ಸ್ಥಳಿಕ ವಿಷಯಗಳು.

ಲೇಖಕ ಸ್ಥಳವಂತಿಕ

ಗ್ರಾಮೋದ್ಧಾರ ಕಾರ್ಯದ ಒಗೆ ಸಂಯುಕ್ತ ಪ್ರಾಂತದ ಗವ್ಹರ್ನರರಾದ ಸರ್ ಮಾರಿಸ ಹಲೆಟ ರವರು ಸುಲ್ತಾನಪುರದೊಳಗಿನ ಗ್ರಾಮೋದ್ಧಾರ ಮಂಡಳದ ಸಭೆಯಲ್ಲಿ ಮಾಡಿದ ಭಾಷಣವನ್ನು ನಮ್ಮಲ್ಲಿಯ ಗ್ರಾಮೋದ್ಧಾರವಾದಿಗಳೆಲ್ಲರೂ ಅಭ್ಯಾಸ ಮಾಡತಕ್ಕಂತಹದು. ವ್ಯವಸ್ಥಿತವಾದ ಕಾರ್ಯಕ್ರಮ ಕಲ್ಪಿಸಲಾಗಲಿಲ್ಲ. ಸಂಘಟಕರಿಗೆ ಶಿಕ್ಷಣವಿಲ್ಲ. ಒಬ್ಬೊಬ್ಬರಿಗೆ ೨೦ ೩೦ ಗ್ರಾಮ [illegible] ಕೊಡಲ್ಪಟ್ಟಿವೆ. ಇವನ್ನೆಲ್ಲ ಸುಧಾರಿಸುವ ಅರಿವು ಈ ಸಂಘಟಕರಿಗಿಲ್ಲ. ಹೀಗೆ ಗ್ರಾಮೋದ್ಧಾರ ಕಾರ್ಯದ ವಿಷಯ ಸಂಯುಕ್ತ ಪ್ರಾಂತದ ಗವ್ಹರ್ನರರು ಮಾಡಿದ ಟೀಕೆ ಯಥಾರ್ಥವುಂಟು. ಗ್ರಾಮೋದ್ಧಾರ ಕಾರ್ಯದಲ್ಲಿ ವಿಂಡೋ ಡ್ರೆಸಿಂಗ (window dressing) ವನ್ನಷ್ಟೇ ಕೊಡುವದು [illegible] ಸಂಯುಕ್ತ ಪ್ರಾಂತದ ಗವ್ಹರ್ನರರು [illegible] ಮಾಡುತ್ತಾರೆ.

ಗ್ರಾಮೋದ್ಧಾರ ಕಾರ್ಯ ಯಾಕೆ ವ್ಯವಸ್ಥಿತವಾದ ಕಾರ್ಯಕ್ರಮದಂತೆ ನಡೆಯುವದಿಲ್ಲವೆಂದು ಗ್ರಾಮೋದ್ಧಾರದ ಮಂಡಳದ ಆಫೀಸ ಪತ್ರಕಗಳನ್ನು ಪರಾಂಬರಿಸಿದರೆ ತಿಳಿಯುವಂತಿದೆ. ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿ [illegible] ಕಾರ್ಯದ ಶಿಕ್ಷಣ ಪಡೆದವರಲ್ಲ. ಗ್ರಾಮೋದ್ಧಾರದ ವ್ಯಾಪಕತೆಯನ್ನು ಇವರು ಅರಿಯುತ್ತಾರೆಂದು ಎಣಿಸುವದು ಕಠಿಣ. ಗ್ರಾಮೋದ್ಧಾರ ವ್ಯಾಪ್ತಿಯಲ್ಲಿ ಹೇರಳ ವಿಷಯಗಳು ಸೇರ್ಪಡೆಯಾಗುತ್ತವೆ. ಗ್ರಾಮದ ಪರಿಸ್ಥಿತಿಯನ್ನು [illegible] ಪರ್ಯಾಲೋಚಿಸಬೇಕು. ಬೇಸಾಯಗಾರರೆಷ್ಟು, ಬೇಸಾಯ ಪ್ರದೇಶವೆಷ್ಟು, ಪ್ರಧಾನ ಬೇಸಾಯವ್ಯಾವದು, ಗೌಣ ಬೇಸಾಯವ್ಯಾವದು, ಬೇಸಾಯೇತರ ಸಮಯದಲ್ಲಿ ಕೈಕೊಳ್ಳಬಹುದಾದ ಕೈಗಾರಿಕೆಗಳ್ಯಾವವು, ಆ ಕೈಗಾರಿಕೆಗಳಿಗೆ ಗ್ರಾಮಗಳಲ್ಲಿ ಯಾವ್ಯಾವ ಅನುಕೂಲತೆಗಳಿವೆ, ಈಗ ದುಃಸ್ಥಿತಿಯಾಗಲು ಕಾರಣವೇನು, ಅದನ್ನು ಪರಿಹರಿಸಲು ಉಪಾಯಗಳಾವವು, ಗ್ರಾಮನಿವಾಸಿಗಳಿಂದ ಪರಿಹರಿಸಿಕೊಳ್ಳಬಹುದಾದ ಸಂಗತಿಗಳೆಷ್ಟು, ಸರಕಾರದಿಂದ ಅನುಗ್ರಹವಾಗಬೇಕಾದ ಸಂಗತಿಗಳೆಷ್ಟು, ಜನಾರೋಗ್ಯಕ್ಕೆ ಬಾಧಕವ್ಯಾವದು, ಇವನ್ನೆಲ್ಲ ಅಭ್ಯಾಸ ಮಾಡುವ ಶಕ್ತಿ ಗ್ರಾಮೋದ್ಧಾರಕರಲ್ಲಿರಬೇಕು. ಯಾವದೊಂದೆರಡು ಗ್ರಾಮಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು, ಆ ಹಳ್ಳಿಗಳಿಗೇ ಒಂದಿಲ್ಲೊಂದು ಉಪಾಯದಿಂದ ಇಡೀ ಜಿಲ್ಹೆಗೆ ಸಲ್ಲತಕ್ಕ ಹಣಗಳನ್ನು ಎಳಕೊಳ್ಳುವ ಹಂಚಿಕೆ ಹಾಕುವದು ಇಡೀ ಜಿಲ್ಹೆಯ ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿಗಳಿಗೆ ಉಚಿತವಾದದ್ದಲ್ಲ. ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿಗಳು ಗ್ರಾಮ್ಯಪ್ರಾಂತದ [illegible] ಇಲ್ಲವೆ ೧೦ ವರ್ಷಗಳ ಗ್ರಾಮೋದ್ಧಾರ ಕಾರ್ಯಕ್ರಮವನ್ನು ತಯಾರಿಸಿಕೊಳ್ಳಬೇಕು. ನಿರ್ಮಲ [illegible] ನಿಷ್ಪಕ್ಷಪಾತ [illegible] ಕಾರ್ಯಕ್ರಮ ತಯಾರ [illegible] ಗ್ರಾಮೋದ್ಧಾರ [illegible]

ಗಳಂತೆ ಗ್ರಾಮ ಸುಧಾರಣೆಯ ಕ್ರಮವನ್ನು ನಿಶ್ಚಯಿಸಿ, ಆ ಕ್ರಮವನ್ನು ಸರ್ವರಿಗೂ ಸಮಾನವಾಗಿ ಅನ್ವಯಿಸುವಂತೆ ಪುರಸ್ಕರಿಸಬೇಕು. ಸಂಯುಕ್ತ [illegible] ದ ಗವ್ಹರ್ನರರು 'ಪ್ಲೆನಿಂಗ' (planing) ಅಂದರೆ ಸಂಕಲಿತ ಕಾರ್ಯಕ್ರಮವಿಲ್ಲವೆಂದೂ ಆ ಕಾರ್ಯಕ್ರಮದ ಅಭಾವದಲ್ಲಿ ಗ್ರಾಮೋದ್ಧಾರ ಮಂಡಳದ ಈಗಿನ ಕೆಲಸ ಬರೀ ತೋರಗಾಣಿಕೆಯದೆಂದೂ ಸ್ವಾನುಭವದಿಂದ ದೂರುತ್ತಾರೆ. ಗ್ರಾಮೋದ್ಧಾರ ಮಂಡಳದ ಆ [illegible] ಪ್ರಕಾರ ಜಿಲ್ಹಾಧಿಕಾರ [illegible] ನವ [illegible] ರಿಗಳ ಇವರೆಲ್ಲರ [illegible] ಹಿ ಪ್ರತಿನಿಧಿ [illegible] ಬೋಕ [illegible] ಗ ಮೋದ [illegible] ಗ್ರಾಮೋದ [illegible] ಸಿಫಾರಸತೇ ಕಾರ್ಯವು

[illegible] ಗೆಳೆಯ ರೆ [illegible] ಮಂಡಳದವ [illegible] ಪರಂಪರಾಗತ [illegible] ಗಳ ವಿವರವನ [illegible] ಗಾಧವಿವೆ! [illegible] ದರೂ ಆಗಾ [illegible] ಮೊಕ್ತೇಸರರು [illegible] ದೇವರ ಭಂ [illegible] ತಮ್ಮವರಿಗೆ ಸ [illegible] ದೊಡ್ಡಸ್ತಿಕೆ ಮೆ [illegible] ಬಡಸ್ತಿಕೆ ದೇ [illegible] ಸಮೂತ್ರವಾಗಿ [illegible] ದಿಂದ ಸಾಲ [illegible] ಮಾಡಲಿಕ್ಕೆ ದೇ [illegible] ವಾಗುತ್ತದೆ ಸಾ [illegible] ಮಾಡಿ ಕಟ್ಟೋ [illegible] ರು ಮಾಡಿದ್ದೇ ಖ [illegible] ದೇವಸ್ಥಾನಗಳ ಕ [illegible] ರದೂ ಒಂದು ಕಟಿ [illegible] ವರು ಭೂಭದ್ರತೆಂ [illegible] ಸಾಲ ಪಡೆದರೆ, [illegible] ಖರ್ಚು ಬರೆದು ಹಾಕುತ್ತಾರೆ! ಲೆಕ್ಕ [illegible] ಸುವ ಸಭ್ಯ ಮೊಕ್ತೆ [illegible] ಜಿಲ್ಹೆಯೊಳಗಿನ [illegible] ಸರರು ಹಾಕಿಕೊಟ್ಟ [illegible] ಅನುಸರಿಸುವಂತಹವ [illegible] ಜಮಾ ವಿವರ ಒರೆದರು. ಖರ್ಚಿನ ವಿವರ ಬರೆದರು. [illegible] ವರೂ ಕೈಯಲ್ಲಿದ ಶಿಲ್ಕಿಗೂ ಖರ್ಚಿನ ವಿವರಗಳಿಗೂ [illegible] ಅಂತರ ಬರುತದೆ "ಜಮಾ ಖರ್ಚು [illegible] ಬಾಕಿ [illegible] ಡಿಸುವದಕ್ಕಾಗಿ [illegible] ಖರ್ಚು" ಎಂದ ಬರೆದ [illegible] ತಯಾ [illegible] ಜಮಾ [illegible] ಖರ್ಚ [illegible]

ಈ ಖರ್ಚಿನ ವಿವರ ದೇವರಿಗೆ ಸಹ ಗೊತ್ತಿಲ್ಲ, ಮೊಕ್ತೇಸರರೊಬ್ಬರಿಗೆ ಮಾತ್ರ ಗೊತ್ತು! ಜಮಾ ಖರ್ಚಿನ ಶಾಸ್ತ್ರದಲ್ಲಿ ಇದೊಂದು ಹೊಸ ಶೋಧ! ಈ ವಿವರ ಬರೆದು ಯಾವದೇ ಜಮಾ ಖರ್ಚನ್ನು ಯಾವಾಗಲೂ ಬಾಯಿಗೂಡಿಸಬರುತ್ತದೆ! ಮೊಕ್ತೇಸರರು ಇನ್ನೂ ಹಲವು ತರಗತಿಗಳಿಂದ ದೇವರ ಭಂಡಾರವನ್ನು ವಂಚಿಸಬಹುದು. ಸದಾವರ್ತವಿರುವ ದೇವಾಲಯಗಳಲಿ [illegible]

[illegible] ಬಿತ್ತನಾಯು ಎಣಿಸುತ್ತಾರ [illegible] ದೈತ್ಯರಿಗೂ ದೇವರಿಗೂ ಸಂಸ್ಕೃತಃ ಬರೆಯುಬೇಕಾದರೆ ಅದಿತ್ಯ [ಆದೃತ್ಯ]ರಿಗೂ ಮತರವುಂಟು [illegible] ದೈತ್ಯರು ದಿತಿಯ ಸಂತತಿ. ಆದಿತ್ಯರು ಅದಿತಿಯ ಸಂತತಿ [illegible] ಅದಿತಿಯು [illegible] ಆದರಿಂದ ದೈತ್ಯರ [illegible] ಅದಿತ್ಯರೂ [illegible] ಬಂಧುಗಳು [illegible]

ಕಾನಡಾವೃತ್ತ

Roll No 10

ಮಾಡುವ ಯಾವತ್ತೂ ಪ್ರಸಂಗವನ್ನು ಸಾಧಿಸುವವರವರು ಮೊಕ್ತೇಸರರು ದೈತ್ಯ-ವಂಶಜರಾದ್ದರಿಂದ ದೇವಸ್ವದ ಅಪಹಾರ ಮಾಡಿ ಅಭಿವೃದ್ಧಿ ಹೊಂದುತ್ತಾರೆ. ದೇವಸ್ವದ ಅಪಹಾರ ದೈತ್ಯ ಧರ್ಮ. ಅದರಿಂದಲೇ ಮೊಕ್ತೇಸರರು ದೈತ್ಯರಿಗುಚಿತವಾದ ಹಂಚಿಕೆಗಳನ್ನು [illegible]

ಮೋಟಾರಿನ ಓಡಾಟಕ್ಕೆ ಬಹು ನಿರ್ಬಂಧ. ಆ ಮೂಲಕ ತಿಕೀಟಿನ ದರ ಏರಿತು. ಹಡಗದ ಅಭಾವದಲ್ಲಿ ಜನರಿಗ ಪ್ರವಾಸ ಮಾಡಲಿಕ್ಕೂ ಸರಕುಗಳನ್ನು ತರ ಒಯ್ಯಲಿಕ್ಕೂ ತೊಂದರೆಯೋ ತೊಂದರೆ! ಮುಚ್ವೆಗಳ ಓಡಾಟಕ್ಕೆ ಇನ್ನೂ ೧-೨ ತಿಂಗಳುಗಳಾದರೂ [illegible]

ದರವನ್ನು ವಿಚಾರಿಸಿದರೆ ೩ ಸಲೆ ಬಡ್ಡಿ ದೊರೆಯುವಂತಿಲ್ಲ. ಪರೋಪಕಾರ ಮಾಡಹೊರಟ ಸಹಕಾರ ಸಂಘಗಳು ಜಿಪುಣರಂತೆ ವರ್ತಿಸಕೂಡದು. ತಮ್ಮ ಸಾಲಕ್ಕೆ ೩ ಸಲೆಯಂತೆ ಬಡ್ಡಿ ಲೆಕ್ಕ ಮಾಡಿ ಕೊಡುವ [illegible] ಮೇಲೆ ಕೃಪ ಇಡಬೇಕು. [illegible] ಕಾಲದೊಳಗಿಂದ ಬಿಡುಗಡೆ [illegible] ದಾರರು ಈ ೧೦ ವರ್ಷಗಳಲ್ಲಿ [illegible] ಹಂಚಿಕೊಂಡಷ್ಟುಂಟು. ಆ [illegible] ವರ್ಷ ಲಾಭ ಹಂಚಿಕೊಳ್ಳ [illegible] ತ್ಯಾಗವಾಗದು. ಸಹ [illegible] ಕಾರರ ಮೇಲ ಒತ್ತಾಯ [illegible] ಯನ್ನು ಲಿಲಾಂವಿಗೆ ದೊರ [illegible] ಭೂಮಿಯ ಬೆಲೆ ಕುಗ್ಗಿ [illegible] ವಕಾರರಿಗೆ ಅಗ್ಗವಾಗಿ [illegible] ಕೊಲವಾಗುತ್ತದೆ ಯುದ್ಧ [illegible] ಇಲ್ಲದ ಸುದ್ದಿಗಳೂ ಹರಟ [illegible] ರಾರಿಗೂ ಎಲ್ಲಿಯೂ ನೆಲೆ- [illegible] ಗುವದೆಂದು ಎಲ್ಲರಿಗೂ [illegible] ಕಾಲದಲ್ಲಿ ತನ್ನ ಬಾಳ್ವೆ [illegible] ಜನರಿದ್ದರೆ ಪ್ರತಿಯೊ [illegible] ಜಾಗ್ರತೆ ಕೊಳ್ಳುತ್ತಿರುವ [illegible] ಕ್ಕಾಗಿ ಏರ್ಪಾಟು ಹೊಂ [illegible] ನಿಸ್ಸುರವಾಗಿ, ಕಠೋರ [illegible] ದರೆ ಕಲ್ಲೋಲವೇಳುವ [illegible] ಗುವ ಭೀತಿಯುಂಟು [illegible] ಗಿಗೆ ಮೋಸವಾಗದಂತೆ [illegible] ಕಡಿಮೆ ಮಾಡಿಕೊಂಡು [illegible]

[illegible] ದಾರರು ಪಕ್ಷಪಾತ [illegible] ಕೊಂಡು ಬರುವದ [illegible] ಇಲ್ಲವೆ ಮುಂಬ [illegible] ವನ್ನು ಕೈಕೊಂಡು [illegible] ಪಡೆಯಲು ವಿಧಿ [illegible] ಕ್ಷಿತವಾದೀತು

ರೆ....

[illegible] ಬಗಿಹಡಿಯ [illegible] ಶ್ರಿದ್ವಾರೆ ಉಗಿಹಡಗದ ಓಡಾಟವಿದ್ದಿತ್ತರೆ ಇನ್ನು ೧೦ ೧೫ ದಿನಗಳಲ್ಲಿ ಉಗಿಹಡಗ ಬರುವ ಸಂಭವವಿತ್ತು, ಮತ್ತು ಆ ಧೋರಣದ ಸುದ್ದಿ ಆಕ್ಕಿಯದರ [illegible] ಇಲಿಯುತ್ತಿತ್ತು. ಹಿಂದುಸ್ಥಾನ ಸರಕಾರವು ಯುದ್ಧಕಾರ್ಯದ ಬಗ್ಗೆ ಇತ್ತ ಕಡೆ ಓಡಾಡುವ ಯಾವತ್ತು ಹಡಗಗಳನ್ನು ಸ್ವಾಧೀನ ಒಡಿಸಿಕೊಂಡಿದ್ದರಿಂದ [illegible] ತೊಂದರೆಯಾಗುವ ಪೆಟ್ರೋಲ ಸಿಂದಾಕ್ರಮದಿಂದ [illegible]

ಸರ್ಟಿಫಿಕೇಟ್

ನಿನ್ನ ತಂದೆ ನಿನಗೋ?

ಪೂರ್ಣ ವಿವರಗಳಿಗೆ ನಿಮ್ಮ ಹತ್ತಿರದ ಪೋಸ್ಟ ಆಫೀಸಿನಲ್ಲಿ ಕೇಳಿ

KN 61 40

ಸ್ಥಳಿಕ ವಿಷಯಗಳು.

ಲೇಖಕ ಸ್ಥಳವಂತಿಕ

ಗ್ರಾಮೋದ್ಧಾರ ಕ [illegible] ದ ಒಗೆ [illegible] ಪ್ರಾಂತದ ಗವ್ಹರ್ನರರಾದ ಸರ್ [illegible] ರವರು ಸುಲ್ತಾನಪುರದೊಳಗಿನ ಗ್ರಾಮೋದ್ಧಾರ ಮಂಡಳದ ಸಭೆಯಲ್ಲಿ ಮಾಡಿದ [illegible] ನವನ್ನು ನಮ್ಮಲ್ಲಿಯ ಗ್ರಾಮೋದ್ಧಾರ ವಾದಿಗಳೆಲ್ಲರೂ [illegible] ಸ ಮಾಡ ಪಂತಹದು ವ್ಯವಸ್ಥಿತವಾದ ಕಾರ್ಯ ಕ್ರಮ ಕಲ್ಪಿಸೋಣವಾಗಲಿಲ್ಲ ಸಂಘಟನೆಗೆ ಲಕ್ಷಣ [illegible] ಒಜ್ಜೊಬ್ಬರಿಗ [illegible] ಕೇಡ [illegible] ಇವನ್ನೆಲ್ಲ ಸುಧಾರಿಸುವ [illegible] ಟಕರಿಗಿಲ್ಲ ಹೀಗೆ ಗ್ರಾಮೋದ್ಧಾರ [illegible] ವಿಷಯ ಸಂಯುಕ್ತ ಪ್ರಾಂತದ [illegible] ಮಾಡಿದ ಟೀಕೆ ಯಥಾರ್ಥವುಂಟು [illegible] ಗ್ರಾಮೋದ್ಧಾರ ಕಾರ್ಯದಲ್ಲಿ [illegible] (wind w [illegible] ing) ವನ್ನು [illegible] ಕೊಡುವದ [illegible] ಸಂಯುಕ್ತ ಪ್ರಾಂತದ [illegible] ಮಾಡುತ್ತಾರೆ

ಗ್ರಾಮೋದ್ಧಾರ ಕಾರ್ಯ ಯಾವದೊಂದು ವ್ಯವಸ್ಥಿತವಾದ ಕಾರ್ಯಕ್ರಮದಂತೆ ನಡಯುವದಿಲ್ಲವೆಂದು ಗ್ರಾಮೋದ್ಧಾರದ ಮಂಡಳದ [illegible] ಪತ್ರಕಗಳನ್ನು ಪರಾಂಬರಿಸಿದರೆ ಅರಿಯುವಂತಿದೆ ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿ [illegible] ಕಾರ್ಯದ ಶಿಕ್ಷಣ ಪಡೆದವರಲ್ಲ ಗ್ರಾಮೋದ್ಧಾರದ ವ್ಯಾಪಕತೆಯನ್ನು ಇವರು ಅರಿಯುತ್ತಾರೆಂದ [illegible] ಸುವದು ಕಠಿಣ ಗ್ರಾಮೋದ್ಧಾರ [illegible] ಹೇರಳ ವಿಷಯಗಳು ಸೇರ್ಪಡಿಯಾ [illegible] ಗ್ರಾಮದ ಪರಿಸ್ಥಿತಿಯನ್ನು [illegible] ಪರ್ಯಾಲೋಚಿಸಬೇಕು ಬೇಸಾಯ [illegible] ಬೇಸಾಯ ಪ್ರದೇಶವೆಷ್ಟು ಪ್ರಧಾನ ಬೇಸಾಯವ್ಯಾವದು ಗೌಣ ಬೇಸಾಯವ್ಯಾವದು ಬೇಸಾಯೇತರ ಸಮಯದಲ್ಲ ಕೈಕೊಳ್ಳಬಹುದಾದ ಕೈಗಾರಿಕೆಗ [illegible] ವವು, ಆ ಕೈಗಾರಿಕೆಗಳಿಗೆ ಗ್ರಾಮದಲ್ಲಿ [illegible] ಅನುಕೂಲತೆಗಳವ, ಈಗ ದುಃಸ್ಥಿತಿಯಾಗಲು ಕಾರಣ ವೇನು, ಅದನ್ನು ಪರಿಹರಿಸಲು ಉಪಾಯಗಳಾವವು ಗ್ರಾಮನಿವಾಸಿಗಳಿಂದ ಪರಿಹರಿಸಿಕೊಳ್ಳಬಹುದಾದ ಸಂಗತಿಗಳೆಷ್ಟು, ಸರಕಾರದಿಂದ ಅನುಗ್ರಹವಾಗಬೇಕಾದ ಸಂಗತಿಗಳೆಷ್ಟು ಜನಾರೋಗ್ಯಕ್ಕೆ ಬಾಧಕ ವ್ಯಾವದು ಇವನ್ನೆಲ್ಲ ಅಭ್ಯಾಸ ಮಾಡುವ ಶಕ್ತಿ ಗ್ರಾಮೋದ್ಧಾರಕರಲ್ಲಿರಬೇಕು ಯಾವದೊಂದೆರಡು ಗ್ರಾಮಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಆ ಹಳ್ಳಿ [illegible] ಗೇ ಒಂದಿಲ್ಲೊಂದು ಉಪಾಯದಿಂದ ಇಡೀ ಜಿಲ್ಲೆಗೆ ಸಲ್ಲತಕ್ಕ ಹಣಗಳನ್ನು [illegible] ಕೊಳ್ಳುವ ಹಂಚಿಕೆ ಹಾಕುವದು ಇಡೀ ಜಿಲ್ಲೆಯ ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿಗಳಿಗೆ ಉಚಿತವಾದದ್ದಲ್ಲ ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿ [illegible] ಗ್ರಾಮ ಗ್ರಾಮಾಂತರದ [illegible] ನ್ನು ಸಂಪದಿ [illegible] ಇಲ್ಲವ [illegible] ವರ್ಷಗಳ ಗ್ರಾಮೋದ್ಧಾರ ಕಾರ್ಯಕ್ರಮ ವನ್ನು ತಯಾರಿಸಿಕೊಳ್ಳಬೇಕು [illegible] ತ್ರದಿಂದ [illegible] ಈ [illegible] ಕ್ರಮ ತಯಾ [illegible]

ವಂತೆ ಗ್ರಾಮ ಸುಧಾರಣೆಯ ಕ್ರಮವನ್ನು ನಿಶ್ಚಯಿಸಿ ಆ ಕ್ರಮವನ್ನು ಸರ್ವರಿಗೂ ಸಮಾನವಾಗಿ ಅನ್ವಯಿಸವಂತೆ ಪುರಸ್ಕರಿಸಬೇಕು ಸಂಯುಕ್ತ [illegible] ದ ಗವ್ಹರ್ನರರು 'ಪ್ಲೆನಿಂಗ' (planing) ಅಂದರೆ ಸಂಕಲಿತ ಕಾರ್ಯಕ್ರಮವಿಲ್ಲವೆಂದೂ ಆ ಕಾರ್ಯಕ್ರಮದ ಅಭಾವದಲ್ಲಿ ಗ್ರಾಮೋದ್ಧಾರ ಮಂಡಳದ ಈಗಿನ ಕೆಲಸ ಬರೀ ತೋರಗಾಣಿಕೆಯದೆಂದೂ ಸ್ವಾನುಭವದಿಂದ ದೂರುತ್ತಾರ ಗ್ರಾಮೋದ್ಧಾರ ಮಂಡಳದ [illegible] ಪ್ರಕಾರ [illegible] ಜಿಲ್ಹಾಧಿ [illegible] ವರ [illegible] ಗಳ ಇವರೆಲ್ಲರ [illegible] ಹಿ ಪ್ರತಿನಿ [illegible] ಬೇಕು [illegible] ಮೋದ [illegible] ಗ್ರಾಮೋದ [illegible] ನಿರ್ಧರಿಸತಕ್ಕ ಕಾರ್ಯವು

ಗೆಳೆಯ [illegible] ಮಂಡಳದವ [illegible] ಪರಂಪರಾಗತ [illegible] ವಿವರವನ [illegible] ಧವಿವೆ! [illegible] ದರೂ ಅಗಾ [illegible] ಮೊಕ್ತೇಸರರು [illegible] ದೇವರ ಭಂ [illegible] ತಮ್ಮವರಿಗೆ [illegible] ದುಷ್ಕೃತ್ಯಕ್ಕೆ [illegible] ಬಹಿಷ್ಕೃತೆ [illegible] ಸುಸೂತ್ರವಾಗಿ [illegible] ದಿಂದ [illegible] ಮಾದರಿಕ್ಕೆ [illegible] ವಾಗುತ್ತದೆ [illegible] ಮಾಡ ಕಟ್ಟೋ [illegible] ರು ಮಾಡಿದ್ದೇ [illegible] ದೇವಸ್ಥಾನಗಳ [illegible] ರದೂ ಒಂದು ಕಟಿ [illegible] ವರು ಭೂಭದ್ರತೆಂ [illegible] ಸಾಲ ಪಡೆದರೆ, [illegible] ಖರ್ಚು ಒರೆದು ಹಾಕುತ್ತಾರೆ! ಲೆಕ್ಕ [illegible] ಸುವ ಸಭ್ಯ ಮೊಕ್ತೆ [illegible] ಜಿಲ್ಹೆಯೊಳಗಿನ [illegible] ಸರರು ಹಾಕಿಕೊಟ್ಟ ಅನುಸರಿಸುವಂತಹವ [illegible] ಜಮಾ ವಿವರ ಬರೆದರು ಖರ್ಚಿನ ವಿವರ ಎರೆದರು ಆವರಗಕ್ಕೈಯಲ್ಲಿದ ಶಿಲ್ಲಿಗೂ ಖರ್ಚಿನ ವಿವರಗಳಿಗೂ [illegible] ಅಂತರ ಬರುತ [illegible] "ಜಮಾ ಖರ್ಚ [illegible] ಬಾಯಿ [illegible] ಡಿಸುವದಕ್ಕಾಗಿ [illegible] ಖರ್ಚ" ಎಂದ ಬರೆದ [illegible]

ಈ ಖಚಿನ ವಿವರ ದೇವರಿಗೆ ಸಹ ಗೊತ್ತಿಲ್ಲ, ಮೊಕ್ತೇಸರರೊಬ್ಬರಿಗೆ ಮಾತ್ರ ಗೊತ್ತು! ಜಮಾ ಖರ್ಚಿನ ಶಾಸ್ತ್ರದಲ್ಲಿ ಇದೊಂದು ಹೊಸ ಶೋಧ! ಈ ವಿವರ ಬರೆದು ಯಾವದೇ ಜಮಾ ಖರ್ಚನ್ನು ಯಾವಾಗಲೂ ಬಾಯಿಗೂಡಿಸಬರುತ್ತದೆ! ಮೊಕ್ತೇಸರರು ಇನ್ನೂ ಹಲವು ತರಗತಿಗಳಿಂದ ದೇವರ ಭಂಡಾರವನ್ನು ವಂಚಿಸಬಹುದು ಸದಾವರ್ತವಿರುವ ದೇವಾಲಯಗಳಲಿ [illegible]

[illegible] ಭಕ್ತರೆಂದು ಎಣಿಸುತ್ತಾರೆ ದೈತ್ಯರಿಗೂ ದೇವರಿಗೂ ಶಾಸ್ತ್ರತಃ ಬರೆಯಬೇಕಾದರೆ ಅದಿತ [ಅದ್ವೈತ]ರಿಗೂ ಮತರವುಂಟು ದೈತರು ದಿತಿಯ ಸಂತತಿ ಆದಿತ್ಯರ [illegible] ಸಂತತಿ ದಿತಿ ಅದಿತಿಯರು ಸವತಿಯರು ಅದರಿಂದ ದೈತರು ಅದಿತ್ಯರೂ ಸವತ್ತ [illegible] ಅದಿ [illegible]

ಮಾಡುವ ಯಾವತ್ತೂ ಪ್ರಸಂಗವನ್ನು ಸಾಧಿಸುವವರಿವರು ಮೊಕ್ತೇಸರರು ದೈತ್ಯ-ವಂಶಜರಾದ್ದರಿಂದ ದೇವಸ್ವದ ಅಪಹಾರ ಮಾಡಿ ಅಭಿವೃದ್ಧಿ ಹೊಂದುತ್ತಾರೆ ದೇವಸ್ವದ ಅಪಹಾರ ದೈತ್ಯ ಧರ್ಮ ಅದರಿಂದಲೇ ಮೊಕ್ತೇಸರರು ದೈತ್ಯರಿಗುಚಿತವಾದ ಹಂಚಿಕೆಗಳನ್ನು

ಮೋಟಾರಿನ ಓಡಾಟಕ್ಕೆ ಬಹು ನಿರ್ಬಂಧ ಆ ಮೂಲಕ ತಿಕೀಟಿನ ದರ ಏರಿತು ಹಡಗದ ಅಭಾವದಲ್ಲಿ ಜನರಿಗ ಪ್ರವಾಸ ಮಾಡಲಿಕ್ಕೂ ಸರಕುಗಳನ್ನು ತರ ಒಯ್ಯಲಿಕ್ಕೂ ತೊಂದರೆಯೇ ಸೈ! ಮುಚ್ಚಿಗಳ ಓಡಾಟಕ್ಕೆ ಇನ್ನೂ ೧-೨ ತಿಂಗಳುಗಳಾದರೂ

ದರವನ್ನು ವಿಚಾರಿಸಿದರೆ ೩ ಸಲೆ ಬಡ್ಡಿ ದೊರೆಯುವಂತಿಲ್ಲ ಪರೋಪಕಾರ ಮಾಡಹೊರಟ ಸಹಕಾರ ಸಂಘಗಳು ಜಿಪುಣರಂತೆ ವರ್ತಿಸಕೂಡದು ತಮ್ಮ ಸಾಲಕ್ಕೆ ೩ ಸಲೆಯಂತೆ ಬಡ್ಡಿ ಲೆಕ್ಕ ಮಾಡಿ ಕೊಡುವ [illegible] ಮೇಲೆ ಕೃಪೆ ಇಡಬೇಕು [illegible] ಕಾಲಮೊಳಗಿಂದ ಬಿಡುಗಡೆ [illegible] ರರು ಈ ೧೦ ವರ್ಷದಲ್ಲಿ [illegible] ಪಂಚಿಕೊಂಡದ್ದುಂಟು ಆ ವರ್ಷ ಲಾಭ ಹಂಚಿಕೊಳ್ಳ [illegible] ತ್ಯಾಗವಾಗದು. ಸಹ [illegible] ಗಾರರ ಮೇಲೆ ಒತ್ತಾಯ [illegible] ಯನ್ನು ಲಿಲಾಂವಿಗೆ ಹಾಕ [illegible] ಭೂಮಿಯ ಬೆಲೆ ಕುಗ್ಗಿ [illegible] ವಕಾರರಿಗೆ ಅಗ್ಗವಾಗಿ [illegible] ಕೊಲವಾಗುತ್ತವೆ ಯುದ್ಧ ಇಲ್ಲದ ಸುಗ್ಗಿಗಳೂ ಪರಬೆ [illegible] ನ್ನಾರಿಗೂ ಎಲ್ಲಿಯೂ ಸಿಕ್ಕ [illegible] ರುವವೆಂದು ಎಲ್ಲರಿಗೂ [illegible] ಕಾಲದಲ್ಲಿ ತನ್ನ ಬಾಳ್ವೆ [illegible] ಜನರಿಂದ [illegible] ರೆ ಪ್ರತಿಯೊ [illegible] ಜಾಗ್ರತೆ ಕೊಳ್ಳುತ್ತಿರುವ [illegible] ಕ್ಕಾಗಿ ಏರ್ಪಾಟು ಮೊ [illegible] ನಿಸ್ತುರವಾಗ್ಗಿ ಕಠೋರ [illegible] ದರೆ ಕಲ್ಲೋಲವೇಳುವ [illegible] ಗುವ ಭೀತಿಯುಂಟು [illegible] ಗಿಗೆ ಮೋಸವಾಗದಂತೆ [illegible] ಕಡಿಮೆ ಮಾಡಿಕೊಂಡು [illegible]

[illegible] ದಾರರು ಪಕ್ಷಪಾತ [illegible] ಕೆಂಡು ಬರುವದ [illegible] ಇಲ್ಲವೆ ಮುಂಬ [illegible] ವನ್ನು ಕೈಕೊಂಡು ಪಡೆಯಲು ವಿಧಿ [illegible] ಕ್ಷಿತವಾದೀತು

ರೆ....

[illegible] ಯು ಕೈಬಗಿಹಿಡಿಯು ತ್ರಿದ್ವಾರಿ ಉಗಿಹಡಗದ ಓಡಾಟವಿದ್ದಿದರೆ ಇನ್ನು ೧೦ [illegible] ದಿನಗಳಲ್ಲಿ ಉಗಿಹಡಗ ಒಡುವ ಸಂಭವವಿತ್ತು ಮತ್ತು ಆ ಧೋರಣದ ಮೇಲೆ ಆಕ್ಕಿಯ ದರ ತೀವ್ರವಾಗಿ ಇಳಿಯುತ್ತಿತ್ತು ಹಿಂದುಸ್ಥಾನ ಸರಕಾರವು ಯುದ್ಧಕಾರ್ಯದ ಬಗ್ಗೆ ಇತ್ತ ಕಡೆ [illegible] ಡಾಡುವ ಯಾವತ್ತು ಹಡಗಗಳನ್ನು ಸ್ವಾಧೀನ [illegible] ಡಿಸಿಕೊಂಡಿದ್ದರಿಂದ ನಮ್ಮ [illegible] ಯ ಪರಿಗೆ [illegible] ತೊಂದರೆಯಾಗಿವೆ ಪೆಟ್ರೋಲ ನಿರ್ಬಂಧ [illegible]

ಕಾನಡಾ ವೃತ್ತ

Roll No 10

ಸರ್ಟಿಫಿಕೇಟ್

ನಿನ್ನ ತಂದೆ ನಿನಗೊ?

ಪೂರ್ತಾ ವಿವರಗಳಿಗೆ ನಿಮ್ಮ
ಹತ್ತಿರದ ಪೋಸ್ಟ ಆಫೀಸಿನಲ್ಲಿ ಕೇಳಿ

KN GJ 40



ಸ್ಥಳಿಕ ವಿಷಯಗಳು.

ಲೇಖಕ ಸ್ಥಳವಂತಿಕ

ಗ್ರಾಮೋದ್ಧಾರ ಕಾರ್ಯದ ಬಗ್ಗೆ ಸಂಯುಕ್ತ ಪ್ರಾಂತದ ಗವ್ಹರ್ನರರಾದ ಸರ್ ಮಾರಿಸ ಹಲೆಟರವರು ಸುಲ್ತಾನಪುರದೊಳಗಿನ ಗ್ರಾಮೋದ್ಧಾರ ಮಂಡಳದ ಸಭೆಯಲ್ಲಿ ಮಾಡಿದ ಭಾಷಣವನ್ನು ನಮ್ಮಲ್ಲಿಯ ಗ್ರಾಮೋದ್ಧಾರವಾದಿಗಳೆಲ್ಲರೂ ಅಭ್ಯಾಸ ಮಾಡತಕ್ಕಂತಹದು. ವ್ಯವಸ್ಥಿತವಾದ ಕಾರ್ಯಕ್ರಮ ಕಲ್ಪಿಸೋಣವಾಗಲಿಲ್ಲ ಸಂಘಟಕರಿಗೆ ಲಕ್ಷ್ಯವಿಲ್ಲ. ಒಬ್ಬೊಬ್ಬರಿಗೆ [illegible] ಗ್ರಾಮಗಳ [illegible] ಕೊಡಲ್ಪಟ್ಟಿವೆ ಇವನ್ನೆಲ್ಲ ಸುಧಾರಿಸುವ [illegible] ಈ ಸಂಘಟಕರಿಗಿಲ್ಲ. ಹೀಗೆ ಗ್ರಾಮೋದ್ಧಾರ ಕಾರ್ಯದ ವಿಷಯ ಸಂಯುಕ್ತ ಪ್ರಾಂತದ ಗವ್ಹರ್ನರರು ಮಾಡಿದ ಟೀಕೆ ಯಥಾರ್ಥವಾದುದು. ಗ್ರಾಮೋದ್ಧಾರ ಕಾರ್ಯದಲ್ಲಿ ವಿಂಡೋ ಡ್ರೆಸ್ಸಿಂಗ್ (window dressing) ವನ್ನಷ್ಟೇ ಕೊಡುವದ [illegible] ಸಂಯುಕ್ತ ಪ್ರಾಂತದ ಗವ್ಹರ್ನರರು [illegible] ಮಾಡುತ್ತಾರೆ

ಗ್ರಾಮೋದ್ಧಾರ ಕಾರ್ಯ ಯಾವದೊಂದು ವ್ಯವಸ್ಥಿತವಾದ ಕಾರ್ಯಕ್ರಮದಂತೆ ನಡಯುವದಿಲ್ಲ ವೆಂದು ಗ್ರಾಮೋದ್ಧಾರದ ಮಂಡಳದ [illegible] ಪತ್ರಕಗಳನ್ನು ಪರಾಂಬರಿಸಿದರೆ ತಿಳಿಯುವಂತಿದೆ ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿ [illegible] ಕಾರ್ಯದ ಶಿಕ್ಷಣ ಪಡೆದವರಲ್ಲ ಗ್ರಾಮೋದ್ಧಾರದ ವ್ಯಾಪಕತೆಯನ್ನು ಇವರು ಅರಿಯುತ್ತಾರೆಂದು [illegible] ಸುವದು ಕಠಿಣ. ಗ್ರಾಮೋದ್ಧಾರ ವ್ಯಾಪ್ತಿಯ [illegible] ಹೇರಳ ವಿಷಯಗಳು ಸೇರ್ಪಡೆಯಾಗುತ್ತವೆ ಗ್ರಾಮದ ಸಂಸ್ಥಿತಿಯನ್ನು [illegible] ಮೊದಲು ಪರ್ಯಾಲೋಚಿಸಬೇಕು. ಬೇಸಾಯಗಾರರೆಷ್ಟು ಬೇಸಾಯ ಪ್ರದೇಶವೆಷ್ಟು, ಪ್ರಧಾನ ಬೇಸಾಯವ್ಯಾವದು, ಗೌಣ ಬೇಸಾಯವ್ಯಾವದು, ಬೇಸಾಯೇತರ ಸಮಯದಲ್ಲಿ ಕೈಕೊಳ್ಳಬಹುದಾದ ಕೈಗಾರಿಕಗಳ್ಯಾವವು, ಆ ಕೈಗಾರಿಕಗಳಿಗೆ ಗ್ರಾಮಗಳಲ್ಲಿ ಯಾವ್ಯಾವ ಅನುಕೂಲತೆಗಳವೆ, ಈಗಿದ್ದ ಸ್ಥಿತಿಯಾಗಲು ಕಾರಣವೇನು, ಅದನ್ನು ಪರಿಹರಿಸಲು ಉಪಾಯಗಳಾವವು ಗ್ರಾಮನಿವಾಸಿಗಳಿಂದ ಪರಿಹರಿಸಿಕೊಳ್ಳಬಹುದಾದ ಸಂಗತಿಗಳೆಷ್ಟು, ಸರಕಾರದಿಂದ ಅನುಗ್ರಹವಾಗಬೇಕಾದ ಸಂಗತಿಗಳೆಷ್ಟು, ಜನಾರೋಗ್ಯಕ್ಕೆ ಬಾಧಕವ್ಯಾವದು, ಇವನ್ನೆಲ್ಲ ಅಭ್ಯಾಸ ಮಾಡುವ ಶಕ್ತಿ ಗ್ರಾಮೋದ್ಧಾರಕರಲ್ಲಿರಬೇಕು. ಯಾವದೊಂದೆರಡು ಗ್ರಾಮಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು, ಆ [illegible] ಗೇ ಒಂದಿಲ್ಲೊಂದು ಉಪಾಯದಿಂದ ಇಡೀ ಜಿಲ್ಹೆಗೆ ಸಲ್ಲತಕ್ಕ ಹಣಗಳನ್ನು [illegible] ಕೊಳ್ಳುವ ಹಂಚಿಕೆ ಹಾಕುವದು ಇಡೀ ಜಿಲ್ಹೆಯ ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿಗಳಿಗೆ ಉಚಿತವಾದದ್ದಲ್ಲ ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿಗಳು ಗ್ರಾಮಗ್ರಾಮಾಂತರಗಳನ್ನು ಸಂಚರಿಸಿ [illegible] ಇಲ್ಲವೆ [illegible] ವರ್ಷಗಳ ಗ್ರಾಮೋದ್ಧಾರ ಕಾರ್ಯಕ್ರಮವನ್ನು ತಯಾರಿಸಿಕೊಳ್ಳಬೇಕು. ನಿರ್ವಾಹ [illegible] ನಿಷ್ಪಕ್ಷಪಾತ [illegible] ಈ [illegible] ತಯಾರು [illegible]

ವಂತೆ ಗ್ರಾಮ ಸುಧಾರಣೆಯ ಕ್ರಮವನ್ನು ನಿಶ್ಚಯಿಸಿ, ಆ ಕ್ರಮವನ್ನು ಸರ್ವರಿಗೂ ಸಮಾನವಾಗಿ ಅನ್ವಯಿಸುವಂತೆ ಪುರಸ್ಕರಿಸಬೇಕು ಸಂಯುಕ್ತ ಪ್ರಾಂತದ ಗವ್ಹರ್ನರರು 'ಪ್ಲೆನಿಂಗ' (planing) ಅಂದರೆ ಸಂಕಲಿತ ಕಾರ್ಯಕ್ರಮವಿಲ್ಲವೆಂದೂ ಆ ಕಾರ್ಯಕ್ರಮದ ಅಭಾವದಲ್ಲಿ ಗ್ರಾಮೋದ್ಧಾರ ಮಂಡಳದ ಈಗಿನ ಕೆಲಸ ಬರೀ ತೋರಣಿಕೆಯದೆಂದೂ ಸ್ವಾನುಭವದಿಂದ ದೂರುತ್ತಾರೆ ಗ್ರಾಮೋದ್ಧಾರ ಮಂಡಳದ ಅ[illegible] ಪ್ರಕಾರ ಜಿಲ್ಹಾಧಿ[illegible] ವರು ನವ [illegible] ರ್ಶಿಗಳ ಇವರೆಲ್ಲರ [illegible] ಟೀಕ [illegible] ಗ್ರಾಮೋದ [illegible] ನಿರ್ಧರಿಸತಕ್ಕ ಕಾರ್ಯವು

[illegible] ಮಂಡಳದವ[illegible] ಪರಂಪರಾಗತ [illegible] ವಿವರವನ [illegible] ಧವಿವೆ! [illegible] ದರೂ ಆಗಾ [illegible] ಮೊಕ್ತೇಸರರು ದೇವರ ಭಂ[illegible] ತಮ್ಮವರಿಗೆ ಸ[illegible] ದೊಷ್ಪಸ್ಥಿಕೆ ಮ[illegible] ಬತಸ್ಥಿಕೆ ದ[illegible] ಸುಸೂತ್ರವಾಗಿ [illegible] ದಿಂದ ಸಾಲ! [illegible] ಮಾಡಲಿಕ್ಕೆ ದೇ[illegible] ವಾಗುತ್ತದೆ ಸಾ[illegible] ಮಾಡಿ ಕಟ್ಟೋ[illegible] ರು ಮಾಡಿದ್ದೇ ಖ[illegible] ದೇವಸ್ಥಾನಗಳ ಕ[illegible] ರದೂ ಒಂದು ಕಟ[illegible] ವರು ಭೂಭದ್ರತೆಂ[illegible] ಸಾಲ ಪಡೆದರೆ, [illegible] ಖರ್ಚು ಬರೆದು ಹಾಕುತ್ತಾರೆ! ಲೆಕ್ಕ[illegible] ಸುವ ಸಭ್ಯ ಮೊಕ್ತೆ[illegible] ಜಿಲ್ಹೆಯೊಳಗಿನ ಒ[illegible] ಸರರು ಹಾಕಿಕೊಟ್ಟ ಅನುಸರಿಸುವಂತಹವ ಜಮಾ ವಿವರ ಬರೆದರು. ಖರ್ಚಿನ ವಿವರ ಬರೆದರು. ಆದರೂ ಕೈಯಲ್ಲಿದ ಶಿಲ್ಕಿಗೂ ಖರ್ಚಿನ ವಿವರಗಳಿಗೂ [illegible] ಅಂತರ ಬರುತ್ತದೆ "ಜಮಾ ಖರ್ಚು [illegible] ಜಾಯಿಗೂಡಿಸುವದಕ್ಕಾಗಿ [illegible] ಖರ್ಚು" ಎಂದು ಬರೆದ [illegible] ಮತ್ತು ಖರ್ಚು [illegible]

ಈ ಖರ್ಚಿನ ವಿವರ ದೇವರಿಗೆ ಸಹ ಗೊತ್ತಿಲ್ಲ ಮೊಕ್ತೇಸರರೊಬ್ಬರಿಗೆ ಮಾತ್ರ ಗೊತ್ತು! ಜಮಾ ಖರ್ಚಿನ ಶಾಸ್ತ್ರದಲ್ಲಿ ಇದೊಂದು ಹೊಸ ಶೋಧ! ಈ ವಿವರ ಬರೆದು ಯಾವದೇ ಜಮಾ ಖರ್ಚನ್ನು ಯಾವಾಗಲೂ ಜಾಯಿಗೂಡಿಸಬರುತ್ತದೆ! ಮೊಕ್ತೇಸರರು ಇನ್ನೂ ಹಲವು ತರಗತಿಗಳಿಂದ ದೇವರ ಭಂಡಾರವನ್ನು ವಂಚಿಸಬಹುದು ಸದಾವರ್ತವಿರುವ ದೇವಾಲಯಗಳಲಿ [illegible]

[illegible] ಎನಿಸುತ್ತಾರೆ ದೈತ್ಯರಿಗೂ ದೇವರಿಗೂ ಶಾಸ್ತ್ರತಃ ಬರೆಯಬೇಕಾದರೆ ಆದಿತ್ಯ [ಅದೈತ್ಯ]ರಿಗೂ ಮತರವುಂಟು. ದೈತ್ಯರು ದಿತಿಯ ಸಂತತಿ ಆದಿತ್ಯರು ಅದಿತಿಯ ಸಂತತಿ [illegible] ಅದರಿಂದ ದೈತ್ಯ [illegible] ಆದಿತ್ಯ [illegible] [illegible]

ಕಾನಡಾವೃತ್ತ

Roll No 10

ಮಾಡುವ ಯಾಪತ್ತು ಪ್ರಸಂಗವನ್ನು ಸಾಧಿಸುವವರು ಮೊಕ್ತೇಸರರು ದೈತ್ಯ-ವಂಶಜರಾದ್ದರಿಂದ ದೇವಸ್ವದ ಅಪಹಾರ ಮಾಡಿ ಅಭಿವೃದ್ಧಿ ಹೊಂದುತ್ತಾರೆ ದೇವಸ್ವದ ಅಪಹಾರ ದೈತ್ಯ-ಧರ್ಮ ಇದರಿಂದಲೇ ಮೊಕ್ತೇಸರರು ದೈತ್ಯರಿಗುಚಿತವಾದ ಹಂಚಿಕೆಗಳನ್ನು

ಮೋಟಾರಿನ ಓಡಾಟಕ್ಕೆ ಬಹು ನಿರ್ಬಂಧ. ಆ ಮೂಲಕ ತಿಕೀಟಿನ ದರ ಏರಿತು, ಹಡಗದ ಅಭಾವದಲ್ಲಿ ಜನರಿಗ ಪ್ರವಾಸ ಮಾಡಲಿಕ್ಕ್ಯಾ ಸರಕುಗಳನ್ನು ತರ ಒಯ್ಯಲಿಕ್ಕೂ ತೊಂದರೆಯೋ ಸೈ! ಮುಚ್ಚಿಗಳ ಓಡಾಟಕ್ಕೆ ಇನ್ನೂ [illegible] ತಿಂಗಳುಗಳಾದರೂ

ಪರವನ್ನು ವಿಚಾರಿಸಿದರೆ [illegible] ಸಲೆ ಬಡ್ಡಿ ದೊರೆಯುವಂತಿಲ್ಲ ಪರೋಪಕಾರ ಮಾಡಹೊರಟ ಸಹಕಾರ ಸಂಘಗಳು ಜಿಪುಣರಂತೆ ವರ್ತಿಸಕೂಡದು. ತಮ್ಮ ಸಾಲಕ್ಕೆ [illegible] ಸಲೆಯಂತೆ ಬಡ್ಡಿ ಲೆಕ್ಕ ಮಾಡಿ ಕೊಡುವ [illegible] ಮೇಲೆ ಕೃಪೆ ಇಡಬೇಕು [illegible] ಸಾಲದೊಳಗಿಂದ ಬಿಡುಗಡೆ [illegible] ರರು ಈ [illegible] ವರ್ಷಗಳಲ್ಲಿ ಹಂಚಿಕೊಂಡದ್ದುಂಟು ಆ ವರ್ಷ ಲಾಭ ಹಂಚಿಕೊಳ್ಳ [illegible] ತ್ಯಾಗವಾಗದು. ಸಹಕಾರರ ಮೇಲೆ ಒತ್ತಾಯ [illegible] ಯನ್ನು ಲಿಲಾಂವಿಗೆ ಹೊರ [illegible] ಭೂಮಿಯ ಬೆಲೆ ಕುಗ್ಗಿ [illegible] ಸಹಕಾರರಿಗೆ ಅಗ್ಗವಾಗಿ [illegible] ಕೂಲವಾಗುತ್ತವೆ ಯುದ್ಧ [illegible] ಇಲ್ಲದ ಸುದ್ದಿಗಳೂ ಹರ[illegible] [illegible] ರಾರಿಗೂ ಎಲ್ಲಿಯೂ ನೆಲೆ- [illegible] ಗುವದೆಂದು ಎಲ್ಲರಿಗೂ ಕಾಲದಲ್ಲಿ ತನ್ನ ಬಾಳ್ವೆ [illegible] ಜನರಿದ್ದಾರೆ ಪ್ರತಿಯೊ [illegible] ಜಾಗ್ರತೆ ಕೊಳ್ಳುತ್ತಿರುವ [illegible] ಕ್ಕಾಗಿ ಏರ್ಪಾಟು ದೊಂ[illegible] ಸಿಪ್ಪುರವಾಗಿ, ಕರೋರ [illegible] ದರೆ ಕಲ್ಲೋಲವೇಳುವ [illegible] ಗುವ ಭೀತಿಯುಂಟು [illegible] ಗಿಗೆ ನೋಸವಾಗದಂತೆ [illegible] ಡಿಮೆ ಮಾಡಿಕೊಂಡು

[illegible] ದಾರರು ಪಕ್ಷಪಾತ [illegible] ಕೆಂಡು ಬರುವದ [illegible] ಇಲ್ಲವೆ ಮುಂಬ[illegible] ವನ್ನು ಕೈಕೊಂಡು ಪಡೆಯಲು ವಿಧಿ [illegible] ಕ್ಷಿತವಾದೀತು

ರೆ....

[illegible] ಕೈಬಿಗಿಪಿಡಿಯು ತ್ರಿದ್ವಾರೆ ಉಗಿಹಡಗದ ಓಡಾಟವಿದ್ದಿದ್ದರೆ ಇನ್ನು [illegible] ದಿನಗಳಲ್ಲಿ ಉಗಿಹಡಗ ಬರುವ ಸಂಭವ ವಿತ್ತು; ಮತ್ತು ಆ ಧೋರಣದ [illegible] ಆಕ್ಕಿಯ ದರ [illegible] ಇಳಿಯುತ್ತಿತ್ತು ಹಿಂದುಸ್ಥಾನ ಸರಕಾರವು ಯುದ್ಧಕಾರ್ಯದ ಬಗ್ಗೆ ಇತ್ತ ಕಡೆ ಓಡಾಡುವ ಯಾವತ್ತು ಹಡಗಗಳನ್ನು ಸ್ವಾಧೀನ [illegible] ಪಡಿಸಿಕೊಂಡಿದ್ದರಿಂದ ನಮ್ಮಾ ಜಿಲ್ಹೆಯವರಿಗೆ [illegible] ತೊಂದರೆಯಾಗಿದ ಪೆಟ್ರೋಲ ನಿರ್ಬಂಧ [illegible]

ಸರ್ಟಿಫಿಕೇಟ್

ನಿನ್ನ ತಂದೆ ನಿನಗೊ?

ಪೂರ್ತಾ ವಿವರಗಳಿಗೆ ನಿಮ್ಮ
ಹತ್ತಿರದ ಪೋಸ್ಟ ಆಫೀಸಾನಲ್ಲಿ ಕೇಳಿ

Kn G I 40

ಸ್ಥಳಿಕ ವಿಷಯಗಳು.

ಲೇಖಕ ಸ್ಥಳವಂತಿಕ

ಗ್ರಾಮೋದ್ಧಾರ ಕಾರ್ಯದ ಒಗೆ ಸಂಯುಕ್ತ ಪ್ರಾಂತದ ಗವ್ಹರ್ನರರಾದ ಸರ್ ಮಾರಿಸ ಹಲೆಟ ರವರು ಸುಲ್ತಾನಪುರದೊಳಿನ ಗ್ರಾಮೋದ್ಧಾರ ಮಂಡಳದ ಸಭೆಯಲ್ಲಿ ಮಾಡಿದ ಭಾಷಣವನ್ನು ನಮ್ಮಲ್ಲಿಯ ಗ್ರಾಮೋದ್ಧಾರ ವಾದಿಗಳಲ್ಲರೂ ಅಭ್ಯಾಸ ಮಾಡುವಂತಹದು. ವ್ಯವಸ್ಥಿತರಾದ ಕಾರ್ಯಕ್ರಮ ಕಲ್ಪಿಸೋಣಾಗಲಿಲ್ಲ ಸಂಘಟಕರಿಗೆ ಶಿಕ್ಷಣ ವಿಲ್ಲ. ಒಬ್ಬೊಬ್ಬರಿಗೆ ೩೦ ೪೦ ಗ್ರಾಮ [illegible] ಕೊಡಲ್ಪಟ್ಟಿವೆ ಇವನೆಲ್ಲ ಸುಧಾರಿಸುವ ಅಶ ಈ ಸಂಘಟಕರಿಗಿಲ್ಲ. ಹೀಗೆ ಗ್ರಾಮೋದ್ಧಾರ ಕಾರ್ಯದ ವಿಷಯ ಸಂಯುಕ್ತ ಪ್ರಾಂತದ ಗವ್ಹರ್ನರರು ಮಾಡಿದ ಟೀಕೆ ಯಥಾರ್ಥವುಂಟು. ಗ್ರಾಮೋದ್ಧಾರ ಕಾರ್ಯದಲ್ಲಿ ಮೇಲ್ಮೈಣ್ಣ (window dressing) ವನ್ನಷ್ಟೇ ಕೊಡುವದ ಅಕ್ಷಮ್ಯವೆಂದ ಸಂಯುಕ್ತ ಪ್ರಾಂತದ ಗವ್ಹರ್ನರರು ಟೀಕೆ ಮಾಡುತ್ತಾರೆ

ಗ್ರಾಮೋದ್ಧಾರ ಕಾರ್ಯ ಯಾವದೊಂದು ವ್ಯವಸ್ಥಿತವಾದ ಕಾರ್ಯಕ್ರಮದಂತೆ ನಡೆಯುವದಿಲ್ಲವೆಂದು ಗ್ರಾಮೋದ್ಧಾರದ ಮಂಡಳದ ಆಫಾಪೆ ಪತ್ರಕಗಳನ್ನು ಹರಾಂಬರಿಸಿದರೆ ತಿಳಿಯುವಂತಿದೆ. ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿ [illegible] ಕಾರ್ಯದ ಶಿಕ್ಷಣ ಪಡೆದವರಲ್ಲಿ. ಗ್ರಾಮೋದ್ಧಾರದ ವ್ಯಾಪಕತೆಯನ್ನು ಇವರು ಅರಿಯುತ್ತಾರೆಂದು ಎಣಿಸುವದು ಕಠಿಣ. ಗ್ರಾಮೋದ್ಧಾರ ಕಾರ್ಯದಲ್ಲಿ ಹೇರಳ ವಿಷಯಗಳು ಸೇರ್ಪಡೆಯಾಗುತ್ತವೆ. ಗ್ರಾಮದ ಪರಿಸ್ಥಿತಿಯನ್ನು ಮೊಟ್ಟಮೊದಲು ಪರ್ಯಾಲೋಚಿಸಬೇಕು. ಬೇಸಾಯದಾರರೆಷ್ಟು, ಬೇಸಾಯ ಪ್ರದೇಶವೆಷ್ಟು, ಪ್ರಧಾನ ಬೇಸಾಯವ್ಯಾವದು, ಗೌಣ ಬೇಸಾಯವ್ಯಾವದು, ಬೇಸಾಯೇತರ ಸಮಯದಲ್ಲಿ ಕೈಕೊಳ್ಳಬಹುದಾದ ಕೈಗಾರಿಕಗಳವು, ಆ ಕೈಗಾರಿಕೆಗಳಿಗೆ ಗ್ರಾಮಗಳಲ್ಲಿ ಯಾವ್ಯಾವ ಅನುಕೂಲತೆಗಳಿವೆ, ಈಗ ದುಃಸ್ಥಿತಿಯಾಗಲು ಕಾರಣವೇನು, ಅದನ್ನು ಪರಿಹರಿಸಲು ಉಪಾಯಗಳಾವವು. ಗ್ರಾಮನಿವಾಸಿಗಳಿಂದ ಪರಿಹರಿಸಿಕೊಳ್ಳಬಹುದಾದ ಸಂಗತಿಗಳೆಷ್ಟು, ಸರಕಾರದಿಂದ ಅನುಗ್ರಹವಾಗಬೇಕಾದ ಸಂಗತಿಗಳೆಷ್ಟು, ಜನಾರೋಗ್ಯಕ್ಕೆ ಬಾಧಕವ್ಯಾವದು, ಇವನ್ನೆಲ್ಲ ಅಭ್ಯಾಸ ಮಾಡುವ ಶಕ್ತಿ ಗ್ರಾಮೋದ್ಧಾರಕರಲ್ಲಿರಬೇಕು. ಯಾವದೊಂದೆರಡು ಗ್ರಾಮಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು, ಆ ಹಳ್ಳಿಗಳಿಗೇ ಒಂದಿಲ್ಲೊಂದು ಉಪಾಯದಿಂದ ಇಡೀ ಜಿಲ್ಲೆಗೆ ಸಲ್ಲತಕ್ಕ ಹಣಗಳನ್ನು [illegible] ಹಂಚಿಕೆ ಹಾಕುವದು ಇಡೀ ಜಿಲ್ಲೆಯ ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿಗಳಿಗೆ ಉಚಿತವಾದದ್ದಲ್ಲ. ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿಗಳು ಗ್ರಾಮ ಗ್ರಾಮಾಂತರಗಳನ್ನು ಸಂಚರಿಸಿ [illegible] ಇಲ್ಲವ [illegible] ವರ್ಷಗಳ ಗ್ರಾಮೋದ್ಧಾರ ಕಾರ್ಯಕ್ರಮವನ್ನು ತಯಾರಿಸಿಕೊಳ್ಳಬೇಕು. [illegible]

[illegible]ಂತೆ ಗ್ರಾಮ ಸುಧಾರಣೆಯ ಕ್ರಮವನ್ನು ನಿಶ್ಚಯಿಸಿ, ಆ ಕ್ರಮವನ್ನು ಸರ್ವರಿಗೂ ಸಮಾನವಾಗಿ ಅನ್ವಯಿಸುವಂತೆ ಪುರಸ್ಕರಿಸಬೇಕು. ಸಂಯುಕ್ತ [illegible] ದ ಗವ್ಹರ್ನರರು 'ಪ್ಲೆನಿಂಗ' (planing) ಅಂದರೆ ಸಂಕಲ್ಪಿತ ಕಾರ್ಯಕ್ರಮವಿಲ್ಲವೆಂದೂ ಆ ಕಾರ್ಯಕ್ರಮದ ಅಭಾವದಲ್ಲಿ ಗ್ರಾಮೋದ್ಧಾರ ಮಂಡಳದ ಈಗಿನ ಕೆಲಸ ಬರೀ ತೋರಗಾಣಿಕೆಯದೆಂದೂ ಸ್ವಾನುಭವದಿಂದ ದೂರುತ್ತಾರೆ. ಗ್ರಾಮೋದ್ಧಾರ ಮಂಡಳದ [illegible]

ಪ್ರಕಾರ

[illegible]

ಗೆಳೆಯರೆ

ಮಂಡಳದವ

ಪರಂಪರಾಗತ

[illegible] ವಿವರವನ

[illegible]ಧವಿವೆ!

ದರೂ [illegible]

[illegible]ಕ್ಕೇಸರರು

ದೇವರ ಭಂ

ತಮ್ಮವರಿಗೆ [illegible]

ದೊಡ್ಡಸ್ತಿಕೆ ಮೆ

ಬಡಸ್ತಿಕೆ ದೇ

ಸುಸೂತ್ರವಾಗಿ

ದಿಂದ ಸಾಲ!

ಮಾಡಲಿಕ್ಕೆ ದೇ

ವಾಗುತ್ತವೆ [illegible]

ಮಾಡಿ ಕಟ್ಟೋ

ರು ಮಾಡಿಪ್ಪ [illegible]

ದೇವಸ್ಥಾನಗಳ ಕ

ರದೂ ಒಂದು ಕಟಿ

ವರು ಭೂಭದ್ರತೆಂ

ಸಾಲ ಪಡೆವರೆ, [illegible]

ಖರ್ಚು ಬರೆದು

ಹಾಕುತ್ತಾರೆ! ಲೆಕ್ಕ

ಸುವ ಸಭ್ಯ ಮೊಕ್ತೆ

ಜಿಲ್ಹೆಯೊಳಗಿನ [illegible]

ಸರರು ಹಾಕಿಕೊಟ್ಟ

ಅನುಸರಿಸುವಂತಹದ

ಜಮಾ ವಿವರ ಬರೆದರು. ಖರ್ಚಿನ ವಿವರ ಬರೆವರು. [illegible] ಕೈಯಲ್ಲಿದ್ದ ಶಿಲ್ಕಿಗೂ ಖರ್ಚಿನ ವಿವರಗಳಿಗೂ [illegible] ಅಂತರ ಬರುತ್ತದೆ "ಒಮ್ಮಾ ಖರ್ಚು [illegible] ಹಾಯಿಗೂಡಿಸುವದಕ್ಕಾಗಿ [illegible] ಖರ್ಚು" ಎಂದು ಬರೆದ ಆದಾಯವು ತಯಾ[illegible] ವತ್ತು ಖರ್ಚು [illegible]ಗೂಡಿತ!

ಈ ಖರ್ಚಿನ ವಿವರ ದೇವರಿಗೆ ಸಹ ಗೊತ್ತಿಲ್ಲ, ಮೊಕ್ತೇಸರರೊಬ್ಬರಿಗೆ ಮಾತ್ರ ಗೊತ್ತು! ಜಮಾ ಖರ್ಚಿನ ಶಾಸ್ತ್ರದಲ್ಲಿ ಇದೊಂದು ಹೊಸ ಶೋಧ! ಈ ವಿವರ ಬರೆದು ಯಾವದೇ ಜಮಾ ಖರ್ಚನ್ನು ಯಾವಾಗಲೂ ಬಾಯಿಗೂಡಿಸಬರುತ್ತದೆ! ಮೊಕ್ತೇಸರರು ಇನ್ನೂ ಹಲವು ತರಗತಿಗಳಿಂದ ದೇವರ ಭಂಡಾರವನ್ನು ವಂಚಿಸಬಹುದು. ಸದಾವರ್ತವಿರುವ ದೇವಾಲಯಗಳಲಿ [illegible]

[illegible] ಎಣಿಸುತ್ತಾರೆ. ದೈತ್ಯರಿಗೂ ದೇವರಿಗೂ ಶಾಶ್ವತಃ ಬರೆಯುಬೇಕಾದರೆ ಅದಿತ್ಯ [ಅದ್ವೈತ್ಯ]ರಿಗೂ ಮತರವುಂಟು. ದೈತರು ದಿತಿಯ ಸಂತತಿ. ಆದಿತ್ಯರು ಅದಿತಿಯ ಸಂತತಿ. ದಿತಿ ಅದಿತಿಯರು ಸವತಿಯರು. ಆದರಿಂದ ದೈತರು ಅದಿತ್ಯರೂ ಸಾವತ್ರ ಬಂಧುಗ[illegible] ಅದಿ [illegible] ದೇವರ [illegible] ಅಪಹಾ[illegible]

ಮಾಡುವ ಯಾವತ್ತೂ ಪ್ರಸಂಗವನ್ನು ಸಾಧಿಸುವವರಿವರು. ಮೊಕ್ತೇಸರರು ದೈತ್ಯ ವಂಶಜರಾದ್ದರಿಂದ ದೇವಸ್ವದ ಅಪಹಾರ ಮಾಡಿ ಅಭಿವೃದ್ಧಿ ಹೊಂದುತ್ತಾರೆ. ದೇವಸ್ವದ ಅಪಹಾರ ದೈತ್ಯ-ಧರ್ಮ. ಆದರಿಂದಲೇ ಮೊಕ್ತೇಸರರು ದೈತ್ಯರಿಗುಚಿತವಾದ ಹಂಚಿಕೆಗಳನ್ನು [illegible]

ಮೋಟಾರಿನ ಓಡಾಟಕ್ಕೆ ಬಹು ನಿರ್ಬಂಧ. ಆ ಮೂಲಕ ತಿಕೀಟಿನ ದರ ಏರಿತು, ಹಡಗದ ಅಭಾವದಲ್ಲಿ ಜನರಿಗೆ ಪ್ರವಾಸ ಮಾಡಲಿಕ್ಕೂ ಸರಕುಗಳನ್ನು ತರ ಒಯ್ಯಲಿಕ್ಕೂ ತೊಂದರೆಯೇ ಸೈ! ಮುಕ್ಕಿಗತ ಓಡಾಟಕ್ಕೆ ಇನ್ನೂ ೧-೨ ತಿಂಗಳುಗಳಾದರೂ [illegible]

[illegible]ತ್ರಿದ್ವಾರೆ ಉಗಿಹಡಗದ ಓಡಾಟವಿದ್ದಿದರೆ ಇನ್ನು ೧೦ [illegible] ದಿನಗಳಲ್ಲಿ ಉಗಿಹಡಗ ಬರುವ ಸಂಭವವಿತ್ತು, ಮುತ್ತು ಆ ಘೋರಣದ ಮೇಲೆ ಅಕ್ಕಿಯ ದರ ತಾನಾಗಿ ಇಳಿಯುತ್ತಿತ್ತು. ಹಿಂದುಸ್ತಾನ ಸರಕಾರವು ಯುದ್ಧಕಾರ್ಯದ ಬಗ್ಗೆ ಇತ್ತ ಕಡೆ ಓಡಾಡುವ ಯಾವತ್ತೂ ಹಡಗಗಳನ್ನು ಸ್ವಾಧೀನ ಪಡಿಸಿಕೊಂಡಿದ್ದರಿಂದ ನಮ್ಮಿಲ್ಲೆಯವರಿಗೆ [illegible] ತೊಂದರೆಯಾಗಿದ [illegible] ಪೆಟ್ರೋಲ ನಿರ್ದಾಕ್ಷ್ರಮದಿ[illegible]

ದರವನ್ನು ವಿಚಾರಿಸಿದರೆ ೩ ಸಲೆ ಬಡ್ಡಿ ದೊರೆಯುವಂತಿಲ್ಲ. ಪರೋಪಕಾರ ಮಾಡಹೊರಟ ಸಹಕಾರ ಸಂಘಗಳು ಜಿಪುಣರಂತೆ ವರ್ತಿಸಕೂಡದು. ತಮ್ಮ ಸಾಲಕ್ಕೆ ೩ ಸಲೆಯಂತೆ ಬಡ್ಡಿ ಲೆಕ್ಕ ಮಾಡಿ ಕೊಡುವ ಸಾಲಗಾರರ ಮೇಲೆ ಕೃಪೆ ಇಡಬೇಕು. [illegible]ಾಲಮೊಳಗಿಂದ ಬಿಡುಗಡೆ [illegible]ಾರರು ಈ ೧೦ ವರ್ಷಗಳಲ್ಲಿ ಹಂಚಿಕೊಂಡದ್ದುಂಟು. ಆ ವರ್ಷ ಲಾಭ ಹಂಚಿಕೊಳ್ಳ[illegible]ತ್ಯಾಗವಾಗದು. ಸಹ[illegible]ಗಾರರ ಮೇಲ ಒತ್ತಾಯ[illegible]ಯನ್ನು ಲಿಲಾಂವಿಗೆ ಹೊರ[illegible] ಭೂಮಿಯ ಬೆಲೆ ಕುಗ್ಗಿ[illegible]ವಕಾರರಿಗೆ ಅಗ್ಗವಾಗಿ [illegible]ಕೂಲವಾಗುತ್ತವೆ. ಯುದ್ಧ[illegible]ಇಲ್ಲದ ಸುದ್ದಿಗಳೂ ಹರಟೆ[illegible]ರಾರಿಗೂ ಎಲ್ಲಿಯೂ ನೆಲೆ[illegible]ಗುವದೆಂದು ಎಲ್ಲರಿಗೂ [illegible] ಕಾಲದಲ್ಲಿ ತನ್ನ ಬಾಳ್ವೆ[illegible] ಜನರಿಂದ್ದಾರೆ ಪ್ರತಿಯೊ[illegible] ಜಾಗ್ರತೆ ಕೊಳ್ಳುತ್ತಿರುವ [illegible]ಕ್ಕಾಗಿ ಏರ್ಪಾಟು ಹೊಂ[illegible] ನಿಸ್ಸರವಾಗಿ, ಕಠೋರ[illegible]ದರೆ ಕಲ್ಲೋಲವೇಳುವ[illegible]ಗುವ ಭೀತಿಯುಂಟು. [illegible]ಗಿಗೆ ಮೋಸವಾಗದಂತೆ [illegible]ಡಿಸು ಮಾಡಿಕೊಂಡು[illegible]

[illegible]ದಾರರು ಪಕ್ಷಪಾತ[illegible] ಕೆಂಡು ಬರುವದ[illegible] ಇಲ್ಲವೆ ಮುಂಬ[illegible]ವನ್ನು ಕೈಕೊಂಡು [illegible] ಪಡೆಯಲು ವಿಧಿ[illegible]ಕ್ಷಿತವಾದೀತು

ರೆ....

ಕಾನಡಾ ವೃತ್ತ

Roll No 10

ಸರ್ಟಿಫಿಕೇಟ್

ನಿನ್ನ ತಂದೆ ನಿನಗೊ?

ಪೂರ್ಣ ವಿವರಗಳಿಗೆ ನಿಮ್ಮ
ಹತ್ತಿರದ ಪೋಸ್ಟ ಆಪೀಸಿನಲ್ಲಿ ಕೇಳಿ

KN G I 10

ಕಾನಡಾವೃತ್ತ

Roll No 10

ಸ್ಥಳೀಕ ವಿಷಯಗಳು.

ಲೇಖಕ.- ಸ್ಥಳವಂತಿಕ

ಗ್ರಾಮೋದ್ಧಾರ ಕಾರ್ಯದ ಬಗ್ಗೆ ಸಂಯುಕ್ತ ಪ್ರಾಂತದ ಗವ್ಹರ್ನರರಾದ ಸರ್ ಮಾರಿಸ ಹೆಲೆಟರವರು ಸುಲ್ತಾನಪುರದೊಳಗಿನ ಗ್ರಾಮೋದ್ಧಾರ ಮಂಡಳದ ಸಭೆಯಲ್ಲಿ ಮಾಡಿದ ಭಾಷಣವನ್ನು ನಮ್ಮಲ್ಲಿಯ ಗ್ರಾಮೋದ್ಧಾರವಾದಿಗಳೆಲ್ಲರೂ ಅಭ್ಯಾಸ ಮಾಡುವಂತಹದು: ವ್ಯವಸ್ಥಿತವಾದ ಕಾರ್ಯಕ್ರಮ ಕಲ್ಪಿಸೋಣಾಗಲಿಲ್ಲ ಸಂಘಟಕರಿಗೆ ಶಿಕ್ಷಣವಿಲ್ಲ; ಒಬ್ಬೊಬ್ಬರಿಗೆ ೨೦ ೩೦ ಗ್ರಾಮಗಳು ಕೊಡಲ್ಪಟ್ಟಿವೆ ಇವನ್ನೆಲ್ಲ ಸುಧಾರಿಸುವ ಶಕ್ತಿ ಈ ಸಂಘಟಕರಿಗಿಲ್ಲ. ಹೀಗೆ ಗ್ರಾಮೋದ್ಧಾರ ಕಾರ್ಯದ ವಿಷಯ ಸಂಯುಕ್ತ ಪ್ರಾಂತದ ಗವ್ಹರ್ನರರು ಮಾಡಿದ ಟೀಕೆ ಯಥಾರ್ಥವುಂಟು. ಗ್ರಾಮೋದ್ಧಾರ ಕಾರ್ಯದಲ್ಲಿ ಹೇಳ್ಬಿಣ್ಣ (window-dressing) ವನ್ನಷ್ಟೇ ಕೊಡುವರು. [illegible] ಸಂಯುಕ್ತ ಪ್ರಾಂತದ ಗವ್ಹರ್ನರರು ಟೀಕೆ ಮಾಡುತ್ತಾರೆ.

ಗ್ರಾಮೋದ್ಧಾರ ಕಾರ್ಯ ಯಾವದೊಂದು ವ್ಯವಸ್ಥಿತವಾದ ಕಾರ್ಯಕ್ರಮದಂತೆ ನಡೆಯುವದಿಲ್ಲವೆಂದು ಗ್ರಾಮೋದ್ಧಾರದ ಮಂಡಳದ ಆಖ್ಯಾಪತ್ರಿಕೆಗಳನ್ನು ಪರಾಂಬರಿಸಿದರೆ ತಿಳಿಯುವಂತಿದೆ. ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿಗಳು ಈ ಕಾರ್ಯದ ಶಿಕ್ಷಣ ಪಡೆದವರಲ್ಲ. ಗ್ರಾಮೋದ್ಧಾರದ ವ್ಯಾಪಕತೆಯನ್ನು ಇವರು ಅರಿಯುತ್ತಾರೆಂದು ಎಣಿಸುವದು ಕಠಿಣ. ಗ್ರಾಮೋದ್ಧಾರ ವ್ಯಾಪ್ತಿಯಲ್ಲಿ ಹೇರಳ ವಿಷಯಗಳು ಸೇರ್ಪಡೆಯಾಗುತ್ತವೆ. ಗ್ರಾಮದ ಪರಿಸ್ಥಿತಿಯನ್ನು ಮೊಟ್ಟಮೊದಲು ಪರ್ಯಾಲೋಚಿಸಬೇಕು. ಬೇಸಾಯಗಾರರೆಷ್ಟು, ಬೇಸಾಯ ಪ್ರದೇಶವೆಷ್ಟು, ಪ್ರಧಾನ ಬೇಸಾಯವ್ಯಾವದು, ಗೌಣ ಬೇಸಾಯವ್ಯಾವದು, ಬೇಸಾಯೇತರ ಸಮಯದಲ್ಲಿ ಕೈಕೊಳ್ಳಬಹುದಾದ ಕೈಗಾರಿಕೆಗಳಾವವು, ಆ ಕೈಗಾರಿಕೆಗಳಿಗೆ ಗ್ರಾಮಗಳಲ್ಲಿ ಯಾವ್ಯಾವ ಅನುಕೂಲತೆಗಳಿವೆ, ಈಗ ದುಃಸ್ಥಿತಿಯಾಗಲು ಕಾರಣವೇನು, ಅದನ್ನು ಪರಿಹರಿಸಲು ಉಪಾಯಗಳಾವವು ಗ್ರಾಮನಿವಾಸಿಗಳಿಂದ ಪರಿಹರಿಸಿಕೊಳ್ಳಬಹುದಾದ ಸಂಗತಿಗಳೆಷ್ಟು, ಸರಕಾರದಿಂದ ಅನುಗ್ರಹವಾಗಬೇಕಾದ ಸಂಗತಿಗಳೆಷ್ಟು, ಜನಾರೋಗ್ಯಕ್ಕೆ ಬಾಧಕವ್ಯಾವದು, ಇವನ್ನೆಲ್ಲ ಅಭ್ಯಾಸ ಮಾಡುವ ಶಕ್ತಿ ಗ್ರಾಮೋದ್ಧಾರಕರಲ್ಲಿರಬೇಕು. ಯಾವದೊಂದೆರಡು ಗ್ರಾಮಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು, ಆ ಹಳ್ಳಿಗಳಿಗೇ ಒಂದಿಲ್ಲೊಂದು ಉಪಾಯದಿಂದ ಇಡೀ ಜಿಲ್ಹೆಗೆ ಸಲ್ಲತಕ್ಕ ಹಣಗಳನ್ನು ಎಳಕೊಳ್ಳುವ ಹಂಚಿಕೆ ಹಾಕುವದು ಇಡೀ ಜಿಲ್ಹೆಯ ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿಗಳಿಗೆ ಉಚಿತವಾದದ್ದಲ್ಲ. ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿಗಳು ಗ್ರಾಮಗ್ರಾಮಾಂತರಗಳನ್ನು ಸಂಚರಿಸಿ ೫ ಇಲ್ಲವೆ ೧೦ ವರ್ಷಗಳ ಗ್ರಾಮೋದ್ಧಾರ ಕಾರ್ಯಕ್ರಮವನ್ನು ತಯಾರಿಸಿಕೊಳ್ಳಬೇಕು. ನಿರ್ಮಲ ಚಿತ್ತದಿಂದಲೂ ನಿಷ್ಪಕ್ಷಪಾತ ಬುದ್ಧಿಯಿಂದಲೂ ಈ ಕಾರ್ಯಕ್ರಮ ತಯಾರಾಗಿದ್ದರೆ ಗ್ರಾಮೋದ್ಧಾರ ಮಂಡಳದ ಕ[illegible] ಆ ಕಾರ್ಯಕ್ರಮ[illegible]ವಂತೆ ಗ್ರಾಮ ಸುಧಾರಣೆಯ ಕ್ರಮವನ್ನು ನಿಶ್ಚಯಿಸಿ, ಆ ಕ್ರಮವನ್ನು ಸರ್ವರಿಗೂ ಸಮಾನವಾಗಿ ಅನ್ವಯಿಸುವಂತೆ ಪುರಸ್ಕರಿಸಬೇಕು. ಸಂಯುಕ್ತ [illegible]ದ ಗವ್ಹರ್ನರರು 'ಪ್ಲೆನಿಂಗ' (planing) ಅಂದರೆ ಸಂಕಲ್ಪಿತ ಕಾರ್ಯಕ್ರಮವಿಲ್ಲವೆಂದೂ ಆ ಕಾರ್ಯಕ್ರಮದ ಅಭಾವದಲ್ಲಿ ಗ್ರಾಮೋದ್ಧಾರ ಮಂಡಳದ ಈಗಿನ ಕೆಲಸ ಬರೀ ತೋರಗಾಣಿಕೆಯದೆಂದೂ ಸ್ವಾನುಭವದಿಂದ ದೂರುತ್ತಾರೆ. ಗ್ರಾಮೋದ್ಧಾರ ಮಂಡಳದ ಅನ

ಪ್ರಕಾರ
ಜಿಲ್ಹಾಧಿಕ
ವರು. ನವ
ದರ್ಶಿಗಳ
ಇವರೆಲ್ಲರ
ಹಿ ಪ್ರತಿಯೊ
ಕೃಬೇಕು
ಗ ಮೋದ
ಗ್ರಾಮೋದ
ನಿರ್ಧರಿಸತ
ಕಾರ್ಯವು

ಗೆಳೆಯುವಿ
ಮಂಡಳದವ
ಪರಂಪರಾಗತ
ಗಳ ವಿವರವನ
ಜನಾಥವಿವೆ!
ದರೂ ಆಗಾ
ಮೊಕ್ತೇಸರರು
ದೇವರ ಭಂ
ತಮ್ಮವರಿಗೆ ಸ
ಡೊದ್ದಸ್ತಿಕೆ ಮ
ಬಡಸ್ತಿಕೆ ದೇ
ಸುಸೂತ್ರವಾಗಿ
ದಿಂದ ಸಾಲ
ಮಾದಲಿಕ್ಕೆ ದೇ
ವಾಗುತ್ತವೆ ಸಾ
ಮಾಡ ಕಟ್ಟೋ
ರು ಮಾಡಿದ್ದೇ ಖ
ದೇವಸ್ಥಾನಗಳ ಕ
ರದೂ ಒಂದು ಕಟ
ವರು ಭೂಭದ್ರತೆಯ
ಸಾಲ ಪಡೆದರೆ, ೧
ಖರ್ಚು ಬರೆದು
ಹಾಕುತ್ತಾರೆ! ಲೆಕ್ಕ
ಸುವ ಸಭ್ಯ ಮೊಕ್ತೆ
ಜಿಲ್ಹೆಯೊಳಗಿನ ಒ
ಸರರು ಹಾಕಿಕೊಟ್ಟ
ಅನುಸರಿಸುವಂತಹವ

ಜಮಾ ವಿವರ ಬರೆದರು; ಖರ್ಚಿನ ವಿವರ ಬರೆದರು; ಆದರೂ ಕೈಯಲ್ಲಿದ ಶಿಲ್ಕಿಗೂ ಖರ್ಚಿನ ವಿವರಗಳಿಗೂ ದಾ[illegible]ರ ಅಂತರ ಬರುತ್ತದೆ "ಜಮಾ ಖರ್ಚನ್ನು ಬಾಯಿಗೂಡಿಸುವದಕ್ಕಾಗಿ ದೂ[illegible] ಖರ್ಚು" ಎಂದು ಬರೆದು, ಅಭಾಯವನ್ನು ತಯಾರಿಸಿದರು. ಜಮಾ ಮತ್ತು ಖರ್ಚು ಬಾಯಿಗೂಡಿತು! ಈ ಖರ್ಚಿನ ವಿವರ ದೇವರಿಗೆ ಸಹ ಗೊತ್ತಿಲ್ಲ, ಮೊಕ್ತೇಸರರೊಬ್ಬರಿಗೆ ಮಾತ್ರ ಗೊತ್ತು! ಜಮಾ-ಖರ್ಚಿನ ಶಾಸ್ತ್ರದಲ್ಲಿ ಇದೊಂದು ಹೊಸ ಶೋಧ! ಈ ವಿವರ ಬರೆದು ಯಾವದೇ ಜಮಾ-ಖರ್ಚನ್ನು ಯಾವಾಗಲೂ ಬಾಯಿಗೂಡಿಸಬರುತ್ತದೆ! ಮೊಕ್ತೇಸರರು ಇನ್ನೂ ಹಲವು ತರಗತಿಗಳಿಂದ ದೇವರ ಭಂಡಾರವನ್ನು ವಂಚಿಸಬಹುದು. ಸದಾವರ್ತವಿರುವ ದೇವಾಲಯಗಳಲಿ ಪ[illegible]

[illegible] ಭಕ್ತನೆಂದು ಎಣಿಸುತ್ತಾರೆ. ದೈತ್ಯರಿಗೂ ದೇವರಿಗೂ ಶಾಶ್ವತಃ ಬರೆಯಬೇಕಾದರೆ ಅದಿತ್ಯ [ಅದೈತ್ಯ]ರಿಗೂ ಮಾತ್ರವುಂಟು, ದೈತ್ಯರು ದಿತಿಯ ಸಂತತಿ; ಆದಿತ್ಯರು ಅದಿತಿಯ ಸಂತತಿ. ದಿತಿ ಅದಿತಿಯರು ಸವತಿಯರು ಆದರಿಂದ ದೈತ್ಯರೂ ಆದಿತ್ಯರೂ ಸಾವತ್ರ ಬಂಧುಗಳು. ಆದಿ[illegible] ದೇವರ ಅ[illegible] ಅಸಾ[illegible]

ಮಾಡುವ ಯಾವತ್ತೂ ಪ್ರಸಂಗವನ್ನು ಸಾಧಿಸುವವರು. ಮೊಕ್ತೇಸರರು ದೈತ್ಯ-ವಂಶಜರಾದ್ದರಿಂದ ದೇವಸ್ವದ ಅಪಹಾರ ಮಾಡಿ ಅಭಿವೃದ್ಧಿ ಹೊಂದುತ್ತಾರೆ. ದೇವಸ್ವದ ಅಪಹಾರ ದೈತ್ಯ-ಧರ್ಮ ಅದರಿಂದಲೇ ಮೊಕ್ತೇಸರರು ದೈತ್ಯರಿಗುಚಿತವಾದ ಹಂಚಿಕೆಗಳನ್ನು

ಮೋಟಾರಿನ ಓಡಾಟಕ್ಕೆ ಬಹು ನಿರ್ಬಂಧ. ಆ ಮೂಲಕ ಟಿಕೀಟಿನ ದರ ಏರಿತು, ಹಡಗದ ಅಭಾವದಲ್ಲಿ ಜನರಿಗೆ ಪ್ರವಾಸ ಮಾಡಲಿಕ್ಕೂ ಸರಕುಗಳನ್ನು ತರ-ಒಯ್ಯಲಿಕ್ಕೂ ತೊಂದರೆಯೋ ತೊಂದರೆ! ಮುಚ್ಚಿಗಳ ಓಡಾಟಕ್ಕೆ ಇನ್ನೂ ೧-೨ ತಿಂಗಳುಗಳಾದರೂ

ದರವನ್ನು ವಿಚಾರಿಸಿದರೆ ೩ ಸಲೆ ಬಡ್ಡಿ ದೊರೆಯುವಂತಿಲ್ಲ. ಪರೋಪಕಾರ ಮಾಡಹೊರಟ ಸಹಕಾರ ಸಂಘಗಳು ಜಿಪುಣರಂತೆ ವರ್ತಿಸಕೂಡದು. ತಮ್ಮ ಸಾಲಕ್ಕೆ ೩ ಸಲೆಯಂತೆ ಬಡ್ಡಿ ಲೆಕ್ಕ ಮಾಡಿಕೊಡುವ ಸಾ[illegible] ಮೇಲೆ ಕೃಪೆ ಇಡಬೇಕು.

ಾಲಮೊಳಗಿಂದ ಬಿಡುಗಡೆ
ರರು ಈ ೧೦ ವರ್ಷಗಳಲ್ಲಿ
ಹಂಚಿಕೊಂಡದ್ದುಂಟು. ಆ
ವರ್ಷ ಲಾಭ ಹಂಚಿಕೊಳ್ಳ
ತ್ಯಾಗವಾಗದು. ಸಹ
ಗಾರರ ಮೇಲೆ ಒತ್ತಾಯ
ಯನ್ನು ಲಿಲಾಂವಿಗೆ ಹೊರ
ಭೂಮಿಯ ಬೆಲೆ ಕುಗ್ಗಿ
ವಕಾರರಿಗೆ ಅಗ್ಗವಾಗಿ
ಕೊಲವಾಗುತ್ತವೆ. ಯುದ್ಧ
ಇಲ್ಲದ ಸುದ್ದಿಗಳೂ ಹರಬಿ
ರಾರಿಗೂ ಎಲ್ಲಿಯೂ ನೆಲೆ-
ಗುವವೆಂದು ಎಲ್ಲರಿಗೂ
ಕಾಲದಲ್ಲಿ ತನ್ನ ಬಾಳ್ವೆ
ಜನರಿದ್ದಾರೆ. ಪ್ರತಿಯೊ
ಜಾಗ್ರತೆ ಕೊಳ್ಳುತ್ತಿರುವ
ಕ್ಕಾಗಿ ಏರ್ಪಾಟು ಹೊಂ
ನಿಸ್ತುರವಾಗಿ, ಕಠೋರ
ದರೆ ಕಲ್ಲೋಲವೇಳುವ
ಗುವ ಭೀತಿಯುಂಟು.
ಗಿಗೆ ನೋಸವಾಗದಂತೆ
ಕಡಿಮೆ ಮಾಡಿಕೊಂಡು
ಬ.

ದಾರರು ಪಕ್ಷಪಾತ
ಕೆಂಡು ಬರುವದ
ಇಲ್ಲವೆ ಮುಂಬ
ವನ್ನು ಕೈಕೊಂಡು
ಪಡೆಯಲು ವಿಧಿ
ಕ್ಷಿತವಾದೀತು.

ರೆ....

[illegible]ಳು ಕೈಬಿಗಿಹಿಡಿಯುತ್ತಿದ್ದಾರೆ. ಉಗಿಹಡಗದ ಓಡಾಟವಿದ್ದರೆ ಇನ್ನು ೧೦-೧೫ ದಿನಗಳಲ್ಲಿ ಉಗಿಹಡಗ ಬರುವ ಸಂಭವವಿತ್ತು; ಮತ್ತು ಆ ಘೋರಣದ ಸೋಲೆ ಅಕ್ಕಿಯ ದರ ತಾನಾಗಿ ಇಳಿಯುತ್ತಿತ್ತು. ಹಿಂದುಸ್ಥಾನ ಸರಕಾರವು ಯುದ್ಧಕಾರ್ಯದ ಬಗ್ಗೆ ಇತ್ತ ಕಡೆ ಓಡಾಡುವ ಯಾವತ್ತೂ ಹಡಗಗಳನ್ನು ಸ್ವಾಧೀನ ಬಡಿಸಿಕೊಂಡಿದ್ದರಿಂದ ನಮ್ಮ ಜಿಲ್ಹೆಯವರಿಗೆ ಬಹಳ ತೊಂದರೆಯಾಗಿದೆ. ಪೆಟ್ರೋಲ-ಸೀದಾಕ್ರಮದಿಂದ



ಸರ್ಟಿಫಿಕೇಟ್

ನಿನ್ನ ತಂದೆ ನಿನಗೊ?

ಪ್ರಶ್ನಾ ವಿವರಗಳಿಗೆ ನಿಮ್ಮ
ಹತ್ತಿರದ ಪೋಸ್ಟ ಆಫೀಸಿನಲ್ಲಿ ಕೇಳಿ

KN GJ 40

ಸ್ಥಳಿಕ ವಿಷಯಗಳು.

ಲೇಖಕ ಸ್ಥಳವಂತಿಕ

ಗ್ರಾಮೋದ್ಧಾರ ಕಾ ದ ಒಗ ಸಂ ಕ್ತ ಪ್ರಾಂತದ ಗವ್ಹರ್ನರರಾದ ಸರ್ ಮಾರಿಸ ಹಲೆಟ ರವರು ಸುಲ್ತಾನಪುರದೊಳಗಿನ ಗ್ರಾಮೋದ್ಧಾ ಮಂಡಳದ ಸಭೆಯಲ್ಲಿ ಮಾಡಿದ ಭಾಷಣವನ್ನು ನಮ್ಮಲ್ಲಿಯ ಗ್ರಾಮೋದ್ಧಾರ ಪಾದಿಕಾರಿಗಳು ಸ ಮಾತ ವಂತಹದು ವ್ಯವಸ್ಥಿತ ಕಾ ಕ್ರಮ ಕಲ್ಪಿಸೋಣಾಗಲಿಲ್ಲ ಂಘಟಕರಿಗೆ ಶಿಕ್ಷಣ ಒಬ್ಬೊಬ್ಬರಿಗೆ ೩೦ ೩೦ ಗ್ರಾಮ ಕೊಡ ಲ್ಪಟ್ಟಿವೆ ಇವನ್ನೆಲ್ಲ ಸುಧಾರಿಸುವ ಈ ಟಕರಿಗಿಲ್ಲ ಹೀಗೆ ಗ್ರಾಮೋದ್ಧಾ ವಿಷಯ ಸಂಯುಕ್ತ ಪ್ರಾಂತದ ಗವ್ಹರ್ನರರು ಮಾಡಿದ ಟೀಕೆ ಯಥಾರ್ಥವುಂಟು ಗ್ರಾಮೋದ್ಧಾರ ಕಾರ್ಯದಲ್ಲಿ ಲ್ಡೋ (window dress ing) ವನ್ನೇ ಕೊಡವರ ಸಂಯುಕ್ತ ಪ್ರಾಂತದ ಗವ್ಹನರ ಮಾಡುತ್ತಾರೆ

ಗ್ರಾಮೋದ್ಧಾರ ಕಾರ್ಯ ಯಾವದೊಂದ ವ್ಯವಸ್ಥಿತವಾದ ಕಾರ್ಯಕ್ರಮದಂತೆ ನಡೆಯುವದಿಲ್ಲವೆಂದು ಗ್ರಾಮೋದ್ಧಾರದ ಮಂಡಳದ ಪತ್ರಕಗಳನ್ನು ಪರಾಂಬರಿಸುವದರಿಂದ ತಿಳಿಯುವಂತಿದ ಗ್ರಾಮೋದ್ಧಾರ ಮಂಡಳದ ಕಾರ್ಯ ದರ್ಶಿ ಕಾರ್ಯದ ಶಿಕ್ಷಣ ಪಡೆದವರು ಗ್ರಾಮೋದ್ಧಾರದ ವ್ಯಾಪಕತೆಯನ್ನು ಇವರು ಅರಿಯುತ್ತಾರೆಂದು ಸುವದು ಕಠಿಣ ಗ್ರಾಮೋದ್ಧಾರ ವ್ಯಾಪ್ತಿಯ ಹೇರಳ ವಿಷಯಗಳು ಸೇರ್ಪಡೆಯಾ ತ್ತ ಗ್ರಾಮದ ಪರಿಸ್ಥಿತಿಯನ್ನು ಮೊದಲು ಪರ್ಯಾಲೋಚಿಸಬೇಕು ಬೇಸಾಯ ರದಿಸ್ಥಿ ಬೇಸಾಯ ಪ್ರದೇಶವೆಷ್ಟು ಪ್ರಧಾನ ಬೇಸಾಯವ್ಯಾವದು ಗೌಣ ಬೇಸಾಯವ್ಯಾವದು ಬೇಸಾಯೇತರ ಸಮಯದಲ್ಲಿ ಕೈಕೊಳ್ಳಬಹುದಾದ ಕೈಗಾರಿಕೆ ವವು ಆ ಕೈಗಾರಿಕೆಗಳಿಗೆ ಗ್ರಾಮ ಲ್ಲಿ ಯಾವ್ಯಾವ ಅನುಕೂಲತೆಗಳವೆ, ಈಗ ದುಃಸ್ಥಿತಿಯಾಗಲು ಕಾರಣ ವೇನು, ಅವನ್ನು ಪರಿಹರಿಸಲು ಉಪಾಯಗಳಾವವು ಗ್ರಾಮನಿವಾಸಿಗಳಿಂದ ಪರಿಹರಿಸಿಕೊಳ್ಳಬಹುದ ವ ಸಂಗತಿಗಳೆಷ್ಟು ಸರಕಾರದಿಂದ ಅನುಗ್ರಹವಾಗಬೇಕಾದ ಸಂಗತಿಗಳೆಷ್ಟು ಜನಾರೋಗ್ಯಕ್ಕೆ ಬಾಧಕವ್ಯಾವದು, ಇವನ್ನೆಲ್ಲ ಅಭ್ಯಾಸ ಮಾಡುವ ಶಕ್ತಿ ಗ್ರಾಮೋದ್ಧಾರಕರಲ್ಲಿರಬೇಕು ಯಾವದೊಂದೆರಡು ಗ್ರಾಮಗಳನ್ನು ಲಕ್ಷದಲ್ಲಿಟ್ಟುಕೊಂಡು ಆ ಹಳ್ಳಿಗಳಿಗೇ ಒಂದಿರೊಂದು ಉಪಾಯದಿಂದ ಇಡೀ ಜಿಲ್ಲೆಗೆ ಸಿಲ್ಲಿಕಕ್ಕ ಹಣಗಳನ್ನು ಎರಕೊಳ್ಳುವ ಹಂಚಿಕೆ ಹಾಕವದು ಇಡೀ ಜಿಲ್ಲೆಯ ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿಗಳಿಗೆ ಉಚಿತವಾದವಲ್ಲ ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿಗಳು ಗ್ರಾಮ ಗ್ರಾಮಾಂತರ ನ್ನ ಸಂ ಇಲ್ಲದ ವ ಗಳ ಗ್ರಾಮೋದ್ಧಾರ ಕಾರ್ಯಕ್ರಮ ವನ್ನ ತಯಾರಿಸಿಕೊಳ್ಳಬೇಕು ನಿವ ತ್ರದಿಂದ ನಿರ್ದಿಷ್ಟ ಈ ಕಾರ್ಯಕ್ರಮ ತಯಾ ಗ್ರಾಮೋದ್ಧಾ ದ ಕ ರಿ ಅ

ರಂತೆ ಗ್ರಾಮ ಸುಧಾರಣೆಯ ಕ್ರಮವನ್ನು ನಿಶ್ಚಯಿಸಿ ಆ ಕ್ರಮವನ್ನು ಸಮ ರಿಗೂ ಸಮಾನವಾಗಿ ಅನ್ವಯಿಸ ನ ತಿ ಪುರಸ್ಕರಿಸಬೇಕು ಸಂಯುಕ್ತ ದ ಗವ್ಹರ್ನರರು 'ಪ್ಲೆನಿಂಗ' (planing) ಅಂದರೆ ಸಂಕಲಿತ ಕಾರ್ಯಕ್ರಮವಿಲ್ಲವೆಂದೂ ಆ ಕಾರ್ಯಕ್ರಮದ ಅಭಾವದಲ್ಲಿ ಗ್ರಾಮೋದ್ಧಾರ ಮಂಡಳದ ಈಗಿನ ಕೆಲಸ ಬರೇ ತೋರಗಾಣಿಕೆಯದೆಂದೂ ಸ್ವಾನುಭವದಿಂದ ದೂರುತ್ತಾರೆ ಗ್ರಾಮೋದ್ಧಾರ ಮಂಡಳದ ಆ ಪಕಾರ ಪಿಲ್ಹಾಧಿ ವರ ನವ ರ್ಶಿಗಳ ಇವರೆಲ್ಲರ ಹಿಪ್ರತಿಯ ಲ್ಪಬೇಕ ಗ ಮೋದ ಗ್ರಾಮೋದ ನಿರ್ಧರಿಸತ ಕಾರ್ಯವು

ಗಕೆಯ ದಿ ಮಂಡಳದವ ಪರಂಪರ ಗತ ಗ ವಿವರವನ್ನು ಧಪಿವೆ! ದರೂ ಆಗಾ ಮೊಕ್ತೇಸರರು ದೇವರ ಭಂ ತಮ್ಮವರಿಗೆ ಸ ದೊಡ್ಡಸ್ತಿಕೆ ಮೆ ಬಡಸ್ತಿಕೆ ದೇ ಸುಸೂತ್ರವಾಗಿ ದಿಂದ ಸ ಲ! ಮಾಡಲಿಕ್ಕೆ ದೇ ವಾಗುತ್ತವೆ ಸಾ ಮಾಡಿ ಚಟ್ಟೋ ರು ಮಾಡಿದ್ದೇ ಖ ದೇವಸ್ಥಾನಗಳ ಕ ರದೂ ಒಂದು ಕಟಿ ವರು ಭೂಭದ್ರತೆಂ ಸಾಲ ಪಡೆದರೆ, ಇ ಖರ್ಚು ಬರೆದು ಹಾಕುತ್ತಾರೆ! ಲೆಕ್ಕ ಸುವ ಸಭ್ಯ ಮೊಕ್ತೆ ಜಿಲ್ಲೆಯೊಳಗಿನ ಬ ಸರರು ಹಾಕಿಕೊಟ್ಟ ಅನುಸರಿಸುವಂತಹವ ಜಮಿ ವಿವರ ಒರೆದರು ಖರ್ಚಿನ ವಿವರ ಬರೆದರು ಆದರೂ ಕೈಯಲ್ಲಿದ ಶಿಲ್ಕಿಗೂ ಖರ್ಚಿನ ವಿವರಗಳಿಗೂ ರ ಅಂತರ ಬರುತ ವೆ "ಒಮಾ ಖಚ ಬಾಯಿ ಗೂಡಿಸವದಕ್ಕಾಗಿ ೂ ಖ ಖರ್ಚ" ಎಂದ ಬರೆದ ಆ ಯಸ್ಸ ತಯಾ ರಿ ವ ತ್ತ ಖಚ ಗಾತ

ಈ ಖಚಿನ ವಿವರ ದೇವರಿಗೆ ಸಹ ಗೊತ್ತಿಲ್ಲ, ಮೊಕ್ತೇಸರರೊಬ್ಬರಿಗೆ ಮಾತ್ರ ಗೊತ್ತು! ಜಮಾ ಖರ್ಚಿನ ಶಾಸ್ತ್ರದಲ್ಲಿ ಇದೊಂದು ಹೊಸ ಶೋಧ! ಈ ವಿವರ ಬರೆದು ಯಾವದೇ ಜಮಾ ಖರ್ಚನ್ನು ಯಾವಾಗಲೂ ಬಾಯಿಗೂಡಿಸಬರುತ್ತದೆ! ಮೊಕ್ತೇಸರರು ಇನ್ನೂ ಹಲವು ತರಗತಿಗಳಿಂದ ದೇವರ ಭಂಡಾರವನ್ನು ವಂಚಿಸಬಹುದು ಸದಾವರ್ತವಿರುವ ದೇವಾಲಯಗಳಲಿ ಪ

ಭತ್ತವನ್ನು ಎಣಿಸುತ್ತಾರೆ ದೈತ್ಯರಿಗೂ ದೇವರಿಗೂ ಸಂಸ್ಕೃತಃ ಬರೆಯಬೇಕಾದರೆ ಆದಿತ [ಅದೃತ್ಯ] ಗೂ ಮತರವುಂಟು ದೈತರು ದಿತಿಯ ಸಂತತಿ ಅದಿತ್ಯರು ಅದಿತಿಯ ಸಂತತಿ ದಿತಿ ಅದಿತಿಯರು ಸವತಿಯರು ಆದರಿಂದ ದೈತರ ಅದಿಸ್ಟಗೂ ಸವತ್ತ ಬಂಧು ವಿ ಕ ಆ ಪದಿ ದೇವರ ಅ ಯ ನ

ಮಾಡುವ ಯಾಪತ್ತಾ ಪ್ರಸಂಗವನ್ನು ಸಾಧಿಸುವವರಿದರು ಮೊಕ್ತೇಸರರು ದೈತ್ಯ ವಂಶಜರಾದ್ದರಿಂದ ದೇವಸ್ವದ ಅಪಹಾರ ಮಾಡಿ ಅಭಿವೃದ್ಧಿ ಹೊಂದುತ್ತಾರೆ ದೇವಸ್ವದ ಅಪಹಾರ ದೈತ್ಯ ಧರ್ಮ ಅದರಿಂದಲೇ ಮೊಕ್ತೇಸರರು ದೈತ್ಯರಿಗುಚಿತವಾದ ಹಂಚಿಕೆಗಳನ್ನು

ಮೋಟಾರಿನ ಓಡಾಟಕ್ಕೆ ಬಹು ನಿರ್ಬಂಧ ಆ ಮೂಲಕ ತಿಕೀಟಿನ ದರ ಏರಿತ ಹಡಗದ ಅಭಾವದಲ್ಲಿ ಜನರಿಗ ಪ್ರವಾಸ ಮಾಡಲಿಕ್ಕೆ ಸರಕುಗಳನ್ನು ತರ ಒಯ್ಯಲಿಕ್ಕೂ ತೊಂದರೆಯೇ ಸೈ! ಮುಕ್ಕಿಗಳ ಓಡಾಟಕ್ಕೆ ಇನ್ನೂ ೧–೨ ತಿಂಗಳುಗಳಾದರೂ

ದರವನ್ನು ವಿಚಾರಿಸಿದರೆ ೩ ಸಲೆ ಒಡ್ಡಿ ದೊರೆಯುವಂತಿಲ್ಲ ಪರೋಪಕಾರ ಮಾಡಹೊರಟ ಸಹಕಾರ ಸಂಘಗಳು ಜಿಪುಣರಂತೆ ವರ್ತಿಸಕೂಡದು ತಮ್ಮ ನಾಲಕ್ಕೆ ೩ ಸಲೆಯಂತೆ ಬಡ್ಡಿ ಲೆಕ್ಕ ಮಾಡಿ ಕೊಡುವ ನೋಟೆ ಕೃಪ ಇಡಬೇಕು ಸಾಲದೊಳಗಿಂದ ಬಿಡುಗಡೆ ಯಾರರು ಈ ೧೦ ವರ್ಷ ಲ್ಲಿ ಹಂಚಿಕೊಂಡದ್ದುಂಟು ಆ ವರ್ಷ ಲಾಭ ಹಂಚಿಕೊಳ್ಳ ತ್ಯಾಗವಾಗದು ಸಹಕಾರರ ಮೇಲ ಒತ್ತಾಯ ಯನ್ನು ಲಿಲಾಂವಿಗೆ ಮೊತ ಭೂಮಿಯ ಬೆಲೆ ಕುಗ್ಗಿ ಸಹಕಾರರಿಗೆ ಅಗ್ಗವಾಗಿ ಕೂಲವಾಗುತ್ತವೆ ಯುದ್ಧ ಇಲ್ಲದ ಸುಸ್ಥಿಗಳೂ ಪರಟ ಸಾರಿಗೂ ಎಲ್ಲಿಯೂ ನೆಲೆ ಸಿಗುವವೆಂದು ಎಲ್ಲರಿಗೂ ಕಾಲದಲ್ಲಿ ತನ್ನ ಬಾಳ್ವೆ ಜನರಿದ್ದರೆ ಪ್ರತಿಯೂ ಜಾಗ್ರತೆ ಕೊಳ್ಳುತ್ತಿರುವ ಕ್ಕಾಗಿ ಏರ್ಪಾಟು ಯೋಂ ನಿಸ್ಸಾರವಾಗಿ, ಕಠೋರ ದರೆ ಕಲ್ಲೋಲವೇಳುವ ಗುವ ಭೀತಿಯುಂಟು ಗಿಗೆ ನೋಸವಾಗದಂತೆ ಕಡಿಮೆ ಮಾಡಿಕೊಂಡು

ದಾರರು ಪಕ್ಷಪಾತ ಕೆಂಡು ಬರುವದ ಇಲ್ಲದ ಮುಂಬ ವನ್ನು ಕೈಕೊಂಡು ಪಡೆಯಲು ವಿಧಿ ಕ್ಷಿತವಾದೀತು

ರೆ....

ಕೈಬಿಗಿಹಿಡಿಯ ತ್ರಿದ್ವಾರೆ ಉಗಿಹಡಗದ ಓಡಾಟವಿದ್ದಿದರ ಇನ್ನು ೧೦ ೧೫ ದಿನಗಳಲ್ಲಿ ಉಗಿಹಡಗ ಬರುವ ಸಂಭವವಿತ್ತು, ಮತ್ತು ಆ ಘೋರಣದ ಮೇಲೆ ಅಕ್ಕಿಯ ದರ ಇಳಿಯುತ್ತಿತ್ತು ಹಿಂದುಸ್ಥಾನ ಸರಕಾರವು ಯುದ್ಧಕಾರ್ಯದ ಬಗ್ಗೆ ಇತ್ತ ಕಡೆ ಓಡಾಡುವ ಯಾವತ್ತ ಹಡಗಗಳನ್ನು ಸ್ವಾಧೀನ ಮಾಡಿಕೊಂಡಿದ್ದರಿಂದ ನಮ್ಮ ಹ್ಲಿಯವರಿಗೆ ತೊಂದರೆಯಾದ ಪಟ್ರೋಲ ನಿರ್ಬಂಧ

ಕಾನಡಾ ವೃತ್ತ

Roll No 10

ಸರ್ಟಿಫಿಕೇಟ್

ನಿನ್ನ ತಂದೆ ನಿನಗೊ?

ಪೂರ್ತಾ ವಿವರಗಳಿಗೆ ನಿಮ್ಮ
ಹತ್ತಿರದ ಪೋಸ್ಟ ಆಫೀಸಿನಲ್ಲಿ ಕೇಳಿ

KN 61 10

ಸ್ಥಳಿಕ ವಿಷಯಗಳು.

ಲೇಖಕ - ಸ್ಥಳವಂತಿಕ

ಗ್ರಾಮೋದ್ಧಾರ ಕಾ ಪ ದ ಬಗ ಸಂಯು ಕ್ತ ಪ್ರಾಂತದ ಗವ್ಹರ್ನರರಾದ ಸರ್ ಮಾರಿಸ ಹಲೆಟ ರವರು ಸುಲ್ತಾನಪುರದೊಳಗಿನ ಗ್ರಾಮೋದ್ಧಾರ ಮಂಡಳದ ಸಭೆಯಲ್ಲಿ ಮಾಡಿದ ಭಾಷಣವನ್ನು ನಮ್ಮಲ್ಲಿಯ ಗ್ರಾಮೋದ್ಧಾರ ಪಾದಿಗಳೆಲ್ಲರೂ ಅಭ್ಯಾಸ ಮಾಡ ತಕ್ಕಂತಹದು. ವ್ಯವಸ್ಥಿತವಾದ ಕಾರ್ಯಕ್ರಮ ಕಲ್ಪಿಸೋದಾಗಲಿಲ್ಲ ಸಂಘಟಕರಿಗೆ ಶಿಕ್ಷಣ ವಿಲ್ಲ ಒಬ್ಬೊಬ್ಬರಿಗ ೨೦ ೩೦ ಗ್ರಾಮ ಕೊಡ ಲ್ಪಟ್ಟಿವೆ ಇವನ್ನೆಲ್ಲ ಸುಧಾರಿಸುವ ಆಸ ಈ ಸಂಘಟಕರಿಗಿಲ್ಲ. ಹೀಗೆ ಗ್ರಾಮೋದ್ಧಾರ ಕಾರ್ಯದ ವಿಷಯ ಸಂಯುಕ್ತ ಪ್ರಾಂತದ ಗವ್ಹರ್ನರು ಮಾಡಿದ ಟೀಕೆ ಯಥಾರ್ಥವುಂಟು. ಗ್ರಾಮೋದ್ಧಾರ ಕಾರ್ಯದಲ್ಲಿ ವಿಳಂಬ (window dress ing) ವನ್ನು ಕೊಡ ಬೇಕೆಂದು ಸಂಯುಕ್ತ ಪ್ರಾಂತದ ಗವ್ಹರ್ನರು ಸೂಚನೆ ಮಾಡುತ್ತಾರೆ

ಗ್ರಾಮೋದ್ಧಾರ ಕಾರ್ಯ ಯಾವದೊಂದು ವ್ಯವಸ್ಥಿತವಾದ ಕಾರ್ಯಕ್ರಮದಂತೆ ನಡೆಯ ಬೇಕೆಂದು ಗ್ರಾಮೋದ್ಧಾರದ ಮಂಡಳ ಅರ್ಜಿ ಪತ್ರಕಗಳನ್ನು ಹರಾಂಬಡಿಸಿದರೆ ಅರಿಯುವಂತಿದೆ. ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿಗಳು ಈ ಕಾರ್ಯದ ಶಿಕ್ಷಣ ಪಡೆದವರಲ್ಲ. ಗ್ರಾಮೋದ್ಧಾರದ ವ್ಯಾಪಕತೆಯನ್ನು ಇವರು ಅರಿಯುತ್ತಾರೆಂದು ಎಣಿಸುವದು ಕಠಿಣ. ಗ್ರಾಮೋದ್ಧಾರ ವ್ಯಾಪ್ತಿಯಲ್ಲಿ ಹೇರಳ ವಿಷಯಗಳು ಸೇರ್ಪಡೆಯಾಗುತ್ತವೆ. ಗ್ರಾಮದ ಪರಿಸ್ಥಿತಿಯನ್ನು ಮೊಟ್ಟಮೊದಲು ಪರ್ಯಾಲೋಚಿಸಬೇಕು. ಬೇಸಾಯಗಾರರೆಷ್ಟು ಬೇಸಾಯ ಪ್ರದೇಶವೆಷ್ಟು, ಪ್ರಧಾನ ಬೇಸಾಯವ್ಯಾವದು, ಗೌಣ ಬೇಸಾಯವ್ಯಾವದು. ಬೇಸಾಯೇತರ ಸಮಯದಲ್ಲಿ ಕೈಕೊಳ್ಳಬಹುದಾದ ಕೈಗಾರಿಕೆಗಳಾವವು, ಆ ಕೈಗಾರಿಕೆಗಳಿಗೆ ಗ್ರಾಮದಲ್ಲಿ ದೊರೆಯುವ ಅನುಕೂಲತೆಗಳಾವೆ, ಈಗ ದುಃಸ್ಥಿತಿಯಾಗಲು ಕಾರಣವೇನು, ಅದನ್ನು ಪರಿಹರಿಸಲು ಉಪಾಯಗಳಾವವು ಗ್ರಾಮನಿವಾಸಿಗಳಿಂದ ಪರಿಹರಿಸಿಕೊಳ್ಳಬಹುದಾದ ಸಂಗತಿಗಳೆಷ್ಟು ಸರಕಾರದಿಂದ ಅನುಗ್ರಹವಾಗಬೇಕಾದ ಸಂಗತಿಗಳೆಷ್ಟು, ಜನಾರೋಗ್ಯಕ್ಕೆ ಬಾಧಕವ್ಯಾವದು ಇವನ್ನೆಲ್ಲ ಅಭ್ಯಾಸ ಮಾಡುವ ಶಕ್ತಿ ಗ್ರಾಮೋದ್ಧಾರಕರಲ್ಲಿರಬೇಕು. ಯಾವದೊಂದೆರಡು ಗ್ರಾಮಗಳನ್ನು ಲಕ್ಷದಲ್ಲಿಟ್ಟುಕೊಂಡು ಆ ಕೆಲಸಗಳಿಗೇ ಒಂದಿಲ್ಲೊಂದು ಉಪಾಯದಿಂದ ಇಡೀ ಜಿಲ್ಹೆಗೆ ಸಲ್ಲತಕ್ಕ ಹಣಗಳನ್ನು ಎಳಕೊಳ್ಳುವ ಹಂಚಿಕೆ ಹಾಕುವದು ಇಡೀ ಜಿಲ್ಹೆಯ ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿಗಳಿಗೆ ಉಚಿತವಾದದ್ದಲ್ಲ. ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿಗಳು ಗ್ರಾಮ ಗ್ರಾಮಾಂತರಗಳನ್ನು ಸಂಚರಿಸಿ [illegible] ಇಲ್ಲವ [illegible] ಗಳ ಗ್ರಾಮೋದ್ಧಾರ ಕಾರ್ಯಕ್ರಮ ವನ್ನು ತಯಾರಿಸಿಕೊಳ್ಳಬೇಕು [illegible] ಸಿದ್ಧ ಪಡಿಸಿ [illegible] ನಿಷ್ಪಕ್ಷಪಾತ [illegible] ಈ [illegible] ತಯಾರ [illegible] ಗ್ರಾಮೋದ್ಧಾರ [illegible]

[illegible] ನಂತೆ ಗ್ರಾಮ ಸುಧಾರಣೆಯ ಕ್ರಮವನ್ನು ನಿಶ್ಚಯಿಸಿ, ಆ ಕ್ರಮವನ್ನು ಸರ್ವರಿಗೂ ಸಮಾನವಾಗಿ ಅನ್ವಯಿಸ ನತೆ ಪುರಸ್ಕರಿಸಬೇಕು. ಸಂಯುಕ್ತ [illegible] ದ ಗವ್ಹರ್ನರರು 'ಪ್ಲನಿಂಗ' (planing) ಅಂದರೆ ಸಂಕಲಿತ ಕಾರ್ಯಕ್ರಮವಿಲ್ಲವೆಂದೂ ಆ ಕಾರ್ಯಕ್ರಮದ ಅಭಾವದಲ್ಲಿ ಗ್ರಾಮೋದ್ಧಾರ ಮಂಡಳದ ಈಗಿನ ಕೆಲಸ ಬರೇ ತೋರಗಾಣಿಕೆಯದೆಂದೂ ಸ್ವಾನುಭವದಿಂದ ದೂರುತ್ತಾರೆ. ಗ್ರಾಮೋದ್ಧಾರ ಮಂಡಳದ ಅ[illegible] ಪ್ರಕಾರ ಜಿಲ್ಹಾಧಿಕಾ[illegible] ವರ ಸಹ[illegible] ಗಾರಿಗಳ ಇವರೆಲ್ಲರ ಹಸ್ತಕ್ಷೇಪ [illegible] ಬೇಕು [illegible] ಗ ಮೋದ [illegible] ಮೋದ ಸಿಫಾರಸತೀ [illegible] ಯವು

ಗೆಳೆಯರೇ [illegible] ಮಂಡಳದವ[illegible] ಪರಂಪರಾಗತ [illegible] ವಿವರವನ [illegible] ಧವಿಸೆ' [illegible] ದರೂ ಆಗ [illegible] ಪೂಕ್ತೇಸರರು ದೇವರ ಭಂ[illegible] ತಮ್ಮವರಿಗೆ ಸ[illegible] ದೊಡ್ಡಸ್ತಿಕೆ ಮೆ[illegible] ಬಡಸ್ತಿಕೆ ದೇ[illegible] ಸುಸೂತ್ರವಾಗಿ [illegible] ದಿಂದ ಸಾಲಿ [illegible] ಮಾಡಲಿಕ್ಕೆ ದೇ[illegible] ವಾಗುತ್ತದೆ ಸಾ[illegible] ಮಾಡಿ ಕಟ್ಟೋ[illegible] ರು ಮಾಡಿದ್ದ[illegible] ದೇವಸ್ಥಾನಗಳ ಕ[illegible] ರದೂ ಒಂದು ಕಟಿ[illegible] ವರು ಭೂಭದ್ರತೆಂ[illegible] ಸಾಲ ಪಡೆದರೆ, [illegible] ಖರ್ಚು ಬರೆದು ಹಾಕುತ್ತಾರೆ! ಲೆಕ್ಕ[illegible] ಸುವ ಸಭ್ಯ ಪೂಕ್ತೆ[illegible] ಜಿಲ್ಹೆಯೊಳಗಿನ [illegible] ವರರು ಹಾಕಿಕೊಟ್ಟ ಅನುಸರಿಸುವಂತಹವ [illegible] ವಿವರ ಬರೆದರು. ಖರ್ಚಿನ ವಿವರ ಬರದರು. [illegible] ಕ್ಯೆಯಲ್ಲಿಯ ಶಿಲ್ಕಿಗೂ ಖರ್ಚಿನ ವಿವರಗಳಿಗೂ [illegible] ಅಂತರ ಬರುತದೆ "ಜಮಾ ಖರ್ಚು [illegible] ಹೊಂದಿಸುವದಕ್ಕಾಗಿ [illegible] ಖರ್ಚು" ಎಂದು ಬರೆದ [illegible] ಯನ ತಮಾ [illegible] ವತ್ತು ಖರ್ಚು [illegible]

ಈ ಖರ್ಚಿನ ವಿವರ ದೇವರಿಗೆ ಸಹ ಗೊತ್ತಿಲ್ಲ, ಪೂಕ್ತೇಸರರೊಬ್ಬರಿಗೆ ಮಾತ್ರ ಗೊತ್ತು! ಜಮಾ ಖರ್ಚಿನ ಶಾಸ್ತ್ರದಲ್ಲಿ ಇದೊಂದು ಹೊಸ ಶೋಧ! ಈ ವಿವರ ಬರೆದು ಯಾವದೇ ಜಮಾ ಖರ್ಚನ್ನು ಯಾವಾಗಲೂ ಬಾಯಿಗೂಡಿಸಬರುತ್ತದೆ! ಪೂಕ್ತೇಸರರು ಇನ್ನೂ ಹಲವು ತರಗತಿಗಳಿಂದ ದೇವರ ಭಂಡಾರವನ್ನು ವಂಚಿಸಬಹುದು. ಸದಾವರ್ತವಿರುವ ದೇವಾಲಯಗಳಲಿ [illegible]

[illegible] ಎಣಿಸುತ್ತಾರೆ. ದೈತ್ಯರಿಗೂ ದೇವರಿಗೂ ಶಾಶ್ವತ ಬರೆಯಬೇಕಾದರೆ ಅದಿತಿ (ಅದೃತ್ಯ)ರಿಗೂ ಮತರವುಂಟು. ದೈತ್ಯರು ದಿತಿಯ ಸಂತತಿ. ಆದಿತ್ಯರು ಅದಿತಿಯ ಸಂತತಿ. ದಿತಿ ಅದಿತಿಯರು ಸವತಿಯರು. ಆದರಿಂದ ದೈತ್ಯರು ಆದಿತ್ಯರು ಸಾವತ್ರ ಬಂಧುಗ[illegible] ಆದಿ[illegible] ದೇವರ ಆ[illegible] ಅಸಹಾ[illegible]

ಕಾನಡಾವೃತ್ತ
Roll No 10

ಮಾಡುವ ಯಾವತ್ತೂ ಪ್ರಯತ್ನನ್ನು ಸಾಧಿಸುವವರಿವರು. ಪೂಕ್ತೇಸರರು ದೈತ್ಯ ವಂಶಜರಾದ್ದರಿಂದ ದೇವಸ್ವದ ಅಪಹಾರ ಮಾಡಿ ಅಭಿವೃದ್ಧಿ ಹೊಂದುತ್ತಾರೆ. ದೇವಸ್ವದ ಅಪಹಾರ ದೈತ್ಯ ಧರ್ಮ. ಆದರಿಂದಲೇ ಪೂಕ್ತೇಸರರು ದೈತ್ಯರಿಗುಚಿತವಾದ ಹಂಚಿಕೆಗಳನ್ನು [illegible]

ಮೋಟಾರಿನ ಓಡಾಟಕ್ಕೆ ಬಹು ನಿರ್ಬಂಧ. ಆ ಮೂಲಕ ತಿಕೀಟಿನ ದರ ಏರಿತು, ಹಡಗದ ಅಭಾವದಲ್ಲಿ ಜನರಿಗ ಪ್ರವಾಸ ಮಾಡಲಿಕ್ಕೂ ಸರಕುಗಳನ್ನು ದರ ಒಯ್ಯಲಿಕ್ಕೂ ತೊಂದರೆಯೋ ತೊಂದರೆ! ಮಚ್ವೆಗಳ ಓಡಾಟಕ್ಕೆ ಇನ್ನೂ ೧-೨ ತಿಂಗಳುಗಳಾದರೂ [illegible]

ಪರನ್ನು ವಿಚಾರಿಸಿದರೆ ೩ ಸಲೆ ಬಡ್ಡಿ ದೊರೆಯುವಂತಿಲ್ಲ. ಪರೋಪಕಾರ ಮಾಡಹೊರಟ ಸಹಕಾರ ಸಂಘಗಳು ಜಿಪುಣರಂತೆ ವರ್ತಿಸಕೂಡದು. ತಮ್ಮ ಸಾಲಕ್ಕೆ ೩ ಸಲೆಯಂತೆ ಬಡ್ಡಿ ಲೆಕ್ಕ ಮಾಡಿ ಕೂಡುವ ಸಾ[illegible] ಮೇಲೆ ಕೃಪೆ ಇಡಬೇಕು. [illegible] ಸಾಲದೊಳಗಿಂದ ಬಿಡುಗಡೆ [illegible] ದಾರರು ಈ ೧೦ ವರ್ಷಗಳಲ್ಲಿ [illegible] ಹಂಚಿಕೊಂಡದ್ದುಂಟು. ಆ [illegible] ವರ್ಷ ಲಾಭ ಹಂಚಿಕೊಳ್ಳ[illegible] ತ್ಯಾಗವಾಗದು. ಸಹ[illegible] ಗಾರರ ಮೇಲೆ ಒತ್ತಾಯ [illegible] ಯನ್ನು ಲಿಲಾಂವಿಗೆ ಹೊ[illegible] ಭೂಮಿಯ ಬೆಲೆ ಕುಗ್ಗಿ[illegible] ವಕಾರರಿಗೆ ಅಗ್ಗವಾಗಿ [illegible] ಕೂಲವಾಗುತ್ತದೆ. ಯುದ್ಧ[illegible] ಇಲ್ಲದ ಸುದ್ದಿಗಳೂ ಹರಟೆ[illegible] ಗಾರಿಗೂ ಎಲ್ಲಿಯೂ ನೆಲೆ[illegible] ಗುವದೆಂದು ಎಲ್ಲರಿಗೂ [illegible] ಕಾಲದಲ್ಲಿ ತನ್ನ ಬಾಳ್ವೆ[illegible] ಜನರಿದ್ದರೆ ಪ್ರತಿಯೊ[illegible] ಜಾಗ್ರತೆ ಕೊಳ್ಳುತ್ತಿರುವ [illegible] ಗಿ ಏರ್ಪಾಟು ಹೊಂ[illegible] ನಿಷ್ಠುರವಾಗಿ, ಕಠೋರ[illegible] ದರೆ ಕಲ್ಲೋಲವೇಳುವ [illegible] ಗುವ ಭೀತಿಯುಂಟು [illegible] ಗಿಗೆ ಮೋಸವಾಗದಂತೆ [illegible] ಕಡಿಮೆ ಮಾಡಿಕೊಂಡು [illegible]

[illegible] ದಾರರು ಪಕ್ಷಪಾತ [illegible] ಕೆಂಡು ಬರುವದ [illegible] ಇಲ್ಲವೆ ಮುಂಬ[illegible] ವನ್ನು ಕೈಕೊಂಡು [illegible] ಪಡೆಯಲು ವಿಧಿ[illegible] ಕ್ಷಿತವಾದೀತು

ರೆ...

[illegible] ಕೃಬಗಿಹಿಡಿಯು [illegible] ತ್ರಿದ್ದಾರೆ. ಉಗಿಹಡಗದ ಓಡಾಟವಿದ್ದಿದ್ದರೆ ಇನ್ನು ೧೦-೧೫ ದಿನಗಳಲ್ಲಿ ಉಗಿಹಡಗ ಬರುವ ಸಂಭವ[illegible] ತ್ತು ಮತ್ತು ಆ ಧೋರಣದ ಸೂಚನೆ ಆಕ್ಕಿಯ[illegible] ವರ ತಾನಾಗಿ ಇಳಿಯತಿತ್ತು. ಹಿಂದುಸ್ಥಾನ [illegible] ರಕಾರವು ಯುದ್ಧಕಾಲದ ಬಗ್ಗೆ ಇತ್ತ ಕಡೆ [illegible] ಮಾಡುವ ಯಾವತ್ತು ಹಡಗಗಳನ್ನು ಸ್ವಾಧೀನ [illegible] ಡಿದ್ದರಿಂದ [illegible] ಯವರ [illegible] ಗೊಂದರೆಯಾಗಿದೆ. ಪಟ್ರೋಲಿನ ಕ್ರಮವಿ[illegible]

ಸರ್ಟಿಫಿಕೇಟ್

ನಿನ್ನ ತಂದೆ ನಿನಗೊ?

ಪೂರ್ತಾ ವಿವರಗಳಿಗೆ ನಿಮ್ಮ ಹತ್ತಿರದ ಪೋಸ್ಟ ಆಫೀಸಿನಲ್ಲಿ ಕೇಳಿ

KN G I 40



ಸ್ಥಳಿಕ ವಿಷಯಗಳು.

ಲೇಖಕ:- ಸ್ಥಳವಂತಿಕ..

ಗ್ರಾಮೋದ್ಧಾರ ಕಾರ್ಯದ ಬಗ್ಗೆ ಸಂಯುಕ್ತ ಪ್ರಾಂತದ ಗವ್ಹರ್ನರರಾದ ಸರ್ ಮೊರಿಸ ಹಲೆಟರವರು ಸುಲ್ತಾನಪುರದೊಳಗಿನ ಗ್ರಾಮೋದ್ಧಾರ ಮಂಡಳದ ಸಭೆಯಲ್ಲಿ ಮಾಡಿದ ಭಾಷಣವನ್ನು ನಮ್ಮಲ್ಲಿಯ ಗ್ರಾಮೋದ್ಧಾರ-ವಾದಿಗಳೆಲ್ಲರೂ ಅಭ್ಯಾಸ ಮಾಡುವಂತಹದು: "ವ್ಯವಸ್ಥಿತವಾದ ಕಾರ್ಯಕ್ರಮ ಕಲ್ಪಿಸೋಣಾಗಲಿಲ್ಲ. ಸಂಘಟಕರಿಗೆ ಶಿಕ್ಷಣವಿಲ್ಲ; ಒಬ್ಬೊಬ್ಬರಿಗೆ ೩೦ ೩೦ ಗ್ರಾಮಗಳು ಕೊಡಲ್ಪಟ್ಟವೆ. ಇವನ್ನೆಲ್ಲ ಸುಧಾರಿಸುವ ಆಶೆ ಈ ಸಂಘಟಕರಿಗಿಲ್ಲ." ಹೀಗೆ ಗ್ರಾಮೋದ್ಧಾರ ಕಾರ್ಯದ ವಿಷಯ ಸಂಯುಕ್ತ ಪ್ರಾಂತದ ಗವ್ಹರ್ನರರು ಮಾಡಿದ ಟೀಕೆ ಯಥಾರ್ಥವುಂಟು. ಗ್ರಾಮೋದ್ಧಾರ ಕಾರ್ಯದಲ್ಲಿ ಮೇಲ್ಬಣ್ಣ (window-dressing) ವನ್ನಷ್ಟೇ ಕೊಡುವದು ಅಪ್ರಸ್ತುತವೆಂದು ಸಂಯುಕ್ತ ಪ್ರಾಂತದ ಗವ್ಹರ್ನರರು ಮೇಲ್ಶೀಕೆ ಮಾಡುತ್ತಾರೆ.

ಗ್ರಾಮೋದ್ಧಾರ ಕಾರ್ಯ ಯಾವದೊಂದು ವ್ಯವಸ್ಥಿತವಾದ ಕಾರ್ಯಕ್ರಮದಂತೆ ನಡೆಯುವದಿಲ್ಲವೆಂದು ಗ್ರಾಮೋದ್ಧಾರದ ಮಂಡಳದ ಆಘಾವೆ-ಪತ್ರಕಗಳನ್ನು ಪರಾಂಬರಿಸಿದರೆ ತಿಳಿಯುವಂತಿವೆ. ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿಗಳು ಈ ಕಾರ್ಯದ ಶಿಕ್ಷಣ ಪಡೆದವರಲ್ಲ. ಗ್ರಾಮೋದ್ಧಾರದ ವ್ಯಾಪಕತೆಯನ್ನು ಇವರು ಅರಿಯುತ್ತಾರೆಂದು ಎಣಿಸುವದು ಕಠಿಣ. ಗ್ರಾಮೋದ್ಧಾರ ವ್ಯಾಪ್ತಿಯಲ್ಲಿ ಹೇರಳ ವಿಷಯಗಳು ಸೇರ್ಪಡೆಯಾಗುತ್ತವೆ. ಗ್ರಾಮದ ಪರಿಸ್ಥಿತಿಯನ್ನು ಮೊಟ್ಟಮೊದಲು ಪರ್ಯಾಲೋಚಿಸಬೇಕು. ಬೇಸಾಯಗಾರರೆಷ್ಟು, ಬೇಸಾಯ ಪ್ರದೇಶವೆಷ್ಟು, ಪ್ರಧಾನ ಬೇಸಾಯವ್ಯಾವದು, ಗೌಣ ಬೇಸಾಯವ್ಯಾವದು, ಬೇಸಾಯೇತರ ಸಮಯದಲ್ಲಿ ಕೈಕೊಳ್ಳಬಹುದಾದ ಕೈಗಾರಿಕೆಗಳ್ಯಾವವು, ಆ ಕೈಗಾರಿಕೆಗಳಿಗೆ ಗ್ರಾಮಗಳಲ್ಲಿ ಯಾವ್ಯಾವ ಅನುಕೂಲತೆಗಳಿವೆ, ಈಗ ದುಃಸ್ಥಿತಿಯಾಗಲು ಕಾರಣವೇನು, ಅದನ್ನು ಪರಿಹರಿಸಲು ಉಪಾಯಗಳ್ಯಾವವು, ಗ್ರಾಮನಿವಾಸಿಗಳಿಂದ ಪರಿಹರಿಸಿಕೊಳ್ಳಬಹುದಾದ ಸಂಗತಿಗಳೆಷ್ಟು, ಸರಕಾರದಿಂದ ಅನುಗ್ರಹವಾಗಬೇಕಾದ ಸಂಗತಿಗಳೆಷ್ಟು, ಜನಾರೋಗ್ಯಕ್ಕೆ ಬಾಧಕವ್ಯಾವದು; ಇವನ್ನೆಲ್ಲ ಅಭ್ಯಾಸ ಮಾಡುವ ಶಕ್ತಿ ಗ್ರಾಮೋದ್ಧಾರಕರಲ್ಲಿರಬೇಕು. ಯಾವದೊಂದೆರಡು ಗ್ರಾಮಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು, ಆ ಹಳ್ಳಿಗಳಿಗೇ ಒಂದಿಲ್ಲೊಂದು ಉಪಾಯದಿಂದ ಇಡೀ ಜಿಲ್ಹೆಗೆ ಸಲ್ಲತಕ್ಕ ಹಣಗಳನ್ನು ಎಳಕೊಳ್ಳುವ ಹಂಚಿಕೆ ಹಾಕುವದು ಇಡೀ ಜಿಲ್ಹೆಯ ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿಗಳಿಗೆ ಉಚಿತವಾದದ್ದಲ್ಲ. ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿಗಳು ಗ್ರಾಮಗ್ರಾಮಾಂತರಗಳನ್ನು ಸಂಚರಿಸಿ ೫ ಇಲ್ಲವೆ ೧೦ ವರ್ಷಗಳ ಗ್ರಾಮೋದ್ಧಾರ ಕಾರ್ಯಕ್ರಮವನ್ನು ತಯಾರಿಸಿಕೊಳ್ಳಬೇಕು. ನಿರ್ಮಲ ಚಿತ್ತದಿಂದಲೂ ನಿಷ್ಪಕ್ಷಪಾತ ಬುದ್ಧಿಯಿಂದಲೂ ಈ ಕಾರ್ಯಕ್ರಮ ತಯಾರಾಗಬೇಕು. ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿಗಳು ಆ ಕಾರ್ಯಕ್ರಮದಂತೆ ಗ್ರಾಮ ಸುಧಾರಣೆಯ ಕ್ರಮವನ್ನು ನಿಶ್ಚಯಿಸಿ, ಆ ಕ್ರಮವನ್ನು ಸರ್ವರಿಗೂ ಸಮಾನವಾಗಿ ಅನ್ವಯಿಸುವಂತೆ ಪುರಸ್ಕರಿಸಬೇಕು. ಸಂಯುಕ್ತ ಪ ಗವ್ಹರ್ನರರು 'ಪ್ಲೆನಿಂಗ' (planing) ಅಂದರೆ ಸಂಕಲ್ಪಿತ ಕಾರ್ಯಕ್ರಮವಿಲ್ಲವೆಂದೂ ಆ ಕಾರ್ಯಕ್ರಮದ ಅಭಾವದಲ್ಲಿ ಗ್ರಾಮೋದ್ಧಾರ ಮಂಡಳದ ಈಗಿನ ಕೆಲಸ ಬರೇ ತೋರಗಾಣಿಕೆಯದೆಂದೂ ಸ್ವಾನುಭವದಿಂದ ದೂರುತ್ತಾರೆ. ಗ್ರಾಮೋದ್ಧಾರ ಮಂಡಳದ ಅವ್ಯವಸ್ಥಿತವಾದ ಚಟುವಟಿಕೆಗಳಿಂದ ಈ ಪ್ರಕಾರ ಟೀಕೆಯಾಗುವದು ಸಾಹಜಿಕ. ನಮ್ಮ ಜಿಲ್ಹಾಧಿಪರು ಗ್ರಾಮೋದ್ಧಾರಕ್ಕಾಗಿ ಹಂಬಲಿಸುವವರು. ನಮ್ಮಲ್ಲಿ ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿಗಳ ಕೈಕೆಳಗೆ ಒಳ-ಕಾರ್ಯದರ್ಶಿಗಳಿರುತ್ತಾರೆ. ಇವರೆಲ್ಲರನ್ನು ಜಿಲ್ಹಾಧಿಪತಿಗಳು ಗ್ರಾಮಗಳಿಗೆ ಕಳುಹಿ ಪ್ರತಿಯೊಂದು ಗ್ರಾಮದ ಪರಿಸ್ಥಿತಿಯನ್ನು ತಿಳಕೊಳ್ಳಬೇಕು. ಆ ಪರಿಸ್ಥಿತಿಯ ವಿಚಾರದಿಂದ ಆಗತಕ್ಕ ಗ್ರಾಮೋದ್ಧಾರದ ಅಂತು ಕಾರ್ಯವನ್ನು ನಿಶ್ಚಯಿಸಿ, ಗ್ರಾಮೋದ್ಧಾರ ಮಂಡಳದ ಶಕ್ತಿಯಂತೆ ಹಪ್ತೆಗಳನ್ನು ನಿರ್ಧರಿಸತಕ್ಕದ್ದು. ಅಂದರೆ ಮಾತ್ರ ಗ್ರಾಮೋದ್ಧಾರ ಕಾರ್ಯವು ಪಂಕ್ತಿಪ್ರಪಂಚವಿಲ್ಲದೆ ನೆರವೇರುವದು.

⁂

ಗೆಳೆಯರೊಬ್ಬರು ಪತ್ರ ಬರೆದು ದೇವಾಲಯ ಮಂಡಳದವರೂ ದೇವರ ಮೊಕ್ತೇಸರರೂ ಹಯಾತಿ-ಪರಂಪರಾಗತ ಅಡಳತೆದಾರರೂ ನಡಿಸುವ ವಂಚನೆಗಳ ವಿವರವನ್ನು ತಿಳಿಸುತ್ತಾರೆ. ದೇವರ ಲೀಲೆಗಳು ಅಗಾಧವಿವೆ! ಅಂತೆಯೇ ಮೊಕ್ತೇಸರರ ಲೀಲೆಗಳಾದರೂ ಅಗಾಧವಿವೆ!! ದೇವರ ಆಸ್ತಿಯನ್ನು ಮೊಕ್ತೇಸರರು ತಮ್ಮ ಹೆಸರಲ್ಲಿ ಮಾಡಿಕೊಳ್ಳುತ್ತಾರೆ. ದೇವರ ಭಂಡಾರದಿಂದ ತಮ್ಮ ಕಾರ್ಯಕ್ಕಾಗಿ, ತಮ್ಮವರಿಗೆ ಸಾಲ ಕೊಡುತ್ತಾರೆ. ಸಾಲ ಕೊಟ್ಟ ದೊಡ್ಡಸ್ತಿಕೆ ಮೊಕ್ತೇಸರರದು, ಸಾಲ ಮುಳುಗಿದ ಬಡಸ್ತಿಕೆ ದೇವರ ಭಂಡಾರದ್ದು! ತಮ್ಮ ಸಾಲ ಸುಸೂತ್ರವಾಗಿ ವಸೂಲ ಬರದಿದ್ದರೆ ದೇವರ ಭಂಡಾರದಿಂದ ಸಾಲ ಕೊಟ್ಟು ತಮ್ಮ ಸಾಲ ವಸೂಲ ಮಾಡಲಿಕ್ಕೆ ದೇವರ ಭಂಡಾರಗಳಿಗೆ ಅನುಕೂಲವಾಗುತ್ತದೆ. ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟೋಣ ಕೆಲಸ ಕೈಕೊಂಡಾಗಂತು ಇವರು ಮಾಡಿದ್ದೇ ಖರ್ಚು! ಕಟ್ಟಿಸಿದ್ದೇ ಕಟ್ಟೋಣ! ದೇವಸ್ಥಾನಗಳ ಕಟ್ಟೋಣ ತಯಾರಾಗುವಾಗ ಇವರದೂ ಒಂದು ಕಟ್ಟೋಣ ತಯಾರಾಗುತ್ತದೆ! ಕೆಲವರು ಭೂಭದ್ರತೆಯ ಮೇಲೆ ದೇವರ ಭಂಡಾರದಿಂದ ಸಾಲ ಪಡೆದರೆ, ಇನ್ನು ಕೆಲವರು ಬರೇ ಲೆಖ್ಖದಲ್ಲಿ ಖರ್ಚು ಬರೆದು ದೇವರ ಭಂಡಾರಕ್ಕೆ ಮೋಸ ಹಾಕುತ್ತಾರೆ! ಲೆಕ್ಕದಲ್ಲಿ ಸಹ ಬರೆಯದೆ ಹಣ ಬಳಸುವ ಸಭ್ಯ ಮೊಕ್ತೇಸರರೂ ಇರುತ್ತಾರೆ! ನಮ್ಮಾ ಜಿಲ್ಹೆಯೊಳಗಿನ ಒಂದು ಮಾದರಿ ಹಳ್ಳಿಯಲ್ಲಿ ಮೊಕ್ತೇಸರರು ಹಾಕಿಕೊಟ್ಟ ಮಾದರಿ ಮೊಕ್ತೇಸರರಿಗೆಲ್ಲ ಅನುಸರಿಸುವಂತಹದು! ಈ ಮೊಕ್ತೇಸರರು ಲೆಕ್ಕದಲ್ಲಿ ಜಮಾ-ವಿವರ ಬರೆದರು; ಖರ್ಚಿನ-ವಿವರ ಬರೆದರು; ಆದರೂ ಕೈಯಲ್ಲಿದ್ದ ಶಿಲ್ಕಿಗೂ ಖರ್ಚಿನ-ವಿವರಗಳಿಗೂ ರೂ. ೧೫೫ರ ಅಂತರ ಬರುತ್ತದೆ. "ಜಮಾ-ಖರ್ಚನ್ನು ಬಾಯಿಗೂಡಿಸುವದಕ್ಕಾಗಿ ರೂ ೧೫೫-೦-೦ ಖರ್ಚು" ಎಂದು ಬರೆದು ಆಡಾವೆಯನ್ನು ತಯಾರಿಸಿದರು. ಜಮೆ ಮತ್ತು ಖರ್ಚು ಬಾಯಿಗೂಡಿತು! ಈ ಖರ್ಚಿನ ವಿವರ ದೇವರಿಗೆ ಸಹ ಗೊತ್ತಿಲ್ಲ; ಮೊಕ್ತೇಸರರೊಬ್ಬರಿಗೆ ಮಾತ್ರ ಗೊತ್ತು! ಜಮಾ-ಖರ್ಚಿನ ಶಾಸ್ತ್ರದಲ್ಲಿ ಇದೊಂದು ಹೊಸ ಶೋಧ! ಈ ವಿವರ ಬರೆದು ಯಾವದೇ ಜಮಾ-ಖರ್ಚನ್ನು ಯಾವಾಗಲೂ ಬಾಯಿಗೂಡಿಸಬರುತ್ತದೆ! ಮೊಕ್ತೇಸರರು ಇನ್ನೂ ಹಲವು ತರಗತಿಗಳಿಂದ ದೇವರ ಭಂಡಾರವನ್ನು ವಂಚಿಸಬಹುದು. ಸಮಾವರ್ತವಿರುವ ದೇವಾಲಯಗಳಲ್ಲಿ ಸಮಾವರ್ತ ಕೊಡದೆ ಖರ್ಚು ಹಾಕಬಹುದು. ಅನ್ನಸಂತರ್ಪಣೆಗೆ ಬೇಕಷ್ಟು ಖರ್ಚು ಬರೆದು ತಮ್ಮತಮ್ಮ ಮನೆಗಳಲ್ಲಿ ಅನ್ನಸಂತರ್ಪಣೆಗಳ ಏರ್ಪಾಟು ಮಾಡಿಕೊಳ್ಳಬಹುದು. ಭಜಕರಿಂದ ಆಗಬೇಕಾದ ಅನ್ನಸಂತರ್ಪಣೆಗಳನ್ನು ಸಂಕೋಚಗೊಳಿಸಿ ಪ್ರಯೋಜನ ಪಡೆಯಬಹುದು. ದೇವಸ್ಥಾನದ ಒಕ್ಕಲುಗಳ ಕಡೆಯಿಂದಲೂ ಋಣಿಕರ ಕಡೆಯಿಂದಲೂ ವ್ಯಕ್ತಿ-ದೊಡ್ಡಸ್ತನಕ್ಕಾಗಿ ಚಾಕರಿ ಮಾಡಿಸಿಕೊಳ್ಳಬಹುದು. ಹೀಗೆ ಒಂದಲ್ಲ, ಎರಡಲ್ಲ, ಮೂರಲ್ಲ; ನಾನಾ ತರಗಳಿಂದ ದೇವರ ಭಂಡಾರವನ್ನು ಮೊಕ್ತೇಸರರು ಲೂಟಿ ಮಾಡುತ್ತಾರಾಗಿ ಗೆಳೆಯರ ಅಂಬೋಣ. ದೇವಾಲಯ ಮಂಡಳದವರಿಗೆ ಇವುಗಳ ಗ್ರಹಿಕೆಯುಂಟು. ಇಂಥ ವಂಚಕರಿಗೆ ಪರಿಶೋಧಿಸಿ ಎಂಬಂತೆ ಅವರು ಮೊಕ್ತೇಸರರಾಗಿ ನೇಮಿಸುತ್ತಾರೆ. ದೇವಾಲಯ ಮಂಡಳದವರೂ ಮೊಕ್ತೇಸರರೂ ಸಮಾನ ಧರ್ಮದವರು. ಒಬ್ಬರಿಗೂ ಮೇಲೆ ಅಂಕೆಯಿಲ್ಲದ್ದರಿಂದ ದೇವಸ್ವವನ್ನು ಅಪಹರಿಸುವ ಕ್ರಮ ಸುಸೂತ್ರವಾಗಿ ನಡೆದಿದೆ.

ಈ ಗೆಳೆಯರು 'ಮೊಕ್ತೇಸರ' ಶಬ್ದದ ಉತ್ಪತ್ತಿಯನ್ನು ಬಲು ಮಾರ್ಮಿಕವಾಗಿ ಮಾಡಿದ್ದಾರೆ: ಮೊಕ್ತೇಸರರು ದೇವರ ಭಂಡಾರಕ್ಕೆ ಮೋಸ ಹಾಕುವದೂ ಮೋಸಗಾರರೇ ದೇವಸ್ವದ ಭಂಡಾರಿಗಳಾಗಿ ನೇಮಿಸಲ್ಪಡುವದೂ ಸ್ವಾಭಾವಿಕವೆಂದು ಈ ಗೆಳೆಯರ ಅಂಬೋಣ. ದೇವರ ಅಡಳತೆದಾರರಿಗೆ 'ಮೊಕ್ತೇಸರ', 'ಮುಕ್ತಾಸರ' ಹೀಗೆ ಬಿರುದಾವಳಿಯುಂಟು. 'ಮುಕ್ತಾಸರ' ಶಬ್ದ 'ಮುಕ್ತಾಸುರ' ಶಬ್ದದ ಸಂಕೋಚವಾಗಿರುತ್ತದೆ. 'ಮುಕ್ತಾಸುರ' ಶಬ್ದ 'ಮತ್ತಾಸುರ' ಶಬ್ದದಿಂದ ಬಂದಿದೆ. ಮತ್ತಾಸುರ ಅಂದರೆ ಮತ್ತ, ಉನ್ಮತ್ತ, ಸೊಕ್ಕಿದ ಅಸುರ, ದೈತ್ಯ, ರಕ್ಕಸ! ಮೊಕ್ತೇಸರರು ಮತ್ತ-ದೈತ್ಯರ ಅವತಾರರು! ದೈತ್ಯರೆಂದೊಡನೆ ಭೀಕರ ಧಡಡೆ-ರೂಪವಿರಬೇಕೆಂದಿಲ್ಲ; ಸ್ವಭಾವ ಮಾತ್ರ ದೈತ್ಯರಂತಿದ್ದರೆ ಸಾಕು. ದೇವರಾಗಲಿ, ದೈತ್ಯರಾಗಲಿ, ಮನುಷ್ಯರಾಗಲಿ ಸ್ವಭಾವದಿಂದಲೇ ಹೆಸರು ಪಡೆಯುತ್ತಾರೆ. ಶ್ರೀಕೃಷ್ಣ ಪರಮಾತ್ಮನು ದೇವ-ಕುಲದವನು; ಆತನ ತಾಯಿ-ತಂದೆ ದೇವಕಿ-ವಸುದೇವರು ಮನುಷ್ಯರು! ಸೋದರಮಾವ ಕಂಸನು ದೈತ್ಯನು! ದೇವರ ರೂಪ ಬೇರೆ, ದೈತ್ಯರ ರೂಪ ಬೇರೆ; ಮನುಷ್ಯರ ರೂಪ ಬೇರೆ; ಹೀಗಿದ್ದರೆ ಈ ಸಂಬಂಧ ಕೂಡಿ ಬರಲಾರದು. ಹಿರಣ್ಯಕಶ್ಯಪು ರಕ್ಕಸನು; ಆತನ ಮಗ ಪ್ರಲ್ಹಾದನನ್ನು ಮನುಷ್ಯಧರ್ಮದ ಭಕ್ತನೆಂದು ಎಣಿಸುತ್ತಾರೆ. ದೈತ್ಯರಿಗೂ ದೇವರಿಗೂ ಶಾಸ್ತ್ರತಃ ಬರೆಯಬೇಕಾದರೆ ಆದಿತ್ಯ [ಅ-ದೈತ್ಯ]ರಿಗೂ ಮತ್ಸರವುಂಟು. ದೈತ್ಯರು ದಿತಿಯ ಸಂತತಿ, ಆದಿತ್ಯರು ಅದಿತಿಯ ಸಂತತಿ. ದಿತಿ-ಅದಿತಿಯರು ಸವತಿಯರು. ಅವರಿಂದ ದೈತ್ಯರೂ ಆದಿತ್ಯರೂ ಸಾವತ್ರ ಬಂಧುಗಳು. ಆದಿತ್ರರ ಅಂದರೆ ದೇವರ ಆಸ್ತಿಯನ್ನು ಅಪಹಾರ

ಮಾಡುವ ಯಾವತ್ತೂ ಪ್ರಸಂಗವನ್ನು ಸಾಧಿಸುವವರಿವರು. ಮೊಕ್ತೇಸರರು ದೈತ್ಯ-ವಂಶಜರಾದ್ದರಿಂದ ದೇವಸ್ವದ ಅಪಹಾರ ಮಾಡಿ ಅಭಿವೃದ್ಧಿ ಹೊಂದುತ್ತಾರೆ. ದೇವಸ್ವದ ಅಪಹಾರ ದೈತ್ಯ-ಧರ್ಮ. ಆದರಿಂದಲೇ ಮೊಕ್ತೇಸರರು ದೈತ್ಯರಿಗುಚಿತವಾದ ಹಂಚಿಕೆಗಳನ್ನು ಮಾಡಿ ದೇವಸ್ವವನ್ನು ಅಪಹರಿಸುತ್ತಿದ್ದಾರೆ ಇದು ವಿಶೇಷ ಮಾತಲ್ಲವೆಂದು ಗೆಳೆಯರ ಸಮಾಧಾನ. ಜನಸಾಮಾನ್ಯರಿಗೆ ದೇವಸ್ವ ದಕ್ಕುವದಿಲ್ಲ; ಒಮ್ಮೆಲೇ ಬಾಧಿಸುತ್ತದೆ. ಮೊಕ್ತೇಸರರು ದೇವಸ್ವ ತಿಂದುಂಡು ಕೊಬ್ಬುತ್ತಾರೆ; ಮೇಲೆ ಸಂಭಾವಿತರಾಗಿ ಗೌರವಿಸಲ್ಪಡುತ್ತಾರೆ. ಅವಕ್ಕೂ ಕಾರಣವುಂಟು. ದೈತ್ಯಾಂಶವಿದ್ದವರಿಗೆ ಮಾತ್ರ ದೇವಸ್ವ ದಕ್ಕುತ್ತದೆ.

ದೇವರ ಭಂಡಾರದ ಪರಮಾರ್ಥ ವಿಚಾರ ಹಾಗಿರಲಿ; ವಿನೋದನಿರೂಪಣ ಹಾಗಿರಲಿ. ಅರ್ಥ ವಿಚಾರದಿಂದ ಸಹ ಈ ಅಪಹಾರವನ್ನು ನಿಲ್ಲಿಸದನಕ ಉಳಿಗಾಲವಿಲ್ಲ. ಜನರಿಂದ ಎತ್ತುವಳಿಯಾಗುವ ಹಣ ತಿರುಗಿ ಜನರಿಗೆ ರೂಪಾಂತರದಿಂದ ಸಿಗಬೇಕು ಅಂದರೆ ಜನವೃದ್ಧಿ, ಜನಸಂಪದಭಿವೃದ್ಧಿಯಾಗುತ್ತದೆ. ಬೇಸಿಗೆಯಲ್ಲಿ ಉಗಿಯ ರೂಪದಿಂದ ಹೀರಿಕೊಂಡ ಜಲಾಂಶ ಮಳೆಗಾಲದಲ್ಲಿ ಮಳೆಯ ರೂಪದಿಂದ ಬೀಳುವ ಕ್ರಮ ಕ್ಷೇಮದಾಯಕವಷ್ಟೇ; ಅಂತೆಯೇ ಸಾರ್ವಜನಿಕವಾಗಿ ಎತ್ತುವಳಿಯಾಗುವ ಹಣ ಸಾರ್ವಜನಿಕವಾಗಿ ವಿನಿಯೋಗಿಸಲ್ಪಟ್ಟರೆ ಜನ-ಧನ ವೃದ್ಧಿಯಾಗುತ್ತದೆ. ದೇವಸ್ಥಾನಗಳನ್ನು ಪೂರ್ವಜರು ಸ್ಥಾಪಿಸಿ ದೇವರ ಭಂಡಾರದ ಹಣ ಅನ್ನಸಂತರ್ಪಣೆ, ಉತ್ಸವ ಕಾರ್ಯ, ಸೇವಾ-ಸಮಾವರ್ತ ಇವೇ ಮೊದಲಾದ ವಿನಿಯೋಗಗಳಿಂದ ಧಾರ್ಮಿಕ ಪ್ರಜೆಗಳ ಕೈಸೇರುವಂತೆ ಏರ್ಪಾಟು ಮಾಡಿದರು. ದುರ್ಬಲರ, ಬಡಬಗ್ಗರ ಪಾಲನೆಗಾಗಿ, ರಕ್ಷಣೆಗಾಗಿ ದೇವರ ಭಂಡಾರದ ವಿನಿಯೋಗವಾಗಬೇಕೆಂದು ಪೂರ್ವಜರ ಸಂಕಲ್ಪ. ಈಗ ಆ ಸಂಕಲ್ಪಕ್ಕೆ ವಿರೋಧವಾಗಿ ಬಲ್ಲಿದರು ತಮ್ಮ ದೊಡ್ಡಿಸ್ತನಕ್ಕೆ ಅನುಕೂಲವಾಗಿ ವರ್ತಿಸುವದರಿಂದ ದೇವರ ಭಂಡಾರದ ಸಂಕಲ್ಪಕ್ಕೆ ಮೋಸವಾಗಿದೆ. ಬಡತನಮಿಗಿಲಾಗಲಿಕ್ಕೆ ಇದೂ ಒಂದು ಕಾರಣ. ಆದರಿಂದ ಸರಕಾರವು ವ್ಯವಹಾರದೃಷ್ಟಿಯಿಂದ ಯಾವತ್ತೂ ಸಂಗತಿಗಳ ವಿಚಾರ ಮಾಡಿ ದೇವರ ಭಂಡಾರದ ಸದ್ವ್ಯಯವಾಗುವಂತೆ ಕ್ರಮ ಕೈಕೊಳ್ಳುವದು ಪ್ರಸಂಗೋಚಿತ.

⁂

ಅಕ್ಕಿಯ ಧಾರಣೆ ಮುಂಬಯಿಯ ಪೇಟೆಯಲ್ಲಿ ಇಳಿಯುತ್ತಿದೆ. ಮಳೆಯ ಮೇಲಿಂದ ಬೆಳೆ ಚನ್ನಾಗಿ ಆಗುವ ಲಕ್ಷಣ ತೋರುವದರಿಂದ ಘಟ್ಟದ ಮೇಲೂ ಅಕ್ಕಿಯ ದರ ಇಳಿಯುತ್ತಿದೆ. ಆದರೆ ನಮ್ಮ ಜಿಲ್ಲೆಯೊಳಗೆ ಅಕ್ಕಿಯ ದರ ಅಪೇಕ್ಷಿಸಿದಷ್ಟು ಇಳಿಯಲೊಲ್ಲದು. ಅಕ್ಕಿಯ ಸಾವಕಾರರು ಕೈಬಿಗಿಹಿಡಿಯುತ್ತಿದ್ದಾರೆ. ಉಗಿಹಡಗದ ಓಡಾಟವಿದ್ದಿದ್ದರೆ ಇನ್ನು ೧೦-೧೫ ದಿನಗಳಲ್ಲಿ ಉಗಿಹಡಗ ಬರುವ ಸಂಭವವಿತ್ತು; ಮತ್ತು ಆ ಧೋರಣದ ಮೇಲೆ ಅಕ್ಕಿಯ ದರ ತಾನಾಗಿ ಇಳಿಯುತ್ತಿತ್ತು. ಹಿಂದುಸ್ಥಾನ ಸರಕಾರವು ಯುದ್ಧಕಾರ್ಯದ ಬಗ್ಗೆ ಇತ್ತ ಕಡೆ ಓಡಾಡುವ ಯಾವತ್ತೂ ಹಡಗಗಳನ್ನು ಸ್ವಾಧೀನ ಪಡಿಸಿಕೊಂಡಿದ್ದರಿಂದ ನಮ್ಮ ಜಿಲ್ಲೆಯವರಿಗೆ ಬಹಳ ತೊಂದರೆಯಾಗಿದೆ. ಪೆಟ್ರೋಲ-ಸೀಮಾಕ್ರಮದಿಂದ ಮೋಟಾರಿನ ಓಡಾಟಕ್ಕೆ ಬಹು ನಿರ್ಬಂಧ. ಆ ಮೂಲಕ ತಿಕೀಟಿನ ದರ ಏರಿತು; ಹಡಗದ ಅಭಾವದಲ್ಲಿ ಜನರಿಗೆ ಪ್ರವಾಸ ಮಾಡಲಿಕ್ಕೂ ಸರಕುಗಳನ್ನು ತರ-ಒಯ್ಯಲಿಕ್ಕೂ ತೊಂದರೆಯೇ ಸೈ! ಮಚ್ವೆಗಳ ಓಡಾಟಕ್ಕೆ ಇನ್ನೂ ೧-೨ ತಿಂಗಳುಗಳಾದರೂ ಬೇಕು. ಆದರಿಂದ ಹಿಂದುಸ್ಥಾನ ಸರಕಾರದವರು ವಾರಕ್ಕೊಂದು ಸಲ ಹಡಗದ ಓಡಾಟವಾಗುವಂತೆ ಒಂದೆರಡು ಉಗಿಹಡಗಗಳನ್ನು ನಮ್ಮಿತ್ತ ಕಡೆ ಸಂಚರಿಸ ಬಿಡಬಹುದು.

⁂

ಮುಂಬಯಿಯಲ್ಲಿ ಬೇಂಕುಗಳ ಬಡ್ಡಿಯ ದರ ಈವಾಗ ಬಹಳ ಇಳಿದಿವೆ. ಸೇವಿಂಗ್ಸ ಬೇಂಕ-ಠೇವಿನ ಬಡ್ಡಿಯ ದರ ೧ ಸಲೆಗೆ ಇಳಿಯಿತು. ಈ ಬಡ್ಡಿಯ ದರ ೧೦ ವರ್ಷಗಳಿಂದ ಇಳಿಮುಖವಾಗಿದೆ. ೧೦ ವರ್ಷಗಳ ಹಿಂದೆ ಚಾಲ್ತಿ ಮತ್ತು ಸೇವಿಂಗ್ಸ ಠೇವುಗಳ ದರ ೩॥ ಸಲೆಗೆ ಕಡಿಮೆಯಾಗಿ ಯಾವದೇ ಬೇಂಕುಗಳಲ್ಲಿರಲಿಲ್ಲ. ಕಾಯಂ ಠೇವುಗಳ ದರ ೪-೫ ಸಲೆಯಂತೆ ಇತ್ತು. ಇತ್ತ ೧೦ ವರ್ಷಗಳಲ್ಲಿ ಆ ದರ ೩ ಸಲೆಗೆ ಮಿಕ್ಕಲಿಲ್ಲ. ಇದರ ಮೇಲಿಂದ ದುಡ್ಡು ದುಡಿಯದೆ ಉಳಿಯುತ್ತಿದೆಂದು ಸಹಜ ಸಿದ್ಧವಾಗುತ್ತದೆ. ದುಡ್ಡಿಗೆ ದುಡಿತವಿಲ್ಲವಾಗಿಯೂ ಮುಂಚಿನಂತೆ ೭॥ ಸಲೆಯಂತೆ ಬೇಂಕಿನಿಂದ ದುಡ್ಡು ಒಯ್ದು ಪ್ರಯೋಜನ ಪಡೆಯಲೀಗ ಅವಕಾಶವಿಲ್ಲವಾಗಿಯೂ ಸಿದ್ಧವಾಗುತ್ತದೆ. ಮುಂಬಯಿಯಂಥ ಉದ್ಯೋಗಭರಿತ ಪಟ್ಟಣದಲ್ಲಿ ಈ ಅವಸ್ಥೆಯಾದಾಗ ನಮ್ಮ ಬಡ ಜಿಲ್ಲೆಯಲ್ಲಿ ಈ ಬಡ್ಡಿಯ ದರ ತೆರಲಾರದೆ ಸಹಕಾರ ಸಂಘಗಳ ಸಾಲಗಾರರು ಪೇಚಾಡಿದರೆ ಆಶ್ಚರ್ಯವಿಲ್ಲ. ಸಹಕಾರ ಸಂಘಗಳ ವಾಡಿಕೆಯ ಬಡ್ಡಿದರ ದರಸಾಲ ದರಶೇಕಡಾ ರೂ. ೯-೬-೦; ಸಾಲಗಾರರ ಮೇಲೆ ಉಪಕಾರ ಮಾಡುವ ದರ ರೂ. ೬॥. ಅಂದರೆ ೧೦ ವರ್ಷಗಳ ಮುಂಚೆ ಮುಂಬಯಿಯಲ್ಲಿ ಬೇಂಕುಗಳು ಸಾಮಾನ್ಯವಾಗಿ ಕೊಡುವ ಬಡ್ಡಿಯ ದರವನ್ನು ಸಹಕಾರ ಸಂಘಗಳು ೧೦ವರ್ಷದ ಮೇಲೆ ಅನುಗ್ರಹಿಸುತ್ತ ಇದು ಸರಿಯಲ್ಲ. ಬಂಡವಲಿಗೆ ಕಳೆದ ೧೦ ವರ್ಷಗಳಲ್ಲಿ ಗಿರಾಕಿಯೇ ಇರಲಿಲ್ಲ. ಬೇಂಕುಗಳ ಠೇವಿನ ದರವನ್ನು ವಿಚಾರಿಸಿದರೆ ೩ ಸಲೆ ಬಡ್ಡಿ ದೊರೆಯುವಂತಿಲ್ಲ. ಪರೋಪಕಾರ ಮಾಡಹೊರಟ ಸಹಕಾರ ಸಂಘಗಳು ಜಿಪುಣರಂತೆ ವರ್ತಿಸಕೂಡದು. ತಮ್ಮ ಸಾಲಕ್ಕೆ ೩ ಸಲೆಯಂತೆ ಬಡ್ಡಿ ಲೆಕ್ಕ ಮಾಡಿ ಕೊಡುವ ಸಾಲಗಾರರ ಮೇಲೆ ಕೃಪೆ ಇಡಬೇಕು. ಮತ್ತು ಅವರನ್ನು ಸಾಲದೊಳಗಿಂದ ಬಿಡುಗಡೆ ಮಾಡಬೇಕು. ಶೇರುದಾರರು ಈ ೧೦ ವರ್ಷಗಳಲ್ಲಿ ೬ ಸಲೆಗೆ ಮಿಕ್ಕಿ ಲಾಭ ಹಂಚಿಕೊಂಡದ್ದುಂಟು. ಆ ವಿಚಾರದಿಂದ ಕೆಲವು ವರ್ಷ ಲಾಭ ಹಂಚಿಕೊಳ್ಳದಿದ್ದರೂ ವಿಶೇಷ ತ್ಯಾಗವಾಗದು. ಸಹಕಾರ ಸಂಘಗಳು ಸಾಲಗಾರರ ಮೇಲೆ ಒತ್ತಾಯ ಮಾಡಿದರೆ, ಸ್ಥಾವರ ಆಸ್ತಿಯನ್ನು ಲಿಲಾಂವಿಗೆ ಹೊರಡಿಸಿದರೆ ಗಡಿಬಿಡಿಯಾಗಿ ಭೂಮಿಯ ಬೆಲೆ ಕುಗ್ಗಿ ಸ್ವಾರ್ಥಪರಾಯಣ ಸಾವಕಾರರಿಗೆ ಅಗ್ಗವಾಗಿ ಭೂಮಿ ಅಪಹರಿಸಲು ಅನುಕೂಲವಾಗುತ್ತದೆ. ಯುದ್ಧದ ಗಡಿಬಿಡಿಯಲ್ಲಿ ಅಲ್ಲದ-ಇಲ್ಲದ ಸುದ್ದಿಗಳೂ ಹರಟೆಗಳೂ ಹಬ್ಬಿಕೊಂಡಿವೆ. ಯಾರಿಗೂ ಎಲ್ಲಿಯೂ ನೆಲೆ-ಹತ್ತುವದಿಲ್ಲ. ಮುಂದೇನಾಗುವದೆಂದು ಎಲ್ಲರಿಗೂ ವಿವಂಚನೆ. ಈ ಪ್ರಳಯ ಕಾಲದಲ್ಲಿ ತನ್ನ ಬಾಳ್ವೆ ಹೇಗೆಂಬ ಚಿಂತೆಯಲ್ಲಿಯೇ ಜನರಿದ್ದಾರೆ. ಪ್ರತಿಯೊಬ್ಬನು ಸುರಕ್ಷಿತನಾಗಿರಲು ಜಾಗ್ರತೆ ಕೊಳ್ಳುತ್ತಿರುವ ಸಮಯ ಲೋಕೋಪಕಾರಕ್ಕಾಗಿ ಏರ್ಪಟ್ಟು ಹೊಂದಿದ ಸಹಕಾರ ಸಂಘಗಳು ನಿಷ್ಠುರವಾಗಿ, ಕಠೋರವಾಗಿ ಸಾಲಗಾರರನ್ನು ದಣಿಸಿದರೆ ಕಲ್ಲೋಲವೇಳುವ ಸಂಭವವುಂಟು; ಅನರ್ಥವಾಗುವ ಭೀತಿಯುಂಟು. ಆದರಿಂದ ಮೂಲ ಮೊಬಲಗಿಗೆ ಮೋಸವಾಗದಂತೆ ಬಡ್ಡಿಯ ದರದಲ್ಲಿ ಹೆಚ್ಚು-ಕಡಿಮೆ ಮಾಡಿಕೊಂಡು ಸುಧಾರಿಸಿಕೊಳ್ಳುವದು ಲೇಸು.

ಸಹಕಾರ ಸಂಘಗಳ ಆಡಳಿತೆದಾರರು ಪಕ್ಷಪಾತ ಮಾಡುವ ಬುದ್ಧಿಯವರಿರುವದು ಕಂಡು ಬರುವದರಿಂದ ಸಹಕಾರ ಇಲಾಖೆಯವರು ಇಲ್ಲವೆ ಮುಂಬಯಿ ಸರಕಾರವು ಒಂದು ಠರಾವನ್ನು ಕೈಕೊಂಡು ಅದರಂತೆ ಸಾಲಗಳನ್ನು ವಸೂಲ ಪಡೆಯಲು ವಿಧಿಸಿದರೆ ಸಾಲಗಾರ-ಲೋಕಕ್ಕೆ ಸುರಕ್ಷಿತವಾದೀತು.

ನನ್ನ ತಂದೆ ನನಗೊಂದು ಕೊಂಡುಕೊಡುತ್ತಾರೆ....

ಡಿಫೆನ್ಸ್
ಸೇವಿಂಗ್ಸ್
ಸರ್ಟಿಫಿಕೇಟ್

ನಿನ್ನ ತಂದೆ ನಿನಗೊ?

ಪೂರ್ತಾ ವಿವರಗಳಿಗೆ ನಿಮ್ಮ
ಹತ್ತಿರದ ಪೋಸ್ಟ್ ಆಫೀಸನಲ್ಲಿ ಕೇಳಿ

Kn. G.I. 40

ಪತ್ರಕರ್ತರ ನುಡಿಗನ್ನಡಿ.

೧. ಇದೇ ಬರುವ ಸಪ್ಟಂಬರ ೩ನೇ ತಾರೀಖಿಗೆ ಮಹಾಯುದ್ಧ ಪ್ರಾರಂಭವಾಗಿ ೨ ವರ್ಷಗಳಾಗುತ್ತವೆ. ಅಂದಿನಿಂದ ಮಹಾಯುದ್ಧಕ್ಕೆ ೩ನೇ ವರ್ಷ ಹುಟ್ಟುತ್ತದೆ. ಇಂಥ ಸಮಯದಲ್ಲಿ ಬ್ರಿಟಿಶರಿಗೆ ವಿಜಯವಾಗುವಂತೆ ಅಖಿಲ ಭರತ ಖಂಡದಲ್ಲಿ ರವಿವಾರ ತಾ. ೭ನೇಗೆ ಪ್ರಾರ್ಥನೆಗಳು ನಡೆಯಬೇಕೆಂದು ಸರ್ವಾಧಿಪತಿಗಳು ಹಿಂದ-ಜನಾಂಗಕ್ಕೆ ವಿನಂತಿ ಮಾಡಿಕೊಂಡಿದ್ದಾರೆ. ಬ್ರಿಟಿಶರಿಗೆ ವಿಜಯವಾಗಬೇಕೆಂದು ಸರ್ವಾಧಿಪತಿಗಳು ಅಪೇಕ್ಷಿಸುವದು ಸಹಜ. ಆದೇಪ್ರಕಾರ ಹಿಂದ-ಜನಾಂಗವಾದವರು ತಮ್ಮಂತೆಯೇ ತಮಗಿಂತಲೂ ಮಿಗಿಲಾಗಿ ಪ್ರಾರ್ಥನೆ ಮಾಡಿಕೊಳ್ಳಬೇಕೆಂದು ಅವರು ಬಯಸುವದಾದರೂ ಸ್ವಾಭಾವಿಕವೇ ಸೈ! "ರಾಜಾ ಬೋಲೇ ದಲ ಹಾಲೇ" ಎಂಬ ಉಕ್ತಿಯಂತೆ ಹಿಂದ ದೇಶದೊಳಗೆ ಸಭೆ ಸೇರಿ ಪ್ರಾರ್ಥನೆ ನಡೆಯಲೂ ಬಹುದು. ಆದರೆ ಇಂಥ ಪ್ರಾರ್ಥನೆಗಳಲ್ಲಿ ಸ್ವಾರಸ್ಯ ಕಡಿಮೆ. ಯಾಕೆಂದರೆ ಹಿಂದ-ಜನಾಂಗದ ಅಂತಃಕರಣವು ಕಳವಳಗೊಳ್ಳುತ್ತಿದೆ. ರಾಷ್ಟ್ರೀಯ ಸಭೆಯ ಲೋಕನಾಯಕರೆಲ್ಲರೂ ವನವಾಸವನ್ನು ಸ್ವೀಕರಿಸಿ ಕಾರಾಗೃಹವಾಸದ ಕ್ಲೇಶಗಳನ್ನು ಯುದ್ಧಘೋರಣದ ಮೂಲಕ ಅನುಭವಿಸುತ್ತಿರುವಾಗ, "ಬ್ರಿಟಿಶರಿಗೆ ವಿಜಯವಾಗಲಿ, ಬ್ರಿಟಿಶರ ಕಲ್ಯಾಣವಾಗಲಿ;" ಇವೇ ಮೊದಲಾದ ಪ್ರಾರ್ಥನೆಗಳನ್ನು ಹಿಂದವಾಸಿಗಳು ಬಾಯಿಂದ ನುಡಿಯುವಾಗ, ಅಂತಃಕರಣವು ತಟಸ್ಥತೆಯನ್ನು ಸ್ವೀಕರಿಸಿ ಸುಮ್ಮಗಿರುವದು ಅಪರಿಹಾರ್ಯವಾದುದು. ಈ ಪ್ರಾರ್ಥನೆಯಲ್ಲಿ ಹಿಂದ ಜನಾಂಗದ ಅಂತಃಕರಣ ಎಂದಿಗೂ ತನ್ಮಯವಾಗದೆಂದು ಮನುಷ್ಯಧರ್ಮವನ್ನರಿಯುವವರು ಎಣಿಸಲೇ ಬೇಕು. ಬ್ರಿಟಿಶರಿಗೆ ಹಿಂದ-ಜನಾಂಗವು ಅಂಕಿತ ಪ್ರದೇಶವೆಂದು ಪ್ರಾರ್ಥನೆ ಮಾಡುವದು ಬೇಕು; ಹೊರತು ಸಮಾನಸ್ಕಂಧ ಜನಾಂಗವೆಂದು, ಸಹಕಾರಿ ರಾಷ್ಟ್ರವೆಂದು ಯುದ್ಧದಲ್ಲಿ ಸೇರ್ಪಡೆಯಾಗುವದು ಇಷ್ಟವಿಲ್ಲ. ಇಂಥ ವಿಷಮ ಪರಿಸ್ಥಿತಿಯಲ್ಲಿ ಸಪ್ಟಂಬರ ೭ನೇ ತಾರೀಖಿಗೆ ನಡೆಯುವ ವಿಜಯ-ಪ್ರಾರ್ಥನೆ ತೀರ ನಿಃಸತ್ವವಾಗುವದೆಂದು ನಾವು ಸರ್ವಾಧಿಪತಿಗಳಿಗೆ ಅರಿಕೆ ಮಾಡಿಕೊಂಡು ಹಿಂದ-ಜನಾಂಗದ ಅಂತಃಕರಣ ಯುದ್ಧಕಾರ್ಯದಲ್ಲಿ ಬುದ್ಧಿಪೂರ್ವಕ ಸೇರುವಂತೆ ರಾಜ್ಯಭಾರದಲ್ಲಿ ತಿದ್ದುಪಡಿ ಮಾಡಲು ಸಾಮ್ರಾಜ್ಯ ಸರಕಾರಕ್ಕೆ ಬುದ್ಧಿ ಹೇಳಬೇಕಾಗಿ ಬಿನ್ನೈಸಿಕೊಳ್ಳುತ್ತೇವೆ.

---

೨. ನಿನ್ನೆ ರವಿವಾರ ಬ್ರಿಟಿಶ ಮುಖ್ಯ ಪ್ರಧಾನರಾದ ಚರ್ಚಿಲ್ಲರವರು ಆಕಾಶವಾಣಿಯಿಂದ ಭಾಷಣ ಮಾಡುವವರಿದ್ದರು. ಅಮೇರಿಕೆಯ ಅಧ್ಯಕ್ಷರಾದ ರೂಝವೆಲ್ಟರವರೊಡನೆ ಆಲೋಚನೆಯಾದ ಬಳಿಕ, ಈ ಭಾಷಣವಾಗುತ್ತದಾದ್ದರಿಂದ ಈ ಭಾಷಣದಲ್ಲಿ ಹಿಂದುಸ್ಥಾನದ ರಾಜ್ಯವ್ಯವಸ್ಥೆಯ ಕುರಿತು ಉಲ್ಲೇಖವಾಗುವದೆಂದು ಪುಣೆಯ 'ಕೇಸರಿ' ಪತ್ರಿಕೆಯ ಲಂಡನಿನ ಪ್ರತಿನಿಧಿಗಳು ತಿಳಿಸುತ್ತಾರೆ. ರೂಝವೆಲ್ಟ ಚರ್ಚಿಲ್ಲರ ಘೋಷಣೆಯಲ್ಲಿ ಹಿಂದುಸ್ಥಾನದ ಉಲ್ಲೇಖವಿಲ್ಲ. ಅಸ್ಪಷ್ಟ ಉಲ್ಲೇಖದಿಂದ ಆ ಘೋಷಣೆಯಲ್ಲಿ ಹಿಂದುಸ್ಥಾನದ ಸೇರ್ಪಡೆಯಾಗುವದಿಲ್ಲವಾಗಿ ರಾಜಕಾರಣ ಭಾಷೆಯ ಪರಿಜ್ಞಾನವಿದ್ದವರು ಅಭಿಪ್ರಾಯಪಡುತ್ತಾರೆ. ಆ ಘೋಷಣೆಯಲ್ಲಿ ಏಶಿಯಾ ಖಂಡದವರೂ ಆಫ್ರಿಕಾ ಖಂಡದವರೂ ಸಂಕಲ್ಪಿಸಲ್ಪಟ್ಟಿದ್ದಾರೆಂದು, ಕೂಲಿಕಾರ ಪಕ್ಷದ ಪರವಾಗಿ ಬ್ರಿಟಿಶ ಪ್ರಧಾನ ಮಂಡಳದಲ್ಲಿ ಸೇರಿದ ಮೇಜರ ಎಟ್ಲಿಯವರು ಸ್ಪಷ್ಟಗೊಳಿಸಿದರು. ಆದರೆ ಈ ಪ್ರಕಾರ ಆ ಘೋಷಣೆಯನ್ನು ಸ್ಪಷ್ಟ ಮಾಡುವಾಗ ಮೇಜರ ಎಟ್ಲಿಯವರು "We of the Labour Party" "ಕೂಲಿಕಾರ ಪಕ್ಷದವರಾದ ನಾವು" ಎಂದು ಉಲ್ಲೇಖ ಮಾಡುತ್ತಾರೆ. ಮೇಜರ ಎಟ್ಲಿಯವರು ಉಪ-ಮುಖ್ಯ ಪ್ರಧಾನರಿರುತ್ತಾರೆ. ಹೀಗಿದ್ದು ಸಾಮ್ರಾಜ್ಯ ಸರಕಾರದ ಪರವಾಗಿ ಈ ಘೋಷಣೆ ಆಫ್ರಿಕಾ ಖಂಡದವರಿಗೂ ಏಶಿಯಾ ಖಂಡದವರಿಗೂ ಅನ್ವಯಿಸುತ್ತದಾಗಿ ಮೇಜರ ಎಟ್ಲಿಯವರು ಯಾಕೆ ಹೇಳಲಿಲ್ಲ? ಏಶಿಯಾ, ಆಫ್ರಿಕಾ ಮೊದಲಾದ ವಿಶಾಲ ಖಂಡದ ವಿಚಾರ ಹಾಗಿರಲಿ, ಹಿಂದ-ಜನಾಂಗದ ವಿಚಾರವೇ ಈವಾಗ ಪ್ರಾಧಾನ್ಯವಾಗಿದೆ. ಇಂಥ ಪ್ರಸಕ್ತಿಯಲ್ಲಿ ಹಿಂದುಸ್ಥಾನದ ನಿರ್ದೇಶ ಮಾಡಲು ಮೇಜರ ಎಟ್ಲಿಯವರು ಸಂಕೋಚಪಡುವದೇಕೆ? ಚರ್ಚಿಲ್-ರೂಝವೆಲ್ಟರ ಘೋಷಣೆಯಲ್ಲಿ ನಿರುಪದ್ರವಿಯಾಗಿ ಕಾಣುವ ಒಂದು ಉಪವಾಕ್ಯವುಂಟು: 'ಈಗಿನ ಹೊಣೆಗಾರಿಕೆಗಳಿಗೆ ತಕ್ಕ ಮನ್ನಣೆ ಕೊಟ್ಟು' (with due regard to the present obligations) ಎಂಬ ಉಲ್ಲೇಖವಿದೆ. ಬ್ರಿಟಿಶ ಸರಕಾರದ ಮೇಲೆ ಪರಮಾತ್ಮನು ಯಾವಾವ ಹೊಣೆಗಾರಿಕೆಗಳನ್ನು ಹೊರಿಸಿದ್ದಾನೆಂದು ನಾವು ಅರಿಯದ ಮಾತು. ಹಿಂದ-ಜನಾಂಗದ ಘಾತ ಮಾಡಿ ಬ್ರಿಟಿಶರಿಗೆ ಸ್ವಾರ್ಥ ಸಾಧಿಸುವ ಹೊಣೆಗಾರಿಕೆಯನ್ನು ಆತನು ಲೋಕೋಪಕಾರಿ ಬ್ರಿಟಿಶರ ಮೇಲೆ ಎಷ್ಟಕ್ಕೂ ಹೊರಿಸನೆಂದು ನಾವು ಖಂಡಿತವಾಗಿ ಹೇಳಬಲ್ಲೆವು. ಸ್ವಾತಂತ್ರ್ಯ ಮನ್ವಂತರದಲ್ಲಿ, ಸ್ವಾತಂತ್ರ್ಯ ಕಳಕೊಂಡ ಚಿಕ್ಕ ಪುಟ್ಟ ಜನಾಂಗಗಳಿಗೆ ಸ್ವಾತಂತ್ರ್ಯ ಕೊಡುವ ಕಾಲದಲ್ಲಿ ಹಿಂದ ಜನಾಂಗವನ್ನು ಹಿಂದಿನಂತೆ ಮುಂದೆಯೂ ಚಿರಕಾಲ ಪರತಂತ್ರವಾಗಿ ಬ್ರಿಟಿಶರು ಆಳಬೇಕೆಂಬ ಹೊಣೆಗಾರಿಕೆಯನ್ನೂ ಆತನು ಬ್ರಿಟಿಶರ ಮೇಲೆ ಹೊರಿಸನು. ಬ್ರಿಟಿಶರು ಕಾಲಧರ್ಮದ ಗ್ರಹಿಕೆ ಪಡೆದು ತಮ್ಮ ನಡಾವಳಿಯನ್ನು ಸುಧಾರಿಸಿಕೊಳ್ಳುವದು ಪ್ರಶಸ್ತ. ನಿನ್ನಿನ ಆಕಾಶವಾಣಿಯಲ್ಲಿ ಚರ್ಚಿಲ್ಲರು ಹೇಳುವ ಮಾತುಗಳನ್ನು ಈ ಮುಂದೆ ಪರಾಂಬರಿಸುವೆವು.

---

೩. ಮುಂಬಯಿಯಲ್ಲಿ ವಿಶ್ವವಿದ್ಯಾಲಯದ ಪದವಿದಾನ ಸಮಾರಂಭದ ಸಮಯ ನಡೆದ ವೃತ್ತಾಂತವನ್ನು ಕೇಳಿ ನಮ್ಮ ಮನಸ್ಸು ವಿಷಣ್ಣವಾಗುತ್ತದೆ. ಫೆಡರಲ್ ಕೋರ್ಟಿನ ನ್ಯಾಯಾಧೀಶರಾದ ಸರ್ ಮೋರಿಸ ಗ್ವಾಯರರು ವಿದ್ಯಾರ್ಥಿಗಳಿಗೆ ಉಪದೇಶ ಮಾಡಲು ನಿಮಂತ್ರಿಸಲ್ಪಟ್ಟಿದ್ದರು. ಆದರೆ ಸರ್ ಮೋರಿಸ ಗ್ವಾಯರರಿಗೂ ವಿದ್ಯಾರ್ಥಿವರ್ಗಕ್ಕೂ ಮನಸ್ಸು ಸರಿಯಿಲ್ಲ. ದಿಲ್ಲಿಯ ವಿಶ್ವವಿದ್ಯಾಲಯದ ಅಧಿಪತಿಗಳಾಗಿ ಸರ್ ಮೋರಿಸ ಗ್ವಾಯರರು ವಿದ್ಯಾರ್ಥಿ ಸಂಘದ ಚಟುವಟಿಕೆಗಳ ಬಗ್ಗೆ ಇಬ್ಬರು ವಿದ್ಯಾರ್ಥಿಗಳಿಗೆ ದಂಡಿಸಿದ್ದಾರೆ. ಇದು ಅನ್ಯಾಯವೆಂದು ವಿದ್ಯಾರ್ಥಿಗಳ ಅಂಬೋಣ. ಅದರಿಂದ ದಿಲ್ಲಿಯಲ್ಲಿ ವಿದ್ಯಾರ್ಥಿಗಳು ಸರ್ ಮೋರಿಸರ ಮೇಲೆ ಬಹಿಷ್ಕಾರ ಹಾಕಿದ್ದುಂಟು. ಆ ಮೇಲೆ ಲಖನೌದಲ್ಲಿ ವಿಶ್ವವಿದ್ಯಾಲಯದ ಪದವಿದಾನ ಸಮಾರಂಭವಾಯಿತು. ಅಲ್ಲಿಯೂ ವಿದ್ಯಾರ್ಥಿಗಳು ಸರ್ ಮೋರಿಸರನ್ನು ಬಹಿಷ್ಕರಿಸಿ ಗೊಂದಲವನ್ನುಂಟು ಮಾಡಿದರು. ಇವರನ್ನು ತಮ್ಮ ಸಮಾರಂಭಕ್ಕೆ ನಿಮಂತ್ರಿಸಬಾರದೆಂದು ವಿದ್ಯಾರ್ಥಿಗಳು ನಮ್ಮ ಮುಂಬಯಿ ವಿಶ್ವವಿದ್ಯಾಲಯದ ಅಧಿಕಾರಿಗಳ ಕಡೆಗೆ ಪ್ರಾರ್ಥಿಸಿಕೊಂಡಾಗ್ಯೂ ವಿಶ್ವವಿದ್ಯಾಲಯದವರು ಹಟ ತೊಟ್ಟು ಸರ್ ಮೋರಿಸರವರನ್ನೇ ನಿಮಂತ್ರಿಸಿದ್ದು ತೀರ ಅನುಚಿತವಾದದ್ದು. ಸರ್ ಮೋರಿಸರು ಪ್ರಾಜ್ಞರು; ಪದವಿ ಪಡೆದು ಪ್ರಪಂಚ ನಡಿಸಹೊರಟ ವಿದ್ಯಾರ್ಥಿಗಳಿಗೆ ಉಪದೇಶ ಮಾಡಲು ಅಧಿಕಾರಿ ಪುರುಷರೆಂದು ನಾವು ಒಪ್ಪುತ್ತೇವೆ. ಆದರೆ ವಿದ್ಯಾರ್ಥಿಗಳು ಸರ್ ಮೋರಿಸರ ಮೇಲೆ ಕುನಸು ಹಿಡಿದಿರುವಾಗ ಅಂಥ ಮಹಾನುಭಾವರನ್ನೇ ಸಮಾರಂಭಕ್ಕೆ ಕರಿಸಿಕೊಳ್ಳುವದು ಮಹದನ್ಯಾಯವೆಂದು ನಮ್ಮ ಅಭಿಪ್ರಾಯ. ಸಮಾರಂಭವು ವಿಶ್ವವಿದ್ಯಾಲಯದವರದಲ್ಲ; ವಿದ್ಯಾರ್ಥಿಗಳದು. ವಿದ್ಯಾರ್ಥಿಗಳ ಭೂಮಿಕೆ ಸಮಾರಂಭದ ಸಮಯ ಪ್ರಸನ್ನವಾಗಿರಬೇಕು; ಉಪದೇಶ ಪಡೆಯಲು ಸಿದ್ಧವಾಗಿರಬೇಕು; ಉಪದೇಶ ಮಾಡಬರುವ ವ್ಯಕ್ತಿಯ ಬಗ್ಗೆ ಆದರಭಾವ—ಪೂಜ್ಯಭಾವಗಳಿರಬೇಕು. ವಿದ್ಯಾಲಯದವರು ಈ ವಿಚಾರಗಳನ್ನು ತೊರೆದು ಹಟಕ್ಕೀಡಾಗಿ ಸರ್ ಮೋರಿಸರನ್ನು ಕರಕೊಂಡು ಸಮಾರಂಭವನ್ನು ನೆರವೇರಿಸಿದ್ದು ತೀರ ವಿಷಾದಕರ. ಸರ್ ಮೋರಿಸರವರಾದರೂ ಯುಕ್ತಾಯುಕ್ತತೆಯನ್ನು ಸಂಪೂರ್ಣವಾಗಿ ಅಲಕ್ಷಿಸಿ ಸಮಾರಂಭಕ್ಕೆ ಚಿತ್ತೈಸಿದ್ದು ಅಸಭ್ಯತನ. ವಿದ್ಯಾರ್ಥಿಗಳು ಕರೇ ನಿಶಾನಿಗಳನ್ನು ತೋರಿಸಿ ಸರ್ ಮೋರಿಸರಿಗೆ ಹಿಂತಿರುಗ ಹೇಳಿದ್ದೂ ಸರ್ ಮೋರಿಸರು ಗುಟ್ಟಿನ ದಾರಿಯಿಂದ ವಿದ್ಯಾಮಂದಿರವನ್ನು ಸೇರಿದ್ದೂ ನಿಜವಾಗಿ ವಿಷಾದಕರ. ಸರ್ ಮೋರಿಸರು ಸಂಭ್ರಮದಿಂದ ಮಾನ್ಯ ಅತಿಥಿಗಳಾಗಿ ಸಮಾರಂಭವನ್ನು ಸೇರುವ ಬದಲು, ಸುದ್ದಿ-ಸುಳುವಿಲ್ಲದೆ ಸಭಾಮಂದಿರವನ್ನು ಪ್ರವೇಶಿಸಿ ಸಮಾರಂಭವನ್ನು ನಡಿಸಲುದ್ಯುಕ್ತವಾದದ್ದು ಅಪಮಾನಾಸ್ಪದವಾದದ್ದೆಂದು ನಮ್ಮ ಅಭಿಪ್ರಾಯ. ಈ ವರ್ತನದಿಂದ ವಿಶ್ವವಿದ್ಯಾಲಯದವರಾಗಲಿ ಸರ್ ಮೋರಿಸರವರಾಗಲಿ ತಮ್ಮ ಗೌರವವನ್ನು ಕಳಕೊಂಡರೆಂದೇ ನಮ್ಮ ಭಾವನೆ. ಹಿಂದುಸ್ಥಾನದ ಮುಖ್ಯ ನ್ಯಾಯಾಧೀಶರು ಇಂಥ ಹುಡುಗಾಟಿಕೆಗೀಡಾಗಬಾರದಿತ್ತು.

---

೪. ಈ ಸಮಾರಂಭದ ಸಮಯ ಹೇರಳ ವಿದ್ಯಾರ್ಥಿಗಳು ಪದವಿ ಕೊಳ್ಳಹೋಗಲಿಲ್ಲ. ಅಂತು ಪದವಿ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ೨,೬೮೩; ಅವುಗಳಲ್ಲಿ ೩೦೦ ವಿದ್ಯಾರ್ಥಿಗಳಷ್ಟೇ ಸಭಾಮಂದಿರದಲ್ಲಿ ಸೇರಿದ್ದರು. ಉಳಿದ ವಿದ್ಯಾರ್ಥಿಗಳು ಹೊರನಿಂತು ನಿಷೇಧಪ್ರದರ್ಶನ ಮಾಡುತ್ತಿದ್ದರು. ಪೋಲೀಸರು ಅವರ ಕಡೆಯಿಂದ ಕರೇ ನಿಶಾನೆಗಳನ್ನು ಕಸಕೊಂಡರು. ಪತಾಕೆಗಳನ್ನು ಕೊಡದವರಿಗೆ ಬೆತ್ತದಿಂದ ಹೊಡೆದರು. ಕೈಯಲ್ಲಿ ಬೆತ್ತವಿಲ್ಲದ ಪೋಲೀಸರು, ವಿದ್ಯಾರ್ಥಿಗಳ ಕೈಯಿಂದ ಕೋಲುಗಳನ್ನು ಕಸಕೊಂಡು, ಅವುಗಳಿಂದಲೇ ವಿದ್ಯಾರ್ಥಿಗಳಿಗೆ ಹೊಡೆದರು! [illegible]

ಯು ಹ್ಯಾಕೋರ್ಟಿನ ವಕೀಲರ ಕೋಟಿಯಿಂದ ೧೯ ಮಂದಿ ವಕೀಲರು ಪೋಲೀಸರ ಈ ಅನಾಚಾರಗಳನ್ನು ನೋಡಿ ಮುಂಬಯಿ ವಿಶ್ವವಿದ್ಯಾಲಯದವರಿಗೆ ಚೌಕಶಿ ಮಾಡಲು ವಿನಂತಿ ಮಾಡಿಕೊಂಡಿದ್ದಾರೆ. ಸರ್ ಮೋರಿಸ ಗ್ವಾಯರರಿಗೂ ಈ ಪತ್ರದ ಒಂದು ನಕಲು ಕಳಿಸಲ್ಪಟ್ಟಿದೆ. ಇವರ ಮೇಲಿಂದ ಪೋಲೀಸರು ನಡಿಸಿದ ಹಿಂಸೆಯ ಕಲ್ಪನೆ ಮೋರಿಸರಿಗೂ ವಿದ್ಯಾಲಯದವರಿಗೂ ತಿಳಿದಿರಬೇಕು. ನಿಷೇಧವಾದಿ ವಿದ್ಯಾರ್ಥಿಗಳನ್ನು ದೊಣ್ಣೆಯಿಂದ ಚದರಿಸಿ ಹಿಂಸಿಸಿದೊಡನೆ ವಿದ್ಯಾರ್ಥಿಗಳ ನಿಷೇಧವು ಸ್ವಾಗತದಲ್ಲಿ ರೂಪಾಂತರವಾಗುವದು ಅಸ್ವಾಭಾವಿಕ. ವಿದ್ಯಾರ್ಥಿಗಳು ಸತ್ಯಾಗ್ರಹಿಗಳಲ್ಲ ಇಲ್ಲವೆ ಯುದ್ಧಯತ್ನವಿರೋಧಕರಲ್ಲ; ಹೀಗಿರುವಾಗ ವಿದ್ಯಾಲಯದವರೂ ಪೋಲೀಸರೂ ಸಮಾಧಾನದಿಂದ ವಿದ್ಯಾಲಯದ ಇದಿರಿಗೆ ಕೂತುಕೊಂಡು ನಿಷೇಧವನ್ನು ವ್ಯಕ್ತ ಮಾಡುವ ವಿದ್ಯಾರ್ಥಿಗಳಿಗೆ ದಣಿಸಲುದ್ಯುಕ್ತರಾದದ್ದು ಬರೇ ದುಷ್ಟತನ. ಸ್ತ್ರೀ–ಉಪವೀಥಧರರಿಗೆ ಸಹ ಪೋಲೀಸರು ದಣಿಸಿದ ವಾರ್ತೆ ಕೇಳಿ ಮನಸ್ಸು ತೀರ ಖಿನ್ನವಾಗುತ್ತದೆ. ಹಿಟ್ಲರನು ದುಷ್ಟನೆಂದೂ ಜರ್ಮನಿಯ ವಿರುದ್ಧ ಮಾತಾಡುವ ಫ್ರೆಂಚರಿಗೆಲ್ಲ ತರತರದಿಂದ ದಣಿಸುತ್ತಾನೆಂದೂ ಲಂಡನಿನಿಂದ ‘ರ್ಯೂಟರ’ ವಾರ್ತಾವಾಹಕರು ಸುದ್ದಿ ಕೊಟ್ಟು ನಮ್ಮ ಮನಸ್ಸಿನಲ್ಲಿ ಹಿಟ್ಲರನ ರಾಜ್ಯಭಾರದ ಕುರಿತು ಉದ್ವೇಗವನ್ನುಂಟು ಮಾಡುವಾಗ, ನಮ್ಮ ಹಿಂದುಸ್ಥಾನದೊಳಗೆ ಹಿಟ್ಲರನ ದುಷ್ಟತನವನ್ನು ದ್ವೇಷಿಸುವ ಬ್ರಿಟಿಶರ ರಾಜ್ಯಭಾರದಲ್ಲಿ ವಿದ್ಯಾರ್ಥಿಗಳಂಥ ಪ್ರಪಂಚಜ್ಞಾನವಿಲ್ಲದವರನ್ನು ಪೋಲೀಸರು ಈ ಪ್ರಕಾರ ತಾಪಗೊಳಿಸುವದು ರಕ್ಕಸತನ! ಸರಕಾರದವರೂ ವಿದ್ಯಾಲಯದವರೂ ಈ ವಿಷಯ ನಿರ್ಮಲಚಿತ್ತದಿಂದ ಚೌಕಶಿ ನಡಿಸಿ ಅಪರಾಧಿ ಪೋಲೀಸರನ್ನು ದಂಡಿಸಬೇಕು. ಇಲ್ಲದಿದ್ದರೆ ವಿದ್ಯಾರ್ಥಿಲೋಕದಲ್ಲಿಯೂ ಜನಸಾಮಾನ್ಯರಲ್ಲಿಯೂ ಅಸಂತೋಷ ಹಬ್ಬುವದು ಖಂಡಿತ.

ನನಗೀಗ ತುರ್ಕರ ಚಿಂತೆ!

(೩ನೇ ಪುಟದಿಂದ ಮುಂದುವರಿದ್ದು.)

ಗಳೂ ಈಗಿನ ಪರಿಸ್ಥಿತಿಯನ್ನು ಅಭ್ಯಾಸ ಮಾಡಿ ಪರಮಾವಧಿಯ ತ್ಯಾಗ ಮಾಡಲು ಸಿದ್ಧರಿರಬೇಕೆಂದು ಅಪ್ಪಣೆ ಕೊಡುತ್ತಾರೆ. ಈ ಸಮಾರಂಭಕ್ಕೆ ರಾಜಪುತ್ರರೂ ದೊಡ್ಡ ದೊಡ್ಡ ಅಧಿಕಾರಿಗಳೂ ಚಿತ್ತೈಸಿದ್ದರು. ಅಂದ ಬಳಿಕ ಇರಾಣದೊಳಗಿನ ಗಂಭೀರ ಪರಿಸ್ಥಿತಿಯ ಕಲ್ಪನೆ ನಿಮಗೆ ಬಂದೀತು. ಹೀಗೆ ಸ್ಥಿತಿ ವಿಕೋಪಕ್ಕೆ ಮುಟ್ಟಿದಾಗ ಇರಾಣ ಸರಕಾರದ ತಟಸ್ಥತೆ ಬಾಳುವದೆಂದು ನಾನು ನಂಬುವ ಬಗೆ ಹೇಗೆ! ನಿಮಗಾದರೂ ಧೈರ್ಯ ಹೇಳುವ ಬಗೆ ಹೇಗೆ? ತುರ್ಕಸ್ಥಾನದ ಸ್ಥಿತಿ ಹಾಗೆ! ಇರಾಣದೊಳಗಿನ ಸ್ಥಿತಿ ಹೀಗೆ! ಅಂದ ಬಳಿಕ ಹಿಂದುಸ್ಥಾನದ ಸ್ಥಿತಿ ಹೇಗೆಂದು ನೀವು ತಿಳಕೊಂಡಂತಾಯಿತು. ಯುದ್ಧ ಹಿಂದುಸ್ಥಾನದಿಂದ ದೂರವಿದೆಯೋ, ಸಮೀಪ ಬಂತೇ? ನೀವೇ ತಿಳಕೊಳ್ಳಿರಿ.

ಇನ್ನು ಜರ್ಮನ-ರುಶ್ಯರ ಯುದ್ಧದ ಪಾರ್ಶ್ವಭೂಮಿಯನ್ನು ಉಲ್ಲೇಖಿಸುತ್ತೇನೆ. ರುಶ್ಯರು ಉತ್ತರದಿಂದ ದಕ್ಷಿಣದ ತನಕ ಎಲ್ಲ ರಣಭೂಮಿಗಳಲ್ಲಿ ಹಿನ್ನುಗ್ಗುತ್ತಿದ್ದಾರೆ; ಜರ್ಮನರು ಮುನ್ನುಗ್ಗುತ್ತಿದ್ದಾರೆ. ರುಶ್ಯರಿಗೆ ದುಡ್ಡು ಕೊಂಡು ಯುದ್ಧಸಾಹಿತ್ಯಗಳನ್ನು ಪೂರೈಸಬೇಕೆಂದು ಅಮೇರಿಕೆಯ ಸರಕಾರವು ನಿರ್ಧಾರ ಮಾಡಿದೆ. ದುಡ್ಡು ಕೊಡದೆ ಪತ್ತಿನ ಮೇಲೆ ರುಶ್ಯರಿಗೆ ಅಮೇರಿಕೆಯಿಂದ ಯುದ್ಧಸಾಹಿತ್ಯ ಪೂರೈಕೆಯಾಗುವದೆಂಬ ಮಾತು ದಿಟವಲ್ಲ. ಬ್ರಿಟಿಶರ ಮಟ್ಟಿಗೆ ಮಾತ್ರ ಅಮೇರಿಕೆಯವರು ಪತ್ತು ಕೊಡಲೊಪ್ಪುತ್ತಾರೆ. ಆದಾಗ್ಯೂ ಜಪಾನಕ್ಕೆ ಸಮಾಧಾನವಿಲ್ಲ. ಯುದ್ಧಸಾಹಿತ್ಯ ವ್ಲಾಡಿವೋಸ್ಟೋಕ ಮಾರ್ಗವಾಗಿ ರುಶ್ಯರಿಗೆ ಪೂರೈಸಲ್ಪಟ್ಟರೆ ತಮಗೆ ಬಾಧೆಯುಂಟೆಂದು ಜಪಾನಿಯರ ಅಂಬೋಣ. ಟೋಕಿಯೊದೊಳಗಿನ “ಕುಕುಮಿನ ಶಿಂಬೂನ” ಪತ್ರಿಕೆಯು ಗುರುವಾರ ಒಂದು ಪ್ರಧಾನ ಲೇಖನ ಬರೆದು ಜಪಾನಕ್ಕೆ ಸಮೀಪವಾಗಿ ರಣಸಾಹಿತ್ಯ ಹೋಗುತ್ತಿರುವದನ್ನು ಮಿಕಿಮಿಕಿ ನೋಡುತ್ತ ಜಪಾನ ಸರಕಾರವು ಸುಮ್ಮನೆ ಕೂತರೆ ಜಪಾನಕ್ಕೆ ಅಪಘಾತವುಂಟೆಂದು ವಾದಿಸಿ ಘೋರ ಉಪಾಯಗಳನ್ನು ಕೈಕೊಳ್ಳಲು ತನ್ನ ಸರಕಾರಕ್ಕೆ ಪ್ರೇರೇಪಿಸುತ್ತದೆ. ಹಿಟ್ಲರನನ್ನು ಪ್ರತಿಭಟಿಸಲು ರುಶ್ಯರಿಗೆ ಸಹಾಯ ನೀಡಲು “ಕುಕುಮಿನ ಶಿಂಬೂನ” ಪತ್ರಕರ್ತರ ಆಕ್ಷೇಪವಿಲ್ಲ. ಆದರೆ ಅದರಿಂದ ಯುರೋಪ ಖಂಡದೊಳಗಿನ ಯುದ್ಧ ಇತ್ತಕಡೆ ಹಬ್ಬಬಹುದೆಂದು ಈ ಪತ್ರಕರ್ತರ ಭೀತಿ! ಜಪಾನಕ್ಕೆ ಸಮೀಪವಾಗಿ ರುಶ್ಯರ ವ್ಲಾಡಿವೋಸ್ಟೋಕ ಬಂದರವಿರುವಾಗ, ಆ ಬಂದರದ ಮುಖಾಂತರ ಯುದ್ಧಸಾಹಿತ್ಯವೆಲ್ಲ ರುಶ್ಯದೇಶಕ್ಕೆ ರವಾನೆಯಾಗಬೇಕಾದಾಗ್ಯೂ ಸುಮ್ಮನೆ ಆಕ್ಷೇಪವಿಲ್ಲವೆಂಬ ಒಣ ಗೌರವದ ಮಾತುಗಳೇಕೆ? ರುಶ್ಯರು ಕೈಕೊಂಡ ಕಾರ್ಯ ತಮ್ಮದೆಂದೂ ರುಶ್ಯರಿಗೆ ಈ ಕಾರ್ಯದಲ್ಲಿ ಬುದ್ಧಿಪುರಃಸರವಾಗಿ ಬ್ರಿಟಿಶರು ನೆರವಾಗಬೇಕಾಗಿಯೂ ಲಂಡನಿನ ‘ಟೈಮ್ಸ’ ‘ಡೇಲಿ ಟೆಲಿಗ್ರಾಫ’, ‘ನ್ಯೂಸ ಕ್ರೋನಿಕಲ’ ಮೊದಲಾದ ವರ್ತಮಾನಪತ್ರಿಕೆಗಳು ಬ್ರಿಟನ ಸರಕಾರಕ್ಕೆ ಪ್ರೇರೇಪಿಸುವಾಗ ಜಪಾನದ ಅಲಿಪ್ತತೆ ಎಷ್ಟರ ಮಟ್ಟಿಗೆ ಬಾಳಕೊಂಡಿರುವದೆಂದು ನಾನಂತು ಹೇಳಲಾರೆ. ಆದಾಗ್ಯೂ ಜಪಾನವು ಈಗಲೇ ಯುದ್ಧದಲ್ಲಿ ಶೇರ್ಪಡೆಯಾಗಲಿಕ್ಕಿಲ್ಲವಾಗಿ ಹೇಳೋಣಾಗುತ್ತದೆ. ಜಪಾನದ ಮಂತ್ರಿಮಂಡಳದಲ್ಲಿ ಪುಂಡ ರಾಜಕಾರಣಿಗಳು ಇದ್ದಾರೆಂಬ ಮಾತು ಒಪ್ಪಿಗೆ. ಆದರೆ ಅವರು ಬ್ರಿಟನ-ಅಮೇರಿಕೆಗಳೊಡನೆ ಯುದ್ಧ ಹೂಡಲು ಧೈರ್ಯಪಡುವರೆಂದು ಹೇಳಬರುವದಿಲ್ಲವಂತೆ. ಆದಾಗ್ಯೂ ಈ ಮಾತಿಗೆ ಬಹುಕಾಲ ಹೋಗುವಂತಿಲ್ಲ. ಅಮೇರಿಕೆಯ ಸಾನಫ್ರಾನ್ಸಿಸ್ಕೋದಿಂದ ವಿಮಾನಗಳಿಗೆ ಬೇಕಾಗುವ ಎಣ್ಣೆಯನ್ನು ತುಂಬಿಕೊಂಡು ೧೫ ಹಡಗಗಳು ವ್ಲಾಡಿವೋಸ್ಟೋಕ ಬಂದರಕ್ಕೆ ಹೊರಟಿವೆ. ಜಪಾನ ಸರಕಾರವು ಅವುಗಳ ಸಂಭಾವನೆ ಹೇಗೆ ಮಾಡುತ್ತದೆಂದು ನಾನು ನೋಡುತ್ತಿರುವೆ; ನೀವಾದರೂ ನೋಡಿಕೊಳ್ಳುತ್ತಿರಿ ಇದೇ ಪರೀಕ್ಷೆ.

ಉತ್ತರ-ಮಧ್ಯ-ದಕ್ಷಿಣ ರಣಭೂಮಿಗಳ ಸಮಾಚಾರಗಳನ್ನು ನಮೂದಿಸಬಹುದು. ಉತ್ತರ ರಣಭೂಮಿಯಲ್ಲಿ ರುಶ್ಯರಿಗೆ ಸುಖವಿಲ್ಲ, ಫಿನ್ನರು ಆವೇಶದಿಂದ ಮುನ್ನುಗ್ಗುತ್ತಿರುತ್ತಾರೆ; ರುಶ್ಯರ ದಂಡುಗಳು ಹಿಂಜರಿಯುತ್ತಿವೆ. ಲೆನಿನಗ್ರೇಡ ಪಟ್ಟಣ ಇಂದು-ನಾಳೆ ಜರ್ಮನರ ವಶವಾಗುತ್ತದೆ. ಲೆನಿನಗ್ರೇಡನ್ನು ಶತ್ರುವಶವಾಗಗೊಡಲು ರುಶ್ಯರು ಒಪ್ಪುವದಿಲ್ಲ; ಅದರ ರಕ್ಷಣೆಗಾಗಿ ನಾಗರಿಕರು ಸಹ ಸಿದ್ಧರಾಗಿರಬೇಕೆಂದು ಸೇನಾಪತಿ ವೊರೊಶಿಲೊವರವರು ಕಟ್ಟಪ್ಪಣೆ ಹೊರಡಿಸಿದ್ದಾರೆ. ೧೦ ಲಕ್ಷ ಸೈನಿಕರು ಲೆನಿನಗ್ರೇಡನ್ನು ರಕ್ಷಿಸಲು ಸಿದ್ಧರಾಗಿದ್ದಾರಾಗಿ ಸುದ್ದಿ. ಜರ್ಮನ ಸೈನ್ಯವು ೩೦-೪೦ ಮೈಲುಗಳಲ್ಲುಂಟು. ಲೆನಿನಗ್ರೇಡ ಪಟ್ಟಣವನ್ನು ಸೈನಿಕರು ನಿಗ್ರಹದಿಂದ ರಕ್ಷಿಸುತ್ತಿದ್ದಾರಾಗಿ ರುಶ್ಯಸೇನಾಪತಿ ವೊರೊಶಿಲೊವರವರು ಪ್ರಕಟಿಸುತ್ತಾರೆ. ಆದಾಗ್ಯೂ ನನಗೆ ಆ ರಣಭೂಮಿಯಲ್ಲಿ ರುಶ್ಯರು ಜರ್ಮನರನ್ನು ಸೋಲಿಸುವ ಸಂಭವ ತೋರುವದಿಲ್ಲ. ಲೆನಿನಗ್ರೇಡ ಪಟ್ಟಣದ ಸಿರಿ ತೀರಿತು! ಇನ್ನು ಮಧ್ಯ ರಣಭೂಮಿಯಲ್ಲಿ ಸ್ಮೊಲೆನ್ಸ್ಕ ಪಟ್ಟಣದ ಸುತ್ತುಮುತ್ತು ಕಂದಕ ಕಡಕೊಂಡು ಜರ್ಮನ ಸೈನಿಕರು ವಿಶ್ರಾಂತಿ ಪಡೆಯುತ್ತಾರಾಗಿ ‘ಎನೆಲಿಸ್ಟ’ ಎಂಬ ಯುದ್ಧವಾರ್ತಾ ಟೀಕಾಕಾರರು ಹೇಳುತ್ತಾರೆ. ಸೈನಿಕರ, ರಾಜಕಾರಣಿಗಳ ವಿಶ್ರಾಂತಿಯೆಂದೊಡನೆ ನನಗೆ ನಗೆ ಬರುತ್ತದೆ!’ ಮೊಸ್ಕೊಕ್ಕೆ ಹೋಗಲು ಜರ್ಮನರು ಗಾಬರಿಗೊಳ್ಳುವಾಗ ನಡುಮಧ್ಯದಲ್ಲಿ ವಿಶ್ರಾಂತಿ ಪಡೆಯುತ್ತಾರೆಂದು ತಿಳಿಯುವದು ಮೂರ್ಖತನ. ವಿಶ್ರಾಂತಿಯ ಸ್ಥಳವೆಂದೊಡನೆ ಶಾಂತತೆ ಬೇಕು. ಮುಗಿಲಲ್ಲಿ ವಿಮಾನಗಳು ಘೋರ್ಗರೆದು ಬಾಂಬುಗಳ ಮಳೆಗರೆಯುತ್ತವೆ; ಮುಂಭಾಗದಲ್ಲಿ ತೋಫುಗಳಿಂದ ಸಿಡಿಮದ್ದು ವಿದ್ಯುದ್ವೇಗದಿಂದ ಹಾರುತ್ತದೆ; ಸುತ್ತು-ಮುತ್ತು ರುಶ್ಯ ಸೈನಿಕರು ಕಣ್ಣು ತಪ್ಪಿಸಿಕೊಂಡು ದಾಳಿಮಾಡಿ ದಣಿಸುತ್ತಾರೆ; ಇಂಥಸ್ಥಿತಿಯಲ್ಲಿ ಜರ್ಮನ ಸೈನಿಕರು ಕಂದಕ ಕಡಕೊಂಡು ವಿಶ್ರಾಂತಿ ಪಡೆಯುತ್ತಾರೆಂದು ನಾನೇನು ನಂಬಲಾರೆ! ಮೊಸ್ಕೋಕ್ಕೆ ಹೋಗಲೋಸುಗ ತಮ್ಮ ಠಾಣ್ಯವನ್ನು ಭದ್ರಗೊಳಿಸಿಕೊಳ್ಳುವದಕ್ಕಾಗಿ ಆಶ್ರಯ-ಸ್ಥಾನವೆಂದು ಕಂದಕಗಳನ್ನು ತೋಡುವ ರಭಸ ನಡೆದಿರುವದು ಸ್ವಾಭಾವಿಕ. ಅಂತು ಆ ಪಾರ್ಶ್ವದಲ್ಲಿ ಈಗ ವಿಶೇಷ ಗಡಿಬಿಡಿಯಿಲ್ಲ. ದಕ್ಷಿಣ ಭಾಗದಲ್ಲಿ ಮಾತ್ರ ಜರ್ಮನರು ಬಹಳ ಮುನ್ನುಗ್ಗಿ ಹೋದರು. ಇಲ್ಲಿಯ ಜರ್ಮನರ ಪ್ರಗತಿ ನಮೂದಿಸತಕ್ಕಂಥಾದ್ದಿದೆ. ಜರ್ಮನರಿಗೆ ತಡೆದು ನಿಲ್ಲಿಸಲು ರುಶ್ಯರು ಮಾಡಿದ ಸಾಹಸ ಮಹಾಯುದ್ಧದ ಇತಿಹಾಸದಲ್ಲಿ ಚಿರಸ್ಮರಣೀಯವಾಗಿರುವದು. ರುಶ್ಯ ಸೇನಾಪತಿಗಳಾದ ಬುಡೇನಿಯವರು ಬಹು ಕುಶಲತೆಯಿಂದ ಈ ರಣಭೂಮಿಯ ಸಂಗ್ರಾಮವನ್ನು ನಡಿಸಿದರು. ನೀಪರ ನದಿಯ ದಡಿಯಲ್ಲಿ ಜರ್ಮನರನ್ನು ಹಿಡಿದು ನಿಲ್ಲಿಸಿದ ಸಾಹಸವೇನು ಸಾಮಾನ್ಯವಾದುದಲ್ಲ. ಅಷ್ಟು ಸಾಹಸ ಮಾಡಲಿಕ್ಕಾದರೂ ಕಾರಣವುಂಟು. ಈ ಪಾರ್ಶ್ವದ ನಿಕೋಲೇವ, ಕಿವ್ಹ್ಯರೊಗ ಪಟ್ಟಣಗಳು ತೀರ ಮಹತ್ವದ್ದಿವೆ. ಕಬ್ಬಿಣದ ಗಣಿಗಳೆಲ್ಲ ಈ ಪಟ್ಟಣದ ನೆರೆಹೊರೆಯಲ್ಲಿವೆ. ಈ ಪಾರ್ಶ್ವದಲ್ಲಿ ಬೆಳೆಯದ ಬೆಳೆಯಿಲ್ಲ. ನೀಪರ ನದಿಯ ಸಾನ್ನಿಧ್ಯದಿಂದ ಸುತ್ತುಮುತ್ತಲಿನ ಪ್ರದೇಶವೆಲ್ಲ ಯಾವಾಗಲೂ ಸಮೃದ್ಧವೇ! ಒಡೆಸಾ ವರೆಗಿನ ರುಶ್ಯ ದೇಶದ ದಕ್ಷಿಣ ಪ್ರದೇಶ ಜರ್ಮನರ ವಶವಾಯಿತೆಂದರೆ ಜರ್ಮನರಿಗೆ ಕಬ್ಬಿಣ ಸಿಕ್ಕಿತು; ಉಕ್ಕು ಸಿಕ್ಕಿತು; ಕಲ್ಲಿದ್ದಲಿ ಸಿಕ್ಕಿತು; ಅಲ್ಯುಮಿನಮ ಸಿಕ್ಕಿತು; ಬೇಕಾಗ ಅನ್ನಸಾಮಗ್ರಿ ಸಿಕ್ಕಿತು! ಕಪ್ಪು ಸಮುದ್ರದ ಒಡೆತನವೂ ಸಿಕ್ಕಿತು! ರುಶ್ಯ ದೇಶದ ಸೌಭಾಗ್ಯ, ಮುಗಿದು ಹೋಗುತ್ತದೆ. ರುಶ್ಯರಿಗೆ ಈಗ ಉಭಯಸಂಕಟವಾಗಿದೆ. ಅವರು ನೀಪರನದಿಯ ಆಚೆ ನಿಂತು ಜರ್ಮನ ಪುಂಡರ ತಂಡಗಳನ್ನು ಪ್ರತಿಭಟಿ

(೧೧ನೇ ಪಾನಿನ ಮೇಲೆ ಮುಂದುವರಿದಿದೆ.)

ಕಾನಡಾವೃತ್ತ.

ಮಿ॥ ವೃಷ ಸಂವತ್ಸರದ ಭಾದ್ರಪದ ಶು॥ ೩ಗೆ, ಸೋಮವಾರ.

ನಮ್ಮ ಉದ್ಧಾರವಾಗಲೇ ಬೇಕು !

ಕಳೆದ ಮಂಗಳವಾರ ಗಯೆಯಲ್ಲಿ ರಾಜಕೀಯ ಪರಿಷತ್ತು ಸೇರಿತ್ತು. ಆ ಪರಿಷತ್ತಿಗೆ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಕಾರ್ಯದರ್ಶಿಗಳಾದ ಆಚಾರ್ಯ ಕೃಪಾಲಾನಿಯವರು ಚಿತ್ತೈಸಿದ್ದರು. ಆಚಾರ್ಯರು ವರ್ಧಾಕ್ಕೆ ಹೋಗಿ ಮಹಾತ್ಮರೊಡನೆ ವಿಚಾರವಿನಿಮಯ ಮಾಡಿ ಗಯೆಗೆ ತೆರಳಿದ್ದರು. ಮಹಾತ್ಮರೊಡನೆ ಆಚಾರ್ಯರು ಪರಿಷತ್ತಿನ ಬಗ್ಗೆ ಸಂದೇಶ ಕೇಳಲು, "ನಾವು ಕೈಕೊಂಡ ಕಾರ್ಯಕ್ಕೆ ವಿಜಯವಾಗುವ ದೃಷ್ಟಾಂತ ಮಹಾತ್ಮರಿಗಾಗುತ್ತದೆ"(Mahatma is seeing a clear vision of his victory for the cause he is striving for) ಹೀಗೆ ಮಹಾತ್ಮರು ಸಂದೇಶ ಕೊಟ್ಟು ಕಳುಹಿದ್ದಾರೆ. ನಮಗಾದರೂ ಹಾಗೆಯೇ ಅನಿಸುತ್ತದೆ. ಮಹಾಯುದ್ಧ-ಯಜ್ಞಕುಂಡದಲ್ಲಿ ಯಜ್ಞಪುರುಷನು ನಮ್ಮ ಜನಾಂಗಕ್ಕೆ ರಾಷ್ಟ್ರಸ್ವಾತಂತ್ರ್ಯವನ್ನು ಅನುಗ್ರಹಿಸಲೇ ಬೇಕು ಘಟನೆಗಳಾದರೂ ಆ ಗುರಿಯನ್ನೇ ಹಿಡಿದು ಮಾರ್ಗಕ್ರಮಣ ಮಾಡುತ್ತವೆಂದು ನಮ್ಮ ಅಭಿಪ್ರಾಯ. ಅಮೇರಿಕೆಯ ಅಧ್ಯಕ್ಷರಾದ ರೂಝವೆಲ್ಟರವರೂ ಬ್ರಿಟಿಶ ಮುಖ್ಯ ಪ್ರಧಾನರಾದ ಚರ್ಚಿಲ್ಲರವರೂ ಒಂದೆಡೆ ಕೂಡಿ ಆಲೋಚನೆ ಮಾಡುವ ಘಟನೆ ಅಸಾಮಾನ್ಯವಾದುದು, ಅದ್ಭುತವಾದುದು; ಅಭೂತಪೂರ್ವವಾದುದು! ಅನ್ನೊಂದು ಮಹಾಕಾರ್ಯವಿದ್ದನಕ ಉಭಯ ಮಹಾಪುರುಷರು ಯುದ್ಧಆಪತ್ತಿನಲ್ಲಿ ಒಂದೆಡೆ ಕೂಡುವ ಸಾಹಸವನ್ನು ಕೈಕೊಳ್ಳುತ್ತಿರಲಿಲ್ಲ. ಈ ಗುಪ್ತಾಲೋಚನೆಯಲ್ಲಿ ರಶಿಯಾ, ಜಪಾನ ಮೊದಲಾದ ಜನಾಂಗಗಳ ರಾಜಕಾರಣದ ಚರ್ಚೆಯಾಗುವದು ಕ್ರಮಪ್ರಾಪ್ತವಾದುದು ಆದರೆ ಲಂಡನಿನ 'ರೇನೋಲ್ಡ್ಸ ನ್ಯೂಸ' ಪತ್ರಿಕೆಯ ರಾಜಕೀಯ ಸುದ್ದಿಗಾರರು ತಿಳಿಸುವಂತೆ, ಹಿಂದುಸ್ಥಾನದೊಳಗಿನ ಬ್ರಿಟಿಶರ ರಾಜ್ಯಧೋರಣ-ವಿಚಾರದ ವಾರ್ತೆಯನ್ನು ಕೇಳಿ ನಮಗೊಳ್ಳೇ ಆಶೆಯುಂಟಾಗಿದೆ ಬ್ರಿಟಿಶರು ಹಿಂದುಸ್ಥಾನದೊಳಗೆ ಪುರಸ್ಕರಿಸುವ ರಾಜ್ಯಧೋರಣ ಅಮೇರಿಕೆಗೆ ಸಮ್ಮತವಿಲ್ಲ ಬ್ರಿಟಿಶರು ಆಧುನಿಕ ರಾಜ್ಯಪದ್ಧತಿಯನ್ನು ಪುರಸ್ಕರಿಸುತ್ತಿದ್ದಾಗ್ಯೂ ಹಿಂದುಸ್ಥಾನದ ಮಟ್ಟಿಗೆ ಲೋಕಶಾಹಿಯ ವೇದಾಂತ ಮೋಸವೆಂದು ಎಣಿಸಲ್ಪಡುತ್ತದೆ ಆದರಿಂದ ಹಿಂದುಸ್ಥಾನವನ್ನು ಸಂತೈಸಬೇಕೆಂಬ ಅಭಿಲಾಷ ಅಮೇರಿಕೆಯಲ್ಲುಂಟು ಅಧ್ಯಕ್ಷರಾದ ರೂಝವೆಲ್ಟರವರು ಹಿಂದುಸ್ಥಾನದೊಳಗಿನ ಬ್ರಿಟಿಶರ ರಾಜ್ಯಧೋರಣದ ಕುರಿತು ಅಸಮಾಧಾನವನ್ನು ವ್ಯಕ್ತಗೊಳಿಸಿದರಾಗಿಯೂ ಬ್ರಿಟಿಶ ಮುಖ್ಯ ಪ್ರಧಾನರಾದ ಚರ್ಚಿಲ್ಲರವರು ರೂಝವೆಲ್ಟರಿಗೆ ಸಮಾಧಾನ ಮಾಡಿದರಾಗಿಯೂ 'ರೇನೋಲ್ಡ್ಸ ನ್ಯೂಸ' ಪತ್ರಿಕೆಯ ಸುದ್ದಿಗಾರರು ಧ್ವನಿಸುತ್ತಾರೆ. ಬ್ರಿಟಿಶರ ಈಗಿನ ರಾಜ್ಯಧೋರಣದಿಂದ ರೂಝವೆಲ್ಟರಿಗೆ ಸಮಾಧಾನವಾಗದೆಂಬ ಮಾತು ಹಿಂದ ರಾಷ್ಟ್ರೀಯ ಸಭೆಯ ಮಹಾ ಲೋಕನಾಯಕರೂ ಅಮೇರಿಕೆಗೆ ಪರಿಚಿತರಾದ ಪಂ॥ ಜವಾಹಿರಲಾಲ ನೆಹರುರವರೂ ಸೆರೆಮನೆಯಲ್ಲಿ ವಾಸವಾಗಿರುವಾಗ, ಜಗತ್ಪ್ರಸಿದ್ಧ ಮಹಾತ್ಮರು ಯುದ್ಧಯತ್ನವನ್ನು ಪ್ರತಿಭಟಿಸುವಾಗ ಅಮೇರಿಕೆಯ ರೂಝವೆಲ್ಟರಿಗೆ ಹಿಂದುಸ್ಥಾನದೊಳಗಿನ ರಾಜ್ಯಧೋರಣ ಮಾನ್ಯವಿರಲಿಕ್ಕಿಲ್ಲವೆಂದು ನಾವು ಹೇಳುವದು ಬೇಡ ಯುದ್ಧಯತ್ನಕ್ಕೆ ಹಿಂದ-ಜನಾಂಗವನ್ನು ಸಂತೈಸಿ ಸಂಘಟಿಸಲೋಸುಗ ರೂಝವೆಲ್ಟರು ಚರ್ಚಿಲ್ಲರಿಗೆ ನಾಲ್ಕು ಬುದ್ಧಿಯ ಮಾತುಗಳನ್ನು ಹೇಳಿರಬೇಕು ಜಪಾನದ ಆಕ್ರಮಣಶೀಲ ಧೋರಣದಿಂದ ಹಿಂದುಸ್ಥಾನಕ್ಕೆ ವಿಶೇಷ ಮಹತ್ವ ಪ್ರಾಪ್ತವಾಗಿದೆ ನ್ಯೂಝಿಲೆಂಡ ಆಸ್ಟ್ರೇಲಿಯಾ ಸರಕಾರಗಳು ಹಿಂದುಸ್ಥಾನದ ಪರವಾಗಿ ಸಾಮ್ರಾಜ್ಯ ಸರಕಾರದ ಕಡೆ ಮಧ್ಯಸ್ಥಿಕೆ ನಡಿಸಲು ಮುಂದಾಗಲಿಕ್ಕಾದರೂ ಜಪಾನದ ಉಗ್ರರೂಪವೇ ಕಾರಣ! ಸರ್ವಾಧಿಪತಿಗಳ ಕಾರ್ಯಕಾರಿ ಮಂಡಳವನ್ನು ವಿಸ್ತರಿಸಿದ್ದರಿಂದ ಹಿಂದ ಜನಾಂಗಕ್ಕೆ ಸಮಾಧಾನವಿಲ್ಲವೆಂದು ಪ್ರತ್ಯೇಕವಾಗಿ ನಮೂದಿಸುವದು ಅನವಶ್ಯಕ. ಅಂದಮೇಲೆ ಹಿಂದಜನಾಂಗವನ್ನು ಸಮಾಧಾನಪಡಿಸಲು ಬೇರೆ ಉಪಾಯ ಕೈಕೊಳ್ಳಬೇಕೆಂದು ತಾನೇ ಸಿದ್ಧವಾಗುತ್ತದೆ. ಪ್ರಾಂತಿಕ ರಾಜ್ಯಕಾರಭಾರದಲ್ಲಿ ಗವ್ಹರ್ನರರು ನಿರಂಕುಶ ಪ್ರಭುಗಳಾಗಿ ರಾಜ್ಯಭಾರ ನಡಿಸುವ ಕ್ರಮ ಬ್ರಿಟಿಶರಂಥ ಸುಧಾರಿಸಿದ ಲೋಕಶಾಹಿ ಜನಾಂಗಕ್ಕೆ ಶೋಭಿಸುವದಿಲ್ಲ. ಆದರೆ ಪ್ರಸ್ತುತ ರಾಜ್ಯಘಟನೆಯಂತೆ ಬಹುಮತವಿದ್ದ ಪಕ್ಷಕ್ಕೆ ಮಾತ್ರ ರಾಜ್ಯಭಾರ ನಡಿಸುವ ಹಕ್ಕು ಪ್ರಾಪ್ತವಾಗುತ್ತದೆ. ಬಹುಮತವಿದ್ದ ಕೊಂಗ್ರೆಸ ಪಕ್ಷವು ವನವಾಸವನ್ನು ಸ್ವೀಕರಿಸಿದ್ದರಿಂದ ಬ್ರಿಟಿಶರಂಥ ಲೋಕಶಾಹಿ ಪ್ರವರ್ತಕರ ಆಶ್ರಯದಲ್ಲಿ ನಿರಂಕುಶ ರಾಜ್ಯಭಾರ ನಡೆಯುತ್ತಿದ್ದರೆ ಆ ರಾಜ್ಯಭಾರವ, ಆ ಲೋಕಶಾಹಿಯ ಗೌರವವೇನುಳಿಯಿತು? ಲಂಡನಿನ 'ನ್ಯೂ ಸ್ಟೇಟ್ಸಮನ್ ಮತ್ತು ನೇಶನ್' ಪತ್ರಕರ್ತರು ಬರೆದಂತೆ, ಹಿಂದುಸ್ಥಾನದೊಳಗಿನ ವಿಷಮ ರಾಜ್ಯಭಾರಕ್ಕೆ ಬೊಟ್ಟು ತೋರಿಸಿ ಹಿಟ್ಲರನು ಬ್ರಿಟಿಶರಿಗೆ ಅಣಕಿಸುತ್ತಿರುತ್ತಾನೆ. "ಬ್ರಿಟಿಶರು ೧೫೦ ವರ್ಷಗಳಿಂದ ಹಿಂದುಸ್ಥಾನವನ್ನು ಆಳುತ್ತಿದ್ದಾರೆ .. . ಆದರೆ ಹಿಂದುಸ್ಥಾನದ ಜನಸಾಮಾನ್ಯರು ತೀರ ದರಿದ್ರರು. ಶೇಕಡಾ ೯೦ರಷ್ಟು ಜನರು ಈಗಲೂ ಓದು-ಬರಹವನ್ನರಿಯದವರು ಬ್ರಿಟಿಶರು ಹಿಂದುಸ್ಥಾನವನ್ನು ತಮ್ಮ ಭಂಡವಲು ದುಡಿಯುವ ಪ್ರದೇಶವೆಂದು ಗಣಿಸುತ್ತಾರೆ. ಪ್ರತಿ ವರ್ಷ ಬಡ್ಡಿಯೆಂದು ೫ ಕೋಟಿ ಪವನುಗಳನ್ನು ಸೆಳೆಯುತ್ತಾರೆ ಸಿವ್ಹಿಲ ಸರ್ವಂಟರ ಕಡೆಯಿಂದ ಅಂಕಿತದೇಶದಂತೆ ಕಾರಭಾರ ನಡಿಸುತ್ತಾರೆ. ಹಿಂದೀಯರು ಈ ಸಿವ್ಹಿಲ ಸರ್ವಂಟರ ಪೆನ್ಶನನ್ನು ತೆರಬೇಕು" ಹಿಟ್ಲರನು ಹಿಂದುಸ್ಥಾನವನ್ನು ಉಲ್ಲೇಖಿಸಿ ಬ್ರಿಟಿಶರ ಮರ್ಮಾಘಾತ ಮಾಡುತ್ತಾನೆ ಆ ಜ್ಞಾನ ಈಗ ಬ್ರಿಟನ ಜನಾಂಗಕ್ಕೆ ಉಂಟಾಗಿದೆ. ಹಿಂದುಸ್ಥಾನವನ್ನು ಪಾದಾಕ್ರಾಂತ ಪ್ರದೇಶವೆಂದು ಗಣಿಸಿ, ಸಂಸ್ಥಾನಿಕರ ಕಡೆಯಿಂದ ದುಡ್ಡು ಎತ್ತುವಳಿ ಮಾಡುವದೂ ಕೂಳಿಗೆ ಗತಿಯಿಲ್ಲದೆ ಅಲೆದಾಡುವ ಬಡ ಜನರನ್ನು ಸೈನಿಕರಾಗಿ ಸೇರಿಸಿಕೊಳ್ಳುವದೂ ಶ್ರೀಮಂತರ ಕಡೆಯಿಂದ ಯುದ್ಧಸಾಹಿತ್ಯಗಳನ್ನು ಪಡಕೊಳ್ಳುವದೂ ಅನುಚಿತವಾದದ್ದೆಂದು 'ನ್ಯೂ ಸ್ಟೇಟ್ಸಮನ್ ಮತ್ತು ನೇಶನ್' ಪತ್ರಕರ್ತರ ಟೀಕೆ. ಮತ್ತು ಇದೇ ಪ್ರಕಾರ ರೂಢವಾಗಿದ್ದರ ಮೇಲಿಂದ ಹಿಂದೀಯರು ಬ್ರಿಟಿಶರ ಲೋಕಶಾಹಿಯ ವೇದಾಂತವೆಲ್ಲ ಮೋಸದ ಬಾಯ್ಬಡಿಕೆಯೆಂದು ಗ್ರಹಿಸಿದರೆ ಬ್ರಿಟಿಶ ಸಾಮ್ರಾಜ್ಯವು ಖಂಡಿತ ಒಡೆದು ಹೋಗುವದಾಗಿ "ನ್ಯೂ ಸ್ಟೇಟ್ಸಮನ್ ಮತ್ತು ನೇಶನ್" ಪತ್ರಕರ್ತರು ಸ್ವ ಜನಾಂಗಕ್ಕೆ ಎಚ್ಚರಿಕೆ ಕೊಡುತ್ತಾರೆ. ಹಿಟ್ಲರನು ದುಷ್ಟನಿರಬಹುದು, ಘಾತಕನಿರಬಹುದು; ಪಾತಕಿಯಿರಬಹುದು, ಆದರೆ ಬ್ರಿಟನ ಜನಾಂಗಕ್ಕೆ ಹಿಂದುಸ್ಥಾನದೊಳಗಿನ ರಾಜ್ಯಭಾರದ ನಿಜ ರೂಪವನ್ನು ದಿಗ್ದರ್ಶನ ಮಾಡಿಕೊಟ್ಟ ಬಗ್ಗೆ 'ನ್ಯೂ ಸ್ಟೇಟ್ಸಮನ್ ಮತ್ತು ನೇಶನ್' ಪತ್ರಕರ್ತರಂಥ ವಿಚಾರವಂತ ಬ್ರಿಟಿಶರು ಹಿಟ್ಲರನ ಉಪಕಾರವನ್ನು ಮನ್ನಿಸಲೇ ಬೇಕು. ಹಿಂದ-ಜನಾಂಗವಂತು ವಿರೋಧಭಕ್ತಿಯಿಂದ ಆತನನ್ನು ಮನ್ನಿಸದಿರದು. ಹಿಟ್ಲರನು ಪಾಶ್ಚಾತ್ಯರ ಹಿಂಸಾಚಾರದ ಆಕ್ರಮಣಶೀಲತೆಯ ಪರಘಾತಕ ಧೋರಣದ ಪರಿಣತ ರೂಪ. ಹಿಂಸಾಚಾರವನ್ನೂ ಪರಘಾತಕತನವನ್ನೂ ಬಲಾಢ್ಯ, ಕುಶಾಗ್ರ ಬುದ್ಧಿಯ ಜನಾಂಗವು ನಿತಾಂತ ಸ್ವಾರ್ಥಪರಾಯಣವಾಗಿ ಪುರಸ್ಕರಿಸಿದರೆ, ಲೋಕಕ್ಕೊದಗುವ ಅನರ್ಥವನ್ನು ಹಿಟ್ಲರನು ಸ್ವೋದಾಹರಣೆಯಿಂದ ಸಿದ್ಧಗೊಳಿಸಿ, ವಿಚಾರವಂತ ಜನಾಂಗಗಳು ಆ ಧೋರಣದ ತ್ಯಾಗ ಮಾಡಿ ರೀತಿ-ನೀತಿಗಳನ್ನೂ ಅಹಿಂಸೆಯನ್ನೂ ಆಶ್ರಯಿಸಿ ವ್ಯವಹರಿಸಿದ ಹೊರತು ಜನರಾಗಲಿ ಜನಾಂಗಗಳಾಗಲಿ ಬಾಳ್ವೆ ಮಾಡುವದು ಅಸಾಧ್ಯವೆಂದು ಸಿದ್ಧಗೊಳಿಸಿದ್ದಾನೆ. ರೂಝವೆಲ್ಟ-ಚರ್ಚಿಲ್ಲರ ಲೋಕಶಾಹಿಯ ಘೋಷಣೆ ಹಿಟ್ಲರನ ದುಷ್ಟತನದ ಪರಮಾವಧಿಯ ಫಲವಾಗಿದೆ. ಪ್ರತಿಯೊಂದು ಜನಾಂಗವು ತನ್ನ ಸ್ವಾರ್ಥವನ್ನೇ ಹಿಡಿದು ಆ ಸಾಧನೆಗೆ ಪೋಷಕವಾಗಿ ಸ್ವದೇಶ-ವಿದೇಶ ನೀತಿಯನ್ನು ನಡಿಸತೊಡಗಿದರೆ ಕಲಹ-ಯುದ್ಧಗಳಾಗುತ್ತವೆಯೆಂದು ಹಿಟ್ಲರನಿಂದ ಬ್ರಿಟನ-ಅಮೇರಿಕೆಯವರು ಬೋಧ ಪಡೆದಿದ್ದಾರೆ ಈ ಜಾಗೃತಿ ಉಪರತಿ ನಮ್ಮ ಹಿಂದ-ಜನಾಂಗಕ್ಕೆ ಅನುಕೂಲವಾದುದೆಂದು ನಮ್ಮ ಅಭಿಪ್ರಾಯ ಪೋಲಂಡ, ಯುಗೋಸ್ಲಾವಿಯಾ, ಗ್ರೀಸ, ಫ್ರಾನ್ಸ, ಝೆಕೊಸ್ಲೋವಾಕಿಯಾ ಬೆಲ್ಜಿಯಮ್, ಹೊಲಂಡ ಮೊದಲಾದ ಜನಾಂಗಗಳಿಗೆ ಅಸ್ತ

ಸುವ ಲೋಕಶಾಹಿಯ ಕ್ರಮವನ್ನು ಬ್ರಿಟಿಶರು ಹಿಂದುಸ್ಥಾನಕ್ಕೆ ನಿರಾಕರಿಸಿ ಹಿಟ್ಲರನಿಂದ ಮೆಟ್ಟುಮೆಟ್ಟಿಗೆ ಚುಚ್ಚಿಸಿಕೊಳ್ಳಲಾರರು. ಸ್ವಾರ್ಥಕ್ಕೆ ಸೀಮೆಯಿದೆ. ಜನಸಾಮಾನ್ಯರ ಕಣ್ಣಿಗೆ ಬೀಳದಂತೆ, ಗೌರವಹಾನಿಯಾಗದಂತೆ ಸಭ್ಯರೆನಿಸಿಕೊಂಡು ಸ್ವಾರ್ಥ ಸಾಧಿಸಲು ಮನುಷ್ಯನು ಯಾವಾಗಲೂ ಹಂಚಿಕೆ ಮಾಡುತ್ತಿರುತ್ತಾನೆ. ಪ್ರೇಕ್ಷಕರಿಗೆ ಕಾಣುವ ಸ್ವಾರ್ಥವನ್ನು ಪುರಸ್ಕರಿಸಲು ಆತನ ಮನಸ್ಸು ನಾಚುತ್ತದೆ. ಆ ಸ್ಥಿತಿ ಈಗ ನಮ್ಮ ಬ್ರಿಟಿಶ ಸಾಮ್ರಾಜ್ಯಕರ್ತರಿಗೆ ಉಂಟಾಗತೊಡಗಿದೆ. ಬ್ರಿಟಿಶರ ಲೋಕೋಪಕಾರದ ವೇದಾಂತವನ್ನೆಲ್ಲ ಹಿಂದುಸ್ಥಾನದಲ್ಲಿ ಹಿಟ್ಲರನು ಒರೆಗಲ್ಲಿಗೆ ಹಚ್ಚಿ ಬ್ರಿಟಿಶರ ಪರಿಹಾಸ್ಯ ಮಾಡುತ್ತಾನೆ. ಇಂಥ ಸಮಯದಲ್ಲಿ ಹಿಂದುಸ್ಥಾನದ ಪರಿಸ್ಥಿತಿ ಬದಲುವದು ಖಂಡಿತವಾದ ಮಾತು. ಅದನ್ನು ಬದಲಿಸದಿದ್ದರೆ ಸಾಮ್ರಾಜ್ಯಕರ್ತರಿಗೆ ಉಪಾಯವೇ ಇರುವದಿಲ್ಲ. ಇದೇ ಪರಿಸ್ಥಿತಿಯನ್ನು ಮಹಾತ್ಮರಾದರೂ ತಮ್ಮ ತಪೋಬಲದಿಂದ ಗ್ರಹಿಸಿ ತಮ್ಮ ಸಂಕಲ್ಪಿತ ಕಾರ್ಯ ನೆರವೇರುವದೆಂದು ಬಹಿರಂಗಗೊಳಿಸಿದ ಬಳಿಕ ನಮ್ಮ ಉದ್ಧಾರವಾಗಲೇ ಬೇಕೆಂದು ಮತ್ತೆ ಒತ್ತಿ ಹೇಳುವದನವಶ್ಯಕ. ಮಹಾತ್ಮರಂಥ ಸತ್ಯಸಂಧರು ಅಂತಃಸ್ಫೂರ್ತಿಯಿಂದ ನುಡಿದ ವಚನ ಹುಸಿಯಾಗಬಲ್ಲದೇ? ಸತ್ಯಪಕ್ಷಪಾತಿ, ಭಕ್ತಾಧೀನ, ಭಕ್ತವಚನಪಾಲಕ ಪರಮಾತ್ಮನು ಮಹಾತ್ಮರಂಥ ನಿಜಭಕ್ತನ ವಚನವನ್ನು ಹುಸಿಯಾಗಗೊಡುವನೇ!

ನನಗೀಗ ತುರ್ಕರ ಚಿಂತೆ!

[ನಿರೀಕ್ಷಕನು ಬರೆದುದು.]

ಈವಾಗ ನನಗೆ ತುರ್ಕರದೇ ಚಿಂತೆ! ತುರ್ಕರ ಅವಸ್ಥೆಯೇನಾದೀತೆಂದು ತಿಳಿಯದೆ ನಾನು ದಿಗಿಲು ಬಿದ್ದಿದ್ದೇನೆ. ಅಂಕಾರಾದೊಳಗಿನ 'ರ್ಯೂಟರ' ವಾರ್ತಾವಾಹಕರು ಬಲ್ಗೇರಿಯಾದ ದಕ್ಷಿಣ ವಿಭಾಗದಲ್ಲಿ ಜರ್ಮನ ಸೈನಿಕರು ಒಕ್ಕಟ್ಟಾಗುತ್ತಿರುವರೆಂದೂ ಅವರಿಗೆ ಅನುಕೂಲವಾಗಿ ಇತಾಲಿಯ ಸೈನ್ಯಪಥಕಗಳು ನೆರೆಹೊರೆಯಲ್ಲಿ ಕೂಡಿರುವವಾಗಿಯೂ ತಿಳಿಸುತ್ತಾರೆ. ತುರ್ಕಸ್ತಾನಕ್ಕೆ ಚಕ್ರ ಬಂತು; ತುರ್ಕರ ಮೇಲೆ ಹಿಟ್ಲರನ ಪಾಪದೃಷ್ಟಿ ಬಿತ್ತು; ತುರ್ಕರಿಗೆ ಸಂಕಟಪ್ರಾಪ್ತವಾಯಿತು, ಹೀಗೆ 'ರ್ಯೂಟರ' ವಾರ್ತಾವಾಹಕರು ಸೂಚಿಸುತ್ತಾರೆ "ನಮ್ಮ ಮೇಲೆ ಸಾಗಿಬರುವ ಆಲೋಚನೆ ಹಿಟ್ಲರನಿಗಿಲ್ಲ!" ಹೀಗೆ ತುರ್ಕರು ನಂಬಿಕೊಂಡಿದ್ದಾರಂತೆ ಜರ್ಮನಿಯ ರಾಯಭಾರಿ ಫೊಪೇನರು ಯಾವ್ಯಾವ ಮೋಡಿ ಮಾಡಿದ್ದಾರೆಂದು ನಾನೇನರಿಯೆ. ತುರ್ಕರು ಅವರ ಮಾತನ್ನು ನಂಬಿ ಅಜಾಗ್ರತೆಯಿಂದ ಉಳಿದರೆ ಕೆಟ್ಟರೆಂದೇ ನನ್ನ ಭಾವನೆ! ಪರಮಾತ್ಮನನ್ನು ನಂಬಿ ಕೆಟ್ಟವರಿಲ್ಲ; ಹಿಟ್ಲರನನ್ನು ನಂಬಿ ಕೆಡದವರಿಲ್ಲ! ರುಶ್ಯ ರಾಯಭಾರಿಗಳಿಗೆ ಹಿಟ್ಲರನ ಪ್ರತಿನಿಧಿಗಳಾದ ರಿಬೆನಟ್ರಾಪರು ಗೆಳೆತನದ ನಂಬಿಗೆ ಕೊಟ್ಟ ೨೪ ತಾಸುಗಳಲ್ಲಿ ರುಶ್ಯರ ಮೇಲೆ ಜರ್ಮನ ಪುಂಡರು ಸಾಗಿಹೋದ ಅನುಭವ ನನಗಿರುವಾಗ, ತುರ್ಕರು ಜರ್ಮನರನ್ನು ಹೇಗೆ ನಂಬಿ ಉಳಿಯುತ್ತಾರೆಂದು ನನಗೆ ಗ್ರಹಿಕೆಯಾಗದ ಮಾತು. ಅಥವಾ ಹಿಟ್ಲರನ ಮಾಯಾಜಾಲದಲ್ಲಿ ತುರ್ಕರು ಸೇರಿಹೋಗುವ ಪ್ರಸ್ತಾವನೆ ಇದೇನೆಂದು ಒಂದು ಭೀತಿಯೂ ನನಗುಂಟಾಗುತ್ತದೆ! ಯಾಕೆಂದರೆ ತುರ್ಕಸ್ತಾನದ ಪರಿಸ್ಥಿತಿಯೇ ಹಾಗುಂಟು. ರುಶ್ಯರ ಮೇಲೆ ದಾಳಿ ಮಾಡಿ ಹಿಟ್ಲರನು ಯುಕ್ರೇನ ಮಾರ್ಗವಾಗಿ ಕೊಕೆಸಸದೊಳಗಿನ ಎಣ್ಣೆ-ಗಣಿಗಳ ಮೇಲೆ ಗುರಿಯಿಟ್ಟು ಸಂಗ್ರಾಮವನ್ನು ನಡಿಸುತ್ತಿದ್ದಾನೆ. ರುಶ್ಯರು ಹಿಮ್ಮೆಟ್ಟುತ್ತಿರುವರೇನೋ ಅಹುದು ಆದರೆ ಮೆಟ್ಟುಮೆಟ್ಟಿಗೆ ಜರ್ಮನರನ್ನು ಅಡ್ಡಗಟ್ಟಿ ಸಂಕಲ್ಪಿತ ವಿದ್ಯುದ್ವೇಗದ ಕ್ರಮವನ್ನು ರುಶ್ಯರು ನಿರರ್ಥಕಗೊಳಿಸಿದ್ದಾರೆ. ಈ ಸಂಗ್ರಾಮದ ತಾತ್ಪರ್ಯವನ್ನು ನಾನು ಈ ಮುಂದೆ ಹೇಳುವೆ. ಸದ್ಯಕ್ಕೆ ಆ ದಾರಿಯಲ್ಲಿರುವ ಪ್ರತಿಬಂಧಗಳನ್ನಷ್ಟು ಇಲ್ಲಿ ಉಲ್ಲೇಖಿಸಿಟ್ಟೆ ಯಾಕೆಂದರೆ ಈ ದಾರಿ ಸುಸೂತ್ರವಲ್ಲಾದ್ದರಿಂದಲೇ ತುರ್ಕಸ್ತಾನದ ಮಾರ್ಗವಾಗಿ ಕೊಕೆಸಸ ಪ್ರಾಂತ (ಕಶ್ಯಪ ದೇಶ) ಕ್ಕೆ ನುಗ್ಗಲು ಹಿಟ್ಲರನು ಹೊಂಚು ಹಾಕಿದ್ದಾನೆಂದು ನನ್ನ ಅಭಿಪ್ರಾಯ. ಬಲ್ಗೇರಿಯದ ದಕ್ಷಿಣ ಪಾರ್ಶ್ವದಲ್ಲಿ ಒಟ್ಟುಗೂಡಿದ ಸೈನ್ಯ ಪಥಕಗಳು ಕಶ್ಯಪ ದೇಶಕ್ಕೆ ಕೂಚು ಮಾಡಲು ದಾರಿ ಕೇಳಿದರೆ ತುರ್ಕ ಸರಕಾರವು ಮಾಡಬೇಕಾದದ್ದೇನು ಅಥವಾ ಮಾಡುವದೇನು ಇಲ್ಲವೆ ಮಾಡಬಲ್ಲದೇನು? ತುರ್ಕರ ಒಲವು ನಮ್ಮ ಬ್ರಿಟಿಶರ ಬದಿಗೆ; ಈ ಮಾತು ತ್ರಿಕಾಲಾಬಾಧಿತ ಸತ್ಯ. ಆದರೆ ಅದೇ ಸಮಯ "ಕಿಂಗಹೊಲ ನ್ಯೂಸಲೆಟರ" ಕರ್ತರು ಬರೆದಂತೆ, "enlightened self interest" ಅಂದರೆ ತುರ್ಕರು ವಿಶಾಲ ವಿಚಾರದಿಂದ ಸ್ವಾರ್ಥ ಸಾಧಿಸುವವರು.. ಸ್ವಾರ್ಥಕ್ಕೆ ಬಾಧೆ ಬರುತ್ತಿದ್ದರೆ ಬ್ರಿಟಿಶರ ಮೇಲಿನ ಮಮತೆಯನ್ನು ತೊರೆಯಲಿಕ್ಕೆ ತುರ್ಕರು ಅ-ಸಿದ್ಧರಲ್ಲ! ಅಂದರೆ ಜರ್ಮನ ಸೈನ್ಯ-ಪಥಕಗಳನ್ನು ಇದಿರಿಸುವ ಶಕ್ತಿ ಇದ್ದರೆ, ಆರ್ಭಾಟದಿಂದ ಜರ್ಮನರೊಡನೆ ಸಂಗ್ರಾಮ ಹೂಡಿ ಬ್ರಿಟಿಶರ ಪಕ್ಷವನ್ನು ಪ್ರಸ್ಥಾಪಿಸಲು ಸಿದ್ಧರು. ತುರ್ಕರ ಶೌರ್ಯ ಪುರಾತನದಿಂದ ಪ್ರಸಿದ್ಧವೇ ಉಂಟು. ರಣಭೂಮಿಯಲ್ಲಿ ತುರ್ಕರು ಇಳಿದರೆ ಅವರನ್ನು ಆವೇಶದಿಂದಲೂ ಕಲಿತನದಿಂದಲೂ ಶೌರ್ಯದಿಂದಲೂ ಧೈರ್ಯದಿಂದಲೂ ಹೋರಾಡುವ ವೀರ ಯೋಧರನ್ನು ಕಾಣುವದು ದುರ್ಘಟ. ಆದರೆ ಈ ಯುಗ ವ್ಯಕ್ತಿ-ಶೌರ್ಯದ್ದಲ್ಲ; ನಿರ್ಜೀವ ಯಂತ್ರಗಳ ಪರಾಕ್ರಮವೇ ಈ ಯುದ್ಧದಲ್ಲಿ ಪ್ರಧಾನ. ತುರ್ಕರ ಕಡೆ ಯಂತ್ರಸಾಮಗ್ರಿಯಿಲ್ಲ, ವಿಮಾನ-ಬಲ ಅಷ್ಟಕ್ಕಷ್ಟೇ! ಇದೇ ಒಂದು ಸಣ್ಣ ಕೊರತೆ! ಯಂತ್ರಸಾಹಿತ್ಯಗಳನ್ನು ಪೂರೈಸಲಿಕ್ಕೆ ಬ್ರಿಟಿಶರು ಸಿದ್ಧರಿದ್ದಾರೆ. ಆದರೆ ತುರ್ಕಸ್ತಾನಕ್ಕೆ ಭೂಮಧ್ಯಸಮುದ್ರದಿಂದ ಹೋಗುವ ದಾರಿ ಹಿಟ್ಲರನ ಪ್ರಭುತ್ವಕ್ಕೆ ಒಳಪಟ್ಟಿದೆ. ಗ್ರೀಸ್ನ ನಡುಗಡ್ಡೆಯಿಂದ ದಾರ್ಡಾನೆಲ್ಸ ಸಾಮುದ್ರಧುನಿಯ ಪ್ರದೇಶದ ವರೆಗಿನ ಸಮುದ್ರ-ಮಾರ್ಗವೆಲ್ಲ ಜರ್ಮನರ ಅಧೀನವಾಗಿದೆ. ಆದರಿಂದಲೇ ಬ್ರಿಟಿಶರು ಇರಾಣದ ಬಸ್ರಾ ಮಾರ್ಗವಾಗಿ ತುರ್ಕಸ್ತಾನಕ್ಕೆ ಯುದ್ಧ ಸಾಹಿತ್ಯಗಳನ್ನು ಕಳಿಸಲುದ್ಯುಕ್ತರಾದದ್ದು ಇರಾಕದಲ್ಲಿ, ಸಿರಿಯಾದಲ್ಲಿ ವಿಮಾನ ಕೇಂದ್ರಗಳಿದ್ದದ್ದನ್ನು ನಾನು ಬಲ್ಲೆ ಇವೆರಡೂ ಪ್ರದೇಶಗಳು ಬ್ರಿಟಿಶರ ವಶವಾಗಿರುವ ಸಂಗತಿಯನ್ನೂ ನಾನು ಬಲ್ಲೆ. ಆದರೆ ಈ ಕೇಂದ್ರದೊಳಗಿಂದ ತುರ್ಕಸ್ತಾನಕ್ಕೆ ತಕ್ಕಷ್ಟು ವಿಮಾನಗಳು ಪೂರೈಸಲ್ಪಡುವವಾಗಿ ನಾನು ಎದೆಗಟ್ಟಿ ಮಾಡಿ ಹೇಳಲಾರೆ. "ಕಿಂಗಹೊಲ ನ್ಯೂಸಲೆಟರ" ಕರ್ತರು ಸಹ "ಅಶಕ್ಯವಿಲ್ಲವೆಂಬ" ನಿಷೇಧ ದ್ವಿರುಕ್ತಿಯಿಂದ ಈ ವಿಷಯವನ್ನು ಉಲ್ಲೇಖಿಸುತ್ತಾರಾದ್ದರಿಂದ ನನಗೆ ಅಧೈರ್ಯ!

ಇರಾಣದೊಳಗಿನ ಘಟನೆಗಳಾದರೂ ಬಲು ಭೀತಿದಾಯಕವೇ. ಜರ್ಮನ-ಪ್ರವಾಸಿಕರಿಂದ ಇರಾಣದ ಸಾರ್ವಭೌಮತನಕ್ಕೆ ಬಾಧಕ ಬರುತ್ತದಾಗಿಯೂ ಅವರನ್ನು ಹೊರತಳ್ಳಬೇಕಾಗಿಯೂ ಬ್ರಿಟಿಶರೂ ರುಶ್ಯರೂ ಇರಾಣ ಸರಕಾರಕ್ಕೆ ಬರೆದಿದ್ದರು ಕೆಲವರನ್ನಷ್ಟೇ ಹೊರಹಾಕಲು ಇರಾಣ ಸರಕಾರವು ಒಪ್ಪಿಕೊಂಡಿರುವದಂತೆ. ಆದರೆ ಇದರಿಂದ ಬ್ರಿಟಿಶರಿಗಾಗಲಿ ರುಶ್ಯರಿಗಾಗಲಿ ಸಮಾಧಾನವಾಗಿಲ್ಲವಂತೆ. ಇರಾಣ ಸರಕಾರವು ಬ್ರಿಟಿಶ-ರುಶ್ಯರ ಅಂಬೋಣವನ್ನು ನಿರಾಕರಿಸಿತೆಂದು ಬ್ರಿಟಿಶ-ರುಶ್ಯರ ಹೇಳಿಕೆ. ಜರ್ಮನ ಪ್ರವಾಸಿಕರ ವಾಸ್ತವ್ಯದಿಂದ ಇರಾಣ ಸರಕಾರಕ್ಕೆ, ಆ ಸರಕಾರದ ಒಡೆತನಕ್ಕೆ, ರಾಜ್ಯಭಾರಕ್ಕೆ ಯಾವದೇ ಪ್ರಕಾರದಿಂದ ವ್ಯತ್ಯಯವಿಲ್ಲವಾಗಿ ಇರಾಣ ಸರಕಾರದ ಅಂಬೋಣ. ನಡುಮಧ್ಯದಲ್ಲಿ ತುರ್ಕಸ್ತಾನದೊಳಗಿನ ಜರ್ಮನ ರಾಯಭಾರಿಯಾದ ಫೊಪೇನರವರು ಇರಾಣಕ್ಕೆ ಹೋಗಿ ಎಲ್ಲ ಪರಿಸ್ಥಿತಿಯನ್ನು ತಿಳಕೊಂಡು ಹಿಟ್ಲರ ಮಹಾಪ್ರಭುವಿಗೆ ವರದಿ ಕೊಡುವವರಿದ್ದಾರೆಂದು ಇಜಿಪ್ತದ ಕ್ಯಾಯಿರೋದೊಳಗಿನ ವಾರ್ತೆ ಇದಲ್ಲದೆ ಡಾ॥ ಆರ್ಥರ ಗ್ರೋಬಾ ಎಂಬ ಜರ್ಮನ ಜಾಲ-ಪ್ರಮುಖರು ಇರಾಣದೊಳಗಿನ ಹಿಟ್ಲರ-ಪಂಥದ ಪ್ರಮುಖರೊಡನೆ ಆಲೋಚನೆ ಮಾಡಲೋಸುಗ ವಿಮಾನದಿಂದ ಹೋಗಿದ್ದಾರಂತೆ. ಇರಾಣದೊಳಗಿನ ಜರ್ಮನರಿಗೆ ಹೊರತಳ್ಳಬಾರದೆಂದು ಇರಾಣ ಸರಕಾರದ ನಿರ್ಧಾರವಾಗಿರುತ್ತದೆ ಇರಾಣದೊಳಗಿನ ಪೋಲೀಸರು ಪ್ರಯಾಣಿಕರ ಮೇಲೆ ಕಠೋರ ಕಾವಲಿಟ್ಟಿರುವರಂತೆ! ೨೪ ತಾಸಿಗೊಮ್ಮೆ ಪ್ರಯಾಣಿಕರ ಪಾಸುಗಳನ್ನು ಪೋಲೀಸರು ತಪಾಸ ಮಾಡುತ್ತಿದ್ದಾರೆ ಇರಾಣ ಸರಕಾರವು ಸ್ವಸ್ಥತೆಯನ್ನು ಕಾಪಾಡಿಕೊಳ್ಳುವದಕ್ಕಾಗಿ ಈ ಪರಿ ಜಾಗ್ರತೆ ಕೊಳ್ಳುತ್ತಿದೆ. ಪ್ರಯಾಣಿಕರಿಗೆ ಹೊರತಳ್ಳಿದರೆ ಹಿಟ್ಲರನು ರೇಗುತ್ತಾನೆ; ಅವರನ್ನು ಇಟ್ಟುಕೊಂಡರೆ ಬ್ರಿಟಿಶ-ರುಶ್ಯರು ಬೇಸರಗೊಳ್ಳುತ್ತಾರೆ; ಅದರಿಂದ ಜರ್ಮನ ಪ್ರಯಾಣಿಕರ ಮೇಲೆ ಇರಾಣದ ಪೋಲೀಸರು ಸರ್ಪಕಾವಲಿಟ್ಟಿದ್ದಾರೆ. ಆದಾಗ್ಯೂ ಇರಾಣದ ಷಹಾ ರೇಝಾ ಅಲಿ ಪೆಹೆಲವಿಯವರಿಗೆ ತಟಸ್ಥತೆ-ಅಲಿಪ್ತತೆ ಬಹು ಕಾಲ ಬಾಳುವದೆಂಬ ಧೈರ್ಯವಿಲ್ಲ. ನಿನ್ನೆ ಗುರುವಾರ ರಾಜಧಾನಿಯಾದ ತೆಹರಾನದಲ್ಲಿ ಸೈನ್ಯ ಶಿಕ್ಷಣಾಲಯದಿಂದ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ಬೇಕಾದ ಸ್ವಾರ್ಥತ್ಯಾಗ ಮಾಡಲು ಸಿದ್ಧರಾಗಿರಬೇಕೆಂದು ಷಹಾರವರು ಅಪ್ಪಣೆ ಕೊಟ್ಟರು. ಈ ತರುಣ ಸೈನಿಕರಿಗೆ ವಾಡಿಕೆಯಂತೆ ರಜೆ ಸಿಗಲಿಕ್ಕಿಲ್ಲವಾಗಿಯೂ ಅದರ ಕಾರಣ ಮುಂದೆ ತಿಳಿಯುವದಾಗಿಯೂ ಷಹಾರವರು ಗಂಭೀರವಾಗಿ ಹೇಳಿ ಸೈನಿಕರೂ ಸೈನ್ಯಾಧಿಕಾರಿ

(೫ನೇ ಪುಟದ ಮೇಲೆ ಮುಂದುವರಿಸಿದೆ)

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರ ೪ ೬ ಇಂಚು ಮಳೆಯಾಗಿದೆ. ಮಧ್ಯಾಹ್ನದಲ್ಲಿ ಚಳೋ ಬಿಸಿಲು ಬೀಳುತ್ತಿದೆ ಹೀಗೆಯೇ ಇನ್ನೊಂದು ತಿಂಗಳು ಮಳೆಯಾದರೆ ಸಾಧಾರಣ ೮–೧೦ ಆಣೆ ಬೆಳೆ ಸಿಗುವಂತಿದೆ ದೀನವತ್ಸಲ ಪರಮೇಶ್ವರನು ಅಷ್ಟೊಂದು ಕೃಪೆ ಮಾಡಲೆಂದು ರೈತರು ಭಕ್ತಿಭಾವದಿಂದ ಪ್ರಾರ್ಥಿಸುತ್ತಾರೆ ಊರಲ್ಲಿ ಕೆಲವು ಕಡೆ ಬಟ್ಟೇ ಕೊರಕೆಡೆ ಮುಂತಾದ ಬೇನೆ ಬೇಸರಿಕೆಗಳಿವೆ.

ಕಳೆದ ರವಿವಾರ ಸಂಜೆ ಜ್ಯುಬಿಲಿ ಧರ್ಮಶಾಲೆಯಲ್ಲಿ ಕೆಲವು ತರುಣರು ರಾ॥ ಗೋಪಾಲ ಹೆಗಡೆ ಇವರ ಅಧ್ಯಕ್ಷತೆಯಲ್ಲಿ ಸಭೆಸೇರಿ ದಿವಂಗತ ಕವೀಂದ್ರ ರವೀಂದ್ರನಾಥ ಟಾಗೋರರವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ರಾ॥ ಮಂಜನಾಥ ಕುಮಟಾಕರ ಇವರು ತಮ್ಮ ಭಾಷಣದಲ್ಲಿ ಕವಿಸಮ್ರಾಟರ ವೈಶಿಷ್ಟ್ಯವನ್ನು ವಿವರಿಸಿ ರವೀಂದ್ರರಂತಹ ಉಜ್ವಲ ಸರಸ್ವತೀ ಸೇವಕರು ಭಾರತವರ್ಷದಲ್ಲಿ ಪುನಃ ಪುನಃ ಜನ್ಮವೆತ್ತಿ ಭಾರತದ ಕೀರ್ತಿಯನ್ನು ಚಿರಂತನ ಮಾಡಲೆಂದು ಹಾರೈಸಿದರು ಅಧ್ಯಕ್ಷ ಗೋಪಾಲ ಹೆಗಡೆಯವರು ತಾವು ಸ್ವತಃ ರಚಿಸಿದ ಒಂದು ಕವಿತೆಯನ್ನು ಹಾಡಿ ತೋರಿಸಿ ಸಭೆಯ ಮುಕ್ತಾಯ ಮಾಡಿದರು.

ಜಿಲ್ಲಾ ಲೋಕಲ್ ಬೋರ್ಡಿನ ಗೋಕರ್ಣ-ಹಿರೇಗುತ್ತಿ ಬರ್ಗಿ ಮತದಾರ ಸಂಘದಲ್ಲಿ ಮೊನ್ನೆಯಾದ ಉಪಚುನಾವಣೆಯ ಸಂಬಂಧ "ಸ್ಥಳವಂತಿಕ"ನು ಮಾಡಿದ ಟೀಕೆಯನ್ನೂ "ವೃತ್ತ"ದ ಸ್ಥಾನಿಕ ಸುದ್ದಿಗಾರರು ಕೊಟ್ಟ ಸುದ್ದಿಗಳನ್ನೂ ಅನುಲಕ್ಷಿಸಿ ರಾ॥ ಗಣಪತಿ ಮಾಧವ ಕಾಮತ ಅಂಕೋಲಾ ಇವರು "ಕೊಂಗ್ರೆಸ ಕೆಲಸಗಾರರ" ನಡತೆಯ ಸಮರ್ಥನೆ ಮಾಡಿ ಒಂದು ಉದ್ದ ಪತ್ರ ಬರೆದಿದ್ದಾರೆ ಅದರ ಸಾರವು:- ರಾ॥ ಟೀಂಗ್ಸೆಯವರು ಪ್ರಚಂಡ ಬಹುಮತದಿಂದ ಆರಿಸಿಬಂದದ್ದು ನೋಡಿ "ಸ್ಥಳವಂತಿಕ"ನೂ "ವೃತ್ತ"ದ ಸ್ಥಾನಿಕ ಸುದ್ದಿಗಾರನೂ ಉರಿ ಕಾರಿ, ಜಿಲ್ಲೆಯ ಕೊಂಗ್ರೆಸ ಕೆಲಸಗಾರರ ಮೇಲೂ ರಾ॥ ತಿ ಶ್ರೀ. ನಾಯಕರ ಮೇಲೂ ಮಾತಿಗೆಟ್ಟ ಟೀಕೆ ಮಾಡಿದ್ದಾರೆ. ಇವರು ಹೊಟ್ಟೇಕಿಚ್ಚಿನಿಂದ ಹೀಗೆ ಮಾಡಿರುವರೋ ತಪ್ಪು ತಿಳುವಳಿಕೆಯಿಂದ ಮಾಡಿರುವರೋ ತಿಳಿಯದು. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಸದಸ್ಯರು ಸತ್ಯಾಗ್ರಹ ಮಾಡಿ ಸೆರೆಮನೆ ಸೇರಿದ್ದರಿಂದ ತೆರವಾಗುವ ಸ್ಥಳಗಳ ಬಗ್ಗಾಗಿ ಉಪಚುನಾವಣೆಗಳಾಗುವ ಸಂದರ್ಭದಲ್ಲಿ ಉಪಚುನಾವಣೆಗೆ ವೈಯಕ್ತಿಕವಾಗಿ ನಿಂತ ಉಮೇದವಾರರೊಳಗೆ ಯಾರಿಗೆ ಕೊಂಗ್ರೆಸ ಪ್ರವೃತ್ತಿಯ ಮತದಾರರು ತಮ್ಮ ಮತ ಕೊಡಬೇಕೆಂಬುದರ ಕುರಿತು ಕೊಂಗ್ರೆಸ ಸಮಿತಿಗಳು ಸೂಚನೆ ಕೊಡಬೇಕು ಎಂಬರ್ಥದ ಒಂದು ಪರಿಪತ್ರವನ್ನು ಅ॥ ಭಾ॥ ಕೊಂ ಸಮಿತಿಯ ಕಚೇರಿಯವರು ಹೊರಡಿಸಿದ್ದುಂಟು. ನಮ್ಮ ಜಿಲ್ಲೆಯಲ್ಲಿ ರಾ॥ ಹರಿ ಪೈ ಮತ್ತು ಮಾಸೂರಕರವರ ಸತ್ಯಾಗ್ರಹದಿಂದ ಡಿ. ಲೋ. ಬೋರ್ಡಿನ ಎರಡು ಸ್ಥಳಗಳು ತೆರವಾದವು ಅವುಗಳಲ್ಲಿ ಒಕ್ಕೆ ಕೊಂಗ್ರೆಸ್ಸಿಗರಾದ ರಾ॥ ಮಂಜನಾಥ ಪೈರು ಅವಿರೋಧವಾಗಿ ಆರಿಸಿ ಬಂದರು; ಮತ್ತು ತಾ ೧೮-೬-೪೧ಕ್ಕೆ ಜಿಲ್ಲಾ ಲೋಕಲ್ ಬೋರ್ಡಿನ ಹೊಸ ಅಧ್ಯಕ್ಷರನ್ನು ಆರಿಸಲಿಕ್ಕೆ ಸೇರಿದ ವಿಶೇಷ ಸಭೆಗೆ ಹಾಜರಾಗಲು ಸಮರ್ಥರಾದರು. ಈ ಸಭೆಯಲ್ಲಿ ನಡೆದ ಹೋರಾಟದ ಪರಿಣಾಮವಾಗಿ ಕೊಂಗ್ರೆಸ ಪಕ್ಷದ ಇಬ್ಬ ಸದಸ್ಯರು ಪಕ್ಷ ಬಿಟ್ಟು ಹೊರಗೆ ಹೋಗಿದ್ದಾರೆ. ಹೀಗಾಗಿ ಕೊಂಗ್ರೆಸ ಪಕ್ಷದ ಬಹುಮತವು ಊನ ತಾ ೧೮ ರ ನಂತರ ೧೫ ವಿರುದ್ಧ ೧೪ ಕ್ಕೆ ಇಳಿಯಿತು ಅದರಿಂದ ಹಿರೇಗುತ್ತಿ ಮತದಾರ ಸಂಘದಿಂದ ನಿಷ್ಠಾವಂತ ಕೊಂಗ್ರೆಸ ಅಭಿಮಾನಿಗಳೊಬ್ಬರು ಆರಿಸಿ ಬರುವಂತೆ ಕೊಂಗ್ರೆಸ ಕೆಲಸಗಾರರಿಗೆ ನೋಡಿಕೊಳ್ಳಬೇಕಾಯಿತು. ಬೋರ್ಡಿನ ಹೊಸ ಅಧ್ಯಕ್ಷರನ್ನಾರಿಸಿದ ಎರಡೇ ದಿನಗಳಲ್ಲಿ ಅಂದರೆ ತಾ. ೨೦-೬-೪೧ನೇಗೆ ಬರ್ಗಿ ಮತದಾರ ಸಂಘದ ಉಪಚುನಾವಣೆಯಲ್ಲಿ ಹುರಿಯಾಳುಗಳು ತಮ್ಮ ನಾಮಪತ್ರ ಕೊಡಬೇಕಾಗಿತ್ತು. ಅದ್ದರಿಂದ ರಾ॥ ತಿ ಶ್ರೀ. ನಾಯಕರು ಗೋಕರ್ಣದೊಳಗಿನ ಕೊಂಗ್ರೆಸ ಕೆಲಸಗಾರರಿಗೆ ಪತ್ರ ಬರೆದು ಯಾರೊಬ್ಬ ನಿಷ್ಠಾವಂತ ಕೊಂಗ್ರೆಸ್ಸಿಗರಿಗೆ ಹುರಿಯಾಳಾಗಿ ನಿಲ್ಲಿಸಿರೆಂದು ಪತ್ರ ಬರೆದು ಆ ಪ್ರಕಾರ ಗೋಕರ್ಣದವರು ರಾ॥ ಟೀಂಗ್ಸೆಯವರಿಗೆ ನಿಲ್ಲಿಸಿದರು. ರಾ॥ ಶೇಷಗಿರಿ ಕಾನಭಾಗರು ಹುರಿಯಾಳು ಪತ್ರ ಹಾಜರಪಡಿಸಿದ ಸಂಗತಿ ಹುರಿಯಾಳು ಪತ್ರಗಳ ಪರಿಶೀಲನೆಯ ಕಾಲಕ್ಕೆ ತಿಳಿದು ಬಂತು ಅದರಿಂದ ಚುನಾವಣೆಗೆ ನಿಂತ ಈರ್ವ ಹುರಿಯಾಳುಗಳಲ್ಲಿ ಯಾರನ್ನು ಆರಿಸಿ ಕೊಡಬೇಕೆಂಬುದನ್ನು ಕೊಂಗ್ರೆಸ ಮುಖಂಡರು ಸ್ಪಷ್ಟೀಕರಿಸಬೇಕಾಯಿತು ಅದರಂತೆ ರಾ॥ ನಾಯಕರು ಹಸ್ತಪತ್ರಿಕೆಗಳನ್ನು ಹೊರಡಿಸಿ ರಾ॥ ಟೀಂಗ್ಸೆಯವರಿಗೆ ಬೆಂಬಲ ಕೊಡಬೇಕೆಂದು ಜನರಿಗೆ ಸೂಚನೆ ಕೊಟ್ಟರು. ಮುಂದೆ ಕುಮಟೆಯ ಯುದ್ಧಯತ್ನ ಮಂಡಳದ ಹಲವು ಶಿಷ್ಯರು ರಾ॥ ಶೇಷಗಿರಿ ಕಾನಭಾಗರ ಪರವಾಗಿ ಮಿಗಿಲಾದ ಪ್ರಚಾರವಡಿಸಿದ್ದರಿಂದ ಕೊಂಗ್ರೆಸ ಕೆಲಸಗಾರರೂ ಅಲ್ಪಸ್ವಲ್ಪ ಪ್ರಚಾರ ಮಾಡಬೇಕಾಯಿತು ಅದರ ಪರಿಣಾಮವಾಗಿ ರಾ॥ ಟೀಂಗ್ಸೆಯವರು ಚುನಾವಣೆಯನ್ನು ಯಶಸ್ವಿಯಾಗಿ ಗೆದ್ದರು, ಮತ್ತು ಈ ಚುನಾವಣೆಯಲ್ಲಿ ಕೊಂಗ್ರೆಸ್ಸಿನ ಹಾಗೂ ಯುದ್ಧಯತ್ನವಾದಿಗಳ ಬಲಾಬಲದ ತುಲನೆಯಾಯಿತು ಕೊಂಗ್ರೆಸ್ಸಿನಲ್ಲಿರುವವರೊಳಗೂ ಮೊನ್ನಿನ ಉಪಚುನಾವಣೆಗೂ ಸಂಬಂಧ ಹಚ್ಚುವದು ಸರಿಯಲ್ಲ ಕೊಂಗ್ರೆಸಿನಲ್ಲಿ ಕೊಳೆಯಿದ್ದರೆ ಅದನ್ನು ತೆಗೆಯಲಿಚ್ಛಿಸುವವರು ಕೊಂಗ್ರೆಸ ಕಮಿಟಿಗಳಲ್ಲಿ ಆರಿಸಿ ಬರಲು ಹೆಣಗಾಡಬೇಕು. ಜಿಲ್ಲಾ ಲೋಕಲ್ ಬೋರ್ಡಿನಲ್ಲಿರುವ ಕೊಂಗ್ರೆಸ ಪಕ್ಷ ಪರಿಪೂರ್ಣ (ideal) ವಿರದಿದ್ದರೂ ಅದು ಕೊಂಗ್ರೆಸ್ಸಿನ ವಿರುದ್ಧವಾಗಿ ಯಾವ ಕೃತ್ಯವನ್ನೂ ಮಾಡಿರುವದಿಲ್ಲ ಅದ್ದರಿಂದ ಅದನ್ನು ಬಲಪಡಿಸುವದು ಕ್ರಮಪ್ರಾಪ್ತವಿತ್ತು. ಇತ್ಯಾದಿ.

[* * ರಾ॥ ಟೀಂಗ್ಸೆಯವರು ಚುನಾವಣೆಗೆ ನಿಂತ ಪರಿಸ್ಥಿತಿ ರಾ॥ ಕಾಮತರಿಗೂ ಅವರ ಕೊಂಗ್ರೆಸ್ಸಿಗ ಗೆಳೆಯರಿಗೂ ಗೊತ್ತಿದ್ದಕ್ಕಿಂತ ಹೆಚ್ಚು ಕುಮಟೆಯ ಜನರಿಗೆ ಗೊತ್ತಿರಬೇಕೆಂಬ ಮಾತನ್ನು ರಾ॥ ಕಾಮತರು ಒಪ್ಪಬೇಕು. ರಾ॥ ಟೀಂಗ್ಸೆಯವರು ಕೊಂಗ್ರೆಸಿಗರ ಪ್ರೇರಣೆಯಿಂದ ಮತ್ತು ಕೊಂಗ್ರೆಸಿನ ಸೇವೆ ಮಾಡುವ ಉದ್ದೇಶದಿಂದ ಹುರಿಯಾಳು ಪತ್ರ ಕೊಟ್ಟಿದ್ದಿಲ್ಲವೆಂದು ನಾವು ಸ್ವತಃ ಬಲ್ಲೆವು ಅಷ್ಟೇ ಅಲ್ಲ, ತಾ ೧೦ನೇಗೆ ಶೇಷಗಿರಿ ಕಾನಭಾಗರು ತಮ್ಮ ಹುರಿಯಾಳು-ಪತ್ರ ಹಾಜರ ಪಡಿಸಿದ್ದಿಲ್ಲವಾದರೆ ರಾ॥ ಟೀಂಗ್ಸೆಯವರೂ ಹುರಿಯಾಳು-ಪತ್ರ ಕೊಡುತ್ತಿದ್ದಿಲ್ಲ! ಕುಮಟೆಯಲ್ಲಿ ಬಗೆಬಗೆಯಿಂದ ಹೆಸರುವಾಸಿಯಾದ ಮತ್ತು ಕೊಂಗ್ರೆಸಿನೊಡನೆ ಎಳ್ಳಷ್ಟೂ ಸಂಬಂಧವಿಲ್ಲದ ಗೋಕರ್ಣದ ಇನ್ನೊಬ್ಬರು ಒಂದೇ ಒಂದು ಹುರಿಯಾಳು-ಪತ್ರ ಕೊಟ್ಟು ಅವಿರೋಧ ಆರಿಸಿ ಬರುತ್ತಿದ್ದರು! ರಾ॥ ಕಾನಭಾಗರು ಕೊಟ್ಟ ಹುರಿಯಾಳು-ಪತ್ರ ನೋಡಿಕೊಂಡು ಅವರು ಹಿಂಜರಿದರು, ಮತ್ತು ರಾ॥ ಟೀಂಗ್ಸೆಯವರ ಕಡೆಯಿಂದ ಇನ್ನೊಂದು ಹುರಿಯಾಳು ಪತ್ರ ಕೊಡಿಸಿದರು! ರಾ॥ ಟೀಂಗ್ಸೆಯವರ ಹುರಿಯಾಳು ಪತ್ರದ ಕಥೆ ಹೀಗಿದೆ! ಸತ್ಯಾಗ್ರಹಿ ರಾ॥ ಕಾಮತರಿಗೂ ಸತ್ಯನಿಷ್ಠ ಕೊಂಗ್ರೆಸ ಕೆಲಸಗಾರರಿಗೂ ಈ ಸತ್ಯ ಸಂಗತಿ ತಿಳಿಯದೆ ಇದ್ದದ್ದು ಸತ್ಯವಾಗಿಯೂ ಸೋಜಿಗದ ಸಂಗತಿ!! ರಾ॥ ಕಾಮತರು ನಮ್ಮ ಸುದ್ದಿಗಾರರ ಮುಖ್ಯ ಮಾತನ್ನೇ ಮರೆಮಾಡಿದ್ದಾರೇಕೆ? ಕೊಂಗ್ರೆಸ ಪ್ರತಿನಿಧಿಗಳೆಂದು ಹಿಂದೆ ಬೋರ್ಡಿನಲ್ಲಿ ಸೇರಿದ ಸದಸ್ಯರು ಮಾಡಿದ ಕೊಂಗ್ರೆಸ ಸೇವೆ ಯಾವದು? ಅವರು ಮಾಡಿದ ಲೋಕೋದ್ಧಾರವಾದರೂ ಯಾವದು? ಕೊಂಗ್ರೆಸ್ಸಿನ ಸಂಬಂಧವಿಲ್ಲದ ಹಿಂದಿನ ಬೋರ್ಡುಗಳಿಗೂ ಕೊಂಗ್ರೆಸ ಪಕ್ಷದ ಬಹುಮತವಿದ್ದ ಈಗಣ ಬೋರ್ಡಿಗೂ ಏನು ವ್ಯತ್ಯಾಸವಿದೆ? ರಾ॥ ಕಾಮತರು ತೋರಿಸಿಕೊಡುವರೇ? ಗ್ರಾಮೋದ್ಧಾರ ಮಂಡಳಗಳಿಗೆ ಕೊಂಗ್ರೆಸ ಪ್ರಮುಖರು ರಾಜಿನಾಮೆ ಕೊಟ್ಟು ಹೊರಟು ಹೋದಾಗ, ಕೊಂಗ್ರೆಸ ಪಕ್ಷದ ನಾಯಕರೆಂದು ಮುಂದೆ ಬಂದ ರಾ॥ ದೇವರವರು ಜಿಲ್ಲಾ ಗ್ರಾಮೋದ್ಧಾರ ಮಂಡಳದಲ್ಲಿ ಸೇರಿದ್ದು ಕೊಂಗ್ರೆಸ ತತ್ವಕ್ಕೆ ಸರಿ ಬೀಳುತ್ತದೆಂದು ರಾ॥ ಕಾಮತರ ಅಂಬೋಣವೇ? ಕೊಂಗ್ರೆಸ ಸಿಬ್ಬಿಕ್ ಬೋರ್ಡಿನವರು ತಯಾರಿಸಿದ ನಿಯಮಗಳಂತೆಯೇ ಬೋರ್ಡಿನೊಳಗೆ ಹೋದ ಕೊಂಗ್ರೆಸ ಸದಸ್ಯರು ನಡೆದರೇ? ನಡೆಯುತ್ತಿರುವರೇ? ಸಿಬ್ಬಿಕ್ ಬೋರ್ಡು ಈಗ ಎಲ್ಲುಂಟು? ಕೊಂಗ್ರೆಸ ಪಕ್ಷದ ಸದಸ್ಯರಿಗೆ ಅವರು ಯಾವ ಯಾವ ಸೂಚನೆಗಳನ್ನು ಕೊಟ್ಟು ಏನೇನು ಕೆಲಸ ಮಾಡಿಸಿಕೊಂಡಿರುತ್ತಾರೆಂಬುದನ್ನು ರಾ॥ ಕಾಮತರು ರಾ॥ ನಾಯಕರಿಂದ ತಿಳಕೊಂಡು ಜನರ ತಿಳುವಳಿಕೆಯ ಬಗ್ಗಾಗಿ ಪ್ರಕಟಗೊಳಿಸುವರೇ? ಬೋರ್ಡಿನಲ್ಲಿದ್ದ "ಕೊಂಗ್ರೆಸ" ಸದಸ್ಯರಲ್ಲಿ ಈಗ ನಾಲ್ಕಾಣೆ ಕೊಟ್ಟು ಕೊಂಗ್ರೆಸ ಸದಸ್ಯರಾದವರು ಎಷ್ಟಿದ್ದಾರೆಂದು ಅವರು ತಿಳಿಸುವರೇ? ಕೊಂಗ್ರೆಸ್ಸಿನವರೆಂದು ಬೋರ್ಡಿಗೆ ಹೋದ ಹಲಕೆಲವು ಸದಸ್ಯರು ನಡಿಸಿರುವ ಕಾರಸ್ಥಾನಗಳೂ ಅವರು ನಡಿಸುತ್ತಿರುವ ಅನುಚಿತ ವರ್ತನೆಯೂ ರಾ॥ ಕಾಮತರಿಗೆ ಪ್ರಶಸ್ತವೆನಿಸುತ್ತವಲ್ಲವೇ? ಇಂಥ ಸದಸ್ಯರನ್ನು ಇನ್ನೂ ಅಪ್ಪಿಕೊಂಡು ಬೋರ್ಡಿನಲ್ಲಿ ಕೊಂಗ್ರೆಸ ಬಹುಮತವಿದೆಯೆಂದು ರಾ॥ ಕಾಮತರೂ ರಾ॥ ನಾಯಕರೂ ಭಾವಿಸುತ್ತಿದ್ದರೆ ಅವರ ಕೊಂಗ್ರೆಸವೂ ಕೊಂಗ್ರೆಸ ತತ್ವಗಳೂ ನಾವಾಗಲಿ ಜನರಾಗಲಿ ಅರಿಯುತ್ತಿರುವ ಮತ್ತು ಗೌರವಿಸುತ್ತಿರುವ ಕೊಂಗ್ರೆಸಿನಿಂದ ತೀರ ಭಿನ್ನವಿರಬೇಕಾಗಿ ನಾವು ತಿಳಿಯಬೇಕಾಗಿದೆ! ರಾ॥ ಟೀಂಗ್ಸೆಯವರ ವಿಜಯ ನೋಡಿ ನಮ್ಮ ಸುದ್ದಿಗಾರರಿಗೂ "ಸ್ಥಳವಂತಿಕ"ನಿಗೂ ಹೊಟ್ಟೆಯೊಳಗೆ ಉರಿ ಎದ್ದಿಲ್ಲ; ಏಳುವ ಕಾರಣವೂ ಇಲ್ಲ, ಬೋರ್ಡ-ಮೆಂಬರಿಗೆ ಅಷ್ಟು ಮಹತ್ವವಿರುವದಿಲ್ಲ. ಆದರೆ "ಕೊಂಗ್ರೆಸ ಕೆಲಸಗಾರ"ರೆಂದು ಮೆರೆಯುವ ಕೆಲವರು ತಮ್ಮ ನಡತೆಯಿಂದ ಕೊಂಗ್ರೆಸ್ಸಿನ ಪವಿತ್ರ ಹೆಸರನ್ನು ಕೆಡಿಸುತ್ತಿರುವ ಬಗೆ ನೋಡಿ ಉರಿ ಏಳುತ್ತದೆ! ರಾ॥ ಕಾಮತರು ಈ ಮಾತು ನೆನಪಿನಲ್ಲಿಟ್ಟುಕೊಳ್ಳಬೇಕಾಗಿ ಮಿತ್ರತ್ವದ ಸೂಚನೆಯದೆ.

—ಸಂಪಾದಕ]

ಇಲ್ಲಿಯ ಸಬಜಜ್ಜ ಕೋರ್ಟಿನ ಆವಾರದ ಬದಿಯ ಓಣಿಯಲ್ಲಿ ಒಂದು ಕಡೆ ಮೊಣಕಾಲು ಮಟ್ಟಿಗೆ ನೀರು ನಿಂತು ಬಹಳ ರಾಡಿಯಾಗಿದೆ! ಓಣಿಯಿಂದ ತಿರುಗಾಡಲಿಕ್ಕೇ ಆಗುವದಿಲ್ಲ! ಓಣಿಯ ಉತ್ತರ ಮಗ್ಗಲಿಗೆ ಇರುವ ಒಂದು ಹಿತ್ತಲೊಳಗಿಂದ ಈ ನೀರು ಹೋಗಬೇಕಿತ್ತಂತೆ. ಆ ಹಿತ್ತಲಿನ ಮಾಲಿಕನು ನೀರು ಹೋಗುವ ತೂಬು ಮುಚ್ಚಿದ್ದರಿಂದ ನೀರು ಹೋಗದೆ ಹಾಗೆ ನಿಂತಿರುವದಂತೆ. ಮ್ಯುನಿಸಿಪಾಲಿಟಿಯವರು ಈ ಹಾದಿ ಮಾಮೂಲ ಎಂದು ಸಾಧಿಸಿ ಆ ನೀರು ಹೋಗದೇಕೆಂದು ಹಟ ಹಿಡಿದಿರುವರಾಗಿ ತಿಳಿಯುತ್ತದೆ. ಆದರೆ ಈ ಮಾಮೂಲ ಹಕ್ಕಿನ ವ್ಯಾಜ್ಯದಲ್ಲಿ ಜನರಿಗೆ ತೊಂದರೆಯಾಗಿರುತ್ತದೆಂಬ ಮಾತನ್ನು ಮ್ಯುನಿಸಿಪಾಲಿಟಿಯವರು ಅರಿಯರೋ ಹೇಗೆ? ನೀರು ನಿಂತಲ್ಲಿಂದ ಪೂರ್ವ ಬದಿಗೆ ಹತ್ತೆಂಟು ಮಾರು ಕಾಲುವೆ ತೆಗೆದು ನೀರು ಹರಿದು ಹೋಗುವಂತೆ ಇಲ್ಲವೆ ಮಾರ್ಗದ ಮೇಲೆ ಬಿದ್ದ ಹೊಂಡ ಮುಚ್ಚಿ ನೀರು ನಿಲ್ಲದಂತೆ ಅವರು ವ್ಯವಸ್ಥೆ ಮಾಡಬಾರದೇ?

ಕಳೆದ ರವಿವಾರ ಮಹಾತ್ಮರ ಅಪ್ಪಣೆಯ ಮೇರೆಗೆ ಗೋಕರ್ಣದೊಳಗಿನ "ಭದ್ರಕಾಳಿ ವಾಚನಾಲಯ'ದವರೂ ರವೀಂದ್ರನಾಥ ಟಾಗೋರ ದಿನವನ್ನು ಆಚರಿಸಿ, ಮೃತಾತ್ಮರಿಗೆ ಅಖಂಡ ಶಾಂತಿಯನ್ನೀಯಲು ಜಗನ್ನಾಥನನ್ನು ಪ್ರಾರ್ಥಿಸಿದರಾಗಿ ತಿಳಿಯುತ್ತದೆ.

ಇಲ್ಲಿಯ ಉಪ್ಪಿನ ಲೈಸೆನ್ಸದಾರರಾದ ರಾ॥ ಭಿಕು ವೈಕುಂಠ ಕಾಮತ ಇವರು ಸೇತೀ ಉಪ್ಪನ್ನು ಮಾರಿದ ಬಗ್ಗೆ ಇಲ್ಲಿಯ ೧ನೇ ವರ್ಗದ ಮೆಜಿಸ್ಟ್ರೇಟರಲ್ಲಿ ಉಪ್ಪಿನ ಇಲಾಖೆಯವರು ಮಾಡಿಕೊಟ್ಟ ಫಿರ್ಯಾದಿಯಲ್ಲಿ ರಾ॥ ಕಾಮತರಿಗೆ ರೂ. ೩೦೦ ದಂಡ ವಿಧಿಸಲ್ಪಟ್ಟಿತ್ತು. ಸೆಶನ್ಸ ಜಡ್ಜರು ಅಪೀಲಿನಲ್ಲಿ ಈ ಹುಕುಮನ್ನು ರದ್ದುಪಡಿಸಿದ್ದಾರೆ ಉಪ್ಪು ಸ್ವಕಟ್ಟೆಯದಲ್ಲವಾಗಿ ಉಪ್ಪಿನ ಇಲಾಖೆಯವರು ಸಮಾಧಾನಕರ ರೀತಿ

ಯಿಂದ ಸಿದ್ಧವಾದಿಲ್ಲವೆಂದು ಸೆಶನ್ಸ ಜಜ್ಜರಾದ ಮಿ|| ಜಲಿದೇಯವರು ನಿರ್ಣಯಿಸಿ, ಜಪ್ತು ಮಾಡಿದ ಉಪ್ಪನ್ನು ಬಿಟ್ಟು ಕೊಡಬೇಕೆಂದು ವಿಧಿಸಿದ್ದಾರೆ.

ಹೊನ್ನಾವರ— (ತಾ. ೨೩-೮-೪೧) ಕಳೆದ ರವಿವಾರ ತಾ. ೧೭ನೇಗೆ ಗೌಡ ಸಾರಸ್ವತ ಬ್ರಾಹ್ಮಣರ ಮಠದಲ್ಲಿ ರಾ| ದತ್ತು ದೀಕ್ಷಿತರ ಅಧ್ಯಕ್ಷತೆಯಲ್ಲಿ ಸಭೆಯಾಗಿ ದಿವಂಗತ ರವೀಂದ್ರರ ಸ್ಮರಣೆ ಮಾಡಲಾಯಿತು. ರಾ|| ಶಿವರಾವ ಶಾಸ್ತ್ರಿಯವರೂ ಅಧ್ಯಕ್ಷರೂ ರವೀಂದ್ರರ ಗೌರವವನ್ನು ತಿಳಿಸಿ ಹೇಳಿ ಅವರ ಆತ್ಮಕ್ಕೆ ಶಾಂತಿಸುಖವನ್ನು ಕೊಡಲು ಪರಮಾತ್ಮನನ್ನು ಪ್ರಾರ್ಥಿಸಿದರು.

ಜಲವಳಕರ್ಕಿ ಅಮ್ಮನವರ ಮೊಕ್ತೇಸರರು ಜಿಲ್ಲಾ ನ್ಯಾಯಾಧೀಶರ ಕಡೆಗೆ ಮಾಡಿದ ಅಪೀಲಿನಲ್ಲಿ ಅವರು ನಿರ್ದೋಷಿಗಳೆಂದು ನಿರ್ಣಯವಾಯಿತು. ಇಲ್ಲಿಯ ಜುಗಾರಿ ಪಟ್ಟಿಯ ಆರೋಪಿಗಳು ಮಾಡಿದ ಅಪೀಲಿನಲ್ಲೂ ಅವರಿಗೆ ಪೂರ್ಣ ಗುಣವಾಗಿರುತ್ತದೆ.

ನಮ್ಮ ನಗರ ಸಭೆಯವರ ದುಂದುಗಾರಿಕೆ ಒಂದೇ ಸವನೆ ನಡೆದಿದೆ. ಹಿಂದೆ ಭಂಗಿ ನೌಕರರ ಮೇಲೆ ಕಣ್ಣಿಡಲಿಕ್ಕೂ ನಾಯಿಗಳ ಶಿಕಾರಿ ಮಾಡಲಿಕ್ಕೂ ನಗರ ಸಭೆಯವರು ಒಬ್ಬನಿಗೆ ನೇಮಿಸಿದ್ದರು. ಅವನು ತೀರಿಕೊಂಡ ಮೇಲೆ ಶಿಕಾರಿ ಕೆಲಸಕ್ಕೆ ಸೇವಾನಿವೃತ್ತ ಪೋಲೀಸನೊಬ್ಬನಿಗೆ ನೇಮಿಸಿಕೊಂಡರು. ಅವನು ಮುದುಕನೆಂದು ಹಿಂದುಗಡೆ ಆಕ್ಷೇಪ ಬಂದ ಮೇಲೆ ಅವನಿಗೆ ತೆಗೆದು ಮುದುಕನಾಗುವ ಮುಂಚೆಯೇ ಸೇವಾನಿವೃತ್ತನಾದ ಇನ್ನೊಬ್ಬ ಪೋಲೀಸನಿಗೆ ನೇಮಿಸಿಕೊಂಡರು. ಅವನು ಶಿಕಾರಿ ಕೆಲಸವನ್ನೂ ಮಾಡುತ್ತಿದ್ದನು, ಭಂಗಿಗಳ ಕೆಲಸದ ತಪಾಸಣೆಯನ್ನೂ ಮಾಡುತ್ತಿದ್ದನು. ನಗರ ಸಭೆಯವರು ಈಗ ಅವನನ್ನು ತೆಗೆದು ಭಂಗಿಗಳ ಕೆಲಸದ ಮೇಲ್ವಿಚಾರ ಮಾಡಲು ಒಂದು ಪ್ರತ್ಯೇಕ ಇಸಮಿಗೆ ನೇಮಿಸಿ, ನಾಯಿ-ಶಿಕಾರಿ ಮಾಡಲು ಒಬ್ಬ ಅನನುಭವಿ ಹುಡುಗನಿಗೆ ನೇಮಿಸಿದ್ದಾರೆ! ಅದರಲ್ಲೂ ಅವನಿಗೆ ಕೋವಿಯ ಪರವಾನೆಯಿಲ್ಲ! ಕೋವಿಯಿಂದ ಸರಿಯಾಗಿ ಗುಂಡು ಹೊಡೆಯಲಿಕ್ಕೂ ಬರುವದಿಲ್ಲ! ಅವನು ಗುಂಡು ಹಾರಿಸಿದರೆ ನಾಯಿ ಸಾಯುವ ಬದಲು ಓಡಿಹೋಗುತ್ತದೆ! ನಮ್ಮ ನಗರ ಸಭೆಯವರ ಕೆಲಸದ ಮಾದರಿಯಿದು!

ಕಳೆದ ತಾ. ೧೩ನೇಗೆ ಕಡತೋಕಾ ಸೀಮೆಯೊಳಗಿನ ಬಾದಳ್ಳಿಯ ಮಹಾಸತಿಯ ಗುಡಿಯಲ್ಲಿ ಸೀಮೆಯವರು ರಾ|| ಧರ್ಮಶೀಲ ಗಣೇಶ ಭಟ್ಟರ ಅಧ್ಯಕ್ಷತೆಯ ಕೆಳಗೆ ಸಭೆಗೂಡಿ, ತಮ್ಮ ಸೀಮೆಯ ಹಳ್ಳಿಗಳಲ್ಲಿ ಪ್ರೌಢ ಶಿಕ್ಷಣ ಶಾಲೆಗಳನ್ನು ತೆರೆದು ನಡೆಸುವ ಬಗ್ಗೆ ರಾ|| ಹೆಗ್ಗೆರೆ ಕೇಶವ ನಾರಾಯಣ ಭಟ್ಟರ ನೇತೃತ್ವದಲ್ಲಿ ೬ ಜನರ ಒಂದು ಸಂಘವನ್ನು ನೇಮಿಸಿದ್ದಾರೆ. ಸದ್ಯಕ್ಕೆ ಬಾದಳ್ಳಿಯ ಶ್ರೀ ಮಹಾಸತಿ ಗುಡಿಯಲ್ಲಿ ಒಂದು ಪ್ರೌಢ ಶಾಲೆ ತೆರೆಯಬೇಕೆಂದು ನಿರ್ಣಯವಾಗಿ, ಸದರಿ ಶಾಲೆಯ ವ್ಯವಸ್ಥೆ ನೋಡಲಿಕ್ಕೆ ೬ ಪಂಚರ ನೇಮಣೂಕಿಯಾಗಿದೆ. ಪ್ರೌಢರ ಶಿಕ್ಷಣ-ಪ್ರಶಸ್ತಿಪತ್ರ ಪಡೆದ ರಾ|| ತಿ. ವಿ. ಭಟ್ಟ ಕಡತೋಕಾ ಇವರು ಆ ಶಾಲೆಯ ಶಿಕ್ಷಕರಾಗಿ ಆರಿಸಲ್ಪಟ್ಟಿದ್ದಾರೆ.

ಭಟಕಳ— (ತಾ. ೨೧-೮-೪೧) ಇಲ್ಲಿಯ ಇಸ್ಲಾಮಿಯಾ ಹಾಯಸ್ಕೂಲಿನಲ್ಲಿ ಕನ್ನಡ, ಸಂಸ್ಕೃತ ಕಲಿಸುತ್ತಿದ್ದ ರಾ|| ಛಪ್ಪಿಯವರು ತಮ್ಮ ಊರಾದ ಬಾಗಲಕೋಟೆಯೊಳಗಿನ ಹಾಯಸ್ಕೂಲಿನಲ್ಲಿ ಸೇರಲು ಇಲ್ಲಿಯ ಶಾಲೆಯನ್ನು ಬಿಟ್ಟು ಹೋದರು, ಅವರು ಇಲ್ಲಿಯ ವಿದ್ಯಾರ್ಥಿ ಲೋಕದಲ್ಲಿ ಬಹಳ ಪ್ರಿಯರಾಗಿದ್ದರು. ಶಾಲೆಯ ವಿದ್ಯಾರ್ಥಿಗಳೂ ಶಿಕ್ಷಕರೂ ಅವರಿಗೆ ಒಳ್ಳೇ ಸತ್ಕಾರ ಮಾಡಿ ಬೀಳ್ಕೊಟ್ಟರು

ಮಾರುಕೇರಿಯ ರಾ|| ತ್ರಿವಿಕ್ರಮ ವೆಂಕಟಗಿರಿ ಹೆಬ್ಬಾರರು ಕಳೆದ ತಾ. ೧೫ನೇಗೆ ಕೈಲಾಸವಾಸಿಗಳಾದರೆಂದು ತಿಳಿಸಲು ವ್ಯಸನವಾಗುತ್ತಿದೆ. ಮೃತಾತ್ಮರು ದೊಡ್ಡ ಮನೆತನದವರಿದ್ದರಲ್ಲದೆ ಹಳ್ಳಿಗಳಲ್ಲಿ ಸುಧಾರಣೆ ಮಾಡಿ ತರುವದಕ್ಕಾಗಿ ಬಹಳ ಹೆಣಗಾಡುತ್ತಿದ್ದರು. ಅವರ ಅಕಾಲಿಕ ನಿಧನದಿಂದ ಭಟಕಳ ಪೇಟೆಯ ಹಳ್ಳಿಗರಿಗೆ ಬಹಳ ಹಾನಿಯಾಗಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗದು. ಕೈಲಾಸೇಶನು ಕೈಲಾಸವಾಸಿಗಳಿಗೆ ಸದ್ಗತಿಯನ್ನಿತ್ತು ಅವರ ಆಪ್ತೇಷ್ಟ ಮಕ್ಕಳಿಗೆ ಸಮಾಧಾನವೀಯಲೆಂದು ಹಾರೈಸುತ್ತೇವೆ.

ಶಿರಸಿ— 'ಶ್ರೀ ಮಾರಿಕಾಂಬಾ ದೇವಾಲಯದ ಭಂಡಾರದಲ್ಲಿ ಅವ್ಯವಸ್ಥೆಯುಂಟಾಗಿರುವ ಕಥೆ ಕೇಳಿ ಜನಸಾಮಾನ್ಯರಲ್ಲಿ ಬಹಳ ಕಳವಳವುಂಟಾಗಿದೆ. ರಾ| ಕೃಷ್ಣರಾವ ಮರಾಠೇಯವರು ದೇವಸ್ಥಾನದ ಲೆಕ್ಕ ತೋರಿಸಲು ಮೊಕ್ತೇಸರರಿಗೆ ಕೇಳಿದ್ದರಂತೆ. ಲೆಕ್ಕ ತೋರಿಸಬೇಕಾದದ್ದಿಲ್ಲೆಂದೂ ಲೆಕ್ಕ ಕೇಳುವ ಹಕ್ಕು ಮರಾಠೇಯವರಿಗಿಲ್ಲೆಂದೂ ಪ್ರಮುಖ ಮೊಕ್ತೇಸರರೊಬ್ಬರು ಜಬಾಬು ಕೊಟ್ಟಿರುವರಾಗಿ ಸುದ್ದಿ! ಗುರುವಾರ ತಾ. ೨೧ಕ್ಕೆ ನಗರ ಸಭೆಯ ಮಾರ್ಕೇಟಿನಲ್ಲಿ ರಾ|| ಭವಾನಿ ತಿರುಮಲೆಯವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯಾಗಿ ದೇವರ ಭಂಡಾರದ ಅವ್ಯವಸ್ಥೆಯ ಬಗ್ಗೆ ಕಾಯಿದೆಯ ಕ್ರಮ ಕೈಕೊಳ್ಳಬೇಕಾಗಿ ಗೊತ್ತುವಳಿಯಾಯಿತು. ಮರಾಠೇ ಕೃಷ್ಣರಾಯರು ತಾವು ಕೇಳಿದ ಹಾಗೂ ತಿಳಕೊಂಡ ಸಂಗತಿಗಳನ್ನು ಸಭಿಕರಿಗರುಹಿ ಭಂಡಾರದ ಸುಧಾರಣೆ ಮಾಡಿ ತರುವ ಧರ್ಮಕಾರ್ಯಕ್ಕೆ ಸರ್ವರೂ ಸಹಾಯ ಮಾಡಬೇಕೆಂದು ಬಿನ್ನವಿಸಿದರು. ವರ್ಗಣಿ ಕೂಡಿಸಲಿಕ್ಕೂ ಮೊಕ್ತೇಸರರ ಮೇಲೆ ದಾವೆ ವಗೈರೆ ಮಾಡಲಿಕ್ಕೂ ೫ ಜನರ ಮಂಡಳವೊಂದು ನೇಮಿಸಲ್ಪಟ್ಟಿದೆ

ಶಿರಸಿ ನಗರ ಸಭೆಯ ನ್ಯಾಯ ವಿಚಿತ್ರವಾದುದು! ಒಬ್ಬರಿಗೊಂದು ನ್ಯಾಯ! ಇನ್ನೊಬ್ಬರಿಗೆ ಮತ್ತೊಂದು ನ್ಯಾಯ!! ಕೊಟ್ಟ ಮಾತಿಗೂ ವಚನಕ್ಕೂ ಬೆಲೆಯಂತೂ ಇಲ್ಲೇ ಇಲ್ಲ!! ನಗರ ಸಭೆಯ ಪರವಾನಗಿ ಪಡೆಯದೆ ಮನೆ-ಇಮಾರತುಗಳನ್ನು ಕಟ್ಟಿದವರು ಬಹಳ ಜನರಿದ್ದಾರೆ, ಆದರೆ ಕೆಲವರ ವಿರುದ್ಧ ಪ್ರಕರಣಗಳಾಗಿವೆ! ರಾ|| ಅಂಕೋಲೆಕರ ಎಂಬವರು ಪರವಾನಗಿ ಪಡೆಯದೆ ಇಮಾರತು ಕಟ್ಟಿಸಿದರೆಂದು ಅವರ ಮೇಲೆ ಖಟ್ಲೆ ಮಾಡಿಕೊಡಲ್ಪಟ್ಟಿತು. ಅವರು ಮಹಾಸಭೆಗೆ ಮನವಿ ಮಾಡಿ ತನ್ನ ಅಪರಾಧ ಕ್ಷಮಿಸಬೇಕೆಂದು ಬೇಡಿಕೊಂಡರು. ರಾ|| ಅಂಕೋಲೆಕರರು ರೂ. ೫ ನಷ್ಟಭರಪಾಯಿ ಬಗ್ಗೆ ಕೊಟ್ಟು ಲೇವಿ ಮಾಫಿ ಬೇಡಿದಲ್ಲಿ ಅವರ ಮೇಲಿನ ಖಟ್ಲೆ ತಿರುಗಿ ತೆಗೆದುಕೊಳ್ಳಬೇಕೆಂದು ಮಹಾಸಭೆಯವರ ನಿರ್ಣಯವಾಯಿತು. ಅದರಂತೆ ರಾ|| ಅಂಕೋಲೆಕರರು ರೂ. ೫ ನಷ್ಟಭರಪಾಯಿ ಕೊಟ್ಟು ಲೇವಿ ಮಾಫಿಯನ್ನು ಬೇಡಿದರು, ಆದಾಗ್ಯೂ ಅವರ ಖಟ್ಲೆ ಮುಂದರಿಯಿತು! ಮತ್ತು ಕೊನೆಗೆ ಅವರಿಗೆ ರೂ. ೨ ದಂಡವಾಯಿತು! ಇನ್ನೊಂದು ಪ್ರಕರಣದ ಕಥೆ ಕೇಳಿರಿ. ಮಂಜುಳಾಬಾಯಿ ಎಂಬವಳು ನಗರ ಸಭೆಯ ಪರವಾನಗಿಯಿಲ್ಲದೆ ಒಂದು ಮನೆ ಕಟ್ಟಿಸಿದ್ದಳು; ಅವಳ ಮೇಲೂ ಖಟ್ಲೆಯಾಗಿ ಅವಳಿಗೆ ೧೦ ರೂ. ದಂಡವಾಯಿತು. ಮುಂದೆ ಮನೆ ಕಿತ್ತಿ ತೆಗೆಯಬೇಕೆಂದು ಅವಳಿಗೆ ಹುಕುಮಾಯಿತು! ಅವಳು ಕೇಳಲಿಲ್ಲ. ಹೀಗೆ ನಗರ ಸಭೆಯ ಅಪ್ಪಣೆ ಅಮಾನ್ಯ ಮಾಡಿದ ಬಗ್ಗೆ ಅವಳ ವಿರುದ್ಧ ಇನ್ನೊಂದು ಖಟ್ಲೆಯಾಯಿತು! ಮುನಿಸಿಪಲ್ ಕಮಿಟಿಯವರ ಈ ನಿರ್ಣಯದ ವಿರುದ್ಧ ಮಂಜುಳೆಯು ಮಹಾಸಭೆಯ ಕಡೆ ಮನವಿ ಮಾಡಿಕೊಂಡಳು. ಈ ಮನವಿಯ ವಿಚಾರಕ್ಕಾಗಿ ನಗರಾಧ್ಯಕ್ಷರು ಮಹಾಸಭೆಯ ವಿಶೇಷ ಸಭೆ ಕರೆದರು! ಅದರಲ್ಲಿ ಮಂಜುಳೆಯ ಅಪರಾಧ ಕ್ಷಮಿಸಿ ಖಟ್ಲೆ ತಿರುಗಿ ಕೊಳ್ಳಬೇಕೆಂದು ಬಹುಮತದಿಂದ ನಿರ್ಣಯವಾಯಿತು! ಹೀಗೆ ಒಬ್ಬೊಬ್ಬರಿಗೆ ಒಂದೊಂದು ಬಗೆಯ ನ್ಯಾಯ ಮಾಡಿದ್ದು ನೋಡಿ ಸ್ವತಃ ನಗರ ಸಭೆಯ ಸದಸ್ಯರೇ ಕೆಲವರು ರೇಗಿಗೆದ್ದಿದ್ದಾರೆ. ಕೆಲವರು ಕೋರ್ಟಿನಲ್ಲಿ ದಾವೆ ಮಾಡಿ ಮೇಲ್ಕಾಣಿಸಿದ ತೀರ್ಮಾನವು ಅಮಲಿನಲ್ಲಿ ಬರದಂತೆ ನಗರಾಧ್ಯಕ್ಷರಿಗೂ ಸೆಕ್ರೆಟರಿಯವರಿಗೂ ತಾತ್ಪೂರ್ತಿಕ ಪ್ರತಿಬಂಧಕ ಹುಕುಮು ಕೊಡಿಸಿದ್ದಾರೆಂದೂ ಸುದ್ದಿಯುಂಟು.

ಮಾರಿಕಾಂಬಾ ಹೈಸ್ಕೂಲಿನೊಳಗಿನ ಫೀವರವಾರಗಳನ್ನು ಮುಂಚಿನ ದರವಾರುಗಳಿಗೆ ಇಳಿಸಬೇಕೆಂದು ನಗರ ಸಭೆಯಲ್ಲಿ, ಒಮ್ಮೆ ಬಹುಮತದಿಂದ, ಇನ್ನೊಮ್ಮೆ ಸರ್ವಾನುಮತದಿಂದ ಠರಾವಾದಾಗ್ಯೂ ಅಧ್ಯಕ್ಷರ ಈ ಠರಾವು ಅಮಲಿನಲ್ಲಿ ತರದೆ ಸುಮ್ಮಗಿದ್ದಾಗಿ! ಅದೇಕೆಂದು ಅವರಿಗೆ ಗೊತ್ತು! ಸದರಿ ಗೊತ್ತುವಳಿಗಳನ್ನು ಕೂಡಲೇ ಅಮಲಿನಲ್ಲಿ ತರ್ರಿ ಎಂದು ಸದಸ್ಯರೊಬ್ಬರು ನಗರಾಧ್ಯಕ್ಷರಿಗೆ ಲೇಖಮೂಲಕವಾಗಿ ತಿಳಿಸಿದ್ದಾರಂತೆ. ಅದಕ್ಕೂ ನಗರಾಧ್ಯಕ್ಷರು ಉತ್ತರ ಕೊಡದೆ ಸುಮ್ಮಗಿದ್ದಾರೆ.

ನಗರ ಸಭೆಯ ಸದಸ್ಯರಿಂದ ಡಾ|| ಕೊಲ್ಲಾಳಿಯವರೂ ಡಾ|| ಭಟ್ಟರೂ ಊರಲ್ಲಿ ಪ್ಲೇಗಿನ ಮದ್ದು ಚುಚ್ಚಿ ನಗರ ಸಭೆಯ ಕಡೆಯಿಂದ ಅನುಕ್ರಮವಾಗಿ ರೂ. ೧೬|| ಮತ್ತು ರೂ. ೪೯ ಫೀ ಹಣ ವಸೂಲ ಮಾಡಿರುತ್ತಾರಂತೆ. ಹೀಗೆ ನಗರ ಸಭೆಯಿಂದ ವೇತನ ಪಡೆದ ಸದಸ್ಯರು ಮ್ಯುನಿಸಿಪಾಲಿಟಿಗಳ ಕಾಯಿದೆಯ ಕಲಂ ೧೫ರನ್ವಯ ಸದಸ್ಯರಾಗುಳಿಯಲು ಅನರ್ಹರಾಗುವದಿಲ್ಲವೇ ಎಂದು ಒಬ್ಬರು ಪ್ರಶ್ನಿಸುತ್ತಾರೆ. ಜಿಲ್ಲಾಧಿಪತಿಗಳು ಅವರಿಗೆ ನಿರ್ಣಯ ಕೊಡಬೇಕಂತೆ.

ಸದ್ಯಕ್ಕೆ ಅಕ್ಕಿ ಧಾರಣೆ ಏರಿಲ್ಲ. ಹೊರಗಿನಿಂದ ಬರುವ ಅಕ್ಕಿಯನ್ನೆಲ್ಲ ಕೊಂಡು ಕೊಂಡು ಒಕ್ಕಲು ಮಾಡಲು ಇಲ್ಲಿಯ ವ್ಯಾಪಾರಿಗಳಿಗೆ ಅನುಕೂಲವಾಗಲಿಲ್ಲಾದ್ದರಿಂದ ಅಕ್ಕಿ ಧಾರಣೆ ಇದ್ದಂತೆಯೇ ಇವೆ. ಇನ್ನು ಮುಂದಾದರೂ ಒಕ್ಕಲು ಆಗದಂತೆ ಅಧಿಕಾರಿಗಳು ಜಾಗ್ರತೆ ಕೊಳ್ಳಬೇಕು.

ಬನವಾಸಿಯಲ್ಲಿ ಪ್ಲೇಗು ಹಬ್ಬಿದೆ. ಹಲವರು ತೀರಿಕೊಂಡಿದ್ದಾರೆ. ಪ್ಲೇಗಿನ ಮದ್ದು ಚುಚ್ಚುವದಕ್ಕಾಗಿ ಸ್ಪೆಶಲ್ ಡಾಕ್ಟರರ ನೇಮಣೂಕಿಯಾಗಿದೆ. ಮೂರು ತಿಂಗಳವರೆಗೆ ಸಂತೆ ಕೂಡಿಸಬಾರದೆಂದು ಸರಕಾರಿ ಹುಕುಮಾಗಿದೆ

ಕಾನಗೋಡ ಗ್ರಾಮದ ಶಾಲೆಗೆ ಒಂದು ಸ್ವತಂತ್ರ ಇಮಾರತು ಇಲ್ಲದ್ದರಿಂದ ಬಹಳ ಅಡಚಣೆಯಾಗುತ್ತಿದೆ. ಹಾಲಿ ಶಾಲೆಯಲ್ಲಿ ೫೦-೬೦ ಹುಡುಗರಿದ್ದಾರೆ. ಇನ್ನೂ ೩೦-೪೦ ಹುಡುಗರು ಶಾಲೆ ಸೇರಬಯಸುತ್ತಾರೆ. ಆ ಶಾಲೆಯಲ್ಲಿ ಕೂಡ್ರಲು ಸ್ಥಳವಿಲ್ಲಾದ್ದರಿಂದ ಅವರಿಗೆ ಪ್ರವೇಶ ಸಿಗುವದಿಲ್ಲ. ಮೊನ್ನೆ ಶಾಲಾ ತಪಾಸಕ ರಾ| ಹೆಗಡೆಯವರು ಆ ಊರಿಗೆ ಹೋದಾಗ ಜನರಿಗೆ ಕೂಡಿಸಿ, ಜನ ಸಹಾಯ ಮಾಡಿದಲ್ಲಿ ಶಾಲೆ ಕಟ್ಟಿಸಲು ಅನುಕೂಲವಾಗುವದೆಂದು ತಿಳಿಸಿ ಹೇಳಿದ ಮೇರೆಗೆ ಊರ ಜನರು ವರ್ಗಣಿಯಿಂದ ರೂ. ೩೧೨ ಕೂಡಿಸಿ ಕೊಡಲೊಪ್ಪಿದ್ದಾರೆ. ಮಗದ್ದೆಯವರೊಬ್ಬರು ಶಾಲೆ ಮನೆಯ ಬಗ್ಗೆ ೩೦ ಗುಂಟೆ ಸ್ಥಳ ದಾನ ಮಾಡಿ ಕೊಡಲು ತಯಾರಾಗಿದ್ದಾರೆ. ಶಾಲಾ ಬೋರ್ಡಿನವರು ಈಗಾದರೂ ಮುಂದಾಗಿ ಕಾನಗೋಡ ಶಾಲೆಗೆ, ಒಂದು ಪ್ರಶಸ್ತ ಇಮಾರತು ಕಟ್ಟಿಸಿಕೊಡಲೆಂದು ಜನರು ಹಾರೈಸುತ್ತಿದ್ದಾರೆ.

ಹುಲೇಕಲ್ಲ ಕನ್ನಡ ಶಾಲೆಯಲ್ಲಿ ಮುಲ್ಕೀ ತನಕ ಕಲಿವ ಏರ್ಪಾಟುಂಟು. ಶಾಲೆಯಲ್ಲಿ ಈಗ ೧೧೦ ರಷ್ಟು ವಿದ್ಯಾರ್ಥಿಗಳಿದ್ದಾರೆ. ಆದರೆ ಶಾಲೆಯಲ್ಲಿ ಇರುವ ಶಿಕ್ಷಕರು ಇಬ್ಬರೇ! ಇಬ್ಬ ಶಿಕ್ಷಕರು ಎಂಟು ವರ್ಗಗಳನ್ನು ಹೇಗೆ ಕಲಿಸಬೇಕೆಂದು ಶಾಲಾಧಿಕಾರಿಗಳಿಗೇ ಗೊತ್ತು! ಇನ್ನೊಬ್ಬ ಶಿಕ್ಷಕರನ್ನಾದರೂ ನೇಮಿಸಿರೆಂದು ಮೇಲಧಿಕಾರಿಗಳಿಗೆ ಬರೆದರೆ "ಶಿಫ್ಟ ಪದ್ಧತಿ (ಕೆಲವು ವರ್ಗಗಳಿಗೆ ಬೆಳಿಗ್ಗೆ ಮತ್ತು ಕೆಲವು ವರ್ಗಗಳಿಗೆ ಸಂಜೆ ಕಲಿಸುವ ಪದ್ಧತಿ) ಅನುಸರಿಸಿರೆಂದು ಹುಕುಮಾಗುತ್ತದೆ! ಶಿಕ್ಷಣದ ಮಹತ್ವವನ್ನರಿಯುವ ಪಟ್ಟಣಗಳಲ್ಲಿ ಈ ಶಿಫ್ಟ ಪದ್ಧತಿ ಒಂದು ವೇಳೆ ನಡಿಯಬಹುದು. ಆದರೆ ಶಿಕ್ಷಣದಲ್ಲಿ ಹಿಂದುಳಿದ, ಶಿಕ್ಷಣದ ಮಹತ್ವವನ್ನರಿಯದ ಹಳ್ಳಿಗಳಲ್ಲಿ ಈ ಪದ್ಧತಿ ಅಮಲಿನಲ್ಲಿ ಬಂದರೆ ಶಿಕ್ಷಣದ ಮಹತ್ವವೇ ಕಡಿಮೆಯಾಗಿ ಶಾಲೆ ಪಾಳಿಯಾಗಲು ತಡವಾಗಲಿಕ್ಕಿಲ್ಲ! ವಿದ್ಯಾಧಿಕಾರಿಗಳಿಗೆ ಇಷ್ಟೂ ತಿಳಿಯದಿದ್ದದ್ದು ಆಶ್ಚರ್ಯಕರ! ಮೇಲಾಗಿ ಶಾಲೆಯಲ್ಲಿ ಶಿಕ್ಷಕರಾಗಲು ಬೇಕಾದ ಮುಲ್ಕೀ ಕಲಿತ ಜನರು ಜಿಲ್ಲೆಯಲ್ಲಿರುವಾಗ, ಅಧಿಕಾರಿಗಳು ಶಾಲೆಯಲ್ಲಿ ಸ್ಥಳಾಭಾವವಾದಾಗ ಇಲ್ಲವೆ ಶಿಕ್ಷಕರು ಸಿಗದಿದ್ದಾಗ ಅನುಸರಿಸಲ್ಪಡುವ ಶಿಫ್ಟ ಪದ್ಧತಿಯನ್ನು ನಮ್ಮಲ್ಲಿ ಅಮಲಿನಲ್ಲಿ ತರುವದೇಕೆ?

ಯಲ್ಲಾಪುರ— (ತಾ. ೧೫-೮-೪೧) ರೈತರು ನೆಟ್ಟಿ ಮಾಡತೊಡಗಿದ್ದಾರೆ. ಆದರೆ ಮಳೆ ಮಾತ್ರ ಅವರಿಗೆ ಧೈರ್ಯ ಕೊಡುವದಿಲ್ಲ! ಊರಲ್ಲಿ ಬಿಟ್ಟೇ ಹೊರಕಡೆ ಜ್ವರ ಪ್ರಾರಂಭವಾಗಿದೆ. ಲೋಕಲ್ ಬೋರ್ಡಿನವರು ಊರ ಸ್ವಚ್ಛತೆಯ ಕೆಲಸ ಇನ್ನೂ ಕೈಕೊಳ್ಳುವದಿಲ್ಲ! ಜಿಲ್ಲಾಧಿಪತಿಗಳಾದರೂ ಅವರಿಗೆ ಬುದ್ಧಿ ಹೇಳಬಾರದೇ ?

ಇಲ್ಲಿಯ ಶ್ರೀಮಂತ ಜಂಗಲ ಕಂಟ್ರಾಕ್ಟರರಾಗಿದ್ದ ರಾ|| ನೀಲಕಂಠರಾವ ಕೈಸರೇ ಇವರು ಕಳೆದ ಶನಿವಾರ ತಾ. ನೇಗೆ ಧಾರವಾಡದಲ್ಲಿ ಸ್ವರ್ಗಸ್ಥರಾದರೆಂದು ನಮೂದಿಸಲು ವ್ಯಸನವಾಗುತ್ತಿದೆ. ಮೃತಾತ್ಮರು ಕಟ್ಟಿಗೆ ವ್ಯಾಪಾರದಲ್ಲಿ ಹೇರಳ ಹಣ ಸಂಪಾದಿಸಿದ್ದರು. ಕೆಲಕಾಲ ಅವರು ಇಲ್ಲಿಯ ತಾ|| ಲೋ|| ಬೋರ್ಡಿನ ಅಧ್ಯಕ್ಷರಾಗಿದ್ದರು. ಇನ್ನಿತರ ಸಂಸ್ಥೆಗಳಲ್ಲೂ ಸೇರಿ ಅವರು ಲೋಕಸೇವೆ ಮಾಡಿದ್ದಾರೆ. ದೇವರು ಅವರಿಗೆ ಸದ್ಗತಿಯನ್ನೀಯಲಿ.

(೧೧ನೇ ಪುಟದ ಮೇಲೆ ಮುಂದುವರಿದಿದೆ.)

The Ankola Urban Co-operative Credit Bank, Ltd.

ಚುನಾವಣೆಯ ನೋಟೀಸು.

ಸದ್ರಿ ಬೇಂಕಿನ 1941-42ನೇ ಸಾಲಿನ ಮೆನೇಜಿಂಗ ಕಮಿಟಿಯ ಮೆಂಬರರ ಚುನಾವಣೆಯನ್ನು ಬೆಲೋಟ ಪದ್ಧತಿಯಿಂದ ರವಿವಾರ ತಾ. 14—9—1941ನೇಗೆ ಬೆಳಿಗ್ಗೆ 8 ಘಂಟೆಯಿಂದ 11½ ಘಂಟೆಯ ವರೆಗೆ ಮತ್ತು ಮಧ್ಯಾಹ್ನ 2 ರಿಂದ 4 ಘಂಟೆಯ ವರೆಗೆ ಬೇಂಕಿನ ಆಫೀಸಿನಲ್ಲಿ ಮಾಡುವದು ನಿಶ್ಚಯಿಸಿರುತ್ತದೆ. ಸದ್ರಿ ಕಮಿಟಿಯ ಮೆಂಬರರ 7 ಸೀಟುಗಳಿಗೆ ಈ ಕೆಳಗೆ ನಮೂದಿಸಿದ 9 ನೊಮಿನೇಶನ ಬಂದಿರುತ್ತವೆ.

1 ಮಿ|| ಶಂಕರ ದತ್ತಾತ್ರಯ ದೇಸಾಯಿ. 2 ಮಿ|| ಸೈದ ಪೀರ ಸಾಹೇಬ ವ|| ಸೈದ ಅಲ್ಲಿ ಸಾಹೇಬ ಪೀರಜಾದೆ. 3 ಮಿ|| ರಾಮಯ್ಯಾ ಹನುಮಪ್ಪ ಶೆಟ್ಟಿ. 4 ಮಿ|| ಶ್ರೀಪಾದ ನಾರಾಯಣ ಶೇಟಗೇರಿ. 5 ಮಿ|| ವೆಂಕಟರಮಣ ಸಾಂಬ ಭಟ್ಟ. 6 ಮಿ|| ಮಾಧವ ಶೇಷಗಿರಿ ಪ್ರಭು 7 ಮಿ|| ಶಂಕರ ಮಂಜನಾಥ ಶೆಟ್ಟಿ. 8 ಮಿ|| ಸೈದ ನಸರೋದ್ದೀನ ವ|| ಸೈದ ಅಹ್ಮದ ಉರ್ಫ ಬಾಬೂ ಸಾಹೇಬ ಪೀರ ಸಾಹೇಬ 9 ಮಿ|| ತ್ರ್ಯಂಬಕ ಮಹಾಬಲೇಶ್ವರ ಓಕಳೇ.

ಬೇಂಕಿನ ಯಾವತ್ತೂ ಮತದಾರರು ಸದ್ರಿ ದಿವಸ ಬಂದು ಚುನಾವಣೆಯಲ್ಲಿ ತಮ್ಮ ಮತದಾನವನ್ನು ಮಾಡಿ ಹೋಗಬೇಕಾಗಿ ವಿನಂತಿ.

ಹಾಗೂ ಅದೇ ದಿವಸ ಅಪರಾಹ್ನ 4½ ಘಂಟೆಗೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಮತಗಳ ಎಣಿಕೆಗಳನ್ನು ಮಾಡುವದು ನಿಶ್ಚಯಿಸಿರುತ್ತದೆ ಚುನಾವಣೆಗೆ ನಿಂತ ಉಮೇದವಾರರೆಲ್ಲರೂ ಸದರ ಹೊತ್ತಿಗೆ ಹಾಜರ ಇರಬೇಕಾಗಿ ಅಪೇಕ್ಷಿಸುತ್ತೇವೆ ಅಂಕೋಲಾ, 22—8—1941.

ಬೇಂಕಿನ
ಮೊಹರು ಇದೆ.

S. N. Shetgeri.
Chairman.

The Ankola Urban Co-operative Credit Bank, Ltd.

ಜಾಹೀರ ನೋಟೀಸು.

ಸದ್ರೀ ಬೇಂಕಿನ ವಾರ್ಷಿಕ ಸಾಧಾರಣ ಸಭೆಯು ಇದೇ ಬರುವ ಸಪ್ಟೆಂಬರ ತಿಂಗಳ ಮಂಗಳವಾರ ತಾ. 16—9—1941ನೇಗೆ ಮಧ್ಯಾಹ್ನ 3 ಘಂಟೆಗೆ ಸರಿಯಾಗಿ (on Tuesday the 16th September 1941 at 3 P. M) ಬೇಂಕಿನ ಇಮಾರತಿಯಲ್ಲಿ ಈ ಕೆಳಗಿನ ವಿಷಯಗಳನ್ನು ವಿಚಾರಿಸುವರೆ ಕೂಡಿಸಬೇಕಾಗಿ ಠರಾಯಿಸಿಯದೆ. ಕಾರಣ ಎಲ್ಲ ಮೆಂಬರರು ದಯಮಾಡಿ ಬಂದು ಸಭೆಯ ಕೆಲಸವನ್ನು ಪೂರ್ಣಪಡಿಸಬೇಕಾಗಿ ವಿನಂತಿ.

ವಿಷಯಗಳು.

(1) ಸಭೆಯ ಪ್ರಸಿಡೆಂಟರನ್ನು ಆರಿಸುವದು.

(2) 1940—41 ನೇ ಸಾಲಿನ ಆಢಾವೆ ವ ವಾರ್ಷಿಕ ರಿಪೋರ್ಟನ್ನು ಮಂಜೂರ ಮಾಡುವದು ವ ನಫೆಯ ವಿಲೆವಾರಿಯನ್ನು ಮಾಡುವದು

(3) 1941—42 ಸಾಲಿನ ಬಗ್ಗೆ ಲೋಕಲ ಒಡಿಟರರನ್ನು ನೇಮಿಸಿ ಅವರ ವೇತನವನ್ನು ಠರಾಯಿಸುವದು

(4) ಡಿಸ್ಟ್ರಿಕ್ಟ ಸರಕಾರಿ ಒಡಿಟರ ವ ಲೋಕಲ ಒಡಿಟರರಿಂದ ಬಂದ 1940-41ನೇ ಸಾಲಿನ ಒಡಿಟ ರಿಪೋರ್ಟುಗಳನ್ನು ವಿಚಾರಿಸುವದು.

(5) ಕಳೆದ ವಾರ್ಷಿಕ ಸಾಧಾರಣ ಸಭೆಯ ಠರಾವ ನಂಬರ 7 ತಾ. 16-9-1940ನೇದರ ಪ್ರಕಾರ ಪಾಸಾದ ಈ ಕೆಳಗೆ ನಮೂದಿಸಿದ 10ನೇ ಪೋಟ ನಿಯಮವನ್ನು ಮಂಜೂರಿ ಮತ್ತು ರಜಿಸ್ಟ್ರಿಗಾಗಿ ಮೆ|| ರಜಿಸ್ಟ್ರಾರ, ಸಹಕಾರಿ ಸಂಘ ಮತ್ತು ರೂರಲ್ ಡೆವಲಪ್‌ಮೆಂಟ ಡಾಯರೆಕ್ಟರ, ಬಿ. ಪಿ. ಪೂಣಾ, ಸಾಹೇಬರವರಿಗೆ ಕಳಿಸಲಾಗಿ ಅವರು ತಮ್ಮ ನಂಬರ 609/7 d/ 27-4-1941ನೇದರ ಪ್ರಕಾರ ಆ ಪೋಟ ನಿಯಮದಲ್ಲಿಯ ಕೊನೆಯ 20,000/— ಶೇಅರು ಭಾಂಡವಲದ ಶರ್ತನ್ನು ಕಡಿಮೆ ಮಾಡಿ ಉಳಿದ ಭಾಗವನ್ನು ಮಂಜೂರ ಮಾಡಿ ಆ ಪ್ರಕಾರ ರಜಿಸ್ಟ್ರಿ ಮಾಡಿ ಅದರಂತೆ ಬೇಂಕಿನ ಸಾಧಾರಣ ಸಭೆಯ ಸ್ವೀಕಾರವನ್ನು ಪಡೆಯಬೇಕಾಗಿ ಬರೆದಂತೆ ಸದ್ರಿ ಪೋಟ ನಿಯಮವನ್ನು ಸ್ವೀಕಾರ ಮಾಡುವದು.

"Any member may withdraw from the Bank at any time with the sanction of the Managing Committee; but this shall not be given while he is in debt to the Bank or a surety for another member who is in debt to the Bank.

Provided that in any one year the refund of Share Capital shall not exceed 10 per cent of the aggregate paid up Share Capital of the Bank as it stood on the 30th June preceding.

And provided further that the refund of Shares shall not be allowed if and when such refund reduces the minimum Share capital of Rs 20,000/- required for the existance and continuance of the status of the Bank. (This last proviso is to be deleted).

(6) ಮೆ|| ರಜಿಸ್ಟ್ರಾರ, ಸಹಕಾರಿಸಂಘ, ರೂರಲ್ ಡೆವಲಪ್‌ಮೆಂಟ ಡಾಯರೆಕ್ಟರ, ಬಿ. ಸಿ. ಪೂಣಾ, ಸಾಹೇಬರವರ ಸರ್ಕ್ಯುಲರ ನಂಬರ A. D. M. 27/9 d/ 12-2-1941 ನೇದರ ಪ್ರಕಾರ ಈ ಕೆಳಗಿನ ಪೋಟ ನಿಯಮವನ್ನು ಹೊಸದಾಗಿ ಮಂಜೂರ ಮಾಡುವದು.

By-Law No. 12-B:— "In the event of member-ship ceasing under By-Law No. 12(2) and (5) the value of the Share held by a member after deducting any amount due by him to the Bank shall be paid to him within 6 months from the date of the ceasation from his membership. The value of the Share to be paid shall be determined in accordance with the provision of rule 9-A2.

(7) ಗೋಡಾವನ ಬಿಝಿನೆಸ್ಸಿನ ಸಲುವಾಗಿ ಈ ಕೆಳಗಿನ ಹೊಸ ಪೋಟ ನಿಯಮವನ್ನು ಮಂಜೂರ ಮಾಡುವದು.

By-Law No. 36 B (3):— "Loans upto Rs 3000/-- each may be advanced to members on the security of goods such as rice, grain, sugar etc. kept in the custody of the Bank at rates between 6¼% and 9⅜%. The loans thus advanced shall not exceed 75% of the invoice or market value of the goods to be taken security. The Bank will have power to dispose of the goods for realisation of its dues in the event of default by the borrower or in the event of the goods depreciating in value or deterioration thereof. But this shall not be done before due notice is given to the party concerned The decision of the Managing Committee in such case shall be final and binding on the parties concerned.

These loans will be governed by specific rules sanctioned by the general meeting & the Registrar.

(8) ಕಳೆದ ವಾರ್ಷಿಕ ಜನರಲ ಮೀಟಿಂಗದ ಠರಾವ ನಂಬರ 6 ತಾ. 16-9-40ನೇದರ ಪ್ರಕಾರ ಕೊಲ್ ಮಾಡಿದ ಶೇರುಗಳ ಕಂತುಗಳು ಬಾರದೇ ಇದ್ದ ಶೇರುಗಳನ್ನು ಫೋರಫೀಟ ಮಾಡುವ ಬಗ್ಗೆ ವಿಚಾರ ಮಾಡುವದು.

(9) ಹಿಂದಿನ (ರಿಟಾಯರಿಂಗ) ಮೆನೇಜಿಂಗ ಕಮೀಟಿಯ ಕಡೆಯಿಂದ ಸಾದರಪಡಿಸಲಾಗುವ ಬೇಂಕಿನ ವ್ಯವಹಾರದ ಇತರೇ ವಿಷಯಗಳ ವಿಚಾರ ಮಾಡುವದು ಮತ್ತು ಗೋಡೌನ ಬಿಝುನೆಸ್ಸದ ವಗೈರೆ ರೂಲ್ಸುಗಳನ್ನು ಮಂಜೂರ ಮಾಡುವದು. (Draft rules may be seen in the office during office hours.)

(10) ಅಧ್ಯಕ್ಷರ ಪರವಾನಗಿಯಿಂದ ಸಭೆಯ ಮುಂದೆ ಬಂದ ಇತರ ವಿಷಯಗಳನ್ನು ವಿಚಾರಿಸುವದು. ಅಂಕೋಲಾ, 22-8-1941.

S. N. SHETGERI.
CHAIRMAN.

ನನಗೀಗ ತುರ್ಕರ ಚಿಂತೆ !

(೫ನೇ ಪಾನಿನಿಂದ ಮುಂದರಿಸಿದ್ದು)

ಸುತ್ತಿದ್ದಾರೆ ! ನಿಕರದಿಂದ ಜೀವದ ಮೇಲಿನ ಹಂಗು ತೊರೆದು ಕಾದಾಡುತ್ತಿದ್ದಾರೆ. ರುಶ್ಯರಿಗೆ ಉಭಯ ಸಂಕಟವಾಗಿದೆ. ನೀಪರ ನದಿಗೆ ರುಶ್ಯರು ಒಂದು ಮಹಾ ದೊಡ್ಡ ಒಡ್ಡು ಹಾಕಿ ನೀರು ನಿಲ್ಲಿಸಿಕೊಂಡು ಸುತ್ತಲಿನ ಪ್ರದೇಶವನ್ನೆಲ್ಲ ಸಮೃದ್ಧಗೊಳಿಸಿದ್ದಾರೆ. ಆ ಒಡ್ಡಿಗೆ ಹೇರಳ ಹಣ ಖರ್ಚಾಗಿದೆ ! ಅದನ್ನು ಕಡಿಯಲು ಮನಸ್ಸು ಬರುವದಿಲ್ಲ. ಅದನ್ನು ಕಡಿದರೆ ಸುತ್ತುಮುತ್ತಲಿನ ಪ್ರದೇಶವೆಲ್ಲ ಕೈಯಲ್ಲಿದ್ದು ಪ್ರಯೋಜನ ಸಿಗುವದಿಲ್ಲ; ಕೃಷಿಕರ್ಮಕ್ಕೆ ನಿಷ್ಪ್ರಯೋಜನವಾಗುತ್ತದೆ ! ಕಡಿಯದಿದ್ದರೆ ಜರ್ಮನ ದುಷ್ಟರು ಅದೇ ಒಡ್ಡಿನ ಮೇಲಿಂದ ತೋಫು-ತುಬಾಕಿಗಳನ್ನು ದಾಟಿಸಿ, ತಾವೂ ದಾಟಿ ಸುರಕ್ಷಿತವಾಗಿ ನದಿಯ ಆಚೆ ಬರುತ್ತಾರೆ ! ಆದರಿಂದ ರುಶ್ಯರು ಈ ವಿಭಾಗದಲ್ಲಿ ಯಾವತ್ತೂ ಪ್ರಕಾರಗಳಿಂದ ಜರ್ಮನರನ್ನು ಅಡ್ಡಗಟ್ಟಲು ತೋರ್ಪಡಿಸುವ ಸಾಹಸ ಅಭೂತಪೂರ್ವವಾದುದು. ಜರ್ಮನರು ಮುನ್ನುಗ್ಗಿ ಬಂದರು; ಒಡೆಸಾದಿಂದ ಜರ್ಮನರು ಈಗ ಬರೀ ೯ ಮೈಲು ಅಂತರದಲ್ಲಿದ್ದಾರೆ; ರುಶ್ಯರು ಗಾಬರಿಗೊಂಡಿದ್ದಾರೆ. ಸೈನಿಕರನ್ನು ತಂಡತಂಡವಾಗಿ ರವಾನಿಸುತ್ತಿದ್ದಾರೆ ! ವಯೋಮಾನದ ನಿರ್ಬಂಧವಿಲ್ಲದೆ ನಗರ-ರಕ್ಷಣೆಗಾಗಿ ಓಡಿಬರಲು ನಾಗರಿಕರಿಗೆ ಆಜ್ಞೆಗಳು ಹೊರಟಿವೆ. ಉಭಯ ಪಕ್ಷಗಳಲ್ಲಿ ರಣಧೀರರು ಅರ್ಭಾಟದಿಂದ ಹೆಣಗಾಡುತ್ತಿದ್ದಾರೆ. ಸತ್ತವರ ಲೆಕ್ಕವಿಲ್ಲ; ರಕ್ತದ ಕಾಲುವೆಗಳು ಹರಿಯುತ್ತವಾಗಿ ಯುದ್ಧ ಪ್ರಕಟಣಗಳು ಹೊರಟಿವೆ. ಎಷ್ಟು ಆರ್ಭಾಟ ನಡಿಸಿದಾಗ್ಯೂ ಒಡೆಸಾದ ಹಣೇಬರಹ ಮುಗಿಯಿತು ! ಯುಕ್ರೇನದಲ್ಲಿ ಸ್ವತಃ ಹಿಟ್ಲರನೇ ಯುದ್ಧಚಾಲಕನಾಗಿ ಹೋಗಿರುವನಂತೆ ! ಅಂತು ರುಶ್ಯ ರಣಭೂಮಿಯ ಹಣೇಬರಹ ಈಗ ಸಾಮಾನ್ಯವಾಗಿ ತಿಳಿದಂತೆಯೇ ! ಜೂನ ೨೨ನೇ ತಾರೀಖಿನಿಂದ ಪ್ರಾರಂಭವಾದ ಈ ಯುದ್ಧಕ್ಕೆ ೨ ತಿಂಗಳುಗಳಾದವು. ಇನ್ನು ೧-೨ ವಾರಗಳಲ್ಲಿ ಮಂಗಲಪ್ರದವಾಗುತ್ತದೆ, ರುಶ್ಯ ಸರಕಾರದ ಅಭಿಪ್ರಾಯವಾದರೂ ಹೀಗೆಯೇ ಆಗಿರಬೇಕು. "ಈಗ ಜರ್ಮನರಿಗೆ ವಿಜಯವಾದರೆ ಪರಿವೆಯಿಲ್ಲ ! ನಾವು ಇಷ್ಟಕ್ಕೆ ಬಿಡುವವರಲ್ಲ; ವಿಜಯಪ್ರಾಪ್ತಿಯಾಗುವ ತನಕ ಹೋರಾಡುವೆವು !" ಹೀಗೆ ರುಶ್ಯ ಪ್ರಚಾರ ಇಲಾಖೆಯವರ ಅಂಬೋಣ ! ಭವಿಷ್ಯವನ್ನು ನಾನರಿಯೆ ! ಆದರಿಂದ ಆ ಕುರಿತು ಚರ್ಚಿಸಲು ನನಗೆ ಇಷ್ಟವಿಲ್ಲ. ಯುದ್ಧವು ಇನ್ನು ೩-೪ ವರ್ಷಗಳ ತನಕ ನಡೆಯುವದೆಂದು ಹೇಳುತ್ತಾರೆ; ಅಲ್ಲಿಯ ವರೆಗೆ ಏನೇನಾಗಲಿಕ್ಕಿದೆಯೆಂದು ನನಗೇನೂ ತಿಳಿಯದು.

ಅಮೇರಿಕೆಯೊಳಗಿನ ರಾಜಕಾರಣ ಮೊದಲಾದ ಆನುಷಂಗಿಕ ವಿಷಯಗಳಿವೆ. ಅವುಗಳನ್ನು ವಿವರಿಸಲು ಈವಾಗ ನನಗೆ ಸಾಧ್ಯವಿಲ್ಲ. ಮುಂದೆ ಪ್ರಸಂಗ ಬಂದ ಹಾಗೆ ಅವನ್ನು ಹೇಳುವೆನು.

ಬೇಕಾಗಿದ್ದಾರೆ !

ಅತ್ಯಾಧುನಿಕ ದೃಷ್ಟಿಯಿಂದ ಬರೆದ ನನ್ನ ಪುಟ್ಟ ಕವನಗಳು ಈಗಾಗಲೇ ಕರ್ನಾಟಕದ ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅವನ್ನೆಲ್ಲ ಸಂಗ್ರಹಿಸಿ ಪುಸ್ತಕಗಳನ್ನು ಮಾಡಲು ಪ್ರಕಾಶಕರು ಬೇಕಾಗಿದ್ದಾರೆ. ಅವಶ್ಯವಿದ್ದವರು ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ನಾರಾಯಣ ತೊರ್ಕೆ,
ಶಾಲಾ-ಮಾಸ್ತರ, ಬಂಕಿಕೊಡ್ಲ, ಉ. ಕಾನಡಾ.

ಸ್ಥಾನಿಕ ವೃತ್ತಾಂತ.

(೯ನೇ ಪುಟದಿಂದ ಮುಂದುವರಿಸಿದ್ದು.)

ಪ್ರತಿ ವರ್ಷ ಶ್ರೀ ಕ್ಷೇತ್ರ ಗೋಕರ್ಣದ ಭಟ್ಟರು ಈ ತಾಲೂಕಿನಲ್ಲಿ ಸಂಭಾವನೆಗೆಂದು ಬರುತ್ತಾರೆ. ಸಂಭಾವನೆಗೆ ಬರುವ ಇವರು ಸ್ವತಃ ಎಷ್ಟು ಸಂಭಾವಿತರಿರುತ್ತಾರೆಂಬುದು ಮೊನ್ನೆ ಒಂದು ಖಟ್ಲೆಯಲ್ಲಿ ತೋರಬಿದ್ದಿದೆ ! ಗೋಕರ್ಣದ ಭಟ್ಟರೊಬ್ಬರು ಎಲ್ಲಾರಗದ್ದೆ ಹಳ್ಳಿಗೆ ವರ್ಷದಂತೆ ಸಂಭಾವನೆಗಾಗಿ ಬಂದಿದ್ದರು. ಸ್ವಜಾತಿಯ ಹೆಗಡೆಯವರೊಬ್ಬರಿಗೆ ಅವರು ೧೦ ರೂ. ಕೊಡುವದಿತ್ತಂತೆ. ಅದರ ಬಗ್ಗೆ ಭಟ್ಟರು ಒಂದು ಬೆಳ್ಳಿಯ ಡಬ್ಬಿ ತಂದುಕೊಟ್ಟರು. ಮತ್ತು ಹಾಗೆಯೇ ಪೋಲೀಸರಲ್ಲಿ ಹೋಗಿ ತಮ್ಮ ಬೆಳ್ಳಿಯ ಡಬ್ಬಿಯನ್ನು ಹೆಗಡೆಯವರು ಕದ್ದುಕೊಂಡು ಹೋಗಿದ್ದಾರೆಂದು ಸುದ್ದಿ ಕೊಟ್ಟರು! ಪೋಲೀಸರಿಗೊಂದು ಪ್ರಕರಣಸಿಕ್ಕಿತು! ಅವರು ಖಟ್ಲೆ ಮಾಡಿ ಕೊಟ್ಟುಬಿಟ್ಟರು ! ಮುಂದೆ ಮೆಜಿಸ್ಟ್ರೇಟ ಕೋರ್ಟಿನಲ್ಲಿ ವಿಚಾರಣೆಯಾಗಿ ಒಬ್ಬ ಆರೋಪಿಯು ಚಾರ್ಜ ಇಲ್ಲದೆ ಬಿಡುಗಡೆಯಾದನು; ಇನ್ನೊಬ್ಬನು ನಿರಪರಾಧಿಯೆಂದು ರಿಹಾಯಿಸಲ್ಪಟ್ಟನು; ಆರೋಪಿಗಳ ವಕೀಲರ ಚಾತುರ್ಯದಿಂದ ಹೀಗಾಯಿತೆಂದು ಯಾರೂ ತಿಳಿಯಬಾರದು. ಆರೋಪಿತರು ಯಾವ ವಕೀಲರನ್ನೂ ಕೊಟ್ಟಿದ್ದಿಲ್ಲ; ಬಚಾವಿ ಪುರಾವೆಯನ್ನೂ ಕೊಟ್ಟಿದ್ದಿಲ್ಲವಂತೆ. ಫಿರ್ಯಾದಿಯ ಪುರಾವೆಯೇ ಸರಿಯಿದ್ದಿಲ್ಲವಾದ್ದರಿಂದ ಮೆಜಿಸ್ಟ್ರೇಟರು ಮೇಲಿನಂತೆ ನಿರ್ಣಯ ಕೊಡಬೇಕಾಯಿತು. ಇಂಥ ನಿರುಪಯೋಗಿ ಪುರಾವೆಯನ್ನು ಆಧರಿಸಿ ಪೋಲೀಸರು ಖಟ್ಲೆ ಮಾಡಿಕೊಟ್ಟದ್ದು ನಿರಪರಾಧಿಗಳಿಗೆ ಕಾಡಿದ್ದು ಉಚಿತವೋ ಹೇಗೆಂದು ಜಿಲ್ಲಾ ಪೋಲೀಸ ಸಾಹೇಬರು ವಿಚಾರ ಮಾಡಬೇಕು.

ರಾ|| ಕುಪ್ಪಾ ಹೆಗಡೆಕರ ಎಂಬವರು ಇಲ್ಲಿ ಸಹಾಯಕ ಬೇಸಾಯ ಅಧಿಕಾರಿಗಳಾಗಿ ನೇಮಿಸಲ್ಪಟ್ಟಿದ್ದಾರೆ. ಇವರಿಗೆ ಬೇಸಾಯ ಕೆಲಸದ ಒಳ್ಳೇ ಅನುಭವವುಂಟೆಂದು ಹೇಳುತ್ತಾರೆ. ೩-೪ ವರ್ಷವಾದರೂ ಅವರು ಇಲ್ಲಿಯೇ ಉಳಿದು ಒಕ್ಕಲಿಗರಿಗೆ ತಮ್ಮ ಅನುಭವದ ಲಾಭ ಮಾಡಿಕೊಡಲೆಂದು ಹಾರೈಕೆ.

ಮಳೆಗಾಲದಲ್ಲಿ ಬೇಗನೆ ಉಪಾಯ ಮಾಡಿರಿ !

ಮಹಾಮಾರಿಯ ಬೇನೆ ಸುರುವಿದ್ದಾಗ ಪ್ರತಿಬಂಧಕ **(Preventive)**
ವೆಂದು ಮತ್ತು ಮಹಾಮಾರೀ-ಪಟಕೀ-ಕಾಲರಾ **(Cholera)**
ಬಂದಾಗ ಮೊಟ್ಟಮೊದಲು (ಅನ್ನ ಬೀಳುವ ವರೆಗೆ)
ಕೊಡಲಿಕ್ಕೆ ಅಪ್ರತಿಮವಾದದ್ದೆಂದರೆ–

ಲಶುನಾದಿ ಗುಟಿಕಾ.

ಈ ಔಷಧದಿಂದ ಅವಷ್ಟಂಭವಾಗದೆ, ಹೊಟ್ಟೆಯುಬ್ಬುವ ದೀಪನ, ಪಾಚನ ಮತ್ತು ಮಲಶೋಧನವಾಗಿ ಮಲ ನಿಲ್ಲಿಸುವದು, ಗಟ್ಟಿಯಾಗುವದು ಇವೆಲ್ಲ ಕಾರ್ಯವು ಚನ್ನಾಗಿ ಆಗುವದು. ಇವರ ಅನುಭವವನ್ನು ಅನೇಕ ಡಾಕ್ಟರರೂ, ವೈದ್ಯರೂ ತೆಗೆದುಕೊಂಡಿರುವರು. ಅಜೀರ್ಣದ ಜುಲಾಬ, ಹೊಟ್ಟೆ ಉಬ್ಬುವದು, ಬಹಳ ವೇಗದಿಂದ ಹೊಟ್ಟೆಯಲ್ಲಿ ನೋವಾಗುವದು, ಅಗ್ನಿಮಾಂದ್ಯ ಮತ್ತು ವಾತವಿಕಾರ ಈ ವಿಕಾರಗಳ ಮೇಲೆ ಈ ಗುಳಿಗೆಗಳು ಒಳ್ಳೇ ಗುಣಕಾರಿಯಾಗುವವು ಎಂದು ಪೂರ್ಣ ಅನುಭವವಿದೆ.

ದತ್ತಾತ್ರೇಯ ಕೃಷ್ಣ ಸಾಂಡೂ ಬ್ರದರ್ಸ
ಚೆಂಬೂರ ಲಿ.

ಆಯುರೌಷಧಿ ಕಾರಖಾನೆ, ಚೆಂಬೂರ-ಮುಂಬಯಿ
ಕರ್ನಾಟಕ ಶಾಖೆ:— ಹುಬ್ಬಳ್ಳಿ

ಸವಣೂರಲ್ಲಿ **ಶ್ರೀ ಗಂಗಾಧರ ಥಿಯೇಟರ** ಇರುವುದೇ! ಸಿನೇಮಾದವರಿಗೂ ನಾಟಕದವರಿಗೂ ಉಪಯುಕ್ತವಾದದ್ದು, ಈ ಊರ ಜನಸಂಖ್ಯೆ ೧೩ ಸಾವಿರ ಥಿಯೇಟರಿನ ಉದ್ದಳತೆ ೧೦೦ ಫೂಟು, ಅಗಲಳತೆ ೪೦ ಫೂಟ ಉಂಟು ಭಾಡಿಗೆ ತರೀಕ ಬೇಕಾದವರು ಕೆಳಗಿನ ವಿಳಾಸಕ್ಕೆ ಭೆಟ್ಟಿಯಾಗಿರಿ

ಮಾಲೀಕರು —

ತೋಟಪ್ಪಾ ರುದ್ರಪ್ಪಾ ಬುಕಿಟ್ಟಿ,
ಸವಣೂರ ಸ್ಟೇಟ.

ಸಹ್ಯಾದ್ರಿಫಾರ್ಮಸಿ
ಕುಮಟಾ.

ಬಾಳಂತಿಯರಿಗೆ— ಕಸ್ತೂರಿ ಮಿಶ್ರಣ ದಶಮೂಲಾರಿಷ್ಟ ಮತ್ತು ಪನ್ನಾಂತಾಗುಳಿಗೆ ಬಲ್ಲೇ ಉಪಯುಕ್ತವಾದವು!

ಚಿಕ್ಕ ಮಕ್ಕಳ ಜಂತುವಿನ ಬಾಧೆಗೂ ಪುಷ್ಟಿಯಾಗಲಿಕ್ಕೂ ಸ್ಯಾಯರಪ್ [illegible] ದಿವ್ಯವಾದ ಔಷಧವು!

ನಾಯಿ-ಕೆಮ್ಮಿಗೆ ಎರಡೇ ದಿವಸಗಳಲ್ಲಿ ಗುಣಪಡಿಸುವ ಕಫನಾಶಕವು

ಯಾವತ್ತೂ ಪ್ರಕಾರಗಳ
ಕಷಾಯ, ಅರಿಷ್ಟ, ಆಸವ,
ತೈಲಾದಿ ಔಷಧ ಸಾಮಗ್ರಿಗಳು
ಸದಾ ಸಿಗುತ್ತವೆ.

ಡಾ|| ಎಸ್. ಕೇ. ಭಟ್ಟ,
ಹಳ್ಕಾರ, ಕುಮಟಾ.

ಹ್ಯಾಸ್ಕೂಲುಗಳಿಗೆ ಬೇಕಾಗುವ ಎಲ್ಲ ತರದ
ಇಂಗ್ಲಿಷ-ಸಂಸ್ಕೃತ ಕನ್ನಡ ಮರಾಠಿ
ಪುಸ್ತಕಗಳು ನಮ್ಮಲ್ಲಿ ಸಿಗುತ್ತವೆ

[illegible] ಪುಸ್ತಕಗಳನ್ನು ಒಂದೇ ಕೊಂಡುಕೊಳ್ಳಿ [illegible] ಬೇಕಾದೀತು [illegible]

ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ

ಧಾತುಪುಷ್ಟಿ ಲೇಹ. (ಸುವರ್ಣ, ಸಾಲಾಮಿಶ್ರಿ ಕಲ್ಪದ ಮಿಶ್ರ)

ನಷ್ಟವಾಗಿರುವ ಪುರುಷತ್ವಗಳನ್ನು ಪುನಃ ಕಲ್ಪಿಸಿಕೊಡುವ ಅತ್ಯುತ್ತಮ ಶಕ್ತಿದಾಯಕ ಔಷಧಿ ಮಾನಸಿಕ ಮತ್ತು ಕಾಯಶಕ್ತಿಗಳನ್ನು ಹೆಚ್ಚಿಸಿ, ಆರೋಗ್ಯ, ಇಂದ್ರಿಯಶಕ್ತಿ ಇವೇ ಮೊದಲಾದವುಗಳನ್ನು ಕಲ್ಪಿಸಿಕೊಡುವದು ಬಾಟ್ಲಿ ೧ಕ್ಕೆ ರೂ 2—8—0.

ಕಸ್ತೂರಿ ಮಿಶ್ರಣ ದಶಮೂಲ.

ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ ಬಾಟ್ಲಿ ೧ಕ್ಕೆ ರೂ 1—8—0

ಮಲೇರಿಯಾ ನಿವಾರಿಣಿ:- ಮಲೇರಿಯಾ ಜ್ವರ, ಚಳಿಜ್ವರ, ಇನ್‌ಫ್ಲುಯೆಂಝಾ ಮಲಬದ್ಧತೆ ಇವುಗಳಿಗೆ ಪ್ರಸಿದ್ಧ ಔಷಧಿ ಬಾಟ್ಲಿ 1ಕ್ಕೆ ರೂ 0—13—0

ಸ್ಪ್ಲೀನ ಮಿಕ್ಸ್ಚರ:- ಜ್ವರಗಡ್ಡೆಯನ್ನು ಕರಗಿಸುವ ದಿವ್ಯ ಔಷಧಿ — ಬಾಟ್ಲಿ 1ಕ್ಕೆ ರೂ 1—2—0.

[illegible] ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕ ಔಷಧ ಚುನಾಯಿಸಿ ರವಾನಿಸಬಹುದು ಕ್ಯಾಟಲಾಗಿಗೆ ಬರೆರಿ

ಎಮ್. ಗಣಪಯ್ಯಾ ಎಂಡ್ ಸನ್ಸ, ರಥಬೀದಿ ನಂಬ್ರ 5, ಮಂಗಳೂರು. ದ. ಕ.

ಔಷಧ ಸಿಗುವ ಸ್ಥಳ — (1) ಸ್ವಸ್ತಿಕ ಫಾರ್ಮಸಿ, ಕುಮಟಾ, (2) ಕಾಮತ ಸ್ಟೋರ್ಸ ಹೊನ್ನಾವರ, (3) ಸ್ಟೇಶನರಿ ಡಿಪೋ, ಅಂಕೋಲಾ, (4) ಕೆ ಗಣಪಯ್ಯಾ ಶಾನಭಾಗ, ಮರ್ಚಂಟ, ಭಟಕಳ, (5) ವಸಂತ ಜೀವನ ಗಿರಗಾಂವ (6) ಪಾಪ್ಯುಲರ ಸ್ಟೋರ್ಸ, ಕೆಮಿಸ್ಟ್ಸ, 183, ಸುಪಾರಿಬಾಗ ಪರೇಲ, (7) ಜನರಲ ಸ್ಟೋರ್ಸ, ಜಿ ಆಯ್ ಪಿ, ಮಾಟುಂಗಾ

ದಿ ಬೊಂಬೆ ಲೈಫ್ ಎಶ್ಶೂರನ್ಸ ಕಂಪೆನಿ, ಲಿಮಿಟೆಡ್,

ಸ್ಥಾಪನೆ **1908.**

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಸ್ಕರವು ಇವೆ. ಕಂಪೆನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್‌ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents
D K Nayak Bros
K. N Nayak.
Honavar Agent
R V Prabhu

K. Padmanabha Rao & Sons,
BELGAUM
Chief Agents for
Karnatak Districts & S M States

ರಕ್ತಬಿಂದು

ಮಕ್ಕಳ ಮರಣವನ್ನು
ತಪ್ಪಿಸುವದು.

ಏಜನ್ಸಿ ಕಲಕತ್ತಾ, ಮುಂಬಯಿ ಮದ್ರಾಸ, ಬೆಂಗಳೂರು, ಮಂಗಳೂರು

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆದಾಗುಳಿ, ಹಸುರು ನರಗಳು, ಕಾಮಿಲೆ,
ಗಡ್ಡೆರೋಗ ಕೋವೆ ರೋಗ, ಮೈ-ಕೈ ಬಾವುಗಳಿಗೆ ದಿವ್ಯೌಷಧ!

೧ ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3

ಏತಕ್ಕೆ ಚಿಂತಿಸುವಿರಿ?



ಆಸೇತುಹಿಮಾಚಲದ ವರೆಗೂ ೪೩ ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಪ್ಲೀಹ ಮತ್ತು ಲಿವ್ಹರ ವ್ಯಾಧಿಗಳಿಗೆ ಇದೊಂದೇ [illegible] ಗಿದೆ

ಡಾ| ಬಿ ಎಸ್ ಶ್ರೀನಿವಾಸರಾವ,
[illegible]
ಎಂ ಬಿ [illegible]
ಶಿವಮೊಗ್ಗಾ

ಕುಮಟಾ ಇದರಲ್ಲಿ [illegible]
[illegible] ಏಜಂಟ —
[illegible] ಹೆಗಡೆ
[illegible]
[illegible] ನಾಯ್ಕ

ಈ ಪತ್ರಿಕೆ [illegible] (ಸಂಪಾದಕ) ಇವರು [illegible] ಪ್ರಿಂಟಿಂಗ [illegible] ಪ್ರಕಟಿಸಿದರು

Reg. No. B 1270.

Monday, 1st September, 1941.

ವರ್ಷ ೨೪

ಕಾನಡಾವೃತ್ತ

THE KANARA NEWS

ಸಂಚಿಕೆ ೯

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ

ಕುಮಟೆಯಲ್ಲಿ ಅಗಾವು ರೂಪಾಯಿ 2-4-0
ಬುನಿಯಾದಾರರಿಂದ ರೂ. 3-1-0
ವ್ಹಿ ಪಿ ಅಂಚೆವೆಚ್ಚ ಸೇರಿ ರೂಪಾಯಿ 3-4-0
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಸ್ಮಾಲ ಪೈಕಾ ಟೈಪಿನ (೧೫ ಎಮ್ ಅಗಲ) ೩ ಸಾಲುಗಳವರೆಗೆ ರೂ 1 8 0
ಆ ನಂತರ, ಪ್ರತಿಸಾಲಿಗೆ 0-3 0
ಹೆಚ್ಚಿಂಗದ ಸಾಲು ಎಷ್ಟು ದೊಡ್ಡರಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತೀರಿಸಲ್ಪಡುವದು.

-*(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧ ಮಾಹೆ ಸಪ್ಟಂಬರ ಸನ್ ೧೯೪೧ನೇ ಇಸವಿ)*-

ಮಕ್ಕಳಿಗೆ--

ಮಳೆಗಾಲದಲ್ಲಿ

ಶೀತ, ನೆಗಡಿ, ಕೆಮ್ಮು, ಅಪಚನ ಮುಂತಾದ ವಿಕಾರಗಳು ಖಂಡಿತವಾಗಿ ಆಗುತ್ತವೆ.

“ಕುಮಾರಿ ಆಸವ ನಂ. ೩”

ಇದು ಮೇಲಿನ ವಿಕಾರಗಳಿಗೆ ಶ್ರೇಷ್ಠವಾದ ಔಷಧವು.

ಶ್ರೀ ಧೂತಪಾಪೇಶ್ವರ ಪನವೇಲ, ಲಿ.,

ಕರ್ನಾಟಕ ಕೇಂದ್ರ ಯುನ್ಯಾಟೆಡ್ ಏಜನ್ಸೀಜ, ಹುಬ್ಬಳ್ಳಿ.

ಕಾರವಾರ — ಮೆಸರ್ಸ ಮುಜುಮುದಾರ-ಕಸಬೇಕರ ಬ್ರದರ್ಸ
ಅಂಕೋಲಾ:— ದಿ ಸ್ಟೇಶನರಿ ಡಿಪೋ
ಕುಮಟಾ:— ದೇವಪ್ಪಾ ಅಯ್ಯು ನಾಯ್ಕ.
ಹೊನ್ನಾವರ— ಮೆಸರ್ಸ ಕಲ್ಯಾಣಪುರ ಬ್ರದರ್ಸ.
ಶಿರ್ಶಿ:— { ಶಿರ್ಶಿ ಡ್ರಗ್ ಸ್ಟೋರ್ಸ
ಎಸ್. ಎಲ್ ಧಾಕಪ್ಪಾ ಎಂಡ್ ಸನ್ಸ
ಸಿದ್ದಾಪುರ — ಮೆಸರ್ಸ ರಾಮಯ್ಯನ ಬ್ರದರ್ಸ

“ಸ್ಟಾರ ಆಫ್ ಕೆನರಾ ಪ್ರೆಸ್”, ಕುಮಟಾ.

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಯಿಂದ ಬೇಕಾದ ನಮೂನೆಯ ಕಲರ ಪ್ರಿಂಟಿಂಗ ವಗೈರೆ ಸಣ್ಣ ದೊಡ್ಡ ಛಾಪಾ ಕೆಲಸಗಳೂ, ಪುಸ್ತಕ ಮುದ್ರಣವೂ, ರೂಲಿಂಗ ಬ್ಯಾಂಡಿಂಗ ಕೆಲಸವೂ ಉತ್ತಮವಾಗಿ ಸುಲಭ ದರದಲ್ಲಿ ತಕ್ಕ ಕಾಲಕ್ಕೆ ತಯಾರಿಸಿ ಕೊಡಲಾಗುವದು

ಇದಲ್ಲದೆ ಕೋರ್ಟ ಕಚೇರಿ ಉಪಯೋಗದ ವಕಾಲತ ವಗೈರೆ ಫಾರ್ಮುಗಳೂ, ಕಸ್ಟಮ್ ಕಚೇರಿಯ ಶಿಪ್ಪಿಂಗ ಬಿಲು-ಪಟ್ಟಿ ವಗೈರೆ ಫಾರ್ಮುಗಳೂ, ಗೇಣಿ ಪಾವತಿ ಬುಕ್ಕ, ಗೇಣಿಚೀಟಿ-ಎದುರ್ಗಾಣಿ ಫಾರ್ಮುಗಳೂ ವಗೈರೆ ಮಾರಾಟಕ್ಕೆ ತಯಾರ ಸಿಗುತ್ತವೆ ನಿಮ್ಮ ಛಾಪಾ ಕೆಲಸಗಳನ್ನು ನಮ್ಮಲ್ಲೀ ಕಳಿಸಿರಿ ಒಮ್ಮೆ ಅನುಭವ ತಕ್ಕೊಂಡು ನೋಡಿರಿ!

ಧಾರವಾಡ ಕೆನರಾ ಮೋಟರ ಯೂನಿಯನ್, ಹುಬ್ಬಳ್ಳಿ.

ಹುಬ್ಬಳ್ಳಿಯಿಂದ ಗೋಕರ್ಣ ಮಹಾಕ್ಷೇತ್ರಕ್ಕೆ ಪೂಜಾ ವಿಧಿಗಳನ್ನು ಮುಗಿಸಿ ನಿಯಮಿತ ವೇಳೆಗೆ ತಿರುಗಿ ಬರಲು ಇದೊಂದೇ ಉತ್ಕೃಷ್ಟ ಮೋಟರ ಸರ್ವಿಸ್.

ಹುಬ್ಬಳ್ಳಿಯಿಂದ ಬಿಡುವ ವೇಳೆ- ಬೆಳಿಗ್ಗೆ ೭ ಘಂಟೆಗೆ
ಗೋಕರ್ಣಕ್ಕೆ ತಲ್ಪುವ ವೇಳೆ ಮಧ್ಯಾಹ್ನ ೨-೩೦ ಘಂ
ಗೋಕರ್ಣ ಬಿಡುವ ವೇಳೆ- ಬೆಳಿಗ್ಗೆ ೧೧-೪೫ ಘಂ
ಹುಬ್ಬಳ್ಳಿ ತಲ್ಪುವ ವೇಳೆ ಸಾಯಂಕಾಲ ೭ ೫ ಘಂ
ವ್ಯವಸ್ಥಾಪಕ,

ಧಾರವಾಡ ಕೆನರಾ ಮೋಟರ ಯೂನಿಯನ್, ಹುಬ್ಬಳ್ಳಿ.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ಹೆಡ್ ಆಫೀಸು — ಕುಂದಾಪುರ.

ಬ್ರೇಂಚ ಆಫೀಸುಗಳು ಅಂಕೋಲಾ, ಕುಂದಾಪುರ, ಬೈಂದೂರು, ಕೋಟೇಶ್ವರ, ಕುಮಟಾ, ಗೋಕರ್ಣ, ಕಾರವಾರ, ಹಾವೇರಿ, ಶಿವಮೊಗ್ಗಾ, ತರೀಕೆರೆ, ನಗರ, ಸೋಮವಾರಪೇಟೆ ಮತ್ತು ವೀರರಾಜಪೇಟೆ

ಕಾಯಂ ಠೇವುಗಳು:- 3 ತಿಂಗಳಿಗೆ ಶೇ ರೂ 3ರಲ್ಲಿ, **6** ತಿಂಗಳಿಗೆ ಶೇ 3½ರಲ್ಲಿ, ೧ ವರ್ಷಕ್ಕೆ ರೂ 4ರಲ್ಲಿ, 2 ವರ್ಷ ಯಾ ಹೆಚ್ಚಿನ ಅವಧಿಗೆ ಶೇ 4½ರಲ್ಲಿ

ಸೇವಿಂಗ್ಸ ಬೇಂಕ್ ಠೇವುಗಳು ಮತ್ತು ಚಾಲು ಠೇವುಗಳು ಸಹ ಅಂಗೀಕರಿಸಲ್ಪಡುವವು

ಭಂಗಾರದ ದಾಗಿನೆಗಳ ವ ಇತರ ವ್ಯಾಪಾರದ ಮಾಲುಗಳ ಅಡವಿನ ಮೇಲೆ ಸವಲತ್ತಿನ ದರದ ಬಡ್ಡಿಯಲ್ಲಿ ಸಾಲ ಕೊಡಲ್ಪಡುವದು ವ್ಯಾಪಾರದ ಕೇಂದ್ರಗಳಿಗೆ ಡ್ರಾಫ್ಟುಗಳು, ಚೆಕ್ಕುಗಳು ಸಹ ಕೊಡಲ್ಪಡುವವು ಎಲ್ಲ ತರದ ಬೇಂಕಿನ ವ್ಯವಹಾರಗಳು ಸವಲತ್ತಿನ ದರದಿಂದ ನಡಿಸಲ್ಪಡುವವು

ಕುಂದಾಪುರ,
1-9-1941

The Agricultural & Industrial Bank, Ltd

ಕಣ್ಮರೆಯಾದ ಕವಿರಾಜ.

(ಲೇಖಕ - ಮಂಜುನಾಥ ಎಸ್. ಕುಮಟಾಕರ.)

ಜಗತ್ತಿನ ಜ್ಯೋತಿ ನಂದಿದೆ. ಇಡಿ ವಿಶ್ವದ ಹೃದಯದಲ್ಲಿ ಕಗ್ಗತ್ತಲೆ ಕವಿದಿದೆ. ಆತ್ಮಸಖ್ಯ ತಳಮಳದಿಂದ-ಕಣ್ಣಿನಲ್ಲಿ ನೀರೂರಿದೆ. ಆ ನೀರಿನ ಧಾರೆ ಎಂದೂ ಆರದು! ಕವಿರಾಜ ಟಾಗೋರರು ವಿಶ್ವದ ಆತ್ಮವನ್ನು ಅಷ್ಟು ಗೆದ್ದಿದ್ದರು, ಆ ಗದ್ದುಗೆಯಲ್ಲಿ ಕುಳಿತು ಆಳಿದ್ದರು. ಅವರ ವ್ಯಕ್ತಿತ್ವವೇ ಅಷ್ಟು ಉಜ್ವಲವಿತ್ತು. ಕಲಾದೇವಿಯನ್ನು ಒಲಿಸಿಕೊಳ್ಳುವದಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಮಹಾ ತಪಸ್ವಿಗಳವರು. ಅವರಿಗೆ ಬಂದ ಸಾವು ಕೇವಲ ಅವರದಷ್ಟೇ ಸಾವಲ್ಲ, ಇಡೀ ಮಾನವ ಜನಾಂಗದ-ಮಾನವ ಸಂಸ್ಕೃತಿಯ ಸಾವಾಗಿದೆ!

ಭರತಖಂಡದ ಪುಣ್ಯದ ಫಲವಾಗಿಯೇ ಭಾರತದಲ್ಲಿ ಅವರ ಅವತಾರವಾಯಿತೆನ್ನಬೇಕು. ಅವರು ಮಹರ್ಷಿ ದೇವೇಂದ್ರನಾಥ ಟಾಗೋರರ ಕಿರಿಯ ಮಕ್ಕಳು. ಹುಟ್ಟಿದ್ದು ವಂಗದೇಶ. ಹುಟ್ಟಿದ್ದು ೧೮೬೧ನೇ ಇಸವಿಯ ಮೇ ೭ನೇ ತಾರೀಖಿಗೆ. ತನ್ನ ಆರು ಮಂದಿ ರಸಿಕ ಅಣ್ಣಂದಿರೊಂದಿಗೆ ಇವರೂ ರಸಿಕರಾಗಿ ಬೆಳೆದರು. ಶಾಲೆಗೆ ಹೋಗಲು ಒಲ್ಲದೆ ಮನೆಯಲ್ಲೇ, ಖಾಸಗಿ ಶಿಕ್ಷಕರ ಕಠಿಣ ಶಿಕ್ಷೆಗಳನ್ನು ಸಹಿಸಿ, ಬಂಗಾಲಿ, ಸಂಸ್ಕೃತ, ಇಂಗ್ಲೀಷ ಭಾಷೆಗಳನ್ನು ಕಲಿತರು; ಚಿತ್ರಕಲೆಯಲ್ಲಿ ನುರಿತರು; ಗಾಯನ ವಾದನ ಮುಂತಾದ ಲಲಿತ ಕಲೆಗಳಲ್ಲೂ ಪಳಗಿದರು.

ಕಿಡಕಿಯ ಹತ್ತಿರ ಕುಳಿತು ತೋಟದಲ್ಲಿ ಅರಳಿರುವ ಹೂವು, ನೀಲ ಆಗಸದಲ್ಲಿ ಒಂದನ್ನೊಂದು ಮುತ್ತುವ ಮೇಘಮಾಲೆ, ಗಿಡಮರಗಳ ಟೊಂಗೆಗಳಲ್ಲಿ ಜಿಗಿಜಿಗಿದು ಹಾರಾಡುವ ಹಕ್ಕಿ ಇಂತಹ ಎಷ್ಟೋ ಸಹಜ ಸುಂದರ ನೋಟಗಳನ್ನು ತನ್ಮಯತೆಯಿಂದ ನೋಡಿಕೊಂಡು ಅವರು ತಮ್ಮ ಹೃದಯದಲ್ಲಿ ಒಡಮೂಡಿರುವ ಭಾವಗಳನ್ನು ರೂಪಿಸಿ ಕವನಗಳನ್ನು ಹೆಣೆಯುವರು; ಹಾಡುವರು; ತನ್ಮಯರಾಗುವರು. ಶ್ರೋತೃವೃಂದವೂ ಆ ಕವಿಗೆ ಸೋತು ಪರವಶರಾಗುವದು. ಎಂಟು ವರುಷದ ವಯಸ್ಸಿನಲ್ಲಿಯೇ ರವೀಂದ್ರರ ಕಳೆಗೆ ಇಷ್ಟು ಕಳೆ ಬಂದಿತ್ತು!

ಒಂದೊಮ್ಮೆ ಮುದ್ದು ಮಗ ರವೀಂದ್ರರ ಕವಿತೆಗಳನ್ನು ಓದಿ ತಿಳಿದು, ಐದು ನೂರು ರೂಪಾಯಿಗಳ ಬಹುಮಾನವನ್ನು ಕೈಯಲ್ಲಿ ಇಡುತ್ತ ಅವರ ತಂದೆಯವರು ಅಂದರಂತೆ, “ಮಗನೇ, ನಿನ್ನೀ ಕವನಗಳನ್ನು ದೇಶದ ಅರಸನು ಒಂದು ವೇಳೆ ಕೇಳುತ್ತಿದ್ದರೆ ನಿನಗೆ ಏನು ಕೊಡುತ್ತಿದ್ದನೋ ನಾನರಿಯೆ!”

ತಂದೆಯ ಈ ಅಮೃತಧಾರೆ ಅವರ ಹೃದಯದೊಳಗಿನ ಕಾವ್ಯ-ತರಂಗಿಣಿಯಲ್ಲಿ ಸುರಿದು ಅದಕ್ಕೊಂದು ಮಹಾ ಉಕ್ಕು ತರಿಸಿತು! ಅಂದಿನಿಂದ ಇವರು ಕವಿತೆಗಳನ್ನು ಮಾಡುವದರಲ್ಲಿ ಹಗಲಿರುಳುಗಳನ್ನೂ ಮರೆಯುತ್ತಿದ್ದರು!

ಹನ್ನೆರಡು ವರುಷದವರಿದ್ದಾಗ ಇವರಿಗೆ ತಾಯಿಯ ವಿಯೋಗವಾಯಿತು! ಆ ವಿಯೋಗದ ತಾಪವನ್ನು ಇವರು ಒಂದು ಕವನದಲ್ಲಿ ಚೆನ್ನಾಗಿ ಚಿತ್ರಿಸಿದ್ದಾರೆ. ಅದನ್ನು ಓದುವಾಗ ಈಗಲೂ ಕಣ್ಣು ಒದ್ದೆಯಾಗುತ್ತದೆ.

ತಮ್ಮ ಇಪ್ಪತ್ತೆರಡನೇ ವರುಷದ ವಯಸ್ಸಿನಲ್ಲಿ ಇವರು ಭವತಾರಿಣಿ ದೇವಿಯವರೊಂದಿಗೆ ಮದುವೆಯಾದರು. ಸಂಸಾರಕ್ಕೆ ಆರಂಭವಾಯಿತು; ಮತ್ತು ಹೊಲ-ಹಿತ್ತಲುಗಳ ವ್ಯವಸ್ಥೆಯನ್ನು ನೋಡಿಕೊಳ್ಳುವದಕ್ಕಾಗಿ ಹಳ್ಳಿಗಳಲ್ಲಿ ಹೋಗಿ ಉಳಿಯಹತ್ತಿದರು. ಅಲ್ಲಿ ಇವರ ಬಾಳೂ ಬದಲಾಯಿತು. ಅಲ್ಲಿಯೇ ಇವರು ಕಲಾದೇವತೆಯ ಉಪಾಸಕರಾದರು. ಹಳ್ಳಿಯ ಜೀವನ ಇವರ ಹೃದಯಕ್ಕೊಂದು ಬಲೆ ಹಾಕಿ ಜೀವನಕ್ಕೆ ಒಪ್ಪು ಕೊಟ್ಟಿತು. ಹಳ್ಳಿಗಾಡಿನ ಸೃಷ್ಟಿಸೌಂದರ್ಯವನ್ನೂ ಹಳ್ಳಿಗರ ದುಸ್ಥಿತಿಗಳನ್ನೂ ಚಿತ್ರಿಸಿ ಆ ಹಳ್ಳಿಗಳಲ್ಲೇ ಇವರು ಎಷ್ಟೋ ಕತೆ-ಕಾದಂಬರಿ-ಕವನಗಳನ್ನು ಬರೆದರು. ಇವರ ಬರಹಗಳು ಮೊದಮೊದಲು “ಭಾನುಸಿಂಹ” ಎಂಬ ಹೆಸರಿನಿಂದ ಬೆಳಕಿಗೆ ಬರುತ್ತಿದ್ದವು. ಆದರೆ ಮುಂದೆ ಸ್ವಲ್ಪ ದಿನಗಳಲ್ಲೇ ಬಂಗಾಲವು ತೆರೆಯ ಮರೆಯಲ್ಲಿರುವ ಈ ‘ಭಾನುಸಿಂಹ’ರನ್ನು ಗುರುತಿಸಿತು. ಇವರ ಕೀರ್ತಿ ಬಂಗಾಲ ದೇಶದ ಮೂಲೆ-ಮೂಲೆಗೂ ಮುಟ್ಟಿತು, ಮತ್ತು ಬಂಗಾಲ ದೇಶದ ಒಬ್ಬ ಸುಪ್ರಸಿದ್ಧ ಕವಿಗಳಾದರು.

ತಮ್ಮ ಸಾಹಿತ್ಯದೊಳಗಿನ ಉತ್ತಮವಾದ ಭಾಗಗಳನ್ನು ಆಯ್ದುಕೊಂಡು, ಅವನ್ನು ಇಂಗ್ಲೀ ಭಾಷೆಯಲ್ಲಿ ಅನುವಾದಿಸಿ ತಮ್ಮ ಸಂಗಡ ವಿಲಾಯತಿಗೆ ತೆಗೆದುಕೊಂಡು ಹೋದರು. ಇವರ “ಗೀತಾಂಜಲಿ” ಮತ್ತು “ಗಾರ್ಡನ್” ಎಂಬ ವಿಚಾರಪ್ರಚೋದಕ ಪುಸ್ತಕಗಳನ್ನು ಓದಿ ಪಾಶ್ಚಾತ್ಯ ಸಾಹಿತಿಗಳು ಬೆಟ್ಟು ಕಚ್ಚಿದರು! ಮತ್ತು ಅವರ ಸಾಹಿತ್ಯದಲ್ಲಿ ಒಂದು ಕ್ರಾಂತಿಯೇ ಎದ್ದಿತು! ಅದರ ಪರಿಣಾಮವಾಗಿ ಕವೀಂದ್ರ ರವೀಂದ್ರರಿಗೆ ೧ ಲಕ್ಷ ೨೦ ಸಾವಿರ ರೂಪಾಯಿ ಬೆಲೆಯ ನೋಬೆಲ್ ಬಹುಮಾನ ದೊರಕಿತು. ಆಗಲೇ ವಿಶ್ವದ ಹೃದಯದಲ್ಲಿ ಇವರ ಮೂರ್ತಿ ನೆಲೆನಿಂತಿತೆನ್ನಬೇಕು. ಅಮೇರಿಕೆಯ ಒಂದು ಪ್ರಸಿದ್ಧ ವಿದ್ಯಾಪೀಠದವರು ಇವರನ್ನು ವ್ಯಾಖ್ಯಾನಗಳಿಗಾಗಿ ಆಮಂತ್ರಿಸಿದರು. ಇವರ ಉಪನ್ಯಾಸ ಕೇಳಿ ತಲೆದೂಗಿ ನಲಿದರು. ಆಗ ಜಗತ್ತಿನ ಶ್ರೇಷ್ಠ ತತ್ವಜ್ಞಾನಿಗಳ ಮಾಲೆಯಲ್ಲಿ ಇವರಿಗೂ ಒಂದು ಸನ್ಮಾನದ ಸ್ಥಾನ ಸಿಕ್ಕಿತು. ಅಲ್ಲಿಂದ ಹಿಂದುಸ್ಥಾನಕ್ಕೆ ತಿರುಗಿ ಬಂದೊಡನೆಯೇ ಢಾಕ್ಕಾ ವಿಶ್ವವಿದ್ಯಾಲಯದವರು “ಸಾಹಿತ್ಯಶ್ರೇಷ್ಠ” ಎಂಬ ಬಿರುದನ್ನು ಕೊಟ್ಟು ಇವರನ್ನು ಗೌರವಿಸಿದರು. ಅದೇ ಕಾಲಕ್ಕೆ ಸರಕಾರದವರೂ “ಸರ್” ಎಂಬ ಪದವಿ ಕೊಟ್ಟರು. ಆದರೆ ಮುಂದೆ ಇವರು ಈ ಪದವಿಯನ್ನು ಜಾಲಿಯನವಾಲಾಬಾಗ ಕೊಲೆಯ ನಿಷೇಧಾರ್ಥವಾಗಿ ಸರಕಾರಕ್ಕೆ ತಿರುಗಿ ಒಪ್ಪಿಸಿ, ತಾನು ಸ್ವದೇಶಪ್ರಿಯ ಮನುಷ್ಯನಿದ್ದೇನೆಂಬ ಮಾತಿನ ಅರಿವನ್ನು ಜಗತ್ತಿಗೆ ಮಾಡಿಕೊಟ್ಟರು.

ಕವಿಗಳ ಗದ್ಯ, ಕತೆಗಾರರ ಪದ್ಯ ನೋಡಬಾರದೆಂದು ಒಂದು ಸಾಮಾನ್ಯವಾದ ಮಾತುಂಟು. ಆದರೆ ರವೀಂದ್ರರ ಕೃತಿ ಇದಕ್ಕೆ ಅಪವಾದವಾಗಿದೆ. ಇವರ ನಾಟಕಗಳಲ್ಲೂ, ಕತೆಗಳಲ್ಲೂ, ಕವನಗಳಲ್ಲೂ ಅಷ್ಟಷ್ಟೇ ಸ್ವಾರಸ್ಯವುಂಟು. ಇವರ ಕೃತಿಗಳಲ್ಲಿ ಕಲೆಯ ಮೇಲ್ಮೆಯನ್ನು ಕಾಣಬಹುದು. ವಂಗ ನಾಡಿನ ಸೃಷ್ಟಿ-ಸೌಂದರ್ಯ, ವಂಗ-ಸಂಸಾರಗಳ ಸುಖ-ದುಃಖದ ಮೇಲೆಯೇ ಇವರು ತಮ್ಮ ಕತೆಗಳನ್ನೋ ನಾಟಕಗಳನ್ನೋ ಕವನಗಳನ್ನೋ ರಚಿಸಿದ್ದಾರೆ. ಸಾಮಾಜಿಕ ಜೀವನಗಳನ್ನು ಕತೆಯಲ್ಲಿ ರೂಪಿಸುವಾಗ ಸಮಾಜದ ಚಿತ್ರವನ್ನು ಇವರು “ಕೆಮೆರಾ” ದಿಂದ ತೆಗೆದಿರುವದಿಲ್ಲ; “ಎಕ್ಸರೇ” (‘ಕ್ಷ’ ಕಿರಣ) ದಿಂದ ತೆಗೆದಿರುತ್ತಾರೆ! ಇವರ ಕವನದ ಅರ್ಥವನ್ನು ಮುಟ್ಟಬೇಕಾದರೆ ಶಬ್ದಗಳ ಆಳಕ್ಕೆ ಇಳಿಯಬೇಕು! ಹೃದಯವನ್ನು ಅರಳಿಸುವ ಒಂದು ಉಚ್ಚ ಸಂಸ್ಕೃತಿ ಇವರ ಕಲಾಕೃತಿಯಲ್ಲಿ ಹುದುಗಿಕೊಂಡಿದೆ. ಇವರ ನಾಟಕಗಳನ್ನೂ, ಕವನಗಳನ್ನೂ ಓದುವಾಗ ಇವರು ಇನ್ನೂ ಸತ್ತಿರುವದಿಲ್ಲ, ಸಾಹಿತ್ಯರೂಪದಲ್ಲಿ ಜೀವಿಸಿದ್ದಾರೆ, ಜೀವಿಸಿರುವರು, ಇವರು ಅಮರರು, ಎಂದು ಅನಿಸುತ್ತದೆ. ಇವರ ಸಾಹಿತ್ಯದಲ್ಲಿಯ ಪ್ರತಿಭೆಯನ್ನು ಅರಿತು ಒಬ್ಬ ಸುಪ್ರಸಿದ್ಧ ಫ್ರೆಂಚ ಬರೆಹಗಾರನು “ರವೀಂದ್ರ ಟಾಗೋರರ ಈ ಹೆಸರು ಕೇವಲ ಈ ವ್ಯಕ್ತಿಗೆ ಮಾತ್ರ ಶೋಭಿಸುತ್ತದೆ!” ಎಂದು ಅಂದಿದ್ದಾನೆ.

ಇವರು ಸುಮಾರು ೩೬ ನಾಟಕಗಳನ್ನೂ, ೨೯ ಕಾದಂಬರಿ ಮತ್ತು ಕಥಾಸಂಗ್ರಹಗಳನ್ನೂ ೫೦ ಪ್ರಬಂಧಗಳನ್ನೂ ೨೪ ಕವನ ಸಂಗ್ರಹಗಳನ್ನೂ ರಚಿಸಿರುವರು. ಪಾಶ್ಚಾತ್ಯ ಸಾಹಿತಿಗಳು ಇವರಿಗೆ ಭಾರತದ “ಮಿಲ್ಟನ್” ಎಂದು ಕರೆದಿದ್ದಾರೆ. ಆದರೆ ಅದು ಸರಿಯಲ್ಲ. ಮಿಲ್ಟನ್ನನು ಇಂಗ್ಲಂಡದ ರವೀಂದ್ರನೆನ್ನುವದೇ ಸರಿಹೋಗುವದು.

ಇವರ ತಂದೆಯವರು ಧ್ಯಾನಮಗ್ನರಾಗಿ ಕುಳಿತುಕೊಳ್ಳುವ ಸ್ಥಳದಲ್ಲಿ ಇವರು “ಶಾಂತಿನಿಕೇತನ”ವೆಂಬ ಕಲಾಮಂದಿರವನ್ನು ಕಟ್ಟಿಸಿದ್ದಾರೆ. ನೋಬೆಲ್ ಬಹುಮಾನದ ಹಣವನ್ನು ಇವರು ಈ ಕಟ್ಟಡಕ್ಕೆ ಅರ್ಪಿಸಿದ್ದಾರೆ. ಓದಲಿಕ್ಕೆ ತೆಗೆದುಕೊಂಡಿರುವ ಪುಸ್ತಕಗಳನ್ನು ಮಾರಿ ಈ ಮಂದಿರದ ಉನ್ನತಿಗೆ ಹೆಣಗಾಡಿದ್ದಾರೆ. ಇದಲ್ಲದೆ “ವಿಶ್ವಭಾರತಿ” ಎಂಬ ಒಂದು ದೊಡ್ಡ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದ್ದಾರೆ. ಇದು ಜಗತ್ತಿಗೇ ಮಾರ್ಗ ತೋರಿಸಿಕೊಡುವ ಒಂದು ಆದರ್ಶ ಶಿಕ್ಷಣ ಸಂಸ್ಥೆ. ವಿದ್ಯಾರ್ಜನೆಗಾಗಿ ವಿಶ್ವದ ಎಲ್ಲೆಡೆಯಿಂದಲೂ ವಿದ್ಯಾರ್ಥಿಗಳು ಇಲ್ಲಿಗೆ ಬರುತ್ತಿರುತ್ತಾರೆ. ಒಂದು ಆದರ್ಶ ಸಂಸ್ಕೃತಿಯ ನೆರಳು ಈ ಮಂದಿರದಲ್ಲಿ ಬಿದ್ದಿದೆ.

ಪಾಶ್ಚಾತ್ಯ ಹಾಗೂ ಪೌರ್ವಾತ್ಯ ಸಂಗೀತಗಳ ಸಮ್ಮೇಲನದಿಂದ ರವೀಂದ್ರರು ಒಂದು ಅಭಿನವ ಸಂಗೀತ ಪದ್ಧತಿ ನಿರ್ಮಿಸಿದ್ದಾರೆ. ಬ್ರಹ್ಮಸಮಾಜದ ಪ್ರತಿಯೊಂದು ಮನೆಯಲ್ಲೂ ಆ ಸಂಗೀತವನ್ನು ಕೇಳಬಹುದು.

ಪಾಶ್ಚಾತ್ಯ, ಪೌರ್ವಾತ್ಯ ಸಂಸ್ಕೃತಿಗಳನ್ನು ಕೂಡಿಸಿ ಅವೆರಡರೊಳಗಿಂದ ಉಚ್ಚ ಹಾಗೂ ಆದರ್ಶವಾದ ಒಂದು ಮಾನವೀ ಸಂಸ್ಕೃತಿಯನ್ನು ಹುಟ್ಟಿಸಬೇಕೆಂಬ ಹಿರಿಯಾಸೆ ಇವರಿಗಿತ್ತು. ಆದರೆ ಆ ಆಸೆ ಸಿದ್ಧಿಸಲಿಲ್ಲ. ಇಷ್ಟೇ ಅಲ್ಲ; ಕೊನೆ ಕೊನೆಗೆ ಪಾಶ್ಚಾತ್ಯ ಸಂಸ್ಕೃತಿಯ ವಿಷಯದಲ್ಲಿ ಇವರಿಗೆ ಜಿಗುಪ್ಸೆ ಹುಟ್ಟಿತು! ಮೊನ್ನೆ ಮೊನ್ನೆ ಸಾವಿನ ಹಾಸಿಗೆಯಲ್ಲಿ ಒರಗಿರುವಾಗ, ರಾಥಬೋನ್ ಎಂಬ ಆಂಗ್ಲ ಮಹಿಳೆಯು ಹಿಂದೂಸ್ಥಾನದ ವಿಷಯದಲ್ಲಿ ಮಾಡಿದ ಟೀಕೆಗೆ ಉತ್ತರವೆಂದು, ಕನ್ನಡಿಯಲ್ಲಿ ಕಟ್ಟುಹಾಕಿಸಿ ಇಡುವಂತಹ ಒಂದು ಉಜ್ವಲ ಲೇಖನವನ್ನು ಬರೆದು, ಪಾಶ್ಚಾತ್ಯ ಸಂಸ್ಕೃತಿಯ ಹಿಂಸ್ರ ಸ್ವರೂಪವನ್ನು ಇವರು ಜಗತ್ತಿನ ಎದುರಿಗೆ ತೆರೆದು ಇಟ್ಟಿದ್ದಾರೆ! ಆ ಲೇಖನವೇ ತಾಯ್ನಾಡಿನ ಮೇಲಿರುವ ಇವರ ಅಗಾಧ ಅಕ್ಕರೆಗೆ ಸಾಕ್ಷಿ. ಸಾವು ತೀರ ಸಮೀಪಿಸಿದಾಗ ಇಂತಹ ಸಿಂಹಸ್ಪರ್ಧಿ ಪುರುಷರ ಬಾಯಿಯಿಂದ ಹೊರಟ ಆ ವಾಣಿಯು ಹಿಂದುಸ್ಥಾನದ ಹೃದಯದಿಂದ ಎಂದೂ ಅಳಿಯಲಿಕ್ಕಿಲ್ಲ.

ಇಂದಿನಂತಹ ಬಿಕ್ಕಟ್ಟಿನ ಹೊತ್ತಿನಲ್ಲಿ ಗುರುದೇವರು ಭಾರತವನ್ನು ಅಗಲಿದ್ದು ಭಾರತೀಯರ ದುರ್ದೈವ! ದೇವರು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ! ಭಾರತದಲ್ಲಿ ರವೀಂದ್ರರು ಹುಟ್ಟುತ್ತಿರಲಿ! ಅಂತಹ ಶ್ರೇಷ್ಠ ವಿಭೂತಿಗಳ ಉದಯದಿಂದ ಭಾರತವು ಭಾರತವಾಗಿ ಬಾಳಲಿ, ಬೆಳೆಯಲಿ; ಬೆಳಗಲಿ!

* * *

— ಮಹಾತ್ಮರ ಇದೇ ಬರುವ ಹುಟ್ಟು-ಹಬ್ಬದ ಕಾಲಕ್ಕೆ ಅವರಿಗೆ ಸತ್ಯಾಗ್ರಹಿಗಳ ಕೈನೂಲನ್ನು ಕಾಣಿಕೆಯಾಗಿ ಅರ್ಪಿಸಬೇಕೆಂದು ಕರ್ನಾಟಕ ಪ್ರಾಂತಾಧ್ಯಕ್ಷರು ನಿಶ್ಚಯಿಸಿದ್ದಾರಷ್ಟೇ. ಈ ಸೂಚನೆಯನ್ನು ಮನ್ನಿಸಿ ವಿಸಾಪುರ ತುರಂಗದೊಳಗಿನ ೩೧ ಸತ್ಯಾಗ್ರಹಿ ಸೆರೆಯಾಳುಗಳು ೧,೫೪,೩೪೦ ಗಜ ನೂಲನ್ನು ಕರ್ನಾಟಕ ಪ್ರಾಂ|| ಸಮಿತಿಯ ಕಡೆ ಕಳಿಸಿದ್ದಾರೆ. ಇನ್ನಿತರ ಸತ್ಯಾಗ್ರಹಿಗಳೂ ಕಳಿಸುತ್ತಿದ್ದಾರೆ.

— ಕಳೆದ ಜೂನ ತಿಂಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಾದ ನೆರೆ-ಹಾವಳಿಯಲ್ಲಿ ೫೦,೦೦೦ಕ್ಕಿಂತ ಹೆಚ್ಚಿಗೆ ಜನರು ಸಂಕಟದಲ್ಲಿ ಬಿದ್ದಿರುವರು. ಅವರಲ್ಲಿ ೧೫,೦೦೦ ಜನರು ನಿರಾಶ್ರಿತರಾಗಿದ್ದಾರೆ. ಈ ಜನರಿಗೆ ಅನ್ನ-ವಸ್ತ್ರಗಳನ್ನೊದಗಿಸಲು ಕನಿಷ್ಠ ರೂ ೨೫,೦೦೦ಗಳಾದರೂ ಬೇಕೆಂದು ಮಹಾಜನ ನೆರೆ-ನಿರಾಶ್ರಿತ-ಸಹಾಯಕ ಮಂಡಳದವರು ಲೆಕ್ಕ ಹಾಕಿದ್ದಾರೆ. ಮಂಡಳದ ಕಡೆ ಈ ವರೆಗೆ ರೂ ೪೦೦೦ ಕೂಡಿದೆ. ಕಳೆದ ವಾರ ಮುಂಬಯಿಯೊಳಗಿನ ಸಂಯುಕ್ತ ಕರ್ನಾಟಕ ಸಂಘದ ಒಂದು ಶಿಷ್ಟಮಂಡಳವು ಸಂಘದ ಅಧ್ಯಕ್ಷರಾದ ದಿ| ಬ| ಕೆ. ರಾಮಸ್ವಾಮಿಯವರ ನೇತೃತ್ವದಲ್ಲಿ ಮುಂಬಯಿಯ ಮಾನ್ಯ ನಗರಾಧ್ಯಕ್ಷರನ್ನು ಭೆಟ್ಟಿಯಾಗಿ, ಮೇಲ್ಕಾಣಿಸಿದ ನೆರೆ-ನಿರಾಶ್ರಿತರಿಗೆ ಸಹಾಯ ಕೂಡಿಸಿ ಕೊಡಬೇಕಾಗಿ ಪ್ರಾರ್ಥಿಸಿತು. ನಗರಾಧ್ಯಕ್ಷರು ಸಮಾಧಾನದಿಂದ ಎಲ್ಲ ವಿವರಗಳನ್ನು ಕೇಳಿಕೊಂಡು, ತಮ್ಮ ನೆರೆ-ನಿರಾಶ್ರಿತ ಸಹಾಯಕ ಸಮಿತಿಯವರ ಕಡೆಯಿಂದ ಬಯಸಿದ ಸಹಾಯ ಕೊಡಿಸುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ.

ಸ್ಥಳೀಕ ವಿಷಯಗಳು.

ಲೇಖಕ:- ಸ್ಥಳವಂತಿಕ.

ಸಹಕಾರ ಸಂಘಗಳು ಪರ-ಜನರಿಗೆ ಸಾಧಕ, ಸ್ವ-ಜನರಿಗೆ ಘಾತಕ ಸಂಸ್ಥೆಗಳೆಂದು ಈವಾಗ ಸಾಮಾನ್ಯವಾಗಿ ಅನುಭವಿಕರು ಒಪ್ಪತಕ್ಕಂಥ ಮಾತು. ಇದಕ್ಕೊಂದು ಚಿಕ್ಕ ಉದಾಹರಣೆ ಕೊಡಬಹುದು. ನಮ್ಮಲ್ಲಿಯ ಸಹಕಾರ ಸಂಘಗಳು ತಮ್ಮ ಕಡೆ ಇದ್ದ-ಇಲ್ಲದ ಯಾವತ್ತೂ ಬಂಡವಲನ್ನು ಮುಂಬಯಿಯಲ್ಲಿ ಒಯ್ದು ಇಡುತ್ತವೆ. ಈ ಬಂಡವಲಿಗೆ ೧ ಸಶೆ ಬಡ್ಡಿ ಸಹ ಸಿಗುವದಿಲ್ಲ; ಆದಾಗ್ಯೂ ಸಹಕಾರ ಸಂಘಗಳಿಗೆ ಈ ವ್ಯವಹಾರ ಪೂರೈಸುತ್ತದೆ; ನಷ್ಟವಾಗುವದಿಲ್ಲ. ಆದರೆ ಅದೇ ಹಣವನ್ನು ಸಭಾಸದರಿಗೆ ೭ ಸಶೆ, ೯ ಸಶೆಯಿಂದ ಬಡ್ಡಿಗೆ ಕೊಟ್ಟರೂ ಸಹಕಾರ ಸಂಘಗಳಿಗೆ ನಷ್ಟವಾಗುತ್ತದೆ. ಕ್ಲಿಪ್ತ ಕಾಲದಲ್ಲಿ ಬಡ್ಡಿಯನ್ನು ಸುಸೂತ್ರ ಒಯ್ದು ಕೊಡುವವರಿಗೆ ಕೆಲವು ಬಡ್ಡಿ ಕಡಿಮೆ ಮಾಡಬೇಕಾದರೆ ಸಹಕಾರ ಸಂಘಗಳಿಗೆ ಜೀವದ ಸುತ್ತು ಬರುತ್ತದೆ. ಸ್ಥಾವರಾಸ್ತಿಯ ಭದ್ರತೆ ಕೊಟ್ಟರೆ ರೂ. ೬-೧೩-೦ ರಂತೆ ಬಡ್ಡಿಯಿಂದ ಸಭಾಸದರಿಗೆ ಹಣ ಸಿಕ್ಕಿದರೆ ಅದೊಂದು ಸಹಕಾರ ಸಂಘಗಳ ಲೋಕೋಪಕಾರವೆಂದು ಹರಸುವ ಪ್ರಸಂಗವುಂಟು. ಸಹಕಾರ ಸಂಘಗಳ ಕಾರಕೀರ್ದಿಯಲ್ಲಿ ಊರೊಳಗಿನ ಬಂಡವಲೆಲ್ಲ ಒಂದೆಡೆ ಕೂಡಿ ನೇರವಾಗಿ ಮುಂಬಯಿಗೆ ರಫ್ತಾಗಿದೆ. ಮುಂಬಯಿ ಪ್ರಾಂತಿಕ ಸಹಕಾರಿ ಬೇಂಕಿನ ದಲಾಲರಾಗಿ ಇಲ್ಲಿಯ ಸಹಕಾರಿ ಸಂಘಗಳು ನಡೆಕೊಳ್ಳುತ್ತವೆ. ಈ ಪರಿ ಭಂಡವಲು ರಫ್ತಾಗುವದರಿಂದ ಯಾವದೇ ಉದ್ದಿಮೆಗೆ ಈ ಜಿಲ್ಹೆಯಲ್ಲಿ ಭಂಡವಲು ಸಿಗುವದಿಲ್ಲ. ಸ್ಥಾವರಾಸ್ತಿಯ ಭದ್ರತೆಯ ಮೇಲೆ ಹಣ ಕೊಡದಿರಲು ಸಂಘಗಳಿಗೆ ನೆವವಿರಬಹುದು: ಆಸ್ತಿಯ ಬೆಲೆ ಕುಗ್ಗುತ್ತದೆ; ಮಳೆ ಸರಿಯಾಗಿ ಬೀಳದೆ ಬೆಳೆ ಸರಿಯಾಗಿ ಹುಟ್ಟುವದಿಲ್ಲ; ಹಣ ಪಡೆಯಲಿಕ್ಕೆ ಪಂಚಾಯತಿ ಕ್ರಮ ಕೈಕೊಳ್ಳಬೇಕಾಗುತ್ತದೆ; ಆ ಮೇಲೆ ವಸೂಲಿ ಕ್ರಮದ ಉಪದ್ರವವುಂಟು; ಹೀಗೆ ಒಂದಲ್ಲ, ಎರಡಲ್ಲ ಹಲವು ಉಪದ್ರವಗಳು ಲೋಕೋಪಕಾರಿ ಸಂಘಗಳಿಗೆ ಒದಗಿ ಜೀವನವೇ ಒಜ್ಜೆಯಾಗುವದು ಸಾಹಜಿಕ. ಆದರೆ ಚಿನ್ನ ಇಟ್ಟುಕೊಂಡು ೨ ಇಲ್ಲವೆ ೩ ಸಶೆ ಬಡ್ಡಿಯಿಂದ ಹಣವನ್ನು ಸಭಾಸದರಿಗೆ ಕೊಟ್ಟರೆ ಸಹಕಾರ ಸಂಘಗಳಿಗೆ ಪ್ರಾಪ್ತಿಯುಂಟು; ಸುರಕ್ಷಿತತೆಯುಂಟು; ಮೇಲೆ ಸಭಾಸದರಿಗೆ ಉಪಕಾರ ಮಾಡಿದ ಶ್ರೇಯಸ್ಸು ಸಿಗುತ್ತದೆ. ಇದೇ ಪ್ರಕಾರ ಸಾಲುಗಳನ್ನಿಟ್ಟುಕೊಂಡು ವರ್ತಕರಿಗೆ ನೆರವಾಗಬಹುದು. ದೇವರ ಭಂಡಾರದ ದುಡ್ಡು, ಕೆಲವು ಮೊಕ್ತೇಸರರಿಗೆ, ಉಳಿದದ್ದು ಬೇಂಕಿನಲ್ಲಿ ಇಲ್ಲವೆ ಸರಕಾರದ ಸಾಲ-ಪತ್ರಗಳಲ್ಲಿ! ಅಂತು ಆ ಭಂಡಾರ ವರ್ತಕರಿಗಾಗಲಿ ಉದ್ದಿಮೆದಾರರಿಗಾಗಲಿ ಸಿಗುವದಿಲ್ಲ. ಆ ವ್ಯವಹಾರ ಮಾಡಲಿಕ್ಕೆ ದೇವಸ್ವ-ವಂಚಕ ಮೊಕ್ತೇಸರರಿಗೆ ಸಮಯಾನುಕೂಲತೆಯಿಲ್ಲ. ಸಹಕಾರ ಬೇಂಕುಗಳ ದುಡ್ಡು ನೇರವಾಗಿ ಪರಸ್ಥಳಕ್ಕೆ, ಅಂದ ಬಳಿಕ ಇಲ್ಲಿಯ ವರ್ತಕರು ವ್ಯಾಪಾರ ನಡಿಸಲು ಅಸಮರ್ಥರಾದದ್ದು ಸೋಜಿಗವಲ್ಲ! ವರ್ತಕರಿಗೆ ಭಂಡವಲು ಕೊಡಮಾಡಿದರೆ ಬೇಂಕುಗಳಿಂದ ಇಲ್ಲಿಯ ಜನರು ಪ್ರಯೋಜನ ಪಡೆಯಲು ಯಾವಾಗಲೂ ತಪ್ಪರಿರುತ್ತಾರೆ. ಶಿರಸಿಯ ಸೆಂಟ್ರಲ್ ಬೇಂಕಿನವರು ಸಂಕಸಿಸ ಮೇಲೆ ೬ ಸಶೆ ಬಡ್ಡಿ ದರದಿಂದ ಹಣ ಕೊಟ್ಟು ವರ್ತಕರಿಗೆ ನೆರವಾಗುತ್ತಿದ್ದಾರೆ. ಇದೇ ಪ್ರಕಾರ ಕುಂದಾಪುರದ ಎಗ್ರಿಕಲ್ಚರಲ್ ಬೇಂಕಿನವರೂ ಅಂಕೋಲೆ-ಕಾರವಾರಗಳಲ್ಲಿ ಈ ಉಪಕ್ರಮವನ್ನು ಪ್ರಾರಂಭಿಸಿದ್ದಾರೆ. ೬ ಸಶೆ ಬಡ್ಡಿ ಈಗಿನ ದಿನಮಾನದಲ್ಲಿ ಸ್ವಲ್ಪ ಹೆಚ್ಚೇ ಸೈ! ಮುಂಬಯಿಯಲ್ಲಿ ಹಣ ತಿರುಗಿ ಸಿಗುವ ಭದ್ರತೆಯುಳ್ಳ ಗಿರಾಕಿಗಳಿಗೆ ಕಾಲು ಸಶೆ ಬಡ್ಡಿಯಿಂದ ಸಹ ಬೇಕಷ್ಟು ಸಾಲ ಸಿಗುತ್ತದೆ! ಬೇಂಕಿನಿಂದ ತಿಳಿಸೋಣಾದ ಕೂಡಲೆ ೨೪ ತಾಸುಗಳಲ್ಲಿ ಕೊಂಡ ಸಾಲವನ್ನು ತುಂಬಬೇಕು. ಅವಧಿಯ ಸಾಲಗಳಿಗೆ ೨-೩ ಸಶೆಗೆ ಮಿಕ್ಕಿ ಮುಂಬಯಿಯಲ್ಲಿ ಬಡ್ಡಿಯಿಲ್ಲ! ಆದಾಗ್ಯೂ ಗಿರಾಕಿಯಿಲ್ಲದೆ ಬೇಂಕುಗಳಲ್ಲಿ ಹಣ ರಾಶಿಯಾಗಿ ಬಿದ್ದಿರುತ್ತದೆ. ಬಡ್ಡಿಯಿಲ್ಲದೆ ಬೇಂಕುಗಳಲ್ಲಿ ಲಕ್ಷಾವಧಿ ಹಣವುಂಟು. ಸರಕಾರವು ಮುಂಚಿನ ವಾರದಲ್ಲಿ ೩ ತಿಂಗಳ ಬಗೆ ೧ ಕೋಟಿ ರೂಪಾಯಿ ಸಾಲ ಕೇಳಿತ್ತು; ಅದಕ್ಕೆ ರೂ. ೩ ಕೋಟಿ ೫೯ ಲಕ್ಷ ಕೊಡಮಾಡುವ ಅರ್ಜಿಗಳು ಹೋದವು. ಈ ಅರ್ಜಿಗಳೊಳಗಿಂದ ೧ ಕೋಟಿ ರೂ. ಸಾಲವನ್ನು ೦-೬-೧೧ರಂತೆ ಬಡ್ಡಿ ಗೊತ್ತುಮಾಡಿ ಸರಕಾರವು ಪಡೆಯಿತು! ಇದಕ್ಕೂ ಹಿಂದಿನ ವಾರದಲ್ಲಿ ಸರಕಾರವು ೧ ಕೋಟಿ ರೂಪಾಯಿಗಳನ್ನು ಅರ್ಧ ಸಶೆ ಬಡ್ಡಿಯಿಂದ ಕೊಂಡಿತ್ತು! ಹೀಗೆ ಮುಂಬಯಿಯೊಳಗೆ ಸ್ಥಿತಿಯಿದ್ದಾಗ್ಯೂ, ಸಹಕಾರ ಸಂಘಗಳ ಕಡೆ ಹಣವಿದ್ದಾಗ್ಯೂ ಇಲ್ಲಿಯ ಸಭಾಸದರಿಗೆ ೭-೯ ಸಶೆಯಿಂದ ಹಣ ಸಿಗಬೇಕಾದರೆ ಬಹಳ ಪ್ರಯಾಸವಾಗುತ್ತದೆ. ಸಹಕಾರ ಸಂಘಗಳು ಲೋಕೋಪಕಾರದ ಬಾಯ್ಬಡಿಕೆಯನ್ನು ನಿಲ್ಲಿಸಿ, ಕೊಂಚ ಆತ್ಮನಿರೀಕ್ಷಣೆ ಮಾಡಬೇಕು; ಹಾವಿಗೆ ಕೊಂಪು ಹುದ್ದಿಗೆ ಹಾಕುವ ಧೋರಣವನ್ನು ತ್ಯಜಿಸಬೇಕು. ಗ್ರಾಮ-ನಿವಾಸಿಗಳನ್ನು ಸುಲಿದು ಮುಂಬಯಿ ಪ್ರಾಂತಿಕ ಸಹಕಾರ ಬೇಂಕಿನ ಭಂಡಾರ ತುಂಬಬಾರದು. ಸಂಘಗಳು ಕಲೆಹಾಕುವ ಹಣವನ್ನು ಸಂಘಗಳ ಕಾರ್ಯಕ್ಷೇತ್ರದಲ್ಲಿಯೇ ವಿನಿಯೋಗಿಸುವ ಯೋಜನೆಯನ್ನು ಪರಿಶೋಧಿಸಬೇಕು. ಸಹಕಾರ ಸಂಘಗಳ ಕಾರ್ಯಕರ್ತರು ಸಮ್ಮೇಲನದಲ್ಲಿ ಈ ವಿಷಯವನ್ನು ವಿಚಾರಿಸಿದರೆ ಲೋಕೋಪಕಾರವಾಗುವಂತಿದೆ.

ಸಹಕಾರ ಇಲಾಖೆಯವರು ಸಹ ಪರ್ಯಾಲೋಚಿಸತಕ್ಕ ವಿಷಯವಿದು. ಸಹಕಾರದ ಆಂದೋಲನದಿಂದ ಲೋಕಸುಖ ಇಲ್ಲವೆ ಲೋಕಾಭಿವೃದ್ಧಿಯಾಗದಿರಲು ಸಹಕಾರ ಇಲಾಖೆಯ ವಿಷಮ ಧೋರಣವೇ ಕಾರಣ. ಸಹಕಾರ ಸಂಘದ ಚಾಲಕರು ಕಾಯಿದೆಯಂತೆ ಪ್ರಾಪ್ತವಾದ ಅಧಿಕಾರವನ್ನು ಸ್ವಾರ್ಥಸಾಧನೆಗೆ ಉಪಯೋಗಿಸಿಕೊಂಡು ಪತ್ತುಗೇಡಿ ಪೋಲಿಗಳಿಗೆ ಆಶ್ರಯ ಕೊಟ್ಟು ಹಾವಳಿ ಹಾಕಿದ ವಿಚಾರ ಹಾಗಿರಲಿ. ಅದೊಂದು ಪುರಾಣಕ್ಕಿಂತ ಮಿಗಿಲಾದ ಗ್ರಂಥವುಂಟು. ಉಳಿದ ಭಂಡವಲನ್ನಾದರೂ ಬೇರೆ ಬೇರೆ ಸಾಲ-ಪತ್ರಗಳಲ್ಲಿ ತೊಡಗಿಸುವದಕ್ಕಿಂತ ಅವುಗಳ ವಿನಿಯೋಗವನ್ನು ಸ್ವ-ಗ್ರಾಮದಲ್ಲಿಯೇ ಕಲ್ಪಿಸಿಕೊಂಡಿದ್ದರೆ ಎಷ್ಟೋ ಉಪಕಾರವಾಗುತ್ತಿತ್ತು. ಸಹಕಾರ ಇಲಾಖೆಯವರಾದರೂ ಸಂಘಗಳಿಗೆ ಆ ಪ್ರಕಾರ ಬುದ್ಧಿ ಹೇಳಿದ್ದರೆ ಇಲ್ಲವೆ ಆ ಕಾಲಕ್ಕೆ ಜಾಗ್ರತೆ ಕೊಟ್ಟಿದ್ದರೆ ಈ ಪರಿ ಅನರ್ಥವಾಗುತ್ತಿರಲಿಲ್ಲ. ಸಹಕಾರ ಇಲಾಖೆಯವರು ಸಹಕಾರ ಪ್ರವೃತ್ತಿಹೀನ ಯಂತ್ರಗಳಂತೆ ವರ್ತಿಸಿ ಮುಂಬಯಿಯ ಪ್ರಾಂತಿಕ ಸಹಕಾರ ಬೇಂಕಿನ ದಲಾಲರಾಗಿ ರೂಪಾಂತರ ಹೊಂದಿದ್ದರಿಂದ ಈ ಅನರ್ಥವಾಯಿತು. ಈ ಅಧಿಕಾರಿಗಳು ಸಾಲಪತ್ರಗಳಲ್ಲಿ ಭಂಡವಲನ್ನು ತೊಡಗಿಸಿದರು; ಸಹಕಾರ ಸಂಘಗಳಿಗೆ ಉತ್ತೇಜನ ಕೊಟ್ಟರಲ್ಲದೆ ಸ್ಥಳೀಕ ವರ್ತಕರ ಇಲ್ಲವೆ ಉದ್ದಿಮೆದಾರರ ಹಿತಾಹಿತಗಳನ್ನು ಆಲೋಚಿಸಲಿಲ್ಲ. ಇಂಥ ಧೋರಣದಿಂದ ಸಹಕಾರ-ಪ್ರದೇಶ ಸುಲಿಯಲ್ಪಡುತ್ತದೆಂಬ ವಿಚಾರವು ಈ ಅಧಿಕಾರಿಗಳಿಗೆ ಸೋಂಕಲಿಲ್ಲ. ಈ ಅಧಿಕಾರಿಗಳ ದೃಷ್ಟಿ ಬಹಿರ್ಮುಖವಾಗಿದೆ; ಹೊರತು ಅಂತರ್ಮುಖವಾಗಿಲ್ಲ. ಮುಂಬಯಿ ಸರಕಾರವು ಸಹಕಾರ ಇಲಾಖೆಯವರಿಗೆ ಕೊಂಚ ಬುದ್ಧಿ ಹೇಳಬೇಕು. ಈಗಿನ ಧೋರಣವೇ ಮುಂದರಿದರೆ ದೀಪಾವಳಿ ಹಬ್ಬ ಬರುವ ಮುಂಚೆಯೇ ಜನರ ದಿವಾಳಿಯಾಗುವದೆಂಬ ಮಾತು ಖಚಿತ!

ಸಹಕಾರ ಸಂಘಗಳು ಸಾಲಗಾರರಿಗೆ ಬಡ್ಡಿ ಸೂಟ ಬಿಡುವದರಲ್ಲಿ ಔದಾರ್ಯವನ್ನು ತೋರಿಸಬೇಕು. ಸಂಘಗಳು ಸುರಕ್ಷಿತವಿರಬೇಕೆಂಬ ಮಾತು ನಿಜ; ಆದರೆ ಸಂಘಗಳಿಗಿಂತ ಸಭಾಸದರ ಸುರಕ್ಷಿತತೆಯ ಮೇಲೆ ಹೆಚ್ಚಿನ ಲಕ್ಷವಿಡಬೇಕು. ಸಂಘಗಳು ಗೌಣ; ಜನರು ಪ್ರಧಾನ. ಸಂಘಗಳ ವಿಸರ್ಜನದಿಂದ ಜನರು ಬದುಕುತ್ತಿದ್ದರೆ, ಸಂಘಗಳನ್ನು ವಿಸರ್ಜಿಸಲು ಇಲಾಖೆಯವರಾಗಲಿ ಸಂಘದವರಾಗಲಿ ಅನುಮಾನಿಸಬಾರದು. ಸಂಘಗಳ ಆಡಳಿತೆ ಖರ್ಚನ್ನು ಕಡಿಮೆ ಮಾಡಲು ಯಾವತ್ತೂ ಪ್ರಯತ್ನಗಳು ನಡೆಯಬೇಕು. ಉದಾಹರಣಾರ್ಥವಾಗಿ ಹೊನ್ನಾವರ ಅರ್ಬನ ಬೇಂಕಿನ ಕಾರ್ಯದರ್ಶಿಗಳು ಗೌರವ-ಕಾರ್ಯದರ್ಶಿಗಳೆಂದು ಹೇಳಿಸಿಕೊಳ್ಳುತ್ತಾರೆ. ವೇತನ ಪಡೆಯುವ ಕಾರ್ಯದರ್ಶಿಗಳಿಗಿಂತ ಇಂಥ ಗೌರವ-ಕಾರ್ಯದರ್ಶಿಗಳು ಸಂಘಕ್ಕೆ ತುಟ್ಟಿ ಬೀಳುತ್ತಾರೆ! ಸಾಲಗಾರರು ಸಾಯಲಿ ಇಲ್ಲವೆ ಬದುಕಲಿ; ಬಡ್ಡಿ ವಸೂಲ ಬರಲಿ; ಇಲ್ಲವೆ ಬಾಕಿಯಲ್ಲಿ ಉಳಿಯಲಿ; ಜಹಜು ಮುಳುಗಲಿ ಇಲ್ಲದೆ ತೇಲುತ್ತಿರಲಿ; ಏನಿದ್ದರೂ ಕಾರ್ಯದರ್ಶಿಗಳಿಗೆ ರೂ. ೭೦೦ರ ಪ್ರತಿಫಲದ ಗಂಟು ಕಟ್ಟಿಟ್ಟದ್ದುಂಟು; ಮೇಲಾಗಿ ಗೌರವವೂ ಕಟ್ಟಿಟ್ಟದ್ದುಂಟು! ಶಿಬಂದಿ-ಬಾಡಿಗೆಗಳ ಪ್ರಯೋಜನವೂ ಈ ಗೌರವ-ಕಾರ್ಯದರ್ಶಿಗಳಿಗೆ ಸಿಗುತ್ತದೆ. ಆದಾಗ್ಯೂ ಸಂಘದ ಮೇಲಿನ ಇವರ ಉಪಕಾರ ತೀರುವದಿಲ್ಲ. ಊರ್ಜಿತಾವಸ್ಥೆಯಲ್ಲಿ ಈ ಸರಂಜಾಮು, ಈ ಗೌರವ ಯೋಗ್ಯವಾಗಿರಬಹುದು; ಆಗಿಹೋದ ಸಂಗತಿಗಳನ್ನು ನೆನಸಿ ಪ್ರಯೋಜನವಿಲ್ಲ; ಈಗಲಾದರೂ ಬೇಂಕುಗಳು ಇಂಥ ಮುಂದುಗಾರಿಕೆಯನ್ನು ಕಡಿಮೆ ಮಾಡುವದು ಶ್ರೇಯಸ್ಕರ. ಸಾಲಗಾರರನ್ನು ಬದುಕಿಸಿಕೊಳ್ಳಲಿಕ್ಕೂ ಅವರಿಗೆ ಸಂಘದ ವ್ಯವಹಾರಗಳನ್ನು ಮುಂಚಿನಂತೆ ನಡಿಸಸಮರ್ಥರನ್ನಾಗಿ ಮಾಡಲಿಕ್ಕೂ ಎಲ್ಲರೂ ಪ್ರಯತ್ನಪಡಬೇಕು. ಬಹುಮಾನದ ಕಾಣಿಕೆ ಬಿಡಲಿಕ್ಕೆ ಬಹುಮಾನ-ಕಾಂಕ್ಷಿಗಳು ಸಿದ್ಧರಾಗಲೇ ಬೇಕು. ಬಹುಮಾನ ಬೇರೆ, ಮುನ್ನ ಬೇರೆ; ಪ್ರಯೋಜನ ಬೇರೆ; ಹೀಗೆ ತರತರದಿಂದ ಸಂಘಗಳನ್ನು ಸುಲಿಯುವದು ಸಭ್ಯತನವಲ್ಲ, ಪ್ರಶಸ್ತವಲ್ಲ.

ಅಂಕೋಲೆಯ ಸಹಕಾರ ಬೇಂಕು ಗುಪ್ತ-ಮತದಾನ ಪದ್ಧತಿಯಿಂದ ಆಡಳಿತೆ ಮಂಡಳವನ್ನು ನೇಮಿಸಿಕೊಳ್ಳುವ ಸಿದ್ಧತೆಯನ್ನು ಮಾಡಿದೆ. ಅದರ ವಿಚಾರ

(ಇನ್ನೂ ಬರುವ ವೇಳೆ ಮುಂದುವರಿಸಿದೆ)

ವಾರ್ತೆಗಳು.

— ಮದ್ರಾಸ ಪ್ರಾಂತದ ಸೆರೆಮನೆಗಳಲ್ಲಿ ಇರುವ ಸತ್ಯಾಗ್ರಹಿಗಳಿಗೆ ಯಾವದೇ ವರ್ಗಭೇದವಿಲ್ಲದೆ ಅವರು ಅಪೇಕ್ಷಿಸುವ ಗ್ರಂಥಗಳನ್ನು ಕೊಡಬೇಕೆಂದು ಮದ್ರಾಸ ಸರಕಾರವು ನಿರ್ಣಯಿಸಿದೆ. ಆದರೆ ಈ ಗ್ರಂಥಗಳು ಆಕ್ಷೇಪಾರ್ಹವಿರಬಾರದು. ಮದ್ರಾಸ ಪ್ರಾಂತದ ಜೈಲುಗಳಲ್ಲಿ ಈಗ ೨೦೦೦ ಮಂದಿ ಸತ್ಯಾಗ್ರಹಿಗಳಿದ್ದಾರೆ.

— ಸಂಯುಕ್ತ ಪ್ರಾಂತದ ಲಖನೌ ಜೈಲಿನಲ್ಲಿ ೧೭೦೦ ಕೈದಿಗಳಿದ್ದಾರೆ. ಅವರು ಬೀಸುವ ಕೆಲಸವನ್ನು ಮಾಡಲು ನಿರಾಕರಿಸಿದ್ದರಿಂದ ಅವರಿಗೆ ಒಪ್ಪತ್ತು ಊಟ ಹಾಕಿ, ಒಪ್ಪತ್ತು ಉಪವಾಸ ಹಾಕಲಾಯಿತು. ಆದರಿಂದ ಒಂದು ದಿನ ಅವರು ತಮ್ಮ ಶಿಬಿರಗಳಲ್ಲಿ ಸೇರಲು ನಿರಾಕರಿಸಿದರು. ಇದರಿಂದ ಪೋಲೀಸರು ಅವರಿಗೆ ಹೊಡೆದು ಶಿಬಿರಗಳಲ್ಲಿ ನೂಕಿದರು. ಸೌ|| ವಿಜಯಲಕ್ಷ್ಮೀ ಪಂಡಿತರವರೂ ಆಚಾರ್ಯ ಕೃಪಾಲಾನಿಯವರೂ ಈ ಸತ್ಯಾಗ್ರಹಿಗಳಿಗೆ ಕಂಡು, ಅವರ ಹಂಬೋಣ ಕೇಳಿಕೊಂಡು ಸಂಯುಕ್ತ ಪ್ರಾಂತ ಸರಕಾರದ ಕಡೆ ಆಲೋಚನೆ ಮಾಡುತ್ತಿದ್ದಾರೆ.

— ನಾಗಪುರದ ಸೆಂಟ್ರಲ ಜೈಲಿನಲ್ಲಿಯೂ ೩ನೇ ತರಗತಿಯ ಸತ್ಯಾಗ್ರಹಿಗಳಿಗೆ ಉಪದ್ರವ ಕೊಡಲ್ಪಡುತ್ತಿದೆ. ಈ ಸತ್ಯಾಗ್ರಹಿಗಳಿಗೆ ಮಂಜಿ ಹಾಲು ಕೊಡಲ್ಪಡುತ್ತಿತ್ತು, ಅದು ಈಗ ನಿಲ್ಲಿಸಲ್ಪಟ್ಟಿದೆ. ಮಧ್ಯಪ್ರಾಂತ ಸರಕಾರಕ್ಕೆ ಕೈದಿಗಳಿಗೆ ಹಾಲು ಕೊಟ್ಟದ್ದರಿಂದ ಹೆಚ್ಚು ಖರ್ಚು ತಗಲುತ್ತಿದ್ದರೆ ಅಷ್ಟು ಹಾಲಿನ ಕ್ರಯವನ್ನು ತಾವು ತೆರುತ್ತೇವಾಗಿ ಸತ್ಯಾಗ್ರಹಿಗಳು ಹೇಳಿದಾಗ್ಯೂ ಸರಕಾರಕ್ಕೆ ಒಪ್ಪಿಗೆಯಿಲ್ಲ. ಬೇಸಿಗೆ ಕಾಲದಲ್ಲಿ ಉಷ್ಣತೆಯಾಗುತ್ತದಾದ್ದರಿಂದ ಹಾಲು ಕೊಡೋಣಾಗುತ್ತಿತ್ತು, ಈಗ ಅದು ಅವಶ್ಯವಿಲ್ಲ. ಅದರಿಂದ ಹಾಲು ಕೊಡುವದನ್ನು ನಿಲ್ಲಿಸಿದೆ, ಹೀಗೆ ಮಧ್ಯಪ್ರಾಂತ ಸರಕಾರದ ಹಂಬೋಣ !

— ಪಂಜಾಬದ ಶಹಾಪುರ ಜೈಲಿನಲ್ಲಿ ಸೆರೆಮನೆಯ ಅಧಿಕಾರಿಗಳ ಉಪದ್ರವ ತಾಳಲಾರದೆ ಸುಮಾರು ೧೦೦ ಮಂದಿ ಸತ್ಯಾಗ್ರಹಿಗಳು ಒಪ್ಪತ್ತು ಊಟ ಬಿಟ್ಟು ೧ ತಿಂಗಳಾಗುತ್ತ ಬಂತು.

— ಸರದಾರ ವಲ್ಲಭಭಾಯಿ ಪಟೇಲರವರಿಗೆ ಶಸ್ತ್ರಕ್ರಿಯೆ ಮಾಡುವ ಆವಶ್ಯಕತೆಯಿಲ್ಲವಾಗಿಯೂ ಉಪಚಾರದಿಂದಲೇ ಬೇನೆ ವಾಸಿಯಾಗುವದಾಗಿಯೂ ಡಾಕ್ಟರರ ಅಭಿಪ್ರಾಯವಿದೆ.

— ಮುಸ್ಲಿಮ ಲೀಗಿನ ಪರವಾಗಿ ಮುಖ್ಯ ಪ್ರಧಾನರಾದ ಪಂಜಾಬದ ಸರ್ ಸಿಕಂದರ ಹಯಾತಖಾನರವರೂ ಬಂಗಾಲದ ಮೌ|| ಫಜಲುಲ ಹಕ್ಕರವರೂ ಆಸಾಮದ ಸರ್ ಸಾದುಲ್ಲಾರವರೂ ಲೀಗಿನ ಅಪ್ಪಣೆ ಪಡೆಯದೆ ಸರ್ವಾಧಿಪತಿಗಳ ಸಂರಕ್ಷಕ ಸಲಹೆಗಾರ ಸಮಿತಿಯ ಸಭಾಸದರಾದ ಬಗ್ಗೆ ಲೀಗಿನ ಸಭೆ ಸೇರಿ, ಅವರು ಸರಕಾರದ ಸಂರಕ್ಷಕ ಸಲಹೆಗಾರ ಸಮಿತಿಯ ಸದಸ್ಯತ್ವಕ್ಕೆ ರಾಜಿನಾಮೆ ಕೊಡಬೇಕೆಂದು ನಿರ್ಣಯವಾಗಿದೆ. ಅದರಂತೆ ಸರ್ ಸಿಕಂದರರವರೂ ಸರ್ ಸಾದುಲ್ಲಾರವರೂ ರಾಜಿನಾಮೆ ಕೊಟ್ಟಿರುತ್ತಾರೆ. ಮೌ|| ಫಜಲುಲ ಹಕ್ಕರವರು ರಾಜಿನಾಮೆ ಕೊಡಲೊಪ್ಪುವದಿಲ್ಲ. ಸರ್ ಅಬ್ದುಲ್ಲ ಹಲೀಮ ಘಜನವಿ ಮೊದಲಾದ ಬಂಗಾಲದೊಳಗಿನ ಪ್ರಮುಖ ಮುಸಲ್ಮಾನರು ಸರಕಾರಿ ಸದಸ್ಯತ್ವಕ್ಕೆ ರಾಜಿನಾಮೆ ಕೊಡಬಾರದಾಗಿ ಮೌ|| ಹಕ್ಕರವರಿಗೆ ಪ್ರೇರೇಪಿಸುತ್ತಾರೆ. ಮುಸಲ್ಮಾನರೆಲ್ಲರೂ ಲೀಗಿನ ಅಧಿಪತ್ಯಕ್ಕೆ ಒಳಪಟ್ಟವರೆಂದೂ ಲೀಗಿನ ಧೋರಣವೇ ಸಕಲ ಮುಸಲ್ಮಾನ ಸಮಾಜದ ಧೋರಣವೆಂದೂ ಮುಸಲ್ಮಾನರೆಲ್ಲರೂ ಲೀಗಿಗೆ ಅಂಕಿತವಾಗಿ ನಡೆಯಬೇಕೆಂದೂ ಜಿನ್ನಾರವರ ಮುಸ್ಲಿಮ ಲೀಗಿನ ನಿಗ್ರಹ. ಮೌ|| ಹಕ್ಕರವರು ರಾಜಿನಾಮೆ ಕೊಡದಿದ್ದರೆ ಅವರನ್ನು ಲೀಗಿನೊಳಗಿಂದ ಹೊರತಳ್ಳಬೇಕೆಂಬ ವಿಚಾರ ಸಹ ನಡೆದಿದೆ.

— ವಿಮಾನ-ದಾಳಿಗೆ ಜನರು ಪರಿಚಿತರಾಗಬೇಕೆಂದೂ ಆ ಸಮಯದಲ್ಲಿ ಜನಸಾಮಾನ್ಯರು ಆತ್ಮರಕ್ಷಣೆಯ ಉಪಾಯವನ್ನು ತಿಳಕೊಂಡಿರಬೇಕೆಂದೂ ಹಿಂದುಸ್ಥಾನ ಸರಕಾರವು ವಿಮಾನ-ದಾಳಿಯಾಗಬಹುದಾದ ಪಟ್ಟಣಗಳಲ್ಲಿ ೩ ದಿನಗಳ ತನಕ ದೀಪಗಳನ್ನು ನಂದಿಸಿಡುವ ಪದ್ಧತಿಯನ್ನು ಅನುಸರಿಸಬೇಕೆಂದು ನಿರ್ಣಯವಾಗಿದೆ. ಅದರಂತೆ ಕರಾಚಿಯಲ್ಲಿ ೩ ದಿನಗಳ ತನಕ ದೀಪ ಹಚ್ಚದಿರುವ ಪ್ರಯೋಗ ಸದ್ಯಕ್ಕೆ ನಡೆಯುವದು !

— ಕಲಕತ್ತೆಯ ಮ್ಯುನಿಸಿಪಾಲಿಟಿಯವರು ತಮಗೆ ಆವಶ್ಯವುಳ್ಳ ಖಾದಿಯನ್ನು ಅ. ಭಾ. ಕೈರಾಟ ಸಂಘದಿಂದ ಪಡಕೊಳ್ಳಬೇಕೆಂದು ನಿರ್ಣಯಿಸಿದ್ದಾರೆ.

— ಹಿಂದುಸ್ಥಾನ ಸರಕಾರವು ಭಾರತ ರಕ್ಷಣ ಕಾನೂನಿನನ್ವಯ ಹೊಸದೊಂದು ನಿಯಮ ಮಾಡಿದೆ: ಈ ನಿಯಮದಂತೆ ಹಿಂದುಸ್ಥಾನ ಸರಕಾರಕ್ಕೆ ಅವಶ್ಯವುಳ್ಳ ಯಾವದೇ ಇಮಾರತನ್ನು ಬೇಕಾದಾಗ ಸ್ವಾಧೀನ ಪಡಿಸಿಕೊಂಡು, ಬೇಕಾದ ರೀತಿ ಉಪಯೋಗಿಸಿಕೊಳ್ಳಲು ಅನುಕೂಲವಾಗಿದೆ.

— ಹಿಂದುಸ್ಥಾನ ಸರಕಾರದ ಕಾರ್ಯಕಾರಿ ಮಂಡಳದ ಸಭಾಸದರಿಗೆ ತಿಂಗಳಿಗೆ ರೂ. ೬೬೬೬ ಸಂಬಳ ಸಿಗುತ್ತಿತ್ತು. ಈಗ ಹೊಸ ಮೆಂಬರರ ಸೇರಿಕೆಯಿಂದ ಆ ಸಂಬಳ ರೂ. ೫೫೦೦ಕ್ಕೆ ಇಳಿಸಲಾಗಿದೆ. ಹೆಚ್ಚಿನ ಸಂಬಳ ಸಿಗುತ್ತಿದ್ದ ಸಭಾಸದರು ಕಡಿಮೆ ಸಂಬಳ ಕೊಂಡು ಅಧಿಕಾರ ನಡಿಸಲು ಒಡಂಬಟ್ಟಿದ್ದಾರಾಗಿ ಪ್ರಕಟವಾಗಿದೆ.

— ಮದ್ರಾಸದ ಶ್ರೀ|| ಸತ್ಯಮೂರ್ತಿಗಳವರು ಕಳೆದ ರವಿವಾರ ಬಿಡುಗಡೆಯಾದರು. ರಾಷ್ಟ್ರೀಯ ಸಭೆಯ ಧೋರಣವನ್ನು ತಿದ್ದುಪಡಿ ಮಾಡಬೇಕಾಗಿಯೂ ಕೊಂಗ್ರೆಸ ಸರಕಾರಗಳು ಪುನಃ ಸ್ಥಾಪನವಾಗಬೇಕಾಗಿಯೂ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಕೊಂಗ್ರೆಸ ಪಕ್ಷದ ಸಭಾಸದರಿಗೆ ಹಾಜರಾಗಲು ಅಪ್ಪಣೆ ಕೊಡಬೇಕಾಗಿಯೂ ಶ್ರೀ|| ಸತ್ಯಮೂರ್ತಿಗಳ ಹಂಬೋಣವುಂಟು. ತಮ್ಮ ಪ್ರಕೃತಿ ಸುಧಾರಣೆಯಾದ ಬಳಿಕ ಶ್ರೀ|| ಸತ್ಯಮೂರ್ತಿಗಳವರು ಈ ಕುರಿತು ಮಹಾತ್ಮರೊಡನೆ ಆಲೋಚನೆ ಮಾಡುವವರಿದ್ದಾರೆ.

— ಸಂಯುಕ್ತ ಪ್ರಾಂತದಲ್ಲಿ ಭಾರತ ರಕ್ಷಣ ಕಾನೂನಿನ ಆಶ್ರಯದಲ್ಲಿ ನಡೆದ ವಿಚಿತ್ರ ಲೀಲೆಯೊಂದು ಹೇಳತಕ್ಕಂದಾಗಿದೆ! ಹಾತ್ರಸದ ಜಮೀನದಾರರೊಬ್ಬರು ರೂ. ೯೬೫॥ ಗಳ ತೀರ್ವೆ ಕೊಡತಕ್ಕದ್ದಿತ್ತು; ಅದನ್ನವರು ೧೯೪೧ನೇ ಇಸ್ವಿಯ ಜುಲಾಯಿ ತಿಂಗಳಲ್ಲಿ ತಮ್ಮ ತಳನ ಕಡೆ ಕೊಟ್ಟು ತಹಶೀಲದಾರರ ಕಡೆ ಮುಟ್ಟಿಸಿದರು. ತಹಶೀಲದಾರರು ರೂ. ೯೪೧ನ್ನು ಅವರ ಕಂದಾಯದ ಲೆಕ್ಕಕ್ಕೆ ಜಮಾ ಕೊಂಡರು, ಉಳಿದ ರೂ. ೨೪,ನ್ನು ಯುದ್ಧನಿಧಿಗೆ ಜಮಾ ಕೊಂಡರು, ಮತ್ತು ರೂ. ೨೪| ತೀರ್ವೆ ಕೊಡುವದು ಬಾಕಿಯಿರುವದೆಂದು ಭೂಮಿಯನ್ನು ಜಪ್ತ ಮಾಡಿದರು. ಜಮೀನದಾರರು ಕಲೆಕ್ಟರರ ಕಡೆ ದೂರಿಕೊಂಡರು, ಪ್ರಾಂತಿಕ ಸರಕಾರದ ಕಡೆ ದೂರಿಕೊಂಡರು; ಕೊಂಗ್ರೆಸಿನವರ ಕಡೆಗೂ ದೂರಿಕೊಂಡರು! ಸಪ್ಟಂಬರ ತಿಂಗಳಲ್ಲಿ ಜಮೀನದಾರರದೊಂದು ಭಾಷಣವಾಯಿತು. ಭಾರತರಕ್ಷಣ ಕಾನೂನಿನನ್ವಯ ಆ ಭಾಷಣ ಆಕ್ಷೇಪಾರ್ಹವಾಯಿತೆಂದು ಜಮೀನದಾರರ ಮೇಲೆ ಖಟ್ಲೆಯಾಗಿ ಅವರಿಗೆ ೧|| ವರ್ಷಗಳ ಕಠಿಣ ಶಿಕ್ಷೆ ಮತ್ತು ರೂ. ೨೦೦ ದಂಡ ವಿಧಿಸಲಾಗಿದೆ! ಅಪೀಲು ಮಾಡಲು, ಅಲಿಗಡದ ಸೆಶನ್ಸ ಜಜ್ಜರು ಜಮೀನದಾರರ ಭಾಷಣದಲ್ಲಿ ಆಕ್ಷೇಪಾರ್ಹವೇನಿದ್ದಿಲ್ಲವೆಂದೂ ಪೋಲೀಸರು ಹಾಜರಪಡಿಸಿದ ಭಾಷಣದ ವಿವರ ನಂಬಲಿಕ್ಕೆ ಅಯೋಗ್ಯವೆಂದೂ ತೀರ್ಮಾನಿಸಿ ಜಮೀನದಾರರನ್ನು ಬಿಡುಗಡೆ ಮಾಡಿದ್ದಾರೆ. ರಾಜ್ಯರಕ್ಷಣ ದೀವಟಿಗೆಯ ಪರಾಕ್ರಮವಿದು !

— ಕ್ವೆಟ್ಟಾದೊಳಗಿನ ಡಿ|| ಮೆಜಿಸ್ಟ್ರೇಟರು ಬಹು ವಿಕ್ಷಿಪ್ತರು ! ಸಾಂಗಿಯಾನಿ ಎಂಬವರು "ಬಲುಚಿಸ್ತಾನ ಛಾಪಖಾನೆ" ಇಟ್ಟು 'ಬಲುಚಿಸ್ತಾನ' ವರ್ತಮಾನ ಪತ್ರವನ್ನು ಹೊರಡಿಸಲು ತಮಗೆ ಅಪ್ಪಣೆ ಕೊಡಬೇಕಾಗಿ ಡಿ|| ಮೆಜಿಸ್ಟ್ರೇಟರ ಕಡೆ ಅರ್ಜಿ ಮಾಡಿದರು. ತಾವು ಮಡಿ ಮನುಷ್ಯರೆಂದು ನಂಬಿಸಲಿಕ್ಕೆ ಇವರು "ಸರಕಾರದ ಯುದ್ಧಪ್ರಯತ್ನಕ್ಕೆ ಆತಂಕವಾಗುವಂಥ ಯಾವದೇ ಕೃತ್ಯವನ್ನು 'ಬಲುಚಿಸ್ತಾನ ಛಾಪಖಾನೆ' ಯಾಗಲಿ 'ಬಲುಚಿಸ್ತಾನ' ಪತ್ರಿಕೆಯಾಗಲಿ ಮಾಡಲಿಕ್ಕಿಲ್ಲವೆಂದು ಅರ್ಜಿಯಲ್ಲಿ ನಮೂದಿಸಿದ್ದರು ! "ಅರ್ಜಿಯಲ್ಲಿ ಯುದ್ಧವಿರೋಧ ಕೃತ್ಯ ಘಟಿಸಲಿಕ್ಕಿಲ್ಲವಾಗಿ ಅರ್ಜದಾರರು ಬರೆದದ್ದರ ಮೇಲಿಂದ ಯುದ್ಧವಿರೋಧವಾದ ಬರಹವನ್ನು ಇವರು ಬರೆಯದಿರಲಿಕ್ಕಿಲ್ಲವೆಂದು ಹೇಳಬರುವದಿಲ್ಲ; ಇಲ್ಲದಿದ್ದರೆ ಯುದ್ಧವಿರೋಧ ಲೇಖಗಳನ್ನು ಪ್ರಕಟಿಸಲಿಕ್ಕಿಲ್ಲವಾಗಿ ಮುಂದಾಗಿ ಬರೆಯಲು ಕಾರಣವಿದ್ದಿಲ್ಲ. ಅದರಿಂದ ಛಾಪಖಾನೆಯ ಬಗ್ಗೆ ಹೊಣೆ ಕೊಡಬೇಕು; ಪತ್ರಿಕೆಯ ಬಗ್ಗೆ ಹೊಣೆ ಕೊಡಬೇಕು !" ಹೀಗೆ ಡಿ|| ಮೆಜಿಸ್ಟ್ರೇಟರು ಹುಕುಮು ಮಾಡಿ ಬಹಳ ಮಡಿತನ ಕಾಪಾಡುವವರಿಗೆ ಚನ್ನಾಗಿ ಒದ್ದಿಗಲಿಸಿದ್ದಾರೆ !

— ಬ್ರಿಟನಿನಲ್ಲಿ ಸಾಮ್ರಾಜ್ಯ ಸರಕಾರವು ಹೆಚ್ಚೆಚ್ಚು ಯುದ್ಧಾಧಿಕಾರಗಳನ್ನು ಪಡಕೊಳ್ಳಹತ್ತಿದೆ; ದೇಶದೊಳಗಿನ ಯಾವತ್ತೂ ಉಗಿಬಂಡಿಗಳು ಸರಕಾರದ ವಶವಾಗುವವು. ಕಲ್ಲಿದ್ದಲಿಯ ಉತ್ಪತ್ತಿ ಅಲ್ಲಿ ಕುಗ್ಗಿದೆ; ಕಲ್ಲಿದ್ದಲಿಯ ಗಣಿಗಳಲ್ಲಿ ಕೆಲಸ ಮಾಡುವ ಕೂಲಿಗಳಿಗೆ ಕೊಡುವ ಕೂಲಿ ಪೂರೈಸುವದಿಲ್ಲ; ಆದರಿಂದ ಕಲ್ಲಿದ್ದಲಿಯ ಕೊರತೆಯಾಗಬಾರದೆಂದು ಕೂಲಿಕಾರರಿಗೆ ಕಲ್ಲಿದ್ದಲಿ ಗಣಿಯ ಕೆಲಸ ಬಿಟ್ಟವರಿಗೆ ಪುನಃ ಕೆಲಸ ಮಾಡಲು ಸರಕಾರವು ವಿಧಿಸಿದೆ. ಮತ್ತು ಅರಿವೆಯ ಉತ್ಪತ್ತಿ ಈಗ ಕುಗ್ಗಿರುವದರಿಂದ ಜನರು ಜವಳಿಯನ್ನು ಮಿತಿಯಿಂದ ಉಪಯೋಗಿಸಬೇಕೆಂದೂ ಹುಕುಮಾಗಿರುತ್ತದೆ! ಇದೇ ಪ್ರಕಾರ ಅಕ್ಟೋಬರ ತಿಂಗಳಿನಿಂದ ಖಾಸಗಿ ಮೋಟಾರುಗಳಿಗೆ ಈಗ ಸಿಗುವ ಪೆಟ್ರೋಲಿನ ಸೇದಾ ಪರಿಮಾಣ ಅರ್ಧಕ್ಕಿಳಿಸಲ್ಪಡುವದೆಂಬ ಹುಕುಮಾಗಿದೆ. ಈ ಎಲ್ಲ ಹುಕುಮುಗಳು ಮೊನ್ನೆ ಶುಕ್ರವಾರ ಯುದ್ಧ ವಾಹನ ಮಂತ್ರಿಗಳು ಪ್ರಕಟಿಸಿದ್ದಾರೆ.

— ಹಿಂದುಸ್ಥಾನ ಸರಕಾರದ ವೈದ್ಯ ಇಲಾಖೆಗೆ ಮುಂಬಯಿಯ ವೈದ್ಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಹಿಂದೀಸ್ತ್ರೀಡಾಕ್ಟರರೊಬ್ಬರು ಅರ್ಜಿ ಮಾಡಿದ್ದರು. ಅವರು ಯುರೋಪಿಯನ್ ವಂಶಜರಲ್ಲವಾಗಿ ಡ್ಯಾರೆಕ್ಟರರು ಬರೆದು ಅವರ ಅರ್ಜಿಯನ್ನು ತಿರಸ್ಕರಿಸಿದ್ದಾರೆ. ಹಿಂದುಸ್ಥಾನದೊಳಗೆ ಹಿಂದೀಯರಿಗೆ ಅಧಿಕಾರ ಕೊಡುವ ನಮೂನೆಯಿದು !

—ಕಲ್ಲಿಕೋಟೆಯಲ್ಲಿ ದೊಂಬಿಯಾಗಿ ಇಬ್ಬ ಪೋಲೀಸ ಆಫೀಸರರು ತೀರಿಕೊಂಡಿದ್ದರು. ಆ ಕುರಿತು ೩೧ ಜನರ ಮೇಲೆ ಖಟ್ಲೆಯಾಗಿ ಈಗ ೧ ವರ್ಷದ ತನಕ ನಡೆಯಿತು. ಉತ್ತರ ಮಲಬಾರದ ಸೆಶನ್ಸ ಜಡ್ಜರು ಅವರಲ್ಲಿ ೧೧ ಮಂದಿಗಳಿಗೆ ೩ರಿಂದ ೭ ವರ್ಷಗಳ ತನಕ ಶಿಕ್ಷೆಕೊಟ್ಟು, ಉಳಿದ ೨೦ ಮಂದಿಗಳಿಗೆ ಬಿಡುಗಡೆ ಮಾಡಿದರು. ನಿರಪರಾಧಿಗಳೆಂದು ಸೆಶನ್ಸ ಜಡ್ಜರು ಬಿಡುಗಡೆ ಮಾಡಿದವರಿಗೆ ಪೋಲೀಸರು ಹೊರಬಂದೊಡನೆ ಸೆರೆಹಿಡಿದೊಯ್ದರು ! ಹೀಗೆ ನ್ಯಾಯಾಸನದಿಂದ ನಿರಪರಾಧಿಗಳೆಂದು ತೀರ್ಮಾನಿಸಲ್ಪಟ್ಟವರಿಗೆ ಭಾರತ ರಕ್ಷಣ ಕಾನೂನಿನನ್ವಯ ಸೆರೆಹಿಡಿಯುವದು ಪುಂಡತನವೆಂದು ಪತ್ರಿಕೆಗಳು ಟೀಕಿಸುತ್ತವೆ.

— ಸಿಂಧ ಪ್ರಾಂತದಲ್ಲಿ ಮಂತ್ರಿಮಂಡಳದ ವಿದ್ಯಮಾನ ಕಾರಭಾರ ನಡೆಯುತ್ತಿದೆ. ಸಿಂಧ ಸರಕಾರವು ಚೀಫ ಇಂಜನಿಯರರಾದ ರಾ॥ ಕರ್ಕಪೆಟ್ರಿಕ್‌ರವರಿಗೆ ಸೇವಾನಿವೃತ್ತರಾಗಬೇಕಾಗಿ ಹುಕುಮು ಮಾಡಿ ಅವರ ಸ್ಥಳದಲ್ಲಿ ಹೆಲೆಸ್ ಎಂಬವರಿಗೆ ನೇಮಿಸಿತು. ಆ ಮೇಲೆ ರಾ॥ ಕರ್ಕ ಪೆಟ್ರಿಕರವರಿಗೆ ಇನ್ನೆರಡು ತಿಂಗಳ ತನಕ ಕೆಲಸ ನಡಿಸಬೇಕೆಂದು ಪ್ರಧಾನರು ಮುಂಚಿನ ಹುಕುಮನ್ನು ತಿದ್ದುಪಡಿಸಿದರು. ತಮಗೆ ಸಾಕಷ್ಟು ಕೆಲಸವಿಲ್ಲವೆಂದು ಹೆಲೆಸರವರು ಗವ್ಹರ್ನರರ ಕಡೆ ದೂರಿಕೊಂಡರು. ಗವ್ಹರ್ನರರು ಪ್ರಧಾನರ ಹುಕುಮನ್ನು ರದ್ದುಮಾಡಿ ಮಿ॥ ಹೆಲೆಸರವರು ಮುಂಚಿನ ಹುಕುಮಿನಂತೆ ಚೀಫ ಇಂಜನಿಯರರಾಗಿ ಕೆಲಸ ನಡಿಸಬೇಕೆಂದು ಹುಕುಮು ಮಾಡಿದ್ದಾರೆ. ಈಗಿನ ರಾಜ್ಯಭಾರದಲ್ಲಿ ಪ್ರಧಾನ ಮಂಡಳಕ್ಕಿರುವ ಅಧಿಕಾರದ ಉದಾಹರಣೆಯಿದು !

ಭೂಮಂಡಳ ಸಂಚಾರಿ.

ನಿನ್ನೆ ಅಂಕೋಲೆಯಿಂದ ರಾ। ಮಂಗೇಶಕುಮಾರ ಜಿ. ಶಹಾಪುರಕರರೆಂಬ ಜಗತ್ಸಂಚಾರಿಗಳು ಇಲ್ಲಿಗೆ ಬಂದಿದ್ದಾರೆ! ಇಲ್ಲಿಯ "ಮೊಡರ್ನ ಹೊಟೆಲ"ದಲ್ಲಿ ಅವರು ಇಳಕೊಂಡಿರುತ್ತಾರೆ. ತಮ್ಮ ಯೋಗಬಲದಿಂದ ಅವರು ಅತಿ ಅದ್ಭುತವಾದ ಶಕ್ತಿಪ್ರಯೋಗಗಳನ್ನು ಚಮತ್ಕಾರಗಳನ್ನು ಮಾಡಿ ತೋರಿಸಬಲ್ಲರು. ಬೆಂಕಿಯ ಮೇಲೆ ನಡಿಯುವದು, ಕಣ್ಣು ಕಟ್ಟಿಕೊಂಡು ಓದುವದು, ಕಾಜುಗಳನ್ನೂ "ಸೇಫ್ಟಿ [illegible]" ಗತ್ತಿಗಳನ್ನೂ ಜಗಿಯುವದು; ಮೋಟಾರ ಬಂಡಿ ನಿಲ್ಲಿಸುವದು, ನೆಲದಲ್ಲಿ ಹುಗಿದುಕೊಂಡಿರುವದು; ಮೊದಲಾದ ಅದ್ಭುತ ಪ್ರಕಾರಗಳನ್ನು ಅವರು ಮಾಡಿ ತೋರಿಸಬಲ್ಲರು. ನಾಳೆ ಇಲ್ಲವೆ ನಾಡದು ಅವರು ಚಿತ್ರರಂಜನ ನಾಟ್ಯಮಂದಿರದಲ್ಲಿ ಅಥವಾ ಗಿಬ್ಬ ಹೈಸ್ಕೂಲಿನಲ್ಲಿ ತಮ್ಮ ಪ್ರಯೋಗಗಳನ್ನು ಮಾಡಿ ತೋರಿಸಬಹುದು

ಇರಾಣದ ರಾಜಕಾರಣ.

(೭ನೇ ಪಾನಿನಿಂದ ಮುಂದರಿಸಿದ್ದು)

ಲಕ್ಷ ಪನಸಿನ ಪತ್ತು ಕೇಳುತ್ತಿದೆ! ಭದ್ರತೆ ಕೊಟ್ಟಿನಕ ಪತ್ತು ಕೊಡಬರುವದಿಲ್ಲವಾಗಿ ಸಯಾಮ ಸರಕಾರದ ಅಂಬೋಣ. ಚಿನ್ನ ಕೊಡಿ ಇಲ್ಲವೆ ಸರಕು ಕೊಡಿ, ಹೀಗೆ ಸಯಾಮ ಸರಕಾರವು ಹೇಳಿತು. ಜಪಾನ ಸರಕಾರವು ಭದ್ರತೆ ಕೊಡಬಾರದೆಂದು ಬಹಳ ಪ್ರಯತ್ನ ಮಾಡಿತು. ಜೂನ ತಿಂಗಳಿನಿಂದ ಈ ವ್ಯವಹಾರದ ಮಾತುಕತೆಗಳು ನಡೆಯುತ್ತಿವೆ. ಕಟ್ಟಕಡೆಗೆ ಅಷ್ಟು ಬೆಲೆಯ ಚಿನ್ನವನ್ನು ಜಪಾನ ಸರಕಾರದಿಂದ ಕೊಳ್ಳತಕ್ಕದ್ದಾಗಿ ಉಭಯತರ ನಿರ್ಣಯವಾಯಿತು. ಆದರೆ ಜಪಾನದಿಂದ ಸಯಾಮಕ್ಕೆ ಚಿನ್ನ ರಫ್ತು ಮಾಡುವದಕ್ಕಿಂತ ಜಪಾನದಲ್ಲಿಯೇ ಆ ಚಿನ್ನ ಸಯಾಮದ್ದಾಗಿ ಇಟ್ಟು, ಸಯಾಮ ಸರಕಾರವು ತಮಗೆ ಹಣ ಕೊಡಬಹುದಾಗಿ ಜಪಾನ ಸರಕಾರದ ಸೂಚನೆ. ಇದಕ್ಕೆ ಸಯಾಮ ಸರಕಾರವು ಒಪ್ಪಲಿಲ್ಲ, ಅದರಿಂದ ಈ ಚಿನ್ನವನ್ನು ಸಯಾಮಕ್ಕೆ ರಫ್ತು ಮಾಡಲು ಜಪಾನ ಸರಕಾರವು ಅಪ್ಪಣೆಯನ್ನಿತ್ತಿದೆ. ಸಯಾಮದಲ್ಲಿ ಯುದ್ಧಕಾಲದ ಕರ್ತವ್ಯಗಳ ಕುರಿತು ಸರಕಾರದ ಪ್ರಕಟಣೆಗಳು ಹೊರಹಸತ್ತಿ ಇರಾಣದೊಳಗಿನ ಘಟನೆಗಳ ಮೂಲಕ ಈ ಪಾರ್ಶ್ವದಲ್ಲಿ ಯುದ್ಧವಾಗುವ ಸಂಭವ ಕಡಿಮೆಯೆಂದು ನಾನು ಮೊದಲೇ ಹೇಳಿಟ್ಟಿದ್ದೇನೆ. ಆದಾಗ್ಯೂ ಆ ಅನುಮಾನಕ್ಕೆ ಇರುವ ಒಂದು ವೈಷಮ್ಯವನ್ನು ಇಲ್ಲಿ ನಮೂದಿಸಿದೆ. ಈಗಿನ ದಿನಮಾನಗಳು ಕಠಿಣ ! ಯಾವದೊಂದು ಭವಿಷ್ಯವನ್ನು ಖಂಡಿತವಾಗಿ ಹೇಳುವ ಧೈರ್ಯ ಯಾರಿಗಿದೆ? ಅಮೇರಿಕೆಯು ಯುದ್ಧದಲ್ಲಿ ಬೀಳುವದೇನೆಂದು ಬ್ರಿಟಿಶ ಮುಖ್ಯ ಪ್ರಧಾನರಾದ ಚರ್ಚಿಲ್ಲರಿಗೆ ಪತ್ರಿಕಾ ಪ್ರತಿನಿಧಿಗಳು ಕೇಳಲು, "ಹಿಟ್ಲರನಿಗೆ ಕೇಳಿರಿ!" ಎಂದು ಸ್ವತಃ ಚರ್ಚಿಲ್ಲರೇ ಹೇಳುತ್ತಾರೆ! ಎಲ್ಲ ಘಟನೆಗಳು ಆತನ ಮಹತ್ವಾಕಾಂಕ್ಷೆಯನ್ನೇ ಕೂಡಿಕೊಂಡಿವೆ. ಚರ್ಚಿಲ್ಲರಂಥವರೇ ಹಿಟ್ಲರನಿಗೆ ಬೊಟ್ಟು ತೋರಿಸಿದ ಬಳಿಕ ನನ್ನಂಥವನು ಧೈರ್ಯದಿಂದ ಭವಿಷ್ಯ ವರ್ತಿಸುವ ಬಗೆ ಹೇಗೆ?

ಸ್ಥಳಿಕ ವಿಷಯಗಳು.

(೩ನೇ ಪುಟದಿಂದ ಮುಂದರಿಸಿದ್ದು.)

ಬೇಂಕುಗಳು ಇನ್ನೂ ಈ ಉಪಕ್ರಮವನ್ನು ಕೈಕೊಂಡಿದ್ದು ತೋರುವದಿಲ್ಲ. ಗುಪ್ತ-ಮತದಾನ ಪದ್ಧತಿ ರೂಢವಾದರೆ ಪರಂಪರೆಯಿಂದ ನಡಿಸಿಬಂದ, ಬರುತ್ತಿದ್ದ ಅಡಳಿತೆಗೆ ಬಾಧಕ ಬರುವದಾಗಿ ಅಡಳಿತೆದಾರರು ಅಂಜುತ್ತಿರಬೇಕು. ಸಹಕಾರ ಇಲಾಖೆಯವರು ಅಡಳಿತೆದಾರರ ದಾಕ್ಷಿಣ್ಯಕ್ಕೆ ಒಳಗಾಗುವದು ಉಚಿತವಲ್ಲ. ಅಡಳಿತೆದಾರರು ಬೇಂಕುಗಳ ಅಡಳಿತೆಯನ್ನು ಸ್ವೇಚ್ಛೆಯಿಂದ ನಡಿಸಿ ಬೇಂಕುಗಳಿಗೆ ಹೇರಳ ನಷ್ಟಪಡಿಸಿದ್ದಾರೆ. ಈ ರಹಸ್ಯ ಸ್ಫೋಟವಾಗುವದೆಂದು ಇವರಿಗೆ ಅಂಜಿಕೆ. ಸಹಕಾರ ಇಲಾಖೆಯವರು ನಿಗ್ರಹ ಹಿಡಿದನಕ ಈಗ ಬೇರೂರಿಕೊಂಡ ಅಡಳಿತೆದಾರರು ಸ್ಥಾನತ್ಯಾಗ ಮಾಡಲಿಕ್ಕಿಲ್ಲ.

ಸ್ಥಾನಿಕ ವೃತ್ತಾಂತ

(೯ನೇ ಪುಟದಿಂದ ಮುಂದರಿಸಿದ್ದು)

೧ ಜಿಲ್ಲಾವಿಲ್ಲದಿದ್ದರೂ ಖರ್ಚು ಮಾತ್ರ ತಪ್ಪುವದಿಲ್ಲ. ಡ್ರಾಯವ್ಹರ ಕ್ಲೀನರರಿಗೆ ಸಂಬಳ ಕೊಡಬೇಕು, ಇದೀ ತಿಂಗಳ ತೆರಿಗೆ ತುಂಬಬೇಕು, ಸೋಸಾಯಟಿ ಫೀ ಕೊಡಬೇಕು, ವಿಮೆಯ ಕಂತೂ ತುಂಬಬೇಕು. ಮೂರು ತಿಂಗಳಿಗೆ ಡ್ರಾಯವ್ಹರ-ಕ್ಲೀನರರ ಸಂಬಳದ ಬಗ್ಗೆ ರೂ. ೧೦೫, ಸರಕಾರಿ ತೆರಿಗೆ ರೂ. ೧೧೭, ವಿಮೆಯ ಕಂತಿನ ಬಗ್ಗೆ ರೂ. ೪೫, ಟಾಯರುಗಳ ಕುರಿತು ರೂ ೧೩೫ ಮತ್ತು ೨೪೦ ಗೆಲನ್ನ ಪೆಟ್ರೋಲ ಹಾಗೂ ಬೇರೆ ಎಣ್ಣೆಗಳ ಬಾಬತು ರೂ. ೪೮೦ ಕೂಡಾ ರೂ ೮೮೨ ಪ್ರತಿ ಸರಕು-ವಾಹಕ ಗಾಡಿಗೆ ಖರ್ಚು ಬರುತ್ತದೆಂದು ಇಲ್ಲಿಯ ಮೋಟಾರ-ಮಾಲಿಕರು ಲೆಕ್ಕಹಾಕಿದ್ದಾರೆ. ಮತ್ತು ಸರಕಾರದವರು ಮಂಜೂರ ಮಾಡಿರುವ (೮೦×೩–) ೨೪೦ ಗೆಲನ್ನ ಪೆಟ್ರೋಲ ಎಣ್ಣೆಯಿಂದ ಅಂಕೋಲಾ-ಹುಬ್ಬಳ್ಳಿಗಳ ನಡುವೆ ೧೩ ಸಾಗಿಗೆಗಳನ್ನು ಮಾಡಿದರೆ ಸಾಗಿಗೆಯೊಂದಕ್ಕೆ ರೂ ೬೫ ರಷ್ಟು ಖರ್ಚು ಬರುತ್ತದೆಂತಲೂ ಲೆಕ್ಕ-ಹಾಕಿದ್ದಾರೆ. ಇಷ್ಟು ಖರ್ಚು ಕೊಟ್ಟು ವ್ಯಾಪಾರಿಗಳು ಸರಕು ತರಿಸಿಕೊಂಡರೆ ಇಲ್ಲವೆ ಕಳಿಸಿಕೊಟ್ಟರೆ ಅವುಗಳನ್ನು ಕೊಂಡುಕೊಳ್ಳುವವರ್ಯಾರು ? ಸರಕಾರಿ ಅಧಿಕಾರಿಗಳು ನಮ್ಮ ಜಿಲ್ಲೆಯ ಮೋಟಾರ ಬಂಡಿಗಳಿಗೆ ಪೆಟ್ರೋಲು ನಿಶ್ಚಯಿಸಿಕೊಡುವಾಗ ನಮ್ಮ ಜಿಲ್ಲೆಯ ವಿಚಿತ್ರ ಪರಿಸ್ಥಿತಿಯನ್ನು ಲಕ್ಷ್ಯಕ್ಕೆ ತರಲೇ ಇಲ್ಲವೆಂದು ಹೇಳಬೇಕು. ಈ ಪರಿಸ್ಥಿತಿಯನ್ನು ಅವರ ಲಕ್ಷ್ಯಕ್ಕೆ ತಂದುಕೊಡುವ ಬಗ್ಗೆ ಕಳೆದ ರವಿವಾರ ತಾ ೨೪ನೇಗೆ ಇಲ್ಲಿ ರಾ। ಶಿರೂರ ಮುಕುಂದ ನಾರಾಯಣ ಪ್ರಭುರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯಾಯಿತು. ನಮ್ಮ ಜಿಲ್ಲೆಯ ವಿಶೇಷ ಅಡಚಣಗಳನ್ನೂ ವಿಚಿತ್ರ ಪರಿಸ್ಥಿತಿಯನ್ನೂ ಚಿತ್ರಕ್ಕೆ ತಂದು ನಮ್ಮಲ್ಲಿಯ ಸರಕು ವಾಹಕ ಗಾಡಿಯೊಂದಕ್ಕೆ ತಿಂಗಳಿಗೆ ಕನಿಷ್ಠಪಕ್ಷ ೨೫೦ ಗೆಲನ್ನ ಪೆಟ್ರೋಲ ಕೊಳ್ಳುವ ಪರವಾನೆಗಳನ್ನು ಕೊಳ್ಳುವಂತೆ ಸರಕಾರಕ್ಕೆ ವಿನ್ನವಿಸಿಕೊಳ್ಳಬೇಕೆಂದು ಸಭೆಯಲ್ಲಿ ತೀರ್ಮಾನವಾಗಿದೆ. ಮೋಟಾರ ಮಾಲೀಕರೂ ಎಲ್ಲ ಪರಿಸ್ಥಿತಿಯನ್ನು ಸರಕಾರದ ಲಕ್ಷ್ಯಕ್ಕೆ ತಂದು ಹಾಗೆಯೇ ಅರ್ಜಿ ಮಾಡಿದ್ದಾರೆ. ಸರಕಾರದವರು ಸಹಾನುಭೂತಿಯಿಂದಲೂ ವಿಶಾಲ ದೃಷ್ಟಿಯಿಂದಲೂ ಅವರ ಬೇಡಿಕೆಯ ವಿಚಾರ ಮಾಡಬೇಕಾಗಿ ವಿನಂತಿಯಿದೆ.

ಬೈಲೂರ— (೨೯-೮-೪೧) ಸೋಮೇಶ್ವರನು ಪೂರ್ಣ ಶಾಪ ಮಾಡಿದನು. ಒಕ್ಕಲಿಗರ ಗಲಾಟೆ ಹೇಳಲಾಗಲ್ಲ, ಉರಿ-ಬಿಸಿಲು ನೋಡಿ ಅವರ ಹೊಟ್ಟೆಯುರಿಯುತ್ತದೆ. ಊರಲ್ಲಿ ಚಿಕ್ಕಪುಟ್ಟ ಬೇನೆ-ಬೇಸರಿಕೆಗಳಿಗೆ ಪ್ರಾರಂಭವಾಗಿದೆ. ಅಕ್ಕಿ ಫಾರಕ ಯಥಾಪ್ರಕಾರ ಉಂಟು; ಅದು ಇಳಿಯುವದಾಗಿ ಮಾಡಿದ ಆಶೆ ನಿರರ್ಥಕವಾಗಿದೆ.

ಇತ್ತ ಹುಲಿಗಳ ಕಾಟ ಮಿಗಿಲಾಗಿದೆ. ೩ ಹುಲಿಗಳು ಕೂಡಿ ಹಾವಳಿ ಮಾಡುತ್ತಿವೆ. ಒಂದೇ ದಿನ ೪ ದನಗಳ ಫಲಾಹಾರವಾಯಿತು. ಹುಲಿಗಳು ಮನೆ-ಮನೆ ಹೊಕ್ಕು ಬಹಳ ಗಡಿಬಿಡಿಯನ್ನೆಬ್ಬಿಸಿವೆ. ಅಧಿಕಾರಿಗಳು ಇವುಗಳ ಬೇಟೆಯನ್ನಾಡಿದ್ದರೆ ರೈತರಿಗೆ [illegible].

ಇಲ್ಲಿ ಬಂದು ಬಿದ್ದ ಒಂದು ಜಲಯಾನದ ಸುದ್ದಿ ಈ ಹಿಂದೆ ಪ್ರಕಟವಾಗಿದೆ. ಇಬ್ಬ ಪೇದೆಗಳು ಆ ಜಲಯಾನದ ಕಾವಲು ಮಾಡುತ್ತಿದ್ದಾರೆ. ಇವರಿಗೇನೂ ಕೆಲಸವಿಲ್ಲ. ಜಲಯಾನದ ಮುಂದಿನ ಗತಿಯೇನೆಂದು ತಿಳಿಯಲಿಲ್ಲ

[illegible] ಕಳವಾಗಿ ಒಂದು ತಿಂಗಳಾಯಿತು. ಆದರೆ ಕಳವಿನ ಪತ್ತೆ ಇನ್ನೂ ಸಿಗಲೊಲ್ಲದು. ಪೋಲೀಸರಿಗೆ ನಳಗೆ ಸಮಾಧಾನವಿಲ್ಲ. ಅವರು ವಿಚಾರ ನಡಿಸುತ್ತಿದ್ದಾರೆ.

ಪೆಟ್ರೋಲ-ಕೋಟಾ ಕ್ರಮದಿಂದ ಜನರಿಗಾದ ಗೋಳು ಹೇಳಲಾಗಲ್ಲ. ಮೋಟಾರು ಹತ್ತಬೇಕಾದರೆ ೧ ಮೈಲು ನಡಕೊಂಡು ಮುಖ್ಯ ಮಾರ್ಗಕ್ಕೆ ಹೋಗಬೇಕು. ಮೋಟಾರುಗಳು ತುಂಬಿ ಬರುವದೇ ಹೆಚ್ಚು. ಮೋಟರ-ಪ್ರಯಾಣಗಳ ಸಂಖ್ಯೆ ಕುಗ್ಗಿದ್ದರಿಂದ ಒಪ್ಪತ್ತು ತಪಶ್ಚರ್ಯೆ ಮಾಡಿದರೂ ಸ್ಥಳ ಸಿಗುವದಿಲ್ಲ. ಮೋಟಾರಿನ ಹಾದಿ ಕಾದು ಕಾದು ಪುನಃ ಮನೆಯ ಹಾದಿ ಹಿಡಿಯಬೇಕಾಗುತ್ತದೆ. ನಮ್ಮ ಕಡೆ ಉಗಿಬಂಡಿಯಿಲ್ಲ. ಇಂಥಲ್ಲಿ ಪೆಟ್ರೋಲ-ಕೋಟಾ ಪರವಾನವನ್ನು ಹೆಚ್ಚಿಸಬೇಕು. ಅದಾಗದಿದ್ದರೆ ಮೋಟಾರ-ವ್ಯವಹಾರವನ್ನೇ ನಿಲ್ಲಿಸುವದೊಳಿತು. ಅಂದರೆ ಜನರು ಮೋಟಾರಿನ ಆಶೆ ಬಿಟ್ಟು ತಮ್ಮ ಪ್ರವಾಸಕ್ರಮವನ್ನು ನಿರ್ಧರಿಸುವರು!

ಕಾನಡಾವೃತ್ತ.

ಮಿತಿ ವೃಷ ಸಂವತ್ಸರ ಭಾದ್ರಪದ ಶು॥ ೧೦೩, ಸೋಮವಾರ.

ಹಿಂದ-ಜನಾಂಗದ ಉಲ್ಲೇಖವಿಲ್ಲ!

ಬ್ರಿಟಿಶ ಮುಖ್ಯ ಪ್ರಧಾನರಾದ ಚರ್ಚಿಲ್ಲರವರ ಆಕಾಶವಾಣಿ ಕೇಳಿ ಹಿಂದವಾಸಿಯರಿಗೆ ಎಳ್ಳಷ್ಟು ಸಮಾಧಾನವಾಗದು; ಸಮಾಧಾನವಾಗುವ ಬಗೆ ಹೇಗೆ? "ಶ್ರದ್ಧೆ ಹಿಡಿಯಿರಿ. ಮಹಾಬಲಗಳು ನಿಮ್ಮ ಬೆಂಬಲಕ್ಕೆ ಬರುತ್ತವೆ ನಿಮ್ಮ ವಿಮೋಚನವಾಗುವದು ಖಂಡಿತ!" ಹೀಗೆ ಚರ್ಚಿಲ್ಲರು ಮಾಡಿದ ಘಂಟಾಘೋಷಣೆಯಲ್ಲಿ ಹಿಂದುಸ್ಥಾನದ ಉಲ್ಲೇಖವಿಲ್ಲ ನೊರ್ವೆ ದೇಶದ ನಿರ್ದೇಶವುಂಟು, ಝೆಕ್ಕರ ಹೆಸರುಂಟು, ಪೋಲರ ಪ್ರಶಸ್ತಿಯುಂಟು, ಫ್ರೆಂಚರ ಉಲ್ಲೇಖವುಂಟು, ಹೊಲಂಡ, ಬೆಲ್ಜಮ ಲಕ್ಸೆಂಬರ್ಗಗಳ ಹೆಸರುಗಳು ನಮೂದ ಇವೆ; ಯುಗೋಸ್ಲಾವಿಯಾ ಜನಾಂಗದ ನೆನಹು ಉಂಟು, ಗ್ರೀಕ ದೇಶಕ್ಕೆ ಪ್ರೇರಣೆ ಉಂಟು, ಆದರೆ ಹಿಂದ ಜನಾಂಗಕ್ಕೆ ಯಾವದೇ ಆಶೆ ತೋರಿಸಲ್ಪಡಲಿಲ್ಲ ಇದನ್ನೋದಿ ನಮಗೊಳ್ಳೇ ವಿಷಾದವಾಗಿದೆ ಬ್ರಿಟಿಶ ಮುಖ್ಯ ಪ್ರಧಾನರಾದ ಚರ್ಚಿಲ್ಲರೂ ಭೂಲೋಕಶಾಹಿಯ ಪ್ರವರ್ತಕರಾದ ಮಿ॥ ರೂಝುವೆಲ್ಟರವರೂ ಒಂದೇ ಪಂಗ್ತಿಯವರೆಂದು ಹಿಂದ-ಜನಾಂಗವು ಗ್ರಹಿಸಿ ಬಹಳ ನಿರಾಶೆ ಹೊಂದುವದು ಅಮೇರಿಕೆಯ ಮೇಲಾಗಲಿ ಬ್ರಿಟಿಶರ ಮೇಲಾಗಲಿ ಹಿಂದ-ಜನಾಂಗವು ಯಾವದೊಂದು ಆಧಾರವನ್ನಿಟ್ಟು ವರ್ತಿಸುವದಿಲ್ಲವೆಂಬ ಮಾತನ್ನು ನಾವು ಒಪ್ಪುತ್ತೇವೆ ಪಂ॥ ಜವಾಹಿರಲಾಲರು 'Parting of the ways" ಎಂಬವೊಂದು ಈ ಹಿಂದೆ ಬರೆದ ಹಸ್ತಪತ್ರಿಕೆಯಲ್ಲಿ ನಮ್ಮ ಹಾದಿ ಪ್ರತ್ಯೇಕವಾಗಿದೆಂದೂ ನಮ್ಮ ಉದ್ಧಾರವನ್ನು ಸ್ವಾವಲಂಬನದಿಂದ ಸಾಧಿಸಿಕೊಳ್ಳಲು ನಮ್ಮಷ್ಟಕ್ಕೆ ನಾವು ಪ್ರಯತ್ನಪಡಬೇಕೆಂದೂ ಅಪ್ಪಣೆ ಕೊಟ್ಟಾಗ್ಯೂ ಬ್ರಿಟಿಶರು ಲೋಕಸಂಕಟಕಾಲದಲ್ಲಿ ಹಿಂದ-ಜನಾಂಗಕ್ಕೆ ಉಪಕಾರಿಯಾಗಿ ವರ್ತಿಸುವರೆಂದು ನಾವು ಭಾವಿಸಿದ್ದೆವು ಘೋರ್ಗರೆದು ಮಳೆ ಸುರಿದು, ನದಿಗಳಿಗೆ ನೆರೆ ಕಟ್ಟಿ ಜಲಪ್ರಳಯವಾದಾಗ ಹಾವಿನ ಹೆಡೆಯ ಮೇಲೆ ಕಪ್ಪೆ ಕೂತುಕೊಂಡು ಉಭಯತರು ಆಪತ್ತಿನ ಮುಟ್ಟಿಗೆ ಸ್ವಾಭಾವಿಕ ವೈರವನ್ನು ಕಣ್ಮರೆ ಮಾಡಿದ ಸಂಗತಿಯನ್ನು ಓದುಗರು ಓದಿರಬೇಕು. ಸಮಾನ ಆಪತ್ಕಾಲದಲ್ಲಿ ಕೌರವ-ಪಾಂಡವರು ಸಹ ಒಕ್ಕಟ್ಟಾದ ಕಥೆಗಳಿವೆ. ಅಂತೆಯೇ ನಮ್ಮ ಬ್ರಿಟಿಶರಾದರೂ ಹಿಟ್ಲರ-ನಿರ್ಮಿತ ಘೋರ ಆಪತ್ತಿನಲ್ಲಿ ಒಕ್ಕಟ್ಟಾಗುವ ದೆಸೆಯಿಂದ ಹಿಂದ ಜನಾಂಗವನ್ನು ಸಮಾನಸ್ಕಂದವಾಗಿ ನಡಿಸಿಕೊಳ್ಳುವರೆಂದು ನಾವು ಎಣಿಸಿ ಆಶಾಭರಿತರಾಗಿದ್ದೆವು ಹಿಟ್ಲರನ ನಿರಂಕುಶ ಪ್ರಭುತ್ವವೂ ಲೋಕ-ಸುಲಿಗೆಯ ಪರಂಪರೆಯೂ ನಿರ್ನಾಮ ಹೊಂದಬೇಕೆಂಬ ಮಾತು ಸತ್ಯವಾದದ್ದು ಅದಕ್ಕಾಗಿ ಬ್ರಿಟಿಶರೂ ಅಮೇರಿಕೆಯವರೂ ಪ್ರಯತ್ನಪಡುತ್ತಾರೆಂಬ ಮಾತಾದರೂ ಸ್ಪಷ್ಟವೇ ಸೈ! ಲೋಕಕ್ಷೇಮವೇ ಬ್ರಿಟಿಶ-ಅಮೇರಿಕೆಯವರ ಸಾಧ್ಯವೆಂದು ನಾವು ಒಪ್ಪುತ್ತೇವೆ. ಆದರೆ ಹಿಂದುಸ್ಥಾನಕ್ಕೆ ಈ ತತ್ವಗಳನ್ನು ಬ್ರಿಟಿಶರು ಅನ್ವಯಿಸಲೊಡಂಬಡುವದಿಲ್ಲವೇಕೆ? ಕೂಲಿಕಾರ ಪಕ್ಷದ ಪರವಾಗಿ ಪ್ರಧಾನರಾದ ಮೇಜರ ಎಟ್ಲಿಯವರು ಚರ್ಚಿಲ್ಲ-ರೂಝುವೆಲ್ಟರ ಘೋಷಣೆ ಆಫ್ರಿಕೆಯವರಿಗೂ ಏಶಿಯಾದವರಿಗೂ ಅನ್ವಯಿಸುತ್ತದಾಗಿ ಸಾರಿದರಷ್ಟೇ! ಆದರೆ ಚರ್ಚಿಲ್ಲರ ಆಕಾಶವಾಣಿಯಲ್ಲಿ ನಮ್ಮ ಜನಾಂಗದ ಉಲ್ಲೇಖವಿಲ್ಲ ಈ ಪ್ರಕಾರ ಬ್ರಿಟಿಶರು ನಡಕೊಳ್ಳುವದರಿಂದ ಹಿಂದುಸ್ಥಾನದೊಳಗಿನ ಯುದ್ಧಯತ್ನ ಅಪೇಕ್ಷೆಯಂತೆ ಆವೇಶದಿಂದ ಸಾಗಲೊಲ್ಲದು ಇದೇ ನಮಗೆ ಬಲು ದೊಡ್ಡ ವ್ಯಸನ. ಮಹಾಯುದ್ಧವು ಹಿಂದುಸ್ಥಾನಕ್ಕೆ ತೀರ ಸಮೀಪಿಸಿ ಬಂದಾಗ ಸಾಮ್ರಾಜ್ಯಕರ್ತರು ಇನ್ನೂ ಕೈ ಬಿಗಿ ಹಿಡಿದು ಹಿಂದ-ಜನಾಂಗದ ಸಂತೋಷವನ್ನು ಸಂಗ್ರಹಿಸಲು ಅನುಮಾನಿಸುವದು ಸುರಕ್ಷಿತವಲ್ಲ. ಹಿಂದೀ ಸೈನಿಕರ ಶೌರ್ಯ-ವರ್ಣನೆಯನ್ನು ಬ್ರಿಟಿಶ ಸೇನಾಪತಿಗಳು ಉಲ್ಲಾಸದಿಂದ ನಡಿಸುತ್ತಾರೆ. ಇವರ ಶೌರ್ಯದಿಂದಲೂ ಧೈರ್ಯದಿಂದಲೂ ಸಾಹಸದಿಂದಲೂ ಆತ್ಮಾರ್ಪಣೆಯಿಂದಲೂ ಲೋಕಸ್ವಾತಂತ್ರ್ಯದ ರಕ್ಷಣೆಯಾಗುವಾಗ ಆ ಸ್ವಾತಂತ್ರ್ಯವನ್ನು ಹಿಂದ-ಜನಾಂಗದಿಂದ ಸಾಮ್ರಾಜ್ಯಕರ್ತರು ಬೇರ್ಪಡಿಸಲೆಳಸಬಾರದು ಕಾಲಧರ್ಮದಂತೆ ಹಿಂದ-ಜನಾಂಗಕ್ಕೆ ಸ್ವಾತಂತ್ರ್ಯ ಸಿಕ್ಕೇ ಸಿಗುವದು. ಯುರೋಪ ಖಂಡದೊಳಗಿನ ಚಿಕ್ಕ ಪುಟ್ಟ ಜನಾಂಗಗಳಿಗೆ ಸ್ವಾತಂತ್ರ್ಯವನ್ನರ್ಪಿಸ ಹೊರಟ ಕಾಲ-ಪುರುಷನು ಹಿಂದ-ಜನಾಂಗವನ್ನು ವಿಮುಖಗೊಳಿಸಲಿಕ್ಕಿಲ್ಲವಾಗಿ ನಮಗೊಂದು ಭಾವನೆಯುಂಟು. ಸಾಮ್ರಾಜ್ಯಕರ್ತರು ಅನುಕೂಲರಾದರೆ, ಕಾಲಧರ್ಮದ ಗ್ರಹಿಕೆ ಪಡೆದು ವರ್ತಿಸಲೊಡಂಬಟ್ಟರೆ ಸ್ವಜನಾಂಗದ ಉದ್ಧಾರ ಶೀಘ್ರವೇ ಒದಗಿ ಬರುವದೆಂದು ನಮಗೊಂದು ಶ್ರದ್ಧೆಯುಂಟು. ಆದರೆ ಸಾಮ್ರಾಜ್ಯಕರ್ತರಿಗೆ ಹಿಂದ-ಜನಾಂಗದೊಡನೆ ಸಹಕಾರ ಮಾಡುವ ಬುದ್ಧಿಯಿಲ್ಲ. ಹಿಂದೀಯರು ಮಾತ್ರ ಅಂತಃಕರಣಪೂರ್ವಕವಾಗಿ ತಮ್ಮೊಡನೆ ಸಹಕರಿಸಬೇಕೆಂದು ಬ್ರಿಟಿಶರ ಅಪೇಕ್ಷೆಯಿದೆ. ಝಾಂಸಿಯಲ್ಲಿ ಸಂಯುಕ್ತಪ್ರಾಂತದ ಗವ್ಹರ್ನರರಾದ ಸರ್ ಮೊರಿಸ ಹೆಲೆಟರವರಿಗೆ ಅಲ್ಲಿಯ ಯುದ್ಧ ಮಂಡಳದವರು ಶುಕ್ರವಾರ ಮಾನಪತ್ರವನ್ನರ್ಪಿಸಿದರು ಪಶ್ಚಿಮ ಮತ್ತು ಪೂರ್ವ ಪಾರ್ಶ್ವಗಳಲ್ಲಿ ಯುದ್ಧ ಬೇಗೆ ಹಬ್ಬಿ ಹಿಂದುಸ್ಥಾನದತ್ತ ಅದು ಹಬ್ಬುವ ಸಂಭವ ತೋರುವಾಗ ಹಿಂದೀಯರು ಮತಭೇದಗಳನ್ನೆಲ್ಲ ಮರೆತು ಒಂದಾಗಬೇಕೆಂಬ ಮಾತು ನಮಗೊಪ್ಪಿಗೆಯಿದೆ. ಆದರೆ ಯುದ್ಧಯತ್ನ ಕಾರ್ಯದಲ್ಲಿ ಸರ್ವರೂ ಒಮ್ಮನಸ್ಸಿನಿಂದ ಒಕ್ಕಟ್ಟಾಗಿ ದುಡಿಯಬೇಕಾದರೆ ಸರ್ವರಿಗೂ ಸಮಾನವಾದ ಸಂಗ್ರಾಮ-ಧ್ಯೇಯವೊಂದು ಇರಬೇಕು. ಸಂಗ್ರಾಮಕ್ಕಾಗಿ ಸಂಗ್ರಾಮವನ್ನು ಯಾರೂ ಹೂಡುವದಿಲ್ಲ; ಧ್ಯೇಯಸಾಧನೆಗಾಗಿ ಸಂಗ್ರಾಮದ ಆಪತ್ತನ್ನು ಮಾನವನು ಬರಮಾಡಿಕೊಳ್ಳುತ್ತಾನೆ. ಸ್ವಾತಂತ್ರ್ಯವು ಸಂಗ್ರಾಮದ ಉಚ್ಚ ಧ್ಯೇಯವಾಗಿದೆ, ಆ ಸ್ವಾತಂತ್ರ್ಯದಿಂದಲೇ ಮಾನವನು ಪುರುಷಾರ್ಥವನ್ನು ಸಾಧಿಸಬಯಸುತ್ತಾನೆ. ಪುರುಷಾರ್ಥ ಸಾಧನೆಗೆ ರಾಷ್ಟ್ರಸ್ವಾತಂತ್ರ್ಯ ಅತ್ಯವಶ್ಯವಾದುದು ಅದನ್ನು ಸಾಮ್ರಾಜ್ಯಕರ್ತರು ಹಿಂದ-ಜನಾಂಗಕ್ಕೆ ಒಪ್ಪಿಸಲು ಇನ್ನೂ ಸಂದೇಹಪಡುವಾಗ, ಯುದ್ಧಯತ್ನದಲ್ಲಿ ತನ್ಮಯವಾಗಿ ಹಿಂದ-ಜನಾಂಗವು ಮೈಮರೆದು ದುಡಿಯುವ ಬಗೆ ಹೇಗೆ? ಅಂತಃಕರಣದಲ್ಲಿ ಚಾಲಕ-ಶಕ್ತಿ, ಪ್ರೇರಕ-ಸ್ಫೂರ್ತಿ ನಿರ್ಮಾಣವಾದನಕ ಮಾನವನಿಂದ ಯಾವ ಕಾರ್ಯಭಾಗವಾಗಬಲ್ಲದು? ಹಿಂದೀಯರು ಭಾವನಾಹೀನ ಯಂತ್ರ-ಗೊಂಬೆಗಳಲ್ಲ. ಸಾಮ್ರಾಜ್ಯಕರ್ತರು ಮನುಷ್ಯ ಸ್ವಭಾವದ ಗ್ರಹಿಕೆ ಪಡೆಯಬೇಕಾಗಿ ನಾವು ಒತ್ತಿ ಹೇಳುತ್ತೇವೆ. ಯುದ್ಧದಲ್ಲಿ ಬ್ರಿಟಿಶರಿಗೆ ದಿಗ್ವಿಜಯವಾಗಬೇಕೆಂಬ ಮಾತು ಸಿದ್ಧವಿದೆ. ಬ್ರಿಟಿಶರಿಗೆ ವಿಜಯವಾದರೆ ಮಾತ್ರ ಲೋಕಕ್ಕೆ ಉಳಿಗಾಲವಿರುವದೆಂಬ ಮಾತನ್ನೂ ನಾವು ಗೃಹೀತ ಹಿಡಿಯುತ್ತೇವೆ. ಆದರೆ "ಲೋಕ" ಶಬ್ದದಲ್ಲಿ ಹಿಂದ-ಜನಾಂಗದ ಸೇರ್ಪಡೆಯಾಗದಿದ್ದರೆ ಅಂಥ ಲೋಕ ಅಳಿದರೇನು, ಉಳಿದರೇನು? ಅಂಥ ಲೋಕದ ರಕ್ಷಣೆಗಾಗಿ, ಉದ್ಧಾರಕ್ಕಾಗಿ, ಸ್ಥಾಪನೆಗಾಗಿ ನಾವು ಹಿಂದವಾಸಿಯರು ಸಂಕಟಪಡುವದೇಕೆ? ಸಂಕಟಪಡಬೇಕಾಗಿ ಸಾಮ್ರಾಜ್ಯಕರ್ತರು ಹಿಂದ-ಜನಾಂಗದ ಮನವೊಲಿಸುವ ಬಗೆಯಾದರೂ ಎಂತು? ಇದೇ ಒಂದು ನಿಗೂಢವಾದ ವಿಷಯವಾಗಿದೆ. ಯುದ್ಧ-ಯತ್ನವು ನಮ್ಮದಾಗಬೇಕಾದರೆ ಈ ಯುದ್ಧ ನಮ್ಮದಾಗಬೇಕು; ಅಂದರೆ ಈ ಯುದ್ಧದಲ್ಲಿ ನಮ್ಮ ಹಿಂದ-ಜನಾಂಗದ ಭವಿಷ್ಯ ಕೂಡಿಕೊಂಡಿರಬೇಕು, ಅಂದರೆ ಮಾತ್ರ ಆ ಭವಿಷ್ಯವನ್ನು ಸಾರ್ಥಕಗೊಳಿಸುವದಕ್ಕಾಗಿ ಹಿಂದವಾಸಿಯರು ಮುದದಿಂದ ತ್ಯಾಗ-ಸಾಹಸಗಳನ್ನು ಕೈಕೊಳ್ಳುವರು. ಸ್ವಾತಂತ್ರ್ಯಪ್ರಿಯ ಬ್ರಿಟಿಶರಿಗೆ ಹಿಂದವಾಸಿಯರ ಮನಃಸ್ಥಿತಿ, ಮನೋಗತ ತಿಳಿಯುವದಿಲ್ಲವಾಗಿ ಎಣಿಸುವದು ದಡ್ಡತನ. ಬ್ರಿಟಿಶ ಸಾಮ್ರಾಜ್ಯಕರ್ತರು ಎಲ್ಲ ಸಂಗತಿಗಳನ್ನು ತಿಳಕೊಂಡು ಬುದ್ಧಿಪೂರ್ವಕವಾಗಿ ಹಿಂದ-ಜನಾಂಗದ ಆಶೆ-ಆಕಾಂಕ್ಷೆಗಳನ್ನು ದಬ್ಬಲು ಹವಣಿಸುತ್ತಾರೆಂದು ಬ್ರಿಟಿಶ ರಾಜಕಾರಣದ ಸೂತ್ರಗಳನ್ನು ಅಭ್ಯಾಸ ಮಾಡಿದವರು ಪ್ರತಿಪಾದಿಸುತ್ತಾರೆ. ಇದನ್ನು ಅಲ್ಲಗಳೆಯಲಿಕ್ಕೆ ನಮಗೆ ಅಸಾಧ್ಯ. ಸಾಮ್ರಾಜ್ಯಕರ್ತರು ಹಿಂದ ಜನಾಂಗವನ್ನು ದಬ್ಬಿ, ದಣಿಸಿ, ಪೀಡಿಸಿ ಯುದ್ಧಯತ್ನವನ್ನು ಸಾಗಿಸುವ ಗೊಡವೆಗೆ ಹೋಗಬಾರದು: ಬೇಕಷ್ಟು ದುಡ್ಡು ಸಿಗಬಹುದು, ಬೇಕಷ್ಟು ಜನ ಸಿಗಬಹುದು, ಹಿಂದುಸ್ಥಾನದಂಥ ವಿಶಾಲ ದೇಶದಿಂದ ಸಾಮ್ರಾಜ್ಯಕರ್ತರಿಗೆ ಯಾವದಕ್ಕೂ ಕೊರತೆಯಾಗಲಿಕ್ಕಿಲ್ಲ, ಆದರೆ ಅಂತಃಕರಣದ ಅಭಾವದಲ್ಲಿ, ಆಧ್ಯಾತ್ಮಿಕ ಶಕ್ತಿಯ ಅಭಾವದಲ್ಲಿ, ಭೌತಿಕ

ಸಾಮುಗ್ರಿಗಳ ಸಂಗ್ರಹದಿಂದ ಸಂಕಲ್ಪಿತ ಕಾರ್ಯಭಾಗವಾಗುವದು ಯಾವಾಗಲೂ ದುರ್ಘಟವಾದದ್ದು. ಆಧಿಭೌತಿಕ ಶಕ್ತಿ, ಆಧ್ಯಾತ್ಮಿಕ ಶಕ್ತಿ ಇವೆರಡೂ ಶಕ್ತಿಗಳು ಒಟ್ಟುಗೂಡಿ ವ್ಯವಹರಿಸಿದರೆ ಮಾತ್ರ ಯಾವದೊಂದು ಕಾರ್ಯಭಾಗ ಸಂಕಲ್ಪಿತ ರೂಪದಲ್ಲಿ ಪರಿಣಮಿಸುತ್ತದೆ. ಇದು ಸೃಷ್ಟಿನಿಯಮ, ಸೃಷ್ಟಿಕ್ರಮ. ಸೃಷ್ಟಿಕ್ರಮವನ್ನು ಧಿಕ್ಕರಿಸಿ ಸಾಮ್ರಾಜ್ಯಕರ್ತರು ಕೃತ್ರಿಮ ಉಪಾಯಗಳಿಂದ ಹಿಂದವಾಸಿಗಳಲ್ಲಿ ಯುದ್ಧಯತ್ನೋಲ್ಲಾಸವನ್ನು ನಿರ್ಮಿಸಬಯಸಲಾಗದು; ಆ ಉಲ್ಲಾಸ, ಆ ಪ್ರೇರಣೆಗಳೆಲ್ಲ ಕಾರ್ಯಸಾಧಕವಾಗಲಾರವು. ಆದರಿಂದ ಸಾಮ್ರಾಜ್ಯಕರ್ತರು ಸ್ವಹಿತಸಾಧನೆಗಾಗಿ ಹಿಂದುಸ್ಥಾನದೊಳಗಿನ ರಾಜ್ಯಧೋರಣವನ್ನು ತಿದ್ದುಪಡಿಸಬೇಕು. ಹಿಂದುಸ್ಥಾನದ ಪಾರತಂತ್ರ್ಯವನ್ನು ಹಿಂದಿನಂತೆ, ಇಂದಿನಂತೆ ಮುಂದಯೂ ಕಾಪಾಡಿಕೊಳ್ಳಬೇಕೆಂಬ ಹವ್ಯಾಸವನ್ನು ಸಾಮ್ರಾಜ್ಯಕರ್ತರು ಒಮ್ಮೆಲೇ ತೊರೆಯತಕ್ಕದ್ದು. ಆ ಆಟ, ಆ ದುರಾಶೆ, ಆ ಹವ್ಯಾಸಗಳು ಎಂದಿಗೂ ಸಾಧ್ಯವಾಗಲಾರವು. ಆ ಮನ್ವಂತರವು ಈ ಹಿಂದೆಯೇ ಕಳೆದು ಹೋಗಿದೆ; ಈಗ ಯುಗಾಂತರವಾಗಿದೆ. ನಾವೀಗ ಹೊಸ ಮನ್ವಂತರದಲ್ಲಿದ್ದೇವೆ. ಆ ಮನ್ವಂತರಕ್ಕುಚಿತವಾಗಿ ಸಾಮ್ರಾಜ್ಯಕರ್ತರು ತಮ್ಮ ನಡೆನುಡಿಗಳನ್ನು ತಿದ್ದಿಕೊಳ್ಳುವದು ಈಗಲಾದರೂ ಅವಶ್ಯ. ಹಿಂದುಸ್ಥಾನದ ಉಲ್ಲೇಖವನ್ನು ಲೋಪ ಮಾಡಿ ಲೋಕಶಾಹಿಯ ವೇದಾಂತವನ್ನು ಪ್ರಸ್ಥಾಪಿಸುವ ಮಹತ್ವಾಕಾಂಕ್ಷೆ ನಿರರ್ಥಕವಾದದ್ದು. ಬ್ರಿಟಿಶ ಮುಖ್ಯ ಪ್ರಧಾನರಾದ ಚರ್ಚಿಲ್ಲರವರಿಗೆ ಈಗಲಾದರೂ ಸದ್ಬುದ್ಧಿ ಸೂಚಿಸುವದೆಂದೇ ನಮ್ಮ ಹಾರೈಕೆ!

ಇರಾಣದ ರಾಜಕಾರಣ!

[ನಿರೀಕ್ಷಕನು ಬರೆದುದು.]

ಇರಾಣದ ರಾಜಕಾರಣದ ರಹಸ್ಯ ನಿಮಗೆ ತಿಳಿಯಲಿಲ್ಲ; ನನಗೆ ತಿಳಿದಿದೆ! ಇರಾಣದೊಳಗಿಂದ ಜರ್ಮನರನ್ನು ಹೊರಪಡಿಸಬೇಕೆಂಬ ನೆವ ತೋರಗಾಣಿಕೆಯದು! ಅಲ್ಲಿ ಜರ್ಮನರು ಇಲ್ಲವೆಂತಲ್ಲ; ಅಲ್ಲಿ ಜರ್ಮನರು ಇದ್ದಾರೆ! ಕೆಲವು ಕಿಡಿಗೇಡಿತನವನ್ನು ಅವರು ಮಾಡುತ್ತಿದ್ದಾರೆ! ಆದರೆ ಜರ್ಮನರು ಎಲ್ಲಿಲ್ಲ? ಜರ್ಮನರು ಅಫಘಾಣಿಸ್ಥಾನದಲ್ಲೂ ಇದ್ದಾರೆ, ಬಲುಚಿಸ್ತಾನದಲ್ಲೂ ಇದ್ದರಂತೆ! ಆದರೆ ಆ ಜರ್ಮನರ ಪಾರುಪತ್ಯ ಮಾಡುವದೇನು ಇರಾಣದ ಶಹಾರವರಿಗೆ ದೊಡ್ಡ ಮಾತಾಗಿರಲಿಲ್ಲ. ಜರ್ಮನರು ಇರಾಣದಲ್ಲಿ ಎಷ್ಟು ಮಂದಿಗಳಿದ್ದರೆಂಬ ಸಂಗತಿ ಪ್ರಕಟವಾಗಿಲ್ಲ. ಆದರೆ ೨-೩ ಸಾವಿರಕ್ಕೆ ಮಿಕ್ಕಿ ಅವರು ಇರಲಿಕ್ಕಿಲ್ಲ. ಇರಾಣದ ಲೋಕಸಂಖ್ಯೆ ೧೦ ಲಕ್ಷವುಂಟು. ರಾಜಧಾನಿಯಾದ ತೆಹರಾನದಲ್ಲಿಯೇ ೫ ಲಕ್ಷಕ್ಕೆ ಮಿಕ್ಕಿ ಜನವಸ್ತಿಯಿದೆ; ಸುಮಾರು ೨ ಲಕ್ಷ ಸೈನ್ಯಬಲವಿದೆ; ತೋಫುಗಳಿವೆ, ತುಬಾಕಿಗಳಿವೆ, ವಿಮಾನುಗಳಿವೆ. ಇಷ್ಟೆಲ್ಲ ಬಲವಿದ್ದಾಗ್ಯೂ ಪ್ರಯಾಣಿಕರಾಗಿ ನಿರಾಯುಧರಾಗಿ ಬಂದ ಜರ್ಮನರಿಗೆ ಇರಾಣದ ಶಹಾರವರಿಂದ ನಿಯಂತ್ರಿಸಲು ಅಸಾಧ್ಯವಿಲ್ಲವೆಂದು ಹೇಳುವವರು ಹೇಳಲಿ; ನನಗೇನೂ ನಂಬಿಗೆ ಹುಟ್ಟದು! ಮೇಲಾಗಿ ಜರ್ಮನರು ಇರಾಣವನ್ನು ಸೇರುವ ಮುಂಚೆಯೇ ಬ್ರಿಟಿಶರೂ ರುಶ್ಯರೂ ಆ ಪ್ರದೇಶವನ್ನು ಆಕ್ರಮಿಸಿಕೊಂಡು ತಮ್ಮ ಪ್ರಭುತ್ವವನ್ನು ಸ್ಥಿರಪಡಿಸಿಕೊಂಡ ವ್ಯೂಹದ ಮಾತಿದೆ; ಆದರೆ ಅದಕ್ಕೂ ನನ್ನ ಸಮ್ಮತಿಯಿಲ್ಲ! ಶಹಾರವರು ಜರ್ಮನ ಪಕ್ಷದವರಲ್ಲ, ಬ್ರಿಟಿಶ ಪಕ್ಷದವರೇ! ಆದರೆ ಬ್ರಿಟಿಶರ ಆಧೀನರಲ್ಲ; ಅಂಕಿತರಲ್ಲ; ಬ್ರಿಟಿಶ-ತಂತ್ರದವರಲ್ಲ! ಈ ಮಾತನ್ನು ನಾನು ಒತ್ತಿ ಹೇಳುತ್ತೇನೆ. ಇದೇ ಇರಾಣದ ರಾಜಕಾರಣದ ಗುಟ್ಟು; ಒಳಗುಟ್ಟು!

ಬ್ರಿಟಿಶ ಮುಖ್ಯ ಪ್ರಧಾನರಾದ ಚರ್ಚಿಲ್ಲರೂ ಅಮೇರಿಕೆಯ ಅಧ್ಯಕ್ಷರಾದ ರೂಝವೆಲ್ಟರವರೂ ಅಟ್ಲಾಂಟಿಕ ಮಹಾಸಾಗರದಲ್ಲಿ ಒಂದೆಡೆ ಕೂಡಿ ರುಶ್ಯರಿಗೆ ನೆರವಾಗಬೇಕೆಂಬ ನಿರ್ಧಾರವನ್ನು ಕೈಕೊಂಡರಷ್ಟೇ! ಪೂರ್ವ ಪಾರ್ಶ್ವದ ಸೈಬೇರಿಯಾದೊಳಗಿನ ವ್ಲಾಡಿವೊಸ್ಟೊಕ ಬಂದರದಿಂದ ರಣಸಾಹಿತ್ಯವನ್ನು ರುಶ್ಯಕ್ಕೆ ಕಳುಹಿಸಬೇಕೆಂಬ ನಿರ್ಧಾರವಾಗಿತ್ತಷ್ಟೇ! ಆದರೆ ವ್ಲಾಡಿವೊಸ್ಟೊಕ ಬಂದರದ ಮುಖಾಂತರ ಸಾಹಿತ್ಯ ಕಳಿಸಿಕೊಟ್ಟರೆ ಜಪಾನಪುಂಡನು ಗದ್ದರಿಸುತ್ತಾನೆ! ಅಲ್ಲಿಯ ರಣಸಾಹಿತ್ಯ ಸಂಗ್ರಹದಿಂದ ಜಪಾನದ ಭದ್ರತೆಗೆ ತೊಂದರೆ ಬರುತ್ತದಾಗಿ ಜಪಾನದ ಸಾಧನೆ. ಜಪಾನದೊಡನೆ ಶತ್ರುತ್ವ ಬೆಳಿಸಲು ಅಮೇರಿಕೆಯು ಸಿದ್ಧವಿಲ್ಲ, ವ್ಲಾಡಿವೊಸ್ಟೊಕ ಬಂದರದ ಮುಖಾಂತರ ರುಶ್ಯರಿಗೆ ಬೇಕಾದ ಸಹಾಯ ನೀಡಲು ಅಮೇರಿಕೆಯು ಸ್ವತಂತ್ರವಿದೆಯಾಗಿ ಅಮೇರಿಕೆಯ ಸರಕಾರದ ಪರವಾಗಿ ಕಾರ್ಯದರ್ಶಿಗಳಾದ ಮಿ॥ ಕೊರ್ಡೆಲ ಹಲ್‌ರವರು ನಿರ್ಧಾರದಿಂದ ಸಾರಿದಾಗ್ಯೂ ಜಪಾನದೊಡನೆ ಮುರಕೊಳ್ಳಲು ಅಮೇರಿಕೆಯು ಸಿದ್ಧವಿಲ್ಲ. ಈ ವಿಷಯ ಅಮೇರಿಕೆಯ ವಾಶಿಂಗಟನದಲ್ಲಿ ಜಪಾನದ ರಾಯಭಾರಿಗಳಾದ ನೊಮುರಾರವರಿಗೂ ರೂಝವೆಲ್ಟರವರಿಗೂ ಆಲೋಚನೆ ನಡೆಯುತ್ತಿದೆ. ಜಪಾನದ ಮುಖ್ಯ ಮಂತ್ರಿಗಳಾದ ಕೊನೊಯಿರವರೂ ರೂಝವೆಲ್ಟರವರಿಗೆ ಒಂದು ಅಗತ್ಯದ ಸ್ವಂತ ಸಂದೇಶವನ್ನು ಕಳುಹಿದ್ದರಂತೆ. "ಇನ್ನೂ ವಿಚಾರ ಮುಗಿಯಲಿಲ್ಲ; ಇನ್ನೊಂದು ಬಾರಿ ವಿಚಾರವಿನಿಮಯವಾಗುವ"ದಾಗಿ ಮಿ॥ ಕೊರ್ಡೆಲ್ ಹಲ್‌ರವರು ಪತ್ರಿಕಾಪ್ರತಿನಿಧಿಗಳಿಗೆ ಹೇಳಿದರು. ಸುದ್ದಿಗಾರರು ನೊಮುರಾ ರಾಯಭಾರಿಗಳಿಗೆ ಮರಿ ಮರಿಯಿಂದ ಪ್ರಶ್ನಿಸಿ ವಿಚಾರ-ವೃತ್ತಾಂತವನ್ನು ತಿಳಕೊಳ್ಳಬಯಸಿದರು. ಆದರೆ ನೊಮುರಾರವರು ಕೊನೆತನಕ ವಿಚಾರದ ಒಲವನ್ನು ತಿಳಿಸಲಿಲ್ಲ. "ರೂಝವೆಲ್ಟ-ಹಲ್ಲರವರೊಡನೆ ಮಾಡಿದ ಆಲೋಚನೆಯಿಂದ ಅಮೇರಿಕಾ-ಜಪಾನ ದೇಶಗಳೊಳಗಿನ ಮತಭೇದ ದೂರವಾಗುವ ಸಂಭವವಿರುವದೇನೆಂ"ದು ಕೇಳಲು ಕಾರ್ಯದರ್ಶಿಗಳ (ಹಲ್ಲರವರ) ಕಡೆಗೆ ಕೇಳಿಕೊಳ್ಳಿರೆಂದು ನೊಮುರಾರವರು ಪತ್ರಿಕೆಯವರಿಗೆ ಮರಳಿ ಕಳುಹಿದರು. ಜಪಾನದ ಮುಖ್ಯ ಪ್ರಧಾನರಾದ ಕೊನೊಯಿರವರು ರೂಝವೆಲ್ಟರವರಿಗೆ ಬರೆದ ಪತ್ರ

ರುಶ್ಯ ದೇಶಕ್ಕೆ ರವಾನಿಸುವ ರಣಸಾಹಿತ್ಯಕ್ಕೆ ಸಂಬಂಧಪಟ್ಟದ್ದೇನೆಂದು ಕೇಳಲು, "ಹಾಗೆ ಕಾಣುತ್ತದಾಗಿ" ಹಾರಿಕೆಯ ಉತ್ತರ ಕೊಟ್ಟು ನೊಮುರಾರವರು ಪಾರಾದರು! ಅಂತು ಅಮೇರಿಕಾ-ಜಪಾನ ದೇಶಗಳೊಳಗಿನ ಸಂಬಂಧಗಳು ಕಡಿದು ಹೋಗುವದೂ ಇಲ್ಲ; ಜೋಡಿಸಿ ಹೋಗುವದೂ ಇಲ್ಲ. "ನಮ್ಮ ಕಡೆ ಬರುವ ಸರಕುಗಳನ್ನು ಅಡ್ಡಗಟ್ಟಿದರೆ ಜಾಗ್ರತೆ!" ಎಂದು ರುಶ್ಯ ಸರಕಾರವು ಜಪಾನಕ್ಕೆ ಎಚ್ಚರಿಕೆ ಕೊಡುತ್ತದೆ! ಆದರೆ ಜಪಾನ ಸರಕಾರವು ಇಂಥ ಬೆದರಿಕೆಗೆ ಸೊಪ್ಪು ಹಾಕುವಂಥಹದಲ್ಲ. ಜರ್ಮನರೊಡನೆ ರುಶ್ಯರು ಯುದ್ಧ ಹೂಡುತ್ತಿರುವಾಗ, ಅದನ್ನು ಸುಸೂತ್ರ ನಡಿಸಿಕೊಳ್ಳುವದು ಕಷ್ಟವಾದಾಗ ಜಪಾನ ಸರಕಾರದೊಡನೆ ಶತ್ರುತ್ವವನ್ನು ಬೆಳಸಿಕೊಂಡು ವ್ಲಾಡಿವೊಸ್ಟೊಕ ಮೊದಲಾದ ಬಂದರಗಳುಳ್ಳ ಪೂರ್ವ ಪಾರ್ಶ್ವವನ್ನು ರುಶ್ಯರು ಸಂಕಟಕ್ಕೊಳಪಡಿಸಲಾರರು, ಜಪಾನ ಸರಕಾರಕ್ಕೆ ಇದೆಲ್ಲ ಪರಿಜ್ಞಾನವಿದೆ. ಯುರೋಪ ಖಂಡದ ಜನಾಂಗಗಳು ಇತ್ತಟ್ಟನಲ್ಲಿರುವಾಗಲೇ ಜಪಾನ ಸರಕಾರವು ಕುಟಿಲ ರಾಜನೀತಿಯನ್ನು ಅನುಸರಿಸಿ ಪೂರ್ವ ಪಾರ್ಶ್ವದಲ್ಲಿ ಕೈ-ಕಾಲುಗಳನ್ನು ಪಸರಿಸಿ ಸಾಮ್ರಾಜ್ಯ ವಿಸ್ತಾರ ಮಾಡಿಕೊಂಡಿದೆ. ಹೀಗಿರುವಾಗ ಜಪಾನದ ಪಾರ್ಶ್ವದಲ್ಲಿ ಯುದ್ಧವಾಗುವದಾಗಿ ನನಗೆ ತೋರುವದಿಲ್ಲ. ಆ ಪಾರ್ಶ್ವದಲ್ಲಿ ಸ್ಫೋಟವಾಗಬಾರದೆಂದೇ ಇರಾಣದ ಘಟನೆ ಒದಗಿ ಬಂತು. ರುಶ್ಯರು ಕೊಕೆಸಸ್‌ದ ಆಚೆ ಜರ್ಮನರನ್ನು ಪ್ರತಿಭಟಿಸುತ್ತಿದ್ದಾರೆ. ಇರಾಕದಲ್ಲಿ ಬ್ರಿಟಿಶರಿದ್ದಾರೆ. ಇರಾಣದೊಳಗಿಂದ ಹಾದಿ ಮಾಡಿಕೊಂಡನಕ ಬ್ರಿಟಿಶ-ರುಶ್ಯರು ಒಂದೆಡೆ ಕೂಡುವಂತಿಲ್ಲ. ಆದರಿಂದ ಇರಾಣದೊಡನೆ ಜರ್ಮನ ಪ್ರಯಾಣಿಕರ ಕಾರಸ್ಥಾನದ ಪ್ರಶ್ನೆಯನ್ನು ಬ್ರಿಟಿಶ-ರುಶ್ಯರು ಎತ್ತಿ, ರುಶ್ಯರಿಗೆ ರಣಸಾಹಿತ್ಯಗಳನ್ನು ಇರಾಣದ ಮಾರ್ಗವಾಗಿ ಬ್ರಿಟಿಶರು ಪೂರೈಸುವ ಏರ್ಪಾಟು ಮಾಡಿಕೊಂಡಿದ್ದಾರೆ. ಅದಕ್ಕಾಗಿಯೇ ಇರಾಣದ ಯುದ್ಧ ಒದಗಿಬಂತೆಂದು ನನ್ನ ಅಂಬೋಣ. ತುರ್ಕಸ್ತಾನ, ಅರಬಸ್ತಾನ, ಇಜಿಪ್ತ, ಇರಾಣ ಈ ದೇಶಗಳೊಳಗೆ ಹಿಟ್ಲರ-ವಿರೋಧ ಪ್ರದೇಶವನ್ನು ತಯಾರಿಸುವದಕ್ಕಾಗಿ ಅರಬಸ್ತಾನದ ಇಬ್ನಸೂದರವರು ಒಂದು ಸಮ್ಮೇಲನವನ್ನು ಸೇರಿಸ ಬಯಸಿದ್ದಾರೆ. ಇರಾಣದ ಶಹಾರವರಿಗೆ ಈ ಪಾಕಪತ್ರನಲ್ಲಿ ಭಕ್ತಿಯಿರಲಿಲ್ಲ; ಅವರು ಅಲಿಪ್ತರಾಗಿಯೇ ಇದ್ದರು. ಆದರೆ ಬ್ರಿಟಿಶ-ರುಶ್ಯರ ವಿಜಯದಿಂದ ಶಹಾರವರು ಈ ಯೋಜನೆಯಲ್ಲಿ ಸೇರ್ಪಡೆಯಾಗುವರು. ಹಿಟ್ಲರನನ್ನು ಪ್ರತಿಭಟಿಸಲು ತುರ್ಕಸ್ತಾನಕ್ಕೆ ಬೆಂಬಲ ದೊರಕಿತೆಂಬಂತೆ ಭಾಸವಾಗುತ್ತಿದೆ. ಆದರೆ ಆ ಮಾತನ್ನು ನಾನು ಇನ್ನೂ ಧೈರ್ಯದಿಂದ ಹೇಳಲಾರೆ. ರುಶ್ಯರು ಅಪಜಯಮೊಂದಿದರೆ, ಹಿಟ್ಲರನು ಒತ್ತಿ ಬಂದರೆ ತುರ್ಕರು ಜರ್ಮನರಿಗೆ ಸ್ವಸ್ತ ಪಥಕಗಳನ್ನು ಇರಾಣ ಪಾರ್ಶ್ವದಲ್ಲಿ ಕಳುಹಲು ದಾರಿ ಕೊಡದೆ ಆವೇಶದಿಂದ ಪ್ರತಿಭಟಿಸುವರೆಂದು ನಿರ್ಧಾರದಿಂದ ನಾನು ಹೇಳಲಾರೆ. ಹಿಟ್ಲರ-ಪಾಪಿಗೆ ಇರಾಣದೊಳಗಿನ ಎಣ್ಣೆಯ ಮೇಲೆ ಕಣ್ಣುಂಟು! ಈಗಲೇ ಆತನು ಇರಾಣದೊಳಗಿನ ಗೋದಿಯನ್ನೆಲ್ಲ ಒಯ್ದು ಅಲ್ಲಿ ಇರಾಣಿಯರಿಗೆ ಬಹಳ ಕಷ್ಟ ಕೊಡುತ್ತಿದ್ದಾನೆ! ಇರಾಣದೊಳಗೆ ಹೇರಳ ಎಣ್ಣೆ ಸಿಗುತ್ತದೆ; ಇರಾಣ ಸರಕಾರದ ಉತ್ಪನ್ನ ೪ ಕೋಟಿ ಪವನು ಅದರೊಳಗೆ

೪೦ ಲಕ್ಷ ಟನ್ನು ಎಣ್ಣೆಯು ರುಮೇನಿಯಾದಿಂದ ದೊರೆಯುತ್ತದೆ! ಬಟೂಮಿನಲ್ಲಿ ಎಣ್ಣೆ ಸ್ವಚ್ಛ ಮಾಡುವ ಕಾರಖಾನೆಯುಂಟು. ಇಷ್ಟು ದೊಡ್ಡ ಕಾರಖಾನೆ ಪೂರ್ವ ಪ್ರದೇಶದಲ್ಲಿ ಇನ್ನೆಲ್ಲಿಯೂ ಇಲ್ಲ! ಇಲ್ಲಿ ೧ ಕೋಟಿ ಟನ್ನು ಎಣ್ಣೆ ವರ್ಷಕ್ಕೆ ತಯಾರಾಗುತ್ತಿದೆ! ಈ ಎಣ್ಣೆ ಹಿಟ್ಲರನಿಗೆ ಬೇಕು! ಲೋಕನಾಶಕ್ಕೆ, ಲೋಕಘಾತಕ್ಕೆ ಈ ಎಣ್ಣೆ ಆತನಿಗೆ ಬೇಕಾಗಿದೆ. ಆದರೆ ರುಶ್ಯ ದೇಶದ ಪೋಲೀಸ ಸ್ವಾಮಿಯನ್ನು ಮಣಿಗಿಸದನಕ ಆತನು ಈ ಕಣಿ ದೊರಕುವ ಸಂಭವ ಕಡಿಮೆ. ತುರ್ಕ ರಾಜಧಾನಿಯಲ್ಲಿ ಗಡಿಬಿಡಿ ನಡೆಯುತ್ತಿರುವದನ್ನು ನಾನು ಬಲ್ಲೆ! ಜರ್ಮನ ರಾಯಭಾರಿಯಾದ ವೋನ ಪೋಪೇನರವರು ಹಿಟ್ಲರನನ್ನು ಕಾಣಲು ಯುಕ್ರೇನಿಗೆ ಹೋಗಿದ್ದಾರೆ. ಹಿಟ್ಲರ-ಪೋಪೇನರ ಭೆಟ್ಟಿಯಲ್ಲಿ ಮುಸಲ್ಮಾನ-ಲೋಕದ ರಾಜಕಾರಣದ ಇತ್ಯರ್ಥವಾಗುವದಾಗಿ ಅಂಕಾರಾದೊಳಗಿನ ವಿದೇಶ ರಾಜಕಾರಣಿಗಳು ಅಭಿಪ್ರಾಯಪಡುತ್ತಾರಂತೆ! ಅಂತು ಮಧ್ಯ-ಪೂರ್ವ ದೇಶಗಳಲ್ಲಿ ಯುದ್ಧದ ಮಣಿಸೆಳೆ ಬಿದ್ದಿದೆ! ಇಂಥ ಸಮಯದಲ್ಲಿ ಇರಾಣದೊಳಗೆ ಬ್ರಿಟಿಶ-ರುಶ್ಯರು ಕಾಲ್ಹೂಡಿ ಶತ್ರುಗಳ ಧೋರಣವನ್ನು ಭಗ್ನಪಡಿಸಿಬಿಟ್ಟದ್ದು ಯೋಗ್ಯವಾಯಿತೆಂದು ಜನಾಭಿಪ್ರಾಯ. ಇರಾಣ ಯುದ್ಧದ ಯುಕ್ತಾಯುಕ್ತತೆಯ ವಿಚಾರ ಈಗ ಅನವಶ್ಯಕ. ಅದರ ಪರಿಣಾಮವನ್ನಷ್ಟು ನೀವು ತಿಳಿಕೊಂಡಿಟ್ಟರಾಯಿತು.

ಇನ್ನು ರುಶ್ಯ-ಜರ್ಮನ ಯುದ್ಧದ ಸಮಾಚಾರವನ್ನು ನಮೂದಿಸಿಬಿಡುತ್ತೇನೆ. ಉತ್ತರ ರಣಭೂಮಿಯಲ್ಲಿ, ಏಕೆ, ಎಲ್ಲ ರಣಭೂಮಿಗಳಲ್ಲಿ ರುಶ್ಯರು ಶೌರ್ಯದಿಂದ ಹೋರಾಡುತ್ತಿದ್ದಾರಾಗಿ ರುಶ್ಯ ಸರಕಾರದ ಯುದ್ಧ ಪ್ರಕಟಣೆ. ಆದಾಗ್ಯೂ ಉತ್ತರ ರಣಭೂಮಿಯಲ್ಲಿ ಲೆನಿನಗ್ರೇಡ ಪಟ್ಟಣ ರುಶ್ಯರ ಸ್ವಾಧೀನವಾಗಿ ಉಳಿಯುವದು ಕಠಿಣವೇ ಸೈ! ಜರ್ಮನರೂ ಫಿನ್ನರೂ ಒಂತಗಟ್ಟಿ ಲೆನಿನಗ್ರೇಡ ಪಟ್ಟಣದ ದಕ್ಷಿಣ ಪಾರ್ಶ್ವವನ್ನು ಆಕ್ರಮಿಸಿಕೊಂಡು ಮಾಸ್ಕೋ-ಲೆನಿನಗ್ರೇಡ ಪಟ್ಟಣಕ್ಕಿರುವ ಸಂಬಂಧವನ್ನು ಕಡಿದುಹಾಕಿದ್ದಾರೆ. ಆದಾಗ್ಯೂ ರುಶ್ಯರು ಹಿಂಜರಿಯುವದಿಲ್ಲ. ವೀರ ಭಟರಂತೆ ಕಳಕಳದಿಂದ ಹೋರಾಡುತ್ತಿದ್ದಾರೆ, ಪ್ರತೀಕಾರದ ಪರಮಾವಧಿ ಮಾಡುತ್ತಿದ್ದಾರೆ. ರುಶ್ಯ ಸೇನಾಪತಿಗಳಾದ ವೋರೊಶಿಲೋವರು ಘೋರ ಪ್ರತಿಜ್ಞೆ ಮಾಡಿದ್ದಾರೆ. "ತಮ್ಮ ಇಂಚಿನಷ್ಟು ಪ್ರದೇಶವನ್ನು ಸಹ ಜರ್ಮನರು ಕೈವಶ ಮಾಡಿಕೊಳ್ಳಲು ಅವರು ರಕ್ತ ಆ ಪ್ರದೇಶದ ಮೇಲೆ ಚಲ್ಲಬೇಕು!" ಇಷ್ಟು ಸಿರಿಂಕೆಯಿಂದ, ಇಷ್ಟು ಆವೇಶದಿಂದ, ಇಷ್ಟು ನಿರ್ಧಾರದಿಂದ, ಇಷ್ಟು ನಿಗ್ರಹದಿಂದ ರುಶ್ಯರು ಹೋರಾಡುತ್ತಿದ್ದಾರೆ! ಈ ಬಗ್ಗೆ ಯುದ್ಧವಾರ್ತಾ ಟೀಕಾಕಾರರು ರುಶ್ಯರ ಬೆನ್ನು ಚಪ್ಪರಿಸುತ್ತಾರೆ. ನನಗಾದರೂ ಈ ವಾರ್ತೆ ಕೇಳಿ ಸಂತೋಷವಾಗಿದೆ! ನಾನೂ ಅವರನ್ನು ಮನದಣಿ ಕೊಂಡಾಡುತ್ತೇನೆ. ಇವರ ತ್ಯಾಗದಿಂದಾದರೂ ಲೆನಿನಗ್ರೇಡ ಪಟ್ಟಣ ರುಶ್ಯರ ಕೈವಶವಾಗಿರಲೆಂದು ನನ್ನ ಪ್ರಾರ್ಥನೆ. ಆದರೆ ಸುದ್ದಿಗಾರರು ಧೈರ್ಯ ಕೊಡುವದಿಲ್ಲ. ಈ ಪಟ್ಟಣವು ರುಶ್ಯರ ಕೈತಪ್ಪಿ ಹೋಗುವದಾಗಿಯೂ ಈ ಪಟ್ಟಣವನ್ನು ಕಾಪಾಡಿಕೊಳ್ಳುವದಕ್ಕಾಗಿ ಮಾಡಿದ ಸಾಹಸವೆಲ್ಲ ಮುಂದೆ ರುಶ್ಯರಿಗೆ ಬಾಧಿಸುವದಾಗಿಯೂ ಸುದ್ದಿಗಾರರು ತಿಳಿಸುತ್ತಾರೆ. ಆದರೆ ಮಧ್ಯ-ರಣಭೂಮಿಯಲ್ಲಿ ರುಶ್ಯರ ಮೇಲೆ ಮೇಘರಾಜನು ಕೃಪೆಮಾಡಿದ್ದಾನೆ! ಅಲ್ಲೀಗ ಮಳೆ ಬೀಳ ತೊಡಗಿದೆ. ಇದೇ ಮಳೆ ರಭಸದಿಂದ ಸುರಿದರೆ ರಣಭೂಮಿಯಲ್ಲೆಲ್ಲ ಕೆಸರೇ ಕೆಸರಾಗಿ ಜರ್ಮನರಿಗೆ ರಣಸಾಹಿತ್ಯವನ್ನೊಯ್ಯಲು ಆತಂಕವುಂಟಾಗುತ್ತದೆ. ರುಶ್ಯರಿಗೆ ಇದೊಂದು ಉಪಕಾರವೇ ಸೈ! ಈ ರಣಭೂಮಿಯಲ್ಲಿ ವೇಲಿಕಿಲುಕಿ ಪಟ್ಟಣ ಜರ್ಮನರ ವಶವಾಯಿತು. ಮೊಸ್ಕೋಕ್ಕೆ ಹೋಗುವ ಉಗಿಬಂಡಿಯ ದಾರಿಯ ಮೇಲೆ ಈ ಪಟ್ಟಣವುಂಟು. ಈ ಪಟ್ಟಣವು ಜರ್ಮನರ ವಶವಾದದ್ದರಿಂದ ಮೊಸ್ಕೋಕ್ಕೆ ನಡೆಯುವ ರುಶ್ಯರ ವ್ಯವಹಾರ ಕಟ್ಟಾಗಿದೆ! ಹೀಗೆ ರುಶ್ಯರ ರಾಜಧಾನಿಯಾದ ಮೊಸ್ಕೋ ಪಟ್ಟಣದ ಒಂದೊಂದೇ ಪಾರ್ಶ್ವ ತುಂಡರಿಸಲ್ಪಡುತ್ತಿದೆ. ಆದರೆ ದಕ್ಷಿಣ ವಿಭಾಗದಲ್ಲಿ ಮಾತ್ರ ಜರ್ಮನರ ಪ್ರಗತಿ ಹೇಳತಕ್ಕಂಥಾದ್ದು! ಸ್ವತಃ ಹಿಟ್ಲರನು ಯುಕ್ರೇನದೊಳಗಿನ ಯುದ್ಧವ್ಯೂಹವನ್ನು ನಡೆಸತೊಡಗಿದ ಬಳಿಕ ಯುಕ್ರೇನದೊಳಗಿನ ಜರ್ಮನ ಸೈನಿಕರ ಉಲ್ಹಾಸಕ್ಕೆ ಕಳೆಯೇರಿತೆಂದು ಹೇಳಬೇಕೇ? ಇಲ್ಲಿ ರುಶ್ಯರು ಪ್ರಾಣದ ಪರಿವೆಯಿಲ್ಲದೆ ಹೋರಾಡಿದರು. ಸೇನಾಪತಿ ಬುಡೆನಿಯವರು ತಮ್ಮ ಬುದ್ಧಿಶಕ್ತಿಯ ಪರಮಾವಧಿ ಮಾಡುತ್ತಾರೆ. ಜರ್ಮನ ಸೈನಿಕರು ಬಹು ದೊಡ್ಡ ಸಾಹಸ ಮಾಡಿ ನೀಪರ ನದಿಯ ಒಡ್ಡಿನ ಮೇಲಿಂದ ಆಚೆ ದಾಟಿ ಖೇರಸನ್, ನಿಪ್ರೊಪೆಟ್ರೊವಸ್ಕ ಗ್ರಾಮಗಳನ್ನು ಕೈವಶ ಮಾಡಿಕೊಂಡರು! ಅದರಿಂದ ರುಶ್ಯರು ನಿರುಪಾಯದಿಂದ ಹಿಂಜರಿಯಬೇಕಾಯಿತು, ರುಶ್ಯರು ಹಿಂಜರಿದರು. ಆದರೆ ನೀಪರ ನದಿಯ ಒಡ್ಡನ್ನು ಊರ್ಜಿತವಿಟ್ಟು ಹಿಂಜರಿಯಲು ರುಶ್ಯರಿಗೆ ಮನಸ್ಸು ಬರಲಿಲ್ಲ; ಮನಸ್ಸನ್ನು ಗಟ್ಟಿಮಾಡಿ ಒಡ್ಡನ್ನು ಕಡಿದುಬಿಟ್ಟರು! ಜರ್ಮನರು ಯುಕ್ರೇನ ಗೆದ್ದರೂ ಅವರಿಗೇನೂ ಪ್ರಯೋಜನ ದೊರೆಯಬಾರದೆಂದು ರುಶ್ಯರು ಈ ಘೋರ ಕೃತ್ಯಕ್ಕೀಡಾದರು! ಈ ಒಡ್ಡಿನಿಂದ ೧॥ ಕೋಟಿ ಮನುಷ್ಯ ಶಕ್ತಿಯಷ್ಟು ವಿದ್ಯುತ್-ಶಕ್ತಿ ನಿರ್ಮಾಣವಾಗುತ್ತಿತ್ತು. ಯುಕ್ರೇನದೊಳಗಿನ ಕಾರಖಾನೆಗಳಿಗೆಲ್ಲ, ಹೊಲಮನೆಗಳಿಗೆಲ್ಲ ಈ ವಿದ್ಯುತ್-ಶಕ್ತಿಯೇ ಸಂಜಪ್ರಾಣದಂತಿತ್ತು. ರುಶ್ಯ ದೇಶದೊಳಗಿನ ಮಹಾಶಿಲ್ಪಿಗಳು ಈ ಒಡ್ಡನ್ನು ೮ ವರುಷಗಳತನಕ ಸತತ ದುಡಿದು ಕಟ್ಟಿಸಿ ಯುಕ್ರೇನ ಪ್ರಾಂತವನ್ನು ಅಭಿವೃದ್ಧಿಗೊಳಿಸಿದ್ದರು. ತಾವೇ ಕಟ್ಟಿಸಿದ ಈ ಒಡ್ಡನ್ನು ರುಶ್ಯರು ತಮ್ಮ ಕೈಯಿಂದಲೇ ಕಡಿಯುವ ಪ್ರಸಂಗ ಅತೀವ ಶೋಕದಾಯಕವಿದೆ. ಯುರೋಪಖಂಡದಲ್ಲಿ ಇಷ್ಟು ಪ್ರಚಂಡ ಅಣೆಕಟ್ಟು ಇರಲಿಲ್ಲವಾಗಿ ರ್ಯೂಟರ ವಾರ್ತಾವಾಹಕರು ಬರೆದು ವ್ಯಸನಪಡುತ್ತಾರೆ. ಯುಕ್ರೇನದಲ್ಲಿ ರುಶ್ಯರು ಇನ್ನೂ ಹೋರಾಡುತ್ತಿದ್ದಾರೆ, ವೀರಾವೇಶದಿಂದ ಹೋರಾಡುತ್ತಿದ್ದಾರೇನೋ ಹೌದು; ಆದರೆ ಈವಾಗ ಯುಕ್ರೇನದೊಳಗಿನ ಪರಿಸ್ಥಿತಿ ಆಶಾದಾಯಕವೆಂದು ನಾನು ಹೇಳಲಾರೆ. ರುಶ್ಯರು ನಿರಾಶರಾಗಿ ನೀಪರ ಒಡ್ಡನ್ನು ಕಡಿದಿರುವಾಗ ನಾನು ಹೇಗೆ ಆಶೆ ಹೇಳಲಿ? ಜರ್ಮನರು ಮಾತ್ರ ಮುಂದೊತ್ತಿ ಹೋಗಿ ಖೇರಸನದ ಬಳಿಯಲ್ಲಿರುವ ಬಂದರ ಸಲಾವ ಪಟ್ಟಣವನ್ನು ಕೈವಶ ಮಾಡಿಕೊಂಡರು! ಆ ಸಮಯದಲ್ಲಿ ಜರ್ಮನ-ರುಶ್ಯರಿಗೆ ಕೈ-ಕೈ ಯುದ್ಧವಾಯಿತಂತೆ! ರುಶ್ಯರು ಹಿಂದೆ ಸರಿದರು!! ಆದರೆ ಜರ್ಮನರಿಗೆ ಸಾಕುಬೇಕು ಮಾಡಿದರಂತೆ!!! ಬಂದರ ಸಲಾವ ಪಟ್ಟಣ ಒಡಸಾ ಬಂದರಿನಿಂದ [illegible] ಮೈಲು ಅಂತರದಲ್ಲಿದೆ! ಅದರಿಂದ ಕಪ್ಪು ಸಮುದ್ರದೊಳಗಿನ ಕ್ರಿಮಿಯಾ ದ್ವೀಪ-ಕಲ್ಪಕ್ಕೆ ಬಾಧೆ ತಟ್ಟಿದೆ. ಮುಂಚೆ ಈ ಪ್ರದೇಶ ತುರ್ಕಸ್ತಾನದ್ದಿತ್ತು. ೧೭೮೩ನೇ ಇಸ್ವಿಯಲ್ಲಿ ಇದು ರುಶ್ಯರ ವಶವಾಯಿತು! ಈ ದ್ವೀಪಕಲ್ಪ ಜರ್ಮನರ ಕೈಸೇರಿದರೆ ತುರ್ಕಸ್ತಾನಕ್ಕೆ ಬಾಧೆಯುಂಟಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಹಿಟ್ಲರ-ಪೊಪೇನರ ಭೆಟ್ಟಿ ಒದಗಿಬರುತ್ತಿರುವಾಗ ತುರ್ಕಸ್ತಾನದ ಭವಿಷ್ಯ ಸದ್ಯಕ್ಕೇ ನಿರ್ಣಯವಾಗುವದಾಗಿ ಭಾವಿಸುವದು ಸಹಜ. ಅಷ್ಟೇಕೆ, ಇಡೀ ಭೂಮಂಡಳದ ಭವಿಷ್ಯವೇ ನಿರ್ಣಯವಾಗಿದೆ. ಹಿಟ್ಲರ-ಮುಸೋಲಿನಿಯವರು ಆಗಸ್ಟ ೨೫-೨೯ನೇ ವರೆಗಿನ ಒಂದು ದಿನ ಯುಕ್ರೇನದಲ್ಲಿ ಒಂದೆಡೆ ಕೂಡಿ ಆಲೋಚನೆ ಮಾಡಿದರಾಗಿ ಈಗ ಪ್ರಕಟವಾಗಿದೆ. ಯಾವತ್ತು ಪರಿಸ್ಥಿತಿ ಸಮಗ್ರ ಆಲೋಚಿಸಲ್ಪಟ್ಟಿತಾಗಿ ಸುದ್ದಿಗಾರರು ಚಿಂತಾಕ್ರಾಂತರಾಗಿ ತಿಳಿಸುತ್ತಾರೆ.

ಜಪಾನದೊಳಗಿನ ರಾಜಕಾರಣ ಸಾವಕಾಶವಾಗಿ ರೂಪುಗೊಳ್ಳುತ್ತಿದೆ; ವಿವರಗಳು ತಿಳಿಯಲೊಲ್ಲವು. ಆದರೆ ಜಪಾನದ ಪುಂಡಾಟಿಕೆ ಮೇರೆದಪ್ಪಿ ನಡೆಯುತ್ತಿದೆಂದು ನನ್ನ ಅಭಿಪ್ರಾಯ. ಆಸ್ಟ್ರೇಲಿಯಾದಲ್ಲಿ ಬಹು ಗಡಿಬಿಡಿಯುಂಟಾಗಿದೆ. ಜಪಾನದ ಉಗ್ರರೂಪಕ್ಕೆ ಪ್ರತೀಕಾರ ಮಾಡತೊಡಗುವಾಗ ಅಲ್ಲಿಯ ಪ್ರಧಾನ ಮಂಡಳವು ಗುಪ್ತ ಆಪ್ತಾಲೋಚನೆ ಮಾಡುತ್ತಿದೆ. ಮುಖ್ಯ ಪ್ರಧಾನರಾದ ಮೆಂಝಿಸರವರ ಧೋರಣ ಆಸ್ಟ್ರೇಲಿಯಾದ ಲೋಕಸಭೆಗೆ ಮಾನ್ಯವಾಗಲಿಲ್ಲ. ಅದರಿಂದ ಮೆಂಝಿಸ ಮಂತ್ರಿಮಂಡಳವು ರಾಜೀನಾಮೆ ಕೊಟ್ಟಿತು! ಫೇಡನರು ಹೊಸ ಮಂತ್ರಿಮಂಡಳವನ್ನು ಸ್ಥಾಪಿಸಿಕೊಂಡಿದ್ದಾರೆ. "ಯುದ್ಧಯತ್ನಕ್ಕಾಗಿ ಕರ ಹೇರುವೆವು; ಸಾಲ ತೆಗೆಯುವೆವು, ಬೇಂಕುಗಳಿಂದ ಹಣ ಪಡೆಯುವೆವು. ಯುದ್ಧಪ್ರಯತ್ನವನ್ನು ಭರದಿಂದ ಸಾಗಿಸುವೆವು!" ಹೀಗೆ ಫೇಡನರು ಆಸ್ಟ್ರೇಲಿಯಾದವರಿಗೆ ಹುರಿದುಂಬಿಸುತ್ತಾರೆ. ಅವಶ್ಯ ಬಿದ್ದರೆ ಹೊಸ ಚುನಾವಣೆಗಳನ್ನು ಸಹ ನಡಿಸಿ ತಮ್ಮ ಕಾರ್ಯಕ್ರಮವನ್ನು ಮನ್ನಿಸಿಕೊಳ್ಳುವೆವಾಗಿ ಫೇಡನರು ಸಾರುತ್ತಾರೆ. ಜಪಾನ ದೇಶದಿಂದ ಬ್ರಿಟಿಶರಿಗೂ ಹಿಂದೀಯರಿಗೂ ಹೊರಹೊರಟು ಬರಬೇಕಾಗಿ ಬ್ರಿಟಿಶ ಸರಕಾರದ ಅಪ್ಪಣೆಯಾಗಿದೆ. ಇದು ಯುದ್ಧಸೂಚಕವಲ್ಲವಂತೆ! "ಜಪಾನಕ್ಕೆ ಬ್ರಿಟಿಶರ ಒಂದು ಹಡಗ ಹೋಗಲಿಕ್ಕಿದೆ! ಅದರ ಪ್ರಯೋಜನವನ್ನು ಕೊಳ್ಳುವವರು ಕೊಳ್ಳಲಿ!" ಎಂದು ಹೇಳಲಾಗುತ್ತದೆ. ಶಯಾಮದೊಳಗೂ ಜಪಾನದ ಗಡಿಬಿಡಿಯುಂಟು. 'ಥಾಯ ಡೇಲಿ ನ್ಯೂಸ,' 'ಥಾಯಿಸಂ' 'ಪ್ರಿಕ್ರುಂಗ' ಮೊದಲಾದ ಶಯಾಮದೊಳಗಿನ ಪತ್ರಿಕೆಗಳು ಜಪಾನದೊಳಗಿನ ಚಟುವಟಿಕೆಗಳನ್ನು ಮೊನ್ನೆ ಶುಕ್ರವಾರದ ಸಂಚಿಕೆಗಳಲ್ಲಿ ಪ್ರಕಟಿಸಿವೆ. ಮುಸೆನಾಕನೆಟ್, ಸೌಗಖ್ಲಾಗಳಲ್ಲಿ ಜಪಾನರ ಪ್ರಭುತ್ವ ಮಿಗಿಲಾಗಿದೆ. ಒಂದೆಡೆ ವಿಮಾನ ರಾಜ್ಯ ಕಟ್ಟಿಸಲ್ಪಡುತ್ತಿದೆ; ಒಂದೆಡೆ ಜಪಾನಿ ಅಂಗಡಿಗಳ ಸಾಲೇ ನಿರ್ಮಾಣ ಹೊಂದಿದೆ. ಇನ್ನೊಂದೆಡೆ ಜಪಾನದಿಂದ ರಣಸಾಹಿತ್ಯಗಳು ಬಂದು ರಾಶಿಯಾಗುತ್ತಿವೆ! ಸಯಾಮದ ಸರಕಾರದ ಕಡೆ ಜಪಾನ ಸರಕಾರವು ೧೦ ಲಕ್ಷ ಪವನಿನ ಪತ್ತು ಬೇಡಿತ್ತು. ಆ ಪತ್ತು ಕೆಲವು ದಿನಗಳಲ್ಲಿಯೇ ಖರ್ಚಾಯಿತು. ಈ ಪತ್ತಿಗೆ ಭದ್ರತೆಯಿರಲಿಲ್ಲ. ಇದು ಹಸ್ತದ ಬಾಕಿಯ ಪತ್ತು! ಈಗ ಜಪಾನ ಪುನಃ ೨೫

(೫ನೇ ಪುಟದ ಮೇಲೆ ಮುಂದುವರಿದಿದೆ)

ಸ್ಥಾನಿಕ ವೃತ್ತಾಂತ.

ಕುಮಟಾ—ಕೊನೆಗೆ ಮಘಾ ಮಳೆಯೂ ಮೋಸವನ್ನೇ ಮಾಡಿತು! ಕಳೆದ ವಾರ ಮೊದಲಿನ ಎರಡು ದಿನಗಳಲ್ಲಿಷ್ಟೇ ೧-೧೯ ಇಂಚು ಮಳೆಯಾಗಿದೆ. ಮಂಗಳವಾರದಿಂದ ಮಳೆಯ ಹೆಸರೇ ಇಲ್ಲ! ರೈತರೆಲ್ಲರೂ ಗಾಬರಿಗೊಂಡಿದ್ದಾರೆ. ಈ ವರೆಗೆ ಬರೇ ೮೬-೩೮ ಇಂಚು ಮಳೆಯಾಗಿದೆ. ವಾರ್ಷಿಕ ಸರಾಸರಿ ಮಳೆ ೧೩೦ ಇಂಚು ಹಿಡಿದರೆ ಇನ್ನೂ ೪೩ ಇಂಚು ಮಳೆ ಶಿಲ್ಕು ಇದೆ. ಅದು ಭತ್ತದ ಸಸಿಗಳಿಗೆ ಹೂವು ಹಿಡಿದ ಮೇಲೆ ಬೀಳುತ್ತದೋ ಭತ್ತಕ್ಕೆ ಹಾಲು ತುಂಬುವಾಗ ಬೀಳುತ್ತದೋ, ಮಳೆಯ ಈ ದುಶ್ಚಿಹ್ನಗಳನ್ನು ನೋಡಿದರೆ ಈ ವರ್ಷ ನಮ್ಮೀ ಭಾಗ ಕಷ್ಟದಲ್ಲಿ ಬೀಳುವದೆಂದು ತೋರುತ್ತದೆ. ಪರಮಾತ್ಮನ ಇಚ್ಛೆಯೇನುಂಟೆಂದು ಯಾರು ಬಲ್ಲರು? ಊರಲ್ಲಿ ವಿಷಮ ಜ್ವರ, ಬಟ್ಟೀ ಹೊರಕಪೆ ಮುಂತಾದ ಬೇನೆಗಳು ಹಬ್ಬಿವೆ, ಜನರು ಬಹಳೇ ಜಾಗ್ರತೆಯಿಂದಿರಬೇಕು. ನಿನ್ನೆ ಮೂರು ಸಂಜೆಯಿಂದ ಈಹೊತ್ತು ಬೆಳಗ್ಗೆ ಮುಂಜಾನೆಯ ವರೆಗೆ ಒಳ್ಳೇ ಮಳೆ ಸುರಿಯಿತು. ಇನ್ನೂ ಮುಗಿಲು ಮೋಡಗಳಿಂದ ಮುಸುಕಲ್ಪಟ್ಟಿದೆ.

ನಿನ್ನೆ ಸಂಜೆ ಚಿತ್ರಿಗಿಯಲ್ಲಿ ಜಿಲ್ಹೆಯೊಳಗಿನ ಸತ್ಯಾಗ್ರಹಿಗಳು ಶ್ರೀ| ಶಿವರಾಮ ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ಈ ವರೆಗಿನ ಸತ್ಯಾಗ್ರಹದ ಪರಿಣಾಮವನ್ನೂ ಪರಿಸ್ಥಿತಿಯನ್ನೂ ಪರಾಂಬರಿಸಿ ಮುಂದಿನ ಕಾರ್ಯಕ್ರಮ-ಕಾರ್ಯಪದ್ಧತಿಗಳ ಬಗ್ಗೆ ಸಭೆಯಲ್ಲಿ ಚರ್ಚೆಯಾಯಿತಾಗಿ ತಿಳಿಯುತ್ತದೆ. ಸೆರೆಮನೆಯಿಂದ ಬಿಡುಗಡೆಯಾಗಿ ಬಂದವರಲ್ಲಿ ನಾಲ್ವರು ಸದ್ಯಕ್ಕೇ ತಿರುಗಿ ಸತ್ಯಾಗ್ರಹ ಮಾಡಲಿಚ್ಛಿರುವರಂತೆ. ಅಂಕೋಲಾ, ಗೋಕರ್ಣ, ಸಿರ್ಸಿ, ಹೊನ್ನಾವರ ಬದಿಯಿಂದ ಅನೇಕ ಸತ್ಯಾಗ್ರಹಿಗಳು ಸಭೆಗೆ ಬಂದಿದ್ದರು.

ಮೋಟಾರ ಬಂಡಿಗಳ ಕಾನೂನಿನನ್ವಯ ಮಾಡಲ್ಪಟ್ಟ ನಿಯಮಾವಳಿಯ ೧೦೧ (೪)ನೇ ನಿಯಮದಲ್ಲಿ ತಿದ್ದುಪಡಿ ಮಾಡಿ, ಸಾರ್ವಜನಿಕ ಸ್ಥಳದಲ್ಲಿರುವ ಯಾವದೇ ಮೋಟಾರ ಬಂಡಿಯನ್ನು ಯಾವದೇ ಕಾಲಕ್ಕೆ ನಿಲ್ಲಿಸಲಿಕ್ಕೂ, ಬಂಡಿಯ ತಪಾಸಣೆ ಮಾಡಲಿಕ್ಕೆ ಬಂಡಿಯನ್ನು ಬೇಕಷ್ಟು ಕಾಲ ನಿಲ್ಲಿಸಿಕೊಳ್ಳಲಿಕ್ಕೂ ಮೋಟಾರ ವಾಹನ-ತಪಾಸಣೆ ಅಧಿಕಾರಿಗಳಿಗೆ ಅಧಿಕಾರ ಕೊಡಬೇಕೆಂದು ಮುಂಬಯಿ ಸರಕಾರದವರು ಆಲೋಚಿಸಿದ್ದಾರೆ. ಈ ತಿದ್ದುಪಡಿಗೆ ತಕ್ರಾರು ಹೇಳುವವರು ತಾ. ೫—೯—೪೧ರೊಳಗೆ ತಮ್ಮ ಕಡೆಗೆ ತಕ್ರಾರು-ಪತ್ರ ಕಳಿಸಿಕೊಡಬೇಕೆಂದು ಬೆಳಗಾಂವಿಯೊಳಗಿನ ಕರ್ನಾಟಕ ವಿಭಾಗದ ಶಾಸನ-ನಿಯಂತ್ರಣ ಮಂಡಳದ ಕಚೇರಿಯವರು ತಿಳಿಸುತ್ತಾರೆ.

ಮ್ಯುನಿಸಿಪಲ್ ಎಲೆ ಮಾರ್ಕೆಟಿಗೆ ತಗಲಿದ ಓಣಿಯಲ್ಲೂ ಬೇರೆ ಕೆಲವು ಓಣಿಗಳಲ್ಲೂ ಮಳೆಯಿಂದ ಮಣ್ಣು ತೊಯ್ದು ಹೋಗಿ ಕಲ್ಲು-ಗುಂಡುಗಳು ಎದ್ದು ನಿಂತಿವೆ. ಕತ್ತಲೆಯಾದ ಮೇಲೆ ಅಲ್ಲಿ ತಿರುಗಾಡುವರೆ ಕಾಲು ಒಡಕೊಳ್ಳಬೇಕಾಗುತ್ತದೆ! ಮ್ಯುನಿಸಿಪಾಲಿಟಿಯವರು ಯಾರೊಬ್ಬ ನೌಕರನಿಗೆ ಹಚ್ಚಿ ಆ ಕಲ್ಲುಗುಂಡುಗಳನ್ನು "ದಫನ" ಮಾಡಿಸಬಾರದೇ?

ಇಲ್ಲಿಯ ಜೈನ ಗುಜರಾಥಿ ಸಮಾಜದ ರಾ| ವಿಶನಜಿ ವಾಲಜಿ ಶೇಟ ಇವರು ಮೊನ್ನೆ ಶನಿವಾರ ಮಧ್ಯಾಹ್ನ ವಿಷಮಜ್ವರದಿಂದ ಸ್ವರ್ಗಸ್ಥರಾದರೆಂದು ನಮೂದಿಸಲು ವ್ಯಸನವಾಗುತ್ತದೆ. ಮೃತಾತ್ಮರು ದಾನಶೀಲ ಸಜ್ಜನರಿದ್ದರಲ್ಲದೆ ಅಡಿಕೆ ಉದ್ಯೋಗದ ಜನರಲ್ಲಿ ಲೋಕಪ್ರಿಯರಾಗಿದ್ದರು. ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ!

ಹೊನ್ನಾವರ—(ತಾ. ೩೦—೮—೪೧) ಮಳೆಯಿಲ್ಲ; ಸೆಕೆ ಬಹಳ, ಊರೊಳಗೆ ಜ್ವರಾದಿ ರೋಗಗಳಿವೆ. ಮಳೆಯ ಅಭಾವದಲ್ಲಿ ಅಕ್ಕಿಯ ದರ ಇಳಿಮುಖವಾಗಿದ್ದರೂ ಅಷ್ಟಕ್ಕೇ ತಡೆದು ನಿಂತಿದೆ. ಬೇಸಾಯಗಾರರು ಚಿಂತಾಕ್ರಾಂತರಾಗಿದ್ದಾರೆ.

ಇಲ್ಲಿಯ ಮ್ಯುನಿಸಿಪಾಲಿಟಿಯೊಳಗೆ ಬಹಳ ಗೊಂದಲವೆದ್ದಿದೆ! ಜನನ-ಮರಣ ರಜಿಸ್ಟರುಗಳು ಕಾಣೆಯಾಗುತ್ತಿವೆ! ಮ್ಯುನಿಸಿಪಾಲಿಟಿಯ ಲೆಕ್ಕದಲ್ಲಿ ಶಿಲ್ಕಿಗಿಂತ ರೂ. ೧೦೦ ಹೆಚ್ಚಿಗೆ ಬರುತ್ತದಂತೆ! ಅದು ಹೇಗೆಂದು ಕಾರ್ಯದರ್ಶಿಗಳಿಗೂ ಗೊತ್ತಿಲ್ಲ! ಲೆಕ್ಕತಪಾಸಕರು ಕಳುಹಿದ ಆಕ್ಷೇಪ-ಪತ್ರಗಳನ್ನು ಹುಡುಕಿ ತೆಗೆಯಬೇಕಾಗುತ್ತದೆ! ಒಂದು ಆಕ್ಷೇಪ ಪತ್ರ ಕಾಣೆ! ಮ್ಯುನಿಸಿಪಾಲಿಟಿಯಲ್ಲಿ ಲೆಕ್ಕ ಪತ್ರಗಳು ಸರಿಯಾಗಿಟ್ಟಿಲ್ಲ; ಒಂದು ಹುಡುಕಿದರೆ ಮತ್ತೊಂದು ಸಿಗುತ್ತದೆ! ಬೇಕಾದದ್ದು ಮಾತ್ರ ಸಿಗುವದಿಲ್ಲ!! ಮ್ಯುನಿಸಿಪಾಲಿಟಿಯ ರಿಕಾರ್ಡಿನ ಸ್ಥಿತಿ ಇದು!!! ಮನೆ-ತೆರಿಗೆಯ ವಸೂಲಿ ಸರಿಯಾಗಿಲ್ಲ; ವರ್ತಕರಿಗೆ ರಿಫಂಡು ಕೊಡುವ ಪದ್ಧತಿಯಿದೆ, ಹಾಲಿ ರೂ. ೩,೦೦೦ ವರ್ತಕರಿಗೆ ರಿಫಂಡು ಕೊಡುವದು ಬಾಕಿಯುಳ್ಳಿದೆ. ಇದನ್ನು ಮೇನೆಜಿಂಗ ಕಮಿಟಿಯವರು ಕೊಡುವದಿಲ್ಲ; ವರ್ತಕರಿಗೆ ದಣಿಸುತ್ತಾರೆ! ಇವರ ಮನಸ್ಸಿನಲ್ಲಿ ಏನಿದೆಂಬ ಸಂಗತಿ ತಿಳಿಯುವದಿಲ್ಲ! ಕಳೆದ ನವಂಬರ ತಿಂಗಳಿನಿಂದ ರಿಫಂಡು ಸಿಗಲೊಲ್ಲದು. ರಿಫಂಡ-ಹಣ ಪಡೆಯುವ ವರ್ತಕರು ಅರ್ಜಿಗಳನ್ನು ೭ ದಿವಸಗಳಲ್ಲಿ ಸಾದರ ಪಡಿಸಬೇಕೆಂದು ನಿಯಮವಿದೆ. ಆ ಪ್ರಕಾರ ವರ್ತಕರು ಅರ್ಜಿಗಳನ್ನು ಸಾದರಪಡಿಸಿದರು. ಸ್ವತಃ ವರ್ತಕರು ಇಲ್ಲವೆ ಅವರ ಪ್ರತಿನಿಧಿಗಳು ಅರ್ಜಿಗಳನ್ನು ಕಳಿಸುವ ಪದ್ಧತಿಯುಂಟು. ಆ ಪ್ರಕಾರದ ಅರ್ಜಿಗಳ ಸ್ವೀಕಾರವಾಗಿ ಈ ತನಕ ರಿಫಂಡ ಪಡೆದದ್ದಿದೆ. ಆದರೆ ವರ್ತಕರು ಸ್ವತಃ ಸಹಿ ಮಾಡದೆ ಕೊಟ್ಟ ಅರ್ಜಿಗಳನ್ನು ಮನ್ನಿಸಲಿಕ್ಕೆ ಬರುವದಿಲ್ಲವಾಗಿ ಮೇನೇಜಿಂಗ ಕಮಿಟಿಯವರು ನಿರ್ಣಯಿಸಿದ್ದಾರೆ. ವರ್ತಕರು ತಮ್ಮ ಬಗ್ಗೆ ಪ್ರತಿನಿಧಿಗಳ ಹೆಸರು ಕೊಟ್ಟು ತಿಳಿಸಿದ ಮೇರೆಗೆ ೧೯೩೫ನೇ ಇಸ್ವಿಯಿಂದ ರಿಫಂಡ ಪಡೆಯುತ್ತಿದ್ದ ಪ್ರತಿನಿಧಿಗಳು ಈಗ ರಿಫಂಡ ಪಡೆಯಲು ಅಪಾತ್ರರಾಗಿದ್ದಾರೆ! ಮುಖ್ಯ ವರ್ತಕರು ಪ್ರತಿನಿಧಿಗಳ ಅಧಿಕಾರವನ್ನು ನಿರಾಕರಿಸಿದ್ದಿಲ್ಲ. ಲೆಕ್ಕ-ತಪಾಸಕರು ಇಂಥ ಅರ್ಜಿಗಳನ್ನು ಈ ಹಿಂದೆ ಮಾನ್ಯ ಮಾಡಿರುವಾಗ ಮೇನೇಜಿಂಗ ಕಮಿಟಿಯವರು ಈ ಪ್ರಕಾರ ವರ್ತಿಸುವದು ಸರಿಯಲ್ಲ. ಕಲೆಕ್ಟರರೂ ಕಮಿಶನರರೂ ಈ ಪ್ರಕರಣವನ್ನು ಸಾದ್ಯಂತ ಸಮಾಲೋಚಿಸಿ ಕ್ರಮದಂತೆ ವರ್ತಕರಿಗೆ ಸಿಗತಕ್ಕ ಹಣವನ್ನು ಶೀಘ್ರವೇ ಕೊಡಿಸುವದು ಉತ್ತಮ. ರಿಫಂಡ ಅರ್ಜಿಗಳನ್ನೆಲ್ಲ ಕೂಡಲೆ ಇತ್ಯರ್ಥಿಸಬೇಕೆಂದು ಜಿಲ್ಹಾಧಿಪತಿಗಳು ಮ್ಯುನಿಸಿಪಾಲಿಟಿಗೆ ಕಿವಿ ಹಿಂಡಿ ತಿಳಿಸಬೇಕು.

(ತಾ. ೨೮-೮-೪೧) ನಿನ್ನೆ ಇಲ್ಲಿಯ ಮೋಟಾರ ನಿಲ್ದಾಣದಲ್ಲಿ ಕೇರಳ ಪ್ರಾಂತದ ರಾ| ಕೆ. ಕೇಶವನ್ ನಾಯರ ಇವರು ಯುದ್ಧವಿರೋಧಿ ಘೋಷಣೆ ಮಾಡಿ ಪೋಲೀಸರ ವಶವಾದರು. ಮಂಗಳೂರದಿಂದ ಇಲ್ಲಿಯ ವರೆಗೆ ಬರುವಾಗ ಹಾದಿಯಲ್ಲಿ ಪ್ರತಿಯೊಂದು ಕಡೆ ಅವರು ಘೋಷಣೆ ಮಾಡಿದಾಗ್ಯೂ ಯಾರೂ ಅವರಿಗೆ ಸೆರೆಹಿಡಿಯಲಿಲ್ಲವಂತೆ.

ಆಚೆಯ ವಾರದಲ್ಲಿ ಸಂತೆಯ ಕೆಲವು ಮುಸಲ್ಮಾನರು ಬೇಟೆಯಾಡಲು ಬೆಟ್ಟಕ್ಕೆ ಹೋಗಿದ್ದರು. ಅವರಲ್ಲೊಬ್ಬನು ಸಾವಿಗೆ ಆಹುತಿಯಾದನು! ಯಾರೊಬ್ಬ ಬೇಟೆಗಾರನ ಗುಂಡು ಅವನನ್ನು ಕೊಂದಿತೋ ಅಥವಾ ಯಾವದೊಂದು ಕಾಡು ಮೃಗವು ಯಮಸದನಕ್ಕಟ್ಟಿತೋ ನಿಶ್ಚಿತವಾಗಿ ತಿಳಿಯುವದಿಲ್ಲ. ಮೃತನ ಶವವು ಮರಣೋತ್ತರ ಪರೀಕ್ಷೆಗಾಗಿ ಇಲ್ಲಿಗೆ ಬಂದಿತ್ತು. ಇಲ್ಲಿ ಡಾಕ್ಟರರು ಇಲ್ಲದ್ದರಿಂದ ಅದು ಮುಂದೆ ಕುಮಟೆಗೆ ಹೋಯಿತು. ಕುಮಟೆಗೆ ತಲ್ಪುವಾಗ ಶವ ಬಹಳ ಕೊಳೆತದ್ದರಿಂದ ಆಸ್ಪತ್ರಿಯುದ್ದ ಕೇರಿಯಲ್ಲಿ ಬಹಳ ನಾತವೆ ಬರುತ್ತಿತ್ತಂತೆ. ಡಾಕ್ಟರರು ಮರಣ-ಕಾರಣವೇನೆಂದು ಅಭಿಪ್ರಾಯಕೊಟ್ಟಿರುವರೆಂಬುದು ತಿಳಿದುಬಂದಿಲ್ಲ.

ಈ ವರ್ಷವೂ ಗ್ರಾಮೋದ್ಯೋಗ ಶಾಲೆಯಲ್ಲಿ ಗಣಪತ್ಯುತ್ಸವವಾಯಿತು. ಒಂದು ದಿನ ತಾಳಮದ್ದಲೆಯಾಯಿತು; ಒಂದು ದಿನ ಮೈಸೂರ ಕಡೆಯ ರಾ|| ಹೊಸಬಾಳೆ ಅನಂತರಾಯರ ಕೀರ್ತನೆಯಾಯಿತು; ಮತ್ತೊಂದು ದಿನ ಗಾಯನ-ವಾದನಗಳ ಕಾರ್ಯಕ್ರಮವಾಯಿತು; ಮಗದೊಂದು ದಿನ ಸೂರಿ ರಾಮಚಂದ್ರ ಶಾಸ್ತ್ರಿಗಳವರ "ಮನುಷ್ಯನು ಕರ್ಮಾಧೀನನು" ಎಂಬ ವಿಷಯದ ಮೇಲೆ ಪ್ರವಚನವಾಯಿತು. ಎಲ್ಲ ಕಾರ್ಯಕ್ರಮಗಳು ಉತ್ಸಾಹದಿಂದಲೂ ವಿಜೃಂಭಣೆಯಿಂದಲೂ ಕೊನೆಗಂಡವು. ಮಂಗಲಮೂರ್ತಿಯು ಶಾಲೆಗೂ ಶಾಲೆಯ ವಿದ್ಯಾರ್ಥಿಗಳಿಗೂ ಮಂಗಲದಾಯಕನಾಗಲೆಂದು ಹಾರೈಕೆ.

ಅಂಕೋಲಾ—(ತಾ. ೩೦-೮-೪೧) ಪೆಟ್ರೋಲ ಸೀದಾ-ಪದ್ಧತಿಯಿಂದ ನಮ್ಮ ಜಿಲ್ಲೆಗೆ ಬಹಳ ಕಷ್ಟವಾಗುವದು. ವಿಶೇಷವಾಗಿ ವ್ಯಾಪಾರಕ್ಕೆ, ವ್ಯಾಪಾರದ ಸರಕುಗಳ ಆಯಾತ-ನಿರ್ಯಾತಕ್ಕೆ ಬಹಳ ಅಡಚಣೆಯುಂಟಾಗಿದೆ. ನಮ್ಮಲ್ಲಿ ಬರುವ ಅಕ್ಕಿ, ಧಾನ್ಯ-ದವಸುಗಳು ಮುಂಬೈಯಿಂದ ಇಲ್ಲವೆ ಹುಬ್ಬಳ್ಳಿ, ಧಾರವಾಡ, ಬೆಳಗಾಂವಿ ಮೊದಲಾದ ಘಟ್ಟದ ಮೇಲಿನ ಪಟ್ಟಣಗಳಿಂದ ಬರಬೇಕು. ಈಗ ಯುದ್ಧ-ಪ್ರಾರಂಭವಾದಂದಿನಿಂದ ಉಗಿಹಡಗಗಳ ಓಡಾಟ ನಿಂತುಹೋಗಿದೆ. ನಮ್ಮ ಕರಾವಳಿಯಲ್ಲಿ ಓಡಾಡುತ್ತಿದ್ದ ಉಗಿಹಡಗಗಳನ್ನು ಸರಕಾರದವರು ಯುದ್ಧಕಾರ್ಯಕ್ಕಾಗಿ ತಮ್ಮ ವಶಕ್ಕೆ ತಕ್ಕೊಂಡಿದ್ದಾರಂತೆ. ಆದರಿಂದ ಮುಂಬಯಿ, ಮಂಗಳೂರ ಕಡೆಯಿಂದ ಬರತಕ್ಕ ಸರಕುಗಳೂ, ಇಲ್ಲಿಂದ ಹೊರಗೆ ಹೋಗುವ ಸರಕುಗಳೂ ಮಚ್ವೆಗಳ ಮೇಲಿಂದ ಸಾಗಬೇಕು. ಆದರೆ ಮಚ್ವೆಗಳ ಪ್ರಯಾಣ ಅನಿಶ್ಚಿತವಾದುದು. ಗಾಳಿ ಅನುಕೂಲವಿಲ್ಲದಿದ್ದರೆ ಇಲ್ಲವೆ ಸಮುದ್ರದಲ್ಲಿ ತುಫಾನು-ಬಿರುಗಾಳಿಗಳುಂಟಾದರೆ ಮಚ್ವೆಗಳು ಬಂದು ಮುಟ್ಟಲಿಕ್ಕೂ ಹೋಗಿ ತಲ್ಪಲಿಕ್ಕೂ ೨-೩-೪ ವಾರಗಳು ತಗಲುತ್ತವೆ! ಆದ್ದರಿಂದ ಬರೂರಿಯ ವ್ಯಾಪಾರವನ್ನು ವರ್ತಕರು ಹುಬ್ಬಳ್ಳಿಯ ಮಾರ್ಗವಾಗಿ ತರಿಸಿಕೊಳ್ಳಬೇಕಾಗುತ್ತದೆ. ನಮ್ಮ ಜಿಲ್ಹೆಯಲ್ಲಿ ಎಲ್ಲೂ ರೇಲ್ವೆ ಇರುವದಿಲ್ಲ. ಹುಬ್ಬಳ್ಳಿಯ ತನಕ ರೇಲ್ವೆಯಿಂದ ತರಿಸಿಕೊಂಡ ಸರಕು-ಜಿನಸುಗಳನ್ನು ಮುಂದೆ ಮೋಟಾರ ಬಂಡಿಗಳಲ್ಲಾಗಲಿ, ಹಳೇ ಕಾಲದ ಚಕ್ಕಡಿಗಳಲ್ಲಾಗಲಿ ತರಿಸಿಕೊಳ್ಳಬೇಕು. ಹುಬ್ಬಳ್ಳಿಯಿಂದ ಕಾರವಾರ ೧೦೩ ಮೈಲು ಅಂತರದಲ್ಲಿದೆ; ಅಂಕೋಲೆಯು ೮೩ ಮೈಲು ದೂರವಿದೆ; ಕುಮಟೆ ೧೧೧ ಮೈಲು ಅಂತರದಲ್ಲುಂಟು. ಈಗಿನ ಮೋಟಾರ ಯುಗದಲ್ಲಿ ಹಿಂದಿನ ಕಾಲದ ಚಕ್ಕಡಿಗಳೆಷ್ಟೋ ಕಾಲನ ಹೊಟ್ಟೆಯಲ್ಲಿ ಹುದುಗಿ ಹೋಗಿವೆ. ಈಗ ಇದ್ದ ಚಕ್ಕಡಿಗಳಿಂದ ಸರಕುಗಳ ಆಯಾತ-ನಿರ್ಯಾತದ ಕೆಲಸ ಸಾಗಿಸಿಕೊಳ್ಳುವದು ಎಂದೆಂದೂ ಸಾಧ್ಯವಿಲ್ಲ. ಒಂದೊಮ್ಮೆ ಸಾಧ್ಯಮಾಡಿಕೊಂಡರೂ ಬರೂರಿಯ ಸರಕುಗಳಾಗಲಿ, ಬಿಸಾನು, ಕಾಯಿಪಲ್ಲೆ ಮುಂತಾದ ಶೀಘ್ರದಲ್ಲಿ ಹಾಳಾಗುವ ಜಿನಸುಗಳಾಗಲಿ ಸಕಾಲದಲ್ಲಿ ನಿರ್ದಿಷ್ಟ ಸ್ಥಳಕ್ಕೆ ಮುಟ್ಟಲಾರವು. ಆದ್ದರಿಂದ ಬಹುತೇಕ ವ್ಯಾಪಾರವೀಗ ಮೋಟಾರಬಂಡಿಗಳಿಂದಲೇ ಸಾಗಬೇಕು ಮತ್ತು ಸಾಗುತ್ತಿದೆ. ಆದರೆ ಸರಕಾರದವರು ಪೆಟ್ರೋಲ ಸೀದಾ-ಪದ್ಧತಿಯನ್ನು ಅಮಲಿನಲ್ಲಿ ತಂದು ಸರಕು-ವಾಹಕ ಗಾಡಿಯೊಂದಕ್ಕೆ ತಿಂಗಳಿಗೆ ೮೦ ಗೆಲನ್ನ ಪೆಟ್ರೋಲ ಕೊಡಬೇಕೆಂದು ನಿಶ್ಚಯಿಸಿದ್ದಾರೆ. ಇಷ್ಟು ಪೆಟ್ರೋಲಿನಿಂದ ಗಾಡಿ ನಡಿಸುವದು ಎಷ್ಟಕ್ಕೂ ಸಾಧ್ಯವಿಲ್ಲೆಂದು ಮೋಟಾರ ಮಾಲೀಕರು ದೂರುತ್ತಾರೆ. ಕಾರವಾರದಿಂದ ಹುಬ್ಬಳ್ಳಿಗೂ ಹುಬ್ಬಳ್ಳಿಯಿಂದ ತಿರುಗಿ ಕಾರವಾರಕ್ಕೂ ಒಂದು ಸಾರಿಗೆ ಮಾಡಿದರೆ ಗಾಡಿಯೊಂದಕ್ಕೆ ಸರಾಸರಿ ೧೮ ಗೆಲನ್ನ ಪೆಟ್ರೋಲ ಎಣ್ಣೆ ಬೇಕಂತೆ. ಅಂದರೆ ಅಧಿಕಾರಿಗಳು ಈಗ ಮಂಜೂರ ಮಾಡಿದ ೮೦ ಗೆಲನ್ನ ಪೆಟ್ರೋಲ ಎಣ್ಣೆಯಿಂದ ೧ ತಿಂಗಳಲ್ಲಿ ಬರೇ ೪|| ಸಾರಿಗಳನ್ನು ಮಾಡಬರುತ್ತದೆ. ಕಾರವಾರದಿಂದ ಹುಬ್ಬಳ್ಳಿಗೆ ಹೋಗಲು ಒಂದು ದಿನ ಮತ್ತು ತಿರುಗಿ ಬರಲು ಒಂದು ದಿನ ಹಿಡಿದರೆ ೯ ದಿನಗಳಲ್ಲಿ, ಸಿಕ್ಕ ಪೆಟ್ರೋಲ ಖರ್ಚಾಗಿ ತಿಂಗಳೊಳಗಿನ ಇನ್ನುಳಿದ ೨೧ ದಿನ ಬಂಡಿಯು ಗರೇಜದಲ್ಲೇ ಬಿದ್ದುಕೊಳ್ಳುವ ಪ್ರಸಂಗವಿದೆ. ಪೋಲಾಗಿ ಈ ೨೧ ದಿನಗಳಲ್ಲಿ ಬಂಡಿ

(೧೧ನೇ ಪಾನಿನ ಮೇಲೆ ಮುಂದರಿಸಿದೆ)

ಬಗೀರ ಇಲೆಕ್ಷನು.

(೯)

ರಾ। ಶೇಷಗಿರಿ ಶಾನಭಾಗರ ಪ್ರಶ್ನೆಗಳು

ರಾ॥ ಗಣಪತಿ ಮಾಧವ ಕಾಮತರಿಗೆ—

ಪ್ರಿಯರೇ,

ತಾವು ರಾ॥ ಶ್ರೀ ನಾಯಕ ಮತ್ತು ರಾ॥ ಮ॥ ಗೋಪಿ ಇವರ ಸಂಗಡ ಹಳ್ಳಿ ಹಳ್ಳಿಗಳಲ್ಲಿ ತಿರುಗಾಡಿ ಬಗೀರ ಮತದಾರ ಸಂಘದಲ್ಲಿ ನನ್ನ ವಿರುದ್ಧ ಚುನಾವಣೆಗೆ ನಿಂತ ಕೊಂಗ್ರೆಸ ಹುರಿಯಾಳುಗಳಾದ ರಾ॥ ಟೀಂಗ್ಸೆಯವರ ಬಗ್ಗೆ ನಡಿಸಿದ ಪ್ರಚಾರ ನಾನು ಬಲ್ಲೆ. ಇದೇ ಕೊಂಗ್ರೆಸ ಮೇಲಿನ ಭಕ್ತಿಯಿಂದ ತಾವು ಈ ಪ್ರಚಾರ ಮಾಡಿದಿರೆಂದು ನನ್ನ ಊಹೆಯಿತ್ತು. ಆದರೆ ಕಳೆದ ವಾರದ "ವೃತ್ತ"ದಲ್ಲಿ ಬಂದ ತಮ್ಮ ಪತ್ರ ಓದಿ ಬಹಳ ಬೇಸರವೆನಿಸುತ್ತಿದೆ. "ವೃತ್ತ"ದವರು ತಮಗೆ ಉತ್ತರ ಕೊಟ್ಟಿದ್ದಾರೆ. ಆದರೂ "ವೃತ್ತ"ದವರು ಬಿಟ್ಟ ಸಂಗತಿಗಳ ಬಗ್ಗೆ ಖುಲಾಸೆ ಮಾಡಲಿಕ್ಕೂ ಕೇಳಲಿಕ್ಕೂ ಈ ಬಹಿರಂಗಪತ್ರ ಬರೆದಿದ್ದೇನೆ.

"ಮೊದಲನೆ ಸಂಗತಿಯೆಂದರೆ ತಾವು ರಾ॥ ಶ್ರೀ ನಾಯಕ ಮತ್ತು ಗೋಪಿ ಇವರ ವಕೀಲಿ ಮಾಡುವದಕ್ಕಾಗಿ ಸದರಿ ಪತ್ರ ಬರೆದದ್ದು ಎಂದು ಎದ್ದು ಕಾಣುತ್ತದೆ. ತಾವು ಈ ವಕೀಲಿಯನ್ನೇಕೆ ಮಾಡಬೇಕು? ರಾ॥ ನಾಯಕರೂ ರಾ॥ ಗೋಪಿಯವರೂ ಆತ್ಮಸಮರ್ಥನೆ ಮಾಡಿಕೊಳ್ಳಲಿಕ್ಕೆ ಅರಿಯರೇ? ಅಥವಾ ತಮ್ಮಷ್ಟು ಅರಿಯದವರೇ? ಈ ಚುನಾವಣೆಯ ಸಂಬಂಧದಲ್ಲಾಗಲಿ ಈ ತಾಲೂಕಿನ ಸಂಬಂಧದಲ್ಲಾಗಲಿ ಅವರಿಗೆ ಮಾಹಿತಿ ಹೆಚ್ಚಿರುತ್ತ, ಅವರು ಯುಕ್ತ ಕಂಡ ಖುಲಾಸೆ ಮಾಡಲಿಕ್ಕಾಗಲಿ ಸ್ವ ನಡತೆಯ ಸಮರ್ಥನೆ ಮಾಡಿಕೊಳ್ಳಲಿಕ್ಕಾಗಲಿ ಸ್ವತಃ ಮುಂದಾಗದೆ ತಮಗೇಕೆ ವಕೀಲಿ ಕೊಟ್ಟಿರುವರು? ಈ ಗುಟ್ಟನ್ನು ತಾವು ರಟ್ಟು ಮಾಡುವಿರಾ?"

ಆ। ಭಾ। ಕೊಂ। ಸಮಿತಿಯ ಕಾರ್ಯದರ್ಶಿಗಳ ಪರಿಪತ್ರದ ಕಡೆ ತಾವು ಲಕ್ಷ್ಯ ಎಳೆದಿರುವಿರಿ. ಆದರೆ ಅದರ ಅರ್ಥ ಮಾತ್ರ ತಾವು ಮರೆತಂತೆ ತೋರುತ್ತದೆ. ವ್ಯಕ್ತಿಶಃ ತಾವಾಗಿ ನಿಂತ ಹುರಿಯಾಳುಗಳಲ್ಲಿ ಯಾರಿಗೆ ಕೊಂಗ್ರೆಸ ಜನರು ಮತ ಕೊಡಬೇಕೆಂದು ಕೊಂಗ್ರೆಸ ಅಧಿಕಾರಿಗಳು ಸೂಚನೆ ಮಾಡಬೇಕಾಗಿ ಆ ಪರಿಪತ್ರದಲ್ಲಿ ಹೇಳಿದೆಯಷ್ಟೇ, ಕೊಂಗ್ರೆಸ-ಹುರಿಯಾಳುಗಳನ್ನು "ನಿಲ್ಲಿಸಲಿಕ್ಕೆ" ಹೇಳಿರುವದಿಲ್ಲವಷ್ಟೇ? ಹಾಗಾದರೆ ರಾ॥ ನಾಯಕರು ರಾ॥ ಟೀಂಗ್ಸೆಯವರಿಗೆ "ಕೊಂಗ್ರೆಸ ಹುರಿಯಾಳು" ಎಂದಾಗಿ "ನಿಲ್ಲಿಸಿದ್ದೇಕೆ"? ಅವರ ಕೃತಿಗೆ ಆಧಾರವಿದೆಯೇ?

ಅಂಕೋಲೆಯಲ್ಲಿ ರಾ। ಮಂಜನಾಥ ಪೈರು ಆರಿಸಿ ಬಂದ ಕಥೆ ತಾವು ಹೇಳುತ್ತೀರಿ. ಆದರೆ ರಾ। ಪೈರು ಚುನಾವಣೆಗೆ ಹೇಗೆ ನಿಂತರು, ಎಂದು ನಿಂತರು ಎಂಬದು ತಮಗೆ ಗೊತ್ತಿಲ್ಲವೆಂದು ಕಾಣುತ್ತದೆ. ತುಸು ಚೌಕಶಿ ಮಾಡಿರಿ. ತಮಗೂ ತಿಳಿದೀತು. ನಾಮಪತ್ರಗಳನ್ನು ಕೊಡುವ ದಿನ ಸಂಜೆ ೫ ಘಂಟೆಯ ವರೆಗೆ ಯಾರೂ ಹುರಿಯಾಳು ಪತ್ರ ಕೊಡದಿದ್ದದ್ದು ನೋಡಿ ಅಂಕೋಲಾ ತಾಲೂಕಿನ ಶ್ರೀಮಂತ ಗೃಹಸ್ಥರೊಬ್ಬರು ರಾ। ಪೈರಿಂದ ಹುರಿಯಾಳು ಪತ್ರ ಕೊಡಿಸಿದ ಸಂಗತಿ ತಮಗೂ ತಿಳಿಯುವದು. ಅಂಕೋಲೆಯ ಚುನಾವಣೆಯ ಕಾಲಕ್ಕೆ ತಮ್ಮ ಕೊಂಗ್ರೆಸ ಕೆಲಸಗಾರರು ಎಲ್ಲಿ ಹೋಗಿದ್ದರು? ನಿದ್ದೆ ಮಾಡುತ್ತಿದ್ದರೇ? ಬಗೀರ ಮತದಾರ ಸಂಘದ ಚುನಾವಣೆಯ ಕಾಲಕ್ಕೆ ಮಾತ್ರ ಅವರು ಎಚ್ಚತ್ತರೇ?

ಅದಂತೂ ಇರಲಿ. ಇಲ್ಲಿಯ ಚುನಾವಣೆಯಲ್ಲಿ ಯಾರೊಬ್ಬ ಕೊಂಗ್ರೆಸ ಹುರಿಯಾಳುವಿಗೆ ನಿಲ್ಲಿಸುವ ಆವಶ್ಯಕತೆಯು ತ್ತೋರಿತು ಒಂದೊಮ್ಮೆ ಒಪ್ಪಿದರೂ ಆದರೆ ನಿಷ್ಠಾವಂತ ಕೊಂಗ್ರೆಸ ಭಕ್ತರು ಗೋಕರ್ಣದಲ್ಲೇ ಇರುವರೆಂದು ತಮ್ಮ ಇಲ್ಲವೆ ರಾ॥ ನಾಯಕರ ಹೇಳಿಕೆಯುಂಟೇ? ಹನೇಹಳ್ಳಿ, ಬಂಕಿಕೊಡ್ಲ, ಹಿರೇಗುತ್ತಿ, ಬಗೀರ, ತೊರ್ಕೆ, ಮುಂತಾದ ಭಾಗಗಳಲ್ಲಿ ಕೊಂಗ್ರೆಸ ಭಕ್ತರು ಯಾರೂ ಇಲ್ಲವೇ? ರಾ॥ ಮಾಸೂರರಂತೆ ಕುಮಟೆಯಲ್ಲಿ ಯಾರೂ ಸಿಗುತ್ತಿದ್ದಿಲ್ಲವೇ? ಗೋಕರ್ಣದವರಿಗೇ ಹುರಿಯಾಳುಗಳಾಗಿ ನಿಲ್ಲಿಸಲು ಗೋಕರ್ಣದ ಮರಿಗೇ ಒರೆಯುವದರ ಬೋಧ್ಯವೇನು? ತಿಳಿಕೊಂಡು ಹೇಳುವಿರಾ? ರಾ॥ ನಾಯಕರು ಕುಮಟಾ ತಾಲೂಕಿನ ಮೂಲೆ ಮೂಲೆ ಬಲ್ಲರು. ಅವರಿಗೆ ಗೋಕರ್ಣದ ಹೊರಗೆ ನಿಷ್ಠಾವಂತ ಕೊಂಗ್ರೆಸ ಜನರು ಕಾಣಲಿಲ್ಲವೇ?

ನನ್ನ ಬಗ್ಗೆ ಪ್ರಚಾರ ಮಾಡಿದವರು ಯುದ್ಧಯತ್ನ ಮಂಡಳದವರೆಂದು ತಾವು ಬರೆದಿದ್ದೀರಿ! ಮತ್ತು ಪ್ರಕೃತ ಚುನಾವಣೆಯು ಕೊಂಗ್ರೆಸ ಬಲ ಮತ್ತು ಯುದ್ಧಯತ್ನವಾದಿಗಳ ಬಲ ಪರೀಕ್ಷಿಸುವ ಒರೆಗಲ್ಲಾಗಿತ್ತೆಂದು ಹೇಳುತ್ತೀರಿ! ಈ ಅಸಂಬದ್ಧ ಸಂಬಂಧ ತಮಗೆ ಯಾರು ಹೇಳಿಕೊಟ್ಟರು? ಸೊಸೈಟಿಯ ಚುನಾವಣೆಗೂ ಯುದ್ಧಯತ್ನ ಕಾರ್ಯಕ್ಕೂ ಎಲ್ಲಿಯ ಸಂಬಂಧ ಬಂತು? ಬಾದರಾಯಣ ಸಂಬಂಧವೇ?

ನನ್ನ ಮಟ್ಟಿಗೆ ಹೇಳುವದಾದರೆ, ನನಗೆ ಬೆಂಬಲ ಕೊಟ್ಟವರಲ್ಲಿ ಕೊಂಗ್ರೆಸ್ಸಿಗರೂ ಇದ್ದಾರೆ, ಕೊಂಗ್ರೆಸ್ಸೇತರರೂ ಇದ್ದಾರೆ, ಯುದ್ಧಯತ್ನವಾದಿಗಳೂ ಇದ್ದಾರೆ. ನನಗೆ ಸಹಾಯ ಮಾಡಿದವರಲ್ಲಿ ಕೆಲವರು ಯುದ್ಧಯತ್ನ ಮಂಡಳದಲ್ಲಿದ್ದರೆಂಬ ಮಾತ್ರಕ್ಕೆ ಅವರು ಯುದ್ಧಯತ್ನವಾದಿಗಳೆಂಬ ನಾತೆಯಿಂದ ಸಹಾಯ ಮಾಡಿದರೆಂದು ತಾವು ಹೇಳುತ್ತೀರಾ? ನನಗೆ ಬೆಂಬಲ ಕೊಟ್ಟ ಕೊಂಗ್ರೆಸ್ಸಿಗರೂ ಯುದ್ಧಯತ್ನವಾದಿಗಳೇ? ರಾ॥ ಟೀಂಗ್ಸೆಯವರಿಗೆ ಯುದ್ಧಯತ್ನವಾದಿಗಳ ಬೆಂಬಲವಿದ್ದಿಲ್ಲವೇ? ಗೋಕರ್ಣದೊಳಗಿನ ಮತದಾನ ಸ್ಥಳದಲ್ಲಿ ರಾ॥ ಟೀಂಗ್ಸೆಯವರ ಪ್ರತಿನಿಧಿಗಳಾಗಿ ಕೂತ ರಾ। ಮುಳೇ ಶೀಷಡಿಯವರು ಯುದ್ಧಯತ್ನ ಮಂಡಳದ ಪ್ರಮುಖ ಸದಸ್ಯರಿದ್ದಾರೆಂಬ ಸಂಗತಿ ತಮಗೆ ಗೊತ್ತಿಲ್ಲವೇ? ಮೇಲಾಗಿ ಎಲ್ಲ ಕೊಂಗ್ರೆಸ ಸದಸ್ಯರೂ ಕೊಂಗ್ರೆಸ ಭಕ್ತರೂ ಯುದ್ಧಯತ್ನ ವಿರೋಧಿಗಳೆಂದು ತಮ್ಮ ತಿಳುವಳಿಕೆಯುಂಟೇ? ಎಷ್ಟೋ ಜನ ಕೊಂಗ್ರೆಸ ಸದಸ್ಯರು ಯುದ್ಧಯತ್ನ ನಿಧಿಗೆ ಕಾಣಿಕೆಗಳನ್ನು ಕೊಟ್ಟಿದ್ದಾರಲ್ಲ? ಅವರು ಕೊಂಗ್ರೆಸ ಜನರಲ್ಲವೇ?

ನನಗೂ ಕೊಂಗ್ರೆಸಿನ ಬಗ್ಗೆ ಪೂಜ್ಯಭಾವವಿದೆ, ಆದರವಿದೆ. ಜಗತ್ತಿನಲ್ಲಿ ಸತ್ಯ-ಅಹಿಂಸೆಗಳ ಪ್ರಚಾರ ಮಾಡಿ ನವ-ಮನ್ವಂತರ ನಿರ್ಮಾಣ ಮಾಡಬೇಕೆಂಬ ಹವ್ಯಾಸ ಹಿಡಿದ ಕೊಂಗ್ರೆಸ್ಸಿನ ಬಗ್ಗೆ ನಾನೂ ನನ್ನ ಬೆಂಬಲಿಗ ಗೆಳೆಯರೂ ತಲೆಬಾಗುತ್ತೇವೆ. ಆದರೆ ತಮ್ಮ ಕೊಂಗ್ರೆಸ್ಸೇ ಬೇರೆ! ಕೊಂಗ್ರೆಸ್ಸಿನ ಹೆಸರು ಮುಂದೆ ಮಾಡಿ ಸ್ವಾರ್ಥ, ಸ್ವಹಿತ, ಸ್ವಕೀಯರ ಹಿತ ಸಾಧಿಸಲೆತ್ನಿಸುವ ಸ್ವಹಿತ-ಸಾಧುಗಳ ಬಲೆಯಲ್ಲಿ ಬಿದ್ದ ತಮ್ಮ ಕೊಂಗ್ರೆಸ್ಸಿಗೆ ನಾವು ತಲೆಬಾಗುವದಿಲ್ಲ, ಬಾಗಲಾರೆವು. ತಾವೂ ತಮ್ಮ ಸಂಗಡಿಗರೂ ನಡಿಸಿದ ಅಲ್ಪಸ್ವಲ್ಪ (?) ಪ್ರಚಾರ ನೋಡಿದರೆ, ನಡಿಸಿದ ಪ್ರಚಾರದ ನಮೂನೆ ನೋಡಿದರೆ ಮಹಾತ್ಮಾಜಿಯವರ ಕೊಂಗ್ರೆಸ್ಸಿನ ಯಾವ ಭಕ್ತನಾದರೂ "ಅಬ್ರಹ್ಮಣ್ಯಂ" ಎಂದು ಕಿವಿಗಳನ್ನು ಮುಚ್ಚದಿರಲಾರನು! ಒಬ್ಬರಿಗೆ ಗ್ರಾಂಟಿನ ಆಶೆ, ಇನ್ನೊಬ್ಬರಿಗೆ ನೌಕರಿಯ ಆಶೆ, ಮತ್ತೊಬ್ಬರಿಗೆ ಮತ್ತೊಂದರ ಆಶೆ ತೋರಿಸಿ ಮತಯಾಚನೆ ಮಾಡುವದು ಕೊಂಗ್ರೆಸ್ಸಿಗೆ ಒಪ್ಪುವ ಪ್ರಚಾರವೇ? ನನ್ನ ವೈಯಕ್ತಿಕ ಲೋಪದೋಷಗಳನ್ನು ಬಣ್ಣಿಸಿ ಮತಯಾಚನೆ ಮಾಡುವದು ಕೊಂಗ್ರೆಸ್ಸಿನ ಕೀರ್ತಿಗೆ ಶೋಭಿಸುವ ಪ್ರಚಾರಪದ್ಧತಿಯೇ? ಮನೆಯ ಬಾಗಿಲಿಗೆ ಬಂದ ಗೃಹಸ್ಥರಿಗೆ ಯಾರಾದರೂ ಚಹಾ ಇಲ್ಲವೆ ಕೃಪೆಯ ಸತ್ಕಾರ ಸ್ವೀಕರಿಸಿರೆಂದು ಬಿನ್ನವಿಸಿದರೆ, "ಮತ ಕೊಡುತ್ತೇನೆಂದು ಮೊದಲು ವಚನ ಕೊಟ್ಟರೆ ನಿಮ್ಮ ಸತ್ಕಾರ ಸ್ವೀಕರಿಸುತ್ತೇವೆ" ಎಂದು ಭಿಡೆಗೆ ಹಾಕುವದು ಕೊಂಗ್ರೆಸ ಪ್ರಚಾರದ ರೀತಿಯೇ? (ಗಯೆಯ ಗಯಾವಾಳರ ಈ ನಮೂನೆಯನ್ನು ಗೋಕರ್ಣ ಭಟ್ಟರು ಎಂದು ಕಲಿತರೋ ಏನೋ!) ನಿಜವಾದ ಕೊಂಗ್ರೆಸ ಭಕ್ತನು ಇಂಥ ಹೇಯ ಪ್ರಚಾರ ಎಂದೂ ಮಾಡಲಾರನು,

ಮಳೆಗಾಲದಲ್ಲಿ ಬೇಗನೆ ಉಪಾಯ ಮಾಡಿರಿ!

ಮಹಾಮಾರಿಯ ಬೇನೆ ಸುರುವಿದ್ದಾಗ ಪ್ರತಿಬಂಧಕ (Preventive)
ವೆಂದು ಮತ್ತು ಮಹಾಮಾರೀ-ಪಟಕೀ ಕಾಲರಾ (Cholera)
ಬಂದಾಗ ಮೊಟ್ಟಮೊದಲು (ಅನ್ನ ಬೀಳುವ ವರಗೆ)
ಕೊಡಲಿಕ್ಕೆ ಅಪ್ರತಿಮವಾದದ್ದೆಂದರೆ—

ಲಶುನಾದಿ ಗುಟಿಕಾ.

ಈ ಔಷಧದಿಂದ ಅಪಸ್ತಂಭವಾಗದೆ, ಹೊಟ್ಟೆಯುಬ್ಬದೆ ದೀಪನ, ಪಾಚನ ಮತ್ತು ಮಲಶೋಧನವಾಗಿ ಮಲ ನಿಲ್ಲಿಸುವದು, ಗಟ್ಟಿಯಾಗುವದು ಇವೆಲ್ಲ ಕಾರ್ಯವು ಚನ್ನಾಗಿ ಆಗುವದು ಇದರ ಅನುಭವವನ್ನು ಅನೇಕ ಡಾಕ್ಟರರೂ, ವೈದ್ಯರೂ ತೆಗೆದುಕೊಂಡಿರುವರು ಅಜೀರ್ಣದ ಜುಲಾಬ, ಹೊಟ್ಟೆ ಉಬ್ಬುವದು, ಬಹಳ ವೇಗದಿಂದ ಹೊಟ್ಟೆಯಲ್ಲಿ ನೋವಾಗುವದು, ಅಗ್ನಿಮಾಂದ್ಯ ಮತ್ತು ವಾತವಿಕಾರ ಈ ವಿಕಾರಗಳ ಮೇಲೆ ಈ ಗುಳಿಗೆಗಳು ಒಳ್ಳೇ ಗುಣಕಾರಿಯಾಗುವವು ಎಂದು ಪೂರ್ಣ ಅನುಭವವಿದೆ

ದತ್ತಾತ್ರೇಯ ಕೃಷ್ಣ ಸಾಂಡೂ ಬ್ರದರ್ಸ
ಚೆಂಬೂರ ಲಿ.

ಆಯುರ್ವೌಷಧಿ ಕಾರಖಾನೆ, ಚೆಂಬೂರ-ಮುಂಬಯಿ
ಕರ್ನಾಟಕ ಶಾಖೆ:— ಹುಬ್ಬಳ್ಳಿ

ಮಾಡಲಿಕ್ಕಿಲ್ಲ

ಸ್ಥಾನಿಕ ಕೊಂಗ್ರೆಸ ಸಂಸ್ಥೆಯಲ್ಲಿ ಕೊಳೆಯಾದ ಮಾದರಿ ನಾವು ಕೊಂಗ್ರೆಸ ಚುನಾವಣೆಗೆ ನಿಂತು, ಆರಿಸಿ ಬಂದು ಅದನ್ನು ತೊಳೆಯುವೇಕೇ? ಈ ಕೊಳೆ ತೊಳೆಯಲು ಬೇರೆ ಮಾರ್ಗವೇ ಇಲ್ಲವೆಂದು ಇವರು ತಿಳಿಯುತ್ತಾರೆ? ಪತ್ರಿಕೆಗಳಲ್ಲಿ ಟೀಕೆ ಮಾಡಿದಾಗ್ಯೂ, ಬಹಿರಂಗ ಟೀಕೆಯು ಕನ್ನಡಿಯಲ್ಲಿ ಮೋರೆಗೆ ತಗಲಿದ ಮಸಿಯನ್ನು ತೋರಿಸಿಕೊಟ್ಟಾಗ್ಯೂ ನಮ್ಮಲ್ಲಿಯ "ಕೊಂಗ್ರೆಸ ಕೆಲಸಗಾರ" ರು ಸುಧಾರಿಸಲಾರರು, ಅವರು ಸುಧಾರಣೆಯ ಹೀಗೆಯೇ ಹೊರಗಿದ್ದಾರೆ, ಹೀಗೆಂದು ತಮ್ಮ ಅಭಿಪ್ರಾಯವಿರುವದೇ ?

(೨)

ಅಂಕೋಲೆಯ ರಾ|| ಮಂಜನಾಥ ಪೈರ ಇಲೆಕ್ಶನ ಪ್ರಾರ್ಥನೆ ಗೊತ್ತಿದ್ದವರು ಬರೆಯುವದೇನಂದರೆ — ರಾ|| ಮಂಜನಾಥ ವಿಠ್ಠಲ ಪೈರು ಕೊಂಗ್ರೆಸ ಪರವಾಗಿ ಇಲೆಕ್ಶನಿಗೆ ನಿಂತಿದ್ದರೆಂದು ರಾ|| ಗಣಪತಿ ಮಾಧವ ಕಾಮತ ಇವರು ಬರೆದದ್ದು ದಿಟವಲ್ಲ. ಅಂಕೋಲೆಯ ಕೆಲವು ಗೃಹಸ್ಥರು ರಾ| ಪೈರಿಗೆ ಸ್ವತಂತ್ರ ಉಮೇದ್ವಾರರಾಗಿ ನಿಲ್ಲಲು ಮನವೊಲಿಸಿ ರಾ| ಪೈರಿಂದ ನಾಮಪತ್ರ ಕೊಡಿಸಿದ್ದರು; ಹೊರತು ಕೊಂಗ್ರೆಸಿನ ಕಡೆಯಿಂದ ಅವರು ನಿಂತಿದ್ದಲ್ಲ. ನಾಮಪತ್ರ ಕೊಡಿಸಿದ ಗೃಹಸ್ಥರು ಕೊಂಗ್ರೆಸಿನ ೪ ಆಣೆಯ ಮೆಂಬರರು ಸಹ ಇಲ್ಲ. ರಾ|| ಹರಿ ಅನಂತ ಪೈ ಇವರ ಸತ್ಯಾಗ್ರಹದಿಂದ ತೆರವಾದ ಸ್ಥಳದಲ್ಲಿ ಹೊಸ ಅಧ್ಯಕ್ಷರನ್ನು ಆರಿಸುವ ವಿಷಯ ಕೊಂಗ್ರೆಸ ಪಕ್ಷದ ಸಭೆ ಸೇರಿತ್ತು. ಆ ಸಭೆಗೆ ರಾ|| ಪೈರಿಗೆ ನಿಮಂತ್ರಣವಿರಲಿಲ್ಲ. ಅಧ್ಯಕ್ಷರನ್ನಾರಿಸುವ ದಿನ ಕೊಂಗ್ರೆಸ ಪಕ್ಷದ ಉಮೇದ್ವಾರರಿಗೆ ಬಹುಮತ ಸಿಗಲಿಕ್ಕಿಲ್ಲವಾಗಿ ಪಕ್ಷದ ಸೂತ್ರಚಾಲಕರು ತಿಳಕೊಂಡು ರಾ|| ಪೈರಿಗೆ ಕೊಂಗ್ರೆಸಿನ ದೀಕ್ಷೆ ಕೊಳ್ಳಬೇಕಾಗಿ ಬಹು ಪರಿಯಿಂದ ಹೇಳಿಕೊಂಡ ಮೇರೆಗೆ ರಾ|| ಪೈರು ಕೊಂಗ್ರೆಸ ಪಕ್ಷದಲ್ಲಿ ಸೇರಿದರು. ಈ ಕಾಲದಲ್ಲಿ ರಾ|| ಗಣಪತಿ ಕಾಮತರು ಸೆರೆಮನೆಯಲ್ಲಿದ್ದರು. ನಿಜ ಸ್ಥಿತಿ ಅವರಿಗೆ ತಿಳಿಯದಿರಲಿಕ್ಕೆ ಕಾರಣವುಂಟು. ಆದರೆ ರಾ|| ಮಂಜನಾಥ ವಿಠ್ಠಲ ಪೈ ಇವರ ಕಡೆಗೆ ಕೇಳಿಕೊಂಡು ಬರೆಯಲಿಕ್ಕೆ ರಾ| ಕಾಮತರಿಗೆ ಅವಕಾಶವಿತ್ತು. ಅದನ್ನು ಸಹ ತಿಳಕೊಳ್ಳುವಷ್ಟು ಸತ್ಯಾಭಿಮಾನವನ್ನು ಸತ್ಯಾಗ್ರಹಿಗಳಾದ ರಾ| ಕಾಮತರು ತಾಳದಿದ್ದದ್ದು ಸೋಜಿಗದ ಸಂಗತಿ.

ತಾ ೨೦-೮-೪೧

ಜಿಲ್ಲಾ ಸಮಾಚಾರ.

(ಕಳೆದ ವಾರದ್ದು.)

ಮುಂಡಗೋಡ— (ತಾ ೧೩-೮-೪೧) ಈ ತನಕ ಬೆಳೆಯ ಸ್ಥಿತಿ ನೆಟ್ಟಗಿದೆ.

ಕಳೆದ ತಾ ೧೧ನೇಗೆ ಮಹಾಲ ಕಚೇರಿಯಲ್ಲಿ ಜಿಲ್ಲಾಧಿಪತಿಗಳಾದ ರಾ| ಮೋಡಕರವರ ಅಧ್ಯಕ್ಷತೆಯ ಕೆಳಗೆ ಸಭೆ ನಡೆಯಿತು. ಯುದ್ಧಯತ್ನ ಕಾರ್ಯಕ್ಕೆ ಕೈಲಾದ ಮಟ್ಟಿಗೆ ನೆರವಾಗಿರೆಂದು ಜಿಲ್ಲಾಧಿಪತಿಗಳು ಜನರಿಗೆ ಪ್ರೋತ್ಸಾಹಿಸಿದರು. ಆ ಮೇಲೆ ಗ್ರಾಮಸುಧಾರಣೆಯ ಕಾರ್ಯದ ಬಗ್ಗೆ ಕೆಲವು ಚರ್ಚೆ ನಡೆಯಿತು. ರಾ| ನಾಡಕರ್ಣಿಯವರು ಈ ಕೆಳಗಿನ ಸೂಚನೆಗಳನ್ನು ಜಿಲ್ಲಾಧಿಪತಿಗಳ ಮುಂದಿಟ್ಟರು. (೧) ಮುಂಡಗೋಡ ಪೊಲೀಸ ಠಾಣೆಯ ಮುಂದೆ ಒಂದು ಬಾವಿಯುಂಟು. ಜನವರಿ ತಿಂಗಳಲ್ಲೇ ಅದರ ನೀರು ಆರಿಹೋಗುತ್ತದೆ. ಆದರಿಂದ ಬೇಸಿಗೆಯ ೪ ೫ ತಿಂಗಳು ಅಲ್ಲಿರುವ ಲಂಬಾಣಿಜನರಿಗೆ ನೀರಿನ ಕಷ್ಟವಾಗುತ್ತಿದೆ. ಕಾರಣ ಸದರಿ ಬಾವಿಯಲ್ಲಿ ಬೋರಿಂಗ ಮಾಡಿಸಲು ಧನಸಹಾಯ ಕೊಡಬೇಕು. (೨) ಹಿಂದೆ ಮುಂಡಗೋಡ ಚಿಕಿತ್ಸಾಲಯದಲ್ಲಿ ಒಬ್ಬ ಸೂಲಗಿತ್ತಿಯಿದ್ದಳು. ಮುಂದೆ ಅವಳು ಮೈಸೂರಿನಲ್ಲಿ ಕಲಿತವಳೆಂದು ಅವಳಿಗೆ ತೆಗೆದರು! ಸರ್ಜನ ಜನರಲ್ಲರು ಆಕ್ಷೇಪಿಸಿದ್ದರಿಂದ ಅವಳಿಗೆ ತೆಗೆದರಂತೆ! ಆದರೆ ಅವಳ ಸ್ಥಳದಲ್ಲಿ ಇನ್ನೊಬ್ಬಳಿಗೆ ನೇಮಿಸಿರುವದಿಲ್ಲ! ಅಂತು ಇಂತು ಮೈಸೂರ ಸೂಲಗಿತ್ತಿಯೂ ಇಲ್ಲ, ಬ್ರಿಟಿಶ ಸೂಲಗಿತ್ತಿಯೂ ಇಲ್ಲ! ಬಾಳಂತಿಗಳು ಸುಖದಿಂದ ಹಡೆಯುವದ್ದರ ಬದಲು ಅವರಿಗೆ ಮೋಕ್ಷ ಮಾರ್ಗ! ಕಾರಣ ಒಬ್ಬ ಸೂಲಗಿತ್ತಿಯನ್ನು ಕೂಡಲೇ ಕಳಿಸಿಕೊಡುವ ವ್ಯವಸ್ಥೆಯಾಗಬೇಕು. (೩) ಕೊಪ್ಪದ ಹಳ್ಳಕ್ಕೆ ನೀರು ತುಂಬಿದರೆ ಮಳೆಗಾಲದಲ್ಲಿ ಆ ಬದಿಯ ಜನರು ದ್ವೀಪಾಂತರವಾಸದ ಕಷ್ಟ ಅನುಭವಿಸಬೇಕಾಗುತ್ತದೆ. ಅದ್ದರಿಂದ ಆ ಹಳ್ಳಕ್ಕೆ ಒಂದು ಸಂಕ ಕಟ್ಟಿಸಬೇಕು. ಜಿಲ್ಲಾಧಿಪತಿಗಳು ಈ ಸೂಚನೆಗಳನ್ನು ಮಾನ್ಯ ಮಾಡಿದ್ದಾರೆ.

ಅದೇ ತಾ. ೧೦ ನೇಗೆ ಸಂಜೆ ರಾ| ಲಕ್ಷ್ಮೀನಾರಾಯಣ ನಾಡಕರ್ಣಿಯವರ ಅಧ್ಯಕ್ಷತೆಯಲ್ಲಿ ಊರವರು ಸಭೆ ಸೇರಿ, ಸರ್ವೆ ತಿದ್ದುಪಡಿ ಮಾಡುವಾಗ ಪೇಟೆಯ ಪರಿಸ್ಥಿತಿಯನ್ನೂ ಮಾಹಿತಿಯನ್ನೂ ಸರಕಾರದೆದುರು ಇಡಲು ತಗಲುವ ಖರ್ಚಿನಗೋಸ್ಕರ ವರ್ಗಣಿಗಳನ್ನು ಕೂಡಿಸಬೇಕಾಗಿಯೂ ಅವಶ್ಯವುಳ್ಳ ದಾಖಲೆಗಳನ್ನು ಸಂಗ್ರಹಿಸಬೇಕಾಗಿಯೂ ಗೊತ್ತುವಳಿಯಾಯಿತು. ಇಲ್ಲಿಯ ಶ್ರೀ ಸದಾಶಿವ ದೇವರ ಕೆಲವು ಭೂಮಿಗಳು ಸರ್ವೆ ಬಾಕಿ ಬಗ್ಗೆ ಲಿಲಾಂವಾಗಿ ದೇವರಿಗೆ ಕೆಲವು ಹಣ ಸಿಕ್ಕಿದೆ. ಸದರಿ ಹಣವನ್ನು ೫ ಜನ ಪಂಚರ ಹೆಸರಲ್ಲಿ ಬೇಂಕಿನಲ್ಲಿಟ್ಟು, ಅದರ ಬಡ್ಡಿಯ ಕೆಲವೊಂದು ಭಾಗ ದೇವರ ಅಮೃತಪಡಿಯ ಬಗ್ಗೆ ವಿನಿಯೋಗಿಸಬೇಕೆಂತಲೂ ಉಳಿದ ಬಡ್ಡಿ ಹಣದಿಂದ ಗುಡಿಯ ಜೀರ್ಣೋದ್ಧಾರ ಮಾಡಬೇಕೆಂತಲೂ ಇನ್ನೊಂದು ಗೊತ್ತುವಳಿಯೂ ಆಯಿತು.

ಮುಂಡಗೋಡದವರೊಬ್ಬರು ಬರೆಯುತ್ತಾರೆ.— ಹಳಿಯಾಳ, ಸುಪಾ, ಯಲ್ಲಾಪುರ ಮತ್ತು ಮುಂಡಗೋಡ ಪೇಟೆ-ತಾಲೂಕುಗಳಲ್ಲಿ ಶಿಕ್ಷಣ ಸೌಕರ್ಯಗಳಿಲ್ಲ. ಈ ಭಾಗಗಳಲ್ಲಿ ಇಂಗ್ಲಿಷ ಶಿಕ್ಷಣದ ಅನುಕೂಲತೆಯಿಲ್ಲದಿರಲಿ, ಕನ್ನಡ ಮುಲ್ಕಿ ತನಕ ಕಲಿಸುವ ಏರ್ಪಾಟೂ ಇರುವದಿಲ್ಲ. ಆದರಿಂದ ಇಲ್ಲಿ ಮೆಟ್ರಿಕ್, ಮುಲ್ಕಿ ವರೆಗೆ ಕಲಿತವರು ಸಿಗುವದಿಲ್ಲ. ಅದರಲ್ಲೂ ಯಾರಾದರೂ ಕಷ್ಟಪಟ್ಟು ಕಲಿತರೆ ಅವರಿಗೆ ನೌಕರಿ ಮುಂತಾದ ಪ್ರೋತ್ಸಾಹ ಸಿಗುವದಿಲ್ಲ. ಉಚ್ಚತರ ನೌಕರಿಗಳು ಶಿಕ್ಷಣದಲ್ಲಿ ಮುಂದರಿದವರಿಗೇ ಸಿಗುತ್ತವೆ! ಆದರಿಂದ ಈ ಭಾಗಗಳ ಜನರಿಗೆ ಕಲಿಯಬೇಕೆಂಬ ಉತ್ಸಾಹವೂ ಇರುವದಿಲ್ಲ. ಸರಕಾರದವರು ಇನ್ನು ಮುಂದೆ ಈ ಸ್ಥಿತಿ ಸುಧಾರಿಸಬೇಕು. ನೌಕರಿಗಳಲ್ಲಿ ಈ ಭಾಗಗಳ ಜನರಿಗೇ ಪ್ರಾಶಸ್ತ್ಯ ಕೊಡಬೇಕು ಇತ್ಯಾದಿ.

ಕುಂಭಾರವಾಡಾ— (ತಾ ೮-೮-೪೧) ಕಳೆದ ತಾ ೪-೮-೪೧ರ "ವೃತ್ತ"ದಲ್ಲಿ ಕುಂಭಾರವಾಡಾ ಚಿಕಿತ್ಸಾಲಯದ ಡಾಕ್ಟರರ ಸಂಬಂಧದ ಕುರಿತು ದೂರು ಬಂದದ್ದು ನೋಡಿ ಆಶ್ಚರ್ಯಗೊಂಡು ಕುಂಭಾರವಾಡೆಯವರೊಬ್ಬರು ಬರೆಯುತ್ತಾರೆ — ಇಲ್ಲಿಯ ಡಾಕ್ಟರರು ಜೊಯಿಡಾದ ಡಾಕ್ಟರರು. ಕುಂಭಾರವಾಡೆಯ ಸುತ್ತುಮುತ್ತು ಇರುವ ಹಳ್ಳಿಗಳನ್ನು ಮೇಲಿಂದ ಮೇಲೆ ಸಂಚರಿಸಿ ಚಳಿಜ್ವರದಿಂದ ನರಳುತ್ತಿರುವ ಜನರಿಗೆ ಔಷಧೋಪಚಾರ ನಡಿಸಲಿಕ್ಕೇ ಅವರ ನೇಮಣೂಕಿಯಾಗಿದೆ. ಕುಂಭಾರವಾಡೆಯಲ್ಲಿ ಮುಕ್ಕಾಮು ಇದ್ದಾಗಷ್ಟೇ ಅವರು ಬೇರೆ ರೋಗಿಗಳಿಗೂ ಚಿಕಿತ್ಸೆ ನಡಿಸಬೇಕೆಂದು ಗ್ರಾಮಸುಧಾರಣಾ ಸಮಿತಿಯವರು ಅವರಿಗೆ ಕೆಲವೊಂದು ಔಷಧಗಳನ್ನು ತರಿಸಿಕೊಡುತ್ತಾರೆ. ಇಂಥ "ಸಂಚಾರಿ" ಡಾಕ್ಟರರು ತಮ್ಮ ಸಂಚಾರ ಕಡಿಮೆ ಮಾಡಬಲ್ಲರೆಯೇ? ಮಾಡಬೇಕೆಂದು ಹೇಳುವದು ನ್ಯಾಯವೇ? ಇತ್ಯಾದಿ.

ಕುಂಭಾರವಾಡಾ ರಸ್ತೆಯ ಮೇಲೆ ಮಾರ್ಗ ದುರಸ್ತಿಯ ಕೆಲಸ ನಡೆಯುವದಿಲ್ಲೆಂಬ ದೂರು ಅಷ್ಟೇನು ಸರಿ ಇರುವದಿಲ್ಲೆಂದೂ ಮೇಲ್ಕಾಣಿಸಿದ ಗೃಹಸ್ಥರು ತಿಳಿಸುತ್ತಾರೆ.

ಕಾರವಾರ— (ತಾ ೨೩-೮-೪೧) ರಾ|| ಎಮ್. ಜಿ. ಬಾಂದಾವರಕರರಿಗೇ ಮತ್ತು ಮೂರು ವರ್ಷ ೪ ತನಕ ಸರಕಾರಿ ವಕೀಲರನ್ನಾಗಿ ನೇಮಿಸಿದ್ದಾರೆ.

ಅಕ್ಕಿ ಧಾರಣೆ ದಿನ ಹೋದಂತೆ ಏರುತ್ತಿದೆ! ಕಳೆದ ವರ್ಷ ಇದೇ ಸಮಯ ೧ ರೂಪಾಯಿಗೆ ೧೩-೧೪ ಸೇರು ಅಕ್ಕಿ ಸಿಗುತ್ತಿತ್ತು. ಮೊನ್ನೆಯ ಸಂತೆಯಲ್ಲಿ ಅದೇ ಜಾತಿಯ ಅಕ್ಕಿ ೮-೮|| ಸೇರಿನಂತೆ ಮಾರಾಟವಾಯಿತು! ಮುಂದಿನ ಸಂತೆಯಲ್ಲಿ ಇನ್ನೂ ತುಟ್ಟಿಯಾಗಬಹುದು! ಹೀಗೆ ಅಕ್ಕಿ ತುಟ್ಟಿಯಾಗುತ್ತ ಹೋದರೆ, ಬಡವರು ಉಪವಾಸ ಸಾಯುವದೇ! ಅಧಿಕಾರಿಗಳು ಇನ್ನೂ ಇತ್ತ ಲಕ್ಷ ಪೂರೈಸಿದ್ದು ಕಂಡುಬರುವದಿಲ್ಲ. ಯುದ್ಧಾರಂಭವಾದಾಗ ಇದೇ ರೀತಿ ವ್ಯಾಪಾರಿಗಳು ಧಾನ್ಯವಸ್ತುಗಳ ಧಾರಣೆಯನ್ನೇರಿಸಿದಾಗ ಜಿಲ್ಲಾಧಿಕಾರಿಗಳು ಕಾಯದೆಯ ಭೀತಿ ತೋರಿಸಿ ಹೇಳಿರಿ ಇಲ್ಲವೆ ಬಂಧುಭಾವನೆಯ ಉಪದೇಶ ಮಾಡಿ ಹೇಳಿರಿ, ಪೇಟೆಯಲ್ಲಿ ಜೀವನಕ್ಕೆ ಅವಶ್ಯವುಳ್ಳ ಧಾನ್ಯವಸ್ತುಗಳ ಮತ್ತು ಜಿನಸುಗಳ ಧಾರಣೆಗಳನ್ನು ಕೆಲವೊಂದು ಪರಿಮಿತಿಯ ಹೊರಗೆ ಏರಿಸದಂತೆ ವ್ಯಾಪಾರಿಗಳ ಮೇಲೆ ನಿಯಂತ್ರಣವನ್ನಿಟ್ಟಿದ್ದರು. ಈಗಲೂ ಅವರು ಹಾಗೆ ಮಾಡಬಹುದಿತ್ತು. ಆದರೆ ಮಾಡಿರುವದಿಲ್ಲ! ಇನ್ನಾದರೂ ಎಚ್ಚೆತ್ತು ಮಾಡುವರೇ? ಅಥವಾ ಊರಲ್ಲಿ ಗೋಳು ಮಿಗಿಲಾಗಿ ಲೂಟಿ ಮುಂತಾದ ಅನಾಹುತಗಳಾದ ಮೇಲೆಯೇ ಅವರು ಕಣ್ತೆರೆಯುವರು?

ಹುಲೇಕಲ್ಲ— ಇಲ್ಲಿಯ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನವು ಸೋಂದಾಪುರದ ವ್ಯಾಸರಾಯ ಮಠಕ್ಕೆ ಒಪ್ಪಿತವಾಗಿರುತ್ತದೆ. ಶ್ರೀ ದೇವರಲ್ಲಿ ಬೇರೆ ಬೇರೆ ಸೇವೆ-ವಿನಿಯೋಗಗಳ ಬಗ್ಗೂ ಉತ್ಸವಾದಿಗಳ ಬಗ್ಗೂ ಸ್ವಾದಿಯ ಅರಸು-ಮನೆತನದವರೂ ಬೇರೆಯವರೂ ಬಿಟ್ಟ ಸಾವಿರಾರು ರೂಪಾಯಿ ಉತ್ಪನ್ನ ಬರುವ ಭೂಮಿಗಳುಂಟು. ಆದರೆ ಕಾಲಗತಿಯಿಂದಲೋ ಮಠದವರ ಬುದ್ಧಿ ತಿರುಗಿದ್ದರಿಂದಲೋ ಆ ಎಲ್ಲ ಉತ್ಸವಗಳೂ ವಿನಿಯೋಗಗಳೂ ಈಗ ಮಾಯವಾಗಿವೆ! ಇತ್ತಲಾಗಿ ಶ್ರೀ ದೇವರ ಆಸ್ತಿಯ ಆಡಳಿತಕ್ಕಾಗಿ ಮಠದಿಂದ ನೇಮಿಸಲ್ಪಟ್ಟ ವಹಿವಾಟುಗಾರ ರಾ| ಭೀಮಸೇನರಾಯರು ಶ್ರೀ ದೇವಸ್ಥಾನದಲ್ಲಿ ಆಗಿದ್ದ ಸೇವೆಗಳನ್ನೂ ಮರ್ಯಾದೆಗಳನ್ನೂ ಒಂದೊಂದಾಗಿಯೇ ನಿಲ್ಲಿಸಿ ಮಿತವ್ಯಯ (?) ಮಾಡಹತ್ತಿದ್ದಾರೆ! ಮಠದಲ್ಲಿ ಹಿಂದೆ ೨ ನಂದಾದೀಪಗಳಿದ್ದವು, ಈಗ ಒಂದೇ ದೀಪ ಉರಿಯುತ್ತಿದೆ! ಅರ್ಚಕರಿಗೆ ಕೊಡತಕ್ಕ ವರ್ಷಾಸನಕ್ಕೆ ಕತ್ತರಿ ಹಾಕಿದ್ದಾರೆ! ಹಿಂದೆ ಪ್ರತಿ ದಿನ ದೇವರಿಗೆ ಒಂದು ಕಾಯಿ ಸಮರ್ಪಣೆಯಾಗುತ್ತಿತ್ತು, ಈಗ ಅದನ್ನು ನಿಲ್ಲಿಸಿ, ಅರ್ಚಕರು ಮನೆಯಲ್ಲಿ ಪೂಜೆಗೆ ಒಡೆಯುವ ಕಾಯನ್ನೇ ದೇವರಿಗೆ ಅರ್ಪಿಸಬೇಕೆಂದು ಹೊಸ ವಹಿವಾಟುಗಾರರು ಕಟ್ಟಳೆ ಮಾಡಿದ್ದಾರೆ! ಜನರ ಹಬ್ಬದ ಕಾಲಕ್ಕೆ ಪ್ರತಿ ವರ್ಷ ಬರುತ್ತಿದ್ದ ಕಂಬಿ (ಪಾಲಕೀಯ ಹಬ್ಬ ಕಾಣಿಕೆ) ಮುಂತಾದವುಗಳ ಬಗ್ಗೆ ಮಠದಿಂದ ಕೆಲವೊಂದು ಮರ್ಯಾದೆ ಸಲ್ಲತಕ್ಕದ್ದಿತ್ತು; ಅದನ್ನು ನಿಲ್ಲಿಸಿದ್ದಾರೆ. ಮಠದ ಗಣಪತಿಯ ಬಗ್ಗೆ ರೈತರು ಮಣ್ಣು ತಂದುಕೊಡಬೇಕೆಂದು ಹಿರಿಯರ ಕಾಲದಿಂದ ನಡೆದುಬಂದ ನಿಯಮವುಂಟು. ಮಣ್ಣು ತಂದವರಿಗೆ ಎರಡು ಮರ್ಯಾದೆ ಸಲ್ಲಬೇಕು; ರೈತರು ಮಣ್ಣು ತರದಿದ್ದರೆ ಎಂಟಾಣೆ ದಂಡ ಕೊಡಬೇಕೆಂದು ಗೇಣಿ ಕರಾರಿನಲ್ಲಿ ಶರ್ತು ಉಂಟಂತೆ. ರಾ|| ಭೀಮಸೇನರಾಯರು ಕಾಯಿ ಮರ್ಯಾದೆ ನಿಲ್ಲಿಸಿದ್ದಾರೆ, ಅದರಿಂದ ರೈತರೂ ಮಣ್ಣು ತರುವದಿಲ್ಲ! ಆದರೆ ರಾಯರು ಗುತ್ತಿಗಾರರಿಂದಲೇ ಅಗ್ಗದಲ್ಲಿ ಮಣ್ಣು ತಕ್ಕೊಂಡು ರೈತರಿಂದ ಮಾತ್ರ ಎಂಟಾಣೆಯಂತೆ ದಂಡ ವಸೂಲು ಮಾಡುತ್ತಾರೆ! ಜನರ ಹಬ್ಬದ ಕಾಲಕ್ಕೆ ಸ್ವರ್ಣವಲ್ಲಿ, ತೀರದೀದಿ ವಗೈರೆ ಮಠಗಳಿಂದ ಈ ಮಠಕ್ಕೆ ಎರಡು ಕಂಬಿ, ೧೦ ಕಾಯಿ ಹೀಗೆ ಮರ್ಯಾದೆ ಬರುತ್ತಿದೆ. ಮಠದವರು ಆ ಮರ್ಯಾದೆ ತಂದವರಿಗೆ ಎರಡೆರಡು ಕಾಯಿ-ಮರ್ಯಾದೆಯನ್ನಿತ್ತು, ಮೇಲೆ ಹೋದ ಮಠಗಳಿಗೂ ಪ್ರತಿ-ಮರ್ಯಾದೆ ಕಳಿಸುತ್ತಿದ್ದರು. ಈ ರಾಯರ ಕಾರಭಾರದಲ್ಲಿ ಬಂದ ಮರ್ಯಾದೆ ಒಳಗೆ ಹಾಕುವದೇ ಹೊರತು, ಪ್ರತಿ-ಮರ್ಯಾದೆ ಕೊಡುವ ಕಟ್ಟಳೆಯೇ ಇಲ್ಲ!' ಮಠಕ್ಕೆ ಯಾರಾದರೂ ಬ್ರಾಹ್ಮಣ ಸ್ವಾಮಿಗಳು ಪರಸ್ಥಳಗಳಿಂದ ಬಂದರೆ ಅವರಿಗೆ ಊಟ ಹಾಕುವ ಬಗ್ಗಾಗಿ ಸರಕಾರದಿಂದ ದಿನ ೧೦ ರೂ ಸಿಗುತ್ತವಂತೆ. ಆದರೆ ಇತ್ತಲಾಗಿ ಮಠದಲ್ಲಿ ಯಾರಿಗೂ ಊಟ ಸಿಗುವದಿಲ್ಲ! ಶ್ರೀ ಮಠದ ಗುರುಗಳೂ ಮಠಕ್ಕೆ ಸಂಬಂಧಪಟ್ಟ ಶಿಷ್ಯವರ್ಗದವರೂ ಈ ಎಲ್ಲ ಸಂಗತಿಗಳನ್ನು ಲಕ್ಷ್ಯಕ್ಕೆ ತಕ್ಕೊಂಡು ಹಿರಿಯರು ಇಟ್ಟ ಉತ್ಸವ ವಿನಿಯೋಗಗಳೂ ಮಠದಲ್ಲಿ ಪ್ರಾಚೀನ ಕಾಲದಿಂದ ನಡೆದು ಬಂದ ಕಟ್ಟಳೆ ನೇಮಗಳೂ ಸರಿಯಾಗಿ ನಡೆಯುವಂತೆ ವ್ಯವಸ್ಥೆ ಮಾಡಬೇಕಾಗಿ ಹುಲೇಕಲ್ಲ ಹೋಬಳಿಯ ಪ್ರಾಂತದ ಪರಂಪರೆಯ ಅಭಿಮಾನಿಗಳೊಬ್ಬರು ವಿನಂತಿಸುತ್ತಾರೆ.

ಸವಣೂರದಲ್ಲಿ ಶ್ರೀ ಗಂಗಾಧರ ಥಿಯೇಟರ ಇರುವದು; ಸಿನೇಮಾದವರಿಗೂ ನಾಟಕದವರಿಗೂ ಉಪಯುಕ್ತವಾದದ್ದು, ಈ ಊರ ಜನಸಂಖ್ಯೆ ೧೩ ಸಾವಿರ ಥಿಯೇಟರಿನ ಉದ್ದಳತೆ ೧೦೦ ಫೂಟು, ಅಗಲಳತೆ ೬೦ ಫೂಟು ಉಂಟು ಭಾಡಿಗ ತರೀಕ ಬೇಕಾದವರು ಕೆಳಗಿನ ವಿಳಾಸಕ್ಕೆ ಭೆಟ್ಟಿಯಾಗಿರಿ

ಮಾಲೀಕರು —

ತೋಟಪ್ಪ ರುದ್ರಪ್ಪ ಒ ಶೆಟ್ಟಿ,
ಸವಣೂರ ಸ್ಟೇಟ

ಸಹ್ಯಾದ್ರಿ ಫಾರ್ಮಸಿ
ಕುಮಟಾ.

ಬಾಳಂತಿಯರಿಗೆ— [illegible] ದಶಮೂಲಾರಿಷ್ಟ ಮತ್ತು ಧನ್ವಂತರ [illegible] ಉಪಯುಕ್ತವಾದವು

ಚಿಕ್ಕ ಮಕ್ಕಳ ಜಂತುವಿನ ಬಾಧೆ [illegible] ತೃಪ್ತಿಯಾಗಲಿಕ್ಕೆ [illegible] ದಿವ್ಯವಾದ ಔಷಧವು।

ವಾಯಿ-ಕೆಮ್ಮಿಗೆ ಎಂಟಿ [illegible] ಗುಣಪಡಿಸುವ ಕಫನಾಶಕವು

ಯಾವತ್ತೂ ಪ್ರಕಾರಗಳ
ಕಷಾಯ, ಅರಿಷ್ಟ, ಆಸವ,
ತೈಲಾದಿ ಔಷಧ ಸಾಮಗ್ರಿಗಳು
ಸದಾ ಸಿಗುತ್ತವೆ.

**ಡಾ॥ ಎಸ್. ಕೇ. ಭಟ್ಟ,
ಹಳ್ಕಾರ, ಕುಮಟಾ.**

ಹೈಸ್ಕೂಲುಗಳಿಗೆ ಬೇಕಾಗುವ ಎಲ್ಲ ತರದ
ಇಂಗ್ಲಿಷ-ಸಂಸ್ಕೃತ-ಕನ್ನಡ-ಮರಾಠಿ
ಪುಸ್ತಕಗಳು ನಮ್ಮಲ್ಲಿ ಸಿಗುತ್ತವೆ

ನಿಮಗೆ ಬೇಕಾಗುವ ಪುಸ್ತಕಗಳನ್ನು ಇಂದೇ ಕೊಂಡುಕೊಳ್ಳಿ [illegible] ಮಾಡಿದಲ್ಲಿ—[illegible] ಪ್ರಾಥಮಿಕ ಶಾಲೆಗಳಿಗೆ ಬೇಕಾಗುವ [illegible] ಪುಸ್ತಕಗಳೂ [illegible]

ದಿ ನ್ಯೂ ಸ್ವಾಧ್ಯಾಯ ಏಜನ್ಸಿ, ಕುಮಟಾ

ಧಾತುಪುಷ್ಟಿ ಲೇಹ. (ಸುವರ್ಣ, ಸಾಲಾಮಿಶ್ರಿ ಕಲ್ಪದ ಮಿಶ್ರ)

ನಷ್ಟವಾಗಿದ ಪುರುಷತ್ವಗಳನ್ನು ಪುನಃ ಕಲ್ಪಿಸಿಕೊಡುವ ಉತ್ತಮ ಶಕ್ತಿದಾಯಕ ಔಷದಿ ವೀರ್ಯವೃದ್ಧಿ, ಆಯುರಕ್ತಿಗಳನ್ನು ಹೆಚ್ಚಿಸಿ, ಆರೋಗ್ಯ, ಇಂದ್ರಿಯಶಕ್ತಿ ಇವೇ ಮೊದಲಾದವುಗಳನ್ನು ಕಲ್ಪಿಸಿಕೊಡುವದು ಬಾಟ್ಲಿ ೧ಕ್ಕೆ ರೂ 2—8—0

ಕಸ್ತೂರಿ ಮಿಶ್ರಣ ದಶಮೂಲ.

ಪ್ರಸವ ನಂತರ ಬಾಣಂತಿಯರು ಉಪಯೋಗಿಸತಕ್ಕ ಆರೋಗ್ಯವಾದ ಶಕ್ತಿವರ್ಧಕ ರಸಾಯನ ಬಾಟ್ಲಿ ೧ಕ್ಕೆ ರೂ 1—8—0

ಮಲೇರಿಯಾ ನಿವಾರಿಣಿ:- ಮಲೇರಿಯಾ ಜ್ವರ, ಚಳಿಜ್ವರ, ಇನ್ಫ್ಲುಯೆಂಜಾ, ಮಲಬದ್ಧತೆ ಇವಗಳಿಗೆ ಪ್ರಸಿದ್ಧ ಔಷದಿ ಬಾಟ್ಲಿ 1ಕ್ಕೆ ರೂ 0—13—0

ಸ್ಪ್ಲೀನ ಮಿಕ್ಸ್ಚರ:- ಜ್ವರಗಡ್ಡೆಯನ್ನು ಕರಗಿಸುವ ದಿವ್ಯ ಔಷಧಿ ಬಾಟ್ಲಿ 1ಕ್ಕೆ ರೂ 1—2—0

[illegible] ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕ ಔಷಧ ಚುನಾಯಿಸಿ ಕಳಿಸಲಾಗುವದು ಕ್ಯಾಟಲಾಗಿಗೆ ಬರೆರಿ

ಎಸ್. ಗಣಪಯ್ಯ ಎಂಡ್ ಸನ್ಸ, ರಥಬೀದಿ ನಂಬ್ರ 5 ಮಂಗಳೂರು. ದ. ಕ.

[illegible] ಸಿಗುವ ಸ್ಥಳ — (1) ಸ್ವಸ್ತಿಕ ಫಾರ್ಮಸಿ ಕುಮಟಾ (2) [illegible] ಸ್ಟೋರ ಹೊನ್ನಾವರ, (3) [illegible] (4) ಕೆ. ಗಣಪಯ್ಯ [illegible], [illegible], ಭಟ್ಕಳ (5) [illegible] (6) ಪ್ರೈಮಿಯರ ಸ್ಟೋರ್ಸ, ಕಮಿಸ್ಟ್ಸ, 183, ಸುಪಾರಿಬಂಗ[illegible] ( ) ಜನರಲ್ ಸ್ಟೋರ [illegible] ಮಾಟುಂಗಾ

ದಿ ಬಾಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್,

ಸ್ಥಾಪನೆ 1908.

ಈ ಕಂಪನಿಯು ಪೂರ್ಣ [illegible] ಇದರ [illegible] ದರಗಳೂ, ಶರ್ತುಗಳೂ ಬಹಳ [illegible] ಈ ಕಂಪನಿಯ ಹಣವು ಸರಕಾರಿ ಪ್ರಾಮಿಸರಿ ನೋಟುಗಳಲ್ಲಿಯೂ ಇಂಡಿಯನ್ ಟ್ರಸ್ಟ [illegible] ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಹೊಸ [illegible] ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

[illegible] ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ [illegible]

Kumta Agents
D K Nayak Bros
K N Nayak
[illegible]
R V. Prabhu

K. Padmanabha Rao & Sons,
BELGAUM
Chief Agents for
Karnatak Districts & S M States

ಒಕ್ರೆಟಿಂಮ

ಮಕ್ಕಳ ಮರಣವನ್ನು ತಪ್ಪಿಸುವದು.

ಏಜನ್ಸಿ ಕಲಕತ್ತಾ, ಮುಂಬಯಿ ಮದ್ರಾಸ, ಬೆಂಗಳೂರು, ಮಂಗಳೂರು

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆದಾಗುವಂಥ ಹಸುರು ನರಗಳು ಕಾಣಿಸಿ [illegible] ಗಡ್ಡೆರೋಗ, ಕೋಪೆ ರೋಗ, ಮೈ-ಕೈ ಬಾವುಗಳಿಗೆ ದಿವ್ಯೌಷಧ!

[illegible] ತಿಂಗಳಿಗೆ ಸಾಕಾಗುವ ಔಷಧದ ಬೆಲೆ [illegible] 3



ಏತಕ್ಕೆ ಚಿಂತಿಸುವಿರಿ?

ಆಸೇತುಹಿಮಾಚಲದ ವರೆಗೂ ೬೩ ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ ವೃದ್ಧಿಗಳಿಗೆ [illegible] ಔಷಧವಾಗಿದೆ

ಡಾ॥ ಪಿ. ಎಸ್. ಶ್ರೀನಿವಾಸರಾವ,
[illegible]
[illegible]
[illegible]
[illegible]
ದೇವಪ್ಪಾ [illegible]

[illegible] (ಸಂಪಾದಕರು) ಇವರು ತಮ್ಮ "[illegible] ಪ್ರಿಂಟಿಂಗ ಪ್ರೆಸ"ದಲ್ಲಿ [illegible] ಪ್ರಕಟಿಸಿದರು

Reg. No. B. 1270.

Monday, 8th September, 1941.

ವರ್ಷ ೨೪

ಕಾನಡಾವೃತ್ತ

THE KANARA NEWS.

ಸಂಚಿಕೆ ೧೦

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಮನಿಯಾರ್ಡರಿನಿಂದ ರೂ. 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಸ್ಮಾಲ ಟೈಪಿನ (೧೫ ಎಮ್ ಉದ್ದ) ೮ ಸಾಲುಗಳವರೆಗೆ ರೂ 1-8-0
೮ ನಂತ್ರ ಪ್ರತಿಸಾಲಿಗೆ 0-3-0.
ಹೆಡ್ಡಿಂಗದ ಸಾಲು ಎಷ್ಟು ಹೊತ್ತಿರುವದೋ ಆ ಮಾಪಿನಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಬಾಕಿ ಜಾಹಿರಾತುಗಳ ಆಗ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವವು.

-*(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೮ ಮಾಹೆ ಸಪ್ಟಂಬರ ಸನ್ ೧೯೪೧ನೇ ಇಸವಿ)*-

ಮಕ್ಕಳಿಗೆ--

ಮಳೆಗಾಲದಲ್ಲಿ

ಶೀತ, ನೆಗಡಿ, ಕೆಮ್ಮು, ಅಪಚನ ಮುಂತಾದ ವಿಕಾರಗಳು ಖಂಡಿತವಾಗಿ ಆಗುತ್ತವೆ.

"ಕುಮಾರಿ ಆಸವ ನಂ. ೩"

ಇದು ಮೇಲಿನ ವಿಕಾರಗಳಿಗೆ ಶ್ರೇಷ್ಠವಾದ ಔಷಧವು.

ಶ್ರೀ ಧೂತಪಾಪೇಶ್ವರ ಪನವೇಲ, ಲಿ.,

ಕರ್ನಾಟಕ ಕೇಂದ್ರ- ಯುನ್ಯಾಟೆಡ್ ಏಜನ್ಸೀಜ, ಹುಬ್ಬಳ್ಳಿ.

ಕಾರವಾರ:— ಮೆಸರ್ಸ ಮುಜುಮದಾರ-ಕಕಬೇಕರ ಬ್ರದರ್ಸ.
ಅಂಕೋಲಾ:— ದಿ ಸ್ಟೇಶನರಿ ಡಿಪೋ
ಕುಮಟಾ:— ದೇವಪ್ಪಾ ಅಯ್ಯು ನಾಯ್ಕ.
ಹೊನ್ನಾವರ— ಮೆಸರ್ಸ ಕಲ್ಯಾಣಪುರ ಬ್ರದರ್ಸ.
ಶಿರ್ಶಿ:— ಶಿರ್ಶಿ ಡ್ರಗ್ ಸ್ಟೋರ್ಸ
ಎಸ್. ಎಲ್ ಧಾಕಪ್ಪಾ ಎಂಡ್ ಸನ್ಸ.
ಸಿದ್ದಾಪುರ:— ಮೆಸರ್ಸ ಶಾಮಯ್ಯನ ಬ್ರದರ್ಸ

"ಸ್ಟಾರ ಆಫ್ ಕೆನರಾ ಪ್ರೆಸ್",

ಕುಮಟಾ.

—*—

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಯಿಂದ ಬೇಕಾದ ನಮೂನೆಯ ಕಲರ ಪ್ರಿಂಟಿಂಗ ವಗೈರೆ ಸಣ್ಣ ದೊಡ್ಡ ಛಾಪಾ ಕೆಲಸಗಳೂ, ಪುಸ್ತಕ ಮುದ್ರಣವೂ, ರೂಲಿಂಗ ಬ್ಯಾಂಡಿಂಗ ಕೆಲಸವೂ ಉತ್ತಮವಾಗಿ ಸುಲಭ ದರದಲ್ಲಿ ತಕ್ಕ ಕಾಲಕ್ಕೆ ತಯಾರಿಸಿ ಕೊಡಲಾಗುವದು.

ಇವಲ್ಲದೆ ಕೋರ್ಟ ಕಚೇರಿ ಉಪಯೋಗದ ವಕಾಲತ ವಗೈರೆ ಫಾರ್ಮುಗಳೂ, ಕಸ್ಟಮ್ ಕಚೇರಿಯ ಶಿಪ್ಪಿಂಗ ಬೀಲು-ಪತ್ಕಿ ವಗೈರೆ ಫಾರ್ಮುಗಳೂ, ಗೇಣಿ ರಶೀದಿ ಬೂಕು, ಗೇಣಿಚೀಟಿ ಏದುರ್ನಾಡಿ ಫಾರ್ಮುಗಳೂ ವಗೈರೆ ಮಾರಾಟಕ್ಕೆ ತಯಾರ ಸಿಗುತ್ತವೆ

ನಿಮ್ಮ ಛಾಪಾ ಕೆಲಸಗಳನ್ನು ನಮ್ಮಲ್ಲಿಗೇ ಕಳಿಸಿರಿ ಒಮ್ಮೆ ಅನುಭವ ತಕ್ಕೊಂಡು ನೋಡಿರಿ !

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ಹೆಡ್ ಆಫೀಸು — **ಕುಂದಾಪುರ.**

ಬ್ರೆಂಚ ಆಫೀಸುಗಳು -- ಅಂಕೋಲಾ, ಕುಂದಾಪುರ, ಬೈಂದೂರು, ಕೋಟೇಶ್ವರ, ಕುಮಟಾ, ಗೋಕರ್ಣ, ಕಾರವಾರ, ಹಾವೇರಿ, ಶಿವಮೊಗ್ಗಾ, ತರೀಕೆರೆ, ನಗರ, ಸೋಮವಾರಪೇಟೆ ಮತ್ತು ವೀರರಾಜಪೇಟೆ

ಕಾಯಂ ಠೇವುಗಳು:- 3 ತಿಂಗಳಿಗೆ ಶೇ ರೂ 3ರಲ್ಲಿ, 6 ತಿಂಗಳಿಗೆ ಶೇ 3^1ರಲ್ಲಿ, ೧ ವರ್ಷಕ್ಕೆ ರೂ 4ರಲ್ಲಿ, 2 ವರ್ಷ ಯಾ ಹೆಚ್ಚಿನ ಅವಧಿಗೆ ಶೇ 4^1ರಲ್ಲಿ

ಸೇವಿಂಗ್ಸ ಬೇಂಕ್ ಠೇವುಗಳು ಮತ್ತು ಚಾಲು ಠೇವುಗಳು ಸಹ ಅಂಗೀಕರಿಸಲ್ಪಡುವವು

ಭಂಗಾರದ ದಾಗಿನೆಗಳ ವ ಇತರ ವ್ಯಾಪಾರದ ಮ್ಹಾಲುಗಳ ಆಧವಿನ ಮೇಲೆ ಸವಲತ್ತಿನ ದರದ ಬಡ್ಡಿಯಲ್ಲಿ ಸಾಲ ಕೊಡಲ್ಪಡುವದು

ವ್ಯಾಪಾರದ ಕೇಂದ್ರಗಳಿಗೆ ಡ್ರಾಫ್ಟುಗಳು, ಚಕ್ಕುಗಳು ಸಹ ಕೊಡಲ್ಪಡುವವು ಎಲ್ಲ ತರದ ಬೇಂಕಿನ ವ್ಯವಹಾರಗಳು ಸವಲತ್ತಿನ ದರದಿಂದ ನಡಿಸಲ್ಪಡುವವು

ಕುಂದಾಪುರ,
[illegible]-8-1941

The Agricultural & Industrial Bank, Ltd

ಕಾರವಾರ ಜಿಲ್ಹಾ ಪ್ರಾಥಮಿಕ ಶಿಕ್ಷಕ ಅರ್ಬನ್ ಬೇಂಕ, ಲಿಮಿಟೆಡ್.

ಹೆಡ್ ಆಫೀಸು.- ಅಂಕೋಲಾ.

ನೋಟೀಸು.

ಈ ಸಂಘದ 1940-41ನೇ ಸಾಲಿನ ವಾರ್ಷಿಕ ಸಾಧಾರಣ ಸಭೆಯನ್ನು ತಾ 29-9-1941ನೇ ಸೋಮವಾರ ಬೆಳಿಗ್ಗೆ 8½ ಘಂಟೆಯಿಂದ ಅಂಕೋಲಾ ಕನ್ನಡ ೧ನೇ ನಂಬರ ಸಾಲೆಯಲ್ಲಿ ಇಟ್ಟಿರುತ್ತದೆ ಕಾರಣ ಸಹಕಾರಿ ಮೆಂಬರರೆಲ್ಲರೂ ಸಭೆಗೆ ಅಗತ್ಯವಾಗಿ ಬಂದು ಸಹಕರಿಸಬೇಕಾಗಿ ವಿನಂತಿ

ವಿಚಾರ ಮಾಡತಕ್ಕ ವಿಷಯಗಳು

(1) 1940-41ನೇ ಸಾಲಿನ ಆಢಾವೆಯನ್ನು ಚರ್ಚಿಸಿ ಮಂಜೂರ ಮಾಡುವದು ಮತ್ತು ಸದರ ಸಾಲಿನ ಲಾಭ ವಿಭಾಗಣಿಯನ್ನು ಮಾಡಿ 1941-42ನೇ ಸಾಲಿನ ಬಗ್ಗೆ ತಯಾರಿಸಿದ ಬಜೆಟ್ಟನ್ನು ವಿಚಾರಿಸಿ ಮಂಜೂರ ಮಾಡುವದು.

(2) 1941-42ನೇ ಸಾಲಿನ ಬಗ್ಗೆ ಗುಪ್ತ ಮತದಾನ ಪದ್ಧತಿಯಿಂದ ಮ್ಯಾ| ಕ| ಮೆಂಬರರನ್ನು ಆರಿಸುವದು. ಈ ಕೆಳಗಿನ ಉಮೇದವಾರರ ಅರ್ಜಿಗಳು ಸ್ವೀಕರಿಸಲ್ಪಟ್ಟಿವೆ

(1) ಶ್ರೀ| ಏಕನಾಥ ಸುಬ್ಬ ಶೆಟ್ಟಿ
(2) ,, ಮಹಾಬಲೇಶ್ವರ ರಾಮ ಶೆಟ್ಟಿ
(3) ,, ಗಜಾನನ ರಾಮಕೃಷ್ಣ ಭಟ್ಟ ಉಗ್ರು
(4) ,, ಲಕ್ಷ್ಮಣ ಗೌರ ಲಕ್ಷ್ಮೇಶ್ವರ
(5) ಶ್ರೀ ವಿಠೋಬ ಬಾಬು ಗಾಂವಕರ
(6) ,, ಶ್ರೀಪಾದ ಗಣು ನೇತ್ರಾವಳ.
(7) ವೆಂಕಟೇಶ ರಂಗಯ್ಯ ಐಗಳ
(8) ಶೇಖ ಅಬ್ದುಲ್ಲಾ ಶೇಖ ಕಾಶಿಮ ಮುಲ್ಲಾ

ಚುನಾವಣೆಯ ತಾರೀಖು. 29-9-41ನೇ ಬೆಳಿಗ್ಗೆ ೧೦ ಘಂಟೆಯಿಂದ ಮಧ್ಯಾಹ್ನ ಒಂದು ಘಂಟೆಯ ವರೆಗೆ ಅಂಕೋಲಾ ಕನ್ನಡ ೧ನೇ ನಂಬರ ಸಾಲೆಯಲ್ಲಿ ಮತದಾನವು ನಡೆಯುವದು ಮತ್ತು ಅದೇ ದಿನ ಸಂಜೆ ೫ ಘಂಟೆಗೆ ಮತಗಳ ಎಣಿಕೆ ಮಾಡಿ ವೈ| ಪ್ರೆಸಿಡೆಂಟರು ಚುನಾವಣೆಯ ಪರಿಣಾಮವನ್ನು ಪ್ರಸಿದ್ಧಿಸುವರು.

(3) 1-1-1939ರಿಂದ 31-3-1941ರ ವರೆಗಿನ ಆಡಿಟ್ ರಿಪೋರ್ಟ ಓದಿ ಅವಶ್ಯ ಕಂಡ ಠರಾವುಗಳನ್ನು ಮಾಡುವದು.

(4) 1941-42ನೇ ಸಾಲಿನ ಬಗ್ಗೆ ಒಬ್ಬ ಕ್ವಾಲಿಫೈಡ್ ಲೋಕಲ್ ಆಡಿಟರರನ್ನು ನೇಮಿಸುವದು.

(5) ಹೆಡ್ ಆಫೀಸಿಗೆ ಸ್ವತಂತ್ರ ಸೆಕ್ರೆಟರಿಯನ್ನು ನೇಮಿಸುವ ಬಗ್ಗೆ ವಿಚಾರ ಮಾಡಿ 1941-42ರ ಬಗ್ಗೆ ಸೆಕ್ರೆಟರಿ, ಕಾರಕೂನ, ಶಿಪಾಯಿ ಜನರನ್ನು ಆರಿಸುವದು ಮತ್ತು ಸೆಕ್ರೆಟರಿ ಕಾರಕೂನರಿಂದ ಜಾಮೀನ ತೆಗೆದುಕೊಳ್ಳುವ ಬಗ್ಗೆ ವಿಚಾರ ಮಾಡುವದು.

(6) ಒಂದು ನೂರು ರೂಪಾಯಿ ವರೆಗೆ ಪಗಾರ ಜಪ್ತಾಗದ್ದರಿಂದ ಇನ್ನು ಮುಂದೆ ಸಾಲ ಕೊಡುವ ಧೋರಣವನ್ನು ನಿಶ್ಚಯಿಸಿ ವಿಮಾ ಇಳಿಸುವ ಬಗ್ಗೆ ವಿಮಾ ಕಂಪನಿಯಿಂದ ಬಂದ ಕಾಗದವನ್ನು ವಿಚಾರಿಸುವದು.

(7) ಸೂಚಿಸಿದ ಪೋಟ ನಿಯಮಗಳ ದುರುಸ್ತಿಯನ್ನು ಸ್ವೀಕರಿಸುವದು (ಇವನ್ನು ಆಯಾ ಆಫೀಸುಗಳಲ್ಲಿ ನೋಡಿಕೊಳ್ಳಬಹುದು).

(8) 'ಶಿಕ್ಷಕ ಮಿತ್ರ' ಬೆಳಗಾಂವ ಇವರ ಕಾಗದದ ವಿಚಾರ

(9) ಜನರಲ್ ಸಭೆಗೆ ಹೆಚ್ಚಿನ ಪ್ರಾತಿನಿಧ್ಯವು ಬರುವಂತೆ ಮಾಡುವ ವಿಚಾರ.

(10) ಇದಲ್ಲದೆ ಬರುವ ಇತರ ವಿಷಯಗಳ ವಿಚಾರ.

ಅಂಕೋಲಾ,
ತಾ. 19-8-1941

ಕೆ. ರಾ. ಪ ಭಟ್ಟ,
ಸೆಕ್ರೆಟರಿ.

ಪ. ರಾ. ನಾಯ್ಕ,
ವ್ಹಾಯ್ಸ ಚೆಅರಮನ್.

ದಿ ಬೋಂಬೆ ಲ್ಯಾಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್,

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯವು ಇವೆ. ಕಂಪನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents-
D. K Nayak Bros.
K. N Nayak.
Honavar Agent -
R. V. Prabhu

K. Padmanabha Rao & Sons,
BELGAUM
Chief Agents for
Karnatak Districts & S. M. States.

ವಾರ್ತೆಗಳು.

— ಹಿಂದುಸ್ಥಾನ ಸರಕಾರದ ಉಗಿಬಂಡಿ ಇಲಾಖೆಯಲ್ಲಿ ಸರಕಾರಕ್ಕೆ ೧೯೪೨ನೇ ಇಸ್ವಿ ಮಾರ್ಚ ಕೊನೆಗೆ ಅಂತ್ಯವಾಗುವ ವರ್ಷದಲ್ಲಿ ರೂ ೧೮|| ಕೋಟಿ ಉತ್ಪನ್ನ ಸಿಗುವದೆಂದು ಸಿಮ್ಲಾದೊಳಗಿನ ಸರಕಾರದ ಲೆಕ್ಕದ ಇಲಾಖೆಯವರು ಪ್ರಕಟಿಸುತ್ತಾರೆ.

— ಪೆಟ್ರೋಲ ಎಣ್ಣೆಯ ಉಪಯೋಗದ ಮೇಲೆ ಸರಕಾರದವರು ನಿಯಂತ್ರಣವಿಟ್ಟಿರುವದರಿಂದ 'ಡೋಜ್' ಮೋಟಾರ ಬಂಡಿಗಳ ಒಡೆಯರು ಪೆಟ್ರೋಲದ ಜೊತೆಗೆ ಚಿಮಣಿ ಎಣ್ಣೆಯನ್ನು ಬೆರಿಸಿ ಉಪಯೋಗಿಸುತ್ತಿರುವರಂತೆ. ಈ ಪದ್ಧತಿ ದೇಶತುಂಬ ಹಬ್ಬಿದರೆ ಚಿಮಣಿ ಎಣ್ಣೆಯ ಮೇಲೂ ಸರಕಾರದವರು ಈಗ ಪೆಟ್ರೋಲ ಎಣ್ಣೆಯ ಮೇಲಿರುವಷ್ಟೇ ಸುಂಕವನ್ನು ಹೇರಬಹುದೆಂದು ಸಿಮ್ಲಾದಿಂದ ಸುದ್ದಿ ಬಂದಿದೆ.

— ಕಳೆದ ೨ ವರ್ಷಗಳಲ್ಲಿ ಹಿಂದುಸ್ಥಾನವು ದೇಶರಕ್ಷಣೆಯ ಸಾಮರ್ಥ್ಯವನ್ನು ಎಷ್ಟು ಬೆಳಸಿಕೊಂಡಿದೆಯೆಂಬುದು ಈ ಕೆಳಗಿನ ಅಂಕಿ-ಸಂಖ್ಯೆಗಳ ಮೇಲಿಂದ ತಿಳಿದು ಬರುವಂತಿದೆ ಯುದ್ಧಕ್ಕಾರಂಭವಾಗುವ ದಿನ ಎಲ್ಲ ಬಗೆಯ ಸೈನಿಕರನ್ನೊಳಗೊಂಡು ಹಿಂದುಸ್ಥಾನದಲ್ಲಿ ೨,೩೭,೦೦೦ ಸೈನ್ಯಬಲವಿತ್ತು. ಅದು ಈಗ ೭,೦೦,೦೦೦ಕ್ಕೆ ಮುಟ್ಟಿದೆ. ಕಳೆದ ೧೨ ತಿಂಗಳಲ್ಲೇ ೪,೬೦,೦೦೦ ಜನರು ಸೈನ್ಯದಲ್ಲಿ ಸೇರಿದ್ದಾರಂತೆ. ಯುದ್ಧಾರಂಭ ಕಾಲದಲ್ಲಿ ಎಲ್ಲ ಜಾತಿಯ ಲಷ್ಕರಿ ವಾಹನಗಳು ಕೆಲಕೆಲವು ಇದ್ದವಂತೆ. ಈ ಎರಡು ವರ್ಷಗಳಲ್ಲಿ ೩೪೦೦೦ ಲಷ್ಕರಿ ವಾಹನಗಳು ಬಂದಿರುತ್ತವಾಗಿ ತಿಳಿಯುತ್ತದೆ. ಈಗ ಪ್ರತಿ ತಿಂಗಳಿಗೆ ಸರಾಸರಿ ೪೦೦೦೦ ಯುವಕರು ಸೈನ್ಯದಲ್ಲಿ ಸೇರಲು ಬರುತ್ತಿದ್ದಾರೆಂದು ಅಧಿಕಾರಿಗಳು ಹೇಳುತ್ತಾರೆ. ಇದೀಗ ೧,೮೦,೦೦೦ ಹಿಂದೀ ಸೈನಿಕರು ಪರದೇಶಗಳಿಗೆ ಹೋಗಿದ್ದಾರೆ. ಪ್ರತಿ ತಿಂಗಳಿಗೆ ಈ ಸಂಖ್ಯೆ ಬೆಳೆಯುತ್ತ ಹೋಗುತ್ತದಂತೆ. ಹಿಂದೀ ನೌಕಾ ದಲದವರು ಹಿಂದೆ ಹೆಚ್ಚಾಗಿ ಕರಾವಳಿಯ ಕಾವಲು ಮಾಡುವ ಕಾರ್ಯ ಮಾಡುತ್ತಿದ್ದವು ಇಟಾಲಿಯು ರಣರಂಗದಲ್ಲಿ ಧುಮುಕುವ ವರೆಗೂ ಅವರು ಆ ಕೆಲಸವನ್ನೇ ಮಾಡುತ್ತಿದ್ದರು' ಆದರೆ ಇಟಾಲಿಯು ಯುದ್ಧ ಸಾರಿದಂದಿನಿಂದ ಈ ನೌಕಾ ದಲವು ಕರಾವಳಿಯನ್ನು ಬಿಟ್ಟು ಯಾವಾಗಲೂ ಮಹಾಸಾಗರದಲ್ಲೇ ಸಂಚರಿಸುವ ಪ್ರಸಂಗ ಬಂದಿತು ಈ ನೌಕಾ ದಲದೊಳಗಿನ ಅನೇಕ ಕೆಲಸಗಾರರು ಹಿಂದೆಂದೂ ಸಮುದ್ರವನ್ನು ನೋಡಿದ್ದಿಲ್ಲವಂತೆ. ಆದರೂ ಅವರು ಈಗ ನಡುಗಡಲಲ್ಲಿ ಯಶಸ್ವಿಯಾಗಿ ತಮ್ಮ ಕೆಲಸ ಸಾಗಿಸುತ್ತಿದ್ದಾರೆಂದು ಕೇಳಲು ಸಂತೋಷವಾಗುತ್ತಿದೆ ಈಗ ಸಣ್ಣ ಆಕಾರದ ಬಹಳೆಷ್ಟು ಹಡಗಗಳು ಹಿಂದುಸ್ಥಾನದಲ್ಲೇ ತಯಾರಾಗುತ್ತಿವೆಯಂತೆ! ೧೯೩೨ರ ಮೊದಲು ಹಿಂದುಸ್ಥಾನದಲ್ಲಿ ವೈಮಾನಿಕ ದಲವಿದ್ದಿಲ್ಲ ಅದೇ ವರ್ಷ ಅದರ ಸ್ಥಾಪನೆಯಾಯಿತು. ಆದರೆ ೧೯೩೨ರಿಂದ ೧೯೩೯ರ ವರೆಗೆ (ಯುದ್ಧಾರಂಭವಾಗುವ ವರೆಗೆ) ಆ ದಲದ ಪ್ರಗತಿಯಾದದ್ದು ಅಷ್ಟಕ್ಕಷ್ಟೇ! ಈ ಎರಡು ವರ್ಷಗಳಲ್ಲಿ ಮಾತ್ರ ಈ ದಲದ ವಿಸ್ತರಣೆಯ ಕೆಲಸ ಭರದಿಂದ ಸಾಗಿದೆ! ಆದರೆ ಈ ವರೆಗೆ ಎಷ್ಟು ವಿಮಾನಗಳು ತಯಾರಾಗಿವೆ ಮತ್ತು ಎಷ್ಟು ವೈಮಾನಿಕರು ಸಿದ್ಧರಾಗಿದ್ದಾರೆಂಬುದು ಪ್ರಕಟವಾಗಿಲ್ಲ ಈ ವರೆಗೆ ಪರದೇಶಗಳಿಂದ ವಿಮಾನಗಳ ಬಿಡಿ-ಭಾಗ

ಗಳನ್ನು ತರಿಸಿಕೊಂಡು ಅವುಗಳನ್ನು ಜೋಡಿಸಿ ವಿಮಾನ ತಯಾರಿಸುವ ಕೆಲಸವಷ್ಟೇ ನಡೆಯುತ್ತದಂತೆ. ಆದರೆ ಬೇಗನೇ ಕೆಲವು ಕಾರಖಾನೆಗಳಲ್ಲಿ ಪೂರ್ಣ "ಹಿಂದೀ" ವಿಮಾನುಗಳು ತಯಾರಾಗುವವೆಂದು ಆಶ್ವಾಸನೆ ದೊರೆತಿದೆ! ಹಿಂದುಸ್ಥಾನಕ್ಕೆ ಬೇಕಾದ ಯುದ್ಧ ಸಾಮುಗ್ರಿಗಳು ಹಿಂದುಸ್ಥಾನದಲ್ಲೇ ತಯಾರಾಗುತ್ತವಂತೆ ಉಕ್ಕಿನ ಚೀಲಗಳು, ಬಟ್ಟೆ-ಬರೆಗಳು, ತಂಬುಗಳು, ಸಣ್ಣ ತೋಫಿಗಳಿಗೆ ಬೇಕಾಗುವ ಮದ್ದುಗುಂಡುಗಳು ಮೊದಲಾದ ಹೇರಳ ಯುದ್ಧ ಸಾಹಿತ್ಯವನ್ನು ಹಿಂದುಸ್ಥಾನವು ಪರರಾಷ್ಟ್ರಗಳಿಗೂ ಕಳಿಸುತ್ತಿರುವದು! ಯುದ್ಧದಿಂದ ಭಾರತೀಯ ಉದ್ಯೋಗ-ಉದ್ದಿಮೆಗಳಿಗೂ ಒಳ್ಳೇ ಪ್ರೋತ್ಸಾಹ ದೊರೆತಿದೆಯಂತೆ. ಯುದ್ಧದಲ್ಲಿ ತೊಡಗಿದ ಜನರಿಗೆ ಉಪಯೋಗಕ್ಕೆ ಬೀಳುವ ೪೧೦೦೦ ಜಾತಿಯ ವಸ್ತು-ಒಡವೆಗಳು ಹಿಂದುಸ್ಥಾನದಲ್ಲಿ ತಯಾರಾಗುತ್ತಿವೆಯಂತೆ!

— ಮುಂಬಯಿ-ಪುಣೆ ಉಗಿಬಂಡಿಯ ಮಾರ್ಗವು ಘೋರ ಘಟ್ಟವನ್ನು ಹಾದುಹೋಗುತ್ತಿರವಲ್ಲಿ ಒಂದು ಕಡೆ ಕಳೆದ ಮಂಗಳವಾರ ಗುಡ್ಡದ ಮೇಲಿಂದ ಒಂದು ದೊಡ್ಡ ಬಂಡೆಗಲ್ಲು ಉರುಳಿ ಬಿದ್ದದ್ದರಿಂದ ಕಳೆದ ವಾರ ಎರಡು ದಿನಗಳ ವರೆಗೆ ಮುಂಬಯಿ-ಪುಣೆ ಗಾಡಿಗಳು ಓಡಾಡಲಿಲ್ಲ. ಮದ್ರಾಸ ಮುಂತಾದ ದಕ್ಷಿಣ ಭಾಗದೊಡನೆ ನಡೆಯುವ ರೇಲ್ವೆ ವ್ಯವಹಾರ ಧೋಂಡ-ಮನಮಾಡ ರಸ್ತೆಯ ಮಾರ್ಗವಾಗಿ ನಡೆಯಿತು.

— ನಿಜಾಮ ರಾಜ್ಯದೊಳಗಿನ ವರಂಗಳ ಜಿಲ್ಹೆಯಲ್ಲಿ ಖಮಾಮ ಊರಿನ ವರ್ತಕರು ಕಾಳುಕಡಿ ಮತ್ತು ಜೀನಸುಗಳ ಧಾರಣೆಗಳನ್ನು ಏರಿಸಿಕೊಂಡು ಕೂತಿದ್ದರು. ಹೀಗೆ ಧಾರಣೆಗಳನ್ನು ಏರಿಸಿ ಬಡವರಿಗೆ ಕಷ್ಟ ಕೊಡುವದು ಒಳಿತಲ್ಲವೆಂದು ಒಕ್ಕಲಿಗರೂ ಕೂಲಿಕಾರರೂ ಎಷ್ಟೇ ತಿಳಿಸಿ ಹೇಳಿದರೂ ವರ್ತಕರು ಕಿವಿಗೊಡಲಿಲ್ಲ! ಅದರಿಂದ ಸಾವಿರಾರು ಜನರು ಒಂದು ದಿನ ಒಟ್ಟುಗೂಡಿ ವರ್ತಕರ ಅಂಗಡಿಗಳಲ್ಲೂ, ಆಂಧ್ರ ಮತ್ತು ಸೆಂಟ್ರಲ್ ಬೇಂಕುಗಳ ಕಾಳುಕಡಿಯ ಕೋಠಾರಗಳಲ್ಲೂ ಲೂಟಿ ಮಾಡಿ ಸುಮಾರು ೩೦ ಸಾವಿರ ರೂ. ಬೆಲೆಯ ಆಹಾರ ಸಾಮುಗ್ರಿಯನ್ನು ತಕ್ಕೊಂಡು ನಡೆದರೆಂದು "ಮುಂಬಯಿ ಕ್ರಾನಿಕಲ್" ಪತ್ರಿಕೆಯ ಹೈದರಾಬಾದ ಸುದ್ದಿಗಾರನು ತಿಳಿಸುತ್ತಾನೆ. ವ್ಯಾಪಾರಿಗಳೂ ಸರಕಾರಿ ಅಧಿಕಾರಿಗಳೂ ಕಲವೊಂದು ಬೋಧ ಪಡೆಯತಕ್ಕ ಸುದ್ದಿಯಿದು.

— ಯುದ್ಧಕಾಲದಲ್ಲಿ ದೇಶದ ಆರ್ಥಿಕ ಸ್ಥಿತಿಯೊಳಗೆ ವಿಪರೀತ ಬದಲಾವಣೆಗಳಾಗುತ್ತಿರುವದೂ, ಯುದ್ಧ ಮುಗಿದ ನಂತರ ಪುನಃ ವಿಲಕ್ಷಣ ಬದಲಾವಣೆಗಳಾಗಿ ಯುದ್ಧಕಾಲದಲ್ಲಿ ಊರ್ಜಿತಾವಸ್ಥೆಗೆ ಬಂದ ಉದ್ಯೋಗ-ಉದ್ದಿಮೆಗಳಿಗೂ ಕಾರಖಾನೆಗಳಿಗೂ ಪ್ರಾಣಸಂಕಟವಾಗುತ್ತಿರುವದೂ ಕಳೆದ ಮಹಾಯುದ್ಧದ ಕಾಲದಲ್ಲಿ ಚೆನ್ನಾಗಿ ಜನರ ಅನುಭವಕ್ಕೆ ಬಂದಿದೆ. ಇಂಥ ಅಡಚಣೆಗಳ ವಿಚಾರ ಮಾಡಿ ಸರಕಾರಕ್ಕೆ ಯೋಗ್ಯ ಸಲಹೆ ಕೊಡುವ ಬಗ್ಗೆ ಕೇಂದ್ರ ಸರಕಾರದವರು ತಜ್ಞ ಅರ್ಥಶಾಸ್ತ್ರಜ್ಞರ ಒಂದು ಸಲಹಾ-ಸಮಿತಿಯನ್ನು ನೇಮಿಸಿದೆ. ಸಮಿತಿಯವರು ಮುಂದಿನ ತಿಂಗಳಲ್ಲಿ ಸಭೆಸೇರಿ ಕೆಲಸ ಪ್ರಾರಂಭಿಸುವರಂತೆ.

— ಬಿಹಾರ ಪ್ರಾಂತಿಕ ಸರಕಾರದವರು ಅಲ್ಲಿಯ ಪ್ರಾಂತಿಕ ಮುಸ್ಲಿಮ್ ಲೀಗ ಕಮಿಟಿಯ ಬೇಡಿಕೆಯನ್ನು ಮನ್ನಿಸಿ ಬಿಹಾರ-ಶರೀಫದೊಳಗಿನ ಜಾತೀಯ ದೊಂಬಿಗಳಲ್ಲಿ ಸೇರಿದ ಬಗ್ಗೆ ಮಾಡಿಕೊಟ್ಟಿರುವ ಖಟ್ಲೆಗಳ ವಿಚಾರಣೆಗಾಗಿ ಒಂದು ವಿಶೇಷ ನ್ಯಾಯಾಧೀಶರ ಮಂಡಳವನ್ನು ನೇಮಿಸಲಿಲ್ಲೆಂಬ ಸಿಟ್ಟಿನಿಂದ ಕಮಿಟಿಯು ಪ್ರಾಂತದೊಳಗಿನ ಯಾವತ್ತೂ ಯುದ್ಧ ಸಹಾಯಕ ಸಮಿತಿಗಳಲ್ಲಿರುವ ಎಲ್ಲ ಮುಸ್ಲಿಮ್ ಲೀಗಿನ ಸದಸ್ಯರಿಗೆ ತಮ್ಮ ತಮ್ಮ ಸ್ಥಳಗಳಿಗೆ ರಾಜಿನಾಮೆ ಕೊಡಬೇಕೆಂದು ಸೂಚನೆ ಕೊಟ್ಟಿದೆ.

— ದಿನಾಜಪೂರ ಜಿಲ್ಹೆಯ (ಬಂಗಾಲ) ನಲಿನೀ ಮೋಹನ ಚತರ್ಜೀಯವರು ಚಿಕ್ಕದೊಂದು ಪುಸ್ತಕದಲ್ಲಿ ಒಕ್ಕಲಿಗರು ಅನುಭವಿಸಬೇಕಾಗಿರುವ ಕಷ್ಟ-ನಷ್ಟಗಳನ್ನೆಲ್ಲ ಪರಾಂಬರಿಸಿ, ಕೊನೆಗೆ ರಾಷ್ಟ್ರೀಯ ಸಭೆಯೇ ಅವರ ತಾರಣ ಮಾಡಬಲ್ಲದೆಂದೂ ಒಕ್ಕಲಿಗರು ರಾಷ್ಟ್ರೀಯ ಸಭೆಯ ಸದಸ್ಯರಾಗಬೇಕೆಂದೂ ಬೋಧಿಸಿದ್ದರು. ಈ ಬಗ್ಗೆ ಅವರ ಮೇಲೆ ಭಾರತ ರಕ್ಷಣ ಕಾನೂನಿನನ್ವಯ ಖಟ್ಲೆಯಾಗಿ ಅವರಿಗೆ ೬ ತಿಂಗಳ ಸಶ್ರಮ ಶಿಕ್ಷೆಯಾಯಿತು! ರಾಷ್ಟ್ರೀಯ ಸಭೆ ಬಂಗಾಲದಲ್ಲಾಗಲಿ ಬೇರಾವ ಪ್ರಾಂತದಲ್ಲಾಗಲಿ ಇನ್ನೂ ತನಕ ಕಾನೂನುಬಾಹ್ಯ ಸಂಸ್ಥೆಯೆಂದು ಸರಕಾರದಿಂದ ಜಾಹೀರ ಮಾಡಲ್ಪಟ್ಟಿರುವದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಕಾಂಗ್ರೆಸ ಸದಸ್ಯರಾಗಿರೆಂದು ಜನರಿಗೆ ಪ್ರೇರೇಪಿಸಿದರೆ ಅದೆಂದೂ, ಯಾವ ಕ್ಯಾದೆಯಂತೆಯೂ, ಗುನ್ಹೆಯಾಗುವದಿಲ್ಲೆಂದು ದಿನಾಜಪುರ ಜಿಲ್ಹೆಯ ನ್ಯಾಯಾಧೀಶ ಮಿ| ಸಿಂಜರವರು ಅಪೀಲಿನಲ್ಲಿ ತೀರ್ಮಾನ ಕೊಟ್ಟು, ನಲಿನೀ ಮೋಹನರಿಗೆ ಬಿಡುಗಡೆ ಮಾಡಿದ್ದಾರೆ.

— ಒಂದು ದಿನ ನರಸಿಂಗಪುರ (ಮ. ಧ್ಯಪ್ರಾಂತ) ದಿಂದ ಛಿಂದವಾಡಾಕ್ಕೆ ಹೋಗುವ ಒಂದು ಮೋಟಾರ ಬಂಡಿಗೆ ಹಾದಿಯಲ್ಲೊಂದು ಕಡೆ ಒಂದು ಕೊಬ್ಬಿ ಬೆಳೆದ ಹುಲಿ ಅಡ್ಡ ಬಂತು. ಮೋಟಾರ ಡ್ರಾಯವ್ಹರನು ಗಾಡಿಯನ್ನ ನಿಲ್ಲಿಸಿ ಎಷ್ಟೇ ಹೊರ್ನ ಮಾಡಿದಾಗ್ಯೂ ಹುಲಿಯು ಅಲಗಾಡಲಿಲ್ಲ, ಹಾದಿಯನ್ನು ಬಿಟ್ಟುಕೊಡಲಿಲ್ಲ! ಆಗ ಆ ಗಾಡಿಯಲ್ಲಿದ್ದ ಜುಮನಖಾನ ಎಂಬ ಪ್ರಯಾಣಿಕನ ಬಳಿ ಒಂದು ಕೋವಿಯಿತ್ತು ಸಂಗಡಿಗರು ಜುಮನಖಾನನಿಗೆ ಅತ್ಯಾಗ್ರಹ ಮಾಡಿ ಅವನ ಕಡೆಯಿಂದ ಗುಂಡು ಹಾರಿಸಿ ಆ ಹುಲಿಯನ್ನು ಓಡಿಸಿದರು; ಮತ್ತು ಗಾಡಿಯು ಮುಂದರಿಯಿತು ಹುಲಿಯ ಮೇಲೆ ಮೇಲಿನಂತೆ ಗುಂಡುಹಾರಿಸಿದ ಬಗ್ಗೆ ಶಿವಣಿಯ ಡಿಸ್ಟ್ರಿಕ್ಟ ಜನರಲ್ ಫಾರೆಸ್ಟ ಒಫೀಸರರು ಜಮನಖಾನನಿಗೆ ರೂ ೧೦ ದಂಡ ವಿಧಿಸಿದ್ದಾರೆ! ಏನು ಬೆಟ್ಟ ರಕ್ಷಣೆಯ ಕಾನೂನುಗಳೋ, ಎಂಥ ಬೆಟ್ಟ ಇಲಾಖೆಯ ಅಧಿಕಾರಿಗಳೋ!

— ಕೇಂದ್ರ ಎಸೆಂಬ್ಲಿಯ ಇದೇ ಬರುವ ಮಳೆಗಾಲದ ಅಧಿವೇಶನದಲ್ಲಿ ಸರ್ವಾಧಿಪತಿಗಳಾದ ಲಿನಲಿಥಗೋ ದೊರೆಗಳು ವಾಡಿಕೆಯಂತೆ ಭಾಷಣ ಮಾಡಲಿಕ್ಕಿಲ್ಲವಂತೆ. ಬರುವ ಏಪ್ರಿಲ ತಿಂಗಳಲ್ಲಿ ಅವರು ನಿವೃತ್ತರಾಗಲಿರುವದರಿಂದ ಹೇಳತಕ್ಕ ಮಾತುಗಳನ್ನೆಲ್ಲ ತಮ್ಮ ಕೊನೆಯ ಭಾಷಣದಲ್ಲೇ ಹೇಳಲಿರುವರಂತೆ.

— ಕಳೆದ ತಾ. ೩ನೇಗೆ ಪಾಟಣಾದಲ್ಲಿ ಕೂಡಿದ ಬಿಹಾರ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಸಭೆಯಲ್ಲಿ, ಪ್ರಾಂತದೊಳಗಿನ ಯಾವತ್ತೂ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿರುವ ಕಾಂಗ್ರೆಸ ಸದಸ್ಯರು ಸ್ಥಾನತ್ಯಾಗ ಮಾಡಿ ಹೊರಬೀಳಬೇಕೆಂದು ನಿರ್ಣಯವಾಗಿದೆ. ಬಿಹಾರ ಪ್ರಾಂತದ ೧೭ ಜಿಲ್ಹಾ ಬೋರ್ಡುಗಳಲ್ಲಿ ೧೫ ಬೋರ್ಡುಗಳೊಳಗೆ ಕಾಂಗ್ರೆಸ್ಸಿಗರದೇ ಬಹುಮತವಿರುತ್ತದೆ.

— ಬ್ರಿಟಿಶರ ವಶಕ್ಕೆ ಬಂದಿರುವ ಇರಾಣಿ ಪ್ರದೇಶಗಳಲ್ಲಿ ಜನರಿಗೆ ಆಹಾರ-ಪದಾರ್ಥಗಳ ಕೊರತೆಯಾಗದಂತೆ ಹಿಂದುಸ್ಥಾನ ಸರಕಾರದವರು ಇರಾಣಕ್ಕೆ ಸುಮಾರು ೫೦೦೦ ಟನ್ನಗಳಷ್ಟು ಗೋದಿ, ಸಕ್ಕರೆ ಮತ್ತು ಚಹಾ ಸೊಪ್ಪು ಕಳಿಸಿಕೊಡುವ ವ್ಯವಸ್ಥೆ ಮಾಡಿರುತ್ತಾರೆ.

— ಸರ್ವಾಧಿಪತಿಗಳಾದ ಲಿನಲಿಥಗೋ ದೊರೆಗಳ ಪಂಚವಾರ್ಷಿಕ ಕಾರಕೀರ್ದಿಯ ಅವಧಿ ಕಳೆದ ಏಪ್ರಿಲ್ ತಿಂಗಳಲ್ಲೇ ಮುಗಿದಿತ್ತು. ಆದರೆ ಈಗ ಯುದ್ಧಕಾಲವಾದ್ದರಿಂದ ಅವರ ಅವಧಿ ಇನ್ನೊಂದು ವರ್ಷ ಬೆಳಿಸಲಾಯಿತು ಮತ್ತೊಮ್ಮೆ ಅವರ ಅವಧಿ ಬೆಳಸಲ್ಪಡುವ ಲಕ್ಷಣಗಳು ತೋರಿಬರುವದಿಲ್ಲ. ಆದ್ದರಿಂದ ಅವರ ಉತ್ತರಾಧಿಕಾರಿಗಳ ಆಯ್ಕೆಯನ್ನು ಸದ್ಯದಲ್ಲೇ ಮಾಡಬೇಕಾಗಿದೆ. ಈ ಉತ್ತರಾಧಿಕಾರಿಗಳು ಯಾರಾಗಬಹುದೆಂಬದರ ತರ್ಕ ಪತ್ರಿಕೆಗಳಲ್ಲಿ ಹಲವು ದಿನಗಳಿಂದಲೂ ನಡೆಯುತ್ತಿದೆ. ಹಿಂದೆ ಬಂಗಾಲದಲ್ಲಿ ದಬ್ಬಾಳಿಕೆಯನ್ನು ನಡಿಸಿ ಹೆಸರುವಾಸಿಯಾದ ಸರ್ ಜೊನ ಎಂಡರಸನ್‌ರವರು ಸರ್ವಾಧಿಪತಿಗಳಾಗಬಹುದೆಂದು ಕಳೆದ ವಾರ ಒಂದು ಪತ್ರಿಕೆಯು ತರ್ಕಿಸಿತ್ತು. ಈ ವಾರ ಸರ್ ಸೇಮ್ಯುಅಲ್ ಹೋರ ಮತ್ತು ಹಿಂದೊಮ್ಮೆ ಸರ್ವಾಧಿಪತಿಗಳಾಗಿದ್ದ ಹೆಲಿಫೆಕ್ಸ (ಆ ಕಾಲದಲ್ಲಿ ಇವರು ಲೊರ್ಡ ಇರ್ವಿನ್‌ರೆಂದು ಕರೆಯಲ್ಪಡುತ್ತಿದ್ದರು) ಇವರಿಬ್ಬರ ಹೆಸರುಗಳು ಮುಂದೆ ಬಂದಿವೆ. ಈ ಇಬ್ಬರಲ್ಲೊಬ್ಬರು ಸರ್ವಾಧಿಪತಿಗಳಾಗಿ ನೇಮಿಸಲ್ಪಡುವ ಸಂಭವವುಂಟಾಗಿ 'ಈವ್ನಿಂಗ ಸ್ಟೆಂಡರ್ಡ' ಎಂಬ ಇಂಗ್ಲಿಶ ಪತ್ರಿಕೆಯು ತಿಳಿಸುತ್ತದೆ ಹಿಂದುಸ್ಥಾನದ ವ್ಹಾಯಿಸರಾಯರಾಗಬೇಕೆಂದು ಸರ್ ಸೆಮ್ಯುಅಲ್ ಹೋರರಿಗೆ ಉತ್ಕಟ ಅಪೇಕ್ಷೆಯುಂಟಂತೆ. ಅಮೇರಿಕೆಯಲ್ಲಿ ರಾಯಭಾರಿಗಳಾಗಿದ್ದ ಹೆಲಿಫೆಕ್ಸ ದೊರೆಗಳು ಕಳೆದ ತಿಂಗಳಲ್ಲಿ ವಿಲಾಯತಿಗೆ ಮರಳಿ ಬಂದಿದ್ದಾರೆ. ತಿರುಗಿ ಅವರು ಅಮೇರಿಕೆಗೆ ಹೋಗಲಿಕ್ಕಿಲ್ಲವಂತೆ. ಆದ್ದರಿಂದ ಅವರಿಗೂ ಇನ್ನೊಮ್ಮೆ ಸರ್ವಾಧಿಪತಿಗಳ ಅಧಿಕಾರ ಸಿಕ್ಕರೂ ಸಿಗಬಹುದು ಎಂದು ಸದರಿ ಪತ್ರಿಕೆಯ ಊಹೆಯುಂಟು.

— ಕಳೆದ ಬುಧವಾರ ಸಂಜೆಯಲ್ಲಿ, ದ್ವಿತೀಯ ಮಹಾಯುದ್ಧದ ದ್ವಿತೀಯ ಸಾಂವತ್ಸರಿಕ ದಿನದ ನಿಮಿತ್ತವಾಗಿ, ಮೈಸೂರಿನ ಹೊಸ ಮಹಾರಾಜರಾದ ಜಯಚಾಮರಾಜೇಂದ್ರ ಒಡೆಯರರು ಬೆಂಗಳೂರಿನಿಂದ ಆಕಾಶವಾಣಿಯಲ್ಲಿ ಸಮಸ್ತ ಕನ್ನಡಿಗರಿಗೆ ಕನ್ನಡ ಭಾಷೆಯಿಂದಲೇ ಒಂದು ಸಂದೇಶ ಕೊಟ್ಟು, ಕರ್ನಾಟಕ ಪ್ರಾಂತದ, ಭರತ ಖಂಡದ ಇಲ್ಲವೆ ಭಾರತವರ್ಷವನ್ನೊಳಗೊಂಡ ಜನಾಂಗ ಸಮುದಾಯದ ಏಳಿಗೆಯ ಕಡೆಗೆ ಗಮನ ಕೊಡಬೇಕಾದುದು ಅವಶ್ಯವಿದ್ದಾಗ್ಯೂ ಸಮಸ್ತರು ಯುದ್ಧಕಾರ್ಯದ ಕಡೆಗೆ ಗಮನ ಕೊಡಬೇಕಾಗಿಯೂ, ಯುದ್ಧೋದ್ಯಮದಲ್ಲಿ ನೆರವಾಗಬೇಕೆಂತಲೂ, ಮಿತ್ರಪಕ್ಷಕ್ಕೆ ವಿಜಯ ದೊರಕಿಸಿಕೊಡಲು ಭಗವಂತನೆಡೆ ಪ್ರಾರ್ಥನೆ ಮಾಡಬೇಕೆಂತಲೂ ಬೋಧಿಸಿದ್ದಾರೆ ಮೈಸೂರ ಮಹಾರಾಜರು ಆಕಾಶವಾಣಿಯಲ್ಲಿ ಕನ್ನಡ ಭಾಷಣ ಮಾಡಿದ್ದು ಇದೇ ಮೊದಲನೇ ಬಾರಿ.

(೧೧ನೇ ಪುಟದ ಮೇಲೆ ಮುಂದುವರಿದಿದೆ)

ಈಗಿನ ಸ್ಥಿತ್ಯಂತರದ ಪೂರ್ವಾಪರ.

ನ[illegible] ಕನ್ನ[illegible] ವರೆ ಅಲ್ಲವ ಹಿಂದುಸ್ಥಾನದ ಕುರಿತು [illegible] ಪೆಲ್ಲಸರ ಪತ್ರಿಕೆಯಲ್ಲಿ ಒಂದು ಲೇಖ ಬರೆದಿರುತ್ತಾರೆ. ಬ್ರಿಟಿಶರ ಪೂರ್ವದಲ್ಲಿ ಹಿಂದು ಮುಸಲ್ಮಾನರು ಧರ್ಮಭೇದದಂತೆ ಭೇದ [illegible] ಲೆಕ್ಕಿಸುತ್ತಿರಲಿಲ್ಲ. ಮೊಗಲ ಬಾದಶಹನಾದ ಔರಂಗಜೇಬನು ಹಿಂದು ಅರಸರೊಡನೆ ಸಂಗ್ರಾಮ ಮಾಡಿದ್ದಾನೆ. ಮುಸಲ್ಮಾನ ಅರಸರೊಡನೆಯೂ ಸಂಗ್ರಾಮ ಮಾಡಿದ್ದಾನೆ. [illegible] ಸರಕಾರದ ಕಾರಕೀರ್ದಿಯಲ್ಲಿ ಹಿಂದು [illegible] ಕಂಪನಿ ಸರಕಾರದ ಪರವಾಗಿ ಹಿಂದು ಅರಸರೊಡನೆ ಹೋರಾಡಿದ್ದು ಮುಸಲ್ಮಾನರು ಅದೇ ಪ್ರಕಾರ ಮುಸಲ್ಮಾನ [illegible] ಪ್ರತಿಘಟನೆ ಮಾಡಿದ್ದಾರೆ.

೧೮೫೭ನೇ ಇಸ್ವಿಯ ಹಿಂದುಸ್ಥಾನದ ಸ್ವಾತಂತ್ರ್ಯ ಸಂಗ್ರಾಮ [illegible] ದಂಗೆ) ಪ್ರಾರಂಭವಾಯಿತು. ಅದರೊಳಗೆ ಹಿಂದು ಮುಸಲ್ಮಾನರಿಬ್ಬರೂ ಕೂಡಿಕೊಂಡಿದ್ದರು.

ಉಭಯ ಧರ್ಮದವರು [illegible] ಕೂಡಿಕೊಂಡು ನಡೆಯುತ್ತಿದ್ದರು. ಪ್ರತಿಯೊಬ್ಬರೂ ತಮ್ಮ ತಮ್ಮ ಧರ್ಮ ಪ್ರಮಾಣಕ್ಕೆ ತಕ್ಕಂತೆ [illegible] ವರ್ತಿಸುತ್ತಿದ್ದರು. [illegible] ಮುಂದೆ ಹಿಂದು [illegible] ಕಲಹಗಳು [illegible] ಪ್ರಾಂತದ ಭಾಗದಲ್ಲಿಯೇ ಹಿಂದು ಮುಸಲ್ಮಾನರ [illegible] ಧರ್ಮಾಂತರದಿಂದ ಧರ್ಮಕ್ರಮದಲ್ಲಿ ಮಾತ್ರ ಅಂತರ ಬೀಳುತ್ತಿತ್ತು. ಉಳಿದ ಸಾಮಾಜಿಕ ಸಂಬಂಧಗಳಲ್ಲಿ ಯಥಾಪೂರ್ವ ನಡೆಯುತ್ತಿದ್ದವು.

ಪ್ರತಿಯೊಂದು ಪ್ರಾಂತದಲ್ಲಿ ಯಾವದೇ ಧರ್ಮದವರಾಗಿದ್ದರೂ ಅವರೆಲ್ಲರೂ ಆ ಪ್ರಾಂತದವರಾಗಿ ವ್ಯವಹರಿಸುತ್ತಿದ್ದರು. ಪಂಜಾಬದೊಳಗೆ ಜಾತ ಸಮಾಜದಲ್ಲಿ ಹಿಂದುಗಳಿದ್ದಂತೆ ಶೀಖರಿದ್ದರು, ಮುಸಲ್ಮಾನರಿದ್ದರು. ಆದರೆ ಅವರೊಳಗೆ ಪಕ್ಷಪಾತ ಅಸ್ತಿತ್ವದಲ್ಲಿತ್ತು. ಪಂಜಾಬದ ಜಾತ ಹಿಂದುಗಳೂ [illegible] ಹಿಂದ [illegible] ಅಷ್ಟು ಅಸ್ತಿತ್ವದಲ್ಲಿರಲಿಲ್ಲ.

ಹಿಂದುಗಳಂತೆಯೇ ಮುಸಲ್ಮಾನರಲ್ಲಿಯೂ ಜಾತಿಪದ್ಧತಿ, ಒಟ್ಟು ಕುಟುಂಬದ ಪದ್ಧತಿ ರೂಢವಾಗಿದ್ದವು.

ಧರ್ಮಸಹನಶೀಲತೆ, ಸಕಲ ಧರ್ಮದವರೊಡನೆ ವಿಚಾರವಿನಿಮಯ ಇವುಗಳ ಮೂಲಕ ಉಭಯ ಧರ್ಮದವರಲ್ಲಿ ಧರ್ಮಪ್ರಶ್ನೆಯ ಮೇಲೆ ವಿರೋಧವಿರಲಿಲ್ಲ. ಚೈತನ್ಯನಿಗೆ ಮುಸಲ್ಮಾನ ಶಿಷ್ಯರಿದ್ದರು. ಕಬೀರರು ಹಿಂದು ಮುಸಲ್ಮಾನ ಸಮಾಜಗಳ ಐಕ್ಯಮತದ ಪುರಸ್ಕರ್ತರಿದ್ದರು. [illegible] ಜಮಾಲಿ ಸುಲ್ತಾನ ಇವರಿಬ್ಬರೂ ಧರ್ಮಗಳ [illegible] ಕೂಡಿಕೊಂಡು ಧರ್ಮಸಂಘಟನ ಮಾಡುತ್ತಿದ್ದರು. [illegible] ಉಭಯತರ ಸಮಾಧಿಗಳನ್ನು [illegible] ಪೂಜಿಸುತ್ತಾರೆ. [illegible] ಹಿಂದ [illegible] ಹಿಂದುಗಳೂ ಮುಸಲ್ಮಾನ[illegible] ಮತ್ತು ಅದೇ ಪ್ರಕಾರ ಹರಕೆಗಳನ್ನು ಸಹ ಹೊತ್ತುಕೊಳ್ಳುತ್ತಿದ್ದರು.

ಈ ಪ್ರಕಾರ ಇಡೀ ಜನಾಂಗವು ಒಂದಾಗಿ ಹೋಗಿತ್ತು. ಮುಸಲ್ಮಾನ ಅರಸರ ಕಾರಕೀರ್ದಿಯಲ್ಲಿ ಧರ್ಮಾಂತರಗಳು ಒದಗಿಬಂದರೂ ಉಳಿದ ಸಾಮಾಜಿಕ ಒಕ್ಕಟ್ಟು ಸಂಪೂರ್ಣವಾಗಿತ್ತು.

ಬ್ರಿಟಿಶರು ೧೮೫೭ನೇ ಇಸ್ವಿಯಲ್ಲಿ ಹಿಂದುಸ್ಥಾನವನ್ನು ಸಂಪೂರ್ಣವಾಗಿ ವಶಪಡಿಸಿಕೊಂಡರು. ಆದರೂ ಹಿಂದು ಮುಸಲ್ಮಾನರು ಒಕ್ಕಟ್ಟಾಗಿ ವ್ಯವಹರಿಸಿ ಬ್ರಿಟಿಶರು ನಡಿಸುವ ಸಲಿಗೆಯನ್ನು ತಪ್ಪಿಸುವ ಯತ್ನ ಮಾಡಿದರು. ೧೮೮೫ನೇ ಇಸ್ವಿಯಲ್ಲಿ ಆ ಮೇಲೆ ಹಿಂದೀ ರಾಷ್ಟ್ರೀಯ ಸಭೆಯನ್ನು ಉಭಯತರೂ ಸ್ಥಾಪಿಸಿ ೨೦ ವರ್ಷಗಳ ತನಕ ಪ್ರಯತ್ನ ಮಾಡಿದರು. ಜನರು ಒಂದು, ಜನಾಂಗ ಒಂದು ಎಂಬ ಭಾವನೆ ಹಿಡಿದೇ ಎಲ್ಲರೂ ನಡೆಕೊಂಡು ಬಂದರು. ಸನ್ ೧೯೦೫ರಲ್ಲಿ [illegible] ಸಹಾಯದಿಂದ ಹಿಂದು ಮುಸಲ್ಮಾನರ ಸಾಮರ್ಥ್ಯವನ್ನು ಬ್ರಿಟಿಶರು ನಾಶಗೊಳಿಸಿದರು. ಆ ಸಂಗ್ರಾಮ ಶಾಂತವಾದ ಬಳಿಕ ಹಿಂದು ಮುಸಲ್ಮಾನರು ರಾಜ್ಯಾಧಿಕಾರವನ್ನು ಕೇಳಿಕೊಳ್ಳಲು ಪ್ರಯತ್ನ ನಡಿಸಿದರು. ಹಿಂದುಗಳ ಜನಸಂಖ್ಯೆ ಹೆಚ್ಚು, ಶಿಕ್ಷಣ ಪಡೆದವರ ಸಂಖ್ಯೆಯೂ ಹೆಚ್ಚು, ಐಶ್ವರ್ಯವಂತರ ಸಂಖ್ಯೆಯೂ ಹೆಚ್ಚು. ಆದರಿಂದ ಅವರನ್ನು ಪ್ರತಿಘಟಿಸುವದು ಬ್ರಿಟಿಶ ರಾಜ್ಯಕರ್ತರಿಗೆ ದುರ್ಘಟವಾಯಿತು. ಆಗ ಮುಸಲ್ಮಾನರಿಗೆ ದುರುಪದೇಶ ಮಾಡಿ ಬ್ರಿಟಿಶರು ಭೇದಬುದ್ಧಿಯ ಬೇರೂರಿದರು. ಮೌ॥ ಮಹಮದ ಅಲಿಯವರು ನುಡಿದಂತೆ ಕೆಲವು ಮುಸಲ್ಮಾನ ಪ್ರಮುಖರು ಮಿಂಟೋ ದೊರೆಗಳ ಭೆಟ್ಟಿಯಾಗಿ ಪೃಥಕ್ ಮತದಾರ ಸಂಘದ ಆಶೀರ್ವಾದ ಪಡಕೊಂಡರು. ೧೯೦೯ನೇ ಇಸ್ವಿಯಲ್ಲಿ ಹೊಸ ಕಾನೂನು ಆಯಿತು. ಆ ಕಾನೂನಿನಲ್ಲಿ ಪೃಥಕ್ ಮತದಾರ ಸಂಘಗಳು ನಿರ್ಮಿಸಲ್ಪಟ್ಟವು. ಅಖಂಡ ಜನಾಂಗಕ್ಕೆ ಈ ಯೋಜನೆ ಬಾಧಕವೆಂದು ಸಯ್ಯದ ಹಸನ ಇಮಾಮರೂ, ಬ್ಯಾ॥ ಮಹಮ್ಮದ ಅಲಿ ಜಿನ್ನರವರೂ ವಿರೋಧಿಸಿದಾಗ್ಯೂ ಬ್ರಿಟಿಶರು ಈ ಯೋಜನೆಯ ತ್ಯಾಗ ಮಾಡಲಿಲ್ಲ.

ಆ ಮೇಲೆ ಮುಸಲ್ಮಾನರು ರಾಜ್ಯಭಾರದಲ್ಲಿಯೂ ಧರ್ಮನಿಷ್ಠೆಯಿಂದ ಪ್ರವೇಶ ಮಾಡಿದರು. ಅಖಿಲ ಹಿಂದುಸ್ಥಾನದಲ್ಲಿ ವಾಸಿಸುವ ಮುಸಲ್ಮಾನರೆಲ್ಲರೂ ಒಂದು ಜನಾಂಗವೆಂಬ ಭಾವನೆ ರೂಢವಾಯಿತು. ಪೃಥಕ್ ಮತದಾರ ಸಂಘದಿಂದ ಆರಿಸಿ ಹೋದ ಸಭಾಸದರು ಸ್ವಸಮಾಜದ ಭೇದಬುದ್ಧಿಯನ್ನು ಬೆಳೆಸಿ ಪ್ರೋತ್ಸಾಹಿಸಿದರು. ಕಳೆದ ಮಹಾಯುದ್ಧದಿಂದ ನಮ್ಮ ಹಿಂದೀ ಜನರಲ್ಲಿ [illegible] ಸ್ವಾಭಿಮಾನ ಜಾಗೃತವಾಗಿ ಹೋಮರೂಲ ಚಳವಳಿ ಪ್ರಾರಂಭವಾಯಿತು. ಆಗ ಪೃಥಕ್ ಮತದಾರ ಸಂಘಗಳ ನೆರವಿನಿಂದ ರಾಜ್ಯಕರ್ತರು ಆ ಚಳವಳಿಗೆ ಆತಂಕವನ್ನುಂಟು ಮಾಡಿದರು. [illegible] ನೇ ಇಸ್ವಿ ಅಕ್ಟೋಬರ [illegible] ಗಳಲ್ಲಿ [illegible] ಸರಕಾರಕ್ಕೆ [illegible] ಮಾಡಬೇಕೆಂಬ ಯೋಜನೆ [illegible] ಕೆಲ ಮುಸಲ್ಮಾನ [illegible] ಪೃಥಕ್ ಮತದಾರ ಸಂಘಗಳನ್ನು ಕೊಡಬೇಕೆಂದು ಸರಕಾರಕ್ಕೆ ಕೇಳಿಕೊಂಡರು. ೧೯೧೬ನೇ ಇಸ್ವಿಯಲ್ಲಿ ಲಖನೌದೊಳಗೆ ಹಿಂದು ಮುಸಲ್ಮಾನರೊಳಗೆ ಕರಾರಾದಾಗ ಮುಸಲ್ಮಾನರಿಗೆ ಅವರ ಲೋಕಸಂಖ್ಯೆಗೆ ಮಿಗಿಲಾಗಿ ಸಭಾಸದ ಸ್ಥಾನಗಳು ಕೊಡೋಣಾದವು. ಧರ್ಮಸಂಬಂಧಿ ಕಾನೂನು ಮಾಡಬೇಕಾದರೆ ಸಂಬಂಧಪಟ್ಟ ಧರ್ಮದವರು ಅನುಮತಿ ಪಡೆಯಬೇಕಾಗಿ ಲಖನೌ ಕರಾರಿನಲ್ಲಿ ಉಲ್ಲೇಖಿಸಿತ್ತು. ೧೯೩೫ನೇ ಇಸ್ವಿಯಲ್ಲಿ ಕಾನೂನು ಮಾಡುವಾಗ ಸರ್ವಾಧಿಪತಿಗಳ ಅನುಮತಿಯನ್ನು ಮುಂದಾಗಿ ಪಡೆಯಬೇಕೆಂಬದೊಂದು ತಿದ್ದುಪಡಿ ಮಾಡೋಣಾಯಿತು.

ಈ ಪ್ರಕಾರ ಬ್ರಿಟಿಶರು ಹಿಂದುಸ್ಥಾನದೊಳಗಿನ ಮುಸಲ್ಮಾನರ ಹಿತಸಂಬಂಧಗಳ ರಕ್ಷಕರಾದರು! ಜನಾಂಗದ ಹಿತಸಂಬಂಧಗಳನ್ನು ವಿರೋಧಿಸಿ ಮುಸಲ್ಮಾನರ ಹಿತರಕ್ಷಣ ಮಾಡುವ ಸರ್ವಾಧಿಕಾರ ಪಡೆದರು! ಆ ಮೇಲೆ ಹಿಂದು ಮುಸಲ್ಮಾನರ ದೊಂಬಿಗಳಿಗೆ ಪ್ರಾರಂಭವಾಯಿತು. ಬ್ರಿಟಿಶ ರಾಜ್ಯಕರ್ತರು ಹಿಂದುಗಳಿಗೆ ವಿರೋಧವಾಗಿ ರಾಷ್ಟ್ರೀಯ ಸಭೆಗೆ ವಿರೋಧವಾಗಿ ವರ್ತಿಸಹತ್ತಿದರು. ಇದರಿಂದ ಮುಸಲ್ಮಾನರಲ್ಲಿ ಒಂದು ತರದ ಅವಿಶ್ವಾಸವುಂಟಾಗಿ ಅವರೂ ಸಿಕ್ಕ ಹಾಗೆ ತಮ್ಮ ರಕ್ಷಣೆ ಮಾಡಲು ಬ್ರಿಟಿಶ ಸರಕಾರಕ್ಕೆ ಕೇಳಿಕೊಂಡರು. ಸಿಂಧ ಮತ್ತು ಗಡಿನಾಡುಗಳು ಮುಸಲ್ಮಾನ ಪ್ರಾಂತಗಳಾದವು. ಬಂಗಾಲ ಪಂಜಾಬಗಳಲ್ಲಿ ಮುಸಲ್ಮಾನರಿಗೆ ಬಹುಮತ ಸಿಕ್ಕಿತು. ಉಳಿದ ಪ್ರಾಂತಗಳಲ್ಲಿ ಹಿಂದುಗಳ ಬಹುಮತವಿದ್ದೇ ಇತ್ತು. ಮುಸಲ್ಮಾನರು ಹಿಂದುಸ್ಥಾನ ಸರಕಾರದಲ್ಲಿ ರಾಜ್ಯಾಧಿಕಾರ ಕೇಳಿದ್ದರು. ಅದನ್ನು ಕೊಟ್ಟರೆ ಬ್ರಿಟಿಶರ ಹಿತಸಂಬಂಧಕ್ಕೆ ಭಂಗ ಬರುವದರಿಂದ ಅದೊಂದನ್ನು ಬಿಟ್ಟು ಉಳಿದ ಯಾವತ್ತು ಕೇಳಿಕೆಗಳನ್ನು ಬ್ರಿಟಿಶರು ಮುಸಲ್ಮಾನರಿಗೆ ದಯಪಾಲಿಸಿ ಜನಾಂಗಕ್ಕೆ ಅನ್ಯಾಯ ಮಾಡಿದರು.

ಹಿಂದುಸ್ಥಾನ-ದೇಶವನ್ನು ಒಕ್ಕಟ್ಟಾಗಿ ಕಾಪಾಡುವ ಯಾವದೇ ಹೊಣೆಗಾರಿಕೆಯಿಲ್ಲದೆ ಬ್ರಿಟಿಶರು ಮುಸಲ್ಮಾನರಿಗೆ ಕೇಳಿ ಕೇಳಿದ್ದನ್ನು ಕೊಟ್ಟರು! ಸ್ಯೈಮನ್ ಸಾಹೇಬರು ಬರೆದ ವರದಿಯಲ್ಲಿ ಹಿಂದುಸ್ಥಾನವು ಒಂದು ಜನಾಂಗವೆಂದು ನಮೂದಿಸಿಲ್ಲ, ಅಥವಾ ಹಿಂದುಸ್ಥಾನದಲ್ಲಿ ಹಿಂದು ಸಮಾಜವಿರುವದೆಂಬ ಉಲ್ಲೇಖವೂ ಇಲ್ಲ. ಹಿಂದುಸ್ಥಾನವೆಂದರೆ ಹಲವು ಸಮಾಜಗಳ ದೇಶವೆಂದಿಷ್ಟೇ ಹಿಂದುಸ್ಥಾನದ ಬಗೆ ಉಲ್ಲೇಖವುಂಟು. ಹಿಂದುಸ್ಥಾನದ [illegible]ಯನ್ನು ಸ್ಯೈಮನ್‌ರು ಹೀಗೆ ಮಾಡಿದ್ದಾರೆ. ಜನಾಂಗದೊಳಗಿನ ಬೇರೆ ಬೇರೆ ಜನರು ಒಕ್ಕಟ್ಟಾಗದ ಹಾಗೆ ಕಾಪಾಡುವ ಕೆಲಸ ಬ್ರಿಟಿಶರದು. ಭೇದನೀತಿಗೆ ಇದರಿಂದ ಉತ್ತೇಜನ ದೊರಕಿತು. ಹಿಟ್ಲರನ ಪರಂಪರೆಯನ್ನು ಅನುಲಕ್ಷಿಸಿ ಮುಸಲ್ಮಾನರು ಹಿಂದುಸ್ಥಾನದೊಳಗೆ [illegible] ಅಲ್ಪಸಂಖ್ಯಾತರಾದವರು ಹೀಗೆ [illegible] ಜನಾಂಗಗಳಲ್ಲಿ [illegible] ಜನಾಂಗದ ರಚನಾ[illegible] ಸ್ವತಂತ್ರ ಜನಾಂಗವನ್ನು ನಿರ್ಮಿಸುವದು ಹಿಟ್ಲರನ ಪರಂಪರೆ. ಈ ಮೂಲಕವಾಗಿಯೇ [illegible] ಮಾಡಿಸುವ [illegible]

ಮಾತರಮ್ ಕಾವ್ಯದ ತ್ಯಾಗ, ರಾಷ್ಟ್ರಧ್ವಜದ ತ್ಯಾಗ, ಮುಸ್ಲಿಮ ಲೀಗು ಸಮಸ್ತ ಮುಸಲ್ಮಾನರ ಪ್ರಾತಿನಿಧ್ಯದ ಸಂಸ್ಥೆ ಎಂಬ ಮನ್ನಣೆ, ಪ್ರಧಾನ ಮಂಡಳಗಳಲ್ಲಿ ಲೀಗಿನ ಪ್ರತಿನಿಧಿಗಳ ಸೇರಿಕೆ ಮೊದಲಾದ ಪೃಥಕ್ ಜನಾಂಗವನ್ನು ದೃಢಪಡಿಸುವ ಕೇಳಿಕೆಗಳನ್ನು ಮುಸ್ಲಿಮ ಲೀಗು ಮಾಡಿತು. ಹಿಂದು, ಮುಸಲ್ಮಾನ ಮೊದಲಾದ ಯಾವತ್ತು ಸಮಾಜಗಳು ರಾಷ್ಟ್ರೀಯ ಭಾವನೆಯನ್ನು ತ್ಯಾಗ ಮಾಡಿ, ಧರ್ಮಗಳನ್ನು ಜನಾಂಗಗಳೆಂಬದೊಂದು ಕ್ರಮವನ್ನು ರೂಢಗೊಳಿಸುವ ಹವ್ಯಾಸವನ್ನು ಮುಸ್ಲಿಮ ಲೀಗು ಹಿಡಿಯಿತು. ಹಿಂದು ಜನಾಂಗ ಬೇರೆ ಮುಸ್ಲಿಮ ಲೀಗು ಬೇರೆ. ಹಿಂದು ಜನಾಂಗದೊಡನೆ ವ್ಯವಹಾರ ಮಾಡಬಯಸುವವರು ಮುಸ್ಲಿಮ ಲೀಗಿನೊಡನೆ ಸಹ ಪ್ರತ್ಯೇಕವಾಗಿ ವ್ಯವಹಾರ ಮಾಡಬೇಕೆಂಬ ನಿಗ್ರಹ ಹಿಡಿಯಲಾಯಿತು. ಆ ಮೇಲೆ ೧೯೩೫ನೇ ಇಸ್ವಿಯಲ್ಲಿ ಈ ಕೇಳಿಕೆಗಳು ಮತ್ತೂ ಬಲಪಟ್ಟವು. ಮುಸಲ್ಮಾನರಿಗೆ ಸರಕಾರಿ ನೌಕರಿಗಳಲ್ಲೂ ಕಾಯಿದೆ ಕೌನ್ಸಿಲುಗಳಲ್ಲೂ ಸರಿ ಅರ್ಧಪಾಲು ಬೇಕಾಯಿತು. ಉರ್ದು ಭಾಷೆ ರಾಷ್ಟ್ರಭಾಷೆಯೆಂದು ಮನ್ನಿಸಬೇಕೆಂಬ ನಿಗ್ರಹ ನಡೆಯಿತು. ಸಂಸ್ಕೃತ ಶಬ್ದಕ್ಕೆ ಸ್ಪರ್ಶವಾದರೆ ಮುಸಲ್ಮಾನ ಸಂಸ್ಕೃತಿಗೆ ಬಾಧೆಯುಂಟಾಗುತ್ತದೆಂದು ಭಾವನೆಯಾಯಿತು. ಮಧ್ಯಪ್ರಾಂತದಲ್ಲಿ ಮುಸಲ್ಮಾನರ ಸಂಖ್ಯೆ ಶೇಕಡಾ ೪|| ಯಷ್ಟಿದೆ. ಆದರೆ 'ವಿದ್ಯಾಮಂದಿರ' ವೆಂಬ ನಿಷ್ಪಾಪ ಶಬ್ದ ಕೇಳಿದೊಡನೆ ಮುಸಲ್ಮಾನರು ರೇಗಿಕೊಂಡರು! ಶೇಕಡಾ ೮೦ರಷ್ಟು ಜನರು ಸಂಸ್ಕೃತ ಮತ್ತು ತದ್ಭವ ಭಾಷೆಗಳನ್ನಾಡುತ್ತಾರೆ. ಆದರೆ ಉಳಿದ ೨೦ ಜನರಿಗಾಗಿ ಉರ್ದು ಭಾಷೆಯನ್ನು ಪೂರ್ಣ ಜನಾಂಗದ ಮೇಲೆ ಹೊರಿಸಬೇಕೆಂದು ಆಗ್ರಹ ನಡೆಯಿತು. ಶಿಕ್ಷಣ, ಮದುವೆ, ಸಮಾಜ ಸಂಬಂಧಗಳು ಪೃಥಕ್ಕಾಗಹತ್ತಿದವು. ಪ್ರತಿಯೊಬ್ಬ ಮುಸಲ್ಮಾನ ಹುಡುಗನು ಉರ್ದು ಭಾಷೆಯ ಹೊರತು ಬೇರೆ ಭಾಷೆಯಿಂದ ಕಲಿಯಬಾರದೆಂಬ ನಿರ್ಬಂಧವುಂಟಾಯಿತು. ಹಿಂದು ರೂಢಿ ಪ್ರಕಾರ ಕಾನೂನುಗಳಂತೆ ನಡೆಯುವ ಮುಸಲ್ಮಾನರೆಲ್ಲರೂ ಶರಿಯತ್-ಕಾನೂನಿನಂತೆ ತಮ್ಮ ವ್ಯವಹಾರಗಳನ್ನು ನಡಿಸಬೇಕೆಂದು ವಿಧಿಸಲಾಯಿತು. ಹಿಂದುಗಳನ್ನು ಮುಸಲ್ಮಾನರಲ್ಲಿ ಸೇರಿಸಿಕೊಂಡರೆ ಮುಸಲ್ಮಾನರು ಪುಣ್ಯವಂತರಾಗುತ್ತಾರೆಂಬ ಪ್ರಚಾರ ನಡೆಯಿತು. ಈ ಮೂಲಕ ಹಿಂದು ಮುಸಲ್ಮಾನರಲ್ಲಿ ಅಪಾರ ಅಪನಂಬಿಕೆ, ಮತ್ಸರ ದ್ವೇಷ, ಅಸೂಯೆಗಳು ಉಂಟಾಗಹತ್ತಿದವು.

ಆ ಮೇಲೆ ಈ ಜನಾಂಗಗಳ ಸಿದ್ಧಾಂತಕ್ಕೆ ಒಂದು ರೂಪ ಬಂತು! ಪಾಕಿಸ್ತಾನವು ಮುಸಲ್ಮಾನ ಜನಾಂಗವಾಯಿತು. ಮುಸಲ್ಮಾನರು ಹಿಂದ ಜನಾಂಗದ ಅಲ್ಪಸಂಖ್ಯಾಕ ಜನಾಂಗವಾಗಿ ಉಳಿಯಲಿಲ್ಲ. ಅದೊಂದು ಸ್ವತಂತ್ರ ಜನಾಂಗವಾಯಿತು. ಮಹಾತ್ಮರು ಹಿಂದು ಜನಾಂಗದ ಪ್ರತಿನಿಧಿಗಳಾದರು. ರಾಷ್ಟ್ರೀಯ ಸಭೆಯು ಹಿಂದು ಜನಾಂಗದ ಸಂಸ್ಥೆಯಾಯಿತು!

ಈ ಪ್ರಕಾರ ಶ್ರೀ ಕನ್ಹಯ್ಯಾಲಾಲ ಮುನಶಿಯವರು ಹಿಂದು ಮುಸಲ್ಮಾನ ಸಮಾಜಗಳ ಪೂರ್ವ ಸಹವಾಸವನ್ನೂ ಬ್ರಿಟಿಶರ ಸಹವಾಸದಿಂದ ಉಭಯ ಸಮಾಜಗಳಲ್ಲಿ ಉಂಟಾದ ವೈಮನಸ್ಯಗಳನ್ನೂ ಐತಿಹಾಸಿಕ ಸಂಗತಿಗಳ ವಿವರದಿಂದ ಪ್ರತಿಪಾದಿಸಿದ್ದಾರೆ. ಮುಸಲ್ಮಾನರು ಎಲ್ಲೇ ಇರಲಿ, ಯಾವದೇ ಪ್ರಾಂತದಲ್ಲಿರಲಿ ಮುಸಲ್ಮಾನ ಧರ್ಮದವರೆಂಬ ಒಂದೇ ಕಾರಣದಿಂದ ಅವರು ಅರಕ್ಷಿತರಿರುತ್ತಾರೆಂದೂ ಅವರಿಗೆ ಬ್ರಿಟಿಶರ ರಕ್ಷಣೆಯೇ ಅತ್ಯವಶ್ಯಕವೆಂದೂ ಬ್ರಿಟಿಶರ ಅಭಾವದಲ್ಲಿ ಅವರು ನಿರ್ನಾಮ ಹೊಂದುವರೆಂದೂ ಹಿಂದುಗಳು ಮುಸಲ್ಮಾನರನಾಶವನ್ನೇ ಬಗೆಯುತ್ತಾರೆಂದೂ ಇವೇ ಮೊದಲಾದ ಭಾವನೆಗಳನ್ನು ದೇಶದಲ್ಲಿ ರೂಢಗೊಳಿಸುವದು ಘಾತಕತನ. ಶ್ರೀ|| ಮುನಶಿಯವರು ಬರೆದಂತೆ ಹಿಟ್ಲರನ ಸಂಪ್ರದಾಯವಿದು. ಹಿಟ್ಲರನ ಸಂಪ್ರದಾಯವನ್ನು ನಿರ್ಮೂಲಗೊಳಿಸಲು ಮಹಾಯುದ್ಧದ ಆಪತ್ತಿಯನ್ನು ಬರಮಾಡಿಕೊಂಡ ಬ್ರಿಟಿಶರು ಆತ್ಮನಿರೀಕ್ಷಣೆ ಮಾಡಿಕೊಂಡು ತಮ್ಮ ನಡಾವಳಿಯನ್ನು ಸುಧರಿಸಿಕೊಳ್ಳುವದು ಶ್ರೇಯಸ್ಕರ. ಮುಸಲ್ಮಾನರನ್ನು ಹಿಂದು-ಬಾಂಧವರಿಂದ ಪೃಥಕ್ಕರಿಸಲು ಸಾಮ್ರಾಜ್ಯಕರ್ತರು ಎಷ್ಟು ಪ್ರಯತ್ನಪಟ್ಟಾಗ್ಯೂ ಹಿಂದು ಮುಸಲ್ಮಾನ ರಾಷ್ಟ್ರಪ್ರಮುಖರ ಪ್ರಯತ್ನದಿಂದ ಹಿಂದ-ಜನಾಂಗವು ಅಖಂಡ ಹಿಂದುಸ್ಥಾನವಾಗಿ ಲೋಕದಲ್ಲಿ ಬಾಳ್ವೆ ಮಾಡುವದು ಖಂಡಿತ. ಸಾಮ್ರಾಜ್ಯಕರ್ತರ ಕಾರಸ್ಥಾನದ ಗಟ್ಟಿ ಈಗ ಒಡೆಯಲಾಗಿದೆ.

ಒಂದು ಸಂಗತಿಯನ್ನು ಮಾತ್ರ ನಮೂದಿಸಲು ವ್ಯಸನವಾಗುತ್ತದೆ. ೧೯೪೦ನೇ ಇಸ್ವಿಯಲ್ಲಿ ಪೃಥಕ್ ಮತದಾರ ಸಂಘಗಳ ಯೋಜನೆಯನ್ನು ಅಖಂಡ ಹಿಂದುಸ್ಥಾನದ ಅಭಿಮಾನದಿಂದ ವಿರೋಧಿಸಿದ ರಾಷ್ಟ್ರೀಯ ಸಭೆಯ ಬೆ|| ಮಹಮ್ಮದ ಅಲಿ ಜಿನ್ನಾರವರು ಇತ್ತಲಾಗಿ ರಾಷ್ಟ್ರೀಯ ಸಭೆಯ ತ್ಯಾಗ ಮಾಡಿ ಮುಸ್ಲಿಮ ಲೀಗಿನ ಕೈ ಹಿಡಿದು ಪಾಕಿಸ್ತಾನದ ಪ್ರಚಾರಕ್ಕಾಗಿ ಆವೇಶದಿಂದ ದುಡಿಯುವ ದೃಶ್ಯ ನಿಜವಾಗಿ ಶೋಚನೀಯ! ಉಚ್ಚ ಸ್ಥಾನದ ಜಿನ್ನಾರವರು ಪತನ ಹೊಂದಿದ ಬಗ್ಗೆ ಸಮಸ್ತ ರಾಷ್ಟ್ರೀಯ ಹಿಂದ-ಲೋಕವು ಮರುಗುತ್ತದೆ. ಪಾಕಿಸ್ತಾನದ ರೂಪವೇನು, ಆ ಪಾಕಿಸ್ತಾನದಲ್ಲಿ ಮುಸಲ್ಮಾನೇತರರು ಇರುವರೋ ಹೇಗೆ? ಇರುತ್ತಿದ್ದರೆ, ಇರಬೇಕಾದರೆ ಅವರ ದರ್ಜೆ ಏನು? ಪಾಕಿಸ್ತಾನೇತರ ಹಿಂದುಗಳು ತಮ್ಮ ಅಧಿಪತ್ಯದಲ್ಲಿರುವ ಮುಸಲ್ಮಾನರ ಘಾತ ಬಗೆಯುತ್ತಿದ್ದರೆ ಪಾಕಿಸ್ತಾನದಲ್ಲಿರುವ ಮುಸಲ್ಮಾನೇತರ ಸಮಾಜದವರ ರಕ್ಷಣೆಯ ಹೊಣೆಗಾರಿಕೆ ಹೇಗಾಗಬೇಕು? ಅಖಿಲ ಹಿಂದುಸ್ಥಾನದಲ್ಲಿರುವ ಮುಸಲ್ಮಾನರೆಲ್ಲ ತಮ್ಮ ಮನೆ ಮಾರುಗಳನ್ನು ಬಿಟ್ಟುಕೊಟ್ಟು ಒಂದೇ ಒಂದು ಪ್ರದೇಶದಲ್ಲಿ ಕಲೆಯಬೇಕೇನು? ಪಾಕಿಸ್ತಾನಕ್ಕೆ ವಿಂಗಡಿಸಿ ಕೊಡಮಾಡಿದ ಪ್ರದೇಶದಲ್ಲಿರುವ ಮುಸಲ್ಮಾನೇತರ ಜನರು ಆ ಪ್ರದೇಶವನ್ನು ಬಿಟ್ಟು ಹೊರಹೊರಡಬೇಕೇನು? ಪಾಕಿಸ್ತಾನ ಪ್ರದೇಶದಲ್ಲಿರುವ ಹಿಂದು ಸಮಾಜದ ಧರ್ಮಮಂದಿರಗಳು ಉಳಿಯಬೇಕೋ ಅಳಿಯಬೇಕೋ? ಹಿಂದುಸ್ಥಾನದಲ್ಲಿ ಹಿಂದುಗಳಿಗೆ ಪ್ರಬಲರಾಗಗೊಡಬಾರದೆಂಬ ಮಾತು ಒಪ್ಪಿಕೊಂಡರೆ, ಆ ಸಮಾಜದ ಭಾಷೆ ಸಂಸ್ಕೃತಿ ಮೊದಲಾದವುಗಳನ್ನು ಘಾತಪಡಿಸಿದನಕ ಮುಸಲ್ಮಾನರ ಕಲ್ಯಾಣವಾಗಲಿಕ್ಕಿಲ್ಲವೆಂದು ಬ್ರಿಟಿಶರು ಕೈಕೊಂಡ ರಾಜ್ಯಧೋರಣವನ್ನು ಒಪ್ಪಿಕೊಳ್ಳುವಾ! ಶೀಖರದೇನು ಗತಿ? ಕ್ರಿಶ್ಚನರದೇನು ಗತಿ? ಪಾರ್ಶಿಗಳದೇನು ಗತಿ? ಅವರ ಸಂರಕ್ಷಣೆ ಪಾಕಿಸ್ತಾನೇತರ ಹಿಂದುಸ್ಥಾನದಲ್ಲಿ ಹೇಗಾಗಬೇಕು? ಇವೇ ಮೊದಲಾದ ಸಮಸ್ಯೆಗಳ ವಿಚಾರವನ್ನು ಜಿನ್ನಾರವರು ಮಾಡಿದ್ದು ತೋರುವದಿಲ್ಲ. ಈ ಸಮಾಜಗಳ ರಕ್ಷಣೆಯ ಹೊಣೆಗಾರಿಕೆ ಬ್ರಿಟಿಶ ಸಾಮ್ರಾಜ್ಯಕರ್ತರಿಗಿಲ್ಲವೇನು? 'ಹಿಂದು' ಎಂಬ ಶಬ್ದವೇ ವ್ಯವಹಾರದಲ್ಲಿ ಲೋಪವಾಗಹತ್ತಿದೆ. ಇಲೆಕ್ಶನುಗಳಲ್ಲಿ ಮುಸಲ್ಮಾನ ಸಂಘ ಮುಸಲ್ಮಾನೇತರ ಸಂಘ, ಹಿಂದುಗಳು ಹಿಂದುಗಳಲ್ಲ ಮುಸಲ್ಮಾನೇತರರು, ಹೀಗೆ ನಿಷೇಧವಾಚಕ ಶಬ್ದಗಳ ಹೊಸ ರೂಢಿ ಪ್ರಾರಂಭವಾಗಿದೆ. ಈ ಕ್ರಮ ಬೇರೆ ಯಾವದೇ ದೇಶದಲ್ಲಿ ಇಲ್ಲ. ಮುಸಲ್ಮಾನರಿರಲಿ, ಪಾರ್ಶಿಗಳಿರಲಿ, ಕ್ರಿಶ್ಚನರಿರಲಿ, ಅವರೆಲ್ಲರೂ ಒಂದೇ ಹಿಂದಮಾತೆಯ ಮಕ್ಕಳೆಂಬ ಭಾವನೆ ಕುಗ್ಗಿ ಪರಸ್ಪರ ವಿರೋಧಕರೆಂಬ, ಜನ್ಮ-ಶತ್ರುಗಳೆಂಬ ಪ್ರಚಾರ ರಾಜಾಶ್ರಯದಲ್ಲಿ ನಡೆಯುತ್ತಿದೆ. ಶ್ರೀ|| ಮುನಶಿಯವರು ಬರೆದಂತೆ ಸಾಮ್ರಾಜ್ಯಕರ್ತರು ನಾಚಿಕೆ ಬಿಟ್ಟು ಈ ಅನಿಷ್ಟ ಕ್ರಮವನ್ನು ಪುರಸ್ಕರಿಸತೊಡಗಿದ್ದಾರೆ.

ಸಾಮ್ರಾಜ್ಯಕರ್ತರು ಈಗಲಾದರೂ ಎಚ್ಚರಿಕೆ ಪಡಬಹುದು. ಬೆ|| ಜಿನ್ನಾರವರಾದರೂ ವಿಶಾಲ ವಿಚಾರ ಹಿಡಿದು ವ್ಯವಹಾರ ದೃಷ್ಟಿಯಿಂದ ತಮ್ಮ ಧೋರಣದ ಪರಿಸೀಮೆಯನ್ನು ಗ್ರಹಿಸಬೇಕು. ಸಾಮ್ರಾಜ್ಯಕರ್ತರ ಬೆಂಬಲವಿರುವದೆಂಬದೊಂದೇ ಗರ್ವ ಹಿಡಿದು 'ಹಿಂದುಗಳೆಲ್ಲರೂ ಹೀನರು, ಘಾತಕರು, ಬಾಧಕರು" ಎಂಬ ಭಾವನೆಯನ್ನು ಸಂಪೂರ್ಣವಾಗಿ ತ್ಯಜಿಸಬೇಕು. ಇಲ್ಲಿಯ ಮುಸಲ್ಮಾನರಲ್ಲಿ ಅರಬಸ್ಥಾನ ತುರ್ಕಸ್ಥಾನಗಳಿಂದ ಹಿಂದುಸ್ಥಾನಕ್ಕೆ ಬಂದ ಮುಸಲ್ಮಾನರಿಲ್ಲ. ಎಲ್ಲರೂ ದೇಸಿಗರೇ. ಹಿಂದು ಸಮಾಜದಿಂದ ಧರ್ಮಾಂತರ ಹೊಂದಿದ ಮುಸಲ್ಮಾನರೇ. ಈಗ ಹಿಂದ-ಜನಾಂಗದ ಆಗು-ಹೋಗುಗಳಲ್ಲಿ ಹಿಂದುಗಳಂತೆ ಮುಸಲ್ಮಾನರೂ ಸಂಬಂಧಪಟ್ಟವರಿದ್ದಾರೆ. ಹಿಂದುಗಳನ್ನು ಸುಲಿಯುವವರು ಮುಸಲ್ಮಾನರನ್ನು ಸುರಕ್ಷಿತ ಬಿಡುವರೆಂದು ಎಣಿಸುವದು ದಡ್ಡತನ. ನ್ಯಾಯವಾದ ರಾಜ್ಯಾಧಿಕಾರವನ್ನು ಬೆ|| ಜಿನ್ನಾರವರಿಗೆ ಒಪ್ಪಿಸಬಹುದಾಗಿಯೂ ಜಿನ್ನಾರವರ ಮುಖ್ಯ ಪ್ರಧಾನ ಪದಕ್ಕೆ ಅನುಕೂಲವಾಗಿ ನಡೆಕೊಳ್ಳಲು ನಾವು ಸಿದ್ಧರಿರುವದಾಗಿಯೂ ಶ್ರೀ|| ಚಕ್ರವರ್ತಿ ರಾಜಗೋಪಾಲಾಚಾರ್ಯರು ಮಾಡಿದ ಸೂಚನೆಯನ್ನು ಸಾಮ್ರಾಜ್ಯಕರ್ತರು ಮನ್ನಿಸಲಿಲ್ಲ. ಮುಸ್ಲಿಮ ಲೀಗು ಸಾಮ್ರಾಜ್ಯಕರ್ತರಿಗೆ ಬೇಕಾದದ್ದು ರಾಷ್ಟ್ರೀಯ ಆಂದೋಲನವನ್ನು ಪ್ರತಿಭಟಿಸಲಿಕ್ಕೆ! 'ಸ್ವರಾಜ್ಯದ ಗಂಟನ್ನು ನಾವು ಕಟ್ಟಿಟ್ಟಿದ್ದೇವೆ. ನಮಗೆ ಸ್ವಾರ್ಥವಿಲ್ಲ. ಪರಾರ್ಥಿಗಳು ನಾವು, ಪರಮಾರ್ಥಿಗಳು ನಾವು, ಪರೋಪಕಾರಿಗಳು ನಾವು, ಲೋಕೋಪಕಾರಿಗಳು ನಾವು, ಲೋಕಸ್ವಾತಂತ್ರ್ಯವಾದಿಗಳು ನಾವು, ಹಿಂದು-ಮುಸಲ್ಮಾನರು ಒಕ್ಕಟ್ಟಾಗಿ ಬಂದೊಡನೆ ಆ ಸ್ವರಾಜ್ಯದ ಗಂಟನ್ನು ಅವರಿಗೊಪ್ಪಿಸಿ ನಾವು ಹಡಗ ಹತ್ತಿ ಸ್ವದೇಶಕ್ಕೆ ಹೊರಟುಬಿಡುತ್ತೇವೆ. ಆದರೆ ಏನು ಮಾಡುವದು? ನಾವು ಎಷ್ಟು ಪ್ರಯತ್ನ ಮಾಡಿದಾಗ್ಯೂ ಹಿಂದು ಮುಸಲ್ಮಾನರು ಒಕ್ಕಟ್ಟಾಗುವದಿಲ್ಲ, ಜನ್ಮಶತ್ರುಗಳಾಗಿ ಬಡಿದಾಡಿಕೊಳ್ಳುತ್ತಿದ್ದಾರೆ, ಅವರನ್ನು ಇಂಥ ಸ್ಥಿತಿಯಲ್ಲಿ ಬಿಟ್ಟು ಹೊರಟುಬಂದರೆ ದೈವಸಂಕಲ್ಪಕ್ಕೆ ವಿರುದ್ಧವಾಗುವದು. ಕರ್ತವ್ಯಪರಾಙ್ಮುಖವಾದ ಘೋರ ಪಾಪ ನಮ್ಮ ತಲೆಯ ಮೇಲೆ ಬಂದು ಬೀಳುವದು' ಹೀಗೆ ಸಾಮ್ರಾಜ್ಯಕರ್ತರು ಅಮೇರಿಕಾ ಮೊದಲಾದ ಜನಾಂಗಗಳಿಗೆ ಭಾಷೆ ಮಾಡಿಕೊಟ್ಟು ಪಾರಾಗಬಯಸುತ್ತಾರೆ. ಶ್ರೀ|| ಮುನಶಿಯವರು ಅಖಂಡ ಹಿಂದುಸ್ಥಾನದ ಕುರಿತು ಲೇಖ ಬರೆದು ಸಾಮ್ರಾಜ್ಯಕರ್ತರ ನಿಜ ವೇಷವನ್ನು ಬಯಲುಗೊಳಿಸಿದ ಬಗ್ಗೆ ಜನಾಂಗವು ಅವರಿಗೆ ಋಣಿಯಾಗಿರುವದು. ಶ್ರೀ|| ಮುನಶಿಯವರು ಅಖಂಡ ಹಿಂದುಸ್ಥಾನದ ಒಂದು ಆಂದೋಲನವನ್ನೇ ಎಬ್ಬಿಸಿ ಹಿಂದುಸ್ಥಾನದೊಳಗಿನ ಸಮಸ್ತ ಜನಾಂಗಗಳಲ್ಲಿ ಏಕರಾಷ್ಟ್ರೀಯ ಭಾವನೆಯನ್ನು ಉಂಟುಮಾಡಲು ಮಾಡಿದ ಪ್ರಯತ್ನ ಸಫಲವಾಗಲೆಂದು ಸಮಸ್ತ ಹಿಂದವಾಸಿಗಳು ಪ್ರಾರ್ಥಿಸುತ್ತಾರೆ.

ಕಾನಡಾವೃತ್ತ.

ಮಿತಿ ವೃಷ ಸಂವತ್ಸರದ ಭಾದ್ರಪದ ಕೃ|| ೪ಗೆ, ಸೋಮವಾರ.

ಹಿಂದ-ಜನಾಂಗದ ಪ್ರಚಂಡ ಶಕ್ತಿ.

ಇದೇ ೩ನೇ ತಾರೀಖಿಗೆ ಮಹಾಯುದ್ಧ ಪ್ರಾರಂಭವಾಗಿ ೨ ವರ್ಷಗಳಾದವು. ಈ ಸಮಯ ಯುಧ್ಯಮಾನ ಜನಾಂಗಗಳೆಲ್ಲ ಹಿಂದಿನ ಘಟನೆಗಳನ್ನು ಪರಾಂಬರಿಸಿ, ಮುಂದೆ ತಮ್ಮಿಂದಾಗಬೇಕಾದ ಕಾರ್ಯಸ್ವರೂಪವನ್ನು ನಿರ್ಧರಿಸಿಕೊಳ್ಳುತ್ತವೆ. ಇಂಥ ಸಮಯದಲ್ಲಿ ನಮ್ಮ ಹಿಂದುಸ್ಥಾನದ ಸರ್ವಾಧಿಪತಿ ಲಿನಲಿಥಗೋ ದೊರೆಗಳೂ ಸರ್ವಚಾಲಕ ಸೇನಾಪತಿಗಳಾದ ವೆವೆಲ್‌ರವರೂ ಆಕಾಶವಾಣಿಯ ಮೂಲಕ ಯುದ್ಧಯತ್ನದಲ್ಲಿ ಪ್ರಚಂಡ ಶಕ್ತಿಯನ್ನು ವಿನಿಯೋಗಿಸಲು ಹಿಂದ ಜನಾಂಗಕ್ಕೆ ಬೋಧಿಸುತ್ತಾರೆ. ಮಹಾಯುದ್ಧವು ಇಕ್ಕಟ್ಟಿನದಾದಾಗ, ಜರ್ಮನರು ರುಶ್ಯರನ್ನು ಪ್ರತಿಭಟಿಸಿ ಮುಂದಾಗುತ್ತಿರುವಾಗ, ಹಿಟ್ಲರನನ್ನು ನಿರ್ಬಂಧಿಸಲು ಹಿಟ್ಲರ ವಿರೋಧಿ ಜನಾಂಗಗಳು ಪರಮಾವಧಿಯ ಪ್ರಯತ್ನ ಮಾಡಬೇಕೆಂಬ ಸಂಗತಿ ಕ್ರಮಪ್ರಾಪ್ತವಾದದ್ದು. ಲೋಕಕಂಟಕ ಹಿಟ್ಲರನನ್ನು ನಿರ್ನಾಮಗೊಳಿಸಿ, ಭೂಮಂಡಳಕ್ಕೊದಗಿದ ಆಪತ್ತನ್ನು ಪರಿಹರಿಸಿ ಲೋಕಪ್ರಪಂಚವನ್ನು ಸುಖಪಡಿಸಲು ಮುಂದಾದ ಬ್ರಿಟನ ಜನಾಂಗದ ಸರ್ವಾಧಿಪತಿಗಳಂಥ ನಿಷ್ಠಾವಂತ ಸೇವಕರು ಸ್ವಕಾರ್ಯದಲ್ಲಿ ಹಿಂದ-ಜನಾಂಗದ ಪೂರ್ಣ-ಸಂಪೂರ್ಣ-ಪರಿಪೂರ್ಣ ಸಹಕಾರವನ್ನು ಅಪೇಕ್ಷಿಸುವದು ಮನುಷ್ಯ-ಸ್ವಭಾವವಷ್ಟೇ! ಆದರೆ ಹಿಂದ-ಜನಾಂಗಕ್ಕಾದರೂ ಮನುಷ್ಯ-ಭಾವನೆಗಳುಂಟು. ಅವನ್ನು ಮನ್ನಿಸುವ ಪೂರ್ವದಲ್ಲಿ ಹಿಂದ-ಜನಾಂಗವು ತಮ್ಮಂತೆಯೇ, ತಮಗಿಂತಲೂ ಮಿಗಿಲಾಗಿ ಯುದ್ಧಕಾರ್ಯದಲ್ಲಿ ನೆರವಾಗಬೇಕೆಂದು ಅಪೇಕ್ಷಿಸಲಾಗದು. ಬ್ರಿಟಿಶ ಮುಖ್ಯ ಮಂತ್ರಿಗಳಾದ ಮಿ|| ಚರ್ಚಿಲ್ಲರವರೂ ಅಮೇರಿಕೆಯ ಅಧ್ಯಕ್ಷರಾದ ರೂಝುವೆಲ್ಟರವರೂ ಗಾಂಭೀರ್ಯದಿಂದ ಘೋಷಿಸಿದ ಲೋಕವಿಮೋಚನೆಯ ಘೋಷಣೆ ಹಿಟ್ಲರನಿಂದ ಸುಲಿಯಲ್ಪಟ್ಟ ನಿರ್ಭಾಗಿ ಜನಾಂಗಗಳಿಗೆ ಮಾತ್ರ ಅನ್ವಯಿಸುತ್ತದೆಂದು ಹೇಳಿದ ಬಳಿಕ, ಹಿಟ್ಲರನನ್ನು ಪ್ರತಿಭಟಿಸಲು ಹಿಂದ-ಜನಾಂಗದ ಅಂತಃಕರಣದಲ್ಲಿ ಉತ್ಸಾಹವುಂಟಾಗುವ ಬಗೆ ಹೇಗೆ? "ಹಿಂದುಸ್ಥಾನದ ಶಕ್ತಿ ಪ್ರಚಂಡವುಂಟು; ಅದು ಇನ್ನೂ ಪ್ರಚಂಡವಾಗಬೇಕು" ಎಂಬ ಸರ್ವಾಧಿಪತಿಗಳ ಅಪೇಕ್ಷೆಯನ್ನು ನಾವು ಮನಃಪೂರ್ವಕವಾಗಿ ಮನ್ನಿಸುತ್ತೇವೆ. ಹಿಂದ ಜನಾಂಗವನ್ನು ಲೋಕಸಂತೋಷದಿಂದ ಸಂಘಟಿಸಿದರೆ ಹಿಟ್ಲರನ ಜರ್ಮನ ತಂಡಗಳೆಲ್ಲ ನಿಂತಲ್ಲಿಯೇ ಸ್ತಬ್ಧವಾಗಬೇಕು ಅಷ್ಟು ಅಪಾರ ಶಕ್ತಿ ನಮ್ಮ ಹಿಂದ-ಜನಾಂಗದಲ್ಲಿವೆ ಆದರೆ ಬ್ರಿಟಿಶರು ನಮ್ಮ ಹಿಂದ ಜನಾಂಗಕ್ಕೆ ಯುದ್ಧಸ್ಫೂರ್ತಿಯನ್ನೇ ಅನುಗ್ರಹಿಸಲೊಲ್ಲರು. ಹಿಂದೀ ಸೈನಿಕರ ಶೌರ್ಯ-ವೀರ್ಯಗಳನ್ನು ಅನೇಕ ಯುದ್ಧಕಲಾಕೋವಿದರು ತುಂಬಾ ಪ್ರಶಂಸಿಸಿದ್ದುಂಟು. ಹಿಂದೀ ಸೈನಿಕರಿಗೆ ಸಾವಿನ ಅಂಜಿಕೆಯಿಲ್ಲ, ರಣಭೂಮಿಯಲ್ಲಿ ನಮ್ಮ ಸೈನಿಕರು ಒಮ್ಮೆ ನಿಂತುಕೊಂಡರೆಂದರೆ ಅವರ ಪ್ರತಾಪಕ್ಕೆ ಸಾವು ಅಂಜಿಹೋಗಬೇಕು! ಇಂಥ ಮೇಲ್ತರಗತಿಯ ರಣಶೌರ್ಯ ನಮ್ಮ ಹಿಂದ ಜನಾಂಗದಲ್ಲಿರಲಾಗ, ಬ್ರಿಟಿಶರು ಬುದ್ಧಿಪೂರ್ವಕವಾಗಿ ಅವನ್ನು ತಾತ್ಸಾರ ಮಾಡಿ ಯುದ್ಧಕಾರ್ಯವನ್ನು ನಡಿಸುತ್ತಿದ್ದನ್ನು ನೋಡಿ ನಮ್ಮ ಮನಸ್ಸು ಖಿನ್ನವಾಗುತ್ತದೆ. ಹಿಂದ ಜನಾಂಗವನ್ನು ಸಂತೈಸದೆ, 'ಸೈನಿಕರನ್ನು ಕೊಡಿರಿ, ಮದ್ದು ಗುಂಡುಗಳನ್ನು ತಯಾರಿಸಿ ಕೊಡಿರಿ, ರಣಸಾಹಿತ್ಯಗಳನ್ನು ತಯಾರಿಸಿಕೊಡಿರಿ. ಯುದ್ಧನಿಧಿ ಕೊಡಿರಿ, ಯುದ್ಧಘೋಷ ಮಾಡಿರಿ; ಸೈನ್ಯ-ಶಿಕ್ಷಣದ ಪಥಕಗಳಲ್ಲಿ ಸೇರಿರಿ, ಬ್ರಿಟಿಶರ ವಿಜಯವಾಗಬೇಕೆಂದು ಹರಸಿರಿ, ಹಿಟ್ಲರನ ಸೋಲಾಗಬೇಕೆಂದು ಪರಮಾತ್ಮನಕಡೆ ಪ್ರಾರ್ಥಿಸಿಕೊಳ್ಳಿರಿ' ಹೀಗೆ ಹಿಂದ-ಜನಾಂಗದೊಡನೆ ಮಧ್ಯಸ್ಥಿಕೆ ಮಾಡುವರೆಂದರೆ ಬುದ್ಧಿಪುರಸ್ಸರವಾಗಿ ಹಿಂದ-ಜನಾಂಗವನ್ನು ಬ್ರಿಟನ್ನು ತಿರಸ್ಕರಿಸುತ್ತದೆಂದು ಎನ್ನಬೇಕು. ಇಂಥ ಕ್ರಮ ಸಾರ್ಥಕವಲ್ಲೆಂದು, ನಿರರ್ಥಕವೆಂದು ನಾವು ನಮೂದಿಸುವದನವಶ್ಯಕ. ಬ್ರಿಟನಿಗೆ ಯಾವದೇ ಪ್ರಕಾರದಿಂದ ಅನ್ಯಾಯ ಮಾಡಿಲ್ಲ. ರುಶ್ಯರಂಥ ಜನ್ಮಶತ್ರುವಿನೊಡನೆ ಸ್ನೇಹಸಂಬಂಧ ಬೆಳಸಿದ ಬ್ರಿಟನ ಜನಾಂಗಕ್ಕೆ ಹಿಂದ ಜನಾಂಗದಂಥ ಯಾವಾಗಲೂ ಬ್ರಿಟಿಶರ ಕಲ್ಯಾಣವನ್ನೇ ಅಪೇಕ್ಷಿಸುವಂಥ, ಬ್ರಿಟನಿನಿಂದಲೇ ಆತ್ಮೋದ್ಧಾರವಾಗುವದೆಂದು ನಂಬಿಕೊಂಡಂಥ ಹಿಂದ ಜನಾಂಗವನ್ನು ಸಂತೋಷಗೊಳಿಸುವದು ಸುಲಭಸಾಧ್ಯವಾದ ಮಾತು. ಹಿಟ್ಲರನು ಪಾದಾಕ್ರಾಂತ ಮಾಡಿದ ಜನಾಂಗಗಳು ಮಾತ್ರ ಪರತಂತ್ರ ಜನಾಂಗಗಳು, ಬ್ರಿಟಿಶ ಸಾಮ್ರಾಜ್ಯಕ್ಕೊಳಪಟ್ಟ ಮಾಂಡಲಿಕ ದೇಶಗಳು ಸ್ವತಂತ್ರವಾದವುಗಳು; ಹೀಗೇನಿಲ್ಲ. ಪಾರತಂತ್ರ್ಯಕ್ಕೆ ಯಾರೂ ಕಾರಣರಾಗಲೊಲ್ಲರೇಕೆ? ಸಮಸ್ತ ಪರತಂತ್ರ ಜನಾಂಗಗಳೆಲ್ಲ ಸಮಾನಸ್ಥಿತಿಯವು, ಅವುಗಳಲ್ಲಿ ಉಚ್ಚ-ನೀಚ ಭೇದವಿಲ್ಲ. ಲಂಡನಿನ 'ನ್ಯೂ ಸ್ಟೇಟ್ಸಮನ್ ಎಂಡ ನೇಶನ್' ಪತ್ರಕರ್ತರ ಮನೋಗತವನ್ನು ನಾವು ಈ ಹಿಂದೆ ಇದೇ ವಿಷಯವನ್ನು ಪ್ರಸ್ತಾಪಿಸುವಾಗ ನಮೂದಿಸಿದ್ದುಂಟು. ಹಿಟ್ಲರನನ್ನು ಅಧಿಕ್ಷೇಪಿಸುವಾಗ ಹಿಟ್ಲರನ ವಿರೋಧಕರು ಆತ್ಮನಿರೀಕ್ಷಣೆ ಮಾಡಿಕೊಳ್ಳಬೇಕು. ಸ್ವಂತ ನಡವಳಿಯನ್ನು ತಿದ್ದಿಕೊಳ್ಳದೆ ಪರರ ದೋಷಗಳನ್ನಷ್ಟೇ ಪ್ರಚುರಗೊಳಿಸುವದೆ ಕಾರ್ಯಭಾಗವಾದರೆ, ಅಂಥ ಪ್ರಚಾರ ಕಾರ್ಯಕ್ಷಮವಾಗುವದಿಲ್ಲ. ಯಾವದೇ ಕಾರ್ಯಕ್ಕಾದರೂ ಕಾರ್ಯಾಧಿಕಾರ ಬೇಕು. ಆ ಕಾರ್ಯದ ಮಟ್ಟಿಗೆ ಕಾರ್ಯ ಪುರಸ್ಕಾರ ಮಾಡುವ ವ್ಯಕ್ತಿ ನಿರ್ದೋಷವಾದದ್ದಿರಬೇಕು. ಲೋಕಶಾಹಿಯನ್ನು ಲೋಕದಲ್ಲಿ ಪ್ರಚುರಗೊಳಿಸಲು ಹೊರಟ ಚರ್ಚಿಲ್ಲ-ರೂಝುವೆಲ್ಟರು ತಮ್ಮ ತಮ್ಮ ಆಳಿಕೆಯಲ್ಲಿರುವ ಪ್ರದೇಶದ ಮಟ್ಟಿಗೆ ಲೋಕಶಾಹಿಯನ್ನು ಪುರಸ್ಕರಿಸದಿದ್ದರೆ ಲೋಕಶಾಹಿಯ ಪ್ರಚಾರವೆಲ್ಲ ಒಣ-ಬಡಿವಾರವೆಂದು ಸಮಕ್ಷ ಯಾರೂ ಹೇಳದಿದ್ದರೂ ಅಂತರ್ಯದಲ್ಲಿ ತಿಳಕೊಳ್ಳದಿರರು! ಮೇಲಾಗಿ ಆ ಕಾರ್ಯಕ್ಕೆ ತಕ್ಕ ಆವೇಶವಾಗಲಿ ಚೈತನ್ಯವಾಗಲಿ ಸಾಮರ್ಥ್ಯವಾಗಲಿ ಕಾರ್ಯಕರ್ತರಿಗೆ ಪ್ರಾಪ್ತವಾಗುವದಿಲ್ಲ. ಸದ್ಯಕ್ಕೇ ಒಂದು ಪತ್ರಿಕೆಯಲ್ಲಿ ನಾವೊಂದು ಚಿತ್ರವನ್ನು ನೋಡಿದೆವು. ಚಿತ್ರಕರ್ತರು ಚರ್ಚಿಲ್ಲ-ರೂಝುವೆಲ್ಟರ ಲೋಕಸ್ವಾತಂತ್ರ್ಯಘೋಷಣೆಯನ್ನು ಉಭಯತರ ಕೈಯಲ್ಲಿ ಕೊಟ್ಟು, ರೂಝುವೆಲ್ಟರ ಕಾಲಡಿಗೆ ಫಿಲಿಪ್ಪೈನ ದೇಶವನ್ನು ಚರ್ಚಿಲ್ಲರ ಕಾಲಡಿಗೆ ನಮ್ಮ ಹಿಂದುಸ್ಥಾನ ದೇಶವನ್ನು ಚಿತ್ರಿಸಿ ಉಭಯತರೂ ಪ್ರಾಮಾಣಿಕ ಲೋಕಶಾಹಿಯ ಪುರಸ್ಕರ್ತರಲ್ಲವೆಂದೂ, ಸ್ವಾರ್ಥಸಾಧನೆಗಾಗಿಯೇ ಲೋಕಶಾಹಿಯ ವೇದಾಂತವನ್ನು ಪ್ರಚುರಗೊಳಿಸುತ್ತಾರೆಂದೂ ಸೂಚಿಸಿದ್ದಾರೆ. ಈ ಸೂಚನೆ ಅಯಥಾರ್ಥವೆಂದು ಹಿಂದುಸ್ಥಾನ ಫಿಲಿಪ್ಪೈನ ದೇಶಗಳ ಪರಿಸ್ಥಿತಿಯ ಅಭ್ಯಾಸ ಮಾಡಿದವರು ಹೇಳಲಾರರು. ಹೀಗೆ ಹಿಂದ-ಜನಾಂಗದ ಅಂತರಂಗವನ್ನು ಖಿನ್ನಗೊಳಿಸಿ, ಅಂತಃಪ್ರೇರಣೆಯಿಲ್ಲದೆ ಹಿಂದುಸ್ಥಾನದಿಂದ ಮಹಾಯುದ್ಧಯತ್ನಕ್ಕಾಗಿ ಪರಮಾವಧಿಯ ಸಹಾಯ ಪಡೆಯುವ ಅಭಿಲಾಷ ಹಿಡಿಯುವದು ವಿಚಾರರಮಣೀಯವಲ್ಲ, ಈ ಧೋರಣದಿಂದ ೨ ವರ್ಷ ಯುದ್ಧ ನಡೆಯಿತು. ಈ ಧೋರಣದಿಂದ ಹಿಂದ ಜನಾಂಗದಲ್ಲಿ ಉಂಟಾದ ಸ್ಥಿತ್ಯಂತರಗಳನ್ನು ನಾವು ಪ್ರತ್ಯೇಕವಾಗಿ ನಮೂದಿಸುವದನವಶ್ಯಕ. ಸರ್ವಾಧಿಪತಿ ಲಿನಲಿಥಗೋ ದೊರೆಗಳೂ ಸೇನಾಪತಿ ವೆವೆಲರವರೂ ಅವನ್ನು ಅನುಭವಿಸಿದ್ದುಂಟು. ಮಹಾತ್ಮಾದಿ ರಾಷ್ಟ್ರೀಯ ಪಕ್ಷದ ಲೋಕನಾಯಕರು ಈ ಧೋರಣವನ್ನು ಕಟುವಾಗಿ ನಿಷೇಧಿಸಿದ್ದಾರೆ. ಮೌ|| ಅಬುಲ ಕಲಾಮ ಆಝಾದ ಪ್ರಭೃತಿ ಲೋಕನಾಯಕರು ಕಾರಾಗೃಹವನ್ನು ಸೇರಿಕೊಂಡು ಬ್ರಿಟಿಶರ ಲೋಕಶಾಹಿಯ ಪುರಸ್ಕಾರವೆಲ್ಲ ನಿರರ್ಥಕವೆಂದು ಲೋಕಕ್ಕೆ ಸಿದ್ಧಪಡಿಸಿದ್ದಾರೆ. ಮಹಾಯುದ್ಧದ ೩ನೇ ವರ್ಷದಲ್ಲಾದರೂ ಸಾಮ್ರಾಜ್ಯಕರ್ತರು ನಿಃಸ್ವಾರ್ಥದಿಂದಲೂ ನಿರ್ವಿಕಾರ ಚಿತ್ತದಿಂದಲೂ ಸಕಲ ಪರಿಸ್ಥಿತಿಯನ್ನು ಸಮಾಲೋಚಿಸಿ ಹಿಂದ-ಜನಾಂಗಕ್ಕೆ ನ್ಯಾಯವಾಗಿ ಸಿಗಬೇಕಾದ ರಾಜ್ಯಭಾರದ ಅಧಿಕಾರವನ್ನು ಒಪ್ಪಿಸಬೇಕಾಗಿ ನಾವು ವಿನಂತಿ ಮಾಡಿಕೊಳ್ಳುತ್ತೇವೆ. ಹಿಂದ-ಜನಾಂಗದ ಧ್ಯೇಯವೂ ಬ್ರಿಟನ ಜನಾಂಗದ ಧ್ಯೇಯವೂ ಜಗತ್ತಿನಲ್ಲೆಲ್ಲ ನಿರಂಕುಶ ರಾಜಸತ್ತೆ ಪ್ರಸ್ಥಾಪಿಸಲು ಹವಣಿಸುವ ಹಿಟ್ಲರನ ನಾಶವಾಗಬೇಕೆಂದು, ಇರುವಾಗ ಉಭಯತರೊಳಗೆ ಮತ್ತೈಕ್ಯ, ಸಹಕಾರ ಒದಗಿಬರುವದು ಕಷ್ಟವಲ್ಲ. ಆದರೆ ಅದಕ್ಕೆ ತಕ್ಕ ಗೆಳೆತನವೂ, ಪರಸ್ಪರ ವಿಶ್ವಾಸವೂ, ಪರಸ್ಪರರ ಬಗ್ಗೆ ಸ್ವತ್ವಾನುಕ ಪ್ರೇಮಾದರಗಳೂ ಪರಸ್ಪರರಲ್ಲಿ ಉಂಟಾಗಬೇಕು. ಇಲ್ಲದಿದ್ದರೆ ಸಹಕಾರವೆಲ್ಲಿಂದ ಒದಗುವದು?

ತುರ್ಕಸ್ಥಾನದಲ್ಲೀಗ ಗಡಿಬಿಡಿ!

[ನಿರೀಕ್ಷಕನು ಬರೆದುದು.]

ಇರಾಣದ ಮೇಲಿನ ಬಾರಿ ಈಗ ತುರ್ಕಸ್ತಾನದ ಮೇಲೆ ಬರಲಿಕ್ಕಿದೆಯೆಂದು ತಿಳಿದು ನನಗೊಳ್ಳೇ ಗಾಬರಿಯಾಗಿದೆ. ತುರ್ಕಸ್ಥಾನದ ಮೇಲೆ ಜರ್ಮನರು ಕಪ್ಪು ಸಮುದ್ರದ ಮಾರ್ಗವಾಗಿ, ಬಲ್ಗೇರಿಯದ ಮಾರ್ಗವಾಗಿ ಸಾಗಿಹೋಗಲಿದ್ದಾರೆಂದು ಸುದ್ದಿಗಳ ಮೇಲೆ ಸುದ್ದಿಗಳು ಬರಹತ್ತಿವೆ! ಬಲ್ಗೇರಿಯದ ಬೋರಿಸ ಅರಸರಿಗೂ ಜರ್ಮನಿಯ ರಾಯಭಾರಿಗಳಾದ ವೊನ ಪೊಪೇನರವರಿಗೂ ವಿಚಾರವಿನಿಮಯವಾದ ವಾರ್ತೆಗಳಿವೆ. ಕೊಕೆಸಸ ಪರ್ವತದ ಮೇಲಿನ ಎಣ್ಣೆ ಗಣಿಗಳನ್ನು ಹಿಟ್ಲರನು ಆಕ್ರಮಿಸಿಕೊಳ್ಳುವ ಹಂಚಿಕೆಯಲ್ಲಿದ್ದಾನಂತೆ. ರುಶ್ಯ ಯುದ್ಧದಲ್ಲಿ ಜರ್ಮನರಿಗೆ ಗೆಲವಾಗುವದೆಂದು ಸುದ್ದಿಗಳು ಹೊರಡಹತ್ತಿವೆ. ತುರ್ಕರ ಮೇಲೆ ಬರಲಿಕ್ಕಿದ್ದ ಸಂಕ್ರಾಂತಿಯ ಪೂರ್ವರಂಗವಿದು! ಇರಾಣದಿಂದ ಓಡಿಹೋದ ಜರ್ಮನರು ತುರ್ಕಸ್ಥಾನದಲ್ಲಿ ರಾಣ್ಯ ಹೂಡಬಾರದೆಂದು ಬ್ರಿಟಿಶರ ನಿಗ್ರಹ. ಈ ಗಡಿಬಿಡಿಯಲ್ಲಿ ತುರ್ಕ ಸರಕಾರವು ಹಿಟ್ಲರನ ಬಲಾತ್ಕಾರಕ್ಕೆ ಬಲಿಬೀಳಬಾರದೆಂದು ಬ್ರಿಟಿಶರು ತುರ್ಕಸ್ತಾನವನ್ನೂ ಆಕ್ರಮಿಸಿಕೊಳ್ಳುತ್ತಾರೇನೆಂದು ಎಣಿಸಿ ನಾನು ಚಿಂತಾಕ್ರಾಂತನಾಗಿದ್ದೇನೆ. ಹಿಟ್ಲರ-ಚಕ್ರದ ಅಂಜಿಕೆಯಿಂದ ಇರಾಣದ ಪಾಡಾದಂತೆಯೇ, ತುರ್ಕಸ್ತಾನದ ಅವಸ್ಥೆಯಾಗುವದಾಗಿ ಸುದ್ದಿಗಾರರು ಸಾಮಾನ್ಯವಾಗಿ ಧ್ವನಿಸುತ್ತಾರೆ. ಯುದ್ಧ-ಕಾರಣದ ನೀತಿಗೆ ಬುಡಬೇರಿಲ್ಲ! ಬಲಶಾಲಿಗಳು ಮಾಡಿದ್ದೇ ನೀತಿ! ತುರ್ಕ ಸರಕಾರವು ಯಾವದೊಂದು ಬದಿಗೆ ಸೇರದೆ ತಾನು ಅಲಿಪ್ತ ಉಳಿಯುವದೆಂದು ಲೋಕಕ್ಕೆ ಸಾರುತ್ತದೆ; ಆದರೆ ತುರ್ಕಸ್ತಾನದ ಘಟನೆಗಳ ಒಡೆತನ ಈಗ ತುರ್ಕರ ಸ್ವಾಧೀನವಿಲ್ಲ! ಒಂದೆಡೆ ಜರ್ಮನರು, ಮತ್ತೊಂದೆಡೆ ಬ್ರಿಟಿಶರು ಎಳೆದಾಟ ನಡಿಸುತ್ತಿರುವಾಗ, ಒಲ್ಲೆಂದರೂ ತುರ್ಕರು ಯುದ್ಧ-ಯಜ್ಞದಲ್ಲಿ ಆಹುತಿ ಬೀಳಬೇಕಾದೀತು. ಬ್ರಿಟಿಶ-ರುಶ್ಯರು ತುರ್ಕಸ್ತಾನವನ್ನು ಸೇರಿದರೆ ಬಲ್ಗೇರಿಯಾದಲ್ಲಿದ್ದ ಜರ್ಮನರೂ ಇಟಾಲಿಯರೂ ತುರ್ಕಸ್ತಾನವನ್ನು ನುಗ್ಗಿ ಹಾವಳಿ ಹಾಕದಿರರು. ಮುಸೊಲಿನಿಯ ಪ್ರತಿನಿಧಿಗಳಾದ ಸಿನೊರ ಗ್ಯಾಡಾರವರೂ ಮಧ್ಯಪೂರ್ವದೇಶಗಳಲ್ಲಿ ಯುದ್ಧ-ಜ್ವಾಲೆಗಳು ಹಬ್ಬುವವಾಗುವದಾಗಿ ತಿಳಿಸುತ್ತಾರೆ. ಅಂದಬಳಿಕ ತುರ್ಕಸ್ತಾನದ ಅಲಿಪ್ತತೆ ಊರ್ಜಿತವುಳಿಯುವದಾಗಿ ನಾನು ಹೇಳಿದರೆ ಯಾರೂ ನಂಬಲಿಕ್ಕಿಲ್ಲ. ತುರ್ಕಸ್ತಾನದ ಸ್ಥಿತಿ ಹೀಗೆ ಸಂಕಟದಲ್ಲಿ ಸಿಲುಕಿಕೊಂಡಿದೆ.

ರುಶ್ಯ ರಣಭೂಮಿಯ ವಾರ್ತೆಗಳನ್ನು ವಿವರಪೂರ್ವಕವಾಗಿ ಸಮಾಲೋಚಿಸುವ ಮನಸ್ಸು ನನಗಿಲ್ಲ. ಉತ್ತರ-ಮಧ್ಯ-ದಕ್ಷಿಣ ರಣಭೂಮಿಗಳಲ್ಲಿ ರುಶ್ಯರೂ ಜರ್ಮನರೂ ಕಲಿತನದಿಂದ ಹೋರಾಡುತ್ತಿದ್ದಾರೆ. ಆದರೆ ಜರ್ಮನರಿಗೊದಗುವ ಹಾನಿ ಅಪಾರವಾದಷ್ಟು ಆದಾಗ್ಯೂ ಪ್ರತಿಯೊಂದು ರಣಭೂಮಿಯಲ್ಲಿ ಜರ್ಮನರೇ ಮುನ್ನುಗ್ಗುತ್ತಿದ್ದಾರೆ. ರುಶ್ಯರ ಲೆನಿನಗ್ರೇಡ ಪಟ್ಟಣ ಇನ್ನೂ ಜರ್ಮನರ ವಶವಾಗಿಲ್ಲ; ಆದರೆ ರುಶ್ಯರ ಸ್ವಾಧೀನವಿರುವ ಆಸೆ ಕಡಿಮೆ! ಮಧ್ಯ-ರಣಭೂಮಿಯಲ್ಲೂ ಇದೇ ಕಥೆ! ಅಪೇಕ್ಷೆಯಂತೆ ಜರ್ಮನರು ಮುಂದರಿಯುವದಿಲ್ಲ; ಆದಾಗ್ಯೂ ಮುಂದರಿಯುತ್ತಿದ್ದಾರೆಂಬ ಮಾತು ನಿಜ. ಮೊಸ್ಕೊ ರಾಜಧಾನಿಯ ರಕ್ಷಣೆ ಮಾಡಿಕೊಳ್ಳುವ ಘೋರ ಪ್ರಸಂಗ ರುಶ್ಯರ ಮೇಲೆ ಬಂದೊದಗಿದೆ. ದಕ್ಷಿಣ ರಣಭೂಮಿಯಲ್ಲಿ ಸಮೃದ್ಧ ಯುಕ್ರೇನ ಪ್ರದೇಶ, ಒಡೆಸಾ ಬಂದರ, ಕ್ರಿಮಿಯಾ ದ್ವೀಪಕಲ್ಪಗಳೂ, ಕಪ್ಪು ಸಮುದ್ರವೂ ಹಿಟ್ಲರನ ಆಕ್ರಮಣದಲ್ಲಿ ಸೇರಿಕೊಂಡಿವೆ. ಒಡೆಸಾ ಬಂದರದಿಂದ ಕೊಕೆಸಸದೊಳಗಿನ ಎಣ್ಣೆ-ಗಣಿಗಳಿಗೆ ದಾರಿ ತೀರ ಸಮೀಪ. ಹಿಟ್ಲರನು ಮುಂದಡಿಯಿಟ್ಟು ಕೊಕೆಸಸದೊಳಗಿನ ಎಣ್ಣೆ-ಗಣಿಗಳನ್ನು ಕೈವಶ ಮಾಡಿಕೊಂಡು ಇರಾಣದ ಪಾರ್ಶ್ವಕ್ಕೆ ದಾಳಿ ಮಾಡಬರುವನೆಂಬ ಅಂಜಿಕೆಯುಂಟಾಗಿದೆ. ಅತ್ತ ರುಶ್ಯ ದೇಶದ ಸೈಬೇರಿಯಾ ವಿಭಾಗದಲ್ಲಿ ಹಿಟ್ಲರನು ರುಶ್ಯ ರಾಜ-ಮನೆತನದವರೊಬ್ಬರಿಗೆ ಪಟ್ಟಾಭಿಷೇಕ ಮಾಡಿ, ರುಶ್ಯ ದೇಶದಲ್ಲಿ ಯುರೋಪ ಖಂಡದ ರುಶ್ಯ ಬೇರೆ, ಏಶಿಯಾ ಖಂಡದ ರುಶ್ಯ ಬೇರೆ, ಹೀಗೆ ರುಶ್ಯ ದೇಶವನ್ನು ವಿಭಾಗಿಸಿ, ರುಶ್ಯ ಸಾಮ್ರಾಜ್ಯವನ್ನು ತುಂಡರಿಸಲು ಹವಣಿಸುತ್ತಾನೆ! ಸೈಬೇರಿಯಾ ದೇಶ ಪೃಥಕ್ಕಾದರೆ ಪೂರ್ವ ಪಾರ್ಶ್ವದ ಪೆಸಿಫಿಕ್ ಮಹಾಸಾಗರದ ಮಾರ್ಗವಾಗಿ ಅಮೇರಿಕೆಯು ಕಳಿಸುವ ರಣಸಾಹಿತ್ಯ ರುಶ್ಯ ರಣಭೂಮಿಗೆ ತಲ್ಪುವದು ಅಶಕ್ಯವೇ ಸೈ! ಈ ಘಟನೆಯನ್ನು ಅಮೇರಿಕೆಯವರು ಮುಂದಾಗಿ ಆಲೋಚಿಸಿ ಇರಾಣವನ್ನು ಆಕ್ರಮಿಸಹಚ್ಚಿ ಇರಾಣ ಆಖಾತದ ದಾರಿಯನ್ನು ಸ್ವಾಧೀನ ಮಾಡಿಕೊಂಡಿದ್ದಾರೆ. ಇರಾಣದಲ್ಲಿ ಶಾಂತತೆಯುಂಟಂತೆ; ಯುದ್ಧ ನಿಂತಿರುವದಂತೆ; ಒಡಂಬಡಿಕೆಯಾಯಿತಂತೆ; ಆದಾಗ್ಯೂ ಇನ್ನೂ ಕದನಗಳು ನಡೆಯುತ್ತಿರುವ ವಾರ್ತೆಯುಂಟು. ಎಂಥ ಶಾಂತತೆಯೋ, ಎಂಥ ಯುದ್ಧವೋ ನನಗೇನೂ ತಿಳಿಯುವದಿಲ್ಲವಾಗಿ ನಾನು ಒಪ್ಪುತ್ತೇನೆ. ಬ್ರಿಟಿಶರಿಗಾಗಲಿ ರುಶ್ಯರಿಗಾಗಲಿ ಇರಾಣದಲ್ಲಿ ಪ್ರದೇಶ ಪಡೆಯುವ ಅಭಿಲಾಷೆಯಿಲ್ಲವಂತೆ. ಬ್ರಿಟಿಶ-ರುಶ್ಯರ ತಂತ್ರದಿಂದ ಇರಾಣ ಸರಕಾರವು ನಡಕೊಂಡು ರಣಸಾಹಿತ್ಯಗಳನ್ನು ರುಶ್ಯ ರಣಭೂಮಿಗೆ ಸುಸೂತ್ರ ಒಯ್ಯಗೊಡಬೇಕೆಂಬ ಮುಖ್ಯ ಶರ್ತು ಒಡಂಬಡಿಕೆಯ ಕರಾರಿನಲ್ಲಿರುವದಾಗಿ ಹಿಂದುಸ್ಥಾನ ಸರಕಾರವು ಸಿಮ್ಲಾದಿಂದ ಹೊರಡಿಸಿದ ಪ್ರಕಟಣೆಯಲ್ಲಿ ನಮೂದಿಸಿದೆ. ಇರಾಣಿಯರ ಕಲ್ಯಾಣಕ್ಕಾಗಿ, ರಕ್ಷಣೆಗಾಗಿ ಬ್ರಿಟಿಶ-ರುಶ್ಯರು ಇರಾಣದ ಮೇಲೆ ದಾಳಿ ಮಾಡಬೇಕಾಯಿತಂತೆ! ಲೋಕರಕ್ಷಣೆಯ ನೆವದಿಂದ ಯಾವ ಯಾವ ಪ್ರಸಂಗಗಳು ಒದಗಿ ಬರುವವೆಂದು ನಾನು ಹೇಳಲಾರೆ.

ಪೂರ್ವ ಪಾರ್ಶ್ವದಲ್ಲಿ ಜಪಾನದ ಘೋರಣವೇನೆಂದು ನನಗೆ ಗ್ರಹಿಕೆಯಾಗುವದಿಲ್ಲ. ಮುಖ್ಯ ಪ್ರಧಾನರಾದ ಕೊನೋಯಿಯವರು ಅಮೇರಿಕೆಯ ಅಧ್ಯಕ್ಷರಾದ ರೂಝವೆಲ್ಟರವರಿಗೆ ಸ್ವಹಸ್ತದಿಂದ ಒರೆದ ಒಂದು ಪತ್ರದ ಉಲ್ಲೇಖವನ್ನು ನಾನು ಈ ಹಿಂದೆ ಮಾಡಿರುತ್ತೇನಷ್ಟೇ. ಅದೊಂದು ಗೌಪ್ಯವೇ ಸರಿ! ಆದಾಗ್ಯೂ ಅಟ್ಲಾಂಟಿಕ ಮಹಾಸಾಗರದಲ್ಲಿ ಬ್ರಿಟಿಶ ಪ್ರಧಾನರೊಡನೆ ಸಮಕ್ಷ ವಿಚಾರವಿನಿಮಯ ಮಾಡಿದಂತೆ ತಮ್ಮ ಕಡೆಗೆ ಪೆಸಿಫಿಕ ಮಹಾಸಾಗರದಲ್ಲಿ ಕೂಡಿ ಆಪ್ತಾಲೋಚನೆ ಮಾಡಬೇಕಾಗಿ ಕೊನೋಯಿಯವರು ಬರೆದಿದ್ದಾರಂತೆ. ಬ್ರಿಟನ ಜನಾಂಗದೊಡನೆ ಸರಿಕರಾಗಬೇಕೆಂಬ ಅಭಿಲಾಷೆಯಿಂದ ಕೊನೊಯಿಯವರು ಈ ಸೂಚನೆ ಮಾಡಿರಬೇಕು. ಇಲ್ಲದಿದ್ದರೆ ರೂಝವೆಲ್ಟ-ಕೊನೋಯಿಯವರಲ್ಲಿ ಆಪ್ತತ್ವವೆಲ್ಲಿದೆ? ಅಮೇರಿಕೆಯೊಡನೆ ಜಪಾನ ಸರಕಾರವು ಯಾವಾಗಲೂ ಮತ್ಸರ ಸಾಧಿಸುತ್ತಿರುವಾಗ ಕೊನೋಯಿಯವರು ಸಮಕ್ಷ ಆಲೋಚನೆ ಮಾಡುವಂತಹದೇನಿದೆ? ತಾವು ಕಡಿಮೆಯವರಲ್ಲ ಹೀಗೆ ಲೋಕಕ್ಕೆ ಭಾಸಿಸಲು ಕೊನೊಯಿಯವರು ಇದೊಂದು ವೇಷ ಮಾಡಿದ್ದಾರೆಂದು ನನ್ನ ಅಭಿಪ್ರಾಯ. ಜಪಾನಿನಲ್ಲಿ ಸಂಧಾನದ ಸಮಾಧಾನವಿಲ್ಲ; ಸಮರದ ಉತ್ಸಾಹವೇ ಎಲ್ಲೆಲ್ಲೂ ರೂಢವಾಗಿದೆ. ಮಂತ್ರಿಮಂಡಳದ ಸಭೆಗಳು ಮೇಲಿಂದ ಮೇಲೆ ಕೂಡಲಾರಂಭಿಸಿವೆ. ಕೊನೊಯಿ ಮುಖ್ಯ ಪ್ರಧಾನರು ರಾಜನಾಮೆ ಕೊಡುವರಂತೆ. ನೌಕಾಧಿಪತಿಗಳು ಮುಖ್ಯ ಪ್ರಧಾನರಾಗುವರಂತೆ. ಹಿಟ್ಲರ ಮುಸೊಲಿನಿ ಪಕ್ಷದ ಮಿಟ್ಸು ಓಕಾರವರು ಪ್ರಧಾನ ಮಂಡಳದಲ್ಲಿ ಇಲ್ಲವೆಂಬ ಮಾತು ನಿಜ. ಆದರಿಂದ ಜಪಾನದ ಮಂತ್ರಿಮಂಡಳದಲ್ಲಿ ಸಮರ-ಪಕ್ಷ ಇಲ್ಲವೆಂದೆಣಿಸುವದು ತಪ್ಪು. ಮಿಟ್ಸು-ಓಕಾರವರು ಕಾರಸ್ಥಾನಿಗಳು. ಸ್ವಾಪೇಕ್ಷಿತ ರಾಜ್ಯಘೋರಣವನ್ನು ಪರರ ಕೈಯಿಂದ ಒದಗಿಸಿ ತರಲು ಅವರು ನಿಷ್ಣಾತರಿದ್ದಾರೆ. ಇದೇ ಸಮಯದಲ್ಲಿ ಜಪಾನರಿಂದ ಆಕ್ರಮಿಸಲ್ಪಟ್ಟ ಚೀನ ಪ್ರದೇಶದಲ್ಲಿ ಜಪಾನ ಸರಕಾರವು ಹೇರಳ ರಣಸಾಹಿತ್ಯವನ್ನು ಸಂಗ್ರಹಿಸಿಕೊಂಡಿರುವದಾಗಿ ಶಾಂಘಾಯದೊಳಗಿನ ವಾರ್ತೆ. ಬ್ರಿಟಿಶರ ಸಿಂಗಾಪುರದಲ್ಲಂತೂ ಹಿಂದೀ ಸೈನ್ಯ ಪಥಕಗಳು ಮೇಲಿಂದ ಮೇಲೆ ರವಾನೆಯಾಗಹತ್ತಿವೆ. ಹೀಗೆ ಜಪಾನ-ದಾಳಿಯ ಲಕ್ಷಣಗಳು ಕಾಣುತ್ತಿದ್ದಾಗ ನನಗೆ ತಿಳಿದುಬಂದ ಒಂದು ವಾರ್ತೆಯನ್ನು ವಿನೋದವೆಂದು ನಮೂದಿಸುತ್ತೇನೆ. ಜಪಾನದ ಆಕ್ರಮಣ ವ್ಯವಹಾರದಲ್ಲಿ ಸಯಾಮದ ಸನ್ನಿವೇಶ ನಾ ಹೇಳಿಟ್ಟಿದ್ದೇನೆ. ಜಪಾನ ಸರಕಾರದಿಂದ ಸಯಾಮದ ಘಾತವಾಗುವ ಪ್ರಸಂಗವುಂಟು. ಸಯಾಮ ಇದೊಂದು ಚಿಕ್ಕ ಜನಾಂಗ. ಆದರೆ ಅಲ್ಲಿಯ ಸರಕಾರವು ಬ್ರಿಟನ, ಅಮೇರಿಕಾ, ಜರ್ಮನಿ, ಇಟಾಲಿ, ಜಪಾನ, ರಶಿಯಾ ಸರಕಾರಗಳ ಪ್ರತಿನಿಧಿಗಳನ್ನು ಒತ್ತಟ್ಟಿಗೆ ಸೇರಿಸಿ, ಪ್ರತ್ಯಕ್ಷ ವಿಚಾರವಿನಿಮಯದಿಂದ ಯುದ್ಧವನ್ನು ಪರಿಹರಿಸುವ ವಿಚಾರದಲ್ಲಿದೆಂದು ಲಂಡನಿನೊಳಗಿನ "ಮುಂಬಯಿ ಕ್ರಾನಿಕಲ" ಪತ್ರಿಕೆಯ ಸ್ವಂತ ಸುದ್ದಿಗಾರರು ತಿಳಿಸುತ್ತಾರೆ. ನನಗೇನೋ ಇದೊಂದು ವಿನೋದ. ಮಹಾ ದ್ರೋಣ-ಸಮರದಲ್ಲಿ ದಿಕ್ಕಿಲ್ಲದ ವಿರಾಟನು ಉಪದೇಶ ಮಾಡುವಂತೆ ಇದೊಂದು ಘಟನೆಯೆಂದು ನಾ ಉಲ್ಲೇಖಿಸುತ್ತೇನೆ! ಪುರಾಣದಲ್ಲಿ ಮಾತ್ರ ಇಂಥ ಉಲ್ಲೇಖಗಳಿರುತ್ತವೆಂದು ಯಾರೂ ಭಾವಿಸಕೂಡದು. ಪುರಾಣಗಳು ಪ್ರಪಂಚದ ಪ್ರತಿಬಿಂಬ. ಅವು ಇತಿಹಾಸಗಳೆಂದು ಪಂಡಿತ ಮದನ ಮೋಹನ ಮಾಲವೀಯರಂಥ ತಪೋನಿಧಿಗಳು ಸಿದ್ಧ ಮಾಡಿದ್ದುಂಟು; ವಿರಾಟನ ರಾಯಭಾರ ನಿರರ್ಥಕವಾದಂತೆ ಸಯಾಮದ ರಾಯಭಾರವಾದರೂ ನಿರರ್ಥಕವಾಗುವದು ಖಂಡಿತ ಇರಲಿ. ಈಗ ನೀವು ತುರ್ಕಸ್ತಾನದ ಕಡೆಗೂ ಜಪಾನದ ಕಡೆಗೂ ನಿರೀಕ್ಷಿಸುತ್ತಿರಿ.

ಸ್ಥಾನಿಕ ವೃತ್ತಾಂತ.

ಕುಮಟಾ— ಪುಬ್ಬಾ ನಕ್ಷತ್ರವು ಒಳಿತಾಗಿ ಮಳೆ ಸುರಿಯುತ್ತಿದೆ ಕಳೆದ ವಾರ ೫ ೨೫ ಇಂಚು ಮಳೆಯಾಗಿದೆ ಮತ್ತು ಹವೆಯಲ್ಲಿ ಒಳ್ಳೇ ತಂಪು ಉಂಟಾಗಿದೆ ಊರಲ್ಲಿ ನೆಗಡಿ, ಚಳಿಜ್ವರ ವಿಷಮಜ್ವರ ಬಟ್ಟೇ ಹೊರಳಡೆ ಮುಂತಾದ ಬಗೆಬಗೆಯ ಬೇನೆಗಳು ಕಂಡುಬರುತ್ತವೆ

ಭೂಮಂಡಲ ಸಂಚಾರಿಗಳಾದ ಪ್ರೊ ಮಂಗೇಶಕುಮಾರ ಶಹಾಪುರಕರರವರು ಶುಕ್ರವಾರ ಸಂಜೆ ಚಿತ್ರರಂಜನ ನಾಟ್ಯಮಂದಿರದಲ್ಲಿ ತಮ್ಮ ವಿವಿಧ ಶಕ್ತಿಪ್ರಯೋಗಗಳನ್ನೂ ಯೋಗಶಕ್ತಿಯ ಅದ್ಭುತ ಚಮತ್ಕಾರಗಳನ್ನೂ ತೋರಿಸಿದರು

ಕುಮಟಾ ತಾಲೂಕ ಹವ್ಯಕ ವಿದ್ಯಾವರ್ಧಕ ಸಂಘಕ್ಕೆ ಕಳೆದ ಜುಲ್ಯಾ ಮತ್ತು ಆಗೋಸ್ತ ತಿಂಗಳಲ್ಲಿ ಬಂದ ದಾನ— ಶಂಭು ಪಂಡಿತ ಅಘನಾಶಿನಿ ಇವರಿಂದ ದಕ್ಷಿಣೆ ರೂ ೧೦ ಆರ್. ಎನ್. ಹೆಗಡೆ ಕಟ್ಟೆಯವರ ಕೊಡುಗೆಯು ೩ನೇ ಕಂತಿನ ರೂ ೧೦ ವಂದಗಳ್ಳಿ ಪರಮೇಶ್ವರ ಜನಭಾಗ್ವತ ದಕ್ಷಿಣೆ ರೂ ೨ ಕರ್ಕಿ ರಾಮಚಂದ್ರ ಶಿಕ್ಷಕ ೦ ರಾ ಪ ಭಟ್ಟರ ಕೊಡುಗೆಯು ೬ನೇ ಕಂತಿನ ರೂ ೭ ೦ ಎಸ್. ಎನ್. ಅಡ್ಕೋಳಿ ಇವರ ೩ ವರ್ಷಗಳ ವರ್ಗಣಿ ರೂ ೦ ಟಿ ಎಸ್. ಹೆಗಡೆ ಕೂಜಳ್ಳಿ ವಕೀಲ ಇವರಿಂದ ೩ ವರ್ಷಗಳ ವರ್ಗಣಿ ಮತ್ತು ಕೊಡುಗೆಯು ೧ನೇ ಕಂತಿನ ಹಣ ಕೂಡಿ ರೂ ೬ ಹೊಲನಗದ್ದೆ ಗಜಾನನ ದೇವರಿಂದ ವರ್ಗಣಿ ದಕ್ಷಿಣೆ ಕೂಡಿ ರೂ ೯ ಚಿತ್ರಿಗಿ ವಿಶ್ವೇಶ್ವರ ಭಟ್ಟರ ವರ್ಗಣಿ ರೂ ಮಾಣಿಕಿಯ ಪರಮೇಶ್ವರ ಹೆಬ್ಬಾರರಿಂದ ವರ್ಗಣಿ ದಕ್ಷಿಣೆ ಕೂಡಿ ರೂ ೨ ೧ ಶಿಕ್ಷಕ ಜನರ ಸಂಬಳದ ಕಂತುಗಳ ಹಣ ರೂ ೩ ಮಾಸೂರ ಶಾಲೆಯ ರಾ ವಿಠ್ಠಲ ಹೆಗಡೆ ಇವರ ಸಂಬಳದ ೩ನೇ ಕಂತಿನ ರೂ ೫ ಕರ್ಕಿ ಪಾರೆಯ ರಾ ಮಹಾಬಲೇಶ್ವರ ಭಟ್ಟ ಮಾಸ್ಕೇರಿ ಇವರ ಕೊಡುಗೆಯು ೫ನೇ ಕಂತಿನ ರೂ ೬ ೬ ೦ ಶ್ರೀ ಸಾವಿತ್ರೀ ಚಿತ್ರಿಗಿಮಠ ಇವರ ಸಂಬಳದ ೫ನೇ ಕಂತಿನ ರೂ ೬ ೧ ೦ ಊರಕೇರಿಯ ರಾ ವೆಂಕಟರಮಣ ಹೆಗಡೆರಲ್ಲಿ ಮದುವೆ ದಕ್ಷಿಣೆ ರೂ ೩ ಚಿತ್ರಿಗಿ ಮಹಾಬಲೇಶ್ವರ ಭಟ್ಟರಲ್ಲಿ ದಕ್ಷಿಣೆ ರೂ ॥ ರಾ ಹಳ್ಕಾರರವರ ಕೊಡುಗೆಯು ೬ನೇ ಕಂತಿನ ರೂ ೩೬॥, ಮದ್ಗುಣಿ ದೇವರು ಭಟ್ಟರ ವರ್ಗಣಿ ವಗ್ಗರೆ ರತ್ನ ೦-೧೩ ೦ ಹೆಗಡೆಯ ಸೇವಾನಿವೃತ್ತ ಶಿಕ್ಷಕ ರಾ ಗೋವಿಂದ ಭಟ್ಟ ಇವರ ಸೇವಾನಿವೃತ್ತಿ ವೇತನದ ಕಂತಿನ ರೂ ೬, ವೇ ರಾ ಮಾ ತಿಮ್ಮಣ್ಣ ಪಂಡಿತ ಬಗ್ಗೋಣ ಇವರ ಕೊಡುಗೆಯು ೬ನೇ ಕಂತಿನ ರೂ ೩೬॥ ರಾ ಗೋವಿಂದ ಭಟ್ಟ ಹಳಕಾರ ಇವರ ದಕ್ಷಿಣೆ, ವರ್ಗಣಿ ಕೂಡಿ ರೂ ೪, ರಾ ಹೊಲನಗದ್ದೆ ಮಹಾದೇವ ಹೆಗಡೆರಿಂದ ಸ್ಥಾನಿಕ ವಸೂಲಿಯು ರೂ ೫ ೧೪ ೩ ರಾ ಹೊಲನಗದ್ದೆ ಲಕ್ಷ್ಮೀನಾರಾಯಣ ಹೆಗಡೆರಿಂದ ಸ್ಥಾನಿಕ ವಸೂಲಿಯು ರೂ ೫॥ ರಾ ತಿಮ್ಮಣ್ಣ ಭಟ್ಟ ಕುಂಬಾಳಿಮನೆ ಇವರ ವರ್ಗಣಿ ಮತ್ತು ದಕ್ಷಿಣೆ ಕೂಡಿ ರೂ ೨॥, ಮೂರೂರ ರಾಮಲಿಂಗ ಭಟ್ಟರ ವರ್ಗಣಿ ರೂ ೧, ರಾ ವಿಶ್ವೇಶ್ವರ ಜಿ ಹೆಗಡೆ ವಕೀಲರ ಕೊಡುಗೆಯು ೬ನೇ ಕಂತಿನ ರೂ ೨೫, ಹೆಗಡೆಯ ರಾ ಗಜಾನನ ಭಟ್ಟರಲ್ಲಿ ದಕ್ಷಿಣೆ ರೂ ॥, ಕಾಗಾಲ ಶಾಲೆಯ ಪರಮೇಶ್ವರ ಗೋ ಭಟ್ಟರಿಂದ ರೂ ॥, ಗೋಕರ್ಣ ಉಪಸಮಿತಿಯಿಂದ ವರ್ಗಣಿ ದಕ್ಷಿಣೆ ಒಟ್ಟು ರೂ ೩ ಕುಮಟೆಯ ನ್ಯೂ ಸಪ್ಲಾಯ ಏಜನ್ಸಿಯ ಮಾಲೀಕರ ದಾನದ ರೂ ೩ ಸಿದ್ದಾಪುರ ಇಂಗ್ಲಿಶ ಶಾಲೆಯ ಶಿಕ್ಷಕ ರಾ ಶ್ರೀಧರ ಹೆಗಡೆ ಕೂಜಳ್ಳಿ ಇವರ ಸಂಬಳದ ೬ನೇ ಕಂತಿನ ರೂ ೧೦ ಮತ್ತು ವೇ ಕಪ್ಪೆ ಮಹಾಬಲೇಶ್ವರ ಭಟ್ಟರ ಕೊಡುಗೆಯು ೬ನೇ ಕಂತಿನ ರೂ ೩೬॥ ಕೂಡಾ ರೂ ೨೮೮— —೩ ವಸೂಲ ಬಂದಿರುವದು ಕಾರ್ಯದರ್ಶಿಗಳು ತಿಳಿಸುತ್ತಾರೆ ಮೇ ತಿಂಗಳಲ್ಲಿ ಕೂಡಿದ ಸಂಘದ ಸಭೆಯಲ್ಲಿ ತೀರ್ಮಾನವಾದಂತೆ ಸಹಾಯ ಜನ ಕನ್ನಡ ವಿದ್ಯಾರ್ಥಿಗಳಿಗೆ ರೂ ೪೯-೧೪-೦ರ ಪುಸ್ತಕಗಳನ್ನೂ ಇಂಗ್ಲಿಶ ವಿದ್ಯಾರ್ಥಿಗಳಿಗೆ ರೂ ೩೯-೧೫-೬ರ ಪುಸ್ತಕಗಳನ್ನೂ ಗೋಕರ್ಣ ಸಂಸ್ಕೃತ ಶಾಲೆಯ ವಿದ್ಯಾರ್ಥಿಗಳಿಗೆ ೧೦ ರೂಪಾಯಿಯ ಪುಸ್ತಕಗಳನ್ನೂ ಸಂಘದವರು ತೆಗೆಯಿಸಿ ಕೊಟ್ಟಿದ್ದಾರೆ ವೇ॥ ಕಪ್ಪೆ ಮಹಾಬಲೇಶ್ವರ ಭಟ್ಟರ ಶಿಷ್ಯವೃತ್ತಿಯು ರೂ ೧೦ ಗಿಬ್ಬ ಹೈಸ್ಕೂಲಿನ ಮೆಟ್ರಿಕ್ ವರ್ಗದಲ್ಲಿರುವ ಕು॥ ಕೇ ಎನ್. ಹೆಗಡೆ ಎಂಬಾತಗೆ ಕೊಡಲಾಗಿದೆ

ಕುಮಟ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ ಭಜಕರೋರ್ವರು ಬರೆಯುತ್ತಾರೆ ಅರೆಂಟು ವರ್ಷಗಳ ಹಿಂದೆ ಶ್ರೀ ದೇವರ ಮೊಕ್ತೇಸರರು ಸರಿಯಾಗಿ ಧಂಡಾಂದ ಆಡಳಿತೆ ನಡಸದೆ ಕಾಲಕಾಲಕ್ಕೆ ದೇವರ ಸನ್ನಿಧಿಯಲ್ಲಿ ನಡಿಯತಕ್ಕ ಸೇವಾ ವಿನಿಯೋಗಗಳನ್ನು ಲೋಪಗೊಳಿಸುವಂತಹ ಪ್ರಸಂಗ ಬಂದಾಗ ಶ್ರೀ ದೇವರ ಪ್ರಮುಖ ಭಜಕರು ಒತ್ತಟ್ಟಿಗೆ ಸೇರಿ, ಶ್ರೀ ದೇವಸ್ಥಾನದ ಆಡಳಿತೆಯನ್ನು ಸುಸೂತ್ರವಾಗಿ ನಡಿಸಿಕೊಂಡು ಹೋಗಲು ಕೆಲವು ನಿಯಮಗಳನ್ನು ರಚಿಸಿ, ಆಡಳಿತೆ ಕೆಲಸ ಮಾಡಲು ಒಂದು ಕಾರ್ಯಕಾರಿ ಮಂಡಳವನ್ನು ನೇಮಿಸಿಕೊಂಡರು ಆ ಕಾಲದ ಮೊಕ್ತೇಸರರೂ ಸಮಸ್ತ ಭಜಕರೂ ಈ ವ್ಯವಸ್ಥೆಗೆ ತಲೆದೂಗಿ ತಮ್ಮ ಹಸ್ತಾಕ್ಷರಗಳ ಒಪ್ಪಿಗೆಯನ್ನು ಕೊಟ್ಟರು ಅಂದಿನಿಂದ ಕಾರ್ಯಕಾರಿ ಮಂಡಳವೇ ದೇವಸ್ಥಾನದ ಎಲ್ಲ ವ್ಯವಹಾರವನ್ನು ನೋಡುತ್ತ ಬಂದಿದೆ ದೇವರ ಮೊಕ್ತೇಸರರು ಸ್ವತಂತ್ರವಾಗಿ ವಹಿವಾಟು ಮಾಡುತ್ತಿದ್ದಿಲ್ಲ ಆದರೆ ಇತ್ತ ೪ ೫ ತಿಂಗಳಿಂದ ಇತ್ತಲಾಗಿಯೇ ಶ್ರೀ ದೇವರ ಮೊಕ್ತೇಸರರಾಗಿ ನೇಮಕಪಟ್ಟ ರಾ॥ ಪುಂಡಲೀಕ ಶಾನಭಾಗ ವಿಟ್ಠಲ ಶೆಣೈ ಮತ್ತು ನಾರಾಯಣ ಶಾನಭಾಗ ಇವರಿಗೆ ದೇವರ ಆಸ್ತಿಯ ವಹಿವಾಟು ಕಾರ್ಯಕಾರಿ ಮಂಡಳದ ಕಡೆ ಇದ್ದದ್ದು ಸೇರಲಿಲ್ಲ ತಾವೇ ಸರ್ವಾಧಿಕಾರಿಗಳಾಗಿ ಆಡಳಿತೆ ನೋಡಬೇಕೆಂಬ ಹಂಬಲ ಅವರ ಮನಸ್ಸಿನಲ್ಲಿ ಹುಟ್ಟಿತು ಹೀಗಾಗಿ ಅವರಿಗೂ ಕಾರ್ಯಕಾರಿ ಮಂಡಳದ ಇನ್ನಿತರ ಸದಸ್ಯರಿಗೂ ತಂಟೆ ತಕರಾರುಗಳುಂಟಾದವು! ಕಾರ್ಯಕಾರಿ ಮಂಡಳದ ಕಾರ್ಯದರ್ಶಿ ರಾ॥ ಮಾಧವ ಶಾನಭಾಗ ಗುಡಾಳ ಇವರು ಕೆಲಕಾಲ ಅಗತ್ಯದ ಖಾಸಗಿ ಕೆಲಸದ ನಿಮಿತ್ತ ಮುಂಬಯಿಗೆ ಹೋಗಬೇಕಾದ್ದರಿಂದ ಅವರ ಲೆಕ್ಕಪತ್ರವೂ ಪೆಟ್ಟಿಗೆಯೂ ಮೊಕ್ತೇಸರ ವಿಟ್ಠಲ ಶೆಣೈಯವರ ಕಡೆಗೆ ಕೊಡಲಾಗಿತ್ತು ರಾ॥ ಮಾಧವ ಶಾನಭಾಗರು ಮುಂಬಯಿಯಿಂದ ಬಂದ ಮೇಲೆ ರಾ। ಶೆಣೈಯವರು ಅವರಿಗೆ ಲೆಕ್ಕಪತ್ರವನ್ನು ತಿರುಗಿ ಕೊಡಲಿಲ್ಲ! ಪೆಟ್ಟಿಗೆಯನ್ನೂ ಕೊಡಲಿಲ್ಲ! ಹೀಗೆ ಮೊಕ್ತೇಸರ ಶೆಣೈ ಮತ್ತು ಪುಂಡಲೀಕ ಶಾನಭಾಗರು ತಾವೇ ದೇವರ ವಹಿವಾಟು ನೋಡಲಿಕ್ಕೆ ಕಾಯಿದೆಯಂತೆ ಹಕ್ಕುದಾರರೆಂದು ಸಾಧಿಸಲಾರಂಭಿಸಿದ್ದರಿಂದಲೂ, ಅವರೊಡನೆ ಜಗಳವಾಡುತ್ತ ಕುಳಿತರೆ ಶ್ರೀ ದೇವಸ್ಥಾನದಲ್ಲಿ ವಿನಾಕಾರಣ ಕಲಹಗಳುಂಟಾಗಿ ಲೋಕದಲ್ಲಿ ಅಪಹಾಸ್ಯವಾದೀತೆಂಬ ಅಂಜಿಕೆಯುಂಟಾದ್ದರಿಂದಲೂ ಕಾರ್ಯಕಾರಿ ಮಂಡಳದವರು ಈಗ ೪ ತಿಂಗಳಿಂದ ಶ್ರೀ ದೇವರ ವಹಿವಾಟಿನ ಎಲ್ಲ ಹೊಣೆಯನ್ನು ಮೇಲೆ ಹೇಳಿದ ಮೂವರು ಮೊಕ್ತೇಸರರಿಗೇ ಬಿಟ್ಟುಕೊಟ್ಟಿದ್ದಾರೆ ಕಾರ್ಯಕಾರಿ ಮಂಡಳದಲ್ಲಿದ್ದ ಈವರೆ ಮೊಕ್ತೇಸರರೂ ಕೂಡ ಕಾರ್ಯಕಾರಿ ಮಂಡಳದ ಸದಸ್ಯತ್ವಕ್ಕೆ ರಾಜೀನಾಮೆಯನ್ನಿತ್ತು ತಮಗೂ ಕಾರ್ಯಕಾರಿ ಮಂಡಳಕ್ಕೂ ಇದ್ದ ಸಂಬಂಧವನ್ನು ತುಂಡರಿಸಿಬಿಟ್ಟಿದ್ದಾರೆ! ಈ ಮೊಕ್ತೇಸರರು ಸ್ವತಂತ್ರವಾಗಿ ದೇವಸ್ಥಾನದ ಪೂರ್ವಪರಂಪರೆಗನುಸರವಾಗಿ ವಹಿವಾಟು ಮಾಡಿ ಶ್ರೀ ದೇವರ ಚೌಕನ ಕೀರ್ತಿಯನ್ನು ಬೆಳಸಿದ್ದರೆ ಇಲ್ಲವೆ ಇಷ್ಟು ಕೀರ್ತಿಯನ್ನು ಕಾಪಾಡಿಕೊಂಡಿದ್ದರೆ ಭಜಕರು ಯಾರೂ ತಕರಾರು ಮಾಡುತ್ತಿದ್ದಿಲ್ಲ ಆದರೆ ಈ ಮೊಕ್ತೇಸರರು ಕೆಲವು ಅನುಯಾಯಿಗಳನ್ನು ಕಟ್ಟಿಕೊಂಡು ದೇವಸ್ಥಾನದಲ್ಲಿ ನಡಿಸಿದ ನಡವಳಿಯನ್ನೂ ನಗ್ಗಿಸ ಅನಾಚಾರಗಳನ್ನೂ ನೆನೆದರೆ ಮನಸ್ಸಿಗೆ ಬಹಳ ಬೇಸರವೆನಿಸುತ್ತದೆ! ಶ್ರೀ ದೇವರಿಗೂ ಬೇಸರವಾಗಿದೆ! ಇತ್ತಿತ್ತ ಅವರ ತಲೆಕೆಲವು ಅನುಯಾಯಿಗಳಿಗೂ ಬೇಸರ ಬರಹತ್ತಿದೆ! ಚಾತುರ್ಮಾಸದ ಪ್ರಾರಂಭಕ್ಕೆ ಶ್ರೀ ದೇವರಿಗೆ ಸಂಪ್ರೋಕ್ಷಣೆ ಮಾಡಿ 'ದೇವರನ್ನು ಚಾತುರ್ಮಾಸಕ್ಕೆ ಕೂಡ್ರಿಸುವದು" ಹಿರಿಯರ ಕಾಲದಿಂದ ನಡೆದು ಬಂದ ವಹಿವಾಟಾಗಿತ್ತು ಹೊಸ ಮೊಕ್ತೇಸರರು ಈ ವರ್ಷ ಸಂಪ್ರೋಕ್ಷಣೆ ಮಾಡಲೇ ಇಲ್ಲ! ದೇವೀ ದೇವಸ್ಥಾನದಲ್ಲಿ ಚಾತುರ್ಮಾಸ ಸಂಪ್ರೋಕ್ಷಣೆಯ ಅವಶ್ಯಕತೆಯಿಲ್ಲೆಂದು ಮೊಕ್ತೇಸರ ಪುಂಡಲೀಕ ಶಾನಭಾಗರ ಅಪ್ಪಣೆಯಂತೆ! ಶ್ರೀ ದೇವರ ಸನ್ನಿಧಾನದಲ್ಲಿ ಮೋಡಿ ಮಾಟ-ಕೃತ್ರಿಮ ಭಾಷೆ ಮುಂತಾದ ದೋಷಗಳೇನಾದರೂ ಇದ್ದರೆ ಅವುಗಳ ನಿವಾರಣೆಗೆಂದು ಶ್ರೀ ಸನ್ನಿಧಿಯ ಅಪ್ಪಣೆಯಿಂದಲೇ ಹಿಂದೆ ವಿಭವ ಸಂವತ್ಸರದ ಮಾರ್ಗಶೀರ್ಷದಲ್ಲಿ, ಶ್ರೀ ದೇವರ ಪ್ರಮುಖ ಭಜಕರೆಲ್ಲರೂ ಕೂಡಿ ೬-೭ ನೂರು ರೂಪಾಯಿ ಖರ್ಚು ಮಾಡಿ, ಸಂಹಿತಾಪವನ, ಶ್ರೀ ನೃಸಿಂಹ ಮಂತ್ರ ಹವನ ಮುಂತಾದ ಶಾಸ್ತ್ರೋಕ್ತ ವಿಧಿಗಳನ್ನು ಮಾಡಿಸಿದ್ದುಂಟು ಈ ವಿಧಾನಗಳಿಂದ ಕೃತ್ರಿಮವಾದಿಗಳಿಗೆ ಸಮಾಧಾನವಾಗಬೇಕಿತ್ತು ಆದರೆ ಅವರಿಗೆ ದೇವರ ಮೇಲೂ ವಿಶ್ವಾಸವಿಲ್ಲ ಶಾಸ್ತ್ರವಿಧಿಗಳ ಮೇಲೂ ನಂಬಿಗೆಯಿಲ್ಲ! ಊರೊಳಗೆ ಬಂದ ಮುಸಲ್ಮಾನ ಜೋಯಿಸರೊಬ್ಬರಿಗೆ ಕಟ್ಟಿಕೊಂಡು ದೇವಸ್ಥಾನದಲ್ಲಿ ನೋಡಿಯುಂಟು, ಮಾಟವುಂಟು, ಆ ಅಭಿಚಾರವುಂಟು, ಈ ಅಭಿಚಾರವುಂಟು ಎಂದು ವಿಚಾರವಂತರು ನಂಬಲಾರದ ಕಾರಣಗಳನ್ನೊಡ್ಡಿ ಮೊಕ್ತೇಸರರು ದೇವಸ್ಥಾನದ ಬೇರೆ ಬೇರೆ ಭಾಗಗಳಲ್ಲಿ ನೆಲವನ್ನಗೆದು ಅವ್ಯವಸ್ಥೆ ಮಾಡಿಟ್ಟಿದ್ದಾರೆ! ದೇವಸ್ಥಾನದಲ್ಲಿ ಪ್ರತಿವರ್ಷ ಚೌತಿ ಹಬ್ಬಕ್ಕೆ ಗಣಪತಿ ಮೂರ್ತಿಯನ್ನು ತಂದು ೫ ದಿನಗಳ ವರೆಗೆ ಉತ್ಸವ ನಡಿಸುವದುಂಟು ಈ ವರ್ಷ ನಮ್ಮ ಮೊಕ್ತೇಸರರು ಈ ಉತ್ಸವದಲ್ಲಿ ತಂದೊಡ್ಡಿದ ವಿಘ್ನಗಳನ್ನು ಕಂಡರೆ ಯಾವ ವಿಚಾರವಂತನಿಗೂ ವ್ಯಸನವಾಗದಿರದು! ಚೌತಿ ಹಬ್ಬದ ದಿನ ಸಂಜೆ ೫ ಘಂಟೆಯವರೆಗೂ ಮುಂಜಾನೆ ತಂದಿಟ್ಟ ಗಣಪತಿಗೆ ಪೂಜೆಯಾಗಲಿಲ್ಲ! ಗಣಪತಿಯ ಸನ್ನಿಧಾನದಲ್ಲಿ ಪ್ರಾರ್ಥನೆ ನಡೆಯತಕ್ಕ ರಂಗಪೂಜಾದಿಗಳಿಗೆ ಮೊಕ್ತೇಸರರು ಸ್ವೈರ ರೀತಿಯಿಂದ ಕಾಟು ಹಾಕಿ, ಭಜಕ ವರ್ಗಕ್ಕೆ ಸುದ್ದಿ ಕೊಡದೆ, ಗಣೇಶ ಚತುರ್ಥಿಯ ಮರುದಿನ ರಾತ್ರಿಯೇ ಶ್ರೀ ವಿನಾಯಕನಿಗೆ ಬಾವಿಯಲ್ಲಿ ದಾರಹಚ್ಚಿಸಿಬಿಟ್ಟರು! ಮೊನ್ನೆ ಮೊನ್ನೆ ಈ ಮೊಕ್ತೇಸರರು ಶ್ರೀ ದೇವರ ಮುಂಡನದಲ್ಲೆಲ್ಲ ಹೆಚ್ಚು ಕಡಿಮೆ ಮಾಡಬೇಕೆಂದು ದೊಡ್ಡ ವ್ಯೂಹವನ್ನು ರಚಿಸಿಕೊಂಡಿದ್ದರು ಶಾಸ್ತ್ರವನ್ನು ಕೇಳಿಕೊಳ್ಳುವಾ, ಶ್ರೀ ಗುರುಗಳ ಸಲಹೆ ಪಡೆಕೊಳ್ಳುವಾ ಎಂದು ವಗ್ಗರೆ ಕೆಲ ವಿಚಾರವಂತರು ಮಾಡಿದ ಸೂಕ್ತ ಸಲಹೆಗಳನ್ನೆಲ್ಲ ತಿರಸ್ಕರಿಸಿ ತಮ್ಮ ಇಷ್ಟದಂತೆಯೇ ಮುಂಡನದಲ್ಲಿ ವ್ಯತ್ಯಾಸಗಳನ್ನು ಮಾಡಲು ಮುಂದಾಗಿದ್ದರು! ಆದರೆ ದೇವಭಕ್ತ ಭಜಕರೋರ್ವರು ಆಗ ದೇವರನ್ನೇ ಕೇಳಿ ಮುಂದಡಿಯಿಡುವಾ ಎಂದು ಸೂಚನೆ ಮಾಡಿದ್ದರಿಂದ ಅವರಿಗೆ ನಿರುಪಾಯವಾಯಿತು ಆ ಸೂಚನೆಯನ್ನು ಅವರೂ ಮನ್ನಿಸಬೇಕಾಯಿತು! ಅದರಂತೆ ಕಳೆದ ಏಕಾದಶಿಯ ದಿನ ಬೆಳಿಗ್ಗೆ ಶ್ರೀ ದೇವರಿಗೆ ಪ್ರಸಾದ ಹಚ್ಚಿ ಅಪ್ಪಣೆ ಕೇಳಲಾಗಿ ಈಗಿದ್ದ ಮುಂಡನದಲ್ಲಿ ಎಳ್ಳಷ್ಟೂ ವ್ಯತ್ಯಾಸ ಮಾಡತಕ್ಕದ್ದಲ್ಲವೆಂದು ಅಪ್ಪಣೆ ದಯಪಾಲಿಸಿ ಶ್ರೀ ದೇವರು ಮೊಕ್ತೇಸರ ಮಹಾಶಯರಿಗೆ ಚಳೋ ಚಪರಾಕಿಯನ್ನು ಕೊಟ್ಟಿದ್ದಾರೆ ಮೊನ್ನೆ ಗುರುವಾರ ಅನಂತ ಚತುರ್ದಶಿ ಕಳೆದ ೧೪ ೧೫ ವರ್ಷಗಳಿಂದ ನಮ್ಮ ದೇವಸ್ಥಾನದಲ್ಲಿ ಅನಂತವ್ರತವಾಗುತ್ತಿದೆ ಇತ್ತಿತ್ತಲಾಗಿ ದೊಡ್ಡ ಪ್ರಮಾಣದಿಂದಲ್ಲದಿದ್ದರೂ ಸಾಧಾರಣ ಪ್ರಮಾಣದಿಂದ ಅನ್ನಸಂತರ್ಪಣೆ ವಿಪ್ರಭೋಜನ ಉತ್ಸವ ಮುಂತಾದವುಗಳು ಆಗುತ್ತಿದ್ದವು ಈ ವರ್ಷ ಹೊಸ ಸರ್ವಾಧಿಕಾರಿ ಮೊಕ್ತೇಸರರು [illegible] ದೇವರ

ಸೇವೆಗೂ ಬಹಳಷ್ಟು ಕಾಟ ದ ಕಿ ಸಂಕೋಚದಿಂದ ಎಲ್ಲವನ್ನೂ ಮುಗಿಸಿ ಬಿಟ್ಟಿದ್ದಾರೆ! ಈಗ ನವರಾತ್ರಿಯಲ್ಲಿ ಉತ್ಸವವು ಬಾಗಿಲಿಗೆ ಬಂದಿದೆ. ನವರಾತ್ರಿ ಉತ್ಸವಕ್ರಮವೂ ಬಹಳಷ್ಟು ಕಾಟ ಬೀಳುವದೆಂದು ಒಳಗೊಳ್ಳ ಬಲ್ಲವರು ಆಡುತ್ತಾರೆ. ಬರುವ ನವರಾತ್ರಿಯಲ್ಲಿ ಕೀರ್ತನೆಗಳಾಡಲಿಕ್ಕಿಲ್ಲವೆ ಹುಣ್ಣಿವೆಯ ದೀಪೋತ್ಸವು ಲಂಗರ ಬ್ರಾಹ್ಮಣ ಸುವಾಸಿನಿಯರ ಸಂತರ್ಪಣೆಯಿಂದಲೇ ಮುಗಿಯುವದೆಂದು ಕೆಲವರ ಊಹೆಯುಂಟು. ಒಟ್ಟಾರೆ ಪ್ರವಚನ ಜೋಯಿಸರು ಹೇಳುವ ಮೋಡಿ-ಮಾಟ ಅಭಿಚಾರಗಳಿಗಿಂತ ಈಗಿನ ಮೊಕ್ತೇಸರರ ಸ್ವೈರ ವರ್ತನೆಯು ಮಹಾಭಿಚಾರಗಳೇ! ಶ್ರೀ ದೇವರಿಗೆ ಎಲ್ಲಿ ತಿರುಗಿ ಗೋವೆಯ ದಾರಿ ಹಿಡಿಯಹತ್ತುವವೋ ಎಂದು ನನಗೆ ಭೀತಿಯುಂಟಾಗಿದೆ. ಊರ ಹರಿಭಕ್ತರೊಳಗಿನ ಭಜಕರು ಕಣ್ತೆರೆದು ಮೊಕ್ತೇಸರರ ಈ ಜಿನಿ ಇ ಟೆಕ್ಕ ಹದೆಸಾಕದಿದ್ದರೆ ದೇವರಿಗೆ ಶನಿ ಕಾಟ ಬಾಧಿಸುವದು ಖಂಡಿತ. ಭಜಕರು ಕಣ್ತೆರೆದು ಮುಂದೆ ಬರುವರೇ? ಇತ್ಯಾದಿ

ಧಾರೇಶ್ವರದ ಶ್ರೀ ಧಾಂನಾಥ ದೇವಾಲಯದಲ್ಲಿ ಕನ್ನಡ ಶಾಲೆಯ ಉಪಯೋಗಕ್ಕಾಗಿ ಕಟ್ಟಿದ ಕೋಣೆಯ ಉದ್ಘಾಟನ ಸಮಾರಂಭವು ಕಳೆದ ತಾ. ೩೧ನೇ ರವಿವಾರ ಸಂಜೆ ಕಾರವಾರದ ರಾ|| ಹೆಗಡೆಯವರ ಅಧ್ಯಕ್ಷತೆಯಲ್ಲಿ ಜರುಗಿತು. ಅದೇ ವೇಳೆಕ್ಕೆ ಆ ಭಾಗದ ಶಿಕ್ಷಕರ ಸಮ್ಮೇಲನವೂ ನಡೆಯಿತು. ಧಾರೇಶ್ವರ ಶಾಲೆಯಲ್ಲಿ ಶಿಕ್ಷಕರ ಕೊರತೆಯಾಗಿದೆಯೆಂದು ಹಲವು ಕಾಲದಿಂದ ದೂರಿತ್ತು, ಡಿ. ಎಲ್.-ಬೋರ್ಡಿನವರು ಒಬ್ಬ ಅಸಿಸ್ಟೆಂಟ್ ಶಿಕ್ಷಕರಿಗೆ ಕಳಿಸಿಕೊಟ್ಟು ಆ ಕೊರತೆಯನ್ನು ತುರ್ತಕ್ಕೆ ಪರಿಹರಿಸಿದ್ದಾರೆ.

ಕಳೆದ ಸೋಮವಾರ ತಾ. ೧ನೇಗೆ ರಾ| ಗಣಪತಿ ನಾರಾಯಣ ಪಂಡಿತ ಗೋಕರ್ಣ ಇವರ ನಿಮಂತ್ರಣದಂತೆ ಹಿರೇಗುತ್ತಿ ಶ್ರೀ ರವಳನಾಥ ದೇವರ ಗುಡಿಯಲ್ಲಿ ಊರವರು ಸಭೆ ಸೇರಿದ್ದರು. ಸೇವಾನಿವೃತ್ತ ಮಹಾಲಕರಿಗಳಾದ ರಾ|| ಗಣಪತ ನ ದೇಶರ್ಣಿಯವರು ಅಧ್ಯಕ್ಷಸ್ಥಾನ ಸ್ವೀಕರಿಸಿದ್ದರು. ರಾ|| ಪಂಡಿತರು ಸಭೆಗೆ ಕನ್ನಡ ನಾಡು ನುಡಿಗಳ ಏಳಿಗೆಗಾಗಿ ದುಡಿಯಲು ಊರಲ್ಲಿ ಒಂದು ಸಂಘವಿರುವದು ಅವಶ್ಯವೆಂದು ತಿಳಿಸಿಕೊಟ್ಟರು. ಆಮೇಲೆ ಸುಸು ಚರ್ಚೆಯಾಗಿ ಕೊನೆಗೆ ಕನ್ನಡ ಕೂಟ ವೆಂಬ ಸಂಘವೊಂದು ಸ್ಥಾಪನೆಯಾಯಿತು. ಈ ಕೂಟವು ಈ ಊರಲ್ಲಿ ಒಂದು ವಾಚನಾಲಯ ನಡಿಸುವದು, ಶಿಕ್ಷಣ ಪ್ರಸಾರಕ್ಕೆ ಹಣಗಳಿಸುವದು, ಔದ್ಯೋಗಿಕ ಚಟುವಟಿಕೆಗಳನ್ನು ಕೈಕೊಳ್ಳುವದು (ಸದ್ಯಕ್ಕೆ ಕೈನೂಲಿನ ಪ್ರಚಾರ ಮಾಡುವದು) ಕೆಲವು ಕಾಲದಿಂದ ನಡೆಯುತ್ತಿದ್ದ ಮಹಾತ್ಮಾ ಗಾಂಧೀ ವಾಚನಾಲಯವನ್ನು ಈ ಕೂಟವು ತಮ್ಮ ಕಡೆ ಒಪ್ಪಿಸಿಕೊಂಡು ನಡಿಸಬೇಕೆಂದೂ ನಿರ್ಣಯವಾಗಿದೆ. ಕೂಟದ ಕೆಲಸ ಸಾಗಿಸುವದಕ್ಕಾಗಿ ರಾ| ಗಣಪತ ಮಂಗೇಶ ನಾಡಕರ್ಣಿಯವರ ಅಧ್ಯಕ್ಷತೆಯಲ್ಲಿ ಒಂದು ಕಾರ್ಯಕಾರಿ ಮಂಡಳವೂ, ಔದ್ಯೋಗಿಕ ಚಟುವಟಿಕೆಗಳನ್ನು ನಡಿಸಲು ರಾ| ನಾರಾಯಣ ಶೇಷಗಿರಿ ನಾಯಕರ ನೇತೃತ್ವದಲ್ಲಿ ಒಂದು ಪ್ರತ್ಯೇಕ ಸಮಿತಿಯೂ ನೇಮಿಸಲ್ಪಟ್ಟಿವೆ.

ಹೊನ್ನಾವರ— ಹುಬ್ಬಾ ಮಳೆ ಚನ್ನಾಗಿ ಬೀಳುತ್ತಿದೆ. ಅಕ್ಕಿಯ ದರ ಇಳಿಯಹತ್ತಿದೆ.

ಮಾರ್ಗಗಳ ಮೇಲೂ ಬದಿಯಲ್ಲೂ ಮಲಮೂತ್ರ ವಿಸರ್ಜನೆ ಮಾಡಬಾರದೆಂತಲೂ ಕಸಕಡ್ಡಿ ಎಂಜಲೆಲೆ ಮುಂತಾದವುಗಳನ್ನು ಒಗೆಯಬಾರದೆಂತಲೂ ಮೊನ್ನೆ ನಗರ ಸಭೆಯವರು ಊರಲ್ಲೆಲ್ಲ ಡಂಗುರ ಸಾರಿಸಿದ್ದಾರೆ. ಆದರೆ ಅಲ್ಲಲ್ಲಿ ಕೆಲವು ಕಾಯಿದೆ ನೆಗಳನ್ನಾಗಲಿ ಮೂತ್ರಿಗಳನ್ನಾಗಲಿ ಕಟ್ಟಿಸುವ ಹಾಗೂ ರಸ್ತೆಗಳ ಮೇಲೆ ಕಚರ ಪೆಟ್ಟಿಗೆಗಳನ್ನಿಡುವ ವ್ಯವಸ್ಥೆಯನ್ನು ಮಾತ್ರ ನಗರ ಸಭೆಯವರು ಮಾಡಿಸಿರುವದಿಲ್ಲ! ಈ ಕೆಲಸ ತಮ್ಮದಲ್ಲವೆಂದು ಅವರು ಭಾವಿಸಿರುವರೋ ಏನೊ! ನಿಜವಾಗಿ ನಗರ ಸಭೆಯವರು ಈ ವ್ಯವಸ್ಥೆ ಮೊದಲು ಮಾಡಬೇಕಿತ್ತು ಮತ್ತು ಹಿಂದುಗಡೆ ಪೋಲೀಸರ ಕಡೆಯಿಂದ ಮೊನ್ನೆಯಂತೆ ಡಂಗುರ ಸಾರಿಸಬೇಕಿತ್ತು. ಆದರೆ— ನಮ್ಮ ನಗರ ಸಭೆಯ ತಲೆಯೇ ಹಿಂಚಿತ್ತು! ನಗರ ಸಭೆಯವರು ಹಿಂದೆ ಕೆಲವು ಕಚರಾ ಪೆಟ್ಟಿಗೆಗಳನ್ನು ಇಟ್ಟಿದ್ದರು. ಅವು ಒಂದೊಂದಾಗಿಯೇ ಕಾಣೆಯಾಗಿ ಹೋಗಿವೆ! ಕುಮಟೆಯಲ್ಲಿ ಹಿಂದೆ ಪ್ಲೇಗು ಬಂದಾಗ ಅಲ್ಲಿಂದ ಬರುತ್ತಿದ್ದ ಸರಕುಗಳಿಗೆ ಗಂಧಕದ ಹೊಗೆ ಕೊಡಲು ನಗರ ಸಭೆಯವರು ರೂ ೫೦ ಖರ್ಚು ಮಾಡಿ, ಒಂದು ದೊಡ್ಡ ಪೆಟ್ಟಿಗೆ ಮಾಡಿಸಿದ್ದರು. ಅದು ಈಗ ಮಳೆ ಗಾಳಿ ಬಿಸಿಲುಗಳಲ್ಲಿ ಬಿದ್ದು ಆಪಶ್ಯಯೇ ಮಾಡುತ್ತಿದೆ! ಮ್ಯುನಿಸಿಪಾಲಿಟಿಯ ಚಂದಿಗೆಯಷ್ಟು ಅದು ಎಲ್ಲಿದೆ ಎಂಬುದರ ಪತ್ತೆ ಯಾರಿಗೂ ಇಲ್ಲ! ಹಳೆಯ ಸಾಮಾನು ಮಾರಿಸುವ ಪದ್ಧತಿಯಂತೂ ನಗರ ಸಭೆಯವರಿಗೆ ಗೊತ್ತೇ ಇಲ್ಲ! ನಗರ ಸಭೆಯ ಆಡಳಿತೆಯ ವರದಿಯನ್ನು ಕರಿಗೆದಾರರ ಮಾಹಿತಿಗಾಗಿ ಪ್ರಕಟಿಸುವ ಪದ್ಧತಿಯೂ ನಮ್ಮ ನಗರ ಪಿತರಿಗೆ ಗೊತ್ತಿಲ್ಲ! ಶಿಬಂದಿಯನ್ನು ಬೆಳಸಿ ಸ ವರ್ತನೆಯ ಹಣದ ಅಪವ್ಯಯ ಬೇಕಾದರೆ ಅವರು ಮಾಡಬಲ್ಲರು. ಹಿಂದೆ ನಗರ ಸಭೆಯ ಕಚೇರಿಯಲ್ಲಿ ಕಚೇರಿಯ ಪೇದೆಯೊಬ್ಬ, ಆರೋಗ್ಯ ರಕ್ಷಣೆಯ ನಾಯ್ಕನೊಬ್ಬ, ಹೀಗೆ ಇಬ್ಬರೇ ಪೇದೆಗಳಿದ್ದರು. ಈಗ ನಾಕೆದಾರರಿಗೆ ಊಟ ಉಪಾಹಾರಗಳಿಗಾಗಿ ಮನೆಗಳಿಗೆ ಹೋಗಲು ಬಿಡಲಿಕ್ಕೂ ನಾಕೆದಾರರು ರಜೆ ತಕ್ಕೊಂಡಾಗ ಅವರ ಬದ್ಲಿ ನೋಡಲಿಕ್ಕೂ ಒಬ್ಬ ರಿಲೀವಿಂಗ್ ನಾಕೆದಾರನು ಮತ್ತು 'ಬೋಯ ಪ್ಯೂನ' ಎಂಬ ನೆ ಕಿರಿ-ಶಿಪಾಯಿ ಹೀಗೆ ಇನ್ನೆರಡು ಜಾಗೆಗಳು ಹುಟ್ಟಿವೆ. ಅಷ್ಟರಿಂದಲೂ ಸಮಾಧಾನವಾಗದೆ ಮನೆ ತೆರಿಗೆ ಬಿಲ್ಲುಗಳನ್ನು ಜಾರಿ ಮಾಡಲು ಇದೀಗ ನಗರ ಸಭೆಯವರು ಆರು ದಿನ ಮಜೂರಿ ನೇಮಿಸಿ ಇನ್ನೊಬ್ಬ ಶಿಪಾಯಿಗೆ ನೇಮಿಸಿಕೊಂಡಿದ್ದಾರೆ. ರಿಲೀವಿಂಗ್ ನಾಕೆದಾರನು ಕಚೇರಿಯಲ್ಲಿ ಖಾಲಿ ಕೂತುಕೊಂಡಿರುತ್ತಾನೆ! ಕಿರಿ ಪೇದೆಗೂ ದಿನಾಲು ೧-೨ ತಾಸಿನ ಹೊರಗೆ ಕೆಲಸವಿದ್ದದ್ದು ತಿಳಿದಿಲ್ಲ! ಈಗ ೮-೧೦ ರೂ ಗಳಿಂದ ಜವಾನರ ಮಯ್ಯುರ ಸ್ವಾನೆ ಮೇಲ್ಪಾಕಸನೆಂಬ ಇಸಮನ್ನು ನೇಮಿಸಿಕೊಂಡು ಅವನಿಗೆ ತಿಂಗಳಿಗೆ ರೂ ೧೫ ಸಂಬಳ ಕೊಡುತ್ತಿದ್ದಾರೆ. ಈ ಇಸಮಿನ ಅವಶ್ಯಕತೆಗಳೇನೆಂದು ಆವನಾದರೂ ಹೇಳಬಲ್ಲನೋ? ಇಲ್ಲವೆ ಸರ್ಕಾರವಿದೆ. ಅವನು ಈ ತನಕ ಮಾಡಿದ ಕೆಲಸವಾದರೂ ದೇವರೇ ಬಲ್ಲ! ಹೀಗೆಲ್ಲ ನಮ್ಮ ನಗರ ಸಭೆಯಲ್ಲಿ ದುಂದುಗಾರಿಕೆ ನಡೆದಿದೆ. ಜಿಲ್ಹಾಧಿಪತಿಗಳಾದರೂ ಅದನ್ನು ಲಕ್ಷಿಸಬೇಕಾಗಿ ಊರ ಜನರ ಅಪೇಕ್ಷೆಯುಂಟು.

ರಫಂದ ಒಗ್ಗಿಸ್ತಕ ಅರ್ಜಿಮಾಡಿದವರಿಗೊಂದು ರಫಂದ ಕೊಡಬಾರದೆಂದು ನಗರ ಸಭೆಯವರ ನಿರ್ಣಯವಾಯಿತು. ಸ್ವತಃ ಅರ್ಜಿ ಮಾಡಿದವರಿಗಾದರೂ ರಫಂದು ಸಿಗುತ್ತದಲ್ಲವೇ? ಅದನ್ನು ಮ್ಯುನಿಸಿಪಾಲಿಟಿಯವರು ಯಾಕೆ ಕೊಡುವದಿಲ್ಲ? ಜಿಲ್ಹಾಧಿಪತಿಗಳು ಇತ್ತ ಲಕ್ಷ ಕೊಟ್ಟು ವರ್ತಕರನ್ನು ಕಾಯಬೇಕು.

ಕೆಕ್ಕಾರದಲ್ಲಿ ಸತ್ಯಾಗ್ರಹ ಮಾಡಿ ಸೆರೆಮನೆಗೆ ಹೋಗಿದ್ದ ರಾ| ಗೋಪಾಲಕೃಷ್ಣ ಜೋಶಿ ಮಾಣಿಗದ್ದೆ ಇವರು ಈಗ ತಿರುಗಿ ಬಂದಿದ್ದಾರೆ. ಕಳೆದ ಮಂಗಳವಾರ ಕಡತೋಕೆಯ ಜನ ರಾ|| ವೆಂಕಟರಮಣ ಭಟ್ಟರ ಮನೆಯಲ್ಲಿ ಸಭೆ ಸೇರಿ ರಾ|| ಜೋಶಿಯವರ ಸತ್ಕಾರ ಮಾಡಿದರು. ತಮ್ಮ ಬಿಡುವಿನ ಹೊತ್ತನ್ನಾದರೂ ಸೂತು ದೇಶಕಾರ್ಯಕ್ಕೆ ನೆರವಾಗಿರೆಂದು ರಾ| ಜೋಶಿಯವರು ಸಭಿಕರಿಗೆ ಬೋಧಿಸಿದರೆಂದು ತಿಳಿಯುತ್ತದೆ.

ಮುರ್ಡೇಶ್ವರ— (ತಾ. ೫-೯-೪೧) ಕಳೆದ ೮ ವರ್ಷಗಳಿಂದ ಈ ಊರಲ್ಲೊಂದು ಸರ್ವಜನಿಕ ವಾಚನಾಲಯ ನಡೆದಿದೆ. ಆದರೆ ಅದಕ್ಕೊಂದು ಸ್ವತಂತ್ರ ಇಮಾರತು ಇದ್ದಿಲ್ಲ. ಸರಕಾರದವರು ಇಮಾರತಿನ ಬಗ್ಗೆ ಕೆಲವು ಸ್ಥಳ ಪುಕ್ಕಟೆಯಾಗಿ ಕೊಟ್ಟಿದ್ದರು. ಅದು ಸಾಲದ್ದರಿಂದ ಮುಂದೆ ವಾಚನಾಲಯದ ಚಾಲಕರು ರೂಪಾಯಿ ಕೊಟ್ಟು ಇನ್ನಷ್ಟು ಕ್ಷೇತ್ರವನ್ನು ಪಡೆಕೊಂಡರು. ಬಳಿಕ ಇಮಾರತಿನ ಖರ್ಚಿನ ಪ್ರಶ್ನೆ ಮುಂದೆ ಬಂತು. ಅದೂ ದೇವರ ದಯೆಯಿಂದ ಬಗೆಹರಿಯಿತು. ಮುಂಬಯಿಯಲ್ಲಿರುವ ದಾತೃ ಕಾಯಿಕಿಣಿಯವರು ಅಲ್ಲಿಯ ಕೃಷ್ಣ ಸಿನೇಮಾ ಸಾಮ್ನಮಂದಿರದ ಚಾಲಕರಾದ ರಾ| ರಂಗರಾವ ವಿಟ್ಠಲರಾಯರಿಂದ ಈ ವಾಚನಾಲಯಕ್ಕಾಗಿ ಒಂದು ದಿನದ ಪಟಪ್ರದರ್ಶನದ ಉತ್ಪನ್ನ ೪೩೦ ರೂಪಾಯಿಗಳಲ್ಲಿ ಕೊಡಿಸಿದ್ದಾರೆ. ಅದರೊಳಗಿನ ರೂ ೨೦೦ ಈಗಾಗಲೇ ಚಾಲಕರ ಕಡೆಗೆ ವಸೂಲ ಬಂದಿವೆ. ಹೀಗೆ ಇಮಾರತಿನ ಖರ್ಚಿನ ವ್ಯವಸ್ಥೆಯಾದ್ದರಿಂದ ನಿನ್ನೆ ಅನಂತ ಚತುರ್ದಶಿಯ ಶುಭ ಮುಹೂರ್ತದಲ್ಲಿ ಚಾಲಕರು ಭಟಕಳ ಪೇಟೆಯ ಮಹಾಲಕರಿಗಳಾದ ರಾ|| ದೇವಿದಾಸ ಹೊಸಂಗಡಿಯವರ ಕೈಯಿಂದ ಇಮಾರತಿನ ಅಡಿಗಲ್ಲು ಕೂಡ್ರಿಸಿದ್ದಾರೆ. ಅಡಿಗಲ್ಲು ಕೂಡ್ರಿಸುವ ಈ ಸಮಾರಂಭವು ಬಲು ವಿಜೃಂಭಣೆಯಿಂದ ನೆರವೇರಿತು. ಊರೊಳಗಿನ ಮಹನೀಯರು ಯಥಾಶಕ್ತಿ ಧನಸಹಾಯ ಒದಗಿಸಿಕೊಟ್ಟರೆ ಈಗಾಗುವ ಇಮಾರತಿಗೆ ಒಂದು ಮಾಳಿಗೆ ಮಾಡಿಸಿ ಅಲ್ಲೊಂದು ಇಂಗ್ಲಿಷ ಶಾಲೆಯನ್ನಿಡಬೇಕೆಂದು ವಾಚನಾಲಯದ ಚಾಲಕರ ಅಪೇಕ್ಷೆಯುಂಟು.

ಭಟಕಳ— (ತಾ. ೫-೯-೪೧) ಮಳೆ ಕಡಿಮೆ. ಊರಲ್ಲಿ ವಿಷಮ ಜ್ವರ, ಬಿಕ್ಕೇಕೊರಕಡೆ ಮುಂತಾದ ಬೇನೆಗಳು ಹಬ್ಬಿವೆ.

ವಾಡಿಕೆಯಂತೆ ಶ್ರೀ ಹನುಮಂತ ದೇವಸ್ಥಾನದಲ್ಲಿ ಸಾರ್ವಜನಿಕ ಗಣಪತಿ ಉತ್ಸವವು ವಿಜೃಂಭಣೆಯಿಂದ ಜರುಗಿತು. ಶಾಲೆಯ ಮಕ್ಕಳ ಆಟಪಾಟಗಳು, ನರ್ತನಗಾಯನಗಳು, ರಾ| ಅನಂತ ಪ್ರಭು ಮತ್ತು ಮಹಾಬಲ ಭಟ್ಟರ ಕೀರ್ತನೆಗಳು ಮುಂತಾದ ವಿವಿಧ ಕಾರ್ಯಕ್ರಮಗಳಿಂದ ಉತ್ಸವಕ್ಕೆ ವಿಶೇಷ ಶೋಭೆಯುಂಟಾಗಿತ್ತು.

ಊರಲ್ಲಿ ಕಳವುಗಳು ಹೆಚ್ಚಾಗಿವೆ. ಪೋಲೀಸರು ಊರೊಳಗಿನ ಘಟಿಂಗರ ಮೇಲೆ ಕಣ್ಣಿಡಬೇಕು.

ಇಲ್ಲಿಯ ನಾಮಧಾರಿ ಜಾತಿಯರು ತಮ್ಮಲ್ಲಿ ಸಾಮಾಜಿಕ ಸುಧಾರಣೆ ಮಾಡಿ ತಾವುವಕ್ಕಾಗಿ ಒಂದು ಸಂಘವನ್ನು ಸ್ಥಾಪಿಸಿಕೊಂಡಿದ್ದಾರೆ.

ಶಿರಸಿ— (ತಾ. ೬-೯-೧೯೪೧) ಶ್ರೀ ಮಾರಿಕಾಂಬಾ ಹಾಯಸ್ಕೂಲಿನ ಗಣಪತಿ ಉತ್ಸವವು ಈ ವರ್ಷ ವಿಜೃಂಭಣೆಯಿಂದ ಜರುಗಿತು. ಬೆಂಗಳೂರಿನ ಸುಪ್ರಸಿದ್ಧ ಸಾಹಿತಿಗಳಾದ ರಾ| ಅ. ನ. ಕೃಷ್ಣರಾಯರ ಪ್ರವಚನಗಳಿಂದ ಉತ್ಸವಕ್ಕೆ ಎಳ್ಳೇ ಶೋಭೆಯುಂಟಾಗಿತ್ತು. ರಾ| ಕೃಷ್ಣರಾಯರ ವ್ಯಾಖ್ಯಾನಗಳು ತರುಣ ಸಂಘ ಮುಂತಾದ ಸಂಸ್ಥೆಗಳಲ್ಲೂ ಆದವು. ಗಣಪತಿ ಉತ್ಸವದ ಕಾಲಕ್ಕೆ ಒಂದಿನ ಉತ್ಸವ ಕಾರ್ಯ ಮುಗಿಸಿ ವಿದ್ಯಾರ್ಥಿಗಳೂ ಜನರೂ ಶಾಲೆಯಿಂದ ಹೊರಟು ಹೋದ ಕೆಲ ಕಾಲದಲ್ಲೇ ಉಪ್ಪರಿಗೆಯ ಮೇಲಿನ ಸಿಮೆಂಟ ಪ್ಲಾಸ್ಟರಿನ ಕೆಲವು ಭಾಗ ಧಕ್ಕನೆ ಕೆಳಗೆ ಬಂತು. ವಿದ್ಯಾರ್ಥಿಗಳಿದ್ದಾಗ ಬಿದ್ದಿದ್ದರೆ ನಾಲ್ಕಾರು ಹುಡುಗರಾದರೂ ಸಾವಿನ ಬಾಯಲ್ಲಿ ಬೀಳುತ್ತಿದ್ದರು. ಹೊಸದಾಗಿ ಕಟ್ಟಿಸಿದ ಕಟ್ಟಡದ ಈ ರೀತಿ ದುರ್ದೆಸೆಯಾದದ್ದನ್ನು ನೋಡಿ ಜನರೆಲ್ಲರೂ ಚಕಿತರಾಗಿದ್ದಾರೆ.

ಶ್ರೀ ಗೋಪಾಲಕೃಷ್ಣ ದೇವರ ಗುಡಿಯೊಳಗಿನ ಭಜನೆ ಸಪ್ತಾಹವು ಉತ್ಸಾಹದಿಂದ ನೆರವೇರಿತು. ತರುಣ ಮಂಡಳಿಯೇ ಹೆಚ್ಚಾಗಿ ಈ ಉತ್ಸವದಲ್ಲಿ ಸೇರಿತ್ತು.

ಶ್ರೀ ಮಾರಿಕಾಂಬಾ ಪ್ರಸೂತಿಗೃಹದಲ್ಲಿ ಉಪಚಾರಕ್ಕಾಗಿ ಬರುವವರ ಸಂಖ್ಯೆ ಬಹಳ ಹೆಚ್ಚಿದ್ದರಿಂದ ಒಂದೇ ಒಂದು ಸೂಲಗಿತ್ತಿಯಿಂದ ಕೆಲಸ ಸಾಗುವದಿಲ್ಲ. ನಗರ ಸಭೆಯವರು ಇನ್ನೊಬ್ಬ ಸೂಲಗಿತ್ತಿಯನ್ನು ನೇಮಿಸಿಕೊಳ್ಳುವದುಚಿತ.

ಶಿರಸಿಯಲ್ಲೀಗ ಒಂದೇ ಒಂದು ಒಪ್ಪಿಯ ವಿಷಯ ಆದ್ಯವೆಂದರೆ ಬೀದಿ ಬೀದಿ ನೇಣ ಛಂದ ಮ್ಮ ಶ್ರೀ ಮಾರೆಮ್ಮನ ಭಂಡಾರದ ಗಾಡಿ ಇನ್ನೇನು

ಸ್ಥಳಿಕ ವಿಷಯಗಳು.

ಲೇಖಕ:- ಸ್ಥಳವಂತಿಕ.

ಕಾರವಾರದಲ್ಲಿ ನಡೆದ ಮ್ಯುನಿಸಿಪಾಲಿಟಿಯ ಇಲೆಕ್ಷನಿನ ಪರಿಣಾಮ ಪ್ರಕಟವಾಗಿದೆ. ಅಂತು ಮ್ಯುನಿಸಿಪಾಲಿಟಿಯ ಸಭಾಸದರ ಸಂಖ್ಯೆ ೨೧. ಅವರಲ್ಲಿ ಇಬ್ಬರು ಕ್ರಿಶ್ಚನರಿರಬೇಕೆಂದು ನಿಯಮವುಂಟು. ಆದರೆ ಈ ಇಲೆಕ್ಷನಿನಲ್ಲಿ ೪ ಮಂದಿ ಕ್ರಿಶ್ಚನರು ಆರಿಸಿ ಬಂದಿದ್ದಾರೆ. ಹಿಂದು ಮತದಾರರ ಬೆಂಬಲದಿಂದ ಕ್ರಿಶ್ಚನರು ಆರಿಸಿಬಂದದ್ದೊಂದು ವಿಶೇಷ. ಮುಸಲ್ಮಾನರು ಬೇರೆ, ಮುಸಲ್ಮಾನೇತರರು ಬೇರೆ; ಅವರವರ ಹಿತಸಂಬಂಧಗಳು ಬೇರೆ ಬೇರೆ; ಹೀಗೊಂದು ಭಾವನೆ ಮಾಡಿಕೊಂಡು ಜನಾಂಗದವರಲ್ಲಿ ಪೃಥಕ್ಕರಣಮಾಡಿ ಪೃಥಕ್ ಪೃಥಕ್ ಮತದಾರ-ಸಂಘಗಳನ್ನು ನಿರ್ಮಿಸಿ ಜಾತಿ-ಜಾತಿಗಳು ಕೂಡಿಕೊಳ್ಳದಂತೆ ಏರ್ಪಾಟು ಮಾಡಿ ಜಾತಿಹಿತ ಮಾಡಬಯಸುವದು ಅರಾಷ್ಟ್ರೀಯ. ಕ್ರಿಶ್ಚನರ ಚುನಾವಣೆಯಿಂದ ಈ ಮಾತು ಸಿದ್ಧವಾಗಿದೆ. ಆರಿಸಿ ಬಂದವರಲ್ಲಿ ರಾ॥ ವಿಲಿಯಮ ಡಿಸೋಜಾ ಮತ್ತು ಸೌ॥ ನೆಲ್ಲಿ ಡಿಸೋಜಾ ಪತಿ ಪತ್ನಿಯರು ಅಭಿನಂದನೆಗೆ ಪಾತ್ರರು. ಉಭಯತರೂ ತಮ್ಮ ತಮ್ಮ ವಾರ್ಡುಗಳಲ್ಲಿ ೧—೨ ಮತಗಳು ಹೆಚ್ಚು ದೊರಕಿ ಆರಿಸಿಬಂದದ್ದೊಂದು ಯೋಗನೇ ಸೈ! ಉಭಯತರೂ ಅಭಿನಂದನಾರ್ಹರು.

⁂

ಬೇಸಾಯ ಇಲಾಖೆಯ ಡೆ॥ ಡ್ಯಾರೆಕ್ಟರರಾದ ವಿ॥ ಬಲೂಚರವರು ಹೊನ್ನಾವರದೊಳಗಿನ ಉದ್ಯೋಗ ಮಂದಿರದಲ್ಲಿ ನಡೆಯುವ ಜೇನು-ತುಪ್ಪದ ವ್ಯವಸಾಯವನ್ನು ಕ್ರಮಗೊಳಿಸಲು ಮಾಡಿದ ಪ್ರಯತ್ನ ಅಭಿನಂದನೀಯವಿದೆ. ಘಟ್ಟದ ಮೇಲೂ ಘಟ್ಟದ ಕೆಳಗೂ ನಮ್ಮ ಜಿಲ್ಲೆಯಲ್ಲಿ ಹೇರಳ ಜೇನು ತುಪ್ಪ ಹುಟ್ಟುತ್ತದೆ. ಆದರೆ ಜನರಿಗೆ ಜೇನು-ಹುಟ್ಟಿನೊಳಗಿಂದ ಜೇನುತುಪ್ಪವನ್ನು ಹೀರಿಕೊಳ್ಳುವ ಜ್ಞಾನ ಕಡಿಮೆ. ಜೇನು-ಹುಟ್ಟಿನಲ್ಲಿ ಜೇನು ನೊಣದ ತತ್ತಿಗಳು ಇರುತ್ತವೆ. ಅವನ್ನು ಬೇರ್ಪಡಿಸಿ ಇಲ್ಲವೆ ಅವುಗಳಿಗೆ ಪೆಟ್ಟಾಗದಂತೆ ಜೇನು ತುಪ್ಪವನ್ನು ತೆಗೆಯತಕ್ಕದ್ದು. ಜೇನು-ತುಪ್ಪದಲ್ಲಿ ತತ್ತಿಗಳು ಕೂಡಿರುವದರಿಂದ ಅವು ಕೊಳೆತು ತುಪ್ಪವು ಸಾಧಕವಾಗುವ ಬದಲು ಬಾಧಕವಾಗುತ್ತದೆ. ಉದ್ಯೋಗ ಮಂದಿರದವರು ಜೇನು ವ್ಯವಸಾಯವನ್ನು ಕ್ರಮಗೊಳಿಸಿದ್ದಾರೆ. ಉದ್ಯೋಗ ಮಂದಿರಕ್ಕಿರುವ ರಾಷ್ಟ್ರೀಯ ಸಭೆಯ ಆಶ್ರಯದ ಮೇಲಿಂದ ವಿಕಲ್ಪವೆಣಿಸದೆ ನಿರ್ಮಲಚಿತ್ತದಿಂದ ಆ ವ್ಯವಸಾಯವನ್ನು ಉದ್ಯೋಗ ಮಂದಿರದವರ ಸಹಕಾರದಿಂದ ಡೆ॥ ಡಾರೆಕ್ಟರರು ಕ್ರಮಗೊಳಿಸಬಯಸಿದ್ದು ಅಭಿನಂದನೀಯ.

ಉದ್ಯೋಗ ಮಂದಿರದಲ್ಲಿ ಕತ್ತದ ಸಾಮಾನಿಗೆ ತಕ್ಕಷ್ಟು ಗಿರಾಕಿ ಇಲ್ಲವಂತೆ. ಆ ಕುರಿತು ಸರಕಾರವು ಮುಂದಾಗಬೇಕು. ಯೋಗ್ಯ ದರದಿಂದ ಉದ್ಯೋಗ ಮಂದಿರದಲ್ಲಿ ತಯಾರಾಗುವ ಸರಕುಗಳನ್ನು ಸರಕಾರವು ಕೊಂಡು ಕೊಂಡು ಉದ್ಯೋಗ ಮಂದಿರಕ್ಕೆ ಆಶ್ರಯ ಕೊಡಬೇಕು. ನಮ್ಮ ಜಿಲ್ಲೆಯೊಳಗೆ ಕೈಗಾರಿಕೆಗಳು ಇರುವದಿಲ್ಲ. ಗುಡಿಗಾರರು ಕೆತ್ತಿಗೆಯ ಸಾಮಾನುಗಳನ್ನಷ್ಟು ತಯಾರಿಸುತ್ತಾರೆ ಅದೊಂದು ಪರಂಪರಾಗತ ಉದ್ದಿಮೆ. ಜೀವನ ನಡಿಸಿಕೊಳ್ಳಲು ಆ ಉದ್ದಿಮೆಯಿಂದ ಸಾಧ್ಯ ಮಾತಲ್ಲ. ಕಲಾ-ಪ್ರಶಂಸಕರು ಯಾವಾಗಲೂ ಕಡಿಮೆ. ಆದರಿಂದ ಜನಸಾಮಾನ್ಯರಿಗೆ ಪ್ರಯೋಜನವಾಗುವಂಥ ಉದ್ಯೋಗ-ಮಂದಿರವನ್ನು ದೃಢಪಡಿಸಲು ಸರಕಾರವು ಮುಂದಾಗಬೇಕು.

ಇದಲ್ಲದೆ ನಮ್ಮ ಜಿಲ್ಲೆಯೊಳಗೆ ಹಾಲಿನ ಬರಗಾಲವುಂಟು. ಹಾಲು ಮಾನವ-ದೇಹಧಾರಣೆಗೆ ಅತ್ಯವಶ್ಯವಾದ ಜೀನಸು. ಹಾಲಿನ ಅಭಾವದ ಮೂಲಕವಾಗಿಯೇ ಜನರ ಚೈತನ್ಯಶಕ್ತಿ ಕುಗ್ಗಿ ಜನರು ಛಳಿಜ್ವರ ಮೊದಲಾದ ರೋಗಗಳಿಗೆ ತುತ್ತಾಗುತ್ತಾರೆಂದು ಮುಂಬಯಿ ಇಲಾಖೆಯ ಶಿಶು ಮತ್ತು ಆರೋಗ್ಯ ಸಪ್ತಾಹ ಸಂಘದ ಕಾರ್ಯದರ್ಶಿಗಳಾದ ಡಾ॥ ಮ್ಹಾಸಕರರವರು ಮುಂಬಯಿಯಲ್ಲಿ ನಡೆದ ಸ್ತ್ರೀಯರ ಕಾರ್ಯಕಾರಿ ಸಭೆಯಲ್ಲಿ ಹೇಳಿದ್ದುಂಟು. ನಮ್ಮ ಜನಾಂಗ ಗೋ-ಬ್ರಾಹ್ಮಣ ಪ್ರತಿಪಾಲಕ ಜನಾಂಗ. ಆದರೆ ಲಂಡನಿನಕಿಂತ ಮುಂಬಯಿಯಲ್ಲಿ ಹಾಲು ತುಟ್ಟಿ! ಲಂಡನಿನಲ್ಲಿ ಶುದ್ಧ ಹಾಲು, ಸರಕಾರಿ ಮುದ್ರೆಯಿದ್ದ ಹಾಲು ಪಿಂಟ (= ೩/೪ ಶೇರಿ) ಗೆ ೩ ಆಣೆ ಬೆಲೆಯಿದೆ. ಆದರೆ ನಮ್ಮ ಮುಂಬಯಿಯಲ್ಲಿ ಅಷ್ಟೇ ಹಾಲಿಗೆ ೬ ಆಣೆ ಬೀಳುತ್ತವೆ. ಛಳಿಜ್ವರವೆಂದರೆ ಸಾಮಾನ್ಯವಾದ ರೋಗವಲ್ಲ. ನಮ್ಮ ಹಿಂದುಸ್ತಾನದೊಳಗೆ ಛಳಿಜ್ವರದಿಂದ ಸಾಧಾರಣ ೧೦ ಲಕ್ಷ ಜನರು ತೀರಿಕೊಳ್ಳುತ್ತಾರಾಗಿ ಲೆಕ್ಕವುಂಟು ಈ ಜ್ವರದಿಂದ ಮನುಷ್ಯನು ದುರ್ಬಲನಾಗಿ ಆತನ ಕಾರ್ಯಶಕ್ತಿ ಸಹ ಕುಂದುತ್ತದೆ. ಕುನ್ನೂರಿನ ಸಂಶೋಧಕ ಸಂಘದ ಚಾಲಕರಾದ ಡಾ॥ ಪೋಲ ರಸೆಲರವರು ತಂಜಾವರ ಜಿಲ್ಲೆಯಲ್ಲಿ ಬಂದು ಛಳಿಜ್ವರಪೀಡಿತ ಗ್ರಾಮದ ಅಭ್ಯಾಸ ಮಾಡಿದರು. ಪ್ರತಿಯೊಬ್ಬ ಜ್ವರಗ್ರಸ್ತನಿಗೆ ಉಪಚಾರಕ್ಕಾಗಿ ರೂ. ೩॥ ಖರ್ಚ ಮತ್ತು ಕಾರ್ಯಹಾನಿಯ ಮೂಲಕ ರೂ ೩-೬-೦ ಖರ್ಚ, ಹೀಗೆ ರೂ. ೬—೧೪—೦ ಪ್ರತಿಯೊಬ್ಬ ಜ್ವರಗ್ರಸ್ತನ ಬಗ್ಗೆ ಖರ್ಚಾಗುತ್ತವೆ. ಹಿಂದುಸ್ಥಾನದೊಳಗೆ ಸುಮಾರು ೧॥ ಲಕ್ಷ ಹಳ್ಳಿಗಳು ಜ್ವರಗ್ರಸ್ತವಾಗಿವೆ. ಈ ಮೂಲಕ ವರ್ಷಾಸನ ಜನಾಂಗಕ್ಕೆ ರೂ. ೪೫ ಕೋಟಿ ನಷ್ಟವಾಗುತ್ತವೆ. ಮಲಾಯಾ ಮೊದಲಾದ ದ್ವೀಪಗಳಲ್ಲಿ ಮುಂಚೆ ಛಳಿಜ್ವರ ಪೀಡೆಯಿತ್ತು. ಅಲ್ಲಿಯ ಸರಕಾರವು ಅದನ್ನು ನಿವಾರಣೆ ಮಾಡಿದೆ. ಇದಕ್ಕೆ ಹೆಚ್ಚು ಖರ್ಚು ತಗಲುವದಿಲ್ಲವಾಗಿ ಡಾ॥ ಪೋಲ ರಸೆಲ್‌ರವರ ಅಂಬೋಣ. ನಮ್ಮಲ್ಲಿಯ ಗ್ರಾಮೋದ್ಧಾರ ಮಂಡಳದವರು ಈ ಕುರಿತು ತಕ್ಕ ಮಾಹಿತಿ ಪಡಕೊಂಡು ಛಳಿಜ್ವರವನ್ನು ಪರಿಹರಿಸಿಕೊಂಡರೆ ಗ್ರಾಮೋದ್ಧಾರ ಕಾರ್ಯವು ದಕ್ಷತೆಯಿಂದ ನಡೆದು ಲೋಕಕ್ಷೇಮವಾಗುವಂತಿದೆ. ಮಲಾಯಾದೊಳಗಿನ ಮುಖ್ಯ ಮುಖ್ಯ, ದೊಡ್ಡ ದೊಡ್ಡ ಬೇಸಾಯಗಾರರು ಈ ಕಾರ್ಯದಲ್ಲಿ ಮುಂದಾಗಿದ್ದರೆಂದು ಡಾ॥ ರಸೆಲರ ಅಂಬೋಣ. ಆದರಿಂದ ಬೇಸಾಯ ಇಲಾಖೆಯವರು ಸಹ ಈ ವಿಷಯವನ್ನು ಅಭ್ಯಾಸ ಮಾಡಬೇಕು. ಮುಖ್ಯವಾಗಿ ಹಾಲಿನ ಬೆಳವಣಿಗೆ ಹೆಚ್ಚಿಸುವಂತೆ ಬೇಸಾಯ ಇಲಾಖೆಯವರು ಉಪಾಯಯೋಜನೆ ಮಾಡಬೇಕು. ಡೆ॥ ಡ್ಯಾರೆಕ್ಟರ ರಾ॥ ಬಲೂಚರವರು ಅಮೇರಿಕಾ, ಜರ್ಮನಿ, ಹೊಲಂಡ ಈ ೩ ದೇಶಗಳಲ್ಲಿ ೨-೩ ವರ್ಷ ಉಳಿದು ಬೇಸಾಯಕ್ಕೆ ಸಂಬಂಧಪಟ್ಟ ಯಾವತ್ತು ವ್ಯವಸಾಯಗಳನ್ನು ಅಭ್ಯಾಸ ಮಾಡಿರುತ್ತಾರೆ. ಹಾಲಿನ ಉತ್ಪತ್ತಿಯ ಕುರಿತು ಅವರೊಂದು ಯೋಜನೆಯನ್ನು ತಯಾರಿಸಿ ಜನಸಾಮಾನ್ಯರಿಗೆ ಒದಗುತ್ತಿರುವ ತೊಂದರೆಯನ್ನು ಪರಿಹರಿಸಬಹುದು.

⁂

ಗೋಕರ್ಣ ಮ್ಯುನಿಸಿಪಾಲಿಟಿಯ ಕುರಿತು ಬಹಳ ದೂರು ಕೇಳಿಬರುತ್ತಿದೆ. ಆ ಮ್ಯುನಿಸಿಪಾಲಿಟಿಯ ಸಭಾಸದರು ಸರಕಾರದಿಂದ ಪ್ರತಿ ೩ ವರ್ಷಕ್ಕೊಮ್ಮೆ ನೇಮಿಸಲ್ಪಡುತ್ತಾರೆ. ಆದರೆ ಬಹುತರವಾಗಿ ಮುಂಚಿನ ಸಭಾಸದರೇ ಮುಂದಿನ ಸಭಾಸದರಾಗಿ ನೇಮಿಸಲ್ಪಡುವ ಕ್ರಮ ನಡೆದಿದೆ. ಆದರಿಂದ ಕೆಲವರಿಗೆ ಮ್ಯುನಿಸಿಪಾಲಿಟಿಯ ಮೆಂಬರಿ ಅದೊಂದು ಪರಂಪರಾಗತ ಉಂಬಳಿಯಾಗಿ ಬಿಟ್ಟಿದೆ! ಈ ಸಭಾಸದರು ಹೇಗೆ ಕುಣಿದರೂ ಇವರಿಗೆ ಪದಚ್ಯುತಿಯಾಗುವದಿಲ್ಲ. ಇಲೆಕ್ಷನಿನ ಅಭಾವದಲ್ಲಿ ಜನಮತದ ಪರಿವೆ ಈ ಸಭಾಸದರಿಗಿಲ್ಲ. ಜಿಲ್ಹಾಧಿಪರು ಈ ಬಾರಿಯಾದರೂ ವಿಚಾರ ಮಾಡಬೇಕು. ಶ್ರೀ ಗೋಕರ್ಣ ಕ್ಷೇತ್ರ ಯಾತ್ರಾಸ್ಥಳ; ದೂರ ದೂರ ದೇಶಗಳಿಂದ ಭಾವಿಕರು ಇಲ್ಲಿ ಬರುತ್ತಾರೆ. ಅಂಥ ಜನಗಳಿಗೆ ಶ್ರೀ ಕ್ಷೇತ್ರ ಸೇರಿದೊಡನೆ ಮನಸು ಪ್ರಸನ್ನವಾಗಬೇಕು. ಈಗಿನ ಗೋಕರ್ಣ ಕ್ಷೇತ್ರದ ತೀರ್ಥಗಳಲ್ಲಿ ಸ್ನಾನ ಮಾಡುವದು ಒತ್ತಟ್ಟಿಗಿರಲಿ; ಅವನ್ನು ನೋಡಿದರೆ ಜಳಕ ಮಾಡುವಷ್ಟು ಅವು ಹೊಲಸಾಗಿವೆ! ಮ್ಯುನಿಸಿಪಾಲಿಟಿಯಲ್ಲಿ ಮ್ಯುನಿಸಿಪಾಲಿಟಿಯ ಆಸ್ತಿಯ ಕುರಿತು ಒಂದು ಯಾದಿಯಿಲ್ಲ. ಮ್ಯುನಿಸಿಪಾಲಿಟಿ ಸೀಮೆಯೊಳಗಿನ ಕೆರೆ, ಬಾವಿ, ಓಣಿ, ಹಳ್ಳ, ಮಾರ್ಗ ಮೊದಲಾದ ಸರಕಾರದ ಆಸ್ತಿಯೆಲ್ಲ ಮ್ಯುನಿಸಿಪಾಲಿಟಿಯ ಒಡೆತನಕ್ಕೆ ಒಪ್ಪಿದ್ದು. ಅವನ್ನು ಶುಚಿರ್ಭೂತವಾಗಿ ಕಾಪಾಡುವ ಹೊಣೆಗಾರಿಕೆ ಮ್ಯುನಿಸಿಪಾಲಿಟಿಯದು. ಮ್ಯುನಿಸಿಪಾಲಿಟಿಯವರು ಯಾತ್ರಿಕರಿಂದ ತಲೆ-ಸುಂಕವನ್ನು ವಸೂಲ ಮಾಡುತ್ತಾರೆ; ಯಾತ್ರಾ-ತೀರ್ಥಗಳೆಲ್ಲ ತಮ್ಮದಲ್ಲವೆಂದು ಹೇಳುತ್ತಾರೆ. ಸಭಾಸದರಿಗೆ ತಮ್ಮ ಹೊಣೆಗಾರಿಕೆಯ ಪರಿಜ್ಞಾನವಿಲ್ಲ; ಅದನ್ನು ಮಾಡಿಕೊಳ್ಳಬೇಕೆಂಬ ಲವಲವಿಕೆಯೂ ಅವರಿಗಿಲ್ಲ; ಸಭಾಸದಾಧಿಕಾರ ತಪ್ಪುವ ಭೀತಿಯೂ ಇಲ್ಲ! ಆದರಿಂದ ಈ ಪರಂಪರೆಯನ್ನು ತಪ್ಪಿಸಿ ಹೊಸಬರನ್ನು ನೇಮಿಸಬೇಕು. ಶ್ರೀ ಕ್ಷೇತ್ರದಲ್ಲಿ ಮ್ಯು॥ ಸಭಾಸದರಾಗಬಲ್ಲ ಸುಶಿಕ್ಷಿತರೂ ವ್ಯವಹಾರಿಕರೂ ಅನೇಕರಿದ್ದಾರೆ. ಅವರ ಪ್ರಯೋಜನವನ್ನು ಸರಕಾರವು ಕ್ಷೇತ್ರಸ್ಥರಿಗೂ ಯಾತ್ರಸ್ಥರಿಗೂ ಒದಗಿಸಿ ಕೊಡುವದು ವಿಹಿತ.

⁂

ಕಾರವಾರದ ಡಿಸ್ಟ್ರಿಕ್ಟ ಜಡ್ಜರು ೪ ಮಂದಿ ಕಾರಕೂನ-ಸ್ಥಳಗಳಿಗೆ ಉಮೇದ್ವಾರರನ್ನು ಆರಿಸಲು ಕೈಕೊಂಡ ಕ್ರಮ ಉಚಿತವಾದದ್ದಲ್ಲ. ಈಗ ಈ ಜಿಲ್ಲೆಯ ನ್ಯಾಯ ಇಲಾಖೆಯಲ್ಲಿ ೧೦ ಮಂದಿ ಕಾರಕೂನರಾಗುವ ಉಮೇದ್ವಾರರಿದ್ದಾರೆ. ಇನ್ನು ನಾಲ್ವರನ್ನು ಸೇರಿಸಿಕೊಳ್ಳುವದಕ್ಕಾಗಿ ಜಾಹೀರಾತು ಕೊಡಲಾಗಿತ್ತು. ಈ ೪ ಸ್ಥಳಗಳಿಗೆ ಸುಮಾರು ೨೦೦ಕ್ಕೆ ಮಿಕ್ಕಿ ಅರ್ಜಿಗಳು ಬಂದಿದ್ದವಂತೆ. ಆ ಬಗ್ಗೆ ಆಕ್ಷೇಪ ಮಾಡಿ ಪ್ರಯೋಜನವಿಲ್ಲ. ಪ್ರತಿ ವರ್ಷ ವಿದ್ಯಾಭ್ಯಾಸ ಮುಗಿಸಿ ವಿದ್ಯಾಲಯದೊಳಗಿಂದ ಹೊರಬೀಳುವ ಸಾವಿರಾರು ಜನರಿಗೆ ಯಾವದೊಂದು ಹೊಟ್ಟೆಪಾಡಿನ ಉದ್ಯೋಗ ತಿಳಿಯದಿದ್ದಾಗ, ನೌಕರಿಯೇ ಸರ್ವಸ್ವ

ವಾದಾಗ ಇಷ್ಟು ಅರ್ಜಿಗಳು ಬಂದದ್ದು ಸಾಹಜಿಕ; ಇದಕ್ಕೂ ಮಿಗಿಲಾಗಿ ಅರ್ಜಿಗಳು ಬಾರದಿದ್ದರ್ದೇ ಸೋಜಿಗ! ಆದರೆ ಡಿ॥ ಜಜ್ಜರು ಪ್ರತ್ಯಕ್ಷ ಸಂಭಾಷಣೆಗಾಗಿ ೬೧ ಜನರಿಗೆ ಬರಮಾಡಿಕೊಂಡಿದ್ದು ತೀರ ತಪ್ಪು. ಹೀಗೆ ಕರೆ ಹೋದವರಲ್ಲಿ ಬೆಳಗಾವಿ-ಧಾರವಾಡ ಕಡೆಯ ಬಿ.ಎ. ಪರೀಕ್ಷೆ ಪಾಸಾದವರೂ ಇದ್ದರು. ನಾಲ್ವರಿಗೆ ಆರಿಸುವದಕ್ಕಾಗಿ ೮ ಅಥವಾ ೧೦ ಜನರನ್ನು ಕರಿಸದೆ ೬೧ ಜನರನ್ನು ತಮ್ಮೆಡೆಗೆ ಕರಿಸಿ ಸುಮಾರು ರೂ. ೧೦೦೦ಗಳ ಮಟ್ಟಿಗೆ ಖರ್ಚಿಗೆ ಹಾಕಿದ್ದು ಪ್ರಶಸ್ತವಲ್ಲ. ಈಗ ಇದ್ದ ೧೦ ಉಮೇದ್ವಾರರಿಗೆ ಕೆಲಸ ಸಿಕ್ಕಿದ ಮೇಲೆ ಈ ೪ ಜನರಿಗೆ ಕೆಲಸ ಸಿಗುವದಿದೆ! ಅದು ಯಾವ ಯುಗದಲ್ಲೋ ಏನೋ! ಹೀಗಿರುವಾಗ, ೫೦-೬೦ ಜನರಿಗೆ ಅನಾವಶ್ಯಕವಾಗಿ ಕಾರವಾರ--ಯಾತ್ರೆಯನ್ನು ಮಾಡಿಸಬಾರದಿತ್ತು. ೩ ದಿನಗಳ ತನಕ ಪರೀಕ್ಷೆ ನಡೆಯಿತಂತೆ. ಒಂದು ದಿನ ಲೇಖೀ ಪರೀಕ್ಷೆ; ಒಂದು ದಿನ ಟ್ಯಾಪರ್‍ರೈಟಿಂಗದ ಪರೀಕ್ಷೆ; ಇನ್ನೊಂದು ದಿನ ಬಾಯಿ-ಪರೀಕ್ಷೆ! ಹೀಗೆ ಪರೀಕ್ಷೆಗಳು ನಡೆದವಂತೆ! ಪಾಕಿಸ್ತಾನ, ಅಖಂಡ ಹಿಂದುಸ್ಥಾನ, ತೆಹರಾನ, ಇರಾಣ, ಯುರೋಪ ಖಂಡದ ಸದ್ಯದ ಪರಿಸ್ಥಿತಿ, ಸೇನಾಪತಿಗಳ ಹೆಸರು, ಮುಖ್ಯ ಪ್ರಧಾನರ ಹೆಸರು, ಮೇಲಧಿಕಾರಿಗಳ ಕಡೆಗೆ ಹ್ಯಾಗೆ ನಡಕೊಳ್ಳಬೇಕು, ಕೆಳ ಅಧಿಕಾರಿಗಳ ಕಡೆಗೆ ಹ್ಯಾಗೆ ನಡಕೊಳ್ಳಬೇಕು, ಇವೇ ಮೊದಲಾದ, ಇವಕ್ಕೂ ಮಿಗಿಲಾದ ಲೋಕ-ಪ್ರಪಂಚದ ಪ್ರಶ್ನೆಗಳು ಕಾರಕೂನಿಯ ಉಮೇದ್ವಾರರಾಗಬಂದವರಿಗೆ ಕೇಳಲಾದವಂತೆ! ಕಾರಕೂನಿ-ಉಮೇದ್ವಾರರಿಗೆ ಇಷ್ಟೆಲ್ಲ ಜ್ಞಾನವಿರಬೇಕಾದರೆ ಪರೀಕ್ಷೆ ಮಾಡುವ ಡಿ॥ ಜಜ್ಜರು ಬಹಳ ಜ್ಞಾನವಂತರೆಂದು ಯುವಕರು ತಿಳಕೊಂಡು ಮೂಗಿನ ಮೇಲೆ ಬೊಟ್ಟು ಇಟ್ಟರಂತೆ! ಈ ರೀತಿ ಜನಸಂಪತ್ತು ಸೂರೆಯಾಗದಂತೆ ಸರಕಾರವು ಕೆಲವು ನಿಯಮಗಳನ್ನು ಮಾಡುವದು ಹಿತ, ಯಾವದೇ ಸಂದರ್ಭದಲ್ಲಿ ನೇಮಿಸಿಕೊಳ್ಳುವ ಇಸಮುಗಳ ಸಂಖ್ಯೆಯ ಇಮ್ಮಡಿ ಇಲ್ಲವೆ ಮುಮ್ಮಡಿ ಜನರಿಗಿಂತ ಹೆಚ್ಚು ಜನರನ್ನು ಸಮಕ್ಷ ಭೆಟ್ಟಿಯ ಬಗ್ಗೆ ಕರೆಯಬಾರದೆಂಬ ನಿಯಮವಿರಬೇಕು.

ವಾರ್ತೆಗಳು.

(೩ನೇ ಪಾನದಿಂದ ಮುಂದರಿಸಿದ್ದು.)

ಮಹಾರಾಜರ ಈ ಭಾಷಣದಲ್ಲಿ ಕೆಲವು ಉದಾತ್ತ ಭಾವನೆಗಳು ವ್ಯಕ್ತವಾಗಿರುವದಾಗ್ಯೂ ಅದರಲ್ಲಿ ಹಿಂದೀ ರಾಷ್ಟ್ರೀಯ ಸಭೆಯ ಯುದ್ಧಸಂಬಂಧಿ ಧೋರಣೆಯ ಮೇಲೆ ಪ್ರಚ್ಛನ್ನ ಟೀಕೆಯಾಗಿರುವದರಿಂದ, ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಅಧ್ಯಕ್ಷರಾಗಿರುವ ಶ್ರೀ ದತ್ತಾತ್ರೇಯ ಕರಮರಕರರವರು ಒಂದು ಪ್ರಕಟನೆಯನ್ನು ಹೊರಡಿಸಿ, ಅಜಾತ ಶತ್ರುಗಳಾದ ಮಹಾತ್ಮಾ ಗಾಂಧಿಜಿಯವರೂ ನಾಝೀವಾದದ ಕಡುವಿರೋಧಿಗಳಾದ ಪೂಜ್ಯ ಪಂಡಿತ ಜವಾಹಿರಲಾಲ ನೆಹರುರವರೂ ಪ್ರಕೃತ ಯುದ್ಧದಿಂದ ಅಲಿಪ್ತರಾಗುಳಿಯಲು ಯಾಕೆ ಬೋಧಿಸುತ್ತಿರುವರೆಂಬವರ ಬಗ್ಗೆ ಆಳವಾಗಿ ವಿಚಾರ ಮಾಡಲು ಮಹಾರಾಜರಿಗೆ ಬಿನ್ನವಿಸಿದ್ದಾರೆ.

— ಇದೇ ಬರುವ ಅಕ್ಟೋಬರ ತಿಂಗಳಲ್ಲಿ ವರಿಷ್ಠ ಕಾಯಿದೆ ಕೌನ್ಸಿಲಿನ ಸಭೆ ಸೇರುತ್ತದೆ. ಆ ಸಮಯ ಉಪ್ಪಿನ ತೆರಿಗೆಯನ್ನು ಏರಿಸುವ ಆಲೋಚನೆಯನ್ನು ಸರಕಾರವು ಮಾಡಿರುವದಂತೆ. ಯುದ್ಧ-ಖರ್ಚು ಮಿಗಿಲಾಗಿರುವದರಿಂದ ಅದನ್ನು ತುಂಬಿಕೊಳ್ಳುವದಕ್ಕಾಗಿ ಸರಕಾರವು ಉಪ್ಪಿನ ತೆರಿಗೆಯನ್ನು ಏರಿಸಲುದ್ಯುಕ್ತವಾಗಿದೆಯಂತೆ. ಸ್ವತಃ ಭಾರತ ಮಂತ್ರಿಗಳು ಈ ಉಪಕ್ರಮವನ್ನು ಸೂಚಿಸಿದ್ದಾರಂತೆ. ಪ್ರಾಪ್ತಿಯ ಕರಭಾರವನ್ನು ಏರಿಸಬೇಕೆಂದೂ ಭಾರತ ಮಂತ್ರಿಗಳು ಸೂಚಿಸಿದ್ದರಂತೆ. ಈ ಸೂಚನೆಯಂತೆ ಬರುವ ಫೆಬ್ರುವರಿ ತಿಂಗಳಲ್ಲಿ ಹಿಂದುಸ್ಥಾನ ಸರಕಾರವು ಪ್ರಾಪ್ತಿಯ ಮೇಲಿನ ಕರವನ್ನೂ ಏರಿಸುವದಾಗಿ ಸುದ್ದಿಗಾರರು ತಿಳಿಸುತ್ತಾರೆ.

ಸ್ಥಾನಿಕ ವೃತ್ತಾಂತ.

(೯ನೇ ಪುಟದಿಂದ ಮುಂದರಿಸಿದ್ದು.)

ದೇವಸ್ಥಾನಗಳ ಭಂಡಾರಗಳ ಗತಿಯಾಗಿದೆಯಂತೆ. ಹಾಗಾಗಲಿಕ್ಕೂ ಒಂದು ಕಾರಣವಿದೆ. ಮೂರೆಮ್ಮನವರ ವಹಿವಾಟ ಮೊಕ್ತೇಸರರೇ ಆ ಗುಡಿಗಳ ಕಾರಭಾರ ಮಾಡುತ್ತಿದ್ದಾರೆ! ಅವರು ದೇವ-ದೇವರಲ್ಲಿ ಪಕ್ಷಪಾತವೇಕೆ ಮಾಡ್ಯಾರು? ಶ್ರೀ ಗೋಪಾಲಕೃಷ್ಣನ ಆಡಳಿತೆ ಈ ಮೊಕ್ತೇಸರರ ಕೈಯ್ಯಲ್ಲಿ ಬಂದಾಗ ಭಂಡಾರದಲ್ಲಿ ೩೦ ಸಾವಿರ ರೂ. ಗಳಿದ್ದವಂತೆ. ಈಗ ಈ ಶಿಲ್ಕು ೮-೧೦ ಸಾವಿರಕ್ಕೆ ಇಳಿದಿದೆಯಾಗಿ ವದಂತಿಯಿದೆ! ಶ್ರೀ ಶಂಕರನ ಗುಡಿಯೂ ಶ್ರೀ ಗಣಪತಿ ದೇವರ ಗುಡಿಯೂ ಬೇರೆ ಬೇರೆ ಇವೆ. ಅವುಗಳಿಗೆ ಪ್ರತ್ಯೇಕ-ಪ್ರತ್ಯೇಕ ತಸ್ತೀಕು ಸಿಗುತ್ತಿದೆ. ಆದರೆ ಊರೊಳಗಿನ ಎಲ್ಲ ದೇವರ ಆಡಳಿತೆ ನೋಡುವ ಈ ಮಹನೀಯರು ತಂದೆ — ಮಕ್ಕಳಲ್ಲಿ ಪಾಲು ಪಟ್ಟಿ ಯಾಗಿಲ್ಲೆಂದು ಹೇಳುತ್ತ ಶ್ರೀ ಗಣಪತಿ ದೇವರ ಭಂಡಾರವನ್ನು ಶ್ರೀ ಶಂಕರ ದೇವರ ಬಗ್ಗೆ ವಿನಿಯೋಗಿಸುತ್ತಿದ್ದಾರಂತೆ. ಎರಡೂ ದೇವರ ಭಂಡಾರಗಳ ಲೆಕ್ಕ ಪತ್ರ ಈಗ ಒಂದೇಯಾಗಿ ಬಹಳ ಗೊಂದಲವಾಗಿದೆಯೆಂದು ಕೇಳಿ ಬರುತ್ತಿದೆ. ಶ್ರೀ ಗಣಪತಿ ದೇವರಿಗೆ ಸೇವೆಯನ್ನೊಪ್ಪಿಸುವದು ಈಗ ಬಲು ಕಷ್ಟವಾಗಿದೆ! ದೇವರಿಗೆ ಯಾರಾದರೂ ೧ ರೂಪಾಯಿಯ ಪಂಚಖಾದ್ಯದ ಸೇವೆ ಮಾಡಿಸಿದರೆ ದೇವರ ಡಬ್ಬಿಗೆ ೮ ಆಣೆ ಕಾಣಿಕೆ ಹಾಕಬೇಕೆಂದು ಈ ಮೊಕ್ತೇಸರರ ನೇಮ! ತಮಗೆ ಎಂಟಾಣೆ ದಕ್ಷಿಣೆ ಕೊಡಬೇಕೆಂದು ಅರ್ಚಕರ ಒತ್ತಾಯ! ಇಲ್ಲದಿದ್ದರೆ ಭಕ್ತರ ಪಂಚಖಾದ್ಯ ದೇವರಿಗೆ ಅವರು ಅರ್ಪಿಸಲಾರರು! ಇಷ್ಟೆಲ್ಲ ಉತ್ಪನ್ನವಿದ್ದಾಗ್ಯೂ ಶ್ರೀ ಗಣಪತಿಗೆ ಒಂದು ಬೆಳ್ಳಿಯ ಕವಚ ಮಾಡಿಸಲು ಮೊಕ್ತೇಸರರು ಊರ-ಬೇರೂರ ಜನರಿಂದ ವಂತಿಗೆ ಕೂಡಿಸುತ್ತಾರೆ! ಶ್ರೀ ಗಣಪತಿ ದೇವರ ಬಾಬತು ಅರ್ಬನ ಸರಕಾರಿ ಬೇಂಕಿನಲ್ಲಿ ೪—೫ ನೂರು ರೂಪಾಯಿಗಳುಂಟಂತೆ. ಆ ಹಣ ಯಾರ ಹೆಸರಲ್ಲುಂಟೆಂದು ತಿಳಿಯುವದಿಲ್ಲ! ಶ್ರೀ ಗಣಪತಿಗಾದರೂ ಗೊತ್ತಿದ್ದರೆ ಸಾಕು! ಬೇರೆ ಬೇರೆ ಗುಡಿಗಳ ಭಂಡಾರಗಳಲ್ಲಿ ನೆಲಸಿರುವ ಈ ಅವ್ಯವಸ್ಥೆಯನ್ನು ಹೇಗೆ ಹೋಗಲಾಡಿಸಬೇಕೆಂಬದು ಸೂಚಿಸದೆ ತಿಳಿಯದೆ ನಾಗರಿಕರು ಈಗ ತಲೆಕೆದರಿಕೊಳ್ಳುತ್ತಿದ್ದಾರೆ.

ಸಿದ್ದಾಪುರ— (ತಾ. ೪—೯—೪೧) ಇಲ್ಲಿಯ ಸಾಹಿತ್ಯ ಸೇವಕ ಸಂಘದ ನಿಮಂತ್ರಣ ಮನ್ನಿಸಿ ತಾ. ೨೯ನೇಗೆ ಶ್ರೀಮಾನ್ ಅ. ನ. ಕೃಷ್ಣರಾಯರು ಈ ಊರಿಗೆ ಚಿತ್ತೈಸಿ, ಸಂಘದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಉತ್ಸವಕ್ಕೆ ಕೂಡಿದ [illegible] ರಾಯರ ರಸಭರಿತ ವಾಣಿಯೊಳಗಿಂದ ಹೊರಬಿದ್ದ ಅಮೃತವನ್ನು ಕುಡಿಕುಡಿದು ಮೈಮರೆತರು. ಕೃಷ್ಣರಾಯರು ಹಚ್ಚಿಸಿದ ಈ ದೀಪ ಉಜ್ವಲವಾಗಿ ಬೆಳಗಲು ಊರವರು ಈಗ ನೆರವಾಗಬೇಕು.

ತಾನು ಕುಂದಾಪುರ ಕಡೆಯವನೆಂದು ಹೇಳಿಕೊಳ್ಳುವವನೊಬ್ಬನು ಒಂದೆರಡು ವಾರ ಇಲ್ಲಿ ಗಡಿಯಾರಗಳನ್ನು ಸಂಪಡಿಸಿ ಕೊಡುವ ವ್ಯವಸಾಯ ನಡಿಸಿದ್ದನು. ಅವನ ಅಡಂಬರಕ್ಕೆ ಮರುಳಾಗಿ ಕೆಲವು ಜನರು ವಿಶ್ವಾಸದಿಂದ ತಮ್ಮ ಭಾರಿ ಬೆಲೆಯ ಗಡಿಯಾರಗಳನ್ನು ಅವನ ವಶೆಗೆ ಕೊಟ್ಟಿದ್ದರು. ಒಂದಿನ ರಾತ್ರಿ ಅವನು ತನ್ನ ಬಾಡಿಗೆಯ ಅಂಗಡಿಗೆ ಬೀಗಹಾಕಿ ಆ ಗಡಿಯಾರಗಳೊಂದಿಗೆ ಫರಾರಿಯಾಗಿದ್ದಾನೆ!

ಕಾರವಾರ— (ತಾ॥ ೬-೯-೪೧) ಕಾರವಾರ ಮ್ಯುನಿಸಿಪಾಲಿಟಿಯ ತ್ರೈವಾರ್ಷಿಕ ಚುನಾವಣೆಯು ಕಳೆದ ಸೋಮವಾರ ನಡೆದು, ಮಂಗಳವಾರ ಮತಗಣನೆಯಾಗಿ ಚುನಾವಣೆಯ ಪರಿಣಾಮ ಜಾಹೀರಪಡಿಸಲ್ಪಟ್ಟಿತು. ಈ ಕೆಳಗಿನವರು ಆಯಾ ವಾರ್ಡುಗಳಿಗೆ ಆರಿಸಿ ಬಂದಿದ್ದಾರೆ:--

೧ನೇ ವಾರ್ಡಿಗೆ-- (೧) ರಾ॥ ಭವಾನೀಶಂಕರ ಮಾವಿನಕುರ್ವೆ ವಕೀಲ, (೨) ರಾ॥ ವೆಂಕಟೇಶ ಆರ್. ಪಾಟೀಲ ಮತ್ತು (೩) ಮಿಸೆಸ್ ನೆಲ್ಲಿ ಡಿಸೋಜಾ. ೨ನೇ ವಾರ್ಡಿಗೆ— (೧) ರಾ॥ ದತ್ತಾ ಸುಬ್ಬ ನಾಯ್ಕ, (೨) ರಾ॥ ಎಸ್. ಎಮ್. ಶಾಯಕಿಣಿ ವಕೀಲ ಮತ್ತು (೩) ರಾ॥ ಮಾಧವ ಜಿ. ಕಸದೇಕರ ವಕೀಲ. ೩ನೇ ವಾರ್ಡಿಗೆ— (೧) ರಾ॥ ಯಶವಂತ ವಿಟ್ಠಲ ಶೇಟ್ಯೆ, (೨) ರಾ॥ ಪದ್ಮನಾಭ ಪಿ. ಸಾವಕಾರ ಮತ್ತು (೩) ರಾ॥ ಡಿ. ಬಿ. ನಾಡಕರ್ಣಿ. ೪ನೇ ವಾರ್ಡಿಗೆ— (೧) ರಾ॥ ಸಾ॥ ಕೇಲಂಗ (೨) ರಾ॥ ಗಣೇಶ ಮಾಸೂರ ಮತ್ತು (೩) ಮಿ॥ ವಿಲಿಯಮ್ ಡಿಸೋಜಾ (ಕ್ರಿಶ್ಚನ್ನರ ಬಗ್ಗಾಗಿ ಕಾದಿಟ್ಟ ಸ್ಥಳಕ್ಕೆ). ೫ನೇ ವಾರ್ಡಿಗೆ— (೧) ರಾ॥ ಕೇ. ಪಿ. ಮೇತ್ರಿ (೨) ರಾ॥ ಲಕ್ಷ್ಮಣ ಸಾಳಗಾಂವಕರ ಮತ್ತು (೩) ರಾ॥ ನಾರಾಯಣ ಅನು ಕಾಮತ. ೬ನೇ ವಾರ್ಡಿಗೆ— (೧) ರಾ॥ ವಿಷ್ಣು ಬೋರಕರ (೨) ಮಿ॥ ಕಾಮಿಲ ಬಸ್ತ್ಯಾಂವ ಅಲ್ಫಾನ್ಸೋ (ಕ್ರಿಶ್ಚನ್ನರ ಬಗ್ಗೆ ಕಾದಿಟ್ಟ ಸ್ಥಳಕ್ಕೆ) ಮತ್ತು (೩) ರಾ॥ ವಿಷ್ಣು ಬಂಟಣಕರ (ಹರಿಜನರ ಬಗ್ಗೆ ಕಾದಿಟ್ಟ ಸ್ಥಳಕ್ಕೆ). ೭ ನೇ ಮುಸಲ್ಮಾನ ವಾರ್ಡಿಗೆ— (೧) ಮಿ॥ ಅಬ್ದುಲ್ಲ ಲತೀಫ ಖಾದಿ ಮುಲ್ಲಾ (೨) ಮಿ॥ ಅಹಮದಖಾನ. ಹೆಂಗಸರ ಬಗ್ಗೆ ಕಾದಿಟ್ಟ ಸ್ಥಳಕ್ಕೆ— ಮಿಸೆಸ್ ಕೊಯೆಲ್ಹೋ.

ಈ ಚುನಾವಣೆಯಲ್ಲಿ ನಮೂದಿಸತಕ್ಕಂಥ ಕೆಲವು ಸಂಗತಿಗಳಿವೆ. (೧) ಕ್ರಿಶ್ಚನ್ನರ ಬಗ್ಗಾಗಿ ಕಾದಿಟ್ಟ ೨ ಸ್ಥಳಗಳಿಗೆ ಆರಿಸಿ ಬಂದ ಜನರ ವಿನಹ ಇನ್ನಿಬ್ಬ ಹುರಿಯಾಳುಗಳು ನಿಂತಿದ್ದರು. ಅವರು ಸೋತದ್ದು ಒಳಿತಾಯಿತು, ಇಲ್ಲದಿದ್ದರೆ ಚುನಾವಣೆಯ ತಕ್ರಾರುಗಳು ಏಳಲಿಕ್ಕೆ ಕಾರಣವುಂಟಾಗುತ್ತಿತ್ತು. ಯಾಕಂದರೆ ಸೋತು ಹೋದ ಹುರಿಯಾಳುಗಳು ಹಿಂದೆ ಸರಕಾರಿ ನೌಕರಿಯಲ್ಲಿದ್ದಾಗ ತಾವು "ಎಂಗ್ಲೋ-ಇಂಡಿಯನ್ನ"ರೆಂದು ಅನ್ನಿಸಿಕೊಳ್ಳುತ್ತಿದ್ದರು. ಮ್ಯುನಿಸಿಪಲ್ ಕಾಯಿದೆಯಂತೆ "ಎಂಗ್ಲೋ-ಇಂಡಿಯನ್ನ"ರು ಕ್ರಿಶ್ಚನ್ನ ಸದರಿನಲ್ಲಿ ಬರುವದಿಲ್ಲ. ಈ ತಕ್ರಾರು ಮುಂದೆ ಬಂದು ಗೊಂದಲವಾಗುತ್ತಿತ್ತು. (೨) ೪ನೇ ವಾರ್ಡಿನಲ್ಲಿ ಮಿ॥ ವಿಲಿಯಮ್ ಡಿಸೋಜಾರವರಿಗೂ ಅವರ ಪ್ರತಿಸ್ಪರ್ಧಿ ಮಿ॥ ರುಜಾರಿಯೋರವರಿಗೂ ತುರಸಿನ ತಿಕ್ಕಾಟವಾಯಿತು. ಡಿಸೋಜಾರವರಿಗೆ ೧೪೦ ಮತಗಳು ಬಿದ್ದರೆ ರುಜಾರಿಯೋರವರಿಗೆ ೧೩೯ ಮತಗಳು ಬಿದ್ದಿದ್ದವು. ಎರಡು ಮತಗಳಿಂದ ಡಿಸೋಜಾರವರು ಗೆದ್ದರು! ೧ನೇ ವಾರ್ಡಿನಲ್ಲಿ ನಿಂತ ಮಿಸೆಸ್ ಡಿಸೋಜಾರವರೂ ಒಂದೇ ಒಂದು ಮತದಿಂದ ನಾಲ್ಕನೇ ಹುರಿಯಾಳುವನ್ನು ಸೋಲಿಸಿದ್ದಾರೆ! (೩) ಸರ್ವಸಾಮಾನ್ಯ ಸ್ಥಳಗಳ ಚುನಾವಣೆಗೆ ನಿಂತು ಆರಿಸಿ ಬಂದ ಮೊದಲನೇ ಸ್ತ್ರೀಯು ಮಿಸೆಸ್ ನೆಲ್ಲಿ ಡಿಸೋಜಾರವರೇ. (೪) ಕ್ರಿಶ್ಚನ್ನರು ಅಲ್ಪಸಂಖ್ಯಾಕರೆಂದು ಅವರಿಗೆ ಈ ಮ್ಯು॥ಯಲ್ಲಿ ಎರಡು ಸ್ಥಳಗಳು ಕಾದಿಡಲ್ಪಟ್ಟಿವೆ. ಆದರೆ ಈ ವರ್ಷದ ಚುನಾವಣೆಯಲ್ಲಿ ಕಾದಿಟ್ಟ ೨ ಸ್ಥಳಗಳನ್ನಲ್ಲದೆ ಕ್ರಿಶ್ಚನ್ನ ಬಂಧುಗಳು ಸ್ತ್ರೀಸಮಾಜಕ್ಕಾಗಿ ಕಾದಿಟ್ಟ ಸ್ಥಳವನ್ನು ೧ನೇ ವಾರ್ಡಿನಲ್ಲಿ ೧ ಸರ್ವಸಾಮಾನ್ಯ ಸ್ಥಳವನ್ನೂ ಆಕ್ರಮಿಸಿಕೊಂಡಿದ್ದಾರೆ. (೫) ಮಿಸೆಸ್ ನೆಲ್ಲಿ ಡಿಸೋಜಾ ಹಾಗೂ ಮಿ॥ ವಿಲಿಯಮ್ ಡಿಸೋಜಾ ಹೀಗೆ ಗಂಡ-ಹೆಂಡರಿಬ್ಬರೂ ಮ್ಯುನಿಸಿಪಾಲಿಟಿಯಲ್ಲಿ ಆರಿಸಿ ಬಂದದ್ದು ಕಾರವಾರ ಮ್ಯುನಿಸಿಪಾಲಿಟಿಯ ಇತಿಹಾಸದಲ್ಲಿ ಇದೇ ಮೊದಲು.

ಧಾರವಾಡ ಕೆನರಾ ಮೋಟರ

ಯೂನಿಯನ್, ಹುಬ್ಬಳ್ಳಿ.

ಹುಬ್ಬಳ್ಳಿಯಿಂದ ಗೋಕರ್ಣ ಮಹಾ ಕ್ಷೇತ್ರಕ್ಕೆ ಪೂಜಾ-ವಿಧಿಗಳನ್ನು ಮುಗಿಸಿ ನಿಯಮಿತ ವೇಳೆಗೆ ತಿರುಗಿ ಬರಲು ಇದೊಂದೇ ಉತ್ಕೃಷ್ಟ ಮೋಟರ ಸರ್ವಿಸ್.

ಹುಬ್ಬಳ್ಳಿಯಿಂದ ಬಿಡುವ ವೇಳೆ ಬೆಳಗ್ಗೆ ೭ ಘಂಟೆಗೆ
ಗೋಕರ್ಣಕ್ಷೇತ್ರ ತಲ್ಪುವ ವೇಳೆ ಮಧ್ಯಾಹ್ನ ೨-೩೦ ಘಂ
ಗೋಕರ್ಣ ಬಿಡುವ ವೇಳೆ ಬೆಳಗ್ಗೆ ೧೧-೪೫ ಘಂ
ಹುಬ್ಬಳ್ಳಿ ತಲ್ಪುವ ವೇಳೆ ಸಾಯಂಕಾಲ ೭-೫ ಘಂ

ವ್ಯವಸ್ಥಾಪಕ,
ಧಾರವಾಡ ಕೆನರಾ ಮೋಟರ
ಯೂನಿಯನ್, ಹುಬ್ಬಳ್ಳಿ

ಸಹ್ಯಾದ್ರಿ ಫಾರ್ಮಸಿ
ಕುಮಟಾ.

ಬಾಳಂತಿಯರಿಗೆ— ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ ಮತ್ತು ಧನ್ವಂತರಿ ಗುಳಿಗೆ- ಒಳ್ಳೇ ಉಪಯುಕ್ತವಾದವು!

ಚಿಕ್ಕ ಮಕ್ಕಳ ಜಂತುವಿನ ಬಾಧೆಗೂ ಪುಷ್ಟಿಯಾಗಲಿಕ್ಕೂ ಸಾಯರಪ್ ಕುಟಜಾ ಒಂದೇ ದಿವ್ಯವಾದ ಔಷಧವು!

ನಾಯಿ-ಕೆಮ್ಮಿಗೆ ಎಂಟೇ ದಿವಸಗಳಲ್ಲಿ ಗುಣಪಡಿಸುವ ಕಫನಾಶಕವು

ಯಾವತ್ತೂ ಪ್ರಕಾರಗಳ
ಕಷಾಯ, ಅರಿಷ್ಟ, ಆಸವ,
ತೈಲಾದಿ ಔಷಧ ಸಾಮುಗ್ರಿಗಳು
ಸದಾ ಸಿಗುತ್ತವೆ

ಡಾ॥ ಎಸ್. ಕೇ. ಭಟ್ಟ,
ಹಳ್ಕಾರ, ಕುಮಟಾ.

ಹೈಸ್ಕೂಲುಗಳಿಗೆ ಬೇಕಾಗುವ ಎಲ್ಲ ತರದ
ಇಂಗ್ಲಿಷ ಸಂಸ್ಕೃತ-ಕನ್ನಡ-ಮರಾಠಿ
ಪುಸ್ತಕಗಳು ನಮ್ಮಲ್ಲಿ ಸಿಗುತ್ತವೆ

ನಿಮಗೆ ಬೇಕಾಗುವ ಪುಸ್ತಕಗಳನ್ನು ಇಂದೇ ಕೊಂಡುಕೊಳ್ಳಿ
ವಿಳಂಬ ಮಾಡಿದಲ್ಲಿ —ನಿರಾಶರಾಗಬೇಕಾದೀತು

ಪ್ರಾಥಮಿಕ ಶಾಲೆಗಳಿಗೆ ಬೇಕಾಗುವ ಎಲ್ಲಾ ಕನ್ನಡ ಮರಾಠಿ ಪುಸ್ತಕಗಳೂ ನಮ್ಮಲ್ಲೇ ದೊರೆಯುವವು ನಿಮಗೆ ಯಾವ ಪುಸ್ತಕ ಬೇಕಾದರೂ ನಮ್ಮಲ್ಲಿ ವಿಚಾರಿಸಿರಿ

ದಿ ಗ್ರ್ಯಾ ಸಪ್ಲಾಯ ಏಜನ್ಸಿ, ಕುಮಟಾ

ಮಳೆಗಾಲದಲ್ಲಿ ಬೇಗನೆ ಉಪಾಯ ಮಾಡಿರಿ!

ಮಹಾಮಾರಿಯ ಬೇನೆ ಸುರುವಿದ್ದಾಗ ಪ್ರತಿಬಂಧಕ **(Preventive)**
ವೆಂದು ಮತ್ತು ಮಹಾಮಾರೀ ಪಟಕೀ ಕಾಲರಾ **(Cholera)**
ಬಂದಾಗ ಮೊಟ್ಟಮೊದಲು (ಅನ್ನ ಬೀಳುವ ವರೆಗೆ)
ಕೊಡಲಿಕ್ಕೆ ಅಪ್ರತಿಮವಾದದ್ದೆಂದರೆ-

ಲಶುನಾದಿ ಗುಟಿಕಾ.

ಈ ಔಷಧದಿಂದ ಅವಷ್ಟಂಭ ಇದೆ ಹೊಟ್ಟೆಯುಬ್ಬದೆ ದೀಪನ ಪಚನ ಮತ್ತು ಮಲ ಶೋಧನವಾಗಿ ಮಲ ನಿಲ್ಲಿಸುವದು ಗಟ್ಟಿಯಾಗುವದು ಇಲ್ಲವೆ ಕಾಯಿಲೆ ಚನ್ನಾಗಿ ಆಗುವದು ಇದರ ಅನುಭವವನ್ನು ಅನೇಕ ಡಾಕ್ಟರರೂ ವೈದ್ಯರೂ ತಗೆದುಕೊಂಡಿರುವರು ಅಜೀರ್ಣದ ಜುಲಾಬ ಹೊಟ್ಟೆ ಉಬ್ಬುವದು ವೇಗದಿಂದ ಹೊಟ್ಟೆಯಲ್ಲಿ ನೋವಾಗುವದು, ಅಗ್ನಿಮಾಂದ್ಯ ಮತ್ತು ವಾತವಿಕಾರ ಈ ಪೀಡೆಗಳ ಮೇಲೆ ಈ ಗುಳಿಗೆಗಳು ಒಳ್ಳೇ ಗುಣಕಾರಿಯಾಗುವವು ಎಂದು ಪೂರ್ಣ ಅನುಭವವಿದೆ

ದತ್ತಾತ್ರೇಯ ಕೃಷ್ಣ ಸಾಂಡೂ ಬ್ರದರ್ಸ
ಚೆಂಬೂರ ಲಿ.

ಆಯುರೌಷಧಿ ಕಾರಖಾನೆ, ಚೆಂಬೂರ-ಮುಂಬಯಿ
ಕರ್ನಾಟಕ ಶಾಖೆ:— ಹುಬ್ಬಳ್ಳಿ

ಚಕ್ರಬಿಂದು
ಮಕ್ಕಳ ಮರಣವನ್ನು ತಪ್ಪಿಸುವದು.

ಏಜನ್ಸಿ ಕಲಕತ್ತಾ, ಮುಂಬಯಿ ಮದ್ರಾಸ, ಬೆಂಗಳೂರು ಮಂಗಳೂರು

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆದೊಡ್ಡಾಗುವಿಕೆ ಹಸುರು ನರಗಳು, ಕಾಮಿಲೆ
ಗಡ್ಡೆರೋಗ ಕೋವೆ ರೋಗ, ಮೈ-ಕೈ ಬಾವುಗಳಿಗೆ ದಿವ್ಯೌಷಧ!

೧ ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3



ಏತಕ್ಕೆ ಚಿಂತಿಸುವಿರಿ?

ಆಸೇತುಹಿಮಾಚಲದ ವರೆಗೂ ೪೩ ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ ವ್ಯಾಧಿಗಳಿಗೆ ಇದೊಂದೇ [illegible] ಔಷಧವಾಗಿದೆ

ಡಾ। ಪಿ ಎನ್ ಶ್ರೀನಿವಾಸರಾವ,
ಲಿವ್ಹರ್ ಸ್ಪೆಶಲಿಷ
ಎಂ ಪಿ ಪ್ರಾಸಾದಿಕ ಔಷಧಾಲಯ,
ಶಿವಮೊಗ್ಗಾ

☞ ಇವರಲ್ಲಿ ವಿಚಾರಿಸಿರಿ

ಶಿರ್ಸಿ ಏಜಂಟ —
ಸುಬ್ರಾಯ ಸೀತಾರಾಮ ಹೆಗಡೆ
ಕುಮಟಾ ಏಜಂಟ
ದೇವಪ್ಪಾ ಅಯ್ಯು ನಾಯ್ಕ

ಇದನ್ನು ಪಾಂಡುರಂಗ ಕೃಷ್ಣ ನಾಯಕ (ಸಂಪಾದಕ) ಇವರು ಕನ್ನಡ ಸ್ಟಾರ ಆಫ್ ಕೆನರಾ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B 1270.

Monday, 15th September, 1941.

ವರ್ಷ ೨೪

ಕಾನಡಾವೃತ್ತ

THE KANARA NEWS

ಸಂಚಿಕೆ ೧೧

ಪತ್ರದ ವರ್ಗಣಿ

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0
ಮನಿಯಸಾರ್ಡರಿನಿಂದ
ರೂ. 3-1-0
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-4-0
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ
ಕನ್ನಡ, ಇಂಗ್ಲಿಷ ಸ್ಮಾಲ ಪೈಕಾ ಟೈಪಿನ (೧೫ ಎಮ್ ಅಗಲ)
೮ ಸಾಲುಗಳವರೆಗೆ ರೂ. 1-8-0
ಆ ನಂತ್ರ ಪ್ರತಿಸಾಲಿಗೆ 0-3-0
ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಖಾಸ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ಠರಾಯಿಸಲ್ಪಡುವದು.

(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೫ ಮಾಹೆ ಸಪ್ಟಂಬರ ಸನ್ ೧೯೪೧ನೇ ಇಸವಿ)-

ಮಕ್ಕಳಿಗೆ--

ಕೈಗಾಲದಲ್ಲಿ

ಶೀತ, ನೆಗಡಿ, ಕೆಮ್ಮು, ಅಪಚನ ಮುಂತಾದ ವಿಕಾರಗಳು ಖಂಡಿತವಾಗಿ ಆಗುತ್ತವೆ.

"ಕುಮಾರಿ ಆಸವ ನಂ ೩"

ಇದು ಮೇಲಿನ ವಿಕಾರಗಳಿಗೆ ಶ್ರೇಷ್ಠವಾದ ಔಷಧವು.

ಶ್ರೀ ಧೂತಪಾಪೇಶ್ವರ ಪನವೇಲ, ಲಿ.,

ಕರ್ನಾಟಕ ಕೇಂದ್ರ- ಯುನ್ಯಾಟೆಡ್ ಏಜನ್ಸೀಜ, ಹುಬ್ಬಳ್ಳಿ.

ಕಾರವಾರ — ಮೆಸರ್ಸ ಮುಜುಮದಾರ-ಕಕಬೇಕರ ಬ್ರದರ್ಸ
ಅಂಕೋಲಾ:— ದಿ ಸ್ಟೇಶನರಿ ಡಿಪೋ
ಕುಮಟಾ:— ದೇವಪ್ಪಾ ಅಯ್ಯು ನಾಯ್ಕ.
ಹೊನ್ನಾವರ— ಮೆಸರ್ಸ ಕಲ್ಯಾಣಪುರ ಬ್ರದರ್ಸ.
ಶಿರ್ಶಿ:—{ ಶಿರ್ಶಿ ಡ್ರಗ್ ಸ್ಟೋರ್ಸ
ಎಸ್. ಎಲ್ ಥಾಕಪ್ಪಾ ಎಂಡ್ ಸನ್ಸ
ಸಿದ್ದಾಪುರ — ಮೆಸರ್ಸ ಶಾಮಯ್ಯನ ಬ್ರದರ್ಸ

"ಸ್ಟಾರ ಆಫ್ ಕೆನರಾ ಪ್ರೆಸ್",

ಕುಮಟಾ.

—*—

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಯಿಂದ ಬೇಕಾದ ನಮೂನೆಯ ಕಲರ ಪ್ರಿಂಟಿಂಗ ವಗೈರೆ ಸಣ್ಣ ದೊಡ್ಡ ಛಾಪಾ ಕೆಲಸಗಳೂ, ಪುಸ್ತಕ ಮುದ್ರಣವೂ, ರೂಲಿಂಗ ಬ್ಯಾಂಡಿಂಗ ಕೆಲಸವೂ ಉತ್ತಮವಾಗಿ ಸುಲಭ ದರದಲ್ಲಿ ತಕ್ಕ ಕಾಲಕ್ಕೆ ತಯಾರಿಸಿ ಕೊಡಲಾಗುವದು

ಇದಲ್ಲದೆ ಕೋರ್ಟ ಕಚೇರಿ ಉಪಯೋಗದ ಮಾಮಲತ ವಗೈರೆ ಫಾರ್ಮುಗಳೂ, ಕಸ್ಟಮ್ ಕಚೇರಿಯ ಶಿಪ್ಪಿಂಗ ಬೀಲು ಸತ್ಕಿ ವಗೈರೆ ಫಾರ್ಮುಗಳೂ, ಗೇಣಿ ರಶೀದಿ ಬೂಕು, ಗೇಣಿಚೀಟಿ ಎದುರ್ನಾಡಿ ಫಾರ್ಮುಗಳೂ ವಗೈರೆ ಮಾರಾಟಕ್ಕೆ ತಯಾರ ಸಿಗುತ್ತವೆ

ನಿಮ್ಮ ಛಾಪಾ ಕೆಲಸಗಳನ್ನು ನಮ್ಮಲ್ಲಿಗೇ ಕಳಿಸಿರಿ ಒಮ್ಮೆ ಅನುಭವ ತಕ್ಕೊಂಡು ನೋಡಿರಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ಹೆಡ್ ಆಫೀಸು — **ಕುಂದಾಪುರ.**

ಬ್ರೆಂಚ ಆಫೀಸುಗಳು ... **ಅಂಕೋಲಾ, ಕುಂದಾಪುರ, ಬೈಂದೂರು, ಕೋಟೇಶ್ವರ, ಕುಮಟಾ, ಗೋಕರ್ಣ, ಕಾರವಾರ, ಹಾವೇರಿ, ಶಿವಮೊಗ್ಗಾ, ತರೀಕೆರೆ, ನಗರ, ಸೋಮವಾರಪೇಟೆ** ಮತ್ತು **ವೀರರಾಜಪೇಟೆ**

ಕಾಯಂ ಠೇವುಗಳು:- **3** ತಿಂಗಳಿಗೆ ಶೇ ರೂ **3**ರಲ್ಲಿ, **6** ತಿಂಗಳಿಗೆ ಶೇ 3^1ರಲ್ಲಿ, ೧ ವರ್ಷಕ್ಕೆ ರೂ **4**ರಲ್ಲಿ,
2 ವರ್ಷ ಯಾ ಹೆಚ್ಚಿನ ಅವಧಿಗೆ ಶೇ 4^1ರಲ್ಲಿ

ಸೇವಿಂಗ್ಸ ಬೇಂಕ್ ಠೇವುಗಳು ಮತ್ತು ಚಾಲು ಠೇವುಗಳು ಸಹ ಅಂಗೀಕರಿಸಲ್ಪಡುವವು

ಭಂಗಾರದ ದಾಗಿನೆಗಳ ವ ಇತರ ವ್ಯಾಪಾರದ ಮ್ಹಾಲುಗಳ ಆಡವಿನ ಮೇಲೆ ಸವಲತ್ತಿನ ದರದ ಬಡ್ಡಿಯಲ್ಲಿ ಸಾಲ ಕೊಡಲ್ಪಡುವದು

ವ್ಯಾಪಾರದ ಕೇಂದ್ರಗಳಿಗೆ ಡ್ರಾಫ್ಟುಗಳು, ಚಕ್ಕುಗಳು ಸಹ ಕೊಡಲ್ಪಡುವವು ಎಲ್ಲ ತರದ ಬೇಂಕಿನ ವ್ಯವಹಾರಗಳು ಸವಲತ್ತಿನ ದರದಿಂದ ನಡಿಸಲ್ಪಡುವವು

ಕುಂದಾಪುರ
1-9-1941 }

The Agricultural & Industrial Bank Ltd

ವಾರ್ತೆಗಳು.

— ಮುಸ್ಲಿಮ ಲೀಗಿನ ಸದಸ್ಯರು ಲೀಗಿನ ಕಾರ್ಯಕಾರಿ ಮಂಡಳದ ನಿರ್ಣಯವನ್ನು ಉಪೇಕ್ಷಿಸಿ ಸರ್ವಾಧಿಪತಿಗಳ ವಿಸ್ತರಿಸಿದ ಕಾರ್ಯಕಾರಿ ಮಂಡಳದಲ್ಲೂ ರಾಷ್ಟ್ರ ಸಂರಕ್ಷಣೆ ಸಲಹೆ ಸಮಿತಿಯಲ್ಲೂ ಸೇರಲೊಪ್ಪಿದ್ದು ಘೋರ ಅಪರಾಧವೆಂದು ಲೀಗಿನ ಸರ್ವಾಧಿಕಾರಿ ಅಧ್ಯಕ್ಷರಾದ ಬೆ| ಜಿನ್ನಾರವರು ಅಭಿಪ್ರಾಯ ವ್ಯಕ್ತಗೊಳಿಸಿ, ಹಾಗೆ ಅಪರಾಧ ಮಾಡಿದ ಸದಸ್ಯರು ಸರ್ವಾಧಿಪತಿಗಳ ಕಾರ್ಯಕಾರಿ ಮಂಡಳಕ್ಕೂ ಸಂರಕ್ಷಣೆ ಸಮಿತಿಗೂ ರಾಜೀನಾಮೆಗಳನ್ನು ಕೊಡದಿದ್ದಲ್ಲಿ ಅವರವರು ಶಿಸ್ತುಭಂಗದ ಕ್ರಮ ತೆಗೆದು ತೆಗೆದುಕೊಳ್ಳಲಾಗುವದೆಂದು ಬೆದರಿಕೆ ಹಾಕಿದ್ದರಷ್ಟೇ? ಸರ್ ಸಿಕಂದರ ಹಯಾತಖಾನ, ನಾ| ಫಜಲುಲ್ ಹಕ್ಕ ಮೊದಲಾದವರು ಎಷ್ಟೇ ಪ್ರಯತ್ನ ಪಟ್ಟಾಗ್ಯೂ ಬೆ| ಜಿನ್ನಾರವರು ತಮ್ಮ ನಿರ್ಣಯವನ್ನು ಬದಲಿಸಲಿಲ್ಲ! ಲೀಗಿನ ಕಾರ್ಯಕಾರಿ ಮಂಡಳದವರೂ ಬೆ| ಜಿನ್ನಾರವರನ್ನೇ ಅನುಮೋದಿಸಿದರು. ಕೊನೆಗೆ ನಿರ್ವಾಹವಿಲ್ಲದೆ ಸರ್ ಸಿಕಂದರ ಹಯಾತಖಾನರೂ ಅಸ್ಸಾಂ ಪ್ರಾಂತದ ಮುಖ್ಯಮಂತ್ರಿಗಳ ಸರ್ ಸಾದುಲ್ಲಾ ಸಾಹೇಬರವರೂ ಸಂರಕ್ಷಣೆ ಸಮಿತಿಯ ಸದಸ್ಯತ್ವಕ್ಕೆ ರಾಜೀನಾಮೆಯಿತ್ತು ಲೀಗಿನ ಮರ್ಯಾದೆ ಕಾಯ್ದರು. ಆದರೆ ನಾ| ಫಜಲುಲ್ ಹಕ್ಕರವರು ಬೆ| ಜಿನ್ನಾರವರ ಅಪ್ಪಣೆಯಂತೆ ಇತ್ತ ಸಂರಕ್ಷಣ ಸಮಿತಿಗೆ ರಾಜೀನಾಮೆಯಿತ್ತಿದ್ದರೂ, ಅತ್ತ ಬೆ| ಜಿನ್ನಾರ ನಿರಂಕುಶ ಸರ್ವಾಧಿಕಾರಿತ್ವವನ್ನು ನಿಷೇಧಿಸುವದಕ್ಕಾಗಿ ಲೀಗಿನ ಕಾರ್ಯಕಾರಿ ಮಂಡಳದ ಸದಸ್ಯತನಕ್ಕೂ ಲೀಗಿನ ಪ್ರಾಥಮಿಕ ಸಭಾಸದತ್ವಕ್ಕೂ ಕೂಡ ರಾಜೀನಾಮೆಯನ್ನಿತ್ತಿದ್ದಾರೆ. ಮತ್ತು ತಮ್ಮ ನಡತೆಯ ಸಮರ್ಥನೆ ಮಾಡಬಲ್ಲ ಉದ್ದವಾದ ಒಂದು ಪ್ರಕಟಣೆಯನ್ನು ಹೊರಡಿಸಿ, ಮುಸಲ್ಮಾನರು ಅಲ್ಪಸಂಖ್ಯಾಕರಿರುವ ಪ್ರಾಂತಗಳೊಳಗಿನ ಮುಸಲ್ಮಾನರಿಗೂ ಮುಸಲ್ಮಾನ ಮತ್ತು ಹಿಂದರಿಗೂ ಮುಸಲ್ಮಾನರ ಪ್ರಾಬಲ್ಯವಿರುವ ಬಂಗಾಲ ಮತ್ತು ಪಂಜಾಬ ಪ್ರಾಂತಗಳ ಪರಿಸ್ಥಿತಿಯು ಭಿನ್ನವೆ ಮುಸಲ್ಮಾನರ ಪ್ರತಿಷ್ಠೆ–ಆತ್ಮವಿಶ್ವಾಸಗಳ ಅಪೇಕ್ಷಿತವೆಂದೂ ಅರಿವಾಗದೆಂದೂ, ಸಮಗ್ರ ಭಾರತಕ್ಕೆ ಅನ್ವಯಿಸುವಂಥ ಒಂದೇ ಧೋರಣೆಯನ್ನು ಲೀಗಿನ ಮುಖಂಡರು ಅನುಸರಿಸಬಾರದೆಂದು ತಾವು ಹಲವಾರಿಯಿಂದ ತಿಳಿಸಿ ಹೇಳಿದಾಗ್ಯೂ ಮುಸ್ಲಿಮ ಲೀಗಿನ ಸ್ವಯಂಘೋಷಿತ ಸರ್ವಾಧಿಕಾರಿ ಅಧ್ಯಕ್ಷರೂ ಅವರ ಅನುಯಾಯಿಗಳೂ ಕಿವಿಗೊಡುವದಿಲ್ಲವೆಂದೂ, ಇಂಥ ನಿರಂಕುಶ ವರ್ತನೆಯಿಂದ ಲೀಗಿನ ಪ್ರಮುಖರು ಮುಸಲ್ಮಾನ ಸಮಾಜದ ಹಿತಸಂಬಂಧಗಳನ್ನು ಗಂಡಾಂತರದಲ್ಲಿ ನೂಕುತ್ತಿರುವರೆಂದೂ, ಅವರು ಸಕಾಲದಲ್ಲಿ ಎಚ್ಚತ್ತು ಸದ್ದಾರಿಗೆ ಬರದಿದ್ದಲ್ಲಿ ತಾವು ಲೀಗಿನ ಪ್ರಮುಖರ ವಿರುದ್ಧ ಬಂಡಾಯವನ್ನೇ ಎಬ್ಬಿಸುವೆನೆಂದೂ ಸ್ಪಷ್ಟೀಕರಿಸಿದ್ದಾರೆ. ನಾ| ಹಕ್ಕರ ಈ ಪ್ರಕಟನೆಯಿಂದ ಬೆ| ಜಿನ್ನಾರವರಿಗೆ ಒಳ್ಳೇ ಪೆಟ್ಟು ಕೊಟ್ಟಂತಾಗಿದೆ! ಆದರೂ ನಾ| ಹಕ್ಕರ. ಈಗ ವಿರೋಧಕರಿಗೆ ಈ ಸ್ಫೋಟಕ ಉದ್ಗಾರಗಳನ್ನು ತೆಗೆದರೂ ಮುಂದೆ ಶಾಂತ ರೀತಿಯಿಂದ ವಿಚಾರ ಮಾಡಿ ತಮ್ಮ ಉದ್ಗಾರಗಳ ಬಗ್ಗೆ ಪಶ್ಚಾತ್ತಾಪ ಪಡದೆ ಇರಲಾರರೆಂದು ಬೆ| ಜಿನ್ನಾರವರು ತಮ್ಮಷ್ಟಕ್ಕೆ ತಾವೇ ಸಮಾಧಾನ ಮಾಡಿಕೊಂಡಿರುತ್ತಾರೆ! ಸಂರಕ್ಷಣೆ-ಸಲಹೆ ಸಮಿತಿಯಲ್ಲಿ ಲೀಗಿಗೊಪ್ಪಿದ ಸದಸ್ಯರಾದ ಬೇಗಮ ಶಹಾ ನವಾಜ ಇವರು ತಮ್ಮ ಸಭಾಸದತ್ವಕ್ಕೆ ರಾಜೀನಾಮೆ ಕೊಡಲು ನಿರಾಕರಿಸಿದ್ದಾರೆ. ಭಾರತೀಯ ಸ್ತ್ರೀ-ಸಮಾಜದ ಒಟ್ಟ್ಯಂಟಿಗ ಪ್ರತಿನಿಧಿಯಾಗಿ ತಾವು ಸಮಿತಿಗೆ ಆರಿಸಲ್ಪಟ್ಟಿರುವದರಿಂದ ಸ್ತ್ರೀ-ಸಮಾಜದ ಹಿತಘಾತವಾಗುವಂತೆ ತಾವು ನಡೆಯಲಾರೆವೆಂತಲೂ, ಲೀಗಿನ ಪ್ರಮುಖರು ಈ ವರೆಗೆ ಸ್ತ್ರೀಯರ ಏಳಿಗೆಗಾಗಿ ಏನೂ ಪ್ರಯತ್ನಿಸಿಲ್ಲೆಂತಲೂ, ಸಂರಕ್ಷಣೆಯ ಕಾರ್ಯದಲ್ಲಿ ಸೇರಿ ಸ್ತ್ರೀಯರ ವಿಶಾಲ ಹಕ್ಕುಗಳಿಗಾಗಿ ಹೆಣಗಾಡಲು ದೊರೆತ ಈ ಸುಸಂಧಿಯನ್ನು ತಾವು ಕಳೆದುಕೊಳ್ಳಲಾರೆವೆಂದೂ ಬೆ|| ಜಿನ್ನಾರವರಿಗೆ ಬಿಸಿ ಬಿಸಿ ಉತ್ತರವನ್ನೂ ಕೊಟ್ಟಿದ್ದಾರೆ! ಬೆ| ಜಿನ್ನಾರವರು ಅವರ ಈ ಅಪರಾಧಕ್ಕಾಗಿ ಅವರನ್ನು ಲೀಗದಿಂದ ತಳ್ಳಿಹಾಕಿದ್ದಲ್ಲದೆ ೫ ವರ್ಷಗಳ ಕಾಲ ಅವರು ಲೀಗದ ಸಭಾಸದರಾಗಲು ಅನರ್ಹರೆಂದು ತೀರ್ಮಾನಿಸಿದ್ದಾರೆ! ಹಿಂದುಸ್ಥಾನ ಸರಕಾರದ ವಿಸ್ತಾರಿತ ಕಾರ್ಯಕಾರಿ ಮಂಡಳದಲ್ಲಿ ಹೊಸತಾಗಿ ಮಂತ್ರಿಗಳಾಗಿ ಸೇರಿದ ಸರ್ ಸುಲ್ತಾನ ಅಹಮದರಿಗೂ ಇದೇ ಶಿಕ್ಷೆ ವಿಧಿಸಲ್ಪಟ್ಟಿದೆ! ಇದೀಗ ಸರ್ ಫಿರೋಜಖಾನ ನೂನ ಇವರು ಈ ಕಾರ್ಯಕಾರಿ ಮಂಡಳದಲ್ಲಿ ಸೇರಿದ ಹಾಗೆ ಬೆ|| ಜಿನ್ನಾರವರು ಒಳಗೊಳಗೆ ಪ್ರಯತ್ನ ನಡಿಸಿದ್ದಾರಂತೆ! ವಿಸ್ತಾರಿತ ಕಾರ್ಯಕಾರಿ ಮಂಡಳದಲ್ಲಿ ಪಂಜಾಬದವರೊಬ್ಬರಾದರೂ ಇರುವದವಶ್ಯವೆಂದು ಪ್ರತಿಪಾದನೆ ಮಾಡಿ ಸರ್ ಫಿರೋಜಖಾನ ನೂನರನ್ನು ಸೇರಿಸಿಕೊಳ್ಳಲು ಸರ್ವಾಧಿಪತಿಗಳ ಮನವೊಲಿಸಿದವರ, ಪಂಜಾಬದ ಮುಖ್ಯ ಮಂತ್ರಿಗಳಾದ ಸರ್ ಸಿಕಂದರ ಹಯಾತಖಾನರು ನೂನರಿಗೆ ಪತ್ರ ಬರೆದು ಅವರು ರಾಜೀನಾಮೆ ಕೊಡುವಂತೆ ಯತ್ನಿಸಬೇಕಾಗಿ ಬೆ|| ಜಿನ್ನಾರವರು ಸರ್ ಸಿಕಂದರರಿಗೆ ಒತ್ತಾಯ ಮಾಡುತ್ತಿದ್ದಾರೆಂದು ಸಿಮ್ಲಾದೊಳಗಿಂದ ಸುದ್ದಿ ಬಂದಿದೆ. ಸಂರಕ್ಷಣೆ ಸಮಿತಿಯಲ್ಲಿ ಲೀಗಿನ ಪ್ರಮುಖರ ರಾಜೀನಾಮೆಯಿಂದ ತೆರವಾದ ೪ ಸ್ಥಳಗಳನ್ನು ಸರಕಾರವು ತುಂಬಲಿಕ್ಕಿಲ್ಲವಂತೆ.

— ಹಿಂದುಸ್ಥಾನದ ಹನ್ನೊಂದೂ ಪ್ರಾಂತಗಳಲ್ಲಿ ಮತ್ತು ಬ್ರಹ್ಮದೇಶದಲ್ಲಿ ಪ್ರಾಂತಿಕ ಎಸೆಂಬ್ಲಿಗಳ ಸಾರ್ವತ್ರಿಕ ಚುನಾವಣೆಗಳು ಇದೇ ಬರುವ ಚಳಿಗಾಲದಲ್ಲಿ ಜರುಗಬೇಕಾಗಿದ್ದವಷ್ಟೇ. ಈ ಚುನಾವಣೆಗಳನ್ನು ಈಗ ನಡಿಸಲಿಕ್ಕೆ ಸರಕಾರದವರು ಸಿದ್ಧರಿಲ್ಲ! ಆದರಿಂದ ಅವರು ಯುದ್ಧ ಮುಗಿದು ಒಂದು ವರ್ಷ ಆಗುವವರೆಗೆ ಚುನಾವಣೆಗಳನ್ನು ಮುಂದೂಡುವದಕ್ಕಾಗಿ ಭಾರತಮಂತ್ರಿಗಳು ಬ್ರಿಟಿಶ ಪಾರ್ಲಿಮೆಂಟಿನಲ್ಲಿ ಒಂದು ಮಸೂದೆಯನ್ನು ಮಂಡಿಸಿದ್ದರು. ಈ ಮಸೂದೆ ದೊರೆಗಳ ಸಭೆಯಲ್ಲಿ ಈ ಹಿಂದೆಯೇ ಮಾನ್ಯವಾಗಿ ಕೆಲವು ದಿನಗಳ ಹಿಂದೆ ಕೊಮನ್ಸರ ಸಭೆಗೆ ಬಂದಿತ್ತು. ಕಳೆದ ಬುಧವಾರ ಅಲ್ಲಿ ಮಸೂದೆಯು ೨ನೆಯ ಮತ್ತು ೩ನೆಯ ವಾಚನಗಳಾಗಿ ಅದಕ್ಕೆ ಸಭೆಯ ಸಮ್ಮತಿ-ಮುದ್ರೆ ಒತ್ತಲಾಯಿತು. ಆ ಕಾಲದಲ್ಲಿ ಕೊಮನ್ಸ ಸಭೆಯಲ್ಲಿ ನಡೆದ ಚರ್ಚೆ ಬಹಳ ಉದ್ಬೋಧಕವಿದೆ. ಎಲ್ಲ ಸರಕಾರಿ ಅಧಿಕಾರಿಗಳು ಈಗ ಹಗಲಿರುಳು ಯುದ್ಧ–ಕಾರ್ಯದಲ್ಲಿ ತೊಡಗಿರುವರೆಂದೂ, ಚುನಾವಣೆಗಳನ್ನು ಕೈಕೊಂಡಲ್ಲಿ ಯುದ್ಧಯತ್ನ ಕಾರ್ಯಕ್ಕೆ ತಡೆಯುಂಟಾಗುವದೆಂದೂ, ಅಧಿಕಾರಿಗಳಿಗೆ ಬಹಳ ತೊಂದರೆಯಾಗುವದೆಂದೂ, ಈಗ ದೇಶದಲ್ಲಿ ಹಾವಳಿಯನ್ನೆಬ್ಬಿಸಿರುವ ಜಾತೀಯ ವೈಮನಸ್ಯವು ಚುನಾವಣೆಗಳಾದಲ್ಲಿ ಇನ್ನೂ ಬಹಳ ಉದ್ರೇಕಗೊಳ್ಳುವ ಭೀತಿಯುಂಟೆಂದೂ, ಈಗ ಘಟನಾತ್ಮಕ ಸರಕಾರಗಳಿಲ್ಲದ ೭ ಪ್ರಾಂತಗಳಲ್ಲಿ ಚುನಾವಣೆಗಳಾದ ಮೇಲಾದರೂ ಕೂಡ ಘಟನಾತ್ಮಕ ಸರಕಾರಗಳು ಅಸ್ತಿತ್ವದಲ್ಲಿ ಬರುವ ಆಶೆ ತೋರದಿದ್ದಾಗ ಚುನಾವಣೆಗಳನ್ನು ನಡಿಸುವದೆಂದರೆ ಗಾಳಿಯನ್ನು ಗುದ್ದಿ ಕೈ ನುಗ್ಗು ಮಾಡಿಕೊಂಡಷ್ಟು ಹಾಸ್ಯಾಸ್ಪದವಾಗುವದೆಂದೂ, ಚುನಾವಣೆಗಳನ್ನು ನಡಿಸಗೊಟ್ಟಲ್ಲಿ ಮಹಾತ್ಮಾ ಗಾಂಧಿಯವರ ಅಸಹಕಾರ ಚಳವಳಿಯು ತೀವ್ರ ಪ್ರಚಾರಕ್ಕೊಂದು ಅವಕಾಶ ಮಾಡಿಕೊಟ್ಟಂತಾಗುವದೆಂದೂ ಭಾರತ ಮಂತ್ರಿ ಕರ್ನಲ್ ಅಮೆರಿಯವರು ಸಭಿಕರಿಗೆ ತಿಳಿಸಿದರು. ಕೂಲಿಕಾರ ಪಕ್ಷದ ಸದಸ್ಯರು ಮಸೂದೆಯನ್ನು ಉಗ್ರವಾಗಿ ಟೀಕಿಸಿದರು. ‘ಎಸೆಂ

NOTICE TO CONTRACTORS.

No. A-31.

Sealed tenders in B-1 form (percentage rate) are invited for the work of reconstructing Bridge No. 83-A in mile No. 14/1 of Sanikatta--Hebbul Road (Foundation & masonry only) costing about Rs 6500/—, upto 2 P. M. on Monday the 29th September 1941, on payment of Rs 2/— for each form Last date of issuing tender forms is 27—9—'41 upto 12 noon.

2 The amount of earnest money to be paid into Treasury is Rs 65/— and of security deposit is Rs 260/—.

3. For details, apply to the executive Engineer, Kanara Division, Karwar.

KARWAR.
12-9-1941.

S. K. KARANDIKAR,
Executive Engineer,
KANARA DIVISION.

ಬ್ಲಿಗಳ ಅವಧಿ ಬೆಳೆಸಿಕೊಳ್ಳಲು ಆ ಎಸೆಂಬ್ಲಿಗಳಿಗೇ ಕೇಳಿಕೊಳ್ಳುವದು ಒಳಿತಿತ್ತು. ಆ ಮಾರ್ಗ ಬಿಟ್ಟು ಇಂಥ ನಿರಂಕುಶ ಸರ್ವಾಧಿಕಾರಿತ್ವದ ಮತ್ತು ಜನರಿಗೆ ಲೋಕಮತ ತಿಳಿಸಲು ಇಂಬುಗೊಡದಂತಹ ಮಸೂದೆಯನ್ನು ಮುಂದೆ ತಂದದ್ದು ಸರಿಯಲ್ಲ! ಜಾತೀಯ ವೈಷಮ್ಯದ ನೆವ ಬರೀ ಕುಂಟ ನೆವವಾಗಿರುತ್ತದೆ! ಯುದ್ಧ ಮುಗಿದು ೧ ವರ್ಷವಾಗುವ ವರೆಗೆ ಚುನಾವಣೆಗಳನ್ನು ಮುಂದೂಡಲು ಈ ಮಸೂದೆ ಅಧಿಕಾರ ಕೊಡುತ್ತಿದೆ. ಈ ಅವಧಿಯಲ್ಲಿ ಜಾತೀಯ ಭಾವನೆಗಳು ತಣ್ಣಗಾಗುವವೆಂದು ಹೇಳುವಿರಾ? ಯುದ್ಧದಿಂದ ಜಾತೀಯ ವೈಷಮ್ಯವುಂಟಾಗಲಿಲ್ಲ; ಯುದ್ಧ ಮುಗಿದ ಮೇಲೂ ಅದು ಮಾಯವಾಗುವಂತಿಲ್ಲ! ಯುದ್ಧ ಒಂದೊಮ್ಮೆ ನಾಳೆ ಮುಗಿಯಬಹುದು; ಆದರೆ ಹಿಂದೀ ಪರಿಸ್ಥಿತಿ ಇದ್ದಂತೆಯೇ ಇರುವದು!" ಹೀಗೆ ಮಿ|| ಸಿಬ್ಬರಮನ್ ಎಂಬ ಸದಸ್ಯರು ಟೀಕಿಸಿದರು. "ತಮ್ಮ ಧೋರಣಕ್ಕೆ ಹಿಂದೀಯರು ಬೆಂಬಲ ಕೊಟ್ಟಾರೆಂದು ಬ್ರಿಟಿಶ ಸರಕಾರಕ್ಕೆ ನಂಬಿಗೆಯಿರುತ್ತಿದ್ದರೆ, ಬೇರೆ ಎಷ್ಟೇ ಅಡಚಣೆಗಳಿದ್ದಾಗ್ಯೂ ಅವರು ಈಗಲೇ ಚುನಾವಣೆಗಳನ್ನು ನಡಿಸುತ್ತಿದ್ದರು. ಆದರೆ ಈ ಸಮಯದಲ್ಲಿ ಚುನಾವಣೆಗಳಾದರೆ ಭಾರತೀಯರು ತಮ್ಮ ಧೋರಣಕ್ಕೆ ಕಡು ವಿರೋಧ ಪ್ರದರ್ಶಿಸುವರೆಂದು ಸರಕಾರವು ಅಂಜುತ್ತಿದೆ! ಚುನಾವಣೆಗಳನ್ನು ಮುಂದೂಡಲು ಇದೇ ಮುಖ್ಯ ಕಾರಣ! ಸರಕಾರದವರು ತಮ್ಮ ನಡತೆಯ ಸಮರ್ಥನೆಗಾಗಿ ಮುಂದೊಡ್ಡಿದ ಬೇರೆ ಕಾರಣಗಳು ಬರೀ ಕುಂಟ ನೆವಗಳಾಗಿರುತ್ತವೆ!" ಎಂದು ಮಿ|| ಸೊರೆನ್ಸನ್‌ರವರು ಸರಕಾರದ ಅಂತರಂಗವನ್ನು ಮುಚ್ಚುಮರೆಯಿಲ್ಲದೆ ಹೊರಗೆಡವಿದರು. ಅಟ್ಲಾಂಟಿಕ್ ಘೋಷಣೆಯೊಳಗಿನ ತತ್ವಗಳನ್ನು ಹಿಂದುಸ್ಥಾನಕ್ಕೂ ಅನ್ವಯಿಸುವಂತೆ ಮಾಡುವದು ಅವಶ್ಯವುಂಟೆಂದು ಮಿ| ಡೇವಿಸ್ ಎಂಬವರು ನುಡಿದರು. ಚರ್ಚೆಗೆ ಮಾರುತ್ತರ ಕೊಡುವಾಗ, ಅಟ್ಲಾಂಟಿಕ್ ಘೋಷಣೆಗಿಂತ ಮೊದಲೇ ತಾವು ಅದರ ತತ್ವಗಳನ್ನು ಹಿಂದುಸ್ಥಾನದಲ್ಲಿ ಆಚರಿಸುತ್ತ ಬಂದಿರುತ್ತೇವಾಗಿ ಭಾರತ ಮಂತ್ರಿಗಳು ತಾರಕೆಯ ಉತ್ತರ ಕೊಟ್ಟು ಪಾರಾದರು! ಅಂತು ಈಗಣ ಯುದ್ಧದ ಸಮಾಪ್ತಿಯಾಗುವವರೆಗೆ ಪ್ರಾಂತಿಕ ಎಸೆಂಬ್ಲಿಗಳ ಚುನಾವಣೆಗಳಾಗಲಿಕ್ಕಿಲ್ಲೆಂಬ ಮಾತು ಈಗ ನಿಶ್ಚಿತವಾಯಿತು.

— ಮೈಸೂರ ಸಂಸ್ಥಾನದಲ್ಲಿ ಬೇರೆ ಬೇರೆ ಉದ್ಯೋಗಗಳನ್ನು ಹೊರಡಿಸಿ, ಔದ್ಯೋಗಿಕ ಕ್ಷೇತ್ರದಲ್ಲಿ ಮೈಸೂರ ನಾಡಿನ ಹೆಸರನ್ನು ಉಜ್ವಲಗೊಳಿಸಿದ ಹಾಗೂ ಅಖಂಡ ಹಿಂದುಸ್ಥಾನದಲ್ಲಿ ದೊಡ್ಡ ದೊಡ್ಡ ಉದ್ಯೋಗಗಳನ್ನೂ ಉದ್ದಿಮೆಗಳನ್ನೂ ಹೊರಡಿಸಲು ಹೆಣಗಾಡುವ ಜಗದ್ವಿಖ್ಯಾತ ಕನ್ನಡಿಗರಾದ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ೮೧ನೇ ಹುಟ್ಟುಹಬ್ಬ ಇಂದು ಆಗುತ್ತದೆ. ಇಷ್ಟು ಮುದಿ ಪ್ರಾಯದಲ್ಲೂ ಕೂಡ ವಿಶ್ವೇಶ್ವರಯ್ಯನವರು ಹಿಂದುಸ್ಥಾನಕ್ಕೆ ಬೇಕಾಗುವ ಮೋಟಾರ ಬಂಡಿಗಳನ್ನು ಹಿಂದುಸ್ಥಾನದಲ್ಲೇ ತಯಾರಿಸಬೇಕೆಂದು ಒಂದು ಸಾಹಸದ ಯೋಜನೆಯನ್ನು ಸಿದ್ಧಪಡಿಸಿ ಅದನ್ನು ಕಾರ್ಯರೂಪದಲ್ಲಿ ತರಲು ಸಾಹಸ ಪಡುತ್ತಿದ್ದುದು ಕನ್ನಡಿಗರಿಗಷ್ಟೇ ಅಲ್ಲ, ಸಮಸ್ತ ಭಾರತೀಯರಿಗೂ ದೊಡ್ಡ ಹೆಮ್ಮೆಯ ಸಂಗತಿ. ಇಂಥ ಪೂಜ್ಯ ವಿಭೂತಿಗಳ ೮೧ನೇ ಹುಟ್ಟುಹಬ್ಬವನ್ನು ಅಖಿಲ ಕರ್ನಾಟಕದ ಮೂಲೆ ಮೂಲೆಗಳಲ್ಲಿ ವಿಜೃಂಭಣೆಯಿಂದ ಪಾಲಿಸಿ, ಸರ್ ಮೋಕ್ಷಗುಂಡಮ್‌ರವರಿಗೆ ದೀರ್ಘಾಯುರಾರೋಗ್ಯ ದಯಪಾಲಿಸುವಂತೆ ದೇವರಲ್ಲಿ ಪ್ರಾರ್ಥನೆ ಮಾಡಬೇಕೆಂದು ಮುಂಬಯಿಯ ಸಂಯುಕ್ತ ಕರ್ನಾಟಕ ಸಂಘದ ಅಧ್ಯಕ್ಷರಾದ ಮಿ| ಬ| ಕೇ. ರಾಮಸ್ವಾಮಿಯವರು ಬಿನ್ನವಿಸುತ್ತಾರೆ. ಒಂದೊಮ್ಮೆ ಇಂದೇ ಹುಟ್ಟು ಹಬ್ಬ ಆಚರಿಸಲಾರದವರು ಬೇಗನೆ ಸಭೆಗಳನ್ನು ಕೂಡಿಸಿ ಸರ್ ಮೋಕ್ಷಗುಂಡಮ್‌ರವರ ವಿಷಯದಲ್ಲಿ ತಮ್ಮ ಕರ್ತವ್ಯವನ್ನು ನೆರವೇರಿಸಬೇಕಾಗಿಯೂ ಅವರು ಸೂಚಿಸಿದ್ದಾರೆ.

— ಸರ್ವಾಧಿಕಾರಿ ಲಿನ್ಲಿಥಗೋ ದೊರೆಗಳು ತಮ್ಮ ವಿಸ್ತಾರಿತ ಕಾರ್ಯಕಾರಿ ಮಂಡಳದ ಉಪಾಧ್ಯಕ್ಷಸ್ಥಾನಕ್ಕೆ ಸರ್ ಅಕಬರ ಹೈದರಿ ಇಲ್ಲವೆ ಶ್ರೀ|| ಮಾಧವರಾವ ಅಣೇಯವರಂಥ ಹಿಂದೀ ಮುಂದಾಳುಗಳನ್ನು ನೇಮಿಸದೆ ಸರ್ ರೆಜಿನೊಲ್ಡ ಮೆಕ್ಸವೆಲ್ಲರನ್ನು ನೇಮಿಸಿದ್ದು ನೋಡಿ ಸಿಮುಲೆಯ ರಾಜಕಾರಣಿಗಳು ಅಸಮಾಧಾನಗೊಂಡಿದ್ದಾರಂತೆ. ಕೌನ್ಸಿಲ ಒಫ್ ಸ್ಟೇಟದಲ್ಲಿ ಸರ್ ಅಕಬರ ಹೈದರಿಯವರೂ ಎಸೆಂಬ್ಲಿಯಲ್ಲಿ ಶ್ರೀ|| ಅಣೇಯವರೂ ಸರಕಾರ ಪಕ್ಷದ ಮುಂದಾಳುಗಳಾಗಿ ನೇಮಕಪಟ್ಟಿರುವಾಗ ಅವರಲ್ಲೊಬ್ಬರನ್ನು ಉಪಾಧ್ಯಕ್ಷರನ್ನಾಗಿ ನೇಮಿಸಬೇಕಿತ್ತೆಂದು ಅವರ ಅಂಬೋಣವಿದೆ.

— ಯರವಡಾ ಸೆರೆಮನೆಯಲ್ಲಿರುವ ಶ್ರೀ| ಭುಲಾಭಾಯಿ ದೇಸಾಯಿಯವರ ಪ್ರಕೃತಿ ಬಹಳ ಕೆಟ್ಟಿರುತ್ತದೆಂದು ಕೇಳಿ ಪುಣೆ, ಮುಂಬಯಿಗಳೊಳಗಿನ ಕೊಂಗ್ರೆಸ ಜನರು ಬಹಳ ಕಳವಳಗೊಂಡಿದ್ದಾರೆ. ಭುಲಾಭಾಯಿಯವರ ಚಿರಂಜೀವರಾದ ಶ್ರೀ|| ಧೀರುಭಾಯಿಯವರು ಸೆರೆಮನೆಗೆ ಹೋಗಿ ತಮ್ಮ ತೀರ್ಥರೂಪರನ್ನು ಕಂಡು ಬಂದಿದ್ದಾರೆ. ಸೆರೆಮನೆಯಿಂದ ಅವರು ತಿರುಗಿ ಬಂದಾಗ ಶ್ರೀ| ಭುಲಾಭಾಯಿಯವರ ಕ್ಷೇಮ-ಸಮಾಚಾರ ಕೇಳಹೋದ ಪತ್ರಿಕಾ ಪ್ರತಿನಿಧಿಗಳ ಪ್ರಶ್ನೆಗಳಿಗೆ ಉತ್ತರ ಕೊಡಲು ಸಹ ಧೀರುಭಾಯಿಯವರ ಬಾಯಿಂದ ಮಾತುಗಳು ಹೊರಬೀಳಲಿಲ್ಲವಂತೆ.

— ಕಳೆದ ಎಪ್ರಿಲ ತಿಂಗಳಿಂದ ಆಗೋಸ್ತ ತಿಂಗಳ ಕೊನೆಯ ವರೆಗೆ ಬೆಳಗಾಂವಿಯ ಪ್ರೋವೆಸ್ಟ ಇಂಜನಿಯರರು ಕರ್ನಾಟಕ ಎಕ್ಸಪ್ರೆಸ್ ಸರ್ವ್ಹಿಸ್ಸಿನ ಶೆವ್ಹಲೇಟ ಮೋಟಾರ ಬಂಡಿಯೊಂದಕ್ಕೆ ಇದ್ದಲಿಯ ಗ್ಯಾಸಿನ ಯಂತ್ರವೊಂದನ್ನು ಕೂಡ್ರಿಸಿ, ಇದ್ದಲಿಯ ಸಹಾಯದಿಂದಲೇ ಬಂಡಿಯು ಓಡಾಡಿದರೆ ಎಷ್ಟು ವೆಚ್ಚ ಬರುತ್ತಿದೆ, ಎಷ್ಟು ಪ್ರವಾಸ ಮಾಡಬರುತ್ತಿದೆ ಎಂಬದರ ಲೆಕ್ಕವನ್ನು ಕಂಡುಹಿಡಿದಿದ್ದಾರೆ. ಸದರಿ ಬಂಡಿಯು ಕಳೆದ ಆಗೋಸ್ತ ತಿಂಗಳಲ್ಲಿ ೨೭ ದಿನಗಳಲ್ಲಿ ೩೬೨೪ ಮೈಲು ಓಡಾಡಿದೆ. ಇಷ್ಟು ಓಡಾಟಕ್ಕೆ ೬೧ ಗೇಲನ್ ಪೆಟ್ರೋಲ ಎಣ್ಣೆಯೂ, ೩೩೩೩ ರತ್ತಲು (= ೧೩೧ ಮಣ) ಕಲ್ಲಿದ್ದಲಿಯೂ ವೆಚ್ಚವಾದವಂತೆ. ಬಂಡಿಗೆ ಉಪಯೋಗಿಸಲ್ಪಟ್ಟ ಕಲ್ಲಿದ್ದಲಿಯ ಬೆಲೆ ರೂ. ೫೭| ಮತ್ತು ೬೧ ಗೆಲನ್ ಪೆಟ್ರೋಲಿನ ಬೆಲೆ ರೂ. ೫೭-೨-೦ ಕೂಡಿ ಅಂತು ಓಡಾಟದ ಖರ್ಚು ರೂ ೧೧೪—೬—೦ ಬಂತು. ಅಂದರೆ ಒಂದು ಮೈಲು ಓಡಾಟಕ್ಕೆ ೬ ಬಿಲ್ಲೆ ಖರ್ಚು ಬಿತ್ತು. ಅದೇ ಆ ಬಂಡಿ ಪೆಟ್ರೋಲನ್ನೇ ಉಪಯೋಗಿಸಿದ್ದರೆ ಪ್ರತಿ ಮೈಲಿಗೆ ೨ ಆ. ೫|| ಪೈ ಖರ್ಚು ಬರುತ್ತಿತ್ತಂತೆ. ಸದರಿ ಮೋಟಾರ ಬಂಡಿಗೆ ಮತ್ತಿ, ಕಿಂದಳಿ, ಜಂಬೆ, ತಗ್ಗಿ, ದಿಂಡಳ ಮತ್ತು ಮುಕವಾಳ ಕಟ್ಟಿಗೆಯ ಇದ್ದಲಿಯನ್ನು ಉಪಯೋಗಿಸುತ್ತಿದ್ದರಾಗಿ ತಿಳಿಯುತ್ತದೆ.

— ದ. ಭಾ. ಹಿಂದೀ ಪ್ರಚಾರ ಸಮಿತಿಯ ಸೂಚನೆಗನುಸಾರವಾಗಿ ಇಡೀ ಕರ್ನಾಟಕದಲ್ಲಿರುವ ಹಿಂದೀ ಪ್ರಚಾರ ಸಂಸ್ಥೆಗಳು ಇದೇ ಬರುವ ಶನಿವಾರ ತಾ. ೨೭-೯-೪೧ ರಿಂದ ತಾ. ೪-೧೦-೪೧ ರ ವರೆಗೆ ಹಿಂದೀ ಪ್ರಚಾರ ಸಪ್ತಾಹವನ್ನು ಆಚರಿಸಬೇಕಾಗಿ ಕರ್ನಾಟಕ ಪ್ರಾಂ| ಹಿಂದೀ ಪ್ರಚಾರ ಸಭೆಯವರು ಬಿನ್ನವಿಸುತ್ತಾರೆ. ಸಪ್ತಾಹ ಪ್ರಾರಂಭ ದಿನ, ರಾಷ್ಟ್ರೈಕ್ಯ ದಿನ, ಪ್ರಾಂತಭಾಷೆಯ ದಿನ, ಹಿಂದಿನ ವಿದ್ಯಾರ್ಥಿಗಳ ದಿನ, ಮಹಿಳೆಯರ ದಿನ, ಗಾಂಧೀ ಜಯಂತೀ ದಿನ, ಭಾಷಣ ಸ್ಪರ್ಧೆಯ ದಿನ ಮತ್ತು ಗೋಷ್ಠೀ ದಿನ ಹೀಗೆ ಬೇರೆ ಬೇರೆ ದಿನಗಳನ್ನಾಚರಿಸಿ ಸಪ್ತಾಹವನ್ನು ಸಾಂಗಗೊಳಿಸಬೇಕಾಗಿಯೂ ಅವರು ಸೂಚನೆ ಕೊಟ್ಟಿರುತ್ತಾರೆ.

— ಈ ವರ್ಷ ಕೊಂಗ್ರೆಸ ಸಂಸ್ಥೆಗಳ ಕೆಲಸದ ವ್ಯಾಪ್ತಿಯೂ ಭಾರವೂ ಎಷ್ಟು ಬೆಳೆದಿದೆಯೆಂಬದು ಎಲ್ಲರಿಗೂ ಗೊತ್ತಿದೆ. ಅದರಂತೆ ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಕೆಲಸದ ವ್ಯಾಪ್ತಿಯೂ ಬಹಳ ಬೆಳೆದಿದ್ದು, ಪ್ರವಾಸ, ಪ್ರಚಾರ, ತಂತಿ-ವ್ಯವಹಾರ ಮುಂತಾದ ಖರ್ಚಿನ ಪ್ರಮಾಣ ಇತ್ತಿತ್ತ ಬಹಳ ಬೆಳೆದಿದೆ. ಆದರೆ ಖರ್ಚಿಗೆ ಸಾಲುವಷ್ಟು ಆದಾಯವಿಲ್ಲ. ಆದ್ದರಿಂದ ಜನರಿಂದ ವಂತಿಗೆಗಳನ್ನು ಕೂಡಿಸಿ ಖರ್ಚಿನ ಹಣದ ವ್ಯವಸ್ಥೆ ಮಾಡಬೇಕಾಗಿದೆ. ಆ ಪ್ರಕಾರ ಕಳೆದ ತಿಂಗಳಿಂದ ಕರ್ನಾಟಕ ಪ್ರಾ|| ಕ.ಯ ಬಗ್ಗೆ ವಂತಿಗೆಗಳನ್ನು ಕೂಡಿಸುವ ಕೆಲಸ ಪ್ರಾರಂಭವಾಗಿದೆಯೆಂತಲೂ, ಕೊಂಗ್ರೆಸ ಭಕ್ತರು ಕಮಿಟಿಯ ಕೆಲಸದ ಮಹತ್ವಕ್ಕೆ ತಕ್ಕ ವಂತಿಗೆಗಳನ್ನು ಕೊಟ್ಟು ಕೊಂಗ್ರೆಸ ಕಾರ್ಯ ಅಖಂಡ ಮತ್ತು ಸುಸೂತ್ರ ನಡಿಸಲು ಸಹಾಯ ಮಾಡಬೇಕೆಂತಲೂ ಕರ್ನಾಟಕ ಪ್ರಾಂತಾಧ್ಯಕ್ಷರು ಒಂದು ಪ್ರಕಟನೆ ಹೊರಡಿಸಿ ಬಿನ್ನವಿಸಿದ್ದಾರೆ.

* * *

ಡಾ|ಎಮ್.ಆರ್.ಭಂಡಾರಕರ,
L. D. Sc. (Madras), C. D. S.
ದಂತ ವೈದ್ಯ, ಕಾರವಾರ.
ಇವರು ತಾ. ೧೮-೯-೪೧ ರಿಂದ
೨೫-೯-೪೧ ರ ವರೆಗೆ ಕುಮಟೆಯಲ್ಲಿರುವರು.

ಹಲ್ಲು ತೊಳೆಯುವದು, ಹುಳ ತಾಗಿದ ಹಲ್ಲುಗಳಲ್ಲಿ ಸಿಮೆಂಟ ಯಾ ಬೆಳ್ಳಿ ತುಂಬಿಸುವದು, ವಿನಾ ನೋವಿಲ್ಲದೆ ಹಲ್ಲುಗಳನ್ನು ಕೀಳುವದು, ಹೊಸ ಹಲ್ಲಿನ ಮಾಲೆ ತಯಾರಿಸುವದು, ಮುಂತಾದ ಕೆಲಸವನ್ನು ಮಾಡುವರು.

ಈ ಸುಸಂಧಿಯನ್ನು ಕಳಕೊಳ್ಳಬೇಡಿರಿ!

ಸ್ಥಳ:- ಬಸ್ತಿಪೇಟೆಯಲ್ಲಿರುವ
ಶಂಕರನಾರಾಯಣ ದೇವಸ್ಥಾನದ ಎದುರಿನಲ್ಲಿರುವ ಪಿ. ಯು. ಭಂಡಾರಕರ ಇವರ ಮಾಳಿಗೆಯಲ್ಲಿರುವರು.

ಪತ್ರಕರ್ತರ ನುಡಿಗನ್ನಡಿ.

೧ ಹಿಂದುಸ್ಥಾನ ಸರಕಾರವು ಸೈನ್ಯ ಇಲಾಖೆಯಲ್ಲಿ ಆಸ್ಟ್ರೇಲಿಯನ್‌ರನ್ನು ಸೈನ್ಯಾಧಿಕಾರಿಗಳನ್ನಾಗಿ ನೇಮಿಸಹತ್ತಿರುವದನ್ನು ತಿಳಿದು ನಮಗೆ ತೀರ ವ್ಯಸನವಾಗಿದೆ. ಹಿಂದೀಯರ ಮೇಲೆ ಬ್ರಿಟಿಶರಿಗೆ ಸಂಶಿಗೆಯುಂಟು, ಹಿಂದೀಯರು ಧೈರ್ಯಶಾಲಿಗಳು, ಪರಾಕ್ರಮಶಾಲಿಗಳು, ಯುದ್ಧ ವಿದ್ಯೆಯಲ್ಲಿ ಪಾರಂಗತರು, ಹೀಗೆ ಹಿಂದೀ ಸೈನಿಕರನ್ನು ಬ್ರಿಟಿಶರು ಬಾಯ್ತುಂಬ ಹೊಗಳುವಾಗ, ಆಸ್ಟ್ರೇಲಿಯನರಿಗೆ ಸೈನ್ಯಾಧಿಕಾರಿಗಳಾಗಿ ನೇಮಿಸಿದ್ದನ್ನು ಕೇಳಿ ಯಾವ ಸ್ವಾಭಿಮಾನಿ ಹಿಂದವಾಸಿಗೆ ವ್ಯಸನವಾಗದಿರದು? ಸರಕಾರವು ಹಿಂದವಾಸಿಗಳ ಮೇಲೆ ನಂಬಿಗೆ ಇಡುವದಿಲ್ಲವಾಗಿ ಗ್ರಹಿಕೆಯಾಗಿ ಹಿಂದವಾಸಿಗಳನ್ನು ಸೈನ್ಯಾಧಿಕಾರಿಗಳನ್ನಾಗಿ ನೇಮಿಸಿದರೆ ನಮ್ಮಲ್ಲಿ ಸ್ವಾಭಿಮಾನ ಸ್ವಪರಾಕ್ರಮಗಳು ಹುಟ್ಟಿ ತನ್ನ ನಿರಂಕುಶ ಪ್ರಭುತ್ವಕ್ಕೆ ತೊಂದರೆ ಒದಗಬಹುದೆಂದು ಸರಕಾರದ ಆಲೋಚನೆಯಾಗಿರಬಹುದು ಆದರೆ ಈ ಧೋರಣೆ ಅನಿಷ್ಟವಾದದ್ದು. ಈ ಕುರಿತು ರಾಷ್ಟ್ರರಕ್ಷಣಾ ಸಭೆಯವರ ಮಂಡಳವೂ ಹಿಂದುಸ್ಥಾನ ಸರಕಾರದ ಹಿಂದೀ ಸಭಾಸದರೂ ಸರಕಾರದ ಕಡೆ ದೂರಿಕೊಳ್ಳಬೇಕಾಗಿ ನಮ್ಮ ವಿನಂತಿಯುಂಟು ಆಸ್ಟ್ರೇಲಿಯನರಂಥ ಪರಸ್ಥರನ್ನು ಹಿಂದುಸ್ಥಾನದ ಸೈನ್ಯ ಇಲಾಖೆಯಲ್ಲಿ ಸೇರಿಸಿಕೊಳ್ಳುವದು ಗಂಡಾಂತರಪ್ರದ, ಹಿಂದ ಜನಾಂಗದ ಸ್ವಾಭಿಮಾನಕ್ಕೂ ಸುರಕ್ಷಿತತೆಗೂ ಬಾಧೆಯುಂಟು ನಮ್ಮ ಸೈನ್ಯದಲ್ಲಿ ಇಕ್ಕಟ್ಟಿನ ಕಾಲಕ್ಕೆ ನಮ್ಮ ಮೇಲೆ ದ್ರೋಹ ಬಗೆಯುವ ಜನರಿಗೆ ನಾವು ಆಶ್ರಯ ಕೊಟ್ಟಂತಾಗುತ್ತದೆ.

೨. ಸಂಸ್ಥಾನಿಕರಿಗೆ ಸ್ವಾತಂತ್ರ್ಯವಿರುವದಾಗಿ ಹಿಂದುಸ್ಥಾನ ಸರಕಾರವು ರಾಷ್ಟ್ರೀಯ ಸಭೆಯವರಿಗೆ ಹೇಳಿ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಕೊಟ್ಟರೆ ಸಂಸ್ಥಾನಿಕರ ಲೋಕಪ್ರಭುತ್ವಕ್ಕೆ ತೊಂದರೆ ಬರಬಹುದಾಗಿ ಭೀತಿ ಹಾಕುತ್ತದೆ ಕೊಚ್ಚಿಯಲ್ಲಿ ಹೊಸ ದಿವಾಣರನ್ನು ನೇಮಿಸಿಕೊಳ್ಳುವದಿತ್ತು. ಸಂಸ್ಥಾನಿಕರು ತಮ್ಮ ನಂಬಿಗೆಯುಳ್ಳ ವ್ಯವಹಾರಚತುರ ಜನರನ್ನು ನೇಮಿಸಿಕೊಳ್ಳಬೇಕು, ಅದಕ್ಕೆ ಹಿಂದುಸ್ಥಾನ ಸರಕಾರವು ರೀತಿಯಂತೆ ಮನ್ನಣೆ ಕೊಟ್ಟರಾಗಿತ್ತು. ಆದರೆ ಈಗ ೨—೩ ತಿಂಗಳುಗಳಿಂದ ಸಂಸ್ಥಾನಿಕರು ನೇಮಿಸಿಕೊಂಡ ಇಸಮಿಗೆ ಹಿಂದುಸ್ಥಾನ ಸರಕಾರದ ರಾಜಕೀಯ ಇಲಾಖೆಯವರು ಮನ್ನಣೆ ಕೊಡದೆ, ಕೊನೆಗೆ ಮದ್ರಾಸ ಸರಕಾರದಲ್ಲಿರುವ ಡಿಕ್ಸನ್ ಎಂಬ ಆಯ್. ಸಿ. ಎಸ್. ಬ್ರಿಟಿಶ ಅಧಿಕಾರಿಯನ್ನು ನೇಮಿಸಿಕೊಳ್ಳಬೇಕಾಗಿ ಒತ್ತಾಯಪಡಿಸಿ ಅವರನ್ನು ದಿವಾಣರನ್ನಾಗಿ ನೇಮಿಸಿಕೊಳ್ಳಹಚ್ಚಿದ್ದಾರೆ ಯುರೋಪಿಯನ್‌ರನ್ನೇ ದಿವಾಣರನ್ನಾಗಿ ನೇಮಿಸಿಕೊಳ್ಳಬೇಕೆಂದು ಹಿಂದುಸ್ಥಾನ ಸರಕಾರದ ಬಲಾತ್ಕಾರ ನಡೆಯಿತಂತೆ. ಕೊಚ್ಚಿಯು ಬಂದರ ಪ್ರದೇಶವಾದ್ದರಿಂದ ಆ ಪ್ರದೇಶದಲ್ಲಿ ಯುರೋಪಿಯನರೇ ದಿವಾಣರಾಗಿ ಉಳಿದರೆ ಮಾತ್ರ ಸಾಮ್ರಾಜ್ಯವು ಭದ್ರವಾಗುಳಿಯುತ್ತದಾಗಿ ಸಾಮ್ರಾಜ್ಯವಾದಿ ಹಿಂದುಸ್ಥಾನದ ರಾಜಕೀಯ ಇಲಾಖೆಯು ಅಂಬೋಣವಿರುವದು ಸಹಜ. ಆದರೆ ಸಂಸ್ಥಾನಿಕರ ಸರ್ವಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಹಿಂದುಸ್ಥಾನ ಸರಕಾರವು ದಿವಾಣರನ್ನು ನೇಮಿಸಿಕೊಳ್ಳುವ ಸಾಮಾನ್ಯ ವಿಷಯದಲ್ಲಿ ಕೈಹಾಕಿ ಯುರೋಪಿಯನ ಅಧಿಕಾರಿಗಳಿಗೆ ಹೊಸ ಹೊಸ ಅಧಿಕಾರಸ್ಥಾನಗಳನ್ನು ನಿರ್ಮಿಸಿಕೊಡುವದು ಸಭ್ಯತನವೇ ವೆಂದು ಪ್ರಶ್ನೆ. ಇಂಥ ಪ್ರಕಾರಗಳಿಂದ ಸಾಮ್ರಾಜ್ಯವಾದದ ಬಗ್ಗೆ ಮನಸ್ಸಿನಲ್ಲಿ ತಿರಸ್ಕಾರವುಂಟಾಗುತ್ತದೆ, ಹಿಂದ – ಜನಾಂಗವು ಅಸಂತೋಷಗೊಳ್ಳುತ್ತದೆ. ಹಿಂದ-ಜನಾಂಗದ ಸ್ವಾತಂತ್ರ್ಯವನ್ನು ವಿರೋಧಿಸುವ ಸಂಸ್ಥಾನಿಕರು ಈ ಉದಾಹರಣೆಯಿಂದ ಬೋಧಗಲಿತು ರಾಷ್ಟ್ರೀಯ ಸಭೆಯ ಪುರಸ್ಕಾರ ಮಾಡಿದರೆ ಅವರಿಗೆ ಶ್ರೇಯಸ್ಸುಂಟು. ಸಾಮ್ರಾಜ್ಯಕರ್ತರು ಹಿಂದುಸ್ಥಾನದ ಸ್ವಾತಂತ್ರ್ಯವನ್ನು ಅಪಹರಿಸುವಾಗ ಸಂಸ್ಥಾನಿಕರ ಸ್ವಾತಂತ್ರ್ಯವನ್ನು ಕಾಪಾಡುವರೆಂದು ತಿಳಕೊಳ್ಳುವದು ದಡ್ಡತನ

೩. ಸದ್ಯಕ್ಕೆ ಪಂಜಾಬದ ಮುಖ್ಯ ಪ್ರಧಾನರಾದ ಸರ್ ಸಿಕಂದರ ಹಯಾತಖಾನರದೊಂದು ಭಾಷಣ ಲಾಯಲಪುರದೊಳಗಿನ ವಿದ್ಯಾರ್ಥಿ ಸಂಘದಲ್ಲಿ ನಡೆಯಿತು. ಆ ಕಾಲದಲ್ಲಿ ಹಿಂದ ಜನಾಂಗವನ್ನು ಛೇದಿಸುವ ಆಂದೋಲನದಲ್ಲಿ ವಿದ್ಯಾರ್ಥಿಗಳು ಸೇರಬಾರದೆಂದು ಸರ್ ಸಿಕಂದರರು ಜಾಗ್ರತಿ ಕೊಟ್ಟರು. ಪಾಕಿಸ್ತಾನದ ಕಲ್ಪನೆಯನ್ನು ವಿರೋಧಿಯರು ಕಲ್ಪಿಸಿದರೆಂತಲೂ ಅದಕ್ಕೆಂದಿಗೂ ಸ್ವಜನರು ಆಶ್ರಯ ಕೊಡಬಾರದೆಂತಲೂ ಸರ್ ಸಿಕಂದರರು ವಿದ್ಯಾರ್ಥಿಗಳ ವಿನ್ಯಾಮಾನ ಸ್ವ-ಜನಾಂಗಕ್ಕೆ ಎಚ್ಚರಿಕೆ ಕೊಟ್ಟಿದ್ದಾರೆ. ಸರ್ ಸಿಕಂದರರು ಪಾಕಿಸ್ತಾನದ ಮೂಲ ಕಲ್ಪನೆಯ ದೇಶಕಾಲಗಳನ್ನು ವಿವರಿಸಲಿಲ್ಲ. ಮದ್ರಾಸದ 'ಹಿಂದು' ಪತ್ರಿಕೆಯು ಈ ಕಲ್ಪನೆಯ ಪೂರ್ವಾಪರವನ್ನು ವಿವರಿಸಿದೆ. ೮ ವರ್ಷಗಳ ಹಿಂದೆ ೧೯೩೩ನೇ ಇಸ್ವಿಯಲ್ಲಿ ಲಂಡನಿನಲ್ಲಿ ರೌಂಡಟೇಬಲ ಪರಿಷತ್ತು ಮುಗಿದಬಳಿಕ ಹಿಂದುಸ್ಥಾನದ ಘಾತ ಬಗೆಯುವ ಸಾಮ್ರಾಜ್ಯವಾದಿ ಬ್ರಿಟಿಶರ ಒಂದು ಪರಿಪತ್ರವನ್ನು ತಯಾರಿಸಿ ಹಿಂದುಸ್ಥಾನದೊಳಗಿನ ೪೦ ಮಂದಿ ಮುಸಲ್ಮಾನರಿಗೆ ಕಳಿಸಿದರು ಪಂಜಾಬ, ಗಡಿನಾಡು, ಕಾಶ್ಮೀರ, ಪಾಳೇಗಾರ ಪ್ರದೇಶ ಮತ್ತು ಸಿಂಧ ಪ್ರಾಂತಗಳನ್ನು ಹಿಂದುಸ್ಥಾನದಿಂದ ಪೃಥಕ್ಕರಿಸಿ ಪಾಕಿಸ್ತಾನವೆಂದು ಹೆಸರಿಡಬೇಕಾಗಿಯೂ ಅದನ್ನು ಪ್ರತ್ಯೇಕಿಸಬೇಕಾಗಿಯೂ ಸೂಚಿಸಿದ್ದರಂತೆ! ಬ್ರಹ್ಮದೇಶವನ್ನು ಹಿಂದುಸ್ಥಾನದಿಂದ ಪೃಥಕ್ಕರಿಸುವಾಗಲೇ ಪಾಕಿಸ್ತಾನದ ಘಟಣೆಯಾಗಬೇಕಾಗಿ ಗೊತ್ತಾಗಿತ್ತಂತೆ! ಈ ಯೋಜನೆಗೆ ಈಗ ಮುಖ್ಯ ಪ್ರಧಾನರಾಗಿದ್ದ ಮಿ|| ಚರ್ಚಿಲ್ಲ, ಪಂಜಾಬದ ಗವ್ಹರ್ನರರಾಗಿದ್ದ ಸರ್ ಮಾಯಿಕೆಲ ಒಡವಾಯರ ಮೊದಲಾದ ಪ್ರಮುಖರ ಪುರಸ್ಕಾರವಿದ್ದಿತ್ತು. ಬೆ|| ಜಿನ್ನಾರವರು ಈ ಕಲ್ಪನೆಯ ಜನಕರಲ್ಲ. ಹಿಂದ-ಹಿತವಿರೋಧಕರು ಹಿಂದ ಜನಾಂಗವನ್ನು ತುಂಡರಿಸಿ ತಮ್ಮ ಒಡೆತನವನ್ನು ಚಿರಕಾಲ ಉಳಿಸುವದಕ್ಕಾಗಿ ಕಲ್ಪಿಸಿದ ಹಂಚಿಕೆ ಇದು. ಇದನ್ನು ತಿಳಕೊಳ್ಳದೆ ಬೆ|| ಜಿನ್ನಾರವರಂಥವರು ಈ ಯೋಜನೆಯ ಪುರಸ್ಕಾರ ಮಾಡಿದ್ದೇ ಪರಮಾಶ್ಚರ್ಯದ ಸಂಗತಿ! ಮುಸಲ್ಮಾನ ಪ್ರಮುಖರು ಗಾಂಭೀರ್ಯದಿಂದ ಈ ವಿಷಯವನ್ನು ಆಲೋಚಿಸಿ ರಾಷ್ಟ್ರೀಯ ಆಂದೋಲನದಿಂದ ಅಲಿಪ್ತರಾಗಬೇಕಾಗಿ ನಮ್ಮ ವಿನಂತಿಯುಂಟು. ಜನಾಂಗವನ್ನು ಒಡೆಯುವದು ಮಹಾ ಘೋರ ಪಾಪವೆಂದು ನಾವು ನಮೂದಿಸುವದವಶ್ಯಕ

೪ ಮೈಸೂರ ಸಂಸ್ಥಾನದಲ್ಲಿ ಕಾಕವಿಯಿಂದ ಒಂದು ದ್ರವವನ್ನು ತಯಾರಿಸಿ ಅದನ್ನು ಮೋಟಾರುಗಳಿಗೆ ಪೆಟ್ರೋಲಿನ ಸಂಗಡ ಉಪಯೋಗಿಸಹತ್ತಿದ್ದಾರೆ. ಈ ಮೂಲಕ ಸಕ್ಕರೆ ಕಾರಖಾನೆಗಳಿಗೆ ಒಂದು ಆಶ್ರಯ ಸಿಕ್ಕುತ್ತದೆ ನಿರರ್ಥಕವಾಗಿ ಹೋಗುವ ಪದಾರ್ಥಕ್ಕೆ ಬೆಲೆ ಬಂದು ಆ ಮಾನದಿಂದ ಸಕ್ಕರೆಯ ಬೆಲೆ ತಗ್ಗಿಸಲು ಮಾರಾಟಕ್ಕೆ ಪೂರೈಸುತ್ತದೆ. ವಿದೇಶಿ ಸಕ್ಕರೆ ದೇಶಿ ಸಕ್ಕರೆಗಿಂತ ಅಗ್ಗವಾಗಲಿಕ್ಕೆ ಕಾಕವಿಯಿಂದ ತೆಗೆಯುವ ದ್ರವವೇ ಕಾರಣ. ವಿದೇಶದಲ್ಲಿ ಸಕ್ಕರೆ ಕಾರಖಾನೆಯವರು ಒಗೆಯುವ ಕಾಕವಿಯಿಂದ ದ್ರವ ತೆಗೆದು ಅದನ್ನು ರುಚಿಕರವಾದ ಮದ್ಯಗಳಲ್ಲಿ ರೂಪಾಂತರಿಸಿ ದುಡ್ಡು ಮಾಡುತ್ತಾರೆ. ಆ ಅನುಕೂಲತೆ ನಮ್ಮ ಹಿಂದುಸ್ಥಾನದಲ್ಲಿಲ್ಲ. ಅದರಿಂದ ನಮ್ಮಲ್ಲಿ ಸಕ್ಕರೆ ಉದ್ದಿಮೆ ಊರ್ಜಿತಾವಸ್ಥೆಗೆ ಬರಲೊಲ್ಲದು. ಈಗ ಪೆಟ್ರೋಲ ಎಣ್ಣೆಯ ಬರಗಾಲ, ಸೈನ್ಯ ಇಲಾಖೆಗೆ ಸಾಮಾನ್ಯವಾಗಿ ವರ್ಷಾಸನ ೭|| ಲಕ್ಷ ಗೆಲನು ಎಣ್ಣೆ ತಗಲುತ್ತಿತ್ತು. ಈಗ ಅದು ೨೦ ಲಕ್ಷಕ್ಕೆ ಏರುವದಾಗಿ ತಿಳಿಯುತ್ತದೆ. ಇನ್ನೂ ಏರಿಕೆಯ ಲಕ್ಷಣಗಳೇ. ಇಂಥ ಪ್ರಸಕ್ತಿಯಲ್ಲಿ ಕಾಕವಿಯಿಂದ ದ್ರವ ತೆಗೆದು ಅದನ್ನು ಪೆಟ್ರೋಲ್ ಕಂಪನಿಗಳಿಗೆ ಪೂರೈಸಿ ದೇಶದೊಳಗಿನ ಎಣ್ಣೆಯ ಭಂಡಾರವನ್ನು ಹೆಚ್ಚಿಸಿಕೊಳ್ಳಬೇಕಾಗಿ ಹಿಂದುಸ್ಥಾನದ ವರ್ತಕ ಸಂಘದವರು ಹಿಂದುಸ್ಥಾನ ಸರಕಾರಕ್ಕೆ ಬಿನ್ನವಿಸಿಕೊಂಡಿದ್ದಾರೆ. ಹಿಂದುಸ್ಥಾನ ಸರಕಾರವು ಈ ಉದ್ದಿಮೆ ನಡಿಸಲಿಕ್ಕೆ ಲಾಯಸನ್ಸುಗಳನ್ನು ಕೊಡಬೇಕಾಗಿ ನಮ್ಮ ವಿನಂತಿ ಇದೆ. ಇದನ್ನು ಪುರಸ್ಕರಿಸಿದರೆ ೬೫ ಲಕ್ಷ ರೂಪಾಯಿ ಪ್ರಯೋಜನವಾಗುವದಾಗಿ ವರ್ತಕ ಸಂಘದವರು ಲೆಕ್ಕ ಹಾಕಿದ್ದಾರೆ ಸಕ್ಕರೆಯ ಕಾರಖಾನೆಯ ವಿಚಾರವಾಯಿತಿದು. ಆದರೆ ದೇಶದೊಳಗೆ ಅಲ್ಲಲ್ಲಿ ಕಬ್ಬು ಬೆಳೆಯುತ್ತಿದೆ. ಜನರು ಅಲ್ಲಲ್ಲಿ ಆಲೆಮನೆಗಳನ್ನಿಟ್ಟು ಕಬ್ಬುಅರೆದು ಬೆಲ್ಲ ಮಾಡುತ್ತಾರೆ. ಬೆಲ್ಲ ಆಗುವಾಗ ಕಾಕವಿಯನ್ನು ಹೊರಗೆ ಚಲ್ಲಿಬಿಡುತ್ತಾರೆ. ಇದು ದೇಶದ ಸಂಪತ್ತಾಗಿದ್ದು ಚಲ್ಲಿ ಬಿಡುವದರಿಂದ ರೈತರಿಗೆ ಬಹಳ ನಷ್ಟವಾಗುತ್ತಿದೆ ಇದನ್ನೆಲ್ಲ ಉಪಯೋಗಿಸಲು ನಮ್ಮಲ್ಲಿಯ ಗ್ರಾಮೋದ್ಧಾರ ಮಂಡಳಿಯವರು ಆಲೋಚನೆ ಮಾಡಬೇಕು

೫ ಪ್ರತಿಯೊಂದು ಆಲೆಮನೆಗೆ ಲ್ಯಾಸೆನ್ಸು ಕೊಡುವದೂ ಆ ಲ್ಯಾಸೆನ್ಸಿನಲ್ಲಿ ವಿಧಿಸಿದ ನಡಾವಳಿಯನ್ನು ಲ್ಯಾಸೆನ್ಸದಾರರ ಕಡೆಯಿಂದ ಪಾಲಿಸಿಕೊಳ್ಳುವದೂ ಕಠಿಣವಾದ ಮಾತು. ಈ ದ್ರವದಲ್ಲಿ ಮದ್ಯಾಂಶವಿರುವದರಿಂದ ಕಳ್ಳತನಕ್ಕೆ ಹೆಚ್ಚಿನ ಅನುಕೂಲತೆ ದೊರೆಯುವ ಸಂಭವವುಂಟು. ಅದರಿಂದ ಸಾಧಾರಣ ತಾಲೂಕಿಗೊಂದರಂತೆ ಲ್ಯಾಸೆನ್ಸು ಕೊಟ್ಟು ಲ್ಯಾಸೆನ್ಸದಾರರು ತಮ್ಮ ತಾಲೂಕಿನೊಳಗಿನ ಕಾಕವಿಯನ್ನು ಒಟ್ಟು ಮಾಡಿ ಅದರಿಂದ ಈ ದ್ರವವನ್ನು ತೆಗೆಯುವಂತೆ ಉಪಾಯಯೋಜನೆ ಮಾಡಬೇಕು. ಅಂದರೆ ಸರಕಾರಕ್ಕೆ ಜಾಗ್ರತೆಯಿಡಲು ಅನುಕೂಲವಾಗಿ ನಷ್ಟವಾಗುವ ಸಂಪತ್ತು ಉಳಿತಾಯವಾಗುವಂತಿದೆ. ಬಡ ಜನರಿಗೆ ಕೆಲವು ಹಣ ಸಿಕ್ಕಿ ಪ್ರಯೋಜನವಾಗುವದು. ಪೆಟ್ರೋಲ ಎಣ್ಣೆಯ ಬರಗಾಲದಲ್ಲಿ ಈ ಯೋಜನೆಯಿಂದ ಒಳ್ಳೇ ಲಾಭವಾಗುವಂತಿದೆ. ಹಿಂದುಸ್ಥಾನ ಸರಕಾರವೂ ಪ್ರಾಂತಿಕ ಸರಕಾರಗಳೂ ಈ ವಿಷಯವನ್ನು ಗಾಂಭೀರ್ಯದಿಂದಲೂ ಸ್ಥೈರ್ಯದಿಂದಲೂ ಆಲೋಚನೆ ಮಾಡಬೇಕಾಗಿ ನಾವು ಸೂಚಿಸುತ್ತೇವೆ

ಹಿಂದೀ ರಾಜಕಾರಣ.

[ನಿರೀಕ್ಷಕನು ಕಲೆಹಾಕಿದ್ದು]

ಹಿಂದೀ ರಾಜಕಾರಣದ ಪಟ್ಟು ತೋರಗಾಣಿಕೆಗೆ ಇದ್ದ ಹಾಗೆಯೇ ಉಂಟು. ಸುಧಾರಣೆಯಾದದ್ದೇನು ಕಾಣಬರುವದಿಲ್ಲ. ಸತ್ಯಾಗ್ರಹದ ಮೇಲಿನ ನಿಗ್ರಹವನೂ ಕುಂದಲಿಲ್ಲ ಮಹಾತ್ಮರ ಮಾರ್ಗವೇ ಸರಿಯಾದ ಮಾರ್ಗವೆಂದೂ, ಅದರಿಂದಲೇ ಹಿಂದ-ಜನಾಂಗದ ಉದ್ಧಾರವಾದೀತೆಂದೂ ಸರದಾರ ವಲ್ಲಭಭಾಯಿ ಪಟೇಲ ಪ್ರಭೃತಿ ಲೋಕನಾಯಕರು ಒತ್ತಿಹೇಳುತ್ತಾರೆ. ಮುಂಬಯಿಯಲ್ಲಿ ಖಾದಿ ಸಮ್ಮೇಲನವನ್ನು ತೆರೆಯುವಾಗ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಕಾರ್ಯದರ್ಶಿಗಳಾದ ಆಚಾರ್ಯ ಕೃಪಾಲಾನಿಯವರು ಒಂದು ಮರ್ಮದ ಮಾತನ್ನು ಹೇಳಿದರು ಅಹಿಂಸೆಯಿಂದ ಜಗತ್ತು ಮುಂದೆ ಹೇಗೆ ನಡೆಯುವದೆಂದು ವಿಚಾರ ಮಾಡುವದಲ್ಲ, ಈಗಿನ ಹಿಂಸಾಚಾರದೊಳಗಿಂದ ಜಗತ್ತು ಹೇಗೆ ಬಾಳಿಕೊಂಡುಳಿಯುವದೆಂದು ತಿಳಕೊಳ್ಳುವದೇ ಮುಖ್ಯ ವಿಷಯವಾಗಿದೆ. ಹೀಗೆ ಪ್ರಸ್ತಾವನೆ ಮಾಡಿ, ಮಹಾತ್ಮರೇ ಸಮಾಜದ ಸಂಸ್ಥಾಪಕರೆಂದೂ, ಅವರನ್ನೇ ನಂಬಿಕೊಂಡು ಅವರ ಹೇಳಿಕೆಯನ್ನು ಪಾಲಿಸುವದರಲ್ಲಿಯೇ ಹಿಂದುಸ್ಥಾನದ ಮತ್ತು ಜಗತ್ತಿನ ಉದ್ಧಾರ ಹೊಂದಿಕೊಂಡಿರುವದಾಗಿಯೂ ನಿರ್ಧಾರದಿಂದ ಹೇಳಿದರು. ಸತ್ಯಾಗ್ರಹವನ್ನು ಯಾವದೇ ರೀತಿ ತಗ್ಗಿಸುವ ವಿಚಾರ ಮಹಾತ್ಮರಿಗಿಲ್ಲ ಬಿಡುಗಡೆ ಹೊಂದಿ ಬಂದ ಸತ್ಯಾಗ್ರಹಿಗಳು ಹೇಗೆ ನಡಕೊಳ್ಳಬೇಕು, ಪುನಃ ಯಾರು ಸತ್ಯಾಗ್ರಹ ಮಾಡಬೇಕು, ಸತ್ಯಾಗ್ರಹ ಮಾಡಲಾರದವರು ಯಾವ ಕೆಲಸವನ್ನು ಮಾಡಬೇಕು ಇವೇ ಮುಂತಾದ ವಿಚಾರಗಳು ರಾಷ್ಟ್ರೀಯ ಸಭೆಯವರಲ್ಲಿ ನಡೆಯುತ್ತಿರುವಾಗ ಹಿಂದೀ ರಾಜಕಾರಣ ಇದ್ದಂತೆಯೇ ಇರುತ್ತದೆಂದು ನಾನು ಹೇಳುತ್ತೇನೆ

ಆದರೆ ಹಿಂದುಸ್ಥಾನ ಸರಕಾರದ ಕಾರ್ಯಕಾರಿ ಮಂಡಳದ ವಿಸ್ತಾರವಾಗಿ ಸಭಾಸದರಾದ ಹಿಂದೀ ಮಹಾನುಭಾವರು ಒಟ್ಟುಗೂಡಿ ರಾಜಬಂದಿಗಳ ಬಿಡುಗಡೆಗಾಗಿ ಹಿಂದುಸ್ಥಾನ ಸರಕಾರಕ್ಕೆ ಬೇಗನೇ ಆಗ್ರಹ ಮಾಡುವರಂತೆ. ಆದರೆ ಇದಕ್ಕೆ ವಿಲಂಬವುಂಟು ಕೆಲ ಸಭಾಸದರು ಅಧಿಕಾರಾರೂಢರಾಗುವ ವರೆಗೆ ಅಕ್ಟೋಬರ ತಿಂಗಳು ಪೂರ್ತಿಯಾಗುವದು. ನವಂಬರ ತಿಂಗಳಲ್ಲಿ ಈ ಕುರಿತು ಆಲೋಚನೆ ನಡೆಯಬಹುದು ರಾಷ್ಟ್ರೀಯ ಸಭೆಯವರಿಗೆಲ್ಲ ಬಿಡುಗಡೆ ಮಾಡಿ, ಈಗಿನ ಸ್ಥಿತ್ಯಂತರದಲ್ಲಿ ರಾ. ಸಭೆಯ ಧೋರಣವನ್ನು ಬದಲಿಸುವ ಆಲೋಚನೆ ನಡೆಯಬೇಕಾಗಿ ಅನೇಕರ ಸೂಚನೆ. ರಾಜಬಂದಿಗಳಿಗೆ ಬಿಡುಗಡೆ ಮಾಡಲು ಹಿಂದುಸ್ಥಾನ ಸರಕಾರಕ್ಕೆ ಧೈರ್ಯವಿಲ್ಲ! ಹಿಂದುಸ್ಥಾನದ ರಾಜ್ಯಭಾರದ ಪಟ್ಟಿಗೆ ಸಾಮ್ರಾಜ್ಯ ಸರಕಾರವು ಕೈಕೊಂಡ ಸುಧಾರಣೆಗಳು ತೀರ ಕಡಿಮೆಯೆಂದು ಹಿಂದುಸ್ಥಾನ ಸರಕಾರಕ್ಕೆ ಗ್ರಹಿಕೆ ಉಂಟು ಇಂಥ ಪ್ರಸಕ್ತಿಯಲ್ಲಿ ರಾಜಬಂದಿಗಳಿಗೆ ಬಿಡುಗಡೆ ಮಾಡುವದರಿಂದ ಯುದ್ಧವಿರೋಧಿ ಆಂದೋಲನಕ್ಕೆ ಕಳೆಯೇರುವದೆಂದು ಹಿಂದುಸ್ಥಾನ ಸರಕಾರವು ಭೀತಿಗೊಳ್ಳುತ್ತದೆ. ಈಗಿನದಕ್ಕೂ ಮಿಗಿಲಾಗಿ ರಾಜ್ಯಸುಧಾರಣೆ ಮಾಡುವ ಆಲೋಚನೆ ಬ್ರಿಟಿಶರಿಗಿಲ್ಲವೆಂದು ಪಾರ್ಲಿಮೆಂಟಿನಲ್ಲಿ ಚರ್ಚಿಲ್ಲ ಪ್ರಧಾನರು ಮಾಡಿದ ಭಾಷಣದಿಂದ ತಮ್ಮಂಥ ಮಧ್ಯಸ್ಥರಿಗೆ ಏನೂ ಸಹಾಯವಾಗಲಿಲ್ಲವಾಗಿ ಹಿಂದುಸ್ಥಾನ ಸರಕಾರದ ಕಾರ್ಯಕಾರಿ ಮಂಡಳದಲ್ಲಿ ಹೊಸದಾಗಿ ಸೇರಿದ ಶ್ರೀ|| ನಲಿನಿರಂಜನ ಸರ್ಕಾರರವರು ಉದ್ಗರಿಸುತ್ತಾರೆ ಅಂದಬಳಿಕ ಸಾಮ್ರಾಜ್ಯ ಸರಕಾರದ ಧೋರಣದ ಕುರಿತು ಪ್ರತ್ಯೇಕವಾಗಿ ಹೇಳಬೇಕಾದುದೇನಿಲ್ಲ ಸಪ್ರು-ಪರಿಷತ್ತಿನ ಅಧ್ಯಕ್ಷರಾದ ಸರ್ ತೇಜಬಹಾದ್ದೂರ ಸಪ್ರೂರವರು ಚರ್ಚಿಲ್ಲರಿಗೆ ಒಂದು ತಂತಿ ಕಳಿಸಿ ಹಿಂದುಸ್ಥಾನಕ್ಕುಂಟಾದ ಅಸಮಾಧಾನವನ್ನು ತಿಳಿಸಿದ್ದಾರೆ, ರಾಜ್ಯಧೋರಣವನ್ನು ಬದಲಿಸಲಿಕ್ಕೆ ಚರ್ಚಿಲ್ಲ ಪ್ರಧಾನರಿಗೆ ವಿನಂತಿ ಮಾಡಿದ್ದಾರೆ. ಮಹಾತ್ಮರು ಚರ್ಚಿಲ್ಲ ಪ್ರಧಾನರ ಭಾಷಣದ ವಿಷಯ ಚಕಾರ ಶಬ್ದವನ್ನು ತೆಗೆಯಲಿಲ್ಲ. ಹಿಂದೀ ರಾಜಕಾರಣದ ಪರಿಸ್ಥಿತಿ ಇಷ್ಟೇ!

ಸರ್ವಾಧಿಪತಿ ಲಿನಲಿಥಗೋ ದೊರೆಗಳ ಕಾರಕೀರ್ದಿಯ ಅವಧಿ ಇದೇ ಬರುವ ಏಪ್ರಿಲ್ ತಿಂಗಳಲ್ಲಿ ಮುಗಿಯುತ್ತದೆ; ಅದು ಬೆಳೆಸಲ್ಪಡುವದಾಗಿ ಒಂದು ಭಾವನೆಯಿತ್ತು ಆದರೆ ಅದು ಬೆಳೆಸಲ್ಪಡಲಿಕ್ಕಿಲ್ಲವಾಗಿ ಪ್ರಕಟವಾಗಿದೆ ಸರ್ವಾಧಿಪತಿಗಳ ಸ್ಥಳದಲ್ಲಿ ಯಾರು ನೇಮಿಸಲ್ಪಡುತ್ತಾರೆಂದು ಈಗ ಚರ್ಚೆ ನಡೆದಿದೆ. ಹಿಂದುಸ್ಥಾನದಲ್ಲಿ ಅಷ್ಟು ಕುತೂಹಲವಿಲ್ಲ! ಇಂಗ್ಲಂಡ ದೇಶದಲ್ಲಿಯೇ ಈ ಕುರಿತು ಚರ್ಚೆ ಹೆಚ್ಚು! ಹಲಿಪೆಕ್ಸ ದೊರೆಗಳು ಅಂದರೆ ಈ ಹಿಂದೆ ಸರ್ವಾಧಿಪತಿಗಳಾಗಿದ್ದ ಇರ್ವಿನ ದೊರೆಗಳು ಪುನಃ ಇಲ್ಲಿ ಸರ್ವಾಧಿಪತಿಗಳಾಗಿ ಬರುತ್ತಾರಾಗಿ ಒಂದು ವಾರ್ತೆಯಿತ್ತು ಆಮೇಲೆ ಹೊಸ ಹಿಂದುಸ್ಥಾನ ಕಾಯಿದೆಯ ಜನಕರಾದ ಸರ್ ಸಮ್ಯುಯಲ ಹೋರರವರು ಸರ್ವಾಧಿಪತಿಗಳಾಗಿ ಬರುತ್ತಾರೆಂದು ಇನ್ನೊಂದು ವಾರ್ತೆ. ಈಗ ಅವರಿಬ್ಬರ ವಾರ್ತೆಗಳೂ ಹಿಂದಾಗಿ ಡ್ಯೂಕ ಅಫ್ ಡಿವ್ಹನಶಾಯರರವರು ಬರುತ್ತಾರೆಂದು ಒಬ್ಬರ ಹೇಳಿಕೆ, ಲೊರ್ಡ ಸೆಮ್ಯುಅಲರೆಂಬವರೊಬ್ಬರು ಬರುತ್ತಾರೆಂದು ಇನ್ನೊಬ್ಬರ ಹೇಳಿಕೆ ಅವರವರ ಗುಣವರ್ಣನೆಗಳನ್ನು ಅವರವರ ಪಕ್ಷಪಾತಿಗಳು ಪ್ರಕಟಿಸುತ್ತಿದ್ದಾರೆ ಈಗಿನ ರಾಜ್ಯಪದ್ಧತಿಯಲ್ಲಿ ಬ್ರಿಟಿಶ ದೇಶದೊಳಗಿನ ಧರ್ಮರಾಯರು ಸರ್ವಾಧಿಪತಿಗಳಾಗಿ ಬಂದರೂ ನಮ್ಮ ಹಿಂದ-ಜನಾಂಗಕ್ಕೆ ಸಿಗುವದು ಅಷ್ಟೇ ಮುಂಬಯಿಯ 'ಸೋಶಲ್ ವೆಲಫೇರ' ಪತ್ರಿಕೆಯಲ್ಲಿ, ಇಲ್ಲಿಯ ರಾಜ್ಯಸುಧಾರಣೆಯ ಸಲಹೆಗಾರರಾದ ಮಿ|| ಹೊಡಸನ್‌ರವರು ಹಿಂದುಸ್ಥಾನದೊಳಗೆ ನಿರಂಕುಶ ಪ್ರಭುತ್ವವನ್ನು ನೆಲಿಸುವದಕ್ಕಾಗಿ ಮಹಾಸಭಾಪರಲ್ಲಿ ಪ್ರಚಾರ ನಡಿಸುತ್ತಿದ್ದಾರಾಗಿ ಶ್ರೀ|| ಮುನಶಿಯವರು ಬರೆಯುತ್ತಾರೆ. ಪ್ರಧಾನ ಮಂಡಳಗಳು ಕಾಯಿದೆಕೌನ್ಸಿಲಿಗೆ ಅಧೀನವಾಗಿರಬಾರದು ಮುಸಲ್ಮಾನರ ಲೋಕಸಂಖ್ಯೆ ಎಷ್ಟಿದ್ದಾಗ್ಯೂ ಅವರಿಗೆ ಅರ್ಧಾಂಶದಂತೆ ಆಸನಗಳು ಸಿಗಬೇಕು, ದೇಶದೊಳಗೆ ಬೇರೆ ಬೇರೆ ಗುಂಪುಗಳನ್ನು ಮಾಡಿ, ಆ ಗುಂಪುಗಳ ಪ್ರತಿನಿಧಿಗಳನ್ನು ಕಾಯಿದೆ ಕೌನ್ಸಿಲಿನಲ್ಲಿ ನೇಮಿಸಿಕೊಳ್ಳಬೇಕು; ಬೆಳೆ ಹುಟ್ಟಿಸುವವರ ಪ್ರತಿನಿಧಿಗಳು, ಬೆಳೆಯ ಗಿರಾಕಿಗಳ ಪ್ರತಿನಿಧಿಗಳು, ಶಿಕ್ಷಿತ ವರ್ಗದ ಪ್ರತಿನಿಧಿಗಳು, ಕೂಲಿಕಾರರ ಪ್ರತಿನಿಧಿಗಳು, ಜಮಾನದಾರರ ಪ್ರತಿನಿಧಿಗಳು, ಹೀಗೆ ಜನಸಾಮಾನ್ಯರಲ್ಲಿ ಒಡಕುಗಳನ್ನು ಏರ್ಪಡಿಸಿ, ಅವರವರೊಳಗೆ ಕಲಹ ಹಚ್ಚಿ, ತಮ್ಮ ಕಾರಭಾರವನ್ನು ಸುಸೂತ್ರಮಾಡಿಕೊಳ್ಳಲು ಮಿ|| ಹೊಡಸನರವರು ದೇಶಸಂಚಾರವನ್ನು ಕೈಕೊಂಡಿದ್ದಾರೆ. ಅಂದ ಬಳಿಕ ಸರ್ವಾಧಿಪತಿಗಳು ಯಾರೇ ಆದರೂ ಹಿಂದ-ಸ್ವರಾಜ್ಯದ ಪಟ್ಟಿಗೆ ಫಲನಿಷ್ಪತ್ತಿಯೇನಾದೀತು? ಲಿನಲಿಥಗೋ ದೊರೆಗಳಂಥ ಉದಾರಧೀಗಳಿಂದ ಹಿಂದ ಜನಾಂಗಕ್ಕೇನು ದೊರೆಯಿತು? ಹಿಂದುಸ್ಥಾನ ಸರಕಾರದ ಸಭಾಸದರ ಸಂಖ್ಯೆ ಹೆಚ್ಚಾದ್ದರಿಂದ ಸರ್ವಾಧಿಪತಿ ಲಿನಲಿಥಗೋ ದೊರೆಗಳು ಹಿಂದೀ ಸಭಾಸದರಿಗೆ ಹೆಚ್ಚಿನ ಮಾನ್ಯತೆ ಕೊಡುವರೆಂದು ಎಣಿಸಲಾಗಿತ್ತು ಹಿಂದುಸ್ಥಾನ ಸರಕಾರದ ಕಾನೂನಿನಂತೆ ಕಾರ್ಯಕಾರಿ ಮಂಡಳದ ಉಪಾಧ್ಯಕ್ಷರನ್ನು ನೇಮಿಸುವ ಅಧಿಕಾರ ಸರ್ವಾಧಿಪತಿಗಳದು. ಉಪಾಧ್ಯಕ್ಷರಿಗೆ ಹೆಚ್ಚಿನ ಅಧಿಕಾರವೇನಿಲ್ಲ! ಸರ್ವಾಧಿಪತಿಗಳ ಅಭಾವದಲ್ಲಿ, ನಡುಮಧ್ಯದ ಖುರ್ಚಿಯ ಮೇಲೆ ಕೂಡಲಾಯಿತು! ಆ ಗೌರವವನ್ನು ಸರ್ವಾಧಿಪತಿಗಳು ಸರ್ ಅಕಬರ ಹೈದರಿಯವರಿಗಾಗಲಿ ಶ್ರೀ|| ಮಾಧವರಾವ ಅಣೆಯವರಿಗಾಗಲಿ ಕೊಡುವರೆಂದು ಕೆಲವರು ತಮ್ಮಷ್ಟಕ್ಕೆ ಭಾವಿಸಿಕೊಂಡಿದ್ದರು. ಆದರೆ ಸರ್ವಾಧಿಪತಿಗಳು ಅದನ್ನು ಸರ್ ರೆಜಿನೊಲ್ಡ ಮೆಕ್ಸವೆಲ್ಲರೆಂಬ ಯುರೋಪಿಯನ ಸಭಾಸದರಿಗೇ ಕೊಟ್ಟು, ಹಿಂದೀಯರನ್ನು ಸರ್ವಾಧಿಪತಿಗಳು ನಂಬುವದಿಲ್ಲವಾಗಿ ಸ್ಪಷ್ಟ ಮಾಡಿದ್ದಾರೆ. ಈ ಪ್ರಕಾರ ಸ್ಥಿತಿಯಿರುವದರಿಂದ, ಹಿಂದೀ ರಾಜಕಾರಣ ಸುಧಾರಿಸುವ ಲಕ್ಷಣಗಳಿಲ್ಲ; ಬ್ರಿಟಿಶರ ದಯೆಯಿಂದ ಹಿಂದ-ಜನಾಂಗಕ್ಕೆ ಏನೊಂದೂ ರಾಜ್ಯಾಧಿಕಾರ ದೊರೆಯುವ ಲಕ್ಷಣಗಳು ಸದ್ಯಕ್ಕೆ ತೋರುವದಿಲ್ಲ

ಸ್ಥಾನಿಕ ವೃತ್ತಾಂತ.

(೧ನೇ ಪುಟದಿಂದ ಮುಂದರಿಸಿದ್ದು.)

ಮಹತ್ವವನ್ನು ಮನದಟ್ಟಾಗುವಂತೆ ತಿಳಿಸಿ ಹೇಳಿದರು. ಈ ಹೊಸ ಶಾಲೆಯಲ್ಲಿ ಪ್ರಾಯಸ್ಥರಿಗೂ ಕಲಿಸುವ ವ್ಯವಸ್ಥೆ ಮಾಡಲಾಗಿದೆ ಈಗಾಗಲೇ ೩೨ ಮಕ್ಕಳೂ ೧೮ ಮಂದಿ ಪ್ರಾಯಸ್ಥರೂ ಶಾಲೆಯಲ್ಲಿ ದಾಖಲಾಗಿದ್ದಾರೆ.

(ತಾ. ೧೨-೯-೪೧) ಮಳೆ ಏನೂ ಇಲ್ಲ! ರೈತರು ನಿರಾಶೆಗೊಳ್ಳುತ್ತಿದ್ದಾರೆ ಅಡಿಕೆ ಮರಗಳಿಗೆ ಕೊಳೆ ಬಂದಿದೆ. ಸರಕಾರ ತೀರ್ವೆ ಕೊಡುವಷ್ಟು ಬೆಳೆಯಾದರೂ ಕೈಗೆ ಬರುವದೆಂದು ಹೇಳಲಾಗುವದಿಲ್ಲ!

ಈ ವಾರ ಇಲ್ಲಿಯ ಚಿಕಿತ್ಸಾಲಯಕ್ಕೆ ಡಾ|| ಮೇಥಾರೆಂಬ ಹೊಸ ಗುಜರಾಥಿ ಡಾಕ್ಟರರು ಬಂದಿದ್ದಾರೆ. ಅವರಿಗೆ ಕನ್ನಡ, ಕೊಂಕಣಿ ಭಾಷೆಗಳು ಬರುವದಿಲ್ಲಾದ್ದರಿಂದ ಸ್ವಲ್ಪ ತೊಂದರೆಯಾಗಿದೆ

ವಿನಂತಿ.

ಇದೇ ಬರುವ ವಿಜಯಾ ದಶಮಿ ತಾ. 30-9-1941ನೇ ಮಂಗಳವಾರ ದಿವಸ ಮಧ್ಯಾನ್ಹ 4 ಘಂಟೆಗೆ ನಮ್ಮ ಕುಮಟಾ ತಾಲೂಕ ಹವ್ಯಕ ವಿದ್ಯಾವರ್ಧಕ ಸಂಘದ 3ನೇ ವಾರ್ಷಿಕ ಜನ್ಮೋತ್ಸವವನ್ನು ತಾಲೂಕ ಮಜಕೂರ ಊರಕೇರಿ ಗ್ರಾಮದ ಕೊಡ್ಲಕೆರೆ ಮಠದಲ್ಲಿ ಮಾಡಬೇಕಾಗಿ ನಿಶ್ಚಯಿಸಿದೆ. ಕಾರಣ ಸಂಘದ ಯಾವತ್ತು ಮೆಂಬರರು ತಪ್ಪದೆ ಒಂದು ಉತ್ಸವವನ್ನು ಯಶಸ್ವಿಯಾಗಿ ಸಾಂಗಗೊಳಿಸಿದ ಶ್ರೇಯಸ್ಸಿಗೆ ಪಾತ್ರರಾಗಬೇಕಾಗಿ ವಿನಂತಿ.

N. T. HEGDE,
ಅಧ್ಯಕ್ಷ.

ಕಾನಡಾವೃತ್ತ.

ಮಿತಿ ವೃಷ ಸಂವತ್ಸರ ಭಾದ್ರಪದ ಕೃ॥ ೯ಮಿ, ಸೋಮವಾರ.

ಆಶಾವಾದಿಗಳಿಗೆ ನಿರಾಶೆ!

ಮಂಗಳವಾರ ಪಾರ್ಲಿಮೆಂಟಿನಲ್ಲಿ ಬ್ರಿಟಿಶ ಮುಖ್ಯ ಪ್ರಧಾನರಾದ ಮಿ॥ ಚರ್ಚಿಲ್ಲವರು ಯುದ್ಧ ಪರಿಸ್ಥಿತಿಯನ್ನು ಸಮಾಲೋಚಿಸುವಾಗ ಹಿಂದ-ಜನಾಂಗವನ್ನು ಸಂತೈಸಲು ಉದಾರಧೀಗಳಾಗಿ ವರ್ತಿಸುವರೆಂದು ಬ್ರಿಟಿಶರ ಅಭಿಮಾನಿಗಳನೇಕರು ಭಾವಿಸಿದ್ದರು. ನಮಗೂ ಅದೇ ಪ್ರಕಾರ ಒಂದು ಆಶೆಯಿತ್ತು. ಆದರೆ ಆ ಭಾಷಣ ಕೇಳಿ ಪಂ॥ ಮದನ ಮೋಹನ ಮಾಲವೀಯ ಪ್ರಭೃತಿ ಮುಂದಾಳುಗಳಿಗೆ ತೀವ್ರ ವ್ಯಸನವಾಗಿದೆ; ಅಂತೆಯೇ ನಮಗಾದರೂ ಕಡು ವ್ಯಸನವಾಗಿದೆ. ಅಟ್ಲಾಂಟಿಕ ಮಹಾಸಾಗರದಿಂದ ರೂಝವೆಲ್ಟ-ಚರ್ಚಿಲ್ಲರು ಮಾಡಿದ ಲೋಕಸ್ವಾತಂತ್ರ್ಯದ ಘೋಷಣೆ ಹಿಂದ-ಜನಾಂಗಕ್ಕೆ ಅನ್ವಯಿಸುವದಿಲ್ಲವಾಗಿಯೂ ೧೯೪೦ನೇ ಅಗಸ್ಟ ತಿಂಗಳಿನಲ್ಲಿ ಸರ್ವಾಧಿಪತಿಗಳ ಕಾರ್ಯಕಾರಿ ಮಂಡಳದ ವಿಸ್ತಾರ ಯೋಜನೆಯೇ ಹಿಂದ-ಜನಾಂಗದ ಸ್ವಾತಂತ್ರ್ಯದ ಹಕ್ಕಿನ ಪತ್ರಿಕೆಯೆಂದೂ ಚರ್ಚಿಲ್ಲರು ಒಳ್ಳೇ ದೊಡ್ಡಸ್ತಿಕೆಯಿಂದ ಹೇಳಿದ ಮಾತನ್ನು ಕೇಳಿ ಬ್ರಿಟಿಶರು ಹಿಂದ-ಜನಾಂಗದ ಪರಿಹಾಸ್ಯ ಮಾಡುತ್ತಾರೆಂದು ವಿಚಾರವಂತರು ಗ್ರಹಿಸದಿರರು. ೧೯೪೦ ನೇ ಇಸ್ವಿ ಅಗಸ್ಟ ತಿಂಗಳ ಘೋಷಣೆ ಗೌರವಹೀನವಾದದ್ದೆಂದೂ ಅಧಿಕಾರಹೀನವಾದದ್ದೆಂದೂ ಈವಾಗ ಲೋಕಾನುಭವನದ ಸಂಗತಿ. ಅದನ್ನು ಪ್ರತ್ಯಕ್ಷ ಪಾಲಿಸಿದ ಬಳಿಕ ಆ ಯೋಜನೆಯಲ್ಲಿ ಏನೂ ಚೈತನ್ಯವಿಲ್ಲವಾಗಿ ತಾನೇ ಸಿದ್ಧವಾಗಿದೆ. ಹಿಂದೀ ಸಭಾಸದರ ಸಂಖ್ಯೆ ಮಿಗಿಲಾದರೂ ಆ ಸಭಾಸದರ ಕೈಯಲ್ಲಿ ಯಾವದೊಂದು ಮಹತ್ವದ ಖಾತೆಗಳು ಕೊಡೋಣಾಗಲಿಲ್ಲ. ಅವೆಲ್ಲ ಮುಂಚಿನಂತೆಯೇ ಮೆಕ್ಸವೆಲ್-ಕ್ರೋ ಪ್ರಭೃತಿ ಯುರೋಪಿಯನ್ನರ ಕೈಯಲ್ಲೇ ಇವೆ. ಇಂಥ ಪ್ರಸಕ್ತಿಯಲ್ಲಿ ಚರ್ಚಿಲ್ಲ ಮಂತ್ರಿಗಳು ಹಿಂದುಸ್ಥಾನ ಸರಕಾರದ ಯೋಜನೆಯೇ ಹಿಂದ-ಸ್ವಾತಂತ್ರ್ಯ ಹಕ್ಕಿನ ಶಾಸನವೆಂದು ಎಷ್ಟೊ ಗೌರವಿಸಿದಾಗ್ಯೂ ಅದರಿಂದ ಹಿಂದ-ಜನಾಂಗಕ್ಕೆ ಸಮಾಧಾನವಾಗದು. ಅಖಿಲ ಭಾರತೀಯ ಪಾರ್ಲಿಮೆಂಟರಿ ಬೋರ್ಡಿನ ಚಾಲಕರಾದ ಬಾಬು ರಾಜೇಂದ್ರ ಪ್ರಸಾದರು ನುಡಿದಂತೆ, ರಾಷ್ಟ್ರೀಯ ಸಭೆಯ ಭೂಮಿಕೆಯನ್ನು ಚರ್ಚಿಲ್ಲರು ಸಮರ್ಥಿಸಿದ್ದಾರೆಂದು ನಾವು ಒಪ್ಪುತ್ತೇವೆ. ಬ್ರಿಟಿಶರು ಹಿಂದ-ಜನಾಂಗಕ್ಕೆ ಸ್ವಸಂತೋಷದಿಂದ ಸ್ವಾತಂತ್ರ್ಯ ಕೊಡಬಯಸುವದಿಲ್ಲವೆಂದು ಸಿದ್ಧವಾಗಿರುವದಾಗಿ ಬಾಬು ರಾಜೇಂದ್ರ ಪ್ರಸಾದರ ನಿಶ್ಚಿತಾಭಿಪ್ರಾಯ. ಹಿಂದ-ಜನಾಂಗದ ಮೇಲಿನ ಪ್ರಭುತ್ವವನ್ನು ಸುಖದಿಂದಾಗಲಿ ಸಂತೋಷದಿಂದಾಗಲಿ ಒಡಂಬಡಿಕೆಯಿಂದಾಗಲಿ ಹಿಂದವಾಸಿಗಳಿಗೆ ಬಿಟ್ಟುಕೊಡಲಿಕ್ಕೆ ಬ್ರಿಟಿಶರು ಸಿದ್ಧರಿಲ್ಲವಾಗಿ ಚರ್ಚಿಲ್ಲರು ಸ್ಪಷ್ಟಗೊಳಿಸಿದ್ದಾರೆಂದು ಡಾ॥ ರಾಜೇಂದ್ರ ಪ್ರಸಾದರು ಪ್ರಕಟಿಸುತ್ತಾರೆ. ಚರ್ಚಿಲ್ಲರ ಭಾಷಣದಿಂದ ರಾಜೇಂದ್ರ ಪ್ರಸಾದರ ಅಂಬೋಣ ಸಿದ್ಧವಾಗುತ್ತಿರುವಾಗ ಸಮ್ಮಂಧ ಬ್ರಿಟಿಶರ ಅಭಿಮಾನಿಗಳಿಗೆ ರಾಜೇಂದ್ರ ಪ್ರಸಾದರ ಅಂಬೋಣವನ್ನು ಖಂಡಿಸುವದು ದುರಾಗ್ರಹವಾದದು. ಹಿಂದ ಜನಾಂಗದಲ್ಲಿ ಅಟ್ಲಾಂಟಿಕ ಮಹಾಸಾಗರದ ಘೋಷಣೆಯಂತೆ ರಾಜ್ಯಭಾರ ನಡೆದದ್ದಾಗಿ ಭಾರತ ಮಂತ್ರಿಗಳು ಗುರುವಾರ ಪಾರ್ಲಿಮೆಂಟಿನಲ್ಲಿ ನುಡಿದ ಮಾತನ್ನು ಕೇಳಿ ಇದೆಂಥ ಹಗಲು-ಸುಳ್ಳುತನವೆಂದು ತಿಳಿಯದೆ ನಾವು ದಿಗಿಲು ಬಿದ್ದಿದ್ದೇವೆ. ಆ ಘೋಷಣೆ ಹಿಂದುಸ್ಥಾನಕ್ಕೆ ಅನ್ವಯಿಸುವದಿಲ್ಲವಾಗಿ ಪ್ರತಿಪಾದಿಸುವ ಚರ್ಚಿಲ್ಲರು ಸತ್ಯವಂತರೋ? ಆ ಘೋಷಣೆಯ ತತ್ವಗಳಿಗೆ ಅನುಸಾರವಾಗಿ ಹಿಂದುಸ್ಥಾನದಲ್ಲಿ ರಾಜ್ಯಭಾರ ನಡೆದಿದೆಯೆಂದು ಹೇಳುವ ಭಾರತ ಮಂತ್ರಿಗಳು ಸತ್ಯವಂತರೋ? ಎಂಬ ಮಾತು ನಮಗೆ ತಿಳಿಯದಾಗಿದೆ. ಸ್ವಾರ್ಥಪರಾಯಣ ಸಾಮ್ರಾಜ್ಯ ಕರ್ತರಿಗೆ ಸತ್ಯಾಸತ್ಯಗಳ ಪರಿವೆಯಿಲ್ಲವೆಂದು ಹಿಂದ-ಜನಾಂಗವು ಎಣಿಸಿ, ಬ್ರಿಟಿಶರ ಮೇಲಿರುವ ಜನಾಂಗದ ಪೂಜ್ಯತೆ ನಷ್ಟವಾಗುವದು. ಕಾಯಿದೆ ಕೌನ್ಸಿಲುಗಳ ಚುನಾವಣೆಗಳು ಸದ್ಯಕ್ಕೆ ಕ್ರಮದಂತೆ ನಡೆಯಬೇಕಾಗಿದ್ದವು. ಅವನ್ನು ಈಗ ನಡೆಸಿದರೆ ಮಹಾತ್ಮರ ಯುದ್ಧಯತ್ನ ವಿರೋಧಕ್ಕೆ ಆಶ್ರಯ ಕೊಟ್ಟಂತಾಗುವದೆಂದು ಭಾರತ ಮಂತ್ರಿಗಳು ಪಾರ್ಲಿಮೆಂಟಿಗೆ ಹೇಳಿ, ಚುನಾವಣೆಯ ಅವಧಿಯನ್ನು ಯುದ್ಧ ಮುಗಿದ ೧ ವರ್ಷದ ವರೆಗೆ ಬೆಳಿಸಿಕೊಂಡಿದ್ದಾರೆ. ಇವರ ಮೇಲಿಂದ ಸಾಮ್ರಾಜ್ಯಕರ್ತರಿಗೆ ಹಿಂದ-ಜನಾಂಗದ ಅಂತರಂಗ ಗೊತ್ತಾಗಿರುತ್ತದಾಗಿ ನಾವು ತಿಳಿಯುತ್ತೇವೆ. ಹಿಂದುಸ್ಥಾನವು ಸಾಮ್ರಾಜ್ಯಕರ್ತರ ಯುದ್ಧಯತ್ನದಲ್ಲಿ ಮನೋನಿರ್ಧಾರದಿಂದ ಸೇರ್ಪಡೆಯಾಗಲಿಲ್ಲವಾಗಿಯೂ ಬಹುಜನಸಮಾಜವು ಯುದ್ಧಯತ್ನವನ್ನು ಮನಸ್ಸಿನಿಂದ ವಿರೋಧಿಸುತ್ತದಾಗಿಯೂ ಸ್ಪಷ್ಟವಾಗುತ್ತದೆ. ಸಾಮ್ರಾಜ್ಯಕರ್ತರು ಈ ವಿರೋಧವನ್ನು ಕಣ್ಮರೆ ಮಾಡಲು ಹವಣಿಸುತ್ತಾರಾಗಿಯೂ ಚುನಾವಣೆಯಿಂದ ಆ ವಿರೋಧ ಸ್ಫೋಟವಾಗಬಹುದಾಗಿ ಭೀತಿಗೊಂಡು ಚುನಾವಣೆಯ ಕ್ರಮಕ್ಕೆ ತಡೆಹಾಕಿದ್ದಾರಾಗಿಯೂ ಸ್ಪಷ್ಟವಾಗುತ್ತದೆ. ಈ ಸೂಚನೆಯ ಚರ್ಚೆಯ ಕಾಲಕ್ಕೆ ಕೆಲ ಸಭಾಸದರು ಭಾರತ ಮಂತ್ರಿಗಳ ಮೇಲೆ ನೇರವಾಗಿ ನಿರಂಕುಶ ಪ್ರಭುತ್ವಸ್ಥಾಪನೆಯ ಆರೋಪ ಹೊರಿಸಿ ಈಗಿನ ದಿನಮಾನದಲ್ಲಿ ಬ್ರಿಟಿಶರು ಈ ರೀತಿ ವರ್ತಿಸಿ ಹಿಂದ-ಜನಾಂಗವನ್ನು ವಿಮನಸ್ಕಗೊಳಿಸುವದು ಸುರಕ್ಷಿತವಲ್ಲೆಂದು ಎಚ್ಚರಿಕೆ ಕೊಟ್ಟರು. ಆದಾಗ್ಯೂ ಭಾರತ ಮಂತ್ರಿಗಳು ಸಮರ್ಪಕ ಉತ್ತರ ಕೊಡದೆ ರಾಜ್ಯಧ್ಯೇಯದ ಪುನರುಕ್ತಿ ಮಾಡಿ ಚರ್ಚೆಯನ್ನು ಮುಗಿಸಿದರು. ಬ್ರಿಟಿಶ ಪಾರ್ಲಿಮೆಂಟಿನಿಂದ ಹಿಂದುಸ್ಥಾನದ ಉದ್ಧಾರವಾಗುವದಾಗಿ ನಮಗೇನೂ ನಂಬಿಗೆಯಿಲ್ಲ. ಆ ಪಾರ್ಲಿಮೆಂಟಿನಲ್ಲಿ ಹಿಂದುಸ್ಥಾನದ ಬಗ್ಗೆ ಆದರಭಾವವಿಲ್ಲ. ಕೆಲವು ಸಭಾಸದರು ವಿರೋಧದ ಭಾಷಣ ಮಾಡಲು ಅಂತಃಕರಣಹೀನ ಭಾಷಣ ಮಾಡಿ ಪಾರ್ಲಿಮೆಂಟಿನಲ್ಲಿ ಹಿಂದುಸ್ಥಾನದ ಬಗ್ಗೆ ಘನಘೋರ ಸಂಗ್ರಾಮ ನಡೆಯುತ್ತದಾಗಿ ನಾಟಕ ಮಾಡುತ್ತಾರೆ. ಚರ್ಚಿಲ್ಲ ಪ್ರಧಾನರ ರಾಜ್ಯಧೋರಣದಲ್ಲಿ ತಿದ್ದುಪಡಿ ಮಾಡಿಕೊಳ್ಳಬೇಕೆಂಬ ಲವಲವಿಕೆ ಈ ಸಭಾಸದರಿಗಿಲ್ಲ. ಚರ್ಚಿಲ್ಲ ಪ್ರಧಾನ ಮಂಡಳವು - ಅಷ್ಟೇಕೆ, ಯಾವತ್ತೂ ಪ್ರಧಾನ ಮಂಡಳಗಳು - ಹಿಂದುಸ್ಥಾನದ ರಾಜ್ಯಧೋರಣವನ್ನು ವಿಶಾಲ ಬ್ರಿಟಿಶ ಜನತೆಯ ಹಿತರಕ್ಷಣೆಯ ವಿಚಾರದಿಂದಲೇ ನಡೆಸುತ್ತವಾಗಿ ಪಾರ್ಲಿಮೆಂಟಿಗೆ ಸಮಾಧಾನವುಂಟು. ಆದರಿಂದ ಪ್ರಧಾನ ಮಂಡಳಗಳೇ ಹಿಂದುಸ್ಥಾನದ ರಾಜ್ಯಧೋರಣವನ್ನು ತಿದ್ದುಪಡಿ ಮಾಡಲು ವಿಚಾರ ಮಾಡಿದರೆ ಮಾತ್ರ ರಾಜ್ಯಭಾರದಲ್ಲಿ ಸ್ಥಿತ್ಯಂತರವುಂಟಾದೀತು. ಪಂ॥ ಮದನ ಮೋಹನ ಮಾಲವೀಯರವರು ಸುವಿಚಾರ ಮಾಡಲಿಕ್ಕೆ ಪುನಃ ಚರ್ಚಿಲ್ಲರಿಗೆ ವಿನಂತಿ ಮಾಡುವ ಕಾರಣವಿದೇ. ಪ್ರಧಾನ ಮಂಡಳವು ಯಾವದೊಂದು ರಾಜ್ಯಯೋಜನೆಯನ್ನು ಪುರಸ್ಕರಿಸಿದರೆ ಪಾರ್ಲಿಮೆಂಟು ಅದನ್ನು ಕಣ್ಣುಮುಚ್ಚಿ ಮನ್ನಿಸುವದೆಂದು ನಮ್ಮದೂ ಅಭಿಪ್ರಾಯವುಂಟು. ಈಗಲೂ ಮಿಂಚಿ ಹೋಗಿಲ್ಲ. ಚುನಾವಣೆಯ ಅವಧಿಯನ್ನು ಮುಂದೂಡುವ ಸೂಚನೆಯ ಚರ್ಚೆಯ ಕಾಲಕ್ಕೆ ಪಾರ್ಲಿಮೆಂಟಿನ ಸಭಾಸದರಾದ ಸರ್ ಸ್ಟೆನಲೀ ರೀಡರವರು ನುಡಿದಂತೆ, ಭಾರತ ಮಂತ್ರಿಗಳೂ ಸರ್ವಾಧಿಪತಿಗಳೂ ಹಿಂದ-ಜನಾಂಗವನ್ನು ಸಂತೈಸುವ ಪ್ರಯತ್ನವನ್ನು ಇನ್ನೂ ನಡೆಸಿದ್ದಾರೆಂದು ನಾವು ನಂಬುತ್ತೇವೆ. ಸರ್ ಸ್ಟೆನಲೀ ರೀಡರವರು ಮುಂಬಯಿಯ ‘ ಟೈಮ್ಸ ಆಫ್ ಇಂಡಿಯಾ ’ ಪತ್ರಿಕೆಯ ಸಂಪಾದಕರಾಗಿ ದೀರ್ಘ ಕಾಲದ ತನಕ ಹಿಂದುಸ್ಥಾನದಲ್ಲುಳಿದು ಹಿಂದುಸ್ಥಾನದ ಪರಿಸ್ಥಿತಿಯ ಪರಿಚಯವನ್ನು ಮಾಡಿಕೊಂಡಿದ್ದಾರೆ. ಸರ್ವಾಧಿಪತಿ ಲಿನಲಿಥಗೋ ದೊರೆಗಳು ಇದೇ ಬರುವ ಏಪ್ರಿಲ ತಿಂಗಳಲ್ಲಿ ಅಧಿಕಾರದಿಂದ ನಿವೃತ್ತರಾಗುತ್ತಾರೆ. ಇಂಥ ಸಮಯದಲ್ಲಿ ಹಿಂದಜನಾಂಗವನ್ನು ಈಗಿನ ಸ್ಥಿತಿಯಲ್ಲಿ ಅಸುಖದಲ್ಲಿಟ್ಟು, ಸರ್ವಾಧಿಪತಿಗಳು ನಿವೃತ್ತರಾಗಲಿಕ್ಕಿಲ್ಲವಾಗಿ ಒಂದು ಭಾವನೆಯುಂಟು. ಚರ್ಚಿಲ್ಲರ ಭಾಷಣದ ಕುರಿತು ಮಹಾತ್ಮರು ಮೌನ ತಳೆದಿದ್ದಾರೆ. ಇವರ ಮೇಲಿಂದ ಒಡಂಬಡಿಕೆಯ ಪ್ರಯತ್ನಗಳು ಗೌಪ್ಯದಿಂದ ನಡೆದಿರಬೇಕಾಗಿ ಅನುಮಾನವುಂಟಾಗುತ್ತದೆ. ಸರ್ವಾಧಿಪತಿಗಳ ಕಾರ್ಯಕಾರಿ ಮಂಡಳದ ಸಭಾಸದರು ಒತ್ತಟ್ಟಿಗೆ ಕೂಡಿಕೊಂಡು ಸ್ಥಾಪಿಸಿದ ರಾಜ್ಯಯೋಜನೆಯನ್ನು ಸರ್ವಾಧಿಪತಿಗಳಿಗೆ ಸಾದರಪಡಿಸಲಿದ್ದಾರಾಗಿ ಪಾಟನಾದಿಂದ ಒಂದು ವಾರ್ತೆ ಹಬ್ಬಿದೆ. ಇವೆಲ್ಲ ನಿರಾಶೆಯೊಳಗಿನ ಆಶಾತಂತುಗಳು! ಆದರೆ ಈಗಿನ ಮಟ್ಟಿಗೆ ಆಶಾವಾ

ದಿಗಳೆಲ್ಲರೂ ನಿರಾಶರಾಗಿದ್ದಾರೆ. ಬ್ರಿಟಿಶರು ಹಿಂದುಸ್ಥಾನಕ್ಕೆ ಏನೊಂದೂ ಅಧಿಕಾರ ಕೊಡಲಿಕ್ಕಿಲ್ಲವಾಗಿ ಗೃಹೀತ ಹಿಡಿದು ಹಿಂದ-ಜನಾಂಗವು ಸಾಮ್ರಾಜ್ಯವಾದಿಗಳಿಗಾಗಿ ಯುದ್ಧಯತ್ನವನ್ನು ನಡಿಸಬೇಕಾದ ಪ್ರಸಂಗವುಂಟು. ಇದರ ಶಕ್ಯಾಶಕ್ಯತೆ, ಯುಕ್ತಾಯುಕ್ತತೆಯನ್ನು ನಾವು ಈ ಹಿಂದೆ ಚರ್ಚಿಸಿ, ಜನಾಂಗದ ಮೇಲೆ ಈ ಪರಿ ಒತ್ತಾಯ ಮಾಡುವದು ಸಾಮ್ರಾಜ್ಯಕರ್ತರಿಗೆ ಭೂಷಣವಲ್ಲವಾಗಿ ನಿಗ್ರಹದಿಂದ ಸೂಚಿಸಿದ್ದೇವೆ. ಹಿಟ್ಲರನು ಮಹಾಯುದ್ಧದಿಂದ ಗೆದ್ದ ಪ್ರದೇಶಗಳಲ್ಲಿ ಜನಗಳಿಗೆ ಪೀಡಿಸಿ, ಸ್ವಾರ್ಥಸಾಧಿಸುವ ಬೇರೆ ಬೇರೆ ಪ್ರಕಾರಗಳನ್ನು ವರ್ಣಿಸಿ ಹಿಂದವಾಸಿಯಲ್ಲಿ ತಿರಸ್ಕಾರವನ್ನುಂಟು ಮಾಡಬಯಸುವ ಸಾಮ್ರಾಜ್ಯಕರ್ತರು ಹಿಂದ-ಜನಾಂಗದ ಮೇಲೆ ಬಲಾತ್ಕಾರ ಮಾಡುವದು ವಿಚಾರರಮಣೀಯವಲ್ಲ. ಚರ್ಚಿಲ್ಲರು ಈಗಲಾದರೂ ಸದ್ಬುದ್ಧಿ ತಳೆದು ಹಿಂದ-ಜನಾಂಗಕ್ಕೆ ಸ್ವರಾಜ್ಯಾಧಿಕಾರ ಕೊಟ್ಟು ಯುದ್ಧಯತ್ನವನ್ನು ವಿಶೇಷ ರಭಸದಿಂದ ಸಾಗಿಸಿಕೊಳ್ಳಬೇಕು. ಯುದ್ಧ ಗೆದ್ದರೆ ಮಾತ್ರ ಬ್ರಿಟಿಶರ ಬಣ್ಣ; ಲೋಕಕ್ಕೂ ರಕ್ಷಣೆ! ಹಿಂದ-ಜನಾಂಗಕ್ಕೆ ಸ್ವಾತಂತ್ರ್ಯ ಹೇಗೂ ಸಿಗಲೇಬೇಕು! ಸ್ವಾತಂತ್ರ್ಯದ ಈ ಮನ್ವಂತರದಲ್ಲಿ ಹಿಂದ-ಜನಾಂಗವು ತಾನಾಗಿ ಅದನ್ನು ಪಡಕೊಳ್ಳುವದು ಖಂಡಿತ! ಚರ್ಚಿಲ್ಲ ಪ್ರಧಾನರು ಸುವಿಚಾರ ಮಾಡಬೇಕಾಗಿಯೂ ಆಶಾವಾದಿಗಳಿಗಾದ ನಿರಾಶೆಯನ್ನು ದೂರಪಡಿಸಬೇಕಾಗಿಯೂ ನಾವು ಅಂತಃಕರಣಪೂರ್ವಕವಾಗಿ ಸೂಚಿಸುತ್ತೇವೆ.

*

ಬ್ರಿಟಿಶರೀಗ ಬಹು ಪ್ರಬಲರಾಗಿದ್ದಾರೆ!

[ನಿರೀಕ್ಷಕನು ಬರೆದುದು.]

ಕಳೆದ ವರ್ಷಕ್ಕಿಂತ ಈ ವರ್ಷ ಬ್ರಿಟಿಶರು ಪ್ರಬಲರಾಗಿರುತ್ತಾರೆಂದು ತಿಳಿಸಲು ನನಗೊಳ್ಳೇ ಉಲ್ಹಾಸವಾಗುತ್ತದೆ. ಕಳೆದ ವರ್ಷ ೧ ಲಕ್ಷ ಸೈನಿಕರು ಸಹ ಬ್ರಿಟಿಶರ ಬಳಿಯಲ್ಲಿರಲಿಲ್ಲ; ಈ ವರ್ಷ ೨॥ ಲಕ್ಷ ಸೈನಿಕರು ರಣಭೂಮಿಯ ಮೇಲೆ ಸುಸಜ್ಜಿತರಾಗಿದ್ದಾರೆಂದು ಮುಖ್ಯ ಪ್ರಧಾನರಾದ ಚರ್ಚಿಲ್ಲರು ಪಾರ್ಲಿಮೆಂಟಿನಲ್ಲಿ ಒಳ್ಳೇ ಡೌಲಿನಿಂದ ಭಾಷಣ ಮಾಡಿ, ಬ್ರಿಟಿಶರು ಹಿಟ್ಲರನನ್ನು ಗೆದ್ದೇ ತೀರುವರೆಂದು ಘೋಷಿಸಿದ್ದಾರೆ. ಬ್ರಿಟಿಶರ ಬಲ ನೋಡಿ, ಬ್ರಿಟಿಶರ ಧೈರ್ಯ ನೋಡಿ, ಬ್ರಿಟಿಶರ ಅಭಿಮಾನಿಗಳಿಗೆಲ್ಲ ಸಂತೋಷವಾಗುವದು ಸಹಜ. ಇದೇ ಸಮಯ ರುಶ್ಯ ರಣಭೂಮಿಯಲ್ಲಿ ಜರ್ಮನರು ಹಿಂಜರಿಯುತ್ತಿದ್ದ ವಾರ್ತೆಗಳು ಬರಹತ್ತಿವೆ. ಉತ್ತರ ರಣಭೂಮಿಯಲ್ಲಿ ಲೆನಿನಗ್ರೇಡ ಪಟ್ಟಣದ ಆಯುರ್ದಾಯ ಮುಗಿದಂತೆಯೇ. ಸ್ಲೂಲೆಸಲಬರ್ಗ ಪಟ್ಟಣವನ್ನು ಜರ್ಮನರು ಕೈವಶ ಮಾಡಿಕೊಂಡದ್ದರಿಂದ ಲೆನಿನಗ್ರೇಡ ಪಟ್ಟಣವನ್ನು ಜರ್ಮನರು ಸುತ್ತುವರಿದಂತಾಗಿದೆ. ಆದಾಗ್ಯೂ ರುಶ್ಯನ್ನರು ಒಳ್ಳೇ ಕಲಿತನದಿಂದ ಹೋರಾಡುತ್ತಿದ್ದಾರೆ. ಲೆನಿನಗ್ರೇಡ ಪಟ್ಟಣವನ್ನು ಜರ್ಮನರಿಗೊಪ್ಪಿಸಬಾರದೆಂದು ಬಹು ಸಾಹಸಮಾಡುತ್ತಿದ್ದಾರೆ. ಲೆನಿನಗ್ರೇಡ ಪಟ್ಟಣವನ್ನು ರುಶ್ಯರು ಸುರಕ್ಷಿತವಾಗಿ ಒಪ್ಪಿಸವಿದ್ದರೆ ತಾವದನ್ನು ಹಾಳುಗೆಡಹಿ ವಶಮಾಡಿಕೊಳ್ಳುವೆವಾಗಿ ಜರ್ಮನರು ಮುಂಜಾಗ್ರತೆ ಕೊಟ್ಟಿದ್ದಾರೆ. ಲೆನಿನಗ್ರೇಡ ಪಟ್ಟಣದ ನಾಗರಿಕರು ಹಿಟ್ಲರನ ಅಡಿಯಾಳಾಗಿರಲು ಒಡಂಬಡುವದಿಲ್ಲ. ಪಟ್ಟಣವನ್ನು ರಕ್ಷಿಸಿಕೊಳ್ಳುವ ಯಾವತ್ತೂ ಉಪಾಯಗಳನ್ನು ನಿಗ್ರಹದಿಂದ, ನಿಕರದಿಂದ ನಡಿಸುತ್ತಿದ್ದಾರೆ. ಬೇಕಾದ ಸ್ವಾರ್ಥತ್ಯಾಗವನ್ನು ಮಾಡಲಿಕ್ಕೂ ಸಿದ್ಧರಾಗಿದ್ದಾರೆ. ಅವರೆ ಎಷ್ಟು ಸಾಹಸ ಮಾಡಿದಾಗ್ಯೂ ಲೆನಿನಗ್ರೇಡದ ಆಶೆ ಈಗ್ಗೆ ಉಳಿಯಲಿಲ್ಲ! ಈಗ ರುಶ್ಯರ ಕೈ ತಪ್ಪಿತು. ಮಧ್ಯ ರಣಭೂಮಿಯಲ್ಲಿ ಮಾತ್ರ ಯಶಾಪಯಶಗಳು ಜೋಕಾಲಿ ಹೊಡೆಯುತ್ತವೆ. ರುಶ್ಯರು ಬಹು ಸಾಹಸ ಮಾಡಿ ಎನ್ ನದಿಯ ದಂಡೆಯ ಮೇಲೆ ನಿಕರದಿಂದ ಹೋರಾಡಿ ಜರ್ಮನರನ್ನು ಹಿಮ್ಮೆಟ್ಟಿಸಿದರು. ಅನೇಕ ಜರ್ಮನರು ನದಿ-ಪ್ರವಾಹದಲ್ಲಿ ಬಿದ್ದು ತೇಲಿ ಹೋದರಂತೆ. ಪ್ರತಿಯಾಗಿ ಜರ್ಮನರು ರುಶ್ಯರ ಮೇಲೆ ಸಾಗಿ ಹೋಗುತ್ತಿದ್ದಾರೆ. ಹೀಗೆ ಜರ್ಮನ-ರುಶ್ಯರೊಳಗೆ ಘನಘೋರ ಕಾಳಗ ನಡೆದಿದೆ. ಅತ್ತ ರುಶ್ಯರೂ ಇತ್ತ ಜರ್ಮನರೂ ತಮ್ಮ ತಮ್ಮ ಸಾಹಸ-ಪರಾಕ್ರಮಗಳ ಪರಮಾವಧಿಯನ್ನು ಸಾಧಿಸುತ್ತಿದ್ದಾರೆ ಯಾರೊಬ್ಬರಿಗೆ ಸೋಲು, ಯಾರೊಬ್ಬರಿಗೆ ಗೆಲುವು ಎಂದು ಹೇಳುವದು ದುರ್ಘಟ. ದಕ್ಷಿಣ ರಣಭೂಮಿಯಲ್ಲಾದರೂ ಇದೇ ಅವಸ್ಥೆ. ಒಡೆಸಾ ಬಂದರದ ಸುತ್ತು ಮುತ್ತು ನಡೆದ ಘೋರ ಕಾಳಗದಲ್ಲಿ ಜರ್ಮನ ಪಕ್ಷಪಾತಿ ರುಮಾನಿಯರ ೨ ಸೈನ್ಯ ಪಥಕಗಳ ಮೇಲೆ ರುಶ್ಯರು ಆವೇಶಭರಿತರಾಗಿ ಸಾಗಿ ಹೋಗಿ ಒಬ್ಬರನ್ನೂ ಬಿಡದೆ ಸಕಲರ ಶಿರಚ್ಛೇದಮಾಡಿದರು. ಇದೊಂದು ಅಪ್ರತಿಮ ಸಾಹಸವೆಂದು ರುಶ್ಯ ಯುದ್ಧಪ್ರಕಟಣೆಗಳು ಪ್ರಶಂಸಿಸುತ್ತವೆ. ಈ ಪರಾಕ್ರಮದ ವಾರ್ತೆ ಕೇಳಿ ನನಗೂ ಉಲ್ಹಾಸ ತುಂಬಿದೆ. ಪ್ರತಿಯಾಗಿ ರುಮಾನಿಯರೂ ಸಾಗಿಹೋಗುತ್ತಿದ್ದಾರೆ. ದಕ್ಷಿಣ ರಣಭೂಮಿಯ ಭಾರ ಹೆಚ್ಚಾಗಿ ರುಮಾನಿಯರ ಮೇಲೆಯೇ ಉಂಟು. ಹೀಗೆ ರುಮಾನಿಯರ ಸಂಹಾರವಾಗುತ್ತಿದ್ದಾಗ್ಯೂ ದಕ್ಷಿಣ ರಣಭೂಮಿಯ ಜಯಾಪಜಯಗಳು ಇನ್ನೂ ನಿರ್ಣಯವಾಗಲೊಲ್ಲವು. ರಣಕಂದನ, ಘೋರ-ಅಘೋರ ರಣಕಂದನ ಎಡೆಬಿಡದೆ ನಡೆಯುತ್ತಿದೆ. ಚಳಿಗಾಲ ಪ್ರಾರಂಭವಾಗುವ ಪೂರ್ವದಲ್ಲಿಯೇ ರುಶ್ಯರ ಆಭಾಟವನ್ನು ನಿರ್ಬಂಧಿಸಬೇಕೆಂದು ಹಿಟ್ಲರನ ಕಾರ್ಯಕ್ರಮವಿತ್ತು. ಆದರೆ ಆ ಕಾರ್ಯಕ್ರಮ ಈವಾಗ ಬದಲಿದೆ. ಆದರಿಂದ ಹಿಟ್ಲರನು ಚಳಿಗಾಲದ ಕಾಳಗಕ್ಕಾಗಿ ಮಧ್ಯ ಮತ್ತು ದಕ್ಷಿಣ ರಣಭೂಮಿಗಳಲ್ಲಿ ಸೈನ್ಯ-ಶಿಬಿರಗಳನ್ನು ಕಟ್ಟಿಸತೊಡಗಿದ್ದಾನೆ. ಅಂತು ಈ ಸಂಗ್ರಾಮ ಈಗ ಶೀಘ್ರವಾಗಿ ಅಂತ್ಯವಾಗುವ ಧೋರಣವಿಲ್ಲ. ರುಶ್ಯರ ಪ್ರತಿಭಟನೆ ತೀವ್ರವಾದ ಹಾಗೆ ನಮ್ಮ ಬ್ರಿಟಿಶರಿಗೆ ಅದೊಂದು ಬೆಂಬಲ! ಇನ್ನು ಮುಂದೆ ರುಶ್ಯರ ಪ್ರತೀಕಾರಕ್ಕೆ ಕಳೆಯೇರುವದೆಂದು ನನ್ನ ಗ್ರಹಿಕೆ ಅಮೇರಿಕೆಯಿಂದಲೂ ಬ್ರಿಟನಿನಿಂದಲೂ ಇರಾಣ ಮಾರ್ಗವಾಗಿ ಯುದ್ಧಸಾಹಿತ್ಯ ರುಶ್ಯ ರಣಭೂಮಿಗೆ ಪೂರೈಸಲ್ಪಡುವ ಯೋಜನೆಯಾಗಿದೆ. ಈ ಮೂಲಕ ರುಶ್ಯರನ್ನು ಹಿಮ್ಮೆಟ್ಟಿಸಲು ಹಿಟ್ಲರನಿಗೆ ಕಠಿಣವಾಗುವದು. ಮೇಲಾಗಿ ರುಶ್ಯರ ಕಡೆ ಬೇಕಷ್ಟು ಅನ್ನಸಾಮುಗ್ರಿಯುಂಟು. ಈ ವರ್ಷ ರುಶ್ಯ ದೇಶದಲ್ಲಿ ವಿಪುಲ ಬೆಳೆ ಬೆಳೆದದಾಗಿ ತಿಳಿದು ನನಗೊಳ್ಳೇ ಆನಂದವಾಗಿದೆ. ಹೀಗೆ ರುಶ್ಯರು ಪರಾಕ್ರಮಶಾಲಿಗಳಾಗಿ ಹೋರಾಡಿದರೆ ಜರ್ಮನರ ಸರ್ವಸ್ವ ರುಶ್ಯ ದೇಶದಲ್ಲಿಯೇ ಲಯಹೊಂದಿ ಬ್ರಿಟಿಶರು ಜಗತ್ತಿನೊಳಗಿಂದ ಹಿಟ್ಲರ-ಸಂಪ್ರದಾಯವನ್ನು ಹೊಡೆದೋಡಿಸಿದ ಶ್ರೇಯಸ್ಸನ್ನು ಸಂಪಾದಿಸಿ ಕೀರ್ತಿವಂತರಾಗುವರು. ರುಶ್ಯರ ಪ್ರತಿಭಟನೆಯಿಂದ ಇಡೀ ಲೋಕಘಟನೆಯೇ ತಿರುಗುವ ಸಂಭವವುಂಟು. ಈ ಮೂಲಕ ಬ್ರಿಟಿಶರಿಗೆ ತಮ್ಮ ತಯಾರಿಯನ್ನು ನಿಷ್ಕಂಟಕವಾಗಿ ನಡಿಸಲು ಒಳ್ಳೇ ಅವಕಾಶ ದೊರೆತಿದೆ. ಬ್ರಿಟಿಶ ಪ್ರಧಾನರಾದ ಚರ್ಚಿಲ್ಲರು ಉಲ್ಹಾಸಭರಿತರಾಗಿ ಪಾರ್ಲಿಮೆಂಟಿನಲ್ಲಿ ಭಾಷಣ ಮಾಡಲಿಕ್ಕೆ ರುಶ್ಯರ ದಿಗ್ವಿಜಯಗಳೇ ಕಾರಣ. ಬ್ರಿಟಿಶರ ನೌಕಾಬಲವು ಈವಾಗ ಬೆಳೆಯುತ್ತಿದೆ. ಹಡಗಗಳು ಹೆಚ್ಚೆಚ್ಚು ನಿರ್ಭಯವಾಗಿ ಓಡಾಡತೊಡಗಿವೆ. ಸುಮಾರು ೨೦೦೦ ಬ್ರಿಟಿಶ ಹಡಗಗಳು ಅಟ್ಲಾಂಟಿಕ ಮಹಾಸಾಗರದಲ್ಲಿ ಓಡಾಡುತ್ತವೆಂದು ಹೇಳಿದ ಬಳಿಕ ಜರ್ಮನರ ಘಾತಕ ಹಡಗಗಳಿಂದ ಏನೂ ಪ್ರಯೋಜನವಾಗುವದಿಲ್ಲವಾಗಿ ತಾನೇ ಸಿದ್ಧವಾಗುತ್ತದೆ. ಕೆಡಿಗೇಡಿ ಜರ್ಮನರು ಇಂಗ್ಲಿಷ ಕಾಲುವೆಯಲ್ಲಿ ವಿಮಾನಗಳ ಮೇಲಿಂದ ರಹಸ್ಯವಾಗಿ ಕೆಲವು ಬಾಂಬುಗಳನ್ನೊಗೆದು ಹಾರಿ ಹೋದರು. ಈ ಬಾಂಬುಗಳು ನೀರಿನ ಮೇಲೆ ತೇಲುತ್ತವಂತೆ! ಬರುವ ಹಡಗದ ಸಪ್ಪಳಕ್ಕೆ ಇವು ಒಡೆದು ಹಡಗದ ಮೇಲೆ ಹಾರಿ ಹಡಗವನ್ನು ಒಡೆಯುತ್ತವೆ. ಮುಂಚೆ ಬ್ರಿಟಿಶರಿಗೆ ಇವುಗಳ ಪ್ರತಿಕಾರ ಗೊತ್ತಾಗಲಿಲ್ಲ. ಈಗ ಸಂಶೋಧಕರು ಪರಿಹಾರವನ್ನು ಶೋಧಿಸಿ ತೆಗೆದದ್ದರಿಂದ ಬ್ರಿಟಿಶ ಹಡಗಗಳಿಗೆ ಇರುವ ಭೀತಿ ನಷ್ಟವಾಗಿರುವದಾಗಿ ಚರ್ಚಿಲ್ಲರು ಅಭಿಮಾನದಿಂದ ಹೇಳಿ ಸ್ವದೇಶಬಾಂಧವರಿಗೆ ಅಭಯ ಕೊಟ್ಟಿರುತ್ತಾರೆ. ಈಗ ಜರ್ಮನರ ಸಮುದ್ರಗಸ್ತಿನ ಬಹು ಮಟ್ಟಿಗೆ ಕುಗ್ಗಿದೆ. ಹಡಗಗಳನ್ನು ಮುಳುಗಿಸುವವರಲ್ಲಿ ಈಗ ಬ್ರಿಟಿಶರೇ ಮುಂದೆ! ಜರ್ಮನರಿಗಿಂತ ಮುಮ್ಮಡಿ ಹಡಗಗಳನ್ನು ಜುಲೈ-ಆಗಸ್ಟ ತಿಂಗಳಲ್ಲಿ ಬ್ರಿಟಿಶರು ಮುಳುಗಿಸಿದರೆಂದು ಚರ್ಚಿಲ್ಲರು ಪಾರ್ಲಿಮೆಂಟಿನಲ್ಲಿ ಹೇಳುತ್ತಾರೆ. ಬ್ರಿಟಿಶ ವಿಮಾನಗಳು ಜರ್ಮನ ರಾಜಧಾನಿಯಾದ ಬರ್ಲಿನಿನ ಮೇಲೂ ಇತಾಲಿಯ ರಾಜಧಾನಿಯಾದ ರೋಮದ ಮೇಲೂ ಹಾರಿಹೋಗಿ ಒಳ್ಳೇ ನಷ್ಟ ಮಾಡತೊಡಗಿವೆ. ಹೀಗೆ ಈ ವಾರದಲ್ಲಿ ಹಿಟ್ಲರನ ಪರಾಭವಗಳ ಸುದ್ದಿಯೇ ಹೆಚ್ಚು.

ತುರ್ಕಸ್ತಾನದ ರಾಜಕಾರಣ ಇನ್ನೂ ಪೂರ್ತಿಯಾಗಿಲ್ಲ; ಅದಿನ್ನೂ ವಿಕಾಸಗೊಳ್ಳುತ್ತಿದೆ. ತುರ್ಕಸ್ತಾನದ ಗಡಿನಾಡಿನಲ್ಲಿ ಜರ್ಮನ, ಬಲ್ಗರ ಸೈನಿಕರ ಪಥಕಗಳು ಒಟ್ಟಾಗುತ್ತಿವೆ. ಹಿಟ್ಲರನು ತನ್ನ ವಿದೇಶ ರಾಜಕಾರಣದ ಶ್ರೇಷ್ಠ ಸಲಹೆಗಾರರಾದ ರಿಬೆನಟ್ರಾಪ್, ತುರ್ಕಸ್ತಾನದಲ್ಲಿರುವ ತನ್ನ ರಾಯಭಾರಿಗಳಾದ ಫೊಪೇನರನ್ನು ಕಳಿಸಿ ಗೌಪ್ಯದಿಂದ ಆಪ್ತಾಲೋಚನೆ ನಡಿಸಿದನಾಗಿ ತುರ್ಕಸ್ತಾನದ ರಾಜಧಾನಿಯಾದ ಅಂಕಾರಾದಿಂದ ವಾರ್ತೆ ಬಂದಿದೆ. ಆದಾಗ್ಯೂ ತುರ್ಕಸ್ತಾನಕ್ಕೆ ಭಯವಿಲ್ಲವಂತೆ ಜರ್ಮನರು ದಾಳಿ ಮಾಡುವ ಸಂಭವವಿಲ್ಲವಂತೆ. ಇದರ ಅರ್ಥವೇನೆಂದು ನಾನು ಎಣಿಸಲಿ? ಹಿಟ್ಲರನು ಇಷ್ಟೆಲ್ಲ ಪೂರ್ವ

ತಯಾರಿ ಮಾಡಿಕೊಂಡು ಸುಮ್ಮನೆ ಉಳಿಯುವನೆಂದು ನಾನು ತಿಳಿಯಲಾರೆ. ತುರ್ಕರು ಶರಣು ಹೋಗದಿದ್ದರೆ ಹಿಟ್ಲರನು ತುರ್ಕಸ್ತಾನದ ಮೇಲೆ ದಂಡೆತ್ತಿ ಹೋಗುವದು ಖಂಡಿತ. ಇರಾಣದ ಮಾರ್ಗವಾಗಿ ರುಶ್ಯ ರಣಭೂಮಿಗಳಿಗೆ ಹೋಗುವ ರಣಸಾಹಿತ್ಯಗಳನ್ನು ಅಡ್ಡಗಟ್ಟಲು ಆತನು ಹಾತೊರೆಯುತ್ತಾನೆ. ಇರಾಣದೊಳಗಿಂದ ಜರ್ಮನರನ್ನು ಸಂಪೂರ್ಣವಾಗಿ ಹೊರತಳ್ಳಲು ಶಹಾರವರು ಒಪ್ಪಿಕೊಂಡದ್ದರಿಂದ ಹಿಟ್ಲರನ ಕಾರಸ್ಥಾನವೇ ಇರಾಣದ ಮಟ್ಟಿಗೆ ನಿರರ್ಥಕವಾದಂತಾಗಿದೆ. ಆದರಿಂದ ಅದನ್ನು ಸರಿಪಡಿಸುವದಕ್ಕಾಗಿ ಆ ಮಾರ್ಗವನ್ನು ತಿರುಗಿ ಪಡಕೊಳ್ಳುವದಕ್ಕಾಗಿ ತುರ್ಕಸ್ತಾನದೊಡನೆ ಒಡಂಬಡಿಕೆ ಮಾಡಿಕೊಳ್ಳುವದು ಕ್ರಮಪ್ರಾಪ್ತವಾಗಿದೆ. ತುರ್ಕರು ಅಲಿಪ್ತವಾಗಿ ಉಳಕೊಂಡರೆ ಇಲ್ಲವೆ ಹಿಟ್ಲರನನ್ನು ಪ್ರತಿಬಂಧಿಸಿದರೆ ತುರ್ಕರ ಮೇಲೆ ದಾಳಿಯಾಗುವದು ಖಂಡಿತವೆಂದು ನನ್ನ ಅಭಿಪ್ರಾಯ. ಸುಜ್ಞಿಗಾರರಂತೂ ಅಭಯ ಹೇಳುತ್ತಾರೆ. ನೋಡುತ್ತಿರುವ!

ಅತ್ತಲಾಗಿ ಜಿಬ್ರಾಲ್ಟರದ ಬದಿಯಲ್ಲಿ ಕಾರ್ಮೋಡಗಳು ಕವಿದು ಬಂದಿವೆ ಫ್ರಾನ್ಸದ ಸೇನಾಪತಿ ಪಿಟೇನರೂ ಸ್ಪೇನದ ಸೇನಾಪತಿ ಫ್ರೆಂಕೋನೂ ತಮ್ಮ ತಮ್ಮ ಪಕ್ಷಕ್ಕೆ ಹಿಟ್ಲರನ ಪರವಾಗಿ ದುಡಿಯುತ್ತಿದ್ದಾರೆ. ಉತ್ತರ ಆಫ್ರಿಕೆಯಲ್ಲಿ ಹಿಟ್ಲರನ ರಾಜ್ಯವನ್ನು ಪ್ರಸ್ತಾಪಿಸುವ ಬಹು ದೊಡ್ಡ ವ್ಯೂಹವನ್ನು ಈ ಮಹಾಶಯರು ರಚಿಸಿಟ್ಟಿದ್ದಾರೆ. ಫ್ರಾನ್ಸ, ಸ್ಪೇನಗಳ ನಡುವೆ ಪಿರಿನೀಸ ಎಂಬ ಪರ್ವತಶ್ರೇಣಿಯಿದೆ. ಇದು ಸ್ಪೇನ ಮತ್ತು ಫ್ರಾನ್ಸ ದೇಶಗಳ ಸ್ವಾಭಾವಿಕ ಸೀಮೆ. ಈ ಪರ್ವತದಲ್ಲಿ ಉಗಿಬಂಡಿಯ ಮಾರ್ಗ ಕಟ್ಟಿಸಿ ನೇರ ಮಾರ್ಗವಾಗಿ ಫ್ರಾನ್ಸ ದೇಶದಿಂದ ಜಿಬ್ರಾಲ್ಟರದ ತನಕ ಸುಸೂತ್ರ ಓಡಾಡಲಿಕ್ಕೆ ಅನುಕೂಲವಾಗುವಂತಿದೆ. ಜಿಬ್ರಾಲ್ಟರದ ನೆರೆಹೊರೆಯಲ್ಲಿ ಅಂದಾಲುಸವೆಂಬ ರಾಜ್ಯವಿದೆ. ಈ ರಾಜ್ಯದ ಒಳ ಮಾರ್ಗವೆಲ್ಲ ಭದ್ರವಾಗತೊಡಗಿದೆ. ಈ ರಾಜಮಾರ್ಗದ ಮೇಲಿನ ಸಂಕಗಳನ್ನು ಹೇರಳ ಹಣ ಖರ್ಚು ಮಾಡಿ ಸ್ಪೇನ ಸರಕಾರವು ಕಟ್ಟಿಸತೊಡಗಿದೆ. ಅದೇ ಪ್ರಕಾರ ಉತ್ತರ ಆಫ್ರಿಕೆಯಲ್ಲಿ ಸಹಾರಾ ಮರುಭೂಮಿಯೊಳಗೆ ಉಗಿಬಂಡಿ ಕಟ್ಟಿಸುವ ಕಾರ್ಯ ರಭಸದಿಂದ ಸಾಗಿದೆ. ಈ ಮರು ಭೂಮಿಯಲ್ಲಿ ಉಗಿಬಂಡಿಯನ್ನು ಕಟ್ಟಿಸುವ ಸಾಹಸವನ್ನು ಯಾರೂ ಮಾಡಿರಲಿಲ್ಲ. ಸ್ಪೇನ ಸರಕಾರವು ಇದನ್ನು ಸಹ ಕೈಕೊಂಡು ಗಾಬರಿಯಿಂದ ಅದನ್ನು ಪುರಸ್ಕರಿಸುತ್ತಿದೆ. ಮರು ಭೂಮಿಯಲ್ಲಿ ಕೂಲಿಯಾಳುಗಳು ಕಷ್ಟ ಮಾಡಲಾಗದೆ ಸಂಕಟಪಟ್ಟು ಸಾಯುತ್ತಿರುವರಂತೆ. ಆದಾಗ್ಯೂ ಸ್ಪೇನ ಸರಕಾರವು ಈ ಯೋಜನೆಯನ್ನು ತಡೆಯಿಲ್ಲದೆ ಮುಂದರಿಸುತ್ತಿದೆ. ಅನುಕೂಲವಿದ್ದಲ್ಲಿ ವೈಮಾನಿಕ ರಾಜ್ಯಗಳೂ ಅನ್ನಸಾಮಗ್ರಿಯ ಉಗ್ರಾಣಗಳೂ ರಣಸಾಹಿತ್ಯಗಳ ಕೋಠಾರಗಳೂ ಕಟ್ಟಿಸಲ್ಪಡುತ್ತಿವೆ. ಹಿಟ್ಲರನು ಫ್ರಾನ್ಸ, ಸ್ಪೇನ, ಜಿಬ್ರಾಲ್ಟರ ಮಾರ್ಗವಾಗಿ ಉತ್ತರ ಆಫ್ರಿಕೆಯನ್ನು ಸೇರಿ ಇಜಿಪ್ತ ದೇಶದ ಮೇಲೆ ದಂಡೆತ್ತಿಕೊಂಡು ಬರುವ ಹೊಂಚು ಹಾಕಿದ್ದಾನಾಗಿ ಈ ಗಡಿಬಿಡಿಯ ಮೇಲಿಂದ ನಾನು ಊಹಿಸುತ್ತೇನೆ. ಹೀಗಾದರೆ ಭೂಮಧ್ಯ ಸಮುದ್ರದೊಳಗಿನ ಬ್ರಿಟಿಶ ಹಡಗಗಳ ಓಡಾಟಕ್ಕೆ ಸಂಕಟವೇ ಸೈ! ಮೇಲಾಗಿ ತುರ್ಕಸ್ತಾನ ಮೊದಲಾದ ಮುಸಲ್ಮಾನ-ಲೋಕಕ್ಕೂ ನೆರೆಹೊರೆಯಲ್ಲಿ ಶತ್ರುರಾಜ್ಯ ಪ್ರಾಪ್ತವಾದಂತೆಯೇ ಸೈ! ಈ ವಾರ್ತೆಗಳು ತೀರ ಸಂಕ್ಷಿಪ್ತವಾಗಿವೆ. ವಿವರಗಳು ಹೆಚ್ಚಾಗಿ ಬರುವದಿಲ್ಲ. ಆದರಿಂದ ಅವುಗಳ ಪೂರ್ಣ ವಿಕಾಸವನ್ನು ನಾನು ವರ್ಣಿಸಲಾರೆ. ತುರ್ಕಸ್ತಾನದ ರಾಜಕಾರಣಕ್ಕೆ ಈ ಪಾರ್ಶ್ವಭೂಮಿ ಅನ್ವಯಿಸುವದರಿಂದ ನನಗೆ ಗೊತ್ತಿದ್ದ ಸಂಗತಿಯನ್ನು ಇಲ್ಲಿ ನಮೂದಿಸಿಟ್ಟೆ, ಇಷ್ಟೇ!

ಅಮೇರಿಕೆಯ ಸರಕಾರವು ಯುದ್ಧದಲ್ಲಿ ಧುಮುಕಬೇಕೆಂದು ಅನೇಕರ ಬಯಕೆ. ಆದರೆ ಅಮೇರಿಕೆಯ ಅಧ್ಯಕ್ಷರಾದ ರೂಝವೆಲ್ಟರವರು ಬಲು ಬಿಗಿ ಪುರುಷರು! ಅವರು ಅಮೇರಿಕೆಯನ್ನು ಯುದ್ಧದಲ್ಲಿ ನೂಕಲು ಒಡಂಬಡುವದಿಲ್ಲ. ಆದಾಗ್ಯೂ ಜರ್ಮನರ ಹಾವಳಿ ಹೀಗೇ ನಡೆದರೆ ಅಮೇರಿಕೆಯು ಯುದ್ಧದಲ್ಲಿ ಬೀಳಬಹುದೇನೆಂದು ನನಗೊಂದು ಭಾವನೆ. ಜರ್ಮನ ವಿನಾಶಿಕೆಗಳು 'ಜಿಯರ' ಎಂಬ ಅಮೇರಿಕೆಯ ಹಡಗವನ್ನು ಗುಂಡು ಹಾಕಿ ಅಟ್ಲಾಂಟಿಕ ಮಹಾಸಾಗರದಲ್ಲಿ ಮುಳುಗಿಸಲೆತ್ನಿಸಿದರು. ಈ ಹಡಗದ ಮೇಲೆ ಅಮೇರಿಕೆಯ ಧ್ವಜಗಳಿದ್ದವು; ಗುರುತು ತೋರಿಸುವ ಪತಾಕೆಗಳಿದ್ದವು. ಆದಾಗ್ಯೂ ಜರ್ಮನರು ಅದರ ಮೇಲೆ ಗುಂಡು ಹಾರಿಸಿದರು. ಆದರೆ ಅವು ಗುರಿ ತಪ್ಪಿದವಂತೆ! "ಜಿಯರ" ಹಡಗವು ತನ್ನ ಮೇಲೆ ಜಲಸ್ಫೋಟಕವನ್ನು ಎಸೆಯಿತಾಗಿಯೂ ಪ್ರತೀಕಾರಕ್ಕಾಗಿ, ಆತ್ಮರಕ್ಷಣೆಗಾಗಿ ತಾವು 'ಜಿಯರ' ಹಡಗದ ಮೇಲೆ ಗುಂಡು ಹಾರಿಸಿದೆವಾಗಿಯೂ ಜರ್ಮನ ವಿನಾಶಿಕೆಯ ಕಪ್ತಾನರ ಅಂಬೋಣ. ಸಟೆ ಯಾವದು, ದಿಟ ಯಾವದು? ಅವರವರಿಗೇ ಗೊತ್ತಿದ್ದ ವಿಷಯವದು! ಅಮೇರಿಕೆಯ ಇನ್ನೊಂದು ಹಡಗವು ಕೆಂಪು ಸಮುದ್ರದಿಂದ ರಣಸಾಹಿತ್ಯ ಹೇರಿಕೊಂಡು ಹೋಗುವಾಗ ಜರ್ಮನ ವಿಮಾನಗಳು ಬಾಂಬು ಹಾರಿಸಿ ೨೦ ನಿಮಿಷಗಳಲ್ಲಿ ಆ ಹಡಗಕ್ಕೆ ಜಲಸಮಾಧಿ ಕೊಟ್ಟವು. ಇವೆಲ್ಲ ಪ್ರಕಾರಗಳಿಂದ ಅಮೇರಿಕೆಯ ರೂಝವೆಲ್ಟರು ಸಂತಪ್ತರಾಗಿದ್ದಾರೆ. ಅಮೇರಿಕೆಯ ದಂಡೆಗುಂಟ ಓಡಾಡುವ ಜರ್ಮನ ಹಡಗಗಳನ್ನು ಒಮ್ಮೆಲೇ ಗುಂಡು ಹಾರಿಸಿ ಮುಳುಗಿಸಬೇಕೆಂಬ ಕಟ್ಟಾಜ್ಞೆಯನ್ನೂ ರೂಝವೆಲ್ಟರು ಹೊರಡಿಸಿದ್ದಾರೆ! ಇದೇ ಉಗ್ರರೂಪ ತಳೆದು ಅಮೇರಿಕೆಯು ಯುದ್ಧ-ಪ್ರವೇಶಗೈಯ್ಯುವದೆಂದು ಹಲವರ ಊಹೆ. ಆದರೆ ಯುದ್ಧದಲ್ಲಿ ಸೇರಲು ಅಮೇರಿಕೆಯ ಲೋಕಮತ ಅನುಕೂಲವಿಲ್ಲ. ಪ್ರತ್ಯಕ್ಷ ಯುದ್ಧದ ಸಂಕಟಗಳನ್ನು ಬರಮಾಡಿಕೊಳ್ಳಲು ಅಮೇರಿಕೆಯವರು ಒಡಂಬಡುವದಿಲ್ಲ. ಆದರಿಂದ ಅಮೇರಿಕೆಯು ಯುದ್ಧದಲ್ಲಿ ಬೀಳಲಿಕ್ಕಿಲ್ಲವಾಗಿ ನಾನು ಈಗಿನ ಮಟ್ಟಿಗೆ ಖಂಡಿತ ಹೇಳಬಲ್ಲೆ.

ಜಪಾನದ ಸ್ಥಿತಿಯಾದರೂ ಹಾಗೆಯೇ. ಜಪಾನವಾದರೂ ಉಗ್ರ ರೂಪ ತೋರಿಸಿ, ಭಯ ತೋರಿಸಿ ಕಾರ್ಯ ಸಾಧಿಸಿಕೊಳ್ಳುವ ಆಲೋಚನೆಯಲ್ಲುಂಟು. ಈ ವಾರದಲ್ಲಿ ಆ ಕಡೆಯ ವಿಶೇಷ ವಾರ್ತೆಗಳಿಲ್ಲ. ಅಲ್ಲಿ ಎಲ್ಲವೂ ತಣ್ಣಗೆ. ನಮ್ಮ ಚರ್ಚಿಲ್ಲ ಮಂತ್ರಿಗಳು ಯುದ್ಧ ಸ್ಥಿತಿಯ ಸಿಂಹಾವಲೋಕನ ಮಾಡುವಾಗ ಜಪಾನದ ಹೆಸರನ್ನೆತ್ತಲಿಲ್ಲ. ಅದೇಕೋ ಮೌನವೆಂದು ನನಗೆ ತಿಳಿಯದೆ ನಾನು ಒಳ್ಳೇ ಗೊಂದಲದಲ್ಲಿ ಬಿದ್ದಿದ್ದೇನೆ. ಜಪಾನದೊಡನೆ ಬ್ರಿಟಿಶ-ಅಮೇರಿಕೆಯವರು ವ್ಯವಹಾರ ನಿಲ್ಲಿಸಿ ಸಾಮಾನ್ಯವಾಗಿ ೧ ತಿಂಗಳಾಯಿತು. ಆದಾಗಲೇ ಯುದ್ಧಘೋಷಣೆಯಾಗುವದೆಂದು ಹಲವರು ಎಣಿಸಿ ದಿಗಿಲು ಬಿದ್ದಿದ್ದರು. ಆದರೆ ಈ ವರೆಗೂ ಆ ರಾಜಕಾರಣ ಅಷ್ಟಕ್ಕೇ ತಡೆದುನಿಂತಿದೆ. ಕಳೆದ ಸೋಮವಾರ ಮುಂಬಯಿಯಿಂದ ೩೫ ಮಂದಿ ಜಪಾನಿ ವರ್ತಕರು ಮಡದಿ-ಮಕ್ಕಳ ಸಹಿತ 'ಹೆಕೊನೆಮಾರು,' ಹಡಗ ಹತ್ತಿ ಜಪಾನಕ್ಕೆ ತೆರಳಿದರು. ಅಂತು ಜಪಾನಿ ಪ್ರಯಾಣಿಕರ ಸಂಖ್ಯೆ ೬೫; ಇವರಲ್ಲಿ ಹೆಂಗಸರು ೨೧, ಮಕ್ಕಳು ೪. ಹಿಂದುಸ್ಥಾನ ಸರಕಾರದ ಕಾನೂನಿನ ಮೂಲಕ ಜಪಾನದ ವ್ಯಾಪಾರಕ್ಕೆ ತಡೆಬಿದ್ದದರಿಂದ ತಾವು ಸ್ವದೇಶಕ್ಕೆ ಹೋಗುತ್ತೇವಾಗಿ ಪ್ರಯಾಣಿಕರೊಬ್ಬರು ಹೇಳಿದರಂತೆ. ಇದೇ ಹಡಗದ ಮೇಲೆ ೨೮೫೦೦ ಅರಳೆ ಗಂಟುಗಳು ಜಪಾನಕ್ಕೆ ರವಾನೆಯಾದವು. ಹಿಂದುಸ್ಥಾನ ಸರಕಾರವು ಇವನ್ನು ಹೇಗೆ ಒಯ್ಯಗೊಟ್ಟಿತು? ಎಂಬದೊಂದು ನಿಗೂಢವೇ ಸೈ! ಬ್ರಿಟನ, ಅಮೇರಿಕಾ, ಜಪಾನಗಳೊಳಗೆ ತುಂಡರಿದುಹೋದ ಸ್ನೇಹಸಂಬಂಧ ಪುನಃ ಕೂಡಬಹುದೇ? ಅಥವಾ ಹಿಟ್ಲರನನ್ನು ದಬ್ಬುವಾಗ ಜಪಾನನ್ನು ಕೆಣಕುವದು ಬ್ರಿಟನ-ಅಮೇರಿಕೆಯವರಿಗೆ ಗಂಡಾಂತರಪ್ರದವೆಂದು ಈ ಪ್ರಕಾರ ವರ್ತನೆಯಾಯಿತೇ? ನನಗೇನು ತಿಳಿಯದ ಮಾತು. ಜಪಾನ ಸರಕಾರವು ಸುಮ್ಮನೆ ಕೂಡ್ರುವಂತಹದಲ್ಲ. ಆದರೆ ಆ ಕಡೆಯ ಸುದ್ದಿಗಳ ಅಭಾವದಲ್ಲಿ ನಾನೇನು ಅನುಮಾನ ಹೇಳಲಿ? ಜಪಾನದ ವಾರ್ತೆಯ ಮಟ್ಟಿಗೆ ಈ ವಾರ ತೀರ ಮೌನ! ಮುಂಬಯಿಯೊಳಗಿನ ಜಪಾನದ ಪ್ರಯಾಣಿಕರೊಬ್ಬರು ಪತ್ರಿಕಾ ಪ್ರತಿನಿಧಿಗಳ ಕಡೆ ನುಡಿದಂತೆ ಬ್ರಿಟನ-ಜಪಾನಗಳೊಳಗಿನ ರಾಜಕಾರಣ ಇನ್ನೂ ನಿರ್ಣಾಯಕ ರೂಪವನ್ನು ತಾಳಿಲ್ಲ. ನಾನಾದರೂ ಇಷ್ಟೇ ಹೇಳಬಲ್ಲೆ.

ಒಂದು ವಿನೋದದ ಸಂಗತಿಯನ್ನು ನಮೂದಿಸಿ ಈ ಹೊತ್ತಿನ ಯುದ್ಧಸಮಾಲೋಚನೆ ಮುಗಿಸುತ್ತೇನೆ. ನೋರ್ವೆ ದೇಶದ ಉತ್ತರ ಭಾಗದಲ್ಲಿ ಸುಮಾರು ೩೬೦ ಮೈಲು ದೂರು ಸ್ಪಿಟ್ಸಬರ್ಗ ಎಂಬ ದ್ವೀಪಸಮೂಹವುಂಟು. ಈ ದ್ವೀಪಸಮೂಹ ಜಗತ್ತಿನ ತೀರ ಉತ್ತರ ಪ್ರದೇಶ. ೧೯೨೫ನೇ ಇಸ್ವಿಯ ಆಗಷ್ಟ ತಿಂಗಳಲ್ಲಿ ಈ ದ್ವೀಪಸಮೂಹ ನೋರ್ವೆ ದೇಶದ ಆಧಿಪತ್ಯಕ್ಕೆ ಒಳಪಟ್ಟಿದ್ದಿತ್ತು. ನೋರ್ವೆ ದೇಶ ಹಿಟ್ಲರನ ವಶವಾದ್ದರಿಂದ ಈ ದ್ವೀಪಸಮೂಹವು ಹಿಟ್ಲರನ ವಶವಾಯಿತು! ಬ್ರಿಟಿಶರು ಕೆನಡಾ, ಸ್ವತಂತ್ರ ನೋರ್ವೆ ಸೈನ್ಯಪಥಕಗಳ ಸಹಾಯದಿಂದ ಕಳೆದ ಮಂಗಳವಾರ ಸ್ಪಿಟ್ಸಬರ್ಗಕ್ಕೆ ಹೋಗಿ ಅದನ್ನು ಆಕ್ರಮಿಸಿಕೊಂಡರು! ಈ ದ್ವೀಪಸಮೂಹ ಜರ್ಮನರಿಗೆ ಬಹು ಮಹತ್ವದ್ದೆಂದೂ ಅದನ್ನು ತಾವು ಒಬ್ಬ ಸೈನಿಕನನ್ನು ಸಹ ಕಳಕೊಳ್ಳದೆ ಆಕ್ರಮಿಸಿಕೊಂಡೆವಾಗಿಯೂ ಬ್ರಿಟಿಶ ಯುದ್ಧ ಖಾತೆಯವರು ಪ್ರಕಟಣೆಯನ್ನು ಹೊರಡಿಸಿ ಬಹುದೊಡ್ಡ ವರ್ಣನೆಯನ್ನು ಪ್ರಕಟಿಸಿದ್ದರು. ಅಲ್ಲಿ ಕಲ್ಲಿದ್ದಲಿಯ ಗಣಿಗಳಿವೆ; ಜರ್ಮನರು ಇಲ್ಲಿಂದಲೇ ತಮಗೆ ಬೇಕಾಗುವ ಎಲ್ಲ ಕಲ್ಲಿದ್ದಲಿಯನ್ನು ಪೂರೈಸಿಕೊಳ್ಳುತ್ತಾರೆ; ಅವು ತಮ್ಮ ವಶವಾದ್ದರಿಂದ ಜರ್ಮನರು ಉಪವಾಸ ಸಾಯುವ ಪ್ರಸಂಗ ಬಂತು! ಹೀಗೆ ದೊಡ್ಡ ದೊಡ್ಡ ಪ್ರಕಟಣೆಗಳು ಹೊರಟ ಮರುದಿನವೇ ಸ್ಪಿಟ್ಸಬರ್ಗಕ್ಕೆ ಹೋದ ಬ್ರಿಟಿಶರ ಪಥಕ ವಿಜಯ ಪಡಕೊಂಡು ಹಿಂತಿರುಗಿ ಬಂತೆಂದು ಪ್ರಕಟಣೆ ಹೊರಟಿದೆ. ಶತ್ರುವಿಗೆ ಉಪಯೋಗವಾಗುವಂಥ ಯಾವದೇ ಪದಾರ್ಥ ಅಲ್ಲಿ ಉಳಿದಿರುವದಿಲ್ಲವಂತೆ! ಮುಂಚೆ ಇದ್ದಿಲ್ಲವೋ, ಈಗ ಉಳಿಯಲಿಲ್ಲವೋ? ನನಗೇನು ತಿಳಿಯದು! ಜರ್ಮನರ ರಕ್ಷಣೆ ಆ ದ್ವೀಪ

ಸಮೂಹಕ್ಕಿಲ್ಲವೆಂದು ಬ್ರಿಟಿಶರು ಬಹು ದೊಡ್ಡ ಶೋಧ ಮಾಡಿ ಅಲ್ಲಿ ದಂಡೆತ್ತಿಕೊಂಡು ಹೋಗಿದ್ದಾಗಿ ಪ್ರಕಟಣೆ ಹೊರಡಿಸಿದ ಮರುದಿನವೇ ಕೈಬೀಸಿಕೊಂಡು ಹಿಂತಿರುಗಿ ಬಂದ ದೃಶ್ಯ ವಿಚಾರ ರಮಣೀಯವಲ್ಲ.

ಆದಾಗ್ಯೂ ಬ್ರಿಟಿಶರು ಬಲಶಾಲಿಗಳಾಗುತ್ತಿದ್ದಾರೆ. ರಣಸಾಹಿತ್ಯಗಳನ್ನು ತಯಾರಿಸುವ ಕಾರಖಾನೆಗಳಿಗೆ ಅರಿಗಳಿಗೆ ಸಮಯವಿಲ್ಲ. ರುಶ್ಯರ ಮೇಲಿನ ದಾಳಿ ಯಶಸ್ವಿಯಾಗಲು ವಿಳಂಬವಾದ ಹಾಗೆ ಬ್ರಿಟಿಶರು ಹೆಚ್ಚೆಚ್ಚು ಬಲಿಯುತ್ತಾರೆ. ಆದರಿಂದ ಬ್ರಿಟಿಶರ ಬಲದ ವಿಚಾರವನ್ನು ಈ ಹೊತ್ತು ಪ್ರಾಧಾನ್ಯವಾಗಿ ನಾನು ಮಾಡಿದೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಹುಬ್ಬಾ ನಕ್ಷತ್ರವು ಕಳೆದ ವಾರ ಮೋಸ ಮಾಡಿದೆ. ಇಡೀ ವಾರದಲ್ಲಿ ಬರೇ ೦-೭೬ ಇಂಚು ಮಳೆಯಾಗಿದೆ! ಹಗಲು ಹೊತ್ತಿನಲ್ಲಿ ಬೇಸಿಗೆಯ ಬಿಸಿಲು ಉರಿಯುತ್ತಿದೆ; ರಾತ್ರಿಯಲ್ಲಿ ಹುಟ್ಟಿ ಚೆಲ್ಲಿದಂತೆ ಬೆಳದಿಂಗಳು ಬೀಳುತ್ತಿದೆ. ಒಮ್ಮೊಮ್ಮೆ ಮೂಡಗಾಳಿಯೂ ಬೀಸುತ್ತಿದೆ! ಭತ್ತದ ಸಸಿಗಳಿಗೆ ತೆನೆಗಳು ಹೊರಬಿದ್ದ ಈ ಕಾಲದಲ್ಲಿ ಈ ಪರಿ ಮಳೆಯಿಲ್ಲದಿದ್ದರೆ ಒಕ್ಕಲಿಗರಿಗೂ ಜಮೀನದಾರರಿಗೂ ಅಕ್ಕಿಯ ಬದಲು ಹೊಳ್ಳು ಭತ್ತ ಸಿಗಲಿಕ್ಕಿಲ್ಲ! ಒಟ್ಟಾರೆ ಈ ವರ್ಷ ಬರಗಾಲವೇ ಗತಿಯೆಂದು ತೋರುತ್ತದೆ. ಪರಮೇಶ್ವರನ ಸಂಕಲ್ಪವೇನುಂಟೆಂದು ಯಾರು ಬಲ್ಲರು? ಊರಲ್ಲಿ ಆರೋಗ್ಯವೂ ನೆಟ್ಟಗಿಲ್ಲ! ಕೆಲವೆಡೆ ಚಳಿಜ್ವರ-ವಿಷಮಜ್ವರಗಳ ಹಾವಳಿ ಕಾಡುತ್ತಿದ್ದರೆ ಇನ್ನಿತರ ಕಡೆಗಳಲ್ಲಿ ಬಟ್ಟೇ ಹೊರಕಡೆಯ ಉಪದ್ರವ ಮಿಗಿಲಾಗಿದೆ! ಮಳೆಯ ನಮೂನೆ ನೋಡಿ ವರ್ತಕರು ಅಕ್ಕಿಯ ಧಾರಣೆ ಇಳಿಸಲೊಪ್ಪುವದಿಲ್ಲ! ಜನರು ಉಪವಾಸ ಬೀಳುವ ಪ್ರಸಂಗ ಬಂದಿದೆ! ಈ ಸಂಕಟದಲ್ಲಿ ದಯಾಘನ ಪರಮಾತ್ಮನೇ ಜನರಿಗೆ ಕಾಯಬೇಕಲ್ಲದೆ ಮನುಷ್ಯಮಾತ್ರರಿಗೆ ಅದೆಂದೂ ಸಾಧ್ಯವಿಲ್ಲ!

ಪೇಟೆಯಲ್ಲಿ ಸಕ್ಕರೆ, ಕೊಬರಿ ಎಣ್ಣೆ, ಕಾಳು-ಕಡಿ ಮುಂತಾದವುಗಳ ಧಾರಣೆಗಳು ಕಳೆದ ವಾರ ಒಳ್ಳೇ ಏರಿಕೆಯಲ್ಲಿದ್ದವು. ಬೆಳಗ್ಗೆ ಒಂದು ದರವಿದ್ದರೆ ಸಂಜೆ ಇನ್ನೊಂದು ದರವಾಗುತ್ತಿತ್ತು! ಅಷ್ಟರಲ್ಲಿ ಮುಂಬಯಿಯಿಂದ ಹಲವು ಬಗೆಯ ಮಾಲು ತುಂಬಿಕೊಂಡು ಬಂದ ಒಂದು ಮಚ್ವೆಯು ತದಡಿ ಬಂದರದ ಮಾರ್ಗವಾಗಿ ಕುಮಟೆಗೆ ಬಂದು ಮುಟ್ಟಿದ್ದರಿಂದ ಧಾರಣೆಗಳ ಏರಾಟಕ್ಕೆ ತಡೆ ಬಿತ್ತು! ಬೇಗನೆ ಇನ್ನೆರಡು ಮಚ್ವೆಗಳು ಬರಲಿವೆ. ಸರಕಾರದವರು ದೀರ್ಘಾಲೋಚನೆ ಮಾಡಿ ಈ ಕಾಲಾವಳಿಯಲ್ಲಿ ಜನರ ಜೀವನಕ್ಕೆ ಅವಶ್ಯವಿರ್ಪ ಸರಕುಗಳನ್ನು ಪೂರೈಸಲಿಕ್ಕಾದರೂ ಒಂದು ಉಗಿಹಡಗವು ಓಡಾಡುವ ಹಾಗೆ ವ್ಯವಸ್ಥೆ ಮಾಡಿಕೊಡಬೇಕಾಗಿ ಆಗ್ರಹದ ಸೂಚನೆಯಿದೆ. ಇಲ್ಲದಿದ್ದರೆ ಮುಂಬಯಿಯಲ್ಲಿ ಸರಕುಗಳು ಅಗ್ಗವಾದಾಗ್ಯೂ ಇಲ್ಲಿಯ ಜನರು ಅರೆಹೊಟ್ಟೆ ಉಣ್ಣುವ ಪ್ರಸಂಗ ಬರುವದು.

ಇದೇ ಬರುವ ನವಂಬರ ತಿಂಗಳಲ್ಲಿ ಜರಗುವ ದ. ಭಾ. ಹಿಂದೀ ಪ್ರಚಾರದ ಸಮಿತಿಯ ಪ್ರಾರಂಭಿಕ ಹಿಂದೀ ಪರೀಕ್ಷೆಗಳಿಗೆ ಕೂಡ್ರಲಿಚ್ಛಿಸುವವರು ಬರುವ ಸಪ್ಟಂಬರ ತಾ. ೨೫ ರ ಸಂಜೆಯೊಳಗಾಗಿ ತಮ್ಮ ಆವೇದನ ಪತ್ರಗಳನ್ನು ತುಂಬಿ ತಮ್ಮ ಕಡಿಗೆ ತಂದು ಕೊಡಬೇಕೆಂದು ಇಲ್ಲಿಯ ರಾಷ್ಟ್ರಭಾಷಾ ಪ್ರಚಾರ ಸಂಘದ ರಾ| ಸು. ವಿ. ಭಟ್ಟರು ತಿಳಿಸುತ್ತಾರೆ. ಆವೇದನದ ಪತ್ರಗಳನ್ನು ಅವರ ಕಡೆ ಸಿಗುತ್ತವೆಯಂತೆ.

ಇಲ್ಲಿಯ ಸಿವ್ಹಿಲ್ ಕೋರ್ಟಿನ ಆವಾರಕ್ಕೆ ತಗಲಿರುವ ಓಣಿಯಲ್ಲಿ ನೀರು ಹರಿದು ಹೋಗದೆ ಹೊಂಡ ಬಿದ್ದಿರುವ ಸಂಗತಿ "ವೃತ್ತ"ದಲ್ಲಿ ಹಿಂದೊಮ್ಮೆ ಬಂದಿರುತ್ತದಷ್ಟೇ. ನಗರ ಸಭೆಯವರು ಇನ್ನೂ ಆ ಹೊಂಡವನ್ನು ಮುಚ್ಚಿರುವದಿಲ್ಲ! ನೀರು ನಿಂತಲ್ಲಿ ಕಸರು ರಾಶಿಯಾಗಿದ್ದು ನಾರುತ್ತದೆ. ಆ ಮಾರ್ಗದಿಂದ ಜನರಿಗೆ ತಿರುಗಾಡಲು ಬರುವದಿಲ್ಲ. ಜಿಲ್ಲಾಧಿಪತಿಗಳು ಮ್ಯುನಿಸಿಪಾಲಿಟಿಗೆ ಬುದ್ಧಿ ಹೇಳಬಾರದೇ?

ನಗರ ಸಭೆಯವರ ಆರೋಗ್ಯ ಸ್ವಚ್ಛತೆಯ ಕೆಲಸ ಸಮಾಧಾನಕರವಿಲ್ಲೆಂದು ದೂರುಂಟು. ವಿಶೇಷವಾಗಿ ಓಣಿಗಳ ಕಡೆಗೆ ನಗರ ಸಭೆಯವರು ಲಕ್ಷವನ್ನೇ ಕೊಡುವದಿಲ್ಲೆಂದೂ, ಅಲ್ಲಿ ರಾಶಿಯಾಗಿ ಬಿದ್ದಿರುವ ಹೊಲಸನ್ನು ತೆಗೆಸುವದಿಲ್ಲೆಂದೂ ಓಣಿಗಳೊಳಗಿಂದ ತಿರುಗಾಡುವಾಗ, ಮೂಗು ಮುಚ್ಚಿಕೊಂಡು ತಿರುಗಾಡಬೇಕಾಗುತ್ತದೆಂತಲೂ ಜನರು ದೂರುತ್ತಿದ್ದಾರೆ. ನಗರ-ಪಿತರು ಒಮ್ಮೆ ಈ ಓಣಿಗಳನ್ನು ಸಂದರ್ಶಿಸಿ ಅವುಗಳ ಸ್ವಚ್ಛತೆ ಮಾಡಿಸಬೇಕೆಂದು ಸೂಚನೆಯಿದೆ. ಊರ ಆರೋಗ್ಯ ಕೆಟ್ಟಿರುವ ಈ ಕಾಲದಲ್ಲಿ ಊರೊಳಗೆ ಹೊಲಸು ರಾಶಿಯಾಗಗೊಡುವದು ಎಂದೂ ಒಳಿತಲ್ಲ!

ಹೊನ್ನಾವರ— ಕೇಂದಿ-ಸರಾಯಿ ಸಿಗುವದು ನಿಂತಂದಿನಿಂದ ಹಳ್ಳಿಗಳಲ್ಲಿ ಚಹಾದ ಚಟ ಮಿಗಿಲಾಗಿದೆ! ಜನರು ಚಹಾ ಕುಡಿಯುವ ವ್ಯಸನವನ್ನು ಹಚ್ಚಿಕೊಂಡು ಮೈಗಳ್ಳರಾಗಿದ್ದಾರೆ! ಚಹಾ ಅಂಗಡಿಗೆ ರೊಕ್ಕ ಕೊಡುವದಕ್ಕೆ ಚಿಕ್ಕ-ಪುಟ್ಟ ಕಳವುಗಳನ್ನೂ ಮಾಡಲಾರಂಭಿಸಿದ್ದಾರೆ! ಅದರಿಂದ ಇಡಗುಂಜಿ, ಮೇಲಕೋಡ ಮುಂತಾದ ಹಳ್ಳಿಗಳೊಳಗಿನ ಜಾತಿ-ಬುದ್ಧಿವಂತರು ಜಾತಿಯವರ ಕೂಟಗಳನ್ನು ಕೂಡಿಸಿ ಚಹಾಕ್ಕೆ ಬಹಿಷ್ಕಾರ ಹಾಕಲು ಸಂಕಲ್ಪಿಸಿದ್ದಾರೆ; ಚಹಾ ಕುಡಿದವರಿಗೆ ಒಂದೊಂದು ರೂಪಾಯಿ ದಂಡ ವಿಧಿಸಲಾದೀತೆಂತಲೂ, ಚಹಾ ಕುಡಿಯಲು ಜನರಿಗೆ ಉತ್ತೇ ಕೊಡುವವರಿಗೂ ದಂಡ ಕೊಡಬೇಕೆಂದು ದುಷ್ಪ್ರೇರಣೆ ಕೊಡುವವರಿಗೂ ಹತ್ತು ಹತ್ತು ರೂಪಾಯಿ ದಂಡ ವಿಧಿಸಲಾಗುವದೆಂತಲೂ ಠರಾವು ಮಾಡಿದ್ದಾರೆ. ಈ ಠರಾವಿಗೆ ಈಗಾಗಲೇ ೮೦ ಮನೆಗಳ ಜನರ ಸಹಿಗಳಾಗಿವೆ. ಇದೊಂದು ಅನುಕರಣೀಯ ಸುಧಾರಣೆ.

ಕಳೆದ ಶುಕ್ರವಾರ ತಾ. ೧೨ನೇ ರಾತ್ರಿ ೧೧-೧೨ ದರೋಡೆಗಾರರು ಇಡಗುಂಜಿಯೊಳಗಿನ ನಾರಾಯಣ ಪಂಡಿತರೆಂಬವರ ಮನೆಯಲ್ಲಿ ನುಗ್ಗಿ, ಮಲಗಿಕೊಂಡಿದ್ದ ಜನರ ಕುತ್ತಿಗೆಗಳನ್ನು ಒತ್ತಿ ಇಲ್ಲವೆ ಅವರು ಒದರಾಡದಂತೆ ಬಾಯೊಳಗೆ ಅರಿವೆ ತುಂಡುಗಳನ್ನು ತುಂಬಿ, ಮನೆಯೊಳಗಿದ್ದ ರೂ. ೩೦೦-೪೦೦ ಬೆಲೆ ಬಾಳುವ ದಾಗಿನೆಗಳನ್ನು ನಗದು ಹಣವನ್ನೂ ಕದ್ದೊಯ್ದರೆಂದು ಸುದ್ದಿ ಬಂದಿದೆ! ದರೋಡೆಗಾರರೆಲ್ಲರೂ ತಮ್ಮ ಗುರುತು ಸಿಗಬಾರದೆಂದು ಮೋರೆಗೆ ಮಸಿ ಬಳಕೊಂಡು ಬಂದಿದ್ದರಂತೆ! ಪಂಡಿತರ ಮನೆಯಲ್ಲಿ ನಡೆದ ದರೋಡೆಗಾರರ ಹಾವಳಿಯ ಸುದ್ದಿ ದೊರೆತು ನೆರೆಮನೆಯವರು ಓಡಿಬಂದದ್ದರಿಂದ ದರೋಡೆಗಾರರು ತಮ್ಮ ಸಂಗಡ ತಂದಿದ್ದ ಕತ್ತಿ, ರೂಮಾಲು ಮುಂತಾದ ಆಯುಧಗಳನ್ನು ಗಡಿಬಿಡಿಯಲ್ಲಿ ಬಿಟ್ಟು ಹೋಗಿರುವರಂತೆ. ಅವುಗಳ ಮೇಲಿಂದ ದರೋಡೆಗಾರರ ಪತ್ತೆ ಹಚ್ಚಲಿಕ್ಕೆ ಬರುವಂತುಂಟಂತೆ. ಪೋಲೀಸರು ದರೋಡೆಗಾರರ ಶೋಧ ನಡಿಸಿದ್ದಾರೆ.

ಇಲ್ಲಿಯ ನಗರ ಸಭೆಯ ಚಿಕಿತ್ಸಾಲಯದ ಡಾಕ್ಟರ ವಾಗಳೇಯವರು ಕಳೆದ ಶನಿವಾರದಿಂದ ಪ್ರತಿ ಶನಿವಾರ ಟಿಪ್ಪರ ಸಭಾಮಂದಿರದಲ್ಲಿ ಪ್ರಥಮ-ಚಿಕಿತ್ಸೆ ಕಲಿಸುವ ವರ್ಗವನ್ನು ನಡಿಸುವ ಸ್ತುತ್ಯ ಉಪಕ್ರಮ ಕೈಕೊಂಡಿದ್ದಾರೆ. ಯಾರೊಬ್ಬರಿಗೆ ಗಾಯ, ಪೆಟ್ಟು, ವಿಷಬಾಧೆ ಮುಂತಾದ ಆಕಸ್ಮಿಕ ಬಾಧೆಗಳಾದಾಗ ವೈದ್ಯ-ಡಾಕ್ಟರರು ಬರುವ ತನಕ ಸಂಕಟಗ್ರಸ್ತರಿಗೆ ಮಾಡಬೇಕಾದ ಚಿಕಿತ್ಸೆಗೆ ಪ್ರಥಮ ಚಿಕಿತ್ಸೆ ಎಂದು ಹೇಳುತ್ತಾರೆ. ಡಾ| ವಾಗಳೇಯವರು ತಮ್ಮ ವ್ಯಾಖ್ಯಾನಗಳನ್ನು ಎಲ್ಲರಿಗೂ ತಿಳಿಯುವ ಹಾಗೆ ಕೊಂಕಣಿಯಿಂದಲೇ ಕೊಡುತ್ತಿದ್ದಾರೆ; ನಡುನಡುವೆ ಪ್ರಯೋಗಗಳನ್ನೂ ಮಾಡಿ ತೋರಿಸುತ್ತಾರೆ. ಆದರಿಂದ ಇಂಗ್ಲಿಶ ಬರದ ವಿದ್ಯಾರ್ಥಿಗಳಿಗೂ ಅವರು ಕೊಟ್ಟ ಪಾಠಗಳು ತಿಳಿಯಲಡ್ಡಿಯಿಲ್ಲ. ನೂರಾರು ವಿದ್ಯಾರ್ಥಿಗಳೂ ಜನರೂ ಈಗ ಅವರ ವರ್ಗದಲ್ಲಿ ಸೇರಿದ್ದಾರೆ.

ಇತ್ತಲಾಗಿ ಅಕ್ಕಿಯ ಗಿರಣಿಗಳೂ ಎಣ್ಣೆಯ ಗಿರಣಿಗಳೂ ಬಂದದ್ದರಿಂದ ಹಿಂದೆ ಗಾಣದ ವ್ಯವಸಾಯ ಇಲ್ಲವೆ ಭತ್ತ ಮೆರಿಯುವ ಉದ್ಯೋಗದಿಂದ ಜೀವನ ಸಾಗಿಸುತ್ತಿದ್ದ ನೂರಾರು ಜನರು ಏನೂ ಉದ್ಯೋಗ ಸಿಗದೆ ನಿರುದ್ಯೋಗಿಗಳಾಗಿ ಸಾಯುವ ಪ್ರಸಂಗ ಬಂದಿದೆ. ಅವರಿಗೆ ಕೈಮಗ್ಗದ ಉದ್ಯೋಗವನ್ನಾದರೂ ದೊರಕಿಸಿಕೊಟ್ಟರೆ ಅವರ ಬಾಳ್ವೆ ಸಾಗೀತು. ಕೈಮಗ್ಗದ ಉದ್ಯೋಗ ಕೈಕೊಳ್ಳುವ ಜನರಿಗೆ ಸರಕಾರದವರು ೧೦೦-೧೦೦ಕ್ಕೂ ಸಾಲ ಕೊಟ್ಟು ಸಹಾಯ ಮಾಡುತ್ತಾರೆಂದು ತಿಳಿದು ಬಂದಿದೆ. ಅದರಂತೆ ಇಲ್ಲಿಯ ೫ ಜನರು ತಾವು ಮಗ್ಗಗಳನ್ನು ಇಡಬಯಸುತ್ತೇವೆಂತಲೂ ತಮಗೆ ಸಹಾಯ ಮಾಡಬೇಕೆಂತಲೂ ಸರಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ. ಅಧಿಕಾರಿಗಳು ಅವರ ಬೇಡಿಕೆಯನ್ನು ಸಹಾನುಭೂತಿಯಿಂದ ಮನ್ನಿಸುವರೆಂದು ಆಶೆಯಿದೆ.

ಈಗ ಪೆಟ್ರೋಲ ಎಣ್ಣೆ ಬೇಕಷ್ಟು ಸಿಗುವದಿಲ್ಲವಾದ್ದರಿಂದ ಮೋಟಾರ ಬಂಡಿಗಳ ಓಡಾಟ ಬಹಳ ಕಡಿಮೆಯಾಗಿದೆ. ಹೊನ್ನಾವರ-ಕುಮಟಾ ರಸ್ತೆಯಲ್ಲಿ ಓಡಾಡುವ ಸರ್ವಿಸ್ಸುಗಳ ಮಾಲಕರು ತಮ್ಮೊಳಗೆ ಒಕ್ಕಟ್ಟು ಮಾಡಿಕೊಂಡು ತಮ್ಮ ಸರತಿಗಳನ್ನು ಕಡಿಮೆ ಮಾಡಿಕೊಂಡಿದ್ದಾರೆ. ಹೊನ್ನಾವರದಿಂದ ಕುಮಟೆಗೆ ಇಲ್ಲವೆ ಕುಮಟೆಯಿಂದ ಹೊನ್ನಾವರಕ್ಕೆ ಹೋಗುವ ಗಾಡಿಗಳು ಹೊರಡುವಾಗಲೇ ಪ್ರಯಾಣಿಕರಿಂದ ತುಂಬಿ ಹೋಗುತ್ತಿವೆ. ಆದರಿಂದ ಕರ್ಕಿ, ಹಳದೀಪುರ, ಹೊಳೆಗದ್ದೆ, ಧಾರೇಶ್ವರಗಳ ಜನರಿಗೆ ಗಾಡಿಗಳಲ್ಲಿ ಸ್ಥಳ ಸಿಗುವದಿಲ್ಲ. [ಇದೊಂದು ಇಷ್ಟಾಪತ್ತಿಯೆಂದು ನಮ್ಮ ಅಭಿಪ್ರಾಯ. ಮೋಟಾರಬಂಡಿಗಳು ಬರುವ ಪೂರ್ವದಲ್ಲಿ ಹೇಗೆ ನಮ್ಮ ಹಿರಿಯರು ಕಾಲ್ನಡಿಗೆಯಿಂದ ತಮ್ಮ ಕಾರ್ಯ ಸಾಗಿಸಿಕೊಳ್ಳುತ್ತಿದ್ದರೋ ಹಾಗೆಯೇ ನಾವೂ ಸಾಗಿಸಿಕೊಳ್ಳಲು ಕಲಿಯಬೇಕು. ಕಾಲು ಗಟ್ಟಿಮುಟ್ಟಾಗಿದ್ದ ಜನರು ಕಾಲು ಕುಂಟಾದವರಂತೆ ೩-೪ ಮೈಲು ಪ್ರವಾಸ ಮಾಡಬೇಕಾದರೂ ಮೋಟಾರ ಬಂಡಿಗಳನ್ನು ಹತ್ತುತ್ತಿರುವದೂ ಮೋಟಾರ ಬಂಡಿಗಳ ಹಾದಿ ಕಾಯುತ್ತ ಮಾರ್ಗಗಳ ಮೇಲೆ ತಾಸುಗಟ್ಟಲೆ ನಿಂತುಕೊಳ್ಳುವದೂ ಇಷ್ಟವಲ್ಲ; ಕ್ಷೇಮಕಾರಕವೂ ಅಲ್ಲ. ಜರೂರಿಯ ಇಲ್ಲವೆ ದೂರ ಅಂತರದ ಪ್ರವಾಸ ಮಾಡುವ ಜನರಷ್ಟೇ ಮೋಟಾರ ಬಂಡಿಗಳ ಪ್ರಯೋಜನ ಪಡೆಯಬೇಕು. ಈ ದೃಷ್ಟಿಯಿಂದ ಆಲೋಚಿಸಿದರೆ ಮೋಟಾರ ಬಂಡಿಗಳ ಓಡಾಟ ಕಡಿಮೆಯಾದ ಬಗ್ಗೆ ವಿಚಾರವಂತರು ಎಂದೂ ದೂರಿಕೊಳ್ಳಲಾರರು.

— ಸಂಪಾದಕ.]

ಇದ್ದಲಿಯ ಸಹಾಯದಿಂದಲೇ ನಡೆಯುವ ಕರ್ನಾಟಕ ಎಕ್ಸಪ್ರೆಸ್ ಸರ್ವಿಸ್ಸಿನ ಮೋಟಾರ ಬಂಡಿಯೊಂದು ನಿನ್ನೆ ಶನಿವಾರ ಪ್ರದರ್ಶನಾರ್ಥ ಈ ಊರಿಗೆ ಬಂದಿತ್ತು.

ಕಡತೋಕಾ ಸೀಮೆಯ ಪ್ರೌಢ ಶಿಕ್ಷಣ ಪ್ರಸಾರಕ ಮಂಡಳದ ವಿನಂತಿಯಂತೆ ಇಲ್ಲಿಯ ಶಾಲಾತಪಾಸಕ ರಾ| ಅಂಕಲೆಕರರವರು ಕಳೆದ ತಾ. ೬ನೇಗೆ ಗುಡ್ಡಿನಕಟ್ಟ ಹಾಗೂ ನವಿಲಗೋಣ ಗ್ರಾಮಗಳಿಗೆ ಭೆಟ್ಟಿ ಕೊಟ್ಟು, ಅಲ್ಲಿ ಸಭೆ ಕೂಡಿದ ಜನರಿಗೆ ಸಾಕ್ಷರತೆಯ ಮಹತ್ವವನ್ನೂ ಓದುಬರಹಗಳ ಜ್ಞಾನದಿಂದುಂಟಾಗುವ ಲಾಭವನ್ನೂ ತಿಳಿಸಿ ಹೇಳಿ, ಕಡತೋಕಾ ಮಂಡಳದ ಸಹಾಯದಿಂದ ತಮ್ಮ ಊರಲ್ಲಿ ಪ್ರೌಢ ಶಿಕ್ಷಣ ಶಾಲೆಗಳನ್ನು ಸ್ಥಾಪಿಸಿಕೊಳ್ಳಿರೆಂದು ಉಪದೇಶಿಸಿದರು. ಅದರಂತೆ ಜನರು ತಮ್ಮಲ್ಲಿ ಪ್ರೌಢರ ಶಾಲೆಗಳನ್ನು ಸ್ಥಾಪಿಸಿಕೊಳ್ಳುವ ಸಂಕಲ್ಪ ಮಾಡಿದ್ದಾರೆ. ರಾ| ಅಂಕಲೆಕರರು ಬಾಸಗೋಳ್ಳಿಯ ಪ್ರೌಢ ಶಾಲೆಯನ್ನೂ ಸಂದರ್ಶಿಸಿ ಅಲ್ಲಿಯ ಕಾರ್ಯದ ಬಗ್ಗೆ ಸಮಾಧಾನ ವ್ಯಕ್ತಗೊಳಿಸಿದರೆಂದು ತಿಳಿಯುತ್ತದೆ.

ಶಿರಾಲಿ— (ತಾ. ೧೨-೯-೪೧) ಮಳೆ ಸಾಧಾರಣವೇ! ಅಕ್ಕಿ ಬಹಳ ತುಟ್ಟಿಯಾಗಿದೆ. ಬಡ-ಬಗ್ಗರು ಗೋಳ

ಡುತ್ತಿದ್ದಾರೆ ಯಾರಾದರೂ ಧನವಂತರು ಅಗ್ಗದರದಿಂದ ಅಕ್ಕಿಯನ್ನು ಮಾರುವ ವ್ಯವಸ್ಥೆ ಮಾಡಿ ಪುಣ್ಯ ಕಟ್ಟಿಕೊಳ್ಳಬೇಕು

ಹೋದ ತಿಂಗಳಲ್ಲಿ ಮುಂಡಳ್ಳಿಯೊಳಗೆ ಬೆಂಕಿಯಿಂದ ಹಾನಿಯು ಮಾಡುತ್ತಿದ್ದ ಬಗ್ಗೆ ಸೆರೆಹಿಡಿಯಲ್ಪಟ್ಟವರಲ್ಲಿ ಒಬ್ಬನಿಗೆ ೩ ತಿಂಗಳ ಶಿಕ್ಷೆ ಮತ್ತು ರೂ ೨೦ ದಂಡ ವಿಧಿಸಲ್ಪಟ್ಟಿದೆ ಇನ್ನೊಬ್ಬ ಹುಡುಗನಿಗೆ ರೂ ೩೦ ದ ದಂಡವಷ್ಟೇ ವಿಧಿಸಲಾಗಿದೆ

೫ ೬ ದಿನಗಳ ಹಿಂದೆ [illegible] ನೀರು ಸೇದಲು ಬಾವಿಗೆ ಹೋದ ಒಬ್ಬ ಹುಡುಗನು ಕಳ್ಳನೆ ಬಾವಿಯಲ್ಲಿ ಬಿದ್ದು ತೀರಿಕೊಂಡನೆಂದು ತಿಳಿಯುತ್ತದೆ

ಬೈಲೂರ— (ತಾ ೮ ೯-೪೧) ಇಲ್ಲೊಂದು ಗ್ರಾಮಪಂಚಾಯತು ಸ್ಥಾಪನೆಯಾಗಿದೆ ಸರಕಾರದಿಂದ ಧನಸಹಾಯವೂ ಬಂದುಕೂತಿದೆ ಆದರೆ ಇನ್ನೂ ಪಂಚಾಯತಿ ಕೆಲಸಕ್ಕೆ ಪ್ರಾರಂಭವಾದದ್ದು ಕಂಡುಬರುವದಿಲ್ಲ. ಪಂಚಾಯತಿನ ಕಾರ್ಯದರ್ಶಿಗಳು ಒಂದು ಹಿಸಾಬ [illegible] ಸಂಘಟಿಸಿರುತ್ತಾರೆ ಯಾವಾಗಲೂ ಅವರು ಕಂಟ್ರಾಕ್ಟ ಕೆಲಸಕ್ಕಾಗಿ ಬೇರೂರುಗಳಲ್ಲಿ ತಿರುಗುತ್ತಿರುತ್ತಾರೆ ಅದರಿಂದ ಪಂಚಾಯತ ಕಚೇರಿಯು ಹಾಗೆಯೇ ಮುಚ್ಚಿದ್ದೇ ಇರುತ್ತದೆ. ಸರಪಂಚರು ಕಾರ್ಯದರ್ಶಿಗಳಿಗೆ ಈ ಬಗ್ಗೆ ಕೇಳುವದಿಲ್ಲ. ಹ್ಯಾಗೆ ಕೇಳುವರು? ಪಂಚಾಯತಿಯಲ್ಲಿ ಕಾರ್ಯದರ್ಶಿಗಳು ಇವರ ಕೈ ಕೆಳಗಿನವರಲ್ಲ [illegible] ವಿಷಯ [illegible] ಸಂಬಂಧದಲ್ಲಿ ಸರಪಂಚರು [illegible] ನಾತೆಯಿಂದ ಕಂಪನಿಯ ಸಂಘಟಕರಾದ ಕಾರ್ಯದರ್ಶಿಗಳ ಮರ್ಜಿಯನ್ನು ಕಾಯಬೇಕಲ್ಲವೇ? ಜಿಲ್ಹಾಧಿಕಾರಿಗಳು ಈ ವಿಷಯವನ್ನು ಚಿತ್ತಕ್ಕೆ ತಂದು ಗ್ರಾಮಪಂಚಾಯತಿ ಕೆಲಸವನ್ನು ಬೇರೆ ಯಾರಿಗಾದರೂ ಒಪ್ಪಿಸಬೇಕು

ಶಿರಸಿ— (ತಾ. ೧೪ ೯ ೪೧) ಕಳೆದ ತಾ. ೧ನೇಗೆ ಮಧ್ಯರಾತ್ರಿಯ ಸಮಯ ಮುಚ್ಚಿಗೇರಿ ಗಲ್ಲಿಯಲ್ಲಿರುವ ಒಂದು ಮನೆಯೊಳಗಿನ ಮಂಜನಾಥನೆಂಬವನು ತನ್ನ ಮನೆಯಲ್ಲೇ ಇದ್ದ ಕನ್ಯೆ ಎಂಬಾಕೆಯ ಕೊಲೆ ಮಾಡಲು ಪ್ರವೃತ್ತನಾಗಿದ್ದನು ಕನ್ಯೆಯ ಕೂಗುಗಳನ್ನು ಕೇಳಿ ಪೋಲೀಸರು ಓಡಿ ಬಂದದ್ದರಿಂದ ಆಕೆ ಕತ್ತಿಯ ಗಾಯಗಳಿಂದಷ್ಟೇ ಪಾರಾದಳು. ಮಂಜನಾಥನಿಗೆ ಮೆಜಿಸ್ಟ್ರೇಟರು ಮೇಲ್ಕಾಣಿಸಿದ ಅಪರಾಧದ ಬಗ್ಗೆ ೩ ತಿಂಗಳ ಸಕ್ತ ಶಿಕ್ಷೆ ವಿಧಿಸಿದ್ದಾರೆ

ಶ್ರೀ ಮಾರೆಮ್ಮನವರ ಗುಡಿಯೊಳಗಿನ ಈ ವರ್ಷದ ನವರಾತ್ರಿಯ ಉತ್ಸವವು ಒಂದು ದೊಡ್ಡ ಜ್ಞಾನಸತ್ರವಾಗಿ ಪರಿಣಮಿಸುವದೆಂದು ಹೇಳಬಹುದು ಇಲ್ಲಿಯ ತರುಣ ಸಂಘದವರೂ ಆ ಉತ್ಸವದಲ್ಲಿ ಭಾಗಿಗಳಾಗಿ, ಉತ್ಸವಕಾಲದಲ್ಲಿ ಶ್ರೀ ಅ ನ ಕೃಷ್ಣರಾವ, ವಿದ್ವಾನ್ ಸೀತಾರಾಮಯ್ಯ, ಸಂಪತ್ಕುಮಾರಾಚಾರ್ಯ, ಮುದವೀಡು ಕೃಷ್ಣರಾವ ಮೊದಲಾದ ಮೇಲ್ತರಗತಿಯ ಕನ್ನಡ ಸಾಹಿತ್ಯಕರ್ತರ ವ್ಯಾಖ್ಯಾನಗಳನ್ನೂ, ಪ್ರವಚನಗಳನ್ನೂ, ಕೀರ್ತನೆಗಳನ್ನೂ ಮಾಡಿಸುವ ಯೋಜನೆ ಮಾಡಿದ್ದಾರೆ

ಶ್ರೀ ಗಣಪತಿ ದೇವಸ್ಥಾನದ ಸಂಬಂಧದಲ್ಲಿ ಇನ್ನೂ ಕೆಲವು ದೂರುಗಳು ತಿಳಿದುಬಂದಿವೆ ಗಣೇಶ ಚತುರ್ಥಿಯ ಹಬ್ಬದ ಕಾಲಕ್ಕೆ ದೇವರಿಗೆ ನೂರಾರು ರೂಪಾಯಿಗಳ ಪಂಚಖಾದ್ಯದ ಸೇವೆಗಳು ಆಗುತ್ತವಂತೆ ಅರ್ಚಕರು ಸ್ವತಃ ಪಂಚಖಾದ್ಯ ತಯಾರಿಸಿ, ಸೇವೆ ಅರ್ಪಿಸುವ ಭಜಕರಿಂದ ಪಂಚಖಾದ್ಯದ ಬೆಲೆ, ಪಂಚಖಾದ್ಯದ ಕಾಣಿಕೆ, ತಮ್ಮ ದಕ್ಷಿಣೆ ಮತ್ತು ಪಂಚಖಾದ್ಯ ತಯಾರಿಸುವ ಮಜೂರಿ ಹೀಗೆ ಬೇರೆ ಬೇರೆ ಹಣ ವಸೂಲ ಮಾಡುತ್ತಾರೆ ಕಾಣಿಕೆ, ದಾನ ದೇವರ ಭಂಡಾರಕ್ಕೆ ಜಮೆಯಾಗುತ್ತದೋ ಇಲ್ಲವೋ ತಿಳಿಯದು ಲೆಕ್ಕದಲ್ಲಿ ಈ ಕಾಣಿಕೆ ಜಮೆಯಾದದ್ದು ಕಂಡುಬರುವದಿಲ್ಲೆಂದು ಕೆಲವರು ಹೇಳುತ್ತಾರೆ. ಬೆಲೆಗೆ ತಕ್ಕಷ್ಟು ಪಂಚಖಾದ್ಯವನ್ನು ಅರ್ಚಕರು ತಯಾರಿಸುವದಿಲ್ಲವೆಂದೂ ದೂರಿದೆ. ಮುಗ್ಗಿಹೋದ ಕಡಲೆ ಮತ್ತು ಹುಳಿಯಾದ ಸಕ್ಕರೆಗಳಿಂದ ತಯಾರಿಸಿದ ಆ ಪಂಚಖಾದ್ಯವನ್ನು ದೇವರ ಪ್ರಸಾದವೆಂದು ಜನರು ತಿನ್ನಬೇಕು. ರುಚಿಯಿಂದ ತಿನ್ನಬಾರದು. ಅದನ್ನು ತಿಂದರೆ ವೈದ್ಯರ ಮದ್ದಿನ ಗುಳಿಗೆ ತಿಂದಂತೆ ಆಗುತ್ತದೆಂದು ಬಹಳ ಜನರು ಹೇಳುತ್ತಾರೆ. ಈ ಬಗ್ಗೆ ದೂರಿಕೊಳ್ಳಲಿಕ್ಕೂ ಅಸ್ಪದವಿಲ್ಲ. ದೂರಿದರೆ ಅರ್ಚಕರು ಹಾರಾಡುತ್ತಾರೆ. ಮೊಕ್ತೇಸರರ ಕಡೆಗೆ ದೂರು ಒಯ್ದರೆ ಅವರು ಆ ಕಡೆ ಕಿವಿಯನ್ನೇ ಕೊಡುವದಿಲ್ಲ.

ಈಗ [illegible] ಮಳೆಯಿಲ್ಲ. ಒಂದೇ ಸಮನೆ ಬಿಸಿಲು ಬೀಳುತ್ತಿದೆ. ಒಕ್ಕಲಿಗರು ನಿರಾಶೆಗೊಂಡು ಮುಗಿಲನ್ನೇ ನೋಡುತ್ತಿದ್ದಾರೆ

ಕಾರವಾರ— (ತಾ ೬-೯-೪೧) ಕಾರವಾರ ಜಿಲ್ಹೆಯ ಸಹಕಾರಿ ಸಂಘಗಳ ಸುಪರವೈಜಿಂಗ ಯೂನಿಯನ್ನಿಗೆ ಒಳಪಟ್ಟ ೩೩ ಸಂಘಗಳ ಕಾರ್ಯದರ್ಶಿಗಳಿಗೆ ಸಹಕಾರದ ತಾತ್ವಿಕ ಸಂಸ್ಥೆ ನಡೆಸುವ ಶಿಕ್ಷಣ ಕೊಡುವದಕ್ಕಾಗಿ ಸಹಕಾರಿ ಇಲಾಖೆಯವರು ಕಳೆದ ತಾ. ೨೦ರಿಂದ ಒಂದು ಮಾಸದ ವರ್ಗವನ್ನು ತೆರೆದಿರುತ್ತಾರೆ ಈ ವರ್ಗವು ೨೫ ದಿನ ನಡೆಯುವದಂತೆ ಎಲ್ಲ ಸಂಘಗಳ ಕಾರ್ಯದರ್ಶಿಗಳೂ [illegible] ಉಮೇದವಾರರೂ ವರ್ಗದಲ್ಲಿ ಸೇರಿದ್ದಾರೆ. ಈ ವರ್ಗವನ್ನು ತೆರೆಯುವ ಸಮಾರಂಭವು ಇದೇ ಕಳೆದ ತಾ ೨೦ನೇ [illegible] ೩ ಘಂಟೆಗೆ ಸುಪರವೈಜಿಂಗ ಯೂನಿಯನ್ನಿನ [illegible] ಜಿಲ್ಹಾಧಿಕಾರಿಗಳಾದ ರಾ [illegible] ಅಧ್ಯಕ್ಷತೆಯಲ್ಲಿ ಜರುಗಿತು ಈ ಸಮಾರಂಭಕ್ಕೆ ಸ್ಥಾನಿಕ ಅಧಿಕಾರಿಗಳೂ ಊರ ಪ್ರಮುಖರೂ ಹೋಗಿದ್ದರು. ಆ ವರ್ಗವನ್ನು ತೆರೆಯಲು ಮಾತಾಡಲಿದ್ದ ಸಹಕಾರ ಶಿಕ್ಷಣದ ಮಹತ್ವವನ್ನೂ ಅವಶ್ಯಕತೆಯನ್ನೂ ತಿಳಿಸಿದರು. ಆ ಬಳಿಕ [illegible] ಮಾತಾಡಲಿದ್ದ ಜಿಲ್ಹಾ [illegible] ಅಧಿಕಾರಿಗಳು ಸಂಘಗಳ ಕಾರ್ಯದರ್ಶಿಗಳು ಗ್ರಾಮೋದ್ಧಾರ ಕಾರ್ಯದ ಕಡೆಗೂ ಲಕ್ಷ್ಯಗೊಟ್ಟು ಸಂಘದ ಸದಸ್ಯರ ಆರ್ಥಿಕ ಉನ್ನತಿ ಸಾಧಿಸಬೇಕೆಂದು ಬೋಧಿಸಿದರು. ಇಲ್ಲಿಯ ಸುಪರವೈಜಿಂಗ ಯೂನಿಯನ್ನವರು ಈ ತಾಲೂಕಿನ ಜನರಿಗೆ ೧೨೦೦ ರಷ್ಟು ಹಾನಿಯ [illegible] ಸುಧಾರಿಸಿದ ಗೊಬ್ಬರ ಮುಂತಾದವುಗಳನ್ನು ಪೂರೈಸಿ ಮಾಡಿದ ಗ್ರಾಮೋದ್ಧಾರ ಕಾರ್ಯವನ್ನು [illegible] ಸಮಾರಂಭದ ಸಮಾರೋಪ ಮಾಡುವಾಗ ಅಧ್ಯಕ್ಷರು ಉಪದೇಶಪರ ಭಾಷಣಮಾಡಿ, ಸಹಕಾರಿ ಸಂಘಗಳ ಕಾರ್ಯದರ್ಶಿಗಳು, ಸಾರಥಿಗಳಂತೆ ಇರುವರೆಂತಲೂ, ಅವರು ಕಾರ್ಯತತ್ಪರರಿದ್ದರೆನೇ ಸಂಘಗಳ ಕಾರಭಾರ ಸರಿಯಾಗಿ ನಡೆಯಬಲ್ಲದೆಂತಲೂ, ಸಹಕಾರಿಸಂಘಗಳು ಒಳ್ಳೇ ಸಾಲ ಕೊಡುವ ಸಂಸ್ಥೆಗಳಾಗಿರಬಾರದೆಂತಲೂ, ತಮ್ಮ ಕ್ಷೇತ್ರದೊಳಗಿನ ಜನತೆಯ ಸಾಂಪತ್ತಿಕ ಸ್ಥಿತಿ ಸುಧಾರಿಸಲು ಪ್ರಯತ್ನಿಸಬೇಕೆಂತಲೂ, ಇದೇ ಸಹಕಾರ ಚಳವಳಿಯ ಮೂಲೋದ್ದೇಶವೆಂತಲೂ ಮನದಟ್ಟಾಗುವಂತೆ ತಿಳಿಸಿ ಹೇಳಿದರು. ಮುಂದೆ ಆಭಾರಮನ್ನಣೆ ಮುಂತಾದವುಗಳಾಗಿ ಈ ಚಿಕ್ಕ ಸಮಾರಂಭ ಸಮಾಪ್ತಿಗೊಂಡಿತು.

ಕಾರವಾರ ಅಂಕೋಲೆಗಳ ನಡುವೆ ಈಗ ಮೊದಲಿನಷ್ಟು ಮೋಟಾರ ಬಂಡಿಗಳು ಓಡಾಡುವದಿಲ್ಲೆಂತಲೂ, ಓಡಾಡುವ ಬಂಡಿಗಳು ಕೂಡ ಸರಿ ವೇಳೆಗೆ ಹೊರಡುವದಿಲ್ಲೆಂತಲೂ, ಬಂಡಿಗಳಲ್ಲಿ ನಡುವಿನ ಜನರಿಗೆ ಸ್ಥಳ ಸಿಗದೆ ಬಹಳ ತೊಂದರೆಗಳಾಗುತ್ತವೆಂತಲೂ ಪ್ರಯಾಣಿಕರೊಬ್ಬರು ದೂರುತ್ತಾರೆ. ಈ ಎಲ್ಲ ತೊಂದರೆಗಳಿಗೆ ವಾಹನ ನಿಯಂತ್ರಣ ಮಂಡಳದವರು ಜವಾಬದಾರರೆಂದು ಅವರ ಅಂಬೋಣ. ಅಂಕೋಲೆಯ ಹಾಗೂ ಅಂಕೋಲಾ ಕಾರವಾರ ಊರುಗಳ ನಡುವಿನ ಊರುಗಳ ಕೋರ್ಟು ವ್ಯವಹಾರದ ಜನರ ಅನುಕೂಲತೆಗಾಗಿ ಮುಂಜಾವಿನ ಹೊತ್ತಿನಲ್ಲಿ ೪ ೫ ಬಂಡಿಗಳನ್ನಾದರೂ ಓಡಾಡಿಸುವಂತೆ ವ್ಯವಸ್ಥೆ ಮಾಡಬೇಕಾಗಿ ಅವರ ಸೂಚನೆಯುಂಟು [ಮೇಲೆ ಹೊನ್ನಾವರ ಸವರಿನಲ್ಲಿ ಕುಮಟಾ ಹೊನ್ನಾವರ ಜನರಿಗೆ ಹೇಳಿದ ಮಾತುಗಳನ್ನೇ ಅಂಕೋಲೆಯ ಸುತ್ತಮುತ್ತಲಿನ ಜನರಿಗೂ ಹೇಳಬಯಸುತ್ತೇವೆ. —ಸಂಪಾದಕ]

ಯಲ್ಲಾಪುರ— (೫-೯-೪೧) ಕಳೆದ ತಿಂಗಳ ಕೊನೆಯ ವರೆಗೆ ೪೪ ಇಂಚು ಮಳೆಯಾಗಿದೆ ನೆಟ್ಟಿಕೆಲಸ ಇನ್ನೂ ೪ ೬ ಆಣೆಯಷ್ಟು ಬಾಕಿಯುಂಟು ಮಳೆ ಕಡಿಮೆಯಾದ್ದರಿಂದ ತೊಂದರೆಯಾಗಿದೆ. ಎಲ್ಲಿ ನೋಡಿದಲ್ಲಿ ಬಟ್ಟೇ ಹೊರಕಡೆ ಬೇನೆಯ ಹಾವಳಿ ಕಣ್ಣಿಗೆ ಬೀಳುತ್ತಿದೆ. ಈ ಊರಿನ ಹೊಲಸಂತೂ ಹಾಗೆಯೇ ಬಿದ್ದಿದೆ. ಲೋಕಲ್ ಬೋರ್ಡಿನವರು ಆ ಕಡೆ ಲಕ್ಷವನ್ನೇ ಕೊಡುವದಿಲ್ಲ

ಇಲ್ಲಿ ಸರಕಾರಿ ಡಾಕ್ಟರರ ವಿನಹ ಬೇರೆ ಯಾರೂ ಡಾಕ್ಟರ, ವೈದ್ಯ, ಹಕೀಮರು ಇರುವದಿಲ್ಲ ಇಲ್ಲವೆನ್ನಲಿಕ್ಕೆ ಒಬ್ಬ ಆಯುರ್ವೇದ ವೈದ್ಯರೊಬ್ಬರಿದ್ದಾರೆ. ಆದರೆ ಅವರು ಇಲ್ಲಿ ಒಂದು ತಿಂಗಳು ಉಳಿದರೆ ಎರಡು ತಿಂಗಳು ಊರಿಗೆ ಹೋಗುತ್ತಾರೆ. ಊರಲ್ಲಿ ಆರೋಗ್ಯ ಕೆಟ್ಟಾಗಲೇ ಅವರು ಊರಿಗೆ ಹೋಗುವದು ಹೆಚ್ಚು. ಆದರಿಂದ ಜನರು ವೈದ್ಯಕೀಯ ಉಪಚಾರದ ಬಗ್ಗೆ ಹೆಚ್ಚಾಗಿ ಡಾಕ್ಟರರ ಮೇಲೆಯೇ ಅವಲಂಬಿಸಬೇಕಾಗುತ್ತದೆ ಆದರೆ ಸರಕಾರಿ ಡಾಕ್ಟರರು ಮೇಲಿಂದ ಮೇಲೆ ಬದಲಿಸುತ್ತಿರುವದರಿಂದ ಜನರಿಗೆ ಬಹಳ ತೊಂದರೆಯಾಗುತ್ತದೆ ಕಳೆದ ೬ ತಿಂಗಳಲ್ಲಿ ೩ ಡಾಕ್ಟರರು ಬಂದು ಹೋದರು ಈಗಿರುವ ಡಾಕ್ಟರರು ೮-೧೦ ದಿನಗಳ ಹಿಂದೆ ೩ ದಿನ ರಜೆ ತಕ್ಕೊಂಡು ಹೋದವರು ಇನ್ನೂ ತಿರುಗಿ ಬಂದಿಲ್ಲ. ಅವರು ರಜೆ ಬೆಳೆಸಿಕೊಂಡಿದ್ದಾರೆಂದು ಸುದ್ದಿ ಹಬ್ಬಿದೆ ಊರಲ್ಲಿ ಬಟ್ಟೇ ಹೊರಕಡೆ ಹಬ್ಬಿಕೊಂಡಾಗ, ಪ್ರತಿ ಮನೆಯಲ್ಲಿ ೨-೩ ಜನರು ಹಾಸಿಗೆ ಹಿಡಿದು ಬಿದ್ದಿರುವಾಗ ಈ ರೀತಿ ಡಾಕ್ಟರರೂ ಇಲ್ಲ, ವೈದ್ಯರೂ ಇಲ್ಲವೆಂದ ಮೇಲೆ ಜನರು ಮದ್ದಿಲ್ಲದೆ ಸಾಯಬೇಕೆಂದಂತಾಯಿತು. ಮೇಲಧಿಕಾರಿಗಳು ಈ ಶೋಚನೀಯ ಪರಿಸ್ಥಿತಿಯನ್ನು ಸುಧಾರಿಸಲಾರರೇ?

ಇತ್ತ ೩-೪ ತಿಂಗಳಿಂದ ಇಲ್ಲಿ ಮಾಮಲೇದಾರರಿದ್ದಿಲ್ಲ ಮಾಮಲೇದಾರರಾಗಿ ನೇಮಕಪಟ್ಟಪಟ್ಟವರು ರಜೆ ತಕ್ಕೊಂಡು ಇಲ್ಲಿ ಬರುವದನ್ನೇ ತಪ್ಪಿಸಿ ಕೊಳ್ಳುತ್ತಿದ್ದರು. ಶಿರಸ್ತೇದಾರರೇ ಎಲ್ಲ ಕೆಲಸ ಸಾಗಿಸಿಕೊಂಡು ಹೋಗಬೇಕಾಗಿತ್ತು ಈಗ ೪ ೫ ದಿನಗಳ ಹಿಂದೆ ರಾ| ಬಾಪಟರವರು ಹಂಗಾಮಿ ಮಾಮಲೇದಾರರಾಗಿ ಬಂದಿದ್ದಾರೆ ಎರಡೇ ತಿಂಗಳ ಬದ್ಲಿಗಾಗಿ ಅವರು ಬಂದಿರುವರಂತೆ. ಈ ಎರಡು ತಿಂಗಳಲ್ಲಿ ತಾಲೂಕಿನ ಪರಿಸ್ಥಿತಿಯನ್ನೂ ಅಡಚಣೆಗಳನ್ನೂ ಅವರು ಅಭ್ಯಸಿಸುವಷ್ಟರಲ್ಲಿ ಅವರಿಗೆ ಬೇರೆ ಕಡೆಗೆ ವರ್ಗವಾಗುವದು! ಹೀಗಾದರೆ ಅವರು ಎಂತಹ ಕೆಲಸ ಮಾಡ್ಯಾರು? ಅಧಿಕಾರಿಗಳು ದೀರ್ಘಾಲೋಚನೆ ಮಾಡಿ ರಾ| ಬಾಪಟರಿಗಾಗಲಿ ಇನ್ನಾರಿಗಾಗಲಿ ಈ ತಾಲೂಕಿನಲ್ಲಿ ಕನಿಷ್ಟಪಕ್ಷಕ್ಕೆ ೨-೩ ವರ್ಷವಾದರೂ ಇಡುವರೋ ಏನು

ಕಳೆದ ತಾ ೩೧ ನೇಗೆ ಇಲ್ಲಿಯ ಅಬಕಾರಿ ಸಬ್ ಇನ್ಸಪೆಕ್ಟರ ರಾ| ದೇಸಾಯಿ ಗೌಡರೂ ಪೋಲೀಸ್ ಸಬ್ ಇನ್ಸಪೆಕ್ಟರ ರಾ| ಶಿರಳೀಯವರೂ ಚಂದಗುಳಿಯ [illegible] ರಾಮಾ ಎಂಬವನ ಮನೆಯಲ್ಲಿ ಝಡ್ತಿ ಮಾಡಿಸಲಾಗಿ ಮನೆಯ ನೆಲದಲ್ಲಿ ಹುಗಿದಿಟ್ಟಿದ್ದ ೬ ಡಬ್ಬಿ ಸಿಂದಿಯೂ ಸರಾಯಿ ತಯಾರಿಸುವ ಸಾಮಿತ್ರ್ಯವೂ ಸಿಕ್ಕವು ಮರುದಿನ ಆ ರಾಮನ ವಿಚಾರಣೆಯಾಗಿ ಅವನಿಗೆ ರೂ ೨೦ ದಂಡ ವಿಧಿಸಲ್ಪಟ್ಟಿತು. ರಾ| ದೇಸಾಯಿ ಗೌಡರು ಇಲ್ಲಿ ಬಂದಂದಿನಿಂದ ೧೯ ೧೯ ಅಬಕಾರಿ ಗುನ್ಹೆಗಳು ಹಿಡಿಯಲ್ಪಟ್ಟಿವೆ ಆದರಿಂದ ಈ ಭಾಗದಲ್ಲಿ ಇತ್ತೀಚೆಗೆ ಸರಾಯಿಯ ಕಳ್ಳ ವ್ಯಾಪಾರ ಬಹಳಷ್ಟು ಕಡಿಮೆಯಾಗಿದೆ

ಈ ತಾಲೂಕಿನ ತೆಲಗೇರಿ ಗ್ರಾಮದಲ್ಲಿ ಗ್ರಾಮ ಸುಧಾರಣೆಯ ಕಾರ್ಯ ಒತ್ತರದಿಂದ ನಡೆಸಬೇಕೆಂದು ನಿಶ್ಚಯಿಸಿದಂತೆ ಕಳೆದ ತಾ ೩೧ ನೇಗೆ ಅಲ್ಲಿ ಯಲ್ಲಾಪುರ ಕನ್ನಡ ಶಾಲೆಯ ಶಿಕ್ಷಕ ರಾ| ಹ [illegible]ರವರ ಅಧ್ಯಕ್ಷತೆಯಲ್ಲಿ ಊರ ಜನರ ಸಭೆಯಾಗಿ ಒಂದು ಸಂಘ ಸ್ಥಾಪಿಸಲಾಗಿದೆ ಗ್ರಾಮೋದ್ಧಾರ ಇಲಾಖೆಯ ಅಧಿಕಾರಿಗಳು ಸಭೆಗಾಗಿ ಶಿಕ್ಷಣದ

(೫ನೇ ಪುಟದ ಮೇಲೆ ಮುಂದುವರಿದಿದೆ)

ಜಿಲ್ಲಾ ಸಮಾಚಾರ.

(ಕಳೆದ ವಾರದ್ದು.)

ಅಂಕೋಲಾ— ತಾ ೨೫-೮-೪೧ರ "ವೃತ್ತ"ದಲ್ಲಿ ರಾ॥ ಗಣಪತಿ ಕಾಮತರ ಪತ್ರವೂ ಅದರ ಮೇಲೆ "ವೃತ್ತ"ಕಾರರ ಟೀಕೆಯೂ ಪ್ರಕಟವಾಗಿವೆಯಷ್ಟೆ. "ವೃತ್ತ"ಕಾರರು ಕೇಳಿದ ಕೆಲವು ಪ್ರಶ್ನೆಗಳಿಗೆ ಪ್ರತ್ಯುತ್ತರವೆಂದು ರಾ॥ ಕಾಮತರು ಒಂದು ಪತ್ರ ಬರೆದಿದ್ದಾರೆ. ಅದರ ಮುಖ್ಯಾಂಶಗಳು ಇಂತಿವೆ- (೧) ಹಿಂದಿನ ಬೋರ್ಡುಗಳಿಗೂ ಈಗಿನ ಬೋರ್ಡಿಗೂ ಇರುವ ವ್ಯತ್ಯಾಸವೇನೆಂದರೆ ಈಗಿನ ಬೋರ್ಡು "ಕೊಂಗ್ರೆಸ" ಬೋರ್ಡಾಗಿರುತ್ತದೆ (೨) ಈಗಿನ ಬೋರ್ಡು ಸಾಧಿಸಿದ ಮುಖ್ಯ ಲೋಕಕಲ್ಯಾಣದ ಕಾರ್ಯವಾವುದೆಂದರೆ ಪ್ರಕೃತ ಕೊಂಗ್ರೆಸ ಕರ್ತವ್ಯಾನುಸಾರವಾಗಿ ಯುದ್ಧಯತ್ನ ಕಾರ್ಯದಲ್ಲಿ ಅಸಹಕಾರ ಮಾಡಿದ್ದು; ಮತ್ತು ಕೊಂಗ್ರೆಸ ಮಂತ್ರಿಮಂಡಳವು ಅಮಲಿನಲ್ಲಿ ತಂದಿದ್ದ "ವರ್ಧಾ ಶಿಕ್ಷಣ" ಯೋಜನೆಯನ್ನು, ಸರಕಾರದವರು ಅದರ ಕೈಬಿಟ್ಟರೂ, ಮುಂದರಿಸಲು ನಿರ್ಧರಿಸಿದ್ದು (೩) ರಾ॥ ದೇಸಾಯರು ಜಿಲ್ಲಾ ಗ್ರಾಮೋದ್ಧಾರ ಮಂಡಳದಲ್ಲಿ ಡಿ| ಲೋ| ಬೋರ್ಡಿನ ಅಧ್ಯಕ್ಷರೆಂಬ ಸ್ಥಾನಬಲದಿಂದ (ex officio) ಸದಸ್ಯರಿದ್ದಾರೆ. ಹೀಗೆ ಬೋರ್ಡಿನ ಅಧ್ಯಕ್ಷನಾತೆಯಿಂದ ಕೊಂಗ್ರೆಸ್ಸಿಗರು ಗ್ರಾಮೋದ್ಧಾರ ಮಂಡಳದಲ್ಲಿ ಸೇರಬಹುದೇ ಹೇಗೆಂಬ ಪ್ರಶ್ನೆ ಇನ್ನೂ ವಿಚಾರಣೆಯಲ್ಲಿದೆ. ಸ್ಥಾನಬಲದಿಂದ ಕೂಡ ಕೊಂಗ್ರೆಸ್ಸಿಗರು ಆ ಮಂಡಳಗಳಲ್ಲಿರಕೂಡದೆಂದು ಮೇಲಧಿಕಾರಿಗಳು ನಿರ್ಣಯ ಕೊಟ್ಟಲ್ಲಿ ರಾ| ದೇಸಾಯರು ರಾಜಿನಾಮೆ ಕೊಡಲಿರುವರು. ಹೀಗೆ "ವೃತ್ತ"ದ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಟ್ಟು ಮುಂದೆ ರಾಷ್ಟ್ರ-ಸ್ವಾತಂತ್ರ್ಯದಂಥಹ ವಿಶಾಲ ಲೋಕಕಲ್ಯಾಣದ ಪ್ರಶ್ನೆಯ ಬಗ್ಗೆ ಹೋರಾಡುವದಕ್ಕಾಗಿ ಆಗ ಕೊಂಗ್ರೆಸ ಮಂತ್ರಿಮಂಡಳಗಳು ಮದ್ಯಪ್ರತಿಬಂಧ, ರೈತರ ಸಾಲ-ವಿಮೋಚನೆ, ಒಕ್ಕಲತನದ ಕಾನೂನು ಮುಂತಾದ ಹಿರಿಯ ಲೋಕಕಲ್ಯಾಣ ಸಾಧಿಸುವ ಸಂಧಿಯನ್ನು ತಾವಾಗಿ ಬಿಟ್ಟುಕೊಟ್ಟವೋ, ಹಾಗೆಯೇ ವಿಶಾಲ ರಾಜಕಾರಣದ ದೃಷ್ಟಿಯಿಂದ, ಯುದ್ಧಯತ್ನ ಕಾರ್ಯದಲ್ಲಿ ಈಗಣ ನಮ್ಮ ಜಿಲ್ಲಾ ಬೋರ್ಡಿನವರು ಸರಕಾರದೊಡನೆ ಸಹಕಾರ ಮಾಡಲೊಪ್ಪವೆ, ಸರಕಾರದ ಅನುಗ್ರಹ ಕಳಕೊಂಡು, ಗೌಣ ಸುಧಾರಣೆಗಳನ್ನು ಮಾಡಿ ತರುವ ಸಂಧಿಯನ್ನು ಕಳಕೊಂಡಿರುವರೆಂದು ರಾ ಕಾಮತರು ಧ್ವನಿಸಿದ್ದಾರೆ. ಬೋರ್ಡಿನ "ಕೊಂಗ್ರೆಸ ಪಕ್ಷದ" ವ್ಯಕ್ತಿಗಳ ವರ್ತನೆ ನೋಡದವೆ ಸಂಸ್ಥೆಯ ಕಡೆಗೇ ನೋಡಬೇಕಂತೆ. ಹಿಂದೀ ರಾಷ್ಟ್ರೀಯ ಸಭೆಯನ್ನು ಶಿರಸಾ ವಂದಿಸಿ ಜಿಲ್ಲೆಯ "ಕೊಂಗ್ರೆಸ ಕೆಲಸಗಾರರನ್ನು" ದೂಷಿಸುವದೆಂದರೆ 'ಮಗನೇ ಚಿರಂಜೀವಿಯಾಗು! ನಿನ್ನ ಹೆಂಡತಿಯು ಮಾತ್ರ ವಿಧವೆಯಾಗಲಿ'" ಎಂದು ಹೇಳುವ ಅತ್ತೆಯ ಆಶೀರ್ವಾದದಂತೆಯೇ ಹಾಸ್ಯಾಸ್ಪದವಾಗುವದಾಗಿ ರಾ॥ ಕಾಮತರ ಅಂಬೋಣ. ರಾ॥ ಕಾಮತರು ತಮ್ಮ ಪತ್ರದ ಕೊನೆಯಲ್ಲಿ, 'ವೃತ್ತ'ದ ಧೋರಣೆಯೊಳಗೆ ಇತ್ತ ೪-೫ ತಿಂಗಳಲ್ಲಿ ಬದಲಾವಣೆಯಾಗಿದೆಯೆಂದೂ, "ಇಡೀ ಕರ್ನಾಟಕದಲ್ಲಿ ಇದೊಂದು ಉಜ್ವಲ ರಾಷ್ಟ್ರೀಯ ಪತ್ರಿಕೆಯೆಂದು ನಾವು ಅಭಿಮಾನದಿಂದ ಪ್ರೀತಿಸುತ್ತಿದ್ದ "ಕಾನಡಾವೃತ್ತವು" ರಾಷ್ಟ್ರೀಯ ಸಭೆಯ ಪ್ರಕೃತ ಯುದ್ಧವಿರೋಧಿ ಧೋರಣಕ್ಕೆ ಪ್ರತಿಕೂಲವಾದ ಧೋರಣೆಯನ್ನು ಸ್ವೀಕರಿಸಿ ತಪ್ಪು ದಾರಿ ಹಿಡಿದಿರುವದೆಂದೂ ಬರೆದು, "ವೃತ್ತ"ದ ಮೇಲೆಯೇ ಒಂದು ದೊಡ್ಡ ಆರೋಪವನ್ನಿಟ್ಟಿದ್ದಾರೆ.

[* * ಬರ್ಗ-ಮತದಾರ ಸಂಘದ ಚುನಾವಣೆಯಿಂದ ಉಪಸ್ಥಿತವಾದ ಈ ವಾದವನ್ನು ಇನ್ನೂ ಬೆಳೆಸಲು ನಮಗೆ ಇಷ್ಟವಿಲ್ಲ. ಹಾಗೆ ಮಾಡುವದರಲ್ಲಿ ಸ್ವಾರಸ್ಯವೂ ಕಡಿಮೆ. ಆದರೂ ರಾ ಕಾಮತರ ವಿಚಾರಸರಣಿಯೊಳಗಿನ ದೋಷಗಳನ್ನು ಎತ್ತಿ ತೋರಿಸುವದು ಅವಶ್ಯವುಂಟು (೧) ಲಕ್ಷ್ಮೀ ಎಂದು ಹೆಸರಿಟ್ಟುಕೊಂಡ ಮಾತ್ರಕ್ಕೆ ಯಾರೊಬ್ಬ ಹೆಣ್ಣು ಮಗಳು ಹೇಗೆ ಧನವತಿಯಾಗುವದಿಲ್ಲವೋ ಹಾಗೆಯೇ "ಕೊಂಗ್ರೆಸ ಬೋರ್ಡು" ಎಂದು ಹೆಸರಿಟ್ಟುಕೊಂಡ ಯಾವದೇ ಬೋರ್ಡು ಕೊಂಗ್ರೆಸ ಬೋರ್ಡಾಗುವದಿಲ್ಲವೆಂದು ರಾ॥ ಕಾಮತರು ಲಕ್ಷದಲ್ಲಿಡಬೇಕು. ರಾಷ್ಟ್ರೀಯ ಸಭೆಯ ವಿಧಾಯಕ ಕಾರ್ಯಕ್ರಮ ವಿಶಾಲವಾದದ್ದಿದೆ. ಅದನ್ನು ಅಮಲಿನಲ್ಲಿ ತರಲು ಈಗಣ ಬೋರ್ಡಿನವರು ಪ್ರಯತ್ನಿಸಿರುವರೇ? ಬೋರ್ಡಿನ ಕಾರಭಾರದಲ್ಲಿ ರಾಷ್ಟ್ರೀಯ ಸಭೆಗೆ ಒಪ್ಪುವಂತಹ ಕಾರ್ಯನೀತಿಯನ್ನು ಅನುಸರಿಸಿರುವರೇ? ಎಂಬುದೇ ಮುಖ್ಯ ಪ್ರಶ್ನೆ. ಕೊಂಗ್ರೆಸ ನೀತಿಗನುಸಾರವಾಗಿ ಯಾವದೊಂದು ಬೋರ್ಡಿನ ಕಾರಭಾರವಿರುವದಾದರೆ, ಆ ಬೋರ್ಡಿನ ಸದಸ್ಯರು ಕೊಂಗ್ರೆಸ ಸದಸ್ಯರಿರದಿದ್ದರೂ ಯಾ ಕೊಂಗ್ರೆಸ ತರ್ಫೆನಿಂದ ಚುನಾವಣೆಗೆ ನಿಂತು ಆರಿಸಿಬಂದವರಿರದಿದ್ದರೂ, ಆ ಬೋರ್ಡಿಗೆ "ಕೊಂಗ್ರೆಸ ಬೋರ್ಡ" ಅನ್ನಬರುತ್ತದೆ. ಕೊಂಗ್ರೆಸ ನೀತಿಯನ್ನನುಸರಿಸದ ಕೊಂಗ್ರೆಸ್ಸಿಗರ ಬೋರ್ಡಿಗೆ ಆ ಹೆಸರು ಸರ್ವಥಾ ಒಪ್ಪುವದಿಲ್ಲ (೨) ವ್ಯಕ್ತಿಗಳ ವರ್ತನೆಗೆ ಮಹತ್ವ ಕೊಡಬಾರದೆಂದು ರಾ| ಕಾಮತರ ಸೂಚನೆ. ಹಲವು ವ್ಯಕ್ತಿಗಳೇ ಕೂಡಿ ಬೋರ್ಡು ಆಗಿರುತ್ತದೆಂಬವನ್ನು ರಾ॥ ಕಾಮತರು ಮರೆಯುತ್ತಾರೆ. ಒಬ್ಬೊಬ್ಬ ಇಲ್ಲವೆ ನಾಲ್ಕಾರು ವ್ಯಕ್ತಿಗಳ ನಡತೆ ಬೋರ್ಡಿನ ವರ್ತನೆಯಾಗದಿರಬಹುದು. ಆದರೆ ಬೋರ್ಡಿನ "ಕೊಂಗ್ರೆಸ-ಪಕ್ಷ"ದ ಬಹಳ ಮಂದಿ ಸದಸ್ಯರ ವರ್ತನೆಯೂ ಬೋರ್ಡಿನ ವರ್ತನೆಯಾಗದೆ ಉಳಿಯಬಲ್ಲದೇ? (೩) ಕೊಂಗ್ರೆಸ ಮಂತ್ರಿ-ಮಂಡಳಗಳ ರಾಜಿನಾಮೆಗೂ ನಮ್ಮ ಬೋರ್ಡಿನ ರಾಜಕಾರಣಕ್ಕೂ ರಾ| ಕಾಮತರು ಸರಿಹೋಲಿಸಲು ಪ್ರಯತ್ನ ಮಾಡಿದ್ದು ಕಂಡು ನಮಗೆ "ಜಾಮ ಭಟ್ಟರ ಕುದುರೆ ಮರಿಗೂ ಇಂದ್ರನ ಐರಾವತಕ್ಕೂ" ಸರಿಹೋಲಿಸುವ ಪ್ರಯತ್ನದ ನೆನಪಾಗುತ್ತದೆ. ಬೋರ್ಡಿನ ಕಾರಭಾರದಲ್ಲಿ ಕೊಂಗ್ರೆಸ ಮುಪ್ರಯಾಸ್ತಿತ್ವಕ್ಕೆ ಸರಕಾರದ ಸಹಾಯ ಬೇಕೆಂಬ ಮಾತನ್ನು ನಾವು ಒಪ್ಪಲಾರೆವು. ನಮ್ಮ ಬೋರ್ಡಿನವರು ಯುದ್ಧ-ಯತ್ನ-ವಿರೋಧ ಪ್ರದರ್ಶಿಸುವರೆಂಬವೂ ಸರಿಯಲ್ಲ. ಬೋರ್ಡಿನ ಮುಂದೆ ಈ ವರೆಗೆ ಆ ಪ್ರಶ್ನೆ ಬಂದಿರುವದಿಲ್ಲವೆಂಬುದೇ ಸುವ್ಯಕ್ತವಾದ ಸಂಗತಿ. ಯಾರೊಬ್ಬರು ಕೊಂಗ್ರೆಸ ಮೆಂಬರರ ಕೊಂಗ್ರೆಸ್ಸಿಗತನವನ್ನು ಒರೆಗೆ ಹಚ್ಚಲಿಕ್ಕೆ ಆ ಪ್ರಶ್ನೆ ಮುಂದೆ ತಂದರೆ ಎಲ್ಲ ಬಣ್ಣ ಹೊರಗೆ ಬೀಳುವಂತಿದೆ! (೪) 'ವೃತ್ತ"ದ ಧೋರಣೆಯಲ್ಲಿ ಈಗ ಬದಲಾವಣೆಯಾಗಿದೆಯೋ ಹೇಗೆಂಬುದನ್ನು ವಾಚಕರೇ ನಿರ್ಣಯಿಸಲಿ. ನಮ್ಮ ಮಟ್ಟಿಗೆ ಕೇಳುವದಾದರೆ ನಾವು ಇದ್ದ ಹಾಗೆಯೇ ಇದ್ದೇವೆ. ರಾಷ್ಟ್ರೀಯ ಸಭೆಯ ಯಾವತ್ತೂ ಕಾರ್ಯಕ್ರಮ-ನಿರ್ಣಯಗಳನ್ನು ನಾವು ಅನುಸರಿಸುತ್ತೇವೆಂದಾಗಲಿ ಅನುಸರಿಸಲು ಬದ್ಧರಿರುತ್ತೇವೆಂದಾಗಲಿ ನಮ್ಮ ಭಾವನೆಯಿಲ್ಲವೆಂದಷ್ಟೇ ನಾವು ಸೂಚಿಸದಿರಲಾರೆವು. ಇಂದಿಗೆ ಇಷ್ಟೇ ಸ್ಪಷ್ಟೀಕರಣ ಸಾಕು. ಇಲ್ಲಿಗೇ ಈ ವಾದದ ಕೊನೆಯಾಗಲಿ

— ಸಂಪಾದಕ]

ಕಾರವಾರ— ಹೊಸ ನಗರಸಭೆಯ ಅಧ್ಯಕ್ಷಸ್ಥಾನದ ಚುನಾವಣೆಯು ತುರುಸಿನದಾಗುವದೆಂದು ಹೇಳುತ್ತಾರೆ. ಹಳೆಯ ಅಧ್ಯಕ್ಷ ರಾ॥ ಸಾ॥ ಶೇಲಂಗರರವರೂ ತಿರುಗಿ ಅಧ್ಯಕ್ಷರಾಗ ಹವಣಿಸುತ್ತಾರೆ. ಕಳೆದ ತ್ರೈವಾರ್ಷಿಕ ಅವಧಿಯಲ್ಲಿ ಅವರ ಬಲಗೈಯಂತಿದ್ದ ರಾ॥ ಮಾವಿನಕುರ್ವೆ ವಕೀಲರೂ ತಾವು ಅಧ್ಯಕ್ಷ-ಚುನಾವಣೆಗೆ ನಿಲ್ಲುವೆವೆಂದು ಹಟಹಿಡಿದಿದ್ದಾರೆ. ರಾವಸಾಹೇಬರು ತಿರುಗಿ ಅಧ್ಯಕ್ಷರಾದರ ಮೋಕದಲ್ಲಿ ಬೀಳುವದು ಕಷ್ಟವೆಂದು ಬಹಳ ಜನರ ಅಂಬೋಣವುಂಟು.

ಕಳೆದ ತಾ ೨ನೇಗೆ ಅಬಕಾರಿ ಸುಪರಿಂಟೆಂಡೆಂಟರು ಇಲ್ಲಿ ಬಂದಿದ್ದರು. ಬೈತಕೋಲ ಬಂದರದಲ್ಲಿ ಆಗ ಅಬಕಾರಿ ಶಿಬಂದಿಯ ಕವಾಯಿತು ನಡೆಯಿತು. ಕವಾಯಿತಿನ ಕಾಲಕ್ಕೆ ಲಷ್ಕರಿ ಶಿಸ್ತಿನ ಪ್ರಕಾರ ರಾ| ಕೇ| ಎಸ್ ಜಾಧವ ಎಂಬ ಜಮಾದಾರರು ಕೂಚು ಮಾಡುವಾಗ ಧಕ್ಕೆಯ ಅಂಚಿಗೆ ಮುಟ್ಟಿದರೂ ಕವಾಯಿತು ಮಾಡುವ ಜನರಿಗೆ ಹಿಂದಿರುಗಲು ಅಪ್ಪಣೆಯಾಗದ್ದರಿಂದ ಧಕ್ಕೆಯ ಮೇಲಿಂದ ಸಮುದ್ರದಲ್ಲಿ ಹಾರಿದ ದೃಶ್ಯ ಕಂಡು ಎಲ್ಲರೂ ಬೆರಗಾದರು! ಸುಪರಿಂಟೆಂಡೆಂಟ ಸಾಹೇಬರು ಅವರ ಲಷ್ಕರೀ ಶಿಸ್ತನ್ನೂ ಆಜ್ಞಾಧಾರಕತನವನ್ನೂ ನೋಡಿ ಅವರಿಗೆ ಶಿಫಾರಸು-ಪತ್ರ ಕೊಡಲೊಪ್ಪಿದ್ದಾರೆ. ರಾ| ಜಾಧವರು ಪದವೀಧರರಿದ್ದಾರೆಂದು ತಿಳಿಯುತ್ತದೆ. ಅವರಂತಹ ಸುಶಿಕ್ಷಿತರು ಅಬಕಾರಿ ಇಲಾಖೆಯಲ್ಲಿ ಸೇರಿದರೆ ಅಬಕಾರಿ ಇಲಾಖೆಯು ಕೆಲಸ ಲೋಕದಲ್ಲಿ ಪ್ರಶಂಸೆಗೆ ಪಾತ್ರವಾದೀತೆಂದು ಹೇಳಬಹುದಾಗಿದೆ

ಕಣ್ಮರೆಯಾದ ಕವಿರಾಜರ ಬಗ್ಗೆ ದುಃಖೋದ್ಗಾರ.

[ಪಾಂಡುರಂಗ ಕುಡತರಕರ, ಉಪ್ಪಿನಪಟ್ಟಣ]

ವಂಗದೇಶವೊಳಗಿರುತಿರ್ದ |
ಮಹರ್ಷಿ ಟಾಗೋರನಾಥ ದೇವೇಂದ್ರರ ||
ಕಿರಿತನಯರಾದೀ ರವೀಂದ್ರರು |
ಅಕ್ಷಯ ಕೀರ್ತಿಯಂ ಬಿಟ್ಟುಪೋದರು ಶಿವನೊಳು ||೧||
  ಪ್ರಕಾಶದಿಂ ಕೂಡಿದೊಂದು ಜ್ಯೋತಿಯು |
  ಭರತ ಖಂಡದ ಕವಿರಾಜ ರತ್ನವು ||
  ಭೂಮಂಡಲದಿ ಪ್ರೀತಿಯ ಮಣಿಯು |
  ಕ್ಷಣದೊಳು ಅದೃಶ್ಯತೆಯಂ ಪೊಂದಿತು ||೨||
ಭಾರತೀಯರ ವಿಶಾಲ ಹೃದಯದೊಳು |
ಅತಿ ಘೋರ ತಮವು ಮುಸುಕಿಹುದು ||
ದೀರ್ಘಾವಧಿಯೊಳು ಕೂಪಾರದಂಥಾ ಜಲವು |
ಸಹಸ್ರನೇತ್ರಗಳಿಂ ಧಾರೆಯಾಗಿ ಬೀಳುತಿಹುದು ||೩||
  ಕಣ್ಮರೆಯಾದಾ ರತ್ನದ ಗೋಳಿನ ಸಂಗತಿ |
  ಕರ್ಣಂ ಸೇರಿದಾಕ್ಷಣವೇ ಭಾರತವಾಸಿ ||
  ಹೃದಯದೊಳು ದುಃಖವ್ಯಕ್ತರಾಗಿ |
  ಕೂಡಿದರೆಲ್ಲ ಸಾಹಿತಿ ಸಭಾಭಾಗಿಗಳಾಗಿ ||೪||
ಧನ್ಯ ಧನ್ಯಾ ಪುರುಷರ ಜೀವನವು |
ಕೀರ್ತಿಯಂ ಪಡೆದ ಶ್ರೇಷ್ಠ ಸಾಹಿತ್ಯಪತಿಗಳು ||
ನಿತ್ಯಂ ದುಃಖಾಬ್ಧಿಯೊಳು ದೂಡಿ ಪೋದರು |
ಮಾನವನಾ ನಿರೀಕ್ಷಿಸದಾದೀ ಸಮಯದೊಳು ||೫||
  ಈಶ್ವರ ಪ್ರೇರಣೆಯಿಂ ಜನಿಸಿದಾ ತನುವು |
  ಬಹು ಜನಪ್ರಿಯವಾದಾ ಕೋಮಲ ಪುಷ್ಪವು ||
  ಅಖಿಲ ಜನರಂ ಮುಳುಗಿಸಿ ಸಂತಸದೊಳು |
  ಕೊನೆಗಂಡಿತದರ ಜೀವನವು ಚಿರಶಾಂತಿಯೊಳು ||೬||
ಅಪರ್ಣದಾ ಜೀವನನೌಕೆಯು |
ಮುಳುಗದೆ ಸಂಸಾರಾಂಬುಧಿಯಾ ನಡುವೊಳು ||
ಪೂರ್ಣತೆಯಂ ಪೊಂದಿ ತನ್ನ ಕಾರ್ಯದೊಳು |
ಸೇರಿದುದು ಶಾಂತತೆಯೆಂದಾವೇ ದಡವೊಳು ||೭||
  ಅಮೂಲ್ಯವಾದಾ ಕವಿಶ್ರೇಷ್ಠಾತ್ಮವು
  ಧರೆಯ ಜೀವನಯಾತ್ರೆ ಮುಗಿಯಲು ||
  ಚಿರಶಾಂತಿನಿಕೇತನದ ದೇವಲೋಕದೊಳು
  ಪ್ರಶಾಂತತೆಯಿಂ ಕೂತು ನಲಿನಲಿಯುತ್ತ
ಪೋಗಿಹುದು ||೮||

ಜೀರ್ಣಂ ಪೊಂದಿದಾ ಶರೀರವಾತ್ಮವು
ನವಕೋಮಲ ಶರೀರದಿಂ ಬರಲು ||
ಜಗವ ದುಃಖಾಬ್ಧಿಯೊಳು ದೂಡಿ ಪೋಗಿರಲು
ನವ ರವೀಂದ್ರರ ಬರವ ಕಾಯುವುದು ಜಗತ್ತು ||೯||

ಧಾರವಾಡ ಕೆನರಾ ಮೋಟರ

ಯೂನಿಯನ್, ಹುಬ್ಬಳ್ಳಿ.

ಹುಬ್ಬಳ್ಳಿಯಿಂದ ಗೋಕರ್ಣ ಮಹಾ ಕ್ಷೇತ್ರಕ್ಕೆ ಪೂಜಾ-ವಿಧಿಗಳನ್ನು ಮುಗಿಸಿ ನಿಯಮಿತ ವೇಳೆಗೆ ತಿರುಗಿ ಬರಲು ಇದೊಂದೇ ಉತ್ಕೃಷ್ಟ ಮೋಟರ ಸರ್ವಿಸ್.

ಹುಬ್ಬಳ್ಳಿಯಿಂದ ಬಿಡುವ ವೇಳೆ ಬೆಳಿಗ್ಗೆ ೬ ಘಂಟೆಗೆ
ಗೋಕರ್ಣಕ್ಕೆ ತಲ್ಪುವ ವೇಳೆ ಮಧ್ಯಾಹ್ನ [illegible] ಘಂ
ಗೋಕರ್ಣ ಬಿಡುವ ವೇಳೆ ಬೆಳಗ [illegible] ಘಂ
ಹುಬ್ಬಳ್ಳಿ ತಲ್ಪುವ ವೇಳೆ ಸಾಯಂಕಾಲ ೭ ೫ ಘಂ
ವ್ಯವಸ್ಥಾಪಕ,

**ಧಾರವಾಡ ಕೆನರಾ ಮೋಟರ
ಯೂನಿಯನ್, ಹುಬ್ಬಳ್ಳಿ**

ಸಹ್ಯಾದ್ರಿಫಾರ್ಮಸಿ
ಕುಮಟಾ.

ಬಾಳಂತಿಯರಿಗೆ— ಕಸ್ತೂರಿ ಪಿಪ್ಪಲಿ ದಶಮೂಲಾರಿಷ್ಟ ಮತ್ತು ಧನ್ವಂತರಿ ಗುಳಿಗೆ ಒಳ್ಳೇ ಉಪಯುಕ್ತವಾದವು!

ಚಿಕ್ಕ ಮಕ್ಕಳ ಜಂತುವಿನ ಬಾಧೆ- ಪುಷ್ಟಿಯಾಗಲಿಕ್ಕೂ ಸಾಯರಪ್ ಕ ಟಜಾ ಒಂದು ದಿವ್ಯವಾದ ಔಷಧವು!

ನಾಯಿ-ಕೆಮ್ಮಿಗೆ ಎಂಟೇ ದಿವಸಗಳಲ್ಲಿ ಗುಣಪಡಿಸುವ ಕಫಸಾರವು

**ಯಾವತ್ತು ಪ್ರಕಾರಗಳ
ಕಷಾಯ, ಅರಿಷ್ಟ, ಆಸವ,
ತೈಲಾದಿ ಔಷಧ ಸಾಮಗ್ರಿಗಳು
ಸದಾ ಸಿಗುತ್ತವೆ.**

ಡಾ॥ ಎಸ್. ಕೇ. ಭಟ್ಟ,
ಹಳ್ದಿಪುರ್ಕರ, ಕುಮಟಾ.

ಹೈಸ್ಕೂಲುಗಳಿಗೆ ಬೇಕಾಗುವ ಎಲ್ಲ ತರದ
ಇಂಗ್ಲಿಷ-ಸಂಸ್ಕೃತ ಕನ್ನಡ-ಮರಾಠಿ
ಪುಸ್ತಕಗಳು ನಮ್ಮಲ್ಲಿ ಸಿಗುತ್ತವೆ

ನಿಮಗೆ ಬೇಕಾಗುವ ಪುಸ್ತಕಗಳನ್ನು ಇಂದೇ ಕೊಂಡುಕೊಳ್ಳಿ, ವಿಲಂಬ ಮಾಡಿದಲ್ಲಿ,—ಸಿಗಲಿಕ್ಕಿಲ್ಲ [illegible] ಪ್ರಾಥಮಿಕ ಶಾಲೆಗಳಿಗೆ ಬೇಕಾಗುವ ಎಲ್ಲಾ ಕನ್ನಡ ಮರಾಠಿ, ಪುಸ್ತಕಗಳೂ ನಮ್ಮಲ್ಲೇ ದೊರೆಯುವವು ನಿಮಗೆ ಯಾವ ಪುಸ್ತಕ ಬೇಕಾದರೂ ನಮ್ಮಲ್ಲಿ ವಿಚಾರಿಸಿರಿ

ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ

ಮಳೆಗಾಲದಲ್ಲಿ ಬೇಗನೆ ಉಪಾಯ ಮಾಡಿರಿ!

ಮಹಾಮಾರಿಯ ಬೇನೆ ಸುರುವಿದ್ದಾಗ ಪ್ರತಿಬಂಧಕ **(Preventive)**
ವೆಂದು ಮತ್ತು ಮಹಾಮಾರೀ ಪಟಕೀ ಕಾಲರಾ **(Cholera)**
ಒಂದಾಗ ಮೊಟ್ಟಮೊದಲು (ಅನ್ನ ಬೀಳುವ ವರೆಗೆ)
ಕೊಡಲಿಕ್ಕೆ ಅಪ್ರತಿಮವಾದದ್ದೆಂದರೆ-

ಲಶುನಾದಿ ಗುಟಿಕಾ.

ಈ ಔಷಧದಿಂದ ಅವಷ್ಟಂಭವಾಗದೆ, ಹೊಟ್ಟೆಯುಬ್ಬದೆ ದೀಪನ ಪಾಚನ ಮತ್ತು ಮಲಶೋಧನವಾಗಿ ಮಲ [illegible] ಗಟ್ಟಿಯಾಗುವದು ಇವೆಲ್ಲಕ [illegible] ಚನ್ನಾಗಿ ಆಗುವದು [illegible] ಅನೇಕ ಡಾಕ್ಟರರೂ ವೈದ್ಯರೂ ತೆಗೆದುಕೊಂಡಿರುವರು ಅಜೀರ್ಣದ [illegible] ಹೊಟ್ಟೆ [illegible] ಬಹಳ [illegible]ದಿಂದ ಹೊಟ್ಟೆಯಲ್ಲಿ ನೋವಾಗುವದು, ಅಗ್ನಿಮಾಂದ್ಯ [illegible] ವಾತವಿಕಾರ [illegible] ರೋಗಗಳ ಮೇಲೆ ಈ ಗುಳಿಗೆಗಳು ಒಳ್ಳೇ ಗುಣ [illegible] ಯಾಗುವವೆಂದ ಪೂರ್ಣ ಅನುಭವವಿದೆ

ದತ್ತಾತ್ರೇಯ ಕೃಷ್ಣ ಸಾಂಡೂ ಬ್ರದರ್ಸ
ಚೆಂಬೂರ ಲಿ.

ಆಯುರ್ವೌಷಧಿ ಕಾರಖಾನೆ, ಚೆಂಬೂರ-ಮುಂಬಯಿ

ಕರ್ನಾಟಕ ಶಾಖೆ:— ಹುಬ್ಬಳ್ಳಿ

ಬಾಲಬಿಂದು

ಮಕ್ಕಳ ಮರಣವನ್ನು ತಪ್ಪಿಸುವದು.

ಏಜನ್ಸಿ ಕಲಕತ್ತಾ, ಮುಂಬಯಿ ಮದ್ರಾಸ, ಬೆಂಗಳೂರು, ಮಂಗಳೂರು

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆ ದೊಡ್ಡದಾಗುವಿಕೆ ಹಸುರು ನರಗಳು ಕಾಣಿಸುವಿಕೆ,
ಗಡ್ಡೆರೋಗ ಕೋವೆ ರೋಗ, ಪ್ಯಾ-ಕ್ಕೆ ಬಾವುಗಳಿಗೆ ದಿವ್ಯೌಷಧ!

[illegible] ತಿಂಗಳಿಗೆ ಸಾಕಾಗುವ ಔಷಧದ ಬೆಲೆ [illegible] 3

ಏತಕ್ಕೆ ಚಿಂತಿಸುವಿರಿ?

ಆಸೇತುಹಿಮಾಚಲದ ವರೆಗೂ ೪೩ ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ

ಡಾ॥ ಪಿ ಎಸ್ ಶ್ರೀನಿವಾಸರಾವ,
ಲಿವ್ಹರ್ ಸ್ಪೆಶಲಿಷ್ಟ,
ಎಂ ಪಿ ಪ್ರಾಸಾದಿಕ ಔಷಧಾಲಯ
ಶಿವಮೊಗ್ಗಾ

☞ ಇವರಲ್ಲಿ ವಿಚಾರಿಸಿರಿ
ಶಿರ್ಸಿ ಏಜಂಟ—
ಸುಬ್ರಾಯ ಸೀತಾರಾಮ ಹೆಗಡೆ,
ಕುಮಟೆಯ ಏಜಂಟ—
ದೇವಪ್ಪಾ ಅಯ್ಯಾ ನಾಯ್ಕ

ಇದನ್ನು ಪಾಂಡುರಂಗ ಕೃಷ್ಣ ಶಿ[illegible] (ಸಂಪಾದಕ) ಇವರು ತಮ್ಮ 'ಸ್ಟಾರ ಆಫ್ ಕೆನರಾ ಪ್ರೆಸ್ಸಿ'ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B. 1270.

Monday, 22nd September, 1941.

ವರ್ಷ ೨೪

ಸಂಚಿಕೆ ೧೨

ಕಾನಡಾವೃತ್ತ

THE KANARA NEWS

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेंद्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0
ಮುನಿಯಾರ್ಡರಿನಿಂದ
ರೂ 3-1 0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-4-0
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಸ್ಮಾಲ್ಪೈಕಿನ (೧೫ ಎಮ್ ಅಗಲ) ೮ ಸಾಲುಗಳವರೆಗೆ ರೂ 1-8-0 ಆ ನಂತ್ರ ಪ್ರತಿಸಾಲಿಗೆ 0-3 0

ಹೆಡ್ಡಿಂಗದ ಸಾಲು ಎಷ್ಟು ಹೊತ್ತಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

✤(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೨೨ ಮಾಹೆ ಸಪ್ಟೆಂಬರ ಸನ್ ೧೯೪೧ನೇ ಇಸವಿ)✤-

ಮಕ್ಕಳಿಗೆ--
ಮಳೆಗಾಲದಲ್ಲಿ

ಶೀತ, ನೆಗಡಿ, ಕೆಮ್ಮು, ಅಪಚನ ಮುಂತಾದ
ವಿಕಾರಗಳು ಖಂಡಿತವಾಗಿ ಆಗುತ್ತವೆ.

“ಕುಮಾರಿ ಆಸವ ನಂ. ೩”

ಇದು ಮೇಲಿನ ವಿಕಾರಗಳಿಗೆ ಶ್ರೇಷ್ಠವಾದ ಔಷಧವು.

ಶ್ರೀ ಧೂತಪಾಪೇಶ್ವರ ಪನವೇಲ, ಲಿ.,

ಕರ್ನಾಟಕ ಕೇಂದ್ರ - ಯುನ್ಯಾಟೆಡ್ ಏಜನ್ಸೀಜ, ಹುಬ್ಬಳ್ಳಿ.

ಕಾರವಾರ — ಮೆಸರ್ಸ ಮುಜುಮುದಾರ-ಕಕಬೇಕರ ಬ್ರದರ್ಸ.
ಅಂಕೋಲಾ:— ದಿ ಸ್ಟೇಶನರಿ ಡಿಪೋ
ಕುಮಟಾ:— ದೇವಪ್ಪಾ ಅಯ್ಯು ನಾಯ್ಕ.
ಹೊನ್ನಾವರ— ಮೆಸರ್ಸ ಕಲ್ಯಾಣಪುರ ಬ್ರದರ್ಸ.
ಶಿರ್ಸಿ:—{ ರಿಶೀ ಡ್ರಗ್ ಸ್ಟೋರ್ಸ
ಎಸ್. ಎಲ್ ಧಾಕಪ್ಪಾ ಎಂಡ್ ಸನ್ಸ
ಸಿದ್ದಾಪುರ — ಮೆಸರ್ಸ ರಾಮಯ್ಯನ ಬ್ರದರ್ಸ

“ಸ್ಟಾರ ಆಫ್ ಕೆನರಾ ಪ್ರೆಸ್”,
ಕುಮಟಾ.

—*—

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಯಿಂದ ಬೇಕಾದ ನಮೂನೆಯ ಕಲರ ಪ್ರಿಂಟಿಂಗ ವಗೈರೆ ಸಣ್ಣ ದೊಡ್ಡ ಛಾಪಾ ಕೆಲಸಗಳೂ, ಪುಸ್ತಕ ಮುದ್ರಣವೂ, ರೂಲಿಂಗ ಬ್ಯಾಂಡಿಂಗ ಕೆಲಸವೂ ಉತ್ತಮವಾಗಿ ಸುಲಭ ದರದಲ್ಲಿ ತಕ್ಕ ಕಾಲಕ್ಕೆ ತಯಾರಿಸಿ ಕೊಡಲಾಗುವದು

ಇದಲ್ಲದೆ ಕೋರ್ಟ ಕಚೇರಿ ಉಪಯೋಗದ ವಕಾಲತ ವಗೈರೆ ಫಾರ್ಮುಗಳೂ, ಕಸ್ಟಮ್ ಕಚೇರಿಯ ಶಿಪ್ಪಿಂಗ ಬೀಲು-ಪತ್ರಿ ವಗೈರೆ ಫಾರ್ಮುಗಳೂ, ಗೇಣಿ ರಶೀದಿ ಬೂಕು, ಗೇಣಚೀಟಿ ಎದುರ್ನುಡಿ ಫಾರ್ಮುಗಳೂ ವಗೈರೆ ಮಾರಾಟಕ್ಕೆ ತಯಾರ ಸಿಗುತ್ತವೆ

ನಿಮ್ಮ ಛಾಪಾ ಕೆಲಸಗಳನ್ನು ನಮ್ಮಲ್ಲಿಗೇ ಕಳಿಸಿ ಒಮ್ಮೆ ಅನುಭವ ತಕ್ಕೊಂಡು ನೋಡಿರಿ !

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ಹೆಡಾ ಆಫೀಸು — ಕುಂದಾಪುರ.

ಬ್ರೆಂಚ ಆಫೀಸುಗಳು -- ಅಂಕೋಲಾ, ಕುಂದಾಪುರ, ಬೈಂದೂರು ಕೋಟೇಶ್ವರ, ಕುಮಟಾ, ಗೋಕರ್ಣ, ಕಾರವಾರ, ಹಾವೇರಿ, ಶಿವಮೊಗ್ಗಾ, ತರೀಕೆರೆ, ನಗರ ಸೋಮವಾರಪೇಟೆ ಮತ್ತು ವೀರರಾಜಪೇಟೆ

ಕಾಯಂ ಠೇವುಗಳು:- 3 ತಿಂಗಳಿಗೆ ಶೇ ರೂ 3ರಲ್ಲಿ, 6 ತಿಂಗಳಿಗೆ ಶೇ 3½ರಲ್ಲಿ, ೧ ವರ್ಷಕ್ಕೆ ರೂ 4ರಲ್ಲಿ,
2 ವರ್ಷ ಯಾ ಹೆಚ್ಚಿನ ಅವಧಿಗೆ ಶೇ- 4½ರಲ್ಲಿ

ಸೇವಿಂಗ್ಸ ಬೇಂಕ್ ಠೇವುಗಳು ಮತ್ತು ಚಾಲು ಠೇವುಗಳು ಸಹ ಅಂಗೀಕರಿಸಲ್ಪಡುವವು

ಭಂಗಾರದ ಡಾಗಿನೆಗಳ ವ ಇತರ ವ್ಯಾಪಾರದ ಮಾಲುಗಳ ಅಡವಿನ ಮೇಲೆ ಸವಲತ್ತಿನ ದರದ ಬಡ್ಡಿಯಲ್ಲಿ ಸಾಲ ಕೊಡಲ್ಪಡುವದು

ವ್ಯಾಪಾರದ ಕೇಂದ್ರಗಳಿಗೆ ಡ್ರಾಫ್ಟುಗಳು, ಚೆಕ್ಕುಗಳು ಸಹ ಕೊಡಲ್ಪಡುವವು ಎಲ್ಲ ತರದ ಬೇಂಕಿನ ವ್ಯವಹಾರಗಳು ಸವಲತ್ತಿನ ದರದಿಂದ ನಡಿಸಲ್ಪಡುವವು

ಕುಂದಾಪುರ,
1-8-1941 }

The Agricultural & Industrial Bank Ltd

ಜಾಹೀರ ನೋಟೀಸು.

(ಛತ್ರಿ ಶಿಪ್ಪಾ)

ಕುಮುಟಾ ಇಲ್ಲಿಯ ಸಬೋರ್ಡಿನೇಟ ಜಜ್ಜ ಕೋರ್ಟಿನಲ್ಲಿ
ಮುಕ್ಕಾಮು ಕುಮುಟಾ ಇಲ್ಲಿ. ನಿ|| ೧೧
ದಿವಾಣಿ ಮುಕದಮೆ ನಂಬರು ೧೮೪—೧೯೪೧ ಪೈಕಿ

ಮೆನೇಜರ ಸುಬ್ರಾಯ ಮಹಾಬಲೇಶ್ವರ ಪಂಡಿತ ಪ್ರಾಯ ೩೦ ಹವೀಕ ಬ್ರಾಹ್ಮಣ ಕೃಷಿ ಸಾಕೀನ ಅಘನಾಶಿನಿ ತಾಲೂಕು ಕುಮುಟಾ ಇವನ ಸ್ವಂತ ನಾತೆಯಿಂದಲೂ ಗಣಪತಿ ಸುಬ್ರಾಯ ಭಟ್ಟಾ ಬಾಳೇಹಿತ್ಲು ಸಾಕೀನ ಅಘನಾಶಿನಿ ಇವನ ಯಾವತ್ತೂ ಧನಕೋ ಜನರ ವತಿಯಿಂದಲೂ ಸಹ } ವಾದಿ.

ವ|| ಮಿ|| ಆರ್. ವ್ಹಿ. ಪಂಡಿತ.

ವಿರುದ್ಧ

೧ ಮೆನೇಜರ ಗಣಪತಿ ಸುಬ್ರಾಯ ಭಟ್ಟಾ ಬಾಳೇಹಿತ್ಲು ವಯ ಅಜಮಾಸ ೬೦ ಹವೀಕ ಬ್ರಾಹ್ಮಣ ವೈದಿಕ ಸಾಕೀನ ಅಘನಾಶಿನಿ ತಾಲೂಕು ಕುಮುಟಾ.
೨ ಗಣಪತಿ ವೆಂಕಟ್ರಮಣ ಭಟ್ಟಾ ಹಾವುಗೋಡಿ ಪ್ರಾಯ ೫೫, ಹವೀಕ ಬ್ರಾಹ್ಮಣ ವೈದೀಕ ಸಾಕೀನ ಗೋಕರ್ಣ ತಾಲೂಕ ಕುಮುಟಾ } ಪ್ರತಿವಾದಿರು

ಇವರಿಗೆ—

ಇದರ ಮೂಲಕ ಜಾಹೀರ ನೋಟೀಸು ಕೊಡುವದೇನಂದರೆ— ಸದರಿ ವಾದಿ ಇವನು ಲಗ್ತ ಇಟ್ಟ ದಾವಾ ನಕ್ಲಿನ ಸಂಕ್ಷಿಪ್ತ ಸ್ಟೇಟಮೆಂಟನಂತೆ ತನ್ನ ಸ್ವಂತದ ಬಗ್ಗೂ ೧ನೇ ಪ್ರತಿವಾದಿಯ ಎಲ್ಲ ಧನಕೋರ ತರ್ಫೆಯಿಂದ ಈ ದಾವಾ ದಾಖಲಪಡಿಸಿರುತ್ತಿದ್ದು, ಆ ಕುರಿತು ಪರವಾನಗಿ ಕೊಡಬೇಕೆಂದು ಮಾಡಿದ ಅರ್ಜಿ ಮಂಜೂರ ಮಾಡಿರುತ್ತದೆ. ಕಾರಣ ಸದ್ರಿ ದಾವೆಯಲ್ಲಿ ತಮ್ಮನ್ನು ಪಕ್ಷಗಾರರಾಗಿ ಸೇರಿಸಿ ದಾವಾ ನಡಿಸಬೇಕೆಂದು ಇಚ್ಛಿಸುವವರು ೧೯೪೧ನೇ ಇಸವಿಯ ಆಕ್ಟೋಬರ ತಿಂಗಳ ೨೭ನೇ ತಾರೀಖಿನ ದಿನ ಪ್ರಾತಃಕಾಲದ ೧೧ ಘಂಟೆಗೆ ನೀವು ಸ್ವತಃ ಅಥವಾ ಯೋಗ್ಯ ರೀತಿಯಿಂದ ಮಾಹಿತಿ ಕೊಟ್ಟಿರುವ ವಕೀಲನ ಮುಖಾಂತರವಾಗಿ ಈ ಕೋರ್ಟಿನಲ್ಲಿ ಹಾಜರಾಗಿ ಅರ್ಜಿ ಮಾಡಿಕೊಳ್ಳತಕ್ಕದ್ದು. ಹೀಗೆ ಮಾಡಲಿಕ್ಕೆ ತಪ್ಪಿದರೆ, ಸದರಿ ದಾವಾ ಸುನಾವಣಿಯೂ ನಿಕಾಲೆಯೂ ಇದ್ದಂತೆ ಮಾಡಲ್ಪಡುವದು.

ಮತ್ತು ನೋಟೀಸು ಕೊಡುವದೇನಂದರೆ, ಪತ್ರೆಯನ್ನು ನಿರ್ದಿಷ್ಟ ಮಾಡಿದ ತಾರೀಖಿನೊಳಗಾಗಿ ತುಂಬಿಕೊಡಲಿಕ್ಕೆ ತಪ್ಪಿದರೆ, ಅವರ ಪಕ್ಷವನ್ನು ಗ್ರಹಿಸಲಾಗದು.

ಈ ಹೊತ್ತು ಸನ್ ೧೯೪೧ನೇ ಇಸವಿಯ ಸಪ್ಟಂಬರ ತಿಂಗಳ ೧೯ನೇ ತಾರೀಖಿನ ದಿನ ನಮ್ಮ ಸಹಿ ಮಾಡಿ ಮತ್ತು ಕೋರ್ಟಿನ ಮೋಹರು ಮಾಡಿ ಕೊಡಲಾಯಿತು

ಕೋರ್ಟಿನ
ಮೋಹರು

Rangrao D. Kulkarny.
Clerk of the Court.

ಕುಮುಟಾ ಸಬಜಜ್ಜ ಕೋರ್ಟಿನಲ್ಲಿ.
ಮೂಲ ನಂಬರ 184—1941.

ಮೆ|| ಸುಬ್ರಾಯ ಮಹಾಬಲೇಶ್ವರ ಪಂಡಿತ ಪ್ರಾಯ ವರ್ಷ ೩೦ ಹವೀಕ ಬ್ರಾಹ್ಮಣ ಕೃಷಿ ಸಾಕೀನ ಅಘನಾಶಿನಿ ತಾಲೂಕು ಕುಮುಟಾ ಇವನು ಸ್ವಂತ ನಾತೆಯಿಂದ ಹಾಗೂ ೧ನೇ ಪ್ರ||ಯ ಎಲ್ಲ ಧನಕೋ ಜನರ ಪರವಾಗಿ } ವಾದಿ

ವಿರುದ್ಧ

೧ ಮೆ|| ಗಣಪತಿ ಸುಬ್ರಾಯ ಭಟ್ಟ ಬಾಳೇಹಿತ್ಲು ಪ್ರಾಯ ವರ್ಷ ೬೦ ಹವೀಕ ವೈದಿಕ ಸಾಕೀನ ಅಘನಾಶಿನಿ ತಾಲೂಕು ಕುಮುಟಾ
೨ ಗಣಪತಿ ವೆಂಕಟ್ರಮಣ ಭಟ್ಟಾ ಹಾವಗೋಡಿ ಪ್ರಾಯ ೫೫ ಹವೀಕ ವೈದಿಕ ಸಾ|| ಗೋಕರ್ಣ ತಾಲೂಕು ಕುಮುಟಾ } ಪ್ರತಿವಾದಿರು

ದಾವಾ ಆಕಾರ ರೂಪಾಯಿ 5/—

ವಾದಿ ತಿಳಿಸುವ ವಿವರ :—

೧ ವಾದಿಯು ೧ನೇ ಪ್ರ||ಯ ವಿರುದ್ಧ ಈ ಕೋರ್ಟ ಮೂಲ ನಂ ೨೪೩/೧೯೩೬ನೇ ಡಿಕ್ರಿ ಪಡಕೊಂಡು ದರಖಾಸ್ತ ನಂಬರ ೩೧೦/೧೯೩೯ನ್ನು ದಾಖಲಪಡಿಸಿ ೧ನೇ ಪ್ರ||ಯು ಕಾರವಾರ ಫ|| ಕ್ಲಾ|| ಕೋರ್ಟನಲ್ಲಿ ಪಡಕೊಂಡಿರುವ ಮೂಲ ನಂಬರ ೨೦೧/೧೯೩೪ನೇ ಡಿಕ್ರಿಯಂತ ಪಡಕೊಂಡಿರುವ ಹಕ್ಕನ್ನು ಜಪ್ತಿ ಮಾಡಿಸಲಾಗಿ ೨ನೇ ಪ್ರ||ಯು ಸದ್ರಿ ಡಿಕ್ರಿಯೊಳಗಿನ ೧ನೇ ಪ್ರ ಯ ಹಕ್ಕು ತನಗೆ ಮಾರಾಟವಾಗಿ ಹೋಗಿರುತ್ತದೆಂದು ಸುಳ್ಳು ಸಾಧನೆ ಮಾಡಿ ಮಿಸ್. ಅರ್ಜಿ ನಂ ೩೯/೧೯೩೯ನೇದನ್ನು ದಾಖಲಪಡಿಸಿ ಜಪ್ತಿಯಿಂದ ಬಿಡಿಸಿಕೊಂಡಿರುತ್ತಾನೆ.

ಅಪೂರ್ಣ ಚೌಕಶಿಯಿಂದ ಆದ ಸದ್ರಿ ಹುಕುಮವು ರದ್ದುಪಡಿಸಿಕೊಳ್ಳುವ ಬಗ್ಗೂ ೧ನೇ ಪ್ರ||ಯಿಂದ ೨ನೇ ಪ್ರ||ಯ ಹೆಸರಿಗೆ ಆದದ್ದೆಂಬ ಕಾರವಾರ ಫ|| ಕ್ಲಾ|| ಕೋ|| ಮೂ|| ನಂ ೨೦೧—೧೯೩೪ನೇ ಡಿಕ್ರಿಯ ಟ್ರಾನ್ಸಫರ ೧ನೇ ಪ್ರ||ಯ ಮೇಲಣ ಈ ಕೋರ್ಟ ಮೂ|| ನಂ. ೨೪೩—೩೬ನೇ ಡಿಕ್ರಿ ಸಾಲವ ಇತರ ಸಾಲಗಳಿಗೆ ಮೋಸಪಡಿಸುವ ದುರಾಲೋಚನೆಯಿಂದ ಮಾಡಿಟ್ಟ ಬಿನ್‌ಮೊಬಲಗಿನ ಹಾಗೂ ಪೋಕಳ ದಸ್ತೈವಜು ಎಂತಲೂ ಕಾ|| ಫ|| ಕ್ಲಾ|| ಕೋ|| ಮೂ|| ನಂ. ೨೦೧—೧೯೩೪ನೇ ಡಿಕ್ರಿಯಲ್ಲಿ ೨ನೇ ಪ್ರ||ಗೆ ಏನೊಂದೂ ಹಕ್ಕು ಸಮ್ಮಂಧ ವಿಲ್ಲೆಂತಲೂ ಅದು ೧ನೇ ಪ್ರ||ಯ ಹಕ್ಕಿನದಾಗಿದ್ದು ಅವನಿಂದ ಸಲ್ಲತಕ್ಕ ಈ ಕೋರ್ಟ ಮೂಲ ನಂಬರ ೨೪೩—೧೯೩೬ನೇ ಡಿಕ್ರಿ ಸಾಲ ಹಾಗೂ ಇತರ ಸಾಲಗಳಿಗೆ ಪಾತ್ರವಿರುತ್ತದೆಂತಲೂ ನಿರ್ಣಯಿಸಿಕೊಳ್ಳುವ ಬಗ್ಗೂ ವಾದಿಯು ಈ ದಾವೆ ಮಾಡುತ್ತಾನೆ.

ಕುಮುಟಾ ತಾರೀಕು ೧೯—೯—೧೯೪೧.

R. V. Pandit.
ವಾದಿ ವಕೀಲ

Rangrao D. Kulkarny.
Clerk of the Court.

ಯುದ್ಧನಿಧಿ ಸಂಗ್ರಹ.

— ಅಲಹಾಬಾದದ ಹೈಕೋರ್ಟಿನಲ್ಲಿ ದಿಲ್ಲಿಯ 'ಹಿಂದುಸ್ಥಾನ ಟೈಮ್ಸ' ಪತ್ರಿಕೆಯ ಮೇಲೆ ಕೋರ್ಟಿಗೆ ಅಪಮಾನ ಮಾಡಿದ ಕುರಿತು ಒಂದು ಖಟ್ಲೆಯ ವಿಚಾರ ನಡೆದಿದೆ. 'ಹಿಂದುಸ್ಥಾನ ಟೈಮ್ಸ'ಪತ್ರಿಕೆಯು ಆಗಸ್ಟ ೬ನೇ ತಾರೀಖಿನ ಸಂಚಿಕೆಯಲ್ಲಿ ಮೀರತದ ಎಡಿಶನಲ ಜಜ್ಜರಾದ ರಾ|| ಹರಿಶಂಕರ ವಿದ್ಯಾರ್ಥಿಯವರಿಂದ ಅಲಹಾಬಾದ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಸರ್ ಇಕಬಲ ಅಹಮದರು ಹೊರಡಿಸಿದ ಸರ್ಕಿಲಾರಿನ ಮೇರೆಗೆ ತುಂಬಿದ ಕೋರ್ಟಿನಲ್ಲಿ ಯುದ್ಧನಿಧಿ ಒಟ್ಟುಮಾಡಲ್ಪಟ್ಟಿತ್ತೆಂದು ಬರೆದಿತ್ತು. ಹೀಗೆ ಸರ್ಕಿಲಾರನ್ನು ಹೊರಡಿಸಿ ಹೈಕೋರ್ಟು ತನ್ನ ಗೌರವವನ್ನು ಕಳೆದುಕೊಂಡಿರುವದಾಗಿ ಟೀಕಿಸಲಾಗಿತ್ತು. ಅಲಹಾಬಾದದ ನ್ಯಾಯಮೂರ್ತಿಗಳು ಈ ಸರ್ಕಿಲಾರಿನ ಸಂಗತಿ ಸಟೆಯಿರುವದರಿಂದ 'ಹಿಂದುಸ್ಥಾನ ಟೈಮ್ಸ'ಕರ್ತರು ಇದನ್ನು ಪ್ರಕಟಿಸಿ ಹೈಕೋರ್ಟಿನ ಅಪಮಾನ ಮಾಡಿದರೆಂದೂ ಆ ಬಗ್ಗೆ ಯಾಕೆ ಶಾಸನ ಮಾಡಬಾರದೆಂದೂ 'ಹಿಂದುಸ್ಥಾನ ಟೈಮ್ಸ' ಪತ್ರದ ಶ್ರೀ|| ದೇವಿದಾಸ ಗಾಂಧಿಯವರ ಮೇಲೆ ನೋಟೀಸು ಹೊರಡಿಸಿದ್ದರು. ಮೀರತದ ಸುದ್ದಿಗಾರರಾದ ರಾ|| ಸಿಂಘಾಲರವರು ಈ ಸುದ್ದಿಯನ್ನು ತಮಗೆ ಕಳಿಸಿದ್ದರಿಂದ ಶ್ರೀ|| ಗಾಂಧಿಯವರು ತಮ್ಮ ಉದಾಹರಣೆಯಲ್ಲಿ ಬರೆದಿದ್ದಾರೆ. ಸುದ್ದಿಯ ಪೂರ್ವಾಪರವನ್ನು ಶ್ರೀ|| ಗಾಂಧಿಯವರು ಈ ಪ್ರಕಾರ ಹೇಳುತ್ತಾರೆ: "ರಾ|| ವಿದ್ಯಾರ್ಥಿಯವರ ಕೋರ್ಟಿನಲ್ಲಿ ಒಂದು ಕೊಲೆಪಾತಕದ ಖಟ್ಲೆ ನಡೆದಿತ್ತು. ಅದರೊಳಗೆ ೨೦ ಮಂದಿ ಆರೋಪಿಗಳಿದ್ದರು. ನಾಲ್ವರಿಗೆ ಜಜ್ಜರು ಕರೇ ನೀರಿನ ಶಿಕ್ಷೆಯನ್ನು ವಿಧಿಸಿ ನುಡಿದಿದ್ದೇನಂದರೆ: 'ನಾ|| ಗವ್ಹರ್ನರರು ಯುದ್ಧನಿಧಿಗೆ ಸಹಾಯ ಮಾಡುವಂತೆ ಮುಖ್ಯ ನ್ಯಾಯಾಧೀಶರಿಗೆ ವಿನಂತಿ ಮಾಡಿಕೊಂಡಿ

(೯ನೇ ಪುಟದ ಮೇಲೆ ಮುಂದುವರಿದಿದೆ)

ವೀರ-ಧೀರ-ರಣಶೂರ ರುಶ್ಯರು !

(೫ನೇ ಪಾನಿನಿಂದ ಮುಂದುವರಿದದ್ದು.)

ಇಲ್ಲ; ಅವರ ಮಗಂದಿರಾದ ಶಾಹಪುರ ಮಹಮ್ಮದ ರೇಝಾಖಾನರಿಗೆ ಪಟ್ಟ ಕಟ್ಟಲಾಗಿದೆ. ಶಾಹಪುರರವರು ಬ್ರಿಟಿಶ-ರುಶ್ಯರ ಆಧೀನರು. ಇವರಿಗೆ ಸ್ವತಂತ್ರ ವಿದೇಶ-ನೀತಿಯಿಲ್ಲ. ಇವರು ಇಜಿಪ್ತ ದೇಶದ ಅರಸರ ಭಾವಂದಿರು. ಪೂರ್ವಕ್ಕೆ ಇರಾಣ, ಪಶ್ಚಿಮಕ್ಕೆ ಇಜಿಪ್ತ, ದಕ್ಷಿಣಕ್ಕೆ ಸೀರಿಯಾ, ಸೌದಿ-ಅರಬಸ್ತಾನ ಹೀಗೆ ಬ್ರಿಟಿಶ ಪಕ್ಷಪಾತಿ ಪ್ರದೇಶಗಳಿಂದ ತುರ್ಕಸ್ತಾನವು ಸುತ್ತುಗಟ್ಟಲ್ಪಟ್ಟಿದೆ! ಉತ್ತರ ಪಾರ್ಶ್ವದಿಂದ ಜರ್ಮನರು ಒತ್ತುತ್ತಾರೆ! ಹೀಗೆ ಮತ್ತಿನಲ್ಲಿ ಹಾವು, ಹೊರಬದಿಗೆ ಬೆಕ್ಕು, ನಡುವೆ ಇಲಿ! ಇರುವಂತೆ ತುರ್ಕಸ್ತಾನದ ಗತಿಯಾಗಿದೆ!! ಒಂದೇ ಬೆಕ್ಕಿನ ಬಾಯಲ್ಲಿ ಇಲ್ಲವೆ ಹಾವಿನ ಬಾಯಲ್ಲಿ ಬೀಳುವ ದುರ್ಧರ ಪ್ರಸಂಗ ತುರ್ಕಸ್ಥಾನ ದೇಶದ ಮೇಲೆ ಬಂದೊದಗಿದೆ. ತುರ್ಕಸ್ತಾನದ ಅಧ್ಯಕ್ಷರಾದ ಇನೋನುರವರು ಹೇಗೆ ಸುರಕ್ಷಿತ ಪಾರಾಗುತ್ತಾರೆಂದು ನನಗೇನು ತಿಳಿಯದ ಮಾತು. ಇರಾಣದಂತೆ ತುರ್ಕಸ್ತಾನವನ್ನು ಪಾಪಿ ಜರ್ಮನರಿಂದ ರಕ್ಷಿಸುವದಕ್ಕಾಗಿ ಬ್ರಿಟಿಶರು ತುರ್ಕಸ್ತಾನದ ಮೇಲೆ ದಂಡೆತ್ತಿಕೊಂಡು ಹೋಗಬಹುದೇನೆಂದು ತಿಳಿಯದೆ ನಾನು ದಿಗಿಲು ಬಿದ್ದಿದ್ದೇನೆ! ಉತ್ತರ ಆಫ್ರಿಕೆಯಲ್ಲಿ ಜರ್ಮನ ದಂಡುಗಳು ಇಳಿದಿವೆಯಂತೆ! ಇತಾಲಿಯ ಸೈನ್ಯ ಪಥಕಗಳೂ ಆ ಬದಿಗೆ ಸರಿದಾಡತೊಡಗಿವೆ. ಜರ್ಮನರು ಚಳಿಗಾಲದಲ್ಲಿ ಆಫ್ರಿಕೆಯೊಳಗಿನ ಯುದ್ಧ ವ್ಯೂಹವನ್ನು ಹೇಗೆ ನಡಿಸಬೇಕೆಂಬದರ ಕುರಿತು ಜರ್ಮನಿಯೊಳಗಿನ ವೃತ್ತಪತ್ರಿಕೆಗಳು ಗಾಂಭೀರ್ಯದಿಂದ ಚರ್ಚೆ ನಡಿಸಿವೆ. ಸುಯೇಜ, ಅಲೆಕ್ಝಾಂಡ್ರಿಯಾ, ಕಾಯರೋ ಪಟ್ಟಣಗಳ ಮೇಲೆ ಜರ್ಮನರು ವಿಮಾನಗಳ ಮೇಲಿಂದ ಹಾರಿ ಹೋಗಿ ಬಾಂಬುಗಳನ್ನೊಗೆದು ನಾಶಪಡಿಸುತ್ತಿದ್ದಾರೆ. ದಕ್ಷಿಣ ರಣಭೂಮಿಯ ಹೋರಾಟವನ್ನು ಹಿಟ್ಲರನು ಮುಗಿಸಿಕೊಂಡು ಚಳಿಗಾಲದಲ್ಲಿ ಉತ್ತರ ಆಫ್ರಿಕೆಯಿಂದ ಇಜಿಪ್ತದ ಮೇಲೆ ಸಾಗಿಹೋಗಬಹುದೆಂದೂ ಇಜಿಪ್ತ ದೇಶ ಕೈವಶವಾದರೆ ಹಾಗೆಯೇ ಮುಂದೊತ್ತಿ ಬರಬಹುದೆಂದೂ ನನಗೊಂದು ಭೀತಿಯಾಗಿದೆ. ಸದ್ಯಕ್ಕೆ ಈ ರಣಭೂಮಿ ರೂಪುಗೊಳ್ಳುತ್ತಿದೆಯಷ್ಟೇ, ವಿಕಾಸ ಹೊಂದಲು ಇನ್ನು ಕೆಲ ಅವಕಾಶವುಂಟು. ತುರ್ಕಸ್ತಾನದ ಘಟನೆಗಳನ್ನು ಆಲೋಚಿಸುವಾಗ ಈ ಪಾರ್ಶ್ವಭೂಮಿ ತಿಳಕೊಂಡಿಟ್ಟರೆ ಮುಂದಿನ ಯುದ್ಧ ಕಾರಣದ ಗ್ರಹಿಕೆ ಬರುವದೆಂದು ನಾನು ಈ ಉಲ್ಲೇಖ ಇಲ್ಲಿ ಮಾಡಿಟ್ಟೆ, ಇಷ್ಟೇ! ರುಶ್ಯರ ಪರಾಕ್ರಮದ ವೃತ್ತಾಂತವನ್ನು ಪೂರ್ಣಗೊಳಿಸಬೇಕಾದರೆ ವೀರಶ್ರೀಭರಿತರಾದ ರುಶ್ಯ-ಸ್ತ್ರೀಯರ ವೀರ ಘಟನೆಯ ಉಲ್ಲೇಖವನ್ನು ನಾನು ಮಾಡಲೇ ಬೇಕು! ಸ್ವತಂತ್ರ ದೇಶದೊಳಗೆ ಅಬಲೆಯರು ಪ್ರಬಲರಾದ ಅದ್ಭುತ ಚಮತ್ಕಾರವನ್ನು ನೀವು ಕಾಣುವಿರಿ! ಸ್ವಾತಂತ್ರ್ಯ ಚೈತನ್ಯವದು! ನಮ್ಮಂಥ ಪರತಂತ್ರ ಜನಾಂಗದಲ್ಲಿ ಇಂಥ ಸಾಹಸವನ್ನು ನಾ ಕಾಣೆ! ಪುರಾಣಗಳಲ್ಲಿ ನಮ್ಮ ವೀರ ಮಹಿಳೆಯರು ಪ್ರದರ್ಶಿಸಿದ ಸಾಹಸದ ಉಲ್ಲೇಖಗಳಿವೆ. ಅದೇ ಪ್ರಕಾರದ ಸಾಹಸವನ್ನು ರುಶ್ಯ-ಸ್ತ್ರೀಯರು ಮಾಡಿ ತೋರಿಸಿದ್ದಾರೆ. ಒಂದು ಗ್ರಾಮದಲ್ಲಿ ದುಷ್ಟ ಜರ್ಮನರು ನುಗ್ಗಿ ನಿರ್ದಯೆಯಿಂದ ೧೩ ವರ್ಷ ವಯಸ್ಸಿನ ರುಶ್ಯ ಹುಡುಗಿಗೆ ಪರಿ ಪರಿಯಿಂದ ದಣಿಸಿದರು! ಇದರಿಂದ ರುಶ್ಯ ಭಗಿನಿಯರಿಗೆ ಆವೇಶ ತುಂಬಿತು! ನೆರೆಹೊರೆಯಲ್ಲಿರುವ ೧೫ ಮಂದಿ ಸ್ತ್ರೀಯರು ಕಗ್ಗತ್ತಲೆಯಾದ ಬಳಿಕ ಎದ್ದು ಜರ್ಮನರು ಠಾಣ್ಯ ಹೂಡಿದ ಶಿಬಿರದ ಬಾಗಿಲಲ್ಲೇ ಉಸುಬಿನ ಚೀಲಗಳನ್ನು ರಾಶಿ ಮಾಡಿ ಬಾಗಿಲನ್ನು ಮುಚ್ಚಿದರು! ಮತ್ತು ಚಿಮಣಿ ಎಣ್ಣೆಯನ್ನು ಎರೆದು ಆ ಶಿಬಿರಕ್ಕೆ ಬೆಂಕಿ ಕೊಟ್ಟರು! ಒಳಗಿದ್ದ ಜರ್ಮನರು ಹೌಹಾರಿದರು! ಆದರೆ ಅವರಿಂದ ಹೊರಬರಲಾಗಲಿಲ್ಲ! ಮೂವರು ಸೈನ್ಯಾಧಿಕಾರಿಗಳು ಪ್ರಯತ್ನಪಟ್ಟು ಹೊರಬಂದರಂತೆ! ಅವರೆಲ್ಲರಿಗೆ ಈ ಸ್ತ್ರೀಯರು ಕೊಂದುಹಾಕಿದರು! ಒಬ್ಬ ೧೬ ವರ್ಷದ ಎಳೆ ಹುಡುಗಿಯಂತು ಚಂಡಿಯಂತೆ ಆವೇಶಭರಿತಳಾಗಿ ಈ ಮೂವರಲ್ಲೊಬ್ಬ ಅಧಿಕಾರಿಯ ನೆತ್ತಿಗೆ ಸಾಗಿಹೋಗಿ ಕೈಯಲ್ಲಿದ್ದ ಕೊಡಲಿಯಿಂದ ಆವನನ್ನು ಯಮಸದನಕ್ಕಟ್ಟಿದಳೆಂದು ರುಶ್ಯರು ಉಲ್ಹಾಸದಿಂದ ಬರೆಯುತ್ತಾರೆ!! ಇಂಥ ವೀರ, ವೀರಶ್ರೀಭರಿತ ರುಶ್ಯ ಜನಾಂಗದ ಮೇಲೆ ಬಂದ ಸಂಕಟ ನೋಡಿ ನಾನು ಚಿಂತಾಕ್ರಾಂತನಾಗಿದ್ದೇನೆ. ರುಶ್ಯರ ಸಂಭ್ರಮ ಇನ್ನು ಬಹು ಕಾಲ ಬಾಳುವದೆಂದು ನಾನೇನು ಹೇಳಲಾರೆ! ಜರ್ಮನರಿಗೆ ಅಪಾರ ಹಾನಿಯಾಗುತ್ತಿರುವದು ನಿಜ; ರುಶ್ಯರು ನಿರಾಶರಾಗಿರುವದೂ ನಿಜ! ಆದಾಗ್ಯೂ ಜರ್ಮನ-ರುಶ್ಯರ ಹೋರಾಟ ನಿಕರದಿಂದಸಾಗುವದೆಂಬದೂ ನಿಜ! ಆದರೆ ಮೇಲ್ಕಾಣಿಸಿದ 'ಪ್ರಾವದಾ' ಪತ್ರಿಕೆಯ ಸೂಚನೆಯನ್ನು ಓದಿದರೆ ಹಿಟ್ಲರನ ಸಮಾಧಿ ರುಶ್ಯದೇಶದಲ್ಲಿ ಒದಗಿಬರುವದಿಲ್ಲವೆಂಬ ಮಾತು ಸಾಮಾನ್ಯವಾಗಿ ಸಿದ್ಧವಾದಂತೆಯೇ! ಈ ರಣಭೂಮಿಯ ಪರಿಣಾಮದಿಂದ ಮುಂದೇನೇನಾಗುತ್ತದೆಂದು ನೋಡಲಿಕ್ಕೆ ನಾನು ಕುತೂಹಲಪಡುತ್ತಿರುತ್ತೇನೆ. ರುಶ್ಯ ರಣಭೂಮಿಯ ಫಲಿತಾಂಶವೇನೇ ಆಗಲಿ; ರುಶ್ಯರು ಮಾಡಿದ ಪರಾಕ್ರಮ, ಸಾಹಸ, ಧೈರ್ಯ, ಶೌರ್ಯಗಳು ಅಜರಾಮರವಾಗಿರುವದು ಖಂಡಿತ! ಬ್ರಿಟಿಶ ನೌಕಾಮಂತ್ರಿ ಮಿ॥ ಅಲೆಕ್ಝಾಂಡರರವರು ಗುರುವಾರ ಲಂಡನಿನಲ್ಲಿ ಒಂದು ಭೋಜನ ಸಮಾರಂಭದ ಸಮಯ ನುಡಿದಂತೆ, ಯುದ್ಧದ ಕೊನೆಯ ಭವಿಷ್ಯ ಬ್ರಿಟಿಶರನ್ನೇ ಹೊಂದಿಕೊಂಡಿದೆ! ಹಿಟ್ಲರನಾದರೂ ಬ್ರಿಟಿಶರ ಮೇಲೆಯೇ ಗುರಿಯಿಟ್ಟಿದ್ದಾನೆ! ಇದರಿಂದ ಜರ್ಮನ-ಬ್ರಿಟಿಶರೊಳಗೆ ಯಾವಲ್ಲಿ ಕದನವಾಗುವದೆಂದು ನಾನು ಹೇಳಲಾರೆ. ಆದರೆ ಬಹುತರವಾಗಿ ಮಧ್ಯ—ಪೂರ್ವ ದೇಶಗಳೊಳಗೆ ಅಂದರೆ ಇಜಿಪ್ತ, ಸೀರಿಯಾ, ಇರಾಣ, ತುರ್ಕಸ್ತಾನ ಪ್ರದೇಶಗಳೊಳಗೆ ಜರ್ಮನ-ರುಶ್ಯರು ಒಂದೆಡೆ ಕೂಡಿ ಕೈ-ಕೈ ಕಾಳಗ ಮಾಡುವರೆಂದು ನನ್ನದೊಂದು ಭಾವನೆ. ಬ್ರಿಟಿಶ ದೇಶದ ಮೇಲೆ ಹಿಟ್ಲರನು ದಾಳಿ ಮಾಡಲಿದ್ದಾನೆಂದು ಹೇಳುತ್ತಾರೆ. ಆ ಮಾತಿನಲ್ಲಿ ನನಗೆ ನಂಬಿಗೆಯಿಲ್ಲ. ವಿಮಾನಗಳ ಮೇಲಿಂದ ಹಾರಿಹೋಗಿ ಬಾಂಬುಗಳನ್ನೊಗೆದು ದುಷ್ಟ ಜರ್ಮನರು ನಿರಪರಾಧಿ ನಾಗರಿಕರನ್ನು ವಣಿಸಬಹುದು, ಮನೆ-ಮಾರುಗಳನ್ನು ಹಾಳು ಸುರಿಸಬಹುದು. ಆದರೆ ರಣಭೂಮಿಯ ಮೇಲೆ ಉಭಯ ಪಕ್ಷಗಳು ಸರಿಸರಿ ಕೂಡಿ ಹೋರಾಡುವ ಲಕ್ಷಣಗಳನ್ನು ನಾ ಕಾಣೆ! ಮುಂದೆ ಏನೇನಾಗುವದೆಂದು ನಾನು ಹೇಳಬಾರದಾಗಿತ್ತು. ಯಾಕಂದರೆ ಈಗಿನ ನಿಯಮನದಲ್ಲಿ ಭವಿಷ್ಯ ಹೇಳುವದು ಅಪಾಯಕರ!

ವಾರ್ತೆಗಳು.

— ಅಹಮದಾಬಾದದಲ್ಲಿ ಮೊನ್ನೆ ಗುರುವಾರ ಭಾಷಣ ಮಾಡುವಾಗ, ಮಹಾತ್ಮರಿಗೆ ಅಸಮಾಧಾನವಾಗಿರುವದಿಲ್ಲ; ಅಹಿಂಸೆಯ ಮೇಲಿನ ಮಹಾತ್ಮರ ಶ್ರದ್ಧೆ ಕುಗ್ಗಲಿಲ್ಲ; ಯುದ್ಧ ಮುಗಿಯುವ ತನಕ ಸತ್ಯಾಗ್ರಹವನ್ನು ನಿಲ್ಲಿಸುವ ವಿಚಾರ ಮಹಾತ್ಮರಿಗಿಲ್ಲ." ಹೀಗೆ ಮಹಾದೇವ ದೇಸಾಯಿಯವರು ಹೇಳಿ, ಚೀನ ದೇಶದೊಳಗೆ ಮಹಾತ್ಮರ ಖಾದಿಯ ಸಂದೇಶ ಅಕ್ಷರಶಃ ಪಾಲಿಸಲ್ಪಡುತ್ತದಾಗಿಯೂ ಹೇಳಿದರು. ಚೀನ ದೇಶದೊಳಗೆ ಜನರು ತಮಗೆ ಬೇಕಾದ ಅರಿವೆ ತಾವೇ ತಯಾರಿಸುತ್ತಾರೆ. ಶ್ರೀ॥ ಮಹಾದೇವ ಭಾಯಿಯವರು ಹೇಳಿ ಅದರಂತೆ ಹಿಂದವಾಸಿಯರು ನಡಕೊಳ್ಳಬೇಕಾಗಿ ವಿನಂತಿ ಮಾಡಿಕೊಂಡರು. ಮುಂಬಯಿಯಲ್ಲಿ ಆಚಾರ್ಯ ಕೃಪಾಲಾನಿಯವರು ಭಾಷಣ ಮಾಡುವಾಗ ಮಹಾತ್ಮರ ಅಹಿಂಸೆಯ ಸಂಪ್ರದಾಯ ಚಿರಕಾಲ ಬಾಳುವದೆಂತಲೂ ಅದರಿಂದಲೇ ಜಗತ್ತಿನ ಉದ್ಧಾರವಾಗುವದೆಂತಲೂ ನುಡಿದರು.

— ಸರ್ವಾಧಿಪತಿ ಲಿನ್‌ಲಿಥಗೋ ದೊರೆಗಳ ಉತ್ತರಾಧಿಕಾರಿಗಳ ಕುರಿತು ಲಂಡನಿನಲ್ಲಿ ಚರ್ಚೆ ನಡೆಯುತ್ತಿದೆ. ಎಲ್ವಿನ್ ದೊರೆಗಳಿಗೆ ನೇಮಿಸಬೇಕೆಂದು ಕೆಲವರು ಹೇಳುತ್ತಾರೆ. ಇವರು ವಿಶಾಲ ವಿಚಾರದವರಂತೆ. ಹಿಂದೆ ಸಹಾಯಕ ಭಾರತ ಮಂತ್ರಿಗಳಾಗಿದ್ದ ಮಿ॥ ಬಟ್ಲರರಿಗೆ ನೇಮಿಸಬೇಕೆಂದು ಬೇರೆ ಕೆಲವರ ಅಭಿಪ್ರಾಯವುಂಟಂತೆ. ಹಿಂದುಸ್ಥಾನದ ಬಿಕ್ಕಟ್ಟನ್ನು ಬಗೆಹರಿಸುವ ಕುರಿತು ಬ್ರಿಟಿಶ ಪ್ರಧಾನ ಮಂಡಳವು ಗಾಂಭೀರ್ಯದಿಂದ ಆಲೋಚನೆ ಮಾಡುತ್ತಿದೆಯಂತೆ. ರಾಜಬಂದಿಗಳನ್ನು ಬಿಡುಗಡೆ ಮಾಡಬೇಕಾಗಿಯೂ ಹಲವರ ಸೂಚನೆಗಳಿವೆ.

ಕೌನ್ಸಲರ ಸರ್ ಜಗದೀಶ ಪ್ರಸಾದರವರು '೨೦ನೇ ಶತಮಾನ'ವೆಂಬ ಮಾಸಪತ್ರಿಕೆಯಲ್ಲಿ ಒಂದು ಲೇಖ ಬರೆದು ಪಂಡಿತ ಜವಾಹಿರಲಾಲ ಪ್ರಭೃತಿ ಲೋಕನಾಯಕರನ್ನು ಬಿಡುಗಡೆ ಮಾಡಿದನಕ ಬಿಕ್ಕಟ್ಟು ಬಗೆಹರಿಯಲಿಕ್ಕಿಲ್ಲವಾಗಿ ಅಭಿಪ್ರಾಯ ವ್ಯಕ್ತಗೊಳಿಸಿದ್ದಾರೆ. ಬ್ರಿಟಿಶ ಪ್ರಧಾನ ಮಂಡಳವು ಸರದಾರ ಪಟೇಲ, ಶ್ರೀ॥ ಭುಲಾಭಾಯಿ ದೇಸಾಯಿಯವರನ್ನು ಬಿಡುಗಡೆ ಮಾಡಿ ರಾಜಬಂದಿಗಳನ್ನು ಬಿಡುಗಡೆ ಮಾಡುವ ಸಂಕಲ್ಪವನ್ನು ತೋರಿಸಿರುವದಾಗಿ ಪುಣೆ "ಕೇಸರಿ" ಪತ್ರಿಕೆಯ ಲಂಡನಿನ ಸುದ್ದಿಗಾರರು ಅಭಿಪ್ರಾಯಪಡುತ್ತಾರೆ.

— ಬಿಹಾರ ಪ್ರಾಂತದ ಮೆಜಿಸ್ಟ್ರೇಟರೊಬ್ಬರು ತಮ್ಮ ಕೋರ್ಟಿನಲ್ಲಿ ದಾಖಲಾದ ಒಂದು ಖಟ್ಲೆಯನ್ನು ಪುರಾವೆಯಿಂದ ನಿಕಾಲಿ ಮಾಡಲಿಲ್ಲ. ಯಾವದೊಂದು ಧರ್ಮನಿಧಿಗೆ ರೂ. ೩೦ನ್ನು ಕೊಡುವ ಶರ್ತಿನ ಮೇಲೆ ಖಟ್ಲೆಯನ್ನು ಬಿಟ್ಟುಕೊಟ್ಟರು. ಈ ಪ್ರಕಾರ ಕಾಯಿದೆಗೆ ಅಸಮ್ಮತವಾದುದೆಂದು ಪಾಟಣಾ-ಹೈಕೋರ್ಟ ತೀರ್ಮಾನಿಸಿ ಖಟ್ಲೆಯ ಪುನರ್ವಿಚಾರದ ಬಗ್ಗೆ ಮೆಜಿಸ್ಟ್ರೇಟರ ಕಡೆಗೆ ಕಳಿಸಿದೆ. ಧರ್ಮ ಕೊಟ್ಟ ಹಣವನ್ನು ಆರೋಪಿಗಳಿಗೆ ತಿರುಗಿ ಕೊಡಬೇಕಾಗಿ ವಿಧಿಸಿದೆ. ಯಾವ ಧರ್ಮನಿಧಿಗೆ ಈ ಹಣ ಕೊಡಮಾಡಿತ್ತೆಂದು ಪ್ರಕಟವಾಗಿರುವದಿಲ್ಲ.

ಕಾನಡಾವೃತ್ತ.

ಮಿತಿ ವೃಷ ಸಂವತ್ಸರ ಆಶ್ವೀಜ ಶು॥ ೧ಲೆ, ಸೋಮವಾರ.

ಇರಾಣದೊಳಗೆ ಲೋಕಶಾಹಿ.

ಇರಾಣದ ಶಹಾ ರೇಝಾಖಾನ ಪಹೆಲವಿಯವರು ಲೋಕಕಂಟಕರಿದ್ದರಂತೆ; ನಿರಂಕುಶ ಪ್ರಭುಗಳಿದ್ದರಂತೆ. ಪ್ರಜೆಗಳನ್ನು ದಬ್ಬಿ, ಅವರ ಅಭಿಪ್ರಾಯವನ್ನು ಕೇಳಿಕೊಳ್ಳದೆ ರಾಜ್ಯಭಾರವನ್ನು ಸ್ವತಂತ್ರವಾಗಿ ಸಾಗಿಸುತ್ತಿದ್ದರಂತೆ. ಅವರ ಕಾರಕೀರ್ದಿಯಲ್ಲಿ ಜನಗಳಿಗೆ ಸುಖವಿರಲಿಲ್ಲವಂತೆ. ಜರ್ಮನಿ ಜಪಾನ ದೇಶಗಳೊಳಗಿನ ವರ್ತಕರು ಇರಾಣದಲ್ಲಿ ಹುಟ್ಟುವ ಅನ್ನಸಾಮುಗ್ರಿಗಳನ್ನು ತಮ್ಮ ತಮ್ಮ ದೇಶಗಳಿಗೆ ಒಯ್ದು ಇರಾಣಿಯರ ಉಪವಾಸಕ್ಕೆ ಕಾರಣರಾಗಿದ್ದರಂತೆ. ಶಹಾರವರು ಈ ಪದ್ಧತಿಯನ್ನು ಪುರಸ್ಕರಿಸಿ ಸ್ವಜನದ್ರೋಹ ಮಾಡುತ್ತಿದ್ದರಂತೆ. ಈ ಎಲ್ಲ ಸಂಗತಿಗಳನ್ನು ನಾವು ಒಪ್ಪುತ್ತೇವೆ. ಶಹಾರವರು ರಾಜ್ಯತ್ಯಾಗ ಮಾಡಿದ್ದರಿಂದ ಅವರನ್ನು ತೆಗಳುವ ಜನ ಮಿಗಿಲಾಗುವದು ಲೋಕಾನುಭವದ ಸಂಗತಿ. ಆದರಿಂದ ಶಹಾರವರ ಮೇಲಿನ ಆರೋಪಗಳ ಸತ್ಯಾಸತ್ಯತೆಯನ್ನು ನಾವು ನಿರ್ಣಯಿಸಬಯಸುವದಿಲ್ಲ. ಆ ಆರೋಪಗಳು ಸಿದ್ಧವಾಗಿರಲಿ ಅಥವಾ ಅಸಿದ್ಧವಾಗಿರಲಿ; ಅಥವಾ ಬ್ರಿಟಿಶರೂ ರುಶ್ಯರೂ ತಮ್ಮ ಅತಿಕ್ರಮಗಳನ್ನು ಸಮರ್ಥಿಸಿಕೊಳ್ಳುವದಕ್ಕಾಗಿ ಹೊರಿಸಿದ್ದೇ ಇರಲಿ; ಅವುಗಳ ಪೂರ್ವಾಪರವನ್ನು ಚರ್ಚಿಸುವದು ಈವಾಗ ಅನವಶ್ಯಕ. ಶಹಾರವರ ರಾಜ್ಯತ್ಯಾಗವನ್ನು ನಾವು ಗೃಹೀತ ಹಿಡಿದು ನಮ್ಮ ವಿಚಾರಗಳನ್ನು ಪ್ರಕಟಿಸಬಯಸಿದ್ದೇವೆ.

ಯುದ್ಧಕಾಲದಲ್ಲಿ ಹೊಸ ರಾಜ್ಯಘಟನೆಗಳನ್ನು ನಿರ್ಮಿಸಬರುವದಿಲ್ಲವಾಗಿ ಬ್ರಿಟಿಶ ಸಾಮ್ರಾಜ್ಯಕರ್ತರ ಅಂಬೋಣ. ಮಹಾಯುದ್ಧದ ಗಡಿಬಿಡಿಯಲ್ಲಿ ಸಾಮ್ರಾಜ್ಯಕರ್ತರು ನಿಮಗ್ನರಾಗಿರುವರಾಗಿಯೂ ಲೋಕಶಾಹಿ ರಾಜ್ಯಘಟನೆಯನ್ನು ನಿರ್ಮಿಸುವಷ್ಟು ಅವಕಾಶ ಇಲ್ಲವೆ ಚಿತ್ತಸ್ವಾಸ್ಥ್ಯ ಅವರಿಗಿರುವದಿಲ್ಲವಾಗಿಯೂ ನಮಗೆ ಹೇಳೋಣಾಗುತ್ತದೆ. ಆದರೆ ಇರಾಣದಲ್ಲಿ ಬ್ರಿಟಿಶ-ರುಶ್ಯರು ಒಂದೆರಡು ವಾರಗಳಲ್ಲಿ ಲೋಕಶಾಹಿಯನ್ನು ಸ್ಥಾಪಿಸಿದ್ದಾರೆ, ನಿರಂಕುಶ ಪ್ರಭುವನ್ನು ಪದಚ್ಯುತಗೊಳಿಸಿದ್ದಾರೆ. ಬ್ರಿಟಿಶ-ರುಶ್ಯರು ತಮ್ಮ ಸ್ವಾರ್ಥಕ್ಕಾಗಿ ಯುದ್ಧ ಪ್ರಸಂಗದಲ್ಲಿ ಬೆಂಬಲ ಪಡೆಯುವದಕ್ಕಾಗಿ ಒಂದು ಏರ್ಪಾಟನ್ನೂ ಮಾಡಿರಬಹುದು. ಆದರೆ ಅಂತರ್ಹೇತುಗಳ ಊಹಾ-ಪೋಹ ನಮಗೆ ಕರ್ತವ್ಯವಿಲ್ಲ. ಲೋಕಶಾಹಿಯ ರಾಜ್ಯಘಟನೆಯನ್ನು ನಿರ್ಮಿಸುವ ಮನಸ್ಸಿದ್ದರೆ ಅದನ್ನು ನಿರ್ಮಿಸಲು ಬ್ರಿಟಿಶರಿಗೆ ದೊಡ್ಡ ಮಾತಲ್ಲ. ೧–೨ ವಾರಗಳು ಸಹ ಆ ಕಾರ್ಯಕ್ಕೆ ತಗಲುವದಿಲ್ಲ. ಹಿಂದುಸ್ಥಾನ ಸರಕಾರದ ನಿವೃತ್ತ ಅರ್ಥಸಚಿವರಾದ ಸರ್ ಜಾರ್ಜ ಶೂಸ್ಟರರವರು ಹಿಂದುಸ್ಥಾನದ ರಾಜ್ಯಘಟನೆಯ ಕುರಿತು ಸದ್ಯಕ್ಕೆ ಪ್ರಕಟಿಸಿದ "India and Democracy" ಎಂಬ ಗ್ರಂಥದ ಪ್ರಸ್ತಾವನೆಯಲ್ಲಿ ಬರೆದಂತೆ, ಹಿಂದುಸ್ಥಾನದ ಉದ್ಧಾರ ಜರ್ಮನಿಯಿಂದಾಗದು, ಜಪಾನದಿಂದಾಗದು, ರಶಿಯಾದಿಂದಾಗದು, ಬ್ರಿಟಿಶರಿಂದಲೇ ಆಗಬೇಕು, ಎಂಬ ಮಾತನ್ನು ಭಕ್ತಿಯಿಂದ ನಂಬಲಿಕ್ಕೆ ನಾವು ಸಿದ್ಧರಿದ್ದೇವೆ. ಆದರೆ ಬ್ರಿಟಿಶರು ಆ ನಂಬಿಗೆಗೆ ಪಾತ್ರವಾಗಿ ನಡೆಕೊಳ್ಳದಿದ್ದರೆ ಬ್ರಿಟಿಶರಿಂದ ನಮ್ಮ ಉದ್ಧಾರವಾಗುವದೆಂದು ಒತ್ತೊತ್ತಿ ಹೇಳಿದಾಗ್ಯೂ ಜನಸಾಮಾನ್ಯರು ನಂಬಿಕೊಳ್ಳುವ ಬಗೆ ಹೇಗೆ ' ಹಿಂದುಸ್ಥಾನದ ಸಂಸ್ಥಿತಿ ಲೋಕಶಾಹಿಯ ಸ್ಥಾಪನೆಗೆ ಅನುಕೂಲವಿಲ್ಲೆಂಬ ಮಾತನ್ನು ಕೇಳಿ ಬ್ರಿಟಿಶರಿಂದ ನಮ್ಮ ಉದ್ಧಾರವಾಗುವದೆಂದು ನಮಗೇನು ನಂಬಿಗೆ ಹುಟ್ಟುವದಿಲ್ಲ. ಸಾಮ್ರಾಜ್ಯಕರ್ತರು ಈ ವಿಷಯವನ್ನು ಆಳವಾಗಿ ವಿಚಾರಿಸಬೇಕೆಂದು ನಾವು ವಿನಂತಿ ಮಾಡಿಕೊಳ್ಳುತ್ತೇವೆ

ಇರಾಣದೊಳಗಿನ ಜನರು ಉಪವಾಸ ಸಾಯುತ್ತಿರಾಗಿಯೂ ಆ ದೇಶದೊಳಗಿನ ಅನ್ನಸಾಮುಗ್ರಿಗಳು ವಿದೇಶಕ್ಕೆ ರಫ್ತಾಗಿ ಜನರು ಸಂಕಟಗ್ರಸ್ತರಾಗಿದ್ದರಾಗಿಯೂ ಮುಂಬಯಿ ' ಟೈಮ್ಸ ' ದಂಥ ಪತ್ರಿಕೆಯು ಬರೆದು, ಶಹಾ ರೇಝಾಖಾನ ಪಹೆಲವಿಯವರ ಪದಚ್ಯುತಿಯನ್ನು ಸಮರ್ಥಿಸುತ್ತದೆ. ನಮ್ಮ ಹಿಂದುಸ್ಥಾನ ದೇಶ ಲೋಕಸ್ವಾತಂತ್ರ್ಯದ ಪುರಸ್ಕಾರ ಮಾಡುವ ಬ್ರಿಟಿಶರ ಅಧೀನದಲ್ಲಿದೆ. ಆದಾಗ್ಯೂ ನಮ್ಮ ಹಿಂದುಸ್ಥಾನ ದೇಶದಿಂದ ವಿದೇಶಕ್ಕೆ ರಫ್ತಾಗುವ ಸರಕುಗಳು ಅನ್ನಸಾಮುಗ್ರಿಗಳಲ್ಲವೇ ? "India and Democracy" ಎಂಬ ಗ್ರಂಥದಲ್ಲಿ ಸರ್ ಜಾರ್ಜ ಶೂಸ್ಟರು ಬರೆದಂತೆ, ಹಿಂದುಸ್ಥಾನದೊಳಗಿನ ಅರ್ಥ-ಸಮಸ್ಯೆಗಳೇ ಮುಖ್ಯ ವಿಚಾರ ವಿಷಯಗಳು. ಹಿಂದುಸ್ಥಾನವು ಸಮೃದ್ಧ ಪ್ರದೇಶವಾಗಿದ್ದು ಜನರು ನಿರುದ್ಯೋಗಿಗಳಾಗಿ, ನಿರ್ಗತಿಕರಾಗಿ, ದರಿದ್ರರಾಗಿ, ಗತಿಗೇಡಾಗಿ, ತುತ್ತು ಕೂಳಿಗೂ ತುಟ್ಟಿಯಾಗಿ ಸಾವನ್ನು ಹಾರೈಸುತ್ತ ಬದುಕಿಕೊಂಡಿದ್ದೇ ಈಗಿನ ದೊಡ್ಡ ಸಮಸ್ಯೆ. ನಮ್ಮ ಹಿಂದುಸ್ಥಾನದ ಈಗಿನ ರಾಜ್ಯಭಾರದಲ್ಲಿ ಲೋಕಮತಕ್ಕೆ ಮಾನ್ಯತೆಯಿಲ್ಲವೆಂಬ ಸಂಗತಿಯನ್ನು ನಾವು ಸ್ಪಷ್ಟ ಮಾಡುವದು ಬೇಡ. ಲೋಕಮತದ ಪರಿವೆ ಹಿಡಿಯದೆ ಲೋಕನಾಯಕರನ್ನು ಧಿಃಕರಿಸಿ ಹಿಂದುಸ್ಥಾನ ಸರಕಾರದ ರಾಜ್ಯಭಾರ ನಡೆದಿದೆಂಬ ಸಂಗತಿ ಈವಾಗ ಸ್ವಯಂಸಿದ್ಧವಾದದ್ದು. ರಾಷ್ಟ್ರೀಯ ಸಭೆಯು ಸತ್ಯಾಗ್ರಹ ಮಾಡಿದ್ದೂ ಮೌ॥ ಅಬುಲ ಕಲಾಮ ಆಝಾದ ಪ್ರಭೃತಿ ಲೋಕನಾಯಕರು ಸೆರೆಮನೆಯ ಕ್ಲೇಶಗಳನ್ನು ಅನುಭವಿಸುವದೂ ಹಿಂದುಸ್ಥಾನ ಸರಕಾರಕ್ಕೂ ಲೋಕಮತಕ್ಕೂ ಇರುವ ವ್ಯತ್ಯಾಸವನ್ನೂ ವೈಷಮ್ಯವನ್ನೂ ವಿರೋಧವನ್ನೂ ಲೋಕಕ್ಕೆ ಸ್ಫುಟಗೊಳಿಸುತ್ತವೆ. ಇರಾಣದಲ್ಲಿ ಲೋಕಶಾಹಿಯನ್ನು ಸ್ಥಾಪಿಸಿ ಲೋಕಮತಕ್ಕೆ ಪ್ರಾಧಾನ್ಯ ಕೊಟ್ಟು ಶಹಾ ರೇಝಾಖಾನರ ಮಗಂದಿರಾದ ಶಾಹಪುರ ಮಹಮ್ಮದ ರೇಝಾರವರಿಗೆ ಬ್ರಿಟಿಶ-ರುಶ್ಯರು ಪಟ್ಟಗಟ್ಟಿ ಇರಾಣದೊಳಗೆ ರಾಜ್ಯಕ್ರಾಂತಿಯನ್ನುಂಟು ಮಾಡಿದ್ದಾರೆ. ಇರಾಣಿಯರ ಹಿತಕ್ಕಾಗಿ ಜನಸಾಮಾನ್ಯ ಇರಾಣಿಯರ ಲೋಕಪ್ರತಿನಿಧಿಗಳ ಅಪೇಕ್ಷೆಯ ಮೇರೆಗೆ ಲೋಕೋಪಕಾರಿ ಬ್ರಿಟಿಶ-ರುಶ್ಯರು ಈ ಕ್ರಾಂತಿಯನ್ನೊದಗಿಸಿ ತಂದರೆಂದು ಹೇಳೋಣಾಗುತ್ತದೆ. ಪರೋಪಕಾರದ ಮಾತನ್ನು ನಂಬುವವರು ನಂಬಲಿ; ನಂಬದವರು ನಂಬದಿರಲಿ; ಆ ವಿಚಾರ ನಮ್ಮ ಪ್ರತಿಪಾದನೆಗೆ ಅನ್ವಯಿಸುವದಿಲ್ಲ. ಮುಖ್ಯ ಮಾತೆಂದರೆ: ಮಹಾಯುದ್ಧ ಪ್ರಸಂಗದಲ್ಲಿ ಪ್ರತ್ಯಕ್ಷ ರಣಭೂಮಿಯು ಸೋಲಿ ನಿರಂಕುಶ ರಾಜನಿಗೊದಗಿದ ವಿಪತ್ತು ಲೋಕಶಾಹಿಗೊದಗಿದ ಸಂಪತ್ತು! ಸಾಮ್ರಾಜ್ಯಕರ್ತರಿಗೆ ಇರಾಣದ ಉದಾಹರಣೆಯನ್ನೇ ಅನುಸರಿಸಿ ಹಿಂದುಸ್ಥಾನದೊಳಗೆ ಲೋಕಶಾಹಿಯನ್ನು ಪ್ರಸ್ಥಾಪಿಸಲು ನಾವು ಪ್ರಾರ್ಥಿಸಿಕೊಳ್ಳುತ್ತೇವೆ.

ಆಳವಾಗಿ ಪರಾಂಬರಿಸಿದರೆ ಲೋಕಶಾಹಿಯೇ ಲೋಕಶಾಹಿಯನ್ನು ರಕ್ಷಿಸಬಲ್ಲದು ನಿರಂಕುಶ ಪ್ರಭುತ್ವಕ್ಕೂ ಲೋಕಶಾಹಿಗೂ ಎಂದಿಗೂ ಸರಿಹೋಗುವದಿಲ್ಲ. ಇರಾಣದಲ್ಲಿ ಬ್ರಿಟಿಶ-ರುಶ್ಯರು ಲೋಕನಾಯಕರಿಗೆ ರಾಜ್ಯಕಾರಭಾರದಲ್ಲಿ ಪ್ರಾಧಾನ್ಯ ಕೊಟ್ಟು ರಾಜ್ಯಘಟನೆಯನ್ನು ತಿದ್ದಿ ಸ್ವಸಂಪ್ರದಾಯಕ್ಕೆ ಬೆಂಬಲ ಪಡೆಕೊಂಡಂತೆ ಹಿಂದುಸ್ಥಾನದಲ್ಲೂ ಯುದ್ಧ-ಯತ್ನವನ್ನು ಸಾಗಿಸತಕ್ಕದ್ದು. ಮಹಾತ್ಮರು ಬ್ರಿಟಿಶರ ಹಿತಚಿಂತಕರು; ಯುದ್ಧಕಾರ್ಯದಲ್ಲಿ ಸರಕಾರಕ್ಕೆ ಬುದ್ಧಿಪೂರ್ವಕವಾಗಿ ವಿಘ್ನಗಳನ್ನೇರ್ಪಡಿಸಲು ಅವರು ಒಡಂಬಡುವದಿಲ್ಲ. ರಾಷ್ಟ್ರೀಯ ಸಭೆಯವರು ಶತ್ರುರಾಷ್ಟ್ರಗಳಿಗೆ ಅನುಕೂಲರಾಗಿ ವ್ಯವಹರಿಸುವದಿಲ್ಲ. ಯುದ್ಧಯತ್ನಕಾರ್ಯದಲ್ಲಿ ಸಾಮ್ರಾಜ್ಯ ಸರಕಾರಕ್ಕೆ ಅಧೀನರಾಗಿ ವ್ಯವಹರಿಸಲಿಕ್ಕೆ ಹಿಂದುಸ್ಥಾನವು ಸಿದ್ಧವಿಲ್ಲ. ಪ್ರಾಗತಿಕ ಪಕ್ಷದ ನಾಯಕರಾದ ಡಾ॥ ಹೃದಯನಾಥ ಕುಂಝರುರವರು ನುಡಿದಂತೆ, ಪರ-ಜನರಿಗೆ ಸ್ವಾತಂತ್ರ್ಯಸಂಗ್ರಹ ಮಾಡಿಕೊಡುವಲ್ಲಿ ನಾವು ನೆರವಾಗಬೇಕಾದರೆ, ನಮ್ಮ ಸ್ವಾತಂತ್ರ್ಯದ್ದೇನು ಗತಿ? ಎಂಬ ಪ್ರಶ್ನೆ ಸಹಜವಾಗಿ ಉಂಟಾಗುತ್ತದೆ. ಇರಾಣದಂಥ ಜನಾಂಗಕ್ಕೆ ಲೋಕಶಾಹಿಯನ್ನು ನಡೆಸುವ ಸಾಮರ್ಥ್ಯವಿದ್ದರೆ ಒಂದು ಶತಮಾನಕ್ಕೂ ಮಿಗಿಲಾಗಿ ಲೋಕಶಾಹಿಯ ಪ್ರವರ್ತಕ ಬ್ರಿಟಿಶರ ಆಳಿಕೆಯಲ್ಲಿದ್ದ ನಮ್ಮ ಹಿಂದು-ಜನಾಂಗಕ್ಕೆ ಲೋಕಶಾಹಿಯನ್ನು ನಡೆಸುವ ಸಾಮರ್ಥ್ಯವಿಲ್ಲವಾಗಿ ಪ್ರತಿಪಾದಿಸುವದು ದಡ್ಡತನ ಇಲ್ಲವೆ ಠಕ್ಕುತನ ಇಲ್ಲವೆ ಸ್ವಾರ್ಥಪರಾಯಣತೆ. ಸಾಮ್ರಾಜ್ಯಕರ್ತರು ಇಂಥ ನಿರಾಧಾರ ನೆವಗಳಿಂದ ಹಿಂದುಸ್ಥಾನದ ಸ್ವಾತಂತ್ರ್ಯವನ್ನು ಅಪಹರಿಸುವ ಹವ್ಯಾಸವನ್ನು ಹಿಡಿಯಕೂಡದು. ಬೇರೆ ಬೇರೆ ಕಾರಣಗಳಿಂದ ಹಿಂದುಸ್ಥಾನದಲ್ಲೀಗ ಲೋಕಜಾಗೃತಿಯುಂಟಾಗಿದೆ. ಆಚೆ-ಈಚೆ, ಸುತ್ತುಮುತ್ತು ಪ್ರತಿಯೊಬ್ಬರು ನೋಡಿ ಗ್ರಹಿಕೆಪಡೆಕೊಳ್ಳು

ತ್ತಿದ್ದಾರೆ. ಇಂಥ ಸಮಯದಲ್ಲಿ ಸಾಮ್ರಾಜ್ಯಕರ್ತರು ಸದ್ಬುದ್ಧಿ ತಳೆಯತಕ್ಕದ್ದು.

ಹಿಂದುಸ್ಥಾನದೊಳಗೆ ಲೋಕಶಾಹಿಯನ್ನು ಸ್ಥಾಪಿಸಿದನಕ ಜನಗಳಿಗೆ ಸಮಾಧಾನವಾಗದು. ರಿಫೋರ್ಮ್ಸ್ ಕಮಿಶನರರಾದ ಮಿ|| ಹೊಡಸನರವರೂ "India and Democracy" ಎಂಬ ಗ್ರಂಥದ ಲೇಖಕರಾದ ಸರ್ ಜ್ಯಾರ್ಜ ಶೂಸ್ಟರರವರೂ ಹಿಂದುಸ್ಥಾನ ರಾಜಕಾರಣದ ಸಮಸ್ಯೆಗಳನ್ನು ಲೋಕ-ಧರ್ಮರಾಯರ ಭೂಮಿಕೆಯಿಂದ ವಿಚಾರ ಮಾಡಹೋಗಿ ಹಿಂದುಸ್ಥಾನದೊಳಗೆ ಲೋಕಶಾಹಿಗೆ ಪ್ರಾಧಾನ್ಯ ದೊರಕದಂತೆಯೂ ಸಾಮ್ರಾಜ್ಯಕರ್ತರ ಪ್ರಭುತ್ವ ನೆಲಿಸುವಂತೆಯೂ ರಾಜ್ಯಘಟನೆಯನ್ನು ತಯಾರಿಸುವ ಕಾರ್ಯದಲ್ಲಿ ತೊಡಗಿದ್ದಾರೆಂದು ನಾವು ಬಲ್ಲೆವು. ಆದರೆ ಅಂಥ ಉಪಕ್ರಮಗಳಿಂದ ಎಂದಿಗೂ ಕ್ಷೇಮವಿಲ್ಲ. ಈ ಪ್ರಯತ್ನಗಳು ನಿರರ್ಥಕವಾಗುವದು ಖಂಡಿತವಾದ ಮಾತು. ಆದರಿಂದ ಸಾಮ್ರಾಜ್ಯಕರ್ತರು ಆ ಗೊಡವೆಗೆ ಹೋಗದೆ ಹಿಂದುಸ್ಥಾನ ಸರಕಾರವನ್ನು ಲೋಕಶಾಹಿಯ ಆಧಾರದ ಮೇಲೆ ಪುನರ್ಘಟಿಸುವ ಆಲೋಚನೆ ಮಾಡತಕ್ಕದ್ದು. ಇದೇ ಪ್ರಾಮಾಣಿಕವಾದ ಮಾರ್ಗವೆಂದು ನಮ್ಮ ಅಂಬೋಣ.

ವೀರ-ಧೀರ-ರಣಶೂರ ರುಶ್ಯರು !

[ನಿರೀಕ್ಷಕನು ಬರೆದುದು.]

ರುಶ್ಯ ರಣಭೂಮಿಯ ವಾರ್ತೆಗಳನ್ನು ಕೇಳಿ ನನಗೊಳ್ಳೇ ವ್ಯಸನ. ರುಶ್ಯರು ಉತ್ತರ, ಮಧ್ಯ, ದಕ್ಷಿಣ ರಣಭೂಮಿಗಳಲ್ಲಿ ಹಿಂಜರಿದರು. ಆದರೆ ಅವರು ಪ್ರದರ್ಶಿಸಿದ ಸಾಹಸ, ಪರಾಕ್ರಮ, ಶೌರ್ಯ ಮಹಾಯುದ್ಧದ ಇತಿಹಾಸದಲ್ಲಿ ಚಿರ ಕಾಲ ಬಾಳುವದೆಂದು ನಾನು ಖಂಡಿತ ಹೇಳಬಲ್ಲೆ. ಲೆನಿನಗ್ರೆಡ ಪಟ್ಟಣ ಇಂದು-ನಾಳೆ ಜರ್ಮನರ ಕೈವಶವಾಗುತ್ತದೆ. ಆದರೆ ಈ ಪಟ್ಟಣವನ್ನು ಉಳಿಸಿಕೊಳ್ಳುವದಕ್ಕಾಗಿ ಆಹಾ! ರುಶ್ಯರು ಮಾಡಿದ ಸಾಹಸವನ್ನು ನಾನು ಎಷ್ಟೆಂದು ಬಣ್ಣಿಸಲಿ! ಘನ ಘೋರ ಭಾರತ ಸಂಗ್ರಾಮವನ್ನು ವರ್ಣಿಸಿದ ಸಂಜಯನ ಶಕ್ತಿ ನನಗಿಲ್ಲವಲ್ಲ! ಎಂದು ನಾನು ಮರುಗುತ್ತೇನೆ. ಲೆನಿನಗ್ರೆಡದ ಸುತ್ತುಮುತ್ತು ಜರ್ಮನರೂ ರುಶ್ಯರೂ ಜನ್ಮಶತ್ರುಗಳಂತೆ, ಅಹಿ-ನಕುಲರಂತೆ ಹೋರಾಡಿದರಂತೆ. ಒಬ್ಬರು ಇನ್ನೊಬ್ಬರನ್ನು ಹಿಮ್ಮೆಟ್ಟಿಸಲು ಪ್ರಾಣಗಳನ್ನು ಸಹ ಸಂಕಟದಲ್ಲಿ ಹಾಕಿದರು. ಈ ರಣಸಂಗ್ರಾಮದಲ್ಲಿ ಉಭಯ ಪಕ್ಷಗಳ ತೋಪು-ತುಬಾಕಿಗಳು ಹಾರಾಡದೆ ಸುಮ್ಮಗುಳಿದದ್ದೊಂದು ಅದ್ಭುತ ಚಮತ್ಕಾರವೇ ಸೈ !! ರಣಶೂರರು ಹೋರಾಡುವ ಆವೇಶದಲ್ಲಿ ಮುನ್ನುಗ್ಗಿ ಹೋಗಿಬಿಟ್ಟರು. ಒಂದೆಡೆ ಶತ್ರುಗಳು, ಇನ್ನೊಂದೆಡೆ ಸ್ವಜನರು ಎಂಬ ವ್ಯವಸ್ಥೆ ಬಯಲಾಗಿ ರುಶ್ಯರೂ ಜರ್ಮನರೂ ಕಲೆತು, ಬೆರೆತು ಒಂದಾದರು! ಉಭಯತರು ಮಲ್ಲಯುದ್ಧ ಮಾಡಿ ಶತ್ರುಗಳಿಗೆ ಸೋಲಿಸಲೆತ್ನಿಸಿದರು. ಹೀಗೆ ಉಭಯ ಪಕ್ಷಗಳ ಸೈನಿಕರು ಮಿಶ್ರವಾದ್ದರಿಂದ ತೋಪುಗಳ ಹಾರ್‍ಯಾಟ ನಿಂತುಹೋಯಿತು! ಜರ್ಮನರ ಮೇಲೆ ತೋಪು ಹಾರಿಸಹೋದರೆ ಅವರ ಬಳಿಯಿರುವ ಸ್ವ-ಜನರು ಸಾಯುವರೆಂದು ರುಶ್ಯರೂ, ರುಶ್ಯರ ಮೇಲೆ ತೋಪು ಹಾರಿಸಹೋದರೆ ಸ್ವ-ಜನರು ಸಾಯಬಹುದೆಂದೂ ಜರ್ಮನರು ತಿಳಿದು ಉಭಯ ಪಕ್ಷದವರು ಮದ್ದು-ಗುಂಡಿನ ಕಾಳಗಕ್ಕೆ ತಡೆಹಾಕಿದರು! ಈ ಸಮಯದಲ್ಲಿ ಜರ್ಮನ-ರುಶ್ಯರೊಳಗಾದ ಮಲ್ಲಯುದ್ಧ ಅದ್ಭುತವಾಯಿತಂತೆ! ಕೆಲ ಕಾಲದ ಮೇಲೆ ಈ ಯುದ್ಧ ಮುಗಿಯಿತು. ಆದರೂ ರುಶ್ಯರು ತಮ್ಮ ನಿಗ್ರಹ ಬಿಡಲಿಲ್ಲ. ಜರ್ಮನರು ಒಂದು ಕಡೆ, ರುಶ್ಯರು ಒಂದು ಕಡೆ; ಹೀಗೆ ಹೋರಾಡಹತ್ತಿದರು. ಲೆನಿನಗ್ರೆಡದ ರಕ್ಷಣೆಗಾಗಿ ತೋಪುಗಳ ಭದ್ರವಾದ ಗೋಡೆಯನ್ನೇ ರುಶ್ಯರು ಕಟ್ಟಿಟ್ಟಿದ್ದಾರೆ. ಆ ತೋಪುಗಳೊಳಗಿಂದ ಅಗ್ನಿನಾರಾಯಣನು ಹೊರಹಾರಿಕೊಂಡು ಅಸಂಖ್ಯ ಜರ್ಮನರನ್ನು ನಾಶಗೊಳಿಸಿದನು. ಪ್ರತಿಯಾಗಿ ಜರ್ಮನರು ಬಾಂಬುಗಳನ್ನೊಗೆದು ಲೆನಿನಗ್ರೆಡದ ಸುತ್ತುಮುತ್ತು ಅಗ್ನಿಕುಂಡವನ್ನೇ ನಿರ್ಮಿಸಿರುತ್ತಾರೆ. ಉಭಯ ಪಕ್ಷದ ಹೆಣಗಳು ರಾಶಿಯಾಗಿ ಬಿದ್ದಿವೆಯಂತೆ! ರುಶ್ಯ-ಜರ್ಮನರ ರಕ್ತ ಕೂಡಿ ಕಾಲುವೆಯಾಗಿ ಹರಿದು ಹೋಗುತ್ತಿದೆಯಂತೆ! ಆದಾಗ್ಯೂ ರುಶ್ಯರು ನಿಕರದಿಂದ ಹೋರಾಡುತ್ತಿದ್ದಾರೆ. ಒಬ್ಬ ರುಶ್ಯ ಸ್ತ್ರೀಯ ಸಾಹಸವನ್ನು ನಾನು ಉಲ್ಲೇಖಿಸುವದುಚಿತ! ಲೆನಿನಗ್ರೆಡ ಪಟ್ಟಣಕ್ಕೆ ಹೋಗಬೇಕಾದರೆ ನ್ವೀ ನದಿ ದಾಟಿ ಹೋಗಬೇಕು. ಈ ನದಿಯ ಆಚೆ-ಈಚೆಯ ದಡಗಳನ್ನು ಕೈವಶ ಮಾಡಿಕೊಳ್ಳುವದಕ್ಕಾಗಿ ಜರ್ಮನರು ಸಾಹಸಪಡುವದು ಸಹಜ. ಅದನ್ನು ರಕ್ಷಿಸಿಕೊಳ್ಳುವದಕ್ಕಾಗಿ ರುಶ್ಯರು ಪರಮಾವಧಿಯ ಪ್ರಯತ್ನ ಮಾಡುವದೂ ಸಹಜ. ರುಶ್ಯರು ತೆಪ್ಪಗಳ ಸಹಾಯದಿಂದ ಈ ನದಿಯ ಮಧ್ಯದಲ್ಲಿರುವ ಒಂದು ದ್ವೀಪವನ್ನು ಕೈವಶ ಮಾಡಿಕೊಂಡರು. ಈ ದ್ವೀಪವನ್ನು ಕೈವಶ ಮಾಡಿಕೊಳ್ಳುವ ಕಾರ್ಯದಲ್ಲಿ ರಣಧೀರ ಎಳೆ ಹುಡುಗಿಯೊಬ್ಬಳು ತುಬಾಕಿಯನ್ನು ಹೆಗಲ ಮೇಲೆ ಹಾಕಿಕೊಂಡು ಗುಂಡು ಹೊಡೆಯುತ್ತ ದ್ವೀಪವನ್ನು ಪ್ರವೇಶಿಸಿದಳು! ಈ ಕಾಳಗದಲ್ಲಿ ಅರ್ಧ ಲಕ್ಷ ಜರ್ಮನರು ಹತರಾದರಂತೆ! ೩೦ ಸಾವಿರ ರುಶ್ಯರು ಪ್ರಾಣ ಕಳಕೊಂಡರಂತೆ! ಆದಾಗ್ಯೂ ಲೆನಿನಗ್ರೆಡದ ಕಾಳಗ ಅಂತ್ಯವಾಗಲೊಲ್ಲದು. ಒಂದು ಬದಿಯಿಂದ ಜರ್ಮನರು ಹಿಮ್ಮೆಟ್ಟುತ್ತಿದ್ದಾರೆ; ಇನ್ನೊಂದು ಬದಿಯಿಂದ ಜರ್ಮನರು ಮುನ್ನುಗ್ಗುತ್ತಿದ್ದಾರೆ; ಒಂದೆಡೆ ಪರಮಾವಧಿಯ ಸಾಹಸ ಮಾಡಿ ಜರ್ಮನರನ್ನು ೯ ಮೈಲುಗಳ ತನಕ ಹಿಮ್ಮೆಟ್ಟಿಸಿಕೊಂಡು ಹೋದೆವೆಂದು ರುಶ್ಯರು ತಮ್ಮ ಯುದ್ಧ ಪ್ರಕಟಣೆಯಲ್ಲಿ ಸಾರುತ್ತಾರೆ. ಈ ಅದ್ಭುತಪೂರ್ವ ಸಾಹಸ ನೋಡಿ ರುಶ್ಯರಿಗೆ ರಣದೇವಿ ಮೆಚ್ಚಬೇಕಾಗಿತ್ತು. ಆದರೆ ದೈವಬಲ ರುಶ್ಯರಿಗೆ ಅನುಕೂಲವಿರುವದಾಗಿ ತೋರುವದಿಲ್ಲ! ಮಧ್ಯ ರಣಭೂಮಿಯಲ್ಲಿ ರುಶ್ಯರು ಒಳ್ಳೇ ಪರಾಕ್ರಮ ಮಾಡಿ ಹತ್ತು ಸಾವಿರ ಜರ್ಮನ ಸೈನಿಕರನ್ನು ಸಂಹಾರ ಮಾಡಿ ಯಾರಕ್ನೊ ಎಂಬ ಠಾಣ್ಯವನ್ನು ಕೈವಶ ಮಾಡಿಕೊಂಡಿದ್ದಾರೆ. ಈ ವಿಭಾಗದಲ್ಲಿ ಘೋರ ಕಾಳಗ ನಡೆಯುತ್ತದಾಗಿಯೂ, ಇನ್ನೂ ಬಹಳ ದಿವಸಗಳ ವರೆಗೆ ಯುದ್ಧ ನಡೆಯುವದಾಗಿಯೂ ರುಶ್ಯ ಸರಕಾರದ ಮುಖಪತ್ರಿಕೆಯಾದ 'ಪ್ರಾವಡಾ' ಪತ್ರಿಕೆಯು ಬರೆದು, ರುಶ್ಯರು ಇನ್ನೂ ಹೆಚ್ಚೆಚ್ಚು ಸೈನ್ಯಪಥಕಗಳನ್ನು ನಿರ್ಮಿಸಬೇಕಾಗಿ ಅಪ್ಪಣೆ ಮಾಡುತ್ತದೆ. ದಕ್ಷಿಣ ವಿಭಾಗದಲ್ಲಿ ಮಾತ್ರ ನಡೆದ ಕಾಳಗವನ್ನು ಯಾವದೇ ವಿಶೇಷಣದಿಂದ ವರ್ಣಿಸಲಸಾಧ್ಯ! ಘೋರ, ಅಘೋರ, ಘನ-ಘೋರ ರಣಕಂಪನವೆಂದು ನಾನು ಹೇಳಬಲ್ಲೆ. ಆದರೆ ಈ ವರ್ಣನೆಯಿಂದ ಅಲ್ಲಿ ನಡೆಯುವ ಸಂಗ್ರಾಮದ ಕಲ್ಪನೆ ಬರಲೊಲ್ಲದು! ಈ ರಣಭೂಮಿಯಲ್ಲಿ ಯಾವವನ್ನೂ ಲಕ್ಷಿಸದೆ, ಯಾವುದರ ಪರಿವೆಯನ್ನೂ ಹಿಡಿಯದೆ ಒಂದೇ ಸವನೆ ಮುನ್ನುಗ್ಗಿ ಹೋಗಬೇಕೆಂದು ಹಿಟ್ಲರನು ತನ್ನ ಸೈನಿಕರಿಗೆ ಕಟ್ಟಾಜ್ಞೆ ಮಾಡಿರುವನಂತೆ! ಆದರಿಂದ ಜರ್ಮನರು ನಿಕರದಿಂದ ಹೋರಾಡುತ್ತಿದ್ದಾರೆ. ರುಶ್ಯರು ಸಹ ಅಷ್ಟೇ ರಭಸದಿಂದ ಹೋರಾಡುತ್ತಿದ್ದಾರೆ. ಈ ರಣಭೂಮಿಯಲ್ಲಿ ೨ ಲಕ್ಷಕ್ಕೆ ಮಿಕ್ಕಿ ರುಶ್ಯರು ಆರ್ಭಾಟದಿಂದಲೂ ಆವೇಶದಿಂದಲೂ ಹೋರಾಡುತ್ತಿದ್ದಾರೆ. ರುಶ್ಯರು ಬಹಳ ಸಾಹಸ ಮಾಡಿದರು; ಧಾರೆಯಾಗಿ ನೆತ್ತರವನ್ನು ರಣಯಜ್ಞದಲ್ಲಿ ಸುರಿದರು! ಸಹಸ್ರಾವಧಿ ಪ್ರಾಣಾರ್ಪಣ ಮಾಡಿದರು! ರಾಜಧಾನಿಯಾದ ಕೀವ್ಹ ಪಟ್ಟಣವನ್ನು ರಕ್ಷಿಸಿಕೊಳ್ಳುವದಕ್ಕಾಗಿ ಹೇಳಲಾಗದ ಯತ್ನ ಮಾಡಿದರು. ಆದರೆ ಎಲ್ಲ ಶೌರ್ಯ-ಸಾಹಸಗಳು ನಿರರ್ಥಕವಾಗಿ, ಕೀವ್ಹ ಪಟ್ಟಣ ಜರ್ಮನರ ವಶವಾಯಿತಾಗಿಯೂ, ರುಶ್ಯರು ಶರಣುಹೋದರೆಂದೂ ಜರ್ಮನರು ಯುದ್ಧ ಪ್ರಕಟಣೆಯನ್ನು ಹೊರಡಿಸಿದ್ದಾರೆ. ಕೀವ್ಹ ಪಟ್ಟಣ ಜರ್ಮನರ ವಶವಾಯಿತೆಂದ ಬಳಿಕ ರುಶ್ಯರು ಈ ಭಾಗದಲ್ಲಿ ಸೋತರೆಂದೇ ನನ್ನ ಭಾವನೆ. ಕೊಕೆಸಸದೊಳಗಿನ ಎಣ್ಣೆಗಡಿಗಳನ್ನು ಕೈವಶ ಮಾಡಿಕೊಳ್ಳುವದಕ್ಕಾಗಿ ಜರ್ಮನರು ಅತ್ತ ಮುನ್ನುಗ್ಗುತ್ತಿರುವದು ಕ್ರಮಪ್ರಾಪ್ತವಾದದ್ದು. ಒಡೆಸಾ ಬಂದರ, ಕಪ್ಪು ಸಮುದ್ರ, ಕ್ರಿಮಿಯಾ ದ್ವೀಪಕಲ್ಪ, ಅಲ್ಲಿರುವ ಸೆಬಸ್ಟಾಪೂಲ ಬಂದರ ಇವೆಲ್ಲವು ಜರ್ಮನರ ವಶವಾದಂತಾಗಿ, ಈಗ ತುರ್ಕರಿಗೆ ಸಂಕಟಪ್ರಾಪ್ತವಾಯಿತು! ಬಲ್ಗೇರಿಯಾ ದೇಶಕ್ಕೆ ತುರ್ಕಸ್ಥಾನದ ಮೇಲೆ ಸಾಗಿಹೋಗಲು ಅನುಕೂಲವಾಯಿತು! ಈಗಾಗಲೇ ಡಾರ್ಡಾನೆಲಿಸ ಸಾಮುದ್ರಧುನಿಯಿಂದ ಇಟಲಿಯ ಹಡಗಗಳನ್ನು ಕಪ್ಪು ಸಮುದ್ರಕ್ಕೆ ತಮ್ಮದಾಗಿ ಒಯ್ಯಲು ಬಲ್ಗರರು ತುರ್ಕರ ಕಡೆ ಕೇಳಿಕೊಂಡಿರುವರಂತೆ! ಬಲ್ಗರರಿಗೆ ಏನು ಉತ್ತರ ಸಿಕ್ಕಿತೆಂದು ನನಗೆ ತಿಳಿಯಲಿಲ್ಲ. ಆದರೆ ರುಶ್ಯರಿಗೂ ತುರ್ಕರಿಗೂ ನಡೆದ ಪತ್ರವ್ಯವಹಾರದಲ್ಲಿ ತುರ್ಕರಿಂದ ರುಶ್ಯರಿಗೆ ಸಿಕ್ಕಿದ ಉತ್ತರ ಸಮಾಧಾನಕರವಿಲ್ಲೆಂದು ರುಶ್ಯ ಸರಕಾರದ ವಿದೇಶ ಸಚಿವರಾದ ಮೊಲೊಟೊವ್ಹರವರು ಹೇಳುತ್ತಾರೆ. ಆದರಿಂದ ತುರ್ಕರು ಗೆದ್ದವರ ಪಕ್ಷಕ್ಕೆ ಸೇರುತ್ತಾರೇನೆಂದು ನಾನು ಭೀತಿಗೊಂಡಿದ್ದೇನೆ. ತುರ್ಕರು ಜರ್ಮನರ ಮರೆಹೊಕ್ಕರೆ ಸಂಕಟವೇ ಸೈ! ಎಲ್ಲರಿಗಿಂತ ತುರ್ಕರಿಗೇ ಸಂಕಟ ಹೆಚ್ಚು! ಈಗ ಇರಾಣ ದೇಶದಲ್ಲಿ ಶಹಾ ರೇಝಾಖಾನ ಪಹೆಲವಿಯವರ ಕಾರಭಾರ

(೭ನೇ ಪುಟದ ಮೇಲೆ ಮುಂದರಿಸಿದೆ.)

ಸ್ಥಾನಿಕ ವೃತ್ತಾಂತ

ಕುಮಟಾ— ಹಗಲು ಹೊತ್ತಿಗೆ ಬಿಸಿಲು ಉರಿಯುತ್ತಿದ್ದರೂ ರಾತ್ರಿ ತುಸು ತುಸು ಮಳೆಯಾಗುತ್ತಿರುವದರಿಂದ ಹೊಲಗಳಿಗೆ ಅಪಾಯವಿಲ್ಲ. ಕಗ್ಗನ ಭತ್ತದ ಹೊಲಗಳಿಗೆ ತೆನೆಗಳು ಬಂದು ಈಗ ಒಣಗಲಾರಂಭಿಸಿವೆ. ಹಳಗನ ಭತ್ತದ ಹೊಲಗಳಿಗೆ ತೆನೆಗಳು ಇದೇ ಹೊರಬೀಳಹತ್ತಿವೆ. ಹವೆಯೊಳಗೆ ಉರಿಯೇ ಹೆಚ್ಚು; ತಂಪು ಬಹಳ ಕಡಿಮೆ. ಇಂಥ ವಿಚಿತ್ರ ಹವೆಯ ಮೂಲಕ ಊರಲ್ಲಿ ಅನಾರೋಗ್ಯ ನುಗಿಲಾಗಿದೆ. ಶಿರವಾರ ಬಡಿಯ ವರ್ತಕರು ಬಂದು ಈ ಕಡೆ ಕಾಚಗಿ ಅಕ್ಕಿ ಖರೀದಿ ಮಾಡಲಾರಂಭಿಸಿದ್ದರಿಂದಲೂ ಈಗಾಗಲೇ ಸಾವಿರಾರು ಮುಡಿ ಅಕ್ಕಿ ಕಾರವಾರಕ್ಕೆ ರಫ್ತಾದ್ದರಿಂದಲೂ ಅಕ್ಕಿ ಧಾರಣೆ ಏರಹತ್ತಿದೆ. ಕಳೆದ ವಾರದಲ್ಲಿ ೨ ೩೯ ಇಂಚು ಮಳೆಯಾಗಿದ್ದು, ಈ ತನಕ ಬಿದ್ದಿರುವ ಮಳೆ ೯೪ ೭೮ ಇಂಚು ಆಗಿರುವದು. ಹೋದ ವರ್ಷ ಇದೇ ಅವಧಿಯಲ್ಲಿ ೧೪೬ ಇಂಚುಗಳಿಗೂ ಮಿಕ್ಕಿ ಮಳೆಯಾಗಿತ್ತು.

ಇಲ್ಲಿಯ ತೂಕಳತೆಗಳ ತಪಾಸಕರು ಇಲ್ಲಿಯ ೧ನೇ ವರ್ಗದ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಚಿತ್ರಿಗಿಯ ಒಬ್ಬ ವರ್ತಕರ ಮೇಲೊಂದು, ನೆಲ್ಲಿಕೇರಿಯ ಒಬ್ಬ ವರ್ತಕರ ಮೇಲೊಂದು ಹೀಗೆ ಎರಡು ಖಟ್ಲೆಗಳನ್ನು ಮಾಡಿ ಕೊಟ್ಟಿದ್ದರು. ಎರಡೂ ಖಟ್ಲೆಗಳ ತೀರ್ಪುಗಳು ಕಳೆದ ಗುರುವಾರ ಹೊರಬಿದ್ದಿದ್ದು, ಮೇಜಿಸ್ಟ್ರೇಟರು ಚಿತ್ರಿಗಿಯ ಅಂಗಡಿಕಾರರಿಗೆ ನಿರ್ದೋಷಿಗಳೆಂದು ಬಿಟ್ಟುಕೊಟ್ಟು, ನೆಲ್ಲಿಕೇರಿಯ ಅಂಗಡಿಕಾರರಿಗೆ ರೂ ೫ ದಂಡ ವಿಧಿಸಿದ್ದಾರೆ. ಹಿಂದೆ ಮುದ್ರೆ ಹಾಕಿದ (ಅಂಗಡಿಯೊಳಗಿನ) ತೂಕಳತೆಗಳ ಅವಧಿ ಮುಗಿದಾಗ್ಯೂ, ಪುನಃ ಮುದ್ರೆಯೊತ್ತಿಕೊಂಡು ಹೋಗಲು ನಾವು ನೋಟೀಸು ಕೊಟ್ಟು ತಿಳಿಸಿದಾಗ್ಯೂ ಆರೋಪಿಯು ತನ್ನ ತೂಕಳತೆಗಳನ್ನು ತಪಾಸಣೆಗೆ ತರಲಿಲ್ಲವಾದ್ದರಿಂದ ನಾವು ಅಂಗಡಿಗೆ ಹೋಗಿ ಅಲ್ಲಿದ್ದ ತೂಕಳತೆಗಳನ್ನು ಜಪ್ತ ಮಾಡಿ ತಂದಿರುತ್ತೇವೆ; ಆರೋಪಿಯು ಮುದ್ರೆಯಿಲ್ಲದ (ಹಳೇ ಮುದ್ರೆಯ ಅವಧಿ ಮುಗಿದದ್ದರಿಂದ ಅದು ಇದ್ದೂ ಇಲ್ಲದಂತೆಯೇ ಸರಿ) ತೂಕಳತೆಗಳನ್ನು ಅಂಗಡಿಯ ಉಪಯೋಗಕ್ಕಾಗಿ ಇಟ್ಟುಕೊಂಡಿದ್ದನು; ಇದೇ ಚಿತ್ರಿಗಿ ಅಂಗಡಿಕಾರನ ಅಪರಾಧವೆಂದು ಫಿರ್ಯಾದಿಯ ದೂರಿತ್ತು. ತಪಾಸಣೆ ಅಧಿಕಾರಿಗಳು ಜಪ್ತಿಗೆ ಬರುವ ಮುಂಚೆ ಕೆಲವು ಕಾಲ ತನ್ನ ಅಂಗಡಿ ಮುಚ್ಚಿತ್ತೆಂತಲೂ, ಯಾತ್ರೆಗೆ ಹೋದ ತಾನು ಊರಿಗೆ ಬಂದು ಅಂಗಡಿ ತೆರೆದು ತೂಕಳತೆಗಳನ್ನು ತಪಾಸಣೆಗೆ ಒಯ್ಯಬೇಕೆಂದು ಒಂದು ಬುಟ್ಟಿಯಲ್ಲಿ ಹಾಕಿಟ್ಟಾಗ ಅವರು ಬಂದು ಜಪ್ತಿ ಮಾಡಿದರೆಂತಲೂ ಆರೋಪಿಯ ಪ್ರತಿಪಾದನೆಯಾಯಿತು. ಮೆಜಿಸ್ಟ್ರೇಟರು ಆರೋಪಿಯ ಹೇಳಿಕೆಯನ್ನು ನಂಬಿ ಅವನಿಗೆ ಬಿಟ್ಟುಕೊಟ್ಟರು. ನೆಲ್ಲಿಕೇರಿಯ ವರ್ತಕರು ೧೯೪೧ನೇ ಇಸವಿಯ ಏಪ್ರಿಲ್ ತಿಂಗಳಲ್ಲಿ ತಮ್ಮ ಕಂಟಕ್ಕೆ ಮುದ್ರೆ ಹಾಕಿಕೊಂಡಿದ್ದರು. ಆದರೂ ಜೂನ ತಿಂಗಳಲ್ಲಿ ತೂಕಳತೆಗಳ ತಪಾಸಕರು ಒಂದು ದಿನ ಅವರ ಅಂಗಡಿಗೆ ಹೋಗಿ ಕಂಟ ತಪಾಸಣೆ ಮಾಡಿದರಂತೆ. ಆಗ ಆ ಕಂಟ ಸರಿಯಾಗಿ ಕೆಲಸ ಕೊಡುವದಿಲ್ಲೆಂತಲೂ ನಿಯಮಗಳಂತೆ ಉಪೇಕ್ಷಿಸಬಹುದಾದ ಫೇರಗಿಂತ ಹೆಚ್ಚಿಗೆ ಫೇರು ತೋರುತ್ತದೆಂತಲೂ ಅಧಿಕಾರಿಗಳ ಅಭಿಪ್ರಾಯವಾಯಿತು! ಆ ಫೇರು ಎಷ್ಟೆಂಬುದು ಮಾತ್ರ ಅವರಿಗೆ ಫಿರ್ಯಾದಿಯಲ್ಲಿ ಸಾಕ್ಷಿ ಹೇಳುವಾಗ ನೆನಪಿರಲಿಲ್ಲ! ಅದನ್ನು ಅವರು ನಮೂದಿಸಿಕೊಂಡದ್ದೂ ಇಲ್ಲ! ಮತ್ತು ಹಾಗೆ ವಿಶೇಷ ಫೇರು ಇತ್ತು ಎಂಬುದಕ್ಕೆ ಈ ಅಧಿಕಾರಿಗಳ ಹಟ್ಟದ ವಿನಹ ಬೇರೆ ಸಾಕ್ಷಿ ಪುರಾವೆಯೂ ಇಲ್ಲ! ಆ ಕಂಟವನ್ನು ದುರುಸ್ತ ಮಾಡಿಸಿ ತಮಗೆ ಆ ಬಗ್ಗೆ ೪ ದಿನಗಳೊಳಗೆ ವರದಿ ಕೊಡಬೇಕೆಂದು ಅಧಿಕಾರಿಗಳು ಆ ಅಂಗಡಿಕಾರರಿಗೆ ಅಪ್ಪಣೆ ಕೊಟ್ಟರು. ಅಂಗಡಿಕಾರರು ಅದರಂತೆ ಅದನ್ನು ಒಬ್ಬ ಕಮ್ಮಾರತನದ ಕೆಲಸ ಮಾಡುವ ಆಚಾರಿಯ ಕಡೆಯಿಂದ ಕಂಟವನ್ನು ದುರುಸ್ತ ಮಾಡಿಸಿದ್ದರಂತೆ. ಆದರೂ ಇನ್ನೊಂದು ದಿನ ಅಧಿಕಾರಿಗಳು ಆ ಅಂಗಡಿಗೆ ಹೋಗಿ ಕಂಟ ಸರಿಯಾಗಿಲ್ಲೆಂದು ಹೇಳಿ ಅದರ ಮೇಲಿನ ಮುದ್ರೆಯನ್ನು ಕಿತ್ತುಕೊಂಡು ಹೋದರು! ಇದಾದ ಎರಡು ದಿನಗಳ ತರುವಾಯ ಅವರು ತಿರುಗಿ ಬಂದು ಆ ಕಂಟವನ್ನು ಜಪ್ತ ಮಾಡಿಕೊಂಡು ಹೋದರು; ಮತ್ತು ಆರೋಪಿಯು ಮುದ್ರೆ ರದ್ದಾದ ಕಂಟವನ್ನು ಅಂಗಡಿಯಲ್ಲಿಟ್ಟುಕೊಂಡು ಉಪಯೋಗಿಸಿದನು ಎಂದು ದೂರು ದಾಖಲಪಡಿಸಿದರು. ತಾನು ಕಂಟವನ್ನು ದುರುಸ್ತಗೊಳಿಸಿದಾಗ್ಯೂ ತಪಾಸಣೆ ಅಧಿಕಾರಿಗಳು ಒಮ್ಮೆಲೇ ಮುದ್ರೆ ರದ್ದುಪಡಿಸಿದ್ದರಿಂದ ಏನು ಮಾಡಬೇಕೆಂದು ತನಗೆ ಸೂಚಿಸಲಿಲ್ಲವಾಗಿಯೂ, ತಾನು ಆ ಕಂಟ ಉಪಯೋಗಿಸಲಿಲ್ಲೆಂದೂ ಆರೋಪಿಯ ಅಂಬೋಣವಾಯಿತು. ಆದರೂ ಮೆಜಿಸ್ಟ್ರೇಟರು ಆರೋಪಿಗೆ ರೂ ೫ ದಂಡ ವಿಧಿಸಿದ್ದಾರೆಂದು ತಿಳಿಯುತ್ತದೆ.

ಕಾಂಗ್ರೆಸ ಭಕ್ತರೊಬ್ಬರು ಬರೆಯುತ್ತಾರೆ— ಕೆಲವು ದಿನಗಳ ಹಿಂದೆ ಅ. ಭಾ. ಕಾಂ. ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಸಾದಿಕ ಅಲ್ಲಿಯವರು ಕರ್ನಾಟಕದಲ್ಲಿ ಸಂಚರಿಸಿ ಹೋದರು. ಅವರು ಈ ಜಿಲ್ಲೆಗೆ ಬರಲಿಲ್ಲ. ಇದೇ ಬರುವ ತಾ ೨೧—೯—೪೧ ರಿಂದ ತಾ ೨೩ ೯ ೪೧ರ ತನಕ ರಾಷ್ಟ್ರೀಯ ಸಭೆಯ ಗೌರವ ಕಾರ್ಯದರ್ಶಿಗಳಾದ ಆಚಾರ್ಯ ಕೃಪಾಲಾನಿಯವರು ಕರ್ನಾಟಕದಲ್ಲಿ ಸಂಚರಿಸುವವರಿದ್ದಾರೆ. ಆದರೆ ಅವರ ಸಂಚಾರದ ಕಾರ್ಯಕ್ರಮದಲ್ಲಿ ನಮ್ಮ ಉತ್ತರ ಕನ್ನಡ ಜಿಲ್ಲೆಯ ಹೆಸರೇ ಕಾಣುವದಿಲ್ಲ! ನಮ್ಮ ಜಿಲ್ಲೆ ಕರ್ನಾಟಕದಲ್ಲಿ ಸೇರಿರುವದಿಲ್ಲವೇ? ಸೇರಿರುತ್ತಿದ್ದರೆ ಬಂದ ಬಂದ ಮಹಾನುಭಾವರಿಗೆ ಈ ಜಿಲ್ಲೆಯ ಸಂದರ್ಶನದ ವ್ಯವಸ್ಥೆಯನ್ನು ಪ್ರಾಂತಿಕ ಕಾಂ. ಸಮಿತಿಯವರು ಯಾಕೆ ಮಾಡಿಕೊಡುವದಿಲ್ಲ? ಹೋರಾಟದ ಪ್ರಶ್ನೆ ಬಂದಾಗ ಮಾತ್ರ ಅವರಿಗೆ ವೀರ ಕಾರವಾರಿಗಳ ನೆನಪಾಗುತ್ತಿರಬೇಕು! ನಮ್ಮ ಜಿಲ್ಲೆಯ ಕಾಂಗ್ರೆಸ ಕೆಲಸಗಾರರೆಲ್ಲ ತುರಂಗಕ್ಕೆ ಹೋಗಿರುವದರಿಂದಲೂ ಆಚಾರ್ಯರ ಸಂಚಾರದ ವ್ಯವಸ್ಥೆ ಸರಿಯಾಗಿ ಮಾಡುವವರು ಜಿಲ್ಲೆಯಲ್ಲಿ ಇಲ್ಲಾದ್ದರಿಂದಲೂ ನಮ್ಮ ಜಿಲ್ಲೆಯಲ್ಲಿ ಆಚಾರ್ಯರ ಸಂಚಾರದ ಕಾರ್ಯಕ್ರಮವಿಟ್ಟಿಲ್ಲೆಂದು ಹೇಳುತ್ತಾರಾಗಿ ಒಂದು ವಾರ್ತೆ. ಈ ಕುಂಟ ನೆವ ಹೇಳುವವರಿಗೆ ಬುದ್ಧಿಯುಂಟೋ ಇಲ್ಲೋ ದೇವರೇ ಬಲ್ಲ! ಎಲ್ಲ ಕಾಂಗ್ರೆಸ ಕೆಲಸಗಾರರು ತುರಂಗಕ್ಕೆ ಹೋಗಿರುವರೆಂದು ಅವರಿಗೆ ಯಾರು ಹೇಳಿದರೋ ನಾನೊಲ್ಲೆ! ಆಚಾರ್ಯರ ಸ್ವಾಗತ-ಸತ್ಕಾರ ಮಾಡಲು ಹಾಗೂ ಮರ್ಯಾದೆಯಿಂದ ಅವರಿಗೆ ಬೀಳ್ಕೊಡಲು ಸಮರ್ಥ ಮತ್ತು ಉತ್ಸಾಹಿ ಕಾಂಗ್ರೆಸ ಅಭಿಮಾನಿಗಳು ಈ ಜಿಲ್ಲೆಯಲ್ಲಿಲ್ಲೆಂದು ಪ್ರಾಂತಿಕ ಕಮೀಟಿಯವರ ಅಭಿಪ್ರಾಯವೇನು? ಹಾಗಿದ್ದರೆ ಆ ಅಭಿಪ್ರಾಯ ಪೂರ್ಣ ತಪ್ಪಿರುವದೆಂದು ಸಮಸ್ತ ಕನ್ನಡಿಗರ ಪರವಾಗಿ ನಾನು ಅವರಿಗೆ ತಿಳಿಸಬಯಸುತ್ತೇನೆ. ಧಾರವಾಡ, ಬೆಳಗಾಂವ, ಬಳ್ಳಾರಿ ಜಿಲ್ಲೆಗಳಲ್ಲಿದ್ದಕ್ಕಿಂತ ಹೆಚ್ಚು ಕಾರ್ಯಕ್ಷಮ ಕಾಂಗ್ರೆಸ ಅಭಿಮಾನಿಗಳು ಈ ಜಿಲ್ಲೆಯಲ್ಲಿದ್ದಾರೆಂದು ಅವರು ಲಕ್ಷದಲ್ಲಿಡಲಿ ಇತ್ಯಾದಿ.

ಹೆಗಡೆ ಪೈಕಿ ಮೇಲಿನಕೇರಿ ಕನ್ನಡ ಶಾಲೆಯಲ್ಲಿ ಇತ್ತ ೧೦ ವರ್ಷಗಳಿಂದ ಶಿಕ್ಷಕರಾಗಿದ್ದ ರಾ| ಮುಕುಂದ ಶ್ರೀನಿವಾಸ ಕಾನಭಾಗರು ಕಳೆದ ತಾ. ೧೭ನೇಗೆ ಸೇವಾನಿವೃತ್ತರಾದರು. ಊರ ಜನರು ಅಂದು ಶಾಲಾ ಬೋರ್ಡಿನ ಸದಸ್ಯ ರಾ| ಹೆಗಡೆಕಟ್ಟೆಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ರಾ| ಕಾನಭಾಗರಿಗೆ ಪಾನ-ಸುಪಾರಿ ಕೊಟ್ಟರು. ರಾ| ಕಾನಭಾಗರೂ ಶಾಲೆಯ ಬಡ ಹುಡುಗರಿಗೆ ಪಾಟಿ-ಪುಸ್ತಕಗಳನ್ನು ಹಂಚಿದರು.

ನಾಡುಮಾಸ್ಕೇರಿಯ ಗಾಂವಠಿ ಶಾಲೆಯಲ್ಲಿ ತಾ ೨೮—೯—೪೧ನೇಗೆ ಶಾರದಾ ಪೂಜೆ ಸಮಾರಂಭ ನಡೆಯುವದಾಗಿಯೂ ಎಲ್ಲ ವಿದ್ಯಾಭಿಮಾನಿಗಳು ಈ ಸಮಾರಂಭಕ್ಕೆ ಬರಬೇಕಾಗಿಯೂ ಶಾಲಾ ಮಂಡಳದ ಕಾರ್ಯದರ್ಶಿಗಳು ಬಿನ್ನವಿಸುತ್ತಾರೆ.

ತಾ ೧೧—೮—೧೯೪೧ರ "ವೃತ್ತ"ದಲ್ಲಿ ಕೂಜಳ್ಳಿ ಗ್ರಾಮ ಪಂಚಾಯತಿಯ ಸ್ತ್ರೀ-ಸದಸ್ಯಳಾದ ಮುಕ್ತಬಾಯಿ ರುದ್ರಿಗ್ಸ ಎಂಬವಳ ಮನೆಯಲ್ಲಿ ಸರಾಯಿ ಸಿಕ್ಕಿತೆಂಬ ಸುದ್ದಿ ಪ್ರಕಟವಾಗಿದೆಯಷ್ಟೇ. ಮುಕ್ತಬಾಯಿಯು ಆ ಬಗ್ಗೆ ಬರೆಯುವದೇನಂದರೆ— ನನ್ನ ಮನೆಯಲ್ಲಿ ಝಡ್ತಿಯಾಗಿ ಹೊರ ಮಾಡಿನಲ್ಲಿ ಒಂದು ಬಾಟಲಿ ಸಿಕ್ಕಿದ್ದು ನಿಜ. ಅದನ್ನು ನನ್ನ ದ್ವೇಷಿಕರು ನಾನಿಲ್ಲದಿದ್ದಾಗ ತಂದಿಟ್ಟು, ಅಬಕಾರಿಯವರನ್ನು ಕರೆತಂದಿದ್ದರು. ಅಬಕಾರಿ ಜನರು ಬಂದಾಗ ನಾನು ಮನೆಯಲ್ಲಿದ್ದಿಲ್ಲ. ಸಿಕ್ಕಿದ ಬಾಟಲಿಯಲ್ಲಿ ಏನಿತ್ತೋ ಏನೋ ನಾನರಿಯೆ! ನನ್ನ ಮೇಲೆ ಇನ್ನೂ ಖಟ್ಲೆಯಾಗಿರುವದಿಲ್ಲ. ನನ್ನ ಹೆಸರು ಕೆಡಿಸಬೇಕೆಂತಲೇ ಕೂಜಳ್ಳಿಯ ಸುದ್ದಿಗಾರರು ನನ್ನ ವಿರುದ್ಧ ಸುಳ್ಳು ಸುದ್ದಿ ಕೊಟ್ಟಿರುತ್ತಾರೆ. ಇತ್ಯಾದಿ.

ಹೊನ್ನಾವರ— ಮಳೆ ಬೀಳುತ್ತಿದೆ. ಅಕ್ಕಿ ದರ ಈಗ ಮಂದಿಯುಂಟು.

ಹೊನ್ನಾವರ ಅರ್ಬನ ಸಹಕಾರಿ ಬೇಂಕಿನ ಮಹಾಸಭೆ ಮುಂದಿನ ರವಿವಾರ ತಾ. ೨೮ನೇಗೆ ಜರುಗಲಿದೆ. ೧೯೪೦-೪೧ನೇ ವರ್ಷದ ಬೇಂಕಿನ ವರದಿಯು ಮೊನ್ನೆ ಪ್ರಕಟವಾಗಿದೆ. ವರದಿಯ ವರುಷದಲ್ಲಿ ಬೇಂಕಿಗೆ ರೂ. ೨೬೪೭ ಲಾಭವಾಗಿರುವದಂತೆ. ಹಿಂದಿನ ವರುಷಗಳ ಲಾಭದ ಶಿಲ್ಕು ರೂ ೧೫೦೦ ಈ ಲಾಭದಲ್ಲಿ ಸೇರಿಸಿ ಅಂತು ಲಾಭವ

ದಿ ಬೋಂಬೆ ಲ್ಯಾಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್,

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯುಳ್ಳವು ಇವೆ. ಕಂಪನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents-
D K. Nayak Bros.
K. N Nayak.
Honavar Agent.-
R. V. Prabhu

K. PadmanabhaRao & Sons,
BELGAUM
Chief Agents for
Karnatak Districts & S M. States.

ರೂ. ೪೨೩೨೭ರೊಳಗಿಂದ ಶೇರುದಾರರಿಗೆ ನೂರಕ್ಕೆ ೪ರಂತೆ ಲಾಭ ಹಂಚಬಹುದಾಗಿಯೂ, ಆಪನ್ನಿಧಿ, ಇಮಾರತು-ನಿಧಿ ಮುಂತಾದ ಬೇರೆ ಬೇರೆ ನಿಧಿಗಳಿಗೆ ರೂ. ೩೪೦೦ ಹಂಚಿ ಹಾಕಬಹುದಾಗಿಯೂ ಕಾರ್ಯವಾಹಕರು ಶಿಫಾರಸು ಮಾಡಿದ್ದಾರೆ. ಹೊಸ ವರ್ಷದ ಕಾರ್ಯವಾಹಕ ಮಂಡಳದ ೯ ಸದಸ್ಯಸ್ಥಾನಗಳಿಗೆ ಒಂಭತ್ತೇ ಮಂದಿ ಉಮೇದುವಾರರು-ಪತ್ರ ಕೊಟ್ಟಿದ್ದರಿಂದಲೂ ಅವರೆಲ್ಲರೂ ಅವಿರೋಧ ಆರಿಸಿ ಬಂದಿದ್ದಾರೆಂದೂ ಚಾಲಕರು ತಿಳಿಸುತ್ತಾರೆ ಈ ಟಾಚಣಿಯು ನೋಟೀಸು ಬೇಂಕಿನ ಕಚೇರಿಯ ಗೋಡೆಗೆ ಮಾತ್ರ ಅಂಟಿಸಿತ್ತು. ಅದು ಎಷ್ಟು ಜನರ ಕಣ್ಣಿಗೆ ಬಿದ್ದಿರುವದೋ ಏನೋ! ಬರುವ ಮಹಾಸಭೆಯಲ್ಲಿ ಹೊಸದೊಂದು ಉಪನಿಯಮ ವಿಚಾರಕ್ಕಾಗಿ ಬರುವದು. ಆ ನಿಯಮ ಮಂಜೂರಾದಲ್ಲಿ ಸಾಲಗಾರರ ಕಡೆಯಿಂದ ಕರಾರಿಗಿಂತ ಕಡಿಮೆ ಬಡ್ಡಿ ದರದಿಂದ ಬಡ್ಡಿ ವಸೂಲ ಮಾಡಲಿಕ್ಕೂ ಸಾಲಗಾರರಿಗೆ ಕೆಲವೊಂದು ಸವಲತ್ತು ಕೊಡಲಿಕ್ಕೂ ಬರುವಂತುಂಟು. ಈ ನಿಯಮ ಮಂಜೂರ ಮಾಡಿಕೊಂಡಾದರೂ ಬೇಂಕಿನ ಚಾಲಕರು ಸಾಲಗಾರರಿಗೆ ಸಹಾನುಭೂತಿಯಿಂದ ನಡಿಸುತ್ತಾರೋ ನೋಡಬೇಕು ಹೊಸ ಅಧ್ಯಕ್ಷರು ಬೇಂಕಿನ ಆಡಳಿತೆಯಲ್ಲಿ ಹೊಸ ಶಿಸ್ತು ಮತ್ತು ಸಹೃದಯ ಧೋರಣೆಗಳನ್ನು ಅನುಸರಿಸಲಿ ಅಂದರೆ ಮಾತ್ರ ಬೇಂಕಿನ ಪಾಲಿಗಾರರ ರಕ್ಷಣೆಯಾಗಿ ಬೇಂಕಿನ ಕಾರಭಾರವೂ ಸುಧಾರಿಸುವದು.

ಇತ್ತ ೧-೧॥ ವರ್ಷಗಳಿಂದ ಕೊಡ್ಲ ಕೃಷ್ಣನು ಸಾಗರ ಸೆರೆಮನೆಯಿಂದ ಓಡಿಬಂದು ಈ ತಾಲೂಕಿನಲ್ಲೇ ಅಡಗಿಕೊಂಡಿದ್ದನು ಪೋಲೀಸರು ಎಷ್ಟು ಶೋಧ ನಡಿಸಿದಾಗ್ಯೂ ಅವನ ಪತ್ತೆ ಹಿಡಿಯಲಾಗಲಿಲ್ಲ! ಇತ್ತೀಚಿಗೆ ಈ ತಾಲೂಕಿನಲ್ಲಿ ಬೇರೆ ಬೇರೆ ಕಡೆಗಾದ ಕಳವು, ದರೋಡೆಗಳಲ್ಲಿ ಕೊಡ್ಲ ಕೃಷ್ಣನ ಕೈವಾಡವಿರಬೇಕೆಂದು ತಜ್ಞರ ಊಹೆಯುಂಟು. ಕಳೆದ ೮-೧೦ ದಿನಗಳಲ್ಲಿ ಇಡಗುಂಜಿಯಲ್ಲೂ ಅಡುಕಳ ಗ್ರಾಮದಲ್ಲೂ ಮಧ್ಯರಾತ್ರಿಯ ಸುಮಾರಿಗೆ ದರೋಡೆಗಳಾಗಿವೆ, ಎರಡೂ ದರೋಡೆಗಳಲ್ಲಿ ಬಹಳ ಸಾಮ್ಯವುಂಟಂತೆ, ಆದ್ದರಿಂದ ಆವೆರಡೂ ಒಂದೇ ಕೂಟದ ಕಳ್ಳರ ಕಡೆಯಿಂದ ಆದವು ಇರಬೇಕೆಂದು ಬಲವಾದ ಸಂಶಯವಿರುತ್ತದೆ. ಮತ್ತು ಈ ಕೂಟ ಬೇರೆ ಯಾವದೇ ಕೂಟವಲ್ಲದೆ ಕೊಡ್ಲ ಕೃಷ್ಣನ ತಂಡ ಇರಬೇಕೆಂದು ಇಲ್ಲಿಯ ಫೌಜದಾರ ರಾ॥ ನಲವಡೆಯವರು ದೃಢವಾಗಿ ಭಾವಿಸಿ ಮತ್ತು ಅತಿ ಪ್ರಯತ್ನ ಮಾಡಿ ಕೊಡ್ಲ ಕೃಷ್ಣನ ಬರ-ಹೋಗುಗಳ ಅಂತರಂಗ ಮಾಹಿತಿ ದೊರಕಿಸಿ, ಕಳೆದ ಗುರುವಾರ ತಾ. ೧೨ನೇ ರಾತ್ರಿ ೨-೩ ಪೋಲೀಸರಿಗೂ ಬೇರೆ ಕೆಲವು ಜನರಿಗೂ ತಕ್ಕೊಂಡು ಹರುಕಾಳಿಯಿಂದ ಹೊಸಪಟ್ಟಣಕ್ಕೆ ಬರುವ ದಾರಿಯಲ್ಲಿ ಕಾಯುಕೊಂಡು ಕೂತರು ಅಪೇಕ್ಷೆಯಂತೆ ಕೆಲ ಹೊತ್ತಿನಲ್ಲಿ ಕೃಷ್ಣನೂ ಅವನ ಸಂಗಡಿಗರೂ ಆ ದಾರಿಯಿಂದ ಬರುವಾಗ ಸಿಕ್ಕರು! ಪೋಲೀಸರು ಆಗ ಕೃಷ್ಣನಿಗೆ ಗಟ್ಟಿಯಾಗಿ ಅಪ್ಪಿಹಾಕಿ ಹಿಡಿದರು ಕೃಷ್ಣನು ಬಹಳ ಒದ್ದಾಡಿದನಂತೆ! ಆದರೂ ರಾ॥ ನಲವಡೆಯವರು ಅವನಿಗೆ ಬಿಡಲಿಲ್ಲ. ಕೃಷ್ಣನ ಜೊತೆಗಾರರು ಮಾತ್ರ ಓಡಿಹೋಗಿ ಗುಡ್ಡದ ಮೇಲಿಂದ ಪೋಲೀಸ ಪಾರ್ಟಿಯ ಮೇಲೆ ಗುಂಡುಗಲ್ಲುಗಳನ್ನು ಒಗೆದರಂತೆ. ಆದರಿಂದ ಫೌಜದಾರರಿಗೂ ಪೋಲೀಸರಿಗೂ ಅವರ ಜೊತೆಗಾರರಿಗೂ ಕೆಲವು ಗಾಯಗಳಾಗಿವೆ. ಕೃಷ್ಣನು ಈಗ ಇಲ್ಲಿಯ ತುರಂಗದಲ್ಲಿದ್ದಾನೆ. ಅವನ ವಿರುದ್ಧ ಹಲವು ಖಟ್ಲೆಗಳಾಗಲಿವೆಯಂತೆ, ರಾ॥ ನಲವಡೆಯವರು ಪ್ರಯತ್ನಪಟ್ಟು ಕೃಷ್ಣನ ಕೂಟದವರಿಗೂ ಹಿಡಿಯಬೇಕಾಗಿ ಜನರ ಅಪೇಕ್ಷೆಯುಂಟು.

ಇಲ್ಲಿಯ ಶಾಲಾ ಶಿಪಾಯಿಯ ವಿರುದ್ಧ ಕಾರವಾರದಲ್ಲಿ ಖಟ್ಲೆ ನಡೆದಿದೆ. ಕಸಬಾ ಕನ್ನಡ ಶಾಲೆಯ ಮುಖ್ಯಾಧ್ಯಾಪಕ ರಾ। ಬೇಂಗಾ ನಾಯ್ಕರು ಅದರ ಫಿರ್ಯಾದಿಗಳು. ಅವರು ಅಧಿಕಾರಿಗಳೆಂಬ ನಾತೆಯಿಂದ ಫಿರ್ಯಾದಿಗಳಿರುವ ಮೂಲಕ ಖಟ್ಲೆಯ ವಿಚಾರ ನಡೆದ ಪ್ರತಿಯೊಂದು ದಿನ ಅವರು ಕೋರ್ಟಿನಲ್ಲಿ ಹಾಜರಿರಬೇಕೆಂದು ನಿಯಮವಿರುವದಿಲ್ಲಂತೆ. ಆದರೂ ರಾ। ನಾಯ್ಕರು ಖಟ್ಲೆ ವಿಚಾರಕ್ಕಿದ್ದ ಪ್ರತಿಯೊಂದು ದಿನಕ್ಕೂ ಕಾರವಾರ ಯಾತ್ರೆ ಮಾಡುತ್ತಿದ್ದಾರೆ! ಇದರ ಬೋಧ್ಯವೇನೆಂಬದು ತಿಳಿಯುವದಿಲ್ಲ! ರಾ। ನಾಯ್ಕರು ಹೀಗೆ ಕಾರವಾರ ಯಾತ್ರೆಯಲ್ಲೇ ದಿನ ಕಳೆದು ಶಾಲೆಯ ಕೆಲಸದ ಕಡೆ ದುರ್ಲಕ್ಷ ಮಾಡಬಹುದೋ ಏನೆಂಬದರ ಆಲೋಚನೆಯನ್ನು ಮೇಲಧಿಕಾರಿಗಳು ಮಾಡಬೇಕಾಗಿ ಸೂಚನೆಯಿದೆ.

ಕರ್ಕಿ ಗ್ರಾಮದ ಕೋಳಗದ್ದೆಯ ಶ್ರೀ ವಿನಾಯಕ, ಕೋದಂಡೇಶ್ವರ ದೇವರಿಗೆ ಪ್ರತಿ ವರ್ಷ ರೂ. ೭೫ರಷ್ಟು ತಸ್ತೀಕು ಸಿಗುತ್ತದೆ. ಈ ಸಿವಾಯ ರೂ. ೭೫-೮೦ರಷ್ಟು ತೀರ್ವೆ ತೆರುವ ಭೂಮಿಯುಂಟು. ಆದರೂ ದೇವತಾ ಸೇವೆಗಳು ಒಂದೊಂದೇ ಲೋಪವಾಗುತ್ತ ಬಂದಿವೆಯಂತೆ! ದೇವಸ್ಥಾನ ಬಹಳ ಜೀರ್ಣವಾಗಿದ್ದು, ದೇವರನ್ನು ಕಾಣಲು ಗುಡಿಯಲ್ಲಿ ಹೋಗಬೇಕಾದರೆ ಬಹಳ ಹೆದರಿಕೆಯಾಗುತ್ತದೆ! ಶ್ರೀದೇವರ ಮೊಕ್ತೇಸರರು ತಮ್ಮೊಳಗೇ ಜಗಳಾಡುತ್ತಿದ್ದಾರೆ. ಜಮಾ-ಖರ್ಚಿನ ಲೆಕ್ಕವನ್ನೂ ಇಡುವದಿಲ್ಲ, ದೇವಾಲಯ ಕಮಿಟಿಯವರು ಇತ್ತ ಗಮನ ಕೊಟ್ಟು ಏನಾದರೊಂದು ಸುವ್ಯವಸ್ಥೆ ಮಾಡಿ ತರಬೇಕು.

ಹೇರಂಗಡಿ— (ತಾ ೧೭-೯-೪೧) ನೆರೆ ಹಾವಳಿಗೆ ಈಡಾದ ಭೂಮಿಗಳನ್ನೂ ಹೊಲಗಳನ್ನೂ ನೋಡಲು ನೊನ್ನೆ ಹೊನ್ನಾವರದ ಮಾಮಲೇದಾರರಾದ ರಾ। ಹಿರೇಮಠದವರೂ ಗ್ರಾಮೋದ್ಧಾರ ಅಧಿಕಾರಿಗಳಾದ ರಾ। ಚಂದೇಶ್ವರರೂ ಬಂದಿದ್ದರು. ಉಸುಬು ಕೂಡಿ ಹಾಳಾದ ಹೊಲಗಳೊಳಗಿನ ಉಸುಬು ತೆಗೆಯಲಿಕ್ಕೆ ಸರಕಾರದಿಂದ ನಿಬಡ್ಡಿಯಿಂದ ತಗಾವಿ ಕೊಡಿಸುತ್ತೇವೆಂತಲೂ, ಬೆಳೆ ಹಾಳಾದ ಭೂಮಿಗಳ ತೀರ್ವೆ ಸೂಟ ಬಿಡಿಸುತ್ತೇವೆಂತಲೂ ತಗಾವಿ ಕೊಡಿಸುತ್ತೇವೆಂತಲೂ ಅವರು ತಿಳಿಸಿದ್ದಾರೆ.

ಅಂದೇ ಮಧ್ಯಾಹ್ನದಲ್ಲಿ ಊರ ಜನರ ಸಭೆಯಾಗಿ ಹೇರಂಗಡಿ, ಅಪ್ಸರ ಮತ್ತು ಉಪ್ಪೋಣಿ ಈ ಮೂರು ಗ್ರಾಮಗಳಿಗೆ ಕೂಡಿ ಒಂದು ಗ್ರಾಮ ಸುಧಾರಣಾ ಕಮಿಟಿ ಸ್ಥಾಪನೆಯಾಯಿತು ಡಾ॥ ಪದ್ಮನಾಭಯ್ಯ, ರಾ॥ ಚಂದೇಶ್ವರ ಮತ್ತು ಅಧ್ಯಕ್ಷ ರಾ॥ ಹಿರೇಮಠ ಇವರು ಆರೋಗ್ಯ ರಕ್ಷಣೆಯ ಮಹತ್ವ, ಗ್ರಾಮಸುಧಾರಣೆಯ ಮಹತ್ವ ಮತ್ತು ರೈತರು ಅನುಸರಿಸಬೇಕಾದ ಆರ್ಥಿಕೋದ್ಧಾರದ ಮಾರ್ಗ ಎಂಬೀ ವಿಷಯಗಳನ್ನು ಮನದಟ್ಟಾಗುವಂತೆ ತಿಳಿಸಿಹೇಳಿದರು.

ಮಹಿಮೆ ಮತ್ತು ಜನ್ನಕಡ್ಕಲ ಗ್ರಾಮಗಳಲ್ಲಿ ಕಾಡಾನೆಗಳು ಬಂದು ಹಾವಳಿಯನ್ನೆಬ್ಬಿಸಿವೆ ಅಧಿಕಾರಿಗಳು ಅವುಗಳ ಬೇಟೆಯ ವ್ಯವಸ್ಥೆ ಮಾಡಬೇಕು.

ಕಳೆದ ನೆರೆ-ಹಾವಳಿಯಲ್ಲಿ ಹೈಗುಂದದಲ್ಲಿ ಹೊಳೆಯದಿಗಿದ್ದ ಒಂದು ಕಟ್ಟು ಮುರಿದು ಹೋಗಿ ೮-೧೦ ಖಾತೆದಾರರ ಭೂಮಿಗಳೆಲ್ಲ ಉಸುಬಿನಿಂದ ತುಂಬಿಹೋಗಿವೆ ಅಲ್ಲಿ ಬರೀ ಉಸುಬು ತೆಗೆದು ಉಪಯೋಗವಿಲ್ಲ ಮುರಿದು ಹೋದ ಕಟ್ಟನ್ನು ಹೊಸದಾಗಿ ಹಾಕಿಸಬೇಕು ಸರಕಾರ ಸಹಾಯ ಸಿಕ್ಕಿದರೆ ಮಾತ್ರ ಇದು ಸಾಧ್ಯವಿದೆ. ಸವರಿಬಾಕೀದಾರರು ಸರಕಾರಕ್ಕೆ ಸಹಾಯದ ಬಗ್ಗೆ ವಿನಂತಿ ಮಾಡುವ ಆಲೋಚನೆಯಲ್ಲಿದ್ದಾರೆ

ಸಿರ್ಸಿ— (ತಾ ೧೯-೯-೪೧) ಶಿರ್ಸಿಯ ಶ್ರೀ ಮಹಾಗಣಪತಿ ದೇವರ ಭಜಕರಾದ ರಾ' ಭೈರಭಟ್ಟ ಕೊಡ್ಲಕೋಟೆ ಇವರು ಬರೆಯುತ್ತಾರೆ.- ಈಗ ಎರಡು ವಾರಗಳಿಂದ ಶ್ರೀ ಗಣಪತಿ ದೇವಸ್ಥಾನದ ಅರ್ಚಕರ ಮೇಲೂ ಮೊಕ್ತೇಸರರ ಮೇಲೂ "ವೃತ್ತ"ದಲ್ಲಿ ಬಂದ ಅವಾಸ್ತವ ಟೀಕೆ ನೋಡಿ ಬಹಳ ವ್ಯಸನವಾಗುತ್ತದೆ ಶ್ರೀ ದೇವರಿಗೆ ೧ ರೂ.ಯ ಪಂಚಖಾದ್ಯ ಮಾಡಿಸಿದರೆ ೮ ಆಣೆ ಕಾಣಿಕೆ ಮತ್ತು ೮ ಆಣೆ ಅರ್ಚಕರ ದಕ್ಷಿಣೆ ಕೊಡಬೇಕೆಂದು ನಿಯಮವಿದ್ದಷ್ಟು ತೀರ ಸುಳ್ಳು ೧ ರೂ ಯ ಪಂಚಖಾದ್ಯ ಮಾಡಿಸಿದರೆ ಕಾಣಿಕೆ ೨ ಆಣೆ ಮತ್ತು ದಕ್ಷಿಣೆ ೨ ಆಣೆ ಕೊಡಬೇಕೆಂದಿಷ್ಟೇ ನಿಯಮವಿದೆ ಪಂಚಖಾದ್ಯವನ್ನು ಅರ್ಚಕರೇ ಮಾಡಿಸುವದಾದರೆ ಆ ಬಗ್ಗೆ ೨ ಆಣೆ ಮಜೂರಿ ಕೊಡಬೇಕು. ಈ ದೇವರಿಗೂ ಶ್ರೀ ಶಂಕರ ದೇವರಿಗೂ ಕೂಡಿ ಬರೇ ೩೬ ರೂ. ತಸ್ತೀಕು ಸಿಗುತ್ತದೆ. ಅಷ್ಟರಿಂದ ಅರ್ಚಕರ ಸಂಸಾರ ಹೇಗೆ ಸಾಗಬೇಕು? ಎಂಬ ಆಲೋಚನೆಯಿಂದಲೇ ಮೊಕ್ತೇಸರರು ಮೇಲಿನಂತೆ ನಿಯಮ ಮಾಡಿದ್ದಾರೆ ಅದು ತಪ್ಪೋ? ದೇವರ ಭೂಮಿ ಈ ಹಿಂದೆಯೇ ಹೋಗಿದೆ ಹಿಂದಿನ ಅರ್ಚಕರು ಅದನ್ನು ತಮ್ಮ ಖಾತೆಗೆ ಹಾಕಿಸಿಕೊಂಡು ಬೇರೆಯವರಿಗೆ ಮಾರಾಟ ಮಾಡಿಬಿಟ್ಟಿದ್ದಾರೆ! ದೇವಸ್ಥಾನಗಳ ಸುಧಾರಣೆಗಾಗಿ ಹೆಣಗಾಡುವ ಹೊಸಬರು ಈ ಭೂಮಿಗಳನ್ನು ಶ್ರೀ ದೇವರಿಗೆ ತಿರುಗಿ ದೊರಕಿಸಿ ಕೊಡುವ ಪ್ರಯತ್ನ ಮಾಡಬಹುದಾಗಿ ನನ್ನ ಮತವಿದೆ. ಪಂಚಖಾದ್ಯದ ಬಗ್ಗೆ ಬಂದ ಟೀಕೆಯಲ್ಲೂ ಸ್ವಾರಸ್ಯವಿಲ್ಲ ಅರ್ಚಕರು ಕೈಯಿಂದ ಹಣ ಖರ್ಚ ಮಾಡಿ ಪಂಚಖಾದ್ಯ ಸೇವೆ ಮಾಡಬೇಕೇ; ಹಿಂದೆ ಭಜಕರು ಕೊಟ್ಟಾಗ ಹಣ ತಕ್ಕೊಳ್ಳಬೇಕು! ಹೀಗೆ ಸಾಮಾನ್ಯ ರೂಢಿಯಾಗಿದೆ! ಹೀಗೆ ಬರತಕ್ಕ ಎಷ್ಟೋ ಹಣವನ್ನು ಅರ್ಚಕರು ಬಡಿತ ಜೊತೆಗೆ ಹಾಕಬೇಕಾಗುತ್ತದೆ! ಇಷ್ಟೆಲ್ಲ ಕಷ್ಟ ಸಹಿಸಿ ಅರ್ಚಕರು ತಯಾರಿಸಿ ಕೊಡುವ ಪಂಚಖಾದ್ಯಕ್ಕೆ ಹೆಸರು ಇಡುವದು ದೇವದ್ರೋಹವೆಂದು ತಿಳಿಯುತ್ತೇನೆ. ಶ್ರೀ ಗಣಪತಿ ದೇವರ ಹಾಗೂ ಶ್ರೀ ಶಂಕರ ದೇವರ ಮೊಕ್ತೇಸರರು ಒಬ್ಬರೇ; ಭಜಕರೂ ಅದೇ ಜನರು. ಆದರೆ ಗಣಪತಿ ದೇವರಿಗೆ ಉತ್ಪನ್ನ ಹೆಚ್ಚು; ಶಂಕರ ದೇವರಿಗೆ ಉತ್ಪನ್ನ ಕಡಿಮೆ. ಇಂಥ ಪರಿಸ್ಥಿತಿಯಲ್ಲಿ ಎರಡೂ ದೇವರು ಒಂದೇ ಎಂದು ಭಾವಿಸಿ ಶ್ರೀ ಗಣಪತಿ ದೇವರ ಕೆಲವು ಹಣ ಶ್ರೀ ಶಂಕರ ದೇವರ ಬಗ್ಗಾಗಿ ವಿನಿಯೋಗಿಸಿದರೆ ತಪ್ಪೇನೆಂದು ನನಗೆ ತಿಳಿಯುವದೇ ಇಲ್ಲ! ಶ್ರೀ ದೇವರ ಹಣ ಬೇಂಕಿನಲ್ಲಿ ಮೋಕ್ತೇಸರರ ಹೆಸರಲ್ಲೇ ಇದೆ. ಬೇರೆ ಜನರ ಹೆಸರಲ್ಲಿ ಅವರೇಕೆ ಇಟ್ಟಾರು? ಇಂಥ ಕುತ್ಸಿತ ಟೀಕೆಯಿಂದ ತಮಗೆ ಪ್ರತಿಷ್ಠೆ ಸಿಗುವದೆಂದು "ವೃತ್ತ"ದ ಸುದ್ದಿಗಾರರು ತಿಳಿದಿರುವರೇನು? ಇತ್ಯಾದಿ.

ಕಾರವಾರ— (ತಾ. ೧೯-೯-೧೯೪೦) ನಗರಸಭೆಯ ಅಧ್ಯಕ್ಷಪದದ ಬಗ್ಗೆ ಡಾ॥ ಸಾ॥ ತೇಲಂಗ ಮತ್ತು ರಾ॥ ಮಾವಿನಕುರ್ವೆ ವಕೀಲ ಇವರಿಬ್ಬರಲ್ಲಿ ತುರುಸಿನ ಹೋರಾಟ ನಡೆದಿದೆ. ಮತಸಂಗ್ರಹದ ಕೆಲಸ ಭರದಿಂದ ಸಾಗಿದೆ. ಡಾ॥ ಸಾ॥ ತೇಲಂಗರ ಹಿಂದಿನ ನಿರ್ದೋಷ ಕಾರಕೀರ್ದಿಯನ್ನು ನೋಡಿ ಅವರಿಗೇ ತಿರುಗಿ ಅಧ್ಯಕ್ಷಪದ ಕೊಡಬೇಕೆಂದು ಬಹಳ ಜನರ ಮತವುಂಟು ಅಧ್ಯಕ್ಷಪದವು ಯಾರೊಬ್ಬರ ಶಾಶ್ವತ ಸೊತ್ತಾಗದೆ ಇತರರಿಗೂ ಅದು ಸಿಗಬೇಕೆಂದು ರಾ॥ ಮಾವಿನಕುರ್ವೆ ಪಕ್ಷದವರ ಅಂಬೋಣ ತಮಗೆ ಬಹುಮತ ಸಿಗುವದಾಗಿ ರಾ॥ ಮಾವಿನಕುರ್ವೆಯವರು ಆತ್ಮವಿಶ್ವಾಸ ತಳೆದಿದ್ದಾರೆ. ಕಾರವಾರದ ಪ್ರಚಂಡ ಲೋಕಮತ ರಾವಸಾಹೇಬರಿಗೆ ಅನುಕೂಲವುಂಟೆಂದು ಅವರ ಮಿತ್ರರು ನಿರ್ಧಾರದಿಂದ ಹೇಳುತ್ತಾರೆ [* ಈ ಅಧ್ಯಕ್ಷಪದದ ಪ್ರಕರಣದಲ್ಲಿ "ವೃತ್ತ"ವು ಡಾ॥ ಸಾ॥ ತೇಲಂಗರ ವಿರುದ್ಧ ಪ್ರಚಾರ ನಡಿಸಿರುವದೆಂದು ಕೆಲವರ ಆರೋಪವಿದೆಯಂತೆ. "ವೃತ್ತ"ವು ಈ ಆರೋಪವನ್ನು ಅಲ್ಲಗಳೆಯುತ್ತದೆ. ಡಾ॥ ಸಾ॥ರ ಕಾರಕೀರ್ದಿಯ ಬಗ್ಗೆ ಯಾರದೂ ಆಕ್ಷೇಪವಿಲ್ಲ ಅವರು ತಿರುಗಿ ಅಧ್ಯಕ್ಷರಾದರೆ "ವೃತ್ತ"ಕ್ಕೆ ಆನಂದವೇ ಆಗುವದು. ಆದರೂ ಅಧ್ಯಕ್ಷಪದವು ಯಾರೊಬ್ಬರ ಚಿರಕಾಲಿಕ ಇಲ್ಲವೆ ಶಾಶ್ವತ ಸೊತ್ತಾಗಬಾರದೆಂಬ ಮಾತಿಗೂ "ವೃತ್ತ"ವು ತಲೆದೂಗುತ್ತಿದೆ.-ಸಂ]

ಯಲ್ಲಾಪುರ— (ತಾ. ೧೨—೯—೧೯೪೦) ಕಳೆದ ತಾ ೪ನೇ ರಾತ್ರಿ ಕತ್ತಲೆಯಲ್ಲಿ ಶಿರಗುಪ್ಪಿಯ ಭೀಮಣ್ಣ ಎಂಬ ಹೊಲೆಯರವನು ರಾ॥ ನಾರಾಯಣ ಕುಡಾಳೇ ಇವರ ಅಂಗಡಿಯ ಬೀಗ ಮುರಿಯುತ್ತಿದ್ದಾಗ ರಾ॥ ಪಿಕಳೇ ಫೌಜದಾರರು ಬಹು ಚಾತುರ್ಯದಿಂದ ಹಿಡಿದಿದ್ದಾರೆ. ಆಗ ಭೀಮಣ್ಣನ ಕಡೆ ಬೀಗ ಮುರಿಯುವ

ತರತರದ ಸಾಧನಗಳಿದ್ದವಂತೆ. ಭೀಮಣ್ಣನು ಹಿಂದೆ ಮುಂಬಕೇರಿಯಲ್ಲಿ ಏನೋ ಒಂದು ಕಳವು ಮಾಡಿ ಫರಾರಿಯಾಗಿದ್ದನೆಂದು ಈಗ ಬೆಳಕಿಗೆ ಬಂದಿದೆ. ಭೀಮಣ್ಣನು ಈಗ ಬಲೆಯಲ್ಲಿ ಸಿಕ್ಕಿಬಿದ್ದದ್ದರಿಂದ ಇತ್ತಲಾಗಿ ಊರಲ್ಲಿ ಆಗುತ್ತಿದ್ದ ಸಣ್ಣ-ಪುಟ್ಟ ಕಳವುಗಳು ನಿಲ್ಲುವವೆಂದು ಜನರು ಹಾರೈಸುತ್ತಾರೆ.

ಕಳೆದ ತಾ. ೧೪ನೇ ದಿನ ಮಧ್ಯಾಹ್ನ ಹೊತ್ತಿನಲ್ಲಿ ಇಲ್ಲಿಯ ಕನ್ನಡ ಶಾಲೆಯಲ್ಲಿ ಯುದ್ಧನಿಧಿ ಸಭೆಯಾಯಿತು. ಅನೇಕ ಸ್ಥಾನಿಕ ಅಧಿಕಾರಿಗಳೂ ಊರ ಪ್ರಮುಖರೂ ೪-೬ ಹಳ್ಳಿಗಳ ಮುಂದಾಳುಗಳೂ ಸಭೆಗೆ ಬಂದಿದ್ದರು. ರಾ॥ ನಾರಾಯಣ ದಾದಾ ಕುಡಳೇಕರವರು ಸಭಾಪತಿಗಳಾಗಿದ್ದರು. ಮಾಮಲೇದಾರ ರಾ॥ ಬಾಪಟರವರು ಈಗ ನಡೆದಿರುವ ಘನಘೋರ ಯುದ್ಧದ ಪರಿಸ್ಥಿತಿಯನ್ನೂ, ಸರಕಾರಕ್ಕೆ ಇಂತಹ ಅಗತ್ಯಕಾಲದಲ್ಲಿ ಜನರು ಮನೋವಾಕ್ಕಾಯಗಳಿಂದ ನೆರವಾಗಬೇಕಾದ ಆವಶ್ಯಕತೆಯನ್ನೂ ತಿಳಿಸಿಹೇಳಿದರು.

ಮೇಲಿನ ಸಭೆಯು ಮುಗಿದ ತರುವಾಯ ರಾ॥ ಬಾಪಟರವರ ಅಧ್ಯಕ್ಷತೆಯಲ್ಲಿ ತಾಲೂಕ ಸುಧಾರಣಾ ಮಂಡಳದ ಸಭೆಯಾಯಿತು. ಸಭೆಯ ಪ್ರಾರಂಭಕ್ಕೆ ರಾ॥ ವಿ. ಆರ್. ಯಲ್ಲಾಪುರಕರ ಇವರು ಒಂದು ಆಕ್ಷೇಪವೆತ್ತಿ, ಈಗ ಜಿಲ್ಹಾ ಗ್ರಾಮೋದ್ಧಾರ ಮಂಡಳದ ಸ್ಥಾಪನೆಯಾಗಿರುವದರಿಂದ ತಾಲೂಕ ಸುಧಾರಣಾ ಮಂಡಳ ತಾನಾಗಿ ವಿಸರ್ಜನೆ ಹೊಂದಿರುತ್ತದಲ್ಲವೇ ಎಂದು ಪ್ರಶ್ನಿಸಿದರು. ಆ ಬಗ್ಗೆ ಸ್ವಲ್ಪ ಚರ್ಚೆಯಾಗಿ ತಾಲೂಕ ಗ್ರಾಮೋದ್ಧಾರ ಮಂಡಳಗಳ ನಿರ್ಮಾಣವಾಗುವ ತನಕ ಹಿಂದಿನ ಸುಧಾರಣಾ (improvement) ಸಂಘಗಳು ಊರ್ಜಿತವಿರುತ್ತವೆಂದು ತಿಳಿಯಬೇಕಾಗಿ ತಿಳಿಸಿ ಹೇಳಲಾಯಿತು. ಆದರೆ ಜಿಲ್ಹಾ ಗ್ರಾಮೋದ್ಧಾರ ಮಂಡಳ ಅಸ್ತಿತ್ವದಲ್ಲಿ ಬಂದು ಈಗ ಮೂರು ವರ್ಷಗಳಾದಾಗ್ಯೂ ಯಲ್ಲಾಪುರ ತಾಲೂಕಿನಲ್ಲಿ ತಾಲೂಕ ಮಂಡಳವನ್ನೇಕೆ ಸ್ಥಾಪಿಸಲಿಲ್ಲೆಂಬ ಪ್ರಶ್ನೆಗೆ ಸಮರ್ಪಕ ಉತ್ತರ ಯಾರೂ ಕೊಡಲಿಲ್ಲ! ರಾ॥ ಯಲ್ಲಾಪುರಕರರ ಆಕ್ಷೇಪದ ನಿರಸನೆಯಾದ ಮೇಲೆ ಅಧ್ಯಕ್ಷರು ಪ್ರಾಸ್ತಾವಿಕ ಭಾಷಣಮಾಡಿ, ಗ್ರಾಮೋದ್ಧಾರ ಕಾರ್ಯದ ಮಹತ್ವ ತಿಳಿಸಿಹೇಳಲು ಜಿಲ್ಹಾ ಗ್ರಾಮೋದ್ಧಾರ ಕಾರ್ಯದ ತಪಾಸಣೆ ಅಧಿಕಾರಿಗಳಾದ ರಾ॥ ವ್ಹಿ. ಎಸ್. ಹಬ್ಬುರವರಿಗೆ ತಮ್ಮ ಭಾಷಣ ಪ್ರಾರಂಭಿಸಲು ವಿನ್ನವಿಸಿದರು. ರಾ॥ ಹಬ್ಬುರವರು ಇನ್ನಿತರ ಕಡೆಗೆ ಹೇಳಿದಂತೆಯೇ ಗ್ರಾಮೋದ್ಧಾರದ ಮಹತ್ವವನ್ನೂ ಕಾರ್ಯವನ್ನೂ ಉದ್ಧಾರ ಮಾರ್ಗಗಳನ್ನೂ ತಿಳಿಸಿ ಹೇಳಿದರು. ಅವರ ಭಾಷಣದ ತಿರುಳು ಈ ಕೆಳಗಿನಂತಿತ್ತು:— ನಮ್ಮ ಜಿಲ್ಹೆ ತೀರ ಬಡ ಜಿಲ್ಹೆ. ಇಲ್ಲಿಯ ಮುಖ್ಯ ಬೆಳೆಗಳು ಅಕ್ಕಿ ಮತ್ತು ತೆಂಗಿನಕಾಯಿ. ಆದರೆ ಅವು ಕೂಡ ನಮಗೆ ಬೇಕಾಗುವಷ್ಟು ಬೆಳೆಯುವದಿಲ್ಲ! ನಾವು ನಮಗೆ ಬೇಕಾದ ಕಾಯಿಪಲ್ಲೆ ಮುಂತಾದ ಜೀನಸುಗಳನ್ನು ಪರಜಿಲ್ಹೆಗಳಿಂದ ತರಿಸಿಕೊಳ್ಳುತ್ತಿದ್ದೇವೆ. ಈ ಸ್ಥಿತಿ ಶೋಚನೀಯವಿದೆ. ನಮ್ಮಲ್ಲಿ ಇವುಗಳನ್ನು ಬೆಳೆಸಲಿಕ್ಕೆ ಬೇಕಷ್ಟು ಭೂಮಿಯಿದೆ. ಆದರೂ ನಾವು ಇವನ್ನು ಬೆಳೆಸಲಿಕ್ಕೆ ಪ್ರಯತ್ನ ಮಾಡಿಲ್ಲ! ಈಗಾದರೂ ಪ್ರಯತ್ನ ಮಾಡಿರಿ. ಮತ್ತು ಜಿಲ್ಹೆಯ ಸ್ಥಿತಿ ಸುಧಾರಿಸುವದರ ಕಡೆಗೆ ಲಕ್ಷ ಕೊಡಿರಿ. ಕೆಲವು ಕಾಲದ ಹಿಂದೆ ಲಕ್ಷಾವಧಿ ರೂಪಾಯಿಗಳ ಉಳ್ಳೇಗಡ್ಡೆ ಪರಜಿಲ್ಹೆಗಳಿಂದ ನಮ್ಮಲ್ಲಿ ಬರುತ್ತಿತ್ತು. ಈಗ ನಮ್ಮ ಪ್ರಯತ್ನದಿಂದ ನಮಗೆ ಬೇಕಷ್ಟು ಉಳ್ಳೇಗಡ್ಡೆ ಇಲ್ಲಿಯೇ ಬೆಳೆಯುತ್ತದಲ್ಲದೆ ಲಕ್ಷಾವಧಿ ರೂಪಾಯಿಗಳ ಉಳ್ಳಗಡ್ಡೆ ಪರಜಿಲ್ಹೆಗಳಿಗೆ ಹೋಗುತ್ತಿದೆ. ನಮ್ಮಲ್ಲಿ ಮಾವಿನ ಬೆಳೆ ಬೆಳಸಿ, ಹೇರಳ ಉತ್ಪನ್ನ ಪಡೆಕೊಳ್ಳಲು ಶಕ್ಯವಿದೆ. ಈ ತಾಲೂಕಿನಲ್ಲಿ ಮಾತ್ರ ಅದು ಅಷ್ಟು ಲಾಭದಾಯಕವಾಗುವಂತಿಲ್ಲ. ಆದರೂ ಜನರು ತಮ್ಮ ತಮ್ಮ ಉಪಯೋಗದ ಬಗ್ಗೆ ಮನೆಯೊಂದಕ್ಕೆ ೪-೬ ಗಿಡಗಳನ್ನಾದರೂ ಬೆಳೆಸಬಹುದು. ನಿಮ್ಮ ತಾಲೂಕಿನಲ್ಲಿ ತೆಂಗಿನಕಾಯಿ ಚನ್ನಾಗಿ ಬೆಳೆಯುತ್ತಿದೆ. ಈಗ ಅಡಿಕೆ ತೋಟಗಳಲ್ಲಿ ಸ್ವಾರಸ್ಯವಿಲ್ಲ. ಅಡಿಕೆಯ ಧಾರಣೆ ಇಳಿದದ್ದರಿಂದಲೂ ಕೊಳೆರೋಗ ಮುಂತಾದ ಬಾಧೆಗಳು ಪೀಡಿಸುತ್ತಿರುವದರಿಂದಲೂ ಅಡಿಕೆ ತೋಟಗಳಿಂದ ಪ್ರಯೋಜನ ಸಿಗಲಾರದು. ಆದ್ದರಿಂದ ಅಡಿಕೆತೋಟಗಳಲ್ಲಿ ತೆಂಗಿನ ಸಸಿಗಳನ್ನು ಹಾಕುವದೊಳಿತೆಂಬ ನಾನು ಸೂಚಿಸುತ್ತೇನೆ. ನಿಮ್ಮ ನಿಮ್ಮ ಊರಿಗೆ ಬೇಕಾದ ಕಾಯಿಪಲ್ಲೆ ನೀವೇ ಬೆಳಸಿಕೊಳ್ಳಿರಿ. ಹೆಚ್ಚಿಗೆ ಬೆಳೆದರೆ ಪೇಟೆಗೆ ಕಳಿಸಿ ಲಾಭ ಹೊಂದಿರಿ. ನಿಮ್ಮ ಮನೆಯ ಸುತ್ತಲೂ ಸ್ವಚ್ಛತೆಯಿಡಿರಿ. ಚಳಿಜ್ವರದ ದಂಗಾಮಿನಲ್ಲಿ ವಾರದಲ್ಲಿ ೩-೪ ಸಾರೆಯಾದರೂ ಕ್ವಿನೀನಗೋಳಿಗೆ ತಕ್ಕೊಳ್ಳಿರಿ. ಅದು ಕಚೇರಿಯಲ್ಲಿ ಪುಕ್ಕಟೆ ಸಿಗುತ್ತದೆ. ಹೊಲಗಳಲ್ಲಿ ಗ್ರಾಮೋದ್ಧಾರ ಅಧಿಕಾರಿಗಳು ಹೇಳುವ ಹೊಸ ಬತ್ತದ ಬೀಜ ಬಿತ್ತಿದರೆ ರೂಪಾಯಿಗೆ ೪ ಆಣೆ, ಕನಿಷ್ಠ ೨ ಆಣೆಯಾದರೂ ಹೆಚ್ಚಿಗೆ ಬೆಳೆ ಬರುವದು. ಈ ಬೀಜ ಅಗ್ಗದರದಲ್ಲಿ ಮಾರುವ ವ್ಯವಸ್ಥೆ ಮಾಡಲಾಗಿದೆ. ಗ್ರಾಮಸುಧಾರಣೆಯ ವಿಷಯ ಅತಿವಿಸ್ತೀರ್ಣವಾದದ್ದು. ಅದು ಎಂದೂ ತೀರುವಂತಿಲ್ಲ. ಆದ್ದರಿಂದ ಪ್ರತಿ ಹಳ್ಳಿಯವರು ತಮ್ಮಲ್ಲಿ ಸಂಘ ಸ್ಥಾಪಿಸಿಕೊಂಡು ಸುಧಾರಣೆಯ ಕಾರ್ಯವನ್ನು ಉತ್ತರದಿಂದ ಸಾಗಿಸಬೇಕು.

ಹೀಗೆ ರಾ॥ ಹಬ್ಬುರ ಭಾಷಣವಾದ ಮೇಲೆ ಬೇರೆ ಯಾರಾದರೂ ಮಾತಾಡುವವರಿದ್ದರೆ ಮಾತಾಡಿರಿ ಎಂದು ಅಧ್ಯಕ್ಷರು ಅಪ್ಪಣೆ ಕೊಡಲಾಗಿ, ರಾ॥ ಯಲ್ಲಾಪುರಕರರು ಎದ್ದು ಒಂದು ಉದ್ದನ್ನ ಭಾಷಣಮಾಡಿ ಗ್ರಾಮೋದ್ಧಾರ ಕಾರ್ಯಕರ್ತರ ಕಾರ್ಯ-ಪದ್ಧತಿಯನ್ನೂ ಪಕ್ಷಪಾತ ನೀತಿಯನ್ನೂ ಕಟುವಾಗಿ ಟೀಕಿಸಿದರು. ಯಲ್ಲಾಪುರ ತಾಲೂಕಿನವರ ದೂರನ್ನೂ ತಿಳಿಯಾಗಿ ತಿಳಿಸಿ ಹೇಳಿದರು. ಅವರು ನುಡಿದದ್ದೇನಂದರೆ— ರಾ॥ ಹಬ್ಬುರವರು ಹೇಳಿದ್ದು ನೀವು ಕೇಳಿರುವಿರಿ. ಆದರೆ ಆ ಬಗ್ಗೆ ನನ್ನ ಮನಸ್ಸಿನಲ್ಲಿದ್ದ ಕೆಲ ಶಂಕೆಗಳನ್ನು ಅವರ ಮುಂದಿಟ್ಟು ಅವುಗಳ ನಿರಸನ ಮಾಡಿಕೊಳ್ಳಲು ಇಚ್ಛಿಸುತ್ತೇನೆ. ರಾ॥ ಹಬ್ಬುರವರು ಹೇಳಿದ ತತ್ವಗಳಿಗೆ ನನ್ನ ಪೂರ್ಣ ಒಪ್ಪಿಗೆಯಿದೆ. ೨೬ ವರ್ಷಗಳಿಂದ ಅವರು ನಮ್ಮ ಜಿಲ್ಹೆಯಲ್ಲಿ ದುಡಿಯುತ್ತಿದ್ದಾರೆ. ಅವರು ಹೇಳುವ ಹೇರಳ ಅನುಕೂಲತೆಗಳು ನಮ್ಮಲ್ಲಿರುವಾಗ ನಾವು ನಮ್ಮ ಕಲ್ಯಾಣ ಯಾಕೆ ಮಾಡಿಕೊಳ್ಳಲಾರೆವೆಂಬದನ್ನು ಅವರು ಕಂಡುಹಿಡಿದಿರುವರೇ? ಗ್ರಾಮಸುಧಾರಣೆಯ ಬಗ್ಗೆ ಪ್ರತಿ ವರ್ಷ ಸರಕಾರದವರು ಲಕ್ಷಾವಧಿ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಆ ಮಾತನ್ನು ರಾ॥ ಹಬ್ಬುರವರು ನಮ್ಮ ಹಳ್ಳಿಗರಿಗೆ ಯಾಕೆ ಹೇಳಲಿಲ್ಲ? ಆ ಹಣದ ಪಾಲು ಅವರು ಬೇಡುವರೆಂದು ಅವರು ಬೆದರಿದರೇ? ಸರಕಾರದಿಂದ ಸಿಗುವ ಹಣ ಈ ತಾಲೂಕಿನ ಹಳ್ಳಿಗಳ ಬಗ್ಗೆ ಇರದೆ ಜಿಲ್ಹಾ ಗ್ರಾಮೋದ್ಧಾರ ಕಾರ್ಯಕರ್ತರ ಪ್ರೀತಿಯ ಹಳ್ಳಿಗಳ ಬಗ್ಗೆಷ್ಟೇ ಸಿಗುತ್ತದೆಯೋ ಹೇಗೆ? ಸರಕಾರದಿಂದ ಸಿಗುವ ಹಣವು ವಿಶೇಷವಾಗಿ ದಿನೇ ದಿನೇ ಹಾಳುಬೀಳುತ್ತಿರುವ ಯಲ್ಲಾಪುರ ತಾಲೂಕ ಇಲ್ಲವೆ ಸುಪಾ ಪೇಟೆಗಳ ಜನರ ಬಗ್ಗಾಗಿ ಎಂದು ನನ್ನ ಎಣಿಕೆ. ಆದರೆ ಸದರಿ ಕಾರ್ಯಕರ್ತರು ಸರಕಾರದ ಸದುದ್ದೇಶವನ್ನು ಮರೆಮಾಡಿ ಸಿಕ್ಕ ಎಲ್ಲ ಹಣವನ್ನು ಘಟ್ಟದ ಕೆಳಗಿನ ಸಂಪನ್ನ ಸ್ಥಿತಿಯಲ್ಲಿರುವ ಹಳ್ಳಿಗಳಲ್ಲೇ ವಿನಿಯೋಗಿಸುತ್ತಾರೆ! ಈ ವರ್ಷ ಗ್ರಾಮೋದ್ಧಾರ ಕಾರ್ಯಕ್ಕೆ ನಮ್ಮ ಜಿಲ್ಹೆಗೆ ರೂ. ೪೩೦೦೦ ಸಿಕ್ಕಿವೆ. ಅದನ್ನು ತಾಲೂಕುಗಳಿಗೆ ಹಂಚಿ ಹಾಕುವ ಕೆಲಸ ರಾ॥ ಹಬ್ಬುರವರದಂತೆ. ಗ್ರಾಮೋದ್ಧಾರ ಮಂಡಳದ ಅಂದಾಜ ಪತ್ರಿಕೆ ತಯಾರಿಸುವ ಕೆಲಸ ಅವರದೇ. ಈಗ ನಮ್ಮ ಜಿಲ್ಹೆಯ ದುರ್ದೈವದಿಂದ ಜಿಲ್ಹಾಧಿಪತಿಗಳು ಆರಾರು ತಿಂಗಳಿಗೆ ಬದಲುತ್ತಿದ್ದಾರೆ. ಅವರಿಗೆ ಜಿಲ್ಹೆಯ ಮಾಹಿತಿ ಕಡಿಮೆ. ಆದರಿಂದ ರಾ॥ ಹಬ್ಬುರವರ ಮಾತೇ ಈ ವಿಷಯದಲ್ಲಿ ಕೊನೆಯ ಮಾತಾಗುತ್ತದೆ. ರಾ॥ ಹಬ್ಬುರವರು ತಯಾರಿಸುವ ಅಂದಾಜ ಪತ್ರಿಕೆಯ ನಮೂನೆ ಈಗ ಕೇಳಿರಿ: ಇಡೀ ಜಿಲ್ಹೆಗೆ ಸಿಕ್ಕ ೪೩೦೦೦ ರೂಪಾಯಿಗಳಲ್ಲಿ ನಮ್ಮ ತಾಲೂಕಿನ ಪಾಲಿಗೆ ರಾ॥ ಹಬ್ಬುರವರು ಬರೀ ೧೫-೧೬ ನೂರು ಕೊಟ್ಟಿದ್ದಾರೆ! ೧೯೩೨ರಿಂದಲೂ ರಾ॥ ಹಬ್ಬುರವರು ಮುರೂರು-ಕಲ್ಲಬ್ಬೆ ಊರುಗಳ ಸುಧಾರಣೆ ಮಾಡುತ್ತಿದ್ದಾರೆ. ಈ ವರೆಗೆ ಆ ಹಳ್ಳಿಗಳ ಸುಧಾರಣೆಗೆ ೫೦ ಸಾವಿರ ರೂಪಾಯಿಗಳಾದರೂ ಸರಕಾರದಿಂದ ವೆಚ್ಚವಾಗಿರಬಹುದು. ಆದರೂ ಆ ಸುಧಾರಣೆ ಪೂರ್ಣವಾಗಲೊಲ್ಲದು! ಈ ವರ್ಷದ ಜಿಲ್ಹಾ ಗ್ರಾಮೋದ್ಧಾರ ಮಂಡಳದ ಅಂದಾಜ ಪತ್ರಿಕೆಯಲ್ಲಿ ಪುನಃ ಈ ಹಳ್ಳಿಗಳ ಪಾಲಿಗೆ ೬-೭ ಸಾವಿರ ರೂಪಾಯಿಗಳು ಮಂಜೂರ ಆಗಿವೆ! ಸರಕಾರದವರು ಕೊಡುವ ಹಣದ ಅರ್ಧದಷ್ಟು ಹಣ ಊರವರು ಕೂಡಿಸಿ ಕೊಡಬೇಕೆಂದು ಒಂದು ಕರಾರೇನೋ ಇದೆ. ಆದರೆ ಊರವರ ಶಕ್ತಿ ಎಷ್ಟೆಂಬದು ಮೊನ್ನೆಯೇ ಪ್ರಕಟವಾಗಿದೆ. ಜಿಲ್ಹಾಧಿಪತಿಗಳು ಯುದ್ಧನಿಧಿಗೆ [illegible] ಸಹಾಯ ಮಾಡಿರೆಂದು ಬೋಧಿಸಿದಾಗ ರೂ. ೨೫ ಕೂಡಿಸಿ ಕೊಡಬೇಕಾದರೆ ಊರ ಪ್ರಮುಖರಿಗೆ ಸಾಕುಬೇಕಾಯಿತಾಗಿ ಹೇಳುತ್ತಾರೆ! ಇಷ್ಟು ಬಡತನವುಳ್ಳ ಜನರು ಗ್ರಾಮೋದ್ಧಾರ ಕಾರ್ಯಕ್ಕೆ ಈ ವರ್ಷ ೩॥-೪ ಸಾವಿರ ರೂ. ಎಲ್ಲಿಂದ ಕೊಟ್ಟಾರು? ರಾ॥ ಹಬ್ಬುರವರು ಇದನ್ನು ವಿವರಿಸಿ ಹೇಳಬೇಕು. ಮುರೂರದಿಂದ ಕಲ್ಲಬ್ಬೆ ತನಕ ೧ ಮೈಲು ರಸ್ತೆ ಮಾಡಿಸಲು ರಾ॥ ಹಬ್ಬುರವರು ೧೦೦೦ ರೂ. ಮಂಜೂರ ಮಾಡಿಸಿಕೊಂಡಿದ್ದಾರೆ. ಅದೇ ಈ ತಾಲೂಕಿನಲ್ಲೊಂದು ಕಡೆ ಅಡವಿಯೊಳಗಿಂದ ಹಾದು ಹೋಗುವ ೧॥ ಮೈಲು ಉದ್ದ ರಸ್ತೆ ತಯಾರಿಸಲು ರೂ. ೧೦೦ ಕೊಡಮಾಡಿದ್ದಾರೆ! ರೂ. ೧೦೦ ತಕ್ಕೊಂಡು ಆ ರಸ್ತೆ ತಯಾರಿಸಿ ಕೊಡಲಿಕ್ಕೆ ರಾ॥ ಹಬ್ಬುರವರು ಸಿದ್ಧರಿರುವರೇ? ಬೇಕಷ್ಟು ಕೂಲಿಗಳು ಸಿಗುವ ಮುರೂರದಲ್ಲಿ ೧ ಮೈಲು ರಸ್ತೆಗೆ ರೂ ೧೦೦೦ ತಗಲುವವೆಂದು ಅಂದಾಜು ಮಾಡಿದ ರಾ॥ ಹಬ್ಬುರವರು ಕೂಲಿಯಾಳುಗಳು ಸಿಗದೆ, ಹುಟ್ಟಿ ಕೂಲಿ ಕೊಟ್ಟು ಕೂಲಿಯಾಳುಗಳನ್ನು ಹಿಡಿಯಬೇಕಾದ ಯಲ್ಲಾಪುರ ತಾಲೂಕಿನ ೧॥ ಮೈಲುದ್ದ ರಸ್ತೆಗೆ ರೂ. ೧೦೦ ಖರ್ಚ ಬರುವದೆಂದು ಅಂದಾಜು ಮಾಡುವ ಬಗೆಯೇನು? ಸಾವಿರಗಟ್ಟಲೆ ಹಣ ಖರ್ಚ ಮಾಡಿ ಸಾಧಾರಿಸಿದ ಮುರೂರ-ಕಲ್ಲಬ್ಬೆ ಗ್ರಾಮಗಳ ಸುಧಾರಣೆಯು ಮಟ್ಟ ಎಲ್ಲಿಗೆ ಮುಟ್ಟಿದೆ ಎಂಬದಾದರೂ ಒಂದು ರಹಸ್ಯವೇ ಸರಿ! ಹಿಂದೆ ಆ ಊರವರ ಉತ್ಪನ್ನವೇನಿತ್ತು? ಈಗ ಅವರ ಉತ್ಪನ್ನವೇನು? ಎಂದು ಕೇಳಿದರೆ ಯಾರೂ ಸಮರ್ಪಕ ಉತ್ತರ ಕೊಡುವದಿಲ್ಲ! ಮುರೂರ-ಕಲ್ಲಬ್ಬೆಗಳ ನಡುವೆ ಈಗ ರಸ್ತೆಗಳಿಲ್ಲವೆಂದು ಭಾವಿಸಬೇಡಿರಿ; ರಸ್ತೆಗಳುಂಟು. ಅವು ಸುತ್ತು ಹಾಕುವ ಉದ್ದ ರಸ್ತೆಗಳೆಂದು ಈಗ ಹೊಸ ಒಳದಾರಿ (Short-cut road) ಮಾಡುವ ಆಲೋಚನೆ ನಡೆದಿದೆ! ನಮ್ಮಲ್ಲಿ ಹಳ್ಳಿ-ಹಳ್ಳಿಗಳ ನಡುವೆ ರಸ್ತೆಗಳೇ ಇಲ್ಲ ಕಾಲುದಾರಿಗಳೂ ಇಲ್ಲ! ಜನರು ಬೆಟ್ಟದೊಳಗಿಂದ ತಿರುಗಾಡಬೇಕು! ವರ್ಷಂಪ್ರತಿ ಮಳೆಗಾಲದಲ್ಲಂತೂ ಹಳ್ಳಿಗಳ ಜನರು ದ್ವೀಪಾಂತರವಾಸದ ಸುಖವನ್ನನುಭವಿಸಬೇಕು! ರಾ॥ ಹಬ್ಬುರವರಿಗೆ ಈ ನಮ್ಮ ಪಾಡು ಗೊತ್ತಿಲ್ಲವೇ? ಗ್ರಾಮೋದ್ಧಾರ ಮಂಡಳದವರು ಈ ವರ್ಷ ಇಡೀ ಜಿಲ್ಹೆಯೊಳಗಿನ ಕೆರೆಗಳ ದುರುಸ್ತಿಗೆ ರೂ. ೫೬೪೭ ಮಂಜೂರ ಮಾಡಿದ್ದಾರೆ. ಆದರಲ್ಲಿ ರೂ. ೧೩೩೦ ಮೂರೂರ-ಕಲ್ಲಬ್ಬೆಗಳ ಪಾಲಿಗೆ ಹೋಗಿವೆ! ನಮ್ಮ ತಾಲೂಕಿನಲ್ಲಿ ೪೦೦ ಕೆರೆಗಳಿವೆ. ಅವುಗಳಲ್ಲಿ ಒಂದರದೂ ನೆನಪು ರಾ॥ ಹಬ್ಬುರವರಿಗೆ ಆಗಲಿಲ್ಲವೇ? ಈಗ ಜಿಲ್ಹಾ ಗ್ರಾಮೋದ್ಧಾರ ಮಂಡಳದಲ್ಲಿ ೨೬ ಸದಸ್ಯರಿದ್ದಾರೆ. ಆದರೆ ನಮ್ಮ ತಾಲೂಕಿನ ಪೈಕಿಯಿಂದ ಒಬ್ಬ ಕುಂಟ ಸದಸ್ಯನೂ ಇರುವದಿಲ್ಲ! ಆದ್ದರಿಂದ ಮಂಡಳದ ಕಾರ್ಯದರ್ಶಿಗಳೇ ನಮ್ಮ ಹಿತರಕ್ಷಣೆ ಮಾಡಬೇಕಿತ್ತು. ಆದರೆ ಅವರ ಮಮತೆ ಘಟ್ಟದ ಕೆಳಗಿನ ಹಳ್ಳಿಗಳ ಮೇಲೆಯೇ ಹೆಚ್ಚು! ಹೀಗೆ ರಾ॥ ಯಲ್ಲಾಪುರಕರರು ಕಟು ಟೀಕೆ ಮಾಡುತ್ತಿದ್ದಾಗ ರಾ॥ ಹಬ್ಬುರವರು ತಡೆಯಲಾಗದೆ, "ನಾನೇನು ಮಾಡಲಿ? ನಿಮ್ಮ ಮಾಮಲೇದಾರರು ಯಾವ ಸೂಚನೆಗಳನ್ನೂ ಕಳಿಸಲಿಲ್ಲ! ಅದಕ್ಕೆ ನಾನು ಹೊಣೆಗಾರನೇ?" ಎಂದು ಉದ್ಗರಿಸಿದರು. ಅದಕ್ಕೆ ರಾ॥ ಯಲ್ಲಾಪುರಕರರು ಕೂಡಲೇ ಉತ್ತರ ಕೊಟ್ಟು, "ಮಾಮಲೇದಾರರು ಕಳಿಸದಿದ್ದರೆ ಜಿಲ್ಹಾ ತಪಾಸಕರಾದ ತಾವು ಸೂಚನೆಗಳನ್ನು ಮಂಡಿಸಬಾರದಿತ್ತೇ? ನಿಮ್ಮ ಕೈಕೆಳಗಿನ ತಾಲೂಕ ಗ್ರಾಮೋದ್ಧಾರ ತಪಾಸಕರು ಮಂಡಿಸಬಾರದಾಗಿತ್ತೇ!" ಎಂದು ಕೇಳಿದರು. ಆಗ ಅಧ್ಯಕ್ಷರು "ಹೀಗೆ ಟೀಕೆ ಮಾಡಿ ಉಪಯೋಗವಿಲ್ಲ! ನಿಶ್ಚಯಾತ್ಮಕ ಸೂಚನೆ ಮಾಡುವದಿದ್ದರೆ ಮಾಡಿರಿ" ಎಂದು ಹೇಳಲಾಗಿ, "ಈಗ ಎಲ್ಲ ಹಣ ಪಾಲಾಗಿ ಹೋದ ಮೇಲೆ ಸೂಚನೆ ಮಾಡಿ ಪ್ರಯೋಜನವೇನು? ನಮ್ಮ ಸ್ಥಿತಿ ಎಲ್ಲಿ ಮುಟ್ಟಿದೆ, ನಮ್ಮ ದುಸ್ಥಿತಿಗೆ ಕಾರಣವೇನು ಎಂಬುವನ್ನು ನನ್ನ ಬಾಂಧವರಿಗೆ ತಿಳಿಸುವದಕ್ಕಾಗಿಯೇ ನಾನು ಇಷ್ಟೆಲ್ಲ ವಿವರಿಸುತ್ತಿದ್ದೇನೆ." ಎಂದು ರಾ॥ ಯಲ್ಲಾಪುರಕರರು ನುಡಿದು, ಮುರೂರ-ಕಲ್ಲಬ್ಬೆ ಊರುಗಳ ಸುಧಾರಣೆ ಎಂದೂ ಮುಗಿಯುವಂತಿಲ್ಲೆಂದು ಟೀಕಿಸಿದರು. "ಮುರೂರು-ಕಲ್ಲಬ್ಬೆ ಊರುಗಳು ಮಾದರಿ ಹಳ್ಳಿಗಳೆಂದು ಹೇಳುತ್ತಾರೆ! ಅವುಗಳಿಗೆ ಢಾಲುಗಳು ಸಿಕ್ಕಿವೆ. ಆದರೆ ಇನ್ನೂ ಅಲ್ಲಿ ಬಹಳ ಸುಧಾರಣೆಯಾಗಬೇಕಾದ ಸಂಗತಿ ನೋಡಲಾಗಿ ಅಲ್ಲಿ ಹಿಂದಾದ ಸುಧಾರಣೆಯೆಂಬದು ಅಧಿಕಾರಿಗಳ ಕಾಗದಪತ್ರ, ವರದಿಗಳಲ್ಲಾದ ಸುಧಾರಣೆಯೇ ಎಂದು ತಿಳಿಯಬೇಕಾಗಿದೆ! ಎಂದೂ ಅವರು ನುಡಿದರು. (ಸ್ಥಳ-ಸಂಕೋಚನಾದ್ದರಿಂದ ರಾ॥ ಯಲ್ಲಾಪುರಕರರವರ ಇನ್ನುಳಿದ ಮಾತುಗಳನ್ನೂ ಸಭಿಕರು ಮಾಡಿದ ಸೂಚನೆಗಳನ್ನೂ ಮುಂದಿನ ಸಂಚಿಕೆಯ ತನಕ ಕಾಯಿದಬೇಕಾಗಿದೆ.

ಯುದ್ಧನಿಧಿ ಸಂಗ್ರಹ.

(೩ನೇ ಪಾನಿನಿಂದ ಮುಂದರಿಸಿದ್ದು.)

ರುತ್ತಾರೆ. ಅದರಂತೆ ಮುಖ್ಯ ನ್ಯಾಯಾಧೀಶರು ನನಗೆ ಅಪ್ಪಣೆ ಮಾಡಿದ್ದಾರೆ. ನೀವು ನನಗೆ ಸಹಾಯ ಮಾಡಬೇಕು." ಹೀಗೆ ಜಜ್ಜರು ಹೇಳಿದ ಬಳಿಕ ವಕೀಲರು ಕೋರ್ಟಿನಲ್ಲಿ ಗಾಬರಿಯಿಂದ ಆಲೋಚನೆ ಮಾಡಿ ರೂ. ೨೦೦ನ್ನು ಒಟ್ಟುಮಾಡಿ ಜಜ್ಜರ ಮೇಜಿನ ಮೇಲಿಟ್ಟರು. ಇನ್ನೊಬ್ಬ ವಕೀಲರು ರೂ. ೧೫೦ನ್ನು ಮರುದಿನ ಮುಂಜಾವಿಗೆ ಒಟ್ಟುಮಾಡಿ ಕೊಡುತ್ತೇವಾಗಿ ಹೇಳಿದರು. ಆ ಮೇಲೆ ಉಳಿದ ೧೬ ಮಂದಿ ಆರೋಪಿಗಳಿಗೆ ನಿರ್ದೋಷಿಗಳೆಂದು ಬಿಡುಗಡೆ ಮಾಡೋಣಾಯಿತು. ರಾ|| ವಿದ್ಯಾರ್ಥಿಯವರು ಡಿಸ್ಟ್ರಿಕ್ಟ ಜಜ್ಜರಾದ ರಾ|| ಅಕಬರ ಹುಸೇನರವರ ಕಡೆಗೆ ಈ ಸಂಗತಿಯನ್ನು ಒಪ್ಪಿಕೊಂಡಿದ್ದಾರೆ. ಆ ಮೇಲೆ ತಾವು ಈ ಪ್ರಕಾರ ನುಡಿಯಲಿಲ್ಲವೆಂದು ಹೊಸಬ ವಕೀಲರ ಕಡೆಯಿಂದ ಒಂದು ಹೇಳಿಕೆಯನ್ನು ರಾ|| ವಿದ್ಯಾರ್ಥಿ ಬರೆಸಿಕೊಂಡಿದ್ದಾರೆ. 'ಹಿಂದುಸ್ಥಾನ ಟ್ಯಾಯ್ಮ್ಸ'ದಲ್ಲಿ ಸುದ್ದಿ ಪ್ರಕಟವಾದ ಬಳಿಕ ರಾ|| ವಿದ್ಯಾರ್ಥಿಯವರು ರಾ|| ಸಿಂಘಾಲರವರಿಗೆ ಕರೆಸಿಕೊಂಡು ಪ್ರಕಟವಾದ ವೃತ್ತಾಂತ ಸರಿಯಿರುವದಾಗಿಯೂ ತಮ್ಮ ಹೆಸರನ್ನು ನಿರ್ದೇಶಿಸಬಾರದಾಗಿಯೂ ಹೇಳಿದರಂತೆ! ಹೀಗೆ ರಾ|| ದೇವಿದಾಸ ಗಾಂಧಿಯವರ ಮೇಲೆ ನೋಟೀಸಾದ ಬಳಿಕ ಸಪ್ಟಂಬರ ತಾ. ೯ನೇಗೆ ಸರ್ ತೇಜ ಬಹಾದ್ದೂರ ಸಪ್ರೂರವರು ಆರೋಪಿತರ ಪರವಾಗಿ ವಾದಿಸಿದರು. ೨ ತಾಸು ತರ್ಕ ನಡೆದ ಬಳಿಕ ಕೋರ್ಟಿನ ಅಪಮಾನದ ಅಪರಾಧ ಸಿದ್ಧವಾಗುತ್ತದಾಗಿ ಮುಖ್ಯ ನ್ಯಾಯಾಧೀಶರೂ ನ್ಯಾ|| ಮೂ|| ಕೊಲಿಸ್ಟರರವರೂ ಅಭಿಪ್ರಾಯಪಟ್ಟು ೨ ದಿನಗಳಲ್ಲಿ ಪತ್ರಿಕರ್ತರು ಕ್ಷಮೆ ಬೇಡದಿದ್ದರೆ ಕಳೆದ ಸಪ್ಟಂಬರ ೧೫ನೇ ತಾರೀಖಿಗೆ ತೀರ್ಪು ಕೊಟ್ಟು ಶಿಕ್ಷೆ ವಿಧಿಸಲ್ಪಡುವದಾಗಿ ಅಪ್ಪಣೆ ಮಾಡಿದರು. ಶ್ರೀ|| ದೇವಿದಾಸ ಗಾಂಧಿಯವರು ಕ್ಷಮೆ ಬೇಡಲಿಲ್ಲ. ಶ್ರೀ|| ಗಾಂಧಿಯವರ ಹೇಳಿಕೆಯನ್ನು ರಾ|| ವಿದ್ಯಾರ್ಥಿಯವರು ಒಪ್ಪಲಿಲ್ಲ. ಆದರಿಂದ ೧೫ನೇ ತಾರೀಖಿಗೆ ರಾ|| ವಿದ್ಯಾರ್ಥಿ ಮತ್ತು ಡಿ|| ಜಜ್ಜ ರಾ|| ಅಕಬರ ಹುಸೇನ ಇವರ ಸಾಕ್ಷಿಗಳಾದವು. "ತುಂಬಿದ ಕೋರ್ಟಿನಲ್ಲಿ ಯುದ್ಧನಿಧಿ ಕೂಡಿಸಿದ್ದು ನಿಜ; ಆದರೆ ಗವ್ಹರ್ನರ ಇಲ್ಲವೆ ಮುಖ್ಯ ನ್ಯಾಯಾಧೀಶರ ಹೆಸರು ಕೊಂಡಿದ್ದಿಲ್ಲ; ವಕೀಲರ ಕಡೆಯಿಂದ ಅಂಬೋಣಗಳನ್ನು ಬರೆಸಿಕೊಂಡಿಲ್ಲ. ಆದರೆ ಅವನ್ನೆಲ್ಲ ನಾಶ ಮಾಡಿದೆ. ಎಲ್ಲ ಸಂಗತಿಗಳನ್ನು ಡಿ|| ಜಜ್ಜರಿಗೆ ಅರಿಕೆ ಮಾಡಿಕೊಂಡಿದ್ದೇನೆ. ಎಲ್ಲ ಆರೋಪಿತರ ಕುರಿತು ತೀರ್ಪು ಹೇಳಿದ ಬಳಿಕ ಯುದ್ಧನಿಧಿಗಾಗಿ ವಿನಂತಿ ಮಾಡಿಕೊಂಡೆ; ಯಾರ ಮೇಲೂ ನಿಧಿಕೊಡಲು ಒತ್ತಾಯ ಮಾಡಲಿಲ್ಲ. ಸುದ್ದಿಗಾರರಿಗೆ ಕಾಣಬೇಕೆಂಬ ಲವಲವಿಕೆ ನನಗಿತ್ತು. ಆದರೆ ಈ ವಿಷಯ ಅವರನ್ನು ಕಾಣಲಾಗಲಿಲ್ಲ. ಆ ದಿನ ರಾ|| ಸಿಂಘಾಲರವರು ಕೋರ್ಟಿನಲ್ಲಿ ಇದ್ದ ಹಾಗೆ ನನಗೆ ಕಾಣಲಿಲ್ಲ" ಹೀಗೆ ರಾ|| ವಿದ್ಯಾರ್ಥಿಯರು ಹೇಳಿದರು. ಸ್ವಂತ ಹೊಣೆಗಾರಿಕೆಯ ಮೇಲೆ ಯುದ್ಧನಿಧಿ ಸಂಗ್ರಹಿಸಲ್ಪಟ್ಟಿತ್ತೋ ಅಥವಾ ಯಾರೊಬ್ಬರ ಹೇಳಿಕೆಯಿಂದ ಸಂಗ್ರಹಿಸಲ್ಪಟ್ಟಿತ್ತೋ? ಎಂದು ಮು|| ನ್ಯಾಯಾಧೀಶರು ರಾ|| ವಿದ್ಯಾರ್ಥಿಯರಿಗೆ ಪ್ರಶ್ನಿಸಲು, "ನನ್ನ ಸ್ವಂತ ಹೊಣೆಗಾರಿಕೆಯ ಮೇಲೆ ನಾನೇ ಒಟ್ಟುಮಾಡಿದ್ದೇ" ಹೀಗೆ ರಾ|| ವಿದ್ಯಾರ್ಥಿಯವರು ಹೇಳಿದರು. ಆ ಮೇಲೆ ಡಿ|| ಜಜ್ಜರಾದ ರಾ|| ಅಕಬರ ಹುಸೇನರ ಸಾಕ್ಷಿಯಾಯಿತು. ಸಾಮಾನ್ಯವಾಗಿ ರಾ|| ವಿದ್ಯಾರ್ಥಿಯವರ ಅಂಬೋಣವನ್ನು ಅವರು ಸಮರ್ಥಿಸಿದ್ದಾರೆ. 'ಹಿಂದುಸ್ಥಾನ ಟ್ಯಾಯ್ಮ್ಸ' ಪತ್ರಿಕೆಯ ಶ್ರೀ|| ಭಾರದ್ವಾಜರವರು ತಮಗೆ ಭೆಟ್ಟಿಯಾಗಿ, ಶ್ರೀ|| ವಿದ್ಯಾರ್ಥಿಯವರು ಒತ್ತಾಯದಿಂದ ಲೇಖಗಳನ್ನು ಬರೆಸಿಕೊಳ್ಳುವ ಸಂಗತಿಯನ್ನು ತಮಗೆ ಹೇಳಿದರಾಗಿಯೂ ಅದನ್ನು ತಾವು ನಂಬುವದಿಲ್ಲವಾಗಿ ಅವರಿಗೆ ಹೇಳಿದೆವಾಗಿಯೂ ಬಿಡುಗಡೆ ಮಾಡುವಾಗ ವರ್ಗಣಿ ಕೂಡಿಸಿದ್ದು ತಪ್ಪೆಂದು ರಾ|| ವಿದ್ಯಾರ್ಥಿಯರು ತಮ್ಮ ಕಡೆ ಒಪ್ಪಿಕೊಂಡರಾಗಿಯೂ ರಾ|| ಅಕಬರ ಹುಸೇನರು ತಮ್ಮ ಸಾಕ್ಷಿಯಲ್ಲಿ ಹೇಳುತ್ತಾರೆ. ಈ ಖಟ್ಲೆಯ ಮುಂದಿನ ವಿಚಾರ ಇದೇ ತಾ. ೨೫ನೇಗೆ ನಡೆಯುವದಿದೆ. ಆ ಕಾಲದಲ್ಲಿ ರಾ|| ವಿದ್ಯಾರ್ಥಿಯವರ ಪರವಾಗಿ ಕೆಲವು ಸಾಕ್ಷಿಗಳಾಗಲಿಕ್ಕಿವೆ. 'ಹಿಂದುಸ್ಥಾನ ಟ್ಯಾಯ್ಮ್ಸ' ಪತ್ರಿಕೆಯ ಪರವಾಗಿಯೂ ಸಾಕ್ಷಿಗಳಾಗಲಿಕ್ಕಿವೆ. ಈ ಖಟ್ಲೆಯ ವೃತ್ತಾಂತ ಕೇಳಲು ಸಕಲರೂ ಕುತೂಹಲಪಡುತ್ತಾರೆ!

⁂

ಬಂಗಾಲ ಪ್ರಾಂತದ ನಿವೃತ್ತ ಪ್ರಧಾನರಾದ ರಾ|| ನವಾಬ ಅಲಿಯವರೂ ಬಂಗಾಲ ಪ್ರಾಂತದ ಲೆ|| ಎಸೆಂಬ್ಲಿಯ ಸಭಾಸದರೀರ್ವರೂ ಇನ್ನಿಬ್ಬ ಕೂಲಿಕಾರ ಪ್ರಮುಖರೂ ಬಂಗಾಲ ಸಾರಿನ ನಿಯಂತ್ರಣದ ಕುರಿತು ಆಗಲಿಕ್ಕಿದ್ದ ಕಾನೂನಿನ ವಿಷಯ ಸೇರಿಸಿದ ಸಭೆಯೊಳಗೆ ಮಾಡಿದ ಭಾಷಣದಲ್ಲಿ ಭಾರತ ರಕ್ಷಣ ಕಾನೂನಿನನ್ವಯ ಆಕ್ಷೇಪಾರ್ಹ ಉಲ್ಲೇಖಗಳು ಬಂದವೆಂದು ಅವರೆಲ್ಲರ ಮೇಲೆ ಖಟ್ಲೆ ನಡೆದು ಅವರೆಲ್ಲರಿಗೆ ೬ ತಿಂಗಳಿಂದ ೧೮ ತಿಂಗಳವರೆಗೆ ಶಿಕ್ಷೆಯಾಗಿತ್ತು. ಈ ಶಿಕ್ಷೆಗಳ ವಿರುದ್ಧ ಸೆಶನ್ಸ ಕೋರ್ಟಿನಲ್ಲಿ ಅಪೀಲು ನಡೆಯಿತು. ಸೆಶನ್ಸ ಜಜ್ಜರು ಶಿಕ್ಷೆಗಳನ್ನು ರದ್ದುಪಡಿಸಿ ರೂ. ೧೦೦೦ರಿಂದ ೬೦೦೦ರ ವರೆಗೆ ದಂಡ ವಿಧಿಸಿದ್ದಾರೆ. ಭಾರತ ರಕ್ಷಣಕ್ಕೆ ಭಂಗ ಮಾಡುವ ಜನರಿಗೆ ಸರಕಾರವು ಸಾಕಿ ಖರ್ಚು ಮಾಡುವದಕ್ಕಿಂತ ಈ ಜನರಿಂದ ಯುದ್ಧಖರ್ಚನ್ನು ಪೂರೈಸಿಕೊಳ್ಳುವದೇ ಹಿತವೆಂದು ಸೆಶನ್ಸ ಜಜ್ಜರು ತಮ್ಮ ತೀರ್ಪಿನಲ್ಲಿ ನಮೂದಿಸಿದ್ದಾರೆ.

⁂

ಮಧ್ಯಪ್ರಾಂತದ ಇಟಾವಾರಿಯಲ್ಲಿ ಡೆಪ್ಯುಟಿ ಕಮಿಶನರರಾದ ಫರೂಖಾರರವರು ಯುದ್ಧ ಸಭೆಯನ್ನು ಸೇರಿಸಿದ್ದರು. ಆ ಸಭೆಯಲ್ಲಿ ಬಹಳ ಗೊಂದಲವಾಯಿತು. ಡೆಪ್ಯುಟಿ ಕಮಿಶನರರು ಬ್ರಿಟಿಶ ಸರಕಾರದ ಪವಿತ್ರ ಯುದ್ಧೋದ್ದೇಶಗಳನ್ನು ನಿರೂಪಿಸಿದರು. ಆಗ ಕೆಲವರು ಎದ್ದುನಿಂತು, "ಪಂ|| ಜವಾಹಿರಲಾಲರಿಗೆ ಏಕೆ ಸೆರೆಮನೆಗಟ್ಟಿದ್ದೀರಿ"ದು ಕೇಳಲು, "ಪಂ|| ಜವಾಹಿರಲಾಲರು 'ಕ್ವಿಸ್ಲಿಂಗ'ರೆಂದು ಡೆಪ್ಯುಟಿ ಕಮಿಶನರರು ಹೇಳಿದರು. 'ಕ್ವಿಸ್ಲಿಂಗ'ರೆಂದರೆ ಜರ್ಮನರ ಗುಪ್ತಚಾರ; ಸ್ವದೇಶದ್ರೋಹಿ! ಈ ಮಾತು ಕೇಳಿದೊಡನೆ ಸಭೆಯಲ್ಲಿ ಗೊಂದಲವಾಯಿತು. ಕೆಲವರು ಕಸಬರಿಗೆ ಒಗೆದರು; ಹಲವರು ಮೊಟ್ಟೆಗಳನ್ನು ಒಗೆದರು; ಇನ್ನು ಕೆಲವರು ಕಲ್ಲುಗಳನ್ನೂ ಒಗೆದರು! ಸಭೆ ತುಂಬ ಗಡಿಬಿಡಿಯಾಯಿತು. ಈ ಗಡಿಬಿಡಿಯಲ್ಲಿ ಡೆಪ್ಯುಟಿ ಕಮಿಶನರರು ಸುರಕ್ಷಿತ ಪಾರಾಗುತ್ತಿರಲಿಲ್ಲ. ರಾಷ್ಟ್ರೀಯ ಸಭೆಯವರು ಧೈರ್ಯದಿಂದ ಮುಂದೆ ಬಂದು ಡೆಪ್ಯುಟಿ ಕಮಿಶನರರನ್ನು ಬದುಕಿಸಿಕೊಂಡರು. ಅಷ್ಟರಲ್ಲಿ ರಾಷ್ಟ್ರೀಯ ಸಭೆಯವರು ಬರದಿದ್ದರೆ ಘಾತವಾಗುತ್ತಿತ್ತಾಗಿ ಡೆ|| ಕಮಿಶನರರೇ ರಾಷ್ಟ್ರೀಯ ಸಭೆಯವರನ್ನು ಪ್ರಶಂಸಿಸುತ್ತಾರೆ. ಪಂ|| ಜವಾಹಿರಲಾಲರಿಗೆ 'ಕ್ವಿಸ್ಲಿಂಗ'ರೆಂದು ಹೇಳಿದದ್ದಕ್ಕಾಗಿ ಡೆ|| ಕಮಿಶನರರು ಕ್ಷಮೆ ಬೇಡಿದ್ದಾರೆ.

⁂

ಇತರ.

ಸಿಂಧ ಪ್ರಾಂತದ ಮುಖ್ಯ ಮಂತ್ರಿಗಳಾದ ಖಾನ ಬಹಾದ್ದೂರ ಅಲ್ಲಾಬಕ್ಷರವರು, ಹಿಂದುಸ್ಥಾನ ಸರಕಾರವು ಏರ್ಪಡಿಸಿದ ರಾಷ್ಟ್ರಸಂರಕ್ಷಕ ಸಮಿತಿಯ ಸಭಾಸದರಾಗಿರುವರಷ್ಟೇ! ಅದರಿಂದ ಯುದ್ಧಯತ್ನಕ್ಕೆ ಪುರಸ್ಕಾರವಾಗುತ್ತದಾಗಿಯೂ ಇದು ಕಾರಣ ಕೊಂಗ್ರೆಸ ಪಕ್ಷದವರು ಅಲ್ಲಾಬಕ್ಷ ಮಂತ್ರಿಮಂಡಲಕ್ಕೆ ಪುರಸ್ಕಾರ ಕೊಡಬೇಕೇನೆಂಬದರ ಕುರಿತು ಸಿಂಧದ ಕೊಂಗ್ರೆಸ ಪಕ್ಷದಲ್ಲಿ ವಿವಾದ ಉಂಟಾಗಿತ್ತು. ಖಾ|| ಬ|| ಅಲ್ಲಾಬಕ್ಷರವರೂ ಸಿಂಧ ಕೊಂಗ್ರೆಸ ಪಕ್ಷದ ನಾಯಕರಾದ ಶ್ರೀ|| ಸಿಧ್ವಾರವರೂ ವಾರ್ಧಾಕ್ಕೆ ಹೋಗಿ ಮಹಾತ್ಮರೊಡನೆ ವಿಚಾರವಿನಿಮಯ ಮಾಡಿದರು. ಆ ಕಾಲದಲ್ಲಿ ಕೊಂಗ್ರೆಸ್ಸಿನ ಕಾರ್ಯದರ್ಶಿಗಳಾದ ಆಚಾರ್ಯ ಕೃಪಾಲಾನಿಯವರೂ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಪಾರ್ಲಿಮೆಂಟರಿ ಬೋರ್ಡಿನ ಬಾಬು ರಾಜೇಂದ್ರ ಪ್ರಸಾದರವರೂ ಹಾಜರಿದ್ದರು. ಸಿಂಧ ದೇಶದ ಪರಿಸ್ಥಿತಿಯಲ್ಲಿ ಖಾ|| ಬ|| ಅಲ್ಲಾಬಕ್ಷರ ಮೇಲೆ ನಿರ್ಬಂಧವಿಡಕೂಡದೆಂದು ರಾಷ್ಟ್ರಪತಿಗಳಾದ ಮೌ|| ಅಬುಲ ಕಲಮ ಅಝುದರವರು ಕೊಟ್ಟ ನಿರ್ಣಯದ ಮೇರೆಗೆ ಕೊಂಗ್ರೆಸ ಪಕ್ಷವು ನಡಕೊಳ್ಳಬೇಕೆಂದು ಮಹಾತ್ಮರು ನಿರ್ಣಯ ಕೊಟ್ಟಿರುತ್ತಾರೆ. ಖಾ|| ಬ|| ಅಲ್ಲಾಬಕ್ಷರು ಸಜ್ಜನರಿದ್ದಾರೆ, ಪ್ರಾಮಾಣಿಕ ದೇಶಸೇವಕರಿದ್ದಾರೆ.

⁂

ಅಖಿಲ ಭಾರತೀಯ ನೂಲುಗಾರ ಸಂಘದವರು ಕಂಬಳಿಗಳನ್ನು ಸೈನ್ಯ ಇಲಾಖೆಗೆ ಮಾರಬಹುದೋ ಹೇಗೆ? ಅಂಥ ವ್ಯವಹಾರದಿಂದ ಯುದ್ಧಯತ್ನದಲ್ಲಿ ಸಹಕಾರ ಕೊಟ್ಟಂತಾಗುವದಿಲ್ಲವೋ ಹೇಗೆ? ಎಂಬ ಪ್ರಶ್ನೆಯನ್ನು ಅಖಿಲ ಭಾರತೀಯ ನೂಲುಗಾರ ಸಂಘದವರು ಮಹಾತ್ಮರಿಗೆ ಕೇಳಿದ್ದರು. ನಮಗೆ ಸಂಪೂರ್ಣ ಸ್ವಾತಂತ್ರ್ಯ ಸಿಗುವ ವರೆಗೆ ಅಪ್ರತ್ಯಕ್ಷವಾಗಿ ನಾವು ಯುದ್ಧಸಹಾಯ ಮಾಡುವ ಪ್ರಸಂಗವುಂಟು. ಟಪಾಲ ತಿಕೀಟುಗಳನ್ನು ನಾವು ಕೊಳ್ಳುತ್ತೇವೆ; ಉಗಿಬಂಡಿಯಿಂದ ನಾವು ಪ್ರಯಾಣ ಮಾಡುತ್ತೇವೆ; ಪೆಟ್ರೋಲ ಎಣ್ಣೆಯನ್ನು ನಾವು ಕೊಂಡುಕೊಳ್ಳುತ್ತೇವೆ; ಕಡ್ಡಿಪೆಟ್ಟಿಗೆಯನ್ನು ನಾವು ಕೊಳ್ಳುತ್ತೇವೆ; ಈ ವ್ಯವಹಾರಗಳಿಂದ ಅಪ್ರತ್ಯಕ್ಷವಾಗಿ ಯುದ್ಧಸಹಾಯವಾಗುತ್ತದೆ. ಆದರೆ ಇವು ಯುದ್ಧಯತ್ನ-ತಿರಸ್ಕಾರದಲ್ಲಿ ಸೇರುವದಿಲ್ಲ. ಅದೇ ಪ್ರಕಾರ ಕೊಡ-ಕೊಳ್ಳುವ ವ್ಯವಹಾರವಿದೆ. ಈ ವ್ಯವಹಾರ ಮಾಡಲಿಕ್ಕೆ ಸತ್ಯಾಗ್ರಹದಲ್ಲಿ ನಿರ್ಬಂಧವಿಲ್ಲ. ಯೋಗ್ಯ ಬೆಲೆ ಸಿಗುವಲ್ಲಿ ಸರಕನ್ನು ಮಾರಾಟ ಮಾಡಬಹುದು. ಈ ಕೊಡ-ಕೊಳ್ಳುವ ವ್ಯವಹಾರದಿಂದ ಯಾರ ಮೇಲೂ ಯಾರೂ ಉಪಕಾರ ಮಾಡುವದಿಲ್ಲ. ಸಾಲ ಕೊಟ್ಟರೆ, ದಾನ ಕೊಟ್ಟರೆ ಮಾತ್ರ ಉಪಕಾರವಾಗುತ್ತದೆ. ಹೀಗೆ ಮಹಾತ್ಮರು ಸತ್ಯಾಗ್ರಹದ ವ್ಯಾಪ್ತಿಯನ್ನು ನಿರ್ದೇಶಿಸಿದ್ದಾರೆ.

⁂

— ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭಾಸದರಾದ ಶ್ರೀ|| ಭುಲಾಭಾಯಿ ದೇಸಾಯಿಯವರ ಪ್ರಕೃತಿ

ನೆಟ್ಟಗಿಲ್ಲದ್ದರಿಂದ ಮುಂಬಯಿ ಸರಕಾರವು ಅವರನ್ನು ಮಂಗಳವಾರ ಬಿಡುಗಡೆ ಮಾಡಿದೆ [illegible] ದ ತನಕ ಶ್ರೀ| ಬುಲಾಭಯಿಯವರು [illegible]ಯಲ್ಲಿ ಇದ್ದು ಆ ವೇಳೆ ಮುಂಬಯಿಗೆ ಹೋದರು [illegible] ದಿನ ಶ್ರೀ|| ಬುಲಾಭಯಿಯವರ ಡಾಕ್ಟರ [illegible] ದ ಮೋದಿಯವರು ಪ್ರಕಟಿಸಿರುತ್ತಾರೆ

—ಗೋಮಾಂತಕದ ಸರಕಾರವು [illegible] ಎಲ್ಲ ಪ್ರದೇಶದ ಮೇಲೆ ಕಬ್ಬು ಬೆಳೆಸಲು ತಯಾರಿಸುತ್ತ ಕಾರ್ಖಾನೆ ಸ್ಥಾಪಿಸುವ ವಿಚಾರ ನಡೆದಿದೆ ಈ ಕಂಪನಿಯ ಬಂಡವಲು ರೂ ೯ ಲಕ್ಷ ಕಾಗ್ಗರದಿಂದ ಒಳ್ಳೇ ಜಾತಿಯ ಕಬ್ಬಿನ ಬೀಜ ತರಿಸಿ ಕಾರ್ಖಾನೆಯನ್ನು ಚನ್ನಾಗಿ ನಡಿಸಬೇಕೆಂದು ಚಾಲಕರ ಸಂಕಲ್ಪವಿದೆ

ಸಹ್ಯಾದ್ರಿ ಫಾರ್ಮಸಿ
ಕುಮಟಾ.

ಬಾಳಂತಿಯರಿಗೆ— ಕಸ್ತೂರಿ ಮಿಶ್ರಣ ದಶಮೂಲಾರಿಷ್ಟ ಮತ್ತು ಧನ್ವಂತರಿ [illegible] ಒಳ್ಳೇ ಉಪಯುಕ್ತವಾದವು!

ಚಿಕ್ಕ ಮಕ್ಕಳ ಜಂತುವಿನ ಬಾಧೆಗೆ ಪ್ರತ್ಯಕ್ಷವಾಗಲಿಕ್ಕೆ ಸ್ವಾಯರ [illegible] ಗುಟಿಕಾ ಒಂದೇ ದಿವ್ಯವಾದ ಔಷಧವು!

ನಾಯಿ–ಕೆಮ್ಮಿಗೆ ಎಂಟೇ ದಿವಸಗಳಲ್ಲಿ ಗುಣಪಡಿಸುವ ಕಸನಾಶಕವು

**ಯಾವತ್ತೂ ಪ್ರಕಾರಗಳ
ಕಷಾಯ, ಅರಿಷ್ಟ, ಆಸವ,
ತೈಲಾದಿ ಔಷಧ ಸಾಮಗ್ರಿಗಳು
ಸದಾ ಸಿಗುತ್ತವೆ.**

ಡಾ|| ಎಸ್. ಕೇ. ಭಟ್ಟ,
ಹಳ್ಕಾರ, ಕುಮಟಾ.

ಮಳೆಗಾಲದಲ್ಲಿ ಬೇಗನೆ ಉಪಾಯ ಮಾಡಿರಿ!

ಮಹಾಮಾರಿಯ ಬೇನೆ ಸುರುವಿದ್ದಾಗ ಪ್ರತಿಬಂಧಕ **(Preventive)**
ವೆಂದು ಮತ್ತು ಮಹಾಮಾರೀ-ಪಟಕೀ ಕಾಲರಾ **(Cholera)**
ಒಂದಾಗ ಹೊಟ್ಟೆಮೊದಲು (ಅನ್ನ ಬೀಳುವ ವರಗೆ)
ಕೊಡಲಿಕ್ಕೆ ಅಪ್ರತಿಮವಾದದ್ದೆಂದರೆ–

ಲಶುನಾದಿ ಗುಟಿಕಾ.

ಈ ಔಷಧದಿಂದ ವಿಷ್ಟಂಭವಾಗದೆ ಹೊಟ್ಟೆಯುಬ್ಬದೆ ದೀಪನ ಪಚನ ಮತ್ತು ಮಲಶೋಧನ ಆಗಿ ಮಲ ನಿಲ್ಲಿಸುವದು ಗಟ್ಟಿಯಾಗುವದು ಇವೆಲ್ಲ ಕಾರ್ಯವು ಚನ್ನಾಗಿ ಆಗುವದು ಇದರ ಅನುಭವವನ್ನು ಅನೇಕ ಡಾಕ್ಟರರೂ ವೈದ್ಯರೂ ತೆಗೆದುಕೊಂಡಿರುವರು ಅಜೀರ್ಣದ [illegible] ಹೊಟ್ಟೆ [illegible] ಬ್ಬುವದು ಬಹಳ ವೇಗದಿಂದ ಹೊಟ್ಟೆಯಲ್ಲಿ ನೋವಾಗುವದು, ಅಗ್ನಿಮಾಂದ್ಯ ಮತ್ತು ವಾತವಿಕಾರ ಈ ವಿಕಾರಗಳ ಮೇಲೆ ಈ ಗುಳಿಗೆಗಳು ಒಳ್ಳೇ ಗುಣಕಾರಿಯಾಗುವವು ಎಂದು ಪೂರ್ಣ ಅನುಭವವಿದೆ

ದತ್ತಾತ್ರೇಯ ಕೃಷ್ಣ ಸಾಂಡೂ ಬ್ರದರ್ಸ
ಚೆಂಬೂರ ಲಿ.

ಆಯುರ್ವೇಷಧಿ ಕಾರಖಾನೆ, ಚೆಂಬೂರ–ಮುಂಬಯಿ
ಕರ್ನಾಟಕ ಶಾಖೆ:— ಹುಬ್ಬಳ್ಳಿ

ಹೈಸ್ಕೂಲುಗಳಿಗೆ ಬೇಕಾಗುವ ಎಲ್ಲ ತರದ
ಇಂಗ್ಲಿಷ ಸಂಸ್ಕೃತ ಕನ್ನಡ–ಮರಾಠಿ
ಪುಸ್ತಕಗಳು ನಮ್ಮಲ್ಲಿ ಸಿಗುತ್ತವೆ

ನಿಮಗೆ ಬೇಕಾಗುವ ಪುಸ್ತಕಗಳನ್ನು ಇಂದೇ ಕೊಂಡುಕೊಳ್ಳಿ
ವಿಳಂಬ ಮಾಡಿದಲ್ಲಿ —ನಿರಾಶರಾಗಬೇಕಾದೀತು
ಪ್ರಾಥಮಿಕ ಶಾಲೆಗಳಿಗೆ ಬೇಕಾಗುವ ಎಲ್ಲಾ ಕನ್ನಡ ಮರಾಠಿ ಪುಸ್ತಕಗಳೂ ನಮ್ಮಲ್ಲೇ ದೊರೆಯುವವು
ನಿಮಗೆ ಯಾವ ಪುಸ್ತಕ ಬೇಕಾದರೂ ನಮ್ಮಲ್ಲಿ ವಿಚಾರಿಸಿರಿ

ದಿ ಸ್ಕೂಲ ಸಪ್ಲಾಯ ಏಜನ್ಸಿ, ಕುಮಟಾ

ಸೆಕ್ರಬಿಂದು ಮಕ್ಕಳ ಮರಣವನ್ನು ತಪ್ಪಿಸುವದು.

ಏಜನ್ಸಿ ಕಲಕತ್ತಾ, ಮುಂಬಯಿ ಮದ್ರಾಸ, ಬೆಂಗಳೂರು ಮಂಗಳೂರು
Spleen and Liver Enlargement for Children.
ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆದಾಗುವಿಕೆ ಹಸುರು ಸರಗಳು, ಕ್ರಿಮಿ,
ಗಡ್ಡೆರೋಗ ಕೋವೆ ರೋಗ, ಪ್ಯ–ಕೈ [illegible] ವುಗಳಿಗೆ ದಿವ್ಯೌಷಧ!
[illegible] ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3



ಏತಕ್ಕೆ ಚಿಂತಿಸುವಿರಿ?

ಹಿಮಾಚಲದ ವರಗೂ [illegible] ವರುಷಗಳಿಂದ ಕೀರ್ತಿ ಪಡೆದಿರುವ
ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ

ಡಾ| ವಿ ಎನ್ ಶ್ರೀನಿವಾಸರಾವ
ಲಿವ್ಹರ್ ಸ್ಪೆಶಲಿಸ್ಟ
ಎಂ ವಿ ಪ್ರಾಸಾದಿಕ ಔಷಧಾಲಯ
ಶಿವಮೊಗ್ಗಾ

ಇವರಲ್ಲಿ ವಿಚಾರಿಸಿರಿ
ಶಿರಸಿ ಏಜಂಟ —
ಸುಬ್ರಾಯ ಸೀತಾರಾಮ ಹೆಗಡೆ
ಕುಮಟಾ ಏಜಂಟ —
ದೇವಪ್ಪಾ ಅಯ್ಯಾ ನಾಯ್ಕ

ಇದನ್ನು ಪಾಂಡುರಂಗ ಕೃಷ್ಣ ಶಿನಭಾಗ (ಸಂಪಾದಕ) ಇವರು ತಮ್ಮ ಸ್ಟಾರ ಆಫ್ ಕೆನರಾ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No B 1270

Monday, 29th September, 1941

ವರ್ಷ ೨೪

ಪತ್ರದ ವರ್ಗಣಿ

ಕುಮುಟೆಯಲ್ಲಿ ಅಗಾವು
ರೂಪಾಯಿ 2-4-0
ಮನಿಯಾರ್ಡರಿನಿಂದ
ರೂ 3-1 0
ವ್ಹಿ ಪಿ ಅಂಚೆವೆಚ್ಚ ಸೇರಿ
ರೂಪಾಯಿ 3-4-0
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0 2-0

ಕಾನಡಾವೃತ್ತ

THE KANARA NEWS

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸಂಚಿಕೆ ೧೩

ಜಾಹೀರಾತುಗಳ ದರ
ಕನ್ನಡ, ಇಂಗ್ಲಿಷ ಸ್ಮಾಲ ಟೈಪಿನ (೧೫ ಏಮ್ ಅಗಲ) ೬ ಸಾಲುಗಳವರೆಗೆ ರೂ 1 8 0
ಆ ನಂತರ ಪ್ರತಿಸಾಲಿಗೆ 0-3 0
ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವವು

-*(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೨೯ ಮಾಹೆ ಸಪ್ಟಂಬರ ಸನ್ ೧೯೪೧ನೇ ಇಸವಿ)*-

ದೀಪಾವಳಿಯ ಒಂದೇ ಒಂದು ಕಾಣಿಕೆ!

ಶ್ರೀ ಧೂತಪಾಪೇಶ್ವರ ಪನವೇಲ, ಲಿ.,
ಕರ್ನಾಟಕ ಕೇಂದ್ರ ಯುನೈಟೆಡ್ ಏಜನ್ಸೀಜ, ಹುಬ್ಬಳ್ಳಿ.
ಕಾರವಾರ — ಮೆಸರ್ಸ ಮುಜುಮುದಾರ-ಕಕಬೇಕರ ಬ್ರದರ್ಸ
ಅಂಕೋಲಾ:— ದಿ ಸ್ಟೇಶನರಿ ಡಿಪೋ
ಕುಮಟಾ— ದೇವಪ್ಪಾ ಆಯ್ಯು ನಾಯ್ಕ
ಹೊನ್ನಾವರ— ಮೆಸರ್ಸ ಕಲ್ಯಾಣಪುರ ಬ್ರದರ್ಸ.
ಶಿರಶಿ:—{ ಶಿರಶಿ ಡ್ರಗ್ ಸ್ಟೋರ್ಸ
ಎಸ್. ಎಲ್ ಧಾಕಪ್ಪಾ ಎಂಡ್ ಸನ್ಸ
ಸಿದ್ದಾಪುರ — ಮೆಸರ್ಸ ಶಾಮಯ್ಯನ ಬ್ರದರ್ಸ

"ಸ್ಟಾರ ಆಫ್ ಕೆನರಾ ಪ್ರೆಸ್",
ಕುಮಟಾ.

—*—

ನಮ್ಮಲ್ಲಿ ಕನ್ನಡ, ಮರಾಠಿ ಇಂಗ್ಲಿಷ, ಗುಜರಾಥಿ ಭಾಷೆಯಿಂದ ಬೇಕಾದ ನಮೂನೆಯ ಕಲರ ಪ್ರಿಂಟಿಂಗ ವಗೈರೆ ಸಣ್ಣ ದೊಡ್ಡ ಛಾಪಾ ಕೆಲಸಗಳೂ, ಪುಸ್ತಕ ಮುದ್ರಣವೂ, ರೂಲಿಂಗ ಬ್ಯಾಂಡಿಂಗ ಕೆಲಸವೂ ಉತ್ತಮವಾಗಿ ಸುಲಭ ದರದಲ್ಲಿ ತಕ್ಕ ಕಾಲಕ್ಕೆ ತಯಾರಿಸಿ ಕೊಡಲಾಗುವದು

ಇದಲ್ಲದೆ ಕೋರ್ಟ ಕಚೇರಿ ಉಪಯೋಗದ ವಕಾಲತ ವಗೈರೆ ಫಾರ್ಮುಗಳೂ, ಕಸ್ಟಮ್ ಕಚೇರಿಯ ಶಿಪ್ಪಿಂಗ ಬಿಲು ಪತ್ರ ವಗೈರೆ ಫಾರ್ಮುಗಳೂ ಗೇಣಿ ರಶೀದಿ ಬುಕ್ಕು, ಗೇಣಿಚೀಟಿ ಎದುರ್ಸಾಡಿ ಫಾರ್ಮುಗಳೂ ವಗೈರೆ ಮಾರಾಟಕ್ಕೆ ತಯಾರ ಸಿಗುತ್ತವೆ

ನಿಮ್ಮ ಛಾಪಾ ಕೆಲಸಗಳನ್ನು ನಮ್ಮಲ್ಲಿಯೇ ಕಳಿಸಿರಿ

ಒಮ್ಮೆ ಅನುಭವ ತೆಕ್ಕೊಂಡು ನೋಡಿರಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,
(ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)
ಹೆಡ್ ಆಫೀಸು — ಕುಂದಾಪುರ.
ಬ್ರೆಂಚ ಆಫೀಸುಗಳು -- ಅಂಕೋಲಾ, ಕುಂದಾಪುರ ಬೈಂದೂರು ಕೋಟೇಶ್ವರ, ಕುಮಟಾ, ಗೋಕರ್ಣ, ಕಾರವಾರ, ಹಾವೇರಿ, ಶಿವಮೊಗ್ಗಾ, ತರೀಕೆರೆ ನಗರ ಸೋಮವಾರಪೇಟೆ ಮತ್ತು ವೀರರಾಜಪೇಟೆ
ಕಾಯಂ ಠೇವುಗಳು:- 3 ತಿಂಗಳಿಗೆ ಶೇ ರೂ 3ರಲ್ಲಿ, 6 ತಿಂಗಳಿಗೆ ಶೇ 3½ರಲ್ಲಿ, ೧ ವರ್ಷಕ್ಕೆ ರೂ 4ರಲ್ಲಿ,
2 ವರ್ಷ ಯಾ ಹೆಚ್ಚಿನ ಅವಧಿಗೆ ಶೇ 4½ರಲ್ಲಿ
ಸೇವಿಂಗ್ಸ ಬೇಂಕ್ ಠೇವುಗಳು ಮತ್ತು ಚಾಲು ಠೇವುಗಳು ಸಹ ಅಂಗೀಕರಿಸಲ್ಪಡುವವು
ಭಂಗಾರದ ದಾಗಿನಗಳ ವ ಇತರ ವ್ಯಾಪಾರದ ವಸ್ತುಗಳ ಆಧಾರದ ಮೇಲೆ ಸವಲತ್ತಿನ ದರದ ಬಡ್ಡಿಯಲ್ಲಿ ಸಾಲ ಕೊಡಲ್ಪಡುವದು
ವ್ಯಾಪಾರದ ಕೇಂದ್ರಗಳಿಗೆ ಡ್ರಾಫ್ಟುಗಳು, ಚೆಕ್ಕುಗಳು ಸಹ ಕೊಡಲ್ಪಡುವವು ಎಲ್ಲ ತರದ ಬೇಂಕಿನ ವ್ಯವಹಾರಗಳು ಸವಲತ್ತಿನ ದರದಿಂದ ನಡಿಸಲ್ಪಡುವವು
ಕುಂದಾಪುರ, }
1-8-1941 }
The Agricultural & Industrial Bank, Ltd

अखिल गौड सारस्वत ब्रह्मवृंदांस

जाहीर आमंत्रण.

श्री संस्थान गोकर्ण पर्तगाळी जीवोत्तम मठाधीशाचे आज्ञे वरून:—

शास्त्रवचनानुसार परद्वीप-गमनशुद्धीच्या अवश्यकतेची बाब आज काही वर्षांपासून समाजासमोर असून त्याबद्दलचा निर्णय श्री संस्थानातून जाहीर रीतीने समजून घेण्याची उत्सुकता समाजातील धर्माभिमानीयात दिसत येत असल्यामुळे सदर शुद्धी बद्दलच्या तपशीला संबंधाने अनुकूल प्रतिकूल मताचा, धर्मपीठा समक्षाचा निराळेपणा लक्षी न आणता, इतर सर्व बाबतीत एकरूप असलेल्या समाजाकडून योग्य विचार विनिमय होऊन श्री संस्थान व समाज यांस भूषणास्पद असा बहुमताने जो सल्ला मिळेल तदनुरूप निश्चित निर्णय ठरवून समाजकल्याण साधून घ्यावे या हेतूने श्री शके १८६३ वृष संवत्सर आश्विन शु० १५ रविवार ता ५-१०-१९४१ रोजी श्री संस्थान वेल्लिग (गोवा) येथे सदर मठाधीशाच निवासस्थानी संध्याकाळी ३ वाजता जाहीर सभा होणार आहे तरी या कार्यी भाग घेऊ इच्छिणाऱ्यांनी समक्ष उपस्थित राहून समाजकार्य पार पाडावे अशी विनंती आहे

वेल्लिग, मिति आश्विन शु० २रा, सोमवार,
शके १८६३ ता. २२-९-१९४१.

गिरिधर कृष्णाचार्य,
श्री संस्थान पारपत्यगार.

ವಾರ್ತೆಗಳು.

ಭಾವೀ ಸರ್ವಾಧಿಪತಿಗಳು ಯಾರು? ಎಂಬ ತರ್ಕಗಳಿಗೂ ಭವಿಷ್ಯ-ವರ್ಣನೆಗಳಿಗೂ ಬ್ರಿಟಿಶ ಮುಖ್ಯ ಪ್ರಧಾನರು ತಡೆಹಾಕಿ ಲಿನಲಿಥಗೋ ದೊರೆಗಳೇ ಇನ್ನೊಂದು ವರ್ಷ ಅಂದರೆ ೧೯೪೩ನೇ ಇಸವಿಯ ಏಪ್ರಿಲ ತನಕ ಇಲ್ಲಿರಬೇಕೆಂದು ತೀರ್ಮಾನಿಸಿದ್ದಾರೆ. ಸರ್ವಾಧಿಪತಿಗಳಾಗಿ ಈಗ ಇಲ್ಲಿ ಬರಲು ವಿಲಾಯತಿಯ ರಾಜಕಾರಣಪಟುಗಳ ರೂ ಒಪ್ಪುವದಿಲ್ಲವಂತೆ!

— ಅ. ಭಾರತೀಯ ಹಿಂದು ಮಹಾಸಭೆಯ ವಾರ್ಷಿಕ ಅಧಿವೇಶನವನ್ನು ಈ ವರ್ಷ ಬಿಹಾರ ಪ್ರಾಂತದ ಭಾಗಲಪುರ ಜಿಲ್ಹೆಯಲ್ಲಿ ಸೇರಿಸುವ ವ್ಯವಸ್ಥೆ ಪೂರ್ವಸಂಕಲ್ಪಕ್ಕನುಸಾರವಾಗಿ ನಡೆದಿತ್ತು. ಆದರೆ ಭಾಗಲಪುರ ಜಿಲ್ಹೆಯಲ್ಲಷ್ಟೇ ಅಲ್ಲ, ತಮ್ಮ ಪ್ರಾಂತದ ಪಾಟಣಾ, ಗಯಾ, ಮೊಂಘೀರ, ಶಹಾಬಾದ ಮತ್ತು ಮುಝಫರಪುರ ಜಿಲ್ಹೆಗಳಲ್ಲೂ ಕೂಡ ಹಿಂದು ಮಹಾಸಭೆಯ ಅಧಿವೇಶನವನ್ನು ಜರುಗಿಸಬಾರದೆಂದು ಬಿಹಾರ ಸರಕಾರವು ಕಟ್ಟಪ್ಪಣೆ ಮಾಡಿದೆ! ಈ ಅಪ್ಪಣೆ ತಾ ೧-೧೨-೪೧ರಿಂದ ತಾ [illegible]ರ ವರೆಗೆ ಅಮಲಿನಲ್ಲಿರುವದು. ಮೇಲ್ಕಾಣಿಸಿದ ಆರೂ ಜಿಲ್ಹೆಗಳಲ್ಲಿ ಜಾತೀಯ ವೈಷಮ್ಯವೂ ಕಲಹಪ್ರವೃತ್ತಿಯೂ ಇನ್ನೂ ಊರ್ಜಿತವಿರುತ್ತವೆಂತಲೂ, ಮಹಾಸಭೆ ಕೂಡಿಸಗೊಟ್ಟಲ್ಲಿ ಆ ದುಷ್ಟಪ್ರವೃತ್ತಿಗಳು ತಿರುಗಿ ತಲೆಯೆತ್ತುವ ಭೀತಿಯುಂಟೆಂತಲೂ ನುಡಿದು ಬಿಹಾರ ಸರಕಾರದವರು ತಮ್ಮ ಅಪ್ಪಣೆಯ ಸಮರ್ಥನೆ ಮಾಡುತ್ತಾರೆ. ಹಿಂದು ಮಹಾಸಭೆಯವರು ಈ ಅಪ್ಪಣೆಯನ್ನು ಮನ್ನಿಸುತ್ತಾರೆಯೋ ಯಾ [illegible] ಸತ್ಯಾಗ್ರಹ ಹೂಡುತ್ತಾರೆಯೋ ತಿಳಿಯದು.

— [illegible] ಸಂಯುಕ್ತಪ್ರಾಂತದ ನ್ಯಾಯಾಧೀಶರ ವರ್ತನೆ ಟೀಕೆ ಮಾಡಿದ ಬಗ್ಗೆ ದಿಲ್ಲಿಯ 'ಹಿಂದುಸ್ಥಾನ ಟೈಮ್ಸ' ಪತ್ರಿಕೆಯ ಸಂಪಾದಕ ಶ್ರೀ ದೇವದಾಸ ಗಾಂಧಿಯವರ ವಿರುದ್ಧ ನಡೆದ ಖಟ್ಲೆಯ ವಿಚಾರ [illegible] ಮುಂದರಿಯಿತು. ನ್ಯಾಯಾಧೀಶರಾದ ರಾ| ವಿದ್ಯಾರ್ಥಿಯವರ ವಿರುದ್ಧ ಮಾಡಲ್ಪಟ್ಟ ಟೀಕೆ [illegible] ಕೂಡಿದ್ದಲ್ಲಿ ಹಿಂದುಸ್ಥಾನ ಟೈಮ್ಸ ಪತ್ರಿಕೆಯ [illegible] ಸುದ್ದಿ [illegible] ಶ್ರೀ| ಸಿಂಘಾಲರು [illegible] ಗುಪ್ತ [illegible], ಅವರ ಸಾಕ್ಷಿ ತೆಗೆಯುವದು ವಿಹಿತವೆಂತಲೂ ಮುಖ್ಯ ನ್ಯಾಯಮೂರ್ತಿಗಳ ಅಭಿಪ್ರಾಯ ವ್ಯಕ್ತಗೊಳಿಸಲಾಗಿ ಶ್ರೀ| ಗಾಂಧಿಯವರ ಪರವಾಗಿ ವಕಾಲಿ ನಡಿಸುತ್ತಿದ್ದ ಸರ್ ತೇಜಬಹಾದೂರ ಸಪ್ರೂರವರು ಆ ಮಾತಿಗೆ ಒಪ್ಪಿ, ಶ್ರೀ ಸಿಂಘಾಲರವರಿಗೆ ಕೂಡಲೇ ಕೋರ್ಟಿನ ಎದುರಿಗೆ ಹಾಜರಪಡಿಸಿ, ಅವರ ಮೇಲಿನ ನೋಟೀಸನ್ನು ಸ್ವೀಕರಿಸಿದರು ಮತ್ತು ರಾ| ಸಿಂಘಾಲರು ಪತ್ರಕಾರರಾಗುವ ಮುಂಚೆಯೇ ಜಬಾನಿ ಕೊಟ್ಟು, [illegible] ಜಿಲ್ಹಾ ನ್ಯಾಯಾಧೀಶರಾದ ರಾ| ವಿದ್ಯಾರ್ಥಿ ಹಾಗೂ ಮುಖ್ಯ ಜಿಲ್ಹಾ ನ್ಯಾಯಾಧೀಶರಾದ ಮಿ|| [illegible] ಇವರಿಬ್ಬರಿಗೂ ತಿರುಗಿ [illegible] ಕರೆಯಬೇಕೆಂದು ಕೋರ್ಟಿಗೆ ಅರುಹಿಕೊಂಡರು. ನ್ಯಾಯಮೂರ್ತಿಗಳು ಆದೀತೆಂದು ಆ ಮಾತಿಗೆ ಒಪ್ಪಿದ್ದಾರೆ. ಇದಾದ ಮೇಲೆ ಹಿಂದುಸ್ಥಾನ ಟೈಮ್ಸದ ಸಹಸಂಪಾದಕರಾದ ರಾ|| ಭಾರದ್ವಾಜ ರಾ| ದೇವಿದಾಸ ಗಾಂಧಿ ರಾ|| ಸಿಂಘಾಲ, [illegible] ಹಾಗೂ ಮೀರತ ಜಿಲ್ಹಾ ಕೋರ್ಟಿನ ಕೆಲವು ವಕೀಲರ ಸಾಕ್ಷಿಗಳಾದವು. ರಾ| ಸಿಂಘಾಲರವರು ಸಾಕ್ಷಿದಾರರಾಗಿ ಕೋರ್ಟ ತಮ್ಮ ಜಬಾನಿಯಲ್ಲಿ ತಾವು ಕಳಿಸಿದ ಸುದ್ದಿ ಪೂರ್ಣ ನಿಜವಿರುತ್ತದೆಂತಲೂ ತಾವು ಪ್ರತ್ಯಕ್ಷ ಕೋರ್ಟಿನಲ್ಲಿದ್ದು ಕಂಡ ಸಂಗತಿಗಳನ್ನೇ ಪತ್ರಿಕೆಗೆ ತಿಳಿಸಿದ್ದೇವೆಂತಲೂ ನುಡಿದರು. ಆಗೋಸ್ಟ ತಾ. ೧೩ಕ್ಕೆ ತಾವು ರಾ|| ವಿದ್ಯಾರ್ಥಿಯವರ ನಿಮಂತ್ರಣೆಯ ಮೇರೆಗೆ ರಾ|| ಗೌರೀಶಂಕರರ ಸಂಗಡ ರಾ|| ವಿದ್ಯಾರ್ಥಿಯವರನ್ನು ಕಾಣಹೋದಾಗ ಅವರು ತಾವು ಕಳಿಸಿದ ಸುದ್ದಿ ಅಕ್ಷರಶಃ ನಿಜವಿರುತ್ತದೆಂಬದನ್ನು ಒಪ್ಪಿಕೊಂಡಿದ್ದರಾಗಿಯೂ, ಆದರೆ ಮುಂದೆ ಏನಾದರೂ ಚೌಕಶಿಯಾದರೆ ಮಾತ್ರ ತಮ್ಮ ಹಾಗೂ ತಮ್ಮ ಕೋರ್ಟಿನ ಹೆಸರು ಪ್ರಕಟಿಸಬಾರದೆಂದು ಬಿನ್ನವಿಸಿದ್ದರಾಗಿಯೂ ರಾ|| ಸಿಂಘಾಲರವರು ಹೊರಗೆಡಹಿದರು. ಆದರೆ ರಾ| ಸಿಂಘಾಲರವರು ಈ ಎಲ್ಲ ಮಾಹಿತಿಯನ್ನು ಶ್ರೀ|| ಗಾಂಧಿಯವರಿಂದ ಪತ್ರ ಬಂದದ್ದರಿಂದ ಆ ಹಿಂದೆಯೇ ಅವರಿಗೆ ತಿಳಿಸಿಬಿಟ್ಟಿದ್ದರು! ರಾ| ಗೌರೀಶಂಕರರು ತಮ್ಮ ಸಾಕ್ಷಿಯಲ್ಲಿ ರಾ|| ವಿದ್ಯಾರ್ಥಿಗಳ ಮನೆಯಲ್ಲಿ ರಾ| ವಿದ್ಯಾರ್ಥಿ ಮತ್ತು ರಾ|| ಸಿಂಘಾಲರವರೊಳಗೆ ನಡೆದ ಮಾತುಕತೆಗಳನ್ನು ದೃಢೀಕರಿಸಿದರು. ರಾ|| ಬ್ಯಾನರ್ಜಿ ಎಂಬ ವಕೀಲರು ತಮ್ಮ ಕಣ್ಣಮುಂದೆ ಶ್ರೀ| ಗಾಂಧಿಯವರಿಗೆ ಭೆಟ್ಟಿಯಾಗಿ ರಾ| ಸಿಂಘಾಲರವರ ಸುದ್ದಿ ಪೂರ್ಣ ನಿಜವಿರುತ್ತದೆಂದು ಒಪ್ಪಿದ್ದರೆಂತಲೂ ರಾ| ವಿದ್ಯಾರ್ಥಿಯವರು ಕೆಲವು ವಕೀಲರಿಗೆ ಒತ್ತಾಯ ಮಾಡಿ ಅಯಥಾರ್ಥ ಹೇಳಿಕೆಗಳನ್ನು ಬರಿಸಿಕೊಳ್ಳುತ್ತಿದ್ದಾರೆಂದು ರಾ| ಸುರಜಮಲ್ ಸ್ವಾಮಿ ವಕೀಲರು ದೂರುತ್ತಿದ್ದರೆಂತಲೂ ಹೇಳಿದರು. ಯುದ್ಧನಿಧಿಗೆ ಹಣ ಬೇಡುವಾಗ ರಾ| ವಿದ್ಯಾರ್ಥಿಯವರು ಮುಖ್ಯ ನ್ಯಾಯಮೂರ್ತಿಗಳ ಹಾಗೂ ಪ್ರಾಂತಾಧಿಪತಿಗಳ ಹೆಸರನ್ನು ತಕ್ಕೊಂಡಿದ್ದರೆಂದು ರಾ| ಉತ್ತಾರಸಿಂಗರು ನುಡಿದರು. ಕೋರ್ಟಿನಲ್ಲಿ ಯುದ್ಧನಿಧಿ ಕೂಡಿಸಿದಾಗ ರಾ| ವಿದ್ಯಾರ್ಥಿಯವರ ಕೋರ್ಟಿನಲ್ಲಿ ಆರೋಪಿಗಳ ಪರವಾಗಿ ಖಟ್ಲೆ ನಡಿಸುತ್ತಿದ್ದ ರಾ| ಸುರಜಮಲ್ಲ ಸ್ವಾಮಿಯವರು ಉತ್ತಾರಸಿಂಗರಂತೆಯೇ ಹೇಳಿ [illegible] ಅಳಿಯಂದಿರಾದ ರಾ| ಕೃಷ್ಣಸ್ವರೂಪ ವಕೀಲರಿಂದ ರಾ| ವಿದ್ಯಾರ್ಥಿಯವರು ಒತ್ತಾಯದಿಂದ ಒಂದು ಹೇಳಿಕೆಯ ಮೇಲೆ ಸಹಿ ತಕ್ಕೊಂಡಿದ್ದರೆಂಬ ಮಾತನ್ನು ಹೊರಗೆ ಹಾಕಿದರು. ಅವರ ಹಿಂದಿನಿಂದ ಒತ್ತಾಯದಿಂದ ಹೇಳಿಕೆ ಕೊಟ್ಟ ರಾ| ಕೃಷ್ಣ ಸ್ವರೂಪರ ಸಾಕ್ಷಿಯೂ ಆಯಿತು. ರಾ|| ವಿದ್ಯಾರ್ಥಿಯವರು ಒಂದು ದಿನ ನನ್ನ ಕರೆದು ೨ ಸಹಿ ಮಾಡಿದ ಹೇಳಿಕೆಗಳನ್ನು ತೋರಿಸಿದರು ಮತ್ತು ನನಗೂ ಅವುಗಳಂತಹದೇ ಒಂದು ಹೇಳಿಕೆ ಬರಕೊಡಲು ಒತ್ತಾಯ ಮಾಡಿದರು. ತನ್ನ ನೌಕರಿಗೆ ಧಕ್ಕೆ ಬರುವದೆಂದು ಅವರು ಹೇಳಿದ್ದರಿಂದ ನಾನು ಬರಕೊಟ್ಟೆ. ಮುಂದೆ ನನ್ನ ಮಾವಂದಿರಿಗೆ ಈ ಸಂಗತಿ ತಿಳಿದು ಅವರು ಬಹಳ ಸಿಟ್ಟಿಗೆದ್ದರು. ಆಗ ನಾನು ನನ್ನ ಹೇಳಿಕೆ ತಿರುಗಿ ಕೊಡಲು ರಾ|| ವಿದ್ಯಾರ್ಥಿಯವರಿಗೆ ಬಹಳ ಅಂಗಲಾಚಿ ಬೇಡಿಕೊಂಡೆ. ಅವರು ಕೊಡಲಿಲ್ಲ! ನಾನು ಬರಕೊಟ್ಟ ಹೇಳಿಕೆಯಲ್ಲಿ ಬರೆದದ್ದು ಏನು ಎಂದು ನೋಡಲು ಅದನ್ನು ತೋರಿಸಬೇಕೆಂದೆ. ಆಗ ತಮ್ಮ ಕೋರ್ಟಿನಲ್ಲಿ ಮುಖ್ಯ ನ್ಯಾಯಮೂರ್ತಿಗಳ ಹೆಸರು ಎತ್ತಲಿಲ್ಲವೆಂದಿಷ್ಟೇ ಅದರಲ್ಲಿ ಉಂಟೆಂದು ಅವರು ತಿಳಿಸಿದರು! ಎಂದು ರಾ| ಕೃಷ್ಣ ಸ್ವರೂಪರು ಹೇಳಿದರು "ನೀವು ಬರಕೊಟ್ಟ ಹೇಳಿಕೆ ಅಸತ್ಯವಿರುತ್ತದೆಂಬ ಮಾತನ್ನು ತಿಳಿದೂ

ನೀವು ಇದಕ್ಕೆ ಸಹಿ ಮಾಡಿದಿರಾ ?" ಎಂದು ನ್ಯಾಯಮೂರ್ತಿಗಳು ಕೇಳಿದ ಪ್ರಶ್ನೆಗೆ "ಅಹುದು" ಎಂದು ಅವರು ಉತ್ತರ ಕೊಟ್ಟರು. ಈ ಪ್ರಕರಣದ ಮುಂದಿನ ವಿಚಾರ ತಾ ೭-೧೦-೪೧ನೇಗೆ ನಡೆಯಲಿದೆ

— ರಂಗೂನ ನಗರದ ಮೇಲೆ ವಿಮಾನ ದಾಳಿಯಾಗುವ ದುರ್ಧರ ಪ್ರಸಂಗ ಬಂದಲ್ಲಿ ರಂಗೂನದಲ್ಲಿದ್ದ ಹೈಕೋರ್ಟು, ಮುಖ್ಯ ಟಪಾಲ ಕಚೇರಿ, ಸರಕಾರಿ ಕೇಂದ್ರ ಕಚೇರಿ ಮುಂತಾದ ಕಚೇರಿಗಳನ್ನು ನಗರ ಮಧ್ಯದಲ್ಲಿಡದೆ ನಗರದ ಹೊರಗೆ ಇಲ್ಲವೆ ಜಿಲ್ಹೆಗಳ ನಗರಗಳಿಗೆ ಸ್ಥಳಾಂತರಿಸುವ ಯೋಜನೆ ತಯಾರಿಸಲ್ಪಟ್ಟಿದೆಯೆಂದು ಬ್ರಹ್ಮದೇಶದ ಸರಕಾರದವರು ಪ್ರಕಟನೆ ಹೊರಡಿಸಿದ್ದಾರೆ.

— ಹಿಂದುಸ್ಥಾನ ಸರಕಾರದ ಶಾಸನ ಮಂಡಳಿಗಳ ಮುಂದಿನ ಅಧಿವೇಶನವು ಅಕ್ಟೋಬರ ತಿಂಗಳ ಕೊನೆಯ ಸುಮಾರಿಗೆ ಕೂಡಲಿದೆ ನಾ|| ಮಾಧವರಾವ ಅಣೇಯವರು ಎಸೆಂಬ್ಲಿಯಲ್ಲೂ, ನಾ|| ಸರ್ ಅಕಬರ ಹೈದರಿಯವರು ಕೌನ್ಸಿಲದಲ್ಲೂ ಸರಕಾರ ಪಕ್ಷದ ಧುರೀಣರಾಗಿ ನೇಮಿಸಲ್ಪಟ್ಟಿದ್ದಾರೆ ಸರ್ವಾಧಿಪತಿಗಳ ವಿಸ್ತಾರಿತ ಕಾರ್ಯಕಾರಿ ಮಂಡಳದ ಎಲ್ಲ ಹೊಸ ಸದಸ್ಯರು ಇನ್ನೂ ತಮ್ಮ ಅಧಿಕಾರ ಸ್ವೀಕರಿಸಿಲ್ಲ. ಶ್ರೀ| ಮಾಧವರಾವ ಅಣೇಯವರು ಮುಂದಿನ ವಾರ ಸ್ವೀಕರಿಸುವರಂತೆ. ಶ್ರೀ| ನಲಿನೀರಂಜನ ಸರ್ಕಾರರವರು ಈ ತಿಂಗಳ ಕೊನೆಗೆ ತಮ್ಮ ಸ್ಥಳದಲ್ಲಿ ಹಾಜರಾಗುವರೆಂದು ಈ ಹಿಂದೆ ತಿಳಿಸಲಾಗಿತ್ತು, ಆದರೆ ಇನ್ನೂ ಅವರು ಹಾಜರಾಗಿರುವದಿಲ್ಲ ಸರ್ ಫಿರೋಜಖಾನ ನೂನರವರು ಇನ್ನೂ ವಿಲಾಯತಿಯಲ್ಲೇ ಇದ್ದಾರೆ ಅವರು ಅಧಿಕಾರಸ್ವೀಕಾರ ಮಾಡಬಾರದೆಂದು ಇನ್ನೂ ಒಳಗಿಂದೊಳಗೆ ತಂತ್ರಗಳು ನಡೆದಿವೆಯೆಂದು ಒಂದು ಸುದ್ದಿಯಿದೆ ಹೊಸ ಸಭಾಸದರು ಒಟ್ಟುಗೂಡಿ ದೇಶದೊಳಗಿನ ರಾಜಕಾರಣವನ್ನು ಸಮಾಧಾನಕರ ರೀತಿಯಿಂದ ಬಗೆಹರಿಸುವ ಬಗ್ಗೆ ಒಂದು ಯೋಜನೆಯನ್ನು ತಯಾರಿಸಲಿದ್ದಾರೆಂದು ಸುದ್ದಿಗಾರರು ಈ ಹಿಂದೆ ತಿಳಿಸಿದ್ದರು. ಆದರೆ ಸದಸ್ಯರೇ ಈ ತನಕ ಒಟ್ಟುಗೂಡಿಲ್ಲ ಅಕ್ಟೋಬರ ತಿಂಗಳ ಕೊನೆಯ ವಾರದ ವರೆಗೂ ಅವರು ಒಟ್ಟಾಗುವ ಲಕ್ಷಣಗಳು ಸಹ ತೋರುವದಿಲ್ಲ. ಎಸೆಂಬ್ಲಿಯ ಮುಂದಿನ ಅಧಿವೇಶನ ಪ್ರಾರಂಭವಾಗುತ್ತಲೇ ಈ ಹೊಸ ಸದಸ್ಯರ ಬಣ್ಣ ಹೊರಬೀಳುವದಂತೆ ಎಸೆಂಬ್ಲಿಯ ಸದಸ್ಯರಾದ ಶ್ರೀ ಸಂತಸಿಂಗರು ಎರಡು ಮಹತ್ವದ ಸೂಚನೆಗಳನ್ನು ತಾವು ಎಸೆಂಬ್ಲಿಯಲ್ಲಿ ಮಂಡಿಸುವದಾಗಿ ಸೂಚನೆ ಕೊಟ್ಟಿದ್ದಾರೆ ಹಿಂದೀ ಬ್ರಹ್ಮದೇಶಗಳ ವಲಸೆಯ ಒಪ್ಪಂದ ನಿಷೇಧಿಸಬೇಕೆಂದು ಒಂದು ಮತ್ತು ಈಗ ನೇಮಿಸಲ್ಪಟ್ಟಿರುವ ರಾಷ್ಟ್ರಸಂರಕ್ಷಣೆ ಸಲಹೆ ಸಮಿತಿಯು ಪ್ರಾತಿನಿಧಿಕವೂ ಅಲ್ಲ, ಜನತೆಯ ವಿಶ್ವಾಸಕ್ಕೆ ಪಾತ್ರವಾದದ್ದೂ ಅಲ್ಲ, ಉಪಯೋಗದ್ದೂ ಅಲ್ಲ, ಆದ್ದರಿಂದ ಅದನ್ನು ಕೂಡಲೇ ವಿಸರ್ಜಿಸಬೇಕೆಂಬರ್ಥದ ಇನ್ನೊಂದು ಹೀಗೆ ಎರಡು ಸೂಚನೆಗಳನ್ನು ಅವರು ಮುಂದೆ ತರಲಿದ್ದಾರೆ ಈ ಎರಡು ಸೂಚನೆಗಳ ಚರ್ಚೆಯ ಕಾಲಕ್ಕೆ ಹೊಸ ಸದಸ್ಯರು ಮನಬಿಚ್ಚಿ ತಮ್ಮ ಸ್ವಂತದ ಅಭಿಪ್ರಾಯಗಳನ್ನು ವ್ಯಕ್ತಪಡಿಸುವರೋ ಅಥವಾ ಸರಕಾರದ ಅಭಿಪ್ರಾಯವನ್ನೇ ಎತ್ತಿಹಿಡಿಯುವರೋ ಎಂದು ನೋಡಬೇಕು! ಹಿಂಸೆ ಮಾಡಿದ ಇಲ್ಲವೆ ಹಿಂಸೆಗೆ ಉತ್ತೇಜನ ಕೊಟ್ಟ ಆರೋಪಗಳ ವಿನಹ ಬೇರೆ ಕಾರಣಗಳ ಸಲುವಾಗಿ ಭಾರತ ರಕ್ಷಣ ಕಾನೂನಿನನ್ವಯ ಶಿಕ್ಷೆಗೆ ಗುರಿಮಾಡಲ್ಪಟ್ಟ ಇಲ್ಲವೆ ಸೆರೆಮನೆಯಲ್ಲಿಡಲ್ಪಟ್ಟ ಕೈದಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕಾಗಿಯೂ ಒಂದು ಸೂಚನೆ ಎಸೆಂಬ್ಲಿಯ ಮುಂದೆ ಬರಲಿದೆ.

—ಕಳೆದ ವರ್ಷ ೨೨ ಹಿಂದೀ ವೈಮಾನಿಕರು ಬ್ರಿಟನ್ನಕ್ಕೆ ಹೋಗಿದ್ದರು. ಅವರಲ್ಲಿ ಇಬ್ಬರು ವಿಮಾನಗಳ ಹೋರಾಟದಲ್ಲಿ ಮೃತಪಟ್ಟರೆಂದೂ ನಾಲ್ವರು ಅಪಘಾತಗಳಿಗೆ ಬಲಿಯಾದರೆಂದೂ ಇನ್ನುಳಿದ ೧೬ ವೈಮಾನಿಕರು ಈಗ ಜರ್ಮನಿಯ ಮೇಲೆ ಹಾರಿಹೋಗಿ ಗುಂಡುಗಳ ಮಳೆಗರೆಯುವ ಕಾರ್ಯ ನಡೆಸುತ್ತಿದ್ದಾರೆಂದೂ ಪ್ರಕಟವಾಗಿದೆ

ಹಿಂದುಸ್ಥಾನವೂ ಯುದ್ಧವೂ.

(೩ನೇ ಪಾನದಿಂದ ಮುಂದುವರಿದ್ದು)

ವೇನಿದೆ? ಗಡಿನಾಡಿನ ಸರಕಾರವು ಒಂದು ಪ್ರಕಟಣೆಯನ್ನು ಹೊರಡಿಸಿ, ಅಪಾಯ ಒದಗಿದರೆ ನಾಗರಿಕರನ್ನು ಸ್ಥಳಾಂತರ ಮಾಡುವದಾಗಿಯೂ ಅದಕ್ಕೆ ನಾಗರಿಕರು ಸಿದ್ಧರಿರಬೇಕೆಂದೂ ಈಗಲೇ ಸೂಚಿಸಿಟ್ಟಿದೆ ಪಂಜಾಬ ಸರಕಾರದ ಮಾದರಿಯ ಮೇಲೆ ಗಾಬರಿಯಾಗುವ ಕಾರಣವಿಲ್ಲೆಂದು ಗಡಿನಾಡಿನ ಸರಕಾರವೂ ಸಮಾಧಾನ ಹೇಳುತ್ತದೆ! ಈ ಸಮಾಧಾನದ ಮಾತುಗಳನ್ನು ಕೇಳಿ ನನಗೊಳ್ಳೆ ಸಮಾಧಾನವಾಗಿದೆ! ಪ್ರತ್ಯಕ್ಷ ವಿಮಾನಗಳು ಹಾರಿಬಂದರೂ ನಾನು ಹೆದರುವದಿಲ್ಲ! ಸ್ಥಳಾಂತರದ ಸೂಚನೆ ಬಂದ ಕೂಡಲೆ ಹೊರಟುಹೋಗಲು ಗಂಟು-ಮೂಟೆಗಳನ್ನು ಕಟ್ಟಿಟ್ಟಿದ್ದೇನೆ ಪ್ರಸಂಗ ಕಠಿಣವಿದೆ ಇಷ್ಟೊಂದು ಮಾತು ಖಂಡಿತ! ಹಿಂದುಸ್ಥಾನದ ಮೇಲೆ ಯುದ್ಧದ ಸಿಡಿನೆಳಲು ಬಿತ್ತು, ಇದೂ ಒಂದು ಮಾತು ಖಂಡಿತವಾದದ್ದು! ಇರಾಣದ ಗಡಿ ಸುತ್ತ ನಮ್ಮ ಬಲುಚಿಸ್ತಾನದ ಗಡಿಗಳು ಒಂದಕ್ಕೊಂದು ಹೊಂದಿಕೊಂಡಿದ್ದರಿಂದಲೂ ಇರಾಣ ದೇಶ ಈಗ ಯುದ್ಧ-ಪ್ರದೇಶದಲ್ಲಿ ಕೂಡಿಕೊಂಡಿದ್ದರಿಂದಲೂ ಹಿಂದುಸ್ಥಾನಕ್ಕೆ ಗಾಬರಿ ಇಲ್ಲವಾಗಿ ಹೇಳಿದರೂ ಗಾಬರಿಯಾಗುವದು ತಪ್ಪುವದಿಲ್ಲ ಮುಂದಿನ ಕ್ರಮವೇನೆಂಬುದು ನನಗೇನೂ ತಿಳಿಯಲೊಲ್ಲದು! ಇಷ್ಟು ಕಠಿಣ ಪ್ರಸಂಗ ಬಂದಾಗ್ಯೂ ಸಾಮ್ರಾಜ್ಯಸರಕಾರಕ್ಕೆ ಹಿಂದುಸ್ಥಾನವನ್ನು ಸಂತೈಸುವ ಬುದ್ಧಿ ಬರುವದಿಲ್ಲ ಇದೇ ನನಗ ವ್ಯಸನ! ಹಿಂದುಸ್ಥಾನದೊಳಗೆ ಅರ್ಧ ಲಕ್ಷಕ್ಕೆ ಮಿಕ್ಕಿ ಸೈನಿಕರು ನೇಮಿಸಲ್ಪಟ್ಟರು, ಅವರ ಶೌರ್ಯ ಸಾಹಸಗಳನ್ನು ವರ್ಣಿಸಿ ತೀರದು, ಇದ ನೋಡಲಾದ, ಇವಕ್ಕೂ ಮಿಗಿಲಾದ ಪ್ರಶಂಸೆಗಳನ್ನು ಭಾರತ ಮಂತ್ರಿಗಳಂಥ ಅಧಿಕಾರಿಪುರುಷರು ಮನದಣಿ ಹೊಗಳುತ್ತಿದ್ದಾಗ್ಯೂ ನಮ್ಮ ಹಿಂದುಸ್ಥಾನದ ಸೈನಿಕನ ಬಾಳ್ವೆ ತೀರ ನಿಕೃಷ್ಟಾವಸ್ಥೆಯದು! ಸಾಮ್ರಾಜ್ಯ ಸರಕಾರವು ಹಿಂದೀ ಮತ್ತು ಬ್ರಿಟಿಶ ಸೈನಿಕರೊಳಗೆ ಈಗಲೂ ಮಾಡುತ್ತಿರುವ ಪಂಕ್ತಿ ಪ್ರಪಂಚವನ್ನು ಇಲ್ಲಿ ಉಲ್ಲೇಖಿಸಬಯಸುವೆ. ನಮ್ಮ ಹಿಂದೀ ಸೈನಿಕನಿಗೆ ತಿಂಗಳಿಗೆ ರೂ ೧೬ ಸಂಬಳ, ರೂ. ೭ ಸಮು ಪ್ರದಾಡೆಯ ಭತ್ತೆ, ಹೀಗೆ ಒಂಟು ರೂ ೨೩ ಸಿಗುತ್ತವೆ. ಊಟದ ಬಗ್ಗೆ ಸೀದಾ ಸಿಗುತ್ತದೆ! ಅದೇ ಬ್ರಿಟಿಶ ಸೈನಿಕನಿಗೆ ಸವಿ ಸವಿ ತಿಂಡಿ ತಯಾರಿಸುವ ಅಂಗಡಿಗಳಲ್ಲಿ ಹೋಗಿ ಬೇಕಾದ ಹಾಗೆ, ಬೇಕಷ್ಟು ತಿಂದು, ಕುಡಿದು, ಕುಣಿದು ವಿಲಾಸ ಮಾಡಲು ತುಂಬ ಅನುಕೂಲವಿದೆ! ಅವನಿಗೆ ರೂ ೭೪ ಸಂಬಳ, ಮದುವೆಯಾದರೆ ಮದುವೆಯ ಭತ್ತೆ! ಮಕ್ಕಳಾದರೆ ಮಕ್ಕಳ ಭತ್ತೆ! ಹೀಗೆ ಸಂಬಳಕ್ಕಿಂತ ಹೆಚ್ಚಾಗಿ ಭತ್ತೆ ಕೊಟ್ಟು, ಯುದ್ಧದಲ್ಲಿ ಸಾಯಲಿಕ್ಕೆ ಇವನಿಗೆ ಹುರುಪು ಕೊಡೋಣಾಗುತ್ತದೆ! ಬ್ರಿಟಿಶ ಸೈನಿಕರಲ್ಲಿ ಆಸ್ಟ್ರೇಲಿಯದ ಸೈನಿಕರೂ ಸೇರ್ಪಡೆಯಾಗುತ್ತಾರೆ! ಹಿಂದೀ ಸೈನಿಕರಿಗೆ ಕಡಿಮೆಯಾದ ದುಡ್ಡಿನ ಬದಲಿಗೆ ಪ್ರಶಂಸೆ ಸಿಗುತ್ತದೆ! ಹೀಗೆ ಪಂಕ್ತಿ ಪ್ರಪಂಚ ಮಾಡುವದರಿಂದ ಹಿಂದುಸ್ಥಾನದೊಳಗೆ ಅಸಮಾಧಾನವಾಗುವದು ಸಹಜ ಇಷ್ಟೇ ಅಲ್ಲ, ಸೈನ್ಯ ಇಲಾಖೆಯ ಕಾರಕೂನ ಸ್ಥಳದಲ್ಲಿಯೂ ಇದೇ ಭೇದ! ಹಿಂದೀ ಕಾರಕೂನರ ಸಂಬಳ ರೂ. ೬೦ಕ್ಕೆ ಪ್ರಾರಂಭವಾಗಿ ರೂ. ೧೪೦ಕ್ಕೆ ಮುಗಿಯುತ್ತದೆ, ಯಾವದೇ ಭತ್ತೆ ಸಿಗುವದಿಲ್ಲ! ಅದೇ ಎಂಗ್ಲೋ-ಇಂಡಿಯನ ಕಾರಕೂನರಿಗೆ— ಎಂಗ್ಲೋ-ಇಂಡಿಯನರೆಂದರೆ ಯುರೋಪಿಯನ ಗಂಡಸು ಮತ್ತು ದೇಶಿ ಹೆಂಗಸಲ್ಲಿ ಅಥವಾ ಯುರೋಪಿಯನ ಹೆಂಗಸಲ್ಲಿ ದೇಶಿ ಗಂಡಸರಿಂದ ಹುಟ್ಟಿದ ಸಂತತಿಯವರಿಗೆ— ಪಗಾರು ರೂ ೧೯೦; ಸೈನ್ಯ ಖಾತೆಯಲ್ಲಿ ಸೇರಿದ ಬಗ್ಗೆ ಭತ್ತೆ ರೂ ೨೦, ಭೋಜನ ಭತ್ತೆ ರೂ.೩೫, ಕ್ಷೌರ ಮತ್ತು ಅರಿವೆ ಮಡಿ ಮಾಡಿಕೊಳ್ಳುವ ಭತ್ತೆ ರೂ ೨, ಮದುವೆಯ ಭತ್ತೆ ರೂ ೩೦, ಮಕ್ಕಳ ಭತ್ತೆ ರೂ- ೯೦, ಬಾಡಿಗೆಯ ಭತ್ತೆ ರೂ ೪೦, ಹೀಗೆ ರೂ ೪೦೭ ಸಂಬಳ ಸಿಗುತ್ತದೆ! ಇದು ಪ್ರಾರಂಭದಲ್ಲಿ! ಮಕ್ಕಳು ಹೆಚ್ಚಾದರೆ ಮಕ್ಕಳ ಭತ್ತೆ ಹೆಚ್ಚುತ್ತದೆ! ಮೇಲೆ ಬಡತಿಯುಂಟು! ಇಷ್ಟಾಗಿ ಈ ಕಾರಕೂನರಿಗೆ ತಿಳಿಯುವದು ಅಷ್ಟಕ್ಕಷ್ಟೇ! ಯುದ್ಧ ಪ್ರಾರಂಭವಾದಂದಿನಿಂದ ಈ ಕಾರಕೂನರ ಸಂಖ್ಯೆ ಮಿಗಿಲಾಗಿದೆ! ಖರ್ಚಿನಲ್ಲಿ ಉಳಿತಾಯ ಮಾಡಿರಿ, ೪ ಆಣೆ ಉಳಿಸಿರಿ! ಹಿಂದೀ ಸೈನಿಕರಿಗೆ ಕೊಡಿರಿ! ವಿಮಾನಗಳನ್ನು ಕೊಂಡುಕೊಟ್ಟು ಯುದ್ಧ ಸಹಾಯ ನೀಡಿರಿ! ಇವೇ ಮೊದಲಾದ ವಿಷಯಗಳನ್ನು ಹಿಂದುಸ್ಥಾನ ಸರಕಾರವು ಪ್ರಚಾರ ಇಲಾಖೆಯ ವಿದ್ಯಮಾನ ಜನರಿಗೆ ತಿಳಿಸಿ ಜನರ ಕಡೆಯಿಂದ ಯುದ್ಧನಿಧಿಯನ್ನು ಎತ್ತುವಳಿ ಮಾಡುತ್ತಿದೆ! ಜನರಿಗೆ ಮಿತವ್ಯಯದ ಉಪದೇಶ ಮಾಡಿದ ಬಗ್ಗೆ ನನ್ನ ಆಕ್ಷೇಪವಿಲ್ಲ ಜನರು ಮಿತವ್ಯಯ ಮಾಡಿ ಯುದ್ಧನಿಧಿಗೆ ಸಹಾಯ ಮಾಡಬೇಕೆಂದು ಸರಕಾರವು ಅಪೇಕ್ಷಿಸುವದು ಸ್ವಾಭಾವಿಕವಾದದ್ದು ಬ್ರಿಟಿಶರ ವಿಜಯದಿಂದ ಭೂಲೋಕದ ಉದ್ಧಾರವಾಗುವದೆಂದು ನಂಬುವವರೆಲ್ಲರೂ ಯುದ್ಧ ನಿಧಿಗೆ ಸರ್ವಸ್ವವನ್ನರ್ಪಿಸಿ ಸಹಾಯ ನೀಡಬೇಕಾಗಿ ನಾನಾದರೂ ಹೇಳಬಯಸುವೆ! ಆದರೆ ಹಿಂದುಸ್ಥಾನ ಸರಕಾರವು ಹೀಗೆ ಎತ್ತುವಳಿ ಮಾಡಿದ ನಿಧಿಯನ್ನು ಈ ತರ ಖರ್ಚು ಮಾಡುವದೂ ಹಿಂದೀ ಸೈನಿಕರಿಗೆ ಭೇದ-ಬುದ್ಧಿಯಿಂದ ನಡಿಸಿಕೊಳ್ಳುವದೂ ಅಪ್ರಶಸ್ತವಾದದ್ದು! ಯುದ್ಧವು ಹಿಂದುಸ್ಥಾನದ ಹೊಸ್ತಿಲಲ್ಲಿ ಕಾಲಿಟ್ಟಾಗ ಈ ಪ್ರಕಾರ ಸರಕಾರವು ವರ್ತಿಸುವದು ಯೋಗ್ಯವಲ್ಲ ಇಷ್ಟೊಂದು ಸಂಗತಿಯನ್ನು ನಾನು ನಮೂದಿಸಿ ಯುದ್ಧ ಕಾಲಕ್ಕುಚಿತವಾಗಿ ಸೈನ್ಯ ಇಲಾಖೆಯವರು ನಡಕೊಳ್ಳಬೇಕಾಗಿ ಸೂಚಿಸುವೆ ಸೇನಾಪತಿ ನವೆಲರ ಚಟುವಟಿಕೆಗಳನ್ನು ಈಗ ನೀವು ನಿರೀಕ್ಷಿಸುತ್ತಿರಬೇಕು

ಕಾನಡಾವೃತ್ತ.

ಮಿತಿ ವೃಷ ಸಂವತ್ಸರ ಅಶ್ವೀಜ ಶು॥ ೯ ಮಿ, ಸೋಮವಾರ

ಮಹಾತ್ಮರಿಗೆ ಮಂಗಳವಾಗಲಿ !

ಈವಾಗ ನಮ್ಮ ಹಿಂದುಸ್ಥಾನದೊಳಗೆ ಸರ್ವತ್ರ ರಾಷ್ಟ್ರಪುರುಷರಾದ ಮಹಾತ್ಮರ ಜಯಂತ್ಯುತ್ಸವ ನಡೆದಿದೆ ಮಹಾತ್ಮರಿಗೆ ದೀರ್ಘಾಯುರಾರೋಗ್ಯ ಪ್ರಾಪ್ತವಾಗಲೆಂದು ಸರ್ವರೂ ಹರಸುತ್ತಾರೆ ನಾವೂ ಲೀನರಾಗಿ ಅನನ್ಯಭಾವದಿಂದ, ಜಗಚ್ಚಾಲಕನೆಡೆಗೆ ಮಹಾತ್ಮರನ್ನು ಅನುಗ್ರಹಿಸಲು ಪ್ರಾರ್ಥಿಸಿಕೊಳ್ಳುತ್ತೇವೆ ಮಹಾತ್ಮರು ಕೈಕೊಂಡ ಕಾರ್ಯವೇ ಅಷ್ಟು ಪವಿತ್ರವಾದದ್ದಿದೆ ಮಹಾತ್ಮರು ಸಮಾಜದ ಬಾಳ್ವೆಗಾಗಿ ಸತತೋದ್ಯೋಗ ನಡಿಸುತ್ತಿದ್ದಾರೆ ಖಾದಿಯೇ ಮಹಾತ್ಮರ ದಿವ್ಯ ಸಂದೇಶದ ಪ್ರತೀಕವಿದೆ. ಖಾದಿಯಲ್ಲಿ ಮಹಾತ್ಮರು ಪ್ರಸ್ಥಾಪಿಸುವ ಕಾರ್ಯದ ಸ್ವರೂಪವು ಪರಿಸ್ಫುಟವಾಗಿದೆ. ಕೈರಾಟೆಯ ಮೇಲೆ ನೂತ ಮತ್ತು ಕೈಮಗ್ಗದ ಮೇಲೆ ನೇಯ್ದ ಖಾದಿಯಲ್ಲಿ ಮಹಾತ್ಮರ ಲೋಕಧರ್ಮವು ಒಡಮೂಡಿದೆ ನಮ್ಮ ಹಿಂದುಸ್ಥಾನ ದೇಶದೊಳಗೆ ಪುರಾತನ ಕಾಲದಲ್ಲಿ ಹಸ್ತಕೌಶಲ್ಯಕ್ಕೆ ಒಳ್ಳೇ ಪ್ರಾಧಾನ್ಯವಿತ್ತು ಹಸ್ತಕೌಶಲ್ಯದಿಂದಲೇ ಜನರು ಜೀವನ ನಡಿಸಿಕೊಂಡು ಸಮೃದ್ಧರಾಗಿದ್ದರು. ಪಾಶ್ಚಾತ್ಯರ ಸಹವಾಸದಿಂದ ನಮ್ಮ ಹಿಂದವಾಸಿಗಳಲ್ಲಿ ಸ್ವಾರ್ಥಪ್ರವೃತ್ತಿಯೂ ಪ್ಯಗಳ್ಳತನವೂ ಮನೆಮಾಡಿಕೊಂಡು ನಾವು ಪರಾಧೀನರಾಗತೊಡಗಿದೆವು; ಕಾರಖಾನೆಗಳ ನಯ ವಸ್ತುಗಳಿಂದ ನಮ್ಮಲ್ಲಿರುವ ಕಾರ್ಯಶಕ್ತಿ ಕುಂದಿ ನಾವು ಕ್ರಮವಾಗಿ, ಸ್ಥಿರವಾಗಿ ಬಡವರಾಗಹತ್ತಿದೆವು ಸಂಪಾದನೆಯ ಅಭಾವದಲ್ಲಿ ಇದ್ದದ್ದನ್ನೆಲ್ಲ ಉಪಭೋಗಿಸಿ ಸರ್ವವನ್ನೂ ಕಳಕೊಂಡೆವು ಖಾದಿಯಲ್ಲಿ ಒಳಗೊಂಡಿರುವ ಅರ್ಥ ವ್ಯಾಪಕವಾದದ್ದು ಕೈರಾಟೆ-ಕೈಮಗ್ಗಗಳಿಂದ ತಯಾರಾದ ವಸ್ತುವೆಂಬ ಸಂಕುಚಿತ ಅರ್ಥದಲ್ಲಿ ಖಾದಿಯನ್ನು ಗ್ರಹಿಸುವದಲ್ಲ ನಮ್ಮ ಜೀವನಕ್ಕೆ ಅವಶ್ಯವಿರುವ ಯಾವತ್ತೂ ಜೀನಸುಗಳನ್ನು ನಮ್ಮ ಕೈಯಿಂದ ನಾವೇ ತಯಾರಿಸಿಕೊಂಡು ಉಪಯೋಗಿಸುವ ಧೋರಣವನ್ನು ಪ್ರತಿಯೊಬ್ಬರೂ ಕಾಪಾಡಿಕೊಂಡು ಸ್ವಾವಲಂಬಿಯಾದರೆ, ಸ್ವತಂತ್ರರಾದರೆ ಜನಾಂಗವು ಸ್ವಾವಲಂಬಿಯಾಗುತ್ತದೆ, ಸ್ವತಂತ್ರವಾಗುತ್ತದೆ! ವ್ಯಕ್ತಿಗಳ ಗುಣವೇ ರಾಷ್ಟ್ರ-ಗುಣವಾಗಿ ಇಡೀ ರಾಷ್ಟ್ರದ ರಾಷ್ಟ್ರವೇ ಉದ್ಧಾರವಾಗುತ್ತದೆ ವ್ಯಕ್ತಿ-ಉದ್ಧಾರದಿಂದ ರಾಷ್ಟ್ರೋದ್ಧಾರವನ್ನು ಸಾಧಿಸುವ ಸುಲಭವಾದ ಮಾರ್ಗವನ್ನು ಮಹಾತ್ಮರು ಸ್ವೋದಾಹರಣೆಯಿಂದ ಲೋಕಕ್ಕೆ ಬೋಧಿಸಿದ್ದಾರೆ ವ್ಯಕ್ತಿಗಳ ಸ್ವಾವಲಂಬನಕ್ಕೆ ಅನೇಕ ಅಂಗ ಉಪಾಂಗಗಳಿವೆ ಖಾದಿ ಧಾರಣ ಮಾಡುವ ವ್ಯಕ್ತಿಯು ನಿರುಪಯೋಗಿಯಾಗಲಾರದು ವಿಲಾಸ ಮಾಡಲು ಆತನಿಗೆ ಸ್ಫೂರ್ತಿ ಸಿಗುವದಿಲ್ಲ ಸ್ವಾವಲಂಬನ ಧರ್ಮವನ್ನು ಪಾಲಿಸುವಾಗ ವಿಲಾಸದ ಕಲ್ಪನೆಗೇ ಆತನಿಗ [illegible] ಸ್ವಾವಲಂಬನ ಧರ್ಮದ ಪರಿಚಿತ ಆತನು ನಿಗ್ರಹವನ್ನು ಪಾಲಿಸಬೇಕಾಗುತ್ತದೆ ಪರರನ್ನು ಸುಲಿಯುವ ಇಚ್ಛೆ ಅವರ ಆಸ್ತಿಯನ್ನು ಅಪಹರಿಸುವ ವ್ಯಾಪಾರಗಳನ್ನೂ ಆತನು ಕೈಕೊಳ್ಳಲಾರನು ಯಾಕಂದರೆ ಸ್ವಾವಲಂಬಿ ವ್ಯಕ್ತಿಗೆ ಪರರ ಸಮಾನ ಘಾತಕ ವೇದನೆಗಳು ಉಂಟಾಗುವವು ಒಂದಾವರ್ತಿ ಉಂಟಾದಾಗ್ಯೂ ಸುತ್ತುಮುತ್ತಲಿನ ವಾತಾವರಣವು ಸ್ವಾವಲಂಬನದ್ದದರಿಂದ ಪರಪ್ರಾಣಹರಣದ ಪ್ರವೃತ್ತಿಗೆ ಪ್ರೋತ್ಸಾಹಕವಾಗಿ ವ್ಯವಹಾರ ನಡಿಸಲಿಕ್ಕೆ ಆತನಿಗೆ ಅವಕಾಶ ದೊರೆಯುವದಿಲ್ಲ [illegible] ತೀರ ಕಡಿಮೆ! ತನಗೆ ಬೇಕಾದದ್ದನ್ನು ತಾನೇ ಸಂಪಾದಿಸಿಕೊಂಡು ಸ್ವಂತ ಪ್ರಪಂಚವನ್ನು ಚಂದಾಗಿ ಸಾಗಿಸಿಕೊಳ್ಳುವ ವ್ಯಕ್ತಿಗೆ ಪರದ್ರವ್ಯಾಪಹರಣದ ಅಪೇಕ್ಷೆಯಾಗುವದು ದುರ್ಘಟವಾದದ್ದು. ಪ್ರತಿಯೊಂದು ವ್ಯಕ್ತಿಯು ತನ್ನ ವ್ಯಕ್ತಿತ್ವ ಪರಿಪೂರ್ಣವಾಗಬೇಕೆಂಬುದೇ ಮಹಾತ್ಮರ ಒಟ್ಟಾಶಯ! ಪರಮಾತ್ಮನು ಪರಿಪೂರ್ಣನು ಆತನ ಬಿಂಬವಾದ ಮಾನವನು ಕೂಡಾ ಸ್ವಯಂಪೂರ್ಣನಾಗಿ, ಆ ಪರಿಪೂರ್ಣ ಪರಮಾತ್ಮನನ್ನು ಕೂಡಿ ಮುಕ್ತಿ ಹೊಂದಬೇಕೆಂದೇ ಮಹಾತ್ಮರ ಆಕಾಂಕ್ಷೆಯಿದೆ ವಿಲಾಸ ಸೋಮಾರಿತನ, ಸಾವಕಾರ ಕೂಲಿಕಾರ ಒಡೆಯ ಒಕ್ಕಲು, ಸಮ್ರಾಟ ಮಾಂಡಲಿಕ, ಸಾರ್ವಭೌಮ ಸಾರ್ವಭೌಮಾಧೀನ, ಪ್ರಭು ಕಿಂಕರ ಇವೇ ಮೊದಲಾದ ಶಬ್ದಗಳು ಮಹಾತ್ಮರ ಕಾರ್ಯದಲ್ಲಿ ಸಂಕಲ್ಪಿತವಾಗಿರುವದಿಲ್ಲ ಈ ವಿರೋಧಭಾವವನ್ನು ನಷ್ಟಪಡಿಸಿ, ಸಕಲರೂ ಸಮಾನರೆಂದೂ, ಸಮಾನರಾಗಿ ವ್ಯವಹರಿಸಬೇಕೆಂದೂ, ಪ್ರತಿಯೊಬ್ಬನೂ ತನ್ನ ಪುರುಷಾರ್ಥವನ್ನು ಪ್ರಯತ್ನದಿಂದ ಸಾಧಿಸಿಕೊಳ್ಳಬೇಕೆಂದೂ ಆಂದರೆ ಮಾತ್ರ ಲೋಕದಲ್ಲಿ ಶಾಂತಿ ನೆಲಿಸಿ ಕ್ಷೇಮ-ಸುಖಗಳು ಉಂಟಾಗುವವೆಂದೂ ಮಹಾತ್ಮರು ಲೋಕಕ್ಕೆ ಸಾರಿ, ಆ ಪ್ರಕಾರ ತಾವು ನಡೆಕೊಂಡು ಲೋಕ ಶಾಂತಿಗ ಕಾರಣರಾಗಿದ್ದಾರೆ ಯುದ್ಧ ಹೇಳಿ, ಕಲಹ ಹೇಳಿ, ಇವೆಲ್ಲವೂ ಮಾನವನ ಪರಾವಲಂಬನದ ಪರಿಣಾಮಗಳು ಸ್ವಾರ್ಥಪರಾಯಣವಾಗಿ ಪರಕೀಯರಿಂದ ಸ್ವ-ಸುಖವನ್ನು ಸಾಧಿಸಿಕೊಳ್ಳಲು ಯಾವದೊಂದು ವ್ಯಕ್ತಿಯು ಉದ್ಯುಕ್ತನಾದ ಬಳಿಕ ಉಚ್ಚ ನೀಚ ಭಾವ, ಸಂಕುಚಿತ ಪ್ರಪಂಚ, ಪಕ್ಷಪಾತ. ವಿರೋಧಗಳು ತಲೆದೋರುತ್ತವ ಸ್ವಾರ್ಥಪರಾಯಣತೆಯ ಸ್ವಾಭಾವಿಕ ಪರಿಣಾಮವಿದು! ಈ ಸ್ವಾರ್ಥಪರಾಯಣತೆಯ ಮೂಲವೇ ಹಿಂಸಾಪ್ರವೃತ್ತಿ! ಹಿಂಸೆಯೆಂದರೆ ಶಸ್ತ್ರಯಿಂದ ಕಡಿಯುವದೆಂದಲ್ಲ, ಪರರಿಗೆ ಯಾವದೇ ಬಗೆಯಿಂದ ನೋಯಿಸುವದು ಹಿಂಸೆಯಲ್ಲಿ ಸೇರ್ಪಡೆಯಾಗುತ್ತದೆ ಕೊಲೆಪಾತಕಕ್ಕಾಗಿ ಖಡ್ಗ ಹಿರಿದುಕೊಂಡು ಬಂದ ಪಾತಕಿಯನ್ನು ಆತ್ಮರಕ್ಷಣೆಗಾಗಿ ಘಾತ ಮಾಡಹೋಗುವದು ಹಿಂಸೆಯೋ, ಅಹಿಂಸೆಯೋ? ಅಥವಾ ಆ ಪಾತಕಿಗೆ ಘಾತ ಮಾಡಗೊಡುವದು ಧರ್ಮವೇ, ಅಧರ್ಮವೇ? ಇವೇ ಮೊದಲಾದ ವಿಚಾರಗಳು ಈವಾಗ ನಮ್ಮಾ ದೇಶದೊಳಗೆ ವಿಚಾರಿಸಲ್ಪಡುತ್ತಿವೆಯೆಂದು ನಾವು ಒಲ್ಲೆವು ಈ ಗಹನ ವಿಚಾರದಲ್ಲಿ ನಾವೀಗ ಸೇರ ಬಯಸುವದಿಲ್ಲ ಆದರೂ ಸಂಪೂರ್ಣ ಅಹಿಂಸೆಯ ಪಾಲನೆಗೆ ಸಾಮಾನ್ಯ ಮಾನವನು ಸಮರ್ಥನಲ್ಲೆಂದು ನಾವು ಒಪ್ಪುತ್ತೇವೆ ಆದರೆ ಇಷ್ಟರ ಮೇಲಿಂದಲೇ ಅಹಿಂಸೆಯ ತತ್ವ ಸದೋಷವಾಗುವದಿಲ್ಲ. ಮೇಲಾಗಿ ವಿಚಾರಿಸಿದರೆ, ಪರಮಾತ್ಮನ ಪ್ರತಿಬಿಂಬವಾದ ಮಾನವನಿಗೆ ಮನೋನಿಗ್ರಹವಿದ್ದರೆ ಲೋಕದಲ್ಲಿ ಯಾವದೂ ಅಸಾಧ್ಯವಿಲ್ಲ. “ ನರ ಕರಣಿ ಕರೇತೋ ನರಕೆ ನಾರಾಯಣ ಹೋ ಜಾಯ ” ಎಂಬ ಉಕ್ತಿ ಎಲ್ಲರೂ ಬಲ್ಲಾದ ವಿಷಯ. ಮಾನವನು ಪತಿತನೂ ಅಹುದು, ಪವಿತ್ರನೂ ಆಹುದು! ಆತನ ನಡಾವಳಿಯೇ ಆತನ ಅವಸ್ಥೆಗೆ ಕಾರಣ! ಯಾವನೊಬ್ಬ ಮಾನವನಲ್ಲಿ ಅಹಿಂಸೆ ಪರಿಪೂರ್ಣವಾಗಿ ಪ್ರಯುಂಡರೆ, ಯಾವ ಪಾತಕಿಯು ಆತನ ಇಚ್ಛೆಗಿಲ್ಲದ ಸಂಕಲ್ಪಕ್ಕೆ ವಿರುದ್ಧವಾಗಿ ಲೋಕದಲ್ಲಿ ವ್ಯವಹಾರ ಮಾಡಬಲ್ಲನು? ದೇವಲೋಕದ ಮೇಲೆ ದೈತ್ಯರು ದಾಳಿ ಮಾಡಿದಾಗ, ಇಂದ್ರಾದಿ ದೇವರು ಕ್ಷೀರಸಾಗರಕ್ಕೆ ಹೋಗಿ ಜಗಚ್ಚಾಲಕನಲ್ಲಿ ಮೊರೆಯಿಡುತ್ತಲೇ ಆತನ ಸಂಕಲ್ಪ ಮಾತ್ರದಿಂದ ದೈತ್ಯಸಂಹಾರವಾದ ಕಥೆಗಳನ್ನು ನಾವು ಓದಿದ್ದೇವೆ. ಅಹಿಂಸೆಯದೊಂದು ಪ್ರಕಾಶ, ಹಿಂಸೆಯದೊಂದು ಕತ್ತಲೆ! ಬೆಳಕಿನ ಸಾನ್ನಿಧ್ಯದಲ್ಲಿ ಕತ್ತಲೆಯು ತಾನಾಗಿ ನಾಶವಾಗುವದು ಇಲ್ಲವೆ ಮಾಯವಾಗುವದು ಸೃಷ್ಟಿಧರ್ಮವಷ್ಟೇ! ಅಂತೆಯೇ ಅಹಿಂಸೆಯಲ್ಲಿ ಶಕ್ತಿಯಿದೆ, ಸಾಮರ್ಥ್ಯವಿದೆ ಅಹಿಂಸೆಯ ಪಾರ್ಶ್ವಭೂಮಿಯಲ್ಲಿ ಹಿಂಸೆ ಪ್ರಾದುರ್ಭೂತವಾಗುವದೆಂದು ಕಲ್ಪಿಸುವದೇ ದಡ್ಡತನ ಅಹಿಂಸೆ ಇದೊಂದು ಧ್ಯೇಯ, ಕೈ ಸಿಲುಕದ ಅವಸ್ಥೆ ಎಂದು ತಿಳಕೊಂಡು ಅಹಿಂಸೆಯ ವಿಚಾರ ಮಾಡುವದರಿಂದಲೂ, ಹಿಂಸಾಚಾರ ಪ್ರತ್ಯಕ್ಷ ಕಾಣುವದರಿಂದಲೂ, ದೃಶ್ಯ ಪ್ರಪಂಚದ ಮುಂದೆ ಅದೃಶ್ಯ ಪ್ರಪಂಚದ ಶಕ್ತಿ ಕಣ್ಣಿಗೆ ಬೀಳದಿರುವದರಿಂದಲೂ ಅಹಿಂಸೆಯ ಮೇಲೆ ತಕ್ಕಷ್ಟು ಶ್ರದ್ಧೆ ಹುಟ್ಟುವದಿಲ್ಲ. ಅಹಿಂಸೆ ಪೂರ್ಣವಲ್ಲ, ಹಿಂಸೆಯ ಕೆಲವು ಮಿಶ್ರಣವಿದ್ದನಕ ಲೋಕವ್ಯವಹಾರ ನಡೆಯದು, ಹಿಂಸೆಗೆ ಒಂದು ಸೀಮೆಯಿದೆ, ಅಹಿಂಸೆಗೂ ಒಂದು ಸೀಮೆಯಿದೆ, ಮಹಾತ್ಮರು ಸೀಮಾಂತ್ಯವನ್ನು ಅಪೇಕ್ಷಿಸುತ್ತಾರೆ, ಹೀಗೆ ಕನ್ನಯ್ಯಾಲಾಲ ಮುನಶಿಯವರಂಥ ಪ್ರಮುಖರು ಭಾವನೆ ಮಾಡಿಕೊಂಡು ರಾಷ್ಟ್ರೀಯ ಸಭೆಯಿಂದ ಅಲಿಪ್ತರಾಗಿದ್ದಾರೆ ಯಾವದೊಂದು ತತ್ವದಲ್ಲಿ ಶ್ರದ್ಧೆಯಿಲ್ಲದ ಜನರಿಂದ ಯಾವದೇ ಕಾರ್ಯವಾಗ ಎಂದೂ ಆಗವಿಲ್ಲ ಅದಕ್ಕಾಗಿಯೆ ಮಹಾತ್ಮರು ಶ್ರದ್ಧಾಹೀನರಿಗೆ ರಾಷ್ಟ್ರೀಯ ಸಭೆ

ಯೊಳಗಿಂದ ಪ್ಸೈ ತೆಗೆದುಕೊಳ್ಳಲು ಅಪ್ಪಣೆ ಮಾಡುತ್ತಾರೆ. ಯುರೋಪ ಖಂಡದಲ್ಲಿ, ಏಕೆ ಇಡೀ ಭೂಮಂಡಳದಲ್ಲಿ, ಬಾಂಬು, ತೋಫು, ಮದ್ದು ಗುಂಡು, ವಿಮಾನಿಕೆ ಮೊದಲಾದ ಲೋಕಘಾತಕ ಸಾಮುಗ್ರಿಗಳಿಂದ ಮಾನವಕೋಟಿಯ ಘಾತ ನಡೆದಿರುವಾಗ, ಹಿಂಸೆಯು ಸ್ಥಿರವಾಗಿ ಕುಣಿಯುತ್ತಿದ್ದಾಗ, ಸುಧಾರಿಸಿದವರೆಂದು ಹೇಳಿಸಿಕೊಳ್ಳುವ ಜನಗಳು ಹೀಗೆಯೇ ಮಾನವಜೀವನದ ಸರ್ವಸ್ವ ಪಂದೆಣಿಸಿ ಆ ಹಿಂಸೆಯನ್ನು ಪ್ರತಿ-ಹಿಂಸೆಯಿಂದ ಪ್ರತಿಭಟಿಸಲು ಉಪಾಯಯೋಜನೆ ಮಾಡುತ್ತಿರುವಾಗ, ಮಹಾತ್ಮರು ಸಕಲರಿಗೂ ಕ್ಷೇಮಕಾರಿಯಾದ ಅಹಿಂಸೆಯ ಸಂದೇಶವನ್ನು ಧೈರ್ಯದಿಂದಲೂ ಸಾಹಸದಿಂದಲೂ ಒಬ್ಬೊಂಟಿಗರಾಗಿ ಪುರಸ್ಕರಿಸುವ ಪ್ರಕಾರವನ್ನು ನೋಡಿ ನಮಗೊಳ್ಳೇ ಅಭಿಮಾನವೆನಿಸುತ್ತಿದೆ ಇಂಥ ಲೋಕವಿಭೂತಿಯ ಕಾರ್ಯವು ಇನ್ನೂ ಪೂರ್ಣವಾಗಿಲ್ಲ. ಹಿಂಸಾಚಾರಿ ಪಾಶ್ಚಾತ್ಯ ಜನಾಂಗಗಳ ಅಂತಃಕರಣದಲ್ಲಿ ಅಹಿಂಸೆಯ ಘೋರಣದಿಂದ ಮಾರ್ಪಾಟುಗಳಾಗತೊಡಗಿವೆ. ಅಟ್ಲಾಂಟಿಕ ಮಹಾಸಾಗರದ ಘೋಷಣೆಯಲ್ಲಿ ಯುದ್ಧೋತ್ತರ ಅಹಿಂಸೆಯ ಶಂಕುಸ್ಥಾಪನೆಯಾಗಿದೆ. ಯುದ್ಧ ಮುಗಿದ ಬಳಿಕ ಶಸ್ತ್ರಸನ್ಯಾಸವನ್ನು ಪುರಸ್ಕರಿಸಬೇಕಾಗಿ ರುಶ್ಯರು ಹೇಳತೊಡಗಿದ್ದಾರೆಂಬ ವಾರ್ತೆಯಿದೆ ಶಸ್ತ್ರಾಸ್ತ್ರ ಬೆಳಸುವ, ಸೈನ್ಯಬಲ-ನೌಕಾಬಲ-ವಿಮಾನ-ಬಲ ಮೊದಲಾದ ಬಲಗಳನ್ನು ಯಥೇಷ್ಟ ಬೆಳಸುವ ವ್ಯವಹಾರಕ್ಕೆ ಪರಿಮಿತಿಯೇ ಇಲ್ಲ. ನಾನು ಹೆಚ್ಚು, ನೀನು ಕಡಿಮೆ ಎಂಬ ಧೋರಣದಿಂದ, ನಾ ಮುಂದೆ, ನೀ ಮುಂದೆ, ನಿನಗಿಂತ ಪುನಃ ನಾನೇ ಮುಂದೆ ಎಂಬ ದುಷ್ಟ ಮೇಲಾಟದಿಂದ ಕಲಹ-ಸಾಮುಗ್ರಿ ವಿಪುಲವಾಗಿ ನಿರ್ಮಾಣ ಹೊಂದಿ ಲೋಕಘಾತಕವಾದ ಯುದ್ಧವೆಸಗಿತು. ಮಹಾಯುದ್ಧಗಳಿಂದ ಲೋಕಕ್ಷೇಮ ಹಿಂದೆ ಆಗಲಿಲ್ಲ, ಮುಂದೂ ಆಗುವಂತಿಲ್ಲ ೧೯೧೪ನೇ ಇಸ್ವಿಯ ಮಹಾಯುದ್ಧದಿಂದ ಜರ್ಮನಿಯ ಸತ್ವಹರಣವಾದಾಗ್ಯೂ ಪುನಃ ೨೦ ವರ್ಷಗಳಲ್ಲಿ ಅದೇ ಜರ್ಮನ ಜನಾಂಗ ಲೋಕಕ್ಕೆ ಭಾರಿಯಾಗಿದೆ! ಇದರ ಮೇಲಿಂದ ಹಿಂಸಾಚಾರದ, ಪರನಾಶದ ಧೋರಣ ತಪ್ಪೆಂದು ತಾನೇ ಸಿದ್ಧವಾಗುತ್ತದೆ. ಮಹಾತ್ಮರು ಅಹಿಂಸೆಯ ಹೊಸ ಧೋರಣದ ಪ್ರವರ್ತಕರು. ಪ್ರತಿಯೊಬ್ಬರೂ ತನ್ನಂತೆ ಪರರೆಂದು ಬಗೆದು, ನ್ಯಾಯದಂತೆಯೂ ನೀತಿಯಂತೆಯೂ ಪರರ ಘಾತ ಬಗೆಯದಂತೆಯೂ ನಡೆಕೊಂಡು, ವೈಯಕ್ತಿಕ, ಸಾಮಾಜಿಕ ಸದ್ಭಾವನೆಯನ್ನು ರೂಢಗೊಳಿಸಿದರೆ, ಅದೇ ಪ್ರವೃತ್ತಿ ದೇಶತುಂಬ, ಲೋಕತುಂಬ ಹಬ್ಬಿ, ವ್ಯಕ್ತಿ-ವ್ಯಕ್ತಿಗಳೊಳಗ, ಸಮಾಜ-ಸಮಾಜಗಳೊಳಗ, ದೇಶ-ದೇಶಗಳೊಳಗೆ ಕಲಹಗಳುದ್ಭವಿಸುವದು ತಪ್ಪಿ ಲೋಕಕ್ಷೇಮವಾಗುವದೆಂಬ ಮಹಾತ್ಮರ ಸಂದೇಶ ಈ ಹೊಸ ಸಂದೇಶವನ್ನು ಸ್ವತಃ ಪಾಲಿಸಿಕೊಂಡು, ಅದನ್ನು ಲೋಕಕ್ಕೆ ಅನುಸರಿಸಲು ಬೋಧಿಸುವ ವಿಭೂತಿಯ ಜಯಂತಿಯ ಸಂಭ್ರಮಗಳು ನಮ್ಮ ಹಿಂದುಸ್ಥಾನ ತುಂಬ ಈವಾಗ ನಡೆಯುತ್ತಿವೆ. ಮಹಾತ್ಮರಿಗೆ ನೂಲಿನ ಕಾಣಿಕೆ, ದ್ರವ್ಯ-ಕಾಣಿಕೆ ಮೊದಲಾದ ಕಾಣಿಕೆಗಳು ಬರುವ ೨ನೇ ತಾರೀಖಿಗೆ ಅರ್ಪಿಸಲ್ಪಡುವವು ಅಂದು ಮಹಾತ್ಮರು ೭೩ನೇ ವರ್ಷದಲ್ಲಿ ಕಾಲಿಡುತ್ತಾರೆ. ಈ ಹುಟ್ಟು ಹಬ್ಬದ ಪ್ರೀತ್ಯರ್ಥ ಅರ್ಪಣೆಯಾಗುವ ಪ್ರತ್ಯಕ್ಷ ಕಾಣಿಕೆಗಳಿಗಿಂತ ಮಹಾತ್ಮರಿಗೆ ಜನರ ಆಚರಣೆಯೇ ಹೆಚ್ಚಾಗಿ ಪ್ರಿಯವಾದದ್ದು ಮಹಾತ್ಮರಿಗೆ ನೂಲು ಬೇಡ, ಕಾಣಿಕೆ ಬೇಡ, ಏನೂ ಬೇಡ; ಆ ವಿಭೂತಿಗೆ ಯಾವುದರ ಆಶೆಯೂ ಇಲ್ಲ ನಿಃಸ್ವಾರ್ಥತೆಯ, ತ್ಯಾಗದ ಪ್ರತ್ಯಕ್ಷ ಮೂರುತಿಯದು! ಲೋಕಸುಖಕ್ಕಾಗಿ ಆತ್ಮಕ್ಲೇಶವನ್ನು ಬರಮಾಡಿಕೊಳ್ಳುವ ಯೋಗಪುರುಷನಾತ! ತನ್ನ ಸಂದೇಶದಂತೆ ವರ್ತಿಸುವವರೇ ಮಹಾತ್ಮರಿಗೆ ಹೆಚ್ಚಾಗಿ ಪ್ರಿಯರು! ಸ್ವಾವಲಂಬಿಯಾಗಿ ಸ್ವಂತ ಜೀವನವನ್ನು ಸಾಧಿಸಿ ಆತ್ಮೋದ್ಧಾರ ಮಾಡಿಕೊಳ್ಳುವ ಜನರನ್ನೇ ಅವರು ಅಪೇಕ್ಷಿಸುತ್ತಾರೆ ಮಹಾತ್ಮರ ಹುಟ್ಟು-ಹಬ್ಬದ ಪವಿತ್ರ ಸಮಯದಲ್ಲಿ ಪ್ರತಿಯೊಬ್ಬರು ಖಾದಿಯನ್ನು ಧರಿಸಿ, ಖಾದಿಯ ವ್ಯಾಪಕ ಅರ್ಥ-ಕ್ಕನುಸಾರವಾಗಿ ನಡಕೊಳ್ಳುವ ನಿರ್ಧಾರ ಮಾಡಬೇಕಾಗಿ ನಾವು ವಿನಂತಿ ಮಾಡುತ್ತೇವೆ, ಮತ್ತು ಲೋಕಕ್ಕೆ ಸದ್ಬೋಧೆ ಮಾಡಿ ಲೋಕೋದ್ಧಾರ ಮಾಡ-ಜನಿಸಿದ ಮಹಾತ್ಮರಿಗೆ ದೀರ್ಘಾಯುರಾರೋಗ್ಯ ಪ್ರಾಪ್ತವಾಗಲೆಂದೂ ಸ್ವತಂತ್ರ ಹಿಂದುಸ್ಥಾನ ಜನಾಂಗವು ಬೇಗನೇ ಉಂಟಾಗಿ, ಆ ಜನಾಂಗದ ವ್ಯವಹಾರವನ್ನು ಮಹಾತ್ಮರು ಸೂತ್ರಚಾಲಕರಾಗಿ ನಡಿಸಿ, ಹಿಂಸಾಚಾರವನ್ನು ನಂಬಿಕೊಂಡಿದ್ದ ಜನಾಂಗಗಳಿಗೆಲ್ಲ ಅಹಿಂಸೆಯ ವ್ಯವಹಾರವನ್ನು ಕಲಿಸಿ, ಭೂಲೋಕದ ಶಾಂತಿಸುಖಗಳನ್ನು ಸಾಧಿಸಲೆಂದೂ ನಾವು ಪ್ರಾರ್ಥಿಸಿಕೊಂಡು, ಮಹಾತ್ಮರಿಗೆ ಮಂಗಳವಾಗಲೆಂದು-ಹೃತ್ಪೂರ್ವಕ ಹರಸುತ್ತೇವೆ

ಹಿಂದುಸ್ಥಾನವೂ ಯುದ್ಧವೂ.

[ನಿರೀಕ್ಷಕನು ಬರೆದುದು.]

ಈಗ ಬೇಕಾದರೆ ನಮ್ಮ ಹಿಂದುಸ್ಥಾನ ದೇಶ ಯುದ್ಧಕಾರಣದಲ್ಲಿ ಸೇರ್ಪಡೆಯಾಯಿತು! ನಮ್ಮ ಸೇನಾಪತಿಗಳಾದ ವೆವೆಲರವರು ವಿಮಾನ-ಮಾರ್ಗವಾಗಿ ಗೌಪ್ಯದಿಂದ ಲಂಡನಿಗೆ ಹೋಗಿ ಮುಖ್ಯ ಪ್ರಧಾನರಾದ ಚರ್ಚಿಲ್ಲ ಮತ್ತು ಬ್ರಿಟಿಶ ಸೇನಾಧಿಕಾರಿಗಳೊಡನೆ ಚರ್ಚೆ ಮಾಡಿ ಹಿಂದುಸ್ಥಾನಕ್ಕೆ ಮರಳಿ ಬಂದರು. ಮುಂದಿನ ಯುದ್ಧಕಾರ್ಯದಲ್ಲಿ ಹಿಂದುಸ್ಥಾನವು ಕೈಕೊಳ್ಳಬೇಕಾದ ಬೇರೆ ಬೇರೆ ಕ್ರಮಗಳ ಚರ್ಚೆ ನಡೆಯಿತೆಂದು ನಾನು ಪ್ರತ್ಯೇಕವಾಗಿ ಹೇಳುವದವಶ್ಯವಿಲ್ಲ ಆ ಕಾರಣಕ್ಕಾಗಿಯೇ ಸೇನಾಪತಿ ವೆವೆಲರವರು ಸ್ವದೇಶ ಪ್ರಯಾಣವನ್ನು ಕೈಕೊಂಡಿದ್ದರು ಎಲ್ಲ ಚರ್ಚೆ ಸಹಜವಾಗಿ ಗೌಪ್ಯದಿಂದಲೇ ನಡೆಯಿತು ಯುದ್ಧೋತ್ತರ ಲೋಕಶಾಂತಿಯನ್ನು ಪ್ರಸ್ಥಾಪಿಸುವ ಅಟ್ಲಾಂಟಿಕ ಘೋಷಣೆಯು ತತ್ವ ಹಿಂದುಸ್ಥಾನಕ್ಕೆ ಅನ್ವಯಿಸುವವರ ಕುರಿತು ವಿಚಾರವಿನಿಮಯವಾಯಿತಾಗಿ ಲಂಡನಿನ 'ನ್ಯೂಸ ಕ್ರೋನಿಕಲ' ಪತ್ರಿಕೆಯ ಅನುಮಾನ. ರುಶ್ಯ ರಾಯಭಾರಿಗಳಾದ ಮೆಸ್ಕಿಯವರು ಪ್ರತಿಯೊಂದು ಜನಾಂಗ ಸ್ವತಂತ್ರ ಜನಾಂಗವೆಂದೂ ತನ್ನ ರಾಜ್ಯಘಟನೆಯನ್ನು ನಿರ್ಧರಿಸುವ ಅಧಿಕಾರ ಪ್ರತಿಯೊಂದು ಜನಾಂಗಕ್ಕಿರುವದಾಗಿಯೂ ಈ ಮೂಲ ತತ್ವದ ಮೇಲೆ ಹಿಂದುಸ್ಥಾನದ ರಾಜ್ಯಘಟನೆಯ ವಿಚಾರವಾಗಬೇಕಾಗಿಯೂ ಪ್ರತಿಪಾದಿಸಿದರಂತೆ ಈ ಚರ್ಚೆಯಲ್ಲಿ ಭಾರತ ಮಂತ್ರಿಗಳಾದ ಎಮೆರಿಯವರೂ ಹಿಂದುಸ್ಥಾನದ ವ್ಹಾ-ಕಮಿಶನರರೂ ಸೇರಿದ್ದರಂತೆ ಸಭೆ ಮುಗಿದ ಬಳಿಕ ಮೆಸ್ಕಿಯವರು ಒಂದು ಟಿಪ್ಪಣೆ ಬರದು ಭಾರತ ಮಂತ್ರಿ ಮಿ॥ ಎಮೆರಿಯವರಿಗ ಕೊಟ್ಟರಂತೆ. ಆ ಟಿಪ್ಪಣೆಯಲ್ಲಿ ಏನು ಬರೆದಿತ್ತು ಎಂಬ ಸಂಗತಿ ಯಾರಿಗೂ ಗೊತ್ತಿಲ್ಲ. ಅದನ್ನು ತಿಳಕೊಳ್ಳಲು ಲಂಡನಿನ ಪತ್ರಕರ್ತರು ಬಹು ಕುತೂಹಲಪಡುತ್ತಾರಾಗಿ ಪುಣೆಯ 'ಕೇಸರಿ' ಪತ್ರಿಕೆಯ ಲಂಡನಿನ ಸುದ್ದಿಗಾರರು ಗುರುವಾರ ತಂತಿಯಿಂದ ತಿಳಿಸುತ್ತಾರೆ ಜರ್ಮನರು ರುಶ್ಯ ದೇಶದ ದಕ್ಷಿಣ ಪಾರ್ಶ್ವದಲ್ಲಿ ಪಡೆದ ವಿಜಯದಿಂದ ಹಿಂದುಸ್ಥಾನದ ಶಾಂತಿಗೆ ಬಾಧೆಯುಂಟಾಗಿದೆ ಇದನ್ನು ಹ್ಯಾಗೆ ತಪ್ಪಿಸಿಕೊಳ್ಳಬೇಕು, ಶತ್ರುವನ್ನು ಹೇಗೆ ಪ್ರತಿಭಟಿಸಬೇಕು ಎಂಬ ವಿಷಯಗಳನ್ನು ಚರ್ಚಿಸುವದಕ್ಕಾಗಿ ವೆವೆಲರು ಲಂಡನಿಗೆ ಉಡ್ಡಾಣ ಮಾಡಿದ್ದರು ಹಿಂದುಸ್ಥಾನದಿಂದ ಕೊಕೆಸಸ ಪ್ರದೇಶಕ್ಕೆ ಸೈನ್ಯ ಕಳಿಸುವ ಸಿದ್ಧತೆಗಳಾಗಿರುವವಾಗಿ ಸ್ಟೊಕಹೊಮದೊಳಗಿನ "ಸೋಶಲ್ ದೆಮೊಕ್ರೆಟೀನ' ಪತ್ರಿಕೆಯ ಇಸ್ತಂಬೂಲದೊಳಗಿನ ಸುದ್ದಿಗಾರರು ಪ್ರಕಟಿಸುತ್ತಾರೆ. ಹಿಂದುಸ್ಥಾನದೊಳಗಿನ ಸೈನ್ಯದಳಗಳನ್ನೂ ಯುದ್ಧಸಾಮುಗ್ರಿಗಳನ್ನೂ ಇರಾಣ ಆಖಾತದ ಇರಾಪುರ ಮಾರ್ಗದಿಂದ ಕೊಕೆಸಸದ ಕಡೆಗೆ ಕಳುಹುವ ನಿರ್ಧಾರವಾಗಿರುವದಾಗಿ ಈ ಸುದ್ದಿಗಾರರ ಅಂಬೋಣ. ಖೈಬರ ಕಂದರದ ಮಾರ್ಗವಾಗಿ ಯುದ್ಧಯಂತ್ರಗಳನ್ನೂ ವಿಮಾನಗಳನ್ನೂ ಕಳುಹುವ ರಭಸ ನಡೆದಿರುವದಂತೆ! ಕೊಕೆಸಸದೊಳಗಿನ ಎಣ್ಣೆಗಣಿಗಳನ್ನು ರಕ್ಷಿಸಿಕೊಳ್ಳುವದಕ್ಕಾಗಿ ಬ್ರಿಟಿಶರೂ ರುಶ್ಯರೂ ಗಾಂಭೀರ್ಯದಿಂದ ವಿಚಾರ ಮಾಡುತ್ತಿದ್ದಾರೆ. ಸದ್ಯಕ್ಕೆ ಟಿಪ್ಲಿಸ ಎಂಬ ಎಣ್ಣೆ ಕೇಂದ್ರದಲ್ಲಿ ಬ್ರಿಟಿಶ-ರುಶ್ಯ ಸೇನಾಪತಿಗಳು ಆಲೋಚನೆ ಮಾಡಲಿರುವರಂತೆ! ಹಿಂದುಸ್ಥಾನ ಸರಕಾರವು ಗಡಿನಾಡಿನಲ್ಲೂ ಪಂಜಾಬದಲ್ಲೂ ಬೇರೆ ಬೇರೆ ಮುಂಜಾಗ್ರತೆಯ ಯೋಜನೆಗಳನ್ನು ಕೈಕೊಳ್ಳತೊಡಗಿದೆ ಪಂಜಾಬ ಸರಕಾರವು ಒಂದು ಪ್ರಕಟಣೆಯನ್ನು ಹೊರಡಿಸಿ ಪ್ರತಿಯೊಬ್ಬರು ತಮಗೆ ಅಪಘಾತವೊದಗಿದರೆ ಆ ಸುದ್ದಿಯನ್ನು ಮುಟ್ಟಿಸತಕ್ಕ ವ್ಯಕ್ತಿಯ ಹೆಸರು ಪತ್ರಗಳನ್ನು ತನ್ನ ಸಂಗಡ ಕಾಪಾಡಿಕೊಂಡು ಅಡ್ಡಾಡಬೇಕೆಂದು ಸೂಚಿಸಿದೆ ವಿಮಾನಗಳು ಹಾರಿಬಂದು ಬಾಂಬುಗಳನ್ನೊಗೆದು ಅಪಘಾತವಾದರೆ ಮುಂದಿನ ವಿಧಿಗಾಗಿ ಈ ಮುಂಜಾಗ್ರತೆ ಕೊಳ್ಳಲಾಗಿರುವದಂತೆ! ಈ ಪ್ರಕಟಣೆಯಿಂದ ಯಾರೂ ಗಾಬರಿಯಾಗುವ ಕಾರಣವಿಲ್ಲವಂತೆ! ವಿಮಾನ-ದಾಳಿಯಾಗುವ ಸಂಭವವಿಲ್ಲವಂತೆ! ಬರೇ ಒಂದು ಮುಂಜಾಗ್ರತೆಯೆಂದು ಈ ಕ್ರಮ ಸೂಚಿಸಿದೆಯಂತೆ! ನನಗೇನೂ ಗಾಬರಿಯಿಲ್ಲ, ಗಾಬರಿಯಿಂದ ವಿಮಾನ-ದಾಳಿಯಾಗುವದೇನು ತಪ್ಪುವದಿಲ್ಲ! ಸುಮ್ಮನೆ ಗಾಬರಿಗೊಂಡು ಪ್ರಯೋಜನ

(೩ನೇ ಪುಟದ ಮೇಲೆ ಮುಂದುವರಿದೆ)

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ಮಂಗಳವಾರ-ಬುಧವಾರ ಒಳ್ಳೇ ಮಳೆ ಸುರಿಯಿತು. ತೆನೆಗಳು ಬಾರದಿದ್ದ ಹೊಲಗಳಿಗೆ ಇದರಿಂದ ಒಳಿತಾಗಿಯುತ್ತಿದ್ದರೂ, ತೆನೆ ಬಂದು ಹೂವು ಹಿಡಿದ ಹಾಗೂ ತೆನೆಗಳು ಬಾಗಿ ಹಾಲು ಅರ್ಧ ಬಿದ್ದ ಹೊಲಗಳಿಗೆ ಚಲೋ ಪೆಟ್ಟಾಗಿದೆ! ಊರಲ್ಲಿ ಇನ್ನೂ ಕ್ಷೇಮವಿಲ್ಲ. ಅಲ್ಲಲ್ಲಿ ಬಟ್ಟೇಹೊರಕಡೆ, ಜ್ವರ, ನೆಗಡಿ ಮುಂತಾದ ಬೇನೆ-ಬೇಸರಿಕೆಗಳು ಇದ್ದೇ ಇವೆ. ಕಳೆದ ವಾರ ೧-೪೯ ಇಂಚು ಮಳೆಯಾಗಿದೆ.

ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಈ ವರ್ಷ ಸುಂಕೇರಿಯ ರಾ|| ಬಾಲಮುಕುಂದಾಚಾರ್ಯ ಇವರ ಕೊಂಕಣಿ ಮತ್ತು ಮರಾಠಿ ಕೀರ್ತನೆಗಳೂ ಶ್ರೀ ವ್ಯಾಸ ದೇವರ ಗುಡಿಯಲ್ಲಿ ರಾ|| ಶಿರಹಟ್ಟಿಯವರ ಕನ್ನಡ ಕೀರ್ತನೆಗಳೂ ನಡೆದಿವೆ. ಮೊನ್ನೆ ಹ|| ಭ|| ಪ|| ಗಾಡಗೀಳ ಬುವಾರವರ ಶಿಷ್ಯವರ್ಗದೊಳಗಿನ ರಾ|| ಕುಲಕರ್ಣಿ ಎಂಬ ಕೀರ್ತನಕಾರರೂ ಈ ಊರಿಗೆ ಬಂದಿದ್ದು, ಮೊನ್ನೆ ಶ್ರೀ ಕಾಪ್ರೂರ ಕಾಮಾಕ್ಷಿ ದೇವಸ್ಥಾನದಲ್ಲಿ ಅವರದೊಂದು ಕೀರ್ತನೆಯಾಯಿತು

ಈಗ ಯುದ್ಧಕಾಲದಲ್ಲಿ ಧಾನ್ಯ ದವಸ ಮುಂತಾದ ಜೀವನ-ಸಾಹಿತ್ಯಗಳ ಬೆಲೆಗಳು ಏರಿದ್ದರಿಂದ ಸರಕಾರದವರು ಕಡಿಮೆ ಸಂಬಳದ ಅಂದರೆ ತಿಂಗಳಿಗೆ ರೂ ೩೦ಕ್ಕಿಂತ ಕಡಿಮೆ ಸಂಬಳ ಪಡೆಯುವ ನೌಕರರಿಗೆ ೨ ೨ ರೂಪಾಯಿ ಯುದ್ಧಭತ್ತೆ ಕೊಡಬೇಕೆಂದು ನಿರ್ಣಯಿಸಿರುವದಷ್ಟೇ, ಅಂತೆಯೇ ಕುಮಟಾ ನಗರ ಸಭೆಯವರೂ ತಮ್ಮ ನೌಕರರಿಗೆ ಯುದ್ಧ-ಭತ್ತೆ ಕೊಡಬೇಕೆಂದು ಠರಾಯಿಸಿದ್ದಾರೆ. ಆದರೆ ಸರಕಾರಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ, ಮೂವತ್ತೇ ಏಕೆ ರೂ. ೫೦ಕ್ಕಿಂತ ಕೆಳಗೆ ಸಂಬಳ ತಕ್ಕೊಳ್ಳುವ ನೌಕರರನ್ನೂ ಹಿಡಿದು, ಎಲ್ಲ ನೌಕರರಿಗೆ ಯುದ್ಧಭತ್ತೆ ಕೊಡಬೇಕೆಂದು ನಿರ್ಣಯಿಸಿದ್ದಾರೆ! ಈ ಠರಾವು ಮೆ|| ಕಮಿಶನರ ಸಾಹೇಬರ ಮಂಜೂರಿಗೆ ಹೋದಾಗ ಅವರೂ ಕಣ್ಮುಚ್ಚಿ ಅದಕ್ಕೆ ಮಂಜೂರಿ ಕೊಟ್ಟಿದ್ದಾರಂತೆ! ನಗರ ಸಭೆಯವರು ಈ ಪರಿ ಅನ್ನಛತ್ರ ಹಾಕಿ ಈಗಿನ ಕಠಿಣ ದಿವಮಾನದಲ್ಲಿ ನಗರಸಭೆಯ ಹಣವನ್ನು ಹೀಗೆ ದುಂದು ಮಾಡುವದು ಯುಕ್ತವೇ ಹೇಗೆಂದು ಕೆಲ ತೆರಿಗೆದಾರರ ಪ್ರಶ್ನೆ!

ಕಳೆದ ತಾ. ೨೨ನೇ ಸೋಮವಾರ ಹೊಳೆಗದ್ದೆಯ ಕನ್ನಡ ಶಾಲೆಯಲ್ಲಿ, ಕಡತೋಕಾ ಪ್ರೌಢ ಶಿಕ್ಷಣ ಪ್ರಸಾರ ಮಂಡಳದ ಅಧ್ಯಕ್ಷರ ನಿಮಂತ್ರಣೆಯಂತೆ, ಉತ್ತರ ಕಾನಡಾ ಜಿಲ್ಲೆಯ ವಿದ್ಯಾಧಿಕಾರಿಗಳಾದ ರಾ|| ಕರ್ಜಗಿಯವರ ಅಧ್ಯಕ್ಷತೆಯಲ್ಲಿ ಸಭೆ ನೆರೆದಿತ್ತು. ರಾ|| ಹೆಗ್ಗಡೆ ಕೇಶವನಾರಾಯಣ ಭಟ್ಟ, ರಾ| ಡೇಂಗಾ ನಾಯ್ಕ, ರಾ| ಹೊಳೆಗದ್ದೆ ರಾಮಚಂದ್ರ ಪೈ, ಧಾರೇಶ್ವರ ಶಾಲಾ ಶಿಕ್ಷಕ ರಾ ಶೆಟ್ಟಿ ಮೊದಲಾದವರೂ ಅಧ್ಯಕ್ಷರೂ ಸಾಕ್ಷರತೆಯ ಮಹತ್ವವನ್ನೂ ಲಾಭಗಳನ್ನೂ ಮನದಟ್ಟಾಗುವಂತೆ ತಿಳಿಸಿ ಹೇಳಿದರು. ಕೊನೆಗೆ ಜನರು ಊರಲ್ಲಿ ಶ್ರೀ ಶಾಂತಿಕಾಂಬಾ ಪ್ರೌಢ ಶಿಕ್ಷಣಾಲಯವೆಂಬ ವರ್ಗವನ್ನು ತೆರೆಯಬೇಕೆಂದು ತೀರ್ಮಾನಿಸಿ ರಾ ಸೂ. ನಾ. ಹೆಗಡೆಯವರಿಗೆ ವರ್ಗದ ಶಿಕ್ಷಕರನ್ನಾಗಿ ಆರಿಸಿದರು. ವರ್ಗವು ಕನ್ನಡ ಶಾಲೆಯಲ್ಲೇ ನಡೆಯುವದು.

ಈಗ ಮಳೆಗಾಲ ಹಿಂದಾದ್ದರಿಂದ ತಿರುಗಿ ಗೋವೆ ಸರಾಯಿ-ವ್ಯಾಪಾರಕ್ಕೆ ಒಳ್ಳೇ ಕಳೆಯೇರಿದೆ. ರಾತ್ರಿ ಹೊತ್ತಿಗೆ ಯಾರಾದರೂ ಬ್ರಹ್ಮದೇವರ ಗುಡ್ಡದ ಮೇಲೆ ಹೋಗಿ ಕುಳಿತರೆ ಹಲವಾರು ದೋಣಿಗಳು ಗೋವೆ ಬದಿಯಿಂದ ಕತ್ತಲೆಯೊಳಗೆ ಬಂದು ಧಡವನ್ನು ಸೇರುತ್ತಿರುವದು ಕಂಡು ಬರದೆ ಇರಲಾರದು! ಪ್ರತಿ ನಿತ್ಯ ಹೀಗೆ [illegible] ತುಂಬ ಸರಾಯಿಯಾದರೂ ಈ ತಾಲೂಕಿನ ಕರಾವಳಿಗೆ ಬಂದು ಮುಟ್ಟುತ್ತಿದೆ. ಈ ವ್ಯಾಪಾರವನ್ನು ನೀವೇಕೆ ತಡೆಯುವದಿಲ್ಲ ಎಂದು ಕಸ್ಟಮ ಅಧಿಕಾರಿಗಳಿಗೆ ಕೇಳಿದರೆ ತಮಗೆ ಸಾಧ್ಯವಿಲ್ಲೆಂದು ಅವರು ಉತ್ತರ ಕೊಡುತ್ತಾರಂತೆ! ಅಬಕಾರಿ ಅಧಿಕಾರಿಗಳು ಅಬಕಾರಿ ಗುನ್ಹೆಗಳ ತಪಾಸಣೆ ಮಾಡುತ್ತಾರೇನೋ ಅರಿಯದು. ಆದರೆ ಅವರು ಹಿಡಿಯುವದು ಒಂದೆರಡು ಬಾಟ್ಲಿ ಇಲ್ಲವೆ ನಾಲ್ಕೆಂಟು ಡ್ರಾಮು ಸರಾಯಿ! ದಬ್ಬಗಟ್ಟಲೆ ಸರಾಯಿ ಇರುವ ಸ್ಥಳವೂ ಜನರೂ ಅವರಿಗೆ ಕಾಣಬೊಲ್ಲರು! ರಾತ್ರಿ ಕಾಲದಲ್ಲಿ ಸಮುದ್ರದೊಳಗೆ ಕಾವಲಿರುವ ಬಗ್ಗೆ ಒಂದು ಲಾಂಚು ಇಟ್ಟನಹೊರತು ಈ ಪರಿಸ್ಥಿತಿಯು ಎಂದೂ ಸುಧಾರಿಸಲಾರದು. ಸೀಮೆಯೊಳಗೆ ದೊಡ್ಡ ಅಬಕಾರಿ ಶಿಬಂದಿಯನ್ನು ಇಡುವದಕ್ಕಿಂತ ಸರಕಾರದವರು ಒಂದು ಲಾಂಚನ್ನು ಇಡುವದೇ ಶ್ರೇಯಸ್ಕರವೆಂದು ತೀವ್ರ ವಿಚಾರವಂತರ ಅಂಬೋಣವಿದೆ. ಇಲ್ಲದಿದ್ದರೆ ಜಿಲ್ಲೆಯಲ್ಲಿ ಈಗ ಜಾರಿಯಲ್ಲಿರುವ ಮದ್ಯಪ್ರತಿಬಂಧದಿಂದ ಸಮಾಜಕ್ಕೆ ಏನೂ ಪ್ರಯೋಜನವಾಗದು. ಸರಕಾರವು ತನ್ನ ಉತ್ಪನ್ನವನ್ನು ಮುಳುಗಿಸಿಕೊಂಡು, ಗೋವೆಯ ಸರಾಯಿಯ ವ್ಯಾಪಾರಿಗಳಿಗೂ ಕಳ್ಳತನದಿಂದ ಸರಾಯಿ ತಂದು ವ್ಯಾಪಾರ ಮಾಡುವ ಜನರಿಗೂ ದುಡ್ಡು ಗಳಿಸಲು ಅನುಕೂಲ ಮಾಡಿಕೊಟ್ಟ ಶ್ರೇಯಸ್ಸಷ್ಟೇ ನಮ್ಮ ಪಾಲಿಗೆ ಬರುವದು. ಸರಕಾರದವರು ದೀರ್ಘಾಲೋಚನೆ ಮಾಡಿ ಮದ್ಯಪ್ರತಿಬಂಧದ ಪೂರ್ಣ ಪ್ರಯೋಜನ ಸಮಾಜಕ್ಕೆ ಸಿಗುವಂತೆ ವ್ಯವಸ್ಥೆ ಮಾಡಬೇಕು.

ಇಲ್ಲಿಯ ಅರ್ಬನ ಸಹಕಾರಿ ಬ್ಯಾಂಕಿನ ವಾರ್ಷಿಕ ಸಭೆ ಕಳೆದ ರವಿವಾರ ಸಂಜೆ ಕೂಡಿತ್ತು. ಕಳೆದ ವರ್ಷ ಬ್ಯಾಂಕಿಗೆ ರೂ. ೨೯೦೫ ಲಾಭ ಉಳಿದಿದೆ. ಇದರೊಳಗಿಂದ ರೂ. ೨೦೦ನ್ನು ಶೇರು-ಭಾಗಗಾರರಗಳ ಒತ್ತಿಯ ಮೇಲೆ ಸಾಲ ಒಯ್ದು ಸಕಾಲದಲ್ಲಿ ತಮ್ಮ ಸಾಲ ಸಿಲಕು ಮಾಡಿದ ಜನರಿಗೆ ಒಪ್ಪಿಯಲ್ಲಿ ನೂರಕ್ಕೆ ೨ರಂತೆ ಸೂಟು ಕೊಡುವ ಸಲುವಾಗಿ ತೆಗೆದಿಟ್ಟು, ಉಳಿದ ಹಣದೊಳಗಿಂದ ಕಾಯಂ ನಿಧಿ, ಸಂಶಯಿತ ಸಾಲಗಳ ನಿಧಿ, ಧರ್ಮಾದಾಯ ನಿಧಿ, ಇಮಾರತ ನಿಧಿ ಮುಂತಾದ ಬೇರೆ ಬೇರೆ ನಿಧಿಗಳಿಗೆ ರೂ. ೧೯೪೦ ರ ಹಂಚುವಿಕೆ ಶೇರುದಾರರಿಗೆ ನೂರಕ್ಕೆ ೫ ಸಲೆ ಮುಂತೆ ಲಾಭ ಹಂಚಿ ಕೊಡಬೇಕೆಂದು ರೂ. ೮೦೦ ವಿನಿಯೋಗಿಸತಕ್ಕದ್ದೆಂದು ಕಾರ್ಯನಿರ್ವಾಹಕರು ಶಿಫಾರಸು ಮಾಡಿದ್ದಾರೆ. ಬ್ಯಾಂಕಿನವರು ಸಾಲಗಾರರಿಗೆ ಕೊಟ್ಟ ತರತರದ ಸವಲತ್ತುಗಳ ಮೂಲಕ ಹಿಂದೆ ೧ ಲಕ್ಷ ರೂಪಾಯಿಗಳಿಗೂ ಮಿಕ್ಕಿದ್ದ ಪಿಟ್ಟುಬಾಕಿ ಸಾಲದ ರಕಮು ಕಳೆದ ಜೂನ ತಿಂಗಳ ಕೊನೆಗೆ ೨೭ ಸಾವಿರ ರೂಪಾಯಿಗಳಿಗೆ ಇಳಿದಿದೆ. ಚಾಲೂ ವರ್ಷದಲ್ಲೂ ಸಾಲಗಾರರಿಗೆ ಬೇರೆ ಬೇರೆ ಸವಲತ್ತುಗಳನ್ನು ಕೊಟ್ಟು ಸಾಲ-ವಸೂಲಿಯ ಕೆಲಸ ಸಮಾಧಾನಕರ ಮಾಡಬೇಕಾಗಿ ಚಾಲಕರು ನಿರ್ಧರಿಸಿದ್ದಾರೆಂದು ವರದಿಯ ಮೇಲಿಂದ ಕಂಡು ಬರುತ್ತದೆ. ಮಹಾಸಭೆಯಲ್ಲಿ ಹೊಸ ಚಾಲಕ ಮಂಡಳದ ನೇಮಣೂಕಿಯಾಯಿತು. ಅವರಲ್ಲಿ ಹಳೆಯ ಚಾಲಕ ಮಂಡಳದ ೮ ಜನರೂ ರಾ|| ಮಂಗೇಶ ಮಿಜಾರ್ನಕರರ ಸ್ಥಳದಲ್ಲಿ ಅವರ ಮಗಂದಿರೂ ಆರಿಸಿ ಬಂದಿದ್ದಾರೆ. ಬ್ಯಾಂಕಿನವರು ಗುಪ್ತಮತದಾನ-ಪದ್ಧತಿಯನ್ನು ಮಾತ್ರ ಇನ್ನೂ ಏಕೆ ಅಮಲಿನಲ್ಲಿ ತರಲಿಲ್ಲವೆಂಬುದು ಒಂದು ಕೂಟ-ಪ್ರಶ್ನೆ!

ಹೊನ್ನಾವರ— (ತಾ. ೧೧-೯-೪೧) ತಮ್ಮ ಪ್ರಾಯದ ೫೫ನೇ ವರ್ಷ ಮುಕ್ಕಿದ ಸರಕಾರಿ ನೌಕರರು ಸೇವಾನಿವೃತ್ತರಾಗತಕ್ಕದ್ದೆಂದು ಸರಕಾರದವರು ಒಂದು ನಿಯಮ ಮಾಡಿದ್ದಾರೆ. ಆ ನೇಮ ನಮ್ಮ ನಗರ ಸಭೆಗೆ ಅನ್ವಯಿಸುವದಿಲ್ಲವೋ ಏನೋ! ನಗರ ಸಭೆಯ ಕಚೇರಿಯೊಳಗಿನ ಶಿಪಾಯಿಗೆ ಈಗ ೬೦ ವರ್ಷ ಪ್ರಾಯವಿರಬಹುದು. ಅವನಿಂದ ಸರಿಯಾಗಿ ಕೆಲಸ ಸಾಗುವದಿಲ್ಲೆಂದ್ಯರಿತು, ಹೋದ ವರುಷವೇ ಅವನಿಗೆ ರಜೆ ಕೊಟ್ಟು ಬೇರೊಂದು ಇಸಮಿಗೆ ನೇಮಿಸಿಕೊಳ್ಳಬೇಕೆಂಬ ಸೂಚನೆ ಬಂದಿತ್ತು. "ಈಗ ಮಳೆಗಾಲದಲ್ಲಿ ಅವನಿಗೆ ಮನೆಗೆ ಕಳಿಸುವದು ಬೇಡ; ಮಳೆಗಾಲ ತೀರುವ ತನಕ ಅವನು ಇರಲಿ." ಎಂದು ಸದಸ್ಯರೊಬ್ಬರು ಹೇಳಿದ್ದರಿಂದ ಆ ಸೂಚನೆ ಅಷ್ಟಕ್ಕೇ ಉಳಿದಿತ್ತು. ಈಗ ಆ ಮಳೆಗಾಲ ತೀರಿ ಇನ್ನೊಂದು ಮಳೆಗಾಲ ತೀರುತ್ತ ಬಂದರೂ ಹೊಸ ಶಿಪಾಯಿಗೆ ನೇಮಿಸಿಕೊಳ್ಳುವ ಮಾತನ್ನೇ ಯಾರೂ ತೆಗೆಯುವದಿಲ್ಲ! ಅದೇಕೆ?

ಕಾಯಂ ನಾಕೇದಾರನು ರಜೆಯ ಮೇಲೆ ಹೋದಾಗ ಅವನ ಬದಲಿ ನೋಡಲಿಕ್ಕೆ ನಮ್ಮ ನಗರ ಸಭೆಯವರು ಒಬ್ಬ "ರಿಲೀವ್ಹಿಂಗ ನಾಕೇದಾರ"ನಿಗೆ ನೇಮಿಸಿಕೊಂಡಿರುತ್ತಾರೆ. ಆದರೆ ಅವನಿಗೆ ಕೆಲಸವೇನೂ ಇಲ್ಲ! ಕಚೇರಿಯಲ್ಲಿ ನೊಣ ಜಾಡಿಸುತ್ತ ಕುಳಿತುಕೊಳ್ಳುವದೇ ಅವನ ಕೆಲಸ! ನಾಕೇದಾರನು ರಜೆಯ ಮೇಲೆ ಹೋದಾಗಲೂ ಅವನು ಮಾಡುವ ಕೆಲಸವಿದೇ! ಮೊನ್ನೆಯೇ ಭಿಕಾಸ್ತಾ ನಾಕೆಯ ನಾಕೇದಾರನು ೪-೫ ದಿನಗಳ ರಜೆ ತಕ್ಕೊಂಡಿದ್ದನು. ಆಗ ಅಲ್ಲಿ ಈ ರಿಲೀವ್ಹಿಂಗ ನಾಕೇದಾರನಿಗೆ ಕಳಿಸದೆ ಚೇರಮನ್ನರು ಹೊಸ ಉಮೇದವಾರನೊಬ್ಬನಿಗೆ ಕಳಿಸಿಕೊಟ್ಟಿದ್ದರು! ಇದಕ್ಕೆ ಸಾರ್ವಜನಿಕ ಹಣದ ಮಿತವ್ಯಯವನ್ನಬೇಕೋ ದುಂದುಗಾರಿಕೆಯನ್ನಬೇಕೋ ವಾಚಕರೇ ನಿರ್ಣಯಿಸಲಿ!

(ತಾ. ೨೬-೯-೪೧) ಶಾಲಾ ಶಿಕ್ಷಕರ ಸಂಬಳ ಬಟವಡೆ ಮಾಡುವ ಇಲ್ಲಿಯ ಶಿಪಾಯಿಯ ಮೇಲೆ ಈಗ ಸಿಸಿ ವಿಭಾಗದ ಪ್ರಾಂತ ಸಾಹೇಬರ ಮುಂದೆ ಖಟ್ಲೆ ನಡೆದಿದೆ. ಫಿರ್ಯಾದಿಗಳಾದ ರಾ| ಡೇಂಗಾ ನಾಯ್ಕರು ಸಾಕ್ಷಿದಾರರಿಗೆ ಹಾಗೆ ಹೇಳಿರಿ, ಹೀಗೆ ಹೇಳಿರಿ ಎಂದು ಬೋಧಿಸುತ್ತಾರಾಗಿ ವದಂತಿಯಿದೆ. ಮೊನ್ನೆ ಕುಮಟೆಯ ಮುಕ್ಕಾಮಿನಲ್ಲಿ ಈ ಖಟ್ಲೆಯ ವಿಚಾರ ನಡೆವಾಗ ರಾ| ನಾಯ್ಕರು ಹೀಗೆ ಸಾಕ್ಷಿಗಾರ ಜನರಿಗೆ ದುರ್ಬೋಧೆ ಕೊಡುತ್ತಿರುವ ಸಂಗತಿ ಮೆಜಿಸ್ಟ್ರೇಟರ ಕಿವಿಯ ತನಕ ಮುಟ್ಟಿ ಮೆಜಿಸ್ಟ್ರೇಟರು ರಾ| ನಾಯ್ಕರ ಕಿವಿ ಹಿಂಡಿದರಾಗಿ ವಾರ್ತೆ ಬಂದಿದೆ! ಆದರೂ ನಾಯ್ಕರು ತಮ್ಮ ವ್ಯಾಪಾರ ನಿಲ್ಲಿಸಿರುವದಿಲ್ಲ. ಊರೊಳಗಿನ

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್,
ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯುಳ್ಳ ಇವೆ. ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯುರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents-
D. K. Nayak Bros.
K. N Nayak.
Honavar Agents-
R. V. Prabhu.

K. Padmanabha Rao & Sons,
BELGAUM
Chief Agents for
Karnatak Districts & S. M. States.

ಗೃಹಸ್ಥರ ಸಹಾಯ ತೆಗೆದುಕೊಂಡು ಹಾಕ್ತಿ ಜನರಿಗೆ ತಿರುಗಿಸುವ ಪ್ರಯತ್ನವನ್ನು ಅವರು ಹಾಗೆಯೇ ನಡಿಸಿರುತ್ತಾರಂತೆ. ವಿದ್ಯಾರ್ಥಿಗಳಿಗೆ ಅವರ ಈ ನಡತೆ ಸರಿದೋರದಿದ್ದರೆ. ಅವರು ನಾಯ್ಕರಿಗೆ ದೂರದೊಳಗಿನ ಬೇರೆ ಊರಿಗೆ ವರ್ಗ ಮಾಡಿ ಅವರಿಗೆ ತಿರುಗಿ ಇಂಥ "ಅವ್ಯಾಪಾರೇಷು ವ್ಯಾಪಾರ" ಮಾಡಬಾರದಂತೆ ವ್ಯವಸ್ಥೆ ಮಾಡಬೇಕಾಗಿ ಸೂಚನೆಯಿದೆ.

ಕಳೆದ ತಾ. ೨೦ನೇಗೆ ಇಲ್ಲಿಯ ಶಾಲಾ ತಪಾಸಣೆ ರಾ॥ ಅಂಕಲೇಕರರು ಗುಂಡಿಬೈಲಿಗೆ ಹೋಗಿದ್ದರು. ಮಧ್ಯಾಹ್ನದಲ್ಲಿ ಶಾಲೆಯೊಳಗೆ ಊರ ಜನರೂ ನೆರೆದಿದ್ದು ಹಳ್ಳಿಗಳ ಪ್ರಮುಖರೂ ರಾ॥ ಅಂಕಲೇಕರ ಅಧ್ಯಕ್ಷತೆಯಲ್ಲಿ ಸಭೆಗೂಡಿ ಗುಂಡಿಬೈಲ ಶಾಲೆಯಲ್ಲಿ ಒಂದು ಪ್ರೌಢ ಶಿಕ್ಷಣ ವರ್ಗವನ್ನು ತೆರೆಯಲು ಸಹಾಯ ಮಾಡಬೇಕೆಂದು ನಿರ್ಧರಿಸಿರುತ್ತಾರೆ. ಗುಂಡಿಬೈಲ ಶಾಲೆಯ ರಾ॥ ದುರ್ಗಾ ನಾಯ್ಕರು ಅದರಂತೆ ಈಗ ಒಂದು ವರ್ಗವನ್ನು ತೆರೆದಿದ್ದಾರೆ.

(ತಾ. ೨೭-೯-೪೧) ಈಗ ಕುಮಟಾ–ಹೊನ್ನಾವರ ಮೋಟಾರ ಸರ್ವೀಸಿನವರು ಬಂಡಿಗಳ ಓಡಾಟ ಕಡಿಮೆ ಮಾಡಿದ್ದರಿಂದ ಪ್ರಯಾಣಿಕರಿಗೆ ಬಲು ತೊಂದರೆಯಾಗುತ್ತಿದೆ. ವಿಶೇಷವಾಗಿ ಮುಂಬಯಿ, ಬೆಳಗಾಂವ, ಹುಬ್ಬಳ್ಳಿಗೆ ಹೋಗುವ ಜನರಿಗೆ ಕಷ್ಟವಾಗುತ್ತಿದೆ. ಹೊನ್ನಾವರ-ಧಾರವಾಡ ಗಾಡಿಯು ಈಗ ನಿಂತಿದ್ದು, ಹುಬ್ಬಳ್ಳಿಗೆ ಒಂದೇ ಗಾಡಿ ಹೋಗುತ್ತಿದೆ. ಕರ್ನಾಟಕ ಎಕ್ಸಪ್ರೆಸ್ ಸರ್ವೀಸಿನವರು ಇದೇ ಬರುವ ತಾ. ೧ರಿಂದ ಇಲ್ಲಿಂದ ಬೆಳಗಾಂವ ತನಕ ಸರ್ವೀಸು ಇಡುತ್ತಾರೆಂದು ಒಂದು ಸುದ್ದಿಯುಂಟು.

ನಿನ್ನೆಯಿಂದ ಇಹಾಸಗಳ ಕಟ್ಟಡದಲ್ಲೇ ಆಟ ತಿರುಗಿ ಸುರುವಾಗಿದೆ! ಪೋಲೀಸರು ಅಲ್ಲಿ ಆಡಹೋದ ಒಬ್ಬರ ಮೇಲಾದರೂ ಖಟ್ಲೆ ಮಾಡಿ ಈ ಆಟ ಜೂಗಾರದಲ್ಲಿ ಬರುತ್ತದೋ ಇಲ್ಲೆಂದು ನ್ಯಾಯಾಸನವೆದುರಿಗೆ ನಿರ್ಣಯಿಸಿ ಕೊಳ್ಳಬೇಕಾಗಿ ಸೂಚನೆಯಿದೆ.

ಕೆಕ್ಕಾರ— (ತಾ. ೨೫-೯-೧೯೪೧) ಕಳೆದ ತಾ. ೧೯ನೇಗೆ ಮಧ್ಯಾಹ್ನ ಇಲ್ಲಿಯ ಶ್ರೀ ರಘೋತ್ತಮ ಮಠದೊಳಗೆ ಹೊನ್ನಾವರ ಮಾಮಲೇದಾರ ರಾ। ಹಿರೇಮಠದವರ ಅಧ್ಯಕ್ಷತೆಯಲ್ಲಿ ಕೆಕ್ಕಾರ ಸೀಮೆಯ ಗ್ರಾಮಸುಧಾರಣಾ ಕಮೀಟಿಯ ಸಭೆ ಸೇರಿತ್ತು. ಕಮೀಟಿಯ ಕಾರ್ಯದರ್ಶಿಗಳಾದ ರಾ॥ ಗಣೇಶ ಭಟ್ಟರು ಕಮೀಟಿಯು ಈ ೫ ವರ್ಷಗಳಲ್ಲಿ ಮಾಡಿದ ಕಾರ್ಯದ ವರದಿಯನ್ನು ಓದಿ ಹೇಳಿ, ತಮ್ಮ ಕಮೀಟಿಯು ಮಾದರಿ ಕಮೀಟಿಯಾಗಬೇಕಾಗಿ ಆಶೆ ವ್ಯಕ್ತಗೊಳಿಸಿದರು. ರಾ॥ ಹಿರೇಮಠರವರು ಕಮೀಟಿಯ ಕೆಲಸ ನೋಡಿ ತಮಗೆ ಸಮಾಧಾನವಾಗಿದೆಯೆಂದೂ, ಇದು ಮಾದರಿ ಕಮೀಟಿಯಾಗಿ ಆರಿಸಲ್ಪಡಲು ಪಾತ್ರವಿರುತ್ತದೆಂದೂ ತಾವು ಹಾಗೆ ಶಿಫಾರಸು ಮಾಡುತ್ತೇನೆಂದೂ ಹೇಳಿ, ಎಲ್ಲರೂ ಒಕ್ಕಟ್ಟಿನಿಂದ ನಡೆಯಬೇಕೆಂದು ಉಪದೇಶ ಮಾಡಿದರು. ತಮ್ಮ ಭಾಷಣವನ್ನು ಹಾಗೆಯೇ ಮುಂದರಿಸಿ ಈಗ ನಡೆದಿರುವ ಮಹಾಯುದ್ಧದ ಸಂಕಟಕಾಲದಲ್ಲಿ ಜನರು ಸರಕಾರಕ್ಕೆ ಸಹಾಯ ಮಾಡುವದು ಅವಶ್ಯವಿರುತ್ತದೆಂದು ಪ್ರತಿಪಾದಿಸಿದರು. ರಾ॥ ಬಾಳೇಮನೆ ಚನ್ನಪ್ಪ ನಾಯ್ಕ, ಗಣೇಶ ಭಟ್ಟ ಮೊದಲಾದವರೂ ಭಾಷಣ ಮಾಡಿ ಯುದ್ಧಯತ್ನ ಕಾರ್ಯದಲ್ಲಿ ಪ್ರಜೆಗಳು ಸರ್ವ ಪರಿಯಿಂದ ಸರಕಾರಕ್ಕೆ ನೆರವಾಗಬೇಕಾದದ್ದು ಪ್ರಜೆಗಳ ಕರ್ತವ್ಯವಿರುವದೆಂದು ಪ್ರತಿಪಾದಿಸಿದರು.

ಇಲ್ಲಿಯ ಶ್ರೀ ಸಿದ್ಧಿವಿನಾಯಕ ಶಾಲೆಗೆ ಒಂದು ಸ್ವತಂತ್ರ ಇಮಾರತು ಅವಶ್ಯವಿದ್ದು ಆ ಬಗ್ಗೆ ನಿಧಿಸಂಗ್ರಹ ಮಾಡುವ ಕೆಲಸ ನಡೆದಿದೆ. ೮-೧೦ ದಿನಗಳಲ್ಲಿ ರೂ. ೧೬೫ರಷ್ಟು ವಾಗ್ದಾನಗಳು ದೊರೆತಿವೆ. ಇಮಾರತಿನ ಪೂರ್ವ ತಯಾರಿಗೆ ಈಗಾಗಲೇ ಆರಂಭವಾಗಿದೆ, ಅದರ ಅಡಿಗಲ್ಲು ಜಿಲ್ಲಾಧಿಕಾರಿಗಳ ಕೈಯಿಂದ ಕೂಡ್ರಿಸುವ ಆಲೋಚನೆ ನಡೆದಿದೆ.

ಶಿರಾಲಿ— (ತಾ. ೨೪-೯-೪೧) ಶಿರಾಲಿಯ ಪೇಟೆಯೊಳಗಿಂದ ಹಾದು ಹೋಗುವಾಗ ಮೋಟಾರ ಬಂಡಿಗಳು ತಮ್ಮ ವೇಗವನ್ನು ನಿಯಂತ್ರಿಸುವದವಶ್ಯವಿದೆ. ಮೊನ್ನೆ ಒಂದು ಬಂಡಿಯು ಬರುತ್ತಿದ್ದಾಗ ಹುಡುಗನೊಬ್ಬನಿಗೆ ಪೆಟ್ಟಾಗಿದೆ.

ನಿನ್ನೆ ಪೇಟೆಯಲ್ಲಿ ಒಬ್ಬ ಮುಸಲ್ಮಾನ ಯುವಕನೂ ಇನ್ನೊಬ್ಬ ಹಿಂದುವೂ ಜಗಳವಾಡಿದರು. ಯುವಕನು ಚೂರಿ ಹಾಕಲು ತಯಾರಾಗಿದ್ದನು! ನೆರೆಹೊರೆಯವರು ಹಿಡಿದು ತಪ್ಪಿಸಿದ್ದರಿಂದ ಸ್ವಲ್ಪದರಲ್ಲೇ ತಂಟೆ ನಿಂತಿತು.

ರಾ॥ ಭವಾನಿಶಂಕರ ರಾಯ್ಸದ ಎಂಬ ಸದ್ಗೃಹಸ್ಥರು ೪-೬ ದಿನ ೬ ಆಣೆಗೆ ಒಂದು ಪಾಯಲಿಯಂತೆ ಅಕ್ಕಿ ಮಾರಾಟಕ್ಕಿಟ್ಟಿದ್ದರು. ಅದರಿಂದ ಬಡ ಜನರಿಗೆ ತುಸು ಸಮಾಧಾನವಾಯಿತು. ಇನ್ನುಳಿದ ಶ್ರೀಮಂತರೂ ರಾ॥ ರಾಯ್ಸದರ ಅನುಕರಣೆ ಮಾಡಬಹುದು.

ಭಟಕಳ— (ತಾ. ೨೭-೯-೪೧) ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ನವರಾತ್ರಿ ಉತ್ಸವದ ಸಂಬಂಧ ವಿಠಾಪುರದ ರಾ॥ ಬಾಲಕೃಷ್ಣ ಶಾಸ್ತ್ರೀ ಇವರ ಕೀರ್ತನೆಗಳು ನಡೆದಿವೆ. ಅವರ ಗಾಯನಕ್ಕೆ ಮರುಳಾಗಿ ಜನರು ಕಿಕ್ಕಿರಿದು ಕೀರ್ತನೆ ಕೇಳಲು ಕೂಡುತ್ತಾರೆ. ಕಲ್ಯಾಣಪುರದ ಸಂಜೀವರಾಯರೆಂಬ ಕೀರ್ತನಕಾರರೂ ಬಂದಿದ್ದಾರೆ. ಬುಧವಾರ, ಗುರುವಾರ ಶ್ರೀ ಹನುಮಂತ ದೇವರ ಗುಡಿಯಲ್ಲಿ ಅವರ ಕೀರ್ತನೆಗಳಾದವು.

ಜಾಲಿ ಮತ್ತು ತಲಗೋಡ ಗ್ರಾಮಗಳಲ್ಲಿ ಕಳ್ಳತನದಿಂದ ಸರಾಯಿ ತಯಾರಾಗುತ್ತದೆಂದು ಬಹಳ ದಿನಗಳಿಂದ ಕೇಳಬರುತ್ತದೆ. ಅಧಿಕಾರಿಗಳು ಆ ವ್ಯಾಪಾರವನ್ನು ನಿಲ್ಲಿಸಬಾರದೇ?

ಶಿರಸಿ— ಈ ವರ್ಷ ಮಳೆ ಸರಿಯಾಗಿ ಬೀಳದ್ದರಿಂದ ಬೆಳೆಯ ಸ್ಥಿತಿ ಕೆಟ್ಟುಹೋಗಿದೆ. ಬತ್ತದ ಹೊಲಗಳಲ್ಲಿ ನೆಟ್ಟಿ ಮಾಡುವ ಪ್ರಸಂಗ ಬಂದು ರೈತರು ಕಷ್ಟದಲ್ಲಿ ಬಿದ್ದರು! ಈಗ ತುಸು ಮಳೆಯಾಗಹತ್ತಿದೆ. ತಾ. ೧೯ನೇಗೆ ಮಧ್ಯಾಹ್ನದಲ್ಲಿ ಬಹಳ ಮಳೆಯಾಯಿತು

ಕಳೆದ ವರ್ಷ ಅಡಿಕೆ ತೋಟಗಳಲ್ಲಿ ಸರಿಯಾಗಿ ಬೆಳೆ ಬರದಿದ್ದರೂ ಸರಕಾರದವರು ಕಿರ್ದಿಯಲ್ಲಿ ಏನೂ ಸೂಟು ಬಿಡಲಿಲ್ಲ! ಈ ವರ್ಷದ ಸ್ಥಿತಿ ಇನ್ನೂ ಕೆಟ್ಟಿದೆ! ಸರಕಾರದವರು ದಯೆ ತೋರಿಸದಿದ್ದರೆ ಕಿರ್ದಿ ವಸೂಲಾಗುವದು ಕಠಿಣವೇ ಸರಿ! ಶಿರ್ಸಿ ಅರ್ಬನ ಸಹಕಾರಿ ಬೇಂಕಿನ ಸ್ಥಿತಿ ನೋಡಿದರೂ ಜನರ ಆರ್ಥಿಕ ಸ್ಥಿತಿ ಎಲ್ಲಿ ಮುಟ್ಟಿದೆಯೆಂಬದು ನಿಚ್ಚಳವಾಗಿ ಕಂಡುಬರುತ್ತದೆ. ೧೯೩೧-೩೨ರಲ್ಲಿ ನೂರಕ್ಕೆ ೧೦ರಂತೆ ಶೇರುದಾರರಿಗೆ ನಫೆ ಹಂಚಿದ ಈ ಬೇಂಕು ಈ ೧೦ ವರ್ಷಗಳಲ್ಲಿ ನಫೆಯ ಪ್ರಮಾಣವನ್ನು ತಗ್ಗಿಸುತ್ತ ತಗ್ಗಿಸುತ್ತ ೧೯೩೯-೪೦ನೇ ವರ್ಷದಲ್ಲಿ ರೂ. ೩-೨-೦ಯಂತೆ ನಫೆ ಹಂಚಿತು. ೧೯೪೦-೪೧ರಲ್ಲಿಯೂ ಬೇಂಕಿಗೆ ಬರೇ ರೂ. ೧೬೪೫ ಲಾಭವಾಗಿದೆ!

ಮೊನ್ನೆ ಜರುಗಿದ ಅರ್ಬನ ಬೇಂಕಿನ ಸಭೆಯಲ್ಲಿ ರಾ॥ ಕೇಶವೈನವರೂ ಡಾ॥ ಘರ್ವಾಂಡೀಕರರೂ ಅನುಕ್ರಮವಾಗಿ ತಮ್ಮ ಉಪಾಧ್ಯಕ್ಷತನಕ್ಕೂ ಅಧ್ಯಕ್ಷಪದಕ್ಕೂ ರಾಜೀನಾಮೆ ಕೊಟ್ಟಿರುತ್ತಾರೆ. ಕಾರಣವೇನೆಂಬದು ತಿಳಿಯಲಿಲ್ಲ.

ಸ್ವಾದಿ-ಬಂಧುಗಳು ವಿದ್ಯಾರ್ಥಿಗಳ ಸೇವೆಯನ್ನು ತಮ್ಮ ಖಾಸಗಿ ಕೆಲಸಕ್ಕಾಗಿ ಮಾಡಿದ ಪ್ರಕರಣವು ಮೇಲಧಿಕಾರಿಗಳ ಕಿವಿ ತನಕ ಹೋಗಿ ಚೌಕಶಿಗಳಾಗಹತ್ತಿವೆ. ಆದರೂ ಸ್ವಾದಿ-ಬಂಧುಗಳಿಗೆ ಇಲ್ಲಿಂದ ಬೇರೆ ಕಡೆಗೆ ಕಳಿಸಿ ನಿಜಾಂಶಗಳನ್ನು ಹುಡುಕಿ ತೆಗೆಯಬೇಕೆಂಬ ಉತ್ಕಂಠೆ ಇರದ ತನಕ, ಈ ಚೌಕಶಿಗಳು ನಿಷ್ಪ್ರಯೋಜಕವೆಂದೇ ಹೇಳಬೇಕು! ಸ್ವಾದಿ ಬಂಧುಗಳು ಈಗ ಎಲ್ಲ ಸಾಮಾನು ತಮ್ಮ ಸಹೋದರರ ಅಂಗಡಿಯಲ್ಲಿ ಇಟ್ಟು, ಬೇಕಾದಂತೆ ಹುಡುಗರ ಕಡೆಯಿಂದ ತರಿಸಿ ವ್ಯಾಪಾರ ಮಾಡುತ್ತಿದ್ದಾರೆ.

ಸ್ವಾದಿ-ಬಂಧುಗಳು ವಿದ್ಯಾರ್ಥಿಗಳ ಹುಕುಮನ್ನು ಬಿಟ್ಟುಬಿಟ್ಟು ತಮ್ಮ ಕಡೆಗಿದ್ದ ಮೆಕ್ಮಿಲನ್ ಕಂಪನಿಯ ಹಳೆಯ ಪುಸ್ತಕಗಳನ್ನು ಮಾರಿದ ಕಥೆ ಈ ಹಿಂದೆ "ವೃತ್ತ"ದಲ್ಲಿ ಬಂದಿದೆ. ಆ ಪುಸ್ತಕಗಳನ್ನೇ ಈ ವರ್ಷ ಕಲಿಸಗೊಡಬೇಕೆಂದು ಕೆಲವು ಶಾಲೆಯವರು ಮಾಡಿದ ಪ್ರಯತ್ನಗಳು ನಿಷ್ಫಲವಾಗಿವೆ. ಅಧಿಕಾರಿಗಳು ಅವರ ಬಿನ್ನಹಗಳನ್ನು ಸಂಪೂರ್ಣವಾಗಿ ತಿರಸ್ಕರಿಸಿ "ಸೊಗಸಿನ ಓದು" ಮಾಲೆಯ ಕ್ರಮಿಕ ಪುಸ್ತಕಗಳನ್ನೇ ಕಲಿಸಬೇಕೆಂದು ಆಜ್ಞಾಪಿಸಿದ್ದಾರೆ. ಅಂತು ಇಂತು ಹಳೆಯ ಪುಸ್ತಕಗಳನ್ನು ಕೊಂಡುಕೊಂಡ ಹುಡುಗರ ಮೇಲೆ ಕಷ್ಟ ಬಂದಿದೆ. ಈ ಕಷ್ಟಗಳಿಗೆ ಹೊಣೆಗಾರರಾದ ಸ್ವಾದಿ-ಬಂಧುಗಳು ಮಾತ್ರ ಸುಖದಿಂದಿದ್ದಾರೆ.

ಸಿದ್ಧಾಪುರ— ಕಳೆದ ತಾ. ೧೨ರಿಂದ ತಾ. ೧೪ರ ವರೆಗೆ ಶ್ರೀ ವಿಠೋಬ ದೇವರ ಗುಡಿಯಲ್ಲಿ ಕರ್ಕಿಯ ವೇ॥ ಪರಮೇಶ್ವರ ಭಟ್ಟರ ಗೀತೆಯ ಮೇಲೆ ಬೋಧಪ್ರದ ಪ್ರವಚನಗಳಾದವು. ಈಗ ನವರಾತ್ರಿಯಲ್ಲಿ ಶ್ರೀ ವೆಂಕಟರಮಣ ದೇವರ ಗುಡಿಯಲ್ಲಿ ಪುರಾಣ ಹೇಳುತ್ತಾರೆ.

ಸಾಹಿತ್ಯ ಸೇವಾ ಸಂಘದವರು ಗಾಂಧಿ ಜಯಂತಿಯ ದಿನ ಕಾವ್ಯವಾಚನ, ವ್ಯಾಯಾಮ-ಪ್ರದರ್ಶನ, ಕೈಗಾರಿಕೆಗಳ ಪ್ರದರ್ಶನ ಮುಂತಾದ ವಿವಿಧ ಕಾರ್ಯಕ್ರಮವನ್ನಿಟ್ಟುಕೊಂಡಿದ್ದಾರೆ.

ಕಾರವಾರ — "ಸತ್ಯವಾದಿ"ಗಳೊಬ್ಬರು ಬರೆಯುತ್ತಾರೆ:— ಕಾರವಾರ ನಗರ ಸಭೆಯ ಅಧ್ಯಕ್ಷಪದದ ಚುನಾವಣೆಯಲ್ಲಿ ಕಾರವಾರದ ಸತ್ಯಸ್ಥಿತಿ ರಾ॥ ಸಾ॥ ಶೇಲಂಗರಿಗೆ ಅನುಕೂಲವಿದೆ. ರಾವಸಾಹೇಬರ ಬಗ್ಗೆ ಎಷ್ಟೇ ಅಪಪ್ರಚಾರ ಮಾಡಿದರೂ ರಾ॥ ನಾವಿನಕುರ್ವೆ

"ಈಸ್ಟ-ಡ್ರೋಪರ"ನ ಅಭಿಪ್ರಾಯ.

ಬರೀ ಹದಿನೇಳು ವರ್ಷಗಳಲ್ಲಿ ೧॥ ಕೋಟಿ ರೂ.ಗಳಷ್ಟು ಜೀವನಿಧಿಯನ್ನು ಕಲೆಹಾಕಿದ ಹಾಗೂ ೪೦ ಲಕ್ಷ ರೂ.ಗಳಿಗೂ ಮಿಕ್ಕಿ ವಾರ್ಷಿಕ ಉತ್ಪನ್ನ ಪಡೆಯುವಷ್ಟು ಉತ್ತಮ ಸ್ಥಿತಿಗೆ ಬಂದು ಮುಟ್ಟಿದ, ಎರಡೇ ವರ್ಷಗಳಲ್ಲಿ ಆಡಳಿತೆಯ ಖರ್ಚಿನ ಪ್ರಮಾಣವನ್ನು ನೂರಕ್ಕೆ ೧೧ರಷ್ಟು ಇಳಿಸಿದ ಮತ್ತು ಹಿಂದುಸ್ಥಾನದ ಮುಖ್ಯ ಮುಖ್ಯ ಕೇಂದ್ರಗಳಲ್ಲಿ ತನ್ನ ಸ್ವಂತ ಮಾಲ್ಕಿಯ ಭವ್ಯ ಕಚೇರಿ-ಮನೆಗಳನ್ನು ಕಟ್ಟಿಸಿಕೊಂಡು ವೈಭವದಿಂದ ಮೆರೆಯುವ ಬೇರೆ ಆವ ಕಂಪನಿಯನ್ನೂ ನಾನು ಕಂಡಿಲ್ಲ! **ಲಕ್ಷ್ಮೀ** ವಿಮೆ ಕಂಪನಿಯು ನಿಜವಾಗಿಯೂ ಲಕ್ಷ್ಮೀ ದೇವಿಯ ಪ್ರೇಮಾನುಗ್ರಹವನ್ನು ಸಂಪಾದಿಸಿದೆ!

ತಾ. ೨೬-೪-೧೯೪೧ರ "ಇಂಡಿಯನ್ ಫಿನೆನ್ಸ್" ಪತ್ರಿಕೆಯಿಂದ

ವರ್ಷ	ಜೀವ ನಿಧಿ	ವೆಚ್ಚದ ಪ್ರಮಾಣ
೧೯೨೫—೨೬	೬೪,೪೨೯	೬೬.೯೮
೧೯೨೯—೩೦	೧೫,೦೦,೦೦೦	೩೬.೮೬
೧೯೩೪—೩೫	೫೯,೧೩,೮೯೯	೩೫.೯೩
೧೯೩೯	೧,೩೩,೪೮,೫೯೯	೩೧.೫೭
೧೯೪೦	೧,೫೫,೨೨,೧೯೭	೨೫.೬೬

ಬೋನಸ್ಸು:- ಎಂಡೌಮೆಂಟ ವಿಮೆಗಳ ಮೇಲೆ: ೧೦೦೦ ರೂ.ಗೆ ಪ್ರತಿ ವರ್ಷ ರೂ. ೧೫.
ಆಜೀವ ವಿಮೆಗಳ ಮೇಲೆ: ೧೦೦೦ ರೂ.ಗೆ ಪ್ರತಿ ವರ್ಷ ರೂ. ೧೮.

ದಿ ಲಕ್ಷ್ಮೀ ಇನ್ಸ್ಯೂರನ್ಸ ಕಂಪನಿ, ಲಿ.,
ಮುಖ್ಯ ಕಚೇರಿ: ಮೆಕ್ಲಾಡ ರೋಡ, **ಲಾಹೋರ.**

ಮುಂಬಯಿ ಶಾಖೆ:—
"ಲಕ್ಷ್ಮೀ ಬಿಲ್ಡಿಂಗ"
ಫಿರೋಜಶಹಾ ಮೆಹತಾ ರೋಡ.

ಕಲಕತ್ತಾ, ಮುಂಬಯಿ, ಮದ್ರಾಸ, ಕರಾಚಿ, ಲಖನೌ,
(ನಿಜಾಮ) ಹೈದರಾಬಾದ, ಮೊಂಬಾಸಾ (ಬ್ರಿಟಿಶ ಪೂರ್ವ ಆಫ್ರಿಕಾ)
ಈ ಊರುಗಳಲ್ಲಿ ಶಾಖೆಗಳಿವೆ.

ಯುವರ ಪ್ರತಿಷ್ಠೆ ಬೆಳೆಯಲಾರದು. ಲೋಕಮತ [illegible] ವಾಗಿ ರಾಜಸಾಹೇಬರಿಗೆ ಅನುಕೂಲಿಸಿದ ಅವರೇ [illegible] ತ ಅಧ್ಯಕ್ಷರಾಗುವರು. ಹಿಂದೆ ರಾಜಸಾಹೇಬರ " [illegible] ಯಂತಿದ್ದ " ರಾ ಮಹಾಸಭೆಯವರು [illegible] ಅವರೊಡನೆ ಹೋರಾಡುವಷ್ಟರ ಮಟ್ಟಿಗೆ [illegible] ರಾಜಸಾಹೇಬರ [illegible] ಕೊಡಬಾರದೇ ? ರಾಜಸಾಹೇಬರ [illegible] ಮಹಾಸಭೆಯವರಿಗೆ ಮಹತ್ವ [illegible] ಜನರಂಗಗಳಲ್ಲಿ ಮುನ್ನಡೆ ಪಡೆದ ರಾಜಸಾಹೇಬರಿಗೆ [illegible] ನನಗಂತೂ ಸಮಾಧಾನದಿಂದ ಅಧ್ಯಕ್ಷ [illegible] ಸಬೇಕಾಗಿ ನನ್ನ ನಿವೇದನ [illegible].

ಕಳೆದ ೩೦, ೩೧ನೇ ತಾರೀಖು [illegible] ಹುಡುಗರ [illegible] ನಿಶಾನೆ ಹಿಡಿದು [illegible] ಒಂದು ಕಡೆ [illegible] ಜನ ! ಮತ್ತು [illegible] ನೀರೊಳಗೆ ಮುಳುಗುತ್ತಿದ್ದರು ! [illegible] ಕಷ್ಟವು [illegible] ನೀರೊಳಗೆ ಹಾರಿ [illegible] ಸ್ತ್ರೀಯರೂ ಮಕ್ಕಳೂ ಪ್ರಯತ್ನಪಟ್ಟು ಬದುಕಿಸಿದರು. [illegible] ಗಾಳ ಹಾಕಿ ಹೊರಗೆ ತೆಗೆದರು [illegible] ಅವರ ಪ್ರಾಣಜ್ಯೋತಿ ಮೊದಲೇ ಹಾರಿಹೋಗಿತ್ತು. [illegible] ಇಲ್ಲ.

[illegible] ತಮ್ಮದೊಂದು ಧಾರ್ಮಿಕ ಪ್ರವಚನ [illegible] ಅದರ ಸಹಾಯ ಮಾಡು [illegible] " ಎಂದು ಉದ್ಗರಿಸಿದರಾಗಿ [illegible] ಈ ಕುರಿತು ಸೂಚನೆ ಮಾಡ [illegible] ಅವರು ಹೇಳಿದ್ದು ಇದ್ದರೆ ಇಂತಹ [illegible] ಅವರ ಕೂಡಲೆ [illegible].

ಅಂಕೋಲಾ — (ತಾ. ೧೫-೯-೧೯೪೧) [illegible] ಜಿಲ್ಲೆಯಲ್ಲಿ ಈ [illegible] ಅಧ್ಯಕ್ಷತೆಯಲ್ಲಿ ಜರುಗಿತು. ಜಿಲ್ಲೆ [illegible] ಈ ಸಮ್ಮೇಳನದಲ್ಲಿ [illegible] ಆಟ, ವ್ಯಾಯಾಮ, [illegible] ಕಾರ್ಯಕ್ರಮ ಗಳಿಂದ ಸಮ್ಮೇಳನ ಕಾರ್ಯವು ಒಳ್ಳೇ ಯಶಸ್ವಿಯಾಯಿತು. ಕಿಕ್ಕಿರಿದು ಜನರು ಕೂಡಿದ್ದರು. ರಾತ್ರಿ ಹೊತ್ತಿಗೆ ಮಾಯಾದೀಪದ ಸಹಾಯದಿಂದ ವಿವಿಧ ದೃಶ್ಯಗಳು ತೋರಿಸಲ್ಪಟ್ಟವು; ಚಿಕ್ಕ ಮಕ್ಕಳ ದಶಾವತಾರದ ಆಟವೂ ಆಯಿತು. ಈ ಸಮ್ಮೇಳನದ [illegible] ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಕೈಗಾರಿಕೆಗಳ ಪ್ರದರ್ಶನವೂ ಜರುಗಿತು. ಸ್ಥಾನಿಕ ವಸ್ತುಗಳಿಂದಲೇ ತಯಾರಿಸಿಟ್ಟ ವಿವಿಧ ಶಾಲೋಪಕರಣಗಳನ್ನು ಕಂಡು ಅನೇಕರು ಬೆರಗಾದರು! ಬಹಳ ವಸ್ತುಗಳ [illegible] ಅಲ್ಲಿಂದಲ್ಲೇ ಆಯಿತು! ಪ್ರದರ್ಶನ ವಿನ್ನೂ ಕೆಲವು ದಿನ ನಡೆಯಬೇಕೆಂದು ಜನರ ಅಭಿಪ್ರಾಯವಿದೆ.

ಈಗ ಗೋಕರ್ಣ-ಹುಬ್ಬಳ್ಳಿಗಳ ನಡುವೆ ಒಂದೂ ಮೋಟಾರ ಸರ್ವಿಸನ್ನು ಇಲ್ಲ. ಗೋಕರ್ಣಕ್ಕೆ ಬರುವ ಯಾತ್ರಿಕರು ಕಾರವಾರ-ಹುಬ್ಬಳ್ಳಿ ಇಲ್ಲವೆ ಧಾರವಾಡ-ಕಾರವಾರ ಸರ್ವಿಸ್ಸಿನಿಂದ ಬರಬೇಕು. ಆದರೆ ಆ ಗಾಡಿಗಳಲ್ಲಿ ಸ್ಥಳ ಸಿಗುವದೇ ಕಷ್ಟ! ಗೋಕರ್ಣದಿಂದ ತಿರುಗಿ ಹೋಗುವ ಯಾತ್ರಿಕರಂತೂ ಅಂಕೋಲೆಯಲ್ಲಿ ಸಹ ಗಾಡಿಗಳಲ್ಲಿ ಸ್ಥಳ ಸಿಗದೆ ಕಿರಿಕಿರಿಯಾಗಬೇಕಾಗುತ್ತದೆ! ಇದ್ದರಿಂದ ಗೋಕರ್ಣ-ಹುಬ್ಬಳ್ಳಿಗಳ ನಡುವೆ ಒಂದು ಸರ್ವಿಸನ್ನು ಇಡಿಸುವ [illegible] ಮೋಟಾರ-ನಿಯಂತ್ರಣ ಮಂಡಳದವರು ಮಾಡ ಬೇಕಾಗಿ ಜನಸಾಮಾನ್ಯರ ಸೂಚನೆಯಿದೆ.



ಹೌದು, ಪುಟ್ಟ ಹುಡುಗನೇ, ಈ ವೀರಯೋಧನು ಶತ್ರುವಿನೊಂದಿಗೆ ಕಾದಾಡಲು ಹೊರಟಿದ್ದಾನೆ ಮತ್ತು, ನೀನು ಸುಖವಾಗಿರುವಂತೆ ಇಂಡಿಯಾವನ್ನು ರಕ್ಷಿಸುತ್ತಾನೆ. ಯೋಧನಾಗಲು ನೀನು ತೀರಾ ಚಿಕ್ಕವನಿರುವೆ, ಆದರೆ ನೀನು ಮತ್ತು ನಿಮ್ಮ ತಂದೆ ಮತ್ತು ತಾಯಿ, ಸಹೋದರರು ಮತ್ತು ಸಹೋದರಿಯರು ನಿಮ್ಮ ಆಣೆಗಳನ್ನು ಕೂಡಿಟ್ಟು ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪಗಳನ್ನು ಮತ್ತು ಸರ್ಟಿಫಿಕೇಟುಗಳನ್ನು ಕೊಂಡುಕೊಂಡು ಇಂಡಿಯಾ ಬಲಗೊಳ್ಳಲು ಸಹಾಯಕರಾಗುವಿರಿ.

ಒಂದಕ್ಕೆ ರೂ. ೧೦/-
ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್
೭/೯/- ಲಾಭ ಕೊಡುತ್ತೆ
ಪೋಸ್ಟ ಆಫೀಸ್‌ನಲ್ಲಿ ವಿವರಗಳನ್ನು ಕೇಳಿರಿ

ಕೊಳ್ಳಿರಿ

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು

ಜಿಲ್ಲಾ ಸಮಾಚಾರ.

(ಕಳೆದ ವಾರದ್ದು.)

ಯಲ್ಲಾಪುರ— ತಾ. ೧೪-೯-೪೧ರ ಗ್ರಾಮ ಸುಧಾರಣಾ ಸಂಸ್ಥೆಯ ಸಭೆಯಲ್ಲಿ ತಮ್ಮ ಭಾಷಣವನ್ನು ಮುಂದರಿಸುತ್ತ ರಾ॥ ಆ. ರಾ. ಯಲ್ಲಾಪುರಕರರು ಹೇಳಿದ್ದೇನೆಂದರೆ:— ಮೂರೂರ-ಕಲ್ಲಬ್ಬೆ ಊರುಗಳ ಸುಧಾರಣೆ ಗಾರಂಭವಾಗಿ ಬಹಳ ವರ್ಷಗಳಾದವು. ೪ ವರ್ಷಗಳ ಹಿಂದೆ ಈ ಸುಧಾರಣೆಗಾಗಿ ಆ ಊರುಗಳಿಗೆ ದಕ್ಷಿಣ ಭಾಗದ ಸ್ಕ್ಯಾಲ್ಸ ಫಾಲು ಸಿಕ್ಕಿದೆ. ಕಳೆದ ವರ್ಷ ತಿರುಗಿ ನಮ್ಮ ಜಿಲ್ಲೆಯ ಫಾಲು ಸಿಕ್ಕಿದೆ. ಈ ಎರಡು ಬಹುಮಾನಗಳು ಸಿಕ್ಕ ಊರುಗಳ ಸುಧಾರಣೆ ಪೂರ್ಣವಾಯಿತೆಂದು ಯಾರೂ ತಿಳಿಯಬಹುದು, ಆದರೆ ಈ ವರ್ಷ ರಭಸದ ಗ್ರಾಮಸುಧಾರಣೆ ಸಾಗಿಸುವದಕ್ಕಾಗಿ ಜಿಲ್ಲಾ ಗ್ರಾಮೋದ್ಧಾರ ಮಂಡಳದ ಕಾರ್ಯಕಾರಿ ಮಂಡಳವು ಆರಿಸಿದ ಹಳ್ಳಿಗಳಲ್ಲಿ ಈ ಎರಡೂ ಹಳ್ಳಿಗಳಿದ್ದವು! ಮಂಡಳದ ಮಹಾಸಭೆಯವರು ರಾ॥ ಹೆಬ್ಬಾರರವರ ಗೈರಹಾಜರಿಯಲ್ಲಿ ಕಲ್ಲಬ್ಬೆಯ ಬದಲು ಹಿರೇಗುತ್ತಿಯನ್ನು ಆರಿಸಿದರೆಂಬ ಮಾತು ಬೇರೆ. ಇದರ ಮೇಲಿಂದ ಮೂರೂರ-ಕಲ್ಲಬ್ಬೆ ಊರುಗಳು ಬಾಕಿ ಊರುಗಳಂತೆಯೇ ಇರುವವೆಂಬದು ಸಿದ್ಧವಾಗುವದಿಲ್ಲವೇ? ಹಾಗಾದರೆ ಈ ಊರುಗಳಿಗೆ ಫಾಲುಗಳನ್ನು ಕೊಟ್ಟಿದ್ದು ಏನನ್ನು ನೋಡಿ ಎಂಬ ಪ್ರಶ್ನೆಯುಂಟಾಗುತ್ತದೆ. ಅದಕ್ಕೆ ಉತ್ತರವನ್ನು ಕೊಡುವದು ಬಹಳ ಕಠಿಣ! ಬರೇ ಕಾಗದ-ಪತ್ರ ಇಲ್ಲವೆ ವರದಿಗಳ ಮೇಲಿಂದ ಕಂಡು ಬರುವ ಸುಧಾರಣೆ ನೋಡಿಕೊಂಡು ಇಲ್ಲವೆ ಕೆಳಗಿನ ಅಧಿಕಾರಿಗಳ ಅವಾಸ್ತವ ಮತ್ತು ಅತಿಶಯೋಕ್ತಿಯ ಶಿಫಾರಸು-ಪತ್ರವನ್ನು ನೋಡಿ ಮೇಲಧಿಕಾರಿಗಳು ಫಾಲುಗಳನ್ನು ಕೊಟ್ಟಿರಬೇಕೆಂದು ಸಂಶಯ ಬರುತ್ತದೆ. ಇನ್ನೂ ಆಳವಾಗಿ ವಿಚಾರ ಮಾಡುತ್ತ ಹೋದಂತೆ ಇನ್ನೂ ಒಂದು ಗೂಢ ಪ್ರಶ್ನೆ ಮುಂದೆ ಬರುತ್ತದೆ. ಅದ್ಯಾವದೆಂದರೆ ಇಷ್ಟು ವರ್ಷ ಸಾವಿರಗಟ್ಟಲೆ ರೂಪಾಯಿ ಖರ್ಚು ಮಾಡಿ ಮೂರೂರ-ಕಲ್ಲಬ್ಬೆಗಳಲ್ಲಿ ಮಾಡಿದ ಸುಧಾರಣೆಗಳ್ಯಾವವು! ರಾ॥ ಹೆಬ್ಬಾರರವರಿಗೆ ಇದು ಹೇಳಬರುವಂತಿಲ್ಲ! ಅದುಕಾರಣ ನಾವು ಕೇಳುವದೂ ಇಷ್ಟವಲ್ಲ! ಇನ್ನು ದವಾಖಾನೆಗಳ ವಿಚಾರ. ನಮ್ಮ ತಾಲೂಕು ಚಳಿ ಜ್ವರದ ಬೀಡೆಂಬದು ಸ್ವಯಂಸಿದ್ಧ ಸಂಗತಿಯಾಗಿದೆ. ಚಳಿ ಜ್ವರದ ಪೀಡೆಯಿಂದ ನಮ್ಮ ತಾಲೂಕಿನ ಜನಸಂಖ್ಯೆ ದಿನೇ ದಿನೇ ಕುಗ್ಗುತ್ತದೆ. ಹಿಂದುಸ್ಥಾನದ ಜನಸಂಖ್ಯೆ ನೂರಕ್ಕೆ ೧೫ರಂತೆ ಬೆಳೆದರೆ ನಮ್ಮ ತಾಲೂಕಿನದು ನೂರಕ್ಕೆ ೧೫ರಂತೆ ಕಡಿಮೆಯಾಗಿದೆ! ಈ ಸ್ಥಿತಿ ಸುಧಾರಿಸಬೇಕಾದರೆ ಪ್ರತಿ ಹಳ್ಳಿಯಲ್ಲಿ ದವಾಖಾನೆಗಳಾಗಬೇಕು. ಆದರೆ ೫೦೯ ಚದರ ಮೈಲು ಕ್ಷೇತ್ರವುಳ್ಳ ನಮ್ಮ ಇಡೀ ತಾಲೂಕಿನಲ್ಲಿ ಎರಡೇ ದವಾಖಾನೆಗಳಿವೆ! ೩ ವರ್ಷಗಳ ಹಿಂದೆ ಕಿರವತ್ತಿಯಲ್ಲಿ ೧ ಮತ್ತು ವಜ್ರಳ್ಳಿಯಲ್ಲಿ ೧ ಹೀಗೆ ಸರಕಾರಿ ಧನಸಹಾಯದಿಂದ ಎರಡು ಗ್ರಾಮ-ಚಿಕಿತ್ಸಾಲಯಗಳನ್ನು ತೆರೆಯಬೇಕೆಂದು ನಿಶ್ಚಯವಾಗಿತ್ತು. ಆದರೆ ಯಾರೂ ದವಾಖಾನೆಗಳನ್ನು ತೆರೆಯಲು ಮುಂದೆ ಬರಲಿಲ್ಲ! ಅಲ್ಲಿ ಸರಕಾರಿ ದವಾಖಾನೆಗಳನ್ನೇ ತೆರೆಯುವದು ಒಳಿತೆಂದು ಆಗ ನಾನು ಸರಕಾರಕ್ಕೆ ಮನವಿ ಮಾಡಿಕೊಂಡೆನು. ಈ ಕುರಿತು ವಿಚಾರ ಮಾಡುತ್ತೇವೆಂದು ನನಗೆ ಉತ್ತರ ಸಿಕ್ಕಿತು. ಆದರೆ ಮುಂದೆ ಕಿರವತ್ತಿಯಲ್ಲಿ ದವಾಖಾನೆ ಅವಶ್ಯವಿಲ್ಲೆಂದೂ ವಜ್ರಳ್ಳಿಯಲ್ಲಿ ಹಳ್ಳಿ ದವಾಖಾನೆ ಸಾಕೆಂದೂ ಸರಕಾರದವರು ಠರಾಯಿಸಿದರು! ವಜ್ರಳ್ಳಿಯಲ್ಲೂ ದವಾಖಾನೆ ಅವಶ್ಯವಿಲ್ಲೆಂದು ಇನ್ನು ಒಂದೆರಡು ವರ್ಷಗಳಲ್ಲಿ ಠರಾವಾಗಬಹುದು! (ಕಿರವತ್ತಿಯಲ್ಲಿರುವ ಜಂಗಲ ಇಲಾಖೆಯ ಒಂದು ಇಮಾರತನ್ನು ದವಾಖಾನೆ ತೆರೆಯುವ ಬಗ್ಗೆ ಜಂಗಲ ಇಲಾಖೆಯವರು ೧೯೩೭ರಲ್ಲೇ ಬಿಟ್ಟುಕೊಡಲೊಪ್ಪಿದ್ದರೆಂದು ಕಿರವತ್ತಿಯ ರೇಂಜರರು ಸ್ಪಷ್ಟೀಕರಣ ಮಾಡಿದರು.) ಈ ನಮ್ಮ ಜಿಲ್ಲಾ ಬೋರ್ಡ ನವರು ನಮ್ಮನ್ನು ಹೀಗೆ ನಡೆಸುತ್ತಾರೆ ನೋಡಿರಿ! (ಈ ವಿಷಯ ಅಪ್ರಸ್ತುತವೆಂದು ಕಿರವತ್ತಿಯ ರೇಂಜರರಾದ ರಾ॥ ವರ್ಟಿಯವರ ಆಕ್ಷೇಪ ಮುಂದೆ ಬಂತು. ಗ್ರಾಮಸುಧಾರಣಾ ಕಾರ್ಯದಲ್ಲಿ ಬೋರ್ಡಿನ ಅಂಗವೂ ಉಂಟೆಂತಲೂ, ಎಲ್ಲ ಇಲಾಖೆಯವರ ಸಹಕಾರದಿಂದಲೇ ಗ್ರಾಮೋದ್ಧಾರವಾಗಬೇಕೆಂತಲೂ ವಾದಿಸಿ ತಮ್ಮ ಮಾತು ಚರ್ಚಾ ವಿಷಯಕ್ಕೆ ಸಂಬಂಧಪಟ್ಟಿದ್ದೇ ಇರುತ್ತದೆಂದು ರಾ॥ ಯಲ್ಲಾಪುರಕರರು ಪ್ರತಿಪಾದಿಸಿದರು. ಈ ಬಗ್ಗೆ ತುಸು ಚರ್ಚೆಯಾಗಿ "ನೀವು ಹೇಳತಕ್ಕದ್ದು ಹೇಳಿರಿ" ಎಂದು ಅಧ್ಯಕ್ಷರು ಅಪ್ಪಣೆ ಕೊಟ್ಟರು. ಆದರೆ ಸುಮ್ಮನೆ ವೈಮನಸ್ಯ ಬೇಡೆಂದು ರಾ॥ ಯಲ್ಲಾಪುರಕರರು ಆ ಮಾತನ್ನೇ ಬಿಟ್ಟು ಬಿಟ್ಟರು.) ಗ್ರಾಮೋದ್ಧಾರ ಕಾರ್ಯಕ್ಕಾಗಿ ಈ ವರ್ಷ ನಮ್ಮ ಜಿಲ್ಲೆಗೆ ಸಿಕ್ಕಿರುವ ರೂ. ೪೩೦೦೦ಗಳ ಪೈಕಿ ರೂ. ೧೮೦೦೦ವನ್ನು ಜಿಲ್ಲಾಧಿಕಾರಿಗಳು ತಮ್ಮ ಮರ್ಜಿ (discretion) ಯಂತೆ ಹಂಚಿಕೊಟ್ಟಿದ್ದಾರೆ. ಆದರಲ್ಲಾದರೂ ನಮ್ಮ ಅಡಚಣೆಗಳಿಗನುಸಾರವಾಗಿ ಪಾಲು ದೊರೆಯಿತೇ? ಅದೂ ಇಲ್ಲ! ನಮಗೆ ಆ ಹಣದೊಳಗಿಂದ ೨೫೦ ಯಾ ೩೦೦ ರೂ. ಗಳಿಗಿಂತ ಹೆಚ್ಚು ಹಣ ದೊರೆಕಿರುವದಿಲ್ಲ! ಅಧಿಕಾರಿಗಳು ನಮ್ಮ ತಾಲೂಕಿನ ಕಡೆ ಹೀಗೇಕೆ ಉಪೇಕ್ಷೆ ಮಾಡುತ್ತಿರುವರೋ ನಾ ಕಾಣೆ! ಕೊನೆಗೆ ಇನ್ನೊಂದು ವಿಷಯ ಹೇಳಿ ನನ್ನ ಭಾಷಣ ಮುಗಿಸುವೆನು. ಕುಮಟೆಯಲ್ಲಿ ೧೯೧೮ರಿಂದ ಒಂದು ಸರಕಾರಿ ಬೇಸಾಯ ಪ್ರಯೋಗದ ಹೊಲವಿದೆ. ಪ್ರತಿ ವರ್ಷ ಈ ಹೊಲದ ಸಲುವಾಗಿ ಸರಕಾರದವರು ೧೨-೧೫ ಸಾವಿರ ರೂಪಾಯಿ ವೆಚ್ಚ ಮಾಡುತ್ತಿದ್ದಾರೆ. ಹೊಲದಲ್ಲಿ ತರತರದ ಹಣ್ಣು-ಹಂಪಲಗಳನ್ನೂ ಬಗೆಬಗೆಯ ಕಬ್ಬು, ಧಾನ್ಯಗಳನ್ನೂ ಬೆಳೆಸುವ ಪ್ರಯೋಗಗಳು ನಡೆಯುತ್ತಿವೆ; ವರ್ಷದಲ್ಲಿ ಒಂದೆರಡು ಸಾರೆ ವ್ಯಾಖ್ಯಾನಗಳಾಗುತ್ತಿವೆ; ಪ್ರದರ್ಶನಗಳೂ ನಡೆಯುತ್ತಿವೆ; ಹೀಗಿರುತ್ತಿದ್ದಾಗ್ಯೂ ಈ ವರ್ಷ ಗ್ರಾಮೋದ್ಧಾರ ಮಂಡಳದವರು ರೈತರಿಗೆ ಹಣ್ಣು-ಹಂಪಲಗಳ ಬೆಳವಣಿಗೆಯ ವಿದ್ಯೆ ಕಲಿಸುವದಕ್ಕಾಗಿ ೪ ಸ್ಥಳಗಳಲ್ಲಿ ವರ್ಗಗಳನ್ನು ತೆರೆಯಬೇಕೆಂದು ಠರಾಯಿಸಿ, ಆರಿಸಿ ತೆಗೆದ ನಾಲ್ಕು ಊರುಗಳಲ್ಲಿ ಕುಮಟೆಯೂ ಒಂದು ಊರುಂಟು! ನಮಗೋ? ನಮಗೆ ಕ್ಲಾಸಿಲ್ಲ! ಕಾಸು ಕೊಟ್ಟಿದ್ದಾರೆ! ಇದರ ಮೇಲಿಂದ ಗ್ರಾಮೋದ್ಧಾರ ಕಾರ್ಯವಾಹಕರ ಬುದ್ಧಿವಂತಿಕೆ ಹೇಗಿದೆ ನೋಡಿಕೊಳ್ಳಿರಿ!

ಹೀಗೆ ರಾ॥ ಯಲ್ಲಾಪುರಕರರು ಮುಚ್ಚು-ಮರೆಯಿಲ್ಲದೆ, ಯಾವ ಭಿಡೆ-ಭೀತಿಗಳಿಲ್ಲದೆ ತಮ್ಮ ತಾಲೂಕಿನ ಕಷ್ಟ-ನಷ್ಟ-ದೂರುಗಳನ್ನು ಸಭೆಯ ಮುಂದಿಡುವಷ್ಟರಲ್ಲಿ ಕತ್ತಲೆಯಾಗುತ್ತ ಬಂತು. ಆದ್ದರಿಂದ ಅಧ್ಯಕ್ಷರು ಚರ್ಚೆಯನ್ನು ಮುಕ್ತಾಯಗೊಳಿಸಿ, ನಿಶ್ಚಯಾತ್ಮಕ ಸೂಚನೆಗಳನ್ನು ಸೂಚಿಸಲು ಸಭಿಕರಿಗೆ ಸೂಚಿಸಿದರು. ಅದರಂತೆ ಈ ಕೆಳಗಿನ ನಿರ್ಣಯಗಳು ಸಭೆಯಲ್ಲಿ ಸ್ವೀಕರಿಸಲ್ಪಟ್ಟವು:— (೧) ಯಲ್ಲಾಪುರ ತಾಲೂಕಿನಲ್ಲಿ ಒಂದು ಬೇಸಾಯ ಪ್ರಯೋಗ ಹೊಲ ತೆರೆಯಲು ಸರಕಾರಕ್ಕೆ ಬಿನ್ನಹ. (೨) ಮದನೂರ, ಕಿರವತ್ತಿ ಮತ್ತು ದೇಹಳ್ಳಿ ಊರುಗಳ ಬಾವಿಗಳನ್ನು ಬೇಗನೇ ಸರುಗಣಿಯಿಂದ ತಗ್ಗಿಸಬೇಕಾಗಿ ಸೂಚನೆ. (೩) ಕಳಸೂರು, ಮುಂಡವಾಡ, ಗಾಡಮಂದೂರ ಕೆರೆಗಳನ್ನು ಆದಷ್ಟು ಬೇಗ ದುರುಸ್ತಗೊಳಿಸಬೇಕಾಗಿ ವಿನಂತಿ (೪) ಗ್ರಾಮಸುಧಾರಣಾ ಸಮಿತಿಗಳು ೧೫ ದಿನಗಳಿಗೊಮ್ಮೆಯಾದರೂ ಕೂಡಿ ತಾಲೂಕಾ ಸುಧಾರಣಾ ಸಂಸ್ಥೆಗೆ ತಮ್ಮ ಬೇಡಿಕೆಗಳನ್ನು ತಿಳಿಸಬೇಕೆಂದು ಸೂಚನೆ. (೫) ತಾಲೂಕ ಸುಧಾರಣಾ ಸಂಸ್ಥೆಯ ಸರಕಾರೇತರ ಸಭಾಸದರಿಗೆ ವರ್ಗಣಿ ಕೊಡತಕ್ಕ ಒತ್ತಾಯವಿರಬಾರದೆಂದು ಸೂಚನೆ. (೬) ಯಲ್ಲಾಪುರದಲ್ಲಿ ಪ್ರತಿ ರವಿವಾರ ಸಂತೆ ಮಾಡುವ ವ್ಯವಸ್ಥೆಯಾಗಬೇಕು. (೭) ಈಗ ಚಳಿಜ್ವರದ ಹಂಗಾಮು ಹತ್ತಿರ ಬಂದಿರುವದರಿಂದ ಕ್ವಿನೈನ ಪುರವಠೆಯ ಬಗ್ಗೆ ತಮ್ಮ ಮರ್ಜಿಯ ಹಣದೊಳಗಿಂದ ರೂ. ೨೦೦ ಕೊಡುವಂತೆ ಜಿಲ್ಲಾಧಿಕಾರಿಗಳಿಗೆ ವಿನಂತಿ.

ಜನಸೇವೆಯ ಮೇಲಿನ ಸೂಚನೆಗಳನ್ನು ಮಾಡಿದ್ದಾರೆ. ಅವು ಅಧಿಕಾರಿಗಳಿಗೆ ಎಷ್ಟು ಗ್ರಾಹ್ಯವಾಗುತ್ತವೋ ನೋಡಬೇಕು. ರಾ॥ ಯಲ್ಲಾಪುರಕರರ ಟೀಕೆಯಿಂದ ನೊಂದುಕೊಳ್ಳದೆ, ಈ ಸೂಚನೆಗಳನ್ನು ಜಿಲ್ಲಾ ಗ್ರಾಮೋದ್ಧಾರ ಮಂಡಳದವರೂ ಜಿಲ್ಲಾಧಿಕಾರಿಗಳೂ ಮನ್ನಿಸುವಂತೆ ರಾ॥ ಹೆಬ್ಬಾರರವರು ಪ್ರಯತ್ನಿಸಿದರೆ ಯಲ್ಲಾಪುರ ತಾಲೂಕಿನ ಜನರು ಅವರ ಆಭಾರ ಮನ್ನಿಸದಿರಲಾರರು.

ಮುರ್ಡೇಶ್ವರ— ಮುರ್ಡೇಶ್ವರ ವಾಚನಾಲಯಕ್ಕೆ ಮುಂಬಯಿಯ ಕೃಷ್ಣ ಸಿನೆಮಾ ಮಂದಿರದಲ್ಲಿ ತೋರ್ಪಡಿಸಿದ ಪಟಗಳ ಉತ್ಪನ್ನ ಕೊಡಿಸಿದ ಶ್ರೇಯಸ್ಸು ರಾ॥ ಆರ್. ಆರ್. ಮುರ್ಡೇಶ್ವರ ಮುಂಬಯಿ ಇವರಿಗೆ ಸಲ್ಲಬೇಕಂತೆ. ರಾ॥ ರಂಗೂನ ಚಿಟ್ಟಿಲವಾಯವರು ಇದರಲ್ಲಿ ಏನೂ ಅಂಗವಿದ್ದಿಲ್ಲವಂತೆ.

ಕಾರವಾರ— (ತಾ. ೨೧-೯-೪೧) ಕಳೆದ ಏಪ್ರಿಲ ತಿಂಗಳಿಂದ ಅಜ್ಞಾತವಾಸ ಕೈಕೊಂಡ "ನವಯುಗ"ವು ಬೇಗನೇ ತನ್ನ ಸ್ವಂತ ಮಾಲ್ಕಿಯ ಅಚ್ಚುಖಾನೆಯೊಳಗಿಂದ ಹೊರಬೀಳುವದೆಂದು ಹೇಳುತ್ತಾರೆ. ಕಾರವಾರದ ಕೆಲ ಪ್ರಮುಖರು ಅಚ್ಚುಖಾನೆಯ ವ್ಯವಸ್ಥೆ ಮಾಡತೊಡಗಿದ್ದಾರಾಗಿ ತಿಳಿಯುತ್ತದೆ.

ನಿನ್ನೆ ಕಾರವಾರ ಅರ್ಬನ ಬೇಂಕಿನ ವಾರ್ಷಿಕ ಸಭೆಯಾಯಿತು. ನಿಜವಾಗಿ ನಿನ್ನೆ ಅಮಾಸ್ಯೆ ಇದ್ದದರಿಂದಲೂ ಬಹುಸಂಖ್ಯ ಬ್ರಾಹ್ಮಣೇತರ ಸದಸ್ಯರಿಗೆ ಸಭೆಗೆ ಬರಲು ಅನುಕೂಲವಿಲ್ಲದ್ದರಿಂದಲೂ ಈ ಸಭೆ ಇನ್ನೊಂದು ದಿನ ಕರೆಯಬಹುದಾಗಿತ್ತು. ಕಾರ್ಯವಾಹಕರು ಅಮಾಸ್ಯೆಯ ದಿನವೇ ಸಭೆ ಇಟ್ಟಿದ್ದರ ರಹಸ್ಯವೇನೋ ತಿಳಿಯದು. ಸಭೆಯಲ್ಲಿ ಎರಡು ಉಲ್ಲೇಖನೀಯ ವಿಷಯಗಳ ಚರ್ಚೆಯಾಯಿತು: ರಾ॥ ಡಿ. ಬಿ. ನಾಡಕರ್ಣಿಯವರು ಈ ಬೇಂಕಿನ ಹಳೇ ಕಾಲದ ಸದಸ್ಯರು. ಅವರೂ ಅವರ ಮಗಂದಿರೂ ಬೇಂಕಿನಿಂದ ೬ ಸಾವಿರ ರೂ. ಸಾಲ ತಕ್ಕೊಂಡಿದ್ದರು. ೧೫-೨೦ ವರ್ಷಗಳಾದರೂ ಈ ಸಾಲ ಫೈಸಲೆಯಾಗಿರುವದಿಲ್ಲ. ನಿನ್ನೆ ರಾ॥ ನಾಡಕರ್ಣಿಯವರು ಮಹಾಸಭೆಗೆ ಒಂದು ಅರ್ಜಿ ಮಾಡಿ, ತಾವು ಬಹಳ ಬಡ್ಡಿ ತೆತ್ತಿದ್ದೇವೆಂತಲೂ ಭೂಮಿಯ ಲಾಗ್ವಾಡು ಮಾಡಿ ತಾವು ಬಹಳ ನಷ್ಟಕ್ಕೆ ಗುರಿಯಾದೆವೆಂತಲೂ ತಿಳಿಸಿ ತಮಗೆ ರಿಯಾಯತಿಯಿಂದ ರೂ. ೩-೩-೦ ಯಂತೆ ಬಡ್ಡಿ ದರ ಹಿಡಿದು ತಮ್ಮ ಸಾಲದ ನಿಕಾಲೆ ಮಾಡಬೇಕಾಗಿ ಬರೆದಿದ್ದರು. ಹೀಗೆ ಮಾಡಲು ನಿಯಮಗಳಂತೆ ಬರುವದಿಲ್ಲೆಂದು ಕೆಲವರ ಆಕ್ಷೇಪ ಬಂತು. ರಾ॥ ನಾಡಕರ್ಣಿಯವರಿಗಷ್ಟೇ ರಿಯಾಯತಿ ಯಾಕೆ ಎಂದು ಇನ್ನು ಕೆಲವರು ಆಕ್ಷೇಪಿಸಿದರು. ರಾ॥ ಸಾಳ ತೇಲಂಗರವರು ಮಾತ್ರ ಅರ್ಜಿಯನ್ನು ಮನ್ನಿಸಬೇಕೆಂದು ಆಗ್ರಹ ಮಾಡಿದರು. ಅಧ್ಯಕ್ಷರು ಈ ವಿಷಯವನ್ನು ನಿನ್ನೆಯೇ ನಿಕಾಲೆಯಾಗಗೊಡದೆ ಮುಂದಿನ ರವಿವಾರದ ವರೆಗೆ ಸಭೆಯನ್ನು ಮುಂದಿಟ್ಟರು.

ಬೇಂಕಿನ ಸಭೆಯ ಮುಂದೆ ಬಂದ ಇನ್ನೊಂದು [illegible] ವಿಷಯವೆಂದರೆ ದೈವಜ್ಞ ಬಾಂಧವರೊಬ್ಬರು ಮಾಡಿದ ಅರ್ಜಿ. ಈ ಬಾಂಧವರು ಯಾರಿಗೋ ಜಾಮೀನದಾರರಾಗಿದ್ದರು. ಮುಖ್ಯ ಸಾಲಗಾರರು ಸದ್ದಿಲ್ಲದೆ ತಮ್ಮ ಆಸ್ತಿಯನ್ನು ಪರಾಧೀನ ಮಾಡಿದ್ದಾರೆ. ಆದರಿಂದ ಬೇಂಕಿನವರು ಈಗ ಈ ಜಾಮೀನದಾರರಿಗೆ ಹಿಡಿದಿದ್ದಾರೆ! ಸದರಿ ಸಾಲಗಾರರ ಪರಾಧೀನತೆಗಳು ಫೋಕಳ ಇರುತ್ತವಾದ್ದರಿಂದ ಅವರ ಆಸ್ತಿಗಳ ವಿರುದ್ಧ ಕ್ರಮ ಕೈಕೊಳ್ಳಬೇಕೆಂದು ಜಾಮೀನದಾರರು ಬೇಂಕಿನ ಚಾಲಕ ಮಂಡಳಕ್ಕೆ ಬಿನ್ನವಿಸಿದ್ದರಂತೆ. ಪರಾಧೀನತೆಗಳನ್ನು ಫೋಕ

ಳ ರಣಾಯಿಸಿಕೊಳ್ಳುವ ಬಗ್ಗೆ ಬರುವ ಅರ್ಜಿಗಳನ್ನು ಕೊಡಲಿಕ್ಕೂ ಒಪ್ಪಿಕೊಂಡಿದ್ದರಂತೆ ಆದರೆ ಚಾಲಕರು ಅವರ ಒನ್ನಡೆಯನ್ನು ಮನ್ನಿಸದೆ ಅವರಿಗೇ ಹಾಲ ನಿರಾಶೆ ಮಾಡಲು ಒತ್ತಾಯ ಮಾಡುತ್ತಿದ್ದಾರೆ ದೈವಜ್ಞ ಬಾಂಧವರು ಅವರ ವಿರುದ್ಧ ಮಹಾಸಭೆಯ ಮುಂದೆ ದೂರು ತಕ್ಕೊಂಡು ಬಂದಿದ್ದರು ಆದರೆ ಈ ವಿಷಯು ಸಭೆಯ ಕಾರ್ಯಕ್ರಮ ಪತ್ರಿಕೆಯಲ್ಲಿ ಇರುವದಿಲ್ಲೆಂದು ತಪ್ಪಾದು ಹೇಳಿ ಅವರ ಅರ್ಜಿ ತಿರಸ್ಕರಿಸಲ್ಪಟ್ಟಿತು! ಈ ನಾಡಕರ್ಣಿಯವರಿಗೆ ಸವಲತ್ತು ಕೊಡಬೇಕೆಂದು ವಾದಿಸುವ ಸಭಿಕರು ದೈವಜ್ಞ ಬಾಂಧವರ ನ್ಯಾಯ್ಯ ಬೇಡಿಕೆಯನ್ನು ಉಪೇಕ್ಷಣೀಯ ತಪ್ಪಾಗಿ ಮಹತ್ವ ಕೊಟ್ಟು ನಿರಾಕರಿಸಿದ್ದು ತೀರ ಅನುಚಿತವೆಂದು ಕೆಲವು ಸದಸ್ಯರ ಮತವಿರುತ್ತದೆ

* * *

ಸಹ್ಯಾದ್ರಿ ಫಾರ್ಮಸಿ
ಕುಮಟಾ.

ಬಾಳಂತಿಯರಿಗೆ— ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ ಮತ್ತು ಧನ್ವಂತರಿ ಗುಳಿಗೆ ಒಳ್ಳೇ ಉಪಯುಕ್ತವಾದದ್ದು!

ಚಿಕ್ಕ ಮಕ್ಕಳ ಜಂತುವಿನ ಬಾಧೆಗೂ ಪುಷ್ಟಿಯಾಗಲಿಕ್ಕೂ ಸಾಯರಪ್ ಕುಟಜಾ ಒಂದು ದಿವ್ಯವಾದ ಔಷಧವು!

ನಾಯಿ-ಕೆಮ್ಮಿಗೆ ಎಂಟೇ ದಿವಸಗಳಲ್ಲಿ ಗುಣಪಡಿಸುವ ಕಸನಾಶಕವು

ಯಾವತ್ತೂ ಪ್ರಕಾರಗಳ
ಕಷಾಯು, ಅರಿಷ್ಟ, ಆಸವ,
ತೈಲಾದಿ ಔಷಧ ಸಾಮಗ್ರಿಗಳು
ಸದಾ ಸಿಗುತ್ತವೆ.

ಡಾ|| ಎಸ್. ಕೇ. ಭಟ್ಟ,
ಹಳ್ದಿಪ್ಕರ, ಕುಮಟಾ.

ಹೈಸ್ಕೂಲುಗಳಿಗೆ ಬೇಕಾಗುವ ಎಲ್ಲ ತರದ
ಇಂಗ್ಲಿಷ-ಸಂಸ್ಕೃತ-ಕನ್ನಡ-ಮರಾಠಿ
ಪುಸ್ತಕಗಳು ನಮ್ಮಲ್ಲಿ ಸಿಗುತ್ತವೆ

ನಿಮಗೆ ಬೇಕಾಗುವ ಪುಸ್ತಕಗಳನ್ನು ಇಂದೇ ಕೊಂಡುಕೊಳ್ಳಿ
ವಿಳಂಬ ಮಾಡಿದಲ್ಲಿ,—ನಿರಾಶರಾಗಬೇಕಾದೀತು
ಪ್ರಾಥಮಿಕ ಶಾಲೆಗಳಿಗೆ ಬೇಕಾಗುವ ಎಲ್ಲಾ ಕನ್ನಡ,
ಮರಾಠಿ, ಪುಸ್ತಕಗಳೂ ನಮ್ಮಲ್ಲೇ ದೊರೆಯುವವು
ನಿಮಗೆ ಯಾವ ಪುಸ್ತಕ ಬೇಕಾದರೂ ನಮ್ಮಲ್ಲಿ ವಿಚಾರಿಸಿರಿ

ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ

ಮಳೆಗಾಲದಲ್ಲಿ ಬೇಗನೆ ಉಪಾಯ ಮಾಡಿರಿ!

ಮಹಾಮಾರಿಯ ಬೇನೆ ಸುರುವಿದ್ದಾಗ ಪ್ರತಿಬಂಧಕ **(Preventive)**
ವೆಂದು ಮತ್ತು ಮಹಾಮಾರೀ-ಪಟಕೀ ಕಾಲರಾ **(Cholera)**
ಬಂದಾಗ ಮೊಟ್ಟಮೊದಲು (ಅನ್ನ ಬೀಳುವ ವರಗೆ)
ಕೊಡಲಿಕ್ಕೆ ಅಪ್ರತಿಮವಾದದ್ದೆಂದರೆ—

ಲಶುನಾದಿ ಗುಟಿಕಾ.

ಈ ಔಷಧದಿಂದ ಅವಷ್ಟಂಭವಾಗದೆ, ಹೊಟ್ಟೆಯುಬ್ಬದೆ ದೀಪನ ಪಾಚನ ಮತ್ತು ಮಲ ಶೋಧನವಾಗಿ ಮಲ ನಿಲ್ಲಿಸುವದು ಗಟ್ಟಿಯಾಗುವದು ಇವೆಲ್ಲ ಕಾರ್ಯವು ಚನ್ನಾಗಿ ಆಗುವದು ಇದರ ಅನುಭವವನ್ನು ಅನೇಕ ಡಾಕ್ಟರರೂ ವೈದ್ಯರೂ ತೆಗೆದುಕೊಂಡಿರುವರು ಅಜೀರ್ಣದ ಮೂಲಕ ಹೊಟ್ಟೆ ಉಬ್ಬುವದು, ಬಹಳ ವೇಗದಿಂದ ಹೊಟ್ಟೆಯಲ್ಲಿ ನೋವಾಗುವದು, ಅಗ್ನಿಮಾಂದ್ಯ ಮತ್ತು ವಾತವಿಕಾರ ಈ ವಿಕಾರಗಳ ಮೇಲೆ ಈ ಗುಳಿಗೆಗಳು ಒಳ್ಳೇ ಗುಣಕಾರಿಯಾಗಿವೆ ಎಂದು ಪೂರ್ಣ ಅನುಭವವಿದೆ

ದತ್ತಾತ್ರೇಯ ಕೃಷ್ಣ ಸಾಂಡೂ ಬ್ರದರ್ಸ
ಚೆಂಬೂರ ಲಿ.

ಆಯುರೌಷಧಿ ಕಾರಖಾನೆ, ಚೆಂಬೂರ-ಮುಂಬಯಿ
ಕರ್ನಾಟಕ ಶಾಖೆ:— ಹುಬ್ಬಳ್ಳಿ

ಚಕ್ರಬಿಂದು

ಮಕ್ಕಳ ಮರಣವನ್ನು
ತಪ್ಪಿಸುವದು.

ಏಜನ್ಸಿ, ಕಲಕತ್ತಾ, ಮುಂಬಯಿ ಮದ್ರಾಸ, ಬೆಂಗಳೂರು ಮಂಗಳೂರು

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆದೊಡ್ಡದಾಗುವಿಕೆ ಹಸುರು ನರಗಳು, ಕಾಮಿಲೆ,
ಗಡ್ಡೆರೋಗ, ಕೋವೆ ರೋಗ ಮುಂತಾದ ಬಾಧೆಗಳಿಗೆ ದಿವ್ಯೌಷಧ!

೧ ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3



ಏತಕ್ಕೆ ಚಿಂತಿಸುವಿರಿ?

ಆಸೇತುಹಿಮಾಚಲದ ವರೆಗೂ ೪೦
ವರುಷಗಳಿಂದ ಕೀರ್ತಿ ಪಡದಿರುವ
ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ
ವ್ಯಾಧಿಗಳಿಗೆ ಇದೊಂದೇ
ರಾಜಔಷಧವಾಗಿದೆ

ಡಾ|| ಏ ಎಸ್ ಶ್ರೀನಿವಾಸರಾವ,
ಲಿವ್ಹರ್ ಸ್ಪೆಶಲಿಸ್ಟ,
ಎಂ ಏ ಪ್ರಾಸಾದಿಕ ಔಷಧಾಲಯ
ಶಿವಮೊಗ್ಗಾ

☞ ಇವರಲ್ಲಿ ವಿಚಾರಿಸಿರಿ
ಶಿರ್ಸಿ ಏಜಂಟ—
ಸುಬ್ರಾಯ ಸೀತಾರಾಮ ಹೆಗಡೆ
ಕುಮಟಾ ಏಜಂಟ—
ದೇವಪ್ಪಾ ಅಯ್ಯಾ, ನಾಯ್ಕ

ಇದನ್ನು ಪಾಂಡುರಂಗ ಕೃಷ್ಣ ಸೀನಭಾಗ (ಸಂಪಾದಕ) ಇವರು ತಮ್ಮ ಸ್ವಂತ ಆರ್ಟ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B 1270

Monday, 6th October, 1941.

ವರ್ಷ ೨೪

ಕಾನಡಾವೃತ್ತ

ಸಂಚಿಕೆ ೧೪

THE KANARA NEWS

ಪತ್ರದ ವರ್ಗಣಿ.
ಕುಮಟೆಯಲ್ಲಿ ಅಗಾವು
ರೂಪಾಯಿ 2-4-0
ಮುನಿಸಿಪಾಲ್ಟಿಯಿಂದ ಹೊರಗೆ
ರೂ 3-1-0
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-4-0
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

नृपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಪ್ಯೈಕಾ ಟ್ಯಾಪಿನ (೧೫ ಏಮ್ ಅಗಲ)
೮ ಸಾಲುಗಳವರೆಗೆ ರೂ 1-8-0
೮ ನಂತ್ರ ಪ್ರತಿಸಾಲಿಗೆ 0-3-0
ಹೆಚ್ಚಿಂಗದ ಸಾಲು ಎಷ್ಟು ತೊಡ್ಗಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

(ಕುಮಟಾ— ಕಾನಡಾವೃತ್ತ, ಸೋಮವಾರ. ತಾರೀಖು ೬ ಮಾಹೆ ಅಕ್ಟೋಬರ ಸನ್ ೧೯೪೧ನೇ ಇಸವಿ)

ದೀಪಾವಳಿಯ ಒಂದೇ ಒಂದು ಕಾಣಿಕೆ!

ಸುಗಂಧಿ
ಕಾಂಚನ
ಹೇಅರ ಆಇಲ

ಶ್ರೀ ಧೂತಪಾಪೇಶ್ವರ ಪನವೇಲ, ಲಿ.,
ಕರ್ನಾಟಕ ಕೇಂದ್ರ ಯುನ್ಯಾಟೆಡ್ ಏಜನ್ಸೀಜ, ಹುಬ್ಬಳ್ಳಿ.
ಕಾರವಾರ — ಮೆಸರ್ಸ ಮುಜುಮುದಾರ-ಶಹಬೀಕರ ಬ್ರದರ್ಸ
ಅಂಕೋಲಾ:— ದಿ ಸ್ಟೇಶನರಿ ಡಿಪೋ
ಕುಮಟಾ:— ದೇವಪ್ಪಾ ಅಯ್ಯು ನಾಯ್ಕ
ಹೊನ್ನಾವರ— ಮೆಸರ್ಸ ಕಲ್ಯಾಣಪುರ ಬ್ರದರ್ಸ.
ಶಿರ್ಸಿ:— { ಶಿರ್ಸಿ ಡ್ರಗ್ ಸ್ಟೋರ್ಸ
ಎಸ್. ಎಲ್ ಧಾಕಪ್ಪಾ ಎಂಡ್ ಸನ್ಸ
ಸಿದ್ದಾಪುರ — ಮೆಸರ್ಸ ಶಾಮಯ್ಯನ ಬ್ರದರ್ಸ

"ಸ್ಟಾರ ಆಫ್ ಕೆನರಾ ಪ್ರೆಸ್",
ಕುಮಟಾ.

—*—

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ ಗುಜರಾಥಿ ಭಾಷೆಯಿಂದ ಬೇಕಾದ ನಮೂನೆಯ ಕಲರ ಪ್ರಿಂಟಿಂ ವಗೈರೆ ಸಣ್ಣ ದೊಡ್ಡ ಛಾಪಾ ಕೆಲಸಗಳೂ ಪುಸ್ತಕ ಮುದ್ರಣವೂ, ರೂಲಿಂಗ ಬ್ಯಾಂಡಿಂಗ್ ಕೆಲಸವೂ ಉತ್ತಮವಾಗಿ ಸುಲಭ ದರದಲ್ಲಿ ತಕ್ಕ ಕಾಲಕ್ಕೆ ತಯಾರಿಸಿ ಕೊಡಲಾಗುವದು

ಇವಲ್ಲದೆ ಕೋರ್ಟ ಕಚೇರಿ ಉಪಯೋಗದ ವಕಾಲತ ವಗೈರೆ ಫಾರ್ಮುಗಳೂ, ಕಸ್ಟಮ್ ಕಚೇರಿಯ ಶಿಪ್ಪಿಂಗ ಬಿಲು ಪತ್ರಿ ವಗೈರ ಫಾರ್ಮುಗಳೂ, ಗೇಣಿ ರಶೀದಿ ಬೂಕು, ಗೇಣಿಚೀಟಿ ಎಮನ್ಸ ಡಿ ಫಾರ್ಮುಗಳೂ ವಗೈರೆ ಮಾರಾಟಕ್ಕೆ ತಯಾರ ಸಿಗುತ್ತವೆ

ನಿಮ್ಮ ಛಾಪಾ ಕೆಲಸಗಳನ್ನು ನಮ್ಮಲ್ಲಿಗೇ ಕಳಿಸಿ
ಒಮ್ಮೆ ಅನುಭವ ತಕ್ಕೊಂಡು ನೋಡಿರಿ !

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,
(ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ಹೆಡ್ ಆಫೀಸು — ಕುಂದಾಪುರ.

ಬ್ರೆಂಚ ಆಫೀಸುಗಳು ಅಂಕೋಲಾ, ಕುಂದಾಪುರ ಬೈಂದೂರು, ಕೋಟೇಶ್ವರ, ಕುಮಟಾ, ಗೋಕರ್ಣ, ಕಾರವಾರ, ಹಾವೇರಿ, ಶಿವಮೊಗ್ಗಾ, ತರೀಕೆರೆ, ನಗರ, ಸೋಮವಾರಪೇಟೆ ಮತ್ತು ವೀರರಾಜಪೇಟೆ

ಕಾಯಂ ಠೇವುಗಳು:- 3 ತಿಂಗಳಿಗೆ ಶೇ ರೂ 3ರಲ್ಲಿ, 6 ತಿಂಗಳಿಗೆ ಶೇ 3½ರಲ್ಲಿ, ೧ ವರ್ಷಕ್ಕೆ ರೂ 4ರಲ್ಲಿ,
2 ವರ್ಷ ಯಾ ಹೆಚ್ಚಿನ ಅವಧಿಗೆ ಶೇ 4½ರಲ್ಲಿ

ಸೇವಿಂಗ್ಸ ಬೇಂಕ್ ಠೇವುಗಳು ಮತ್ತು ಚಾಲು ಠೇವುಗಳು ಸಹ ಅಂಗೀಕರಿಸಲ್ಪಡುವವು

ಭಂಗಾರದ ದಾಗಿನೆಗಳ ವ ಇತರ ವ್ಯಾಪಾರದ ಮಾಲುಗಳ ಆಡವಿನ ಮೇಲೆ ಸವಲತ್ತಿನ ದರದ ಬಡ್ಡಿಯಲ್ಲಿ ಸಾಲ ಕೊಡಲ್ಪಡುವದು

ವ್ಯಾಪಾರದ ಕೇಂದ್ರಗಳಿಗೆ ಡ್ರಾಫ್ಟುಗಳು, ಚೆಕ್ಕುಗಳು ಸಹ ಕೊಡಲ್ಪಡುವವು ಎಲ್ಲ ತರದ ಬೇಂಕಿನ ವ್ಯವಹಾರಗಳು ಸವಲತ್ತಿನ ದರದಿಂದ ನಡಿಸಲ್ಪಡುವವು

ಕುಂದಾಪುರ,
1-8-1941 }

The Agricultural & Industrial Bank, Ltd

[illegible] ತಿಳಿದಂತೆ [illegible] ಅವರೇ [illegible] ಯ [illegible] ಅದರೆ [illegible] ಯಲ್ಲಿ [illegible]

ಸಹ್ಯಾದ್ರಿಫಾರ್ಮಸಿ

ಕುಮಟಾ.

ಬಾಳಂತಿಯರಿಗೆ—

[illegible]

ಚಿಕ್ಕ ಮಕ್ಕಳ ಜಂತು [illegible]

[illegible]

ನಾಯಿ–ಕೆಮ್ಮಿಗೆ [illegible]

ಯಾವತ್ತೂ ಪ್ರಕಾರಗಳ

ಕಷಾಯ, ಅರಿಷ್ಟ ಆಸವ,

ತೈಲಾದಿ ಓಷಧ ಸಾಮಗ್ರಿಗಳು

ಸದಾ ಸಿಗುತ್ತವೆ

ಡಾ॥ ಎನ್. ಕೆ. ಭಟ್ಟ,

ಹಳಕಾರ, ಕುಮಟಾ.

[illegible] ಎಲ್ಲ ತರದ

ಇಂಗ್ಲಿಷ [illegible] ಕನ್ನಡ [illegible]

[illegible]

ಮಳೆಗಾಲದಲ್ಲಿ ಬೇಗನೆ ಉಪಾಯ ಮಾಡಿರಿ!

ಮಹಾಮಾರಿಯ ಬೇನೆ ಗುರುವಿದ್ದಾಗ ಪ್ರತಿಬಂಧಕ (Preventive)

[illegible] ಮತ್ತು ಮಹಾಮಾರೀ ಪಟಕೀ ಕಾಲರಾ (Cholera)

ಆದಾಗ ಮೊಟ್ಟಮೊದಲು (ಅನ್ನ ಬೀಳುವ ವರಗೆ)

[illegible] ಅಪ್ರತಿಮವಾದದ್ದೆಂದರೆ–

ಲಶುನಾದಿ ಗುಟಿಕಾ.

[illegible] ತೀರದುಕೊಂಡಿರುವದು ಅಜೀರ್ಣದ [illegible] ಹೊಟ್ಟೆಯಲ್ಲಿ ನೋವ [illegible]

ದತ್ತಾತ್ರಯ ಕೃಷ್ಣ ನಾಂದೂ ಬ್ರದರ್ಸ

ಚೆಂಬೂರ ಲಿ.

ಆಯುರ್ವೇದೌಷಧಿ ಕಾರಖಾನೆ, ಚೆಂಬೂರ–ಮುಂಬಯಿ

ಕರ್ನಾಟಕ ಶಾಖೆ:— ಹುಬ್ಬಳ್ಳಿ

[illegible]

ಮಕ್ಕಳ ಮರಣವನ್ನು ತಪ್ಪಿಸುವದು.

ವಿಜಾಪುರ, ಕಲಕತ್ತಾ, ಮುಂಬಯಿ ಮದ್ರಾಸ, ಬೆಂಗಳೂರು ಮಂಗಳೂರು

Spleen and Liver Enlargement for Children

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆ [illegible] ನರಗಳು, ಕಾಮಿಲ

[illegible] ದಿವ್ಯೌಷಧ!

[illegible]



ಏತಕ್ಕೆ ಚಿಂತಿಸುವಿರಿ?

[illegible]

ಡಾ॥ ಎಸ್. ಶ್ರೀನಿವಾಸರಾವ,

[illegible]

ಶಿವಮೊಗ್ಗಾ

[illegible]

Reg. No B 1270

Monday, 6th October 1941.

ವರ್ಷ ೨೪

ಸಂಚಿಕೆ ೧೮

ಕಾನಡಾವೃತ್ತ

THE KANARA NEWS

ಪತ್ರದ ವರ್ಗಣಿ

ಕುಮಟೆಯಲ್ಲಿ ಉಗಾವು ರೂಪಾಯಿ 2-4-0
ಮುನಿಯಾರ್ಡರಿನಿಂದ ರೂ 3-1-0
ವ್ಹಿ ಪಿ ಟಪಾಲ ವೆಚ್ಚ ಸೇರಿ ರೂಪಾಯಿ 3-4-0
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ

ಕನ್ನಡ ಇಂಗ್ಲಿಷ ಸ್ಮಾಲ ಟೈಪಿನ (೧೪ ಎಮ ಅಗಲದ)
೮ ಸಾಲುಗಳವರೆಗೆ ರೂ 1-8-0
ಹೆಚ್ಚಿನ ಪ್ರತಿಸಾಲಿಗೆ 0 3 0
ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯುತ್ತವೆ
ಬಾಕಿ ಜಾಹಿರಾತುಗಳ ಬಗೆ ಪತ್ರದ್ವಾರ ಯಾ ಸಮಕ್ಷ ತಿಳಿಸುವದು

-*(ಕುಮಟಾ— ಕಾನಡಾವೃತ್ತ, ಸೋಮವಾರ. ತಾರೀಖು ೬ ಮಾಹೆ ಅಕ್ಟೋಬರ ಸನ್ ೧೯೪೧ನೇ ಇಸವಿ)*

ದೀಪಾವಳಿಯ ಒಂದೇ ಒಂದು ಕಾಣಿಕೆ!

ಸುಗಂಧಿ
ಕಾಂಚನ

ಶ್ರೀ ದೂತಪಾಪೇಶ್ವರ ಪನವೇಲ, ಲಿ.,
ಕರ್ನಾಟಕ ಕೇಂದ್ರ ಯುನೈಟೆಡ್ ಏಜನ್ಸೀಜ, ಹುಬ್ಬಳ್ಳಿ
ಕಾರವಾರ — ಮೆಸರ್ಸ ಮುಜುಮದಾರ ಕಳವೇಕರ ಬ್ರದರ್ಸ
ಅಂಕೋಲಾ:— ದಿ ಸ್ಟೇಶನರಿ ಡಿಪೋ
ಕುಮಟಾ — ದೇವಪ್ಪಾ ಅಯ್ಯು ನಾಯ್ಕ
ಹೊನ್ನಾವರ— ಮೆಸರ್ಸ ಕಲ್ಯಾಣಪುರ ಬ್ರದರ್ಸ
ಶಿರ್ಶಿ:— { ಶಿರ್ಶಿ ಡ್ರಗ್ ಸ್ಟೋರ್ಸ
ಎಸ್ ಎಲ್ [illegible] ಎಂಡ ಸನ್ಸ
ಸಿದ್ದಾಪುರ — ಮೆಸರ್ಸ ರಾಮಯ್ಯನ ಬ್ರದರ್ಸ

"ಸ್ಟಾರ ಆಫ್ ಕೆನರಾ ಪ್ರೆಸ್",
ಕುಮಟಾ.

ನಮ್ಮಲ್ಲಿ ಕನ್ನಡ ಮರಾಠಿ ಇಂಗ್ಲಿಷ ಗುಜರಾತಿ ಟೈಪುಗಳಿಂದ ಬೇಕಾದ ನಮೂನೆಯ ಕಲರ ಪ್ರಿಂಟಿಂಗ ವಗೈರೆ ಸಣ್ಣ ದೊಡ್ಡ ಜಾಬ ಕೆಲಸ [illegible] ಪುಸ್ತಕ ಮುದ್ರಣ [illegible] ಬುಕ್ ಬೈಂಡಿಂಗ [illegible] ಉತ್ತಮವಾಗಿ ಸುಲಭ ದರದಲ್ಲಿ ತಕ್ಷಣ [illegible] ತಯಾರಿ ಮಾಡಲಾಗುವದು ಇದಲ್ಲದೆ [illegible] [illegible] [illegible] ನೋಡಿರಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,
([illegible] ಸಂಘಟಿತವಾದದು)
ಹೆಡ್ ಆಫೀಸ — ಕುಂದಾಪುರ
ಬ್ರಾಂಚ ಆಫೀಸುಗಳು ಅಂಕೋಲಾ ಕುಂದಾಪುರ ಬೈಂದೂರು ಕೋಟೇಶ್ವರ ಕುಮಟಾ ಗೋಕರ್ಣ
ಕಾರವಾರ, ಹಾವೇರಿ ಶಿವಮೊಗ್ಗ ತರೀಕೆರೆ ನಗರ ಸೋಮವಾರಪೇಟೆ ಮತ್ತು ವೀರರಾಜಪೇಟೆ
ಕಾಯಂ ಠೇವುಗಳು: 3 ತಿಂಗಳಿಗೆ ಶೇ. ರೂ 3ರಲ್ಲಿ, 6 ತಿಂಗಳಿಗೆ ಶೇ. 3 [illegible], ೧ ವರ್ಷಕ್ಕೆ ರು. 4ರಲ್ಲಿ,
2 ವರ್ಷ ಯಾ ಹೆಚ್ಚಿನ ಅವಧಿಗೆ ಶೇ. 4½ರಲ್ಲಿ
ಸೇವಿಂಗ್ಸ ಬೇಂಕ್ ಠೇವುಗಳು ಮತ್ತು ಚಾಲು ಠೇವುಗಳು ಸಹ ಒಪ್ಪಿಕೊಳ್ಳಲ್ಪಡುವವು
[illegible]
[illegible]
ಕುಂದಾಪುರ
1-9-1941 }
The Agricultural & Industrial Bank Ltd

ಸ್ಥಳಿಕ ವಿಷಯಗಳು.

ಲೇಖಕ - ಸ್ಥಳವಂತಿಕ

ಬೆಳಗಾವಿಯಲ್ಲಿ ದಕ್ಷಿಣ ಭಾಗದ ಕಮಿಶನರ ಕಚೇರಿಯಲ್ಲಿ ಇದೇ ಕಳೆದ ಸಪ್ಟಂಬರ ತಾ [illegible] ನೇಗೆ ಒಂದು ಸಭೆ ಸೇರಿದ ವಾರ್ತೆ ಪ್ರಕಟವಾಗಿದೆ. ನಮ್ಮ ಜಿಲ್ಹಾಧಿಪರೂ ಆರೋಗ್ಯ ಇಲಾಖೆಯ ಡೈರೆಕ್ಟರರೂ ಗ್ರಾಮೋದ್ಧಾರ ಇಲಾಖೆಯ ಡೈರೆಕ್ಟರರೂ ನಮ್ಮ ಜಿಲ್ಹೆಯ ಜಂಗಲ ಅಧಿಕಾರಿಗಳೂ ಈ ಸಭೆಗೆ ನಿಮಂತ್ರಣ ಹೋಗಿ [illegible]ಸಿದ್ದರಂತೆ! ಕಮಿಶನರರೇ ಈ ಸಭೆಯ ಸಭಾಪತಿಗಳು. ಕೊಂಗ್ರೆಸ ಸರಕಾರದ ಕಾರಕೀರ್ದಿಯಲ್ಲಿ [illegible] ಯ ಮಂತ್ರಿಗಳಿದ್ದ [illegible] ದೇಸಾಯಿಯವರು ಸಭೆಯಲ್ಲಿ ಸನ್ಮಾನಿಸಿ ಕರೆದು ಅಧಿಕಾರಿಗಳ [illegible] ಲೋಕರ ಮುಖದಿಂದ [illegible] ವಿಸಿದ್ದರಿಂದ ನಮ್ಮ ಜಿಲ್ಹೆಯ ಉದ್ಧಾರಕ್ಕಾಗಿ ಒಡವಿ ಇಲಾಖೆಯ [illegible] ಕಲ ಜನಹಿತಕ್ಕಾಗಿ ಮಟ್ಟಿಗೆ [illegible] ಆ ಧೋರಣವನ್ನು ರದ್ದುಪಡಿಸ [illegible] ಈ ಸಭೆಯನ್ನು ಕಮಿಶನರರು [illegible] ಯುತ್ತದೆ ಅಧಿಕಾರಿಗಳಿಗೆ [illegible] ಗಿರುವದರಿಂದ ಕೊಂಗ್ರೆಸ [illegible] ಮುಂಬಯಿ ಸರಕಾರವು ಹೊರಡಿ[illegible] ರದ್ದು [illegible] ವ ಪ್ರಸ್ತಾವ [illegible]! ಈ [illegible] ನನ್ನ [illegible] ಜನರಿಗೆ [illegible] ಕೊಟ್ಟಿದ್ದೇನು ಹೊಸ್ದಾಗಿ [illegible] ವಿಲ್ಲ ಈ ಹೀಸರ್ಣನಕ್ಕೆ [illegible] ಅಧಿಕಾರಿ[illegible] ಸಹಾನುಭೂತಿ ಇರಲಿಲ್ಲ ಕೊಂಗ್ರೆಸ [illegible] ಮಂಡಳದ [illegible] ಮೂಲಕ ಅಧಿಕಾರಿ[illegible] ಈ ತೀರ್ಮಾನಕ್ಕೆ ಒಪ್ಪಿಕೊಂಡಿದರು [illegible] ನಲ್ಲಿ ಜನರ ಕೇಳಿಕೆಗಳೆಲ್ಲ ಮಾನ್ಯವಾಗಿರಲಿಲ್ಲ [illegible] ಕೊಳ್ಳುವಿಕೆಯ ವ್ಯವಹಾರವೆಂದ [illegible] ಯೆಂದು ಆ ತೀರ್ಮಾನ [illegible] ಅದನ್ನು [illegible] ಜಂಗಲ ಅಧಿಕಾರಿಗ[illegible] ಮುಲ್ಕಿ ಅಧಿಕಾರಿಗಳ [illegible] ಸಲಿಲ್ಲ [illegible] ನ್ನು ಕಡಿಯಗೊಡುವದೆಂದರೆ ನಮ್ಮ [illegible] ಅಧಿಕಾರಿಗಳಿಗೆ ಜೀವದ ಸತ್ತು ಬರುತ್ತದೆ ಇತ್ತಲಾಗಿ [illegible] ತೀರ್ಮಾನ ಇದ್ದೂ ಇಲ್ಲದಂತಾಗಿತ್ತು [illegible] ಇದು ಹೋದವರ್ಷ ವ್ಯಸನಪಡತಕ್ಕದು [illegible] ಕೊಂಗ್ರೆಸ ರಾಜ ಭಾರ ಅಂತ್ಯವಾದ [illegible] ನರ ಕಷ್ಟನಿವಾರಣೆಯ ಅರಿ ಒಟ್ಟು [illegible]

ಆದರೆ ಗಳೆಯರೊಬ್ಬರು ಈ [illegible] ಒಂದು ಸ್ಪಷ್ಟೀಕರಣ ಬಯಸುತ್ತಾರೆ [illegible] ಸರಕಾರವು ಈ [illegible] ನ್ನು [illegible] ಡಿಸಿ ಇದೇ [illegible] ನವಂಬರ [illegible] ನೇ ತಾರೀಖಿಗೆ [illegible] ಗಿಯ [illegible] ಈ [illegible] ಗಳಲ್ಲಿ ಈ [illegible] ಮುಕ್ತಾಯವಾದ ಸರಕಾರಕ್ಕೆ ಅವ[illegible] [illegible] ಜನರು ಸರಕಾರಕ್ಕೆ ಕೊಟ್ಟ [illegible] ಒಂದು ಸಂಗತಿಗಳನ್ನು [illegible] ನ್ನು [illegible] [illegible] ಸನ್ನಿವೇಶ ಸಂಬಂಧದ [illegible] ವೃತ್ತಾಂತವನ್ನು [illegible] ಸಿಕ [illegible]

ದ [illegible] ಗಿನ ಸಿರಿಂಗಿನ ರಾಜ ಭಾರದಲ್ಲಿ ಜನಮತಕ್ಕೆ ಅವಕಾಶವೇ ಇಲ್ಲವಾದರೆ ಅದಕ್ಕೆ ಸ್ಥಳವಂತಿಕನ ಅಸ್ತಿತ್ವವಿಲ್ಲ ಕೊಂಗ್ರೆಸ ಧ್ವಜ ಅಧಿಕಾರಾರೂಢ [illegible] ಜನಹಿತ [illegible] ಸಂಗತಿ ಈ ವಾರ್ತೆಯ ಮೇಲಿಂದ ಸಿದ್ಧವಾಗುತ್ತದೆ ಹೀಗೆ ರಾಷ್ಟ್ರೀಯ ಸಭೆಯ ಅಧಿಕಾರ [illegible] ನಮ್ಮ ಜಿಲ್ಹೆಯಲ್ಲಿ ಹೊಸ [illegible] ವನ್ನು [illegible] ಮಾಡಿಕೊಟ್ಟು [illegible] ಅಧಿಕಾರಿ [illegible] ಗಳು!

⁂

[illegible] ಗ್ರಾಮೋದ್ಧಾರ ಮಂಡಳದ ಘಟನೆಯನ್ನು [illegible] ಯಿಂದ ಪರ್ಯಾಲೋಚಿಸ [illegible] ಈ [illegible] ಕಾರ್ಯದರ್ಶಿ [illegible] ಪತ್ರಿಕೆಯಲ್ಲಿ [illegible] ನ್ನು [illegible] ಬೋರ್ಡಿನ [illegible] ಈ ವಿಷಯ [illegible] ಮಾಡಿತ ಇದಲು [illegible] ನ್ನು [illegible] ಬೋರ್ಡಿನ [illegible] ಸ್ಥಿತಿಯಲ್ಲಿ [illegible] ಸ್ಥಿತಿಯಲ್ಲಿ [illegible] ಯಂತ [illegible] ಬಂದಂತೆ [illegible] ಗ್ರಾಮೋದ್ಧಾರ [illegible] ಇನ್ನು [illegible] ಹಣ [illegible] ಮಾಡ [illegible] ಈ [illegible] ಮಂಡಳ [illegible] ದದ್ದುಪಡಿಸಿಕೊಂಡಿದಾರೆಂದು [illegible] ಸಭೆ [illegible] ತೀರ್ಮಾನ [illegible] ಕಮಿಶನರ [illegible] ಈ [illegible] ರಾಜಕಾರಣವಿಲ್ಲ [illegible] ಕಷ್ಟವನ್ನು [illegible] ಹಣ [illegible] ಬೋರ್ಡಿನ ಮಂಡಳದ ಸಭೆಯಲ್ಲಿ ಆಕ್ಷೇಪ ಮಾಡದೆ ಸಹಿತ [illegible] ಕೂಡಾ [illegible] ಮಂಡಳಕ್ಕೆ ತಿಳಿಯದೆ [illegible] ದಿಂದ ಆಜ್ಞಾಪತ್ರ ಕಳಿಸುವದೂ ಕಮಿಶನರ [illegible] ಮಂಡಳಕ್ಕೆ ತಿಳಿಸದೆ ನಿರ್ಣಯವನ್ನು ರದ್ದುಪಡಿಸುವದೂ ಗ್ರಾಮೋದ್ಧಾರ ಮಂಡಳದ ಕರ್ತವ್ಯ! ಗ್ರಾಮೋದ್ಧಾರ ಮಂಡಳದ ಸಭೆಗಳಲ್ಲಿ [illegible] ಎಲ್ಲ ವ್ಯವಹಾರಿಕತೆ ಕಮಿಶನರ-ಪ್ರತಿನಿಧಿಗಳಲ್ಲಿ ಕೇಂದ್ರೀಕೃತವಾಗಿದ್ದರೆ ಗ್ರಾಮೋದ್ಧಾರ ಮಂಡಳವನ್ನು [illegible] ಗ್ರಾಮೋದ್ಧಾರ [illegible] ಈ [illegible] ಸನ್ನಿವೇಶ [illegible] ಪ್ರತಿಭಟ [illegible] ನೀತವಾದೆ

⁂

ಗ್ರಾಮೋದ್ಧಾರ ಮಂಡಳದಿಂದ ಖರ್ಚು ಕೊಟ್ಟು ಕಟ್ಟಿಸಿದ ಗ್ರಾಮ ರಸ್ತೆಗಳು ಕಟ್ಟುಹೋದ ಸಂಗತಿ ಅಧಿಕಾರಿಗಳಿಗೆ ಗೊತ್ತಿದೆ ಇದರಿಂದ ಅಧಿಕಾರಿಗಳು ಒಕ್ಟೋಬರ ತಿಂಗಳ ತಾ ೧೭, ೧೮, ೧೯ ಈ ೩ ದಿನಗಳನ್ನು ಗ್ರಾಮ-ರಸ್ತೆಗಳ ದಿವಸಗಳೆಂದು ಪಾಲಿಸಬೇಕಾಗಿ ಪ್ರಕಟನೆ ಹೊರಡಿಸಿದ್ದಾರೆ ಪ್ರತಿಯೊಂದು ಹಳ್ಳಿಯ ಜನರು ಈ ೩ ದಿನಗಳಲ್ಲಿ ಮನೆಗೊಬ್ಬ ಆಳಿನಂತೆ ಜನರನ್ನು ಕೊಟ್ಟು ಸ್ವಂತ ಕಷ್ಟದಿಂದ ಗ್ರಾಮ ರಸ್ತೆಗಳನ್ನು ದುರುಸ್ತ ಮಾಡಬೇಕು, ಆಳು ಕೊಡದಿದ್ದವರು ಆಳಿನ ಕೂಲಿ ಕೊಡಬೇಕು, ಹೀಗೆಲ್ಲ ಗ್ರಾಮದವರಿಗೆ ಸ್ವಾವಲಂಬನದಿಂದ ಗ್ರಾಮೋದ್ಧಾರ ಮಾಡಿಕೊಳ್ಳುವ ಪಾಠ ಕಲಿಸಲ್ಪಡುತ್ತದೆ ಬೋರ್ಡಿನಲ್ಲಿ ಹಣವಿಲ್ಲ, ಸರಕಾರಕ್ಕೆ ಇದ್ದ ಹಣ ಸಾಲುವದಿಲ್ಲ! ಜನರು ತೆರಿಗೆ ತೆರಬೇಕು, ಮೇಲೆ ಅಂಗಮೆಹನತಿ ಮಾಡಬೇಕು, ಇಷ್ಟಾಗಿ ಎಲ್ಲ ಕೆಲಸ ಗ್ರಾಮ ನಿವಾಸಿಗಳದೇ, ಮತ್ತು ಅವರ ಉದ್ಧಾರಕ್ಕಾಗಿಯೇ! ಇಂಥ ಲೋಕ ಧರ್ಮದಿಂದ ಅಧಿಕಾರಿಗಳು ಲೋಕಾನುಕೂಲತೆಗಳನ್ನು ನಮ್ಮ ಜಿಲ್ಹೆಯೊಳಗೆ ಪ್ರತ್ಯಕ್ಷ ಹವ್ಯಾಸ ಹಿಡಿದಷ್ಟು ವ್ಯಸನಕರ ಅಂಗಮೆಹನತಿ ಮಾಡುವವರಿಗೆ ಇದನ್ನು ಮೋದಬರದಾಗಿ ದುಷ್ಪ್ರೇರಣೆ ಕೊಡಲು ಈ ಮಾತು ಬರೆದಿಲ್ಲ ಧರ್ಮಾರ್ಥವಾಗಿ ಮಾಡಿದ ಯಾವದೇ ಕೆಲಸ ಮನುಷ್ಯನಿಗೆ ಉನ್ನತಿಕಾರಕವಿದೆ 'ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್'। ಎಂಬದಾಗಿ ಭಗವಂತನ ಆಜ್ಞೆಯಿದೆ ಸಾಮರ್ಥ್ಯವಿದ್ದವರು ಅಂಗಮೆಹನತಿ ಮಾಡಿ ಊಟಕ್ಕೆ ಮನೆಗೆ ಹೋಗಬಹುದು, ಆದರೆ ಪ್ರತಿ ದಿನ ಊಟಕ್ಕೆ ದುಡಿಯಬೇಕಾದವರು ೩ ದಿನ ಲೋಕಧರ್ಮ ಮಾಡಿ ಊಟಕ್ಕೆಲ್ಲಿಗೆ ಹೋಗಬೇಕು? ಈ ೩ ದಿನಗಳಲ್ಲಿ ಅಂಗ ಮೆಹನತಿ ಮಾಡಲು ಹುರಿದುಂಬಿಸಲು ಅಗ್ರಣಿಯಾದ ಗ್ರಾಮದ ಪಟೇಲರೂ ಗ್ರಾಮೋದ್ಧಾರದ ಅಧಿಕಾರಿಗಳೂ ಗ್ರಾಮಸುಧಾರಣಾ ಮಂಡಳದವರೂ ಗ್ರಾಮ ಪಂಚಾಯತದಾರರೂ ಅಡಿಗೆಯ ಏರ್ಪಾಟು ಮಾಡಿದರೆ ಉಚಿತ. ಇದರಿಂದ ಗ್ರಾಮದೊಳಗೆ ಜನರು ಒಂದೆಡೆ ಕೂಡಿ ಅದೊಂದು ದೊಡ್ಡ ಉತ್ಸವ ರೂಪವನ್ನು ತಾಳುವದು. ಬರೇ ದುಡಿಯುವವರಾಗಲಿ ಅಂಗ ಮೆಹನತು ಮಾಡುವವರಾಗಲಿ [illegible] ಎಲ್ಲರೂ ಕೂಡುವಂತೆ ಪಿ[illegible] [illegible] ಮೆಹನತು ಮಾಡಲಾರದವರಿಂದ [illegible] ಕೂಲಿಯನ್ನು ವಸೂಲ ಮಾಡುವ ಕ್ರಮವು ಅನಿಷ್ಟವಾದದ್ದು ಶಕ್ತಿ ಇದ್ದವರು ಕೆಲಸಕ್ಕೆ ಬಂದೇ ಬರುವರು ದುರ್ದೈವದಿಂದ ಕೆಲಸಕ್ಕೆ ಶಕ್ತಿಯಿಲ್ಲದವರು ಅದವಾ ಉಸ್ಸ[illegible] ವಿದ್ದವರು ಕೆಲಸಕ್ಕೆ ಬರಲಾರರು ಅಂಥ ಜನರ ಮೇಲೆ ಆಳಿನ ಕೂಲಿ ಹೊರಿಸಿ ವಸೂಲ ಮಾಡುವದೆಂದರೆ ಕೇವಲ ಬಲಾತ್ಕಾರ ಮೇಲಾಗಿ ದುಷ್ಟತನ! ಧರ್ಮದ ಕೆಲಸ ಮನಃಪೂರ್ವಕದಿಂದಲೇ ಆಗಬೇಕು ಧರ್ಮದ ಹೆಸರು ಹೇಳಿ ಅನ್ಯಾಯ ಮಾಡುವದರಿಂದ ಧರ್ಮಸಾಧನೆಯಾಗದು. ಗ್ರಾಮೋದ್ಧಾರ ಮಂಡಳದವರು ವಿಚಾರ ಮಾಡಿ ಈ ೩ ದಿನಗಳನ್ನು ಜನರು ಉತ್ಸಾಹದಿಂದ ಕಳೆಯುವಂತೆ [illegible]ಸುವದು ಶ್ರೇಯಸ್ಕರ

[illegible] ಇನ್ನೊಂದು ವಿಚಾರವುಂಟು [illegible] ನ [illegible] ವ[illegible] ತಕ್ಕಷ್ಟು [illegible] ಇರುವಂತೆಯು

ವ ಐದುಯಿಂದ ನಮ್ಮ ಜಿಲ್ಹೆಯಲ್ಲಿ ಜನರಿಗಿಂತ ಜಾನಾವರಗಳೇ ಹೆಚ್ಚು! ಜನ ಪೋಷಣೆಗಿಂತ ಜಾನಾವರಗಳ ಪೋಷಣೆಯ ಮೇಲೆ ಅಧಿಕಾರಿಗಳ ಲಕ್ಷ್ಯ ಹೆಚ್ಚು. ಇಂಥ ಸ್ಥಿತಿಯಲ್ಲಿ ಎಲ್ಲ ಮಾರ್ಗಗಳನ್ನು ದುರುಸ್ತ ಮಾಡಲು ಪೂರ್ಣ ಜನಬಲ ಪ್ರತಿಯೊಂದು ಗ್ರಾಮದಲ್ಲಿ ದೊರಕದಿರುವದು ಸಾಹಜಿಕ. ಇಂಥ ಗ್ರಾಮಗಳಲ್ಲಿ ಇರುವ ಮಾರ್ಗಗಳನ್ನು ದುರುಸ್ತ ಮಾಡುವದು ಅವಶ್ಯವಿದ್ದರೆ ಆ ಬಗ್ಗೆ ಅಧಿಕಾರಿಗಳ ಯೋಜನೆಯೇನಿದೆ? ಈ ೩ ದಿನಗಳಲ್ಲಿ ಒದಗಿದಷ್ಟು ಜನರು ಯಥಾಶಕ್ತಿ ಮಾಡಿದ ಧರ್ಮಕಾರ್ಯದಿಂದ ಹಾಳು ಬಿದ್ದ ಮಾರ್ಗಗಳಿಗೆ ಅದೆಷ್ಟು ದುರುಸ್ತಿ ಸಾಕೆಂದಿದ್ದರೆ 'ಸ್ಥಳವಂತಿಕ'ನ ಆಕ್ಷೇಪವಿಲ್ಲ. ಹಾಗೆ ಸಾಲದಿದ್ದರೆ ದುರುಸ್ತಿಯ ಕಾರ್ಯ ಪೂರ್ಣಗೊಳಿಸಬೇಕಾಗಿದ್ದರೆ ಅಧಿಕಾರಿಗಳ ವಿಚಾರವೇನಿದೆ? ಈ ೩ ದಿನಗಳಲ್ಲಿ ಆಗತಕ್ಕ ಕಾರ್ಯದ ರೂಪರೇಷೆಯೇನಾದರೂ ತಯಾರಿಸಲ್ಪಟ್ಟಿರುವದೇನೆಂದು ತಿಳಿಯಲಿಲ್ಲ. ಗ್ರಾಮ ನಿವಾಸಿಗಳು ಕುಟಾರಿಯನ್ನು ಹೆಗಲ ಮೇಲೆ ಹಾಕಿಕೊಂಡು ತಮಗೆ ಬೇಕಾದಲ್ಲಿ ದುರುಸ್ತಿ ಮಾಡಿ ಊಟಕ್ಕೆ ಮನೆಗೆ ಹೋಗುವದಿದ್ದರೆ ದುರುಸ್ತಿ ಮಾಡದಿದ್ದರೆ ಒಳಿತೆಂದು ವ್ಯವಹಾರಿಕ ಗೆಳೆಯರೊಬ್ಬರ ಅಂಬೋಣ. ಹಳ್ಳಿಯಲ್ಲಿ ಸಿಗಬಹುದಾದ ಆಳುಗಳೆಷ್ಟು, ಈ ೩ ದಿನಗಳಲ್ಲಿ ಆಗಬೇಕಾದ ಕಾರ್ಯವೆಷ್ಟು? ಮನೆಗೊಬ್ಬ ಆಳು ಬಂದರೆ ಸಾಕೋ ಸಾಲದೋ? ಈ ಯಾವದೇ ವಿಚಾರ ನಡೆದದ್ದು ತೋರುವದಿಲ್ಲ. ಅದನ್ನು ಈಗಲಾದರೂ ನಿಶ್ಚಯಿಸಿಕೊಂಡರೆ ಒಳಿತು

⁂

ಅಧಿಕಾರಿಗಳು ಹೊರಡಿಸಿದ ಮಾರ್ಗದುರುಸ್ತಿಯ ಧರ್ಮಕಾರ್ಯದ ಪ್ರಕಟನೆಯನ್ನೋದಿ ಯಲ್ಲಾಪುರದ ಸ್ನೇಹಿತರು ಬಲು ಸಿಟ್ಟಿಗೆದ್ದಿದ್ದಾರೆ. ಜಿಲ್ಲಾ ಲೋಕಲ ಬೋರ್ಡಿನ ಬಳಿಯಲ್ಲಿ ಹೊಸ ಗ್ರಾಮ-ರಸ್ತೆಗಳನ್ನು ವಹಿಸಿಕೊಂಡು ಕಾಪಾಡಲು ಹಣವಿಲ್ಲವಾಗಿ ಪ್ರಕಟನೆಯಲ್ಲಿ ಬರೆದ ಸಂಗತಿಯನ್ನು ಈ ಗೆಳೆಯರು ಒಪ್ಪುವದಿಲ್ಲ. ಯಲ್ಲಾಪುರ ತಾಲೂಕಿನಲ್ಲಿ ಜಿಲ್ಹಾ ಲೋಕಲ ಬೋರ್ಡ ಕೊಂಗ್ರೆಸ ಪಕ್ಷದ ಬೋರ್ಡಿನ ಸಭಾಸದರಾದ ರಾ|| ರಾಮಚಂದ್ರ ನಾರಾಯಣ ಹೆಗಡೆ ಕನೇನಳ್ಳಿ ಇವರ ಅನುಕೂಲತೆಯ ಬಗ್ಗೆ ಬೋರ್ಡಿನ ಹಣ ಖರ್ಚು ಮಾಡುವ ನಮೂನೆ ಕೇಳತಕ್ಕಂಥಾದ್ದಿದೆ! ಕನೇನಳ್ಳಿಯ ಮಾರ್ಗ ಗ್ರಾಮ ರಸ್ತೆಯಲ್ಲಿ ಸೇರ್ಪಡೆಯಾಗುವದಿಲ್ಲವಾಗಿಯೂ ಇದು ರಾ|| ರಾಮಚಂದ್ರ ನಾರಾಯಣ ಹೆಗಡೆ ಇವರೊಬ್ಬರದಷ್ಟೇ ಅನುಕೂಲತೆಯದೆಂತಲೂ ರಾ|| ರಾಮಚಂದ್ರ ಹೆಗಡೆರು ಬೋರ್ಡಿನ ಸಭಾಸದರಾಗುವ ತನಕ ಬೋರ್ಡು ಅಭಿಪ್ರಾಯಪಟ್ಟು ಅದನ್ನು ಕಾಪಾಡುವಿಕೆಯ ಬಗ್ಗೆ ಕೊಳ್ಳಲು ಒಡಂಬಡಲಿಲ್ಲ. ರಾ|| ಹೆಗಡೆರು ಇಲೆಕ್ಷನಿನಲ್ಲಿ ಗೆದ್ದೊಡನೆ, ಒಡನೆಗಲೇ ಬೋರ್ಡಿನವರು ಈ ಮಾರ್ಗ ಗ್ರಾಮ ಮಾರ್ಗವೆಂದು ವಹಿಸಿಕೊಂಡು ವರ್ಷಾಸನ ಕಾಪಾಡುವಿಕೆಯ ಬಗ್ಗೆ ರೂ ೨೨-೮-೦ ಖರ್ಚು ಮಾಡಬೇಕಾಗಿಯೂ ನಿರ್ಣಯಿಸಿ ದುರುಸ್ತಿ ಮಾಡಿಸಿದರು. ಈ ಬಗ್ಗೆ ಆಕ್ಷೇಪ ನಡೆಯುತ್ತಿರುವಾಗಲೇ ರೂ ೫೦೦ನ್ನು ಖರ್ಚು ಮಾಡಿ ಈ ಮಾರ್ಗದ ಕೆಲಭಾಗವನ್ನು ಖಡಿ ಹಾಕಿ ಭದ್ರಗೊಳಿಸಬೇಕೆಂದು ನಿರ್ಣಯವಾಯಿತು. ಖಡಿ ತಯಾರಿಸಲಿಕ್ಕೆ ಜನ ಸಿಗಲಿಲ್ಲ! ಹಾಗಾದರೆ ಗುಂಡುಗಲ್ಲು ಹಾಕಿರಿ, ಮಣ್ಣು ಹಾಕಿರಿ, ಬೇಕಾದ್ದನ್ನು ಹಾಕಿರಿ, ಅಂತು ರೂ ೪೦೦ ಈ ರಸ್ತೆಯ ಬಗ್ಗೆ ಶೀಘ್ರವೇ ಖರ್ಚಾಗಬೇಕು ಎಂಬದಾಗಿ ಬೋರ್ಡಿನ ಘೋರ ಅಪ್ಪಣೆಯಾದಂತೆ ಲಗಬಗೆಯಿಂದ ಕೆಲಸ ನಡೆದಿದೆ. ಈ ಮಾರ್ಗಕ್ಕೆ ಹೊಂದಿಕೆಯಾಗಿ ಜಂಗಲ ಇಲಾಖೆಯ ಮಾರ್ಗವಿದೆ. ಆ ಮಾರ್ಗ ಜಂಗಲ ಇಲಾಖೆಯವರ ಉಪಯೋಗಕ್ಕೂ. ಜಂಗಲ ಇಲಾಖೆಯವರು ಇಷ್ಟವಿದ್ದರೆ ಅದನ್ನು ದುರುಸ್ತ ಮಾಡುತ್ತಾರೆ ಇಲ್ಲವೆ ಹಾಗೆಯೇ ಕೆಡಹುತ್ತಾರೆ. ಈ ಮೂಲಕ ರಾ|| ಹೆಗಡೆಯವರಿಗೆ ತಮ್ಮ ಮನೆಗೆ ಹೋಗಲು ಆ ಮಾರ್ಗ ತೊಂದರೆ ಕೊಡುತ್ತದೆ. ಆದದಿಂದ ಬೋರ್ಡಿನವರು ಆ ಮಾರ್ಗವನ್ನು ಜಂಗಲ ಇಲಾಖೆಯಿಂದ ಕಾಪಾಡುವಿಕೆಯ ಬಗ್ಗೆ ಕೊಂಡು ಅಲ್ಲಿ ಹಣ ಖರ್ಚು ಮಾಡತೊಡಗಿದ್ದಾರೆ. ಈ ಜಂಗಲ ಇಲಾಖೆಯ ಮಾರ್ಗದಲ್ಲಿ ಒಂದು ಸಂಕವಿದೆ. ಆ ಸಂಕ ಜೀರ್ಣವಾಗಿದೆ. ಅದನ್ನು ಮುಂದಕ್ಕಾದರೂ ಪುನಃ ಕಟ್ಟಿಸಬೇಕು. ಅದಕ್ಕೆ ರೂ ೧೦೦೦ವಾದರೂ ಬೇಕು. ಬೋರ್ಡ ಇದನ್ನು ಖರ್ಚು ಮಾಡಲಿಕ್ಕೆ ಹಿಂದ ಮುಂದೆ ನೋಡಲಿಕ್ಕಿಲ್ಲ. ಯಾಕೆಂದರೆ ರಾ|| ರಾಮಚಂದ್ರ ನಾರಾಯಣ ಹೆಗಡೆಯವರು ಬೋರ್ಡಿನ ಸಭಾಸದರಾದಂದಿನಿಂದ ಲೋಕಪ್ರಯೋಜನದ ಸಾರ್ವಜನಿಕ ಸಂಸ್ಥೆಯಾಗಿ ಪರಿಣಮಿಸಿದೆ. ಹೀಗೆ ಬೋರ್ಡಿನ ಹಣ ವ್ಯಕ್ತಿ-ಸುಖಕ್ಕಾಗಿ ಅಪವ್ಯಯವಾಗುತ್ತಿರುವಾಗ, ಬೋರ್ಡಿಗೆ ಒಡೆತನೆಯಿರುವದಾಗಿ ನಂಬುವ ಜನರು ಯಲ್ಲಾಪುರ ತಾಲೂಕಿನಲ್ಲಿಲ್ಲದಿದ್ದರೆ ಆಶ್ಚರ್ಯವೇನು? ಜನರು ಲೋಕಲ್ಬೋರ್ಡನ್ನು ತೆಗಳುತ್ತಿರುವಾಗ ಬೋರ್ಡು ದುಂದುಗಾರಿಕೆ ಮಾಡುತ್ತಿರುವಾಗ, ಅಕ್ಟೋಬರ ೧೭-೧೮-೧೯ನೇ ತಾರೀಖುಗಳಲ್ಲಿ ಅಂಗಮೆಹನತಿ ಮಾಡಿ ಗ್ರಾಮ-ರಸ್ತೆಗಳನ್ನು ದುರುಸ್ತಿ ಮಾಡಿ ಊಟಕ್ಕೆ ಮನೆಗೆ ಹೋಗುವ ಜನ ಸಿಗಲಾರರೆಂದು ಈ ಗೆಳೆಯರ ಅಂಬೋಣ. ಅಧಿಕಾರಿಗಳು ಇಂಥ ದುಂದುಗಾರಿಕೆಗೆ ನಿರ್ಬಂಧ ಹಾಕಲು ಒಡಂಬಡುವದಿಲ್ಲ! ಜನರು ಅರ್ಜಿ ಮಾಡಿ ಬೇಸತ್ತರು! ಅರ್ಜಿಯ ವಿಚಾರ ಮುಗಿಯುವ ತನಕವಾದರೂ ಕೆಲಸಕ್ಕೆ ತಡೆಹಾಕಲು ಬೋರ್ಡಾಗಲಿ, ಜಿಲ್ಹಾಧಿಕಾರಿಗಳಾಗಲಿ ಉಭಯತರ ಪಾರುಪತ್ಯ ಮಾಡುವ ಕಮಿಶನರ-ಪ್ರಭುಗಳಾಗಲಿ ಒಡಂಬಡುವದಿಲ್ಲ. ಲೋಕೋಪಕಾರಕ್ಕಾಗಿ ಬೋರ್ಡಿನಲ್ಲಿ ಸೇರಿದ ಕೊಂಗ್ರೆಸ ಪಕ್ಷವಂತು ಬಕ ಧ್ಯಾನ ಮಾಡುತ್ತಿದೆ. ಪಬ್ಲಿಕ ಬೋರ್ಡಿನ ಪಾರುಪತ್ಯ ಕೊಂಗ್ರೆಸ ಪಕ್ಷದ ಸ್ಥಾಪನೆ ಕಾಲದಲ್ಲಿಯೇ ಲಯಹೊಂದಿದೆ. ಇಂಥ ಪ್ರಕಾರಗಳಿಂದ ಜನರಿಗೆ ಉತ್ಸಾಹವಾಗುವದಿಲ್ಲ. ರಾ|| ಹೆಗಡೆಯವರಿಗೆ ಸ್ವಾರ್ಥವಿರುವದು ಸಹಜಿಕ, ಅವರು ಪ್ರಾಪಂಚಿಕರು. ಆದರೆ ಇತರ ಸಭಾಸದರು ರಾ|| ಹೆಗಡೆರ ಸ್ವಾರ್ಥ ಕಾರಣದಲ್ಲಿ ಸೇರಿದ್ದು ಮಾತ್ರ ಆಶ್ಚರ್ಯ. ಜಿಲ್ಹಾ ಲೋಕಲ ಬೋರ್ಡು ವಿಚಾರಿಸಿ ವರ್ತಿಸಬೇಕು. ಇಷ್ಟಾಗಿ ಕನೇನಳ್ಳಿಯಲ್ಲಿ ಇರುವ ಮನೆಗಳ ಸಂಖ್ಯೆ ೫. ವರ್ಷಾಸನ ಸಿಗುವ ಲೋಕಲ್ಫಂಡು ರೂ ೩॥ ಇದಕ್ಕಿಂತ ಹೆಚ್ಚಿನ ವಸತಿಯುಳ್ಳ ಹಳ್ಳಿಗಳ ಲೋಕಪ್ರಯೋಜನದ ಮಾರ್ಗಗಳನ್ನು ಬಿಟ್ಟುಕೊಟ್ಟು, ಒಂದೇ ಮನೆಯವರ ಪ್ರಯೋಜನದ ಮಾರ್ಗಗಳನ್ನು ಕಟ್ಟಿಸುವ ಅಟ್ಟಹಾಸ ಹಿಡಿಯುವದು, ಕೊಂಗ್ರೆಸ ಪಕ್ಷದ ಪ್ರಾಧಾನ್ಯವುಳ್ಳ ಬೋರ್ಡಿಗೆ ಭೂಷಣವಲ್ಲ. ಈಗಲಾದರೂ ಈ ವ್ಯಾಪಾರದೊಳಗಿಂದ ಬೋರ್ಡಿಗೆ ಅಲಿಪ್ತವಾಗಿರಲು ಸಾಧ್ಯವಿದ್ದರೆ ಆ ಪ್ರಕಾರ ಮಾಡಬಹುದಾಗಿ ಸೂಚನ ಉಂಟು

“ಈವ್ಸ-ಡ್ರೊಪರ”ನ ಅಭಿಪ್ರಾಯ.

ಬರೀ ಹದಿನೇಳು ವರ್ಷಗಳಲ್ಲಿ ೧॥ ಕೋಟಿ ರೂಗಳಷ್ಟು ಜೀವನಿಧಿಯನ್ನು ಕಲೆಹಾಕಿದ ಹಾಗೂ ೬೦ ಲಕ್ಷ ರೂಗಳಿಗೂ ಮಿಕ್ಕಿ ವಾರ್ಷಿಕ ಉತ್ಪನ್ನ ಪಡೆಯುವಷ್ಟು ಉತ್ತಮ ಸ್ಥಿತಿಗೆ ಬಂದು ಮುಟ್ಟಿದ, ಎರಡೇ ವರ್ಷಗಳಲ್ಲಿ ಆಡಳಿತೆಯ ಖರ್ಚಿನ ಪ್ರಮಾಣವನ್ನು ನೂರಕ್ಕೆ ೧೧ರಷ್ಟು ಇಳಿಸಿದ ಮತ್ತು ಹಿಂದುಸ್ಥಾನದ ಮುಖ್ಯ ಮುಖ್ಯ ಕೇಂದ್ರಗಳಲ್ಲಿ ತನ್ನ ಸ್ವಂತ ಮಾಲ್ಕಿಯ ಭವ್ಯ ಕಚೇರಿ-ಮನೆಗಳನ್ನು ಕಟ್ಟಿಸಿಕೊಂಡು ವೈಭವದಿಂದ ಮೆರೆಯುವ ಬೇರೆ ಆವ ಕಂಪನಿಯನ್ನೂ ನಾನು ಕಂಡಿಲ್ಲ! ಲಕ್ಷ್ಮೀ ವಿಮೆ ಕಂಪನಿಯು ನಿಜವಾಗಿಯೂ ಲಕ್ಷ್ಮೀ ದೇವಿಯ ಪ್ರೇಮಾನುಗ್ರಹವನ್ನು ಸಂಪಾದಿಸಿದೆ!

ತಾ ೨೭-೪-೧೯೪೦ರ “ಇಂಡಿಯನ್ ಫಿನೆನ್ಸ” ಪತ್ರಿಕೆಯಿಂದ

ವರ್ಷ	ಜೀವ ನಿಧಿ	ನೆಚ್ಚಿದ ಪ್ರಮಾಣ
೧೯೨೫—೨೬	೭೪,೮೨೯	೬೬.೯೮
೧೯೨೯—೩೦	೧೫,೦೦,೭೨೬	೩೭.೨೭
೧೯೩೪—೩೫	೫೯,೧೨,೮೯೯	೩೫.೯೩
೧೯೩೯	೧,೩೫,೪೬,೫೯೯	೩೧.೫೭
೧೯೪೦	೧,೭೫,೩೩,೧೯೭	೨೧.೭೭

ಬೋನಸ್ಸು – ಎಂಡೌಮೆಂಟ ವಿಮೆಗಳ ಮೇಲೆ ೧೦೦೦ ರೂಗೆ ಪ್ರತಿ ವರ್ಷ ರೂ ೧೫
ಆಜೀವ ವಿಮೆಗಳ ಮೇಲೆ ೧೦೦೦ ರೂಗೆ ಪ್ರತಿ ವರ್ಷ ರೂ ೧೮

ದಿ ಲಕ್ಷ್ಮೀ ಇನ್ಶ್ಯೂರನ್ಸ ಕಂಪನಿ, ಲಿ.,
ಮುಖ್ಯ ಕಚೇರಿ **ಮೆಕ್ಲೋಡ ರೋಡ, ಲಾಹೋರ.**

ಮುಂಬಯಿ ಶಾಖೆ –
“ಲಕ್ಷ್ಮೀ ಬಿಲ್ಡಿಂಗ”
ಫಿರೋಜಶಹಾ ಮೆಹತಾ ರೋಡ

ಕಲಕತ್ತಾ, ಮುಂಬಯಿ, ಮದ್ರಾಸ, ಕರಾಚಿ, ಲಖನೌ,
(ನಿಜಾಮ) ಹೈದರಾಬಾದ, ಮೊಂಬಾಸಾ (ಬ್ರಿಟಿಶ ಪೂರ್ವ ಆಫ್ರಿಕಾ)
ಈ ಊರುಗಳಲ್ಲಿ ಶಾಖೆಗಳಿವೆ

ಕಾನಡಾವೃತ್ತ.

ಮಿತಿ ವೃಷ ಸಂವತ್ಸರ ಆಶ್ವೀಜ ಶು [illegible], ಸೋಮವಾರ

ಸಾಮ್ರಾಜ್ಯಕರ್ತರ ಕಪಟ ಸಾಕು!

ಕಪಟ ಕ್ರಿಯಾಸ್ಪದವಲ್ಲವಾಗಿ ಸಾಮ್ರಾ[illegible]ಕರ್ತರಿಗೆ ನಾವು ಸಾರಿ ಹೇಳುತ್ತೇವೆ. ಬ್ರಿಟಿಶರು ಹಿಂದುಸ್ಥಾನದೊಳಗೆ ನಡಿಸುವ [illegible] ವರ್ತನೆ ಈಗೀಗ ಅಮೇರಿಕೆಯಲ್ಲಿ [illegible] ತೊಡಗಿವೆ. ಅಮೇರಿಕೆಯವರು ಹಿಂದುಸ್ಥಾನದ [illegible] ರಾಜ್ಯಭಾರದ ವಿಷಯ ಭಾರತ ಮಂತ್ರಿ [illegible] ಪ್ರಶ್ನೆ [illegible] ಗಳಿಗೆ [illegible] ಆಕಾಶವಾಣಿಯಿಂದ ಭಾರತ ಮಂ[illegible] ಕೊಟ್ಟಿದ್ದಾರೆ. ಈ [illegible] ನಮ್ಮ ಓದುಗ[illegible] [illegible]

ಬ್ರಿಟಿಶ ಸರಕಾರಕ್ಕೆ ಹಿಂದುಸ್ಥಾನದ ಪ್ರತ್ಯಕ್ಷ[illegible]ವಾಗಿ ಇಲ್ಲವೆ ಅಪ್ರತ್ಯಕ್ಷವಾಗಿ [illegible] ನೆಂದು ಕೇಳಿದ ಪ್ರಶ್ನೆಯನ್ನು ಮಿ॥ ಎಮೆರಿಯವರು ಸಂಪೂರ್ಣವಾಗಿ ನಿರಾಕರಿಸಿದ್ದಾರೆ. ಹಿಂದುಸ್ಥಾನದಲ್ಲಿ ಎತ್ತುವಳಿಯಾಗುವ ಯಾವತ್ತು ಕಂ[illegible] ಹಿಂದುಸ್ಥಾನದ ಸಂಪೂರ್ಣ ಹಿತಕ್ಕಾಗಿಯೇ [illegible] ಯೋಗಿಸಲ್ಪಡುತ್ತವೆಂದೂ ಸಾಮ್ರಾ[illegible] ಕಾರವು ಹಿಂದುಸ್ಥಾನದ ಸಂರಕ್ಷಣೆಗಾಗಿ ಹಿ[illegible] ಸೈನ್ಯ ಇಲಾಖೆಗೆ [illegible] ವರ್ಗಣಿ ಕೊಡುತ್ತಲಿದ್ದಾಗಿಯೂ ಭಾರತ ಮಂತ್ರಿ ಮಿ॥ ಎಮೆರಿಯವರು ಒಡೆದ ಮಾತನ್ನು ಕೇಳಿ ಹಿಂದಿನ ವಾಕ್ಯಗಳಲ್ಲಿಯೂ ವ್ಯಸನಪಡುವರ. ಭಾರತ ಮಂತ್ರಿಗಳಿಂದ ಸಭ್ಯರು, ಶಿಷ್ಟರು ಇಂಥ ವಿಪರೀತ ವಿಧಾನಗಳನ್ನು ಬೇಗ ಮಾಡುತ್ತಾರೆಂದು ತಿಳಿಯದವರು ಬಿಗಿಲು ಬೀಳುವರು. ಹಿಂದುಸ್ಥಾನದೊಳಗೆ ಎತ್ತುವಳಿಯಾಗುವ ಹಣ ಹಿಂದೂ[illegible]ಗಳ ಪ್ರ[illegible] ಜನ ಬೀಳುತ್ತಿದ್ದರೆ ಹಿಂದುಸ್ಥಾನದ ರಾಜ್ಯಭಾರವು ಸಾಮ್ರಾಜ್ಯಕರ್ತರ ವರ್ಗಣಿಯ ಮೇಲೆ ನಡೆಯುತ್ತಿದ್ದರೆ ಸಾಮ್ರಾಜ್ಯಕರ್ತರು ಎಂದೋ [illegible] ಮೋರ್ಚ ಕಟ್ಟಿಕೊಂಡು ತಾವಾಗಿಯೇ ಸ್ವದೇಶಕ್ಕೆ ಮರಳುತ್ತಿದ್ದರು. [illegible] ಹಿಂದ ಸ್ವರಾಜ್ಯ ಕೊಟ್ಟು [illegible] ಲೋಕ ಧರ್ಮರಾಯ ಎಂಬ ಖ್ಯಾತಿ ಪಡೆಯುತ್ತಿದ್ದರು. ಹಿಂದುಸ್ಥಾನದಿಂದ ತಮ್ಮ ಹೊಟ್ಟೆ ಪ್ರಯೋಜನ ಪಡೆದ, ಹಿಂದುಸ್ಥಾನವನ್ನು ಪಾಪ[illegible] [illegible] ಹಿಂದುಸ್ಥಾನದ [illegible] ಗಿ ಹಿಂದುಸ್ಥಾನದ ಹಿತಕ್ಕಾ[illegible] [illegible] ತ್ತವೆಂದು [illegible] [illegible] ವಿಲ್ಲ.

[illegible] ಎಷ್ಟು [illegible] [illegible]

ಸ್ವಾತಂತ್ರ್ಯ [illegible] ಗಿತ ಸರ್ವಾಧಿಪತಿಗಳ ಯ [illegible] ನ್ನು [illegible] ಸಾಮ್ರಾಜ್ಯ ಸರಕಾರವು ಯುದ್ಧ [illegible] ಹಿಂದುಸ್ಥಾನವು [illegible] ದೇವ ರಿತು! ಎಂದು [illegible] ತ್ರ [illegible] ಭಾರತ ಮಂತ್ರಿ [illegible] ಸ್ನು ಕೊಡುತ್ತಾರೆ! ಸಾಮ್ರಾ[illegible] ಮಾಡ [illegible] ನ್ನು ಕ[illegible]ಕೊಂಡಿತ್ತು [illegible] ಹಿಂದುಸ್ಥಾನದ [illegible] ವನ್ನು [illegible] ರವು [illegible] ಕೊಂಡಿವೆ [illegible] ಸ್ವಾತಂತ್ರ್ಯ [illegible] ಹಿಂದುಸ್ಥಾನ ಸರಕಾರವು [illegible] ಪ್ರಾಶಸ್ತ್ಯವು ಹಿಂದುಸ್ಥಾನ ಸಂಕಟದಲ್ಲಿ [illegible] ಸಾಮ್ರಾ[illegible] ಕಾರಣರಾಗಿ [illegible] ಸರಕಾರವು [illegible] ಕೊಡುತ್ತೆಂದು [illegible] ಈಗಿನ ಘೋರಣ [illegible] ತಮ್ಮ [illegible] ಪ್ರಶ್ನೆಗೆ ಭಾರತ ಮಂತ್ರಿ [illegible] ಪವಾಗಿ [illegible] ಹಿಂದು ಸ್ಥಾನದ [illegible] ಸಿಂದ [illegible] [illegible] ಮಾಡಿಕೊಂಡರೆ [illegible] [illegible] ಪ್ರಶ್ನೆಗಳನ್ನು [illegible] ತಾವು [illegible] ಅಧಿಕಾರ [illegible] ಯ ಸ್ವಾತಂತ್ರ್ಯ [illegible] ಒದಗಿ ಬರ[illegible] [illegible] ಒಕ್ಕೀ ಬಾಲಿಶಿಂದ [illegible] ಕೋರಿಕಾರದ [illegible] ಅವರು ಹೇಳುತ್ತಾರೆ!" ಈ ಮಾತು [illegible] ಹಿಂದುಸ್ಥಾನದೊಳಗೆ ಲೋಕರು [illegible] ಸ್ಥಾನವನ್ನು ತಾವು [illegible] ಅಧಿಕಾರದಿಂದ ಆಳುತ್ತೇವೆಂದೂ [illegible] ಇದ್ದ ಸ್ಥಿತಿಯನ್ನು ಇದ್ದಂತೆ ಹೇಳಿದ [illegible] ಭಾರತ ಮಂತ್ರಿಗಳಿಗೆ [illegible]ತ್ತು! ಹಿಂದುಸ್ಥಾನದೊಳಗೆ ಈಗ ಸಾ[illegible] ಸ್ವರಾಜ್ಯವಿರುವವಾಗಿ ಹೇಳಿದ ಮಾತನ್ನು [illegible] ನಂಬರು. [illegible] ಪ್ರಕಾರ ಪಂ॥ ಜವಾಹಿ[illegible] ಲಾಲರು ಹಿಂ[illegible] ತ್ತೇಜಕ ಭಾಷಣ ಮಾಡಿದರೆಂ[illegible] [illegible] ಬಂಧನ [illegible] ಯಿಂದ [illegible] [illegible] ವರಿಗೆ [illegible] ದಲ್ಲಿ [illegible] ಶಿಕ್ಷೆ [illegible] [illegible] ಮಜಿಸ್ಟ್ರೇ[illegible] [illegible]

ವಾಗಿಯೂ, ಮಜಿಸ್ಟ್ರೇಟರು ಖಟ್ಲೆಯ ವೃತ್ತಾಂತದ ಮೇಲಿಂದ ಅಷ್ಟು ಶಿಕ್ಷೆ ಕೊಟ್ಟಿರಾಗಿಯೂ ಹೇಳಿದ ಮಾತನ್ನು ಒಕ್ಕ ಮಕ್ಕಳು ಸಹ ಚೇಷ್ಟೆಯೆಂದು ಎಣಿಸುವರು! ಪಂ॥ ಜವಾಹಿರಲಾಲರೆಲ್ಲಿ, ಮೆಜಿಸ್ಟ್ರೇಟರೆಲ್ಲಿ? ಪಂ॥ ಜವಾಹಿರಲಾಲರ ನಡತೆಯ ತನಿಖೆ ಮಾಡುವ ಶಕ್ತಿ ಆ ಮಜಿಸ್ಟ್ರೇಟರಲ್ಲೇನುಂಟು? ಭಾರತ ಮಂತ್ರಿಗಳ, ಏಕೆ - ಬ್ರಿಟಿಶ ಪ್ರಧಾನ ಮಂಡಳದ ಅಭಿಪ್ರಾಯ ತಿಳಕೊಳ್ಳದೆ ಪಂ॥ ಜವಾಹಿರಲಾಲರಿಗೆ ೪ ವರ್ಷಗಳ ಶಿಕ್ಷೆಯನ್ನು ವಿಧಿಸುವಷ್ಟು ಆ ಮೆಜಿಸ್ಟ್ರೇಟರು ದಿಟ್ಟರಾದರೆಂದು ಯಾರಿಗೆ ತಿಳಿಯುವಂತಿಲ್ಲ! ಪಂ॥ ಜವಾಹಿರಲಾಲರು ಸೆರೆಮನೆ ಸೇರಿದ್ದು ವಿಪರೀತವೆಂದು ನಮಗನಿಸುವದಿಲ್ಲ. ಪರತಂತ್ರ ಹಿಂದುಸ್ಥಾನದಲ್ಲಿ ಪಂ॥ ಜವಾಹಿರಲಾಲರಂಥ ಸ್ವಾತಂತ್ರ್ಯಮೂರ್ತಿ ಸ್ವತಂತ್ರನಾಗಿ ವ್ಯವಹರಿಸುವದು ಎಂದಿಗೂ ಸಾಧ್ಯ ಮಾತಲ್ಲ. ಆ ವಿಚಾರವೇ ವಿಪರೀತವಾದದ್ದು. ಪಂ॥ ಜವಾಹಿರಲಾಲರಂಥವರು ಅಲ್ಪಾವಧಿಯಾಗಲಿ ದೀರ್ಘಾವಧಿಯಾಗಲಿ ಸೆರೆಮನೆ ಸೇರುವ ಪ್ರಸಂಗವನ್ನೇ ತಪ್ಪಿಸುವ ರಾಜ್ಯಭಾರವನ್ನು ನಾವು ಸಂಕಲ್ಪಿಸಬೇಕು. ಇಂಥ ಕಪಟವನ್ನು ಸಾಮ್ರಾಜ್ಯಕರ್ತರು ಸ್ಥಿರಪಡಿಸಲಿಕ್ಕೆ ಸಲ್ಲಾಗದು.

ಪಂಜಾಬದ ಮುಖ್ಯ ಪ್ರಧಾನರಾದ ಸರ್ ಸಿಕಂದರ ಹಯಾತಖಾನರವರು ನುಡಿದಂತೆ ಬ್ರಿಟಿಶ ರಾಜ್ಯದ ಅಧಿಕಾರಿಗಳಿಗಲ್ಲ ಈವಾಗ ಸಂಕಟವಾಗಿದೆ. ಬ್ರಿಟಿಶರಿಂದ ನಮ್ಮ ಹಿಂದುಸ್ಥಾನದ ಉದ್ಧಾರವಾಗುವದಾಗಿ ನಂಬಿಕೊಂಡ ನಾ॥ ಜಯಕರರಂಥ ಅಧಿಕಾರಿ ಪುರುಷರು ಈವಾಗ ಒಡಕಿಗೆ, ಪಕ್ಷಪಂಗಡಗಳಿಗೆ ಸಾಮ್ರಾಜ್ಯಕರ್ತರೇ ಕಾರಣರೆಂದು ನಿರ್ದಾಕ್ಷಿಣ್ಯದಿಂದ ಹೇಳತೊಡಗಿದ್ದಾರೆ. ಹಿಂದುಸ್ಥಾನದ ರಾಜ್ಯಧೋರಣವನ್ನು ಸ್ಪಷ್ಟ ಶಬ್ದಗಳಲ್ಲಿ ಜನಸಾಮಾನ್ಯರಿಗೆ ತಿಳಿಯುವಂತೆ ಘೋಷಿಸಬೇಕಾಗಿ ಸರ್ ಸಿಕಂದರ ಹಯಾತಖಾನರ ಆಗ್ರಹವಿದೆ. ಯುದ್ಧ ಮುಗಿದ ೧-೨ ವರ್ಷಗಳಲ್ಲಿ ಬ್ರಿಟಿಶರಿಗೆ ಸಮಾನರಾಗಿ ವ್ಯವಹರಿಸುವಂತೆ ರಾಜ್ಯಭಾರ ಕಲ್ಪಿಸಬೇಕಾಗಿಯೂ ಅಂಥ ರಾಜ್ಯಯೋಜನೆಯನ್ನು ತಯಾರಿಸಲಿಕ್ಕೆ ನಮ್ಮ ಹಿಂದುಸ್ಥಾನದ ಪಕ್ಷಪ್ರಮುಖರ ಸಭೆ ಕರೆಯಬೇಕಾಗಿಯೂ ಸರ್ ಸಿಕಂದರ ಹಯಾತಖಾನರು ಸಿಮ್ಲಾದಲ್ಲಿ ಪತ್ರಿಕಾ ಪ್ರತಿನಿಧಿಗಳ ಕಡೆಗೆ ಹೇಳಿದ್ದಾರೆ. ಇ[illegible] ವಾರದಲ್ಲಿ ತಮ್ಮ [illegible] ಮನ್ನಿಸಿ ಸಾಮ್ರಾಜ್ಯ ಸರಕಾರವು ಘೋಷಣೆಯನ್ನು ಮಾಡದಿದ್ದರೆ ತಾವು ಆ ಕುರಿತು ಸಾಮ್ರಾಜ್ಯ ಸರಕಾರವನ್ನು ಪ್ರತಿಭಟಿಸುವೆನೆಂದೂ ಸರ್ ಸಿಕಂದರರು ಎಚ್ಚರಿಕೆ ಕೊಟ್ಟಿದ್ದಾರೆ. ಸಾಮ್ರಾಜ್ಯಕರ್ತರು ಮುಂಜಾಗ್ರತೆ ಪಡೆಯಬೇಕಾಗಿ ನಾವು ಬಿನ್ನೈಸಿಕೊಳ್ಳುತ್ತೇವೆ. ಸರ್ ಸಿಕಂದರ, ನಾ॥ ಜಯಕರರಂಥ ಬ್ರಿಟಿಶ ಹಿತಚಿಂತಕರಿಗೆ ಸಾಮ್ರಾಜ್ಯ ಸರಕಾರದ ತಿರಸ್ಕಾರವುಂಟಾದ [illegible] [illegible] ವಿಕಲ್ಪ [illegible] [illegible] [illegible] ಲಾಗಿಸಿ ತರ[illegible] [illegible] [illegible] ಹಿಂದುಸ್ಥಾನದ [illegible]

ಕ್ಕಾದ ಮಿ॥ ಅಮೆರಿಯವರಿಗೂ ಮುಖ್ಯ ಪ್ರಧಾನರಾದ ಮಿ॥ ಚರ್ಚಿಲ್ಲರವರಿಗೂ ಬುದ್ಧಿ ಹೇಳಿ, ಇನ್ನು ಮುಂದೆ ಲೋಕವಂಚನೆಯ ಕಪಟ ನಾಟಕ ಹಿಂದುಸ್ಥಾನದಲ್ಲಿ ನಡೆಯುವ ಹಾಗಿಲ್ಲವೆಂದು ತಿಳಿಸಿ, ರಾಜ್ಯಭಾರವನ್ನು ಸುಧಾರಿಸುವ ಕ್ರಮ ಕೈಕೊಳ್ಳಬೇಕಾಗಿ ನಾವು ಬಿನ್ನೈಸಿಕೊಳ್ಳುತ್ತೇವೆ. ಇಲ್ಲವಾದರೆ ಬ್ರಿಟನ-ಹಿಂದುಸ್ಥಾನಗಳೊಳಗಿನ ಸಂಬಂಧವನ್ನು ಕಾಪಾಡಲು ಕಷ್ಟವಾಗುವಂತಿದೆ. ಹರಿಯುವ ತನಕ ಎಳೆದರೆ ಯಾರಿಗೂ ಕ್ಷೇಮವಿಲ್ಲವಷ್ಟೇ.

* * *

ಹಿಟ್ಲರನ ದರ್ಪೋಕ್ತಿ!

[ನಿರೀಕ್ಷಕನು ಬರೆದುದು]

ಶುಕ್ರವಾರ ಹಿಟ್ಲರ [illegible] ಬರ್ಲಿನಿಗೆ ರುಸ್ಯ ರಣಭೂಮಿಯಿಂದ ಕೂಚು ಮಾಡಿ ಒಳ್ಳೇ ಜೋರಿನಿಂದ ಭಾಷಣ ಮಾಡಿ, ಇಡೀ ಜಗತ್ತೇ ತನ್ನ ಕಾಲಡಿಯಲ್ಲಿ ಸಿಕ್ಕಿಬಿದ್ದಿದೆಯೆಂಬಂತೆ ಘರ್ಜಿಸಿದ್ದಾನೆ. ರುಸ್ಯ ದೇಶದಲ್ಲಿ ರುಸ್ಯರು ಹಿಮ್ಮೆಟ್ಟುತ್ತಿರುವರೇನೋ ಅಹುದು! ಆದರೆ ಹಿಟ್ಲರನು ಹೇಳಿದಂತೆ ರುಸ್ಯ ಜನಾಂಗ ಹಣ್ಣಿಗೆ ಬಂದಿಟ್ಟ ಮಾತನ್ನು ನಾನೆಂದಿಗೂ ಒಪ್ಪುವದಿಲ್ಲ. ರುಸ್ಯರು ಇನ್ನೂ ಕಲಿತನದಿಂದ ಹೋರಾಡುತ್ತಿದ್ದಾರೆ. ಲೆನಿನ್‌ಗ್ರಾಡ ಪಟ್ಟಣ ಇನ್ನೂ ರುಸ್ಯರ ಸ್ವಾಧೀನವಿರುವದು. ಲೆನಿನ್‌ಗ್ರಾಡವನ್ನು ಕೈವಶ ಮಾಡಿಕೊಳ್ಳುವದಕ್ಕಾಗಿ ಜರ್ಮನರು ಬಹು ಪರಿಯಿಂದ ಜೀವದ ಹಂಗುದೊರೆದು ಹೋರಾಡುತ್ತಿದ್ದಾರೆ. ಆ ಪ್ರದೇಶದಲ್ಲಿ ರುಸ್ಯರು [illegible] ಬದಿಯಿಂದ ಹಿಟ್ಲರನು ಇನ್ನೂ ಸೈನ್ಯದ ತುಕಡಿಗಳನ್ನು ಕಳುಹಿಸುವನಂತೆ. ಲೆನಿನ್‌ಗ್ರಾಡ ಪಟ್ಟಣವನ್ನು [illegible] ಅಂತರವಿದ್ದಾಗ್ಯೂ ಆ ಪಟ್ಟಣವನ್ನು ಕೈವಶ ಮಾಡಿಕೊಳ್ಳಲು ಜರ್ಮನರಿಂದ ಈ ತನಕ ಆಗಲಿಲ್ಲ! ಘೋರ ಕಾಳಗಗಳು ಅನೇಕ ದಿವಸಗಳಿಂದ ಇನ್ನೂ ನಡೆದಿರುವವು. [illegible] ನ ಮಾರ್ಗವಾಗಿ ಸುತ್ತಿ ಬಂದಿದ್ದ ಮಧ್ಯರಣಭೂಮಿಯಲ್ಲಿ ಜರ್ಮನರ ಘೋರ ಆಕ್ರಮಣವನ್ನು ಆತ್ಮರಕ್ಷಣೆಯಿಂದು ಮುಷ್ಟಿಗಾರರ [illegible] ಡ್ನೀಪರ ನದಿಯ ಭಾಗದಲ್ಲಿ ಇನ್ನೂ ಘೋರ ಕಾಳಗ ನಡದಿದೆ. ಆ ನದಿಯ ದಕ್ಷಿಣ ದಂಡೆ ದಾಟಲು ಇನ್ನೂ ಜರ್ಮನರು ಅಸಮರ್ಥರಾಗಿದ್ದಾರೆ. ರುಸ್ಯರ ಪ್ರತಿಭಟನೆ ಇಷ್ಟು ಬಲವಾಗಿದೆ. ದಕ್ಷಿಣದ ಯುಕ್ರೇನ ವಿಭಾಗದಲ್ಲಿ ಕ್ರಿಮಿಯಾ ದ್ವೀಪಕಲ್ಪದ ಸುತ್ತುಮುತ್ತು ಘೋರವಾದ ರಣಕಂದನ ನಡೆಯುತ್ತಿದೆ. ಕ್ರಿಮಿಯಾ ದ್ವೀಪಕಲ್ಪದಲ್ಲಿ ಜರ್ಮನರು ಇಷ್ಟು ದಿವಸಗಳ ತನಕ ಹೋರಾಡಬೇಕಾದೀತೆಂದು ನಾನು ಎಣಿಸಿರಲಿಲ್ಲ. ಆದರೆ ರಣ-[illegible]ಗಳ ರೂಪವೇ ಬೇರೆ! ಮಾಸ್ಕೋ ಪಟ್ಟಣವನ್ನು ತಲ್ಪುವ ಮಾತು ಹಾಗಿರಲಿ, ಅದರ ಸುತ್ತುಮುತ್ತು ಸುಳಿಯಲಿಕ್ಕೂ ಸಹ ಹಿಟ್ಲರನಿಗೆ ಇನ್ನೂ ಸಾಧ್ಯವಾಗಲಿಲ್ಲ. ಆದಾಗ್ಯೂ "ಎಲ್ಲವೂ ನನ್ನ ಯೋಜನೆಯ ಪ್ರಕಾರ ನಡೆದಿದೆ" ಎಂದು ಹಿಟ್ಲರನು ಹೇಳಿ ತನ್ನ ಬೆನ್ನನ್ನು ತಾನೇ ಚಪ್ಪರಿಸಿಕೊಳ್ಳುತ್ತಾನೆ! ತನ್ನ ಮುಂದೆ ರುಸ್ಯರನ್ನು ಕೆಡೆಬಡಿಯಲು ಹಿಟ್ಲರನಿಗೆ ಕಠಿಣವಾಗುವದೆಂದು ಹೇಳಲಾಗುತ್ತದೆ. ರುಸ್ಯರಿಗೆ ಸಹಾಯ ನೀಡುವದಕ್ಕಾಗಿ ಬ್ರಿಟಿಶರು ಅಮೇರಿಕೆಯವರೂ ಮಾಸ್ಕೋದಲ್ಲಿ ಸಭೆಸೇರಿ [illegible] ದಿನಗಳಲ್ಲಿ ಸಹಾಯ ಯೋಜನೆಯನ್ನು ತಯಾರಿಸಿದ್ದಾರೆ. ಬ್ರಿಟನ ಅಮೇರಿಕೆಯವರ ಬೆಂಬಲವನ್ನು ನೋಡಿ ಸೇನಾಪತಿ ವೊರೋಶಿಲೋವರವರಿಗೆ ಹಿಡಿಯಲಾರದಷ್ಟು ಸಂತೋಷವಾಗಿದೆ! ಈಗಾಗಲೇ ರುಸ್ಯರಿಗೆ ಕ್ವೆಟ್ಟಾ ಮಾರ್ಗವಾಗಿ ಹಿಂದುಸ್ಥಾನದಿಂದ ಕಳಿಸಿದ ಯುದ್ಧ ಸರಕುಗಳು ತಲ್ಪಿದವಾಗಿ ಯುದ್ಧ ಪ್ರಕಟನೆ ಹೊರಟಿದೆ. ಕ್ವೆಟ್ಟಾದಿಂದ ರುಸ್ಯ ರಣಭೂಮಿ [illegible] ವಾರದ ಮೂಲಕ ಕ್ವೆಟ್ಟಾದಿಂದ ಉತ್ತರ ಬಲುಚಿಸ್ತಾನ, ಅಲ್ಲಿಂದ ಇರಾಣ, ಅಲ್ಲಿಂದ ರುಸ್ಯ, ಹೀಗೆ ಯುದ್ಧ ಸಾಮಗ್ರಿಗಳು ನಾಲ್ಕು [illegible] ರಣಭೂಮಿಗೆ ರವಾನೆಯಾಗುವವು. [illegible] ತಯಂಪ ಮತ್ತು ಜನಾಂಗಗಳ ಬೆಂಬಲವಿರುವಾಗ, ರುಸ್ಯ ಜನಾಂಗವು ಸೋತು ಹೋಯಿತೆಂದೂ ಅದನ್ನು ನಾನು ಹಣ್ಣಿಗೆ ತಂದೆನೆಂದೂ ಹಿಟ್ಲರನು ಬಡಿವಾರ ಬಡಿಯುವದನ್ನು ನೋಡಿ ನನಗೊಳ್ಳೇ ವಿನೋದವಾಗುತ್ತಿದೆ! ಯುದ್ಧಕಾರಣದಲ್ಲಿ ಉಂಟಾದ ಅಪಸ್ವಾತಂತ್ರ್ಯವನ್ನು ಆತನು [illegible] ತರುವದಿಲ್ಲವೇನೆಂದು ನನಗೆ ಮನಸು ಖಿನ್ನವಾಗುತ್ತದೆ. ಇಂಗ್ಲಂಡಕ್ಕೆ ಕಲ್ಯಾಣವಿಲ್ಲ! ಹೀಗೆ ಆತನು ಇಂಗ್ಲಂಡಕ್ಕೆ ಜಾಗ್ರತೆ ಕೊಡುತ್ತಾನೆ. ಅನಿವಾರ್ಯವಾದುದು ಹಿಟ್ಲರನು ಯುದ್ಧ ಸಾರಿದನಂತೆ ಇಂಗ್ಲಂಡ ದೊಡನ ಸ್ನೇಹ ಸಂಪಾದಿಸಲು ಆತ ಬಹು ಪ್ರಯತ್ನ ಪಟ್ಟನಂತೆ! ಈ ಸ್ನೇಹವನ್ನು ಕೇಳಿ ಜನರು ಅಪಹಾಸ್ಯ ಮಾಡ ಹತ್ತಿದರು. [illegible] ಆತನಿಗಿಲ್ಲ! ಬ್ರಿಟಿಶರು ಎಂದಿಗೂ ಯುದ್ಧ ಕಾಂಕ್ಷಿಗಳಲ್ಲ! [illegible] — ತಪ್ಪಿದೆ, ಯುರೋಪ ಖಂಡದ [illegible] — ಲೋಕರಾಜ್ಯ [illegible]ರಾಗಿರಬೇಕು ಎನ್ನುವ ಯಾರೂ ಸಹಸ್ರಸಹಿಸಕೂಡದ ಎಂಬ ಒಂದೇ ಭಾವನೆಯಿಂದ ಬ್ರಿಟಿಶರು ಈ ಯುದ್ಧದಲ್ಲಿ ಸೇರಬೇಕಾಯಿತು. ಯುದ್ಧದಿಂದ ಇಂಗ್ಲಂಡಕ್ಕೆ ಕಲ್ಯಾಣವಿಲ್ಲವಾಗಿ ಹೇಳುವಾಗ ಹಿಟ್ಲರನು ಈ ಮಾತನ್ನು ಮಂತ್ರಂತೆ ಜಾಣ್ಮೆಯ ಇಂಗ್ಲಂಡದ ಮಾತು ಹಾಗಿರಲಿ ಹಿಟ್ಲರನಿಗಾಗಲಿ ಜರ್ಮನಿಗಾಗಲಿ ಈ ಯುದ್ಧದಿಂದ ಕಲ್ಯಾಣವಿಲ್ಲವೆಂಬ ಸಂಗತಿಯನ್ನು ನಾನು ಖಂಡಿತ ಹೇಳಬಲ್ಲೆ. ಈ ಯುದ್ಧದಿಂದ ಹಿಟ್ಲರನು ಜರ್ಮನ ಜನಾಂಗದ ಅಪಾರ ಹಾನಿ ಮಾಡಿದ್ದಾನೆ. ಹರಿವೆ ಇಲ್ಲದೆ ಜರ್ಮನ ತರುಣರನ್ನು [illegible] ಈ ಯುದ್ಧವನ್ನು ನಡೆಸುತ್ತಿದ್ದಾನೆ. [illegible] ಲಕ್ಷ ರುಸ್ಯರನ್ನು ತಾನು [illegible] ರಣಭೂಮಿಯಲ್ಲಿ [illegible] ಹಿಡಿದನೆಂದು ಹೇಳಿಸುವಾಗ ಸ ಜನರೆಷ್ಟು ಕಷ್ಟಕ್ಕೀಡಾದರೆಂಬ ಸಂಗತಿಯನ್ನು ಆತ ವಿವರಿಸಲಿಕ್ಕೆ ಹೋಗುವದಿಲ್ಲ. ರುಸ್ಯ ಜರ್ಮನಿಯ ಮೇಲೆ ದಾಳಿ ಮಾಡುವರೆಂದು ತನಗೆ ಮೊದಲೇ ಗೊತ್ತಿತ್ತೆಂದೂ ತಾನು [illegible] ಪೂರ್ವಸೂಚನೆ ಕೊಡದೆ ದಂಡೆತ್ತಿ ಹೋದೆನೆಂದೂ ಹಿಟ್ಲರನ ಆಡಿದ ಮಾತಿನಿಂದ ಯಾರಿಗೂ ನಂಬಿಗೆ ಹುಟ್ಟಲಾರದು. ರುಸ್ಯರು ಹಿಂತಿರುಗಿ ಹಿಟ್ಲರನ ಗತಿಯ [illegible] ಪರ [illegible] ಮೇಲೆ ಸಾಗಿಯೋ ಎಂದು ಯಾರೂ ಎಷ್ಟುಕಾಲ ತಿಳಿಯಲಾರರು. ಬರೇ ರಣಶಕ್ತಿಯಿಂದ ಯುರೋಪ ಖಂಡದಲ್ಲಿ ಜಗತ್-ಪ್ರಭುವಾಗಿ ಮೆರೆಯಬೇಕೆಂಬ ಹೆಬ್ಬಯಕೆಯಿಂದ ಹಿಟ್ಲರನು ರುಸ್ಯ ದೇಶದೊಡನೆ ಕಾಳಗ ಹೂಡಿ ಜಗದ್ವಿಪತ್ತನ್ನು ಉಂಟು ಮಾಡಿದ ಸಂಗತಿ ಜಗತ್ತಿನ ಇತಿಹಾಸದಲ್ಲಿ ಚಿರಕಾಲ ಉಳಿಯುವದು. ಒಡಿಂತಿರಲಿ ಯುಕ್ರೇನದಿಂದ ಕೊಕೇಸಸ ಪ್ರಾಂತ ಸೇರಿ ಇರಾಣದ ತನಕ ಸಾಗಿಬರಬೇಕೆಂಬ ಲವಲವಿಕೆ ಹಿಟ್ಲರನಿಗುಂಟು. ರುಸ್ಯರ ಆರ್ಭಟದ ಪ್ರತಿಭಟನೆಯಿಂದ ಹಿಟ್ಲರನಿಗೆ ವಿಘ್ನವುಂಟಾಗಿದೆ. ಆದ್ದರಿಂದ ಜರ್ಮನರನ್ನು ಹುರಿದುಂಬಿಸುವದಕ್ಕಾಗಿ ಹಿಟ್ಲರನು ಈ ರೀತಿ ಭಾಷಣ ಮಾಡಿದ್ದಾನೆ. ಆದರೆ ರುಸ್ಯರಿಗೆ ಹಿನ್ನಟ್ಟುವದು ದುರ್ಘಟವೆಂದು ನನ್ನ ಅಭಿಪ್ರಾಯ. ಕ್ರಿಮಿಯಾದಲ್ಲಿ ಜರ್ಮನರು ಒಳನುಗ್ಗದಂತೆ ರುಸ್ಯಸೇನಾಪತಿಗಳಾದ ಬುಡೆನಿಯವರು ಹೊಸ ವ್ಯೂಹವನ್ನು ರಚಿಸಿದ್ದಾರಂತೆ. ಈವಾಗ ಇರಾಣ ದೇಶದಲ್ಲಂತೂ ಸೈನ್ಯ ರಾಣ್ಣ [illegible] ಹೂಡಿದಂತಾಗಿದೆ. ಇರಾಣದೊಳಗಿಂದಲೇ ಯಾವತ್ತೂ ಸೈನ್ಯ ಪಥಕ, ಯುದ್ಧ ಸಾಮುಗ್ರಿ ರವಾನೆಯಾಗುವಂತೆ ಏರ್ಪಾಟಾಗುವದಿದೆ. ರುಸ್ಯರ ಸಹಾಯಕ್ಕಾಗಿ ನಮ್ಮ ಹಿಂದುಸ್ಥಾನದ ಪ್ಲಂತು ಸೈನಿಕರನ್ನು ಬೇಖಿಸುವ ಕ್ರಮ ಭರದಿಂದ ನಡೆದಿದೆ. ನಮ್ಮ ಹಿಂದುಸ್ಥಾನದ ಸೈನ್ಯಸಂಖ್ಯೆ ೨ ಲಕ್ಷವಿದ್ದಿತ್ತು, ಈಗ ೮ ಲಕ್ಷಕ್ಕೆ ತಲ್ಪಿದೆ, ಇನ್ನು ಕೆಲವು ದಿನಗಳಲ್ಲಿಯೇ ೧೦ ಲಕ್ಷಕ್ಕೆ ಹೋಗುವದು. ಅದಕ್ಕೂ ಮಿಕ್ಕಿ ಸಹ ಸೈನಿಕರು ನಮ್ಮ ಹಿಂದುಸ್ಥಾನದಲ್ಲಿ ಹೂರಕುಸಂತಿದೆಯಂತೆ! ನಮ್ಮ ಸೇನಾಪತಿಗಳಾದ ವೇವಲರವರು ಇರಾಣದ ರಾಜಧಾನಿಯಾದ ತೆಹರಾನಕ್ಕೆ ಹೋಗಿ ರುಸ್ಯ ಸೇನಾಪತಿಗಳ ಜತೆ ವಿಚಾರವಿನಿಮಯ ಮಾಡಿಕೊಂಡು ಕೊಕೇಸಸ ಪ್ರಾಂತದ ರಕ್ಷಣೆಯಾಗುವಂತೆ ಯೋಜಿಸಿ ಮರಳಿ [illegible] ಬಂದಾದ ಪಟ್ಟಣಕ್ಕೆ ಹೋಗಿ ಮಧ್ಯಪೂರ್ವದ ಸೇನಾಪತಿಗಳಾದ ಎಚಿನಲೆಕರವರೊಡನೆ ಆಲೋಚನೆ ಮಾಡಿಕೊಂಡು ಬಂದಿದ್ದಾರೆ. ಹಿಟ್ಲರನು ಕ್ರಿಮಿಯಾದಲ್ಲಿ ಗೆದ್ದರೆ, ಕೊಕೇಸಸ ಪ್ರಾಂತವನ್ನು ಸೇರಬಂದರೆ ಆತನನ್ನು ಎದುರಿಸಲು ಯಾವತ್ತೂ ಸಿದ್ಧತೆಗಳು ಜರುಗಿವೆ! ಕ್ರಿಮಿಯವನ್ನು ಗೆದ್ದರೂ ಕೊಕೇಸಸ ಪ್ರಾಂತವನ್ನು ಗೆಲ್ಲಲು ಆತನಿಂದ ಎಂದಿಗೂ ಸಾಧ್ಯವಿಲ್ಲ! ಅಲ್ಲಿ ಆತ ತಡೆದು ನಿಲ್ಲಲೇಬೇಕು!

ತುರ್ಕಸ್ಥಾನದ ಮನಃಸ್ಥಿತಿ ಮಾತ್ರ ನನಗಿನ್ನೂ ತಿಳಿಯದು. ತುರ್ಕ ಜರ್ಮನರ ಪಕ್ಷದವರೋ ಬ್ರಿಟಿಶ ಪಕ್ಷದವರೋ ಎಂಬವನ್ನು ನಾನಿನ್ನು ಹೇಳಲಾರೆ. ತುರ್ಕರು ತಮ್ಮ ಸ್ವತಂತ್ರತೆಯ ವಿಚಾರದಲ್ಲಿಯೇ ಮಗ್ನರಾಗಿದ್ದಾರೆಂದು ನನ್ನ ಗ್ರಹಿಕೆ. ಕಳೆದ ವಾರ [illegible] ಕ್ರೋಮ ಧಾತುವಿನ ಕುರಿತು ತುರ್ಕ ಜರ್ಮನರಲ್ಲಿ ಒಂದು ವಿವಾದವುಂಟಾಗಿತ್ತು. ತುರ್ಕಸ್ಥಾನದೊಳಗಿನ ಗಣಿಗಳಲ್ಲಿ ಕ್ರೋಮ ಧಾತು ಹೇರಳ ಸಿಗುತ್ತದೆ. [illegible] ತಯಾರಿಸಲಿಕ್ಕೆ ಆ ಧಾತು ಅವಶ್ಯವು. [illegible] ಸುಮಾರ ೨ ಲಕ್ಷ ಟನ್ನು ಕ್ರೋಮ ಧಾತುವನ್ನು ತುರ್ಕಸರಕಾರವು [illegible] ಮಾಡಿತ್ತು. [illegible] ಇಷ್ಟರ ಜನವರಿಯಲ್ಲಿ ತುರ್ಕಸ್ಥಾನಕ್ಕೆ ಜರ್ಮನಿಯ ಯಾವತ್ತೂ ಕ್ರೋಮ ಧಾತುವನ್ನು ಕಳುಹಿಸಿಕೊಡಬೇಕೆಂದು ಬ್ರಿಟಿಶ ಪ್ರಾಂತ ಸಂಸ್ಥಾನಗಳು ತುರ್ಕ ಸರಕಾರದೊಡನೆ ಕರಾರ ಮಾಡಿಕೊಂಡವು. [illegible] ಜನಾಂಗ ತುರ

ಕೊಂಡು ಬಿತ್ತು, ಆದರಿಂದ ಹಿಟ್ಲರನೇ ಆ ಜನಾಂಗದ ಪ್ರಭುವಾದನು! ಆದರಿಂದ ಫ್ರೆಂಚರಿಗೆ ಸಲ್ಲತಕ್ಕ ಕ್ರೋಮ ಧಾತುವಿನ ಪಾಲನ್ನು ಜರ್ಮನಿಗೆ ಸಲ್ಲಿಸಬೇಕೆಂದು ಹಿಟ್ಲರನ ಅಂಬೋಣ. ಫ್ರೆಂಚ ಸರಕಾರದ ಶರಣಾಗತಿಯಿಂದ ತುರ್ಕಸ್ತಾನದೊಡನೆ ಮಾಡಿಕೊಂಡ ಕರಾರಿನಿಂದ ಉಂಟಾದ ಹೊಣೆಗಾರಿಕೆಗಳನ್ನು ಬ್ರಿಟಿಶ ಸರಕಾರವು ಪೂರಯಿಸುತ್ತಿರುವಾಗ, ಆ ಕರಾರಿನ ಪ್ರಯೋಜನಗಳನ್ನು ಪಡೆಯಲು ಅದೇ ಜನಾಂಗ ಹಕ್ಕುದಾರವೆಂದು ಬ್ರಿಟಿಶರ ಅಂಬೋಣ. ತುರ್ಕಸ್ತಾನದ ವಿದೇಶ ಸಚಿವರಾದ ಸಾರಾಜೋಗ್ಲು ರವರು ಬುಧವಾರ ಬೆಳಿಗ್ಗೆ ಬ್ರಿಟಿಶ ಮತ್ತು ಜರ್ಮನ ರಾಯಭಾರಿಗಳನ್ನು ಕರಿಸಿ ಕ್ರೋಮ ಧಾತುವು ಜರ್ಮನರಿಗೆ ಸಿಗಲಿಕ್ಕಿಲ್ಲವಾಗಿ ತಿಳಿಸಿದ್ದಾರೆ. ಇದರ ಮೇಲಿಂದ ತುರ್ಕರು ಬ್ರಿಟಿಶರ ಪಕ್ಷಪಾತಿಗಳಾಗಿದ್ದಾರೆಂದು ಯಾರಾದರೂ ತಿಳಿದರೆ ಅದು ತೀರ ತಪ್ಪು. ಈವಾಗ ಜರ್ಮನರಿಗೂ ತುರ್ಕರಿಗೂ ವ್ಯಾಪಾರ ವ್ಯವಹಾರದ ಮಾತುಕತೆಗಳು ನಡೆದಿವೆ. ತುರ್ಕಸ್ತಾನಕ್ಕೆ ಉಪಯೋಗವಾಗುವ ಜರ್ಮನ ಸರಕುಗಳನ್ನು ಜರ್ಮನ ಸರಕಾರವು ತುರ್ಕ ಸರಕಾರಕ್ಕೆ ಪೂರೈಸಬೇಕು, ಯುದ್ಧ ಸಾಹಿತ್ಯ, ಯಂತ್ರಸಾಮಗ್ರಿ, ಯಂತ್ರ ವಿಭಾಗಗಳು ತಮಗೆ ಬೇಕೆಂದು ತುರ್ಕರು ತಿಳಿಸಿದ್ದರು. ತಾಮ್ರ, [illegible] ಮತ್ತು ಕ್ರೋಮ ಈ [illegible] ಪದಾರ್ಥಗಳು ತಮಗೆ ಬೇಕೆಂದು ಜರ್ಮನ ಸರಕಾರವು ತುರ್ಕ ಸರಕಾರಕ್ಕೆ ಕೇಳಿಕೊಂಡಿತ್ತು. ತುರ್ಕ ಸರಕಾರವು ಕ್ರೋಮ ಧಾತುವನ್ನು ಪೂರೈಸಲೊಡಂಬಡದಿದ್ದಾಗ್ಯೂ, ಆ ಪದಾರ್ಥ ಹೊಂದದ್ದು ಬಿಟ್ಟು ವ್ಯಾಪಾರ ಕರಾರು ಪೂರ್ಣತೆಯಾಗುವದು. ಇದಲ್ಲದೆ ತುರ್ಕಸ್ತಾನದ ನಿವೃತ್ತ ಸೇನಾಪತಿಗಳಾದ ಇರ್ಕಿಲೆಟರವರೂ ತುರ್ಕಸ್ತಾನದೊಳಗಿನ ಸೈನ ವಿದ್ಯಾಲಯದ ಚಾಲಕರಾದ ಪೌದ ಇರದೀನರವರೂ ಶೀಘ್ರವೇ ಜರ್ಮನಿಯನ್ನು ಸಂಚರಿಸಿ, ಹಾಗೆಯೇ ಪೂರ್ವ ರಣಭೂಮಿಯನ್ನು ಸಂದರ್ಶಿಸಲಿದ್ದಾರೆಂದು ತಿಳಿಯಬರುತ್ತದೆ. ಇದರ ಮೇಲಿಂದ ತುರ್ಕರು ಇತ್ತ ಬ್ರಿಟಿಶರಿಗೂ ಅತ್ತ ಜರ್ಮನರಿಗೂ ಗೆಳೆಯರಾಗಿ ಉಳಕೊಳ್ಳಲು ಪ್ರಯತ್ನಪಡುವಂತೆ ತೋರುತ್ತದೆ. ಆದರೆ ಇದೇ ಅವಸ್ಥೆ ನಿರಂತರ ಬಾಳುವದೆಂದು ನಾ ಹೇಳಲಾರೆ. ಜರ್ಮನ ರಾಯಭಾರಿಗಳಾದ ವ್ಹಾನ ಪಾಪೇನರವರು ಇನ್ನೂ ಕಾರಸ್ಥಾನಗಳನ್ನು ನಡಿಸುವ ದೆಸೆಯಿಂದ ತುರ್ಕಸ್ತಾನದಲ್ಲಿದ್ದಾರೆಂದು ತಿಳಿಯುತ್ತದೆ. ತುರ್ಕಸ್ತಾನದ ನೆರೆಹೊರೆಯಲ್ಲಿರುವ ಬಲ್ಗೇರಿಯದ ಸ್ಥಿತಿ ಬಹು ಕಠಿಣವಾಗಿದೆ. ಬಲ್ಗೇರಿಯವು ರುಶ್ಯದೊಡನೆ ಇರುವ ಸಂಬಂಧವನ್ನು ತುಂಡರಿಸಿಕೊಳ್ಳುವದೇನೆಂದು ಭೀತಿಯಾಗಿದೆ. ರುಶ್ಯ ರಣಭೂಮಿಗೆ ಸೈನ್ಯ ಪಥಕಗಳನ್ನು ರವಾನಿಸುವಂತೆ ಬಲ್ಗೇರಿಯದ ಬೋರಿಸ ಅರಸರಿಗೆ ಹಿಟ್ಲರನು ಘೋರ ಅಪ್ಪಣೆ ಮಾಡಿದ್ದಾನೆಂದು ಒಂದು ವಾರ್ತೆ ಹಬ್ಬಿದೆ. ರುಶ್ಯರೊಡನೆ ಕಾದಾಡಲು ಬಲ್ಗೇರರು ಒಪ್ಪುವದಿಲ್ಲವಂತೆ! ಅಲ್ಲಲ್ಲಿ ಬಲ್ಗೇರರು ಮಾಂಚಿನ ಸೈನ್ಯ ಸಿಡಿಯುವರಂತೆ. ಹಿಟ್ಲರನೊಡನೆ ಕೂಡಿಕೊಳ್ಳಲು ಬಲ್ಗೇರ ಪ್ರಜೆಗಳು ಒಪ್ಪುವದಿಲ್ಲವಾಗಿ ಬೋರಿಸ ಅರಸರು ಸಂಕಟದಲ್ಲಿ ಸಿಲುಕಿಕೊಂಡಿದ್ದಾರೆಂದೂ ವಾರ್ತೆಯುಂಟು. ಈ ವಾರ್ತೆ [illegible] ತುರ್ಕಸ್ತಾನದ ರಾಜಧಾನಿಯಾದ ಅಂಕಾರಾದಿಂದ ಹೊರಟಿದೆ. ಇದರ ಮೇಲಿಂದ ಬಲ್ಗೇರಿಯದೊಳಗಿನ ಘಟನೆಗಳನ್ನು ತುರ್ಕ ಸರಕಾರವು ಎವೆಯಿಕ್ಕದೆ ನೋಡುತ್ತದಾಗಿ ತಾನೇ ಸ್ಪಷ್ಟವಾಗುತ್ತದೆ. ಹಿಟ್ಲರನ ಅಪ್ಪಣೆಯನ್ನು ಮನ್ನಿಸಿ ಬಲ್ಗೇರಿಯವು ರುಶ್ಯರನ್ನು ಪ್ರತಿಭಟಿಸಹೊರಟರೆ ತುರ್ಕಸ್ತಾನದ ಭೂಮಿಕೆ ಸ್ಪಷ್ಟವಾಗಲೇಬೇಕು. ಕ್ರಿಮಿಯಾ ದ್ವೀಪಕಲ್ಪವನ್ನು ಉಳಿಸಿಕೊಳ್ಳಲು ಸೇನಾಪತಿ ಬುದೆನಿಯವರು ಪ್ರಯತ್ನಪಡುತ್ತಿದ್ದಾಗ್ಯೂ ದೀರ್ಘ ಕಾಲದತನಕ ಆ ದ್ವೀಪಕಲ್ಪ ಕಾಪಾಡಿಕೊಳ್ಳುವದಾಗಿ ನನಗೇನು ತೋರುವದಿಲ್ಲ. ೭೦೦೦೦ ಜರ್ಮನ ಸೈನಿಕರು ಕ್ರಿಮಿಯವನ್ನು ನೆಲಮಾರ್ಗದಿಂದ ನುಗ್ಗುತ್ತಿದ್ದಾರೆ. ವಿಮಾನಗಳಿಂದ ಕೂಡ ಸೈನಿಕರು ಇಳಿಯುತ್ತಿದ್ದಾರೆ. ಇಲ್ಲಿ ಜರ್ಮನ ಸೈನಿಕರ ಸಂಖ್ಯೆ ಅಪರಿಮಿತವಾಗಿ ಬೆಳೆದಿದೆಯೆಂದು ರುಶ್ಯ ರಾಜಧಾನಿಯಾದ ಮೊಸ್ಕೋದಿಂದ ಸುದ್ದಿ ಬಂದಿದೆ. ಇದರ ಮೇಲಿಂದ ಕ್ರಿಮಿಯವು ಜರ್ಮನರ ವಶವಾಗುವದು ಖಂಡಿತವಾದದ್ದು. ಸೇನಾಪತಿ ಬುದೆನಿಯವರ ಪ್ರತಿ-ದಾಳಿಯಿಂದ ಪ್ರಯೋಜನ ದೊರೆಯುವದಾಗಿ ನನಗೇನು ಆಶೆಯಿಲ್ಲ. ಕ್ರಿಮಿಯದ ಅಪಜಯವನ್ನು ಮುಂದಾಗಿ ಎಣಿಸಿಕೊಳ್ಳುವದಕ್ಕಾಗಿ ಬ್ರಿಟಿಶರೂ ರುಶ್ಯರೂ ಆಲೋಚನೆ ಮಾಡತೊಡಗಿದ್ದಾರೆಂದು ನನ್ನ ಅಭಿಪ್ರಾಯ.

ಹಿಟ್ಲರನಿಗೆ ಉಂಟಾದ ಒಂದು ಸಂಕಟವನ್ನು ನಾನು ಇಲ್ಲಿಯೇ ನಮೂದಿಸುತ್ತೇನೆ. ರುಶ್ಯ ರಣಭೂಮಿಯಲ್ಲಿ ಪ್ರದೇಶವನ್ನು ಗೆದ್ದಾಗ್ಯೂ ಜರ್ಮನರಿಗೆ ಅಪಾರ ಹಾನಿಯಾಯಿತು. ಆದರಿಂದಲೇ ಹಿಟ್ಲರನು ಎಲ್ಲ ಸೈನಿಕರನ್ನು ರುಶ್ಯ ರಣಭೂಮಿಗೆ ರವಾನಿಸಬೇಕಾಗಿ ಬೋರಿಸ ಅರಸರಿಗೆ ಅಪ್ಪಣೆ ಮಾಡಿರಬೇಕು. ಮುಸೊಲಿನಿಯ ಪ್ರಭುತ್ವವು ಇಟಾಲಿಯಲ್ಲಿ ಈವಾಗ ಕುಗ್ಗತೊಡಗಿದೆ. ಬ್ರಿಟಿಶರು ಇಟಾಲಿಯೊಳಗಿನ ಪಟ್ಟಣಗಳ ಮೇಲೆ ವಿಮಾನೋಡ್ಡಾಣ ಮಾಡಿ ಬಾಂಬುಗಳನ್ನೊಗೆದು ಭೂಪ್ರದೇಶವನ್ನು ಧ್ವಸ್ತಗೊಳಿಸಿದ್ದರಿಂದ ಮುಸೊಲಿನಿಯು ಲೋಕರ ಹೊಟ್ಟೆಗೆ ಬೇಕಿದ್ದ ತುಂಬ ಅನ್ನಸಾಮಗ್ರಿಗಳನ್ನು ಪೂರೈಸಲು ಅಲ್ಲಿ ಸಾಧ್ಯವಿಲ್ಲ. ಜನರು ಬಡವರಾಗಿದ್ದಾರೆ. ಈ ಎಲ್ಲ ಕಾರಣಗಳ ಮೂಲಕ ಇಟಾಲಿಯಲ್ಲಿ ಯುದ್ಧೋಲ್ಲಾಸವಿಲ್ಲ. [illegible] ಗುಂಪುಗಳು ಯುದ್ಧವನ್ನು ಮುಂದರಿಸಲು ಒಪ್ಪುವದಿಲ್ಲವಂತೆ! ಆದರೆ ಇಷ್ಟರ ಮೇಲಿಂದ ಮುಸೊಲಿನಿಯು ಯುದ್ಧದೊಳಗಿಂದ ಅಲಿಪ್ತನಾಗುವನೆಂಬದಾಗಲಿ ರುಶ್ಯ ರಣಭೂಮಿಯ ಫಲಿತಾಂಶಗಳ ಮೇಲಿಂದ ಯುದ್ಧ ಅಂತ್ಯವಾಗುವದೆಂದು ತಿಳಿಯುವದಾಗಲಿ ಮೂಢತನ. ಬ್ರಿಟಿಶರು ಹಾಗೆಂದಿಗೂ ತಿಳಿಯುವದಿಲ್ಲ. ಬ್ರಿಟಿಶ ಸರಕಾರದ ವಿಮಾನ ಇಲಾಖೆಯ ಕಾರ್ಯದರ್ಶಿಗಳಾದ ಸರ್ ಆರ್ಚಿಬೊಲ್ಡ ಸಿಂಕ್ಲೇರರವರು ಬುಧವಾರ ರಾತ್ರೆ ನುಡಿದಂತೆ ರುಶ್ಯ ರಣಭೂಮಿಯಲ್ಲಿ ಯುದ್ಧ ಜಯಿಸುವ ಆಶೆಯಿಲ್ಲ. ರುಶ್ಯ ರಣಭೂಮಿಯಲ್ಲಿ ಜರ್ಮನರಿಗೆ ಹೇರಳ ನಷ್ಟವಾದದ್ದೇನೋ ಆಹುದು, ಆದರೆ ಅದೇ ಪ್ರಕಾರ ಯುದ್ಧ ಸಾಮಗ್ರಿಯ ಉತ್ಪತ್ತಿಯೂ ಹೇರಳವಾಗಿ ಬೆಳೆದಿದೆ. ಚಳಿಗಾಲದಲ್ಲಿ ಇಂಗ್ಲಂಡದ ಮೇಲೆ ವಿಮಾನಗಳಿಂದ ಹಲ್ಲೆಯಾಗುವದು. ಅನ್ಯಗಳಿಂದ ಬಹಳ ಅನರ್ಥವಾಗುವದಿದೆ. ಆ ಕಾಲದಲ್ಲಿ ಬ್ರಿಟಿಶರ ಸತ್ವ ಪರೀಕ್ಷೆಯಾಗುವದಿದೆ. ಯುರೋಪ ಖಂಡದ ಭವಿಷ್ಯ ಈ ಹೊಂದ ಬ್ರಿಟಿಶರ ಮೇಲಿತ್ತು. ಅದೇ ಪ್ರಕಾರ ಇನ್ನು ಮುಂದೆಯೂ ಬ್ರಿಟಿಶರ ಮೇಲೆ ಅವಲಂಬಿಸಿರುವದಾಗಿ ಸರ್ ಆರ್ಚಿಬೊಲ್ಡ ಸಿಂಕ್ಲೇರರವರು ಒತ್ತಿ ಹೇಳಿ ಹೊಸ ಪರೀಕ್ಷೆಗೆ ಸಿದ್ಧರಾಗಿರಲು ಸ್ವಜನರಿಗೆ ಬೋಧಿಸಿದರು. ಬ್ರಿಟಿಶರ ಪರಾಕ್ರಮ-ಸಾಹಸಗಳನ್ನು ನೋಡಿ ನನಗೊಳ್ಳೇ ಆನಂದವಾಗುತ್ತಿದೆ. ಸ್ವ-ಸ್ವಾತಂತ್ರ್ಯ ರಕ್ಷಣೆಯ ಬಗ್ಗೆ ಅವರು ತಮ್ಮನ್ನೇ ನಂಬಿಕೊಂಡಿದ್ದಾರೆಂಬ ಮಾತನ್ನು ನಮ್ಮ ದೇಶಬಾಂಧವರು ಲಕ್ಷದಲ್ಲಿಡಬೇಕು. ಇಂಥ ಬ್ರಿಟನ ಜನಾಂಗಕ್ಕೆ ಯುದ್ಧದಿಂದ ಕಲ್ಯಾಣವಾಗಲಿಕ್ಕಿಲ್ಲವಾಗಿ ಎಚ್ಚರಿಕೆ ಕೊಡುವ ಹಿಟ್ಲರನ ದಿಟ್ಟತನ ನೋಡಿ ನನಗ ನಗೆ ಬರುತ್ತಿದೆ! ಚಳಿಗಾಲ ಮುಗಿಯುವಷ್ಟರಲ್ಲಿ ಹಿಟ್ಲರನು ಯಾವ ದುರ್ದೆಸೆ ಹೊಂದುವನೆಂದು ನನ್ನಿಂದ ಹೇಳಲ ಸಾಧ್ಯ! ಎಷ್ಟು ರಭಸದಿಂದ ಬ್ರಿಟಿಶರೂ ರುಶ್ಯರೂ ಅಮೇರಿಕೆಯವರೂ ಹಿಟ್ಲರನನ್ನು ಹಣ್ಣಿಗೆ ತರುವ ತಯಾರಿ ನಡಿಸುತ್ತಿದ್ದಾರೆ.

ಇತ್ತ ಪೂರ್ವಪಾರ್ಶ್ವದ ವೃತ್ತಾಂತವನ್ನು ಸಂಕ್ಷೇಪತಃ ವಿವರಿಸಿಬಿಡುವೆನು. ಇತ್ತಕಡೆ ಯುದ್ಧ ಪ್ರಕೋಪವಾಗುವ ಭೀತಿಯುಂಟಾಗಿದೆ. ರುಶ್ಯ-ಜಪಾನ ದೇಶಗಳೊಳಗೆ ವಿತುಷ್ಟವುಂಟಾಗಹತ್ತಿದೆ. ಚೀನ ಪ್ರಾಂತದಿಂದ ಅಪಹರಿಸಿದ ಮಂಚುಕೋ ಪ್ರಾಂತದಲ್ಲಿ ೫॥ ಲಕ್ಷ ಜಪಾನ ಸೈನ್ಯವುಂಟು. ಅದಕ್ಕೆ ಹೊಂದಿಕೆಯಾದ ರುಶ್ಯ ದೇಶದ ಗಡಿಸೀಮೆಯಲ್ಲಿ ೭ ಲಕ್ಷ ರುಶ್ಯ ಸೈನ್ಯವಿದೆ. ಜಪಾನದೊಳಗಿರುವ ೩೭೩ ಮಂದಿ ಬ್ರಿಟಿಶರು ಸಿಂಗಾಪುರಕ್ಕೆ ಹೊರಟರು. ಹಿಂದುಸ್ಥಾನ ಮತ್ತು ಆಫ್ರಿಕೆಯೊಳಗೆ ವಾಸಿಸುವ ಜಪಾನಿಯರನ್ನು ಒಯ್ಯುವದಕ್ಕಾಗಿ ಜಪಾನ ಸರಕಾರವು 'ಹಿಯಾಮರು' ಹಡಗವನ್ನು ಇತ್ತ ಕಡೆ ಕಳಿಸಿದ. ಈ ಹಡಗ ಈ ಹೊತ್ತು ಮುಂಬಯಿಗೆ ತಲ್ಪುವದಿತ್ತು. ಅಮೇರಿಕೆಯಿಂದ ಜಪಾನಿ ನಾಗರಿಕರನ್ನು ಜಪಾನಕ್ಕೆ ತರಲು ಇ ಹಡಗ ಹೋಗುವದಿದೆ. ಸಯಾಮ ದೇಶಕ್ಕೆ ಬ್ರಿಟನ-ಅಮೇರಿಕೆಯವರು ಸಹಾಯ ಮಾಡಬೇಕಾಗಿ ಸಯಾಮದ ಪ್ರಸಿದ್ಧಿ ಇಲಾಖೆಯ ಪ್ರಚಾರಕರು ಹೇಳತೊಡಗಿದ್ದಾರೆ. ಸಯಾಮದಲ್ಲಿ ವಾಸಿಸುವ ಜಪಾನಿಯರ ಮೇಲೆ ರಾಜದ್ರೋಹದ [illegible]ಗಹತ್ತಿವೆ. ಜಪಾನಿಯರು ಗುಪ್ತವಾಗಿ ಇಟ್ಟುಕೊಂಡ ಯುದ್ಧ ಸಾಮಗ್ರಿಯನ್ನು ಸಯಾಮ ಸರಕಾರವು ಪತ್ತೆ ಹಚ್ಚಿ ಜಪಾನಿಯರ ಪಾರುಪತ್ಯ ಮಾಡತೊಡಗಿದೆ. ಸಿಂಗಾಪುರದಲ್ಲಿ ಬ್ರಿಟಿಶ ಮತ್ತು ಆಸ್ಟ್ರೇಲಿಯಾ ಸರಕಾರದ ಪ್ರತಿನಿಧಿಗಳ ಸಭೆಯಾಗಿ ಜಪಾನದೊಳಗಿನ ಯುದ್ಧ ಕಾರಣದ ಚರ್ಚೆಯಾಯಿತು. ಆಸ್ಟ್ರೇಲಿಯಾದಲ್ಲಿ ಮಂತ್ರಿಮಂಡಳ ಬದಲಿದೆ. ಕೂಲಿಕಾರ ಪಕ್ಷದವರು ಆಸ್ಟ್ರೇಲಿಯದ ಮುಖ್ಯ ಪ್ರಧಾನರಾದ ಮಿ। ಫಡನರವರ ಮೇಲೆ ಅಪನಂಬಿಗೆಯ ಠರಾವನ್ನು ಸೂಚಿಸಿ ಮನ್ನಿಸಿಕೊಂಡಿದ್ದರಿಂದ ಮಿ। ಫಡನರು ರಾಜೀನಾಮೆ ಕೊಟ್ಟು ಕೂಲಿಕಾರ ಪಕ್ಷದ ಪ್ರಮುಖರಾದ ಮಿ॥ ಕರ್ಟೀನರವರು ಹೊಸ ಪ್ರಧಾನ ಮಂಡಳವನ್ನು ರಚಿಸಿದ್ದಾರೆ. ಯುದ್ಧ ಯತ್ನವನ್ನು ಜಗ್ರುಗೊಳಿಸುವದಕ್ಕಾಗಿ ಹೊಸ ಪ್ರಧಾನ ಮಂಡಳ ಹಾಟಿಸೋಣಾಗಿದೆ. ಜಪಾನದಲ್ಲಿ ಬ್ರಿಟಿಶ ರಾಯಭಾರಿಗಳಾಗಿದ್ದ ಮಿ। ಡಫ ಕೂಪರರವರು ಸಿಂಗಾಪುರಕ್ಕೆ ಬಂದು ಅಲ್ಲಿಯ ಪರಿಸ್ಥಿತಿಯನ್ನು ತಿಳಕೊಂಡರು. ಅವರು

(೯ನೇ ಪುಟದ ಮೇಲೆ ಮುಂದುವರಿಸಿದೆ)

ಸ್ಥಾನಿಕ ವೃತ್ತಾಂತ.

ಕುಮಟಾ— ಈಗ ಹವೆ ಇಂತಹದೇ ಎಂದು ನಿಶ್ಚಯಾತ್ಮಕವಾಗಿ ಹೇಳುವದು ತೀರ ಕಷ್ಟ! ಒಮ್ಮೊಮ್ಮೆ ಮಳೆಯಾಗುತ್ತಿದೆ, ಒಮ್ಮೊಮ್ಮೆ ಬೆಳಗು ಮುಂಜಾವಿನಲ್ಲಿ ಮೂಡಗಾಳಿ ಬೀಸುತ್ತಿದೆ, ಹಗಲು ಹೊತ್ತಿಗೆ ಬೇಸಿಗೆಯ ಶೆಕೆಯೂ ಆಗುತ್ತಿದೆ! ಈ ಮಿಶ್ರ ಮತ್ತು ವಿಚಿತ್ರ ಹವೆಯ ಮೂಲಕ ಊರಲ್ಲಿ ಅನಾರೋಗ್ಯ ಮಿಗಿಲಾಗಿದೆ ಜ್ವರ, ನೆಗಡಿ, ಕೆಮ್ಮು ಮುಂತಾದ ಬೇನೆಗಳು ಮಿಗಿಲಾಗಿವೆ ಬುಧವಾರ ಮತ್ತು ರವಿವಾರ ಮುಂಜಾನೆ ಬಹಳ ಮಳೆಯಾಯಿತು ಬುಧವಾರ ೧-೨೨ ಇಂಚು ಮತ್ತು ರವಿವಾರ ಮುಂಜಾನೆ ೦-೪೭ ಇಂಚು ಮಳೆ ಬಿದ್ದಿದೆ ಅಂತು ಈ ವಾರ ೧-೬೯ ಇಂಚು ಮಳೆಯಾಗಿದೆ. ಆದರಿಂದ ಹೊಲಗಳಲ್ಲಿ ಕೊಯ್ದು ಹಾಕಿದ ಬೆಳೆಗೆ ಬಹಳ ಪೆಟ್ಟಾಗಿದೆ! ಒಣಗಿ ಕೊಯ್ಲಿಗೆ ತಯಾರಾದ ಬೆಳೆಯೂ ಹಾನಿಯಾಗಿದೆ! ಊರಲ್ಲಿ ಅಕ್ಕಿ ಧಾರಣೆ ಏರುತ್ತಲಿದೆ ತೆಂಗಿನಕಾಯಿಗಳ ಧಾರಣೆಯಂತೂ ಬಹಳ ತುಟ್ಟಿಯಾಗಿದೆ

ಕಳೆದ ವಾರ ಇಲ್ಲಿ ಗಾಂಧಿ ಜಯಂತಿ ಸಪ್ತಾಹ ಆಚರಿಸಲ್ಪಟ್ಟಿತು ದಿನಾಲೂ ಧ್ವಜವಂದನೆ, ಖಾದಿಯ ಮಾರಾಟ ಮುಂತಾದ ವಾಡಿಕೆಯ ಕ್ರಮಗಳು ನಡೆದವು ಒಂದು ದಿನ ನೂಲು ತೆಗೆಯುವ ಸ್ಪರ್ಧೆ ನಡೆಯಿತು ಕೆಲವರು ರಾಟೆಗಳ ಮೇಲೂ, ಕೆಲವರ ತಕಲಿಗಳ ಮೇಲೂ ನೂಲು ತೆಗೆದರು ಅವರಲ್ಲಿ ಮೇಲುಸ್ಥಾನಕ್ಕೆ ಬಂದ ಜನರಿಗೆ ಮಹಾತ್ಮರ ಹುಟ್ಟು ಹಬ್ಬದ ದಿನ ಜರುಗಿದ ಸಭೆಯಲ್ಲಿ ಬಹುಮಾನಗಳು ಕೊಡಲ್ಪಟ್ಟವು ಹುಟ್ಟುಹಬ್ಬದ ದಿನ ಅಂದರೆ ಕಳೆದ ಗುರುವಾರ ಸಂಜೆ ಮಹಾತ್ಮಾಜಿಯವರ ಭಾವಚಿತ್ರವನ್ನು ಅಂದವಾಗಿ ಸಿಂಗರಿಸಿದ ಮಂಟಪದಲ್ಲಿಟ್ಟುಕೊಂಡು ಊರಲ್ಲೆಲ್ಲ ಮೆರವಣಿಗೆಯಾಯಿತು ಮೆರವಣಿಗೆಯು ತಿರುಗಿ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದೆದುರಿಗೆ ಧ್ವಜಸ್ತಂಭದೆಡೆ ಬರುತ್ತಲೇ ಅಲ್ಲಿ ಸಭೆಯಾಗಿ ಜಿಲ್ಲೆಯ ಕೊಂಗ್ರೆಸ ನಾಯಕರಾದ ರಾ॥ ಶ್ರೀ ನಾಯಕರ ಭಾಷಣವಾಯಿತು ರಾ॥ ನಾಯಕರು ಮಹಾತ್ಮರ ಮಹಾತ್ಮೆಯನ್ನೂ ಅವರು ಹಾಕಿಕೊಟ್ಟ ಹೊಸ ಮಾರ್ಗದ ಮೇಲ್ಮೆಯನ್ನೂ ಮನದಟ್ಟಾಗುವಂತೆ ವಿವರಿಸಿ ಎಲ್ಲರೂ ಕೊಂಗ್ರೆಸ್ಸಿನ ವಿಧಾಯಕ ಕಾರ್ಯಕ್ರಮವನ್ನು ಭಕ್ತಿಪುರಸ್ಸರವಾಗಿ ಅನುಸರಿಸಬೇಕೆಂದು ಬಿನ್ನವಿಸಿದರು ಆ ಮೇಲೆ ರಾಷ್ಟ್ರಗೀತೆ, ಧ್ವಜಾವರೋಹಣ, ಮಹಾತ್ಮರ ಜಯಜಯಕಾರ ಮುಂತಾದವುಗಳಾಗಿ ಸಪ್ತಾಹೋತ್ಸವದ ಪೂರ್ಣತೆಯಾಯಿತು

ಗಾಂಧಿ-ಜಯಂತಿಯ ಮರುದಿನ ಮುಂಜಾನೆ ಹೆಗಡೆಯ ರಾ॥ ತಿಮ್ಮಣ್ಣಾ ಹೆಗಡೆಕಟ್ಟೆಯವರು ಹೆಗಡೆಯಲ್ಲೇ ಶ್ರೀ ಶಾಂತಿಕಾ ಪರಮೇಶ್ವರಿ ದೇವಸ್ಥಾನದ ಮುಂದಿನ ಪಟಾಂಗಣದಲ್ಲಿ ಎರಡನೇ ಬಾರಿ ಯುದ್ಧವಿರೋಧಿ ಘೋಷಣೆ ಮಾಡಿ ಸತ್ಯಾಗ್ರಹವನ್ನಾಚರಿಸಿದರು ಕೂಡಲೇ ಪೋಲಿಸರು ಅವರಿಗೆ ಸೆರೆಹಿಡಿದು ಅಂದೇ ಸಂಜೆ ಇಲ್ಲಿಯ ೧ನೇ ವರ್ಗದ ಮೆಜಿಸ್ಟ್ರೇಟರ ಎದುರಿಗೆ ಹಾಜರಪಡಿಸಿದರು. ಮತ್ತು ಖಟ್ಲೆಯ ವಿಚಾರಣೆಯಾಗಿ ರಾ॥ ಹೆಗಡೆಕಟ್ಟೆಯವರಿಗೆ ೬ ತಿಂಗಳ ಸಾದಾ ಶಿಕ್ಷೆ ವಿಧಿಸಲ್ಪಟ್ಟಿತು

ಈ ತಿಂಗಳಲ್ಲಿ ಜಿಲ್ಹಾಧಿಪತಿಗಳಾದ ರಾ॥ ಮೋಡೆಕರವರ ಸಂಚಾರಕ್ರಮ ಈ ಕೆಳಗಿನಂತಿದೆ — ತಾ ೫ರಿಂದ ತಾ ೧೦ ಕುಮಟಾ, ತಾ ೧೧–೧೩ ಹೊನ್ನಾವರ, ತಾ ೧೪ರಿಂದ ತಾ ೧೮ರ ತನಕ ಭಟಕಳ, ತಾ ೧೯–೨೦ ಶಿರ್ಸಿ; ತಾ ೨೧ರಿಂದ ತಾ ೨೫ ಹಳಿಯಾಳ, ತಾ ೨೬–೨೭–೨೮ ಯಲ್ಲಾಪುರ, ತಾ ೨೯–೩೦–೩೧ ಭಾಗವತಿ

ಮೊನ್ನೆ ಶುಕ್ರವಾರ ಇಲ್ಲಿಯ ಬೇಸಾಯ ಪ್ರಯೋಗ ಹೊಲದಲ್ಲಿ ಮುಂಜಾನೆ ೮ರಿಂದ ಮಧ್ಯಾನ್ಹದ ವರೆಗೆ ಹೊಲದಲ್ಲಿ ನಡೆದ ಪ್ರಯೋಗಗಳ ಮಾಹಿತಿ ಕೊಡುವದು ಮತ್ತು ಸಂಜೆ ೪ ಘಂಟೆಗೆ ರೈತರ ಸಭೆ ಕೂಡಿಸಿ ಒಕ್ಕಲತನಕ್ಕೆ ಸಂಬಂಧಪಟ್ಟ ವಿಷಯಗಳ ಚರ್ಚೆ ಮಾಡುವದು ಮೊದಲಾದ ಕಾರ್ಯಕ್ರಮ ನಡೆಯಿತು ರಾ॥ ಹೆಗಡೆಕಟ್ಟೆಯವರು ಕೂಡಿದ ಜನರಿಗೆ ಬೇರೆ ಬೇರೆ ಭತ್ತ,ಕಬ್ಬುಗಳ ತುಲನಾತ್ಮಕ ಉಪಯುಕ್ತತೆ ಮತ್ತು ಲಾಭದಾಯಕತ್ವ, ಹಣ್ಣು-ಹಂಪಲಗಳ ಬೆಳವಣಿಗೆಯ ಪ್ರಯೋಜನ ಮುಂತಾದ ವಿಷಯಗಳನ್ನು ತಿಳಿಸಿಹೇಳಿದರು ಜಿಲ್ಲೆಯ ಎಲ್ಲ ತಾಲೂಕು-ಪೇಟೆಗಳಿಂದ ಸರಕಾರ-ನಿಮಂತ್ರಿತ ರೈತ ಬಾಂಧವರು ಈ ಸಭೆಗೆ ಬಂದಿದ್ದರು

ಹೋದ ಮಂಗಳವಾರ ಕುಮಟಾ ಗಂಧದ ಕೆತ್ತಿಗೆ ಕೆಲಸ ಮಾಡುವವರ ಸಹಕಾರ ಸಂಘದ ವಾರ್ಷಿಕ ಮಹಾಸಭೆಯಾಗಿ ವರದಿಯ ವಾಚನ, ಹೊಸ ವ್ಯವಸ್ಥಾಪಕ ಮಂಡಳದ ಆಯ್ಕೆ ಮೊದಲಾದ ಕ್ರಮಗಳು ನಡೆದವು ತಾ ೮–೧೦–೪೦ನೇಗೆ ಈ ಸಂಘದ ಸ್ಥಾಪನೆಯಾಗಿತ್ತು ಅಂದಿನಿಂದ ತಾ ೩೦–೬–೪೧ರ ತನಕ ಅಂದರೆ ಮೊದಲಿನ ೯ ತಿಂಗಳಲ್ಲಿ ಸಂಘವು ಸುಮಾರು ೧೪೦೦ ರೂ ಬೆಲೆಯ ಕಲಾಕೌಶಲ್ಯದ ಸಾಮಾನುಗಳನ್ನು ಮಾರಾಟ ಮಾಡಿರುತ್ತದೆ ವರದಿಯ ಅವಧಿಯಲ್ಲಿ ಸಂಘಕ್ಕೆ ರೂ ೧೯೬-೫-೩ ಹಾನಿಯಾಗಿದೆಯೆಂದು ಅದರ ವರದಿಯ ಮೇಲಿಂದ ಕಂಡುಬರುತ್ತಿದೆ ಮೊದಲನೇ ವರ್ಷದಲ್ಲಿ ಈ ಪರಿ ಹಾನಿಯಾದದ್ದು ಆಶ್ಚರ್ಯಕರವಲ್ಲ, ಖೇದಕರವೂ ಅಲ್ಲ ಇದರಿಂದ ಎದೆಗುಂದದೆ ಗೌಡಚಿತ್ರಕ ಬಾಂಧವರು ಪ್ರೇಮದಿಂದ ಸಂಘದಲ್ಲಿ ಸೇರಿ ಅದನ್ನು ಸರಿಯಾಗಿ ನಡಿಸಿದರೆ ಮುಂದೆ ಅವರಿಗೆ ಲಾಭವಾಗದೆ ಎಂದೂ ಉಳಿಯಲಿಕ್ಕಿಲ್ಲ

ಈ ಹಿಂದೆ ತಿಳಿಸಿದಂತೆ ಕಳೆದ ದಸರೆ ಹಬ್ಬದ ದಿನ ಕುಮಟಾ ತಾಲೂಕ ಹವ್ಯಕ ವಿದ್ಯಾವರ್ಧಕ ಸಂಘದ ಮೂರನೇ ಜನ್ಮ—ದಿನೋತ್ಸವವು ಊರಕೇರಿಯೊಳಗಿನ ಕೊಡ್ಲಕೆರೆ ಮಠದಲ್ಲಿ ವೇ॥ ಸೀತಾರಾಮ ಭಟ್ಟರ ಅಧ್ಯಕ್ಷತೆಯೊಳಗೆ ನೆರವೇರಿತು ಡಾ॥ ರಾ॥ ಎನ್ ಟಿ ಹೆಗಡೆ, ಜಿ ಜಿ ಶಾಸ್ತ್ರಿ ವಕೀಲ ಮೊದಲಾದವರು ಭಾಷಣ ಮಾಡಿ ಸಂಘದ ಮಹತ್ವವನ್ನು ಚೆನ್ನಾಗಿ ತಿಳಿಸಿಹೇಳಿ ಎಲ್ಲರೂ ಕೈಲಾದ ಮಟ್ಟಿಗೆ ಸಂಘದ ಕಾರ್ಯಕ್ಕೆ ಪ್ರೋತ್ಸಾಹ ಕೊಡಬೇಕೆಂದು ಬಿನ್ನವಿಸಿದರು ಅಧ್ಯಕ್ಷರು ೫೦ ರೂ ವಂತಿಕೆ ಕೊಟ್ಟು ಸಂಘವು ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದು ಆಶೀರ್ವಾದ ಕೊಟ್ಟರು ಉತ್ಸವಕ್ಕೆ ಬಂದ ಜನರಿಂದ ಸಭೆಯಲ್ಲೇ ರೂ ೨॥, ಸಭೆಯ ನಂತರ ಊರಕೇರಿ ಜನರಿಂದ ರೂ ೫೦-೬ ಮತ್ತು ಧಾರೇಶ್ವರದಲ್ಲಿ ೨॥ ರೂ ವರ್ಗಣಿ ಇಲ್ಲವೆ ವಂತಿಕೆ ರೂಪದಿಂದ ವಸೂಲ ಬಂದವು ಕಳೆದ ತಿಂಗಳಲ್ಲಿ ಸಂಘಕ್ಕೆ ರಾ॥ ಅಡಕೋಳ ಸುಬಜ್ಜರಿಂದ ೨ನೇ ಕಂತಿನ ರೂ ೧೦ ರಾ॥ ಜಿ ಎಮ್ ಹೆಗಡೆಕಟ್ಟೆಯವರ ೨ನೇ ಕಂತಿನ ರೂ ೬, ಗೋಕರ್ಣ ಶಾಲಾ ಶಿಕ್ಷಕ ರಾ॥ ಮಹಾಬಲೇಶ್ವರ ವೆಂಕಟರಮಣ ಭಟ್ಟರ ೬ನೇ ಕಂತಿನ ರೂ ೭-೬-೦, ಶ್ರೀ॥ ಸಾವಿತ್ರಿ ಕೋಂ ಮಹಾಬಲೇಶ್ವರ ಭಟ್ಟ ಇವರ ೩ನೇ ಕಂತಿನ ರೂ ೬—೧೨—೦, ರಾ॥ ಮಾಗೋಡ ರಂಗ ಭಟ್ಟರ ೨ನೇ ಕಂತಿನ ರೂ ೫, ಕಲ್ಲಬ್ಬೆಯ ರಾ॥ ಶಂಭು ಹೆಗಡರ ೪ನೇ ಕಂತಿನ ರೂ ೨, ಇನ್ನಿತರ ಶಿಕ್ಷಕರ ಕಂತುಗಳ ರೂ ೧೮, ಬೆತ್ತಗೇರಿಯಲ್ಲಿ ಮುಂಜಿ ದಕ್ಷಿಣೆ ರೂ ೧ ಮತ್ತು ರಾ॥ ಗಣೇಶ ಹೆಗಡೆ ಬೆತ್ತಗೇರಿಯವರ ವಂತಿಕೆ ರೂ ೧ ಹೀಗೆ ರೂ ೫೭ ಸಂಘಕ್ಕೆ ವಸೂಲ ಬಂದಿವೆಯೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

ಕಳೆದ ತಾ ೨೭ನೇ ಶನಿವಾರ ಗಂಗಾವಳಿ ಗಾಂವರೀ ಶಾಲೆಯಲ್ಲಿ ವೇ॥ ವಿಘ್ನೇಶ್ವರ ಜೋಶಿ ಇವರ ಅಧ್ಯಕ್ಷತೆಯಲ್ಲಿ ಶ್ರೀ ಸರಸ್ವತೀ ಪೂಜೆಯ ಮಹೋತ್ಸವ ನಡೆಯಿತು. ಭಾಷಣಗಳು, ಕಾವ್ಯವಾಚನ, ಮನರಂಜನೆಯ ಕಾರ್ಯಕ್ರಮ, ಶ್ರೀ ಶಾರದಾ ಪ್ರಾರ್ಥನೆ, ಪ್ರಸಾದ ಸ್ವೀಕಾರ ಮುಂತಾದ ಕಾರ್ಯಕ್ರಮಗಳಾದವು

ಗೋಕರ್ಣ ಮ್ಯುನಿಸಿಪಾಲಿಟಿಯು ಇದೇ ವರ್ಷದ ಮ್ಯುನಿಸಿಪಾಲಿಟಿಯಲ್ಲಿ ಅಕ್ಟೋಬರ ತಾ, ೧ರಿಂದ ಜೂನ ತಾ ೩೦ರ ತನಕ ಮಾತ್ರ ಆದು ಕೆಲಸ ಮಾಡುತ್ತಿದೆ. ಮ್ಯುನಿಸಿಪಾಲಿಟಿಯ ಸದಸ್ಯರನ್ನು ಸರಕಾರದವರೇ ನೇಮಿಸುತ್ತಾರೆ. ಹಿಂದೆ ಅವೇ ಅದೇ ಸದಸ್ಯರು ತಿರುಗಿ ತಿರುಗಿ ನೇಮಿಸಲ್ಪಡುತ್ತಿದ್ದದರಿಂದ ಮ್ಯು॥ಯ ಕಾರಭಾರ ಒಂದೇ ರೀತಿ ನಡೆದಿತ್ತು ಈ ವರ್ಷ ಸರಕಾರದವರು ಕೆಲವು ಹೊಸಬರಿಗೆ ನೇಮಿಸಿದ್ದಾರೆ ಅವರು ಈ ಕೆಳಗಿನಂತಿದ್ದಾರೆ — (ಅಧಿಕಾರಸ್ಥರು) (೧) ಪ್ರಾಂತ ಸಾಹೇಬ ರಾ॥ ಹುಬ್ಬಳ್ಳಿ, (ಅಧ್ಯಕ್ಷ), (೨) ಕುಮಟಾ ಮಾಮಲೇದಾರ ರಾ॥ ಲಂಬಾಟಿ, (೩) ಗೋಕರ್ಣ ಚಿಕಿತ್ಸಾಲಯದ ಡಾಕ್ಟರರಾದ ಡಾ॥ ಜೋಶಿ, (೪) ಗೋಕರ್ಣ ಪೋಲೀಸ ಪಟೇಲ ರಾ॥ ರಾಘವೇಂದ್ರ ಚಿಕ್ಕೇರಮನೆ, (ಅಧಿಕಾರರಹಿತರು) (೫) ರಾ॥ ಶೇಷಡಿ ಮುಳೇ, (೬) ರಾ॥ ಗೋವಿಂದ ಸುಬ್ರಾಯ ಶೆಟ್ಟಿ, (೭) ರಾ॥ ವಿನಾಯಕ ಮಂಗೇಶ ಚಿಕ್ಕೇರಮನೆ, (೮) ರಾ॥ ಶಂಕರ ರಾಮಕೃಷ್ಣ ನಾಡಕರ್ಣಿ, (೯) ರಾ॥ ದತ್ತಾತ್ರಯ ವೈಕುಂಠ ಕಾಮತ ತಿಮಾನಿಕರ, (೧೦) ರಾ॥ ವೆಂಕಟೇಶ ವಿಠೋಬ ಶೆಟ್ಟಿ ಎಲ್ಲನ, (೧೧) ರಾ॥ ಗಣಪತಿ ಗಣೇಶ ಶಾಸ್ತ್ರಿ ಹೊಸಮನೆ ಮತ್ತು (೧೨) ರಾ॥ ಮಂಜನಾಥ ವೆಂಕಪ್ಪಾ ಬಸ್ತಿಕರ ಹೊಸಬ ಸದಸ್ಯರು ಮ್ಯು॥ಯ ಕಾರ್ಯಪದ್ಧತಿಯಲ್ಲೂ ಕಾರ್ಯಕ್ರಮದಲ್ಲೂ ಹೊಸ ದೃಷ್ಟಿಯನ್ನು ತಾಳಿ ಹಳೆಯ ಕಾಲದ ಸದಸ್ಯರ ಲೋಪ-ದೋಷಗಳನ್ನು ಹೊಲಸನ್ನು ಹೋಗಲಾಡಿಸಿ, ಮ್ಯು॥ಯ ಕಾರಭಾರದ ಬಗ್ಗೆ ಜನತೆಯೊಳಗೆ ಸಮಾಧಾನ ಮತ್ತು ವಿಶ್ವಾಸಗಳನ್ನುಂಟುಮಾಡುವರೆಂದು ಹಾರೈಕೆಯುಂಟು.

ಹೊನ್ನಾವರ— (ತಾ ೧–೧೦–೪೧) ಇಲ್ಲಿಯ ಶಾಲಾ ಶಿಕ್ಷಕರ ಪಗಾರ ಬಟವಡೆ ರಿವಾಜಿಯ ಮೇಲೆ ನಡೆದಿರುವ ಖಟ್ಲೆಯೊಳಗಿನ ಸಾಕ್ಷಿಗಾರ ಜನರಿಗೆ, ಹಾಗೆ ಹೇಳಿ, ಹೀಗೆ ಹೇಳಿ ಎಂದು ರಾ॥ ಡೆಂಗಾ ನಾಯ್ಕರು ಹೇಳಿದ್ದೆಂಬುದು ನಿಜವಲ್ಲವೆಂತಲೂ, ಊರೊಳಗಿನ ಸಭ್ಯರ ಕೈಕಾಲು ಹಿಡಿದು ಸಾಕ್ಷಿಗಾರರಿಗೆ ತಿರುಗಿಸಲು ಅವರು ಪ್ರಯತ್ನಿಸಿದ್ದು ಇಲ್ಲೆಂತಲೂ ಒಬ್ಬರು ತಿಳಿಸುತ್ತಾರೆ ಪೋಲೀಸರೇ ಈ ಖಟ್ಲೆ ನಡಿಸುತ್ತಾರಂತೆ

ನಿನ್ನೆ ದಸರೆಯ ಹಬ್ಬದ ದಿನ ಕಶ್ಯಾರದ ಶ್ರೀ ಸಿದ್ಧಿವಿನಾಯಕ ವಿದ್ಯಾಲಯದಲ್ಲಿ ಶ್ರೀ ಶಾರದಾಂಬೆಯ ಪೂಜೆಯೂ, ಕಲಾಕೋವಿದ ರಾ॥ ಎಸ್ ಜಿ ಭಟ್ಟರು ತಯಾರಿಸಿದ ರಾ॥ ಗಣೇಶ ಭಟ್ಟರ ಭಾವಚಿತ್ರದ ಅನಾವರಣ ಸಮಾರಂಭವೂ ನಡೆದವು. ನೂರಾರು ಜನರು ಸಭೆಗೆ ಬಂದಿದ್ದರು. ವಿದ್ಯಾಲಯದ ಹೊಸ ಮನೆಯ ಅಡಿಗಲ್ಲನ್ನು ಜಿಲ್ಹಾಧಿಪತಿಗಳಾದ ರಾ॥ ಮೋಡೆಕರವರು ಬರುವ ಸೋಮವಾರ ಮುಂಜಾನೆ ಇಡುವರೆಂದು ತಿಳಿಯುತ್ತದೆ.

(೪–೧೦–೪೧) ಮೊನ್ನೆ ಮಹಾತ್ಮರ ಹುಟ್ಟು ಹಬ್ಬದ ನಿಮಿತ್ತ ಇಲ್ಲಿ ಮುಂಜಾನೆ ಪ್ರಭಾತ ಫೇರಿ ಮತ್ತು ಧ್ವಜವಂದನೆಗಳೂ, ಸಂಜೆಯಲ್ಲಿ ಮಹಾತ್ಮರ ಚಿತ್ರದ ಮೆರವಣಿಗೆ ಉತ್ಸವವೂ ನಡೆದವು ಮೆರವಣಿಗೆ ಮುಗಿದ ತರುವಾಯ ರಾ॥ ಮಂಜನಾಥ ಭಟ್ಟ ಕರ್ಕಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯಾಗಿ ರಾ॥ ಶಿವರಾಮ ಶಾಸ್ತ್ರಿಯವರ ಭಾಷಣವಾಯಿತು ರಾ॥ ಶಾಸ್ತ್ರಿಯವರು ಗಾಂಧಿಜಿಯವರ ಮಾರ್ಗದ ಶ್ರೇಷ್ಠತ್ವವನ್ನು ಪ್ರತಿಪಾದಿಸಿ, ಭಾರತೀಯರೆಲ್ಲರೂ ಅವರನ್ನೇ ಅನುಸರಿಸಿದಲ್ಲಿ ಭಾರತ ಭೂಮಿಯ ಉದ್ಧಾರವಾಗುವದೆಂದು ಮನದಟ್ಟು ಮಾಡಿಕೊಟ್ಟರು. ಬಳಿಕ ಮಹಾತ್ಮರಿಗೆ ಆಯುರಾರೋಗ್ಯಾಭಿವೃದ್ಧಿ ದಯಪಾಲಿಸಲು ಪರಮೇಶ್ವರನ ಚರಣಾರವಿಂದಗಳಲ್ಲಿ ಪ್ರಾರ್ಥನೆ ಮಾಡಿ, ಪ್ರಸಾದ ಸ್ವೀಕರಿಸಿ ಸಭಿಕರು ಚದರಿದರು

ಸಾಧುವರ್ಯ ಗಾಧಗೆ ಬುವಾರವರ ಶಿಷ್ಯರಾದ ರಾ॥ ಕುಲಕರ್ಣಿಯವರು ದಸರೆಯ ಕಾಲಕ್ಕೆ ಈ ಊರಿಗೆ ಬಂದು ೩ ಕೀರ್ತನೆಗಳನ್ನು ಮಾಡಿದರು ಮುಂದೆ ಗಾಧಗೆ ಬುವಾರವರು ಈ ಊರಿಗೆ ಬರುವವರಿದ್ದಾರಂತೆ ಅವರು ಬಂದಾಗ ಜನರಿಗೆ ಅನ್ನಸಂತರ್ಪಣೆ ಹಾಕಲು ಒಂದು ನಿಧಿಯನ್ನು ಕೂಡಿಸುವದಕ್ಕಾಗಿ ಕುಲಕರ್ಣಿಯವರು ಒಂದು ಭಜಕ ಮಂಡಳವನ್ನು ನೇಮಿಸಿದ್ದಾರೆ ಈಗಾಗಲೇ ನೂರು

ರೂಪಾಯಿಗಳು ಮಂಡಳದ ನಿಧಿಪಾಲಕರಾದ ರಾ॥ ಶ್ರೀನಿವಾಸ ಶೇಷಗಿರಿ ಕಾಮತರವರ ಕಡೆಗೆ ಜಮೆಯಾಗಿದೆ.

ಹೋದ ರವಿವಾರ ಅರ್ಬನ ಬೇಂಕಿನ ಮಹಾಸಭೆಯಾಗಿ ವರದಿಯ ವಾಚನ ಮುಂತಾದ ಕಾರ್ಯಕ್ರಮಗಳಾದವು. ಹೊಸ ವ್ಯವಸ್ಥಾಪಕ ಮಂಡಳದಲ್ಲಿ ೭ ಮಂದಿ ಹಳಬರೇ ಆರಿಸಲ್ಪಟ್ಟಿದ್ದಾರೆ. ವೈ॥ ವಾ॥ ಭಾಸ್ಕೇರಿ ಮಂಜಯ್ಯ ಕಾಮತ ಮತ್ತು ರಾ॥ ಭಾಸ್ಕೇರಿ ಭಿಕ್ಕು ಕಾಮತರ ಸ್ಥಳದಲ್ಲಿ ರಾ॥ ರಾ॥ ಅಚ್ಯುತ ನಾಗಪ್ಪ ಶಾನಭಾಗ ಮತ್ತು ರಾಮಚಂದ್ರ ಶ್ರೀನಿವಾಸ ಕಾಮತ ಇವರಿಬ್ಬರ ಹೊಸಬರಿಗೆ ಸೇರಿಸಿಕೊಳ್ಳಲಾಗಿದೆ. ಅ॥ ರಜಿಸ್ಟ್ರಾರರ ಅನುಮತಿ ತಕ್ಕೊಂಡು ಶೇರಾರಿಗಿಂತ ಕಡಿಮೆ ಬಡ್ಡಿದರದಿಂದ ಸಾಲ ವಸೂಲ ಮಾಡಲಿಕ್ಕೆ ಬರುವಂತೆ ಒಂದು ಉಪನಿಯಮವು ಮಂಜೂರಾಗಿದೆ.

ಮ್ಯುನಿಸಿಪಾಲಿಟಿಯಿಂದ ವರ್ತಕರಿಗೆ ಈಗ ಸುಮಾರು ರೂ ೩೦೦೦೦ ದಷ್ಟು ರಿಫಂಡ ಸಿಗಬೇಕಂತೆ! ಮೆನೇಜಿಂಗ ಕಮಿಟಿಯವರು ಏನಾದರೂ ನೆವಗಳನ್ನು ಹುಡುಕಿ ಈ ಹಣ ಕೊಡುವದಿಲ್ಲ! ಮಹಾಸಭೆಯ ಕಡೆಗೆ ದೂರುಕೊಂಡರೆ ಮಹಾಸಭೆಗೆ ಆ ಕುರಿತು ವಿಚಾರ ಮಾಡಲು ಸಮಯವೇ ಸಿಗಲೊಲ್ಲದು! ಆದರಿಂದ ವರ್ತಕರು ಈಗ ಕಮಿಶನರರ ಕಡೆಗೆ ದೂರು ಒಯ್ದಿದ್ದಾರೆ.

ಮೇಲಿಂದ ಮೇಲೆ ಮಳೆಯಾಗುತ್ತಿದ್ದದರಿಂದ ಗದ್ದೆ ಕೊಯಿಲಿಗೆ ತೊಂದರೆಯಾಗಿದೆ. ಅಕ್ಕಿ ಧಾರಣೆ ಏರುತ್ತಿದೆ.

ಇಲ್ಲೊಂದು ನೂಲುವ ವರ್ಗ ತೆರೆಯಬೇಕೆಂದು ಜಿಲ್ಹಾಧ್ಯಕ್ಷ ರಾ॥ ಶಿವರಾವ ಶಾಸ್ತ್ರಿಯವರು ನಿಶ್ಚಯಿಸಿದ್ದಾರೆ. ಕೊಂಗ್ರೆಸ ಸದಸ್ಯರಾಗುವವರು ರಾ॥ ಶಾಸ್ತ್ರಿಯವರಿಗೆ ಭೆಟ್ಟಿಯಾಗಬೇಕು.

ಬೈಲೂರ— (ತಾ ೨೯-೯-೪೧) ಇಲ್ಲಿಯ ಕನ್ನಡ ಶಾಲೆಯಲ್ಲಿ ಡಾ॥ ಶಿವರಾಮ ಹೆಗಡೆರ ಅಧ್ಯಕ್ಷತೆಯಲ್ಲಿ ಇಂದು ಶ್ರೀ ಶಾರದಾ ಪೂಜೆಯ ಉತ್ಸವವಾಯಿತು. ಸಂಖ್ಯೆ ಮಿಕ್ಕಿ ಜನರು ಕೂಡಿದ್ದರು. ವಿದ್ಯಾರ್ಥಿಗಳ ಹಾರ, ಹೆಣ್ಣುಮಕ್ಕಳ ಕೋಲಾಟ, ಕಾವ್ಯಗಾಯನ, ವ್ಯಾಯಾಮ ಪ್ರದರ್ಶನ ಮೊದಲಾದ ಬಗೆಬಗೆಯ ಕಾರ್ಯಕ್ರಮಗಳಾದವು. "ವೇಣೀಸಂಹಾರ" ಎಂಬ ಚಿಕ್ಕ ನಾಟಕವನ್ನು ಹುಡುಗರೇ ಅಭಿನಯಿಸಿ ತೋರಿಸಿದರು. ಆ ಮೇಲೆ ಅಧ್ಯಕ್ಷರೂ ಬೇರೆ ಕೆಲವು ಸದ್ಗೃಹಸ್ಥರೂ ಮಾತಾಡಿ, ವಿದ್ಯೆಯ ಮಹತ್ವ, ಶಿಕ್ಷಕ-ವಿದ್ಯಾರ್ಥಿ-ಪಾಲಕರ ಕರ್ತವ್ಯಗಳು ಮುಂತಾದ ವಿಷಯಗಳನ್ನು ತಿಳಿಸಿಹೇಳಿದರು. ಕೊನೆಗೆ ಪ್ರಸಾದಸ್ವೀಕಾರ, ಆಭಾರಮನ್ನಣೆ ಮೊದಲಾದವುಗಳಾಗಿ ಈ ಚಿಕ್ಕ ಸಮಾರಂಭವು ಮುಕ್ತಾಯ ಹೊಂದಿತು.

ಶಿರಸಿ— (೩೦-೯-೪೧) ಇಲ್ಲಿ ಕಳೆದ ಶುಕ್ರವಾರ ತಾ ೨೬ನೇಗೆ ಈ ವಿಭಾಗದ ಅಧಿಕಾರಿಗಳ ಸಭೆ ಸೇರಿತ್ತು. ಕೊಳೆರೋಗ ನಿವಾರಣೆಯ ಪ್ರಯೋಗಗಳನ್ನು ಅಧಿಕಾರಿಗಳಿಗೆ ಪ್ರತ್ಯಕ್ಷ ತೋರಿಸಿ, ಆ ಜ್ಞಾನವನ್ನು ಜನರಲ್ಲಿ ಪ್ರಸಾರ ಮಾಡುವ ಉದ್ದೇಶದಿಂದ ಈ ಸಭೆ ಕರೆಯಲಾಗಿತ್ತು. ಕಚೇರಿಯ ಬಳಿಯಲ್ಲಿ ತಯಾರಿಸಿದ ಪ್ರಯೋಗ ಶಾಲೆಯಲ್ಲಿಯೇ ಈ ಸಭೆ ಸೇರಿಸಲಾಗಿತ್ತು. ಸಭೆ ಸೇರುವ ಮುಂಚೆಯೇ ಪ್ರಯೋಗ ಶಾಲೆಯಲ್ಲಿ ಯಾಂತ್ರಿಕ-ಬೀಜ ಚಿತ್ರ ಪ್ರತ್ಯಕ್ಷ ಪ್ರಯೋಗ ಮಾಡಿ ತೋರಿಸಬೇಕೆಂದು ಗೊತ್ತಾಗಿತ್ತು. ಆದರೆ ಅಸಿಸ್ಟಂಟ ರಾ॥ ದೇಸಾಯಿಯವರಿಗೆ ಬೀಜ ಹಾಕಲು ೨೫ನೇ ತಾರೀಖು ಬೆಳಗಿತು! ಮರು ದಿನವೇ ಸಭೆಯಿತ್ತು! ಕೊಳೆರೋಗ ನಿವಾರಣೆಯ ಕುರಿತು ರಾ॥ ದೇಸಾಯಿಯವರು ಪ್ರವಚನ ಕೊಟ್ಟ ಬಳಿಕ ಚಹಾಪಾನವಾಗಿ ಸಭೆಯ ಕಾರ್ಯಕ್ರಮ ಮುಗಿಯಿತು. ಈ ಸಭೆಗೆ ಕಲೆಕ್ಟರರು ಹಾಜರಿದ್ದಿಲ್ಲ. ಪ್ರಾಂತ ಸಾಹೇಬರು ಹೊನ್ನಾವರದಿಂದ ಬಂದು ತಲ್ಪುವಷ್ಟರಲ್ಲಿ ಸಭಾಕಾರ್ಯ ಮುಗಿದಿತ್ತು! ಸಂಶೋಧನ ಸಲುವಾಗಿ ಒಂದು ಕನ್ನಡಿಯ ಮನೆ ಕಟ್ಟಲಾಗಿದೆ. ಸುತ್ತುಮುತ್ತು ಕನ್ನಡಿಯ ಗೋಡೆಗಳು, ಮೇಲ್ಛಾವಣಿಯೂ ಕನ್ನಡಿಯದೇ! ಈ ಮನೆ ಸುಮಾರು ೬೦ ಅಡಿ ಉದ್ದ, ೩೦ ಅಡಿ ಅಗಲ, ೨೫ ಅಡಿ ಎತ್ತರವಿದೆ. ಇದಕ್ಕೆ ಸುಮಾರು ರೂ ೩೦೦೦ ಖರ್ಚ ತಗಲಿರುವದಂತೆ.

ಸ್ವಾದಿ ಬಂಧುಗಳ ವಿರುದ್ಧ ಎದ್ದಿರುವ ದೂರುಗಳ ಕುರಿತು ಶಿಕ್ಷಣಾಧಿಕಾರಿಗಳಾದ ರಾ॥ ರಾ॥ ದೇಸಾಯಿ, ಕರ್ಜಗಿ, ಆರ್ ಎಸ್ ಹೆಗಡೆ ಇವರು ಚೌಕಸಿ ನಡಿಸಿ ಹೋಗಿರುತ್ತಾರೆ. ಚೌಕಶಿಯ ಫಲಿತಾಂಶವೇನಾಯಿತೆಂಬುದು ಮಾತ್ರ ಇನ್ನೂ ತಿಳಿಯಲಿಲ್ಲ. ತನ್ಮಧ್ಯೇ ರಾ॥ ಸ್ವಾದಿ ಬಂಧುಗಳೂ ಅವರ ಗೆಳೆಯರೂ "ವೃತ್ತ"ದಲ್ಲಿ ಬಂದ ಟೀಕೆಯ ಬಗ್ಗೆ ಅಪಪ್ರಚಾರ ನಡಿಸುತ್ತಿದ್ದಾರೆ! ಕೆಲವರು "ವೃತ್ತ"ಕ್ಕೆ ಹೆಸರಿಲ್ಲದ ಪತ್ರಗಳನ್ನು ಕಳಿಸಿ ಏನೇನೋ ಬರೆಯುತ್ತಿದ್ದರೆ, ಬೇರೆ ಕೆಲವರು "ಮಾಡುವದೇನು? ಮಾನನಷ್ಟದ ಮೊಕದ್ದಮೆ ಮಾಡುತ್ತಿದ್ದೆವು. ಆದರೆ ಮೇಲಧಿಕಾರಿಗಳು ಅದಕ್ಕೆ ಸಮ್ಮತಿ ಕೊಡುವದಿಲ್ಲವಲ್ಲ!" ಎಂದು ಮರುಗುತ್ತಿದ್ದಾರೆ! ರಾ॥ ಸ್ವಾದಿ ಬಂಧುಗಳ ನಡತೆ ಆಕ್ಷೇಪಾರ್ಹವಿರುವದಿಲ್ಲವಾದರೆ ಈ ಗೆಳೆಯರು "ವೃತ್ತ"ಕ್ಕೆ ಸಪ್ರಮಾಣ ಮತ್ತು ಅಧಿಕೃತ ಪ್ರತ್ಯುತ್ತರವನ್ನೇಕೆ ಕೊಡಬಾರದೋ ತಿಳಿಯದು! 'ವೃತ್ತ'ವು ಅಂಥ ಪ್ರತ್ಯುತ್ತರಕ್ಕೆ ಸ್ಥಳ ಕೊಡದೆಂದು ತಿಳಿಯುವದು ದಡ್ಡತನವಲ್ಲವೇ?

ಶ್ರೀ ಮಾರಿಕಾಂಬಾ ದೇವಾಲಯದೊಳಗಿನ ನಾದಹಬ್ಬದ ಕಾರ್ಯಕ್ರಮ ಒಳ್ಳೇ ಉತ್ಸಾಹದಿಂದಲೂ ವಿಜೃಂಭಣೆಯಿಂದಲೂ ಜರುಗಿತು. ನಾಗರಿಕರಿಗೆ ೧೦ ದಿನಗಳ ವರೆಗೆ ಬೇರೆ ಬೇರೆ ಪ್ರಖ್ಯಾತ ಕನ್ನಡ ಸಾಹಿತಿಗಳ ಉಚ್ಚ ಜ್ಞಾನಾಮೃತದ ಸವಿಯೂಟ ಉಣ್ಣಲು ಸಿಕ್ಕಿತು! ಈ ಬಗ್ಗೆ ನಾಗರಿಕರು ಸದಾ ಸಾಹಿತಿ ಶಿರೋಮಣಿಗಳಿಗೂ ಅವರ ವ್ಯಾಖ್ಯಾನ-ಪ್ರವಚನಗಳ ವ್ಯವಸ್ಥೆ ಮಾಡಿದ ತರುಣ ಸಂಘದವರಿಗೂ ಋಣಿಯಾಗಿರುತ್ತಾರೆ.

ಕಳೆದ ಗುರುವಾರ ತಾ ೨೫ ನೇ ಮುಂಜಾನೆ ಶ್ರೀ ಹೊನ್ನಳ್ಳಿ ಮಠದ ಶ್ರೀ ಸರ್ವಜ್ಞೇಂದ್ರ ತೀರ್ಥ ಸ್ವಾಮಿಗಳು ಈ ಊರಿಗೆ ಚಿತ್ತೈಸಿದ್ದರು. ಇಲ್ಲಿಯ ತೋಟಿಗಾರ ಸಂಘದವರು ಶ್ರೀಯವರನ್ನು ಮೆರವಣಿಗೆಯಿಂದ ತಮ್ಮ ಮಂದಿರಕ್ಕೆ ಬರಮಾಡಿಕೊಂಡು, ಪಾದ ಪೂಜಾದಿಗಳನ್ನು ಮಾಡಿ, ಭಕ್ತಿಯಿಂದ ಶ್ರೀಗಳನ್ನು ಸತ್ಕರಿಸಿದರು. ಶ್ರೀಗಳವರೂ ಚಿಕ್ಕದೊಂದು ಭಾಷಣ ಮಾಡಿ, ಪರಸ್ಪರ ಪ್ರೇಮ, ಸಹಕಾರ, ಸೌಹಾರ್ದ, ಒಕ್ಕಟ್ಟುಗಳಿಂದ ನಡೆದು, ಪರಸ್ಪರರ ಕಷ್ಟ-ನಷ್ಟ ಪರಿಹಾರ ಮಾಡಿರೆಂದೂ, ಧರ್ಮಬುದ್ಧಿಯಿಂದ ವ್ಯವಹರಿಸಿರೆಂದೂ ನೆರೆದ ಭಕ್ತ ಜನರಿಗೆ ತಮ್ಮ ಪವಿತ್ರ ವಾಣಿಯಿಂದ ನಾಲ್ಕು ಉಪದೇಶದ ಮಾತುಗಳನ್ನು ಹೇಳಿದರು.

ಇಲ್ಲಿಯ ಮಾಮಲೇದಾರ ರಾ॥ ದಿವೇಕರರಿಗೆ ವಿಜಾಪುರಕ್ಕೆ ವರ್ಗವಾಗಿದ್ದು ಅವರ ಸ್ಥಳದಲ್ಲಿ ರಾ॥ ಕುಮಾರರೆಂಬುವರು ಬಂದಿರುತ್ತಾರೆ.

ಶ್ರೀ ವಿಷ್ಣು ದೇವರ ಗುಡಿಯಲ್ಲಿ ನವರಾತ್ರಿಯೊಳಗೆ ಭಜನೆ ಸಪ್ತಾಹ ನಡೆದು ಶು॥ ಅಷ್ಟಮಿಯ ದಿನ ಮಂಗಲವಾಯಿತು. ಸಪ್ತಾಹದ ಕಾಲಕ್ಕೆ ಮಕ್ಕಳ ಕೋಲಾಟ, ಲೇಝಿಮ ವಗೈರೆ ಉಪಾಂಗ ಕಾರ್ಯಕ್ರಮಗಳೂ ನಡೆದಿದ್ದವು.

ವಿಜಯಾ ದಶಮಿಯ ದಿನ ಶ್ರೀ ಮಾರೀಗುಡಿಯ ಎದುರಿಗಿರುವ ಪಟಾಂಗಣದಲ್ಲಿ ಶ್ರೀ ದೇವರ ಭಂಡಾರದ ಅವ್ಯವಸ್ಥೆಯ ಕುರಿತು ಏನು ಉಪಾಯಯೋಜನೆ ಮಾಡಬಹುದೆಂಬದರ ಆಲೋಚನೆಯ ಬಗ್ಗೆ ಒಂದು ಜಾಹೀರ ಸಭೆ ಕೂಡಿತ್ತು. ರಾ॥ ಮುರಾರೀಯವರು ನೆರೆದ ಜನರಿಗೆ, ದೇವರ ಮೊಕ್ತೇಸರರು ಹೇಗೆ ಭಂಡಾರದ ಹಣವನ್ನು ತಮ್ಮ ತಮ್ಮೊಳಗೆ ಹಂಚಿಕೊಳ್ಳುತ್ತಾರೆಂಬದನ್ನೂ ದೇವರ ಲೆಕ್ಕದ ಮೇಲಾಗಲಿ ಆಸ್ತಿಯ ಮೇಲಾಗಲಿ ಯಾರದೇ ಅಂಕೆಯಿಲ್ಲವೆಂಬದನ್ನೂ ತಿಳಿಸಿ ಹೇಳಿದರು. ಮತ್ತು ಈ ಅವ್ಯವಸ್ಥೆಯನ್ನು ನಿವಾರಿಸಿ ಸುವ್ಯವಸ್ಥೆಯನ್ನು ಮಾಡಿಸಲು ಸಹಾಯ ಮಾಡಬೇಕಾಗಿ ಅರುಹಿದರು. ಈ ಸಭೆಗೆ ಬಂದ ಜನರಿಗೆ ಕೂತುಕೊಳ್ಳಲು ಬೇಕಾದ ಗುಡಾರಗಳನ್ನು ಸಭೆಯ ಚಾಲಕರು ಮೊಕ್ತೇಸರರ ಕಡೆಗೆ ಬೇಡಿದ್ದರಂತೆ. ಆದರೆ ಮೊಕ್ತೇಸರರು ಅವನ್ನು ಕೊಡಲೊಪ್ಪಲಿಲ್ಲವಂತೆ!

(ತಾ ೪-೧೦-೪೧) ಕಸಬಾ ಕನ್ನಡ ಶಾಲೆಯ ವಿದ್ಯಾರ್ಥಿಗಳು ಮೊನ್ನೆ ಶ್ರೀ ಮಾರೆಮ್ಮನವರ ಗುಡಿಯಲ್ಲಿ ಗಾಂಧಿ ಜಯಂತಿಯ ಉತ್ಸವವನ್ನು ಬಲು ವಿಜೃಂಭಣೆಯಿಂದ ಜರುಗಿಸಿದರು. ರಾ॥ ಸುಂದರರಾವ ಪಂಡಿತರು ಅಧ್ಯಕ್ಷತೆ ವಹಿಸಿದ್ದರು. ಮೊದಲು ವಿದ್ಯಾರ್ಥಿಗಳ ಆಟಪಾಟ, ಗಾಯನ-ವಾದನ, ಸ್ಪರ್ಧೆ ಮೊದಲಾದ ವಿವಿಧ ಕಾರ್ಯಕ್ರಮವಾದ ಮೇಲೆ ಶ್ರೀ॥ ಪಡವೀಡು ಕೃಷ್ಣರಾಯರ ಸ್ಫೂರ್ತಿದಾಯಕ ಭಾಷಣವಾಯಿತು. ರಾಯರು ಗಾಂಧಿಜಿಯವರ ತತ್ವಗಳನ್ನು ವಿಶದವಾಗಿ ವರ್ಣಿಸಿ, ಅವರ ಮಾರ್ಗದಿಂದಲೇ ಭಾರತ ಭೂಮಿಯ ಉದ್ಧಾರ-ಉತ್ಕರ್ಷಗಳಾಗುವವೆಂದು ತಮ್ಮ ಅಭಿಪ್ರಾಯ ವ್ಯಕ್ತಗೊಳಿಸಿದರು. ಅಧ್ಯಕ್ಷರು ಸಮಯೋಚಿತ ಸಮಾರೋಪ ಮಾತಲಾಗಿ, ಆಭಾರಮನ್ನಣೆ, ಹಾರಸಮರ್ಪಣೆ ಮೊದಲಾದವುಗಳಾಗಿ ಉತ್ಸವವು ಕೊನೆಗಂಡಿತು.

ತರುಣ ಸಂಘದಲ್ಲೂ ಶ್ರೀ॥ ಪಡವೀಡು ಕೃಷ್ಣರಾಯರ ಅಧ್ಯಕ್ಷತೆಯ ಕೆಳಗೆ ಗಾಂಧಿ-ಜಯಂತಿಯ ಉತ್ಸವವಾಯಿತು. "ವಿಶ್ವಕರ್ನಾಟಕ" ಪತ್ರಿಕೆಯ ಸಂಪಾದಕ ಶ್ರೀ॥ ತಿ. ತಾ. ಶರ್ಮರವರು ಮುಖ್ಯ ಭಾಷಣ ಮಾಡಿ ಗಾಂಧಿಜಿಯವರ ಜೀವನದ ಮಹಾತ್ಮೆಯನ್ನು ತಿಳಿಸಿ ಹೇಳಿದರು.

ಅಂಕೋಲಾ— (ತಾ. ೧-೧೦-೪೧) ಕಳೆದ ತಾ ೧೮ರಿಂದ ಇಲ್ಲಿ ಗಾಂಧಿ-ಜಯಂತಿ ಉತ್ಸವವು ನಡೆಯುತ್ತಿದೆ. ಕೊಂಗ್ರೆಸ್ಸಿಗರೂ, ಹರಿಜನ ಸೇವಕರೂ, ಹಿಂದೀ ಪ್ರೇಮಿಗಳೂ ಸಹಕಾರದಿಂದ ಉತ್ಸವದ ವಿವಿಧ ಕಾರ್ಯಕ್ರಮಗಳನ್ನು ನಡಿಸುತ್ತಿದ್ದಾರೆ. ಪ್ರಭಾತ ಫೇರಿ, ಧ್ವಜವಂದನ ಮುಂತಾದ ಕಾರ್ಯಕ್ರಮಗಳಂತೂ ಇವೆ. ಈ ಹೊರಗೆ ಕೆಲವು ದಿನ ಸೂತ್ರಯಜ್ಞ ನಡೆಯಿತು. ೭ ಮಂದಿ

ಜಾಹೀರ ನೋಟೀಸು.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ, ಲಿಮಿಟೆಡ್,

ಬ್ರೆಂಚ— ಅಂಕೋಲಾ.

ಈ ಮೂಲಕ ತಿಳಿಸುವದೇನಂದರೆ:— ಈ ಕೆಳಗೆ ತೋರಿಸಿದವರು ನಮ್ಮ ಬೇಂಕಿನಲ್ಲಿ ಚಿನ್ನದ ದಾಗಿನೆಗಳ ಮೇಲೆ ಪಡೆದ ಸಾಲಗಳ ಅಸಲು ಮತ್ತು ಅವುಗಳ ಮೇಲಿನ ಬಡ್ಡಿ ಹಣ ಬೇಂಕಿಗೆ ವಾಯಿದೆಗೆ ವಸೂಲ ಬರದೇ ಇದ್ದ ಕಾರಣ, ಅವರು ತಾರೀಕು ***14—10—1941***ನೇ ಮಂಗಳವಾರ ಅಪರಾಹ್ಣ ಘಂಟೆ ***4***ರ ಒಳಗೆ ವಸೂಲ ಕೊಡದೆ ಇದ್ದಲ್ಲಿ, ಸದರಿ ಸಾಲದ ಭದ್ರತೆಯ ಬಗ್ಗೆ ಸದ್ರಿಯವರು ಬೇಂಕಿನಲ್ಲಿ ಒತ್ತೆ ಇಟ್ಟ ನಗಗಳನ್ನು ತಾರೀಕು ***18—10—1941***ನೇ ಶನಿವಾರ ಬೆಳಿಗ್ಗೆ ***10*** ಘಂಟೆಗೆ ಬೇಂಕಿನ ಆಫೀಸಿನಲ್ಲಿ ಏಲಂ ಯಾ [illegible] ಮಾಡಲಾಗುವದು.

J. L. No 82/40 Shaik Hassan
Shaik Ibrahim
Tadri Rs 5-0-0
J. L. No 111/40 Damodar Govind
Pai, Ankola
Rs. 100-0-0

ಅಂಕೋಲಾ.
ತಾ. 29-9-41

N. R. HEGDE,
Agent

ಹೆಣ್ಣುಮಕ್ಕಳ ಸಹಿತ ೩೦ ಜನರಿಗೆ ನೂಲಲು ಕಲಿಸಲಾಯಿತು. ೮ ದಿನಗಳಲ್ಲಿ ೬೯ ಸಾವಿರ ಗಜ ನೂಲು ತಯಾರಾಗಿದೆಯಂತೆ. ತಾ. ೨೪ಕ್ಕೆ ನೂಲುವ ಸಪ್ತಾಹದ ಮಂಗಳವಾಯಿತು. ಮಂಗಳದ ಸಭೆಯಲ್ಲಿ ಸ್ತ್ರೀಯರೂ ಮಕ್ಕಳೂ ಪುರುಷರೂ ಒಟ್ಟಿಗೆ ಸೇರಿ ನೂಲುವ ನೋಟ ನಯನ ಮನೋಹರವಿತ್ತು. ರಾ॥ ತಿ. ಶ್ರೀ. ನಾಯಕರು ಅಂದು ಒಂದು ಬೋಧಪರ ಭಾಷಣ ಮಾಡಿ, ಇಂದಿನ ಸತ್ಯಾಗ್ರಹದ ಸಂಗ್ರಾಮದಲ್ಲಿ ರಾಟೆಯ ಸ್ಥಾನವೆಲ್ಲಿ ಎಂಬದನ್ನು ತಿಳಿಸಿ ಹೇಳಿದರು. ತಾ ೨೧-೨೨-೨೩ನೇಗೆ ಸ್ವಯಂಸೇವಕರೂ ಸೇವಿಕೆಗಳೂ ಊರಲ್ಲಿ ಭಜನೆ ಮಾಡುತ್ತ ಹರಿಜನ ವಿದ್ಯಾರ್ಥಿನಿಲಯದ ಬಗ್ಗೆ ಭಿಕ್ಷೆಯನ್ನು ಕಲೆ ಹಾಕಿದರು. ನಗದಿಯಿಂದಲೂ ಅಕ್ಕಿ ಕಾಯಿಗಳ ರೂಪದಿಂದಲೂ ಸುಮಾರು ರೂ ೬೦ ವಸೂಲಾಗಿವೆ.

ಎಡವರ್ಡ ಹಾಯಸ್ಕೂಲಿನ ವಿದ್ಯಾರ್ಥಿಗಳ ಶಾರದಾ ಪೂಜೆಯ ಉತ್ಸವ ಒಳ್ಳೇ ವಿಜೃಂಭಣೆಯಿಂದ ನೆರವೇರಿತು. ಶುಕ್ರವಾರ ತಾ. ೨೬ನೇಗೆ 'ಮೈಸೂರಿನ ಹುಲಿ' ಎಂಬ ನಾಟಕವನ್ನು ಹುಡುಗರೇ ಅಭಿನಯಿಸಿದ್ದರು. ಜನರ ಆಗ್ರಹವಿರುವದರಿಂದ ನಾಳೆ ಗಾಂಧಿ ಜಯಂತಿಯ ದಿನ ಮತ್ತೊಮ್ಮೆ ಆ ನಾಟಕದ ಪ್ರಯೋಗವಾಗುವದು. ನಾಟಕವಲ್ಲ ಒಳ್ಳೇ ಅಭಿನಯ, ರಮಣೀಯ ಹಾಸ್ಯ ಹಾಗೂ ಸುಶ್ರಾವ್ಯ ಸಂಗೀತ ಮಾಡಿದ ಕುಮಾರ ಬಿ ಜಿ ಪೈ, ಎಸ್ ಎನ್ ಭಟ್ಟ ಮತ್ತು ಎಸ್ ಟಿ ಪಾಟೀಲರ ಇವರಿಗೆ ಪ್ರೇಕ್ಷಕರಿಂದ ಬಹುಮಾನಗಳು ದೊರಿತಿವೆ.

ಹುಬ್ಬಳ್ಳಿಯಿಂದ ಧಾರವಾಡ-ಕೆನರಾ ಮೋಟಾರ ಯೂನಿಯನ್ನಿನ ಕಾರ್ಯದರ್ಶಿಗಳು ತಿಳಿಸುತ್ತಾರೆ:— ಗೋಕರ್ಣ ಮತ್ತು ಹುಬ್ಬಳ್ಳಿಗಳ ನಡುವೆ ೩ ಒಂಟಿ (Single) ಓಡಾಟ ಮಾಡಲಿಕ್ಕೆ ನಮಗೆ ಪರವಾನೆಯುಂಟು. ಆದರೆ ಪೆಟ್ರೋಲ ಸೀಮಿತ ಅಧಿಕಾರಿಗಳು ಸಾಕಷ್ಟು ಪೆಟ್ರೋಲ ಮಂಜೂರ ಮಾಡದ್ದರಿಂದ ನಾವು ಈ ಓಡಾಟವನ್ನು ನಿಲ್ಲಿಸಬೇಕಾಗಿದೆ. ಈಗ ಈ ಅಧಿಕಾರಿಗಳು ಕೊಟ್ಟ ಪೆಟ್ರೋಲು ಹುಬ್ಬಳ್ಳಿ-ಯಲ್ಲಾಪುರ ಓಡಾಟಕ್ಕಷ್ಟೇ ಸಾಲುತ್ತಿದೆ. ಹೆಚ್ಚಿನ ಪೆಟ್ರೋಲ ದೊರೆತರೆ ಗೋಕರ್ಣದ ತನಕ ಒಂದು ಗಾಡಿಯನ್ನಾದರೂ ನಾವು ನಡಿಸಲು ಸಿದ್ಧರಿದ್ದೇವೆ. ಇತ್ಯಾದಿ

ಕಾರವಾರ— (೪-೧೦-೪೧) ಕಳೆದ ವಾರದ 'ವೃತ್ತ'ದಲ್ಲಿ ಕಾರವಾರ ಅರ್ಬನ ಸಹಕಾರಿ ಬ್ಯಾಂಕಿನ ಮಹಾಸಭೆಯ ಕುರಿತು ಬಂದ ಸುದ್ದಿಯಲ್ಲಿ ಕೆಲವು ತಪ್ಪು ತಿಳುವಳಿಕೆಯನ್ನುಂಟು ಮಾಡುವ ಸಂಗತಿಗಳಿವೆ. ಅವನ್ನು ತಿದ್ದಬೇಕಾಗಿ ಶ್ರಯಸ್ಥರೊಬ್ಬರು ತಿಳಿಸುತ್ತಾರೆ. ೩೦ನೆಯ ದಿನ ಸಭೆ ಕರೆದದ್ದು ತಪ್ಪೆಂದೂ ಬ್ರಾಹ್ಮಣೇತರ ಸದಸ್ಯರಿಗೆ ಅನನುಕೂಲವಿದ್ದ ದಿನ ಸಭೆ ಕರೆಯಬಾರದಿತ್ತೆಂದೂ 'ವೃತ್ತ'ದ ಸುದ್ದಿಗಾರರು ಧ್ವನಿಸಿದ್ದಾರಷ್ಟೇ. ಆದರೆ ೩೦ನೆಯ ದಿನ ಸಭೆಯಿಡಬೇಕೆಂದು ಠರಾಯಿಸಿದ ಕಾರ್ಯಕಾರಿ ಮಂಡಳದಲ್ಲಿ ಬ್ರಾಹ್ಮಣೇತರ ಸದಸ್ಯರೇ ಬಹುಸಂಖ್ಯಾಕರಿದ್ದರೆಂತಲೂ ಅವರೇ ದಿನದ ನಿರ್ಣಯ ಮಾಡಿದ್ದರೆಂತಲೂ ಶ್ರಯಸ್ಥರು ತಿಳಿಸುತ್ತಾರೆ. ಮೇಲಾಗಿ ಸಭೆಯ ಪೂರ್ವದಲ್ಲಾಗಲಿ ಪ್ರತ್ಯಕ್ಷ ಸಭೆಯಲ್ಲಾಗಲಿ ಯಾರೂ ಈ ಆಕ್ಷೇಪವನ್ನೆತ್ತಿ ಸಭೆಯನ್ನು ಮುಂದೂಡಿಕೊಳ್ಳಲಿಕ್ಕೆ ಪ್ರಯತ್ನಿಸದಿದ್ದಾಗ ಆ ಆಕ್ಷೇಪವನ್ನು ಸುದ್ದಿಗಾರರು 'ವೃತ್ತ'ದಲ್ಲೇ ಮೊದಲು ಬಾರಿ ಮುಂದೂಡಿದ್ದು ಕೇವಲ ಅನುಚಿತವೆಂದು ಅವರ ಅಭಿಪ್ರಾಯವಿದೆ. ಎರಡನೇ ಸಂಗತಿಯೆಂದರೆ ರಾ॥ ಸಾ॥ ತೇಲಂಗರವರು ರಾ॥ ಡಿ. ಬಿ ನಾಡಕರ್ಣಿಯವರ ಅರ್ಜಿಯನ್ನು ಪುರಸ್ಕರಿಸಿದರೆಂಬ ಸಂಗತಿ ನಿಜವಲ್ಲವಂತೆ. ಸಭಿಕರ ಆಗ್ರಹವಾದ್ದರಿಂದ ರಾವಸಾಹೇಬರು ಇಂಗ್ಲಿಷದಲ್ಲಿದ್ದ ಅರ್ಜಿಯನ್ನು ಕೊಂಕಣಿಯಲ್ಲಿ ಅನುವಾದಿಸಿ ತಿಳಿಸಿಹೇಳಿದ್ದರಂತೆ. ಹೀಗೆ ಹೇಳುವಾಗಲೂ ಕೂಡ ತಾವು ಈ ಅರ್ಜಿಯನ್ನು ಪುರಸ್ಕರಿಸುತ್ತೇನೆಂದು ತಿಳಿಯಬಾರದೆಂದು ಅವರು ಸ್ಪಷ್ಟಪಡಿಸಿದ್ದರಾಗಿ ಶ್ರಯಸ್ಥರು ತಿಳಿಸುತ್ತಾರೆ. ಬ್ಯಾಂಕಿನ ನಿಯಮಗಳಂತೆ ಸದರ ಅರ್ಜಿಯನ್ನು ಮನ್ನಿಸಬರದಿದ್ದರೆ ತಾವು ಅದನ್ನು ಎಂದೂ ಎತ್ತಿ ಹಿಡಿಯಲಿಕ್ಕಿಲ್ಲವಾಗಿಯೂ ಅವರು ನುಡಿದಿದ್ದರಂತೆ. ಕೊನೆಗೆ ದೈವಜ್ಞ ಬಾಂಧವರು ತಮ್ಮ ಅರ್ಜಿಯನ್ನು ಏನೇನೂ ಪೂರ್ವಸೂಚನೆ ಕೊಡದೆ ಸಭೆಯ ಮುಂದಿಟ್ಟಿದ್ದರಿಂದಲೂ, ಬ್ಯಾಂಕಿನ ಕಾರ್ಯವಾಹಕ ಮಂಡಳದವರು ಅರ್ಜಿಯ ವಿಚಾರ ಹಿಂದೆಯೇ ಮಾಡಿದ್ದಾರೆಂದು ತಿಳಿದು ಬಂದದ್ದರಿಂದಲೂ ಆ ಅರ್ಜಿಯ ವಿಚಾರವಾಗಲಿಲ್ಲವಾಗಿ ಶ್ರಯಸ್ಥರು ಹೇಳುತ್ತಾರೆ.

ಮೊನ್ನೆ ಗುರುವಾರ ಹಿಂದೀ ಪ್ರಚಾರ ಸಭೆ, ಕೊಂಕಣಿ ಪರಿಷತ್ತು ಮತ್ತು ಭಾರತೀ ಸಮ್ಮೇಲನದ ಪರವಾಗಿ ಮಲ್ಲಾಪುರಕರರ ಮಾಳಿಗೆಯ ಮೇಲೆ ರಾ॥ ಮಾಧವ ದಾನಭಾಗ ವಕೀಲ ಇವರ ಅಧ್ಯಕ್ಷತೆಯಲ್ಲಿ ಗಾಂಧಿ-ಜಯಂತಿಯ ನಿಮಿತ್ತ ಸಭೆಯಾಯಿತು. ರಾ॥ ವೆಂಕಟೇಶ ಪ್ರಭುರವರು ಮಹಾತ್ಮರ ಮೇಲೆ ತಾವು ರಚಿಸಿದ ಕೊಂಕಣಿ ಪದ್ಯವನ್ನು ಹಾಡಿ ತೋರಿಸಿದರು. ಒಬ್ಬ ಹುಡುಗಿಯು ಸರಾಯಿಯ ಮೇಲಿನ ಒಂದು ಹಿಂದೀ ಪದ್ಯವನ್ನು ಹಾಡಿದಳು. ಆ ಮೇಲೆ ಮಹಾತ್ಮರಿಗೆ ಚಿರಾಯುರಾರೋಗ್ಯವನ್ನಿತ್ತು ಸಲಹಲು ದೇವರಿಗೆ ಪ್ರಾರ್ಥನೆ ಮಾಡುವ ಗೊತ್ತುವಳಿಯನ್ನು ರಾ॥ ಸಿ. ಎಸ್. ಕಾಮತ ವಕೀಲರು ಸೂಚಿಸಿದರು. ಸೂಚನೆ ಸರ್ವಾನುಮತದಿಂದ ಸ್ವೀಕೃತವಾಯಿತು. ಅಧ್ಯಕ್ಷರೂ ರಾ॥ ಡಿ ಬಿ. ನಾಡಕರ್ಣಿಯವರೂ ಕೊನೆಗೆ ಕೊಂಕಣಿಯಲ್ಲಿ ಭಾಷಣಗಳನ್ನು ಮಾಡಿ ಗಾಂಧಿ ಜಯಂತಿಯ ಮಹತ್ವವನ್ನೂ, ಗಾಂಧೀಜಿಯವರ ಕಾರ್ಯದ ವಿಶಾಲ ಸ್ವರೂಪವನ್ನೂ ತಿಳಿಸಿ ಹೇಳಿದರು. ಅಧ್ಯಕ್ಷರು ರಾಷ್ಟ್ರಭಾಷೆಯಾದ ಹಿಂದೀ ಭಾಷೆಯನ್ನು ಕಲಿಯಬೇಕಾದ್ದರ ಮಹತ್ವವನ್ನೂ ತಿಳಿಸಿ ಹೇಳಿ ಕೊಂಕಣಿಗರಿಗೆ ಹಿಂದೀ ಕಲಿಯಲು ಕಷ್ಟವಾಗುವದಿಲ್ಲೆಂದು ಅಭಿಪ್ರಾಯಪಟ್ಟರು. ಸಭೆಯ ಬಹುತೇಕ ಎಲ್ಲ ಕೆಲಸವು ಕೊಂಕಣಿಯಿಂದಲೇ ಸಾಗಿತ್ತು.

ಕಳೆದ ಮಂಗಳವಾರ ದಸರೆಹಬ್ಬದ ದಿನ ಮುಂಜಾನೆ ರಾ॥ ಕಾಮತ ವಕೀಲರ ಅಧ್ಯಕ್ಷತೆಯಲ್ಲಿ ಕಲ್ಬಾದೇವಿಯೊಳಗೆ ಸಭೆಯಾಗಿ ಹನುಮಾನ ವ್ಯಾಯಾಮಶಾಲೆ ತೆರೆಯಲ್ಪಟ್ಟಿತು. ಸ್ವಾಗತಪದ ಮತ್ತು ಪ್ರಾಸ್ತಾವಿಕ ವಿಧಿಗಳಾದ ಮೇಲೆ ಅಧ್ಯಕ್ಷರು ಶಾಲೆಯನ್ನು ತೆರೆದು ಅದು ಚಿರಾಯುವಾಗಿ ಬಾಳಲೆಂದೂ ಹಾರೈಸಿದರು. ಕಾರವಾರ ಹಾಯಸ್ಕೂಲಿನ ಶಿಕ್ಷಕರಾದ ರಾ॥ ಎಮ್. ಎಚ್ ನಾಯಕರವರೂ ಒಂದು ಭಾಷಣ ಮಾಡಿ ಈ ಹೊಸ ಶಾಲೆಯು ವ್ಯಾಯಾಮ ವಿದ್ಯೆಯ ಜೊತೆಗೆ ಹುಡುಗರಿಗೆ ಬೌದ್ಧಿಕ ವಿದ್ಯೆಯನ್ನೂ ಕಲಿಸಲು ಸಹಾಯಕಾರಿಯಾಗಲೆಂದು ಆಶೆ ವ್ಯಕ್ತಗೊಳಿಸಿದರು. ಕೊನೆಗೆ ರಾಷ್ಟ್ರಗೀತೆ, ಮೇವಾಮಿಠಾಯಿಗಳಾಗಿ ಈ ಚಿಕ್ಕ ಸಮಾರಂಭ ಕೊನೆಗಂಡಿತು.

ಅರ್ಗೆ— (ತಾ. ೨-೧೦-೪೧) ಇಲ್ಲಿಯ ಕನ್ನಡ ಶಾಲೆಯ ಕಟ್ಟಡ ಬಹಳ ಜೀರ್ಣವಾಗಿದೆ. ಜನರು ಸರಕಾರಿ ಸಹಾಯದಿಂದ ಹೊಸದೊಂದು ಇಮಾರತು ಕಟ್ಟುವ ವ್ಯವಸ್ಥೆ ಮಾಡಿದ್ದಾರೆ

ಶಾಲೆಯಲ್ಲಿ ಈ ವರ್ಷ 'ನಾಡಹಬ್ಬ' ಆಚರಿಸಲ್ಪಟ್ಟಿತು. ಶಾಲೆಯ ಮುಖ್ಯಾಧ್ಯಾಪಕ ರಾ॥ ಎಸ್. ಜೀ ಶೇಣ್ವಿಯವರ ನೇತೃತ್ವದಲ್ಲಿ ವಿದ್ಯಾರ್ಥಿಗಳೇ ಎಲ್ಲ ವ್ಯವಸ್ಥೆ ಮಾಡಿದ್ದರು. ಮೊನ್ನೆ ದಸರೆಹಬ್ಬದ ದಿನ ಹುಡುಗರು ತಮ್ಮ ಶಿಕ್ಷಕರು ರಚಿಸಿದ "ಸಾವಿತ್ರೀ ಸತ್ಯವಾನ" ಎಂಬ ಹೊಸ ನಾಟಕವನ್ನೂ ಯಶಸ್ವಿಯಾಗಿ ಅಭಿನಯಿಸಿ ತೋರಿಸಿದರು

ಯಲ್ಲಾಪುರ— (ತಾ. ೩-೧೦-೪೧) ತಾರೀಖು ೨೮-೭-೪೧ರ "ವೃತ್ತ"ದಲ್ಲಿ ಜಿಲ್ಲಾ ಪೋಲಿಸ ಅಧಿಕಾರಿಗಳು ಕಾರವಾರದಿಂದ ಹಳಿಯಾಳಕ್ಕೆ ಹೋಗುವಾಗ ಯಲ್ಲಾಪುರದಲ್ಲಿ ಒಂದು ದಿನ ವಿಶ್ರಮಿಸಿದ್ದರೆಂತಲೂ, ಆ ಕಾಲದಲ್ಲಿ ಇಲ್ಲಿಯ ಕೆಲ ರೈತರು ಅವರನ್ನು ಕಾಣಹೋದಾಗ, ನಿಮ್ಮ ಬಳಿ ಮಾತಾಡಲು ತಮಗೆ ಅವಕಾಶವಿಲ್ಲೆಂದು ತಿರಸ್ಕಾರಬುದ್ಧಿಯಿಂದ ನುಡಿದಿದ್ದರಾಗಿಯೂ ಒಂದು ಸುದ್ದಿ ಪ್ರಕಟವಾಗಿತ್ತಷ್ಟೇ. ಆದರೆ ಹಿಂದಿನಿಂದ ಚೌಕಸಿ ಮಾಡಲಾಗಿ ಸದರಿ ಅಧಿಕಾರಿಗಳು ಹಾಗೇನೂ ನುಡಿದಿದ್ದಿಲ್ಲವಾಗಿಯೂ, ಅವರ ಮಾತಿನ ಸರಿಯಾದ ಅರ್ಥ ತಿಳಿಯದಿದ್ದ ಜನರ ಹೇಳಿಕೆಯ ಮೇಲೆ ವಿಶ್ವಾಸವಿಟ್ಟು ತಾವು ಆ ಸುದ್ದಿ ಕೊಟ್ಟಿದ್ದೆವೆಂತಲೂ, ಈ ಬಗ್ಗೆ ತಮಗೆ ವ್ಯಸನವಾಗುತ್ತದಾಗಿಯೂ "ವೃತ್ತ"ದ ಯಲ್ಲಾಪೂರ ಸುದ್ದಿಗಾರರು ಬರೆಯುತ್ತಾರೆ. ಮೇಲಿನಂತೆ ಒಬ್ಬ ಹೊಣೆಗಾರ ಅಧಿಕಾರಿಯ ಬಗ್ಗೆ ತಪ್ಪು ತಿಳುವಳಿಕೆಯುಂಟುಮಾಡಲು ಪರ್ಯಾಯದಿಂದ ಕಾರಣವಾದ ಬಗ್ಗೆ "ವೃತ್ತ"ವೂ ವ್ಯಸನಪಡುತ್ತದೆ

ಮೊನ್ನೆ ದಸರೆಹಬ್ಬದ ದಿನ ಊರ ಪ್ರಮುಖರೂ ಕೆಲವು ರೈತ ಬಾಂಧವರೂ ರಾ॥ ಮಂತ್ರಿಯವರ ಮನೆಯಲ್ಲಿ ಸಭೆ ಸೇರಿ ಒಂದು "ರೈತ ಸಂಘ"ವೆಂಬ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಈ ತಾಲೂಕಿನ ರೈತರ ಕಷ್ಟನಷ್ಟಗಳನ್ನು ಕಾಲಕಾಲಕ್ಕೆ ಸರಕಾರದ ಮುಂದಿಟ್ಟು ಯೋಗ್ಯ ಪರಿಹಾರ ದೊರಕಿಸಿ ಕೊಡುವದೇ ಸಂಘದ ಹೆಗ್ಗುರಿಯಾಗಿದೆ. ತಾಲೂಕಿನ ಸಕಲ ರೈತರು ಈ ಸಂಘದಲ್ಲಿ ಸೇರಿ ತಮ್ಮ ಹಿತಸಾಧಿಸಿಕೊಳ್ಳಬೇಕಾಗಿ ಸೂಚನೆಯಿದೆ

ಹಿಟ್ಲರನ ದರ್ಪೋಕ್ತಿ !

(೩ನೇ ಪುಟದಿಂದ ಮುಂದುವರಿಸಿದ್ದು.)

ಹಾಗೆಯೇ ಮೊನ್ನೆ ಶನಿವಾರ ರಂಗೂನಕ್ಕೆ ಬಂದರು. ಅಲ್ಲಿ ಗವ್ಹರ್ನರರಿಗೆ ಭೆಟ್ಟಿಯಾಗಿ ಮುಂದೆ ಸಿಮ್ಲಾಕ್ಕೆ ಹೋಗಿ ಸರ್ವಾಧಿಪತಿಗಳೊಡನೆ ಆಲೋಚನೆ ಮಾಡುವರು. ರಂಗೂನಿನಲ್ಲಿ ಒಬ್ಬ ಜಪಾನಿಯನು ಪ್ರತಿಬಂಧ ಪ್ರದೇಶದಲ್ಲಿ ಪ್ರವೇಶಿಸಿದ ಬಗ್ಗೆ ರಾಜ್ಯರಕ್ಷಣ ಕಾನೂನಿನನ್ವಯ ಖಟ್ಲೆ ನಡೆದು ಆತಗೆ ೧ ದಿನದ ಶಿಕ್ಷೆ, ರೂ. ೧೦೦ ದಂಡ ವಿಧಿಸೋಣಾದೆ! ಜಪಾನಿಯರು ಈಗ ಗುಪ್ತಚಾರರಾಗಿ ಪರಿಣಮಿಸಹತ್ತಿದ್ದಾರೆ! ಹೀಗೆ ಜಪಾನದ ರಾಜಕಾರಣವು ದಿನ ಹೋದ ಹಾಗೆ ಉಗ್ರರೂಪವನ್ನು ತಾಳತೊಡಗಿದೆ. ಚೀನಿಯರಂತು ಜಪಾನದ ಕಡು ವೈರಿಗಳು ! ಚೀನದ ಹೊನಾನ ಪ್ರಾಂತದಲ್ಲಿ ನಿಕರದಿಂದ ಹೋರಾಟ ನಡೆದಿದೆ. ಹೊನಾನ ಪ್ರಾಂತದ ರಾಜಧಾನಿಯಾದ ಚಾಂಗಶಾ ಪಟ್ಟಣವನ್ನೂ, ಅಲ್ಲಿಂದ ೩೦ ಮೈಲು ದೂರವಿದ್ದ ಚುಚೊ ಉಗಿಬಂಡಿ ಕೇಂದ್ರವನ್ನೂ ಜಪಾನಿಯರು ವಶಮಾಡಿಕೊಂಡರು. ಆದರೆ ಈ ವಿಜಯವೇ ಜಪಾನಿಯರಿಗೆ ಅಪಜಯವಾಗಿ ಪರಿಣಮಿಸಿತು ಚೀನಿಯರು ಹಿಂಬದಿಯಿಂದ ಜಪಾನಿಯರ ಮೇಲೆ ಸಾಗಿಹೋಗಿ ಮಿಲೊ ಮತ್ತು ಲೊಟೋ ನದಿಗಳ ನಡುವೆ ೧ ಲಕ್ಷ ಜಪಾನಿಯರನ್ನು ಹಿಡಿದು ನಿಲ್ಲಿಸಿದ್ದಾರೆ!! ಚೀನ-ಜಪಾನ ಯುದ್ಧದಲ್ಲಿ ಜಪಾನಿಯರು ಗೆಲ್ಲುತ್ತಿದ್ದಾರೆ ಚೀನಿಯರೂ ಗೆಲ್ಲುತ್ತಿದ್ದಾರೆ ! ಯಾಪ್ರೆಚ್ಚು, ಯಾರು ಕಡಿಮೆಯೆಂದು ಹೇಳುವದು ದುರ್ಘಟವಾದದ್ದು. ಆದರೆ ಚೀನದೊಳಗೆ ಯುದ್ಧ ನಡೆಯುವ ತನಕ ಜಪಾನ ದೇಶಕ್ಕೆ ಬಲ ಕಡಿಮೆ! ಯಾವದೊಂದು ಪ್ರಕಾರದಿಂದ ಉಗ್ರರೂಪ ತಾಳಲು ಜಪಾನ ಸರಕಾರಕ್ಕೆ ಸಾಧ್ಯವಿಲ್ಲ. ರುಶ್ಯದ ಮೇಲೆ ದಂಡೆತ್ತಿಕೊಂಡು ಹೋಗಲು ಜರ್ಮನರು ಜಪಾನದ ಮೇಲೆ ಒತ್ತಾಯ ಮಾಡುತ್ತಿದ್ದಾರಾಗಿ ಶಾಂಘಾಯದೊಳಗಿನ 'ಚೀನ ವೃತ್ತ' ಪತ್ರಿಕೆಯ ವಾರ್ತೆ. ಆದರೆ ಚೀನ ಯುದ್ಧಕ್ಕೆ ಗೌಣಸ್ಥಾನ ಬರುವಂಥ ಯಾವದೇ ಕ್ರಮ ಕೈಕೊಳ್ಳಲು ಚೀನ ಸರಕಾರವು ಒಪ್ಪುವದಿಲ್ಲವಂತೆ. ಚೀನದೇಶವನ್ನು ಪಾದಾಕ್ರಾಂತ ಮಾಡುವದೇ ಜಪಾನ ದೇಶದ ಮುಖ್ಯೋದ್ದೇಶವೆಂದು ಜಪಾನದ ಕೊನೊಯಿ ಮಂತ್ರಿ ಮಂಡಳದ ಅಭಿಪ್ರಾಯವಿರುವದಂತೆ. ಆದರೆ ಸೈನ್ಯಾಧಿಕಾರಿಗಳೂ ನೌಕಾಧಿಕಾರಿಗಳೂ ಜರ್ಮನ ಗುಪ್ತ ಚಾರರ ಮೋಹಪಾಶಕ್ಕೆ ಬಲಿಬಿದ್ದು ಜಪಾನ ಸರಕಾರವನ್ನು ರುಶ್ಯದ ಮೇಲೆ ಸಾಗಿಹೋಗಲು ದುಷ್ಪ್ರೇರಣೆ ಕೊಡುತ್ತಾರಾಗಿ 'ಚೀನ ವೃತ್ತ' ಪತ್ರಿಕೆಯ ವಾರ್ತೆ. ಜಪಾನದ ಯುದ್ಧ ಪ್ರವೇಶ ಪ್ರಾಮುಖ್ಯವಾಗಿ ಚೀನ ಯುದ್ಧದ ಮೇಲೆಯೇ ಅವಲಂಬಿಸಿಕೊಂಡಿದೆ. ಆದರೆ ಜಪಾನ ಮಂತ್ರಿ ಮಂಡಳವೂ ಸೈನ್ಯಾಧಿಕಾರಿಗಳೂ ವಿವಾದ ಮಾಡಿಕೊಂಡು, ಸೈನ್ಯಾಧಿಕಾರಿಗಳ ಧೋರಣವೇ ನಿರ್ಣಾಯಕವಾಗುವದೆಂದು ನನಗೆ ಭೀತಿಯುಟಾಗಿದೆ. ಆದಾಗ್ಯೂ ನವಂಬರ ತಿಂಗಳ ತನಕ ಜಪಾನವು ಯುದ್ಧ ಘೋಷಣೆ ಮಾಡಲಿಕ್ಕಿಲ್ಲವಾಗಿ ನನ್ನ ಎಣಿಕೆ. ಯಾಕೆಂದರೆ ಈ ಹೊತ್ತು ಮುಂಬಯಿಗೆ ಬರುವ 'ಹಿಯಾಮಾರು' ಹಡಗ ನವಂಬರ ೧ ನೇ ತಾರೀಖಿಗೆ ಮುಂಬಯಿಯಿಂದ ಹೊರಡುವದಿದೆ. ಆ ತನಕ ಅವಕಾಶವುಂಟು, ನೀವು ಎಲ್ಲ ಘಟನೆಗಳನ್ನು ನಿರೀಕ್ಷಿಸುತ್ತಿರಿರಿ, ಆದೇಸಮಯ ಕ್ರಿಮಿಯಾ ದ್ವೀಪಕಲ್ಪದ ಯುದ್ಧ ಮರೆಯಬೇಡಿ !

— ಈ ಕನಕ ರಂಗೂನ ಅಕ್ಕಿಯ ರಫ್ತಿನ ವ್ಯಾಪಾರವು ರಂಗೂನದಲ್ಲಿರುವ ಹಿಂದೀ ಬ್ರಹ್ಮೀ ಮತ್ತು ಯುರೋಪಿಯನ್ ವ್ಯಾಪಾರಿಗಳ ಕೈಯಲ್ಲಿತ್ತು. ಅದನ್ನು ಈಗ ಬ್ರಹ್ಮದೇಶದ ಸರಕಾರವು ತನ್ನ ಸ್ವಂತ ಕೈಯಲ್ಲಿ ತಕ್ಕೊಳ್ಳಬೇಕೆಂದು ನಿರ್ಧರಿಸಿದೆ। ಬ್ರಹ್ಮೀ ರೈತರ ಹಿತರಕ್ಷಣೆ ಮಾಡುವದಕ್ಕಾಗಿಯೇ ತಾವು ಹೀಗೆ ಮಾಡಬೇಕಾಗಿದೆಯೆಂದು ಆ ಸರಕಾರದ ಅಂಬೋಣ. ಹೀಗಿದ್ದಾಗ್ಯೂ ಇನ್ನು ಮುಂದೆ ಬ್ರಹ್ಮೀ ಸರಕಾರದ ಈ ಅಕ್ಕಿಯ ವ್ಯಾಪಾರದಿಂದ ಹಿಂದುಸ್ಥಾನದಲ್ಲಿ ರಂಗೂನ ಅಕ್ಕಿ ತುಟ್ಟಿಯಾಗುವದೆಂಬ ಮಾತು ಮಾತ್ರ ನಿಶ್ಚಿತವಿದ್ದು।

ಜ್ವರಕ್ಕೆ
ಉಪಯೋಗಿಸಿರಿ

ಸಹ್ಯಾದ್ರಿ ಫಾರ್ಮಸಿ
ಕುಮಟಾ.

ಬಾಳಂತಿಯರಿಗೆ— ಕಸ್ತೂರಿ ಮಿಶ್ರಣ ದಶಮೂಲಾರಿಷ್ಟ ಮತ್ತು ಧನ್ವಂತರಿ ಗುಳಿಗೆ ಒಳ್ಳೇ ಉಪಯುಕ್ತವಾದವು।

ಚಿಕ್ಕ ಮಕ್ಕಳ ಜಂತುವಿನ ಬಾಧೆಗೆ ಪುಷ್ಟಿಯಾಗಲಿಕ್ಕೂ ಸಾಯರಜ ಕಷಾಯ ಒಂದೇ ದಿವ್ಯವಾದ ಔಷಧವು।

ನಾಯಿ-ಕೆಮ್ಮಿಗೆ ಎಂಟೇ ದಿವಸಗಳಲ್ಲಿ ಗುಣಪಡಿಸುವ ಕಫನಾಶಕವು

ಯಾವತ್ತೂ ಪ್ರಕಾರಗಳ
ಕಷಾಯ, ಅರಿಷ್ಟ, ಆಸವ,
ತೈಲಾದಿ ಔಷಧ ಸಾಮುಗ್ರಿಗಳು
ಸದಾ ಸಿಗುತ್ತವೆ

ಡಾ॥ ಎನ್. ಕೇ. ಭಟ್ಟ,
ಹಳ್ದಿಪುರ, ಕುಮಟಾ.

ಹೈಸ್ಕೂಲುಗಳಿಗೆ ಬೇಕಾಗುವ ಎಲ್ಲ ತರದ
ಇಂಗ್ಲಿಷ-ಸಂಸ್ಕೃತ-ಕನ್ನಡ-ಮರಾಠಿ
ಪುಸ್ತಕಗಳು ನಮ್ಮಲ್ಲಿ ಸಿಗುತ್ತವೆ

ನಮಗೆ ಬೇಕಾಗುವ ಪುಸ್ತಕಗಳನ್ನು ಇಂದೇ ಕೊಂಡುಕೊಳ್ಳಿ [illegible] ಪ್ರಾಥಮಿಕ ಶಾಲೆಗಳಿಗೆ ಬೇಕಾಗುವ ಎಲ್ಲ ಕನ್ನಡ ಮರಾಠಿ ಪುಸ್ತಕಗಳೂ ಸ್ಲೇಟು ದೊರೆಯುವವು [illegible] ಪುಸ್ತಕ ಬೇಕಾದರೆ ನಮ್ಮಲ್ಲಿ [illegible]

ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ

ಮಾತೃಪುಷ್ಟಿ ಲೇಹ. (ಸುವರ್ಣ, ಸಾಲಾಮಿಶ್ರಿ ಕಲ್ಪದ ಮಿಶ್ರ) ನಷ್ಟವಾಗಿರುವ ಪುರುಷತ್ವವನ್ನು ಪುನಃ ಕಲ್ಪಿಸಿಕೊಡುವ ಅತ್ಯುತ್ತಮ ಶಕ್ತಿದಾಯಕ ಔಷಧಿ ಮಾನಸಿಕ ಮತ್ತು ಕಾಯಶಕ್ತಿಗಳನ್ನು ಹೆಚ್ಚಿಸಿ ಆರೋಗ್ಯ ಇಂದ್ರಿಯಶಕ್ತಿ ಇವೇ ಮೊದಲಾದವುಗಳನ್ನು ಕಲ್ಪಿಸಿಕೊಡುವದು ಬಾಟ್ಲಿ ೧ಕ್ಕೆ 2—8—0

ಕಸ್ತೂರಿ ಮಿಶ್ರಣ ದಶಮೂಲ. ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ ಬಾಟ್ಲಿ ೧ಕ್ಕೆ ರೂ 1—8—0

ಮಲೇರಿಯಾ ನಿವಾರಿಣಿ. ಮಲೇರಿಯಾ ಜ್ವರ, ಚಳಿಜ್ವರ, ಇನ್‌ಫ್ಲುಯೆಂಝಾ, ಮಲಬದ್ಧತೆ ಇವುಗಳಿಗೆ ಪ್ರಸಿದ್ಧ ಔಷಧಿ ಬಾಟ್ಲಿ ೧ಕ್ಕೆ ರೂ 0—13—0

ಸ್ಪ್ಲೀನ ಮಿಕ್ಶ್ಚರ. ಜ್ವರಗಡ್ಡೆಯನ್ನು ಕರಗಿಸುವ ದಿವ್ಯೌಷಧಿ ಬಾಟ್ಲಿ ೧ಕ್ಕೆ ರೂ 1-2-0

ಎಮ್. ಗಣಪಯ್ಯ ಎಂಡ್ ಸನ್ಸ್, ರಥಬೀದಿ ನಂಬ್ರ 5, ಮಂಗಳೂರು. ದ. ಕ

ದೊರೆಯುವ ಸ್ಥಳ — (1) ಸ್ವಸ್ತಿಕ ಫಾರ್ಮಸಿ, ಕುಮಟಾ (2) ಅಮೃತ ಸ್ಟೋರ್ಸ್, ಹೊನ್ನಾವರ, (3) [illegible] ಡಿಪೋ, [illegible] (4) ಕೆ ಗಣಪಯ್ಯ [illegible], ಮುರ್ಡೇಶ್ವರ, ಭಟಕಳ (5) [illegible] ಸ್ಟೋರ್ಸ ಕಂಪನಿ, 183, ಸುಪಾರಿಬಾಗ ಪರೇಲ, (6) ಜನರಲ್ ಸ್ಟೋರ್ಸ್, ಜಿ. ಬಿ. [illegible] ಸಿ, ಮಾಟುಂಗ, (7) ವ್ಯಾಸ [illegible] ಮಾರ್ಕೆಟ, ಕಾರವಾರ (8) [illegible] ಬ್ರದರ್ಸ ಸಿದ್ದಾಪುರ (9) [illegible] ಮೆಡಿಕಲ್ ಸ್ಟೋರ, ಗೋಕರ್ಣ, (10) ಎಸ್. ಎಲ್. [illegible] ಎಂಡ್ ಸನ್ಸ, ಬಡವರ ಔಷಧಿ ಅಂಗಡಿ, ಶಿರ್ಸಿ [ಕ್ಯಾಟಲಾಗಿಗೆ ಬರೆ]

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್,
ಸ್ಥಾಪನೆ 1908

ಈ ಕಂಪನಿಯು ಪೂರ್ಣ ಹಿಂದೀ ಇದ್ದು ಇದರ ಕಂತಿನ ದರಗಳೂ, ಶರ್ತುಗಳೂ ಬಹಳ [illegible] ವಿಮೆಯ ಹಣವು ಸರಕಾರಿ ಪ್ರಾಮಿಸರಿ ನೋಟುಗಳಲ್ಲಿಯೂ ಇಂಡಿಯನ [illegible] ಪೋರ್ಟ ಟ್ರಸ್ಟ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದರೆ ಸಿಗುವದು

Kumta Agents
D K Nayak Bros
K N Nayak
Honavar Agent
R V Prabhu

K. Padmanabha Rao & Sons,
BELGAUM
Chief Agents for
Karnatak Districts & S M States

ಚಕ್ರಬಿಂದು ಮಕ್ಕಳ ಮರಣವನ್ನು ತಪ್ಪಿಸುವದು.

ಏಜನ್ಸಿ ಕಲಕತ್ತಾ, ಮುಂಬಯಿ ಮದ್ರಾಸ ಬೆಂಗಳೂರು ಮಂಗಳೂರು
Spleen and Liver Enlargement for Children.
ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆದೊಡ್ಡಾಗುವಿಕೆ ಹಸುರು ನರಗಳು, ಕಾಮಿಲೆ
ಗಡ್ಡೆರೋಗ ಕೋಪೆ ರೋಗ ಮೈ-ಕೈ ಬಾವುಗಳಿಗೆ ದಿವ್ಯೌಷಧ।
೧ ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3



ಏತಕ್ಕೆ ಚಿಂತಿಸುವಿರಿ?
ಆಸೇತುಹಿಮಾಚಲದ ವರೆಗೂ ೪೦
ವರುಷಗಳಿಂದ ಖ್ಯಾತಿ ಪಡೆದಿರುವ
ಮಕ್ಕಳ ಪ್ಲೀಹ ಮತ್ತು ಲಿವ್ಹರ
ವೃದ್ಧಿರೋಗ ಇದೊಂದೆ
ರಾಜಔಷಧವಾಗಿದೆ
ಡಾ| ಎ ಎಸ್ ಶ್ರೀನಿವಾಸರಾವ,
ಚಿಲ್ಡ್ರನ್ ಸ್ಪೆಶಲಿಸ್ಟ
ಎಂ ವಿ [illegible]
ಶಿವಮೊಗ್ಗಾ
[illegible] ಇವರಲ್ಲಿ ಸಿಗುವದು
ಶಿರ್ಸಿ ಏಜಂಟ—
ಗಜಾನನ ಸೀತಾರಾಮ ಹೆಗಡೆ
ಕುಮಟಾ ಏಜಂಟ —
ದೇವಪ್ಪಾ ಅಣ್ಣಪ್ಪ ನಾಯ್ಕ

ಇದನ್ನು ಪಾಂಡುರಂಗ ಕೃಷ್ಣ [illegible] (ಪಂ[illegible] ದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B 1270.

Monday, 13th October, 1941.

ವರ್ಷ ೨೪

ಕಾನಡಾವೃತ್ತ

THE KANARA NEWS

ಸಂಚಿಕೆ ೧೫

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेंद्रैः ।
इति महति विरोधे वर्तमाने समाने नृपतिजनपदानां दुर्लभ कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0
ಮುನಿಯಾರ್ಡರಿನಿಂದ ರೂ 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-4-0
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಸ್ಮಾಲ ಟೈಪಿನ (೧೪ ಎಮ್ ಉದ್ದ) ೮ ಸಾಲುಗಳವರೆಗೆ ರೂ.1-8-0 ೮ ನಂತ್ರ ಪ್ರತಿಸಾಲಿಗೆ 0-3-0.

ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪಿನಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಬೇರೆ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

-*(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೩ ಮಾಹೆ ಅಕ್ಟೋಬರ ಸನ್ ೧೯೪೧ನೇ ಇಸವಿ)*-

ದೀಪಾವಳಿಯ ಒಂದೇ ಒಂದು ಕಾಣಿಕೆ!

ಸುಗಂಧಿ
ಕಾಂಚನ
ಹೇರ ಆಯಿಲ

ಶ್ರೀ ಧೂತಪಾಪೇಶ್ವರ ಪನವೇಲ, ಲಿ.,
ಕರ್ನಾಟಕ ಕೇಂದ್ರ ಯುನ್ಯಾಟೆಡ್ ಏಜನ್ಸೀಜ, ಹುಬ್ಬಳ್ಳಿ.

ಕಾರವಾರ:— ಮೆಸರ್ಸ ಮುಜುಮುದಾರ-ಶಿಶಬೇಕರ ಬ್ರದರ್ಸ
ಅಂಕೋಲಾ:— ದಿ ಸ್ಟೇಶನರಿ ಡಿಪೋ
ಕುಮಟಾ:— ದೇವಪ್ಪಾ ಅಯ್ಯು ನಾಯ್ಕ.
ಹೊನ್ನಾವರ— ಮೆಸರ್ಸ ಕಲ್ಯಾಣಪುರ ಬ್ರದರ್ಸ.
ಶಿರಶಿ:— { ಶಿರಶಿ ಡ್ರಗ್ ಸ್ಟೋರ್ಸ
ಎಸ್. ಎಲ್ ಧಾಕಪ್ಪಾ ಎಂಡ್ ಸನ್ಸ
ಸಿದ್ದಾಪುರ — ಮೆಸರ್ಸ ಶಾಮಯ್ಯನ ಬ್ರದರ್ಸ

"ಸ್ಟಾರ ಆಫ್ ಕೆನರಾ ಪ್ರೆಸ್",
ಕುಮಟಾ.

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಯಿಂದ ಬೇಕಾದ ನಮೂನೆಯ ಕಲರ ಪ್ರಿಂಟಿಂಗ ವಗೈರೆ ಸಣ್ಣ ದೊಡ್ಡ ಛಾಪಾ ಕೆಲಸಗಳೂ, ಪುಸ್ತಕ ಮುದ್ರಣವೂ, ರೂಲಿಂಗ ಬ್ಯಾಂಡಿಂಗ ಕೆಲಸವೂ ಉತ್ತಮವಾಗಿ ಸುಲಭ ದರದಲ್ಲಿ ತಕ್ಕ ಕಾಲಕ್ಕೆ ತಯಾರಿಸಿ ಕೊಡಲಾಗುವದು

ಇದಲ್ಲದೆ ಕೋರ್ಟ ಕಚೇರಿ ಉಪಯೋಗದ ವಕಾಲತ ವಗೈರೆ ಫಾರ್ಮುಗಳೂ, ಕಸ್ಟಮ್ ಕಚೇರಿಯ ಶಿಪ್ಪಿಂಗ ಬೀಲು-ಪತ್ಕಿ ವಗೈರೆ ಫಾರ್ಮುಗಳೂ, ಗೇಣಿ ರಶೀದಿ ಬೂಕು, ಗೇಣಿಚೀಟಿ ಎದುರ್ನಿಗಿ ಫಾರ್ಮುಗಳೂ ವಗೈರೆ ಮಾರಾಟಕ್ಕೆ ತಯಾರ ಸಿಗುತ್ತವೆ.

ನಿಮ್ಮ ಛಾಪಾ ಕೆಲಸಗಳನ್ನು ನಮ್ಮಲ್ಲಿಗೇ ಕಳಿಸಿರಿ

ಒಮ್ಮೆ ಅನುಭವ ತಕ್ಕೊಂಡು ನೋಡಿರಿ !

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ಹೆಡ್ ಆಫೀಸು — ಕುಂದಾಪುರ.

ಬ್ರೆಂಚ ಆಫೀಸುಗಳು — ಅಂಕೋಲಾ, ಕುಂದಾಪುರ, ಬೈಂದೂರು, ಕೋಟೇಶ್ವರ, ಕುಮಟಾ, ಗೋಕರ್ಣ, ಕಾರವಾರ, ಹಾವೇರಿ, ಶಿವಮೊಗ್ಗಾ, ತರೀಕೆರಿ, ನಗರ, ಸೋಮವಾರಪೇಟೆ ಮತ್ತು ವೀರರಾಜಪೇಟೆ

ಕಾಯಂ ಠೇವುಗಳು:- 3 ತಿಂಗಳಿಗೆ ಶೇ ರೂ 3ರಲ್ಲಿ, 6 ತಿಂಗಳಿಗೆ ಶೇ 3½ರಲ್ಲಿ, ೧ ವರ್ಷಕ್ಕೆ ರೂ 4ರಲ್ಲಿ, 2 ವರ್ಷ ಯಾ ಹೆಚ್ಚಿನ ಅವಧಿಗೆ ಶೇ 4½ರಲ್ಲಿ

ಸೇವಿಂಗ್ಸ ಬೇಂಕ್ ಠೇವುಗಳು ಮತ್ತು ಚಾಲು ಠೇವುಗಳು ಸಹ ಅಂಗೀಕರಿಸಲ್ಪಡುವವು

ಭಂಗಾರದ ಡಾಗಿನೆಗಳ ವ ಇತರ ವ್ಯಾಪಾರದ ವಸ್ತುಗಳ ಆಡವಿನ ಮೇಲೆ ಸವಲತ್ತಿನ ದರದ ಬಡ್ಡಿಯಲ್ಲಿ ಸಾಲ ಕೊಡಲ್ಪಡುವದು ವ್ಯಾಪಾರದ ಕೇಂದ್ರಗಳಿಗೆ ಡ್ರಾಫ್ಟುಗಳು, ಚೆಕ್ಕುಗಳು ಸಹ ಕೊಡಲ್ಪಡುವವು ಎಲ್ಲ ತರದ ಬೇಂಕಿನ ವ್ಯವಹಾರಗಳು ಸವಲತ್ತಿನ ದರದಿಂದ ನಡಿಸಲ್ಪಡುವವು

ಕುಂದಾಪುರ,
1-8-1941 }

The Agricultural & Industrial Bank, Ltd

ಹಿಂದೀ ರಾಜಕಾರಣ.

[ನಿರೀಕ್ಷಕನು ಕಲೆಹಾಕಿದ್ದು.]

ಹಿಂದೀ ರಾಜಕಾರಣದ ಬಿಕ್ಕಟ್ಟು ಇನ್ನೂ ಇದ್ದಂತೆಯೇ ಇರುವದಾಗಿ ಭಾಸವಾಗುತ್ತದೆ. ಭಾರತ ಮಂತ್ರಿಗಳಾದ ಮಿ|| ಎಮೆರಿಯವರು ಗುರುವಾರ ಪಾರ್ಲಿಮೆಂಟಿನಲ್ಲಿ ಕೂಲಿಕಾರ ಪಕ್ಷದ ಸಭಾಸದರಾದ ಮಿ|| ಸೊರೆನಸನ್‌ರವರಿಗೆ ಉತ್ತರ ಕೊಡುವಾಗ ಹಿಂದುಸ್ಥಾನದೊಳಗಿನ ರಾಜ್ಯಧೋರಣ ಮುಂಚಿನಂತೆಯೇ ಇರುವದಾಗಿ ಹೇಳಿದರಷ್ಟೇ! ಬ್ರಿಟಿಶರಿಗೂ ಹಿಂದೀಯರಿಗೂ ಸಮಾಧಾನ ಮಾಡುವ ದೆಸೆಯಿಂದ ರಾಜ್ಯಧೋರಣವನ್ನು ಬದಲಿಸುವ ಆವಶ್ಯಕತೆಯ ಬಗ್ಗೆ ನೇರವಾಗಿ ಪ್ರಶ್ನಿಸಲು, ಭಾರತ ಮಂತ್ರಿಗಳು ಸಂಪೂರ್ಣ ಮೌನ ತಳೆದರು! ಬ್ರಿಟನಿನೊಳಗೆ ಇತ್ತಲಾಗಿ ಒಳ್ಳೇ ಗಡಿಬಿಡಿಯಾಗಿದೆ. ಹಿಂದುಸ್ಥಾನದ ಗೆಳೆಯರ ಗಡಿಬಿಡಿಯೆಂದು ಹೇಳುತ್ತಾರೇನೋ ಆಹುದು. ಆದರೆ ನನಗೇನು ಆ ಪ್ರಕಾರ ಕಾಣುವದಿಲ್ಲ. ಹಿಂದುಸ್ಥಾನಕ್ಕಿಂತ ಬ್ರಿಟನದ ಹಿತದ ವಿಚಾರದಿಂದಲೇ ಬ್ರಿಟಿಶ ಗೆಳೆಯರು ಹಿಂದುಸ್ಥಾನದ ಪರಿಸ್ಥಿತಿಯನ್ನು ವಿಚಾರಿಸಹತ್ತಿರುವರಾಗಿ ನನ್ನ ಅಂಬೋಣ. ಲಂಡನಿನ 'ನ್ಯೂ ಸ್ಟೇಟ್ಸಮನ್ ಮತ್ತು ನೇಶನ್' ಪತ್ರಿಕೆಗೆ ಹಿಂದುಸ್ಥಾನವು ಕೈತಪ್ಪಿ ಹೋಗುವ ಕನಸು ಬಿದ್ದಿದೆ. ಲಿನಲಿಥಗೋ-ಎಮೆರಿಯವರಂಥ ವಿಚಾರಹೀನರು ಅಧಿಕಾರಾರೂಢರಾದಾಗ ಬ್ರಿಟಿಶರು ವಸಾಹತುಗಳನ್ನು ಕಳಕೊಂಡರೆಂಬ ಪೂರ್ವೇತಿಹಾಸದ ಸ್ಮರಣೆಯನ್ನು 'ನ್ಯೂ ಸ್ಟೇಟ್ಸಮನ್ ಮತ್ತು ನೇಶನ್' ಪತ್ರಿಕೆಯು ಬ್ರಿಟನಿಗೆ ಮಾಡಿಕೊಟ್ಟು, ದುರ್ಬುದ್ಧಿಗೀಡಾಗಿ ಈಗಲೂ ಅದೇ ಧೋರಣ ಸ್ವೀಕರಿಸಿ ಹಾನಿಗೀಡಾಗಬಾರದೆಂದು ಬ್ರಿಟಿಶರಿಗೆ ಎಚ್ಚರಿಕೆ ಕೊಡುತ್ತದೆ. 'ನ್ಯೂಸ ಕ್ರೊನಿಕಲ' ಪತ್ರಿಕೆಯೂ ಇದೇ ಪ್ರಕಾರ ಚಿಂತಾಕ್ರಾಂತವಾಗಿ ಹಿಂದುಸ್ಥಾನದೊಳಗಿನ ಅಸಂತೋಷವನ್ನು ಪರಿಹರಿಸಬೇಕಾಗಿ ಬ್ರಿಟಿಶ ಪ್ರಧಾನ ಮಂಡಳಕ್ಕೆ ಆಗ್ರಹ ಮಾಡುತ್ತದೆ. ಹಿಂದುಸ್ಥಾನದ ಪರಿಸ್ಥಿತಿಯನ್ನು ಹೀಗೆಯೇ ಇರಗೊಟ್ಟಲ್ಲಿ ಅಪಾಯ ಸಂಭವಿಸುವದಾಗಿಯೂ 'ನ್ಯೂಸ ಕ್ರೊನಿಕಲ' ಪತ್ರಿಕೆಯ ಅಂಬೋಣ. ರಶ್ಯ ದೇಶದ ಸಂಗ್ರಾಮದಲ್ಲಿ ರಶ್ಯರು ಸಂಕಟದಲ್ಲಿ ಸಿಲುಕಿದರೆಂದು ಅವರನ್ನು ಕಾಪಾಡಲು ಈವಾಗ ದುರ್ಘಟವೆಂದೂ 'ಲಂಡನ ಟೈಮ್ಸ' ಮೊದಲಾದ ಪತ್ರಿಕೆಗಳು ಗಾಬರಿಗೊಂಡು ಬರೆಯತೊಡಗಿವೆ. ಈ ಅವಸ್ಥಾಂತರದ ಮೂಲಕ ಬ್ರಿಟಿಶ ರಾಜಕಾರಣಿಗಳು ಹಿಂದುಸ್ಥಾನದ ಸಮಸ್ಯೆಯನ್ನು ಗಾಂಭೀರ್ಯದಿಂದ ಸಮಾಲೋಚಿಸತೊಡಗಿರುವರೆಂದು ನನ್ನ ಊಹೆ. ನ್ಯೂಫೀಲ್ಡ ಕೊಲೇಜಿನ ರಾಜ್ಯಘಟನಾಶಾಸ್ತ್ರವಿಶಾರದರಾದ ಕೂಪಲಂಡ ಎಂಬವರು ಇದೇ ಬರುವ ನವಂಬರ ತಿಂಗಳಲ್ಲಿ ಇಲ್ಲಿಯ ರಾಜ್ಯಘಟನೆಯನ್ನು ಅಭ್ಯಾಸ ಮಾಡುವದಕ್ಕಾಗಿ ಇತ್ತ ಬರಲಿದ್ದಾರೆಂದು ವಾರ್ತೆಯುಂಟು. ಈ ಪ್ರಯಾಣಕ್ಕೂ ಹಿಂದುಸ್ಥಾನದೊಳಗಿನ ರಾಜಕಾರಣಕ್ಕೂ ಸಂಬಂಧವಿಲ್ಲವಾಗಿ ಹೇಳಲಾಗುತ್ತದೆ. ಆದರೆ ಇದೊಂದು ಸ್ವತಂತ್ರ ವ್ಯವಹಾರವೆಂದು ನಾನು ಎಣಿಸಲಾರೆ, ವ್ಯವಹಾರಿಕರ್‍ಯಾರೂ ಎಣಿಸರು. ಎಲ್ಲ ಸೂತ್ರಗಳು ಒಂದೇ ಒಂದು ಧೋರಣದಿಂದ ಪರಸ್ಪರ ಪೋಷಕವಾಗಿ ಓಡಾಡುತ್ತಿವೆ. ಹಿಂದುಸ್ಥಾನಕ್ಕೆ ಸಮಾಧಾನ ಮಾಡಬೇಕೆಂಬ ಲವಲವಿಕೆ ಬ್ರಿಟಿಶರಲ್ಲುಂಟು. ಏನೊಂದೂ ಅಧಿಕಾರ ಕೊಡದೆ ಸಮಾಧಾನ ಮಾಡಸಿಗಬೇಕೆಂದು ಯುಕ್ತಿಗಳ ಸಾಧನೆ. ರಾಜ್ಯಾಧಿಕಾರ ಕೊಡುವ ಪ್ರಸಂಗ ಬಂದರೆ ಬ್ರಿಟಿಶರ ಸ್ವಾರ್ಥಕ್ಕೆ ನ್ಯೂನತೆಯಾಗದಂತೆ ರಾಜ್ಯಾಧಿಕಾರ ಕೊಡುವ ಗಂಭೀರ ಆಲೋಚನೆಯನ್ನು ಸಾಮ್ರಾಜ್ಯಕರ್ತರು ನಡೆಸಿರುತ್ತಾರೆಂದು ನನಗಂತೂ ಕಾಣುತ್ತದೆ. ಉಪಾಯಗಳೆಲ್ಲ ನಿರರ್ಥಕವಾದ ಬಳಿಕ, ನಿರುಪಾಯದ ಪರಿಸ್ಥಿತಿಯಲ್ಲಿ ರಾಜ್ಯಾಧಿಕಾರವನ್ನು ಕೊಡಬೇಕಾದ ಪ್ರಮಾಣವನ್ನು ಸಾಮ್ರಾಜ್ಯಕರ್ತರು ಪರಿಶೋಧಿಸುತ್ತಿದ್ದಾರೆ. ಬ್ರಿಟನ ದೇಶದೊಳಗಿನ ಪರಿಸ್ಥಿತಿ ಹೀಗಿದೆ.

ಹಿಂದುಸ್ಥಾನದೊಳಗೂ ಒಳಸೂತ್ರಗಳು ಓಡಾಡುತ್ತಿವೆ. ಹಿಂದುಸ್ಥಾನ ಸರಕಾರದ ಕಾರ್ಯಕಾರಿ ಮಂಡಳದ ವಿಸ್ತಾರಯೋಜನೆಯಂತೆ ಇನ್ನೂ ಎಲ್ಲ ಸಭಾಸದರು ಅಧಿಕಾರಾರೂಢರಾಗಿಲ್ಲ. ಈ ತಿಂಗಳಲ್ಲಿ ಎಲ್ಲರೂ ಅಧಿಕಾರಾರೂಢರಾಗುತ್ತಾರೆ. ಈ ಮಂಡಳದಲ್ಲಿ ಬಹುಮತ ಹಿಂದೀ ಸಭಾಸದರದು. ಅಂತು ಸಭಾಸದರ ಸಂಖ್ಯೆ ೧೩. ಅವರಲ್ಲಿ ೮ ಜನ ಹಿಂದೀಯರು. ಇವರೆಲ್ಲರೂ ಒಕ್ಕಟ್ಟಿನಿಂದ ಲೋಕಸಮ್ಮತವಾಗಬಹುದಾದ ರಾಜ್ಯಸುಧಾರಣೆಯ ಯೋಜನೆಯನ್ನು ತಯಾರಿಸುವ ಆಲೋಚನೆಯಲ್ಲಿದ್ದಾರಂತೆ. ಬಹುಮತ ಹಿಂದೀಯರದಿದ್ದರೂ ಮುಖ್ಯ ಮುಖ್ಯ ಇಲಾಖೆಗಳೆಲ್ಲ ಬ್ರಿಟಿಶ ಸಭಾಸದರ ಕೈಯಲ್ಲಿಯೇ! ಆದರಿಂದ ಇವರ ಪರಿಸ್ಥಿತಿಯೂ ವಿಷಮವಾಗಿದೆ. ಶ್ರೀ|| ಮಾಧವರಾವ ಅಣೇಯವರ ಮನಸ್ಸು ಆಚೀಚೆ, ಹಿಂದೆ ಮುಂದೆ ಜೋಕಾಲಿ ಹೊಡೆಯುತ್ತಿದೆ. ಹಿಂದುಸ್ಥಾನ ಸರಕಾರದ ಕಾರ್ಯಕಾರಿ ಮಂಡಳದ ಸಭಾಸದರಾಗಿದ್ದರೂ ಇವರು ಮಹಾತ್ಮರೊಡನೆ ಪುನಃ ಪುನಃ ವಿಚಾರ ಮಾಡಹೋಗುತ್ತಿದ್ದಾರೆ. ಕಾಯಿದೆ ಇಲಾಖೆಯ ಸಭಾಸದರಾದ ಸರ್ ಸುಲ್ತಾನ ಅಹಮ್ಮದರವರೂ ಶ್ರೀ|| ಮಾಧವರಾವ ಅಣೇಯವರೂ ಈ ೮ ಮಂದಿ ಸಭಾಸದರಲ್ಲಿ ಪ್ರಮುಖ ಸಭಾಸದರು. ಸರ್ ಸುಲ್ತಾನ ಅಹಮ್ಮದರು ೧೯೩೭ನೇ ಇಸ್ವಿಯಲ್ಲಿ ಹಿಂದುಸ್ಥಾನ ಸರಕಾರದ ಕಾರ್ಯಕಾರಿ ಮಂಡಳದ ಕಾಯಿದೆ ಇಲಾಖೆಯ ಸಭಾಸದರಿದ್ದರು. ಆ ಕಾಲದಲ್ಲಿ ರಾಷ್ಟ್ರೀಯ ಸಭೆಯವರು ಪ್ರಧಾನ ಮಂಡಳಗಳನ್ನು ಸಂಘಟಿಸಲು ಒಡಂಬಡದೆ ಮುನಿದು ಕೂತಿದ್ದರು. ಆಗ ಸರ್ ಸುಲ್ತಾನರು ಲಿನಲಿಥಗೋ ಸರ್ವಾಧಿಪತಿಗಳ ಕಡೆಯಿಂದ ಆಶ್ವಾಸನ ಕೊಡಿಸಿ ರಾಷ್ಟ್ರೀಯ ಸಭೆಯವರಿಗೆ ಅಧಿಕಾರ ಪಡೆಯಲು ಅನುವು ಮಾಡಿಕೊಟ್ಟದ್ದುಂಟು. ಅದೇ ಪ್ರಕಾರ ಸರ್ ಸುಲ್ತಾನರು ಶ್ರೀ|| ಮಾಧವರಾವ ಅಣೇಯವರ ಸಹಕಾರ-ಕಲಹಗಳಿಂದ ರಾಷ್ಟ್ರೀಯ ಸಭೆಯವರಿಗೆ ಸಮ್ಮತವಾಗುವಂಥ ಯೋಜನೆಯನ್ನು ಕಲ್ಪಿಸಬಹುದಾಗಿ ಅನೇಕರು ಊಹಿಸುತ್ತಾರೆ. ಆದರೆ ರಾಷ್ಟ್ರೀಯ ಸಭೆಯವರು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಸೇರಿ ತಮಗೆ ಬೆಂಬಲ ಕೊಟ್ಟನಕ ತಮಗೆ ಕಾರ್ಯಶಕ್ತಿ ಪ್ರಾಪ್ತವಾಗಲಿಕ್ಕಿಲ್ಲವಾಗಿ ಅವರ ಅಂಬೋಣವಿರುವದಂತೆ. ರಾಷ್ಟ್ರೀಯ ಸಭೆಯವರು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಸೇರುವ ಮುಂಚೆ ರಾಜ್ಯಭಾರದಲ್ಲಿ ತಿದ್ದುಪಡಿಮಾಡುವ ತಯಾರಿಯನ್ನು ಹಿಂದುಸ್ಥಾನ ಸರಕಾರವು ತೋರ್ಪಡಿಸಬೇಕು. ಅಂದರೆ ಮಾತ್ರ ರಾಷ್ಟ್ರೀಯ ಸಭೆಯವರು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಸೇರಲು ಒಡಂಬಡುತ್ತಾರೆ. ಹಿಂದುಸ್ಥಾನ ಸರಕಾರದ ಕಾರ್ಯಕಾರಿ ಮಂಡಳದ ಸಭಾಸದರಿಗೆ ಎಷ್ಟು ಬೆಂಬಲ ಕೊಟ್ಟರೂ ಅದರಿಂದ ಕಾರ್ಯಭಾಗವಾಗುವ ಆಶೆ ರಾಷ್ಟ್ರೀಯ ಸಭೆಗೆ ಇರುವದಿಲ್ಲ. ಲೋಕಮತದ ಒತ್ತಾಯಗಳನ್ನು ಮನ್ನಿಸಿಕೊಳ್ಳುವ ಶಕ್ತಿಯ ಅಭಾವದಲ್ಲಿ ಬೆಂಬಲ ಕೊಡುವದರಿಂದ ನಿಷ್ಪತ್ತಿಯಿಲ್ಲವಾಗಿ ರಾಷ್ಟ್ರೀಯ ಸಭೆಯ ಅಂಬೋಣ. ಸಾಮ್ರಾಜ್ಯಸರಕಾರಕ್ಕೆ ಸಂತೋಷವಿಲ್ಲದಿದ್ದರೆ ಕಾಯಿದೆ ಕೌನ್ಸಿಲಗಳಲ್ಲಿ ಮಾಡಿದ ಯಾವತ್ತೂ ಲೋಕಮತ ನಿರರ್ಥಕವೆಂದು ಅನುಭವವುಂಟು. ಹೀಗೆ ಹಿಂದುಸ್ಥಾನದೊಳಗಿನ ಮಧ್ಯಸ್ಥರ ಭೂಮಿಕೆಯುಂಟು.

ಇನ್ನು ರಾಷ್ಟ್ರೀಯ ಸಭೆಯವರ ಭೂಮಿಕೆಯ ವಿಚಾರ. ಸಂಯುಕ್ತ ಪ್ರಾಂತದ ಶ್ರೀ ಕ್ಷೇತ್ರ ಕಾಶಿ ಜೈಲಿನೊಳಗಿಂದ ಶ್ರೀ|| ಸಕ್ಸೆನಾರವರೂ ತ್ರಿಚನಾಪಳ್ಳಿ ಜೈಲಿನೊಳಗಿಂದ ಶ್ರೀ|| ಪ್ರಕಾಶಂರವರೂ ಶ್ರೀ|| ರಾಜಗೋಪಾಲಾಚಾರ್ಯರೂ ಬಿಡುಗಡೆಯೊಂದಿರುತ್ತಾರೆ. ಶ್ರೀ|| ರಾಜಗೋಪಾಲಾಚಾರ್ಯರು ಮೌನ ತಳೆಯುತ್ತಾರೆ. ಪ್ರಕೃತ ಪರಿಸ್ಥಿತಿಯ ಕುರಿತು ಅಭಿಪ್ರಾಯ ಕೇಳಬಂದ ಪ್ರತಿನಿಧಿಗಳಿಗೆ "ನನಗೆ ಏನೂ ಹೇಳತಕ್ಕದ್ದಿಲ್ಲ"ವೆಂದು ಶ್ರೀ|| ರಾಜಗೋಪಾಲಾಚಾರ್ಯರು ಹೇಳಿಕಳಿಸಿಬಿಟ್ಟರು. ಶ್ರೀ|| ಮೋಹನಲಾಲ ಸಕ್ಸೆನಾರವರೂ ಶ್ರೀ|| ಪ್ರಕಾಶಂರವರೂ ರಾಷ್ಟ್ರೀಯ ಸಭೆಯ ಧೋರಣದಲ್ಲಿ ತಿದ್ದುಪಾಟು ಮಾಡುವ ಪ್ರಸಂಗ ಒದಗಿಬರಲಿಲ್ಲವಾಗಿ ಹೇಳುತ್ತಾರೆ. ಶ್ರೀ|| ಪ್ರಕಾಶಂರವರು ಎಲ್ಲ ಭಾರವನ್ನು ಮಹಾತ್ಮರ ಮೇಲೆ ಹಾಕಿ, ಅವರ ಆಜ್ಞೆಯನ್ನು ಪಾಲಿಸುವ ತಾನೊಬ್ಬ ಸೈನಿಕನೆಂದು ಅವರು ಹೇಳುತ್ತಾರೆ. ತನಕ ಬಿಡುಗಡೆಯಾದವರಲ್ಲಿ ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭಾಸದರ ಸಂಖ್ಯೆ ೮. ಅಧ್ಯಕ್ಷರಾದ ಮೌ|| ಅಬುಲ ಕಲಮು ಆಝಾದವರೂ ಪಂ|| ಜವಾಹಿರಲಾಲ ನೆಹರೂರವರೂ ಸೆರೆಮನೆಯಲ್ಲಿರುವಾಗ ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆ ಸೇರಿಸುವದು ವಿಚಾರಬಾಹಿರವಾದದ್ದು. ಆದರೆ ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭಾಸದರಾದ ಬೆ|| ಆಸಫ್ ಆಲಿಯವರು ಡೇರಾಡನಿಗೆ ಹೋಗಿ ಪಂ|| ಜವಾಹಿರಲಾಲರಿಗೆ ಗುರುವಾರ ಕಾಣುವವರಿದ್ದರು. ಹಾಗೆಯೇ ನೈನಿ ಜೈಲಿಗೆ ಬಂದು ಮೊನ್ನೆ ಶನಿವಾರ ಮೌ|| ಅಬುಲ ಕಲಮು ಆಝಾದರೊಡನೆ ಆಲೋಚನೆ ಮಾಡಿ ಮುಂಬಯಿಗೆ ಬಂದು ಸರದಾರ ವಲ್ಲಭಭಾಯಿ ಪಟೇಲ, ಶ್ರೀ|| ಭುಲಾಭಾಯಿ ದೇಸಾಯಿಗಳವರೊಡನೆ ಆಪ್ತಾಲೋಚನೆ ಮಾಡಿ ವರ್ಧಾಕ್ಕೆ ಮಹಾತ್ಮರ ಭೆಟ್ಟಿ ಹೋಗುತ್ತಾರೆ. ತಾವು ವರ್ಧಾಕ್ಕೆ ತಲ್ಪುವ ತನಕ ವರ್ಧಾದಲ್ಲಿಯೇ ಉಳಿಯಬೇಕಾಗಿ ಶ್ರೀ|| ಚಕ್ರವರ್ತಿ ರಾಜಗೋಪಾಲಾಚಾರ್ಯರಿಗೆ ಬೆ|| ಆಸಫ ಅಲಿಯವರು ತಂತಿ ಮಾಡಿರುತ್ತಾರೆ. ಬೆ|| ಆಸಫ ಅಲಿಯವರು ಇಂದ-ನಾಳೆ ವರ್ಧಾಕ್ಕೆ ತಲ್ಪುವರು. ಇದೇ ಪ್ರಕಾರ ಶ್ರೀ|| ಸತ್ಯಮೂರ್ತಿಯವರೂ

ಶುಕ್ರವಾರ ವರ್ಧಾಕ್ಕೆ ಹೋಗಿದ್ದಾರೆ. ಮೊನ್ನೆ ಶನಿವಾರ ಮಹಾತ್ಮರೊಡನೆ ಮಾತನಾಡಿ ಹಾಗೆಯೇ ಅವರು ಮುಂಬಯಿಗೆ ಹೋಗುತ್ತಾರೆ. ಅಲ್ಲಿ ಸರದಾರ ವಲ್ಲಭಭಾಯಿ ಪಟೇಲ, ಶ್ರೀ॥ ಭುಲಾಭಾಯಿ ದೇಸಾಯಿಯವರೊಡನೆ ಆಪ್ತಾಲೋಚನೆ ಮಾಡುತ್ತಾರೆ. ಬೆ॥ ಆಸಫ ಅಲಿಯವರೂ ಶ್ರೀ॥ ಸತ್ಯಮೂರ್ತಿಯವರೂ ರಾಷ್ಟ್ರೀಯ ಸಭೆಯ ರಾಜಕಾರಣದಲ್ಲಿ ಶಿಸ್ತು ಪಾಟವಾಗಬೇಕೆಂಬ ಪಕ್ಷದವರು. ಈವಾಗ ಬಾಬು ರಾಜೇಂದ್ರ ಪ್ರಸಾದರೂ ವರ್ಧಾಕ್ಕೆ ಬಂದಿರುತ್ತಾರೆ. ಈ ಎಲ್ಲ ಓಡಾಟಗಳು ಒಂದು ಧೋರಣದಿಂದ ನಡೆದಿವೆಯೆಂದು ನಾನು ಹೇಳುವದನವಶ್ಯಕ. ಪರಿಣಾಮವೇನೆಂದು ನಾನರಿಯೆ!

ರಾಜ್ಯಸುಧಾರಣೆಯ ಬಗ್ಗೆ ಪ್ರತ್ಯಕ್ಷ ವ್ಯವಹಾರಿಕ ಸೂಚನೆಗಳನ್ನು ಇನ್ನೂ ಯಾರೂ ಮಾಡಿರಲಿಲ್ಲ. ಧಾರವಾಡದೊಳಗೆ ಪ್ರಕೃತ ಪರಿಸ್ಥಿತಿಯ ಕುರಿತು ಭಾಷಣ ಮಾಡುವಾಗ ಡಾ॥ ಜಯಕರರು ಹಿಂದುಸ್ಥಾನದೊಳಗಿನ ಬಿಕ್ಕಟ್ಟನ್ನು ಬಗೆಹರಿಸಬೇಕೆಂದಿಷ್ಟೇ ಹೇಳಿದರು. ಸರ್ವಾಧಿಪತಿಗಳ ನಂಬಿಗೆಯುಳ್ಳ ಲೋಕಪ್ರಮುಖರದೊಂದು ರಾಷ್ಟ್ರೀಯ ಸರಕಾರವನ್ನು ನಿರ್ಮಿಸಬೇಕಾಗಿ ಅಸ್ಪಷ್ಟವಾಗಿ ಅವರು ಹೇಳುತ್ತಾರೆ. ಕಾರ್ಯಕಾರಿ ಮಂಡಳದ ಸಭಾಸದರಾದ ಸರ್ ಫಿರೋಜಖಾನ ನೂನರವರು ಹೇಳಿದ ಮಾತ್ರೆ ನಡೆಯುವ ಲಕ್ಷಣಗಳಿಲ್ಲ. ಮಹಾತ್ಮರೂ ಬೆ॥ ಜಿನ್ನಾರವರೂ ಒಕ್ಕಟ್ಟಾಗಿ ಸ್ವರಾಜ್ಯವನ್ನೂ ಪಾಕಿಸ್ತಾನವನ್ನೂ ಸ್ಥಾಪಿಸಿಕೊಳ್ಳಬೇಕಾಗಿ ಅವರದೊಂದು ಸೂಚನೆ. ಗಾಂಧಿಯವರಿಗೆ ಸ್ವರಾಜ್ಯ ಕೊಡುವ ಶಕ್ತಿ ಜಿನ್ನಾರವರಲ್ಲಿರುವದಂತೆ! ಜಿನ್ನಾರವರಿಗೆ ಪಾಕಿಸ್ತಾನ ಕೊಡುವ ಶಕ್ತಿ ಗಾಂಧಿಯವರಲ್ಲುಂಟಂತೆ! ಹೀಗೆ ಹಿಟ್ಟು-ಬೂದಿ ಒಟ್ಟು ಮಾಡುವ ಯೋಜನೆ ಸರ್ ಫಿರೋಜಖಾನರವರದು! ಹೇಗೆ ಒಟ್ಟುಗೂಡಬೇಕೆಂದು ಗಾಂಧಿ-ಜಿನ್ನಾರವರು ಆಲೋಚಿಸತಕ್ಕದ್ದಾಗಿ ಸರದಾರ ಪರಸ್ಪರ ಸಲಹೆ! ‘ನ್ಯೂ ಸ್ಟೇಟ್ಸಮನ್ ಮತ್ತು ನೇಶನ್’ ಈ ಪತ್ರಕರ್ತರು ತಮ್ಮದೊಂದು ಯೋಜನೆ ಸೂಚಿಸುತ್ತಾರೆ. ಸರಕಾರವು ರಾಷ್ಟ್ರೀಯ ಸಭೆಯ ಕೇಳಿಕೆಗಳೊಳಗಿನ ಮುಖ್ಯಾಂಶಗಳನ್ನು ಮನ್ನಿಸಬೇಕು; ಅಂದರೆ ಹಿಂದುಸ್ಥಾನ ಸರಕಾರದ ಕಾರ್ಯಕಾರಿ ಮಂಡಳವು ವರಿಷ್ಠ ಕಾಯಿದೆ-ಕೌನ್ಸಿಲಿಗೆ ಅಧೀನವಾಗಬೇಕು ಮುಸ್ಲಿಮ ಲೀಗ ಮತ್ತು ಕೊಂಗ್ರೆಸ ಪಕ್ಷಗಳಿಗೆ ಹಿಂದುಸ್ಥಾನದಲ್ಲಿರುವ ಗೌರವಕ್ಕೊಚಿತವಾಗಿ ಕಾರ್ಯಕಾರಿ ಮಂಡಳದಲ್ಲಿ ಅಧಿಕಾರ ಸ್ಥಾನಗಳು ಸಿಗಬೇಕು. ವಸಾಹತು ಸ್ವರಾಜ್ಯವನ್ನು ರೂಢಗೊಳಿಸಬೇಕೆಂದು ಬ್ರಿಟಿಶರು ಪ್ರಾಮಾಣಿಕತನದಿಂದ ಎಣಿಸುತ್ತಿದ್ದರೆ ಮಧ್ಯವರ್ತಿ ಸರಕಾರದಲ್ಲಿ ಬ್ರಿಟಿಶರಿಗಿರುವ ಅಧಿಕಾರ ಹಿಂದವಾಸಿಯರಿಗೆ ಸಿಗಬೇಕು. ಈ ಸುಧಾರಣೆಯ ಜೊತೆಗೆ ರಾಜಬಂದಿಗಳನ್ನು ಬಿಡುಗಡೆಮಾಡಿದರೆ ರಾಷ್ಟ್ರೀಯ ಸಭೆಗೂ ಸರಕಾರಕ್ಕೂ ಒಡಂಬಡಿಕೆಯಾಗಲೇಬೇಕು. ರಾಷ್ಟ್ರೀಯ ಸಭೆಯು ಒಡಂಬಟ್ಟರೆ ಬೆ॥ ಜಿನ್ನಾರವರು ಹಿಂಬಾಲಿಸಲೇ ಬೇಕು. ಹೀಗೆ ‘ನ್ಯೂ ಸ್ಟೇಟ್ಸಮನ್ ಮತ್ತು ನೇಶನ್’ ಪತ್ರಿಕೆಯು ರಾಜ್ಯಭಾರವನ್ನು ಸುಧಾರಿಸುವ ಸೂಚನೆಯನ್ನು ಮಾಡುತ್ತಿದೆ. ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ಪುಣೆಯೊಳಗಿನ ಅಧಿವೇಶನದಲ್ಲಿ ಕೈಕೊಂಡ ತೀರ್ಮಾನಿನ ಕಟಾಕ್ಷ ಸಾಮಾನ್ಯವಾಗಿ ಅಧಿಕಾರಾಂತರದಲ್ಲಿಯೇ ಇತ್ತು! ವರಿಷ್ಠ ಕಾಯಿದೆ ಕೌನ್ಸಿಲಿನ ನಂಬಿಗೆಗೆ ಪಾತ್ರವಾದ ಸಕಲ ಪಕ್ಷ-ಪಂಗಡಗಳ ಮನ್ನಣೆಯುಳ್ಳ ಪ್ರಮುಖರನ್ನು ಕಾರ್ಯಕಾರಿ ಮಂಡಳದಲ್ಲಿ ನೇಮಿಸುವಂತೆ ಏರ್ಪಾಟಾಗಬೇಕಾಗಿ ಸೂಚಿಸಲಾಗಿತ್ತು. ಬೆ॥ ಜಿನ್ನಾರವರೇ ಮುಖ್ಯ ಪ್ರಧಾನರಾಗಲಿ; ತಾವು ಅವರ ಕೈಕೆಳಗೆ ಕೆಲಸ ಮಾಡಲು ಸಿದ್ಧರಿರುವೆವೆಂದು ರಾಷ್ಟ್ರೀಯ ಸಭೆಯ ಪರವಾಗಿ ಶ್ರೀ॥ ಚಕ್ರವರ್ತಿ ರಾಜಗೋಪಾಲಾಚಾರ್ಯರವರು ಆ ಕಾಲದಲ್ಲಿ ಹೇಳಿ, ರಾಷ್ಟ್ರೀಯ ಸಭೆಯು ರಾಜ್ಯಾಧಿಕಾರವನ್ನು ಹಿಂದವಾಸಿಯರಲ್ಲಿ ವರ್ಗಾಯಿಸಿಕೊಳ್ಳಲು ಆತುರಪಡುತ್ತದಾಗಿಯೂ ವ್ಯಕ್ತಿ-ಪ್ರಾಧಾನ್ಯಕ್ಕಾಗಿ ಇಲ್ಲವೆ ವ್ಯಕ್ತಿ-ಗೌರವಕ್ಕಾಗಿ ಸ್ವದೇಶ-ಸ್ವಾತಂತ್ರ್ಯದ ಆಂದೋಲನವನ್ನು ನಡಿಸುವದಿಲ್ಲವಾಗಿಯೂ ಸ್ಪುಟ ಮಾಡಿದ್ದುಂಟು. ಹಿಂದುಸ್ಥಾನದ ರಾಜ್ಯಭಾರದಲ್ಲಿ ಬ್ರಿಟಿಶರಿಗಿರುವ ಅಧಿಕಾರ ನಷ್ಟವಾಗಿ ಹಿಂದವಾಸಿಯರಿಗೆ ಸಿಗುವ ಯಾವದೇ ಯೋಜನೆಯನ್ನು ಮನ್ನಿಸಲು ರಾಷ್ಟ್ರೀಯ ಸಭೆಯು ಸಂತೋಷಪಡುತ್ತದೆ. ಅನಕ ವರೆಗೆ ರಾಜ್ಯಭಾರದಲ್ಲಿ ಪ್ರವೇಶಿಸಲು ರಾಷ್ಟ್ರೀಯ ಸಭೆಯ ಒಪ್ಪಿಗೆಯಿಲ್ಲ. ರಾಷ್ಟ್ರೀಯ ಸಭೆಯ ಪರಿಸ್ಥಿತಿ ಹೀಗೆ.

ಬೇರೆ ಬೇರೆ ಪರಿಸ್ಥಿತಿಗಳನ್ನು ಪೃಥಕ್ ಪೃಥಕ್ ವಿಚಾರ ಮಾಡಿದರೆ ಇವುಗಳಲ್ಲಿ ಮೇಳಗೂಡುವ ಸಂಭವ ಕಡಿಮೆಯೆಂದು ತೋರುತ್ತದೆ. ಆದರೆ ಸಂಧಿಯೋಗ ಸಮೀಪಿಸಿ ಬಂದಿದೆಂದು ನನ್ನ ಹೇಳಿಕೆ. ಯುದ್ಧದ ಸಾನಿಧ್ಯದಿಂದ ಹಿಂದುಸ್ಥಾನದ ಸಮಸ್ಯೆ ಬಗೆಹರಿಯಬೇಕೆಂಬದೊಂದು ಭಾವನೆ ಉಂಟೇ ಉಂಟು. ಆದರೆ ಆದರ ಜೊತೆಗೆ ಇನ್ನೊಂದು ಸುದ್ದಿ ಕೇಳಿ ನನಗೆ ಆಶೆಯುಂಟಾಗಿದೆ. ಸರ್ವಾಧಿಪತಿಗಳು ಕಾರ್ಯಕಾರಿ ಮಂಡಳದ ಸಭಾಸದರನ್ನು ನೇಮಿಸಿಕೊಳ್ಳುವಾಗ ಸಭಾಸದರಿಗೊಂದು ಸೂಚನೆ ಕೊಟ್ಟಿದ್ದಾರಾಗಿ ಸಿಮ್ಲಾದೊಳಗಿನ “ಮುಂಬಯಿ ಕ್ರೊನಿಕಲ” ಪತ್ರಿಕೆಯ ಸುದ್ದಿಗಾರರ ವಾರ್ತೆ. ರಾಷ್ಟ್ರೀಯ ಸಭೆಯೊಡನೆ ಸಂಧಿಯಾದ್ದಲ್ಲಿ ಕಾರ್ಯಕಾರಿ ಮಂಡಳದ ಸಭಾಸದರನ್ನು ನೂತನವಾಗಿ ನೇಮಿಸಿಕೊಳ್ಳುವ ಪ್ರಸಂಗದಲ್ಲಿ ಈಗ ನೇಮಿಸಲ್ಪಟ್ಟ ಸಭಾಸದರು ತಮ್ಮ ಸ್ಥಾನಗಳನ್ನು ತೆರವು ಮಾಡಿಕೊಡಬೇಕೆಂದು ಸರ್ವಾಧಿಪತಿಗಳು ತಿಳಿಸಿದ್ದಾರಂತೆ! ಅದಕ್ಕವರು ಒಪ್ಪಿಗೆ ಕೊಟ್ಟಿದ್ದಾರಂತೆ! ಇದರ ಮೇಲಿಂದ ಸರ್ವಾಧಿಪತಿಗಳೂ ಬ್ರಿಟಿಶ ಸರಕಾರವೂ ಗಾಂಭೀರ್ಯದಿಂದ ಸಂಧಿ-ಯೋಜನೆಯನ್ನು ವಿಚಾರಿಸುತ್ತಿರುವರೆಂದು ನನಗೊಂದು ಅನುಮಾನ. ಇನ್ನೊಂದು ಪಕ್ಷದಲ್ಲಿ ಯಾವದೊಂದು ರೂಪ ಪ್ರಕಟವಾಗುವ ಸಂಭವವಿದೆ.

ಗಾಂಧಿ-ಜಯಂತಿಯವಾರ್ತೆ.

— ಗಾಂಧಿ ಜಯಂತಿಯ ನಿಮಿತ್ತ ಪಂಜಾಬ ಪ್ರಾಂತದಲ್ಲಿ ಖಾದಿ ಮಾರಾಟ ಮಾಡಲಿಕ್ಕೆ ಅನುಕೂಲವಾಗಬೇಕೆಂದು ಪಂಜಾಬ ಸರಕಾರವು ಅಖಿಲ ಭಾರತೀಯ ನೂಲುಗಾರ ಸಂಘಕ್ಕೆ ಬೇಕಾದಷ್ಟು ಕಾಲ ವ್ಯವಹಾರ ನಡಿಸಲು ಅತಂಕವುಂಟಾಗುವ ನೌಕರ-ರಕ್ಷಣೆಯ ಕಾನೂನಿನ ಪ್ರತಿಬಂಧಗಳಿಗೆ ೧೫ ದಿನಗಳ ಮಟ್ಟಿಗೆ ತಡೆ ಹಾಕಿದೆ. ಮಹಾಕೋಸಲ ಪ್ರಾಂತಿಕ ಕೊಂಗ್ರೆಸ ಕಮಿಟಿಯವರು ಮಹಾತ್ಮರಿಗೆ ೭೨ನೇ ಹುಟ್ಟು ಹಬ್ಬದ ಸಮಯ ೭೨ ಲಕ್ಷ ಗಜ ನೂಲನ್ನೂ ೮೦೦೦ ರೂಪಾಯಿಗಳನ್ನೂ ಅರ್ಪಿಸಿದ್ದಾರೆ. ಮಧ್ಯ ಪ್ರಾಂತದವರು ೩॥ ಸಾವಿರ ರೂಪಾಯಿಗಳನ್ನು ಮಹಾತ್ಮರಿಗೆ ಅರ್ಪಿಸಿದ್ದಾರೆ. ಲಾಹೋರದ ಜೈಲಿನಲ್ಲಿರುವ ೧೫ ಮಂದಿ ಸ್ತ್ರೀ-ಸತ್ಯಾಗ್ರಹಿಗಳು ೧೫ ದಿನಗಳಲ್ಲಿ ನೂತ ೧ ಲಕ್ಷ ೨೧ ಸಾವಿರ ಗಜ ನೂಲನ್ನು ಮಹಾತ್ಮರಿಗೆ ಕಳುಹಿದ್ದಾರೆ. ಮಹಾಕೋಸಲದ ಅಧಣೇರ ಗ್ರಾಮದಲ್ಲಿ ೭೨ ಶುಭ್ರ ಹೋರಿಗಳನ್ನು ಕಟ್ಟಿದ ರಥದಲ್ಲಿ ಮಹಾತ್ಮರ ಭಾವ ಚಿತ್ರದ ಮೆರವಣಿಗೆಯಾಯಿತು. ಕರಾಚಿಯ ರಾ॥ ಹಿಂಗುರಾಣಿಯವರು ಮಹಾತ್ಮರ ಭಾಷಣಗಳನ್ನೂ ಲೇಖಗಳನ್ನೂ ಗಾಂಧಿಮಾಲಾ ಗ್ರಂಥದಲ್ಲಿ ಪ್ರಕಟಿಸತೊಡಗಿದ್ದಾರೆ. ಈ ಮಾಲೆಯ ೩ ಪುಸ್ತಕಗಳನ್ನು ಪ್ರಕಾಶಕರು ಸೇವಾ ಗ್ರಾಮಕ್ಕೆ ಹೋಗಿ ಮಹಾತ್ಮರಿಗೆ ಕಾಣಿಕೆ ಮಾಡಿದರು. ಈ ಮಾಲೆಯಲ್ಲಿ ಮಹಾತ್ಮರ ಸಮ್ಮತಿಯಿಂದ ಮಹಾತ್ಮರ ಭಾಷಣಗಳೂ ಲೇಖಗಳೂ ಪ್ರಕಟಿಸಲ್ಪಡುವವು. ಈ ಗ್ರಂಥಗಳ ಮೇಲಿಂದ ಮಹಾತ್ಮರ ವಿಚಾರಗಳನ್ನು ತಿಳಕೊಳ್ಳಲು ಜನರಿಗೆ ಅನುಕೂಲವಾಗುವಂತಿದೆ. ಈ ಮಾಲೆಯನ್ನು ಹಿಂದುಸ್ಥಾನದೊಳಗಿನ ಯಾವತ್ತೂ ಭಾಷೆಗಳಲ್ಲಿ ‘ಮುಂಬಯಿ ಕ್ರೊನಿಕಲ” ಕರ್ತರು ಪ್ರಕಟಿಸಬೇಕಾಗಿ ಸೂಚಿಸುತ್ತಾರೆ. ಮಹಾತ್ಮರಿಗೆ ಅಮೇರಿಕೆಯ ಕೆಂಪು ವರ್ಣದ ಜನರು ಶ್ರೀಮತಿ ಕಮಲಾದೇವಿಯವರ ಕಡೆ ಕೈನೂಲಿನ ಶಾಲನ್ನು ಕೊಟ್ಟು ಮಹಾತ್ಮರಿಗೆ ಅರ್ಪಿಸಲು ಹೇಳಿದ ಮೇರೆಗೆ ಶ್ರೀಮತಿ ಕಮಲಾದೇವಿಯವರು ವರ್ಧಾಕ್ಕೆ ಹೋಗಿ ಅದನ್ನು ಮಹಾತ್ಮರಿಗೆ ಅರ್ಪಿಸಿದ್ದಾರೆ.

ಜೀವದ ವಿಮೆಯ ಕೆಲಸಗಾರರಿಗೆ ಇದೊಂದು ಸುವರ್ಣ-ಸಂಧಿ!

— ಬೊಂಬೇ ಕೋ-ಒಪರೇಟಿವ್ಹ ಎಶ್ಯೂರನ್ಸ-ಸೊಸ್ಯಾಯಿಟಿ, ಲಿಮಿಟೆಡ್,—ಸಂಸ್ಥೆಯ-ಪರವಾಗಿ ಕಾನಡಾ ಜಿಲ್ಹೆಯಲ್ಲೂ ನೆರೆಹೊರೆಯ ಭಾಗಗಳಲ್ಲೂ ಸಂಘಟಕರನ್ನೂ ವಿಶೇಷ ಪ್ರತಿನಿಧಿಗಳನ್ನೂ ನೇಮಿಸುವದಿದೆ. ಈ ಸ್ಥಳಗಳನ್ನು ಬಯಸುವವರು ತ್ವರ್ಯವೇ ಅರ್ಜಿ ಮಾಡಬೇಕು. ಸೊಸ್ಯಾಟಿಯು ಕಡಿಮೆಯೆಂದರೆ ರೂ. ೧೫೦ ರ ಪೋಲಿಸಿಗಳನ್ನು ಕೊಡುತ್ತಿದೆ. ಇದರಿಂದ ಹಳ್ಳಿಯ ಬಾಂಧವರಿಗೂ ಔದ್ಯೋಗಿಕ ಕಾರಖಾನೆಗಳಲ್ಲಿ ಕಲಿಯುವ ಬಾಂಧವರಿಗೂ ಒಳ್ಳೇ ಅನುಕೂಲತೆಯುಂಟು.

ಅನುಭವಿಕ ಗೃಹಸ್ಥರಿಗೆ ಪ್ರಾಶಸ್ತ್ಯ ಕೊಡಲಾಗುವದು. ಅರ್ಜಿದಾರರು ತಮ್ಮ ಪೂರ್ಣ ಮಾಹಿತಿ ಸಹಿತ ಈ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಬೇಕು:—

ಕುಲಕರ್ಣಿ ಎಂಡ್ ಕಂಪನಿ, ಚೀಫ್ ಒರ್ಗನ್ಯಾಯಝರ್ಸ್.
ನವಸಾರಿ ಬಿಲ್ಡಿಂಗ, ಹೊರ್ನಬಿ ರೋಡ, ಫೋರ್ಟ, ಮುಂಬಯಿ.

ಕಾನಡಾವೃತ್ತ.

ಮಿತಿ ವೃಷ ಸಂವತ್ಸರ ಆಶ್ವೀಜ ವ॥ ಅಮಿ, ಸೋಮವಾರ

ಯುದ್ಧ ನಮ್ಮದಾದರೆ……?

ಸರ್ವಾಧಿಪತಿಗಳು ಸೈನ್ಯ ಸಲಹೆಗಾರ ಮಂಡಳದ ಉದ್ಘಾಟನ ಸಮಾರಂಭದ ಸಮಯ ಈಗ ನಡೆದಿರುವ ಮಹಾಯುದ್ಧ ನಮ್ಮ ಹಿಂದುಸ್ಥಾನದ್ದೆಂದು ಘೋಷಿಸಿ ಈ ಯುದ್ಧವನ್ನು ಜಯಿಸುವದಕ್ಕಾಗಿ ನಾವು ಹಿಂದವಾಸಿಗಳು ವಿಶ್ವಪ್ರಯತ್ನ ಮಾಡಬೇಕಾಗಿ ಪ್ರೇರೇಪಿಸಿದ್ದರಷ್ಟೇ! ನಾ॥ ಜಯಕರರು ಧಾರವಾಡದಲ್ಲಿ ಪ್ರಕೃತ ಪರಿಸ್ಥಿತಿಯನ್ನು ಸಮಾಲೋಚಿಸುವಾಗ, ಯುದ್ಧ ನಮ್ಮದೆಣಿಸುವ ಪ್ರಸಂಗ ಬಂದಿರುವದಾಗಿ ಒತ್ತಿಹೇಳಿದರು ಬ್ರಿಟಿಶರಂತೆ ಹಿಂದವಾಸಿಯರು ಪ್ರಕೃತ ಯುದ್ಧವನ್ನು ತಮ್ಮದೆಂಣಿಸಿ ಹೋರಾಡುವ ಪ್ರಸಂಗ ಬಂದಿರುವದಾಗಿ ನಾ॥ ಜಯಕರರು ಹೇಳಿದ ಮಾತಿಗೆ ನಾವು ತಲೆದೂಗುತ್ತೇವೆ. ಆದರೆ ಈ ಯುದ್ಧವನ್ನು ನಮ್ಮದೆಂದು ಎಣಿಸುವ ಭಾವನೆ ನಮ್ಮಲ್ಲಿ ಹುಟ್ಟಲೊಲ್ಲದು ಯುದ್ಧವು ಯುರೋಪ ಖಂಡದಿಂದ ಸ್ಥಿರವಾಗಿ, ಕ್ರಮವಾಗಿ ಮುಂದರಿದು ಬರತ್ತಿದೆ. ಅಫಘಾಣಿಸ್ತಾನದಲ್ಲಿ ಜರ್ಮನಿಯ ಗುಪ್ತ ಚಾರರು ತಳವೂರಿದ್ದಾರಾಗಿ ತುರ್ಕಸ್ತಾನದ ರಾಜಧಾನಿಯಾದ ಅಂಕಾರಾದಿಂದ ಆಕಾಶವಾಣಿಯಾಗಿದೆ ಇಷ್ಟು ಸಮೀಪವಾಗಿ ಯುದ್ಧಜ್ವಾಲೆಗಳು ಪಸರಿಸಿದಾಗ್ಯೂ ನಮ್ಮಲ್ಲಿ ಯುದ್ಧ ನಮ್ಮದೆಂಬ ಭಾವನೆ ಹುಟ್ಟದ ಕಾರಣವನ್ನು ಪರ್ಯಾಲೋಚಿಸುವದು ಅತ್ಯಗತ್ಯ ನಾ॥ ಜಯಕರರು ನುಡಿದಂತೆ, ಈ ಪರಿಸ್ಥಿತಿಗೆ ಬ್ರಿಟಿಶ ಸರಕಾರವೇ ಕಾರಣವೆಂದು ನಮಗೂ ಅನಿಸುತ್ತಿದೆ "ಯುದ್ಧ ನಿಮ್ಮದು, ನಿಮ್ಮ ಮೇಲಿನ ಪಾರುಪತ್ಯಾಧಿಕಾರ ನಮ್ಮದು. ಯುದ್ಧ ಗೆದ್ದು ನಿಮ್ಮ ಮೇಲಿನ ನಮ್ಮ ಒಡೆತನವನ್ನು ಸ್ಥಿರಪಡಿಸಿಕೊಳ್ಳಿ' ಎಂಬಂತಾಗಿ ಬ್ರಿಟಿಶ ಸರಕಾರವು ಹಿಂದುಸ್ಥಾನಕ್ಕೆ ಹೇಳಿ ಸ್ವಾರ್ಥ ಸಾಧಿಸಲು ಹವಣಿಸುತ್ತಲಾಗಿ ನಮ್ಮ ಜನಾಂಗದ ಅಭಿಪ್ರಾಯವಾಗಿರುತ್ತದೆ ಯುದ್ಧ ನಮ್ಮದಾದರೆ ಆ ಯುದ್ಧದ ಫಲಿತಾಂಶದ ಅಧಿಕಾರಿಗಳಾದವರೂ ನಾವೇ ಎಂದು ತಂತಾನೇ ಸಿದ್ಧವಾಗುತ್ತದೆ. ಆದರೆ ಯುದ್ಧ ನಮ್ಮದೆಂದು ಹೇಳುವಾಗ; ಯುದ್ಧ ಪರಿಣಾಮದಲ್ಲಿ ತಮ್ಮಂತೆ ಹಿಂದವಾಸಿಯರಿಗೆ ಅಧಿಕಾರ ಕೊಡಲು ಬ್ರಿಟಿಶರು ಒಡಂಬಡುವದಿಲ್ಲ ಯುದ್ಧ ಗೆದ್ದ ಬಳಿಕ ಏಕೆ?— ಯುದ್ಧ ನಡಿಸುವಾಗ ಸಹ— ತಮ್ಮದೇ ಪಾರುಪತ್ಯಾಧಿಕಾರವೆಂದು ಸಾಮ್ರಾಜ್ಯ ಕರ್ತರು ಪಟ ಹಿಡಿದು ವರ್ತಿಸುವದರಿಂದ ಹಿಂದುವಾಸಿಯರಲ್ಲಿ ಯುದ್ಧ ನಮ್ಮದೆಂಬ ಭಾವನೆ ಹುಟ್ಟುವದಿಲ್ಲ ಆದರಿಂದ ಇಂಥ ಉತ್ತ ಭಾವನೆಯ ಅಭಾವದಲ್ಲಿ ಯುದ್ಧಕ್ಕೆ ತಕ್ಕಷ್ಟು ಪ್ರಯತ್ನ ನಮ್ಮ ಜನಾಂಗದಿಂದ ಒದಗುವದಿಲ್ಲ ನಮ್ಮ ಸೈನಿಕರು ವೀರರು, ಶೂರರು, ಧೀರರು, ಸಾಹಸಿಗರು ಎಂಬುದಾಗಿ ಸರ್ವಾಧಿಪತಿಗಳೂ ಸಾಮ್ರಾಜ್ಯ ಸರಕಾರದ ಅಧಿಕಾರಿಗಳೂ ಘೋಷಿಸುತ್ತಿರುವಾಗ, ಇಂಥ ವೀರ ಯೋಧರ ಜನಾಂಗಕ್ಕೆ ಭವಿಷ್ಯದ ಆಶೆ ಕೊಡಲು ಸಾಮ್ರಾಜ್ಯ ಕರ್ತರು ಒಡಂಬಡುವದಿಲ್ಲ ನಾ॥ ಜಯಕರರು ಧಾರವಾಡದಲ್ಲಿ ನುಡಿದಂತೆ ಬ್ರಿಟಿಶ ಸರಕಾರಕ್ಕೆ ಹಿಂದುಸ್ಥಾನದಿಂದ ಜನ-ಧನ ಸಾಮುಗ್ರಿ ಸಿಕ್ಕಿದರೆ ಸಾಕು' ಯುದ್ಧಕ್ಕೆ ನಮ್ಮ ಜನಾಂಗದ ಮಾನಸಿಕ ಇಲ್ಲವೆ ಪಾರಮಾರ್ಥಿಕ ಬೆಂಬಲವನ್ನು ಸಾಮ್ರಾಜ್ಯ ಕರ್ತರು ಅಪೇಕ್ಷಿಸುವದಿಲ್ಲ ನಮ್ಮ ಜನಾಂಗವು ಸಂತೋಷಪಡಲಿ ಇಲ್ಲವೆ ಅಸಂತೋಷದಲ್ಲಿಯೇ ಇರಲಿ, ಸಾಮ್ರಾಜ್ಯ ಸರಕಾರಕ್ಕೆ ಅದರ ಗೊಡವೆಯಿಲ್ಲ ನಮ್ಮ ಸಂತೋಷ ಅಸಂತೋಷಗಳು ಯುದ್ಧ-ಯತ್ನ ಕಾರ್ಯದ ಮಟ್ಟಿಗೆ ವಿಚಾರಾರ್ಹವಲ್ಲೆಂದು ಸಾಮ್ರಾಜ್ಯಕರ್ತರ ಮನೋನಿರ್ಣಯ ಹಿಂದುಸ್ಥಾನವು ತಮ್ಮ ಅಂಕಿತ ಜನಾಂಗ, ಹಿಂದುಸ್ಥಾನದ ಸರ್ವಾಧಿಕಾರಿಗಳು ನಾವು, ಕುರಿಗೆ ಕೇಳಿ ಸಂಹಾರ ಅರಿಯುವಮುಂಟೇ? ಎಂಬ ಭಾವನೆಯನ್ನು ಸಾಮ್ರಾಜ್ಯ ಕರ್ತರು ತಳೆದು ನಮ್ಮ ಜನಾಂಗವನ್ನು ನಡಿಸಿಕೊಳ್ಳುತ್ತಿರುವಾಗ, ಯುದ್ಧವ್ಯವಹಾರದಲ್ಲಿ ನಮಗೆ ಯಾವದೇ ಪ್ರಕಾರದಿಂದ ನಿರ್ಣಾಯಕ ಅಧಿಕಾರ ಕೊಡದಿದ್ದಾಗ ಈ ಯುದ್ಧ ನಮ್ಮದೆಂಬ ಭಾವನೆಯಿಂದ ನಾವು ನಡಕೊಳ್ಳಬೇಕೆಂದು ಸಾಮ್ರಾಜ್ಯ ಕರ್ತರು ಅಪೇಕ್ಷಿಸುವದು ಮನುಷ್ಯಸ್ವಭಾವಕ್ಕೆ ವಿರುದ್ಧವಾದದ್ದೆಂದು ನಮ್ಮ ಅಭಿಪ್ರಾಯ ನಾ॥ ಜಯಕರರು ರಾಷ್ಟ್ರೀಯ ಸಭೆಯ ಅಲಿಪ್ತ ಧೋರಣವನ್ನು ಟೀಕಿಸುತ್ತಾರೆ. ರಾಷ್ಟ್ರೀಯ ಸಭೆಯು ಹಟಮಾರಿಯಿರಲಿಲ್ಲ ಮಹಾತ್ಮರ ಅಹಿಂಸೆಯ ಮೇಲಿನ ಕಟಾಕ್ಷವನ್ನು ಸಹ ಅಲ್ಲಗಳೆದು ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ಪುಣೆಯಲ್ಲಿ ಕೈಕೊಂಡ ಠರಾವಿನಂತೆ, ಸಾಮ್ರಾಜ್ಯಕರ್ತರು ನಡಿಯಲಿಕ್ಕಾಗಲಿ ಯುದ್ಧಯತ್ನದ ಪಾರುಪತ್ಯಾಧಿಕಾರವನ್ನು ಲೋಕಪ್ರಮುಖರಿಗೆ ಒಪ್ಪಿಸಲಿಕ್ಕಾಗಲಿ ಒಡಂಬಡದಿದ್ದಾಗ ರಾಷ್ಟ್ರೀಯ ಸಭೆಯವರು ಸತ್ಯಾಗ್ರಹ ಹೂಡಿದ್ದೂ ಸೆರೆಮನೆಯನ್ನು ಸೇರಿದ್ದು ಕ್ರಮಪ್ರಾಪ್ತವೆಂದು ನಮ್ಮ ನಿಶ್ಚಿತಾಭಿಪ್ರಾಯ ರಾಷ್ಟ್ರೀಯ ಸಭೆಯಂಥ ಸ್ವದೇಶಸ್ವಾತಂತ್ರ್ಯಕಾಂಕ್ಷಿ ಮಾನಧನ ಸಂಸ್ಥೆಗೆ ಬೇರೆ ಉಪಾಯವೇ ಇರಲಿಲ್ಲವೆಂದು ನಾವು ತಿಳಿಯುತ್ತೇವೆ ನಾ॥ ಜಯಕರರು ಬೇರೆ ಉಪಾಯವನ್ನು ಸೂಚಿಸಿದರೆ ಒಳಿತಾಗುತ್ತಿತ್ತು ಸಾಮ್ರಾಜ್ಯ ಕರ್ತರು ಯುದ್ಧಗಾಂಭೀರ್ಯವನ್ನು ನೆನಿಸಿ, ಹಿಂದುಸ್ಥಾನದಿಂದ ಆಗಬೇಕಾದ ಯುದ್ಧಕಾರ್ಯದ ವಿಚಾರದಿಂದ ರಾಷ್ಟ್ರೀಯ ಸಭೆಯ ಲೋಕಪ್ರತಿನಿಧಿತನವನ್ನು ಮನ್ನಿಸಿ ರಾಜ್ಯಭಾರದಲ್ಲಿ ಸ್ಥಿತ್ಯಂತರವನ್ನುಂಟು ಮಾಡುವ ಯಾವತ್ತೂ ಪ್ರಯತ್ನಗಳು ವಿಫಲವಾದಾಗ, ರಾಷ್ಟ್ರೀಯ ಸಭೆಯವರು ತಾಳ್ಮೆಯಿಂದ ವರ್ತಿಸಿದಾಗ, ಅಧಿಕಾರಸ್ಥಾನದಲ್ಲಿದ್ದ ಸಾಮ್ರಾಜ್ಯ ಕರ್ತರು ಸಂಧಿ-ಯೋಜನೆಯನ್ನು ತಿರಸ್ಕರಿಸಿದ್ದಿರುವಾಗ ರಾಷ್ಟ್ರೀಯ ಸಭೆಯವರನ್ನು ದೂರುವದು ಅನ್ಯಾಯವೆಂದು ನಾವು ಹೇಳಬಯಸುತ್ತೇವೆ. ನಮ್ಮ ಜನಾಂಗದ ಸ್ವಾತಂತ್ರ್ಯವನ್ನು ಮನ್ನಿಸಿ ಯುದ್ಧ ಕಾಲೋಚಿತವಾಗಿ ಪ್ರಕೃತ ರಾಜ್ಯಭಾರದಲ್ಲಿ ಸ್ಥಿತ್ಯಂತರವನ್ನುಂಟು ಮಾಡುವ ಯೋಜನೆಯನ್ನು ಸೂಚಿಸಿದರೆ ಈಗಲೂ ರಾಷ್ಟ್ರೀಯ ಸಭೆಯವರು ಆಲೋಚಿಸಲಿಕ್ಕೆ ಸಿದ್ಧರಿದ್ದಾರೆಂದು ನಮ್ಮ ಗ್ರಹಿಕೆ ಮಹಾತ್ಮರಿಗಾಗಲಿ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಮೌ॥ ಅಬುಲ ಕಲಮ ಅಝಾದರವರಿಗಾಗಲಿ, ಪಂ॥ ಜವಾಹಿರಲಾಲ, ಶ್ರೀ॥ ಚಕ್ರವರ್ತಿ ರಾಜಗೋಪಾಲಾಚಾರ್ಯ ಪ್ರಭೃತಿ ಕಾರ್ಯಕಾರಿ ಮಂಡಳದ ಸಭಾಸದರಿಗಾಗಲಿ ಬ್ರಿಟಿಶರ ಮೇಲೆ ಹಗೆಯಿಲ್ಲ ಜರ್ಮನರಿಗಿಂತ ಈಗ ಬಳಕೆಯಲ್ಲಿರುವ ಬ್ರಿಟಿಶರೇ ನಮಗೆ ಇಷ್ಟವೆಂಬ ಸಂಗತಿಯನ್ನು ಎಲ್ಲರೂ ಒಪ್ಪುತ್ತಾರೆ ಹಿಂದುಸ್ಥಾನದ ಮೇಲಿನ ಬ್ರಿಟಿಶರ ಅಧಿರಾಜ್ಯ ಸಮೂಲ ನಷ್ಟವಾಗಬೇಕು, ಜರ್ಮನರ ರಾಜ್ಯ ಹಿಂದುಸ್ಥಾನದ ಮೇಲೆ ನಡೆಯಬೇಕು ಎಂಬ ಕಾಂಕ್ಷೆ ಯಾವನೇ ಹಿಂದವಾಸಿಯಲ್ಲಿಲ್ಲ. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಸಿಗಬೇಕು, ಜರ್ಮನರು ಜರ್ಮನಿಯಲ್ಲಿ ಬ್ರಿಟನರು ಬ್ರಿಟನಿನಲ್ಲಿ ಸಾರ್ವಭೌಮರಾಗಿ ಆಳುವಂತೆ ನಾವು ಹಿಂದುವಾಸಿಯರು ಹಿಂದುಸ್ಥಾನದಲ್ಲಿ ಸಾರ್ವಭೌಮರಾಗಿ ಸ್ವತಂತ್ರರಾಗಿ ಆಳಿ, ಲೋಕಕ್ಷೇಮಕ್ಕೆ ಕಾರಣವಾಗಬೇಕೆಂದು ರಾಷ್ಟ್ರೀಯ ಸಭೆಯ ಅಟ್ಟಹಾಸವಿದೆ ಹೊರತು ಜರ್ಮನರ ಅಭಿಮಾನವಾಗಲಿ ಪ್ರೀತಿಯಾಗಲಿ ನಮ್ಮಲ್ಲಿಲ್ಲ ಈ ಸಂಗತಿಯನ್ನು ಸಾಮ್ರಾಜ್ಯಕರ್ತರು ಅರಿತಿದ್ದಾರೆ ಮಹಾತ್ಮರಾದರೂ ಯುದ್ಧಯತ್ನಕಾರ್ಯದಲ್ಲಿ ವಿಘ್ನಗಳನ್ನುಂಟು ಮಾಡಲು ಬಯಸುವದಿಲ್ಲವೆಂಬ ಸಂಗತಿಯನ್ನು ದಿಲ್ಲಿಯ 'ಹಿಂದುಸ್ಥಾನ ಟೈಮ್ಸ' ಪತ್ರಿಕಾಕರ್ತರಾದ ಶ್ರೀ॥ ದೇವಿದಾಸ ಗಾಂಧಿಯವರು ಅಲಹಾಬಾದ ಹೈಕೋರ್ಟಿನಲ್ಲಿ ತಮ್ಮ ಮೇಲೆ ನಡೆದ ಕೋರ್ಟ ತಿರಸ್ಕಾರದ ಖಟ್ಲೆಯಲ್ಲಿ ಹೇಳಿದ್ದುಂಟು ಸ್ವಸಂತೋಷದಿಂದ ಯುದ್ಧಸಹಾಯ ಮಾಡುವಲ್ಲಿ ರಾಷ್ಟ್ರೀಯ ಸಭೆಯ ಆತಂಕವಿಲ್ಲ ಹಿಂದುಸ್ಥಾನದೊಳಗಿನ ಈಗಿನ ರಾಜ್ಯಭಾರದ ಸ್ಥಿತಿ ಎಲ್ಲರಿಗೂ ಗೊತ್ತಿದ್ದ ಮಾತು ರಾಜ್ಯಭಾರದಲ್ಲುಂಟಾದ ನಮ್ಮ ಜನಾಂಗದ ಸ್ಥಿತಿಯನ್ನು ನಾವು ಅನುಭವಿಸುತ್ತಿದ್ದೇವೆ ಯಾವ ಪ್ರವೃತ್ತಿಯಿಂದ ಯುದ್ಧಯತ್ನ ನಡೆದಿದೆಂಬ ಸಂಗತಿಯನ್ನೂ ರಾಷ್ಟ್ರೀಯ ಸಭೆಯ ಭೂಮಿಕೆಯನ್ನೂ ಸ್ವದೇಶಬಾಂಧವರು ಬಲ್ಲರು ಇವನ್ನೆಲ್ಲ ಗ್ರಹಿಸಿ ಸಾಮ್ರಾಜ್ಯಕರ್ತರಿಗೆ ಯುದ್ಧಸಹಾಯವನ್ನು ನೀಡಿದ್ದರಿಂದ ಹಿಂದುಸ್ಥಾನದ ಉನ್ನತಿ ಇಲ್ಲವೆ ಉದ್ಧಾರವಾಗುವದೆಂದು ನಮ್ಮ ದೇಶಬಾಂಧವರ ಕಲ್ಪನೆ ಇದ್ದರೆ ಆ ಪ್ರಕಾರ ಯುದ್ಧಸಹಾಯ ನೀಡುವಲ್ಲಿ ರಾಷ್ಟ್ರೀಯ ಸಭೆಯ ಆಕ್ಷೇಪವಿಲ್ಲ ಆದರೆ ಯುದ್ಧ ಗೆದ್ದ ಬಳಿಕ ಬ್ರಿಟಿಶರಿಂದ ಸ್ವದೇಶೋದ್ಧಾರದ ಮಟ್ಟಿಗೆ ಏನೂ ಪ್ರಾಪ್ತಿಯಾಗಲಿಕ್ಕಿಲ್ಲವೆಂಬ ರಾಷ್ಟ್ರೀಯ ಸಭೆಯ ಅಭಿಪ್ರಾಯ ಮಾನ್ಯವಿದ್ದವದು

ಯಾವದೇ ಪ್ರಕಾರದಿಂದ ಯುದ್ಧ-ಯತ್ನದಲ್ಲಿ ಸೇರದೆ ಅಲಿಪ್ತವಾಗಿದ್ದರೆ ಆ ಕುರಿತು ರಾಷ್ಟ್ರೀಯ ಸಭೆಯನ್ನು ದೂರಲಿಕ್ಕೆ ಆಸ್ಪದವಿಲ್ಲ ಭವಿಷ್ಯದ ಆಶೆಯ ಅಭಾವದಲ್ಲಿ ಯುದ್ಧಯತ್ನದೊಳಗೆ ಮನಮುಟ್ಟಿ ದುಡಿಯಬೇಕಾಗಿ ಜನಸಾಮಾನ್ಯರಿಗೆ ಪ್ರೇರೇಪಿಸುವ ಬಗೆ ಹೇಗೆ? ಈ ಕುರಿತು ನಾ॥ ಜಯಕರರ ವ್ಯವಹಾರಿಕ ಸೂಚನೆಯೊಂದಿರುವದೆಂದು ನಮಗೆ ತಿಳಿಯುವದಿಲ್ಲ. ಈಗಿನ ಅಸಂತೋಷ, ಆ ಅಸಂತೋಷದಿಂದ ಉಂಟಾದ ಅಲಿಪ್ತತೆ, ಆ ಅಲಿಪ್ತತೆಯಿಂದುಂಟಾದ ನ್ಯೂನತೆಗಳನ್ನು ಪರಿಹರಿಸಿಕೊಳ್ಳಬೇಕೆಂಬ ಸಂಗತಿ ಸ್ಪಷ್ಟವಿದೆ. ಸಾಮ್ರಾಜ್ಯಕರ್ತರು ರಾಷ್ಟ್ರೀಯ ಸಭೆಯನ್ನು ಸಂತೈಸಬೇಕೆಂಬ ಮಾತು ಸಹ ದಿಟವಾದದ್ದು ಅಂತೆಯೇ ರಾಷ್ಟ್ರೀಯ ಸಭೆಯವರು ಅಧಿಕಾರಾರೂಢರಾಗಿ ಪ್ರಾಂತಿಕ ಸರಕಾರಗಳನ್ನು ಲೋಕಮತಾನುವರ್ತಿಯಾಗಿ ನಡಿಸಲು ಮುಂದಾಗಿ ಬರಬೇಕೆಂದೂ ನಾವಾದರೂ ಹೇಳುತ್ತೇವೆ ಆದರೆ ಈ ಪರಿಣಾಮವಸ್ಥೆ ಕೂಡಿ ಬರುವ ಬಗೆ ಹೇಗೆ? ಎಂಬದೇ ಸಮಸ್ಯೆ ಸಾಮ್ರಾಜ್ಯಕರ್ತರು ನಮ್ಮ ಸೈನಿಕರ ಪ್ರಶಂಸೆಯನ್ನು ಮುಕ್ತಕಂಠದಿಂದ ಘೋಷಿಸುತ್ತಿದ್ದಾಗ್ಯೂ ನಮ್ಮ ಮೇಲೆ ಸಾಮ್ರಾಜ್ಯಕರ್ತರಿಗೆ ನಂಬಿಗೆಯಿಲ್ಲ ಸೈನ್ಯ ಇಲಾಖೆಯಲ್ಲಿ ಹೋರಾಡುವ ಸೈನಿಕರಲ್ಲಿ ಬ್ರಿಟಿಶರು ಬೇರೆ, ಬ್ರಿಟಿಶ-ವಂಶಜರು ಬೇರೆ, ನಮ್ಮ ಹಿಂದೀಯರು ಬೇರೆ, ಹೀಗೆ ಪಂಕ್ತಿ ಪ್ರಪಂಚ ನಡೆದಿದೆ. ರಣಭೂಮಿಯಲ್ಲಿ ನಮ್ಮ ಹಿಂದೀ ಸೈನಿಕರೇ ಮುಂದಾಗಿ ಸಾಹಸ-ಪರಾಕ್ರಮಗಳನ್ನು ನಡಿಸುತ್ತಾರೆಂದು ಪ್ರಮುಖ ಸಾಮ್ರಾಜ್ಯಕರ್ತರು ಘೋಷಿಸುವಾಗ ಸೈನ್ಯ ಇಲಾಖೆಯೊಳಗಿನ ಈ ಪಂಕ್ತಿ-ಪ್ರಪಂಚ ಹೇಗೆ ನಡೆಯುತ್ತದೆಂಬ ಸಂಗತಿ ತಿಳಿಯುವದಿಲ್ಲ ಹೀಗೆಲ್ಲ ಭೇದ, ಪಕ್ಷಪಾತ ನಡೆಯುತ್ತಿದ್ದಾಗ ಹಿಂದುಸ್ಥಾನವು ಇನ್ನೂ ಅಂಕಿತ ಜನಾಂಗವೆಂದು ಎಣಿಸಲ್ಪಡುತ್ತಿದ್ದಾಗ ಮುಂದಿನ ಉದ್ಧಾರದ ಆಶೆ ತೋರದಿದ್ದಾಗ ಯುದ್ಧ ನಮ್ಮದೆಂದು ನಾವು ಎಣಿಸಿ ಯುದ್ಧಯತ್ನ ಕಾರ್ಯದಲ್ಲಿ ಉತ್ಸಾಹಭರಿತರಾಗಿ ಸತತೋದ್ಯೋಗ ನಡಿಸಬೇಕೆಂದು ಸಾಮ್ರಾಜ್ಯಕರ್ತರು ಅಪೇಕ್ಷಿಸಲಾಗದು ಈ ಯುದ್ಧ ನಮ್ಮದಾದರೆ, ನಮ್ಮದಾಗಬೇಕಾಗಿದ್ದರೆ, ಈಗ ನಡೆದಿರುವ ಯುದ್ಧಯತ್ನವನ್ನು ನಾವೇ ಮುಂದಾಗಿ ಉಲ್ಹಾಸದಿಂದಲೂ ಉತ್ಸಾಹದಿಂದಲೂ ನಡಿಸಬೇಕಾದರೆ ಆ ಯುದ್ಧಯತ್ನ ಕಾರ್ಯದ ಚಾಲಕತ್ವವನ್ನು ನಮಗೊಪ್ಪಿಸಬೇಕು. ಯುದ್ಧವನ್ನು ಜಯಿಸಿದ ಬಳಿಕ ಆ ವಿಜಯೋತ್ಸವದಲ್ಲಿ ಸ್ವತಂತ್ರ ಜನಾಂಗದೋಪಾದಿಯಲ್ಲಿ ವ್ಯವಹರಿಸಲು ಅನುಕೂಲವಾಗುವಂತೆ ಈಗಿನ ರಾಜ್ಯಭಾರದಲ್ಲಿ ಮಾರ್ಪಾಟಗಳಾಗಬೇಕು ಅಂದರೆ ಯುದ್ಧ ನಮ್ಮದಾಗಬಲ್ಲದು; ಯುದ್ಧಯತ್ನ ನಮ್ಮದಾಗಬಲ್ಲದು, ನಮ್ಮದಾಗಬೇಕಾದ ಯಾವತ್ತೂ ಯುದ್ಧಯತ್ನ ಕಾರ್ಯ ಪೂರ್ಣವಾಗಿ ನೆರವೇರಬಲ್ಲದು ತಕ್ಕ ಸ್ಥಿತ್ಯಂತರಗಳನ್ನೊದಗಿಸಿ ತರದೆ ಯುದ್ಧ ನಮ್ಮದೆಂದು ಘೋಷಿಸುವದು ನಿರರ್ಥಕ. ಇಂಥ ಘೋಷಣೆಗಳಿಂದ ಅಂತಃಕರಣಗಳು ಕಳವಳಗೊಳ್ಳುವದಿಲ್ಲ ಸಾಮ್ರಾಜ್ಯಕರ್ತರಿಗೆ ಈ ಮಾತನ್ನು ನಾವು ಹಿಂದೆ ಹೇಳಿದ್ದೇವೆ, ಈಗಲೂ ಒತ್ತಿ ಹೇಳುತ್ತೇವೆ ಸರ್ವಾಧಿಕಾರಿ ಲಿನಲಿಥಗೋ ದೊರೆಗಳು ಯುದ್ಧ ನಮ್ಮದೆಂದು ಗೌರವಿಸುವದು ವಸ್ತುಸ್ಥಿತಿಯ ವಿಪರ್ಯಾಸವೆಂದೂ ಇಂಥ ವಿಪರ್ಯಾಸದಿಂದ ಏನೂ ನಿಷ್ಪತ್ತಿಯಿಲ್ಲವಾಗಿಯೂ ಯುದ್ಧ ನಮ್ಮದೆಂದು ಹೇಳುವ ಪೂರ್ವದಲ್ಲಿ ಆ ಶಬ್ದಗಳಿಗುಚಿತವಾಗಿ ರಾಜ್ಯಭಾರದಲ್ಲಿ ತಕ್ಕ ತಿದ್ದುಪಾಟಗಳನ್ನು ಕೈಕೊಳ್ಳಬೇಕಾಗಿಯೂ ನಾವು ಸೂಚಿಸುತ್ತೇವೆ

ಬ್ರಿಟಿಶರು ರುಶ್ಯರ ಕೈ ಬಿಟ್ಟರೇ ?

[ನಿರೀಕ್ಷಕನು ಬರೆದುದು.]

ಬ್ರಿಟಿಶರು ರುಶ್ಯರ ಕೈಬಿಟ್ಟರೇ ? ರುಶ್ಯರ ಕಲಿತನದ ಹೋರಾಟವೆಲ್ಲ ನಿರರ್ಥಕವಾಯಿತೇ ? ಏನಾಯಿತೆಂದು ಹೇಳಲು ನನಗೆ ಬಾಯಿ ಬರುವದಿಲ್ಲವಲ್ಲಾ ! ಪೂರ್ವ ರಣಭೂಮಿಯಿಂದ ಬರ್ಲಿನ್ನಿಗೆ ಮರಳಿಬಂದ ಜರ್ಮನ ಪ್ರಸಿದ್ಧಿ ಇಲಾಖೆಯ ಪ್ರಮುಖರಾದ ಟ್ರಿರ್ಚ್‌ರವರು "ಪೂರ್ವ ಪಾರ್ಶ್ವದ ಸಂಗ್ರಾಮದ ನಿರ್ಣಯವಾಯಿತು, ರುಶ್ಯರು ನಾಮಶೇಷರಾದರು !" ಹೀಗೆ ಪ್ರಕಟಣೆ ಹೊರಡಿಸುತ್ತಾರೆ. ನಿನ್ನೆ ರವಿವಾರ ರುಶ್ಯ ಜನಾಂಗದ ಸಂಪೂರ್ಣ ಪರಾಭವದ ವಾರ್ತೆ ಪ್ರಕಟವಾಗುವದಿತ್ತೋ ಏನೋ, ಹಿಟ್ಲರ ಮಹಾ ಪ್ರಭುವು ರವಿವಾರದ ಸಂಚಿಕೆಯಲ್ಲಿ ಜರ್ಮನ ಸೈನ್ಯಾಧಿಕಾರಿಗಳ ಮಹತ್ವದ ಘೋಷಣೆಯನ್ನು ಭಾಷಿಸಲು ಸ್ಥಳವನ್ನು ಕಾದಿಡಬೇಕೆಂದು ೩ ದಿನ ಮುಂಚಿತವಾಗಿಯೇ ಕಟ್ಟಪ್ಪಣೆ ಹೊರಡಿಸಿದ್ದಾನೆ ! ರುಶ್ಯ-ಜರ್ಮನ ಯುದ್ಧದ ಗ್ರಂಥವನ್ನು ಹಿಟ್ಲರನು ಬರೆಯತೊಡಗಿದ್ದಾನಂತೆ ಮೊಸ್ಕೋದೊಳಗಿನ 'ರೆಡ್‌ಫ್ಲೀಟ' ಪತ್ರಿಕೆಯು ರುಶ್ಯ ದೇಶದ ಸ್ಥಿತಿ ನಿರಾಶಾಜನಕವಿರುವದೆಂದೂ ಬ್ರಿಟಿಶರು ಫ್ರಾನ್ಸ ದೇಶದ ಪಾರ್ಶ್ವದಿಂದ ಪಶ್ಚಿಮ ರಣಭೂಮಿಯ ಮೇಲೆ ಹೋರಾಡಿ ರುಶ್ಯ ದೇಶದ ಮೇಲಿನ ಗಂಡಾಂತರವನ್ನು ಬಗೆಹರಿಸಬೇಕೆಂದೂ ಸೂಚಿಸುತ್ತದ ಜರ್ಮನರು ಪೂರ್ವರಣಭೂಮಿಯ ಮೇಲೆ ಯಾವತ್ತೂ ಸೈನ್ಯಬಲವನ್ನು ಕೇಂದ್ರೀಕರಿಸಿರುವರೆಂದೂ ಪಶ್ಚಿಮ ಪಾರ್ಶ್ವದಿಂದ ದಾಳಿ ಮಾಡಿದರೆ ಸೈನ್ಯಬಲವನ್ನು ಜರ್ಮನರು ಪಶ್ಚಿಮಕ್ಕೆ ವರ್ಗಾಯಿಸಬೇಕಾಗುವದೆಂದೂ ಆದರಿಂದ ರುಶ್ಯರಿಗೆ ಕೆಲ ಮಟ್ಟಿಗೆ ಬೆಂಬಲ ಕೊಟ್ಟಂತಾಗುವದೆಂದೂ 'ರೆಡ್ ಫ್ಲೀಟ' ಪತ್ರಿಕೆಯು ಗಾಬರಿಯಿಂದ ಸೂಚಿಸುತ್ತಿದೆ ಆದರೆ ಬ್ರಿಟಿಶರು ಪಶ್ಚಿಮ ರಣ ಭೂಮಿಯ ಮೇಲೆ ಹೋರಾಡ ಹೋಗುವರೆಂದು ನನಗೇನು ಅನಿಸುವದಿಲ್ಲ "ಗಡಿಬಿಡಿ, ಗೊಂದಲ ಮಾಡಬೇಡಿ; ಅವ್ಯವಸ್ಥಾಕಾರರಾಗಬೇಡಿ, ಇಂಥ ಗಾಬರಿಯಿಂದ ರುಶ್ಯ ದೇಶಕ್ಕೆ ಏನೂ ಸಹಾಯವಾಗದು" ಹೀಗೆ 'ಲಂಡನ್ ಟೈಮ್ಸ' ಪತ್ರಕರ್ತರು ಸ್ವಜನರಿಗೆ ಸಾವಧಾನದ ಉಪದೇಶ ಮಾಡುತ್ತಾರೆ ರುಶ್ಯ ಸೇನಾಪತಿಗಳು ಭಯಂಕರವಾದ ಅಪಾಯದಲ್ಲಿ ಸಿಲುಕಿದ್ದಾರೆಂದು 'ಡೇಲಿ ಟೆಲಿಗ್ರಾಫ' ಪತ್ರಿಕೆಯೂ ಬರೆದು 'ರೆಡ್ ಫ್ಲೀಟ' ಪತ್ರಿಕೆಯ ಮಾತು ಕೇಳಿ ಬ್ರಿಟಿಶರು ಪಶ್ಚಿಮ ಪಾರ್ಶ್ವದಿಂದ ಜರ್ಮನರ ಮೇಲೆ ದಾಳಿ ಮಾಡಹೋದರೆ ಬ್ರಿಟಿಶರು ಓಡಿಹೋಗಬೇಕಾದೀತೆಂದು ಅದೇ ಪತ್ರಿಕೆಯು ಅಭಿಪ್ರಾಯಪಡುತ್ತಿದೆ. ಇವೆಲ್ಲ ಪ್ರಕಾರಗಳನ್ನು ಕೇಳಿ ನಾನು ದಿಗಿಲುಬಿದ್ದಿದ್ದೇನೆ ರುಶ್ಯರು ಬಿದ್ದರು, ಬ್ರಿಟಿಶರು ರುಶ್ಯರ ಕೈಬಿಟ್ಟರು! ಆದಾಗ್ಯೂ ಅಭಿಮನ್ಯುವಿನಂತೆ ರುಶ್ಯರು ಕಲಿತನದಿಂದ ಹೋರಾಡುತ್ತಿದ್ದಾರೆ, ರುಶ್ಯಪ್ರಭು ಸ್ಟೆಲಿನನು ಸ್ವತಃ ರಣಭೂಮಿಗೆ ಹೋಗಿದ್ದಾನಂತೆ! ಸ್ವಾತಂತ್ರ್ಯಕ್ಕಾಗಿ ರುಶ್ಯರು ಎದೆಗಟ್ಟಿ ಮಾಡಿ ಹೋರಾಡುವ ವರ್ಣನೆ ನನ್ನಿಂದ ಹೇಳಬರದು. ಲೆನಿನಗ್ರೆಡ ಪಟ್ಟಣ ಇನ್ನೂ ಜರ್ಮನರ ಕೈವಶವಾಗದು! ಜರ್ಮನರು ಲೆನಿನಗ್ರೆಡನ್ನು ಸುತ್ತುವರಿಯುತ್ತಿದ್ದಾರೆ. ಆದರೆ ಅದನ್ನು ಕೈವಶ ಮಾಡಿಕೊಳ್ಳಲು ಇನ್ನೂ ಅವರಿಗೆ ಸಾಧ್ಯವಾಗುವದಿಲ್ಲ ಲೆನಿನಗ್ರೆಡದ ಹೆಬ್ಬಾಗಿಲಲ್ಲಿ ಜರ್ಮನರು ತಳವೂರಿದ್ದಾರೆಂದು ಹಿಟ್ಲರನು ಘೋಷಿಸಿ ಈಗ ೮-೧೦ ದಿನಗಳಾದವು. ಲೆನಿನಗ್ರೆಡದ ಮೇಲೆ ಜರ್ಮನ ವಿಮಾನಗಳು ಬಾಂಬುಗಳನ್ನೆಸೆದು ಉಂಟುಮಾಡಿದ ವಕ್ಷೋಭೆಯನ್ನು ಹೇಗೆ ಸೈರಿಸುತ್ತಾರೆಂದು ನಾನೇನರಿಯೆ! ಇಷ್ಟು ಉಗ್ರ ದಾಳಿಯಾದಾಗ್ಯೂ ರುಶ್ಯರು ಜರ್ಮನರಿಗೆ ಪಟ್ಟಣ ಸೇರಗೊಡುವದಿಲ್ಲ. ಹೆದೆಯೇರಿಸಿ, ಪ್ರತಿಭಟಿಸಿ ಜರ್ಮನರನ್ನು ಹಿಡಿದು ನಿಲ್ಲಿಸಿದ್ದಾರೆ ಜರ್ಮನರು ನಿರುಪಾಯರಾಗಿ ಕಂದಕಗಳನ್ನು ತೋಡಿಕೊಂಡು ಕಾಲಹರಣ ಮಾಡುತ್ತಿದ್ದಾರಂತೆ. ಲೆನಿನಗ್ರೆಡದ ಸಂಗ್ರಾಮದ ಮಟ್ಟಿಗೆ ಹೇಳತಕ್ಕಂಥಾದ್ದೇನಿಲ್ಲ. ಆದರೆ ಮಧ್ಯ ರಣಭೂಮಿಯಲ್ಲಿ ಮಾತ್ರ ಜರ್ಮನ ಕಪಟಗಳು ರುಶ್ಯರಿಗೆ ಮೋಹಿಸಿ ನಿರ್ನಾಮಗೊಳಿಸಿದ ಸಂಗತಿಯನ್ನು ನಮೂದಿಸಲು ನನಗೊಳ್ಳೆ ವ್ಯಸನ ಮಧ್ಯರಣಭೂಮಿಯಲ್ಲಿ ರುಶ್ಯ ಸೈನಿಕರು ಮುಂದರಿದು ಹೋಗಿ ಜರ್ಮನರಿಂದ ೮ ಗ್ರಾಮಗಳನ್ನು ಕೈವಶ ಮಾಡಿಕೊಂಡರು, ೧೦ ಗ್ರಾಮಗಳನ್ನು ಕೈವಶ ಮಾಡಿಕೊಂಡರು, ಜರ್ಮನರು ಹಿಮ್ಮೆಟ್ಟುತ್ತಿದ್ದಾರೆ; ರುಶ್ಯರು ಮುಮ್ಮೆಟ್ಟುತ್ತಿದ್ದಾರೆ, ಇವೇ ಮೊದಲಾದ ವಾರ್ತೆಗಳನ್ನು ಕೇಳಿ ನನಗೊಳ್ಳೇ ಉಲ್ಹಾಸವಾಗಿತ್ತು ಹಿಟ್ಲರನ ಸಮಾಧಿ ರುಶ್ಯ ದೇಶದಲ್ಲಿಯೇ ಕಟ್ಟುವ ಪ್ರಸಂಗ ಬರುವದೆಂದು ನಾನು ಹುರುಳಿಹೋಗಿದ್ದೆ ಆದರೆ ಈ ವಿಜಯಗಳೇ ರುಶ್ಯರ ಅಪಜಯಕ್ಕೆ ಕಾರಣವಾಗಿವೆ! ರುಶ್ಯ ಸೇನಾಪತಿ ತಿಮೋಶಿಂಕೊರವರು ಮೊಸ್ಕೋ ರಾಜಧಾನಿಯಿಂದ ಮುಂದೆ ನುಗ್ಗಿ ಬಂದ ಹಾಗೆ ಜರ್ಮನರು ಬುದ್ಧಿಪೂರ್ವಕವಾಗಿ ಬಹು ಚತುರತನದಿಂದ ಹೆದರಿದ ಹಾಗೆ ಹಿಂದೆ ಸರಿದರು! ರುಶ್ಯರು ತಕ್ಕಷ್ಟು ಒಳಸೇರಿದ ಬಳಿಕ ರುಶ್ಯರ ಹಿಂಬದಿಯಿಂದ ಉತ್ತರ ದಕ್ಷಿಣ ಪಾರ್ಶ್ವದಿಂದ ಜರ್ಮನ ಸೈನ್ಯಗಳು-ಹೋಗಿ ರುಶ್ಯ ಸೈನ್ಯ ಪಥಕಗಳನ್ನು ಸುತ್ತುಗಟ್ಟಿದವು ಚಕ್ರವ್ಯೂಹದಲ್ಲಿ ಸಿಕ್ಕಿಬಿದ್ದ ವೀರ ಅಭಿಮನ್ಯುವಿನಂತೆ ರುಶ್ಯರ ಸ್ಥಿತಿಯಾಯಿತು, ಕಾದಾಡಬೇಕು, ಇಲ್ಲವೆ ಶತ್ರುವಶವಾಗಬೇಕು, ಬೇರೆ ಉಪಾಯವೇ ಇರಲಿಲ್ಲ ಹಿಂದೆ-ಮುಂದೆ, ಆಚೆ-ಈಚೆ, ಸುತ್ತ-ಮುತ್ತ ಜರ್ಮನ ಸೈನ್ಯ ಪಥಕಗಳಿದ್ದವರಿಂದ ರುಶ್ಯ ಸೈನ್ಯ ಪಥಕಗಳೆಲ್ಲ ಪಂಜರದಲ್ಲಿ ಸಿಲುಕಿ ಬಿದ್ದಂತಾಗಿವೆ. ಅವು ಈಗ ನಾಶಹೊಂದುವದಂತು ನಿಜ, ಆದರೆ ಇಷ್ಟಕ್ಕೆ ಈ ಆಪತ್ತು ತೀರಲಿಲ್ಲ. ಮೊಸ್ಕೋ ಪಟ್ಟಣದ

ರಕ್ಷಕ ಸೈನ್ಯ ಬಲವೇ ಈಗ ಇಲ್ಲದಂತಾಗಿದೆ! ಹೀಗಾಗಿ ಜರ್ಮನರು ಈಗ ಸೊಕ್ಕಿ ಹೋಗಿದ್ದಾರೆ! ಬಿರುಗಾಳಿಯಂತೆ ಮೊಸ್ಕೊದ ಕಡೆಗೆ ಕೂಚು ಮಾಡುತ್ತಿದ್ದಾರೆ! ಮೊಸ್ಕೊದಿಂದ ಜರ್ಮನರು ಈಗ ೧೦೦ ಮೈಲು ಸಹ ದೂರವಿಲ್ಲ ಇಂದು-ನಾಳೆಯೊಳಗೆ ಮೊಸ್ಕೊ ರಾಜಧಾನಿ ಜರ್ಮನರ ವಶವಾಗುವ ಪ್ರಸಂಗದ. ಮೊಸ್ಕೊ ರಾಜಧಾನಿಯಿಂದ ಜನರು ಈಗ ಹೊರಹೊಡುತ್ತಿದ್ದಾರೆ! ಅಮೇರಿಕೆಯ ರಾಯಭಾರಿ ಕಚೇರಿಯವರು ಕಾರ್ಝಾನ ಕಡೆಗೆ ಹೋಗಿ ಒಂದು ವಾರವಾಗಿರಬೇಕು. ಮಹಾನುಭಾವರನೇಕರು ಮೊಸ್ಕೊ ಪಟ್ಟಣ ಬಿಟ್ಟು ಹೋದರೆಂದು ಅಮೇರಿಕೆಯ ರಾಯಭಾರಿ ಕಚೇರಿಯಿಂದ ಸುದ್ದಿ ಹೊರಟಿದೆ. ಮೊಸ್ಕೊ ಹೋದರೆ ರುಶ್ಯರ ಕಾದಾಟ ಮುಗಿಯಿತೆಂದು ತಿಳಿಯುವದು ಮಾತ್ರ ತಪ್ಪು! ಮೊಸ್ಕೊ ರಾಜಧಾನಿ ಕಳಕೊಂಡರೂ ರುಶ್ಯರು ಎದೆಗುಂದುವವರಲ್ಲವಾಗಿ ಅಮೇರಿಕೆಯಿಂದ ರುಶ್ಯ ದೇಶಕ್ಕೆ ಹೋದ ಸಂಡ ಎಂಬ ತಿಸ್ಸರು ಲಂಡನಿನಲ್ಲಿ ಹೇಳುತ್ತಾರೆ. ರುಶ್ಯರು ಹಿಂಜರಿಯುವರಂತೆ! ಹಿಂಜರಿಯುತ್ತ ಹೋರಾಡುವರಂತೆ! ಅಂತು ಜರ್ಮನರಿಗೆ ವಶವಾಗರಂತೆ!! ರುಶ್ಯರ ಧೈರ್ಯದ ವಾರ್ತೆಗಳನ್ನು ಕೇಳಿ ಸಾಮಾನ್ಯರಲ್ಲಿ ಉತ್ಸಾಹ ತುಂಬಬಹುದು! ಆದರೆ ಈ ಉತ್ಸಾಹದಿಂದ ಕಾರ್ಯಭಾಗವಾಗುವಂತಿಲ್ಲ. ಇದೇ ನನಗ ವ್ಯಸನ! ದಕ್ಷಿಣ ರಣಭೂಮಿಯಲ್ಲೂ ರುಶ್ಯರಿಗೆ ಸೋಲೇ! ಇಲ್ಲಿಯೂ ರುಶ್ಯರು ಜರ್ಮನರನ್ನು ತಡೆದು ನಿಲ್ಲಿಸುವರೆಂದು ನನಗೇನು ಧೈರ್ಯವಿಲ್ಲ ಯುಕ್ರೇನದ ಪಂಚಪ್ರಾಣವಾದ ಖಾರಕೋವ್ಹ ಪ್ರದೇಶ ಜರ್ಮನರ ವಶವಾಗುವ ತಯಾರಿಯಲ್ಲಿದೆ, ವಶವಾಯಿತೆಂದು ಹೇಳಿದರೂ ಅಡ್ಡಿಯಿಲ್ಲ! ಉತ್ತರ ಪಾರ್ಶ್ವದ ಓರೆಲ, ಪಶ್ಚಿಮ ಪಾರ್ಶ್ವದ ಚರ್ನಿಗೊ, ದಕ್ಷಿಣದ ಪೋಲ್ಟಾವಾ ಈ ಮೂರೂ ಠಾಣ್ಯಗಳು ಜರ್ಮನರ ವಶವಾದ್ದರಿಂದ ಖಾರಕೋವ್ಹ ಪ್ರದೇಶ ಜರ್ಮನರ ವಶವಾಗಲು ಹೆಚ್ಚಿನ ಅವಕಾಶ ಬೇಡ ಓರೆಲ, ಖಾರಕೋವ್ಹ ಪ್ರದೇಶದಲ್ಲಿ ರುಶ್ಯ ದೇಶದ ಐಶ್ವರ್ಯವೆಲ್ಲ ಒಟ್ಟುಗೂಡಿರುವದೆಂದು ಹೇಳುತ್ತಾರೆ. ಕಬ್ಬಿಣ, ಚಿನ್ನ, ಪ್ಲೆಟಿನಮ್ ಮೊದಲಾದ ನಾನಾತರ ಧಾತುಗಳು ಈ ಪಾರ್ಶ್ವದಲ್ಲಿ ತುಂಬಿ ತುಳುಕುತ್ತಿವೆ ಸ್ಟೆಲಿನ ಮಹಾಪ್ರಭುವಿನ ರುಶ್ಯ ಸರಕಾರವು ಪಂಚವಾರ್ಷಿಕ ಯೋಜನೆ, ದಶವಾರ್ಷಿಕ ಯೋಜನೆಗಳನ್ನು ಮಾಡಿ ಈ ಪಾರ್ಶ್ವವನ್ನು ಸಮೃದ್ಧಗೊಳಿಸಿದ ಕಥೆ ಕೇಳಿದರೆ ಆಲ್ಹಾದವಾಗುತ್ತದೆ! ರಾಜಶಕ್ತಿಯು ಲೋಕಹಿತಕ್ಕಾಗಿ ವ್ಯವಹರಿಸಿದರೆ ಉಂಟಾಗುವ ಲೋಕ-ಸಮೃದ್ಧಿಯ ಕಲ್ಪನೆ ಬರುತ್ತಿದೆ! ದಕ್ಷಿಣ ಭಾಗದಲ್ಲಿ ರುಶ್ಯರಿಗೊದಗಿದ ವಿಪತ್ತು ಇನ್ನೂ ಭಯಂಕರವಾದದ್ದು ಈ ಪಾರ್ಶ್ವದಲ್ಲಿ ಜರ್ಮನರು ನೀಪರ ನದಿಯನ್ನು ದಾಟಿ ರುಶ್ಯರಿಗ ಹಿಂದಕ್ಕಟ್ಟಿ ಮುನ್ನುಗ್ಗುತ್ತಿದ್ದಾರೆ ಖೇರಸನ್ ಪಟ್ಟಣ, ನೀಪರ ನದಿಯ ಮೇಲಿನ ಮುಖ್ಯ ಠಾಣ್ಯ. ಅದು ಜರ್ಮನರ ವಶವಾಗಿದೆ ಅಲ್ಲಿಂದ ಜರ್ಮನರು ಪೂರ್ವಪಾರ್ಶ್ವದಿಂದ ಅಝೋವ ಸಮುದ್ರದ ಮೇಲೆ ಗುರಿಯಿಟ್ಟು ರೋಸ್ಟೋವ್ಹ ಪಟ್ಟಣದ ಕಡೆ ಕೂಚು ಮಾಡುತ್ತಿದ್ದಾರೆ. ರೋಸ್ಟೋವ್ಹ ಅಂದರೆ ಕೊಕೆಸಸ ಪರ್ವತದ ಮುಖ್ಯ ಕೀಲಿ ಆಚೆ ಕ್ರಿಮಿಯಾ ದ್ವೀಪಕಲ್ಪದಿಂದ ಎಡಪಾರ್ಶ್ವದಿಂದ ಇತ್ತ ಕಡ ಜರ್ಮನರಿಗೆ ಎದುರಾಗುವದಕ್ಕಾಗಿ ಒಂದು ರುಶ್ಯ ದಂಡು ಕೂಚು ಮಾಡಿ ಬರುತ್ತಿತ್ತು. ಜರ್ಮನರು ಆವೇಶದಿಂದ ಈ ಸೈನಿಕರ ಮೇಲೆ ಸಾಗಿಹೋಗಿ ನಡುದಾರಿಯಲ್ಲಿಯೇ ಎದುರಾಗಿ ರುಶ್ಯರನ್ನು ಹಿಂದಕ್ಕಟ್ಟಿಬಿಟ್ಟಿದ್ದಾರೆ! ಈ ಸೈನಿಕರಿಗೆ ಸುಸೂತ್ರವಾಗಿ ಪಾರಾಗಲಿಕ್ಕೂ ಈಗ ಉಪಾಯವಿಲ್ಲ ಹಿಂಭಾಗದಿಂದ ಜರ್ಮನರು ಹೋಗಿ ಅವರಿಗೆ ತಡೆ ಹಾಕುತ್ತಿದ್ದಾರೆ. ಹೀಗೆ ಎಲ್ಲ ಪಾರ್ಶ್ವದಿಂದಲೂ ರುಶ್ಯ ಸೈನಿಕರು ಸುತ್ತುಗಟ್ಟಲ್ಪಟ್ಟಿದ್ದಾರೆ. ಕ್ರಿಮಿಯಾದೊಳಗೆ ಇನ್ನೂ ಯುದ್ಧ ನಡೆದಿದೆ. ಜರ್ಮನರು ಕ್ರಿಮಿಯವನ್ನು ಗೆದ್ದುಕೊಂಡರೆ ಕಪ್ಪು ಸಮುದ್ರದ ಆಡಳಿತ ಜರ್ಮನರ ವಶವಾಗುತ್ತದೆ. ಕಪ್ಪು ಸಮುದ್ರವು ಜರ್ಮನರ ವಶವಾದರೆ ಕೊಕೆಸಸ ಪ್ರದೇಶವನ್ನು ಕಾಪಾಡಿಕೊಳ್ಳುವದು ದುರ್ಘಟವೇ ಸೈ! ಕಪ್ಪು ಸಮುದ್ರದ ರುಶ್ಯರ ಸೆಬಾಸ್ಟಪೂಲ ಬಂದರ ಇನ್ನೂ ಜರ್ಮನರ ವಶವಾಗಿಲ್ಲ. ಆದರಿಂದಲೇ ಜರ್ಮನರು ತಡೆದು ನಿಂತಿದ್ದಾರೆ ಅದು ಜರ್ಮನರ ಸ್ವಾಧೀನವಾದ ಬಳಿಕ ಕಪ್ಪು ಸಮುದ್ರದ ವ್ಯವಹಾರವೆಲ್ಲ ಜರ್ಮನರಿಗೆ ಆಧೀನವಾದಂತೆಯೇ. ೧೫ ಲಕ್ಷ ಟನ್ನಿನ ಯುದ್ಧ ಹಡಗು-ಪಡೆಗಳು ಕಪ್ಪು ಸಮುದ್ರ ಸೇರಲು ಸಜ್ಜಾಗಿ ನಿಂತಿವೆ! ಇಷ್ಟು ಹಡಗಗಳು ಕಪ್ಪು ಸಮುದ್ರದಲ್ಲಿ ಜರ್ಮನರ ಬೆಂಬಲಕ್ಕಿರುವಾಗ ಕೊಕೆಸಸ ಪ್ರಾಂತದ ದಾಳಿ ಜರ್ಮನರಿಗೆ ಯಶಸ್ವಿಯಾಗುವದೆಂದು ನಾನು ಹೇಳುವದು ಬೇಡ

ಈಗ ಬ್ರಿಟಿಶರು ಜರ್ಮನರನ್ನು ಪಶ್ಚಿಮ ಪಾರ್ಶ್ವದಲ್ಲಿ ಅಂದರೆ ಫ್ರಾನ್ಸ ರಣಭೂಮಿಯಲ್ಲಿ ಎದುರಿಸುವದಿಲ್ಲವೆಂಬ ಮಾತು ಸ್ಪಷ್ಟವಿದೆ. 'ಲಂಡನ ಟೈಮ್ಸ' ದಂಥ ಪತ್ರಕರ್ತರು ಈ ಯೋಜನೆ ಅವ್ಯವಹಾರಿಕವೆಂದು ಆಕ್ಷೇಪಿಸುತ್ತಿದ್ದಾಗ ಮತ್ತು ಅಲ್ಲಿ ರಣಕಂಡನ ಹೂಡಿದರೆ ಬ್ರಿಟಿಶರು ಓಡಿ ಬರಬೇಕಾದೀತೆಂದು ಎಚ್ಚರಿಕೆ ಕೊಟ್ಟಾಗ ಆ ಪಾರ್ಶ್ವದಲ್ಲಿ ಬ್ರಿಟಿಶರು ಜರ್ಮನರಿಗೆ ಪ್ರತಿಭಟಿಸುವರೆಂದು ಹೇಳುವದು ಕಠಿಣ ಇಂಗ್ಲಂಡದ ಪತನ ಯಾರಿಗೂ ಇಷ್ಟವಿಲ್ಲ. ಅಮೇರಿಕೆಯ ಅಧ್ಯಕ್ಷರಾದ ರೂಝವೆಲ್ಟರವರು ಇಂಗ್ಲಂಡದ ಪತನವಾಗುತ್ತಿದ್ದರೆ ತಾವು ಯುದ್ಧದಲ್ಲಿ ಸೇರುವ ಪ್ರಸಂಗವಿದೆಂದು "ಕಲಿಯರ್ಸ" ಎಂಬ ಮಾಸಪತ್ರಿಕೆಯಲ್ಲಿ ಲೇಖ ಬರೆದಿದ್ದಾರೆ ಇಂಗ್ಲಂಡದ ಪತನವಾಗುವದು ಬಹು ಕಠಿಣವೆಂದು ನನಗೂ ಅನಿಸುತ್ತಿದೆ ಆದರೆ ಈಗ ಯುದ್ಧವಾಗುವದು ಬ್ರಿಟಿಶ-ಜರ್ಮನರೊಳಗೆ, ಅದು ಬಹುತರವಾಗಿ ಇರಾಣದಲ್ಲಿಯೇ ಎಂದು ನನ್ನ ಅಂಬೋಣ. ಲಂಡನಿನ 'ಡೇಲಿ ಮೇಲ' ಪತ್ರಿಕೆಯಾದರೂ ಇದೇ ಪ್ರಕಾರ ಅಭಿಪ್ರಾಯಕೊಟ್ಟು ಇರಾಣವನ್ನು ಭದ್ರಪಡಿಸಲು ಬ್ರಿಟಿಶ ಸರಕಾರಕ್ಕೆ ಜಾಗ್ರತೆ ಕೊಡುತ್ತದ ಇರಾಣವನ್ನು ಎಷ್ಟಕ್ಕೂ ಕಳಕೊಳ್ಳಬಾರದಾಗಿ 'ಡೇಲಿ ಮೇಲ' ಪತ್ರಿಕೆಯ ಆಗ್ರಹ. ಅಫಘಾಣಿಸ್ತಾನದಲ್ಲಿ ಜರ್ಮನಿಯ ಗುಪ್ತಚಾರರು ತಳವೂರಿದ್ದಾರೆಂದು ಅಂಕಾರಾದೊಳಗಿನ ವಾರ್ತೆ 'ಲಂಡನ ಟೈಮ್ಸ' ಪತ್ರಿಕೆಯ ರಾಜಕೀಯ ಸುದ್ದಿಗಾರರು ಇದೇ ಪ್ರಕಾರ ಅಭಿಪ್ರಾಯ ಕೊಡುತ್ತಾರೆ ಆದರೆ ಇದರೊಳಗೇನೂ ತಥ್ಯಾಂಶವಿಲ್ಲವೆಂದು ಅಫಘಾನ ಸರಕಾರದ ಅಂಬೋಣವಂತೆ. ಅಫಘಾನ ಸರಕಾರವು ನೆರೆಹೊರೆಯ ಜನಾಂಗಗಳೊಡನೆ ಮಿತ್ರಭಾವದಿಂದಲೇ ಇರುವದಂತೆ ಮುಂಬಯಿಯೊಳಗಿನ ಅಫಘಾಣಿಸ್ತಾನದ ರಾಯಭಾರಿಗಳೂ ಈ ಸುದ್ದಿಯನ್ನು ನಿರಾಕರಿಸುತ್ತಾರೆ ಸಟೆ ಯಾವದು, ದಿಟವ್ಯಾವದು ಎಂದು ನಾನೇನೂ ಹೇಳಲಾರೆ! ಇರಾಕದೊಳಗೆ ಪ್ರಧಾನ ಮಂಡಳ ಬದಲಿತು! ಅನಪೇಕ್ಷಿತವಾಗಿ ಈ ಮಂಡಳ ಬದಲಿದೆ ಮುಂಚಿನ ಪ್ರಧಾನ ಮಂಡಳವನ್ನು ಬ್ರಿಟಿಶರೇ ಸ್ಥಾಪಿಸಿದ್ದರು ಹೀಗಿರುವಾಗ, ಮುಖ್ಯ ಪ್ರಧಾನರಾದ ಜಮಿಲಾಲ ಮುದಫೀಯವರು ಏಕೆ ರಾಜಿನಾಮೆ ಕೊಟ್ಟರೆಂದು ನನಗೆ ತಿಳಿಯುವದಿಲ್ಲ ಇರಾಕದೊಳಗೆ ಬ್ರಿಟಿಶರ ಪ್ರಸ್ಥ ಕಡಿಮೆಯಾಯಿತೇನೆಂದು ನನಗೆ ಭೀತಿ ಹತ್ತಿದೆ. ಅಂತು ಈ ಪಾರ್ಶ್ವದಲ್ಲಿ ಬಹು ಗಡಿಬಿಡಿಯಾಗಹತ್ತಿದೆ. ನಮ್ಮ ಗಡಿನಾಡಿನಲ್ಲಿ ಆಗಬಹುದಾದ ವಿಮಾನ-ಹಲ್ಲೆಗಳ ಪೂರ್ವ ಸೂಚನೆಯಿದೆಯೆಂದು ಕೆಲವರು ಎಣಿಸುತ್ತಾರೆ ತುರ್ಕ ಜರ್ಮನರೊಳಗೆ ಮೊನ್ನೆ [illegible]ನೇ ತಾರೀಖಿಗೆ ವ್ಯಾಪಾರಿ ತಹನಾಮೆಯಾಯಿತು. ತುರ್ಕ-ಜರ್ಮನ ಸಂಬಂಧಗಳು ಸ್ನೇಹಭಾವದ್ದಿರುವವೆಂದು ತುರ್ಕ ಸರಕಾರದ ಪ್ರಸಿದ್ಧಿ ಇಲಾಖೆಯವರು ಪ್ರಕಟಿಸುತ್ತಾರೆ. ಇದರ ಮೇಲಿಂದ ತುರ್ಕಸ್ತಾನದ ಒಲವು ಜರ್ಮನರ ಒದಿಗಾಗುತ್ತದೇನೆಂಬ ಶಂಕೆ ನನ್ನಲ್ಲುಂಟಾಗುತ್ತಿದೆ. ಇರಾಕದೊಳಗಿನ ಸ್ಥಿತ್ಯಂತರವೂ ಈ ಸೂತ್ರಗಳ ಕಾರಣವೆಂಬ ಅನುಮಾನ ಹುಟ್ಟುತ್ತಿದೆ. ಖೈಬರ ಕಂದರದಲ್ಲಿ ಹಿಂದುಸ್ಥಾನ ಸರಕಾರವು ಕೋಟೆ-ಕೊತ್ತಳಗಳನ್ನು ರಕ್ಷಿಸಿ ಅವುಗಳನ್ನು ಸಂರಕ್ಷಿಸುವದಕ್ಕಾಗಿ ಹಿಂದುಸ್ಥಾನ ಸರಕಾರವು ಬಹಳ ಜಾಗ್ರತೆಯನ್ನು ಕೊಳ್ಳಹತ್ತಿದೆ ಇಲ್ಲಿಯ ಸರಕಾರದ ಒಲವಿನ 'ಎಸೋಸಿಯೇಟೆಡ್ ಪ್ರೆಸ್' ವಾರ್ತಾ ಸಂಸ್ಥೆಯ ಸ್ವಂತ ಪ್ರತಿನಿಧಿಗಳು ಗಡಿನಾಡಿನಲ್ಲಿ ನಡೆಯುತ್ತಿರುವ ಸಂರಕ್ಷಣೆಯ ವಾರ್ತೆಗಳನ್ನು ಪ್ರಕಟಿಸುತ್ತಾರೆ ಅಫಘಾಣಿಸ್ತಾನದಲ್ಲಿ ಏನಾದರೊಂದು ಭೀತಿಯಿದ್ದನಕ ಖೈಬರ ಕಂದರದಲ್ಲಿ ಸಂರಕ್ಷಣೆಯ ಸಿದ್ಧತೆ ನಡೆಯುವಂತಿಲ್ಲ ಪಂಜಾಬ-ಪೇಶಾವರಗಳಲ್ಲಿ ವಿಮಾನ-ಹಲ್ಲೆಗಳ ನಾಟಕ ನಡೆಯುವ ಪ್ರಸಂಗವೂ ಇಲ್ಲ ಸೀರಿಯಾದೊಳಗೂ ಅರಬರು ಸಮಾಧಾನದಿಂದಿಲ್ಲ ಸೀರಿಯಾಕ್ಕೆ ಕೊಡಮಾಡಿದ ಸ್ವಾತಂತ್ರ್ಯದ ಯೋಜನೆಯಿಂದ ಅಲ್ಲಿಯ ರಾಷ್ಟ್ರೀಯ ಪಕ್ಷಕ್ಕೆ ಸಮಾಧಾನವಿಲ್ಲ ಅರಬರೊಳಗೆ ಬುದ್ಧಿಭೇದ-ಪಕ್ಷ ಭೇದಗಳನ್ನುಂಟು ಮಾಡುವದಕ್ಕಾಗಿ ಈ ಸ್ವಾತಂತ್ರ್ಯ ಯೋಜನೆಯ ಕಲ್ಪನೆಯಾಗಿದೆಂದು ರಾಷ್ಟ್ರೀಯ ಪಕ್ಷದ ಅಭಿಪ್ರಾಯವಾಗಿದೆ ಹೀಗೆ ತುರ್ಕಸ್ತಾನದಿಂದ ಅಫಘಾಣಿಸ್ತಾನದ ವರೆಗಿನ ಮನಃಸ್ಥಿತಿಯುಂಟು ಚಂಚಲತೆಯೇ ಈವಾಗ ಈ ಪ್ರದೇಶದಲ್ಲಿ ಬೇರೂರಿಕೊಂಡಿದೆ. ಯಾವಾಗ ಏನಾದೀತೆಂದು ನಾನೇನೂ ಹೇಳಲಾರೆ ರುಶ್ಯ ದೇಶದ ರಣಸಂಗ್ರಾಮದಿಂದ ಜರ್ಮನರು ಬಿಡುಗಡೆಯಾದ ಬಳಿಕ, ಈ ಪಾರ್ಶ್ವದ ಘೋರಣ ನಿಶ್ಚಯವಾದೀತು ಸದ್ಯಕ್ಕೆ ಜರ್ಮನರು ಮೊಸ್ಕೋದ ಮೇಲೆ ಭಯಂಕರವಾದ ವಿಮಾನ-ಹಲ್ಲೆಗಳನ್ನು ಮಾಡುತ್ತಿದ್ದಾರೆ. ೪೮ ತಾಸುಗಳಲ್ಲಿ ರುಶ್ಯರಣಭೂಮಿಯ ಭವಿಷ್ಯ ನಿರ್ಣಯ ಹೊಂದುವದೆಂದು ಶುಕ್ರವಾರ ಲಂಡನಿನಿಂದ ಬಂದ ಸುದ್ದಿ ನೋಡಿದರೆ ನಿನ್ನೆ, ಯಾ ಈ ಹೊತ್ತು ರುಶ್ಯ ದೇಶದ ರಣಸಮಾಪ್ತಿಯಾಗಬೇಕೆಂದು ನನ್ನ ಅನುಮಾನ! ಬ್ರಿಟಿಶರು ರುಶ್ಯರ ಕೈ ಬಿಟ್ಟ ನಮೂನೆಯ ಮೇಲಿಂದ, ನಿನ್ನೆ ಜರ್ಮನ ವೃತ್ತಪತ್ರಿಕೆಗಳಲ್ಲಿ ಮಹತ್ವದ ಸಂಕೇತವನ್ನು ಪ್ರಕಟಿಸಲು ಸ್ಥಳ ಕಾದಿಡಬೇಕೆಂದು ಹಿಟ್ಲರನು ಹೊರಡಿಸಿರುವ ಅಪ್ಪಣೆಯಿಂದ ನಿನ್ನೆಯೇ ಯಾವತ್ತೂ ಪ್ರಕರಣ ಮುಗಿದಿರಬೇಕೆಂದು ನನ್ನ ಅನುಮಾನ! ಅಂತು ಈಗ ಬಹಳ ಕಠಿಣ ಕಾಲ ಬಂತು!!

ಮುಂದಿನ ವಾರ “ವೃತ್ತ”ಕ್ಕೆ ರಜೆ.

ಬರುವ ರವಿವಾರ ಮತ್ತು ಸೋಮವಾರ ದೀಪಾವಳಿ ಹಬ್ಬದ ನಿಮಿತ್ತ “ವೃತ್ತ”ದ ಕೆಲಸಗಾರರಿಗೆ ಬಿಡುವು ಕೊಡಬೇಕಾದ್ದರಿಂದ ಮುಂದಿನ ವಾರ “ವೃತ್ತ”ವೂ ರಜೆ ಕೊಳ್ಳುವದು. ಕಾರಣ ಮುಂದಿನ ಸಂಚಿಕೆಯು ತಾ. ೨೭—೧೦—೪೧ನೇ ಸೋಮವಾರ ಪ್ರಕಟವಾಗುವದು.

ವ್ಯವಸ್ಥಾಪಕ

ಸ್ಥಾನಿಕ ವೃತ್ತಾಂತ.

ಕುಮಟಾ — ಕಳೆದ ಮಂಗಳವಾರದಿಂದ ಮಳೆ ಹಿಂದಾಗಿದೆ. ಹಗಲು ಸೆಕೆ. ರಾತ್ರಿಯಲ್ಲಿಷ್ಟೇ ಕೆಲ ಮಟ್ಟಿಗೆ ತಂಪು ತೋರುತ್ತಿದೆ. ಒಕ್ಕಲಿಗರು ಗದ್ದೆ ಕೊಯಿಲು ಮಾಡತೊಡಗಿದ್ದಾರೆ ಊರಲ್ಲಿ ಇನ್ನೂ ಪೂರ್ಣ ಕ್ಷೇಮವಿಲ್ಲ. ರವಿವಾರ ಮತ್ತು ಸೋಮವಾರ ಕೂಡಿ ೯ ಇಂಚು ಮಳೆಯಾಗಿರುವದು.

ಗಿಬ್ಬ ಹಾಯಸ್ಕೂಲಿನ ವಿದ್ಯಾರ್ಥಿಗಳ ಈ ವರ್ಷದ ವಾರ್ಷಿಕ ಸಮ್ಮೇಲನವೂ ಇನಾಮು ಕೊಡುವ ಸಮಾರಂಭವೂ ಕಳೆದ ಗುರು, ಶುಕ್ರ, ಶನಿವಾರ ಜರುಗಿದವು. ಶುಕ್ರವಾರ ಸಂಜೆ ಇನಾಮು ಕೊಡುವ ಸಮಾರಂಭದ ಅಧ್ಯಕ್ಷಸ್ಥಾನವನ್ನು ಜಿಲ್ಹಾಧಿಪತಿಗಳಾದ ರಾ| ಡಿ. ಎಸ್. ಮೋದಕರವರು ಸ್ವೀಕರಿಸಿದ್ದರು. ವಿದ್ಯಾರ್ಥಿ-ವಿದ್ಯಾರ್ಥಿನಿಗಳ ಗಾಯನ-ವಾದನ ಸಂಭಾಷಣೆಗಳಾದ ಮೇಲೆ ಶಾಲೆಯ ವಾರ್ಷಿಕ ವರದಿ ಓದಿ ಹೇಳಲ್ಪಟ್ಟಿತು ಆ ಮೇಲೆ ಕಳೆದ ವಾರ್ಷಿಕ ಪರೀಕ್ಷೆಗಳಲ್ಲೂ, ಮುನ್ನಾಣ ದಿನ ನಡೆದ ಭಾಷಣ-ಸ್ಪರ್ಧೆಗಳು ಮತ್ತು ಆಟಪಾಟಗಳಲ್ಲೂ, ವಿದ್ಯಾರ್ಥಿಗಳ ಕೈಗಾರಿಕೆಗಳ ಪ್ರದರ್ಶನದಲ್ಲೂ ಪ್ರಶಸ್ತಿ ದೊರಕಿಸಿದ ವಿದ್ಯಾರ್ಥಿಗಳಿಗೆ ಇನಾಮುಗಳು ಹಂಚಲ್ಪಟ್ಟವು. ಅಧ್ಯಕ್ಷರು ಸಮಾರಂಭದ ಸಮಾರೋಪ ಮಾಡುವಾಗ ವಿದ್ಯಾರ್ಥಿಗಳಿಗೆ ನಾಲ್ಕು ಉಪದೇಶಪರ ಮಾತುಗಳನ್ನು ಹೇಳಿ, ಬರೇ ನೌಕರಿಯ ಆಶೆಯಿಂದ ಕಲಿಯಬೇಡಿರೆಂದೂ, ಏನಾದರೂ ಉದ್ಯೋಗ, ವ್ಯವಸಾಯ ಮಾಡಿ ಸ್ವತಂತ್ರ ಜೀವನ ಸಾಧಿಸುವ ಧ್ಯೇಯವನ್ನು ಮುಂದಿಟ್ಟು ಕಲಿಯಿರೆಂದೂ, ಗ್ರಾಮೋದ್ಯೋಗಿಗಳಿಗೆ ಪ್ರೋತ್ಸಾಹ ಕೊಡಿರೆಂದೂ ಬೋಧಿಸಿದರು ತಮ್ಮ ಭಾಷಣದ ಕೊನೆಗೆ ಅವರು ವಿದ್ಯಾರ್ಥಿಗಳಿಗೂ ಶಿಕ್ಷಕರಿಗೂ ರಾಷ್ಟ್ರಸಂರಕ್ಷಣೆ ವಿಷಯದಲ್ಲಿ ನಾಗರಿಕರ ಕರ್ತವ್ಯ ತಿಳಿಸಿ ಹೇಳಿ, ಉತ್ಸಾಹದಿಂದಲೂ ಸ್ಫೂರ್ತಿಯಿಂದಲೂ ನಾಗರಿಕ ಸೈನಿಕರಾಗಲು ಉತ್ತೇಜನಕೊಟ್ಟರು

ಇದೇ ಬರುವ ಮಾರ್ಚ ತಿಂಗಳಲ್ಲಿ ಕುಮಟಾ ನಗರಸಭೆಯ ತ್ರೈವಾರ್ಷಿಕ ಸಾರ್ವತ್ರಿಕ ಚುನಾವಣೆಯಾಗಲಿದೆಯಷ್ಟೇ ಅದರ ಕಾರ್ಯಕ್ರಮವು ನಿನ್ನೆಯೇ ಜಿಲ್ಹಾಧಿಪತಿಗಳ ಕಡೆಯಿಂದ ನಿಶ್ಚಿತವಾಗಿ ಹೊರಬಿದ್ದಿದೆ. ಆ ಕಾರ್ಯಕ್ರಮದಂತೆ ಮತದಾರ ಕಚ್ಚಾ ಯಾದಿಗಳು ತಾ. ೩-೧೧-೪೧ಕ್ಕೆ ಪ್ರಕಟವಾಗುವವು, ಈ ಯಾದಿಗಳ ಬಗ್ಗೆ ತಕರಾರುಳ್ಳವರು ತಾ ೧೭-೧೧-೪೧ ರೊಳಗಾಗಿ ತಮ್ಮ ತಕರಾರುಗಳನ್ನು ಮ್ಯುನಿಸಿಪಾಲಿಟಿಯವರ ಕಡೆ ಹಾಜರಪಡಿಸಬೇಕು; ಮ್ಯುನಿಸಿಪಾಲಿಟಿಯವರೇ ಈ ತಕರಾರುಗಳ ವಿಚಾರ ಮಾಡುವರು, ಎಲ್ಲ ತಕರಾರುಗಳ ನಿವೃತ್ತಿಯಿಂದ ಸಿದ್ಧವಾಗುವ ಪಕ್ಕಾ ಮತದಾರ-ಯಾದಿಗಳು ತಾ. ೧೭-೧೨-೪೧ನೇಗೆ ಪ್ರಕಟವಾಗುವವು, ಚುನಾವಣೆಗೆ ನಿಲ್ಲಬಯಸುವ ಹುರಿಯಾಳುಗಳು ತಾ ೭-೧-೪೨ರ ನಂತರ ತಾ. ೧೪-೧-೪೨ರೊಳಗಾಗಿ ಕುಮಟಾ ಮಾಮಲೇದಾರರ ಕಡೆಗೆ ಹುರಿಯಾಳು ಪತ್ರಗಳನ್ನು ಹಾಜರಪಡಿಸಬೇಕು, ತಾ ೧೬-೧-೪೨ನೇಗೆ ಅವುಗಳ ಪರಿಶೀಲನೆಯಾಗಿ ತಾ ೨೨-೧-೪೨ನೇಗೆ ಹುರಿಯಾಳುಗಳ ಯಾದಿಯು ಪ್ರಕಟವಾಗುವದು; ತಾ. ೩-೩-೪೨ನೇಗೆ ಮುಂಜಾನೆ ಹಾಗೂ ಸಂಜೆ ಮತದಾನ ನಡೆಯುವದು, ಮತ್ತು ಮರುದಿನ ಮುಂಜಾನೆ ೯ ಘಂಟೆಯಿಂದ ಮುಂದೆ ಮತಗಳ ಎಣಿಕೆಯಾಗಿ, ಯಶಸ್ವಿ ಹುರಿಯಾಳುಗಳ ಹೆಸರುಗಳು ಪ್ರಕಟವಾಗುವವು.

ಪ್ರಾಂತಿಕ ಹಿಂದೀ ಪ್ರಚಾರ ಸಭೆಯ ಅಪೇಕ್ಷೆಯಂತೆ ಕಳೆದ ತಾ ೨೭ ರಿಂದ ತಾ ೪-೧೦-೪೧ ರ ವರೆಗೆ ಇಲ್ಲಿಯ ಹಿಂದೀ ಪ್ರಚಾರ ಸಂಘದವರು “ಹಿಂದೀ-ಪ್ರಚಾರ ಸಪ್ತಾಹ”ವನ್ನು ಆಚರಿಸಿದರು, ತಾ ೨೭ ನೇಗೆ ರಾ|| ಸುಬ್ರಾಯ ಶಾನಭಾಗರ ಅಧ್ಯಕ್ಷತೆಯಲ್ಲಿ ಸಭೆಯಾಗಿ ರಾ|| ಸುಬ್ರಾಯ ಭಟ್ಟ ಮತ್ತು ರಾ|| ವಿಷ್ಣು ಪಂಡಿತ ಇವರ ಭಾಷಣಗಳಾದವು ರಾ|| ಭಟ್ಟರು ಹಿಂದೀ ಮತ್ತು ಹಿಂದುಸ್ಥಾನಿ ಇವುಗಳೊಳಗಿನ ಸೂಕ್ಷ್ಮ ಭೇದವನ್ನು ತಿಳಿಸಿ ಹೇಳಿ ಭಾರತದಲ್ಲಿ ನವರಾಷ್ಟ್ರ-ನಿರ್ಮಾಣ ಮಾಡಲು ಹಿಂದುಸ್ಥಾನಿಯ ಪ್ರಚಾರವು ಬಹಳ ಸಹಾಯಕಾರಿಯಾಗುವದೆಂದು ಮನಗಾಣಿಸಿಕೊಟ್ಟರು ರಾ| ಪಂಡಿತರೂ ಹಿಂದೀ ಕಲಿಯುವದರ ಮಹತ್ವ ವಿವರಿಸಿದರು. ತಾ ೨೮, ೨೯, ೩೦ನೇಗೆ ರಾ| ಭಗವಾನದಾಸ ಭಾಟಿಯಾ ಇವರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿಗಳ ಭಾಷಣ-ಸ್ಪರ್ಧೆಗಳೂ ಭಾರತದ ಒಕ್ಕಟ್ಟಿನ ದಿನದ ಆಚರಣೆಯೂ ನಡೆದವು ತಾ. ೨ನೇಗೆ ಮಹಿಳಾ ದಿನದ ನಿಮಿತ್ತ ಹೆಣ್ಣು ಹುಡುಗಿಯರ ಮರಾಠಿ ಶಾಲೆಯಲ್ಲಿ ಸಭೆ ಸೇರಿಸಿ, ರಾ|| ವೈಕುಂಠ ಶಾನಭಾಗರು ನಮ್ಮ ನಾಡು ಮತ್ತು ಸಂಸ್ಕೃತಿಗಳ ಉದ್ಧಾರಕ್ಕಾಗಿ ಸ್ತ್ರೀಯರು ಏನು ಮಾಡಬೇಕೆಂಬ ವಿಷಯವನ್ನು ವಿವರಿಸಿ ಹೇಳಿದರು, ಮತ್ತು ಎಲ್ಲರೂ ಸ್ವದೇಶವನ್ನು ಆಚರಿಸಬೇಕೆಂದು ಬೋಧಿಸಿದರು. ಅಂತು ಈ ಸಪ್ತಾಹವು ಉತ್ಸಾಹದಿಂದ ಕೊನೆಗಂಡಿತು

ಸಿರ್ಸಿ ವಿಭಾಗದ ಬಗ್ಗೆ ಪ್ರಾಂತಸಾಹೇಬರು ಈ ಕೆಳಗೆ ಕಾಣಿಸಿದ ಜನರನ್ನು ಶಾನಭೋಗಿ ಸ್ಥಳಗಳಿಗೆ ಉಮೇದವಾರರನ್ನಾಗಿ ಆರಿಸಿದ್ದಾರೆ ೧. ರಾ|| ಸಿದ್ದಪ್ಪಾ ಬಸಪ್ಪಾ ನವಲಗುಂದ, ಸಿರ್ಸಿ, ೨. ರಾ|| ಹನುಮಾ ಹುಲಿಯಾ, ಸಿರ್ಸಿ, ೩ ರಾ|| ನಾಗಪ್ಪಾ ಪರಮೇಶ್ವರ ಹೆಗಡೆಕರ, ಹೊನ್ನಾವರ; ೪. ರಾ|| ಜಟ್ಟಪ್ಪಾ ನಾಗಪ್ಪಾ ನಾಯ್ಕ ಬಾಡ, ೫. ರಾ|| ಶಿವಾನ್ನ ಪ್ರಭು ಮಡಿವಾಳ, ಹೊಸೂರ; ೬ ರಾ|| ಕೃಷ್ಣಾ ವೆಂಕಟಾ ನಾಯ್ಕ, ಕೋಡಕಣಿ, ೭. ರಾ|| ನಾರಾಯಣ ಗುರುರಾಯ ಆಣವೇಕರ, ಸಿದ್ದಾಪುರ, ೮. ರಾ|| ಬಾಲಚಂದ್ರ ಹನುಮಂತನಾಯ್ಕ ಗಾಂವಕಾರ, ಹನೇಹಳ್ಳಿ, ೯. ರಾ| ಗೋಪಾಲಕೃಷ್ಣ ಫಕೀರಾ ಕೋಡಕಣಿ, ಸಿರ್ಸಿ.

ಕಳೆದ ತಾ ೨ನೇಗೆ ಗಂಗಾವಳಿ ಗಾಂವಠಿ ಶಾಲೆಯ ವಿದ್ಯಾರ್ಥಿಗಳೂ ಶಿಕ್ಷಕರೂ ಮಹಾತ್ಮಾ ಗಾಂಧಿಯವರ ೭೩ನೇಯ ಹುಟ್ಟುಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿದರು ಮೆರವಣಿಗೆ, ಸಭೆ ಮುಂತಾದವುಗಳಾದವು. ಶಾಲೆಯ ಶಿಕ್ಷಕ ರಾ|| ಹೊನ್ನಯ್ಯಾ ಕಾರಿ ಇವರು ಮಕ್ಕಳಿಗೆ ತಿಳಿಯುವಹಾಗೆ ಮಹಾತ್ಮರ ಜೀವನ ಚರಿತ್ರೆಯ ಸಾರವನ್ನು ತಿಳಿಸಿ ಹೇಳಿದರು

ಹೊನ್ನಾವರ — ಹೊನ್ನಾವರ ಬಂದರ ನಾಕೆಯಲ್ಲಿ ಹಿಂದೆ ಉಗಿಹಡಗಗಳ ಮೇಲಿಂದ ಸರಕುಗಳು ಬರುತ್ತಿದ್ದಾಗ ಮ್ಯುನಿಸಿಪಾಲಿಟಿಯವರು ಜೆಟ್ಟಿಗೆ ಶಿಬಂದಿಯನ್ನು ಇಡುತ್ತಿದ್ದರೆಂತಲೂ, ಈಗ ಉಗಿಹಡಗಗಳ ಓಡಾಟ ನಿಂತಿದ್ದರಿಂದ ಅಷ್ಟು ಶಿಬಂದಿ ಬೇಕಾಗಿಲ್ಲೆಂತಲೂ, ಒಬ್ಬ ನಾಕೇದಾರನಿಂದ ಕೆಲಸ ಸಾಗುವಂತಿಲ್ಲವಾದರೆ ನಗರ ಸಭೆಯವರು “ಎಲೀವ್ಹಿಂಗ ನಾಕೇದಾರ”ನಿಗೆ ಕಳಿಸಿಕೊಟ್ಟು ಕಾರ್ಯಭಾಗ ಸಾಗಿಸಿಕೊಳ್ಳಬಹುದೆಂತಲೂ “ತರಿಗೆದಾರ”ರೊಬ್ಬರು ಸೂಚಿಸುತ್ತಾರೆ.

ಕಡತೋಕಾ ಪ್ರೌಢ ಶಿಕ್ಷಣ ಪ್ರಚಾರಮಂಡಳಿಯವರು ಕಡತೋಕೆಯಲ್ಲಿ ತಾ. ೩೦-೯-೪೧ರಿಂದ ಒಂದು ವಾಚನಾಲಯವನ್ನು ತೆರೆದಿದ್ದಾರೆ ಈ ವಾಚನಾಲಯಕ್ಕಾಗಿ ರಾ| ಪರಮೇಶ್ವರ ಶೀಲ ಭಟ್ಟರು ರಸ್ತೆಗೆ ತಗಲಿರುವ ತಮ್ಮ ಮಾಲ್ಕಿಯ ೨ ಗುಂಠೆ ಸ್ಥಳವನ್ನು ಮಂಡಳಿಗೆ ದಾನ ಮಾಡಿಕೊಟ್ಟಿದ್ದಾರೆ ವಾಚನಾಲಯವು ದಿನಾಲೂ ಸಂಜೆ ತೆರೆಯಲ್ಪಟ್ಟು ಎಲ್ಲ ಜಾತಿಯ ಜನರಿಗೂ ಅದರಲ್ಲಿ ಪ್ರವೇಶ ಸಿಗಬೇಕೆಂದು ವ್ಯವಸ್ಥೆ ಮಾಡಲಾಗಿದೆ ಅದರಂತೆ ಮಂಡಳಿಯವರು ತಮ್ಮ ಭಾಗದ ಜನರಿಗೆ ಜೇನಿನ ಉದ್ಯೋಗ, ಬಿದುರು-ಬೆತ್ತಗಳ ಕೈಗಾರಿಕೆ ಮುಂತಾದ ಹಳ್ಳಿಯ ವ್ಯವಸಾಯಗಳನ್ನು ಕಲಿಸುವ ಸಂಕಲ್ಪ ಮಾಡಿದ್ದು ಆ ಬಗ್ಗೆ ಅವಶ್ಯವುಳ್ಳ ಸರಕಾರಿ ಸಹಾಯವನ್ನು ದೊರಕಿಸುವ ಪ್ರಯತ್ನ ನಡಿಸಿರುತ್ತಾರೆ. ಈ ಮಂಡಳಿಗೆ ಸರಕಾರಿ ಮಾನ್ಯತೆ ದೊರೆತಿರುವದಂತೆ.

ಕಳೆದ ತಾ ೬ನೇ ಸೋಮವಾರ ಮುಂಜಾನೆ ಕೆಕ್ಕಾರ ಶ್ರೀ ಸಿದ್ಧಿವಿನಾಯಕ ವಿದ್ಯಾಲಯದ ಹೊಸ ಶಾಲೆಮನೆಯ ಅಡಿಗಲ್ಲನ್ನಿಡುವ ಸಮಾರಂಭವು ಜಿಲ್ಹಾಧಿಪತಿಗಳಾದ ರಾ| ಮೋದಕರವರ ಅಧ್ಯಕ್ಷತೆಯಲ್ಲಿ ಒಳ್ಳೇ ವಿಜೃಂಭಣೆಯಿಂದ ನೆರವೇರಿತು ರಾ| ಮೋದಕರವರು ಅಡಿಗಲ್ಲನ್ನಿಟ್ಟು ಶಾಲೆಗೆ ಸಂಬಂಧಪಟ್ಟ ದೇಸಾಯದ ಹೊಲದಲ್ಲಿ ಒಂದು ಫಲವೃಕ್ಷದ ಸಸಿಯನ್ನೂ ನೆಟ್ಟರು. ತಮ್ಮ ಭಾಷಣದಲ್ಲಿ ಅಧ್ಯಕ್ಷರು ಶಾಲೆಯು ಈ ವರೆಗೆ ಮಾಡಿರುವ ಕಾರ್ಯದ ಬಗ್ಗೆ ಸಂತೋಷ ವ್ಯಕ್ತಗೊಳಿಸಿ, ವಿದ್ಯಾಲಯವು ಮುಂದೆ ಕ್ರಮೇಣ ಒಂದು ಹಾಯಸ್ಕೂಲಾಗಿ ಪರಿಣಮಿಸಲೆಂದು ಹಾರೈಸಿದರು ಬಹಳ ಜನರು ಸಮಾರಂಭಕ್ಕೆ ಬಂದಿದ್ದರು.

ಮೇಲಿನ ಸಮಾರಂಭ ಮುಗಿಯುತ್ತಲೇ ಅದೇ ಸ್ಥಳದಲ್ಲಿ ಕೆಕ್ಕಾರ ಸೀಮೆಯ ಗ್ರಾಮ ಸುಧಾರಣಾ ಮಂಡಳವವರು ಜಿಲ್ಹಾಧಿಪತಿಗಳಿಗೆ ಒಂದು ಬಿನ್ನವತ್ತಳೆಯನ್ನು ಅರ್ಪಿಸಿ ಹಲಕೆಲವು ಬೇಡಿಕೆಗಳನ್ನು ಮುಂದಿಟ್ಟರು. ಜಿಲ್ಹಾಧಿಪತಿಗಳು ಮಂಡಳದ ಕೆಲಸವನ್ನು ಪ್ರಶಂಸಿಸಿ, ಅದರ ಬೇಡಿಕೆಗಳನ್ನು ಜಿಲ್ಹಾ ಗ್ರಾಮೋದ್ಧಾರ ಮಂಡಳದ ಮುಂದೆ ಇಡುವೆವಾಗಿ ಆಶ್ವಾಸನೆ ಕೊಟ್ಟರು. ಡಾ| ವ್ಹಿ. ಎಸ್. ಹಬ್ಬು, ರಾ| ಹಿರೇಮಠ, ರಾ| ಬಾಳೇಮನೆ, ಮೊದಲಾದವರೂ ಭಾಷಣಗಳನ್ನು ಮಾಡಿ ಗ್ರಾಮ ಸುಧಾರಣೆಯ ಮಹತ್ವವನ್ನು ತಿಳಿ ಹೇಳಿದ್ದಲ್ಲದೆ, ಈಗ ಮಹಾಯುದ್ಧದಲ್ಲಿ ಜನರು ಸರಕಾರಕ್ಕೆ ಸಂಪೂರ್ಣ ಸಹಾಯ ಮಾಡುವದು ಕರ್ತವ್ಯವಿರುತ್ತದಾಗಿಯೂ ಬೋಧಿಸಿದರು. ಸಭೆಯ ವಿಸರ್ಜನೆಯಾದ ಮೇಲೆ ಜಿಲ್ಹಾಧಿಪತಿಗಳು ರಾ| ಕೊಂಕೇರಿ ವಿಷ್ಣು ಭಟ್ಟರ ತೋಟವನ್ನು ನೋಡಿಕೊಂಡು ಹಾಗೆಯೇ ಕುಮಟೆಗೆ ಹಿಂತಿರುಗಿದರು.

ಶಿರಾಲಿ — (ತಾ ೧೦-೧೦-೪೧) ಆಗಾಗ ತುಸು ತುಸು ಮಳೆಯಾಗುತ್ತದೆ. ಗದ್ದೆ ಕೊಯಿಲಿಗೆ ಇನ್ನೂ ಪ್ರಾರಂಭವಾಗಿಲ್ಲ. ಮುಂದಿನ ವಾರ ಪ್ರಾರಂಭವಾಗುವದು. ಅಕ್ಕಿ ಧಾರಣೆ ಏರುತ್ತಿದೆ ಬಡವರ ಗೋಳು ಹೆಚ್ಚಾಗಿದೆ

ಶ್ರೀ ಶಾಂತಾದುರ್ಗಾ ಮತ್ತು ಶ್ರೀ ಗಣಪತಿ-ಮಹಾಮಾಯಾ ದೇವರ ಗುಡಿಗಳಲ್ಲಿ, ನವರಾತ್ರ ಉತ್ಸವವು ವಿಜೃಂಭಣೆಯಿಂದ ನಡೆಯಿತು ಶ್ರೀ ಶಾಂತಾದುರ್ಗೆಯ ಗುಡಿಯಲ್ಲಿ ಭಜನ ಸಪ್ತಾಹವೂ ನಡೆಯಿತು.

ಸಿದ್ದಾಪುರ— (ತಾ. ೧೦-೧೦-೪೧) ಇಲ್ಲಿಯ ಸಾಹಿತ್ಯ ಸೇವಕ ಸಂಘದ ವತಿಯಿಂದ ತಾ ೨ ರಿಂದ ತಾ. ೪ ರ ವರೆಗೆ ಗಾಂಧಿ-ಜಯಂತಿ ಉತ್ಸವವೂ ಹಿಂದೀ-ಪ್ರಚಾರ ಕಾರ್ಯವೂ ಜರುಗಿದವು ಜಯಂತಿಯ ದಿನ ಮಹಾತ್ಮರ ಭಾವಚಿತ್ರದ ಮೆರವಣಿಗೆ, ಹಿಂದೀ-ಕನ್ನಡ ಭಾಷಣಗಳು, ಕಾವ್ಯವಾಚನ, ಕಲಾಪ್ರದರ್ಶನ, ವ್ಯಾಯಾಮ ಪ್ರದರ್ಶನ ಮುಂತಾದ ಕಾರ್ಯಕ್ರಮಗಳಾದವು “ಯಮನ ಸೋಲು” ಎಂಬ ಏಕಾಂಕ ನಾಟಕದ ಪ್ರಯೋಗವೂ ನಡೆಯಿತು ಜನರ ಪ್ರಶಂಸೆ ಪಡೆದ ಕಸೂತಿಯ ಕೆಲಸ, ಭಾಷಣ, ಮತ್ತು ಅಭಿನಯ ಮಾಡಿದವರಿಗೆ ಸಂಘದ ಪರವಾಗಿ ಪಾರಿತೋಷಕಗಳು ಕೊಡಲ್ಪಟ್ಟವು ಇದೇ ಕಾಲಕ್ಕೆ ಹಿಂದೀ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಪ್ರಮಾಣಪತ್ರಿಕೆಗಳನ್ನು ಕೊಡುವ ಸಮಾರಂಭವೂ ಜರುಗಿತು.

ಕಳೆದ ತಾ. ೬ ನೇಗೆ ಮಧ್ಯಾನ್ಹ ಇಲ್ಲೊಂದು ತೋಟದಲ್ಲಿ ಸಣ್ಣದೊಂದು ಅನಾಹುತವಾಯಿತು ಆ ತೋಟದ ಬಗ್ಗೆ ಬಹಳ ಕಾಲದಿಂದ ವ್ಯವಹರಣೆ ನಡೆದು ಸರಕಾರದಿಂದ ಅದು ರಾ| ತಿಮ್ಮಯ್ಯನ ಭಿಕ್ಷಪ್ಪನವರ ಕಬಜೆಗೆ

ಕೊಡಲ್ಪಟ್ಟಿತ್ತು. ಆದರೂ ಹಿಂದೆ ಅಲ್ಲಿ ಕಟಣಿ ಮಾಡುತ್ತಿದ್ದ ವೆಂಕಟೇಶ ಹೆಗಡೆ ಎಂಬಾತನು ಭಿಕ್ಕಪ್ಪನವರಿಗೆ ಬೆಳೆ ತೆಗೆದುಕೊಳ್ಳಲು ಆತಂಕ ಮಾಡುತ್ತಿದ್ದನು. ಆದ್ದರಿಂದ ತಾ. ೬ ನೇಗೆ ಭಿಕ್ಕಪ್ಪನವರು ಪೋಲೀಸರ ಸಹಾಯ ತಕ್ಕೊಂಡು ಆ ತೋಟದೊಳಗಿನ ಬೆಳೆಯನ್ನು ಕೊಯ್ಯಲು ಹೋದರು. ಆಗ ವೆಂಕಟೇಶನೂ ಅವನ ಹೆಂಡತಿಯೂ ಕತ್ತಿ ತಕ್ಕೊಂಡು ಭಿಕ್ಕಪ್ಪನವರ ಜನರಿಗೆ ಕಡಿಯಲು ಮುಂದಾದರಂತೆ. ಪೋಲೀಸ ಹವಾಲದಾರರು ವೆಂಕಟೇಶನ ಕತ್ತಿ ಹಿಡಿಯಲಾಗಿ ಹೆಂಡತಿಯು ಮುಂದಾದಳಂತೆ! ಹವಾಲದಾರರ ಸಂಗಡ ಹೋಗಿದ್ದ ಪೋಲೀಸನು ಅವಳ ಕತ್ತಿ ಕಸಕೊಳ್ಳಲು ಪ್ರಯತ್ನಿಸುವಾಗ ಅವಳು ಅವನ ಕಾಲಿನ ಮೇಲೆ ಬಲವಾದ ಕತ್ತಿಯ ಒಂದು ಏಟು ಕೊಟ್ಟಳಂತೆ! ಪೋಲೀಸರು ಅವರಿಬ್ಬರನ್ನೂ ಸೆರೆಹಿಡಿದು ತಂದು ಇಲ್ಲಿಯ ಕಚೇರಿಯಲ್ಲಿಟ್ಟಿದ್ದಾರೆ.

ಶಿರಸಿ — ಶಿರಸಿ ಪೈಕಿಂ ಸಿಲೇಕಣಯಲ್ಲಿ ಮ್ಯಾನೇಜರ ಉದ್ಯೋಗ ಮಾಡಿಕೊಂಡಿರುವ ರಾ|| ಅಚ್ಯುತ ಮಂಜುನಾಥ ನಾಯಕ ಕಲಭಾಗ ಇವರು ಮುಂಬಯಿಯೊಳಗಿನ ಗೌಡ ಸಾರಸ್ವತ ಬ್ರಾಹ್ಮಣ ಸ್ಕೂಲರಶಿಪ ಲೀಗಿಗೆ ರೂ. ೧೦೦ ಕೊಟ್ಟು ಜೀವಾವಧಿ ಸದಸ್ಯರಾಗಲೊಪ್ಪಿದ್ದಾರೆಂದು ತಿಳಿಯುತ್ತದೆ.

ಕಾರವಾರ — (ತಾ. ೧೧-೧೦-೪೧) ಇಲ್ಲಿಯ ಹೊಸ ನಗರ ಸಭೆಯ ಹೊಸ ಅಧ್ಯಕ್ಷರ ಚುನಾವಣೆಯು ನಿನ್ನೆ ಮುಂಜಾನೆ ನಡೆಯಿತು. ಹೊಸ ಕಾಯಿದೆಯಂತೆ ಜಿಲ್ಲಾಧಿಕಾರಿಗಳಿಂದ ಅಧಿಕಾರಪಟ್ಟ ಕಾರವಾರ ಮಾಮಲೇದಾರರು ಈ ಸಭೆಯನ್ನು ಕರೆದಿದ್ದರು. ಬೆಳಗ್ಗೆ ೯ ಘಂಟೆಗೆ ಸಭೆ ಕರೆಯಲ್ಪಟ್ಟಿತ್ತು. ಆ ಹೊತ್ತಿಗೆ ಎಲ್ಲ (೨೧) ಸದಸ್ಯರೂ ಸಭೆಗೆ ಬಂದು ಮುಟ್ಟಿದ್ದರು. ಆದರೂ ಮಾಮಲೇದಾರರು ಬಂದು ಮುಟ್ಟಿರಲಿಲ್ಲವಾದ್ದರಿಂದ ಹಳೆಯ ಅಧ್ಯಕ್ಷ ರಾ|| ಸಾ|| ತೇಲಂಗರವರು ಸಭೆಯ ಕೆಲಸವನ್ನು ಪ್ರಾರಂಭಿಸಲಿಲ್ಲ. ಕೆಲ ಕಾಲ ಮಾಮಲೇದಾರರ ನಿರೀಕ್ಷಣೆ ಮಾಡುತ್ತ ಉಳಿದರು. ಕೊನೆಗೆ ಒಬ್ಬಿಬ್ಬ ಸದಸ್ಯರು ಕೆಲಸಕ್ಕೆ ಪ್ರಾರಂಭ ಮಾಡಲು ಆಗ್ರಹ ಮಾಡಿದ್ದರಿಂದ ಮಾಮಲೇದಾರರಿಗೆ ಜರೂರಿಯ ಕರೆ ಕಳಿಸಿಕೊಟ್ಟು ರಾವಸಾಹೇಬರು ಸಭೆಗೆ ಆರಂಭ ಮಾಡಿದರು. ಕೆಲ ನಿಮಿಷಗಳಲ್ಲೇ ಮಾಮಲೇದಾರರೂ ಬಂದು ತಲ್ಪಿದರು; ಮತ್ತು ಅಧ್ಯಕ್ಷರ ಕುರ್ಚಿಯ ಸಮೀಪವೇ ಇಟ್ಟ ಒಂದು ಕುರ್ಚಿಯ ಮೇಲೆ ಕೂತುಕೊಂಡರು. ಸಭೆಗೆ ಆರಂಭವಾದ ಮೇಲೆ ಅಂದಿನ ಸಭಾಪತಿಗಳ ಸ್ಥಾನಕ್ಕೆ ಒಂದು ಪಕ್ಷದವರು ರಾ| ಕಾಯ್ಕಿಣಿ ವಕೀಲರ ಹೆಸರನ್ನೂ ಮತ್ತೊಂದು ಪಕ್ಷದವರು ರಾ| ಕಸಬೇಕರ ವಕೀಲರ ಹೆಸರನ್ನೂ ಸೂಚಿಸಿದರು. ಆನಂತರ ಈ ಸೂಚನೆ-ಉಪಸೂಚನೆಗಳ ಮೇಲೆ ಮತಗಳನ್ನು ತೆಗೆದುಕೊಳ್ಳಬೇಕಾಯಿತು. ಆಗ ರಾ| ಮಾವಿನಕುರ್ವೆ ವಕೀಲರವರು ಗುಪ್ತ ಮತದಾನ ಪದ್ಧತಿಯಿಂದ ಮತಗಳನ್ನು ನೋಂದಿಸಿಕೊಳ್ಳಬೇಕೆಂದು ಸೂಚನೆ ಮಾಡಿದರು. ಈ ಬಗ್ಗೆ ಕೆಲ ಕಾಲ ಚರ್ಚೆ ನಡೆಯಿತು. ಸಭೆಯಲ್ಲಿ ಹಾಜರ ಇದ್ದ ಅಧಿಕಾರಿಗಳ ಇಲ್ಲವೆ ಬೇರೆಯವರ ಭಿಡೆ-ಭೀತಿಗಳಿಲ್ಲದೆ ಸದಸ್ಯರು ಸ್ವತಂತ್ರ ಬುದ್ಧಿಯಿಂದಲೂ ಸ್ವೇಚ್ಛೆಯಿಂದಲೂ ಮತಗಳನ್ನು ಕೊಡಲು ಗುಪ್ತ ಮತದಾನ ಪದ್ಧತಿಯೇ ಅನುಕೂಲವೆಂದು ರಾ| ಮಾವಿನಕುರ್ವೆ-ಪಕ್ಷದವರ ಅಂಬೋಣವಾಯಿತು. ತಾತ್ಕಾಲಿಕ ಸಭಾಧ್ಯಕ್ಷರಾಗಿದ್ದ ರಾ| ಸಾ| ತೇಲಂಗರವರು ರಾ| ಮಾವಿನಕುರ್ವೆಯವರ ಸೂಚನೆಯನ್ನು ತಿರಸ್ಕರಿಸಿ, ಸದಸ್ಯರು ಕೈಯೆತ್ತಿ ಬಹಿರಂಗವಾಗಿಯೇ ಮತಗಳನ್ನು ಕೊಡಬೇಕೆಂದು ನಿರ್ಣಯ ಕೊಟ್ಟರು. ಅದರಂತೆ ಮತಗಳನ್ನು ತಕ್ಕೊಂಡು ರಾ|| ಸಾ|| ತೇಲಂಗರವರು ಕೈಗಳನ್ನೆಣಿಸಿ ರಾ|| ಕಸಬೇಕರರಿಗೆ ೧೧ ಮತ್ತು ರಾ|| ಕಾಯ್ಕಿಣಿಯವರಿಗೆ ೯ ಮತಗಳು ಬಿದ್ದಿವೆಯೆಂದು ಹೇಳಿದರು. ರಾ|| ಮಾವಿನಕುರ್ವೆಯವರು ಅದಕ್ಕೆ ಆಕ್ಷೇಪವನ್ನೆತ್ತಿ, ಸದಸ್ಯರ ಹೆಸರು ಸಹಿತ ಮತಗಳನ್ನು ಬರೆದುಕೊಳ್ಳಬೇಕೆಂದು ಬೇಡಿದರು. ಹಾಗೆ ಮಾಡಲಾಗಿ ರಾ|| ಕಸಬೇಕರರಿಗೆ ೧೧ ಮತ್ತು ರಾ|| ಕಾಯ್ಕಿಣಿಯವರಿಗೆ ೧೦ ಮತಗಳು ಬಿದ್ದದ್ದು ಕಂಡು ಬಂತು!



ಮಗು ಇದು ನಿನಗೆ!

ಈ ಮಗುವು ಯುವಕನಾದಾಗ, ಕೂಡಿಟ್ಟ ಪ್ರತಿ ೧೦ ರೂಗೆ, ಅವನು ರೂ. ೧೪|೯ ಯನ್ನು ಪೋಸ್ಟ್ ಆಫೀಸ್‌ನಲ್ಲಿ ಪಡೆಯಬಹುದು. ೧೦ ರೂ. ನ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು ಕೊಂಡು ತನ್ಮೂಲಕ ತಮ್ಮ ಮಕ್ಕಳಿಗೆ ಹಣ ಕೂಡಿಡುವುದು ಪ್ರತಿಯೊಬ್ಬ ಪ್ರೀತಿಯ ತಂದೆತಾಯಿಗಳ ಕರ್ತವ್ಯವಾಗಿದೆ. ಪ್ರತಿ ಒಂದು ಮಗುವೂ, ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪ್‌ಗಳನ್ನು ಅಂಟಿಸುವ ತನ್ನದೇ ಆದ ಡಿಫೆನ್ಸ್ ಸೇವಿಂಗ್ಸ್ ಕಾರ್ಡ್ ಹೊಂದಬಹುದು. ಈ ಸ್ಟಾಂಪುಗಳು ಪೋಸ್ಟ್ ಆಫೀಸ್‌ನಲ್ಲಿ ೪ ಆಣೆ, ೮ ಆಣೆ ಮತ್ತು ರೂ. ೧ ಕ್ಕೆ ಒಂದರಂತೆ ಸಿಗುತ್ತವೆ. ಎಲ್ಲಾ ವಯಸ್ಸಿನ ಮಕ್ಕಳೂ ಸ್ಟಾಂಪ್‌ಗಳನ್ನು ಶೇಖರಿಸಲು ಆನಂದಿಸುತ್ತಾರೆ, ಅಪರೆ ಈ ವಿಧಾನದಲ್ಲಿ ಅವರು ಕೂಡಿಟ್ಟ ಹಣವು ಮುಂದೆ, ಪಟ್ಟಣದಲ್ಲಿ ಶಿಕ್ಷಣ ಹೊಂದಲು ಅನುಕೂಲವಾಗುತ್ತೆ.







ಅವರು ತಮಗೆ ತಾವೇ ಸಹಾಯ ಮಾಡಿಕೊಂಡು ವಿಪುಲವಾದ ಲಾಭ ಹೊಂದಲು ನೆರವಾಗಿರಿ.

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟು

ಅದರಂತೆ ರಾ|| ಕಸಬೇಕರರು ಸಭಾಪತಿಗಳಾಗಿ ಸಗ್ರಂಥ್ಯಕ್ಷರ ಸ್ಥಳಕ್ಕೆ ಸೂಚನೆಗಳನ್ನು ಮಾಡಹೇಳಿದರು. ಒಂದು ಬದಿಯಿಂದ ರಾ|| ಸಾಹೇಬ ತೇಲಂಗರವರ ಮತ್ತು ಇನ್ನೊಂದು ಬದಿಯಿಂದ ರಾ|| ಮಾವಿನಕುರ್ವೆಯವರ ಹೆಸರುಗಳು ಸೂಚಿಸೋಣಾದವು. ಮತ್ತು ಮತಗಳನ್ನು ತೆಗೆದುಕೊಳ್ಳಲಾಗಿ ರಾವ ಸಾಹೇಬ ತೇಲಂಗರವರಿಗೆ ೧೯ ಮತ್ತು ರಾ|| ಮಾವಿನಕುರ್ವೆಯವರಿಗೆ ೯ ಮತಗಳು ಬಿದ್ದವು. ಡಿಸೋಜಾ ಪತಿ-ಪತ್ನಿಗಳು ತಮ್ಮ ಮತಗಳನ್ನು

ಪುರವಣಿ—ಕಾನಡಾವೃತ್ತ, ತಾ. ೧೩-೧೦-೪೧.

ಎಸ್. ಕಾಮತ, ರಾ|| ಪಾಂಡುರಂಗ ಪ್ರಭು ಮೊದಲಾದವರು ಪ್ರವಚನಗಳನ್ನಿತ್ತರು. ಕೊನೆಯ ಅಂದರೆ ದಸರೆ ಹಬ್ಬದ ದಿನ ಮುಂಜಾನೆ ಹುಡುಗ-ಹುಡುಗಿಯರ ಆಟ-ಓಟ ಮುಂತಾದ ಸ್ಪರ್ಧೆಗಳೂ ಕಲಾ-ಕೈಗಾರಿಕೆಗಳ ಪ್ರದರ್ಶನವೂ ಆದವು. ಅಪರಾಹ್ಣದಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರು « ನವ ಬಹಾರ, » « ರಾಣಿ ಚೆನ್ನಮ್ಮ » ಎಂಬ ನಾಟಕಗಳನ್ನು ಆಡಿ ತೋರಿಸಿದರು. ಈ ದಿನದ ಹಲಕೆಲವು ವಿದ್ಯಾರ್ಥಿಗಳ ಪಾಠ-ಸಂಭಾಷಣೆಗಳೂ ಆದವು. ಸಭಾಧ್ಯಕ್ಷರಾಗಿದ್ದ ರಾ| ಪಿ. ಎಸ್. ಕಾಮತರವರು ಕೊನೆಗೆ ಉತ್ತಮ ಅಭಿನಯ ಮಾಡಿ ತೋರಿಸಿದ ಹಾಗೂ 'ಆಟ-ಪಾಟಗಳಲ್ಲಿ ಮೇಲ್ಮೆ ತೋರ್ಪಡಿಸಿದ ಹುಡುಗ-ಹುಡುಗಿಯರಿಗೆ ಪಾಠ-ಪುಸ್ತಕಗಳು, ಅಂಗಿ-ಟೊಪ್ಪಿಗಳು ಮುಂತಾದ ಪಾರಿತೋಷಕಗಳನ್ನು ಹಂಚಿದರು. ಈ ಬಗ್ಗೆ ಶಿಕ್ಷಕ ರಾ| ಪ್ರಭುರವರು ಕೆಲವು ವಂತಿಗೆಗಳನ್ನು ಕೂಡಿಸಿದ್ದರಂತೆ. ಗಾಂಧೀ ಜಯಂತಿಯ ದಿನ ಶಾಲೆಯ ವಿದ್ಯಾರ್ಥಿಗಳಿಗೆಲ್ಲ ಉಪಹಾರ ಕೊಡಲಾಯಿತು. ರಾ| ಪ್ರಭುರವರು ಇಲ್ಲಿ ಬಂದಂದಿನಿಂದ ಈ ಉತ್ಸವ ನಡಿಯುತ್ತಿದೆ.

ಯಲ್ಲಾಪುರ — (ತಾ. ೧೦—೧೦—೪೧) « ವೃತ್ತ »ದ ಹೋದ ಸಂಚಿಕೆಯಲ್ಲಿ « ಸ್ಥಳವಂತಿಕ »ನು ಜಿಲ್ಹಾ ಲೋಕಲ್ ಬೋರ್ಡಿನವರು ಕನೇನಳ್ಳಿಯಲ್ಲಿ ಮಾಡಹೊರಟ ಹೊಸ ಮಾರ್ಗದ ಸಂಬಂಧದಲ್ಲಿ ಕೆಲವು ಮಾತುಗಳನ್ನು ಬರೆದಿರುವನಷ್ಟೇ. ಅವನ ಮಾತಿನ ಮರ್ಮ ಸರಿಯಾಗಿ ತಿಳಕೊಳ್ಳಲು ವಾಚಕರು ಈ ಕೆಳಗಿನ ಮಾಹಿತಿಯನ್ನು ಲಕ್ಷದಲ್ಲಿಟ್ಟುಕೊಳ್ಳುವದವಶ್ಯವಿದೆ:— ಯಲ್ಲಾಪುರದಿಂದ ಶಿರ್ಶಿಗೆ ಹೋಗುವ ಮಾರ್ಗದ ೧೫ನೇ ಮೈಲುಗಲ್ಲಿನ ಸಮೀಪದಿಂದ ಜಂಗಲ ಇಲಾಖೆಯವರು ತಮ್ಮ ಇಲಾಖೆಯ ಉಪಯೋಗದ ಬಗ್ಗೆ ಕಾತೂರವರೆಗೆ ಒಂದು ಮಾರ್ಗವನ್ನು ಮಾಡಿಸಿದ್ದುಂಟು. ಈ ಮಾರ್ಗವು ೩ ಫರ್ಲಾಂಗುಗಳ ವರೆಗೆ ಉತ್ತರಕ್ಕೆ ಹೋಗಿ ಅಲ್ಲಿಂದ ಅದು ಒಮ್ಮೆಲೇ ಬಲಕ್ಕೆ ತಿರುಗಿ ಪೂರ್ವಕ್ಕೆ ಕಾತೂರಕ್ಕೆ ಹೋಗುತ್ತದೆ. ಈ ಮಾರ್ಗದ ಉತ್ತರಕ್ಕೇ ಕನೇನಳ್ಳಿ ಹಳ್ಳಿಯಿದೆ. ಈ ಹಳ್ಳಿಯೆಂದರೆ ಹಳ್ಳಿಯೇ! ತೀರ ಚಿಕ್ಕ ಹಳ್ಳಿ! ಇದೀ ಹಳ್ಳಿಯಲ್ಲಿ ೫ ಮನೆಗಳಿವೆ, ಒಂದು ಸಣ್ಣ ಗುಡಿಯಿದೆ; ನೂರಕ್ಕೆ ಮಿಕ್ಕಿ ಜನವಸತಿಯಿಲ್ಲ. ಇದೀ ಹಳ್ಳಿಯಲ್ಲಿ ೪೦೩ ರೂಪಾಯಿ ತೀರ್ವೆ ಹುಟ್ಟುತ್ತದಂತೆ! ಈ ಹಳ್ಳಿಯಲ್ಲಿ ಒಂದು ಹಳ್ಳಿಯ ರಸ್ತೆ ಮಾಡಿಸಬೇಕೆಂದು ಜಿಲ್ಹಾ ಗ್ರಾಮೋದ್ಧಾರ ಮಂಡಳದಲ್ಲಿ ಹಿಂದೆ ಸೂಚನೆ ಬಂದಿತ್ತು. ಆದರೆ ಕನೇನಳ್ಳಿಯ ಪ್ರಮುಖ ರಾಜಶ್ರೀ ಕನೇನಳ್ಳಿ ರಾಮಚಂದ್ರ ಹೆಗಡೆ (ಜಿ. ಲೋ. ಬೋರ್ಡಿಗೆ ಯಲ್ಲಾಪುರ ತಾಲೂಕಿನಿಂದ ಆರಿಸಿ ಬಂದ « ಕಾಂಗ್ರೆಸ » ಸದಸ್ಯರು) ಇವರ ಬಗ್ಗಾಗಿಯೇ ಒಂದು ರಸ್ತೆ ಮಾಡಿಸಲು ಬರುವದಿಲ್ಲೆಂದೂ ನುಡಿದು ಜಿಲ್ಹಾಧಿಪತಿಗಳು ಆ ಸೂಚನೆಯನ್ನು ಥಟ್ಟನೆ ತಿರಸ್ಕರಿಸಿ ಬಿಟ್ಟಿದ್ದರು. ರಾ| ಹೆಗಡೆಯವರು ಅಷ್ಟರಿಂದ ಎದೆಗುಂದದೆ, ಗ್ರಾಮೋದ್ಧಾರ ನಿಧಿಯಿಂದಲ್ಲದಿದ್ದರೆ ಬೋರ್ಡಿನ ಹಣದಿಂದಾದರೂ ತಮ್ಮ ಮನೆಯ ತನಕ ಒಂದು ಚಕ್ಕಡಿ ತಿರುಗಾಡುವ ರಸ್ತೆಯನ್ನು ಮಾಡಿಸಿಕೊಳ್ಳಬೇಕೆಂದು ನಿಶ್ಚಯಿಸಿ, ಮೇಲೆ ಹೇಳಿದ ಜಂಗಲರಸ್ತೆಯು ಪೂರ್ವಕ್ಕೆ ಮುರಿಯುವಲ್ಲಿಂದ ತಮ್ಮ ಮನೆಯ ತನಕ ಮತ್ತು ತಮ್ಮ ಮನೆಯಿಂದ ಕನೇನಳ್ಳಿ ಕನ್ನಡ ಶಾಲೆಯ ತನಕ (ಅಂದರೆ ಕಾತೂರ ರಸ್ತೆಯ ತನಕ) ಒಂದು ರಸ್ತೆ ಮಾಡಿಸಿಕೊಂಡಿದ್ದಾರೆ. ಹಿಂದೆ ಇಲ್ಲಿ ರಸ್ತೆಯಿದ್ದಿಲ್ಲ.

ಶಿಕ್ಷಣ ಪದ್ಧತಿಗಳನ್ನೂ ಮಾದರಿ ಪಾಠಗಳನ್ನೂ ಸಪ್ರಯೋಗ ಕಲಿಸಿ ತೋರಿಸಿದರು. ಶಿಕ್ಷಕರು ಅವನ್ನು ಅನುಸರಿಸಿದಲ್ಲಿ ಶಿಕ್ಷಣದ ಪ್ರಗತಿಗೆ ತುಂಬಾ ಸಹಾಯವಾಗುವಂತಿದೆ.

ಅಂಕೋಲಾ — (ತಾ. ೫—೧೦—೪೧) ಇಲ್ಲಿಯ ಹೊಸ ಇಂಗ್ಲಿಷ ಶಾಲೆಯಲ್ಲಿ ಕಳೆದ ತಾ. ೨೮, ೨೯ನೇಗೆ ವಿದ್ಯಾರ್ಥಿಗಳೂ ಶಿಕ್ಷಕರೂ ಶ್ರೀ ಸರಸ್ವತೀ ಪೂಜೆಯ ಉತ್ಸವವನ್ನು ಬಹಳ ವಿಜೃಂಭಣೆಯಿಂದ ಜರುಗಿಸಿದರು. ತಾ. ೨೯ ನೇಗೆ ಹುಡುಗರು, ಮ್ಯುನ್ಸಿಪಾಲಿಟಿಯ ರಾ| ಂಗಪಕೇರಿ ಉಮಾನಾಥರಾಯರು ರಚಿಸಿರುವ ಕುಡಕ' ಎಂಬ ಕೊಂಕಣಿ ಭಾಷೆಯ ನಾಟಕವನ್ನು ತೋರಿಸಿದರು. ವಿದ್ಯಾರ್ಥಿಗಳ ಪಾಠಗಳಲ್ಲೂ ಹಾಡುಗಳಲ್ಲೂ ಕೊಂಕಣಿ ಭಾಷೆಗೇ ಪ್ರಾಧಾನ್ಯ ಕೊಡಲಾಗಿ ಅಂತು ಈಗ ಕೊಂಕಣಿ ಭಾಷೆಯು ಬೆಳೆಯುತ್ತ ಗೌರ ವಿಯಲಾರಂಭಿಸಿದೆಯೆಂದೂ ಹೇಳಬೇಕಿಲ್ಲ.

ಂಭಾರವಾಡಾ — (ತಾ. ೪—೧೦—೪೧) ಯ ಕನ್ನಡ ಶಾಲಾ ಶಿಕ್ಷಕ ರಾ| ಪಾಂಡುರಂಗ ಪ್ರಭು, ಧ್ಯಕ್ಷ ರಾ| ಪುಂಡಲೀಕ ಶಾನಭಾಗ ಮತ್ತು ಗ್ರಾಮೋದ್ಧಾರ ಸಂಘದ ಅಧ್ಯಕ್ಷ ರಾ| ಪಿ. ಎಸ್. ಕಾಮತ ಇವರು ಸಹಕಾರದಿಂದ ಈ ಶಾಲೆಯಲ್ಲಿ ಕಳೆದ ತಾ. ೨೭ ರಿಂದ ತಾ. ೩೦ರ ತನಕ ನಾಲ್ಕು ದಿನಗಳ ವರೆಗೆ ಸಡಗರದ ಶಾರದಾ-ಪೂಜೆಯ ಉತ್ಸವವನ್ನು ನಡಿಸಿದರು. ತಾ. ೨೭ನೇಗೆ ಮೂರ್ತಿಯನ್ನು ತಂದು ಪ್ರತಿಷ್ಠಿಸಲಾಗಿದ್ದಿತು. ದಿನಾಲೂ ಮೂರ್ತಿಯ ಎದುರಿಗೆ ಭಜನ-ಪೂಜನಾದಿ ವಿಧಿಗಳು ನಡೆಯುತ್ತಿದ್ದವು. ಇದಲ್ಲದೆ ಹಾಸ್ಯಗಾರಿಕೆ, ಸಂಮ್ಮೋಹನ ವಿದ್ಯೆ (ಮೆಸ್ಮೆರಿಜಮ್) ಗಳ ಮನೋರಂಜಕ ಪ್ರಯೋಗಗಳೂ ಗಾಯನ-ವಾದನಗಳೂ ಆಟ-ಪಾಟಗಳೂ ನಡೆಯುತ್ತಿದ್ದವು. ಒಂದು ದಿನ ಹೆಂಗಸರ ಅರಿಶಿನ-ಕುಂಕುಮ ಸಮಾರಂಭವಾಯಿತು. ಇನ್ನೊಂದು ದಿನ ಗ್ರಾಮಸುಧಾರಣೆ, ಶಿಕ್ಷಣ, ಆರೋಗ್ಯ, ಒಕ್ಕಲತನ ಮುಂತಾದ ಗ್ರಾಮವಿಷಯಗಳಿಗೆ ನಿಕಟ ಸಂಬಂಧವಿರುವ ಬೇರೆ ಬೇರೆ ವಿಷಯಗಳ ಮೇಲೆ ಪ್ರವಚನಗಳಾದವು. ಅಬಕಾರಿ ಅಧಿಕಾರಿಗಳಾದ ರಾ| ಶಂಕರ ನಾವಡರ, ಸದಾನಂದನಾಡಕರ್ಣಿ, ಪಿ.

(ಮುಂದೆ ಪುರವಣಿ ನೋಡಿರಿ.)

BY THE AREA RATIONING AUTHORITY,
KARNATAK REGION, BELGAUM.

NOTIFICATION No. 2.

Owners of motor vehicles in the Karnatak Region, are reby informed that the petrol ration coupons for the next arter ending 31st January 1942 will be issued at the following tres and on the dates mentioned against them. Necessary plication forms can be had from the Officers in charge of the tres:—

strict.	*Centre.*	*Date.* *From*	*To*	*Location of the Office.*
gaum.	Belgaum.	16-10-41	onwards.	Regional Transport Office, Belgaum.
nara.	1. Ankola,	16-10-41	to 18-10-41	Mamlatdar's Office Ankola.
	2. Sirsi,	22-10-41	and 24-10-41	Mamlatdar's Office, Sirsi.
arwar.	1. Hubli,	26-10-41	to 28-10-41	Municipal Office, Hubli.
	2. Gadag,	30-10-41	to 31-10-41	Mamlatdar's Office, Gadag.
atnagiri.	1. Ratnagiri,	16-10-41	to 18-10-41	Mamlatdar's Office Ratnagiri.
	2. Venguria,	22-10-41	and 24-10-41	Inspector's Camping place.
japur.	1. Bagalkot,	27-10-41	to 28-10-41	Mamlatdar's Office, Bagalkot.
	2. Bijapur,	30-10-41	to 31-10-41	Collector's Office, Bijapur.

2. Motor owners should produce their registration tificates. In case of transport vehicles part 'A' of the mit also must be produced.

3. ***No ration coupons will be issued to owners who l to comply with the above requirements.***

4. The hours of work for this purpose will be from 0 a. m. to 3-0 p. m.

Sd/- **M. SHARIFF KHAN.**
AREA RATIONING AUTHORITY,
KARNATAK REGION, BELGAUM.

lgaum, 11—10—41.

ಕೆ ತಪ್ಪಿಸಿತ್ತು. ಅದರ ಹಿಂದೆ ಅಲ್ಲಿ ಕೆಲಸ ಮಾಡುತ್ತಿದ್ದ ವೆಂಕಟೇಶ ಹೆಗಡೆ ಎಂಬ ತನು ಭಿಕ್ಷಪ್ಪನವರಿಗೆ ಬೆಳೆ ತೆಗೆದುಕೊಳ್ಳಲು ಆತಂಕ ಮಾಡುತ್ತಿದನು. ಆದ್ದರಿಂದ ತಾ ೬ ನೇಗೆ ಭಿಕ್ಷಪ್ಪನವರು ಪೋಲೀಸರ ಸಹಾಯ ತಕ್ಕೊಂಡು ಆ ತೋಟದೊಳಗಿನ ಬೆಳೆಯನ್ನು ಕೊಯ್ಯಲು ಹೋದರು. ಆಗ ವೆಂಕಟೇಶನೂ ಅವನ ಹೆಂಡತಿಯು ಕತ್ತಿ ತಕೊಂಡು ಭಿಕ್ಷಪ್ಪನವರ ಜನರಿಗೆ ಕಡಿಯಲು ಮುಂದೆ ಬರಲು ಪೋಲೀಸ ಹವಾಲದಾರರು ವೆಂಕಟೇಶನ ಕತ್ತಿ ಹಿಡಿಯಲಾಗಿ ಹೆಂಡತಿಯು ಮುಂದೆ ಬಂದಳಂತೆ. ಹವಾಲದಾರರ ಸಂಗಡ ಹೋಗಿದ್ದ ಪೋಲೀಸನು ಅವಳ ಕತ್ತಿ ಕಸಕೊಳ್ಳಲು ಪ್ರಯತ್ನಿಸುವಾಗ ಅವಳು ಅವನ ಕಾಲಿನ ಮೇಲೆ ಬಲವಾದ ಕತ್ತಿಯ ಏಟು ಕೊಟ್ಟಳಂತೆ! ಪೋಲೀಸರು ಅವರಿಬ್ಬರಿಗೂ ಸೆರೆಹಿಡಿದು ತಂದು ಇಲ್ಲಿಯ ಕಚೇರಿಯಲ್ಲಿಟ್ಟಿದ್ದಾರೆ.

ಶಿರ್ಸಿ — ಶಿರ್ಸಿ ಪೈಸಾ ಫಂಡ ಲೋಕಶಿಕ್ಷಣಕ್ಕೆ [illegible] ಉದ್ಯೋಗ ಮಾಡಿಕೊಂಡಿರುವ ಒಬ್ಬ ಅಜ್ಞಾತ ಸಜ್ಜನ [illegible] ಕೆಲಸಗಾರರು ಅವರು ಮುಂಬಯಿಯೊಳಗಿನ ಗೌಡ ಸಾರಸ್ವತ ಬ್ರಾಹ್ಮಣ ಸ್ಕಾಲರಶಿಪ ಲೀಗಿಗೆ ರೂ ೧೦೧ ಕೊಟ್ಟು ಜೀವಾವಧಿ ಸದಸ್ಯರಾಗಲು ಇಷ್ಟಪಟ್ಟಿರುವರೆಂದು ತಿಳಿಯುತ್ತದೆ.

ಕಾರವಾರ — (ತಾ ೧೯-೧೦-೪೧) ಇಲ್ಲಿಯ ಹೊಸ ನಗರ ಸಭೆಯ ಹೊಸ ಅಧ್ಯಕ್ಷರ ಚುನಾವಣೆಯು ನಿನ್ನೆ ಮುಂಜಾನೆ ನಡೆಯಿತು. ಹೊಸ ಕಾಯಿದೆಯಂತೆ [illegible] ಅಧಿಕಾರಿಗಳಿಂದ ಎರಡು ದಿವಸ ಮುಂಚೆ [illegible] ಮಾಮಲೇದಾರರು ಈ ಸಭೆಯನ್ನು ಕರೆದಿದ್ದರು. ಒಂಬತ್ತು ಘಂಟೆಗೆ ಸಭೆ ಕರೆಯಲ್ಪಟ್ಟಿತ್ತು. ಆ ಪ್ರಕಾರ ಎಲ್ಲ (೨೧) ಸದಸ್ಯರೂ ಸಭೆಗೆ ಬಂದು ಮುಟ್ಟಿದ್ದರು. ಆದರೂ ಮಾಮಲೇದಾರರು ಬಂದು ಮುಟ್ಟಲಿಲ್ಲವಾದ್ದರಿಂದ ಹಳೆಯ ಅಧ್ಯಕ್ಷರಾದ ಶ್ರೀ ತೇಲಂಗರವರು ಸಭೆಯ ಕೆಲಸವನ್ನು ಪ್ರಾರಂಭಿಸಲಿಲ್ಲ. ಕೆಲ ಕಾಲ ಮಾಮಲೇದಾರರ ದಾರಿ ಕಾಯ್ದು ಕೊನೆಗೆ ಒಟ್ಟಿಗೆ ಸದಸ್ಯರು ಕೆಲಸಕ್ಕೆ ಪ್ರಾರಂಭ ಮಾಡಲು ಆಗ್ರಹ ಮಾಡಿದ್ದರಿಂದ ಮಾಮಲೇದಾರರಿಗೆ ಜರೂರಿಯ ಕರೆ ಕಳಿಸಿಕೊಟ್ಟು [illegible] ಸಭೆಗೆ ಆರಂಭ ಮಾಡಿದರು. ಕೆಲ ನಿಮಿಷಗಳಲ್ಲೇ ಮಾಮಲೇದಾರರೂ ಬಂದು ತಲ್ಪಿದರು ಮತ್ತು ಅಧ್ಯಕ್ಷರ ಕುರ್ಚಿಯ ಸಮೀಪದಲ್ಲಿ ಇದ್ದ ಬೇರೆ ಕುರ್ಚಿಯ ಮೇಲೆ ಕೂತುಕೊಂಡರು. ಸಭೆಗೆ ಆರಂಭವಾದ ಕೂಡಲೆ ಅಂದಿನ ಸಭೆ ಕಾರ್ಯಕ್ರಮದ ಪ್ರಕಾರ ಅಧ್ಯಕ್ಷಸ್ಥಾನಕ್ಕೆ ಒಂದು ಪಕ್ಷದವರು [illegible] ವಕೀಲರ ಹೆಸರನ್ನೂ ಮತ್ತೊಂದು ಪಕ್ಷದವರು [illegible] ವಕೀಲರ ಹೆಸರನ್ನೂ ಸೂಚಿಸಿದರು. ಅದರಂತೆ ಈ ಸೂಚನೆ ಉಪಸೂಚನೆಗಳ ಮೇಲೆ ಮತಗಳನ್ನು ತೆಗೆದುಕೊಳ್ಳಬೇಕಾಯಿತು. ಆಗ ಶ್ರೀ ಮಾವಿನಕುರ್ವೆ ವಕೀಲರಿದ್ದು ಗುಪ್ತ ಮತದಾನ ಪದ್ಧತಿಯಿಂದ ಮತ ಕೊಟ್ಟು ನೋಂದಿಸಿಕೊಳ್ಳಬೇಕೆಂದು ಸೂಚನೆ ಮಾಡಿದರು. ಈ ಬಗ್ಗೆ ಕೆಲ ಕಾಲ ಚರ್ಚೆ ನಡೆಯಿತು. ಸಭೆಯಲ್ಲಿ ಹಾಜರ ಇದ್ದ ಅಧಿಕಾರಿಗಳ ಇಲ್ಲವೆ ಒಳ್ಳೆಯವರ ಭಿಡೆ ಹೇರಿಕೆಗಳಿಲ್ಲದೆ ಸದಸ್ಯರು ಸ್ವತಂತ್ರ ಬುದ್ಧಿಯಿಂದ ಸ್ವೇಚ್ಛೆಯಿಂದಲೂ ಮತಗಳನ್ನು ಕೊಡಲು ಗುಪ್ತ ಮತದಾನ ಪದ್ಧತಿಯೇ ಅನುಕೂಲವೆಂದು ಶ್ರೀ ಮಾವಿನಕುರ್ವೆ ಪಕ್ಷದವರ ಅಂಬೋಣವಿತ್ತು. ಆದರೂ ಹಳೆಯ ಸಭಾಧ್ಯಕ್ಷರಾಗಿದ್ದ ಶ್ರೀ ತೇಲಂಗರವರು ಶ್ರೀ ಮಾವಿನಕುರ್ವೆಯವರ ಸೂಚನೆಯನ್ನು ತಿರಸ್ಕರಿಸಿ ಸದಸ್ಯರು ಕೈ ಎತ್ತಿ ಬಹಿರಂಗವಾಗಿಯೇ ಮತಗಳನ್ನು ಕೊಡಬೇಕೆಂದು ನಿರ್ಣಯ ಕೊಟ್ಟರು. ಅದರಂತೆ ಮತಗಳನ್ನು ತಕ್ಕೊಂಡು [illegible] ಶ್ರೀ ತೇಲಂಗರವರು ಕೈಗಳನ್ನೆಣಿಸಿ [illegible] ಶ್ರೀ [illegible]ರವರಿಗೆ ೧೧ ಮತ್ತು ಶ್ರೀ [illegible]ಯವರಿಗೆ [illegible] ಮತಗಳು [illegible] ಒಂದು ಮತದಿಂದ [illegible] ಮಾವಿನಕುರ್ವೆಯವರ ಪಕ್ಷದ ಸದಸ್ಯರ ಹೆಸರುಗಳನ್ನು [illegible] ಹಾಗೆ [illegible] ಕೆಲಕರರಿಗೆ ೧೧ ಮತ್ತು [illegible] ಯವರಿಗೆ ೧೦ [illegible] ಬಂತು



ಮಗು ೩೭

ಈ ಮಗುವು ಯುವಕನಾದಾಗ ಕೂ[illegible] [illegible] ಯನ್ನು ಪೋಸ್ಟ್ ಆಫೀಸ್‌ನಲ್ಲಿ ಡಿ[illegible] ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು ಕೊಂ[illegible]



ಪೋಸ್ಟ್ ಆಫೀಸ್‌ನಲ್ಲಿ ೪ ಆಣೆ, ೮ ಆಣೆ ಮತ್ತು ರೂ ೧ ಕ್ಕೆ ಒಂದರಂತೆ ಸಿಗುತ್ತವೆ ಎಲ್ಲಾ ವಯಸ್ಸಿನ ಮಕ್ಕಳೂ ಸ್ಟ್ಯಾಂಪ್‌ಗಳನ್ನು ಈ ವಿಧಾನದಲ್ಲಿ ಅವರು ಕೂಡಿಟ್ಟು ಹೊಂದಲು ಅನುಕೂಲವಾಗುತ್ತೆ

ಇದ್ದಿದ್ದರೆ "ಒಂದು ಹಳ್ಳಿಯ ರಸ್ತೆ (ಎಪ್ರೋಚ ರೋಡ) ಮಾಡಿಸಿಕೊಡಬೇಕು" ಎಂದು ರಾ॥ ಹೆಗಡೆಯವರು ಗ್ರಾಮೋದ್ಧಾರ ಮಂಡಳಕ್ಕೆ ಬಿನ್ನವಿಸುತ್ತಿದ್ದಿಲ್ಲ. ಆದ್ದರಿಂದ ಹೊಸ ರಸ್ತೆಯಾದ ಸ್ಥಳದಲ್ಲಿ ಹಳೆಯ ರಸ್ತೆಯಿತ್ತೆಂದು ಹೇಳುವದು ಶುದ್ಧ ತಪ್ಪು. ಮೊದಮೊದಲು ಬೋರ್ಡಿನವರು ಇದೊಂದು "ರಸ್ತೆ" ಯೆಂದು ಭಾವಿಸಿ ಚಾಲತಿ ದುರುಸ್ತಿಯ ಬಗ್ಗೆ ಪ್ರತಿ ವರ್ಷ ರೂ [illegible] ಮಂಜೂರ ಮಾಡುತ್ತ ಬಂದರು! ಈ ವರ್ಷ ಅಲ್ಲಿ ಖಡಿ ಹಾಕುವ ಬಗ್ಗೆ ರೂ ೪೫೦ ಮಂಜೂರ ಮಾಡಿದರು. ಮುಂದೆ ಇಷ್ಟೇ ರಸ್ತೆ ಬೋರ್ಡಿನ ರಸ್ತೆಯೆಂದು ಮಾಡಿಕೊಂಡು ಯಾರಾದರೂ ನಗುವರೆಂದು ಜಿಲ್ಹಾ ಬೋರ್ಡಿನವರು ಯಲ್ಲಾಪುರ ಶಿರ್ಸಿ ಮಾರ್ಗದಿಂದ "ಕನೇನಳ್ಳಿ ರಸ್ತೆ"ಯ ವರೆಗಿನ ಜಂಗಲ ಇಲಾಖೆಯ ೫ ಫರ್ಲಾಂಗ ರಸ್ತೆಯನ್ನು ಈಗ ತಮ್ಮ ತಾಬೆಗೆ ತಕ್ಕೊಂಡಿದ್ದಾರೆ. ಈ ರಸ್ತೆಯನ್ನು [illegible] ಮಾಡಿಕೊಳ್ಳುವದು ಬೋರ್ಡಿಗೆ ತಲೆಭಾರವಾಗುವದು ಖಂಡಿತ. ಅಲ್ಲಿ ಒಂದು ಜೀರ್ಣವಾದ ಸಂಕವಿದೆ. ಇಂದಲ್ಲ ನಾಳೆ ಅದರ ದುರುಸ್ತಿಯಾಗಬೇಕು. ಅದಕ್ಕೆ ರೂ ೫೦೦೦ ವಾದರೂ ಬೇಕು. ಒಬ್ಬ ಸದಸ್ಯರ ಅನುಕೂಲತೆಗಾಗಿ— ಅವರ ಮನೆಯವರ ಅನುಕೂಲತೆಗಾಗಿಯೆಂದು ಬೇಕಾದರೆ ಅನ್ನಿರಿ (ಯಾಕೆಂದರೆ ಕನೇನಳ್ಳಿಯ ಅರ್ಧ ಜನರು ಇವರ ಮನೆಯವರೇ!)— ಕೊಂಗ್ರೆಸ ಬೋರ್ಡು ಹೀಗೆ ಕಣ್ಣುಮುಚ್ಚಿ ಹಣ ವೆಚ್ಚ ಮಾಡುತ್ತಿದೆ. ಮತ್ತು ಎಂತೆಂತಹ ಹೊಣೆ ಹೊರುತ್ತಿದೆಯೆಂಬದನ್ನು ವಾಚಕರೇ ಆಲೋಚಿಸಲಿ. ಕೊಂಗ್ರೆಸ ಬೋರ್ಡಿನವರು ಮಾಡಿದ ವಿವಿಧ ಕೃತ್ಯಗಳಲ್ಲಿ ಇದೊಂದು! ಮೇಲಾಗಿ ಕನೇನಳ್ಳಿ ರಸ್ತೆಯು ಕೆಲವು ಕಡೆ ಖಾಸಗಿ ಮಾಲ್ಕಿಯ ಭೂಮಿಯೊಳಗಿಂದ ಮತ್ತು ಕೆಲವು ಕಡೆ ಕುಮಕಿ ಬೆಟ್ಟವೆಂದು ತೋಟಿಗರಿಗೆ ನೇಮಿಸಿಕೊಟ್ಟ ಜಂಗಲ ಸರ್ವೇ ನಂಬರುಗಳೊಳಗಿಂದ ಹಾದುಹೋಗುತ್ತದೆ. ಆ ಬಗ್ಗೆ ಖಾಸಗಿ ಸ್ಥಳಗಳನ್ನು ದಾನವೆಂತಾಗಲಿ ಕ್ರಯವೆಂತಾಗಲಿ ಮಾಡಿಕೊಂಡಿದ್ದಿರುವದಿಲ್ಲ! ಬೆಟ್ಟದೊಳಗಿಂದ ರಸ್ತೆ ಮಾಡಲು ಸರಕಾರದಿಂದ ಪರವಾನಗಿಯನ್ನೂ ಪಡೆದಿದ್ದಿರುವದಿಲ್ಲ! ಗ್ರಾಮಿಣರಿಂದ ರಸ್ತೆ ಮಾಡಿಸಿದೆ ರಸ್ತೆಗೆ ಖಡಿ ಹಾಕಬೇಕೆಂದು ಮೂಲ ಸಂಕಲ್ಪವಿತ್ತು. ಅದರ ಖಡಿ ಸಿಗಲಿಲ್ಲ. ಆಗ ಬೋರ್ಡಿನವರು ಬರೆಯುತ್ತಾರೇನಂದರೆ ಖಡಿ ಸಿಗದಿದ್ದರೆ ಗುಂಡ ಗಲ್ಲು ಹಾಕಿರಿ, ಮಣ್ಣು ಹಾಕಿರಿ, ಏನು ಬೇಕಾದದ್ದು ಮಾಡಿರಿ. ಆ ರಸ್ತೆಯ ಮೇಲೆ ರೂ ೪೫೦ ಖರ್ಚಾದರಾಯಿತು. ಇದು ಕೊಂಗ್ರೆಸ ಬೋರ್ಡಿನ ಕಾರ್ಯ ಪದ್ಧತಿ!

ಕಳೆದ ತಾ ೩ ೯ ೪೧ ನೇಗೆ ಅಬಕಾರಿ ಅಧಿಕಾರಿಗಳು ಮಾಡಿದ ಖಟ್ಲೆಯಲ್ಲಿ ಒಬ್ಬ ಆರೋಪಿ ಗಣಪಯ್ಯ ಹೆಗಡೆ ಇವರಿಗೆ ಅದೇ ದಿನ ಮೆಜಿಸ್ಟ್ರೇಟರು ರೂ ೨೦ ದಂಡ ವಿಧಿಸಿ, ಇನ್ನೊಬ್ಬ ಆರೋಪಿಯಾದ ವಿಶ್ವೇಶ್ವರ ಜಯರಾಮ ಹೆಗಡೆ ಇವರ ವಿಚಾರಣೆಯನ್ನು ಮಾತ್ರ ಮುಂದಿಟ್ಟಿದ್ದರಷ್ಟೇ. ಹೆಗಡೆಯವರ ಮೇಲಿನ ಖಟ್ಲೆಯ ವಿಚಾರ ಕಳೆದ ತಾ ೬ ನೇಗೆ ಮುಗಿದು ಹೆಗಡೆಯವರು ನಿರ್ದೋಷಿಗಳೆಂದು ಬಿಡುಗಡೆಯಾಗಿರುತ್ತದೆ.

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗರು ಇವರು ತಮ್ಮ ಸ್ಟಾರ ಆಫ್ ಕೆನರಾ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿದರು.

ಅದರಂತೆ ೧೫ ಸದಸ್ಯರು ಸಭಾಪತಿಗಳಾಗಿ ನಗರಾಧ್ಯಕ್ಷರ ಸ್ಥಳಕ್ಕೆ ಸೂಚನೆಗಳನ್ನು ಮಾಡಬೇಕಾದರು ಒಂದು ಬದಿಯಿಂದ ರಾ|| ಸಾ|| ತೇಲಂಗರವರ ಮತ್ತು ಇನ್ನೊಂದು ಬದಿಯಿಂದ ರಾ|| ಮಾವಿನಕುರ್ವೆಯವರ ಹೆಸರುಗಳು ಸೂಚಿಸಲ್ಪಟ್ಟವು ಮತ್ತು ಮತಗಳನ್ನು ತೆಗೆದು ಕೊಳ್ಳಲಾಗಿ ರಾವ ಸಾಹೇಬ ತೇಲಂಗರವರಿಗೆ ೧೧ ಮತ್ತು ರಾ|| ಮಾವಿನಕುರ್ವೆಯವರಿಗೆ ೯ ಮತಗಳು ಬಿದ್ದವು ಡಿಸೋಜಾ ಹಾಗು ಸಕ್ಸೆನಗಳು ತಮ್ಮ ಮತಗಳನ್ನು ಎರಡೂ ಹುರಿಯಾಳುಗಳಿಗೆ ಸಮನಾಗಿ ಹಂಚಿಹಾಕಿದ್ದರು ಹೀಗಾಗಿ ರಾ| ಸಾ| ತೇಲಂಗರವರು ಇನ್ನೊಮ್ಮೆ ನಗರಾಧ್ಯಕ್ಷರಾಗಿ ಆರಿಸಲ್ಪಟ್ಟರು ಆ ಪ್ರಕಾರ ರಾವಸಾಹೇಬರು ಅಧ್ಯಕ್ಷಸ್ಥಾನ ಮಂಡಿಸಿದ ತರುವಾಯ ಉಪಾಧ್ಯಕ್ಷರ ಚುನಾವಣೆಯ ಪ್ರಶ್ನೆ ಮುಂದೆ ಬಂತು ಉಪಾಧ್ಯಕ್ಷಪದಕ್ಕೆ ಶ್ರೀಯುತ ನೆಲ್ಲಿ ಡಿಸೋಜಾ ಮತ್ತು ಶ್ರೀಯುತ ಕೊಯಲೋ ಹೀಗೆ ಇಬ್ಬರು ಕ್ರಿಶ್ಚನ ಸದಸ್ಯರ ಹೆಸರುಗಳು ಸೂಚಿಸಲ್ಪಟ್ಟವು ಮತಗಳನ್ನು ತಕ್ಕೊಳ್ಳಲಾಗಿ ನೆಲ್ಲಿಯವರಿಗೆ ೧೩ ಮತ್ತು ಕೊಯಿಲೋರವರಿಗೆ ೮ ಮತಗಳು ಬಿದ್ದದ್ದರಿಂದ ಶ್ರೀಯುತ ನೆಲ್ಲಿ ಡಿಸೋಜಾರವರು ಉಪಾಧ್ಯಕ್ಷರೆಂದು ಜಾಹೀರಾಯಿತು. ಅಂತು ೫-೬ ವಾರಗಳಿಂದ ನಡೆದಿದ್ದ ನಗರಾಧ್ಯಕ್ಷ ಚುನಾವಣೆಯ ತೀವ್ರತರ ಹೋರಾಟದಲ್ಲಿ ರಾ| ಸಾ| ತೇಲಂಗರವರು ಯಶಸ್ವಿಯಾಗಿ ಹೊರಬಿದ್ದದ್ದು ನೋಡಿ ಕಾರವಾರಿಗರು ಬಹಳ ಆನಂದಗೊಂಡಿದ್ದಾರೆ ಎಲ್ಲರೂ ರಾವಸಾಹೇಬರನ್ನು ಅಭಿನಂದಿಸುತ್ತಾರೆ

[ಆಟೆಯ ವರ್ಗ] ಅಯ್ ಸಿ ಎಸ್ ರಾವ ಸಾಹೇಬ ರಾ|| ಯಾರ್ಡಿಯವರಿಗೆ ಸಿಂಧ ಪ್ರಾಂತದ ಭಾರವಾರ ಜಿಲ್ಹೆಯಲ್ಲಿ ನೇಮಣೂಕಿಯಾಗಿದೆ ಕೆಲವು ದಿನಗಳಲ್ಲಿ ರಾ|| ಯಾರ್ಡಿಯವರು ತಮ್ಮ ಸ್ಥಾನಕ್ಕೆ ಹೋಗುವರು

ಅಕ್ಕಿ ಧಾರಣೆ ಬಹಳ ಏರಿಕೆಯಲ್ಲಿದೆ ಹೋದಸಂತೆಯಲ್ಲಿ ರೂ ೧ಕ್ಕೆ ೭||| ಶೇರುಗಳಂತೆ ಅಕ್ಕಿ ಮಾರಾಟವಾಯಿತು ಹೀಗೆ ಅಕ್ಕಿ ತುಟ್ಟಿಯಾದರೆ ತಮ್ಮ ಗತಿಯೇನೆಂದು ಬಡಬಗ್ಗರು ಮರಗುತ್ತಿದ್ದಾರೆ ಸರಕಾರದವರು ಧಾರಣೆಯನ್ನು ನಿಯಂತ್ರಿಸುವ ಆಲೋಚನೆ ಮಾಡುವದೊಳಿತು

ತಾ ೨೯-೯-೪೧ "ವೃತ್ತ"ದಲ್ಲಿ ಪ್ರಕಟವಾದಂತೆ ತಾವು ಯಾವದೇ ಪ್ರವಚನದಲ್ಲಿ ಹಿಂದುಗಳು ಪಾಂಗಳು ಅವರ ಸಹವಾಸ ಮಾಡುವದು ಬಪಕರ " ಎಂದು ಹೇಳಿದ್ದಿರುವದಿಲ್ಲವಾಗಿ ಸದಾಶಿವಗಡ ಇಗರ್ಜಿಯ ವ್ಹಿಕಾರರಾದ ರೆ|| ಬಿ ಫರ್ನಾಂಡಿಸರವರು ತಿಳಿಸುತ್ತಾರೆ ಹೀಗೆ ಹೇಳುವ ಕಾರಣ ಇಲ್ಲವೆ ಪ್ರಸಂಗ ಸಹ ಎಂದೂ ಉತ್ಪನ್ನವಾಗಿದ್ದಿಲ್ಲವಂತೆ ರೆ|| ಫಾದರರವರು ಮಾಡಿದ ಈ ಖುಲಾಸೆಯನ್ನು ನೋಡಿ "ವೃತ್ತ"ಕ್ಕೂ ಒಂದು ಸಮಾಧಾನಕ್ಕೂ ಸಂತೋಷವಾಗುತ್ತದೆಂದು ಹೇಳಬೇಕಾಗಿಲ್ಲ

ಅಮದಳ್ಳಿ ಪೈಕಿ ಕೊತ್ತವಾಡೆಯಲ್ಲಿ ಹೊಸದಾಗಿ ತೆರೆಯಲ್ಪಟ್ಟಿರುವ ಪ್ರೌಢ ಶಿಕ್ಷಣ ವರ್ಗಕ್ಕೆ ಕಳೆದ ತಾ ೩ನೇಗೆ ಈ ಭಾಗದ ಶಾಲಾತಪಾಸಣೆ ಅಧಿಕಾರಿಗಳಾದ ರಾ|| ಪರಬರವರು ಭೆಟ್ಟಿ ಕೊಟ್ಟು ಶಾಲೆಯ ಪ್ರಗತಿಯ ಪರೀಕ್ಷೆ ಮಾಡಿ ವಿದ್ಯಾರ್ಥಿಗಳಿಗೆ ಮನಮುಟ್ಟಿ ಕಲಿಯಲು ಪ್ರೋತ್ಸಾಹನ ಕೊಟ್ಟರು ವಿದ್ಯಾರ್ಥಿಗಳು ಆಗ "ಕುಸಂಯೋಗ ದಾರ" ಎಂಬ ಬೇಂದ್ರೆಯವರ ಪದವನ್ನೂ "ಕಟ್ಟಿಗೆವದಾತ್ಮದಲ್ಲಿ ಬಿಚ್ಚುತಿದೆ ನ್ಯೆ" ಎಂಬ ಪುಟ್ಟಪ್ಪನವರ ಪದ್ಯವನ್ನೂ ಸಾಭಿನಯ ಹಾಡಿ ತೋರಿಸಿದರು ರಾ|| ಪರಬರು ಅದನ್ನು ನೋಡಿ ಬಹಳ ಸಂತುಷ್ಟರಾದರಂತೆ

ಕಳೆದ ತಾ ೪ ಮತ್ತು ೫ನೇಗೆ ಅಮದಳ್ಳಿಯ ಕನ್ನಡ ಶಾಲೆಯಲ್ಲಿ ಆ ಭಾಗದ ಪ್ರಾಥಮಿಕ ಶಿಕ್ಷಕ ಸಮ್ಮೇಲನವು ಶಾಲಾಧಿಕಾರಿಗಳಾದ ರಾ|| ಕರ್ಜಗಿಯವರ ಅಧ್ಯಕ್ಷತೆಯಲ್ಲಿ ಜರುಗಿತು ಅದರ ಜೊತೆಗೆ ವಿದ್ಯಾರ್ಥಿಗಳ ಕೈಗಾರಿಕೆಯ ಪ್ರದರ್ಶನವೂ ನಡೆಯಿತು ಉತ್ತಮ ಕೈಗಾರಿಕೆ ಕೆಲಸ ಮಾಡಿದ ೬ ಮಂದಿ ವಿದ್ಯಾರ್ಥಿಗಳಿಗೆ ಇನಾಮುಗಳು ಸಿಕ್ಕಿವೆ ಸಮ್ಮೇಲನದಲ್ಲಿ ಸುಶಿಕ್ಷಿತ ಶಿಕ್ಷಕರು ಕೆಲವು ಬೋಧಪ್ರದ ಶಿಕ್ಷಣ ಪದ್ಧತಿಗಳನ್ನೂ ಪಾಠದ ಬಗೆಗಳನ್ನೂ ಪ್ರತ್ಯಕ್ಷವಾಗಿ ಕಲಿಸಿ ತೋರಿಸಿದರು ಶಿಕ್ಷಕರು ಅವನ್ನು ಅನುಸರಿಸಿದಲ್ಲಿ ಶಿಕ್ಷಣದ ಪ್ರಗತಿಗೆ ತುಂಬಾ ಸಹಾಯಕಾರಿಯಾಗುವಂತೆ

ಅಂಕೋಲಾ — (೯-೧೦-೪೧) ಇಲ್ಲಿಯ ಹೊಸ ಇಂಗ್ಲಿಷ ಶಾಲೆಯಲ್ಲಿ ಕಳೆದ ತಾ ೨೨,-೮ನೇಗೆ ವಿದ್ಯಾರ್ಥಿಗಳೂ ಶಿಕ್ಷಕರೂ ಶ್ರೀ ಸರಸ್ವತೀ ಪೂಜೆಯ ಉತ್ಸವವನ್ನು ಒಳ್ಳೇ ವಿಜೃಂಭಣೆಯಿಂದ ಆಚರಿಸಿದರು ತಾ ೨೯ನೇಗೆ ಮಕ್ಕಳು [illegible] ಡೋಂಗರಕೇರಿ ಉಮಾನಾಥ [illegible] ರಚಿಸಿದ "ವಜ್ರಾಯುಧ" ಎಂಬ ಕೊಂಕಣಿ ಭಾಷೆಯ ನಾಟಕವನ್ನು ಆಡಿ ತೋರಿಸಿದರು ವಿದ್ಯಾರ್ಥಿಗಳ [illegible] ಎಲ್ಲೂ ಕೊಂಕಣಿ ಭಾಷೆಗೆ ಪ್ರಾಧಾನ್ಯ ಕೊಡಲಾಗಿತ್ತು ಅಂತು ಈಗ ಕೊಂಕಣಿ ಭಾಷೆಯು ತಲೆಯೆತ್ತಿ ಗೌರವದಿಂದ ಮೆರೆಯಲಾರಂಭಿಸಿದೆಯೆಂದು ಹೇಳಬಹುದು

ಕುಂಭಾರವಾಡಾ — (ತಾ ೬-೧೦-೪೧) ಇಲ್ಲಿಯ ಕನ್ನಡ ಶಾಲಾ ಶಿಕ್ಷಕ ರಾ ಪಾಂಡುರಂಗ ಪ್ರಭು ಶಾಲಾ ಧರ್ಮಕರ್ತ ರಾ| ಪುಂಡಲೀಕ [illegible] ಗ್ರಾಮೋದ್ಧಾರ ಸಂಘದ ಅಧ್ಯಕ್ಷ ರಾ ಬಿ ಎಸ್ [illegible] ಇವರು ಸಹಕರಿಸಿ ಕನ್ನಡ ಶಾಲೆಯಲ್ಲಿ ಕಳೆದ ತಾ ೨೬ ರಿಂದ ತಾ ೩೦ರ ವರೆಗೆ ನಾಲ್ಕು ದಿನಗಳ ವರೆಗೆ ಸಹಾಯಕರ ಶಾರದಾ-ಪೂಜೆಯ ಉತ್ಸವವನ್ನು ನಡಿಸಿದರು ತಾ ೨೬ನೇಗೆ ಮೂರ್ತಿಯ ಪಾದದೆಯನ್ನು ತಂದು ಪ್ರತಿಷ್ಠಿಸಲಾಯಿತು ದಿನಾಲೂ ಮೂರ್ತಿಯ ಎದುರಿಗೆ ಭಜನ ಪೂಜಾ ವಿಧಿಗಳು ನಡೆಯುತ್ತಿದ್ದವು ಇದಲ್ಲದೆ ಹಾಸ್ಯಗಾರಿಕೆ, ಸಂತೋಷದ ವಿದ್ಯೆ (ಮ್ಯಾಜಿಕ್) ಗಳ ಮನರಂಜಕ ಪ್ರಯೋಗಗಳೂ ಗಾಯನ ವಾದನಗಳೂ ಆಟ ಪಾಟಗಳೂ ನಡೆಯುತ್ತಿದ್ದವು ಒಂದು ದಿನ ಹೊಂಗೆಲೆಯರ [illegible] ಸಂಭ್ರಮ ಸಮಾರಂಭವಾಯಿತು ಇನ್ನೊಂದು ದಿನ ಗ್ರಾಮಸುಧಾರಣೆ ಶಿಕ್ಷಣ ಆರೋಗ್ಯ ಒಕ್ಕಲತನ ಮುಂತಾದ ಗ್ರಾಮ್ಯ ಜನಗಳಿಗೆ ನಿಕಟ ಸಂಬಂಧವಿರುವ ಬೇರೆಬೇರೆ ವಿಷಯಗಳ ಮೇಲೆ ಪ್ರವಚನಗಳಾದವು ಅಬಕಾರಿ ಅಧಿಕಾರಿ [illegible] ತಾರ ಸಾಹೇಬರ ಸದಾನಂದ ನಾಡಕರ್ಣಿ, ಬಿ

(ಮುಂದೆ ಪುರವಣಿ ನೋಡಿರಿ)

BY THE AREA RATIONING AUTHORITY,
KARNATAK REGION, BELGAUM

NOTIFICATION No. 2.

Owners of motor vehicles in the Karnatak Region are hereby informed that the petrol ration coupons for the next quarter ending 31st January 1942 will be issued at the following centres and on the dates mentioned against them Necessary application forms can be had from the Officers in charge of the centres —

District	*Centre*	*Date* *From*	*To*	*Location of the Office.*
Belgaum	Belgaum	16-10-41	onwards	Regional Transport Office Belgaum
Kanara	1 Ankola	16 10 41	to 18 10 41	Mamlatdar's Office Ankola
	2 Sirsi,	22 10 41	and 24 10 41	Mamlatdar's Office Sirsi
Dharwar	1 Hubli,	26 10 41	to 28 10 41	Municipal Office, Hubli
	2 Gadag	30 10 41	to 31 10 41	Mamlatdar's Office, Gadag
Ratnagiri	1 Ratnagiri,	16 10 41	to 18 10 41	Mamlatdar's Office Ratnagiri
	2 Vengurla,	22 10 41	and 24 10 41	Inspector's Camping place.
Bijapur	1 Bagalkot	27 10 41	to 28 10 41	Mamlatdar's Office Bagalkot
— —	2 Bijapur,	30 10 41	to 31 10 41	Collector's Office, Bijapur

2 Motor owners should produce their registration certificates In case of transport vehicles part A of the permit also must be produced

3 ***No ration coupons will be issued to owners who fail to comply with the above requirements***

4 The hours of work for this purpose will be from 11 0 a m to 3 0 p m

Sd/ **M. SHARIFF KHAN**
AREA RATIONING AUTHORITY,
KARNATAK REGION BELGAUM

Belgaum, 11—10—41

— ದಕ್ಷಿಣ ಭಾಗದ ಕಮಿಶನರ ಮಿ|| ಪೆರಿಯವರಿಗೆ ಕೊಲ್ಹಾಪುರ ಸಂಸ್ಥಾನದ ಆಡಳಿತೆದಾರರಾಗಿ ನೇಮಿಸಿದ್ದಾರೆ. ಅವರ ಸ್ಥಳದಲ್ಲಿ ರಾ|| ವ್ಹಿ. ಎಸ್. ಭಿಡೆಯವರು ಕಮಿಶನರರಾಗಿ ಬರುವರು.

— ಭಾಗಲಪುರ ಜಿಲ್ಹೆಯಲ್ಲಿ ಹಿಂದು ಮಹಾಸಭೆಯ ವಾರ್ಷಿಕ ಅಧಿವೇಶನ ಕೂಡಿಸಬಾರದೆಂಬ ಪ್ರತಿಬಂಧಕ ಹುಕುಮು ತಾ. ೧-೧೦-೪೧ನೇ ತನಕವೇ ಅಮಲಿನಲ್ಲಿರುವದು. ಕಾರಣ ಈ ನಂತರವಾದರೂ ಅಧಿವೇಶನವನ್ನು ಅಲ್ಲೇ ಕೂಡಿಸಬೇಕೆಂದು ನಿಶ್ಚಯಿಸಿ ಸ್ವಾಗತ ಸಮಿತಿಯವರು ಅಧಿವೇಶನದ ಸಿದ್ಧತೆಯ ಕೆಲಸವನ್ನು ಹಿಂದಿನಂತೆಯೇ ಮುಂದರಿಸಿದ್ದಾರೆ.

ಕರ್ಣಿಕ
[illegible]
ನೋವುಗಳಿಗೆ ಸಿದ್ಧೌಷಧ
[illegible]

ಸಹ್ಯಾದ್ರಿ ಫಾರ್ಮಸಿ
ಕುಮಟಾ.

ಬಾಳಂತಿಯರಿಗೆ— ಕಸ್ತೂರಿ ಮಿಶ್ರಣ ದಶಮೂಲಾರಿಷ್ಟ ಮತ್ತು ಧನ್ವಂತರಿ ಗುಳಿಗೆ- ಒಳ್ಳೇ ಉಪಯುಕ್ತವಾದವು!

ಚಿಕ್ಕ ಮಕ್ಕಳ ಜಂತುವಿನ ಬಾಧೆಗೂ ಪುಷ್ಟಿಯಾಗಲಿಕ್ಕೂ ಸಾಯರಪ್-ಕುಟಜಾ ಒಂದೇ ದಿವ್ಯವಾದ ಔಷಧವು!

ನಾಯಿ-ಕೆಮ್ಮಿಗೆ ಎಂಟೇ ದಿವಸಗಳಲ್ಲಿ ಗುಣಪಡಿಸುವ ಕಫನಾಶಕವು.

ಯಾವತ್ತೂ ಪ್ರಕಾರಗಳ ಕಷಾಯ, ಅರಿಷ್ಟ, ಆಸವ, ತೈಲಾದಿ ಔಷಧ ಸಾಮಗ್ರಿಗಳು ಸದಾ ಸಿಗುತ್ತವೆ.

ಡಾ|| ಎಸ್. ಕೇ. ಭಟ್ಟ,
ಹಳ್ಕಾರ, ಕುಮಟಾ.

ಹೈಸ್ಕೂಲುಗಳಿಗೆ ಬೇಕಾಗುವ ಎಲ್ಲ ತರದ ಇಂಗ್ಲಿಷ-ಸಂಸ್ಕೃತ-ಕನ್ನಡ-ಮರಾಠಿ ಪುಸ್ತಕಗಳು ನಮ್ಮಲ್ಲಿ ಸಿಗುತ್ತವೆ.

ನಿಮಗೆ ಬೇಕಾಗುವ ಪುಸ್ತಕಗಳನ್ನು ಇಂದೇ ಕೊಂಡುಕೊಳ್ಳಿ. ವಿಳಂಬ ಮಾಡಿದಲ್ಲಿ—ನಿರಾಶರಾಗಬೇಕಾದೀತು. ಪ್ರಾಥಮಿಕ ಶಾಲೆಗಳಿಗೆ ಬೇಕಾಗುವ ಎಲ್ಲಾ ಕನ್ನಡ, ಮರಾಠಿ, ಪುಸ್ತಕಗಳೂ ನಮ್ಮಲ್ಲೇ ದೊರೆಯುವವು. ನಿಮಗೆ ಯಾವ ಪುಸ್ತಕ ಬೇಕಾದರೂ ನಮ್ಮಲ್ಲಿ ವಿಚಾರಿಸಿರಿ.

ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ.

ಧಾತುಪುಷ್ಟಿ ಲೇಹ. (ಸುವರ್ಣ, ಸಾಲಾಮಿಶ್ರಿ, ಕಲ್ಪದ ಮಿಶ್ರ) ನಷ್ಟವಾಗಿರುವ ಪುರುಷತ್ವವನ್ನು ಪುನಃ ಕಲ್ಪಿಸಿಕೊಡುವ ಅತ್ಯುತ್ತಮ ಶಕ್ತಿದಾಯಕ ಔಷಧಿ, ಮಾನಸಿಕ ಮತ್ತು ಕಾಯಶಕ್ತಿಗಳನ್ನು ಹೆಚ್ಚಿಸಿ, ಆರೋಗ್ಯ, ಇಂದ್ರಿಯಶಕ್ತಿ ಇವೇ ಮೊದಲಾದವುಗಳನ್ನು ಕಲ್ಪಿಸಿಕೊಡುವದು. ಬಾಟ್ಲಿ ೧ಕ್ಕೆ 2—8—0.

ಕಸ್ತೂರಿ ಮಿಶ್ರಣ ದಶಮೂಲ. ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ. ಬಾಟ್ಲಿ ೧ಕ್ಕೆ ರೂ. 1—8—0.

ಮಲೇರಿಯಾ ನಿವಾರಿಣಿ. ಮಲೇರಿಯಾ ಜ್ವರ, ಚಳಿ ಜ್ವರ, ಇನ್‌ಫ್ಲುಯೆಂಝಾ, ಮಲಬದ್ಧತೆ ಇವುಗಳಿಗೆ ಪ್ರಸಿದ್ಧ ಔಷಧಿ. ಬಾಟ್ಲಿ ೧ಕ್ಕೆ ರೂ. 0—13—0.

ಸ್ಪ್ಲೀನ ಮಿಕ್ಶ್ಚರ. ಜ್ವರಗಡ್ಡೆಯನ್ನು ಕರಗಿಸುವ ದಿವ್ಯೌಷಧ. ಬಾಟ್ಲಿ ೧ಕ್ಕೆ ರೂ. 1-2-0.

ಎಮ್. ಗಣಪಯ್ಯ ಎಂಡ್ ಸನ್ಸ, ರಥಬೀದಿ ನಂಬ್ರ 5, ಮಂಗಳೂರು. ದ. ಕ.

ಔಷಧಿ ಸಿಗುವ ಸ್ಥಳ:— (1) ಸ್ವಸ್ತಿಕ ಫಾರ್ಮಸಿ, ಕುಮಟಾ; (2) ಕಾಮತ ಸ್ಟೋರ್ಸ, ಹೊನ್ನಾವರ; (3) ಕೇಸರಿ ಡಿಪೋ, ಅಂಕೋಲಾ; (4) ಕೆ. ಗಣಪಯ್ಯ ಶಾನಭಾಗ, ಮರ್ಚಂಟ್ಸ, ಭಟಕಳ; (5) ಪೊಪ್ಯುಲರ ಸ್ಟೋರ್ಸ, ಕೆಮಿಸ್ಟ್ಸ, 183, ಸುಪಾರಿಬಾಗ ಪರೇಲ; (6) ಜನರಲ್ ಸ್ಟೋರ್ಸ, ಜಿ. ಐ. ಪಿ, ಮಾಟುಂಗಾ; (7) ಮ್ಹಾಳಪ್ಪ ಪದ್ಮನಾಭ ಶೆಟ್ಟಿ, ಮರ್ಚಂಟ, ಕಾರವಾರ; (8) ಶಾಮಯ್ಯನ ಬ್ರದರ್ಸ, ಸಿದ್ದಾಪುರ; (9) ಪೊಪ್ಯುಲರ ಮೆಡಿಕಲ್ ಸ್ಟೋರ್ಸ, ಗೋಕರ್ಣ; (10) ಎಸ್. ಎಲ್. ಥಾಕಪ್ಪ ಎಂಡ್ ಸನ್ಸ್, ಬಡವರ ಔಷಧಿ ಅಂಗಡಿ, ಶಿರಸಿ. [ಕ್ಯಾಟಲಾಗಿಗೆ ಬರೆ.]

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್,
ಸ್ಥಾಪನೆ: **1908.**

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯುಳ್ಳವು ಇವೆ. ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್‌ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯುರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents-
D. K. Nayak Bros.
K. N Nayak.
Honavar Agent:-
R. V, Prabhu.

K. PadmanabhaRao & Sons,
BELGAUM
Chief Agents for
Karnatak Districts & S. M. States.

ಚಕ್ರಬಿಂದು

ಮಕ್ಕಳ ಮರಣವನ್ನು ತಪ್ಪಿಸುವದು.

ಏಜನ್ಸಿ ಕಲಕತ್ತಾ, ಮುಂಬಯಿ, ಮದ್ರಾಸ, ಬೆಂಗಳೂರು, ಮಂಗಳೂರು.

Spleen and Liver Enlargement for Children.

ಮಕ್ಕಳ ಲಿವ್ಹರ್, ಪ್ಲೀಹ, ಹೊಟ್ಟೆದ್ದಾಗುವಿಕೆ, ಹಸುರು ನರಗಳು, ಕಾಮಿಲೆ, ಗಡ್ಡೆರೋಗ, ಕೋವೆ ರೋಗ, ಮೈ-ಕೈ ಬಾವುಗಳಿಗೆ ದಿವ್ಯೌಷಧ!

೧ ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ. 3.



ಏತಕ್ಕೆ ಚಿಂತಿಸುವಿರಿ?

ಆಸೇತುಹಿಮಾಚಲದ ವರೆಗೂ ೪೦ ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ.

ಡಾ| ವಿ. ಎನ್. ಶ್ರೀನಿವಾಸರಾವ,
ಲಿವ್ಹರ್ ಸ್ಪೆಶಲಿಸ್ಟ,
ಎಂ. ವಿ. ಪ್ರಾಸಾದಿಕ ಔಷಧಾಲಯ,
ಶಿವಮೊಗ್ಗಾ.

☞ ಇವರಲ್ಲಿ ವಿಚಾರಿಸಿರಿ.

ಶಿರಸಿ ಏಜಂಟ—
ಸುಬ್ರಾಯ ಸೀತಾರಾಮ ಹೆಗಡೆ,
ಕುಮಟೆಯ ಏಜಂಟ:—
ದೇವಪ್ಪಾ ಅಯ್ಯು ನಾಯ್ಕ.

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg. No. B. 1270. Monday, 27th October, 1941.

ವರ್ಷ ೨೪

ಕಾನಡಾವೃತ್ತ

THE KANARA NEWS

ಸಂಚಿಕೆ ೧೬

ಪತ್ರದ ವರ್ಗಣಿ.
ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮುನಿಯಾರ್ಡರಿನಿಂದ
ರೂ. 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಸ್ಮಾಲ ಪೈಕಾ ಟೈಪಿನ (೧೫ ಎಮ್ ಉದ್ದ) ೮ ಸಾಲುಗಳವರೆಗೆ ರೂ.1-8-0 ಆ ನಂತರ ಪ್ರತಿಸಾಲಿಗೆ 0-3-0. ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪಿನಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

-✦(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೨೭ ಮಾಹೆ ಅಕ್ಟೋಬರ ಸನ್ ೧೯೪೧ನೇ ಇಸವಿ)✦-

ದೀಪಾವಳಿಯ ಒಂದೇ ಒಂದು ಕಾಣಿಕೆ!

ಶ್ರೀ ಧೂತಪಾಪೇಶ್ವರ ಪನವೇಲ, ಲಿ.,
ಕರ್ನಾಟಕ ಕೇಂದ್ರ:- ಯುನೈಟೆಡ್ ಏಜನ್ಸೀಜ, ಹುಬ್ಬಳ್ಳಿ.
ಕಾರವಾರ:— ಮೆಸರ್ಸ ಮುಜುಮದಾರ-ಶಿಕಬೇಕರ ಬ್ರದರ್ಸ.
ಅಂಕೋಲಾ:— ದಿ ಸ್ಟೇಶನರಿ ಡಿಪೋ.
ಕುಮಟಾ:— ದೇವಪ್ಪಾ ಅಯ್ಯು ನಾಯ್ಕ.
ಹೊನ್ನಾವರ— ಮೆಸರ್ಸ ಕಲ್ಯಾಣಪುರ ಬ್ರದರ್ಸ.
ಶಿರ್ಶಿ:— { ಶಿರ್ಶಿ ಡ್ರಗ್ ಸ್ಟೋರ್ಸ.
ಎಸ್. ಎಲ್. ಥಾಕಪ್ಪಾ ಎಂಡ್ ಸನ್ಸ.
ಸಿದ್ದಾಪುರ:— ಮೆಸರ್ಸ ಶಾಮಯ್ಯನ ಬ್ರದರ್ಸ.

"ಸ್ಟಾರ ಆಫ್ ಕೆನರಾ ಪ್ರೆಸ್",

ಕುಮಟಾ.

—✱—

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಯಿಂದ ಬೇಕಾದ ನಮೂನೆಯ ಕಲರ ಪ್ರಿಂಟಿಂಗ ವಗೈರೆ ಸಣ್ಣ-ದೊಡ್ಡ ಛಾಪಾ ಕೆಲಸಗಳೂ, ಪುಸ್ತಕ-ಮುದ್ರಣವೂ, ರೂಲಿಂಗ-ಬ್ಯಾಂಡಿಂಗ ಕೆಲಸವೂ ಉತ್ತಮವಾಗಿ ಸುಲಭ ದರದಲ್ಲಿ ತಕ್ಕ ಕಾಲಕ್ಕೆ ತಯಾರಿಸಿ ಕೊಡಲಾಗುವದು.

ಇದಲ್ಲದೆ ಕೋರ್ಟ-ಕಚೇರಿ ಉಪಯೋಗದ ವಖಾಲತ ವಗೈರೆ ಫಾರ್ಮುಗಳೂ, ಕಸ್ಟಮ್ ಕಚೇರಿಯ ಶಿಪ್ಪಿಂಗ ಬೀಲು-ಸತ್ಮಿ ವಗೈರೆ ಫಾರ್ಮುಗಳೂ, ಗೇಣಿ ರಶೀದಿ ಬೂಕು, ಗೇಣಚೀಟಿ-ಎದುರ್ಸೂಡಿ ಫಾರ್ಮುಗಳೂ ವಗೈರೆ ಮಾರಾಟಕ್ಕೆ ತಯಾರ ಸಿಗುತ್ತವೆ.
ನಿಮ್ಮ ಛಾಪಾ ಕೆಲಸಗಳನ್ನು ನಮ್ಮಲ್ಲಿಗೇ ಕಳಿಸಿರಿ.

ಒಮ್ಮೆ ಅನುಭವ ತಕ್ಕೊಂಡು ನೋಡಿರಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು.)

ಹೆಡ್ ಆಫೀಸು:— ಕುಂದಾಪುರ.

ಬ್ರೆಂಚ ಆಫೀಸುಗಳು:— ಅಂಕೋಲಾ, ಕುಂದಾಪುರ, ಬೈಂದೂರು, ಕೋಟೇಶ್ವರ, ಕುಮಟಾ, ಗೋಕರ್ಣ, ಕಾರವಾರ, ಹಾವೇರಿ, ಶಿವಮೊಗ್ಗಾ, ತರೀಕೆರೆ, ನಗರ, ಸೋಮವಾರಪೇಟೆ ಮತ್ತು ವೀರರಾಜಪೇಟೆ.

ಕಾಯಂ ಠೇವುಗಳು:- 3 ತಿಂಗಳಿಗೆ ಶೇ. ರೂ. 3ರಲ್ಲಿ, 6 ತಿಂಗಳಿಗೆ ಶೇ. 3½ರಲ್ಲಿ, ೧ ವರ್ಷಕ್ಕೆ ರೂ. 4ರಲ್ಲಿ, 2 ವರ್ಷ ಯಾ ಹೆಚ್ಚಿನ ಅವಧಿಗೆ ಶೇ. 4½ರಲ್ಲಿ.

ಸೇವಿಂಗ್ಸ ಬೇಂಕ್ ಠೇವುಗಳು ಮತ್ತು ಚಾಲು ಠೇವುಗಳು ಸಹ ಅಂಗೀಕರಿಸಲ್ಪಡುವವು.

ಭಂಗಾರದ ದಾಗಿನೆಗಳ ವ ಇತರ ವ್ಯಾಪಾರದ ಮ್ಹಾಲುಗಳ ಆಡವಿನ ಮೇಲೆ ಸವಲತ್ತಿನ ದರದ ಬಡ್ಡಿಯಲ್ಲಿ ಸಾಲ ಕೊಡಲ್ಪಡುವದು.
ವ್ಯಾಪಾರದ ಕೇಂದ್ರಗಳಿಗೆ ಡ್ರಾಫ್ಟ್‌ಗಳು, ಚೆಕ್ಕುಗಳು ಸಹ ಕೊಡಲ್ಪಡುವವು. ಎಲ್ಲ ತರದ ಬೇಂಕಿನ ವ್ಯವಹಾರಗಳು ಸವಲತ್ತಿನ ದರದಿಂದ ನಡಿಸಲ್ಪಡುವವು.

ಕುಂದಾಪುರ,
1-8-1941.

The Agricultural & Industrial Bank, Ltd.

ಇಂದಿನ ಕನ್ನಡ ಸಾಹಿತ್ಯದ ಪರಾಮರ್ಶ.

(ಮಂಗಳೂರಿನ ಪ್ರಮುಖ ಸಾಹಿತ್ಯ-ಸಂಘವಾದ “ಮಿತ್ರ-ಮಂಡಳಿ”ಯು ದಸರಾ-ಸಾಹಿತ್ಯೋತ್ಸವದಲ್ಲಿ ಏರ್ಪಡಿಸಿದ ಸಾಹಿತ್ಯ-ಗೋಷ್ಠಿಯ ಅಧ್ಯಕ್ಷಪೀಠದಿಂದ ಸುಂಕೇರಿಯ **ಶ್ರೀಮಾನ್ ಹನುಮಂತರಾವ ಮಾಂಜರೇಕರರವರು** ಮಾಡಿದ ಭಾಷಣದ ಸಾರಾಂಶ)

“ಬೇರೆ ಜಿಲ್ಲೆಯವರು ಉತ್ತರ ಕನ್ನಡದಿಂದ ಭಾಷಣಕಾರರನ್ನು ಆಮಂತ್ರಿಸುವದಕ್ಕೆ ಇದೇ ಮೊದಲು. ಆದುದರಿಂದ ಉಪನ್ಯಾಸಕರ ಭೂಮಿಕೆ-ವ್ಯಕ್ತಿತ್ವಗಳು ನನ್ನಲ್ಲಿಲ್ಲದಿದ್ದರೂ ತಾವು ಪ್ರೀತಿ-ವಿಶ್ವಾಸಗಳಿಂದ ಕೊಟ್ಟ ಆಹ್ವಾನವನ್ನು ಸ್ವೀಕರಿಸಿ ತಮ್ಮಲ್ಲಿಗೆ ಬಂದಿದ್ದೇನೆ ಹಿಂದೆ ತಮ್ಮ ಜಿಲ್ಲೆಯದೇ ಒಂದು ಅಂಗವಾಗಿದ್ದರೂ ಈಗ ದೂರವಾಗಿದ್ದ ಜಿಲ್ಲೆಯ ಓರ್ವ ಸಾಮಾನ್ಯ ಪ್ರತಿನಿಧಿಯೆಂದು ಬಂದಿದ್ದೇನೆ.

ನಿಮ್ಮ ನಾಡು ಚೆಲುವಿನ ಬೀಡು, ಸಿರಿ-ಸರಸ್ವತಿಯರ ನೆಲೆವನೆ. ಕೀರ್ತಿಶೇಷರಾದ ಎಮ್ ಎನ್. ಕಾಮತ, ಪಂಜೆ ಮಂಗೇಶರಾಯ ಇವರ ಜನ್ಮಭೂಮಿಯಾದ ಈ ಪ್ರಾಂತವನ್ನು ಒಮ್ಮೆ ನೋಡಬೇಕೆಂದೂ, ಜಿಲ್ಲೆಯ ಸಾಹಿತ್ಯ-ಪ್ರೇಮಿಗಳೊಡನೆ ನಿಕಟವಾದ ಪರಿಚಯವನ್ನು ಮಾಡಿಕೊಳ್ಳಬೇಕೆಂದೂ ಅನೇಕ ದಿನಗಳಿಂದ ಬಯಸಿದ್ದೆ. ಪಂಜೆಯವರು ನಮ್ಮಲ್ಲಿಗೆ ಬಂದಾಗ ಆಮಂತ್ರಣವನ್ನೂ ಕೊಟ್ಟಿದ್ದರು. ಆದರೆ ಆ ಮಹನೀಯರ ಜೀವಮಾನದಲ್ಲಿಯೇ ಇಲ್ಲಿಗೆ ಬರುವ ಭಾಗ್ಯವು ಒಂದಿಲ್ಲೊಂದು ಕಾರಣದ ಮೂಲಕ ನನಗೆ ಲಭಿಸಲಿಲ್ಲ ಈಗ ಅದು ತಮ್ಮ ಔದಾರ್ಯದಿಂದ ಲಭಿಸಿದುದಕ್ಕಾಗಿ ತಮ್ಮೆಲ್ಲರಿಗೂ ನನ್ನ ಹೃತ್ಪೂರ್ವಕ ಆಭಾರಗಳನ್ನೂ ವಂದನೆಗಳನ್ನೂ ಸಲ್ಲಿಸುತ್ತೇನೆ

ರಾಜಕೀಯ ಉತ್ಥಾನಕ್ಕೆ ಸಾಧನವೆಂಬ ದೃಷ್ಟಿಯಿಂದ ಸಾಹಿತ್ಯದ ಕಡೆಗೆ ನೋಡುವವರಲ್ಲಿ ನಾನು ಒಬ್ಬನಾದುದರಿಂದ, ಸಾಹಿತ್ಯವೆಂದ ಕೂಡಲೇ ಮಹಾತ್ಮಾ ಗಾಂಧಿಯವರು ಗುಜರಾಥಿ ಸಾಹಿತ್ಯ ಸಮ್ಮೇಲನದ ಅಧ್ಯಕ್ಷೀಯ ಭಾಷಣದಲ್ಲಿ ಹೇಳಿದ ಒಂದು ಮಾತಿನ ನೆನಪಾಗುತ್ತದೆ “ನೀರು ಸೇದುವವರಿಗೆ, ಬಂಡೀ ನಡಿಸುವವರಿಗೆ, ದುಡಿಯುವಾಗ ಮೈಬೆವರನ್ನು ಸುರಿಸುತ್ತಿರುವವರಿಗೆ ಉಪಯುಕ್ತವಾಗುವಂತಹ ಹಾಡುಗಳನ್ನು ಯಾವಾತನು ರಚಿಸುವನೋ ಅವನೇ ನಿಜವಾದ ವಿಜಯಶಾಲಿಯಾದ ಲೇಖಕನು!” ಕರ್ನಾಟಕದೊಳಗಿನ ಹಿರಿಯ ಸಾಹಿತಿಗಳೆನಿಸಿಕೊಳ್ಳುವವರು ಸಾಹಿತ್ಯದ ಇಂತಹ ಒರಟು ವ್ಯಾಖ್ಯೆಯನ್ನು ಕೇಳಿ ಅಪಹಾಸ್ಯ ಮಾಡಬಹುದು, ಮಯೂರ ಸಿಂಹಾಸನದ ಮೇಲಿಂದ ಎಳೆದು ತಂದು ಶಾರದೆಯನ್ನು ಮಣ್ಣಿನಲ್ಲಿ ಕೆಡವಿದ್ದಾರೆ ಗಾಂಧಿಜಿಯವರು ಎಂತಲೂ ಮರುಗಬಹುದು.

ಇತ್ತೀಚೆಗೆ ಸಾಮಾನ್ಯ ಮಾನವೀ ಜೀವನದಿಂದ ಭಿನ್ನವಾದ, ಅಲಿಪ್ತವಾದ ಬಂಡವಲುಗಾರರ ವರ್ಗವೊಂದು ಪ್ರತ್ಯೇಕವಾದಂತೆ, ಜನಜೀವನದಿಂದ ಅಲಿಪ್ತವಾದ ಸಾಹಿತಿಗಳ ಜಾತಿಯೊಂದು ಸಿದ್ಧವಾಗುತ್ತಿದೆಯೆಂದು ವಿಷಾದದಿಂದ ಹೇಳಬೇಕಾಗಿದೆ. ಬಂಡವಲುಶಾಹಿಯ ವಿರುದ್ಧ ಇಂದು ಜಗತ್ತಿನಲ್ಲಿ ಹೋರಾಟವು ನಡೆದಿರುವಂತೆ, ಸಾಹಿತಿಶಾಹಿಯ ವಿರುದ್ಧ ಬಂಡಾಯ ಹೂಡುವ ಕಾಲವೂ ಶೀಘ್ರದಲ್ಲಿ ಬರಬಹುದೇನೋ ಎಂಬ ಸಂದೇಹವು ನನ್ನನ್ನು ಕಾಡುತ್ತಿದೆ! ಬಂಡವಲುಗಾರರಿಗೆ parasite class ಎಂದು ಕರೆಯುವಂತೆ ಸಾಹಿತಿಗಳಿಗೂ ಪರಾನ್ನಪುಷ್ಟವರ್ಗ (parasite class) ಎಂದು ಸಂಬೋಧಿಸುವ ಸಮಯವು ಪ್ರಾಪ್ತವಾಗಬಹುದೇ?

ಮಹಾತ್ಮಾ ಗಾಂಧಿಯವರ ವ್ಯಾಖ್ಯೆಗೆ ಅನುಗುಣವಾದ ಸಾಹಿತ್ಯವು ಹೊಸಗನ್ನಡದಲ್ಲಿ ಹುಡುಕಹೋದರೆ ಎಷ್ಟು ಸಿಕ್ಕೀತು? ಅದೇ ಹಳಗನ್ನಡದಲ್ಲಿ ದಾಸರು, ಶರಣರು, ಕುಮಾರವ್ಯಾಸ, ಲಕ್ಷ್ಮೀಶ, ಸರ್ವಜ್ಞ ಮೊದಲಾದ ಜನಪದ ಕವಿಗಳು ಇಂದಿಗೂ ಜನತಾಹೃದಯಸಿಂಹಾಸನದ ಮೇಲೆ ಆರೂಢರಾಗಿದ್ದಾರೆ ಅವರಿಗೆ ಸರಿಸಮಾನರಾಗಿ ನಿಲ್ಲಬಲ್ಲ ಸಾಹಿತಿಗಳು ಇಂದು ನಮ್ಮಲ್ಲಿ ಇದ್ದಾರೆಯೇ? ಬೇಂದ್ರೆಯವರು ಮಹಾಕವಿಗಳೆಂದೂ, ಅವರು ವಿಶ್ವಕವಿಗಳ ಮಾಲಿಕೆಯಲ್ಲಿ ಸ್ಥಾನ ಹೊಂದಲು ಯೋಗ್ಯರಾಗಿದ್ದಾರೆಂದೂ ಅವರ ಸಾಹಿತಿ-ಮಿತ್ರರು ಅವರನ್ನು ಹೊಗಳುತ್ತಿರುತ್ತಾರೆ ಅವರು ಹಾಗೆ ಇರಲೂ ಬಹುದು ಆದರೆ ನಮ್ಮ ಜನತೆಯ ಮಟ್ಟವೂ ಅಷ್ಟು ಮೇಲಕ್ಕೇರಿದೆಯೇ? ಜನಸಾಮಾನ್ಯರ ಮಾತಂತಿರಲಿ, ಕೇವಲ ಸಾಹಿತ್ಯಕ್ಕೆಂದು ಇದ್ದ ಉಚ್ಚಶಿಕ್ಷಿತರಾದ ಮಹಾಶಯರಲ್ಲಿ ಎಷ್ಟು ಮಂದಿ ಅವರ ಅಷ್ಟೂ ಕವನಗಳನ್ನೋದಿ ಅರ್ಥ ಮಾಡಿದವರಿದ್ದಾರೆ? ಭಾವ ಗ್ರಹಿಸಿದವರಿದ್ದಾರೆ? ಪುಟ್ಟಪ್ಪನವರ ಇತ್ತೀಚಿನ ಸಂಸ್ಕೃತಪ್ರಚುರ ಭಾವಾತ್ಮಶೈಲಿಯನ್ನು ತಿಳಿಕೊಳ್ಳಬಲ್ಲ ಸಾಮಾನ್ಯರು ಎಷ್ಟು ಜನ? A sentence that needs explanation is not worth explanation ಸ್ಪಷ್ಟೀಕರಣದ ಅವಶ್ಯಕತೆಯುಳ್ಳ ವಾಕ್ಯವು ಸ್ಪಷ್ಟೀಕರಣಕ್ಕೇ ಯೋಗ್ಯವಾದುದೇ ಅಲ್ಲ ಎಂದು (Voltaire) ವಾಲ್ಟೇರ ಹೇಳಿದ್ದಾನೆ

ಕನ್ನಡದಲ್ಲಿ ವಾಙ್ಮಯ ಬೆಳೆಯುತ್ತಿದೆಯೆಂಬ ಮಾತು ನಾವು ಕೇಳುತ್ತೇವೆ ಆದರೆ ಅದು ಇಂದು ನಮಗೆ ಬೇಕಾದ ಸಾಹಿತ್ಯವೇ ಎಂದು ನಾನಂತೂ ಸಂದೇಹಗೊಂಡಿದ್ದೇನೆ ಹಿಂದಿನ ಕಾಲದಲ್ಲಿ ಸಂಸ್ಕೃತಿ ಪ್ರಚಾರಕ್ಕೆ ಉಪಯುಕ್ತವಾದ ಸಾಹಿತ್ಯದ ವಾಹಕವು ಮುಖವಾಗಿತ್ತು, ಇಂದು ಅದರ ವಾಹಕವು ಅಕ್ಷರವಾಗಿದೆ ನಮ್ಮ ನಾಡಿನಲ್ಲಿ ಸದ್ಯ ಅಕ್ಷರಜ್ಞರ ಸಂಖ್ಯೆ ೧೦೦ರಲ್ಲಿ ೧೫ಕ್ಕೆ ಮಿಕ್ಕಿಲ್ಲ ಈ ೧೫ರಲ್ಲಿ ಸಹ ಸಂಸ್ಕೃತಿ ಸಂವರ್ಧನಕ್ಕೆ ತಮ್ಮ ಅಕ್ಷರಜ್ಞಾನ ಬಳಿಸಿಕೊಳ್ಳಲು ಸಮರ್ಥರಾದವರು ಅರ್ಧದಷ್ಟು. ಅಂದಮೇಲೆ ಈಗ ಹೊರಬೀಳುವ ಸಾಹಿತ್ಯವು ೧೦೦ರಲ್ಲಿ ಕೇವಲ ೭-೮ ಮಂದಿಗೆ ಉಪಯುಕ್ತವಾದುದುದಂತಾಯಿತು ಈ ೭-೮ ಜನರಲ್ಲಿ ಸಿರಿವಂತರೇ ಹೆಚ್ಚು ಮಂದಿ. ಹೀಗಾಗಿ ಅವರ ವಿಲಾಸೋಪಾಸನೆಗೆ ಉಪಯುಕ್ತವಾದ ವಾಙ್ಮಯವೇ ಇಂದು ಹೆಚ್ಚು ಹೆಚ್ಚಾಗಿ ಹೊರಬೀಳುತ್ತಿರುವದರಲ್ಲೇನಾಶ್ಚರ್ಯ? ಇಂತಹ ಪರಿಸ್ಥಿತಿಯಲ್ಲಿ ನಿಜವಾದ ಸಾಹಿತ್ಯಾಭಿವೃದ್ಧಿಗೆ ಅಕ್ಷರ-ಪ್ರಚಾರದಷ್ಟು ಪ್ರಬಲವಾದ ಸಾಧನವು ಇನ್ನೊಂದಿಲ್ಲ ಆದುದರಿಂದ ಸಾಹಿತಿಗಳು ಜನಪದದ ದೃಷ್ಟಿಯಿಂದ ನಿರುಪಯುಕ್ತವೆನ್ನಿಸುವ ಸಾಹಿತ್ಯ-ಸಂವರ್ಧನದ ಕೆಲಸಕ್ಕೆ ಕೆಲ ಮಟ್ಟಿಗೆ ತಡೆಹಾಕಿ ಅಕ್ಷರ-ಪ್ರಚಾರಕ್ಕಾಗಿ ಹೊರಬೀಳುವ ಹೊತ್ತು ಇನ್ನೂ ಬಂದಿಲ್ಲವೇ? ಹಾಗೆ ಮಾಡಿದಲ್ಲಿ ಸಾಮಾನ್ಯ ಜನರ ದೃಷ್ಟಿಯಿಂದ ಯಾವ ಯಾವ ಅಡಚಣೆಗಳು ಬಂದೊದಗುತ್ತವೆಂಬುದರ ಅರಿವು ಅವರಿಗಾಗುವದು, ಅವರು ಜನತೆಯ ಸುಖದುಃಖಗಳೊಂದಿಗೆ ತಾದಾತ್ಮ್ಯ ಹೊಂದುವರು; ಆಗ ಅವರು ಬರೆಯುವ ಸಾಹಿತ್ಯವು ನಿಜವಾಗಿ ಪ್ರಭಾವಿ ಸಾಹಿತ್ಯವಾಗುವುದು, ಜನತೆಯ ಮನ್ನಣೆಯನ್ನೂ ಪಡೆಯುವುದು

ಇತ್ತೀಚೆಗೆ ಕನ್ನಡ ನುಡಿಯ ಅಭಿಮಾನವೇ ದೊಡ್ಡ ದೇಶಭಕ್ತಿಯೆಂದು ಒಂದು ತಿಳಿವಳಿಕೆ ಎಲ್ಲ ಕಡೆಗೆ ಹರಡಿದೆಯಷ್ಟೇ! ಭಾಷಾಭಿಮಾನಿಗಳಿಗೆ ಅಗ್ಗವಾದ ಹೊಗಳಿಕೆಯೂ ಸಿಕ್ಕುತ್ತದಷ್ಟೇ! ಇದರ ಪರಿಣಾಮವಾಗಿ ಕೇವಲ ಸಾಹಿತಿಯಾಗಬೇಕೆಂಬ ಹಿರಿಯಾಸೆಯಿಂದ ಪ್ರೇರಿತರಾಗಿ ಅನೇಕರು ಜೀವನದ ಅನುಭವವಿಲ್ಲದೆ, ಸುತ್ತುಮುತ್ತಲಿನ ಸಮಾಜಜೀವನವನ್ನೂ ವಾತಾವರಣ ಸ್ಪಂದನಗಳನ್ನೂ ಸೂಕ್ಷ್ಮವಾಗಿ ನಿರೀಕ್ಷಿಸದೆ, ಇಂಗ್ಲಿಸ, ಹಿಂದೀ, ತೆಲಗು ಮೊದಲಾದ ಭಾಷೆಯೊಳಗಿನ ಸಾಹಿತ್ಯವನ್ನಷ್ಟೇ ಓದಿ, ಕಲ್ಪನಾಸಾಮ್ರಾಜ್ಯದಿಂದ ಹೇರಳ ಸಾಹಿತ್ಯವನ್ನು ಹೊರಗೆಡಹುತ್ತಿದ್ದಾರೆಂದು ವಿಷಾದದಿಂದ ಹೇಳಬೇಕಾಗಿದೆ ಹಣವಂತರೂ ಮುದ್ರಣ-ಸೌಕರ್ಯವಿದ್ದವರೂ ಇಂದು ಬೇಕಾದುದನ್ನು ಬರೆದು ಸಾಹಿತಿಯೆನ್ನಿಸಿಕೊಳ್ಳುವುದು ಸಾಧ್ಯವಿದೆ ಇದು ಶೋಚನೀಯವಲ್ಲವೆ? ಈ ಸನ್ನಿವೇಶದಲ್ಲಿ ನೋಬೆಲ ಪಾರಿತೋಷಕ ಪಡೆದ ಸುಪ್ರಸಿದ್ಧ ಆಂಗ್ಲ ಸಾಹಿತಿ ಗಾಲ್ಸವರ್ದಿಯು “ಜಾನ ಓ ಲಂಡನ್ಸ ವೀಕ್ಲಿ” ಯಲ್ಲಿ ಬರೆದದ್ದು ನೆನಪಿಗೆ ಬರುತ್ತದೆ ಅವರು ಅನ್ನುವದೇನಂದರೆ– “ಅನನುಭವಿಯಾದ ತಾರುಣ್ಯದಲ್ಲಿ ಲೇಖನಕ್ಕೆ ಪ್ರಾರಂಭಿಸುವದು ಆತ್ಮವಂಚನೆಯೇ ಸರಿ ಮೊದಲು ಉತ್ತಮವಾಗಿ ಜೀವನವನ್ನು ಸಾಗಿಸಿರಿ; ಜಗತ್ತಿನಲ್ಲಿಯ ವಿವಿಧ ಅನುಭವಗಳನ್ನು ಪೂರ್ಣವಾಗಿ ಪಡೆಯಿರಿ; ಅನಂತರವೇ ಬರೆಯುವ ವಿಚಾರ ಮಾಡಿರಿ, ನನ್ನ ವಿಷಯವಾಗಿಯೇ ಹೇಳುವುದಾದರೆ, ಲೇಖನ ಕಾರ್ಯವನ್ನು ಕೈಕೊಳ್ಳುವ ಮೊದಲು ಪ್ರಪಂಚದ ವಿವಿಧ ಅನುಭವಗಳನ್ನು ನಾನು ಅನಹಂಕಾರಪೂರ್ವಕವಾಗಿ ಸವಿದಿದ್ದೆ.” ಗಾಲ್ಸವರ್ದಿಯ ಈ ಮಾತುಗಳನ್ನು ಪ್ರತಿಯೊಬ್ಬ ಲೇಖಕನು ಹೃತ್ಪಟಲದ ಮೇಲೆ ಮೂಡಿಸಿಡಬೇಕು ಮಹಾರಾಷ್ಟ್ರದ ಸುಪ್ರಸಿದ್ಧ ಸಾಹಿತಿಗಳಾದ ಪ್ರೊ| ಪಟವರ್ಧನ (ಮಾಧವ ಜ್ಯೂಲಿಯನ್) ಅವರು ನನ್ನೊಬ್ಬ ಮರಾಠಿ ಸಾಹಿತಿ-ಮಿತ್ರರಿಗೆ ಹೀಗೆ ಬರೆದಿದ್ದರು– “ಹೊಸದನ್ನು ಹೇಳುವುದು ತನ್ನ ಕಡೆಗೇನಾದರೂ ಇದೆಯೇ ಎಂಬ ಬಗ್ಗೆ ಪ್ರತಿಯೊಬ್ಬನು ತನ್ನಷ್ಟಕ್ಕೇ ವಿಚಾರ ಮಾಡಿನೋಡಬೇಕು ತರುವಾಯ, ಆವೇಶ ಉಂಟಾದರೆನೇ ಬರೆಯಬೇಕು” ಈ ಅನುಭವದ ಮಾತುಗಳನ್ನು ಸಾಹಿತ್ಯ-ನಿರ್ಮಾತೃಗಳು ನೆನಪಿನಲ್ಲಿಡುವುದು ಅವಶ್ಯವಿದೆ ನನ್ನ ಅಭಿಪ್ರಾಯದಲ್ಲಿ ಪ್ರಭಾವೀ ಸಾಹಿತ್ಯದ ಒಂದೇ ಒಂದು ಒರೆಗಲ್ಲು ಇದೆ ಅದನ್ನು ನಿತ್ಸೇ ಎಂಬ ಜರ್ಮನ ಪಂಡಿತನ ಮಾತಿನಲ್ಲಿ ಹೀಗೆ ಹೇಳಬಹುದು. ‘Of all that is written, I love only what a person hath written with his blood’’ ಸಾಹಿತ್ಯದಲ್ಲಿ ನಾನು ಪ್ರೀತಿಸುವ ಭಾಗವೆಂದರೆ ಮಾನವನು ತನ್ನ ರಕ್ತದಿಂದ ಬರೆದುದಷ್ಟೇ ನಮ್ಮ ಸಾಹಿತ್ಯದಲ್ಲಿ ಎಷ್ಟು ಈ ಒರೆಗಲ್ಲಿಗೆ ಹತ್ತುತ್ತದೆಂಬುದರ ವಿಚಾರ ಮಾಡಿರಿ

ನಮ್ಮಲ್ಲಿ ವಿಮರ್ಶೆಯೂ ಯೋಗ್ಯವಾದ ಹಾದಿಯನ್ನು ಹಿಡಿದಿಲ್ಲ! ಪರಸ್ಪರ ಪ್ರಶಂಸೆಯೇ ಹೆಚ್ಚು! ಢೋಲು ಹೆಚ್ಚು! ನಿರ್ಪಕ್ಷಪಾತವಾಗಿ, ಸಹಾನುಭೂತಿಯಿಂದ ದೋಷಗಳನ್ನು ಬೈಲಿಗೆಳೆಯುವ ವಿಮರ್ಶಕರು ಕಡಿಮೆ. ಒಬ್ಬ ಲೇಖಕನು ಪ್ರಸಿದ್ಧಿಗೆ ಬರುವುದೇ ತಡ, ಅವನು ಏನು ಬರೆದರೂ ನಡೆಯುತ್ತದೆ ಏನು ಬರೆಯುತ್ತಾನೆಂದು ನೋಡುವದಕ್ಕಿಂತ ಯಾರು ಬರೆಯುತ್ತಾರೆಂಬುದನ್ನು ನೋಡುವದರ ಕಡೆಗೇ ನಮ್ಮ ಲಕ್ಷ ಹೆಚ್ಚು! “ಚೋಮನ ದುಡಿ”ಯಂಥ ಅಮರಕೃತಿಯನ್ನು ಬರೆದ ಲೇಖಕರಿಗೆ “ಸರಸಮ್ಮನ ಸಮಾಧಿ”ಯಂಥ ಕೆಳತರಗತಿಯ ಕಾದಂಬರಿಯನ್ನು ಬರೆಯುವುದು ಶೋಭಿಸುತ್ತದೆಯೇ? “ಉದ್ಧಾರ”ದಂಥ ಅವಿದ್ಧ ಪ್ರಯೋಗಗಳು ಬಳಕೆಗೆ ಬಾರದಿದ್ದಲ್ಲಿ ಕನ್ನಡವು ಅಳಿಯುತ್ತಿತ್ತೇ? ಪುಟ್ಟಪ್ಪನವರ ರಾಮಾಯಣ ಮಹಾಕಾವ್ಯ ನಮಗಿಂದು ಏಕೆ ಬೇಕು? ಮಹಾಕಾವ್ಯಕ್ಕೆ ರಾಮಾಯಣವನ್ನು ಬಿಟ್ಟರೆ ವಿಷಯಗಳೇ ಇಲ್ಲವೇ? ದೇವದತ್ತ ಪ್ರತಿಭೆಯನ್ನು ಅವರು ಈ ರೀತಿ ಯಾಕೆ ಹಾಳುಮಾಡಬೇಕು? ಮೊದಲೇ ಸಾಮಾಜಿಕ ವಿಷಮತೆಯಲ್ಲಿ ತೊಳಲುತ್ತಿದ್ದ ನಾಡಿನಲ್ಲಿ ‘[illegible]’ ನಾಟಕ, ‘ಸರಸಮ್ಮನ ಸಮಾಧಿ’ ಕಾದಂಬರಿ ಇವುಗಳಂಥ ವಿಶಿಷ್ಟ ಸಮಾಜಘಟಕಗಳನ್ನು ಮೂಡಲಿಸುವ, ಭಿನ್ನ ಸಮಾಜಗಳಲ್ಲಿ ವೈಷಮ್ಯವನ್ನು ಹೆಚ್ಚಿಸುವ ಪುಸ್ತಕಗಳನ್ನು ಯಾಕೆ ಸ್ವಾಗತಿಸಬೇಕು? ಸ್ಪಷ್ಟವಾಗಿ ಮಾತನಾಡಿದುದಕ್ಕೆ ದಯವಿಟ್ಟು ಕ್ಷಮಿಸಬೇಕು

ಕನ್ನಡದಲ್ಲಿ ಸಾಹಿತ್ಯ ನಿರ್ಮಿತಿಯು ಈಗ ಏಕಾಂಗಿಯಾಗಿ ಸಾಗುತ್ತಿದೆಯೆಂದು ನನಗನಿಸುತ್ತದೆ. ನಮ್ಮ ಬರಹಗಾರರಲ್ಲಿ ೧೦೦ಕ್ಕೆ ೯೦ರಷ್ಟು ಜನ ಶಿಕ್ಷಕವೃತ್ತಿಯವರು ನಿಮ್ಮ ಮಿತ್ರಮಂಡಳಿಯಲ್ಲಿ ವಕೀಲರು, ಡಾಕ್ಟರರು ಇರುವುದು ಸಂತೋಷದ ಸಂಗತಿ ಬೇರೆ ಬೇರೆ ವೃತ್ತಿಯ ಜನರು ನಮ್ಮಲ್ಲಿ ಬರೆಯುತ್ತಿರುವುದು ತೀರ ಕಡಿಮೆ. ಹೀಗಾಗಿ ವಾಙ್ಮಯದೊಳಗಿನ ವಿವಿಧಾನುಭವಗಳಿಂದ ನಾವು ವಂಚಿತರಾಗಿದ್ದೇವೆ ಕಾಲೇಲಕರ, ಮುನಶಿ, ರಾಜಗೋಪಾಲಾಚಾರಿ ಮೊದಲಾದ ರಾಜಕಾರಣಿಗಳಿಗೆ ಅವರವರ ಮಾತೃಭಾಷೆಯ ಸಾಹಿತ್ಯದಲ್ಲಿ ವಿಶಿಷ್ಟವಾದ ಸ್ಥಾನವಿದೆ ಆದರೆ ನಮ್ಮಲ್ಲಿಯ ರಾಜಕಾರಣಿಗಳು ಸಾಹಿತ್ಯದ ಮಟ್ಟಿಗಾದರೂ ಅಸ್ಪೃಶ್ಯತೆಯನ್ನು ಪಾಲಿಸುತ್ತಿದ್ದಾರೆ

ಮಿತ್ರ ಮಂಡಳಿಯು ಮಾಡುತ್ತಿರುವ ಸಾಹಿತ್ಯಸೇವೆ ನಿಜವಾಗಿಯೂ ಗಣ್ಯವಾದುದು, ಅದು ಮಾಡಿದ, ಮಾಡುತ್ತಿರುವ ಕಾರ್ಯ ಕನ್ನಡನಾಡಿಗೇ ಒಂದು ಹೆಮ್ಮೆಯ ವಿಷಯ ತಮ್ಮ ಸಾಹಿತ್ಯ ಸೇವೆಯು ಮುಂದೆಯೂ ಇತರೋಪಕೃತಿಯಾಗಿ ಸಾಗಲಿ, ಅದು ನಾಡಿಗೇ ಕೀರ್ತಿ ತರುವಂತಾಗಲಿ ನಮಸ್ತೇ’’

ಘೋರ ಮಾಸ್ಕೋ ಹೋರಾಟ !

(೭ನೇ ಪಾನಿನಿಂದ ಮುಂದರಿಸಿದ್ದು.)

ಪಾರ್ಲಿಮೆಂಟಿನಲ್ಲಿ ಕೆಲ ಶೀಘ್ರಕೋಪಿ ಸಭಾಸದರು ಉದ್ಗರಿಸಿದರು. ಆದರೆ ಈ ಯೋಜನೆಗೆ ವಿದೇಶ ಸಚಿವರಾದ ಮಿ॥ ಈಡನ್‌ರವರು ಯಾವದೊಂದು ನಿಶ್ಚಿತ ಉತ್ತರ ಕೊಡಲಿಲ್ಲ "ಪ್ರತಿಯೊಂದು ಪ್ರಕಾರದಿಂದ ರುಶ್ಯರಿಗೆ ನಾವು ಸಹಾಯ ಮಾಡಲು ಘೋರ 'ನಿರ್ಧಾರ ಮಾಡಿದ್ದೇವೆ" ಹೀಗವರು ಹೇಳಿ ಸುಮ್ಮಗಾದರು. ಬ್ರಿಟಿಶರು ಗಾಬರಿ ಮಾಡಲಾಗದೆಂದೂ ಅವಿವೇಕಿಯಾಗಿ ಜರ್ಮನರಿಗೆ ಎದುರಿಸಿದರೆ ಡಂಕರ್ಕ್‌ದಲ್ಲಿ ದುರವಸ್ಥೆಯಾಗಿ ಹಿಂಗಾಲಿನಿಂದ ಅಯಶಸ್ವಿಯಾಗಿ ಓಡಬಂದಂತೆ ಓಡಿಬರಬೇಕಾದೀತೆಂದೂ, ಲೋಕಕ್ಕೆ ಘಾತವಾದೀತೆಂದೂ ಬ್ರಿಟಿಶರು ಆತ್ಮರಕ್ಷಣೆಗೆ ಘಾತವಾಗದಂತೆ ರುಶ್ಯ ಜನಾಂಗಕ್ಕೆ ಯಾವತ್ತೂ ಸಹಾಯ ನೀಡಬೇಕಾಗಿಯೂ, ಬ್ರಿಟಿಶರು ಸುರಕ್ಷಿತವಾಗಿದ್ದರೆ ಮಾತ್ರ ಹಿಟ್ಲರನ ಸರ್ವನಾಶ ಮಾಡಲು ಸಾಧ್ಯವೆಂದೂ ಬ್ರಿಟನ ದೇಶದೊಳಗಿನ ವಿಚಾರವಂತರು ಅಭಿಪ್ರಾಯಪಡುತ್ತಾರೆ. ಇದೇ ಸಮಯ ಹಿಟ್ಲರನು ಅಮೇರಿಕೆಯ ಮಧ್ಯಸ್ಥಿಕೆಯಿಂದ ಬ್ರಿಟಿಶರೊಡನೆ ಸಂಧಾನ ಮಾಡಿಕೊಳ್ಳಲು ಹವಣಿಸುತ್ತಾನಾಗಿ ವೊಶಿಂಗಟನದೊಳಗಿನ "Foreign Correspondent" 'ವಿದೇಶ ಸುದ್ದಿಗಾರ'ನೆಂಬ ವಾರಪತ್ರಿಕೆಯಲ್ಲಿ ಪ್ರಕಟವಾಗಿದೆ. ರುಶ್ಯ ದೇಶದ ದಾಳಿ ಮುಗಿದ ಬಳಿಕ ಹಿಟ್ಲರನು ಬ್ರಿಟಿಶ-ಅಮೇರಿಕೆಯವರೊಡನೆ ಸಂಧಿ ಮಾಡಿಕೊಳ್ಳಲು ಕಾಂಕ್ಷಿಸುತ್ತಾನಂತೆ. ಬ್ರಿಟಿಶ-ಅಮೇರಿಕೆಯವರಿಗೆ ಹಿಟ್ಲರನು ಬಹಳ ಹೆದರುತ್ತಾನೆ. ಅವರಿಗಿದಿರಾಗಲು ಆತನಿಗೀಗ ಶಕ್ತಿ ಕಡಿಮೆ. ರುಶ್ಯ ದೇಶದಲ್ಲಿ ಅಪಾರ ಹಾನಿಯೊದಗಿದೆ. ಇತಾಲಿಯಲ್ಲಿ ದೊಂಬಿಗಳಾಗಿ ಮುಸೊಲಿನಿ ಮಿತ್ರನಿಗೆ ಕಾಪಾಡಿಕೊಳ್ಳುವದು ಕಠಿಣವಾಗಿದೆಯಂತೆ. ಮುಸೊಲಿನಿಯು ಜರ್ಮನಿಗೆ ಸಹಾಯ ಮಾಡಲು ಅಸಮರ್ಥನಾಗಿರುವನಂತೆ ಪ್ರತ್ಯೇಕವಾಗಿ ಒಪ್ಪಂದ ಮಾಡಿಕೊಂಡು ಹಿಟ್ಲರನ ಉಪಟಳದಿಂದ ಆತ ಪಾರಾಗಬಯಸುತ್ತಾನಂತೆ. ಅಂತು ಹಿಟ್ಲರನು ಮೆತ್ತಗಾಗಿದ್ದಾನೆಂದು 'ವಿದೇಶ ಸುದ್ದಿಗಾರ' ಪತ್ರಿಕೆಯ ಅಭಿಪ್ರಾಯ. ಆದರೆ ಲಂಡನಿನ 'ಕಿಂಗಹೂಲ ನ್ಯೂಸ ಲೆಟರ' ಪತ್ರಕರ್ತರ ಅಭಿಪ್ರಾಯವೇ ಪ್ರತ್ಯೇಕ. ಜರ್ಮನಿಯ ಸಾಮರ್ಥ್ಯಕ್ಕೆ ಎಷ್ಟಕ್ಕೂ ಕುಂದು ಬರಲಿಲ್ಲವಾಗಿ ಆ ಪತ್ರಕರ್ತರು ಕಳೆದ ೧೬ನೇ ತಾರೀಖಿಗೆ ಬರೆಯುತ್ತಾರೆ. ಈವಾಗ ನಡೆದ ಸಂಧಾನದ ಸುದ್ದಿ ನಿರಾಧಾರವಾದದ್ದೆಂದು ಮೊನ್ನೆ, ಗುರುವಾರ ಸೇರಿದ ಪಾರ್ಲಿಮೆಂಟಿನಲ್ಲಿ ಬ್ರಿಟಿಶ ವಿದೇಶ ಸಚಿವರಾದ ಮಿ॥ ಈಡನ್‌ರವರು ಹೇಳಿದ ಬಳಿಕ, ನಾನು ಈ ಮಾತನ್ನು ಹೇಗೆ ನಂಬಹೇಳಲಿ ? ಪೋಲಂಡ, ಹೊಲಂಡ, ಬೆಲ್ಜಿಮ, ಫ್ರಾನ್ಸ, ಯುಗೋಸ್ಲಾವಿಯಾ ಗ್ರೀಸ, ರಶಿಯಾ ಸ್ನೇಹಿತರ ಕೈಬಿಟ್ಟು ಬ್ರಿಟಿಶ-ಅಮೇರಿಕೆಯವರು ಹಿಟ್ಲರ-ದುಷ್ಟನೊಡನೆ ಸಂಧಾನ ಮಾಡಿಕೊಳ್ಳುವರೆಂದು ನಾನೇನೂ ನಂಬಲಾರೆ. ಎಲ್ಲ ಭಾರ ರುಶ್ಯ ಸಂಗ್ರಾಮದ ಮೇಲುಂಟು. ಈಗ ಜಪಾನ ಸ್ಪೇನದೊಳಗೆ ಗಡಿಬಿಡಿಯಾಗ ಹತ್ತಿದೆ. ಇವೆರಡೂ ಜನಾಂಗಗಳು ಹಿಟ್ಲರನ ಪರವಾಗಿ ಹೋರಾಡಲು ಸಜ್ಜಾಗಿ ನಿಂತಿವೆ. ರುಶ್ಯರು ಸೋತರೆ ಜಪಾನವು ಸೈಬೇರಿಯಾದ ಮೇಲೆ ಕಡಕೊಂಡು ಬೀಳುತ್ತದೆ. ಸ್ಪೇನ ದೇಶದ ಫ್ರಾಂಕೋನು ಖಡ್ಗ ಹಿಡಿದು ರಣವೇಷ ಬರಕೊಳ್ಳುತ್ತಾನೆ. ಈ ಘಟನೆಗಳ ಪ್ರಸವವೇದನೆಗಳು ನಡೆಯತೊಡಗಿವೆ. ಅವನ್ನೀಗ ವಿವರದಿಂದ ಪರಾಂಬರಿಸಲು ಸಮಯವಿಲ್ಲ. ರುಶ್ಯ ಸಂಗ್ರಾಮ ಮುಗಿದ ಬಳಿಕ ಅವು ರೂಪುಗೊಳ್ಳುವವು. ಆಗ ಎಲ್ಲ ಪೂರ್ವಾಪರ ಕಥೆ ವಿವರಿಸುವೆ. ಈವಾಗ ಮಾಸ್ಕೋ ಹೋರಾಟದ ಕಡೆಗೆ ನಿಮ್ಮ ಲಕ್ಷವಿರಲಿ !

ಅವಳೀ ಕೂಡಿಡಲು
ಆಕೆಗೆ
ನೆರವಾಗಿರಿ !



ಪ್ರತಿಯೊಬ್ಬ ತಾಯಿಯೂ ತನ್ನ ಮಗಳು ಹಣ ಕೂಡಿಡಲು ನೆರವಾಗಬೇಕು; ಇದರಿಂದ ಅವಳ ಮದುವೆಗೂ ಭವಿಷ್ಯತ್ ಹಿತಕ್ಕೂ ಹಣ ಒದಗಿಸಿಟ್ಟಂತಾಗುತ್ತೆ. ಪೋಸ್ಟ ಆಫೀಸ್‌ನಲ್ಲಿ ಉಚಿತವಾಗಿ ದೊರೆಯುವ ಸೇವಿಂಗ್ಸ್ ಕಾರ್ಡಿನ ಮೇಲೆ ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪ್‌ಗಳನ್ನು ಕೊಂಡು ಅಂಟಿಸುವ ಸುಲಭವಾದ ಮತ್ತು ಮನರಂಜಕವಾದ ವಿಧಾನ ಬೇರೊಂದಿಲ್ಲ. ಮಕ್ಕಳು ಸ್ಟಾಂಪ್‌ಗಳನ್ನು ಶೇಖರಿಸಲು ಇಷ್ಟಪಡುತ್ತಾರೆ ಮತ್ತು ಈ ರೀತಿಯಲ್ಲಿ ರೂ. ೧೦|-ನ್ನು ಬಹು ಜಾಗ್ರತೆ ಕೂಡಿಸುವುದು ಆಶ್ಚರ್ಯಕರವಾಗಿದೆ.





ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳು ನಿಮ್ಮ ಹತ್ತಿರದ ಪೋಸ್ಟ್ ಆಫೀಸ್‌ನಲ್ಲಿ ಮಾರಲ್ಪಡುತ್ತವೆ. ಅವುಗಳ ಬೆಲೆ ರೂ ೧೦|- ಮತ್ತು ಅವು ವರ್ಷ ವರ್ಷವೂ ೧೦ ವರ್ಷಗಳವರೆಗೆ ಬಡ್ಡಿಯನ್ನು ಗಳಿಸುತ್ತವೆ. ಆಗ ರೂ ೧೩|= ಮೌಲ್ಯವುಳ್ಳದ್ದಾಗುತ್ತವೆ. ಕೂಡಿಟ್ಟ ಹಣ ಮತ್ತು ಅದು ಗಳಿಸಿದ ಲಾಭವನ್ನು ಬೇಕಾದಾಗ ತೆಗೆದುಕೊಳ್ಳಬಹುದು

ಕೊಳ್ಳಿರಿ
ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್
ಲಾಭಕ್ಕೆ ಮತ್ತು ರಕ್ಷಣೆಗೆ GI6:4

ಸ್ಥಳಿಕ ವಿಷಯಗಳು.

ಲೇಖಕ- ಸ್ಥಳವಂತಿಕ.

ಹಿಂದುಸ್ಥಾನದೊಳಗೆ ಹುಟ್ಟುವ ಅಕ್ಕಿ ಇಲ್ಲಿಯ ಜನಗಳಿಗೆ ಸಾಲುವದಿಲ್ಲ. ಬ್ರಹ್ಮದೇಶದಿಂದ ಅಕ್ಕಿ ಬಂದರೆ ಮಾತ್ರ ನಾವು ಉಣ್ಣಬೇಕು! ಈಗ ಯುದ್ಧ ಗಡಿಬಿಡಿಯ ಮೂಲಕ ಅಕ್ಕಿ ತರಲು ಹಡಗಗಳು ಸಿಗುವದಿಲ್ಲ ಇತ್ತಲಾಗಿ ಬ್ರಹ್ಮದೇಶ ಸರಕಾರವು ಅಕ್ಕಿಯ ಹೊರವ್ಯಾಪಾರವನ್ನು ನಿಯಂತ್ರಣ ಮಾಡತೊಡಗಿದೆ. ಆದರಿಂದ ರಂಗೂನ ಅಕ್ಕಿಯು ನಮ್ಮಲ್ಲಿ ಬರುವದು ಇನ್ನು ಮುಂದೆ ಕಠಿಣ ಈ ಮೂಲಕ ನಮ್ಮ ಹಿಂದುಸ್ಥಾನ ಸರಕಾರದ ಬೇಸಾಯ ಸಂಶೋಧನ ಇಲಾಖೆಯವರು ಅಕ್ಕಿಯನ್ನು ಹೆಚ್ಚಿಗೆ ಉತ್ಪತ್ತಿ ಮಾಡುವ ಆಲೋಚನೆಯಿಂದ ತ್ರೈವಾರ್ಷಿಕ ಯೋಜನೆಯನ್ನೊಂದು ತಯಾರಿಸಿದ್ದಾರಾಗಿ ಪ್ರಕಟವಾಗಿದೆ. ಈ ಯೋಜನೆಯಲ್ಲಿ ೩ ವಿಭಗಳಿವೆ: (೧) ಬೇರೆ ಬೇರೆ ಜಾತಿಯ ಅಕ್ಕಿಗಳನ್ನು ಬೆಳಸುವದು, ಹೆಚ್ಚು ಭತ್ತ ಹುಟ್ಟುವ ನಮೂನೆಗೆ ಪ್ರೋತ್ಸಾಹ ಕೊಟ್ಟು ಅಕ್ಕಿಯ ಉತ್ಪತ್ತಿಯನ್ನು ಬೆಳಸುವದು ಮತ್ತು (೨) ಭತ್ತ-ಅಕ್ಕಿ ಬೆಳೆಯಬಹುದಾದ ಪ್ರದೇಶಗಳಲ್ಲಿ ಬಿತ್ತಿ ಅಕ್ಕಿಯ ಉತ್ಪತ್ತಿಯನ್ನು ಹೆಚ್ಚಿಸುವದು ಈ ೩ ವರ್ಷಗಳಲ್ಲಿ ೧೦ ಲಕ್ಷ ಎಕರೆ ಭೂಮಿಯನ್ನು ಸಾಗುವಳಿ ಮಾಡಿಸುವ ಯೋಜನೆಯುಂಟು ಈವಾಗ ವಿದೇಶದಿಂದ ೧೫ ಲಕ್ಷ ಟನ್ನ ಅಕ್ಕಿ ನಮ್ಮ ಹಿಂದುಸ್ಥಾನಕ್ಕೆ ಬರುತ್ತದೆ ೧೦ ಲಕ್ಷ ಎಕರೆ ಭೂಮಿ ಸಾಗುವಳಿಯಾದರೆ ಸರಾಸರಿ ೫ ಲಕ್ಷ ಟನ್ನ ಅಕ್ಕಿ ಹುಟ್ಟಿಸಬಹುದು. ಈ ಯೋಜನೆ ತೀರ ಯೋಗ್ಯ ನಮ್ಮ ಜಿಲ್ಹೆಗೆ ಇದನ್ನು ಕೂಡಲೇ ಅನ್ವಯಿಸಬೇಕು. ನಮ್ಮ ಜಿಲ್ಹೆಯೊಳಗೆ ಸಾಗುವಳಿಯಾಗಬಹುದಾದ ಬಹಳ ಪ್ರದೇಶ ಬಂಜರು ಬಿದ್ದಿವೆ. ಹೇರಳ ಹಳ್ಳಿಗಳು ನಿರ್ಜನವಾಗಿ, ಒಳ್ಳೊಳ್ಳೇ ಜಾತಿಯ ಭತ್ತ ಬೆಳೆಯುವ ಹೊಲಗಳೆಲ್ಲ ಈಗ ಅಡವಿಪಾಲಾಗಿ ಬಿಟ್ಟಿವೆ! ಸರಕಾರವು ಈ ಎಲ್ಲ ಪ್ರದೇಶಗಳಲ್ಲಿ ಭತ್ತ ಬೆಳೆಯುವಂತೆ ಏರ್ಪಾಟು ಮಾಡಿದರೆ ಸ್ವದೇಶದ ಸಂಪತ್ತು ಬೆಳೆಯುವದಲ್ಲದೆ ನಮ್ಮ ಜಿಲ್ಹೆಯೊಳಗಿನ ಬಡ ಜನಗಳಿಗೆ ತುತ್ತು ಕೂಳನ್ನೂ ಕೊಟ್ಟಂತಾಗುವದು ಹಳ್ಳಿಗಳೂ ಉದ್ಧಾರ ಹೊಂದಿ ಜನಸಮೃದ್ಧಿಯಾಗುವದು.

ಹಿಂದುಸ್ಥಾನ ಸರಕಾರದ ಇಂಥ ಯೋಜನೆ ನಡೆದಾಗ ಇತ್ತ ಮುಂಬಯಿ ಸರಕಾರವು ಕೊಂಗ್ರೆಸ ಸರಕಾರದ ಕಾರಕೀರ್ದಿಯಲ್ಲಿ ಕೊಟ್ಟ ಅಂದರೆ ಕಾಗದದ ಮೇಲೆ ಕೊಟ್ಟ ಜಂಗಲ ಸೌಕರ್ಯಗಳನ್ನು ರದ್ದು ಮಾಡಬಯಸಿದ್ದು ವಿಷಮ! ಸಾಗುವಳಿಯಾಗುವ ಪ್ರದೇಶದ ಸುತ್ತುಮುತ್ತು ಬೆಟ್ಟ ಬೆಳೆದದ್ದರಿಂದ ನಮ್ಮ ಜಿಲ್ಹೆಯೊಳಗಿನ ಭೂಮಿ ಅಡವಿಪಾಲಾಯಿತೆಂಬದು ಈವಾಗ ಸಿದ್ಧವಾದ ಮಾತು ಗ್ರಾಮೋದ್ಧಾರ ಮಂಡಳದವರು ಕಾರ್ಯದರ್ಶಿಗಳ ವಿದ್ಯಮಾನ ನಿರ್ಜನವಾದ ಇಲ್ಲವೆ ನಿರ್ಜನವಾಗತೊಡಗಿದ ಗ್ರಾಮಗಳ ಪೂರ್ವಾಪರವನ್ನು ವಿಚಾರಿಸಿದರೂ ಈ ಸಂಗತಿ ಗ್ರಹಿಕೆಯಾಗುವಂತಿದೆ ಇಂಥ ಸಂಗತಿಯಲ್ಲಿ ಸೌಕರ್ಯಗಳನ್ನು ಬೆಳಸಿ ಹೆಚ್ಚೆಚ್ಚು ಪ್ರದೇಶವನ್ನು ಭತ್ತದ ಬೆಳವಣಿಗೆಗೆ ಬಿಟ್ಟುಕೊಡುವ ವಿಚಾರ ಮಾಡುವದು ಅವಶ್ಯವಿದೆ . ಹಿಂದುಸ್ಥಾನ ಸರಕಾರವು ಮುಂಬಯಿ ಸರಕಾರಕ್ಕೆ ಕಿವಿಹಿಂಡಿ ತುಸು ಬುದ್ಧಿ ಹೇಳಬಹುದು ನಮ್ಮ ಜಿಲ್ಹೆಯ ಉದ್ಧಾರ ವಿಚಾರ ಹೇಗಿದ್ದಾಗ್ಯೂ, ನಿಖಿಲ ಹಿಂದುಸ್ಥಾನದ ವಿಚಾರ ಮಾಡಿದಾಗ್ಯೂ ಸಾಗುಹೊಲಗಳನ್ನು ಹೆಚ್ಚಿಸುವ ಕ್ರಮವನ್ನು ಕೈಕೊಳ್ಳುವದು ವಿಹಿತವಿದೆ. ವಿಶಾಲ ಭೂಮಿ, ಸಮೃದ್ಧ ಭೂಪ್ರದೇಶವುಳ್ಳ ಹಿಂದುಸ್ಥಾನವು ಜೀವನಕ್ಕೆ ಅವಶ್ಯವುಳ್ಳ ಅಕ್ಕಿಗಾಗಿ ವಿದೇಶಗಳ ಮೇಲೆ ಅವಲಂಬಿಸಿರುವದು ನಾಚಿಕೆಗೇಡಿತನವೆಂದೇ ಹೇಳಬೇಕು.

⁂

ಈಗಿನ ಕಾಲ ಸ್ವಯಂಪೂರ್ಣತೆಯದು. ಸ್ವಂತ ಜೀವನಕ್ಕೆ ಅವಶ್ಯವುಳ್ಳ ಅಶನ ವಸನ ಸಾಮುಗ್ರಿಗಳನ್ನು ಸ್ವದೇಶದಲ್ಲೇ ತಯಾರಿಸಿಕೊಳ್ಳುವ ಧೋರಣ ಅನುಸರಿಸಬೇಕಾಗಿದೆ. ಸದ್ಯಕ್ಕೆ ಇಂಗ್ಲಂಡದ ದೊರೆಗಳ ಸಭೆಯಲ್ಲಿ ಈ ಕುರಿತು ಚರ್ಚೆ ಸಹ ನಡೆಯಿತು, ಸ್ವದೇಶ-ಜೀವನೋಪಾಯಕ್ಕೆ ಅವಶ್ಯವುಳ್ಳ ಯಾವತ್ತು ಜೀವನಸಾಮುಗ್ರಿಗಳನ್ನು ಸ್ವದೇಶವೇ ತಯಾರಿಸಿಕೊಳ್ಳತಕ್ಕದ್ದೆಂದು ಪೆಂಗಟನ್ನ ದೊರೆಗಳು ಪ್ರತಿಪಾದಿಸಿದ್ದಾರೆ. “ಸ್ಟೈಟಸ್ಟ’ ಎಂಬ ಲಂಡನಿನೊಳಗಿನ ವ್ಯಾಪಾರಸ್ಥರ ಪತ್ರಿಕೆಯು ಇದೇ ಧೋರಣವನ್ನು ಪುರಸ್ಕರಿಸುತ್ತದೆ ಮುಂಚ ನಮ್ಮ ಗ್ರಾಮಗಳು ಸ್ವಯಂಪೂರ್ಣವಾಗಿದ್ದವು ಅಷ್ಟೇಕೆ, ಪ್ರತಿಯೊಂದು ಮನೆಯೂ ಸ್ವಯಂಪೂರ್ಣವಾಗಿದ್ದಿತು. ಪ್ರತಿಯೊಂದು ಮನೆಯವರು ತಮಗೆ ತಗಲುವಷ್ಟು ಅಕ್ಕಿ ತಾವೇ ಹುಟ್ಟಿಸುತ್ತಿದ್ದರು, ಕಬ್ಬು ನೆಟ್ಟು ಬೆಲ್ಲ ಪೂರೈಸಿಕೊಳ್ಳುತ್ತಿದ್ದರು, ಹಿತ್ತಲುಗಳಲ್ಲಿ ತೆಂಗಿನ ಮರಗಳನ್ನು ನೆಟ್ಟು ತೆಂಗಿನಕಾಯಿ ಬೆಳಸುತ್ತಿದ್ದರು, ಗೋವುಗಳಿಂದ ಹಾಲು-ತುಪ್ಪ ಪಡೆಯುತ್ತಿದ್ದರು ಎಳ್ಳು, ರಾಗಿ ಬಿತ್ತಿ ತೈಲದ ಏರ್ಪಾಟು ಮಾಡಿಕೊಳ್ಳುತ್ತಿದ್ದರು ಅದಷ್ಟರ ಮಟ್ಟಿಗೆ ಸಂಸಾರಕ್ಕೆ ತಗಲುವ ಸಾಮಾನುಗಳ ಬಗ್ಗೆ ಹೊರ—ಮೋರೆ ಹಾಕುವ ಅನಿಷ್ಟ ಪ್ರಸಂಗ ಇರುತ್ತಿದ್ದಿಲ್ಲ ಜವಳಿಯನ್ನಷ್ಟೇ ಅವರು ಹೊರಗಿನಿಂದ ತರಬೇಕಾಗಿತ್ತು. ಈಗ ಎಲ್ಲವೂ ತಿರುವುಮುರುವಾಗಿದೆ! ಪ್ರತಿಯೊಂದಕ್ಕೂ ಹೊರಗಿನಿಂದ ಜೀನಸು ಬರಬೇಕು! ಬೆಳಗಿನ ತ್ರಾಸಗೆ ಚಹ ಸಕ್ಕರೆ ಬೇಕು, ಗೋಧಿಯ ರೊಟ್ಟಿ ಬೇಕು. ಹಿಂದೆ ಅಸ್ವಾಸ್ಥ್ಯವಾದಾಗ ಗಿಡಮೂಲಿಕೆಗಳಿಂದ ಕಾರ್ಯಭಾಗವಾಗುತ್ತಿತ್ತು ಈಗ ಒಂದಿಷ್ಟು ಶೀತವಾದರೂ ನೆಟ್ಟಗೆ ೧೦ ಮೈಲು ಪಟ್ಟಣಕ್ಕೆ ದೂರ ಬಾಟ್ಲಿ ತಗೆದುಕೊಂಡು ಬಂದು ಮದ್ದು ಒಯ್ಯಬೇಕು! ಮನೆಯಲ್ಲಿ, ಗ್ರಾಮದಲ್ಲಿ ತಮಗೆ ತಗಲುವ ಜೀನಸುಗಳನ್ನು ಹುಟ್ಟಿಸಿಕೊಂಡು ಉಪಭೋಗಿಸಬೇಕೆಂಬ ಲವಲವಿಕೆಯೇ ಇಲ್ಲ! ಚಹದ ಹೊಟೆಲುಗಳಲ್ಲಿ ಚಹ ಕುಡಿಯುವದು, ತಿಂಡಿ-ತಿನಸು ತಿನ್ನುವದು, ಭೋಜನಾಲಯಗಳಲ್ಲಿ ಭೋಜನ ಮಾಡುವದು, ದೇಹಕ್ಕೆ ಯಾವದೇ ಬಗೆಯ ಕಷ್ಟ ತೊಡದಿರುವದು, ಇದೇ ಈಗಿನ ಕಾಲದ ಜನಸಾಮಾನ್ಯರ ಪ್ರವೃತ್ತಿ ಜನಗಳ ಇಂಥ ಪ್ರವೃತ್ತಿಯ ಮೂಲಕ ಗ್ರಾಮದ ಅರ್ಥ-ಕಾರಣ ಬದಲಿಬಿಟ್ಟಿದೆ, ತನ್ನ ಪ್ರಪಂಚಕ್ಕೇನು ಬೇಕು ಆ ಜೀನಸುಗಳನ್ನು ತಾನು ತಯಾರಿಸಿಕೊಳ್ಳುವ ಬಗೆ ಹೇಗೆ, ಎಂಬದರ ವಿಚಾರ ಯಾರಿಗೂ ಹುಟ್ಟುವದಿಲ್ಲ ನೇರವಾಗಿ ಪೇಟೆಗೆ ಹೋಗಿ, ದುಡ್ಡು ಕೊಟ್ಟು ಬೇಕಾದ ಜೀನಸನ್ನು ಖರೇದಿ ಪಡೆದು ವಿಲಾಸ ಮಾಡುವದೇ ನಿಯಮವಾಗಿದೆ. ಮುಂಚೆ ಜೀನಸುಗಳ ಅಂದರೆ ಅಕ್ಕಿ-ಕಾಯಿಗಳ ವಿನಿಮಯದಿಂದ ಮನೆಯವರು ತಮ್ಮಲ್ಲಿ ಹುಟ್ಟದ ಪದಾರ್ಥಗಳನ್ನು ಪೂರೈಸಿಕೊಳ್ಳುತ್ತಿದ್ದರು. ದುಡ್ಡಿನ ಉಪಯೋಗ ಕಡಿಮೆಯಿತ್ತು. ಈಗಲೂ ಒಳಗ್ರಾಮಗಳಲ್ಲಿ ದುಡ್ಡು ಕೊಡಕೊಳ್ಳುವ ವ್ಯವಹಾರ ಕಡಿಮೆ. ಜೀನಸುಗಳ ಕೊಡಕೊಳ್ಳುವಿಕೆಯ ರೂಢಿಯೇ ಹೆಚ್ಚು. ಗ್ರಾಮ-ನಿವಾಸಿಗಳು ಈ ಎಲ್ಲ ಸಂಗತಿಗಳನ್ನು ಪರಾಂಬರಿಸುವದು ಅಗತ್ಯ. ಗ್ರಾಮವೇ ತಮ್ಮ ವಿಶ್ವವೆಂದು ಅವರು ಎಣಿಸಬೇಕು ಗ್ರಾಮದ ಹೊರಗಿನ ಜೀನಸುಗಳಿಂದ ಪ್ರಪಂಚ ಸಾಗಿಸುವ ಹವ್ಯಾಸವನ್ನು ತ್ವರ್ಯವೇ ತೊರೆಯಬೇಕು.

⁂

ಕುನ್ನೂರಿನ ಪೌಷ್ಟಿಕ ಆಹಾರ ಸಂಶೋಧಕ ಪ್ರಯೋಗ ಶಾಲೆಯವರು ಅಕ್ಕಿ ವಿಷಯ ದ ಮೇಲೆ ಒಂದು ಚಿಕ್ಕ ಪತ್ರಿಕೆಯನ್ನು ಹೊರಡಿಸಿದ್ದಾರೆ. ಅಕ್ಕಿಯ ಆಹಾರದಿಂದ ಜನಗಳಿಗೆ ಉಂಟಾಗುವ ಲಾಭಾಲಾಭ ಈ ಪತ್ರಿಕೆಯಲ್ಲಿ ನಮೂದಿಸಲ್ಪಟ್ಟಿದೆ ಅಕ್ಕಿಯಲ್ಲಿ ಯಾವ್ಯಾವ ದ್ರವ್ಯಗಳಿವೆ, ಆ ದ್ರವ್ಯಗಳನ್ನು ಕಾಪಾಡಿಕೊಳ್ಳುವ ಬಗೆಯೆಂತು, ಈಗ ಮಾರಾಟಕ್ಕೆ ಸಿಗುವ ಅಕ್ಕಿ ಪೂರ್ಣವೋ ಅಪೂರ್ಣವೋ, ‘ಪಾಲೀಸ’ ಅಕ್ಕಿ ದೇಹಕ್ಕೆ ಹಿತವೋ ಅಹಿತವೋ, ಇವೇ ಮೊದಲಾದ ವಿಷಯಗಳು ಈ ಪತ್ರಿಕೆಯಲ್ಲಿ ಚರ್ಚಿಸಲ್ಪಟ್ಟಿವೆ. ಅಕ್ಕಿಯ ಆಹಾರದಲ್ಲಿ ಅನೇಕ ಗುಣಗಳಿವೆ. ಅಕ್ಕಿಯ ಸೇವನೆಯಿಂದ ದೇಹಕ್ಕೆ ಪುಷ್ಟಿ ದೊರೆಯುತ್ತದೆ, ಆದರೆ ಗಿರಣಿ ಅಕ್ಕಿಯಿಂದ ಪ್ರಯೋಜನವಿಲ್ಲ. ಈ ಅಕ್ಕಿಯಲ್ಲಿ ಚಲೋ ತತ್ವಗಳು ನಾಶವಾಗುತ್ತವೆ, ಆದರಿಂದ ದೇಹ ಬೆಳವಣಿಗೆಗೆ ಕೊರತೆಯುಂಟಾಗುತ್ತದೆ. ಕೈಯಿಂದ ಕುಟ್ಟಿದ ಅಕ್ಕಿಯನ್ನೇ ಉಪಯೋಗಿಸಬೇಕು. ಕೈ ಕುಟ್ಟಿದ ಅಕ್ಕಿಯಲ್ಲಿ ಧಾತು-ಅಂಶಗಳೂ ಪೌಷ್ಟಿಕ ಸತ್ವಗಳೂ ಹಾಗೆಯೇ ಉಳಿದು ದೇಹಕ್ಕೆ ಪುಷ್ಟಿ ದೊರೆಯುತ್ತದೆ. ಗಿರಣಿ ಅಕ್ಕಿಯಲ್ಲಿ ಇವ್ಯಾವವೂ ಉಳಿಯುವದಿಲ್ಲ. ‘ಪಾಲೀಸ’ ಅಕ್ಕಿಯಲ್ಲಿ ಇವನ್ನು ಕೇಳಬೇಡಿ! ಹೀಗೆ ಈ ಪತ್ರಿಕೆಯಲ್ಲಿ ಬರೆದಿದೆ. ಆದರಿಂದ ಅಕ್ಕಿಯನ್ನು ಹೇಗೆ ತಯಾರಿಸಬೇಕು, ಅವನ್ನು ತಯಾರಿಸುವ ಸಾಹಿತ್ಯಗಳ್ಯಾವವು ಎಂಬ ಸಂಗತಿಗಳು ಈ ಪತ್ರಿಕೆಯಲ್ಲಿ ಕೊಡಲ್ಪಟ್ಟಿವೆ. ಗಿರಣಿಗಳ ಸ್ಥಾಪನೆಯಿಂದ ಜನರು ನಿರುದ್ಯೋಗಿಗಳಾಗುತ್ತಾರೆ ೧೦೦ ಮಣ ಕೈಯಿಂದ ಕುಟ್ಟಿದ ಅಕ್ಕಿ ತಯಾರಿಸಲು ೧೫೦ ಜನರು ಬೇಕು. ಅದೇ ಅಕ್ಕಿಯನ್ನು ಗಿರಣಿಯ ಸಹಾಯದಿಂದ ೧೦-೧೨ ಜನರು ತಯಾರಿಸಬರುತ್ತಿದೆ. ಹೀಗೆ ತಯಾರಿಸುವ ಕೆಲಸ ತಪ್ಪಿದ್ದರಿಂದ ಜನರು ನಿರುದ್ಯೋಗಿಗಳಾಗಿದ್ದಾರೆ ಹಿಂದೆ ಬೆಳೆ ಕೊಯ್ದಾದ ಬಳಿಕ ಜನಗಳು ಅಕ್ಕಿ ತಯಾರಿಸತೊಡಗುತ್ತಿದ್ದರು. ಅಕ್ಕಿ ಬೆಳೆಯುವ ಭೂಪ್ರದೇಶದಲ್ಲಿ ಇದೊಂದು ಉದ್ಯೋಗವಿತ್ತು. ಈವಾಗ ಈ ಉದ್ಯೋಗ ಬಯಲಾಗುತ್ತಿದೆ ಈ ಮೂಲಕ ಗ್ರಾಮದ ಆರೋಗ್ಯವೂ ಗ್ರಾಮದ ಸಂಪತ್ತೂ ಕುಗ್ಗಲಾರಂಭಿಸಿದೆ ಬಡಬಗ್ಗರಿಗೆ ಉದ್ಯೋಗ ಸಿಗದೆ ಕಷ್ಟ ನಷ್ಟ, ಗಿರಣಿ ಅಕ್ಕಿ ಉಣ್ಣುವವರಿಗೆ ಔಷಧೋಪಚಾರ ಪಡೆಯಹೋಗಿ ಕಷ್ಟ ನಷ್ಟ ಈ ಸ್ಥಿತಿ ಅಪ್ರಶಸ್ತವಾದದ್ದು, ಅಕ್ಷೇಮಕರವಾದದ್ದು.

ಗ್ರಾಮದವರು ಆತ್ಮನಿರೀಕ್ಷಣ ಮಾಡಿಕೊಳ್ಳುವದಂತೂ ಅವರ ಕರ್ತವ್ಯವಷ್ಟೇ ಅದೇ ಪ್ರಕಾರ

ಸರಕಾರದ್ದಾದರೂ ಒಂದು ಕರ್ತವ್ಯವಿದೆ ಅಕ್ಕಿಯೇ ಪ್ರಧಾನ ಆಹಾರವಾಗಿರುವ ಜಪಾನ, ಫಿಲಿಫ್ಯಾನ ದೇಶಗಳಲ್ಲಿ ಸರಕಾರವು ಕಟ್ಟಳೆಗಳನ್ನು ಮಾಡಿ ಅಕ್ಕಿಯು ಜೀವನ ಯೋಗ್ಯಸ್ಥಿತಿಯಲ್ಲಿ ಜನಗಳಿಗೆ ಸಿಗುವಂತೆ ಏರ್ಪಾಟು ಮಾಡಿದೆ. ಅಧಿಕಾರಿಗಳು ಕಾಲ-ಕಾಲಕ್ಕೆ ಜಾಗ್ರತೆ ಪಡೆಯಬೇಕಾಗಿ ಹುಕುಮುಗಳಿವೆ. ಆ ದೇಶಗಳಂತೆಯೇ ನಮ್ಮ ಹಿಂದುಸ್ಥಾನದ ಸ್ಥಿತಿ. ಇಲ್ಲಿಯೂ ಸರಕಾರವು ಅದೇ ಪ್ರಕಾರ ಜಾಗ್ರತೆ ಕೊಳ್ಳಬೇಕು. ಅಕ್ಕಿಯ ಪೌಷ್ಟಿಕ ದ್ರವ್ಯಗಳ ಘಾತವಾಗುವ ಯಾವತ್ತೂ ಪ್ರಕಾರಗಳನ್ನು ಪ್ರತಿಬಂಧಿಸಲಿಕ್ಕೆ ಸರಕಾರವು ಬದ್ಧವಿದೆ. ಹಾಲು, ತುಪ್ಪ ಮೊದಲಾದ ಸ್ನಿಗ್ಧ ಪದಾರ್ಥಗಳು ಸ್ವಚ್ಛ ಮತ್ತು ಆರೋಗ್ಯಕರ ಸ್ಥಿತಿಯಲ್ಲಿ ಮಾರಾಟವಾಗುವಂತೆ ಸರಕಾರವು ಕಾನೂನುಗಳನ್ನು ಮಾಡಿರುತ್ತದೆ. ಅಕ್ಕಿಯ ಸಂಬಂಧದಲ್ಲಿಯೂ ಇಂಥ ಕಾನೂನುಗಳನ್ನು ಏರ್ಪಡಿಸಬಹುದು ಕ್ಷೇಮಕರ ಆಹಾರ-ಸಾಮಗ್ರಿಗಳು ಪ್ರಜೆಗಳಿಗೆ ಸಿಗುವಂತೆಯೂ ಅಕ್ಷೇಮಕರ ಪದಾರ್ಥಗಳು ಸಿಗದಂತೆಯೂ ಕ್ರಮಗೊಳಿಸುವದು ಸರಕಾರದ ಕರ್ತವ್ಯವುಂಟು.

⁂

ನಮ್ಮಲ್ಲಿಯ ಬೋರ್ಡು-ಮ್ಯುನಿಸಿಪಾಲಿಟಿಗಳಲ್ಲಿ ತತ್ವ-ಪ್ರಾಧಾನ್ಯಕ್ಕಿಂತ ವ್ಯಕ್ತಿ ಪ್ರಾಧಾನ್ಯ ಹೆಚ್ಚು; ಪಕ್ಷ-ಪಂಗಡಗಳ ಉಪಟಳ ಹೆಚ್ಚು; ಲೋಕಸೇವೆಯ ಬುದ್ಧಿ ಕಡಿಮೆ, ಯಾವಾಗಲೂ ಹಣದ ಅಡಚಣೆ, ಇವೇ ಮೊದಲಾದ ಲೋಪ-ದೋಷಗಳನ್ನು ಸರಕಾರವು ಬೋರ್ಡು-ಮ್ಯುನಿಸಿಪಾಲಿಟಿಗಳ ಆಡಳಿತೆಯನ್ನು ವಿಮರ್ಶಿಸುವಾಗ ಬರೆಯುತ್ತದೆ ಈ ವರ್ಷವೂ ಇದೇ ಪ್ರಕಾರ ಶರಾ ಹೊಡೆದಿರುತ್ತದೆ. ಇಂಥ ಪ್ರಸಂಗದಲ್ಲಿ ಕರಾಚಿಯ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾಗಿದ್ದ ಶ್ರೀ|| ಸಿಧ್ವಾರವರು ಶ್ರೀಲಂಕೆಯ ಕೋಲಂಬೋ ಮ್ಯುನಿಸಿಪಾಲಿಟಿಯ ಕುರಿತು ಬರೆದ ಲೇಖದೊಳಗಿನ ಒಂದು ಅಂಶ ವಿಚಾರಾರ್ಹವಾಗಿದೆ: ಕೋಲಂಬೋ ಮ್ಯುನಿಸಿಪಾಲಿಟಿಯವರು ಒಂದು ದೀನ-ಮಂದಿರವನ್ನು ಸ್ಥಾಪಿಸಿದ್ದಾರೆ. ಈ ಮನೆಯಲ್ಲಿ ಊನರಿಗೆ ಸಾಕಿ ಸಲಹುತ್ತಾರೆ. ಮಾನಸಿಕ ಊನರೂ, ಕಾಯಿಕ ಊನರೂ, ಕಷ್ಟಮಾಡಿಕೊಂಡು ಜೀವನ ಮಾಡಲಾಗದವರೂ ಈ ಮನೆಯಲ್ಲಿ ಉಳಿದು ನಿರ್ವಾಹ ಮಾಡುತ್ತಾರೆ. ಮ್ಯುನಿಸಿಪಾಲಿಟಿಯವರು ಅನ್ನ ಕೊಡುತ್ತಾರೆ, ವಸ್ತ್ರ ಕೊಡುತ್ತಾರೆ, ಮನೋರಂಜನ ಸಾಹಿತ್ಯಗಳನ್ನು ಪೂರೈಸುತ್ತಾರೆ. ಇವರೆಲ್ಲರ ನಿಗಾ ನೋಡಲು ಮ್ಯುನಿಸಿಪಾಲಿಟಿಯವರು ಒಬ್ಬ ಆಡಳಿತೆದಾರರನ್ನು ನೇಮಿಸಿದ್ದಾರೆ ಚೊಕ್ಕವಾದ ಮನೆ, ಚಂದವಾದ ಉದ್ಯಾನ, ಹೈಲು ಇವೇ ಮೊದಲಾದವುಗಳಲ್ಲಿ ದೈವಸಂಕಲ್ಪದಿಂದ ಊನರಾದವರು ನಿಶ್ಚಿಂತರಾಗಿ ದೇಹಯಾತ್ರೆಯನ್ನು ಕಳೆಯುವದು ಕಂಡರೆ ಸಂತೋಷವಾಗುತ್ತದೆ ಈ ಮೂಲಕ ಶ್ರೀಲಂಕೆಯ ಕೋಲಂಬೋದಲ್ಲಿ ಯಾಚಕರ ಉಪಟಳವಿಲ್ಲ. ಊನರಿಗೆ ಹೊಟ್ಟೆ ಹೊರಕೊಳ್ಳುವ ದೆಸೆಯಿಂದ ಮನೆ-ಮನೆ ತಿರುಗುವ ದುರ್ಧರ ಪ್ರಸಂಗವಿಲ್ಲ. ನಮ್ಮ ಕಡೆಯಂತೆ ಊನರೂ ದಿಕ್ಕಿಲ್ಲದವರೂ ಮರದಡಿ ಇಲ್ಲವೆ ಮಾರ್ಗದ ಮೇಲೆ ಬಿದ್ದು ಸಮಾಜದ ಅಪಮಾನ ಮಾಡುವ ಪ್ರಸಂಗವಿಲ್ಲ. ಸಮರ್ಥರೂ ಐಶ್ವರ್ಯವಂತರೂ ದೀನವತ್ಸಲರಿರಬೇಕು. ಆದೇ ಪ್ರಕಾರ ಸ್ಥಳಿಕ ಸೌಕರ್ಯಗಳಿಗಾಗಿ, ಸ್ಥಳಿಕ ಸುಖಗಳಿಗಾಗಿ ಏರ್ಪಾಟು ಹೊಂದಿದ ಮ್ಯುನಿಸಿಪಾಲಿಟಿಗಳು ತಮ್ಮ ಸೀಮೆಗಳಲ್ಲಿರುವ ಊನರಿಗೂ ನಿರಾಶ್ರಿತರಿಗೂ ಸಂರಕ್ಷಿಸಲು ಧರ್ಮಬದ್ಧವಿವೆ. ಶ್ರೀಲಂಕೆಯ ಕೋಲಂಬೋ ಮ್ಯುನಿಸಿಪಾಲಿಟಿಯ ಉದಾಹರಣೆ ಅನುಕರಣೀಯವಿದೆ. ಲಖನೌ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಇಲಾಖೆಯ ಮುಖ್ಯಾಧಿಕಾರಿಗಳಾದ ಪ್ರೊ|| ರಾಧಾಕಮಲ ಮುಕರ್ಜಿಯವರು ಬರೆದಂತೆ ಯಾಚಕವೃತ್ತಿಯನ್ನು ಪ್ರತಿಬಂಧಿಸಿ, ದೀನ-ಮಂದಿರಗಳನ್ನು ಸ್ಥಾಪಿಸಿ ಇವರೆಲ್ಲರ ವ್ಯವಸ್ಥೆ ಮಾಡಲು ಸರಕಾರವು ಬದ್ಧವಿದೆ. ನಿಜಾಮು ರಾಜ್ಯದಲ್ಲಿ ಸದ್ಯಕ್ಕೆ ಇಂಥದೊಂದು ಕಾನೂನಾಗಿದೆ, ದೀನ-ಮಂದಿರಗಳು ಸದ್ಯಕ್ಕೇ ಅಲ್ಲಿ ಸ್ಥಾಪಿಸಲ್ಪಡುವವು. ಅದೇ ಮಾದರಿಯ ಮೇರೆಗೆ ನಮ್ಮಲ್ಲಿಯ ಬೋರ್ಡು-ಮ್ಯುನಿಸಿಪಾಲಿಟಿಗಳು ಏರ್ಪಾಟು ಮಾಡುವಂತೆ ಸರಕಾರವು ಉಪಾಯವನ್ನು ಕೈಕೊಳ್ಳುವದು ವಿಹಿತ. ಕಾಯಕಷ್ಟ ಮಾಡಬಲ್ಲ ಯಾಚಕರಿಗೆ ಸರಕಾರವು ಕೃಷಿಕರ್ಮ ಮಾಡಹಚ್ಚಬೇಕೆಂದು ಪ್ರೊ|| ರಾಧಾಕಮಲ ಮುಕರ್ಜಿಯವರು ಮಾಡಿದ ಸೂಚನೆ ಸಹ ವಿಚಾರಾರ್ಹವಿದೆ ಈ ಯೋಜನೆಯಿಂದ ಕಾಯಕಷ್ಟ ಮಾಡಬಲ್ಲಾದವರಿಗೆ ಸಭ್ಯ ಜೀವನ ಮಾಡಹಚ್ಚಿದ ಶ್ರೇಯಸ್ಸು ಸಿಗುವದಲ್ಲದೆ ಕೃಷಿಕರ್ಮದ ಉದ್ಧಾರ ಸಹ ಆಗುವಂತಿದೆ

ಇದಲ್ಲದೆ ಶ್ರೀಲಂಕೆಯ ಮ್ಯುನಿಸಿಪಾಲಿಟಿಯವರು ೩೦೫ ಬಡವರ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ ಇವುಗಳ ಕಟ್ಟೋಣ ಖರ್ಚಿನ ವಿಚಾರ ಮಾಡಿದರೆ ತಿಂಗಳಿಗೆ ರೂ ೧೧ ಭಾಡಿಗೆ ಬೀಳುತ್ತದೆ. ಬಡಬಗ್ಗರಿಗೆ ಇಷ್ಟು ಭಾಡಿಗೆ ಕೊಡುವ ಸಾಮರ್ಥ್ಯವಿಲ್ಲ. ಆದರಿಂದ ಮ್ಯುನಿಸಿಪಾಲಿಟಿಯವರು ರೂ. ೩ ಇಲ್ಲವೆ ೪ ಯನ್ನಷ್ಟೇ ಆಕರಿಸಿ, ಉಳಿದ ಭಾಡಿಗೆಯನ್ನೆಲ್ಲ ತಾವೇ ಸಹಿಸುತ್ತಾರೆ. ಕಟ್ಟೋಣ ಕಟ್ಟಿಸಲಿಕ್ಕೆ ತಗಲಿದಷ್ಟು ಖರ್ಚನ್ನು ಅವುಗಳಲ್ಲಿ ವಾಸ ಮಾಡುವ ಬಡವರಿಂದ ವಸೂಲ ಮಾಡಬೇಕೆಂಬ ಧೋರಣ ಇಲ್ಲಿಯಂತೆ ಅಲ್ಲಿಲ್ಲ. ಮಾರ್ಗಗಳ ಮೇಲೆ ಕೊಲಸು ಮಾಡುವವರಿಗೆ ಕಠಿಣ ಶಿಕ್ಷೆ ಮಾಡಲ್ಪಡುತ್ತದೆ. ಮಾರ್ಗಗಳ ಮೇಲೆ ಮಲ-ಮೂತ್ರ ಮಾಡುವದು ಒತ್ತಟ್ಟಿಗಿರಲಿ, ಉಗುಳಲಿಕ್ಕೆ ಸಹ ಪ್ರತಿಬಂಧವುಂಟು. ಆರೋಗ್ಯ ರಕ್ಷಣೆಯ ಬಗ್ಗೆ ಅಲ್ಲಿ ಮಿತಿಮೀರಿ ಜಾಗ್ರತೆ ಕೊಳ್ಳಲಾಗುತ್ತದೆ ಮೈಲಿ ಬೇನೆಗಂತು ಶ್ರೀಲಂಕೆಯವರು ಬಹಳ ಹೆದರುತ್ತಾರೆ. ಅಲ್ಲಿ ಗುಜರಾಥಿ ವರ್ತಕರ ವ್ಯಾಪಾರವುಂಟು. ಒಬ್ಬ ವರ್ತಕರು ಸಣ್ಣ ಶಿಶುವಿನೊಡನೆ ಕೋಲಂಬೋಕ್ಕೆ ಹೋಗಿದ್ದರು ಆ ಶಿಶುವಿಗೆ ಮೈಲಿ ಚುಚ್ಚೋಣಾಗಿತ್ತು. ಆದಾಗ್ಯೂ ಕೋಲೊಂಬೋಕ್ಕೆ ಮುಟ್ಟಿದ ೮ ದಿನಗಳಲ್ಲಿ ಆ ಶಿಶುವಿಗೆ ಮೈಲಿ ಬಂತು. ಈ ಸಂಗತಿಯನ್ನು ವರ್ತಕರು ಮ್ಯುನಿಸಿಪಾಲಿಟಿಯ ಆರೋಗ್ಯ ಇಲಾಖೆಯವರಿಗೆ ತಿಳಿಸಲಿಲ್ಲ ಆದರಿಂದ ಅವರ ಮೇಲೆ ಖಟ್ಲೆಯಾಗಿ ಅವರಿಗೆ ೬ ತಿಂಗಳ ಸಕ್ರಮ ಶಿಕ್ಷೆ, ಮತ್ತು ರೂ. ೫೦೦ ದಂಡ ವಿಧಿಸಲಾಯಿತು. ಆರೋಗ್ಯ ರಕ್ಷಣೆಯ ಬಗ್ಗೆ ಕೋಲಂಬೋ ಮ್ಯುನಿಸಿಪಾಲಿಟಿಯಷ್ಟು ಕಠೋರ ಮ್ಯುನಿಸಿಪಾಲಿಟಿ ಬೇರೆಲ್ಲಿಯೂ ಇಲ್ಲ. ಈ ಮ್ಯುನಿಸಿಪಾಲಿಟಿಯೊಳಗಿನ ಕ್ರಮಗಳು ನಮ್ಮ ಬೋರ್ಡು-ಮ್ಯುನಿಸಿಪಾಲಿಟಿಗಳಲ್ಲಿ ರೂಢಗೊಳಿಸಿದರೆ ಬಹಳ ಲೋಕಕಲ್ಯಾಣವಾಗುವಂತಿದೆ

⁂

ಮಹಾಯುದ್ಧದ ಮೂಲಕ ಸರಕಾರಿ ನೌಕರರಿಗೆ ಸಿಗುವ ಭತ್ತೆ ಉಗ್ರಾಣಿಗಳಿಗೆ ಸಿಗುವದಿಲ್ಲವಾಗಿ ದೂರು ಉಂಟು. ಉಗ್ರಾಣಿಗಳು ಸರಕಾರಿ ನೌಕರರಲ್ಲವಂತೆ! ಎಲ್ಲ ಸರಕಾರಿ ನೌಕರರಿಗೆ ಉಗ್ರಾಣಿಗಳು ಆಧೀನರಾಗಿ ಚಾಕರಿ ಮಾಡುತ್ತಾರೆ. ಎಲ್ಲ ಸರಕಾರಿ ನೌಕರರಿಗೆ ಅವರವರಿಗೆ ನೇಮಿಸಿದ ಕೆಲಸಗಳುಂಟು. ಆದರೆ ಉಗ್ರಾಣಿಗಳ ವ್ಯವಸ್ಥೆಯೇ ಬೇರೆ! ಪ್ರತಿ ತಿಂಗಳಿಗೆ ಕೆಲಸ ಮಾಡಿದ ಬಗ್ಗೆ ಪಟೇಲ-ಶಾನಭೋಗರ ಪ್ರಶಸ್ತಿಪತ್ರ ಪಡೆಯಬೇಕು, ಅಂದರೆ ಮಾತ್ರ ತಿಂಗಳ ಕೊನೆಗೆ ಸಂಬಳ ಸಿಗುತ್ತದೆ! ಇಲ್ಲದಿದ್ದರೆ ಅದಕ್ಕೆ ಸಂಕಟ. ಆ ಮೇಲೆ ಕಚೇರಿಯವರ, ಅಲ್ಲಿಯ ಪೇದೆಗಳ ಚಾಕರಿ ಮಾಡಬೇಕು. ಸಾಹೇಬರ ಸರ್ಕೀಟಾದಾಗ ಪಟ್ಟಣದಲ್ಲಿ ಬಂದು ಚಾಕರಿ ಮಾಡಿ ಊಟಕ್ಕೆ ಊರಿಗೆ ಇಲ್ಲವೆ ಖಾನಾವಳಿಗೆ ಹೋಗಬೇಕು! ಇಷ್ಟೆಲ್ಲ ಚಾಕರಿ ಮಾಡಿದಾಗ್ಯೂ ಪಟೇಲ-ಶಾನಭೋಗರ ಮರ್ಜಿ ಕಾದಿದಾಗ್ಯೂ ಸುಸೂತ್ರ ಸಂಬಳ ಸಿಗುವದು ಕಷ್ಟ! ಯಾವದೇ ಸರಕಾರಿ ನೌಕರನಿಗೆ ತಿಂಗಳ ಸಂಬಳ ಪಡೆಯುವ ಪೂರ್ವದಲ್ಲಿ ಪ್ರತಿ ತಿಂಗಳಿಗೆ ಕೆಲಸ ಮಾಡಿದ ಬಗ್ಗೆ ಮೇಲಧಿಕಾರಿಯ ಒಪ್ಪಿಗೆಯು

(೧೧ನೇ ಪುಟದ ಮೇಲೆ ಮುಂದರಿಸಿದೆ)

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ ಕೋರ್ಟನಲ್ಲಿ.

R. E. P. 20/1940 ಮತ್ತು E. A. 16/41.
I. A. 297/40 ಮತ್ತು I A. 67/41.

ಸುಬ್ರಾಯ ಕಾರಂತ ಕೂಡಾ— ಅರ್ಜದಾರರು
ಮತ್ತು
ಮಾಧಪ್ಪ ವೈಯ್ಯ ಕೂಡಾ— ರೆಸ್ಪೋಂಡೆಂಟರು

4ನೇ ರೆಸ್ಪೋಂಡೆಂಟ ರಾಮರಾವ್, ವೆಂಕಟ್ರಾಯರ ಮಗ ಉತ್ತರ ಕನ್ನಡ ಜಿಲ್ಲಾ ಹೊನ್ನಾವರ ತಾಲೂಕ ಮಹ್ಲಾಪುರ ಗ್ರಾಮದಲ್ಲಿರುವವರಿಗೆ—

ಮೇಲಿನ ಕೋರ್ಟಿನ ಕ್ರಮ ನಂಬರ 14/1935ರಲ್ಲಿ ನಿಮ್ಮ ಮೇಲೆ ಕೂಡಾ ಆದ ಡಿಕ್ರಿ ಮೇಲೆ ವಾದಿಯು R. E. P 20/1940ನೇ ಅಮಲಜಾರಿ ದಾಖಲು ಮಾಡಿರುತ್ತಾನೆ, ತನ್ಮಧ್ಯೆ ಅಮಲಜಾರಿಗೆ ಕಾರಣವಾದ ಡಿಕ್ರಿ ತಿದ್ದುಪಡಿಯ ಬಗ್ಗೆ I. A. ನಂಬರ 297/1940ನೇ ಅರ್ಜಿ ಕೂಡಾ ದಾಖಲು ಮಾಡಿರುತ್ತಾನೆ. ಅನಂತರ ಸದರಿ ವಾದಿಯು ಮೃತಪಟ್ಟಿರುವದರಿಂದ ಮೇಲೆ ಕಾಣಿಸಿದ ಅರ್ಜದಾರರು ತಮ್ಮನ್ನು ವಾದಿಯ ವಾರಿಸದಾರರಾಗಿ ಮೇಲೆ ಹೇಳಿದ ಅಮಲಜಾರಿ ಮತ್ತು ಅರ್ಜಿಯಲ್ಲಿ ಕಕ್ಷಿಯಲ್ಲಿ ಸೇರಿಸಬೇಕಾಗಿ ಸದರಿ ಕೋರ್ಟನಲ್ಲಿ I. A. 67/41 ಮತ್ತು R. E. A. 16/1941 ಹೀಗೆ ಎರಡು ಅರ್ಜಿಗಳನ್ನು ಮಾಡಿರುವದರಿಂದಲೂ ಮೇಲೆ ಹೇಳಿದ ೪ ಅರ್ಜಿಗಳಿಗೂ ಆಕ್ಷೇಪಣೆ ಹೇಳುವದಿದ್ದರೆ ಅದನ್ನು ತಾ. ***30-10-41***ನೇ ಪೂರ್ವಾಹ್ನ 10½ ಘಂಟೆಗೆ ಸ್ವತಃ ಅಥವಾ ವಕೀಲ ಮುಖಾಂತರ ಹಾಜರಾಗಿ ಹೇಳಕೊಳ್ಳಬೇಕು ಇಲ್ಲವಾದರೆ ನಿಮ್ಮ ಗೈರು ಹಾಜರಿನಲ್ಲಿ ಸದರಿ ನಾಲ್ಕು ಅರ್ಜಿಗಳನ್ನು ತೀರ್ಮಾನ ಮಾಡಲಾಗುತ್ತದೆ.

ಮಂಗಳೂರು, 11-10-1941.

K. Suryanarayana Adiga,
Advocate for Petitioners.

ಕಾನಡಾವೃತ್ತ.

ಮಿತಿ ವೃಷ ಸಂವತ್ಸರ ಕಾರ್ತಿಕ ಶು|| ೮ಮಿ, ಸೋಮವಾರ.

ಸಾಮ್ರಾಜ್ಯಕರ್ತರಿಗೆ ಎಚ್ಚರಿಕೆ !

ನಾವು ಮುಂದಾಗಿಯೇ ಹೇಳುತ್ತೇವೆ: ಈಗ ನಾವು ಸಾಮ್ರಾಜ್ಯಕರ್ತರಿಗೆ ಹೇಳುವ ಎಚ್ಚರಿಕೆ ನಮ್ಮ ಸ್ವಂತದ್ದು ಅಲ್ಲ; ಹಿಂದುಸ್ಥಾನ ಸರಕಾರದ ನಿವೃತ್ತ ಅರ್ಥಸಚಿವರಾದ ಸರ್ ಜೊರ್ಜ ಶೂಸ್ಟರರು ಸಾಮ್ರಾಜ್ಯಕರ್ತರಿಗೆ ಕೊಟ್ಟ ಎಚ್ಚರಿಕೆಯಿದು ! ಸರ್ ಜೋರ್ಜರು ಗುರುವಾರ ಆಕ್ಸಫರ್ಡ ವಿಶ್ವವಿದ್ಯಾಲಯದಲ್ಲಿ ಭಾಷಣ ಮಾಡುವಾಗ ಹಿಂದುಸ್ಥಾನದ ಸಮಸ್ಯೆ ಆಯರ್ಲಂಡದಷ್ಟೇ ಬಿಗಿಯಾಗುವದಾಗಿ ಎಚ್ಚರಿಕೆ ಕೊಡುತ್ತಾರೆ. ಯುದ್ಧ ಮುಗಿದ ಬಳಿಕ ಹಿಂದೀ ಪ್ರಮುಖರೊಡನೆ ಆಲೋಚನೆ ಮಾಡಿ ಹಿಂದುಸ್ಥಾನದ ಸಮಸ್ಯೆಯನ್ನು ಬಗೆಹರಿಸುವ ಪ್ರಸಂಗವುಂಟು. ಈಗ ಸಣ್ಣ ಮಂಡಲವನ್ನು ನೇಮಿಸಿಕೊಂಡು, ಉಭಯ ಪಕ್ಷಗಳಲ್ಲಿ ಮಾನ್ಯವಾಗುವಂಥ ಸೂಚನೆಯನ್ನು ತಯಾರಿಸಬೇಕಾಗಿ ಸರ್ ಜೊರ್ಜರು ಸಲಹೆ ಕೊಡುತ್ತಾರೆ. “ಪ್ರಾಂತಿಕ ಸರಕಾರಗಳ ಅನುಭವವುಳ್ಳ ಹಿಂದೀಯರು ಯೋಜನೆಯನ್ನು ತಯಾರಿಸಬಲ್ಲರು, ನಾವು ಎಷ್ಟೆಂದರೂ ವಿದೇಶೀಯರು; ನಮ್ಮಿಂದ ಆ ಕೆಲಸ ಆಗದು.’ ಹೀಗೆ ಸರ ಜೋರ್ಜರು ಅಂತಃಕರಣ ಬಿಚ್ಚಿ ಹೇಳಿದ ಮಾತನ್ನು ನಾವು ಸಾಮ್ರಾಜ್ಯಕರ್ತರಿಗೆ ವಿನಯಪೂರ್ವಕವಾಗಿ ಅರ್ಪಿಸಿ, ಹಿಂದುಸ್ಥಾನದ ಸಮಸ್ಯೆಯನ್ನು ಗಾಂಭೀರ್ಯದಿಂದ ಪರ್ಯಾಲೋಚಿಸಲು ಈ ಮೂಲಕ ಅರಿಕೆ ಮಾಡಿಕೊಳ್ಳುತ್ತೇವೆ. ನಮ್ಮ ಹಿಂದುಸ್ಥಾನದೊಳಗೆ ಈವಾಗ ಬ್ರಿಟಿಶರ ಮೇಲೆ ನಂಬಿಗೆಯಿಲ್ಲ ನೇಕ ನಾಮದಾರ ಶ್ರೀನಿವಾಸ ಶಾಸ್ತ್ರಿಗಳಂಥ ಸಾಮ್ರಾಜ್ಯ ಸರಕಾರದ ಸೂತ್ರಗೊಂಬೆಯೆಂದು ಖ್ಯಾತಿಗೊಂಡ ಮಹಾನುಭಾವರು ಸಹ ಬ್ರಿಟಿಶ ಗೆಳೆಯರ ಮೇಲೆ ನಂಬಿಗೆಯಿಡಲು ಧೈರ್ಯಪಡುವದಿಲ್ಲ. “Our experience is that when the day of reckoning comes the honest man is no longer on the stage.” ನಿರ್ಣಯ ಪ್ರಸಂಗದಲ್ಲಿ ಪ್ರಾಮಾಣಿಕ ಜನರು ರಂಗಸ್ಥಳದ ಮೇಲೆ ಎಲ್ಲಿಯೂ ಕಾಣುವದಿಲ್ಲ ಇದೇ ನಮ್ಮ ಅನುಭವ.” ಹೀಗೆ ನೇಕ ನಾಮದಾರ ಶ್ರೀನಿವಾಸ ಶಾಸ್ತ್ರಿಗಳು ಹೇಳಿದ ಬಳಿಕ ಹಿಂದುಸ್ಥಾನದೊಳಗಿನ ಜನಸಾಮಾನ್ಯರು ಸಾಮ್ರಾಜ್ಯಕರ್ತರ ಮೇಲೆ ಭಕುತಿಯಿಡಲಾರರೆಂದು ನಾವು ಹೇಳುವದನವಶ್ಯಕ. ಈ ಪ್ರಕಾರ ರಾಜ್ಯಕರ್ತರ ಮೇಲೆ ಅಪನಂಬಿಗೆಯುಂಟಾಗುವದು ಸಾಮ್ರಾಜ್ಯಕರ್ತರಿಗೆ ಶ್ರೇಯಸ್ಕರವಾದುದೇನೆಂದು ನಾವು ಅವರಿಗೆ ಕೇಳಬಯಸುತ್ತೇವೆ. ಬ್ರಿಟಿಶರ ಋಣಾನುಬಂಧವನ್ನು ತುಂಡರಿಸಿಕೊಳ್ಳಲು ನಮ್ಮಂಥ ಬ್ರಿಟಿಶರ ಅಭಿಮಾನಿಗಳ ಮನಸ್ಸಿಗೆ ಒಪ್ಪದ ಮಾತು. ಆದರೆ ಬ್ರಿಟಿಶರು ಇಲ್ಲವೆ ಬ್ರಿಟಿಶ ಗೆಳೆಯರು ಹಿಂದುಸ್ಥಾನದ ಕಲ್ಯಾಣಕಾಂಕ್ಷೆಯನ್ನು ಪ್ರದರ್ಶಿಸಿ ಅಷ್ಟರ ಮೇಲೆಯೇ ನಾವು ಹಿಂದವಾಸಿಯರು ಸಮಾಧಾನ ತಳೆಯಬೇಕಾಗಿ ಅಪೇಕ್ಷಿಸುತ್ತಿದ್ದರೆ ಈಗಿನ ಕಾಲಮಾನದಲ್ಲಿ ಅದು ಅಸಾಧ್ಯವೆಂದು ನಾವು ಅತ್ಯಂತ ವಿನಯದಿಂದ ತಿಳಿಸಬಯಸುತ್ತೇವೆ. ಸಾಮ್ರಾಜ್ಯಕರ್ತರು ಹುಡುಗಾಟಿಕೆಗೆ ಈಡಾಗಬಾರದು. ಮಹಾಯುದ್ಧವು ಬಹು ಇಕ್ಕಟ್ಟಿಗೆ ಬಂದು ತಲ್ಪಿದೆ. ಹಿಂದುಸ್ಥಾನದ ಸಹಾಯ-ಸಹಕಾರಗಳು ಈವಾಗ ಅತ್ಯವಶ್ಯ. “ಹಿಂದುಸ್ಥಾನದ ಭವಿಷ್ಯ ವಿಚಾರ ಭವಿಷ್ಯಕ್ಕೆ ಬಿಟ್ಟುಕೊಡೋಣ; ಯುದ್ಧವನ್ನು ಗೆದ್ದುಕೊಳ್ಳೋಣ. ಯುದ್ಧ ಗೆದ್ದುಕೊಂಡ ಮೇಲೆ ಮುಂದಿನ ಮಾತು.’ ಹೀಗೆ ಸಾಮ್ರಾಜ್ಯಕರ್ತರು ದೊಡ್ಡ ವೇದಾಂತಿಗಳಾಗಿ ಪ್ರತಿಪಾದಿಸಬಹುದು. ಆದರೆ ಹಿಂದುಸ್ಥಾನಕ್ಕೆ ಈ ವೇದಾಂತ ಕೇಳಿ ಸಾಕಾಗಿದೆ. ಕಳೆದ ಮಹಾಯುದ್ಧ ಗೆದ್ದುಕೊಂಡ ಬಳಿಕ ಬ್ರಿಟಿಶರಿಂದ ಸಿಕ್ಕಿದ ಉಡುಗೊರೆಯನ್ನು ಎಲ್ಲರೂ ಬಲ್ಲಾದ ವಿಷಯ. ಇಂಥ ಪ್ರಸಕ್ತಿಯಲ್ಲಿ ಹಿಂದುಸ್ಥಾನದ ಸ್ಥಾನ-ಮಾನಗಳನ್ನು ನಿಶ್ಚಯಿಸದೆ ಯುದ್ಧಕ್ಕೆ ಪೂರ್ಣ, ಸಂಪೂರ್ಣ, ಪರಿಪೂರ್ಣ ಸಹಾಯ-ಸಹಕಾರ ನೀಡಬೇಕಾಗಿ ಸಾಮ್ರಾಜ್ಯಕರ್ತರು ಹೇಳುವದು ನಿತಾಂತ ಸ್ವಾರ್ಥಪರಾಯಣತೆ! ಇಂಥ ನಿರರ್ಥಕ ವಚನಗಳಿಂದ ಜನಸಾಮಾನ್ಯರಲ್ಲಿ ಯುದ್ಧಯತ್ನದ ಆವೇಶ ತುಂಬುವದಿಲ್ಲ. ಈ ಸಂಗತಿಯನ್ನು ನಾವು ಸಾಮ್ರಾಜ್ಯಕರ್ತರಿಗೆ ಇನ್ನೊಮ್ಮೆ ಅರಿಕೆ ಮಾಡಿಕೊಳ್ಳುತ್ತೇವೆ. ಬ್ರಿಟಿಶರಿಗೆ ಅಪಜಯವಾಗಬೇಕೆಂದು ನಮ್ಮ [illegible]ವಿಲ್ಲ. ಬ್ರಿಟಿಶರು ಗೆಲ್ಲಬೇಕು, ಗೌರವ ಪಡೆದು ಜಯಿಸಬೇಕು. ಬ್ರಿಟಿಶರು ಜಯಿಸಿದರೆ ಮಾತ್ರ ಲೋಕಕ್ಕೆ ಸುಖ. ಹಿಟ್ಲರನು ಗೆದ್ದರೆ ಲೋಕಕ್ಕೆ ಸಂಕಟ! ಇವೇ ಮೊದಲಾದ ವಿಷಯಗಳನ್ನು ಜನಸಾಮಾನ್ಯರು ನಂಬುತ್ತಾರೆ. ಆದರೆ ಲೋಕ ಸುಖದಲ್ಲಿ ನಮ್ಮ ಹಿಂದುಸ್ಥಾನಕ್ಕೆ ಸಿಗುವ ಸುಖಾಂಶವೆಷ್ಟು, ಲೋಕದುಃಖದಲ್ಲಿ ಒದಗುವ ದುಃಖಾಂಶವೆಷ್ಟು? ಹಿಂದುಸ್ಥಾನದ ಸ್ಥಾನವೇನು, ಮಾನವೇನು? ಬ್ರಿಟಿಶರು ಗೆಲ್ಲಲಿ, ಹಿಟ್ಲರನು ಗೆಲ್ಲಲಿ, ಹಿಂದುಸ್ಥಾನದ ಸ್ಥಾನ-ಮಾನಗಳು ಈಗಿನಂತೆಯೇ ಮುಂದೆಯೂ ಇರಬೇಕಾಗಿದ್ದರೆ, ಬ್ರಿಟಿಶರು ಯುದ್ಧ ಜಯಿಸಬೇಕೆಂದು ನಮ್ಮ ಜನಾಂಗಕ್ಕೆ ಪ್ರೇರೇಪಿಸುವ ಸ್ಫೂರ್ತಿ ಯಾವದು? ಈ ಸಂಗತಿಯನ್ನು ಸಾಮ್ರಾಜ್ಯಕರ್ತರು ಸ್ಪಷ್ಟಗೊಳಿಸಬೇಕು. ಅಂದರೆ ಮಾತ್ರ ಯುದ್ಧಯತ್ನವು ಸಾರ್ಥಕವಾಗಿ ನಡೆಯಬಲ್ಲದು. ನಮ್ಮ ಜನಾಂಗಕ್ಕೆ ಭವಿಷ್ಯದ ಆಶೆಯುಂಟಾದನಕ ಯುದ್ಧಯತ್ನವನ್ನು ಯಶಸ್ವಿಯಾಗಿ ಪುರಸ್ಕರಿಸಬಯಸುವದು ಶಿಷ್ಟಸಮ್ಮತವಾದುದೆಂದು ನಮ್ಮಿಂದ ಹೇಳಬರದು. ಬ್ರಿಟಿಶರಿಂದ ನಮ್ಮ ಕಲ್ಯಾಣವಾಗದಾಗಿ ಒಮ್ಮೆ ದೇಶದೊಳಗೆ ಅಭಿಪ್ರಾಯ ರೂಢವಾದರೆ ಮುಂದೆ ಬಹಳ ಅನರ್ಥವುಂಟು; ಸರ ಜೊರ್ಜ ಶೂಸ್ಟರವರು ನುಡಿದಂತೆ ಅಪಾಯವುಂಟು. ಆಯರ್ಲಂಡಕ್ಕೂ ಇಂಗ್ಲಂಡ ದೇಶಕ್ಕೂ ಉಂಟಾದ ದ್ವೇಷಭಾಂಡಾರವನ್ನು ಸರ್ ಜೊರ್ಜ ಶೂಸ್ಟರರು ಬ್ರಿಟಿಶ ಸಾಮ್ರಾಜ್ಯಕರ್ತರಿಗೆ ನೆನಪು ಮಾಡಿಕೊಡುತ್ತಾರೆ. ಮಹಾತ್ಮರ ಅನುಗ್ರಹದಿಂದ ನಮ್ಮಲ್ಲಿ ಬ್ರಿಟಿಶರ ದ್ವೇಷಭಾವನೆ ರೂಢವಾಗಿಲ್ಲ. ಮಹಾತ್ಮರು ಪರಾವಲಂಬಿಗಳಲ್ಲ. ಪರರಿಂದ ನಮಗೆ ಕಷ್ಟವಾಗಲಿ ನಷ್ಟವಾಗಲಿ ಒದಗುತ್ತದೆಂದು ಮಹಾತ್ಮರು ಭಾವಿಸುವದಿಲ್ಲ ನಮ್ಮ ಕಷ್ಟ-ನಷ್ಟಗಳಿಗೆ, ಸುಖ-ದುಃಖಗಳಿಗೆ ನಾವೇ ಕಾರಣರೆಂದು ಮಹಾತ್ಮರ ಉಪದೇಶವುಂಟು. ಅಂತೆಯೇ ಮಹಾತ್ಮರು ಸ್ವದೇಶಬಾಂಧವರಿಗೆ ಸ್ವಾವಲಂಬನದ ಸದುಪದೇಶ ಮಾಡುತ್ತಾರೆ. ‘ ಬ್ರಿಟಿಶರ ಗೊಡವೆ ಬಿಟ್ಟುಬಿಡಿ, ಅವರ ಧೋರಣದಂತೆ ಅವರು ನಡೆಕೊಳ್ಳಲಿ; ಅವರ ಕಾರ್ಯಕ್ರಮದಲ್ಲಿ ನಾವು ಕೈಹಾಕುವದು ಬೇಡ; ಪುರಸ್ಕಾರದ ಪುಣ್ಯ ಬೇಡ, ತಿರಸ್ಕಾರದ ಪಾಪ ಬೇಡ. ನಮಗೆ ಯುಕ್ತ ಕಂಡ ಮಾರ್ಗವನ್ನು ನಿರ್ಧರಿಸಿಕೊಂಡು ನಾವು ಅದನ್ನು ಪ್ರಯತ್ನಪೂರ್ವಕವಾಗಿ ಪುರಸ್ಕರಿಸೋಣ.’ ಹೀಗೆ ಮಹಾತ್ಮರ ಸಂದೇಶವಿದೆ. ಹಿಂದ. ಜನಾಂಗವು ಈ ಪ್ರಕಾರದಿಂದ ಬ್ರಿಟಿಶರಿಗೆ ವಿಮುಖವಾಗತೊಡಗಿದೆ. ಬ್ರಿಟಿಶರ ಬಗ್ಗೆ ಇರುವ ಅಭಿಮಾನ, ಮಮತೆ, ಸ್ನೇಹಭಾವ ಕ್ರಮವಾಗಿ, ಸ್ಥಿರವಾಗಿ ವಿಲಯ ಹೊಂದುತ್ತಿವೆ. ಸಾಮ್ರಾಜ್ಯಕರ್ತರು ಈ ಕಡೆ ಕೊಂಚ ಲಕ್ಷ್ಯ ಕೊಡಬೇಕು. ಹಿಂದುಸ್ಥಾನದ ಸ್ಥಿತಿ ಈಗಿನಂತೆಯೇ ಮುಂದೆಯೂ ಕಾಪಾಡಬೇಕೆಂಬ ಅಟ್ಟಹಾಸವನ್ನು ಸಾಮ್ರಾಜ್ಯಕರ್ತರು ಹಿಡಿಯುವದು ಸ್ವಾಭಾವಿಕ. ಆದರೆ ಆ ಆಶೆ ಆ ಅಪೇಕ್ಷೆ ಎಂದೂ ಪೂರ್ಣವಾಗದು. ಈಗಿನ ಕಾಲಮಾನವೇ ಸ್ಥಿತ್ಯಂತರದ್ದು. ಕ್ರಾಂತಿಕಾರಕ ಸ್ಥಿತ್ಯಂತರಗಳುಂಟಾಗುವ ನೋಟಗಳನ್ನು ನಾವು ನೋಡುತ್ತೇವೆ. ಚಕ್ರನೇಮಿಕ್ರಮಕ್ಕೂ ಮಿಗಿಲಾದ ವೇಗದಿಂದ ಜನಾಂಗಗಳ ದೆಸೆಗಳು ಬದಲಹತ್ತಿವೆ. ಇಂದಿನ ಜನಾಂಗ ನಾಳೆಗಿಲ್ಲ; ನಿನ್ನೆ ಇಲ್ಲದ ಜನಾಂಗ ಇಂದು ಹುಟ್ಟಿದೆ ! ಹೀಗೆ ಜನಾಂಗಗಳ ಹುಟ್ಟು-ಸಾವುಗಳು ಜೋಕಾಲಿ ಹೊಡೆಯುವ ಕಾಲಚಕ್ರದಲ್ಲಿ ಪರತಂತ್ರವಾಗಿರುವ ನಮ್ಮ ಜನಾಂಗ ಇದೇ ಪ್ರಕಾರ ಶಾಶ್ವತವಾಗಿ ಉಳಿಯುವದೆಂದು ನಾವು ಎಣಿಸಲಾರೆವು. ಮಹಾತ್ಮರ ಪುಣ್ಯ ದೊಡ್ಡದಿದೆ; ರಾಷ್ಟ್ರೀಯ ಸಭೆಯ ಪುಣ್ಯಪ್ರಭಾವ ಮಿಗಿಲಾದದ್ದಿದೆ. ಆ ಪುಣ್ಯಬಲದಿಂದಲೂ ತಪಸ್ಸಿನ ಪ್ರಭಾವದಿಂದಲೂ ನಮ್ಮ ಉದ್ಧಾರವಾಗಲೇ ಬೇಕು. ಈ ಉದ್ಧಾರ ಕಾರ್ಯದಲ್ಲಿ ಸಾಮ್ರಾಜ್ಯಕರ್ತರು ಕ್ರಮಪ್ರಾಪ್ತ ಕರ್ತವ್ಯವನ್ನು ಮಾಡಬಯಸುತ್ತಾರೇನೆಂಬುದೇ ವಿಚಾರ ಸಮಸ್ಯೆ. ಸಾಮ್ರಾಜ್ಯಕರ್ತರು ಕಾಲಧರ್ಮವನ್ನು ಗಣನೆಗೆ ತಾರದೆ, ಕ್ಷುದ್ರ ವಿಚಾರ ತಳೆದು ಹಿಂದುಸ್ಥಾನವನ್ನು ಇಂದಿನಂತೆ ಮುಂದೆಯೂ ಅಧೀನವಾಗಿ ಕಾಪಾಡುವೆನೆಂಬ ಅತ್ಯಾಶೆ ಹಿಡಿದರೆ, ಆಯರ್ಲಂಡ ದೇಶವನ್ನು ಸಾಮ್ರಾಜ್ಯ ಸರಕಾರವು ಕಳೆಕೊಂಡಂತೆ ಹಿಂದುಸ್ಥಾನವನ್ನೂ ಕಳೆಕೊಳ್ಳಬೇಕಾದೀತಾಗಿ ಸಾಮ್ರಾಜ್ಯಕರ್ತರಿಗೆ ಸರ್

ಜೋರ್ಜರು ಎಚ್ಚರಿಕೆ ಕೊಡುತ್ತಾರೆ. ಮುಖ್ಯ ಪ್ರಧಾನರಾದ ಮಿ॥ ಚರ್ಚಿಲ್ಲರವರೂ ಭಾರತ ಮಂತ್ರಿಗಳಾದ ಮಿ॥ ಎಮೆರಿಯವರೂ ಎಚ್ಚರಿಕೆ ಪಡೆದು ಹಿಂದುಸ್ಥಾನವನ್ನು ಸಂತೈಸುವ ಕ್ರಮವನ್ನು ಕೂಡಲೆ ಕೈಕೊಳ್ಳದಿದ್ದರೆ ಹಿಂದುಸ್ಥಾನವನ್ನು ಸಾಮ್ರಾಜ್ಯಕ್ಕೆ ಶಾಶ್ವತವಾಗಿ ಪರಾಙ್ಮುಖಗೊಳಿಸಿದ ಪಾಪಕ್ಕೆ ಅವರು ಗುರಿಯಾಗುವರು. ಸರ್ವಾಧಿಪತಿ ಲಿನಲಿಥಗೋ ದೊರೆಗಳ ಅಧಿಕಾರ ದೆಸೆಯನ್ನು ಸಾಮ್ರಾಜ್ಯ ಸರಕಾರವು ರಾಷ್ಟ್ರೀಯ ಸಭೆಯನ್ನು ಸಂತೈಸಲೋಸುಗವೇ ಬೆಳೆಸಿರುವದಾಗಿ ನಾಗಪುರದ 'ಹಿತವಾದ' ಪತ್ರಿಕೆಯ ರಾಜಕೀಯ ಸುದ್ದಿಗಾರರು ತಿಳಿಸುತ್ತಾರೆ ಈ ಸುದ್ದಿಯ ಯಥಾರ್ಥತೆಯನ್ನು ನಾವು ಅರಿಯೆವು. ಆದರೆ ಸಾಮ್ರಾಜ್ಯಕರ್ತರಿಗೆ ರಾಷ್ಟ್ರೀಯ ಸಭೆಯನ್ನು ಸಂತೋಷಗೊಳಿಸಬೇಕೆಂಬ ಅಭಿಲಾಷೆಯುಂಟಾಗಿದ್ದರೆ ಅದೊಂದು ಸ್ವಾಗತಾರ್ಹವಾದ ವಾರ್ತೆಯೆಂದು ನಾವು ತಿಳಿದು ಸಾಮ್ರಾಜ್ಯಕರ್ತರಿಗೆ ಮುಂದಾಗಿಯೇ ಅಭಿನಂದಿಸುತ್ತೇವೆ. ಹೇಗೂ ಮಾಡಿರಿ, ಏನೂ ಮಾಡಿರಿ, ಹಿಂದುಸ್ಥಾನದ ಸ್ಥಾನ-ಮಾನಗಳನ್ನು ಇದೀಗಲೇ ನಿಶ್ಚಯಿಸಿ, ಅವಕ್ಕೆ ಅನುಗುಣವಾದ ರಾಜ್ಯಘಟನೆಯನ್ನು ನಮ್ಮಲ್ಲಿಯ ಪ್ರಮುಖರ ಸಹಕಾರದಿಂದ ತಯಾರಿಸಿಕೊಂಡು ಕಾರ್ಯಕ್ಕೆ ಇದೀಗಲೇ ಪ್ರಾರಂಭ ಮಾಡಿರೆಂದು ಸರ್ ಜೋರ್ಜರಂತೆ ನಾವೂ ಸಾಮ್ರಾಜ್ಯಕರ್ತರಿಗೆ ಸೂಚಿಸುತ್ತೇವೆ. ಗಾಳಿ ಬಂದಾಗ ತೂರಿಕೊಳ್ಳದಿದ್ದರೆ. ಮುಂದೆ ಘಾತವಾದೀತು! ಇಷ್ಟೇ ಸರ್ ಜೋರ್ಜರು ಸಾಮ್ರಾಜ್ಯಕರ್ತರಿಗೆ ಹೇಳಿದ ಎಚ್ಚರಿಕೆ. ಇದಕ್ಕೂ ಮಿಗಿಲಾಗಿ ನಮ್ಮಿಂದ ಹೇಳಲಸಾಧ್ಯ

* * *

ಘೋರ ಮೊಸ್ಕೋ ಹೋರಾಟ!

[ನಿರೀಕ್ಷಕನು ಬರೆದುದು.]

ರುಶ್ಯ ರಾಜಧಾನಿ ಮೊಸ್ಕೋ ಪಟ್ಟಣ ಇನ್ನೂ ಹಿಟ್ಲರನ ವಶವಾಗಿಲ್ಲ. ರುಶ್ಯರು ಕಲಿತನದಿಂದ ರಾಜಧಾನಿಯ ರಕ್ಷಣೆಗಾಗಿ ಹೋರಾಡುತ್ತಿದ್ದಾರೆ. ಪ್ರಾಣ ಹೋಗುವ ವರೆಗೂ ತಾವು ಹೋರಾಡುತ್ತಿರುವೆವಾಗಿಯೂ ಮೊಸ್ಕೋ ರಾಜಧಾನಿಯನ್ನು ತಾವು ಎಷ್ಟಕ್ಕೂ ಶತ್ರುವಶವಾಗಗೊಡಲಿಕ್ಕಿಲ್ಲವಾಗಿಯೂ ರಣಧೀರ ರುಶ್ಯರು ಮಾಡಿದ ನಿರ್ಧಾರವನ್ನು ಕೇಳಿ ಎಲ್ಲರೂ ರುಶ್ಯರಿಗೆ ಬೆನ್ನು ಚಪ್ಪರಿಸುತ್ತಾರೆ. ನಾನೂ ಹಾಗೆಯೇ ಭಾಪುರೆ! ಭಾಪುರೆ! ಎಂದು ಹುರಿದುಂಬಿಸುವೆನು. ಮೊಸ್ಕೋವನ್ನು ವಶ ಮಾಡಿಕೊಳ್ಳುವದು ಸಾಮಾನ್ಯವಾದ ಪರಾಕ್ರಮವಲ್ಲ. ಮೊಸ್ಕೋದ ಮುಂಭಾಗದಲ್ಲಿ ಒಂದು ಬೆಟ್ಟವಿದ್ದು, ಆ ಬೆಟ್ಟ ಸೃಷ್ಟಿಕರ್ತನಿಂದ ಮೊಸ್ಕೋದ ರಕ್ಷಣೆಗಾಗಿಯೇ ನಿರ್ಮಿಸಲ್ಪಟ್ಟಿದೆ. ಈ ಬೆಟ್ಟ ದಾಟಿ ಮೊಸ್ಕೋ ಸೇರುವದು ಸಹಸಾ ಸಾಧ್ಯವಾದ ಮಾತಲ್ಲ. ಬೆಟ್ಟತುಂಬ ಕೇಸರಿಕೆ ಮತ್ತು ಪೀತದಾರು ಮರಗಳು ತುಂಬಿಕೊಂಡಿವೆ. ಅವುಗಳಲ್ಲಿ ಅಡಗಿಕೊಂಡು ರುಶ್ಯ ಸೈನಿಕರು ಸಾಗಿಬರುವವರನ್ನು ಅಲ್ಲಿಂದಲ್ಲೇ ಹಿಡಿದು ನಿಲ್ಲಿಸುವರು. ವಿಖ್ಯಾತ ನೆಪೋಲಿಯನನು ಈ ಬೆಟ್ಟದ ಕಾಟವನ್ನು ಸೈರಿಸಿಕೊಳ್ಳಲಾಗದೆ ತನ್ನ ಸೈನಿಕರಿಗೆ ಹಿಂಗಾಲಿನಿಂದ ಫ್ರಾನ್ಸ ದೇಶಕ್ಕೆ ಓಡಿಹೋಗಲು ಆಜ್ಞಾಪಿಸಿದ್ದನಾಗಿ ಇತಿಹಾಸವುಂಟು. ಆ ಇತಿಹಾಸದ ಪುನರಾವೃತ್ತಿಯಾಗುವದೇನೆಂದು, ಆಗಬೇಕೆಂದು ನನ್ನ ಹಿರಿಯಾಸೆ. ಆದರೆ ಜರ್ಮನರು ಮೊಸ್ಕೋ ಸೇರದೆ ಇರಲಿಕ್ಕಿಲ್ಲವಾಗಿ ಕಾಣುತ್ತದೆ. ಹಿಟ್ಲರನು ಮೊಸ್ಕೋ ಪಟ್ಟಣವನ್ನು ಕೈವಶ ಮಾಡಿಕೊಳ್ಳಲು ಪರಮಾವಧಿಯ ಸಾಹಸ ಮಾಡುತ್ತಿದ್ದಾನೆ. ರುಶ್ಯರು ತಸು-ತಸುವಿಗೆ ನಿಕರದಿಂದ ಹೋರಾಡುತ್ತಿದ್ದಾಗ್ಯೂ ಕೆಲವು ಕಡೆ ರುಶ್ಯರು ಹಿಂಜರಿಯಬೇಕಾಯಿತು. ಆದಾಗ್ಯೂ ರುಶ್ಯರು ನಿರಾಶರಾಗಿಲ್ಲ ಇಲ್ಲವೆ ಎದೆಗುಂದಲಿಲ್ಲ. ರುಶ್ಯ ಸೈನಿಕರ ಸಂಗ್ರಾಮಕ್ರಮವೇ ಪ್ರತ್ಯೇಕ. ಸೈನ್ಯ ಚದರಿಹೋದರೂ, ಆತನು ಪೃಥಕ್ಪೃಥಕ್ ಆದರೂ ಒಟ್ಟೊಂಟಿಗನಾಗಿ ಕಂದಕ ಕಡಿದುಕೊಂಡು ಶತ್ರುಗಳೊಡನೆ ಹೋರಾಡುತ್ತಾನೆ. ಜರ್ಮನರು ೩ ಪಾರ್ಶ್ವಗಳಿಂದ ಮುತ್ತಿಗೆ ಹಾಕಿ ಮೊಸ್ಕೋವನ್ನು ಕೈವಶ ಮಾಡಿಕೊಳ್ಳುವ ದುರಾಶೋದಾಗಿದ್ದಾರೆ: ಮಾಸ್ಕೋದಿಂದ ರುಶ್ಯ ಸರಕಾರದ ಕಚೇರಿಗಳು ವೋಲ್ಗಾ ನದಿಯ ಮೇಲಿನ ಕುಜಬಿಶೇವ ಪಟ್ಟಣಕ್ಕೆ ಒಯ್ಯಲಾಗಿವೆ. ಬ್ರಿಟನ-ಅಮೇರಿಕೆಯ ರಾಯಭಾರಿಗಳು ಆ ಕಡೆ ಹೋಗಿಬಿಟ್ಟಿದ್ದಾರೆ. ರುಶ್ಯ-ಪ್ರಭು ಸ್ಟೈಲಿನನು ಮಾತ್ರ ಇನ್ನೂ ಮೊಸ್ಕೋದಲ್ಲಿಯೇ ಉಳಿದು ರಾಜಧಾನಿಯನ್ನು ರಕ್ಷಿಸಿಕೊಳ್ಳಲು ಸಾಹಸ ಮಾಡ ಪ್ರೇರೇಪಿಸುತ್ತಿದ್ದಾನೆ. ಮೊಸ್ಕೋ ಬಿಟ್ಟರೆ ರುಶ್ಯರು ಎಲ್ಲವೂ ಬಿಟ್ಟಂತೆಯೇ ಸೈ! ಈ ಪ್ರದೇಶದಲ್ಲಿ ಯುದ್ಧಸಾಹಿತ್ಯ ಪೂರೈಸುವ ಕಾರಖಾನೆಗಳಿವೆ. ಅದಕ್ಕಾಗಿಯೇ ಹಿಟ್ಲರನು ಈ ಪ್ರದೇಶವನ್ನು ಕೈವಶ ಮಾಡಿಕೊಳ್ಳುವದಕ್ಕಾಗಿ ಪ್ರಯತ್ನ ಮಾಡುತ್ತಿದ್ದಾನೆ ಯುಕ್ರೇನದೊಳಗಿನ ಕಾರಖಾನೆಗಳು ಲಯವಾದವು. ಲೆನಿನಗ್ರೇಡದೊಳಗಿನ ಕಾರಖಾನೆಗಳೂ ಲಯವಾದವು. ಮಾಸ್ಕೋ ಮುತ್ತಿಗೆಯ ಮೂಲಕ ಅಲ್ಲಿಯ ಕಾರಖಾನೆಗಳನ್ನು ಸಹ ಸ್ಥಳಾಂತರ ಮಾಡುವ ಪ್ರಸಂಗ ಬಂದಿದೆ. ರುಶ್ಯರು ಅವನ್ನು ಕಿತ್ತು ದೂರ ಒಯ್ಯುತ್ತಿದ್ದಾರೆ. ಆದರೆ ಈ ಕ್ರಮದಿಂದ ರುಶ್ಯರಿಗೆ ಯುದ್ಧಸಾಹಿತ್ಯ ಪೂರೈಸಿಕೊಳ್ಳುವದು ಕಠಿಣವಾಗುತ್ತದೆ. ಮೊಸ್ಕೋ ಪಡೆದು ಜರ್ಮನರಿಗೆ ಪ್ರಯೋಜನವೇನಿಲ್ಲ. ಆದರೆ ರುಶ್ಯರಿಗೆ ಮಾತ್ರ ನಷ್ಟ! ಅದಕ್ಕಾಗಿಯೇ ಹಿಟ್ಲರನು ಮೊಸ್ಕೋದ ಮೇಲೆ ಗುರಿಯಿಟ್ಟು ದಾಳಿಗಳ ಮೇಲೆ ದಾಳಿಗಳನ್ನು ಮಾಡುತ್ತಿದ್ದಾನೆ. ರುಶ್ಯರು ಹೊಸ ಹೊಸ ದಂಡುಗಳನ್ನು ರವಾನಿಸುತ್ತಿದ್ದಾರೆ. ಘನ ಘೋರ ಕಾಳಗ ಉಭಯತರಲ್ಲಿ ನಡೆಯುತ್ತಿದೆ. ಮಾಸ್ಕೋ ಪಟ್ಟಣ ಸುರಕ್ಷಿತವಾಗಿರುವದೆಂದು ಹೇಳುವದು ಕಠಿಣ! ಅಂತೆಯೇ ಮೊಸ್ಕೋ ಪಟ್ಟಣ ಜರ್ಮನರ ವಶವಾಗುವದೆಂದು ಹೇಳುವದೂ ಕಠಿಣ! ಈ ಭಾಗದಲ್ಲಿ ಈಗ ಚಳಿಗಾಲಕ್ಕೆ ಪ್ರಾರಂಭ. ಮಂಜು ಬೀಳಹತ್ತಿದೆಯಂತೆ. ಚಳಿಯ ಪ್ರಭಾವವು ಹೆಚ್ಚು; ಮೇಲೆ ಮಾರ್ಗಗಳಲ್ಲೆಲ್ಲ ಕೆಸರಿನರಾಶಿ! ಈ ಮೂಲಕ ಜರ್ಮನರ ಯಾಂತ್ರಿಕ ತೋಫುಗಳೂ ಕಾಲಾಳುಗಳೂ ಮೊಸ್ಕೋಕ್ಕೆ ತಲ್ಪುವದು ದುರ್ಘಟ. ಮೊಸ್ಕೋ ಬಿದ್ದರೂ ರಶ್ಯರು ಹೆದರುವದಿಲ್ಲ. ಅವರೀಗ ೫೦೦ ಮೈಲು ದೂರ ಉರಲ ಪರ್ವತ ಪ್ರದೇಶದಲ್ಲಿ ಎಲ್ಲವನ್ನೂ ಒಯ್ದು ಸುರಕ್ಷಿತರಾಗಿದ್ದಾರೆ. ಹಿಟ್ಲರನು ಮೊಸ್ಕೋವನ್ನು ವಶ ಮಾಡಿಕೊಂಡು ಅಲ್ಲಿ ನಮ್ಮ ಸಂಸ್ಥಾನಿಕರಂಥ ಮಾಂಡಲೀಕ ರಾಜರನ್ನು ಸ್ಥಾಪನೆ ಮಾಡಿ ರುಶ್ಯ ರಾಜ್ಯಭಾರವನ್ನು ನಡಿಸುವ ಯೋಜನೆಯನ್ನು ಸಿದ್ಧಪಡಿಸಿದ್ದಾನೆ. ಹಿಟ್ಲರನ ಮೊಸ್ಕೋ ಸರಕಾರಕ್ಕೆ ರುಶ್ಯ ದೇಶದಲ್ಲಿ ಮಾನ್ಯತೆ ಸಿಗಲಾರದೆಂದು ನಾಮಾಂಕಿತ ವಿದೇಶ 'ಕಾರಣ ಪಾರಂಗತ ಮಿ॥ ವ್ಹರ್ನನ-ಬಾರ್ಟಲೆಟರವರ ಅಭಿಪ್ರಾಯ. ಸ್ಟೆಲಿನ ಪ್ರಭುವೇ ರುಶ್ಯ ಜನಾಂಗದ ಅಂತಃಕರಣವನ್ನು ವ್ಯಾಪಿಸಿಕೊಂಡಿದ್ದಾನೆ. ಆತನ ಆಜ್ಞೆಯೇ ರುಶ್ಯರಿಗೆ ರಾಜಾಜ್ಞೆಯಾಗಿದೆ. ಇದಕ್ಕಾಗಿಯೇ ಮೊಸ್ಕೋ ಬಿದ್ದರೂ ಹಿಟ್ಲರನಿಗೆ ಪ್ರಯೋಜನವಿಲ್ಲವೆಂದು ನಾನು ಹೇಳಿದ್ದು!

ದಕ್ಷಿಣ ಭಾಗದಲ್ಲಿ ಜರ್ಮನರು ಮುನ್ನುಗ್ಗುತ್ತಿದ್ದಾರೆ. ಈವಾಗ ಯುಕ್ರೇನದ ಮುಖ್ಯ ಕೇಂದ್ರ ಖಾರಕೋವ ಪಟ್ಟಣ ಜರ್ಮನರ ವಶವಾಯಿತು. ಜರ್ಮನರು ಇನ್ನೂ ಮುನ್ನುಗ್ಗುತ್ತಿದ್ದಾರೆ ಕೊಕೆಸಸ ಪರ್ವತ ದಾಟಿ ಹೋಗಿ ಬಾಕುದೊಳಗಿನ ಎಣ್ಣೆ ಗಣಿಗಳ ತನಕ ಹಿಟ್ಲರನು ಸಾಗಿಹೋದನಕ ಆತನಿಗೆ ಪ್ರಯೋಜನವಿಲ್ಲ ಡೊನ ನದಿಯ ತನಕ ಹೋಗಲಿ, ವ್ಹೋಲ್ಗಾ ನದಿಯ ತನಕ ಸಾಗಿಹೋಗಲಿ; ಎಲ್ಲಿಯ ತನಕ ಸಾಗಿದರೂ ಹಿಟ್ಲರನ ಕೈಸೇರುವದು ಉಧ್ವಸ್ತಗೊಂಡ ಪ್ರದೇಶ! ಕಾರಖಾನೆ, ಕೈಗಾರಿಕೆ, ಹೊಲ ಮನೆಗಳನ್ನು ನಾಶಗೊಳಿಸಿದ ಪಾಪವನ್ನಷ್ಟೇ ಆತನು ಕಟ್ಟಿಕೊಂಡಂತಾಗುತ್ತದೆ. ಬಾಕುದೊಳಗಿನ ಎಣ್ಣೆಗಣಿಗಳು ಹಿಟ್ಲರನ ಕೈವಶವಾದರೆ ಮಾತ್ರ ರುಶ್ಯ ದೇಶದ ಹಾರಾಟ ಮುಗಿಯಿತು! ಲೆನಿನಗ್ರೇಡ, ಮೊಸ್ಕೋ, ಯುಕ್ರೇನ ಈ ೩ ಪ್ರದೇಶಗಳ ಯಾವತ್ತೂ ಐಶ್ವರ್ಯ ಈ ೩–೪ ತಿಂಗಳಲ್ಲಿ ಸರ್ವನಾಶವಾದಂತಾಗಿದೆ. ಈ ಪ್ರಸಕ್ತಿಯಲ್ಲಿ ಬ್ರಿಟನ–ಅಮೇರಿಕೆಯವರು ರುಶ್ಯರಿಗೆ ಸಹಾಯ ಮಾಡದಿದ್ದರೆ ರುಶ್ಯ ಜನಾಂಗಕ್ಕೆ ಉಳಿಗಾಲವಿಲ್ಲ. ಬ್ರಿಟಿಶರೂ ಅಮೇರಿಕೆಯವರೂ ರುಶ್ಯರಿಗೆ ಇರಾಣದ ಮಾರ್ಗವಾಗಿ ಸಹಾಯ ಮಾಡಲು ನಿರ್ಧಾರ ಮಾಡಿದ್ದಾರೆ. ಪಾರ್ಲಿಮೆಂಟಿನಲ್ಲಿ ಗುರುವಾರ ತೀವ್ರ ವಿವಾದ ನಡೆಯಿತು. ಹಿಟ್ಲರ ವಿರೋಧಿ ವಿಶಾಲ ಜನಾಂಗಗಳು ಈ ಸರಿಯಿಂದ ಪ್ರತಿಭಟಿಸುತ್ತಿದ್ದಾಗ್ಯೂ ಹಿಟ್ಲರನು ಒಂದೊಂದಾಗಿ ಜನಾಂಗಗಳನ್ನು ನಿರ್ನಾಮಗೊಳಿಸುವ ಪ್ರಕಾರ ಕೇಳಿ ಪಾರ್ಲಿಮೆಂಟನಲ್ಲಿ ವಿಷಾದವಾಗಿದೆ. ರುಶ್ಯದೊಳಗಿನ ಸಂಗ್ರಾಮ ಮಹಾಯುದ್ಧದ ಮರ್ಮಸ್ಥಾನವೆಂದು ತಿಳಕೊಂಡು ಬ್ರಿಟಿಶರು ನೆರವಾಗತಕ್ಕದ್ದಾಗಿ ಪಾರ್ಲಿಮೆಂಟಿನ ಸಭಾಸದರು ಎದ್ದೆದ್ದು ಹೇಳಿದರು. ಅಮೇರಿಕೆಯಿಂದ ಹೆಚ್ಚಿಚ್ಚಿನ ಯುದ್ಧ ಸಹಾಯ ಬೇಸಿಗೆಯಲ್ಲಿ ಆಗುವದಾಗಿ ದೊಡ್ಡ ಸುದ್ದಿ ಬಂದಿದೆ. ರುಶ್ಯ ದೇಶಕ್ಕೆ ಸಹಾಯ ಬೇಕಾದದ್ದು ಇದೀಗ! ಕಾರಖಾನೆಗಳೆಲ್ಲ ಸ್ಥಳಾಂತರವಾದ್ದರಿಂದ ಪುನಃ ಅವು ತಯಾರಾಗುವ ಅವಧಿಯಲ್ಲಿ ಯುದ್ಧಸಹಾಯ ಬೇಕು. ಚಳಿಗಾಲದಲ್ಲಿ ಬದುಕಿದರೆ ಮಾತ್ರ ಬೇಸಿಗೆ ಕಾಲದಲ್ಲಿ ಅಮೇರಿಕೆಯಿಂದ ಬರುವ ಸಹಾಯದ ಪ್ರಯೋಜನ! ಇಷ್ಟು ಸಾಮಾನ್ಯ ಸಂಗತಿ ಅಮೇರಿಕೆಯ ರೂಝವೆಲ್ಟರಿಗೆ ತಿಳಿಯದಿದ್ದದ್ದು ವಿಷಾದಕರ. ಬ್ರಿಟಿಶರು ಸೈನ್ಯ ಪಥಕಗಳನ್ನು ಕಳಿಸಿ ಕೊಕೆಸಸದಲ್ಲಿ ಜರ್ಮನರೊಡನೆ ಹೋರಾಡಲು ಸಿದ್ಧರಾಗಬೇಕಾಗಿ

(೬ನೇ ಪುಟದ ಮೇಲೆ ಮುಂದರಿಸಿದೆ)

ಸ್ಥಾನಿಕ ವೃತ್ತಾಂತ.

ಕುಮಟಾ— ಈಗ ೧೦ ೧೨ ದಿನಗಳಿಂದ ಮಳೆಯುಲ್ಲ ರಾತ್ರಿಕಾಲಕ್ಕೆ ಕುಸು ಚಳಿ ಬೀಳುತ್ತದೆ ಅದರೆ ಮಳೆ ತೀರ ತೆಂದು ಹೇಳಬರುವದಿಲ್ಲ ಒಮ್ಮೊಮ್ಮೆ ಬಹಳ ಸೆಕೆಯಾಗುತ್ತಿರುವದರಿಂದ ತಿರುಗಿ ಒಂದೆರಡು ಮಳೆ ಬೀಳುವವೆಂದು ಕೆಲವರ ತರ್ಕವುಂಟು ಊರಲ್ಲಿ ವಿಷಮಜ್ವರ, ಬಟ್ಟೀ ಹೊರಳಡೆ ಮುಂತಾದ ಬೇನೆಗಳು ಇನ್ನೂ ಹಾವಳಿ ಹಾಕುತ್ತಿವೆ. ಇದು ಈಗಿನ ಸಮ್ಮಿಶ್ರ ಮತ್ತು ವಿಚಿತ್ರ ಹವೆಯ ಪರಿಣಾಮವಂತೆ. ಶೆಂಗಿಸಕಾಯಿಯ ಧಾರಣೆ ವಿಪರೀತ ಏರಿದ್ದೆ ನೂರಕ್ಕೆ ೭॥-೮ ರೂಪಾಯಿಗಳಷ್ಟು ಧಾರಣೆಯುಂಟು

ಇಲ್ಲಿಯ ಪ್ರಮುಖ ನಾಗರಿಕರೂ ವಯೋವೃದ್ಧ ವಕೀಲರೂ ಆಗಿದ್ದ ರಾ। ಜನಾರ್ದನ ಶಿವ ಪಂಡಿತ ಇವರು ಕಳೆದ ತಾ ೧೫ನೇ ಬುಧವಾರ ರಾತ್ರಿ ೯॥-೧೦ ಘಂಟೆಯ ಸುಮಾರಿಗೆ ವೈಕುಂಠವಾಸಿಗಳಾದರೆಂದು ನಮೂದಿಸಲು ಬಹಳ ವ್ಯಸನವಾಗುತ್ತಿದೆ. ಮೃತಾತ್ಮರು ಯಾವಾಗಲೂ ಸಾತ್ವಿಕ ಪ್ರವೃತ್ತಿಯವರೂ ಔಧಾರ್ಯವಂತರೂ ಆಗಿರುತ್ತಿದ್ದು ಕೈಲಾದ ಮಟ್ಟಿಗೆ ಬಡಬಗ್ಗರಿಗೆ ಸಹಾಯ ಮಾಡುತ್ತಿದ್ದರು. ಹಲವುಕಾಲ ಇವರು ಸ್ಥಾನಿಕ ಮ್ಯುನಿಸಿಪಾಲಿಟಿಯ ಸದಸ್ಯ ಮತ್ತು ಚೆರಮನ್ನರಾಗಿಯೂ, ಜಿಲ್ಹಾ ಲೋಕಲ್ ಬೋರ್ಡಿನ ಸದಸ್ಯರಾಗಿಯೂ ಯಥಾಶಕ್ತಿ ಸಾರ್ವಜನಿಕ ಸೇವೆ ಮಾಡಿರುತ್ತಾರೆ ಕೊಂಗ್ರೆಸ ಸದಸ್ಯರಾಗಿರದಿದ್ದರೂ ಕೊಂಗ್ರೆಸ ರಾಜಕಾರಣದ ಬಗ್ಗೂ ಕೊಂಗ್ರೆಸ್ಸಿನ ಮುಂದಾಳುಗಳ ಬಗ್ಗೂ ಅವರಲ್ಲಿ ವಿಶೇಷ ಅಭಿಮಾನಗಳು ನೆಲೆಸಿದ್ದವೆಂದು ಅವರ ನಿಕಟವರ್ತಿ ಜನರಿಗೆ ಗೊತ್ತಿದೆ ಜನರೊಳಗಿನ ತಂಟೆ ತಕರಾರುಗಳನ್ನು ಬಗೆಹರಿಸುವ ಕಲೆ ಅವರಿಗೆ ಚನ್ನಾಗಿ ಸಾಧಿಸಿತ್ತು. ಕುಮಟೆಯ ಕೋರ್ಟಿನಲ್ಲಿ ಅವರು ಎಷ್ಟೋ ವಾದೆಗಳನ್ನೂ ಪ್ರಕರಣಗಳನ್ನೂ ಪಕ್ಷಗಾರರೊಳಗೆ ರಾಜಿಮಾಡಿ ನಿಕಾಲೆ ಮಾಡುತ್ತಿದ್ದರು. ಕುಮಟೆಯ ಕೋರ್ಟು ರಾಜಿಯ ಕೋರ್ಟೆಂದು ಹೆಸರು ಪಡೆಯಲು ಹೆಚ್ಚಾಗಿ ವೈ। ವಾ। ಪಂಡಿತರೇ ಕಾರಣರಾಗಿದ್ದರೆಂದು ಹೇಳಿದರೆ ತಪ್ಪಾಗುವಂತಿಲ್ಲ ಇಂಥ ಪುಣ್ಯಾತ್ಮರು ಒಮ್ಮೆಲೇ ಅದೃಶ್ಯರಾದದ್ದು ಕುಮಟೆಯ ದುರ್ಭಾಗ್ಯವೇ ಸರಿ ವೈಕುಂಠವಾಸಿಗಳ ಅನುಜರೂ ದತ್ತಪುತ್ರರೂ ಮನೆಯವರೂ ತಮಗಾದ ದುಃಖದಲ್ಲಿ ಕುಮಟೆಯ ಹಾಗೂ ಕುಮಟಾ ತಾಲೂಕಿನ ಜನರು ಸಹಭಾಗಿಗಳಾಗಿದ್ದಾರೆಂದು ತಿಳಿದು ತಮ್ಮ ಸಾಂತ್ವನ ಮಾಡಿಕೊಳ್ಳಬೇಕು, ಮತ್ತು ಮೃತಾತ್ಮರ ಧರ್ಮನಿಷ್ಠೆಯ ಉಜ್ವಲ ಪರಂಪರೆಯನ್ನು ಮುಂದರಿಸಿ ಅವರ ಕೀರ್ತಿಯನ್ನು ಕಾಪಾಡಿಕೊಳ್ಳಬೇಕು ಮೃತಾತ್ಮರಿಗೆ ವೈಕುಂಠನಾಥನು ಸದ್ಗತಿಯನ್ನೀಯಲಿ !

ಕಾರವಾರ ತಾಲೂಕ ಕದ್ರಾ ಸಮೀಪ ಮಡಿ ಎಂಬಲ್ಲಿ ಒಂದು ಹೊಲದೊಳಗೆ ಭತ್ತದ ತೆನೆಗಳು ಏನೋ ಒಂದು ರೋಗಹಿಡಿದು ಹಾಳಾಗುತ್ತವೆಂದೂ, ಬೆಳೆ ಕೈಗೆಸಿಗುವದಿಲ್ಲೆಂದೂ, ಕಾರಣ ಸದರಿ ಹೊಲದ ತೀರ್ವೆ ಸೂಟಿಸಿಗಬೇಕೆಂದೂ ಅಲ್ಲಿಯ ಒಕ್ಕಲಿಗರು ಸರಕಾರಕ್ಕೆ ಮನವಿ ಮಾಡಿಕೊಂಡಿದ್ದರಂತೆ. ಅದ್ದರಿಂದ ಆ ಹೊಲದೊಳಗಿನ ಭತ್ತದ ತೆನೆಗಳು ಯಾಕೆ ಹಾಳಾಗುತ್ತಿವೆ ಮತ್ತು ಎಷ್ಟು ಹಾಳಾಗುತ್ತಿವೆ ಎಂಬುದರ ತಪಾಸಣೆ ಮಾಡಿ ವರದಿಯನ್ನೊಪ್ಪಿಸಲು ಇಲ್ಲಿಯ ಬೇಸಾಯ ಪ್ರಯೋಗ ಹೊಲದ ಮೇಲ್ವಿಚಾರಕ (ಸುಪರಿಂಟೆಂಡೆಂಟ) ರಾದ ರಾ॥ ರಾಮಕೃಷ್ಣ ಮಹಾದೇವ ಹೆಗಡೆಕಟ್ಟೆ ಇವರಿಗೆ ಹುಕುಮಾಗಿತ್ತಂತೆ ಅದರಂತೆ ರಾ॥ ಹೆಗಡೆಯವರು ಕಳೆದ ತಾ ೧೪ಕ್ಕೆ ಮಡಿಗೆ ಹೋಗಿ ಹೊಲದೊಳಗಿನ ಭತ್ತದ ತೆನೆಗಳ ತಪಾಸಣೆ ನಡಿಸಿದ್ದರು ಆ ತಪಾಸಣೆ ನಡಿಯುತ್ತಿರುವಾಗಲೇ ರಕ್ತದ ಒತ್ತಡ ಹೆಚ್ಚಾಗಿ ರಾ॥ ಹೆಗಡೆಕಟ್ಟೆಯವರಿಗೆ ಒಮ್ಮಿಂದೊಮ್ಮೆ ಪಕ್ಷಘಾತದ ಬಾಧೆಯಾಯಿತು ಅಲ್ಲಿಂದ ಅವರನ್ನು ಎತ್ತಿಕೊಂಡು ಚಕ್ಕಡಿಯೊಳಗೆ ಹಾಕಿ ಕದ್ರಗೆ ತರಲಾಯಿತು ಕದ್ರೆಯಿಂದ ಮುಂದೆ ಅವರಿಗೆ ಕಾರವಾರಕ್ಕೊಯ್ದು ಅಂದೇ ಸಂಜೆ ಸಿವ್ಹಿಲ್ ಅಸ್ಪತ್ರಿಯಲ್ಲಿಡಲಾಯಿತು. ಕಾರವಾರಕ್ಕೆ ಮುಟ್ಟಿದಾಗ ರಾ॥ ಹೆಗಡೆಕಟ್ಟೆಯವರು ಶುದ್ಧಿಯ ಮೇಲಿದ್ದಿಲ್ಲ, ಮತ್ತು ಒಮ್ಮೆ ಹೋದ ಶುದ್ಧಿಯು ಅವರಿಗೆ ತಿರುಗಿ ಬರಲೂ ಇಲ್ಲ ಎಷ್ಟೇ ಉಪಚಾರ ಮಾಡಿದಾಗ್ಯೂ ಅವರ ಅಸ್ವಾಸ್ಥ್ಯ ಬೆಳೆಯುತ್ತನಡೆಯಿತು ತಾ ೧೬ನೇಗೆ ಗುರುವಾರ ಮೂರು ಸಂಜೆಗೆ ಅವರಿಗೆ ಬಂದ ಜ್ವರ ಏರುತ್ತ ಏರುತ್ತ ೧೧ ಘಂಟೆ ರಾತ್ರಿಯ ಸುಮಾರಿಗೆ ೧೦೬ ಡಿಗ್ರಿಗೂ ಏರಿತು ಆಗ ಡಾ। ಆಚರೇಕರರವರು ಭರ್ಫದಿಂದ ಜ್ವರ ಇಳಿಸಬೇಕೆಂದು ಹವಣಿಸಿ ಬರ್ಫ ಬೇಡಿದರಂತೆ ಆದರೆ ಆಸ್ಪತ್ರಿಯಲ್ಲಿ ಬರ್ಫ ಸಿಗಲಿಲ್ಲ ! ಊರಲ್ಲೂ ಸಿಗಲಿಲ್ಲ ! ಗ್ರೀಂಡ ಹೊಟೆಲಿನಲ್ಲಿ ಸ್ವಲ್ಪ ಬರ್ಫ ಸಿಕ್ಕಿತಂತೆ ಅದು ಬಂದು ಮುಟ್ಟುವಷ್ಟರಲ್ಲಿ ರಾತ್ರಿ ೩ ಘಂಟೆಯ ಸುಮಾರಿಗೆ ರಾ। ಹೆಗಡೆಕಟ್ಟೆಯವರ ಜೀವಜ್ಯೋತಿ ನೊಂದಿ ಹೋಯಿತು. ಮೃತಾತ್ಮರು ಬಿ ಎ ಜಿ ಪರೀಕ್ಷೆ ಕೊಟ್ಟು ಬೇಸಾಯ ಇಲಾಖೆಯಲ್ಲಿ ಸೇವೆ ಪ್ರಾರಂಭದಿಂದ ಮೊನ್ನೆಯ ತನಕ ಇಲ್ಲಿಯ ಬೇಸಾಯ ಪ್ರಯೋಗ ಹೊಲದಲ್ಲಿ ನೌಕರಿ ಮಾಡಿರುತ್ತಾರೆ ಸದರಿ ಹೊಲದಲ್ಲಿ ನಡೆದ ವಿವಿಧ ಚಟುವಟಿಕೆಗಳ ಹಾಗೂ ಯಶಸ್ವಿ ಪ್ರಯೋಗಗಳ ಶ್ರೇಯಸ್ಸಿನ ಬಹುಭಾಗ ಅವರಿಗೆ ಸಲ್ಲಬೇಕು ಮೃತಾತ್ಮರ ತೀರ ಅಕಾಲಿಕ ಮತ್ತು ಅಕಲ್ಪಿತ ನಿಧನದಿಂದ ಅವರ ವಯೋವೃದ್ಧ ತಂದೆ-ತಾಯಿಗಳ ಮೇಲೂ ಗೆಳೆಯರ ಮೇಲೂ ಕುಟುಂಬದವರ ಮೇಲೂ ದೊಡ್ಡ ವಜ್ರಾಘಾತವಾದಂತಾಗಿದೆ ಆದರೆ ಈಶ್ವರೀ ಸಂಕಲ್ಪದಂತೆ ಜಗತ್ತು ನಡಿಯುತ್ತಿದೆ ಮತ್ತು ನಡಿಯಬೇಕು ಎಂಬೀ ಮಾತನ್ನು ಲಕ್ಷದಲ್ಲಿಟ್ಟು ಅವರು ತಮ್ಮ ಸಾಂತ್ವನ ಮಾಡಿಕೊಳ್ಳಬೇಕೆಂದು ಸೂಚನೆಯಿದೆ ಮೃತಾತ್ಮರಿಗೆ ಪರಮಾತ್ಮನು ಚಿರಶಾಂತಿಯನ್ನಿತ್ತು ಪೊರೆಯಲಿ !

“ನಾಗರಿಕ”ರೊಬ್ಬರು ಬರೆಯುತ್ತಾರೆ- ಈ ವರ್ಷ ಕುಮಟಾ ಮ್ಯುನಿಸಿಪಾಲಿಟಿಯ ಇಲೆಕ್ಶನು ನಡಿಯಲಿದೆ. ಇದೇ ಬರುವ ತಾ ೧ನೇ ಶನಿವಾರ ಮತದಾರರ ಕಚ್ಚಾಯಾದಿ ಹೊರಬೀಳಲಿದೆ ಮ್ಯು'ಗೆ ಎಂಟಾಣೆಯಾ ಹೆಚ್ಚು ಮನೆ ತೆರಿಗೆ ಇಲ್ಲವೆ ಪೇರಿ ತೆರಿಗೆ ಕೊಡುವವನಿಗೆ ಮತದಾನದ ಹಕ್ಕುಂಟು ಆದರೆ ಚಾಲೂ ವರ್ಷದ ತೆರಿಗೆ ವಸೂಲ ಕೊಟ್ಟವರಿಗಷ್ಟೇ ಮತಾಧಿಕಾರ ಸಿಗುತ್ತದಂತೆ ಕಾರಣ ಚಾಲೂ ಸಾಲಿನ ತೆರಿಗೆ ಇನ್ನೂ ತೆರದಿದ್ದವರು ಕೂಡಲೇ ಅದನ್ನು ತೆತ್ತು ತಮ್ಮ ಮತಾಧಿಕಾರ ಸುರಕ್ಷಿತ ತಮಗೆ ಸಿಗುವಂತೆ ಮಾಡಿಕೊಳ್ಳಬೇಕು ಇಲ್ಲದಿದ್ದರೆ ಮತಾಧಿಕಾರ ತಪ್ಪಿ ಹೋಗುವ ಸಂಭವವುಂಟು, ಇತ್ಯಾದಿ

ಹುಬ್ಬಳ್ಳಿಯ ವೈದ್ಯಗುರು ಹಲಸೀಕರರವರ “ ಆಯುರ್ವೇದ ವಿದ್ಯಾಲಯ ” ದಲ್ಲಿ ಕಲಿತ ರಾ॥ ಪರಮೇಶ್ವರ ಶಿವರಾಮ ಉಪಾಧ್ಯಾಯ ಮದ್ಗುಣಿ, ರಾ॥ ವೆಂಕಟರಮಣ ವೆಂಕಟರಮಣ ಭಟ್ಟ ಹೊಲನಗದ್ದೆ ಮತ್ತು ರಾ॥ ಗಜಾನನ ಗಣಪತಿ ಭಟ್ಟ ಹೊಲನಗದ್ದೆ ಈ ಮೂವರು ಲಾಹೋರದ ನಿಖಿಲ ಭಾರತೀಯ ಆಯುರ್ವೇದ ಮಹಾಮಂಡಳ ವಿದ್ಯಾಪೀಠದ “ ಆಯುರ್ವೇದ ಭಿಷಕ್ ” ಎಂಬ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ

ದಕ್ಷಿಣಭಾರತ ಹಿಂದೀ ಪ್ರಚಾರ ಸಭೆಯ ಪರವಾಗಿ ನವಂಬರದಲ್ಲಿ ನಡೆಯುವ ಪ್ರಥಮಾ, ಮಧ್ಯಮಾ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳು ಇಲ್ಲಿಯ ಕೇಂದ್ರದಲ್ಲಿ ಇದೇ ಬರುವ ಶನಿವಾರ ತಾ ೧ನೇಗೆ ಮುಂಜಾನೆ ೧೦ ಘಂಟೆಗೆ ಪ್ರಾರಂಭವಾಗುವವು ಪರೀಕ್ಷೆಗಳ ಸ್ಥಳದ ಏರ್ಪಾಟು ಗಿಬ್ಬಹಾಯಸ್ಕೂಲಿನಲ್ಲಿ ಮಾಡಲಾಗಿದೆ ಪರೀಕ್ಷಾರ್ಥಿಗಳು ತಕ್ಕ ಹೊತ್ತಿಗೆ ಬಂದು ತಲ್ಪಬೇಕಾಗಿ ಸ್ಥಾನಿಕ ಹಿಂದೀ ಪ್ರಚಾರಕರು ತಿಳಿಸುತ್ತಾರೆ

ಹೊನ್ನಾವರ— (ತಾ ೨೫-೧೦-೧೯೪೧) ಹೊನ್ನಾವರದಿಂದ ಪಂಚಗ್ರಾಮಗಳಿಗೂ ಗೇರಸಪ್ಪೆಗೂ ಪ್ರವಾಸ ಮಾಡುವವರು ದೋಣಿಗಳಲ್ಲಿ ಪ್ರವಾಸ ಮಾಡಬೇಕಾಗುತ್ತದೆಂಬ ಮಾತು ಲೋಕ-ಪ್ರಸಿದ್ಧವಿರುತ್ತದಷ್ಟೇ. ಹಿರಿಯರ ಕಾಲದಿಂದ ಶರಾವತಿ ಹೊಳೆಯಲ್ಲಿ ನೂರಾರು ದೋಣಿಗಳು ತಿರುಗಾಡಿ ಪ್ರವಾಸಿಗಳಿಗೆ ಪರ ಒಯ್ಯುವ ಕೆಲಸ ಮಾಡುತ್ತಿದ್ದಾರೆ ಸುಮಾರು ೨೦೦ರಷ್ಟು ಜನರು ಈ ದೋಣಿಗಳನ್ನು ನಡಿಸಿ ಜೀವಿತಾರ್ಥವನ್ನೂ ಸಾಗಿಸುತ್ತಿದ್ದಾರೆ ಹಿಂದೆ ಈ ದೋಣಿಗಳಿಗೆ ಕಷ್ಟಮ ಇಲಾಖೆಯವರ ವಿಶೇಷ ನಿರ್ಬಂಧಗಳಿದ್ದಿಲ್ಲ. ಅಕ್ಟೋಬರ ತಿಂಗಳ ಪ್ರಾರಂಭಕ್ಕೆ ದೋಣಿಕಾರರು ಒಂದು ಅರ್ಜಿ ಮಾಡಿ ಪರವಾನೆಯನ್ನು ತಕ್ಕೊಂಡರಾಗಿತ್ತು. ಆ ಪರವಾನೆ ಸುಲಭವಾಗಿ ಸಿಗುತ್ತಿತ್ತು ಆದರೆ ಈ ವರ್ಷ ಕಷ್ಟಮ ಇಲಾಖೆಯ ಅಧಿಕಾರಿಗಳು ಹೊಸ ನಿಯಮಗಳನ್ನು ಮಾಡಿ ದೋಣಿಕಾರರ ವ್ಯವಸಾಯದ ಮೇಲೆ ದೊಡ್ಡ ಕಷ್ಟ ತಂದೊಡ್ಡಿದ್ದಾರಲ್ಲದೆ ಜನರಿಗೂ ಅತ್ಯಂತ ಕಷ್ಟಪ್ರದ ಸ್ಥಿತಿಯನ್ನು ಉಂಟುಮಾಡಿದ್ದಾರೆ ದೋಣಿಗಳಿಗೆ ಪರವಾನೆ ಕೊಡ

ಜಾಹೀರ ನೋಟೀಸು.

ಗಂಗಾಧರ ನಾರಾಯಣ ಶಾನಭಾಗ ಇವರಿಗೆ ಮಹಾದೇವ ಶಿವಯ್ಯ ಶಾನಭಾಗ ವಾಲಗಳ್ಳಿ ಇವನು ಈ ನೋಟೀಸಿನ ಮೂಲಕ ತಿಳಿಸುವದೇನಂದರೆ ಇದೇ ತಾ ೯—೧೦—೧೯೪೧ನೇ ದಿನ ನೀನು ನಿನ್ನ ತಮ್ಮ ವಿರೂಪಾಕ್ಷನೊಡನೆ ಇನ್ನು ೧೫ ದಿನಗಳಲ್ಲಿ ನಮ್ಮ ಮನೆಯಿಂದ ಹೊರಟು ಹೋಗಬೇಕೆಂತ ನೋಟೀಸ ಕೊಟ್ಟ ಪ್ರಕಾರ ಮಾರನೇ ದಿನ ಬೆಳಗೆ ನೀನೊಬ್ಬನೇ ಹೊರಟು ಹೋದೆ ಪರಂತು ತಮ್ಮನನ್ನು ಕರಕೊಂಡು ಹೋಗಲೇ ಇಲ್ಲ. ಇನ್ನು ಸದ್ರಿ ವಿರೂಪಾಕ್ಷನು ಕೊಡುವ ತ್ರಾಸ ನಮ್ಮಿಂದ ಸಹಿಸಲಸಾಧ್ಯವಾದ್ದರಿಂದ ಈ ನೋಟೀಸ ಕೊಟ್ಟ ೮ ದಿನಗಳೊಳಗೆ ಬಂದು ಕರಕೊಂಡು ಹೋಗಬೇಕು. ಇಲ್ಲವಾದರೆ ಮುದ್ದತು ಮೀರಿದ ಕೂಡಲೆ ಅಂದರೆ ತಾ. ೧-೧೧-೧೯೪೧ನೇ ದಿನ ಬೆಳಗ್ಗೆ ಸದ್ರಿ ವಿರೂಪಾಕ್ಷನನ್ನು ನಮ್ಮ ಮನೆಯಿಂದ ಹೊರಗೆ ಹಾಕುತ್ತೇನೆ. ಮುಂದೆ ಆತನು ಎಲ್ಲಾದರೂ ಹೋಗಿ ಏನಾದರೂ ಕಷ್ಟ ಸಂಭವಿಸಿದರೆ ಆ ಲುಕ್ಸಾನಿಗೆ ನಾನು ಜವಾಬದಾರನಾಗಲಿಕ್ಕಿಲ್ಲ ತಿಳಿಯುವದು ತಾ ೨೪-೧೦-೪೧.

ಮಹಾದೇವ ಶಿವಯ್ಯ ಶಾನಭಾಗ.

Notice.

Be it known to all persons it may concern that the Policy No. 86489 issued to me by The Hindusthan Co-operative Insurance Society Ltd Calcutta, has been lost to which effect I swore an affidavit on 13th Oct. 1941 before Mr H E Lambate, I Class Magistrate at Kumta The said policy is hereby made null and void and anybody dealing with the same will do so at his own risk

Dated 23-10-1941

Vasudev Subraya Navada,
Gokarn
Post GOKARN N Kanara.

ಬೇಕಾದರೆ ಅಧಿಕಾರಿಗಳು ಕೆಲವು ಕರ್ಮಗಳನ್ನು ಹಾಕುತ್ತಾರೆ. ಅವನ್ನು ಪಾಲಿಸಿದರೆ ಮಾತ್ರ ಪರವಾನೆ ಸಿಗುತ್ತದೆ. ಸಣ್ಣ ದೋಣಿಗಳಿಗೆ ೧ ಕಾಂಡೇಲ ಮತ್ತು ೧ ಖಲಾಸಿ ಹೀಗೆ ಸಿಬ್ಬಂದಿ ಇರಬೇಕು; ದೋಣಿಯಲ್ಲಿ ೨ ಹುಟ್ಟು, ೨ ಹಲ್ಲು, ೧ ಬಾಲದಿ, ೧ ಲಾಟೀನು, ೨ ಪ್ರಾಣ ತ್ರಾಣ (ಲ್ಯಾಫ್‌ಬೋಯ್ಸ್) ಹೀಗೆ ಸರಂಜಾಮು ಇರಬೇಕಂತೆ! ಇಷ್ಟೆಲ್ಲ ಸರಂಜಾಮು ಇಟ್ಟುಕೊಂಡೂ ಕೇವಲ ಒಬ್ಬ ಇಲ್ಲವೆ ಇಬ್ಬರು ಪ್ರಯಾಣಿಕರನ್ನಷ್ಟೇ ಒಯ್ಯತಕ್ಕದ್ದೆಂದು ಮೇಲೊಂದು ನಿರ್ಬಂಧ! ದೊಡ್ಡ ದೋಣಿಗಳಿಗೆ ಒಬ್ಬ ಕಾಂಡೇಲ ಮತ್ತು ೬ ಖಲಾಸಿಗಳನ್ನಿಡಬೇಕು! ಇಷ್ಟು ಸಿಬಂದಿಯೂ ಸರಂಜಾಮೂ ದೋಣಿಯಲ್ಲಿಲ್ಲದಿದ್ದರೆ ಅಧಿಕಾರಿಗಳು ಆ ದೋಣಿಕಾರರಿಗೆ ಹಿಡಿದು ಖಟ್ಲೆ ಮಾಡಿಕೊಡುವರು. ಒಂದೊಂದು ದೋಣಿಗೆ ಸಿಗುವ ಉತ್ಪನ್ನವೇನು? ಅವರು ಇಷ್ಟೆಲ್ಲ ಸಿಬಂದಿ-ಸರಂಜಾಮುಗಳನ್ನು ಇಟ್ಟು ಉದ್ಯೋಗ ಮಾಡುವರೇನು? ಎಂಬ ವ್ಯಾವಹಾರಿಕ ವಿಚಾರ ಇಲ್ಲವೆ ಕಲ್ಪನೆ ನೂರಾರು ರೂಪಾಯಿ ಮಾಸಿಕ ಪಗಾರ ಪಡೆಯುತ್ತ ಸುಖಾಸನಗಳ ಒರಗಿ ಬೆವರಿಲ್ಲದ ಕೆಲಸ ಮಾಡುವ ಅಧಿಕಾರಿಗಳ ತಲೆಯಲ್ಲಿ ಎಲ್ಲಿಂದ ಬಂದೀತು? ಒಂದು ವೇಳೆ ಈ ಎಲ್ಲ ಸಿಬಂದಿಯ ಖರ್ಚನ್ನು ಕಳೆದು ಕಳ್ಳ ಮುನಾಫೆ ಉಳಿಯುವ ಹಾಗೆ ಪ್ರಯಾಣದ ಹಾಸಲು ಇಡಬೇಕೆಂದು ಬಡ ದೋಣಿಕಾರರಿಗೆ ಯಾರಾದರೂ ಸೂಚಿಸಬಹುದು! ಆದರೆ ಅಷ್ಟು ಹಾಸಲು ಕೊಟ್ಟು ತಿರುಗಾಡುವ ಶಕ್ತಿ ಹಂಚಗ್ರಾಮದವರಿಗಿರಬೇಕಲ್ಲವೇ? ಮೇಲೆ ಹೇಳಿದ ನಿರ್ಬಂಧಗಳನ್ನು ಪಾಲಿಸಲಾಗದೆ ತಿರುಗಾಡುತ್ತಿದ್ದ ಹಲವಾರು ದೋಣಿಕಾರರ ಮೇಲೆ ಕಸ್ಟಮದವರು ಖಟ್ಲೆಗಳನ್ನು ಮಾಡಿಕೊಟ್ಟಿರುತ್ತಾರೆ. ಆದರಿಂದ ದೋಣಿಕಾರರೂ ಈಗ ತಮ್ಮಲ್ಲಿ ಒಕ್ಕಟ್ಟು ಮಾಡಿಕೊಂಡು ಕಳೆದ ತಾ. ೨೨ರಿಂದ ಸಂಪು ಹೂಡಿದ್ದಾರೆ. ಅಧಿಕಾರಿಗಳು ಹೊಸ ನಿರ್ಬಂಧಗಳನ್ನು ರದ್ದುಗೊಳಿಸಿ ಹಿಂದಿನಂತೆಯೇ ನಡೆಯಗೊಡುವ ವರೆಗೆ ದೋಣಿಗಳನ್ನು ನೀರಲ್ಲಿಳಿಸತಕ್ಕದ್ದಲ್ಲೆಂದು ಪಣ ತೊಟ್ಟಿದ್ದಾರೆ. ಆದರಿಂದ ಜನರಿಗಾಗುವ ಕಷ್ಟ ಹೇಳ ತೀರದು. ಅವರು ವನವಾಸದ ಸುಖ ಅನುಭವಿಸುವ ಪ್ರಸಂಗ ಬಂದೊದಗಿದೆ. ಮೇಲಧಿಕಾರಿಗಳು ಇತ್ತ ತ್ವರ್ಯವೇ ಲಕ್ಷ್ಯವಿತ್ತು ದೋಣಿಕಾರರ ಕಷ್ಟಗಳನ್ನೂ ಪ್ರಜೆಗಳಿಗಾಗುವ ತೊಂದರೆಯನ್ನೂ ದೂರಗೊಳಿಸಬೇಕಾಗಿ ಸೂಚನೆಯಿದೆ.

ತೂಕಳತೆ ಅಧಿಕಾರಿಗಳು ಈಗ ಇಲ್ಲಿಯೇ ಮುಕ್ಕಾಮು ಮಾಡಿಕೊಂಡಿದ್ದು ಎಲ್ಲ ಅಂಗಡಿ-ಮಳಿಗೆಗಳಲ್ಲಿ ತಪಾಸಣೆ ಮಾಡುತ್ತಿದ್ದಾರೆ. ಹೋದ ವರ್ಷವೇ ಮುದ್ರೆ ಹಾಕಿದ ಕಾಂಟೆ-ಕಲ್ಲುಗಳನ್ನೂ ಅವರು ತಪಾಸಿಸುತ್ತಾರೆ. ದೊಡ್ಡ ಕಾಂಟೆಗಳಲ್ಲಿ ಎರಡಾಣೆಯಷ್ಟು ಫೇರು ಬಂದರೆ ಅವನ್ನು ತಿರುಗಿ ದುರುಸ್ತ ಮಾಡಬೇಕೆಂದು ಹುಕುಮು ವಿಧಿಸುತ್ತಾರೆ! ಏನು ಕಾಯದೆಯೋ! ಎಂಥ ನಿಯಮಗಳೋ!" ಹತ್ತೀಕಾಳು, ಉಳ್ಳೀಗಡ್ಡೆ, ತಂಬಾಕು, ಬೆಲ್ಲ, ಗೋದಿ ಹಿಟ್ಟು, ರದ್ದಿ ಮುಂತಾದ ಜಿನಸುಗಳನ್ನು ತೂಗುವ ಕಾಂಟೆಗಳಲ್ಲಿ ಇಷ್ಟು ಸೂಕ್ಷ್ಮತೆಯನ್ನು ಕಾಪಾಡಬಯಸುವ, ಕಾಣಲಾಗ್ರಹ ಮಾಡುವ ಈ ಕಾಯದೆ ನಿಯಮಗಳು ಲೋಕಕಲ್ಯಾಣಕ್ಕಾಗಿ ನಿರ್ಮಾಣವಾಗಿವೆಯೆಂದು ಹೇಳುವದು ತೀರ ಸರಿ! ಅಂಥ ಕಾಯಿದೆಗಳನ್ನು ಅಮಲಿನಲ್ಲಿ ತರುವಾಗ ಅಧಿಕಾರಿಗಳು ವ್ಯಾವಹಾರಿಕ ಭೂಮಿಕೆಯನ್ನಾದರೂ ತಿಳಿಯಬೇಕು. ಇಲ್ಲದಿದ್ದರೆ ಜನಸಾಮಾನ್ಯರು ಇದೊಂದು ಪೀಡೆ ಬಂತೆಂದು ಹೇಳದಿರಲಾರರು. ಒಬ್ಬ ವರ್ತಕನು ಇಷ್ಟು ದಿನ ಮುದ್ರೆ ಹಾಕಿದ ಬೇರೆಯವರ ಕಲ್ಲುಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದನು ಮತ್ತು ಮೊನ್ನೆಯೇ ಮುಂಬಯಿಯಿಂದಲೋ ಹುಬ್ಬಳ್ಳಿಯಿಂದಲೋ ಹೊಸ ಕಲ್ಲುಗಳನ್ನು ತರಿಸಿದ್ದನು. ಅವುಗಳಿಗೆ ಮುದ್ರೆಯಿದ್ದಿಲ್ಲ. ಮುದ್ರೆ ಹಾಕಿಕೊಳ್ಳಬೇಕೆಂದು ವರ್ತಕನು ಆಲೋಚಿಸುವಷ್ಟರಲ್ಲಿ ಅಧಿಕಾರಿಗಳು ಅಲ್ಲಿ ಬಂದರಂತೆ ಮತ್ತು ಆ ಕಲ್ಲುಗಳನ್ನು ತಕ್ಕೊಂಡು ಹೋದರಂತೆ! ಮುದ್ರೆ ಹಾಕಿಕೊಡಿರಿ ಎಂದು ಬಿನ್ನವಿಸಿದರೆ, ಕಲ್ಲುಗಳು ಎಲ್ಲಿಂದ ಬಂದವೆಂದು ಚೌಕಸಿ ಮಾಡಿದವಿನಾ ಮುದ್ರೆಕೊಡಲಾಗುವದಿಲ್ಲೆಂದು ಒರಟು ಉತ್ತರ ಕೊಟ್ಟರಂತೆ! ತೂಕಳತೆ ಕಾಯಿದೆಯು ತತ್ವವೇನೋ ಒಳ್ಳೆದಿರಬಹುದು. ಆದರೆ ಅದನ್ನು ಅಮಲಿನಲ್ಲಿ ತರುವಾಗ ವ್ಯವಹಾರಶೂನ್ಯರಾಗಿ ಪ್ರಯೋಜನವಿಲ್ಲ. ಕಾರಣ ಮೇಲಧಿಕಾರಿಗಳು ಆಳವಾಗಿ ಆಲೋಚಿಸಿ ವ್ಯವಹಾರಕ್ಕೊಪ್ಪುವಂತೆ ವರ್ತಿಸಲು ಮತ್ತು ಕಾಯದೆಯ ಅಮಲು ನಡೆಸಲು ಕೆಳ-ಅಧಿಕಾರಿಗಳಿಗೆ ವಿಧಿಸಬೇಕಾಗಿ ವರ್ತಕಸಮಾಜದ ಅನ್ನಸವಿದೆ.

ಶಿರಸಿ— ತಾ. ೨೭-೧೦-೪೧ರಿಂದ ತಾ ೨-೧೧-೪೧ರ ತನಕ ಪ್ರಾಂತ ಸಾಹೇಬರು ಇಲ್ಲಿ ಮುಕ್ಕಾಮು ಮಾಡುವರೆಂದು ತಿಳಿದು ಬರುತ್ತದೆ.

ಇದೇ ಬರುವ ನವಂಬರ ತಾ. ೧, ೨, ೩ನೇಗೆ ಇಲ್ಲಿ ಜಿಲ್ಲಾ ಸಹಕಾರಿ ಪರಿಷತ್ತು ಮತ್ತು ಪ್ರದರ್ಶನಗಳು ಜರುಗಲಿವೆ. ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಹಿಂದೆ ಮುಂಬಯಿಯ ಕೊಂಗ್ರೆಸ ಮಂತ್ರಿಮಂಡಳದಲ್ಲಿ ಅರ್ಥಸಚಿವರಾಗಿದ್ದ ಶ್ರೀ ಅಣ್ಣಾಸಾಹೇಬ ಲಠ್ಠೆ ಇವರು ಸ್ವೀಕರಿಸಲೊಪ್ಪಿದ್ದಾರೆ. ಪ್ರದರ್ಶನದಲ್ಲಿ ಔದ್ಯೋಗಿಕ, ಕೈಗಾರಿಕೆಯ, ಬೇಸಾಯದ ವಗೈರೆ ಸಾಮಾನುಗಳನ್ನು ಇಡುವ ವ್ಯವಸ್ಥೆ ಮಾಡಲ್ಪಟ್ಟಿದೆ. ಪ್ರದರ್ಶನದ ಸಾಮಾನು ಇಡಬಯಸುವವರು ಕೂಡಲೇ ಡಿಸ್ಟ್ರಿಕ್ಟ ಸೆಂಟ್ರಲ ಬೇಂಕಿನ ಕಚೇರಿಗೆ ಕಳಿಸಿ ಕೊಡಬೇಕು. ಸದರಿ ಮೂರೂ ದಿನಗಳಲ್ಲಿ ಆಟ, ಶರ್ಯತ್ತು, ಕುಸ್ತಿ, ಗಾಯನ-ಸ್ಪರ್ಧೆಗಳನ್ನು ಮಾಡಿಸಬೇಕೆಂದು ಪರಿಷತ್ತಿನ ಚಾಲಕರು ಯೋಚಿಸಿದ್ದಾರೆ. ತಾ ೩ನೇ ಸಂಜೆ ಪ್ರದರ್ಶನದಲ್ಲಿ ಉತ್ಕೃಷ್ಟ ಸಾಮಾನುಗಳನ್ನಿಟ್ಟವರಿಗೂ, ಸ್ಪರ್ಧೆಗಳಲ್ಲಿಯ ಯಶಸ್ವಿಯಾದವರಿಗೂ ಜಿಲ್ಲಾಧ್ಯಕ್ಷ ಶ್ರೀ ಶಿವರಾವ ಶಾಸ್ತ್ರಿ ಇವರ ಕೈಯಿಂದ ಪಾರಿತೋಷಕಗಳನ್ನು ಕೊಡಿಸುವ ಸಮಾರಂಭ ನಡೆಯಲಿದೆ. ಮುಂದೆ ತಾ ೪ರಿಂದ ೭ರ ವರೆಗೆ ಜಿಲ್ಲೆಯೊಳಗಿನ ಎಲ್ಲ ತಾಲೂಕ ಕೇಂದ್ರಗಳಲ್ಲೂ ಮುಖ್ಯ ಮುಖ್ಯ ಹಳ್ಳಿ-ಪಟ್ಟಣಗಳಲ್ಲೂ ಸಹಕಾರಿ ಹಬ್ಬಗಳಾಚರಿಸಲ್ಪಟ್ಟು ಪ್ರಾಂತಾಧಿಪತಿಗಳು ಸಹಕಾರಿ ಕಾರ್ಯಕರ್ತರಿಗೆ ಕೊಟ್ಟಿರುವ ಸಂದೇಶ ಜನರಿಗೆ ಓದಿ ಹೇಳಲ್ಪಡುವದಾಗಿಯೂ ಎಲ್ಲ ಜಿಲ್ಲಾ ಬಾಂಧವರು ಈ ಸಪ್ತಾಹ ಕಾರ್ಯದಲ್ಲಿ ನೆರವಾಗಬೇಕಾಗಿಯೂ ಸ್ವಾಗತ ಸಮಿತಿಯ ಅಧ್ಯಕ್ಷ ರಾ| ಸುಂದರರಾವ ಪಿ ಪಂಡಿತರು ಬಿನ್ನವಿಸುತ್ತಾರೆ.

ಇಲ್ಲಿಯ ಕಸಬಾ ಶಾಲೆಯಲ್ಲಿ ಶಿಕ್ಷಕರಾಗಿರುವ ಸ್ವಾದಿ. ಬಂಧುಗಳ ವಿರುದ್ಧ "ವೃತ್ತ"ದಲ್ಲಿ ಈ ವರೆಗೆ ಪ್ರಕಟವಾಗಿರುವ ಆಪಾದನೆಗಳು ನಿರಾಧಾರವಿರುತ್ತವೆಂತಲೂ, ಸದರಿ ಬಂಧುಗಳ ಚಟುವಟಿಕೆಗಳು ಶಾಲೆಯ ಅಭಿವೃದ್ಧಿಗೆ ವಿಘಾತಕವಾಗಿರುವದಿಲ್ಲೆಂತಲೂ ಜಿಲ್ಲಾ ಮಧ್ಯವರ್ತಿ ಬೇಂಕಿನ ಚೇರಮನ್ನರಾಗಿರುವ ಡಾ| ಎಸ್ ಪಿ ಪಂಡಿತ, ಶಿರ್ಸಿ ನಗರ ಸಭೆಯ ಶಾಲಾಧ್ಯಕ್ಷ ರಾ|| ಪಿ ಎಫ್. ಎಲ್ಸ ಫರ್ನಾಂಡಿಸ, ಜಿ|| ಲೋ|| ಬೋರ್ಡಿನ ಸದಸ್ಯರಾಗಿರುವ ರಾ|| ಎಮ್. ಸಿ. ಹೇಮಶೆಟ್ಟಿ ಮತ್ತು ರಾ|| ಡಿ ವಾಜ್. ಗೌಡಾರವರು ತಿಳಿಸುತ್ತಾರೆ. "ವೃತ್ತ"ದೊಳಗಿನ ಟೀಕೆಯಿಂದ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪಾಲಕರು ಇವರೊಳಗೆ ಸಂಶಯವೃತ್ತಿಯುಂಟಾಗಿ ಸ್ವಾದಿ-ಬಂಧುಗಳು ನಿರುತ್ಸಾಹರಾಗಬಾರದೆಂಬ ಉದ್ದೇಶದಿಂದ ನಾವು ತಮ್ಮ ಅಭಿಪ್ರಾಯವನ್ನು "ವೃತ್ತ" ದ್ವಾರಾ ಪ್ರಕಟಿಸಲಿಚ್ಛಿಸುತ್ತೇವೆಂದು ಅವರ ಅಂಬೋಣವಿದೆ.

ಬಹುತೇಕ ಬೆಳೆಗಳು ತಯಾರಾದಾಗ ಧಾರಣೆಗಳು ಇಳಿಯುತ್ತವೆ. ಆದರೆ ಆಗಲೇ ತಮ್ಮ ಸಾಲ ವಸೂಲಿಯ ಬಗ್ಗೆ ಧನಿಕ ಜನರ ತಗಾದೆ ಆಗುತ್ತಿದೆ. ಆದರಿಂದ ರೈತರು ಸಿಕ್ಕ ಸಿಕ್ಕ ಧಾರಣೆಯಿಂದ ತಮ್ಮ ಬೆಳೆ ಮಾರಾಟ ಮಾಡಿ ಕಷ್ಟನಷ್ಟ ಅನುಭವಿಸಬೇಕಾಗುತ್ತದೆ. ಅದ್ದರಿಂದ ರೈತರ ಈ ಕಷ್ಟ-ನಷ್ಟ ತಪ್ಪಿಸುವ ಉದ್ದೇಶದಿಂದ ಕೆನರಾ ಡಿಸ್ಟ್ರಿಕ್ಟ ಸೆಂಟ್ರಲ ಬೇಂಕಿನವರು ಕೂಡಲೇ ನಾಶವಾಗದ ಭತ್ತ, ಅಡಿಕೆ ಮೊದಲಾದ ಪೈರನ್ನು ಒತ್ತೇ ಇಟ್ಟುಕೊಂಡು ೬ ಸಲಿಯಂತೆ ರೈತರಿಗೂ ತೋಟಿಗರಿಗೂ ಸಾಲ ಕೊಡುವ ಹಾಗೂ ಧಾರಣೆಗಳು ಮುಂದೆ ಯೋಗ್ಯ ಮಟ್ಟಿಗೆ ಏರಿದಾಗ ಒತ್ತೇ ಇಟ್ಟುಕೊಂಡ ಬೆಳೆಯನ್ನು ಶಿರ್ಸಿಯ ತೋಟಗಾರರ ಸಹಕಾರಿ ಸಂಘದ ವಿದ್ಯಮಾನ ಮಾರಾಟ ಮಾಡಿಸಿ ತಮ್ಮ ಹಣ ವಸೂಲ ಮಾಡಿಕೊಳ್ಳುವ ಮತ್ತು ಉಳಿದ ಹಣವನ್ನು ಸಕಾಲದಲ್ಲಿ ಸಾಲಗಾರರಿಗೆ ಮುಟ್ಟಿಸುವ ಒಂದು ಯೋಜನೆಯನ್ನು ಕೈಕೊಂಡಿದ್ದಾರೆ. ಇದರಿಂದ ರೈತರಿಗೆ ಅಗ್ಗ ಬಡ್ಡಿ ದರದಿಂದ ಸಾಲ ತೆಗೆದುಕೊಂಡು ತೀರ್ವೆ, ತಗಾವಿ ಮುಂತಾದ ಹೊರಗೆ ಸಲ್ಲತಕ್ಕ ಹಣ ತೀರಿಸಲಿಕ್ಕೂ ಕಷ್ಟದಿಂದ ಬೆಳಸಿದ ತಮ್ಮ ಪೈರನ್ನು

ಜಾಹೀರ ವಿನಂತಿ.

ಚಂದಾವರ ಸೀಮೆಯ ನಾಮಧಾರಿ ಸಮಾಜ ಬಾಂಧವರಿಗೆ:— ಕಳೆದ ತಾ 4-10-1941ನೇ ದಿವಸ ಅಳ್ವೇಕೋಡಿ ದೇವರ್ಸ ನ್ಯಾಕ ದೇವಸ್ಥಾನದಲ್ಲಿ ಕೂಡಿದ ಸೀಮೆ ಸಭೆಗೆ ಬಹುತೇಕ ಹಳ್ಳಿಯ ಜನರು ಬಂದಿಲ್ಲಾದ್ದರಿಂದ ಯಾವದೇ ನಿರ್ಣಯ ಕೈಕೊಳ್ಳಲಾಗಲಿಲ್ಲ. ಅದೇ ವಿಷಯ ಪೂರ್ತಿಗೊಳಿಸುವ ಬಗ್ಗೆ ವ ಸಮಾಜದ ಅಭಿವೃದ್ಧಿಯ ಇತರೇ ವಿಷಯಗಳ ಬಗ್ಗೆ ಸಹ ಅಲಾಹಿದಾ ಜಾಹೀರ ವಿನಂತಿ ಪತ್ರಿಕ ಹೊರಡಿಸಿದಂತೆ ತಾ. *1-11-41*ನೇ ದಿನ ಮಧ್ಯಾನ್ಹ *3* ಘಂಟೆಗೆ ಕಲಭಾಗ ಶಾಲೆಯಲ್ಲಿ ಕೂಡುವ ಮಹಾಸಭೆಗೆ ತಪ್ಪದೇ ಬರಬೇಕಾಗಿ ವಿನಂತಿ ತಾ. 25-10-1941.

ಬೀರಪ್ಪಾ ಶಿವಪ್ಪ ನಾಯ್ಕ ಸ್ಥಳದ ಮೊಕ್ತೇಸರ
ದೇವಪ್ಪಾ ವೆಂಕ ನಾಯ್ಕ ಸ್ಥಳದ ಮೊಕ್ತೇಸರ.
ಗಣಪತಿ ಶಿವಪ್ಪ ನಾಯ್ಕ ಸ್ಥಳದ ಮೊಕ್ತೇಸರ.

ಕರ್ನಾಟಕ
ಏಗ್ಯೂಮಿಕ್ಚರ
ಜ್ವರಕ್ಕೆ
ಉಪಯೋಗಿಸಿರಿ

HAPPY DEEPAVALI
KALPAKA OIL MILLS, LTD, PALLURUTTI, COCHIN
have the pleasure in sending their hearty greetings to all and wish them a happy, bright & prosperous new year.
USE **KALPAKA SOAPS**
Sheshagiri Subraya Pai, Honavar.
Principal Distributor for – ***North Kanara, Belgaum, Bijapur & Ratnagiri Districts.***

[illegible] ಗ್ಯ ಮತ್ತು ಲಭ [illegible] ದ ದಿಂದ ಮಾರಕ [illegible] ಸುಗಂಧ ದೊರೆತಿದೆ ಎಲ್ಲ ಶ್ರೈತ [illegible] ಹೊರಗೆ ಅ ರೋಗ [illegible] ಎಸ್ಸೆನ್ಸ್ ಚರಂದ [illegible] ಚೀ [illegible] ಸಭ ಗರು ತಿಳಿಸುತ್ತಾರೆ ಈ ಕುರಿತು ವಿಸ್ತೃತ ಮಾಹಿತಿ ಬೇಕಾದವರು [illegible] ಯಿಂದ ಪಡೆಕೊಳ್ಳಬಹುದು

ಕಳೆದ ೩೨ ನೇ ತಾರೀಖು ಪತ್ತ ಗಿಯಲ್ಲಿ [illegible] ಎಸ್ ಜಿ [illegible] ಅಧ್ಯಕ್ಷತೆಯಲ್ಲಿ [illegible] ಸಭೆಯಾಯಿತು ಆ ಕ ಲಕ್ಷ ಪತ್ತರಗಿ [illegible] ಎಸ್ [illegible] ಪಟ್ಟಿಯ ಪರ ಕೆಲವು ಅದ್ಭುತ ಶಕ್ತಿ [illegible] ಸ್ವಪ್ರಯ [illegible] ಪತ್ತರಗಿ [illegible] ಬಳ್ಳಿಯ ಪದಕ [illegible]

ಜೀವವಿಮೆಯ ಕಲಸಗಾರರಿಗೆ ಇದೊಂದು ಸುವರ್ಣ-ಸಂಧಿ!

[illegible] ಲಿಮಿಟೆಡ್ ಸಂಸ್ಥೆಯು [illegible] ಪ್ರತಿನಿಧಿ [illegible] ಸೊಸ್ಯಾಟಿಯು [illegible] ವೈದ್ಯಕೀಯ [illegible] ಇಂತೆಯುಂಟು

[illegible] ತಮ್ಮ ಪೂರ್ಣ ಮಾಹಿತಿ ಸಹಿತ [illegible] ಮಾಡಬೇಕು —

ಕುಲಕರ್ಣಿ ಎಂಡ್ ಕಂಪನಿ, ಚೀಫ್ ಆರ್ಗನೈಸರ್ಸ್,
ನವಸಾರಿ ಬಿಲ್ಡಿಂಗ, ಹಾರ್ನಬಿ ರೋಡ, ಫೋರ್ಟ, ಮುಂಬಯಿ



ನೀನು ಪುಟ್ಟ ಹುಡುಗನೆ [illegible] ಯೋಧನು ಶತ್ರುವಿನಿಂದ [illegible] ಕಾದಾಡುವ [illegible] ನೀನು ಸುಖವಾಗಿರು [illegible] ಇಂಡಿಯಾವನ್ನು ರಕ್ಷಿಸುತ್ತಾನೆ [illegible] ತಂದೆ ಮತ್ತು ತಾಯಿ [illegible] ಮತ್ತು ಸಹೋದರಿಯರು [illegible] ಡಿಫೆನ್ಸ ಸೇವಿಂಗ್ಸ [illegible] ಕೊಂಡುಕೊಂಡು ಇಂಡಿಯಾ [illegible]

ಒಂದಕ್ಕೆ ರೂ. ೧೦/-
ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್
೩/೯/- ಲಾಭ ಕೊಡುತ್ತೆ
[illegible]

ಕೊಳ್ಳಿರಿ

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು

61 49 Kn

ಸ್ಥಳೀಕ ವಿಷಯಗಳು.

(೫ನೇ ಪಾನಿನಿಂದ ಮುಂದರಿಸಿದ್ದು)

ಪತ್ರ ಪಡೆಯ ಬೇಕೆಂಬ ಶರ್ತ ಇಲ್ಲ ಪ್ರತಿಯೊಬ್ಬ ನೌಕರನು ವಿಧಿಸಿದ ಕರ್ತವ್ಯಗಳನ್ನು ರೀತಿಯಂತೆ ಮಾಡೇ ತೀರುತ್ತಾನೆಂಬ ಗ್ರಹಿಕೆಯುಂಟು ಉಗ್ರಾಣಿಗಳ ವಿಷಯದಲ್ಲಿ ಮಾತ್ರ ಭೇದ ಮಾಡಲಾಗಿದೆ ಸಂಬಳಕ್ಕೆ ಸಂಕಟ ಬತ್ತಿಗೆ ಅನಧಿಕಾರ ಪೆನ್ಶನಿಗೆ ಪೂಜ್ಯ ಚಾಕರಿ ಕೇಳುವವರೂ ಕೊಳ್ಳುವವರೂ ಮಾತ್ರ ಕಂಡಕಂಡಲ್ಲಿ! ಇಂಥ ನೌಕರ-ಜನ ಹಿಂದುಸ್ಥಾನ ಬಿಟ್ಟು ಇತರ ಪ್ರದೇಶದಲ್ಲಿ ಸಿಗುವದು ಅಪರೂಪ ಯುದ್ಧಭತ್ತೆಯ ಕುರಿತು ಉಗ್ರಾಣಿಗಳು ಸರಕಾರಕ್ಕೆ ಅರ್ಜಿ ಮಾಡಿಕೊಂಡು ದೀರ್ಘ ಕಾಲವಾಯಿತು ಇನ್ನೂ ಅದರ ವಿಚಾರ ಮುಗಿಯಲಿಲ್ಲ! ಹೀಗೆಯೇ ವಿಚಾರ ನಡೆದರೆ ವಿಚಾರದ ಅವಧಿಯಲ್ಲೇ ಯುದ್ಧ ಮುಗಿದು ಹೋಗುವದು!

ವೆಕ್ಸಿನೇಟರರ ಪೇದೆಗಳ ಅವಸ್ಥೆಯೂ ಉಗ್ರಾಣಿಗಳದೇ ಈ ಪೇದೆಗಳಿಗೆ ರಜೆಯಿಲ್ಲ! ರಜೆ ಕೊಡಬೇಕಾದರೆ ಡಾಕ್ಟರರ ಕಡೆಯಿಂದ ಸರ್ಟಿಫಿಕೇಟು ಪಡೆಯಬೇಕು ಅಂದರೆ ಸ್ವತ ಪೇದೆ ಅಸ್ವಸ್ಥ ಬಿದ್ದರೆ ಮಾತ್ರ ರಜೆ ಸಿಗುತ್ತದೆ! ಯಾವದೇ ಮನೆ-ಪ್ರಪಂಚಕ್ಕೆ ರಜೆ ಸಿಗುವದಿಲ್ಲ ಸರ್ಟಿಫಿಕೇಟು ಕೊಂಡು ರಜೆ ಕೊಂಡ ಬಳಿಕ, ಪುನ ಕೆಲಸದ ಮೇಲೆ ಹಾಜರಾಗಬೇಕಾದರೆ ಸರಕಾರಿ ಕೆಲಸ ಮಾಡಲು ಪಾತ್ರತೆಯಿದ್ದ ಬಗ್ಗೆ ಡಾಕ್ಟರರ ಸರ್ಟಿಫಿಕೇಟು ಬೇಕು ಅದನ್ನು ಪಡಕೊಂಡನಕ ಕೆಲಸದ ಮೇಲೆ ಹಾಜರಾಗಗೊಡುವದಿಲ್ಲ ರಜೆ ಒಂದಾದರೆ ಸರ್ಟಿಫಿಕೇಟು ಎರಡು! ಇವರಿಗೆ ಪೆನ್ಶನು ಇಲ್ಲ ಪ್ರಾವ್ಹಿಡೆಂಟ ಫಂಡಿಲ್ಲ, ಯುದ್ಧಭತ್ತೆ ಕೇಳಬೇಡ! ಪೇದೆಗಳು ಈ ನಿರ್ಬಂಧದ ಮೂಲಕ ಬಹಳ ದುರ್ದಶೆಗೀಡಾಗಿದ್ದಾರೆ ವೆಕ್ಸಿನೇಶನ್ ಇಲಾಖೆಯೊಳಗಿನ ವೆಕ್ಸಿನೇಟರರ ಕೈಕೆಳಗಿರುವ ಪೇದೆಗಳ ಸ್ಥಿತಿ ಮಾತ್ರ ಇದು! ವೆಕ್ಸಿನೇಟರರ ಮೇಲಧಿಕಾರಿಗಳ ಪೇದೆಗಳಿಗೆ ಆಕಸ್ಮಿಕ (ಕೆಝ್ಯುಅಲ್) ರಜೆ ಹಕ್ಕಿನ ರಜೆ, ಅಸ್ವಸ್ಥದ ರಜೆ ಪ್ರಾವ್ಹಿಡೆಂಟ ಫಂಡು ಪೆನ್ಶನು ಮೊದಲಾದ ಯಾವತ್ತೂ ಸೌಕರ್ಯಗಳಿವೆ! ರಜೆಯ ಮೇಲೆ ಹೋಗುವಾಗ, ಬರುವಾಗ ಡಾಕ್ಟರರ ಸರ್ಟಿಫಿಕೇಟುಗಳನ್ನು ಹಾಜರಪಡಿಸಬೇಕೆಂಬ ನಿರ್ಬಂಧವಿಲ್ಲ ಈ ಎಲ್ಲ ಗೌರವ ವೆಕ್ಸಿನೇಟರರ ಪೇದೆಗಳಿಗೆ ಮಾತ್ರ!! ವೆಕ್ಸಿನೇಟರರ ಪೇದೆಗಳಿಗೆ ಮಾತ್ರ ಈ ಭೇದ ಮಾಡುವ ಕಾರಣ ತಿಳಿಯುವದಿಲ್ಲ ಸರಕಾರವು ಈ ಕುರಿತು ವಿಚಾರ ಮಾಡಿ ಎಲ್ಲರಿಗೂ ಒಂದೇ ಪ್ರಕಾರದಿಂದ ನಡಿಸಿಕೊಳ್ಳುವದುತ್ತಮ ಡಾಕ್ಟರರ ಕಡೆಯಿಂದ ಸರ್ಟಿಫಿಕೇಟು ಪಡೆಯಲಿಕ್ಕೆ ಪೇದೆಗಳಿಗೆ ಒದಗುವ ಕಷ್ಟನಷ್ಟಗಳನ್ನು ವ್ಯವಹಾರಿಕರು ಬಲ್ಲರು ಈ ನಿರ್ಬಂಧ ಹಾಕಿ ರಜೆ ಕೊಡುವದಕ್ಕಿಂತ ಈ ಪೇದೆಗಳಿಗೆ ಯಾವದೇ ರಜೆ ಯಾವದೇ ಕಾಲದಲ್ಲಿ, ಯಾವದೇ ಪ್ರಸಂಗದಲ್ಲಿ ಸಿಗಲಿಕ್ಕಿಲ್ಲವಾಗಿ ತೀರ್ಮಾನ ಮಾಡುವದು ಯುಕ್ತವಾದದ್ದು

* * *

ಹೊನ್ನಾವರ ಮ್ಯುನಿಸಿಪಾಲಿಟಿಗೂ ಅಲ್ಲಿಯ ವರ್ತಕರಿಗೂ ರಫ್ತು ಸರಕಿನ ಕುರಿತು ಸಿಗತಕ್ಕ ರಿಫಂಡಿನ ಅರ್ಜಿಗಳ ವಿಚಾರ ಬಹು ಕಾಲದಿಂದ ಬಾಕಿಯಲ್ಲಿದೆ ಮ್ಯು ಯವರು ಹೊಸ ಕ್ರಮಗಳನ್ನು ಕೈಕೊಂಡು ಗಂಟು ತಿನ್ನುವ ಉದ್ಯೋಗ ಹಿಡಿದಿದ್ದಾರೆ ಅರ್ಜಿಗಳು ಏಜಂಟರ ಮಾರ್ಫತ ಬರತಕ್ಕವಲ್ಲ, ಸ್ವಂತ ವರ್ತಕರ ಸಹಿಯಿಂದ ಅರ್ಜಿ ಬರಬೇಕು ಹೀಗೊಂದು ಆಕ್ಷೇಪ ಈ ಆಕ್ಷೇಪಕ್ಕೊಂದು ಲೋಕಲಬೋರ್ಡಿನ ಎಕ್ಸಾಮಿನರರ ಆಧಾರ ಕೊಡಲಾಗುತ್ತದೆ ಓತೀಕಾಟಕ್ಕೆ ಬೇಲಿಯೇ ಸಾಕ್ಷಿ! ಈ ಕುರಿತು ಮಹಾಸಭೆಗೆ ಮಾಡಿಕೊಂಡ ಅಪೀಲ ಅರ್ಜಿಗಳ ವಿಚಾರ ಪ್ರತಿ ಸಭೆಯಲ್ಲಿ ಮುಂದೂಡಲ್ಪಡುತ್ತಿದೆ ಯಾವದೊಂದು ನಿರ್ಣಯವಾದನಕ ದಿವಾಣಿ ಮೊಕದ್ದಮೆ ಹೂಡಲೂ ಉಪಾಯವಿಲ್ಲ ಕಾನೂನಿನಂತೆ ರಿಫಂಡು ಕೊಡದೆ ಇರಲಿಕ್ಕೆ ಉಪಾಯವಿಲ್ಲ ಆದ್ದರಿಂದ ಮ್ಯುನಿಸಿಪಾಲಿಟಿಯವರು ಕಾಲಹರಣ ಮಾಡುತ್ತಿದ್ದಾರೆ ಕಲೆಕ್ಟರ ಕಮಿಶನರರಿಗೆ ಮ್ಯುನಿಸಿಪಾಲಿಟಿಯ ಆಡಳಿತೆಯನ್ನು ನಿಯಂತ್ರಿಸುವ ಸರ್ವಾಧಿಕಾರವುಂಟು ವರ್ತಕರು ಕಮಿಶನರರಿಗೆ ಅರಿಕೆ ಮಾಡಿಕೊಂಡು ತಿಂಗಳಾಗುತ್ತ ಬಂತು ಆದಾಗ್ಯೂ ಯಾವದೊಂದು ನಿರ್ಣಯವಾಗಿಲ್ಲ ಸದ್ಯಕ್ಕೇ ಕಲೆಕ್ಟರರು ಹೊನ್ನಾವರದಲ್ಲಿ ಮುಕ್ಕಾಮು ಮಾಡಿದ್ದರು ವರ್ತಕ ಜನರ ದೂರು ಕಲೆಕ್ಟರರ ತಿಳುವಳಿಕೆಯಲ್ಲಿತ್ತು ಆ ಕಾಲದಲ್ಲಿ ವರ್ತಕರಿಗೂ ಮ್ಯುನಿಸಿಪಾಲಿಟಿಯ ಅಧಿಕಾರಿಗಳಿಗೂ ಕರಿಸಿ ಕಲೆಕ್ಟರರು ಈ ದೂರನ್ನು ಬಗೆಹರಿಸುವರೆಂದು ವರ್ತಕರು ತಿಳಕೊಂಡಿದ್ದರು ಮುಕ್ಕಾಮು ಮಾಡಿದ ಸ್ಥಳದೊಳಗಿನ ದೂರುಗಳನ್ನು ಪ್ರತ್ಯಕ್ಷ ತಿಳಕೊಳ್ಳುವದಕ್ಕಾಗಿಯೇ ಸರ್ಕೀಟು-ಸಂಚಾರ ಅಧಿಕಾರಿಗಳಿಗೆ ವಿಧಿಸಿರುತ್ತದೆ ಹೀಗಿದ್ದು ಕಲೆಕ್ಟರ ಕಮಿಶನರರು ಈ ದೂರನ್ನು ಈ ತನಕ ನಿರ್ಣಯಿಸದೆ ಇಟ್ಟದ್ದು ಆಶ್ಚರ್ಯ! ರಿಫಂಡು ಸಿಗುವದಾದರೆ ಸಿಗಬೇಕು ಸಿಗುವದಿಲ್ಲವಾದರೆ ಆ ಪ್ರಕಾರ ನಿರ್ಣಯವಾಗಬೇಕು ಅಂದರೆ ವರ್ತಕರಿಗೆ ಮುಂದಿನ ಮಾರ್ಗ ಹಿಡಿಯಲನುಕೂಲವಾಗುತ್ತದೆ ಮುನಿಸಿಪಾಲಿಟಿಯವರು ತ್ವರ್ಯವೇ ನಿರ್ಣಯ ಕೊಡುವಂತೆ ಕಲೆಕ್ಟರ ಕಮಿಶನರರು ಆಜ್ಞೆ ಹೊರಡಿಸುವದುತ್ತಮ

ಈ ಮ್ಯುನಿಸಿಪಾಲಿಟಿಯವರು ರಿಫಂಡನ್ನು ಮುಳುಗಿಸುವದಕ್ಕಾಗಿ ಇನ್ನೊಂದು ಹಂಚಿಕೆ ಮಾಡಿದ್ದಾರೆ ರಿಫಂಡಿಗೊಪ್ಪಿದ ಸರಕು ಹೊರಹೋಗುವಾಗ ಮೆನೇಜಿಂಗ ಕಮಿಟಿಯ ಸಭಾಸದರು ಮತ್ತು ಆಕಟ್ರಾಯ ಇನಸ್ಪೆಕ್ಟರರು ಹಾಜರಿರಬೇಕು, ಮತ್ತು ರಿಫಂಡ ಪಾಸಿನ ಮೇಲೆ ಅವರ ಸಹಿ ಇರಬೇಕು ಎಂದು ಹೊಸ ಹುಕುಮು ಹೊರಡಿಸಿದ್ದಾರೆ ಸರಕು ಭರತ ಇಳಿತ ನೋಡಿ ಹೊರಕಳಿಸುವದುಂಟು, ಮೋಟಾರಿನಿಂದ ಹೊರಕಳಿಸುವದುಂಟು ಪ್ರತಿ ಸರತಿಗೆ ಮೆನೇಜಿಂಗ ಕಮಿಟಿಯ ಸಭಾಸದರಿಗೆ ಹುಡುಕಿ ಕೈಕಾಲು ಹಿಡಿದು ಮದುಮಗನಂತೆ ಕರೆತರುವ ಬಗೆ ಯಾವದೆಂದು ತಿಳಿಯಲಿಲ್ಲ ಮೆನೇಜಿಂಗ ಕಮಿಟಿಯ ಸಭಾಸದರು ಮ್ಯುನಿಸಿಪಾಲಿಟಿಯ ನೌಕರರಲ್ಲ, ವರ್ತಕರಿಂದಲೂ ಅವರೇನು ಅಪೇಕ್ಷಿಸುವದಿಲ್ಲ, ನಿರಪೇಕ್ಷ ಲೋಕಸೇವಕರವರು! ಇಂಥ ನಿರಪೇಕ್ಷರಿಗೆ ವರ್ತಕರು ಬೇಕಾದಾಗ ಬೇಕಾದಲ್ಲಿ ಕರೆತರುವದು ಘೋರ ಸಂಕಟ ಯಾವದೇ ಮ್ಯು|ಯಲ್ಲಿ ಈ ನಿಯಮವಿಲ್ಲ ಶಿರ್ಶಿ ಮ್ಯುನಿಸಿಪಾಲಿಟಿಯಲ್ಲಂತು ಒಂದು ನಾಕೆಯಲ್ಲಿ ಆಕ್ಟ್ರಾಯ ವಸೂಲ ಮಾಡುತ್ತಾರೆ, ಇನ್ನೊಂದು ನಾಕೆಯಲ್ಲಿ ಆಕ್ಟ್ರಾಯ ಕೊಟ್ಟ ರಶೀದಿಯನ್ನು ಹಾಜರಪಡಿಸಿಕೊಂಡು ರಿಫಂಡ ಹಣವನ್ನು ನಾಕೆದಾರರೇ ಆಗಿಂದಾಗ ಕೊಟ್ಟು ಬಿಡುತ್ತಾರೆ! ಹೊನ್ನಾವರ ಮ್ಯುನಿಸಿಪಾಲಿಟಿಯ ನಾಕೇದಾರರು ಅಪ್ರಾಮಾಣಿಕರೆಂದು ಮ್ಯುನಿಸಿಪಾಲಿಟಿಯವರು ಪ್ರಾಮಾಣಿಕತನದಿಂದ ತಿಳಿಯುತ್ತಿದ್ದರೆ ಅವರು ಬೇರೆಯವರಿಗೆ ನೇಮಿಸಿಕೊಳ್ಳಬೇಕಲ್ಲದೆ ಇಂಥ ಅವ್ಯವಹಾರಿಕ ನಿರ್ಬಂಧಗಳನ್ನು ಹಾಕಕೂಡದು ಕಲೆಕ್ಟರರೂ ಕಮಿಶನರರೂ ಹೊನ್ನಾವರ ಮ್ಯುನಿಸಿಪಾಲಿಟಿಯಲ್ಲಿ ನಡೆಯುವ ಈ ಹುಡುಗಾಟಿಕೆಗಳನ್ನು ತ್ವರ್ಯವೇ ನಿಲ್ಲಿಸದಿದ್ದರೆ ಇಲ್ಲಿಯ ವ್ಯಾಪಾರ ವ್ಯವಹಾರಕ್ಕೆ ಬಾಧಕವಾಗುವಂತಿದೆ

“ ಈಸ್ಟ-ಡ್ರೊಪರ ”ನ ಅಭಿಪ್ರಾಯ.

ಬರೇ ಹದಿನೇಳು ವರ್ಷಗಳಲ್ಲಿ ೧|| ಕೋಟಿ ರೂಗಳಷ್ಟು ಜೀವನಿಧಿಯನ್ನು ಕಲೆಹಾಕಿದ ಹಾಗೂ ೪೦ ಲಕ್ಷ ರೂ ಗಳಿಗಿಂತ ಮಿಕ್ಕಿ ವಾರ್ಷಿಕ ಉತ್ಪನ್ನ ಪಡೆಯುವ ಉತ್ತಮ ಸ್ಥಿತಿಗೆ ಬಂದು ಮುಟ್ಟಿದ ಎರಡೇ ವರ್ಷಗಳಲ್ಲಿ ಆಡಳಿತೆಯ ಖರ್ಚಿನ ಪ್ರಮಾಣವನ್ನು ನೂರಕ್ಕೆ ೧೧ರಷ್ಟು ಇಳಿಸಿದ ಮತ್ತು ಹಿಂದುಸ್ಥಾನದ ಮುಖ್ಯ ಮುಖ್ಯ ಕೇಂದ್ರಗಳಲ್ಲಿ ತನ್ನ ಸ್ವಂತ ಮಾಲ್ಕಿಯ ಭವ್ಯ ಕಚೇರಿ ಮನೆಗಳನ್ನು ಕಟ್ಟಿಸಿಕೊಂಡು ವೃದ್ಧಿಪಥದಿಂದ ಏರಿಯುವ ಬೇರೆ ಆವ ಕಂಪನಿಯನ್ನೂ ನಾನು ಕಂಡಿಲ್ಲ! **ಲಕ್ಷ್ಮೀ ವಿಮೆ ಕಂಪನಿಯು** ನಿಜವಾಗಿಯೂ ಲಕ್ಷ್ಮೀ ದೇವಿಯ ಪ್ರಸನ್ನಾನುಗ್ರಹವನ್ನು ಸಂಪಾದಿಸಿದೆ!

ತಾ ೩-೪-೧೯೪೧ರ “ಇಂಡಿಯನ್ ಫಿನೆನ್ಸ್” ಪತ್ರಿಕೆಯಿಂದ

ವರ್ಷ	ಜೀವ ನಿಧಿ	ವೆಚ್ಚದ ಪ್ರಮಾಣ
೧೯೨೫—೨೬	೭೪ ೪೨೯	೬೬ ೯೮
೧೯೨೯—೩೦	೧೫ ೦೦,೭೫೬	೩೭ ೮೬
೧೯೩೪ ೩೫	೫೯ ೧೨,೮೯೯	೩೫ ೯೩
೧೯೩೯	೧ ೨೩ ೪೮ ೨೯೯	೩೧ ೫೭
೧೯೪೦	೧ ೩೫ ೭೨,೧೯೭	೨೫ ೭೭

ಬೋನಸ್ಸು ಎಂಡೌಮೆಂಟ ವಿಮೆಗಳ ಮೇಲೆ ೧೦೦೦ ರೂ ಗೆ ಪ್ರತಿ ವರ್ಷ ರೂ ೧೫
ಆಜೀವ ವಿಮೆಗಳ ಮೇಲೆ ೧೦೦೦ ರೂ ಗೆ ಪ್ರತಿ ವರ್ಷ ರೂ ೧೮

ದಿ ಲಕ್ಷ್ಮೀ ಇನ್ಶ್ಯೂರನ್ಸ ಕಂಪನಿ, ಲಿ.,
ಮುಖ್ಯ ಕಚೇರಿ **ಮೆಕ್ಲಾಡ ರೋಡ, ಲಾಹೋರ.**

ಮುಂಬಯಿ ಶಾಖೆ –
“ ಲಕ್ಷ್ಮೀ ಬಿಲ್ಡಿಂಗ ”
ಫಿರೋಜಶಹಾ ಮಹತಾ ರೋಡ

ಕಲಕತ್ತಾ, ಮುಂಬಯಿ, ಮದ್ರಾಸ, ಕರಾಚಿ, ಲಖನೌ,
(ನಿಜಾಮ) ಹೈದರಾಬಾದ, ಮೊಂಬಾಸಾ (ಬ್ರಿಟಿಶ ಪೂರ್ವ ಆಫ್ರಿಕಾ)
ಈ ಊರುಗಳಲ್ಲಿ ಶಾಖೆಗಳಿವೆ

ವಿಶೇಷ ವಾರ್ತೆ.

ಕೋಳಿ ಮುಂತಾದ ಉಪಯುಕ್ತ ಪಕ್ಷಿ ಪ್ರಾಣಿಗಳನ್ನು (poultry) ಸಾಕಿ ಸಲಹುವ ಉದ್ಯೋಗ ಕಲಿಯಬಯಸುವ ತರುಣರಿಗಾಗಿ ಮುಂಬಯಿ ಸರಕಾರದ ಪ್ರಾಣಿವಿದ್ಯಾವಿಶಾರದರು ಪುಣೆಯ ಸಮೀಪ ಖಡಕಿ (Kirkee) ಯೊಳಗಿರುವ ಸರಕಾರಿ ಪಕ್ಷಿ ಪ್ರಾಣಿಗಳ ಹೊಲದಲ್ಲಿ ಪ್ರಾಯೋಗಿಕ ವರ್ಗಗಳನ್ನು ನಡಿಸುವ ವ್ಯವಸ್ಥೆ ಮಾಡಿದ್ದಾರೆ ಪ್ರತಿ ವರ್ಷ ಜನವರಿಯಿಂದ ಮಾರ್ಚ, ಜುಲೈಯಿಂದ ಸಪ್ಟಂಬರ ಮತ್ತು ಅಕ್ಟೋಬರದಿಂದ ಡಿಸಂಬರ ಹೀಗೆ ವರ್ಷದಲ್ಲಿ ಮೂರಾವರ್ತಿ ವರ್ಗಗಳು ನಡೆಯುವವು ಮೂರು ತಿಂಗಳಲ್ಲಿ ಎಲ್ಲ ಶಿಕ್ಷಣ ಕೊಡುವ ಏರ್ಪಾಟು ಮಾಡಲ್ಪಟ್ಟಿದೆ ಪೌಲ್ಟ್ರಿ ಫಾರ್ಮುಗಳ ಮ್ಯಾನೇಜರರಾಗಬಯಸುವವರ ಬಗ್ಗೆ ಜುಲೈಯಿ ತಾ ೧ರಿಂದ ಮಾರ್ಚ ಕೊನೆಯ ವರೆಗೆ ೯ ತಿಂಗಳಲ್ಲಿ ಸಂಪೂರ್ಣ ವಿದ್ಯೆ ಕಲಿಸುವ ಒಂದು ವರ್ಗವೂ ತೆರೆಯಲ್ಪಡುವದು ಒಂದೊಂದು ವರ್ಗದಲ್ಲಿ ೩೦ ಮಂದಿಗಳಿಗಷ್ಟೇ ಪ್ರವೇಶವಿದೆ ಪ್ರತಿ ವಿದ್ಯಾರ್ಥಿಯು, ಮಾಸಿಕ ಫೀ ರೂ ೫ ಕೂಡ ಫಂಡಿಗೆ ರೂ ೨ ತೆರಬೇಕು ಇನಸಿಕ ರೆವಿನ್ಯೂ ಇಲ್ಲವೆ ಬೇಸಾಯ ಇಲಾಖೆಯ ಅಧಿಕಾರಿಗಳಿಂದ ಪ್ರಶಸ್ತಿಪತ್ರ ಒಯ್ಯುವ ನಿಜವಾದ ಬೇಸಾಯಗಾರರಿಗೆ ಮಾಫಿ ಸಿಗುವದಂತೆ ವರ್ಗದ ವಿದ್ಯಾರ್ಥಿಗಳ ಬಗ್ಗೆ ಒಂದು ವಸತಿಗೃಹವೂ ತೆರೆಯಲ್ಪಡುವದು ಅಲ್ಲಿ ಊಟದ ಖರ್ಚು ಸುಮಾರು ರೂ ೧೦ ಬರುವದಾಗಿ ತಿಳಿಯುತ್ತದೆ ವಿಶೇಷ ಮಾಹಿತಿ ಬೇಕಾದವರು * Live Stock Expert to Government, B P, Poona ಇವರಿಂದ ಪಡೆಯಬಹುದು

ಸಹ್ಯಾದ್ರಿಫಾರ್ಮಸಿ
ಕುಮಟಾ.

ಬಾಳಂತಿಯರಿಗೆ— ಕಸ್ತೂರಿ ಮಿಶ್ರಣ ದಶಮೂಲಾರಿಷ್ಟ ಮತ್ತು ಧನ್ವಂತರಿ ಗುಳಿಗೆ ಬಳ್ಳೇ ಉಪಯುಕ್ತವಾದವು!

ಚಿಕ್ಕ ಮಕ್ಕಳ ಜಂತುವಿನ ಬಾಧೆಗೂ ಪುಷ್ಟಿಯಾಗಲಿಕ್ಕೂ ಸಾಯರಪ್ ಕುಟಜಾ ಒಂದೇ ದಿವ್ಯವಾದ ಔಷಧವು!

ನಾಯಿ-ಕೆಮ್ಮಿಗೆ ಎಂಟೇ ದಿವಸಗಳಲ್ಲಿ ಗುಣಪಡಿಸುವ ಕಫನಾಶಕವು

ಯಾವತ್ತೂ ಪ್ರಕಾರಗಳ
ಕಷಾಯ, ಅರಿಷ್ಟ, ಆಸವ,
ತೈಲಾದಿ ಔಷಧ ಸಾಮುಗ್ರಿಗಳು
ಸದಾ ಸಿಗುತ್ತವೆ.

ಡಾ॥ ಎಸ್. ಕೇ. ಭಟ್ಟ,
ಹಳ್ಕಾರ, ಕುಮಟಾ.

ಹೈಸ್ಕೂಲುಗಳಿಗೆ ಬೇಕಾಗುವ ಎಲ್ಲ ತರದ
ಇಂಗ್ಲಿಷ ಸಂಸ್ಕೃತ–ಕನ್ನಡ–ಮರಾಠಿ
ಪುಸ್ತಕಗಳು ನಮ್ಮಲ್ಲಿ ಸಿಗುತ್ತವೆ

ನಿಮಗೆ ಬೇಕಾಗುವ ಪುಸ್ತಕಗಳನ್ನು ಇಂದೇ ಕೊಂಡುಕೊಳ್ಳಿ

ವಿಳಂಬ ಮಾಡಿದಲ್ಲಿ,—ನಿರಾಶರಾಗಬೇಕಾದೀತು ಪ್ರಾಥಮಿಕ ಶಾಲೆಗಳಿಗೆ ಬೇಕಾಗುವ ಎಲ್ಲ ಕನ್ನಡ ಮರಾಠಿ ಪುಸ್ತಕಗಳೂ ನಮ್ಮಲ್ಲೇ ದೊರೆಯುವವು ನಿಮಗೆ ಯಾವ ಪುಸ್ತಕ ಬೇಕಾದರೂ ನಮ್ಮಲ್ಲಿ ಬರೆಯಿರಿ

ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ

ಧಾತುಪುಷ್ಟಿ ಲೇಹ. (**ಸುವರ್ಣ ಸಾಲಾಮಿಶ್ರಿ, ಕಲ್ಮದ ಮಿಶ್ರ**) ನಷ್ಟವಾಗಿರುವ ಪುರುಷತ್ವವನ್ನು ಪುನಃ ಕಲ್ಪಿಸಿಕೊಡುವ ಅತ್ಯುತ್ತಮ ಶಕ್ತಿದಾಯಕ ಔಷಧಿ ಮಾನಸಿಕ ಮತ್ತು ಕಾಯಶಕ್ತಿಗಳನ್ನು, ಜಿಜ್ಞಾಸ, ಆರೋಗ್ಯ, ಇಂದ್ರಿಯಶಕ್ತಿ ಇವೇ ಮೊದಲಾದವುಗಳನ್ನು ಕಲ್ಪಿಸಿಕೊಡುವದು ಬಾಟ್ಲಿ ೧ಕ್ಕೆ 2—8—0

ಕಸ್ತೂರಿ ಮಿಶ್ರಣ ದಶಮೂಲ. ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ ಬಾಟ್ಲಿ ೧ಕ್ಕೆ ರೂ 1—8—0.

ಮಲೇರಿಯಾ ನಿವಾರಿಣಿ. ಮಲೇರಿಯಾ ಜ್ವರ, ಚಳಿ ಜ್ವರ, ಇನ್‌ಫ್ಲುಯೆಂಝಾ, ಮಲಬದ್ಧತೆ ಇವುಗಳಿಗೆ ಪ್ರಸಿದ್ಧ ಔಷಧಿ ಬಾಟ್ಲಿ ೧ಕ್ಕೆ ರೂ 0—13—0

ಸ್ಪ್ಲೀನ ಮಿಕ್ಶ್ಚರ. ಜ್ವರಗಡ್ಡೆಯನ್ನು ಕರಗಿಸುವ ದಿವ್ಯೌಷಧ ಬಾಟ್ಲಿ ೧ಕ್ಕೆ ರೂ 1-2-0

ಎಮ್. ಗಣಪಯ್ಯ ಎಂಡ್ ಸನ್ಸ, ರಥಬೀದಿ ನಂಬ್ರ 5, ಮಂಗಳೂರು. ದ. ಕ.

ಔಷಧಿ ಸಿಗುವ ಸ್ಥಳ — (1) ಸ್ವಸ್ತಿಕ ಫಾರ್ಮಸಿ, ಕುಮಟಾ, (2) ಶಾಂತ ಸ್ಟೋರ್ಸ, ಹೊನ್ನಾವರ, (3) ಸ್ಟೇಶನರಿ ಡಿಪೋ, ಅಂಕೋಲಾ, (4) ಕೆ ಗಣಪಯ್ಯ ಶಾನಭಾಗ, ಮರ್ಚಂಟ, ಭಟಕಳ, (5) ಪೊಪ್ಯುಲರ ಸ್ಟೋರ್ಸ ಕೆಮಿಸ್ಟ್ಸ, 183, ಸುಪಾರಿಬಾಗ ಪರೇಲ, (6) ಜನರಲ್ ಸ್ಟೋರ್ಸ, ಜಿ ಆಯ್ ಪಿ ಮಾಟುಂಗ, (7) ಮ್ಹಾಳಪ್ಪ ಪದ್ಮನಾಭ ಶೆಟ್ಟಿ, ಮರ್ಚಂಟ್ಸ, ಕಾರವಾರ, (8) [illegible] ಬ್ರದರ್ಸ, ಸಿದ್ದಾಪುರ (9) ಪೊಪ್ಯುಲರ ಮೆಡಿಕಲ್ ಸ್ಟೋರ್ಸ, ಗೋಕರ್ಣ, (10) ಎಸ್ ಎಲ್ [illegible] ಎಂಡ ಸನ್ಸ್, ಬಡವರ ಔಷಧಿ ಅಂಗಡಿ, ಶಿರ್ಸಿ [ಕ್ಯಾಟಲಾಗಿಗೆ ಬರೆರಿ]

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್,

ಸ್ಥಾಪನೆ 1908.

ಈ ಕಂಪನಿಯು ಪ್ರಾಣ [illegible] ಇಷ್ಟು ಇವರ ಕಂತಿನ ದರಗಳೂ, ಶರ್ತುಗಳೂ ಬಹಳ ಸೊಯಿಯುಳ್ಳವು ಇವೆ. ಕಂಪನಿಯ ಹಣವು ಸರಕಾರಿ ಪ್ರೊ ನೋಟುಗಳಲ್ಲಿಯೂ, ಇಂಡಿಯನ್‌ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದರೆ ಸಿಗುವದು

Kumta Agents
D K Nayak Bros
K N Nayak
Honavar Agent
R V Prabhu

K. PadmanabhaRao & Sons,
BELGAUM
Chief Agents for
Karnatak Districts & S M. States

ಚಕ್ರಬಿಂದು

ಮಕ್ಕಳ ಮರಣವನ್ನು
ತಪ್ಪಿಸುವದು.

ಏಜನ್ಸಿ ಕಲಕತ್ತಾ, ಮುಂಬಯಿ ಮದ್ರಾಸ, ಬೆಂಗಳೂರು, ಮಂಗಳೂರು

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆದೊಡ್ಡಾಗುವಿಕೆ, ಹಸುರು ಸಂಗಳು, ಕಾಮಿಲೆ, ಗಡ್ಡೆರೋಗ, ಕೋವೆ ರೋಗ, ಮ್ಯಾಕ್ಯ ಬಾವುಗಳಿಗೆ ದಿವ್ಯೌಷಧ!

೧ ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3

ಏತಕ್ಕೆ ಚಿಂತಿಸುವಿರಿ?

ಆಸೇತುಹಿಮಾಚಲದ ವರೆಗೂ ೨೫ ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ

ಡಾ| ಪಿ ಎನ್ ಶ್ರೀನಿವಾಸರಾವ,
ಲಿವ್ಹರ್ ಸ್ಪೆಶಲಿಸ್ಟ
ಎಂ ರಿ ಪ್ರಾಸಾದಿಕ ಔಷಧಾಲಯ,
ಶಿವಮೊಗ್ಗಾ

☞ ಇವರಲ್ಲಿ ವಿಚಾರಿಸಿರಿ
ಶಿರ್ಸಿ ಏಜಂಟ —
ಸುಬ್ರಾಯ ಸೀತಾರಾಮ ನಗಡೆ
ಕುಮಟಾ ಏಜಂಟ —
ದೇವಪ್ಪಾ ಅಣ್ಣು ನಾಯ್ಕ

[illegible] ಮುದ್ರಿಸಿ ಪ್ರಕಟಿಸಿದರು

Reg. No. B. 1270. Monday, 3rd November, 1941.

ವರ್ಷ ೨೪

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನಿಯಾರ್ಡರಿನಿಂದ
ರೂ. 3-1-0.
ವ್ಹಿ. ಪಿ. ಖರ್ಚವನ್ನ ಸೇರಿ
ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಕಾನಡಾವೃತ್ತ

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸಂಚಿಕೆ ೧೭

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಸ್ಮಾಲ ಪೈಕಾ ಟೈಪಿನ (೧೫ ಎಮ್ ರುಂದ) ೮ ಸಾಲುಗಳವರೆಗೆ ರೂ.1-8-0 ಆ ನಂತ್ರ ಪ್ರತಿಸಾಲಿಗೆ 0-3-0 ಹೆಚ್ಚಿಂಗದ ಸಾಲು ಎಷ್ಟು ಹೊಕ್ಕಿರುವವೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

-*(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೩ ಮಾಹೆ ನವಂಬರ ಸನ್ ೧೯೪೧ನೇ ಇಸವಿ)*-

ದೀಪಾವಳಿಯ ಒಂದೇ ಒಂದು ಕಾಣಿಕೆ!

ಸುಗಂಧಿ
ಕಾಂಚನ
ಹೇರ ಆಯ್ಲ

ಶ್ರೀ ಧೂತಪಾಪೇಶ್ವರ ಪನವೇಲ, ಲಿ.,
ಕರ್ನಾಟಕ ಕೇಂದ್ರ - ಯುನ್ಯಾಟೆಡ್ ಏಜನ್ಸೀಜ, ಹುಬ್ಬಳ್ಳಿ.

ಕಾರವಾರ:— ಮೆಸರ್ಸ ಮುಜುಮುದಾರ-ಆಕಬೇಕರ ಬ್ರದರ್ಸ
ಅಂಕೋಲಾ:— ದಿ ಸ್ಟೇಶನರಿ ಡಿಪೋ
ಕುಮಟಾ:— ದೇವಪ್ಪಾ ಅಯ್ಯು ನಾಯ್ಕ.
ಹೊನ್ನಾವರ— ಮೆಸರ್ಸ ಕಲ್ಯಾಣಪುರ ಬ್ರದರ್ಸ.
ಶಿರ್ಶಿ:— ಶಿರ್ಶಿ ಡ್ರಗ್ ಸ್ಟೋರ್ಸ
ಎಸ್. ಎಲ್. ಧಾಕಪ್ಪಾ ಎಂಡ್ ಸನ್ಸ
ಸಿದ್ದಾಪುರ:— ಮೆಸರ್ಸ ಶಾಮಾಯ್ಯನ ಬ್ರದರ್ಸ

"ಸ್ಟಾರ ಆಫ್ ಕೆನರಾ ಪ್ರೆಸ್",
ಕುಮಟಾ.

—*—

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಯಿಂದ ಬೇಕಾದ ನಮೂನೆಯ ಕಲರ ಪ್ರಿಂಟಿಂಗ ವಗೈರೆ ಸಣ್ಣ ದೊಡ್ಡ ಛಾಪಾ ಕೆಲಸಗಳೂ, ಪುಸ್ತಕ ಮುದ್ರಣವೂ, ರೂಲಿಂಗ ಬ್ಯಾಂಡಿಂಗ ಕೆಲಸವೂ ಉತ್ತಮವಾಗಿ ಸುಲಭ ದರದಲ್ಲಿ ತಕ್ಕ ಕಾಲಕ್ಕೆ ತಯಾರಿಸಿ ಕೊಡಲಾಗುವದು.

ಇವಲ್ಲದೆ ಕೋರ್ಟ ಕಚೇರಿ ಉಪಯೋಗದ ವಖಾಲತ ವಗೈರೆ ಫಾರ್ಮುಗಳೂ, ಕಸ್ಟಮ್ ಕಚೇರಿಯ ಶಿಪ್ಪಿಂಗ ಬೀಲು-ಪತ್ರಿ ವಗೈರೆ ಫಾರ್ಮುಗಳೂ, ಗೇಣಿ ರಶೀದಿ ಬೂಕು, ಗೇಣಚೀಟಿ-ಎದುರ್ನುಡಿ ಫಾರ್ಮುಗಳೂ ವಗೈರೆ ಮಾರಾಟಕ್ಕೆ ತಯಾರ ಸಿಗುತ್ತವೆ. ನಿಮ್ಮ ಛಾಪಾ ಕೆಲಸಗಳನ್ನು ನಮ್ಮಲ್ಲಿಗೇ ಕಳಿಸಿರಿ

ಒಮ್ಮೆ ಅನುಭವ ತಕ್ಕೊಂಡು ನೋಡಿರಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ಹೆಡ್ ಆಫೀಸು — ಕುಂದಾಪುರ.

ಬ್ರೇಂಚ ಆಫೀಸುಗಳು -- ಅಂಕೋಲಾ, ಕುಂದಾಪುರ, ಬೈಂದೂರು, ಕೋಟೇಶ್ವರ, ಕುಮಟಾ, ಗೋಕರ್ಣ, ಕಾರವಾರ, ಹಾವೇರಿ, ಶಿವಮೊಗ್ಗಾ, ತರೀಕೆರೆ, ನಗರ, ಸೋಮವಾರಪೇಟೆ ಮತ್ತು ವೀರರಾಜಪೇಟೆ.

ಕಾಯಂ ಠೇವುಗಳು:- 3 ತಿಂಗಳಿಗೆ ಶೇ ರೂ 3ರಲ್ಲಿ, 6 ತಿಂಗಳಿಗೆ ಶೇ. 3½ರಲ್ಲಿ, ೧ ವರ್ಷಕ್ಕೆ ರೂ. 4ರಲ್ಲಿ, 2 ವರ್ಷ ಯಾ ಹೆಚ್ಚಿನ ಅವಧಿಗೆ ಶೇ 4½ರಲ್ಲಿ

ಸೇವಿಂಗ್ಸ ಬೇಂಕ್ ಠೇವುಗಳು ಮತ್ತು ಚಾಲು ಠೇವುಗಳು ಸಹ ಅಂಗೀಕರಿಸಲ್ಪಡುವವು.

ಭಂಗಾರದ ದಾಗಿನೆಗಳ ವ ಇತರ ವ್ಯಾಪಾರದ ಮಾಲುಗಳ ಆಡವಿನ ಮೇಲೆ ಸವಲತ್ತಿನ ದರದ ಬಡ್ಡಿಯಲ್ಲಿ ಸಾಲ ಕೊಡಲ್ಪಡುವದು ವ್ಯಾಪಾರದ ಕೇಂದ್ರಗಳಿಗೆ ಡ್ರಾಪ್ಟುಗಳು, ಚೆಕ್ಕುಗಳು ಸಹ ಕೊಡಲ್ಪಡುವವು ಎಲ್ಲ ತರದ ಬೇಂಕಿನ ವ್ಯವಹಾರಗಳು ಸವಲತ್ತಿನ ದರದಿಂದ ನಡೆಸಲ್ಪಡುವವು.

ಕುಂದಾಪುರ,
1-8-1941

The Agricultural & Industrial Bank, Ltd

ಸ್ಥಳಿಕ ವಿಷಯಗಳು.

ಲೇಖಕ - ಸ್ಥಳವಂತಿಕ

ಈವಾಗ ಹಿಟ್ಲರ ವಿರೋಧಿ ರಾಜ್ಯಗಳಲ್ಲಿ ವಿಜಯ ಪತ್ರಗಳ ಸುಗ್ಗಿದಾಟ ನಡೆದಿದೆ V ಅಂದರೆ Victory ಅಂದರೆ ವಿಜಯವೆಂದು ತಿಳಕೊಂಡು ಪ್ರತಿಯೊಬ್ಬರು ಇಂಗ್ಲಿಷ V ಅಕ್ಷರವನ್ನು ಪ್ರಾಮುಖ್ಯವಾಗಿ ಪ್ರದರ್ಶಿಸತೊಡಗಿದ್ದಾರೆ V ಅಕ್ಷರದ ಬಣ್ಣದ ಪಟಗಳು ಅಲ್ಲಲ್ಲಿ ಎಲ್ಲಲ್ಲಿ, ಎಲ್ಲಿ ನೋಡಿದಲ್ಲಿ ಹಚ್ಚಲ್ಪಟ್ಟಿವೆ ಅನೇಕರು V ಅಕ್ಷರವನ್ನು ಉಡಿಗೆ-ತೊಡಿಗೆಗಳಿಗೂ ಹಚ್ಚಿಕೊಂಡು ವಿಜಯೋಲ್ಲಾಸವನ್ನು ಪಡೆಯುತ್ತಿದ್ದಾರೆ ಶ್ರೀ, ಮಾಧವರಾವ ಅಣೇಯವರು ಸರ್ವಾಧಿಪತಿಗಳ ಕಾರ್ಯಕಾರಿ ಮಂಡಳದ ಸಭಾಸದರು ಅಮೇರಿಕದ ಅಧಿಕಾರಿಗಳೊಬ್ಬರು ಅವರ ಅಂಗಿಗೆ V ಅಕ್ಷರವನ್ನು ಹಚ್ಚಿ ವಿಜಯವನ್ನು ಘೋಷಿಸಿದರಂತೆ ಪ್ರತಿಯಾಗಿ ಶ್ರೀ|| ಮಾಧವರಾಯರು ಸಾಮ್ರಾಜ್ಯಕ್ಕೆ ವಿಜಯವನ್ನು ಕೋರಿದರಂತೆ ವಿಜಯ ಪ್ರಚಾರ ಮಾಡಿ ವಿಜಯಕ್ಕೆ ಕಾರಣವಾದ ಯುದ್ಧನಿಧಿ, ಯುದ್ಧಸಾಮಗ್ರಿ ಸೈನ್ಯ ಸಂಗ್ರಹಗಳನ್ನು ಹೆಚ್ಚೆಚ್ಚು ಸಂಗ್ರಹಿಸುವ [illegible] ನಡದಿದೆ ಯುದ್ಧಯತ್ನವ ದಿಗಾ ಈ ಪ್ರಚಾರಂದ ಪುರಸ್ಕಾರ ಮಾಡುವದು ಸಹಜಿಕ

ಆದರೆ ಸಂಯುಕ್ತಪ್ರಾಂತ ಸರಕಾರವು ಕೈಕೊಂಡ ವಿಜಯದ ಒಂದು ಕ್ರಮ ಕ್ಷೇಮದಾಯಕವಿದೆ "Ploughing for Victory" ವಿಜಯಕ್ಕಾಗಿ ಹೂಡುವದು ಅಂದರೆ ಕೃಷಿಕರ್ಮ ಮಾಡುವದು ಎಂಬ ಪ್ರಚಾರವನ್ನು ಸಂಯುಕ್ತ ಪ್ರಾಂತದ ಸರಕಾರವು ಲಕ್ಷದಿಂದ ನಡಿಸುತ್ತಿದೆ ಇದೇ ಪ್ರಚಾರವನ್ನು ನಮ್ಮ ಮುಂಬಯಿ ಸರಕಾರವು ಭಕ್ತಿಯಿಂದ ನಡಿಸುವದು ಶ್ರೇಯಸ್ಕರ ವಿಜಯಕ್ಕೆ ಆಹಾರ ಸಾಮಗ್ರಿ ಅತ್ಯವಶ್ಯವಾದುದು ಹಿಟ್ಲರನು ಈ ಮರ್ಮವನ್ನು ತಿಳಕೊಂಡಿದ್ದಾನೆ ಸಾಗರ ಅಗ ಬಲ್ಲ ಯಾವತ್ತೂ ಭೂಮಿಯನ್ನು ಆತನು ಸಾಗುವಳಿ ಮಾಡಿಸಿ ಅನ್ನಸಾಮಗ್ರಿಗಳ ಭಾಂಡಾರವನ್ನು ಕಾಪಾಡುತ್ತಾನೆ ಯುದ್ಧ ಕೈದಿಗಳಿಗೆ ನಮ್ಮ ಬ್ರಿಟಿಶರು ನಮ್ಮ ಖರ್ಚಿನಿಂದ ಸಾಕುತ್ತಾರೆ ಮನೆಗಿಂತ ಮಿಗಿಲಾಗಿ ವಿಲಾಸಗಳನ್ನು ಪೂರೈಸುತ್ತಾರೆ ಆದರೆ ಹಿಟ್ಲರನು ಈ ಸಭ್ಯ ನಡ ನುಡಿಗಳನ್ನು ಅರಿಯನು! ಆತನು ೧೦ ಲಕ್ಷ ಯುದ್ಧ ಕೈದಿಗಳಿಗ ಕೃಷಿಕರ್ಮ ಮಾಡಹಚ್ಚಿದ್ದಾನೆ ಇನ್ನು ೨೦ ಲಕ್ಷ ಜನರಿಗೆ ಪರದೇಶದಿಂದ ತರಿಸಿ ಅವರಿಗೆ ಬೇಸಾಯ ಮಾಡಹಚ್ಚಿದ್ದಾನೆ ಇದರಿಂದ ಜರ್ಮನಿಯನ್ನು ಉಪವಾಸ ಕೆಡವಿ ಹಣ್ಣಿಗೆ ತರುವ ಅಭಿಲಾಷೆಯನ್ನು ಬ್ರಿಟಿಶರು ಹಿಡಿಯಬಾರದಿಲ್ಲವಂತೆ ಹಿಟ್ಲರನು ದುಷ್ಟನು ನಿಜ, ಆದರೆ ನಿತಾಂತ ವ್ಯವಹಾರಿಕ ಪ್ರಾಣಿ ಬ್ರಿಟಿಶರು ಈ ಪಾಠ ಅವನಿಂದ ಕಲಿಯುವಂತಹದು ನಮ್ಮ ಜನಾಂಗ ಬೇಸಾಯ-ಪ್ರಧಾನ ಪ್ರದೇಶ ಕೃಷಿಕರ್ಮವೇ ನಮ್ಮ ಜನರ ಮುಖ್ಯ ಉದ್ಯೋಗ ಅದನ್ನು ಸರಿಯಾಗಿ ಪುರಸ್ಕರಿಸಿದ್ದರೆ ನಾವು ವಂಚಿತರಂತೆ ಸ್ವಾವಲಂಬಿಗಳಾಗಿರುತ್ತಿದ್ದೆವು ವಿಲಾಸಿಗಳಾಗುತ್ತಿರಲಿಲ್ಲ ಅಗ್ಗ ಬೆಲ್ಲಕ್ಕಿಂತ ತುಟ್ಟಿ ಸಕ್ಕರ ರುಚಿಯಾಗುತ್ತಿರಲಿಲ್ಲ ಪೌಷ್ಟಿಕ ದ್ರವ್ಯಭರಿತ ಕೈಕುಟ್ಟಿದ ಅಕ್ಕಿಯನ್ನು ಬಿಟ್ಟು ಕಣ್ಣಿಗೆ ಚಂದ ಕಾಣುವ ಗಿರಣಿ ಅಕ್ಕಿಯನ್ನು ಉಣ್ಣುತ್ತಿರಲಿಲ್ಲ, ಭತ್ತ ಕುಟ್ಟುವ ಕೈಗಾರಿಕೆಯನ್ನು ಕಳಕೊಳ್ಳುತ್ತಿರಲಿಲ್ಲ ಪ್ರಾಂತಿಕ ಸರಕಾರವು ವಿಜಯಸಾಧನವಾಗಿ ನಮ್ಮ ಪ್ರಾಂತದೊಳಗ ಕೃಷಿಕರ್ಮದ ಪ್ರಚಾರ ಮಾಡಿದರೆ ಎಷ್ಟು ಹಿತವಾಗುವಂತಿದೆ ನಮ್ಮ ಜಿಲ್ಲೆಯೊಳಗೆ ಹೇರಳ ಭೂಪ್ರದೇಶ ಕೃಷಿಕರ್ಮಕ್ಕೆ ಒಪ್ಪಿದ್ದಿತ್ತು ಜಂಗಲ ಇಲಾಖೆಯ ಚಟುವಟಿಕೆಯಲ್ಲಿ ಅದು ಕ್ರಮವಾಗಿ ಅಡವಿಯಾಗುತ್ತಿದೆ ಸಮುದ್ರ ದಂಡೆಯಿಂದ ೮—೧೦ ಮೈಲು ಒಳಸಾರಿದರೆ ಬಂಜರು ಹೊಲಮನೆ ನಿರ್ಜನ ಗ್ರಾಮ ಇವೇ ಕಣ್ಣಿಗ ಬೀಳುತ್ತವೆ ಇಲ್ಲಿ ಈಗಲೂ ವಾಸವಾಗಿದವರು ದೇಶಾಂತರವಾಗುವ ಪ್ರಸಂಗವನ್ನು ನಿರೀಕ್ಷಣ ಮಾಡುತ್ತಿದ್ದಾರೆ ಸರಕಾರವು ಯುದ್ಧಯತ್ನವ ದಿಗಾ ಈ ಪರಿಸ್ಥಿತಿಯನ್ನು ಪರಾಂಬರಿಸಿ ಕೂಡಲೆ ಬಂಜರು ಬಿದ್ದ ಹೊಲಗಳನ್ನು ಸಾಗುವಳಿ ಮಾಡಿಸುವ ಯೋಜನೆ ಮಾಡಬೇಕು

ಜನರು ತಾವಾಗಿ ಕೃಷಿಕರ್ಮ ಮಾಡಲು ಮುಂದಾಗದಿದ್ದರೆ ಸರಕಾರವು ಹಿಟ್ಲರನಂತೆ ಕೂಲಿಯಾಳುಗಳನ್ನು ಹಚ್ಚಿ ಕೃಷಿಕರ್ಮ ಮಾಡಿಸಬೇಕು ಬೇಸಾಯ ಇಲಾಖೆಯು ವಿಧಾನ ಈ ಚಟುವಟಿಕೆಗಳು ನಡೆಯಬೇಕು ಅಗತ್ಯ ಬಿದ್ದರೆ ಅಡವಿಯನ್ನು ಕಡಿದು ಕೊಡಬೇಕು ವಿಜಯಕ್ಕಾಗಿ ಯಾವದೇ ತ್ಯಾಗ ಮಾಡಲು ಯಾರೂ ಸಿದ್ಧರಿರಬೇಕು ಸರಕಾರವು ದರ್ಪ ಅದೇ ಗುಂಪಿ ಹಿಡಿದು ನಡಕೊಳ್ಳಬೇಕ ಭೂಕಂದಾಯದ ಅಪೇಕ್ಷೆಯನ್ನು ಸರಕಾರವು ಹಿಡಿಯಕೂಡದು ಶ್ರೀಲಂಕೆಯಲ್ಲಿ ಚಹ, ರಬ್ಬರ, ತೆಂಗಿನಕಾಯಿ ಮೊದಲಾದ ಬೆಳೆಯುತ್ತದೆ ಭೂಕಂದಾಯ ಹೇರಿದರೆ ಸರಕಾರಕ್ಕೆ ರೂ ೧ ಕೋಟಿ ಸಿಗಬಹುದು ಆದಾಗೂ ಅಲ್ಲಿಯ ಸರಕಾರವು ಭೂಕಂದಾಯವನ್ನು ಎತ್ತುವ ಮಾಡುವದಿಲ್ಲ ಇದರಿಂದ ಅಡವಿಗಳಲ್ಲಿರುವ ಭೂಮಿಯಲ್ಲಿ ಬೆಳೆ ಬೆಳೆಸಿಕೊಳ್ಳುವವರಿಗ ಪುಕ್ಕಟೆಯಾಗಿ ಸರಕಾರವು ಭೂದಾನ ಮಾಡಬೇಕು ಕೃಷಿಕರ್ಮ ಮಾಡಲು ದ್ರವ್ಯಾನುಕೂಲತೆಯಿಲ್ಲದವರಿಗ ಯುದ್ಧನಿಧಿಯೊಳಗಿಂದ ಸಹಾಯ ನೀಡಬೇಕು ಯಾಕೆಂದರೆ ಕೃಷಿಕರ್ಮದ ಉದ್ಧಾರ ಉತ್ಕರ್ಷಗಳು ಯುದ್ಧಯತ್ನದ ಅಂಗವಾಗಿವೆ ಗ್ರಾಮೋದ್ಧಾರ ಇಲಾಖೆಯವರೂ ಮುಲ್ಕಿ ಇಲಾಖೆಯವರೂ ಬೇಸಾಯ ಇಲಾಖೆಯವರೂ ಯುದ್ಧಯತ್ನ ಮಂಡಳಿಗಳು ಒಮ್ಮನಸ್ಸಿನಿಂದ ದುಡಿದರೆ ೨-೩ ವರ್ಷಗಳಲ್ಲಿ ನಮ್ಮ ಜಿಲ್ಹೆಯ ಭೂಪ್ರದೇಶ ಸಮೃದ್ಧವಾಗಬಲ್ಲದು ಜಿಲ್ಲಾ ರಾಷ್ಟ್ರೀಯ ಸಭೆಯ ಕಾರ್ಯಕರ್ತರು ಸಹ ಈ ಕಾರ್ಯದಲ್ಲಿ ನೆರವಾಗಬಹುದು ಬೇಸಾಯೋದ್ಧಾರವು ರಾಷ್ಟ್ರೀಯ ಸಭೆಯು ಕೈಕೊಂಡ ಗ್ರಾಮೋದ್ಧಾರದ ಒಂದು ಅಂಗ

⁂

ಶ್ರೀ ಗೋಕರ್ಣ ಕ್ಷೇತ್ರದೊಳಗಿನ ಬ್ರಹ್ಮಚರ್ಯಾಶ್ರಮದ ಕುಲಪತಿಗಳಾದ ಶ್ರೀ|| ದೇವರಾತ ಗಜಾನನ ಶರ್ಮಾರವರು ಕಾರ್ತಿಕ ಶು|| ೧ತಿಯಿಂದ ಶ್ರೀ ರಾಮತೀರ್ಥದ ಪ್ರಾಕಾರದಲ್ಲಿ ಮಾಡಿದ ಉಪಕ್ರಮ ಸಮಸ್ತ ಹಿಂದು ಸಮಾಜಕ್ಕೆ, ವಿಶೇಷವಾಗಿ ಬ್ರಾಹ್ಮಣ ವರ್ಗಕ್ಕೆ ಅನುಕರಣೀಯವಿದೆ ಏಕಾದಶಿಯ ದಿನ ಏಕಾದಶಿಯ ಮಹತ್ವ ತುಳಸೀ ವಿವಾಹದ ಅರ್ಥಗಳನ್ನು ಶ್ರೀ|| ಶರ್ಮಾರವರು ಧರ್ಮಶಾಸ್ತ್ರವಿಚಾರದಿಂದ ವಿಶದಗೊಳಿಸಿದರು [illegible] ವಿದ್ಯಾರ್ಥಿಗಳಿಗೆ ಸಂಹಿತಾ [illegible] ಇಲ್ಲಿದೆ ಆಶ್ರಮದ ವಿದ್ಯಾರ್ಥಿಗಳೂ ಕ್ಷೇತ್ರವಾಸಿ ವಿದ್ಯಾರ್ಥಿಗಳೂ ಋಗ್ವೇದಪಾರ ಹೇಳಿದರು ಇಡೀ ಋಗ್ವೇದವನ್ನು ಸ್ವರಯುಕ್ತವಾಗಿ ವಿದ್ಯಾರ್ಥಿಗಳು ಪಠಣ ಮಾಡಿದರು ವೇದ-ಮಹಿಮೆಯನ್ನು ಪಾಶ್ಚಾತ್ಯರು ಮನದಣಿ ವರ್ಣಿಸಿದ್ದುಂಟು ನಮ್ಮ ಸನಾತನ ಜನಾಂಗ ವೇದವಿದ್ಯೆಯ ಪರಂಪರೆಯದು ವೇದವಿದ್ಯೆ ಪರಂಪರೆಯಿಂದ ಚ್ಯುತಿಯಿಲ್ಲದೆ ನಡೆದು ಬರಬೇಕೆಂದು ವೈದಿಕ ಸಂಪ್ರದಾಯ ರೂಢವಾಯಿತು, ಉಪನಯನ ಸಂಸ್ಕಾರ ವಿಧಿ ಕಲ್ಪಿಸಲ್ಪಟ್ಟಿತ, ಮಠ-ದೇವಾಲಯಗಳು ಸ್ಥಾಪಿಸಲ್ಪಟ್ಟವು, ಧರ್ಮ ಪೀಠಗಳು ನಿರ್ಮಿಸಲ್ಪಟ್ಟವು, ಪೀಠಾಧಿಪತಿಗಳಿಗೆ ದಂಡಾಧಿಕಾರ ಕೊಡಲ್ಪಟ್ಟಿತು ಆದರೆ ಧರ್ಮಸಂಸ್ಥೆಗಳೂ ಧರ್ಮಾಧಿಕಾರಿಗಳೂ ಕಾಲಮಹಿಮೆಯಿಂದಲೋ ಮತ್ತಾವ ಕಾರಣದಿಂದಲೋ ಸ್ವಸಮಾಜಗಳಲ್ಲಿ ವೇದವಿದ್ಯೆಯನ್ನು ಪ್ರಚಾರ ಮಾಡಲು ಅಸಮರ್ಥರಾದರು ಸನಾತನಿ ಸಮಾಜವೂ ಮುಖ್ಯವಾಗಿ ಬ್ರಾಹ್ಮಣ ವರ್ಗವೂ ವೈದಿಕ ವರ್ಗವೂ ವೇದ ರಕ್ಷಣೆಯ ಕಾರ್ಯದ ಕಡೆ ದುರ್ಲಕ್ಷ ಮಾಡಿದವು ಮುಂಚ ವೇದಗಳು ಪರಂಪರೆಯಿಂದ ಮುಖೋದ್ಗತವಾಗಿದ್ದವು ಈಗ ಅವು ಗ್ರಂಥಗಳಲ್ಲಿ ಅಚ್ಚು ಹಾಕಲ್ಪಟ್ಟಿವೆ ಆದಾಗ್ಯೂ ಈಗ ಅವನ್ನು ಪಠಿಸುವವರು ದುರ್ಲಭ ಬ್ರಾಹ್ಮಣರೇ ಅವನ್ನು ಹೀಯಾಳಿಸಿ, ತಮ್ಮ ಪರಂಪರೆಗೆ ಘಾತಕವಾದ ಪಾಶ್ಚಾತ್ಯ ವಿದ್ಯೆಯನ್ನು ರುಚಿಯಿಂದಲೂ ಅಭಿಮಾನದಿಂದಲೂ ಪಠಿಸಿ ಅರ್ಥಾರ್ಜನರಾಗತೊಡಗಿದ್ದಾರೆ ಇಂದ ದುರ್ಲಕ್ಷವಾಗಹತ್ತಿರುವ ಲೋಕಕ್ಕೆ ಶ್ರೀ|| ದೇವರಾತ ಶರ್ಮಾರವರು ಸ್ವೋದಾಹರಣೆಯಿಂದ ಸನ್ಮಾರ್ಗಬೋಧೆ ಮಾಡಹತ್ತಿದ್ದಾರೆ ಸಮಸ್ತ ಧರ್ಮಪೀಠಾಧೀಶರೂ ಮಠಾಧಿಕಾರಿಗಳೂ ದೇವಸ್ಥಾನಗಳ ಅಧಿಕಾರಿಗಳೂ ಉತ್ಸವ ಪ್ರಸಂಗಗಳಲ್ಲಿ ವೇದವಿದ್ಯೆಯನ್ನು ಪ್ರೋತ್ಸಾಹಿಸುವ ಕ್ರಮ ಕೈಕೊಳ್ಳಬೇಕು ವೇದವಿದ್ವಜ್ಜನರಿಗೆ ಉಡುಗೊರೆ ಮನ್ನಣೆಗಳನ್ನಿತ್ತು ಪ್ರೋತ್ಸಾಹಿಸಬೇಕು, ವೇದಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಭೋಜನ ನಿವಾಸಗಳನ್ನು ಪೂರೈಸಿ ಅನುಕೂಲ್ಯಗಳನ್ನು ಒದಗಿಸಿಕೊಡಬೇಕು ಧರ್ಮನಿಧಿಯ ವಿನಿಯೋಗ ಈ ಪರಿ ನಡೆಯಬೇಕು ಧರ್ಮ ಸಂಸ್ಥೆಗಳು ಸಾವಕಾರಿ ಸಂಘಗಳಲ್ಲ ಅಸಲಿಗ ಬಡ್ಡಿ ಬಡ್ಡಿಗ ಬಡ್ಡಿ ಕೂಡಿಸಿ ಹಣ ಒಟ್ಟಿ ಮಾಡುವ ಕರ್ತವ್ಯ ಈ ಸಂಸ್ಥೆಗಳಿಗೆ ವಿಧಿಸಿಲ್ಲ ಅದ ವ್ಯಾಪಾರಿಕದ ಕೆಲಸ ಧರ್ಮರಕ್ಷಣೆಯು, ವೇದ ವೇದಾಂತಗಳ ಜ್ಞಾನದ ಪ್ರಸಾರ ಪ್ರಚಾರಗಳು ಮತ್ತು ಧರ್ಮವಿಶ್ವಾಸದ ಕಾರ್ಯವೇ ಧರ್ಮಸಂಸ್ಥೆಗಳದು ಪರಮಧರ್ಮ [illegible] ಈ ಸಂಸ್ಥೆಗಳಲ್ಲಿ ಪ್ರಧಾನರಾಗಬೇಕು ಬ್ರಹ್ಮಚರ್ಯಾಶ್ರಮದವರು ಸೂಚಿಸಿದ ಮಾರ್ಗವನ್ನು ಸಮಸ್ತ ಧರ್ಮಾಧಿಕಾರಿಗಳೂ ಧರ್ಮಸಂಸ್ಥೆಗಳೂ ಅನುಸರಿಸಿ, ಸಂಕಲ್ಪಿತ ಧರ್ಮಸೇವೆ ಮಾಡಿ ಧರ್ಮೋದ್ಧಾರವನ್ನೂ ಸಮಾಜೋದ್ಧಾರವನ್ನೂ ಸಾಧಿಸತಕ್ಕದ್ದು ಆವಾಗ ಹಿಂದು ಸಮಾಜದಲ್ಲಿ, ವೈದಿಕ ಧರ್ಮದ ಅನುಯಾಯಿಗಳಲ್ಲಿ ನಮ್ಮ ಧರ್ಮದ ಧಾರ್ಮಿಕ ಗ್ರಂಥಗಳಲ್ಲಿ ತುಂಬಿರುವ ಶ್ರೇಷ್ಠ ಜ್ಞಾನಭಂಡಾರದ ವಿಜ್ಞಾನವಿಲ್ಲದ್ದರಿಂದಲೇ ಸ್ವದೇಶ ಧರ್ಮದ ಅವನತಿಯಾಗಲು ಕಾರಣವಾಗಿ [illegible] ಸ್ವಯಂಸ್ಫೂರ್ತಿಯ ಮಾತು ಜ್ಞಾನಪ್ರಸಾರದಿಂದಲೇ ಈ ಅವನತಿ ದೂರವಾಗಬಲ್ಲದು

ಸ್ಥಾನಿಕ ವೃತ್ತಾಂತ.

(೮ನೇ ಪುಟದಿಂದ ಮುಂದುವರಿದದ್ದು)

ಹಳ್ಳಿಗಳ ಸಾಲಗಳನ್ನು ಸಹಕಾರ ಸಂಘಗಳ ಉಪಾಧ್ಯಕ್ಷರಾಗಿ ವಸೂಲ ಮಾಡುವ ಸಹಕಾರ ಸಂಘಗಳ ಅವರಿಗೆ ತಾತ್ಕಾಲಿಕರಾಗಿಯೂ ಲೆಕ್ಕತಪಾಸಕರು ಈ ಕುರಿತು ಯಾವದೊಂದು ಜಾಗ್ರತೆ ಕೊಳ್ಳಲಿಲ್ಲವಾಗಿಯೂ ಶ್ರೀ॥ ಲಕ್ಷ್ಮೀಯವರು ಆವೇಶದಿಂದ ನುಡಿದರು. ಆ ಮೇಲೆ ಪ್ರದರ್ಶನದ ಉದ್ಘಾಟನ ಸಮಾರಂಭವಾಯಿತು. ಪ್ರದರ್ಶನದಲ್ಲಿ ಹೊನ್ನಾವರದ ಉದ್ಯೋಗ ಶಾಲೆಯವರೂ ಜಿಲ್ಹೆಯೊಳಗಿನ ಹುಡುಗ-ಹುಡುಗಿಯರೂ ಗ್ರಾಮೋದ್ಧಾರ ಶಾಲೆಯವರೂ ಕುಮಟಾ ಹೊನ್ನಾವರದ ಗುಡಿಗಾರರೂ ಚಿತ್ರಕಾರರೂ ಬೇಸಾಯಗಾರರೂ ಇಲ್ಲಿಯ ವನವರ್ಧನ ಉದ್ಯಾನದವರೂ ತಮ್ಮ ತಮ್ಮ ವಸ್ತುಗಳನ್ನಿಟ್ಟಿದ್ದರು. ಶ್ರೀ॥ ಲಕ್ಷ್ಮೀಯವರು ಅವನ್ನೆಲ್ಲ ನೋಡಿಕೊಂಡರು. ಬಳಿಕ ವಿಷಯನಿಯಾಮಕ ಕಮಿಟಿ ಸೇರಿ ಈ ಹೊತ್ತಿನ ಸಭೆಯಲ್ಲಿ ಸೂಚಿಸತಕ್ಕ ಠರಾವುಗಳು ನಿಶ್ಚಯಿಸಲ್ಪಟ್ಟವು. ಈ ಹೊತ್ತು ಬೆಳಿಗ್ಗೆ ಹನುಮಾನ ವ್ಯಾಯಾಮ ಶಾಲೆಯವರು ಬೇರೆ ಬೇರೆ ಅಂಗಸಾಧನೆಗಳನ್ನು ಮಾಡಿ ತೋರಿಸಿದರು. ಮಧ್ಯಾಹ್ನ ೨ ಘಂಟೆಗೆ ಸಭೆ ಸೇರಿ ಬೇರೆ ಬೇರೆ ಠರಾವುಗಳು ಮಂಜೂರ ಮಾಡಲ್ಪಟ್ಟವು. ಸಂಜೆ ೫॥ ಘಂಟೆಗೆ ಸದ್ಯಸ್ಥಿತಿಯ ಕುರಿತು ಶ್ರೀ॥ ಲಕ್ಷ್ಮೀಯವರ ಭಾಷಣವಾಯಿತು. [ಪರಿಷತ್ತಿನ ಸವಿಸ್ತರ ವೃತ್ತಾಂತ ಮುಂದೆ ಪ್ರಕಟಿಸಲ್ಪಡುವದು]

ಹುಲೇಕಲ್ಲ ವ್ಯಾಸರಾಯ ಮಠದ ಆಡಳಿತೆಯ ಸಂಬಂಧದಲ್ಲಿ ತಾ ೧-೯ ೧೯೪೧ರ "ವೃತ್ತ"ದಲ್ಲಿ ಪ್ರಕಟವಾದ ಟೀಕೆ ಸಮಂಜಸವಿರುವದಿಲ್ಲವೆಂತಲೂ, ಆಡಳಿತೆಗಾರರ ದ್ವೇಷದಿಂದ ಪ್ರೇರಿತವಾದದ್ದಿರುವದೆಂತಲೂ ಮಠದ ಏಜಂಟರಾದ ಭೀಮಸೇನರಾಯ ಇವರು ತಿಳಿಸುತ್ತಾರೆ. ದೇಶ ಕಾಲ ಪರಿಸ್ಥಿತಿಗನುಸಾರವಾಗಿ ಆಡಳಿತೆಯ ಖರ್ಚಿನಲ್ಲಿ ಮಿತವ್ಯಯ ಮಾಡಿ ತಂದಿರುವದು ನಿಜವಂತೆ. ಮಠದ ಸಂಬಂಧದಲ್ಲಿ ಕಾಲಕಾಲಕ್ಕೆ ಮಾಡತಕ್ಕ ಕರ್ತವ್ಯ ಕೆಲಸಗಳನ್ನು ಮಾಡದಿದ್ದವರಿಗೆ ನ್ಯಾಯ್ಯ ದಂಡ ವಿಧಿಸಿದ್ದೂ ನಿಜವೆಂದು ಅವರು ಒಪ್ಪುತ್ತಾರೆ. ಉತ್ಸವಗಳ ಕಾಲಕ್ಕೆ ಸೇವೆ ಮಾಡಬಂದ ಜನರಿಗೆ ಕಾಲೋಚಿತ ಮರ್ಯಾದೆ ಮಾಡಲು ತಾವು ತಪ್ಪಿಲ್ಲೆಂದೂ ಅವರ ಅಂಬೋಣವಿದೆ. ಕಾಲ ಮೀರಿ ಬಂದವರಿಗೆ ಮರ್ಯಾದೆ ಸಿಗದಿದ್ದರೆ ಅದಕ್ಕುಪಾಯವಿಲ್ಲ. ಬೇರೆಯವರಿಂದ ಬಂದ ಮರ್ಯಾದೆಗೆ ಪ್ರತಿಮರ್ಯಾದೆ ಸಲ್ಲುವದಿಲ್ಲೆಂಬದೂ, ಮಠದಲ್ಲಿ ಹಿಂದಿನ ಕಾಲದಿಂದ ನಡೆಯುತ್ತ ಬಂದ ಉತ್ಸವ ವಿನಿಯೋಗಗಳು ನಿಂತಿವೆಯೆಂಬದೂ ಸುಳ್ಳು ಸುಳ್ಳೆಂದೂ ಅವರು ತಿಳಿಸುತ್ತಾರೆ

ಸಿದ್ದಾಪುರ— (ತಾ ೨೪—೧೦—೪೧)
ತಾ ೨೨-೯-೪೧ರಿಂದ ತಾ ೩-೧೦-೪೧ರ ವರೆಗೆ ಜರುಗಿದ ಗಾಂಧಿ ಜಯಂತಿ ಉತ್ಸವದ ಕಾಲಕ್ಕೆ ರೂ ೨೭೩॥ಯ ಖಾದಿ ಮಾರಾಟವಾಗಿದೆ. ಕಳೆದ ಜನವರಿಯಿಂದ ಸೆಪ್ಟಂಬರ ತಿಂಗಳ ಕೊನೆಯ ತನಕ ಇಲ್ಲಿಯ ಖಾದಿ ಭಾಂಡಾರದಲ್ಲಿ ರೂ ೧೯೮೪ರ ಖಾದಿ ವಿಕ್ರಯವಾಗಿದೆಯೆಂದು ತಿಳಿಯುತ್ತದೆ

ಅಂಕೋಲಾ— (ತಾ ೧-೧೧ ೪೧) ಇದೇ ಬರುವ ತಾ ೪ರಿಂದ ತಾ ೧೧ರ ತನಕ ಜಿಲ್ಹಾಧಿಕಾರಿಗಳು ಈ ಊರಲ್ಲಿ ಮುಕ್ಕಾಮು ಮಾಡುವವರಿದ್ದಾರೆ

ನಮ್ಮ ಜಿಲ್ಹಾ ಗ್ರಾಮೋದ್ಧಾರ ಮಂಡಳವು ಯುದ್ಧಯತ್ನ ಕಾರ್ಯದಿಂದ ಅಲಿಪ್ತವಿರುವದಾಗಿ ಹಿಂದೆ ಜಿಲ್ಹಾಧಿಕಾರಿಗಳು ಜಾಹೀರ ಮಾಡಿದ್ದರು. ನಿಜ ಆದರೆ ಕರ್ನಾಟಕ ಪ್ರಾಂತಾಧ್ಯಕ್ಷರು ಮುಂಬಯಿ ಸರಕಾರಕ್ಕೆ ಈ ಬಗ್ಗೆ ಕೇಳಲಾಗಿ, " ಎಲ್ಲ ಗ್ರಾಮೋದ್ಧಾರ ಮಂಡಳಗಳ ಅಧಿಕಾರಸ್ಥರನ್ನೊಳಗೊಂಡು ಸಮಸ್ತ ಸರಕಾರಿ ಅಧಿಕಾರಿಗಳು ಯುದ್ಧಯತ್ನದ ಕೆಲಸಕ್ಕೆ ಸರ್ವ ವಿಧದಿಂದ ಸಹಾಯ ಮಾಡತಕ್ಕದ್ದೆಂದು ಸರಕಾರವು ಅಪೇಕ್ಷಿಸುತ್ತದೆ " ಎಂದು ಸರಕಾರದವರು ಉತ್ತರವನ್ನಿತ್ತಿದ್ದಾರೆ. ಆದ್ದರಿಂದ ಗ್ರಾಮೋದ್ಧಾರ ಮಂಡಳಗಳಲ್ಲಿ ಸೇರಿರುವ ಯಾವತ್ತು ಕಾಂಗ್ರೆಸ ಜನರು ಸದರಿ ಮಂಡಳಗಳಿಂದ ಹೊರಬೀಳಬೇಕೆಂದು ಪ್ರಾಂತಾಧ್ಯಕ್ಷರು ಈಗ ಹುಕುಮು ಮಾಡಿರುತ್ತಾರೆ. ಅದರಂತೆ ಜಿ॥ ಲೋಕಲ್ ಬೋರ್ಡಿನ ಈಗಿನ ಅಧ್ಯಕ್ಷ ರಾ॥ ಗೋಪಾಲರಾವ ದೇಸರವರೂ ರಾ॥ ರಾ॥ ಸುಬ್ರಾವ ಹಳದೀಪುರಕರ, ಮಾಧವ ಮಂಜನಾಥ ಶಾನಭಾಗ ಮತ್ತು ಲಕ್ಷ್ಮಣರಾವ ನಾಡಕರ್ಣಿ ಇವರೂ ಜಿಲ್ಹಾ ಗ್ರಾಮೋದ್ಧಾರ ಮಂಡಳದ ಸದಸ್ಯಸ್ಥಾನಗಳಿಗೆ ಇತ್ತೀಚಿಗೆ ರಾಜಿನಾಮೆ ಕೊಟ್ಟಿದ್ದಾರೆಂದು ರಾ॥ ತಿ ಶ್ರೀ ನಾಯಕರು ತಿಳಿಸುತ್ತಾರೆ

ಕಾರವಾರ, ಅಂಕೋಲಾ ಮತ್ತು ಕುಮಟಾ ತಾಲೂಕುಗಳಲ್ಲಿರುವ ಅಜಮಾಸ ೨೦೦೦ ಆಗೇರ ಜಾತಿಯವರ ದೀನಾವಸ್ಥೆ ಕಂಡು ಕಳಮಳಗೊಂಡ ಶ್ರೀ॥ ಠಕ್ಕರ ಬಾಬಾರವರು ಅವರ ಸ್ಥಿತಿಯನ್ನು ಸುಧಾರಿಸುವದಕ್ಕೆ ಇಲ್ಲೊಂದು ಹರಿಜನ ವಿದ್ಯಾರ್ಥಿ ವಸತಿಗೃಹವನ್ನು ತೆರೆಯಬೇಕೆಂದು ಯೋಚಿಸಿದ್ದರಷ್ಟೇ. ಅವರ ಸಲಹೆಗನುಸಾರವಾಗಿ ಕಳೆದ ಜೂನ ತಿಂಗಳಿಂದ ಇಲ್ಲಿ ಒಂದು ವಸತಿಗೃಹ ತೆರೆಯಲ್ಪಟ್ಟಿದೆ. ಹಾಲಿ ೫ ಮಂದಿ ಹಳ್ಳಿಯ ವಿದ್ಯಾರ್ಥಿಗಳು ಅದರಲ್ಲಿ ಸೇರಿದ್ದಾರೆ. ವಸತಿಗೃಹಕ್ಕೆ ಯೋಗ್ಯ ಇಮಾರತು ಸಿಗದ್ದರಿಂದ ತಾತ್ಕಾಲಿಕ ಅದನ್ನು ಆಗೇರ ಜನರ ಕೇರಿಯಲ್ಲಿರುವ ಒಂದು ಗುಡಿಸಲಿನಲ್ಲಿ ತೆರೆಯಲಾಗಿದೆ. ವಸತಿಗೃಹದ ಖಾಲಿ ವೆಚ್ಚದ ಬಗ್ಗೆ ಹಿಂದೆ ಕಾರವಾರ ವಿಭಾಗದ ಆ॥ ಕಲೆಕ್ಟರರಾಗಿದ್ದ ರಾ॥ ರಾ ಜವಾಡೇ ಇವರು ಶ್ರೀ॥ ಠಕ್ಕರ ಬಾಬಾರವರು ಇಲ್ಲಿ ಬಂದಾಗ ಕೊಟ್ಟ ಅಭಿವಚನದಂತೆ ಪ್ರತಿ ತಿಂಗಳಿಗೆ ರೂ ೧೦ ರಂತೆ, ಹಾಗೂ ಕಾರವಾರ ೧ನೇ ವರ್ಗದ ಸಬಜಡ್ಜ ರಾ॥ ಭೋಜ ಮತ್ತು ಅಬಕಾರಿ ಸುಪರಿಂಟೆಂಡೆಂಟ ರಾ॥ ಅಂಗಡಿ ಇವರಿಬ್ಬರು ಪ್ರತಿ ತಿಂಗಳಿಗೆ ರೂ ೫-೫ ರಂತೆ ಕೊಡುತ್ತಿರುವ ವಂತಿಗೆ ಹಣದಿಂದಲೂ ಸ್ಥಾನಿಕ ವರ್ಗಣಿ ಹಣದಿಂದಲೂ ಖಾಲಿ ವೆಚ್ಚ ಸಾಗುತ್ತಿದೆ. ಆದರೆ ವಸತಿಗೃಹಕ್ಕೆ ಯೋಗ್ಯ ಸ್ಥಳದಲ್ಲಿ ಒಂದು ಸ್ವತಂತ್ರ ಇಮಾರತಿನ ಏರ್ಪಾಟುವಿಲ್ಲದೆ ವಸತಿಗೃಹ ತೆರೆಯುವದರಲ್ಲಿ ಒಳಗೊಂಡಿರುವ ಮೂಲ ಉದ್ದೇಶವು ಸಫಲವಾಗುವಂತಿಲ್ಲ. ಆದ್ದರಿಂದ ಸದರಿ ವಸತಿಗೃಹಕ್ಕೆ ಸ್ವತಂತ್ರ ಇಮಾರತು ಕಟ್ಟಿಸುವ ಬಗ್ಗೆ ಧನಸಹಾಯ ನೀಡಬೇಕೆಂದು ಜಿಲ್ಹಾಧ್ಯಕ್ಷ ರಾ॥ ಶಿವರಾವ ಶಾಸ್ತ್ರಿ, ಉಪಾಧ್ಯಕ್ಷ ರಾ॥ ತಿಮ್ಮಪ್ಪ ನಾಯಕ, ರಾ ಶೇಷಗಿರಿರಾವ ಕೇಶವೈನ, ಜಿಲ್ಹಾ ಮಧ್ಯವರ್ತಿ ಸಹಕಾರಿ ಬೇಂಕಿನ ಅಧ್ಯಕ್ಷರಾದ ರಾ॥ ಸುಂದರರಾವ ಪಂಡಿತ, ಕಾರವಾರದ ವಕೀಲ ರಾ॥ ಕೃಷ್ಣರಾವ ಹಳದೀಪುರಕರ ವಗೈರೆ ಸದ್ಗೃಹಸ್ಥರು ಸಾರ್ವಜನಿಕರಲ್ಲಿ ವಿನಂತಿ ಮಾಡಿದ್ದಾರೆ. ೨೫ ವಿದ್ಯಾರ್ಥಿಗಳಿಗೆ ಸಾಲುವಷ್ಟು ದೊಡ್ಡ ಇಮಾರತು ಕಟ್ಟಬೇಕೆಂದು ಸದರಿ ಗೃಹಸ್ಥರ ಸಂಕಲ್ಪವಾಗಿರುತ್ತಿದ್ದು ಅದಕ್ಕೆ ರೂ ೧೬೦೦ ಖರ್ಚು ತಗಲುವದೆಂದು ಅಂದಾಜು ಮಾಡಲಾಗಿದೆ

ಅವರ್ಸಾ— (ತಾ ೧೮—೧೦—೪೧)
೧೫ ವರ್ಷಗಳಿಂದ ಇಲ್ಲಿ ವಾಸ್ತವ್ಯ ಮಾಡಿಕೊಂಡಿದ್ದ ಮಳೆಯಾಳಿ ರಾಮಾ ಎಂಬ ಗವಂಡಿಯು ಕಳೆದ ತಾ ೧೬ನೇ ಸಂಜೆ ವಿಷಮ ಜ್ವರದಿಂದ ತೀರಿಕೊಂಡನು. ಕೇರಿಯವರೊಬ್ಬರೂ ಅವನ ಶವದ ವ್ಯವಸ್ಥೆ ಮಾಡಲು ಮುಂದಾಗಲಿಲ್ಲ! ಪಟೇಲರೂ ಅದರ ವ್ಯವಸ್ಥೆ ಮಾಡಲಿಲ್ಲ! ಊರವರು ಪಂಚಾಯತ ಕಮಿಟಿಯ ಅಧ್ಯಕ್ಷರಿಗೆ ಈ ವರ್ತಮಾನ ಕೊಟ್ಟು, ನೀವಾದರೂ ವ್ಯವಸ್ಥೆ ಮಾಡಿರೆಂದು ಬಿನ್ನವಿಸಲಾಗಿ « ಅದು ನಮ್ಮ ಕೆಲಸವಲ್ಲ ಗ್ರಾಮಸ್ಥರಿಗೆ ಹೇಳಿಕೊಳ್ಳಿರಿ! » ಎಂದು ಅವರು ಪ್ರತ್ಯುತ್ತರ ಕೊಟ್ಟರು! ಊರೊಳಗಿನ ಒಂದು ಅನಾಥ ಪ್ರೇತದ ವ್ಯವಸ್ಥೆ ಮಾಡಲಾಗದಿದ್ದ ಜನರು ಗ್ರಾಮಪಂಚಾಯತವು ಏಕೋ ಏನೋ! ಮುಂದೆ ಕೆಲವರು ಹೇಗಾದರೂ ಮಾಡಿ ಆ ಪ್ರೇತದ ದಹನ ಮಾಡಿಸಿದರು

ಊರಲ್ಲಿ ಆಮಾಂಶ, ಅತಿಸಾರ, ವಿಷಮಜ್ವರ ಮುಂತಾದ ಬೇನೆಬೇಸರಿಕೆಗಳು ಹಬ್ಬಿಕೊಂಡಿವೆ

ಇಲ್ಲಿಯ ಶ್ರೀ ಶಾಂತ್ಯಾಯನೀ ಬಾಣೇಶ್ವರ ದೇವಸ್ಥಾನದಲ್ಲಿ ಒಬ್ಬ ಅರ್ಚಕರ ಕಡೆಯಿಂದ ವಿನಿಯೋಗಗಳು ಸರಿಯಾಗಿ ಸಾಗುವದಿಲ್ಲೆಂತಲೂ, ಇನ್ನೊಬ್ಬ ಅರ್ಚಕರಿಗೆ ನೇಮಿಸಿಕೊಳ್ಳಬೇಕೆಂತಲೂ ಭಜಕರೂ ಮಹಾಜನರೂ ಕೇಳಿ ಎರಡು ವರ್ಷಗಳಾದವು. ಆದರೆ ಇನ್ನೂ ಹೊಸ ಅರ್ಚಕರ ನೇಮಣೂಕಿಯಾಗಿರುವದಿಲ್ಲ. ಮೊಕ್ತೇಸರರು ಹೀಗೇಕೆ ಮಾಡುತ್ತಿರುವರೆಂದು ಭಜಕರೊಬ್ಬರ ಪ್ರಶ್ನೆ

ಇತ್ತೀಚಿಗೆ ಗೋವೆಯಿಂದ ಬಹಳಷ್ಟು ಕಳವಿನ ಸರಾಯಿ ಬರುತ್ತದೆ. ಸರಾಯಿ ಕುಡಿದು ರಸ್ತೆ ಬದಿಗೆ ಬೀಳುವ ಜನರು ಮೇಲಿಂದ ಮೇಲೆ ಕಣ್ಣಿಗೆ ಬೀಳುತ್ತಿರುವರು. ಈ ಬಗ್ಗೆ ಪಟ್ಟಿಗಳೂ ಆಗುತ್ತಿವೆ. ಹೀಗಿದ್ದುಕೊಂಡು ಸರಾಯಿಯನ್ನು ಮಾತ್ರ ಯಾರೂ ಹಿಡಿಯುವದಿಲ್ಲ! ಅಬಕಾರಿ ಅಧಿಕಾರಿಗಳು ಎಲ್ಲಿದ್ದಾರೆ?

ಕಾರವಾರ— (ತಾ ೨೫-೧೦ ೧೯೪೧) ಕಳೆದ ಜುಲಾಯಿ ತಿಂಗಳಲ್ಲಿ ಇಲ್ಲಿ ಸೇರಿದ ಮಾಧ್ಯಮಿಕ ಶಾಲೆಗಳ ಮುಖ್ಯಾಧ್ಯಾಪಕರ ಪರಿಷತ್ತಿನಲ್ಲಿ, ಮುಂಬಯಿ ವಿಶ್ವವಿದ್ಯಾಲಯದವರು ಇದೇ ಬರುವ ೧೯೪೨ ರಿಂದ ಈ ಜಿಲ್ಹೆಯಲ್ಲೊ ಮೆಟ್ರಿಕ್ ಪರೀಕ್ಷೆಯ ಒಂದು ಕೇಂದ್ರವನ್ನು ಇಡುವದು ಅವಶ್ಯವಿರುತ್ತದೆಂದು ಶಿಫಾರಸು ಮಾಡುವ ಒಂದು ಗೊತ್ತುವಳಿಯಾಗಿತ್ತು. ಆ ರೀತಿ ಇಲ್ಲಿ ಕೇಂದ್ರವನ್ನಿಡುವದು ಅವಶ್ಯವುಂಟೋ ಹೇಗೆ, ಇಟ್ಟರೆ ಬೇಕಾದ ಅನುಕೂಲತೆಗಳು ಇಲ್ಲಿ ಸಿಗುವಂತಾಗುಂಟೋ ಹೇಗೆ ಎಂಬುದರ ಪರೀಕ್ಷೆ ಮಾಡಲು ವಿಶ್ವವಿದ್ಯಾಲಯದ ರಜಿಸ್ಟ್ರಾರರು ಬೇಗನೇ ಇಲ್ಲಿಗೆ ಬರುವವರಿದ್ದಾರೆಂದು ವದಂತಿಯಿದೆ. ಈ ಜಿಲ್ಹೆಯಲ್ಲಿ ಈಗ ೧೦ ಹಾಯಸ್ಕೂಲುಗಳಿರುತ್ತಿದ್ದು ಪ್ರತಿ ವರ್ಷ ಸುಮಾರು ೪೦೦ರಷ್ಟು ವಿದ್ಯಾರ್ಥಿಗಳು ಮೆಟ್ರಿಕ್ ಪರೀಕ್ಷೆಗೆ ಕೂಡ್ರುತ್ತಾರೆ. ಜಿಲ್ಹೆಯಲ್ಲೇ ಕೇಂದ್ರವಾದರೆ ಇಷ್ಟು ವಿದ್ಯಾರ್ಥಿಗಳಿಗೆ ಬಹಳ ಅನುಕೂಲವಾಗುವದು. ಈಗಂತೂ ಪೆಟ್ರೋಲ ರೇಶನ ಮೂಲಕ ಮೋಟಾರ ಬಂಡಿಗಳಲ್ಲಿ ಪ್ರವಾಸ ಮಾಡುವದು ತ್ರಾಸಕರವಾಗಿದೆ. ಬಂಡಿಗಳಲ್ಲಿ ಸ್ಥಳ ಸಿಗುವದೇ ಕಷ್ಟವಾಗುತ್ತಿದೆ. ಪರೀಕ್ಷೆಗೆ ಕೂಡ್ರುವ ವಿದ್ಯಾರ್ಥಿಗಳು ಬೆಳಗಾಂವ, ಧಾರವಾಡ, ಮುಂಬಯಿ ಮುಂತಾದ ಊರುಗಳಿಗೆ ಹೋಗಬೇಕಾದರೆ ೫ ೬ ದಿನ ಮುಂಚಿಯೇ ಹೊರಟು ಹೋಗಬೇಕಾದೀತು. ಹಾಗಾದಲ್ಲಿ ಪರಸ್ಥಳಗಳಲ್ಲಿ ಅನವಶ್ಯಕ ದಿನವಂಶೆ ಮಾಡಿ ಹುಡುಗರು ವಿನಾಕಾರಣ ದೇಹಯಾತನೆಯನ್ನೂ, ಹೇರಳ ಖರ್ಚನ್ನೂ ಅನುಭವಿಸಬೇಕಾದೀತು. ಆದ್ದರಿಂದ ಮುಖ್ಯಾಧ್ಯಾಪಕರ ಪರಿಷತ್ತಿನ ಶಿಫಾರಸಿನಂತೆ ವಿಶ್ವವಿದ್ಯಾಲಯದವರು ಈ ವರ್ಷದ ಮಟ್ಟಿಗಾದರೂ ಇಲ್ಲೊಂದು ಕೇಂದ್ರವನ್ನು ತೆರೆಯಬೇಕಾಗಿ ಜನರ ಆಗ್ರಹವಿದೆ

ಇಲ್ಲಿಯ ಹೆಣ್ಣು ಮಕ್ಕಳ ಶಾಲೆಯಲ್ಲಿ ಜರುಗಿದ ಶಾರದಾ ಪೂಜೆಯ ಉತ್ಸವದ ಕಾಲಕ್ಕೆ ಒಂದು ಚಿಕ್ಕ ಕೊಂಕಣಿ ನಾಟಕದ ಪ್ರಯೋಗವಾಯಿತು. ಆ ನಾಟಕದಲ್ಲಿ ಹುಡುಗಿಯರು ಸಭೆಸೇರಿ ವರದಕ್ಷಿಣೆಯ ಪದ್ಧತಿಯ ನಿಷೇಧ ಮಾಡುತ್ತಾರೆ, ಮತ್ತು ವರದಕ್ಷಿಣೆಯನ್ನು ತೆಗೆದುಕೊಳ್ಳದೆ ಮದುವೆ ಮಾಡಿಕೊಳ್ಳಲು ತಯಾರಿದ್ದ ತರುಣರು ಸಿಗುವ ವರೆಗೆ ತಾವು ಅವಿವಾಹಿತರಾಗಿರುವೆವೆಂದು ಪ್ರತಿಜ್ಞೆ ಮಾಡುತ್ತಾರೆ. ಹುಡುಗಿಯರ ಈ ಬಗೆಯ ಗೊತ್ತುವಳಿಯಿಂದಲೂ ಪ್ರತಿಜ್ಞೆಯಿಂದಲೂ ಹಿರಿಯರ ಮನಸ್ಸಿನ ಮೇಲೆ ಯೋಗ್ಯ ಪರಿಣಾಮವಾಗುವಂತೆ ನಾಟಕಕಾರರು ಕುಶಲತೆಯಿಂದ ಚಿತ್ರಿಸಿದ್ದಾರೆ. ಹುಡುಗಿಯರ ಈ ಪ್ರಯೋಗದಿಂದ ಇಲ್ಲಿಯ ಸಮಾಜದ ಮೇಲೂ ಕೆಲಮಟ್ಟಿಗೆ ಪರಿಣಾಮವಾಗಿದೆ

ಕಾನಡಾವೃತ್ತ.

ಮಿತಿ ವೃಷ ಸಂವತ್ಸರ ಕಾರ್ತಿಕ ಶು॥ ೧೫ಮಿ, ಸೋಮವಾರ.

ಮಹಾತ್ಮರ ನಿತಾಂತ ನಿರ್ಧಾರ.

ನಮ್ಮ ಜನಾಂಗವನ್ನು ಮೋಸಗೊಳಿಸಬಹುದೆಂಬ ಕಲ್ಪನೆಯನ್ನು ಒಮ್ಮೆಲೇ ಬಿಟ್ಟುಬಿಡಬೇಕಾಗಿ ನಾವು ಸಾಮ್ರಾಜ್ಯಕರ್ತರಿಗೆ ಒತ್ತಿಹೇಳುವವು ಯಾವದೇ ಭೀತಿ ಹಾಕಿದಾಗ್ಯೂ ಹಿಂದವಾಸಿಯರು ಯುದ್ಧಯತ್ನೋನ್ಮುಖವಾಗುವದು ಈಗಾಗ ದುರ್ಘಟವಾದದ್ದು ರಾಷ್ಟ್ರೀಯ ಸಭೆಯವರಿರಲಿ ಮುಸ್ಲಿಮ ಲೀಗಿನವರಿರಲಿ ಉದಾರಮತವಾದಿಗಳಿರಲಿ, ಸಪ್ರುರವರಂಥ ಮಧ್ಯಸ್ಥರೇ ಇರಲಿ, ಯಾರೇ ಇರಲಿ, ಅವರೆಲ್ಲರೂ ಹೇಳುವ ಮಾತು ಒಂದೇ! ಹಿಂದುಸ್ಥಾನದೊಳಗೆ ಹಿಂದೀಯರನ್ನು ಸ್ವಾಭಿಮಾನದಿಂದ ನಡಿಸಿಕೊಳ್ಳುವ ಏರ್ಪಾಟಾಗುವನಕ ಬ್ರಿಟಿಶರ ವಿದ್ಯಮಾನ ಹಿಂದುಸ್ಥಾನದೊಳಗೆ ನಡೆಯುವ ಯುದ್ಧಯತ್ನದಲ್ಲಿ ಪ್ರವೇಶಿಸಲು ಒಬ್ಬರೂ ಉತ್ಸಾಹಪಡಲಾರರು ಯುದ್ಧ-ಘಟನೆಗಳು ಬದಲಿವೆ, ಕ್ರಾಂತಿಕಾರಕ ಸ್ಥಿತ್ಯಂತರಯೋಗಗಳು ಕೂಡಿಬಂದಿವೆ, ನರೆಹೊರೆಯಲ್ಲಿ ಯುದ್ಧ ಒಂದು ತಲ್ಪಿದೆ; ಹಿಟ್ಲರನು ಹಿಂದುಸ್ಥಾನದ ಮೇಲೆಯೇ ದಂಡೆತ್ತಿ ಬರುವ ಸಂಭವವುಂಟು, ನಮ್ಮ ಮತ್ತು ಬ್ರಿಟಿಶರೊಳಗಿನ ವಿವಾದಗಳನ್ನು ಮುಂದ ನೋಡುವಾ, ಮೊಟ್ಟಮೊದಲು ಯುದ್ಧವನ್ನು ಜಯಿಸಿಕೊಳ್ಳುವಾ, ಹೀಗೆ ಸಾಮ್ರಾಜ್ಯಕರ್ತರ ಪರವಾಗಿ ಪ್ರತಿಪಾದನೆಯಾಗುತ್ತದೇನೋ ಅಹುದು ಆದರೆ ಅದನ್ನು ರಾಷ್ಟ್ರೀಯ ಸಭೆಯ ಸರ್ವಸೂತ್ರಚಾಲಕರಾದ ಮಹಾತ್ಮರು ಗಣಿಸುವದಿಲ್ಲ ಸಾಮಾನ್ಯವಾದ ವಾಕ್‌-ಸ್ವಾತಂತ್ರ್ಯ ಸಹ ಸಿಗದಿದ್ದಾಗ ಯುದ್ಧವನ್ನು ಗೆದ್ದುಕೊಂಡು ಲೋಕಕಾರ್ಯ ಸಾಧಿಸುವದಿಲ್ಲೆಂದು ಮಹಾತ್ಮರ ನಿಶ್ಚಿತಾಭಿಪ್ರಾಯವಾಗಿದೆ ರಾಷ್ಟ್ರೀಯ ಸಭೆಯ ಧೋರಣವನ್ನು ಒದಲಿಸುವ ಇಲ್ಲವೆ ಸತ್ಯಾಗ್ರಹವನ್ನು ನಿಲ್ಲಿಸುವ ಪರಿಸ್ಥಿತಿ ಉಂಟಾಗಿಲ್ಲವಾಗಿ ಮಹಾತ್ಮರು ಗುರುವಾರ ಹೊರಡಿಸಿದ ಪ್ರಕಟನೆಯಲ್ಲಿ ಸ್ಫುಟಗೊಳಿಸಿದ್ದಾರೆ ಸತ್ಯಾಗ್ರಹದ ಶಕ್ತಿ ಗುಣಪ್ರಧಾನವಾದುದೆಂದೂ, ಸಂಖ್ಯೆ ಗೌಣವೆಂದೂ, ಸತ್ಯಾಗ್ರಹದಲ್ಲಿ ಭಕುತಿಯಿಲ್ಲದವರು ಅಥವಾ ಕಾರಣಾಂತರದಿಂದ ಸೇರಲಾಗದವರು ವಿಧಾಯಕ ಕಾರ್ಯಕ್ರಮವನ್ನು ಕೈಕೊಂಡು ಸ್ವದೇಶಬಾಂಧವರಿಗೆ ಸ್ವಾವಲಂಬನದ ಪಾಠಗಳನ್ನು ಕಲಿಸಬೇಕೆಂದೂ ಅನುಜ್ಞೆ ಮಾಡುತ್ತಾರೆ ವಿಧಾಯಕ ಕಾರ್ಯಕ್ರಮದ ವಿವರವನ್ನು ಈವಾಗ ಬಂಧು-ಭಗಿನಿಯರೆಲ್ಲರೂ ಚೆನ್ನಾಗಿ ಬಲ್ಲರು ಖಾದಿಯನ್ನು ತೊಡಬೇಕು ಖಾದಿಯನ್ನು ತಯಾರಿಸಬೇಕು, ಸಾಧ್ಯವಿದ್ದರೆ ಸ್ವತಃ ನೂತ ನೂಲಿನಿಂದ ಖಾದಿಯನ್ನು ನೇಯಿಸಿ ಧರಿಸಬೇಕು, ಗ್ರಾಮ ಕೈಗಾರಿಕೆಗಳನ್ನು ಪುರಸ್ಕರಿಸಬೇಕು, ಸ್ವಂತ ಗ್ರಾಮಗಳಲ್ಲಿ ಹುಟ್ಟುವ ಇಲ್ಲವೆ ತಯಾರಿಸಲ್ಪಡುವ ಕೈಗಾರಿಗಳಿಂದ ಅಥವಾ ಜೀನಸುಗಳಿಂದ ಸ್ವಂತ ಪ್ರಪಂಚವನ್ನು ಸಾಗಿಸಿಕೊಳ್ಳಬೇಕು, ಕೈ-ಕುಟ್ಟಿದ ಅಕ್ಕಿ, ಬೆಲ್ಲ, ಕಾಯಿಪಲ್ಲೆ, ವನಸ್ಪತಿ ಇವುಗಳಿಂದಲೇ ಗ್ರಾಮವಾಸಿಗಳು ನಿರ್ವಾಹ ಮಾಡಕಲಿಯಬೇಕು ಎಂದರೆ ಪ್ರತಿಯೊಬ್ಬರು ಸ್ವಯಂಪೂರ್ಣರಾಗಬೇಕು, ವ್ಯಕ್ತಿಯ ಮಟ್ಟಿಗೆ ವ್ಯಕ್ತಿಯು ಪೂರ್ಣ, ಮನೆತನದ ಮಟ್ಟಿಗೆ ಮನೆತನವು ಪೂರ್ಣ, ಗ್ರಾಮದ ಮಟ್ಟಿಗೆ ಗ್ರಾಮವು ಪೂರ್ಣ, ಹೀಗೆ ಸಮಾಜದ ಘಟಕಗಳಲ್ಲಿ ಪೂರ್ಣತೆ ಮೈಗೊಂಡ ಹಾಗೆ ಸ್ವದೇಶವು ಸ್ವಯಂಪೂರ್ಣವಾಗಿ, ಲೋಕಸುಲಿಗೆಯಿಂದ ಸ್ವಂತ ಮುಕ್ತಸ್ಥಿತಿಯನ್ನು ಸಾಧಿಸಬಯಸುವವರು ತಾವಾಗಿಯೇ ನಮ್ಮ ಜನಾಂಗದ ಮೇಲಿನ ಅಭಿಲಾಷೆಯನ್ನು ತೊರೆಯುತ್ತಾರೆ, ಸಾಮ್ರಾಜ್ಯಶಾಹಿ, ಹಿಟ್ಲರಶಾಹಿ ಮೊದಲಾದ ಹಿಂಸಾಚಾರಿ ಲೋಕಕಂಟಕ ರಾಜ್ಯತಂತ್ರಗಳು ನಮ್ಮ ಅಪೂರ್ಣತೆಯ ಹಾಗೂ ಪರಾವಲಂಬನದ ಪರಿಸ್ಥಿತಿಯಲ್ಲಿ ಹುಟ್ಟಿದ ಇಲ್ಲವೆ ಹುಟ್ಟುವ ಸ್ವಾಭಾವಿಕ ಘಟನೆಗಳು ವಿಕಾರ-ಕಾರಣ ವಿಧ್ವಂಸಕ ವಿಕಾರ-ಕ್ಷೇತ್ರ ಕಾರ್ಯಕಾರಿಯಾಗುವದಿಲ್ಲ, ವಿಕಾರ-ಕಾರಣವೇ ವಿಕಾರ-ಕ್ಷೇತ್ರದ ವಿನಾಶಕ್ಕೆ, ಅಭಿವೃದ್ಧಿಗೆ ಕಾರಣ ಮಹಾತ್ಮರು ಈ ಮರ್ಮವನ್ನು ಗ್ರಹಿಸಿಕೊಂಡು ಸ್ವದೇಶಬಾಂಧವರಿಗೆ, ಸತ್ಯಾಗ್ರಹವನ್ನು ಕೈಕೊಳ್ಳಲಾರದ ದುರ್ಬಲರಿಗೆ, ಅಶಕ್ತರಿಗೆ ವಿಧಾಯಕ ಕಾರ್ಯಕ್ರಮದ ಅಮೋಘವಾದ ಉಪದೇಶವನ್ನು ಮಾಡುತ್ತಾರೆ ಪ್ರತಿಯೊಬ್ಬರೂ ಸ್ವಯಂಪೂರ್ಣರಾದರೆ, ಸ್ವಾವಲಂಬಿಗಳಾದರೆ, ಸ್ವಯಂಪೂರ್ಣತೆ ಸ್ವಾವಲಂಬನಗಳನ್ನೇ ಗುರಿಯಿಟ್ಟುಕೊಂಡು ಪ್ರಪಂಚವನ್ನು ನಡಿಸಬಯಸಿದರೆ, ವ್ಯಕ್ತಿ ವ್ಯಕ್ತಿಗಳೊಳಗೆ, ಜಾತಿ ಜಾತಿಗಳೊಳಗೆ, ಧರ್ಮ-ಸಂಪ್ರದಾಯಗಳೊಳಗೆ ಉಂಟಾಗುವ ಕಲಹ ಕಾರಣಗಳು ತಾವಾಗಿಯೇ ವಿಲಯ ಹೊಂದಿ ಸಾಮಾಜಿಕ ಐಕ್ಯವು ಸ್ವಾಭಾವಿಕವಾಗಿ ನೆಲೆಗೊಳ್ಳುವದು. ಮಹಾತ್ಮರ ವಿಚಾರಸರಣಿಯನ್ನು ಸಾಮ್ರಾಜ್ಯಕರ್ತರು ನಿತಾಂತ ಗಾಂಭೀರ್ಯದಿಂದ ಅಭ್ಯಾಸ ಮಾಡಬೇಕಾಗಿ ನಾವು ಒತ್ತಿ ಹೇಳುತ್ತೇವೆ ಸರಕಾರಕ್ಕೆ ಉಪದ್ರವ ಕೊಡಲು ಎಷ್ಟಕ್ಕೂ ತಾವು ಬಯಸುವದಿಲ್ಲವಾಗಿ ಮಹಾತ್ಮರು ತಮ್ಮ ಪ್ರಕಟಣೆಯಲ್ಲಿ ಮನೋನಿರ್ಧಾರದಿಂದ ಬರೆದು, ಸರಕಾರದ ವ್ಯವಹಾರಗಳನ್ನು ಗಣನೆಗೆ ತಾರದೆ ನಮ್ಮಷ್ಟಕ್ಕೆ ನಾವು ನಮ್ಮ ವ್ಯವಹಾರಗಳನ್ನು ನಡಿಸತಕ್ಕದ್ದಾಗಿಯೂ, ನಮ್ಮ ಧೋರಣದಂತೆ ನಾವು ನಡೆಯುವಲ್ಲಿ ಸರಕಾರದೊಡನೆ ಕಲಹವಾಗುತ್ತಿದ್ದರೆ ಅದು ಕ್ರಮಪ್ರಾಪ್ತವಾದುದೆಂದು ಪ್ರತಿಭಟಿಸತಕ್ಕದ್ದಾಗಿಯೂ ಮಹಾತ್ಮರ ಅಂಬೋಣವುಂಟು. ಈವಾಗ ನಮ್ಮ ಜನಾಂಗದ ಅಂತಃಕರಣದಲ್ಲಿ ಮಹಾತ್ಮರ ಮಾತು ನೆಟ್ಟುಹೋಗಿದೆಂದು ನಾವು ಪ್ರತ್ಯೇಕವಾಗಿ ನಮೂದಿಸುವದನವಶ್ಯಕ ಮಹಾತ್ಮರ ವ್ಯಾಪಾರಗಳು ಹಿಂದದೇಶ ವ್ಯಾಪ್ತವಾದದ್ದರಿಂದಲೇ ಲೋಕಪ್ರಮುಖರೂ ಅಧಿಕಾರಿ ಪ್ರಮುಖರೂ ಮಹಾತ್ಮರೊಡನೆ ವಿಚಾರ-ವಿನಿಮಯ ಮಾಡುತ್ತಿದ್ದಾರೆ. ದೇಶ-ವಿದೇಶಗಳಲ್ಲಿ ಒದಗುವ ಘಟನೆಗಳ ಕುರಿತು ಮಹಾತ್ಮರ ಮನೋಭೂಮಿಯಲ್ಲಿ ಉಂಟಾಗುವ ಸ್ಥಿತ್ಯಂತರಗಳನ್ನು ಅರಿತುಕೊಳ್ಳಲು ಜನರು ಆತುರಪಡುತ್ತಿದ್ದಾರೆ ನಮ್ಮ ಜನಾಂಗ ಈವಾಗ ಮಹಾತ್ಮರಲ್ಲಿ ತನ್ಮಯವಾಗಿದೆ. ಮಹಾತ್ಮರ ಅಂತಃಕರಣವು ಯುದ್ಧ-ಯತ್ನಮುಖವಾಡನಕ ಹಿಂದ-ಜನಾಂಗ ಯುದ್ಧಯತ್ನಮುಖವಾಗುವದಾಗಿ ಸರಕಾರವು ಎಣಿಸುವದು ದಡ್ಡತನವೆಂದು ನಮ್ಮ ಅಭಿಪ್ರಾಯ ಯುದ್ಧನಿಧಿ ಅಪೇಕ್ಷೆಗಿಂತ ಮಿಗಿಲಾಗಿ ಕೂಡಿತು, ಇನ್ನೂ ಕೂಡುತ್ತಿದೆ, ತರುಣರು ಸೈನ್ಯದಲ್ಲಿ ಸೇರುತ್ತಿದ್ದಾರೆ, ಸೇರಬಯಸುತ್ತಿದ್ದಾರೆ, ಕಾರಖಾನೆಗಳು ತೆರಪಿಲ್ಲದೆ ಯುದ್ಧಸಾಮಗ್ರಿಯನ್ನು ತಯಾರಿಸುತ್ತಿವೆ, ಇವೇ ಮೊದಲಾದ ಪ್ರಕಟನೆಗಳನ್ನು ಹಿಂದುಸ್ಥಾನ ಸರಕಾರವು ಹೊರಡಿಸಿ, ರಾಷ್ಟ್ರೀಯ ಸಭೆಯ ಮತ್ತು ಮಹಾತ್ಮರ ವಿರೋಧ ಪರಿಣಾಮಕಾರಿಯಾಗಿಲ್ಲೆಂದು ಲೋಕಕ್ಕೆ ಸಾರುತ್ತಿದೆ. ಇಂಥ ಲೋಕವಂಚನೆಗಳನ್ನು ಸರಕಾರವು ಯಾರ ಬಗ್ಗೆ ನಡಿಸುತ್ತಿದೆಂದು ನಮಗೇನು ತಿಳಿಯದ ಮಾತು! ಯುದ್ಧನಿಧಿಗೆ ಕೊಡುಗೈಯಿಂದ ಧರ್ಮ ಮಾಡಿದ ಮಹಾನುಭಾವರಿಗೂ ಸಾಮ್ರಾಜ್ಯಕರ್ತರ ಹಟದಿಂದ ಉಪರತಿಯುಂಟಾಗಹತ್ತಿದೆ. ಮದ್ರಾಸ ಪ್ರಾಂತದ ಯುದ್ಧಮಂಡಳದ ಓರ್ವ ಸಭಾಸದರಾದ ರಾ॥ ರಾಮಚಂದ್ರ ರೆಡ್ಡಿಯರವರು ಹಿಂದುಸ್ಥಾನ ಮತ್ತು ಸಾಮ್ರಾಜ್ಯಕರ್ತರು ಈಗಲೂ ನಡಿಸುತ್ತಿರುವ ಪ್ರಕಾರದ ಬಗ್ಗೆ ಬೇಸರಗೊಂಡು, ಯುದ್ಧಯತ್ನ ಪುರಸ್ಕಾರದಿಂದ ಹಿಂದುಸ್ಥಾನದ ಉದ್ಧಾರವಾಗುವದಾಗಿ ಬಯಸುವದು ದಡ್ಡತನವೆಂದು ಮನಗಂಡು, ತಮ್ಮ ಸಭಾಸದತ್ವಕ್ಕೆ ರಾಜೀನಾಮೆ ಕೊಟ್ಟು ರಾಷ್ಟ್ರೀಯಸಭೆಯನ್ನುಕೂಡಿಕೊಂಡಿದ್ದಾರೆ ರಾ॥ ರಾಮಚಂದ್ರ ರೆಡ್ಡಿಯವರು ಯುದ್ಧಯತ್ನವನ್ನು ಭಕುತಿಯಿಂದ ನಡಿಸುತ್ತಿದ್ದ ಮಹಾನುಭಾವರು, ಚಿತ್ತೂರಿನ ಪ್ರಮುಖ ಉದ್ದಿಮೆದಾರರು, ಇವರು ೧ ಲಕ್ಷ ರೂಗಳ ನಿಬಡ್ಡಿಯ ಸಾಲ-ಪತ್ರ ಕೊಂಡು ಯುದ್ಧ-ನಿಧಿಗೆ ನೆರವಾಗಿದ್ದರೆ ಇಂಥ ಪ್ರಮುಖರ ಮನೋಭೂಮಿಯಲ್ಲಿ ಉಂಟಾಗಿರುವ ಅವಸ್ಥಾಂತರವನ್ನು ಸಾಮ್ರಾಜ್ಯಕರ್ತರು ಲಕ್ಷಿಸತಕ್ಕದ್ದು ಲೋಕದೃಷ್ಟಿಗೆ ಯುದ್ಧ-ಯತ್ನ ಪ್ರಚಂಡವಾಗಿ ತೋರಬಹುದು ಆದರೆ ಆ ಯುದ್ಧಯತ್ನದ ಬೆಂಬಲಕ್ಕೆ ಹಿಂದ-ಜನಾಂಗದ ಅಂತಃಕರಣವಿದ್ದರೆ ಮಾತ್ರ ಆ ಯತ್ನ ಸಫಲವಾಗಬಲ್ಲದು ದೃಶ್ಯ ಪದಾರ್ಥಕ್ಕೆ, ಪ್ರಾಣರೂಪದಂತಿರುವ ಅದೃಶ್ಯ ಚೇತನಶಕ್ತಿಯಿದ್ದನಕ ದೃಶ್ಯ ಪ್ರಪಂಚ ಸಂಕಲ್ಪಿತ ಕ್ರಮದಿಂದ ನಡೆಯುವದಿಲ್ಲ ಅದೃಶ್ಯ ಶಕ್ತಿಯು ದೃಶ್ಯಸೃಷ್ಟಿಗೆ ಚೈತನ್ಯ ಕೊಟ್ಟು ಸಂಕಲ್ಪಿತ ವ್ಯಾಪಾರ ವ್ಯವಹಾರಗಳನ್ನು ಮಾಡಿಸಿಕೊಳ್ಳುತ್ತದೆ ಹಿಂದ ಜನಾಂಗದ ಆ ಅದೃಶ್ಯ ಶಕ್ತಿಯನ್ನು ಸಾಮ್ರಾಜ್ಯಕರ್ತರು ಸ್ವಾಧೀನಪಡಿಸಿಕೊಂಡನಕ ಆಡಂಬರದ ಯುದ್ಧಯತ್ನ ಸಾರ್ಥಕವಾಗದೆಂದು. ನಾವು ತಿಳಿ

ನಮ್ರರಾಗಿ ಸಾಮ್ರಾಜ್ಯಕರ್ತರಿಗೆ ಸೂಚಿಸುತ್ತೇವೆ. ಹಿಂದುಸ್ಥಾನದಲ್ಲಿ ಭಕ್ತಿಯು ಇಲ್ಲವೆ ಆಸಕ್ತಿಯು ಭಾವ ಎದ್ದರೆ ಮಾತ್ರ ಹಿಂದುಸ್ಥಾನದೊಳಗಿನ ಯುದ್ಧಯತ್ನ ಸಾಮ್ರಾಜ್ಯಕ್ಕೆ ಫಲಿಸುವಂತಿದೆ. ಸಾಮ್ರಾಜ್ಯಕರ್ತರು ಈ ಎಲ್ಲ ಸಂಗತಿಗಳನ್ನು ಪರಾಂಬರಿಸಿ, ಮಹಾತ್ಮರ ಮನವೊಲಿಕೆಯಾಗುವಂತೆ ರಾಜ್ಯಭಾರದಲ್ಲಿ ತಕ್ಕ ಅವಸ್ಥಾಂತರಗಳನ್ನು ಸಂಘಟಿಸಲು ತ್ವರೆ ಮಾಡಬೇಕು. ಬಲಾತ್ಕಾರದ ನಿರ್ಬಂಧಗಳನ್ನೇರ್ಪಡಿಸಿ ಇಲ್ಲವೆ ಭೀತಿ ಹಾಕಿ ಜನಾಂಗವನ್ನು ವಶಪಡಿಸಿಕೊಳ್ಳುವ ದಿನಗಳು ಈಗ ಇಲ್ಲ; ಇನ್ನು ಮುಂದೆ ಬರುವ ಆರೆ ಸಹ ಕಡಿಮೆ ಸಾಮ್ರಾಜ್ಯಕರ್ತರ ರಾಜನೀತಿಯ ಚೇಷ್ಟೆಗಳೆಲ್ಲ ಈಗ ಬಯಲಾಗಿವೆ ಇಂಥ ಪ್ರಸಕ್ತಿಯಲ್ಲಿ ಮಹಾತ್ಮರ ಯುದ್ಧಯತ್ನ ವಿಮುಖ ಕಾರಣಪರಂಪರೆಯನ್ನು ಸಾಮ್ರಾಜ್ಯಕರ್ತರು ಪರಾಂಬರಿಸಿ ಹಿಂದುಸ್ಥಾನದ ರಾಜ್ಯಕಾರಭಾರದಲ್ಲಿ ತಕ್ಕ ಕ್ರಾಂತಿಕಾರಕ ಅಭ್ಯಂತರಗಳನ್ನು ಮಾಡಿಕರುವ ಆಲೋಚನೆ ಮಾಡುವದು ಶ್ರೇಯಸ್ಕರ.

* * *

ಈಗ ಕಶ್ಯಪದೇಶದ ಮೇಲೆ ಗುರಿ !

[ನಿರೀಕ್ಷಕನು ಬರೆದುದು.]

ಹಿಟ್ಲರನು ಕಶ್ಯಪ (ಕೊಕೆಸಸ) ದೇಶದ ಮೇಲೆಯೇ ಗುರಿಯಿಟ್ಟು ಸಂಗ್ರಾಮವನ್ನು ನಡಿಸುತ್ತಾನಾಗಿ ನಾನು ಹೇಳಬಲ್ಲೆ ಕಶ್ಯಪ ದೇಶ ರುಶ್ಯ ಸಂಗ್ರಾಮದ ಮರ್ಮಸ್ಥಾನವೆಂದು ನಾನು ಈ ಮುಂಚೆಯೇ ಹೇಳಿಟ್ಟಿದ್ದೇನೆ. ಸ್ಟೆಲಿನ ಪ್ರಭುವು ಕಶ್ಯಪ ದೇಶದಲ್ಲಿ ಒಳ್ಳೇ ಸುಧಾರಣೆಗಳನ್ನೇರ್ಪಡಿಸಿ ಆ ಭೂಪ್ರದೇಶವನ್ನು ಸಮೃದ್ಧಗೊಳಿಸಿದ್ದಾನೆ ಅದರಿಂದ ಕಶ್ಯಪವಾಸಿಗಳು ಸ್ಟೆಲಿನ ಪ್ರಭುವಿನ ನಿಷ್ಠಾವಂತ ಪ್ರಜೆಗಳು ಈ ಜನರಿಗೆ ಕೋಝಾಕರೆನ್ನುತ್ತಾರೆ. ಆಜಾನುಬಾಹು ಪುರುಷರಿವರು, ವೀರಯೋಧರು; ರಣಭೂಮಿಯ ಮೇಲೆ ಒಮ್ಮೆ ನಿಂತರೆಂದರೆ ಪ್ರಾಣ ಹೋಗುವವರೆಗೂ ಹೋರಾಡುವ ಪರಾಕ್ರಮಶಾಲಿ, ಬಲಶಾಲಿ ಭಟರಿವರು. ಇವರಿಗೆ ರುಶ್ಯ ಸರಕಾರದ ಮೇಲೆ ನಿತಾಂತ ನಿಷ್ಠೆಯುಂಟು ಹಿಟ್ಲರರ ಗುಪ್ತ-ಚಾರರ ಕಿಡಿಗೇಡಿ ವ್ಯಾಪಾರಗಳು ಈ ಪ್ರದೇಶದಲ್ಲಿ ನಾಟುವದಿಲ್ಲ ಇಲ್ಲಿ ಎಣ್ಣೆಗಣಿಗಳಿವೆ. ಮೆಂಗೆನೀಸು, ಕಲ್ಲಿದ್ದಲಿ, ಶೀಸ, ಪಾದರಸ ಮೊದಲಾದ ಯಾವತ್ತೂ ಖನಿಜಗಳು ಇಲ್ಲಿ ವಿಪುಲವಾಗಿ ದೊರೆಯುತ್ತವೆ. ಈ ಪ್ರದೇಶದಲ್ಲಿರುವ ಗ್ರೋಝ್ನಿ, ಮ್ಯಾಕೋ, ಬಾಕು ಗಣಿಗಳಿಂದ ೩॥ ಕೋಟಿ ಟನ್ನ ಎಣ್ಣೆ ಹುಟ್ಟುತ್ತದಾಗಿ ಇಲ್ಲಿಯ ಪರಿಸ್ಥಿತಿ ಬಲ್ಲವರು ಅಭಿಪ್ರಾಯಪಡುತ್ತಾರೆ ರೊಸ್ಟೋವ ಪಟ್ಟಣವನ್ನು ವಶ ಮಾಡಿಕೊಂಡು, ಬಾಕು ಮಾರ್ಗವಾಗಿ ಹಿಟ್ಲರನು ಇಲ್ಲಿ ಸ್ವಾರಿಮಾಡುವ ವ್ಯೂಹವನ್ನು ಕಲ್ಪಿಸಿಕೊಂಡಿದ್ದಾನಾಗಿ ಯುದ್ಧಕಲ-ಕೋವಿದರ ಅಭಿಪ್ರಾಯವುಂಟು ಅಷ್ಟೇಕೆ, ಆತನು ಆ ಗುರಿಯನ್ನೇ ಹಿಡಿದು ಸೈನ್ಯಪಥಕಗಳನ್ನು ಒಯ್ಯುತ್ತಿದ್ದಾನಾಗಿ ಯಾರೂ ಹೇಳಬಲ್ಲರು ಲಂಡನಿನ 'ಡೇಲಿ ಮಿರರ' ಪತ್ರಿಕೆಯು ಹಿಟ್ಲರನ ಸಿದ್ಧತೆಗಳನ್ನು ಮನಸದಣಿ ಹೊಗಳುತ್ತಿದೆ: "ಹಿಟ್ಲರನ ಸಿದ್ಧತೆ ಸರ್ವೋತ್ಕೃಷ್ಟವುಂಟು ರುಶ್ಯ ದೇಶದೊಳಗಿನ ಎಣ್ಣೆಗಣಿಗಳಿಂದ ಎಣ್ಣೆ ತೆಗೆಯಲು ಅವಶ್ಯವುಳ್ಳ ಯಾವತ್ತೂ ಯಂತ್ರಸಾಮಗ್ರಿಯನ್ನು ರವಾನಿಸಲಿಕ್ಕೆ ಆತನು ಈಗಾಗಲೇ ಪ್ರಾರಂಭಿಸಿರುತ್ತಾನೆ ಯಂತ್ರಸಾಮಗ್ರಿಯ ಬೆನ್ನಿಗೆ ತಜ್ಞರು ರವಾನೆಯಾಗುತ್ತಿದ್ದಾರೆ ಈ ಪ್ರದೇಶವನ್ನು ಕಾಪಾಡಿಕೊಳ್ಳಲು ರುಶ್ಯರು ಪರಮಾವಧಿಯ ಪ್ರಯತ್ನ ಮಾಡಿ, ಆ ಯತ್ನ ನಿರರ್ಥಕವಾದ ಬಳಿಕ ಆ ಪ್ರದೇಶವನ್ನು ತೊರೆಯುವ ಪ್ರಸಂಗದಲ್ಲಿ ಕಾರಖಾನೆಗಳನ್ನೂ ಗಣಿಗಳನ್ನೂ ನಾಶ ಮಾಡುವರೆಂದು ಹಿಟ್ಲರನು ಗೃಹೀತ ಹಿಡಿದಿದ್ದಾನೆ. ರುಶ್ಯರು ಎಲ್ಲವನ್ನೂ ಉಧ್ವಸ್ತಗೊಳಿಸಿ ಹಿಂದಿರಿದೊಡನೆ ಅಲ್ಲಿ ಕಾರಖಾನೆಗಳನ್ನು ಪುನಃ ತ್ವರ್ಯವೇ ಸ್ಥಾಪಿಸಿ ಕೆಲಸ ಪ್ರಾರಂಭಿಸಲು ಸಕಲ ಸಿದ್ಧತೆಗಳನ್ನಿಟ್ಟಿದ್ದಾನೆ. ಹಿಟ್ಲರನು ಪಾಪಿ ನಿಜ, ದ್ರೋಹಿಯೂ ನಿಜ ಸ್ಟೆಲಿನನೊಡನೆ ಸ್ನೇಹಭಾವದಿಂದಿರುವಾಗ ಈ ಭೂಪ್ರದೇಶದ ಸೂಕ್ಷ್ಮ ನಿರೀಕ್ಷಣವನ್ನು ತನ್ನ ತಜ್ಞರಿಂದ ಮಾಡಿಸಿ ಗಣಿಗಳಿಂದ ಎಣ್ಣೆ ತೆಗೆಯುವ ಕಾರಖಾನೆಗಳನ್ನು ಸ್ಥಾಪಿಸುವ ಸ್ಥಳವನ್ನು ಸಹ ಆತ ನಿರ್ದೇಶಿಸಿಕೊಂಡಿಟ್ಟಿದ್ದಾನಂತೆ ಕಶ್ಯಪ ದೇಶ ಜರ್ಮನಿಯ ವಶವಾಗಲು ರುಶ್ಯರು ಎಂದಿಗೂ ಕೊಡಲಿಕ್ಕಿಲ್ಲ ನಮ್ಮ ಹಿಂದುಸ್ಥಾನದ ಸೇನಾಪತಿ ವೆವೆಲಂವರೂ ರುಶ್ಯ ಸೇನಾಪತಿಗಳೂ ಈ ಸಂಕಟವನ್ನು ಪ್ರತಿಭಟಿಸಲು ಕಶ್ಯಪ ದೇಶದಲ್ಲಿ ನಿಪುಣ ಸೈನಿಕರನ್ನು ಇಟ್ಟು ಪುಂಡ ಜರ್ಮನರ ಸೊಂಟ ಮುರಿಯಲು ಹೊಂಚು ಹಾಕಿದ್ದಾರೆಂದು ಮುಂಬಯಿ "ಕ್ರೊನಿಕಲ" ಪತ್ರಿಕೆಯ ಸ್ವಂತ ಸುದ್ದಿಗಾರರು ತಿಳಿಸಿ, ಯಾರೂ ಹೆದರುವ ಕಾರಣವಿಲ್ಲವೆಂದು ಹೇಳುತ್ತಾರೆ ನನಗೆ ಇದೇ ಧೈರ್ಯ ಅಮೇರಿಕೆಯವರೂ ರುಶ್ಯರಿಗೆ ಯುದ್ಧಸಾಮಗ್ರಿಗಳನ್ನು ರವಾನಿಸುವ ರಭಸ ನಡಿಸಿದ್ದಾರೆ. ರುಶ್ಯದೇಶವು ಸಹಸಾ ಹಿಮ್ಮೆಟ್ಟಲಿಕ್ಕಿಲ್ಲವಾಗಿ ಲಂಡನಿನ 'ಕಿಂಗ ಹೊಲ ನ್ಯೂಸ ಲೆಟರ' ಪತ್ರಕರ್ತರು ಧೈರ್ಯ ಕೊಡುತ್ತಾರೆ. ರುಶ್ಯದಲ್ಲಿ ಯಾವದಕ್ಕೂ ಕೊರತೆಯಿಲ್ಲವಂತೆ ಜರ್ಮನರು ಈವಾಗ ಮುನ್ನುಗ್ಗಿ ಹೋದಾಗ್ಯೂ ರುಶ್ಯರು ಈ ಆಪತ್ತನ್ನು ಮುಂದಾಗಿ ಎಣಿಸಿ ವ್ಹೋಲ್ಗಾ ನದಿಯ ಆಚೆ ಕಾರಖಾನೆಗಳನ್ನು ಕಟ್ಟಿಟ್ಟಿದ್ದಾರೆಂದು ರುಶ್ಯ ದೇಶದ ಪ್ರಾಜ್ಞರೊಬ್ಬರು "ಕಿಂಗಹೊಲ ನ್ಯೂಸ ಲೆಟರ" ಪತ್ರಕರ್ತರಿಗೆ ತಿಳಿಸುತ್ತಾರೆ ಲಕ್ಷಾವಧಿ ರುಶ್ಯ ಸೈನಿಕರು ಯುದ್ಧಕೈದಿಗಳಾಗಿ ಜರ್ಮನರ ವಶವಾದರೇನಾಯಿತು? ಇನ್ನೂ ಲಕ್ಷಾವಧಿ ಸೈನಿಕರು ರುಶ್ಯ ದೇಶದ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲಿಕ್ಕೂ ಹಿಟ್ಲರನ ರಣಸೊಕ್ಕನ್ನು ಇಳಿಸಲಿಕ್ಕೂ ಸಿದ್ಧರಿದ್ದಾರಾಗಿ ಈ ಪ್ರಾಜ್ಞರ ಅಂಬೋಣ. ನಾಶ ಹೊಂದಿದ ಕಾರಖಾನೆಗಳ ಸಾಮಗ್ರಿಗಳನ್ನು ವ್ಹೋಲ್ಗಾ ನದಿಯ ಆಚೆ ಗಾಬರಿಯಿಂದ ಒಯ್ದು ಅಲ್ಲಿ ಕಾರಖಾನೆಗಳ ಕೆಲಸಗಳನ್ನು ಪುನಃ ಸುಸೂತ್ರ ಪ್ರಾರಂಭ ಮಾಡುವ ಕ್ರಮ ಕೇಳಿ ಪ್ರಾಜ್ಞರು ಆಶ್ಚರ್ಯಪಡುತ್ತಾರೆ ರುಶ್ಯ ದೇಶದಲ್ಲಿ ಅನ್ನ-ಸಾಮಗ್ರಿಗಳು ಸಾಕಷ್ಟು ಉಂಟು ಯುಕ್ರೇನವನ್ನು ಕಳಕೊಂಡಾಗ್ಯೂ ಅನ್ನ ಸಾಮಗ್ರಿಗಳಿಗೆ ಕೊರತೆ ಇಲ್ಲ, ಈಗ ಕಶ್ಯಪ ದೇಶದಲ್ಲಿ ಮಂಜು ಬೀಳುತ್ತಿದೆ ಆದರಿಂದ ಜರ್ಮನರಿಗೆ ಯಾಂತ್ರಿಕ ತೋಪುಗಳನ್ನು ಒಯ್ಯಲು ಅಸಾಧ್ಯವಾಗುವದಂತೆ. ಕುದುರೆ-ಸವಾರ ಸೈನಿಕರಿದ್ದವರು ಮಾತ್ರ ಗೆಲ್ಲುತ್ತಾರಂತೆ ! ರುಶ್ಯರ ಬಳಿ ಬಲಶಾಲಿ ಕುದುರೆ ಸವಾರರ ಬಲವುಂಟು ಅಂದ ಬಳಿಕ ಕಶ್ಯಪ ದೇಶವನ್ನು ಕೈವಶ ಮಾಡಿಕೊಳ್ಳುವದು ಜರ್ಮನರಿಗೆ ಅಸಾಧ್ಯವಾದದ್ದೆಂದು ತಜ್ಞರು ಅಭಿಪ್ರಾಯಪಡುತ್ತಾರೆ. ನಾನೇನು ತಜ್ಞರಿಗಿಂತ ಜಾಣನಲ್ಲ; ತಜ್ಞರ ಅಭಿಪ್ರಾಯವೇ ನನ್ನದು ಕಶ್ಯಪ ದೇಶದಲ್ಲಿ ಜರ್ಮನರು ಹಿಂದೀಯರೊಡನೆ, ಇರಾಣಿಯರೊಡನೆ, ಬ್ರಿಟಿಶರೊಡನೆ ಹೋರಾಡುವ ಪ್ರಸಂಗವುಂಟು ಈ ರಣಕುಂಡದಲ್ಲಿ ಮತ್ತಾರಾರು ಸೇರುತ್ತಾರೆಂದು ನಾನರಿಯೆ ಜರ್ಮನರು ಇರಾಣಕ್ಕೆ ಗದ್ದರಿಸುವಾಗಲೇ ದಕ್ಷಿಣಮುಖವಾಗಿ ಇಜಿಪ್ತ ದೇಶದ ಕಡೆಗೆ ಸಾಗಿಹೋಗಬಹುದಾಗಿ ಕೆಲವರ ಅಭಿಪ್ರಾಯವುಂಟು. ಮುಖ್ಯ ಪ್ರಧಾನರಾದ ಚರ್ಚಿಲ್ಲರವರಂತು ೧೯೪೨ನೇ ಇಸ್ವಿಯಲ್ಲಿ ಹಿಂದೀ ಸೈನಿಕರು ಬ್ರಿಟಿಶರೊಡನೆ ಸಮಾನಸ್ಕಂಧರಾಗಿ ಕಶ್ಯಪ ದೇಶದ ಸಮುದ್ರದಿಂದ ಇಜಿಪ್ತ ದೇಶದ ದೇಶದ ನ್ಯಾಲ ನದಿಯ ತನಕ ಹಬ್ಬಿರುವ ರಣಭೂಮಿಯ ಮೇಲೆ ಹೋರಾಡಬೇಕಾದೀತೆಂದು ನಮ್ಮಲ್ಲಿಯ ಸೈನ್ಯ-ಸಲಹೆಗಾರ ಮಂಡಳಕ್ಕೆ ಎಚ್ಚರಿಕೆ ಕೊಡುತ್ತಾರೆ. ಈ ಪರಿಸ್ಥಿತಿಯಲ್ಲಿ ಮುಸಲ್ಮಾನ-ಲೋಕದ, ಪ್ರಾಮುಖ್ಯವಾಗಿ ತುರ್ಕಸ್ಥಾನದ ಭೂಮಿಕೆ ಯಾವದೆಂದು ಇನ್ನೂ ನನಗೆ ತಿಳಿಯದಾಗಿದೆ. ತುರ್ಕ ಸರಕಾರಕ್ಕೆ ಬ್ರಿಟಿಶರು ಒಂದು ಬದಿಯಿಂದ, ಜರ್ಮನರು ಒಂದು ಬದಿಯಿಂದ ಎಳೆಯುತ್ತಿದ್ದಾರೆ. ಮೊನ್ನೆ ಗುರುವಾರ ತುರ್ಕಸ್ಥಾನದಲ್ಲಿ ತುರ್ಕ ಲೋಕ-ಸರಕಾರದ ೧೮ನೇ ವರ್ಧಂತ್ಯುತ್ಸವ ನಡೆಯಿತು ಆ ಕಾಲದಲ್ಲಿ ನಮ್ಮ ಜೋರ್ಜ ಭೂಪತಿಗಳೂ ಹಿಟ್ಲರ ಪ್ರಭುವೂ ತುರ್ಕ ಸರಕಾರದ ಅಭೀಷ್ಟವನ್ನು ಕೋರಿದರು. ಇದರ ರಹಸ್ಯವೇನೆಂದು ನೀವೇ ತಿಳಕೊಳ್ಳತಕ್ಕದ್ದು. ತುರ್ಕರಿಗೆ ಇನ್ನೂ ಭೀತಿಯುಂಟು, ತುರ್ಕರು ಸಾವಧಾನದಿಂದಿರಬೇಕ , ಹೀಗೆ ತುರ್ಕ ಸರಕಾರದ ಅಧ್ಯಕ್ಷರಾದ ಇನೆನುರವರು ಸ್ವಜನರಿಗೆ ಸಂದೇಶ ಕೊಟ್ಟಿದ್ದಾರೆ ಆ ಭಯವೆಲ್ಲಿಂದೆಂಬದನ್ನು ಇನೆನುರವರು ನಿರ್ದೇಶಿಸಲಿಲ್ಲ. ನಾನು ಅವನ್ನು ನಿರ್ದೇಶಿಸಿ ಹೇಳುತ್ತೇನೆ ಕ್ರಿಮಿಯಾದಲ್ಲಿ ಘನಘೋರ ಸಂಗ್ರಾಮ ನಡೆದಿದೆ ಜೀವದಾಶೆ ಬಿಟ್ಟು ಜರ್ಮನರೂ ರುಶ್ಯರೂ ಹೋರಾಡುತ್ತಿದ್ದಾರೆ. ಭೀಕರ ಕಾಳಗವಾಗುತ್ತದಾಗಿ ಮೊಸ್ಕೊದ ಆಕಾಶವಾಣಿ. ಜರ್ಮನರು ಭೂ-ಜಲ-ವಾಯು ಮಾರ್ಗಗಳಿಂದ ಹೋರಾಡುತ್ತಿರುವರಂತೆ ರುಶ್ಯರು ಸೋತು ಹಿಂದೆ ಸರಿದರಾಗಿಯೂ, ರಣಭೂಮಿಯಿಂದ ಓಡಿಹೋಗುವವರನ್ನು ಜರ್ಮನ ಪಕ್ಷಪಾತಿ ಫಿನ್ನ ಮತ್ತು ರುಮಾನಿಯಾ ದಂಡುಗಳು ಬೆನ್ನಟ್ಟಿಕೊಂಡು ಹೋದವೆಂದೂ ಜರ್ಮನ ಸೈನ್ಯ ಕಚೇರಿಯಿಂದ ಪ್ರಕಟಣೆ ಹೊರಟಿದೆ. ಇದರಿಂದ ತುರ್ಕರಿಗೆ ಎದೆ ಹಾರಿದೆ! ಕ್ರಿಮಿಯದಲ್ಲಿ ಜರ್ಮನರು ತಳವೂರಿದರೆ ತುರ್ಕರು ಸಂಕಟಗ್ರಸ್ತರಾಗುವರೆಂದು ನಾನು ಹೆದರಿಹೋಗಿದ್ದೇನೆ 'ಇನೆನುರವರು ಹೇಳುವ ಭೀತಿ ಇದೇ ತುರ್ಕರಿಗೆ ಧೈರ್ಯ ಕೊಡುವದಕ್ಕಾಗಿ ಇರಾಕ.

(೯ನೇ ಪುಟದ ಮೇಲೆ ಮುಂದುವರಿಸಿದೆ)

ಸ್ಥಾನಿಕ ವೃತ್ತಾಂತ.

ಕುಮಟಾ— ಹವೆಯೊಳಗೆ ಏನೂ ಬದಲಾವಣೆ ಆಗಿಲ್ಲ. ಹಗಲು ಸೆಕೆಯಾಗುತ್ತಿದೆ; ರಾತ್ರಿ ತುಸು ತಂಪು ಆಗುತ್ತಿದೆ. ಒಮ್ಮೊಮ್ಮೆ ಮೂಡಗಾಳಿ ಬೀಸುತ್ತಿದ್ದಾಗ್ಯೂ ಶೀತಕ್ಕೆ ಚಳಿ ಬೀಳಲಾರಂಭವಾಗಿಲ್ಲ. ಊರೊಳಗಿನ ನೆಗಡಿ-ಬೇನೆಗಳು ಈಗ ತುಸು ಹೆಚ್ಚುತ್ತಿವೆ

ಇಲ್ಲಿ ಶಿರಸ್ತೇದಾರರಾಗಿದ್ದ ರಾ॥ [illegible] ರಾಮಚಂದ್ರ ಮಹಾಲೇಯವರಿಗೆ ಹೊನ್ನಾವರದೊಳಗಿನ ಶಿರಸ್ತೇದಾರ ಸ್ಥಳಕ್ಕೆ ವರ್ಗವಾಗಿದ್ದು ಕಳೆದ ತಾ. ೨೫ ರಿಂದ ರಾ॥ ಎಸ್. ಎಮ್. ಮಹಾಲೇಯವರು ಇಲ್ಲಿ ಶಿರಸ್ತೇದಾರರಾಗಿದ್ದಾರೆ.

ಈ ಊರ ನಾಗರಿಕರಾದ ರಾ॥ ಸೀತಾರಾಮ ವಿಟ್ಠಲ ಪಂಡಿತ, ಎಮ್. ಎ., ಎಲ್‌ಎಲ್. ಬಿ., ಇವರಿಗೆ ಹಿಂದೀ ಸೈನ್ಯದಲ್ಲಿ "ಕಿಂಗ್ಸ ಕಮಿಶನ್" (ವರಿಷ್ಠಾಧಿಕಾರಿಗಳ ವರ್ಗದಲ್ಲಿ ಪ್ರವೇಶ) ದೊರೆತಿರುವದೆಂಬ ವಾರ್ತೆ ಬಂದಿದೆ.

ಕಳೆದ ತಾ. ೧೯, ೨೦, ೨೧ನೇಗೆ ದೀಪಾವಳಿ ಹಬ್ಬದ ಸಮಯದಲ್ಲಿ ಮೂರೂರದೊಳಗಿನ ಶ್ರೀ ಶಂಭುಲಿಂಗ ದೇವರ ಗುಡಿಯ ಮುಂದಿನ ಪಟಾಂಗಣದಲ್ಲಿ ಮೂರೂರ ತರುಣ ಸಂಘದ ೯ನೆಯ ವಾರ್ಷಿಕ ಸಮ್ಮೇಲನ ಜರುಗಿತು. ತಾ. ೧೯ನೇ ಸಂಜೆ ರಾ॥ ವಿಶ್ವೇಶ್ವರ ಹೆಗಡೆ ವಕೀಲರ ಅಧ್ಯಕ್ಷತೆಯಲ್ಲಿ ಸಭೆಯಾಗಿ ಹುಡುಗ-ಹುಡುಗಿಯರ ಗಾಯನ-ಭಾಷಣಗಳೂ, ಮನೋರಂಜಕ ಕಾರ್ಯಕ್ರಮಗಳೂ, ಬೀಜಾಯದ ಸುಧಾರಣೆಯ ವಿಷಯದ ಮೇಲೆ ಡಾ॥ ರಾ॥ ಜಿ. ಟಿ. ಹೆಗಡೆ ಮತ್ತು ಸೀ. ಶಾ. ಹೆಗಡೆ ಇವರ ವ್ಯಾಖ್ಯಾನಗಳೂ ನಡೆದವು. ತಾ. ೨೦ನೇಗೆ ರಾ॥ ವಿನಾಯಕ ಹಬ್ಬುರವರ ಅಧ್ಯಕ್ಷತೆಯಲ್ಲಿ ಕೆಲವು ಹುಡುಗ ಹುಡುಗಿಯರ ಹಾಡು, ಸೋಳಿ, ಕೊಳಲು-ವಾದನ ಮುಂತಾದ ಮನರಂಜನೆಯ ಕ್ರಮಗಳೂ, ಗರ್ಭಿಣಿ-ಶಿಶು ಸಂಗೋಪನ ವಿಷಯದ ಮೇಲೆ ಡಾ॥ ಭಟ್ಟರ ಪ್ರವಚನವೂ, "ಮಹತ್ವಾಕಾಂಕ್ಷೆ"ಯ ಮೇಲೆ ರಾ॥ ಅ. ಜಿ. ಹೆಗಡೆ ಇವರ ವ್ಯಾಖ್ಯಾನವೂ ನಡೆದವು; "ಕಟ್ಟು ಪುರಾಣ" ಎಂಬ ನಾಟಕವೂ ಅಭಿನಯಿಸಲ್ಪಟ್ಟಿತು. ತಾ. ೨೧ನೇಗೆ ಪುನಃ ರಾ॥ ವಿಶ್ವೇಶ್ವರ ಹೆಗಡೆರ ಅಧ್ಯಕ್ಷತೆಯ ಕೆಳಗೆ ಮನರಂಜನೆಯ ಕಾರ್ಯಕ್ರಮ, ಚಹಾಪಾನದ ಕುರಿತು ರಾ॥ ಅಪ್ಪೋಳಿಯವರ ಭಾಷಣ, ಸಮ್ಮೇಲನಗಳ ಮಹತ್ವವನ್ನು ಕುರಿತು ರಾ॥ ಎಸ್. ಕೆ. ಹೆಗಡೆಯವರ ಭಾಷಣ, ಇಷ್ಟಲ್ಲದೆ ಬೇನೆಯ ಬಗ್ಗೆ ಡಾ॥ ಭಟ್ಟರ ಭಾಷಣ ಮುಂತಾದ ಕಾರ್ಯಕ್ರಮವಾದ ಮೇಲೆ ಸಂಜೆಯ ಕಡೆ ಬಾಲಕರಿಂದಲೇ "ವೀರ ಅಭಿಮನ್ಯು" ಎಂಬ ಆಖ್ಯಾನದ ಪ್ರಯೋಗ ನಡೆಯಿತು. ಈ ಸಮ್ಮೇಲನದ ಕೆಲಸಕ್ಕೆ ಗ್ರಾಮ ಪಂಚಾಯತ ಕಮಿಟಿಯವರು ಸಂಘಕ್ಕೆ ಕೆಲವು ಧನಸಹಾಯ ನೀಡಿದ್ದರು.

ಹೊಲನಗದ್ದೆಯಲ್ಲಿ ಕೆಲವು ಮಕ್ಕಳು "ಬಾಲ ಸಾಹಿತ್ಯ ವಾಚನಾಲಯ" ವೆಂಬ ಚಿಕ್ಕ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಕಳೆದ ತಾ. ೨೬ನೇಗೆ ರಾ॥ ಮಹಾದೇವ ತಿ. ಹೆಗಡೆಯವರ ಅಧ್ಯಕ್ಷತೆಯಲ್ಲಿ ಅದರ ವರ್ಧಂತಿಯಾಯಿತು. ರಾ॥ ಗೋಪಾಲ ಹೆಗಡೆ, ಶಂಕರ ಹೆಗಡೆ ಮೊದಲಾದ ಶಿಕ್ಷಕರು ಹುಡುಗರಿಗೆ ನಾಲ್ಕು ಉಪದೇಶಾತ್ಮಕ ಮಾತುಗಳನ್ನು ಹೇಳಿದರು. ರಾ॥ ಎಲ್. ಆರ್. ಹೆಗಡೆಯವರು ಸಂಸ್ಥೆಯ ವಾರ್ಷಿಕ ವರದಿಯನ್ನು ಓದಿ ತೋರಿಸಿದರು. ರಾ॥ ವ್ಹಿ. ವ್ಹಿ. ಹೆಗಡೆ, ಎಸ್. ಓ. ಭಟ್ಟ ಇವರು ಚಿಕ್ಕ ಭಾಷಣಗಳನ್ನು ಮಾಡಿ ವಾಚನಾಲಯದ ಅವಶ್ಯಕತೆಯನ್ನು ತಿಳಿಸಿ ಹೇಳಿ, ಎಲ್ಲರೂ ಸಂಸ್ಥೆಗೆ ಸಹಾಯ ಮಾಡಬೇಕೆಂದು ಬಿನ್ನವಿಸಿದರು. ಅದರಂತೆ ಕೆಲವು ಸಭಿಕರೂ ಗ್ರಾಮಪಂಚರೂ ಸಂಸ್ಥೆಗೆ ಧನಸಹಾಯ ನೀಡುವ ವಾಗ್ದಾನಗಳನ್ನು ಕೊಟ್ಟಿದ್ದಾರೆ.

ಹಿರೇಗುತ್ತಿಯ ಶಾಲೆಯ ಕಟ್ಟಡದ ಕೆಲಸ ತಾರೀಖು ೨೦-೫-೪೧ರೊಳಗೆ ಮುಗಿಸಬೇಕೆಂದು ಲೋಕಲ್‌ಬೋರ್ಡಿನವರ ಸಂಕಲ್ಪವೇನೋ ಇತ್ತು. ಆದರೆ ಇನ್ನೂ ಶಾಲೆಯು ನೆಲಗಟ್ಟಿಗಿಂತ ಮೇಲೆ ಎದ್ದಿರುವದೇ ಇಲ್ಲೆಂದು ಹಿರೇಗುತ್ತಿಯವರೊಬ್ಬರು ದೂರುತ್ತಿದ್ದಾರೆ. ಸಂಕಲ್ಪದಂತೆ ಕೆಲಸ ನೆರವೇರಿಸುವ ಸಾಮರ್ಥ್ಯ ಬೋರ್ಡಿಗೆ ಇರುವದಿಲ್ಲೇನೆಂದು ಅವರ ಪ್ರಶ್ನೆಯಿದೆ! ಬೋರ್ಡಿನವರು ಅವರಿಗೆ ತಕ್ಕ ಉತ್ತರ ಕೊಡಬೇಕು.

ಓರ್ವ ಶಿಕ್ಷಣಾಭಿಮಾನಿಗಳು ಬರೆಯುತ್ತಾರೆ:- ಕೊಂಗ್ರೆಸ ಮಂತ್ರಿಮಂಡಳವು ಸಾಕ್ಷರತಾ ಪ್ರಸಾರದ ಯೋಜನೆಯನ್ನು ಅಮಲಿನಲ್ಲಿ ತಂದ ಮೇಲೆ ಹಳ್ಳಿ-ಹಳ್ಳಿಗಳಲ್ಲಿ ಗಾಂವಠಿ ಶಾಲೆಗಳು ಹುಟ್ಟಿದವು. ಎಷ್ಟೋ ತರುಣರು ಉತ್ಸಾಹದಿಂದ ಶಾಲೆಗಳನ್ನು ತೆರೆದರು. ಅವರಿಗೆ ತಿಂಗಳಿಗೆ ೬-೭, ಹೆಚ್ಚೆಂದರೆ ೮-೧೦ ರೂ. ಸಿಗುತ್ತಿದೆ. ಅದರೊಳಗಿಂದ ಶಾಲೆಯ ಬಾಡಿಗೆ ಖರ್ಚು ಮುಂತಾದ್ದು ಕಳೆದು ಉಳಿಯುವ ಶೇಷವೇ ಅವರ ಸಂಬಳ! ಈ ಸಂಬಳವಾದರೂ ಅವರಿಗೆ ಕಾಲಕಾಲಕ್ಕೆ ಸರಿಯಾಗಿ ಸಿಕ್ಕರೆ ಒಳಿತಾಗುತ್ತಿತ್ತು. ಆದರೆ ಹಾಗೆ ಸಿಗುವದೇ ಕಷ್ಟ! ಮೊದಲು ಸರಕಾರದಿಂದ ಸಿಗುವ ಧನಸಹಾಯ ಶಾಲೆಯ "ಮೆನೇಜರ"ರಿಗೆ ಸಿಗುತ್ತಿತ್ತು! ಈ ಮೆನೇಜರರಿಂದ ಶಾಲೆಯಲ್ಲಿ ಸ್ವಮುಂದು ದುಡಿಯುವ ಶಿಕ್ಷಕನಿಗೆ ಸಂಬಳ ಸಿಗಬೇಕಾದರೆ ಅವನು ಹತ್ತಿಪ್ಪತ್ತು ಸಾರೆಯಾದರೂ ಮೆನೇಜರರ ಮನೆಯ ಮೆಟ್ಟಲು ಸವೆಸಬೇಕಾಗುತ್ತಿತ್ತು! ಮುಂದೆ ಈ ಕುರಿತು ಸರಕಾರಿ ಅಧಿಕಾರಿಗಳ ಕಿವಿಯ ತನಕ ದೂರು ಹೋಗಿ ಒಂದು ಹೊಸ ಹುಕುಮು ಹೊರಬಿತ್ತು. ಮೆನೇಜರರು ಶಾಲೆಯ ಪಂಚರನ್ನು ಕೂಡಿಕೊಂಡು ಧನಸಹಾಯದ ಹಣ ಒಯ್ಯತಕ್ಕದೆಂದು ಹುಕುಮಾಯಿತು. ಅದರಿಂದಲೂ ಶಿಕ್ಷಕನ ಕಷ್ಟ ಕಡಿಮೆಯಾಗಲಿಲ್ಲ! ಅವನು ಈ ಶಾಲಾಪಂಚರಿಗೆ ಕೂಡಿಸಿ, ಗಾಡಿಯ ಮೇಲೋ ಮೋಟಾರ ಮೇಲೋ ಅವರಿಗೆ ತಾಲೂಕಿನ ಕಚೇರಿಗೆ ಒಯ್ಯುವ ವ್ಯವಸ್ಥೆ ಮಾಡಬೇಕು; ಅವರ ಊಟ-ಉಪಚಾರಗಳ ವ್ಯವಸ್ಥೆಯನ್ನೂ ಮಾಡಬೇಕು! ಸಂಬಳವಿಲ್ಲದೆ ಶಾಲೆಗಾಗಿ ದುಡಿಯುವ (?) ಪಂಚರು ತಮ್ಮ ಕಿಸೆಯೊಳಗಿಂದ ಹಣ ಖರ್ಚು ಮಾಡಿ ಕಚೇರಿಯಿಂದ ಧನಸಹಾಯವನ್ನೇಕೆ ತರುವರು? ಈ ಎಲ್ಲ ಖರ್ಚು ಹೋಗಲಾಗಿ ಶಿಕ್ಷಕರಿಗೆ ಎಷ್ಟು ಸಂಬಳ ಸಿಕ್ಕೀತೆಂಬುದರ ಲೆಕ್ಕ ವಾಚಕರೇ ಹಾಕಿ ನೋಡಲಿ. ವಿದ್ಯಾಧಿಕಾರಿಗಳು ಈ ಎಲ್ಲ ಪರಿಸ್ಥಿತಿಯ ಆಲೋಚನೆ ಮಾಡಿ ಗಾಂವಠಿ ಶಾಲೆಗಳ ಧನಸಹಾಯವನ್ನು ನೇರವಾಗಿ ನಿಜವಾಗಿಯೂ ಆ ಶಾಲೆಗಳ ಮೆನೇಜರರೂ ಚಾಲಕರೂ ಶಾಲೆಯ ಸರ್ವ ಭಾರವನ್ನು ಹೊರುವವರೂ ಮೈಮುರಿದು ಶಾಲೆಯ ಕೆಲಸ ಮಾಡುವವರೂ ಆದ ಶಿಕ್ಷಕರಿಗೇ ಮುಟ್ಟಿಸುವ (ಅವಶ್ಯವಿದ್ದರೆ ಶಾಲೆಯ ಪಂಚರ ಸಮಕ್ಷ ಶಿಕ್ಷಕರ ಕೈಯಲ್ಲೇ ಇಡುವ) ವ್ಯವಸ್ಥೆಯನ್ನು ಮಾಡಬೇಕಾಗಿ ನನ್ನ ಸೂಚನೆಯಿದೆ. ಹೀಗೆ ಮಾಡದಿದ್ದರೆ ಗಾಂವಠಿ ಶಾಲೆಗಳು ಕ್ರಮೇಣ ಮುಚ್ಚುತ್ತ ಹೋಗುವವೆಂದು ಅವರು ತಿಳಿದಿರಲಿ. ಇನ್ನೆರಡು ಸೂಚನೆಗಳನ್ನು ಮುಂದಿಟ್ಟು ಈ ಪತ್ರ ಮುಗಿಸುವೆನು. ಶಾಲೆಗೆ ಕೊಡತಕ್ಕ ಧನಸಹಾಯದ ಹಣವನ್ನು ವರ್ಷದ ಕೊನೆಗೆ ಒಂದೇ ಬಾರಿ ಕೊಡುವದಕ್ಕಿಂತ ಅದನ್ನು ೪

ಜಾಹೀರ ನೋಟೀಸು.

ನಾನು ಯಶೋದಾಬಾಯಿ ಕೋಂ ಪಾಂಡುರಂಗ ಶೇಣವಿ ಸಾಕೀನ ಚಂಡಿಯೆ, ತಾಲೂಕ ಕಾರವಾರ ಇವಳು ಈ ನೋಟೀಸಿನ ಮೂಲಕ ಯಾವತ್ತೂ ಜನರಿಗೆ ತಿಳಿಸುವದೇನಂದರೆ:- ನನ್ನ ಮಯತ ಗಂಡ ಪಾಂಡುರಂಗ ಕೃಷ್ಣ ಶೇಣವಿ ಮತ್ತು ಖಾಸ ಮಗಂದಿರಾದ 1ನೇ ನರಸಿಂಹ 2ನೇ ಪುರುಷೋತ್ತಮ 3ನೇ ಶ್ರೀಧರ 4ನೇ ಅಚ್ಯುತ 5ನೇ ವಿಷ್ಣು ತಂದೆ ಪಾಂಡುರಂಗ ಶೇಣವಿ ಇಷ್ಟು ಜನರಲ್ಲಿ ತಾರೀಖು 4—12—1911ನೇ ದಿವಸ ರಿಜಿಸ್ಟ್ರಿ ಮೂಲಕ ಆದ ಹಿಸ್ಸಾಪಟ್ಟಿಯಲ್ಲಿ ನನ್ನ ಗಂಡನ ಹಿಸೆಗೆ ಬಂದ ಈ ಕೆಳಗೆ ಕಾಣಿಸಿದ ಚಂಡಿಯೆ ವ ಕೋಡಾರ ಗ್ರಾಮಗಳ ಸರ್ವೆ ನಂಬರುಗಳ ಭೂಮಿ ನನ್ನ ಗಂಡನ ಹಯಾತಿಯ ವರೆಗೆ ಸವರೀಯವರು ಮತ್ತು ಅವರ ಮರಣದ ನಂತರ ನಾನೂ ಜೀವಂತ ಇರುವ ತನಕ ಅನುಭವಿಸಿ ಬರಬೇಕೆಂತ ಸ್ಪಷ್ಟವಾಗಿ ಶರ್ತು ನಮೂದಿಸಿದೆ. ಹೀಗಿದ್ದು ಏಲೀಕಡೆಗೆ ನನ್ನ ಮಗಂದಿರು ನನ್ನ ಹಕ್ಕಿಗೆ ಒಳಪಟ್ಟ ಈ ಭೂಮಿಗಳನ್ನು ಕ್ರಯ, ಅಡವು ವಗೈರೆ ಪರಾಧೀನ ಮಾಡುವ ತಯಾರಿಯಲ್ಲಿ ಇರುವದು ನನಗೆ ತಿಳಿದು ಬರುತ್ತದೆ. ಕಾರಣ ನಾನು ಜೀವಂತ ಇರುವ ವರೆಗೆ ಅವರಿಗೆ ಕ್ರಯ ಅಡವು ವಗೈರೆ ಯಾವದೇ ರೀತಿಯಿಂದ ಸದರ ಆಸ್ತಿ ಪರಾಧೀನ ಮಾಡಲಿಕ್ಕೆ ಹಕ್ಕು ಇಲ್ಲಾ. ಹೀಗಿದ್ದು ಯಾರಾದರೂ ಸದರಿ ಭೂಮಿಯನ್ನು ಅಡವು ಯಾ ಕ್ರಯಕ್ಕೆ ತಕ್ಕೊಂಡಲ್ಲಿ ಅವರು ಪಡೆಕೊಂಡ ಹಕ್ಕು ಕಾಯಿದೆಯಂತೆ ಎಂದೂ ಸಿಂಧುವೆನಿಸಲಾರದು. ಮತ್ತು ನನ್ನ ಹಕ್ಕು-ಸಂಬಂಧಕ್ಕೆ ಯಾವದೇ ರೀತಿ ಬಂಧನಕಾರಕವಾಗದು ಮತ್ತು ನನಗೆ ಮುಂದೆ ಯಾವದೇ ತರದ ನುಕ್ಸಾನು ಯಾ ಖರ್ಚು ಈ ಮೂಲಕ ಉತ್ಪನ್ನವಾದಲ್ಲಿ ಅದೆಲ್ಲವಕ್ಕೆ ಕ್ರಯ-ಅಡವು ಪಡೆಕೊಂಡವರೇ ಜವಾಬದಾರರಾಗಬೇಕಾಗುವದು. ತಿಳಿದಿರಲಿ.

ಗ್ರಾಮ	ಸ. ನಂ.	ಪೋ.	ಕ್ಷೇತ್ರ.	ಆಕಾರ.
ಚಂಡಿಯೆ.	441	0	0-29-0	4-0-0
	383	2	0-9-0	1-0-0
	429	0	0-22-8	2-0-0
	430		0-31-8	3-4-0
	346		0-17-0	3-8-0
	534		0-14-0	0-12-0
	536		0-11-8	1-2-0
	24		0-6-0	0-8-0
	11		0-31-0	2-12-0
ಕೋಡಾರ	67		6-25-0	5-0-0

ಚಂಡಿಯೆ, ತಾರೀಖು 30—10—41.

● ಈ ಎಡಗೈ ಹೆಬ್ಬೆಟ್ಟಿನ ಗುರ್ತು ಯಶೋದಾಬಾಯಿ ಪಾಂಡುರಂಗ ಶೇಣವಿ, ಚಂಡಿಯೆ ಇವರದು ಇರುತ್ತದೆ.

ತ್ರೈಮಾಸಿಕ ಕಂತುಗಳಿಂದ ಇಲ್ಲವೆ ೬ ಮಾಸಿಕ ಕಂತುಗಳಿಂದ ಮುಟ್ಟಿಸುವ ವ್ಯವಸ್ಥೆ ಮಾಡಿದರೆ ಉತ್ತಮವಾದೀತು ಎಂಬದು ನನ್ನ ಮೊದಲನೇ ಸೂಚನೆ ೨ನೇ ಸೂಚನೆಯೆಂದರೆ, ಸತತ ಮೂರು ವರ್ಷಗಳ ವರೆಗೆ ಸರಿಯಾಗಿ ನಡೆದ ಶಾಲೆಗಳನ್ನು ಲೋ. ಬೋರ್ಡಿನವರು ತಮ್ಮ ವಶಕ್ಕೆ ಒಪ್ಪಿಸಿಕೊಂಡು ಆ ಶಾಲೆಗಳ ಶಿಕ್ಷಕರನ್ನೂ ತಮ್ಮ ಶಿಬಂದಿಯಲ್ಲಿ ಸೇರಿಸಿಕೊಳ್ಳಬೇಕು. ಅದಲ್ಲದೆ ಬೇರೆ ಬೇರೆ ಸರಕಾರಿ ಇಲಾಖೆಯವರು ತಮ್ಮ ಉಮೇದವಾರರನ್ನು ಆರಿಸಿಕೊಳ್ಳುವಾಗ ಗ್ರಾಂಟಿನ ಶಾಲೆಗಳಲ್ಲಿ ಕೆಲಸ ಮಾಡಿದ ಮಂದಿಗೇ ಅವರು ಪ್ರಾಶಸ್ತ್ಯ ಕೊಡಬೇಕು. ಪರೀಕ್ಷೆಯಲ್ಲಿ ಹೆಚ್ಚು ಗುಣಗಳನ್ನು ದೊರಕಿಸಿದ ಪಾತ್ರತೆಗಿಂತಲೂ ಒಂದು ಶಾಳೆಯನ್ನು ಯಶಸ್ವಿಯಾಗಿ ನಡಿಸಿ ದೊರಕಿಸಿದ ಅನುಭವದ ಪಾತ್ರತೆ ಎಷ್ಟೋ ಮಿಗಿಲಾದದ್ದೆಂಬದು ಸುಸ್ಪಷ್ಟವಿದೆ. ಈ ರೀತಿ ಗ್ರಾಂಟಿನ ಶಾಲೆಗಳ ಶಿಕ್ಷಕರಿಗೆ ಪ್ರೋತ್ಸಾಹನ ಕೊಟ್ಟರೆನೇ ಇಂಥ ಶಾಲೆಗಳು ಹೆಚ್ಚುತ್ತ ಹೋಗಿ ಶೀಘ್ರದಲ್ಲಿಯೇ ದೇಶದಲ್ಲಿ ಸಾಕ್ಷರತೆಯು ಪ್ರಸಾರವಾದೀತು. ಅನ್ಯಥಾ ಆಗಲಾರದು ಇತ್ಯಾದಿ.

ತಾ. ೩೦-೯-೪೧ನೇಗೆ ದಸರೆ ಹಬ್ಬದ ದಿನ ಹಿರೇಗುತ್ತಿಯಲ್ಲಿ ತೊರ್ಕೆಯ ರಾ। ನಾರಾಯಣ ಗೋವಿಂದ ನಾಯ್ಕರ ಅಧ್ಯಕ್ಷತೆಯಲ್ಲಿ ನಾಡಹಬ್ಬವಾಚರಿಸಲ್ಪಟ್ಟಿತು ರಾ। ಗ. ನಾ. ಪಂಡಿತ, ತಿಮ್ಮಣ್ಣ ನಾಯ್ಕ ಮಾಸ್ಕೇರಿ, ಬೀರಣ್ಣ ನಾಯ್ಕ, ಉದ್ದಂಡ ನಾಯ್ಕ ಮೊದಲಾದವರು ನಾಡು ನುಡಿಗಳ ಏಳಿಗೆಯ ಬಗ್ಗೆ ದುಡಿಯಲು ಸಭಿಕರಿಗೆ ಬೋಧಿಸಿದರು. ಬಂಕಿಕೊಡ್ಲ ಶಾಲೆಯ ರಾ। ನಾರಾಯಣ ತೊರ್ಕೆಯವರೂ ಹಿರೇಗುತ್ತಿ ಶಾಲೆಯ ರಾ। ಗಿರಿಯಣ್ಣ ನಾಯ್ಕರೂ ಕೆಲವು ಕವಿತೆಗಳನ್ನು ಹಾಡಿ ತೋರಿಸಿದರು. ಹಬ್ಬದಲ್ಲಿ ಹುಡುಗರು ಉತ್ಸಾಹದಿಂದ ಸೇರಿದ್ದರು. ರಾತ್ರಿಯಲ್ಲಿ ಯಕ್ಷಗಾನದ ಪ್ರಸಂಗ ನಡೆಯಿತು. ಮುಂದೆ ತಾ. ೨-೧೦-೪೧ನೇ ಸಂಜೆ ಕನ್ನಡ ಕೂಟದವರು ಗಾಂಧಿ ಜಯಂತಿ ಉತ್ಸವ ಜರುಗಿಸಿದರು. ಮಹಾತ್ಮರ ಭಾವಚಿತ್ರದ ಮೆರವಣಿಗೆ, ರಾ॥ ಪಂಡಿತರ ಅಧ್ಯಕ್ಷತೆಯಲ್ಲಿ ಸಭೆಸೇರಿ ಮಹಾತ್ಮರ ಗುಣಸಂಕೀರ್ತನ, ಕಾವ್ಯಗಾಯನ ಮೊದಲಾದ ಕಾರ್ಯಕ್ರಮ ನಡೆಯಿತು. ಅಧ್ಯಕ್ಷ ಪಂಡಿತರು ಖಾದಿಯ ಮತ್ತು ಅಹಿಂಸೆಯ ಮಹತ್ವ ತಿಳಿಸಿ ಹೇಳಿದರು.

ಹೊನ್ನಾವರ— ಚಳಿ ಬೀಳುತ್ತಿದೆ. ರೈತರು ಗದ್ದೆ ಕೊಯಲು ಪ್ರಾರಂಭಿಸಿದ್ದಾರೆ ಅಕ್ಕಿ-ಭತ್ತಗಳ ದರ ಇಳಿಯುತ್ತಿವೆ. ಕೈ-ಕುಟ್ಟಿದ ಅಕ್ಕಿ ಮಾನಗಿಯೊಂದಕ್ಕೆ ರೂ. ೫, ೫—೨—೦; ಗಿರಣಿ ಅಕ್ಕಿ ಮಾನಗಿಯೊಂದಕ್ಕೆ ರೂ. ೫-೧೦, ೫-೧೨ ಹೀಗೆ ಧಾರಣೆಗಳಿವೆ. ಗಿರಣಿ ಅಕ್ಕಿ ಕೈ-ಕುಟ್ಟಿದ ಅಕ್ಕಿಗಿಂತ ತುಟ್ಟಿ ಹಾಗೂ ನಿಕೃಷ್ಟವಿರುತ್ತಿದ್ದಾಗ್ಯೂ ಜನರು ಅದನ್ನೇ ಕೊಂಡುಕೊಳ್ಳುತ್ತಿರುವದೊಂದು ಆಶ್ಚರ್ಯ ಸಂಗತಿ. ಜನರಿಗೆ ಬುದ್ಧಿ ಎಂದು ಬಂದೀತೋ ದೇವರೇ ಬಲ್ಲ!

ಮೆನೇಜಿಂಗ ಕಮಿಟಿಯ ಮೆಂಬರರ ಸಹಿ ತಕ್ಕೊಂಡ ನಕ ರಿಫಂಡ ಪಾಸು ಕೊಡಬಾರದೆಂದು ಚೆರಮನ್ನರು ನಾಕೆದಾರರಿಗೆ ಕೊಟ್ಟ ಹುಕುಮನ್ನು ನಗರ ಸಭೆಯ ಉಪಾಧ್ಯಕ್ಷರು ರದ್ದುಗೊಳಿಸಿ, ಪುನಃ ಹುಕುಮ ಆಗುವ ವರೆಗೆ ಹಿಂದಿನಂತೆಯೇ ರಿಫಂಡು ಚೀಟಿ ಕೊಡಬೇಕೆಂದು ಎಲ್ಲ ನಾಕೆದಾರರಿಗೆ ತಿಳಿಸಿದ್ದಾರೆ.

ತೂಕಳತೆ ಅಧಿಕಾರಿಗಳು ದೊಡ್ಡ ಕಂಟಗಳಿಗೆ ಪರಡಿಗಳು ಹಲಿಗೆಯವು ಇರಬಾರದೆಂದೂ ಕಬ್ಬಿಣದವಿರಬೇಕೆಂದೂ ಒತ್ತಾಯ ಮಾಡುತ್ತಿದ್ದಾರೆ. ಈಗ ಕಬ್ಬಿಣ ತುಟ್ಟಿಯಾದಾಗ ಕಬ್ಬಿಣದ ಹಲಿಗೆಗಳನ್ನು ಮಾಡಿಸಿಕೊಳ್ಳಲು ಅವರು ವರ್ತಕರಿಗೆ ಒತ್ತಾಯಪಡಿಸುವದು ಉಚಿತವಲ್ಲ. ಮೇಲಾಗಿ ಹಲಿಗೆಯ ಪರಡಿಗಳಿದ್ದರೆ ಏನು ಹಾನಿಯಾಗುತ್ತದೆಂಬವನ್ನು ಅವರಾಗಲಿ ಅವರ ಮೇಲಧಿಕಾರಿಗಳಾಗಲಿ ಜನರಿಗೆ ತಿಳಿಸಿ ಹೇಳಬಾರದೇ ?

ಶರಾವತಿ ಹೊಳೆಯೊಳಗಿನ ದೋಣಿಕಾರರು ಸಂಪು ಹೂಡಿದ್ದರಿಂದ ಪಂಚಗ್ರಾಮ ಪ್ರದೇಶದಲ್ಲಿ ಹಾಹಾಕಾರವೆದ್ದಿತು. ಆಗ ಕಸ್ಟಮ ಅಧಿಕಾರಿಗಳು ಕತ್ತರಿದು ತಾ. ೨೫ರಿಂದ ಹಿಂದಿನಂತೆಯೇ (ಹೊಸ ಶರ್ತುಗಳಿಲ್ಲದೆ) ದೋಣಿಗಳಿಗೆ ಪರವಾನೆ ಚೀಟುಗಳನ್ನು ಕೊಡಲಾರಂಭಿಸಿದ್ದಾರೆ. ಕಳೆದ ತಾ. ೨೩ನೇಗೆ ಶರಾವತಿ ಹೊಳೆಯೊಳಗಿನ ಹಾಗೂ ಗುಂಡಬಾಳ ಹಳ್ಳದೊಳಗಿನ ದೋಣಿಕಾರರೂ ದೋಣಿಕಾರರ ಉದ್ದಿಮೆಯ ಕ್ಷೇಮ ಚಿಂತಿಸುವ ಹಿತಚಿಂತಕರೂ ಮೊಲಕೋಡ ಗ್ರಾಮದಲ್ಲಿ ಇಲ್ಲಿಯ ವಕೀಲ ರಾ। ಸಂಜೀವರಾವ ಕಲ್ಲಾಪುರ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ದೋಣಿಕಾರ ವರ್ಗದ ಹಿತರಕ್ಷಣೆ ಮಾಡಿಕೊಳ್ಳುವ ಉದ್ದೇಶದಿಂದ ಒಂದು ಸಂಘವನ್ನು ಏರ್ಪಡಿಸಿಕೊಂಡಿದ್ದಾರೆ. ಸದರಿ ಸಂಘದ ಅಧ್ಯಕ್ಷರಾಗಿರುವ ರಾ। ಕಲ್ಲಾಪೂರರವರು ಕಸ್ಟಮ ಅಧಿಕಾರಿಗಳಿಗೆ, ಈಗಿನ ಹೊಸ ನಿಯಮಗಳನ್ನು ರದ್ದುಗೊಳಿಸಿ ಇಲ್ಲಿಯ ಪರಿಸ್ಥಿತಿಗೆ ಒಪ್ಪುವಂತಹ ಹೊಸ ನಿಯಮಗಳನ್ನು ಮಾಡಲು ಮನವಿ ಮಾಡಿಕೊಂಡಿರುತ್ತಾರೆ.

ನಮ್ಮ ನಗರ ಸಭೆಯವರು ಒಬ್ಬ ಆರೋಗ್ಯಾಧಿಕಾರಿಗಳಿಗೆ ನೇಮಿಸಿಕೊಳ್ಳಬೇಕೆಂದು ಠರಾಯಿಸಿ ೫ ವರ್ಷಗಳ ಹಿಂದೆ ಒಬ್ಬ ಇಸಮಿಗೆ ರೂ. ೨೦೦ ಧನಸಹಾಯ ಸಹ ಕೊಟ್ಟು ಪುಣೆಗೆ ಕಲಿಯಲು ಕಳಿಸಿಕೊಟ್ಟಿದ್ದರು. ದುರ್ದೈವದಿಂದ ಆ ಇಸಮು ಪರೀಕ್ಷೆಯಲ್ಲಿ ತೇರ್ಗಡೆಯಾಗಲಿಲ್ಲ! ಆದರೂ ಅವನಿಗೆ ನಗರ ಸಭೆಯವರು ಆರೋಗ್ಯಾಧಿಕಾರಿಯಾಗಿ ನೇಮಿಸಿಕೊಂಡರು! ಮುಂದೆ ಆ ನೇಮಣೂಕಿಯ ಬಗ್ಗೆ ಬಹಳ ಆಕ್ಷೇಪಗಳು ಬರಲಾಗಿ ನಗರ ಸಭೆಯವರು ನೇಮಿಸಿಕೊಂಡ ಇಸಮಿಗೆ ಮನೆಗೆ ಕಳಿಸಿಕೊಟ್ಟರು. ಅಂದಿನಿಂದ ಈತನಕ ಆರೋಗ್ಯಾಧಿಕಾರಿಯಿರಲಿಲ್ಲ! ಆದರೂ ಊರ ಆರೋಗ್ಯವೇನೂ ಕೆಡಲಿಲ್ಲ! ಊರೊಳಗಿನ ಹೊಲಸು ಕಾಲಕಾಲಕ್ಕೆ ತೆಗೆಸಿ ಎಲ್ಲೆಲ್ಲೂ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವದೇ ಆರೋಗ್ಯಾಧಿಕಾರಿಯ ಕೆಲಸವಿದ್ದರೆ ಅದನ್ನು ಈಗಿನ ಶಿಬಂದಿಯು ಈ ವರೆಗೆ ಮಾಡುತ್ತ ಬಂದಿದೆ, ಮುಂದೆಯೂ ಮಾಡಿ ಬರುವಂತಿದೆ. ಅದಲ್ಲದೆ ಊರಲ್ಲಿ ಆರೋಗ್ಯ ರಕ್ಷಣೆಯ ಬಗ್ಗೆ ವಿಶೇಷ ಜಾಗ್ರತೆ ಇಲ್ಲವೆ ಉಪಾಯಯೋಜನೆ ಮಾಡತಕ್ಕದಿದ್ದರೆ ಅದನ್ನು ಮಾಡಿಸಲಿಕ್ಕೆ ನಗರ ಸಭೆಯ ಚಿಕಿತ್ಸಾಲಯದ ಡಾಕ್ಟರರ ಸಹಾಯ ಬೇಕಾದಾಗ ಸಿಗುವ ಹಾಗಿದೆ. ಆದ್ದರಿಂದ ಪ್ರತಿ ತಿಂಗಳಿಗೆ ೬೦—೭೫ ರೂ ಸಂಬಳ ಕೊಟ್ಟು ಯಾವನೊಬ್ಬ ಆರೋಗ್ಯಾಧಿಕಾರಿಯೆಂಬ ಹೊಸ ನೌಕರನೊಬ್ಬನನ್ನು ನೇಮಿಸಿಕೊಳ್ಳುವ ಅವಶ್ಯಕತೆಯಿಲ್ಲ. ಆದರೂ ನಮ್ಮ ನಗರಸಭೆಯವರು ಇತ್ತ ೧—೧॥ ತಿಂಗಳಿಂದ ಅಂತಹ ಒಬ್ಬ ನೌಕರನನ್ನು ನೇಮಿಸಿಕೊಂಡಿದ್ದಾರೆ! ಅವನ ಕೆಲಸವೇನೆಂದು ಕೇಳಿರಿ. "ಅವನು ತನಗೆ ಮಹಾ ಸಭೆಯವರಾಗಲಿ, ಮೆನೇಜಿಂಗ ಕಮಿಟಿಯವರಾಗಲಿ, ಆರೋಗ್ಯರಕ್ಷಣೆಯ ಮಂಡಳದವರಾಗಲಿ, ನಗರಾಧ್ಯಕ್ಷರಾಗಲಿ, ಉಪಾಧ್ಯಕ್ಷರಾಗಲಿ, ಮ್ಯಾ॥ ಕ॥ಯ ಚೆರಮನ್ನರಾಗಲಿ, ಆರೋಗ್ಯ ಮಂಡಳದ ಚೆರಮನ್ನರಾಗಲಿ ಕಾಲಕಾಲಕ್ಕೆ ಒಪ್ಪಿಸಬಹುದಾದ ಇತರ ಕಚೇರಿಯ ಕೆಲಸವನ್ನೂ ಮಾಡತಕ್ಕದ್ದು." ಹೀಗೆ ನಗರ ಸಭೆಯ ಠರಾವಿನಲ್ಲೇ ವಿಧಿಸಿದೆ! ಈ ನೇಮಣೂಕಿಯಿಂದ ಆರೋಗ್ಯ ಇಲಾಖೆಯ ಡೈರೆಕ್ಟರರು ಸಮಾಧಾನ ಮಾಡಿಕೊಳ್ಳಬೇಕೆಂದು ಮೇಲೆ ನಗರ ಸಭೆಯ ಹಾರೈಕೆ! ನೇಮಿಸಿದ ಇಸಮನ ಪಾತ್ರತೆಯನ್ನು ಕೇಳುತ್ತೀರಾ? ಆ ಪ್ರಶ್ನೆ ಕೇಳಬೇಡಿ! ಮೇಲೆ ಅವತರಿಸಿಕೊಟ್ಟ ಠರಾವಿನ ಭಾಗದಲ್ಲಿ ವಿವರಿಸಿದ "ಇತರ" ಕೆಲಸವನ್ನು ಮಾಡಲಿಕ್ಕಷ್ಟೇ ಅವರ ಪಾತ್ರತೆ! ಹೊರತು ಆರೋಗ್ಯ ಶಾಸ್ತ್ರದ ಪರಿಚಯ ಅವರಿಗುಂಟೋ ಎಂದು ಕೇಳಬೇಡಿ! ೧೯೩೬ರಲ್ಲಿ ನೇಮಿಸಿದ ಇಸಮು ಪುಣೆಗೆ ಹೋಗಿ ಕಲಿತವನಾದರೂ ಇದ್ದನು! ಆ ಪಾತ್ರತೆ ಸಹ ಹೊಸ ಇಸಮನದಲ್ಲ!! ಇಷ್ಟಾಗಿ ಈ ನೇಮಣೂಕಿಯಿಂದ ಅಧಿಕಾರಿಗಳು ಸಂತುಷ್ಟರಾಗಬೇಕು!

ಜಾಹೀರ ವಿನಂತಿ.

ನಮ್ಮ ಉಪ್ಪಿನಪಟ್ಟಣ ಡಿಪೋದಿಂದ ಚಾಲು ಹಂಗಾಮಿನಲ್ಲಿ ಅಂದರೆ ೧೯೪೨ನೇ ಮೇ ಕೊನೆಯೊಳಗೆ ಅಜಮಾಸ ೫—೬ ಸಾವಿರ (ಎರಡು ಬಂಗಾಲಿ ಮಣದ) ಉಪ್ಪಿನ ಚೀಲಗಳನ್ನು ಒಯ್ದು ಶಿರ್ಶಿಯಲ್ಲಿರುವ ನಮ್ಮ ಇಮಾರತಿಗೆ ಮುಟ್ಟಿಸಿಕೊಡಬೇಕಾಗಿದೆ. ಈ ರೀತಿ ಚೀಲಗಳನ್ನು ಗಾಡಿಗಳಿಂದಾಗಲಿ ಮೋಟಾರುಗಳಿಂದಾಗಲಿ ನಿಶ್ಚಿತ ಧಾರಣೆಯಿಂದ ಒಯ್ದು ಕೊಡುವ ಕಂಟ್ರಾಕ್ಟು ಕೊಳ್ಳುವವರು ನಮ್ಮ ಆಫೀಸಿಗೆ ಇದೇ ಬರುವ ತಾ. ೧೫—೧೧—೧೯೪೧ ರೊಳಗೆ ತಾವು ಒಯ್ದು ಕೊಡಲಿಚ್ಛಿಸುವ ಕಡಿಮೆ ಧಾರಣೆಯನ್ನು ತಿಳಿಸಿ ಅರ್ಜಿ ಮಾಡತಕ್ಕದ್ದು. ಸದ್ರಿ ಅರ್ಜಿಗಳನ್ನು ಕಮಿಟಿಯವರು ಆಲೋಚಿಸಿ ಗುತ್ತಿಗೆ ಕೊಡುವ ವಿಚಾರ ಮಾಡುವರು.

ಸಾಣಿಕಟ್ಟಾ, ತಾ. ೧—೧೧—೧೯೪೧.

V. G Nadkerny,
ಸೆಕ್ರೆಟರಿ.
ಸಾಣಿಕಟ್ಟಾ ಕೋ-ಒಪರೇಟಿವ್ಹ ಸೊಲ್ಟ ಸೇಲ
ಸೊಸಾಯಿಟಿ, ಲಿ., ಸಾಣಿಕಟ್ಟಾ.

ಕೈಯಲ್ಲಿ ಕೈ ಹಿಡಿದು ಹೀಗೆಯೇ ತಮ್ಮ ಜೀವನನೌಕೆಯನ್ನು
ಪ್ರೇಮದಿಂದ ಸಾಗಿಸುವರೆಂಬ ಆಶೆ ಈ ಇಬ್ಬ "**ಶೇಜಾರಿ**"ಯವರಿಗೆ ಇತ್ತು !
* ಪ್ರಭಾತ *) ಆದರೆ ? (ಚಿತ್ರಪಟ !

ಹಿಂದು-ಮುಸಲ್ಮಾನ
ಐಕ್ಯದ ಭವ್ಯ ಚಿತ್ರ
ಶೇಜಾರಿ
ಕುಮಟಾ
ಚಿತ್ರರಂಜನ
ಥಿಯೇಟರಿನಲ್ಲಿ

ಸಿಂಧ ಸರಕಾರದ ಪ್ರಶಂಸೆಗೆ
ಪಾತ್ರವಾದ ಚಿತ್ರ !
ಶೇಜಾರಿ
ತಾ. 6-11-1941ನೇ
ಗುರುವಾರದಿಂದ
ಪ್ರಾರಂಭ !

ಊರಲ್ಲಿ ಅತ್ಯವಶ್ಯ ಮಾಡಬೇಕಾದ ಸುಧಾರಣೆಗಳನ್ನು ಮಾಡ ಹೋದರೆ ನಗರ ಸಭೆಯ ಕಡೆ ದುಡ್ಡಿಲ್ಲ! ವರ್ತಕರಿಗೆ ಸಲ್ಲಬೇಕಾದ ರಿಫಂಡ ಹಣ ಕೊಡಲಿಕ್ಕೆ ಸಾವಿರಾರು ಅಡ್ಡಿಗಳು ಮುಂದೆ ಬರುತ್ತಿವೆ! ಆದರೆ ತಮಗೆ ಬೇಕಾದ ಜನರಿಗೆ ಹುದ್ದೆಗಳನ್ನು ಕೊಡಲಿಕ್ಕೆ ಮತ್ತು ಅವರಿಗೆ ಸಂಬಳ ಕೊಡಲಿಕ್ಕೆ ಮಾತ್ರ ದುಡ್ಡಿನ ಅಡಚಣೆ ಅಡ್ಡ ಬರುವದಿಲ್ಲ! ಪಾತ್ರಾಪಾತ್ರತೆಯ ವಿಚಾರದ ಅಡಚಣೆಯೂ ತಡೆಯುವದಿಲ್ಲ! ಇವೆಲ್ಲ ಆಟಗಳನ್ನು ಜಿಲ್ಲಾಧಿಪತಿಗಳು ಹೇಗೆ ನಡೆಯಗೊಡುತ್ತಾರೋ ತಿಳಿಯದು!

ಊರಲ್ಲಿ ಜುಗಾರಿ ಮಂಡಗಳು ತಿರುಗಿ ತಲೆಯೆತ್ತಿವೆ ಜೋಗಮರಡಿಯಲ್ಲೂ ಕಮಟಿಹೊತ್ತಲದಲ್ಲೂ ಮಂಡಗಳು ನಡೆಯುತ್ತವೆಂದು ದಟ್ಟವಾರ್ತೆಯುಂಟು ಇದರಿಂದ ಊರಲ್ಲಿ ಕಳವುಗಳಾಗಹತ್ತಿವೆ ಮೊನ್ನೆ ತಾ ೩೦ನೇಗೆ ದುರ್ಗಾಕೇರಿಯೊಳಗಿನ ಒಂದು ಮನೆಯಲ್ಲಿ ಸಂಜೆಯ ೭ ಘಂಟೆಗೆ ಕಳ್ಳನೊಬ್ಬನು ಒಮ್ಮೆಲೇ ಹೊಕ್ಕು ಹಣ ಬಂಗಾರಗಳಿದ್ದ ಪೆಟ್ಟಿಗೆಯನ್ನು ಹೊತ್ತುಕೊಂಡು ಹೋದನೆಂದು ತಿಳಿದು ಬಂದಿದೆ ಆಗ ಮನೆಯಲ್ಲಿದ್ದ ಸಣ್ಣ ಹುಡುಗಿಯು ಕಳ್ಳನ ಹೆದರಿಕೆಯಿಂದ ನೆರೆಮನೆಗೆ ಓಡಿಹೋಗಿ ಸುದ್ದಿ ಕೊಟ್ಟಳಂತೆ ಆದರೆ ಮೂರು ಸಂಜೆಗೆ ಕಳ್ಳರು ಎಲ್ಲಿಂದ ಬಂದಾರು ಎಂದು ಭಾವಿಸಿ ನೆರೆಮನೆಯವರು ಹುಡುಗಿಯ ಮಾತನ್ನು ನಂಬಲಿಲ್ಲ ಮತ್ತು ಯಾರೂ ಕಳ್ಳನನ್ನು ಹಿಡಿಯಲಿಕ್ಕೆ ಅಥವಾ ಓಡಿಸಲಿಕ್ಕೆ ಬರಲಿಲ್ಲ ಇದರಿಂದ ಕಳ್ಳನಿಗೆ ತನ್ನ ಕೆಲಸ ಪೂರೈಸಿಕೊಳ್ಳಲು ಒಳ್ಳೇ ಸಂಧಿ ಸಿಕ್ಕಿತು! ಕಳವಿನ ಚೌಕಶಿ ಏನೋ ನಡೆದಿದೆ ಆದರೆ ಇನ್ನೂ ಪತ್ತೆ ಹತ್ತಿರುವದಿಲ್ಲ ಅದು ಹೇಗೆ ಹತ್ತೀತು? ಬಾಳೆಕೊನೆ ಕೋಳಿ ಮುಂತಾದವುಗಳ ಕಳವಾದರೆ ಪೋಲೀಸರಿಗೆ ಕೂಡಲೇ ಪತ್ತೆ ಹತ್ತುತ್ತಿದೆ ಆದರೆ ಅದೇ ದೊಡ್ಡ ಕಳವುಗಳಾದರೆ ಇಲ್ಲವೆ ಜುಗಾರಾಟ ನಡೆಯುತ್ತಿದ್ದರೆ ಮಾತ್ರ ಪೋಲೀಸರಿಗೆ ಪತ್ತೆ ಹತ್ತುವದು ಕಠಿಣ! ಹೀಗಿದೆ ಪರಿಸ್ಥಿತಿ!

ಈ ವರ್ಷ ಕೊಂಗ್ರೆಸ ಸದಸ್ಯರಾದವರು ತೀರ ಕಡಿಮೆ ಆಗಿಲ್ಲೆಂದರೂ ಹೇಳಬಹುದು ಜನರಿಗೆ ಕೊಂಗ್ರೆಸ ಬಗ್ಗೆ ಅನಾದರವುಂಟಾಗಿದೆಯೆಂದು ಹೇಳಬೇಕೋ ಕೊಂಗ್ರೆಸ ಸದಸ್ಯರಾಗುವದು ಈಗಿನ ಪರಿಸ್ಥಿತಿಯಲ್ಲಿ ಭೀತಿಕಾರಕವೆಂಬ ಕಲ್ಪನೆಯಾಗಿದೆಯೆಂದು ತಿಳಿಯಬೇಕೋ ತಿಳಿಯದು ಇನ್ನಾದರೂ ಜನರು ಕೊಂಗ್ರೆಸ ಸದಸ್ಯರಾಗಿ ಕೊಂಗ್ರೆಸ್ಸಿನ ಬಲವನ್ನು ಹೆಚ್ಚಿಸಲೆಂದೇ ಹಾರೈಕೆ ಕೊಂಗ್ರೆಸ ಕಾರ್ಯಕರ್ತರು ಮನೆಯ ಬಾಗಿಲಿಗೆ ಬಂದು ತಮಗೆ ಸದಸ್ಯರನ್ನಾಗಿ ನೋಂದಿಸುವರೆಂದು ಹಾದಿ ನೋಡುತ್ತ ಯಾರೂ ಕೂಡ್ರಬಾರದು ತಾವಾಗಿ ಕೊಂಗ್ರೆಸ ಕಾರ್ಯಕರ್ತರನ್ನು ಕಂಡು ಸದಸ್ಯರಾಗಬೇಕು

ಕಳೆದ ತಾ ೨೧ನೇಗೆ ಕೆಳಗಿನ ಪಾಳ್ಯದಲ್ಲಿಯ ಕೊಂಕಣ ಖಾರ್ವೀ ಹೆಂಗಸೊಬ್ಬಳು ೨ ಗಂಡು ೧ ಹೆಣ್ಣು ಹೀಗೆ ೩ ಶಿಶುಗಳನ್ನು ಹಡೆದಿದ್ದಾಳೆ ಮೂರೂ ಶಿಶುಗಳೂ ಬಾಳಂತಿಯೂ ಕ್ಷೇಮದಿಂದಿದ್ದಾರೆ

ಆರೊಳ್ಳಿ ಮುಗ್ವಾ ಬದಿಗೆ ಟಪಾಲು ಬಟವಡೆಗಾಗಿ ಹೋಗುವ ಟಪಾಲ ಪೇದೆಯು ಸೋಡ್ತಿಯ ತಿಕೀಟುಗಳನ್ನು ಮಾರುತ್ತಾನೆಂದೂ ಮನಿಯಾರ್ಡರ ತಕ್ಕೊಳ್ಳುವ ಜನರಿಗೆ ೧೨ ತಿಕೀಟುಗಳನ್ನು ಕೊಂಡು ಕೊಳ್ಳಲು ಒತ್ತಾಯ ಮಾಡುತ್ತಾನೆಂದೂ ದೂರುಂಟು ಅಧಿಕಾರಿಗಳು ಅವನ ಈ ವ್ಯಾಪಾರ ನಿಲ್ಲಿಸಬೇಕಾಗಿ ಸೂಚನೆ

ಕೆಕ್ಕಾರ — ಧಾರವಾಡ ಜಿಲ್ಲೆಯ ಉಪ್ಪಿನಬೆಟಗೇರಿ ಗ್ರಾಮದ ಸುಪ್ರಸಿದ್ಧ ವೈದಿಕ ವಿದ್ಯಾ ಪಾರಂಗತರಾದ ವೇ|| ಶಾ|| ಸಂ|| ಗಣೇಶ ಶಾಸ್ತ್ರಿಗಳು ಅಕಾಲದಲ್ಲಿ ಕೈವಲ್ಯವಾದ ಬಗ್ಗೆ ದುಃಖಪ್ರದರ್ಶನ ಮಾಡಲು ಕಳೆದ ತಾ ೨೩ನೇಗೆ ಇಲ್ಲಿಯ ಸಂಸ್ಕೃತ ಪಾಠಶಾಲೆಯಲ್ಲಿ ಸಭೆಯಾಯಿತು ಸಭಾಧ್ಯಕ್ಷರಾದ ರಾ|| ಕಡೆಮನೆ ಅನಂತ ಭಟ್ಟರೂ ಬೇರೆಯವರೂ ಶಾಸ್ತ್ರಿಗಳ ವಿದ್ವತ್ತೆಯ ಗೌರವ ತಿಳಿಸಿ ಹೇಳಿ, ಅವರ ನಿಧನದಿಂದ ವೈದಿಕ ಧರ್ಮ, ವಿದ್ಯೆ ಸಂಸ್ಕೃತಿಗಳಿಗೆ ಪ್ರಬಲ ಆಘಾತವಾಗಿರುವದಾಗಿ ಉದ್ಗರಿಸಿದರು ಸಭಿಕರು ಮೃತಾತ್ಮರಿಗೆ ಚಿರಶಾಂತಿ ದೊರೆಯಲೆಂದು ಕೋರಿದರು

ಭಟಕಳ— (ತಾ ೧೦-೧೦ ೪೧) ಈಹೊತ್ತು ಮಾರುಕೇರಿಯಲ್ಲಿ ರಾ ವೆಂಕಟಗಿರಿ ಹೆಬ್ಬಾರರವರ ಹಸ್ತದಿಂದ ಆಯುರ್ವೇದ ಚಿಕಿತ್ಸಾಲಯವೊಂದು ತೆರೆಯಲ್ಪಟ್ಟಿದೆ ಆ ಕಾಲಕ್ಕೆ ಹಲವರು ಮಾತಾಡಿ ಆಯುರ್ವೇದದ ವೈಶಿಷ್ಟ್ಯ ಚಿಕಿತ್ಸಾಲಯದ ಸ್ವರೂಪ, ಹಳ್ಳಿಗರ ಆರೋಗ್ಯ ಪಾಲನೆಯ ಕರ್ತವ್ಯ ಮುಂತಾದ ವಿಷಯಗಳನ್ನು ತಿಳಿಸಿ ಹೇಳಿದರು ಹಿಂದೆ ಇಲ್ಲೊಂದು ಎಲೋಪಥಿಯ ಗ್ರಾಮ ಚಿಕಿತ್ಸಾಲಯ ತೆರೆಯಲ್ಪಟ್ಟಿತ್ತು ಆದರೆ ಮೂರೇ ತಿಂಗಳಲ್ಲಿ ಡಾಕ್ಟರನು ಬಿಟ್ಟುಹೋದದ್ದರಿಂದ ಅದು ತಾನಾಗಿಯೇ ಮುಚ್ಚಲ್ಪಟ್ಟಿತು ಮುಂದೆ ಕೈ ಪ ತ್ರಿವಿಕ್ರಮ ಹೆಬ್ಬಾರರು ಈ ಹೊಸ ಚಿಕಿತ್ಸಾಲಯದ ಯೋಜನೆ ಮಾಡಿದರು ಆ ಯೋಜನೆ ಮೂರ್ತರೂಪ ತಾಳಿದ್ದು ನೋಡಲಿಕ್ಕೆ ಮಾತ್ರ ಅವರು ಉಳಿಯಲಿಲ್ಲದಿದ್ದು ದುರ್ದೈವದ ಸಂಗತಿ ಈ ಹೊಸ ಚಿಕಿತ್ಸಾಲಯ ದಿನೋ ದಿನ ಬೆಳೆಯಲೆಂದು ಈಶ್ವರ ಪ್ರಾರ್ಥನೆ

(ತಾ ೧-೧೧ ೪೧) ಇಲ್ಲಿಯ ನಗರ ಸಭೆಯ ಚಿಕಿತ್ಸಾಲಯದಲ್ಲಿ ಮದ್ದು ಸಿಗುವದೇ ಕಠಿಣವಾಗಿದೆ ಡಾಕ್ಟರರು ಹೊತ್ತಿಗೆ ಸರಿಯಾಗಿ ಚಿಕಿತ್ಸಾಲಯಕ್ಕೆ ಬರುವದಿಲ್ಲೆಂದು ದೂರಿದೆ ಮದ್ದಿಗಾಗಿ ಬಂದ ಜನರು ತಾಸುಗಟ್ಟಲೆ ಹಾದಿ ನೋಡುತ್ತ ಕೂಡ್ರಬೇಕು ಇಲ್ಲವೆ ಮದ್ದಿನ ಆಶೆ ಬಿಟ್ಟು ತಿರುಗಿ ಹೋಗಬೇಕು ನಗರ ಸಭೆಯವರು ಸರಕಾರಕ್ಕೆ ಬರೆದು ಹೊಸ ಡಾಕ್ಟರರನ್ನಾದರೂ ತರಿಸಿಕೊಳ್ಳಬಾರದೇ?

ಇಲ್ಲಿಯ ಅಬಕಾರಿ ಶಿಪಾಯಿಯು ಸ್ವತಃ ಸರಾಯಿ ಕುಡಿಯುತ್ತಾನೆಂದೂ ಬೇರೆಯವರಿಗೂ ಸರಾಯಿ ತಂದುಕೊಡುತ್ತಾನೆಂದೂ ದೂರು ಕೇಳಿ ಬರುತ್ತದೆ ಅಬಕಾರಿ ಅಧಿಕಾರಿಗಳಿಗೆ ಇದು ಭೂಷಣವಲ್ಲೆಂದು ಹೇಳಬೇಕೇ?

ಶಿರಸಿ— (ತಾ ೨ ೧೧ ೪೧) ಚಳಿ ಸಾಮಾನ್ಯ ಊರಲ್ಲಿ ಜ್ವರ ದಿ ಬೇನೆಗಳಿವೆ ಸಿದ್ದಾಪುರ ಸೀಮೆಯಿಂದ ಅಡಿಕೆ, ಮೆಣಸು ಬರಹತ್ತಿದೆ ಅಡಿಕೆ ಮಣ ೧ಕ್ಕೆ ರೂ ೯-೬ ದರವಿತ್ತು, ಈಗ ರೂ ೭-೮ ದರವಿದೆ ಇನ್ನೂ ಇಳಿತದ ಲಕ್ಷಣಗಳೇ ಮುಂಬಯಿಯಲ್ಲಿ ದರ ಇಳಿಯುತ್ತಿದೆ ಅಡಿಕೆಯನ್ನು ಮುಂಬಯಿಯಿಂದ ಕಳಿಸಲು ಉಗಿಬಂಡಿ ಸಿಗದ್ದರಿಂದ ದರ ಇಳಿದಿರುತ್ತದಾಗಿ ಹೇಳುತ್ತಾರೆ ಪೆಟ್ರೋಲ ನಿರ್ಬಂಧದಿಂದ ಗಾಡಿಗಳಿಗೆ ಕೊಂಚ ಸುಖ ಸರಕು ಮೋಟಾರುಗಳ ಅಭಾವವಾಗಿ ಎಲ್ಲ ಸರಕುಗಳು ಗಾಡಿಗಳಿಂದಲೇ ಸಾಗಬೇಕಾಗಿದೆ ಅದರಿಂದ ಗಾಡಿಗಳಿಗೆ ಗಿರಾಕಿ ಹೆಚ್ಚಿದೆ ಹೊಸ ಗಾಡಿಗಳು ತಯಾರಾಗಿವೆ ಪೆಟ್ರೋಲ ಸಿಗುವದು ಇನ್ನೂ ಕಡಿಮೆಯಾಗಬಹುದಾಗಿ ಹೇಳುತ್ತಾರೆ ನಮ್ಮ ಹಿಂದುಸ್ಥಾನದ ಉತ್ತರಕ್ಕಿರುವ ಸಿಂಕ್ಯಾಂಗದಲ್ಲಿ ಪೆಟ್ರೋಲ ಎಣ್ಣೆ ಇಲ್ಲವಂತೆ ಆ ಸರಕಾರವು ಹಿಂದುಸ್ಥಾನ ಸರಕಾರದ ಕಡೆ ಪೆಟ್ರೋಲ ಎಣ್ಣೆ ಕೇಳಿತ್ತಂತೆ ಕೆಲವು ಎಣ್ಣೆ ಪೂರೈಸಬಹುದಾಗಿ ಸಿಂಕ್ಯಾಂಗ ಸರಕಾರಕ್ಕೆ ಹಿಂದುಸ್ಥಾನ ಸರಕಾರವು ತಿಳಿಸಿರುತ್ತದಂತೆ

ಕೊಂಗ್ರೆಸ ರಾಜ್ಯಭಾರದಲ್ಲಿ ಆರೋಗ್ಯ ಇಲಾಖೆಯ ಮಂತ್ರಿಗಳಾಗಿದ್ದ ಡಾ|| ಗಿಲ್ಡರರವರು ಇತ್ತಕಡೆ ಸಂಚರಿಸಿದಾಗ ಬಸುರು ಹೆಂಗಸರಿಗೆ ಆಗುವ ಬಿಳಿತೊನ್ನಿನ ರೋಗನಿವಾರಣೆಗಾಗಿ ಒಬ್ಬ ಡಾಕ್ಟರರನ್ನು ಇಲ್ಲಿ ನೇಮಿಸಿ, ಈ ರೋಗದ ಸಂಶೋಧನೆ ನಡಿಸಬೇಕೆಂದು ತಿಳಿಸಿದಂತೆ ಡಾ|| ದಲಾಲ ಎಂಬ ಪೆನ್ಶನ ಪಡೆದ ಅನುಭವಿಕರು ೧ ವರ್ಷದ ಬಗ್ಗೆ ನೇಮಿಸಲ್ಪಟ್ಟಿದ್ದರು ಅವರ ನೇಮಣೂಕಿಯ ಅವಧಿ ನಿನ್ನೆ ತೀರಿತು ಅವರು ನಿನ್ನೆ ಇಲ್ಲಿಂದ ಹೊರಟು ಹೋಗಿರುತ್ತಾರೆ ಡಾ|| ದಲಾಲರು ಸಜ್ಜನರು ಬಿಳಿತೊನ್ನಿನ ರೋಗದ ಮೇಲೆ ಇವರು ಚಿಕಿತ್ಸೆ ಮಾಡಿ ಬಹಳ ಹೆಂಗಸರಿಗೆ ಜೀವದಾನ ಕೊಟ್ಟಿದ್ದುಂಟು ಡಾ|| ದಲಾಲರಿಗೆ ಈ ರೋಗದ ಚೌಕಶಿ ಮಾಡಲು ಇನ್ನೂ ಅವಕಾಶ ಬೇಕಾಗಿದ್ದಿತು ಮುಂಬಯಿ ಸರಕಾರವು ಡಾ|| ದಲಾಲರನ್ನು ಪುನಃ ನೇಮಿಸಬೇಕಾಗಿ ಇಲ್ಲಿಯ ಜನರ ಅಪೇಕ್ಷೆ

ಇಲ್ಲಿಯ ಡಾ|| ಜಗನ್ನಾಥ ಅನಂತರಾವ ಸೋಂದೆ, ಎಮ್ ಬಿ ಬಿ ಎಸ್ ಇವರಿಗೆ ಹಿಂದುಸ್ಥಾನ ಸರಕಾರವು ಆಯ್ ಎಮ್ ಎಸ್ ಹುದ್ದೇದಾರರಾಗಿ ನೇಮಿಸಿಕೊಂಡಿದೆ ಡಾ|| ಸೋಂದೆಯವರು ಮುಂಬಯಿಯ ಕೇ ಈ ಎಮ್ ಆಸ್ಪತ್ರೆಯಲ್ಲಿ ಕೆಲಸ ಮಾಡಿ ತಮ್ಮ ನಿಪುಣತೆಯನ್ನು ಸಿದ್ಧಗೊಳಿಸಿದ್ದಾರೆ

ಇಲ್ಲಿ ೧ನೇ ವರ್ಗದ ಮೆಜಿಸ್ಟ್ರೇಟರು ಇಲ್ಲ ೨ನೇ ವರ್ಗದ ಮೆಜಿಸ್ಟ್ರೇಟ ಇಸಮುಗಳು ೪ ಇವೆ ಸಿದ್ದಾಪುರದ ಮಾಮಲೇದಾರರೂ ೨ನೇ ವರ್ಗದವರು ಹೀಗಾಗಿ ಘಟ್ಟದ ಮೇಲಿ ೧ನೇ ವರ್ಗದ ಮೆಜಿಸ್ಟ್ರೇಟರ ಕೆಲಸವನ್ನು ಪ್ರಾಂತ ಸಾಹೇಬರೇ ನಡಿಸಬೇಕಾಗುತ್ತದೆ ಪ್ರಾಂತ ಸಾಹೇಬರ ಕ್ಯಾಂಪ ಸರ್ಕೀಟಿನದ್ದರಿಂದ ಜನರು ಊರೂರು ತಿರುಗಾಡಿ ಕಷ್ಟ ನಷ್ಟಪಡಬೇಕಾಗುತ್ತದೆ ಇಲ್ಲಿಯ ಮಾಮಲೇದಾರರಿಗೆ ೧ನೇ ವರ್ಗ ಕೊಡುವಷ್ಟು ಹಿರಿತನವಿಲ್ಲಾದರೆ ಹೊಸ ಮಾಮಲೇದಾರರನ್ನು ನೇಮಿಸುವ ವಿಚಾರ ಮಾಡಬಹುದು ಕುಮಟೆಯಲ್ಲಿ ಮಾಮಲೇದಾರರಿದ್ದ ರಾ|| ಅಲಾಬಕ್ಷರವರು ಇಲ್ಲಿ ಮಾಮಲೇದಾರರಾಗಿ ಬರುತ್ತಾರಾಗಿ ಒಂದು ಗಾಳಿ ವಾರ್ತೆಯುಂಟು

ಉತ್ತರ ಕನ್ನಡ ಜಿಲ್ಲೆಯ ಸಹಕಾರ ಪರಿಷತ್ತು ಮತ್ತು ಪ್ರದರ್ಶನ ಸಮಾರಂಭಗಳು ನಿನ್ನೆ ಮತ್ತು ಇಂದು ನಡೆದವು ನಿನ್ನೆ ಅಪರಾಹ್ನ ೩ ಘಂಟೆಗೆ ಶ್ರೀ ಮಾರಿಕಾಂಬಾ ಹೈಸ್ಕೂಲಿನ ಉಪ್ಪರಿಗೆಯ ಮೇಲೆ ಸಭೆ ನಡೆಯಿತು ಸ್ವಾಗತ ಪದ್ಯಗಳಾದ ಬಳಿಕ ಸ್ವಾಗತ ಸಮಿತಿಯ ಅಧ್ಯಕ್ಷರಾದ ರಾ|| ಸುಂದರರಾವ ಪಂಡಿತರು ಸಕಲರ ಸ್ವಾಗತ ಕೋರಿ ನಮ್ಮಲ್ಲಿಯ ಸಹಕಾರ ಸಂಘಗಳ ಪರಿಸ್ಥಿತಿಯನ್ನು ಸಮಾಲೋಚಿಸಿದರು ಆ ಮೇಲೆ ಅಧ್ಯಕ್ಷರಾದ ಶ್ರೀ|| ಅಣ್ಣಾಜಿ ಬಾಬಾಜಿ ಲಠ್ಠೇಯವರು ಸಹಕಾರದ ದುರವಸ್ಥೆಗೆ ಸರಕಾರವೇ ಕಾರಣವೆಂದೂ ಜನಗಳ ಪರಿಸ್ಥಿತಿ ಸುಧಾರಿಸದನಕ ಸಹಕಾರದ ಸುಧಾರಣೆಯಾಗದೆಂದೂ ಜನರು ಅಕ್ಷರಶತ್ರುಗಳೆಂದು ಎಲ್ಲ ಹೊಣೆ ಅವರ ಮೇಲೆ ಹೊರುವದು ತಪ್ಪೆಂದೂ ಜನಸ್ಥಿತಿಯನ್ನು ಸುಧಾರಿಸುವದು ಸರಕಾರದ ಉದ್ದೇಶವಿಲ್ಲವಾಗಿಯೂ ಮಹಾತ್ಮರು ಗ್ರಾಮೋದ್ಧಾರದ ಮೇಲೆ ಕಟಾಕ್ಷವನ್ನಿಟ್ಟು ದುಡಿದು ಜನಪ್ರೀತಿಯನ್ನು ಸಂಪಾದಿಸುವ ಕ್ರಮ ನೋಡಿ ಮೇಲಾಟದ ಬುದ್ಧಿಯಿಂದ ೩ ೪ ವರ್ಷಗಳ ಹಿಂದೆ ೧ ಕೋಟಿ ರೂಪಾಯಿಗಳನ್ನು ಸರಕಾರವು ಗ್ರಾಮೋದ್ಧಾರಕ್ಕೆ ಕೊಡುವ ನಾಟಕ ಮಾಡಿತೆಂದೂ ಆ ಎಲ್ಲ ಹಣ ಬೇರೆ ಬೇರೆ ಅಧಿಕಾರಿಗಳ ಪಾಲಾಯಿತೆಂದೂ ಆ ಹಣ ಜನರ ಕೈ ಸೇರಲಿಲ್ಲವಾಗಿಯೂ ಈ ಎಲ್ಲ ದುರವಸ್ಥೆ ಸ್ವಾತಂತ್ರ್ಯ ಸಿಕ್ಕಿದನಕ ಪರಿಹಾರ ಹೊಂದಲಿಕ್ಕಿಲ್ಲವಾಗಿಯೂ ಅಲ್ಲಿಯವರೆಗೆ ಜನರು ಕೈ ಮುದುಡಿಕೊಂಡು ಉಳಿಯದೆ ಗ್ರಾಮಜೀವನವನ್ನು ಗ್ರಾಮದ ಪರಿಸ್ಥಿತಿಗೆ ತಕ್ಕಂತೆ ನಡಿಸಿ ಗ್ರಾಮದೊಳಗಿನ ಸಂಪತ್ತು ಗ್ರಾಮದ ಹೊರಗೆ ಹೋಗದಂತೆ ಜಾಗ್ರತೆ ಕೊಳ್ಳಬೇಕಾಗಿಯೂ ಆದರಿಂದಲೇ ಗ್ರಾಮೋದ್ಧಾರವಾಗುವದಾಗಿಯೂ ಈಗಿನ ಗ್ರಾಮೋದ್ಧಾರ ಅಧಿಕಾರಿಗಳು ಕೊರಳ ಸುತ್ತು ಕೊರಳ ಬಾಕಿ ಚಹಾ ಅಂಗಿ ಪೇಟುಗಳನ್ನು ಹಾಕಿಕೊಂಡು ಗ್ರಾಮನಿವಾಸಿಗಳಿಗೆ ದೂರವಾಗುವರಾಗಿಯೂ ಇಂಥ ಕ್ರಮಗಳಿಂದ ಗ್ರಾಮೋದ್ಧಾರವಾಗದಾಗಿಯೂ ಸಾವಕಾರರಿಂದ ಸಾಲ ಹುಟ್ಟದ ಜನರಿಗೆ ಸಂಘಗಳು ಸಾಲ ಕೊಟ್ಟವಾಗಿಯೂ ಸಾವಕಾರರು ತಾವಾಗಿ

(೩ನೇ ಪುಟದ ಮೇಲೆ ನಡೆದಿದೆ)

ಈಗ ಕಕ್ಕಸಪ್ರದೇಶದ ಮೇಲೆ ಗುರಿ!

(೨ನೇ ಪುಟದಿಂದ ಮುಂದುವರಿದುದು)

ಇರಾಣಗಳೊಳಗಿನ ಉಗಿಬಂಡಿಗಳನ್ನು ಜೋಡಿಸುವ ಯೋಜನೆ ನಡೆದಿದೆ. ಅದೇ ಪ್ರಕಾರ ಇರಾಣದೊಳಗಿನ ಉಗಿಬಂಡಿಗಳನ್ನು ನಮ್ಮ ಹಿಂದುಸ್ಥಾನದೊಳಗಿನ ಉಗಿಬಂಡಿಗಳಿಗೆ ಜೋಡಿಸಿ ಹಿಂದುಸ್ಥಾನದಿಂದ ತುರ್ಕಸ್ತಾನದ ವರೆಗೆ ರಣಭೂಮಿಯನ್ನೇರ್ಪಡಿಸಿ ಸಂರಕ್ಷಣ ಮಾಡಿಕೊಳ್ಳುವ ಯೋಜನೆ ಸಹ ನಡೆದಿದೆ. ಸಂಕಲ್ಪಿತ ಯೋಜನೆ ಸಂಕಲ್ಪದಂತೆ ಪೂರ್ಣವಾದರೆ ತುರ್ಕಸ್ತಾನಕ್ಕೆ ತಕ್ಕ ಬೆಂಬಲ ಸಿಕ್ಕೀತು. ಆದರೆ ಕಾಲಚಕ್ರವು ನಿಲ್ಲುವದಿಲ್ಲ! ಅದು ಗರಗರನೆ ತಿರುಗುತ್ತಿರುವಾಗ, ಹಿಟ್ಲರನು ಆ ಕಾಲಚಕ್ರಕ್ಕೆ ಮಿಗಿಲಾದ ವೇಗದಿಂದ ಸಾಗಿ ಬರುತ್ತಿದ್ದಾಗ, ಈ ಯೋಜನೆ ಪೂರ್ಣವಾಗಲು ಅವಕಾಶವಿಲ್ಲವೆಂದೇ ನನಗೆ ಯೋಚನೆ! ಗಾಬರಿಯಿಂದ, ಲಗುಬಗೆಯಿಂದ ಈ ಮಾರ್ಗಗಳು ಕಟ್ಟಲ್ಪಡುತ್ತಿವೆ. ಆದರೆ ಈ ಮಾರ್ಗ ಪೂರ್ಣವಾಗುವ ತನಕ ರುಶ್ಯ ಭಟರು ಹಿಟ್ಲರನನ್ನು ತಡೆದರೆ ಮಾತ್ರ ತುರ್ಕ ಸರಕಾರಕ್ಕೆ ಧೈರ್ಯವಿದೆ. ಅಲ್ಲಿಯ ವರೆಗೆ ರುಶ್ಯರು ಜರ್ಮನರನ್ನು ಹಿಡಿದು ನಿಲ್ಲಿಸಬಹುದಾಗಿಯೂ, ಆ ಶಕ್ತಿ ಈಗಲೂ ರುಶರಲ್ಲಿರುವದಾಗಿಯೂ, ಚಳಿಗಾಲವು ಅನುಕೂಲವಿರುವದೆಂದೂ ಹೇಳಲಾಗುತ್ತದೆ. ನಾವು ನಂಬುತ್ತೇವೆ, ನೀವಾದರೂ ನಂಬಿಕೊಂಡಿರಿ! ಅಪನಂಬಿಗೆಯಿಂದ ಧೈರ್ಯ ಕುಂದುತ್ತದೆ. ಕಕ್ಕಸ ದೇಶದ ಮೇಲಿನ ದಾಳಿಯ ಕದಾತಂತುಗಳಿವು.

ಲೆನಿನಗ್ರಾಡ, ಮಾಸ್ಕೋ ರಣಭೂಮಿಗಳಲ್ಲಿ ಅದ್ಭುತವಾದ ಸಂಗ್ರಾಮಗಳು ನಡೆಯುತ್ತಿವೆ. ರುಶ್ಯರೂ ಜರ್ಮನರೂ ನಿಕರದಿಂದ ಹೋರಾಡುತ್ತಿದ್ದಾರೆ. ಜರ್ಮನ ಸೇನಾಪತಿಗಳಿದ್ದ ಬೋಕ್‌ರವರು ಒಬ್ಬ ಗೂಳಿ ಮನುಷ್ಯರಂತೆ, ಪರಿವೆಯಿಲ್ಲದವರಂತೆ ತಮ್ಮ ಸೈನ್ಯದ ಕಷ್ಟ-ನಷ್ಟಗಳ ಪರಿವೆ ಹಿಡಿಯದೆ ಕೇವಲ ಹುಂಬರಂತೆ ಮುನ್ನುಗ್ಗಿ ಹೋಗುತ್ತಾರಂತೆ! ಆದರಿಂದ ಜರ್ಮನರಿಗೆ ವಿಜಯವಾಗುತ್ತಿದ್ದಾಗ್ಯೂ, ಜರ್ಮನರಿಗೊದಗುವ ಹಾನಿಯೆಷ್ಟೆಂದು ಹೇಳಸಲ್ಲ. ಮಾಸ್ಕೋದ ಉತ್ತರ ಪಾರ್ಶ್ವದ ಕಲಿನಿನದಲ್ಲಿಯೂ ಟೂಲಾದಲ್ಲಿಯೂ ಜರ್ಮನರು ಮುನ್ನುಗ್ಗಿ ರುಶ್ಯರಿಗೆ ಬಹು ಸಂಕಟವನ್ನುಂಟುಮಾಡಿದ್ದಾರೆ. ಮಾಸ್ಕೋ ಪಟ್ಟಣವನ್ನು ಮೂರು ಪಾರ್ಶ್ವಗಳಿಂದ ಮುತ್ತಲು ಜರ್ಮನರು ಪರಿಪರಿಯಿಂದ ಯತ್ನಮಾಡುತ್ತಿದ್ದಾರೆ. ಜರ್ಮನಿಯಿಂದ ಹೊಸ ದಂಡುಗಳು ಬರಹತ್ತಿವೆಯೆಂದು ಮಾಸ್ಕೋದೊಳಗಿನ 'ಪ್ರವಡಾ' ಪತ್ರಿಕೆಯು ಬರೆಯುತ್ತಿದೆ. ರಶ್ಯರಾದರೂ ಅಷ್ಟೇ ನಿಕರದಿಂದ ಪ್ರತಿಭಟಿಸುತ್ತಿದ್ದಾರೆ. ರಶ್ಯ ಸೇನಾಪತಿಗಳಾದ ಬುಡೆನಿಯವರೂ ವ್ರೋಶಿಲೊವರವರೂ ಸೈನ್ಯಬಲ ಶೇಖರಿಸುವ ಕಾರ್ಯವನ್ನು ರಭಸದಿಂದ ನಡಿಸಿದ್ದಾರೆ. ಜರ್ಮನ ಪುಂಡರನ್ನು ಮಾಸ್ಕೋದ ಮೇಲಿನ ಗಿಡರದಂತೆ ಅಲ್ಲಲ್ಲಿ ಹಿಡಿದಿಡುತ್ತಾರೆ. ಜರ್ಮನರು ಬಹು ಆವೇಶದಿಂದ ಸಾಗಿಹೋಗಿ ರುಶ್ಯರ ವ್ಯೂಹಗಳನ್ನು ಭೇದಿಸಿ ಮುನ್ನುಗ್ಗುತ್ತಿದ್ದಾರೆ. ಟೂಲಾ ನಗರದ ಹೊರಕೋಟೆಯನ್ನು ಭೇದಿಸಿ ಜರ್ಮನರು ನಗರ ಪ್ರವೇಶ ಮಾಡಿದರಂತೆ. ನಗರದಲ್ಲಿ ನಾಗರಿಕರು ಜರ್ಮನರನ್ನು ಪ್ರತಿಭಟಿಸುತ್ತಿದ್ದಾರಂತೆ. ಬೀದಿ ಬೀದಿಗಳಲ್ಲಿ, ಕೇರಿ ಕೇರಿಗಳಲ್ಲಿ ರುಶ್ಯರು ಜರ್ಮನರನ್ನು ಎದುರಿಸಿ ಹೊರತಳ್ಳಲೆತ್ನಿಸುತ್ತಿದ್ದಾರಂತೆ. ಹೊಡೆದಾಟ—ಬಡಿದಾಟ— ಹೋರಾಟ— ಚೀರಾಟ ಕೂಗಾಟಗಳು ಟೂಲಾ ನಗರವನ್ನು ವ್ಯಾಪಿಸಿಕೊಂಡಿವೆಯಂತೆ. ಟೂಲಾ ನಗರದ ಮುಖ್ಯ ಕೈಗಾರಿಕೆಯ ಕೇಂದ್ರ, ಮಾಸ್ಕೋದಿಂದ ೧೨೦ ಮೈಲು ದೂರವಿದೆ. ರುಶ್ಯರು ಆರ್ಭಟದಿಂದ ಜರ್ಮನರ ಮೇಲೆ ಸಾಗಿ ಹೋಗಿ ಕೈತಪ್ಪಿ ಹೋದ ಕೆಲ ಪ್ರದೇಶವನ್ನು ಪುನಃ ಕೈಕೊಂಡರೆಂಬ ಸುದ್ದಿಯೂ ಬಂದಿದೆ. ರುಶ್ಯ ದೇಶ ಫ್ರಾನ್ಸ ದೇಶವಲ್ಲ, ಹಿಟ್ಲರನು ಇದನ್ನು ನೆನಪಿನಲ್ಲಿಟ್ಟುಕೊಳ್ಳತಕ್ಕದ್ದು. ಜರ್ಮನರು ಎಷ್ಟೇ ವಿಜಯಗಳನ್ನು ಪಡೆಕೊಂಡರಾಗ್ಯೂ ರುಶ್ಯರ ಅಂತಃಕರಣ ಹಿಟ್ಲರನ ವಶವಾಗುವದು ಅಶಕ್ಯ! ಇಲ್ಲಿಯ ಕಾಳಗಗಳನ್ನು ವಿಮರ್ಶಿಸಿದರೆ ರುಶ್ಯರು ಇನ್ನೂ ೧-೨ ತಿಂಗಳು, ಏಕೆ ಚಳಿಗಾಲ ಮುಗಿಯುವ ತನಕ, ಹಿಟ್ಲರನನ್ನು ಕೈ ಕಟ್ಟಿ ಹಿಡಿದು ನಿಲ್ಲಿಸಬಹುದಾಗಿ ಊಹಿಸುತ್ತಾರೆ. ಬ್ರಿಟನ ಅಮೇರಿಕೆಗಳಿಂದ ಯುದ್ಧಸಾಮಗ್ರಿಗಳು ಉತ್ತರ ಭಾಗದಿಂದ ಸುಸೂತ್ರವಾಗಿ ರುಶ್ಯ ರಣಭೂಮಿಗೆ ತಲ್ಪುತ್ತಿರುವದರಿಂದ ರುಶ್ಯರು ಹಿಮ್ಮೆಟ್ಟಿ ಓಡಿಹೋಗುವ ಇಲ್ಲವೆ ಜರ್ಮನರೊಡನೆ ಸಂಧಾನ ಮಾಡಿಕೊಳ್ಳುವ ಯೋಗ ಕಡಿಮೆ. ಆದರಿಂದ ತುರ್ಕರಿಗೂ ಕೆಲಮಟ್ಟಿಗೆ ಧೈರ್ಯ ದೊರೆಯಬೇಕು. ರುಶ್ಯ ರಣದೇವಿ ಹಿಟ್ಲರನಿಗೆ ಪ್ರಸನ್ನವಾದರೆ ಮಾತ್ರ ಸಂಕಟವಿದೆ, ಅದರೆ ಘಾತವಿಲ್ಲ.

ಬ್ರಿಟಿಶ ಪ್ರಧಾನ ಮಂಡಳದೊಳಗೆ ಗಡಿಬಿಡಿಯಾಗಹತ್ತಿದೆ. ರುಶ್ಯರ ಅಪಜಯಗಳಿಂದ ಬ್ರಿಟನ ಅಮೇರಿಕೆಗಳಲ್ಲಿ ಜನರು ಪ್ರಕ್ಷುಬ್ಧರಾಗಿದ್ದಾರೆ. ಪಶ್ಚಿಮ ಪಾರ್ಶ್ವದಿಂದ ಜರ್ಮನಿಯ ಮೇಲೆ ಸಾಗಿಹೋಗಿ ರುಶ್ಯ ದೇಶದ ಮೇಲಿನ ಹಿಟ್ಲರನ ದಾಳಿಯನ್ನು ಕುಂಠಿತ ಮಾಡಬೇಕೆಂಬ ಈ ಜನರ ಆಗ್ರಹ. ಅದಕ್ಕೆ ಬ್ರಿಟಿಶ ಪ್ರಧಾನ ಮಂಡಳವು ಒಪ್ಪುವದಿಲ್ಲ. ಲಂಡನಿನ 'ಟೈಮ್ಸ'ದಂಥ ಪತ್ರಿಕೆಯು ಸಹ ಈ ಯೋಜನೆಗೆ ಬೆಂಬಲ ಕೊಡುವದಿಲ್ಲ. ಆದಾಗ್ಯೂ ಜನರಿಗೆ ಸಮಾಧಾನವಿಲ್ಲ. ಅಮೇರಿಕೆಯಲ್ಲಿ ಬ್ರಿಟಿಶ ರಾಯಭಾರಿ ಹೆಲಿಫೆಕ್ಸರವರದೊಂದು ಭಾಷಣವಾಯಿತು. ರುಶ್ಯರಿಗೆ ಅಮೇರಿಕೆಯವರಿಂದ ಆಗತಕ್ಕ ಸಹಾಯದ ಕುರಿತು ಹಲಿಫಕ್ಸ ದೊರೆಗಳು ಭಾಷಣ ಮಾಡಲಿದ್ದರು. ಪಶ್ಚಿಮ ಪಾರ್ಶ್ವದಿಂದ ಯುದ್ಧ ಪ್ರಾರಂಭಿಸಿರೆಂಬದೊಂದೇ ಘೋಷಣೆಯನ್ನು ಅಮೇರಿಕೆಯ ನಾಗರಿಕರು ನಡಿಸಿ ದೊರೆಗಳ ಭಾಷಣವನ್ನು ಮುಂದರಿಸಗೊಡಲಿಲ್ಲ. ಲಂಡನಿನೊಳಗೂ ಇದೇ ಅವಸ್ಥೆ! ಪಾರ್ಲಿಮೆಂಟಿನ ಕಾರ್ಯದರ್ಶಿ ಕಮಾಂ ವಿಲೀನಸನ್‌ರವರ ಭಾಷಣವನ್ನು ಬ್ರಿಟಿಶರು ಆಗಗೊಡಲಿಲ್ಲ. ಸಭಾಸ್ಥಾನದಲ್ಲಿ ಗದ್ದಲ ಮಾಡಿ ಗೊಂದಲ ಮಾಡಿದರು. ರುಶ್ಯರು ಸೋತರೆ ಚರ್ಚಿಲ್ಲರು ಈಗಿನ ಪ್ರಧಾನ ಮಂಡಳವನ್ನು ಇದ್ದಕ್ಕಿದ್ದಂತೆ ಕಾಪಾಡುವದು ಕಠಿಣವೇ ಸೈ! ಈಗಾಗಲೇ ಯುದ್ಧಸಾಮುಗ್ರಿ ಪೂರೈಕೆ ಇಲಾಖೆಯ ಪ್ರಧಾನರಾದ ಬೀವರಬ್ರುಕ ದೊರೆಗಳಿಗೆ ದಮ್ಮಿನ ವಿಕಾರವಾಗಿದೆ ಪ್ರಧಾನಪದದಿಂದ ನಿವೃತ್ತಿ ಹೊಂದುವ ಚಿನ್ಹೆಯಿದು! ಇನ್ನೂ ಅನೇಕ ಪ್ರಧಾನರು ಬದಲುವ ಸಂಭವವುಂಟಂತೆ. ಪ್ರತ್ಯಕ್ಷ ಮಾಸ್ಕೋ ಬೀಳುವ ತನಕ ಈಗಿನ ಚರ್ಚಿಲ್ಲ ಪ್ರಧಾನ ಮಂಡಳಕ್ಕೆ ಆಯುರ್ದಾಯವುಂಟು. ಮಾಸ್ಕೋಪಟ್ಟಣ ರುಶ್ಯರ ಕೈತಪ್ಪಿ ಹೋದರೆ ಚರ್ಚಿಲ್ಲರ ಪ್ರಧಾನ ಮಂಡಳ ಪದಚ್ಯುತವಾಗುವದು. ಆದಾಗ್ಯೂ ಚರ್ಚಿಲ್ಲರು ಮಹಾಪ್ರಧಾನರಾಗಿಯೇ ಉಳಿಯುವರಂತೆ, ಉಳಿಯಲೊಲ್ಲರೇಕೆ?

ಅಮೇರಿಕೆಯ ಭೂಮಿಕೆ ಏನೆಂದು ನಾವು ನಿರೀಕ್ಷಿಸುತ್ತಿದ್ದೇವೆ. ಜರ್ಮನಿಯ ವಿರುದ್ಧ ಅಮೇರಿಕೆಯು ಇನ್ನೂ ಯುದ್ಧ ಘೋಷಣೆಯನ್ನು ಮಾಡಿಲ್ಲ. ವಿಧಿಯಂತೆ ಘೋಷಣೆ ಮಾಡದಿದ್ದಾಗ್ಯೂ ಅಮೇರಿಕೆ ಮತ್ತು ಜರ್ಮನಿಗಳಲ್ಲಿ ಯುದ್ಧ ನಡೆದಿರುವದಾಗಿ 'ನ್ಯೂ ಯೊರ್ಕ ಟೈಮ್ಸ' ಪತ್ರಿಕೆಯ ಅಭಿಪ್ರಾಯ. 'ರುಬೆನ ಜೇಮ್ಸ' ಎಂಬ ಅಮೇರಿಕೆಯ ವಿನಾಶಿಕೆಯನ್ನು ಆಯ್ಸಲಂಡದ ಹತ್ತಿರ ಗುಂಡು ಹೊಡೆದು ಜರ್ಮನರು ಮುಳುಗಿಸಿದರು. ಅದರಿಂದ ಸುಮಾರು ೭೦ ಜನ ಅಮೇರಿಕೆಯವರು ತೀರಿಕೊಂಡರಂತೆ. ಈ ಘಟನೆಯಿಂದ ಅಮೇರಿಕೆಯ ಲೋಕಸಭೆಯಲ್ಲಿ ಲೋಕಪ್ರತಿನಿಧಿಗಳು ಸಂತಪ್ತರಾಗಿ ಜರ್ಮನಿಯ ವಿರುದ್ಧ ಒಮ್ಮೆಲೇ ಯುದ್ಧ ಘೋಷಣೆ ಮಾಡಿ ಸಾಗಿಹೋಗಬೇಕೆಂದು ಆರ್ಭಟಿಸುತ್ತಾರೆ. ಅಮೇರಿಕೆಯ ಹಡಗಗಳು ಜರ್ಮನ ಜಲನಾವೆಯ ಮೇಲೆ ಯುದ್ಧಘೋಷಣೆಯಾಯಿತೆಂಬಂತೆ ಗುಂಡುಗಳನ್ನು ಹಾರಿಸುತ್ತವಾಗಿ ಪ್ರಕಟವಾಗಿದೆ. ಆದಾಗ್ಯೂ ಜರ್ಮನ ರಾಯಭಾರಿಯು ಇನ್ನೂ ಅಮೇರಿಕೆಯ ದರಬಾರದಲ್ಲಿ ಠಾಣ್ಯ ಹೂಡಿಕೊಂಡಿದ್ದಾನೆ. ಆತನಿಗೆ ಸ್ವದೇಶಕ್ಕೆ ಕಳುಹಿ, ಬರ್ಲಿನದಲ್ಲಿರುವ ತಮ್ಮ ರಾಯಭಾರಿಯನ್ನು ಹಿಂಗರೆದುಕೊಂಡು ಸಂಬಂಧವನ್ನು ಕಡಕೊಳ್ಳಲು ರೂಝವೆಲ್ಟರು ಒಪ್ಪುವದಿಲ್ಲ! ಅತ್ತ ಜಪಾನವು ಗರ್ಜಿಸಹತ್ತಿದೆ. ಆದರೆ ಯಾವದೊಂದು ನಿಶ್ಚಿತರೂಪವನ್ನು ಜಪಾನವು ತಳೆದಿರುವದಾಗಿ ನಾವು ಹೇಳಲಾರೆವು. ರುಶ್ಯ ದೇಶದ ಮೇಲೆ ಈಗಾಗಲೇ ಜಪಾನದ ಸ್ವಾರಿಯಾಯಿತೆಂದು ಸುದ್ದಿ ಬಿದ್ದದ್ದನ್ನು ರುಶ್ಯ ಸರಕಾರವೇ ಒಪ್ಪುತ್ತದೆ. ಗಡಿಪ್ರದೇಶದಲ್ಲಿರುವ ರೆಸ್ಕಿನೋ ಎಂಬ ಹಳ್ಳಿಯಲ್ಲಿ ೨೦ ಮಂದಿ ಜಪಾನಿಯರು ಒಳನುಗ್ಗಿ ರುಶ್ಯ ಸರಕಾರದ ಪೋಲೀಸ ಚೌಕಿಯ ಮೇಲೆ ಸಾಗಿಹೋಗಿ ಬಡಿದಾಟ ಹೂಡಿದರು. ಇದೇನು ಜಪಾನ ಸರಕಾರದ ಧೋರಣದ ಪರಿಣಾಮವಲ್ಲವಾಗಿಯೂ ಪುಂಡ ಜಪಾನಿಯರ ತುಂಟತನವೆಂದೂ 'ಜಪಾನ ಟೈಮ್ಸ ಮತ್ತು ಒಡ್ವರ್ಟೈಝರ' ಪತ್ರಿಕೆಯು ಬರೆಯುತ್ತದೆ. ಉಭಯ ಸರಕಾರಗಳು ಪ್ರೀತಿಯಿಂದಿರುವವಾಗಿಯೂ ಈ ಕದನದಿಂದ ಆ ಪ್ರೀತಿಯಲ್ಲಿ ವ್ಯತ್ಯಾಸವಾಗಿಲ್ಲವಾಗಿಯೂ, ಆ ಪತ್ರಕರ್ತರ ಅಂಬೋಣ! ಅಕಾರಣವಾಗಿ ಪುಂಡತನವನ್ನೆಬ್ಬಿಸಿ ಜನರಲ್ಲಿ ಗಡಿಬಿಡಿಯನ್ನುಂಟುಮಾಡುವ ಪುಂಡರಿಗೆ ಜಪಾನ ಸರಕಾರವು ಶಾಸನ ಮಾಡಿದ ವಾರ್ತೆ ಪ್ರಕಟವಾಗಿಲ್ಲ. ತಕ್ಕ ಕಾಲದಲ್ಲಿ ರುಶ್ಯ ಸರಕಾರದ ಬಳಿ ಜಪಾನ ಸರಕಾರವು ತನ್ನ ಕೋರಿಕೆಗಳನ್ನು ಮಂಡಿಸುವದಾಗಿ ಚೀನ ಸರಕಾರದ 'ಸಂಟ್ರಲ ಡೇಲಿ ನ್ಯೂಸ' ಪತ್ರಕರ್ತರು ಪ್ರಕಟಿಸುತ್ತಾರೆ. ತಕ್ಕ ಕಾಲ ಯಾವದು, ಕೋರಿಕೆಗಳ್ಯಾವವು ಎಂಬ ವಿವರ ಗೌಪ್ಯವಾಗಿದೆ. ಜರ್ಮನಿಯಿಂದ ರುಶ್ಯರು ಅಪಜಯ ಹೊಂದುವ ಕಾಲವನ್ನು ಜಪಾನ ಸರಕಾರವು ನಿರೀಕ್ಷಿಸುತ್ತದಾಗಿ ನನ್ನ ಅಂಬೋಣ! ಆಗಲೇ ಆ ಕೋರಿಕೆಗಳ ಯಾದಿ ಹೊರಬಿದ್ದೀತು. ಒಟ್ಟು ಎಲ್ಲವೂ ರಶ್ಯ ರಣದೇವಿಯ ಅಧೀನವಾಗಿದೆ. ರುಶ್ಯ ರಣದೇವಿ ಹಿಟ್ಲರನಿಗೆ ಪ್ರಸನ್ನವಾದರೆ ಮಾತ್ರ ಯುದ್ಧಪ್ರಕರಣಕ್ಕೆ ಹೊಸ ರೂಪ ಬರುತ್ತದೆ. ರುಶ್ಯ ರಣಭೂಮಿಯ ಮರ್ಮಸ್ಥಾನ ಕಕ್ಕಸಪ್ರದೇಶ. ಅದರಿಂದಲೇ ಕಕ್ಕಸ ದೇಶದ ಮೇಲಿನ ದಾಳಿಯ ವಿವರವನ್ನು ಮುಂದಾಗಿ ಇಂದು ವಿವರಿಸಿದುದು!

— ಈಗ ಪೆಟ್ರೋಲಿನ ಮಿತವ್ಯಯ ಮಾಡಬೇಕಾದ್ದರಿಂದ ಪೆಟ್ರೋಲಿನಲ್ಲಿ ಆಲ್ಕೋಹೋಲ ಯಾನೆ ಸರಾಯಿಯ ಅರ್ಕ ತಯಾರಿಸಿ ಮಿಶ್ರ ಮಾಡಬೇಕೆಂಬ ಆಲೋಚನೆ ನಡೆದಿದೆ. ಮುಂಬಯಿ ಸರಕಾರದವರು ಈ ಕುರಿತು ಸಕ್ಕರೆ ಕಾರಖಾನೆದಾರರ ಸಲಹೆ ತಕ್ಕೊಂಡು, ಮಹಾರಾಷ್ಟ್ರದೊಳಗಿನ ಕೆಲವು ಸಕ್ಕರೆಯ ಕಾರಖಾನೆಗಳಲ್ಲಿ ಆಲ್ಕೋಹೊಲ ತಯಾರಿಸುವ ಯೋಜನೆಯನ್ನು ಮಾಡಿರುತ್ತಾರೆ. ಈ ಬಗ್ಗೆ ಅವಶ್ಯವುಳ್ಳ ಕಾಯಿದೆಯನ್ನೂ ಮಾಡಲಾಲೋಚಿಸಿದ್ದಾರೆ.

— ತಾ. ೧-೭-೪೧ರಿಂದ ತಾ. ೧೫-೧೦-೪೧ರ ತನಕ ನಮ್ಮ ಕರ್ನಾಟಕದಲ್ಲಿ ೬೭ ಮಂದಿ ಸತ್ಯಾಗ್ರಹ ಮಾಡಿ ಶಿಕ್ಷೆಗೆ ಗುರಿಯಾಗಿದ್ದಾರೆ. ಪ್ರಾರಂಭದಿಂದ ತಾ. ೧೫-೧೦-೪೧ರ ತನಕ ಬೆಳಗಾಂವ ಜಿಲ್ಲೆಯಲ್ಲಿ ೪೪೦, ಧಾರವಾಡ ಜಿಲ್ಲೆಯಲ್ಲಿ ೨೬೧, ವಿಜಾಪುರ ಜಿಲ್ಲೆಯಲ್ಲಿ ೨೨೫, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೦೩, ಉತ್ತರ ಕನ್ನಡ ಜಿಲ್ಲೆಯಲ್ಲಿ ೪೫, ಬಳ್ಳಾರಿ ಜಿಲ್ಲೆಯಲ್ಲಿ ೪೫, ಕೊಡಗು ಪ್ರಾಂತದಲ್ಲಿ ೨೦, ಬೆಂಗಳೂರ ಲಷ್ಕರದಲ್ಲಿ ೨೨, ಕರ್ನಾಟಕಕ್ಕೊಪ್ಪಿದ ಸಂಸ್ಥಾನಗಳಲ್ಲಿ ೭ ಹೀಗೆ ಇಡೀ ಕರ್ನಾಟಕದಲ್ಲಿ ೧೧೪೮ ಸತ್ಯಾಗ್ರಹಿಗಳಿಗೆ ೧೧೮೮ ಶಿಕ್ಷೆಗಳಾಗಿವೆ. (ಅಂದರೆ ೩೮ ಜನರು ಎರಡಾವರ್ತಿ ಮತ್ತು ಇಬ್ಬರು ಮೂರಾವರ್ತಿ ಸತ್ಯಾಗ್ರಹ ಮಾಡಿದ್ದುಂಟು.) ಸತ್ಯಾಗ್ರಹಿಗಳಿಗೆ ವಿಧಿಸಿದ ಒಟ್ಟು ದಂಡದ ರಕಮು ರೂ. ೨೬೦೫೫ ರಷ್ಟು ಇರುತ್ತದೆ. ಬೆಳಗಾಂವ ಜಿಲ್ಲೆಯ ದಂಡದ ರಕಮು ರೂ. ೯೯೭೦ ಮತ್ತು ಬಳ್ಳಾರಿ ಜಿಲ್ಲೆಯ ರಕಮು ರೂ ೯೦೬೫ರಷ್ಟಿದೆ.

ಸಹ್ಯಾದ್ರಿಫಾರ್ಮಸಿ
ಕುಮುಟಾ.

ಬಾಳಂತಿಯರಿಗೆ— ಕಸ್ತೂರಿ ಮಿಶ್ರಣ ದಶಮೂಲಾರಿಷ್ಟ ಮತ್ತು ಧನ್ವಂತರಿ ಗುಳಿಗೆ- ಒಳ್ಳೇ ಉಪಯುಕ್ತವಾದವು !

ಚಿಕ್ಕ ಮಕ್ಕಳ ಜಂತುವಿನ ಬಾಧೆಗೂ ಪುಷ್ಟಿಯಾಗಲಿಕ್ಕೂ ಸಾಯರಪ್-ಕುಟಜಾ ಒಂದೇ ದಿವ್ಯವಾದ ಔಷಧವು !

ನಾಯಿ-ಕೆಮ್ಮಿಗೆ ಎಂಟೇ ದಿವಸಗಳಲ್ಲಿ ಗುಣಪಡಿಸುವ ಕಫನಾಶಕವು.

**ಯಾವತ್ತೂ ಪ್ರಕಾರಗಳ
ಕಷಾಯ, ಅರಿಷ್ಟ, ಆಸವ,
ತೈಲಾದಿ ಔಷಧ ಸಾಮುಗ್ರಿಗಳು
ಸದಾ ಸಿಗುತ್ತವೆ.**

ಡಾ|| ಎಸ್. ಕೇ. ಭಟ್ಟ,
ಹಳ್ಕಾರ, ಕುಮುಟಾ.

ಇತ್ತ ಲಕ್ಷಗೊಡಿರಿ! ಇತ್ತ ಲಕ್ಷಗೊಡಿರಿ!!

ಅಗತ್ಯದ ಸೂಚನೆ.

ಸದ್ಯ ಚಾಲತಿಯಲ್ಲಿ ಇಲ್ಲದ ವಿಕ್ಟೋರಿಯಾ, ವಿಲಿಯಂ, ಶೆಂಡೆರಾಣಿ ಛಾಪೆಯ ರೂಪಾಯಿ, ಅರ್ಧ ರೂಪಾಯಿ ಮತ್ತು ಗೋವಾ, ಆಲ್ವಾರ, ಬಿಕಾನೇರ ಸ್ಟೇಟಿನ ರೂಪಾಯಿ ವಗೈರೆ ನಾಣ್ಯಗಳು ಯೋಗ್ಯ ದರದಿಂದ ಕೊಳ್ಳಲ್ಪಡುವವು.

—- ಇಂದೇ ವಿಚಾರಿಸಿರಿ. —

ದಿ ನ್ಯೂ ಸಪ್ಲಾಯ ಏಜನ್ಸಿ, ಕುಮುಟಾ.

ಧಾತುಪುಷ್ಟಿ ಲೇಹ. **(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)** ನಷ್ಟವಾಗಿರುವ ಪುರುಷತ್ವವನ್ನು ಪುನಃ ಕಲ್ಪಿಸಿಕೊಡುವ ಅತ್ಯುತ್ತಮ ಶಕ್ತಿದಾಯಕ ಔಷಧಿ. ಮಾನಸಿಕ ಮತ್ತು ಕಾಯಶಕ್ತಿಗಳನ್ನು ಹೆಚ್ಚಿಸಿ, ಆರೋಗ್ಯ, ಇಂದ್ರಿಯಶಕ್ತಿ ಇವೇ ಮೊದಲಾದವುಗಳನ್ನು ಕಲ್ಪಿಸಿಕೊಡುವದು. ಬಾಟ್ಲಿ ೧ಕ್ಕೆ 2—8—0.

ಕಸ್ತೂರಿ ಮಿಶ್ರಣ ದಶಮೂಲ. ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ. ಬಾಟ್ಲಿ ೧ಕ್ಕೆ ರೂ. 1—8—0.

ಮಲೇರಿಯಾ ನಿವಾರಿಣಿ. ಮಲೇರಿಯಾ ಜ್ವರ, ಚಳಿ ಜ್ವರ, ಇನ್‌ಫ್ಲುಯೆಂಝಾ, ಮಲಬದ್ಧತೆ ಇವುಗಳಿಗೆ ಪ್ರಸಿದ್ಧ ಔಷಧಿ. ಬಾಟ್ಲಿ ೧ಕ್ಕೆ ರೂ. 0—13—0.

ಸ್ಪ್ಲೀನ ಮಿಕ್ಶ್ಚರ. ಜ್ವರಗಡ್ಡೆಯನ್ನು ಕರಗಿಸುವ ದಿವ್ಯೌಷಧಿ. ಬಾಟ್ಲಿ ೧ಕ್ಕೆ ರೂ. 1-2-0.

ಎಮ್. ಗಣಪಯ್ಯ ಎಂಡ್ ಸನ್ಸ, ರಥಬೀದಿ ನಂಬ್ರ 5, ಮಂಗಳೂರು. ದ. ಕ.

ಔಷಧಿ ಸಿಗುವ ಸ್ಥಳ:— (1) ಸ್ವಸ್ತಿಕ ಫಾರ್ಮಸಿ, ಕುಮಟಾ; (2) ಕಾಮತ ಸ್ಟೋರ್ಸ, ಹೊನ್ನಾವರ; (3) ಸ್ಟೇಶನರಿ ಡಿಪೋ, ಅಂಕೋಲಾ; (4) ಕೆ. ಗಣಪಯ್ಯ ಶಾನಭಾಗ, ಮರ್ಚಂಟ, ಭಟಕಳ; (5) ಪೋಪ್ಯುಲರ ಸ್ಟೋರ್ಸ, ಕೆಮಿಸ್ಟ್ಸ, 183, ಸುಪಾರಿಬಾಗ ಪರೇಲ; (6) ಜನರಲ್ ಸ್ಟೋರ್ಸ, ಜಿ. ಆಯ್. ಪಿ. ಮಾಟುಂಗಾ; (7) ವ್ಯಾಳಪ್ಪ ಪದ್ಮನಾಭ ಶೆಟ್ಟಿ, ಮರ್ಚಂಟ, ಕಾರವಾರ; (8) ರಾಮಯ್ಯನ ಬ್ರದರ್ಸ, ಸಿದ್ದಾಪುರ; (9) ಪೊಪ್ಯುಲರ ಮೆಡಿಕಲ್ ಸ್ಟೋರ್ಸ, ಗೋಕರ್ಣ; (10) ಎಸ್. ಎಲ್. ಧಾಕಪ್ಪ ಎಂಡ್ ಸನ್ಸ್, ಬಡವರ ಔಷಧಿ ಅಂಗಡಿ, ಶಿರ್ಸಿ. [ಕ್ಯಾಟಲಾಗಿಗೆ ಬರೆರಿ.]

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್,

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯುಳ್ಳವು ಇವೆ. ಕಂಪನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಶಿಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents-
D. K. Nayak Bros.
K. N Nayak.
Honavar Agent:-
R. V, Prabhu.

K. PadmanabhaRao & Sons,
BELGAUM
Chief Agents for
Karnatak Districts & S. M. States.

ಚಕ್ರಬಿಂದು

ಮಕ್ಕಳ ಮರಣವನ್ನು
ತಪ್ಪಿಸುವದು.

ಏಜನ್ಸಿ ಕಲಕತ್ತಾ, ಮುಂಬಯಿ, ಮದ್ರಾಸ, ಬೆಂಗಳೂರು, ಮಂಗಳೂರು.

Spleen and Liver Enlargement for Children.

- ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆದಾಗುವಿಕೆ, ಹಸುರು ಸಂಗಳು, ಕಾಮಿಲೆ, ಗಡ್ಡೆರೋಗ, ಕೋವೆ ರೋಗ, ಕೈ-ಕೈ ಬಾವುಗಳಿಗೆ ದಿವ್ಯೌಷಧ!

೧ ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ. 3.



ಏತಕ್ಕೆ ಚಿಂತಿಸುವಿರಿ ?

ಆಸೇತುಹಿಮಾಚಲದ ವರೆಗೂ ೪೦ ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ.

ಡಾ|| ಪಿ ಎಸ್. ಶ್ರೀನಿವಾಸರಾವ,
ಲಿವ್ಹರ್ ಸ್ಪೆಶಲಿಸ್ಟ,
ಎಂ. ಪಿ. ಪ್ರಾಸಾದಿಕ ಔಷಧಾಲಯ,
ಶಿವಮೊಗ್ಗಾ

☞ ಇವರಲ್ಲಿ ವಿಚಾರಿಸಿರಿ.

ಶಿರ್ಸಿ ಏಜಂಟ —
ಸುಬ್ರಾಯ ಸೀತಾರಾಮ ಹೆಗಡೆ,
ಕುಮುಟೆಯ ಏಜಂಟ: —
ದೇವಪ್ಪಾ ಅಣ್ಣಯ್ಯ ನಾಯ್ಕ.

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg. No. B. 1270. Monday, 10th November, 1941.

ವರ್ಷ ೨೪

ಕಾನಡಾವೃತ್ತ.

ಸಂಚಿಕೆ ೧೮

ಪತ್ರದ ವರ್ಗಣಿ.
ಕುಮಟೆಯಲ್ಲಿ ಅಗಾವು
ರೂಪಾಯಿ 3-4-0.
ಮುನಿಯಾರ್ಡರಿನಿಂದ
ರೂ. 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಸ್ಮಾಲ
ಪೈಕಿನ (೧೨ ಎಮ್ ಉದ್ದ)
೮ ಸಾಲುಗಳವರೆಗೆ ರೂ. 1-8-0
೮ ನಂತ್ರ ಪ್ರತಿಸಾಲಿಗೆ 0-3-0.
ಚಿತ್ರಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಖಾಸ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತೀರಿಸಲ್ಪಡುವದು.

-*(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೦ ಮಾಹೆ ನವಂಬರ ಸನ್ ೧೯೪೧ನೇ ಇಸವಿ)*-

ದೀಪಾವಳಿಯ ಒಂದೇ ಒಂದು ಕಾಣಿಕೆ!

ಸುಗಂಧ
ಕಾಂಚನ
ಹೇರ ಆಯಿಲ

ಶ್ರೀ ಧೂತಪಾಪೇಶ್ವರ ಪನವೇಲ, ಲಿ.,
ಕರ್ನಾಟಕ ಕೇಂದ್ರ:- ಯುನೈಟೆಡ್ ಏಜನ್ಸೀಜ, ಹುಬ್ಬಳ್ಳಿ.
ಕಾರವಾರ:— ಮೆಸರ್ಸ ಮುಜುಮದಾರ-ಕಕಬೇಕರ ಬ್ರದರ್ಸ.
ಅಂಕೋಲಾ:— ದಿ ಸ್ಟೇಶನರಿ ಡಿಪೋ.
ಕುಮಟಾ:— ದೇವಪ್ಪಾ ಅಯ್ಯು ನಾಯ್ಕ.
ಹೊನ್ನಾವರ— ಮೆಸರ್ಸ ಕಲ್ಯಾಣಪುರ ಬ್ರದರ್ಸ.
ಶಿರ್ಶಿ:— ಶಿರ್ಶಿ ಡ್ರಗ್ ಸ್ಟೋರ್ಸ.
ಎಸ್. ಎಲ್. ಧಾಕಪ್ಪಾ ಎಂಡ್ ಸನ್ಸ.
ಸಿದ್ದಾಪುರ:— ಮೆಸರ್ಸ ಶಾಮಯ್ಯನ ಬ್ರದರ್ಸ.

"ಸ್ಟಾರ ಆಫ್ ಕೆನರಾ ಪ್ರೆಸ್",
ಕುಮಟಾ.

*

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಯಿಂದ ಬೇಕಾದ ನಮೂನೆಯ ಕಲರ ಪ್ರಿಂಟಿಂಗ ವಗೈರೆ ಸಣ್ಣ-ದೊಡ್ಡ ಛಾಪಾ ಕೆಲಸಗಳೂ, ಪುಸ್ತಕ-ಮುದ್ರಣವೂ, ರೂಲಿಂಗ-ಬ್ಯಾಂಡಿಂಗ ಕೆಲಸವೂ ಉತ್ತಮವಾಗಿ ಸುಲಭ ದರದಲ್ಲಿ ತಕ್ಕ ಕಾಲಕ್ಕೆ ತಯಾರಿಸಿ ಕೊಡಲಾಗುವದು.

ಇದಲ್ಲದೆ ಕೋರ್ಟ-ಕಚೇರಿ ಉಪಯೋಗದ ವಖಾಲತ ವಗೈರೆ ಫಾರ್ಮುಗಳೂ, ಕಸ್ಟಮ್ ಕಚೇರಿಯ ಶಿಪ್ಪಿಂಗ ಬೀಲು-ಸತ್ಮಿ ವಗೈರೆ ಫಾರ್ಮುಗಳೂ, ಗೇಣಿ ರಶೀದಿ ಬೂಕು, ಗೇಣಿಚೀಟಿ-ಏದುರ್ನುಡಿ ಫಾರ್ಮುಗಳೂ ವಗೈರೆ ಮಾರಾಟಕ್ಕೆ ತಯಾರ ಸಿಗುತ್ತವೆ. ನಿಮ್ಮ ಛಾಪಾ ಕೆಲಸಗಳನ್ನು ನಮ್ಮಲ್ಲಿಗೇ ಕಳಿಸಿರಿ.

ಒಮ್ಮೆ ಅನುಭವ ತಕ್ಕೊಂಡು ನೋಡಿರಿ.!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,
(ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು.)

ಹೆಡ್ ಆಫೀಸು:— ಕುಂದಾಪುರ.

ಬ್ರೆಂಚ ಆಫೀಸುಗಳು:— **ಅಂಕೋಲಾ, ಕುಂದಾಪುರ, ಬೈಂದೂರು, ಕೋಟೇಶ್ವರ, ಕುಮಟಾ, ಗೋಕರ್ಣ, ಕಾರವಾರ, ಹಾವೇರಿ, ಶಿವಮೊಗ್ಗಾ, ತರೀಕೆರೆ, ನಗರ, ಸೋಮವಾರಪೇಟೆ** ಮತ್ತು ವೀರರಾಜಪೇಟೆ.

ಕಾಯಂ ಠೇವುಗಳು, ಸೇವಿಂಗ್ಸ ಬೇಂಕ್ ಠೇವುಗಳು ಮತ್ತು ಚಾಲು ಠೇವುಗಳು ಸಹ ಅಂಗೀಕರಿಸಲ್ಪಡುವವು.

ಭಂಗಾರದ ದಾಗಿನೆಗಳ ವ ಇತರ ವ್ಯಾಪಾರದ ಮಾಲುಗಳ ಅಡವಿನ ಮೇಲೆ ಸವಲತ್ತಿನ ದರದ ಬಡ್ಡಿಯಲ್ಲಿ ಸಾಲ ಕೊಡಲ್ಪಡುವದು.
ವ್ಯಾಪಾರದ ಕೇಂದ್ರಗಳಿಗೆ ಡ್ರಾಫ್ಟುಗಳು, ಚೆಕ್ಕುಗಳು ಸಹ ಕೊಡಲ್ಪಡುವವು. ಎಲ್ಲ ತರದ ಬೇಂಕಿನ ವ್ಯವಹಾರಗಳು ಸವಲತ್ತಿನ ದರದಿಂದ ನಡಿಸಲ್ಪಡುವವು.

ಕುಂದಾಪುರ,
1-8-1941.

The Agricultural & Industrial Bank, Ltd.

ಹಿಂದೀ ರಾಜಕಾರಣ.

[ನಿರೀಕ್ಷಕನು ಕಳುಹಿಸಿದ್ದು]

ಹಿಂದೀ ರಾಜಕಾರಣದ ಮಟ್ಟು ಈಗಾದರೂ ಬದಲಲಾರದೇ ? ಎಂದು ಕೆಲವರು ನನಗ ಪ್ರಶ್ನಿಸುತ್ತಾರೆ ಬದಲುವದಿಲ್ಲದಾಗಿ ನನ್ನು ಹೇಳಲಾರೆ ಸ್ಥಿತ್ಯಂತರವಾಗುತ್ತಿದೆ, ಆದರೆ ರೂಪರೇಷೆ ಇನ್ನೂ ಅಸ್ಪಷ್ಟವಿದೆ ಮಹಾತ್ಮರು ಕಳೆದ ವಾರ ಪ್ರಕಟಣೆಯನ್ನು ಹೊರಡಿಸಿ ಸತ್ಯಾಗ್ರಹ ನಿರ್ಧಾರದಿಂದ ಹಿಂಜರಿಯುವ ಪ್ರಸಂಗ ಒದಗಿಬರಲಿಲ್ಲವಾಗಿ ಖಂಡಿತ ಹೇಳಿದ್ದಾರೆ ಸತ್ಯಾಗ್ರಹವನ್ನು ದೃಢಪಡಿಸುವದೇ ಮಹಾತ್ಮರ ನಿರ್ಧಾರವಿದೆ ಮಹಾತ್ಮರ ಆಜ್ಞಾನುಸಾರವಾಗಿ ಕೊಂಗ್ರೆಸ ಪಕ್ಷದ ಸಭಾಸದರು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಒಂದು ದಿನ ಹಾಜರಾದರು ಚರ್ಚೆಯಲ್ಲಿ ಯಾವದೇ ಭಾಗ ವಹಿಸಲಿಲ್ಲ ಗೈರಹಾಜರಿಯಿಂದ ಸದಸ್ಯತ್ವವನ್ನು ಕಳಕೊಳ್ಳಬಾರದೆಂದು ಕೊಂಗ್ರೆಸ ಪಕ್ಷದ ಸಭಾಸದರು ಕೌನ್ಸಿಲಿನಲ್ಲಿ ಹಾಜರಾಗಿದ್ದರು ಕೊಂಗ್ರೆಸ ಪಕ್ಷದವರು ಕಾಯಿದೆ ಕೌನ್ಸಿಲಿನ ಚರ್ಚೆಯಲ್ಲಿ ಸೇರಬೇಕೆಂದು ಎಲ್ಲರ ಹಂಬಲವಿತ್ತು ಹಿಂದುಸ್ಥಾನ ಮತ್ತು ಬ್ರಿಟಿಷ ಸರಕಾರಗಳೊಡನೆ ಆದ ಒಪ್ಪಂದದ ಚರ್ಚೆ ಅಕ್ಟೋಬರ ತಾ ೩೧ನೇಗೆ ಇಟ್ಟಿತ್ತು ಆದರೆ ಕೊಂಗ್ರೆಸ ಪಕ್ಷದ ಸಭಾಸದರು ನವಂಬರ ೪ನೇ ತಾರೀಖಿಗೆ ಹಾಜರಾಗುವವರಿದ್ದದರಿಂದ ಆ ಚರ್ಚೆ ಆ ದಿನ ಮುಂದರಿಸಲ್ಪಟ್ಟಿತ್ತು ಆದಾಗ್ಯೂ ಕೊಂಗ್ರೆಸಪಕ್ಷದ ಸಭಾಸದರು ಚರ್ಚೆಯಲ್ಲಿ ಸೇರಲೊಡಂಬಡಲಿಲ್ಲ, ಮೌನದಿಂದಲೇ ತಮ್ಮ ಸೇವೆಯನ್ನು ಸಲ್ಲಿಸಿದರು ಸಂಕಲ್ಪದಂತೆ ಕೊಂಗ್ರೆಸ ಪಕ್ಷದ ಸಾಂಕೆ ಒದಗಿಬರಲಿಲ್ಲವೆಂದು ನೋಡಿ ಸಕಲರಿಗೂ ಬಹಳ ನಿರಾಶೆಯಾಯಿತು ರಾಷ್ಟ್ರೀಯ ಸಭೆಯನ್ನು ರಾಜ್ಯಕಾರಭಾರದಲ್ಲಿ ಸೇರಿಸಿಕೊಳ್ಳಲು ಸರಕಾರವು ಆತುರಪಡುತ್ತದೆ ಶ್ರೀ|| ಮಾಧವರಾವ ಅಣೇ ಪ್ರಭೃತಿ ನೂತನವಾಗಿ ಕಾರ್ಯಕಾರಿ ಮಂಡಳದಲ್ಲಿ ಸೇರಿದ ಕೊಂಗ್ರೆಸ ಪ್ರವೃತ್ತಿಯ ಲೋಕನಾಯಕರು ರಾಷ್ಟ್ರೀಯ ಸಭೆಯ ಮನವೊಲಿಸುವದಕ್ಕಾಗಿ ಪ್ರಯತ್ನಪಡುತ್ತಿದ್ದಾರಂತೆ ಕಾರ್ಯಕಾರಿ ಮಂಡಳದೊಳಗಿನ ಸರ್ ಸುಲ್ತಾನ ಅಹಮ್ಮದ ಶ್ರೀ|| ನಲಿನಿ ರಂಜನ ಸರಕಾರ ಮಾಧವರಾವ ಅಣೇ ಸರ್ ರಾಮಸ್ವಾಮಿ ಮುದಲಿಯಾರ, ಸರ್ ಫಿರೋಜಖಾನ ನೂನ ಮೊದಲಾದವರು ಒಕ್ಕಟ್ಟಿನಿಂದ ಹಿಂದುಸ್ಥಾನದೊಳಗಿನ ಬಿಕ್ಕಟ್ಟನ್ನು ಪರಿಹರಿಸಲೋಸುಗ ಸತತೋದ್ಯೋಗ ನಡಿಸುತ್ತಿದ್ದಾರಂತೆ ಹಿಂದುಸ್ಥಾನ ಸರಕಾರವು ಬ್ರಹ್ಮದೇಶದೊಡನೆ ಒಂದು ಶಿಷ್ಟಾಯಿ ಮಾಡಿಕೊಂಡು ಹಿಂದುಸ್ಥಾನದ ಹಿತವನ್ನು ಘಾತ ಮಾಡಿತ್ತು ಸಾಮ್ರಾಜ್ಯ ಕಾರಣದ ದೆಸೆಯಿಂದ ಈ ಒಡಂಬಡಿಕೆ ಒದಗಿಬಂದಿತೆಂದು ಸ್ಪಷ್ಟ ಇದರಂತೆ ಭಾರತ ಮಂತ್ರಿಗಳು ಹುಕುಮುಗಳನ್ನು ಸಹ ಹೊರಡಿಸಲಿಕ್ಕೆ ಸಿದ್ಧರಾಗಿದ್ದರು ಆದರೆ ಶ್ರೀ|| ಮಾಧವರಾವ ಅಣೇ ಪ್ರಭೃತಿ ಕಾರ್ಯಕಾರಿ ಮಂಡಲದ ಸಭಾಸದರ ನಿಗ್ರಹದ ಮೂಲಕ ಆ ಹುಕುಮಿಗೆ ತಡೆಬಿದ್ದಿದೆ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ, ಅಟ್ಲಾಂಟಿಕ ಮಹಾಸಾಗರದಿಂದ ಹೊರಡಿಸಿದ ಲೋಕಸ್ವಾತಂತ್ರ್ಯದ ಘೋಷಣೆ ಹಿಟ್ಲರಾಂಕಿತ ಪ್ರದೇಶಗಳಿಗೆ ಮಾತ್ರ ಅನ್ವಯಿಸುತ್ತದೆಂದು ಕೇಳಿ, ಸರದಾರ ಸಂತಸಿಂಗರು ಆವೇಶಭರಿತರಾದರು ಹಿಂದುಸ್ಥಾನಕ್ಕೆ ಸ್ವರಾಜ್ಯ ಸಿಗಬೇಕಾದರೆ ಹಿಂದುಸ್ಥಾನವು ಹಿಟ್ಲರನ ಅಧೀನವಾಗಬೇಕೆಂದು ಇಚ್ಛೆಯಿರುವದೇನೆಂದು ಪ್ರಶ್ನಿಸಿ ಹಿಂದುಸ್ಥಾನಕ್ಕುಂಟಾದ ಸಂತಾಪವನ್ನು ಅವರು ವ್ಯಕ್ತಗೊಳಿಸಿದರು ಸೈನ್ಯ ಇಲಾಖೆಯಲ್ಲಿ ಹಿಂದೀಯರಿಗೆ ಬೇರೆ, ಯುರೋಪಿಯನ್ನರಿಗೆ ಬೇರೆ ಹೀಗೆ ಭೇದಭಾವದಿಂದ ಸಂಬಳ ಕೊಡುವ ಪ್ರಕಾರದಿಂದಲೂ ಆಸ್ಟ್ರೇಲಿಯನರಿಗೆ ಸೈನ್ಯಾಧಿಕಾರಿಗಳಾಗಿ ನೇಮಿಸುವ ಕ್ರಮದಿಂದಲೂ ಸ್ವತಂತ್ರ ವಿಚಾರದಿಂದ ನಡಕೊಳ್ಳುವ ಸಭಾಸದರಿಗೆ ಬಹಳ ಕೋಪ ಬಂದಿದೆ ರಾಷ್ಟ್ರೀಯ ಸಭೆಯವರು ತಮಗೆ ಬೆಂಬಲವನ್ನಿತ್ತು ಸರಕಾರವನ್ನು ಪ್ರತಿಭಟಿಸುವ ಕಾರ್ಯದಲ್ಲಿ ನೆರವಾಗಬೇಕೆಂದು ಅವರ ಅಪೇಕ್ಷೆ ಈ ಕುರಿತು ಆಪ್ತಾಲೋಚನೆ ನಡೆಯುತ್ತಿದೆ ಶ್ರೀ|| ಚಕ್ರವರ್ತಿ ರಾಜಗೋಪಾಲಾಚಾರ್ಯರು ಆಗ ದಿಲ್ಲಿಯಲ್ಲಿದ್ದರು ಆ ಸಮಯ ಶ್ರೀ|| ರಾಜಗೋಪಾಲಾಚಾರ್ಯರೊಡನೆ ಬೇರೆ ಬೇರೆ ಸಭಾಸದರು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಸೇರಿದರೆ ಜನಹಿತವಾಗುವದಾಗಿ ಪ್ರತಿಪಾದಿಸಿದರಂತೆ ಮಹಾತ್ಮರೊಡನೆ ಆಲೋಚನೆ ಮಾಡಲೋಸುಗ ಇಬ್ಬ ಸಭಾಸದರು ವರ್ಧಾಕ್ಕೆ ಹೊರಟಿದ್ದಾರೆ ಶ್ರೀ|| ಚಕ್ರವರ್ತಿ ರಾಜಗೋಪಾಲಾಚಾರ್ಯ, ಭುಲಾಭಾಯಿ ದೇಸಾಯಿಯವರು ವರ್ಧಾಕ್ಕೆ ಹೊರಟರು ಪಂ|| ಜವಾಹಿರಲಾಲರು ಸೆರೆಮನೆ ಸೇರಿ ನವಂಬರ ೧ನೇ ತಾರೀಖಿಗೆ ೧ ವರ್ಷ ಮುಗಿಯಿತು ಆ ಪ್ರೀತ್ಯರ್ಥ ಜನರು ಸಭೆಸೇರಿ ನಿಷೇಧ ವ್ಯಕ್ತಮಾಡಿದರು ಮುಂಬಯಿಯೊಳಗೆ ಪೇಟೆಗಳು ಮುಚ್ಚಿಕೊಂಡಿರಲಿಲ್ಲ ಆದರೆ ವ್ಯವಹಾರ ಮಾತ್ರ ನಿಂತುಹೋಗಿತ್ತು ಪಂ|| ಜವಾಹಿರಲಾಲರ ಬಂಧನದಿಂದ ಹಿಂದುಸ್ಥಾನದೊಳಗುಂಟಾದ ಕ್ಲೇಶವನ್ನು ಮುಂಬಯಿಯ ವರ್ತಕರು ಪ್ರದರ್ಶಿಸಿದ್ದರು ಪಂ|| ಜವಾಹಿರಲಾಲರು ಸೆರೆಮನೆಯಲ್ಲಿರುವ ತನಕ ಹಿಂದುಸ್ಥಾನವೇ ಸೆರೆಮನೆಯಲ್ಲಿದ್ದಂತೆಂದು ಖ್ವಾಜಾ ಅಹಮ್ಮದ ಅಬ್ಬಾಸರವರು ಮುಂಬಯಿ ಕ್ರಾನಿಕಲ " ಪತ್ರಿಕೆಯಲ್ಲಿ ಲೇಖ ಬರೆದು, ಜವಾಹಿರಲಾಲರು ಅರ್ವಾಚೀನ ಹಿಂದುಸ್ಥಾನದ ಪ್ರತ್ಯಕ್ಷ ಪ್ರತಿನಿಧಿಗಳೆಂದು ವರ್ಣಿಸುತ್ತಾರೆ ಪಂ|| ಜವಾಹಿರಲಾಲರು ಹಿಟ್ಲರನ ನಿರಂಕುಶ ಪ್ರಭುತ್ವದ ದ್ವೇಷಿಕರು ಇಂಥವರಿಗೆ ಜರ್ಮನರೊಡನೆ ಕಾದಾಡುವಾಗ ಕೈಸೆರೆಯಾಗುವದು ದೈವವಿಲಾಸವೆಂದ ಖ್ವಾಜಾ ಅಹಮ್ಮದ ಅಬ್ಬಾಸರವರು ಮರುಗುತ್ತಾರೆ ಸತ್ಯಾಗ್ರಹಿಗಳಿಗೆಲ್ಲ ಸೆರೆಮನೆಯಿಂದ ಬಿಡುಗಡೆ ಮಾಡಬೇಕೆಂದ ಶ್ರೀ|| ಅಣೇ ಪ್ರಭೃತಿ ಮುಂದಾಳುಗಳು ಪ್ರಯತ್ನಪಡುತ್ತಲಿದ್ದಾರಂತೆ ಪಂ|| ಜವಾಹಿರಲಾಲ, ಮೌ|| ಅಬುಲ ಕಲಮ ಅಝಾದರವರಿಗೆ ಸೆರೆಮನೆಯಲ್ಲಿಟ್ಟು ರಾಷ್ಟ್ರೀಯ ಸಭೆಯನ್ನು ಸಂತೈಸುವದು ಸಾಧ್ಯವಲ್ಲವೆಂದು ಅವರು ತಿಳಿಯುತ್ತಾರೆ ಕೊಂಗ್ರೆಸ ಕಾರ್ಯಕಾರಿ ಮಂಡಳದವರಿಗೆ ಬಿಡುಗಡೆ ಮಾಡಿ ಅಖಿಲ ಭಾರತೀಯ ಕೊಂಗ್ರೆಸ ಕಮೀಟಿಯನ್ನು ಸೇರಿಸಿದರೆ ರಾಷ್ಟ್ರೀಯ ಸಭೆಯು ಧೋರಣದಲ್ಲಿ ವ್ಯತ್ಯಾಸವಾಗಬಹುದಾಗಿ ಮಧ್ಯಸ್ಥರ ಆಶೆ ರಾಜಬಂದಿಗಳಿಗೆ ಬಿಡುಗಡೆ ಮಾಡಲು ಸರಕಾರದ ಒಪ್ಪಿಗೆಯುಂಟಂತೆ ! ಆದರೆ ರಾಷ್ಟ್ರೀಯ ಸಭೆಯವರು ಯುದ್ಧಯತ್ನ ವಿರೋಧ ಧೋರಣದಲ್ಲಿ ವ್ಯತ್ಯಾಸ ಮಾಡಲೊಡಂಬಡುವ ತನಕ ರಾಜಬಂದಿಗಳಿಗೆ ಬಿಡುಗಡೆ ಮಾಡಿದರೆ ಅಪಾಯವುಂಟೆಂದು ಸರಕಾರದ ಅಂಬೋಣವಂತೆ ಸರಕಾರದ ಅಂತರಂಗವನ್ನು ತಿಳಿಯದೆ ತಮ್ಮ ಧೋರಣವನ್ನಷ್ಟೇ ಹಿಡಿಕೊಂಡರೆ ಸರಕಾರವು ಇಂದಿನ ಧೋರಣವನ್ನು ಮುಂದರಿಸುವ ಭೀತಿಯುಂಟೆಂದು ರಾಷ್ಟ್ರೀಯ ಸಭೆಯ ಅಭಿಪ್ರಾಯವಂತೆ ಪಂ|| ಜವಾಹಿರಲಾಲರಿಗೆ ಬಂಧನದಲ್ಲಿಟ್ಟಿರುವದರಿಂದ ಅಮೇರಿಕೆಯ ಮಹಾಜನರಲ್ಲಿ ಟೀಕೆಯಾಗುತ್ತದಂತೆ ಆದರಿಂದ ಹಿಂದುಸ್ಥಾನ ಸರಕಾರವು ಅವರನ್ನು ಬಿಡುಗಡೆ ಮಾಡುವ ಬಗೆಯನ್ನು ವಿಚಾರಿಸುತ್ತದಂತೆ ಸದ್ಯಕ್ಕೆ ಮುಂಬಯಿಯ ಮುಖ್ಯ ಪ್ರಧಾನರಾಗಿದ್ದ ನಾ|| ಬಾಳಾಸಾಹೇಬ ಖೇರರವರಿಗೂ ಕಂದಾಯ ಇಲಾಖೆಯ ಪ್ರಧಾನರಾಗಿದ್ದ ನಾ|| ಮೊರಾರಜಿ ದೇಸಾಯಿಯವರಿಗೂ ಸುದ್ದಿ ಸುಳುವಿಲ್ಲದೆ ಸರಕಾರವು ಬಿಡುಗಡೆ ಮಾಡಿತು ಯೆರವಡಾ ಜೈಲಿನಿಂದ ಕುದುರೆಟಾಂಗೆಯಲ್ಲಿ ಉಭಯತರಿಗೆ ಒಯ್ದು ಪುಣೆ ಸ್ಟೇಶನ್ನಿನಲ್ಲಿ ೩ನೇ ತರಗತಿಯ ೨ ತಿಕೀಟುಗಳನ್ನು ಕೊಟ್ಟು ಮುಂಬಯಿಗೆ ರವಾನಾಯಿತು ಪೆಟ್ರೋಲ ಸಿಗದಾಯುಗದಲ್ಲಿ ಶ್ರೀ|| ಖೇರ ದೇಸಾಯಿಗಳವರಿಗೆ ಸ್ಟೇಶನಿಗೆ ಒಯ್ಯಲು ಅಧಿಕಾರಿಗಳಿಗೆ ಮೋಟಾರು ಸಿಗದಿದ್ದದ್ದು ಸಾಹಜಿಕ ಆದರೆ ೩ನೇ ವರ್ಗದ ತಿಕೀಟು ತೆಗಿಸಿ ಕೊಡುವದು ಕ್ಷುದ್ರತನವೆಂದು ಪತ್ರಿಕೆಗಳ ಟೀಕೆ ಶ್ರೀ|| ಖೇರ ದೇಸಾಯಿಗಳವರಿಗೆ ಬಿಡುಗಡೆ ಮಾಡಿದಂತೆ ಪಂ|| ಜವಾಹಿರಲಾಲರನ್ನು ಬಿಡುಗಡೆ ಮಾಡುವದು ಕ್ರಮಬದ್ಧವಲ್ಲವಂತೆ ಶ್ರೀ|| ಖೇರ--ದೇಸಾಯಿಗಳವರ ಮೇಲೆ ಖಟ್ಲೆ ಮಾಡದೆ ಅವರನ್ನು ಸೆರೆಮನೆಯಲ್ಲಿ ಡೋಣಾಗಿತ್ತು ಪಂ|| ಜವಾಹಿರಲಾಲರ ಮೇಲೆ ಖಟ್ಲೆ ಮಾಡಿ ೪ ವರ್ಷಗಳ ಘೋರ ಶಿಕ್ಷೆ ವಿಧಿಸಲಾಗಿದೆ ಆದರಿಂದ ನ್ಯಾಯಾಸನದಿಂದ ಶಿಕ್ಷೆ ಹೊಂದಿದ ಜವಾಹಿರಲಾಲರಿಗೆ ಫಕ್ಕನೆ ಬಿಡುಗಡೆ ಮಾಡುವ ಮುಂಚೆ ಸರಕಾರವು ಒಂದು ಧೋರಣವನ್ನು ನಿರ್ಧರಿಸಿಕೊಳ್ಳಬೇಕಂತೆ ಆದರಿಂದ ವಿಲಂಬವಾಗುತ್ತದಂತೆ ಬಿಡುಗಡೆ ಹೊಂದಿದವರು ಪುನಃ ಯುದ್ಧಯತ್ನವಿರೋಧವನ್ನು ಪುರಸ್ಕರಿಸಿದರೆ ಔದಾರ್ಯ ನಿರರ್ಥಕವಾಗುವದೆಂದು ಸರಕಾರದ ಭೀತಿ ಸರ ತೇಜಬಹಾದ್ದೂರ ಸಪ್ರೂರವರು ಮಧ್ಯಸ್ಥಿಕೆ ಮಾಡಲು ಒಡಂಬಡುತ್ತಾರಂತೆ ಆದರೆ ಸರಕಾರವೂ ರಾಷ್ಟ್ರೀಯ ಸಭೆಯವರೂ ಅವರ ಮಧ್ಯಸ್ಥಿಕೆಗೆ ಒಪ್ಪಬೇಕಂತೆ ಬ್ರಿಟಿಶ ಮುಖ್ಯ ಪ್ರಧಾನರಾದ ಮಿ|| ಚರ್ಚಿಲ್ಲರವರ ಮೇಲೂ ಹಿಂದುಸ್ಥಾನದ ಪರವಾಗಿ ಒತ್ತಾಯ ನಡೆಯುತ್ತಿದೆ ಲಂಡನಿನಲ್ಲಿ ಒಂದು ಗೆಳೆಯರ ಕೂಟವಿದೆ ಈ ಕೂಟದವರು ಸೋಮವಾರ ಮುಖ್ಯ ಪ್ರಧಾನರಿಗೆ ಕಂಡು ಹಿಂದುಸ್ಥಾನಕ್ಕೆ ರಾಜ್ಯಾಧಿಕಾರ ಕೊಡುವ ವಿಷಯದಲ್ಲಿ ಶಿಷ್ಟಾಯಿ ನಡಿಸಿದರು ರಾಜಬಂದಿಗಳಿಗೆ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡರು ಆದರೆ ಮುಖ್ಯ ಪ್ರಧಾನರಾದ ಚರ್ಚಿಲ್ಲರು ಇದಕ್ಕೆ ಒಪ್ಪಲಿಲ್ಲ ತಮ್ಮ ಧೋರಣ ಈ ಹಿಂದೆಯೇ ಸ್ಫುಟವಾಗಿರುವದಾಗಿ ಗೆಳೆಯರಿಗೆ ಹೇಳಿ ಕಳಿಸಿದರು ಅದಾಗ್ಯೂ ಒಳ ಆಲೋಚನೆ ನಡೆದಿರುವದಾಗಿ ಹೇ

ಉತ್ತರ ರಾಜಬಂದಿಗಳಿಗೆ ಸದ್ಯಕ್ಕೇ ಬಿಡುಗಡೆಯಾಗುವದೆಂದು ತಿಳಿಯಲಾಗದೆ ಆದರೆ ಪೂರ ದೃಷ್ಟಿಗೆ ಯಾವ ವ್ಯತ್ಯಾಸವೂ ಕಂಡುಬರುವದಿಲ್ಲ! ಮಧ್ಯಪ್ರಾಂತದ ಮುಖ್ಯ ಪ್ರಧಾನರಾದ ಡಾ| ರವಿಶಂಕರ ಶುಕ್ಲರವರು ಅಕ್ಟೋಬರ ೧೨ನೇ ತಾರೀಖಿಗೆ ತಿವಣಿ ಜೈಲಿನಿಂದ ಬಿಡುಗಡೆಯಾಗಿದ್ದರು ಅವರು ನವಂಬರ ೩ನೇ ತಾರೀಖಿಗೆ ಪುನಃ ಸತ್ಯಾಗ್ರಹ ಮಾಡುವವರಿದ್ದಾರೆ ಸೆರೆಹಿಡಿಯುವ ಕ್ರಮವಾದರೂ ಅದೇ ಪ್ರಕಾರ ನಡೆದಿದೆ ಹೀಗೆ ಸತ್ಯಾಗ್ರಹವೂ ಸರಕಾರದ ದಬ್ಬಾಳಿಕೆಯೂ ಏಕಸಮನೆ ನಡೆದಿವೆ ಯುದ್ಧ ವಿರೋಧಿ ಪ್ರಚಾರ ಮಾಡಲು ಸ್ವಾತಂತ್ರ್ಯ ಕೊಟ್ಟನಕ ಸತ್ಯಾಗ್ರಹವನ್ನು ತಾವು ನಿಲ್ಲಿಸಬಯಸುವದಿಲ್ಲವಾಗಿ ಮಹಾತ್ಮರು ಪುರೋಗಾಮಿ ಪಕ್ಷದ ಸಂಘಟಕ ಕಾರ್ಯದರ್ಶಿಗಳಾದ ಶ್ರೀ|| ಹುಂಡಿ ವಿಷ್ಣು ಕಾಮತರು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದಾರೆ ಯುದ್ಧ ಕಾಲದಲ್ಲಿ ಯುದ್ಧವಿರೋಧಿ ಪ್ರಚಾರಕ್ಕೆ ಎಷ್ಟರ ಮಟ್ಟಿಗೆ ಸ್ವಾತಂತ್ರ್ಯ ಕೊಡಬಹುದು, ಯುದ್ಧಪ್ರಯತ್ನ ಕಾರ್ಯದ ಚಟುವಟಿಕೆಗಳ್ಯಾವವು ಎಂಬ ಸಂಗತಿಗಳನ್ನು ಸರಕಾರವು ನಿರ್ಣಯಿಸಿಕೊಳ್ಳಬಯಸುತ್ತದಾಗಿ ನನ್ನ ಊಹೆ ಶ್ರೀ|| ಅಣೇ ಮೊದಲಾದವರು ಸರಕಾರದೊಡನೆ ನಡೆಸಿದ ರಾಯಭಾರದ ರೂಪ ಸದ್ಯಕ್ಕೇ ಪ್ರಕಟವಾಗುವದಾಗಿ 'ಮುಂಬಯಿ ಕ್ರೊನಿಕಲ'ಪತ್ರಿಕೆಯ ದಿಲ್ಲಿಯೊಳಗಿನ ಸ್ವಂತ ಸುದ್ದಿಗಾರರ ಅಂಬೋಣ ನಾಡದು ಬುಧವಾರ ೧೨ನೇ ತಾರೀಖು ಆ ದಿನ ವರಿಷ್ಠ ಕಾಯಿದೆ ಎಸೆಂಬ್ಲಿಯಲ್ಲಿ ಸರಕಾರ ಪಕ್ಷದ ನಾಯಕರಾದ ಶ್ರೀ|| ಅಣೇಯವರು ಸರಕಾರದ ಅಂಬೋಣ ಹೇಳುವರಂತೆ ಹಿಂದೆ ರಾಷ್ಟ್ರೀಯ ಸಭೆಯವರಿಗೆ ಪ್ರಾಂತಗಳಲ್ಲಿ ಅಧಿಕಾರಾರೂಢರಾಗಲು ಈ ಹಿಂದೆ ಅನುಕೂಲ ಮಾಡಿಕೊಟ್ಟಂತೆ ಈಗಲೂ ಪ್ರಕೃತ ಕಾಯಿದೆಯ ಕಕ್ಷೆಯಲ್ಲಿ ಉಭಯ ಪಕ್ಷಗಳಿಗೆ ಮಾನ್ಯವಾದ ಯೋಜನೆಯನ್ನು ಸರ್ ಸುಲ್ತಾನ ಅಹಮ್ಮದರವರು ತಯಾರಿಸಬಹುದೆಂದು ನಂಬಲಾಗಿದೆ ಲಂಡನಿನ 'ನ್ಯೂ ಸ್ಟೇಟ್ಸ್‌ಮನ್' ಪತ್ರಿಕರ್ತರು ಸೋಮವಾರದ ಸಂಚಿಕೆಯಲ್ಲಿ ' War nears India" (ಯುದ್ಧವು ಹಿಂದುಸ್ಥಾನವನ್ನು ಸಮೀಪಿಸುತ್ತಿದೆ) ಎಂಬ ಲೇಖದ ಸಮಾರೋಪದಲ್ಲಿ ಬರೆದಂತೆ, ರಷ್ಯ ಜನಾಂಗದಂತೆ ಹಿಂದುಸ್ಥಾನವಾದರೂ ಬ್ರಿಟಿಶರಿಗೆ ಅತ್ಯಗತ್ಯವೆಂಬ ಮಾತು ಸಿದ್ಧವೇ ಸೈ! ಯುದ್ಧವು ಪೂರ್ವ ಮುಖವಾಗಿ ಹಬ್ಬುತ್ತಿದೆಯೆಂಬ ಮಾತು ಸಹ ಸಿದ್ಧವೇ ಸೈ! ಹಿಂದ ಜನಾಂಗವು ಇಂಥ ಪ್ರಸಕ್ತಿಯಲ್ಲಿ ಕೈ ಮುದುಡಿಕೊಂಡು ಕೂಡ್ರುವದು ಅಶಕ್ಯ ಯುದ್ಧಕಾರ್ಯಕ್ಕಾಗಿ ಅವಶ್ಯವಿದ್ದ ತಯಾರಿ ಹಿಂದುಸ್ಥಾನದೊಳಗೆ ಇನ್ನೂ ನಡೆಯಬೇಕೆಂಬ ಮಾತು ಸಹ ದಿಟವಾದದ್ದೇ ಸರ್ ಫಿಕ್ಸರ ನೂನರವರು ಮಂಗಳವಾರ ಮುಂಬಯಿಯ ರೋಟರಿ ಕ್ಲಬ್ಬಿನಲ್ಲಿ ಮಾಡಿದ ಭೋಜನೋತ್ತರ ಭಾಷಣದಲ್ಲಿ ನುಡಿದಂತೆ, ಮುಂಬಯಿಯ ಕಾರಖಾನೆಗಳಲ್ಲಿ ಬೇರೆ ಬೇರೆ ಕೆಲಸ ಮಾಡುವ ಜನಗಳಿಗೂ ಅವರ ಮನೆತನಗಳಿಗೂ ಸುರಕ್ಷಿತ ನೆಲಮನೆಗಳನ್ನು ಕಟ್ಟಿಸಿಕೊಡತಕ್ಕದ್ದಿದೆ ಯುದ್ಧವಾದರೆ ೩೪ ಲಕ್ಷ ಜನರಾದರೂ ಗಾಯಪಡುವರು ಈ ಜನರಿಗೆ ಉಪಚಾರ ಮಾಡಲು ದಾದಿಗಳು ಬೇಕು, ಉಪಚಾರ ಸಾಹಿತ್ಯ ಬೇಕು ಮುಂಬಯಿಯ ಮೇಲೆ ದಾಳಿಯಾದರೆ ಜನರು ದೇಶಾಂತರ ಮಾಡುವರು ಆ ಕಾಲದಲ್ಲಿ ಮುಂಬಯಿಯೊಳಗಿನ ಕಾರಖಾನೆಗಳ ಕೆಲಸಕ್ಕೆ ತಡೆಬೀಳುವದು ಆಗ ಈ ಕೆಲಸಗಾರರಿಗೆ ಕೆಲಸ ಪೂರೈಸಿಡಬೇಕು ರಾಜ್ಯ ಸರಕಾರವು ಸುರಕ್ಷಿತ ಪ್ರದೇಶದಲ್ಲಿ ಕಾರಖಾನೆಗಳನ್ನು ಕಟ್ಟಿಸಿಟ್ಟು ಮುಂಜಾಗ್ರತೆ ವಹಿಸಿದೆ ಈ ಆಪತ್ಕಾಲದಲ್ಲಿ ಆ ಜನಾಂಗಕ್ಕೆ ಇದರಿಂದ ಪ್ರಯೋಜನ ದೊರೆಯುತ್ತದೆ ಅಂಥ ಏರ್ಪಾಟನ್ನೇನಾದರೂ ಹಿಂದುಸ್ಥಾನ ಸರಕಾರವು ಮಾಡದಿದ್ದರೆ ಸರ್ವನಾಶವಾಗುವ ಭೀತಿಯುಂಟು ಮುಂಬಯಿ ತುಂಬ ನೆಲಮನೆಗಳನ್ನು ಕಟ್ಟಿಸಲು ಸಾಧ್ಯವಿಲ್ಲ ಯಾಕಂದರೆ ನೆಲ ಅಗೆದರೆ ಸಮುದ್ರ ಸಮೀಪವಿದ್ದದರಿಂದ ನೀರು ಬರುತ್ತದೆ ಇದರಿಂದ ಸುರಕ್ಷಿತ ಸ್ಥಳಗಳನ್ನು ಹುಡುಕಿ ಅಲ್ಲಿ ಯುದ್ಧಕಾಲದ ಆತ್ಮರಕ್ಷಣೆಯ ಏರ್ಪಾಟು ಮಾಡಬೇಕು ಆದರೆ ಯಾವದಕ್ಕೂ ಹಿಂದೀ ಜನಾಂಗದ ಸೌಹಾರ್ದವನ್ನು ಸರಕಾರವು ಗಳಿಸಿಕೊಂಡನಕ ಯುದ್ಧಕ್ಕೆ ಸಜ್ಜಾಗಲು ಸಾಧ್ಯವಿಲ್ಲ ಹಿಂದೀ ರಾಜಕಾರಣದ ಕ್ಷಿತಿಜದ ಮೇಲೆ ಸದ್ಯಕ್ಕೇನೂ ಅಂತಹ ಆಶಾಕಿರಣ ತೋರುವದಿಲ್ಲ ನಾಡದು ಪ್ರಕಟವಾಗುವ ಸರಕಾರದ ಅಂಬೋಣದಲ್ಲಿ ಹಿಂದುಸ್ಥಾನಕ್ಕೆ ಸಂತೋಷವಾರ್ತೆ ಇರುವದಾಗಿ ಸುದ್ದಿಗಾರರು ತಿಳಿಯುತ್ತಾರೆ ಅದನ್ನು ನೀವೆಲ್ಲರೂ ನಿರೀಕ್ಷಿಸುತ್ತಿರಬೇಕು! ಇದೇ ಇಂದಿನ ಹಿಂದೀ ರಾಜಕಾರಣದ ಮಟ್ಟು

ದಿ ಶಿರ್ಶಿ ಬಸ್ ಯೂನಿಯನ್, ಕುಮಟಾ.

ಯೂನಿಯನ್ನದ ಸದಸ್ಯರಿಗೆ ವಿನಂತಿ

ಸದರಿ ಯೂನಿಯನ್ನಿನಲ್ಲಿ ಸೇರಿದ ಮೋಟರ ಬಂಡಿಗಳ ಒಡೆಯರೊಳಗೆ ಒಡಕುಂಟಾಗಿ, ಕಳೆದ ತಿಂಗಳಲ್ಲಿ ಯೂನಿಯನ್ನು ಒಮ್ಮೇಲೇ ಅನಪೇಕ್ಷಿತ ರೀತಿಯಲ್ಲಿ ಸಂಪುಷ್ಟದಲ್ಲಿ ಒಂದ ಸಂಗತಿ ಈಗ ಜನಜನಿತವಾಗಿದೆ ಯೂನಿಯನ್ನಿನ ಎಲ್ಲ ಲೆಕ್ಕಾಚಾರವನ್ನು ಯೂನಿಯನ್ನಿನ ಸದಸ್ಯರಿಗೊಪ್ಪಿಸಿ ಅದರ ಮುಂದಿನ ವ್ಯವಸ್ಥೆ ಮಾಡುವದಕ್ಕಾಗಿ ಇದೇ ಕಳೆದ ತಾ ೨೩-೧೦-೪೧ಕ್ಕೆ ಎಲ್ಲ ಸದಸ್ಯರ ಸಭೆ ಕರೆಯಲಾಗಿತ್ತು ಆ ದಿನ ಸಭೆ ಸೇರದ್ದರಿಂದ ತಾ ೭ ೧೧-೪೧ನೇಗ ಪುನಃ ಸಭೆ ಇಟ್ಟಿತ್ತು ಆ ದಿನ ಸಹ ಸಭೆಯಾಗಲಿಲ್ಲ ಆದ್ದರಿಂದ ಯೂನಿಯನ್ನಿನ ಯಾವತ್ತೂ ಸದಸ್ಯರಿಗೆ ಇದರ ಮೂಲಕ ಕೊನೆಯ ಲೆಕ್ಕಾಚಾರ ತಿಳಿಸುವ ಪ್ರಸಂಗ ಬಂದಿದೆ

ಯೂನಿಯನ್ನು ಅಂತ್ಯಗೊಂಡ ತಾ ೨೭ ೧೦ ೪೧ನೇಗೆ ತೆಗೆದ ಅಢಾವೆಯಂತೆ ಯೂನಿಯನ್ನಿಗೆ

ತಿಕೀಟು ಹಾಸಲ ಬಾಕಿ	ರೂ ೪ ೮ ೦
ಚಿತ್ರಾಪುರ ಎಕ್ಸಪ್ರೆಸ ಸರ್ವಿಸ ಕಡೆಯಿಂದ	ರೂ ೬೫ ೬ ೩
ಶ್ರೀಮತಿ ಸುಂದರಬಾಯಿ ನಾಯಕರಿಂದ	೧ ೪-೭
ರಾ| ಎಮ್ ಕೇ ಕುಮಟಾ ಇವರಿಂದ	೬೭ ೧೧ ೬
ಡಾ| ಪಿ ಎಸ್ ಮೋದಿಯರಿಂದ	೧೬ ೮ ೭
ರಾ ಪಿ ಲಕ್ಷ್ಮಣರಿಂದ	೪೦-೫ ೪
ರಾ| ಆರ್ ವಿ ನಾಯಕರಿಂದ	೪೨ ೦ ೧೦
ಶ್ರೀಮತಿ ಎಮ್ ಬಿ ಕುಮಟಾ ಇವರಿಂದ	೧೦ ೧೪ ೯
ಕನ್ಸರ್ನ ಖಾತೆಗೆ	೧೮ ೯ ೩
ಅಮಾನತ ಖಾತೆಗೆ	೪೯-೧೪ ೩
ಹೀಗೆ ಯೂನಿಯನ್ನಿಗೆ ಅಂಕು	ರೂ ೨೬೬-೧ ೪

ಬರತಕ್ಕದ್ದುಂಟು ಮತ್ತು ಕೈಯಲ್ಲಿ ರೂ ೧೯ ೧ ೫ ಶಿಲ್ಕುಂಟು ಹಾಗೂ—

ಕಾರ್ತಿಮಾಜಿ ಸರ್ವಿಸ್ಸಿನವರಿಗೆ	ರೂ ೧೦ ೬ ೪
ರಾ| ಅಯ್ ಬಿ ಸಯ್ಯದರಿಗೆ	೧೪೩ ೭-೩
ರಾ| ಎಲ್ ಟಿ ಜೋಶಿಯವರಿಗೆ	೭ ೧೦ ೦
ಡಾ| ಎನ್ ಆರ್ ಕಲಬುರ್ಗಿಯವರಿಗೆ	೭೫ ೭ ೫
ಶ್ರೀ ರಾಮಕೃಷ್ಣ ಪ್ರಿಂಟಿಂಗ ವರ್ಕ್ಸದವರಿಗೆ	೧೧ ೮ ೦
ಮುಂಗಡ ಖಾತೆಗೆ	೪೭ ೧೧ ೧೦
ಹೀಗೆ ಅಂಕು	ರೂ ೨೬೫-೩ ೯

ಯೂನಿಯನ್ನದಿಂದ ಹೊರಗೆ ಸಲ್ಲಬೇಕು

ಯೂನಿಯನ್ನಿನ ಸದಸ್ಯರು ಬೇಗನೇ ಒಂದೆಡೆ ಸೇರಿ ನನ್ನ ಕಡೆಗಿದ್ದ ಎಲ್ಲ ಲೆಕ್ಕವನ್ನು ಒಪ್ಪಿಸಿಕೊಂಡು ನನಗೂ ಬೇರೆ ನೌಕರರಿಗೂ ಸಲ್ಲಬೇಕಾಗಿರುವ ಸಂಬಳವನ್ನು ಕೊಡುವ ವ್ಯವಸ್ಥೆ ಮಾಡಬೇಕಾಗಿ ವಿನಂತಿಯಿದೆ

ಕುಮಟಾ,
ತಾ ೯-೧೧-೪೧
P. N. PAI,
ಯೂನಿಯನ್ನ ಕಚೇರಿಯ
ಮೆನೇಜರ

ಇತ್ತ ಲಕ್ಷಗೊಡಿರಿ! ಇತ್ತ ಲಕ್ಷಗೊಡಿರಿ!!

ಅಗತ್ಯದ ಸೂಚನೆ.

ಸದ್ಯ ಚಾಲತಿಯಲ್ಲಿ ಇಲ್ಲದ ವಿಕ್ಟೋರಿಯಾ, ವಿಲಿಯಂ ತಂಡೆರಾಣಿ ಛಾಪಿಯ ರೂಪಾಯಿ, ಅರ್ಧ ರೂಪಾಯಿ ಮತ್ತು ಗೋವಾ, ಅಲ್ವಾರ, ಬಿಕಾನೇರ ಸ್ಟೇಟಿನ ರೂಪಾಯಿ ವಗೈರೆ ನಾಣ್ಯಗಳು ಯೋಗ್ಯ ದರದಿಂದ ಕೊಳ್ಳಲ್ಪಡುವವು

— ಇಂದೇ ವಿಚಾರಿಸಿರಿ —

ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ

ಕರ್ನಾಟಕ, ಆಂಧ್ರ ಪ್ರಾಂತಗಳಲ್ಲೆಲ್ಲ ಆಢ್ಯತೆಯಿಂದ ಮೆರೆದ ಚಿತ್ರ!
ಪತಿಯೇ ಪರದೈವವೆಂದು ತಿಳಿದು ಆದರ್ಶ ಸತಿಯು ತನ್ನ ಪ್ರೇಮಮೂರ್ತಿ
* ಯನ್ನು ಹೇಗೆ ಪೂಜಿಸಿದಳೆಂದು ತೋರಿಸುವ ಉಜ್ವಲ ಚಿತ್ರ'! *

ಬಾಲಾಜಿ ಚಿತ್ರ
— ತಯಾರಿಸಿದ —
ಪಿ ಪುಲ್ಲಯ್ಯನವರ
* ದಿಗ್ದರ್ಶನ! *

— ಫೇಮಸ್ ಫಿಲ್ಮ್ಸರವರ —
ಧರ್ಮಪತ್ನಿ

ದೇವತಾವಂಥ ಮರಾಠಿ
— ಚಿತ್ರದ ಕಥೆ ಬರೆದ—
ಖಾಂಡೇಕರರ
* ಕಥಾಲೇಖನ!! *

ಬಾಲಾಜಿಯಲ್ಲಿ ಪದ್ಮಾವತಿಯ ಪಾರ್ಟು ಮಾಡಿದ ಶಾಂತಕುಮಾರಿಯೂ
ಇದರಲ್ಲಿ ಮುಖ್ಯ ಭೂಮಿಕೆ ವಹಿಸಿರುವಳು!!
ಕುಮಟಾ ಚಿತ್ರರಂಜನ ಥೇಟರಿನಲ್ಲಿ ತಾ ೧೮-೧೧-೪೧ರಿಂದ ಪ್ರಾರಂಭ!

ಕಾನಡಾವೃತ್ತ.

ಮಿತಿ ವೃಷ ಸಂವತ್ಸರ ಕಾರ್ತಿಕ ಬ॥ ೬ಷ್ಠಿ, ಸೋಮವಾರ.

ಸಾಮ್ರಾಜ್ಯಕರ್ತರಿಗೆ ಎಚ್ಚರಿಕೆ.

ಮುಂಬಯಿಯಲ್ಲಿ ಮಂಗಳವಾರ ಭಾಷಣ ಮಾಡುವಾಗ ಸರ್ ವ್ಹಿಕ್ಟರ ಸೆಸೂನರವರು ನುಡಿದಂತೆ, ಬ್ರಿಟಿಶರಿಗೆ ಕೊನೆಯಲ್ಲಿ ವಿಜಯವಾಗುವದು ಖಂಡಿತ ಮಾತೆಂದು ನಮ್ಮದೂ ಖಂಡಿತ ಭಾವನೆ. ಅದೇ ಪ್ರಕಾರ ಈ ವಿಜಯದಲ್ಲಿ ಪ್ರಮುಖ ಅಂಗ ನಮ್ಮ ಹಿಂದುಸ್ಥಾನ ದೇಶದ್ದಿರಬೇಕೆಂದು ನಮ್ಮ ಅಂಬೋಣವುಂಟು. ಕಾಲವಶಾತ್ ಬ್ರಿಟಿಶರು ಸೋತರೆ ಆ ಅಪವಾದ, ಆ ಅಪಕೀರ್ತಿ ನಮ್ಮ ಹಿಂದುಸ್ಥಾನದ ಮೇಲೆ ಬರಬಾರದೆಂದು ಸರ್ ವ್ಹಿಕ್ಟರ ಸೆಸೂನರವರಂತೆಯೇ ನಮ್ಮದೂ ಅಭಿಪ್ರಾಯವುಂಟು. ಆದರೆ ವಿಜಯಕ್ಕಾಗಿ ನಮ್ಮ ಜನಾಂಗವನ್ನು ಸಂಘಟಿಸಿ ಸಿದ್ಧಪಡಿಸುವ ಬಗೆ ಹೇಗೆ? ರುಶ್ಯರು ಕೊಕೆಸಸದಲ್ಲೂ ಕಾಸ್ಪಿಯನ್ ಸಮುದ್ರದಲ್ಲೂ ಹಿಮ್ಮೆಟ್ಟಿದ ಹಾಗೆ ಹಿಂದುಸ್ಥಾನದ ಸಹಕಾರವು ಅವಶ್ಯವಾಗುತ್ತದಾಗಿ ಲಂಡನಿನ 'ನ್ಯೂ ಸ್ಟೇಟ್ಸಮನ್' ಕರ್ತರು ಅಭಿಪ್ರಾಯಪಟ್ಟು ಹಿಂದುಸ್ಥಾನವನ್ನು ಸಂತೈಸಲು ಎಚ್ಚರಿಕೆ ಕೊಡುತ್ತಾರೆ. ಹಿಂದುಸ್ಥಾನದೊಳಗೆ ನಿರಂಕುಶ ನಾಝಿ ಸಂಪ್ರದಾಯದ ದ್ವೇಷವುಂಟು. ಹಿಂದವಾಸಿಯರು ಆ ಸಂಪ್ರದಾಯದ ಸರ್ವನಾಶಕ್ಕಾಗಿ ಹೋರಾಡಲು ಸಿದ್ಧರಿದ್ದಾರೆ; ಆತ್ಮರಕ್ಷಣೆಗಾಗಿ ಪ್ರತಿಭಟಿಸಲಿಕ್ಕೂ ಅವರು ಸಿದ್ಧರೇ! ಆದರೆ ಬ್ರಿಟನಿಗಾಗಿ ಹಿಂದಜನಾಂಗವು ಹೋರಾಡಲು ಸಿದ್ಧವಿಲ್ಲ. ಇಂಥ ಪ್ರಸಕ್ತಿಯಲ್ಲಿ ಸಾಮ್ರಾಜ್ಯಕರ್ತರು ಜಾಗ್ರತೆ ಪಡೆದು ಹಿಂದವಾಸಿಗಳನ್ನು ಸ್ವಪಕ್ಷಕ್ಕೆ ಎಳಕೊಳ್ಳಲು ಕಾಲೋಚಿತವಾದ ರಾಜ್ಯಾಧಿಕಾರಗಳನ್ನು ಅರ್ಪಿಸಿ, ಹಿಂದುಸ್ಥಾನದೊಡನೆ ಆಪ್ತತ್ವವನ್ನುಂಟು ಮಾಡಬೇಕು. ಸಾಮ್ರಾಜ್ಯಕರ್ತರು ಹಟವಾದಿಗಳಾದರೆ ಘೋರ ಸಂಕಟ ಒದಗುವದಾಗಿಯೂ 'ನ್ಯೂ ಸ್ಟೇಟ್ಸಮನ್'ಕರ್ತರು ಸಾಮ್ರಾಜ್ಯಕರ್ತರಿಗೆ ಮುಂಜಾಗ್ರತೆ ಕೊಟ್ಟಿರುತ್ತಾರೆ. ಪಸಾಹತು ಸ್ವರಾಜ್ಯವನ್ನು ಬ್ರಹ್ಮದೇಶಕ್ಕೆ ಸಾಮ್ರಾಜ್ಯಕರ್ತರು ಅನುಗ್ರಹಿಸಲೊಡಂಬಡದಿದ್ದರೆ ಗಂಡಾಂತರವೊದಗುವದಾಗಿ ಬ್ರಹ್ಮದೇಶದ ಮುಖ್ಯ ಪ್ರಧಾನರಾದ ರಾ॥ ಯುಸೋರವರು ಸಾಮ್ರಾಜ್ಯಕರ್ತರಿಗೆ ತಿಳಿಸಿರುತ್ತಾರೆ. "Japan is very clever" ಎಂಬ ವಾಕ್ಯವನ್ನು ಬ್ರಹ್ಮದೇಶದ ಮುಖ್ಯ ಪ್ರಧಾನರು ಮುಂದಿನ ಗಂಡಾಂತರದ ಸೂಚನೆಯೆಂದೇ ಚಾತುರ್ಯದಿಂದ ಉದ್ಗರಿಸಿರುತ್ತಾರಾಗಿ "ನ್ಯೂ ಸ್ಟೇಟ್ಸಮನ್"ಕರ್ತರು ಆ ವಾಕ್ಯದ ಮೇಲೆ ಭಾಷ್ಯಮಾಡಿದ್ದಾರೆ. ಬ್ರಹ್ಮೀಯರು ಬೌದ್ಧ ಮತಾನುಯಾಯಿಗಳು; ಜಪಾನಿಯರೂ ಬೌದ್ಧ ಮತಾನುಯಾಯಿಗಳೇ! ಉಭಯತರೂ ಧರ್ಮ ಬಂಧುಗಳಾಗಿ ಬ್ರಹ್ಮದೇಶವನ್ನು ಸಾಮ್ರಾಜ್ಯಕರ್ತರಿಂದ ತಪ್ಪಿಸಿಕೊಳ್ಳುವ ಸಂಭವವುಂಟೆಂದು "ನ್ಯೂ ಸ್ಟೇಟ್ಸಮನ್"ಕರ್ತರು ಗ್ರಹಿಸುತ್ತಾರೆ. ಇದೇನು ಅಶಕ್ಯವಾದ ಸಂಗತಿಯೆಂದು ವ್ಯವಹಾರಿಕರು ಎಣಿಸಲಾರರು. ಈಗ ಇಡೀ ಜಗತ್ತು ಪ್ರಳಯ ಕಾಲದಲ್ಲಿ ಸಿಲುಕಿಕೊಂಡಿದೆಯೆಂದು ಧಾರಾಳವಾಗಿ ಹೇಳಬಹುದು. ಸಂಕ್ರಮಣವೇ ಈ ಕಾಲದ, ಈ ಯುಗದ ಮುಖ್ಯ ಲಕ್ಷಣ. ಯಾವ ಕಾಲಕ್ಕೆ ಯಾವ ಘಟನೆಗಳು ಸಂಭವಿಸುವವೆಂದು ಯಾರಿಗೂ ಹೇಳಬರುವದಿಲ್ಲ ಮಾಡಬರುವದಿಲ್ಲ. ಇಂಥ ಪ್ರಸಕ್ತಿಯಲ್ಲಿ ಬ್ರಿಟಿಶ ಸಾಮ್ರಾಜ್ಯಕರ್ತರು ಕಾಲ-ಪ್ರವಾಹವನ್ನು ಲಕ್ಷಿಸದೆ, ಕಾಲಪ್ರವಾಹಕ್ಕೆ ಅನುಕೂಲವಾಗಿ ವರ್ತಿಸದೆ, ಸ್ವಾರ್ಥವನ್ನೇ ಉದ್ದೇಶವಾಗಿಟ್ಟುಕೊಂಡು ವರ್ತಿಸಿದರೆ ಮುಂದೆ ಘಾತವಾಗುವಂತಿದೆ. 'ನ್ಯೂ ಸ್ಟೇಟ್ಸಮನ್'ಕರ್ತರು ಸಾಮ್ರಾಜ್ಯಕರ್ತರಿಗೆ ಹಿಂದುಸ್ಥಾನದ ಸ್ಥಿತಿಯನ್ನು ಪುನರಾಲೋಚಿಸಲು ಪುನಃ ಮಾಡಿದ ವಿನಂತಿ ಪ್ರಸಂಗೋಚಿತ.

'ನ್ಯೂ ಸ್ಟೇಟ್ಸಮನ್'ಕರ್ತರು ನುಡಿದಂತೆ, ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿ ಸರ್ವಾಧಿಪತಿಗಳು ಆ ಸರಕಾರಕ್ಕೆ ಅಧೀನರಾಗಿ ನಡಕೊಳ್ಳಲು ಒಪ್ಪಂಬಡಬೇಕು. ವರಿಷ್ಠ ಕಾಯಿದೆ ಕೌನ್ಸಿಲು ನಮ್ಮ ಹಿಂದುಸ್ಥಾನದ ಪ್ರಜಾಪ್ರತಿನಿಧಿ ಸಭೆಯಾಗಬೇಕು. ಈ ಸಭೆಗೆ ಸಾರ್ವಭೌಮ ಅಧಿಕಾರವಿರಬೇಕು. ಭಾರತ ಮಂತ್ರಿಗಳಿಗೆ, ಬ್ರಿಟಿಶ ಪ್ರಧಾನ ಮಂಡಳಕ್ಕೆ, ಬ್ರಿಟಿಶ ಪಾರ್ಲಿಮೆಂಟಿಗೆ ನಮ್ಮ ಹಿಂದುಸ್ಥಾನದ ಅಂತಃಕಾರಭಾರದಲ್ಲಿ ಏನೂ ಸಂಬಂಧವಿರಕೂಡದು. ನಮ್ಮ ವಿದೇಶ ನೀತಿಯನ್ನು ನಮ್ಮ ಜನಾಂಗದ ಹಿತಾಹಿತಗಳ ವಿಚಾರದಿಂದ ನಡಿಸುವ ಸರ್ವಾಧಿಕಾರ ನಮಗಿರಬೇಕು. ಈಗ ವಿಸ್ತರಿಸಲ್ಪಟ್ಟ ಸರ್ವಾಧಿಪತಿಗಳ ಕಾರ್ಯಕಾರಿ ಮಂಡಳವು ಪ್ರಧಾನ ಮಂಡಳವಾಗಬೇಕೆಂದೂ ಸರ್ವಾಧಿಪತಿಗಳು ಅದಕ್ಕೆ ಹೊಣೆಯಿರಬೇಕೆಂದೂ 'ನ್ಯೂ ಸ್ಟೇಟ್ಸಮನ್'ಕರ್ತರ ಸಲಹೆ. ಆದರೆ ನಮಗಿದು ಯುಕ್ತ ತೋರುವದಿಲ್ಲ. ಈ ಕಾರ್ಯಕಾರಿ ಮಂಡಳದಲ್ಲಿ ಬ್ರಿಟಿಶ ಪಕ್ಷಪಾತಿ ಯುರೋಪಿಯನ ಸಭಾಸದರ ಪ್ರಾಬಲ್ಯವುಂಟು. ಇವರು ಹಿಂದೀ ಪ್ರಧಾನ ಮಂಡಳದಲ್ಲಿ ಉಳಿಯಲು ಅರ್ಹರಲ್ಲ; ಹಿಂದುಸ್ಥಾನಕ್ಕೆ ಹಿತವಾಗುವಂತೆ ನಡಕೊಳ್ಳಲು ಇವರಿಗೆ ಅಸಾಧ್ಯ. ಇಂಥವರನ್ನು ಪ್ರಧಾನ ಮಂಡಳದಲ್ಲಿಟ್ಟುಕೊಳ್ಳಬೇಕಾಗಿ 'ನ್ಯೂ ಸ್ಟೇಟ್ಸಮನ್' ಕರ್ತರು ಒತ್ತಾಯ ಮಾಡುವದು ವಿಹಿತವಲ್ಲ. ಹಿಂದುಸ್ಥಾನದ ಹಿತವನ್ನು ಹಿಂದುಸ್ಥಾನದ ನಿವಾಸಿಗಳೇ ಕಾಪಾಡಬಲ್ಲರು. ಹಿಂದುಗಳೇ ಇರಲಿ, ಮುಸಲ್ಮಾನರೇ ಇರಲಿ, ಕ್ರಿಶ್ಚನರೇ ಇರಲಿ, ಶೀಖರೇ ಇರಲಿ, ಪಾರ್ಸಿಗಳೇ ಇರಲಿ, ಅಥವಾ ಯಾವದೇ ಪಕ್ಷ-ಪಂಗಡಗಳಿಗೆ ಒಪ್ಪಿದವರೇ ಇರಲಿ; ಎಲ್ಲರೂ ಸ್ವದೇಶದ ನಿತಾಂತ ಹಿತವನ್ನೇ ಬಯಸುವವರು. ಸ್ವದೇಶದ್ರೋಹದ ವಿಚಾರ ಯಾವ ಬಾಂಧವನಿಗೂ ಸೋಂಕುವದಿಲ್ಲ. ಸಾಮ್ರಾಜ್ಯಕರ್ತರ ದುರ್ಬೋಧನೆಯಿಂದ ಇಲ್ಲವೆ ಸಾಮ್ರಾಜ್ಯಕರ್ತರ ಕೃಪೆಯಿಂದ ಸ್ವಾರ್ಥ ಸಾಧಿಸುವದೆಂಬ ಆಶೆಯಿಂದ ಇಲ್ಲವೆ ದುರಾಶೆಯಿಂದ ಕೆಲವು ಮಹಾನುಭಾವರು ವಿಪರೀತ ಬುದ್ಧಿ ತಳೆದು ಈಗ ಅಡ್ಡ ಹಾದಿ ಹಿಡಿಯುತ್ತಿದ್ದಾಗ್ಯೂ ಸಾಮ್ರಾಜ್ಯಕರ್ತರ ಕೈಯೊಳಗಿಂದ ರಾಜ್ಯಾಧಿಕಾರ ತಪ್ಪಿ ಸ್ವದೇಶದೊಳಗೆ ಸೇರಿದ ಮೇಲೆ ನಾವೆಲ್ಲರೂ ಸಹಕಾರಿಗಳಾಗಿ ನಡಕೊಳ್ಳಲೇ ಬೇಕು. ಸ್ವದೇಶಹಿತ ಸಾಧಿಸುವ ಮಾರ್ಗಗಳು ಭಿನ್ನವಾದಾಗ್ಯೂ ಸ್ವದೇಶೋದ್ಧಾರವೊಂದೇ ಧ್ಯೇಯವಾಗಿರುವಾಗ ಪಕ್ಷ-ಪಂಗಡದವರೂ ಜಾತಿಧರ್ಮದವರೂ ಒಮ್ಮನಸ್ಸಿನಿಂದ ವ್ಯವಹರಿಸಲೇ ಬೇಕು. ಅಧಿಕಾರದ ಅಭಾವದಲ್ಲಿ ಬೇರೆ ಬೇರೆ ಕಾರಣಗಳ ಮೂಲಕ ನಮ್ಮೊಳಗೆ ಜಗಳಗಳಾಗುವದು ಸ್ವಾಭಾವಿಕ. ಸಾಮ್ರಾಜ್ಯಕರ್ತರು ಅಧಿಕಾರಿಗಳು; ನಾವೆಲ್ಲರೂ ಅವರ ಅಧೀನರು; ಎಂಬ ಭಾವನೆ ಈಗ ರೂಢವಾಗಿದೆ. ಸಾಮ್ರಾಜ್ಯಕರ್ತರ ಕೃಪೆಯಿಂದ ಆತ್ಮೋದ್ಧಾರವನ್ನು ಸಾಧಿಸಿಕೊಳ್ಳಬೇಕೆಂಬ ಮೇಲಾಟದಲ್ಲಿ ಪಕ್ಷ-ಪಂಗಡಗಳೊಳಗೆ ಸಹಜವಾಗಿ ಮತ್ಸರವುಂಟಾಗುತ್ತದೆ. ಯಾವದೇ ಕಾರ್ಯವನ್ನು ದಕ್ಷತೆಯಿಂದ ಯಾರಿಂದಲೂ ಪುರಸ್ಕರಿಸಲಾಗುವದಿಲ್ಲ. ಪ್ರತಿಯೊಬ್ಬರೂ ತಮ್ಮ ತಮ್ಮ ಸ್ವಾರ್ಥವನ್ನೇ ಉದ್ದೇಶವಾಗಿಟ್ಟುಕೊಂಡು ನಡಕೊಳ್ಳುತ್ತಿರುವಾಗ ದೇಶಕಾರ್ಯ-ಸಿದ್ಧಿಯಾಗದಿದ್ದರೆ ಆಶ್ಚರ್ಯವಿಲ್ಲ. ಪರತಂತ್ರ ರಾಜ್ಯಭಾರದ ಸ್ವಾಭಾವಿಕ ಪರಿಣಾಮಗಳಿವು. ಈ ಸ್ಥಿತಿಯನ್ನು ಸಾಮ್ರಾಜ್ಯಕರ್ತರು ಹೋಗಲಾಡಿಸಲೇ ಬೇಕು; ಹೋಗಲಾಡಿಸಿದರೆ ಮಾತ್ರ, ಹಿಂದುಸ್ಥಾನದ ಮಾತು ಹಾಗಿರಲಿ, ಬ್ರಿಟನಕ್ಕೆ ಉಳಿಗಾಲವುಂಟು. ರಣಭೂಮಿಯು ಕೊಕೆಸಸದ ಈಚೆ ಬರುತ್ತಿರುವಾಗ ಹಿಂದುಸ್ಥಾನದ ಸಿದ್ಧತೆ ವಿಜಯದ ನಿರ್ಣಾಯಕವೆಂದು 'ನ್ಯೂ ಸ್ಟೇಟ್ಸಮನ' ಕರ್ತರು ಹೇಳುವ ಮಾತು ದಿಟವಾದದ್ದೇ. ಸರ ವ್ಹಿಕ್ಟರ ಸೆಸೂನರವರಾದರೂ ಇದೇ ಪ್ರಕಾರ ಮುಂಜಾಗ್ರತೆಯನ್ನು ಕೊಡುತ್ತಾರೆ. ಮುಂಬಯಿಯೊಳಗಿಂದ ಗಿರಣಿಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರ ಮಾಡುವ ಉಪಾಯ ಮಾಡಬೇಕಾಗಿಯೂ ಸರ್ ವ್ಹಿಕ್ಟರರ ಅಂಬೋಣವಿದೆ. ಯುದ್ಧಸ್ಥಿತಿ ಇಷ್ಟು ಗಂಭೀರವಾದಾಗ, ಜಪಾನ ದೇಶವು ಬ್ರಹ್ಮದೇಶದಲ್ಲಿ ಕೈಕಾಲು ಪಸರಿಸಿಕೊಂಡು ಹಿಂದುಸ್ಥಾನಕ್ಕೆ ಭಯವನ್ನುಂಟುಮಾಡಲು ಹೊಂಚು ಹಾಕುತ್ತಿರುವಾಗ ಸಾಮ್ರಾಜ್ಯಕರ್ತರು 'ಹಿಂದಿನ ಧೋರಣವೇ ಮುಂದೆ' ಎಂಬದಾಗಿ ಗಟ್ಟಿ ಹಿಡಿದು ಕೂತರೆ ಹಿಂದಜನಾಂಗವು ಅಸಂತೋಷಪಟ್ಟು, ನೊಂದು, ನಿರಾಶೆಪಟ್ಟು ಅಲಿಪ್ತವಾಗಿ ಉಳಿದರೆ, ಯುದ್ಧವನ್ನು ಪ್ರತಿಭಟಿಸುವ ಶಕ್ತಿ ಸಾಮ್ರಾಜ್ಯಕರ್ತರಿಗೆ ಪ್ರಾಪ್ತವಾಗಲಿಕ್ಕಿಲ್ಲ. ಹಿಂದುಸ್ಥಾನದ ತಯಾರಿಯ ಅಭಾವದಲ್ಲಿ ಬ್ರಿಟನಿಗೆ ಅಪಜಯವಾದರೆ ಲೋಕವೇ ಸಂಕಟದಲ್ಲಿ ಸಿಲುಕುವ ಹಾಗಿದೆ. ಲೋಕಸಂಕಟ ಪರಿಹಾರಕ್ಕಾಗಿ, ತಾವು ವಹಿಸಿಕೊಂಡ ಲೋಕಸ್ವಾತಂತ್ರ್ಯ ಕಾರ್ಯದ ಪೂರ್ಣತೆಗಾಗಿ, ಸಾಮ್ರಾಜ್ಯಕರ್ತರು ಹಿಂದುಸ್ಥಾನದ ಪರಿಸ್ಥಿತಿಯನ್ನು ಪುನರಾಲೋಚಿಸಬೇಕಾಗಿ 'ನ್ಯೂ ಸ್ಟೇಟ್ಸಮನ್'ಕರ್ತರಂತೆ ನಾವಾದರೂ ಒತ್ತಿ ಹೇಳುತ್ತೇವೆ. ಇಲ್ಲದಿದ್ದರೆ 'ನ್ಯೂ ಸ್ಟೇಟ್ಸಮನ'ಕರ್ತರು ಎಚ್ಚರಿಕೆ ಕೊಟ್ಟಂತೆ ಅಪಾಯವುಂಟು. ಇನ್ನಾದರೂ ಸಾಮ್ರಾಜ್ಯಕರ್ತರು ಸದ್ಬುದ್ಧಿ ತಳೆಯಲಿ!

ದಯೆ, ಮಾಯೆ ತೊರೆಯಿರಿ !

[ನಿರೀಕ್ಷಕನು ಬರೆದುದು.]

“ದಯೆ, ಮಾಯೆ ತೊರೆಯಿರಿ!” “ಕಠೋರರಾಗಿರಿ!” “ನಿಷ್ಠುರರಾಗಿರಿ!” “ಜರ್ಮನರಿಗೆ ದಣಿಸಲು, ಪೀಡಿಸಲು, ಕಾಡಲು ಹಿಂದೆ-ಮುಂದೆ ನೋಡಬೇಡಿರಿ!” ಹೀಗೆ ರುಶ್ಯ ಮಹಾ-ಪ್ರಭು ಸ್ಟೈಲಿನನು ರುಶ್ಯ ಸರಕಾರದ ಸ್ಥಾಪನೆಯ ೨೪ನೇ ವರ್ಧಂತಿ ಮಹೋತ್ಸವದ ಸಮಯ ರುಶ್ಯ ಪ್ರಜೆಗಳಿಗೆ ಘೋರ ಆಜ್ಞೆ ಮಾಡಿದ್ದಾನೆ. ರುಶ್ಯರು ಕಷ್ಟಪಟ್ಟರು ನಿಜ; ಹಿಂಜರಿದರು ನಿಜ, ಆದರೆ ರುಶ್ಯ ಜನಾಂಗ ಇನ್ನೂ ಭದ್ರವಾಗಿದೆ; ಹಿಟ್ಲರನನ್ನು ಆ ಜನಾಂಗ ಹಣ್ಣಿಗೆ ತರದೆ ಬಿಡಲಿಕ್ಕಿಲ್ಲ; ಹೀಗೆ ಸ್ಟೈಲಿನ ಪ್ರಭು ಮೊಸ್ಕೊ ಆಕಾಶವಾಣಿಯಿಂದ ಬುಧವಾರ ಭಾಷಣ ಮಾಡಿ ರುಶ್ಯ ಜನಾಂಗವನ್ನು ಹುರಿದುಂಬಿಸಿದ್ದನ್ನು ಕೇಳಿ ನನಗೊಳ್ಳೇ ಉಲ್ಲಾಸ! ಆಪತ್ಕಾಲದಲ್ಲಿ ರುಶ್ಯ ಜನಾಂಗದ ಅಂತಃಕರಣ ಬಲಶಾಲಿಯಾಗಿದೆಂದು ತಿಳಿದು ನನ್ನಂತೆಯೇ ನೀವೂ ಸಂತೋಷಪಡಬೇಕು. ಸಶಸ್ತ್ರ ಮೋಟಾರ ತೋಫುಗಳ ಅಭಾವದಲ್ಲಿ ರುಶ್ಯರು ಅಪಜಯ ಹೊಂದಬೇಕಾಯಿತೆಂದು ಸ್ಟೈಲಿನನ ಹೇಳಿಕೆ. ಆದರೆ ಈಗಿನಷ್ಟು ಭದ್ರತೆ ರುಶ್ಯ ಸೈನ್ಯಕ್ಕೆ ಹಿಂದೆಂದೂ ಪ್ರಾಪ್ತವಾಗಿದ್ದರಿಂದ ಜರ್ಮನರಿಗೆ ಮುತ್ತಿಗೆ ಹಾಕಿ ಧರ್ಮಾಧರ್ಮದ ವಿಚಾರ ಮಾಡದೆ ನಿಷ್ಠುರತನದಿಂದ ಅವರನ್ನು ಕೊಲ್ಲಬೇಕಾಗಿ ಸ್ಟೈಲಿನ ಪ್ರಭು ಕಟ್ಟಪ್ಪಣೆ ಹೊರಡಿಸಿದ್ದಾನೆ. ರುಶ್ಯ ರಾಜಧಾನಿಯಾದ ಮೊಸ್ಕೊ ಪಟ್ಟಣವನ್ನು ಸಂರಕ್ಷಿಸಿಕೊಳ್ಳುವದಕ್ಕಾಗಿ ರುಶ್ಯರು ಅಭೂತಪೂರ್ವವಾದ ಸಾಹಸ ಮಾಡುತ್ತಿದ್ದಾರೆ ಹಿಟ್ಲರನಾದರೋ, ಅಷ್ಟೇ ತೀವ್ರತೆಯಿಂದ ಮೊಸ್ಕೊ ರಾಜಧಾನಿಯನ್ನು ವಶಪಡಿಸಿಕೊಳ್ಳಲು ಹೋರಾಡುತ್ತಿದ್ದಾನೆ. ಮೊಸ್ಕೊ ಪಟ್ಟಣಕ್ಕೆ ಉತ್ತರ, ದಕ್ಷಿಣ, ಪಶ್ಚಿಮ ಪಾರ್ಶ್ವಗಳಿಂದ ಮುತ್ತಿಗೆ ಬಿದ್ದು ಘೋರ ರಣಕಂದನ ನಡೆದಿದೆ. ಜರ್ಮನರಿಗೆ ಅಪಾರ ಹಾನಿಯಾಗುತ್ತಿದೆ. ಆದರೆ ಕಾಳಗದಲ್ಲಿ ಜರ್ಮನರ ಅಡಿಯೇ ಮುಂದೆ ಬೀಳುತ್ತಿದ್ದಾಗಿ ರುಶ್ಯರು ಸಹ ಒಪ್ಪುತ್ತಾರೆ ಮೊಸ್ಕೊ ಸಂಗ್ರಾಮಕ್ಕಾಗಿ ಹಿಟ್ಲರನು ಹೊಸ ಹುರುಪಿನ ಸೈನ್ಯ ಪಥಕಗಳನ್ನು ಕಳುಹುತ್ತಿದ್ದಾನೆ. ದಕ್ಷಿಣ ಪಾರ್ಶ್ವದಿಂದ ಜರ್ಮನ ಸೈನ್ಯವು ಮುಂದರಿದು ಹೋಗಿದೆ. ಉತ್ತರ ಪಾರ್ಶ್ವದಿಂದ ವೋಲ್ಗಾ ನದಿಯನ್ನು ದಾಟಲು ಜರ್ಮನರು ಅದ್ಭುತವಾದ ಸಾಹಸ ಮಾಡುತ್ತಿದ್ದಾರೆ. ವೋಲ್ಗಾ ನದಿಯನ್ನು ಜರ್ಮನರು ದಾಟಿದರೆ ಮೊಸ್ಕೊ ಪಟ್ಟಣವನ್ನು ಕಾಪಾಡಿಕೊಳ್ಳುವದು ದುರ್ಘಟ. ಪಶ್ಚಿಮ ಪಾರ್ಶ್ವದ ದಾಳಿಗಳನ್ನಷ್ಟು ರುಶ್ಯರು ಪ್ರತಿಭಟಿಸುತ್ತಿದ್ದಾರೆ. ಅಲ್ಲಿ ಜರ್ಮನರು ಹಿಮ್ಮೆಟ್ಟುತ್ತಿದ್ದಾರೆ ಆದರೆ ಟೂಲಾ ಪಟ್ಟಣವನ್ನು ಜರ್ಮನರು ವಶಮಾಡಿಕೊಂಡ ಬಳಿಕ ಮೊಸ್ಕೊ ಪಟ್ಟಣದ ಆಯುಷ್ಯ ಮುಗಿದಂತೆಯೇ! ಹೀಗೆ ವಸ್ತುಸ್ಥಿತಿಯಿರುವಾಗ ಮೊಸ್ಕೊ ಪಟ್ಟಣವನ್ನು ರಕ್ಷಿಸಿಕೊಳ್ಳುವದು ಕಠಿಣವೆಂದು ಪ್ರಾಜ್ಞರ ಅಭಿಪ್ರಾಯ. ಮೊಸ್ಕೊ ಪಟ್ಟಣ ಇಂದಲ್ಲ ನಾಳೆ, ಇನ್ನು ಕೆಲವು ದಿನಗಳಲ್ಲಿ ಜರ್ಮನರ ವಶವಾಗಿ, ಆ ರಾಜಧಾನಿಯ ಮೇಲೆ ಹಿಟ್ಲರನ ಸ್ವಸ್ತಿಕ ಧ್ವಜ ಹಾರ್ಯಾಡತೊಡಗಿದರೆ ಯುದ್ಧ-ಕಾರಣದಲ್ಲಿ ಕಲ್ಪನೆಗೆ ಮಿಕ್ಕ ಸ್ಥಿತ್ಯಂತರಗಳುಂಟಾಗುವ ಭೀತಿಯುಂಟು. ನೆಪೋಲಿಯನನ ಶೌರ್ಯ, ಸಾಹಸಗಳನ್ನು ಹಿಟ್ಲರನೊಡನೆ ಪರಿಹೋಲಿಸುವದು ಮೂರ್ಖತನ; ನೆಪೋಲಿಯನನು ಮೃಗೇಂದ್ರನು; ಹಿಟ್ಲರನು ಬೆಕ್ಕು; ಹೀಗೆ ಸಹ ರುಶ್ಯ ಪ್ರಭು ಸ್ಟೈಲಿನನು ಹೀಯಾಳಿಸುತ್ತಾನೇನೋ ಅಹುದು. ಆದಾಗ್ಯೂ ಮೊಸ್ಕೊ ಕಾಪಾಡಲ್ಪಡುವದಾಗಿ ನನಗೇನೂ ಧೈರ್ಯವಿಲ್ಲ ಮೊಸ್ಕೊ ಬಿದ್ದರೆ ಅನರ್ಥಪರಂಪರೆ; ಬೀಳಬಾರದೆಂದೇ ರುಶ್ಯಪ್ರಭು ಆಕಾಶವಾಣಿಯಿಂದ ಸ್ವಜನರಿಗೆ ಪ್ರೇರೇಪಿಸುತ್ತಾನೆ.

ಯುಕ್ರೇನ ವಿಭಾಗದಲ್ಲಿ ಜರ್ಮನರು ಮುಂದೊತ್ತಿ ನಡೆದರು. ಕ್ರಿಮಿಯಾದಲ್ಲಿಯೂ ಜರ್ಮನರದೇ ಮುಂದಡಿ. ಈ ವಿಜಯಗಳ ಮೂಲಕ ಕಪ್ಪುಸಮುದ್ರದ ಕಣಿವೆಯಲ್ಲಿ ಕಲ್ಲೋಲವೆದ್ದಿದೆ, ಕಪ್ಪು ಸಮುದ್ರದಲ್ಲಿ ರುಶ್ಯರ ನೌಕಾದಲವಿದೆ ಆದರೆ ಬಂದರಗಳೂ ಮುಖ್ಯ ಮುಖ್ಯ ಠಾಣ್ಯಗಳೂ ಜರ್ಮನರ ವಶವಾದ ಬಳಿಕ ಆ ನೌಕಾದಲದಿಂದೇನು ಪ್ರಯೋಜನ? ಕಪ್ಪು ಸಮುದ್ರದಲ್ಲಿ ಗಡಿಬಿಡಿ ಮಾಡಿ ತುರ್ಕರಿಗೆ ಗಾಬರಿಯನ್ನುಂಟು ಮಾಡಲು ಜರ್ಮನರು ಹೊಂಚು ಹಾಕಿದ್ದಾರೆ. ಕಪ್ಪು ಸಮುದ್ರದಲ್ಲಿ ಬುಧವಾರ ತುರ್ಕಸ್ಥಾನದ ಒಂದು ಹಡಗವನ್ನು ಜರ್ಮನರು ಮುಳುಗಿಸಿದರಾಗಿ ಅಂಕಾರಾದೊಳಗಿನ ವಾರ್ತೆ. ಈ ಹಡಗವನ್ನು ಮುಳುಗಿಸಿದವರ್ಯಾರೆಂದು ವಾರ್ತೆಯಲ್ಲಿ ಉಲ್ಲೇಖವಿಲ್ಲ; ಬಹುತರವಾಗಿ ಜರ್ಮನರೇ ಮುಳುಗಿಸಿರಬೇಕೆಂದು ತಾರ್ಕಿಕರ ಅಂಬೋಣ. ಈ ಊಹೆ ನನಗೂ ಯುಕ್ತ ತೋರುತ್ತದೆ. ಈಗ ಕಶ್ಯಪದೇಶದ ಮೇಲೆ ಸಾಗಿಹೋಗಲು ಹಿಟ್ಲರನು ಗಾಬರಿ ಮಾಡುತ್ತಿದ್ದಾನೆ. ಯಾಕೆಂದರೆ ರುಶ್ಯ ಯುದ್ಧದ ಮರ್ಮ ಈ ವಿಭಾಗದಲ್ಲಿದೆ. ಬ್ರಿಟನರೂ ಅಮೇರಿಕೆಯವರೂ ರುಶ್ಯರ ಸಹಾಯಕರಹುದು. ಆ ಎಲ್ಲ ಸಹಾಯ ಇರಾಣ ಮಾರ್ಗವಾಗಿಯೇ ಹೋಗಬೇಕು. ಬೇರೆ ಯಾವದೇ ಮಾರ್ಗ ಅಮೇರಿಕಾ ಬ್ರಿಟನುಗಳಿಗೆ ಸಾಧ್ಯವಿಲ್ಲ. ಆದರಿಂದ ಈ ಮಾರ್ಗವನ್ನೇ ಕಡಿದು ಹಾಕುವದಕ್ಕಾಗಿ ಯುಕ್ರೇನ ವಿಭಾಗದಿಂದಲೂ ತುರ್ಕಸ್ಥಾನ ದಾರಿಯಿಂದಲೂ ಆಕ್ರಮಣ ಮಾಡಲು ಹಿಟ್ಲರನು ಹೊಂಚುಹಾಕಿದ್ದಾನೆ. ತುರ್ಕಸ್ಥಾನಕ್ಕೆ ಧಾವಿಸಿ ಅಲ್ಲಿಂದ ದಾರಿ ಪಡಕೊಂಡರೆ ಹಿಂಬದಿಯಿಂದ ರುಶ್ಯರ ಮೇಲೆ ಸಾಗಿಹೋಗಲು ಅನುವಾಗುತ್ತಿದೆ. ತುರ್ಕರು ಇನ್ನೂ ಯಾವದೊಂದು ಧೋರಣವನ್ನು ನಿರ್ಧಾರ ಮಾಡಿಲ್ಲ ಜರ್ಮನರು ಮುಂದೊತ್ತಿ ಬಂದ ಹಾಗೆ ತುರ್ಕಸ್ಥಾನದ ಅಂತರಂಗದಲ್ಲಿ ಕಲ್ಲೋಲವೇಳುತ್ತಿದೆ. ತಮ್ಮ ಮೇಲೆ ಸಾಗಿಬರುವವರಿಗೆ ತಾವು ಬಲವಾಗಿ ಪ್ರತಿಭಟಿಸುವೆವಾಗಿ ತುರ್ಕ ಸರಕಾರವು ಸಾರುತ್ತದೆ ಜರುಸಲೆಮದೊಳಗಿನ ಅವಿವಾಗ ಅಬ್ದುಲ್ಲಾರವರು ಅರಬ ಜನಾಂಗಗಳನ್ನು ಸಂಘಟಿಸಿ ಜರ್ಮನರಿಗಿದಿರಾಗುವ ತಯಾರಿ ನಡಿಸಿದ್ದಾರೆ ಆದರೆ ಪ್ರತ್ಯಕ್ಷ ಪ್ರಸಂಗ ಬಂದ ಬಳಿಕ ಈ ಜನಾಂಗಗಳು ಹಿಟ್ಲರನಿಗೆ ವಿರೋಧಿಸಬಲ್ಲವೇನೆಂದು ಕೇಳಿದರೆ ನಾನೇನೂ ನಿಶ್ಚಯದಿಂದ ಹೇಳಲಾರೆ. ಸುಯೋಜ ಕಾಲುವೆಯ ಕಂಪನಿಯಲ್ಲಿ ಶೇಕಡಾ ೪೦ರಷ್ಟು ಪಾಲುಗಳು ಫ್ರೆಂಚ ಸಾವಕಾರರವು ಜರ್ಮನಿಯ ಗೋರಿಂಗ ಕೊರ್ಪೋರೇಶನಿನವರು ಈ ಪಾಲುಗಳನ್ನು ಖರೀದಿ ಮಾಡತೊಡಗಿದ್ದಾರೆ ಆದರಿಂದ ಈ ಪಾಲುಗಳ ಬೆಲೆ ಶೇಕಡಾ ೨೫ರಷ್ಟು ಏರಿದೆ. ಇವುಗಳ ಹಣವನ್ನು ಜರ್ಮನ ಸರಕಾರವು ಫ್ರೆಂಚ ಸರಕಾರದಿಂದ ಸಿಗುವ ಕಪ್ಪ-ಕಾಣಿಕೆಗಳಿಂದ ಸಲ್ಲಿಸುತ್ತಿದೆ. ಜರ್ಮನ ಸರಕಾರಕ್ಕೆ ಫ್ರೆಂಚ ಸರಕಾರವು ಪ್ರತಿ ದಿನ ೩೦ ಲಕ್ಷ ಫ್ರೆಂಕ (=೨ ಆಣೆ) ನಾಣ್ಯ ಅಂದರೆ ಸರಾಸರಿ ೪ ಲಕ್ಷ ರೂಪಾಯಿಗಳಂತೆ ಖಂಡಣಿ ಕೊಡುತ್ತದೆ. ಫ್ರಾನ್ಸ ದೇಶದಲ್ಲಿಟ್ಟ ಜರ್ಮನ ಸೈನಿಕರ ಖರ್ಚಿದು. ಸುಯೋಜ ಕಾಲುವೆ ಕಂಪನಿಯನ್ನು ಕೈವಶ ಮಾಡಿಕೊಂಡು ಸುಯೋಜ ಕಾಲುವೆಯ ಯಾವತ್ತೂ ಆಡಳಿತೆಯನ್ನು ಸ್ವಾಧೀನಪಡಿಸಿಕೊಳ್ಳಲು ಹಿಟ್ಲರನು ಈ ಕಾರಸ್ಥಾನ ನಡಿಸಿದ್ದಾನೆ ತುರ್ಕಸ್ಥಾನದಲ್ಲಿರುವ ಬ್ರಿಟಿಶ ರಾಯಭಾರಿ ಕಚೇರಿಯ ಸುತ್ತು ಮುತ್ತು ತುರ್ಕರು ತಂಡತಂಡವಾಗಿ ನೆರೆದು ಗೊಂದಲವನ್ನೆಬ್ಬಿಸಿದರಂತೆ. ಇದು ಹುಡುಗಾಟಿಕೆಯೆಂದೂ ಇದಕ್ಕೇನೂ ಮಹತ್ವವಿಲ್ಲವಾಗಿಯೂ ಪ್ರಕಟಣೆ ಹೊರಟಿದೆ ಆದರೆ ತುರ್ಕ ಜನಾಂಗದ ಅಂತರಂಗದಲ್ಲಿ ಉಂಟಾಗುವ ಬ್ರಿಟನ ದ್ವೇಷದ ತೆರೆಗಳೆಂದು ಕೆಲ ರಾಜಕಾರಣಿಗಳು ಅಭಿಪ್ರಾಯಪಡುತ್ತಾರೆ. ಉತ್ತರಕ್ಕೆ ಕಪ್ಪು ಸಮುದ್ರ, ಪೂರ್ವಕ್ಕೆ ಯುಕ್ರೇನ, ಪಶ್ಚಿಮಕ್ಕೆ ಸುಯೋಜ ಹೀಗೆ ೩ ಬದಿಗಳಿಂದ ತುರ್ಕಸ್ಥಾನವು ಸುತ್ತುಗಟ್ಟಲ್ಪಟ್ಟಿದೆ. ತುರ್ಕರ ಧೋರಣ ಹೇಗೆ ಬದಲುವದೆಂದು ಹೇಳುವದು ಕಠಿಣ. ಹಿಂದುಸ್ಥಾನದ ಸೇನಾಪತಿಗಳಾದ ವೆವೆಲರವರು ನುಡಿದಂತೆ, ಹಿಟ್ಲರನು ಹಿಂದುಸ್ಥಾನದ ಮೇಲೆ ಕಣ್ಣಿಟ್ಟು ಆಕ್ರಮಣ ಮಾಡಬಂದರೆ ಗಡಿನಾಡಿನಲ್ಲಿ ಅವನ ಮೇಲೆ ಹಿಂದೀ ಸೈನಿಕರು ಕಡಕೊಂಡು ಬಿದ್ದು ಪ್ರತಿಭಟಿಸುವದು ಖಂಡಿತವಾದ ಮಾತು. ಸೇನಾಪತಿ ವೆವೆಲರವರು ಈವಾಗ ಸಿಂಗಾಪುರಕ್ಕೆ ಹೋಗಿ ದಿಲ್ಲಿಗೆ ಮರಳಿದ್ದಾರೆ ಸಿಂಗಾಪುರದಲ್ಲಿ ಪೂರ್ವ ವಿಭಾಗದ ಸೇನಾಪತಿಗಳಾದ ಸರ್ ರೊಬರ್ಟ ಬ್ರೂಕ ಪೋಫಮರವರೊಡನೆ ಆಲೋಚನೆ ಮಾಡಿ ಬಂದರು. ವೆವೆಲರವರು ಸಿಂಗಾಪುರಕ್ಕೆ ಹೋದಾಗ ನಮ್ಮ ಹಿಂದುಸ್ಥಾನದ ಗಡಿನಾಡಿನಲ್ಲಿ ಭದ್ರವಾದ ವ್ಯವಸ್ಥೆಯಿದೆಂದು ಜನಗಳಿಗೆ ಆಶ್ವಾಸನ ಕೊಟ್ಟಿರುತ್ತಾರೆ ಗಡಿನಾಡಿನಲ್ಲಿ ಸೈನ್ಯ ಪಥಕಗಳೂ ಮದ್ದುಗುಂಡು, ತೋಫು, ಬಂದೂಕಿ ಸಾಹಿತ್ಯಗಳೂ ವೈಮಾನಿಕ ದಲಗಳೂ ಜರ್ಮನರನ್ನು ಪ್ರತಿಭಟಿಸಲು ಸಜ್ಜಾಗಿ ನಿಂತಿವೆಯಂತೆ. ಈ ಪಾರ್ಶ್ವದಲ್ಲಿ ಸಂರಕ್ಷಣೆಯ ಯೋಜನೆ ಪೂರ್ಣಾವಸ್ಥೆಗೆ ಮುಟ್ಟಿರುವದಾಗಿ ಸೇನಾಪತಿ ವೆವೆಲರವರು ಆಶ್ವಾಸನ ಕೊಡುತ್ತಾರೆ. ಯುದ್ಧಕಲೆಯಲ್ಲಿ, ಯುದ್ಧವ್ಯೂಹ ರಚನೆಯಲ್ಲಿ ಸೇನಾಪತಿ ವೆವೆಲರವರಿಗೆ ಸರಿಗಟ್ಟುವವರು ಯಾರಿಲ್ಲವಂತೆ ರುಶ್ಯ ದೇಶಕ್ಕೆ ವಿಪುಲವಾಗಿ ಯುದ್ಧ-ಸಾಮಗ್ರಿ ರವಾನೆಯಾಗುತ್ತಿದೆ. ಇರಾಣದಲ್ಲಿಯೇ ಹಿಟ್ಲರನನ್ನು ಅಡ್ಡಗಟ್ಟಿ ಹಿಡಿಯುವ ಯೋಜನೆಯುಂಟು. ಆ ವ್ಯೂಹವನ್ನು ಭೇದಿಸಿ ಹಿಟ್ಲರನು ಹಿಂದುಸ್ಥಾನದ ಗಡಿ ದಾಟಬಂದರೆ ಸೇನಾಪತಿ ವೆವೆಲರವರು ಗಡಿನಾಡಿನಲ್ಲಿ ಜರ್ಮನರನ್ನು ಪ್ರತಿಭಟಿಸಲು ಸಿದ್ಧರಿದ್ದಾರೆ. ಎಲ್ಲವೂ ರಶಿಯಾ ರಾಜಧಾನಿಯಾದ ಮೊಸ್ಕೋ ರಾಜಧಾನಿಯ ಭವಿತವ್ಯವನ್ನು ಹೊಂದಿಕೊಂಡಿದೆ. ಮೊಸ್ಕೊ ಉಳಿದರೆ ಎಲ್ಲವೂ ಉಳಿಯಿತು. ಹಿಟ್ಲರನ

(೮ನೇ ಪುಟದ ಮೇಲೆ ಮುಂದುವರಿಸಿದೆ)

ಸ್ಥಾನಿಕ ವೃತ್ತಾಂತ.

ಕುಮಟಾ— ರಾತ್ರಿ ಹೊತ್ತಿಗೆ ಅಲ್ಪ ಸ್ವಲ್ಪ ಚಳಿ ಬೀಳಲಾರಂಭಿಸಿದೆ, ಮೂಡಗಾಳಿಯೂ ಬೀಸುತ್ತಿದೆ ಆದರೂ ಚಳಿಗಾಲಕ್ಕೆ ಪ್ರಾರಂಭವಾಯಿತೆಂದು ಹೇಳುವದು ತುಸು ಕಠಿಣ. ಇನ್ನೂ ಶಕೆ ಬಿಟ್ಟಿಲ್ಲ, ಒಮ್ಮೊಮ್ಮೆ ಮುಗಿಲೊಳಗೆ ಮೋಡಗಳೂ ಆಗುತ್ತಿವೆ. ಊರೊಳಗೆ ಬೇನೆ ಬೇಸರಿಕೆಗಳು ಈಗ ಕಡಿಮೆಯಾಗಿವೆ. ಅಕ್ಕಿ, ಕಾಯಿಗಳ ಧಾರಣೆಗಳು ಇಳಿಯುಹತ್ತಿವೆ

ಕಳೆದ ಸೋಮವಾರ ಶ್ರೀ ವೆಂಕಟರಮಣ ದೇವರ ವನಭೋಜನೋತ್ಸವವು ವಾಡಿಕೆಯಂತೆ ವಿಜೃಂಭಣೆಯಿಂದ ನೆರವೇರಿತು. ಉತ್ಸವದಲ್ಲಿ ಜನರ ದಟ್ಟಣೆ ಮಾತ್ರ ಈ ವರ್ಷ ಕಡಿಮೆಯಾಗಿತ್ತು. ಶ್ರೀ ವೆಂಕಟರಮಣ ದೇವರ ದೀಪೋತ್ಸವವು ಇದೇ ಬರುವ ಐಮಿ ಬುಧವಾರ ಜರಗುವದೆಂದು ತಿಳಿದು ಬಂದಿದೆ.

ಕುಮಟಾ ತಾಲೂಕ ಹವ್ಯಕ ವಿದ್ಯಾವರ್ಧಕ ಸಂಘಕ್ಕೆ ತಾ ೨-೧೦-೪೧ರಿಂದ ತಾ ೭-೧೧-೪೧ರ ತನಕ ರಾ॥ ಅಡಕೋಳಿ ಸುಬ್ಬಜ್ಜರಿಂದ ಕಂತಿನ ಬಾಬ್ತು ಮತ್ತು ವರ್ಗಣಿ ಕೂಡಿ ರೂ ೨೦, ಮಾಸ್ತೇರ ಹಳ್ಳಿಯವರಿಂದ ಸದಸ್ಯರ ವರ್ಗಣಿ ಮತ್ತು ಸ್ಥಾನಿಕ ವಂತಿಕೆ ಕೂಡಿ ರೂ ೧೫-೫-೩, ಅದರಂತೆ ಬೆತ್ತಗೇರಿಯವರಿಂದ ರೂ ೬-೧-೦, ಅಂತ್ರವಳ್ಳಿ ಸೀಮೆಯವರಿಂದ ರೂ ೧॥, ಕಲ್ಲಬ್ಬೆಯವರಿಂದ ರೂ ೧-೯-೦, ಊರಕೇರಿಯವರಿಂದ ರೂ. ೧೩-೭-೯, ವಾಲಗಳ್ಳಿಯವರಿಂದ ರೂ ೭ ೧೦ ೮, ಕೂಜಳ್ಳಿಯವರಿಂದ ರೂ ೨೦-೩-೯, ಶಿಕ್ಷಕ ಜನರ ವರ್ಗಣಿ ೯-೧೨-೦ ಮತ್ತು ಅವರ ಸಂಬಳದ ಕಂತಿನ ಬಾಬತು ರೂ ೧೯, ಡಾ॥ ಎಸ್. ಕೇ ಭಟ್ಟ ಹಳಕಾರ ಇವರ ೭ನೇ ಕಂತಿನ ರೂ ೩೭॥ ಮತ್ತು ಸಂಘದ ಅಧ್ಯಕ್ಷ ರಾ॥ ಎನ್. ಟಿ ಹೆಗಡೆ ಇವರ ೭ನೇ ಕಂತಿನ ರೂ ೬೨॥ ಕೂಡಿ ಒಂದು ರೂ ೨೦೪-೧೨-೯ ಜಮಾ ಬಂದಿವೆಯೆಂದೂ, ಈ ತನಕ ಸಂಘದ ಕಡೆ ಜಮೆಯಾದ ಹಣದೊಳಗಿಂದ ಖರ್ಚ ಕಳೆದು ರೂ ೩೫೫೪-೧೦-೫ ಶಿಲ್ಕು ಇವೆಯೆಂದೂ, ಅದರೊಳಗಿಂದ ರೂ.೩೫೩೫ ಬೇಂಕಿನಲ್ಲಿ ಠೇವಾಗಿಟ್ಟಿವೆಯೆಂದೂ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಬಾಡ ಸಹಕಾರಿ ಸಂಘದವರೂ ಗುಡೇಅಂಗಡಿಯ ವಿವಿಧ ಉದ್ದೇಶಗಳ ಸಹಕಾರಿ ಸಂಘದವರೂ ಕೂಡಿ ಕಳೆದ ತಾ ೫ನೇ ಸಂಜೆಗೆ ಒಳ್ಳೇ ವಿಜೃಂಭಣೆಯಿಂದ ಸಹಕಾರಿ ಹಬ್ಬವನ್ನಾಚರಿಸಿದರು ಬಾಡಸಂಘದ ಕಚೇರಿಯಿಂದ ಗುಡೇಅಂಗಡಿ ಸಂಘದ ಕಚೇರಿಯ ತನಕ ಶಾಲಾ ವಿದ್ಯಾರ್ಥಿಗಳ ಮೆರವಣಿಗೆ, ಗುಡೇಅಂಗಡಿಯಲ್ಲಿ ರಾ। ವಕೀಲ ವ್ಹಿ ಟಿ ಹೆಗಡೆಯವರ ಅಧ್ಯಕ್ಷತೆಯಲ್ಲಿ ಸಭೆ, ಸಹಕಾರಿಗಳಿಗೆ ಪ್ರಾಂತಾಧಿಪತಿಗಳು ಕೊಟ್ಟ ಸಂದೇಶದ ವಾಚನ, ಅದೇ ವಿಷಯದ ಮೇಲೆ ರಾ। ಪಿ ಜಿ ನಾಯ್ಕ ಮೊದಲಾದವರ ಭಾಷಣಗಳು, ಹುಡುಗರ ಆಟೋಟಗಳು ಮತ್ತು ಸಹಕಾರ ಗೀತೆಗಳು ವಗೈರೆ ವಿವಿಧ ಕಾರ್ಯಕ್ರಮ ನಡೆಯಿತು ಸಹಕಾರ ಎಂಬ ವಿಷಯದ ಮೇಲೆ ಭಾಷಣ ಮಾಡಿದ ಕುಮಾರ ಗೋವಿಂದ ಹೆಗಡೆ ಎಂಬ ಹುಡುಗನಿಗೆ ರಾ। ಪಿ. ಜಿ ನಾಯ್ಕರು ಅಧ್ಯಕ್ಷರ ಕೈಯಿಂದ ಎಂಟಾಣೆ ಇನಾಮು ಕೊಡಿಸಿದರು

ಗೋಕರ್ಣದೊಳಗಿನ “ ಪ್ರೇಮ ಸಂಘ ” ಎಂಬ ವಾಚನಾಲಯದ ವಾರ್ಷಿಕ ಉತ್ಸವವು ಕಳೆದ ತಾ. ೧ನೇ ಶನಿವಾರ ಸಂಜೆಗೆ ಅಲ್ಲಿಯ ಸಂಸ್ಕೃತ ಶಾಲೆಯಲ್ಲಿ ಶ್ರೀ॥ ಮಹರ್ಷಿ ದೈವರಾತ ಭಟ್ಟರ ಅಧ್ಯಕ್ಷತೆಯಲ್ಲಿ ಜರುಗಿತು ಅಧ್ಯಕ್ಷರೂ ರಾ॥ ಎಮ್. ಜಿ ಗೋಪಿ ವಗೈರೆ ಊರ ಪ್ರಮುಖರೂ ಆ ಕಾಲದಲ್ಲಿ ಸಂಸ್ಕೃತ ಮತ್ತು ಕನ್ನಡ ಭಾಷೆಗಳ ಏಳ್ಗೆಯ ಕುರಿತು ವಿಚಾರ-ಪರಿಪ್ಲುತ ಭಾಷಣಗಳನ್ನಿತ್ತರು ಕೊನೆಯಲ್ಲಿ ಸಭಿಕರು ಉಪ್ಪಿನಪಟಿಗೇರಿಯ ವಿದ್ವದ್ರತ್ನ ನಾಗೇಶ ಶಾಸ್ತ್ರಿಯವರ ಅಕಾಲಿಕ ನಿಧನದ ಬಗ್ಗೆ ದುಃಖ ವ್ಯಕ್ತಗೊಳಿಸುವ ಒಂದು ಗೊತ್ತುವಳಿಯಾಯಿತು.

ಬೆಳ್ಳಂಗಿ ಪೈಕಿ ಮಾವಳ್ಳಿಯೊಳಗಿನ ಸುಮಾರು ರೂ ೩೭ ತೀರ್ವೆಯ ಒಂದು ಸಬ್-ಸರ್ವೆ ನಂಬರವನ್ನು ಕೊಡಂಬಳ್ಳಿ ಬದಿಯ ರಾ। ಸುಬ್ರಾಯ ಶಿವರಾಮ ಭಟ್ಟರು ಲಾಗಣಿಗೆ ಬೇಡಿ ಸರಕಾರಕ್ಕೆ ಅರ್ಜಿ ಮಾಡಿದ್ದರಾಗಿಯೂ, ತನ್ಮಧ್ಯೇ ಶಾನಭೋಗರು ಊರ ಪಾಟೀಲರಿಗೂ ಸಹ ಸುದ್ದಿ-ಸುಳುವು ಕೊಡದೆ ೪ ಮೈಲು ದೂರ ವಾಸ್ತವ್ಯವಿರುವ ಅಳಕೋಡದ ರಾ। ನಾರಾಯಣ ವೆಂಕಭಟ್ಟ ಇವರಿಂದ ಅದೇ ಸ್ಥಳದ ಬಗ್ಗೆ ಇನ್ನೊಂದು ಅರ್ಜಿ ಮಾಡಿಸಿ, ಸುಬ್ರಾಯಭಟ್ಟರ ಅರ್ಜಿಯ ಸಂಗತಿ ಮೇಲಧಿಕಾರಿಗಳ ನೆನಪಿಗೆ ತರದೆ, ಆ ಭೂಮಿಯನ್ನು ನಾರಾಯಣ ಭಟ್ಟರಿಗೆ ತೆಗಿಸಿಕೊಟ್ಟರೆಂತಲೂ, ಹಿಂದಿನಿಂದ ಸುಬ್ರಾಯ ಭಟ್ಟರ ಅರ್ಜಿ ತಿರಸ್ಕರಿಸಲ್ಪಟ್ಟಿತೆಂತಲೂ ಕೊಡಂಬಳ್ಳಿಯ ರಾ। ಗಣಪತಿ ಭಟ್ಟರು ದೂರುತ್ತಾರೆ ಶಾನಭೋಗ ಜನರು ಹಳ್ಳಿಯವರೊಡನೆ ಈ ಪರಿ ಕುತಂತ್ರ ನಡಿಸಬಹುದೇನೆಂಬು ಅವರ ಪ್ರಶ್ನೆ

ಕಳೆದ ಸೋಮವಾರ ಇಲ್ಲಿಯ ಫೌಜದಾರರಾದ ರಾ॥ ದಳವಿಯವರು ಹೊಲನಗದ್ದೆಯಲ್ಲಿ ಒಳ್ಳೇ ಚಾತುರ್ಯದಿಂದ ಒಂದು ಜುಗಾರದ ಮಂಡವನ್ನು ಹಿಡಿದಿರುತ್ತಾರೆ ಈ ಮಂಡ ಬಹಳ ದಿನಗಳಿಂದ ನಡೆದಿತ್ತಂತೆ ಆದಾಗ್ಯೂ ಊರ ಪಟೇಲರಿಗೆ ಅದರ ಸುಳುವು ಸಿಗದಿದ್ದದ್ದು ಆಶ್ಚರ್ಯ ! ಊರಲ್ಲಿ ಆಗು ಹೋಗುವ ಮಹತ್ವದ ಸಂಗತಿಗಳನ್ನು ತಿಳಕೊಳ್ಳಲಸಮರ್ಥರಾದ ಜನರು ಪಟೇಲಕಿಯನ್ನಾದರೂ ಮಾಡುವದೇಕೆ ?

ಚಿಮಣಿ ಎಣ್ಣೆಯ ಕುರಿತು ಕೆಲ ಬಂದ ಪತ್ರಗಳ ತಾತ್ಪರ್ಯವೇನಂದರೆ ಚಿಮಣಿ ಎಣ್ಣೆಯ ದರ ಡಬ್ಬಿ ೧ಕ್ಕೆ ಕಾರವಾರದಲ್ಲಿ ರೂ ೪-೧ ೩, ಅಂಕೋಲೆಯಲ್ಲಿ ರೂ ೪ ೧-೦, ತದಡಿಯಲ್ಲಿ ರೂ ೪-೧ ೦, ಕುಮಟೆಯಲ್ಲಿ ರೂ ೪-೧ ೬, ಹೊನ್ನಾವರದಲ್ಲಿ ರೂ ೪ ೧ ೦, ಶಿರಾಲಿಯಲ್ಲಿ ರೂ ೪-೧-೩, ಭಟಕಳದಲ್ಲಿ ರೂ ೪-೨ ೦, ಶಿರ್ಸಿಯಲ್ಲಿ ರೂ. ೪-೨-೬, ಹೀಗೆ ಕಂಪನಿಯು ದರವಾರು ಇದೆ ಇದಕ್ಕೆ ಮಿಕ್ಕಿ ಮಾರಲಿಕ್ಕೆ ಯಾವ ಏಜಂಟನಿಗೂ ಅಧಿಕಾರವಿಲ್ಲ ಹೀಗಿದ್ದು ಏಜಂಟರು ಚಿಮಣಿ ಎಣ್ಣೆ ಡಬ್ಬಿಗಳನ್ನು ಪ್ರಾಮಾಣಿಕತನದಿಂದ ಮಾರಾಟ ಮಾಡುವದಿಲ್ಲ ದರ ಏರಿಸಿ ಮಾರಾಟ ಮಾಡುತ್ತಾರೆ! ತಮಗೆ ಬೇಕಾದವರಿಗೇ ಡಬ್ಬಿಗಳನ್ನು ಕೊಡುತ್ತಾರೆ! ಹೀಗಾಗಿ ಚಿಮಣಿ ಎಣ್ಣೆಯನ್ನು ವರ್ತಕರು ಕಟ್ಟಿ ಮಾಡಿ ಮಾರಾಟ ಮಾಡುತ್ತಾರೆ ಏಜಂಟರ ಭೇದಭಾವದ ಮೂಲಕ ಜನರ ಸುಲಿಗೆಯಾಗುತ್ತಿದೆ ಅಧಿಕಾರಿಗಳೂ ಕಂಪನಿಯವರೂ ಏಜಂಟರ ಮತ್ತು ವರ್ತಕ-ಗಿರಾಕಿಗಳ ಲೆಕ್ಕವನ್ನು ಸೂಕ್ಷ್ಮತನದಿಂದ ತಪಾಸ ಮಾಡಿದರೆ ಠಕ್ಕತನ ತಿಳಿಯುವಂತಿದೆ. ಇತ್ಯಾದಿ.

ಹೊನ್ನಾವರ— (ತಾ ೭-೧೧-೪೧) ಇರಾಣಿ ಜನರು ತಿರುಗಿ ಈ ಊರಿಗೆ ಬಂದಿದ್ದು ಅವರ ಕವ್ಹರ-ಪ್ಲೇ ಜುಗಾರಾಟ ಭರದಿಂದ ನಡೆದಿದೆ ಊರಲ್ಲಿ ಸಭ್ಯಗೃಹಸ್ಥರೆನಿಸಿಕೊಳ್ಳುವವರು ಕೂಡ ಈ ಜುಗಾರಾಟದಲ್ಲಿ ಸೇರಿದ್ದು ಕಣ್ಣಿಗೆ ಬೀಳುತ್ತಿದೆ! ದಿನಾಲೂ ೨೦೦-೨೫೦ ರೂ ಈ ಆಟದಲ್ಲಿ ಹಾರಿಹೋಗುತ್ತದಂತೆ! ಆದರೂ ಪೋಲೀಸರು ಈ ಆಟವನ್ನು ಪ್ರತಿಬಂಧಿಸುವದಿಲ್ಲ! ಮೇಲಧಿಕಾರಿಗಳು ಕಣ್ಣೆತ್ತಿ ನೋಡುವದಿಲ್ಲ! ಇರಾಣಿಗಳ ಕವ್ಹರ-ಪ್ಲೇ ಆಟ ನಡೆಯಗೊಡುವವರು ಗಾಂವಠಿ ಜುಗಾರಾಟಕ್ಕೆ ಯಾಕೆ ಅಡ್ಡಿ ಮಾಡಬೇಕು? ಜುಗಾರ-ಪ್ರತಿಬಂಧಕ ಕಾನೂನಿನಲ್ಲಿ ಇರಾಣಿಗಳ ಕವ್ಹರ-ಪ್ಲೇ ಆಟ ಅಪವಾದವೆಂದೇನಾದರೂ ವಿಧಿಸಿರುವರೇ ?

(ತಾ ೮-೧೧-೪೧) ಹೊನ್ನಾವರದ “ ನಾಗರಿಕ ” ರೊಬ್ಬರು ಬರೆಯುತ್ತಾರೆ - ಇಲ್ಲಿಯ ನಗರ ಸಭೆಯವರು ಮೊನ್ನೆಯೇ ನೇಮಿಸಿಕೊಂಡ ಆರೋಗ್ಯಾಧಿಕಾರಿಯ ಕುರಿತು ಕಳೆದ ವಾರದ ‘ವೃತ್ತ’ದಲ್ಲಿ ಬಂದ ಟೀಕೆ ಸರಿಯಾಗಿರುವದಿಲ್ಲ ಆರೋಗ್ಯಾಧಿಕಾರಿಯಾಗಿ ನೇಮಿಸಲ್ಪಟ್ಟಿರುವ ರಾ॥ ಏ ಎಮ್. ಶಾನಭಾಗರ ಬಗ್ಗೆ ತಮ್ಮ ಮನಸ್ಸಿನೊಳಗಿದ್ದ ವೈಯಕ್ತಿಕ ದ್ವೇಷ ಸಾಧಿಸಿಕೊಳ್ಳುವ ಇಚ್ಛೆಯಿಂದ ಕೆಲವರು “ ವೃತ್ತ ”ದ ಸುದ್ದಿಗಾರರಿಗೆ ಏನೇನೋ

“ ಈಸ್ಟ-ಪ್ರೋಪರ ”ನ ಅಭಿಪ್ರಾಯ.

ಬರೇ ಹದಿನೇಳು ವರ್ಷಗಳಲ್ಲಿ ೧॥ ಕೋಟಿ ರೂ ಗಳಷ್ಟು ಜೀವನಿಧಿಯನ್ನು ಕಲೆಹಾಕಿದ ಹಾಗೂ ೪೦ ಲಕ್ಷ ರೂ ಗಳಿಗೂ ಮಿಕ್ಕಿ ವಾರ್ಷಿಕ ಉತ್ಪನ್ನ ಪಡೆಯುವಷ್ಟು ಉತ್ತಮ ಸ್ಥಿತಿಗೆ ಬಂದು ಮುಟ್ಟಿದ, ಎರಡೇ ವರ್ಷಗಳಲ್ಲಿ ಆಡಳಿತೆಯ ಖರ್ಚಿನ ಪ್ರಮಾಣವನ್ನು ನೂರಕ್ಕೆ ೧೧ರಷ್ಟು ಇಳಿಸಿದ ಮತ್ತು ಹಿಂದುಸ್ಥಾನದ ಮುಖ್ಯ ಮುಖ್ಯ ಕೇಂದ್ರಗಳಲ್ಲಿ ತನ್ನ ಸ್ವಂತ ಮಾಲ್ಕಿಯ ಭವ್ಯ ಕಚೇರಿ-ಮನೆಗಳನ್ನು ಕಟ್ಟಿಸಿಕೊಂಡು ವೈಭವದಿಂದ ಮೆರೆಯುವ ಬೇರೆ ಆವ ಕಂಪನಿಯನ್ನೂ ನಾವು ಕಂಡಿಲ್ಲ! **ಲಕ್ಷ್ಮೀ ವಿಮೆ** ಕಂಪನಿಯು ನಿಜವಾಗಿಯೂ ಲಕ್ಷ್ಮೀ ದೇವಿಯ ಪ್ರೇಮಾನುಗ್ರಹವನ್ನು ಸಂಪಾದಿಸಿದೆ !

ತಾ ೨೬-೪-೧೯೪೧ರ “ **ಇಂಡಿಯನ್ ಫಿನೆನ್ಸ್** ” ಪತ್ರಿಕೆಯಿಂದ

ವರ್ಷ	ಜೀವ ನಿಧಿ	ವೆಚ್ಚದ ಪ್ರಮಾಣ
೧೯೨೫—೨೬	೬೪,೪೨೮	೬೬ ೯೮
೧೯೨೯—೩೦	೧೫,೦೦,೭೮೬	೩೭ ೮೭
೧೯೩೪ —೩೫	೫೯,೭೨,೮೯೯	೩೫ ೯೩
೧೯೩೯	೧,೩೩,೪೮,೩೯೯	೩೧ ೫೭
೧೯೪೦	೧,೫೫ ೨೩,೧೯೩	೨೫.೭೭

ಬೋನಸ್ಸು:- ಎಂಡೌಮೆಂಟ ವಿಮೆಗಳ ಮೇಲೆ. ೧೦೦೦ ರೂ ಗೆ ಪ್ರತಿ ವರ್ಷ ರೂ ೧೫,
ಆಜೀವ ವಿಮೆಗಳ ಮೇಲೆ. ೧೦೦೦ ರೂ ಗೆ ಪ್ರತಿ ವರ್ಷ ರೂ ೧೮

ದಿ ಲಕ್ಷ್ಮೀ ಇನ್ಶೂರನ್ಸ ಕಂಪನಿ, ಲಿ.,
ಮುಖ್ಯ ಕಚೇರಿ. **ಮೆಕ್ಲಾಡ ರೋಡ, ಲಾಹೋರ.**

ಮುಂಬಯಿ ಶಾಖೆ –
“ ಲಕ್ಷ್ಮೀ ಬಿಲ್ಡಿಂಗ ”
ಸರ್ ಫಿರೋಜಶಹಾ ಮೆಹತಾ ರೋಡ,

ಕಲಕತ್ತಾ, ಮುಂಬಯಿ, ಮದ್ರಾಸ, ಕರಾಚಿ, ಲಖನೌ,
(ನಿಜಾಮ) ಹೈದರಾಬಾದ, ಮೊಂಬಾಸಾ (ಬ್ರಿಟಿಶ ಪೂರ್ವ ಆಫ್ರಿಕಾ)
ಈ ಊರುಗಳಲ್ಲಿ ಶಾಖೆಗಳಿವೆ.

ತಿಳುವಳಿಕೆ ಕೊಟ್ಟು ಆ ಟೀಕೆ ಮಾಡಿಸುತ್ತಾರೆ. ಹಿಂದೆ ರಾ| ವಿ ಎಸ್. ಶಾನಭಾಗರಿಗೆ ನಗರ ಸಭೆಯವರು ತಮ್ಮ ಕಾರ್ಯದರ್ಶಿಗಳನ್ನಾಗಿ ನೇಮಿಸಿಕೊಂಡ ಕೂಡಲೆ ಸೇವಾ ನಿವೃತ್ತಿ-ಪೂರ್ವ ರಜೆಯ ಮೇಲೆ ಹೋಗಹೊರಟ ಹಾಗೂ ಹಾಗೆ ನಗರ ಸಭೆಯ ಕಡೆ ಪರವಾನಗಿ ಬೇಡಿದ ಹಳೆಯ ಕಾರ್ಯದರ್ಶಿಗಳಿಗೆ ರಜೆಯ ಮೇಲೆ ಹೋಗಬಾರದಾಗಿ ಪರಿಪರಿಯಿಂದ ಹೇಳಿಕೊಂಡು ರಾ| ಶಾನಭಾಗರ ನೇಮಣೂಕಿಗೆ ಕಲ್ಲುಹಾಕಿದ ಜನರೇ ಈಗ ಅವರ ಹೊಸ ನೇಮಣೂಕಿಗೆ ವಿರೋಧವನ್ನೆಬ್ಬಿಸುತ್ತಿದ್ದಾರೆ! ರಾ| ಶಾನಭಾಗರು ಮೆಟ್ರಿಕ್ ಪರೀಕ್ಷೆ ಕೊಟ್ಟು ತೇರ್ಗಡೆಯಾಗಿದ್ದಾರೆ, ಆರೋಗ್ಯಶಾಸ್ತ್ರದ ಅಭ್ಯಾಸ ಮಾಡಿದವರಿದ್ದಾರೆ, ಹಿಂದೆ ನಗರ ಸಭೆಯ ಕಾರ್ಯದರ್ಶಿಯಾಗಿ ಆರಿಸಲ್ಪಟ್ಟವರಿದ್ದಾರೆ. ಊರಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳುವಷ್ಟು ಜಾಣ್ಮೆ ಅವರಲ್ಲಿ ಖಂಡಿತವಾಗಿಯೂ ಇದೆ. ಊರ ಆರೋಗ್ಯ ಈಗ ಸಮಾಧಾನಕರವೆಂಬೆಂದು ಸುದ್ದಿಗಾರರು ಹೇಳುವ ಮಾತು ದಿಟವಲ್ಲ. ಅಲ್ಲಲ್ಲಿ ಗಟಾರುಗಳನ್ನೂ ರಸ್ತೆಗಳನ್ನೂ ಕಣ್ಣಾರೆ ಕಂಡವರು ಊರ ಆರೋಗ್ಯ ನೆಟ್ಟಗುಂಟೆಂದು ಎಂದೂ ಹೇಳರು. ಈಗಿದ್ದ ಸಿಬ್ಬಂದಿಯಿಂದ ಸ್ವಚ್ಛತೆ ಕಾಪಾಡಿಕೊಳ್ಳುವ ಕೆಲಸ ಸಾಗುವಂತಿದ್ದರೆ ಹೀಗೆ ಅಲ್ಲಲ್ಲಿ ಅಸ್ವಚ್ಛತೆ ಹೇಗಾಯಿತೆಂಬ ಪ್ರಶ್ನೆ ಮುಂದೆ ಬರುತ್ತದೆ. ಊರ ಸ್ಥಿತಿಯನ್ನು ಕಂಡುಕೊಂಡೇ ಆರೋಗ್ಯ ಇಲಾಖೆಯವರು ಆರೋಗ್ಯಾಧಿಕಾರಿಯ ನೇಮಣೂಕಿಯ ಬಗ್ಗೆ ನಗರ ಸಭೆಗೆ ಆಗ್ರಹ ಮಾಡಿದ್ದರು. ರಾ|| ಶಾನಭಾಗರ ನೇಮಣೂಕಿಗೆ ಅವರೂ ಒಪ್ಪಿಗೆ ಕೊಟ್ಟಿರುತ್ತಾರೆಂದು ಕೇಳುತ್ತೇನೆ. 'ವೃತ್ತ'ದ ಸುದ್ದಿಗಾರರು ಹೇಳುವ ಪಾತ್ರತೆ ರಾ|| ಶಾನಭಾಗರಲ್ಲಿರದೆ ಇರಬಹುದು. ಆದರೆ ಅಂಥ ಪಾತ್ರತೆಯುಳ್ಳ ಇಸಮನ್ನು ನೇಮಿಸಿಕೊಳ್ಳಲಿಕ್ಕೆ ತಿಂಗಳೊಂದಕ್ಕೆ ರೂ ೨೦—೨೫ ಸಂಬಳ ಕೊಡಬೇಕಾದೀತು. ಅಷ್ಟು ಶಕ್ತಿ ನಮ್ಮ ನಗರ ಸಭೆಗಿಲ್ಲ. ಆದ್ದರಿಂದ ನಗರ ಸಭೆಯವರು ರೂ ೪೦ ಮಾಸಿಕ ಪಗಾರದ ಮೇಲೆ ರಾ|| ಶಾನಭಾಗರನ್ನು ನೇಮಿಸಿಕೊಂಡಿದ್ದಾರೆ. ಇತ್ತ ೧-೧|| ತಿಂಗಳಲ್ಲಿ ಊರೊಳಗಾದ ಗಟಾರುಗಳ, ದೀಪಗಳ ಮತ್ತು ರಸ್ತೆಗಳ ಸುಧಾರಣೆಯನ್ನು ನೋಡಿದವರು ರಾ|| ಶಾನಭಾಗರ ಕಾರ್ಯತತ್ಪರತೆಯನ್ನು ಎಂದೂ ಹೊಗಳದಿರಲಾರರು. ರಾ|| ಶಾನಭಾಗರ ತಲೆಯ ಮೇಲೆ ಹೇಗಾದರೂ ಕಲ್ಲು ಒಗೆಯಬೇಕೆನ್ನುವವರಿಗೆ ಮಾತ್ರ ಎಂದೂ ಅವರ ಕೆಲಸದಿಂದ ಸಮಾಧಾನವಾಗದು. ಆ ಮಾತು ಬೇರೆ ಇತ್ಯಾದಿ.

ಪ್ರಯಾಣಿಕರೊಬ್ಬರು ಬರೆಯುತ್ತಾರೆ:- ಹಿಂದೆ ಇಲ್ಲಿಂದ ಧಾರವಾಡದ ವರೆಗೆ ಎರಡು ಮೋಟಾರ ಸರ್ವಿಸ್ಸುಗಳಿದ್ದವು. ಕುಮಟಾ-ಸಿರ್ಸಿ-ಕಲಘಟಗಿ ಮಾರ್ಗವಾಗಿ ಒಂದು, ಕುಮಟಾ-ಹುಬ್ಬಳ್ಳಿ ಮಾರ್ಗವಾಗಿ ಇನ್ನೊಂದು. ಹೀಗೆ ದಿನಾಲೂ ಎರಡು ಗಾಡಿಗಳು ಧಾರವಾಡಕ್ಕೆ ಹೋಗುತ್ತಿದ್ದವು; ಎರಡು ಗಾಡಿಗಳು ಅಲ್ಲಿಂದ ಬರುತ್ತಿದ್ದವು. ಈಗ ಎರಡೂ ಗಾಡಿಗಳು ನಿಂತಿವೆ. ಆದರಿಂದ ಹುಬ್ಬಳ್ಳಿ, ಧಾರವಾಡ, ಮುಂಬಯಿ ಕಡೆಗೆ ಹೋಗುವ ಪ್ರಯಾಣಿಕರಿಗೆ ಬಹಳ ಅನನುಕೂಲತೆಯಾಗಿದೆ. ಪೆಟ್ರೋಲ ಸೀಮಾ ಅದ ಮೇಲೆ ಸಾಕಷ್ಟು ಪೆಟ್ರೋಲ ಸಿಗುವದಿಲ್ಲೆಂದು ಗಾಡಿಗಳು ನಿಂತಿವೆಯಂತೆ. ಆದರೆ ಮೊನ್ನೆ ಚಿತ್ರಾಪುರ ಎಕ್ಸಪ್ರೆಸ್ ಸರ್ವಿಸಿನವರು ಹುಬ್ಬಳ್ಳಿ-ಸಿರ್ಸಿ ಮಾರ್ಗದ ಮೇಲೆ ಒಂದು ಗಾಡಿ ನಡಿಸಲಿಕ್ಕೆ ಇಲ್ಲವೆ ಹೊನ್ನಾವರ ಧಾರವಾಡ ಮಾರ್ಗದ ಬದಲು ತಮ್ಮ ಹಳೆಯ ಗಾಡಿಗೆ ಹೊನ್ನಾವರ-ಹುಬ್ಬಳ್ಳಿ ಮಾರ್ಗ ನೇಮಿಸಿಕೊಡಲು ಅರ್ಜಿ ಮಾಡಿದ ಪ್ರಕರಣದಲ್ಲಿ, 'ಪೆಟ್ರೋಲ ಸಿಗದಿದ್ದರಡ್ಡಿಯಿಲ್ಲ! ನಾವು ಇದ್ದಲಿಯ ಇಂಜಿನು ಕೂಡ್ರಿಸಿ ಗಾಡಿ ನಡಿಸುತ್ತೇವೆ" ಯೆಂದು ಚಿತ್ರಾಪುರ ಸರ್ವಿಸ್ಸಿನ ಪ್ರತಿನಿಧಿಗಳು ಪ್ರತಿಪಾದಿಸಿದ್ದರಾಗಿ ತಿಳಿದು ಬರುತ್ತದೆ. ಅದು ನಿಜವಿದ್ದರೆ ಚಿತ್ರಾಪುರ ಸರ್ವಿಸ್ಸಿನವರು ಇದ್ದಲಿಯ ಇಂಜಿನಿನ ಮೋಟಾರ ಬಂಡಿಯನ್ನು ಹೊನ್ನಾವರ-ಧಾರವಾಡ ರಸ್ತೆಯ ಮೇಲೆ ಯಾಕೆ ನಡಿಸಬಾರದು? ಇದ್ದ-ಹಳೆಯ ಸರ್ವಿಸ್ಸುಗಳನ್ನು ಒಂದೆಡೆ ನಿಲ್ಲಿಸಿ, ಹೊಸ ಹೊಸ ಮಾರ್ಗಗಳನ್ನು ಅವರೇಕೆ ಹುಡುಕುತ್ತಿರುವರೋ ನಾ ಕಾಣೆ! ಇತ್ಯಾದಿ.

ತೂಕಲಕೆರೆಯ ಇನ್ಸಪೆಕ್ಟರರು ತಾ ೨೯-೧೦-೫೧ರ ಹಾಗೂ ೫-೧೧-೫೧ರ 'ವೃತ್ತ'ದಲ್ಲಿ ತಮ್ಮ ವಿರುದ್ಧ ಬಂದ ಟೀಕೆಯನ್ನು ಅನುಲಕ್ಷಿಸಿ ಒಂದು ಸ್ಪಷ್ಟೀಕರಣ ಕಳಿಸಿದ್ದಾರೆ. ಕಂಟಿಗಳ ಹಾಗೂ ತೂಕಲಕೆರೆಗಳ ತಪಾಸಣೆ ತಾವು ನಡಿಸಿದ್ದು ನಿಜವೆಂದು ಅವರು ಒಪ್ಪುತ್ತಾರೆ. ಆದರೆ ಆ ಬಗ್ಗೆ ಫೀ ಆಕರಿಸುವದಿಲ್ಲವಾಗಿಯೂ, ಏನಾದರೂ ಹೆಚ್ಚು ಕಡಿಮೆ ಕಂಡುಬಂದಲ್ಲಿ ಮಾತ್ರ ಅದನ್ನು ಸರಿಪಡಿಸಿಕೊಳ್ಳಲಿಕ್ಕೆ ತಿಳಿಸುತ್ತೇವಾಗಿಯೂ, ಹೊನ್ನಾವರ ಪೇಟೆಯಲ್ಲಿ ನೂರಾರು ಕಂಟಿಗಳನ್ನು ಪರೀಕ್ಷಿಸಿದಾಗ ೬-೭ ಕಂಟಿಗಳಲ್ಲಿ ಮಾತ್ರ ವ್ಯತ್ಯಾಸ ಕಂಡುಬಂದಿತಾಗಿಯೂ, ಆ ಬಗ್ಗೆ ಅವರೂ ಪಾರ್ಕರಿಗೂ ಸಹ ಮಾನವರಿಕೆ ಮಾಡಿಕೊಟ್ಟಿರುತ್ತೇವೆಂತಲೂ ಅವರು ತಿಳಿಸುತ್ತಾರೆ. ಒಂದೆಡೆ ಮಾತ್ರ ೨-೩ ಪೌಂಡಿನ ೩ ಕಲ್ಲುಗಳನ್ನು ನೋಡಿದಾಗ ಒಂದು ೭|| ತೊಲೆ ಮತ್ತು ಇನ್ನೊಂದು ೨|| ತೊಲೆ ಕಡಿಮೆ ತೂಕದವಿದ್ದವೆಂತಲೂ, ಸೀಸ ತುಂಬಿ ಅವನ್ನು ಸರಿಪಡಿಸುವಾ ಎಂದರೆ ಆ ಕಲ್ಲುಗಳಲ್ಲಿ ಸೀಸ ತುಂಬಲು ಇಟ್ಟ ಕಣ್ಣುಗಳು ಸೀಸದಿಂದ ಮೊದಲೇ ತುಂಬಿಕೊಂಡಿದ್ದರಿಂದ ಇನ್ನಿಷ್ಟು ಸೀಸ ತುಂಬಲು ಅಸ್ಪದವಿದ್ದಿಲ್ಲವಾಗಿಯೂ, ಆದರಿಂದ ಅವನ್ನು ಕಾನೂನಿನ ಮೇರೆಗೆ ಜಪ್ತ ಮಾಡಬೇಕಾಯಿತೆಂತಲೂ ಅವರು ತಿಳಿಸುತ್ತಾರೆ. ಈ ಎಲ್ಲ ಸಂಗತಿಗಳನ್ನು ಸಂಬಂಧಪಟ್ಟ ವರ್ತಕರಿಗೆ ತಾವು ಸಭ್ಯ ಮತ್ತು ಸೌಮ್ಯ ವಾಣಿಯಿಂದ ತಿಳಿಸಿರುವಾಗ ಟೀಕಾಕಾರರು ತಮ್ಮ ಮೇಲೆ ಒರಟುತನ ಆರೋಪ ಮಾಡಬಹುದೇ ಎಂದು ಅವರು ಪ್ರಶ್ನಿಸುತ್ತಾರೆ. ಜನರ ಹಿತಕ್ಕಾಗಿಯೇ ಕಂಟಿಕಲ್ಲುಗಳು ಸರಿಯಾಗಿರಬೇಕೆಂದು ಅಧಿಕಾರಿಗಳು ಆಗ್ರಹ ಪಡುತ್ತಿರುವರಲ್ಲದೆ ಬೇರೊಂದು ಉದ್ದೇಶದಿಂದ ಅವರು ಆಗ್ರಹ ಪಡುವದಿಲ್ಲೆಂಬ ಮಾತನ್ನು ಜನರು ಲಕ್ಷದಲ್ಲಿಡಬೇಕಾಗಿಯೂ ಅವರ ಅರಿಕೆಯಿದೆ. ಯಾವ ವರ್ತಕರಿಗೂ ತಾವು ಕಂಟಿಗಳಿಗೆ ಕಬ್ಬಿಣದ ಪರಡಿಗಳನ್ನು ಹಾಕಬೇಕೆಂದು ಹುಕುಮು ಮಾಡಿಕೊಟ್ಟಿಲ್ಲೆಂದು ಅವರು ಹೇಳುತ್ತಾರೆ. ೩ ಜನ ವರ್ತಕರಿಗೆ ಮಾತ್ರ ಅವರ ಕಂಟಿಗಳ ಹಲಗೆಯ ಪರಡಿಗಳಿಗೆ ಮೇಲಿಂದ ಕಬ್ಬಿಣದ ತಗಡುಗಳನ್ನು ಕೂಡ್ರಿಸಲು ಅವರು ಹೇಳಿದ್ದುಂಟು. ಇಂಥ ತಗಡುಗಳನ್ನು ಕೂಡ್ರಿಸಲು ಒಂದೊಂದು ರೂಪಾಯಿಗಿಂತ ಹೆಚ್ಚಿಗೆ ಖರ್ಚು ಬರಲಿಕ್ಕಿಲ್ಲವಾಗಿ ಅವರು ತಿಳಿಸುತ್ತಾರೆ. ಹಾಗೆಯೇ ಮುಂದೆ ಸಾಗಿ, ತಮ್ಮ ಕುಂದು-ಕೊರತೆಗಳಿಂದ ಯಾರಿಗಾದರೂ ಸಮಾಧಾನವಾಗದಿದ್ದರೆ ಅವರು ನೇರವಾಗಿ ಪತ್ರಿಕೆಗಳ ಕಡೆ ಓಡಿ ಹೋಗುವದಕ್ಕಿಂತ ತಮ್ಮ ಬಳಿ ಬಂದು ಮಾಹಿತಿ ಮಾಡಿಕೊಳ್ಳಬೇಕೆಂತಲೂ, ತಾವು ಸಮಾಧಾನ ಮಾಡಿಕೊಡಲು ಸಿದ್ಧರಿದ್ದೇವೆಂತಲೂ, ತಾವು ಸಮಾಧಾನ ಮಾಡಿಕೊಡದಿದ್ದರೆ ಮಾತ್ರ ದೂರುಗಾರರು ತಮ್ಮ ದೂರುಗಳನ್ನು ಬೀದಿಗೆ ಒಯ್ಯಬಹುದೆಂತಲೂ ಸದರಿ ಇನ್ಸಪೆಕ್ಟರರು ದೂರುಗಾರರಿಗೂ ಸುದ್ದಿಗಾರರಿಗೂ ಒಂದು ಮಹತ್ವದ ವ್ಯವಹಾರಿಕ ಸೂಚನೆ ಮಾಡಿರುತ್ತಾರೆ.

ಭಟಕಳ— (ತಾ ೬-೧೧-೫೧) ಪ್ರಯಾಣಿಕರೊಬ್ಬರು ತಿಳಿಸುವದೇನೆಂದರೆ- ಇಲ್ಲಿಯ ಮೋಟಾರ ಸರ್ವಿಸ್ಸಿನವರು ಪ್ರಯಾಣಿಕರಿಗೆ ಬಹಳ ಮೋಸ ಮಾಡುತ್ತಾರೆ. ಬೈಂದೂರಿಗೆ ಹೋಗುವ ಶಾಂತಿಮಣಿ ಸರ್ವಿಸ್ಸಿನ ಗಾಡಿಯು ಬರುವದಕ್ಕಿಂತ ಮುಂಚೆ ಪ್ರಯಾಣಿಕರಿಗೆ ತಿಕೀಟುಗಳನ್ನು ಕೊಟ್ಟಿರುತ್ತಾರೆ. ಅವುಗಳಲ್ಲಿ ಎಲ್ಲಿಂದ (from) ಎಂಬ ಸ್ಥಳದಲ್ಲಿ ಊರಿನ ಹೆಸರು ಬರೆಯುವದಿಲ್ಲ! ಮತ್ತು ಶಾಂತಿಮಣಿ ಗಾಡಿಯು ಹೊರಟು ಹೋದ ಮೇಲೆ ಹೆಚ್ಚಿಗೆ ಹಾಸಲು ಬೇಡುತ್ತಾರೆ! ಅದನ್ನು ಕೊಡದಿದ್ದರೆ ತಿಕೀಟಿನಲ್ಲಿ ಎಲ್ಲಿಂದ ಎಂಬುದರ ನಿರ್ದೇಶವಿಲ್ಲೆಂಬ ನೆವ ಮುಂದೆ ಮಾಡಿ ಪ್ರಯಾಣಿಕರಿಗೆ ಕಾಡುತ್ತಾರೆ! ಅಧಿಕಾರಿಗಳು ಚೌಕಶಿ ಮಾಡಿ ಈ ಹಗಲು ಲೂಟಿಯನ್ನು ನಿಲ್ಲಿಸಬೇಕು ಇತ್ಯಾದಿ.

ಮೊನ್ನೆ ತಾ ೪ನೇಗೆ ರಾತ್ರಿಯ ೧೦ ಘಂಟೆಯ ಸುಮಾರಿಗೆ ಇಬ್ಬ ಪೋಲೀಸರೂ ಕೆಲವು ಹುಡುಗರೂ ಸೊನಗಾರ ಕೇರಿಯಲ್ಲಿರುವ ಶಂಕರ ಶೆಟ್ಟಿ ಎಂಬಾತಗೆ ಹೊಡೆಯ ಹೋಗಿದ್ದರೆಂತಲೂ, ಅವನ ಮನೆಗೆ ಹೋಗಿ ಬಾಯಿಗೆ ಬಂದಂತೆ ಬೈದರಾಗಿಯೂ, ಬಹಳ ಗಲಭೆ ಮಾಡಿದರಾಗಿಯೂ ವದಂತಿಯಿದೆ. ಸ್ವತಃ ಪೋಲೀಸರೇ ಹೀಗೆ ಗಲಭೆ ಮಾಡಿದರೆ ಊರಲ್ಲಿ ಶಾಂತತೆಯನ್ನು ಕಾಪಾಡುವವರು ಯಾರು? ಮೇಲಧಿಕಾರಿಗಳು ಸದರಿ ಘಟನೆಯ ಚೌಕಶಿ ಮಾಡಿಸುವರೇ?

ಇಲ್ಲಿ ಬದಲಿ ಮಹಾಲಕರಿಗಳಾಗಿದ್ದ ರಾ|| ಹೆಗಡೆಯವರೂ ಬೇರೆ ಕೆಲ ಗೃಹಸ್ಥರೂ ತಾ ೩೦-೯-೫೧ನೇಗೆ ಜಾಲಿ ಊರಿಗೆ ಹೋಗಿ ಅಲ್ಲೊಂದು ಗ್ರಾಮ ಸುಧಾರಣಾ ಸಂಘವನ್ನು ಸ್ಥಾಪಿಸಿ ಬಂದಿದ್ದರು. ಕಳೆದ ತಿಂಗಳಲ್ಲಿ ಮಹಾಲಕರಿಗಳಾದ ರಾ|| ಹೊಸಂಗಡಿಯವರು ಆ ಸಂಘದವರಿಗೂ ಊರವರಿಗೂ ಉತ್ತೇಜನ ಕೊಟ್ಟು ಜಾಲಿಯಿಂದ ಭಟಕಳ ಸರಕಾರಿ ರಸ್ತೆಯ ತನಕ ಒಂದು ಹಳ್ಳಿಯ ಮಾರ್ಗ ಮಾಡಿಕೊಳ್ಳಲು ಪ್ರೇರೇಪಿಸಿದ್ದರು. ಅದರಂತೆ ಊರವರು ಈಗ ೧೦|| ಫರ್ಲಾಂಗ ಉದ್ದ ರಸ್ತೆಯನ್ನು ತಯಾರಿಸಿದ್ದಾರೆ. ಇನ್ನೂ ೨|| ಫರ್ಲಾಂಗ ರಸ್ತೆ ಆಗುವದುಂಟು. ಅದರ ಕೆಲಸ ಭರದಿಂದ ಸಾಗಿದೆ.

ಕಾರವಾರ— (ತಾ ೮-೧೧-೫೧) ಕಳೆದ ೩ನೇಗೆ ಇಲ್ಲಿಯ ಸಹಕಾರಿ ಸಂಸ್ಥೆಗಳು ಸುಪರವಾಯಿಝಿಂಗ ಯೂನಿಯನ್ನಿನ ನೇತೃತ್ವದಲ್ಲಿ "ಸಹಕಾರಿಗಳ ಹಬ್ಬ"ವನ್ನಾಚರಿಸಿದರು. ಕಾರವಾರ ಅರ್ಬನ್ ಬೇಂಕು ಈ ಉತ್ಸವದಲ್ಲಿ ಸೇರಿದ್ದಿಲ್ಲ.

ನಿನ್ನೆ ಅರ್ಬನ ಬೇಂಕಿನ ಹೊಸ ವರ್ಷದ ಅಧ್ಯಕ್ಷೋಪಾಧ್ಯಕ್ಷರ ಚುನಾವಣೆಯಾಯಿತು. ರಾ| ದತ್ತನಾಯ್ಕರು ಅಧ್ಯಕ್ಷರಾಗಿಯೂ ರಾ| ವಿಶ್ವನಾಥ ಘಾಟಕರ್ಣೇಕರರು ಉಪಾಧ್ಯಕ್ಷರಾಗಿಯೂ ಆರಿಸಲ್ಪಟ್ಟಿರುತ್ತಾರೆ. ಈ ಚುನಾವಣೆಯಿಂದ ಹಲವರಿಗೆ ಅಸಮಾಧಾನವಾಗಿರುತ್ತದೆ.

ಇಲ್ಲಿಯ ಮೀನುವ್ಯಾಪಾರ ದೊಡ್ಡ ಪ್ರಮಾಣದಿಂದ ಸಾಗಿದೆ. ಮುಂಬಯಿ ಸರಕಾರದ ಉದ್ಯೋಗಿಕ ಇಲಾಖೆಯವರೂ ಅದಕ್ಕೆ ಒಳ್ಳೇ ಪ್ರೋತ್ಸಾಹನ ಕೊಡುತ್ತಿದ್ದಾರೆ. ಆದರೆ ಮೀನಿನ ಉದ್ಯೋಗದಿಂದ ಊರ ಆರೋಗ್ಯಕ್ಕೆ ಬಾಧೆಯಾಗುತ್ತಿದೆಯೆಂದು ಒಬ್ಬಿಬ್ಬ ನಗರ ಪಿತರು ತಕ್ರಾರು ಮಾಡಲಾರಂಭಿಸಿದ್ದಾರೆ!

ಮೊನ್ನೆ ಕೂಡಿದ ನಗರ ಸಭೆಯಲ್ಲಿ ಮದುವೆಯೊಂದಕ್ಕೆ ಒಂದು ರೂಪಾಯಿಯಂತೆ ಮದುವೆ ಕರ ವಸೂಲ ಮಾಡಬೇಕೆಂದು ನಿರ್ಣಯವಾಗಿದೆ. ಶ್ರೀಮಂತರಿಂದ ರೂ ೧, ಮಧ್ಯಮವರ್ಗದವರಿಂದ ಆಣೆ ೮, ಬಡವರಿಂದ ಆಣೆ ೪ ವಸೂಲ ಕೊಳ್ಳಬೇಕಾಗಿಯೂ ತೀರ ಬಡವರ ಮೇಲೆ ಈ ಕರ ಹೇರಬಾರದಾಗಿಯೂ ಬಂದ ಉಪಸೂಚನೆ ತಿರಸ್ಕರಿಸಲ್ಪಟ್ಟಿತು. ಇನ್ನೂ ಯಾವ ಯಾವ ಕರಗಳನ್ನು ಹೇರಬಹುದೆಂಬುದರ ಆಲೋಚನೆ ಮಾಡಲು ರಾ|| ಸಾ|| ತೇಲಂಗ, ರಾ|| ಕಸಬೇಕರ, ರಾ|| ಕಾಯಕಿಣಿ, ರಾ|| ಡಿಸೋಜಾ ಮತ್ತು ರಾ|| ಖಾದಿ ಮುಲ್ಲಾ ಸಾಹೇಬ ಈ ೫ ಜನರದೊಂದು ಸಮಿತಿ ನೇಮಿಸಲ್ಪಟ್ಟಿದೆ.

ಕೆಲವು ನಗರಪಿತರು ನಾಕೆಗಳ ಮೇಲೆ ಸ್ಯಾಕಲ್-ತೆರಿಗೆ ಕೊಡದೆ ಒಳಗೆ ಬರುತ್ತಾರಂತೆ! ನಾಕೇದಾರರಿಗೆ ಇದರಿಂದ ಕಷ್ಟವಾಗುತ್ತಿದೆ! ಸ್ಯಾಕಲ್-ತೆರಿಗೆ ಕೊಡದ ಸದಸ್ಯರ ವಿರುದ್ಧ ನಗರ ಸಭೆಯ ಕಚೇರಿಗೆ ದೂರು ಒಯ್ದರೆ ಸದಸ್ಯರು ಸಿಟ್ಟು ಮಾಡ್ಯಾರೆಂಬ ಭೀತಿಯೊಂದು ಕಡೆಗೆ! ವರದಿ ಕೊಡದಿದ್ದರೆ ಇಂಥಿಂಥ ನಾಕೇದಾರರು ಕರ್ತವ್ಯದಕ್ಷರಿರುವದಿಲ್ಲೆಂದು ಅದೇ ಸದಸ್ಯರು ತಮಗೊಂದು ಪ್ರಶಸ್ತಿಪತ್ರ (?) ಕೊಟ್ಟಾರೆಂಬ ಭೀತಿ ಇನ್ನೊಂದು ಕಡೆಗೆ! ನಗರಪಿತರೇ ಸ್ವತಃ ಆತ್ಮನಿರೀಕ್ಷಣೆ ಮಾಡಿಕೊಂಡು ಈ ಬಿಗಿ ಸಮಸ್ಯೆಯನ್ನು ಬಿಡಿಸಿ ನಾಕೇದಾರರಿಗೆ ಕಾಯಬೇಕು.

ಸುಂಕೇರಿಯ ರಾ|| ಬಾಲಮುಕುಂದಾಚಾರ್ಯರಿಗೆ ಇಲ್ಲಿಯ ಜಿಲ್ಹಾ ಯುದ್ಧ-ಯತ್ನ ಮಂಡಳದವರು ತಮ್ಮ ಪ್ರಚಾರಕರನ್ನಾಗಿ ನೇಮಿಸಿದ್ದಾರೆ.

ದಯೆ, ನ್ಯಾಯ ತೋರಿಯಿರಿ!

(೫ನೇ ಪುಟದಿಂದ ಮುಂದರಿಸಿದ್ದು)

ಚಪಲ ಚೇಷ್ಟೆಗಳೆಲ್ಲ ಅಲ್ಲಿಗೇ ಅಂತ್ಯ! ಮಾಸ್ಕೋ ಅಳಿದರೆ ಮಾತ್ರ ಮುಂದೆ ಸಂಕಟವುಂಟು ಇಷ್ಟಕ್ಕೇ ಈ ಘಟನೆಗಳು ನಿಲ್ಲುವದಿಲ್ಲ ಜಪಾನವು ದಾದಿ ಕಾಯುತ್ತಿದೆ ಮಾಸ್ಕೋ ಬಿದ್ದೊಡನೆ ಜಪಾನವು ಯುದ್ಧ ಸೇರುವದು ಖಂಡಿತ ಈಗಲೇ ಕೋರಿಯಾದ ಒಂ 'ಕೆಂಬಿಮಾರು' ಎಂಬ ತನ್ನ ಹಡಗನ್ನು ರುಶ್ಯರು ಜಲಸುರಂಗ ಹಾಕಿ ಮುಳುಗಿಸಿದರೆಂದು ಜಪಾನ ಸರಕಾರವು ದೂರಿಕೊಳ್ಳುತ್ತಿದೆ ಬ್ರಹ್ಮದೇಶದ ಮಾರ್ಗದಿಂದ ರಾಷ್ಟ್ರೀಯ ಚೀನ ಸರಕಾರಕ್ಕೆ ಯುದ್ಧಸಾಹಿತ್ಯ ಕಳಿಸಬಾರದೆಂದು ಜಪಾನ ಸರಕಾರವು ಬ್ರಿಟನ-ಅಮೇರಿಕೆಗಳಿಗೆ ಸೂಚನ ಮಾಡಿರುವದಂತೆ ಜಪಾನವು ಯುದ್ಧಘೋಷಣೆ ಮಾಡುವ ಪೂರ್ವತಯಾರಿಯಾದೆಂದು ಹೇಳುತ್ತಾರೆ ಅಮೇರಿಕೆಯ ಸರಕಾರವು ತಟಸ್ಥ ಕಾನೂನನ್ನು ಶನಿವಾರ ರದ್ದುಪಡಿಸಿಕೊಂಡು ಯುದ್ಧ ಸೇರುವ ಪೂರ್ವ ತಯಾರಿಯನ್ನು ಮುಗಿಸಿದೆ ಆದರೆ ಅಮೇರಿಕೆಯೊಳಗಿನ ಜನರು ಯುದ್ಧ ಸೇರಲು ಒಡಂಬಡುವದಿಲ್ಲವಂತೆ ಬ್ರಿಟಿಶ ರಾಯಭಾರಿಗಳಾದ ಹೆಲಿಫೆಕ್ಸ ದೊರೆಗಳು ಯುದ್ಧಪ್ರೇರಕರೆಂದು ಅವರ ಮೇಲೆ ಅಲ್ಲಿಯ ಹೆಂಗಸರೂ ಮಕ್ಕಳೂ ಕೊಳೆತ ತತ್ತಿ ಟಮಾಟೋಗಳನ್ನು ಒಗೆದರಂತೆ ಒಂದು ತತ್ತಿ ಮಾತ್ರ ದೊರೆಗಳಿಗೆ ತಗಲಿತು ಆದರೆ ಪೆಟ್ಟಾಗದಿದ್ದದ್ದೊಂದು ಸುದೈವ! ದೊರೆಗಳು ಕಣ್ಣುನೋವಿನ ಬಗ್ಗೆ ಚಿಕಿತ್ಸಾಲಯದಲ್ಲಿ ಉಪಚಾರ ಹೊಂದುತ್ತಿದ್ದಾರೆ ಆದರೆ ಇದು ಆ ತತ್ತಿ ಪೆಟ್ಟಿನ ಪರಿಣಾಮವಲ್ಲೆಂದು ಡಾಕ್ಟರರು ಅಭಿಪ್ರಾಯಪಡುತ್ತಾರಂತ, ಇದೊಂದು ಸಮಾಧಾನದ ಸಂಗತಿ! ಅಮೇರಿಕೆಯೊಳಗಿನ ಭಾವನೆಯ ನಿದರ್ಶನವೆಂದು ಈ ಸಂಗತಿಯು ಉಲ್ಲೇಖ ಮಾಡಿದೆ ಜಪಾನ ಅಮೇರಿಕೆಗಳ ವಿದೇಶ ಕಾರಣ ಇನ್ನು ಸಂಪೂರ್ಣವಾಗಿ ರೂಪುಗೊಳ್ಳಲಿಲ್ಲ ಮಾಸ್ಕೋದ ಭವಿತವ್ಯವನ್ನೇ ಅದು ಹೊಂದಿಕೊಂಡಿದೆ ಆದರಿಂದ ಆ ಕಡೆ ನಿಮ್ಮ ಲಕ್ಷ್ಯವಿರಲಿ



ವ್ಯವಹಾರವಿವೇಕಕ್ಕೆ
ಒಂದು ವಿನಂತಿ

ಪರಕೀಯರ ಆಕ್ರಮಣ ದಾಳಿಯನ್ನು ನಿರೋಧಿಸಲು
ಇಂಡಿಯಾ ದೇಶವು ಬಲಿಷ್ಠವಾಗಬೇಕು ಪ್ರತಿಯೊಬ್ಬವ್ಯಕ್ತಿಯೂ . ತನ್ನ ಪ್ರಾಣ,
.. ತನ್ನ ಸಂಸಾರ,
. ತನ್ನ ಹಣ
.. ತನ್ನ ಉದ್ಯೋಗ
. ತನ್ನ ಮನೆ
.. ತನ್ನ ಭೂಮಿ

ಇವನ್ನು ರಕ್ಷಿಸಿಕೊಳ್ಳಲೇಬೇಕು
ಈಗಲೇ ಆ ಕೆಲಸವನ್ನು ಕೈಗೊಳ್ಳಿರಿ! ನಿಮ್ಮಲ್ಲಿ ನೀವೇ ಯೋಚಿಸಿನೋಡಿರಿ; ನಿಮ್ಮ ರಕ್ಷಣೆಗಾಗಿ ನೀವೇ ಸಹಾಯ ಮಾಡಿರಿ.

ಕೊಳ್ಳಿರಿ
ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ ಗಳನ್ನು

ಅದಕ್ಕಾಗಿ ನಾವು ವಿನಿಯೋಗಿಸುವ ಪ್ರತಿಯೊಂದು ಆಣೆಯೂ ಇಂಡಿಯಾದ ಸೇನೆ, ನೌಕೆ, ವಿಮಾನದಳಗಳ ರಚನೆಗೆ ಸಹಾಯಕವಾಗಿ ಪರಕೀಯರ ಆಕ್ರಮಣ ದಾಳಿಯನ್ನು ನಿರೋಧಿಸಲು ಇಂಡಿಯಾದ ಬಲವನ್ನು ಬೆಳೆಸುತ್ತದೆ.

GIKn Ad No 43 A
ಪೋಸ್ಟಾಫೀಸಿನಲ್ಲಿ ಎಲ್ಲಾ ವಿವರವೂ ಸಿಗುತ್ತದೆ

ಸ್ಥಳಿಕ ವಿಷಯಗಳು.

ಲೇಖಕ - ಸ್ಥಳವಂತಿಕ

ಸಿದ್ದಾಪುರ, ತಾಲೂಕಿನ ಮಾಮಲೇದಾರರಾದ ಇಂಬಿಗನೇರಿಯವರು ಕರ್ತವ್ಯದಕ್ಷರು ನಿಜ ಆದರೆ ಸಿದ್ದಾಪುರ ತಾಲೂಕಿನಂಥ ಬಡ ತಾಲೂಕಿಗೆ ಇವರು ಹೇಳಿದವರಲ್ಲ ಈ ತಾಲೂಕಿನಲ್ಲಿ ಜನರಿಗೆ ತೀರ್ವೆ ತೆರುವದು ಒತ್ತಟ್ಟಿಗಿರಲಿ, ಕಗಾವಿ ತೆರುವದು ಒತ್ತಟ್ಟಿಗಿರಲಿ, ಹೊಟ್ಟೆ ತುಂಬಿಕೊಳ್ಳುವದೇ ದುರ್ಘಟವಾಗಿದೆ ಅಂಥಲ್ಲಿ ನೇಮಿಸಿದ ಅವಧಿಗೆ ತೀರ್ವೆ ಕೊಡಲಿಲ್ಲವೆಂದು ಮಾಮಲೇದಾರರು ಚೌಥಾಯಿ ದಂಡ ವಿಧಿಸಿ ವಸೂಲಿಯ ಕ್ರಮ ನಡಿಸಿದರು ನೆರೆಯ ಶಿರ್ಶಿ ತಾಲೂಕಿನಲ್ಲಿ ತೀರ್ವೆಯನ್ನು ಜಾನ ತಿಂಗಳಲ್ಲಿ ಕೊಟ್ಟರೂ ಅಲ್ಲಿಯ ಮಾಮಲೇದಾರರು ಚೌಥಾಯಿ ದಂಡ ವಿಧಿಸಲಿಲ್ಲ ಆದರೆ ಅದೇ ಸಿದ್ದಾಪುರ ತಾಲೂಕಿನಲ್ಲಿ ಆ ಕಾಲಕ್ಕೆ ತೀರ್ವೆ ಕೊಟ್ಟವರ ಮೇಲೆ ಚೌಥಾಯಿ ದಂಡ ವಿಧಿಸಲಾಯಿತು ಸಿದ್ದಾಪುರ ತಾಲೂಕಿನ ಕೆಲವರಿಗೆ ಶಿರ್ಶಿ ತಾಲೂಕಿನಲ್ಲಿ ಭೂಮಿಯಿತ್ತು ಎರಡೂ ತಾಲೂಕುಗಳೊಳಗಿನ ಭೂಮಿಗಳ ತೀರ್ವೆಯನ್ನು ಅವರು ಒಂದೇ ಸರತಿ ತುಂಬಿದ್ದುಂಟು ಆದರೆ ಸಿದ್ದಾಪುರ ತಾಲೂಕಿನಲ್ಲಿ ಚೌಥಾಯಿ ದಂಡ ತುಂಬಬೇಕೆಂದು ಒತ್ತಾಯ ಸಿದ್ದಾಪುರ ತಾಲೂಕಿನಲ್ಲಿದ್ದ ಭೂಮಿಗಳ ಶಿರ್ಶಿ ತಾಲೂಕಿನ ಖಾತೇದಾರರ ಮೇಲೂ ಇದೇ ಪ್ರಕಾರದ ಒತ್ತಾಯ ಹೀಗೆ ಒಂದೇ ಜಿಲ್ಹೆಯೊಳಗೆ ಬೇರೆ ಬೇರೆ ಧೋರಣವಿರುವ ಕಾರಣವೇನೆಂದು ತಿಳಿಯುವದಿಲ್ಲ ಸಿದ್ದಾಪುರ ತಾಲೂಕಿನಂಥ ಬಡ ತಾಲೂಕಿನ ಜನರ ಮೇಲೆ ಇಂಥ ಕಠಿಣ ಧೋರಣ ಏಕೆಂದು ತಿಳಿಯುವದಿಲ್ಲ ಈ ಕುರಿತು ಮೇಲಧಿಕಾರಿಗಳಿಗೆ ಅರ್ಜಿ ಮಾಡಿಕೊಂಡರೆ ಮಾಮಲೇದಾರರ ಹುಕುಮನ್ನಿಟ್ಟು ಅಪೀಲು ಮಾಡಬೇಕೆಂದು ಹುಕುಮವಾಗುತ್ತದೆ ಜಿಲ್ಹಾಧಿಪತಿಗಳಿಗಾಗಲಿ ಪ್ರಾಂತ ಸಾಹೇಬರಿಗಾಗಲಿ ಸಿದ್ದಾಪುರ ತಾಲೂಕಿನ ಅವಸ್ಥೆಯನ್ನು ತಿಳಿಸಿ ಹೇಳುವ ಪ್ರಸಂಗವಿಲ್ಲ ಅವರಿಂದ ಜಿಲ್ಹಾಧಿಪತಿಗಳು ದಯಾಳುಗಳಾಗಿ ಚೌಥಾಯಿ ದಂಡವನ್ನು ಜನರಿಗೆ ಸೂಟ ಬಿಡುವರೆಂದು ಎಣಿಸಲಾಗಿದೆ ಕಾಲಮಾನ ಕಠಿಣವೆಂದು ಹೇಳುವದು ಬೇಡ

⁂

ಕೋಡಕಣಿಯಲ್ಲಿ ಗಾಮವಕ್ಕಲ ಮತ್ತು ನಾಮಧಾರಿ ಸಮಾಜದವರು ಕೈಕೊಂಡ ಉಪಕ್ರಮ ಅನುಕರಣೀಯವಿದೆ ಈ ಗ್ರಾಮದಲ್ಲಿ ಚಹದ ಅಂಗಡಿಯಿರಲಿಲ್ಲ ಸದ್ಯಕ್ಕೊಂದು ಚಹದ ಅಂಗಡಿ ಸ್ಥಾಪನೆಯಾಯಿತು ಒಕ್ಕಲಿಗರು ಚಹದ ಅಂಗಡಿಗೆ ಹೋಗಿ ವ್ಯಸನಿಗಳಾದರು ಚಹ ಕುಡಿಯುವ ದೆಸೆಯಿಂದ ಕೆಲ ಒಕ್ಕಲಿಗರು ಗದ್ದೆ ಕೊಯ್ಯುವ ಮುಂಚೆಯೇ ತೆನೆಗಳ ಭತ್ತವನ್ನು ಉದುರಿಸಿಕೊಂಡು ವ್ಯಸನವನ್ನು ತೃಪ್ತಿಗೊಳಿಸಲಾರಂಭಿಸಿದರು ಇದರಿಂದ ಗಾಮವಕ್ಕಲ ಮತ್ತು ನಾಮಧಾರಿ ಜಾತಿಯವರು ಜಾತಿಕೂಟ ಸೇರಿಸಿ ಚಹ ಕುಡಿಯಬಾರದೆಂದೂ ಚಹ ಕುಡಿದವರಿಗೆ ಜಾತಿಯ ಬಹಿಷ್ಕಾರವಾಗುವದೆಂದೂ ತೀರ್ಮಾನಿಸಿದ್ದಾರೆ ಈ ತೀರ್ಮಾನದಿಂದ ಇವೆರಡೂ ಸಮಾಜಗಳಲ್ಲಿ ಚಹದ ವ್ಯಸನಕ್ಕೆ ಒಳ್ಳೇ ನಿರ್ಬಂಧವುಂಟಾಗಿದೆ ಗ್ರಾಮನಿವಾಸಿಗಳು ಬಡವರಾಗಲು ಇತ್ತಿತ್ತಲಾಗಿ ಹಬ್ಬಿದ ಚಹದ ದುರ್ವ್ಯಸನವೇ ಕಾರಣ ಈ ವ್ಯಸನದ ಮೂಲಕ ಸಂಸಾರದ ಖರ್ಚು ಹೆಚ್ಚಾಯಿತು, ಆರೋಗ್ಯ ಕೆಟ್ಟು ಹೋಯಿತು, ಚಹ ಕುಡಿದ ಹೊರತು ದಿನದ ಹೋರೆಮಾಡಲು ಮನಸ್ಸು ಒಡಂಬಡುವದಿಲ್ಲ ಹೀಗಾಗಿ ನಸುಕು ಹರಿಯುವ ಮುಂಚೆ ಒಕ್ಕಲಿಗರು ಸುಖದಿಂದ ಮಾಡುವ ಒಕ್ಕಲತನದ ಕೆಲಸಕ್ಕೆಲ್ಲ ತೊಂದರೆಯುಂಟಾಯಿತು ಮೇಲೆ ಚಹ, ಸಕ್ಕರೆಗಳಿಂದ ಊರೊಳಗಿನ ಸಂಪತ್ತು ಸೂರೆಯಾಯಿತು ಈಗಿನ ದಿನಮಾನ ಸ್ವಯಂಪೂರ್ಣತೆಯದು ಮೊನ್ನೆ ಶಿರ್ಶಿಯಲ್ಲಿ ಸೇರಿದ ಸಹಕಾರಿ ಪರಿಷತ್ತಿನ ಅಧ್ಯಕ್ಷರಾದ ಶ್ರೀ॥ ಅಣ್ಣಾಜಿ ಬಾಬಾಜಿ ಲಠ್ಠೆಯವರು ನುಡಿದಂತೆ ಗ್ರಾಮೋದ್ಧಾರ ಮಾಡಬಯಸುವವರು ಗ್ರಾಮದ ಸಂಪತ್ತು ಗ್ರಾಮದ ಹೊರಗೆ ಹೋಗಗೊಡದಂತೆ ಜಾಗ್ರತೆ ಕೊಳ್ಳಬೇಕು ಗ್ರಾಮದವರು ತಮ್ಮ ಗ್ರಾಮದಲ್ಲಿ ಹುಟ್ಟುವ ಜಿನಸುಗಳಿಂದಲೇ ನಿರ್ವಾಹ ಮಾಡಿಕೊಳ್ಳಲು ಈಗಲಾದರೂ ಕಲಿಯಬೇಕು ಪಾನಕ ಅವಶ್ಯವಾಗಿದ್ದರೆ ಹಾಲು ಕುಡಿಯಬಹುದು, ಹಾಲಿನಷ್ಟು ಪೋಷಕ ಪಾನಕ ಬೇರೊಂದಿಲ್ಲ ಹಾಲಿನ ಕೊರತೆಯಿಂದ ನಮ್ಮ ಹಿಂದುಸ್ಥಾನದೊಳಗೆ ಆಯುರ್ಮಾನ ಕುಗ್ಗಿತೆಂದು ಆರೋಗ್ಯಾಧಿಕಾರಿಗಳ ಅಂಬೋಣವುಂಟು ಹಾಲು ಜೀರ್ಣವಾಗದಿದ್ದ ಅಶಕ್ತ ಪ್ರಕೃತಿಯವರು ಗ್ರಾಮದಲ್ಲಿ ಹುಟ್ಟುವ ಅಥವಾ ಸುಲಭವಾಗಿ ಸಿಗಬಹುದಾದ ಬೇರು ಚಕ್ಕೆಗಳಿಂದ ಕಷಾಯ ಮಾಡಿಕೊಂಡು ಬೆಳಗಿನ ಪಾನಕದ ಏರ್ಪಾಟು ಮಾಡಿಕೊಳ್ಳಬಹುದು ಸಕ್ಕರೆಗಿಂತ ಬೆಲ್ಲ ಯಾವಾಗಲೂ ಹಿತಕರವೆಂದು ವೈದ್ಯರ ಅಭಿಪ್ರಾಯವಿದೆ ಸಕ್ಕರೆಯಲ್ಲಿ ಬೆಲ್ಲದಲ್ಲಿರುವ ಹಿತಕರವಾದ ಜೀವನಾಂಶಗಳು ನಷ್ಟವಾಗುತ್ತವಾಗಿ ಪ್ರಾಜ್ಞರ ಅಭಿಪ್ರಾಯವುಂಟು ಗ್ರಾಮ ಪಂಚಾಯತಗಳೂ ಗ್ರಾಮಸುಧಾರಣೆ, ಗ್ರಾಮೋನ್ನತಿ, ಗ್ರಾಮೋದ್ಧಾರ ಸಂಘಗಳೂ ಗ್ರಾಮದವರಲ್ಲಿ ನೆಲಸಿರುವ ವ್ಯಸನವನ್ನು ನಿರ್ಮೂಲಿಸಲು ಕೋಡಕಣಿಯ ಗಾಮವಕ್ಕಲ ನಾಮಧಾರಿ ಸಮಾಜದವರಂತೆ ಉಪಾಯಯೋಜನೆ ಮಾಡಬಹುದು

⁂

ಶಿರ್ಶಿಯ ಸಹಕಾರ ಪರಿಷತ್ತಿನವರು ಏರ್ಪಡಿಸಿದ ಪ್ರದರ್ಶನ ಒಳ್ಳೇ ಚಿತ್ತವೇಧಕವಿತ್ತು ಸ್ವಾಗತ ಸಮಿತಿಯ ಅಧ್ಯಕ್ಷರಾದ ರಾ॥ ಸುಂದರರಾವ ಪಂಡಿತರು ನುಡಿದಂತೆ, ನಮ್ಮ ಜಿಲ್ಹೆಯಲ್ಲಿ ಇಷ್ಟೆಲ್ಲ ವಸ್ತುಗಳು ಹುಟ್ಟುತ್ತವಾಗಿ ಯಾರಿಗೂ ಕಲ್ಪನೆಯಿರಲಿಲ್ಲ ಹೊನ್ನಾವರದ ಉದ್ಯೋಗ ಶಾಲೆಯವರೂ ಗ್ರಾಮೋದ್ಧಾರ ಮಂಡಳದವರೂ ಜಿಲ್ಹೆಯೊಳಗಿನ ಸ್ತ್ರೀಯರೂ ಹುಡುಗ-ಹುಡುಗಿಯರೂ ಕುಮಟಾ-ಹೊನ್ನಾವರದೊಳಗಿನ ಗೌಡಚಿತ್ರಕಾರರೂ ಶಿರ್ಶಿಯ ಪಟವರ್ಧನ ನರ್ಸರಿಯವರೂ ತಮ್ಮ ತಮ್ಮ ವಸ್ತುಗಳನ್ನು ಪ್ರದರ್ಶನಕ್ಕೆ ಕಳುಹಿ ನಮ್ಮ ಜಿಲ್ಹೆ ಈ ದೆಸೆಯಲ್ಲೂ ಉದ್ಯೋಗಾಭಿವೃದ್ಧಿಯನ್ನು ಮಾಡಬಲ್ಲದಾಗಿ ತಿಳಿಸಿದ್ದಾರೆ ಕುಮಟೆಯ ವ್ಯಾಯಾಮ ಶಾಲೆಯವರೂ ಶಿರ್ಶಿಯ ಹನುಮಾನ ವ್ಯಾಯಾಮ ಶಾಲೆಯವರೂ ಆಟ-ಓಟ, ಕಸರತ್ತುಗಳನ್ನು ಆಡಿತೋರಿಸಿ ವ್ಯಾಯಾಮ ಶಾಲೆಗಳನ್ನು ಈ ಜಿಲ್ಹೆಯಲ್ಲಿ ಸ್ಥಾಪಿಸಿದರೆ ಇಲ್ಲಿಯೂ ಶಕ್ತ ಜನಕ್ಷೇಮವಾಗುವದಾಗಿ ತಿಳಿಸಿದ್ದಾರೆ ಹೊನ್ನಾವರ ಉದ್ಯೋಗ ಶಾಲೆಯ ಕತ್ತದ ಕೆಲಸ, ಗುಂಡಿಯ ಕೆಲಸ, ಕೋಡಿನ ಕೆಲಸ ನೋಡಿ ಶ್ರೀ॥ ಲಠ್ಠೆಯವರು ಸಂತೋಷಪಡುವದು ಸಾಹಜಿಕ ಕತ್ತದ ಸರಕುಗಳಿಗೆ ತಕ್ಕಷ್ಟು ಗಿರಾಕಿಯಿಲ್ಲದ್ದರಿಂದ ಉದ್ಯೋಗ ಶಾಲೆಯ ಪ್ರಗತಿ ಕೊಂಚ ಕುಂಠಿತವಾಗುತ್ತದೆ ಬೆಳಗಾವಿಯಲ್ಲಿ ಈ ಕುರಿತು ತಕ್ಕ ಪ್ರಯತ್ನ ಮಾಡುತ್ತೇವಾಗಿ ಶ್ರೀ॥ ಲಠ್ಠೆಯವರು ಹೇಳಿದ್ದನ್ನು ಕೇಳಿ ಉದ್ಯೋಗ ಶಾಲೆಯವರಿಗೆ ಬಹಳ ಸಮಾಧಾನವಾಗಿದೆ ಜೇನುಹುಟ್ಟು ಮಾಡುವ ಕ್ರಮ ಸಹ ಆಹ್ಲಾದದಾಯಕವಿದೆ ಜೇನುತುಪ್ಪ ತುಂಬಿದ ಕಟ್ಟಿಗೆ ಪೆಟ್ಟಿಗೆಯೊಳಗಿನ ಹುಟ್ಟು ಸ್ವಚ್ಛವಾಗಿ ಹೊಳೆಯುತ್ತದೆ, ಪಾರದರ್ಶಕವೆಂದರೂ ಅಡ್ಡಿಯಿಲ್ಲ ಒಂದು ನೊಣಕ್ಕೆ ಸಹ ನೋಯಿಸದೆ ತುಪ್ಪ ತೆಗೆದು ಪುನಃ ಹುಟ್ಟನ್ನು ಪೆಟ್ಟಿಗೆಯಲ್ಲಿಟ್ಟು ನೊಣಗಳಿಗೆ ತುಪ್ಪ ಮಾಡಹಚ್ಚುವ ಕ್ರಮ ಮಹಾತ್ಮರ ಅಹಿಂಸಾ ಸಂಪ್ರದಾಯದ ವಿಜಯವೇ ಸರಿ ಜೇನು ಹುಟ್ಟುಗಳ ಪ್ರಗತಿ ಗಣೇಶಕ್ರೀಡೆಯಿಂದ ಉದ್ಯೋಗಶಾಲೆಯಲ್ಲಿ ಆಗತೊಡಗಿದೆ ೧೯೩೯ರಲ್ಲಿ ೪ ಹುಟ್ಟುಗಳಿದ್ದವು, ಈಗ ೧೪೦ ಹುಟ್ಟುಗಳಾಗಿವೆ ಇದರ ಶ್ರೇಯಸ್ಸು ಉದ್ಯೋಗ ಶಾಲೆಯ ಚಾಲಕರಾದ ರಾ॥ ಕಲ್ಲಾಪುರರಿಗೆ ಸಲ್ಲತಕ್ಕದ್ದು ಪ್ರತಿ ವರ್ಷ ಇಂಥ ಪ್ರದರ್ಶನಗಳನ್ನು ಸೇರುವಂತೆ ಏರ್ಪಾಟಾಗುವದು ವಿಹಿತ

ಈ ಪ್ರದರ್ಶನಗಳನ್ನು ಗ್ರಾಮೋದ್ಧಾರ ಮಂಡಳದವರು ಒಂದೊಂದು ತಾಲೂಕಿನಲ್ಲಿ ಒಂದೊಂದು ವರ್ಷ ನೆರೆಸಬೇಕು ಯುಕ್ತ ಕಂಡರೆ ಪ್ರತಿ ತಾಲೂಕಿನಿಂದ ಪ್ರದರ್ಶನದಲ್ಲಿ ಆಸಕ್ತಿಯುಳ್ಳ ಜನರಂತೆ ಗ್ರಾಮೋದ್ಧಾರ ಮಂಡಳದ ಆಧೀನವಾಗಿರುವ ಒಂದು ಮಂಡಳವನ್ನು ನೇಮಿಸಬಹುದು ಈ ಪ್ರದರ್ಶ

ನೋಟೀಸು.

ಕುಮಟಾ ತಾಲೂಕ ಅಂತ್ರವಳ್ಳಿ ಗ್ರಾಮ ದೇವರಾದ ಶ್ರೀ ವೀರೇಶ್ವರ ದೇವರ ಮೊಕ್ತೇಸರ ಮತ್ತು ಯಾವತ್ತೂ ಭಜಕ ಜನರಿಗೆ ಕುಟುಂಬದ ಮೆನೇಜರ ನರಸಿಂಹ ನಾರಾಯಣ ಭಟ್ಟ ಸಾಕೀನ ಅಂತ್ರವಳ್ಳಿ ಇವರು ತಿಳಿಸುವ ವಿವರ — ನಮ್ಮ ಗ್ರಾಮದೇವರಾದ ಶ್ರೀ ವೀರೇಶ್ವರ ದೇವರ ನಿತ್ಯ ಪೂಜಾ ನೈವೇದ್ಯ ಕಾರ್ಯಗಳನ್ನು ನಾವು ಅಜಮಾಸ ೩೫ ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದು ಸದರಿ ದೇವತಾ ವಿನಿಯೋಗಗಳಿಗೆ ಅರ್ಚಕರಿಗೆ ರೀತಿಯಂತೆ ಕೊಡಬೇಕಾಗಿದ್ದ ೬೫ ಖಂಡಗ ಭತ್ತವನ್ನು ಮೊಕ್ತೇಸರ ಜನರು, ಇತರ ವ್ಯವಸ್ಥಾಪಕರು ನಮ್ಮಕಡೆ ಕೊಡದೆ ತ್ರಾಸು ಕೊಡುವದರಿಂದ ಸದರಿ ಪೂಜಾ-ವಿನಿಯೋಗ ಕಾರ್ಯಗಳನ್ನು ಈ ಹೊತ್ತಿನಿಂದ ಒಂದು ತಿಂಗಳದೊಳಗಾಗಿ ಮೊಕ್ತೇಸರರೂ ಭಜಕರೂ ಬಂದು ರೀತಿಯಂತೆ ನಿತ್ಯ ಪೂಜಾ ವಿನಿಯೋಗಗಳನ್ನು ವಹಿಸಿಕೊಳ್ಳತಕ್ಕದ್ದು. ಮೇಲು ಪೂಜಾ ಕೆಲಸ ಮಾತ್ರ ನಮ್ಮ ಹಕ್ಕಿನದೇ ಇರುತ್ತದೆ ತಪ್ಪಿದರೆ ಮುಂದೆ ನಿತ್ಯ ಪೂಜಾ-ವಿನಿಯೋಗವು ನಿಂತ ಬಗ್ಗೆ ಶಾಸ್ತ್ರ ರೀತಿಯಂತೆ ಸಂಭವಿಸಬಹುದಾದ ಲುಕ್ಸಾನಿಗೆ ನಾವು ಬದ್ಧರಲ್ಲಾ ತಿಳಿಯುವದು.

ತಾರೀಕು ೮—೧೧—೧೯೪೧

ನರಸಿಂಹ ನಾರಾಯಣ ಭಟ್ಟ, ಅಂತ್ರವಳ್ಳಿ

ನಕ್ಕೆ ವರ್ಷಾಸನ ರೂ ೫೦೦ರ ಮಟ್ಟಿಗೆ ಖರ್ಚು ತಗಲಬಹುದು ಸರಕಾರದಿಂದ ಕೆಲವು, ಸಹಕಾರಿ ಸಂಘಗಳಿಂದ ಕೆಲವು ಮಹಾಜನರಿಂದ ಕೆಲವು ಹೀಗೆ ದ್ರವ್ಯಸಹಾಯವನ್ನು ಒಟ್ಟುಗೂಡಿಸಿದರೆ ಪ್ರದರ್ಶನದ ಖರ್ಚು ಸಹಜವಾಗಿ ಹುಟ್ಟುವಂತಿದೆ ಈ ಪ್ರದರ್ಶನಗಳಿಂದ ನಮ್ಮ ಜಿಲ್ಹೆಯೊಳಗೆ ಹಸ್ತಕೌಶಲ್ಯಕ್ಕೂ ಕಲಾಕೌಶಲ್ಯಕ್ಕೂ ಕಾರ್ಯಕೌಶಲ್ಯಕ್ಕೂ ಉತ್ತೇಜನ ದೊರೆಯುವದಲ್ಲದೆ ಎಲ್ಲೆಲ್ಲಿ ಏನೇನು ಹುಟ್ಟುತ್ತದೆ, ತಮ್ಮಲ್ಲಿ ಏನೇನು ಹುಟ್ಟಿಸಬಹುದು ಎಂಬ ಜ್ಞಾನದ ಪ್ರಸಾರವಾಗಿ ಜಿಲ್ಹೆಯೊಳಗೆ ಕೈಗಾರಿಕೆಯ ವಾತಾವರಣ ಹುಟ್ಟಬಹುದು ಡಾ॥ ಸುಂದರರಾವ ಪಂಡಿತರು ಪ್ರದರ್ಶನ ಮಂಡಳದ ವಿಚಾರವನ್ನು ತತ್ಪರತೆಯಿಂದ ಪುರಸ್ಕರಿಸಿದರೆ ಕಾರ್ಯಭಾಗವಾಗುವಂತಿದೆ

⁂

ಗ್ರಾಮೋದ್ಧಾರ ಮಂಡಳವನ್ನು ಯುದ್ಧಯತ್ನ ಮಂಡಳದ ಅಂಗವಾಗಿ ರೂಪಾಂತರಿಸಿದ್ದು ವ್ಯಸನಕರ ಹಿಂದುಸ್ಥಾನದೊಳಗೆ ಯುದ್ಧಯತ್ನ ವಿರೋಧಿಗಳ ಪ್ರಾಬಲ್ಯವಿರುವಾಗ, ಗ್ರಾಮೋದ್ಧಾರವನ್ನು ಸಕಲರೂ ಅಪೇಕ್ಷಿಸುತ್ತಿರುವಾಗ ಯುದ್ಧಯತ್ನ ವಿರೋಧಿಗಳಿಗೆ ಮಂಡಳದಲ್ಲಿ ಸೇರಲು ಅಡ್ಡಿಯಾಗುವಂತೆ ಸರಕಾರವು ಗ್ರಾಮೋದ್ಧಾರ ಮಂಡಳಗಳ ಧೋರಣವನ್ನು ಬದಲಿಸಮಾಡಿತ್ತು ಗ್ರಾಮೋದ್ಧಾರ ಕಾರ್ಯದಲ್ಲಿ ಗ್ರಾಮೋದ್ಧಾರಕ್ಕೆ ಪ್ರಾಧಾನ್ಯವಿರಬೇಕು ಯುದ್ಧೋದ್ಯಮಕ್ಕಾಗಿ ಪ್ರತ್ಯೇಕ ಮಂಡಳಗಳಿವೆ ಪ್ರತ್ಯೇಕ ಕಾರ್ಯಕರ್ತರಿದ್ದಾರೆ ಹೀಗಿರುವಾಗ, ಗ್ರಾಮೋದ್ಧಾರ ಮಂಡಳಗಳನ್ನು ಯುದ್ಧೋದ್ಯಮ ಮಂಡಳಗಳನ್ನಾಗಿ ಪರಿಣಮಿಸಿದ್ದು ಅಪ್ರಶಸ್ತ ಕಾಂ [illegible]ಕ್ಷದ ಜಿಲ್ಹಾ ಲೋಕಲ ಬೋರ್ಡಿನ ಅಧ್ಯಕ್ಷರೂ ಇತರ ಕೊಂಗ್ರೆಸ ಅಭಿಮಾನಿಗಳೂ ತಮ್ಮ ಸದಸ್ಯತ್ವಗಳಿಗೆ ರಾಜಿನಾಮೆ ಕೊಟ್ಟಿದ್ದು ಕ್ರಮಪ್ರಾಪ್ತವೇ ಸೈ! ಗ್ರಾಮೋದ್ಧಾರವಾದರೆ ಯುದ್ಧಯತ್ನಕ್ಕೆ ವಿರೋಧವೇನಿಲ್ಲ ಮೇಲಾಗಿ ಯುದ್ಧಯತ್ನಕ್ಕೆ ಪೋಷಕವೇ ಸೈ! ಹೀಗಿರುವಾಗ ಮುಂಬಯಿ ಸರಕಾರವು ಗ್ರಾಮೋದ್ಧಾರ ಮಂಡಳದ ಧೋರಣವನ್ನು ಬದಲಿಸದೆ ಮೂಲ ಕಲ್ಪನೆಯಂತೆ ನಡಿಸುವದೂ ಆ ಪ್ರಕಾರ ಕಾರ್ಯಕ್ರಮವನ್ನು ಪಾಲಿಸುವದೂ ಸಭ್ಯತನ

ಸಹ್ಯಾದ್ರಿ ಫಾರ್ಮಸಿ
ಕುಮಟಾ.

ಬಾಳಂತಿಯರಿಗೆ— ಕಸ್ತೂರಿ ಮಿಶ್ರಣ ದಶಮೂಲಾರಿಷ್ಟ ಮತ್ತು ಧನ್ವಂತರಿ ಗುಳಿಗೆ ಒಳ್ಳೇ ಉಪಯುಕ್ತವಾದದ್ದು!

ಚಿಕ್ಕ ಮಕ್ಕಳ ಜಂತುವಿನ ಬಾಧೆಗೂ ಪುಷ್ಟಿಯಾಗಲಿಕ್ಕೂ ಸಾಯರಪ್-ಟುಟಿಪಾ ಒಂದೇ ದಿವ್ಯವಾದ ಔಷಧವು!

ನಾಯಿ-ಕೆಮ್ಮಿಗೆ ಎಂಟೇ ದಿವಸಗಳಲ್ಲಿ ಗುಣಪಡಿಸುವ ಕಫನಾಶಕವು

ಯಾವತ್ತೂ ಪ್ರಕಾರಗಳ
ಕಷಾಯ, ಅರಿಷ್ಟ, ಆಸವ,
ತೈಲಾದಿ ಔಷಧ ಸಾಮುಗ್ರಿಗಳು
ಸದಾ ಸಿಗುತ್ತವೆ.

ಡಾ॥ ಎಸ್. ಕೇ. ಭಟ್ಟ,
ಹಳಕಾರ, ಕುಮಟಾ.

ಧಾತುಪುಷ್ಟಿ ಲೇಹ. (ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ) ನಷ್ಟವಾಗಿರುವ ಪುರುಷತ್ವವನ್ನು ಪುನಃ ತಿರುಗಿ ಕೊಡುವ ಅತ್ಯುತ್ತಮ ಶಕ್ತಿದಾಯಕ ಔಷಧಿ ಮಾನಸಿಕ ಮತ್ತು ಕಾಮಶಕ್ತಿಗಳನ್ನು ಹೆಚ್ಚಿಸಿ, ಆರೋಗ್ಯ ಇಂದ್ರಿಯಶಕ್ತಿ ಇವೇ ಮೊದಲಾದವುಗಳನ್ನು ಕಲ್ಪಿಸಿಕೊಡುವದು ಬಾಟ್ಲಿ ೧ಕ್ಕೆ 2—8—0

ಕಸ್ತೂರಿ ಮಿಶ್ರಣ ದಶಮೂಲ. ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ ಬಾಟ್ಲಿ ೧ಕ್ಕೆ ರೂ 1—8—0

ಮಲೇರಿಯಾ ನಿವಾರಿಣಿ. ಮಲೇರಿಯಾ ಜ್ವರ ಚಳಿಜ್ವರ, ಇನ್‌ಫ್ಲುಯೆಂಝಾ, ಮಲಬದ್ಧತೆ ಇವುಗಳಿಗೆ ಪ್ರಸಿದ್ಧ ಔಷಧಿ ಬಾಟ್ಲಿ ೧ಕ್ಕೆ ರೂ 0—13—0

ಸ್ಪ್ಲೀನ ಮಿಕ್ಶ್ಚರ. ಜ್ವರಗಡ್ಡೆಯನ್ನು ಕರಗಿಸುವ ದಿವ್ಯೌಷಧಿ ಬಾಟ್ಲಿ ೧ಕ್ಕೆ ರೂ 1-2-0.

ಎಮ್. ಗಣಪಯ್ಯ ಎಂಡ್ ಸನ್ಸ, ರಥಬೀದಿ ನಂಬ್ರ 5, ಮಂಗಳೂರು. ದ. ಕ

ಔಷಧಿ ಸಿಗುವ ಸ್ಥಳ — (1) ಸ್ವಸ್ತಿಕ ಫಾರ್ಮಸಿ, ಕುಮಟಾ (2) ಕಾಮತ ಸ್ಟೋರ್ಸ, ಹೊನ್ನಾವರ, (3) ಸ್ಟೇಶನರಿ ಡಿಪೋ, ಅಂಕೋಲಾ (4) ಕೆ ಗಣಪಯ್ಯ ಶಾನಭಾಗ, ಮರ್ಚಂಟ, ಭಟಕಳ. (5) ಪೈ ಪ್ಯಾಲೇಸ ಸ್ಟೋರ್ಸ ಕಮಿಷ್ಟ 163, ಸುಬಾರಿಬಾಗ ಪರೇಲ, (6) ಜನರಲ್ ಸ್ಟೋರ್ಸ, ಜಿ ಆಯ ಪಿ ಮಾಟುಂಗ (7) ಮ್ಹಾಳಪ್ಪ ಪದ್ಮನಾಭ ಶೆಟ್ಟಿ, ಮರ್ಚಂಟ ಕಾರವಾರ, (8) ವಿ ಮಯ್ಯರ ಬ್ರದರ್ಸ ಸಿದ್ದಾಪುರ (9) ಪ್ರೊಪ್ರೈಟರ ಮೆಡಿಕಲ್ ಸ್ಟೋರ್ಸ, ಗೋಕರ್ಣ, (10) ಎಂ ಎಲ್ ಧಗಪ್ಪ ಎಂಡ್ ಸನ್ಸ ಬಡವರ ಔಷಧಿ ಅಂಗಡಿ ಶಿರಸಿ [ಕ್ಯಾಟಲಾಗಿಗೆ ಬರೆರಿ]

ದಿ ಬೋಂಬೆ ಲ್ಯಾಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್,

ಸ್ಥಾಪನೆ 1908

ಈ ಕಂಪನಿಯು ಪೂರ್ಣ ಹಿಂದೀ [illegible] ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯಾಗಿವೆ [illegible] ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ ಇಂಡಿಯನ್ ಟ್ರಸ್ಟ ಎಕ್ಟಿನ ಸಿಕ್ಯುರಿಟಿಗಳಲ್ಲಿ [illegible] ತೊಡಗಿಸಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ [illegible] ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದರೆ ಸಿಗುವದು

Kumta Agents
D K Nayak Bros
K N Nayak
Honavar Agent
R V Prabhu

K. PadmanabhaRao & Sons,
BELGAUM
Chief Agents for
Karnatak Districts & S M States

ಚಿತ್ರಬಿಂದು

ಮಕ್ಕಳ ಮರಣವನ್ನು
ತಪ್ಪಿಸುವದು.

ಏಜನ್ಸಿ ಕಲಕತ್ತಾ, ಮುಂಬಯಿ ಮದ್ರಾಸ, ಬೆಂಗಳೂರು ಮಂಗಳೂರು.

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆದಾಗುವಿಕೆ ಪಸುರು [illegible]ಗಳು ಕಾಮಿಲೆ,
ಗಡ್ಡೆರೋಗ ಕೋವೆ ರೋಗ, ಪೈ-ಕ್ಕ ಬಾವುಗಳಿಗೆ ದಿವ್ಯೌಷಧ!

೧ ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3

ಏತಕ್ಕೆ ಚಿಂತಿಸುವಿರಿ?

ಆಸೇತುಹಿಮಾಚಲದ ವರೆಗೂ ೪೦ ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ

ಡಾ॥ ಪಿ ಎನ್ ಶ್ರೀನಿವಾಸರಾವ,
ಲಿವ್ಹರ್ ಸ್ಪೆಶಲಿಸ್ಟ,
ಎಂ ಪಿ ಪ್ರಸಾದಿಕ ಔಷಧಾಲಯ,
ಶಿವಮೊಗ್ಗಾ

☞ ಇವರಲ್ಲಿ ಏಜಂಸಿ
ಶಿರಸಿ ಏಜಂಟ —
ಸುಬ್ರಾಯ ಸೀತಾರಾಮ ಹೆಗಡೆ
ಕುಮಟೆಯ ಏಜಂಟ —
ದೇವಪ್ಪಾ ಅಯ್ಯು ನಾಯ್ಕ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B 1270. Monday, 17th November, 1941.

ವರ್ಷ ೨೪

ಸಂಚಿಕೆ ೧೯

ಕಾನಡಾವೃತ್ತ.

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेंद्रैः ।
इति महति विरोधे वर्तमाने समाने नृपतिजनपदानां दुर्लभ कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0
ಮನಿಯಾರ್ಡರಿನಿಂದ
ರೂ 3-1 0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-4-0
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಸ್ಮಾಲ ಪ್ಯೈಕಿನ (೧೫ ಎಮ್ ಅಗಲ) ೫ ಸಾಲುಗಳವರೆಗೆ ರೂ.1 8 0 ಆ ನಂತ್ರ ಪ್ರತಿಸಾಲಿಗೆ 0-3-0

ಹೆಡ್ಡಿಂಗದ ಸಾಲು ಎಷ್ಟು ಹೊತ್ತಿರುವದೋ ಆ ಜಾಗದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಬಾಕಿ ಜಾಹಿರಾತುಗಳ ಬಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

ಸುಗಂಧಿ

ಕಾಂಚನ

ಹೇರ ಆಯಿಲ

ಶ್ರೀ ಧೂತಪಾಪೇಶ್ವರ ಪನವೇಲ, ಲಿ.,

ಕರ್ನಾಟಕ ಕೇಂದ್ರ- ಯುನ್ಯಾಟೆಡ್ ಏಜನ್ಸೀಜ, ಹುಬ್ಬಳ್ಳಿ.

ಕಾರವಾರ:— ಮೆಸರ್ಸ ಮುಜುಮುದಾರ-ಕಸಬೇಕರ ಬ್ರದರ್ಸ.
ಅಂಕೋಲಾ:— ದಿ ಸ್ಟೇಶನರಿ ಡಿಪೋ
ಕುಮಟಾ:— ದೇವಪ್ಪಾ ಅಯ್ಯು ನಾಯ್ಕ.
ಹೊನ್ನಾವರ— ಮೆಸರ್ಸ ಕಲ್ಯಾಣಪುರ ಬ್ರದರ್ಸ.
ಶಿರ್ಶಿ:—{ ಶಿರ್ಶಿ ಡ್ರಗ್ ಸ್ಟೋರ್ಸ
ಎಸ್. ಎಲ್. ಥಾಕಪ್ಪಾ ಎಂಡ್ ಸನ್ಸ
ಸಿದ್ದಾಪುರ — ಮೆಸರ್ಸ ಕಾಮಯ್ಯನ ಬ್ರದರ್ಸ
ಹಳಿಯಾಳ:— ಎನ್. ಪಿ ಹಳ್ಳಿಕೇರಿ

“ಸ್ಟಾರ ಆಫ್ ಕೆನರಾ ಪ್ರೆಸ್”,

ಕುಮಟಾ.

—*—

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಯಿಂದ ಬೇಕಾದ ನಮೂನೆಯ ಕಲರ ಪ್ರಿಂಟಿಂಗ ವಗೈರೆ ಸಣ್ಣ ದೊಡ್ಡ ಛಾಪಾ ಕೆಲಸಗಳೂ, ಪುಸ್ತಕ ಮುದ್ರಣವೂ, ರೂಲಿಂಗ ಬ್ಯಾಂಡಿಂಗ ಕೆಲಸವೂ ಉತ್ತಮವಾಗಿ ಸುಲಭ ದರದಲ್ಲಿ ತಕ್ಕ ಕಾಲಕ್ಕೆ ತಯಾರಿಸಿ ಕೊಡಲಾಗುವದು.

ಇದಲ್ಲದೆ ಕೋರ್ಟ ಕಚೇರಿ ಉಪಯೋಗದ ವಕಾಲತ ವಗೈರೆ ಫಾರ್ಮಗಳೂ, ಕಸ್ಟಮ್ ಕಚೇರಿಯ ಶಿಪ್ಪಿಂಗ ಬೀಲು ಸತ್ಕೆ ವಗೈರ ಫಾರ್ಮಗಳೂ, ಗೇಣಿ ರಶೀದಿ ಬೂಕು, ಗೇಣಿಚೀಟಿ ಎಮರ್ನಾಡಿ ಫಾರ್ಮಗಳೂ ವಗೈರೆ ಮಾರಾಟಕ್ಕೆ ತಯಾರ ಸಿಗುತ್ತವ

ನಿಮ್ಮ ಛಾಪಾ ಕೆಲಸಗಳನ್ನು ನಮ್ಮಲ್ಲಿಗೇ ಕಳಿಸಿ ಒಮ್ಮೆ ಅನುಭವ ತಕ್ಕೊಂಡು ನೋಡಿರಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ಹೆಡ್ ಆಫೀಸು — **ಕುಂದಾಪುರ.**

ಬ್ರೆಂಚ ಆಫೀಸುಗಳು -- **ಅಂಕೋಲಾ, ಕುಂದಾಪುರ, ಬೈಂದೂರು, ಕೋಟೇಶ್ವರ, ಕುಮಟಾ, ಗೋಕರ್ಣ, ಕಾರವಾರ, ಹಾವೇರಿ, ಶಿವಮೊಗ್ಗಾ, ತರೀಕೆರೆ ನಗರ, ಸೋಮವಾರಪೇಟೆ** ಮತ್ತು **ವೀರರಾಜಪೇಟೆ**

ಕಾಯಂ ಠೇವುಗಳು, ಸೇವಿಂಗ್ಸ ಬೇಂಕ್ ಠೇವುಗಳು ಮತ್ತು ಚಾಲು ಠೇವುಗಳು ಸಹ ಅಂಗೀಕರಿಸಲ್ಪಡುವವು

ಭಂಗಾರದ ಡಾಗಿನೆಗಳ ವ ಇತರ ವ್ಯಾಪಾರದ ಮಾಲುಗಳ ಅಡವಿನ ಮೇಲೆ ಸವಲತ್ತಿನ ದರದ ಬಡ್ಡಿಯಲ್ಲಿ ಸಾಲ ಕೊಡಲ್ಪಡುವದು

ವ್ಯಾಪಾರದ ಕೇಂದ್ರಗಳಿಗೆ ಡ್ರಾಫ್ಟುಗಳು, ಚೆಕ್ಕುಗಳು ಸಹ ಕೊಡಲ್ಪಡುವವು ಎಲ್ಲ ತರದ ಬೇಂಕಿನ ವ್ಯವಹಾರಗಳು ಸವಲತ್ತಿನ ದರದಿಂದ ನಡಿಸಲ್ಪಡುವವು

ಕುಂದಾಪುರ,
1-8-1941 }

The Agricultural & Industrial Bank Ltd

ವಿವಿಧ ವಾರ್ತೆಗಳು.

— ಅಜಮೀರದೊಳಗಿನ ದೇವಲಿ ಜೈಲಿನಲ್ಲಿ ೨೫೫ ಮಂದಿ ರಾಜಬಂದಿಗಳಿರುತ್ತಾರೆ. ಅವರಿಗೆ ಸರಿಯಾಗಿ ನಡಿಸಿಕೊಳ್ಳದ್ದರಿಂದ ಅವರಲ್ಲಿ ೨೨೧ ಜನರು ಉಪವಾಸ ಹೂಡಿದ್ದರು ಶ್ರೀ|| ಜಯಪ್ರಕಾಶ ನಾರಾಯಣ ಮೊದಲಾದ ಸಮಾಜಸತ್ತಾವಾದಿಗಳೇ ಉಪವಾಸ ಪ್ರಕರಣಕ್ಕೆ ಮೂಲ ಈ ಕುರಿತು ಮಹಾತ್ಮರ ತನಕ ದೂರು ತಲ್ಪಿದೆ ಉಪವಾಸವನ್ನು ನಿಲ್ಲಿಸಬೇಕಾಗಿ ಮಹಾತ್ಮರು ಶ್ರೀ|| ಜಯಪ್ರಕಾಶರಿಗೆ ತಂತಿ ಮಾಡಿದ್ದರು ಉಪವಾಸ ಕಾರಣಗಳ ಪರಿಹಾರವಾದನಕ ಉಪವಾಸವನ್ನು ನಿಲ್ಲಿಸಲು ತಾವು ಅಸಮರ್ಥರಿರುವೆವಾಗಿ ಶ್ರೀ|| ಜಯಪ್ರಕಾಶರು ಮಹಾತ್ಮರಿಗೆ ಉತ್ತರ ಕಳುಹಿ ತಮಗೆ ಕ್ಷಮಿಸಲು ಕೇಳಿಕೊಂಡಿದ್ದಾರೆ ಉಪವಾಸ ನಿಲ್ಲಿಸಿದನಕ ರಾಜಬಂದಿಗಳ ದೂರುಗಳ ವಿಚಾರವಾಗಲಿಕ್ಕಿಲ್ಲವಾಗಿ ಸರಕಾರದ ಅಂಬೋಣ ಸರಕಾರದ ಈ ಕೃತಿಯನ್ನು ಮಹಾತ್ಮರು ನಿಷೇಧಿಸಿ ಕೂಡಲೆ ವಿಚಾರ ಮಾಡಿ ರಾಜಬಂದಿಗಳ ಉಪವಾಸವನ್ನು ನಿಲ್ಲಿಸುವಂತೆ ಮಾಡಲು ಸರಕಾರದ ಕಡೆ ಕೇಳಿಕೊಂಡಿದ್ದಾರೆ. ವರಿಷ್ಠ ಕಾಯಿದೆ ಕೌನ್ಸಿಲಿನ ಸಭಾಸದರಾದ ರಾ|| ನಾರಾಯಣರಾವ ಜೋಶಿಯವರ ಆಶ್ವಾಸನದ ಮೇರೆಗೆ ಈಗ ೧೬೦ ಜನರು ಉಪವಾಸ ನಿಲ್ಲಿಸಿದ್ದಾರೆ. ಉಳಿದ ೫೧ ಮಂದಿಗಳು ಉಪವಾಸವನ್ನು ಮುರಿಯಲಿಲ್ಲ ಮುಂದೆ ಸರಿಯಾಗಿ ನಡಿಸುವ ಸಂಭವವಿಲ್ಲದ್ದರಿಂದ ತಾವು ಉಪವಾಸ ನಿಲ್ಲಿಸಲಾರೆವಾಗಿ ಈ ರಾಜಬಂದಿಗಳ ಅಂಬೋಣ. ಉಪವಾಸ ನಡೆದು ಈ ಹೊತ್ತಿಗೆ ೨೨ ದಿನಗಳಾದವು ಶ್ರೀ|| ಜಯಪ್ರಕಾಶ ನಾರಾಯಣರ ಪ್ರಕೃತಿ ತೀರ ಕೆಟ್ಟಿದೆ ಶ್ರೀ|| ಜಯಪ್ರಕಾಶರ ಪತ್ನಿ ಸೌ|| ಪ್ರಭಾವತಿದೇವಿಯವರು ವರ್ಧಾದಲ್ಲಿ ಮಹಾತ್ಮರ ಬಳಿಯಲ್ಲಿದ್ದಾರೆ. ಅವಳನ್ನು ಕಾಣಲು ಅವರು ಅಪೇಕ್ಷಿಸಿದ್ದರು ಆದರೆ ಪತಿಯನ್ನು ಕಳಿಸಬಾರದಾಗಿ ಶ್ರೀ|| ಜಯಪ್ರಕಾಶರು ಮಹಾತ್ಮರಿಗೆ ತಿಳಿಸಿದ್ದಾರೆ. ಸರಕಾರವು ಹಟಮಾರಿಯಾಗಿ ಹರಿಯುವ ವರೆಗೆ ಎಳೆದರೆ, ಶ್ರೀ|| ಜಯಪ್ರಕಾಶ ನಾರಾಯಣ ಮೊದಲಾದ ರಾಜಬಂದಿಗಳು ಪ್ರಾಣ ಕಳಕೊಂಡರೆ ಅನರ್ಥವಾಗುವದು ಖಂಡಿತ

—ಹಿಂದುಸ್ಥಾನದೊಳಗಿನ ಡಾ|| ರೇ, ದೇಶಮುಖ, ಭರೂಚಾ ಮೊದಲಾದ ವೈದ್ಯಶಾಸ್ತ್ರ ವಿಶಾರದರು ಸೆರೆಮನೆಗಳಲ್ಲಿ ೩ ನೇ ವರ್ಗದ ಕೈದಿಗಳಿಗೆ ಸಿಗುವ ಆಹಾರವನ್ನು ವೈದ್ಯಶಾಸ್ತ್ರದೃಷ್ಟಿಯಿಂದ ಪರಿಶೋಧಿಸಿ ಅದರೊಳಗೆ ಮಾನವನ ದೇಹಬೆಳವಣಿಗೆಗೆ ಅವಶ್ಯಪೂರ್ಣ ಜೀವನಾಂಶಗಳ ಕೊರತೆಯಿರುವದಾಗಿಯೂ ದಿನಾಲು ೧೬ ಔಂಸು (-೩೦ ತೊಲೆ) ಹಾಲು ಜನರಿಗೆ ಅವಶ್ಯವೆಂದೂ, ಆಪ್ರಕಾರ ಆಹಾರ ಕೊಡುವಂತೆ ಸರಕಾರವು ಏರ್ಪಡಿಸಬೇಕಾಗಿಯೂ ಶಿಫಾರಸು ಮಾಡಿರತ್ತಾರೆ ಸರಕಾರವು ತಜ್ಞರ ಅಭಿಪ್ರಾಯವನ್ನು ಮನ್ನಿಸುವದಾಗಿ ಕೋರಿಕೆ

— ಮೈಸೂರ ಸರಕಾರವು ಬೆಂಗಳೂರಿನ ಸೆಂಟ್ರಲ ಜೈಲಿನಲ್ಲಿ ಒಂದು ನೂತನ ಉಪಕ್ರಮ ಕೈಕೊಂಡಿದೆ. ಅಪರಾಧ ಮಾಡಲು ಬಹುತರವಾಗಿ ಜನರಿಗೆ ಹಣದ ಅಡಚಣೆಯೇ ಕಾರಣವೆಂದು ಸರಕಾರದ ಅಭಿಪ್ರಾಯ ಅದರಿಂದ ಅಪರಾಧಿಗಳನ್ನು ಸೆರೆಮನೆಗಳಲ್ಲಿ ಬರೇ ನಿರ್ಬಂಧಿಸುವದರಿಂದ ಪ್ರಯೋಜನವುಂಟಾಗುವದಿಲ್ಲ. ಅವರಿಗೆ ಕೈಗಾರಿಕೆಗಳನ್ನು ಕಲಿಸಬೇಕು ಎಂದು ಸೆಂಟ್ರಲ ಜೈಲಿನ ಸೆರೆಯಾಳುಗಳಿಗೆಲ್ಲ ಗ್ರಾಮಕೈಗಾರಿಕೆಗಳನ್ನು ಕಲಿಸುವ ಏರ್ಪಾಟು ಮಾಡಿದೆ, ಅದರಿಂದ ಜೈಲಿನೊಳಗಿಂದ ಹೊರಬಿದ್ದವರಿಗೆ ಮರ್ಯಾದೆಯಿಂದ ಜೀವನಕ್ರಮ ನಡಿಸಲು ಉಪಾಯ ತೋರಿಸಿಕೊಟ್ಟಂತಾಗಿದೆ ಎಲ್ಲ ಸೆರೆಮನೆಗಳಲ್ಲಿ ಗ್ರಾಮಕೈಗಾರಿಕೆಗಳ ಶಿಕ್ಷಣದ ಏರ್ಪಾಟಾದರೆ ಅಪರಾಧಿಗಳ ಸಂಖ್ಯೆ ತಾನಾಗಿಯೇ ಇಳಿಯುವದು

—ನವಂಬರ ೧೧ ನೇ ತಾರೀಖು ಒಂದು ಪವಿತ್ರವಾದದಿನ. ಕಳೆದ ಮಹಾಯುದ್ಧ ಮುಗಿದ ಬಳಿಕ ಆ ಮಹಾಯುದ್ಧದಲ್ಲಿ ಸೇರಿದವರ ಸ್ಮರಣಾರ್ಥ ನಿಧಿಯನ್ನು ಒಟ್ಟುಮಾಡಿ ಆ ಮಹಾಯುದ್ಧದಲ್ಲಿ ನಷ್ಟಪಟ್ಟವರಿಗೆ ಸಹಾಯ ಮಾಡುವ ಕ್ರಮವುಂಟಾಗಿದೆ ೧೧ ನೇ ತಾರೀಖಿಗೆ ಫ್ರಾನ್ಸದೊಳಗಿನ ಫ್ಲೆಂಡರ್ಸ ಪ್ರಾಂತದಲ್ಲಿ ಬೆಳೆಯುವ ಪೊಪ್ಪಿ ಗಿಡದ ಹೂವಿನ ಮಾದರಿಯ ಮೇಲ ಹೂವುಗಳನ್ನು ತಯಾರಿಸಿ ಅವನ್ನು ಮಾರಾಟಮಾಡಿ ಹಣ ಒಟ್ಟುಮಾಡುತ್ತಾರೆ ಈ ತನಕ ಕೆಂಪು ಹೂವುಗಳೇ ಮಾರಾಟವಾಗುತ್ತಿದ್ದವು ಈ ನಿಧಿ ಎಲ್ಲರ ಹೆಸರಿನಿಂದ ಎತ್ತುವಳಿಯಾಗುತ್ತಿದ್ದಾಗ್ಯೂ ಅದು ಬ್ರಿಟಿಶರಿಗಷ್ಟೇ ಸಿಗುತ್ತಿತ್ತು ಆದರಿಂದ 'ಮುಂಬಯಿ ಕ್ರೊನಿಕಲ' ಪತ್ರಿಕೆಯು ಹೀಗೆ ಹಿಂದುಸ್ಥಾನದೊಳಗೆ ಎತ್ತುವಳಿಯಾಗುವ ನಿಧಿಯನ್ನು ಬ್ರಿಟಿಶರಿಗೆ ಹಂಚುವ ಕ್ರಮವನ್ನು ನಿಷೇಧಿಸಲು, ಆ ದಿನ ಮಾರಾಟ ಮಾಡಲು ಬಿಳೇ ಹೂವುಗಳು ಮಾಡಲ್ಪಟ್ಟವು ಬಿಳೇ ಹೂವುಗಳ ವಿಕ್ರಯದಿಂದ ಹುಟ್ಟಿದ ಹಣ ಅರ್ಧ ಬ್ರಿಟಿಶರಿಗೆ, ಅರ್ಧ ಹಿಂದೀಯರಿಗೆ ಹಂಚಿಕೊಡೋಣಾಗುತ್ತದೆ ಕೆಂಪು ಹೂವುಗಳ ಮಾರಾಟವೂ ನಡೆಯಿತು ಕೆಂಪು ಹೂವುಗಳಿಂದ ಹುಟ್ಟಿದ ಹಣ ಹಿಂದೀಯರಿಗೆ ಸಿಗುತ್ತದೆಂದು ಕೆಂಪು ಹೂವು ಮಾರಾಟಕ್ಕೆ ಒಯ್ದು ಕೆಲವರು ಕುಕೃತನ ಮಾಡಿದರಂತೆ ಆದರೆ ಚಿಕ್ಕ ಹುಡುಗಿಯರು ಸಹ ಇದನ್ನು ನಿಷೇಧಿಸಿದರಾಗಿ 'ಮುಂಬಯಿ ಕ್ರೊನಿಕಲ' ಪತ್ರಿಕೆಯಲ್ಲಿ ಪ್ರಕಟವಾಗಿದೆ ಬ್ರಿಟಿಶರೂ ಹಿಂದೀಯರೂ ಸ್ವಾರ್ಥತ್ಯಾಗ ಮಾಡಬೇಕೆಂದು ಬೋಧಿಸುತ್ತಿರುವವರು ಹೀಗೆ ಪಂಕ್ತಿ ಪ್ರಪಂಚ ಮಾಡುವದು ವಿಷಮವೆಂದು ಟೀಕೆ

— 'ಮುಂಬಯಿ ಕ್ರೊನಿಕಲ' ಪತ್ರಿಕೆಯಲ್ಲಿ ಇನ್ನೊಂದು ಪ್ರಕಾರ ಬೈಲಿಗೆ ಬಂದಿದೆ ಜಯಪುರದ ಮಹಾರಾಜರು ಮಧ್ಯ-ಪೂರ್ವ ಪ್ರದೇಶವನ್ನು, ಅಂದರೆ ಇಜಿಪ್ತ ಮೊದಲಾದ ಮುಸಲ್ಮಾನ ದೇಶಗಳನ್ನು ಸುತ್ತಾಡಿ ಬಂದರು. ಆಗ ಅವರಿಗೆ ದೊಡ್ಡ ದೊಡ್ಡ ಸೈನ್ಯಾಧಿಕಾರಿಗಳು ಹಸ್ತಾಂದೋಲನ ಮಾಡಿ ಸತ್ಕರಿಸಿದ್ದರು ಈ ಸ್ವಾಗತದ ಚಿತ್ರಪಟಗಳು ತೆಗೆಯಲ್ಪಟ್ಟವು ಸಂಚಾರದಲ್ಲಿ ಗಾಯಪಟ್ಟ ಹಿಂದೀಯರಿಗೆ ಸೇವಾಗಲು ಜಯಪುರದ ಮಹಾರಾಜರು ಅಪೇಕ್ಷಿಸಿದ್ದರು ಈ ಕುರಿತು ಬ್ರಿಟಿಶ ರಾಯಭಾರಿಗಳಾದ ಸರ್ ಮ್ಯಾಲ್ಕಮ್ ಲೆಂಪಸನ್ ದಂಪತಿಗಳೊಡನೆ ಆಲೋಚಿಸಿದ್ದರು. ಗಾಯಪಟ್ಟ ಹಿಂದೀ ಸೈನಿಕರಿಗಾಗಿ ನಿಧಿ ಸಂಗ್ರಹ ಮಾಡಲು ಆಕ್ಷೇಪವಿಲ್ಲವಾಗಿ ಲೆಂಪ್ಸನ್ ದಂಪತಿಗಳು ತಿಳಿಸಿದರಂತೆ ಆಗ ಜಯಪುರದ ಮಹಾರಾಜಾ ಶ್ರೀಮಂತ ಗೆಳೆಯರಿಗೂ ಸಂಸ್ಥಾನಿಕರಿಗೂ ತಮ್ಮ ಮುಕ್ಕಾಮಿನಿಂದ ಪತ್ರಗಳನ್ನು ಬರೆದು ನಿಧಿ ಸಂಗ್ರಹ ಮಾಡಲು ವಿನಂತಿ ಮಾಡಿಕೊಂಡರು. ಆದರೆ ಜಯಪುರದ ಮಹಾರಾಜರು ಬರೆದ ಯಾವದೇ ಪತ್ರ ಯಾರಿಗೂ ತಲ್ಪಲಿಲ್ಲ ಸರಕಾರವು ಪತ್ರಗಳನ್ನು ಹಿಂದುಸ್ಥಾನಕ್ಕೆ ತಲ್ಪಗೊಡಲಿಲ್ಲವೆಂಬ ಮಾತು ಸ್ಪಷ್ಟ. ಹೀಗೆ ನಿರ್ಬಂಧಿಸುವ ಕಾರಣವೇನೆಂದು ತಿಳಿಯಲಿಲ್ಲ! ಗಾಯಪಟ್ಟ ಹಿಂದೀ ಸೈನಿಕರು ಯಾವಾಗಲೂ ನರಳುತ್ತಿರಬೇಕೆಂದು ಸರಕಾರದ ಅಭಿಪ್ರಾಯವಿರುವದೇನೆಂದು ಟೀಕೆಯಾಗುತ್ತಿದೆ ಹಿಂದೀ ಸೈನಿಕರ ಪ್ರಶಂಸೆಯನ್ನು ಭಾರತ ಮಂತ್ರಿಗಳೂ ಮುಖ್ಯ ಪ್ರಧಾನರೂ ಮಾಡುವದನ್ನು ಕೇಳಿದರೆ ಆಲ್ಹಾದವಾಗುತ್ತದೆ. ಆದಾಗ್ಯೂ ಅವರ ಮೇಲಿನ ಮತ್ಸರವನ್ನು ಬ್ರಿಟಿಶರು ತೊರೆಯರು

— ಇತ್ತಲಾಗಿ ಸುಧಾರಿಸಿದ ಜನಗಳಲ್ಲಿ ಹಲ್ಲು ತೆಗೆದುಕೊಳ್ಳುವದೊಂದು ರೂಢಿ ಬಿದ್ದಿದೆ ಹಲ್ಲಿಗೆ ಕ್ರಿಮಿಯಾಗಿ ಅವು ಕೆಡುವದರಿಂದ ಅವೆಲ್ಲ ಕಿತ್ತುಕೊಳ್ಳಲ್ಪಡುತ್ತಿವೆ ಹಲ್ಲು ಹಾಳಾಗಲು ನಮ್ಮ ಆಹಾರವೇ ಕಾರಣ ಹಾಲನ್ನು ಹೆಚ್ಚಾಗಿ ಉಪಯೋಗಿಸಿದರೆ ಹಲ್ಲು ಘಟ್ಟಿಯಾಗಿ ಉಳಿಯುತ್ತವೆಂದು ಅಮೇರಿಕೆಯ ಡಾ|| ಜೊರ್ಜ ವ್ಹಿಪಲರವರು ಶೋಧ ಮಾಡಿರುತ್ತಾರಾಗಿ 'ಇಂಟರನೆಶನಲ್ ನ್ಯೂಸ ಸರ್ವ್ಹಿಸ" ಪತ್ರಿಕೆಯ ಶಾಸ್ತ್ರವಿಭಾಗದ ಸಂಪಾದಕರಾದ ರಾ|| ಜಿ ಬಿ. ಲಾಲರವರು ಬರೆಯುತ್ತಾರೆ ತಮ್ಮ ಸಂಶೋಧನ ಶಾಲೆಯಲ್ಲಿ ಡಾ|| ವ್ಹಿಪಲರವರು ಇಲಿಗಳ ಮೇಲೆ ಈ ಪ್ರಯೋಗ ಮಾಡಿ ನೋಡಿದರಂತೆ. ಹಾಲಿನ ಅಂಶ ಇಲ್ಲದ ಆಹಾರ ಕೊಟ್ಟ ಇಲಿಗಳ ಹಲ್ಲುಗಳ ಒಸಡುಗಳಿಗೆ ಕ್ರಿಮಿ ಹತ್ತಿ ಅವು ಸಡಿಲಾದವು ಆ ಮೇಲೆ ಅವಕ್ಕೆ ಹಾಲಿನ ಆಹಾರವನ್ನು ಡಾ|| ವ್ಹಿಪಲರವರು ಕೊಟ್ಟರಂತೆ ಆಗ ಒಸಡುಗಳು ಪುನಃ ಹುಟ್ಟಿ ಹಲ್ಲುಗಳು ಗಟ್ಟಿಯಾದವಂತೆ ಜನರು ಹಾಲನ್ನು ಹೆಚ್ಚೆಚ್ಚಾಗಿ ಸೇವಿಸಿದರೆ ಹಲ್ಲಿನ ಬಾಧೆ ತಾನಾಗಿ ನಿವಾರಣವಾಗುವಂತಿದೆ.

—ಬಂಗಾಲ ಪ್ರಾಂತದ ಅಮೀರಾಬಾದ ಗ್ರಾಮದಲ್ಲಿ ಒಂದು ಬಾವಿಯನ್ನು ಕಡಿಯುವಾಗ ಫಕ್ಕನೆ ಹೊಗೆ ಬಂತಂತೆ! ಹಾಗೆಯೇ ಜ್ವಾಲೆಗಳು ಕಂಡವಂತೆ! ಈಗ ಆ ಬಾವಿ ಮುಚ್ಚೋಣಾಗಿದೆ! ಆದಾಗ್ಯೂ ಭಯಂಕರವಾದ ಸಪ್ಪಳವು ಈಗಲೂ ಕೇಳಿ ಬರುತ್ತಿದೆ

—ನಾ|| ಬಾಳಾಸಾಹೇಬ ಖೇರರವರು ಡಿಸಂಬರ ತಿಂಗಳ ಮೊದಲನೇ ವಾರದಲ್ಲಿ ಸತ್ಯಾಗ್ರಹ ಮಾಡುವವರಿದ್ದಾರೆ ಅದೇ ಪ್ರಕಾರ ಸ್ಥಾನಿಕ ಸ್ವರಾಜ್ಯ ಇಲಾಖೆಯ ಮಂತ್ರಿಗಳಾಗಿದ್ದ ನಾ|| ಪಾಟೀಲರವರೂ ಸತ್ಯಾಗ್ರಹ ಮಾಡುವವರಿದ್ದಾರೆ. ಮಹಾರಾಷ್ಟ್ರ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಅಧ್ಯಕ್ಷರಾದ ಶ್ರೀ|| ಗೋಸಾವಿಯವರಿಗೂ ಸತ್ಯಾಗ್ರಹ ಮಾಡಲು ಮಹಾತ್ಮರು ಅಪ್ಪಣೆ ಕೊಟ್ಟಿರುತ್ತಾರೆ

[ಈ ಹೊತ್ತಿನ ಪುರವಣಿ ನೋಡಿರಿ]

ಕರ್ಣಿಕ
ಇಂದೂಬಾಮ್
ನೋವುಗಳಿಗೆ ಸಿದ್ಧೌಷಧ
ಕರ್ಣಿಕ ಬ್ರದರ್ಸ ಮುಂಬಯಿ, ನಂ.೪

ಅಮೇರಿಕೆಯೂ ಜಪಾನವೂ

(೫ನೇ ಪುಟದಿಂದ ಮುಂದುವರಿದ್ದು)

ಸಹಾಯ ಪೂರ್ಣವಾಗಿ ಸಿಗುವದಿಲ್ಲ. ಚರ್ಚಿಲ್ಲರ ಸೋಮವಾರ ಕೊಟ್ಟ ಭಾಷಣದಲ್ಲಿ ಈ ಸಂಗತಿಯನ್ನು ಸ್ಫುಟ ಮಾಡಿರುತ್ತಾರೆ. ಯುದ್ಧದಲ್ಲಿ ಸೇರದೆ ಉಳಿದ ಕಾಲಾಂಶ ಪೃಥ್ವೀಪ್ರದೇಶ ಈಗ ಯುದ್ಧದಲ್ಲಿ ಸೇರ್ಪಡೆಯಾಗುವದಾಗಿ ಚರ್ಚಿಲ್ಲರು ಹೇಳುತ್ತಾರೆ. ಇಡೀ ಭೂಭಾಗ ಯುದ್ಧ ಸೇರುವಂತೆ ಘಟನೆಗಳು ರೂಪುಗೊಳ್ಳುತ್ತಿದ್ದಾಗ ಅಮೇರಿಕೆಯಾಗಲಿ ಜಪಾನವಾಗಲಿ ಮಡಿಯಾಗಿ ಉಳಿಯುವವೆಂದು ನಾನೇನು ಧೈರ್ಯದಿಂದ ಹೇಳಲಾರೆ. ಚೀನ ದೇಶಕ್ಕೆ ರಣಸಾಹಿತ್ಯಗಳನ್ನು ಪೂರೈಸುವ ಬ್ರಹ್ಮದೇಶದ ಮಾರ್ಗದ ಕುರಿತು ಬ್ರಿಟನ-ಅಮೇರಿಕೆಗಳೊಳಗೂ ಜಪಾನದೊಳಗೂ ಮತಭೇದವಾಗುವದು ಖಂಡಿತವೆಂದು ನನ್ನ ಊಹೆ. ಆ ದೃಷ್ಟಿಯಿಂದಲೇ ಸಿಂಗಾಪುರ ಕೇಂದ್ರದಲ್ಲಿ ಬ್ರಿಟಿಶ ನೌಕಾದಲದವರು ಸೈನ್ಯ ಪಥಕಗಳನ್ನು ಠಾಣಿಸುತ್ತಿದ್ದಾರೆ. ಅಮೇರಿಕೆಯ ಹಡಗುಪಡೆಗಳು ಇಲ್ಲಿ ಆಶ್ರಯ ಪಡೆಯಬಹುದಂತೆ. ನೂತನ ಮಾದರಿಯ ವಿಮಾನ ಪಥಕಗಳು ಸದ್ಯಕ್ಕೇ ತಲ್ಪುವವಂತೆ. ಪುಣೆಯ 'ಕೇಸರಿ' ಪತ್ರಿಕೆಯ ಲಂಡನಿನ ಸುದ್ದಿಗಾರರು ಒಂದು ಹೊಸ ವಾರ್ತೆಯನ್ನು ಪ್ರಕಟಿಸಿದ್ದಾರೆ. ಹಲಿಫೆಕ್ಸ ದೊರೆಗಳು ಅಮೇರಿಕೆಯೊಳಗಿನ ಬ್ರಿಟಿಶ ರಾಯಭಾರಿಗಳು. ಅವರಿಗೆ ಬ್ರಿಟಿಶ ಪ್ರಧಾನ ಮಂಡಳವು ಹಿಂಗರೆದುಕೊಂಡು ಆಸ್ಟ್ರೇಲಿಯಾದ ಮುಖ್ಯ ಪ್ರಧಾನರಾದ ಮೆಂಝಿಸರವರಿಗೆ ಬ್ರಿಟಿಶ ರಾಯಭಾರಿಯಾಗಿ ನೇಮಿಸುವ ವಾರ್ತೆ ಅಮೇರಿಕೆಯಲ್ಲಿ ಹುಟ್ಟಿದೆಯಂತೆ. ಮಿ॥ ಮೆಂಝಿಸರವರು ಜಪಾನದ ರಾಜಕಾರಣದ ಪೂರ್ವಾಪರವನ್ನು ತಿಳಿದವರು. ಜಪಾನದ ರಾಜಕಾರಣ ಪ್ರತ್ಯಕ್ಷ ವಿಚಾರವಿನಿಮಯವಾದ್ದರಿಂದ ಬ್ರಿಟಿಶ ಪ್ರಧಾನ ಮಂಡಳವು ಆಸ್ಟ್ರೇಲಿಯಾ ವಸಾಹತಿನವರನ್ನು ರಾಯಭಾರಿಯಾಗಿ ನೇಮಿಸಿತೆಂದು ತಿಳಿಯಲಾಗಿದೆ. ಹೀಗೆಲ್ಲ ಸ್ಫೋಟಕ ಸಾಮಗ್ರಿ ಸಿದ್ಧವಾಗುತ್ತಿರುವಾಗ ಅಮೇರಿಕಾ-ಜಪಾನ ದೇಶಗಳು ಅಲಿಪ್ತವಾಗಿ ಉಳಿಯಲಾರವು.

ರುಶ್ಯ ರಣಭೂಮಿಯಲ್ಲಿ ನಡೆಯುವ ಭೀಕರ ಕದನವನ್ನು ನಾನು ವರ್ಣಿಸಲಾರೆ. ಮಧ್ಯ ಮತ್ತು ದಕ್ಷಿಣ ಭಾಗದಲ್ಲಿ ನಿಕರದಿಂದ ಹೋರಾಟ ನಡೆದಿದೆ. ಆಕಾಶ ಮಾರ್ಗದಿಂದ ವಿಮಾನಗಳು ಬೆಂಕಿಯ ಮಳೆಯನ್ನು ಸುರಿಸುತ್ತಿವೆ. ಆದಾಗ್ಯೂ ರುಶ್ಯರು ಒಳ್ಳೆ ಧೈರ್ಯದಿಂದ ಹೋರಾಡುತ್ತಿದ್ದಾರೆ. ಮೊಸ್ಕೋ ರಾಜಧಾನಿಯನ್ನು ಉಳಿಸಿಕೊಳ್ಳಲು ರುಶ್ಯರು ನಡಿಸಿದ ಘೋರ ಪ್ರಯತ್ನದ ವಾರ್ತೆ ಕೇಳಿ ಉಲ್ಹಾಸವಾಗುತ್ತದೆ. ಆದರೆ ಕೊನೆಗೆ ಜರ್ಮನರದೇ ಮುಂದರಿ' ಮೊಸ್ಕೋದ "ಪ್ರವದಾ' ಪತ್ರಿಕೆಯ ಸುದ್ದಿಗಾರನು ಬರೆದಂತೆ, ಕಾಳಗವು ಘಳಿಗೆ ಘಳಿಗೆಗೆ ಉಗ್ರ ರೂಪವನ್ನು ಧರಿಸುತ್ತದೆ. ಹಿಟ್ಲರನ ಸೈನಿಕರು ಮೊಸ್ಕೋದ ನೆರೆ ಹೊರೆಯಲ್ಲಿ ನಿಕರದಿಂದ ಹೋರಾಡುತ್ತಿದ್ದಾರೆ. ಪ್ರತಿ ದಿನ ಹೊಸ ಹೊಸ ಜರ್ಮನ ಸೈನಿಕರು ಹೋಗುತ್ತಿದ್ದಾರೆ. ಜರ್ಮನರನ್ನು ತಡೆದು ನಿಲ್ಲಿಸಿದ ಬಗ್ಗೆ ರುಶ್ಯರಿಗೆ ಎಲ್ಲರೂ ಅಭಿನಂದಿಸುತ್ತಾರೆ. ನಾನೂ ಮನದಣಿ ಹೊಗಳುತ್ತೇನೆ. ಚಳಿಗಾಲದಲ್ಲಿ ಹಿಟ್ಲರನಿಗೆ ಮೊಸ್ಕೋದ ಸುತ್ತುಮುತ್ತು ವ್ಯವಹರಿಸುವದು ಕಠಿಣವಾಗುವದಂತೆ. ಏನೇ ಆದರೂ ಮೊಸ್ಕೋದ ರಾಜಧಾನಿ ಸುರಕ್ಷಿತವೆಂದು ನಾನು ಹೇಳಲಾರೆ. ದಕ್ಷಿಣಭಾಗದಲ್ಲಂತು ಜರ್ಮನರವ್ಯೂಹ ಪೂರ್ಣವಾದ ಹಾಗಿದೆ. ಕ್ರಿಮಿಯಾ ದ್ವೀಪಕಲ್ಪ ಅರ್ಧಕ್ಕೆ ಮಿಕ್ಕಿ ಜರ್ಮನರ ವಶವಾಯಿತು. ಸೆಬಾಸ್ಟಪೂಲ ಬಂದರ ಇನ್ನೂ ವಶವಾಗಿಲ್ಲ. ಅದರ ಸುತ್ತುಮುತ್ತು ಘೋರ ಸಂಗ್ರಾಮ ನಡೆದಿದೆ. ಸೆಬಾಸ್ಟಪೂಲದ ಮೇಲೆ ಜರ್ಮನರ ವಿಮಾನ ದಾಳಿಯು ನಡೆದಿದೆ. ಹೀಗೆ ಜರ್ಮನರು ಆಕ್ರಮಿಸುತ್ತಿರುವಾಗ ಪಂಜಾಬದ ಗವ್ಹರ್ನರರಿಗೆ ಹಿಂದುಸ್ಥಾನದ ಮೇಲೆ ಮುಂದಿನ ವರುಷ ಜರ್ಮನರ ದಾಳಿಯಾಗುವ ಸ್ವಪ್ನ ಬಿದ್ದದ್ದೇನು ಆಶ್ಚರ್ಯವಲ್ಲ! ಪಂಜಾಬದ ಗವ್ಹರ್ನರರಾದ ಸರ್ ಬರ್ಟ್ರಂಡ ಗ್ಲೆನ್ಸಿಯವರು ರಾವಳಪಿಂಡಿಯ ಯುದ್ಧ ಸಮಿತಿಯ ಸಭೆಯಲ್ಲಿ ನುಡಿದಂತೆ, ಮುಂದಿನ ವಸಂತ ಋತುವಿನಲ್ಲಿ ಹಿಂದುಸ್ಥಾನದ ಮೇಲೆ ಹಿಟ್ಲರನ ದಾಳಿಯಾಗಬಹುದಾಗಿ ಹೇಳಲಿಕ್ಕೆ ದಕ್ಷಿಣ ರುಶ್ಯ ಭಾಗದಲ್ಲಿ ಜರ್ಮನರು ಪಡೆಯುತ್ತಿರುವ ವಿಜಯಗಳೇ ಕಾರಣ. ಈ ವಿಜಯಗಳನ್ನು ಈವಾಗ ಎಲ್ಲರೂ ಗೃಹೀತ ಹಿಡಿಯುವದರಿಂದ ನಾನು ಅವನ್ನು ಇನ್ನೂ ವಿವರವಾಗಿ ವರ್ಣಿಸಬಯಸುವದಿಲ್ಲ.

ತುರ್ಕಸ್ಥಾನ, ಇರಾಣ, ಇರಾಕ, ಅಫಘಾಣಿಸ್ಥಾನ, ಅರಬಸ್ತಾನ, ಸೀರಿಯಾ, ಇಜಿಪ್ತ, ಸುಯೇಜದೊಳಗಿನ ಕಥಾತಂತುಗಳನ್ನು ಈ ಹಿಂದೆಯೇ ನಾನು ವಿವರಿಸಿದ್ದೇನೆ. ತುರ್ಕಸ್ತಾನದ ರಾಜಕಾರಣದ ಸುತ್ತು-ಮುತ್ತು ಈ ವಿಭಾಗದ ಯುದ್ಧಕಾರಣ ಸುಳಿಯುತ್ತದಾಗಿ ನಾನು ಈ ಹಿಂದೆ ಹೇಳಿದ್ದೇನೆ. ಕಪ್ಪು ಸಮುದ್ರದಲ್ಲಿ ಜಲಸುರಂಗ ಹೊಡೆದು ಜರ್ಮನರೇ ತುರ್ಕರ ಹಡಗ ಮುಳುಗಿಸಿದರೆಂದು ಈ ಹಿಂದೆ ವಾರ್ತೆ ಬಿದ್ದಿತ್ತು. ಆದರೆ ಪ್ರತ್ಯಕ್ಷವಾಗಿ ಚೌಕಶಿ ಮಾಡಿದರೆ ರುಶ್ಯರೇ ಈ ಹಡಗವನ್ನು ಮುಳುಗಿಸಿದರಾಗಿ ಈಗ ಸಿದ್ಧವಾಗಿದೆ. ಈ ಪ್ರಕರಣದಲ್ಲಿ ತುರ್ಕಸ್ಥಾನದ ಯುದ್ಧಮಂತ್ರಿಗಳೂ ವಾಹನ ಮಂತ್ರಿಗಳೂ ರಾಜಿನಾಮೆ ಕೊಟ್ಟಿರುವರಂತೆ. ಭೂಮಧ್ಯ ಸಮುದ್ರದಲ್ಲಿ ಮುಳುಗಿದ ತುರ್ಕಸ್ತಾನದ ಹಡಗುಪಡೆಗಳ ಸಂಬಂಧ ಸಹ ಈ ರಾಜಿನಾಮೆಗಳಿಗುಂಟಂತೆ. ಆದರೆ ವಿವರಪೂರ್ವಕವಾದ ವಾರ್ತೆಗಳು ಸಿಗಲೊಲ್ಲವು. ತುರ್ಕಸ್ಥಾನದ ರಾಜಕಾರಣವು ಇನ್ನೂ ರೂಪುಗೊಳ್ಳುತ್ತದಾಗಿ ನನ್ನ ಊಹೆ. ಅಥವಾ ಸಂಪೂರ್ಣವಾಗಿ ಬ್ರಿಟಿಶರ ಅಪೇಕ್ಷೆಯಂತೆ ರೂಪಾಂತರ ಹೊಂದಿಲ್ಲವೆಂದು ಅನುಮಾನ. ಚರ್ಚಿಲ್ಲರು ನುಡಿದಂತೆ ಈ ಭೂಪ್ರದೇಶ ಯವ್ವಾಕ ರಣದಲ್ಲಿ ಸೇರುವ ಸಮಯ ತೀರ ಸಮೀಪಿಸಿ ಬಂದಿದೆಂದು ಹೇಳಿ ಇಲ್ಲಿಯ ಘಟನೆಗಳಿಗೆ ಪೋಷಕ ಇಲ್ಲವೆ ಘಾತಕವಾಗಿರುವ ಉತ್ತರ ಆಫ್ರಿಕೆಯೊಳಗಿನ ಕೆಲವು ಸಂಗತಿಗಳನ್ನು ಇಲ್ಲಿಯೇ ಉಲ್ಲೇಖಿಸಿಡುತ್ತೇನೆ. ಅವನ್ನು ನಾನು ಈ ಹಿಂದೆ ಸಂಕ್ಷಿಪ್ತವಾಗಿ ಸಮಾಲೋಚಿಸಿದ್ದೆ. ಆದರೆ ಅವಕ್ಕೆ ಈಗೊಂದು ಪರಿಣಾಕ ರೂಪ ಬಂದಿದೆ. ಉತ್ತರ ಆಫ್ರಿಕೆಯಲ್ಲಿ ಹಿಟ್ಲರನು ಬಹಳ ಚಟುವಟಿಕೆಗಳನ್ನು ನಡಿಸುತ್ತಿದ್ದಾನೆ. ಭೂಮಧ್ಯ ಸಮುದ್ರದಲ್ಲಿ ಅಮೇರಿಕೆಯ ಸೈನ್ಯಪಥಕಗಳು ಬಂದಿಳಿಯುವ ವಾರ್ತೆಯುಂಟು. ಆದರಿಂದ ಸ್ಪೇನ ಮಾರ್ಗವಾಗಿ ಉತ್ತರ ಆಫ್ರಿಕೆಯನ್ನು ವ್ಯಾಪಿಸುವ ಕ್ರಮ ನಡೆದಿದೆ. ಹಿಟ್ಲರನ ಚಾರರು ಈ ಪ್ರದೇಶವನ್ನು ಆಕ್ರಮಿಸಿಕೊಂಡು ಜನರೊಳಗೆ ಇರುವ ಐಕ್ಯಭಂಗ ಮಾಡಿ ಸ್ವಕಾರ್ಯವನ್ನು ಸಾಧಿಸುತ್ತಿದ್ದಾರೆ. ಈ ಪ್ರದೇಶದ ಜನರಲ್ಲಿ ವಿರೋಧ ಶಕ್ತಿಯಿಲ್ಲ. ಜನರು ತೀರ ಬಡವರು. ಹೊತ್ತುಹೊತ್ತಿಗೆ ಕೂಳು ಅವರಿಗೆ ಸಿಗದು. ಮೇಲಾಗಿ ವಿಷಮಜ್ವರ ಮೊದಲಾದ ಸಾಂಸರ್ಗಿಕ ರೋಗಗಳು ಈ ಪ್ರದೇಶದಲ್ಲಿ ರಾಜ್ಯಹೂಡಿ ಜನರನ್ನು ಕಾಡುತ್ತಿವೆ. ಸಹಾರಾ ಮರುಭೂಮಿಯಲ್ಲಿ ಈಗ ಉಗಿಬಂಡಿಯ ಮಾರ್ಗ ಸಿದ್ಧವಾಯಿತು. ಈವಾಗ ಸ್ಪೇನದ ಮೊರೊಕ್ಕೋ ವಿಭಾಗದಲ್ಲಿ ಯುದ್ಧಸಾಮಗ್ರಿಯ ಕೋಠಾರಗಳು ಕಟ್ಟಲ್ಪಟ್ಟಿವೆ. ನಾಗರಿಕ ದಲದವರು ಮನೆಮನೆಗೆ ಹೋಗಿ ೧೮ರಿಂದ ೪೦ ವರ್ಷ ವಯಸ್ಸಿನ ಜನರ ಯಾದಿಗಳನ್ನು ತಯಾರಿಸುತ್ತಿದ್ದಾರೆ. ಈ ಜನರಿಗೆ ಯಾವಾಗ ಎಲ್ಲಿಗೆ ಹೋಗಬೇಕೆಂಬದರ ಕುರಿತು ಗುಪ್ತ ಆಜ್ಞೆಗಳು ಕೊಡಲಾಗಿವೆ. ಈ ಪ್ರದೇಶದಲ್ಲಿ ಸೈನ್ಯಕವಾಯತುಗಳು ನಡೆಯುತ್ತಿರುತ್ತವೆ. ಟಾಂಜಿಯಾರ ದೇಶದಲ್ಲಿ ವಿಮಾನ-ಠಾಣ್ಯ ಕಟ್ಟಲ್ಪಟ್ಟಿದೆ. ಹೀಗೆ ಮೊರೊಕ್ಕೊದಿಂದ ಇಜಿಪ್ತದ ವರೆಗಿನ ಪ್ರದೇಶದಲ್ಲಿ ಸ್ಪೇನದ ಮಾರ್ಗವಾಗಿ ದಾಳಿ ಮಾಡುವ ವ್ಯೂಹವನ್ನು ಹಿಟ್ಲರನು ರಚಿಸಿದ್ದಾನೆ. ಕಳೆದ ಸೋಮವಾರ ಮಾತ್ರಿಡದೊಳಗೆ ಜರ್ಮನಿ, ಇತಾಲಿ ಮತ್ತು ಜಪಾನ ದೇಶಗಳ ರಾಯಭಾರಿಗಳೊಡನೆ ಸ್ಪೇನದ ವಿದೇಶ ರಾಯಭಾರಿಗಳಾದ ಸಿನೊರ ಸುನೆರರವರು ಗೌಪ್ಯದಿಂದ ವಿಚಾರವಿನಿಮಯ ಮಾಡಿದರು. ಇದ್ಯಾವ ಆಲೋಚನೆಯೆಂದು ಪ್ರಕಟವಾಗಿಲ್ಲ. ಬಹುತರವಾಗಿ ಇತ್ತ ಕಡೆ ದಾಳಿಯ ವಿಚಾರವೇ ನಡೆಯಿತೆಂದು ಹೇಳಬಹುದು. ಶನಿವಾರ ಇಜಿಪ್ತದಲ್ಲಿ ಲೋಕಸಭೆಯಾಯಿತು. ಆ ಸಭೆಯಲ್ಲಿ ಫರೂಕ ಅರಸರು ಭಾಷಣ ಮಾಡುವಾಗ ಜನರಿಗೆ ಯುದ್ಧ ಸಿದ್ಧತೆ ಮಾಡಲು ಎಚ್ಚರಿಕೆ ಕೊಟ್ಟರು. ಹತ್ತಿಯನ್ನು ಬೆಳಿಸುವದಕ್ಕಿಂತ ಗೋದಿಯನ್ನೇ ಬೆಳಿಸುವಂತೆ ಜನರಿಗೆ ಉತ್ತೇಜನ ಕೊಟ್ಟಿರುತ್ತಾರೆ. ಯುದ್ಧವೊದಗಿದ್ದಲ್ಲಿ ಆಶ್ರಯ ಸ್ಥಾನಗಳನ್ನು ಕಟ್ಟಿಸುವ ಕೆಲಸ ಸಹ ನಡೆದಿದೆ. ಈ ಕಾರ್ಯಕ್ಕಾಗಿ ಬ್ರಿಟಿಶ ಸರಕಾರವು ಇಜಿಪ್ತ ಸರಕಾರಕ್ಕೆ ೧೦ ಲಕ್ಷ ಪವನುಗಳನ್ನು ಧರ್ಮ ಮಾಡಿದೆ. ಆದರಿಂದ ಸ್ಪೇನದ ಮಾರ್ಗವಾಗಿ ಇಜಿಪ್ತ ದೇಶದ ಮೇಲೆ ಜರ್ಮನರು ದಾಳಿ ಮಾಡಬಹುದೆಂಬದೊಂದು ಭೀತಿಯುಂಟಾಗಿದೆ.

— ಬುಧವಾರ ಬಾದಶಹರು ಪಾರ್ಲಿಮೆಂಟನ್ನು ಉದ್ಘಾಟನ ಮಾಡುವಾಗ ಅಮೇರಿಕೆಯ ಸಹಾಯವನ್ನು ಹೊಗಳಿದರು. ಬ್ರಿಟಿಶ ಜನಾಂಗಿಕ್ಕೆ ನಿರ್ಧಾರದಿಂದ ಈ ಯುದ್ಧವನ್ನು ನಡಿಸಿದ ಬಗ್ಗೆ ಹೊಗಳಿದರು. ರುಶ್ಯರು ವೀರಾವೇಶದಿಂದ ನಡಿಸಿದ ಪ್ರತಿಘಟನೆಯನ್ನು ಬಾದಶಹರು ಕೊಂಡಾಡಿದರು. ಆದರೆ ಈ ಭಾಷಣದಲ್ಲಿ ಹಿಂದುಸ್ಥಾನದ ಇಲ್ಲವೆ ಬ್ರಹ್ಮದೇಶದ ಉಲ್ಲೇಖವನ್ನು ಮಾಡಲಿಲ್ಲ. ಈ ಬಗ್ಗೆ ದೊರೆಗಳ ಸಭೆಯಲ್ಲಿ ಎಡಿಸನ ದೊರೆಗಳು ನಿರಾಶೆಯನ್ನು ವ್ಯಕ್ತಗೊಳಿಸಿದರು. ಹಿಂದುಸ್ಥಾನವು ಪರತಂತ್ರವಿರುವಾಗ ಈ ಪ್ರಕಾರ ಹಿಂದುಸ್ಥಾನದ ಉಲ್ಲೇಖ ಬಾದಶಹರ ಭಾಷಣದಲ್ಲಿ ಆಗದಿರುವದು ಸ್ವಾಭಾವಿಕ. ದೊರೆಗಳು ಮುಂಚೆ ಬ್ರಿಟಿಶ ಪ್ರಧಾನ ಮಂಡಳದಲ್ಲಿದ್ದು ಸಾಮ್ರಾಜ್ಯ ಸರಕಾರದ ಸಾಮಾನ್ಯ ರಾಜ್ಯಧೋರಣ ಬಲ್ಲವರಾಗಿದ್ದು ಈಗ ನಿಷೇಧ ಮಾಡಿದ್ದೊಂದು ಸೋಜಿಗ !

— ಜುಲೈ, ಆಗಸ್ಟ, ಸಪ್ಟಂಬರ, ಆಕ್ಟೋಬರ ಈ ೪ ತಿಂಗಳಲ್ಲಿ ಬ್ರಿಟಿಶಾದಿ ಮಿತ್ರ ಜನಾಂಗಗಳ ೭ ಲಕ್ಷ ಟನ್ನಿನ ಹಡಗಗಳು ಜಲಸಮಾಧಿ ಹೊಂದಿದವು. ಇದೇ ಅವಧಿಯಲ್ಲಿ ಜರ್ಮನಾದಿ ಶತ್ರು ಪಕ್ಷದ ೧೦ ಲಕ್ಷ ಟನ್ನಿನ ಹಡಗಗಳು ಮುಳುಗಿಸಲ್ಪಟ್ಟವು!

ಕಾನಡಾವೃತ್ತ.

ಮಿತಿ ವೃಷ ಸಂವತ್ಸರ ಕಾರ್ತಿಕ ಕೃ॥ ೧೪ಕಿ, ಸೋಮವಾರ.

ರಾಜ್ಯಧೋರಣ ಬದಲಬೇಕು !

ರಾಜ್ಯಧೋರಣವನ್ನು ಬದಲಿಸಿದ ಹೊರತು ಹಿಂದುಸ್ಥಾನದೊಳಗಿನ ಅಸಂತೋಷ ಪರಿಹಾರ ಹೊಂದದೆಂದು ನಾವು ಮತ್ತೊಮ್ಮೆ ಸಾರಿ ಹೇಳುತ್ತೇವೆ. ಸತ್ಯಾಗ್ರಹಿಗಳನ್ನೂ ರಾಜಬಂದಿಗಳನ್ನೂ ಬಿಡುಗಡೆ ಮಾಡಬೇಕೆಂಬ ಮಾತು ಸ್ವಯಂಸಿದ್ಧವಾದದ್ದು ಮೌ॥ ಆಬುಲ ಕಲಮ ಆಝಾದ, ಪಂ ಜವಾಹಿರಲಾಲ ನೆಹರು, ಶ್ರೀ॥ ಜಯಪ್ರಕಾಶ ನಾರಾಯಣರವರಂಥ ಮಹಾನುಭಾವರನ್ನು ಕಾರಾಗೃಹವಾಸದಲ್ಲಿಟ್ಟು ರಾಜ್ಯಭಾರವನ್ನು ನಡಿಸುವವರು ರಾಜ್ಯಕರ್ತರಾಗಲಿಕ್ಕೆ ಅನರ್ಹರೆಂದು ವ್ಯವಹಾರಿಕರೆಲ್ಲರೂ ಹೇಳಲೇಬೇಕು. ಸದ್ಗುಣಸಂಪನ್ನರು, ಕರ್ತೃತ್ವಶಾಲಿಗಳು ಸೆರೆಮನೆಯಲ್ಲಿರಬೇಕಾದ ರಾಜ್ಯಭಾರ ಗರ್ಹಣೀಯವಾದುದು. ರಾಜ್ಯಭಾರದ ಮೂಲವೇ ಕೆಟ್ಟುಹೋದ ಲಕ್ಷಣವದು. ಆದರೆ ರಾಜಬಂದಿಗಳನ್ನಷ್ಟು ಬಿಡುಗಡೆ ಮಾಡಿದೊಡನೆ ಕಾರ್ಯಭಾಗ ಪೂರ್ಣವಾಗುವದಿಲ್ಲ. ರಾಜಬಂದಿಗಳ ಬಿಡುಗಡೆ ಮಾಡುವಾಗ ಆ ಬಂಧನಕ್ಕೆ ಕಾರಣವಾಗಿರುವ ಪರಿಸ್ಥಿತಿಯನ್ನು ಹೋಗಲಾಡಿಸಲು ರಾಜ್ಯಕರ್ತರು ಒಡಂಬಡಬೇಕು, ಅಂದರೆ ಮಾತ್ರ ರಾಜಬಂದಿಗಳ ಬಿಡುಗಡೆ ಸಾರ್ಥಕವಾದೀತು ಶ್ರೀ॥ ಮಾಧವರಾವ ಅಣೇ ಪ್ರಭೃತಿ ಲೋಕನಾಯಕರಿಗೆ ರಾಷ್ಟ್ರೀಯ ಸಭೆಯ ಕಾರ್ಯಕರ್ತರ ಬಂಧನ ಬಾಧಿಸುತ್ತದೆಂದು ನಾವು ಬಲ್ಲೆವು. ತಾವು ಹಿಂದುಸ್ಥಾನ ಸರಕಾರದ ಅಂಗವಾಗಿ ವ್ಯವಹರಿಸುವಾಗ ತಮಗಿಂತಲೂ ಮಿಗಿಲಾಗಿ ಕರ್ತೃತ್ವಶಾಲಿಗಳಾಗಿರುವ ರಾಷ್ಟ್ರೀಯ ಮಹಾಜನರು ಸೆರೆಮನೆಯ ಕಷ್ಟಭೋಗಗಳನ್ನು ಅನುಭವಿಸುವ ದೃಶ್ಯ ಅವರಿಗೆ ಅಸಹ್ಯವಾಗುವದು ಸ್ವಾಭಾವಿಕ. ಇವರ ಬಿಡುಗಡೆಗಾಗಿ ಶ್ರೀ॥ ಅಣೇ ಮೊದಲಾದವರು ಯತ್ನಿಸುವದು ಮನುಷ್ಯಸ್ವಭಾವವಷ್ಟೇ. ಆದರೆ ಮಹಾತ್ಮರು ಎಚ್ಚರಿಕೆ ಕೊಟ್ಟಂತೆ ಸತ್ಯಾಗ್ರಹಿಗಳ ಬಿಡುಗಡೆಯಿಂದ ಈ ಸಮಸ್ಯೆ ಪರಿಹಾರ ಹೊಂದದು. ರಾಜ್ಯಧೋರಣವನ್ನು ಬದಲಿಸದೆ ಸತ್ಯಾಗ್ರಹಿಗಳನ್ನಷ್ಟೇ ಬಿಡುಗಡೆ ಮಾಡಿದರೆ ತಾವು ಪುನಃ ಸತ್ಯಾಗ್ರಹದ ಆಜ್ಞೆಯನ್ನು ಹೊರಡಿಸಿ ಪುನಃ ಸೆರೆಮನೆ ತುಂಬಿಸುವೆವಾಗಿ ಮಹಾತ್ಮರು ನಿರ್ದಾಕ್ಷಿಣ್ಯದಿಂದ ತಮ್ಮ ನಿರ್ಧಾರಗಳನ್ನು ಘೋಷಿಸಿದ್ದಾರೆ. ರಾಷ್ಟ್ರೀಯ ಸಭೆಯವರು ಸೆರೆಮನೆ ಸೇರಿದ್ದು ಸೆರೆಮನೆಯಿಂದ ಹೊರಬರಬೇಕೆಂಬ ಇಚ್ಛೆಯಿಂದಲ್ಲ ರಾಜ್ಯಧೋರಣವನ್ನು ತಿದ್ದುಪಡಿ ಮಾಡಬೇಕಾಗಿ ಪರಿಪರಿಯಿಂದ ಸರಕಾರಕ್ಕೂ ಸಾಮ್ರಾಜ್ಯಕರ್ತರಿಗೂ ಬುದ್ಧಿ ಹೇಳಿದಾಗ್ಯೂ ಆ ಕಡೆ ಕಿವಿಗೊಡದೆ ನಿರಂಕುಶ ಪ್ರಭುತ್ವವನ್ನು ಎಂದಿನಂತೆ ಮುಂದೆಯೂ ನಡಿಸುವ ಮನೋನಿರ್ಧಾರವನ್ನು ಸರಕಾರವು ಮಾಡಿಕೊಂಡು ವಿರೋಧಕರನ್ನು ಸೆರೆಮನೆಗಟ್ಟಿ ಕಷ್ಟಕ್ಕೆ, ದುರ್ದಶೆಗೀಡು ಮಾಡಿದಾಗ ಆ ರಾಜ್ಯಧೋರಣ, ಆ ರಾಜ್ಯಭಾರ ಈಗಲೂ ರೂಢವಾಗಿರುವಾಗ ಸೆರೆಮನೆಗಳನ್ನಷ್ಟು ತೆರವು ಮಾಡಿ ಪ್ರಯೋಜನವೇನಿದೆ? ಈ ಧೋರಣದಲ್ಲಿ ಸಹ ಸರಕಾರದ ಔದಾರ್ಯವಿಲ್ಲ. ಮಹಾತ್ಮರ ಅನುಜ್ಞೆಯಂತೆ ಸತ್ಯಾಗ್ರಹ ಮಾಡಿ, ಸೆರೆಮನೆ ಸೇರಿದವರದೊಂದು ವರ್ಗ, ಶ್ರೀ॥ ಜಯಪ್ರಕಾಶ ನಾರಾಯಣರಂಥ ಸಮಾಜಸತ್ತಾವಾದಿ ರಾಜಬಂದಿಗಳದೊಂದು ವರ್ಗ, ಹೀಗೆ ಕರ್ತೃತ್ವಶಾಲಿ ಸೆರೆಯಾಳುಗಳಲ್ಲಿ ವರ್ಗಗಳನ್ನು ಕಲ್ಪಿಸಿ ಸತ್ಯಾಗ್ರಹಿಗಳಿಗೆ ಮಾತ್ರ ಬಿಡುಗಡೆ ಮಾಡಬೇಕೆಂದು ಸರಕಾರದ ಸಂಕಲ್ಪವಿರುವದಾಗಿ ತಿಳಿದು ಮಹಾತ್ಮರು ಸಂತಪ್ತರಾಗಿದ್ದಾರೆ. ಇಂಥ ದಯೆ ಅನುಗ್ರಹವನ್ನು ಮಹಾತ್ಮರು ಧಿಃಕರಿಸುತ್ತಾರೆ. ಸರಕಾರವು ಈ ಪ್ರಕಾರ ಭೇದ ಕಲ್ಪಿಸಿದರೆ ಸತ್ಯಾಗ್ರಹಕ್ಕೆ ಉಗ್ರ ರೂಪ ಬರುವದಾಗಿಯೂ ಪರಿಸ್ಥಿತಿ ವಿಕೋಪಕ್ಕೆ ತಳ್ಳುವದಾಗಿಯೂ ಮಹಾತ್ಮರ ಮುಂಜಾಗ್ರತೆ ಕಾಲೋಚಿತವಾದದ್ದೆಂದು ನಮ್ಮ ಅಭಿಪ್ರಾಯ. ಮಹಾತ್ಮರ ಪ್ರಕಟನೆಯ ಮೂಲಕವಾಗಿಯೇ ಸರಕಾರವು ಬುಧವಾರ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಕೊಡಮಾಡಿದ ಹೇಳಿಕೆಯನ್ನು ಈ ಹೊತ್ತು ಸೋಮವಾರದ ತನಕ ಮುಂದರಿಸಿರುತ್ತದೆ. ಸತ್ಯಾಗ್ರಹಿಗಳು ಸೆರೆಮನೆಯಲ್ಲಿರಲಿ ಇಲ್ಲವೆ ಬಿಡುಗಡೆ ಹೊಂದಲಿ ಅಥವಾ ವಿಧಿಸಿದಷ್ಟು ಕಾರಾಗೃಹವಾಸವನ್ನು ಸಂಪೂರ್ಣವಾಗಿ ಅನುಭವಿಸಲಿ, ಆ ಗೊಡವೆ ಸರಕಾರಕ್ಕೆ ಬೇಡ. ಐಹಿಕ ಇಲ್ಲವೆ ಭೌತಿಕ ಸುಖಾಪೇಕ್ಷೆಯಿಂದ ಸತ್ಯಾಗ್ರಹಿಗಳು ಸೆರೆಮನೆ ಸೇರಿರುವದಿಲ್ಲ. ದೇಶಕ್ಕೆ ಸುಖವಾಗಬೇಕು, ಸ್ವದೇಶ ಬಾಂಧವರಿಗೆ ಕ್ಷೇಮವಾಗಬೇಕು, ತುತ್ತು ಕೂಳಿಗೆ ಗತಿಯಿಲ್ಲದೆ ಅರೆಹೊಟ್ಟೆ ಉಂಡು ಒಳಲುವ ಸ್ವಜನರಿಗೆ ಹೊಟ್ಟೆ ತುಂಬ ಅನ್ನ, ಮೈತುಂಬ ಅರಿವೆ ಅಂಚಡಿ ಸಿಗಬೇಕು, ಈ ಪ್ರಕಾರ ಒದಗಿಬರುವಂತೆ ಈಗಿನ ರಾಜ್ಯಭಾರದಲ್ಲಿ ಏರ್ಪಾಟಿಲ್ಲ, ಆ ಪ್ರಕಾರ ಏರ್ಪಾಟಾಗಬೇಕು, ಹಾಗೆ ಏರ್ಪಾಟಾಗುವಂತೆ ರಾಜ್ಯಭಾರದಲ್ಲಿ ಸ್ಥಿತ್ಯಂತರ ಒದಗಿಬರಬೇಕು; ಆ ಪರಿಣತಿಗಾಗಿ ಆತ್ಮಕ್ಲೇಶಗಳನ್ನು ಅನುಭವಿಸಬೇಕು, ಇದೊಂದು ತಪಸ್ಸು, ಎಂಬ ಭಾವನೆಯಿಂದ ಸತ್ಯಾಗ್ರಹಿಗಳು ಸೆರೆಮನೆಯ ತಾಪಗಳನ್ನು ಸಹಿಸಮುಂದಾಗಿದ್ದಾರೆ! ಸೆರೆಮನೆ ಸೇರಿದ್ದು ತಪ್ಪಾಯಿತು, ಯಾವದೊಂದು ಪ್ರಸಂಗ ಸಿಕ್ಕಿದೊಡನೆ ಹೊರಬಂದು ಬಿಡಬೇಕು, ಎಂಬ ಆಲೋಚನೆ ಇಲ್ಲವೆ ಯೋಚನೆ ಸತ್ಯಾಗ್ರಹಿಗಳಿಗೆ ಬಾಧಿಸುವದಿಲ್ಲ. ಹಿಂದುಸ್ಥಾನ ಸರಕಾರವಾಗಲಿ ಸಾಮ್ರಾಜ್ಯಕರ್ತರಾಗಲಿ ಈ ಪ್ರವೃತ್ತಿಯನ್ನು ಗಣಿಸಿ ತಮ್ಮ ನಡಾವಳಿಯನ್ನು ನಿರ್ಧರಿಸಬೇಕಾಗಿ ನಾವು ವಿನಂತಿ ಮಾಡುತ್ತೇವೆ. ರಾಜ್ಯಧೋರಣವನ್ನು ಇದ್ದಕ್ಕಿದ್ದ ಹಾಗೆ ಇರಗೊಟ್ಟು ಸತ್ಯಾಗ್ರಹಿಗಳನ್ನಷ್ಟು ಬಿಡುಗಡೆ ಮಾಡಿದೊಡನೆ ಹಿಂದುಸ್ಥಾನದೊಳಗೆಲ್ಲ ಲೋಕಸಂತೋಷ ಹುಟ್ಟುವದಾಗಿ ಬ್ರಿಟಿಶ ರಾಜಕಾರಣಧುರಂಧರರು ತಿಳಿದರೆ ಅದೊಂದು ಸಂಕಟವೆಂದು ನಾವು ಹೇಳಬಯಸುತ್ತೇವೆ. ರಾಜಬಂದಿಗಳಿಗೂ ಸತ್ಯಾಗ್ರಹಿಗಳಿಗೂ ಬಿಡುಗಡೆಯಾಗಲೇಬೇಕು ಆದರೆ ಅದೇ ಕಾಲಕ್ಕೆ ರಾಜ್ಯಧೋರಣದಲ್ಲಿ ಸ್ಥಿತ್ಯಂತರ ಉಂಟಾಗಲೇ ಬೇಕು ಶ್ರೀ॥ ಜಯಪ್ರಕಾಶ ನಾರಾಯಣರಂಥ ಸಮಾಜಸತ್ತಾವಾದಿಗಳು ಹಿಂಸಾಚಾರಿಗಳೆಂದೂ ಇವರನ್ನು ಬಿಡುಗಡೆ ಮಾಡಿದರೆ ಲೋಕಕ್ಕೆ ಅಪಾಯವಿರುವದೆಂದೂ ಹಿಂದುಸ್ಥಾನ ಸರಕಾರವು ಶ್ರೀ॥ ಜಯಪ್ರಕಾಶ ನಾರಾಯಣರು ಬರೆದವೆಂಬದೊಂದು ಪತ್ರವನ್ನು ಪ್ರಕಟಿಸಿ ಜನಮನವನ್ನು ವಿಮನಸ್ಕಗೊಳಿಸಲು ಯತ್ನಿಸುತ್ತದೆ. ಆದರೆ ಇಂಥ ಕ್ರಮಗಳಿಂದ ಶ್ರೀ॥ ಜಯಪ್ರಕಾಶ ನಾರಾಯಣರಂಥವರ ದೇಶಭಕ್ತಿಗೆ ನ್ಯೂನತೆ ಉಂಟಾಗಲಾರದು. ಮದ್ರಾಸದ ‘ಹಿಂದು’ ಪತ್ರಿಕೆಯು ಬರೆದಂತೆ ಸರಕಾರವು ಪ್ರಕಟಿಸಿದ ಪತ್ರ ನಿಜವೇನೆಂಬವರ ಕುರಿತು ಸಂದೇಹವಿರುವಾಗ, ಶ್ರೀ॥ ಜಯಪ್ರಕಾಶ ನಾರಾಯಣರವರಂಥ ಸ್ವದೇಶಸ್ವಾತಂತ್ರ್ಯಕ್ಕಾಗಿ ಕಷ್ಟಭೋಗವನ್ನು ಅನುಭವಿಸುವ ದೇಶಬಾಂಧವರಿಗೆ ಜನರು ಎಷ್ಟಕ್ಕೂ ಅಮಾನ್ಯ ಮಾಡಲಾರರು, ಅವರನ್ನು ಆತ್ಮಕ್ಲೇಶಗಳನ್ನು ಅನುಭವಿಸುವ ಶಕ್ತಿ ತಮಗಿಲ್ಲವೆಂದು ಮರುಗಿ ದೇಶಬಾಂಧವರು ಅದನ್ನು ದಯಪಾಲಿಸಲು ಪ್ರಾರ್ಥಿಸಿಕೊಳ್ಳುವರು, ಹೊರತು ಅವರಿಗೆ ಎಂದಿಗೂ ಹೀಯಾಳಿಸಲಿಕ್ಕಿಲ್ಲ. ಈ ಮಾತು ಸೂರ್ಯಪ್ರಕಾಶದಷ್ಟು ಸ್ಪಷ್ಟವಿದ. ಅಧಿಕಾರಿಗಳು ಈ ವಿಚಾರವನ್ನು ಹಿಡಿಯದ ಶ್ರೀ॥ ಜಯಪ್ರಕಾಶ ನಾರಾಯಣರಂಥವರಿಗೆ ಹೀಯಾಳಿಸಹೋಗುವದು ದಡ್ಡತನ. ಮೊನ್ನೆ ಮೊನ್ನೆ ಕೌನ್ಸಿಲ ಅಫ್ ಸ್ಟೇಟ ಸಭೆಯಲ್ಲಿ ಶ್ರೀ॥ ಸುಭಾಷಚಂದ್ರರ ಪತ್ತೆಯನ್ನು ವಿಚಾರಿಸಿದಾಗ, ಶ್ರೀ॥ ಸುಭಾಷರು ರೋಮ ಇಲ್ಲವೆ ಬರ್ಲಿನದಲ್ಲಿ ಇರುವರಾಗಿಯೂ ಅವರು ಹೇಗೆ ಅತ್ತ ಕಡೆ ಪಯಣ ಬೆಳಿಸಿದರೆಂಬ ಸಂಗತಿ ತಿಳಿಯಲಿಲ್ಲವಾಗಿಯೂ ಸರಕಾರದ ಕಡೆ ಹೇಳಿಕೆಯಾಯಿತು ಇದನ್ನು ಕೇಳಿ ಲಂಡನಿನೊಳಗಿನ ವೃತ್ತಪತ್ರಿಕೆಗಳು ಶ್ರೀ॥ ಸುಭಾಷರಿಗೆ ದೇಶದ್ರೋಹಿ, ಸ್ವಾಮಿದ್ರೋಹಿ ಮೊದಲಾದ ವಿಶೇಷಣಗಳಿಂದ ಅಧಿಕ್ಷೇಪ ಮಾಡುತ್ತಿವೆ. ಆದರೆ ಇಂಥ ವಿಶೇಷಣಗಳಿಂದ ಕಾರ್ಯಭಾಗ ಹೇಗಾಗಬಲ್ಲದು? ಹಿಂದುಸ್ಥಾನ ಪರತಂತ್ರ ದೇಶ, ಅದು ಸ್ವತಂತ್ರವಾಗಬೇಕು, ಎಂಬ ತೀವ್ರ ಕಾಂಕ್ಷೆ ಇರುವಾಗ ಪ್ರತಿಯೊಬ್ಬರು ತಮ್ಮ ತಮ್ಮ ಬುದ್ಧಿಯ ಮಟ್ಟಿಗೆ ಆ ಕಾರ್ಯದಲ್ಲಿ ಪ್ರಯತ್ನಪಡುವದು ಸ್ವಾಭಾವಿಕವಾದದ್ದು. ನಮಾಂಕಿತ ಬ್ರಿಟಿಶ ಪತ್ರಕರ್ತರಾದ ಮಿ॥ ಬ್ರೇಲ್ಸಫರ್ಡರವರು ಬರೆದಂತೆ ಸ್ವಾತಂತ್ರ್ಯಕ್ಕಾಗಿ ಸಂಗ್ರಾಮ ನಡಿಸಲು ಬ್ರಿಟಿಶರು ಹಿಂದುಸ್ಥಾನಕ್ಕೆ ಅನುಜ್ಞ ಮಾಡಿಕೊಡಬೇಕು “ಹಿಂದುಸ್ಥಾನದೊಳಗೆ ಬಡತನವಿದೆ. ದುಡ್ಡಿನ ಆಶೆಗಾಗಿ ಸೈನಿಕರಾಗಲಿಕ್ಕೂ ಕಾರಖಾನೆಗಳಲ್ಲಿ ಕೆಲಸ ಮಾಡಲಿಕ್ಕೂ ಜನರು ಸಿಗಬಹುದು, ಆದರೆ ಜನಾಂಗದ ಮನೋನಿರ್ಧಾರ ಇಲ್ಲದೆ ಬುದ್ಧಿಕೌಶಲ್ಯ ಸರಕಾರಕ್ಕೆ ಯುದ್ಧಕಾರ್ಯದಲ್ಲಿ ಎಷ್ಟಕ್ಕೂ ಸಿಗದು” ಈ ಉಕ್ತಿಯ

ಗಳನ್ನು ನಾವು ಹಿಂದುಸ್ಥಾನ ಸರಕಾರಕ್ಕೂ ಸಾಮ್ರಾಜ್ಯ ಸರಕಾರಕ್ಕೂ ವಿನಯಪೂರ್ವಕವಾಗಿ ಅರ್ಪಿಸಿ ಸ್ವದೇಶಬಾಂಧವನಾದ ಬ್ರೇಲ್ಸಫರ್ಡರವರ ವಿಚಾರಸರಣಿಯನ್ನು ಗಾಂಭೀರ್ಯದಿಂದ ಪರ್ಯಾಲೋಚಿಸಬೇಕಾಗಿ ಬ್ರಿಟಿಶ ಮುಖ್ಯ ಪ್ರಧಾನರಾದ ಮಿ|| ಚರ್ಚಿಲ್ಲರವರ ಕಡೆ ನಾವು ವಿನಂತಿ ಮಾಡಿಕೊಳ್ಳುತ್ತೇವೆ, ಮಿ|| ಬ್ರೇಲ್ಸಫರ್ಡರವರಾದರೂ ಮಿ|| ಚರ್ಚಿಲ್ಲರವರಿಗೇ ವಿನಂತಿ ಮಾಡಿಕೊಂಡಿದ್ದಾರೆ "ಹೌದಣ್ಣ" (Yes men) ಜನಗಳಿಗೆ ಸರಕಾರದಲ್ಲಿ ಸೇರಿಸಿಕೊಳ್ಳುವದು ನಿರರ್ಥಕ. ಹಿಂದುಸ್ಥಾನದ ಲೋಕಮಾನ್ಯತೆಯುಳ್ಳ ಬಲಶಾಲಿ, ಸಾಹಸಿಗ, ಕರ್ತೃತ್ವಶಾಲಿ, ಧೀರ ಪ್ರಮುಖರನ್ನು ಸರಕಾರದಲ್ಲಿ ಸೇರಿಸಿಕೊಳ್ಳುವಂತೆ ಸ್ಥಿತ್ಯಂತರಗಳನ್ನುಂಟು ಮಾಡುವದೇ ಧೈರ್ಯಶಾಲಿ ರಾಜಕಾರಣಿಗಳ ಕರ್ತವ್ಯವೆಂದು ಮಿ|| ಬ್ರೇಲ್ಸಫರ್ಡರವರು ಬರೆದು ಆ ಧೈರ್ಯ, ಆ ದಿಟ್ಟತನ, ಆ ಸಾಹಸ, ಆ ದೂರದೃಷ್ಟಿಕೆ, ಆ ವಿಶಾಲತೆ ಚರ್ಚಿಲ್ಲರವರಿಗಿರುವದೇನೆಂದು ಪ್ರಶ್ನಿಸುತ್ತಾರೆ. ನಮಗಾದರೂ ಅದೇ ಮನೋವ್ಯಥೆ! ಮಿ|| ಬ್ರೇಲ್ಸಫರ್ಡರವರು ಬರೆದಂತೆ, ನಮ್ಮ ಸೇನಾಪತಿ ವೆವೆಲರು ಕುಶಲ ಸೇನಾಪತಿಗಳೆಂದು ನಾವು ಒಪ್ಪುತ್ತೇವೆ. ಹಿಂದುಸ್ಥಾನವನ್ನು ಅವರು ಕಾಪಾಡುವರೆಂಬದರಲ್ಲಿ ನಮಗೆ ಸಂದೇಹವಿಲ್ಲ. ಆದರೆ ಬ್ರಿಟಿಶರು ಹಿಂದುಸ್ಥಾನವನ್ನು ರಕ್ಷಿಸುತ್ತಾರೆಂಬ ಸಂಗತಿಯೇ ಈಗಿನ ದಿನಮಾನಕ್ಕೆ ವಿಷಮವಾದುದು. ಹಿಂದುಸ್ಥಾನವನ್ನು ಹಿಂದುಸ್ಥಾನವೇ ರಕ್ಷಿಸಿಕೊಳ್ಳಬೇಕು ಇದೇ ಈಗಿನ ಕಾಲಮಾನಕ್ಕೆ ಉಚಿತವಾದ ಘಟನೆ. ಮಿ|| ಬ್ರೇಲ್ಸಫರ್ಡರವರು ರಾಷ್ಟ್ರೀಯ ಸಭೆಯ ಹೇಳಿಕೆಯನ್ನು ಚೊಕ್ಕವಾಗಿ ಸ್ವಜನರಿಗೆ ಬೋಧಿಸಿ ನಮಗುಪಕಾರ ಮಾಡಿದ್ದಾರೆ. ಆ ಬಗ್ಗೆ ನಾವು ಅವರನ್ನು ಹೃತ್ಪೂರ್ವಕವಾಗಿ ಕೊಂಡಾಡುತ್ತೇವೆ. ರಾಜ್ಯಧೋರಣವನ್ನು ಬದಲಿಸದೆ ರಾಜಬಂದಿಗಳನ್ನು ಬಿಡುಗಡೆ ಮಾಡುವ ಕ್ರಮದಿಂದ ಹಿಂದುಸ್ಥಾನದೊಳಗೆ ಸಮಾಧಾನ ನೆಲಿಸದೆಂದು ಮಹಾತ್ಮರು ನಿರ್ಧಾರದಿಂದ ಹೇಳಿ ಮಿ|| ಚರ್ಚಿಲ್ಲ ಪ್ರಭೃತಿ ಸಾಮ್ರಾಜ್ಯಕರ್ತರಿಗೆ ಯುಗಧರ್ಮದ ಸದ್ಬೋಧೆ ಮಾಡಿದ್ದಾರೆ. ಈಗಲಾದರೂ ಸಾಮ್ರಾಜ್ಯಕರ್ತರು ಸದ್ಬುದ್ಧಿಯನ್ನು ತಳೆದು ರಾಜ್ಯಧೋರಣವನ್ನು ಬದಲಿಸುವರೆಂದು ನಮ್ಮ ನಂಬಿಗೆ

ಅಮೇರಿಕೆಯೂ ಜಪಾನವೂ.

[ನಿರೀಕ್ಷಕನು ಬರೆದುದು.]

ಈವಾಗ ಎಲ್ಲರ ಲಕ್ಷ ಅಮೇರಿಕೆ-ಜಪಾನಗಳ ಮೇಲೆ. ಚರ್ಚಿಲ್ಲ-ಹಿಟ್ಲರರು ಇವೆರಡು ಜನಾಂಗಗಳನ್ನು ಯುದ್ಧರಣರಂಗದಲ್ಲಿ ನೂಕಲು ಕಾರಸ್ಥಾನಗಳನ್ನು ನಡಿಸುತ್ತಿದ್ದಾರೆ. ಹಿಟ್ಲರನು ಜಪಾನವನ್ನು ರಣರಂಗದಲ್ಲಿ ದೂಡಲು ಬಹಳ ಕಪಟ ನಡಿಸುತ್ತಿದ್ದಾನೆ. ಪೂರ್ವ ಪ್ರದೇಶದ ಪಾರುಪತ್ಯಗಾರಿಕೆ ತನ್ನದೆಂದು ಜಪಾನನ ನಿಗ್ರಹವಿದ್ದ ಸಂಗತಿ ಲೋಕಪ್ರಸಿದ್ಧವಾದದ್ದೇ. ಜಪಾನದ ಮಂತ್ರಿಮಂಡಳವು ಗುರುವಾರ ಮುಖ್ಯ ಪ್ರಧಾನರಾದ ಸೇನಾಪತಿ ತೋಜೋರವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಮೊನ್ನೆ ಶನಿವಾರ ಲೋಕಸಭೆಯಲ್ಲಿ ಆಗತಕ್ಕ ಭಾಷಣಗಳನ್ನು ನಿರ್ಧರಿಸಿತಂತೆ. ಈಸ್ಟ ಇಂಡೀಜದೊಳಗಿಂದ ೧೬೦೦ ಜಪಾನಿಯರು ಈಗಾಗಲೇ ಸ್ವದೇಶಕ್ಕೆ ಹೊರಟಿದ್ದಾರೆ. ಮಲಾಯಾದೊಳಗಿನ ಪಹಾಂಗ ಸಂಸ್ಥಾನದ ಕೌಂಟಿನದಲ್ಲಿ ವಾಸಿಸುವ ಜಪಾನಿಯರಿಗೆಲ್ಲ ಸ್ವದೇಶಕ್ಕೆ ಹೋಗಲು ಜಪಾನ ಸರಕಾರದ ಅಪ್ಪಣೆಯಾಗಿದೆಂದು ಸಿಂಗಾಪುರದೊಳಗಿನ "ಸಿಂಗಾಪುರ ಹೆರಲ್ಡ" ಪತ್ರಿಕೆಯ ವಾರ್ತೆ. ಅದೇ ಪ್ರಕಾರ ಹೊಂಗಕೊಂಗದೊಳಗಿನ "ಚೈನಾ ಮೇಲ' ಪತ್ರಿಕೆಯು ಕೆಂಟನದೊಳಗಿನ ಸುದ್ದಿಗಾರರು ಪರ್ಲ ನದಿಯನ್ನು ಜಪಾನಿ ಸೈನ್ಯಾಧಿಕಾರಿಗಳು ವ್ಯಾಪಾರ ವ್ಯವಹಾರಕ್ಕೆ ಮುಚ್ಚಿರುವರಾಗಿ ತಿಳಿಸುತ್ತಾರೆ. ಅಲ್ಲಿ ಜಪಾನದ ಸೈನ್ಯಪಥಕಗಳು ಓಡಾಡುತ್ತವಂತೆ. ಮಾಕೋ-ಕೆಂಟನ ನದಿಗಳೊಳಗಿನ ಓಡಾಟವೂ ನಿಲ್ಲಿಸಲ್ಪಟ್ಟಿರುವದಾಗಿ ಸುದ್ದಿಯುಂಟು. ಸಯಾಮದಲ್ಲಿ ಆಕಾಶವಾಣಿಯಿಂದ ಸಮಸ್ತ ನಾಗರಿಕರಿಗೆ ಯುದ್ಧಕ್ಕಾಗಿ ತುಬಾಕಿಗಳನ್ನು ಉಪಯೋಗಿಸಲು ಸಜ್ಜಾಗಿರಬೇಕೆಂದು ಅಪ್ಪಣೆ ಹೊರಟಿದೆ. ದೇಶದ್ರೋಹಿಗಳ ಮೇಲೆ ಸರ್ಪಗಾವಲು ಇಡಬೇಕಾಗಿ ಆಕಾಶವಾಣಿಯು ಎಚ್ಚರಿಕೆ! ಅಮೇರಿಕೆಯಿಂದ ಬಾಂಬು ಒಗೆಯುವ ವಿಮಾನಗಳು ಸದ್ಯಕ್ಕೇ ಸಯಾಮಕ್ಕೆ ಬಂದೀಯುವವಂತೆ! ಅಮೇರಿಕೆಯಲ್ಲಿ ಅಧ್ಯಕ್ಷರಾದ ರೂಝವೆಲ್ಟರು ಜಪಾನಕ್ಕೆ ವಿರೋಧಿಸುತ್ತಿದ್ದಾರೆ. ಅಮೇರಿಕೆಯ ಕಾರಖಾನೆಗಳಲ್ಲಿ ಈವಾಗ ಸಂಪುಗಳು ಪ್ರಾರಂಭವಾಗಿವೆ. ಇವುಗಳಿಗೆ ಹಿಟ್ಲರನ ಗುಪ್ತ ಚಾರರ ದುರ್ಬೋಧನೆಯೇ ಕಾರಣವೆಂದು ಅಮೇರಿಕೆಯ ಅಭಿಪ್ರಾಯ. ೯ ಲಕ್ಷಕ್ಕೆ ಮಿಕ್ಕಿ ಕೂಲಿಯಾಳುಗಳು ಸಂಪು ಮಾಡಿದ್ದಾರೆ, ಇನ್ನು ೩॥ ಲಕ್ಷ ಕೂಲಿಯಾಳುಗಳು ಸಂಪು ಮಾಡುವವರಿದ್ದಾರೆ. ಇಲಿನಾಯ ಪ್ರಾಂತದಲ್ಲಿ ಮದ್ದುಗುಂಡು ತಯಾರಿಸುವ ಕಾರಖಾನೆಗೆ ಬೆಂಕಿ ಬಿದ್ದು ಇಡೀ ಕಾರಖಾನೆ ಸುಟ್ಟು ಬೂದಿಯಾಯಿತು. ಇವೆಲ್ಲ ಘಟನೆಗಳಿಗೆ ಹಿಟ್ಲರನ ಕುತಂತ್ರಗಳೇ ಕಾರಣವೆಂದು ಅಮೇರಿಕೆಯವರ ಅಭಿಪ್ರಾಯ. ಮುಖ್ಯ ಸೇನಾಪತಿಗಳಾದ ಮಾರ್ಶಲರವರು ಸದ್ಯಕ್ಕೆ ಆಕಾಶವಾಣಿಯಿಂದ ಜನರಿಗೆ ಎಚ್ಚರಿಕೆಯಿಂದಿರಲು ಸೂಚಿಸಿದ್ದಾರೆ. "ಅಮೇರಿಕೆಯೊಳಗಿನ ನಮ್ಮ ಮದ್ದು-ಗುಂಡಿನ ಕಾರಖಾನೆ, ವ್ಯಾಪಾರ-ವ್ಯವಹಾರಗಳ ಸಾಧನ ಮುಖ್ಯ ಮುಖ್ಯ ಠಾಣ್ಯಗಳನ್ನು ಉಧ್ವಸ್ತ ಮಾಡುವ ಪ್ರಯತ್ನವನ್ನು ಹಿಟ್ಲರ ತಂಡದವರು ನಡಿಸಿದ್ದಾರೆ; ಎಚ್ಚರಿಕೆ!" ಹೀಗೆ ಸೇನಾಪತಿಗಳು ಸ್ವಜನರಿಗೆ ಮುಂಜಾಗ್ರತೆ ಕೊಟ್ಟಿರುತ್ತಾರೆ. ಬ್ರಹ್ಮದೇಶದ ಮಾರ್ಗವನ್ನು ಮುಚ್ಚಬಾರದಾಗಿಯೂ ಅದನ್ನು ಮುಚ್ಚಿದರೆ ಚೀನ ದೇಶದ ಲೋಕಶಾಹಿಗೆ ಸಿಗತಕ್ಕ ಯುದ್ಧಸಾಹಿತ್ಯ ಸಹಾಯ ದೊರಕಲಿಕ್ಕಿಲ್ಲವಾಗಿಯೂ ಈ ವಿಭಾಗದಲ್ಲಿ ಒಂದು ವರ್ಷದ ತನಕ ಸಂಚರಿಸಿ ಸ್ವದೇಶಕ್ಕೆ ಮರಳಿದ ಅಮೇರಿಕೆಯ ಬೋಸ್ಟನ ವಿಶ್ವವಿದ್ಯಾಲಯದ ಡಾ|| ಹೆನ್ರಿ ಮೋಯರರವರು ಪ್ರಕಟಿಸುತ್ತಾರೆ. ಜಪಾನ ಸರಕಾರವು ವಿಶೇಷ ಅಧಿಕಾರ ಕೊಟ್ಟು ಕುರುಸು ರಾಯಭಾರಿಗಳನ್ನು ಅಮೇರಿಕೆಗೆ ರವಾನಿಸಿದೆ. ಅಮೇರಿಕಾ-ಜಪಾನ ಸರಕಾರಗಳೊಳಗೆ ಹುಟ್ಟಿದ ವೈಷಮ್ಯಗಳನ್ನು ಪರಿಹರಿಸುವ ದೆಸೆಯಿಂದ ಕುರುಸುರವರು ರವಾನೆಯಾಗಿದ್ದಾರೆ. ಅವರು ಮೊನ್ನೆ ಶನಿವಾರ ನ್ಯೂಯೊರ್ಕಿಗೆ ತಲ್ಪಿದರು. ಕೂಡಲೆ ಅವರು ವಿಮಾನಮೂಲಕ ವಾಶಿಂಗಟನಕ್ಕೆ ಹೋಗುವವರಿದ್ದರು. ಜಪಾನ ಮತ್ತು ಅಮೇರಿಕೆಗಳೊಳಗೆ ಒಡಂಬಡಿಕೆ ಮಾಡಿಕೊಳ್ಳುವದು ಅಷ್ಟೇನು ಕಠಿಣವಲ್ಲವೆಂದು ಕುರುಸುರವರ ಅಭಿಪ್ರಾಯ. ಆದರೆ ನನಗೆ ಈ ಮಾತಿನಲ್ಲಿ ಸ್ವಾರಸ್ಯ ತೋರುವದಿಲ್ಲ. ಬ್ರಿಟಿಶ ಮುಖ್ಯ ಪ್ರಧಾನರಾದ ಮಿ|| ಚರ್ಚಿಲ್ಲರು ಅಮೇರಿಕೆಯಿಂದ ಯುದ್ಧಘೋಷಣೆಯಾದ ೧ ತಾಸಿನಲ್ಲಿಯೇ ಬ್ರಿಟಿಶರು ಜಪಾನಿಯರ ಮೇಲೆ ಯುದ್ಧಘೋಷಣೆ ಮಾಡುವರೆಂದು ಹೇಳಿದರು. ಈ ಉಲ್ಲೇಖವನ್ನು ಹೊನೊಲುಲುದಲ್ಲಿ ಕುರುಸುರವರಿಗೆ ತೋರಿಸಲು ಅದನ್ನು ಕೇಳಿ ಕುರುಸುರವರು ಪರಿಹಾಸ್ಯ ಮಾಡಿದರಂತೆ. ಪೆಸಿಫಿಕ ಮಹಾಸಾಗರದಲ್ಲಿ ಶಾಂತತೆಯನ್ನು ಕಾಪಾಡುವ ಹೊಣೆಗಾರಿಕೆಯು ಅಮೇರಿಕಾ-ಜಪಾನಗಳದೆಂದು ಕುರುಸುರವರು ಹೇಳಿ, ಉಭಯತರೊಳಗೆ ಸಂಗ್ರಾಮವಾಗುವದು ದುರ್ಘಟವೆಂದು ಸೂಚಿಸುತ್ತಾರೆ. ಆದರೆ ಅಮೇರಿಕೆಯು ಜಪಾನದೊಡನೆ ಯುದ್ಧಘೋಷಣೆಯ ಪೂರ್ವತಯಾರಿ ನಡಿಸುತ್ತದಾಗಿ ನನ್ನ ಅಭಿಪ್ರಾಯ. ಅಮೇರಿಕೆಯ ಸರಕಾರವು ಚಿನವಲ್ಲಿದ್ದ ತನ್ನ ಹಡಗುಪಡೆಗಳನ್ನು ಅಲ್ಲಿಂದ ಕರಕೊಂಡಿದೆ. ಚುಂಕಿಂಗದೊಳಗಿನ "ಸೊ-ಟಿಂಗ-ಪೊ" ಪತ್ರಿಕೆಯು ಈ ಸಂಗತಿಯನ್ನು ಉಲ್ಲೇಖಿಸಿ ಇದರ ಮೇಲಿಂದ ಮುಂದಿನ ಘಟನೆಯ ಕಲ್ಪನೆ ಮಾಡಿಕೊಳ್ಳಬೇಕಾಗಿ ತಿಳಿಸುತ್ತದೆ. "ಸೊ-ಟಿಂಗ ಪೊ' ಪತ್ರಿಕೆಯು ಚೀನದೊಳಗಿನ ಸೇನಾ ಇಲಾಖೆಯ ಪತ್ರಿಕೆ, ಜಪಾನದ ರಾಜಕಾರಣವು ಚೀನದ ಸುತ್ತು ಮುತ್ತು ಸುಳಿಯುತ್ತಿದೆ. ಚೀನ ದೇಶವನ್ನು ಪಾದಾಕ್ರಾಂತ ಮಾಡಬೇಕೆಂಬ ಹೆಬ್ಬಯಕೆ ಜಪಾನಿಯರಿಗೆ, ಆದ್ದರಿಂದ "ಸೊ-ಟಿಂಗ-ಪೊ ಪತ್ರಿಕೆಯ ಸೂಚನೆಯನ್ನು ನಾನು ಅಲಕ್ಷಿಸಲಾರೆ. ಮೇಲಾಗಿ ಅಮೇರಿಕೆಯು ಹಡಗುಪಡೆಗಳನ್ನು ಪೆಸಿಫಿಕ ಮಹಾಸಾಗರದಲ್ಲಿ ಇಡುವಂತೆ ಒತ್ತಾಯಪಡಿಸಲೋಸುಗ ಜಪಾನವನ್ನು ಯುದ್ಧದಲ್ಲಿ ಸೇರ್ಪಡೆ ಮಾಡಲು ಹಿಟ್ಲರನು ಯೋಚಿಸುತ್ತಾನೆಂದು "ಸಿಂಗಪೂರ ನ್ಯೂಸಲೆಟರ' ಕರ್ತರು ಬರೆಯುತ್ತಾರೆ. ಮುಂಚಿನಿಂದಲೇ ಈ ಘಟನೆಗಾಗಿ ಹಿಟ್ಲರನು ಆತುರಗೊಂಡಿದ್ದಾನೆ. ಅಮೇರಿಕೆಯನ್ನು ಯುದ್ಧಮಾನ ಜನಾಂಗಗಳಲ್ಲಿ ನೂಕಿದನಕ ಅಟ್ಲಾಂಟಿಕ ಮಹಾಸಾಗರದಿಂದ ಆಯ್ಲೆಂಡಿಗೆ ಪಯಣ ಮಾಡುವ ಅಮೇರಿಕೆಯ ಹಡಗಗಳನ್ನು ಮುಳುಗಿಸಬಲ್ಲುವದಿಲ್ಲ. ಆಯ್ಲೆಂಡದಿಂದ ಬ್ರಿಟಿಶರು ತಮಗೆ ಬೇಕಾದ ಅನ್ನಸಾಮುಗ್ರಿ-ಯುದ್ಧಸಾಮುಗ್ರಿಗಳನ್ನು ತರಿಸಿಕೊಂಡು ಜರ್ಮನಿಗೆ ಇದಿರಾಗುತ್ತಿದ್ದಾರೆ. ಅಮೇರಿಕೆಯ ಹಡಗಗಳ ಮೇಲೆ ಹಲ್ಲೆ ಮಾಡಲಿಕ್ಕೆ ಉಪಾಯವಿಲ್ಲ, ಹಲ್ಲೆ ಮಾಡದಿರಲಿಕ್ಕೂ ಉಪಾಯವಿಲ್ಲ. ಬ್ರಿಟಿಶರಿಗಾದರೂ ಅಮೇರಿಕೆಯನ್ನು ಯುದ್ಧದಲ್ಲಿ ಸೇರಿಸಿಕೊಳ್ಳಲೇಬೇಕಾಗಿದೆ. ಅಮೇರಿಕೆಯನ್ನು ಯುದ್ಧದಲ್ಲಿ ಸೇರಿಸಿಕೊಂಡನಕ ಆ ದೇಶದಿಂದ ಸಿಗತಕ್ಕ ಯುದ್ಧ

(೩ನೇ ಪುಟದ ಮೇಲೆ ಮುಂದರಿಸಿದೆ)

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿಯ ವಿಚಿತ್ರತೆ ಇನ್ನೂ ಬಿಟ್ಟಿಲ್ಲ. ಮಧ್ಯರಾತ್ರಿಯ ನಂತರ ಮೂಡಗಾಳಿ ಏನೋ ಬೀಸುತ್ತಿದೆ, ಆದರೂ ಅದರಲ್ಲಿ ಅಷ್ಟು ತಂಪು ಇರುವದಿಲ್ಲ! ಇನ್ನೂ ಚಳಿ ಬೀಳಲಿಕ್ಕೆ ಪ್ರಾರಂಭವಾಗಿಲ್ಲ! ಹಗಲು ಹೊತ್ತಿಗೆ ಬಹಳ ಶೆಕೆಯಾಗುತ್ತಿದೆ. ಊರ ಆರೋಗ್ಯ ಸಾಧಾರಣ ಮಟ್ಟಿಗೆ ನೆಟ್ಟಗಿದೆ. ಅಕ್ಕಿ, ತೆಂಗಿನಕಾಯಿಗಳ ಧಾರಣೆ ಇಳಿಮುಖವಾಗಿದೆ.

ಕಳೆದ ವಾರ ತಿಳಿಸಿದಂತೆ ಶ್ರೀ ವೆಂಕಟರಮಣ ದೇವರ ಶಿಖರ ದೀಪಾರಾಧನೆ ಉತ್ಸವವು ಬುಧವಾರ ಒಳ್ಳೇ ವಿಜೃಂಭಣೆಯಿಂದ ನೆರವೇರಿತು.

ಇಡೀ ತಾಲೂಕಿನಲ್ಲಿ ಸರಾಯಿಯ ವ್ಯಾಪಾರ ದೊಡ್ಡ ಪ್ರಮಾಣದಿಂದ ನಡೆದಿದೆಯೆಂದು ಜನರು ದೂರುತ್ತಾರೆ. ಸಮುದ್ರಮಾರ್ಗವಾಗಿ ದಿನಾಲೂ ಗೋವೆಸರಾಯಿಯ ಒಂದು ಹೊಳೆಯೇ ಈ ಬದಿಗೆ ಹರಿದುಬರುತ್ತದಂತೆ. ನೂರಾರು ಜನರು ಈ ಕಳ್ಳ ವ್ಯಾಪಾರದಲ್ಲಿ ಸೇರಿ ತಮ್ಮ ಕಿಸೆಗಳನ್ನು ಕಾಂಚಾಣದಿಂದ ತುಂಬಿಕೊಳ್ಳುತ್ತಿದ್ದಾರೆ! ಸರಕಾರಿ ಪರವಾನೆಯಿದ್ದ ಹಾಗೂ ಸರಕಾರಕ್ಕೆ ಯೋಗ್ಯ ತೆರಿಗೆ ಕೊಟ್ಟು ವ್ಯಾಪಾರ ಮಾಡುವ ಮದ್ಯದಂಗಡಿಗಳು ಇಲ್ಲಿ ಇರುವದಿಲ್ಲ ಎಂಬ ಒಂದೇ ಕಾರಣದಿಂದ ಈ ತಾಲೂಕಿಗೆ ನಿರ್ಮದ್ಯ ಪ್ರದೇಶವೆನ್ನಬೇಕಲ್ಲದೆ ಸತ್ಯ ಸಂಗತಿಯನ್ನು ಹೇಳಬೇಕಾದರೆ ಈ ಪ್ರದೇಶವು ಈಗ ಗೋವಾ ಸರಾಯಿಯ ವ್ಯಾಪಾರದ ಒಂದು ದೊಡ್ಡ ಕೇಂದ್ರವಾಗಿದೆ. ಮದ್ಯದ ಈ ವ್ಯಾಪಾರವು ಕತ್ತಲೆಯಲ್ಲೇ ನಡೆಯುತ್ತದೆಂದು ಹೇಳಬರದು, ಬಹಳಮಟ್ಟಿಗೆ ಬಹಿರಂಗದಿಂದಲೇ ನಡೆಯುತ್ತಿದೆ. ಅಬಕಾರಿ ಅಧಿಕಾರಿಗಳಿಗೆ ಈ ವ್ಯಾಪಾರದ ಮತ್ತು ವ್ಯಾಪಾರ ನಡೆಯುವ ಸ್ಥಳಗಳ ಮಾಹಿತಿ ಇಲ್ಲವೆಂದು ತಿಳಿಯುವದೂ ಕಷ್ಟ! ಇಂಥ ಸ್ಥಳಗಳ ಸುತ್ತುಮುತ್ತು ಅಬಕಾರಿ ಅಧಿಕಾರಿಗಳು ತಿರುಗಾಡುವದು ಮೇಲಿಂದ ಮೇಲೆ ಕಣ್ಣಿಗೆ ಬೀಳುತ್ತಿದೆ. ಅವರೇಕೆ ಅಲ್ಲಿ ತಿರುಗುತ್ತಾರೆಂದು ಮಾತ್ರ ತಿಳಿಯುವದಿಲ್ಲ! ಅಬಕಾರಿ ಜನರು ಮಲಗಿಕೊಂಡಿದ್ದಾರೆಂದು ಯಾರೂ ಹೇಳುವದಿಲ್ಲ. ದಿನಾಲೂ ಅವರು ಒಂದಿಲ್ಲೊಂದು ಕಡೆ ಸರಾಯಿ ಹಿಡಿಯುತ್ತಾರೆ, ಪಿಟ್ಲ ಮಾಡಿಕೊಡುತ್ತಾರೆ, ಹಲಕೆಲವು ಆರೋಪಿತರಿಗೆ ಶಿಕ್ಷೆಗಳನ್ನೂ ಮಾಡಿಸುತ್ತಾರೆ. ಆದರೆ ಅವರು ಹಿಡಿಯುವದು ೪-೬ ಡ್ರಾಮು ಸರಾಯಿ ಇಲ್ಲವೆ ಶಾಪು, ಅರ್ಧ ಅಥವಾ ಹೆಚ್ಚೆಂದರೆ ಒಂದು ಬಾಟ್ಲಿ ಸರಾಯಿ! ದಪ್ಪಗಟ್ಟಲೆ ಸರಾಯಿ ಅವರಿಗೆ ಸಿಗಲೊಲ್ಲದು! ದೊಡ್ಡ ದೊಡ್ಡ ಸರಾಯಿಯ ವ್ಯಾಪಾರಿಗಳೂ ಅವರ ಕೈಯಲ್ಲಿ ಸಿಗಲೊಲ್ಲರು! ಸರಾಯಿಯ ವ್ಯಾಪಾರವನ್ನು ನಿರ್ಮೂಲ ಮಾಡಬೇಕೆಂಬ ತೀವ್ರ ಉತ್ಕಂಠೆ ಇದ್ದರಲ್ಲವೇ ಇದೆಲ್ಲ ಸಾಧ್ಯ? ಹಿಂದೊಮ್ಮೆ ಬರೆದಂತೆ ಸಮಾಜಘಾತಕ ಮದ್ಯದ ವ್ಯಾಪಾರವನ್ನು ಸಂಪೂರ್ಣ ನಿಲ್ಲಿಸಬೇಕೆಂದು ಹಾತೊರೆಯುವ ಜನರು ಈ ಪ್ರದೇಶದಲ್ಲಿ ಬೇಕಷ್ಟು ಇದ್ದಾರೆ. ಮದ್ಯನಿರೋಧನ ಕಾರ್ಯದಲ್ಲಿ ತುಂಬಾ ಆಸಕ್ತಿಯುಳ್ಳ, ಸಾಹಸೀ ಅಧಿಕಾರಿಗಳು ಸಹಾಯ-ಸಹಕಾರ ಬೇಡಿದಲ್ಲಿ ಮಾಡಲಿಕ್ಕೆ ಸಿದ್ಧರಿದ್ದವರೂ ವಿಪುಲರಿದ್ದಾರೆ. ಆದರೆ ಈಗಿನ ಅಬಕಾರಿ ಅಧಿಕಾರಿಗಳು ಇಂಥ ಜನರ ಸಹಾಯವನ್ನೂ ಕೋರುವದಿಲ್ಲ; ಸಹಕಾರವನ್ನೂ ಬೇಡುವದಿಲ್ಲ! ಹಾಗೂ ಪ್ರಾಮಾಣಿಕ ಸುದ್ದಿಗಾರರು ಸುದ್ದಿ ಕೊಟ್ಟರೆ ಈ ಅಧಿಕಾರಿಗಳು ಅತ್ತ ಕಿವಿಗೊಡುವದಿಲ್ಲ! ಸುದ್ದಿ ಕೊಟ್ಟ ಜನರ ಹೆಸರು ಮಾತ್ರ ಮದ್ಯವ್ಯಾಪಾರಿಗಳಿಗೆ ನೇರವಾಗಿ ತಿಳಿದು ಸುದ್ದಿಗಾರರು ಆ ವ್ಯಾಪಾರಿಗಳ ಬೈಗಳ ಪೂಜೆಯನ್ನು ಸ್ವೀಕರಿಸುವ ಪ್ರಸಂಗ ಬರುತ್ತದೆ! ಅಬಕಾರಿ ಅಧಿಕಾರಿಗಳಿಗೆ ಸರಾಯಿ ಹಿಡಿಯುವ ಕಾರ್ಯದಲ್ಲಿ ಸಹಾಯಮಾಡುವವರಿಲ್ಲವೆಂತಿಲ್ಲ, ಅನೇಕರು ಇದ್ದಾರೆ, ಆದರೆ ಅವರ ಸ್ಥಿತಿಗತಿ, ಚಾರಿತ್ರ್ಯ ನೀತಿಮತ್ತೆ ನೋಡಿದರೆ ಅವರ ಮಾತಿನ ಮೇಲೂ ಸಾಕ್ಷಿಯ ಮೇಲೂ ವಿಶ್ವಾಸವನ್ನಿಡುವದು ಸಭ್ಯಜನರಿಗೆ ಕಠಿಣವಾಗುತ್ತದೆ! ಬೇರೊಂದು ಉದರನಿರ್ವಾಹದ ಸಾಧನವಿಲ್ಲದ್ದರಿಂದ ಊರಲ್ಲಿ ಅಲೆದಾಡುವ ಈ ಜನರು ಸರಾಯಿ ಹುಡುಕಿ ಕೊಡುವ ಈ ಉದ್ಯೋಗವನ್ನು ಕೈಕೊಂಡಿದಾರೆಂದು ಹೇಳಿದರೂ ಹೇಳಬಹುದು! ಕಳ್ಳತನದಿಂದ ಯಾರೊಬ್ಬ ಬಡವನ ಮನೆಯಲ್ಲಿ ಸರಾಯಿಯ ಬಾಟಲಿಯನ್ನು ಇಟ್ಟು, ಹಿಂದುಗಡೆ ಅಧಿಕಾರಿಗಳ ಕಡೆಯಿಂದ ಶೋಧ ಮಾಡಿಸುವ ಹಾಗೂ ಆ ಬಡವನನ್ನು ಪಿಟ್ಲಿಯ ಕಷ್ಟನಷ್ಟಗಳಿಗೆ ಗುರಿಪಡಿಸುವ ಪಾಪಿ ದುರಾತ್ಮರೂ ಈ ಪಂಗಡದಲ್ಲಿದ್ದಾರೆ! ಮೇಲಧಿಕಾರಿಗಳು ಈ ಎಲ್ಲ ಪರಿಸ್ಥಿತಿಯನ್ನು ಆಳವಾಗಿ ಪರಾಂಬರಿಸಿ, ಈ ಪ್ರದೇಶವು ನಿಜವಾಗಿಯೂ ನಿರ್ಮಾದಕವಾಗಬೇಕೆಂಬ ತಾತ್ಪರ್ಯ ಅವರಿಗಿರುತ್ತಿದ್ದರೆ, ಮದ್ಯನಿರೋಧನ ಕಾರ್ಯದ ಬಗ್ಗೆ ದೃಢವಾದ ವಿಶ್ವಾಸ ಮತ್ತು ತಾತ್ಪರ್ಯವುಳ್ಳ ಸಿಬ್ಬಂದಿಯನ್ನು ಇಲ್ಲಿ ನೇಮಿಸಬೇಕಾಗಿ ಮದ್ಯಪ್ರತಿಬಂಧನ ಕಾರ್ಯಕರ್ತರೊಬ್ಬರು ಸೂಚಿಸುತ್ತಾರೆ.

ಕಳೆದ ಬುಧವಾರದಿಂದ ಇಲ್ಲಿಯ ಜ್ಯುಬಿಲಿ ಧರ್ಮಶಾಲೆಯಲ್ಲಿ ಕಾಂಗ್ರೆಸ ವಿಧಾಯಕ ಸಪ್ತಾಹ ನಡೆಯುತ್ತಿದೆ. ದಿನಾಲು ನೂಲುವ ಶಿಕ್ಷಣದ ವರ್ಗ, ಸಾಮುದಾಯಿಕ ಸೂತ್ರಯಜ್ಞ, ಪ್ರಭಾತ ಫೇರಿ, ಸಾಯಂಕಾಲದಲ್ಲಿ ಸಾಮುದಾಯಿಕ ಪ್ರಾರ್ಥನೆ ಮುಂತಾದ ಕಾರ್ಯಕ್ರಮ ನಡೆಯುತ್ತಿದೆ. ನಾಳೆ ಮಂಗಳವಾರ ಸಪ್ತಾಹದ ಮುಕ್ತಾಯವಾಗುವದು.

ಕಳೆದ ಕಾರ್ತಿಕ ಹುಣ್ಣಿವೆಯ ದಿನ ಇಲ್ಲಿಯ ಪೌಜದಾರ ರಾ॥ ದಳವಾಯಿಯವರು ಜುಗಾರ ಮಂಡ ಒಡೆದದ್ದು ಗುಡೇಅಂಗಡಿಯಲ್ಲಿ ಹೊರತು ಹೊಲನಗದ್ದೆಯಲ್ಲಿಲ್ಲ ಎಂದು ಹೊಲನಗದ್ದೆಯ ಪಟೇಲರು ತಿಳಿಸುತ್ತಾರೆ.

ಕಳೆದ ವಾರದ 'ವೃತ್ತ' ದಲ್ಲಿ ಶಿರ್ಸಿ ಬಸ್ ಯೂನಿಯನ್ನಿನ ಲೆಕ್ಕ ಪ್ರಕಟವಾಗಿದೆಯಷ್ಟೆ. ಆ ಲೆಕ್ಕದಲ್ಲಿ ನೋದದ ರೂ. ೧೬೬—೧೦—೦ ಬೆಲೆಯ ಸ್ಟೇಶನರಿ ವಗೈರೆ ಯೂನಿಯನ್ನಿನ ಮಾಲ್ಕಿಯ ಸಾಮಾನು ಶಿಲ್ಕು ಇರುತ್ತದಾಗಿ ರಾ॥ ಸಿ ಎನ್ ಪೈರು ತಿಳಿಸುತ್ತಾರೆ.

ಮೂರೂರಿನ ಪೋಲೀಸ ಪಟೇಲರೂ ದೊಡ್ಡ ಜಮೀನದಾರರೂ ಆದ ರಾ॥ ತಿಮ್ಮಪ್ಪ ವಿಷ್ಣ್ವೇಶ್ವರ ಹೆಗಡೆ ಹುಳಸೇಮಕ್ಕಿ ಇವರು ಕಳೆದ ತಾ ೩ನೇ ದಿನ ಕೈಲಾಸವಾಸಿಗಳಾದರೆಂದು ನಮೂದಿಸಲು ವ್ಯಸನವಾಗುತ್ತಿದೆ. ಮೃತಾತ್ಮರು ಶಾಂತಸ್ವಭಾವದವರೂ ದೀನದಯಾಳುಗಳೂ ಆಗಿದ್ದು ಊರಲ್ಲಿ ಒಳ್ಳೇ ಲೋಕಪ್ರಿಯರಿದ್ದರು. ದೇವರು ಅವರ ಆತ್ಮಕ್ಕೆ ಚಿರಶಾಂತಿಯನ್ನೀಯಲಿ!

ಕಳೆದ ಮಂಗಳವಾರ ಮೂರೂರಿನ ಶ್ರೀ ದುರ್ಗಾದೇವಿಯ ಗುಡಿಯಲ್ಲಿ ಅಹೋರಾತ್ರಿ ಭಜನೆ ನಡೆದು ಮರುದಿನ ಮಂಗಲವಾಯಿತು. ಬಹಳ ಜನರು ಈ ಉತ್ಸವದಲ್ಲಿ ಸೇರಿದ್ದರು. ಬುಧವಾರ ಸಂಜೆಗೆ ವೇ॥ ಮಂಜನಾಥ ಭಟ್ಟರು ಒಂದು ಕೀರ್ತನೆ ಮಾಡಿ ಕೀಚಕವಧೆಯ ಕಥೆಯನ್ನೂ ಅದರ ತಾತ್ಪರ್ಯವನ್ನೂ ಬಹಳ ಸರಸವಾಗಿ ಬಣ್ಣಿಸಿದರು.

ಹೊನ್ನಾವರ— ಚಳಿ ಬೀಳಲು ಆರಂಭವಾಗಿದೆ. ಅಕ್ಕಿ ದರ ಇಳಿಯುತ್ತಿದೆ. ಸಾಣಗಿ ಅಕ್ಕಿ ಖಾನಗಿ ೧ಕ್ಕೆ ೪-೧೪-೦, ೫-೦-೦ ಮತ್ತು ಬೆಣ್ತಗಿ ಅಕ್ಕಿ ಖಾನಗಿ ೧ಕ್ಕೆ ೫-೧೨-೦. ೫-೧೩-೦ ಹೀಗೆ ಧಾರಣೆಗಳುಂಟು.

ಇಲ್ಲಿಯ ಸಾವಕಾರರಾದ ರಾ॥ ಕರ್ಕಿ ಕೇಶವ ಪಾನಭಾಗರು ನ್ಯೂ ಇಂಗ್ಲಿಷ ಶಾಲೆಯ ನಿಧಿಗೆ ರೂ.೧೧೦೦ ಕಾಣಿಕೆ ಕೊಟ್ಟಿರುತ್ತಾರೆಂದು ತಿಳಿಯುತ್ತದೆ.

ತೂಕಕಾಟೆಗಳ ತಪಾಸಕರು ಕೊಟ್ಟ ಸ್ಪಷ್ಟೀಕರಣದಲ್ಲಿ, ೩-೩ ಮಣಗಳ ಎರಡು ಕಲ್ಲುಗಳನ್ನು ಸೀಸ ತುಂಬಿ ಸರಿಪಡಿಸಿಕೊಡಲಿಕ್ಕೆ ಅಸ್ಪದವಿಲ್ಲದ್ದರಿಂದ ಅವನ್ನು ಜಪ್ತಿ ಮಾಡಿಯಾಯಿತಾಗಿ ಹೇಳಿರುತ್ತಾರಷ್ಟೇ. ತಪಾಸಕರು ಕೊಟ್ಟ ಈ ನೆವವು ಕುಂಟ ನೆವವೆಂದು ಸಂಬಂಧಪಟ್ಟ ವರ್ತಕರ ಅಂಬೋಣವಿದೆ. ಆ ಕಲ್ಲುಗಳಲ್ಲಿ ಈಗಿದ್ದ ಕಣ್ಣುಗಳೊಳಗೆ ಸಾಕಷ್ಟು ಸೀಸ ತುಂಬಲು ಅಸ್ಪದವಿಲ್ಲದಿದ್ದರೆ ಕಮ್ಮಾರರ ಕಡೆಯಿಂದ ಆ ಕಣ್ಣುಗಳನ್ನು ಮತ್ತಷ್ಟು ಕೊರೆಯಿಸಿಕೊಳ್ಳಬಹುದಿತ್ತಲ್ಲವೂ, ಹಾಗೆ ತಾವು ಸೂಚಿಸಲಾಗಿ "ನೀವೇಕೆ ವರ್ತಮಾನಪತ್ರದಲ್ಲಿ ಈ ಸುದ್ದಿ ಕೊಟ್ಟಿರಿ? ಈಗ ಮಾತು ಮೀರಿ ಹೋಯಿತು!" ಎಂದು ಅಧಿಕಾರಿಗಳು ಪ್ರತ್ಯುತ್ತರ ಕೊಟ್ಟರೆಂದೂ ಸದರಿ ವರ್ತಕರು ದೂರುತ್ತಾರೆ. ಈಗ ಅವರು ಮೇಲಧಿಕಾರಿಗಳಿಗೆ ಅರ್ಜಿ ಮಾಡಿದ್ದಾರೆ. ಈ ವರ್ತಕರ ಕಲ್ಲುಗಳಂತೆಯೇ ತಮ್ಮ ಕಲ್ಲುಗಳನ್ನೂ ಅಧಿಕಾರಿಗಳು ಒಯ್ದಿರುತ್ತಾರೆಂದೂ ಅವನ್ನು ಸರಿಪಡಿಸಿ ತಿರುಗಿ ಕೊಡಲಿಲ್ಲೆಂದೂ ಬೇರೆ ಕೆಲವು ವರ್ತಕರೂ ದೂರುತ್ತಿದ್ದಾರೆ.

ಸಾಧುವರ್ಯ ಘೋಡಗೇ ಬುವಾರವರು ಇದೇ ಬರುವ ತಾ. ೮-೧೨-೪೧ಕ್ಕೆ ಇಲ್ಲಿಗೆ ಬಂದು ತಲ್ಪುತ್ತೇವಾಗಿ ತಿಳಿಸಿದ್ದಾರಂತೆ. ಆ ಕಾಲದಲ್ಲಿ ಅಂದರೆ ತಾ ೨--೧೨-೪೧ರಿಂದ ಹರಿನಾಮ-ಸಪ್ತಾಹ ನಡೆಸುವದಂತೆ. ಈ ಬಗ್ಗೆ ಟಪ್ಪರ ಸಭಾಮಂದಿರದ ಹಿಂದುಗಡೆ ಇರುವ ಬೈಲ ಪ್ರದೇಶದಲ್ಲಿ ಒಂದು ವಿಸ್ತೀರ್ಣ ಮಂಟಪ ಹಾಕುವ ವ್ಯವಸ್ಥೆಯಾಗಿದೆ. ಅಲ್ಲೇ ಸಾಧುವರ್ಯರ ಕೀರ್ತನೆಗಳು ನಡೆಯುವವು. ಈ ಉತ್ಸವದ ಪೂರ್ವತಯಾರಿ ಮಾಡುವದಕ್ಕಾಗಿ ಬುವಾರವರ ಶಿಷ್ಯರಾದ ಹ॥ ಭ॥ ಪ॥ ಕುಲಕರ್ಣಿಯವರು ತಾ ೨೬ಕ್ಕೆ ಇಲ್ಲಿ ಬರುವವರಿದ್ದಾರೆಂದು ತಿಳಿಯುತ್ತದೆ.

ಕೆರೋಸಿನ ಎಣ್ಣೆ ಡಬ್ಬಿ ೧ಕ್ಕೆ, ಈ ಊರಲ್ಲಿ ಕಂಪನಿಯ ದರ ರೂ. ೪-೦-೬ ಉಂಟು. ಸುಂಕ, ಇತರ ಖರ್ಚು ಕೂಡಿ ಡಬ್ಬಿ೧ಕ್ಕೆ ೬ ಪೈ ಖರ್ಚು ಬೀಳುತ್ತದೆಂದು ಹಿಡಿದರೆ ಏಜಂಟರು ೧ ಡಬ್ಬಿಯನ್ನು ರೂ ೪-೧-೦ಕ್ಕೆ ಮಾರಬೇಕು. ಆದರೆ ಅವರು ಮನಸ್ಸಿಗೆ ಬಂದಹಾಗೆ ರೂ ೪-೩-೦, ೪ ೩ ೦ಕ್ಕೆ ಮಾರುತ್ತಾರೆ. ಎಣ್ಣೆಯ ಉಗ್ರಾಣದ ಬಾಗಿಲಲ್ಲಿ ಧಾರಣೆಯ ಪಾಟಿಯೊಂದನ್ನು ತೂಗಹಾಕಬೇಕೆಂದು ಕಂಪನಿಯವರ ನಿಯಮವುಂಟಂತೆ. ಆದರೆ ಇಲ್ಲಿ ಯಾವ ಏಜಂಟರೂ ಅಂಥ ಪಾಟಿಯನ್ನು ಹಚ್ಚಿರುವದಿಲ್ಲ! ಕಂಪನಿಯವರು ಆ ವಿಷಯ ಚೌಕಶಿ ಮಾಡಬೇಕು ಎಂದು ವರ್ತಕರೊಬ್ಬರು ಬರೆಯುತ್ತಾರೆ.

ಕೊಡ್ಲ ಕೃಷ್ಣನ ಖಟ್ಲೆಯ ವಿಚಾರ ಇಲ್ಲಿಯ ಕಚೇರಿಯಲ್ಲಿ ನಡೆದಿದೆ. ಬಹಳ ಜನರು ಅದನ್ನು ಕೇಳಲು ಹೋಗುತ್ತಿದ್ದಾರೆ. ಕೃಷ್ಣನ ಒಬ್ಬ ಸಂಗಡಿಗನಾಗಿದ್ದ ಬೈಲೂರ ಸುಬ್ಬಾ ಎಂಬಾತಗೆ ಆಚೆಯ ಶುಕ್ರವಾರ ಭಟಕಳ ಫೌಜದಾರರೂ ಜಮಾದಾರರೂ ಕೂಡಿ ಶಿರಸಿಕೋಡ ಸಮೀಪ ಹೊಸಪಟ್ಟಣ ಎಂಬ ಊರಲ್ಲಿ ಸೆರೆಹಿಡಿದಿರುವರೆಂದು ಸುದ್ದಿ ಬಂದಿದೆ. ಅವನನ್ನು ಹಿಡಿದುಕೊಂಡು ಮುರ್ಡೇಶ್ವರಕ್ಕೆ ಹೋಗುತ್ತಿದ್ದಾಗ, ಸುಬ್ಬನು ಕಾಳಗಿರಿ ಎಂಬಲ್ಲಿ ಒಂದು ಕಡೆ ತಾನು ಹುಗಿದಿಟ್ಟ ೮—೯ ತೊಲೆ ತೂಕದ ಬೆಳ್ಳಿಯ ಕಳವಿನ ಸಾಮಾನು ತಾನಾಗಿಯೇ ತೋರಿಸಿಕೊಟ್ಟನಂತೆ. ಅದು ಮುರ್ಡೇಶ್ವರ ರವಳಪ್ಪ ಪ್ರಭುರ ಮನೆಯ ಸಾಮಾನು ಆಗಿರಬೇಕೆಂದು ತರ್ಕವಿದೆ.

ಮಹಿಮೆ ಗ್ರಾಮದೊಳಗಿನ ಮರಾಠಿ ಜನರು ತಮ್ಮ ತಮ್ಮ ಹೊಲಗಳ ತಲೆಯ ಮೇಲಿರುವ ಗುಡ್ಡಗಳನ್ನು ಸ್ವಚ್ಛಗೊಳಿಸಿ ಅಲ್ಲಿ ರಾಗಿ ಬೆಳೆಸುತ್ತಾರೆ. ಬಹಳ ವರ್ಷಗಳಿಂದ ಈ ಕ್ರಮ ನಡೆದು ಬಂದಿದೆ. ಮೊನ್ನೆಯೇ ನೇಮಕಪಟ್ಟ ಗೇರಸಪ್ಪಾ ಶಾನಭೋಗರೇನೋ ೧೦-೧೨ ದಿನಗಳ ಹಿಂದೆ ಮಾಹಿಮೆ ಗ್ರಾಮಕ್ಕೆ ಹೋಗಿದ್ದರೆಂತಲೂ, ಅವರು ಮರಾಠಿಗಳ ರಾಗಿ ಬೆಳೆ ನೋಡಿ "ನಿಮಗೆ ರಾಗಿ ಬೆಳೆಸಲು ಹೇಳಿದವರು ಯಾರು?" ಎಂದು ಪ್ರಶ್ನಿಸಿ ಬಹಳ ಬೆದರಿಸಿದರೆಂತಲೂ, ಒಬ್ಬೊಬ್ಬರಿಗೆ ೫೦—೬೦ ರೂಪಾಯಿ ದಂಡ ಮಾಡಿಸುತ್ತೇನೆಂದು ಬಹಳ ಬೆದರಿಕೆ ಹಾಕಿದರೆಂದೂ ದೂರು ಬಂದಿದೆ. ಪ್ರಾಂತ ಸಾಹೇಬರು ಶಾನಭೋಗರ ಈ ಅತಿಕ್ರಮದ ಚೌಕಶಿ ಮಾಡಬೇಕಾಗಿ ಸೂಚನೆಯಿದೆ.

ಕಳೆದ ತಾ ೮ನೇಗೆ ನೊಕಕೋಡದಲ್ಲಿ ಗ್ರಾಮದೇವರ ಉತ್ಸವದ ಕಾಲಕ್ಕೆ ಇದಗುಂಜಿಯ ಯಕ್ಷಗಾನ ಮಂಡಳಿ

ಯುವಕರು “ಸುಭದ್ರಾ ಪರಿಣಯ” ಎಂಬ ಆಖ್ಯಾನವನ್ನು ಅಭಿನಯಿಸಿದರು. ಮಂಡಳಿಯ ವಿಷಯ ಪ್ರತಿಪಾದನೆ, ರಸಾಭಿನಯ ಮುಂತಾದ್ದು ಕಂಡು ತೃಪ್ತಿಯಾದ ರಾವ್ ಶ್ರೀಕರ ನಾರಾಯಣ ನಾಯ್ಕರು ಚಿಕ್ಕದೊಂದು ಭಾಷಣ ಮಾಡಿ, ಪ್ರಯಾಣಿಗಳ ವ್ಯವಸ್ಥೆಯಲ್ಲಿ ಅವಶ್ಯ ಮಾಡಬೇಕಾದ ಕೆಲವು ಸೂಕ್ತ ಸೂಚನೆಗಳನ್ನು ಮಾಡಿದರು

ಮುಂಡೇಶ್ವರ— (ತಾ ೧೪-೧೧-೪೧) ಹಗಲು ಸೆಕೆ, ರಾತ್ರಿ ಚಳಿ ಬೀಳುತ್ತಿದೆ

ಭಟಕಳದಲ್ಲಿ ೩೦-೩೫ ಕೀರ್ತನೆಗಳನ್ನು ಮಾಡಿ ಲೋಕ ಪ್ರಿಯರಾಗಿರುವ ರಾ|| ಕಲ್ಯಾಣಪುರ ಸಂಜೀವರಾಯರು ಈಗ ಇಲ್ಲಿಗೆ ಬಂದಿದ್ದು ಈ ವರೆಗೆ ೩-೪ ಕೀರ್ತನೆಗಳಾದವು

ಶಿರಾಲಿ— (ತಾ ೧೩-೧೧-೪೧) ಇದೇ ತಿಂಗಳು ಕಟ್ಟಿದ್ದು ಊರಲ್ಲಿ ಚಿಕ್ಕ ಪುಟ್ಟ ಬೇನೆಗಳು ಹಬ್ಬಿವೆ

ಕಳೆದ ಕಾರ್ತಿಕ ಶುದ್ಧ ೧೧ಶಿಯ ದಿನ ಶ್ರೀ ಶಾಂತಾ ದುರ್ಗಾದೇವರ ಗುಡಿಯಲ್ಲಿ ಅಹೋರಾತ್ರಿ ಭಜನೆನಡೆಯಿತು

ಇದೇ ಕಳೆದ ತಾ ೭ನೇಗೆ ಶ್ರೀ ಹರಂಸಳ್ಳಿ ಛತ್ರದ ಹನುಮಂತ ದೇವರ ಗುಡಿಯಲ್ಲಿ ಸಭೆ ಸೇರಿ ಭಟಕಳ, ಶಿರಾಲಿ, ಮುರ್ಡೇಶ್ವರ ಮೊದಲಾದ ಊರುಗಳ ಸಹಕಾರಿ ಪ್ರಮುಖರು “ಸಹಕಾರಿ ಹಬ್ಬ”ವನ್ನಾಚರಿಸಿದರು. ಸಭೆಯಲ್ಲಿ ಸಹಕಾರದ ಮೇಲೆ ಹಲವಾರು ಭಾಷಣಗಳಾದವು.

ನಿನ್ನೆ ಅಷ್ಟಮಿ ಕಟ್ಟೆಯ ಬಳಿ ದೈವಜ್ಞ ಬಂಧುಗಳು ಸಪ್ತ-ಪ್ರಹರ ಭಜನೆ ಉತ್ಸವ ಮಾಡಿದರು. ಉತ್ಸವಕ್ಕೆ ಶ್ರೀ ಚಿತ್ರಾಪುರ ಮಠಾಧಿಪತಿಗಳನ್ನು ಗೌರವದಿಂದ ಕರೆತಂದು, ವಿಜೃಂಭಣೆಯ ಪಾದಪೂಜೆಯನ್ನೂ ಮಾಡಿದರು.

ಶ್ರೀ ಚಿತ್ರಾಪುರ ಮಠದವರು ಒಬ್ಬ ವರ್ತಕರಿಂದ ೩೪ ಕೆರೋಸಿನ್ ಎಣ್ಣೆ ಡಬ್ಬಿ ಕೊಂಡುಕೊಂಡಿದ್ದರು ಆ ಡಬ್ಬಿಗಳ ತೂಕದ ಬಗ್ಗೆ ಯಾರಿಗೋ ಸಂಶಯ ಬಂದು ಡಬ್ಬಿಗಳನ್ನು ತೂಗಿ ನೋಡಲಾಗಿ ಅಂತು ೩೦ ರತ್ತಲ್ ಎಣ್ಣೆ ಕಡಿಮೆ ಇದ್ದದ್ದು ಕಂಡು ಬಂದಂತೆ! ಏಜಂಟರಾಗಲಿ ನಡುವಿನ ವರ್ತಕರಾಗಲಿ ಹೀಗೆ ಕಡಿಮೆ ತೂಕದ ಡಬ್ಬಿಗಳನ್ನು ಮಾರಿದರೆ ಕಿರಕೋಳ ವ್ಯಾಪಾರಿಗಳ ಇಲ್ಲವೆ ಜನರ ಗತಿಯೇನ ? ಕಂಪನಿಯವರು ಪ್ರತಿ ಡಬ್ಬಿಯ ತೂಕ ಇಂತಿಷ್ಟೇ ಇರುತ್ತದೆಂದು ಜಾಹೀರಪಡಿಸಿ, ಕಡಿಮೆ ತೂಕದ ಡಬ್ಬಿಗಳನ್ನು ಮಾರದಂತೆ ಏಜಂಟರಿಗೆ ವಿಧಿಸುವದೊಳಿತು.

ತೂಕಕಳತೆಗಳ ಅಧಿಕಾರಿಗಳು ಈಗ ಇಲ್ಲಿ ಬಂದಿದ್ದಾರೆ ಅಂತೆ, ಕೆಲ್ಲಾ ಮುಂತಾದವರುಗಳ ತಪಾಸಣೆ ನಡಿಸಿದ್ದಾರೆ ಹಿಂದೆ ಒಮ್ಮೆ ತಮ್ಮ ಸಾಮಾನು ತಮಗೆ ತಿರುಗಿ ಕೊಡಲಿಕ್ಕೆ ಇವರು ಬಂದಿರಬಹುದೆಂದು ಕೆಲವರು ಆಶಾಭರಿತರಾಗಿದ್ದರು. ಆದರೆ ಯಾರ ಸಾಮಾನೂ ತಿರುಗಿ ದೊರೆತಿರುವದಿಲ್ಲ ಚಿತ್ರಾಪುರದ ಶಾಕ್ರಯ್ಯನೆಂಬವನು ಅಂಗಡಿಯಲ್ಲಿ ಇಲ್ಲದಿದ್ದಾಗ ಅವನ ಕಂಟಿವನ್ನೇನೋ ಅಧಿಕಾರಿಗಳು ಒಯ್ದಿದ್ದರಂತೆ ಹೀಗೆ ತಾವು ಮಾಡಬಹುದೇ ಎಂದು ಶಾಕ್ರಯ್ಯನು ಕೇಳಲಾಗಿ, “ನೀವು ಪೋಲೀಸರಲ್ಲಿ ಫಿರ್ಯಾದವನ್ನು ಮಾಡಬಹುದಿತ್ತಲ್ಲ!” ಎಂದು ಅವರು ಉತ್ತರ ಕೊಟ್ಟರಂತೆ! ಕೊಣಿಗಾರ ಅಧಿಕಾರಿಗಳು ಇಂಥ ಮಾತುಗಳನ್ನಾಡಿದರೆ ಹಳ್ಳಿಯ ಬಡ ವ್ಯಾಪಾರಿಗಳ ಗತಿಯೇನು ?

ಶಿರ್ಶಿ— ಶಿರ್ಶಿಯಲ್ಲಿ ಯಾವದೇ ಕೆರೋಸಿನ್ ಎಣ್ಣೆ ಕಂಪನಿಯ ಏಜಂಟರಿಲ್ಲ, ಕುಮಟೆಯ ಏಜಂಟರೂ ಹಾವೇರಿಯ ಏಜಂಟರೂ ಇಲ್ಲಿ ತಮ್ಮ ಡಬ್ಬಿಗಳನ್ನು ತಂದು ಮಾರುತ್ತಾರೆ, ಹಾವೇರಿಯ ಏಜಂಟರು ಡಬ್ಬಿಗೆ ರೂ ೪-೬-೬ಕ್ಕೆ ಮಾರುತ್ತಾರೆ, ಆದರೆ ಹಾವೇರಿಯಿಂದ ತಂದು ಬಿಸಿಲಿಗೆ ಹಾಕಿದ ಈ ಡಬ್ಬಿಗಳು ಕುಮಟಾ ಏಜಂಟರು ಮಾರುವ ಮುಂಬಯಿ ಬೆಸಗಿಯ ಡಬ್ಬಿಗಳಿಗಿಂತ ತೂಕದಲ್ಲಿ ಕಡಿಮೆಯಿರುತ್ತವೆ; ಕುಮಟಾ ಏಜಂಟರು ಡಬ್ಬಿಗಳನ್ನು ಕುಮಟೆಯಿಂದ ಶಿರ್ಶಿಗೆ ಒಯ್ಯುವ ಮುಂತಾದ ಆಗಿನಾಡ ಖರ್ಚು ಕೂಡಿಸಿ ಮುಂಬಯಿ ಬೆಸಗಿಯ ಡಬ್ಬಿಗಳನ್ನು ರೂ ೪ ಆ. ೬ಕ್ಕೆ ಮಾರುತ್ತಾರೆ, ಅದಕ್ಕೂ ಕಡಿಮೆ ದರದಿಂದ ಮಾರಲು ಪೂರೈಸುವದಿಲ್ಲ, ಎಂದು ಮುಂತಾಗಿ ಕುಮಟಾ ಏಜಂಟರ ಮುಖಾಂತರ ಅವರ ಪ್ರತಿನಿಧಿಗಳು ತಿಳಿಸುತ್ತಾರೆ.

ಸಿದ್ದಾಪುರ— ಕಳೆದ ವಾರ ಲಿಂಗಾಯತ ಪೇಟೆಯಲ್ಲಿ ಮೋಟಾರ ಅಪಘಾತವಾಗಿ ಒಂದು ಬಾಲಕಿಯು ಪ್ರಾಣಕ್ಕೆರವಾದಳು. ಊರಲ್ಲಿ ಬಂಡಿಯನ್ನು ಓಡಾಡಿಸುವ ಮೋಟಾರಡ್ರೈಯವ್ಹರರು ಇದರಿಂದ ಬೋಧ ಪಡೆಯಬೇಕು.

ಇಲ್ಲಿಯ ಖಾದಿ ಭಾಂಡಾರದಲ್ಲಿ ಕಳೆದ ತಿಂಗಳೊಳಗೆ ರೂ ೩೬೬ ರ ಖಾದಿ ವಿಕ್ರಯವಾಗಿದೆ.

ಮಂಚಿಕೇರಿ— (ತಾ ೭-೧೧-೪೧) ಮೊನ್ನೆ ಈ ಬದಿಯ ಸಹಕಾರಿ ಸಂಸ್ಥೆಗಳು ಕೂಡಿ ಗೋರಗದ್ದೆಯಲ್ಲಿ ಸಹಕಾರಿಗಳ ಸಮ್ಮೇಲನ ಜರುಗಿಸಬೇಕೆಂದು ಗೊತ್ತಾಗಿತ್ತು ಮೇಲಧಿಕಾರಿಗಳೂ ಹಾಗೆ ಅಪ್ಪಣೆ ದಯಪಾಲಿಸಿದ್ದರು. ಮತ್ತು ಸಮ್ಮೇಲನದ ಅಧ್ಯಕ್ಷಸ್ಥಾನ ವಹಿಸಲು ಶಿರ್ಶಿ ಯೂನಿಯನ್ನಿನ ಚೇರಮನ್ನರು ಬರುವರೆಂದೂ ತಿಳಿಸಿದ್ದರು ಅದರಂತೆ ಇಲ್ಲಿಯ ಜನರು ಎಲ್ಲ ತಯಾರಿ ಮಾಡಿಕೊಂಡು ಸಂಜೆಯ ತನಕ ಅಧ್ಯಕ್ಷರ ಹಾದಿ ಕಾಯುತ್ತ ಕುಳಿತರು ಆದರೆ ಅಧ್ಯಕ್ಷರು ಬರಲೇ ಇಲ್ಲ! ಬಾರಲಾಗುವದಿಲ್ಲೆಂದೂ ತಿಳಿಸಲಿಲ್ಲ! ಕೊನೆಗೆ ನಿರಾಶರಾಗಿ ಜನರು ಮನೆಗೆ ಹೋಗಬೇಕಾಯಿತು! ಸಹಕಾರಿ ಪ್ರಮುಖರ ಈ ನಡತೆಯಿಂದ ಹಳ್ಳಿಯ ಜನರಲ್ಲಿ ಅವರ ಬಗ್ಗೆ ಅವರ ಸಹಕಾರದ ಬಗ್ಗೆ ಅನಾದರವುಂಟಾಗದೆ ಉಳಿದೀತೇ ?

ಜಾಹೀರ ನೋಟೀಸು.

ಅಪ್ರಾಯಸ್ಥ ಸುಬ್ರಾಯ ಜನಿತ ತಂದೆ ಸಾಂಬಶಿವ ಭಟ್ಟ ಉಪಾಧ್ಯಾಯನ ದತ್ತತಂದೆ ಸೂರ್ಯನಾರಾಯಣ ಶಂಕರ ನಾರಾಯಣ ಭಟ್ಟ ರಕ್ಷಕ ಜನಿತ ತಂದೆ ಸಾಂಬಶಿವ ದತ್ತಾತ್ರಯ ಭಟ್ಟ ಸಾ|| ಹೊಳೆಗದ್ದೆ ಗ್ರಾಮದ ಪೈಕಿ ಚಿತ್ರಗೇರಿ ಆದ ನಾನು ಈ ಮೂಲಕ ಯಾವತ್ತೂ ಜನರಿಗೆ ತಿಳಿಸುವದೇನಂದರೆ:- ಅಪ್ರಾಯಸ್ಥನ ದತ್ತತಂದೆ ಸೂರ್ಯನಾರಾಯಣ ಶಂಕರನಾರಾಯಣ ಭಟ್ಟರು ಇತ್ತೀ ಕಡೆಗೆ ತಮ್ಮ ಅಳಿಯಂದಿರ ವ ಹೆಣ್ಣುಮಕ್ಕಳ ದುರ್ಬೋಧನೆಗೆ ಬಲಿಬಿದ್ದು ದತ್ತ-ಕುಟುಂಬದ ಹೇರಳ ಕಿಮ್ಮತ್ತಿನ ಚರ ಆಸ್ತಿಗಳನ್ನು ಪರಾಧೀನ ಮಾಡಿದ್ದಲ್ಲದೆ ಸ್ಥಿರ ಆಸ್ತಿಯನ್ನು ಸಹ ಪರಾಧೀನ ಮಾಡುವ ಆಲೋಚನೆಯಲ್ಲಿದ್ದಾರಾಗಿ ತಿಳಿಯುತ್ತದೆ. ಅಪ್ರಾಯಸ್ಥನು ಸ್ವಲ್ಪ ದಿನಗಳಲ್ಲಿಯೇ ಪ್ರಾಯಕ್ಕೆ ಬರತಕ್ಕವನಿದ್ದುದರಿಂದ ದತ್ತನ ಮೇಲಿನ ಮತ್ಸರ ಬುದ್ಧಿಯಿಂದ ಸದ್ರಿಯವರ ಅಳಿಯಂದಿರು ಮಾ ಸೂರ್ಯನಾರಾಯಣ ಭಟ್ಟರ ಕಡೆಯಿಂದ ದತ್ತ-ಕುಟುಂಬದ ಸ್ಥಿರ ಆಸ್ತಿಗಳನ್ನು ತಮ್ಮ ಆಪ್ತೇಷ್ಟರ ಹೆಸರಿಗೆ ಕ್ರಯ ಮೂಲಗೇಣಿ ವಗೈರೆ ಖಾತೆಯಿಂದ ಹಕ್ಕ ಮಾಡಿಸುವ ಹವಣಿಕೆಯಲ್ಲಿದ್ದಾರಾಗಿ ತೋರುತ್ತದೆ. ಸದರ ಸೂರ್ಯನಾರಾಯಣ ಭಟ್ಟರಿಗೆ ಚರ-ಸ್ಥಿರ ಆಸ್ತಿಗಳನ್ನು ಪರಾಧೀನ ಮಾಡುವ ಯಾವದೇ ಗರಜು ಇರುವದಿಲ್ಲ ಹೀಗಿದ್ದು ಯಾರಾದರೂ ದತ್ತ-ಕುಟುಂಬದ ಆಸ್ತಿಯ ಹಕ್ಕು ಮಾಡಿಕೊಂಡಲ್ಲಿ ಇಂಥ ಅನ್ಯಾಯವಾದ ಪರಾಧೀನತೆಯು ಅಪ್ರಾಯಸ್ಥನಿಗೆ ಏನೂ ಬಾಧಿಸಲಾರದು ತಿಳಿಯುವದು.

ತಾರೀಕು ೧೬—೧೧—೧೯೪೧.

ಸಾಂಬಶಿವ ದತ್ತಾತ್ರಯ ಭಟ್ಟ



ವ್ಯವಹಾರ ವಿವೇಕ
ನನಗ ಹೇಳುತದೆ..

ನನ್ನ ಸ್ವಹಿತಕ್ಕೆ ನಾನು ಸ್ವತಂತ್ರನಾಗಿ ಯೋಚಿಸಬೇಕು
ನಾನು ನನ್ನ ಜೀವ, ನನ್ನ ಸಂಸಾರ ರಕ್ಷಿಸಿಕೊಳ್ಳಲೇ ಬೇಕು
ನನ್ನ ಹಣ ಕಾಪಾಡಿಕೊಳ್ಳಲೇಬೇಕು
ಆದ್ದರಿಂದ ಈಕ್ಷಣವೇ ಕಾರ್ಯೋನ್ಮುಖನಾಗಬೇಕು
ನಾನು ಕೊಳ್ಳಲೇಬೇಕು

ಡಿಫೆನ್ಸ್
ಸೇವಿಂಗ್ಸ್
ಸರ್ಟಿಫಿಕೇಟುಗಳನ್ನು

ಏಕೆಂದರೆ ನಾವು ಅದಕ್ಕಾಗಿ ವಿನಿಯೋಗಿಸುವ ಪ್ರತಿಯೊಂದು ಆಣೆಯೂ, ಇಂಡಿಯಾದ ಸೇನೆ, ನೌಕಾ, ವಿಮಾನದಳಗಳ ರಚನೆಗೆ ಸಹಾಯಕವಾಗಿ ವೈರಿಯ ಆಕ್ರಮಣ ಧಾಳಿಯನ್ನು ಪ್ರತಿರೋಧಿಸಲು ಇಂಡಿಯಾದ ಬಲವನ್ನು ಹೆಚ್ಚಿಸುತ್ತದೆ.

ಪ್ರತಿ ೧೦ ರೂಪಾಯಿನ
ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್
ರೂ ೭-೮ ಆಣೆಮಾತ್ರ
ಪೋಸ್ಟಾಫೀಸಿನಲ್ಲಿ ಎಲ್ಲಾ ವಿವರವೂ ಸಿಗುತ್ತದೆ. GI. 49Kn.

ಕಾರವಾರ—(ತಾ ೧೬-೧೧-೪೧) ಈ ಊರಿನ ಮೆಟ್ರಿಕ್ ಪರೀಕ್ಷೆಯ ಕೇಂದ್ರವನ್ನು ಇಡಲು ಅನುಕೂಲವುಂಟೋ ಹೇಗೆಂಬ ಬಗ್ಗೆ ಪರಿಶೀಲಿಸಿ ನೋಡಲು ಮುಂಬಯಿ ವಿಶ್ವವಿದ್ಯಾಲಯದ ರಜಿಸ್ಟ್ರಾರರಾಗಿರುವ ರಾ|| ಡೊಂಗರಕೇರಿಯವರು ತಾ. ೭ನೇಗೆ ಇಲ್ಲಿಗೆ ಬಂದಿದ್ದರು. ಪರೀಕ್ಷೆಯ ಕೇಂದ್ರವನ್ನು ಇಲ್ಲಿ ಇಡಲು ಸ್ಥಳದ ಅನುಕೂಲತೆಯುಂಟೆಂದೂ, ಕೇಂದ್ರದ ಅವಶ್ಯಕತೆ ಸಹ ಇರುತ್ತದೆಂದೂ ಅವರು ಮನಗಂಡಿದ್ದಾರಂತೆ. ಬಹುಶಃ ಈ ವರ್ಷ ಇಲ್ಲಿ ಮೆಟ್ರಿಕ್ ಪರೀಕ್ಷೆಯ ಕೇಂದ್ರ ತೆರೆಯಲ್ಪಡುವದೆಂದು ತಿಳಿಯಲಿಕ್ಕೆ ಬಂದಿದೆ.

ತಾ ೧೧ನೇಗೆ ಇಲ್ಲಿಯ ಮಿತ್ರ ಸಮಾಜದಲ್ಲಿ ಸೌ| ಕಮಲಾಬಾಯಿ ಡೊಂಗರಕೇರಿಯವರು "ಸ್ತ್ರೀಯರ ಸಾಮಾಜಿಕ ಸೇವೆ" ಎಂಬ ವಿಷಯದ ಮೇಲೆ ಕೊಂಕಣಿ ಭಾಷೆಯಲ್ಲಿ ಒಂದು ಬೋಧಪ್ರದ ಭಾಷಣವನ್ನಿತ್ತರು. ಶ್ರೀಮತಿಯವರು ಭಾರತೀಯ ಮಹಿಳಾ ಸಂಘದ ವತಿಯಿಂದ ಹೊರಡುವ ಪ್ರಕಟನಾಪತ್ರ ಸಂಪಾದಕೀಯರಿದ್ದು ಮುಂಬಯಿಯೊಳಗೆ ಸಮಾಜ ಸೇವೆ ನಡಿಸಿರುವ ಮಹಿಳೆಯರಲ್ಲಿ ಅಗ್ರಗಣ್ಯರಿದ್ದಾರೆ. ಅವರು ತಮ್ಮ ಭಾಷಣದಲ್ಲಿ ಮುಂಬಯಿಯೊಳಗೆ ತಮಗೆ ಬಂದ ಅನುಭವಗಳನ್ನು ವಿವರಿಸಿ ಭಿಕ್ಷೆ ಬೇಡುವ ಜನರ ಉಪಟಳವನ್ನು [illegible] ಬೋಧಿಸಿದರು. [illegible] ಮಾತ್ರ [illegible] ಬೇಕೆಂದೂ ಏನೂ [illegible] ಬಗ್ಗೆ [illegible] ಅವರು ಉಪದೇಶಿಸಿದರು.

ಡೊಂಗರಕೇರಿ ದಂಪತಿಗಳಿಗೆ ಇಲ್ಲಿಯ ನಗರಾಧ್ಯಕ್ಷರೂ ಹನುಮಂತ ವಿಠ್ಠಲ ಬೀಂಕಿಸವರೂ ಚಹಾ ಪಾರ್ಟಿಗಳನ್ನಿತ್ತು ಸತ್ಕರಿಸಿದರು. ಬೀಂಕಿಸವರ ಪಾರ್ಟಿಯ ಕಾಲಕ್ಕೆ ರಾ ಮುರ್ಡೇಶ್ವರ ಮಂಜುನಾಥಯ್ಯನವರು ಹಾಗೂ ಡೊಂಗರಕೇರಿ ದಂಪತಿಗಳು ತಮ್ಮ ಭಾಷಣಗಳನ್ನು ಕೊಂಕಣಿಯಲ್ಲೇ ಮಾಡಿದ್ದರಿಂದ ಸಮಾಧಿಕ [illegible] ಇತ್ತೀಚೆಗೆ ಸಾರ್ವಜನಿಕ ಸಮಾರಂಭಗಳಲ್ಲಿ ಕೊಂಕಣಿಯಲ್ಲಿ ಮಾತಾಡಲಿಕ್ಕೆ ಯಾರೂ ಹಿಂಜರಿಯುವದಿಲ್ಲ.

ಜ್ವರಕ್ಕೆ
ಉಪಯೋಗಿಸಿರಿ

ಸಹ್ಯಾದ್ರಿಫಾರ್ಮಸಿ
ಕುಮಟಾ.

ಬಾಳಂತಿಯರಿಗೆ— ಕಸ್ತೂರಿ ಮಿಶ್ರಣ ದಶಮೂಲಾರಿಷ್ಟ ಮತ್ತು ಧನ್ವಂತರಿಗುಳಿಗೆ ಒಳ್ಳೇ ಉಪಯುಕ್ತವಾದದ್ದು!

ಚಿಕ್ಕ ಮಕ್ಕಳ ಜಂತುವಿನ ಬಾಧೆಗೂ ಪುಷ್ಟಿಯಾಗಲಿಕ್ಕೂ ಸಾಯರಸ ಕುಟಜಾ ಒಂದೇ ದಿವ್ಯವಾದ ಔಷಧವು!

ನಾಯಿ-ಕೆಮ್ಮಿಗೆ ಎಂಟೇ ದಿವಸಗಳಲ್ಲಿ ಗುಣಪಡಿಸುವ ಕಫನಾಶಕವು

**ಯಾವತ್ತೂ ಪ್ರಕಾರದಗಳ
ಕಷಾಯ, ಅರಿಷ್ಟ, ಆಸವ,
ತೈಲಾದಿ ಔಷಧ ಸಾಮಗ್ರಿಗಳು
ಸದಾ ಸಿಗುತ್ತವೆ.**

ಡಾ|| ಎಸ್. ಕೇ. ಭಟ್ಟ,
ಹಳಕಾರ, ಕುಮಟಾ.

ಧಾತುಪುಷ್ಟಿ ಲೇಹ. (**ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ**) ನಷ್ಟವಾಗಿರುವ ಪುರುಷತ್ವವನ್ನು ಪುನಃ ಕಲ್ಪಿಸಿಕೊಡುವ ಅತ್ಯುತ್ತಮ ಶಕ್ತಿದಾಯಕ ಔಷಧಿ ಮಾನಸಿಕ ಮತ್ತು ಕಾಯಶಕ್ತಿಗಳನ್ನು ಹೆಚ್ಚಿಸಿ, ಆರೋಗ್ಯ, ಇಂದ್ರಿಯಶಕ್ತಿ ಇವೇ ಮೊದಲಾದವುಗಳನ್ನು ಕಲ್ಪಿಸಿಕೊಡುವವು ಬಾಟ್ಲಿ ೧ಕ್ಕೆ 2—8—0

ಕಸ್ತೂರಿ ಮಿಶ್ರಣ ದಶಮೂಲ. ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ. ಬಾಟ್ಲಿ ೧ಕ್ಕೆ ರೂ 1—8—0.

ಮಲೇರಿಯಾ ನಿವಾರಿಣಿ. ಮಲೇರಿಯಾ ಜ್ವರ, ಚಳಿ ಜ್ವರ, ಇನ್‌ಫ್ಲುಯೆಂಝಾ, ಮಲಬದ್ಧತೆ ಇವುಗಳಿಗೆ ಪ್ರಸಿದ್ಧ ಔಷದಿ ಬಾಟ್ಲಿ ೧ಕ್ಕೆ ರೂ 0—13—0

ಸ್ಪ್ಲೀನ ಮಿಕ್ಸ್ಚರ. ಜ್ವರಗೆಡ್ಡೆಯನ್ನು ಕರಗಿಸುವ ದಿವ್ಯೌಷಧಿ ಬಾಟ್ಲಿ ೧ಕ್ಕೆ ರೂ 1-2-0

ಎಮ್. ಗಣಪಯ್ಯ ಎಂಡ್ ಸನ್ಸ್, ರಥಬೀದಿ ನಂಬ್ರ 5, ಮಂಗಳೂರು. ದ. ಕ.

ಔಷಧ ಸಿಗುವ ಸ್ಥಳ — (1) ಸ್ವಸ್ತಿಕ ಫಾರ್ಮಸಿ, ಕುಮಟಾ, (2) ಕಾಮತ ಸ್ಟೋರ್ಸ, ಹೊನ್ನಾವರ, (3) ಸ್ವದೇಶಿ ಡಿಪೋ, ಅಂಕೋಲಾ, (4) ಕೆ ಗಣಪಯ್ಯ ಶಾನಭಾಗ, ಮುರ್ತಾಂಟ, ಭಟಕಳ, (5) ಪೈ ಪುಲರ ಸ್ಟೋರ್ಸ, ಕಮಿಸ್ಟ್ಸ, 183, ಸುಪಾರಿಬಾಗ ಪರೇಲ, (6) ಜನರಲ್ ಸ್ಟೋರ್ಸ, ಜಿ ಐ ಪಿ, ಮಾಟುಂಗಾ, (7) ಮಲ್ಲಪ್ಪ ಪದ್ಮನಾಭ ಶೆಟ್ಟಿ, ಮರ್ಚಂಟ ಕಾರವಾರ, (8) ರಾಮಯ್ಯನ ಬ್ರದರ್ಸ ಸಿದ್ದಾಪುರ, (9) ಪೊಪ್ಯುಲರ ಮೆಡಿಕಲ್ ಸ್ಟೋರ್ಸ, ಗೋಕರ್ಣ, (10) ಎಲ್ ಎಲ್ ಭಾಗವತ ಎಂಡ್ ಸನ್ಸ್, ಬಡವರ ಔಷಧಿ ಅಂಗಡಿ, ಶಿರ್ಸಿ [ಕ್ಯಾಟಲಾಗಿಗೆ ಬರೆರಿ]

ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್,
ಸ್ಥಾಪನೆ 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯವು ಇವೆ ಕಂಪನಿಯ ಹಣವು ಸರಕಾರಿ ಪ್ರೊ ನೋಟುಗಳಲ್ಲಿಯೂ, ಇಂಡಿಯನ್‌ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ,

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents
D K Nayak Bros
K N Nayak
Honavar Agent
R. V. Prabhu

K. PadmanabhaRao & Sons,
BELGAUM
Chief Agents for
Karnatak Districts & S M. States

ಚಕ್ರಬಿಂದು

ಮಕ್ಕಳ ಮರಣವನ್ನು
ತಪ್ಪಿಸುವದು.

ಏಜನ್ಸಿ ಕಲಕತ್ತಾ, ಮುಂಬಯಿ, ಮದ್ರಾಸ, ಬೆಂಗಳೂರು, ಮಂಗಳೂರು.

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆದೊಡ್ಡಾಗುವಿಕೆ, ಮೈಸುರು ನೆಗಳು, ಕಾಮಿಲೆ, ಗಡ್ಡೆರೋಗ ಕೋವೆ ರೋಗ, ಮ್ಯಾಕ್ಷ ಬಾವುಗಳಿಗೆ ದಿವ್ಯೌಷಧ!

೧ ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3



ಏತಕ್ಕೆ ಚಿಂತಿಸುವಿರಿ?

ಆಸೇತುಹಿಮಾಚಲದ ವರೆಗೂ ಖ್ಯಾತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ ವ್ಯಾಧಿಗೆ ಇದೊಂದೇ ರಾಜಔಷಧವಾಗಿದೆ

ಡಾ| ಪಿ ಎನ್ ಶ್ರೀನಿವಾಸರಾವ,
ಲಿವ್ಹರ್ ಸ್ಪೆಶಲಿಸ್ಟ,
ಎಂ ಪಿ ಪ್ರಸಾದಿಕ ಔಷಧಾಲಯ,
ಶಿವಮೊಗ್ಗಾ

☞ ಇವರಲ್ಲಿ ಸಿಗುವದು
ಶಿರ್ಸಿ ಏಜಂಟ —
ಸುಬ್ರಾಯ ಸೀತಾರಾಮ ಹೆಗಡೆ,
ಕುಮಟಾ ಏಜಂಟ —
ದೇವಪ್ಪಾ ಅಯ್ಯ ನಾಯ್ಕ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ತಮ್ಮ 'ಸ್ಟಾರ್ ಆಫ್ ಕೆನರಾ' ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿದರು.

ಉತ್ತರ ಕನ್ನಡ ಜಿಲ್ಲೆಯ ಸಹಕಾರಿ ಪರಿಷತ್ತಿನ ಮೊದಲನೇ ಅಧಿವೇಶನ.

ಅಧ್ಯಕ್ಷರಾದ ಶ್ರೀ॥ ಅಣ್ಣಾಜಿ ಬಾಬಾಜಿ ಲತ್ಥೇ ಇವರ ಭಾಷಣ.

ಕನ್ನಡ ಜಿಲ್ಲೆಯ ಸಹಕಾರಿ ಮಿತ್ರರೇ,

ಈ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ನನಗಿತ್ತ ಬಗ್ಗೆ ನಾನು ತಮಗೆಲ್ಲ ಬಹಳ ಉಪಕೃತನಾಗಿದ್ದೇನೆ ತಾವು ಈ ಸ್ಥಾನವನ್ನು ಕೊಟ್ಟುದರಿಂದ ತಮ್ಮ ಜಿಲ್ಲೆಯಲ್ಲಿ ಸಹಕಾರಿ ಆಂದೋಲನವು ಯಾವ ರೀತಿಯಲ್ಲಿ ಎಷ್ಟು ಮಟ್ಟಿಗೆ ಪ್ರಗತಿ ಪಡೆದಿರುವದೆಂಬದನ್ನರಿತುಕೊಳ್ಳಲು ನನಗೆ ಸಂಧಿಯನ್ನೊದಗಿಸಿದಂತಾಗಿದೆ ಸಹಕಾರಿ ಚಳವಳಿಯ ಭಾವೀ ಪ್ರಗತಿಯ ದಿಕ್ಕುದೆಸೆಗಳನ್ನು ಗೊತ್ತುಮಾಡುವ ಕುರಿತು ತಾವು ಇಂದು ಇಲ್ಲಿ ನೆರೆಯಿಸಿರುವ ಪರಿಷತ್ತಿನಲ್ಲಿ ನನ್ನ ಕೈಲಾದ ಮಟ್ಟಿಗೆ ಭಾಗವಹಿಸುವದಕ್ಕೂ ಈ ಮೂಲಕ ಸಂಧಿಯನ್ನು ಕೊಟ್ಟಿದ್ದೀರಿ ಇದೇ ಕಾರಣದಿಂದ ನಾನು ಅಧ್ಯಕ್ಷತೆಯನ್ನು ವಹಿಸಲು ಆಭಾರಪೂರ್ವಕವಾಗಿ ಒಪ್ಪಿಕೊಂಡಿದ್ದೇನೆ

ತಮ್ಮ ಜಿಲ್ಲೆಯಲ್ಲಿ ಸೆಂಟ್ರಲ್ ಬ್ಯಾಂಕಿನ ಸಹಿತವಾಗಿ ನೂರಾ ಮೂವತ್ತೈದು ಸಹಕಾರಿ ಸಂಸ್ಥೆಗಳಿದ್ದು ಇವುಗಳ ಸಭಾಸದರ ಸಂಖ್ಯೆಯು ಸುಮಾರು ಹದಿನೇಳು ಸಾವಿರವಿದೆ. ಈ ಸಂಸ್ಥೆಗಳ ಅಧೀನದಲ್ಲಿ ಸುಮಾರು ಮೂವತ್ತು ಲಕ್ಷ ರೂಪಾಯಿಗಳಷ್ಟು ಬಂಡವಾಳವಿದ್ದು ಇವೆಲ್ಲ ಸಂಸ್ಥೆಗಳ ರಿಝರ್ವ ಫಂಡ್ ಮೊದಲಾದ ನಿಧಿಗಳ ರಕಮು ಆರು ಲಕ್ಷಕ್ಕೆ ಮಿಕ್ಕಿದೆ ಶೇರುಗಳ ಬಂಡವಾಳವೂ ಸುಮಾರು ನಾಲ್ಕುವರೆ ಲಕ್ಷವಿದೆ. ಈ ಆಂಕಿಗಳನ್ನು ನೋಡಿದರೆ, ತಮ್ಮ ಜಿಲ್ಲೆಯೊಳಗಿನ ಥಕ್ಕಬಾಕಿಯ ರಕಮು ಎರಡು ಲಕ್ಷ ಐವತ್ತೊಂಬತ್ತು ಸಾವಿರಕ್ಕೆ ಏರಿದ್ದರೂ ಕೂಡ ತಮ್ಮ ಸಹಕಾರಿ ಸಂಸ್ಥೆಗಳ ಸಾಂಪತ್ತಿಕ ಸ್ಥಿತಿಯು ಸಮಾಧಾನಕರವಿರುವದೆಂದೇ ನನಗೆನಿಸುತ್ತದೆ ಇಂದಿನಂಥ ಮಂದತೆಯ ದಿನಗಳಲ್ಲಿ ಸಾಲಗಾರರಿಂದ ಬರತಕ್ಕ ರಕಮುಗಳಲ್ಲಿ ಬಹಳ ಪಾಲಿನ ಹಣವು ವಸೂಲಾಗದೆ ಉಳಿದಿದ್ದರೂ ಕೂಡ ತಾವು ತಮ್ಮ ರಿಝರ್ವ ಫಂಡನ್ನು ಕಳೆದ ಒಂದೇ ವರ್ಷದಲ್ಲಿ ಸುಮಾರು ಮೂವತ್ತೇಳು ಸಾವಿರ ರೂಪಾಯಿಗಳಿಂದ ಹೆಚ್ಚಿಸಿರುವ ವಿಷಯವಾಗಿ ನಾನು ತಮ್ಮನ್ನು ವಿಶೇಷವಾಗಿ ಅಭಿನಂದಿಸುತ್ತೇನೆ ಬೆಳವಣಿಗೆ ಹೊಂದಿರುವ ಈ ಮಂಡಿಯಲ್ಲಿ ಒಕ್ಕಲಿಗರ (ಶೇತಕರಿ) ಸಂಘಗಳ ರಕಮು ಎಂಟು ಸಾವಿರ ರೂಪಾಯಿಗಳಷ್ಟಿರುವದೆಂಬದು ಬಹಳ ಸಂತೋಷದ ಸಂಗತಿಯಾಗಿದೆ ಥಕ್ಕಬಾಕಿಯನ್ನು ವಸೂಲು ಮಾಡುವಲ್ಲಿಯೂ ತಾವು ದಕ್ಷತೆಯನ್ನು ವಹಿಸಿರುವದು ಕಂಡುಬರುತ್ತದೆ ೧೯೩೯-೪೦ರಲ್ಲಿ ಥಕ್ಕಬಾಕಿಯ ರಕಮು ಎರಡು ಲಕ್ಷ ಎಂಬತ್ತೆಂಟು ಸಾವಿರಕ್ಕೆ ಮಿಕ್ಕಿದ್ದಿತು ೧೯೪೦-೪೧ರಲ್ಲಿ ಅದು ಎರಡು ಲಕ್ಷ ಐವತ್ತು ಸಾವಿರಕ್ಕಿಂತಲೂ ಕಡಿಮೆಯಾಗಿದೆ ಇದರ ಮೇಲಿಂದ ನೋಡಲಾಗಿ ಥಕ್ಕಬಾಕಿಯನ್ನು ವಸೂಲು ಮಾಡುವ ಪ್ರಯತ್ನವು ಯೋಗ್ಯ ರೀತಿಯಲ್ಲಿ ನಡೆದಿರುವದೆಂದು ಹೇಳಲು ಪ್ರತ್ಯವಾಯವಿಲ್ಲ ಥಕ್ಕಬಾಕಿಯ ವಸೂಲಿಯು ಕಡಿಮೆಯಾದುದರ ಮುಖ್ಯ ಕಾರಣವು ಸಾಲಗಾರರ ಸಾಂಪತ್ತಿಕ ನಿಕೃಷ್ಟಾವಸ್ಥೆಯೇ ಸರಿ ಬಹುಶಃ ನಿರುಪಾಯವಾದ ಹೊರತು ಸಾಲವನ್ನು ಮುಟ್ಟಿಸದೆ ಇರುವ ಇಚ್ಛೆಯು ನಮ್ಮ ಜನರಿಗೆ ಉಂಟಾಗುವದಿಲ್ಲ, ಸಾಲವನ್ನು ತೀರಿಸುವದು ತಮಗೆ

ಶಕ್ಯವಿದ್ದರೂ ಸಹ ಬುದ್ಧಿಪುರಃಸರವಾಗಿಯೇ ಅದನ್ನು ತಿರುಗಿ ಕೊಡಲು ತಪ್ಪಿಸುವ ಜನರು ಒಟ್ಟಾರೆ ಬಹಳ ಕಡಿಮೆಯೆಂದೇ ನನ್ನ ಅನುಭವವಿದೆ ಥಕ್ಕಬಾಕೀದಾರರಲ್ಲಿ ಯಾರು ದುರ್ಬುದ್ಧಿಯಿಂದ ಹಣ ಕೊಡುವದನ್ನು ತಪ್ಪಿಸುವರೋ ಅಂಥವರ ವಿರುದ್ಧವಾಗಿ ಸಕ್ರಿಯ ಉಪಾಯಗಳನ್ನು ಯೋಜಿಸಿ ಶಕ್ಯವಿದ್ದಷ್ಟು ಶೀಘ್ರವಾಗಿ ಸಾಲವನ್ನು ವಸೂಲು ಮಾಡುವದು ಅವಶ್ಯವೇ ಇದೆ. ಆದರೆ, ತಮ್ಮ ಸಾಲವನ್ನು ಮುಟ್ಟಿಸಬೇಕೆಂಬ ಮನಸ್ಸಿದ್ದರೂ ಪ್ರತಿಕೂಲ ಪರಿಸ್ಥಿತಿಯ ಮೂಲಕ ಅದು ಯಾರಿಗೆ ಸಾಧ್ಯವಾಗುವದಿಲ್ಲವೋ ಅಂಥವರಿಗೆ ಮಾತ್ರ ಶಕ್ಯವಿದ್ದಷ್ಟು ಸವಲತ್ತುಗಳನ್ನು ಕೊಟ್ಟು ಅವರ ಸಾಲವನ್ನು ಸಾವಕಾಶವಾಗಿ ವಸೂಲು ಮಾಡಿದರೂ ಅದರಲ್ಲಿ ಅಪ್ರಶಸ್ತವೇನೂ ಇಲ್ಲ ಇಂಥವರಿಂದ ಸಾಲವು ಬೇಗನೆ ವಸೂಲಾಗುವದಿಲ್ಲೆಂದು ಸಕ್ರಿಯ ಉಪಾಯಗಳನ್ನು ಯೋಜಿಸುವದೆಂದರೆ ಸಾಂಪತ್ತಿಕ ದೃಷ್ಟಿಯಿಂದ ಇವರ ಸರ್ವನಾಶ ಮಾಡಿದಂತೆಯೇ ಸರಿ ಇಂಥ ಸಾಲಗಾರರ ಹೊಲಮನೆ, ತೋಟಪಟ್ಟಿ, ದನಕರು ಮೊದಲಾದವುಗಳನ್ನು ಲಿಲಾವು ಮಾಡಿಸಿಯಾಗಲಿ ಖಾಸಗಿ ರೀತಿಯಿಂದ ಅವುಗಳ ಮಾರಾಟ ಮಾಡಿಯಾಗಲಿ ಸಹಕಾರಿ ಸಂಘಗಳು ತಮ್ಮ ಥಕ್ಕಬಾಕಿಯ ರಕಮನ್ನು ಕಡಿಮೆ ಮಾಡುವದೆಂದರೆ ಅದೆಂದಿಗೂ ಸಹಕಾರಿ ಚಳವಳಿಯ ಯಶಸ್ವಿತೆಯ ಲಕ್ಷಣವಾಗಲಾರದು ಯಾವ ಸಾವಕಾರರಿಗೆ ದೂಷಣೆಯನ್ನಿಟ್ಟು ಈ ಸಹಕಾರಿ ಸಂಘಗಳು ಸ್ಥಾಪಿಸಲ್ಪಟ್ಟವೋ ಅವರಾದರೂ ಇದಕ್ಕಿಂತ ಹೆಚ್ಚಿಗೆ ಏನು ಮಾಡುತ್ತಾರೆ? ಈ ಸಾವಕಾರರು ತಮ್ಮ ಸಾಲವನ್ನು ವಸೂಲು ಮಾಡಬೇಕಾದರೆ ಅದೆಷ್ಟೋ ಸಲ ದಿವಾಣಿ ಕೋರ್ಟಿನ ಕಟ್ಟೆಯನ್ನೇರಿ ಅಲ್ಲಿಯ ಅನೇಕ ಅಡಚಣೆಗಳನ್ನೆದುರಿಸಿ ಸಾಲಗಾರರೊಡನೆ ಹೋರಾಡಬೇಕಾಗುತ್ತದೆ ಸಹಕಾರಿ ಸಂಘಗಳಿಗೆ ಸಾಲದ ವಸೂಲಿಯ ವಿಷಯದಲ್ಲಿ ಉಪಲಬ್ಧವಿರುವ ಮಾರ್ಗಗಳು ಆ ದೃಷ್ಟಿಯಿಂದ ಬಹಳ ಸುಕರವಾಗಿವೆ ಈ ಮಾತಿನ ವಿಚಾರ ಮಾಡಿ, ಪ್ರಾಮಾಣಿಕರಿದ್ದರೂ ಪ್ರತಿಕೂಲ ಪರಿಸ್ಥಿತಿಯಲ್ಲಿರುವ ತಮ್ಮ ಸಾಲಗಾರರ ಥಕ್ಕಬಾಕಿಯ ಪ್ರಶ್ನೆಯನ್ನು ಸಹಕಾರಿ ಸಂಘಗಳು ಮನಸ್ಸಿಗೆ ತಂದರೆ ಅಂಥ ಬಾಕಿಯ ರಕಮು ಬೆಳೆಯಬಾರದೆಂದು ಅವರ ವಿರುದ್ಧವಾಗಿ ಅದೆಷ್ಟು ಮಟ್ಟಿಗೆ ಸಕ್ರಿಯ ಉಪಾಯಗಳನ್ನು ಯೋಜಿಸಬೇಕೆಂಬ ವಿಷಯಕ್ಕೆ ಸಂದೇಹವುಂಟಾಗುತ್ತದೆ ಶಕ್ಯವಿದ್ದಷ್ಟು ಮಟ್ಟಿಗೂ ಸವಲತ್ತುಗಳನ್ನು ಕೊಟ್ಟು ಬಡ್ಡಿಯ ದರವನ್ನು ಇಳಿಸಿ, ಕಂತುಗಳನ್ನು ಬೆಳೆಸಿ, ಬೇರೆ ರೀತಿಯಿಂದಲೂ ಸಹಾಯ ಮಾಡಿ ತಮ್ಮ ಸಭಾಸದರು ನಾದಾರರಾಗದಂತೆ ಸೌಮ್ಯವಾಗಿ ವಸೂಲು ಮಾಡುವದೇ ನ್ಯಾಯಸಮ್ಮತವಾಗುವದು ಆದರೆ ಯಾರು ಖೊಟ್ಟಿತನದಿಂದ ಸಂಘದ ಸಾಲವನ್ನು ಮುಳುಗಿಸುವ ದುರ್ಬುದ್ಧಿಯಿಂದಲೇ ಹಣ ಕೊಡುವದನ್ನು ತಪ್ಪಿಸುವರೋ ಅಂಥವರಿಗೆ ಸವಲತ್ತುಗಳನ್ನಾಗಲೀ ಸಹಾನುಭೂತಿಯನ್ನಾಗಲೀ ತೋರಿಸುವ ಕಾರಣವೇ ಇಲ್ಲ. ಇಂಥವರಿಂದ ಸಾಲವು ಬೇಗನೆ ವಸೂಲಾಗುವಂತೆ ಸದ್ಯಕ್ಕಿಂತಲೂ ಹೆಚ್ಚಿನ ಕಠೋರತೆಯನ್ನು ತೋರಿಸಲಿಕ್ಕೆ ಬೇಕು ಸಹಕಾರಿ ಸಂಘಗಳು ಆರಂಭದ ಕೆಲವು ವರ್ಷಗಳಲ್ಲಿ ವಸೂಲಿಯ ವಿಷಯವಾಗಿ ಸಡಿಲುತನ ತೋರಿಸಿದ್ದರಿಂದಲೂ ಮುಲ್ಕೀ ಖಾತೆಯವರು ಈ ಕೆಲಸಕ್ಕೆ ವಿಲಂಬ ಮಾಡಿದ್ದರಿಂದಲೂ ಸಾಲಗಾರರ ಖೊಟ್ಟಿತನವು ಕೆಲವು ಮಟ್ಟಿಗಾದರೂ ಬೆಳೆಯಿತೆಂಬದು ಕಂಡುಬಂದಿದೆ ಆರ್ಬಿಟ್ರೇಶನ್ನಿನ ಕೆಲಸಕ್ಕೆ ಆರಂಭವಾದ ಬಳಿಕ ಪ್ರತ್ಯಕ್ಷ ವಸೂಲಿಗೆ ಬರಬೇಕಾದರೆ ಬಹಳ ವರ್ಷಗಳು ಹಿಡಿಯುವವೆಂದು ಖೊಟ್ಟಿ ಕುಳಗಳಿಗೆ ಕಂಡುಬಂದದ್ದರಿಂದ ಅವರಿಗೆ ಆರ್ಬಿಟ್ರೇಶನ್ನಿನ ಅಂಜಿಕೆಯೇ ಇಲ್ಲದಂತಾಗಿದೆ ಖೊಟ್ಟಿ ಕುಳಗಳ ಖೊಟ್ಟಿತನಕ್ಕೆ ಇದೊಂದು ಬಗೆಯ ಉತ್ತೇಜನವೇ ಆದಂತಾಗಿದೆ ಇಂಥ ಖೊಟ್ಟಿ ಜನರ ವರ್ಗವನ್ನೇ ಬೇರೆಗೊಳಿಸಿ, ಕೇವಲ ಪ್ರತಿಕೂಲ ಪರಿಸ್ಥಿತಿಯ ಮೂಲಕವೇ ಯಾರಿಗೆ ಕಾಲಕಾಲಕ್ಕೆ ಕಂತುಗಳನ್ನು ಕೊಡುವದು ಸಾಧ್ಯವಾಗುವದಿಲ್ಲವೋ ಅಂಥವರ ಬಗ್ಗೆ ಸಂಘಗಳು ಸಹಾನುಭೂತಿಯಿಂದ ವಿಚಾರ ಮಾಡಬೇಕಲ್ಲದೆ ಎಲ್ಲ ಸವಲತ್ತುಗಳನ್ನು ಕೊಟ್ಟರೂ ವಸೂಲು ಬರುವದಿಲ್ಲೆಂದು ಮನವರಿಕೆಯಾದ ಹೊರತು ಅವರ ವಿರುದ್ಧವಾಗಿ ಸಕ್ರಿಯ ಉಪಾಯಗಳನ್ನು ಯೋಜಿಸಬಾರದು

ಥಕ್ಕಬಾಕಿಯ ರಕಮು ಬೆಳೆಯಿತೆಂದರೆ ಸಂಘದ ಕೆಲಸವು ಸರಿಯಾಗಿ ನಡೆಯಲಿಲ್ಲವೆಂದೇ ಸಹಕಾರಿ ಖಾತೆಯ ಅಧಿಕಾರಿಗಳು ಭಾವಿಸುವರೆಂಬದು ನನಗೆ ಗೊತ್ತಿದೆ ಸಹಕಾರಿ ಸಂಘಗಳಿಗೆ ಸಲ್ಲಬೇಕಾಗಿರುವ ಬಾಕೀ ಹಣವು ಬೆಳೆದದ್ದರಿಂದ ಈ ಸಹಕಾರಿ ಚಳವಳಿಯೇ ಅಯಶಸ್ವಿಯಾಗಿ ಹೋಯಿತೆಂದು ಅನೇಕ ಜನರು ಅನುಮಾನಪಡುವದನ್ನೂ ನಾನು ಬಲ್ಲೆ ಸದೋಷವಾದ ವಿಚಾರಪದ್ಧತಿಯಿಂದಲೇ ಈ ಪ್ರಕಾರದ ತಿಳುವಳಿಕೆಗಳು ಹುಟ್ಟಿವೆಯೆಂದು ನನಗೆನಿಸುತ್ತದೆ ಮೊದಮೊದಲು ಸಹಕಾರಿ ಸಂಘಗಳು ಹಿಂದುಮುಂದಿಲ್ಲದ ಸಿಕ್ಕಾಬಟ್ಟೆ ಸಾಲಗಳನ್ನು ಕೊಟ್ಟ ಕೆಲವು ಉದಾಹರಣೆಗಳನ್ನು ನನ್ನ ಜಿಲ್ಲೆಯಲ್ಲಿಯೇ ನಾನು ನೋಡಿದ್ದೇನೆ ಸಾವಕಾರರು ತಮ್ಮ ಖೊಟ್ಟಿ ಕುಳಗಳನ್ನು ಸಹಕಾರಿ ಸಂಘಗಳಲ್ಲಿ ಸೇರಿಸಿ, ಮುಂದಾಗಿ ನಡೆದಿದ್ದ ತಮ್ಮ ಸಾಲಗಳನ್ನು ವಸೂಲು ಮಾಡಿಕೊಂಡು ಸಂಘಗಳಿಗೆ ಮಾತ್ರ ಸಂಕಟ ತಂದರೆಂಬ

ಸಂಗತಿಯೂ ಅನುಭವಕ್ಕೆ ಬಂದಿದೆ. ಕೆಲಕೆಲವು ಸ್ಥಳಗಳಲ್ಲಿ ಸಂಘವು ಕೊಟ್ಟ ಸಾಲವು ಬಿನಾಮಿಯಾಗಿರುವದರಿಂದ ಅದು ವಸೂಲಾಗುವದೇ ಅಶಕ್ಯವಾಗಿದೆ. ಆದರೆ ಒಟ್ಟಿನಲ್ಲಿ ಇಂಥ ಉದಾಹರಣೆಗಳು ಅಪವಾದಾತ್ಮಕವೆಂದೇ ಭಾವಿಸಬೇಕು. ಕೊಟ್ಟ ಸಾಲವು ವಸೂಲಾಗದೆ ಇರುವದಕ್ಕೆ ಸಾಮಾನ್ಯವಾಗಿ ಜನರ ಆರ್ಥಿಕ ಸ್ಥಿತಿಯು ಕೆಟ್ಟಿರುವದೇ ಕಾರಣವಾಗಿದೆ. ಪ್ರಾಮಾಣಿಕ ಸಾಲಗಾರರಿಗೆ ಯಾವದೇ ಕಾರಣದಿಂದ ತಮ್ಮ ಸಾಲ ಮುಟ್ಟಿಸುವದು ಅಶಕ್ಯವಾಗಿ ಅವರ ಮೇಲೆ ಬಾಕಿ ಉಳಿಯಿತೆಂದರೆ ಅದು ಸಹಕಾರಿ ಚಳವಳಿಗೆ ದೂಷಣ ಕೊಡಲು ಯೋಗ್ಯವಾದ ಕಾರಣವೆಂದು ತಿಳಿಯಬಾರದೆಂಬದು ನನ್ನ ದೃಷ್ಟಿಯಿಂದ ನಿರ್ವಿವಾದವಾಗಿದೆ. ಇಂಥ ಜನರ ಅಡಚಣೆಗಳ ವಿಚಾರ ಮಾಡದೆ ಒಮ್ಮೆಲೆ ವಸೂಲಿಯ ಸಕ್ತಿ ಮಾಡುವದೆಂದರೆ ಸಂಘದ ಸಾಲ ತೀರಿಸಿಕೊಳ್ಳುವದಕ್ಕಾಗಿ ಸಂಘದ ಸಭಾಸದರ ಸರ್ವನಾಶ ಮಾಡಿದಂತೆಯೇ ಸರಿ.

ಸಂಘದ ಸದಸ್ಯರು ಒಬ್ಬರಿಗೊಬ್ಬರು ಸಹಕಾರ ಮಾಡಿ ಎಲ್ಲರ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸಬೇಕೆಂಬದು ಸಹಕಾರಿ ಚಳವಳಿಯ ಮುಖ್ಯ ಉದ್ದೇಶವಾಗಿದೆ. ಸಭಾಸದರ ಹಳೆಯ ಸಾಲವನ್ನು ತೀರಿಸುವ ಅಥವಾ ಅದು ತೀರುವಂತೆ ಏನಾದರೊಂದು ಏರ್ಪಾಡು ಮಾಡುವ ಪ್ರಯತ್ನವಾಗಲಿಕ್ಕೆ ಬೇಕು. ಈ ಬಗೆಯ ಏರ್ಪಾಡು ಮಾಡದೆ ಸಹಕಾರಿ ಸಂಘಗಳಿಂದ ಅವರಿಗೆ ಸಹಾಯ ದೊರೆಯುವದು ಅಶಕ್ಯವಿದೆ. ನಮ್ಮ ಪ್ರಾಂತದ ಮಟ್ಟಿಗಂತೂ ಅನೇಕ ವರ್ಷಗಳವರೆಗೆ ಈ ಬಗೆಯ ದಕ್ಷತೆಯನ್ನು ವಹಿಸಿದ್ದಿಲ್ಲ. ಈ ಕಾರಣದಿಂದ ಸಾಲಗಾರರ ಮೇಲೆ ಮೊದಲಿಗೆ ಇದ್ದ ಹೊರೆಯು ಹಾಗೆಯೇ ಉಳಿಯಿತು. ಯಾರಿಗೆ ಸಾವಕಾರರು ಹೊಸ ಸಾಲವನ್ನು ಕೊಡುವದು ಶಕ್ಯವಿದ್ದಿಲ್ಲವೋ ಅಂಥವರಿಗೆ ಸಹಕಾರಿ ಸಂಘಗಳಿಂದ ಬಹಳವಲ್ಲ ಸ್ವಲ್ಪವಾದರೂ ಸಾಲ ದೊರೆತುದರಿಂದ ಅವರ ಮೊದಲಿನ ಸಾಲಗಾರಿಕೆಯು ಮತ್ತಷ್ಟು ಬೆಳೆದು ಹೋಯಿತು. ಕಳೆದ ಹತ್ತು-ಹನ್ನೆರಡು ವರ್ಷಗಳಲ್ಲಿ ಬೇಸಾಯದ ಸರಕುಗಳ ಧಾರಣೆಯು ಇಳಿದದ್ದರಿಂದಲೂ ಅವರು ಸಾಲ ಮುಟ್ಟಿಸುವದು ದಿನದಿನಕ್ಕೆ ಕಠಿಣವಾಗುತ್ತ ಹೋಯಿತು. ನಿಷ್ಕಾರಣವಾಗಿ ಸಾಲ ಬೇಡುವಿಕೆ ಬೆಳೆಯಬಾರದೆಂದು ಸಹಕಾರಿ ಸಂಘಗಳು ತಮ್ಮ ಬಡ್ಡಿಯ ದರವನ್ನು ಸಾಧಾರಣವಾಗಿ ಸಾವಕಾರರ ದರದಷ್ಟೇ ಗೊತ್ತುಮಾಡಬೇಕೆಂದು ವಿಧಿಸಲಾಯಿತು. ಸಾಲವು ವಸೂಲಾಗದಿರಲು ಇದೂ ಒಂದು ಕಾರಣವಾಯಿತು.

ತಮ್ಮ ಜಿಲ್ಲೆಯಲ್ಲಿ ಕೊಳೆ ರೋಗವೊಂದು ಗಂಟು ಬಿದ್ದುದರಿಂದ ಈ ಜಿಲ್ಲೆಯ ತೋಟಗಾರಿಕೆಯು ಲಾಭದಾಯಕವಾಗದಂತೆ ಆಯಿತು. ಇಂಥ ಸ್ಥಿತಿಯಲ್ಲಿ ಸಹಕಾರಿ ಸಂಘಗಳ ಸಾಲದ ವ್ಯವಹಾರವು ಈಗ ಇದ್ದುದಕ್ಕಿಂತಲೂ ಹೆಚ್ಚಿಗೆ ಅಸಮಾಧಾನಕರವೇಕೆ ಆಗಲಿಲ್ಲವೆಂಬದೇ ನನಗೆ ಆಶ್ಚರ್ಯವಾಗಿದೆ.

ಸಹಕಾರಿ ಚಳವಳಿಯಲ್ಲಿ ಇಂದು ಸೇರಿಕೊಂಡಿರುವ ದೋಷಗಳು ಹಲವು ಮಟ್ಟಿಗೆ ಅಪರಿಹಾರ್ಯವೇ ಆಗಿದ್ದವೆಂದು ಹೇಳಬೇಕಾಗಿದೆ. ಆ ಕಾರಣಗಳನ್ನು ಕಿತ್ತಿ ಹಾಕುವದು ಸರಕಾರದ ಪ್ರಥಮ ಕರ್ತವ್ಯವಾಗಿತ್ತು. ಒಕ್ಕಲಿಗರ ಉತ್ಪನ್ನವು ಬಹುಶಃ ಅವರ ಖರ್ಚಿಗೇ ಸಾಕಾಗುವದಿಲ್ಲ. ಇಂಥ ಸ್ಥಿತಿಯಲ್ಲಿ ಅವರು ಬಡ್ಡಿಯನ್ನಾಗಲಿ, ಅಸಲನ್ನಾಗಲಿ ಕಂತುಗಳನ್ನಾಗಲಿ ಕೊಡುವದೇ ಅಶಕ್ಯವಾದರೆ ಆಶ್ಚರ್ಯವೇನು? ಅವರ ಉತ್ಪನ್ನವು ಬೆಳೆಯುವಂತೆ, ಅವರ ಖರ್ಚು ಕಡಿಯುವಂತೆ, ಉಪಾಯಗಳನ್ನು ಯೋಜಿಸಿದ ಹೊರತು ಸಹಕಾರಿ ಸಂಘಗಳು ಸಹಾಯವನ್ನು ಮಾಡಲಾರವು. ಈ ವಿವಿಧ ಸಮಸ್ಯೆಗಳಲ್ಲಿ ಒಂದು ಪ್ರಶ್ನೆಯೆಂದರೆ, ರೈತರನ್ನು ಸಾವಕಾರರು ಮುಳುಗಿಸದಂತೆ ಸಹಕಾರಿ ಸಂಘಗಳು ಸುಲಭ ಕರಾರುಗಳಿಂದ ಅವರ ಗರಜುಗಳನ್ನು ಪೂರೈಸಿಕೊಡಬೇಕೆಂಬದಾಗಿತ್ತು. ಜನರ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಅವಶ್ಯವಾಗಿದ್ದ ಅನೇಕ ಸಂಗತಿಗಳಲ್ಲಿ ಇದೂ ಒಂದಾಗಿತ್ತು. ಸಹಕಾರಿ ಸಂಘಗಳ ಮುಖಾಂತರ ಸಹಾಯವಾಗುವದಕ್ಕೆಂದು ಯೋಜಿಸಿದ ಉಪಾಯಗಳು ಉಪಕಾರಕವಾಗದೆ ಅಪಕಾರಕವೇ ಆಗುವದು ಸ್ವಾಭಾವಿಕವಾಗಿತ್ತು. ರೈತರ ಋಣಮುಕ್ತತೆಯ ಸಲುವಾಗಿ ಮಾಡಿದ ರೈತಸುಧಾರಣೆಯ ಕಾಯಿದೆಯು ಕೊನೆಗೆ ಅವರ ಸಾಲಗಾರಿಕೆಯನ್ನೇ ಬೆಳೆಸಲು ಕಾರಣವಾಯಿತು.

ಕಾಂಗ್ರೆಸ್ಸಿನ ಮಂತ್ರಿಮಂಡಲವು ಕಾರ್ಯಭಾರ ಸಾಗಿಸಿರುವಾಗ ೧೯೩೮ರಲ್ಲಿ ಈ ಕಾಯಿದೆಯಲ್ಲಿ ಬೊಡ್ಡಿಯಿಂದ ತುದಿಯವರೆಗೂ ಬದಲಾವಣೆ ಮಾಡಿ ರೈತರ ಹಳೇ ಸಾಲಗಳನ್ನು ಒಗೆಹರಿಸಬೇಕೆಂದು ಗೊತ್ತುಮಾಡಲ್ಪಟ್ಟಿತ್ತು. ಆದರೆ ಇವುಗಳಲ್ಲಿ ಯಾವ ಕಾರ್ಯವೂ ಮಂತ್ರಿಮಂಡಲದ ರಾಜೀನಾಮೆಯ ತರುವಾಯ ಅಮಲಿನಲ್ಲಿ ಬಂದಿಲ್ಲ. ರೈತರ ಒಕ್ಕಲತನದ ಉತ್ಪನ್ನವನ್ನು ಬೆಳಿಸಿ ಅವರ ಬೇಸಾಯವು ಲಾಭದಾಯಕವಾಗುವಂತೆ ಉಪಾಯಗಳನ್ನು ಯೋಜಿಸುವದಕ್ಕಾಗಿ ಮಂತ್ರಿಮಂಡಲದವರು ಲಕ್ಷಾವಧಿ ರೂಪಾಯಿಗಳ ವಾರ್ಷಿಕ ವೆಚ್ಚದ ಯೋಜನೆಗಳನ್ನು ಮಾಡಿದ್ದರು.

ರೈತರು ಹುಟ್ಟಿಸುವ ಸರಕುಗಳ ಮಾರಾಟದ ಇಂದಿನ ಪದ್ಧತಿಯಿಂದ ಆ ಸರಕಿನ ಬೆಲೆಯಲ್ಲಿ ನೂರಕ್ಕೆ ೪೦ರಷ್ಟು ಭಾಗವು ರೈತರ ಕೈಗೆ ಬಾರದೆ ನಡುವಿನವರೇ ಅದನ್ನು ನುಂಗಿ ಬಿಡುತ್ತಿರುವರೆಂಬ ಮಾತು ಹಿಂದುಸ್ಥಾನ ಸರಕಾರದವರು ನಡಿಸಿದ ವಿಚಾರಣೆಯಲ್ಲಿಯೇ ಕಂಡುಬಂದಿದೆ. ರೈತರಿಗೆ ಒದಗುತ್ತಿರುವ ಈ ನಿಷ್ಕಾರಣ ನಷ್ಟವನ್ನು ತಪ್ಪಿಸುವದಕ್ಕಾಗಿ ಕಾಂಗ್ರೆಸ್ ಮಂತ್ರಿಮಂಡಲವು "ಮಾರ್ಕೆಟಿಂಗ ಆ್ಯಕ್ಟನ್ನು" ಮಾಡಿತು. ಕೆಲವು ಮಾರ್ಕೆಟಿಂಗ ಆಫೀಸರರ ನೇಮಣೂಕು ಮಾತ್ರ ಆಗಿರುವದಲ್ಲದೆ ಹಿಂದುಸ್ಥಾನ ಸರಕಾರದವರು ಈ ಆಫೀಸರರ ಪರಿಷತ್ತನ್ನು ಕರೆದಿರುವರೆಂದು ಕೆಲವು ದಿನಗಳ ಹಿಂದೆ ಪ್ರಸಿದ್ಧವಾಗಿತ್ತು. ಆದರೆ ಈ ಚಟುವಟಿಕೆಯ ಕಾರಣವೆಂದರೆ ಕೇವಲ ಯುದ್ಧಕ್ಕಾಗಿ ಶೇತಕೀ ಉತ್ಪನ್ನದೊಳಗಿಂದ ಬೇಕಾಗುವ ಜಿನಸುಗಳನ್ನು ಸುಲಭವಾಗಿ ಕೊಂಡುಕೊಳ್ಳಲು ಸಾಧಿಸಬೇಕೆಂಬದಿಷ್ಟೇ ಇರುವಂತೆ ಕಾಣುತ್ತದೆ.

ರೈತರ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವದಕ್ಕಾಗಿ ಬೇಸಾಯದ ಉತ್ಪನ್ನವನ್ನು ಬೆಳೆಸಲು ಅದೆಷ್ಟೋ ಉಪಾಯಗಳನ್ನು ದೊಡ್ಡ ಪ್ರಮಾಣದ ಮೇಲೆ ಯೋಜಿಸಲಿಕ್ಕೆ ಬರುವಂತಿದೆ. ಭೂಮಿಯ ಕಸುವನ್ನು ಬೆಳೆಸುವದು, ಅದಕ್ಕಾಗಿ ಭೂಮಿಯನ್ನು ಚನ್ನಾಗಿ ಹದಗೊಳಿಸುವದು, ಯಾಂತ್ರಿಕ ಶಕ್ತಿಯ ಸಹಾಯದಿಂದ ನೇಗಿಲು ಹೊಡೆಯುವದು, ಸಾಕಷ್ಟು ಗೊಬ್ಬರಗಳ ಪೂರೈಕೆಯಾಗುವಂತೆ ಏರ್ಪಾಡು ಮಾಡುವದು, ಹೆಚ್ಚಾಗಿ ಬೆಳೆ ಕೊಡುವಂಥ ಬೀಜಗಳನ್ನು ಬಿತ್ತುವದು, ಭೂಮಿಯೊಳಗಿನ ಹಸಿಯು ಆರಿಹೋಗದಂತೆ ಶಕ್ಯವಿದ್ದ ಪ್ರಯತ್ನ ಮಾಡುವದು, ಮಳೆಯ ನೀರನ್ನು ಅಲ್ಲಲ್ಲಿ ಸಂಗ್ರಹಿಸಿ ಬೇಕಾದ ಹೊತ್ತಿಗೆ ಅದನ್ನು ಬೆಳೆಗಳಿಗೆ ಉಣಿಸುವದಲ್ಲದೆ ಮಳೆ ಕಡಿಮೆಯಾದ ಕಾರಣದಿಂದ ಕಾಲಕಾಲಕ್ಕೆ ಆಗುತ್ತಿರುವ ಹಾನಿಯನ್ನು ತಪ್ಪಿಸುವದು; ಇವೇ ಮೊದಲಾದ ಅನೇಕ ಮಾರ್ಗಗಳು ರೈತರಿಗೆ ಲಾಭಕರವಾಗುವವೆಂಬದು ಈಗ ಸತ್ಪ್ರಯೋಗವಾಗಿ ಸಿದ್ಧವಾಗಿರುವದಲ್ಲದೆ ಸರಕಾರಕ್ಕೂ ಇದು ಮನವರಿಕೆಯಾದ ಮಾತಾಗಿದೆ. ಬೇಸಾಯ ಸುಧಾರಣೆಯು ಈ ಮಾರ್ಗಗಳ ಪ್ರಸಾರವಾಗುವಂತೆ ಸದ್ಯಕ್ಕೆ ಸ್ವಲ್ಪ ಮಟ್ಟಿಗೆ ಪ್ರಯತ್ನ ನಡೆದಿರುವವೆಂಬದೂ ನನಗೆ ಗೊತ್ತಿದೆ. ಆ ಉಪಾಯಗಳ ಪ್ರಸಾರವು ಸಾರ್ವತ್ರಿಕವಾಗುವಂತೆ ಪ್ರಯತ್ನವಾಗುವದಿಲ್ಲ.

ಬಡವರ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವ ಮತ್ತೊಂದು ಮಹತ್ವದ ಮಾರ್ಗವೆಂದರೆ ಒಕ್ಕಲತನಕ್ಕೆ ಆನುಷಂಗಿಕವಾಗಿರುವ ಮತ್ತು ಹಳ್ಳಿಪಳ್ಳಿಗಳಲ್ಲಿ ತಾಳಬಹುದಾದ ಹಳ್ಳಿಯ ಹೋರೆಗಳ ಪ್ರಸಾರ ಮಾಡುವದು. ಈ ವಿಷಯದಲ್ಲಾದರೂ ತೋರಿಕೆಯ ಮಟ್ಟಿಗೆ ಕೆಲವು ಚಟುವಟಿಕೆಗಳು ನಡೆದಂತೆ ಒಮ್ಮೊಮ್ಮೆ ಕಂಡುಬರುತ್ತದೆ. ವಿಶೇಷತಃ, ಮಹಾತ್ಮಾ-ಗಾಂಧಿಯವರು ಖಾದಿಯ ಚಳವಳಿಯನ್ನು ಕೆಲವು ಮಟ್ಟಿಗೆ ಯಶಸ್ವಿಯಾಗಿ ಮಾಡಿದ್ದರಿಂದ ಜನಲಜ್ಜೆಯ ಸಲುವಾಗಿ ಅಥವಾ ಗಾಂಧಿಯವರ ಪ್ರಯತ್ನಗಳಿಂದ ಜನರ ಮನಸ್ಸಿನ ಮೇಲೆ ಅವರ ವರ್ಚಸ್ಸು ಬಹಳ ಬೆಳೆಯಬಾರದೆಂಬ ಕಾರಣದಿಂದ ಸರಕಾರದವರೂ ಅವರ ಅಧಿಕಾರಿಗಳೂ ಗ್ರಾಮೋದ್ಯೋಗದ ಮಾತುಗಳನ್ನಾಡುತ್ತಿರುವರು. ಹಳ್ಳಿಯ ಕೈಗಾರಿಕೆಗಳಿಗೆ ಉತ್ತೇಜನ ಕೊಡುವ ಬಾಯಿಬಡಾಯಿಯು ಬೇಕಾದಷ್ಟು ನಡೆದಿರುವಾಗ ಈಗ ಅಸ್ತಿತ್ವದಲ್ಲಿ ಇರುವ ಗ್ರಾಮೋದ್ಯೋಗಗಳೂ ದಿನದಿನಕ್ಕೆ ನಾಶವಾಗುತ್ತಲೇ ಇವೆ. ಉದಾಹರಣಾರ್ಥವಾಗಿ, ಭತ್ತ ಕುಟ್ಟಿ ಅಕ್ಕಿ ಮಾಡುವ ಉದ್ಯೋಗವನ್ನು ಕೆಲವು ವರ್ಷಗಳ ಹಿಂದೆಯೆ ಹಳ್ಳಿಪಳ್ಳಿಯ ಜನರು ಮಾಡುತ್ತಲಿದ್ದರು. ಇತ್ತಿತ್ತ ಹಳ್ಳಿಯೊಳಗಿನ ಭತ್ತ ಕುಟ್ಟುವ ಉದ್ಯೋಗವು ನಾಶವಾಗಿ ಆ ಕೆಲಸವು ಗಿರಣಿಯ ಪಾಲಾಗಿದೆ. ಗ್ರಾಮೋದ್ಯೋಗದ ದೃಷ್ಟಿಯಿಂದ ಮತ್ತು ಆರೋಗ್ಯದ ದೃಷ್ಟಿಯಿಂದಲೂ ಈ ಸಂಗತಿ ಅನಿಷ್ಟ. ಗ್ರಾಮೋದ್ಯೋಗಗಳನ್ನು ಸಂರಕ್ಷಿಸುವದು ಸರಕಾರಕ್ಕೆ ಶಕ್ಯವಿದ್ದರೂ ಅವರು ಅತ್ತ ಗಮನಿಸುವದಿಲ್ಲ. ಇದರಿಂದ ರೈತರೇ ಮೊದಲಾದ ಹಳ್ಳಿವಾಸದವರ ಉತ್ಪನ್ನವು ದಿನದಿನಕ್ಕೆ ಕಡಿಮೆಯಾಗುತ್ತಿರುವದಲ್ಲದೆ ಬಂದ ಉತ್ಪನ್ನವು ಹಳ್ಳಿಯ ಹೊರಗಿನ ಬಂಡವಲದಾರರ ಕಡೆಗೆ ಹರಿದು ಹೋಗುತ್ತದೆ.

ತಾತ್ಪರ್ಯವೆಂದರೆ, ಸಹಕಾರಿ ಸಂಘಗಳು ಯಾವ ಹಿತಕ್ಕಾಗಿ ಸ್ಥಾಪಿಸಲ್ಪಟ್ಟವೋ ಅವರು ಸಾಂಪತ್ತಿಕ ದೃಷ್ಟಿಯಿಂದ ಸಂಪೂರ್ಣವಾಗಿ ದುರ್ದೆಸೆಗೆ ಈಡಾಗಿರುವರಲ್ಲದೆ ಆ ದುಸ್ಥಿತಿಯು ದಿನದಿನಕ್ಕೆ ಮತ್ತಷ್ಟು ಕೆಡುತ್ತಲೇ ನಡೆದಿದೆ. ಇಂಥ ಸ್ಥಿತಿಯಲ್ಲಿ ಸಹಕಾರಿ ಚಳವಳಿಯು ಯಶಸ್ವಿಯಾಗುವದಿಲ್ಲವೆಂಬಲ್ಲಿ ಆಶ್ಚ

ರ್ಯವೇಸಿದೆ? ಇಂಥ ದುರವಸ್ಥೆಗೀಡಾಗಿರುವ ಜನರಿಗೆ ನೀವು ಸಹಕಾರಿ ಚಳವಳಿಯ ಉಪಯೋಗ ಮಾಡಿಕೊಳ್ಳುವದಿಲ್ಲ, ಆ ಚಳವಳಿಯನ್ನು ಯಶಸ್ವಿಯಾಗಿಸುವ ಗುಣ ನಿಮ್ಮಲ್ಲಿಲ್ಲವೆಂದು ಮುಂತಾಗಿ ಹೀಯಾಳಿಸುವದೆಂದರೆ ಗಾಯದ ಮೇಲೆ ಉಪ್ಪು ಸವರಿದಂತೆಯೇ ನಿರ್ದಯತನವಾಗುವದು ಸಾವಿರಾರು ವರ್ಷಗಳ ಮೊದಲಿನಿಂದಲೂ ನಮ್ಮ ಹಳ್ಳಿಯ ಜನರಿಗೆ ಸಹಕಾರಿ ಜೀವನದ ಶಿಕ್ಷಣ ದೊರೆತಿದೆ ಮುಂಚಿನ ಕಾಲದಲ್ಲಿ ನಮ್ಮ ಹಳ್ಳಿಗಳು ಪ್ರತಿಯೊಂದು ವಿಷಯದಲ್ಲಿಯೂ ಸ್ವಯಂಶಾಸಿತ ರಾಜ್ಯಗಳಂತೆ ತಮ್ಮ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದವು. ಬ್ರಿಟಿಶ ರಾಜ್ಯಪದ್ಧತಿಯಿಂದ ಹಳ್ಳಿಯ ಜೀವನದ ಕಟ್ಟು ಸಂಪೂರ್ಣವಾಗಿ ಸಡಿಲಾಗಿ ನಾಶ ಹೊಂದಿದೆ. ಈಗ ಪ್ರತಿಯೊಂದು ಮಾತಿನಲ್ಲಿಯೂ ಹಳ್ಳಿಗರು ಹೊರಗಿನ ಸಂಸ್ಥೆಗಳಿಗೆ, ಅಧಿಕಾರಿಗಳಿಗೆ, ವ್ಯಕ್ತಿಗಳಿಗೆ ಮತ್ತು ಹೊಸ ಹೊಸದಾಗಿ ಹುಟ್ಟುತ್ತಿರುವ ಶಕ್ತಿಗಳಿಗೆ ಶರಣು ಹೋಗಬೇಕಾಗಿದೆ. ಇದರಿಂದ ಹಳ್ಳಿಯಲ್ಲಿ ಸಹಕಾರೀ ಜೀವನವೆಂಬುದು ಅಶಕ್ಯವಾಗಿ ಹೋಗಿದೆ ಅಲ್ಲಿ ಈಗ ಪರಸ್ಪರ ಸಹಕಾರ್ಯವು ಉಳಿದಿರದೆ ಪುಂಡರ ಪ್ರತಿಷ್ಠೆ ಬೆಳೆದಿದೆ. ಇವರ ಜೋರು ಹಳ್ಳಿಯ ಜನರ ಮೇಲಿರದೆ ಅವರ ಶಕ್ತಿಯನ್ನು ಹೀರಿದ ಪರಿಸ್ಥಿತಿಯ ಪರಿಣಾಮವಿದಾಗಿದೆ. ಈ ಸ್ಥಿತಿಯನ್ನು ಬದಲಿಸುವದು ಹಲವು ಮಟ್ಟಿಗೆ ಸರಕಾರದ ಕೈಯಲ್ಲಿಯೇ ಇದೆ. ಹಳ್ಳಿಗಳ ಸಂಘಟನೆಯನ್ನೇ ಆಮೂಲಾಗ್ರವಾಗಿ ಬದಲಿಸಲಿಕ್ಕೆ ಬೇಕು. ಹಳ್ಳಿಗಳ ಸುಧಾರಣೆಯ ಪ್ರಯತ್ನ ಮಾಡುವ ಅನೇಕ ಖಾತೆಗಳು (ಇಲಾಖೆಗಳು) ಸರಕಾರದಲ್ಲಿವೆ. ಆದರೆ ಈ ಖಾತೆಗಳಲ್ಲಿ ಅನ್ಯೋನ್ಯವಾದ ಅವಿಶ್ವಾಸ ಅಥವಾ ಅಸೂಯೆ ಕೂಡ ಇರುವದು ಕಂಡುಬರುತ್ತದೆ ನಮ್ಮ ಜಿಲ್ಹೆಯಲ್ಲಿ ಸಹಕಾರಿ ತತ್ವದ ಮೇರೆಗೆ ಸಕ್ಕರೆಯ ಕಾರಖಾನೆಯನ್ನು ಸ್ಥಾಪಿಸಬೇಕೆಂದು ಸಹಕಾರಿ ಅಧಿಕಾರಿಗಳೊಮ್ಮೆ ಪ್ರಯತ್ನ ನಡಿಸಿದ್ದರು ಆದರೆ ಅದು ಯಶಸ್ವಿಯಾಗಲಿಲ್ಲ. ಶೇತಕೀ ಖಾತೆಯ ಅಧಿಕಾರಿಗಳು ಸಹಕಾರಿ ಖಾತೆಯ ಪ್ರಯತ್ನದ ವಿರುದ್ಧವಾಗಿ ಜನರ ಮನಸ್ಸಿನಲ್ಲಿ ತುಂಬಿಸುತ್ತಿದ್ದರೆಂಬದೂ ಅಂದಿನ ಅಪಯಶಸ್ಸಿಗೆ ಒಂದು ಕಾರಣವಾಗಿತ್ತೆಂಬದು ಬೈಲಿಗೆ ಬಂದಿತು ಇಂಥ ಅನಿಷ್ಟ ಪ್ರಕಾರಗಳು ಯಾವ ಅಧಿಕಾರಿ ವರ್ಗದಲ್ಲಿ ನಡೆಯುವವೋ ಅಂಥವರಿಂದ ಜನರಿಗೆ ಸಹಕಾರ್ಯದ ಶಿಕ್ಷಣವೇನು ದೊರೆತೀತು? ಕಲೆಕ್ಟರರಿಗೆ ಗ್ರಾಮಸುಧಾರಣೆಗೆ ಸಂಬಂಧಿಸಿದ ಯಾವದೇ ಖಾತೆಯ ಮಾಹಿತಿ ಇರುವದಿಲ್ಲ; ಭಿನ್ನ ಖಾತೆಗಳನ್ನು ಸಾಮಾನ್ಯವಾದ ಒಂದೇ ಪ್ರಗತಿಪಥಕ್ಕೆ ಹೂಡುವಷ್ಟು ಬಿಡುವೂ ಅವರಿಗೆ ಇರುವದಿಲ್ಲ

ಸಹಕಾರ ಯಶಸ್ವಿಯಾಗಬೇಕೆಂಬ ಪ್ರಶ್ನೆಗೆ ಸರಕಾರಿ ಅಧಿಕಾರಿಗಳು ಕೊಡುವ ಉತ್ತರವೇನೆಂದರೆ, ಸಹಕಾರಿತೆಗೆ ಅವಶ್ಯವಿರುವ ಗುಣಗಳು ನಮ್ಮ ಜನರಲ್ಲಿ ಇಲ್ಲವೆಂಬದು. ಎಂಬಿವೇ ಮೊದಲಾದ ಮಾತುಗಳು ಕೇವಲ ಜನರೇ ಸಹಕಾರಿತೆಗೆ ಯೋಗ್ಯರಿಲ್ಲವೆಂಬ ನಿಮಿತ್ತದಿಂದ ಈ ಚಳವಳಿಯನ್ನು ಸಂಕೋಚಗೊಳಿಸಲು ಸರಕಾರದವರು ಸಂಕಲ್ಪಿಸಿದರು ಕಳೆದ ೨-೩ ವರ್ಷಗಳಲ್ಲಿ ಲೋಕನಿಯುಕ್ತ ಮಂತ್ರಿಮಂಡಳದವರು ಈ ಧೋರಣದಲ್ಲಿ ಕೆಲವು ಮಟ್ಟಿಗೆ ಬದಲಾವಣೆ ಮಾಡಿರುವದರಿಂದ ದಕ್ಷತೆಯಿಂದ ಹೊಸ ಸಂಘಗಳನ್ನು ಸ್ಥಾಪಿಸುವ ಪ್ರಯತ್ನಗಳು ಈಗ ನಡೆದಿವೆ. ಆದರೂ ನಮ್ಮ ಜನರ ಆರ್ಥಿಕ ದುರ್ದಶೆಯ ಕಾರಣಗಳನ್ನು ಕಿತ್ತಿ ಹಾಕಿ ಅನಿರ್ಬಂಧವಾಗಿ ಸಹಕಾರಿ ಪದ್ಧತಿಯ ಲಾಭ ಪಡೆಯುವದು ಸಮಸ್ತ ಜನರಿಗೂ ಶಕ್ಯವಾಗುವಂಥ ಪ್ರಯತ್ನವಾಗುವದು ಅವಶ್ಯವಿದೆ. ಇಂದಿನ ಪರಿಸ್ಥಿತಿಯಲ್ಲಿ ಬದಲಾವಣೆಯಾಗದೆ ಸಹಕಾರಿ ಸಂಘಗಳ ಲಾಭವು ಜನತೆಗೆ ದೊರೆಯುವದೇ ಶಕ್ಯವಿಲ್ಲ, ಆ ಬದಲಾವಣೆಯು ನೆರವೇರುವ ವರೆಗಿನ ಕಾಲಾವಧಿಯಲ್ಲಿ ಸಹಕಾರಿ ಸಂಸ್ಥೆಗಳ ನಿಯಂತ್ರಣವು ಹೆಚ್ಚು ನಿಷ್ಠುರವಾಗಿ ನಡೆಯುವದವಶ್ಯವೆಂಬ ಮಾತನ್ನು ಇಲ್ಲಿ ಸ್ಪಷ್ಟವಾಗಿ ಹೇಳುವದು ಅಗತ್ಯ ಸಹಕಾರಿ ಸಂಸ್ಥೆಗಳು ಸ್ವಯಂಶಾಸಿತವಾಗಿರಬೇಕು. ಬೇರೆ ಸಂಸ್ಥೆಗಳಿಗಿಂತ ಸಹಕಾರಿ ಬ್ಯಾಂಕುಗಳ ಮೇಲೆಯೇ ಹೆಚ್ಚಿಗೆ ವಿಶ್ವಾಸವಿಟ್ಟು ಜನರು ಅವುಗಳಿಗೆ ಅವಶ್ಯವಿರುವಷ್ಟಕ್ಕಿಂತ ಹೆಚ್ಚಿನ ಠೇವುಗಳನ್ನು ಅಲ್ಲಿ ಇಡುತ್ತಿರುವ ಕಾರಣವೆಂದರೆ ಈ ಬ್ಯಾಂಕುಗಳ ಮೇಲೆ ಸರಕಾರದ ನಿಯಂತ್ರಣವಿರುವದೆಂಬ ಸಂಗತಿಯೇ ಸರಿ 'ಲ್ಯಾಂಡ್ ಮಾರ್ಗೇಜ್ ಬ್ಯಾಂಕು'ಗಳ ಬಂಡವಾಳವಂತೂ ಸರಕಾರದ ಹೊಣೆಗಾರಿಕೆಯ ಮೇಲೆಯೇ ಕೂಡಿಸಲಾಗಿದೆ. ಈಗಿನ ಸಹಕಾರಿ ಸಂಸ್ಥೆಗಳು ಸ್ವಯಂಶಾಸಿತವಾಗಿಲ್ಲ. ಅವು ಸಂಪೂರ್ಣವಾಗಿ ಸರಕಾರದ ನಿಯಂತ್ರಣದಲ್ಲಿಯೂ ಇಲ್ಲ. ಇದರಿಂದ ಈ ಸಹಕಾರಿ ಸಂಸ್ಥೆಗಳಲ್ಲಿನ ಜನರು ಮತ್ತು ಸರಕಾರದ ಅಧಿಕಾರಿಗಳ ನಡುವೆ ಆಗಾಗ ಜಗ್ಗಾಟ ನಡೆಯುವದುಂಟು. ಇಂದಿನ ಪರಿಸ್ಥಿತಿಯಲ್ಲಿ ಜನತೆಯ ಸಾಂಪತ್ತಿಕ ಸ್ಥಿತಿಯ ಸುಧಾರಣೆ, ಸಹಕಾರಿ ಚಳವಳಿಯು ಬೆಳವಣಿಗೆ ಹೊಂದುವಂತೆ ಅನುಕೂಲ ವಾತಾವರಣದ ನಿರ್ಮಾಣ, ಅದು ನಿರ್ಮಾಣವಾಗುವವರೆಗೆ ಸಹಕಾರಿ ಸಂಸ್ಥೆಗಳು ಯೋಗ್ಯವಾಗಿ ನಡೆಯುವಂತೆ ಹೊಣೆಯನ್ನು ವಹಿಸುವಿಕೆ ಇವೆಲ್ಲ ಕಾರ್ಯಗಳು ಕೆಲವು ವರ್ಷಗಳ ವರೆಗಾದರೂ ಸರಕಾರದಿಂದಲೇ ಸಾಗಬೇಕಾಗಿವೆ. ಸರಕಾರವು ಜನತೆಯ ಸರಕಾರವಾಗಿ ಪರಿಣಮಿಸಿದ ಹೊರತು ಇಂದಿನ ಪರಿಸ್ಥಿತಿಯಲ್ಲಿ ಬದಲಾವಣೆಯಾಗಿ ಸಹಕಾರಿ ತತ್ವಗಳ ಪ್ರಸಾರವಾಗಲಾರದೆಂಬ ಸಿದ್ಧಾಂತವನ್ನೇ ಕೊನೆಗೆ ಎಲ್ಲರೂ ಒಪ್ಪಬೇಕಾಗುವದು

ಈ ಬದಲಾವಣೆಯನ್ನು ಉಂಟುಮಾಡುವ ಕೆಲಸ ಸಹಕಾರಿ ಸಂಸ್ಥೆಗಳ ಕಾರ್ಯಕ್ಷೇತ್ರದಲ್ಲಿ ಬರುವದಿಲ್ಲ ಸಹಕಾರಿ ಸಂಸ್ಥೆಗಳ ಕಾರ್ಯಮರ್ಯಾದೆಯಲ್ಲಿ ನಿಂತು ನಾವು ಇಂದು ಮಾಡಬಹುದಾದ ಕಾರ್ಯವೆಂದರೆ, ಇಂದಿನ ಒಟ್ಟು ಪರಿಸ್ಥಿತಿಯ ಜ್ಞಾನವನ್ನು ನಮ್ಮ ಬಾಂಧವರಲ್ಲಿ ಪ್ರಸಾರಗೊಳಿಸುವದು ಮತ್ತು ಪ್ರತಿಕೂಲ ಪರಿಸ್ಥಿತಿಯ ಬಂಧನದಲ್ಲಿ ಶಕ್ಯವಿದ್ದ ಮಟ್ಟಿಗೆ ಸಹಕಾರಿತೆಯ ಪ್ರಚಾರ ಮಾಡುವದಿಷ್ಟೇ ಆಗಿದೆ. ಕೆಲವು ಕಾಲದ ಹಿಂದೆ, ತಮ್ಮ ಜಿಲ್ಲೆಯೊಳಗಿನ ಪ್ರತಿಯೊಂದು ಗ್ರಾಮವಸತಿಯಿಂದ ಕೆಲವು ಅಂತರದ ವರೆಗಿನ ಅಡವಿಯನ್ನು ಕಡಿದು ಜಂಗಲಿನ ಗಡಿಯನ್ನು ಆಚೆಗೆ ಸರಿಸಿ ಅಲ್ಲಿ ಉಂಟಾಗಬಹುದಾದ ಹೊಸ ಭೂಮಿ ಆಯಾ ಹಳ್ಳಿಯವರು ಸಾಮೂಹಿಕವಾಗಿ ಉಪಯೋಗಿಸಬೇಕೆಂದು ಕಾಂಗ್ರೆಸ್ ಮಂತ್ರಿಮಂಡಳವು ನಿರ್ಣಯ ಮಾಡಿದ್ದಿತು ಈ ವ್ಯವಸ್ಥೆಯನ್ನು ನಡವಳಿಕೆಗೆ ತರುವ ಕಾರ್ಯವು ಮಂತ್ರಿಮಂಡಳದ ಕಡೆಗೆ ಇದ್ದ ಹೊತ್ತಿನಲ್ಲಿ, ನಿರ್ದಿಷ್ಟ ಹದ್ದಿನೊಳಗಿನ ಅಡವಿಯನ್ನು ಕಡಿದು ಆ ನೆಲವನ್ನು ತಮ್ಮೂರಿನ ಸಾಮೂಹಿಕ ಒಡೆತನದ್ದಾಗಿ ಮಾಡಿಕೊಂಡು ಅದರ ಉಪಭೋಗ ಪಡೆಯಲು ಆಯಾ ಹಳ್ಳಿಗಳ ಜನರು ಸಿದ್ಧರಿಲ್ಲವೆಂದು ತಿಳಿದುಬಂದಿತ್ತು ಇಡಿಯ ಊರಿನ ಹಿತಕ್ಕಾಗಿ ಊರವರೆಲ್ಲರು ಸಾಮುದಾಯಿಕ ಜವಾಬದಾರಿಯನ್ನು ಹೊತ್ತು ಊರಿಗೆಲ್ಲ ಕೂಡಿ ಸಾಮೂಹಿಕವಾಗಿ ಪ್ರಾಪ್ತವಾಗಿರುವ ಭೂಮಿಯ ಒಡೆತನವನ್ನು ಊರ ಹಿತಕ್ಕಾಗಿಯೆ ಉಪಯೋಗಿಸುವದು ತಮ್ಮ ಜಿಲ್ಲೆಯಲ್ಲಿ ಸಾಧ್ಯವಾದರೆ ಅಥವಾ ಆಗಿದ್ದರೆ ಸಹಕಾರಿತೆಯ ಇದೊಂದು ಮಹತ್ಫಲವೇ ತಮಗೆ ದೊರೆಯಬಹುದಾಗಿತ್ತು ಅಥವಾ ದೊರೆಯಬಹುದಾಗಿದೆ ಸಂಪತ್ತಿನ ಉತ್ಪಾದನೆ ಮತ್ತು ಅದರ ಹಂಚುವಿಕೆಯ ಕೆಲಸದಲ್ಲಿ ಸಹಕಾರ್ಯ ಮಾಡುವದೇ ಈ ಚಳವಳಿಯಲ್ಲಿ ಮಹತ್ವದ ಭಾಗ.

ತಮ್ಮ ಜಿಲ್ಲೆಯಲ್ಲಿ ಭತ್ತವೇ ಮುಖ್ಯ ಬೆಳೆಯಾಗಿದೆ. ನಮ್ಮ ದೇಶಕ್ಕೆ ಹೊರಗಿನಿಂದ ಬಹಳ ಕೋಟಿ ರೂಪಾಯಿಗಳ ಅಕ್ಕಿ ಬರುತ್ತದೆ. ಭತ್ತದ ಬಿತ್ತಿಗೆಯಲ್ಲಿ ಸುಧಾರಿಸಿದ ಬೀಜಗಳನ್ನು ಈ ಜಿಲ್ಲೆಯಲ್ಲಿ ಎಷ್ಟು ಜನರು ಉಪಯೋಗಿಸುತ್ತಿರುವರೆಂಬದು ನನಗೆ ಗೊತ್ತಿಲ್ಲ ನಮ್ಮ ದೇಶದ ಭತ್ತದ ಭೂಮಿಯಲ್ಲಿ ಒಟ್ಟಿಗೆ ನೂರಕ್ಕೆ ೬ರಷ್ಟೇ ಭಾಗದಲ್ಲಿ ಸುಧಾರಿಸಿದ ಬೀಜಗಳನ್ನು ಬಿತ್ತಲಾಗುತ್ತಿದೆ ಸುಧಾರಿಸಿದ ಬೀಜ ಬಿತ್ತುವದರಿಂದ ಭತ್ತದ ಬೆಳೆಯು ಕನಿಷ್ಟ ಪಕ್ಷಕ್ಕೆ ನೂರಕ್ಕೆ ೧೦ರಷ್ಟಾದರೂ ಹೆಚ್ಚಾಗಬಹುದು. ಸುಧಾರಿಸಿದ ಭತ್ತದ ಬೀಜವನ್ನೇ ಬಿತ್ತುವಂತೆ ಇಡೀ ಜಿಲ್ಲೆಯ ರೈತರಲ್ಲಿ ಪ್ರಚಾರಕಾರ್ಯ ಮಾಡುವದಕ್ಕಾಗಿ ತಾವು ಸಂಸ್ಥೆಯನ್ನು ಸ್ಥಾಪಿಸಿದರೆ ಅಥವಾ ಆಧುನಿಕ ಸಾಧನಗಳ ಸಹಾಯದಿಂದ ಬೀಳು ಭೂಮಿಯಲ್ಲಿ ಭತ್ತದ ಪೈರನ್ನು ಬೆಳೆಯುವಂತೆ ಸಹಕಾರಿ ತತ್ವದ ಮೇರೆಗೆ ಪ್ರಯತ್ನ ಮಾಡಿದರೆ ದಾರಿದ್ರ್ಯ ದುಃಖಿತವಾಗಿರುವ ತಮ್ಮ ಜಿಲ್ಲೆಗೆ ಅದರಿಂದ ಬಹಳ ಲಾಭವಾಗದೆ ಇರಲಾರದು ಗ್ರಾಮೋದ್ಯೋಗಗಳನ್ನು ಕೈಗೊಂಡಿರುವವರ ಸಹಕಾರಿ ಸಂಘವೊಂದು ಇತ್ತೀಚಿಗೆ ಸ್ಥಾಪಿತವಾಗಿರುವದು ಸಂತೋಷದ ಸಂಗತಿ ತಮ್ಮ ಜಿಲ್ಲೆಗೆ ಬೇಕಾಗುವಷ್ಟು ಬಟ್ಟೆಯೆಲ್ಲ ಇಲ್ಲಿಯೇ ಸಿದ್ಧವಾಗುವಂತೆ ಸಹಕಾರಿ ಪದ್ಧತಿಯಿಂದ ಪ್ರಯತ್ನ ಮಾಡಿದರೆ ಅದರಲ್ಲಿಯೂ ಯಶಸ್ಸು ದೊರೆಯುವದು ಅಶಕ್ಯವಿಲ್ಲ. ಸಂಪತ್ತಿನ ಉತ್ಪಾದನಕ್ಕಾಗಿ ಸಹಕಾರಿ ತತ್ವದ ಮೇರೆಗೆ ಕಾರ್ಯ ಮಾಡುವ ಶಿಕ್ಷಣವನ್ನು ಜನರಿಗೆ ಕೊಡುವ ವಿಷಯದಲ್ಲಿ ಶಕ್ಯವಿದ್ದ ಮಟ್ಟಿಗೂ ಬಲವಾದ ಪ್ರಯತ್ನಗಳನ್ನು ಮಾಡಲಿಕ್ಕೆ ಬೇಕು

ಮಿತ್ರರೇ, ಸಹಕಾರಿ ಚಳವಳಿಗೆ ಸಂಬಂಧಿಸಿದ ಕೆಲವು ಮುಖ್ಯ ವಿಷಯಗಳ ದಿಗ್ದರ್ಶನವನ್ನು ಮಾತ್ರ ನಾನು ಇದುವರೆಗೆ ಮಾಡಿದ್ದಾಯಿತು. ಈ ಆಂದೋಲನಕ್ಕೆ ಸಂಬಂಧಿಸಿರುವ ಬೇರೆ ಹಲವು ಪ್ರಶ್ನೆಗಳು ಮತ್ತು ತಮ್ಮ ಜಿಲ್ಲೆಗೇ ವಿಶಿಷ್ಟವಾಗಿರುವ ಸಮಸ್ಯೆಗಳನ್ನು ಕುರಿತು ತಾವು ನಾಳೆಯ ದಿನ ಚರ್ಚೆ ಮಾಡಿಯೇ ಮಾಡುವಿರಿ. ಆದುದರಿಂದ ನನ್ನೀ ವಿಚಾರಗಳನ್ನು ತಮ್ಮೆದುರು ಸಾರಾಂಶರೂಪವಾಗಿ ಮಂಡಿಸಲು ಸಂಧಿಯನ್ನಿತ್ತ ಸಲುವಾಗಿ ತಮಗೆ ಮತ್ತೊಮ್ಮೆ ವಂದನೆಗಳನ್ನು ಸಲ್ಲಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ

|| ವಂದೇ ಮಾತರಮ್ ||

ಪ್ರದರ್ಶನಗಳ ಅವಶ್ಯಕತೆ.

ಇದೇ ತಿಂಗಳ ಆದಿಯಲ್ಲಿ ಶಿರಸಿಯಲ್ಲಿ ನೆರೆದ ಸಹಕಾರಿ ಪರಿಷತ್ತಿನ ಜತೆಗೆ ಒಂದು ಪ್ರದರ್ಶನವನ್ನೂ ಏರ್ಪಡಿಸಿದ್ದರು. ನಮ್ಮ ಜಿಲ್ಲೆಯಲ್ಲಿ ಇದೊಂದು ಹೊಸ ಉಪಕ್ರಮವೆಂದು ಹೇಳಬಹುದು. ಪ್ರಾಚೀನ ಕಾಲದಲ್ಲಿ ಇಂಥ ಪ್ರದರ್ಶನಗಳು ಇದ್ದಿಲ್ಲವೆಂತಲ್ಲ. ಅದರ ಕಲ್ಪನೆಯು ಬೇರೆ ರೂಪದಲ್ಲಿ ರೂಢಿಯಲ್ಲಿತ್ತು. ಪ್ರತಿ ಒಂದು ದೊಡ್ಡ ಊರಿನಲ್ಲಿ ನೆರೆಯುವ ಸಂತೆಗಳೆಂದರೆ ಒಂದು ಬಗೆಯ ಪ್ರದರ್ಶನವೇ ಸರಿ. ನೆರೆ ಹಳ್ಳಿಗಳಲ್ಲಿ ಬೆಳೆಯುವ ಧಾನ್ಯದವಸ, ಕೈಗಾರಿಕೆಯ ಸಾಮಾನುಗಳು, ಹಳ್ಳಿಗರಿಗೆ ಅಗತ್ಯವುಳ್ಳ ಜಿನಸುಗಳು ಇವೆಲ್ಲವೂ ಸಂತೆಗಳಲ್ಲಿ ತರಿಸುತ್ತಿದ್ದರು. ಇದರಿಂದ ಗಿರಾಕಿಗಳಿಗೂ ಸಂತೆಗೆ ಬರುವ ಇತರೇ ಜನರಿಗೂ ನೆರೆಹೊರೆಯಲ್ಲಿ ಇದ್ದಂತೆ ಸುತ್ತುಮುತ್ತಲಿನ ಹಳ್ಳಿಗಳಲ್ಲಿ ಏನೇನು ಬೆಳೆಯುತ್ತದೆ, ಯಾವ್ಯಾವ ಜಿನಸುಗಳು ತಯಾರಾಗುತ್ತವೆ ಎಂಬುದರ ಅರಿವು ಆಗುತ್ತಿತ್ತು. ಇಂಥ ಸಾಮಾನುಗಳನ್ನು ಉತ್ಪತ್ತಿಸುವವರಿಗೂ ಸುಲಭದಲ್ಲಿ ಅವುಗಳ ಮಾರಾಟವಾಗುವದರಿಂದ ಹಣ ಸಂಪಾದನೆಯೂ ಆಗಿ ಅವುಗಳನ್ನು ಹೆಚ್ಚುಹೆಚ್ಚಾಗಿ ಉತ್ಪತ್ತಿಸುವದಕ್ಕೆ ಉತ್ತೇಜನವೂ ಸಿಗುತ್ತಿತ್ತು. ಸಂತೆಗಳ ಜತೆಗೆ ಕೆಲವು ಕಡೆಗಳಲ್ಲಿ ಕುಸ್ತೀ ಆಟಗಳೂ, ಎತ್ತು-ಕೋಣಗಳ ಶರ್ಯತ್ತುಗಳೂ ನಡೆಯುತ್ತಿದ್ದವು.

ಆದರೆ ಇವೆಲ್ಲವೂ ೧೯ನೆಯ ಶತಮಾನದ ಅರ್ಧದ ವರೆಗೂ ರಾಷ್ಟ್ರೀಯ ರೀತ್ಯಾ ಒಂದು ಶಿಸ್ತವಾದ ಪದ್ಧತಿಯಿಂದ ಏರ್ಪಡಿಸುವ ಕಲೆ ಇನ್ನೂ ಜಾರಿಗೆ ಬಂದಿದ್ದಿಲ್ಲ. ಅದನ್ನು ಮೊದಲು ಜಾರಿಯಲ್ಲಿ ತಂದದ್ದು ಇಂಗ್ಲಂಡಿನಲ್ಲಿ. ಅಂದಿನಿಂದ ಈ ಕಲ್ಪನೆಗೆ ಚಾಲನ ಸಿಕ್ಕು ಯುರೋಪದ ರಾಷ್ಟ್ರಗಳು ಒಂದೊಂದಾಗಿ ತಮ್ಮ ದೇಶದಲ್ಲಿ ಇಂಗ್ಲಂಡಿನಲ್ಲಿ ಏರ್ಪಡಿಸಿದ ಪ್ರದರ್ಶನದಂತಹ ಸಮಾರಂಭಗಳನ್ನು ಕೈಕೊಂಡು ವರ್ಷೇ ವರ್ಷೇ ಅದರಲ್ಲಿ ಪ್ರಗತಿ ಮಾಡುತ್ತ ಬಂದಿರುತ್ತವೆ.

ಇಪ್ಪತ್ತನೆಯ ಶತಮಾನದಿಂದ ಈ ಪ್ರದರ್ಶನಗಳ ಅಸ್ತಿತ್ವವು ಹಿಂದುಸ್ಥಾನದಲ್ಲಿ ರೂಢವಾಯಿತೆಂದು ಹೇಳಬಹುದು. ರಾಷ್ಟ್ರೀಯ ಸಭೆಯ ಅಧಿವೇಶನಗಳ ಜತೆಗೆ ಇವನ್ನು ನೆರೆಯಿಸುವ ಪ್ರಚಾರವು ಶುರುವಾಯಿತು. ಆದರೆ ನಮ್ಮ ಜಿಲ್ಲೆ ಮಟ್ಟಿಗೆ ಇಂತಹ ಪ್ರದರ್ಶನವು ನಿನ್ನೆ ಶಿರಸಿಯಲ್ಲಾದದ್ದು ಮೊದಲನೆಯದೆಂದೇ ಹೇಳಬಹುದು. ಇದನ್ನು ಮಾದರಿ ರೂಪದಲ್ಲಿ ತಂದು ಸ್ವಲ್ಪಾವಕಾಶದಲ್ಲಿಯೇ ಅದರ ಉಚಿತ ಯೋಗ್ಯವಾದ ವ್ಯವಸ್ಥೆಯನ್ನು ಮಾಡಿದ್ದರ ಬಗ್ಗೆ ಪರಿಷತ್ತಿನ ಚಾಲಕರನ್ನು ತುಂಬಾ ಹೊಗಳಲೇಬೇಕು.

ಪ್ರದರ್ಶನದಲ್ಲಿ ತಂದಿಟ್ಟ ಸಾಮಾನುಗಳನ್ನು ನೋಡಿದವರಲ್ಲಿ ಕೆಲವರು ನಮ್ಮ ಈ ಹಿಂದುಳಿದ ಒಡ ಜಿಲ್ಲೆಯಲ್ಲಿ ಇಷ್ಟು ಕೈಗಾರಿಕೆ ಸಾಮಾನುಗಳು ಆಗುತ್ತವೆಯೇ ಎಂತ ಆಶ್ಚರ್ಯಪಟ್ಟಿರಬೇಕು! ಬಗೆ ಬಗೆಯ ಧಾನ್ಯಗಳ ಹಾಗೂ ಉತ್ಪತ್ತಿಗಳ ಜ್ಞಾನವು ಕೂಡ ನೋಡಲು ಬಂದವರಲ್ಲಿ ಹಲವರಿಗೆ ಪ್ರಥಮವೇ ಆಗಿರಬೇಕು. ಮತ್ತು ಇದೇ ರೀತಿ ಕೈಗಾರಿಕೆ ಸಾಮಾನುಗಳನ್ನೂ ಧಾನ್ಯದವಸಗಳನ್ನೂ ಶಕ್ಯವಿದ್ದರೆ ತಮ್ಮ ಹಳ್ಳಿಗಳಲ್ಲಿಯೂ ತಯಾರಿಸುವ ಇಚ್ಛೆಯು ಸಹ ಸ್ವಲ್ಪ ಜನರಲ್ಲಾದರೂ ಹುಟ್ಟಿರಬೇಕು. ಈ ತರದ ಕಾಂಕ್ಷೆ ಹುಟ್ಟಿದರೆ ಅದೊಂದು ಮಹತ್ತ್ವದ ಲಾಭವೇ ಎಂತ ನಾನು ಎಣಿಸುತ್ತೇನೆ.

ಪ್ರದರ್ಶನದ ಜತೆಗೆ ಪಂದ್ಯಾಟಗಳನ್ನೂ ನಡಿಸಿದರು. ಇದೊಂದು ಸಹ ಸ್ತುತ್ಯವಾದ ಉಪಕ್ರಮವೇ. ಶರೀರ ದಾರ್ಢ್ಯದ ಪರಮಾವಧಿಯನ್ನು ನಮ್ಮ ಜಿಲ್ಲೆಯ ಹಳ್ಳಿಗಳಲ್ಲಿನೆ ಬೇರೆ ಎಲ್ಲಿ ನೋಡಬಹುದು? ಶರೀರ ಸಾಮರ್ಥ್ಯಗಳಿಂದ ಏನೇನು ಮಾಡಬಹುದೆಂಬುದರ ಪ್ರತ್ಯಕ್ಷ ಅನುಭವವನ್ನು ಶಿರಸಿಯ ಹನುಮಾನ ವ್ಯಾಯಾಮ ಮಂಡಳಿಯವರೂ ಕುಮಟೆಯ ವ್ಯಾಯಾಮಶಾಲೆಯವರೂ ಪ್ರೇಕ್ಷಕರಿಗೆ ತಂದು ಕೊಟ್ಟದ್ದಾರೆ.

ಕುಸ್ತೀ ಸ್ಪರ್ಧೆಯ ಕಾಲದಲ್ಲಿ ನಮ್ಮ ಜಿಲ್ಲೆಯವರ ಹೀನಸ್ಥಿತಿ ಮತ್ತಿಷ್ಟು ದೃಗ್ಗೋಚರವಾಯಿತು. ಪರ ಜಿಲ್ಲೆಯವರ ಸಂಗಡ ಕುಸ್ತೀ ಆಡುವ ಧೈರ್ಯವು ನಮ್ಮವರಲ್ಲಿದ್ದಷ್ಟು ಕಂಡುಬರಲಿಲ್ಲ. ಆದರಲ್ಲೂ ನಮ್ಮ ಮುಸಲ್ಮಾನ ಬಂಧುಗಳಲ್ಲಿರುವ ನೈಸರ್ಗಿಕವಾದ ನಿರೋಗಿತ್ವವು ಹಿಂದು ಬಾಂಧವರಲ್ಲಿರುವದಿಲ್ಲೆಂಬ ಸಂಗತಿಯು ಇನ್ನೊಮ್ಮೆ ಜನರಿಗೆ ಸ್ಪಷ್ಟವಾಯಿತು. ಮುಂಚಿನ ಕಾಲದಲ್ಲಿ ಪ್ರತಿಯೊಂದು ಹಳ್ಳಿ ಪಟ್ಟಣದಲ್ಲಿರುವ ಗರಡೀ ಮನೆಗಳ ಅಸ್ತಿತ್ವವು ನಿರ್ನಾಮವಾದುದೇ ಇದರ ಕಾರಣವಿರಬಹುದೇ? ಈಗೀಗ ನಮ್ಮ ಶಾಲೆ-ಕಾಲೇಜುಗಳು ಶರೀರ-ಶಿಕ್ಷಣದ ಕಡೆಗೆ ಹೆಚ್ಚಾಗಿ ಗಮನ ಕೊಡುತ್ತಿದ್ದರೂ ಸಾಮಾನ್ಯವಾಗಿ ನಮ್ಮ ಮಕ್ಕಳು ಆ ಕಡೆ ಸಾಕಷ್ಟು ಎಳೆಯಲ್ಪಡುವದಿಲ್ಲೆಂಬುದನ್ನು ನಾವು ಮರೆಯಕೂಡದು. ಪಾಶ್ಚಾತ್ಯ ಆಟಗಳಾದ ಫುಟಬಾಲ್, ಕ್ರಿಕೆಟ್, ಟೆನಿಸ್ ಇತ್ಯಾದಿ ಹೆಚ್ಚು ಖರ್ಚಿನ ಆಟಗಳಿಗಿಂತ ನಮ್ಮ ದೇಶದ ಕುಸ್ತಿ, ಮಲ್ಲಕಂಬ, ಗರಡೀ ಸಾಧನ ಮುಂತಾದ ಪದ್ಧತಿಗಳನ್ನು ಶಾಲೆಯ ಒಳಗರೂ ಮಕ್ಕಳ ಪಾಲಕರೂ ಹೆಚ್ಚು ಹೆಚ್ಚಾಗಿ ಜಾರಿಯಲ್ಲಿ ತರುವದು ಉತ್ತಮವೆನ್ನಬಹುದು. ಇನ್ನು ಸಾಧ್ಯವೆಂದರೆ ಪ್ರತಿ ಸಾಲ ಜಾತ್ರೆಯಲ್ಲಿ ಇಂಥ ಸ್ಪರ್ಧೆಯ ಆಟಗಳೂ ಅವಶ್ಯವಾಗಿ ಏರ್ಪಡಿಸಲ್ಪಡಬೇಕು. ಅದರಂತೆ ಬಹುಮಾನಗಳನ್ನೂ ಪಾರಿತೋಷಕಗಳನ್ನೂ ಕೊಡುವ ಪದ್ಧತಿಯು ಅನುಕರಣೀಯವೂ, ಅವಶ್ಯಕವೂ ಆಗಿರುತ್ತದೆ.

ಈ ದೃಷ್ಟಿಯಿಂದ ವಿಚಾರ ಮಾಡಿದರೆ ನಮ್ಮ ಜಿಲ್ಲೆಯಲ್ಲಿ ಶಿರಸಿಯ ಪ್ರದರ್ಶನವು ಕೊನೆಯದಾಗದಂತೆ ನೋಡಿಕೊಂಡು ನಾವು ಪ್ರತಿ ವರ್ಷವೂ ಇದೇ ಪ್ರಮಾಣದಿಂದ ಮೇಲೆ ಎಲ್ಲ ತಾಲೂಕುಗಳಲ್ಲಿ ಇಂತಹ ಸಮಾರಂಭವನ್ನು ಕೈಕೊಳ್ಳುವದು ನಮ್ಮ ಜಿಲ್ಲೆಯ ಏಳ್ಗೆಯನ್ನು ಬಯಸುವ ಪ್ರತಿ ಒಬ್ಬ ನಾಗರೀಕನ ಕರ್ತವ್ಯವಾಗಿರುತ್ತದೆ. ಬಹುಶಃ ಯಾವದಾದರೊಂದು ಹಬ್ಬದ ಸಮಯದಲ್ಲಿ ಇಂಥ ಪ್ರದರ್ಶನವನ್ನು ಏರ್ಪಡಿಸುವದು ಅನುಕೂಲತೆ ದೃಷ್ಟಿಯಿಂದ ಒಳ್ಳೇದು. ಸುಗ್ಗಿಗಳು ಮುಗಿದ ನಂತರವೇ ಹೆಚ್ಚು ಅನುಕೂಲವು. ದೀಪಾವಳೀ ನಂತರ ಅಥವಾ ಕ್ರಿಸ್ತಮಸ್ ಹಬ್ಬದ ಸಮಯದಲ್ಲಿ ಎಲ್ಲರಿಗೂ ಅನುವಾಗುವದು. ಇದಕ್ಕಾಗಿ ಜಿಲ್ಲೆಯಲ್ಲಿ ಒಂದು ಮುಖ್ಯವಾದ ಅಂದರೆ ಕೇಂದ್ರ (Central) ಪ್ರದರ್ಶನ ಕಮೀಟಿಯನ್ನು ಸ್ಥಾಪಿಸಿ, ಇದರ ಮುಖಾಂತರ ಅನುಕೂಲ ಸ್ಥಳವನ್ನು ಕಂಡು ಅಲ್ಲಿ ಮುಂದಿನ ವರುಷ ಪ್ರದರ್ಶನವನ್ನು ಏರ್ಪಡಿಸುವ ವ್ಯವಸ್ಥೆ ಮಾಡಿದರೆ ಉತ್ತಮವಾದೀತು. ಇದಕ್ಕೆ ಜನ ಧನ ಸಹಾಯವು ಬೇಕು. ಸಹಕಾರ ಪರಿಷತ್ತಿನಂತಹ ಸಭೆಯನ್ನು ಎಲ್ಲಾ ಕಡೆಯಲ್ಲಿಯೂ ಕರೆಯಬಹುದು. ಅಥವಾ ಅದಕ್ಕೆ ಸಂಬಂಧ ಪಟ್ಟ ಗ್ರಾಮೋದ್ಧಾರ ಮಂಡಳದ ನೇತೃತ್ವದಲ್ಲಿಯಾದರೂ ಪ್ರದರ್ಶನವನ್ನು ನಡೆಯಿಸಬಹುದು. ಒಂದರ್ಥದಿಂದ ಇಂತಹ ಕೆಲಸವು ಗ್ರಾಮೋದ್ಧಾರ ಮಂಡಳದವರದೇ ಆಗಿರುತ್ತದೆ. ಅಷ್ಟರಿಂದ ಇತ್ತ ಕಡೆ ನಮ್ಮ ಜಿಲ್ಲೆಯ ಮುಖಂಡರೂ ನಮ್ಮ ಜಿಲ್ಲೆಯ ಹಿತೈಷಿಗಳೂ ಅಗತ್ಯವಾಗಿ ಲಕ್ಷ್ಯ ಕೊಡಬೇಕಾಗಿ ಈ ನನ್ನ ನಮ್ರ ಸೂಚನೆಯನ್ನು ಮುಂದಿಟ್ಟು ಈ ಅಲ್ಪ ಲೇಖವನ್ನು ಮುಗಿಸುತ್ತೇನೆ.

S. S. SHASTRI,
ಅಧ್ಯಕ್ಷ, ಜಿಲ್ಹಾ ಕೊಂಗ್ರೆಸ ಕಮಿಟಿ

ಪ್ರದರ್ಶನದ ವರ್ಣನೆ.

(ನಮ್ಮ ಪ್ರತಿನಿಧಿಗಳಿಂದ)

ಶಿರಸಿ, ತಾ॥ ೭-೧೧-೪೧

ನಮ್ಮ ಜಿಲ್ಲೆಯ ಸಹಕಾರಿ ಪರಿಷತ್ತು ಕಳೆದ ೧, ೨, ೩ನೇ ತಾರೀಕಿಗೆ ಶಿರಸಿ ಶ್ರೀ ಮಾರಿಕಾಂಬಾ ಹೈಸ್ಕೂಲಿನಲ್ಲಿ ಒಳ್ಳೇ ವಿಜೃಂಭಣೆಯಿಂದ ನೆರವೇರಿತು. ಪರಿಷತ್ತಿನ ಅಂಗವಾಗಿರುವ ಪ್ರದರ್ಶನಕ್ಕಾಗಿ ಕಟ್ಟಡದ ಎಡಬದಿಗಿರುವ ಪಟಾಂಗಣದಲ್ಲಿ ಭವ್ಯವಾದ ಮಂದರಗಳನ್ನು ಹಾಕಿದ್ದರು. ಪ್ರಾಕಾರದ ಒಳಗಿರುವ ಪ್ರತಿ ಒಂದು ಭಾಗವು ತಳಿರು ತೋರಣ, ಧ್ವಜ ಪತಾಕಾದಿಗಳಿಂದ ಮನೋಹರವಾಗಿ ಕಂಗೊಳಿಸುತ್ತಿತ್ತು. ಮಹಾದ್ವಾರವನ್ನು ಪ್ರವೇಶಿಸಿದ ಕೂಡಲೆ ಎಡಬದಿಗೆ ಹೊಸ್ತಾಪದ ಗ್ರಾಮೋದ್ಯೋಗಗಳ ಪ್ರದರ್ಶನವು ನೋಡತಕ್ಕಂಥಾದ್ದಿತ್ತು. ಅದರಲ್ಲಿ ೧ ಜೇನು ಸಾಕಣೆ ೨ ಕೋಡಿನ ಕೈಗಾರಿಕೆ ೩ ಕತ್ತದ ಕೆಲಸ ಎಂಬ ವಿಭಾಗಗಳಿದ್ದವು. ೧ನೇ ವಿಭಾಗದಲ್ಲಿ ನೊಣಗಳು ಜೇನನ್ನು ತಯಾರಿಸುವ ಕ್ರಮ, ನೊಣಗಳನ್ನಾಗಲಿ ಅವುಗಳ ಮರಿಗಳನ್ನಾಗಲಿ ಹಿಂಸಿಸದೆ ಹುಟ್ಟಿನಿಂದ ಶುದ್ಧವಾಗಿ ಜೇನನ್ನು ತೆಗೆಯುವ ರೀತಿ, ದೂಷಿತವಾದ ಹಳೇ ಪದ್ಧತಿ ಮೊದಲಾದವುಗಳ ಪ್ರತ್ಯಕ್ಷ ಅನುಭವವು ಸಿಗುವಂತಿತ್ತು. ಪ್ರದರ್ಶನ-ಪರಿಷತ್ತುಗಳಿಗಾಗಿ ಆಗಮಿಸುವ ಸಾವಿರಗಟ್ಟಲೆ ಜನಸ್ತೋಮದಿಂದುಂಟಾದ ಅಶಾಂತತೆಯ ವಾತಾವರಣದ ಕಡೆಗೆ ಎಳ್ಳಷ್ಟು ಲಕ್ಷ್ಯ ಕೊಡದೆ ನಿತ್ಯಕಾಲದಂತೆ, ಸಹಯೋಗದ ಮರೆಗೆ, ಅಜ್ಞಾನಿಗಳೆನಿಸುವ ಜೇನ್ನೊಣಗಳು ಎಡೆಬಿಡದೆ ತಮ್ಮ ಗೂಡಿನಿಂದ ಹೊರಗೆ ಹಾರಿಹೋಗಿ ಸುಧಾ ಪರಾಗಗಳನ್ನು ತರುತ್ತಿರುವದನ್ನು ನೋಡಿದರೆ ಜ್ಞಾನಿ ಎಂದು ಜಂಬ ಬಡಿಯುವ ಮಾನವನು ಆ ಮೂಕ ಪ್ರಾಣಿಗಳ ಉದ್ಯೋಗಪ್ರೇಮವನ್ನು ತನ್ನ ತನ್ನ ತಲೆ ತಗ್ಗಿಸಬಹುದಾಗಿತ್ತು. ಇದಲ್ಲದೆ ಜೇನ್ನೊಣಗಳು ತಮ್ಮ ಕಾರ್ಯದಲ್ಲಿ ಅನಾವಶ್ಯಕವಾಗಿ ಅಡ್ಡ ಬರುವ ಕೆಲ ಉಂಡಾಡಿ ಗಂಡು ಹುಳುಗಳಿಗೆ ತಮ್ಮ ಅಂಬಿನ ರುಚಿಯನ್ನು ತೋರಿಸಿ ಬುದ್ಧಿ ಕಲಿಸುವ ಬಿಡಲಿಲ್ಲ. ಮೆಚ್ಚತಕ್ಕ ಜೇನಿಗೆ ಸ್ವದೇಶದಲ್ಲಿಯೂ ಪರದೇಶದಲ್ಲಿಯೂ ಬಹಳ ಬೇಡಿಕೆಯಿರುವದರಿಂದ ಈ ಉದ್ಯೋಗವು ಒಳ್ಳೇ ಲಾಭದಾಯಕವಾಗಿದೆ. ೨ನೇ ವರ್ಗದಲ್ಲಿ ನಿರುಪಯೋಗಿ ಎಂಬಂತೆ ಕಾಣುವ ದನಗಳ ಕೋಡಿನಿಂದ ಕೂಡ ಎಂಥ ಉಪಯುಕ್ತವಾದ ಸುಂದರ ಜಿನಸುಗಳನ್ನು ತಯಾರಿಸಬಹುದೆಂಬುದನ್ನು ಕಾಣಬಹುದಾಗಿತ್ತು. ಗುಂಡಿ, ಬಾಚಣಿಕೆ, ಕರಡಿಗೆ ಮೊದಲಾದ ನಿತ್ಯೋಪಯೋಗಿ ವಸ್ತುಗಳು ಸುವ್ಯವಸ್ಥಿತವಾಗಿ ಪ್ರದರ್ಶಿಸಲ್ಪಟ್ಟಿದ್ದವು. ೩ನೇ ವಿಭಾಗದಲ್ಲಿ ಹೆಣ್ಣುಮಕ್ಕಳು ಕತ್ತದಿಂದ ತರತರದ ವಸ್ತುಗಳನ್ನು ತಯಾರಿಸುವ ಕ್ರಮವನ್ನು ತೋರಿಸುತ್ತಿದ್ದರು. ಈ ಎಲ್ಲ ಉದ್ಯೋಗಗಳ ಉಪಯುಕ್ತತೆಯನ್ನು ಅಂಕೆ-ಸಂಖ್ಯೆಗಳಿಂದ ಸಿದ್ಧಮಾಡಿ ತೋರಿಸುವ ಬೋರ್ಡುಗಳನ್ನು ಅಲ್ಲಲ್ಲಿ ಕಾಣಬಹುದಾಗಿತ್ತು.

ಬಲಬದಿಗೆ ಶೇತಕಿ ಪ್ರದರ್ಶನದ ಏರ್ಪಾಟಾಗಿತ್ತು. ಅದರಲ್ಲಿ ತೋಟಗಳಲ್ಲಿಯೂ ಹೊಲಗಳಲ್ಲಿಯೂ ಬೆಳೆಯುವ ಅತ್ಯುತ್ತಮವೆನಿಸುವ ಜಿನಸುಗಳನ್ನಿಟ್ಟಿದ್ದರು. ಅಳೆತ್ತರದ ಸಿಲೋನದ ಕೇಶಿನ ಗಡ್ಡೆಯನ್ನು ನೋಡಿ ಪ್ರೇಕ್ಷಕರು ಚಕಿತರಾಗುವದಲ್ಲದೆ, ರಾಮಾಯಣದೊಳಗಿನ ಲಂಕೆಯಲ್ಲಿ ವರ್ಣಿಸಿರುವ ರಾಕ್ಷಸರು ನಿಜವಾದ ರಾಕ್ಷಸರೇ ಎಂಬುದಕ್ಕೆ ಇದೊಂದು ಉದಾಹರಣೆ ಎಂತ ಅವರಿಗೆ ಅನಿಸದೆ ಇರಲಿಲ್ಲ. ಇಲ್ಲಿಯ ಶ್ರೀ॥ ಭುಂಡ್ಲಿಕ ರಾಮಾ ನಾಯಕ ಇವರು ತಾವು ಸಾಕಿದ ಉತ್ತಮವಾದ ಜಾತಿಯ ಕೋಳಿಗಳನ್ನು ಇಟ್ಟಿದ್ದರು. ಅವುಗಳ ಜೊತೆಗೆ ನಾಲ್ಕು ಕಾಲಿನ ೧ ಕೋಳಿಮರಿಯು ಪ್ರೇಕ್ಷಣೀಯವಾಗಿತ್ತು.

ಕಟ್ಟಡದ ಮೆಟ್ಟಲನ್ನು ಹತ್ತಲು ಎಡಬದಿಗೆ ೧ ಕೋಣೆಯಲ್ಲಿ ಸ್ತ್ರೀಯರ ಕಸೂತಿ ಕಲಾ-ಕೌಶಲ್ಯದ ಪ್ರದರ್ಶನವೂ ಇನ್ನೊಂದರಲ್ಲಿ ಪುರುಷರ ಕೈಗಾರಿಕೆಯ ಪ್ರದರ್ಶನವೂ ಕಂಗೊಳಿಸುತ್ತಿದ್ದವು. ಯಾವತ್ತೂ ಪ್ರದರ್ಶನಗಳಲ್ಲಿ ಸ್ತ್ರೀಯರ ಕಲಾಕೌಶಲ್ಯದ ಪ್ರದರ್ಶನವೇ ಒಳ್ಳೇ ಮನೋಹರವಾಗಿದ್ದುದರಿಂದ ಅದರ ದರ್ಶನ ಲಾಭವನ್ನು ಪಡೆಯಲು ಬಾಲವೃದ್ಧರು [illegible] ಕಿಕ್ಕಿರಿದು ನೆರೆಯುತ್ತಿದ್ದರು. ಇದರಿಂದ ಸ್ತ್ರೀಯರಲ್ಲಿ ಕಲಾಭಿರುಚಿಯನ್ನು ಹೆಚ್ಚಿಸುವಲ್ಲಿ ಒಳ್ಳೇ ಅನುಕೂಲವಾಯಿತು.

ಬಲಬದಿಯ ೨ ಕೋಣೆಯಲ್ಲಿ ಶಾಲೆಯ ಪ್ರದರ್ಶನದ ವ್ಯವಸ್ಥೆಯಾಗಿತ್ತು. ಎಷ್ಟು ಶಾಲೆಗಳ ನಕಾಶೆಗಳು ಮತ್ತು

ಪಟ್ಟಿ ಎಂದು ಮಾರು ಮುರಿಯುವವರಿಗೆ ಇಂಥ ಅಂತಕ ಹುಟ್ಟಿಸುತ್ತಿತ್ತು. ಹೀಗಾಗಿ ಧಾರವಾಡ ನಗರ ಅಸ್ತಿತ್ವವಾಗಲಿ ಒಕ್ಕಲುತನವಾಗಲಿ ಇಲ್ಲದೆ ಮೂರೇ ದಿನಗಳಲ್ಲಿ ೩೦೦ ರೂಪಾಯಿಗಳ ವ್ಯಾಪಾರವಾಯಿತು ಇನ್ನೊಂದು ಕೋಣೆಯಲ್ಲಿ ಗಂಧ ಮತ್ತು ಹಸ್ತಿದಂತದ ಕೈಗಾರಿಕೆಯ ಕೆಲಸವು ಪ್ರೇಕ್ಷಣೀಯವಾಗಿತ್ತು ಇವನ್ನು ನೋಡಿದವರಿಗೆ ಈ ಸುಂದರವಾದ ಕಲೆಯಲ್ಲಿ ನಮ್ಮ ಜಿಲ್ಲೆಯವರು ಯಾವ ರೀತಿಯಿಂದಲೂ ಹಿಂದೆಬಿದ್ದಿಲ್ಲವೆಂಬುದು ಭಾಸವಾಗುತ್ತಿತ್ತು.

ಕಟ್ಟಡದ ಮಧ್ಯ ಭಾಗದಲ್ಲಿ ಪರಿಷತ್ತಿನ ಕಚೇರಿಯ ವ್ಯವಸ್ಥೆಯಾಗಿತ್ತು, ಮತ್ತು ಅಟ್ಟದ ಮೇಲಿನ ವಿಶಾಲವಾದ ಭಾಗವನ್ನು ಪರಿಷತ್ತಿನ ಕಾರ್ಯಕರ್ತರಿಗಾಗಿ ಅಂದವಾಗಿಯೂ ವ್ಯವಸ್ಥಿತವಾಗಿಯೂ ಶೃಂಗರಿಸಿದ್ದರು.

ವಿದ್ಯಾರ್ಥಿ ವಿದ್ಯಾರ್ಥಿನಿಯರ ಪರ್ಯಟನ ಆಟ ವಗೈರೆ ಕಾರ್ಯಕ್ರಮಗಳು ದಿನಕ ಬೈಲಲ್ಲಿ ನಡೆದವು [illegible] ಸಮರ್ಥರ ವ್ಯಾಯಾಮ ಶಾಲೆಯವರ ಶಕ್ತಿಪ್ರದರ್ಶನವೂ ಕುಮಟೆಯ ವ್ಯಾಯಾಮ ಶಾಲೆಯವರ ಚಮತ್ಕೃತಿಯ ಪ್ರದರ್ಶನವೂ ಉತ್ತಮವಾಗಿದ್ದವು

ಈ ಪರಿಷತ್ತು ಈ ರೀತಿ ವ್ಯಾಪಕತೆಯನ್ನು ಹೊಂದಿ ಅಲ್ಪಾವಧಿಯಲ್ಲಿ ಇಷ್ಟು ಯಶಸ್ವಿಯಾಗಿ ನೆರವೇರುವದೆಂದು ಯಾರೂ ಕಲ್ಪಿಸಿರಲಿಲ್ಲ. ಇದರ ಶ್ರೇಯದ ಬಹುಭಾಗವು ಸ್ವಾಗತ ಸಮಿತಿಯ ಚೇರಮನ್ನರಾದ ಶ್ರೀ ಸುಂದರರಾವ ಪಂಡಿತ ಇವರಿಗೆ ಸಲ್ಲಬೇಕಾಗಿದೆ ಈ ಕಾರ್ಯಕ್ಕೆ ನಮ್ಮ ನಗರ ಸಭೆಯವರೂ ಶಕ್ತಿ ಮೀರಿ ಸಹಾಯ ಮಾಡಿದೆ ಲೋಕಕಲ್ಯಾಣದ ಕಾರ್ಯವನ್ನು ಕೈಕೊಂಡು ಮನಮುಟ್ಟಿ ದುಡಿಯುವ ಸತ್ಪುರುಷನಿಗೆ ದಶದಿಕ್ಕುಗಳಿಂದಲೂ ಹೇಗೆ ಸಹಾಯ ಸಿಗುವದೆಂಬುದಕ್ಕೆ ಇದೊಂದು ಒಳ್ಳೇ ಉದಾಹರಣೆಯಾಗಿದೆ ಅಂತೂ ಈ ಪರಿಷತ್ತು ಚಿರಸ್ಮರಣೀಯವಾಗಿ ಉಳಿಯುವದೆಂಬುದಕ್ಕೆ ಸಂದೇಹವಿಲ್ಲ

ಶ್ರೀ॥ ಸುಂದರರಾವ ಪಿ. ಪಂಡಿತ

ಬಿ ಏ, ಎಲ್‌ಎಲ್ ಬಿ,

ಸ್ವಾಗತಾಧ್ಯಕ್ಷರು, ಇವರ ಭಾಷಣವು.

ಅಧ್ಯಕ್ಷ ಮಹಾಶಯರೇ, ಸಹಕಾರ ಬಂಧುಗಳೇ,
ಬಂಧು-ಭಗಿನಿಯರೇ!

ಈ ನಮ್ಮ ಜಿಲ್ಲಾ ಸಹಕಾರ ಪರಿಷತ್ತಿನ ಅಧಿವೇಶನಕ್ಕೆ ತಮ್ಮೆಲ್ಲರನ್ನು ಸ್ವಾಗತ ಮಾಡುವ ಸುಸಂದರ್ಭವು ನನಗೆ ಲಭಿಸಿದುದಕ್ಕಾಗಿ ನಾನು ಬಹಳ ಹೆಮ್ಮೆಗೊಂಡಿದ್ದೇನೆ

ಕಳೆದ ೧೫ ವರ್ಷಗಳಿಂದ ನಮ್ಮ ಜಿಲ್ಲೆಯಲ್ಲಿ ಇಂಥ ಪರಿಷತ್ತು ನೆರೆದಿಲ್ಲವೆಂಬುದು ನಮಗೆ ವಿಷಾದವೇ ಇದೆ ಆ ಕಾಲದಿಂದಲೂ ಕಠಿಣವಾದ ಆರ್ಥಿಕ ದುಃಸ್ಥಿತಿಯ ಹಿಡಿತಕ್ಕೆ ನಾವೆಲ್ಲರೂ ಸಿಕ್ಕು ಬಳಲಿದ್ದೇವೆ ಆದ್ದರಿಂದ ನಮ್ಮ ಜಿಲ್ಲೆಯ ಸಹಕಾರ ಬಂಧುಗಳು ಒಟ್ಟುಗೂಡಿ ಒಂದು ಕಡೆ ಸೇರಲು ಸಾಧ್ಯವಾಗಲಿಲ್ಲ ಈ ವರ್ಷ ನಡೆದ ಸಹಕಾರ ಸಪ್ತಾಹದ ಉತ್ಸವ ಸಂದರ್ಭದಿಂದ ನಮಗೆ ಈ ಪರಿಷತ್ತನ್ನು ಸೇರಿಸುವ ಸದವಕಾಶ ದೊರೆತಿದೆ ಪರಿಷತ್ತಿಗೆ ತಕ್ಕ ವ್ಯವಸ್ಥೆಯನ್ನು ಮಾಡಲು ನಮಗೆ ಯೋಗ್ಯ ಅವಕಾಶ ಸಾಕಷ್ಟು ದೊರೆಯಲಿಲ್ಲ, ಪರಿಷತ್ತನ್ನು ಸೇರಿಸುವ ನಿರ್ಣಯವು ಕೇವಲ ಎರಡೇ ವಾರಗಳ ಹಿಂದೆ ನಿರ್ಧರಿಸಲ್ಪಟ್ಟಿತು ಆದ್ದರಿಂದ ವ್ಯವಸ್ಥೆಯಲ್ಲಿ ಅನೇಕ ದೋಷ-ದೋಷಗಳು ಇರುವದು ಸಹಜವಾಗಿದೆ ಅವೆಲ್ಲವನ್ನೂ ತಾವು ಕ್ಷಮಿಸುವಂತೆ ಸ್ವಾಗತ ಮಂಡಳದ ಪರಿಯಿಂದ ಪ್ರಾರ್ಥಿಸುತ್ತೇನೆ ಮತ್ತು ತಮ್ಮೆಲ್ಲರನ್ನು ಈ ಸಮಾರಂಭಕ್ಕೆ ಸ್ವಾಗತ ಮಾಡಬಯಸುತ್ತೇನೆ

ನಮ್ಮ ಪರಿಷತ್ತಿನ ಅಧ್ಯಕ್ಷಸ್ಥಾನಕ್ಕೆ ಶ್ರೀ ವಿ ಬಿ ಲಕ್ಕೇಯವರಂಥ ಮಹನೀಯರು ದೊರೆತಿರುವದು ನಮ್ಮ ಭಾಗ್ಯವೇ ಸರಿ. ಅವರ ಬಹು ಕಾಲದ ಸಹಕಾರ ಸೇವೆ, ಅಧಿಕಾರಾನುಭವ, ಮುಖ್ಯವಾಗಿ ಕಾಂಗ್ರೆಸ್ ಮಂತ್ರಿಮಂಡಳದಲ್ಲಿದ್ದು ಅವರು ಸಲ್ಲಿಸಿದ ಅಮೋಘವಾದ ಸೇವೆ ಮುಂತಾದ್ದೆಲ್ಲವೂ ನಮ್ಮ ಈ ಕಾರ್ಯದಲ್ಲಿ ಸಹಾಯಕರವಾಗಿ, ಅವರ ನೇತೃತ್ವದಲ್ಲಿ ಈ ಪರಿಷತ್ತು ಬಹಳ ಸುಯೋಗ್ಯವಾದ, ಉಪಯುಕ್ತವಾದ ತೀರ್ಮಾನಗಳನ್ನು ಮಾಡುವದೆಂದು ನಿಶ್ಚಯಿಸಬಹುದಾಗಿದೆ ಇಂಥ ಪ್ರಸಂಗದಲ್ಲಿ ಸ್ವಾಗತಾಧ್ಯಕ್ಷರು ತಮ್ಮ ಜಿಲ್ಲೆಯಲ್ಲಿಯ ಸಹಕಾರ ಚಳವಳಿಯ ಪರಿಸ್ಥಿತಿಯನ್ನು ಕುರಿತು ನಾಲ್ಕು ಮಾತು ಹೇಳುವದೂ ಪ್ರಚಲಿತ ಸಮಸ್ಯೆಗಳನ್ನು ಚರ್ಚಿಸುವದೂ ಸಂಪ್ರದಾಯವೇ ಆಗಿದೆ. ನಾನೂ ಆ ರೀತಿ ಕೆಲವು ಮಾತನ್ನು ಹೇಳಲು ತಮ್ಮ ಅಪ್ಪಣೆಯನ್ನು ಬೇಡುತ್ತೇನೆ

ಸಹಕಾರ ಪ್ರೇಮಭಾವನೆಗಳನ್ನು ತುಂಬಿಕೊಳ್ಳದೆ ಜಗತ್ತಿಗೆ ಮೋಕ್ಷವಿಲ್ಲೆಂಬುದು ಜನರಿಗೆ ದಿನೇ ದಿನೇ ಗೋಚರವಾಗುತ್ತಿದೆ ಇಂದಿನ ವರೆಗೆ ಪಾಶ್ಚಾತ್ಯ ಪದ್ಧತಿಗೆ ಮರುಳಾಗಿ ಅನುಸರಿಸುತ್ತಿರುವವರು ನಾವು ಈಗ ಆ ಬಗ್ಗೆ ವಿಚಾರ ಮಾಡಬೇಕಾಗಿದೆ ನಮ್ಮದು ಹಿಂದುಳಿದ ದೇಶ, ಬಡತನ, ರೋಗರುಜಿನಗಳಿಂದ ಪೀಡಿತವಾದ ದೇಶ ಒಕ್ಕಲತನವೇ ಮುಖ್ಯವಾದ ಹಿಂದುಸ್ಥಾನದಂಥ ದೇಶಕ್ಕೆ ಸಹಕಾರವೇ ಸಂಜೀವನ ಔಷಧವೆಂದು ಸುಪ್ರಸಿದ್ಧ ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ. ಈ ಚಳವಳಿಯು ನಮ್ಮ ದೇಶಕ್ಕೆ ಬಂದು ಮೂವತ್ತಾರು ವರ್ಷಗಳಾದವು ನಮ್ಮ ಆರ್ಥಿಕ ಜೀವನದಲ್ಲಿ ಅದಕ್ಕೊಂದು ಮುಖ್ಯಸ್ಥಾನ ದೊರೆತಿದೆ ಮುಂಬೈ ಪ್ರಾಂತದಲ್ಲಿ ಒಟ್ಟು ೧೪ ಕೋಟಿ ರೂಪಾಯಿ ಬಂಡವಾಳದ್ದಾಗಿ [illegible] ಸಹಕಾರ ಸಂಸ್ಥೆಗಳು ಕೆಲಸಮಾಡುತ್ತಿವೆ ನಮ್ಮ ಜಿಲ್ಲೆಯಲ್ಲಿಯೇ ೩೧ ಲಕ್ಷ ರೂಪಾಯಿ ಒಟ್ಟು ಬಂಡವಾಳದ ೧೪೫ ಸಂಸ್ಥೆಗಳು, ಬ್ಯಾಂಕುಗಳು ಕೆಲಸ ಮಾಡುತ್ತಿವೆ ಇವುಗಳಲ್ಲಿ ೯೩ ಪತ್ತಿನ ಸಂಸ್ಥೆಗಳು ಅವಕ್ಕೆ ಒಟ್ಟು ಬಂಡವಾಳ ೭ ಲಕ್ಷ, ಒಟ್ಟು ಸದಸ್ಯರು ೬,೮೪೩ ಸುಮಾರು ೧೭ ಸಾವಿರ ಕುಟುಂಬಗಳಿಗೆ ಇವುಗಳಿಂದ ಪ್ರಯೋಜನವಾಗುತ್ತಿದೆ ಪ್ರತಿ ಕುಟುಂಬದಲ್ಲಿ ೫ ಜನರಿದ್ದಾರೆಂದು ಹಿಡಿದರೆ ೬೫,೦೦೦ ಜನಕ್ಕೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಎಂದರೆ ನಮ್ಮ ಜಿಲ್ಲೆಯ ಜನಸಂಖ್ಯೆಯಲ್ಲಿ ೧೦೦ಕ್ಕೆ ೨೧ ರಷ್ಟು ಜನಕ್ಕೆ ಈ ಚಳವಳಿಯಲ್ಲಿ ಸ್ಥಾನವಿದೆಯೆಂದು ತಿಳಿಯುತ್ತದೆ. ಇದೇ ಇದೇ ಮುಂಬೈ ಪ್ರಾಂತದಲ್ಲಿ ೧೦೦ಕ್ಕೆ ೧೪ ೨೨, ಪಂಜಾಬಿನಲ್ಲಿ ೧೬ ೩೩, ಮದರಾಸಿನಲ್ಲಿ ೬ ೪೫ ಮಧ್ಯಪ್ರಾಂತಗಳಲ್ಲಿ ೨ ೩೫ ಇದೆ ಹೀಗೆ ನಮ್ಮ ಸ್ಥಿತಿ ಸಮಾಧಾನಕರವಾಗಿದೆ ಎನ್ನಬೇಕು ನಮ್ಮ ಜಿಲ್ಲೆಯ ಇನ್ನೊಂದು ವಿಶೇಷವೆಂದರೆ [illegible] ಬೇಕಾದ ಸಂಸ್ಥೆಗಳಲ್ಲಿ ಇಟ್ಟಿರುವ ಠೇವಣಿ [illegible] ಒಟ್ಟು ೭ ಲಕ್ಷ ೨೦ ಸಾವಿರ ರೂಪಾಯಿಯ ದುಡಿತ ಬಂಡವಾಳದಲ್ಲಿ ೨ ಲಕ್ಷ ೨೩ ಸಾವಿರದಷ್ಟು ಈ ಠೇವು ಇರುತ್ತದೆ.

ಸಹಕಾರ ಚಳವಳಿಯ ಇತಿಹಾಸದಲ್ಲಿ ನಾಲ್ಕು ಭಾಗಗಳು ಕಾಣಬರುತ್ತವೆ ೧೯೦೪ರಿಂದ ೧೯೧೭-೧೮ರ ವರೆಗೆ ಮೊದಲನೆಯ ಭಾಗದಲ್ಲಿ ಚಳವಳಿಯು ಬಹಳ ಮಂದಗಾಮಿಯಾಗಿತ್ತು. ಮಹಾಯುದ್ಧವಾದ ಮೇಲೆ, ೧೯೧೮ರಿಂದ ೧೯೨೯-೩೦ರ ವರೆಗೆ ಭೂಮಿಯ ಬೆಲೆಯೂ ಕಾಳುಕಡಿಯ ಬೆಲೆಯೂ ಅಪಾರಕ್ಕೆ ಮುಟ್ಟಿದಾಗ ಚಳವಳಿಯು ಅತಿ ವೇಗವಾಗಿ ಬೆಳೆಯಿತು ಅಲ್ಲಿಂದ ಮುಂದೆ ಒಕ್ಕಲತನದ ಬೆಲೆಗಳಿಗೆ ೧೯೩೦-೩೧ರಲ್ಲಿ ಧಕ್ಕೆ ಬಿದ್ದು ಒಮ್ಮಿಂದೊಮ್ಮೆ ಕೆಳಗಿಳಿಯಿತು. ಅನೇಕ

ಸಂಘಗಳಲ್ಲಿ ಸಾಲದ ವಸೂಲಿಯೇ ಕಷ್ಟವಾಗಿ ಬಾಕಿಗಳ ಮೊತ್ತ ವರ್ಷೇ ವರ್ಷೇ ಹೆಚ್ಚಾಗಿ ಕೆಲವು ಕಡೆ ೧೦೦ಕ್ಕೆ ೧೦೦ರಷ್ಟಾಯಿತು. ನಮ್ಮ ಪ್ರಾಂತದಲ್ಲಿ ಎಲ್ಲ ಸಹಕಾರಪ್ರಿಯರೂ ಆತ್ಮಪರೀಕ್ಷೆಯನ್ನೂ ವಿಮರ್ಶೆಯನ್ನೂ ಮಾಡಿಕೊಳ್ಳಬೇಕಾಯಿತು. ಸಹಕಾರ ಚಳವಳಿ ಸತ್ತೇ ಹೋಯಿತೆಂದು ಟೀಕಾಕಾರರು ಕೂಗತೊಡಗಿದರು. ಕಮಿಟಿ ಮೆಂಬರರೇ ಸಾಲಗಾರರಾಗಿರುವದು ಮತ್ತು ಅವರ ಸ್ಪರ್ಧೆ, ಪೋಲ್ವಿಟಾರಡೆಯ ಲೋಪ, ವಾಯಿದೆ ಬೆಳೆಸುವದರಲ್ಲಿ ದುರ್ಲಕ್ಷ, ಸಾಲ ಪಡೆಯುವ ಉದ್ದೇಶ, ಹಿಂದಿರುಗಿಸುವ ಯೋಗ್ಯತೆಗಳನ್ನು ಸರಿಯಾಗಿ ವಿಚಾರಿಸದೆ ಸಾಲ ಕೊಟ್ಟಿದ್ದು, ವಾಯಿದೆ ಮೀರಿದ ಸಾಲಗಳನ್ನು ಸಕಾಲದಲ್ಲಿ ವಸೂಲು ಮಾಡದಿದ್ದುದು, ಬಿನಾಮಿ ವ್ಯವಹಾರ, ನಿರಕ್ಷರತೆ, ಚಳವಳಿಯ ಬಗ್ಗೆ ಅಜ್ಞಾನ, ದುಷ್ಕಾಲ ಇವೆಲ್ಲ ಕಾರಣಗಳೂ ಸಹಕಾರ ಚಳವಳಿ ಕ್ಷೀಣವಾಗಲು ಕಾರಣವೆಂದು ಹೇಳಲಾಯಿತು. ಇವೆಲ್ಲ ಕಾರಣಗಳೂ ಸಂಘಗಳಿಗೆ ಬರಬೇಕಾದ ಸಾಲದ ಮೊತ್ತ ಬೆಳೆಯಲು, ಸಂಘಗಳು ನಿಸ್ತೇಜವಾಗಲು ಕಾರಣವಾಗಿದ್ದರೂ ಮುಖ್ಯವಾದ ಕಾರಣವೆಂದರೆ ಆರ್ಥಿಕ ಮುಗ್ಗಟ್ಟು ಮತ್ತು ಧಾರಣೆಗಳ ಮಂದತೆಯೇ. ಆರ್ಥಿಕ ಮುಗ್ಗಟ್ಟಿನ ಕಾಲವೂ ಸಂಘಗಳ ಸಾಲ ಬೆಳೆದ ಕಾಲವೂ ಒಂದೇ ಆಗಿರುವದನ್ನು ಗಮನಿಸಿದರೆ ಇದು ತಿಳಿಯುತ್ತದೆ.

ಸಹಕಾರ ಚಳವಳಿಯನ್ನು ಪುನರ್ಜೀವನಗೊಳಿಸಲು ನಾವೀಗ ಉಪಾಯಗಳನ್ನು ಯೋಚಿಸಬೇಕಾಗಿದೆ. ಒಕ್ಕಲಿಗನ ಸ್ಥಿತಿ ಸುಧಾರಿಸಬೇಕಾದರೆ ಆ ಸಮಸ್ಯೆ ಎಲ್ಲ ದಿಕ್ಕುಗಳಿಂದಲೂ, ಎಲ್ಲ ರೀತಿಗಳಿಂದಲೂ ಪರೀಕ್ಷಿಸಲ್ಪಡಬೇಕು. ಗ್ರಾಮೋದ್ಧಾರವೆಂಬ ಮಾತು ಈಗ ಬಹಳ ಕೇಳಿ ಬರುತ್ತದೆ. ಸರಕಾರದವರೂ ಅಧಿಕಾರೇತರರೂ ಒಕ್ಕಲಿಗರ ಕುಂದುಕೊರತೆಗಳನ್ನು ಪೂರ್ಣ ಮಾಡಿ ಅಡಚಣಿಗಳನ್ನು ದೂರ ಮಾಡುತ್ತಿದ್ದಾರೆ. ಗ್ರಾಮೋದ್ಧಾರವೆಂದರೆ ಗ್ರಾಮವಾಸಿಗಳ ಆರೋಗ್ಯ, ಆದಾಯಗಳನ್ನು ಹೆಚ್ಚಿಸಿ ವಿದ್ಯಾಪ್ರಸಾರ, ನೀರಾವರಿ, ಪ್ರಯಾಣ ಸೌಕರ್ಯ, ವ್ಯಾಪಾರಾನುಕೂಲ ಮುಂತಾದ ಮಾರ್ಗಗಳಿಂದಲೂ, ಋಣಪರಿಹಾರ ಶಾಸನದಂತಹ ದಾರಿಯಿಂದಲೂ, ಹಳ್ಳಿಯ ಜೀವನವನ್ನು ಉತ್ತಮಗೊಳಿಸುವದೇ ಆಗಿದೆ.

ಇನ್ನು ಮುಂದೆ ಹೆಚ್ಚು ಹೆಚ್ಚಾಗಿ ಕಿರಾಣೀ ಸಂಘಗಳನ್ನೂ ಸಾಲ ಕಡಿ ಮಾಡುವ ಮಂಡಿಗಳಂಥ ವ್ಯಾಪಾರ ಸಂಘಗಳನ್ನೂ ಸ್ಥಾಪಿಸುವದು ಅತ್ಯಗತ್ಯವೆಂದು ಒತ್ತಿ ಹೇಳಬಯಸುತ್ತೇನೆ. ಬರಿಯ ಸಾಲ ಕೊಡುವ ಸಂಘಗಳಿಂದ ಏನೂ ಉಪಯೋಗವಾಗಲಾರದು. ಆದುದರಿಂದಲೇ ಹಣಕಾಸು ಕೊಡತಕ್ಕೊಳ್ಳುವದರ ಜೊತೆಗೆ ಪದಾರ್ಥ ವಿಕ್ರಯವನ್ನೂ ಮಾಡುವ ಸಂಘಗಳಿಗೆ ಹೆಚ್ಚು ಬೆಲೆ ಸಿಗುತ್ತ ಬಂದಿದೆ. ಇವಕ್ಕೆ ಮಲ್ಟಿಪರಪಜ್-ಬಹುಮುಖಿ ಸಂಘ—ಸೊಸಾಯಿಟಿ ಎನ್ನುತ್ತಾರೆ. ನಮ್ಮ ಪ್ರಾಂತದಲ್ಲಿ ಇಂತಹವು ಕೆಲವು ಸ್ಥಾಪಿತವಾಗಿವೆ.

ಮತ್ತೊಂದು ಮುಖ್ಯ ಪ್ರಶ್ನೆಯೆಂದರೆ— ನಮ್ಮ ಜಿಲ್ಲೆಯಲ್ಲಿ ಬೆಳೆದ ಕಾಳುಕಡಿಯನ್ನು ಲಾಭಕರವಾಗಿ ಮಾರುವ ವ್ಯವಸ್ಥೆ. ಇಲ್ಲಿಯ ವರೆಗೆ ಅಡಿಕೆ, ಮೆಣಸು ಇತ್ಯಾದಿ ಮಸಾಲೆ ಮುಂತಾದ ಬೆಳೆಗೆ ನಾವು ಸರಿಯಾದ ಗಮನ ಕೊಟ್ಟಿಲ್ಲ. ಇವಕ್ಕೆ ಯೋಗ್ಯವಾದ ಬೆಲೆ ಸಿಗಬೇಕಾದರೆ [illegible] ಪದ್ಧತಿಯನ್ನು ನಾವು ಆಚರಣೆಯಲ್ಲಿ ತರಬೇಕು

ನಮ್ಮ ಜಿಲ್ಲೆಗೆ ಹತ್ತಿಕೊಂಡಿರುವ ಮತ್ತೊಂದು ವಿಶಿಷ್ಟ ಸಮಸ್ಯೆ ಮಲೇರಿಯಾ ಬಾಧೆ. ಇದು ಸರಕಾರದ ಅರಣ್ಯ ಖಾತೆಯ ವ್ಯವಸ್ಥೆಯ ರೀತಿ-ನೀತಿಗಳ ಫಲವಾಗಿದೆ. ಇಲ್ಲಿಯ ವರೆಗೆ ಬಾಯಿಮಾತಿನ ಹೊರತು ಸರಕಾರವು ಯಾವ ಬಗೆಯಲ್ಲೂ ಈ ಪೀಡೆಯನ್ನು ಪರಿಹರಿಸಲು ಪ್ರಯತ್ನ ಮಾಡಿಲ್ಲ ಮಲೇರಿಯಾ ಬಾಧೆ ನಿವಾರಣೆಯಾಗುವ ವರೆಗೆ ಒಕ್ಕಲಿಗರ ಅಭಿವೃದ್ಧಿಯ ಮಾತನ್ನಾಡುವದು ನಿಷ್ಪಯೋಜನ.

ಅರಣ್ಯ ಖಾತೆ ಪ್ರಾರಂಭವಾದಾಗಿನಿಂದಲೇ ನಮ್ಮ ಜಿಲ್ಲೆಯ ಸರ್ವದುರದೃಷ್ಟವೂ ಆರ್ಥಿಕ ನಷ್ಟವೂ ಮೊದಲಾಯಿತು. ಅರಣ್ಯ ಖಾತೆಯ ನಿಯಮಗಳ ಕಠೋರತೆಯನ್ನು ಸಡಲಿಸಲು ೨೫ ವರ್ಷಗಳ ಕಾಲ ಜನರು ಪ್ರಯತ್ನ ಮಾಡಿ ಕಡೆಗೆ ಕಾಂಗ್ರೆಸ ಸರಕಾರದಿಂದ ಕೆಲವು ರಿಯಾಯಿತಿಗಳನ್ನು ಪಡೆದರು. ಅವು ಅತ್ಯಲ್ಪವಾಗಿದ್ದವು. ಸರಕಾರದಲ್ಲಿ ಆದ ಬದಲಾವಣೆಯ ಸಂದರ್ಭವನ್ನು ಉಪಯೋಗಿಸಿಕೊಂಡು ಅರಣ್ಯ ಖಾತೆಯವರು ಆ ರಿಯಾಯಿತಿಗಳನ್ನೂ ತಪ್ಪಿಸಿ ತಮ್ಮ ಹಳೇ ಪದ್ಧತಿಗಳನ್ನೇ ಮತ್ತೆ ತರಲಿದ್ದಾರೆಂದು ತಿಳಿಯಬರುತ್ತದೆ. ಈ ವಿಪರೀತ ನೀತಿಯನ್ನು ಸ್ಪಷ್ಟವಾಗಿ ಖಂಡಿಸಲು ಬಯಸುತ್ತೇನೆ. [illegible] ೪ ಭಾಗ ಅಡವಿಯೇ ಆಗಿರುವಂಥ ಈ ಜಿಲ್ಲೆಯಲ್ಲಿ ಅರಣ್ಯದಿಂದ ಹೊಟ್ಟೆತುಂಬ ಉಂಡು ತಿಂದು ಸುಖವಾಗಿರಲು ಒಕ್ಕಲಿಗರಿಗೆ ಅವಕಾಶ ಸಿಗಬೇಕೆಂದೂ, ಕಾಡಿನ ಕ್ರೂರ ಮೃಗಗಳನ್ನು [illegible] ಜಮೀನು ಸಾಕಷ್ಟು ಸಲಕರಣೆಗಳನ್ನು ಸರಕಾರ ಒದಗಿಸಬೇಕೆಂದೂ ಕೇಳುತ್ತೇನೆ. ನಮ್ಮ ಒಕ್ಕಲಿಗರಿಗೆ ಹೀಗೆ ಕೇಳುವ ಹಕ್ಕಿದೆ. ಒಕ್ಕಲಿಗನ ಅವಶ್ಯಕತೆಗಳಲ್ಲಿ ಪ್ರಧಾನವಾದುದರಲ್ಲಿ ಹೈನದ ದನವೂ ಒಂದು. ಚಲೋ ಹಾಲು ಕೊಡುವ ತಳಿಯ ದನಗಳನ್ನು ತಂದು ನಮ್ಮ ದನಗಳನ್ನು ಉತ್ತಮಗೊಳಿಸುವದು ಅತ್ಯಗತ್ಯವಾದ ಕೆಲಸವಾಗಿದೆ.

ಒಕ್ಕಲುತನವು ನಷ್ಟದ ಉದ್ಯೋಗವೆಂದೂ, ಒಕ್ಕಲಿಗನು ತನ್ನ ಪಥವನ್ನು ನಡೆಸಬೇಕಾದರೆ ಉಪವೃತ್ತಿ ಅಗತ್ಯವೆಂದೂ ಈಗ ಎಲ್ಲರೂ ಒಪ್ಪಿಕೊಂಡಿದ್ದಾರೆ ಜಪಾನ ದೇಶದಲ್ಲಿ ಒಕ್ಕಲಿಗನ ಆದಾಯದೊಳಗೆ ಶೇಕಡಾ ೩೦ರಷ್ಟು ಉಪವೃತ್ತಿಗಳಿಂದಲೇ ಬರುತ್ತದೆ ಇಷ್ಟಾದರೂ ಉಪವೃತ್ತಿಗಳ ಆದಾಯ ಸಾಲದೆಂದು ಅವರು ಲೆಕ್ಕ ಹಾಕಿದ್ದಾರೆ ಕೆಲವಾದರೂ ಉಪವೃತ್ತಿಗಳನ್ನು ಒದಗಿಸಿಕೊಡದೆ ನಮ್ಮ ಒಕ್ಕಲಿಗನ ಆರ್ಥಿಕ ಸ್ಥಿತಿ ಸುಧಾರಿಸದು. ಸಹಕಾರ ಪದ್ಧತಿಯ ಮೇರೆಗೆ ಈ ವೃತ್ತಿಗಳನ್ನು ಹರಡಿಸಬೇಕು

ಒಕ್ಕಲಿಗನ ಸಾಲದ ಭಾರ ಮಿತಿಮೀರಿ ಬೆಳೆದಿದೆ ಮುಂಬೈ ಪ್ರಾಂತಕ್ಕೆ ಒಟ್ಟು ೧೫೦ ಕೋಟಿ ರೂಪಾಯಿ ಸಾಲವಿದೆಯೆಂದು ಅಂದಾಜು ಮಾಡಲಾಗಿದೆ ಇದರ ಪರಿಹಾರಕ್ಕಾಗಿ ಲ್ಯಾಂಡ ಮಾರ್ಗೇಜ ಬ್ಯಾಂಕುಗಳನ್ನು ಸ್ಥಾಪಿಸಿದ್ದಾರೆ. ಆದರೆ ಇಲ್ಲಿಯ ವರೆಗೆ ಅವುಗಳಿಂದ ಆಗಿರುವ ಕೆಲಸ ಕೇವಲ ಒಂದು ಕಣದಷ್ಟು ಮಾತ್ರ. ೨೭ ಲಕ್ಷ ರೂಪಾಯಿ ಮಾತ್ರ ಇಡೀ ಪ್ರಾಂತದಲ್ಲಿ ಈ ಬ್ಯಾಂಕುಗಳು ಕೊಟ್ಟಿವೆ. ಇದೇ ಪ್ರಕಾರವಾದರೆ ಈ ಸಮಸ್ಯೆಯನ್ನು ಅಲ್ಪಸ್ವಲ್ಪ ಬಿಡಿಸಲಿಕ್ಕೂ ೧೦೦ ವರ್ಷಗಳಾದರೂ ಬೇಕು. ಒಕ್ಕಲಿಗನಿಗೆ ತನ್ನ ಸಾಲವನ್ನು ಪರಿಹರಿಸಿಕೊಳ್ಳಲು ಹೆಚ್ಚು ಸೌಕರ್ಯಗಳನ್ನು ಕೊಡಲು ಸರಕಾರವನ್ನು ನಾವು ಇಂದು ಒತ್ತಾಯಪಡಿಸಬೇಕಾಗಿದೆ.

ಕೊನೆಯದಾಗಿ, ಸರಕಾರದ ರೆವ್ಹಿನ್ಯೂ, ಅರಣ್ಯ, ಶೇತಕಿ ಮತ್ತು ಸಹಕಾರ ಖಾತೆಯವರು ಪರಸ್ಪರ ಸಹಕರಿಸಿ, ಅಧಿಕಾರೇತರ ಕಾರ್ಯಕರ್ತರೊಡನೆಯೂ ಏಕಮನಸ್ಸಿನಿಂದ ದುಡಿದು ನಿಃಸಹಾಯನಾದ, ಅತಿ ಪೀಡಿತನಾದ ಒಕ್ಕಲಿಗನಿಗೆ ಸಹಾಯವಾಗಲು ಪ್ರಯತ್ನ ಮಾಡುವದು ಅತ್ಯಗತ್ಯವೆಂದು ಹೇಳಲು ಬಯಸುತ್ತೇನೆ ಗ್ರಾಮೋದ್ಧಾರಕ್ಕೆಂದು ಈಗ ಬೇರೆ ಬೇರೆ ಖಾತೆಗಳ ನೌಕರರ ಸಿಬ್ಬಂದಿ ಬಹಳವಾಗಿ ಬೆಳೆದಿದೆ.

ನಮ್ಮ ರೂರಲ್ ಡೆವಲೆಪ್‌ಮೆಂಟ ಇನ್‌ಸ್ಪೆಕ್ಟರರಾದ ಶ್ರೀ. ಪಿ. ಎಸ್. ಹಬ್ಬು ಅವರು ಶೇತಕೀ ಖಾತೆಯಲ್ಲಿ ಇದ್ದು, ಅಧಿಕಾರದಿಂದ ಸಹಕಾರ ಚಳವಳಿಗೆ ಏನೂ ಸಂಬಂಧವಿರದಿದ್ದರೂ ನಮ್ಮ ಕೆಲಸಗಾರರಲ್ಲಿ ಬಹಳ ಮುಖ್ಯರಾಗಿದ್ದಾರೆ. ೨೫ ವರ್ಷಗಳ ದೀರ್ಘ ಕಾಲ ಬೇಸರವಿಲ್ಲದೆ ಒಂದೇ ಸವನೆ ಈ ಚಳವಳಿಗಾಗಿ ಅವರು ದುಡಿದಿದ್ದಾರೆ. ಸಹಕಾರ ಚಳವಳಿಗೆ ಅವರು ಮಾಡಿದ ಸೇವೆ ಅತ್ಯಮೂಲ್ಯವಾದುದು. ಅವರಂತಹ ಅಧಿಕಾರಿಗಳು ಇನ್ನೂ ಇದ್ದಿದ್ದರೆ ಜಾಸ್ತವಾದ ಉಪಕಾರ ಆಗುತ್ತಿತ್ತೆಂದು ಹೇಳಲು ಸಂಶಯವಿಲ್ಲ.

ಹೊನ್ನಾವರದ ಔದ್ಯೋಗಿಕ ಶಾಲೆಯ ಶ್ರೀ. ಎಸ್. ಕೆ. ಕಲ್ಲಾಪೂರ ಇವರು ನಾವು ಬಹಿರಂಗವಾಗಿ ವಂದಿಸಬೇಕಾದ ಮತ್ತೊಬ್ಬ ಕಾರ್ಯಕರ್ತರು. ಶ್ರೀಯುತರು ಉಪವೃತ್ತಿಗಳನ್ನು ಪ್ರಚಾರ ಮಾಡುವ ಕೆಲಸದಲ್ಲಿ ಬಹಳ ಕಾಲದಿಂದ ತೊಡಗಿಕೊಂಡಿದ್ದಾರೆ. ಈಚೆಗೆ ಎಲ್ಲರ ಗಮನಕ್ಕೂ ಬಂದಿರುವ ಜೇನುನೊಣಗಳ ಪಾಲನೆ, ಗುಂಡಿ ತಯಾರಿ, ಕೊಂಬಿನ ಕೆಲಸ, ನಾರಿನ ಕಸಬುಗಳು ಅವರು ಒಬ್ಬರೇ ದುಡಿದುದರ ಫಲವಾಗಿದೆ ನಮ್ಮ ದೇಶದಲ್ಲಿ ಇಂತಹ ಕೆಲಸಗಾರರು ತೀರ ವಿರಳ.

ಇತ್ತ ಲಕ್ಷಗೊಡಿರಿ! ಇತ್ತ ಲಕ್ಷಗೊಡಿರಿ!!

ಅಗತ್ಯದ ಸೂಚನೆ.

ಸದ್ಯ ಚಾಲತಿಯಲ್ಲಿ ಇಲ್ಲದ ವಿಕ್ಟೋರಿಯಾ, ವಿಲಿಯಂ, ರಂಡೆರಾಣಿ ಛಾಪೆಯ ರೂಪಾಯಿ, ಅರ್ಧ ರೂಪಾಯಿ ಮತ್ತು ಗೋವಾ, ಆಲ್ವಾರ ಬಿಕಾನೇರ ಸ್ಟೇಟಿನ ರೂಪಾಯಿ. ವಗೈರೆ ನಾಣ್ಯಗಳು ಯೋಗ್ಯ ದರದಿಂದ ಕೊಳ್ಳಲ್ಪಡುವವು.

— ಇಂದೇ ವಿಚಾರಿಸಿರಿ. —

ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ.

NOTICE TO CONTRACTORS.

No. A-31.

Sealed tenders in B 1 form (percentage rate) are invited for "Construction of 7 and 4 seated latrines for females and males in the compound of Police Lines at Honavar" estimates to cost Rs 2,000/— up to 2 P. M. on 1—12—1941, on payment of Re. 1/— each form.

For details apply to the Executive Engineer, Kanara Division, Karwar. The earnest money to accompany the tender and the security deposit are Rs 40 and Rs 100/— respectively.

KARWAR,
11—11—1941.

S. K. KARANDIKAR,
Executive Engineer,
Kanara Division

ಶಿರಸಿ ಸಹಕಾರಿ ಪರಿಷತ್ತಿನ ವೃತ್ತಾಂತ

(ಸುದ್ದಿಗಾರರಿಂದ)

ಶಿರಸಿ, ತಾ. ೧೪—೧೧—೪೭.

ಮೊದಲನೇ ದಿನ ಸಭೆಯ ಕೆಲಸ ಮುಗಿದ ಬಳಿಕ ಸಭಾಸ್ಥಾನದಲ್ಲಿ ವಿಷಯನಿರ್ಧಾರಕ ಸಭೆ ಸೇರಿ ಪರಿಷತ್ತಿನಲ್ಲಿ ಸೂಚಿಸತಕ್ಕ ಠರಾವುಗಳು ನಿಶ್ಚಯಿಸಲ್ಪಟ್ಟವು. ಮರುದಿನ ಅಪರಾಹ್ನ ೩ಕ್ಕೆ ಲಕ್ಷ್ಮೀಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಠರಾವುಗಳು ಸ್ವೀಕರಿಸಲ್ಪಟ್ಟವು: (೧) ಸಹಕಾರಿ ಸಂಘಗಳಿಗೆ ತಮ್ಮ ಹಣಗಳನ್ನು ಪುಸ್ತಕಪೇಟೆಗಳಿಗೆ ಕಳಿಸಲು ಮುಂಬಯಿ ಸರಕಾರವು ತನ್ನ ಕಟ್ಟಳೆಯ ಮುಖಾಂತರ ನಿರ್ಬಂಧ ಮಾಡಿತ್ತು. ಈ ವ್ಯವಸ್ಥೆಯನ್ನು ಮುಂಬಯಿ ಸರಕಾರವು ಈಗ ಕಿತ್ತು ಹಾಕಿದೆ. ರೂ. ೨೦,೦೦೦ಕ್ಕೆ ಮೇಲ್ಪಟ್ಟು ಶೇರು ಭಂಡವಲುಳ್ಳ ಬೇಂಕುಗಳಿಗೆ ಮಾತ್ರ ಕಮಿಶನ್ ಕೊಟ್ಟು ಟ್ರೆಜರಿಗಳ ಮುಖಾಂತರ ಹಣ ಕಳಿಸಲಿಕ್ಕೆ ಹಕ್ಕು ಇದೆ. ಈ ಕುರಿತು ನಿಷೇಧಪೂರ್ವಕ ಠರಾವನ್ನು ರಾ|| ಗೋಪಾಳರಾವ ದೇವರವರು ಸೂಚಿಸಿ, ಎಲ್ಲ ಬೇಂಕುಗಳಿಗೆ ಮುಂಚಿನಂತೆ ಈ ಅನುಕೂಲತೆಯಿರಬೇಕೆಂದು ಪ್ರತಿಪಾದಿಸಿದರು. ಈ ಠರಾವು ಸರ್ವಾನುಮತದಿಂದ ಮನ್ನಿಸಲಾಯಿತು. (೨) ಸಹಕಾರಿ ಬೇಂಕುಗಳ ಕೈಯಲ್ಲಿ ವಿಪುಲ ಹಣವುಂಟು. ಅದಕ್ಕೆ ಶೇಕಡಾ ೬ ರಷ್ಟು ಸಹ ಬಡ್ಡಿ ಬರುತ್ತದೆ. ಇದನ್ನು ಬೇಂಕುಗಳು ಸರಕಾರದ ಒತ್ತಿಯ ಮೇಲೆ, ಗ್ರಾಮ-ಕೈಗಾರಿಕೆಗಳ ಮೇಲೆ, ಅಲ್ಪ ಮುದ್ದತ್ತಿನ ಸರಕಾರಿ ಋಣಪತ್ರಗಳ ಮೇಲೆ, ಭೂತಭದ್ರ ಬೇಂಕಿನ ಸಾಲಪತ್ರಗಳ ಮೇಲೆ ಉಪಯೋಗಿಸಬೇಕೆಂಬ ರಾ|| ಗೋಪಾಳರಾವ ದೇವರವರ ಸೂಚನೆಯ ಮೇರೆಗೆ ಸರ್ವಾನುಮತದಿಂದ ಠರಾವಾಯಿತು. (೩) ರೂ. ೩೦೦ ಇಲ್ಲವೆ ಅದಕ್ಕೂ ಮೇಲ್ಪಟ್ಟು ಶೇರು ಇಡುವವರಿಗೆ ಆಡಳಿತ ಮಂಡಳದಲ್ಲಿ ಒಬ್ಬ ಪ್ರತಿನಿಧಿಯನ್ನು ಆರಿಸಿ ಕೊಡುವ ಹಕ್ಕು ಇರಬೇಕಾಗಿ ರಾ|| ಶೇಷಗಿರಿರಾವ ಕೇಶವೈನರವರು ಸೂಚಿಸಿದ್ದಕ್ಕೆ ಸರ್ವರೂ ಒಪ್ಪಿಕೊಂಡರು. (೪) ೧ ವರ್ಷಕ್ಕೆ ಮೇಲ್ಪಟ್ಟು ಸಾಲ ಬಾಕಿ ಇಟ್ಟುಕೊಂಡವರು ಕಾರ್ಯಕಾರಿ ಮಂಡಳದಲ್ಲಿ ಸೇರಲು ಅಪಾತ್ರರೆಂದು ಠರಾವಾಯಿತು. (೫) ಸ್ಥಾವರ ಆಸ್ತಿಯ ಭದ್ರತೆಯ ಮೇಲೆ ಸಾಲ ಕೊಟ್ಟ ಸಂಗತಿಯಲ್ಲಿ ಆ ಸ್ಥಾವರಾಸ್ತಿಯನ್ನು ಲಿಲಾಂವಿನಲ್ಲಿ ಪಡೆಯುವ ಸಂಗತಿಯಲ್ಲಿ ಬೇಂಕುಗಳು ಸರಕಾರದ ಪವಿತ್ರ ಹಕ್ಕನ್ನು ಕಾಯ್ದುಕೊಳ್ಳುವದಕ್ಕಾಗಿ ಬಡ್ಡಿಯನ್ನು ಆಕರಿಸುವ ವಿಷಯದಲ್ಲಿ ಸರಕಾರದ ಅನುಕೂಲತೆಗಳನ್ನು ತೋರಿಸಬೇಕಾಗಿ ರಾ|| ಸುಂದರರಾವ ಪಂಡಿತರವರು ಸೂಚಿಸಿದ್ದಕ್ಕೆ ಎಲ್ಲರೂ ಅನುಮತಿ ಕೊಟ್ಟರು. (೬) ಲಿಲಾಂವಾದ ೧ ತಿಂಗಳಲ್ಲಿ ಸಾಲದ ಹಣ ತುಂಬಿದರೆ ಲಿಲಾಂವು ರದ್ದು ಪಡಿಸುವಂತೆ ಭೂಕಂದಾಯ ಕಾನೂನಿನಲ್ಲಿ ತಿದ್ದುಪಡಿ ಮಾಡುವಂತೆ ಸರಕಾರಕ್ಕೆ ವಿನಂತಿ ಮಾಡುವ ಠರಾವನ್ನು ರಾ|| ರಾಮರಾವ ಪಂಡಿತರು ಮನ್ನಿಸಿಕೊಂಡರು. (೭) ಸಹಕಾರಿ ಲೆಕ್ಕ ಪರೀಕ್ಷಕರ ಫೀಯನ್ನು ಅರ್ಧಕ್ಕಿಳಿಸಬೇಕಾಗಿ ರಾ|| ಎಸ್. ಎನ್. ನಾಡಿಗೇರರವರು ತಂದ ಸೂಚನೆ ಸರ್ವಾನುಮತಿಯಿಂದ ಮನ್ನಿಸಲಾಯಿತು. (೮) ಸಹಕಾರಿ ಸಂಘಗಳ ಎಲ್ಲ ವಿವಾದಗಳಿಗಾಗಿ ಆರ್ಬಿಟ್ರೇಟರರಿಗೆ ಹೆಚ್ಚಿನ ಅಧಿಕಾರ ಕೊಡಬೇಕೆಂದು ರಾ|| ಗಂಗೋಳಿಯವರು ತಂದ ಸೂಚನೆ ಮಂಜೂರಾಯಿತು. (೯) ಸಾಲ ಕೊಂಡವನು ಸಾಕ್ಷಿದಾರನಾಗಿ ಜಾಮೀನುದಾರರ ವಿರುದ್ಧ ಕ್ರಮ ನಡೆದ ಸಂಗತಿಯಲ್ಲಿ ಸಹಕಾರಿ ಬೇಂಕುಗಳೂ ಸಂಘಗಳೂ ಶಕ್ಯವಿದ್ದ ಯಾವತ್ತೂ ರಿಯಾಯತಿಗಳನ್ನು ಕೊಡಬೇಕಾಗಿ ರಾ|| ರಾಮರಾವ ಪಂಡಿತರು ತಂದ ಸೂಚನೆ ಮಂಜೂರಾಯಿತು. (೧೦) ಜಿಲ್ಹೆಯಲ್ಲಿ ಸಹಕಾರಿ ಬೇಂಕುಗಳು ಮುಂಬಯಿ ಪ್ರಾಂತಿಕ ಸಹಕಾರಿ ಬೇಂಕಿನ ಮೇಲೆ ಕೊಟ್ಟ ಚೆಕ್ಕುಗಳನ್ನು ೧ ಆಣೆ ಪಾವತಿ ಪಡೆದು ಹಣ ಕೊಡಬೇಕಾಗಿ ರಾ|| ವ್ಹಿ. ಜಿ. ಹೆಗಡೆಯವರು ತಂದ ಸೂಚನೆ ಮಂಜೂರಾಯಿತು. (೧೧) ಬೇಂಕುಗಳ ಭಂಡವಾಲನ್ನು ರೂ. ೩೦,೦೦೦ಕ್ಕೆ ಏರಿಸುವ ಶರ್ತನ್ನು ೫ ವರ್ಷಗಳ ತನಕ ಜಾರಿಯಲ್ಲಿ ತರಬಾರದೆಂಬ ಠರಾವನ್ನು ರಾ|| ದೇವರವರು ಮಂಜೂರ ಮಾಡಿಕೊಂಡರು. (೧೨) ಸಾಲಗಾರರು ತಾವು ಪಡೆದ ಸಾಲದ ರಕಮಿನ ಮಟ್ಟಿಗೆ ವಿಮಾ ಇಳಿಸಿ ಆ ವಿಮಾ-ಪತ್ರವನ್ನು ಸಂಘದ ಹೆಸರಿನಲ್ಲಿ ಬರೆಸಿಕೊಡಬೇಕಾಗಿ ರಾ|| ಹೆಗ್ಗಡೆರು ಸೂಚಿಸಿ ಮನ್ನಿಸಿಕೊಂಡರು. (೧೩) ಸಹಕಾರಿ ಇಲಾಖೆಯವರು ಸಂಘಗಳ ದಿವಾಳಿತನದ (liquidation) ಪ್ರಕರಣಗಳನ್ನು ಶೀಘ್ರ ಬಗೆಹರಿಸಬೇಕಾಗಿ ರಾ|| ಎಸ್. ಟಿ. ಭಟ್ಟರವರು ತಂದ ಸೂಚನೆ ಮಂಜೂರಾಯಿತು. (೧೪) ಭೂಭದ್ರ ಬೇಂಕಿನಿಂದ ರೈತರಿಗೆ ತಕ್ಕ ಅನುಭವಾಗಲಿಲ್ಲ; ತಿಬಂದಿಯ ಖರ್ಚನ್ನು ಸರಕಾರವು ಪೂರೈಸದಿದ್ದರೆ ಅದನ್ನು ನಡೆಸುವದು ಕಠಿಣವಿದೆ. ಡೈರೆಕ್ಟರರು ಈ ಕುರಿತು ಸರಕಾರದ ಕಡೆ ಆಲೋಚನೆ ಮಾಡಿ ಏನೂ ಸಾಧ್ಯವಾಗದಿದ್ದರೆ, ಬೇಂಕಿನ ವ್ಯವಹಾರವನ್ನು ನಿಲ್ಲಿಸುವ ಆಲೋಚನೆ ಮಾಡಬೇಕೆಂಬ ಸೂಚನೆಯನ್ನು ರಾ|| ಸುಂದರರಾವ ಪಂಡಿತರವರು ಮಂಜೂರ ಮಾಡಿಕೊಂಡರು. (೧೫) ಸಹಕಾರ ಸಂಘಗಳನ್ನು ಪುನರ್ಘಟಿಸಿ ಅವನ್ನು ರೈತರುಗಳ ಹುಟ್ಟುವಳಿ ಮತ್ತು ಮಾರಾಟ-ವ್ಯವಹಾರಗಳಿಗೆ ಜೋಡಿಸಿ ನಡೆಸಲ್ಪಡುವಂತೆ ಏರ್ಪಡಿಸಬೇಕಾಗಿ ರಾ|| ಸಂಜೀವರಾವ ಕಲ್ಲಾಪುರರವರು ತಂದ ಸೂಚನೆ ಮಂಜೂರಾಯಿತು. (೧೬) ಇಡೀ ಜಿಲ್ಹೆಗೆ ಒಬ್ಬ ಔದ್ಯೋಗಿಕ ಅಧಿಕಾರಿಯನ್ನು ನೇಮಿಸಬೇಕು. ೫ ವರ್ಷಗಳ ತನಕ ಬಾಬ್ತುವಸೂಲಿಯನ್ನು ಗ್ರಾಮ-ಕೈಗಾರಿಕೆಗಳಿಗೆ ಸರಕಾರವು ಪ್ರತ್ಯಕ್ಷ ಸಹಾಯ ಮಾಡಬೇಕು. ಮತ್ತು ಈ ಗ್ರಾಮ-ಕೈಗಾರಿಕೆಗಳ ಸಾಮಗ್ರಿಗಳನ್ನು ಸರಕಾರಿ ಇಲಾಖೆಯವರು ಕೊಳ್ಳಬೇಕು. ಇದನ್ನು ರಾ|| ಕಲ್ಲಾಪುರರವರು ಮಂಜೂರ ಮಾಡಿಕೊಂಡರು. (೧೭) ಈ ಜಿಲ್ಹೆಗೆ ಯೋಗ್ಯವಾದ ಹಾಲು ಹಿಂಡುವ ಧನಗಳ ತಳಿಗೆಯನ್ನು ಸರಕಾರವು ತನ್ನ ತಜ್ಞರ ಮುಖಾಂತರ ಗೊತ್ತುಪಡಿಸಿ ಅದನ್ನು ಪ್ರಚಾರದಲ್ಲಿ ತರಬೇಕು. ಈ ಠರಾವನ್ನು ರಾ|| ಹೆಗಡೆಯವರು ಮಂಜೂರ ಮಾಡಿಕೊಂಡರು. (೧೮) ಜಿಲ್ಹೆಯಲ್ಲಿ ಪ್ರತಿ ವರ್ಷ ಹೇರಳ ಜನರು ಬಳಲಿಬೀಳುತ್ತಾರೆ. ಆದ್ದರಿಂದ ಸರಕಾರವು ಪ್ರಯತ್ನ ಮಾಡಿ ಗ್ರಾಮಗಳಲ್ಲಿ ಔಷಧಾಲಯಗಳನ್ನು ಸ್ಥಾಪಿಸಬೇಕು, ವೈದ್ಯರಿಗೆ ತಕ್ಕ ವೇತನ ಕೊಡಬೇಕು; ಕೆರೆ ಮೊದಲಾದ ಜಲಾಶಯಗಳನ್ನು ಚಳಿಜ್ವರದ ಪ್ರತಿಬಂಧಕ ದ್ರವಗಳನ್ನು ಸಿಂಪಡಿಸಬೇಕು; ಜನವಸತಿಯ ಸುತ್ತ ಮುತ್ತ ಇರುವ ಬಚ್ಚಲನ್ನು ಕಡಿದು ಹಾಕಬೇಕು; ಸಹಕಾರಿ ಸಂಘಗಳು ವಿದ್ಯಾದಾನದ ತ್ರಾಸವನ್ನು ಪ್ರತ್ಯಕ್ಷವಾಗಿ ಹೊರಬೇಕು. ಈ ಠರಾವನ್ನು ರಾ|| ಮೋಟಿನಸರ ತಿಮ್ಮಪ್ಪ ಹೆಗಡೆಯವರು ಸೂಚಿಸಿ ಮನ್ನಿಸಿಕೊಂಡರು. (೧೯) ಅಡಿಕೆ ಬೆಳೆಯ ಸಂಶೋಧನವನ್ನು ಸರಕಾರವು ನಡಿಸಿ, ಅಡಿಕೆಯ ವಗರ್ವಾರಿಯನ್ನು ನಿಶ್ಚಯಿಸಬೇಕು. ಭತ್ತ, ಅಡಿಕೆ, ಮೆಣಸು, ಯಾಲಕ್ಕಿಗಳ ಕುರಿತು ಕುಮಟಾ ಶಿರಸಿಗಳಲ್ಲಿ ಮಾರ್ಕೆಟಿಂಗ ಅಕ್ಟಿನನ್ವಯ ಕ್ರಮಗಳನ್ನು ಕೈಕೊಳ್ಳಬೇಕು. ಈ ಠರಾವನ್ನು ರಾ|| ದೇವರವರು ಸೂಚಿಸಿ ಮನ್ನಿಸಿಕೊಂಡರು. (೨೦) ಗ್ರಾಮಗಳಲ್ಲಿ ಮಾರ್ಗ ಮತ್ತು ಸಂಕಗಳನ್ನು ಕಟ್ಟಲು ಸರಕಾರವು ಹೆಚ್ಚಿನ ಗ್ರಾಂಟು ಕೊಡಬೇಕಾಗಿ ರಾ|| ದೇವರವರು ತಂದ ಸೂಚನೆಗೆ ಸರ್ವರೂ ಅನುಮತಿ ಕೊಟ್ಟರು. (೨೧) ಮುಂಬಯಿ ಪರಿಷತ್ತಿನಲ್ಲಿ ಕಾಂಗ್ರೆಸ ಸರಕಾರದ ಕಾರ್ಯಕಾರಿಣಿಯಲ್ಲಿ ಜನರಿಗೆ ಕೊಟ್ಟ ಅನುಕೂಲತೆಗಳನ್ನು ಎದ್ದು ಪಡಿಸಬೇಕೆಂಬ ವಿಚಾರ ಅಧಿಕಾರಿಗಳಲ್ಲಿ ನಡೆಯುತ್ತದೆಂಬ ವಾರ್ತೆಯಿಂದ ಜನರಿಗೆ ಚಿಂತೆಯುಂಟಾಗಿದೆ. ಗ್ರಾಮೋದ್ಧಾರವನ್ನು ಬಯಸುವ ಸರಕಾರವು ಈ ಪ್ರಕಾರ ಮಾಡುವದು ತರವಲ್ಲ; ಅದರಿಂದ ಜನರು ನಿರುತ್ಸಾಹಗೊಳ್ಳುವರು ಎಂಬ ನಿಷೇಧಪರ ಠರಾವನ್ನು ರಾ|| ಶಿವರಾವ ಶಾಸ್ತ್ರಿಯವರು ಸೂಚಿಸಿ ಮಂಜೂರ ಮಾಡಿಕೊಂಡರು. (೨೨) ಸಾಗುವಳಿಯಾಗುವ ಭೂಮಿ ಬೀಳು ಬೀಳುತ್ತ ನಡೆದದ್ದರಿಂದ ಅವನ್ನು ಪುನಃ ಸಾಗುವಳಿ ಮಾಡುವ ದೆಸೆಯಿಂದ ಸರಕಾರವು ಮನ್ಯಾತ್ರಯೋಜನೆಯನ್ನು ಕಲ್ಪಿಸಬೇಕಾಗಿ ರಾ|| ಶಾಸ್ತ್ರಿಯವರು ತಂದ ಸೂಚನೆ ಮಂಜೂರಾಯಿತು. (೨೩) ಕೊಳೆರೋಗದ ಮದ್ದನ್ನು ಸಿಂಪಡಿಸಲಿಕ್ಕೆ ಸರಕಾರವು ತಗಾವಿ ಸಾಲವನ್ನು ಕೊಡುವಂತೆ ಕೊಟ್ಟ ಕಟ್ಟಳೆ ಖರ್ಚಿನ ಬಗ್ಗೆ ಸರಕಾರವು ತಗಾವಿ ಸಾಲವನ್ನು ಕೊಡಬೇಕಾಗಿ ರಾ|| ಗಂಗೋಳಿಯವರು ತಂದ ಸೂಚನೆ ಸರ್ವಾನುಮತಿಯಿಂದ ಮಂಜೂರಾದ ಬಳಿಕ, ಅಧ್ಯಕ್ಷರ ಸಮಾರೋಪ ಭಾಷಣವಾಗಿ ಸಭಾಕಾರ್ಯ ಮುಕ್ತಾಯ ಹೊಂದಿತು.

ಮರುದಿನ ಜಿಲ್ಹಾ ಕಾಂಗ್ರೆಸ ಕಮಿಟಿ ಅಧ್ಯಕ್ಷರಾದ ರಾ|| ಶಿವರಾವ ಶಾಸ್ತ್ರಿಯವರು ಬಹುಮಾನಗಳನ್ನು ಹಂಚಿದರು. ಪ್ರದರ್ಶನದಲ್ಲಿ ಅಂತು ೧೬೦೦ ಜಿನಸುಗಳು ಪ್ರದರ್ಶಿಸಲ್ಪಟ್ಟಿದ್ದವು: (೧) ಔದ್ಯೋಗಿಕ ವಿಭಾಗ, (೨) ಕಲಾಕೌಶಲ್ಯ ವಿಭಾಗ (೩) ಗಂಧ ಮತ್ತು ಹಸ್ತಿದಂತದ ಕೆತ್ತಿಗೆಯ ವಿಭಾಗ, (೪) ಖಾದಿ ವಿಭಾಗ, (೫) ಬೇಸಾಯ ವಿಭಾಗ. ಔದ್ಯೋಗಿಕ ವಿಭಾಗದಲ್ಲಿ ಹೊನ್ನಾವರದ ಶ್ರೀ ಮಾನವೇಲ ಡಿಸೋಜಾ, ರೋಜ ಮಾನವೇಲ ಡಿಸೋಜಾ, ಮೊದ ಫ್ರಾನ್ಸಿಸ ಫರ್ನಾಂಡೀಸ ಈ ಮೂವರಿಗೆ ಕಬ್ಬಿಣದ ಕುರಿ ಮಾಡುವ ಕೆಲಸದ ಬಗ್ಗೆ ಪದಕಗಳು ಕೊಡಲ್ಪಟ್ಟವು. ಶಿವಮೊಗ್ಗೆ ಮುತ್ತಿಂಗ ವಜ್ರಾ ಇವರಿಗೆ ಕಲ್ಲಿನ ಕೆತ್ತನೆ ಬಗೆ ಪ್ರಶಸ್ತಿಪತ್ರ ಕೊಡಲಾಯಿತು. ಪ್ರದರ್ಶನದಲ್ಲಿಟ್ಟ ಹ್ಯಾಂಡ್ ಕೋಡಿನ ಸಾಮಾನುಗಳು ವಿಕ್ರಯವಾದವೆಂದು ವಿಶೇಷ. ಕಲಾಕೌಶಲ್ಯದ ವಿಭಾಗದಲ್ಲಿ ಸ್ತ್ರೀಯರ ಮತ್ತು ಪುರುಷರ ಕಲಾಕೌಶಲ್ಯಗಳೇ ಹೆಚ್ಚು. ಮಿತ್ರಾಭಾಯಿ ಕಾನ್ಡೆ ಶಿರಸಿ ಇವರಿಗೆ ಫೋಟೋ ಹೆಣೆದ ಕೆಲಸದ ಬಗ್ಗೆ ೧ ಪದಕ ಕೊಡಲಾಯಿತು. ಸಿಂಧುಭಾಗವತ ಗೋಕರ್ಣ (ಮಿನುಗಿನ ಚಿತ್ರ), ಶಾರದಾ ವಾಘ, ಸುಬ್ರಾಯ ಮ್ಯಾಳಿಪ್ಪೈ ಶಿರಸಿ (ಬಣ್ಣದ ಚಿತ್ರ), ಶಕುಂತಲಾಬಾಯಿ ಚೌಗುಲೆ ಶಿರಸಿ, ಶಾರದಾ ಚಕ್ರವರ್ತಿ ಶಿರಸಿ, ಮುದ್ದಾಬಾಯಿ ಕಾನ್ಡೆ ಶಿರಸಿ, ಸೀತಾಬಾಯಿ ಭಟ್ಟ ಶಿರಸಿ (ಹೆಣಿಗೆ ಕೆಲಸ), ಪ್ರೇಮಾಬಾಯಿ ಹೊನ್ನಾವರ, ಕಮಲಾ ಹಳಿಯಾಳಪುರ ಶಾರದಾ, ಸಾವಿತ್ರಿ ಚಿಕ್ಕ-ಶಿರಸಿ, ಇಂದಿರಾ ಶೆಟ್ಟಿ ಶಿರಸಿ (ಕಸೂತಿಯ ಕೆಲಸ), ಸರೋಜಿನಿ ಘುಂಡಿ ಶಿರಸಿ (ಚಿತ್ರದ ಚೌಕಟ್ಟು) ಇಂದಿರಾ ಪೇಡಣೇಕರ ಶಿರಸಿ, ಸರೋಜಾ ದೇವಿ ಶಿರಸಿ (ಹಸ್ತ ಕೌಶಲ್ಯ), ವಿಮಲಾ ನಾಗರಕಟ್ಟೆ ಕಾರವಾರ, ಲಲಿತಾ ಪಾಲಕರ ಕಾರವಾರ, ಎ. ಎಲ್. ಗೋಖಲೆ ಕುಮಟಾ (ಚಿತ್ರದ ಕೆಲಸ), ಸೌ|| ಫರ್ನಾಂಡೀಸ ಹೊನ್ನಾವರ (ನೆಯ್ಗೆ), ಎಚ್. ಆರ್. ಭಾಗವತ ಶಿರಸಿ (ಕಲ್ಲಿನ ಮೇಲೆ ಚಿತ್ರ ತೆಗೆಯುವ ಕಸೂತಿ ಕೆಲಸ), ಆನಂದ ಪಾಂಡುರಂಗ ಪೈ ಕುಮಟಾ (ಹಸ್ತಕೌಶಲ್ಯ), ರಾಮಚಂದ್ರ ನಾರೋಬಾ ಬಣ್ಣಗಾರ ಹಳಿಯಾಳ (ಬಣ್ಣದ ಕೆಲಸ) ಇವರೆಲ್ಲರಿಗೆ ಪ್ರಶಸ್ತಿ-ಪತ್ರಗಳು ಕೊಡಲ್ಪಟ್ಟವು. ರಾ|| ಎಸ್. ಎಲ್. ಕುಲಕರ್ಣಿಯವರಿಗೆ ಕೆತ್ತಿಗೆಯ ಬಗ್ಗೆ ೧ ಪದಕ ಕೊಡಲಾಯಿತು.

ಗಂಧದ ಮತ್ತು ಹಸ್ತಿದಂತದ ವಿಭಾಗದಲ್ಲಿ ಸಿದ್ದಾಪುರದ ವ್ಹಿ. ಸಿ. ಗುಡಿಗಾರ, ಕುಮಟೆಯ ಚಿದಾನಂದ ಶೆಟ್ಟಿ, ಹೊನ್ನಾವರದ ಗಂಧದ ಕೆಲಸದ ಸಂಘ ಇವುಗಳಿಗೆ ಪದಕಗಳೂ, ಕುಮಟಾ ಗಂಧದ ಕೆಲಸದ ಸಂಘ, ಶಿರಸಿಯ ಮಂಜಪ್ಪ ಮಂಜಪ್ಪ ಗುಡಿಗಾರ, ಹೊಸಕಂಬಿ ಜಿ. ಆರ್. ಗುಡಿಗಾರ ಇವರಿಗೆ ಪ್ರಶಸ್ತಿಪತ್ರಗಳೂ ಕೊಡಲಾದವು. ಬೇಸಾಯ ವಿಭಾಗದಲ್ಲಿ ಶ್ರೀಪಾದ ವೆಂಕಟರಮಣ ಪಂಡಿತ (ಭತ್ತದ-ನಮೂನೆ), ಗಣೇಶ ಮಹಾಬಲ ಹೆಗಡೆ ದಂಟಕಲ್ಲ

(ಸುಕೇಳಿ ಮತ್ತು ಕಬ್ಬು), ಎಸ್ ಎಸ್ ಪಾಟೀಲ ಸಿದ್ದಾಪುರ (ಪರಿಶುದ್ಧ ಜೇನುತುಪ್ಪ) ಎಸ್ ಎಮ್. ಕೇರಗಾಂವಕರ ಹಳಿಯಾಳ (ಭತ್ತ), ಜಿ ಎಮ್ ಫರ್ನಾಂಡೀಸ ಸಿದ್ದಾಪುರ (ಅಡಿಕೆ ಒಣಗಿಸುವ ಪಟ್ಟಿ), ಪುಂಡಲೀಕ ರಮಣ ಕಾಮತ ಶಿರ್ಸಿ (ಕೋಳಿ) ಇವರಿಗೆ ಪ್ರಶಸ್ತಿ ಪತ್ರಗಳು ಕೊಡೋಣಾದವು.

ಗಾಯನ-ಸ್ಪರ್ಧೆಗಳಲ್ಲಿ ಮೋಹಿನಿ ಸಿಲೀಕರ ಶಿರ್ಸಿ ಇವರಿಗೆ (ಪದಕ), ದೇವಮಾನತಿ ಅಂಬಳ್ಳಿ, ಉಮಾಕುಮಾರಿ ಹಳದೀಪುರ ಸಿದ್ದಾಪುರ, ಸರಸ್ವತಿ ಮುಂಜಾ, ಪ್ರಮಿಲಾ ನಾಫ, ವಸುಮತಿ ಸ್ವಾದಿ, ಇಂದ್ರಾಣಿ ಪಿಲ್ಯಮಿತ್ರ, ಸ.ಶಿ.ರೋ ಪಟ್ಟು, ಮಧು ಕಾಮತ ಶಿರ್ಸಿ ಇವರಿಗೆ ಪ್ರಶಸ್ತಿಪತ್ರ ಕೊಡೋಣಾದವು

ಗುರಿ ಹೊಡೆದ ಬಗ್ಗೆ ಇನಾಸ ಇವರಿಗೆ ಪದಕವು, ಜಿ ಎಚ್ ರಾಜಾಧ್ಯಕ್ಷ, ಜಿ ಯು ಆಲೇಕರ ಶಿರ್ಸಿ ಇವರಿಗೆ ಪ್ರಶಸ್ತಿಪತ್ರಗಳೂ ಕೊಡೋಣಾದವು, ಸೋಡಾ ವಾಟರ ತಯಾರಿಸಿದ ಬಗ್ಗೆ ಶಿರ್ಸಿಯ ಫಿ ಎಸ್ ಸಿಕ್ವೇರಾ ಇವರಿಗೆ ಪ್ರಶಸ್ತಿಪತ್ರ ಕೊಡೋಣಾಗಿದೆ

ಕುಮಟೆಯ ವ್ಯಾಯಾಮ ಶಾಲೆ, ಶಿರ್ಸಿಯ ಶ್ರೀ ಹನುಮಾನ ವ್ಯಾಯಾಮ ಶಾಲೆಯ ವಿದ್ಯಾರ್ಥಿಗಳು ತರತರದ ಆಟ ಓಟಗಳನ್ನೂ ಅಂಗಸಾಧನೆಗಳನ್ನೂ ಮಾಡಿ ತೋರಿಸಿ ಜನಮನರಂಜನೆ ಮಾಡಿದರು ೧ ಮೈಲು ಓಡಿದ ಬಗ್ಗೆ ಅಂತೋನ ಜುಜೆ ಮೊಂತೇರ, ಜನಾರ್ದನ ಬಸ್ರೂರ ಪ್ರಿಟೋ, ೫೦ ಯಾರ್ಡ ಓಟದ ಬಗೆ ಚಕ್ರಪಾಣಿ ಆಲ್ಪ್ರ ನಾಯಕ ಗುಂಡು ಒಗೆಯುವ ಬಗೆ ಎಸ್ ಡಿ ಮುಂಡ್ರಿ, ಹರುವಸಾ ಕಾಳಿಸಾ ಕೋಲು ಕುಪ್ಪರಿಯ ಬಗ್ಗೆ ನಾಗು ನಾಯಕ ಶಿರ್ಸಿಕರ, ಚಂದ್ರು ಬಾಳಪ್ಪ, ಉದ್ದ ಜಿಗಿಯುವ ಬಗೆ ಜನಾರ್ದನ ಬಸ್ರೂರ, ಚೆಂಡು [illegible] ಬಗೆ ಎಸ್ ಡಿ ಮುಂಡ್ರಿ, [illegible] ಕೊಡಲ್ಪಟ್ಟು. ಕುಸ್ತಿಯ ಬಗ್ಗೆ ಕರಿಯಾ ಲಕ್ಷ್ಮಣ ಚವುಗಾರ, ಜಿ ಬಿ ಶಿರಾಲಿ, ಎಸ್ ಡಿ ಮುಂಡ್ರಿ, ಜಿ.ಪಿ. ಬಾಳಪ್ಪ, ಅಂತೋನ ಜುಜೆ ಇವರಿಗೆ ಪದಕಗಳ ಕೊಡೋಣಾದವು ಕುಮಟೆಯ ವ್ಯಾಯಾಮ ಶಾಲೆಯವರಿಗೆ ವ್ಯಾಯಾಮ ಮತ್ತು ಅಂಗಸಾಧನೆ ಪ್ರಯೋಗಗಳನ್ನು ಮಾಡಿ ತೋರಿಸಿದ ಬಗ್ಗೆ ರೂ ೨.೫೦ ಬಹುಮಾನ ಕೊಡೋಣಾಯಿತು ಆಟ ಓಟ ಅಂಗಸಾಧನೆಗಳನ್ನು ನೋಡಲು ಬಹಳ ಜನ ಸೇರಿದ್ದರು

[illegible] ಪ್ರದರ್ಶನವು ೩ ದಿನಗಳಲ್ಲಿ [illegible]

ಪ್ರದರ್ಶನ [illegible] ಜನರು ಬಂದಿದ್ದರು [illegible] ಪ್ರದರ್ಶನವು ಯಶಸ್ವಿಯಾಗಿ ನೆರವೇರಿದವು [illegible] ಮತ್ತು ಪ್ರದರ್ಶನಗಳನ್ನು ಯಶಸ್ವಿ ಮಾಡಿದ ಶ್ರೇಯಸ್ಸು ಸ್ವಾಗತಾಧ್ಯಕ್ಷರಾದ ರಾ॥ ಸುಂದರರಾವ ಪಂಡಿತ ಮತ್ತು ಅವರ ಗೆಳೆಯರಿಗೆ ಸಲ್ಲತಕ್ಕದ್ದು

ಕೆಲವು ವಿಚಾರಗಳು.

ಸಹಕಾರಿ ಪರಿಷತ್ತಿನ ಕಾರ್ಯವನ್ನು ಈಗ ಸಮಾಲೋಚಿಸಬಹುದು ಸ್ವಾಗತಾಧ್ಯಕ್ಷರೂ ಅಧ್ಯಕ್ಷರೂ ಸಹಕಾರದ ಅಂಗ-ಉಪಾಂಗಗಳನ್ನು ಗ್ರಾಮೋದ್ಧಾರದ ದೃಷ್ಟಿಭೂಮಿಯಲ್ಲಿ ಸಮಾಲೋಚಿಸಿದ್ದಾರೆ ಸಹಕಾರ ಸಂಘಗಳು ಈ ದುರ್ದೆಸೆಗೀಡಾಗಲು ಆರ್ಥಿಕ ಮುಗ್ಗಟ್ಟೇ ಕಾರಣವೆಂದು ಉಭಯತರೂ ಒತ್ತಿ ಹೇಳಿದ್ದಾರೆ ಕಾಳು-ಕಡಿಗಳ ದರ ಹೇರಳವಾಗಿ ಇಳಿದದ್ದರಿಂದ ಬೇಸಾಯಗಾರರಿಗೆ ಸಾಲ ತೀರಿಸುವದೊತ್ತಟ್ಟಿಗಿರಲಿ, ಪ್ರಪಂಚ ಸಾಗಿಸುವದೇ ಕಠಿಣವಾಯಿತು. ಅಧ್ಯಕ್ಷರಾದ ಶ್ರೀ॥ ಲಿಮ್ಯೇಯವರು ಹೇಳಿದಂತೆ ಹಲವೆಡೆ ಸಾವಕಾರರು ಸಂಘಗಳನ್ನು ಸ್ಥಾಪಿಸಿಕೊಂಡು ತಮಗೆ ಸಲ್ಲತಕ್ಕ ಸಾಲಗಳನ್ನು ತೀರಿಸಿಕೊಂಡದ್ದೂ ಉಂಟು. ಅದೇ ಪ್ರಕಾರ ಸಾಲ ತೀರಿಸುವ ಸಾಮರ್ಥ್ಯದ ವಿಚಾರ ಮಾಡದೆ ಸಂಘಗಳು ಸಾಲ ಕೊಟ್ಟದ್ದುಂಟು. ಸಾವಕಾರರಿಂದ ಸಾಲ ಸಿಗದವರಿಗೆ ಸಂಘಗಳು ಸಾಲ ಕೊಟ್ಟದ್ದುಂಟು ಈ ನ್ಯೂನತೆಗಳನ್ನು ಶ್ರೀ॥ ಲಿಮ್ಯೇಯವರು ಮರೆಮಾಚದೆ ಹೇಳಿ ಸಂಘಗಳ ಚಾಲಕರಿಗೆ ಆತ್ಮಪರೀಕ್ಷಣ ಮಾಡಲು ಸೂಚಿಸಿದ್ದು ಒಳಿತಾಯಿತು

ಸಹಕಾರಿ ಇಲಾಖೆಯ ಲೆಕ್ಕ ತಪಾಸಕರು ತಮ್ಮ ಅಧಿಕಾರವನ್ನು ಸಂಘಗಳಿಗೆ ಹಿತವಾಗುವಂತೆ ಉಪಯೋಗಿಸಲಿಲ್ಲವಾಗಿ ಶ್ರೀ॥ ಲಿಮ್ಯೇಯವರು ಹೇಳಿದ ಮಾತನ್ನು ಯಾರೂ ಒಪ್ಪಲೇ ಬೇಕು. ಲೆಕ್ಕ-ಪರೀಕ್ಷಕರು ಜನರ ಅಜ್ಞಾನ, ಸೋಮಾರಿತನ ಇವೇ ಮೊದಲಾದ ನ್ಯೂನತೆಗಳನ್ನಷ್ಟೇ ರಿಪೋರ್ಟಿನಲ್ಲಿ ಬರೆದು, ಅಷ್ಟೇ ತಮ್ಮ ಕಾರ್ಯವೆಂದು ಎಣಿಸಿದರು. ಪ್ರತಿಯೊಂದು ಸಂಘಕ್ಕೂ ಇದೇ ರೋಗವೆಂದು ಎಲ್ಲ ಲೆಕ್ಕಪರೀಕ್ಷಕರ ನಿರ್ಣಯ. ಶ್ರೀ॥ ಲಿಮ್ಯೇಯವರು ಅಧಿಕಾರದಲ್ಲಿದ್ದಾಗ ಈ ಶರಾಗಳನ್ನು ಓದಿ ಬೇಸರಪಟ್ಟರಂತೆ ಪ್ರತಿ ಸಂಘದ ಬಗ್ಗೆ ಒಂದೇ ಶರಾ ಬರೆಯುವ ಕಷ್ಟ ಕೊಳ್ಳುವ ಬದಲು ಆ ಶರಾಗಳನ್ನು ಛಾಪಿಸಿಟ್ಟು ಪ್ರತಿ ವರ್ಷ ಅವನ್ನು ವರದಿಗಳಿಗೆ ಅಂಟಿಸಬಹುದು. ಹೀಗೆ ಹಿಂದಿನ ರಿಜಿಸ್ಟ್ರಾರರು [illegible] ಉದ್ಗರಿಸಿದರೆಂದು ಶ್ರೀ॥ ಲಿಮ್ಯೇಯವರು ಹೇಳಿದರು ಲೆಕ್ಕಪರೀಕ್ಷಕರು ಸಂಘಗಳ ಅಡಚಣೆಗಳನ್ನು ನಿವಾರಿಸುವಂತೆ ಸಾಲಗಾರ-ಬೋರ್ಡದೊಡನೆ ವಿಚಾರ-ವಿನಿಮಯ ಮಾಡಿದ್ದರೆ, ಅದೇ ಪ್ರಕಾರ ಕಾರ್ಯಕಾರಿ ಮಂಡಳಕ್ಕೂ ಹೊಡೆ ಇರುವಾಗ ತಿಳುವಳಿಕೆ ಕೊಟ್ಟಿದ್ದರೆ ಸಂಘಗಳು ಹೀಗೆ ಅಧೋಗತಿಗೆ ಮುಟ್ಟುತ್ತಿರಲಿಲ್ಲ. ಸಾವಕಾರರು ಸಾಲ ಕೊಡದವರಿಗೆ, ಸಹಕಾರಿ ಸಂಘಗಳಲ್ಲಿ ಸಾಲ ಸಿಗಬೇಕಾಗಿದ್ದ ದಕ್ಕೆ [illegible] ಮಾಡಬೇಕಾಗಿಲ್ಲ. ಸಂಘಗಳ ಚಾಲಕರಿಗೆ ಪ್ರಯೋಜನ ದೊರೆಯುತ್ತಿದ್ದದರಿಂದ ಸಾಲ ಹಚ್ಚುವವರಿಗೆ ಸಾಲ ಕೊಟ್ಟಿತು ಹಣ ಜೋಡಿದ ಸಂಘವು [illegible] ಶ್ರೇಯಸ್ಸು ತಮಗೆ [illegible] ದೊರೆಯುತ್ತದೆ, ಎಂಬ ಧ್ವನಿಯಿಂದ ಚಾಲಕರು ವರ್ತಿಸಿಕೊಳ್ಳುವಾಗ ಲೆಕ್ಕಪರೀಕ್ಷಕರು ಬರಿ ಧ್ವನಿ ಮಾಡುತ್ತ ಕುಳಿತದ್ದರಿಂದ ಚಾಲಕರಿಗೆ [illegible] ಶ್ರೀ ಲಿಮ್ಯೇಯವರು [illegible] ಅಧಿಕಾರಿ [illegible] ಸಹಕಾರಿ [illegible] ಪ್ರಶ್ನೆಯುಂಟು ಸಾಲ [illegible] ತಿರುಗಿ [illegible] ಕೊಡುವ [illegible] ಈಗ ಈ ಹಣವನ್ನು [illegible] ಕ್ರಮ ಉಂಟು. ಆದಕಾರಣ ತಮಗೆ ಸಲ್ಲತಕ್ಕ ಸಾಲವನ್ನು ಸಂಘದ ವಿದ್ಯಮಾನ [illegible] ತಿರುಗಿ ಬರುವ ಲಕ್ಷಣವಿಲ್ಲದೆ ಸಾಲ ಕೊಟ್ಟ ಪ್ರಸಕ್ತಿಯಲ್ಲಿ ಇಂಥ ಸಾಲಗಳನ್ನು ಸಾಲ ಕೊಟ್ಟ ಕಾರ್ಯಕಾರಿ ಮಂಡಳದವರಿಂದ ವಸೂಲ ಪಡೆಯುವ ಕ್ರಮವನ್ನಿಡಬೇಕು [illegible] ಇಲ್ಲದಿದ್ದರೆ ಅಸಲನ್ನಾದರೂ ಕಾರ್ಯಕಾರಿ ಮಂಡಳದವರಿಂದ ತುಂಬಿಕೊಳ್ಳುವ ನಿಯಮವಿಲ್ಲದಿದ್ದರೆ ಕಾರ್ಯಕಾರಿ ಮಂಡಳಕ್ಕೆ ಹೊಣೆಯ ಗ್ರಹಿಕೆ ಹುಟ್ಟುವದಿಲ್ಲ. ಸರಕಾರ ಈ ವಿಷಯವನ್ನು ವಿಚಾರಿಸಿದ್ದು ಕಂಡುಬರುವದಿಲ್ಲ. ಸರಕಾರ ಅಧಿಕಾರಿಗಳ ಅನಾಸಕ್ತಿಯ ಜೊತೆಗೆ ಕಾರ್ಯಕಾರಿ ಮಂಡಳದ ಹೊಣೆಯ ಅಭಾವವೂ ಸಂಘಗಳ ಅವನತಿಗೆ ಒಂದು ಕಾರಣವುಂಟು [illegible] ಸಂಘಗಳು ಲೋಕಶಿಕ್ಷಣಕ್ಕೆ [illegible] ಹೇರಳ ಸಂಘಗಳು ಇಂದಿಗೆ ಆತ್ಮನಾಶ ಮಾಡಿಕೊಂಡಿವೆ ಪರಿಷತ್ತಿನಲ್ಲಿ ಈ ಕುರಿತು ಮುಂಜಾಗ್ರತೆಯಿಂದ [illegible] ತಿಳಿಸಬೇಕೆಂಬ ಠರಾವನ್ನು ಹಿತಕರ [illegible] ಕಾರ್ಯಕಾರಿ ಮಂಡಳಕ್ಕೆ ಹೊಣೆಗಾರಿಕೆ ಹುಟ್ಟಿಸುವಂಥ [illegible] ಸಂಘಗಳ ಅಭ್ಯುದಯವಾಗದು

ಶ್ರೀ॥ ಲಿಮ್ಯೇಯವರು ಹೇಳಿದ ಒಂದು ಮಾತು ಸತ್ಯವಾದದ್ದು ಸಹಕಾರದ ಉದ್ಧಾರವಾಗಬೇಕಾದರೆ ಗ್ರಾಮೋದ್ಧಾರವಾಗಬೇಕು ಅಂದರೆ ಗ್ರಾಮವಾಸಿಗಳ ಸಂಪದಭ್ಯುದಯವಾಗಬೇಕು ಈ ಕುರಿತು ಲಿಮ್ಯೇಯವರು ಹಿಟ್ಲರನ ಉದಾಹರಣೆಯನ್ನು ಉಲ್ಲೇಖಿಸಿದರು ಜರ್ಮನಿಯಲ್ಲಿ ಕೈಯಿಂದ ಸಿಗರೇಟುಗಳನ್ನು ತಯಾರಿಸಿ ಸಾವಿರಾರು ಜನರು ಹೊಟ್ಟೆ ತುಂಬಿಕೊಳ್ಳುತ್ತಾರೆ ಶೋಧಕರೊಬ್ಬರು ಸಿಗರೇಟುಗಳನ್ನು ತಯಾರಿಸುವ ಯಂತ್ರವನ್ನು ಶೋಧಿಸಿದರು. ಅದನ್ನು ಹಿಟ್ಲರನು ಪ್ರಚಾರಕ್ಕೆ ತರಗೊಡಲಿಲ್ಲ ಅದು ಪ್ರಚಾರದಲ್ಲಿ ಬಂದರೆ ಸಾವಿರಾರು ಜನರ ಜೀವನೋಪಾಯ ಹೋಗುವದಾಗಿ ಆ ಯಂತ್ರಪ್ರಚಾರವನ್ನು ನಿರ್ಬಂಧಿಸಿ ಜನಹಿತ ಮಾಡಿದನು ಮೋಟರಿನ ಮೇಲೆ ಪ್ರಯಾಣ ಮಾಡುವವರು ಮಾತಲೆ, ನಡೆಯುತ್ತಿರುವ ಲೋಕಕ್ಕೆ ನಿರ್ಬಂಧ ಬೇಡ, ಆದರೆ ಸರಕು ಒಯ್ಯುವ ಮೋಟರುಗಳನ್ನು ನಿರ್ಬಂಧಿಸಿದರೆ ಗಾಡಿಕಾರರಿಗೆ ಜೀವನಕ್ಕೆ ಆಸ್ಪದವಾಗುವದೆಂದು ಹೇಳಿದಾಗ್ಯೂ ಸರಕಾರವು ಅದನ್ನೊಪ್ಪುವದಿಲ್ಲ ಹಿಂದುಸ್ಥಾನದಲ್ಲಿ ಆ ಸ್ವಾತಂತ್ರ್ಯವಿರಬೇಕೆಂದು ಪ್ರತಿಪಾದಿಸಿ ಸಾವಿರಾರು ಗಾಡಿಕಾರರಿಗೆ ಹೊಟ್ಟೆಗೆ ಪೆಟ್ಟು ಮಾಡಿದೆ ಬೇಸಾಯಗಾರರು ಬೇಸಾಯದ ಕೆಲಸವಿಲ್ಲದ ಸಮಯದಲ್ಲಿ ಗಾಡಿ ನಡಿಸಿ ಹೊಟ್ಟೆ ಹೊರೆಕೊಳ್ಳುತ್ತಿದ್ದರು ಬೆಳಗಾವಿಯಲ್ಲಿ ಹಿಂದೊಮ್ಮೆ ಜನಸ್ಥಿತಿ ಸುಧಾರಿಸುವ ದೆಸೆಯಿಂದ ಒಂದು ಮಂಡಳ ನೇಮಿಸಲ್ಪಟ್ಟಿತಂತೆ ಆ ಮಂಡಳದಲ್ಲಿ ಶ್ರೀ॥ ಲಿಮ್ಯೇಯವರು ಸಭಾಸದರಿದ್ದರು. ಸಭಾಸದರ ಮನವೊಲಿಸಿ ಒಂದು ಕೈಗಾರಿಕೆಯನ್ನು ದೂಢಗೊಳಿಸುವ ಬಗ್ಗೆ ಶ್ರೀ॥ ಲಿಮ್ಯೇಯವರು ಶಿಫಾರಸು ಮಾಡಿದರು ಆದರೆ ಅಧ್ಯಕ್ಷರಾದ ಕಲೆಕ್ಟರರು ಈ ಸೂಚನೆಯ ವಿಚಾರವನ್ನು ಮಹಾಮಂಡಳದ ಮುಂದೆ ಸೂಚಿಸಲಿಲ್ಲ, ಈ ತನಕ ಆ ಸೂಚನೆ ಧೂಳು ತಿನ್ನುತ್ತಿದೆ ಸರಕಾರದ ಪ್ರವೃತ್ತಿ, ಅಧಿಕಾರಿಗಳ ಪ್ರವೃತ್ತಿ ಈ ಪರಿ ಇರುವಾಗ ಜನಸ್ಥಿತಿಯ ಸುಧಾರಣೆಯ ಅಭಾವದಲ್ಲಿ ಸಹಕಾರಿ ಸಂಘಗಳ ಸಾಲ ತೀರುವ ಬಗೆ ಎಂತು ?

ಗ್ರಾಮೋದ್ಧಾರವಾದಿಗಳಿಗೆ ಶ್ರೀ॥ ಲಿಮ್ಯೇಯವರು ಹೇಳಿದ ಬುದ್ಧಿ ಮಾತನ್ನು ಅವರೆಲ್ಲರೂ ಗಮನಿಸುವಂತಹದು ಚಣ್ಣ, ಕೋಟಗಟ್ಟಿ, ಕೊರಳಪಟ್ಟಿ, ಬೂಟು-ಹ್ಯಾಟುಗಳನ್ನು ಧರಿಸಿಕೊಂಡು ಪ್ರತಿ-ಸಾಹೇಬರಾಗಿ ಗ್ರಾಮ-ಗ್ರಾಮಾಂತರಗಳಲ್ಲಿ ಗ್ರಾಮೋದ್ಧಾರದ ಅಧಿಕಾರಿಗಳು ಸಂಚರಿಸುವದು ತಪ್ಪು ಅದರಿಂದ ಜನಸಾಮಾನ್ಯರೊಡನೆ ಬಳಕೆಯಾಗುವದಿಲ್ಲ ಈ ಜನರಿಗೆ ಆದರಾತಿಥ್ಯ ಮಾಡುವ ಕ್ರಮ ಜನರಿಗೆ ತಿಳಿಯುವದಿಲ್ಲ ಇವರು ಜನಸಾಮಾನ್ಯರಂತೆ ತಮ್ಮ ಜೀವನಕ್ರಮವನ್ನಿಡಬೇಕು ಪರಕೀಯರೆಂಬ ಭಾವನೆ ಜನರಲ್ಲಿ ಹುಟ್ಟಬಾರದು ತಮ್ಮೊಳಗಿನವರೊಬ್ಬರು, ಎಂಬ ಭಾವನೆ ಜನರಲ್ಲಿ ಹುಟ್ಟಬೇಕು. ಅಂದರೆ ಮಾತ್ರ ಅವರ ಸುಖ-ದುಃಖಗಳು ಇವರಿಗೆ ತಿಳಿಯುವಂತಿವೆ ಗ್ರಾಮೋದ್ಧಾರ ಇಲಾಖೆಯ ಅಧಿಕಾರಿಗಳು ಇತ್ತ ಕಡೆ ಗಮನ ಕೊಟ್ಟು ತಮ್ಮ ನಡವಳಿಯನ್ನು ಸುಧಾರಿಸಿಕೊಳ್ಳುವರೆಂದು ಆಶೆಯಿದೆ

ಜಂಗಲ ಅಧಿಕಾರಿಗಳ ಕಾರಸ್ಥಾನಗಳ ಕುರಿತು ಶ್ರೀ॥ ಲಿಮ್ಯೇಯವರು ಹೇಳಿದ ಮಾತನ್ನು ಕೇಳಿ ಅನೇಕರು ಸೋಜಿಗಗೊಂಡರು ಕಂದಾಯ ಮಂತ್ರಿಗಳಾದ ನಾ॥ ದೇಸಾಯಿಯವರು [illegible] ಕೊಡಮಾಡಿದ ಸವಲತ್ತುಗಳಿಗೆ ಗವರ್ನರರು ಸಹ ಅಂತಿಮ [illegible] ಮುದ್ರೆ ಕೊಟ್ಟರೂ ಕಾರ್ಯದರ್ಶಿಗಳು ಒಂದಿಲ್ಲೊಂದು ನೆವ ಹೇಳಿ ಪ್ರಧಾನ ಮಂಡಳದ ಅಪೇಕ್ಷೆಯ ಮೇರೆಗೆ ಸರಕಾರಿ ಪ್ರಕಟನೆಯನ್ನು ೩-೪ ತಿಂಗಳ ತನಕ ತಡೆಹಿಡಿದರಲ್ಲದೆ ಪ್ರಧಾನ ಮಂಡಳಕ್ಕೆ [illegible] ಜಂಗಲ ಇಲಾಖೆಯವರಿಗೆ ಸರಕಾರಿ ಪ್ರಕಟನೆಯ ಅಭಿಪ್ರಾಯ [illegible] ಕೇಳಿದರು ಮತ್ತು ಪ್ರಧಾನ ಮಂಡಳದವರು ಸೂಚಿಸಿದ ತಿದ್ದುಪಾಟುಗಳಿಗೆ [illegible] ಗವರ್ನರರ ಅಂತಿಮ ಒಪ್ಪಿಗೆ [illegible] ಜಂಗಲ ಇಲಾಖೆಯ ಅಧಿಕಾರಿಗಳು ಆಕ್ಷೇಪ ಮಾಡಲು [illegible] ಸರಕಾರಿ ಪ್ರಕಟನೆ ಹೊರಬಿತ್ತು. ಇದರ ಮೇಲಿಂದ ಜಂಗಲ ಇಲಾಖೆಯ ಧೋರಣ ಬಯಲಾಗುತ್ತದೆ

ಈ ಪುರವಣಿಯನ್ನು [illegible] ಇವರು ತಮ್ಮ [illegible] ಪ್ರೆಸ್ಸಿನಲ್ಲಿ ಮುದ್ರಿಸಿ, ಪ್ರಕಟಿಸಿದರು.

Reg. No. B 1270.

Monday, 24th November, 1941.

ವರ್ಷ ೨೪

ಕಾನಡಾವೃತ್ತ

ಸಂಚಿಕೆ ೨೦

THE KANARA NEWS.

नृपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಕುಮಟೆಯಲ್ಲಿ ಆಗಾವು
ರೂಪಾಯಿ 2-4-0.
ಮನಿಯಾರ್ಡರಿನಿಂದ
ರೂ. 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಪ್ಯಾಕಾ ಟೈಪಿನ (೧೫ ಎಮ್ ಉದ್ದ) ೮ ಸಾಲುಗಳವರೆಗೆ ರೂ.1-8-0
ಆ ನಂತರ ಪ್ರತಿಸಾಲಿಗೆ 0-3-0
ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

-*(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೨೪ ಮಾಹೆ ನವಂಬರ ಸನ್ ೧೯೪೧ನೇ ಇಸವಿ)*-


ಶ್ರೀಧೂತಪಾಪೇಶ್ವರ
ದ್ರಾಕ್ಷಾಸವ
ಚಳಿಗಾಲಕ್ಕಾಗಿ ಶಕ್ತಿವರ್ಧಕವೂ ಪಾಚಕವೂ
ಅಜೀರ್ಣ, ದಮ್ಮು, ಕೆಮ್ಮು, ಮಲಬದ್ಧತೆಗಳಿಗೆ ಉತ್ತಮ ಗುಣಕಾರಿಯಾದದ್ದು.
— ಟಾನಿಕ್ —

ಶ್ರೀ ಧೂತಪಾಪೇಶ್ವರ ಪನವೇಲ, ಲಿ.,

ಕರ್ನಾಟಕ ಕೇಂದ್ರ:- ಯುನೈಟೆಡ್ ಏಜನ್ಸೀಜ, ಹುಬ್ಬಳ್ಳಿ.

ಕಾರವಾರ:— ಮೆಸರ್ಸ ಮುಜುಮದಾರ-ಕೆಕಬೇಕರ ಬ್ರದರ್ಸ.
ಅಂಕೋಲಾ:— ದಿ ಸ್ಟೇಶನರಿ ಡಿಪೋ.
ಕುಮಟಾ:— ದೇವಪ್ಪಾ ಅಯ್ಯು ನಾಯ್ಕ.
ಹೊನ್ನಾವರ— ಮೆಸರ್ಸ ಕಲ್ಯಾಣಪುರ ಬ್ರದರ್ಸ.
ಶಿರ್ಶಿ:— { ಶಿರ್ಶಿ ಡ್ರಗ್ ಸ್ಟೋರ್ಸ
ಎಸ್. ಎಲ್. ಭಾಕಪ್ಪಾ ಎಂಡ್ ಸನ್ಸ
ಸಿದ್ದಾಪುರ:— ಮೆಸರ್ಸ ಶಾಮಯ್ಯನ ಬ್ರದರ್ಸ
ಹಳಿಯಾಳ:— ಎನ್. ಪಿ. ಹಳ್ಳಿಕೇರಿ

“ಸ್ಟಾರ ಆಫ್ ಕೆನರಾ ಪ್ರೆಸ್”,
ಕುಮಟಾ.

—*—

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಯಿಂದ ಬೇಕಾದ ನಮೂನೆಯ ಕಲರ ಪ್ರಿಂಟಿಂಗ ವಗೈರೆ ಸಣ್ಣ-ದೊಡ್ಡ ಛಾಪಾ ಕೆಲಸಗಳೂ, ಪುಸ್ತಕ-ಮುದ್ರಣವೂ, ರೂಲಿಂಗ-ಬ್ಯಾಂಡಿಂಗ ಕೆಲಸವೂ ಉತ್ತಮವಾಗಿ ಸುಲಭ ದರದಲ್ಲಿ ತಕ್ಕ ಕಾಲಕ್ಕೆ ತಯಾರಿಸಿ ಕೊಡಲಾಗುವದು.

ಇದಲ್ಲದೆ ಕೋರ್ಟ-ಕಚೇರಿ ಉಪಯೋಗದ ವಕಾಲತ ವಗೈರೆ ಫಾರ್ಮುಗಳೂ, ಕಸ್ಟಮ್ ಕಚೇರಿಯ ಶಿಪ್ಪಿಂಗ ಬೀಲು-ಸತ್ತಿ ವಗೈರೆ ಫಾರ್ಮುಗಳೂ, ಗೇಣಿರಶೀದಿ ಬುಕ್ಕು, ಗೇಣಚೀಟಿ-ಎದುರ್ಚೀಟಿ ಫಾರ್ಮುಗಳೂ ವಗೈರೆ ಮಾರಾಟಕ್ಕೆ ತಯಾರ ಸಿಗುತ್ತವೆ. ನಿಮ್ಮ ಛಾಪಾ ಕೆಲಸಗಳನ್ನು ನಮ್ಮಲ್ಲಿಗೇ ಕಳಿಸಿ ಒಮ್ಮೆ ಅನುಭವ ತಕ್ಕೊಂಡು ನೋಡಿರಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ಹೆಡ್ ಆಫೀಸು:— ಕುಂದಾಪುರ.

ಬ್ರೆಂಚ ಆಫೀಸುಗಳು:— ಅಂಕೋಲಾ, ಕುಂದಾಪುರ, ಬೈಂದೂರು, ಕೋಟೇಶ್ವರ, ಕುಮಟಾ, ಗೋಕರ್ಣ, ಕಾರವಾರ, ಹಾವೇರಿ, ಶಿವಮೊಗ್ಗಾ, ತರೀಕೆರೆ, ನಗರ, ಸೋಮವಾರಪೇಟೆ ಮತ್ತು ವೀರರಾಜಪೇಟೆ

ಕಾಯಂ ಠೇವುಗಳು, ಸೇವಿಂಗ್ಸ ಬೇಂಕ್ ಠೇವುಗಳು ಮತ್ತು ಚಾಲು ಠೇವುಗಳು ಸಹ ಅಂಗೀಕರಿಸಲ್ಪಡುವವು.

ಭಂಗಾರದ ದಾಗಿನೆಗಳ ವ ಇತರ ವ್ಯಾಪಾರದ ಮ್ಹಾಲುಗಳ ಅಡವಿನ ಮೇಲೆ ಸವಲತ್ತಿನ ದರದ ಬಡ್ಡಿಯಲ್ಲಿ ಸಾಲ ಕೊಡಲ್ಪಡುವದು ವ್ಯಾಪಾರದ ಕೇಂದ್ರಗಳಿಗೆ ಡ್ರಾಫ್ಟುಗಳು, ಚೆಕ್ಕುಗಳು ಸಹ ಕೊಡಲ್ಪಡುವವು. ಎಲ್ಲ ತರದ ಬೇಂಕಿನ ವ್ಯವಹಾರಗಳು ಸವಲತ್ತಿನ ದರದಿಂದ ನಡಿಸಲ್ಪಡುವವು.

ಕುಂದಾಪುರ, }
1-8-1941 }

The Agricultural & Industrial Bank, Ltd.

ಸ್ಥಳಿಕ ವಿಷಯಗಳು.

*

ಲೇಖಕ.- ಸ್ಥಳವಂತಿಕ

ಚೌಕಶಿ ಮಾಡಿದ್ದಲ್ಲಿ ಬೆಳಗಾವಿಯಲ್ಲಿ ಕಮಿಶನರ ಅಧ್ಯಕ್ಷತೆಯೊಳಗೆ ಸೇರಿದ ಗುಪ್ತ ಆಲೋಚನಾ ಕೂಟದಲ್ಲಿ ಸುಪೆಯ ಸಮ್ಮೇಲನದ ಪರಿಣಾಮವಾಗಿ ರೈತರಿಗೆ ಸಿಕ್ಕಿದ ಅನುಕೂಲತೆಗಳನ್ನು ರದ್ದು ಮಾಡಬೇಕೆಂದು ನಿರ್ಣಯವಾದ ಸಂಗತಿ ವಾಸ್ತವವಲ್ಲವಾಗಿ ತಿಳಿಯುತ್ತದೆ ಜಂಗಲ ಅಧಿಕಾರಿಗಳು ಅವನ್ನು ರದ್ದುಪಡಿಸಬೇಕಾಗಿ ಸೂಚಿಸಿದ್ದು ನಿಜ ಈ ಅನುಕೂಲತೆಗಳಿಂದ ಜನರು ವನ-ಸಂಪತ್ತನ್ನು ಸೂರೆ ಮಾಡಿದ್ದಾರೆಂದು ಆರೋಪಿಸಿದ್ದು ನಿಜ ಆದರೆ ಬೇಸಾಯ ಇಲಾಖೆಯವರು ಜಂಗಲ ಇಲಾಖೆಯವರ ಎಲ್ಲ ಆರೋಪಗಳನ್ನು ಖಂಡಿಸಿದಾಗಿಯೂ ಬೇಸಾಯ ಸುಧಾರಣೆಯಿಂದ ಸರಕಾರಕ್ಕೆ ಜನಗಳಿಗೂ ಹಿತವಾಗುತ್ತದಾಗಿ ಸರಕಾರಿ [illegible] ಗಿನ ಅಂಕಿಗಳಿಂದ ಸಿದ್ಧಪಡಿಸಿದವಾಗಿಯು [illegible] ತ್ತದೆ ಜಂಗಲ ಅಧಿಕಾರಿಗಳು working plan" ಅಂದರೆ ಜಂಗಲ ಕಡಿಯುವ ಪದ್ಧತಿಯ ಪ್ರಕಾರ ಜಂಗಲುಗಳ ಉತ್ಪತ್ತಿಯನ್ನು ಪಡೆಯುವ ಪ್ರದೇಶ ಬಿಟ್ಟರೆ ಉಳಿದ ಲಕ್ಷಾವಧಿ ಎಕರೆ ಬಿಟ್ಟ ಪ್ರದೇಶ ನಿರರ್ಥಕವಾಗುತ್ತದಾಗಿಯೂ ಜಂಗಲ ಇಲಾಖೆಯು ವರದಿಗಳ ಮೇಲಿಂದ ಸಿದ್ಧ [illegible] ಗುತ್ತದ ಮೇಲಾಗಿ ಸರಾಸರಿ ಉತ್ಪನ್ನ ವಿಚಾರ ಮಾಡಿದರೂ ಜಂಗಲ ಉತ್ಪನ್ನಕ್ಕಿಂತ ಬೇಸಾಯದ ಉತ್ಪನ್ನವೇ ಹೆಚ್ಚು ಹೀಗೆ ಬೇಸಾಯವು ಲಾಭದಾಯಕವಿರುವದೆಂದು ಬೇಸಾಯ ಇಲಾಖೆಯವರು ಬೆಳಗಾವಿಯ ಆಲೋಚನಾ ಸಭೆಯಲ್ಲಿ ಸಿದ್ಧಪಡಿಸಿದರಂತೆ ಆದರಿಂದ ಇವೆರಡೂ ಇಲಾಖೆಯ ಅಧಿಕಾರಿಗಳು ಪರಸ್ಪರ ವಿರೋಧವಾಗಿ ತಮ್ಮ ಕಾರ್ಭಾರವನ್ನು ನಡಿಸದೆ, ಸಹಕಾರದಿಂದಲೂ ರಾಜಧರ್ಮದಿಂದಲೂ ನಡೆದು ಬೇಸಾಯದ ಉದ್ಧಾರವಾಗುವಂತೆ ಉಪಾಯಯೋಜನೆ ಮಾಡಬೇಕೆಂದು ಆಲೋಚನಾ ಸಭೆಯು ನಿರ್ಣಯವಾಯಿತಾಗಿ ತಿಳಿಯುತ್ತದೆ ಈ ನಿರ್ಣಯದ ಮೇರೆಗೆ ಸದ್ಯಕ್ಕೆ ಶಿರ್ಶಿಯಲ್ಲಿ ಉಭಯ ಇಲಾಖೆಗಳ ಅಧಿಕಾರಿಗಳ ಸಭೆ ಸೇರಲಿಕ್ಕಿತ್ತು

ಜಂಗಲ ಇಲಾಖೆ ಬೇಸಾಯ ಇಲಾಖೆಗೆ ವಿರೋಧವಾಗಿ ವ್ಯವಹರಿಸುವದು ವಿಷಮದೃಶ್ಯ ಸುಧಾರಿಸಿದ ಜನಾಂಗಗಳಲ್ಲಿ ಜಂಗಲ ಇಲಾಖೆಯು ಬೇಸಾಯ ಇಲಾಖೆಗೆ ಅಂಗತವಾಗಿ ನಡೆಯುತ್ತಿದೆ ಅಮೇರಿಕೆಯಲ್ಲಿ ಜಂಗಲ ಇಲಾಖೆಯು ಬೇಸಾಯ ಇಲಾಖೆಯ ಒಂದು ಭಾಗ ಬೇಸಾಯ ಇಲಾಖೆಯು ಮುಖ್ಯ, ಜಂಗಲ ಇಲಾಖೆಯು ಗೌಣ ಜಂಗಲುಗಳ ರಕ್ಷಣೆ ಜಂಗಲುಗಳ ಉತ್ಪತ್ತಿ, ಜಂಗಲುಗಳ ಬೆಳವಣಿಗೆ ಇವೇ ಮೊದಲಾದವು ಬೇಸಾಯದ ಬೆಳವಣಿಗೆಗೆ ಅಧೀನವಾಗಿ ವ್ಯವಹರಿಸಬೇಕೆಂಬದೇ ಈ ಏರ್ಪಾಟಿನ ಉದ್ದೇಶ ಕೃಷಿಕರ್ಮದ ಉದ್ಧಾರವೇ ಪ್ರಧಾನವಾದದ್ದು ಮಾನವ ಜೀವನಕ್ಕೆ ಅದೇ ಅತ್ಯವಶ್ಯ ಆದರಿಂದ ಜಂಗಲ ಇಲಾಖೆಯನ್ನು ಪೃಥಕ್ಕಾಗಿ ವಿಂಗಡಿಸದ ಬೇಸಾಯ ಇಲಾಖೆಯ ಅಂಗವಾಗಿ ಏರ್ಪಡಿಸಲ್ಪಟ್ಟಿದ ನಮ್ಮ ಹಿಂದುಸ್ಥಾನದಲ್ಲಿ ಇಂಥ ಘೋರ [illegible] ವಿಲ್ಲ ಬೇಸಾಯಕ್ಕೂ ಜಂಗಲಕ್ಕೂ ವೈಷಮ್ಯವುಂಟು ಇವು ಪರಸ್ಪರವಿರೋಧಿಗಳು ಬೇಸಾಯ ಸುಧಾರಣೆಯ ಮಂತ್ರಿಯು [illegible] ಈ [illegible] ದೂರವಾಗಿದ್ದರಿಂದ ನಮ್ಮ [illegible] ಬಿಟ್ಟು ಬೆಳಕೊಂಡ ಹಾಗೆ ಕೃಷಿಕರ್ಮವು ಕ್ರಮವಾಗಿ ನಾಶ ಹೊಂದಿ ದರ್ಸೆಯಾಗಿದೆ ಬೇಸಾಯ ಇಲಾಖೆಗೆ ಜಂಗಲ ಇಲಾಖೆಯನ್ನು ನಿರೋಧಿಸುವ ಶಕ್ತಿ ಈವಾಗ [illegible] ಇತರ ಅಧಿಕಾರಿಗಳೂ [illegible] ಕಲವನ್ನು [illegible] ಪರಿಸ್ಥಿತಿಯನ್ನು [illegible] ಬೆಳೆಯುವಂತೆ [illegible] ಮಾಡಿ [illegible] ಆಶಿಸುವಾಗಿದೆ

* *

ಬೇಸಾಯ ಇಲಾಖೆಯ [illegible] ಸಂಪಾದನೆ ಮಾಡುವ [illegible] ಹುಟ್ಟಿದ ಮೇಲೆ [illegible] ಹುಟ್ಟಿದ ಕೇಂದ್ರ [illegible] ಕೇಂದ್ರದವರು ಜನರಿಗೆ [illegible] ಹುಟ್ಟಿನ ಪೆಟ್ಟಿಗೆಗಳನ್ನು ಪೂರೈಸಿ ಅವುಗಳನ್ನು ಜೇನುತುಪ್ಪದ [illegible] ಮಾಡಿಕೊಳ್ಳ [illegible] ಜೇನುತುಪ್ಪದ [illegible] ಹುಟ್ಟಿದ [illegible] ಕೇಂದ್ರದವರ [illegible] ಜೇನು ತುಪ್ಪಕ್ಕೆ [illegible] ಪ್ರಸಂಗವಿಲ್ಲ [illegible] ಮಾದರಿಯ ಜೇನ ಪೆಟ್ಟಿಗೆಗಳನ್ನು ಜನರು ನೋಡಿ [illegible] ಪೆಟ್ಟಿಗೆಯಲ್ಲಿ [illegible] ಹೋಗದ ಹಾಗೆ [illegible] ಜಾಗ್ರತೆ ಕೊಳ್ಳುವದು [illegible] ಜೇನು ಹುಟ್ಟಿಗೆ ಕೈ ಹಚ್ಚಲಿಕ್ಕಿಲ್ಲ ರಂಧ್ರಗಳಲ್ಲಿ ಮುಚ್ಚಿಕೊಂಡ ಬಳಿಕ ಆ ಹುಟ್ಟನ್ನು ಕೇಂದ್ರಕ್ಕೆ ಒಯ್ದು ತುಪ್ಪ ತೆಗೆದು ಪುನಃ ಹುಟ್ಟನ್ನು ಹಿಂತರಬೇಕು ಕೇಂದ್ರದಲ್ಲಿ ತುಪ್ಪ ತೆಗೆಯುವ ಕ್ರಮ ಬಹು ಸಭ್ಯವಾದದ್ದು ರಂಧ್ರಗಳಲ್ಲಿ ಉಳಿಯುವ ಜೇನು ಹುಳುಗಳಿಗೆ ಯಾವದೇ ಪ್ರಕಾರದ ಬಾಧೆ ಕೊಡದೆ ತುಪ್ಪವಷ್ಟೇ ಹೀರಿಹೋಗುತ್ತದ ಈ ಉದ್ದಿಮೆಯನ್ನು ನಮ್ಮ ಜಿಲ್ಹೆಯಲ್ಲಿ ದೊಡ್ಡ ಪ್ರಮಾಣದಿಂದ ನಡಿಸಬೇಕೆಂದು ಬೇಸಾಯ ಇಲಾಖೆಯವರ ಯೋಜನೆಯಿದೆ ಪುಣೆಯ ಬಳಿ ಖಡಕಿಯಲ್ಲಿ ಜೇನು-ತುಪ್ಪದ ಸಂಶೋಧನ ಶಾಲೆಯೊಂದಿತ್ತು ಆ ವಿಭಾಗದಲ್ಲಿ ಹೂ ಬೆಳೆಯುವ ಪ್ರದೇಶದ ಅಭಾವವಾದ್ದರಿಂದ ಆ ಪ್ರಯೋಗ ಶಾಲೆಯಿಂದ ಅಷ್ಟೊಂದು ಪ್ರಯೋಜನವಾಗಲಿಲ್ಲ ಆದರಿಂದ ಬೇಸಾಯ ಇಲಾಖೆಯವರು ಆ ಪ್ರಯೋಗಶಾಲೆಯ ಸಾಹಿತ್ಯಗಳನ್ನೆಲ್ಲ ನಮ್ಮ ಶಿರಸಿಗೆ ತರಿಸಿದ್ದಾರೆ ಇದೊಂದು ಆನಂದದ ಸಂಗತಿ ಬೇಸಾಯಗಾರರು ಜೇನು ತುಪ್ಪದ ಉದ್ದಿಮೆಯನ್ನು ಕೈಕೊಂಡರೆ ಒಳ್ಳೇ ಪ್ರಯೋಜನ ದೊರೆಯುವಂತಿದೆ ಮೇಲಾಗಿ ಈ ಉದ್ದಿಮೆಗೆ ಮೂಲ ಬಂಡವಲು ಬೇಡ ಅವಶ್ಯವುಳ್ಳ ಯಾವತ್ತೂ ಮಾಹಿತಿಯನ್ನು ಕೇಂದ್ರದವರು ಪೂರೈಸುತ್ತಾರೆ

* *

ಇದೇ ಜಿಲ್ಹೆಯಲ್ಲಿ ಜನರದೊಂದು ದೂರುಂಟು ಸಣ್ಣ ಭೂಮಿ ಧಾರಣ ಮಾಡುವ ಜನಗಳ ಕಷ್ಟ ನಿವಾರಣೆಯ [illegible] ಸರಕಾರವು ಗೇಣಿಬಾಕಿ ದಾವೆಗಳ ಕ್ರಮಗಳನ್ನು ತಡೆದು ನಿಲ್ಲಿಸಿದೆ ೬-೭ ವರ್ಷದ ಹಿಂದಿನ ಗೇಣಿಬಾಕಿ ದಾವೆಗಳಲ್ಲಿ ಆದ ಫೈಸಲೆಗಳು ಸಹ ಜಾಮೀನುದಾರರ ಕಚೇರಿಗಳಲ್ಲಿ ಮುಂದರಿಯದೆ ನಿಂತುಕೊಂಡಿವೆ ಒಕ್ಕಲುಗಳಿಗೆ ಕಾಪಾಡಿಕೊಳ್ಳ [illegible] ಆದರೆ ಒಡೇ ಸಮಯದಲ್ಲಿ [illegible] ಕಾಪಾಡಿಕೊಳ್ಳುವದು ರಾಜಧರ್ಮ [illegible] ಎಂದರೆ ಸಿರಿವಂತರಲ್ಲಿ ಕೆಲವರನ್ನು [illegible] ಇವರು ವರ್ಷಂಪ್ರತಿ ತೀರ್ವೆ ಕೊಡಬೇಕು ತಪ್ಪದೇ ಕೊಡಬೇಕು ಸಿದ್ದಾಪುರ ತಾಲೂಕಿನಲ್ಲಿಂತು ಮೇಲೆ ಚೌಥಾಯಿ ತೆರಬೇಕು ಹುಟ್ಟಿದ ಉತ್ಪತ್ತಿಯಲ್ಲಿ ಒಕ್ಕಲುಗಳ ಸ್ವಾಧೀನ ಸರಕಾರವು ತೀರ್ವೆಯನ್ನು ಸಹ ಒಕ್ಕಲುಗಳ ಕಡೆಯಿಂದ ವಸೂಲ ಪಡೆಯುವ [illegible] ಇದು ಅನ್ಯಾಯವಾದದ್ದು ಗೇಣಿ ಬಾಕಿ ಇಟ್ಟುಕೊಳ್ಳದಿದ್ದವರಿಗೆ ಅದನ್ನ ಇಟ್ಟುಕೊಳ್ಳಲು ಈ ಕ್ರಮದಿಂದ ಪ್ರೋತ್ಸಾಹ ಸಿಗುತ್ತದೆ ಆದರಿಂದ ಪ್ರತಿ ವರ್ಷ ತೀರ್ವೆಯ ಮಟ್ಟಿಗಾದರೂ ಸರಕಾರವು ವಸೂಲಿಯ ಕ್ರಮವನ್ನು ಮುಂದರಿಸಬೇಕು ಅಮಲಜಾರಿ ಕ್ರಮಗಳಲ್ಲಿ ಎರಡು ವರ್ಷಗಳ ಬಡ್ಡಿಯನ್ನು ವಸೂಲ ಕೊಟ್ಟರೆ ಮಾತ್ರ ಅಮಲಜಾರಿ ಕ್ರಮಕ್ಕೆ ತಡೆಬೀಳುತ್ತದೆ ಅದೇ ಮೇರೆಗೆ ಗೇಣಿಬಾಕಿ ವಸೂಲದ ತೀರ್ವೆಯನ್ನಾದರೂ ವಸೂಲ ಪಡೆಯಲು ಸರಕಾರವು ಅಪ್ಪಣೆಯನ್ನು ಹೊರಡಿಸಬೇಕು ತೀರ್ವೆಯ ರಕಮನ್ನು ವಸೂಲ ಕೊಡದವರ ಮೇಲೆ ವಸೂಲಿಯ ಕ್ರಮವನ್ನು ಮುಂದರಿಸಬೇಕು ಅಂ[illegible] ಸರಕಾರವು ಕರ್ತವ್ಯ ಮಾಡಿದಂತಾಗುವದು ಸಿದ್ದಾಪುರದಲ್ಲಾಗಲಿ ಇತರ ಕಡೆಗಳಲ್ಲಾಗಲಿ ಗೇಣಿಯು ಸರ್ವತ್ರ ವಸೂಲ ಬಾರದಿರಲಿಕ್ಕೆ ಒಕ್ಕಲುಗಳಿಗೆ ಸರಕಾರವು ಪೂರೈಸಿದ ಅನಾವಶ್ಯಕ ಅನುಕೂಲತೆಯು ಕಾರಣವಿದೆ

* *

ಸಹಕಾರಿ ಸಂಘಗಳ ವಸೂಲಿಯ ಕ್ರಮದಿಂದ ಉಂಟಾಗುವ ಶೋಕಪಾಲಿಗೆಯ ವಿಚಾರವಾಗುವದು ಅವಶ್ಯ ಸಹಕಾರಿ ಸಂಘಗಳಲ್ಲಿ ಸಾಲ ಕೊಂಡವರ ಆಸ್ತಿಯ ಮೇಲೆ ಸಂಘಗಳಿಗೆ ಅಗ್ರತೆಯ ಹಕ್ಕು ದೊರೆಯುತ್ತದೆ ಸಾಲಗಾರರು ಸಾವಕಾರರ ಕಡೆಗೆ ಮುಂಚೆ ಅಥವಾ ನಂತರ ಸಾಲ ಕೊಂಡಿದ್ದರಲಿ, ಅಥವಾ ಆ ಸಾಲದ ಬಾಬತು ದಿವಾಣಿ ಕೋರ್ಟುಗಳಲ್ಲಿ ಜಪ್ತಿಯ ಕ್ರಮ ಹೊಂದಿದ್ದರಲಿ, ಅವರ್ಯಾರಿಗೂ ಅಗ್ರತೆಯ ಹಕ್ಕು ದೊರೆಯುವದಿಲ್ಲ ಕ್ರಮದಂತೆ ಸಂಘ [illegible] ಎಲ್ಲಿ ದನಕರೋ ಜನರಲ್ಲಿ [illegible] ಹಾಕಬೇಕು ಹಿಂದುಸ್ಥಾನ ಸರಕಾರವು ಏರ್ಪಡಿಸಿದ ಸಹಕಾರಿ ಸಂಘದ [illegible] ನಮೂದಿಸಿದ ನಿಬಂಧನೆಗಳು ಸಹ [illegible]

ಲ್ಪಡುತ್ತಿವೆ ರಾಜ್ಯಧರ್ಮಕ್ಕೆ ಸಮಾನವಾದ ಸಾಲ ಭೂಮಿಯ ಗೇಣಿ ಇವುಗಳ ಹೊರತೆ ಸಂಘದ ಸಾಲಕ್ಕಿಂತ ಅಗ್ರತೆಯದು ಇವನ್ನು ತೀರಿಸಿ ಉಳಿಯುವ ಹಣದ ಮೇಲೆ ಸಂಘಗಳಿಗೆ ಅಗ್ರತೆಯ ಹಕ್ಕು ಕೊಡಲಾಗಿದೆ ಅದೂ ಸಹ ಎಲ್ಲ ಸಂಘಗಳ ಮೂವತ್ತು ಸಾಲಗಳಿಗೆ ಅನ್ವಯಿಸುವದಿಲ್ಲ ಬೀಜ, ಕೊಡುವ ಎತ್ತು ಇವೇ ಮೊದಲಾದ ಬೇಸಾಯ ಸಾಹಿತ್ಯ ಕೊಂಡುಕೊಳ್ಳಲಿಕ್ಕೆ ಸಾಲ ಕೊಡಲಾಗಿದ್ದರೆ ಆಗ ಮಾತ್ರ ಸಂಘಕ್ಕೆ ಅಗ್ರತೆಯ ಹಕ್ಕು ಸಿಗುತ್ತದೆ ಸಂಘಗಳ ಫೈಸಲೆಗಳು ದಿವಾಣಿ ಕೋರ್ಟುಗಳ ಮುಖಾಂತರ ಅಮಲಬಜಾವಣಿಯಾಗುತ್ತಿದ್ದಾಗ ಯಾರಿಗೂ ಅಗ್ರತೆಯ ಹಕ್ಕು ಸಿಗುತ್ತಿದ್ದಿಲ್ಲ ಋಣಕೋಸ ಎಲ್ಲ ಧನಕೋರು ಸಮಾನತಳಿಯ ಮೇಲೆ ಇರುತ್ತಿದ್ದರು ಈಗ ಸಂಘಗಳ ವಸೂಲಿಯ ಕ್ರಮವನ್ನು ತ್ವರ್ಯಪಡಿಸುವ ದೆಸೆಯಿಂದ ಸ್ಪೆಶಲ ರಿಕವ್ಹರಿ ಆಫೀಸರರು ನೇಮಿಸಲ್ಪಟ್ಟರು ಅವರಿಗೆ ಭೂಕಂದಾಯ ಕಾನೂನಿನಂತೆ ಅಮಲಬಜಾವಣಿ ನಡೆಸಲು ಹುಕುಮಾಯಿತು ಸಂಘಗಳಿಗೆ ಸಲ್ಲತಕ್ಕ ಸಾಲವನ್ನು ತ್ವರ್ಯದಿಂದ ವಸೂಲ ಮಾಡಲು ಯಾರದೂ ಆಕ್ಷೇಪವಿಲ್ಲ ಆದರೆ ಬೇರೆ ಧನಕೋ ಜನರ ಹಕ್ಕನ್ನು ಮುಳುಗಿಸುವದು ಅನ್ಯಾಯ! ಸಂಘದ ಫೈಸಲೆ ಹಣ ಸ್ಪೆಶಲ ರಿಕವ್ಹರಿ ಆಫೀಸರರಿಂದ ವಸೂಲಾಗುತ್ತಿದ್ದಲ್ಲಿ ಬೇರೆ ಧನಕೋ ಜನರಿಗೆ ಏನೂ ಸಿಗುವದಿಲ್ಲ! ಎಲ್ಲ ಹಣ ಸಂಘಕ್ಕೆ ಜಮೆಯಾಗುತ್ತದೆ ಸಂಘದ ಸಾಲ ಪೂರ್ಣ ತೀರಿದರೆ ಮಾತ್ರ ಉಳಿದ ಹಣ ಬೇರೆ ಅಗ್ರಹಕ್ಕಿನ ಧನಕೋ ಜನರಿಗೆ ಸಿಗಬೇಕು! ಸಂಘಗಳು ಧನಕೋ ಎಂಬ ಹಕ್ಕಿನಿಂದ ಈ ಭೇದವಾಗುವದಿಲ್ಲ ಸಂಘಗಳ ಫೈಸಲೆ ಹಣದ ವಸೂಲಿ ರಿಕವ್ಹರಿ ಆಫೀಸರರಿಂದ ಆಗುತ್ತಿದ್ದರೆ ಮಾತ್ರ ಸಂಘದ ಫೈಸಲೆಗೆ ಅಗ್ರತೆ ಸಿಗುತ್ತದೆ ಅದೇ ಫೈಸಲೆ ಹಣ ದಿವಾಣಿ ಕೋರ್ಟಿನ ಮುಖಾಂತರ ವಸೂಲಾಗುತ್ತಿದ್ದರೆ ಆಸ್ತಿಯ ವಿಕ್ರಿಯಿಂದ ಬಂದ ಹಣವು ಎಲ್ಲ ಧನಕೋ ಜನರಲ್ಲಿ ಹಂಚಿಹಾಕಲ್ಪಡುತ್ತದೆ ಈ ಸ್ಥಿತಿ ವಿಷಮ ಇದರಿಂದ ಜನಸಾಮಾನ್ಯರು ಸುಲಿಯಲ್ಪಡುತ್ತಾರೆ ಸಂಘಗಳ ವ್ಯವಹಾರಗಳ, ಗುಣದೋಷಗಳ ಕುರಿತು ಈವಾಗ ಟೀಕಿಸುವದು ಅಪ್ರಾಸಂಗಿಕ ಸಂಘಗಳ ವ್ಯವಹಾರಗಳೆಲ್ಲ ಪ್ರಾಮಾಣಿಕತನದಿಂದಲೂ ಕ್ರಮದಿಂದಲೂ ನಡೆದಿರುವವೆಂದು ಸಂಘಗಳು ಪರೋಪಕಾರಿ ಸಂಸ್ಥೆಗಳೆಂದು ಎಣಿಸಿದರೂ ಈಗಿನ ದ್ವಿಪಂಕ್ತಿ-ಪ್ರಪಂಚ ಲೋಕಘಾತಕವಾದುದು! ಇದು ಜನರೊಳಗೆ ಅಪನಂಬಿಗೆಯನ್ನು ಉಂಟುಮಾಡುತ್ತದೆ

ಸಾವಕಾರರ ಕಡೆಗೆ ಸಾಲ ಕೊಂಡವರು ಸಂಘಗಳಲ್ಲಿ ಸಾಲ ಕೊಳ್ಳಬಾರದೆಂಬ ವಿಧಿಯಿಲ್ಲ ಆದರಿಂದ ಆತನು ಸಂಘದಲ್ಲಿ ಸೇರಿ ಸಂಘದ ಸಾಲಗಾರನಾದೊಡನೆ ಸಾವಕಾರನ ಸಾಲಕ್ಕೆ ಬಾಧೆಯುಂಟಾಗುತ್ತದೆ ಸಂಘದಿಂದ ಪಡೆಯಬಹುದಾದ ಸಾಲಕ್ಕೆ ಪರಿಮಿತಿಯಿಲ್ಲ ಸಾವಕಾರರಲ್ಲಿ ಪತ್ತು ಇಲ್ಲದವರೇ ಸಂಘಗಳಲ್ಲಿ ಸಾಲಗಾರರಾಗುವದು ಲೋಕಾನುಭವ! ಇವರಿಗೆ ಆಸ್ತಿ ಇರುವದು ಅಷ್ಟರ ಮಟ್ಟಿಗೇ! ಪ್ರತ್ಯಕ್ಷ ಸಾಲದ ಅಂಕಿಗೆ ನಿರ್ಬಂಧವಿರುವದು ನಿಜ ಆದರೆ ಜಾಮೀನದಾರರಾಗಿ ಬೇಕಷ್ಟು ಹೊಣೆ ಹೊರಲು ಯಾವದೇ ಪ್ರತ್ಯವಾಯವಿಲ್ಲ ಇಂಥ ಸ್ಥಿತಿಯಲ್ಲಿ ಸಾವಕಾರರು ನಿರ್ಭಯದಿಂದಲೂ ಸುರಕ್ಷಿತವಾಗಿಯೂ ಸಣ್ಣ ಸಣ್ಣ ಸಾಲಗಳನ್ನು ಕೊಡುವದು ಸಹ ಅಪಾಯಕರ ಬಹುತರವಾಗಿ ಜಾಮೀನದಾರರು ಪತ್ತಿದ್ದವರು ಇಂಥವರಿಗೆ ಸಾವಕಾರರು ಸಾಲ ಕೊಟ್ಟಿದ್ದಿರುತ್ತದೆ ಅವರೂ ಸಂಘಗಳ ಋಣಕರಾದ್ದರಿಂದಲೂ ಸಂಘಗಳ ವಸೂಲಿಯ ಕಕ್ಷೆಯಲ್ಲಿ ಸೇರುವದರಿಂದಲೂ ಅವರಿಂದ ಸಾವಕಾರರಿಗೆ ಸಲ್ಲತಕ್ಕ ಸಾಲಕ್ಕೂ ಸೊನ್ನೆಯಾಗುವದುಂಟು! ಹೀಗೆ ಸಾವಕಾರರನ್ನು ಸುಲಿಯುವದು ಪಾಪ, ಸಮಾಜದ ಸಾಮಾನ್ಯ ವ್ಯವಹಾರಕ್ಕೆ ಘಾತಕ ವ್ಯಾಪಾರ ವ್ಯವಹಾರಗಳಿಗೆ ಅವಶ್ಯವುಳ್ಳ ಸ್ಥಿರತೆಗೆ ಈ ಕಾನೂನು ಭಂಗಗೊಳ್ಳುತ್ತಿದೆ. ಆದರಿಂದ ಸರಕಾರವು ಸಂಘಗಳ ಈಗಿನ ವಸೂಲಿಯ ಕ್ರಮದಲ್ಲಿ ತಿದ್ದುಪಡಿ ಮಾಡುವದು ಅವಶ್ಯ

ಸಂಘಗಳ ಸಾಲವನ್ನು ಸ್ಪೆಶಲ ರಿಕವ್ಹರಿ ಆಫೀಸರರಿಂದ ವಸೂಲ ಮಾಡುವ ಕ್ರಮವನ್ನು ರದ್ದುಪಡಿಸುವದು ಅವಶ್ಯವಿಲ್ಲ ಈಗ ರೈತರ ಮೇಲೆ ನಡೆಯುವ ಅಮಲಜಾರಿ ಪ್ರಕರಣಗಳು ದಿವಾಣಿ ಕೋರ್ಟುಗಳಲ್ಲಿ ಮೊದಲು ದಾಖಲಾಗಿ, ಆ ಮೇಲೆ ಕಲೆಕ್ಟರರ ಕಡೆಗೆ ಮುಂದಿನ ಕ್ರಮಕ್ಕಾಗಿ ಕಳಿಸಲ್ಪಡುತ್ತಿವೆ ಅದೇ ಪ್ರಕಾರ ಸಂಘಗಳು ಪಡೆದ ಫೈಸಲೆಗಳು ದಿವಾಣಿ ಕೋರ್ಟುಗಳಲ್ಲಿ ದಾಖಲಾಗಬೇಕೆಂದು ವಿಧಿಸಿ, ಮುಂದಿನ ಕ್ರಮಗಳನ್ನು ಕಲೆಕ್ಟರರಿಗೆ ಕಳುಹಿ, ಅಲ್ಲಿಂದ ಸ್ಪೆಶಲ ರಿಕವ್ಹರಿ ಆಫೀಸರರ ಕಡೆಗೆ ಕಳುಹಬಹುದು ಈಗಲಾದರೂ ಸ್ಪೆಶಲ ರಿಕವ್ಹರಿ ಆಫೀಸರರು ಕಲೆಕ್ಟರರಿಗೆ ಅಧೀನವಿದ್ದವರು ಹೊಸ ಕ್ರಮದ ಯೋಜನೆಯಾದಲ್ಲಿ ಅದೇ ಪ್ರಕಾರ ಅವರು ವ್ಯವಹರಿಸುವರು ಈಗ ಮಾಮಲೇದಾರರು ನಡೆಸುವ ಕೆಲಸವನ್ನು ಸ್ಪೆಶಲ ರಿಕವ್ಹರಿ ಆಫೀಸರರು ಕೆಲಸ ನಡೆಸುವರು ಆಸ್ತಿಯನ್ನು ವಿಕ್ರಯಿಸಿ ಬಂದ ಹಣ ದಿವಾಣಿ ಕೋರ್ಟಿಗೆ ಬಂದು ಆ ಕೋರ್ಟಿನ ಮುಖಾಂತರ ಎಲ್ಲ ಧನಕೋ ಜನರಿಗೆ ಹಂಚಲ್ಪಡುವದು ಸಂಘಗಳ ಸಾಲಕ್ಕೆ ಅನುಚಿತ ಪ್ರಾಧಾನ್ಯ ಸಿಗಲಿಕ್ಕಿಲ್ಲ ವಸೂಲಿಯ ಕ್ರಮವು ತ್ವರ್ಯದಿಂದ ನಡೆಯುವದು ಮುಂಬಯಿ ಸರಕಾರವು ಈ ಸೂಚನೆಯನ್ನು ಆಲೋಚಿಸಬಹುದಾಗಿದೆ

— ಮುಂಬಯಿ, ಮದ್ರಾಸ, ಕಲಕತ್ತಾ ಮೊದಲಾದ ದೊಡ್ಡ ದೊಡ್ಡ ನಗರಗಳಲ್ಲಿ ಹಾಲಿನ ವ್ಯಾಪಾರ ಮಾಡುವದಕ್ಕಾಗಿ ಗೌಳಿಗರು ನಾಡಿನೊಳಗಿನ ಉತ್ತಮೋತ್ತಮ ಎಮ್ಮೆಗಳನ್ನೂ ಆಕಳುಗಳನ್ನೂ ಈ ನಗರಗಳಿಗೆ ಒಯ್ಯುತ್ತಾರೆ ಹಾಲು ಹಿಂಡುವತನಕ ಈ ಪ್ರಾಣಿಗಳ ಆರೈಕೆ ಚನ್ನಾಗಿ ಸಾಗುತ್ತಿದೆ ಆದರೆ ಅವು ಹಾಲು ಕೊಡುವದು ನಿಂತ ಮೇಲೆ ಆ ಪ್ರಾಣಿಗಳಿಗೆ ಯಾರೂ ನೋಡುವದಿಲ್ಲ! ಹೊಟ್ಟೆಗೆ ಬೇಕಷ್ಟು ಮೇವು ಸಹ ಬೀಳುವದಿಲ್ಲ! ಆ ದನಗಳನ್ನು ತಿರುಗಿ ನಾಡಿಗೆ ಕಳಿಸಿ ಕೊಡುವ ಖರ್ಚು ಬಹಳ ಬರುತ್ತಿರುವದರಿಂದ ಅವನ್ನು ಹಾಗೆ ಕಳಿಸುವದೂ ಇಲ್ಲ ಹೀಗಾಗಿ ಹಾಲು ಹಿಂಡಲು ಎಂದು ಎಣಿಸಿ ನಗರಗಳಿಗೆ ಒಯ್ಯಲ್ಪಟ್ಟ ದನಗಳು ಒಂದೇ ವರುಷದಲ್ಲಿ ಸರಿಯಾಗಿ ಆರೈಕೆ ಮಾಡುವವರಿಲ್ಲದೆ ಬಡವಿಟ್ಟು ನಿಕೃಷ್ಟಾವಸ್ಥೆಗೆ ಮುಟ್ಟುತ್ತಿವೆ. ಇಲ್ಲವೆ ಗೋವಧೆಶಾಲೆಯ ಹಾದಿ ಹಿಡಿಯುತ್ತಿವೆ ದೇಶದೊಳಗಿನ ದನಕರುಗಳ ಹ್ರಾಸವಾಗಲು ಇದೇ ಒಂದು ಮಹತ್ವದ ಕಾರಣವೆಂಬ ಸಂಗತಿ ಈಗೀಗ ಬೇಸಾಯ ಸಂಶೋಧನ ಇಲಾಖೆಯ ಕೇಂದ್ರ ಸಮಿತಿಯ ಲಕ್ಷ್ಯಕ್ಕೆ ಬಂದದ್ದೊಂದು ಶುಭಲಕ್ಷಣ ಹೀಗೆ ಗೋಧನದ ಹ್ರಾಸವಾಗುತ್ತ ನಡೆದರೆ ರಾಷ್ಟ್ರದ ಕಲ್ಯಾಣವಾಗದೆಂದು ಮನಗಂಡು ಸಮಿತಿಯವರು ತುರ್ತಕ್ಕೆ ಮುಂಬಯಿ, ಮದ್ರಾಸ ಮತ್ತು ಕಲಕತ್ತಾ ಶಹರಗಳಲ್ಲಿ ನಡೆಯುವ ಗೋಸಂಪತ್ತಿನ ನಾಶಕ್ಕೆ ಹೇಗೆ ತಡೆಹಾಕಬಹುದು ಮತ್ತು ಅಲ್ಲಿಯವರಿಗೆ ಚಲೋ ಹಾಲಿನ ಪುರವಟಿ ಹೇಗೆ ಮಾಡಬಹುದು ಎಂಬುದರ ಚೌಕಶಿ ಮಾಡಲು ಒಂದು ಸಂಚಾರಿ ಚೌಕಶಿ ಮಂಡಳವನ್ನು ನೇಮಿಸಿರುತ್ತಾರೆ

"ಈಸ್ಟ-ಡ್ರೋಪರ"ನ ಅಭಿಪ್ರಾಯ.

ಬರೇ ಹದಿನೇಳು ವರ್ಷಗಳಲ್ಲಿ ೧|| ಕೋಟಿ ರೂ ಗಳಷ್ಟು ಜೀವನಿಧಿಯನ್ನು ಕಲೆಹಾಕಿದ ಹಾಗೂ ೪೦ ಲಕ್ಷ ರೂ ಗಳಿಗೂ ಮಿಕ್ಕಿ ವಾರ್ಷಿಕ ಉತ್ಪನ್ನ ಪಡೆಯುವದು, ಉತ್ತಮ ಸ್ಥಿತಿಗೆ ಬಂದು ಮುಟ್ಟಿದ, ಎರಡೇ ವರ್ಷಗಳಲ್ಲಿ ಆಡಳಿತೆಯ ಖರ್ಚಿನ ಪ್ರಮಾಣವನ್ನು ನೂರಕ್ಕೆ ೫ರಷ್ಟು ಇಳಿಸಿದ ಮತ್ತು ಹಿಂದುಸ್ಥಾನದ ಮುಖ್ಯ ಮುಖ್ಯ ಕೇಂದ್ರಗಳಲ್ಲಿ ತನ್ನ ಸ್ವಂತ ಮಾಲ್ಕಿಯ ಭವ್ಯ ಕಚೇರಿ-ಮನೆಗಳನ್ನು ಕಟ್ಟಿಸಿಕೊಂಡು ವೈಭವದಿಂದ ಮೆರೆಯುವ ಬೇರೆ ಯಾವ ಕಂಪನಿಯನ್ನೂ ನಾವು ಕಂಡಿಲ್ಲ! ಲಕ್ಷ್ಮೀ ವಿಮೆ ಕಂಪನಿಯು ನಿಜವಾಗಿಯೂ ಲಕ್ಷ್ಮೀ ದೇವಿಯ ಪ್ರೇಮಾನುಗ್ರಹವನ್ನು ಸಂಪಾದಿಸಿದೆ!

ತಾ ೨೭-೬-೧೯೪೦ರ "ಇಂಡಿಯನ್ ಫಿನೆನ್ಸ್" ಪತ್ರಿಕೆಯಿಂದ

ವರ್ಷ	ಜೀವ ನಿಧಿ	ವೆಚ್ಚದ ಪ್ರಮಾಣ
೧೯೨೫—೨೬	೬೪,೪೨೯	೬೭.೯೦
೧೯೨೯—೩೦	೧೫,೦೦,೭೮೬	೩೭.೪೭
೧೯೩೪—೩೫	೫೯,೧೮,೬೯೯	೩೧.೯೩
೧೯೩೯	೧,೩೩,೬೮,೪೯೯	೨೭.೩೭
೧೯೪೦	೧,೫೫,೨೨,೧೯೭	೨೫.೭೭

ಬೋನಸ್ಸು - ಎಂಡೌಮೆಂಟ ವಿಮೆಗಳ ಮೇಲೆ ೧೦೦೦ ರೂ ಗೆ ಪ್ರತಿ ವರ್ಷ ರೂ ೧೫
ಆಜೀವ ವಿಮೆಗಳ ಮೇಲೆ ೧೦೦೦ ರೂ ಗೆ ಪ್ರತಿ ವರ್ಷ ರೂ ೧೮

ದಿ ಲಕ್ಷ್ಮೀ ಇನ್ಶೂರನ್ಸ ಕಂಪನಿ, ಲಿ.,
ಮುಖ್ಯ ಕಚೇರಿ **ಮೆಕ್ಲೋಡ ರೋಡ, ಲಾಹೋರ.**

ಮುಂಬಯಿ ಶಾಖೆ –
"ಲಕ್ಷ್ಮೀ ಬಿಲ್ಡಿಂಗ"
ಫಿರೋಜಶಹಾ ಮಹತಾ ರೋಡ

ಕಲಕತ್ತಾ, ಮುಂಬಯಿ, ಮದ್ರಾಸ, ಕರಾಚಿ, ಲಖನೌ,
(ನಿಜಾಮ) ಹೈದರಾಬಾದ, ಮೊಂಬಾಸಾ (ಬ್ರಿಟಿಶ ಪೂರ್ವ ಆಫ್ರಿಕಾ)
ಈ ಊರುಗಳಲ್ಲಿ ಶಾಖೆಗಳಿವೆ

ಕಾನಡಾವೃತ್ತ.

ಮಿತಿ ವೃಷ ಸಂವತ್ಸರೆ ಮಾರ್ಗಶೀರ್ಷ ಶು॥ ೬ಷ್ಠಿ, ಸೋಮವಾರ.

ಇನ್ನೂ ಆಲೋಚನೆ ನಡೆದಿದೆ!

ಸಾಮ್ರಾಜ್ಯಕರ್ತರು ಹಿಂದುಸ್ಥಾನದ ರಾಜ್ಯಧೋರಣದ ಕುರಿತು ಇನ್ನೂ ಆಲೋಚನೆಯಲ್ಲಿಯೇ ಮಗ್ನರಾಗಿರುವರೆಂಬ ಸಂಗತಿ ತಿಳಿದು ವ್ಯಸನವಾಗುತ್ತದೆ. ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ದಾ॥ ನಾರಾಯಣರಾವ ಜೋಶಿಯವರು ಸೂಚಿಸಿದ ರಾಜಬಂದಿಗಳ ಬಿಡುಗಡೆಯ ಠರಾವಿನ ಚರ್ಚೆಯ ಕಾಲಕ್ಕೆ ಬ್ರಿಟಿಶ ಸರಕಾರದ ಹೊಸ ರಾಜ್ಯಧೋರಣ ಸಿದ್ಧಪಡುವದೆಂದು ಅನೇಕರಂತೆ ನಾವಾದರೂ ಹಾರೈಸಿದ್ದೆವು. ಆದರೆ ಬ್ರಿಟಿಶ ಸಾಮ್ರಾಜ್ಯಕರ್ತರು ಇನ್ನೂ ಆಲೋಚನೆಯನ್ನು ಅಂತ್ಯಪಡಿಸದ್ದರಿಂದ ಹಿಂದೀ ರಾಜ್ಯಧೋರಣದ ನಿರ್ದೇಶ ತಿಳಿಯಲಿಲ್ಲ. ಬ್ರಿಟಿಶ ಪಾರ್ಲಿಮೆಂಟಿನಲ್ಲಿಯೂ ಮುಖ್ಯ ಪ್ರಧಾನರಾದ ಮಿ॥ ಚರ್ಚಿಲ್ಲರವರು ಹಿಂದುಸ್ಥಾನದ ಕುರಿತು ಏನೊಂದೂ ಉಲ್ಲೇಖ ಮಾಡಲು ಒಡಂಬಡಲಿಲ್ಲ. ಆದಾಗ್ಯೂ ಸಾಮ್ರಾಜ್ಯ ಸರಕಾರವು ರಾಜ್ಯಧೋರಣದಲ್ಲಿ ಸದ್ಯಕ್ಕೇ ತಿದ್ದುಪಾಟು ಮಾಡಲಿಕ್ಕಿದೆಯೆಂತೆ. ಲಂಡನಿನ 'ಟ್ಯಾಮ್ಸ' ಪತ್ರಕರ್ತರೂ 'ಮೆಂಚೆಸ್ಟರ ಗಾರ್ಡಿಯನ್' ಕರ್ತರೂ ಈ ವಿಷಯದ ಅಸಮ್ಮತಿಯನ್ನು ಪ್ರದರ್ಶಿಸಿದ್ದಾರೆ ರಾಜಬಂದಿಗಳ ಬಿಡುಗಡೆಯನ್ನು ಮೊಟ್ಟಮೊದಲು ಮಾಡಬೇಕಾಗಿ ಲಂಡನಿನ 'ಟ್ಯಾಮ್ಸ' ಕರ್ತರ ಸಲಹೆ. ರಾಜ್ಯಧೋರಣವನ್ನು ಬದಲಿಸಿ, ಈಗ ಒದಗಿದ ರಾಜ್ಯಧೋರಣದ ನಿರ್ದೇಶಕನೆಂದು ಕೆಲ ಅಧಿಕಾರವನ್ನು ಸಮರ್ಪಿಸಬೇಕಾಗಿ 'ಟ್ಯಾಮ್ಸ' ಕರ್ತರು ಸಹ ಸೂಚಿಸುತ್ತಾರೆ. ಲಂಡನಿನ 'ಟ್ಯಾಮ್ಸ' ಕರ್ತರು ಮಹಾತ್ಮರ ಸತ್ಯಾಗ್ರಹದ ಧೋರಣವನ್ನು ಆಕ್ಷೇಪಿಸಿದ್ದಾರೆ ಆದರೆ ಆ ಆಕ್ಷೇಪವನ್ನು ಮುಂದೊಡ್ಡಿ ರಾಜ್ಯಧೋರಣವನ್ನು ಇದ್ದಂತೆ ಇರಗೊಡಬೇಕಾಗಿ ಲಂಡನಿನ 'ಟ್ಯಾಮ್ಸ' ಕರ್ತರಿಗೆ ಅನಿಸುವದಿಲ್ಲ 'ಮೆಂಚೆಸ್ಟರ ಗಾರ್ಡಿಯನ್' ಪತ್ರಕರ್ತರಾದರೂ ಭಾರತ ಮಂತ್ರಿಗಳಾದ ಮಿ॥ ಎಮೆರಿಯವರಿಗೆ ಇದೇ ಪ್ರಕಾರ ಸಲಹೆ ಕೊಡುತ್ತಾರೆ. "ಟ್ಯಾಮ್ಸ" ಕರ್ತರಾಗಲಿ, "ಮೆಂಚೆಸ್ಟರ ಗಾರ್ಡಿಯನ್" ಕರ್ತರಾಗಲಿ ಸ್ವಜನಾಂಗದ ಹಿತಕ್ಕಾಗಿಯೇ ಈ ಸೂಚನೆ ಮಾಡಿರುತ್ತಾರೆ. ಮಿ॥ ಚರ್ಚಿಲ್ಲರೂ ಎಮೆರಿಯವರೂ ದೀರ್ಘಾಲೋಚನೆಯನ್ನು ತಳೆಯಬೇಕಾಗಿ ನಮ್ಮ ಸೂಚನೆ.

ಈಗಿನ ರಾಜ್ಯಧೋರಣ ಯಾರಿಗೂ ಮಾನ್ಯವಿಲ್ಲ. ನೂತನವಾಗಿ ಹಿಂದುಸ್ಥಾನ ಸರಕಾರದ ದೀಕ್ಷೆ ಪಡೆದ ಶ್ರೀ॥ ಮಾಧವರಾವ ಅಣೇ, ನಲಿನಿ ರಂಜನ ಸರ್ಕಾರ, ಸರ್ ಸುಲ್ತಾನ ಅಹಮ್ಮದ ಮೊದಲಾದವರಿಗೆ ಬಹಳ ಸಂಕಟವುಂಟಾಗಿರುತ್ತದಾಗಿ ತಿಳಿಯುತ್ತದೆ. ರಾಜಬಂದಿಗಳನ್ನು ಬಿಡುಗಡೆ ಮಾಡಿಸುವ ಸಾಮರ್ಥ್ಯವು ತಮ್ಮ ಕೈಯಿಂದಾಗದ ಬಳಿಕ, ಹಿಂದುಸ್ಥಾನ ಸರಕಾರದಲ್ಲಿ ಅಧಿಕಾರ ಪಡೆದು ಪ್ರಯೋಜನವೇನೆಂದು ಅವರು ತಮ್ಮಷ್ಟಕ್ಕೆ ಕೇಳಿಕೊಳ್ಳುತ್ತಿರಬೇಕು. ರಾಜಬಂದಿಗಳ ಬಿಡುಗಡೆ ಒದಗಿ ಬರದಿದ್ದರೆ ತಾವು ರಾಜೀನಾಮೆ ಕೊಡುವೆನಾಗಿ ಕೆಲವು ಸಭಾಸದರು ಸರ್ವಾಧಿಪತಿಗಳಿಗೆ ತಿಳಿಸಿರುತ್ತಾರಾಗಿ ಹೇಳುತ್ತಾರೆ. ಆ ಪ್ರಕಾರ ಸಭಾಸದರು ರಾಜೀನಾಮೆ ಕೊಟ್ಟಲ್ಲಿ ಹಿಂದೀ ರಾಜಕಾರಣವು ಮತ್ತೂ ಬಿಕ್ಕಟ್ಟಿಗೊಳಗಾಗುವದು. ಹಿಂದುಸ್ಥಾನ ಸರಕಾರದ ಕಾರ್ಯಕಾರಿ ಮಂಡಳವನ್ನು ವಿಸ್ತರಿಸಿ ನಿಷ್ಪ್ರಯೋಜಕವಾಯಿತೆಂದು ಸಾಮ್ರಾಜ್ಯ ಸರಕಾರವು ಲೋಕಕ್ಕೆ ಸಿದ್ಧಪಡಿಸಿದಂತಾಗುವದು. ಅಧಿಕಾರವನ್ನು ಸ್ವೀಕರಿಸುವ ಮುಂಚೆ ಶ್ರೀ॥ ಅಣೇ, ಸರ್ಕಾರರವರು ಮಹಾತ್ಮರೊಡನೆ ಆಲೋಚನೆ ಮಾಡಿದ ಸಂಗತಿ ಲೋಕಪ್ರಸಿದ್ಧವಿದೆ. ಆದರೆ ಈ ಅಧಿಕಾರಸ್ವೀಕಾರದಿಂದ ಪ್ರಯೋಜನವಿಲ್ಲವಾಗಿಯೂ, ಅದಕ್ಕೆ ತಮ್ಮ ಸಮ್ಮತಿಯಿಲ್ಲವಾಗಿಯೂ ಮಹಾತ್ಮರು ಉಭಯತರಿಗೂ ಹೇಳಿರಬೇಕು. ಉಭಯತರ ಅಧಿಕಾರ ಸ್ವೀಕಾರಕ್ಕೆ ತಮ್ಮ ಸಮ್ಮತಿಯಿರಲಿಲ್ಲವೆಂದು ಮಹಾತ್ಮರು ಪ್ರತೀಗಾಮಿ ಪಕ್ಷದ ಕಾರ್ಯದರ್ಶಿಗಳಾದ ರಾ॥ ಕಾಮತರಿಗೆ ಬರೆದ ಪತ್ರದಲ್ಲಿ ಸ್ಪಷ್ಟ ಮಾಡಿದ್ದಾರೆ. ಹೀಗಿರುವಾಗ ರಾಜಬಂದಿಗಳಿಗೆ ಬಿಡುಗಡೆ ಮಾಡದಿದ್ದರೆ ಮಾಧವರಾವ ಅಣೇ ಸರ್ಕಾರ–ಅಹಮ್ಮದ ಪ್ರಭೃತಿ ಮುಂದಾಳುಗಳು ಸರಕಾರದ ಅಂಗವಾಗಿ ಉಳಕೊಳ್ಳುವದು ಅಸಾಧ್ಯ. ಇವರು ಅಧಿಕಾರತ್ಯಾಗ ಮಾಡಿದರೆ ಹಿಂದುಸ್ಥಾನದೊಳಗೆ ಹಬ್ಬಿಕೊಂಡ ಸರಕಾರದ ವಿರೋಧಕ್ಕೆ ಅಭೂತಪೂರ್ವ ಕಳೆಯೇರುವದು ಸಾಹಜಿಕ. ಚರ್ಚಿಲ್ಲ–ಎಮೆರಿಯವರು ವಿವೇಕ ಹಿಡಿಯಬೇಕು. ಸ್ವಾರ್ಥವನ್ನೇ ಉದ್ದೇಶವಾಗಿಟ್ಟುಕೊಂಡು ಹಿಂದುಸ್ಥಾನವನ್ನು ಹಿಂದಿನಂತೆ ಮುಂದೆಯೂ ಆಳುವ ಹವ್ಯಾಸವನ್ನು ಇವರು ಹಿಡಿಯಲಾಗದು.

ಮುಖ್ಯ ಮಂತ್ರಿಗಳಾದ ಮಿ॥ ಚರ್ಚಿಲ್ಲರೂ ಭಾರತ ಮಂತ್ರಿಗಳಾದ ಮಿ॥ ಎಮೆರಿಯವರೂ ಇನ್ನೂ ಬಿಗಿಹಿಡಿಯುವದು ಅಪಾಯಕರ. ಹಿಂದುಸ್ಥಾನದ ರಾಜ್ಯಧೋರಣವನ್ನು ಎಷ್ಟಕ್ಕೂ ಬದಲಿಸಲಿಕ್ಕಿಲ್ಲವೆಂಬ ಹಟಮಾರಿತನವನ್ನು ಸಾಮ್ರಾಜ್ಯಕರ್ತರು ತೊರೆಯಬೇಕು. ಲಂಡನಿನ 'ಟ್ಯಾಮ್ಸ' ಪತ್ರಕರ್ತರು ಸೂಚಿಸಿದಂತೆ ರಾಜಬಂದಿಗಳನ್ನು ಮೊಟ್ಟಮೊದಲು ಬಿಡುಗಡೆ ಮಾಡಿ ರಾಜ್ಯಾಧಿಕಾರವನ್ನರ್ಪಿಸುವ ಯೋಜನೆಯನ್ನು ತಯಾರಿಸಿ, ಈವಾಗ ಪ್ರಸಂಗೋಚಿತವಾಗಿ ತಿದ್ದುಪಾಟುಗಳನ್ನು ಕೈಕೊಳ್ಳಬೇಕು.

ಮಹಾತ್ಮರಾದಿ ರಾಷ್ಟ್ರೀಯ ಸಭೆಯವರೂ ವರ್ಧಾದೊಳಗೆ ಆಪ್ತಾಲೋಚನೆಯಲ್ಲಿ ತೊಡಗಿದ್ದಾರೆ. ಶ್ರೀ॥ ಚಕ್ರವರ್ತಿ ರಾಜಗೋಪಾಲಾಚಾರ್ಯ, ಆಚಾರ್ಯ ಕೃಪಾಲಾನಿ, ಡಾ॥ ಪಟ್ಟಾಭಿಸೀತಾರಾಮಯ್ಯ, ಶ್ರೀ॥ ಭುಲಾಭಾಯಿ ದೇಸಾಯಿ, ಸರದಾರ ವಲ್ಲಭಭಾಯಿ ಪಟೇಲ, ಬಾಬು ರಾಜೇಂದ್ರಪ್ರಸಾದ ಮೊದಲಾದವರು ಮಹಾತ್ಮರೊಡನೆ ಆಲೋಚನೆ ಮಾಡಿ ಕೊಂಗ್ರೆಸ ರಾಜಕಾರಣದ ಆಢಾವೆಯನ್ನು ವಿಮರ್ಶಿಸುತ್ತಿದ್ದಾರೆ. ಪ್ರಕೃತ ರಾಜಕಾರಣಕ್ಕೆ ಆಗಬೇಕಾದ ತಿದ್ದುಪಾಟುಗಳನ್ನು ಆಲೋಚಿಸುತ್ತಿದ್ದಾರೆ. ರಾಷ್ಟ್ರೀಯ ಸಭೆಯವರಿಗೆ ಸ್ವಾರ್ಥವಿಲ್ಲ; ನಿಃಸ್ಪೃಹ ದೇಶಸೇವಕರವರು. ಸ್ವದೇಶ ಸ್ವಾತಂತ್ರ್ಯಕ್ಕಾಗಿ ಸಮಯೋಚಿತವಾದ ಘಟನೆಗಳನ್ನು ಕೈಕೊಳ್ಳಲಿಕ್ಕೆ ಇವರು ಸಿದ್ಧರಿದ್ದಾರೆ. ಸತ್ಯಾಗ್ರಹವನ್ನು ಕೈಕೊಳ್ಳುವ ಪೂರ್ವದಲ್ಲಿ ಸರಕಾರದೊಡನೆ ನಡೆಸಿದ ಯಾವತ್ತೂ ರಾಯಭಾರ ನಿಷ್ಫಲವಾದ ಸಂಗತಿ ಈವಾಗ ಲೋಕವಿಖ್ಯಾತವಾದದ್ದು. ಮಹಾಯುದ್ಧದಿಂದ ಹಿಂದುಸ್ಥಾನದ ಮೇಲೆ ಬಂದ ಲೋಕಸಂಕಟವನ್ನು ರಾಷ್ಟ್ರೀಯ ಸಭೆಯವರು ಗ್ರಹಿಸುತ್ತಾರೆ. ಅದೇ ಪ್ರಕಾರ ಆ ಸಂಕಟವನ್ನು ಪ್ರತಿಭಟಿಸಲಿಕ್ಕೆ ಹಿಂದವಾಸಿಯರು ಸಿದ್ಧರಿರಬೇಕೆಂಬ ಮಾತನ್ನೂ ಇವರು ಅಲಕ್ಷ ಮಾಡುವದಿಲ್ಲ. ಸ್ವದೇಶರಕ್ಷಣೆ ಸ್ವದೇಶವಾಸಿಗಳಿಗೆ ಕ್ರಮಪ್ರಾಪ್ತವಾದ ಕರ್ತವ್ಯ. ಆದರಿಂದಲೇ ಮಹಾತ್ಮರು ಬ್ರಿಟಿಶರಿಗೆ ಯುದ್ಧಯತ್ನ ಕಾರ್ಯದಲ್ಲಿ ವಿಘ್ನವಾಗಗೊಡದಂತೆ ವ್ಯಕ್ತಿ-ಸಂಗ್ರಾಮ ಹೂಡಿದುದು. ಸ್ವದೇಶಕ್ಕೆ ಸ್ವಾತಂತ್ರ್ಯ ಸಿಗಬೇಕು; ಆ ಬಗ್ಗೆ ಸ್ವದೇಶವಾಸಿಗಳು ಯತ್ನಿಸಬೇಕು. ಆದರೆ ಅದೇ ಕಾಲಕ್ಕೆ ಮಹಾಯುದ್ಧದಲ್ಲಿ ಸ್ವತಂತ್ರ ಜನಾಂಗಕ್ಕೆ ಉಚಿತವಾದ ಸ್ಥಾನ-ಮಾನಗಳನ್ನು ದೊರಕಿಸಿಕೊಳ್ಳಬೇಕು; ಸ್ವಾತಂತ್ರ್ಯಕ್ಕೆ ನ್ಯೂನತೆಯಾಗಿರುವ ಯೋಗ್ಯತಾಹೀನ ಕ್ರಮಗಳನ್ನು ಕೈಕೊಂಡು ಯುದ್ಧಕಾರ್ಯದಲ್ಲಿ ನೆರವಾದರೆ ಯುದ್ಧೋತ್ತರ ನಮ್ಮಾ ಜನಾಂಗಕ್ಕೆ ಸ್ವಾತಂತ್ರ್ಯ ಸಿಗುವ ಬಗೆ ಕಡಿಮೆ ಸರ ವಿಕ್ಟರ ಸೆಸೂನರು ಪತ್ರಕರ್ತರ ಸಂಘದಲ್ಲಿ ಮೊನ್ನೆ ಬುಧವಾರ ನುಡಿದಂತೆ, ನಮ್ಮಾ ಜನಾಂಗಕ್ಕೆ ಸ್ವಾತಂತ್ರ್ಯದ ಘೋಷಣೆ ಯುದ್ಧೋತ್ತರ ದೊರೆಯುವದೆಂದು ನಮಗಾದರೂ ಅನಿಸುತ್ತದೆ. ಯುದ್ಧ-ಪೂರ್ವಸ್ಥಿತಿ ಯುದ್ಧೋತ್ತರ ಉಳಿಯಲಿಕ್ಕಿಲ್ಲವಾಗಿ ನಾವು ಖಂಡಿತವಾಗಿ ಹೇಳಬಲ್ಲೆವು. ಜಗತ್ತೇ ಪುನರ್ಘಟಿಸಲ್ಪಡುತ್ತಿರುವಾಗ ಹಿಂದುಸ್ಥಾನದಂಥ ವಿಶಾಲ ಭೂಪ್ರದೇಶದ ರಾಜಕಾರಣ ಇದ್ದಕ್ಕಿದ್ದ ಹಾಗೆ ಕಾಪಾಡುವದು ಮನುಷ್ಯ-ಯತ್ನಕ್ಕೆ ಮಿಕ್ಕಿದ್ದೆಂದು ನಮ್ಮ ಭಾವನೆ. ಹಿಂದುಸ್ಥಾನದೊಳಗೆ ಜರ್ಮನರ ಅಧಿರಾಜ್ಯವಾದರೆ ಅಂಥ ರಾಜ್ಯದಲ್ಲಿ ಉಳಿಯುವದಕ್ಕಿಂತ ಮರಣವೇ ಶ್ರೇಯಸ್ಕರವೆಂದು ವೃದ್ಧ ಸೆಸೂನರಂತೆಯೇ ಎಲ್ಲ ಬ್ರಿಟಿಶ ರಾಜನಿಷ್ಠ ಹಿಂದವಾಸಿಗಳ ಭಾವನೆಯುಂಟು. ಬ್ರಿಟಿಶರಿಂದಲೇ ಹಿಂದುಸ್ಥಾನದ ಉದ್ಧಾರವಾಗುವದೆಂದು ಹಿಂದವಾಸಿಗಳಲ್ಲಿ ನಂಬಿಗೆಯುಂಟು. ಆದರೆ ಯುದ್ಧೋತ್ತರ ಸ್ವಾತಂತ್ರ್ಯವು ಮುಗಿಲೊಳಗಿಂದ ಕುಸಿದು ಬೀಳುವಂತಹ ವಸ್ತುವಲ್ಲ. ಆ ಪೂರ್ಣಾವಸ್ಥೆಗಾಗಿ ಈಗಿನಿಂದಲೇ ಪ್ರಯತ್ನ ಮಾಡಬೇಕು ಅದೇ ಈಗ ಆಗಬೇಕಾದ ತಿದ್ದುಪಾಟು ಸಾಮ್ರಾಜ್ಯಕರ್ತರು

ಸಾಮ್ರಾಜ್ಯಕರ್ತರು ಯುದ್ಧೋತ್ತರ ಒದಗಬರುವ ಸ್ವಾತಂತ್ರ್ಯದ ಸಂಕಲ್ಪ ಮಾಡಿ ಈಗಲೇ ರಾಜ್ಯಭಾರದಲ್ಲಿ ಅದಕ್ಕುಚಿತವಾದ ಸುಧಾರಣೆ ಮಾಡಬೇಕೆಂದು ಹಿಂದೀ ಲೋಕಪ್ರಮುಖರ ಆಗ್ರಹ. ಅದಕ್ಕಾಗಿ ರಾಷ್ಟ್ರೀಯ ಸಭೆಯವರೂ ಸಾಮ್ರಾಜ್ಯಕರ್ತರೂ ದುಡಿಯಬೇಕು. ಈ ತನಕ ನಡೆದ ಆಲೋಚನೆ ಸಾಕಾಗಬೇಕಿತ್ತು; ಇನ್ನೂ ಆಲೋಚನೆಯಲ್ಲಿ ಕಾಲಹರಣವಾಗುವದು ಅನಿಷ್ಟಕರ. ಸಾಮ್ರಾಜ್ಯಕರ್ತರು ತ್ವರ್ಯವೇ ಆಲೋಚನೆಯನ್ನು ಮುಗಿಸಿ ಹಿಂದುಸ್ಥಾನಕ್ಕೆ ಸಮಾಧಾನವಾಗುವಂಥ ನಿರ್ಣಯವನ್ನು ಘೋಷಿಸುವರೆಂದು ನಾವು ಕೋರುತ್ತೇವೆ.

✤

ಮೊಸ್ಕೊ ಹಿಟ್ಲರನ ವಶವಾಗಲಿಲ್ಲ!

[ನಿರೀಕ್ಷಕನು ಬರೆದುದು.]

ಸದ್ಯಕ್ಕೆ ನನಗೆ ಇದೇ ಒಂದು ಸಮಾಧಾನ. ಮೊಸ್ಕೊ ವಿಭಾಗದಲ್ಲಿ ಪರಿಸ್ಥಿತಿ ದಿನ ಹೋದ ಹಾಗೆ ಭೀಕರವಾಗುತ್ತದಾಗಿ ಮೊಸ್ಕೊದೊಳಗಿನ ಆಕಾಶವಾಣಿ! ಸಂತೋಷಪಡಲು ಆಸ್ಪದವಿಲ್ಲವಾಗಿಯೂ ಆಕಾಶವಾಣಿಯವರ ಅಂಬೋಣ. ಆದಾಗ್ಯೂ ಮೊಸ್ಕೊ ಪಟ್ಟಣ ಇನ್ನೂ ಶತ್ರುವಶವಾಗಿಲ್ಲವೆಂದು ತಿಳಿದು ನನಗೆ ಎಷ್ಟೋ ಸಮಾಧಾನ. ಈಗ ಈ ವಿಭಾಗದಲ್ಲಿ — ಏಕೆ, ಇಡೀ ರಣಕ್ಷೇತ್ರದಲ್ಲಿ — ಚಳಿ ಬೀಳುತ್ತಿದೆ; ಹಿಮ ಸುರಿಯುತ್ತಿದೆ. ನೆಲವೆಲ್ಲ ಕೆಸರಾಗಿದೆಯೆಂದು ಬರ್ಲಿನ ಆಕಾಶವಾಣಿಯಲ್ಲಿ ಜರ್ಮನರು ಹೇಳಹತ್ತಿದ್ದಾರೆ. ಆದಾಗ್ಯೂ ಜರ್ಮನರ ಒತ್ತಡ ಕಡಿಮೆಯಾಗಲಿಲ್ಲ! ಮೊಸ್ಕೊ ವಿಭಾಗದಲ್ಲಿ ಜರ್ಮನರ ಸೈನ್ಯ ಪಥಕಗಳು ತಂಡಗಟ್ಟಿ ಹೋಗಹತ್ತಿವೆ. ದಕ್ಷಿಣ ವಿಭಾಗದಲ್ಲಿಯೂ ಉತ್ತರ ಭಾಗದಲ್ಲಿಯೂ ಜರ್ಮನರು ಆವೇಶದಿಂದ ಮುನ್ನುಗ್ಗುತ್ತಿದ್ದಾರೆ. ರುಶ್ಯರಾದರೂ ನಿರಾಶರಾಗಿಲ್ಲ; ಆಶಾಭರಿತರಾಗಿದ್ದಾರೆ. ಶತ್ರುವನ್ನು ಸಂಪೂರ್ಣ ಸೋಲಿಸಿ ತಿರುಗಿ ಕಳುಹಬೇಕೆಂದು ಪ್ರತಿಯೊಬ್ಬರು ನಿರ್ಧರಿಸಿದ್ದಾರೆ. ಶತ್ರುವಿನ ಸೊಂಟ ಮುರಿಯಬೇಕು; ಇನ್ನು ಶತ್ರು ತಲೆಯೆತ್ತಕೂಡದು, ಎಂಬ ನಿರ್ಧಾರದಿಂದ ರುಶ್ಯರು ಜೀವದ ಮೇಲಿನ ಹಂಬಲಿಲ್ಲದೆ ಶತ್ರುಗಳ ಮೇಲೆ ಹಾರಿ ಅವರನ್ನು ಅಡ್ಡಗಟ್ಟುತ್ತಿದ್ದಾರೆ. ಕೆಲವೆಡೆ ರುಶ್ಯರಿಗೆ ಜಯ, ಕೆಲವೆಡೆ ಜರ್ಮನರಿಗೆ ಜಯ, ಹೀಗೆ ಜಯಾಪಜಯಗಳು ಉತ್ತರ-ಮಧ್ಯ ವಿಭಾಗದಲ್ಲಿ ಜೋಕಾಲಿ ಜೊತೆಯುತ್ತಿರುವಾಗ, ಚಳಿಗಾಲವು ರುಶ್ಯರಿಗೆ ಬೆಂಬಲ ಕೊಡುತ್ತಿರುವಾಗ ರುಶ್ಯರು ಗೆಲ್ಲಲೇ ಬೇಕೆಂದು ನನಗನಿಸಿ ಬಹು ಸಮಾಧಾನವಾಗುತ್ತದೆ. ಸತ್ಪಕ್ಷಕ್ಕನುಕೂಲವಾಗಿ ಸೃಷ್ಟಿಕರ್ತನು ಚಳಿಗಾಲವನ್ನು ಕಳುಹಿರಬೇಕೆಂದೆನಿಸುತ್ತದೆ. ಆದಾಗ್ಯೂ ರುಶ್ಯರು ಗೆಲ್ಲುವರೆಂದು ನಾನು ಧೈರ್ಯದಿಂದ ಹೇಳಲಾರೆ. ಮೊಸ್ಕೊ ಪಟ್ಟಣ ಕೊನೆತನಕ ರಕ್ಷಿಸಲ್ಪಡುವದೆಂದು ನಾನು ತಿಳಿಯಲಾರೆ. ಮೊಸ್ಕೊದೊಳಗಿನ ಆಕಾಶವಾಣಿಯ ವಾರ್ತೆಗಳಿಂದ ಮನಸ್ಸು ಗಾಬರಿಗೊಳ್ಳುತ್ತಿದೆ. ಲೆನಿನಗ್ರಾಡ, ಮೊಸ್ಕೊ ಪಟ್ಟಣಗಳು ಇದೇ ಸ್ಥಿತಿಯಲ್ಲಿ ಇನ್ನೂ ಕೆಲವು ಕಾಲ ಕಳೆಯಬಹುದೆಂದು ನನ್ನ ಊಹೆ. ಹಿಟ್ಲರನು ಈ ಪ್ರದೇಶದಲ್ಲಿ ಕೊಂಚ ಅಲಕ್ಷ ಮಾಡುತ್ತಿರುವನಾಗಿ ಹೇಳುತ್ತಾರೆ. ಹೇಗಿದ್ದಾಗ್ಯೂ ಲೆನಿನಗ್ರಾಡ, ಮೊಸ್ಕೊ ಪಟ್ಟಣಗಳು ಇನ್ನೂ ಕಾಪಾಡಿಕೊಂಡದ್ದು ಸಮಾಧಾನಕರ.

ಆದರೆ ದಕ್ಷಿಣ ವಿಭಾಗದೊಳಗಿನ ಪರಿಸ್ಥಿತಿಯನ್ನು ಕೇಳಿ ನನಗೊಳ್ಳೇ ಚಿಂತೆಯುಂಟಾಗಿದೆ. ದಕ್ಷಿಣದ ರೊಸ್ಟೋವ್ಹ ಪಟ್ಟಣ ಜರ್ಮನರ ವಶವಾಯಿತು. ಈ ಪಟ್ಟಣವು ಕೊಕಸಸದ ಹೆಬ್ಬಾಗಿಲು. ಈ ಪಟ್ಟಣ ಜರ್ಮನರ ವಶವಾದ್ದರಿಂದ ದಕ್ಷಿಣ ವಿಭಾಗದಲ್ಲಿ ಜರ್ಮನರೇ ಪ್ರಬಲರಾದಂತಾಗಿದೆ. ಈ ಘಟನೆಯ ಮೂಲಕ ದಕ್ಷಿಣ ವಿಭಾಗದ ಯುದ್ಧವ್ಯೂಹ ತೀರ ಬದಲಿಹೋಗುವದೆಂದು ನಾನು ಊಹಿಸುತ್ತೇನೆ. ರೊಸ್ಟೋವ್ಹ ಪಟ್ಟಣದಿಂದಲೂ ಅಲ್ಲಿಂದ ದಕ್ಷಿಣಕ್ಕೆ ಕ್ರಿಮಿಯಾದಲ್ಲಿರುವ ಕರ್ಚ ಪಟ್ಟಣದಿಂದಲೂ ಕೊಕೆಸಸದ ಮೇಲೆ ಜರ್ಮನರು ದಂಡೆತ್ತಿಕೊಂಡು ಹೋಗುವದೊಂದು ಭೀತಿ ಇದ್ದೇ ಇದೆ. ಆದರೆ ಅದೇ ಸಮಯ ಕಪ್ಪು ಸಮುದ್ರದಲ್ಲಿ ಪುಂಡತನ ನಡೆಸಲು ಜರ್ಮನರಿಗೆ ಅನುಕೂಲವಾಗಿದೆ. ಕಪ್ಪು ಸಮುದ್ರದ ಪಶ್ಚಿಮ ದಂಡೆಯ ಮೇಲೆ ಯುದ್ಧ-ಹಡಗುಪಡೆಗಳನ್ನು ಜರ್ಮನರು ಕಟ್ಟತೊಡಗಿದ್ದಾರೆ. ಆದರಿಂದ ತುರ್ಕಸ್ಥಾನಕ್ಕೆ ಬಾಧೆ ಉಂಟಾಗುವದಾಗಿ ಲಂಡನಿನ 'ಡೇಲಿ ಹೆರಲ್ಡ' ಪತ್ರಿಕೆಯ ಇಸ್ತಂಬೂಲದ ಸುದ್ದಿಗಾರರು ಗಾಬರಿಗೊಂಡು ತಂತಿಯಿಂದ ತಿಳಿಸುತ್ತಾರೆ. ಹಿಟ್ಲರನಿಗೆ ಒಂದು ವ್ಯಥೆಯುಂಟಾಗಿರಬೇಕು. ರುಶ್ಯರ ಕಡೆಗೆ ಮನುಷ್ಯಬಲವಿದೆ. ಜರ್ಮನರು ಎಷ್ಟೇ ಜಂಬ ಬಡಿದಾಗ್ಯೂ ರುಶ್ಯರ ಮನುಷ್ಯಬಲ ಅಪಾರವಾದದ್ದೆಂದು ನಾನು ಎದೆ ಗಟ್ಟಿಮಾಡಿ ಹೇಳಬಲ್ಲೆ. ಆದರೆ ಅವಕ್ಕೆ ತಕ್ಕಷ್ಟು ಯುದ್ಧ ಸಾಹಿತ್ಯವಿಲ್ಲ. ವಿಮಾನಗಳಿವೆ; ಮದ್ದುಗುಂಡುಗಳಿವೆ; ತೋಫು ತುಬ-ಕಿಗಳಿವೆ, ಆದರೆ ಅವು ಇಷ್ಟು ಪ್ರಚಂಡ ಯುದ್ಧಕ್ಕೆ ತಕ್ಕಷ್ಟು ಇಲ್ಲ. ರುಶ್ಯ ದೇಶದಲ್ಲಿ ವಿಮಾನ ತಯಾರಿಸುವ ಕಾರಖಾನೆಗಳು ಹಗಲಿರುಳು, ತೆರಪಿಲ್ಲದೆ ದುಡಿಯುತ್ತಿವೆ. ಮೊಸ್ಕೊದೊಳಗಿನ ಒಂದು ವಿಮಾನ ಕಾರಖಾನೆಯನ್ನು ಜರ್ಮನರು ನಾಶಗೊಳಿಸಲುದ್ಯುಕ್ತರಾಗಿದ್ದರು. ಲಗುಬಗೆಯಿಂದ ರುಶ್ಯರು ಅದನ್ನು ಅಲ್ಲಿಂದ ಕಿತ್ತು ತೆಗೆದು ೩೦೦ ಮೈಲು ದೂರ ವ್ಹೋಲ್ಗಾ ನದಿಯ ಆಚೆ-ಒಯ್ದು ಪುನಃ ಕಟ್ಟಿಸಿ ಕೆಲಸ ಪ್ರಾರಂಭಿಸಿ ಬಿಟ್ಟಿದ್ದಾರೆ. ಆದರಿಂದ ವಿಮಾನಗಳಿಗೆ ರುಶ್ಯ ದೇಶದಲ್ಲಿ ಕೊರತೆಯಿಲ್ಲ. ಆದರೆ ತೋಫುಖಾನೆಗಳಿಗೆ ಒಳ್ಳೇ ಕೊರತೆಯುಂಟಾಗಿದೆ. ತೋಫುಗಳನ್ನು ತಯಾರಿಸುವ ಕಾರಖಾನೆಗಳೆಲ್ಲ ದಕ್ಷಿಣದ ಡೊನ ನದಿಯ ಪ್ರದೇಶದಲ್ಲಿದ್ದವು. ಈ ನದಿಯ ಕೇಂದ್ರಸ್ಥಳವಾದ ರೊಸ್ಟೋವ್ಹ ಪಟ್ಟಣ ಜರ್ಮನರ ವಶವಾದ್ದರಿಂದ ತೊಫುಖಾನೆಗಳನ್ನು ತಯಾರಿಸಲು ಅವಶ್ಯವಾಗಿದೆ. ಆದರಿಂದ ಹೊಸ ತೋಫುಖಾನೆಗಳು ಬೇಕು; ಉಕ್ಕಿನ ಕಾರಖಾನೆಗಳೂ ಇದೇ ಪ್ರದೇಶದಲ್ಲಿದ್ದವು. ಅವೂ ಉಧ್ವಸ್ತವಾಗಿವೆ. ಆದರಿಂದ ತೋಫು-ಬಂದೂಕಿ, ಮದ್ದುಗುಂಡುಗಳು ರುಶ್ಯರಿಗೆ ಬೇಕು. ಚಳಿಗಾಲ ತೀರುವಷ್ಟರಲ್ಲಿ ಈ ಸಾಹಿತ್ಯವನ್ನು ಪೂರೈಸಿಕೊಳ್ಳದಿದ್ದರೆ, ಮುಂದೆ ವಸಂತ ಋತುವಿನಲ್ಲಿ ಹಿಟ್ಲರನನ್ನು ತಡೆದು ನಿಲ್ಲಿಸುವದು ರುಶ್ಯರಿಗೆ ಬಲು ಕಷ್ಟವಾಗುವದು. ಚಳಿಗಾಲದಲ್ಲಿ ಹೇಗೂ ಮಾಡಿ ದಂಡೆತ್ತಿಕೊಂಡು ಬರುವ ಜರ್ಮನರನ್ನು ತಡೆದು ನಿಲ್ಲಿಸಿದಾಗ್ಯೂ, ಹೊಸ ಯುದ್ಧ-ಸಾಹಿತ್ಯಗಳು ಪೂರೈಸಲ್ಪಡದಿದ್ದಲ್ಲಿ ರುಶ್ಯರು ಘಾತ ಹೊಂದುವ ಭೀತಿಯುಂಟು. ಇತ್ತಲಾಗಿ ಬ್ರಿಟಿಶರೂ ಅಮೇರಿಕೆಯವರೂ ಇರಾಣ ಮಾರ್ಗವಾಗಿ ಯುದ್ಧಸಾಹಿತ್ಯವನ್ನು ರುಶ್ಯರಿಗೆ ಪೂರೈಸುತ್ತಾರೇನೋ ಆಹುದು. ಆದರೆ ಇದೊಂದು ನಾಸಿವೆ ಕಾಳು ಎಂದು 'ಕಿಂಗಹೊಲ ನ್ಯೂಸಲೆಟರ' ಕರ್ತರು ಬರೆದು ಈ ಸಹಾಯ ದೊಡ್ಡ ಪ್ರವಾಹ-ರೂಪವಾಗಿ ಭೋರ್ಗರೆದು ಹರಿಯುತ್ತಿರಬೇಕೆಂದು ಅಭಿಪ್ರಾಯಪಡುತ್ತಾರೆ. ಬ್ರಿಟನ-ಅಮೇರಿಕೆಯವರು ಅದೇ ಪ್ರಕಾರ ಸಹಾಯದ ಯೋಜನೆ ನಡಿಸಿದ್ದಾರೆ. ಈ ಸಹಾಯವನ್ನು ತುಂಡರಿಸಿ ರುಶ್ಯ ದೇಶದ ಘಾತ ಮಾಡುವದಕ್ಕಾಗಿ ಹಿಟ್ಲರನು ಕಾರಸ್ಥಾನ ಹೂಡಿದ್ದಾನೆ.

ಇರಾಣದಿಂದ ಈ ಸಹಾಯ ರುಶ್ಯ ದೇಶಕ್ಕೆ ತಲ್ಪುತ್ತದೆ. ಆದರಿಂದ ಇರಾಣವನ್ನೇ ಆಕ್ರಮಿಸಿಕೊಳ್ಳಬೇಕಾಗಿ ಆತನ ಕಾರಸ್ಥಾನ; ಬ್ರಿಟಿಶರಿಗೆ ಈ ಸಂಗತಿ ಗೊತ್ತುಂಟು. ಇರಾಣಿಯರಿಗೆ ಸಮಾಧಾನಗೊಳಿಸುವದಕ್ಕಾಗಿ ಬ್ರಿಟಿಶರು ಹಿಂದುಸ್ಥಾನದಿಂದ ಇರಾಣಕ್ಕೆ ಗೋದಿ-ಸಕ್ಕರೆಗಳನ್ನು ಕಳುಹಿ ಅಲ್ಲಿಯ ಜನಗಳನ್ನು ಸಮಾಧಾನಗೊಳಿಸುತ್ತಿದ್ದಾರೆ. ಅದೇ ಪ್ರಕಾರ ರುಶ್ಯರಿಗೂ ಅವಶ್ಯವುಳ್ಳ ಯಾವತ್ತೂ ಅನ್ನಸಾಮಗ್ರಿಗಳನ್ನು ಕಳುಹಲಿಕ್ಕೂ ಬ್ರಿಟಿಶರು ಸಿದ್ಧರಿದ್ದಾರೆ. ಬ್ರಿಟನಿನಿಂದ ರುಶ್ಯ ದೇಶಕ್ಕೆ ಮೂರು ಕೋಟಿ ಬೂಟುಗಳು ರವಾನೆಯಾದವು. ಅದೇ ಪ್ರಕಾರ ಸಕ್ಕರೆಯ ಚೀಲಗಳೂ ರವಾನೆಯಾದವು. ಬ್ರಿಟಿಶರು ಈಗ ತ್ಯಾಗಿಗಳಾಗಿರುವರೆಂದೂ, ಮುಂಭಾಗದಲ್ಲಿ ಹೋರಾಡುವ ರುಶ್ಯರಿಗಾಗಿ ಯಾವತ್ತೂ ಕಷ್ಟನಷ್ಟಗಳನ್ನು ಸಹಿಸಲು ಸಿದ್ಧರಿರುವರೆಂದೂ ಲಂಡನಿನ 'ಕಿಂಗಹೊಲ ನ್ಯೂಸಲೆಟರ' ಪತ್ರದಲ್ಲಿ ಉಲ್ಲೇಖವುಂಟು. ಬ್ರಿಟಿಶರ ಈ ಮನೋನಿರ್ಧಾರದಿಂದಲೇ ಹಿಟ್ಲರನಿಗೆ ಚಿಂತೆಯುಂಟಾಗಿದೆ! ಇರಾಣದ ಯುದ್ಧಕಾರಣಕ್ಕೆ ಈವಾಗ ಕಳೆಯೇರಲಿಕ್ಕೂ ಈ ಚಿಂತೆಯೇ ಕಾರಣ. ತುರ್ಕಸ್ಥಾನದ ಮೇಲೆ ಗಂಡಾಂತರ ಬರಲಿಕ್ಕಾದರೂ ಇದೇ ಕಾರಣ. ರೊಸ್ಟೋವ್ಹದಿಂದ ಮುನ್ನುಗ್ಗಿ ಕೊಕೆಸಸವನ್ನು ಆಕ್ರಮಿಸಿಕೊಳ್ಳುವ ಹಿಟ್ಲರನ ಯುದ್ಧ-ಕಾರಣಕ್ಕೆ, ಇರಾಣದೊಳಗಿಂದ ಯುದ್ಧಸಾಮಗ್ರಿಗಳನ್ನು ಪೂರೈಸುವ ಕ್ರಮದಿಂದ ಸ್ವಾಭಾವಿಕವಾದ ಆತಂಕವುಂಟಾಗುತ್ತದೆ. ಆದರಿಂದ ರುಶ್ಯರ ವಿರೋಧವನ್ನು ನಿರ್ಬಲಗೊಳಿಸುವ ದೆಸೆಯಿಂದ ಇರಾಣದ ಕಾರಣವನ್ನು ಹಿಟ್ಲರನು ಕೆಣಕತೊಡಗಿದ್ದಾನೆ. ಆದರಿಂದ ಈಗ ತುರ್ಕಸರಕಾರವು ಉಭಯ ಸಂಕಟದಲ್ಲಿ ಸಿಲುಕಿ ಪೇಚಾಡುತ್ತದೆಂದು ನನ್ನ ಅಭಿಪ್ರಾಯ. ಕಪ್ಪು ಸಮುದ್ರದೊಳಗಿನ ಸಂಕಟವನ್ನು 'ಡೇಲಿ ಹೆರಲ್ಡ'ದ ಇಸ್ತಂಬೂಲದ ಸುದ್ದಿಗಾರರು ಹೇಳಿದ್ದನ್ನು ನಾನು ಮೊದಲೇ ಉಲ್ಲೇಖಿಸಿಬಿಟ್ಟಿದ್ದೇನೆ. ತುರ್ಕಸ್ಥಾನದಲ್ಲಿಯೂ ಇನ್ನೂ ಭಯಂಕರ ಪ್ರಕಾರಗಳು ನಡೆಯತೊಡಗಿವೆ.

(೯ನೇ ಪುಟದ ಮೇಲೆ ಮುಂದುವರಿದಿದೆ)

ಸ್ಥಾನಿಕ ವೃತ್ತಾಂತ.

ಕುಮಟಾ——"ಇನ್ನೂ ಚಳಿ ಪ್ರಾರಂಭವಾಗಿಲ್ಲ ಇಡೀ ದಿನ ಸೆಕೆಯಾಗುತ್ತಿದೆ" ಯೆಂದು ಹೇಳಿದರೆ ತಪ್ಪಾಗದು! ಇತ್ತೀಚೆಗೆ [illegible] ಬೀಳುವದೂ ನಿಂತಿದೆ. ಇಂಥ ಹವೆಯ ಮೂಲಕ ಊರಲ್ಲಿ ಜ್ವರ ಬೇನೆಗಳು ಹಬ್ಬದೆ ಇರಲಾರವು? ನಗರ ಸಭೆಯವರು ಊರ ಸ್ವಚ್ಛತೆಯ ಕಡೆ ಸಾಕಷ್ಟು ಲಕ್ಷ ಪೂರೈಸುವದಿಲ್ಲೆಂದು ಬಹಳ ಜನರ ದೂರುಂಟು. ವಿಶೇಷತಃ ಓಣಿಗಳಲ್ಲಿರುವ ಹೊಲಸು ಹಾಗೆಯೇ ಕೊಳೆಯುತ್ತ, ನಾರುತ್ತ ಬಿದ್ದುಕೊಳ್ಳುತ್ತಿದೆ. ನಗರಸಭೆಯವರು ಇತ್ತ ಲಕ್ಷ ಕೊಡಬಹುದೇ?

ಶ್ರೀ ಶಂಕರನಾರಾಯಣ ದೇವರ ವನಭೋಜನದ ಉತ್ಸವವು ಪಾಡ್ಯದಂತೆ ಕಳೆದ ಸೋಮವಾರ ವಿಜೃಂಭಣೆಯಿಂದ ನೆರವೇರಿತು.

ಪುಣೆಯೊಳಗಿನ ಫರ್ಗ್ಯುಸನ್ ಕಾಲೇಜಿನಲ್ಲಿ ಬಹಳ ಕಾಲ ತತ್ವಜ್ಞಾನ ವಿಷಯದ ಪ್ರಾಧ್ಯಾಪಕರಾಗಿ [illegible] ಸಂಗಲಿಯಲ್ಲಿ ವಿಲಿಂಗ್ಡನ್ ಕಾಲೇಜು ಸ್ಥಾಪನೆಯಾದ ಬಳಿಕ [illegible] ವರ್ಷಗಳವರೆಗೆ ಆ ಕಾಲೇಜಿನ ಪ್ರಧಾನ ಅಧ್ಯಾಪಕರಾಗಿದ್ದ ಶ್ರೀ [illegible] ಭಾಟೇಯವರು ಹಲವು ದಿನಗಳಿಂದ ಈ ಜಿಲ್ಲೆಯಲ್ಲಿ ಸಂಚರಿಸುತ್ತಿದ್ದಾರೆ. ಕಾರವಾರ, ಅಂಕೋಲಾ, ಗೋಕರ್ಣ ಮೊದಲಾದ ಊರುಗಳನ್ನು ಸಂದರ್ಶಿಸಿ ಅವರು ಕಳೆದ ಬುಧವಾರ ಈ ಊರಿಗೆ ಬಂದಿದ್ದರು. ಗುರುವಾರ ಸಂಜೆಗೆ ಗಿಬ್ಬ ಹೈಸ್ಕೂಲಿನ ಥಿಯೇಟರ ಸಭಾಮಂದಿರದಲ್ಲಿ ಇಲ್ಲಿಯ ಸಬಜಜ್ಜರಾದ ಶ್ರೀ ಶಿವರಾಯರ ಅಧ್ಯಕ್ಷತೆಯ ಕೆಳಗೆ ಸೇರಿದ ಸಭೆಯಲ್ಲಿ "ಶಿಕ್ಷಣದ ನಿಜವಾದ ಗುರಿಯೇನು?" ಎಂಬ ವಿಷಯದ ಮೇಲೆ ಅವರದೊಂದು ವಿಸ್ತಾರವಾದ ವ್ಯಾಖ್ಯಾನವಾಯಿತು. ಶ್ರೀಯುತರು ಪ್ರಾಚೀನ ಹಾಗೂ ಅರ್ವಾಚೀನ ಶಿಕ್ಷಣ ಪದ್ಧತಿಗಳ ಗುಣದೋಷಗಳನ್ನು ತೋರಿಸಿಕೊಟ್ಟು ಶಿಕ್ಷಣದ ಗುರಿ ಸಾಧ್ಯವಾಗಬೇಕಾದರೆ ಅದು ಸರ್ವಾಂಗೀಣ ಮತ್ತು ಸಾರ್ವತ್ರಿಕವಾಗಬೇಕೆಂದೂ, ಸುಶಿಕ್ಷಿತರು ತಮ್ಮ ಜ್ಞಾನದ ಲಾಭವನ್ನು ತಮ್ಮ ತಮ್ಮ ಪ್ರದೇಶದ ಬಂಧು ಭಗಿನಿಯರಿಗೆ ಮಾಡಿಕೊಟ್ಟು ಅವರ ಉದ್ಧಾರದ ಜೊತೆಗೆ ಸ್ವಂತ ಉದ್ಧಾರವನ್ನೂ ಸಾಧಿಸಬೇಕೆಂದೂ, ಬರೀ ಬೌದ್ಧಿಕ ಶಿಕ್ಷಣಕ್ರಮವನ್ನೇ ಅನುಸರಿಸದೆ ತಮ್ಮ ತಮ್ಮ ರುಚಿ ಮನಃಪ್ರವೃತ್ತಿಗೆ ಒಪ್ಪುವಂತಹ ಕೆಲವೊಂದು ಹೊಸ ಕೈಗಾರಿಕೆಗಳನ್ನು ಕಲಿತು ಸ್ವಾವಲಂಬನದ ಮಾರ್ಗ ಹಿಡಿಯಲು ಸಿದ್ಧರಾಗಬೇಕೆಂದೂ ಬೋಧಿಸಿದರು. ಅವರು ನಡುನಡುವೆ ಸ್ವಾನುಭವದ ಸಂಗತಿಗಳನ್ನು ಉದಾಹರಿಸುತ್ತಿದ್ದರಿಂದ ವಿಷಯ ಪ್ರತಿಪಾದನೆಯು ಶ್ರೋತೃಗಳ ಮನಸ್ಸಿನ ಮೇಲೆ ಒಳ್ಳೆ [illegible] ಮೂಡುತ್ತಿತ್ತು. ಅಧ್ಯಕ್ಷರು ಸಭೆಯ ಮುಕ್ತಾಯ ಮಾಡುವಾಗ ಚಿಕ್ಕದೊಂದು ಭಾಷಣ ಮಾಡಿ, ಹೊಟ್ಟೆ ತುಂಬಿಕೊಳ್ಳುವ ಸಮಸ್ಯೆಯೇ ಜಗತ್ತಿನ ಜನರ ಮುಂದಿನ ಮುಖ್ಯ ಸಮಸ್ಯೆಯಾಗಿರುವದರಿಂದ ಶಿಕ್ಷಣದ ನಿರಪೇಕ್ಷ ಗುರಿಯ ಕಡೆಗೆ ಜನರು ಲಕ್ಷ ಕೊಡಲಾರರೆಂತಲೂ, ಈಗ ನಡೆದಿರುವ ಘನಘೋರ ಯುದ್ಧದ ಪರಿಣಾಮವೇನಾಗುವದೆಂದು ನಿಶ್ಚಿತವಾಗಿ ಹೇಳಬರುವದಿಲ್ಲೆಂದೂ ಅಭಿಪ್ರಾಯ ವ್ಯಕ್ತಗೊಳಿಸಿದರು. ಶ್ರೀ ಭಾಟೇಯವರು ಇಲ್ಲಿಯ ಬೇರೆ ಬೇರೆ ಸಂಸ್ಥೆಗಳನ್ನೂ ದೃಶ್ಯಗಳನ್ನೂ ನೋಡಿಕೊಂಡು, ಇಲ್ಲಿಂದ ಮುಂದೆ ಹೊನ್ನಾವರ, ಭಟಕಳ ಊರುಗಳನ್ನು ಸಂದರ್ಶಿಸಲು ಹೋಗಿರುತ್ತಾರೆ. ಕಾರವಾರ ಜಿಲ್ಲೆಯ ಪ್ರವಾಸದಲ್ಲಿ ಕಂಡುಬಂದ ಅನುಭವಗಳನ್ನೂ ಸಂಗತಿಗಳನ್ನೂ ಅವರು ಹಿಂದಿನಿಂದ ಪುಸ್ತಕರೂಪದಲ್ಲಿ ಪ್ರಕಟಿಸಲಿದ್ದಾರಂತೆ. ಹಿಂದೆ ಅವರು ದೇಶ-ವಿದೇಶಗಳಲ್ಲಿ ಸಂಚಾರ ಮಾಡಿ ೧೦-೧೨ ಪ್ರವಾಸ ವೃತ್ತಾಂತದ ಹೊತ್ತಿಗೆಗಳನ್ನು ತಮ್ಮ ಮಾತೃಭಾಷೆಯಾದ ಮರಾಠಿಯಲ್ಲಿ ಬರೆದು ಪ್ರಕಟಿಸಿದ್ದುಂಟು. ೭೨ ವರುಷದ ಮುದುಕರಾದರೂ ಶ್ರೀ ಭಾಟೇಯವರು ನವತರುಣರಂತೆ ಒಬ್ಬಂಟಿಗರಾಗಿ ದೇಶಸಂಚಾರ ಮಾಡುತ್ತ, ಅಲ್ಲಲ್ಲಿಯ ಇತಿಹಾಸದ ಹಾಗೂ ಪ್ರಚಲಿತ ಪರಿಸ್ಥಿತಿಯ ಆಳವಾದ ಮತ್ತು ಸೂಕ್ಷ್ಮ ಅಭ್ಯಾಸ ಮಾಡುತ್ತ, ತಮಗೆ ಕಂಡುಬರುವ ಸಂಗತಿಗಳನ್ನು ಬೋಧಪ್ರದ ರೀತಿಯಲ್ಲಿ ಬರೆದು ತೆಗೆಯುತ್ತಿರುವದನ್ನು ನೋಡಿದರೆ ಯಾರಿಗೆ ತಾನೇ ಆಶ್ಚರ್ಯವಾಗದು?

ಢಾಕಾ ಊರಿನ ೨೪ ವರ್ಷ ಪ್ರಾಯದ ತರುಣ [illegible] ಬಾಬು ನಲಿನಿ ಘೋಷ ಚೌಧರಿ ಇವರು ಈಗ ೧೬ ತಿಂಗಳಿಂದ ಕಾಲ್ನಡಿಗೆಯಿಂದಲೇ ಭಾರತವರ್ಷವನ್ನು ಸಂಚರಿಸುತ್ತಿದ್ದಾರೆ. ತಾ ೧೭-೭-೧೯೪೦ನೇಗೆ ಅವರು ಢಾಕಾದಿಂದ ಹೊರಟು ಈ ತನಕ ಬಂಗಾಲ, ಬಿಹಾರ, [illegible] ಮಧ್ಯಪ್ರಾಂತದ ಪೂರ್ವ ಭಾಗ, ಮೈಸೂರ, ಆಂಧ್ರದೇಶ, ತಮಿಳನಾಡು, ಮಲಬಾರ, ದಕ್ಷಿಣ ಕನ್ನಡ ಜಿಲ್ಲೆ ಇವೇ ಪ್ರದೇಶಗಳನ್ನು ಸಂಚರಿಸಿದ್ದಾರೆ, ೬೪೫೦ ಮೈಲು [illegible] ಕಳೆದ ತಾ. ೧೯ನೇಗೆ ಅವರು ಮಂಗಳೂರು ಬಿಟ್ಟು, ಹಾದಿಯಲ್ಲಿ [illegible] ಧರ್ಮಸ್ಥಳ, ಬೆಳ್ತಂಗಡಿ, [illegible] ಹಿರಿಯಡ್ಕ, ಉಡುಪಿ, [illegible] ಬೈಂದೂರ, ಮುರ್ಡೇಶ್ವರ ಮೊದಲಾದ ಊರುಗಳನ್ನು ಕಂಡು ೨೦೦ ಮೈಲು ಮಾರ್ಗಕ್ರಮಣ ಮಾಡಿ ಕಳೆದ ಸೋಮವಾರ ತಾ ೧೭ನೇ ಸಂಜೆಗೆ ಅವರು ಇಲ್ಲಿ ಬಂದು ಮುಟ್ಟಿದರು. ಬರೇ ದೇಶ ಅಥವಾ ಊರುಗಳನ್ನು ನೋಡಿ ನೇತ್ರಾನಂದದ ಸುಖವನ್ನನುಭವಿಸುವದಕ್ಕಾಗಿ ಅವರು ಈ ಪ್ರವಾಸ ಮಾಡುತ್ತಿಲ್ಲ. ಅಲ್ಲಲ್ಲಿಯ ಹಳ್ಳಿಗಳೊಳಗಿನ ಬಡಬಗ್ಗರ ಕಷ್ಟ-ನಷ್ಟಗಳನ್ನೂ ಹೀನ-ದೀನ ಪರಿಸ್ಥಿತಿಯನ್ನೂ, ಅದೇ ವೇಳೆಗೆ ಪಟ್ಟಣಗಳಲ್ಲಿ ಕಂಡುಬರುವ ನಾಗರಿಕತೆ ಮತ್ತು ವಿಲಾಸಗಳನ್ನೂ ಪ್ರತ್ಯಕ್ಷ ಅನುಭವದಿಂದ ಅವರು ಅಭ್ಯಸಿಸುತ್ತಿದ್ದಾರೆ. ಅಲ್ಲಲ್ಲಿಯ ಹೃದಯಂಗಮ ದೃಶ್ಯಗಳ ಮತ್ತು ಪುರಾತನ ಸ್ಮಾರಕ ವಸ್ತುಗಳ ಛಾಯಾ ಚಿತ್ರಗಳನ್ನೂ ಅವರು ತೆಗೆದುಕೊಳ್ಳುತ್ತಾರೆ. ೧೯೩೯ರಲ್ಲಿ ಇವರು ತಿಬೇಟ ಸಂಚಾರ ಕೈಕೊಂಡಿದ್ದರಂತೆ. ಆದರೆ ಅಸಾಮಕ್ಕೆ ಮುಟ್ಟುವಷ್ಟರಲ್ಲಿ ಕಾಲಿಗೆ ನೋವಾದ್ದರಿಂದ ಮುಂದಿನ ಪ್ರವಾಸವನ್ನು ರದ್ದುಗೊಳಿಸಿ ಮನೆಗೆ ಹಿಂದಿರುಗಿ ಬರಬೇಕಾಯಿತಂತೆ. ಯುದ್ಧ ಮುಗಿದ ಮೇಲೆ ತಿಬೇಟಕ್ಕೆ ಹೋಗಬೇಕೆಂದು ಅವರ ಸಂಕಲ್ಪವಿದೆ.

ಮುಂಬಯಿ ಸರಕಾರವು ಮ್ಯುನಿಸಿಪಾಲಿಟಿಗಳ ಈಗಿನ ಸೆಕ್ರೆಟರಿ ಹುದ್ದೆಗಳನ್ನು ತೆಗೆದು, ಅವರ ಸ್ಥಳದಲ್ಲಿ ಹೆಚ್ಚಿನ ಅಧಿಕಾರ ಕೊಟ್ಟು ತಾಲೂಕ ಶಿರಸ್ತೇದಾರ ದರ್ಜೆಯ ಸರಕಾರಿ ಹುದ್ದೇದಾರರನ್ನು ನೇಮಿಸುವ ನಿರ್ಣಯ ಮಾಡಿರುವದಾಗಿ ತಿಳಿಯುತ್ತದೆ. ಈ ಯೋಜನೆಯಿಂದ ಮ್ಯುನಿಸಿಪಾಲಿಟಿಗಳ ಆಡಳಿತದಲ್ಲಿ ಬಹಳ ಸುಧಾರಣೆಯಾಗುವಂತಿದೆ.

ಕಳೆದ ತಾ ೧೨ರಿಂದ ತಾ ೧೮ರ ತನಕ [illegible] ಧರ್ಮಶಾಲೆಯಲ್ಲಿ ನಡೆದ ಕೊಂಗ್ರೆಸ ವಿಧಾಯಕ ಸಪ್ತಾಹದಲ್ಲಿ ಪ್ರತಿ ದಿನ ಸಾಮುದಾಯಿಕ ಸೂತ್ರಯಜ್ಞ ನಡೆಯಿತು, ಏಳು ದಿನ ನೂಲುವ ಶಿಕ್ಷಣ ಕೊಡಲ್ಪಟ್ಟಿತು, ದಿನಾಲು

ವ್ಯವಹಾರ ವಿವೇಕ
ನನಗ ಹೇಳುತದೆ..

ನನ್ನಷ್ಟಕ್ಕೆ ನಾನು ಸ್ವತಂತ್ರವಾಗಿ ಯೋಚಿಸಬೇಕು

ನಾನು ನನ್ನ ಜೀವ, ನನ್ನ ಸಂಸಾರ ರಕ್ಷಿಸಿಕೊಳ್ಳಲೇಬೇಕು

ನನ್ನ ಹಣ ಕಾಪಾಡಿಕೊಳ್ಳಲೇಬೇಕು

ಆದ್ದರಿಂದ ಈಕ್ಷಣವೇ ಕಾರ್ಯೋನ್ಮುಖನಾಗಬೇಕು
ನಾನು ಕೊಳ್ಳಲೇಬೇಕು

ಡಿಫೆನ್ಸ್
ಸೇವಿಂಗ್ಸ್
ಸರ್ಟಿಫಿಕೇಟುಗಳನ್ನು

[illegible]

ಪ್ರತಿ ೧೦ ರೂಪಾಯಿನ
ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್
ರೂ [illegible] ಲಾಭದೊಡನೆ

ಪೋಸ್ಟಾಫೀಸಿನಲ್ಲಿ ಎಲ್ಲಾ ವಿವರವೂ ಸಿಗುತ್ತದೆ

ಸರಾಸರಿ ೪೦ ಜನ ಗಂಡಸರೂ ೮ ಮಂದಿ ಸ್ತ್ರೀಯರೂ ಈ ಕಾರ್ಯದಲ್ಲಿ ಭಾಗ ತೆಗೆದುಕೊಳ್ಳುತ್ತಿದ್ದರು ೫ ಮಂದಿ ಹುಡುಗಿಯರೂ ೧೨ ಜನ ಗಂಡಸರೂ ರಾಟಿಯ ಮೇಲೆ ನೂಲಲಿಕ್ಕೆ, ೧೫ ಹುಡುಗರು ತಕಲಿಯಿಂದ ನೂಲಲಿಕ್ಕೆ ಕಲಿತರು, ಇಡೀ ಸಪ್ತಾಹದಲ್ಲಿ ೬೫೦೦೦ ಗಜ ನೂಲು ನೂಲಲಾಯಿತಂತೆ ತಾ. ೧೫ನೇಗೆ ಕಾಂಗ್ರೆಸ ಕೆಲಸಗಾರರೂ ಹರಿಜನರೂ ಕೂಡಿ ಭಜನೆಯನ್ನೂ ಕೀರ್ತನೆಯನ್ನೂ ಮಾಡಿದರು ಎಲ್ಲರೂ ಕೂಡಿಯೇ ಒಟ್ಟಿಗೆ ಸೇರಿ ಉಪಹಾರ ತಕ್ಕೊಂಡರು ಕೊನೆಯ ದಿನ ಮಹಾತ್ಮರ ಭಾವಚಿತ್ರದೊಂದಿಗೆ ಮೆರವಣಿಗೆಯಾಯಿತು, ಮತ್ತು ರಾ| ಸದಾಶಿವ ರಾವ ಮಾಸೂರಕರವರ ಅಧ್ಯಕ್ಷತೆಯಲ್ಲಿ ಸಭೆಯಾಗಿ ರಾ| ತಿ ಶ್ರೀ. ನಾಯಕರ ಭಾಷಣವಾಯಿತು

ಇಲ್ಲಿಯ ಗಾಂಧಿ ಕುಟೀರದಲ್ಲಿ ಪ್ರತಿ ನಿತ್ಯ ಸಂಜೆ ೫|| ರಿಂದ ೭ ಘಂಟೆಯ ವರೆಗೆ ನೂಲುವ ಶಿಕ್ಷಣ ಕೊಡುವ ವರ್ಗವು ನಡೆಯುತ್ತಿದೆ

ಹೊನ್ನಾವರ— (೧೯-೧೧-೪೧) ಒಕ್ಕಲಿಗರು ಬೆಳೆಸಿದ ಧಾನ್ಯ ದವಸಗಳಿಗೆ ಯೋಗ್ಯ ಧಾರಣೆ ಸಿಗದೆ ಕಷ್ಟವಾಗಿರುವಲ್ಲಿ ತೀರ್ವೆಯೊಳಗೆ ಕೆಲವೊಂದು ಸೂಟು ಕೊಡಲು ಮುಂಬಯಿ ಸರಕಾರದವರು ನಿರ್ಧರಿಸಿ, ತೀರ್ವೆ ಹಿಡುವಳಿಯ ಕಾಲಕ್ಕಿದ್ದ ಧಾರಣೆಗಳಿಗೂ ಈ ವರ್ಷದ ಧಾರಣೆಗಳಿಗೂ ಇರುವ ವ್ಯತ್ಯಾಸಗಳನ್ನು ಕಂಡು ಹಿಡಿದು ತಮ್ಮ ತಮ್ಮ ಜಿಲ್ಹೆಯ ಬೇಸಾಯಗಾರರ ಪರಿಸ್ಥಿತಿಯ ಕುರಿತು ವರದಿಯನ್ನೊಪ್ಪಿಸಬೇಕೆಂದು ಜಿಲ್ಹಾಧಿಪತಿಗಳಿಗೆ ತಿಳಿಸಿರುತ್ತಾರೆಂದು ವಾರ್ತೆಯಿದೆ ನಮ್ಮಿ ನಾಡಿನಲ್ಲಿ ಈ ವರ್ಷ ಮಳೆಗಾಲದ ಪ್ರಾರಂಭಕ್ಕೆ ವಿಪರೀತ ಮಳೆಯಾದ್ದರಿಂದ ಬೀಜ ಬಳದುಹೋಗಿ, ಕೆಲವು ಕಡೆ ಹೊಲಗಳಲ್ಲಿ ಮಣ್ಣು, ಉಸುಬು ಮುಚ್ಚಿದ್ದು ಕೂಡ ಬಹಳ ಕಷ್ಟವಾದದ್ದುಂಟು, ಪುನಃ ಬಿತ್ತಿಗೆ ಮಾಡಲು ಬೀಜ ಸಿಗದೆ ನೂರಾರು ಹೊಲಗಳು ಬಂಜರು ಬಿದ್ದದ್ದುಂಟು, ಮುಂದೆ ಸಾಕಷ್ಟು ಮಳೆಯಾಗದ ಮೂಲಕ ಬೆಳೆ ಹಾಳಾದದ್ದುಂಟು, ಸರಿಯಾಗಿ ಮಳೆಯಾಗದ್ದರಿಂದ ಹೀನ ಬೆಳೆ ಬಂದ ತೋಟಗಳುಂಟು, ಯೋಗ್ಯ ಧಾರಣೆಯಿಲ್ಲದೆ ಒಕ್ಕಲಿಗರು ನಷ್ಟಕ್ಕೆ ಗುರಿಯಾದದ್ದುಂಟು ಸ್ಥಾನಿಕ ಅಧಿಕಾರಿಗಳು ಈ ಎಲ್ಲ ಪರಿಸ್ಥಿತಿಯನ್ನು ಮೇಲಧಿಕಾರಿಗಳಿಗೆ ಸವಿಸ್ತರ ಮತ್ತು ಸರಿಯಾಗಿ ತಿಳಿಸಿ ರೈತ ಜನರಿಗೆ ಯೋಗ್ಯ ಪರಿಹಾರ ದೊರಕಿಸಿ ಕೊಡುವದರಲ್ಲಿ ದುರ್ಲಕ್ಷ ಮಾಡಬಾರದಾಗಿ ನಮ್ರ ಸೂಚನೆಯಿದೆ ರೈತರಾದರೂ ತಮ್ಮ ಸ್ಥಿತಿಗತಿಯನ್ನು ಅಧಿಕಾರಿಗಳ ಮುಖಾಂತರ ಇಲ್ಲವೆ ಪ್ರತ್ಯಕ್ಷ ಜಿಲ್ಹಾಧಿಪತಿಗಳ ಭೆಟ್ಟಿ ತಕ್ಕೊಂಡು ಅರುಹಿಕೊಳ್ಳುವ ಸುಸಂಧಿಯನ್ನು ಕಳಕೊಳ್ಳಬಾರದಾಗಿ ಸೂಚನೆಯಿದೆ

ರಾಮತೀರ್ಥದಲ್ಲಿ ದುರುಸ್ತಿ ಕೆಲಸ ನಡೆದಿದೆ ಅದರಿಂದ ಈ ವರ್ಷ ಗೌಡಸಾರಸ್ವತ ಸಮಾಜದ ಮಠದ ವನಭೋಜನೆಯ ಉತ್ಸವವು ಮಠದಲ್ಲಿಯೇ ನಡೆಯಿತು

ಕಳೆದ ಸೋಮವಾರ ರಾತ್ರಿ ಇಲ್ಲಿಯ ಬಂದರದ ಮೇಲಿದ್ದ ಅಂಗಡಿಯೊಂದರಲ್ಲಿ ಕಳವಾಯಿತು ಕಳ್ಳರು ಅಂಗಡಿಯೊಳಗಿನ ಹಣದ ಪೆಟ್ಟಿಗೆಯನ್ನೇ ಒಯ್ದಿದ್ದರು ಮರುದಿನ ಅದು ಸ್ಮಶಾನ ಭೂಮಿಯಲ್ಲಿ ಸಿಕ್ಕಿತು! ಪೆಟ್ಟಿಗೆಯಲ್ಲಿದ್ದ ಹಣವೆಲ್ಲ ಮಾಯವಾಗಿತ್ತು!

(ತಾ ೨೦-೧೧-೪೧) ಇಂದು ಇಲ್ಲಿಯ ಪೋಲೀಸರ ಬೈಲಲ್ಲಿ ಶಾರೀರಿಕ ವ್ಯಾಯಾಮದ ಪಂದ್ಯಾಟಗಳು ನಡೆದವು ಪೋಲೀಸ ಸಾಹೇಬರು, ಪ್ರಾಂತ ಸಾಹೇಬ ರಾ| ಪುಟ್ಟಯ್ಯನವರು, ಮಾಮಲೇದಾರ ರಾ| ಹಿರೇಮಠದವರು, ಡಾ| ವಾಗಳೇ ಮೊದಲಾದ ಸ್ಥಾನಿಕ ಅಧಿಕಾರಿಗಳು, ಊರ ಪ್ರಮುಖರೂ ಕೂಡಿ ೨೦೦-೩೦೦ ಜನರು ಈ ಪಂದ್ಯಾಟಗಳನ್ನು ನೋಡ ಹೋಗಿದ್ದರು ಸೇಂಟ ಥೊಮಸ್ ಹೈಸ್ಕೂಲಿನ ಹಾಗೂ ಕಸಬಾ ಕನ್ನಡ ಶಾಲೆಯ ವಿದ್ಯಾರ್ಥಿಗಳೂ, ಹಲಕೆಲವು ನಾಗರಿಕ ಸೈನಿಕರೂ, ಪೋಲೀಸರೂ, ಪೋಲೀಸರ ಹುಡುಗರೂ ಪಂದ್ಯಾಟಗಳಲ್ಲಿ ಭಾಗ ತಕ್ಕೊಂಡಿದ್ದರು. ಪಂದ್ಯಾಟಗಳಲ್ಲಿ ಗೆದ್ದವರಿಗೆ ರಾ| ಫಿರಿ ಪೋಕರವರು ಬಹುಮಾನಗಳನ್ನಿತ್ತರು ಕೊನೆಗೆ ಹೈದರಾಬಾದದ ಕಡೆಯವನೊಬ್ಬನು ಹಸ್ತಲಾಘವದ ಪ್ರಯೋಗಗಳನ್ನು ಮಾಡಿತೋರಿಸಿದನು

ತಾ ೧೭-೧೧ ೪೧ರ "ವೃತ್ತ"ದಲ್ಲಿ ಬಂದ ಟೀಕೆಯನ್ನು ಉದ್ದೇಶಿಸಿ ತೂಕಳತೆಗಳ ಇಲಾಖೆಯ ಅಧಿಕಾರಿಗಳು ತಿಳಿಸುವದೇನಂದರೆ — ನಾವು ಜಪ್ತ ಮಾಡಿದ ೨ ೨ ಮಣಗಳ ಕಲ್ಲುಗಳು ಹೊಯ್ದ ಕಬ್ಬಿಣದವು (Cast iron) ಇದ್ದದರಿಂದ ಮೊದಲೇ ದೋಷಪೂರ್ಣವಿದ್ದವು ಅವುಗಳ ತಪ್ಪುಗಳನ್ನು ದುರುಸ್ತ ಮಾಡಹೋದರೆ ಅವು ಇನ್ನಷ್ಟು ಹಾಳಾಗಿ ಹೋಗುತ್ತಿದ್ದವು ಕಾಯಿದೆಗೆ ಸರಿಯಾಗಿ ಅವನ್ನು ಸಂಸ್ಕರಿಸಿಕೊಳ್ಳುವದು ಸಾಧ್ಯವೇ ಇದ್ದಿಲ್ಲ ಈ ೨ ಕಲ್ಲುಗಳ ವಿನಹ ಈ ಸಾರೆಯ ತಪಾಸಣೆಯಲ್ಲಿ ಬೇರೆ ಅವ ಕಲ್ಲುಗಳನ್ನು ನಾವು ಜಪ್ತ ಮಾಡಿರುವದಿಲ್ಲ "ವೃತ್ತ"ದಲ್ಲಿ ಕಲ್ಲುಗಳ ಜಪ್ತಿಯ ಸುದ್ದಿ ಕೊಟ್ಟ ಬಗ್ಗೆ ನಾವು ಆಕ್ಷೇಪಿಸಿಲ್ಲ ಒರಟು ಉತ್ತರ ಕೊಟ್ಟವೆಂಬ ಮಾತಿನ ಬಗ್ಗೆ ನಾವು ಚೌಕಶಿ ಮಾಡಿದ್ದೇವಷ್ಟೇ ಒರಟು ಮಾತಾಡಿದರೆಂದು ನಾವೇನು ಸುದ್ದಿ ಕೊಟ್ಟಿಲ್ಲವಾಗಿ ಸದರಿ ಕಲ್ಲುಗಳ ಮಾಲೀಕರು ಹೇಳಿದರು ಆದರೆ ಜಪ್ತಾದ ಕಲ್ಲುಗಳ ಸುದ್ದಿ 'ವೃತ್ತ'ದಲ್ಲಿ ಬಂದದ್ದು ನೋಡಿ ಮೇಲಧಿಕಾರಿಗಳು ನಮ್ಮ ಕಡೆ ವಿಚಾರಿಸಿದರೆ ನಾವು ಆ ಕಲ್ಲುಗಳನ್ನು ಹಾಜರಪಡಿಸಬೇಕಾಗುವದರಿಂದ ಕಲ್ಲುಗಳನ್ನು ತಿರುಗಿ ಕೊಡಬರುವದಿಲ್ಲೆಂದು ನಾವು ಹೇಳಿದ್ದೆವು. ಇದು ಕಾಂಟ ನೆವವೋ ಹೇಗೆಂಬದನ್ನು ವಾಚಕರೇ ಊಹಿಸಲಿ ನಮಗೆ ಯಾರ ಮೇಲೂ ಹಗೆತನವಿಲ್ಲ ಮೇಲಧಿಕಾರಿಗಳ ಅಪ್ಪಣೆಗಳ ಮೇರೆಗೆ ಕಾಯಿದೆಯ ಸರಿಯಾದ ಅಮಲಬಜಾವಣೆ ಮಾಡುತ್ತಿದ್ದೇವಷ್ಟೇ ಸುದ್ದಿಗಾರರು ಕಾಯಿದೆಯ ಯಾ ನಿಯಮಗಳ ಮಾಹಿತಿ ಮಾಡಿಕೊಳ್ಳದೆ ನಮ್ಮನ್ನು ದೂಡುವದು ನ್ಯಾಯ್ಯವಲ್ಲ. ಇತ್ಯಾದಿ

ನಾಗರಿಕರೊಬ್ಬರು ಬರೆಯುತ್ತಾರೆ — ಇಲ್ಲಿಯ ನ್ಯೂ ಇಂಗ್ಲಿಷ ಶಾಲೆಯಲ್ಲಿ ಯಾವ ಶಿಕ್ಷಕರಿಗೂ ಸ್ಥೈರ್ಯವಿಲ್ಲ ಶಿಕ್ಷಕರು ಬರುತ್ತಾರೆ, ಬಂದ ಕೆಲವು ಕಾಲದಲ್ಲೇ ನಾಯಕರು ಕೊಡುವ ಸಂಬಳ, ಬಡತಿಗಳನ್ನು ನೋಡಿ ಇಲ್ಲವೆ ಶಾಲೆಯೊಳಗಿನ ಪರಿಸ್ಥಿತಿಗೆ ಬೇಸತ್ತು ಜಾರಿ ಹೋಗುತ್ತಾರೆ ಶಾಲೆಯ ಪ್ರಾರಂಭವಾದಂದಿನಿಂದ ಮೊನ್ನೆಯ ತನಕ ರಾ| ಪಿ ಎಸ್ ಶಾನಭಾಗರು ಈ ಶಾಲೆಯಲ್ಲಿದ್ದರು. ಅವರ ಸಂಬಳ ರೂ ೨೦ಕ್ಕಿಂತ ಹೆಚ್ಚಿಗಿಲ್ಲ! ಅದರೂ ೧೦ ವರ್ಷಗಳ ಕಾಲ ಅವರು ಶಾಲೆಯಲ್ಲಿ ಸೇವೆ ಮಾಡಿದವರು ಅವರನ್ನು ಈಗ ತಳ್ಳಿ ಹಾಕಿದ್ದಾರಂತೆ! ಶಾಲಾ ನಾಯಕರ ಈ ವರ್ತನೆಯಿಂದ ಶಾಲೆಯು ಒಂದಿಲ್ಲೊಂದು ದಿನ ಮುಚ್ಚುವ ಪ್ರಸಂಗ ಬರದಿರಲಾರದು ಕಾರಣ ಊರ ನಾಗರಿಕರು ಈ ಶಾಲೆಯ ಕಾರಭಾರದಲ್ಲಿ ತುಸು ಲಕ್ಷ ಹಾಕಿ ಅದನ್ನು ಸುಧಾರಿಸುವ ಪ್ರಯತ್ನ ಮಾಡಬೇಕಾಗಿ ಆರಿಕೆಯಿದೆ

ಶಿರಾಲಿ— (ತಾ ೨೧-೧೧-೪೧) ದಕ್ಷಿಣ ಕನ್ನಡ ಜಿಲ್ಹೆಯಿಂದ ಈ ಬದಿಗೆ ಕಳ್ಳತನದಿಂದ ಗಾಂಜಾ ಸೊಪ್ಪು ಬಹಳ ಆಮದಾಗುತ್ತಿದೆ ಕೆಲವು ಅಂಗಡಿಕಾರರು ಗಾಂಜಾ ಮಾರುತ್ತಾರೆಂತಲೂ ಗುಪ್ತ ವಾರ್ತೆಯಿದೆ ಅಧಿಕಾರಿಗಳು ಇತ್ತ ಲಕ್ಷ ಕೊಟ್ಟು ಈ ಕಳ್ಳ ವ್ಯಾಪಾರವನ್ನು ನಿರ್ಮೂಲಿಸಬೇಕು

ವೆಂಕಟಾಪುರ ಹಾಯಿಯಲ್ಲಿ ಕಾಲ್ನಡಿಗೆಯ ಪ್ರವಾಸಿಗರಿಗೆ ಬಹಳ ತೊಂದರೆಯಾಗುತ್ತಿದೆ ಹಾಯಿ ದಾಟಬೇಕಾದರೆ ಅವರು ೧ ೧| ಕಾಸು ಜಾಸ್ತಿ ಕೊಡಬೇಕಾಗುತ್ತದೆಯಂತೆ! ಅಧಿಕಾರಿಗಳು ಗುತ್ತಿಗೆದಾರರಿಗೆ ತುಸು ಎಚ್ಚರಿಕೆ ಕೊಡುವದೊಳಿತು.

ಮುಂಡಳ್ಳಿಯ ಕೆಥೊಲಿಕ್ ರಾತ್ರಿ ಶಾಲೆಯ ಶಿಕ್ಷಕರಾಗಿದ್ದ ರಾ| ಲಕ್ಷ್ಮಣ ಅನಂತ ಭಟ್ಟ ಬಡ್ಡುಕುಳಿಯವರು ಕಳೆದ ತಾ ೧೫ನೇಗೆ ಭಟಕಳದಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವ್ಯಸನವಾಗುತ್ತಿದೆ ಅವರು ಏಕನಿಷ್ಠ ಕಾಂಗ್ರೆಸ ಸೇವಕರಾಗಿದ್ದು ೧೯೩೦ರ ಸತ್ಯಾಗ್ರಹದ ಸಂಗ್ರಾಮದಲ್ಲಿ ೨ ಸಾರೆ ಸುರಂಗಕ್ಕೂ ಹೋಗಿದ್ದರು ಇತ್ತೀಚೆಗೆ ೪-೫ ಗಾಂವಿ

ನೋಟೀಸಿಗೆ ಉತ್ತರ.

ಈ ಕೆಳಗೆ ಸಹಿ ಮಾಡುವವರು ನರಸಿಂಹ ನಾರಾಯಣ ಭಟ್ಟ ಅಂತ್ರವಳ್ಳಿ ಇವರಿಗೆ ತಿಳಿಸುವದೇನಂದರೆ —

ನಿಮ್ಮ ನೋಟೀಸಿನ ಮಜಕೂರು ಬರೇ ಸುಳ್ಳು ಇರುತ್ತದೆ. ನಿಮಗೆ ೬೫ ಖಂಡಿ ಭತ್ತ ಕೊಡುತ್ತೇವೆಂತಾ ಯಾವ ಭಜಕರೂ ಹೇಳಿದ್ದು ಇಲ್ಲಾ. ಬರೇ ೨೬ ಖಂಡಿ ಭತ್ತವೆಂತಾ ಕುಮಟಾ ಕೋರ್ಟ ಮೂಲ ನಂಬರ ೨೫-೧೯೨೬ನೇದರಲ್ಲಿ ನಿಖಾಲೆಯಾಗಿರುತ್ತದೆ ನಿಮ್ಮ ಅಜ್ಜ ವಗೈರೆರು ಸನ್ ೧೮೬೬ನೇ ಇಸ್ವಿಯಲ್ಲಿ ನಮ್ಮ ದಾಯಾದಿ ರಂಗೆ ನಾಯ್ಕರ ಕುಟುಂಬಕ್ಕೆ ಪರ ಸಾಲ ಕೊಡತಕ್ಕ ಭತ್ತ ಖಂಡಿ ೧೫ ಎಂತಾ ಸದ್ರಿ ದಾವೆಯಲ್ಲಿ ನಿಮ್ಮ ತಂದೆಯವರು ಕಬೂಲ ಮಾಡಿರುತ್ತಾರೆ. ಸದರಿ ಭತ್ತ ಖಂಡಿ ೧೫ ಅಂತ್ರವಳ್ಳಿ ಗ್ರಾಮದ ಸರ್ವೆ ನಂಬರ ೨೫ರ ಜವಾಬದಾರಿಯಿಂದಾ ಶ್ರೀ ಗಣಪತಿ ದೇವರ ನಿತ್ಯ ನೈವೇದ್ಯಕ್ಕೆ ಸಲ್ಲುವದು ಇದ್ದು, ಸದ್ರಿ ಭೂಮಿ ನೀವಾಗಲಿ ನಿಮ್ಮ ಕುಟುಂಬದವರಾಗಲಿ ಆಡವು, ಕ್ರಯ ಅಥವಾ ಕೋರ್ಟ ವಿಕ್ರಿ ಕೂಡಾ ಮಾಡಲಿಕ್ಕೆ ಅಧಿಕಾರವಿಲ್ಲಾ ನಿಮಗೆ ಮೇಲು ಪೂಜೆ ಬಗ್ಗೆ ನಾವಾಗಲಿ ನಮ್ಮ ಕುಟುಂಬದವರಾಗಲಿ ಲೇಖಿ ಶಾಸನ ಮಾಡಿಕೊಟ್ಟಿದ್ದು ಇಲ್ಲಾ. ನಮ್ಮ ಕುಟುಂಬದವರ ಖುಶಿಯಂತೆ ಮಾಡಿಸುವ ಅಧಿಕಾರ ನಮ್ಮದೇ ಇರುತ್ತದೆ ನೀವು ದೇವರ ಪೂಜೆ ಬಿಡಬೇಕಾದರೆ ನಿಮ್ಮ ವ ನಿಮ್ಮ ಕುಟುಂಬದವರ ಕಡೆಗೆ ಇದ್ದ ಶ್ರೀ ದೇವರ ದಾಗಿನೆ, ಕಂಚು ತಾಮ್ರದ ಹಿತ್ತಾಳಿ ಪಾತ್ರೆ ವ ನಗದಿ ಕಾಣಿಕೆ ಕೂಡಾ ಒಪ್ಪಿಸಿಕೊಟ್ಟು, ಗ್ರಾಮದ ಭಜಕರಿಗೆ ಕೂಡಿಸಿಕೊಂಡು ದೇವರ ಪೂಜೆ ಬಿಡುವರೆ ಹರಕತು ಇಲ್ಲಾ. ಈ ಬಗ್ಗೆ ಹಿಂದೆ ಲೇಖಿ ನೋಟೀಸುಗಳು ಸಹ ಆಗಿರತ್ತವೆ. ವರ್ಷಾಸನ ಖಂಡಿ ೨೬ರಂತೆ ಭತ್ತ ಪೂರಾ ಭಜಕರು ನಿಖಾಲೆ ಮಾಡಿರುತ್ತಾರೆ. ಬಾಕಿ ಸಲ್ಲತಕ್ಕದ್ದು ಏನೂ ಇಲ್ಲಾ

ತಾರೀಖು ೨೩-೧೧-೧೯೪೧.

ದೇವರಾವ ಪುಂಡಲೀಕ ದೇಸಾಯಿ.
ರಾಮಚಂದ್ರ ಸಾಂಬ ದೇಸಾಯಿ ರುಜು

ಇತ್ತ ಲಕ್ಷಗೊಡಿರಿ! ಇತ್ತ ಲಕ್ಷಗೊಡಿರಿ!!

ಅಗತ್ಯದ ಸೂಚನೆ.

ಸದ್ಯ ಚಾಲತಿಯಲ್ಲಿ ಇಲ್ಲದ ವಿಕ್ಟೋರಿಯಾ, ವಿಲಿಯಂ, ಶಿಂಡೆರಾಣಿ ಛಾಪೆಯ ರೂಪಾಯಿ. ಅರ್ಧ ರೂಪಾಯಿ ಮತ್ತು ಗೋವಾ, ಅಲ್ವಾರ ಬಿಕಾನೇರ ಸ್ಟೇಟಿನ ರೂಪಾಯಿ. ವಗೈರೆ ನಾಣ್ಯಗಳು ಯೋಗ್ಯ ದರದಿಂದ ಕೊಳ್ಳಲ್ಪಡುವವು

— ಇಂದೇ ವಿಚಾರಿಸಿರಿ —

ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ

ಶಾಲೆಗಳ ವ್ಯವಸ್ಥೆಯನ್ನೂ ಮಾಡುತ್ತಿದ್ದರು. ರಾ॥ ಭಟ್ಟರಂತಹ ಜನಪ್ರಿಯ ಲೋಕಸೇವಕರು ಅಕಾಲದಲ್ಲಿ ಕಣ್ಮರೆಯಾದದ್ದು ದುರ್ದೈವವೇ ಸರಿ. ಮೃತಾತ್ಮರಿಗೆ ದೇವರು ಶಾಂತಿಯನ್ನೀಯಲಿ!

ಶಿರ್ಶಿ— (ತಾ. ೧೮-೧೧-೪೧) ಇಲ್ಲಿಯ ಶ್ರೀ ವಿಷ್ಣುವೆಂಕಟೇಶ ದೇವರ ವನಭೋಜನ ಮತ್ತು ಕಾರ್ತಿಕೋತ್ಸವವು ಕಳೆದ ಶುಕ್ರವಾರ ಜರುಗಿತು. ಶ್ರೀ ವಿಷ್ಣುವೆಂಕಟೇಶ ನಾಟಕ ಮಂಡಳಿಯವರು ಅಂದು ರಾತ್ರಿ ದೇವರೆದುರಿಗೆ "ಕಬೀರದಾಸ" ಎಂಬ ನಾಟಕವನ್ನು ಅಭಿನಯಿಸಿದರು.

ಹಿಂದೆ ನಾಲ್ಕೈದು ದಿನ ಚಲೋ ಚಳಿ ಬಿತ್ತು. ಈಗ ಕಡಿಮೆಯಾಗಿದೆ. ಊರಲ್ಲಿ ಬೇನೆ ಬೇಸರಿಕೆಗಳು ಇವೆ.

ನಿಲೇಕಣಿ ಶಾಲೆಯ ಶಿಕ್ಷಕ ರಾ॥ ಗಣಪತಿ ಅ. ಹೆಗಡೆಯವರಿಗೆ ಕಸಬಾ ಶಾಲೆಗೆ ವರ್ಗವಾಗಿದೆ. ರಾ॥ ಹೆಗಡೆಯವರು ನೂತನ ಪದ್ಧತಿಯಿಂದ ಕಲಿಸುತ್ತಾರೆ. ಅವರ ಕಾಲದಲ್ಲಿ ನಿಲೇಕಣಿ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ ೩-೩॥ ಪಟ್ಟಿಗೆ ಬೆಳೆದಿತ್ತು.

ಕಾರವಾರ— (ತಾ. ೨೧-೧೧-೪೧) ಜಿಲ್ಲಾಧಿಪತಿ-ಮಿ॥ ಜಬುತ್ಕಾರವರು ನಾಳೆ ಬೋಳಶಿಟ್ಟಿಗೆ ಹೋಗುತ್ತಾರೆ. ತಾ. ೨೬ರ ವರೆಗೆ ಅವರು ಅಲ್ಲೇ ಉಳಿಯುವರು. ಮುಂದೆ ತಾ. ೨೬ರಿಂದ ೨೯ರ ವರೆಗೆ ಕದ್ರೆಯಲ್ಲಿ ಮುಕ್ಕಾಮು ಮಾಡಿ, ತಾ. ೩೦ಕ್ಕೆ ಇಲ್ಲಿ ಬಂದು ತಾ. ೧-೧೨-೪೧ಕ್ಕೆ ಮಾಜಾಳಿಗೆ ಹೋಗುವರು. ತಾ. ೬ರ ತನಕ ಅವರ ಮುಕ್ಕಾಮು ಅಲ್ಲೇ ಆಗುವದು.

ತಾ. ೧೧-೧೧-೪೧ರ "ವೃತ್ತ"ದಲ್ಲಿ ಪ್ರಕಟವಾದಂತೆ ಕಾರವಾರ ಅರ್ಬನ ಸಹಕಾರಿ ಬೇಂಕಿನವರು ಸುಪರವಾಯಿಝಿಂಗಯೂನಿಯನ್ನಿನವರು ಏರ್ಪಡಿಸಿದ "ಸಹಕಾರಿ ಹಬ್ಬ"ದ ಉತ್ಸವದಲ್ಲಿ ಅಸಹಕಾರ ಮಾಡಿದ್ದಿಲ್ಲವೆಂದು ಯೂನಿಯನ್ನಿನ ಚೆಅರಮನ್ನರು ತಿಳಿಸುತ್ತಾರೆ.

ಅಚೆಯ ವಾರ ವಿಲಿಂಗ್ಡನ್ ಕೊಲೇಜಿನಲ್ಲಿ ಹಿಂದೆ ಪ್ರಧಾನಾಧ್ಯಾಪಕರಾಗಿದ್ದ ಶ್ರೀ॥ ಭಾಟೇಯವರು ಈ ಊರಿಗೆ ಬಂದಿದ್ದರು. ರವಿವಾರ ಸಂಜೆ ಮಿತ್ರಸಮಾಜದಲ್ಲಿ ರಾ॥ ಡಿ. ವ್ಹಿ. ಎಣ್ಣೆಮಡಿಯವರ ಅಧ್ಯಕ್ಷತೆಯಲ್ಲಿ ಅವರೊಂದು ವ್ಯಾಖ್ಯಾನ ಕೊಟ್ಟರು. ಶಿಕ್ಷಣದ ಧ್ಯೇಯವೆಂಬುದು ಅವರ ಪ್ರತಿಪಾದ್ಯ ವಿಷಯವಿತ್ತು. ವ್ಯಾಖ್ಯಾನದ ಸಾರಾಂಶ ಈ ಕೆಳಗಿನಂತಿದೆ:— ನಮ್ಮ ಹಿರಿಯರ ಶಿಕ್ಷಣ ಪದ್ಧತಿಯೇ ಬೇರೆ; ಈಗಿನ ಶಿಕ್ಷಣ ಪದ್ಧತಿಯೇ ಬೇರೆ. ಹಿರಿಯರ ಕಾಲದಲ್ಲಿ ಒಂದೊಂದೇ ವಿಷಯದಲ್ಲಿ ಪ್ರಾವೀಣ್ಯ ಸಂಪಾದಿಸುತ್ತಿದ್ದರು. ಈಗ ನಾವು ಪ್ರತಿಯೊಂದು ವಿಷಯದ ಪರಿಚಯ ಮಾಡಿಕೊಳ್ಳುತ್ತೇವೆ. ಈ ಪದ್ಧತಿಯ ಮೂಲ ಪ್ರವರ್ತಕರು ಮೆಕೋಲೆ ದೊರೆಗಳಿರುತ್ತಾರೆ. ಮೆಕೋಲೆಯವರ ಹೇತು ಏನೇ ಇದ್ದಾಗ್ಯೂ ಸರಕಾರದವರು ಮಾತ್ರ ತಮಗೆ ಬೇಕಾದ ನೌಕರರನ್ನು ತಯಾರಿಸಿಕೊಳ್ಳುವದಕ್ಕಾಗಿಯೇ ಈ ಪದ್ಧತಿಯ ಪ್ರಯೋಜನ ಮಾಡಿಕೊಂಡರು. ಇಂಗ್ಲಿಷ ಕಲಿತವರಿಗೆ ಆಗ ನೌಕರಿಗಳು ಸಿಗುತ್ತಿದ್ದವು. ಇಲ್ಲವೆ ಅವರು ವಕೀಲರು ಯಾ ಡಾಕ್ಟರರಾಗುತ್ತಿದ್ದರು. ಮುಂದೆ ನೌಕರಿಗಳು ದುರ್ಲಭವಾಗಹತ್ತಿದವು. ಈಗಂತೂ ೧ ಸ್ಥಳಕ್ಕೆ ೨೦೦-೩೦೦ ಅರ್ಜಿಗಳಾಗುತ್ತಿವೆ ? ಆದರಿಂದ ಶಿಕ್ಷಣದ ಕ್ರಮವನ್ನು ಬದಲಿಸಬೇಕಾಗಿದೆ. ಮಾನವನ ಸರ್ವಾಂಗೀಣ ಉನ್ನತಿಯನ್ನು ಮಾಡಿತಂದು ಅವನಿಗೆ ಸ್ವಾವಲಂಬಿ ಮಾಡುವದೇ ಶಿಕ್ಷಣದ ಗುರಿಯಾಗಿರಬೇಕು. ಶಿಕ್ಷಣ ಕ್ರಮದಲ್ಲಿ ಬೌದ್ಧಿಕ ವಿಕಾಸದೊಂದಿಗೆ ಶಾರೀರಿಕ ಬೆಳವಣಿಗೆಯ ಕಡೆಗೂ, ಸಾತ್ವಿಕ ಭಾವನೆಗಳ ಬೆಳವಣಿಗೆಯ ಕಡೆಗೂ ಲಕ್ಷ ಕೊಡಬೇಕು. ಅವರವರ ಪ್ರಕೃತಿ, ಮನೋವೃತ್ತಿ, ಅಭಿರುಚಿಗಳನ್ನು ನೋಡಿ ಅವರಿಗೆ ಒಪ್ಪುವಂತಹ ಕೈಗಾರಿಕೆ ಇಲ್ಲವೆ ಹೋರೆ ಕಲಿಸುವ ಏರ್ಪಾಟು ಇರಬೇಕು. ಶಿಕ್ಷಣ ಕ್ರಮ ಹೇಗಿರಬೇಕೆಂಬ ಬಗ್ಗೆ ಈಗ ತಜ್ಞರು ಊಹಾಪೋಹ ನಡಿಸಿದ್ದಾರೆ. ಯಾರದೂ ಒಮ್ಮತವಾಗುವದಿಲ್ಲ. ಆದರೆ ಮೇಲಿನಂತೆ ಶಿಕ್ಷಣದ ಧ್ಯೇಯವಿರತಕ್ಕದ್ದೆಂಬ ಬಗ್ಗೆ ಒಮ್ಮತವಿದೆ. ಶಿಕ್ಷಣವನ್ನು ಮಾತೃಭಾಷೆಯಲ್ಲಿ ಕೊಡುವದುತ್ತಮ. ಬೇರೆ ಭಾಷೆಗಳನ್ನು ಕಲಿಸುವ ಏರ್ಪಾಟು ಇರಲಡ್ಡಿಯಿಲ್ಲ. ಇಂಗ್ಲಂಡದಲ್ಲಿ ಸಹ ಫ್ರೆಂಚ, ಜರ್ಮನ್ ಮೊದಲಾದ ಯುರೋಪಿಯನ್ ಭಾಷೆಗಳನ್ನು ಕಲಿಸುತ್ತಾರೆ. ಆದರೆ ಶಿಕ್ಷಣವೆಲ್ಲ ಇಂಗ್ಲಿಶ ಭಾಷೆಯಿಂದಲೇ ಸಾಗುತ್ತಿದೆ. ಈ ಊರೊಳಗಿನ ಶಾಲೆಗಳಲ್ಲಿ ಕನ್ನಡ, ಮರಾಠಿ, ಕೊಂಕಣಿ ಭಾಷೆಗಳಲ್ಲಿ ಕಲಿಸುತ್ತಿದ್ದುದು ನನ್ನ ಕಣ್ಣಿಗೆ ಬಿದ್ದಿದೆ. ಇದೇ ಪದ್ಧತಿಯು ಪ್ರಚಾರವಾಗಬೇಕು. ಸುಶಿಕ್ಷಿತರು ಶಿಕ್ಷಣ ಮುಗಿಯುತ್ತಲೇ ಪುಸ್ತಕಗಳನ್ನು ಕಟ್ಟಿಡತಕ್ಕದ್ದಲ್ಲ. ಹೊಸ ಹೊಸ ಪುಸ್ತಕಗಳನ್ನು ಸಂಪಾದಿಸಿ ಅಭ್ಯಾಸವನ್ನು ಮುಂದೆ ನಡಿಸುತ್ತಿರಬೇಕು. ಇಂಗ್ಲಂಡದೊಳಗೆ ಪ್ರತಿಯೊಂದು ಮನೆಯಲ್ಲಿ ಪುಸ್ತಕಸಂಗ್ರಹವಿರುತ್ತದೆ. ನಮ್ಮಲ್ಲಿ ಶ್ರೀಮಂತರೂ ದೊಡ್ಡವರೂ ವಸ್ತುಸಂಗ್ರಹ ಬೇಕಾದರೆ ಮಾಡುತ್ತಾರೆ! ಪುಸ್ತಕಸಂಗ್ರಹ ಮಾಡುವದರ ಕಡೆ ಅವರ ಮನಸ್ಸು ಹೋಗಲೊಲ್ಲದು! ರಾಜಭಾಷೆಯೆಂದು ನಾವು ಇಂಗ್ಲಿಶ ಕಲಿಯಬೇಕು. ಆದರೆ ಎಲ್ಲ ವ್ಯವಹಾರವನ್ನು ಇಂಗ್ಲಿಶದಲ್ಲಿ ನಡಿಸುವದು ಸರಿಯಲ್ಲ. ಹಾಗೆ ಮಾಡಿದಲ್ಲಿ ಜನಸಾಮಾನ್ಯರಿಗೂ ಸುಶಿಕ್ಷಿತರಿಗೂ ಸಂಬಂಧ ತಪ್ಪಿ ಹೋಗುತ್ತದೆ. ಆದ್ದರಿಂದ ಮಾತೃಭಾಷೆಯಿಂದಲೇ ವ್ಯವಹಾರ ಮಾಡಬೇಕು. ನಾವು ಪರಕೀಯ ವಾಙ್ಮಯದಲ್ಲಿ ಕಲಿತ ಜ್ಞಾನವನ್ನೂ ಅನುಭವವನ್ನೂ ಸ್ವಭಾಷೆಯಿಂದ ಸ್ವಜನರಿಗೆ ದಾನ ಮಾಡಬೇಕು. ದಿವಂಗತ ವಿಷ್ಣುಶಾಸ್ತ್ರಿ ಚಿಪಳೂಣಕರರು ಈ ಮಾರ್ಗ ಹಾಕಿಕೊಟ್ಟವರಲ್ಲಿ ಅಗ್ರಗಣ್ಯರು. ನಾನೂ ಅವರ ಮಾರ್ಗ ಅನುಸರಿಸಿ ಮಾತೃಭಾಷೆಯಾದ ಮರಾಠಿಯಲ್ಲೇ ಲೇಖನ ವ್ಯವಸಾಯ ನಡಿಸಿದ್ದೇನೆ. ನಮಗೆ ಶಿಕ್ಷಣ ಸಿಗುವದು ಸಾರ್ವಜನಿಕರ ಹಣದ ಸಹಾಯದಿಂದಲೇ ಇರುವದರಿಂದ ನಮ್ಮ ಜ್ಞಾನದ ಲಾಭವನ್ನು ಸಾರ್ವಜನಿಕರಿಗೆ, ಜನಸಾಮಾನ್ಯರಿಗೆ ಮಾಡಿಕೊಡಬೇಕಾದುದು ನಮ್ಮ ಕರ್ತವ್ಯವೇ ಸರಿ. ಸುಶಿಕ್ಷಿತರು ಕೈಕೆಲಸ ಮಾಡಲಿಕ್ಕೆ ಹಿಂಜರಿಯಬಾರದು. ಪ್ರಾಮಾಣಿಕತನದಿಂದ ಮಾಡಿದ ಯಾವ ಕೆಲಸವಾದರೂ ನಾಚಿಕೆಗೇಡಿಯಾಗಲಾರದು. ಹೀಗೆ ಮಾಡಿದಲ್ಲಿ ಇಂದು ಭೀಷಣವಾಗಿರುವ ನಿರುದ್ಯೋಗ ಸಮಸ್ಯೆ ತಾನಾಗಿ ಬಿಡಿಸಲ್ಪಡುವದು ಇತ್ಯಾದಿ. ಇಲ್ಲಿಯ ಉಭಯ ಹಾಯಸ್ಕೂಲಗಳ ಹಾಗೂ ಬಾಲ ಇಂಗ್ಲಿಶ ಶಾಲೆಯ ವಿದ್ಯಾರ್ಥಿಗಳನೇಕರು ಈ ವ್ಯಾಖ್ಯಾನ ಕೇಳಲು ಬಂದಿದ್ದರು.

ಚೆಂಡಿಯೆ— (ತಾ. ೧೭-೧೧-೪೧) ಇಲ್ಲಿಯ ಸಹಕಾರಿ ಸಂಘದವರು ಕಳೆದ ತಾ. ೨ನೇಗೆ ನೆರೆಹೊರೆಯ ಸಂಘಗಳ ಸಹಾಯ-ಸಹಕಾರದಿಂದ "ಸಹಕಾರಿ ಹಬ್ಬ"ವನ್ನು ವಿಜೃಂಭಣೆಯಿಂದ ಆಚರಿಸಿದರು. ವಿದ್ಯಾರ್ಥಿಗಳೂ ಉತ್ಸವದಲ್ಲಿ ಭಾಗ ವಹಿಸಿ ಪ್ರಸ್ತುತ ಪರಿಸ್ಥಿತಿಯ ಚಿತ್ರವನ್ನು ಆಡಿ ತೋರಿಸಿದರು.

ನಿನ್ನೆ ಕಾರವಾರದಲ್ಲಾದ ಜಿಲ್ಹೆಯ ಬಾಲ ಸೈನಿಕರ ಸಮ್ಮೇಲನಕ್ಕಾಗಿ ಇಲ್ಲಿಯ ಕೆಲವು ಬಾಲ-ವೀರರು ಹೊರಟಿದ್ದರು. ನಡುವೆ ಹಾದಿಯಲ್ಲಿ ಅವರಿಗೆ ಒಂದು ಮನೆಗೆ ಬೆಂಕಿ ಬಿದ್ದದ್ದು ಕಣ್ಣಿಗೆ ಬಿತ್ತು. ಕೂಡಲೇ ಅವರೂ ಅವರ ನಾಯಕರಾದ ರಾ॥ ಗೋವಿಂದ ಫಕೀರ ನಾಯ್ಕರೂ ಆ ಬೆಂಕಿ ಬಿದ್ದಲ್ಲಿ ಹೋಗಿ ಬೆಂಕಿಯು ಸುತ್ತುಮುತ್ತಲಿನ ಮನೆಗಳಿಗೆ ಹಬ್ಬದಂತೆ ಒಳ್ಳೇ ಸಾಹಸದ ಪ್ರಯತ್ನ ಮಾಡಿದರು. ರಾ॥ ನಾಯ್ಕರ ಮೈಮೇಲಿನ ಅರಿವೆಗಳೆಲ್ಲ ಸುಟ್ಟುಹೋಗಿದ್ದವು. ಬಾಲವೀರರ ಈ ಸಾಹಸವನ್ನು ಊರ ಜನರೆಲ್ಲರೂ ಮನದಣಿ ಕೊಂಡಾಡುತ್ತಾರೆ.

ಅಂಕೋಲಾ— ವರ್ಧಾ ಶಿಕ್ಷಣ ಯೋಜನೆಯಂತೆ ಇಲ್ಲಿ ಕೊಂಗ್ರೆಸ ಸರಕಾರದ ಕಾರಕೀರ್ದಿಯಲ್ಲಿ ಸ್ಥಾಪಿಸಲ್ಪಟ್ಟ ಕೈಗಾರಿಕೆಯ ವರ್ಗಗಳು ಮುಚ್ಚಲ್ಪಟ್ಟಿವೆ. ಕಳೆದ ವಾರದಲ್ಲಿ ಎಡ್ಮಿನಿಸ್ಟ್ರೇಟಿವ ಆಫೀಸರರು ಬಂದು ವರ್ಗದ ಶಿಕ್ಷಣ ಸಾಹಿತ್ಯಗಳನ್ನು ಮಾರಾಟ ಮಾಡಿದರು. ಇದೇ ಪ್ರಕಾರ ಹಳದೀಪುರದ ವರ್ಗ ಮುಚ್ಚಿ ಅಲ್ಲಿಯ ಸಾಹಿತ್ಯಗಳು ಸಹ ಬಹಿರಂಗವಾಗಿ ಲಿಲಾವು ಮಾಡಲ್ಪಟ್ಟಿರುತ್ತವಾಗಿ ತಿಳಿಯುತ್ತದೆ. ಈ ವರ್ಗ ಮುಚ್ಚಲಿಕ್ಕೆ ಕೊಂಗ್ರೆಸ ಪಕ್ಷದ ಅಧಿಕಾರವಿದ್ದ ಜಿಲ್ಹಾ ಲೋಕಲ್ಬೋರ್ಡಿನಲ್ಲಿ ತೀರ್ಮಾನವಾದದ್ದು ಹೇಳತಕ್ಕ ಸಂಗತಿ!

ಸುಪೆ— (ತಾ. ೧೨-೧೧-೪೧) ೧೯೩೯ರಲ್ಲಿ ರಾ॥ ಗೋವಿಂದ ಪರುಳೇಕರ ಇವರು ಕೊಂಗ್ರೆಸ ಪರವಾಗಿ ಜಿಲ್ಹಾ ಬೋರ್ಡಿನ ಚುನಾವಣೆಗೆ ನಿಂತು ಈ ಪೇಟೆಯಿಂದ ಅವಿರೋಧವಾಗಿ ಆರಿಸಿ ಹೋಗಿದ್ದರಷ್ಟೇ. ಬೋರ್ಡಿನ ಕೊಂಗ್ರೆಸ ಸದಸ್ಯರು ಕೊಂಗ್ರೆಸ ತತ್ವಗಳಿಗನುಸಾರವಾಗಿ ನಡೆದು ಏನಾದರೂ ಲೋಕಸೇವೆ ಮಾಡುವರೆಂಬ ಆಶೆ ರಾ॥ ಪರುಳೇಕರರಿಗೆ ಆಗ ಇತ್ತು. ಆದರೆ ಮುಂದೆ ಅಧ್ಯಕ್ಷರ ಚುನಾವಣೆಯ ಕುರಿತು ಅಂಕೋಲೆಯಲ್ಲಾದ ಪಕ್ಷದ ಸಭೆಯಲ್ಲೂ, ಮುಂದೆ ಕಾಲಾ ಬೋರ್ಡಿನ ಸದಸ್ಯರ ಆಯ್ಕೆಯ ಬಗ್ಗೆ ಕಾರವಾರದೊಳಗಿನ ಸತ್ಯಭಾಮಾ ಭುವನದ ಮಾಳಿಗೆಯ ಮೇಲಾದ ಸಭೆಯಲ್ಲೂ ನಡೆದ ಕುಹಕ-ಕುತಂತ್ರಗಳನ್ನು ನೋಡಿ ಅವರಿಗೆ ಬೇಸರ ಬಂದಿತು! ಆದರೂ ಅವರು ಪಕ್ಷವನ್ನು ಬಿಟ್ಟು ಹೋಗಲಿಲ್ಲ. ಎಂದಾದರೂ ಸುಧಾರಣೆಯಾದೀತು, ಏನಾದರೂ ಲೋಕಸೇವೆಯ ಕೆಲಸ ಕೈಗೂಡುವದು ಎಂಬ ಆಶೆಯಿಂದ ಅವರು ಕೊಂಗ್ರೆಸ ಪಕ್ಷದಲ್ಲುಳಿದರು. ಆದರೆ ಈ ೨॥ ವರ್ಷಗಳಲ್ಲಿ ಬೋರ್ಡಿನಲ್ಲಿ ನಡೆಯುವ ಕಾರಸ್ಥಾನಗಳನ್ನೂ, ಸ್ವಾರ್ಥ, ಅಧಿಕಾರಲೋಲುಪತೆ, ಜಾತ್ಯಭಿಮಾನ ಮೊದಲಾದ ಅನಿಷ್ಟ ದುರ್ಗುಣಗಳು ಹಾಕಿದ ಹಾವಳಿಯನ್ನೂ, ಸಿದ್ಧಿಕ್ ಬೋರ್ಡಿನ ಅಜ್ಞೆ-ಸಲಹೆಗಳನ್ನು ಧಿಕ್ಕರಿಸಿ ಬೋರ್ಡಿನಲ್ಲಿರುವ "ತ್ರಿಕೂಟ"ದವರು ಎಲ್ಲ ಸರ್ವಾಧಿಕಾರ ತಾವೇ ಸೆಳಕೊಂಡದ್ದನ್ನೂ ನೋಡಿ ನೋಡಿ ಅವರ ಮನಸ್ಸಿಗೆ ತೀವ್ರ ವೇದನೆಯಾಯಿತು! ಕಳೆದ ಜೂನ ತಿಂಗಳಲ್ಲಿ ರಾ॥ ಹರಿ ಸ್ವರ ಸ್ಥಳದಲ್ಲಿ ಹೊಸ ಅಧ್ಯಕ್ಷರನ್ನಾರಿಸುವ ಕಾಲಕ್ಕೆ ಪ್ರಮುಖ ಸದಸ್ಯರು ನಡಿಸಿದ ಕಾರಸ್ಥಾನ ನೋಡಿಯಂತೂ ಅವರು ನಿರಾಶೆಗೊಂಡರು! ಒಂದೆಡೆ ಕೊಂಗ್ರೆಸ ಸದಸ್ಯರೆನಿಸಿಕೊಂಡು, ಇನ್ನೊಂದೆಡೆ ಗ್ರಾಮೋದ್ಧಾರ ಮಂಡಳಗಳಲ್ಲೋ ಬೇರ್ಯಾವ ಸಮಿತಿ-ಕಮಿಟಿಗಳಲ್ಲೋ ಸೇರಿಕೊಂಡು ಕೆಲವರು ಸ್ವ-ಹಿತ, ಸ್ವ-ಜನಹಿತ, ಸ್ವ-ಪ್ರಾಂತದ ಹಿತ ಸಾಧಿಸಿಕೊಳ್ಳುತ್ತಿರುವದನ್ನು ನೋಡಿ ಅವರು ಬಹಳ ಬೇಸರಗೊಂಡರು! ಈ ಸ್ಥಿತಿ ಸುಧಾರಿಸಿಕೊಳ್ಳುವ ಬಗ್ಗೆ ಅವರು ಸ್ಥಾನಿಕ ಕೊಂಗ್ರೆಸ ಮುಂದಾಳುಗಳ ಕೂಡ ನಡಿಸಿದ ಪ್ರಯತ್ನಗಳೆಲ್ಲ ವ್ಯರ್ಥವಾಗಲಾಗಿ, ಕೊನೆಯ ಮಹಾತ್ಮಾಜಿಯವರಿಗೂ ಅವರು ಒಂದು ವಿನಂತಿ-ಪತ್ರ ಕಳುಹಿ, ಬೋರ್ಡಿನ ಪರಿಸ್ಥಿತಿಯ ಚೌಕಶಿಯಾಗಬೇಕೆಂದು ಬೇಡಿಕೊಂಡರು. ಮಹಾತ್ಮರು ಅದರಂತೆ ಪ್ರಾಂತಾಧ್ಯಕ್ಷರಿಗೆ ಚೌಕಶಿ ಮಾಡಲು ತಿಳಿಸಿದ್ದರಂತೆ. ಆದರೆ ಪ್ರಾಂತಾಧ್ಯಕ್ಷರೂ ಏನೂ ಚೌಕಶಿ ಮಾಡಲಿಲ್ಲ! ಆದ್ದರಿಂದ ರಾ॥ ಪರುಳೇಕರರು ತಾ. ೨೫-೯-೪೧ಕ್ಕೆ ಬೋರ್ಡಿನ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟು ಕೊಂಗ್ರೆಸ ಪಕ್ಷದಿಂದ ಹೊರಬಿದ್ದರು. ಹಾಗೆ ಮಾಡುವಾಗ ಎಲ್ಲ ಪರಿಸ್ಥಿತಿಯನ್ನು ಅವರು ತಮ್ಮ ಮತದಾರ ಸಂಘದ ಜನರಿಗೆ ತಿಳಿಸಿ ಅವರ ಸಲಹೆಯಿಂದಲೇ ತಮ್ಮ ನಿರ್ಣಯ ಮಾಡಿಕೊಂಡಿದ್ದರು. ಅವರ ರಾಜಿನಾಮೆಯಿಂದ ತೆರವಾದ ಸ್ಥಳಕ್ಕೆ ಹೊಸ ಸದಸ್ಯರನ್ನು ಆರಿಸಲು ಮೊನ್ನೆ ಚುನಾವಣೆಯಾಯಿತು. ಅದರಲ್ಲಿ ರಾ॥ ಪರುಳೇಕರರೇ ತಿರುಗಿ ಅವಿರೋಧ ಆರಿಸಿಬಂದಿದ್ದಾರೆ. ಪರುಳೇಕರರ ಈ ಕೃತಿಯಿಂದ ಸಲ್ಹಾ ಬೋರ್ಡಿನಲ್ಲಿ ಕೊಂಗ್ರೆಸ ವೇಷ ಹಾಕಿ ಕುಣಿಯುತ್ತಿರುವ ವೇಷಧಾರಿಗಳ ನಿಜವಾದ ಬಣ್ಣ ಒಳಿತಾಗಿ ಹೊರಬಿದ್ದಿದೆ.



ಮೊಸ್ಕೋ ಹಿಟ್ಲರನ ವಶವಾಗಲಿಲ್ಲ!

(೫ನೇ ಪುಟದಿಂದ ಮುಂದರಿಸಿದ್ದು.)

ತುರ್ಕಸ್ಥಾನಕ್ಕೆ ಬ್ರಿಟಿಶರ ಮೇಲೆ ಪ್ರೀತಿ. ಆದರೆ ಅದೇ ಕಾಲಕ್ಕೆ ತುರ್ಕಸ್ಥಾನಕ್ಕೆ ಜರ್ಮನರ ಭೀತಿಯುಂಟು. ಪ್ರೀತಿಗಿಂತ ಭೀತಿಯೇ ಮಿಗಿಲಾದದ್ದು. ಭೀತಿಯೇ ತುರ್ಕಸ್ಥಾನದ ವಿದೇಶ-ಕಾರಣವನ್ನು ನಿರ್ಣಯಿಸುತ್ತದೇನೆಂದು ನನಗೊಂದು ' ಭೀತಿ. ಇಸ್ತಂಬೂಲದಲ್ಲಿ ಜರ್ಮನ ಚಾರರೂ ಪ್ರಚಾರಕರೂ ದಾಣ್ಯ ಹೂಡಿದ್ದಾರೆ. ಹರ್ಬರ್ಟ ವಾನ ಬೇಲ, ರುಡೊಲ್ಫ ಫಿಶರ, ಪೊಲಸ್ಮಿಡ ಈ ತ್ರಿಮೂರ್ತಿಗಳ ಹೆಸರುಗಳನ್ನು ನೀವು ಕೇಳಿರಬೇಕು; ಕೇಳದಿದ್ದರೆ ನಾನು ಹೇಳುತ್ತೇನೆ; ನೀವು ಚನ್ನಾಗಿ ಕೇಳಿಕೊಳ್ಳಿರಿ. ಹರ್ಬರ್ಟ ವಾನ ಬೇಲರವರು ಜರ್ಮನ ವಿದೇಶ ಇಲಾಖೆಯ ದಕ್ಷಿಣ ಯುರೋಪ ವಿಭಾಗದ ಶ್ರೇಷ್ಠ ಪ್ರಚಾರಕರು. ರುಡೊಲ್ಫ ಫಿಶರರವರು ನಾಮಾಂಕಿತ ಪತ್ರಕರ್ತರೆಂದು ಜರ್ಮನಿಯಲ್ಲಿ ಖ್ಯಾತಿಗೊಂಡವರು. ಪೊಲ ಸ್ಮಿಡರವರಂತು ಜರ್ಮನ ವಿದೇಶ ಇಲಾಖೆಯ ಮುಖ್ಯ ಪ್ರವಚನಕಾರರು. ಈ ಮಹಾರಾಯರು ತುರ್ಕಸ್ಥಾನದಲ್ಲಿ ಇಲ್ಲದ-ಅಲ್ಲದ ವಾರ್ತೆಗಳನ್ನು ಹಬ್ಬಿಸಿ ತುರ್ಕರ ಧೈರ್ಯವನ್ನು ಕುಗ್ಗಿಸಿ ಜರ್ಮನರಿಗೆ ಅನುಕೂಲವಾದ ಪರಿಸ್ಥಿತಿಯನ್ನುಂಟು ಮಾಡುವ ದೂತಶ್ರೇಷ್ಠರು! ತುರ್ಕಸ್ಥಾನವನ್ನು ಆಕ್ರಮಿಸಿ ಇಲ್ಲವೆ ಮನವೊಲಿಸಿ ಹಿಟ್ಲರನು ಇರಾಣವನ್ನು ನುಗ್ಗಿ ಬ್ರಿಟನ ಅಮೇರಿಕೆಗಳಿಂದ ಇರಾಣ ಮಾರ್ಗವಾಗಿ ರುಶ್ಯರಣಕ್ಷೇತ್ರಕ್ಕೆ ಹೋಗುವ ಯುದ್ಧಸಾಮಗ್ರಿಗಳನ್ನು ನಿಲ್ಲಿಸುವ ಆಲೋಚನೆ ಮಾಡಿದ್ದಾನೆ. ತುರ್ಕಸ್ಥಾನಕ್ಕೆ ಈಗ ಬಹು ಕಾಲ ತಟಸ್ಥ ಉಳಿಯಲು ಸಾಧ್ಯವಿಲ್ಲ. ಯಾವದೊಂದು ನಿರ್ಣಯಕ್ಕೆ ತುರ್ಕ ಸರಕಾರವು ಬರಲೇ ಬೇಕು. ಅದೇನೆಂದು ತಿಳಿಯಲು ನಾನು ಬಹು ಕುತೂಹಲಪಡುತ್ತೇನೆ.

ತುರ್ಕಸ್ಥಾನದ ರಾಜಕಾರಣದ ಪಾರ್ಶ್ವಭೂಮಿಯೆಂದು ಲಿಬಿಯಾದೊಳಗಿನ ಘಟನೆಗಳ ಪೂರ್ವಾಪರವನ್ನು ಆಲೋಚಿಸುವದು ಕ್ರಮಪ್ರಾಪ್ತವಾದದ್ದು. ರುಶ್ಯ ದೇಶದ ಮೇಲಿನ ಜರ್ಮನರ ಒತ್ತಡವನ್ನು ಕುಗ್ಗಿಸುವದಕ್ಕಾಗಿ ಬ್ರಿಟಿಶರು ಫ್ರಾನ್ಸ ದೇಶದ ಮೇಲೆ ಸಾಗಿ ಹೋಗಿ ಜರ್ಮನರಿಗೆ ಕೆಲವು ದಂಡುಗಳನ್ನು ಪೂರ್ವ ಪಾರ್ಶ್ವದಿಂದ ಪಶ್ಚಿಮ ಪಾರ್ಶ್ವಕ್ಕೆ ತರಲು ಒತ್ತಾಯಪಡಿಸಬೇಕೆಂದು ಪಾರ್ಲಿಮೆಂಟಿನಲ್ಲಿ ಹಲವು ಸಭಾಸದರು ಗದ್ದಲವನ್ನೆಬ್ಬಿಸಿದ್ದು ನಿಮಗೆ ಜ್ಞಾಪಕದಲ್ಲಿರಬೇಕು. ಫ್ರಾನ್ಸದಲ್ಲಿ ಬ್ರಿಟಿಶರು ರಣಕಣಕ್ಕಿಳಿಯುವದು ಮೂರ್ಖತನವೆಂದು ಲಂಡನಿನ 'ಟ್ಯಾಯಿಮ್ಸ'ಕರ್ತರು ಟೀಕಿಸಿದ ಸಂಗತಿ ಸಹ ನಿಮ್ಮ ನೆನಪಿನಲ್ಲಿರಬೇಕು. ಜರ್ಮನರ ಲಕ್ಷವನ್ನು ರುಶ್ಯ ದೇಶದ ದಾಳಿಯಿಂದ ತಿರುಗಿಸುವದೇ ಲಿಬಿಯಾದೊಳಗಿನ ಘಟನೆಗೆ ಮುಖ್ಯ ಉದ್ದೇಶ. ಲಿಬಿಯಾ ಪ್ರದೇಶ ಇಜಿಪ್ತ ದೇಶದ ಪಶ್ಚಿಮಕ್ಕಿದೆ. ಅಲ್ಲಿ ಬ್ರಿಟಿಶರು ಮುನ್ನುಗ್ಗಿ ೫೦ ಮೈಲು ಸಾಗಿಹೋಗಿ ಜರ್ಮನರನ್ನು ಎದುರಿಸಿ ಸುತ್ತುಗಟ್ಟಿದರಾಗಿ ಬ್ರಿಟಿಶರ ಯುದ್ಧಪ್ರಕಟಣೆ. ರೇಝುಗ ಕಾಳಗದಲ್ಲಿ ಜರ್ಮನರು ಸೋತರು. ಅನೇಕ ಜರ್ಮನರನ್ನು ಬ್ರಿಟಿಶರು ಸೆರೆಹಿಡಿದರು. ಬ್ರಿಟಿಶರ ವ್ಯೂಹವನ್ನು ಭೇದಿಸಲು ಜರ್ಮನರು ನಡಿಸಿದ ಸಾಹಸವೆಲ್ಲ ನಿರರ್ಥಕವಾಯಿತಾಗಿಯೂ ಜರ್ಮನರಿಗೆ ಅಪಾರ ಹಾನಿಯಾಯಿತಾಗಿಯೂ ಶುಭ ವಾರ್ತೆಗಳು ಬಂದಿವೆ. ಗ್ರೀಸ ದೇಶದಿಂದ ಜರ್ಮನರ ದಂಡುಗಳು ಉತ್ತರ ಆಫ್ರಿಕೆಯಲ್ಲಿ ಇಳಿಯತೊಡಗಿವೆ. ಆದರೆ ಈ ಯುದ್ಧದಲ್ಲಿ ಜರ್ಮನರಿಗೆ ವಿಜಯವಾಗುವ ಲಕ್ಷಣಗಳಿಲ್ಲ. ಈ ವಾರದಲ್ಲಿ ಹಿಟ್ಲರನೂ ಫ್ರಾನ್ಸದ ಮುಖ್ಯಾಧಿಕಾರಿಗಳಾದ ಸೇನಾಪತಿ ಪಿಟೇನರವರೂ ಒತ್ತಟ್ಟಿಗೆ ಕೂಡುತ್ತಾರೆ. ಸ್ಪೇನದ ರಾಯಭಾರಿಗಳು ಈ ಆಲೋಚನೆಯಲ್ಲಿ ಸೇರುವವರಿದ್ದಾರಂತೆ. ಉತ್ತರ ಆಫ್ರಿಕೆಯ ಮೊರೊಕೊದಲ್ಲಿ ಸ್ಪೇನದ್ದೊಂದು ಭಾಗ, ಫ್ರೆಂಚರದೊಂದು ಭಾಗ. ಫ್ರೆಂಚರ ಭಾಗದಲ್ಲಿ ಸುಪ್ರಸಿದ್ಧ ಸೇನಾಪತಿ ವೆಗಾಂಡರವರಿದ್ದರು. ಪಿಟೇನ [illegible] ವನ್ನು ಆಕ್ರಮಿಸಿಕೊಂಡು ಹಿಟ್ಲರನು ಉತ್ತರ ಆಫ್ರಿಕೆಯನ್ನು ದಂಡೆಕ್ಕಿಕೊಂಡು ಹೋಗುವವನಿದ್ದಾನೆ ಹೀಗೆ ಮೊರೊಕ್ಕೋ ಪ್ರದೇಶ ಜರ್ಮನರ ವಶವಾದರೆ ಲಿಬಿಯಾದೊಳಗೆ ಬ್ರಿಟಿಶರನ್ನು ಎದುರಿಸಲು ಜರ್ಮನರಿಗೆ ಅನುಕೂಲವಾಗುತ್ತದೆ. ಆದರಿಂದ ಬ್ರಿಟಿಶರು ಅಮೇರಿಕೆಯ ಕಡೆಯಿಂದ ಪಿಟೇನ ಸರಕಾರಕ್ಕೆ ಮುಂಜಾಗ್ರತೆ ಕೊಡಿಸಿದ್ದಾರೆ. ಪಿಟೇನರು ಹಿಟ್ಲರನ ಕೈಗೊಂಬೆಯಾದರೆ ಜರ್ಮನರಂತೆಯೇ ಫ್ರೆಂಚರಾದರೂ ಶತ್ರುಸ್ಥಾನದಲ್ಲಿರಬೇಕೆಂದು ಅಮೇರಿಕೆಯ ಸರಕಾರವು ಪಿಟೇನರಿಗೆ ತಿಳಿಸಿರುವದಂತೆ! ಫ್ರೆಂಚರಿಗೆ ಅಮೇರಿಕೆಯಿಂದ ಯಾವದೇಪ್ರಕಾರ ಸಹಾಯ ಸಿಗಲಾರದಂತೆ! ಆದರೆ ಈ ಮುಂಜಾಗ್ರತೆಯಿಂದ ಪಿಟೇನ ಸರಕಾರದ ಧೋರಣ ಬದಲುವ ಲಕ್ಷಣಗಳಿಲ್ಲ! ಸ್ಪೇನದ ಸೇನಾಪತಿ ಫ್ರೆಂಕೋ ಸರಕಾರವೂ ಫ್ರಾನ್ಸದ ಸೇನಾಪತಿ ಪಿಟೇನ ಸರಕಾರವೂ ಹಿಟ್ಲರನಿಗೆ ಅನುಕೂಲವಾಗಿಯೇ ವ್ಯವಹರಿಸುವವೆಂದು ನಾನು ಹೇಳಬಲ್ಲೆ. ಉಭಯ ಸರಕಾರಗಳು ಒಟ್ಟುಗೂಡಿದರೆ ಉತ್ತರ ಆಫ್ರಿಕೆಯ ಮತ್ತು ಸ್ಪೇನದ ನಡುವಿರುವ ಬ್ರಿಟಿಶರ ಜಿಬ್ರಾಲ್ಟರ ಪ್ರದೇಶಕ್ಕೆ ಬಾಧೆಯುಂಟು. ಶತ್ರು-ದಂಡುಗಳು ಈ ಹಾದಿಯಿಂದ ಉತ್ತರ ಆಫ್ರಿಕೆಯನ್ನು ಸೇರಬಹುದು ಜಿಬ್ರಾಲ್ಟರಕ್ಕಾಗಿ ಬ್ರಿಟಿಶರು ಯುದ್ಧ ಹೂಡುವ ಪ್ರಸಂಗವುಂಟು. ಇದಕ್ಕೆ ಪೋಷಕವಾಗಿ ಭೂಮಧ್ಯ ಸಮುದ್ರದಲ್ಲಿ ನೌಕಾಯುದ್ಧ ನಡೆಯುವದು. ಮುಸೊಲಿನಿಯು ಹತಬಲನಾದನೆಂದು ತಿಳಿಯುವದು ತಪ್ಪು. ಆತನ ಕಡೆಗೆ ಹಡಗುಪಡೆಗಳಿವೆ. ಭೂಮಧ್ಯ ಸಮುದ್ರದಿಂದ ಜರ್ಮನರು ಸೈನ್ಯ ಪಥಕಗಳನ್ನು ಕಳಿಸುತ್ತಿದ್ದಾರೆ. ಬ್ರಿಟಿಶ ನೌಕಾಧಿಪತಿಗಳಾದ ಕನಿಂಗಹೆಮರವರು ಈ ಸಂಗತಿಯ ಸಾಕ್ಷಿ ಕೊಡುತ್ತಾರೆ. ಇಟಾಲಿಯ ನೌಕಾಬಲ ಇನ್ನೂ ಹತಬಲವಾಗಿಲ್ಲವಾಗಿಯೂ ಆ ಕಡೆ ದುರ್ಲಕ್ಷ ಮಾಡುವದು ಘಾತಕವೆಂದೂ ಅವರು ಸದ್ಯಕ್ಕೆ ಹೇಳಿದ್ದುಂಟು. ಇಟಾಲಿಯ ನೌಕಾಬಲದ ಧೈರ್ಯ ಮಾತ್ರ ಕುಂದಿರುವದಂತೆ. ಹಿಟ್ಲರ-ಪಿಟೇನರ ಆಲೋಚನೆಯ ಫಲವಾಗಿ ಜಿಬ್ರಾಲ್ಟರದ ಮಾರ್ಗವು ತೆರವಾದಲ್ಲಿ ಉತ್ತರ ಆಫ್ರಿಕೆಯ ರಣರಂಗಕ್ಕೆ ಒಳ್ಳೇ ಕಳೆಯೇರುವದು.

ಅಮೇರಿಕಾ-ಜಪಾನ ದೇಶಗಳೊಳಗಿನ ವಿದೇಶ-ಕಾರಣವೂ ಪ್ರಕ್ಷುಬ್ಧವಾಗತೊಡಗಿದೆ. ಜಪಾನದಿಂದ ಹೋದ ಕುರುಸುರವರ ರಾಯಭಾರ ನಿಷ್ಫಲವಾಯಿತಾಗಿ ಸುದ್ದಿಯುಂಟು. ಜಪಾನ-ಅಮೇರಿಕೆಗಳೊಳಗೆ ಯುದ್ಧ ಘೋಷಣೆಯಾಗಬಹುದೆಂದು ಭೀತಿಯುಂಟಾಗಿದೆ. ಸದ್ಯಕ್ಕೆ ಜಪಾನದ ಲೋಕಸಭೆಯ ಅಧಿವೇಶನ ನಡೆಯಿತು. ಮುಖ್ಯ ಪ್ರಧಾನರಾದ ಸೇನಾಪತಿ ತೋಜೋರವರು ಇಟಾಲಿ-ಜರ್ಮನಿಗಳ ಸಹಕಾರದಿಂದ ಜಪಾನ ಸರಕಾರದ ಸಂಕಲ್ಪಿತ ಪುನರ್ಘಟನೆಯ ಕಾರ್ಯಕ್ಕೆ ಅನುಕೂಲವಾಗುವದಾಗಿ ಉದ್ಗರಿಸುತ್ತಾರೆ. ಈ ಉದ್ಗಾರದ ಮೇಲಿಂದ ಯುದ್ಧಘೋಷಣೆ ಸದ್ಯಕ್ಕೇ ಒದಗಿಬರಬಹುದು. ಅಮೇರಿಕಾ ಮತ್ತು ಜಪಾನ ದೇಶಗಳೊಳಗಿ ಪತ್ರಿಕೆಗಳು ಅಶುಭವನ್ನು ಸೂಚಿಸುತ್ತವೆ. ಟೋಕಿಯೋದೊಳಗಿನ 'ನಿಚಿ ನಿಚಿ ಶಿಂಬೂನ' ಮತ್ತು ನ್ಯೂ ಯೊರ್ಕದ 'ನ್ಯೂ ಯೊರ್ಕ ಟ್ಯಾಯಿಮ್ಸ' ಪತ್ರಿಕೆಗಳು ಕುರುಸು ರಾಯಭಾರ ಸಾರ್ಥಕವಾಗಿಲ್ಲವಾಗಿ ಹೇಳುತ್ತಿವೆ. ಅಂತು ಜಪಾನವೂ ಅಮೇರಿಕೆಯ-ಸದ್ಯಕ್ಕೇ ಹೋರಾಡುವವೆಂದು ಸುದ್ದಿಗಾರರು ತರ್ಕಿಸುತ್ತಾರೆ.

ಹೀಗೆ ಯುದ್ಧವು ಭೂಲೋಕವನ್ನು ವ್ಯಾಪಿಸುತ್ತಿರುವಾಗ ಹಿಟ್ಲರನು ಯುರೋಪ ಖಂಡದ ಸಮಸ್ತ ಜನಾಂಗಗಳ ಪರಿಷತ್ತನ್ನು ಕರಿಸಿ ಶಾಂತತೆಯ ಯೋಜನೆಯನ್ನು ತಯಾರಿಸುವ ಸಂಕಲ್ಪ ಮಾಡಿದ್ದಾನಾಗಿ ಅಮೇರಿಕೆಯ ವಾಶಿಂಗಟನದಿಂದ ಸುದ್ದಿ ಹಬ್ಬಿದೆ. ಇದರ ರಹಸ್ಯವೇನೆಂದು ನಾನರಿಯೆ.

ವಾರ್ತೆಗಳು.

— ವರ್‍ಹಾಡ ಪ್ರಾಂತದ ಪರವಾಗಿ ಶ್ರೀ॥ ಮಾಧವರಾವ ಅಣೇಯವರು ವರಿಷ್ಠ ಕಾಯಿದೆ ಕೌನ್ಸಿಲಿಗೆ ಆರಿಸಿ ಹೋಗಿದ್ದರು. ಅವರು ಸರ್ವಾಧಿಪತಿಗಳ ಕಾರ್ಯಕಾರಿ ಮಂಡಳದಲ್ಲಿ ಸೇರಿದ್ದರಿಂದ ಆ ಪ್ರಾಂತದಲ್ಲಿ ಉಪ-ಚುನಾವಣೆ ನಡೆಯಿತು. ಈ ಉಪ-ಚುನಾವಣೆಯಲ್ಲಿ ಮೂವರು ಉಮೇದ್ವಾರರು: ರಾಷ್ಟ್ರೀಯ ಸಭೆಯ ಪರವಾಗಿ ಶ್ರೀ॥ ವಾಮನರಾವ ಜೋಶಿಯವರು; ಹಿಂದು ಮಹಾಸಭೆಯ ಪರವಾಗಿ ರಾ॥ ರಾಮಭಾವು ಕಾನಿಟಕರರವರು; ಮತ್ತು ಪುರೋಗಾಮಿ ಪಕ್ಷದ ಪರವಾಗಿ ರಾ॥ ಪಟವರ್ಧನರವರು. ರಾ॥ ಕಾನಿಟಕರರಿಗೆ ಹಿಂದು ಮಹಾಸಭೆ, ಲೋಕಶಾಹಿ ಸ್ವರಾಜ್ಯ ಪಕ್ಷ, ಉದಾರ ಮತವಾದಿ ಪಕ್ಷ ಮೊದಲಾದ ಯಾವತ್ತೂ ಕೊಂಗ್ರೆಸ ವಿರೋಧಿ ಪಕ್ಷ-ಪಂಗಡಗಳ ಬೆಂಬಲವಿತ್ತು. ಚುನಾವಣೆಯ ಪರಿಣಾಮ ಮೊನ್ನೆ ಶನಿವಾರ ಪ್ರಕಟವಾಯಿತು. ಶ್ರೀ॥ ವಾಮನರಾವ ಜೋಶಿಯವರಿಗೆ ೩೫೬೩ ಮತಗಳು ದೊರಕಿದವು; ರಾ॥ ಕಾನಿಟಕರರಿಗೆ ೧೧೬೫, ರಾ॥ ಪಟವರ್ಧನರಿಗೆ ೬೨೭ ಮತಗಳು ದೊರಕಿದವು. ರಾಷ್ಟ್ರೀಯ ಸಭೆಯ ರಾಜಕಾರಣಕ್ಕೆ ಈ ಚುನಾವಣೆಯಿಂದ ಒಳ್ಳೇ ಬೆಂಬಲ ದೊರಕಿದೆ. ಶ್ರೀ॥ ವಾಮನರಾವ ಜೋಶಿಯವರು ಸತ್ಯಾಗ್ರಹಿಗಳಾಗಿದ್ದು ಈಗ ನಾಗಪುರದೊಳಗಿನ ಸೆಂಟ್ರಲ ಜೈಲಿನಲ್ಲಿದ್ದಾರೆ. ಅವರು ಸೆರೆಮನೆಯಲ್ಲಿರುವಾಗಲೇ ಇಲೆಕ್ಶನಿನ ಯಾವತ್ತೂ ಕಾರ್ಯಕ್ರಮ ನಡೆದದ್ದೊಂದು ನಮೂದಿಸತಕ್ಕ ಸಂಗತಿ!

— ಶ್ರೀ ಸುಭಾಷಚಂದ್ರ ಬೋಸರು ಜರ್ಮನಿಯಲ್ಲಿ ಇದ್ದಾರೆಂಬ ವಾರ್ತೆಯನ್ನು ಲಂಡನಿನೊಳಗಿನ ಬ್ರಿಟಿಶರು ನಂಬುವದಿಲ್ಲ. ಲಂಡನಿನ 'ಈವ್ನಿಂಗ ಸ್ಟಂಡರ್ಡ' ಪತ್ರಿಕೆಯ ಸಹಾಯಕ ಸಂಪಾದಕರಾದ ಮಿ॥ ಮ್ಯಾಕೇಲ ಫೂಟರವರೂ 'ನ್ಯೂ ಸ್ಟೇಟ್ಸಮನ್ ಮತ್ತು ನೇಶನ್' ಪತ್ರಿಕೆಯ ಸಂಪಾದಕರಾದ ಮಿ॥ ಕಿಂಗಸ್ಲೇ ಮಾರ್ಟಿನರವರೂ ಶ್ರೀ॥ ಸುಭಾಷರ ಗೆಳೆಯರು. ಶ್ರೀ॥ ಸುಭಾಷರು ಸಮಾಜಸತ್ತಾವಾದಿಗಳಿದ್ದು ಅವರು ಶತ್ರುಗಳಿಗೆ ಎಷ್ಟಕ್ಕೂ ಕೂಡುವವರಲ್ಲವೆಂದು ಮಿ॥ ಫೂಟರವರ ಅಭಿಪ್ರಾಯವಿದೆ.

ವಿಶೇಷ ವಾರ್ತೆಗಳು.

— ಸರ್ ರೋಜರ ಲುಮ್ಲೀಯವರ ಅಧಿಕಾರಾವಧಿ ತೀರಿದ ತರುವಾಯ ೧೯೪೦ನೇ ಇಸವಿಯಲ್ಲಿ ಉತ್ತರ ಫ್ರಾನ್ಸಕ್ಕೆ ಹೋಗಿದ್ದ ಬ್ರಿಟಿಶ ಸೈನ್ಯದ ದಳಪತಿಗಳಾಗಿದ್ದ ಸರ್ ಜ್ಯೋನ್ ಡಿಲ್ಲರವರು ನಮ್ಮ ಮುಂಬಯಿ ಪ್ರಾಂತದ ಗವ್ಹರ್ನರರಾಗಿ ನೇಮಿಸಲ್ಪಟ್ಟಿದ್ದಾರೆ ಸರ್ ರೋಜರರವರ ಅಧಿಕಾರಾವಧಿ ಇದೇ ಬರುವ ಸಪ್ಟಂಬರ ತಿಂಗಳ ತನಕ ಇರತ್ತದೆ ಆದರೆ ತತ್ಪೂರ್ವದಲ್ಲಿ ಸರ್ವಾಧಿಪತಿಗಳಾದ ಲಿನ್‌ಲಿಥ್‌ಗೋ ದೊರೆಗಳು ರಜೆಯ ಮೇಲೆ ಹೋಗುವವರಿದ್ದಾರೆಂತಲೂ ಲುಮ್ಲೀ ದೊರೆಗಳು ಆಗ ಬದಲಿ ಸರ್ವಾಧಿಪತಿಗಳಾಗುವರೆಂತಲೂ, ಆ ಕಾರಣದಿಂದಲೇ ಸರ್ ಜ್ಯೋನ ಡಿಲ್ಲರವರ ನೇಮಣೂಕಿ ಬಹಳ ಮುಂದಾಗಿ ಸಿದ್ಧಪಡಿಸಲ್ಪಟ್ಟಿರುವದಾಗಿಯೂ ದಿಲ್ಲಿಯೆಂದಿನ ಪತ್ರಿಕೆ ಪ್ರತಿನಿಧಿಗಳ [illegible]

— ಫ್ಹಿಕ್ಟೋರಿಯಾ ರಾಣಿಯ ಮುದ್ರೆಯ ರೂಪಾಯಿ ಅರ್ಧ ರೂಪಾಯಿಗಳಂತೆಯೇ ಎಡ್ವರ್ಡ ಬಾದಶಹರ ಮುಖಮುದ್ರೆಯ [illegible] ರೂಪಾಯಿಗಳನ್ನು ಕೂಡ ಚಲಾವಣೆಯಿಂದ ಹಿಂತೆಗೆದುಕೊಳ್ಳಬೇಕೆಂದು ಸರಕಾರವು [illegible] ೧೯೪೧ನೇ ಇಸವಿಯ ಮಾರ್ಚ ತಿಂಗಳ ಕೊನೆಯ ತನಕವಷ್ಟೇ ಈ ನಾಣ್ಯಗಳು [illegible] ನಾಣ್ಯಗಳೆಂದು ವ್ಯವಹಾರದಲ್ಲಿ ನಡೆಯುವವು ಆ ನಂತರ ಅವು ವ್ಯವಹಾರದಲ್ಲಿ ನಡೆಯಲಿಕ್ಕಿಲ್ಲ ಆದರೂ ೧೯೪೧ನೇ ಇಸವಿಯ ಸಪ್ಟಂಬರ ತಿಂಗಳ ಕೊನೆಯ ವರೆಗೆ ಅವು ತಾಲೂಕ ಕಚೇರಿಗಳಲ್ಲಿ [illegible] ಸರಕಾರಿ ಕಚೇರಿಗಳಲ್ಲಿ ಸ್ವೀಕರಿಸಲ್ಪಡುವವು ಆ ನಂತರ ಆ ನಾಣ್ಯಗಳು ಮುಂಬಯಿ ಕಲಕತ್ತೆಗಳಲ್ಲಿರುವ ರಿಝರ್ವ ಬೇಂಕಿನ ಕಚೇರಿಗಳಲ್ಲಷ್ಟೇ ಸ್ವೀಕರಿಸಲ್ಪಡುವವು ಜನರು ಆದಷ್ಟು ತ್ವರೆಯಾಗಿ ಈ ನಾಣ್ಯಗಳನ್ನು ಕಚೇರಿಗಳಿಗೆ ಮುಟ್ಟಿಸುವದೊಳಿತು

ಧಾತುಪುಷ್ಟಿ ಲೇಹ. (ಸುವರ್ಣ, ಸಾಲಾಮಿಶ್ರಿ, ಕಲ್ಪದ ಮಿಶ್ರ) ನಷ್ಟವಾಗಿರುವ ಪುರುಷತ್ವವನ್ನು ಪುನಃ ಕಲ್ಪಿಸಿಕೊಡುವ ಆಶ್ಚರ್ಯಕರ ಶಕ್ತಿದಾಯಕ ಔಷಧಿ ಮಾನಸಿಕ ಮತ್ತು ಕಾಯಶಕ್ತಿಗಳನ್ನು ಹೆಚ್ಚಿಸಿ, ಆರೋಗ್ಯ, ಇಂದ್ರಿಯಶಕ್ತಿ ಇವೇ ಮೊದಲಾದವುಗಳನ್ನು ಕಲ್ಪಿಸಿಕೊಡುವದು ಬಾಟ್ಲಿ ೧ಕ್ಕೆ 2—8—0

ಕಸ್ತೂರಿ ಮಿಶ್ರಣ ದಶಮೂಲ. ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ ಬಾಟ್ಲಿ ೧ಕ್ಕೆ ರೂ 1—8—0

ಮಲೇರಿಯಾ ನಿವಾರಿಣಿ. ಮಲೇರಿಯಾ ಜ್ವರ, ಚಳಿಜ್ವರ ಇನ್‌ಫ್ಲುಯೆಂಝಾ, ಮಲಬದ್ಧತೆ ಇವುಗಳಿಗೆ ಪ್ರಸಿದ್ಧ ಔಷಧಿ ಬಾಟ್ಲಿ ೧ಕ್ಕೆ ರೂ 0—13—0

ಸ್ಪ್ಲೀನ ಮಿಕ್ಸ್‌ಚರ. ಪ್ಲೀಹೆಗಡ್ಡೆಯನ್ನು ಕರಗಿಸುವ ದಿವ್ಯೌಷಧಿ ಬಾಟ್ಲಿ ೧ಕ್ಕೆ ರೂ 1 2 0

ಎಮ್. ಗಣಪಯ್ಯ ಎಂಡ್ ಸನ್ಸ್, ರಥಬೀದಿ ನಂಬ್ರ 5, ಮಂಗಳೂರು. ದ ಕ

ಔಷಧ ಸಿಗುವ ಸ್ಥಳ — (1) ಸ್ವಸ್ತಿಕ ಫಾರ್ಮಸಿ, ಕುಮಟಾ (2) ಶಾಂತ [illegible], ಹೊನ್ನಾವರ, (3) ಸ್ವದೇಶಿ ಡಿಪೋ, ಅಂಕೋಲಾ, (4) ಕೆ ಗಣಪಯ್ಯ [illegible], ಮುರ್ಡೇಶ್ವರ, ಭಟಕಳ (5) ಪ್ರಭು [illegible] ಕೆಮಿಸ್ಟ್ಸ, 183, ಸುಭಾರಿಬಾಗ ಪರೇಲ (6) ಜನರಲ್ ಸ್ಟೋರ್ಸ ಜಿ ಆಯ ಪಿ, ಮಾಟುಂಗಾ, (7) [illegible] ಮುಚ ಂಟ, ಕಾರವಾರ (8) [illegible] ಬ್ರದರ್ಸ ಸಿದ್ದಾಪುರ, (9) [illegible] ಮೆಡಿಕಲ್ ಸ್ಟೋರ್ಸ ಗೋಕರ್ಣ, (10) [illegible] ಎಂಡ್ ಸನ್ಸ್ ಬಡವರ ಔಷಧಿ ಅಂಗಡಿ [illegible] [ಕೃಷ್ಣಾಪುರ ೬೫೦]

ದಿ ಬೋಂಬೆ ಲ್ಯಾಯ್ಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್,

ಸ್ಥಾಪನೆ 1908

ಈ ಕಂಪನಿಯು ಪೂರ್ಣ ಹಿಂದೀ [illegible], [illegible], [illegible] ಸೋಯಿಸುತ್ತ ಇವೆ ಕಂಪನಿಯು ಹಣವು ಸರಕಾರಿ ಪ್ರೋ ನೋಟುಗಳಲ್ಲಿಯೂ ಇಂಡಿಯ ಸರ್ಟಿಫಿಕೆಟ್ ನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯುರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ,

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು

Kumta Agents-
D K Nayak Bros
K. N Nayak
Honavar Agent
R V, Prabhu

K. PadmanabhaRao & Sons,
BELGAUM
Chief Agents for
Karnatak Districts & S M States

ಸಹ್ಯಾದ್ರಿಫಾರ್ಮಸಿ
ಕುಮಟಾ.

ಬಾಳಂತಿಯರಿಗೆ— ಕಸ್ತೂರಿ ಮಿಶ್ರಣ ದಶಮೂಲಾರಿಷ್ಟ ಮತ್ತು ಧನ್ವಂತರಿಗುಟಿಗೆ ಒಳ್ಳೇ ಉಪಯುಕ್ತವಾದದು!

ಚಿಕ್ಕ ಮಕ್ಕಳ ಜಂತುವಿನ ಬಾಧೆಗೂ ಪುಷ್ಟಿಯಾಗಲಿಕ್ಕೂ ಸಾಯರಪ್ ಕುಟಜಾ ಒಂದೇ ದಿವ್ಯವಾದ ಔಷಧವು!

ನಾಯಿ-ಕೆಮ್ಮಿಗೆ ಎಂಟೇ ದಿವಸಗಳಲ್ಲಿ ಗುಣಪಡಿಸುವ ಔಷಧವು

ಯಾವತ್ತೂ ಪ್ರಕಾರಗಳ
ಕಷಾಯ, ಅರಿಷ್ಟ, ಆಸವ,
ತೈಲಾದಿ ಔಷಧ ಸಾಮುಗ್ರಿಗಳು
ಸದಾ ಸಿಗುತ್ತವೆ.

ಡಾ॥ ಎಸ್. ಕೇ. ಭಟ್ಟ,
ಹಳದೀಪುರ, ಕುಮಟಾ

ಚಕ್ರಬಿಂದು ಮಕ್ಕಳ ಮರಣವನ್ನು ತಪ್ಪಿಸುವದು.

ಏಜನ್ಸಿ ಕಲಕತ್ತಾ, ಮುಂಬಯಿ, ಮದ್ರಾಸ, ಬೆಂಗಳೂರು ಮಂಗಳೂರು

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆದಾಗುವ ದಸುರು ನರಗಳು, ಕಾಮಿಲ
ಗಡ್ಡೆರೋಗ ಕೋವೆ ರೋಗ, ಮೈ-ಕೈ ಬಾವುಗಳಿಗೆ ದಿವ್ಯೌಷಧ!

೧ ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3

ಏತಕ್ಕೆ ಚಿಂತಿಸುವಿರಿ?

ಆಸೇತುಹಿಮಾಚಲದ ವರೆಗೂ ೨೫ ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ

ಡಾ| ವಿ ಎಸ್ ಶ್ರೀನಿವಾಸರಾವ,
ಲಿವ್ಹರ್ ಸ್ಪೆಶಲಿಸ್ಟ
ಎಂ ವಿ ಶ್ರೀನಿವಾಸ [illegible] ಲಯ,
ಶಿವಮೊಗ್ಗಾ

☞ ಇವರಲ್ಲಿ ಮಾರಾಟ
ಕಿರ್ರ ಏಜಂಟ—
ಸುಬ್ರಾಯ ಸೀತಾರಾಮ ಹೆಗಡೆ
ಕುಮಟೆಯ ಏಜಂಟ
ದೇವಪ್ಪಾ ಅಯ್ಯು ನಾಯ್ಕ

ಇದನ್ನು ಪಾಂಡುರಂಗ ಕೃಷ್ಣ ಕಾನಡೆ (ಸಂಪಾದಕ) ಇವರು ತಮ್ಮ [illegible] ಕೆನರಾ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B 1270.

Monday, 1st December, 1941.

ವರ್ಷ ೨೪

ಸಂಚಿಕೆ ೨೧

ಕಾನಡಾವೃತ್ತ.

THE KANARA NEWS

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेंद्रैः ।
इति महति विरोधे वर्तमाने समाने नृपतिजनपदानां दुर्लभ कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಕುಮಟೆಯಲ್ಲಿ ಆಗಾವು
ರೂಪಾಯಿ 2-4-0
ಮನಿಯಾರ್ಡರಿನಿಂದ
ರೂ. 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಸ್ಮಾಲ ಟೈಪಿನ (೧೫ ಎಮ್ ಅಗಲ)
೮ ಸಾಲುಗಳವರೆಗೆ ರೂ.1 8-0
ಆ ನಂತ್ರ, ಪ್ರತಿಸಾಲಿಗೆ 0-3-0
ಹೆಡ್ಡಿಂಗದ ಸಾಲು ಎಷ್ಟು ಹತ್ತಿರುವದೋ ಆ ಮಾಪಿನಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

-❉(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧ ಮಾಹೆ ಡಿಶಂಬರ ಸನ್ ೧೯೪೧ನೇ ಇಸವಿ)❉-


ಶ್ರೀಧೂತಪಾಪೇಶ್ವರ
ದ್ರಾಕ್ಷಾಸವ
ಚಳಿಗಾಲಕ್ಕಾಗಿ ಶಕ್ತಿವರ್ಧಕವೂ- ಪಾಚಕವೂ
ಅಪಚನ, ದಮ್ಮು, ಕೆಮ್ಮು, ಮಲಬದ್ಧತೆಗಳಿಗೆ ಉತ್ತಮ ಗುಣಕಾರಿಯಾದದ್ದು
— ಟಾನಿಕ —
ಶ್ರೀಧೂತಪಾಪೇಶ್ವರ ಪನವೇಲ ಲಿಮಿಟೆಡ

ಶ್ರೀ ಧೂತಪಾಪೇಶ್ವರ ಪನವೇಲ, ಲಿ.,

ಕರ್ನಾಟಕ ಕೇಂದ್ರ - ಯುನ್ಯಾಟೆಡ್ ಏಜನ್ಸೀಜ, ಹುಬ್ಬಳ್ಳಿ.

ಕಾರವಾರ — ಮೆಸರ್ಸ ಮುಜುಮುದಾರ-ಕಳಬೇಕರ ಬ್ರದರ್ಸ
ಅಂಕೋಲಾ:— ದಿ ಸ್ಟೇಶನರಿ ಡಿಪೋ
ಕುಮಟಾ:— ದೇವಪ್ಪಾ ಅಯ್ಯು ನಾಯ್ಕ.
ಹೊನ್ನಾವರ— ಮೆಸರ್ಸ ಕಲ್ಯಾಣಪುರ ಬ್ರದರ್ಸ.
ಶಿರ್ಶಿ:— { ಶಿರ್ಶಿ ಡ್ರಗ್ ಸ್ಟೋರ್ಸ
ಎಸ್. ಎಲ್ ಧಾಕಪ್ಪಾ ಎಂಡ್ ಸನ್ಸ್
ಸಿದ್ದಾಪುರ — ಮೆಸರ್ಸ ಶಾಮಾಯ್ಯನ ಬ್ರದರ್ಸ
ಹಳಿಯಾಳ:— ಎನ್. ಪಿ ಹಳ್ಳಿಕೇರಿ

"ಸ್ಟಾರ ಆಫ್ ಕೆನರಾ ಪ್ರೆಸ್",

ಕುಮಟಾ.

—*—

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಯಿಂದ ಬೇಕಾದ ನಮೂನೆಯ ಕಲರ ಪ್ರಿಂಟಿಂಗ ವಗೈರೆ ಸಣ್ಣ ದೊಡ್ಡ ಛಾಪಾ ಕೆಲಸಗಳೂ, ಪುಸ್ತಕ ಮುದ್ರಣವೂ, ರೂಲಿಂಗ ಬ್ಯಾಂಡಿಂಗ ಕೆಲಸವೂ ಉತ್ತಮವಾಗಿ ಸುಲಭ ದರದಲ್ಲಿ ತಕ್ಕ ಕಾಲಕ್ಕೆ ತಯಾರಿಸಿ ಕೊಡಲಾಗುವದು

ಇದಲ್ಲದೆ ಕೋರ್ಟ ಕಚೇರಿ ಉಪಯೋಗದ ವಕಾಲತ ವಗೈರೆ ಫಾರ್ಮುಗಳೂ, ಕಸ್ಟಮ್ ಕಚೇರಿಯ ಶಿಪ್ಪಿಂಗ ಬಿಲು ಸತ್ಕಿ ವಗೈರೆ ಫಾರ್ಮುಗಳೂ, ಗೇಣಿ ರಶೀದಿ ಬುಕ್, ಗೇಣಿಚೀಟಿ ಎದುರ್ಚಿಟಿ ಫಾರ್ಮುಗಳೂ ವಗೈರೆ ಮಾರಾಟಕ್ಕೆ ತಯಾರ ಸಿಗುತ್ತವೆ ನಿಮ್ಮ ಛಾಪಾ ಕೆಲಸಗಳನ್ನು ನಮ್ಮಲ್ಲಿಗೇ ಕಳಿಸಿರಿ ಒಮ್ಮೆ ಅನುಭವ ತಕ್ಕೊಂಡು ನೋಡಿರಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ಹೆಡ್ ಆಫೀಸು — ಕುಂದಾಪುರ.

ಬ್ರೇಂಚ ಆಫೀಸುಗಳು -- ಅಂಕೋಲಾ, ಕುಂದಾಪುರ, ಬೈಂದೂರು, ಕೋಟೇಶ್ವರ, ಕುಮಟಾ, ಗೋಕರ್ಣ, ಕಾರವಾರ, ಹಾವೇರಿ, ಶಿವಮೊಗ್ಗಾ, ತರೀಕೆರೆ, ನಗರ, ಸೋಮವಾರಪೇಟೆ ಮತ್ತು ವೀರರಾಜಪೇಟೆ

ಕಾಯಂ ಠೇವುಗಳು, ಸೇವಿಂಗ್ಸ ಬೇಂಕ್ ಠೇವುಗಳು ಮತ್ತು ಚಾಲು ಠೇವುಗಳು ಸಹ ಅಂಗೀಕರಿಸಲ್ಪಡುವವು.

ಭಂಗಾರದ ದಾಗಿನೆಗಳ ವ ಇತರ ವ್ಯಾಪಾರದ ಮ್ಹಾಲುಗಳ ಆಡವಿನ ಮೇಲೆ ಸವಲತ್ತಿನ ದರದ ಬಡ್ಡಿಯಲ್ಲಿ ಸಾಲ ಕೊಡಲ್ಪಡುವದು
ವ್ಯಾಪಾರದ ಕೇಂದ್ರಗಳಿಗೆ ಡ್ರಾಫ್ಟುಗಳು, ಚೆಕ್ಕುಗಳು ಸಹ ಕೊಡಲ್ಪಡುವವು. ಎಲ್ಲ ತರದ ಬೇಂಕಿನ ವ್ಯವಹಾರಗಳು ಸವಲತ್ತಿನ ದರದಿಂದ ನಡಿಸಲ್ಪಡುವವು

ಕುಂದಾಪುರ }
1-8-1941 }

The Agricultural & Industrial Bank, Ltd

ಸ್ಥಳಿಕ ವಿಷಯಗಳು.

*

ಲೇಖಕ:- ಸ್ಥಳವಂತಿಕ.

ಈಗ ತಾಲೂಕ ಕಚೇರಿಗಳಲ್ಲಿ ಗೇಣಿಬಾಕಿ ದಾವೆಗಳೂ ದಿವಾಣಿ ಕೋರ್ಟುಗಳಿಂದ ವಸೂಲಿಗೆ ಹೋದ ಡಿಕ್ರಿಗಳೂ ರಾಶಿಯಾಗಿ ಬಿದ್ದಿವೆ. ವಸೂಲಿಯ ಕ್ರಮವು ತತ್ಪರತೆಯಿಂದ ನಡೆಯುವದಿಲ್ಲ. ಇದಕ್ಕೆ ಸರಕಾರದ ಕೃಪಣತೆಯೇ ಕಾರಣ. ದಿವಾಣಿ ಕೋರ್ಟುಗಳ ಡಿಕ್ರಿಗಳು ಕಲೆಕ್ಟರರ ಕಡೆಗೆ ಕಳಿಸಿದ ಬಳಿಕ ಅವುಗಳ ವಸೂಲಿಯನ್ನು ತ್ವರ್ಯಪಡಿಸಲು ಪ್ರತ್ಯೇಕ ಇಸಮನ್ನು ನೇಮಿಸಬೇಕೆಂಬದೊಂದು ಸಾಮಾನ್ಯವಾದ ನಿಯಮವುಂಟು. ಕಲೆಕ್ಟರರು ಹೊಸ ಇಸಮನ್ನು ನೇಮಿಸಿಕೊಳ್ಳುವದು ಒತ್ತಟ್ಟಿಗಿರಲಿ; ಕಚೇರಿಗಳಲ್ಲಿ ಇದ್ದ ಇಸಮುಗಳನ್ನು ಕಡಿಮೆ ಮಾಡುತ್ತಾರೆ ಆದರಿಂದ ಕೆಲಸ ಸಾಗಿಹೋಗುವದಿಲ್ಲ. ಹೀಗಾಗಿ ಹೇರಳ ಡಿಕ್ರಿಗಳು ಧೂಳ ತಿನ್ನುತ್ತ ಬಿದ್ದಿರುತ್ತವೆ

ಗೇಣಿಬಾಕಿ ದಾವೆಯ ವಸೂಲಿಕ್ರಮದ ಕಥೆಯೇ ಪ್ರತ್ಯೇಕ. ಈ ದಾವೆಗಳ ಬಗ್ಗೆ ಎತ್ತುವಳಿಯಾಗುವ ಹಣ ಆ ದಾವೆಗಳ ವಸೂಲಿಯ ಕ್ರಮಕ್ಕೆ ವಿನಿಯೋಗಿಸಬೇಕಾಗಿ ಸರಕಾರದ ತೀರ್ಮಾನವಾದದ್ದಿದೆ. ದಿವಾಣಿ ಕೋರ್ಟುಗಳಲ್ಲಿ ದಾವೆಗಳಿಗೆ ಕಾಲಹರಣವಾಗುತ್ತದೆಂದು ಭೂಕಂದಾಯ ಕಾನೂನಿನಲ್ಲಿ ಗೇಣಿ ವಸೂಲಿಯ ಬಗ್ಗೆ ಪ್ರತ್ಯೇಕ ನಿಯಮಗಳು ಮಾಡಲ್ಪಟ್ಟಿವೆ. ವರ್ಷ ಮುಗಿಯುವದರೊಳಗೆ ಅಂದರೆ ಪ್ರತಿ ಜುಲೈ ೩೧ ನೇ ತಾರೀಖಿನೊಳಗೆ ಎಲ್ಲ ತೀರ್ವೆ ವಸೂಲಾಗಬೇಕು. ಅದೇ ಪ್ರಕಾರ ತೀರ್ವೆ ಕೊಡುವವರಿಗೆ ಸಿಗತಕ್ಕ ಗೇಣಿಯಾದರೂ ಅಷ್ಟೇ ಅವಧಿಯಲ್ಲಿ ವಸೂಲಾಗಬೇಕು; ಇಲ್ಲವೆ ೧ ವರ್ಷದಲ್ಲಾದರೂ ವಸೂಲಾಗಬೇಕು; ಈವಾಗ ೩-೩, ೪ ೪ ವರ್ಷಗಳ ತನಕ ಫೈಸಲೆ ರಕಮುಗಳು ವಸೂಲಾಗುವದಿಲ್ಲ. ವಸೂಲ ಮಾಡಲಿಕ್ಕೆ ಯಾರೂ ಉತ್ಸಾಹ ಪಡುವದಿಲ್ಲ. ಸರಕಾರವು ದಾವೆಯ ಅರ್ಜಿಯ ಬಗ್ಗೆ ೦-೪-೦, ಪ್ರತಿವಾದಿಯ ಮೇಲೆ ಆಗತಕ್ಕ ಸಮನ್ಸಿನ ಬಗ್ಗೆ ೦-೮-೦, ಮೇಲೆ ಮುನಾಹಿರೆಯಂತ ಫೈಸಲೆ ರಕಮಿನ ಮೇಲೆ ರೂಪಾಯಿಗೆ ೧ ಆಣೆಯಂತೆ ಎತ್ತುವಳಿ ಮಾಡಿ ಎಲ್ಲ ರಕಮುಗಳನ್ನು ತಾನೇ ನುಂಗುತ್ತದೆ. ಮೊದಲು ಸಮನ್ಸುಗಳನ್ನು ಪ್ರತಿವಾದಿಯರ ಮೇಲೆ ಜಾರಿ ಮಾಡಲು 'ಪ್ರೊಸೆಸ-ಸರ್ವ್ಹರ್ಸ' ಅಂದರೆ ಸಮನ್ಸುಗಳನ್ನು ಜಾರಿ ಮಾಡುವ ಪೇದೆಗಳು ನೇಮಿಸಲ್ಪಡುತ್ತಿದ್ದರು. ಹಂಗಾಮಿಯಾಗಿ ಒಬ್ಬೊಬ್ಬ ಕಾರಕೂನರು ಈ ಕೆಲಸಕ್ಕೆ ನೇಮಿಸಲ್ಪಡುತ್ತಿದ್ದರು. ತತ್ಪರತೆಯಿಂದ ಹಣ ವಸೂಲ ಮಾಡಿದ ಬಗ್ಗೆ ಮುಶಾಹಿರೆ ಗ್ರಾಮಾಧಿಕಾರಿಗಳಿಗೆ ಸಿಗುತ್ತಿತ್ತು. ದಾವಾ ಸ್ಟಾಂಪು ಮತ್ತು ಸಮನ್ಸ ಸ್ಟಾಂಪುಗಳ ಉತ್ಪತ್ತಿಯಿಂದ ಕಾರಕೂನ ಪೇದೆಗಳ ಸಂಬಳ ಕೊಡಲ್ಪಡುತ್ತಿತ್ತು. ಹೀಗೆ ಗೇಣಿಬಾಕಿ ದಾವೆಗಳ ವಸೂಲಿಯ ವ್ಯವಸ್ಥೆ ನಡೆಯುತ್ತಿದ್ದದರಿಂದ ಜನರಿಗೆ ಬಹಳ ಅನುಕೂಲವಾಗುತ್ತಿದ್ದಿತು. ಈಗ ಅಂಥ ಯಾವದೇ ವ್ಯವಸ್ಥೆಯಿಲ್ಲ. ಎಲ್ಲ ಕೆಲಸವನ್ನು ಇದ್ದ ಶಿಬಂದಿಯವರೇ ನಡಿಸಬೇಕು. ಸಮನ್ಸುಗಳನ್ನು ಉಗ್ರಾಣಿ ಜನರು ಜಾರಿ ಮಾಡಬೇಕು. ಆ ಬಗ್ಗೆ ಅವರಿಗೆ ಪ್ರತ್ಯೇಕ ವೇತನ ಸಿಗುವದಿಲ್ಲ. ತಮ್ಮ ಇದ್ದ ಸಂಬಳವೇ ಈ ಕೆಲಸಕ್ಕೆಂದು ಎಣಿಸಿ ಗ್ರಾಮಸ್ಥರು ವಸೂಲಿಯ ಕೆಲಸ ನಡಿಸಬೇಕು. ಕಲೆಕ್ಟರರು ಈ ಕಡೆ ಏನೂ ಲಕ್ಷ ಕೊಡುವದಿಲ್ಲ ತೀರ್ವೆ ವಸೂಲಾಗದಿದ್ದರೆ ಎಲ್ಲರೂ ಪ್ರಕ್ಷುಬ್ಧರಾಗುತ್ತಾರೆ ಗೇಣಿಬಾಕಿ ದಾವೆಗಳ ವಸೂಲಿಯ ಕೆಲಸದ ಬಗ್ಗೆ ಆಗ್ರಹ ಹಿಡಿದರೆ ಸಿಟ್ಟು ಮಾಡುತ್ತಾರೆ ಭೂಮಿಯ ಉತ್ಪತ್ತಿ ಪಡೆಯದೆ ತೀರ್ವೆಯನ್ನಷ್ಟೇ ಸಕಾಲದಲ್ಲಿ ತುಂಬತಕ್ಕದ್ದಾಗಿ ಕಲೆಕ್ಟರರು ವಿಧಿಸುವದು ಜನಗಳಿಗೆ ಅನ್ಯಾಯ. ಆದರಿಂದ ಗೇಣಿಬಾಕಿಯನ್ನಿಟ್ಟುಕೊಳ್ಳುವ ಕೃತಘ್ನ ಒಕ್ಕಲುಗಳಿಗೆ ಉತ್ತೇಜನ ಕೊಟ್ಟಂತಾಗುತ್ತದೆ. ಮುಂಬಯಿ ಸರಕಾರವು ಈ ಕಡೆ ಸ್ವಲ್ಪ ಲಕ್ಷ ಕೊಡದಿದ್ದರೆ ನಮ್ಮ ಜಿಲ್ಹೆಯಲ್ಲಿ ಇನ್ನು ಮುಂದೆ ತೀರ್ವೆ ತೆರುವದು ಬಲು ಕಷ್ಟವಾದೀತು

⁂

ಮುಂಬಯಿ ಸರಕಾರವು ಮ್ಯುನಿಸಿಪಾಲಿಟಿಗಳಿಗೆ ಹೆಡ್ ಕಾರಕೂನ ದರ್ಜೆಯ ಇಸಮುಗಳನ್ನು ಮುಖ್ಯ ಕಾರ್ಯಕಾರಿ ಅಧಿಕಾರಿಯಾಗಿ ನೇಮಿಸುವ ನಿರ್ಣಯ ಕೈಕೊಂಡಿದ್ದು ತೀರ ಕ್ಷೇಮಕರವಾದದ್ದು. ಮ್ಯುನಿಸಿಪಾಲಿಟಿಗಳ ಕಾರಭಾರ ಕಂಗೆಡಲಿಕ್ಕೂ ಪಕ್ಷ-ಪಂಗಡಗಳ ಪ್ರಾಬಲ್ಯ ಉಂಟಾಗಲಿಕ್ಕೂ ಕಾರ್ಯಕಾರಿ ಅಧಿಕಾರಿಯ ದುರ್ಬಲತೆಯೇ ಪ್ರಮುಖ ಕಾರಣ. ಈಗಿನ ಕಾರ್ಯದರ್ಶಿಗಳಿಗೆ ಮ್ಯುನಿಸಿಪಾಲಿಟಿ ಕಾನೂನಿನ ಜ್ಞಾನ ಕಡಿಮೆ, ತಮ್ಮ ಕಾರ್ಯದ ಗ್ರಹಿಕೆ ಕಡಿಮೆ. ಆದರಿಂದ ಪಕ್ಷ-ಪಂಗಡಗಳಲ್ಲಿ ಸೇರಿಕೊಂಡು ಅವನ್ನು ಕುಣಿಸಿ ತಮ್ಮ ಸಂಬಳವನ್ನು ಇವರು ಸುಸೂತ್ರ ಪಡೆಯಬಯಸುತ್ತಾರೆ. ಪಕ್ಷ-ಪಂಗಡಗಳ ಅಭಾವದಲ್ಲಿ ಇವರ ಅಯೋಗ್ಯತೆ ಬಯಲಾಗುತ್ತದೆ ಸರಕಾರವು ಈ ತನಕ ಅನಾಸ್ಥೆ ಮಾಡಿದ್ದರಿಂದಲೇ ಮ್ಯುನಿಸಿಪಾಲಿಟಿಗಳು ಲೋಕೋಪಕಾರಿಗಳಾಗದೆ ಲೋಕಕಂಟಕವಾದವು ಸದ್ಯಕ್ಕೆ ಆಕಾಶವಾಣಿಯಲ್ಲಿ ಮದ್ರಾಸದ ನ್ಯಾಯಾಧೀಶರು ಮ್ಯುನಿಸಿಪಾಲಿಟಿಯ ಕಾರಭಾರದ ಒಂದು ವಿನೋದಪರ ಖಿಲ್ಲಿಯ ವಿಚಾರವನ್ನು ಹೇಳಿ, ಮ್ಯುನಿಸಿಪಾಲಿಟಿಗಳ ಆಡಳಿತೆ ತೀರ ಗರ್ಹಣೀಯವೆಂದು ಪ್ರತಿಪಾದಿಸಿದ್ದಾರೆ. ಮ್ಯುನಿಸಿಪಾಲಿಟಿಗಳಲ್ಲಿ ಸಭಾಸದರು ಮ್ಯುನಿಸಿಪಾಲಿಟಿಯ ಕಾರ್ಯವೊಂದನ್ನು ಬಿಟ್ಟು, ಬೇರೆ ಕಾರ್ಯದಲ್ಲಿ ಮಗ್ನರಾಗುತ್ತಾರೆ; ಇಲ್ಲದ ವಿವಾದಗಳನ್ನು ಹೂಡಿ ಸಭೆಗಳನ್ನು ನಿರರ್ಥಕಗೊಳಿಸುತ್ತಾರೆ; ಕಾರ್ಯಕಾರಿ ಅಧಿಕಾರಿಗಳು ಲಂಚ ತಿಂದು ಕೊಬ್ಬುತ್ತಾರೆ, ಆರೋಗ್ಯರಕ್ಷಣೆ ಮಾಡುವದಿಲ್ಲ ಹೀಗೆ ಸಹ ಮದ್ರಾಸದ ನ್ಯಾಯಮೂರ್ತಿಗಳು ಆ ಖಿಲ್ಲಿಯನ್ನು ತೀರ್ಮಾನಿಸುವಾಗ ತಮ್ಮ ತೀರ್ಪು ಕೊಟ್ಟಿರುತ್ತಾರೆ. ಮುಂಬಯಿ ಸರಕಾರವು ಖಾಳೇ ಮಂಡಳದ ಶಿಫಾರಸಿನಂತೆ ಸೆಕ್ರೆಟರಿ ಇಸಮುಗಳನ್ನು ನೇಮಿಸುವ ಮನೋನಿರ್ಣಯ ಮಾಡಿ ಜನಗಳ ಮೇಲೊಂದು ಉಪಕಾರ ಮಾಡಿದೆ. ಕಾರವಾರ, ಕುಮಟಾ, ಹೊನ್ನಾವರ, ಭಟಕಳ, ಶಿರ್ಸಿ, ಹಳಿಯಾಳ ಮ್ಯುನಿಸಿಪಾಲಿಟಿಗಳ ಕಾರ್ಯದರ್ಶಿಗಳಿಗೆ ಸಾಮಾನ್ಯವಾಗಿ ಹೆಡ್-ಕಾರಕೂನ ದರ್ಜೆಯ ಸಂಬಳ ಸಿಗುತ್ತದೆ ಸರಕಾರವು ತಮ್ಮ ಇಸಮಿನ ಕ್ಷಿ ಸಂಬಳವನ್ನು ಸಹಿಸುವ ನಿರ್ಣಯ ಮಾಡಿದ್ದರಿಂದ ಸರಕಾರಿ ಇಸಮುಗಳನ್ನು ನೇಮಿಸಿಕೊಂಡರೆ ಮ್ಯುನಿಸಿಪಾಲಿಟಿಗೆ ಕೆಲ ಮಟ್ಟಿಗೆ ಲಾಭವಾಗುವಂತಿದೆ ಮುಂಬಯಿ ಸರಕಾರವು ಈ ತೀರ್ಮಾನದಂತೆ ಶೀಘ್ರವೇ ಕಾರ್ಯಕಾರಿ ಅಧಿಕಾರಿಗಳನ್ನು ನಮ್ಮ ಜಿಲ್ಹೆಯೊಳಗೆ ನೇಮಿಸುವ ವ್ಯವಸ್ಥೆ ಮಾಡುವದೊಳಿತು.

⁂

ನಮ್ಮ ಜಿಲ್ಹೆಯೊಳಗೆ ಗೋಧನ ಕಡಿಮೆ. ಮುಂಚೆ ನಮ್ಮಲ್ಲಿ ಗೌಳಿಗರು ಉರ್ಜಿತರಾಗಿದ್ದರು. ಈಗ ಅಂದರೆ ಜಂಗಲ ಇಲಾಖೆಯ ಕಾರಕೀರ್ದಿಯಾದಂದಿನಿಂದ ನಮ್ಮಲ್ಲಿಯ ಗೋಧನ ಬಹು ಮಟ್ಟಿಗೆ ಕುಗ್ಗಿದೆ; ಮೇಲಾಗಿ ಇದ್ದ ಗೋಧನಕ್ಕೆ ತಕ್ಕ ವ್ಯವಸ್ಥೆಯಿಲ್ಲ. ಗೋವುಗಳು ತೀರ ಬಡಬೀಳುತ್ತವೆ. ಇದಕ್ಕೆ ಮುಖ್ಯ ಕಾರಣ ಬೈಲು ಪ್ರದೇಶದ ಅಭಾವ. ಗೋವುಗಳ ಅಭಿವೃದ್ಧಿಗೆ ಬೈಲು ಪ್ರದೇಶ ಬೇಕು. ಹಾರ್ಯಾಡಲಿಕ್ಕೆ, ಓಡಾಡಲಿಕ್ಕೆ, ಮೇಯಲಿಕ್ಕೆ ಗೋವುಗಳಿಗೆ ವಿಶಾಲವಾದ ಭೂಪ್ರದೇಶವಿದ್ದರೆ ಅವು ಪ್ರಕೃತಿಯೊಡನೆ ಒಡನಾಡಿ ಅಭಿವೃದ್ಧಿ ಹೊಂದುತ್ತವೆ. ಶರೀರದಿಂದ ಬೆಳೆದು ಚಲೋ ಹಾಲು ಹಿಂಡುತ್ತವೆ. ಈವಾಗ ನಮಗೆ ದನ ಸಾಕುವದು ಒಜ್ಜೆಯಾಗಿದೆ ದನಗಳಿಂದ ಸಿಗುವ ಹಾಲು ದನಗಳ ಜೋಪಾನಕ್ಕೆ ಸಾಲುವದಿಲ್ಲ ಇದರ ವಿಚಾರವನ್ನು ಸರಕಾರವು ಗಾಂಭೀರ್ಯದಿಂದ ಮಾಡಬೇಕು.

ನಮ್ಮತ್ತ ಕಡೆಯ ದನಗಳು ಕೃಶವಾಗಲು ಇಲ್ಲವೆ ಪುಷ್ಟವಾಗಿ ಬೆಳೆಯದಿರಲು ಇನ್ನೊಂದು ಪ್ರಬಲ ಕಾರಣವುಂಟು. ನಮ್ಮತ್ತ ಕಡೆ ಬೆಳೆಯುವ ಹುಲ್ಲು (below maintainance) ಅಂದರೆ ದೇಹಧಾರಣೆಗೆ ನ್ಯೂನತೆಯುಳ್ಳದ್ದಾಗಿದೆ ದನಗಳ ದೇಹಬೆಳವಣಿಗೆಗೆ ಅವಶ್ಯವುಳ್ಳ ಸತ್ವಾಂಶಗಳೂ ಚೈತನ್ಯಾಂಶಗಳೂ ಈ ಹುಲ್ಲಿನಲ್ಲಿ ಇರುವದಿಲ್ಲ ಆದರಿಂದ ಹೊಸ ಮಾದರಿಯ ಹುಲ್ಲನ್ನು ಬೆಳೆಸುವ ದೆಸೆಯಿಂದ ಬೇಸಾಯ ಇಲಾಖೆಯವರು ಪ್ರಚಾರವನ್ನು ನಡಿಸುತ್ತಿದ್ದಾರೆ ಸ್ವಾಭಾವಿಕವಾಗಿ ಬೆಳೆಯುವ ಹುಲ್ಲಿನ ಮೇಲೆಯೇ ನಿರ್ವಾಹ ಮಾಡಿಕೊಳ್ಳುವ ದನಗಳು ಸಾವಿರಾರು. ಈ ಹುಲ್ಲು ಈಗ ಸತ್ವಹೀನವಾಗಲು ಕಾರಣವೇನು ? ಸೃಷ್ಟಿಸ್ಥಿತಿಯಲ್ಲಿ ವ್ಯತ್ಯಾಸವೇನಾಯಿತು? ಎಂಬದರ ಚೌಕಶಿಯಾಗಬೇಕು ಹೊಸ ಮಾದರಿಯ ಹುಲ್ಲು ನಮ್ಮ ಕರಾವಳಿಗೆ ಸರಿಹೋಗುವದೇನೆಂಬದೊಂದು ಪ್ರಶ್ನೆಯುಂಟು. ಬೇಸಾಯ ಇಲಾಖೆಯವರು ಈ ಚೌಕಶಿಯನ್ನು ನಡಿಸಿ ದನಗಳ ಜೋಪಾನಕ್ಕೆ ಮತ್ತು ಅಭಿವೃದ್ಧಿಗೆ ಅವಶ್ಯವುಳ್ಳ ಏರ್ಪಾಟನ್ನು ಕೈಕೊಳ್ಳತಕ್ಕದ್ದು.

ಬೇಸಾಯ ಇಲಾಖೆಯವರೂ ಜಂಗಲ ಇಲಾಖೆಯವರೂ ವಿಚಾರವಿನಿಮಯದಿಂದ ಬೇಸಾಯೋದ್ಧಾರವನ್ನು ಕಲ್ಪಿಸುವಾಗ ಗೋವಿನ ಅಭಿವೃದ್ಧಿಯ ವಿಚಾರ ಮಾಡುವದು ಅತ್ಯವಶ್ಯ. ಗೋವೇ ಕೃಷಿಕರ್ಮದ ಮುಖ್ಯ ಆಧಾರ. ಬೇಸಾಯದ ಅಭಿವೃದ್ಧಿಯೂ ಗೋವಿನ ಅಭಿವೃದ್ಧಿಯೂ ಒಮ್ಮೆಲೇ ನಡೆಯಬಲ್ಲವು. ಗೋವಿನ ಅಭಿವೃದ್ಧಿಯಾದರೆ ಬೇಸಾಯದ ಅಭಿವೃದ್ಧಿಯಾಗುತ್ತದೆ. ಬೇಸಾಯದ ಅಭಿವೃದ್ಧಿಯಾದರೆ ಗೋವಿನ ಅಭಿವೃದ್ಧಿಯೂ ಆಗುತ್ತದೆ. ಹೀಗೆ ಇವು ಅನ್ಯೋನ್ಯ ಸಂಬಂಧವುಳ್ಳವುಗಳು.

⁂

ಕುಮಟಾ ತಾಲೂಕಿನ ಕಾಗಾಲ ಮೊದಲಾದ ಊರುಗಳಲ್ಲಿ ಗೀತಾ-ಜಯಂತಿಯ ಉತ್ಸವ ಕ್ರಮ ನಡೆದಿದೆ. ಮಾರ್ಗಶೀರ್ಷ ಶು॥ ೧೧ ತಿಗೆ ಕುರು

ಕ್ಷೇತ್ರದಲ್ಲಿ ಶ್ರೀ ಕೃಷ್ಣ ಪರಮಾತ್ಮನು ಎದೆಗುಂದಿದ ಪಾರ್ಥನಿಗೆ ಗೀತೆಯನ್ನು ಬೋಧಿಸಿ ಕರ್ತವ್ಯತತ್ಪರ ಮಾಡಿ ಮಹಾಭಾರತ ಯುದ್ಧವನ್ನು ತನ್ನ ಸಂಕಲ್ಪದಂತೆ ಕೊನೆಗಾಣಿಸಿಕೊಂಡಿದ್ದಾನೆ. ಉತ್ತರ ದೇಶದಲ್ಲೂ ಮಹಾರಾಷ್ಟ್ರದಲ್ಲೂ ಗೀತಾ-ಜಯಂತಿಯ ಉತ್ಸವಗಳು ಸಂಭ್ರಮದಿಂದ ನಡೆಯುತ್ತಿವೆ. ನಮ್ಮ ಜಿಲ್ಹೆಯೊಳಗೆ ಇವು ಅಪರೂಪ. ಗೀತಾ ಗ್ರಂಥದ ಕುರಿತು ಪ್ರಶಂಸೆ ಮಾಡತಕ್ಕದ್ದೇನೂ ಇಲ್ಲ. ದೇಶ-ವಿದೇಶಗಳಲ್ಲಿ ಮಹಾಜನರೆಲ್ಲರೂ ಅದನ್ನು ಹೊಗಳಿದ್ದಾರೆ. ಆ ಗ್ರಂಥ ಪಠಣದಿಂದ ಮಹಾತ್ಮಾ ಗಾಂಧಿ, ಪಂ॥ ಮದನಮೋಹನ ಮಾಲವೀಯ, ಲೋಕಮಾನ್ಯ ಟಿಳಕರವರಂಥ ಮಹಾವಿಭೂತಿಗಳು ಶಾಂತಿ-ಸಮಾಧಾನಗಳನ್ನು ಸಂಗ್ರಹಿಸಿಕೊಂಡಿದ್ದುಂಟು. ಇಂಥ ಗ್ರಂಥವನ್ನು ಸಕಲರೂ ಪಠಿಸಬೇಕು. ಜಯಂತ್ಯುತ್ಸವಗಳಲ್ಲಿ ಈ ಗ್ರಂಥಬೋಧದ ಚರ್ಚೆಯಾಗುತ್ತಿದೆ; ಗ್ರಂಥ ಪಠಣವೂ ನಡೆಯುತ್ತಿದೆ ಇಂಥ ಉತ್ಸವಗಳು ಪ್ರತಿಯೊಂದು ಗ್ರಾಮದಲ್ಲಿ ನಡೆಯುವದು ಹಿತಕರ. ಧರ್ಮಗ್ಲಾನಿಯ ದಿನಗಳಲ್ಲಿ ಗೀತಾ-ಪಾಠದಿಂದ ಮನಸ್ಸು ಧರ್ಮಪರವಾಗಿ ಪ್ರಾಪಂಚಿಕನು ದಕ್ಷನಾಗುತ್ತಾನೆ. ಗೀತೆಯಲ್ಲಿ ವೇದಾಂತವಿದೆ, ವ್ಯವಹಾರವಿದೆ. ವೇದಾಂತ-ವ್ಯವಹಾರಗಳು ಸಮನ್ವಯ ಮಾಡಿಕೊಡಲ್ಪಟ್ಟಿವೆ. ಯಾವದೊಂದು ಸಂದರ್ಭದಲ್ಲಿ ಮಾನವನು ಯಾವ ಪ್ರಕಾರದಿಂದ ನಡಕೊಳ್ಳಬೇಕೆಂಬ ಸಂಗತಿ ಸಹ ಆ ಗ್ರಂಥ ಪಠಣದಿಂದ ಗ್ರಹಿಕೆಯಾಗುತ್ತಿದೆ ಸನಾತನ ಹಿಂದು ಧರ್ಮದ ಅತ್ಯುಚ್ಚತರ ಗತಿಯ ಗ್ರಂಥರತ್ನವಿದು. ಇಂಥ ಗ್ರಂಥವನ್ನು ಸಮಸ್ತ ಹಿಂದುಗಳು ಪಠಣ ಮಾಡಿ ಪ್ರಪಂಚವನ್ನು ಆ ಗ್ರಂಥ ಬೋಧೆಗನುಸಾರವಾಗಿ ನಡಿಸಿದರೆ ಜನ್ಮ ಸಾರ್ಥಕವಾಗುವದು ನಿಃಸಂಶಯ. ಧರ್ಮಾಭಿಮಾನಿಗಳೂ ಧರ್ಮಾಧಿಕಾರಿಗಳೂ ಧರ್ಮಸಂಸ್ಥೆಯವರೂ ಈ ಉಪಕ್ರಮ ಪ್ರೋತ್ಸಾಹಿಸುವಂತಹದು.

ವಿವಿಧ ವಾರ್ತೆಗಳು.

— ಮುಂಬಯಿಯ ಪೇಟೆಯಲ್ಲಿ ಚಿನ್ನದ ದರ ಏರುತ್ತಲಿವೆ ಮಾರ್ಗಶಿರ್ಷ ವ್ಯಾದೆಯು ಚಿನ್ನ ತೊಲೆಗೆ ರೂ ೪೪ರ ತನಕ ಏರಿಹೋಯಿತು; ಈಗ ರೂ. ೪೪॥ ಯ ಮಾನ! ಈಗಿನ ದರ ರೂ. ೪೪-೫-೬, ಇನ್ನೂ ಏರುವದಾಗಿ ಊಹೆ. ಜಪಾನದ ಪರಿಸ್ಥಿತಿ ಕೆಟ್ಟ ವಾರ್ತೆ ಬಂದೊಡನೆ ಚಿನ್ನದ ದರ ಏರುತ್ತದೆ; ಸಮಾಧಾನದ ವಾರ್ತೆ ಬಂದರೆ ಚಿನ್ನದ ದರ ಇಳಿಯುತ್ತಿದೆ. ಜಪಾನದೊಳಗಿನ ವಾರ್ತೆಗಳು ಇತ್ತಲಾಗಿ ಭಯಂಕರವಾದದ್ದಿವೆ ಅದರಿಂದ ಇನ್ನೂ ಚಿನ್ನದ ದರ ಏರುವ ಲಕ್ಷಣಗಳಿವೆ. ಮುಂಬಯಿಯೊಳಗೆ ಪೇಟೆಯಲ್ಲಿ ೧। ಲಕ್ಷ ತೊಲೆ ಚಿನ್ನವುಂಟು. ದಿನಕ್ಕೆ ೨೦೦ ತೊಲೆ ಚಿನ್ನ ಬರುತ್ತವೆ, ಅಷ್ಟೇ ಖರೇದಿಯಾಗಿ ಹೋಗುತ್ತಿದೆ. ಬೆಳ್ಳಿಯ ಧಾರಣೆ ೧೦೦ ತೊಲೆಯ ಘಟ್ಟಿಗೆ ರೂ ೬೩ ಬೆಲೆಯಿದೆ. ಸುಕ್ಷಿಕೋಠದಲ್ಲಿ ಬೆಳ್ಳಿಯುಂಟು. ಅದನ್ನು ಅಮೇರಿಕೆಯ ಸರಕಾರವು ಪ್ರತಿ ತಿಂಗಳಿಗೆ ೧-೧। ಕೋಟಿ ತೊಲೆಯಂತೆ ಕೊಳ್ಳಬೇಕೆಂದು ಕರಾರು ಮಾಡಿದೆ. ಅದರಿಂದ ಬೆಳ್ಳಿಗೆ ಹೊಸ ಗಿರಾಕಿ ಹುಟ್ಟಿದೆ. ಕಾರಣ ಬೆಳ್ಳಿಯ ದರ ಏರಬಹುದು, ಆದರೆ ಎಷ್ಟಕ್ಕೂ ಇಳಿಯಲಾರದು. ಮುಂಬಯಿ ಪೇಟೆಯಲ್ಲಿ ೧೦೦-೧೦೦ ತೊಲೆಯ ೧॥ ಸಾವಿರ ಘಟ್ಟಿಗಳು ಇರುತ್ತವೆ.

— ಪಂಜಾಬದೊಳಗೆ ಒಂದು ಕ್ರಿಕೆಟ ಪಂದ್ಯಾಟ ನಡೆಯಿತು. ಗವ್ಹರ್ನರರ ಪಕ್ಷ ಒಂದು ಬದಿಗೆ, ಪಂಜಾಬ ವಿಶ್ವವಿದ್ಯಾಲಯದ ಪಕ್ಷ ಇನ್ನೊಂದು ಬದಿಗೆ. ಈ ಪಂದ್ಯಾಟಕ್ಕೆ ತಿಕೀಟು ಇಡಲಾಗಿತ್ತು. ಹುಟ್ಟಿದ ಉತ್ಪನ್ನವೆಲ್ಲ ಲಾಹೋರದ ಯುದ್ಧಮಂಡಳಕ್ಕೆ. ಈ ಪಂಧ್ಯಾಟದ ಒಂದು ತಿಕೀಟನ್ನು ಲಾಹೋರದ ಡೆಪ್ಯುಟಿ ಕಮಿಶನರರು ಸರದಾರ ಸೋಹನಸಿಂಗ ಜೋಶ ಎಂಬ ಲೆಜಿಸ್ಲೇಟಿವ್ಹ ಎಸೆಂಬ್ಲಿಯ ಸಭಾಸದರಿಗೆ ರವಾನಿಸಿದರು. ಸರದಾರರು ರಾಜಬಂದಿಗಳಾಗಿದ್ದಾರೆ. ಇವರು ಕೊಂಗ್ರೆಸ ಪಕ್ಷದ ಸಭಾಸದರು. ಇಷ್ಟಾಗಿ ಇವರು ಲಾಹೋರದಿಂದ ೨೦೦ ಮೈಲು ದೂರವಿರುವ ಒಂದು ಜೈಲಿನಲ್ಲಿ ಇದ್ದಾರೆ. ಇವರಿಗೆ ಕಾರಾಗೃಹವಾಸವಾಗಿ ೧॥ ವರ್ಷವಾಯಿತು ಇವರಿಗೆ ಸರಕಾರದಿಂದ ಏನೂ ಭಕ್ತೆ ಸಿಗುವದಿಲ್ಲ. ಇಂಥವರಿಗೆ ಪಂದ್ಯಾಟ ನೋಡುವ ತಿಕೀಟನ್ನು ಕಳುಹುವದು ಅದ್ಭುತ ಸಂಗತಿಯೆಂದು ಕೊಂಗ್ರೆಸ ಪಕ್ಷದವರು ಡೆ॥ ಕಮಿಶನರರಿಗೆ ಉತ್ತರ ಕಳುಹಿದ್ದಾರೆ ತಮಗೆ ಕಳುಹಿದ ಪತ್ರವನ್ನು ಸರದಾರರು ಕೊಂಗ್ರೆಸ ಪಕ್ಷದ ಕಚೇರಿಗೆ ಕಳುಹಿದ್ದರು.

— ಅಲಹಾಬಾದದ ಮ್ಯುನಿಸಿಪಾಲಿಟಿಯಲ್ಲಿ ರೂ. ೧೫೦೦೦ ಯುದ್ಧಕಾಣಿಕೆ ಕೊಡಬೇಕೆಂಬ ತೀರ್ಮಾನ ಕಳೆದ ಮೇ ತಿಂಗಳಲ್ಲಿ ಸೂಚಿಸಲಾಗಿತ್ತು. ವಿರೋಧಕರಿಗೆ ಭಾಷಣ ಸ್ವಾತಂತ್ರ್ಯವಿರುವದೇನೆಂಬದರ ವಿಚಾರವನ್ನು ಸರಕಾರದ ಕಡೆ ನಡಿಸಿ, ಆ ಮೇಲೆ ಈ ವಿಷಯ ವಿಚಾರ ನಡಿಸತಕ್ಕದ್ದಾಗಿ ಅಧ್ಯಕ್ಷರಾದ ಶ್ರೀ॥ ಬಸುರವರು ತೀರ್ಮಾನಿಸಿ ಚರ್ಚೆಯನ್ನು ಮುಂದೂಡಿದ್ದರು ಕೇಳಿದ ಆಶ್ವಾಸನ ಸರಕಾರದಿಂದ ಸಿಗಲಿಲ್ಲ. ಲೋಕಲಾಬ ಸಂಸ್ಥೆಗಳಿಗೆ ಭಾಷಣ ಸ್ವಾತಂತ್ರ್ಯವನ್ನು ನಿರ್ಬಂಧಿಸುವ ವಿಷಯಗಳನ್ನು ಚರ್ಚಿಸಗೊಡಲು ಸಾಧ್ಯವಿಲ್ಲವೆಂದು ಶ್ರೀ॥ ಬಸುರವರು ತೀರ್ಮಾನಿಸಿ ಠರಾವನ್ನು ಚರ್ಚಿಸಗೊಡಲಿಲ್ಲ. (ಶುಕ್ರವಾರ) ತಾ. ೨೧ನೇಗೆ ಸೇರಿದ ಸಭೆಯಲ್ಲಿ ಮ್ಯುನಿಸಿಪಾಲಿಟಿಯ ಭಂಡಾರದೊಳಗಿಂದ ರೂ. ೧೫೦೦೦ಗಳನ್ನು ಯುದ್ಧನಿಧಿಗೆ ಅರ್ಪಿಸಬೇಕೆಂಬ ತೀರ್ಮಾನ ನಿಯಮಬಾಹ್ಯವಾದುದೆಂದು ನಿರ್ಣಯಿಸಿ ಸಭಾಪತಿಗಳಾದ ಶ್ರೀ॥ ಬಸುರವರು ಅದನ್ನು ತಿರಸ್ಕರಿಸಿದರು.

— ದಿಲ್ಲಿಯ 'ಹಿಂದುಸ್ಥಾನ ಟೈಮ್ಸ್" ಪತ್ರಿಕೆಯ ಸಂಪಾದಕರಾದ ಶ್ರೀ॥ ದೇವದಾಸ ಗಾಂಧಿಯವರು ಶುಕ್ರವಾರ ತಾ. ೨೮ನೇಗೆ ದಂಡ ಕೊಡದೆ ಸೆರೆಮನೆ ಸೇರಿರುವರು. ಮುಖ್ಯ ನ್ಯಾಯಾಧೀಶರು ಒಂದು ಪ್ರಕಟಣೆ ಹೊರಡಿಸಿ ನ್ಯಾಯಾಧಿಕಾರಿಗಳು ವ್ಯಾಜ್ಯಗಳೊಳಗಿನ ಪಕ್ಷಗಾರರ ಕಡೆಯಿಂದ ಯುದ್ಧನಿಧಿ ಎತ್ತುವಳಿ ಮಾಡಕೂಡದಾಗಿ ನಿರ್ಬಂಧಿಸಿದ್ದಾರೆ. ನ್ಯಾಯಾಧಿಕಾರಿಗಳು ವ್ಯಕ್ತಿ ನಾತೆಯಿಂದ ಯುದ್ಧಮಂಡಳಗಳಲ್ಲಿ ಸೇರಲಿಕ್ಕೆ ಪ್ರತ್ಯವಾಯವಿಲ್ಲವಾಗಿಯೂ ಮುಖ್ಯ ನ್ಯಾಯಾಧೀಶರು ವಿಶದಗೊಳಿಸಿದ್ದಾರೆ. ರಾಷ್ಟ್ರಪತಿ ಮೌ॥ ಅಝಾದರವರು ಸರಕಾರಕ್ಕೆ ಒಂದು ನಿಷೇಧಪರ ಪತ್ರ ಬರೆದು, ಇನ್ನು ಮುಂದೆ ತಾವು ಯಾರನ್ನೂ ಸೆರೆಮನೆಯಲ್ಲಿ ಕಾಣಲಿಕ್ಕಿಲ್ಲವಾಗಿ ತಿಳಿಸಿದ್ದಾರಂತೆ ನೈನಿ ಜೈಲಿನಲ್ಲಿ ಮೌ॥ರವರಿಗೆ ಕಾಣಲು ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭಾಸದರೊಬ್ಬರು ಹೋಗಿದ್ದರಂತೆ, ಮಾತಾಡ ನಿಂತಾಗ ಲಘುಲೇಖಕ ಪೌಜದಾರರೊಬ್ಬರು ಮಾತಿಗೆ ನಿಂತು ಬರಕೊಳ್ಳತೊಡಗಿದರಂತೆ. ಮೌ॥ರವರು ಇದನ್ನು ನೋಡಿದೊಡನೆ ಮಾತಾಡುವದನ್ನು ಬಿಟ್ಟು, ಈ ಅಪಕೃತ್ಯದ ಕುರಿತು ಸರಕಾರಕ್ಕೆ ಬರಕೊಂಡರಾಗಿ ನೈನಿ ಸೆಂಟ್ರಲ ಜೈಲಿನಿಂದ ಬಿಡುಗಡೆಯಾಗಿ ಬಂದ ಸತ್ಯಾಗ್ರಹಿಗಳು ಹೇಳುತ್ತಾರೆ. ನಾಗಪುರದ ಜೈಲಿನಲ್ಲಿದ್ದ ಆಚಾರ್ಯ ವಿನೋಬಾ ಭಾವೆಯವರೂ ಹೊರಜನರಿಗೆ ಕಾಣಬಯಸುವದಿಲ್ಲ. ಅದೇ ಪ್ರಕಾರ ಹೊರ-ಜನರಿಗೆ ಪತ್ರ ಬರೆಯಬಯಸುವದಿಲ್ಲ ಸೆರೆಮನೆಯಿಂದ ಹೊರಬಿದ್ದ ಸತ್ಯಾಗ್ರಹಿಗಳೊಡನೆ ಸೆರೆಮನೆಯಲ್ಲಿದ್ದವರು ಮಾತಾಡಕೂಡದೆಂದು ನಿಷೇಧಿಸಿದ್ದರಿಂದ ಆಚಾರ್ಯ ಭಾವೆಯವರು ಈ ತ್ಯಾಗ ಮಾಡಿದ್ದಾರೆ.

—ಕುಮಟಾ ಚಿತ್ರರಂಜನ ಥಿಯೇಟರಿನಲ್ಲಿ—
ತಾ. 30-11-41 ರಿಂದ ೨ನೇ ವಾರ ಪ್ರಾರಂಭವಾಯಿತು!
ಯ — ಶ — ಸ್ವೀ
** ಕನ್ನಡದ ಹೆಮ್ಮೆಯ ಚಿತ್ರಪಟ **


ಕನ್ನಡ
ಸುಭದ್ರ
ಬಾಳಾಜಿ. ಗುಬ್ಬಿ. ಫಿಲಂನ್ ರವರ ತಯಾರಿಕೆ

ಪಾತ್ರ:— ವಿನೋದ ರತ್ನಾಕರ ಗುಬ್ಬಿ ವೀರಣ್ಣಾ ಮತ್ತು ಜಯಮ್ಮಾ.

ಬುಕಿಂಗ ಬಗ್ಗೆ ಇವರಿಗೆ ಬರೆಯಿರಿ:—
ಕರ್ನಾಟಕ ಫಿಲ್ಮ ಡಿಸ್ಟ್ರಿಬ್ಯೂಟರ್ಸ, ಬಾಗಲಕೋಟ.

ಕಾನಡಾವೃತ್ತ.

ಮಿತಿ ವೃಷ ಸಂವತ್ಸರ ಮಾರ್ಗಶೀರ್ಷ ಶು॥ ೧೩, ಸೋಮವಾರ.

ಪ್ರಜಾಸಂತೋಷದ ವಿಚಾರ!

ಲಂಡನಿನ 'ಟ್ಯಾಯಿಮ್ಸ' ಪತ್ರಿಕೆಯಲ್ಲಿ ಮಿ॥ ಕಾರ್ಲ ಹೀಥರವರು ಬರೆದಂತೆ ಸರಕಾರವು ಹಿಂದುಸ್ಥಾನದೊಳಗಿನ ಈಗಿನ ಬಿಕ್ಕಟ್ಟಿಗೆ ಸರ್ವ ಕಾರಣವೆಂದು ಯಾರೂ ಒಪ್ಪತಕ್ಕಂಥ ಮಾತು. ರಾಷ್ಟ್ರೀಯ ಸಭೆಯವರಿಗೂ ಮುಸ್ಲಿಮ ಲೀಗಿನವರಿಗೂ ವಿವಾದವುಂಟು, ಹಿಂದು ಮಹಾಸಭೆಯವರದೊಂದು ಪ್ರತ್ಯೇಕ ಮಾರ್ಗವಿದೆ, ಉದಾರ ಮತವಾದಿಗಳು ಬೇರೆ, ರಾಜನಿಷ್ಠರು ಬೇರೆ, ಸ್ವತಂತ್ರರು ಬೇರೆ ಬೇರೆ, ಇವರೆಲ್ಲರ ವಿಚಾರಸರಣಿ ಭಿನ್ನ ಭಿನ್ನವಾಗಿದ್ದರಿಂದ ಹಿಂದುಸ್ಥಾನದೊಳಗಿನ ಬಿಕ್ಕಟನ್ನು ಬಗೆಹರಿಸಲು ಸಾಮ್ರಾಜ್ಯ ಸರಕಾರಕ್ಕೆ ನಿರುಪಾಯವಾಗಿದೆಂಬ ಮಾತನ್ನು ಮಿ॥ ಹೀಥರು ನಂಬುವದಿಲ್ಲ. ಹಿಂದುಸ್ಥಾನದ ಆಗು-ಹೋಗುಗಳ ಹೊಣೆಗಾರಿಕೆ ಸಾಮ್ರಾಜ್ಯ ಸರಕಾರದ್ದೇ ಇರುವಾಗ ಬಿಕ್ಕಟ್ಟಿನ ಪೂರ್ತ ಹಿಂದುಸ್ಥಾನದೊಳಗಿನ ಪಕ್ಷ ಪಂಗಡಗಳ ಮೇಲೆ ಹೊಣೆಗಾರಿಕೆಯನ್ನು ಹೊರಿಸಿ ಅಲಿಪ್ತ ಸಾಮ್ರಾಜ್ಯ ಸರಕಾರವು ಲೋಕವಂಚನೆಯನ್ನು ಮಾಡುತ್ತದೆಂದು ಪ್ರೊ॥ ಹೀಥರವರು ಸೂಚಿಸುತ್ತಾರೆ. ಹಿಂದುಸ್ಥಾನದ ಸಮಸ್ಯೆ ತಂತಾನೇ ಹೇಗೂ ಸುಧಾರಿಸಿ ಹೋಗುವದೆಂದು ಹಾರೈಸುತ್ತ ಉಳಿಯುವದು ತರವಲ್ಲವಾಗಿ ಮಿ॥ ಹೀಥರವರು ಸಾಮ್ರಾಜ್ಯ ಸರಕಾರಕ್ಕೆ ಎಚ್ಚರಿಕೆ ಕೊಡುತ್ತಾರೆ. ಬ್ರಿಟನಿನೊಳಗಿನ ಲೋಕಮತ ಹಿಂದುಸ್ಥಾನದ ಸಮಸ್ಯೆಯನ್ನು ಬಗೆಹರಿಸಬೇಕೆಂದು ಅಭಿಪ್ರಾಯಪಡುವದರಿಂದ ಸಾಮ್ರಾಜ್ಯ ಸರಕಾರವು ಈ ಸಮಸ್ಯೆಯನ್ನು ಬಿಡಿಸಲು ಗಾಂಭೀರ್ಯದಿಂದ ಆಲೋಚನೆ ಮಾಡುತ್ತದಾಗಿ ನಾವು ಊಹಿಸುತ್ತೇವೆ. ಮುಖ್ಯ ಪ್ರಧಾನರಾದ ಚರ್ಚಿಲ್ಲರವರು ಸದ್ಯಕ್ಕೆ ಹಿಂದುಸ್ಥಾನದ ಕುರಿತು ಹೇಳಿಕೆ ಕೊಡುವವರಿದ್ದರಾಗಿ 'ಮುಂಬಯಿ ಕ್ರೋನಿಕಲ' ಪತ್ರಿಕೆಯ ಲಂಡನಿನ ಸುದ್ದಿಗಾರರು ತಂತಿಯಿಂದ ತಿಳಿಸಿದ್ದರು. ಆದರೆ ಈ ತನಕ ಚರ್ಚಿಲ್ಲರ ಅಂತರಂಗ ಸ್ಪಷ್ಟವಾಗಲಿಲ್ಲ. ಮಧ್ಯದಲ್ಲಿ ಮಹಾತ್ಮರೊಡನೆ ಇದೇ ಕುರಿತು ಚಕ್ರವರ್ತಿ ರಾಜಗೋಪಾಲಾಚಾರ್ಯ ಪ್ರಭೃತಿ ಮುಂದಾಳುಗಳು ರಹಸ್ಯದಿಂದ ಆಲೋಚನೆ ಮಾಡಿದರು. ಚಕ್ರವರ್ತಿ ರಾಜಗೋಪಾಲಾಚಾರ್ಯರು ಮುಂಬಯಿ ತನಕ ಹೋಗಿ ಶ್ರೀ॥ ಭುಲಾಭಾಯಿ ದೇಸಾಯಿಯವರೊಡನೆ ಆಲೋಚನೆ ಮಾಡಿ ಬೆಂಗಳೂರಿಗೆ ತೆರಳಿದರು. ಪ್ರಕೃತ ರಾಜಕಾರಣದ ಕುರಿತು ಅಭಿಪ್ರಾಯ ಕೊಡಲು ತಾವು ಸಮರ್ಥರಾಗಿಲ್ಲವೆಂದು ಮುಂಬಯಿಯಲ್ಲಿ ಪತ್ರಿಕಾ ಪ್ರತಿನಿಧಿಗಳ ಕಡೆ ಶ್ರೀಯುತ ಆಚಾರ್ಯರು ಉದ್ಗರಿಸಿದ್ದುಂಟು. ರಾಷ್ಟ್ರೀಯ ಸಭೆಯವರು ಕಾಯಿದೆ ಕೌನ್ಸಿಲುಗಳ ಕಾರ್ಯಕ್ರಮಗಳಲ್ಲಿ ಸೇರಿ ಸರಕಾರವನ್ನು ಪ್ರತಿಭಟಿಸಬೇಕೆಂಬದೊಂದು ವಿಚಾರ ನಡೆಯುತ್ತಿದೆ. ಸರಕಾರಕ್ಕಾದರೂ ಈ ಬಿಕ್ಕಟ್ಟನ್ನು ಬಗೆಹರಿಸಬೇಕೆಂಬ ಲವಲವಿಕೆಯುಂಟಾಗಿದೆ. ಶುಕ್ರವಾರ ಪಾರ್ಲಿಮೆಂಟಿನಲ್ಲಿ ಹಿಂದುಸ್ಥಾನದ ವಿಷಯ ಕೆಲವು ಪ್ರಶ್ನೋತ್ತರಗಳು ನಡೆದವು. ರಾಜಬಂದಿಗಳನ್ನು ಬಿಡುಗಡೆ ಮಾಡುವ ವಿಷಯ ಹಿಂದುಸ್ಥಾನ ಸರಕಾರಕ್ಕೆ ಒಪ್ಪಿಸಿದ್ದು ಭಾರತ ಮಂತ್ರಿಗಳು ಹೇಳಿ ಆ ಕುರಿತು ವಿಚಾರ ನಡೆದಿರುವದಾಗಿ ತಿಳಿಸಿದರು. ಪ್ರಾಂತಗಳಲ್ಲಿ ಗವ್ಹರ್ನರರ ರಾಜ್ಯಭಾರವನ್ನು ಕೊನೆಗೊಳಿಸಿ ಮಂತ್ರಿಮಂಡಳಗಳನ್ನು ಸ್ಥಾಪಿಸಲು ಗವ್ಹರ್ನರರೂ ಹಿಂದುಸ್ಥಾನ ಸರಕಾರವೂ ಆತುರಪಡುತ್ತಿವೆ. ಪ್ರಜೆಗಳನ್ನು ಸಂತೈಸಬೇಕು, ಪ್ರಜೆಗಳ ಸಂತೋಷದಿಂದಲೇ ರಾಜ್ಯಭಾರವನ್ನು ಸಾಗಿಸಬೇಕು, ಎಂಬ ಕುತೂಹಲ ಸರಕಾರದಲ್ಲಿ ಉಂಟಾದದು ಶುಭೋದಯವೆಂದು ನಮ್ಮ ಅಂಬೋಣ.

ರಾಷ್ಟ್ರೀಯ ಸಭೆಯವರು ರಾಜ್ಯದಾಡಳಿತೆಯನ್ನು ಕೈಕೊಳ್ಳಲು ಸಿದ್ಧರಿದ್ದಾರೆ. ಯಾವದೇ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳಲು ರಾಷ್ಟ್ರೀಯ ಸಭೆಯವರು ಕಷ್ಟಪಡುವದಿಲ್ಲ. ಲೋಕಕಾರ್ಯಕ್ಕಾಗಿ ಯಾವತ್ತೂ ತ್ಯಾಗ ಕ್ಲೇಶಗಳನ್ನು ಸಹಿಸಲಿಕ್ಕೆ ಅವರು ತಯಾರಿದ್ದಾರೆ. ಆದರೆ ಅಧಿಕಾರಸ್ವೀಕಾರದಿಂದ ದೇಶಕಾರ್ಯವಾಗದಿದ್ದರೆ ಅಧಿಕಾರವನ್ನು ಸ್ವೀಕರಿಸಲಿಕ್ಕೆ ಅವರು ಒಡಂಬಡುವದಿಲ್ಲ. ಇದು ಸ್ವಾಭಾವಿಕವಾದದ್ದು. ಸರಕಾರಕ್ಕೆ ರಾಷ್ಟ್ರೀಯ ಸಭೆಯ ಭೂಮಿಕೆಯ ಅರಿವುಂಟು. ಸಾಮ್ರಾಜ್ಯ ಸರಕಾರವಾಗಲಿ ಹಿಂದುಸ್ಥಾನ ಸರಕಾರವಾಗಲಿ ರಾಷ್ಟ್ರೀಯ ಸಭೆಯವರಿಗೆ ಅಧಿಕಾರ ಕೊಡಲು ಒಡಂಬಡುತ್ತದೋ ಎಂಬದೇ ಕೂಟ ಪ್ರಶ್ನೆ. ಈ ಮುಖ್ಯ ಪ್ರಶ್ನೆಯ ಉತ್ತರ ಇನ್ನೂ ಸಿಗಲೊಲ್ಲದು. ಸಾಮ್ರಾಜ್ಯಕರ್ತರು ರಾಜಬಂದಿಗಳ ಬಿಡುಗಡೆಯ ವಿಚಾರವನ್ನಷ್ಟೇ ನಡಿಸುತ್ತಾರೆಂಬದರಿಂದ ಲಂಡನಿನ 'ಟ್ಯಾಯಿಮ್ಸ' ಕರ್ತರು ಬರೆದಂತೆ ಹಿಂದುಸ್ಥಾನದೊಳಗೆ ಹಬ್ಬಿಕೊಂಡ ನಿರಾಶೆ ಬಯಲಾಗದು. ರಾಜಬಂದಿಗಳನ್ನು ಬಿಡುಗಡೆ ಮಾಡಲು ವಿಚಾರ ಮಾಡುವಾಗ ಪ್ರಜೆಗಳಿಗೆ ಯಾವದೊಂದು ಯೋಜನೆಯಂತೆ ರಾಜ್ಯಾಧಿಕಾರವನ್ನು ಅರ್ಪಿಸಲು ಸಾಮ್ರಾಜ್ಯಕರ್ತರು ಸಿದ್ಧರಾಗಬೇಕು. ರಾಷ್ಟ್ರೀಯ ಸಭೆಯವರು ತಮ್ಮ ಆಂದೋಲನದ ಧೋರಣವನ್ನು ಬದಲಿಸಲು ವಿಚಾರ ಮಾಡುತ್ತಿರುವಾಗ ಸರಕಾರವಾದರೂ ತನ್ನ ರಾಜ್ಯಧೋರಣವನ್ನು ತಿದ್ದುಪಡಿ ಮಾಡಲು ಮುಂದಾಗಬೇಕು. ಅಂದರೆ ಮಾತ್ರ ಪರಿಸ್ಥಿತಿ ಕೆಲಮಟ್ಟಿಗೆ ಸುಧಾರಿಸಿ ಪ್ರಜೆಗಳು ಸಮಾಧಾನ ಪಡೆಯುವರು.

ಆವೇಶದಿಂದಲೂ ಉಲ್ಹಾಸದಿಂದಲೂ ಯುದ್ಧಯತ್ನ ಸಾಗಬೇಕಾದರೆ ಜನಸಾಮಾನ್ಯರಿಗೆ ಪ್ರಕೃತ ರಾಜ್ಯಧೋರಣ ಮಾನ್ಯವಾಗಬೇಕು. ಯುರೋಪ ಖಂಡದ ಜನಾಂಗಗಳಿಗೆ ಸ್ವಾತಂತ್ರ್ಯ ಸಿಗುವದು, ಸ್ವರ್ಗಸುಖ ಸಿಗುವದು ಎಂಬ ಲೋಕೋಪಕಾರದ ಬಡಿವಾರದಿಂದ ನಮ್ಮಿಲ್ಲಿಯ ಜನಾಂಗದೊಳಗೆ ಪ್ರಸನ್ನತೆಯುಂಟಾಗುವದಿಲ್ಲ; ಆ ಪ್ರಕಾರ ಉಂಟಾಗುವದೆಂದು ಎಣಿಸುವದು ತಪ್ಪು. ಅಟ್ಲಾಂಟಿಕ ಮಹಾಸಾಗರದಿಂದ ರೂಝವೆಲ್ಟ-ಚರ್ಚಿಲ್ಲರು ಹೊರಡಿಸಿದ ಭೂಲೋಕ ಸ್ವಾತಂತ್ರ್ಯ ಘೋಷಣೆಯನ್ನು ಹಿಂದುಸ್ಥಾನಕ್ಕೆ ಅನ್ವಯಿಸಬೇಕಾಗಿ ಸಾಮ್ರಾಜ್ಯ ಸರಕಾರದ ಪ್ರಧಾನರಾದ ಮಿ॥ ಎಟ್ಲಿಯವರು ಪ್ರಧಾನ ಮಂಡಳಿಯಲ್ಲಿ ಮಾಡಿದ ಪ್ರಯತ್ನಗಳೆಲ್ಲ ನಿರರ್ಥಕವಾದವಾಗಿ 'ಮುಂಬಯಿ ಕ್ರೋನಿಕಲ' ಪತ್ರಿಕೆಯ ಅಲಹಾಬಾದದ ಸುದ್ದಿಗಾರರು ಲಂಡನಿನಿಂದ ಅಲ್ಲಿಯ ಮಹಾಜನರಿಗೆ ಬಂದ ಪತ್ರವ್ಯವಹಾರದ ತಾತ್ಪರ್ಯವೆಂದು ಪ್ರಕಟಿಸುತ್ತಾರೆ. ಮುಖ್ಯ ಪ್ರಧಾನರಾದ ಮಿ॥ ಚರ್ಚಿಲ್ಲರ ಮನವೊಲಿಸುವದಕ್ಕಾಗಿ ಇನ್ನೂ ಪ್ರಯತ್ನಗಳು ನಡೆದಿರುವವೆಂದೂ ಅದೇ ಸುದ್ದಿಗಾರರ ಅಂಬೋಣ. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯದ ಮಾರ್ಗ ತೋರಿಕೊಟ್ಟು ಆ ಮಾರ್ಗಕ್ರಮಣಕ್ಕೆ ಅನುಕೂಲವಾಗಿ ಈಗಿನ ರಾಜ್ಯಭಾರದಲ್ಲಿ ಕ್ರಮಗಳನ್ನು ಸರಕಾರವು ಕಲ್ಪಿಸಿದನಕ ಪ್ರಜೆಗಳು ಪ್ರಸನ್ನರಾಗರು. ಯಾವದೊಂದು ಕಾರ್ಯ ಸಾರ್ಥಕವಾಗಬೇಕಾದರೆ ಪ್ರಜಾಸಮ್ಮತಿಯಿರಬೇಕು; ಆ ಸಮ್ಮತಿ ಪ್ರತ್ಯಕ್ಷವಾದದ್ದಿರಲಿ, ಅಪ್ರತ್ಯಕ್ಷವಾದದ್ದಿರಲಿ, ಸಮ್ಮತಿಯ ಸನ್ನಿವೇಶವಿದ್ದನಕ ಕಾರ್ಯ ಫಲಿಸುವದಿಲ್ಲ. ಯುದ್ಧವು ತೀರ ಸಮೀಪಿಸಿ ಬರಹತ್ತಿದೆ. ಪಶ್ಚಿಮ ಪಾರ್ಶ್ವದ ರಣಭೂಮಿಗಿಂತ ಪೂರ್ವ ಪಾರ್ಶ್ವದ ಯುದ್ಧಜ್ವಾಲೆಗಳ ಉರಿ ಹೆಚ್ಚಾಗಹತ್ತಿದೆ. ಸಯಾಮ ದೇಶದಲ್ಲಿ ಯುದ್ಧಭಯ ಮಿಗಿಲಾಗಿರುವದಾಗಿ ಸದ್ಯದ ಸುದ್ದಿ. ಆಸ್ಟ್ರೇಲಿಯಾ ದೇಶದೊಳಗೆ, ನ್ಯೂಝಿಲೆಂಡ ದೇಶದೊಳಗೆ, ಸಿಂಗಾಪುರದೊಳಗೆ ರಭಸದಿಂದ ಸೈನ್ಯಸಂಗ್ರಹ ನಡೆದಿದೆ. ಕಾರಣ ಪ್ರಸಕ್ತಿಯಲ್ಲಿ ಇಡೀ ನಮ್ಮ ಹಿಂದ ಜನಾಂಗವನ್ನು ದಬ್ಬಿ ಕಾರ್ಯಕಾರಿಯಾಗುವಂತೆ ಯುದ್ಧಯತ್ನವನ್ನು ಸರಕಾರವು ನಡಿಸಬಯಸುವದು ತೀರ ಅಯೋಗ್ಯ. ಪ್ರಜೆಗಳ ಸಂತೋಷವನ್ನು ಸಾಧಿಸಬೇಕಾದರೆ ಪ್ರಜೆಗಳಿಗೆ ಸಂತೈಸುವ ಕ್ರಮಗಳನ್ನು ಸರಕಾರವು ಕೈಕೊಳ್ಳಬೇಕು. ಬರೇ ರಾಜಬಂದಿಗಳನ್ನು ಬಿಡುಗಡೆ ಮಾಡಿ ಪ್ರಯೋಜನವಿಲ್ಲ.

ಆದರೆ ರಾಜಬಂದಿಗಳನ್ನು ಮೊಟ್ಟಮೊದಲು ಬಿಡುಗಡೆ ಮಾಡಬೇಕೆಂಬ ವಿಷಯ ವಿವಾದವಿಲ್ಲ. ಮುಂಬಯಿಯ 'ಟ್ಯಾಯಿಮ್ಸ' ಪತ್ರಿಕೆಯಲ್ಲಿ 'ಕೆಂಡಿಡಸ' ಎಂಬ ಸಂಕೇತನಾಮದಿಂದ ಬರೆದ ಲೇಖದಲ್ಲಿ ರಾಜಬಂದಿಗಳಿಗೆ ಸರಕಾರವು ಸಾಮಾನ್ಯವಾಗಿ ಬಿಡುಗಡೆ ಮಾಡುವದೆಂಬ ಉಲ್ಲೇಖವುಂಟು. ರಾಷ್ಟ್ರಪತಿಗಳಾದ ಮೌ॥ ಅಬುಲ ಕಲಮ ಆಝಾದರವರಿಗೂ ಪಂ॥ ಜವಾಹರಲಾಲ ನೆಹರು ಪ್ರಭೃತಿ ಕಾರ್ಯಕಾರಿ ಮಂಡಲದವರಿಗೂ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಸಭಾಸದರಿಗೂ ಬಿಡುಗಡೆಯಾದರೆ ಸದ್ಯಸ್ಥಿತಿಯನ್ನು ಸಮಾಲೋಚಿಸಲಿಕ್ಕೆ ಅನುಕೂಲವಾದೀತು. ಸರಕಾರವು ರಾಷ್ಟ್ರೀಯ ಸಭೆಯೊಡನೆ ಮಧ್ಯಸ್ಥಿಕೆ ನಡಿಸಲಿಕ್ಕೂ ಅನುಕೂಲವುಂಟು. ಸತ್ಯಾಗ್ರಹಿಗಳನ್ನು

ಸೆರೆಮನೆಯಲ್ಲಿಟ್ಟು ರಾಜ್ಯಭಾರ ನಡಿಸಬಯಸುವದು ವಿಚಾರ ರಮಣೀಯವಲ್ಲ. ರಾಷ್ಟ್ರೀಯ ಸಭೆಗೆ ಲೋಕಪ್ರಿಯತೆಯಿಲ್ಲವೆಂಬ ಗ್ರಹಿಕೆಯನ್ನು ಸರಕಾರವು ಮಾಡಿಕೊಳ್ಳಕೂಡದು. ಕಳೆದ ವಾರವೇ ಪ್ರಕಟವಾದ ವಿದರ್ಭದೇಶದ ಎಸೆಂಬ್ಲಿ ಚುನಾವಣೆಯಿಂದ ರಾಷ್ಟ್ರೀಯ ಸಭೆಯ ಗೌರವ ಲೋಕಕ್ಕೆ ಸಿದ್ಧವಾಗಿದೆ. ಸತ್ಯಾಗ್ರಹ ಮಾಡಿ ನಾಗಪುರದೊಳಗಿನ ಸೆರೆಮನೆಯಲ್ಲಿ ಕಾರಾಗೃಹವಾಸವನ್ನನುಭವಿಸುವ ಶ್ರೀ॥ ವಾಮನರಾವ ಜೋಶಿಯವರು ೩೯೬೩ ಮತಗಳನ್ನು ಪಡೆದು ಚುನಾವಣೆಯಲ್ಲಿ ಗೆದ್ದಿದ್ದಾರೆ. ಪ್ರತಿಪಕ್ಷದ ಇಬ್ಬರು ಉಮೇದ್ವಾರರಿಗೆ ಕೂಡಿ ೨೪೦೨ ಮತಗಳು ದೊರಕಿದವು. ಶ್ರೀ॥ ಮಾಧವರಾವ ಅಣೇಯವರು ಸಭಾಸದರಾಗಿದ್ದ ಪ್ರಾಂತವಿದು! ಶ್ರೀ॥ ಅಣೇಯವರು ಹಿಂದುಸ್ಥಾನ ಸರಕಾರದ ಅಂಗವಾದ್ದರಿಂದ ಈ ಉಪಚುನಾವಣೆ ನಡೆದಿತ್ತು. ಹಿಂದು ಮಹಾಸಭೆಯವರೂ ಲೋಕಶಾಹಿ ಸ್ವರಾಜ್ಯ ಪಕ್ಷದವರೂ ಪುರೋಗಾಮಿ ಪಕ್ಷದವರೂ ರಾಷ್ಟ್ರೀಯ ಸಭೆಗೆ ಎದುರಾಳಿಗಳಾಗಿ ಹೋರಾಡಿದ್ದರು. ಪುಣೆಯ 'ಕೇಸರಿ' ಮೊದಲಾದ ಮಹಾರಾಷ್ಟ್ರದೊಳಗಿನ ಪ್ರಸಿದ್ಧ ಪತ್ರಿಕೆಗಳು ರಾಷ್ಟ್ರೀಯ ಸಭೆಯವರನ್ನು ಆರಿಸಿ ಕೊಡುವದು ನಿರರ್ಥಕವೆಂದು ತಂತ್ರದಿಂದ ಪ್ರತಿಪಾದಿಸಿ, ತಮ್ಮ ಉಮೇದ್ವಾರರ ಪರವಾಗಿ ಡಾ॥ ರಘುನಾಥರಾವ ಪರಾಂಜಪೇ, ಬೆ॥ ಸಾವರಕರ ಪ್ರಭೃತಿ ಮಹಾನುಭಾವರ ಪ್ರಶಸ್ತಿಪತ್ರಗಳನ್ನು ಪ್ರಕಟಿಸಿ ಪ್ರಚಾರವನ್ನು ನಡಿಸಿದ್ದವು. ಸಾಮ್ರಾಜ್ಯಕರ್ತರಾದರೂ ಈ ಚುನಾವಣೆಯನ್ನು ಉದ್ದೇಶಪೂರ್ವಕವಾಗಿ ನಡಿಸಿ ರಾಷ್ಟ್ರೀಯ ಸಭೆಯ ಸಾಮರ್ಥ್ಯವನ್ನು ಎಣಿಸಬಯಸಿದ್ದರಾಗಿ ನಮ್ಮ ಅಂಬೋಣ. ಈ ಪರೀಕ್ಷೆಯನ್ನು ರಾಷ್ಟ್ರೀಯ ಸಭೆಯು ತೇರ್ಗಡೆ ಮಾಡಿ, ಹಿಂದುಸ್ಥಾನದೊಳಗಿನ ರಾಜಕಾರಣದಲ್ಲಿ ಸಮಸ್ತ ಜನಾಂಗದ ಪರವಾಗಿ ರಾಜ್ಯಭಾರ ನಡಿಸುವ ತನ್ನ ಅಧಿಕಾರವನ್ನು ಸಿದ್ಧಪಡಿಸಿ ಸ್ಥಿರಪಡಿಸಿಕೊಂಡಿದೆ. ಸಾಮ್ರಾಜ್ಯಕರ್ತರು ಈಗಲಾದರೂ ಜಾಗ್ರತಿ ಪಡೆಯಬೇಕು. ಹಿಂದುಸ್ಥಾನದೊಳಗೆ ಪ್ರಜಾಸಂತೋಷವನ್ನು ಸರಕಾರವು ಸಂಗ್ರಹಿಸಬಯಸುತ್ತಿದ್ದಲ್ಲಿ ಮೊಟ್ಟಮೊದಲು ರಾಜಬಂದಿಗಳಿಗೆ ಬಿಡುಗಡೆ ಮಾಡಿ ರಾಷ್ಟ್ರೀಯ ಸಭೆಯವರೊಡನೆ ಒಡಂಬಡಿಕೆಯ ಮಾತುಕತೆಯನ್ನು ನಡಿಸತಕ್ಕದ್ದು. ಅಂದರೆ ಮಾತ್ರ ರಾಜ್ಯಭಾರವು ಸಾರ್ಥಕವಾಗಬಲ್ಲದು

* * *

ರುಶ್ಯರ ಆರ್ಭಾಟ!

[ನಿರೀಕ್ಷಕನು ಬರೆದುದು.]

ಜರ್ಮನರು ೧೦-೧೫ ದಿನಗಳಿಂದ ಮೊಸ್ಕೊ ನಗರವನ್ನು ಕೈವಶ ಮಾಡಿಕೊಳ್ಳಲು ಸಾಹಸಪಡುತ್ತಿದ್ದಾಗ್ಯೂ ಆ ನಗರ ಇನ್ನೂ ರುಶ್ಯರ ವಶದಲ್ಲಿರುವ ಸಂಗತಿ ನಮೂದಿಸತಕ್ಕಂತಹದು! ರುಶ್ಯರು ತಮ್ಮ ರಾಜಧಾನಿಯನ್ನು ಕಾಪಾಡಿಕೊಳ್ಳುವದಕ್ಕಾಗಿ ರಣಧೀರರಾಗಿ ಹೋರಾಡುತ್ತಿದ್ದಾರೆ. ಬಾರಿ ಬಾರಿಗೂ ರುಶ್ಯರು ಜರ್ಮನರನ್ನು ಆರ್ಭಟಿಸಿ ಎದುರಿಸುತ್ತಿದ್ದಾಗ್ಯೂ ಬಹಳ ಹೋರಾಟದ ಪರಿಣಾಮವಾಗಿ ಕೊನೆಗೆ ಜರ್ಮನರು ಮುನ್ನುಗ್ಗುತ್ತಾರೆ. ಮೊಸ್ಕೊದ ವಾಯವ್ಯದಲ್ಲಿರುವ ವೊಲೊಕಲಂಸ್ಕ ಪಟ್ಟಣವು ಜರ್ಮನಿಯ ವಶವಾಯಿತು. ಉತ್ತರ ಭಾಗದಲ್ಲೂ ದಕ್ಷಿಣ ಭಾಗದಲ್ಲೂ ಜರ್ಮನರು ಮುನ್ನುಗ್ಗಿ ಹೋಗಿದ್ದಾರೆ. ಬಹು ದೂರ ಮುನ್ನುಗ್ಗಿ ಹೋದರೆಂದು ವಾರ್ತೆಯುಂಟು. ಉತ್ತರ-ದಕ್ಷಿಣ ಭಾಗಗಳಲ್ಲಿ ಹಿಮ ಬೀಳುತ್ತಿದೆ. ಆದರೆ ಇದರಿಂದ ಜರ್ಮನರಿಗೆ ಅನುಕೂಲವೇ ಹೊರತು ಪ್ರತಿಕೂಲವಿಲ್ಲ. ಈ ಹಿಮ ಹೆಪ್ಪುಗಟ್ಟಿ ಕಲ್ಲಾಗಿದೆ. ಜರ್ಮನರ ತೋಫುಗಳಿಗೆ ಓಡಾಡಲು ಇದರಿಂದ ಅನುಕೂಲ. ಮೊಸ್ಕೊದ ಸುತ್ತುಮುತ್ತು ಜರ್ಮನರು ಹೊಸ ಹೊಸ ದಂಡುಗಳನ್ನು ಕಳುಹುತ್ತಿದ್ದಾರೆ. ಇದರಿಂದ ಮೊಸ್ಕೊ ಪಟ್ಟಣ ಜರ್ಮನರ ವಶವಾಗುವದಾಗಿ ಹೇಳಬಹುದು. ಆದೇ ಪ್ರಕಾರ ಸಿಬಾಸ್ತಾಪೂಲ ಬಂದರದ ಮೇಲೆ ಜರ್ಮನರು ನಡಿಸಿದ ದಾಳಿಯ ಅವಸ್ಥೆ! ರುಶ್ಯರು ಈ ಕಾಳಗದಲ್ಲಿ ವಿಮಾನಗಳಿಂದ ಎಡೆಬಿಡದೆ ಬಾಂಬಿನ ಮಳೆಗರೆಯುತ್ತಿದ್ದಾರೆ. ರೊಸ್ಟೊವ್ಹ ವಿಭಾಗದಲ್ಲಿ ರುಶ್ಯರು ಪ್ರತಿ-ದಾಳಿ ಮಾಡಿ ಕೆಲವು ಪಟ್ಟಣಗಳನ್ನು ಕೈವಶ ಮಾಡಿಕೊಂಡರು. ಇದರಿಂದ ಹಿಟ್ಲರನಿಗೆ ಕೋಪ ಬಂದಿದೆಯಂತೆ. ಆತನು ರೊಸ್ಟೋವ್ಹದ ಸರ್ವನಾಶ ಬಗೆಯಲು ಘೋರ ಆಜ್ಞೆ ಹೊರಡಿಸಿದ್ದಾನಂತೆ. ರುಶ್ಯರಿಂದ ಸ್ವಾಧೀನಪಡಿಸಿಕೊಂಡ ಕೀವ್ಹ ಪಟ್ಟಣದಲ್ಲಿ ಹಿಟ್ಲರನು ೫೨,೦೦೦ ರುಶ್ಯ ಸ್ತ್ರೀ-ಪುರುಷರನ್ನು ಸಂಹರಿಸಿದನಾಗಿ ಮೊಸ್ಕೊದ "ರೆಡ್ ಸ್ಟಾರ" ಪತ್ರಿಕೆಯಲ್ಲಿ ಪ್ರಕಟವಾಗಿದೆ. ಗ್ರೀಸ ದೇಶದಲ್ಲೂ ಹಿಟ್ಲರನು ಗ್ರೀಕರನ್ನು ಪರಿಪರಿಯಿಂದ ದಣಿಸುತ್ತಾನೆಂದು "ಕಿಂಗಫೊಲ ನ್ಯೂಸಲೆಟರ" ಪತ್ರದಲ್ಲಿ ಪ್ರಕಟವಾಗಿದೆ. ಈವಾಗ ಹಿಟ್ಲರನ ದುಷ್ಟತನ ಮಿಗಿಲಾಯಿತೆಂದು ಸಾಮಾನ್ಯವಾಗಿ ತಿಳಿಯಲ್ಪಡುತ್ತದೆ. ಆದರೆ ಲಂಡನಿನ 'ಡೇಲಿ ಮೇಲ'ಕರ್ತರ ಅಭಿಪ್ರಾಯವೇ ಬೇರೆ. ಕೈವಶ ಮಾಡಿಕೊಂಡ ಪ್ರದೇಶದಲ್ಲಿ ಶಾಂತತೆ ಮತ್ತು ಸುರಕ್ಷಿತತೆಯನ್ನು ಸ್ಥಾಪಿಸಿ ಜನಮನವೊಲಿಸಿಕೊಳ್ಳಲು ಹಿಟ್ಲರನು ಬಯಸುತ್ತಾನೆ. ಯುದ್ಧ ಮುಕ್ತಾಯವಾಯಿತು. ತಾವು ವಿಜಯ ಹೊಂದಿದೆವು; ಹೀಗೆ ಜರ್ಮನರು ಅನ್ನುತ್ತಾರೆ. ಬ್ರಿಟಿಶರಿಗೆ ದುಷ್ಟರೆಂದೂ ಹಿಟ್ಲರ-ಕಲ್ಪಿತ ಶಾಂತತೆಗೆ ವಿಘ್ನಕರ್ತರೆಂದೂ ಹಿಟ್ಲರನು ದೂರುತ್ತಾನಂತೆ. ಈ ಪ್ರಚಾರ ಯುರೋಪ ಖಂಡದಲ್ಲಿ ಸಾಮಾನ್ಯವಾಗಿ ಯಶಸ್ವಿಯಾಗಬಹುದೆಂದು ಲಂಡನಿನ 'ಡೇಲಿ ಮೇಲ'ಕರ್ತರು ಸೂಚಿಸಿ ಇದನ್ನು ಪ್ರತಿಭಟಿಸಲು ಬ್ರಿಟಿಶರಿಗೆ ಒತ್ತಾಯ ಮಾಡುತ್ತಾರೆ. ಯುರೋಪ ಖಂಡದೊಳಗಿನ ಹಿಟ್ಲರನ ವ್ಯವಹಾರಗಳ ದುಷ್ಟಾದುಷ್ಟತನವನ್ನು ನಾನರಿಯೆ. ಅವುಗಳ ಫಲಾಫಲಗಳನ್ನು ಸಹ ನಾನು ಹೇಳಲಾರೆ. ಅವು ಯುದ್ಧ-ಕಾರಣಕ್ಕೆ ಸಂಬಂಧಪಟ್ಟವುಗಳಲ್ಲ. ಇಷ್ಟೊಂದು ಮಾತು ನಿಶ್ಚಿತ. ರುಶ್ಯ ರಣಭೂಮಿಯು ಇತ್ಯರ್ಥವಾದನಕ ಯುದ್ಧ ಕಾರಣಕ್ಕೆ ಯಾವದೊಂದು ರೂಪ ಬರದು

ಆಫ್ರಿಕೆಯೊಳಗಿನ ಯುದ್ಧವಾರ್ತೆಗಳನ್ನು ನಾನು ಸಮಾಲೋಚಿಸಬಯಸುತ್ತೇನೆ. ಈ ವಿಭಾಗದಲ್ಲಿ ಬ್ರಿಟಿಶರು ಮುನ್ನುಗ್ಗಿ ಹೋಗಿದ್ದಾರೆ. ಆದರೆ ಇನ್ನೂ ಈ ಪಾರ್ಶ್ವದ ಯುದ್ಧಕ್ಕೆ ಕಳೆಯೇರುವದಿಲ್ಲ. ಈ ಕಾಳಗಕ್ಕೆ ಮಹತ್ವ ಬರಬೇಕಾದರೆ ಇಜಿಪ್ತದ ಕಡೆಗೆ ಜರ್ಮನರು ಸಾಗಿ ಬರಬೇಕು, ಇಲ್ಲವೆ ಬ್ರಿಟಿಶರು ಮೊರೊಕೊದ ಕಡೆಗೆ ದಂಡೆತ್ತಿಕೊಂಡು ಹೋಗಬೇಕು. ಲಿಬಿಯದೊಳಗಿನ ಯುದ್ಧದಲ್ಲಿ ಬ್ರಿಟಿಶರಿಗೂ ಜರ್ಮನರಿಗೂ ಅಪಾರ ಹಾನಿಯಾಯಿತೆಂದು ಬ್ರಿಟ [illegible]

ಮುನ್ನುಗ್ಗಿ ಹೋಗಬೇಕೆಂದೂ ಅಂದರೆ ಮಾತ್ರ ಸಂತೋಷ ಕಾಲ ಪ್ರಾಪ್ತವಾಗುವದಾಗಿಯೂ ಬ್ರಿಟಿಶ ಪತ್ರಿಕೆಗಳ ಅಂಬೋಣ. ಭೂಮಧ್ಯ ಸಮುದ್ರದಲ್ಲಿ ಬ್ರಿಟಿಶರ ನೌಕಾದಳವಿದ್ದು, ಈ ಸಂಗ್ರಾಮ ನಡಿಸಲಿಕ್ಕೆ ಬ್ರಿಟಿಶರಿಗೆ ತುಂಬಾ ಅನುಕೂಲವಿದೆ. ಆದರೆ ಜರ್ಮನರಿಗೆ ಇಲ್ಲಿ ದಂಡುಗಳನ್ನು ಕಳುಹಲು ಅನುಕೂಲತೆ ಕಡಿಮೆ. ಗ್ರೀಸದೊಳಗಿನ ಸಾಲೋನಿಕಾ ಬಂದರದಿಂದ ಯುದ್ಧಸಾಹಿತ್ಯವನ್ನು ಕಳುಹಬಹುದಾಗಿ ಅಂಕಾರಾದೊಳಗಿನ ವಾರ್ತೆ. ಆದೇ ಪ್ರಕಾರ ಇಟಾಲಿಯ ಸಿಸಿಲಿಯೊಳಗಿಂದಲೂ ಸೈನ್ಯ ಕಳುಹಬಹುದಂತೆ. ಈ ವಿಭಾಗದಲ್ಲಿ ಸದ್ಯಕ್ಕೆ ಬ್ರಿಟಿಶರಿಗೇ ಜಯ. ಹಿಂದೀ ಸೈನಿಕರು ಮುಂಭಾಗದಲ್ಲಿ ಸಾಗಿ ಹೋಗಿ ಅದ್ಭುತ ಪರಾಕ್ರಮ ಮಾಡಿದರೆಂದು ಬ್ರಿಟಿಶರು ಹಿಂದೀ ಸೈನಿಕರ ಬೆನ್ನು ಚಪ್ಪರಿಸುತ್ತಿದ್ದಾರೆ. ಹಿಂದುಸ್ಥಾನಕ್ಕೆ ಸ್ವರಾಜ್ಯ ಸಿಗುವದು! ತ್ವರ್ಯವೇ ಸಿಗುವದು! ಗಾಬರಿಯಾಗ ಕಾರಣವಿಲ್ಲ! ಹೀಗೆ ಹೇಳಲಾಗುತ್ತದಂತೆ! ಸ್ವರಾಜ್ಯದ ಮಾತು ಹಾಗಿರಲಿ, ಒಣ-ಪ್ರಶಂಸೆಗೇನು ಬರಗಾಲವಿಲ್ಲ. ಆಫ್ರಿಕೆಯಲ್ಲಿ ಬ್ರಿಟಿಶರು ಗೆಲ್ಲುತ್ತಿರುವ ಲಕ್ಷಣವಿದು! ಜರ್ಮನಿಯೊಳಗಿನ ಪತ್ರಿಕೆಗಳಲ್ಲಿ ಆಫ್ರಿಕೆಯೊಳಗಿನ ಕಾಳಗದ ಸುದ್ದಿಗಳೇ ಪ್ರಕಟವಾಗುವದಿಲ್ಲವಂತೆ. ಇದಕ್ಕೇನು ಮಹತ್ವವಿಲ್ಲವಾಗಿ ಜರ್ಮನರು ಹೇಳುತ್ತಾರಂತೆ. ಸೋಲುತ್ತಿರುವದರಿಂದ ಮಹತ್ವವಿಲ್ಲವೆಂದು ಎಣಿಸುತ್ತಿರಬೇಕೆಂದು ನನ್ನ ಗ್ರಹಿಕೆ. ಆದಾಗ್ಯೂ ಇನ್ನು ಒಂದೆರಡು ವಾರ ಕಳೆದನಕ ಆಫ್ರಿಕೆಯ ರಣರಂಗದ ಕುರಿತು ಹೆಚ್ಚಿನ ವಿವರ ಕೊಡುವದು ಅಶಕ್ಯ.

ಅಮೇರಿಕೆ-ಜಪಾನಗಳೊಳಗಿನ ರಾಯಭಾರ ಮುಗಿಯಿತು. ಆದರೆ ಸಮಾಧಾನವಾಯಿತೆಂದು ನಾ ಹೇಳಲಾರೆ. ಮುಂದಿನ ನಿರ್ಣಯ ಜಪಾನದ ಕೈಯಲ್ಲಿದೆಂದು ಅಮೇರಿಕೆಯೊಳಗಿನ ಅಭಿಪ್ರಾಯ. ಅಮೇರಿಕೆಗೆ ಜಪಾನದ ಮೇಲೆ ನಂಬಿಗೆಯಿಲ್ಲ. ಜಪಾನದ ಮೇಲೆ ನಂಬಿಗೆಯುಂಟಾದನಕ ಪೆಸಿಫಿಕ್ ಮಹಾಸಾಗರದೊಳಗಿನ ಹಡಗುಪಡೆಗಳನ್ನು ಅಮೇರಿಕೆಯ ಸರಕಾರವು ಹಿಂಗರೆದುಕೊಳ್ಳಬಯಸುವದಿಲ್ಲವಾಗಿ ಅಮೇರಿಕೆಯೊಳಗಿನ ವಾರ್ತೆ. ಚೀನದೊಳಗಿನ ಸಂಗ್ರಾಮವನ್ನು ಬಿಟ್ಟುಬಿಡಬೇಕಾಗಿ ಅಮೇರಿಕೆಯ ಸರಕಾರದ ಹೇಳಿಕೆ. ಬ್ರಿಟನ-ಅಮೇರಿಕೆಗಳು ಚೀನ ಪ್ರದೇಶವನ್ನು ಸುಲಿಯುತ್ತವಾಗಿ ಜಪಾನದ ಆರೋಪ. ಹೀಗೆ ಆರೋಪ-ಪ್ರತ್ಯಾರೋಪಗಳು ನಡೆಯುತ್ತಿರುವಾಗ ಅಮೇರಿಕೆ-ಜಪಾನಗಳೊಳಗೆ ಸಮಾಧಾನ ನೆಲಸುವದೆಂದು ಹೇಳುವದು ಕಠಿಣ. ಅಮೇರಿಕೆಯ ಅಧ್ಯಕ್ಷರಾದ ರೂಝುವೆಲ್ಟರು ವಿಶ್ರಾಂತಿ ಪಡೆಯಲು ವಾರ್ಮಸ್ಪ್ರಿಂಗಕ್ಕೆ ಹೋಗಿದ್ದಾರೆ. ಆದರೆ ತತ್ಪೂರ್ವದಲ್ಲಿ ನೌಕಾಧಿಕಾರಿಗಳೊಡನೆ, ಸೈನ್ಯಾಧಿಕಾರಿಗಳೊಡನ ಆಲೋಚನೆ ಮಾಡಿ ಜಪಾನವನ್ನು ಎದುರಿಸಲು ತಕ್ಕ ಸಿದ್ಧತೆಗಳನ್ನಿಡಲು ಸೂಚಿಸಿರುತ್ತಾರೆ. ಇಂಡೋ-ಚೀನದಲ್ಲಿ ಜಪಾನದ ದಂಡು ಬಂದು ಇಳಿಯತೊಡಗಿವೆ. ೮೦ ಸಾವಿರ ಸೈನಿಕರು ಈವಾಗ ಬಂದಿಳಿದಿದ್ದಾರೆ. ಸಯಾಮದ ಸಂರಕ್ಷಣವು [illegible] ಆತ್ಮಸಿದ್ಧತೆಯ ತಯಾರಿ ಮಾಡುತ್ತಿದೆ. ಅಮೇರಿಕೆಯಿಂದ ೪೦ ವಿಮಾನಗಳನ್ನೂ ೧ ಹಡಗುಪಡೆಯನ್ನೂ ಸಯಾಮ ಸರಕಾರವು ಖರೀದಿ ಮಾಡಿದೆ. "ಸಯಾಮವು ಯುದ್ಧದಲ್ಲಿ [illegible] ಪ್ರಸಂಗವಿದೆ!" ಎಂಬದಾಗಿ ಸಯಾಮದ ಅರಸರು ಘೋಷಿಸುತ್ತಾರೆ. ಇದರಿಂದ ಅಮೇರಿಕೆ-ಜಪಾನಗಳೊಳಗೆ ಯುದ್ಧವಾಗುವದೆಂಬ ಭೀತಿ [illegible]

ಹಿಂದೀ ರಾಜಕಾರಣ.

[ನಿರೀಕ್ಷಕನು ಕಳಿಹಿಸಿದ್ದು]

ರಾಜಬಂದಿಗಳ ಬಿಡುಗಡೆ ಇಂದು ನಾಳೆ ಒದಗಿ ಬರುವದೆಂದು ನನ್ನ ಅನುಮಾನ. ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆ ಕೂಡುವ ವಾರ್ತೆ ವರ್ಧಾದಲ್ಲಿ ಹಬ್ಬಿಕೊಂಡಿದ್ದ ಲಂಡನಿನೊಳಗೆ ಸಹ ರಾಜಬಂದಿಗಳ ಬಿಡುಗಡೆಯಾಗುವ ಸುದ್ದಿ ಕೇಳಬರುತ್ತದೆಂದು ಕೇಸರಿಯ ಸುದ್ದಿಗಾರರು ಗುರುವಾರ ತಂತಿಯಿಂದ ತಿಳಿಸುತ್ತಾರೆ. ಸತ್ಯಾಗ್ರಹಿಗಳನ್ನೆಲ್ಲ ಬಿಡುಗಡೆ ಮಾಡಿ ರಾಷ್ಟ್ರೀಯ ಸಭೆಗೆ ಹಿಂದೀ ರಾಜಕಾರಣವನ್ನು ಪುನರಾಲೋಚಿಸಲು ಅವಕಾಶ ಮಾಡಿಕೊಡಬೇಕಾಗಿ ಕೂಲಿಕಾರ ಪಕ್ಷದ ಒತ್ತಾಯವಿರುವದಂತೆ. ಇನ್ನೊಂದು ಪಕ್ಷದಲ್ಲಿ ಅಕಲ್ಪಿತ ಘಟನೆಗಳು ಸಂಭವಿಸುವವೆಂದು ಆ ಸುದ್ದಿಗಾರರ ಅಂಬೋಣ. ಆಫ್ರಿಕೆಯಲ್ಲಿ ಹಿಂದೀ ಸೈನಿಕರು ಪ್ರದರ್ಶಿಸಿದ ಪರಾಕ್ರಮಗಳಿಂದ ಅಮೇರಿಕೆಯಲ್ಲಿ ಹಿಂದುಸ್ಥಾನಕ್ಕೆ ಅನುಕೂಲವಾಗಿ ಗಾಳಿ ಬೀಸುತ್ತಿದೆಯಂತೆ. ಹಿಂದುಸ್ಥಾನವು ಯುದ್ಧಪ್ರಯತ್ನಕ್ಕೆ ಕೂಡಿಕೊಂಡಿರುವದಾಗಿಯೂ ಹಿಂದೀ ಸ್ವಾತಂತ್ರ್ಯದ ಸಮಸ್ಯೆ ಬ್ರಿಟಿಶರು ಪುರಸ್ಕರಿಸುತ್ತಿರುವ ಲೋಕಸ್ವಾತಂತ್ರ್ಯದ ಅಂಗವೆಂದೂ ಅಮೇರಿಕೆಯ 'ನ್ಯೂಯೋರ್ಕ ಟೈಮ್ಸ' ಪತ್ರಿಕೆಯ ಅಂಬೋಣ. ರಾಷ್ಟ್ರೀಯ ಸಭೆಯ ಪ್ರಮುಖ ಮುಂದಾಳುಗಳಾದ ಶ್ರೀ॥ ಚಕ್ರವರ್ತಿ ರಾಜಗೋಪಾಲಾಚಾರ್ಯ ಪ್ರಭೃತಿ ಲೋಕನಾಯಕರು ರಾಷ್ಟ್ರೀಯ ಸಭೆಯ ಧೋರಣವನ್ನು ಬದಲಿಸಬಹುದಾಗಿ ಹೇಳಲಾಗುತ್ತಿದೆ. ಶ್ರೀ॥ ಮಾಧವರಾವ ಅಣೆಯವರು ಈ ಹೊತ್ತು ಸೋಮವಾರ ದಿಲ್ಲಿಯಿಂದ ಮುಂಬಯಿಗೆ ತಲ್ಪುತ್ತಾರೆ. ನಾಳೆ ಅವರ ಸತ್ಕಾರಕ್ಕಾಗಿ ಜಾಹೀರ ಸಭೆ ಸೇರಲಿದೆ. ಬಹುತರವಾಗಿ ರಾಜ್ಯಧೋರಣ ಕೇಂದ್ರದೊಳಗಿನ ಲೋಕಮತಕ್ಕೆ ಅನುಕೂಲವಾಗುವಂತೆ ಕ್ರಮವನ್ನು ಅವರು ಕೈಕೊಂಡಿದ್ದಾರೆಂದು ನನ್ನ ಊಹೆ. ಸರ್ವಾಧಿಪತಿ ಲಿನಲಿಥಗೋ ದೊರೆಗಳು ತಮ್ಮ ಕಾರ್ಯಕಾರಿ ಮಂಡಳದ ಅಭಿಪ್ರಾಯವನ್ನು ಸಂಪೂರ್ಣವಾಗಿ ಮನ್ನಿಸಿರುವರೆಂದು ದಿಲ್ಲಿಯೊಳಗಿನ ವಾರ್ತೆಯುಂಟು. ರಾಜಬಂದಿಗಳ ಬಿಡುಗಡೆಯ ಮೇಲೆ ಶ್ರೀ॥ ಅಣೆ ಮೊದಲಾದವರು ಹೆಚ್ಚಿನ ಕಟಾಕ್ಷವನ್ನಿಟ್ಟ ಸಂಗತಿ ಲೋಕವಿಶ್ರುತವಿದೆ. ಆದರಿಂದಲೇ ರಾಜಬಂದಿಗಳ ಬಿಡುಗಡೆ ಇಂದು-ನಾಳೆ ಒದಗಿ ಬರಬಹುದೆಂದು ನಾನು ಹೇಳಿದ್ದು.

ಮೌ॥ ಅಬುಲ ಕಲಾಮ ಆಝಾದರಿಗೆ ಇಂದು ಬಿಡುಗಡೆಯಾಗುವದೆಂದು ಅಲಹಾಬಾದದಲ್ಲಿ ಶುಕ್ರವಾರದಿಂದ ಸುದ್ದಿ ಹಬ್ಬಿದೆ.

— ಪಂ॥ ಜವಾಹಿರಲಾಲರು ಡೇಹರಾಡೂನ ಜೈಲಿನಲ್ಲಿ ಒಂದು ಹೊಸ ಗ್ರಂಥವನ್ನು ಬರೆಯತೊಡಗಿದ್ದಾರೆ. ಆ ಗ್ರಂಥದ ಹೆಸರು ("Rediscovery of India") ಭಾರತಾಕ್ಕದ ಪುನರಾವಿಷ್ಕಾರ) ಎಂಬದಾಗಿದೆ. ಪಂ॥ ಜವಾಹಿರಲಾಲರವರ ಪ್ರಕೃತಿ ನೆಟ್ಟಗಿದೆ. ಸಂಯುಕ್ತ ಪ್ರಾಂತದ ಮುಖ್ಯ ಪ್ರಧಾನರಾದ ಪಂ॥ ಗೋವಿಂದ ವಲ್ಲಭ ಪಂತರವರು ನಿನ್ನೆ ಪಂ॥ ಜವಾಹಿರಲಾಲರಿಗೆ ಕಂಡು ಬಂದಿರುತ್ತಾರೆ.

ವಾರ್ತೆಗಳು.

—ಮುಂಬಯಿಯ ಬೋರಿಬಂದರ ಸ್ಟೇಶನಿನಲ್ಲಿ ಮಂಗಳವಾರ ಒಂದು ವಿನೋದ ನಡೆಯಿತು! ಶ್ರೀ॥ ಚಕ್ರವರ್ತಿ ರಾಜಗೋಪಾಲಾಚಾರ್ಯರು ಶ್ರೀ॥ ಬುಲಾಭಾಯಿಯವರೊಡನೆ ವಿಚಾರ ವಿನಿಮಯ ಮಾಡಿ ಬೆಂಗಳೂರಿಗೆ ಹೋಗಲು ಹೊರಟು ಬಂದಿದ್ದರು. ಗಾಡಿ ಹೊರಡುವ ಬಹು ಕಾಲ ಮುಂಚೆಯೇ ಸ್ಟೇಶನಿನಲ್ಲಿ ತಲ್ಪುವದು ಆಚಾರ್ಯರ ವಾಡಿಕೆ. ಶ್ರೀ॥ ಆಚಾರ್ಯರು ಸ್ಟೇಶನಿನಲ್ಲಿ ಗೆಳೆಯರೊಡನೆ ಮಾತನಾಡುತ್ತಿರುವಾಗ ಇಬ್ಬರು ಸೈನಿಕರು ನಗಮೊಗದಿಂದ ಆಚಾರ್ಯರಿದ್ದಲ್ಲಿಗೆ ಬಂದರು! ಗಾಂಧಿಯವರ ಬಲಗೈ ಸಮಾನವಿರುವರೆಂದು ಇವರಿಗೆ ತಿಳಿಯಿತಂತೆ! ಅವರೊಂದು ಸಣ್ಣ ಪುಸ್ತಕ ಕೊಟ್ಟು ಅದರ ಮೇಲೆ ಸಹಿ ಮಾಡಿಕೊಡಲು ಆಚಾರ್ಯರಿಗೆ ವಿನಂತಿ ಮಾಡಿ ತಮ್ಮ ಜೇಬುಗಳಿಂದ ಫೌಂಟನಪೆನ ತೆಗೆದುಕೊಟ್ಟರು. "ನಿಮ್ಮ ಜನಾಂಗಕ್ಕ್ಯಾವದು?" ಎಂದು ಆಚಾರ್ಯರು ಸೈನಿಕರಿಗೆ ಕೇಳಿದರು. "ನಾವು [illegible] ನಾವು, [illegible] ಡರು!" ಹೀಗೆ ಅವರು ಹೇಳಿದರು. ಆಚಾರ್ಯರು ಸಹಿ ಮಾಡಹೋದರು. ಶಾಯಿ ಹರಿಯಲಿಲ್ಲ, ಸಹಿಯ ಬದಲಿಗೆ ಗೆರೆಗಳಷ್ಟೇ ಬಿದ್ದವು. ಲೇಖಣಿಕೆಯನ್ನು ಪರೀಕ್ಷಿಸಿದರು. 'ಬ್ರಿಟಿಶ ಶಾಯಿ ಹಿಂದುಸ್ಥಾನದೊಳಗೆ ಹರಿಯುವದಿಲ್ಲ.' ಹೀಗೆ ಆಚಾರ್ಯರು ಸೈನಿಕರ ಕಡೆ ಉದ್ಗರಿಸಲು, "ಆದರೆ ಇದು ಮುಂಬಯಿಯ ಶಾಯಿ!" ಎಂದು ಸೈನಿಕರು ಮಾರುತ್ತರಿಸಲು "ಹಾಗೋ! ಬ್ರಿಟಿಶ ಲೇಖಣಿಕೆಗಳಿಗೆ ಹಿಂದುಸ್ಥಾನದ ಶಾಯಿ ಸರಿಹೋಗುವದಿಲ್ಲ!" ಎಂದು ಆಚಾರ್ಯರು ಉದ್ಗರಿಸಿದರು!

— ದೇವಲಿ ಜೈಲಿನಲ್ಲಿ ನಡೆದ ಅನ್ನಸತ್ಯಾಗ್ರಹ ಸರದಾರ ಮಂಗಲಸಿಂಗರವರ ಮಧ್ಯಸ್ಥಿಕೆಯ ಮೇರೆಗೆ ನಿಲ್ಲಿಸಲ್ಪಟ್ಟಿದೆ. ಇಂತು ಈ ಸತ್ಯಾಗ್ರಹವು [illegible] ದಿನ ನಡೆಯಿತು. ಈ ಕುರಿತು ಮಹಾತ್ಮರು ಒಂದು ಪ್ರಕಟಣೆಯನ್ನು ಹೊರಡಿಸಿ ಸರಕಾರವು ಕೈದಿಗಳಲ್ಲಿ ಭೇದ ಮಾಡದೆ ಸರ್ವರಿಗೂ ಸಭ್ಯತನದಿಂದ ಜೀವನಕ್ಕೆ ಅವಶ್ಯಕ್ಕ ಆಹಾರ ಸಾಮಗ್ರಿಗಳನ್ನು ಪೂರೈಸಬೇಕಾಗಿಯೂ ದೇವಲಿಯೊಳಗಿನ ಕೈದಿಗಳನ್ನು ಆಯಾ ಪ್ರಾಂತಗಳಿಗೆ ಕಳುಹಿಕೊಡಬೇಕಾಗಿಯೂ ಸೂಚಿಸಿದ್ದಾರೆ. ಯುದ್ಧಕಾಲದೊಳಗಿನ ಮಿತವ್ಯಯವನ್ನು ಈ ಕೈದಿಗಳ ಅಶನ ವಸನ ಖರ್ಚಿಗೆ ಹಚ್ಚುವದು ತಪ್ಪೆಂದು ಮಹಾತ್ಮರ ಅಂಬೋಣ.

— ಇಂಗ್ಲಂಡದ ಪಾರ್ಲಿಮೆಂಟಿನ ಸಭೆಯಲ್ಲಿ ಹೊಸ ಕಾನೂನು ಆಗಲಿಕ್ಕಿದೆ. ಈ ಕಾನೂನಿನಂತೆ ಸ್ತ್ರೀಯರು ಸಹ ಯುದ್ಧಕಾರ್ಯದಲ್ಲಿ ಸೇರಬೇಕೆಂದು ವಿಧಿಸಲಾಗಿದೆ. ಸದ್ಯಕ್ಕೆ ೨೦-೩೦ ವರ್ಷಗಳ ನಡುವಿನ ಸ್ತ್ರೀಯರಿಗೆ ಮಾತ್ರ ಕರೆಹೋಗುವದು. ಈ ಯುದ್ಧದಲ್ಲಿ ಬ್ರಿಟಿಶರು ಪರಮಾವಧಿಯ ಪ್ರಯತ್ನ ಮಾಡಬೇಕೆಂದು ಗೊತ್ತಾಗಿದೆ. ಮುಖ್ಯ ಪ್ರಧಾನ ಮಿ॥ ಚರ್ಚಿಲ್ಲರವರು ಈ ಕಾನೂನನ್ನು ಸೂಚಿಸುವರು. ೨ ದಿನ ಇದರ ಚರ್ಚೆ ನಡೆದು ಅನಂತರ ಕಟ್ಟಳೆಯಾಗಿ ಅಮಲಿನಲ್ಲಿ ಬರುವದು.

— ಹಿಂದುಸ್ಥಾನದೊಳಗಿಂದ ಇರಾಣಕ್ಕೆ ಗೋಧಿ ರಫ್ತಾಯಿತು. ಆದರಿಂದ ಇಲ್ಲಿ ಗೋಧಿಯ ಕೊರತೆಯಾಗಬಹುದೆಂದು ಹಿಂದುಸ್ಥಾನ ಸರಕಾರವು ಆಸ್ಟ್ರೇಲಿಯಾದಿಂದ ೧೦೦೦೦ ಟನ್ ಗೋಧಿಯನ್ನು ತರಿಸುವ ವ್ಯವಸ್ಥೆ ಮಾಡಿದೆ. ಈ ಗೋಧಿ ೨ ಹಡಗಗಳಲ್ಲಿ ತುಂಬಿ ಬರುವದು. ಅವುಗಳಲ್ಲಿ ಒಂದು ಮುಂಬಯಿಯೊಳಗೆ, ಒಂದು ಕಲಕತ್ತೆಯೊಳಗೆ ಇಳಿಸಲ್ಪಡುವದು.

— ಜರ್ಮನಿಯಲ್ಲಿ ಸೋಯಾಬೀನದ ಸಾಗುವಳಿ ಪ್ರಚಂಡ ಪ್ರಮಾಣದಿಂದ ನಡೆದಿದೆ. ಸೋಯಾಬೀನವನ್ನು ಜರ್ಮನರು ಪರಿಶೋಧಿಸಿ ತರತರದಿಂದ ಉಪಯೋಗ ಮಾಡುತ್ತಾರೆ. ಸೋಯಾಬೀನದಿಂದ ೭೦ ನಮೂನೆಯ ಪದಾರ್ಥಗಳು ಮಾಡಲ್ಪಡುತ್ತಿವೆ. ಮಾಂಸ, ಹಾಲು, ತತ್ತಿ ಇವುಗಳಲ್ಲಿರುವ ಯಾವತ್ತೂ ಸತ್ವಾಂಶಗಳು ಸೋಯಾಬೀನದಲ್ಲಿವೆ. ೨ ರತ್ತಲು ಸೋಯಾಬೀನದೊಳಗಿನ ಸತ್ವಾಂಶಗಳು ೫ ರತ್ತಲು ಗೋಮಾಂಸ, ೩೦ ರತ್ತಲು ಹಾಲು ಅಥವಾ ೬೦ ತತ್ತಿಗಳಿಗೆ ಸಮಾನವಾಗಿದೆ.

ಜಾಹೀರ ನೋಟೀಸು.

ಅಪ್ರಾಪ್ತ ಲಕ್ಷ್ಮೀನಾರಾಯಣ, ಪಾಂಡುರಂಗ, ಬಾಬು ತಂದೆ ರಾಮಕೃಷ್ಣ ವಿಠ್ಠಲ ಭಟ್ಟ ರಕ್ಷಕ ತಾಯಿ ಅನುಸೂಯಾಬಾಯಿ ಕೋಂ ರಾಮಕೃಷ್ಣ ಭಟ್ಟ ಸಾ॥ ಕುಮಟಾ. ಇವಳು ಈ ಮೂಲಕ ತಿಳಿಸುವದೇನಂದರೆ —

ಅಪ್ರಾಪ್ತರ ತಂದೆಯವರು ಪರರ ದುರ್ಬೋಧನೆಗೊಳಗಾಗಿ ಸಾಂಸಾರ ಹಿತಾಹಿತಗಳನ್ನು ತಿಳಕೊಂಡು ವ್ಯವಹಾರ ಮಾಡಲು ಅಸಮರ್ಥರಾಗಿದ್ದಾರೆ. ಪೋಕಳ ಸಾಲಗಳನ್ನು ನಿರ್ಮಿಸಿಕೊಡಗಿದ್ದಾಗಿ ತಿಳಿಯುತ್ತದೆ. ಅವರಿಗೆ ಸಾಲ ಮಾಡುವ ಯಾವದೇ ಗರಜಿಲ್ಲ. ಅವರಿಂದ ಅವರೇನಾದರೂ ಸಾಲ ಮಾಡಿದ್ದಲ್ಲಿ ಆ ಸಾಲಗಳು ಅಪ್ರಾಪ್ತರಿಗಾಗಲಿ ಅಪ್ರಾಪ್ತರ ಬಾಬ್ತು ಇರುವ ಪಿತ್ರಾರ್ಜಿತ ಆಸ್ತಿಗಾಗಲಿ ಬಾಧಿಸಲಾರವು. ತಿಳಿಯುವದು.

ಕುಮಟಾ, ತಾ ೩೦—೧೧—೪೧

ಅನಸೂಯಾಬಾಯಿ ಕೋಂ ರಾಮಕೃಷ್ಣ ಭಟ್ಟ.

ನೋಟೀಸು.

ತಾ ೨೩-೧೧-೪೧ನೇಗೆ ಉತ್ತರ ಕೊಟ್ಟಿರುವ ಕುಮಟಾ ತಾಲೂಕ ಅಂತ್ರವಳ್ಳಿ ಗ್ರಾಮದ ಶ್ರೀ ವೀರೇಶ್ವರ ದೇವರ ಮಾಜೀ ಮೊಕ್ತೇಸರ ೧ ದೇವರಾವ ಪುಂಡಲೀಕ ದೇಸಾಯಿ ೨ ರಾಮಚಂದ್ರ ಸಾಂಬ ದೇಸಾಯಿ ವಗೈರೆ ಭಜಕ ಜನರಿಗೆ ಈ ಮೂಲಕ ನರಸಿಂಹ ನಾರಾಯಣ ಭಟ್ಟ ಕುಟುಂಬದ ಮೆನೇಜರ ಸಾ॥ ಅಂತ್ರವಳ್ಳಿ, ತಾಲೂಕ ಇವರು ತಿಳಿಸುವ ವಿವರ —

ನಮ್ಮ ತಾ ೮-೧೧-೪೧ನೇ ನೋಟೀಸಿಗೆ ನೀವು ತಾ ೨೩-೧೧-೪೧ನೇಗೆ ಕೊಟ್ಟ ಉತ್ತರ ಸಂಪೂರ್ಣ ಅಸತ್ಯವಿದೆ. ನಮ್ಮ ಕುಲದೇವರ ದಾಗಿನೆ ವಗೈರೆ ಏನೊಂದೂ ಇಲ್ಲ. ಈ ವರೆಗಿನ ಭಕ್ತ ವಗೈರೆ ನಮಗೆ ಯಾರಿಂದಲೂ ವಸೂಲ ಬಂದಿಲ್ಲ. ನಾವು ತಾ ೭-೧೧-೪೧ನೇಗೆ ತಿಳಿಸಿದಂತೆ ತಾ ೮-೧೨-೪೧ರೊಳಗೆ ದೇವರ ನಿತ್ಯಪೂಜಾ-ವಿನಿಯೋಗವನ್ನು ವಹಿಸಿಕೊಳ್ಳದೇ ಇದ್ದಲ್ಲಿ ಅದು ನಿಂತ ಬಗ್ಗೆ ಒದಗತಕ್ಕ ಶಿಕ್ಷೆ, ಪ್ರಾಯಶ್ಚಿತ್ತ, ಖರ್ಚಿಗೆ ನಾವು ಬದ್ಧರಲ್ಲ. ನೀವೇ ಜವಾಬದಾರರಿರುತ್ತೀರಿ. ಮೇಲು ಪೂಜಾ ವಿನಿಯೋಗವು ನಮ್ಮದೇ ಇರುತ್ತದಾಗಿ ನಿಮ್ಮ ಕುಟುಂಬದ ಸುಬ್ರಾಯ ಶ್ರೀನಿವಾಸ ದೇಸಾಯಿ ಇವ[illegible] ಬರಕೊಟ್ಟಿದ್ದು ಇದೆ. ತಿಳಿಯುವದು. ತಾ [illegible]—೧೧—೪೧

ನರಸಿಂಹ ನಾರಾಯಣ ಭಟ್ಟ, ಅಂತ್ರವಳ್ಳಿ.

ವಿವಿಧ ವಾರ್ತೆಗಳು.

— ಕಳೆದ ಖಾನೇಸುಮಾರಿಯು ಲೆಕ್ಕ ಪ್ರಕಟವಾಗಿದೆ ಅಂತು ನಮ್ಮ ಹಿಂದುಸ್ಥಾನದ ಲೋಕಸಂಖ್ಯೆ ೩೮ ಕೋಟಿ, ೮೮ ಲಕ್ಷ ಅಂದರೆ ಸರಾಸರಿ ಶೇಕಡಾ ೧೫ರಷ್ಟು ಜನಸಂಖ್ಯೆ ಬೆಳೆದಿದೆ. ಪಟ್ಟಣಗಳಲ್ಲಿ ಜನಸಂಖ್ಯೆ ಹೆಚ್ಚಾಗಿ ಬೆಳೆದಿದೆ ನಮ್ಮ ಮುಂಬಯಿ ಇಲಾಖೆಯಲ್ಲಿ ೧೯೩೧ನೇ ಇಸ್ವಿಯಲ್ಲಿ ೧ ಕೋಟಿ, ೮೦ ಲಕ್ಷ ಜನಸಂಖ್ಯೆಯಿತ್ತು, ಅದೀಗ ೨ ಕೋಟಿ, ೮|| ಲಕ್ಷಕ್ಕೆ ಮುಟ್ಟಿದೆ. ಇಡೀ ಹಿಂದುಸ್ಥಾನದಲ್ಲಿ ಓದು ಬರಹ ಬಲ್ಲಾದವರ ಸಂಖ್ಯೆ ೪ ಕೋಟಿ, ೭೩ ಲಕ್ಷ

— ದಿಲ್ಲಿಯ 'ಹಿಂದುಸ್ಥಾನ ಟೈಮ್ಸ' ಪತ್ರಿಕೆಯ ಸಂಪಾದಕರಾದ ಶ್ರೀ|| ದೇವದಾಸ ಗಾಂಧಿಯವರಿಗೂ ಮುದ್ರಕ ಮತ್ತು ಪ್ರಕಾಶಕ ಶ್ರೀ|| ದೇವಿಪ್ರಸಾದ ಶರ್ಮಾರವರಿಗೂ ಮಿಂತದ ಸುದ್ದಿಗಾರರಾದ ಶ್ರೀ|| ಸಿಂಹಲರವರಿಗೂ ಅಲಹಾಬಾದದ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ಅಪರಾಧಿಗಳೆಂದು ನಿರ್ಣಯಿಸಿದ್ದಾರೆ. ಅಲಹಾಬಾದದ ಹೈಕೋರ್ಟು ಕಕ್ಷಗಾರರಿಂದ ಯುದ್ಧನಿಧಿಯನ್ನು ಎತ್ತುವಳಿ ಮಾಡುವಂತೆ ಸರ್ಕಲರುಗಳನ್ನು ಹೊರಡಿಸಿರುವದಾಗಿ ಸೂಚಿಸಿ ಆಗಸ್ಟ ೩ನೇ ತಾರೀಖಿಗೆ ಮುರಕದಿಂದ ಹೊರಟ ಸುದ್ದಿಯನ್ನು ಪ್ರಕಟಿಸಿದ ಬಗ್ಗೆ ಖಟ್ಲೆ ನಡೆದು ಈ ಪ್ರಕಾರ ತೀರ್ಮಾನವಾಗಿದೆ ಶ್ರೀ|| ದೇವದಾಸರಿಗೆ ರೂ ೧೦೦೦ ದಂಡ, ದಂಡ ತುಂಬದಿದ್ದರೆ ೧ ತಿಂಗಳ ಸಾದಾ ಶಿಕ್ಷೆ ಶ್ರೀ|| ದೇವಿಪ್ರಸಾದ ಶರ್ಮಾರಿಗೆ ರೂ. ೫೦೦ ದಂಡ, ದಂಡ ಕೊಡದಿದ್ದರೆ ೧ ತಿಂಗಳ ಸಾದಾ ಶಿಕ್ಷೆ, ಶ್ರೀ|| ಸಿಂಹಲರವರಿಗೆ ೨ ತಿಂಗಳ ಸಾದಾ ಶಿಕ್ಷೆ ವಿಧಿಸಲಾಗಿದೆ. ಶ್ರೀ|| ಸಿಂಹಲರವರಿಗೆ ತಮ್ಮಂತೆ ದಂಡ ವಿಧಿಸದೆ ಶಿಕ್ಷೆಯನ್ನು ವಿಧಿಸಿದ್ದರಿಂದ ತಾವು ದಂಡ ತುಂಬುವದಿಲ್ಲವಾಗಿ ಶ್ರೀ|| ದೇವದಾಸ ಗಾಂಧಿಯವರು ಕೋರ್ಟಿಗೆ ಅರಿಕೆ ಮಾಡಿಕೊಂಡರು ಆದಾಗ್ಯೂ ಗಾಂಧಿಯವರ ವಕೀಲರಾದ ಡಾ|| ತೇಜ ಬಹದ್ದೂರ ಸಪ್ರುರವರ ಅರಿಕೆಯ ಮೇರೆಗೆ ದಂಡ ತುಂಬಲಿಕ್ಕೆ ೧೫ ದಿವಸಗಳ ಅವಧಿ ಕೊಡೋಣಾಗಿದೆ ಶ್ರೀ|| ಸಿಂಹಲರವರು ಸೆರೆಮನೆ ಸೇರಿದರು ಶ್ರೀ|| ಶರ್ಮಾರವರು ದಂಡ ತುಂಬುವದಾಗಿ ಶ್ರೀ|| ಗಾಂಧಿಯವರು ಕೋರ್ಟಿಗೆ ತಿಳಿಸಿದ್ದಾರೆ

— ಮುಂಬಯಿಯ ಪೇಟೆಗಳಲ್ಲಿ ಪಂ|| ಜವಾಹಿರಲಾಲರಿಗೆ ಬಿಡುಗಡೆಯಾಯಿತೆಂದು ಕಳೆದ ಗುರುವಾರ ಹೇಗೋ ಒಂದು ಸುದ್ದಿ ಹಬ್ಬಿತು! ಅರ್ಧ ತಾಸಿನವರೆಗೆ ಆನಂದಪ್ರದರ್ಶನಾರ್ಥ ಪೇಟೆಗಳು ಮುಚ್ಚಿಕೊಂಡವು! ಕೆಲವು ವರ್ತಕರು ಮಿಠಾಯಿ ಹಂಚಿದರು! ಕಾಂಗ್ರೆಸ ಮಂದಿರದ ಕಡೆ ಜನರು ಮುತ್ತಿದರು ದೂರದೂರದಿಂದ ಟೆಲಿಫೋನಿನ ಮೂಲಕ ಚೌಕಶಿಯಾಯಿತಂತೆ ಈ ಸುದ್ದಿ ನಿರಾಧಾರವಾದದ್ದೆಂದು ತಿಳಿದ ಬಳಿಕ ಪುನಃ ವ್ಯವಹಾರಕ್ಕೆ ಪ್ರಾರಂಭವಾಯಿತಂತೆ!

— ಮೊಂಸೀರದ ಬಳಿ ಪೈಜಾಬದ ಗ್ರಾಮದಲ್ಲಿ ಹಿಂದು-ಮುಸಲ್ಮಾನರೊಳಗೆ ಕಲಹವುತ್ಪನ್ನವಾಗಿ ಕ್ರಿಮಿನಲ ಪ್ರೊಸೀಜರ ಕೋಡಿನ ೧೪೪ನೇ ಕಲಮಿನಂತೆ ಪ್ರಕರಣ ನಡೆದಿತ್ತು. ಮಸೀದಿಯ ಮುಂಭಾಗದಲ್ಲಿ ಎರಡು ದೇವಸ್ಥಾನಗಳಿವೆ ಅಲ್ಲಿ ಹಿಂದುಗಳು ವಾದ್ಯಘೋಷದಿಂದ ಕೀರ್ತನೆ ಮಾಡಬಯಸಿದರು ಹೀಗೆ ಕೀರ್ತನೆ ಮಾಡುವ ಸಂಪ್ರದಾಯವು ಬಹುಕಾಲದಿಂದ ನಡೆದು ಬಂದಿತ್ತು ಈ ವರ್ಷ ಮುಸಲ್ಮಾನರು ಆಕ್ಷೇಪ ಮಾಡಿದರು ಈ ವಿಭಾಗದಲ್ಲಿ ಮುಸಲ್ಮಾನ ಲೋಕಸಂಖ್ಯೆಯುಂಟು. ಮೆಜಿಸ್ಟ್ರೇಟ ಕೋರ್ಟಿನಲ್ಲಿ ಪ್ರಕರಣದ ವಿಚಾರ ನಡೆದಾಗ ಪ್ರಾರ್ಥನೆ ಮಾಡುವ ಸಮಯಗಳಲ್ಲಿ ಕೀರ್ತನೆ ನಿಲ್ಲಿಸಲು ಹಿಂದುಗಳು ಒಡಂಬಟ್ಟರು. ಮೆಜಿಸ್ಟ್ರೇಟರು ಪ್ರಕರಣವನ್ನು ನಿಕಾಲೆಯಲ್ಲಿ ತಂದರು ಕೂಡಲೆ ಮುಸಲ್ಮಾನ ಪ್ರಮುಖರು ಹಿಂದು-ಪ್ರಮುಖರ ಕಡೆಗೆ ಹೋಗಿ ಅಹೋರಾತ್ರಿ ಕೀರ್ತನೆ ಮಾಡಲು ತಮ್ಮದೇನೂ ಆಕ್ಷೇಪವಿಲ್ಲವಾಗಿ ಹೇಳಿದರು. ತಮ್ಮ ಧಾರ್ಮಿಕ ಭಾವನೆಯನ್ನು ಮನ್ನಿಸಿದ್ದರಿಂದ ತಮಗೆ ಸಮಾಧಾನವಾಯಿತಾಗಿ ಉದ್ಗರಿಸಿದರು! ಬಂಗಾಲ ಪ್ರಾಂತದಲ್ಲಿ ಈಗ ವಾದ್ಯ ನಿರ್ಬಂಧದ ಕೋಲಾಹಲ ಎದ್ದಿದೆ. ಮಸೀದಿಗಳ ಮುಂದೆ ವಾದ್ಯ ಬಾರಿಸಲೇ ಬಾರದೆಂಬ ಕಾನೂನನ್ನು ಸಂಘಟಿಸುವ ವಿಚಾರ ನಡೆದಿದೆ ಹಿಂದು-ಮುಸಲ್ಮಾನರ ಪರಸ್ಪರ ವಿಚಾರ ವಿನಿಮಯದಿಂದಲೂ ಸಹನಶೀಲತೆಯಿಂದಲೂ ಈ ಸಮಸ್ಯೆ ದೂರವಾಗಬಲ್ಲದು

— ೮ನೇ ಎಡ್ವರ್ಡ ಬಾದಶಹರ ರಾಜ್ಯತ್ಯಾಗಕ್ಕೆ ಸಿಂಪ್ಸನಳೊಡನೆ ಸಂಕಲ್ಪಿತ ಮದುವೆಯೇ ಕಾರಣವೆಂದು ಲೋಕಪ್ರಸಿದ್ಧವಾದ ಸಂಗತಿ ಆದರೆ ನಿಜವಾದ ಕಾರಣವೇ ಪ್ರತ್ಯೇಕ. ಅಮೇರಿಕೆಯ 'ನ್ಯೂಯೊರ್ಕ ಟೈಮ್ಸ' ಪತ್ರಿಕೆಯ ವಿಶೇಷ ವಿಭಾಗದ ಸಂಪಾದಕರಾದ ಮಿ|| ಯುಜಿನ ಯಂಗರವರ ಸಪ್ಪೆಕ್ಸ್ಟಾಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಆ ಗ್ರಂಥದಲ್ಲಿ "೮ನೇ ಎಡ್ವರ್ಡ ಬಾದಶಹರೂ ಜರ್ಮನಿಯೂ" ಎಂಬದೊಂದು ಅಧ್ಯಾಯವುಂಟು. ೮ನೇ ಎಡ್ವರ್ಡ ಬಾದಶಹರಿಗೂ ಪ್ರಧಾನ ಮಂಡಳಕ್ಕೂ ವಿದೇಶ ಧೋರಣದಲ್ಲಿ ಮತಭೇದ ಬಂತು ಜರ್ಮನಿಯ ನಾಝಿ ಸಂಪ್ರದಾಯವನ್ನೂ ಇಟಾಲಿಯ ಫೆಸಿಷ್ಟ ಸಂಪ್ರದಾಯವನ್ನೂ ಪ್ರತಿಬಂಧಿಸಬೇಕೆಂದು ಪ್ರಧಾನ ಮಂಡಳದ ಒತ್ತಾಯ ಎತ್ತ ಎಡ್ವರ್ಡ ಬಾದಶಹರು ಜರ್ಮನಿಯೊಡನೆ ವಿರೋಧ ಬಗೆಯಬೇಕಾದುದಿಲ್ಲ, ಜರ್ಮನಿಯೊಡನೆ ಒಡಂಬಡಿಕೆ ಮಾಡಿಕೊಳ್ಳಬೇಕಾಗಿ ಅಭಿಪ್ರಾಯಪಟ್ಟರು. ಆದರಿಂದ ಎಡ್ವರ್ಡರ ಮೇಲೆ ರಾಜ್ಯತ್ಯಾಗ ಮಾಡುವ ಪ್ರಸಂಗ ಬಂತು ಆದರೆ ಇದ್ಯಾವದೇ ಸುದ್ದಿ ಹಿಂದುಸ್ಥಾನಕ್ಕೆ ಗೊತ್ತಿಲ್ಲ.

— ಸಂಯುಕ್ತ ಪ್ರಾಂತದಲ್ಲಿ ಯುದ್ಧನಿಧಿಯ ಎತ್ತುವಳಿಗಾಗಿ ನಡೆದ ವಿಕ್ಷಿಪ್ತ ಕ್ರಮವೊಂದು ಲಖನೌದೊಳಗಿನ 'ನೆಶನಲ್ ಹೆರಲ್ಡ' ಪತ್ರಿಕೆಯಲ್ಲಿ ಪ್ರಕಟವಾಗಿದೆ ಶ್ರೀ|| ಮಹಾವೀರಪ್ರಸಾದ ಪೊದ್ದಾರರವರು ಸತ್ಯಾಗ್ರಹಿಗಳು ೧ ವರ್ಷ ಶ್ರೀ ಕಾಶಿಯ ಸೆರೆಮನೆವಾಸವನ್ನು ಅನುಭವಿಸಿ ಬಿಡುಗಡೆಯಾದರು. ಇವರು ತಮ್ಮ ಊರಾದ ಗೋರಖಪುರಕ್ಕೆ ಹೋದ ಬಳಿಕ ಯುದ್ಧನಿಧಿ ಮಂಡಳದ ಉತ್ಸಾಹಭರಿತ ಕಾರ್ಯಕರ್ತರೊಬ್ಬರು ಇವರ ಕಡೆ ಯುದ್ಧನಿಧಿಗೆ ಕಾಣಿಕೆ ಕೇಳಿದರು ಶ್ರೀ|| ಪೊದ್ದಾರರು ನಿರಾಕರಿಸಿದರು ಇದರಿಂದ ಭಾರತ ರಕ್ಷಣಾ ಕಾನೂನಿನ ೧೯ನೇ ಕಲಮಿನನ್ವಯ ಅವರ ಮೇಲೆ ದಸ್ತಗಿರಿ ವಾರಂಟು ಹೊರಟಿತು ಅವರನ್ನು ಸೆರೆಹಿಡಿಯಲಿಕ್ಕೆ ಒಂದು ದಿನ ರಾತ್ರಿ ೯ ಘಂಟೆಗೆ ಪೋಲೀಸರು ಅವರ ಮನೆಗೆ ಹೋದರು. ಆ ಕಾಲದಲ್ಲಿ ಶ್ರೀ|| ಮಹಾವೀರರು ಮನೆಯಲ್ಲಿರಲಿಲ್ಲ, ಅವರ ಆಪ್ತರೊಬ್ಬರಿದ್ದರು ಅವರು ಯುದ್ಧನಿಧಿ ಕಾಣಿಕೆಯ ವಿಷಯವಾದರೆ ರೂ. ೫೦೦ನ್ನು ಕಳುಹುತ್ತೇವಾಗಿ ಹೇಳಿ ದಸ್ತಗಿರಿ ಮಾಡಬಾರದೆಂದು ಹೇಳಿಕೊಂಡರು. ಪೋಲೀಸರು ಈ ಆಶ್ವಾಸನದ ಮೇಲೆ ಮರಳಿದರು ಶ್ರೀ|| ಪೊದ್ದಾರರು ಮನೆಗೆ ಬಂದ ಬಳಿಕ ಈ ಎಲ್ಲ ಸಂಗತಿ ಅವರಿಗೆ ತಿಳಿಯಿತು. ಹೀಗೆ ಖಟ್ಲೆ ತಪ್ಪಿಸಿಕೊಳ್ಳಲಿಕ್ಕೆ ಅವರು ಒಡಂಬಡಲಿಲ್ಲ. ಮರುದಿನ ಬೆಳಿಗ್ಗೆ ತಾವು ಸೆರೆಮನೆಯ ಬಾಯಲ್ಲಿಯೇ ಸಿಗುತ್ತೇವಾಗಿಯೂ ತಮಗೆ ಸೆರೆಹಿಡಿಯಬೇಕಾಗಿಯೂ ಶ್ರೀ|| ಮಹಾವೀರರು ಪೋಲೀಸರಿಗೆ ತಿಳಿಸಿ ಸೆರೆಮನೆ ಸೇರಿದ್ದಾರೆ

— ಶ್ರೀ|| ಸುಭಾಷಚಂದ್ರ ಬೋಸರು ಸ್ವದೇಶದೊಳಗಿಂದ ವಿದೇಶಕ್ಕೆ ಸರಕಾರದ ಕಣ್ಣು ತಪ್ಪಿಸಿಕೊಂಡು ಪಾರಾದ ಕ್ರಮದ ಬಗ್ಗೆ ಬೇರೆ ಬೇರೆ ಜನರು ಬೇರೆ ಬೇರೆ ತರ್ಕ ಮಾಡತೊಡಗಿದ್ದಾರೆ. ಲಂಡನಿನ 'ಎಂಪಾಯರ ನ್ಯೂಜ' ಪತ್ರಿಕೆಯು ಒಂದು ಸುದ್ದಿಯನ್ನು ಹರಡಿದೆ ಶ್ರೀ|| ಸುಭಾಷರು ಸೀರೆಯನ್ನುಟ್ಟುಕೊಂಡು ಹೆಣ್ಣು ವೇಷದಿಂದ ಪಾರಾದರಂತೆ! ನೋಡಿದವರ್ಯಾರೆಂದು ಗೊತ್ತಿಲ್ಲ "ಮುಂಬಯಿ ಕ್ರೊನಿಕಲ" ಪತ್ರಿಕೆಯ ಸುದ್ದಿಗಾರರಾದ ರಾ|| ಕಲ್ಯಾಣಪುರರವರು 'ಕ್ರೊನಿಕಲ' ಪತ್ರಿಕೆಯಲ್ಲಿ 'ಸುಭಾಷರೊಡನೆ ೧೫ ದಿನಗಳು' ಎಂಬ ಲೇಖ ಬರೆದಿದ್ದಾರೆ ೧೯೩೮ನೇ ಇಸವಿಯ ಸುದ್ದಿಯಿದು! ಆ ಕಾಲದಲ್ಲಿ ಪುರೋಗಾಮಿ ಪಕ್ಷದ ಪ್ರಚಾರ ಮಾಡುವ ದೆಸೆಯಿಂದ ಶ್ರೀ|| ಸುಭಾಷರು ಗುಜರಾಥವನ್ನು ಸಂಚರಿಸುತ್ತಿದ್ದರು. ಆಗ ಪುರೋಗಾಮಿ ಪಕ್ಷಕ್ಕೆ ಲೋಕ ಬೆಂಬಲವಿಲ್ಲವಾಗಿ ಪುರೋಗಾಮಿ ಪಕ್ಷದ ಪ್ರಮುಖರು ಶ್ರೀ|| ಸುಭಾಷರಿಗೆ ನಿರ್ವಂಚನೆಯಿಂದ ಹೇಳಲು, "ಹಾಗಾದರೆ ಹಿಂದುಸ್ಥಾನದಲ್ಲಿ ನನಗೆ ಸ್ಥಾನವಿಲ್ಲ!" ಹೀಗೆ ಉದ್ಗರಿಸಿದರು. ಜರ್ಮನರ ಶಿಸ್ತು, ಅವರ ಸೈನ್ಯ-ಕವಾಯಿತು, ಮೆರವಣಿಗೆಗಳ ಬಗ್ಗೆ ಶ್ರೀ|| ಸುಭಾಷರಿಗೆ ತುಂಬಾ ಪ್ರಶಂಸೆಯಿದೆ. ಅದೇ ರೀತಿ ಹಿಂದುಸ್ಥಾನದಲ್ಲಿ ಸಂಘಟನೆಯಾಗಬೇಕೆಂದು ಶ್ರೀ|| ಸುಭಾಷರ ಹಂಬಲವಿತ್ತು

ಜಾಹೀರ ನೋಟೀಸು.

ಅಂಕೋಲಾ ತಾಲೂಕ ಶಿಂಗನಮಕ್ಕಿ ನಿವಾಸಿಕ ಸದ್ಯ ಹಾಲ ಕುಮಟಾ ತಾಲೂಕ ಗೋಕರ್ಣ ಗ್ರಾಮದ ಪೈಕಿ ತಾರಮಕ್ಕಿಯಲ್ಲಿ ಇರುವ ದತ್ತಾ ನಾರಾಯಣ ಶೇಟ ರಾಯಕರ ಇವನು ಇದರ ಮೂಲಕ ಯಾವತ್ತೂ ಜನರಿಗೆ ತಿಳಿಸುವದೇನಂದರೆ -

ನನ್ನ ಜನಕ ತಂದೆ ನಾರಾಯಣ ವಾಸುದೇವ ಶೇಟ ರಾಯಕರ ಸಾಕೀನ ಶಿಂಗನಮಕ್ಕಿ ತಾಲೂಕ ಅಂಕೋಲಾ ಇವರಿಗೆ ನಾನು ಒಬ್ಬನೇ ಮಗ ಇದ್ದು ನಮಗೆ ಸಾಲ ವಗೈರೆ ಏನೊಂದೂ ಇರುವದಿಲ್ಲ. ಇಷ್ಟೇ ಅಲ್ಲ, ಸಾಲ ಮಾಡುವ ಪ್ರಸಂಗವೂ ಇಲ್ಲ. ಹೀಗಿದ್ದು ನನ್ನ ತಂದೆಯವರು ಎಲ್ಲಿ ಕಡೆಗೆ ವ್ಯಸನಗ್ರಸ್ತರಾಗಿ ನನಗೆ ದಗೆಕೊಡಿಸುವ ಇರಾದೆಯಿಂದ ಸಾಲ ವಗೈರೆ ಮಾಡುವ ಇರಾದೆಯಲ್ಲಿ ಇದ್ದಾರಾಗಿ ತಿಳಿಯುವದರಿಂದ ಯಾವತ್ತೂ ಜನರಿಗೆ ಇದರ ಮೂಲಕ ತಿಳಿಸುತ್ತೇನಲ್ಲಾ- ಸದ್ರಿಯವರಿಗೆ ಸಾಲ ವಗೈರೆ ಕೊಟ್ಟಲ್ಲಿ ನಮ್ಮ ಕುಟುಂಬದ ಆಸ್ತಿಯಾ ನಾನು ಜವಾಬದಾರನಲ್ಲಾ ತಿಳಿಯುವದು

ಗೋಕರ್ಣ, [illegible] ೨೪-೧೧-೧೯೪೧

● ಈ ಎಡಗೈ ಹೆಬ್ಬೆಟ್ಟಿನ ಗುರ್ತು ದತ್ತಾ ನಾರಾಯಣ ಶೇಟ ರಾಯಕರ ಇವನದು

— ಶ್ರೀ ಹ। ಭ। ಪ। ಬಂಡಗೇ ಮಹಾರಾಜರ ಶಿಷ್ಯರಾದ ಕಂಥೆರಪುರದ ಕುಶಾಬಾ ತನಪುರೇ ಮಹಾರಾಜರವರು ಬದರಿ ನಾರಾಯಣನ ತೀರ್ಥಯಾತ್ರೆಗಾಗಿ ಕಳೆದ ಕಾರ್ತಿಕ ಶು॥ ೧೫ಕ್ಕೆ ಹೊರಟಿದ್ದಾರೆ. ಶ್ರೀ॥ ಕುಶಾಬಾರವರು ಇಡೀ ತೀರ್ಥಯಾತ್ರೆಯನ್ನು ಪಾದಚಾರಿಗಳಾಗಿ ಮಾಡುವರು. ೬ ತಿಂಗಳಲ್ಲಿ ಬದರಿ ಕ್ಷೇತ್ರಕ್ಕೆ ತಲ್ಪಿ ಅಲ್ಲಿ ಶ್ರೀ ಬದರಿ ನಾರಾಯಣನಿಗೆ ಚಂದ್ರಭಾಗಾ ನದಿಯ ತೀರ್ಥದಿಂದ ಅಭಿಷೇಕ ಮಾಡಿ ಹಾಗೆಯೇ ಅಲ್ಲಿಂದ ಪುನಃ ಪಂಢರಪುರಕ್ಕೆ ಮರಳುವರು. ಮುಂದಿನ ಕಾರ್ತಿಕ ಶು॥ ೧೧ಗೆ ಪಂಢರಪುರಕ್ಕೆ ತಲ್ಪಿ ಬದರಿಯಿಂದ ತಂದ ಗಂಗಾ ತೀರ್ಥದಿಂದ ಶ್ರೀ ಪಂಡರಿನಾಥನಿಗೆ ಅಭಿಷೇಕ ಮಾಡುವರು. ಶ್ರೀ॥ ಕುಶಾಬಾ ರವರೊಡನೆ ೨೦೦-೩೦೦ ಯಾತ್ರಿಕರಿದ್ದಾರೆ. ಈ ೧ ವರ್ಷದ ಯಾತ್ರೆಗೆ ಸುಮಾರು ರೂ ೨೦—೨೫ ಸಾವಿರ ಖರ್ಚು ಬರುವದು. ಅನೇಕ ಧರ್ಮಾತ್ಮರು ಆ ಯಾತ್ರೆಯ ಖರ್ಚಿನ ಬಗ್ಗೆ ಕಾಣಿಕೆಗಳನ್ನು ಕಳುಹಿಸ್ತಾರೆ, ಕಳುಹುತ್ತಿದ್ದಾರೆ. ಇದೊಂದು ಪುರಾತನ ಸಂಪ್ರದಾಯದ ತೀರ್ಥ ಯಾತ್ರೆ !

— ಕೊಚಿನ ಸರ್ಕಾರದ ದೇವಸ್ವ [illegible] ನಿರ್ಬಂಧಿಸಿದ ದೇವಾಲಯ [illegible] [illegible]ಯಬಾರದಾಗಿ ಕೊಚಿನ ಸರಕಾರದ ಆಜ್ಞೆ

ಸಹ್ಯಾದ್ರಿಫಾರ್ಮಸಿ
ಕುಮಟಾ.

ಬಾಳಂತಿಯರಿಗೆ— ಕಸ್ತೂರಿ ಮಿಶ್ರಣ ದಶಮೂಲಾರಿಷ್ಟ ಮತ್ತು ಧನ್ವಂತರಿ ಗುಳಿಗೆ ಬಹಳ ಉಪಯುಕ್ತವಾದದ್ದು !

ಚಿಕ್ಕ ಮಕ್ಕಳ ಜಂತುವಿನ ಬಾಧೆಗೂ ಪುಷ್ಟಿಯಾಗಲಿಕ್ಕೂ ಸಾಯರಪ್ ಕುಟಜಾ ಒಂದೇ ದಿವ್ಯವಾದ ಔಷಧವು !

ನಾಯಿ-ಕೆಮ್ಮಿಗೆ ಎಂಟೇ ದಿವಸಗಳಲ್ಲಿ ಗುಣಪಡಿಸುವ ಕಫನಾಶಕವು

ಯಾವತ್ತೂ ಪ್ರಕಾರಗಳ
ಕಷಾಯ, ಆರಿಷ್ಟ, ಆಸವ,
ತೈಲಾದಿ ಔಷಧ ಸಾಮುಗ್ರಿಗಳು
ಸದಾ ಸಿಗುತ್ತವೆ.

ಡಾ॥ ಎಸ್. ಕೇ. ಭಟ್ಟ,
ಹಳ್ಕಾರ, ಕುಮಟಾ.

ಇತ್ತ ಲಕ್ಷಗೊಡಿರಿ ! ಇತ್ತ ಲಕ್ಷಗೊಡಿರಿ !!

ಅಗತ್ಯದ ಸೂಚನೆ.

ಸದ್ಯ ಚಾಲತಿಯಲ್ಲಿ ಇಲ್ಲದ ವಿಕ್ಟೋರಿಯಾ, ವಿಲಿಯಂ ಕಿಂಡೆರಾಣಿ ಛಾಪೆಯ ರೂಪಾಯಿ ಅರ್ಧ ರೂಪಾಯಿ ಮತ್ತು ಗೋವಾ ಅಲ್ವಾರ ಬಿಕಾನೇರ ಸ್ಟೇಟಿನ ರೂಪಾಯಿ ವಗೈರೆ ನಾಣ್ಯಗಳು ಯೋಗ್ಯ ದರದಿಂದ ಕೊಳ್ಳಲ್ಪಡುವವು.

ಇಂದೇ ವಿಚಾರಿಸಿರಿ —

ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ

ಧಾತುಪುಷ್ಟಿ ಲೇಹ. (ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ) ನಷ್ಟವಾಗಿರುವ ಪುರುಷತ್ವವನ್ನು ಪುನಃ ಕಲ್ಪಿಸಿಕೊಡುವ ಅತ್ಯುತ್ತಮ ಶಕ್ತಿದಾಯಕ ಔಷಧಿ ಮಾನಸಿಕ ಮತ್ತು ಕಾಯಶಕ್ತಿಗಳನ್ನು ಹೆಚ್ಚಿಸಿ ಆರೋಗ್ಯ, ಇಂದ್ರಿಯಶಕ್ತಿ ಇವೇ ಮೊದಲಾದವುಗಳನ್ನು ಕಲ್ಪಿಸಿಕೊಡುವದು ಬಾಟ್ಲಿ ೧ಕ್ಕೆ 2—8—0

ಕಸ್ತೂರಿ ಮಿಶ್ರಣ ದಶಮೂಲ. ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ ಬಾಟ್ಲಿ ೧ಕ್ಕೆ ರೂ 1—8—0

ಮಲೇರಿಯಾ ನಿವಾರಿಣಿ ಮಲೇರಿಯಾ ಜ್ವರ, ಚಳಿಜ್ವರ, ಇನ್‌ಫ್ಲುಯೆಂಝಾ, [illegible] ಇವುಗಳಿಗೆ ಪ್ರಸಿದ್ಧ ಔಷಧಿ ಬಾಟ್ಲಿ ೧ಕ್ಕೆ ರೂ 0—13—0

ಸ್ಪ್ಲೀನ ಮಿಕ್ಶ್ಚರ ಜಠರಗಡ್ಡೆಯನ್ನು ಕರಗಿಸುವ ದಿವ್ಯೌಷಧ ಬಾಟ್ಲಿ ೧ಕ್ಕೆ ರೂ 1-2-0

ಎಸ್. ಗಣಪಯ್ಯ ಎಂಡ್ ಸನ್ಸ, ರಥಬೀದಿ ನಂಬ್ರ 5, ಮಂಗಳೂರು. ದ. ಕ.

ಔಷಧಿ ಸಿಗುವ ಸ್ಥಳ — (1) ಸ್ವಸ್ತಿಕ ಫಾರ್ಮಸಿ, ಕುಮಟಾ (2) ಕಾಮತ ಸ್ಟೋರ್ಸ, ಹೊನ್ನಾವರ, (3) ಸ್ಟೇಶನರಿ ಡಿಪೋ, ಅಂಕೋಲಾ (4) ಕೆ ಗಣಪಯ್ಯ ಶಾನಭಾಗ, ಮರ್ಚಂಟ್ಸ, ಭಟಕಳ (5) ಪಾಪ್ಯುಲರ ಸ್ಟೋರ್ಸ ಕೆಮಿಸ್ಟ 183, ಸುಪಾರಿಬಾಗ ಪರೇಲ, (6) ಜನರಲ್ ಸ್ಟೋರ್ಸ, ಜಿ ಆಯ. ಪಿ ಮಾಟುಂಗಾ, (7) ವ್ಯಾಳಪ್ಪ ಪದ್ಮನಾಭ ಶೆಟ್ಟಿ ಮರ್ಚಂಟ, ಕಾರವಾರ, (8) ಬಿ ಮುಕುಂದ ಬ್ರದರ್ಸ ಸಿದ್ದಾಪುರ (9) ಪಾಪ್ಯುಲರ ಮೆಡಿಕಲ್ ಸ್ಟೋರ್ಸ ಗೋಕರ್ಣ, (10) ಎ. ಎ. ಧಕಪ್ಪ ಎಂಡ ಸನ್ಸ ಇವರ ಔಷಧಿ ಅಂಗಡಿ, ಶಿರ್ಸಿ [ಕ್ಯಾಟಲಾಗಿಗೆ ಬರೆರಿ]

ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್,

ಸ್ಥಾಪನೆ 1908

ಈ ಕಂಪನಿಯು ಪೂರ್ಣ ಸ್ವದೇಶೀ ಇದ್ದು [illegible] ದೇಶಗಳೂ, ಶಹರಗಳೂ ಬಹಳ [illegible] ಇವೆ. ಕಂಪನಿಯ ಹಣವು ಸರಕಾರಿ ಪ್ರೊ ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಹಲವು ವಿಮೆದಾರರಿಗೆ ಅತೀಶಯ ಲಾಭಕರವಾಗಿದೆ.

ವಿಸ್ತೃತ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದರೆ ಸಿಗುವದು

Kumta Agents
D K Nayak Bros
K N Nayak
Honavar Agent
R V Prabhu

K. Padmanabha Rao & Sons,
BELGAUM
Chief Agents for
Karnatak Districts & S M States

ಚಕ್ರಬಿಂದು

ಮಕ್ಕಳ ಮರಣವನ್ನು
ತಪ್ಪಿಸುವದು.

ಏಜನ್ಸಿ ಕಲಕತ್ತಾ, ಮುಂಬಯಿ, ಮದ್ರಾಸ, ಬೆಂಗಳೂರು, ಮಂಗಳೂರು

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆದೊಡ್ಡದಾಗುವಿಕೆ ಹಸುರು ನರಗಳು, ಕಾಮಿಲೆ ಗಡ್ಡೆರೋಗ ಕೋವೆ ರೋಗ, ಮೈ-ಕೈ ಬಾವುಗಳಿಗೆ ದಿವ್ಯೌಷಧ !

೧ ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ. 3

ಏತಕ್ಕೆ ಚಿಂತಿಸುವಿರಿ ?

ಆಸೇತುಹಿಮಾಚಲದ ವರೆಗೂ ೪೦ ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ

ಡಾ। ಪಿ ಎನ್ ಶ್ರೀನಿವಾಸರಾವ,
ಲಿವ್ಹರ್ ಸ್ಪೆಶಲಿಸ್ಟ,
ಎಂ ಪಿ ಪ್ರಾಸಾದಿಕ ಔಷಧಾಲಯ,
ಶಿವಮೊಗ್ಗಾ

☞ ಇವರಲ್ಲಿ ವಿಚಾರಿಸಿರಿ
ಶಿರ್ಸಿ ಏಜಂಟ —
ಸುಬ್ರಾಯ ಸೀತಾರಾಮ ಹೆಗಡೆ
ಕುಮಟಾ ಏಜಂಟ —
ದೇವಪ್ಪಾ ಅಯ್ಯು ನಾಯ್ಕ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B 1270.

Monday, 8th December, 1941.

ವರ್ಷ ೨೪

ಸಂಚಿಕೆ ೨೨

ಕಾನಡಾವೃತ್ತ

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभ कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮುನಿಯಾರ್ಡರಿನಿಂದ
ರೂ. 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಸ್ಮಾಲ ಪೈಕಾ ಟೈಪಿನ (೧೫ ಎಮ್ ಉದ್ದ)
೮ ಸಾಲುಗಳವರೆಗೆ ರೂ.1-8-0
೮ ನಂತರ ಪ್ರತಿಸಾಲಿಗೆ 0-3-0.
ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ೮ ಸಾಲಿನಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

-*(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೮ ನೇ ಮಾಹೆ ಡಿಸೆಂಬರ ಸನ್ ೧೯೪೧ನೇ ಇಸವಿ)*-


ಶ್ರೀಧೂತಪಾಪೇಶ್ವರ
ದ್ರಾಕ್ಷಾಸವ
DRAKSHASAV
ಚಳಿಗಾಲಕ್ಕಾಗಿ ಶಕ್ತಿವರ್ಧಕವೂ- ಪಾಚಕವೂ
ಅಪಚನ, ದಮ್ಮು, ಕೆಮ್ಮು, ವ ಲಬದ್ಧತೆಗಳಿಗೆ ಉತ್ತಮ ಗುಣಕಾರಿಯಾದದ್ದು
— ಟಾನಿಕ್ —
ಶ್ರೀಧೂತಪಾಪೇಶ್ವರ ಪನವೇಲ ಲಿಮಿಟೆಡ

ಶ್ರೀ ಧೂತಪಾಪೇಶ್ವರ ಪನವೇಲ, ಲಿ.,
ಕರ್ನಾಟಕ ಕೇಂದ್ರ- ಯುನ್ಯಾಟೆಡ್ ಏಜನ್ಸೀಜ, ಹುಬ್ಬಳ್ಳಿ.

ಕಾರವಾರ — ಮೆಸರ್ಸ ಮುಜುಮುದಾರ-ಕಕಬೇಕರ ಬ್ರದರ್ಸ
ಅಂಕೋಲಾ:— ದಿ ಸ್ಟೇಶನರಿ ಡಿಪೋ
ಕುಮಟಾ:— ದೇವಪ್ಪಾ ಅಯ್ಯು ನಾಯ್ಕ
ಹೊನ್ನಾವರ— ಮೆಸರ್ಸ ಕಲ್ಯಾಣಪುರ ಬ್ರದರ್ಸ.
ಶಿರ್ಶಿ:—{ ಶಿರ್ಶಿ ಡ್ರಗ್ ಸ್ಟೋರ್ಸ
ಎಸ್. ಎಲ್ ಧಾಕಪ್ಪಾ ಎಂಡ್ ಸನ್ಸ್
ಸಿದ್ದಾಪುರ — ಮೆಸರ್ಸ ಶಾಮಯ್ಯನ ಬ್ರದರ್ಸ
ಹಳಿಯಾಳ:— ಎಸ್. ಪಿ ಹಳ್ಳಿಕೇರಿ

"ಸ್ಟಾರ ಆಫ್ ಕೆನರಾ ಪ್ರೆಸ್",
ಕುಮಟಾ.

—*—

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಯಿಂದ ಬೇಕಾದ ನಮೂನೆಯ ಕಲರ ಪ್ರಿಂಟಿಂಗ ವಗೈರೆ ಸಣ್ಣ ದೊಡ್ಡ ಛಾಪಾ ಕೆಲಸಗಳೂ, ಪುಸ್ತಕ ಮುದ್ರಣವೂ, ರೂಲಿಂಗ-ಬ್ಯಾಂಡಿಂಗ ಕೆಲಸವೂ ಉತ್ತಮವಾಗಿ ಸುಲಭ ದರದಲ್ಲಿ ತಕ್ಕ ಕಾಲಕ್ಕೆ ತಯಾರಿಸಿ ಕೊಡಲಾಗುವದು

ಇದಲ್ಲದೆ ಕೋರ್ಟ ಕಚೇರಿ ಉಪಯೋಗದ ವಕಾಲತ ವಗೈರೆ ಫಾರ್ಮುಗಳೂ, ಕಸ್ಟಮ್ ಕಚೇರಿಯ ಶಿಪ್ಪಿಂಗ ಬೀಲು-ಸತ್ಮಿ ವಗೈರೆ ಫಾರ್ಮುಗಳೂ, ಗೇಣಿ ರಶೀದಿ ಬೂಕು, ಗೇಣಿಚೀಟಿ ಎದುರ್ಸೂಡಿ ಫಾರ್ಮುಗಳೂ ವಗೈರೆ ಮಾರಾಟಕ್ಕೆ ತಯಾರ ಸಿಗುತ್ತವೆ ನಿಮ್ಮ ಛಾಪಾ ಕೆಲಸಗಳನ್ನು ನಮ್ಮಲ್ಲಿಗೇ ಕಳಿಸಿರಿ

ಒಮ್ಮೆ ಅನುಭವ ತಕ್ಕೊಂಡು ನೋಡಿರಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,
(ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ಹೆಡ್ ಆಫೀಸು — ಕುಂದಾಪುರ.

ಬ್ರೆಂಚ ಆಫೀಸುಗಳು - ಅಂಕೋಲಾ, ಕುಂದಾಪುರ, ಬೈಂದೂರು, ಕೋಟೇಶ್ವರ, ಕುಮಟಾ, ಗೋಕರ್ಣ, ಕಾರವಾರ, ಹಾವೇರಿ, ಶಿವಮೊಗ್ಗಾ, ತರೀಕೆರಿ, ನಗರ, ಸೋಮವಾರಪೇಟೆ ಮತ್ತು ವೀರರಾಜಪೇಟೆ

ಕಾಯಂ ಠೇವುಗಳು, ಸೇವಿಂಗ್ಸ ಬೇಂಕ್ ಠೇವುಗಳು ಮತ್ತು ಚಾಲು ಠೇವುಗಳು ಸಹ ಅಂಗೀಕರಿಸಲ್ಪಡುವವು.

ಭಂಗಾರದ ದಾಗಿನೆಗಳ ವ ಇತರ ವ್ಯಾಪಾರದ ಮಾಲುಗಳ ಅಡವಿನ ಮೇಲೆ ಸವಲತ್ತಿನ ದರದ ಬಡ್ಡಿಯಲ್ಲಿ ಸಾಲ ಕೊಡಲ್ಪಡುವದು ವ್ಯಾಪಾರದ ಕೇಂದ್ರಗಳಿಗೆ ಡ್ರಾಫ್ಟುಗಳು, ಚಕ್ಕುಗಳು ಸಹ ಕೊಡಲ್ಪಡುವವು ಎಲ್ಲ ತರದ ಬೇಂಕಿನ ವ್ಯವಹಾರಗಳು ಸವಲತ್ತಿನ ದರದಿಂದ ನಡಿಸಲ್ಪಡುವವು

ಕುಂದಾಪುರ,
1-8-1941 }

The Agricultural & Industrial Bank, Ltd

ಸ್ಥಳಿಕ ವಿಷಯಗಳು.

ಲೇಖಕ:- ಸ್ಥಳವಂತಿಕ.

ಸುಪೆಯೊಳಗೆ ಕೊಂಗ್ರೆಸ ಸರಕಾರದ ಕಾರಕೀರ್ದಿಯಲ್ಲಿ ನಿರ್ದಿಷ್ಟಗೊಳಿಸಿದ ಜಂಗಲ ಸವಲತ್ತುಗಳಿಂದ ಜಂಗಲ ಇಲಾಖೆಗೆ ಹೊಟ್ಟೆಶೂಲಿಯಾದ ಸಂಗತಿ ಈಗಾಗಲೇ ಪ್ರಸಿದ್ಧವಿದೆ. ಶಿರ್ಶಿಯಲ್ಲಿ ಸೇರಿದ ಸಹಕಾರಿ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ಅರ್ಥಸಚಿವರಾಗಿದ್ದ ಶ್ರೀ॥ ಲಟ್ಠೇಯವರು ಜಂಗಲ ಇಲಾಖೆಯ ಕಾರಭಾರಿಗಳ ಕಾರಸ್ಥಾನಗಳನ್ನು ವಿಶದಗೊಳಿಸಿರುತ್ತಾರೆ. ಪ್ರಾಂತಾಧಿಪರ ಅಂಕಿತವಾದ ಜಂಗಲ ಸವಲತ್ತುಗಳನ್ನು ರದ್ದುಗೊಳಿಸುವದಕ್ಕಾಗಿ ಮುಂಬಯಿ ಸರಕಾರದ ಕಾರಭಾರಿಗಳು ಪ್ರಧಾನರಿಗೆ ತಿಳಿಯಗೊಡದೆ ರಹಸ್ಯದಿಂದ ಆ ಸವಲತ್ತುಗಳ ಯಾದಿಯನ್ನು ಜಂಗಲ ಇಲಾಖೆಯವರಿಗೆ ಕಳುಹಿ ಆಕ್ಷೇಪಗಳನ್ನು ತರಿಸಿಕೊಂಡು ತುಂಟತನ ಮಾಡಿದ್ದರು. ಆದಾಗ್ಯೂ ಪ್ರಧಾನರು ದೃಢಮನಸ್ಕರಾದ್ದರಿಂದ ಆ ಕಿಡಿಗೇಡಿತನ ಸಾರ್ಥಕವಾಗಲಿಲ್ಲ. ಕೊಂಗ್ರೆಸ ಪ್ರಧಾನ ಮಂಡಳವು ರಾಜಿನಾಮೆಯನ್ನಿತ್ತ ಬಳಿಕ, ಜಂಗಲ ಇಲಾಖೆಯವರು ಪುನಃ ತಲೆಯೆತ್ತಿದರು. ಮತ್ತು ಆ ಸವಲತ್ತುಗಳಿಂದ ವಿಶಾಲ ಭೂಲೋಕದ ವನಸಂಪತ್ತೇ ನಷ್ಟವಾಗುತ್ತದೆಂದು ಕೋಲಾಹಲವನ್ನೆಬ್ಬಿಸಿ ಅದನ್ನು ಭಕುತಿಯಿಂದ ಪಾಲಿಸಲಿಲ್ಲ. ಅವುಗಳಿಂದ ಲೋಕಕ್ಕೆ ಒದಗುವ ನಷ್ಟವನ್ನು ಕಲ್ಪನೆಯಿಂದ ತೆಗೆದು ಅವನ್ನು ರದ್ದುಪಡಿಸಿಕೊಳ್ಳುವದಕ್ಕಾಗಿ ಯತ್ನಿಸುತ್ತಿದ್ದಾರೆ. ಕಮಿಶನರ ಪ್ರಭೃತಿ ಮುಲ್ಕಿ ಇಲಾಖೆಯವರೂ ಬೇಸಾಯ ಇಲಾಖೆಯವರೂ ಈ ಕುರಿತು ಯಾವ ಧೋರಣ ಕೊಂಡಿದ್ದಾರೆಂದು ತಿಳಿಯಬರಲಿಲ್ಲ. ಆದರೆ ಬೇಸಾಯ ಇಲಾಖೆಯವರು ಜಂಗಲ ಇಲಾಖೆಯ ಧೋರಣವನ್ನು ಬಲವಾಗಿ ಪ್ರತಿಭಟಿಸಿದ್ದಾರೆಂದು ನಂಬಲರ್ಹವಾದ ಸುದ್ದಿಯುಂಟು. ಬೆಳಗಾವಿಯೊಳಗೆ ಮುಂಬಯಿ ಸರಕಾರವು ಸದ್ಯಕ್ಕೊಂದು ಸಭೆಯನ್ನು ಕರೆಯುವ ಆಲೋಚನೆಯಲ್ಲಿರುವದಂತೆ ಈ ಸಭೆಯಲ್ಲಿ ಜಂಗಲ ಇಲಾಖೆಯವರಂತು ಇದ್ದೇ ಇರುವರು; ಅವರ ಜೊತೆಗೆ ಬೇಸಾಯ ಇಲಾಖೆಯವರೂ ಗ್ರಾಮೋದ್ಧಾರ ಇಲಾಖೆಯವರೂ ಔದ್ಯೋಗಿಕ ಇಲಾಖೆಯವರೂ ಇರುವರಂತೆ. ಅದೇ ಪ್ರಕಾರ ನಮ್ಮಾ ಜಿಲ್ಲೆಯೊಳಗಿನ ಮಹಾಜನರಿಗೂ ನಿಮಂತ್ರಿಸಲ್ಪಡುವದಂತೆ. ಕಮಿಶನರರು ಸಭಾಪತಿಗಳು ಸಭೆಯ ಯೋಜನೆ ನಿರಪವಾದವಾದದ್ದು. ಆದರೆ ಈ ಸಭೆಯ ನಿರ್ಣಯಗಳ ಕ್ರಮವೇನು, ಆ ನಿರ್ಣಯಗಳ ಬೆಲೆಯೇನು ಎಂಬ ಯಾವವೇ ಸಂಗತಿಗಳು ಗ್ರಹಿಕೆಯಾಗುವದಿಲ್ಲ. ಮಹಾಜನರಿಗೆ ನಿಮಂತ್ರಿಸುವ ಇಲ್ಲವೆ ಆರಿಸುವ ಕ್ರಮ ಗೊತ್ತಾಗಿಲ್ಲ. ಬಹುಮತದಿಂದ ನಿರ್ಣಯವಾಗುತ್ತಿದ್ದರೆ ಲೋಕಪ್ರಮುಖರ ಸಂಖ್ಯೆ ಯಾವಾಗಲೂ ಅಲ್ಪಸಂಖ್ಯಾಕವಾಗಿದ್ದರೆ ಸರಕಾರದ ನಿರ್ಣಯಕ್ಕೆ ಲೋಕಬೆಂಬಲವನ್ನು ಸಂಗ್ರಹಿಸಿಕೊಳ್ಳುವ ಕಾರಸ್ಥಾನವೆಂದು ಜನರು ತಿಳಿದು ಗಾಬರಿಯಾಗಿದ್ದಾರೆ. ಸಂಕಲ್ಪಿತ ಸಭೆಯ ರೂಪ ನಿರ್ದೇಶದ ಅಭಾವದಲ್ಲಿ ಕೊಂಗ್ರೆಸ ಕಾರ್ಯಕರ್ತರು ಮುಂದಿನ ಶುಕ್ರವಾರ ಕುಮಟೆಯಲ್ಲಿ ಸಭೆ ಸೇರುತ್ತಾರೆ. ಇದೇ ಪ್ರಕಾರ ಕಾರವಾರದಲ್ಲಿ ರವಿವಾರ ರಾ॥ ಗೋಪಿ-ದೇವರವರ ನಿಮಂತ್ರಣೆಯ ಮೇರೆಗೆ ಜಿಲ್ಲೆಯೊಳಗಿನ ೨೮ ಮಂದಿ ಮಹಾಜನರು ಕೂಡಿ ಆಲೋಚನೆ ಮಾಡುವವರಿದ್ದಾರೆ. ಜಂಗಲ ಇಲಾಖೆಯ ಧೋರಣವನ್ನು ತಿಳಿಯದೆ ಯಾವದೊಂದು ವ್ಯವಹಾರಿಕವಾದ ನಿರ್ಣಯ ಕೈಕೊಳ್ಳಲು ಸಾಧ್ಯವಿರುವದಾಗಿ ಎಣಿಸುವದು ತಪ್ಪು.

ಸರಕಾರವು ಗೌಪ್ಯದಿಂದ ವ್ಯವಹಾರ ಮಾಡಲು ಬಯಸಲಾಗದು. ಸಭೆಯ ಕೆಲಸವನ್ನು ಬಹಿರಂಗದಿಂದ ನಡಿಸಬೇಕೆಂದು ಸರಕಾರದ ಮನೀಷೆಯಿದ್ದರೆ ಸರಕಾರವು ಒಂದು ಪ್ರಕಟಣೆಯನ್ನು ಹೊರಡಿಸಿ ನಿಜ ಸ್ಥಿತಿಯನ್ನು ಸ್ಪಷ್ಟಗೊಳಿಸತಕ್ಕದ್ದು. ಸುಪೆಯ ಸಮ್ಮೇಲನದ ನಿರ್ಣಯಗಳಂತೆ ಮುಂಬಯಿ ಸರಕಾರವು ಹೊರಡಿಸಿದ ನಿರ್ಣಯದ ಮೇರೆಗೆ ಎಲ್ಲೆಲ್ಲಿ ಎಷ್ಟೆಷ್ಟು ಕೆಲಸ ನಡೆಯಿತು? ಅದರಿಂದ ಜನರಿಗೆ ಉಪಕಾರವೆಷ್ಟಾಯಿತು? ಜನಾವರಗಳಿಗೆ ಅಪಕಾರವೆಷ್ಟಾಯಿತು,' ಜಂಗಲ ಸಂಪತ್ತು ಎಷ್ಟು ನಷ್ಟವಾಯಿತು ' ಜಂಗಲ ಇಲಾಖೆಗೆ ಅವರ ಸೂಚನೆಯಂತೆ ಜನನಿರ್ಬಂಧಗಳನ್ನು ಏರ್ಪಡಿಸಿದಲ್ಲಿ ಜನಗಳಿಗೆ ಕಷ್ಟವೆಷ್ಟು ' ಜಂಗಲ ಇಲಾಖೆಗೆ ಇಷ್ಟವೆಷ್ಟು? ಗ್ರಾಮೋದ್ಧಾರಕ್ಕೆ ಪೋಷಕವೆಷ್ಟು ? ಅರಣ್ಯೋದ್ಧಾರಕ್ಕೆ ಘಾತಕವೆಷ್ಟು ' ಈಗಿನ ಸೂಚನೆಗಳ ಬಗ್ಗೆ ಬೇಸಾಯ ಇಲಾಖೆಯ ಅಂಬೋಣವೇನಿದೆ? ಉತ್ತರ ಕನ್ನಡ ಜಿಲ್ಲೆ ಜನ-ಪ್ರದೇಶವಾಗಿ ಉಳಿಯಬೇಕೋ ? ಜಂಗಲ ಪ್ರದೇಶವಾಗಿ ಹಬ್ಬಬೇಕೋ ? ಇವೇ ಮೊದಲಾದ ವಿಷಯಗಳನ್ನು ಸರಕಾರವು ಸ್ಪಷ್ಟ ಮಾಡಿದರೆ ಜನಮತವನ್ನು ಪ್ರದರ್ಶಿಸಲಿಕ್ಕೆ ಅನುಕೂಲವಾಗುವಂತಿದೆ. ಮುಂಬಯಿ ಸರಕಾರವು ಸಂಕಲ್ಪಿತ ಸಭೆಯನ್ನು ಸೇರಿಸುವ ಪೂರ್ವದಲ್ಲಿ ಈ ಎಲ್ಲ ಖುಲಾಸೆಯನ್ನು ಪ್ರಕಟಿಸಿದರೆ ಕೊಂಗ್ರೆಸ ಕಾರ್ಯಕರ್ತರಿಗೂ ರವಿವಾರ ಕಾರವಾರದಲ್ಲಿ ಸೇರಲಿಕ್ಕಿದ್ದ ಮಹಾಜನರಿಗೂ ಯಾವದೊಂದು ನಿರ್ಣಯವನ್ನು ಕೈಕೊಳ್ಳಲು ಅನುಕೂಲವಾಗುವದು

ಬೆಳಗಾವಿಯ ಸಭೆಯ ಕುರಿತು ಮೂಲ ತತ್ವದ ವಿಚಾರದಿಂದ ಎರಡು ಆಕ್ಷೇಪಗಳಿವೆ: ಈಗಿನ ರಾಜ್ಯಭಾರವು ಲೋಕಮತಾನುವರ್ತಿಯಲ್ಲ. ಲೋಕಮತದ ಪರಿವೆ ಹಿಡಿಯದೆ ನಿರಂಕುಶವಾಗಿ ಈಗಿನ ರಾಜ್ಯಭಾರ ನಡೆಯುತ್ತಿದೆ ಲೋಕಮತಾನುವರ್ತಿ ರಾಜ್ಯಭಾರದಲ್ಲಿ ಕೈಕೊಂಡ ನಿರ್ಣಯವನ್ನು ರದ್ದುಪಡಿಸಲಿಕ್ಕೆ ಲೋಕಮತಾಂಕಿತವಾದ ಸರಕಾರವು ಅಧಿಕಾರಾರೂಢವಾಗಬೇಕು. ಅಂದರೆ ಮಾತ್ರ ಆ ನಿರ್ಣಯವನ್ನು ರದ್ದುಪಡಿಸಲು ಸರಕಾರಕ್ಕೆ ಅಧಿಕಾರ ದೊರೆಯುತ್ತದೆ. ಇನ್ನೊಂದು ಆಕ್ಷೇಪವೇನಂದರೆ:- ಜಂಗಲ ಇಲಾಖೆಯ ಯಾವತ್ತೂ ಆಕ್ಷೇಪಗಳ ವಿಚಾರದಿಂದ ಸುಪೆಯ ನಿರ್ಣಯ ಕೈಕೊಳ್ಳಲಾಗಿತ್ತು. ಈಗ ಆ ನಿರ್ಣಯವನ್ನು ಪಾಲಿಸದೆ ಪುನರಾಲೋಚಿಸಬಯಸುವದು ಮತ್ತೂ ಒಂದು ದೊಡ್ಡ ತಪ್ಪು. ಕಾರವಾರದೊಳಗಿನ ಮಹಾಜನರಾಗಲಿ ರಾಷ್ಟ್ರೀಯ ಸಭೆಯ ಕಾರ್ಯಕರ್ತರಾಗಲಿ ಇಂಥ ಪ್ರಸಕ್ತಿಯಲ್ಲಿ ಯಾವದೊಂದು ಮನೋನಿರ್ಣಯವನ್ನು ಮಾಡಬಯಸದೆ ಲೋಕಪ್ರಮುಖರಿಗೆ ಸಾವಧಾನ ಚಿತ್ತದಿಂದ ಸಭೆಯಲ್ಲಿ ಸೇರಹೇಳಿ ಅಧಿಕಾರಿಗಳ ಧೋರಣ ಲೋಕಮತಕ್ಕೆ ವಿರುದ್ಧವಾಗುವ ಪ್ರಸಂಗದಲ್ಲಿ ಸಭೆಯನ್ನು ತ್ಯಜಿಸುವಂತೆ ಹುಕುಮು ಮಾಡುವ ಅನುಜ್ಞೆಯನ್ನು ಹೊರಡಿಸುವ ಪ್ರಸಂಗವಿರುವದೆಂದೂ ಎಣಿಸಲಾಗಿದೆ.

⁂

ಮೆಟ್ರಿಕ್ಯುಲೇಶನ ಪರೀಕ್ಷೆಯ ಕೇಂದ್ರವನ್ನು ನಮ್ಮಾ ಜಿಲ್ಲೆಯೊಳಗೆ ಸ್ಥಾಪಿಸುವದು ಈವಾಗ ಕ್ರಮಪ್ರಾಪ್ತವಾದುದು. ಮುಂಬಯಿ ವಿಶ್ವವಿದ್ಯಾಲಯದ ರಿಜಿಸ್ಟ್ರಾರರಾದ ಡಾ॥ ಡೊಂಗರಕೇರಿಯವರು ಕಾರವಾರ ತನಕ ಬಂದು ಮಹಾಜನರೊಡನೆ ವಿಚಾರವಿನಿಮಯ ಮಾಡಿದ್ದು ಪ್ರಶಸ್ತವಾಯಿತು. ಸದ್ಯಕ್ಕೆ ಕಾರವಾರದಲ್ಲಿಯೇ ಪರೀಕ್ಷೆಯ ಕೇಂದ್ರವಿಡಲು ಅನುಕೂಲ. ಯಾಕಂದರೆ ಕಾರವಾರ, ಅಂಕೋಲಾ ಕಡೆಯ ವಿದ್ಯಾರ್ಥಿಗಳೇ ಹೆಚ್ಚಾಗಿ ಮೆಟ್ರಿಕ್ಯುಲೇಶನ ಪರೀಕ್ಷೆಗೆ ಕೂಡ್ರುತ್ತಾರೆ. ಭಟಕಳ, ಹೊನ್ನಾವರ, ಕುಮಟೆಯವರಿಗೆ ಕಾರವಾರವು ಸ್ವಲ್ಪ ದೂರ ನಿಜ; ಆದರೆ ಹೇಳತಕ್ಕಷ್ಟು ದೂರವಿರುವದಿಲ್ಲ. ಶಿರ್ಶಿಯವರಿಗೆ ಕಾರವಾರಕ್ಕಿಂತ ಧಾರವಾಡವೇ ಸಮೀಪ ಆದರಿಂದ ಸದ್ಯಕ್ಕೆ ಕಾರವಾರವನ್ನೇ ಮೆಟ್ರಿಕ್ಯುಲೇಶನ ಪರೀಕ್ಷೆಯ ಕೇಂದ್ರವನ್ನಾಗಿ ಇಟ್ಟರೆ ಕಾರವಾರದಿಂದ ಭಟಕಳದ ವರೆಗಿನ ಯಾವತ್ತೂ ಹುಡುಗರಿಗೆ ಅನುಕೂಲವಾಗುವಂತಿದೆ. ಪರೀಕ್ಷೆಯನ್ನು ನಡಿಸುವಂಥ ಸಭ್ಯ, ಶಿಷ್ಟ, ವಿದ್ಯಾವಂತ ಮಹಾಜನರಿಗೆ ಕಾರವಾರದಲ್ಲಿ ಕೊರತೆಯಿಲ್ಲ. ದೊಡ್ಡ ದೊಡ್ಡ ಅಧಿಕಾರಸ್ಥಾನಗಳನ್ನು ದಕ್ಷತೆಯಿಂದ ನಡಿಸಿ ಸರಕಾರದ ಪ್ರಶಸ್ತಿಗೆ ಪಾತ್ರರಾದ ಅನೇಕ ಪೆನ್ಶನರರು ಕಾರವಾರದಲ್ಲಿ ಇರುತ್ತಾರೆ. ಅಂತೆಯೇ ಬೇರೆ ಬೇರೆ ಉದ್ದಿಮೆದಾರರೂ ವಿದ್ವಜ್ಜನರೂ ಕಾರವಾರದಲ್ಲಿರುವರು. ಕಾರವಾರದಲ್ಲಿ ಕೇಂದ್ರ ನಡಿಸಲಿಕ್ಕೆ ಯಾವತ್ತೂ ಸಾಹಿತ್ಯಗಳನ್ನು ಒದಗಿಸಿಕೊಳ್ಳಲು ಅನುಕೂಲವುಂಟು. ಮೊದಮೊದಲು ೩೦೦ ಇಲ್ಲವೆ ೩೫೦ ವಿದ್ಯಾರ್ಥಿಗಳ ಮಟ್ಟಿಗೆ ಸಾಹಿತ್ಯಗಳನ್ನು ಪೂರೈಸಿಕೊಂಡರೆ ಸಾಕು. ಆ ಮೇಲೆ ಸಾಮಾನ್ಯವಾಗಿ ೫ ವರ್ಷಗಳಲ್ಲಿ ಈ ಸಂಖ್ಯೆ ೫೦೦ಕ್ಕೆ ಏರಬಹುದು ಇಷ್ಟು ವಿದ್ಯಾರ್ಥಿಗಳ ವ್ಯವಸ್ಥೆಯನ್ನು ಕಾರವಾರದಲ್ಲಿ ಈಗಲೂ ಮಾಡಲು ಅನುಕೂಲವುಂಟು. ಕನ್ನಡ ಮುಲ್ಕಿ ಪರೀಕ್ಷೆಯ ಕೇಂದ್ರ ಕಾರವಾರದಲ್ಲಿ ಉಂಟು. ಸಾಮಾನ್ಯವಾಗಿ ೩೦೦—೪೦೦ ಹುಡುಗರು ಕಾರವಾರದಲ್ಲಿ ಪರೀಕ್ಷೆಗೆ ಕೂಡ್ರುತ್ತಾರೆ. ಇದೇ ಸಾಹಿತ್ಯ ಮೆಟ್ರಿಕ್ಯುಲೇಶನ ಪರೀಕ್ಷೆಗೆ ಸಿಗುವಂತುಂಟು. ಬರುವ ವರ್ಷವೇ ಈ ಕೇಂದ್ರದ ಏರ್ಪಾಟಾಗತಕ್ಕದ್ದು. ಅಂದರೆ ನಮ್ಮ ಜಿಲ್ಲೆಯೊಳಗಿನ ಬಡ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಹೋಗುವ ಅನಾವಶ್ಯಕ ಪ್ರವಾಸ ಮತ್ತು ಖರ್ಚು ಉಳಿಯುವಂತಿದೆ. ವಿಶ್ವವಿದ್ಯಾಲಯದವರು ಕಾಲಹರಣ ಮಾಡಕೂಡದು. ವಿದ್ಯಾರ್ಥಿಗಳ ಸಂಖ್ಯೆಯ ಮಾನದಿಂದ ನಮ್ಮಾ ಜಿಲ್ಲೆಯೊಳಗೆ ಮೆಟ್ರಿಕ್ಯುಲೇಶನ ಪರೀಕ್ಷೆಯ ಕೇಂದ್ರವಾಗಿ ೨-೩ ವರ್ಷಗಳಾಗಬೇಕಾಗಿತ್ತು

⁂

ಮುಂಬಯಿ ಸರಕಾರವು ನಮ್ಮಾ ಜಿಲ್ಲೆಯೊಳಗೆ ಚಳಿಜ್ವರದ ಹಾವಳಿಯ ಕಾರಣವನ್ನು ಕಂಡು ಹಿಡಿಯಲು ಕೈಕೊಂಡ ಉಪಕ್ರಮವನ್ನು ಕೇಳಿ ಬಹುಜನರಿಗೆ ಸಮಾಧಾನವಾಗುವದು. ಹಿಂದುಸ್ಥಾನ ಸರಕಾರದ ಕೈಕೆಳಗೆ ಚಳಿಜ್ವರದ ಸಂಶೋಧನ ಸಂಸ್ಥೆಯೊಂದಿದೆ. ಮುಂಬಯಿ ಸರಕಾರವು ಆ ಸಂಸ್ಥೆಯ ಕಾರ್ಯಕರ್ತರನ್ನು ಹಿಂದುಸ್ಥಾನ ಸರಕಾರದ ಕಡೆಯಿಂದ ಪಡೆಕೊಂಡು ನಮ್ಮಾ ಜಿಲ್ಲೆಯೊಳಗೆ ಚೌಕಶಿ ಮಾಡಬಯಸಿದೆ. ಚಳಿಜ್ವರದಿಂದ ನಮ್ಮಾ

ಜಿಲ್ಲೆಯೊಳಗೆ ಒದಗುವ ಅನರ್ಥವನ್ನು ಹೇಳತೀರದು. ಗ್ರಾಮಗಳು ನಿರ್ಜನವಾಗಲಿಕ್ಕೂ ಬೇಸಾಯ ಪ್ರದೇಶ ಬಂಜರು ಬೀಳಲಿಕ್ಕೂ ಚಳಿಜ್ವರದ ಬಾಧೆಯೇ ಮುಖ್ಯ ಕಾರಣ, ಏಕೆ, ಸರ್ವಕಾರಣ! ದಟ್ಟಡವಿ ಒತ್ತಿಬಂದದ್ದರಿಂದ ಚಳಿಜ್ವರ ಸುತ್ತುಮುತ್ತಲಿನ ಗ್ರಾಮಗಳಲ್ಲಿ ಬೇರೂರಿಕೊಂಡಿದೆಂದು ಜನಾನುಭವವುಂಟು. ಸಾಮಾನ್ಯವಾಗಿ ಪ್ರಾಜ್ಞರ ಅಭಿಪ್ರಾಯವಾದರೂ ಹಾಗೆಯೇ ಇರುತ್ತದೆ. ಈ ತನಕ ನಮ್ಮ ಮುಂಬಯಿ ಸರಕಾರವು ಈ ಕುರಿತು ಅಜಾಗ್ರತೆ ಮಾಡಿದ್ದು ಅಕ್ಷಮ್ಯ. ಜ್ವರ-ಕಾರಣ ಸಂಶೋಧಕರಿಗೆ ಸಂಪೂರ್ಣ ಶೋಧ ಮಾಡಲು ೨ ವರ್ಷಗಳು ತಗಲುವವಂತೆ. ಆ ಅವಧಿಯ ವರೆಗೆ ಸರಕಾರವು ಶೋಧಕರ ಸಂಚಾರದ ಕಡೆಗೆ ಬೊಟ್ಟು ತೋರಿಸಿ ಕೈ-ಕಾಲು ಮುದುಡಿಕೊಂಡು ಕೂಡ್ರಬಾರದು. ಸಂಶೋಧಕರ ಕಡೆಯಿಂದ ದೊಡ್ಡ ದೊಡ್ಡ ಕಾರಣಗಳನ್ನು ತ್ವರ್ಯವೇ ತಿಳಕೊಂಡು ಅವನ್ನು ಪರಿಹರಿಸಲಿಕ್ಕೆ ಕೂಡಲೆ ಯತ್ನ ಮಾಡತಕ್ಕದ್ದು. ಸಂಶೋಧಕರಿಗೆ ಪ್ರಮುಖ್ಯವಾಗಿ ಕುಗ್ರಾಮಗಳನ್ನು ಸಂಚರಿಸುವಂತೆ ಆಜ್ಞೆಯಾಗಬೇಕು. ಕೊಂಗ್ರೆಸ ಸರಕಾರದಲ್ಲಿ ಆರೋಗ್ಯ ಇಲಾಖೆಯ ಮಂತ್ರಿಗಳಾಗಿದ್ದ ಡಾ|| ಗಿಲ್ಡರರವರು ಶಿರ್ಶಿ ತಾಲೂಕಿನಲ್ಲಿ ಸಂಚರಿಸಿದಾಗ ಜರಗ್ರಸ್ತರ ಅವಸ್ಥೆಯನ್ನು ಕಂಡು ಬಹಳ ಅಚ್ಚರಿಗೊಂಡ ಸಂಗತಿ ಪ್ರಸಿದ್ಧವಿದೆ.

***

ಅಂಕೋಲೆಯಲ್ಲಿ ಹರಿಜನ ಸೇವಕ ಸಂಘದ ವಿದ್ಯಮಾನ ಆಗೇರ ಜನರ ಬಗ್ಗೆ ಒಂದು ವಸತಿಸ್ಥಾನವನ್ನು ಕಟ್ಟಿಸುವ ಆಲೋಚನೆ ನಡೆದಿದೆ. ಈಗ ೫ ಜನ ಆಗೇರ ವಿದ್ಯಾರ್ಥಿಗಳಿಗೆ ಒಂದೆಡೆ ಇಟ್ಟು ವಿದ್ಯಾಭ್ಯಾಸ ನಡಿಸಲ್ಪಡುತ್ತಿದೆ. ಹೊಸ ವಸತಿಗೃಹ ಕಟ್ಟಿಸಿದ್ದಲ್ಲಿ ವಸತಿಗೃಹಕ್ಕೆ ಸ್ಥಿರತೆಯುಂಟಾಗಿ ಒಂದು ಪ್ರಕಾರದಿಂದ ಗೌರವ ಪ್ರಾಪ್ತಿಯಾಗುವಂತಿದೆ. ಸರಕಾರದಿಂದ ದ್ರವ್ಯಸಹಾಯ ಕೇಳುವ ಹಕ್ಕು ಬರುತ್ತದೆ. ಅಂಕೋಲೆಯಲ್ಲಿ ಕಚೇರಿಯ ಹಿಂದುಗಡೆ ವಿಶಾಲವಾದ ಸ್ಥಳದಲ್ಲಿ ಹೊಸ ಕಟ್ಟಡ ಏರ್ಪಾಟಾಗಬೇಕೆಂದು ಗೊತ್ತಾಗಿದೆ. ಸರಕಾರದಿಂದ ಉಚಿತವಾಗಿ ಸ್ಥಳ ಕೊಡೋಣಾಗಿದೆ. ಈ ಕಟ್ಟಡಕ್ಕೆ ಸಾಮಾನ್ಯವಾಗಿ ರೂ. ೧೫೦೦ ಬೇಕು. ಮಹಾಜನರು ಈ ಕುರಿತು ವಿನಂತಿಪತ್ರವನ್ನು ಹೊರಡಿಸಿ ಪಟ್ಟಿ ಕೂಡಿಸುತ್ತಿದ್ದಾರೆ. ಔದಾರ್ಯವಂತರು ನೆರವಾಗಬೇಕು.

ಆಗೇರ, ಮುಕ್ರಿ ಮೊದಲಾದ ಜಾತಿಯ ಹರಿಜನರು ತೀರ ಬಡವರು. ಸಾಮಾನ್ಯವಾಗಿ ನಮ್ಮ ಜಿಲ್ಲೆಯ ಮೂಲ ನಿವಾಸಿಗಳು ಇವರೇ. ಇವರಷ್ಟು ಕಷ್ಟದ ಕೆಲಸ ಮಾಡುವ ಜಾತಿ ಬೇರೊಂದಿಲ್ಲ. ಆದರೆ ಶಿಕ್ಷಣದ ಅಭಾವ, ಹೊಲಸು ನಡೆ-ನುಡಿಗಳಿಂದ ಈ ಸಮಾಜಗಳು ಕ್ರಮವಾಗಿ ಕಳೆಗುಂದಹತ್ತಿವೆ. ಅರ್ವಾಚೀನ ಪರಿಸ್ಥಿತಿಗನುಸಾರವಾಗಿ ಅವರನ್ನು ಸುಧಾರಿಸದಿದ್ದರೆ ಈ ಸಮಾಜಗಳು ನಾಮಶೇಷವಾಗುವ ಭೀತಿಯುಂಟು. ಹರಿಜನಸೇವಕ ಸಂಘದವರು ವಸತಿಗೃಹಗಳನ್ನು ನಡಿಸಿ ಈ ಜನರ ನಡೆ-ನುಡಿಗಳನ್ನು ಸುಧಾರಿಸಲು ಯೋಜಿಸಿದ್ದಾರೆ. ವಸತಿಸ್ಥಾನಗಳು ಸುಧಾರಿಸಿದ ಕೇರಿಗಳಲ್ಲಿರುವದರಿಂದ ವಸತಿಗೃಹ-ವಾಸಿಗಳಿಗೆ ಸುಧಾರಿಸಿದ ಜನರ ಸಹವಾಸ ದೊರೆಯುತ್ತದೆ. ಹೊಲಸು ನಡೆ-ನುಡಿಗಳನ್ನು ಧಿಃಕರಿಸಲು ತಾನಾಗಿ ಬುದ್ಧಿ ಹುಟ್ಟುತ್ತದೆ. ಅಂಕೋಲೆಯಲ್ಲಿ ಹೊಸ ಕಟ್ಟಡವನ್ನು ಕಟ್ಟಿಸಿದರೆ ೨೫-೩೦ ಮಂದಿ ಹುಡುಗರನ್ನು ಜೋಪಾನ ಮಾಡಬಹುದಾಗಿ ಅಂಕೋಲೆಯ ಕಾರ್ಯಕರ್ತರು ಎಣಿಸುತ್ತಾರೆ. ದೀನ ಬಾಂಧವರು ಸಹಾಯ ಮಾಡಿ ಶ್ರೇಯಸ್ಸನ್ನು ಪಡೆಯತಕ್ಕದ್ದು.

***

ವಸತಿಗೃಹದ ವಿಚಾರ ಕಾಲದಲ್ಲಿ ಇನ್ನೊಂದು ವಿಚಾರ ಸೂಚಿಸುತ್ತದೆ. ಅಶನ-ವಸನದ ವಿಚಾರ ಮಾಡಿದರೆ ಮೇಲ್ತರಗತಿಯವರೆಂದು ಹೇಳಿಸಿಕೊಳ್ಳುವವರ ಅವಸ್ಥೆಯಾದರೂ ಬಹು ಮಟ್ಟಿಗೆ ಕುಗ್ಗಿಕೊಂಡಿದೆ. ಈ ಹುಡುಗರಿಗೆ ವಿದ್ಯಾರ್ಜನ ಮಾಡಬೇಕೆಂಬ ಲವಲವಿಕೆ ಇದೆ, ಆದರೆ ಅನುಕೂಲತೆಗಳ ಅಭಾವ. ಅನೇಕ ವಿದ್ಯಾರ್ಥಿಗಳಿಗೆ ಅಶನ-ವಸನಕ್ಕೆ ತೊಂದರೆ. ಆದರಿಂದ ಈ ವಿದ್ಯಾರ್ಥಿಗಳ ಬಗ್ಗೆ ವಸತಿಗೃಹಗಳಿರುವದು ಅಪರಿಹಾರ್ಯವಾಗಿದೆ. ಪುರಾತನ ಕಾಲದಲ್ಲಿ ಗುರುಕುಲಗಳಿದ್ದವು; ಆಶ್ರಮಗಳಿದ್ದವು; ಮಠಗಳಿದ್ದವು; ದೇವಾಲಯಗಳಿದ್ದವು. ಇವೆಲ್ಲವೂ ವಿದ್ಯಾಪ್ರಸಾರದ ಸಂಸ್ಥೆಗಳು. ಗುರುಕುಲ, ಆಶ್ರಮ, ಮಠ-ನಿವಾಸಿಗಳಿಗೆ ಅಶನ-ವಸನಗಳ ಚಿಂತೆಯಿರಲಿಲ್ಲ; ವಿದ್ಯಾರ್ಜನದ್ದೊಂದೇ ಚಿಂತೆ! ಆದರೆ ಈಗಿನ ಯುಗದಲ್ಲಿ ಈ ಧರ್ಮಸಂಸ್ಥೆಗಳು ಆ ಕೆಲಸವನ್ನು ಮಾಡುವದಿಲ್ಲ. ಅವೆಲ್ಲ ಸಾವಕಾರಿ ಸಂಸ್ಥೆಗಳಾಗಿ ಪರಿಣಮಿಸಿವೆ ಮಠಗಳಲ್ಲಾಗಲಿ ದೇವಾಲಯಗಳಲ್ಲಾಗಲಿ ವಿದ್ಯೆಯ ಪುರಸ್ಕಾರವಾಗುವದಿಲ್ಲ. ಆಗಮಶಾಸ್ತ್ರದಂತೆ ಅಮೃತಪಡಿ-ನಂದಾದೀಪ, ಉತ್ಸವಗಳನ್ನಷ್ಟು ಚಾಲಕರು ನಡಿಸಿ, ಅದೇ ತಮ್ಮ ಕರ್ತವ್ಯಪರಾಯಣತೆಯೆಂದು ಎಣಿಸಿ ಕೃತಕೃತ್ಯರಾಗುತ್ತಾರೆ; ಮಠಗಳ ಉತ್ಪತ್ತಿಯಿಂದ ಸಾವಕಾರಿ ನಡಿಸುತ್ತಾರೆ ಇಲ್ಲವೆ ದೇವರಿಗೆ ಚಿನ್ನಾಭರಣಗಳನ್ನು ಮಾಡಿಸುತ್ತಾರೆ; ಅಧವಾ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿಸುತ್ತಾರೆ. ಕಟ್ಟೋಣಗಳ ಉಪಯುಕ್ತತೆ, ಲೋಕಪ್ರಯೋಜನ, ಸಾರ್ಥಕತೆ ಇವುಗಳ ವಿಚಾರ ಅವರಿಗೆ ಹೊಳೆಯುವದಿಲ್ಲ. ಕಟ್ಟೋಣಗಳಲ್ಲಿ ವರ್ಷಾಸನ ಒಂದೆರಡು ಅನ್ನಸಂತರ್ಪಣೆ ಕಾಲದಲ್ಲಿ ಜನರು ಕೂಡಿದರೆ ಹೆಚ್ಚು. ದೇವಸ್ಥಾನಗಳ ಇಲ್ಲವೆ ಮಠಗಳ ಉತ್ಪನ್ನದ ವಿನಿಯೋಗ ಈ ಪ್ರಕಾರ ನಡೆದದ್ದರಿಂದ ಸಮಾಜಗಳಲ್ಲಿ ದೈನ್ಯ ಬೇರೂರಿಕೊಂಡಿದೆ. ಈ ಸಂಸ್ಥೆಗಳಲ್ಲಿ ಒಮ್ಮೆ ಸೇರಿದ ಹಣ ಇಲ್ಲವೆ ಆಸ್ತಿ ಪುನಃ ವಿನಿಮಯಕ್ಕೆ ದೊರೆಯುವದಿಲ್ಲ. ಅರ್ಥಶಾಸ್ತ್ರ ಸರ್ವಮಾನ್ಯ ನಿಯಮಗಳಂತೆ ಅಷ್ಟರ ಮಟ್ಟಿಗೆ "ಸಮಾಜದ ದ್ರವ್ಯಶೋಷವಾಗುತ್ತದೆ. ಹರಿಜನ ವಸತಿಗೃಹ ಸ್ಥಾಪನೆಯಿಂದ ಮೇಲ್ತರಗತಿಯ ಸಮಾಜಗಳ ಮಹಾಜನರು ಬೋಧೆಗಲಿಯಬಹುದು. ವಿದ್ಯಾರ್ಜನ ಮಾಡುವ ವಿದ್ಯಾರ್ಥಿಗಳಿಗೆ ದೇವಾಲಯದ ಇಲ್ಲವೆ ಮಠದ ಉತ್ಪತ್ತಿಗೆ ಸರಿಹೋಗುವಂತೆ ವಸನದಲ್ಲಿಲ್ಲದಿದ್ದರೂ ಅಶನದ ವ್ಯವಸ್ಥೆಯನ್ನು ಮಾಡಿದರೆ ಲೋಕೋಪಕಾರವಾಗುವಂತಿದೆ; ಧರ್ಮಪ್ರಸಾರಕ್ಕೂ ಧರ್ಮರಕ್ಷಣೆಗೂ ಅನುಕೂಲವಾಗುವಂತಿದೆ. ಧರ್ಮಗ್ಲಾನಿಯಿಂದಲೇ ಸಮಾಜಗಳು ದುರ್ದಶೆಗೀಡಾದವೆಂದು ಸಾಮಾನ್ಯವಾದ ಭಾವನೆಯುಂಟು. ಧರ್ಮವನ್ನು ರಕ್ಷಿಸಲು, ಅದೇ ಪ್ರಕಾರ ಧರ್ಮಪ್ರಸಾರ ಮಾಡಲು ಸ್ಥಾಪಿಸಲ್ಪಟ್ಟ ಧರ್ಮಸಂಸ್ಥೆಗಳು ಕರ್ತವ್ಯಪರಾಙ್ಮುಖವಾದದ್ದೇ ಧರ್ಮಗ್ಲಾನಿಯ ಮುಖ್ಯ ಕಾರಣ. ಪ್ರತಿಯೊಂದು ಸಮಾಜದವರು ತಮ್ಮ ತಮ್ಮ ಧರ್ಮ ಸಂಸ್ಥೆಗಳಲ್ಲಿ ಸಂಚಿತವಾಗಿರುವ ಹಣವನ್ನು — ಸಂಪೂರ್ಣವಲ್ಲಾದರೂ ಬಹು ಅಂಶವನ್ನು — ಸ್ವ-ಸಂಪ್ರದಾಯಕ್ಕೆ ವಿರೋಧವಾಗದಂತೆ ಅರ್ವಾಚೀನ ಪರಿಸ್ಥಿತಿಗೆ ಉಚಿತವಾಗಿ ವಿನಿಯೋಗಿಸಲು ಈಗಲೂ ವಿಚಾರ ಮಾಡಬಹುದಾಗಿದೆ.

“ಈವ್ಸ-ಡ್ರೊಪರ”ನ ಅಭಿಪ್ರಾಯ.

ಬರೀ ಹದಿನೇಳು ವರ್ಷಗಳಲ್ಲಿ ೧|| ಕೋಟಿ ರೂ.ಗಳಷ್ಟು ಜೀವನಿಧಿಯನ್ನು ಕಲೆಹಾಕಿದ ಹಾಗೂ ೪೦ ಲಕ್ಷ ರೂ.ಗಳಿಗೂ ಮಿಕ್ಕಿ ವಾರ್ಷಿಕ ಉತ್ಪನ್ನ ಪಡೆಯುವಷ್ಟು ಉತ್ತಮ ಸ್ಥಿತಿಗೆ ಬಂದು ಮುಟ್ಟಿದ, ಎರಡೇ ವರ್ಷಗಳಲ್ಲಿ ಆಡಳಿತೆಯ ಖರ್ಚಿನ ಪ್ರಮಾಣವನ್ನು ನೂರಕ್ಕೆ ೧೧ರಷ್ಟು ಇಳಿಸಿದ ಮತ್ತು ಹಿಂದುಸ್ಥಾನದ ಮುಖ್ಯ ಮುಖ್ಯ ಕೇಂದ್ರಗಳಲ್ಲಿ ತನ್ನ ಸ್ವಂತ ಮಾಲ್ಕಿಯ ಭವ್ಯ ಕಚೇರಿ-ಮನೆಗಳನ್ನು ಕಟ್ಟಿಸಿಕೊಂಡು ವೈಭವದಿಂದ ಮೆರೆಯುವ ಬೇರೆ ಆವ ಕಂಪನಿಯನ್ನೂ ನಾನು ಕಂಡಿಲ್ಲ! ಲಕ್ಷ್ಮೀ ವಿಮೆ ಕಂಪನಿಯು ನಿಜವಾಗಿಯೂ ಲಕ್ಷ್ಮೀ ದೇವಿಯ ಪ್ರೇಮಾನುಗ್ರಹವನ್ನು ಸಂಪಾದಿಸಿದೆ!

ತಾ. ೨೩-೮-೧೯೪೧ರ “ಇಂಡಿಯನ್ ಫಿನೆನ್ಸ” ಪತ್ರಿಕೆಯಿಂದ

ವರ್ಷ	ಜೀವ ನಿಧಿ	ವೆಚ್ಚದ ಪ್ರಮಾಣ
೧೯೨೪—೨೫	೬೪,೮೨೯	೬೬.೯೮
೧೯೨೯—೩೦	೧೫,೦೦,೭೮೬	೩೭.೮೭
೧೯೩೪—೩೫	೩೯,೧೩,೮೯೯	೩೫.೯೩
೧೯೩೯	೧,೨೨,೮೮,೩೯೯	೩೧.೫೭
೧೯೪೦	೧,೨೫,೨೩,೧೯೭	೨೫.೭೭

ಬೋನಸ್ಸು:- ಎಂಡೌಮೆಂಟ ವಿಮೆಗಳ ಮೇಲೆ: ೧೦೦೦ ರೂ.ಗೆ ಪ್ರತಿ ವರ್ಷ ರೂ. ೧೫.
ಅಜೀವ ವಿಮೆಗಳ ಮೇಲೆ: ೧೦೦೦ ರೂ.ಗೆ ಪ್ರತಿ ವರ್ಷ ರೂ. ೧೮

ದಿ ಲಕ್ಷ್ಮೀ ಇನ್ಸೂರನ್ಸ ಕಂಪನಿ, ಲಿ.,
ಮುಖ್ಯ ಕಚೇರಿ: ಮೆಕ್ಲಾಡ ರೋಡ, ಲಾಹೋರ.

ಮುಂಬಯಿ ಶಾಖೆ:-
“ಲಕ್ಷ್ಮೀ ಬಿಲ್ಡಿಂಗ”
ಫಿರೋಜಶಹಾ ಮೆಹತಾ ರೋಡ.

ಕಲಕತ್ತಾ, ಮುಂಬಯಿ, ಮದ್ರಾಸ, ಕರಾಚಿ, ಲಖನೌ,
(ನಿಜಾಮ) ಹೈದರಾಬಾದ, ಮೊಂಬಾಸಾ (ಬ್ರಿಟಿಶ ಪೂರ್ವ ಆಫ್ರಿಕಾ)
ಈ ಊರುಗಳಲ್ಲಿ ಶಾಖೆಗಳಿವೆ.

ಕಾನಡಾವೃತ್ತ.

ಮಿತಿ ವೃಷ ಸಂವತ್ಸರದ ಮಾರ್ಗಶೀರ್ಷ ಶು|| ೪ಥಿ, ಸೋಮವಾರ.

ಭಾರತ ಮಂತ್ರಿಗಳ ದಿಗ್ವಿಜಯ!

ಭಾರತ ಮಂತ್ರಿಗಳಾದ ಮಿ|| ಎಮೆರಿಯವರು ಸದ್ಯಕ್ಕೆ ಹಿಂದುಸ್ಥಾನಕ್ಕೆ ದಿಗ್ವಿಜಯ ಮಾಡಬಯಸುತ್ತಾರಾಗಿ "ಮುಂಬಯಿ ಕ್ರಾನಿಕಲ" ಪತ್ರಿಕೆಯ ಲಂಡನ್ನಿನ ಸುದ್ದಿಗಾರರು ಸೂಚಿಸುತ್ತಾರೆ. ಆದರೆ ಈ ಸೂಚನೆಯಿಂದ ವ್ಯವಹಾರಿಕ ರಾಜಕಾರಣಿಗಳು ಉಲ್ಹಾಸಪಡಲಾರರು. ಸತ್ಯಾಗ್ರಹಿಗಳಿಗೆಲ್ಲ ಹಿಂದುಸ್ಥಾನ ಸರಕಾರವು ಬಿಡುಗಡೆ ಮಾಡಿದ್ದು ಸಮಾಧಾನಕರ. ಆದರೆ ರಾಜ್ಯಧೋರಣದಲ್ಲಿ ಯಾವದೇ ಪ್ರಕಾರದಿಂದ ಮಾರ್ಪಾಟು ಮಾಡದೆ ಸತ್ಯಾಗ್ರಹಿಗಳನ್ನಷ್ಟೇ ಬಿಡುಗಡೆ ಮಾಡುವದರಿಂದೇನು ಪ್ರಯೋಜನ? ಸರಕಾರವು ಸತ್ಯಾಗ್ರಹಿಗಳ ಮೇಲಿನ ಪ್ರೀತಿಯಿಂದ ಸತ್ಯಾಗ್ರಹಿಗಳನ್ನು ಬಿಡುಗಡೆ ಮಾಡಲಿಲ್ಲ. ಬಂಧವಿಮೋಚನ ಪ್ರಕಟನೆಯಲ್ಲಿ ಉಲ್ಲೇಖಿಸಿದಂತೆ, ಯುದ್ಧಯತ್ನಕ್ಕೆ ಲೋಕಬೆಂಬಲವನ್ನು ಸಂಗ್ರಹಿಸುವ ದೆಸೆಯಿಂದ ಸರಕಾರವು ಸತ್ಯಾಗ್ರಹಿಗಳನ್ನು ಬಂಧನದಿಂದ ಬಿಡುಗಡೆ ಮಾಡಿದೆ. ಯುದ್ಧಯತ್ನ ಪುರಸ್ಕಾರದ ಬಗ್ಗೆ ಈವಾಗ ಮತಭೇದ ತೋರಿಬರುವದಿಲ್ಲ. ಹಿಂದವಾಸಿಗಳು ಪ್ರಯತ್ನಪೂರ್ವಕವಾಗಿ ಯುದ್ಧಯತ್ನವನ್ನು ಸಾಗಿಸಬೇಕೆಂದು ಎಲ್ಲರೂ ಒಪ್ಪುತ್ತಾರೆ; ಪ್ರಸಂಗವೇ ಅಂತಹದು! ಮಹಾಯುದ್ಧ ಜ್ವಾಲೆಗಳು ನಾಲ್ಕೂ ಬದಿಗಳಿಂದ ಕವಿದು ಬರುತ್ತಿರುವಾಗ ನಾವು ಅಲಿಪ್ತವಾಗಿ ಉಳಿಯುವದು ಅಸಾಧ್ಯವಾದ ಮಾತು. ಯುದ್ಧಯತ್ನದಲ್ಲಿ ನಾವು ಅಂತಃಕರಣಪೂರ್ವಕವಾಗಿ ಸೇರಲೇಬೇಕು; ಸೇರುವದು ಕ್ರಮಪ್ರಾಪ್ತ ನಮ್ಮ ಕರ್ತವ್ಯವುಂಟು. ನಾವು ಸ್ವಾತಂತ್ರ್ಯವಾದಿಗಳು; ಅಂದ ಮೇಲೆ ಸ್ವದೇಶ ರಕ್ಷಣೆಯ ಹೊಣೆಗಾರಿಕೆ ನಮ್ಮದೇ ಸೈ! ಸ್ವದೇಶದ ಮೇಲೆ ಬರುವ, ಬರಬಹುದಾದ ಯಾವತ್ತೂ ಅರಿಷ್ಟಗಳನ್ನು ಜೀವದ ಮೇಲಿನ ಹಂಗುತೊರೆದು ಪ್ರತಿಭಟಿಸ ಹೋಗುವದು ನಮ್ಮ ಕರ್ತವ್ಯ. ಸ್ವ-ಜನಾಂಗದ ರಕ್ಷಣಕ್ಕಾಗಿ ವೀರಶ್ರೀಭರಿತರಾಗಿ ಜರ್ಮನ-ಶತ್ರುಗಳ ಮೇಲೆ ರಶ್ಯರು ಮೈಮೇಲೆ ಬಿದ್ದು ಹೋರಾಡುವ ವೃತ್ತಾಂತವನ್ನು ನಾವು ಪ್ರತಿ ದಿನ ಓದುತ್ತಿದ್ದೇವೆ. ಅಷ್ಟೇ ನಿರ್ಧಾರದಿಂದಲೂ ಸಾಹಸದಿಂದಲೂ ವಿರಕ್ತಿಯಿಂದಲೂ ಆತ್ಮಾರ್ಪಣೆಯಿಂದಲೂ ಈ ಯುದ್ಧದೊಳಗೆ ನಾವು ಹಿಂದವಾಸಿಗಳು ಹೋರಾಡಲು ಬದ್ಧರಿದ್ದೇವೆ; ಹೋರಾಡ ಮುಂದಾಗುವದು ನಮ್ಮ ಪರಮ ಶ್ರೇಷ್ಠವಾದ ಧರ್ಮವಿದೆ. ಆದರೆ ಆ ಪ್ರಕಾರ ನಮ್ಮಲ್ಲಿ ಅಂದರೆ ನಮ್ಮ ರಾಜ್ಯಭಾರದಲ್ಲಿ ರೂಪಾಂತರವಾಗಬೇಕು. ಹಿಂದುಸ್ಥಾನ ನಮ್ಮ ಸ್ವತಂತ್ರ ಜನಾಂಗ, ಆ ಜನಾಂಗದ ಆಗುಹೋಗುಗಳು ನಮ್ಮ ಸ್ವಾಧೀನ, ಎಂಬ ಭಾವನೆ ನಮ್ಮಲ್ಲಿ ಉಂಟಾಗಬೇಕು. ಹಿಂದುಸ್ಥಾನ ಸರಕಾರದ ಪ್ರಕಟಣೆಯಲ್ಲಿ ರಾಜ್ಯಭಾರದೊಳಗಿನ ರೂಪಾಂತರದ ಕುರಿತು ಒಂದು ಅಕ್ಷರವಿಲ್ಲ. ಸತ್ಯಾಗ್ರಹಿಗಳನ್ನು ಒಮ್ಮೆಲೇ ಬಿಡುಗಡೆ ಮಾಡಿದರೆ ಜನೋತ್ಸಾಹವು ಉಕ್ಕೇರಿ ಹೋಗಿ ಸರಕಾರದ ಗೌರವಹಾನಿಯಾಗಬಹುದೆಂದು ಸರಕಾರಕ್ಕೆ ಗಾಬರಿಯಾಗಿ ಬಿಡುಗಡೆಯ ಹುಕುಮುಗಳನ್ನು ಯಾವದೊಂದೇ ದಿನ ಹೊರಡಿಸದೆ ಈ ತಿಂಗಳ ಕೊನೆಯೊಳಗೆ ಕಂತಿನಿಂದ ಹೊರಡಿಸಬೇಕೆಂದು ನಿರ್ಣಯವಾಗಿದೆ. ಈ ಕೃಪಣತನಕ್ಕೆ ಎಲ್ಲಿಯೂ ಉಪಮೆ ಸಿಗದು. ಮಹಾತ್ಮರು ನಮ್ಮಾ ಜನಾಂಗದ ಅಂತರಂಗವನ್ನು ಸ್ಫುಟ ಮಾಡಿದ್ದಾರೆಂದು ನಮ್ಮ ಅಭಿಪ್ರಾಯ. ಸತ್ಯಾಗ್ರಹದ ಕಾರಣಗಳನ್ನು ಪರಾಂಬರಿಸದೆ, ಬರೇ ಸತ್ಯಾಗ್ರಹಿಗಳನ್ನಷ್ಟೇ ಬಿಡುಗಡೆ ಮಾಡುವದರಿಂದ ತಮಗೆ ಸಮಾಧಾನವಾಗಿಲ್ಲವಾಗಿ ಮಹಾತ್ಮರು ಮರೆಮಾಜದೆ ಘೋಷಿಸಿದ್ದಾರೆ. ಪಂ|| ಜವಾಹಿರಲಾಲರು ಈಗ ಬಿಡುಗಡೆ ಹೊಂದಿದ್ದಾರಷ್ಟೇ. ಆದರೆ ಅವರು ಬಿಡುಗಡೆ ಹೊಂದುವ ಪೂರ್ವದಲ್ಲಿ ಭಾವಂದಿರಾದ ಬೆರಿಸ್ಟರ ರಣಜಿತ ಪಂಡಿತರು ಡೇರಾಡೂನ ಜೈಲಿನೊಳಗಿಂದ ಬಿಡುಗಡೆ ಹೊಂದಿದ್ದರು. Parliamentary activity ಅಂದರೆ ಕಾಯಿದೆ ಕೌನ್ಸಿಲುಗಳ ವಿದ್ಯಮಾನ ನಡಿಸತಕ್ಕ ವ್ಯವಹಾರಗಳನ್ನು ನಡಿಸದಿರುವದು ತಪ್ಪೆಂದೂ ರಾಷ್ಟ್ರೀಯ ಸಭೆಯವರು ಈಗಲಾದರೂ ಬುದ್ಧಿಗಲಿತು ಅವನ್ನು ನಡಿಸಬೇಕೆಂದೂ ಕೊಂಗ್ರೆಸ ಪಕ್ಷದ ಶ್ರೀ|| ಸತ್ಯಮೂರ್ತಿ ಪ್ರಭೃತಿ ಮುಂದಾಳುಗಳು ಆಂದೋಲನ ನಡಿಸಿದ ನೆನಪು ಓದುಗರಿಗಿರಬಹುದು. ಆ ಕುರಿತು ಕಾರಾಗೃಹದಲ್ಲಿ ಮಾತಾಡುವ ಪ್ರಸಂಗ ಬಂದಾಗ ಪಾರ್ಲಿಮೆಂಟಿನ ಅಭಾವದಲ್ಲಿ "ಪಾರ್ಲಿಮೆಂಟರಿ ಎಕ್ಟಿವ್ಹಿಟಿ'ಯ ಮಾತನಾಡುವದು ಚೇಷ್ಟೆಯೆಂದು ಪಂ|| ಜವಾಹಿರಲಾಲರು ಉದ್ಗರಿಸಿದ್ದರಾಗಿ ಬೆ|| ಪಂಡಿತರು ತಿಳಿಸುತ್ತಾರೆ. "ಪಾರ್ಲಿಮೆಂಟು" ಶಬ್ದದಿಂದ ಅನೇಕ ಅರ್ಥಗಳು ಹೊರಡುತ್ತವೆ. ಬ್ರಿಟನ್ನಿನಲ್ಲಿ ಪಾರ್ಲಿಮೆಂಟು ಅಂದರೆ ಲೋಕಪ್ರತಿನಿಧಿಗಳ ಸಭೆ; ಸಾರ್ವಭೌಮ ಸಭೆ. ಪ್ರಧಾನ ಮಂಡಳವು ಪಾರ್ಲಿಮೆಂಟಿಗೆ ಅಧೀನವಾಗಿರುತ್ತದೆ. ಅರಸರು ಆ ಪ್ರಧಾನ ಮಂಡಳದ ಸಲಹೆಯನ್ನು ಮನ್ನಿಸಿ ರಾಜದಂಡವನ್ನು ನಡಿಸುವ ಮೊದಲನೇ ಲೋಕಸೇವಕರು. ಪಾರ್ಲಿಮೆಂಟಿನ ಅಧಿಕಾರಕ್ಕೆ ಪರಿಮಿತಿಯಿಲ್ಲ. ಒಬ್ಬ ರಾಜ್ಯಘಟನಾಶಾಸ್ತ್ರವಿಶಾರದರು ಬರೆದಂತೆ ಪಾರ್ಲಿಮೆಂಟಿಗೆ ಗಂಡಸನ್ನು ಹೆಂಗಸು ಮಾಡುವ ಇಲ್ಲವೆ ಹೆಂಗಸನ್ನು ಗಂಡಸು ಮಾಡುವ ಅಧಿಕಾರ ಬಿಟ್ಟು ಯಾವತ್ತೂ ಅಧಿಕಾರಗಳಿವೆ! ಸೃಷ್ಟಿನಿಯಮಗಳೇ ಪಾರ್ಲಿಮೆಂಟಿನ ಅಧಿಕಾರಕ್ಕಿರುವ ನಿರ್ಬಂಧಗಳು! ಇಷ್ಟು ವ್ಯಾಪಕ ಅಧಿಕಾರವುಳ್ಳ ಸಾರ್ವಭೌಮ ಪಾರ್ಲಿಮೆಂಟನ್ನು ನಮ್ಮ ಪರತಂತ್ರ ಕಾಯಿದೆ ಕೌನ್ಸಿಲಿಗೆ ಹೋಲಿಸಿ, ಆ ಕಾಯಿದೆ ಕೌನ್ಸಿಲುಗಳ ಬಹಿಷ್ಕಾರದಿಂದ ರಾಷ್ಟ್ರೀಯ ಸಭೆಯವರು ಜನಹಾನಿ ಮಾಡಿದರೆಂದು ದೂರುವದು ದಡ್ಡತನ. ಪಂ|| ಜವಾಹಿರಲಾಲರು ಮೂಲ ತತ್ವವನ್ನು ಬಹು ಸೊಗಸಾಗಿ ಹೇಳಿ ಕೌನ್ಸಿಲುವಾದಿಗಳ ಅತ್ಯುತ್ಸಾಹದ ನಿರರ್ಥಕತೆಯನ್ನು ಸ್ಫುಟಗೊಳಿಸಿದ ಬಗ್ಗೆ ನಾವು ಪಂ|| ಜವಾಹಿರಲಾಲ ನೆಹರೂರವರಿಗೆ ಅಂತಃಕರಣಪೂರ್ವಕವಾಗಿ ಧನ್ಯವಾದಗಳನ್ನರ್ಪಿಸಿ ಮನದಣಿ ಹರಸುತ್ತೇವೆ. ಕಾಯಿದೆ ಕೌನ್ಸಿಲುಗಳ ಚಟುವಟಿಕೆಗಳಿಂದ ನಮ್ಮಾ ಜನಾಂಗದ ದೈನ್ಯ ಪರಿಹಾರ ಹೊಂದುತ್ತಿದ್ದರೆ ನಾವು ಸ್ವತಂತ್ರವಾಗಿ ಇಷ್ಟೊತ್ತಿಗೆ ಅರ್ಧ ಶತಮಾನವಾಗುತ್ತಿತ್ತು. ಮಹಾತ್ಮರು ಹಿಂದೊಮ್ಮೆ ಹೇಳಿದಂತೆ ನಮ್ಮ ಚಟುವಟಿಕೆಗಳೆಲ್ಲ ಕೌನ್ಸಿಲು-ಮಂದಿರದ ಹೊರಗೆ ವಿಶಾಲ ದೇಶದಲ್ಲಿಯೇ ನಡೆಯಬೇಕು; ಹೊರಪ್ರದೇಶದಲ್ಲಿ ನಾವು ಸಂಘಟಿತರಾದ ಹಾಗೆ ಕೌನ್ಸಿಲಿನೊಳಗೆ ನಮಗೆ ಬೆಲೆಯುಂಟು. ಆದರಿಂದ ಕೌನ್ಸಿಲು ಕಾರಣವನ್ನು ನಾವು ಸಂಪೂರ್ಣವಾಗಿ ಅಲಕ್ಷಿಸಿ ನಮ್ಮ ರಾಜಕಾರಣವನ್ನು ನಡಿಸತಕ್ಕದ್ದು. ರಾಜ್ಯಭಾರದ ಮೂಲ ಕ್ರಮವನ್ನಷ್ಟೇ ನಾವು ಲಕ್ಷದಲ್ಲಿಡಬೇಕು. ರಾಜಬಂದಿಗಳ ವಿಮೋಚನದಿಂದ ಈ ಸಮಸ್ಯೆ ಬಗೆಹರಿಯುವಂತಿಲ್ಲ. ಶ್ರೀ|| ಅಣೇ ಪ್ರಭೃತಿ ಹಿಂದುಸ್ಥಾನ ಸರಕಾರದ ನೂತನ ಸಭಾಸದರು ರಾಜ್ಯಭಾರವನ್ನು ಸುಧಾರಿಸುವ ಯೋಜನೆಯಲ್ಲಿ ತೊಡಗಿದ್ದಾರಾಗಿ ಸುದ್ದಿಗಾರರು ಹೇಳುತ್ತಾರೆ. ರಾಷ್ಟ್ರೀಯ ಸಭೆಯವರೊಡನೆ ಸಮಾನಸ್ಕಂಧ ನಾತೆಯಿಂದ ಮಧ್ಯಸ್ಥಿಕೆ ನಡಿಸಲು ಅನುಕೂಲವಾಗಬೇಕೆಂದು ರಾಜಬಂದಿಗಳಿಗೆ ಬಿಡುಗಡೆಯಾಗಿರುವದಂತೆ. ವರ್ಧಾದಲ್ಲಿ ಇಲ್ಲವೆ ಬಾರ್ಡೋಲಿಯಲ್ಲಿ ಕಾರ್ಯಕಾರಿ ಮಂಡಳದ ಸಭೆಯನ್ನು ರಾಷ್ಟ್ರಪತಿಯ ಅಧ್ಯಕ್ಷರಾದ ಮೌ|| ಅಬುಲ ಕಲಮ ಅಝಾದರವರು ಸದ್ಯಕ್ಕೆ ಸೇರಿಸಿ ವಿಚಾರ ಮಾಡಬಹುದು. ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಸಭೆಯನ್ನೂ ರಾಷ್ಟ್ರಪತಿಗಳು ಸೇರಿಸಬಹುದು. ಇದೇ ಸಮಯ ಭಾರತ ಮಂತ್ರಿಗಳಾದ ಮಿ|| ಎಮೆರಿಯವರು ಹಿಂದುಸ್ಥಾನದ ಸಮಸ್ಯೆಯನ್ನು ಬಿಡಿಸಲೋಸುಗ ಹಿಂದುಸ್ಥಾನಕ್ಕೆ ದಿಗ್ವಿಜಯ ಬೆಳೆಸುವವರಿದ್ದಾರಂತೆ! ರಾಜ್ಯಭಾರದಲ್ಲಿ ಮಾರ್ಪಾಟ ಮಾಡುವ ಸಮಯ ಭಾರತ ಮಂತ್ರಿಗಳಂಥ ಮಹಾಪ್ರಧಾನರು ನಮ್ಮಾ ದೇಶಕ್ಕೆ ಸ್ವತಃ ಅನುಗ್ರಹಿಸುವದು ಇಷ್ಟವಾದುದೆಂದು ನಾವು ಒಪ್ಪುತ್ತೇವೆ; ಮತ್ತು ಅವರನ್ನು ಹೃತ್ಪೂರ್ವಕ ಸ್ವಾಗತಿಸಲು ನಾವು ಸಿದ್ಧರಿದ್ದೇವೆ. ಆದರೆ ಬರೇ ದಿಗ್ವಿಜಯದಿಂದ ನಮ್ಮಾ ಜನಾಂಗದ ಸಮಾಧಾನವಾಗದು; ಯುದ್ಧಯತ್ನಕ್ಕೆ ಲೋಕಬೆಂಬಲ ಸಹ ಪ್ರಾಪ್ತವಾಗದು. ರಾಜ್ಯಭಾರವನ್ನು ಲೋಕಾಧೀನವಾಗಿ ಪರಿಣಮಿಸಲು ಭಾರತ ಮಂತ್ರಿಗಳು ಮನೋನಿರ್ಧಾರ ಮಾಡಿಕೊಂಡು ನಮ್ಮಿತ್ತ ಕಡೆ ದಿಗ್ವಿಜಯ ಮಾಡಬರಬೇಕು. ಅಂದರೆ ಮಾತ್ರ ಭಾ. ಮಂತ್ರಿಗಳು ಇಲ್ಲಿಯ ತನಕ ಪ್ರಯಾಣ ಬೆಳೆಸಿದ್ದು ಸಾರ್ಥಕವಾದೀತು. ಸಾಮ್ರಾಜ್ಯ ಸರಕಾರದ ಸಂಕಲ್ಪದಂತೆ ಯುದ್ಧಯತ್ನಕ್ಕೆ ಪುರಸ್ಕಾರ ದೊರೆತು ಅಭೂತಪೂರ್ವವಾದ ಸಹಾಯವಾದೀತು. ಹಿಂದುಸ್ಥಾನದ ಸೇನಾಪತಿಗಳು ಆಕಾಶವಾಣಿಯಲ್ಲಿ ಸದ್ಯಕ್ಕೆ ನುಡಿದಂತೆ, ನೂರಾರು

ಹಿಂದೀಯರು ಈಗಾಗಲೇ ಸೈನ್ಯ ಇಲಾಖೆಯಲ್ಲಿ ಸೇರುತ್ತಿದ್ದಾರೆ. ಸಾಮಾನ್ಯವಾಗಿ ೩-೪॥ ಲಕ್ಷ ಜನರು ಸೈನ್ಯ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಹಿಂದುಸ್ಥಾನದೊಳಗೆ ಜನಬಲ ಅಪಾರವಾದದ್ದಿದೆ. ಇಲ್ಲಿಯ ಲೆಕ್ಕವೆಲ್ಲ ಕೋಟಿಗಳಿಂದ ಎಣಿಸುವಂತಹದು ಸದ್ಯಕ್ಕೆ ನಡೆದ ಜನಗಣತಿಯಲ್ಲಿ ನಮ್ಮಲ್ಲಿಯ ಲೋಕಸಂಖ್ಯೆ ೩೮ ಕೋಟಿಗೆ ಮಿಕ್ಕುತ್ತದೆ. ಇಂಗ್ಲಂಡ ದೇಶದಲ್ಲಿ ೪ ಕೋಟಿ ೭೦॥ ಲಕ್ಷ ಲೋಕಸಂಖ್ಯೆ ಉಂಟು. ಇವುಗಳಲ್ಲಿ ಸರಾಸರಿ ಅರ್ಧಕ್ಕೆ ಮಿಕ್ಕಿ ಜನರನ್ನು ಸೈನ್ಯ ಇಲಾಖೆಯಲ್ಲಿ ಸೇರಿಸಿಕೊಳ್ಳುವಂತೆ ಪಾರ್ಲಿಮೆಂಟಿನಲ್ಲಿ ಕಾನೂನಾಗಹತ್ತಿದೆ. ಹೆಂಗಸರಿಗೂ ಹುಡುಗಿಯರಿಗೂ ಸೈನ್ಯ ಕಾರ್ಯದಲ್ಲಿ ಸೇರಿಸಿಕೊಳ್ಳುವಂತೆ ಕಾನೂನಾಗಿದೆ. ಎಲ್ಲರೂ ಉತ್ಸಾಹದಿಂದ ಯುದ್ಧಯತ್ನವನ್ನು ನಡಿಸಿ ಸ್ವದೇಶವಾದ ಬ್ರಿಟನಿನ ಸಂರಕ್ಷಣೆಯಲ್ಲಿ ಮಗ್ನರಾಗಿದ್ದಾರೆ. ಬ್ರಿಟಿಶರಂತೆ ನಾವೂ ಯುದ್ಧಕಾರ್ಯದಲ್ಲಿ ಸೇರಬೇಕೆಂಬ ಅಭಿಮಾನ-ಆವೇಶಗಳು ನಮ್ಮಲ್ಲುಂಟು. ನಾವು ಬ್ರಿಟನಿನಂತೆ ಉತ್ಸಾಹಭರಿತರಾದರೆ ಸಹಜ ೧೯-೨೦ ಕೋಟಿ ಜನಬಲ ಈ ಯುದ್ಧಕಾರ್ಯದಲ್ಲಿ ತೊಡಗಿಸುವಂತಿರುವಾಗ ಭಾರತ ಮಂತ್ರಿ ಮಿ|| ಎಮೆರಿಯವರು ಹಿಂದುಸ್ಥಾನಕ್ಕೆ ದಿಗ್ವಿಜಯ ಮಾಡಬರುವ ಪೂರ್ವದಲ್ಲಿ ಪ್ರಧಾನ ಮಂಡಳದಿಂದ ಹಿಂದುಸ್ಥಾನದ ರಾಜ್ಯಘಟನೆಯಲ್ಲಿ ತಿದ್ದುಪಾಟ ಮಾಡಲು ಸರ್ವಾಧಿಕಾರ ಪಡೆದುಬರಬೇಕಾಗಿ ನಮ್ಮ ವಿನಂತಿಯುಂಟು. ಆ ಪ್ರಕಾರ ಅವರು ಪಡೆದುಬರುತ್ತಾರೆಂದು "ಮುಂಬಯಿ ಕ್ರೊನಿಕಲ" ಪತ್ರಿಕೆಯ ಸುದ್ದಿಗಾರರು ಗ್ರಹಿಸಿ ಉತ್ಸಾಹದಿಂದ ಈ ವಾರ್ತೆಯನ್ನು ತಿಳಿಸಿರುತ್ತಾರೆಂದು ನಮ್ಮ ನಿಶ್ಚಿತಾಭಿಪ್ರಾಯ.

ಹಿಟ್ಲರನ ಗ್ರಹಗತಿ ತಿರುಗಿತು!

[ನಿರೀಕ್ಷಕನು ಬರೆದುದು.]

ಈಗ ಬೇಕಾದರೆ ಹಿಟ್ಲರನ ಗ್ರಹಗತಿ ತಿರುಗಿತೆಂದು ಹೇಳುತ್ತಾರೆ. ಆಹುದೆಂದು ನಾನು ಒಪ್ಪುತ್ತೇನೆ. ರುಶ್ಯ ದೇಶದೊಳಗೆ ರೊಸ್ಟೋವ್ಹ ಠಾಣ್ಯವನ್ನು ಜರ್ಮನರು ವಶ ಮಾಡಿಕೊಂಡು ಕಶ್ಯಪ ದೇಶದ ಮೇಲೆ ಕಡಕೊಂಡು ಬೀಳುತ್ತಾರೆಂದು ನಾನು ಹೇಳಿದ್ದೆ. ಜರ್ಮನರ ಆರ್ಭಟವಾದರೂ ಅದೇ ಪ್ರಕಾರದ್ದಿತ್ತು. ಆದರೆ ರುಶ್ಯ-ಭಟರು ನಿಕರದಿಂದ ಪ್ರತಿಭಟಿಸಿ ಜರ್ಮನರನ್ನು ಹಿಂದೂಡಿ ರೊಸ್ಟೋವ್ಹ ಠಾಣ್ಯವನ್ನೂ ಸುತ್ತುಮುತ್ತಲಿನ ಪ್ರದೇಶಗಳನ್ನೂ ಕೈವಶ ಮಾಡಿಕೊಂಡಿರುತ್ತಾರೆ. ೪೦ ಸಾವಿರ ಜರ್ಮನರು ಈ ರಣಭೂಮಿಯಲ್ಲಿ ತೀರಿಕೊಂಡರು. ಅಪಾರ ಯುದ್ಧ ಸಾಮಗ್ರಿ ರುಶ್ಯರ ವಶವಾಯಿತು. ಮೊಸ್ಕೋ ವಿಭಾಗದಲ್ಲೂ ಸಾಮಾನ್ಯವಾಗಿ ಇದೇ ಪರಿ! ದಕ್ಷಿಣ ಟೊಲಾ ಪಾರ್ಶ್ವದಿಂದ ಮೊಸ್ಕೋಕ್ಕೆ ಅಪಾಯವುಂಟು. ಉಳಿದ ಮೂರೂ ಪಾರ್ಶ್ವಗಳಲ್ಲಿ ಜರ್ಮನರು ಹಿಮ್ಮೆಟ್ಟಿದರು. ಆದಾಗ್ಯೂ ರುಶ್ಯ-ಜರ್ಮನರ ರಣಕಂದನ ಇನ್ನೂ ಮುಗಿಯಲಿಲ್ಲ. ಇನ್ನೂ ಉಭಯತರು ವೀರಾವೇಶದಿಂದ ಆರ್ಭಟಿಸುತ್ತಿದ್ದಾರೆ. ಸಮಗ್ರ ರುಶ್ಯ ರಣಭೂಮಿಯ ಮೇಲೆ ಉತ್ತರದಿಂದ ದಕ್ಷಿಣದ ತನಕ ಘನಘೋರ ಸಂಗ್ರಾಮಗಳು ನಡೆಯುತ್ತಿವೆ. ಆದರೆ ಸಾಮಾನ್ಯವಾಗಿ ಈ ರಣಭೂಮಿಯ ಸಮಾಚಾರ ರುಶ್ಯರಿಗೇ ಅನುಕೂಲ. ನಮ್ಮ ರಾಷ್ಟ್ರಪತಿಗಳಾದ ಮೌ॥ ಆಝಾದರು ನುಡಿದಂತೆ, ಹಿಟ್ಲರನು ಮೊಸ್ಕೋ ಪಟ್ಟಣದ ಮೇಲೆ ಯಾವತ್ತೂ ವಿರೋಧವನ್ನು ಕೇಂದ್ರೀಕರಿಸುವದಕ್ಕಾಗಿ ರೊಸ್ಟೋವ್ಹ ವಿಭಾಗದೊಳಗಿಂದ ಸೈನ್ಯ ಪಥಕಗಳನ್ನು ಒಯ್ದಿರಬೇಕೆಂದು ನನ್ನದಾದರೂ ಅನುಮಾನವುಂಟು. ಹೇಗಿದ್ದಾಗ್ಯೂ ರುಶ್ಯ-ಜರ್ಮನ ಯುದ್ಧದ ಘಟನೆಗಳು ಈವಾಗ ಜರ್ಮನರಿಗೆ ಅನುಕೂಲವಿಲ್ಲ. ಉತ್ತರ ಆಫ್ರಿಕೆಯಲ್ಲಿ ಮಾತ್ರ ಜರ್ಮನರು ವಿಜಯ ಹೊಂದುತ್ತಿದ್ದಾರೆ ಸಿದಿ-ರೇಝುಗ ಠಾಣ್ಯವು ಜರ್ಮನರ ವಶವಾಯಿತು. ಇದು ಮಹತ್ವದ್ದಲ್ಲವೆಂದು ಬ್ರಿಟಿಶರ ಹೇಳಿಕೆ. ಆದರೆ ಆಫ್ರಿಕೆಯ ಯುದ್ಧಕಾರಣಕ್ಕೆ ಈವಾಗ ಕಳೆಯೇರುವದೆಂದು ನನ್ನ ಗ್ರಹಿಕೆ. ಹಿಟ್ಲರನ ಪ್ರತಿನಿಧಿಗಳಾದ ಸೇನಾಪತಿ ಗೋರಿಂಗರವರೂ ಫ್ರಾನ್ಸದ ಸರ್ವಾಧಿಕಾರಿಗಳಾದ ಸೇನಾಪತಿ ಪಿಟೇನರವರೂ ಪಾರೀಸ ಪಟ್ಟಣದ ಬಳಿ ಬಂದು ಉಗಬಂಡಿಯ ಡಬ್ಬಿಯಲ್ಲಿ ಏಕಾಂತದಿಂದ ಮಾತನಾಡಿ ಉತ್ತರ ಮತ್ತು ಪಶ್ಚಿಮ ಆಫ್ರಿಕೆಯೊಳಗಿನ ಸಮಸ್ತ ವಿಮಾನ ಠಾಣ್ಯಗಳನ್ನೂ ನೌಕಾ ಠಾಣ್ಯಗಳನ್ನೂ ಯುದ್ಧಕಾಲದಲ್ಲಿ ಪಡೆದು ಆಫ್ರಿಕೆಯ ಸಂಗ್ರಾಮವನ್ನು ನಡಿಸತಕ್ಕದ್ದೆಂದು ಗೊತ್ತಾಗಿರುವದಂತೆ. ಫ್ರೆಂಚರ ನೌಕಾದಲ ಜರ್ಮನರಿಗೆ ಒಪ್ಪಿಸಲು ಸೇನಾಪತಿ ಪಿಟೇನರು ಒಪ್ಪದಿದ್ದದ್ದು ಸುದೈವವೆಂದು ಎಣಿಸಲಾಗಿದೆ. ಆದಾಗ್ಯೂ ಪಿಟೇನರ ಮೇಲೆ ನನಗೆ ನಂಬಿಗೆಯಿಲ್ಲ. ಅವರೀಗ ಹಿಟ್ಲರಾಧೀನರಾಗಿದ್ದಾರೆ. ಹಿಟ್ಲರನ ದಿಗ್ವಿಜಯಕ್ಕಾಗಿ ಅವರು ಸಕಲ ಸಹಾಯ ನೀಡುವರೆಂದು ನಾನು ಹೇಳಬಲ್ಲೆ. ಪಿಟೇನರ ಬೆಂಬಲದ ಮೂಲಕ ಆಫ್ರಿಕೆಯೊಳಗಿನ ಯುದ್ಧಕಾರಣ ನಡಿಸಲು ಹಿಟ್ಲರ-ಮುಸೊಲಿನಿಯವರಿಗೆ ಒಳ್ಳೇ ಅನುಕೂಲ. ಭೂಮಧ್ಯ ಸಮುದ್ರದ ಒಡೆತನ ಬ್ರಿಟಿಶರ ಸ್ವಾಧೀನವಿರುವದರಿಂದ ಹಿಟ್ಲರ-ಮುಸೊಲಿನಿಯವರಿಗೆ ಆಕಾಶಮಾರ್ಗದಿಂದಲೇ ಆಫ್ರಿಕೆಯ ರಣರಂಗವನ್ನು ನಡಿಸುವ ಪ್ರಸಂಗವುಂಟು. ಹಿಟ್ಲರ--ಮುಸೊಲಿನಿಯವರು ಪೂರ್ವಾಭಿಮುಖವಾಗಿ ಒತ್ತಿಬರುತ್ತಿದ್ದಾರೆ. ಇಜಿಪ್ತ ದೇಶದ ಮೇಲೆ ಸಾಗಿಹೋಗಬೇಕೆಂಬ ಲವಲವಿಕೆ ಇವರಿಗುಂಟು. ಅಲ್ಲಿಂದ ತುರ್ಕಸ್ತಾನವನ್ನು ಒತ್ತಬೇಕೆಂಬ ಆಲೋಚನೆ ಸಹ ಉಂಟು. ತುರ್ಕಸ್ತಾನದಲ್ಲಿ ಜರ್ಮನರನ್ನು ಪ್ರತಿಭಟಿಸುವ ದೆಸೆಯಿಂದ ಅಮೇರಿಕೆಯ ಸರಕಾರವು ದೊಡ್ಡ ದೊಡ್ಡ ತೋಫುಗಳನ್ನೂ ಇತರ ಶಸ್ತ್ರಾಸ್ತ್ರಗಳನ್ನೂ ಕಳಿಸುವ ನಿರ್ಧಾರ ಮಾಡಿದೆ ಬಹಳ ರಣಸಾಹಿತ್ಯ ತುರ್ಕಸ್ತಾನಕ್ಕೆ ಕಳ್ಸಿದ ಸುದ್ದಿಯುಂಟು ಜರ್ಮನರನ್ನು ಪ್ರತಿಭಟಿಸಬೇಕಾದರೆ ಯುದ್ಧಸಾಹಿತ್ಯದ ಕೊರತೆಯಾಗಿದೆಂದು ತುರ್ಕ ಸರಕಾರವು ಬ್ರಿಟನ-ಅಮೇರಿಕೆಯವರಿಗೆ ತಿಳಿಸಿದ್ದರಿಂದ ಯುದ್ಧಸಾಹಿತ್ಯ ತುರ್ಕಸ್ತಾನಕ್ಕೆ ರವಾನೆಯಾಗುತ್ತದಂತೆ. ಇದಲ್ಲದೆ ಈ ಪೂರ್ವ ಪಾರ್ಶ್ವದಲ್ಲಿ ಜರ್ಮನರನ್ನು ಪ್ರತಿಭಟಿಸಲು ಯಾರ್‍ಯಾರಿಗೆ ಏನೇನು ಸಾಹಿತ್ಯ ಬೇಕೆಂಬದರ ಕುರಿತು ಚೌಕಶಿ ಮಾಡಿ ವರದಿಗಳನ್ನೊಪ್ಪಿಸಲು ಅಮೇರಿಕೆಯ ಅಧ್ಯಕ್ಷರಾದ ರೂಝುವೆಲ್ಟರು ಮಿ|| ಟ್ಯುಲಿಟರವರಿಗೆ ಸ್ವಂತ ಪ್ರತಿನಿಧಿಗಳಾಗಿ ನೇಮಿಸಿ ಆ ಪ್ರದೇಶದಲ್ಲಿ ಸಂಚಾರಕ್ಕೆ ಕಳುಹಿದ್ದಾರೆ. ಅದರಿಂದ ಆಫ್ರಿಕೆಯ ರಣರಂಗ ಸದ್ಯಕ್ಕೇ ಉಗ್ರ ರೂಪ ಧರಿಸಬಹುದು

ಜಪಾನದ ರಾಜಕಾರಣದ ಮಟ್ಟೇನೆಂದು ನನಗೆ ಗ್ರಹಿಕೆಯಾಗಲೊಲ್ಲದು. ಅಮೇರಿಕೆಗೂ ಜಪಾನಕ್ಕೂ ಸದ್ಯಕ್ಕೇ ಯುದ್ಧಘೋಷಣೆಯಾಗುವದಾಗಿ ಸರ್ವರೂ ಯೋಚಿಸಿ ಚಿಂತಾತುರರಾಗಿದ್ದರು. ಉಭಯ ಜನಾಂಗಗಳಲ್ಲಿ ಸಂಧಿಯಾಗಲು ಸಮಾನ ಭೂಮಿಕೆಯೇ ಇಲ್ಲ. ಚೀನದೊಳಗಿನ ಕಲಹದಲ್ಲಿ ಇತರ ಜನಾಂಗಗಳಿಗೆ ಸಂಬಂಧವಿಲ್ಲವಾಗಿ ಜಪಾನದ ಹಟ; ಚೀನದೊಳಗಿಂದ ಜಪಾನ ಸರಕಾರವು ಸೈನ್ಯ ಪಥಕಗಳನ್ನು ಹಿಂಗರಿದುಕೊಳ್ಳಬೇಕಾಗಿ ಅಮೇರಿಕೆಯ ನಿಗ್ರಹ! ಸಿಂಗಾಪುರ, ಫಿಲಿಪ್ಪಾಯಿನ, ಆಸ್ಟ್ರೇಲಿಯಾ, ಜಾವಾ, ಸುಮಾತ್ರಾಗಳಲ್ಲಿ ನಡಿಸಿದ ಸೈನ್ಯ ತಯಾರಿಯನ್ನು ನಿಲ್ಲಿಸಬೇಕಾಗಿ ಜಪಾನದ ಅಂಬೋಣ; ಫ್ರೆಂಚ-ಇಂಡೋ-ಚೀನ ಪ್ರದೇಶದಲ್ಲಿ ಜಪಾನ ಸರಕಾರವು ನಡಿಸಿದ ಸೈನ್ಯ ಸಂಗ್ರಹವನ್ನು ನಿಲ್ಲಿಸತಕ್ಕದ್ದೆಂದು ಅಮೇರಿಕೆಯವರ ಅಂಬೋಣ!! ಹೀಗೆ ಪರಸ್ಪರ ವಿರೋಧವಾದ ಪರಸ್ಪರ ಘಾತಕವಾದ ಹೇಳಿಕೆ-ಕೇಳಿಕೆಗಳು ಉಭಯ ಜನಾಂಗಗಳಲ್ಲಿ ನಡೆದಿರುವಾಗ, ಉಭಯತರು ಶಾಂತ ರೀತಿಯಿಂದ ಉಳಿಯುವ ಸಂಭವ ನನಗೇನು ಕಾಣುವದಿಲ್ಲ. ಅಮೇರಿಕೆಯೊಳಗಿನ ಜಪಾನದ ರಾಯಭಾರಿ ನೊಮೂರಾರವರು ನುಡಿದಂತೆ ಯುದ್ಧವು ಯಾರಿಗೂ ಬೇಡವೆಂದು ನನಗಾದರೂ ಅನಿಸುತ್ತದೆ. ಆದರೆ ಪರಹಿತಘಾತಮಾಡಿ ಸ್ವಾರ್ಥವನ್ನು ಸಾಧಿಸುವವರಿಗೆ ಯುದ್ಧ ತಪ್ಪುವ ಬಗೆ ಹೇಗೆ? ಆದಾಗ್ಯೂ ಜಪಾನ-ಅಮೇರಿಕೆಗಳೊಳಗೆ ರಾಯಭಾರ ಇನ್ನೂ ನಡೆಯುತ್ತಲಿದೆ. ಜಪಾನ ಸರಕಾರವು ಇನ್ನು ಮುಂದೆ ಇಂಡೋ-ಚೀನಕ್ಕೆ ಸೈನ್ಯಪಥಕಗಳನ್ನು ರವಾನಿಸಲಿಕ್ಕಿಲ್ಲವಾಗಿ ಜಪಾನದ ರಾಯಭಾರಿಗಳು ಇಂಡೋ-ಚೀನದ ಗವ್ಹರ್ನರರಿಗೆ ಕಂಡು ತಿಳಿಸಿದ್ದಾರಂತೆ. ಆದರೆ ಈಗಲೇ ಅಲ್ಲಿ ೧॥ ಲಕ್ಷಕ್ಕೆ ಮಿಕ್ಕಿ ಜಪಾನದ ಸೈನ್ಯಬಲವಿದೆ ಇದೇ ವಿಪರೀತವಾದದ್ದು. ಜಪಾನದ ಪ್ರಧಾನ ಮಂಡಳವು ಸೋಮವಾರ ಅಗತ್ಯದ ಸಭೆ ಸೇರಿಸಿ ಆಲೋಚನೆ ಮಾಡಿತಂತೆ. ಅದೇ ದಿನ ಜಪಾನದ ಸೈನ್ಯಾಧಿಕಾರಿಗಳೊಬ್ಬರು ಟೋಕಿಯೋದಲ್ಲಿ ಭಾಷಣ ಮಾಡಿ ಜಾವಾ, ಸುಮಾತ್ರಾ ಪ್ರದೇಶವನ್ನು ನುಚ್ಚುನೂರು ಮಾಡಲಿಕ್ಕೆ ಜಪಾನ ಸರಕಾರಕ್ಕೆ ಅವಧಿ ಬೇಡ; ಬ್ರಿಟಿಶರು ಇವರಿಗೆ ಸಹಾಯ ನೀಡುವರೆಂದು ತಿಳಿಯುವದು ಭ್ರಮೆ; ಅಮೇರಿಕೆಯವರೇ ತಮಗೆ ಅಡ್ಡಗಟ್ಟಬೇಕು; ಹೀಗೆ ಉದ್ಗರಿಸಿದ್ದುಂಟು. ಇಂಥ ಪ್ರಸಕ್ತಿಯಲ್ಲಿ ಜಪಾನ-ಅಮೇರಿಕೆಗಳೊಳಗೆ ಸೌಹಾರ್ದವಾಗುವದೆಂದು ನಾನು ಹೇಳಲಾರೆ. ಸಿಂಗಾಪುರದಲ್ಲಿ ಯುದ್ಧ-ಪರಿಸ್ಥಿತಿಯ ಘೋಷಣೆ ಮಾಡಲಾಗಿದೆ. ಸ್ವಯಂಸೇವಕರಿಗೂ ವಿಮಾನ ದಲಗಳಿಗೂ ನೌಕಾ ದಲಗಳಿಗೂ ಯುದ್ಧಕ್ಕೆ ಸಿದ್ಧರಾಗಿರಬೇಕೆಂದು ರಾಜಾಜ್ಞೆ ಹೊರಟಿದೆ. ರಜೆ ಕೊಂಡ ನೌಕಾದಲದವರಿಗೆಲ್ಲ ಕೂಡಲೆ ಕೆಲಸದ ಮೇಲೆ ಹಾಜರಾಗಲು ಅಪ್ಪಣೆ ಹೊರಟಿದೆ. ೩೫ ಸಾವಿರ ಟನ್ನಿನ 'ಪ್ರಿನ್ಸ ಆಫ್ ವೇಲ್ಸ' ಎಂಬ ಪ್ರಚಂಡ ಯುದ್ಧಹಡಗು ಪಡೆ ಲಂಡನಿನಿಂದ ಸಿಂಗಾಪುರಕ್ಕೆ ಕಳಿ

(೯ನೇ ಪುಟದ ಮೇಲೆ ಮುಂದರಿಸಿದೆ.)

ಸ್ಥಾನಿಕ ವೃತ್ತಾಂತ.

ಕುಮಟಾ —— ಕೆಲವೊಂದು ಅದ್ಭುತ ಸ್ಥಾನಗಳಲ್ಲಿ ಎಲ್ಲ ಋತುಗಳು ಒಟ್ಟಿಗೆ ಕಾರ್ಯ ಮಾಡುತ್ತಿವೆಯೆಂಬ ವರ್ಣನೆಯನ್ನು ಕೆಲವೊಂದು ಅದ್ಭುತರಮ್ಯ ಕಾದಂಬರಿಗಳಲ್ಲಿ ನಾವು ಓದುತ್ತೇವೆ ಇದೀಗ ನಮ್ಮ ಕರಾವಳಿಯಲ್ಲಿ ಇದೇ ಬಗೆಯ ಸ್ಥಿತಿಯುಂಟಾಗಿದೆ! ಕಳೆದ ವಾರದ ಪ್ರಾರಂಭಕ್ಕೆ ಒಂದೆರಡು ದಿನ ಚಳಿ ಬಿದ್ದಿತು, ಬುಧವಾರ, ಗುರುವಾರ ಸಾಧಾರಣ ಮಳೆ ಸುರಿಯಿತು, ಈಗ ಒಂದೆರಡು ದಿನಗಳಿಂದ ಬಹಳ ಸೆಕೆಯಾಗುತ್ತಿದೆ! ಈ ವಿಚಿತ್ರ ಹವೆಯ ಮೂಲಕ ಊರಲ್ಲಿ ತರತರದ ಬೇನೆ ಬೇಸರಿಕೆಗಳು ತಲೆದೋರಹತ್ತಿವೆ ಪೇಟೆಯಲ್ಲಿ ಧಾನ್ಯ ದವಸಗಳ ಧಾರಣೆಗಳು ಏರಲಾರಂಭಿಸಿವೆ ಮುಂಬಯಿಯಲ್ಲಿ ದರಗಳು ಏರಿದ್ದೇ ಇದಕ್ಕೆ ಕಾರಣ

ಜಿಲ್ಲಾ ಕೊಂಗ್ರೆಸ ಕಮಿಟಿಯ ಉಪಾಧ್ಯಕ್ಷರೂ ಇತ್ತ ಒಂದು ವರ್ಷದಿಂದ ಜಿಲ್ಲೆಯ ಕೊಂಗ್ರೆಸ ಕಾರ್ಯದ ನಾಯಕರೂ ಆಗಿದ್ದ ರಾ। ತಿಮ್ಮಪ್ಪ ಶ್ರೀನಿವಾಸ ನಾಯಕರವರು ಇದೇ ಬರುವ ತಾ ೧೩ನೇ ಶನಿವಾರ ಸಂಜೆ ಇಲ್ಲಿಯ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ ಮುಂದಿನ ಪಟಾಂಗಣದಲ್ಲಿ ಯುದ್ಧ ವಿರೋಧಿ ಘೋಷಣೆ ಮಾಡಿ ಸತ್ಯಾಗ್ರಹ ಮಾಡುವವರಿದ್ದಾರೆ ಈ ಸಂಗತಿಯನ್ನು ಅವರು ಮುಂದಾಗಿ ಜಿಲ್ಲಾಧಿಪತಿಗಳಿಗೆ ತಿಳಿಸಿದ್ದಾರಂತೆ

ಪ್ರಾಯಸ್ಥ ಸ್ವಾತಂತ್ರ್ಯ-ಭಕ್ತರೂ ಕೊಂಗ್ರೆಸ ಅಭಿಮಾನಿಗಳೂ ತಾವಾಗಿ ಮುಂದೆ ಬಂದು ಬೇಗನೇ ಹಿಂದೀ ರಾಷ್ಟ್ರೀಯ ಸಭೆಯ ಪ್ರಾಥಮಿಕ ಸದಸ್ಯರಾಗಬೇಕಾಗಿ ಈ ತಾಲೂಕಿನ ಕೊಂಗ್ರೆಸ ಸಂಘಟಕರಾದ ರಾ। ಲಕ್ಷ್ಮಣ ಸುಬ್ರಾಯ ಕಾಮತ ಇವರು ಬಿನ್ನವಿಸುತ್ತಾರೆ ಕೊಂಗ್ರೆಸ ಸ್ವಯಂಸೇವಕರಾಗಲಿ ಕೆಲಸಗಾರರಾಗಲಿ ತಮಗೆ ಸದಸ್ಯರನ್ನಾಗಿ ಮಾಡಲು ತಾವಿದ್ದಲ್ಲಿಗೆ ಬರುವರೆಂದು ಯಾರೂ ಹಾದಿ ನೋಡಬಾರದು ಹೀಗೆ ಸದಸ್ಯರಾಗಬಯಸುವವರು ಇಲ್ಲಿಯ ಖಾದಿ ಭಾಂಡಾರದಲ್ಲಾಗಲಿ ಸಂಘಟಕರ ಕಚೇರಿಯಲ್ಲಾಗಲಿ ಹೋಗಿ ತಮ್ಮ ಹೆಸರುಗಳನ್ನು ಸದಸ್ಯರ ಯಾದಿಯಲ್ಲಿ ನೋಂದಿಸಿಕೊಳ್ಳಬಹುದೆಂದೂ ರಾ ಕಾಮತರು ತಿಳಿಸುತ್ತಾರೆ

೧೯೩೮ನೇ ಇಸವಿಯ ಮೇ ತಿಂಗಳ ತಾ ೨೧ನೇಗೆ ಮುಂಬಯಿ ಸರಕಾರದ ಕಂದಾಯ ಮಂತ್ರಿಗಳಾದ ನಾ॥ ಮುರಾರಜಿ ದೇಸಾಯಿಯವರ ಅಧ್ಯಕ್ಷತೆಯಲ್ಲಿ ಸುಪೆಯೊಳಗೆ ಸೇರಿದ ಜಿಲ್ಲಾಧಿಕಾರಿಗಳ ಹಾಗೂ ಜಿಲ್ಲಾ ಪ್ರಮುಖರ ಸಭೆಯಲ್ಲಿ ನಮ್ಮ ಜಿಲ್ಲೆಯ ಒಕ್ಕಲಿಗರಿಗೂ ರೈತರಿಗೂ ಕೆಲವೊಂದು ಸವಲತ್ತುಗಳೂ ಅನುಕೂಲತೆಗಳೂ ಕೊಡಲ್ಪಡಬೇಕೆಂದು ನಿರ್ಣಯವಾಗಿತ್ತಷ್ಟೇ ಆ ನಿರ್ಣಯದ ಪುನರ್ವಿಚಾರ ಮಾಡಲು ಇದೇ ಬರುವ ತಾ ೧೬ನೇಗೆ ಸರಕಾರದವರು ಬೆಳಗಾಂವದೊಳಗೆ ಒಂದು ಸಭೆಯನ್ನು ಕರೆದಿರುತ್ತಾರೆಂದು ನಂಬಲರ್ಹವಾದ ಸುದ್ದಿಯಿದೆ ಸಭೆಯ ಅಧ್ಯಕ್ಷತೆಯನ್ನು ಮುಂಬಯಿಯ ಪ್ರಾಂತಾಧಿಪತಿಗಳ ಓವರ್ ಸಲಹೆಗಾರರಾದ ಶ್ರೀ॥ ಮದನರವರು ವಹಿಸುವರಂತೆ ಈ ಸಭೆಗೆ ಅಧಿಕಾರಿಗಳಂತೆ ಹಲಕೆಲವು ಅಧಿಕಾರೇತರ ಲೋಕ-ಪ್ರಮುಖರನ್ನೂ ನಿಮಂತ್ರಿಸಲಿರುವರಾಗಿ ವಾರ್ತೆಯುಂಟು ಆದರೆ ಹೀಗೆ ನಿಮಂತ್ರಿಸಲ್ಪಡುವ ಲೋಕ ಪ್ರಮುಖರ್ಯಾರೆಂದು ತಿಳಿದು ಬಂದಿಲ್ಲ ಕಾರಣ ಸರಕಾರಕ್ಕೂ ಸದರಿ ಸಭೆಯವರಿಗೂ ಸುಪೆಯ ನಿರ್ಣಯದ ಸಂಬಂಧದಲ್ಲಿ ಲೋಕಮತವೇನುಂಟೆಂದು ನಿಶ್ಚಯಾತ್ಮಕವಾಗಿ ತಿಳಿಸಲಿಕ್ಕೂ, ಲೋಕಮತವನ್ನು ಸ್ಪಷ್ಟಪಡಿಸಲಿಕ್ಕೂ ಒಂದು ಸಭೆ ಅಥವಾ ಸಮ್ಮೇಲನ ಕರೆಯುವದು ಅವಶ್ಯವೆಂದು ಭಾವಿಸಿ ಜಿಲ್ಲಾ ಲೋಕಲ ಬೋರ್ಡಿನ ಈಗಿನ ಅಧ್ಯಕ್ಷರಾದ ರಾ। ಜಿ ಆರ್ ದೇವರವರೂ ಮುಂಬಯಿ ಎಸೆಂಬ್ಲಿಯ ಸದಸ್ಯರಾದ ರಾ। ಎಮ್ ಜಿ ಗೋಪಿಯವರೂ ಇದೇ ಬರುವ ತಾ ೧೪ನೇ ರವಿವಾರ ಮಧ್ಯಾಹ್ನ ೩ ಘಂಟೆಗೆ ಕಾರವಾರದೊಳಗಿನ ಜಿಲ್ಲಾ ಲೋಕಲ್ ಬೋರ್ಡ ಕಚೇರಿಯಲ್ಲಿ ಜಿಲ್ಲಾ ಪ್ರಮುಖರ ಒಂದು ಸಭೆಯನ್ನು ಕರೆದಿರುತ್ತಾರೆ ಜಿಲ್ಲೆಯೊಳಗಿನ ಯಾವತ್ತೂ ಕೌನ್ಸಿಲ್-ಎಸೆಂಬ್ಲಿಗಳ ಸದಸ್ಯರಿಗೂ, ಹಲಕೆಲವು ಕೊಂಗ್ರೆಸ ಮುಂದಾಳುಗಳಿಗೂ, ಜಂಗಲ ಇಲಾಖೆಯ ಕಾರ್ಯನೀತಿಯಿಂದ ರೈತರಿಗೊದಗುತ್ತಿರುವ ಕಷ್ಟನಷ್ಟಗಳ ದೀರ್ಘ ಅಭ್ಯಾಸ ಮಾಡಿರುವ ರಾ। ಗಣಪತರಾವ ಮಾಸೂರ, ರಾ। ರಾಘವೇಂದ್ರರಾವ ಬಸರೂರ ಮೊದಲಾದವರಿಗೂ, ಬೇರೆ ಕೆಲವು ರೈತ ಮುಖಂಡರಿಗೂ ಈ ಸಭೆಗೆ ಬರಬೇಕೆಂದು ಆಮಂತ್ರಣಗಳು ಹೊರಟಿವೆ. ಈ ಸಭೆಯಲ್ಲಿ ಚರ್ಚಿಸಲ್ಪಡುವ ವಿಷಯವನ್ನೇ ಚರ್ಚಿಸಲು ಕೊಂಗ್ರೆಸ ಕಾರ್ಯವಾಹಕರಾದ ರಾ। ತಿ ಶ್ರೀ ನಾಯಕರು ಇದೇ ಬರುವ ತಾ ೧೯ನೇ ಶುಕ್ರವಾರ ಮಧ್ಯಾಹ್ನ ೩ ಘಂಟೆಗೆ ಜಿಲ್ಲಾ ಕೊಂಗ್ರೆಸ ಕಮಿಟಿಯ ಕಾರ್ಯಕಾರಿ ಸಮಿತಿಯ ಸಭೆಯನ್ನು ಇಲ್ಲಿ ಕರೆದಿರುತ್ತಾರೆ.

ಕಳೆದ ೧೦ನೆಯ ದಿನ ಕಾಗಾಲದ ಶ್ರೀ ದೇವಕಿ ಕೃಷ್ಣ ದೇವರ ಗುಡಿಯಲ್ಲಿ ಅಲ್ಲಿಯ ಗೀತಾ ಭಕ್ತರು ವಾಡಿಕೆಯಂತೆ ಗೀತಾ ಜಯಂತಿಯ ಉತ್ಸವವನ್ನು ನೆರವೇರಿಸಿದರು ಕುಮಟೆಯ ವಕೀಲ । ಗಣಪತಿ ಗಣೇಶ ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಅಂದು ಸಾರ್ವಜನಿಕ ಸಭೆಯಾಗಿ ಗೀತೆಯ ಮಹತ್ವ ಹಾಗೂ ಅದರೊಳಗಿನ ಬೇರೆ ಬೇರೆ ತತ್ವಗಳನ್ನು ಕುರಿತು ಹಲವು ಗೀತಾಭ್ಯಾಸಿ ಗೃಹಸ್ಥರ ಭಾಷಣಗಳಾದವು ಅಧ್ಯಕ್ಷ ರಾ। ಶಾಸ್ತ್ರಿಯವರು ಸಭೆಯ ಸಮಾರೋಪ ಮಾಡುವಾಗ, ಶ್ರೀಕೃಷ್ಣ ಪರಮಾತ್ಮನು ಗೀತೆಯಲ್ಲಿ ಹೇಗೆ ಜ್ಞಾನ ಕಾಂಡ ಮತ್ತು ಕರ್ಮ ಕಾಂಡಗಳ ಸಮನ್ವಯ ಮಾಡಿ, ಸಮಾಜದ ಯೋಗಕ್ಷೇಮ ಸರಿಯಾಗಿ ನಡೆಯುವಂತೆ ಕರ್ಮ ಯೋಗವನ್ನು ಬೋಧಿಸಿರುವನೆಂಬದನ್ನು ವಿಸ್ತಾರವಾಗಿ ತೋರಿಸಿಕೊಟ್ಟರು ಕೊನೆಗೆ ದೇವರ ಆರತಿ, ಪ್ರಸಾದ ಸ್ವೀಕಾರ ಮುಂತಾದವುಗಳಾಗಿ ಉತ್ಸವದ ಸಮಾಪ್ತಿಯಾಯಿತು.

ಜಂಗಲ ಇಲಾಖೆಯವರ ಜಂಗಲ-ರಕ್ಷಣೆಯ ಧೋರಣೆಯಿಂದ ಹಳ್ಳಿಗರು ಎಂತೆಂಥ ಕಷ್ಟಗಳಿಗೆ ಗುರಿಯಾಗುತ್ತಿರುವರೆಂಬುದು ಜನರಿಗೆ ಗೊತ್ತಿದ್ದಿದೆ ಇಲ್ಲಿ ಮೊನ್ನೆ ನೀಲಕೋಡ ಗ್ರಾಮದಲ್ಲಿ ಇಂತಹದೊಂದು ಕಷ್ಟ ನಿದರ್ಶನಕ್ಕೆ ಬಂದಿದೆ ನೀಲಕೋಡ ಗ್ರಾಮದ ಸುತ್ತಲೂ ಬೆಟ್ಟ ಬೆಳೆದಿದೆ ಅಲ್ಲಿ ಕುಂಬ್ರಿ ಮಾಡಲು ಪರವಾನಗಿ ಕೊಡಬೇಕೆಂದು ಹಳ್ಳಿಯ ರೈತರು ಸರಕಾರಕ್ಕೆ ಅರ್ಜಿ ಮಾಡಿದ್ದರಂತೆ ದೀರ್ಘ ಕಾಲದ ವರೆಗೆ ಅರ್ಜಿಯ ವಿಚಾರ ನಡೆದು ಕುಂಬ್ರಿ ಮಾಡಲು ಪರವಾನಗಿ ಕೊಡಬರುವದಿಲ್ಲೆಂದು ಮೊನ್ನೆಯೇ ಅಧಿಕಾರಿಗಳ ಕಡೆಯಿಂದ ಆಜ್ಞೆ ಬಂದಿದೆ! ಹಳ್ಳಿಯ ಸುತ್ತಲೂ ಬೆಟ್ಟ ಬೆಳೆದಿರುವದರಿಂದ ಹಳ್ಳಿಯ ಜನರಿಗೆ ಕಾಡು ಮೃಗಗಳ ಹಾಗೂ ಕಾಳಿಂಗ ಹಾವು ಮೊದಲಾದ ಭಯಂಕರ ವಿಷ ಪ್ರಾಣಿಗಳ ಬಾಧೆ ವಿಶೇಷವಾಗಿದೆ ಈ ಎರಡು ತಿಂಗಳಲ್ಲಿ ನೀಲಕೋಡದೊಳಗಿನ ಮೂರು ತೋಟಗಳಲ್ಲಿ ಕಾಳಿಂಗ ಹಾವುಗಳು ಬಂದಿದ್ದವು ಅವುಗಳಲ್ಲಿ ೨ ಹಾವುಗಳನ್ನು ರಾ। ಬಾಳೇರಿ ನಾರಾಯಣ ಶ್ಯಾನಭಾಗರು ಗುಂಡಿಟ್ಟು ಕೊಂದುಹಾಕಿದ್ದಾರೆ ಮೂರನೇ ಹಾವು ರಾ। ಶ್ಯಾನಭಾಗರು ಹೋಗುವಷ್ಟರಲ್ಲಿ ಅಲ್ಲೇ ಇರುವ ಗಿಡಗಂಟಿಗಳಲ್ಲಿ ಸೇರಿ ಅದೃಶ್ಯವಾಯಿತು! ಕುಂಬ್ರಿ ಮಾಡಿ ಊರ ಸುತ್ತುಮುತ್ತಲಿನ ಕೆಲವೊಂದು ಬೆಟ್ಟ ಹಸನಗೊಳಿಸಿದ್ದಲ್ಲಿ ಈ ಹಾವುಗಳ ಕಾಟ ಕಡಿಮೆಯಾಗುತ್ತಿತ್ತು, ಊರೊಳಗೆ ಹಾವಳಿ ಹಾಕುತ್ತಿರುವ ಚಳಿಜ್ವರದ ಬಾಧೆಯೂ ತಪ್ಪುತ್ತಿತ್ತು ಆದರೆ ಅಧಿಕಾರಿಗಳಿಗೆ ಈ ವಿಚಾರ ಬರುವದಿಲ್ಲ! ಬೆಟ್ಟ ಬೆಳವಣಿಗೆಯ ಮೋಹದಿಂದ ಅವರು ಮೂಢರಾಗಿದ್ದಾರೆ ಆ ಮೋಹವೆಂದು ಬಿಟ್ಟು ಹೋಗುವದೋ ದೇವರೇ ಬಲ್ಲ!

ಜಾಹೀರ ನೋಟೀಸು.

ವೆಂಕಟರಮಣ ನಾರಾಯಣ ಹೆಗಡೆ ಕಸಲೆ ಸಾಕಿನ ಕಲ್ಲಬ್ಬೆ ಇವರಿಗೆ ಪರಮೇಶ್ವರ ಈಶ್ವರ ಹೆಗಡೆ ಅಂತರವಳ್ಳಿ ಇವರು ತಿಳಿಸುವದೇನಂದರೆ—

ಕಲ್ಲಬ್ಬೆ ಗ್ರಾಮ ಸರ್ವೆ ನಂಬರ ೫೯, ೬ ಪೈ, ೧೦ ಪೈ ವಗೈರೆ ಸ್ಥಳಗಳು ನಿಮ್ಮ ಮಾಲ್ಕಿ ಹಕ್ಕಿನವಾಗಿದ್ದು ಅವನ್ನು ನನಗೆ ಐದು ವರುಷದ ಮುದ್ದತ್ತಿಗೆ ಗೇಣಿಗೆ ಕೊಟ್ಟಿದ್ದು ಸದರ ಗೇಣಿ ಮುದ್ದತ್ತಿನ ವಾಯಿದೆ ಇದೇ ಡಿಶಂಬರ ಆಖೈರಿಗೆ ಗುಜಾರ ಆಗುತ್ತದೆ. ಸದರಿ ಸ್ಥಳಗಳನ್ನು ಇನ್ನು ಮುಂದೆ ಸಾಗುವಳಿ ಮಾಡುವದು ನನ್ನಿಂದ ಸಾಧ್ಯವಿಲ್ಲವಾದ್ದರಿಂದಲೂ ಅವನ್ನು ಈ ನೋಟೀಸಿನ ಮೂಲಕ ಈ ಹೊತ್ತೇ ನಿಮ್ಮ ಕಬಜಾ ಒಪ್ಪಿಸಿರುತ್ತೇನೆ ಇನ್ನು ಮುಂದೆ ಸದರಿ ಸ್ಥಳಗಳಿಗೆ ಬೇಕಾದ ಲಾಗವಾಡ ಮುಟ್ಟಿಸಿ ಮುಂದಿನ ಉತ್ಪನ್ನ ಪಡಕೊಳ್ಳತಕ್ಕದ್ದು. ಹಾಗೆ ಮಾಡದೆ ಬುದ್ಧ್ಯಾ ನನಗೆ ಲುಕ್ಸಾನಪಡಿಸಿದಲ್ಲಿ ನನಗಾಗುವ ಯಾವತ್ತೂ ನಷ್ಟಕ್ಕೆ ನೀವೇ ಜವಾಬದಾರರಿರುತ್ತೀರಿ ತಿಳಿಯುವದು

ತಾ ೧—೧೨—೧೯೪೧

ಪರಮೇಶ್ವರ ಈಶ್ವರ ಹೆಗಡೆ, ಅಂತರವಳ್ಳಿ

NOTICE TO CONTRACTORS.

No A-31

Sealed tenders in B 1 form (Percentage rate) are invited for the work mentioned below upto 9 A M on Saturday the the 20th December 1941 on payment of Rs 2/- each form

Name of work	Estimated amount	Earnest money	Security deposit.
Constructon of quarters for the Excise Sub-inspector, Supa	Rs 5,824/-	Rs 58/-	Rs 290/-

2 For details apply to the Executive Engineer, Kanara Division, Karwar

Ex Engr's Office, Kan. Dn
Karwar, 4th December, 41

S. K. KARANDIKAR.
EXECUTIVE ENGINEER,
Kanara Division.

ಕಳೆದ ಮಂಗಳವಾರ ಉಪ್ಪಿನಪಟ್ಟಣದಲ್ಲಿ ಮುತ್ತಿ ಹೆಂಗಸೊಬ್ಬಳು ಆಕಸ್ಮಿಕವಾಗಿ ಸತ್ತಳು. ಹಂದಿಯ ಮಾಂಸ ತಿಂದು ಅಜೀರ್ಣವಾಗಿ ಸತ್ತಳೆಂದು ಅವಳ ಆಪ್ತೇಷ್ಟರ ಅಂಬೋಣ. ಬುಧವಾರ ಆಕೆಯ ಶವವು ಮರಣೋತ್ತರ ಚೌಕಶಿಗಾಗಿ ಇಲ್ಲಿಯ ಸರಕಾರಿ ಆಸ್ಪತ್ರೆಗೆ ತರಲ್ಪಟ್ಟಿತು. ಚೌಕಶಿಯಲ್ಲಿ ಅವಳ ಪ್ಲೀಹೆ ಒಡೆದು ಹೋದದ್ದು ಕಂಡು ಬಂದಿತಂತೆ. ಮೃತ ಹೆಂಗಸಿಗೂ ಗಂಡನಿಗೂ ಜಗಳವಾಗಿ ಗಂಡನು ಸಿಟ್ಟಿನ ಭರದಲ್ಲಿ ಅವಳಿಗೆ ಹೊಡೆದಿರಬೇಕೆಂದೂ ಆ ಪೆಟ್ಟಿನಿಂದ ಅವಳ ಪ್ಲೀಹೆ ಒಡೆದಿರಬೇಕೆಂದೂ ಪೋಲೀಸರ ಊಹೆ. ಪೋಲೀಸ ಅಧಿಕಾರಿಗಳು ನಿಜವಾದ ಮರಣಕಾರಣದ ಚೌಕಶಿ ನಡಿಸಿದ್ದಾರೆ

ಕಳೆದ ಸೋಮವಾರ ಮಧ್ಯಾಹ್ನ ನೆಲ್ಲಿಕೇರಿಯಲ್ಲಿ ಶಂಕರಾಚಾರಿ ಎಂಬವನ ಮನೆಗೆ ನಡುಹಗಲಿಗೆ ಬೆಂಕಿ ಬಿದ್ದು ರೂ ೨೦೦ರಷ್ಟು ನಷ್ಟವಾಗಿದೆ

ಅದೇ ಮರುದಿನ ಮಂಗಳವಾರ ಮಾಧನಗೇರಿಯಲ್ಲಿ ರಾ|| ನಾಗಪ್ಪ ಬಾಲಕೃಷ್ಣ ಪೈ ಇವರ ಅಂಗಡಿಗೆ ಮಧ್ಯರಾತ್ರಿಯ ಸುಮಾರಕ್ಕೆ ಅಕಸ್ಮಾತ ಬೆಂಕಿ ಬಿದ್ದು ಸುಮಾರು ೧೦೦೦೦ ರೂಪಾಯಿಗಳ ನಷ್ಟವಾಗಿರುತ್ತದಂತೆ. ಮನೆಯ ಜೊತೆಗೆ ದನವಿನ ಕೊಟ್ಟಿಗೆಯೂ ಸುಟ್ಟು ಬೂದಿಯಾಗಿದ್ದು, ಅದರೊಳಗಿದ್ದ ೨ ಆಕಳುಗಳು ಕೂಡ ಅಗ್ನಿನಾರಾಯಣನಿಗೆ ಆಹುತಿಯಾಗಿವೆ. ಕೊಟ್ಟಿಗೆಗೆ ನಾಲ್ಕೂ ಬದಿಯಿಂದ ಬೆಂಕಿ ಹತ್ತಿದಾಗ್ಯೂ ಒಂದು ಆಕಳ ಕರು ಮಾತ್ರ ಹೇಗೋ ಏನೋ ಹೊರಬಿದ್ದು ಜೀವ ಬದುಕಿಸಿಕೊಂಡಿದೆ! ಆಯುರ್ಬಲವೆನ್ನುತ್ತಾರೆ ಇದಕ್ಕೇ! ರಾ|| ಪೈರ ಮನೆಯಲ್ಲಿದ್ದ ೨-೪ ನೂರು ರೂಪಾಯಿಗಳ ನೋಟುಗಳು ಕೂಡ ಸುಟ್ಟು ಬೂದಿಯಾಗಿವೆಯಂತೆ. ಅದರಿಂದ ಅವರು ತೀರ ಅಸಹಾಯರಾಗಿದ್ದಾರೆ. ಧರ್ಮಾತ್ಮರಾಗಲಿ ಧರ್ಮಸಂಸ್ಥೆಗಳಾಗಲಿ ಅವರಿಗೆ ಯಥಾಶಕ್ತಿ ಸಹಾಯ ಮಾಡಬೇಕಾಗಿ ಸೂಚನೆ.

ಹೊನ್ನಾವರ— (ತಾ ೫-೧೨-೪೧) ಹ|| ಭ|| ಪ|| ಮಾರುತಿ ಬುವಾರವರ ಸಂನಾಮ ಸಪ್ತಾಹಕ್ಕೆ ಮಂಗಳವಾರದಿಂದ ಪ್ರಾರಂಭವಾಗಿದೆ. ರಾತ್ರಿ ೯ರಿಂದ ೧೧ರ ತನಕ ಅವರ ಕೀರ್ತನೆಗಳೂ ನಡೆಯುತ್ತಿವೆ. ನಾವು ಈ ವರೆಗೆ ಕೇಳಿರುವ ಕೀರ್ತನೆಗಳಿಗೂ ಈ ಕೀರ್ತನೆಗಳಿಗೂ ಬಹು ವ್ಯತ್ಯಾಸವಿದೆ. ಈ ಕೀರ್ತನೆಗಳಲ್ಲಿ ನಡು ನಡುವೆ ಭಜನೆಗಳೂ ರಾಮನಾಮ ಘೋಷವೂ ನಡೆಯುತ್ತಿವೆ. ಜನರು ಕೀರ್ತನೆ ಕೇಳುವಾಗ ಮೈಮರೆತು ಹೋಗುತ್ತಾರೆ. ಸೋಮವಾರ ತಾ ೮ನೇಗೆ ಮಹಾತ್ಮಾ ಗಾಡಗೇ ಬುವಾರವರು ಬರುವವರಿದ್ದಾರೆ. ಅಂದೇ ಸಪ್ತಾಹದ ಮಂಗಲವಾಗಲಿದೆ. ಮರುದಿನ ಊರ ಜನರಿಗೆಲ್ಲ ಅನ್ನಸಂತರ್ಪಣೆ ಕೊಡಲ್ಪಡುವದು. ಅದಕ್ಕಾಗಿ ಅನೇಕರು ಅಕ್ಕಿ, ಕಾಯಿ ಮೊದಲಾದ ಸಾಹಿತ್ಯವನ್ನು ಕೊಡಿಸುತ್ತಿದ್ದಾರೆ. ಮಂಗಳವಾರ ಗಾಡಗೇ ಬುವಾರವರ ಕೀರ್ತನೆಯಿದೆ. ಕೇಳಬೇಕೆನ್ನುವವರು ಈ ಸಂಧಿಯನ್ನು ಕಳಕೊಳ್ಳಬಾರದು.

ನಿನ್ನೆ ಸ್ವಲ್ಪ ಮಳೆ ಸುರಿಯಿತು. ಸಮುದ್ರದಲ್ಲಿ ತುಫಾನುಂಟೆಂದು ಕಸ್ಟಮ ಇಲಾಖೆಯವರು ಪ್ರಕಟನೆ ಹೊರಡಿಸಿದ್ದಾರೆ

ಕಳೆದ ತಾ ೨೪ನೇಗೆ ಪ್ರಾಧ್ಯಾಪಕ ಭಾಟೀಯವರು ಈ ಊರಿಗೆ ಬಂದಿದ್ದರು. ನ್ಯೂ ಇಂಗ್ಲಿಷ ಸ್ಕೂಲಿನಲ್ಲಿ ಅವರದೊಂದು ವ್ಯಾಖ್ಯಾನವಾಯಿತು. ಶಾಲೆಯ ಚಾಲಕರು ಹೊರಗಿನ ಜನರಿಗೆ ಈ ಸಭೆಗೆ ಕರೆಯಲಿಲ್ಲವಂತೆ! ತಮ್ಮ ಸಂಸ್ಥೆಯ ಸದಸ್ಯರಿಗಷ್ಟೇ ನಿಮಂತ್ರಿಸಿದ್ದರಂತೆ! ಅದೇಕೋ ತಿಳಿಯದು!

ಕಳೆದ ತಾ ೨೯ನೇಗೆ ಸಹಕಾರಿಸಂಸ್ಥೆಗಳ ರಜಿಸ್ಟ್ರಾರರೂ ಅ|| ರಜಿಸ್ಟ್ರಾರರೂ ಇಲ್ಲಿಗೆ ಬಂದು ಎರಡು ದಿನ ಇಲ್ಲಿ ಮುಕ್ಕಾಮು ಮಾಡಿದ್ದರು. ಅವರು ಅರ್ಬನ ಬೇಂಕಿನ ತಪಾಸಣೆಗೆ ಹೋದಾಗ ಕಾರ್ಯವಾಹಕಮಂಡಳದ ಸದಸ್ಯರ ವಿನಹ ಬೇರೆ ಯಾರಿಗೂ ಪ್ರವೇಶವಿದ್ದಿಲ್ಲ. ಬೇಂಕಿನ ಸಾಲಗಾರರಿಗೆ ಬಡ್ಡಿಯಲ್ಲಿ ಸೂಟು ಮುಂತಾದ ಸವಲತ್ತು ಕೊಟ್ಟು ಬಿಟ್ಟಬಾಕಿ ಸಾಲ ವಸೂಲ ಮಾಡಬೇಕೆಂತಲೂ, ಸಾಲಗಾರರಿಗೆ ದಸಸಲಾರದೆಂತಲೂ, ಆಡಳಿತೆಯ ಖರ್ಚಿನಲ್ಲಿ ಮಿತವ್ಯಯ ಮಾಡಬೇಕೆಂತಲೂ ಸಾಹೇಬರು ಚಾಲಕರಿಗೆ ಉಪದೇಶ ಮಾಡಿದಂತೆ ತಿಳಿಯುತ್ತದೆ. ಅದೇ ಮೇರೆಗೆ ಬೇಂಕಿನ ಲೆಕ್ಕ ಬರೆಯಲು ಲೆಕ್ಕ-ಬರವಣಿಗೆಯ ಶಾಸ್ತ್ರ ಕಲಿತು ಪರೀಕ್ಷೆ ಕೊಟ್ಟ ಕಾರಕೂನನಿಗೆ ನೇಮಿಸಿಕೊಳ್ಳಬೇಕೆಂದು ಒಂದು ಸೂಚನೆಯನ್ನೂ ಮಾಡಿದ್ದಾರಂತೆ

ಭಟಕಳ— (ತಾ ೬-೧೨-೪೧) ಇಲ್ಲಿಯ ನಗರ ಸಭೆಯ ಚಿಕಿತ್ಸಾಲಯದ ಡಾಕ್ಟರರಾಗಿರುವ ಡಾ|| ವತ್ಸರಾಜಭಯ್ಯರವರು ರಾಜೀನಾಮೆ ಕೊಟ್ಟಿರುತ್ತಾರೆಂತಲೂ, ಅವರ ಸ್ಥಳದಲ್ಲಿ ಬೆಳಗಾಂವದಿಂದ ಡಾ|| ದೇಶಪಾಂಡೇಯೆಂಬವರು ಬರುತ್ತಾರೆಂತಲೂ ವಾರ್ತೆಯುಂಟು.

ಪಾಂಡುರಂಗ ಶೇಣಗಿರಿ ಎಂಬವನು ಇಲ್ಲಿ ಗಾಂಜಾ ಮಾರುವದಕ್ಕಾಗಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಕಳ್ಳತನದಿಂದ ಗಾಂಜಾ ತರುತ್ತಿದ್ದನಂತೆ. ಉತ್ತರ, ದಕ್ಷಿಣ ಕನ್ನಡ ಜಿಲ್ಲೆಗಳ ಗಡಿಯಲ್ಲಿ ಅವನು ಅಧಿಕಾರಿಗಳ ಕೈಯಲ್ಲಿ ಸಿಕ್ಕಿದ್ದನು. ಮುಂದೆ ಕುಂದಾಪುರ ಮೆಜಿಸ್ಟ್ರೇಟರ ಎದುರಿಗೆ ಅವನ ಮೇಲೆ ಖಟ್ಲೆಯಾಗಿ ಅವನಿಗೆ ರೂ ೫೦ ದಂಡವಾಗಿರುತ್ತದಂತೆ

ತೆಂಗಿನಗುಂಡಿಯಲ್ಲಿ ಹಲವು ತಿಂಗಳಿಂದ ಸರಾಯಿ ತಯಾರಾಗುತ್ತದೆ. ಆ ಬಗ್ಗೆ ಬಹಳಷ್ಟು ಬೆಲ್ಲ ಅಲ್ಲಿ ಹೋಗುತ್ತಿದೆ, ಮತ್ತು ಅಲ್ಲಿಂದ ನಾಲ್ಕೂ ಬದಿಗೆ ಸರಾಯಿ ರಫ್ತಾಗುತ್ತಿದೆ! ಆದರೂ ಅಬಕಾರಿ ಅಧಿಕಾರಿಗಳಿಗೆ ಸರಾಯಿಯನ್ನಾಗಲಿ ಸರಾಯಿಯ ಭಟ್ಟಿಗಳನ್ನಾಗಲಿ ಸಿಗಲೊಲ್ಲವು! ಮೊನ್ನೆ ಪಟೇಲರು ಹಿಂದೆ ಕೆಲವು ಭಟ್ಟಿಗಳನ್ನು ಹಿಡಕೊಟ್ಟು ಸರಕಾರದಿಂದ ಬಹುಮಾನ ದೊರಕಿಸಿದ್ದರು. ಈಗ ಅವರು ಸುಮ್ಮನಿದ್ದಾರೆ. ಭಟ್ಟಿಗಳ ಪತ್ತೆ ಹಚ್ಚುವ ಪ್ರಯತ್ನವನ್ನು ಮಾಡುವದಿಲ್ಲ! ಮೇಲಧಿಕಾರಿಗಳಿಗೆ ವರದಿ ಕೊಡುವದಿಲ್ಲವಂತೆ! ಅಂತು ಈ ಭಾಗದಲ್ಲಿ ಮದ್ಯಪ್ರತಿಬಂಧವೆಂಬುದು ಹೆಸರಿಗೆ ಮಾತ್ರ ಜಾರಿಯಲ್ಲಿದೆ. ಸರಾಯಿಯ ಚಟವಿದ್ದವರಿಗೆ ಆ ಪ್ರತಿಬಂಧವೇನೂ ತೊಂದರೆ ಕೊಡುವದಿಲ್ಲ! ಈ ಸ್ಥಿತಿ ರಮ್ಯವೋ ಹೇಗೆಂಬುದನ್ನು ಮೇಲಧಿಕಾರಿಗಳು ಆಲೋಚಿಸಬೇಕು

ಶಿರಾಲಿ— (ತಾ ೫ ೧೨-೪೧) ವೆಂಕಟಾಪುರ ಹಾರೆಯಲ್ಲಿ ಹಾದಿ ದಾಟುವ ಪ್ರಯಾಣಕರಿಗೆ ಕಷ್ಟವಾಗುತ್ತದೆಂದು ಈ ಹಿಂದೆ ಪ್ರಕಟವಾದ ಸುದ್ದಿ ನಿಜವಲ್ಲವಾಗಿ ಎಪ್ಪರು ತಿಳಿಸುತ್ತಾರೆ. ಮೋಟಾರ ಬಂಡಿಗಳು ಜೆಟ್ಟಿಂಟ ಕೊಡುವ ಪದ್ಧತಿಯಿಟ್ಟಿರುವದರಿಂದ ಆ ಬಂಡಿಗಳೊಳಗಿನ ಪ್ರಯಾಣಕರಿಗಷ್ಟೇ ಕಷ್ಟವಾಗುತ್ತದಂತೆ. ಈಚೆ ಬದಿಯ ಪ್ರಯಾಣಿಕರು ಆಚೆ ಬದಿಯ ಬಂಡಿ ಬರುವ ತನಕ ಹಾರೆಯಲ್ಲೇ ಬಂಡಿಯ ಹಾದಿ ನೋಡುತ್ತ ಕುಳಿತುಕೊಳ್ಳಬೇಕಾಗುತ್ತದಲ್ಲದೆ ಹಾರಿ-ದೋಣಿಯ ಬಗ್ಗೆ ಯಾವ ಬಾಧೆ ಕಾಣುವ ಪ್ರಸಂಗವಿಲ್ಲವೆಂದು ಅವರ ಅಂಬೋಣ.

ಭೈರೂರ— (ತಾ. ೨೭-೧೧-೪೧) ಇಲ್ಲಿಯ ಗ್ರಾಮಪಂಚಾಯತಿಯ ಕಚೇರಿಯ ಕಥೆ ಬಹಳ ಚೆಂದವು. ಕಾರ್ಯದರ್ಶಿಗಳು ಬಂದಾಗ, ಕಚೇರಿಯ ಬಾಗಿಲು ತೆರೆದಾಗ ಕಚೇರಿ! ಇಲ್ಲವಾದರೆ ಕಚೇರಿಗೆ ಬೀಗ! ಕಾರ್ಯದರ್ಶಿಗಳು ಸರಪಂಚರ ಮಾತಿಗೂ ಬೆಲೆ ಕೊಡುವದಿಲ್ಲವಂತೆ! "ನನ್ನನ್ನು ನೇಮಿಸಿದವರು ಸರಕಾರದವರು. ನೀವ್ಯಾಕೆ ನನಗೆ ಅಪ್ಪಣೆ ಮಾಡುವವರು ?" ಎಂದು ಅವರು ಕೇಳುತ್ತಾರಂತೆ! ಕಾರ್ಯದರ್ಶಿಗಳ ಈ ಉಚ್ಛೃಂಖಲ ವೃತ್ತಿಯ ಮೂಲಕ ಪಂಚಾಯತಿಯ ಕೆಲಸ ಸಾಗುವದೇ ಇಲ್ಲ! ಈ ಸ್ಥಿತಿ ಸುಧಾರಿಸಲು ಭಟಕಳ ಪೇಟೆಯ ಮಾಮಲೇದಾರರಿಗೂ ಸಾಧ್ಯವಾಗಲಿಲ್ಲೆಂದು ತಿಳಿದುಬರುತ್ತದೆ. ಜಿಲ್ಹಾಧಿಕಾರಿಗಳೇ ಇದನ್ನು ಸುಧಾರಿಸಬೇಕು

ಶಿರಸಿ— (೪-೧೨-೪೧) ೧೦-೧೨ ದಿನಗಳಿಂದ ಸುಬ್ಬಳ್ಳಿಯವನೊಬ್ಬನು ಈ ಊರಿಗೆ ಬಂದು ಪೇಟೆಯಲ್ಲಿ ಅನೇಕರನ್ನು ಬೋಲ್ ಬೊಕ್ಸ ಮತ್ತು ನಂಬರ ಪಾಟಿಂಗ (ಅಂಕಿಗಳ ಮೇಲೆ ಗುರಿಯಿಟ್ಟು ಹೊಡೆಯುವದು) ಎಂಬ ಎರಡು ಜೂಜಾಟಗಳನ್ನು ಹಚ್ಚಿದ್ದಾನೆ. ಜನರು ಗುಂಪುಗಟ್ಟಿ ಆಟ ನೋಡಲು ಮತ್ತು ದುಡ್ಡು ಹಾಕಲು ಅವನ ಆ ಪೇಡಿಯ ಸುತ್ತಲೂ ನೆರೆಯುತ್ತಾರೆ! ದಿನಾಲೂ ನೂರಾರು ರೂಪಾಯಿಗಳ ಸುಲಿಗೆಯಾಗುತ್ತದೆ. ಈ ಬಗ್ಗೆ ಅಧಿಕಾರಿಗಳ ಕಡೆ ದೂರಿಕೊಂಡರೆ ಅವರು ಕಿವಿಗೊಡುವದಿಲ್ಲ! ಸುಬ್ಬಳ್ಳಿಯವನು ಈ ಆಟಗಳನ್ನು ಆಡಬಹುದಾದರೆ ತಾವೂ ಏಕೆ ಆಡಬಾರದು ಎಂದು ಆಲೋಚಿಸಿ ಇಲ್ಲಿಯವರೇ ಇಬ್ಬರು ಅಂಥವೇ ಆಟಗಳನ್ನು ಆಡಲು ಪರವಾನಗಿ ಬೇಡಿದ್ದರಂತೆ. ಅವರ ಆ ಜೂಜಾಟಗಳಲ್ಲಿ ಸ್ಪರ್ಧೆಯಾಗುತ್ತಿರುವದರಿಂದ ಪರವಾನಗಿ ಕೊಡಲು ಬರುವದಿಲ್ಲವಾಗಿ ಅಪ್ಪಣೆ ಸಿಕ್ಕಿತಂತೆ! ಇದೆಂಥ ಚೋದ್ಯವೆಂದು ಅರ್ಜಿದಾರರು ಚೌಕಸಿ ಮಾಡಲಾಗಿ ಸುಬ್ಬಳ್ಳಿಯವನು ಯುದ್ಧ ನಿಧಿಗೆ ರೂ ೫೦ ಕಾಣಿಕೆಯಾಗಿ ಕೊಟ್ಟಿದ್ದರಿಂದ ಅವನಿಗೆ ಪರವಾನಗಿ ಸಿಕ್ಕಿತೆಂದು ತಿಳಿದುಬಂತು. ಇವರ ಮೇಲಿಂದ ಯುದ್ಧ ಕಾಣಿಕೆ ಕೊಟ್ಟರೆ ಏನನ್ನೂ ಮಾಡಬಹುದೆಂದು ತಿಳಿಯಬಹುದೇ ?

ಗೋಮಾಂತಕದಿಂದ ಭತ್ತ ಖರೀದಿಯ ಬಗ್ಗೆ ಇ ವರ್ತಕರು ಬಂದಿದ್ದಾರೆ. ೬೦ ಮಣ ತೂಕದ ಖಾಡಿ ೧ ರೂ ೬೫-೬೬ ಹೀಗೆ ದರವುಂಟು. ಇನ್ನೂ ರೂ ೧- ಏರಬಹುದೆಂದು ಹೇಳಲಾಗುತ್ತದೆ. ಬಹಳ ಭತ್ತ ಖರೀ ಯಾಗಿ ರವಾನೆಯಾಯಿತು. ಆ ಮಾನದಿಂದ ಅಕ್ಕಿ ಗಿಂತಿಯಲ್ಲಿ ಅದರ ಹೇಗೆಯೋ ಭತ್ತ ಗೋಮಾಂತ ಕ್ಕೆ ರಫ್ತಾದರೆ ಮುಂದೆ ಅಕ್ಕಿಯ ಬರಗಾಲ ಬೀಳುವ ಸಂ ವವುಂಟು. ಗೋಮಾಂತಕ ಸರಕಾರವು ಅಕ್ಕಿಯ ಆಮದ ತೆರಿಗೆಯನ್ನಿಟ್ಟದ್ದರಿಂದ ಗೋಮಾಂತಕದವರು ಭತ್ತವನ್ನೆ ಖರೀದಿ ಮಾಡಹತ್ತಿದ್ದಾರೆ. ನಮ್ಮ ಹಿಂದುಸ್ಥಾನ ಸರಕಾರ ಭತ್ತದ ರಫ್ತನ್ನು ನಿರ್ಬಂಧಿಸುವಂತೆ ಉಪಾಯ ಮಾ ಬಹುದು. ಭತ್ತ ರಫ್ತಿನಿಂದ ಭತ್ತ ಕುಟ್ಟಿ ಅಕ್ಕಿ ಮಾಡು ಉದ್ದಿಮೆಯವರಿಗೆ ಪ್ರಪಂಚ ನಡಿಸಲು ಕಷ್ಟವಾಗುತ್ತದೆ.

ಸಿದ್ದಾಪುರ— ಇಲ್ಲಿಯ ಮಾಮಲೇದಾರ ರಾ ಇಂಜೆ ನೇರ ಇವರಿಗೆ ಸರಕಾರದವರು ೧ನೇ ವರ್ಗ ಮೆಜಿಸ್ಟ್ರೇಟರನ್ನಾಗಿ ಮಾಡಿದ್ದಾರೆ

ಅಂಕೋಲಾ— (ತಾ ೧-೧೨-೪೧) ಕಳೆ ವಾರ ಈ ತಾಲೂಕಿನ ಬ್ರಹ್ಮೂರ ಗ್ರಾಮದಲ್ಲಿ ಮಹಾ ಒಕ್ಕಲಿಗನೊಬ್ಬನ ಮನೆಯು ಬೆಂಕಿಪಾಲಾದ ವಿಷಾದಕ ಸುದ್ದಿ ಬಂದಿದೆ. ಈ ಅನಾಹುತದಿಂದ ಅವನಿಗೆ ರೂ ೪೦ ರಷ್ಟು ನಷ್ಟವೊದಗಿರಬಹುದೆಂದು ಬಲ್ಲವರ ಅಂದಾಜು. ಒಕ್ಕಲಿಗನು ಬಹಳ ಕಾಲದಿಂದ ಸುಮಾರು ೧೫೦ ರೂ ಗಳನ್ನು ಸಂಗ್ರಹಿಸಿಟ್ಟಿದ್ದನು. ಹೋದ ವರ್ಷ ರಾಣಿಯ ಮುದ್ರೆಯ ರೂಪಾಯಿಗಳನ್ನು ಹೊರಗೆ ಹಾಕಿ ೬ನೆ ಜಾರ್ಜ ಚಕ್ರವರ್ತಿಗಳ ಮುದ್ರೆಯ ಹೊಸ ರೂಪಾಯಿಗಳನ್ನು ಕೊಂಡಿಟ್ಟಿದ್ದನು. ಈ ಬೆಂಕಿಯಲ್ಲಿ ಸುಟ್ಟು ಒಡೆದ ಉಂಡಾಗಿ ಬಿದ್ದಿವೆ. ಸರಕಾರದವರು ಆ ಉಂಡುಗಳನ್ನು ತಕ್ಕೊಂಡು ಆ ಬಡವನಿಗೆ ಹೊಸ ರೂಪಾಯಿಗಳನ್ನು ಕೊಡಿಸುವ ಏರ್ಪಾಟು ಮಾಡಬೇಕಾದುದು ನ್ಯಾಯ್ಯವಿದೆ.

ನೋಟೀಸು.

ರಾಮಪ್ಪ ಪುಟ್ಟ ನಾಯ್ಕ ಸಾಕೇನ ಪಾವಿನಕುರ್ವೆ ತಾಲೂಕ ಹೊನ್ನಾವರ ಇವರು ಈ ಮೂಲಕ ತಿಳಿಸುವದೇನಂದರೆ — ಪಾವಿನಕುರ್ವೆ ಗ್ರಾಮದ ನನ್ನ ಬಿ ಸಾ ಚಿಕ್ಕ ನಾಗಪ್ಪ ಪುಟ್ಟ ನಾಯ್ಕ ಇವನು ನನಗೆ ದಗೆಪಡಿಸುವ ಇರಾದೆಯಿಂದ ನಮ್ಮ ಕುಟುಂಬದ ಆಸ್ತಿಯನ್ನು ಮೆನೇಜರ ನಾತೆಯಿಂದ ತನ್ನ ಹೆಸರಿನಲ್ಲಿದ್ದದ್ದನ್ನು ಪರಾಧೀನಪಡಿಸುವ ಹಾದಿಯಲ್ಲಿದ್ದಾನೆ. ಸದ್ರಿ ಆಸ್ತಿಯಲ್ಲಿ ನನ್ನ ಕಬಜಾ ಇರುವ ಕೆಲವದರಲ್ಲಿ ½ ಮತ್ತು ಕೆಲವದರಲ್ಲಿ ⅓ ಹಕ್ಕು ಕ್ರಯದಾರರಿಗೆ ಬಂಧುವಾಗಲಾರದು.

ತಾ ೬—೧೨—೧೯೪೧.

ರಾಮಪ್ಪ ಪುಟ್ಟ ನಾಯ್ಕ.

ಇತ್ತ ಲಕ್ಷಗೊಡಿರಿ! ಇತ್ತ ಲಕ್ಷಗೊಡಿರಿ!!

ಅಗತ್ಯದ ಸೂಚನೆ.

ಸದ್ಯ ಚಾಲತಿಯಲ್ಲಿ ಇಲ್ಲದ ವಿಕ್ಟೋರಿಯಾ, ವಿಲಿಯಂ, ಶಂಡೆರಾಣಿ ಛಾಪೆಯ ರೂಪಾಯಿ, ಅರ್ಧ ರೂಪಾಯಿ ಮತ್ತು ಗಿನೀ, ಅಲ್ವಾರ ಬಿಕಾನೇರ ಸ್ಟೇಟಿನ ರೂಪಾಯಿ, ವಗೈರೆ ನಾಣ್ಯಗಳು ಯೋಗ್ಯ ದರದಿಂದ ಕೊಳ್ಳಲ್ಪಡುವವು.

— ಇಂದೇ ವಿಚಾರಿಸಿರಿ —

ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ.

ಕಾರವಾರ— (ತಾ ೧-೧೨-೪೧) ನಿನ್ನೆ ಇಡೀ ದಿನ ಮುಗಿಲೊಳಗೆ ಮೋಡಗಳಾಗಿದ್ದವು ಈ ಹೊತ್ತು ಸಾಧಾರಣ ಮಳೆ ಸುರಿದಿದೆ

ಕಳೆದ ಶನಿವಾರ ತಾ ೨೯ನೇಗೆ ಇಲ್ಲಿಯ ಹೆಣ್ಣುಮಕ್ಕಳ ಮರಾಠಿ ಶಾಲೆಯು ಇನಾಮು ಕೊಡುವ ಸಮಾರಂಭ ಜರುಗಿತು ರಾ| ಕೃಷ್ಣರಾವ ಹಳದೀಪುರಕರ ವಕೀಲರು ಸಭಾಪತಿಗಳಾಗಿದ್ದರು ಸೌ| ರುಕ್ಮಿಣೀಬಾಯಿ ಹಳದೀಪುರಕರ ಇವರು ಪರೀಕ್ಷೆಗಳಲ್ಲಿ ಮೊದಲ-ಸ್ಥಾನಗಳಿಗೆ ಬಂದ ಹುಡುಗಿಯರಿಗೆ ಇನಾಮುಗಳನ್ನು ಹಂಚಿದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಮಾಜದಲ್ಲಿ ಸ್ತ್ರೀಯರ ಮಹತ್ವ ಹಾಗೂ ಹೊಣೆಗಾರಿಕೆಯನ್ನು ವಿವರಿಸಿ, ಅವರಿಗೆ ತಕ್ಕ ಶಿಕ್ಷಣಕೊಡಬೇಕಾದ ಅವಶ್ಯಕತೆಯನ್ನು ತಿಳಿಸಿದರು, ಸ್ತ್ರೀಶಿಕ್ಷಣದ ಕಡೆ ಸರಕಾರದವರಾಗಲಿ ಜನರಾಗಲಿ ಸಾಕಷ್ಟು ಲಕ್ಷ್ಯ ಪೂರೈಸುವದಿಲ್ಲೆಂದು ನುಡಿದು ಮರುಗಿದರು ಸದರಿ ಶಾಲೆಯಲ್ಲಿ ೪೦೦ರಷ್ಟು ಹುಡುಗಿಯರು ಕಲಿಯುತ್ತಿದ್ದು ಅವರಿಗೆ ಸಾಕಷ್ಟು ಸ್ಥಳದ ಅನುಕೂಲತೆ ಇನ್ನೂ ಆಗದಿದ್ದದ್ದನ್ನೇ ಅವರು ಉದಾಹರಣೆಗಾಗಿ ತೋರಿಸಿಕೊಟ್ಟರು

ಉಳಗೆ ಶಾಲೆಯ ಶಿಕ್ಷಕರಾಗಿದ್ದ ರಾ| ಬೀರಪ್ಪಾ ಸದಾಶಿವ ನಾಯಕ ಇವರು ಧಾರವಾಡದಲ್ಲಿ ಟ್ರೇನಿಂಗಿಗಾಗಿ ಹೋಗಿದ್ದರು ಅವರು ಕಳೆದ ತಾ ೨೬ನೇಗೆ ಅಕಸ್ಮಾತ ಪ್ಲೇಗು ಬೇನೆಯಿಂದ ತೀರಿಕೊಂಡರೆಂಬ ಶೋಚನೀಯ ವಾರ್ತೆ ಬಂದಿದೆ ಟ್ರೇನಿಂಗ ಕೊಲೇಜಿನ ನೆರೆಹೊರೆಯಲ್ಲಿ ಪ್ಲೇಗು ಆದದ್ದು ಇದೇ ಮೊದಲಂತೆ ಹೀಗೆ ಕೊಲೇಜಿನ ವಿದ್ಯಾರ್ಥಿಗಳ ವಸತಿ ಗೃಹದಲ್ಲಿ ಪ್ಲೇಗು ಬೇನೆಯ ಪ್ರಾದುರ್ಭಾವವಾಗಿರುವದರಿಂದಲೂ ಊರಲ್ಲಿ ಮಾರಿ (ಕಾಲರಾ) ಬೇನೆ ಇದ್ದಿರುವದರಿಂದಲೂ ಮುಖ್ಯಾಧ್ಯಾಪಕರು ಕೊಲೇಜನ್ನು ೧೫ ದಿನ ಮುಚ್ಚಿದ್ದಾರೆ ಮೃತ ಬೀರಪ್ಪ ನಾಯ್ಕರ ತರುಣ ಪತ್ನಿಯು ಕೊಲೇಜ ಶಿಕ್ಷಣ ಪಡೆಯಲಿಕ್ಕೆ ಇಚ್ಛಿಸುತ್ತಾಳೆ ಅವಳ ಮೇಲೆ ಈ ಚಿಕ್ಕ ಎಳೆ-ಪ್ರಾಯದಲ್ಲಿ ವೈಧವ್ಯ ದುಃಖದ ಪ್ರಸಂಗ ಬಂದದ್ದು ತೀರ ವ್ಯಸನಕರ ಮೃತಾತ್ಮರಿಗೆ ದೇವರು ಶಾಂತಿಯನ್ನೀಯಲಿ।


ವ್ಯವಹಾರವಿವೇಕಕ್ಕೆ ಒಂದು ವಿನಂತಿ

ಪರಕೀಯರ ಆಕ್ರಮಣ ಹಾಳಿಯನ್ನು ನಿರೋಧಿಸಲು
ಇಂಡಿಯಾ ದೇಶವು ಬಲಿಷ್ಠವಾಗಬೇಕು ಪ್ರತಿಯೊಬ್ಬವ್ಯಕ್ತಿಯೂ .. ತನ್ನ ಪ್ರಾಣ
.. ತನ್ನ ಸಂಸಾರ
. ತನ್ನ ಹಣ
.. ತನ್ನ ಉದ್ಯೋಗ
.. ತನ್ನ ಮನೆ
.. ತನ್ನ ಭೂಮಿ ಇವನ್ನು ರಕ್ಷಿಸಿಕೊಳ್ಳಲೇಬೇಕು
ಈಗಲೇ ಆ ಕೆಲಸವನ್ನು ಕೈಗೊಳ್ಳಿರಿ! ನಿಮ್ಮಲ್ಲಿ ನೀವೇ ಯೋಚಿಸಿನೋಡಿರಿ, ನಿಮ್ಮ ರಕ್ಷಣೆಗಾಗಿ ನೀವೇ ಸಹಾಯ ಮಾಡಿರಿ,

ಕೊಳ್ಳಿರಿ
ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು

ಅವಕ್ಕಾಗಿ ನಾವು ವಿನಿಯೋಗಿಸುವ ಪ್ರತಿಯೊಂದು ಆಣೆಯೂ ಇಂಡಿಯಾದ ಸೇನೆ, ನೌಕೆ, ವಿಮಾನದಳಗಳ ರಚನೆಗೆ ಸಹಾಯಕವಾಗಿ ಪರಕೀಯರ ಆಕ್ರಮಣ ಧಾಳಿಯನ್ನು ನಿರೋಧಿಸಲು ಇಂಡಿಯಾದ ಬಲವನ್ನು ಬೆಳೆಸುತ್ತದೆ.

G.I. Kn Ad No 43 A ಪೋಸ್ಟಾಫೀಸಿನಲ್ಲಿ ಎಲ್ಲಾ ವಿವರವೂ ಸಿಗುತ್ತದೆ

ಹಿಟ್ಲರನ ಗ್ರಹಗತಿ ತಿರುಗಿತು!

(೫ನೇ ಪಾನಿನಿಂದ ಮುಂದರಿಸಿದ್ದು)

ಸೋಣಾಗಿದೆ ಇದೇ ಪ್ರಕಾರ ಇನ್ನೂ ಅನೇಕ ಹಡಗುಗಳು ಸಿಂಗಾಪುರಕ್ಕೆ ರವಾನೆಯಾಗಿವೆ ಹಾಂಗಕಾಂಗದೊಳಗಿನ ಸೈನಿಕರಿಗೆಲ್ಲ ಯುದ್ಧಕ್ಕೆ ಸಿದ್ಧರಾಗಿರಲು ಈಗಾಗಲೇ ಹುಕುಮುಗಳು ಹೊರಟಿವೆ ಹಾಂಗಕಾಂಗದಿಂದ ಬ್ರಿಟಿಶ ನಾಗರಿಕರೂ ಹಿಂದೀ ನಾಗರಿಕರೂ ಹಡಗ ಹತ್ತಿ ಆಸ್ಟ್ರೇಲಿಯಾಕ್ಕೆ ರವಾನೆಯಾದರು ಹಾಂಗಕಾಂಗದ ಸರಕಾರಿ ಬೆಂಕು ಸಿಂಗಾಪುರಕ್ಕೆ ಒಯ್ಯಲಾಗುವದೆಂದು ಹಾಂಗಕಾಂಗ ಸರಕಾರವು ಗುರುವಾರ ವಿಶೇಷ ಪ್ರಕಟಣೆಯನ್ನು ಹೊರಡಿಸಿ ಜಾಹೀರಪಡಿಸಿದೆ ನ್ಯೂ ಯೋರ್ಕ ಹಾಂಗಕಾಂಗಗಳೊಳಗಿನ ಜಪಾನಿಯರಿಗೆಲ್ಲ ಸ್ವದೇಶಕ್ಕೆ ಬರಬೇಕೆಂದು ಜಪಾನ ಸರಕಾರವು ಆಜ್ಞೆಗಳನ್ನು ಹೊರಡಿಸಿದ ಆದೇ ಪ್ರಕಾರ ಅಮೇರಿಕೆಯ ಸರಕಾರವು ಜಪಾನದೊಳಗಿಂದಲೂ ಜಪಾನದ ಒಡತನಕ್ಕೊಪ್ಪಿದ ಚೀನದೊಳಗಿಂದಲೂ ತನ್ನ ಪ್ರಜೆಗಳನ್ನು ಹಿಂಗರೆದುಕೊಂಡಿದೆ. ಆಸ್ಟ್ರೇಲಿಯಾದ ರಾಜಧಾನಿಯಾದ ಮೆಲ್ಬೋರ್ನಿನಲ್ಲಿ ಪ್ರಧಾನ ಮಂಡಳದ ಸಭೆ ಗುರು-ಶುಕ್ರವಾರ ಸೇರಿ, ಯುದ್ಧ ಘೋಷಣೆಯಾದೊಡನೆ ಸೈನ್ಯಾಧಿಕಾರಿಗಳು ಕೈಕೊಳ್ಳಬೇಕಾದ ವ್ಯೂಹಗಳ ಆಲೋಚನೆಯಾಯಿತಂತೆ ಜಪಾನ ಜನಾಂಗವು ಯುದ್ಧ ಸಾರುವದು ಖಂಡಿತವಾದರೂ ಹೆಚ್ಚಿನ ವಿಳಂಬವಾಗಲಿಕ್ಕಿಲ್ಲವೆಂದೂ ಅಭಿಪ್ರಾಯವುಂಟು ಅಮೇರಿಕೆಯವರು ಶಾಂಘಾಯದೊಳಗಿನ ನೌಕಾದಲವನ್ನು ಮಣಿಲಾ ದ್ವೀಪಕ್ಕೊಯ್ದು ಅಲ್ಲಿಂದ ಜಪಾನದ ಮೇಲೆ ಸ್ವಾರಿ ಮಾಡುವ ವ್ಯೂಹ ನಡಿಸಿದ್ದಾರೆ ಚೀನ-ಬ್ರಹ್ಮದೇಶಗಳ ನಡುವಿನ ಮಾರ್ಗದ ಮೇಲೆ ಜಪಾನಿಯರು ಮೊಟ್ಟಮೊದಲು ದಂಡೆತ್ತಿಕೊಂಡು ಹೋಗುವರೆಂದು ಎಣಿಸಿ, ಆದರ ರಕ್ಷಣೆಗಾಗಿ ಅಮೇರಿಕೆಯವರು ಒಂದು ವಿಮಾನ ಪಥಕವನ್ನು ಚೀನ ದೇಶಕ್ಕೆ ರವಾನಿಸುವವರಿದ್ದಾರೆ ಈ ವಿಮಾನದಲದ ಮೇಲೆ ಚೀನದ ರಾಷ್ಟ್ರಧ್ವಜ ಹಾರ್ಯಾಡುವದಂತೆ ಜಪಾನದೊಡನೆ ಯುದ್ಧ ಮಾಡಲು ಅಮೇರಿಕೆಯ ಹಡಗುಪಡೆಗಳೆಲ್ಲ ಸಿದ್ಧವಿರುವವಾಗಿ ಅಮೇರಿಕೆಯ ನೌಕಾಧಿಪತಿಗಳಾದ ಕೆಸ್ನನ ನಾಕ್ಸರವರು ಘೋಷಿಸುತ್ತಾರೆ ರಂಗೂನಿನಲ್ಲಿ ಬ್ರಿಟಿಶ ಸೈನ್ಯ ಇಲಾಖೆಯವರು ಪ್ರಚಂಡ ಸೈನ್ಯ ಪಥಕಗಳನ್ನು ನೌಕಾದಲಗಳನ್ನು ರವಾನಿಸಿ ಜಪಾನಿಯರಿಗೆ ಇದಿರಾಗಲು ಸಿದ್ಧರಾಗಿದ್ದಾರೆ ರಂಗೂನಿನಲ್ಲಿ ಬಂದಿಳಿದ ಸೈನ್ಯ ಸಕಲ ಶಸ್ತ್ರಾಸ್ತ್ರಗಳಿಂದ ಕೂಡಿಕೊಂಡಿದ್ದು ಯುದ್ಧಘೋಷಣೆ ಕೇಳಿದೊಡನೆ ಕ್ಷಣ ಸಹ ವಿಳಂಬ ಮಾಡದೆ ಬೇಕಾದಲ್ಲಿ ಇದು ಕೂಚು ಮಾಡಬಲ್ಲದು ಸಯಾಮ ದೇಶದ ಮೇಲೆ ಜಪಾನವು ಮೊದಲು ದಂಡೆತ್ತಿಕೊಂಡು ಹೋಗಿ, ಆ ಮೇಲೆ ಚೀನ ಬ್ರಹ್ಮದೇಶಗಳ ಮಾರ್ಗವನ್ನು ವ್ಯಾಪಿಸುವದೆಂದು ಬ್ರಿಟನ ಅಮೇರಿಕೆಗಳ ಭೀತಿ ಆದರೆ ಸಯಾಮ ದೇಶಕ್ಕೆ ಭೀತಿಯಿಲ್ಲವಂತೆ ಜಪಾನ ಜನಾಂಗವು ಎಷ್ಟಕ್ಕೂ ಸಯಾಮದೇಶದ ಮೇಲೆ ದಂಡೆತ್ತಿಕೊಂಡು ಬರಲಿಕ್ಕಿಲ್ಲವೆಂದು ಸಯಾಮದ ರಾಜಧಾನಿಯಾದ ಬಂಕೋಕದಿಂದ ಸಯಾಮ ಸರಕಾರದ ಪರವಾಗಿ ಆಕಾಶವಾಣಿಯಾಗುತ್ತಿದೆ ಜಪಾನ-ಸಯಾಮ ಸ್ನೇಹಭಾವವುಂಟಂತೆ, ಆದನ್ನು ಜಪಾನವು ಉಲ್ಲಂಘಿಸಿ ಸಯಾಮದ ಮೇಲೆ ದಂಡೆತ್ತಿಕೊಂಡು ಬರಲಿಕ್ಕಿಲ್ಲವಂತೆ ಇದರ ಚಮತ್ಕಾರವೇನೆಂದು ನಾವರಿಯೆ ಆದರೆ ಜಪಾನದ ಒಂದು ಭೀತಿ ಇಲ್ಲಿಯೇ ನಿರ್ದೇಶಿಸಿಡುವೆನು ಜಪಾನಕ್ಕೆ ರುಶ್ಯ ದೇಶದ ವ್ಲಾಡಿವೊಸ್ಟೊಕ ಬಂದರದ ಭೀತಿಯೊಂದುಂಟು ಈ ಬಂದರ ರಶ್ಯದ ಪೂರ್ವ ಪಾರ್ಶ್ವದಲ್ಲಿ ಜಪಾನಸಮುದ್ರದ ಮೇಲಿದೆ, ಈ ಬಂದರ ಮಾಸ್ಕೋದಿಂದ ೫॥ ಸಾವಿರ ಮೈಲು ದೂರವುಂಟು ಒಲ್ಲಿಂದ ವ್ಲಾಡಿವೊಸ್ಟೊಕಕ್ಕೆ ಸಹಾಯ ಸಿಗುವದು ಕಠಿಣವಾದುದು ನಿಜ ಆದರೆ ವ್ಲಾಡಿವೊಸ್ಟೊಕದಲ್ಲಿ ರುಶ್ಯರು ಅನೇಕ ಜಲನಾವೆಗಳನ್ನಿಟ್ಟು ಹಡಗುಪಡೆಗೆ ಘಾತ ಮಾಡಲು ಸಾಮರ್ಥ್ಯವುಳ್ಳವರಾಗಿದ್ದಾರೆ ಈ ಬಂದರದಲ್ಲಿ ವೈಮಾನಿಕ ಬಲವಿದೆ ಇಲ್ಲಿಂದ ೬೦೦ ಮೈಲು ಪ್ರಾಕಾರದಲ್ಲಿ ಜಪಾನದ ಯಾವತ್ತೂ ಸೈನ್ಯ ಠಾಣ್ಯಗಳೂ ನೌಕಾ ಠಾಣ್ಯಗಳೂ ವಿಮಾನ ಠಾಣ್ಯಗಳೂ ಇವೆ ವಿಮಾನುಗಳಿಗೆ ೬೦೦ ಮೈಲು ಪ್ರವಾಸವೆಂದರೆ ೧ ೨ ತಾಸುಗಳ ಹಾದಿ! ಅದರಿಂದ ಜಪಾನಕ್ಕೆ ಹೆದರಿಕೆ ಹಿಟ್ಲರನನ್ನು ಸೇರಿದರೆ ಇಲ್ಲವೆ ರುಶ್ಯರನ್ನು ವಿರೋಧಿಸಿದರೆ ವ್ಲಾಡಿವೊಸ್ಟೊಕದೊಳಗಿನ ವಿಮಾನಗಳು ಉಡ್ಡಾಣ ಮಾಡಿ ಅನರ್ಥ ಮಾಡುವದು ಖಂಡಿತ ವ್ಲಾಡಿವೊಸ್ಟೊಕ ಬಂದರವು ರುಶ್ಯರ ಸ್ವಾಧೀನವಿರುವ ತನಕ ಜಪಾನಕ್ಕೆ ಎಷ್ಟಕ್ಕೂ ಸುರಕ್ಷಿತತೆಯಿಲ್ಲವಾಗಿ ಟೋಕಿಯೋದೊಳಗಿನ ಪತ್ರಿಕೆಗಳಲ್ಲಿ ಪ್ರಾಜ್ಞರೊಬ್ಬರು ಈ ಹಿಂದೆ ಬರೆದದ್ದುಂಟು ಹೀಗ ಅಮೇರಿಕಾ— ಜಪಾನಗಳೊಳಗಿನ ಯುದ್ಧ ಕಾರಣವು ಜೋಕಾಲಿ ಹೊಡೆಯುತ್ತಿದೆ. ಹಿಟ್ಲರನು ರುಶ್ಯರನ್ನು ಗೆದ್ದು ಆ ಸರಕಾರವನ್ನು ಸ್ವಪಕ್ಷಕ್ಕೆ ಒಲಿಸಿಕೊಂಡನಂತರ ಜಪಾನಕ್ಕೆ ವ್ಲಾಡಿವೊಸ್ಟೊಕದ ಭೀತಿ ತಪ್ಪುವಂತಿಲ್ಲ ಆ ಪರಿಣತಿ ಒದಗಿಬರುವ ತನಕ ಜಪಾನವು ತಾಳ್ಮೆ ಹಿಡಿಯುವದೆಂದು ನನ್ನ ಊಹೆ ಎಲ್ಲವೂ ರುಶ್ಯ-ಜರ್ಮನ ಯುದ್ಧದ ಘಟನೆಗಳನ್ನೇ ಕೂಡಿಕೊಂಡಿದೆ ಅಲ್ಲಿ ಹಿಟ್ಲರನ ಗ್ರಹಗತಿ ತಿರುಗಿದ್ದರಿಂದ ಯುದ್ಧಕಾರಣಕ್ಕೆ ಈಗ ಹೊಸ ರೂಪ ಬರಬಹುದು

ಆದರ ಯುದ್ಧ ಕಳೆಗುಂದಿತೆಂದು ಯಾರೂ ಎಣಿಸಲಾಗದು ಬ್ರಿಟಿಶ ಮುಖ್ಯ ಪ್ರಧಾನರಾದ ಮಿ॥ ಚರ್ಚಿಲ್ಲರವರು ಬ್ರಿಟನಿನ ಮೇಲೆ ವಿಮಾನು ದಾಳಿಯಾಗುವದೆಂದೂ ಯುದ್ಧಕ್ಕೆ ಕಳೆಯೇರುವದೆಂದೂ ಎಣಿಸಿ ಆ ಬಗ್ಗೆ ವಿಶೇಷ ಸಿದ್ಧತೆಗಳನ್ನಿಡತೊಡಗಿದ್ದಾರೆ ಈ ತನಕ ಹಂಗಸರು ರಣಭೂಮಿಗೆ ಕೂಚು ಮಾಡುತ್ತಿರಲಿಲ್ಲ ಇನ್ನು ಮುಂದೆ ಅವರನ್ನೂ ಯುದ್ಧದಲ್ಲಿ ಸೇರಿಸಲಾಗುವದು ೨೦ರಿಂದ ೩೦ರ ತನಕ ವಯಸ್ಸಿನ ಅವಿವಾಹಿತ ಸ್ತ್ರೀಯರಿಗೆಲ್ಲ ಯುದ್ಧದ ಕರೆ ಹೋಗಲಿಕ್ಕಿದೆ ಇಂಥ ಸ್ತ್ರೀಯರ ಸಂಖ್ಯೆ ೧೬ ಲಕ್ಷಕ್ಕೆ ಮಿಕ್ಕುತ್ತದ ಇದಲ್ಲದ ಗಂಡಸರ ವಯೋಮರ್ಯಾದೆ ೧೯ ಇತ್ತು, ಅದು ಈಗ ೧೮॥ಗೆ ಇಳಿಸೋಣಾಗಿದೆ ೧೮॥ ವಯಸ್ಸಿಗೆ ಮೇಲ್ಪಟ್ಟ ಯಾವತ್ತೂ ಪ್ರಾಯಸ್ಥ ಹುಡುಗರು ಸೈನಿಕರಾಗಿ ಸೇರಹೋಗಬೇಕು ಆದೇ ಪ್ರಕಾರ ೪೦ ವರ್ಷಕ್ಕೆ ಮಿಕ್ಕಿದ ಪ್ರಬುದ್ಧರನ್ನು ಸೈನ್ಯ ಕೆಲಸಕ್ಕೆ ಕರೆಯುತ್ತಿರಲಿಲ್ಲ ಈಗ ಆ ವಯೋಮರ್ಯಾದೆ ೫೦ಕ್ಕೆ ಬೆಳಸೋಣಾಗಿದೆ ಅಂದರೆ ೧೮॥ ಯಿಂದ ೫೦ ವರ್ಷಗಳ ವರೆಗಿನ ಯಾವತ್ತೂ ಗಂಡಸರೂ ೨೦ರಿಂದ ೩೦ರ ವರೆಗಿನ ಅವಿವಾಹಿತ ಸ್ತ್ರೀಯರೂ ಸೈನ್ಯ ಇಲಾಖೆಯಲ್ಲಿ ಸೇರಲೇ ಬೇಕು ಇದೇ ಪ್ರಕಾರ ೧೬ರಿಂದ ೧೮ ವರ್ಷಗಳೊಳಗಿನ ಹುಡುಗರೂ ಹುಡುಗಿಯರೂ ಯುದ್ಧಯತ್ನ ಕಾರ್ಯದಲ್ಲಿ ತೊಡಗುವಂತೆ ಏರ್ಪಾಟಾಗಿದೆ ಈ ಯೋಜನೆಯಿಂದ ಸರಾಸರಿ ೨೭॥ ಲಕ್ಷ ಸ್ತ್ರೀ ಪುರುಷರು ಸೈನ್ಯ ಇಲಾಖೆಯಲ್ಲಿ ಸೇರ್ಪಡೆಯಾಗುವರೆಂದು ಬ್ರಿಟಿಶ ಸೈನ್ಯ ಇಲಾಖೆಯವರು ಲೆಕ್ಕ ಹಾಕುತ್ತಾರೆ ಇದೇ ಪ್ರಕಾರ ದೇಶದೊಳಗಿರುವ ಯಾವತ್ತೂ ಕಾರಖಾನೆಗಳು ಯುದ್ಧಸಾಮಗ್ರಿಗಾಗಿ ದುಡಿಯುವವು ಹೀಗೆ ಬ್ರಿಟನಿನಲ್ಲಿ ನಡೆಯುವ ಸಿದ್ಧತೆಗಳ ಮೇಲಿಂದ ಈಗ ಯುದ್ಧ ನಡಿಸುವ ಭಾರ ಬ್ರಿಟನಿನ ಮೇಲೆ ಬಂದೊದಗಿದೆಂದು ನಾನು ಅನುಮಾನಿಸುತ್ತೇನೆ ಸ್ಟಾಲಿನನು ಬ್ರಿಟಿಶರಿಗೆ ಯುದ್ಧ ಸೇರಿ ರುಶ್ಯ ದೇಶದ ಮೇಲಿನ ಜರ್ಮನರ ಒತ್ತಡವನ್ನು ಕುಗ್ಗಿಸಲು ಸೂಚಿಸುತ್ತಾನಂತೆ ಬ್ರಿಟಿಶರು ಪ್ರತ್ಯಕ್ಷ ರಣಕಣದಲ್ಲಿಳಿಯದಿದ್ದರೆ, ರುಶ್ಯರ ಪ್ರತಿಭಟನೆ ನಿರರ್ಥಕವಾಗುವ ಭೀತಿಯುಂಟು ಇದು ಕಾರಣವೇ ಹಿಂದುಸ್ಥಾನದೊಳಗಿನ ಜನಗಳನ್ನು ಸಂತೈಸಲೋಸುಗ ರಾಜಬಂದಿಗಳ ಬಿಡುಗಡೆಯಾಗಿದೆ ಹಿಂದುಸ್ಥಾನ ಸರಕಾರವು ಹೊರಡಿಸಿದ ಪ್ರಕಟಣೆಯಲ್ಲಿ ಯುದ್ಧಯತ್ನದ ಸ್ಪಷ್ಟ ನಿರ್ದೇಶವಿದೆ ಹಿಂದೀ ರಾಜಕಾರಣದೊಳಗಿನ ಬೇರೆ ಬೇರೆ ತೆರೆಗಳನ್ನು ಯುದ್ಧಕಾರಣದ ಸಮಾಲೋಚನದಲ್ಲಿ ವಿಮರ್ಶಿಸುವದು ಅಪ್ರಾಸಂಗಿಕ ಮುಂದಿನ ಯುದ್ಧಕಾರಣದ ಲಕ್ಷಣ ನಿರ್ದೇಶವಾಗುತ್ತದೆಂದು ಈ ಸಂಗತಿಯನ್ನು ಸಹಜ ಇಲ್ಲಿ ನಿರ್ದೇಶಿಸಿಟ್ಟೆ ಇರಾಣದಲ್ಲಿ ಪುನಃ ಜರ್ಮನರೊಡನೆ ಅಲ್ಲಿಯ ಸರಕಾರಿ ಅಧಿಕಾರಿಗಳು ಗೌಪ್ಯದಿಂದ ಸಂಧಾನ ನಡಿಸತೊಡಗಿದ್ದಾರೆಂಬದೊಂದು ವಾರ್ತೆ ಹಬ್ಬಿದೆ ಆದರಿಂದ ಇರಾಣದಲ್ಲಿ ಪುನಃ ಕಾಳಗವಾಗಬಹುದೇನೆಂಬದೊಂದು ಭೀತಿಯುಂಟಾಗಿದೆ

ಜಾಹೀರ ನೋಟೀಸು.

ಕುಮಟಾ ಕೋರ್ಟ ದರಖಾಸ್ತ ನಂ ೩೬೩೩ನೇದರಲ್ಲಿ ವಾದಿ ಗೋಪಾಳ ಶಿವ ಪಂಡಿತ ಇವರು ಲಿಲಾಂ ತೆಗೆದ ಲಿಲಾಂ ಆಸ್ತಿಗಳನ್ನು ಪ್ರತಿವಾದಿ ಹೊಳೆಗದ್ದೆ ರಾಮಚಂದ್ರ ಶ್ರೀನಿವಾಸ ಪೈ ಇವರು ನನಗೆ ಖಂಡಿತ ಯೋಗ್ಯ ಕಿಮ್ಮತ್ತಿಗೆ ಕ್ರಯಕ್ಕೆ ಕೊಟ್ಟು ಸದ್ರಿ ದರಖಾಸ್ತ ಸಾಲ ಮತ್ತು ಸದ್ರಿಯವರಿಂದ ಕುಮಟಾ ಶ್ರೀ ಶಾಂತಿಕಾ ಪರಮೇಶ್ವರಿ ದೇವರಿಗೆ ಸಲ್ಲತಕ್ಕ ಎನಿಕೆಸಲವನ್ನು ನಿಕಾಲೆ ಮಾಡುವ ತಯಾರಿಯಲ್ಲಿ ಇದ್ದಾರೆ ಈ ಬಾಬ್ತು ಯಾರದಾದರೂ ತಕರಾರು ಇದ್ದಲ್ಲಿ ೧೦ ದಿವಸದೊಳಗಾಗಿ ಜಾಹೀರ ರೀತಿಯಿಂದ ತಿಳಿಸಬೇಕಾಗಿ ವಿನಂತಿ

ತಾರೀಖು ೨-೧೨-೧೯೪೧

ಗುಲಾಬಿ ತಾಯಿ ಶಾಂತ್ತೇರಿ ಹೊನ್ನಾವರಕರ.

ಜಾಹೀರ ನೋಟೀಸು.

ಅಪ್ರಾಯಸ್ಥ ಲಕ್ಷ್ಮೀನಾರಾಯಣ, ಪಾಂಡುರಂಗ, ಬಾಬಾ ತಂದೆ ಅಪ್ಪಾ ಯಾನೆ ರಾಮಕೃಷ್ಣ ಪಾಂಡುರಂಗಭಟ್ಟ ರಕ್ಷಕ ತಾಯಿ ಅನಸೂಯಾಬಾಯಿ ಕೋಂ ಅಪ್ಪಾ ಯಾನ ರಾಮಕೃಷ್ಣ ಭಟ್ಟ ಸಾ॥ ಕುಮಟಾ **ಇವರು ಈ ಮೂಲಕ ತಿಳಿಸುವದೇನಂದರೆ —**

ಅಪ್ರಾಯಸ್ಥರ ತಂದೆಯವರು ಇತರರ ದುರ್ಬೋಧನೆಗೊಳಗಾಗಿ ಸಾರಾಸಾರ ಹಿತಾಹಿತಗಳನ್ನು ತಿಳಕೊಂಡು ವ್ಯವಹಾರ ಮಾಡಲು ಅಸಮರ್ಥರಾಗಿದ್ದಾರೆ ಪೋಕಳ ಸಾಲಗಳನ್ನು ನಿರ್ಮಿಸತೊಡಗಿದ್ದಾಗಿ ತಿಳಿಯುತ್ತವೆ ಅವರಿಗೆ ಸಾಲ ಮಾಡುವ ಯಾವದೇ ಗರಜಿಲ್ಲ ಆದರಿಂದ ಅವರೇನಾದರೂ ಸಾಲ ಮಾಡಿದ್ದಲ್ಲಿ ಆ ಸಾಲಗಳಿಗೆ ಅಪ್ರಾಯಸ್ಥರಾಗಲಿ ಅಪ್ರಾಯಸ್ಥರ ಬಾಬ್ತು ಇರುವ ಪಿತ್ರಾರ್ಜಿತ ಆಸ್ತಿಗಾಗಲಿ ಬಾಧಿಸಲಾರವು ತಿಳಿಯುವದು

ಕುಮಟಾ, ತಾ॥ ೩೦—೧೧—೪೧

ಅನಸೂಯಾಬಾಯಿ ಕೋಂ ಅಪ್ಪಾ ಯಾನ
ರಾಮಕೃಷ್ಣ ಭಟ್ಟ

ಕೂದಲು

ಅಪ್ರತಿಮ ರಂಜಕತೆಯೂ ಮುಖ್ಯ ಭೂಷಣವೂ ಆಗಿದ್ದು ಕೇಶವರ್ಧಿನಿಯಿಂದ ನಿಮ್ಮ ಹಸ್ತಗತವಾಗಿವೆ

ನಿಮ್ಮ ಮೊಗವೂ ಮತ್ತು ಗಲ್ಲಗಳು ಏಕಪ್ರಕಾರವಾಗಿರುವವೆಂದು ತುಚ್ಛಿಸಲ್ಪಡುವವು ನಿಮ್ಮ ಕೂದಲುಗಳಾದರೋ ಅಜಂಟದಲ್ಲಿಯ ಚಿತ್ರದಲ್ಲಿಯಂತೆ ಬಗೆಬಗೆಯವನ್ನಾಗಿ ಮಾಡಬಹುದು

ಪ್ರತಿ ದಿನದ ಕೇಶಕಲಾಪವನ್ನು ಕೇಶವರ್ಧಿನಿಯಿಂದ ಮಾಡಿ ಸೌಂದರ್ಯವನ್ನು ಪಡೆಯಿರಿ ನಿಮ್ಮ ಕೇಶಪಾಶದಿಂದ ಕಾಂತಿಯು ಹೆಚ್ಚಾಗಲಿ ನಿಮ್ಮ ಮನೋಹರ ಕೂದಲುಗಳನ್ನು ಬೆಳೆಸಿ ಪೋಷಿಸಿ ಕೇಶವರ್ಧಿನಿಯು ನಿಮ್ಮ ಕೇಶಪಾಶದ ಅಂದತೆಯನ್ನು ಬೆಳೆಸಲಿ ಇಂದೇ ನಿಮ್ಮ ಕೂದಲಿಗೆ ಕೇಶವರ್ಧಿನಿಯನ್ನು ಉಪಯೋಗಿಸಿರಿ

ಕೇಶವರ್ಧಿನಿ

ಕೂದಲುಗಳನ್ನು ರಕ್ಷಿಸಿ ಬೆಳೆಸಿ ಸೌಂದರ್ಯ ತಂದು ಕೊಡುವದು

ಕೇಶವರ್ಧಿನಿ	೮ —
ಕೇಶವರ್ಧಿನಿ ಶ್ಯಾಂಪೂ	೮ —
ಕೇಶವರ್ಧಿನಿ ಕ್ರೀಮ್	ರೂ ೧

ಅಂಚೆವೆಚ್ಚ ಮತ್ತು ಪ್ಯಾಕಿಂಗ್ ಬೇರೆ
ಎಲ್ಲ ವ್ಯಾಪಾರಸ್ಥರಲ್ಲಿಯೂ ಇಲ್ಲವೆ
ಸೌತ ಇಂಡಿಯಾ ಕೆಮಿಕಲ್ಸ
ಮೈಲಾಪುರ ಮದರಾಸು
ಉತ್ತರ ಕನ್ನಡ ಜಿಲ್ಲೆಯ ಏಜಂಟರು
ದೇವಪ್ಪಾ ಅಯ್ಯಾ ನಾಯ್ಕ, ಕುಮಟಾ

ಸಹ್ಯಾದ್ರಿಫಾರ್ಮಸಿ ಕುಮಟಾ.

ಬಾಳಂತಿಯರಿಗೆ— ಕಸ್ತೂರಿ ಮಿಶ್ರಣ ದಶಮೂಲಾರಿಷ್ಟ ಮತ್ತು ಧನ್ವಂತರಿ ಗುಳಿಗೆ ಒಳ್ಳೇ ಉಪಯುಕ್ತವಾದದ್ದು!

ಚಿಕ್ಕ ಮಕ್ಕಳ ಜಂತುವಿನ ಬಾಧೆಗೂ ಪುಷ್ಟಿಯಾಗಲಿಕ್ಕೂ ಸಂಯುರಪ ಕುಟಜಾ ಒಂದೇ ದಿವ್ಯವಾದ ಔಷಧವು!

ನಾಯಿ-ಕೆಮ್ಮಿಗೆ ಎಂಟೇ ದಿವಸಗಳಲ್ಲಿ ಗುಣಪಡಿಸುವ ಕಫನಾಶಕವು

ಯಾವತ್ತೂ ಪ್ರಕಾರಗಳ
ಕಷಾಯ, ಅರಿಷ್ಟ, ಆಸವ,
ತೈಲಾದಿ ಔಷಧ ಸಾಮುಗ್ರಿಗಳು
ಸದಾ ಸಿಗುತ್ತವೆ.

ಡಾ॥ ಎನ್. ಕೇ. ಭಟ್ಟ,
ಹಳ್ದ್ಕರ, ಕುಮಟಾ.

ಧಾತುಪುಷ್ಟಿ ಲೇಹ. (ಸುವರ್ಣ ಸಾಲಾಮಿಶ್ರಿ, ಕಲ್ಕದ ಮಿಶ್ರ) ನಷ್ಟವಾಗಿರುವ ಪುರುಷತ್ವವನ್ನು ಪುನಃ ಕಲ್ಪಿಸಿಕೊಡುವ ಅತ್ಯುತ್ತಮ ಶಕ್ತಿದಾಯಕ ಔಷಧಿ ಮಾನಸಿಕ ಮತ್ತು ಕಾಯಶಕ್ತಿಗಳನ್ನು ಹೆಚ್ಚಿಸಿ ಆರೋಗ್ಯ ಇಂದ್ರಿಯಶಕ್ತಿ ಇವೇ ಮೊದಲಾದವುಗಳನ್ನು ಕಲ್ಪಿಸಿಕೊಡುವದು ಬಾಟ್ಲಿ ೧ಕ್ಕೆ 2—8—0

ಕಸ್ತೂರಿ ಮಿಶ್ರಣ ದಶಮೂಲ. ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ ಬಾಟ್ಲಿ ೧ಕ್ಕೆ ರೂ 1—8—0

ಮಲೇರಿಯಾ ನಿವಾರಿಣಿ. ಮಲೇರಿಯಾ ಜ್ವರ, ಚಳಿಜ್ವರ ಇನ್‌ಫ್ಲುಯೆಂಝಾ, ಮಲಬದ್ಧತೆ ಇವುಗಳಿಗೆ ಪ್ರಸಿದ್ಧ ಔಷಧಿ ಬಾಟ್ಲಿ ೧ಕ್ಕೆ ರೂ 0—13—0

ಸ್ಪ್ಲೀನ ಮಿಕ್ಶ್ಚರ. ಜ್ವರಗಡ್ಡೆಯನ್ನು ಕರಗಿಸುವ ದಿವ್ಯೌಷಧ ಬಾಟ್ಲಿ ೧ಕ್ಕೆ ರೂ 1—2—0

ಎಮ್. ಗಣಪಯ್ಯ ಎಂಡ್ ಸನ್ಸ, ರಥಬೀದಿ ನಂಬ್ರ 5 ಮಂಗಳೂರು. ದ. ಕ.

ಔಷಧಿ ಸಿಗುವ ಸ್ಥಳ — (1) ಸ್ವಸ್ತಿಕ ಫಾರ್ಮಸಿ, ಕುಮಟಾ (2) ಕಾಮತ ಸ್ಟೋರ್ಸ, ಹೊನ್ನಾವರ, (3) ಸ್ಟೇಶನರಿ ಡಿಪೋ ಅಂಕೋಲಾ (4) ಕೆ ಗಣಪಯ್ಯ ಶ ನಭಾಗ, ಮರ್ಚಂಟ, ಭಟ್ಕಳ (5) ಪಾಪ್ಯುಲರ ಸ್ಟೋರ್ಸ ಕೆಮಿಸ್ಟ 183, ಸುಪಾರಿಬಾಗ ಪರೇಲ, (6) ಜನರಲ್ ಸ್ಟೋರ್ಸ ಜಿ ಐ ಪಿ ಮಾಟುಂಗಾ (7) ಮಲ್ಲಪ್ಪ ಪದ್ಮನಾಭ ಶೆಟ್ಟಿ ಮರ್ಚಂಟ, ಕಾರವಾರ (8) ಕಾಮತ ಸ ಬ್ರದರ್ಸ ಸಿದ್ದಾಪುರ (9) ಪೋಪ್ಯುಲರ ಮೆಡಿಕಲ್ ಸ್ಟೋರ್ಸ, ಗೋಕರ್ಣ, (10) ಎ[illegible] ಎಲ್ ಥ[illegible]ಪ್ಪ ಎಂಡ [illegible]ನ ಬಡವರ ಔಷಧಿ ಅಂಗಡಿ, ಶಿರ್ಶಿ [ಕ್ಯಾಟಲಾಗಿಗೆ ಬರೆ]

ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್,

ಸ್ಥಾಪನೆ 1908

ಈ ಕಂಪನಿಯು ಪೂರ್ಣ ಹಿಂದೀ ಇದ್ದು ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಸ್ಕರವು ಇವೆ ಕಂಪನಿಯ ಹಣವು ಸರಕಾರಿ ಪ್ರೋ ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದು [illegible] ಪಡು

Kumta Agents
D K Nayak Bros
K N Nayak
Honavar Agent
R V Prabhu

K. Padmanabha Rao & Sons,
BELGAUM
Chief Agents for
Karnatak Districts & S M States

ಚಿತ್ರಬಿಂದು

ಮಕ್ಕಳ ಮರಣವನ್ನು ತಪ್ಪಿಸುವದು.

ಏಜನ್ಸಿ ಕಲಕತ್ತಾ, ಮುಂಬಯಿ ಮದ್ರಾಸ, ಬೆಂಗಳೂರು ಮಂಗಳೂರು

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆಯ ಗುಪಿಕೆ ಹಸುರು ನರಗಳು, ಕಾಮಿಲೆ ಗಡ್ಡೆರೋಗ ಕೋವೆ ರೋಗ, ಮೈ-ಕೈ ಬಾವುಗಳಿಗೆ ದಿವ್ಯೌಷಧ!

೧ ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3

ಏತಕ್ಕೆ ಚಿಂತಿಸುವಿರಿ?

ಆಸೇತುಹಿಮಾಚಲದ ವರೆಗೂ ೬೦ ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ

ಡಾ॥ ವಿ ಎನ್ ಶ್ರೀನಿವಾಸರಾವ,
ಲಿವ್ಹರ್ ಸ್ಪೆಶಲಿಸ್ಟ
ಎಂ ವಿ ಪ್ರಾಸಾದಿಕ ಔಷಧಾಲಯ
ಶಿವಮೊಗ್ಗಾ

☞ ಇವರಲ್ಲಿ ವಿಚಾರಿಸಿರಿ
ಶಿರ್ಶಿ ಏಜಂಟ —
ಸುಬ್ರಾಯ ಸೀತಾರಾಮ ಹೆಗಡೆ
ಕುಮಟೆಯ ಏಜಂಟ
ದೇವಪ್ಪಾ ಅಯ್ಯಾ ನಾಯ್ಕ

ಇದನ್ನು ಪಾಂಡುರಂಗ ಕೃಷ್ಣ ಕಾನಥಂಗ (ಸಂಪಾದಕ) ಇವರು ತಮ್ಮ ಸ್ಟಾರ ಆಫ್ ಕೆನರಾ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No B 1270.
Monday, 15th December, 1941.

ವರ್ಷ ೨೪

ಕಾನಡಾವೃತ್ತ

ಸಂಚಿಕೆ ೨೩

THE KANARA NEWS

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समान नृपतिजनपदानां दुर्लभ कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.
ಕುಮಟೆಯಲ್ಲಿ ಆಗಾವು ರೂಪಾಯಿ 2 4-0
ಮನಿಯಾರ್ಡರಿನಿಂದ ರೂ 3-1 0
ವ್ಹಿ ಪಿ ಅಂಚೆವೆಚ್ಚ ಸೇರಿ ರೂಪಾಯಿ 3-4-0
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ.
ಕನ್ನಡ ಇಂಗ್ಲಿಷ ಸ್ಮಾಲ ಪೈಕಾ (೧೫ ಎಮ್ ಅಗಲ)
೮ ಸಾಲುಗಳವರೆಗೆ ರೂ.1 8 0
೮ ನಂತ್ರ ಪ್ರತಿಸಾಲಿಗೆ 0-3 0
ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

-*(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೫ ಮಾಹೆ ಡಿಶಂಬರ ಸನ್ ೧೯೪೧ನೇ ಇಸವಿ)*-



ಶ್ರೀ ಧೂತಪಾಪೇಶ್ವರ ಪನವೇಲ, ಲಿ.,
ಕರ್ನಾಟಕ ಕೇಂದ್ರ- ಯುನ್ಯಾಟೆಡ್ ಏಜನ್ಸೀಜ, ಹುಬ್ಬಳ್ಳಿ.

ಕಾರವಾರ — ಮೆಸರ್ಸ ಮುಜುಮದಾರ ಕಳಬೇಕರ ಬ್ರದರ್ಸ
ಅಂಕೋಲಾ:— ದಿ ಸ್ಟೇಶನರಿ ಡಿಪೋ
ಕುಮಟಾ:— ದೇವಪ್ಪಾ ಅಯ್ಯು ನಾಯ್ಕ.
ಹೊನ್ನಾವರ— ಮೆಸರ್ಸ ಕಲ್ಯಾಣಪುರ ಬ್ರದರ್ಸ
ಶಿರ್ಶಿ:—{ ಶಿರ್ಶಿ ಡ್ರಗ ಸ್ಟೋರ್ಸ
ಎಸ್. ಎಲ್. ಧಾಕಪ್ಪಾ ಎಂಡ್ ಸನ್ಸ್
ಸಿದ್ದಾಪುರ — ಮೆಸರ್ಸ ಶಾಮಾಯ್ಯನ ಬ್ರದರ್ಸ
ಹಳಿಯಾಳ— ಎನ್ ಪಿ ಪಳ್ಳಿಕೇರಿ

''ಸ್ಟಾರ ಆಫ್ ಕನರಾ ಪ್ರೆಸ್'',
ಕುಮಟಾ.

*

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಯಿಂದ ಬೇಕಾದ ನಮೂನೆಯ ಕಲರ ಪ್ರಿಂಟಿಂಗ ವಗೈರೆ ಸಣ್ಣ ದೊಡ್ಡ ಛಾಪಾ ಕೆಲಸಗಳೂ, ಪುಸ್ತಕ ಮುದ್ರಣವೂ, ರೂಲಿಂಗ ಬ್ಯಾಂಡಿಂಗ ಕೆಲಸವೂ ಉತ್ತಮವಾಗಿ ಸುಲಭ ದರದಲ್ಲಿ ತಕ್ಕ ಕಾಲಕ್ಕೆ ತಯಾರಿಸಿ ಕೊಡಲಾಗುವದು

ಇವಲ್ಲದೆ ಕೋರ್ಟ ಕಚೇರಿ ಉಪಯೋಗದ ವಕಾಲತ ವಗೈರ ಫಾರ್ಮಗಳೂ ಕಸ್ಟಮ್ ಕಚೇರಿಯ ಶಿಪ್ಪಿಂಗ ಬೀಲು ಸತ್ಕಿ ವಗೈರೆ ಫಾರ್ಮುಗಳೂ, ಗೇಣಿ ರಶೀದಿ ಬೂಕ, ಗೇಣಿಚೀಟಿ ಎದುರುಚೀಟಿ ಫಾರ್ಮುಗಳೂ ವಗೈರೆ ಮಾರಾಟಕ್ಕೆ ತಯಾರ ಸಿಗುತ್ತವೆ

ನಿಮ್ಮ ಛಾಪಾ ಕೆಲಸಗಳನ್ನು ನಮ್ಮಲ್ಲಿಗೇ ಕಳಿಸಿರಿ
ಒಮ್ಮೆ ಅನುಭವ ತೆಕ್ಕೊಂಡು ನೋಡಿರಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,
(ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)
ಹೆಡ್ ಆಫೀಸು — ಕುಂದಾಪುರ.

ಬ್ರೇಂಚ ಆಫೀಸುಗಳು - ಅಂಕೋಲಾ, ಕುಂದಾಪುರ ಬೈಂದೂರು ಕೋಟೇಶ್ವರ, ಕುಮಟಾ, ಗೋಕರ್ಣ, ಕಾರವಾರ, ಹಾವೇರಿ, ಶಿವಮೊಗ್ಗಾ ತರೀಕೆರೆ ನಗರ ಸೋಮವಾರಪೇಟೆ ಮತ್ತು ವೀರರಾಜಪೇಟೆ

ಕಾಯಂ ಠೇವುಗಳು, ಸೇವಿಂಗ್ಸ ಬೇಂಕ್ ಠೇವುಗಳು ಮತ್ತು ಚಾಲು ಠೇವುಗಳು ಸಹ ಅಂಗೀಕರಿಸಲ್ಪಡುವವು

ಬಂಗಾರದ ದಾಗಿನೆಗಳ ವ ಇತರ ವ್ಯಾಪಾರೀ ಮಾಲುಗಳ ಆಧಾರದ ಮೇಲೆ ಸವಲತ್ತಿನ ದರದ ಬಡ್ಡಿಯಲ್ಲಿ ಸಾಲ ಕೊಡಲ್ಪಡುವದು.
ವ್ಯಾಪಾರದ ಕೇಂದ್ರಗಳಿಗೆ ಡ್ರಾಫ್ಟುಗಳು, ಚೆಕ್ಕುಗಳು ಸಹ ಕೊಡಲ್ಪಡುವವು ಎಲ್ಲ ತರದ ಬೇಂಕಿನ ವ್ಯವಹಾರಗಳು ಸವಲತ್ತಿನ ದರದಿಂದ ನಡಿಸಲ್ಪಡುವವು

ಕುಂದಾಪುರ,
1-8-1941 }

The Agricultural & Industrial Bank, Ltd

ಸ್ಥಳಿಕ ವಿಷಯಗಳು.

ಲೇಖಕ - ಸ್ಥಳವಂತಿಕ

ಗೋಮಾಂತಕದ ವರ್ತಕರು ಹೇರಳ ಭತ್ತ ಖರೇದಿ ಮಾಡಹತ್ತಿದ್ದಾರೆ ಗೋಣಚೀಲಗಳನ್ನು ಬಡಿಸಿ ಸಹ ಭತ್ತದ ಖರೇದಿಯಾಗುತ್ತದಾಗಿ ಸುದ್ದಿಗಳುಂಟು ಕರಾವಳಿಯಲ್ಲೂ ಘಟ್ಟದ ಮೇಲೂ ಖಾನಗಿ ಭತ್ತ ಖರೇದಿಯಾಗಿ ರಫ್ತಾಗುತ್ತದೆ ಹೀಗೆ ಬತ್ತ ಗೋಮಾಂತಕಕ್ಕೆ ರವಾನೆಯಾದರ ಇಲ್ಲಿಯ ಜನಗಳಿಗೆ ಉದರನಿರ್ವಾಹ ಮಾಡಲು ಬಲು ಕಷ್ಟವಾದೀತು ಜಪಾನದ ವಿರುದ್ಧ ಹಿಂದುಸ್ತಾನ ಸರಕಾರವು ಯುದ್ಧ ಘೋಷಣೆ ಮಾಡುವ ತಯಾರಿ ನಡಿಸಿದೆ ಸಯಾಮ ದೇಶ ಅಕ್ಕಿಯ ಭಂಡಾರ ಅದು ಜಪಾನದ ವಶವಾಗಿದೆ ಬ್ರಹ್ಮದೇಶದ ಮೇಲೆ ವಿಮಾನ ಹಾಲಿಯಾಗಹತ್ತಿವೆ ಬಂಗಾಲ ಉಪಸಾಗರ, ಪೂರ್ವ ಸಮುದ್ರ ಹಿಂದೀ ಮಹಾಸಾಗರಗಳಲ್ಲಿ ಯುದ್ಧ ಕಲ್ಲೋಲವಿದ್ದಿದೆ ಬ್ರಹ್ಮದೇಶದ ಸಂಬಂಧ ಕಡಿದುಹೋಗುವ ಸಂಭವವಿರುವದರಿಂದ ಆ ಪಾರ್ಶ್ವದಿಂದ ನಮ್ಮತ್ತ ಕಡೆ ಅಕ್ಕಿಯ ಆಮದಾಗುವದಶಕ್ಯ ಆದರಿಂದ ಭತ್ತವನ್ನು ರಫ್ತು ಮಾಡಲು ನಮಗೆ ಪ್ರೋತ್ಸಹಿಸದು. ಮೇಲಾಗಿ ಈ ಜಿಲ್ಲೆಯಲ್ಲಿ ಹುಟ್ಟುವ ಅಕ್ಕಿ ಈ ಜಿಲ್ಲೆಯ ಜನಗಳ ಇಡೀ ವರ್ಷದ ನಿರ್ವಾಹಕ್ಕೆ ಸಾಲುವದಿಲ್ಲ ಆದರಿಂದ ಹಿಂದುಸ್ತಾನ ಸರಕಾರವು ಬತ್ತ ರಫ್ತಾಗದಂತೆ ನಿರ್ಬಂಧಗಳನ್ನು ಶೀಘ್ರವೇ ಪ್ರಕಟಿಸುವದು ಶ್ರೇಯಸ್ಕರ

⁂

ನಮ್ಮ ಜಿಲ್ಲೆಯೊಳಗೆ ೧ ಲಕ್ಷ ೧೫ ಸಾವಿರ ಎಕರೆ ಸರಕಾರಿ ಪಡಭೂಮಿಯುಂಟು. ಇದಲ್ಲದೆ ಜನರು ಭೂಕಂದಾಯ ತೆರುವ ಸಾವಿರ ರು. ಎಕರೆ ಭೂಮಿ ಬಂಜರು ಉಂಟು ಈ ಬಂಜರು ಭೂಮಿಯಲ್ಲಿ ಸುಮಾರು ಮುಕ್ಕಾಲು ಪಾಲು ಭೂಮಿ ನೀರಿನ ಆಶ್ರಯವಿದ್ದದ್ದು, ಅಂದರೆ ಸರಕಾರದಿಂದ ನೀರ್ತೆರಿಗೆ ಎತ್ತುವಳಿಯಾಗುವಂತಹದು ಸರಕಾರವು ನೀರ್ತೆರಿಗೆಯನ್ನು ಎತ್ತುವಳಿ ಮಾಡುವಾಗ ನೀರು ಅಪೇಕ್ಷೆಯಂತೆ ಸಿಗುತ್ತದೇನೆಂಬದರ ಕುರಿತು ವಿಚಾರಿಸುವದಿಲ್ಲ ಹೊಳೆಗಳಿಗೆ ಸುಗ್ಗಿ ಬೆಳೆ ಬೆಳೆಸಲಿಕ್ಕೆ ಅನುಕೂಲವಾಗುವಂತೆ ಪ್ರತಿ ವರ್ಷ ಕಟ್ಟು ಹಾಕುವದಿದೆ. ಈ ಕಟ್ಟಿನ ಕೆಲಸವನ್ನು ಸರಕಾರವು ಮಾಡಿಸತಕ್ಕದ್ದು ಆದಕ್ಕಾಗಿ ವರ್ಷಾಸನ ಯಾರಿಗೋ ಏನೋ ಹಣ ಸಲ್ಲುತ್ತದಂತೆ! ಯಾರಿಗೆ ಸಲ್ಲುತ್ತದೆ, ಎಷ್ಟು ಸಲ್ಲುತ್ತದೆ, ಆದರಿಂದ ಯಾವ ಕಾರ್ಯವಾಗುತ್ತದೆ, ಪ್ರತಿ ವರ್ಷಕ್ಕೆ ಸಿಗುವ ಹೊಳೆ ನೀರು ಸುಗ್ಗಿ ಬೆಳೆಗೆ ಸಾಕೋ ಸಾಲದೋ? ಎಂಬ ಯಾವದೇ ಚೌಕಶಿಯನ್ನು ಸರಕಾರವು ನಡಿಸುವದಿಲ್ಲ ಹೊಳೆಯ ಆಚೆ ಈಚೆ ವರ್ಷಾಸನ ಆಗತಕ್ಕ ದುರುಸ್ತಿಯ ಕೆಲಸ ನಡೆಯದೆ ಎರಡೂ ದಂಡೆಗಳ ಮೇಲೆ ದೊಡ್ಡ ಕಾಡುಮರ ಬೆಳೆಕೊಂಡಿವೆ ಅವು ಹೊಳೆ ನೀರನ್ನೆಲ್ಲ ಹೀರಿಕೊಳ್ಳುತ್ತವೆ ಬೆಳೆಗೆ ತೆನೆ ಬಿಡುವಾಗ ನೀರಿನ ಕೊರತೆಯಾಗಿ ಭತ್ತ ಹೊಳ್ಳು ಬೀಳುತ್ತದೆ ಈ ಸಂಗತಿಗಳನ್ನು ಒಮಕಾರಿಗಳು ಅರಿಯರು ಅಧಿಕಾರಿಗಳಿಗೆ ಗ್ರಾಮಸಂಚಾರ ವಿಧಿಸಿಯದೆ ಆದರೆ ಅಧಿಕಾರಿಗಳು ಈ ಚೌಕಶಿ ಮಾಡಿದ್ದೇನೂ ಕಂಡುಬರುವದಿಲ್ಲ ಅಧಿಕಾರಿಗಳು ಗ್ರಾಮಸಂಚಾರಕ್ಕೆ ಹೋದಾಗ ಈ ಸ್ಥಿತಿಯ ಚೌಕಶಿ ಮಾಡತಕ್ಕದ್ದಾಗಿ ವಿಧಿಸಿ ವರದಿ ತರಿಸಿಕೊಂಡು ತಕ್ಕ ಪರಿಹಾರ ಕೈಕೊಂಡರೆ ಸರಕಾರದ ಕರ್ತವ್ಯದಕ್ಷತೆ ಸಿದ್ಧವಾದೀತು

ಗೋಮಾಂತಕದಲ್ಲಿ ಹುಟ್ಟುವ ಭತ್ತ ಗೋಮಾಂತಕೀಯರ ಸಂಸಾರಕ್ಕೆ ಸಾಲುವದಿಲ್ಲ ಅಲ್ಲಿ ತೆಂಗಿನ ತೋಟಗಳೇ ಹೆಚ್ಚಿನ ಕೃಷಿ. ಆದರಿಂದ ಭತ್ತ ಬೆಳೆಸುವದಕ್ಕಾಗಿ ಅಲ್ಲಿಯ ಸರಕಾರವು ಯಾವತ್ತೂ ಅನುಕೂಲತೆಗಳನ್ನು ಪೂರೈಸುತ್ತದೆ ನದಿಗಳಿಗೆ ದೊಡ್ಡ ದೊಡ್ಡ ಒಡ್ಡು ಹಾಕಿ ನೀರನ್ನು ಹೊಲಗಳಲ್ಲಿ ಪೂರೈಸುತ್ತದೆ ಜನರೆಲ್ಲರೂ ಬೇಸಾಯದಲ್ಲಿ ತೊಡಗಬೇಕೆಂದು ಸರಕಾರದ ಅಪೇಕ್ಷೆ ಈ ನೀರನ್ನು ಉಪಯೋಗಿಸುವ ರೈತರು ಒಂದು ಎಕರೆ ಭೂಮಿಗೆ ೧೫ ಆಣೆ ಕೊಟ್ಟರಾಯಿತು ಇಷ್ಟು ಅಗ್ಗ ದರದಿಂದ ಗೋಮಾಂತಕದಲ್ಲಿ ಸುಗ್ಗಿ ಬೆಳೆ ಮಾಡುವವರಿಗೆ ನೀರು ಪೂರೈಸಲ್ಪಡುತ್ತದೆ ಸುಗ್ಗಿ ಬೆಳೆ ಮಾಡದಿದ್ದವರಿಗೆ ನೀರಿನ ಸುಂಕವಿಲ್ಲ ನಮ್ಮ ಜಿಲ್ಲೆಯೊಳಗೆ ಭೂಕಂದಾಯದ [illegible] ಅರ್ಧಾಂಶಕ್ಕೆ ಮಿಕ್ಕಿ ನೀರ್ತೆರಿಗೆ ಸಾರಿಯುಂಟು ಜಲಾಶಯಗಳ ಸ್ಥಿತಿಗತಿಗಳ ವಿಚಾರವಿಲ್ಲದೆ ಈ ತೆರಿಗೆ ಎತ್ತುವಳಿಯಾಗುತ್ತಿದೆ. ಜಲಾಶಯಗಳನ್ನು ಊರ್ಜಿತ ಸ್ಥಿತಿಯಲ್ಲಿ ಕಾಪಾಡುವ ಹೊಣೆಗಾರಿಕೆಯನ್ನು ಸಹ ಸರಕಾರವು ಪಾಲಿಸುವದಿಲ್ಲ ಆದರಿಂದ ನೀರಿನ ಆಶ್ರಯವಿದ್ದ ಭೂಮಿಗಳು ಸಹ ಬಂಜರು ಬೀಳತೊಡಗಿವೆ ಭೂಮಿ ಬಂಜರು ಬಿದ್ದರೂ ನೀರ್ತೆರಿಗೆಯನ್ನು ತರುವದು ತಪ್ಪುವದಿಲ್ಲ. ಇದು ಲೋಕಸ್ಥಲಿಗೆ ಗ್ರಾಮೋದ್ಧಾರ ಮಂಡಳದವರು ಈ ವಿಷಯವನ್ನು ಗಾಂಭೀರ್ಯದಿಂದ ಪುರಸ್ಕರಿಸುವದು ಅತಿ ಅಗತ್ಯ ಇದೊಂದು ಸಾಧ್ಯವಾದರೆ ಜನಗಳಿಗೆ ಕನಿಷ್ಟ ಅರ್ಧ ಕೋಟಿ ರೂಪಾಯಿಗಳಿಗೆ ಮಿಕ್ಕಿ ಸಂಪತ್ತು ಒದಗಿಸಿಕೊಟ್ಟಂತಾಗುತ್ತದೆ ಜಂಬರುಬಿದ್ದ ಭೂಮಿಯ ಕ್ಷೇತ್ರ ೨ ಲಕ್ಷ ಎಕರೆ ಎಂದು ಹಿಡಿಯಲಡ್ಡಿಯಿಲ್ಲ ಇಷ್ಟು ಭೂಮಿಗೆ ಎಕರೆಗೆ ೧೨ ಖಂಡಿ ಅಕ್ಕಿ ಉತ್ಪತ್ತಿ ಹಿಡಿದರೆ ಸರಾಸರಿ ೩೦-೪೦ ಲಕ್ಷ ರೂ ಹುಟ್ಟುವಳಿ ಆಗುತ್ತದೆ ಸರಕಾರಕ್ಕೆ ಸರಾಸರಿ ಎಕರೆ ೧ಕ್ಕೆ ರೂ ೪ರಂತೆ ರಾಜಾದಾಯ ಹಿಡಿದಾಗ್ಯೂ ೮ ಲಕ್ಷ ರೂಪಾಯಿ ಪ್ರಾಪ್ತಿಯಾಗುತ್ತದೆ ವರ್ಷಾಸನ ಸಿಗುವ ಪ್ರಾಪ್ತಿ ಇದು! ಜಂಗಲುಗಳ ಬೆಳವಣಿಗೆಯಿಂದ ಸರಕಾರಕ್ಕೆ ಸಿಗುವ ರಾಜಾದಾಯದ ಲೆಕ್ಕ ಹಾಕಿದರೆ ಎಕರೆ ೧ಕ್ಕೆ ೮ ಆಣೆ ಸಹ ಬೀಳುವದಿಲ್ಲವಾಗಿ ಸರಕಾರಿ ಅಂಕಿಗಳಿಂದ ಸಿದ್ಧಪಡಿಸಬರುತ್ತದೆ ಯಾವ ಲೆಕ್ಕ ಹಿಡಿದಾಗ್ಯೂ ಕೃಷಿಕರ್ಮವೇ ರಾಜ-ಪ್ರಜೆಗಳಿಗೆ ಲಾಭದಾಯಕವಾದದ್ದು, ಪ್ರಯೋಜನಕಾರಿಯಾದದ್ದು.

⁂

ಮುಂಬಯಿ ಸರಕಾರವು ಈ ವರ್ಷ ಧಾನ್ಯದ ದರಗಳನ್ನು ತಗ್ಗಿಸಿಕೊಂಡು ತೀರ್ವೆಯಲ್ಲಿ ಸೂಟ ಬಿಡುವ ಆಲೋಚನೆ ಮಾಡುತ್ತದಾಗಿ ತಿಳಿದುಬಂದಿದೆ, ಇದೇ ನವಂಬರ ಡಿಶಂಬರ ತಿಂಗಳುಗಳಲ್ಲಿ ಇರುವ ದರಗಳನ್ನು ಸರಕಾರವು ಕೇಳಿರುವದಂತೆ ತೀರ್ವೆ ಆಕರಿಸುವ ಕಾಲದಲ್ಲಿರುವ ದರಗಳಿಗೂ ಈಗಿನ ದರಗಳಿಗೂ ವ್ಯತ್ಯಾಸವಾಗುವ ಸಂದರ್ಭದಲ್ಲಿ ಸರಕಾರವು ಆ ವ್ಯತ್ಯಾಸವನ್ನು ಲಕ್ಷಿಸಿ ಕಂದಾಯದಲ್ಲಿ ರೂಪಾಯಿಗೆ ೧-೨ ಆಣೆಯಂತೆ ಸೂಟ ಕೊಡಬಹುದು. ಆದರೆ ಇದರಿಂದ ಸಮಾಧಾನವಾಗುವದು ಕಠಿಣ ಆ ತೆರಿಗೆಯನ್ನು ಹೇರುವ ಕಾಲದ ಪರಿಸ್ಥಿತಿಯೇ ವ್ಯತ್ಯಾಸವಾಗಿದೆ ಈ ಜಿಲ್ಲೆಯೊಳಗೆ ಹೆಚ್ಚಾಗಿ ವ್ಯತ್ಯಾಸವಾದದ್ದು ಜಲಾಶಯಗಳ ಸ್ಥಿತಿ ಮತ್ತು ಅದೇ ಪ್ರಕಾರ ಬೆಟ್ಟದ ಸ್ಥಿತಿ. ಬೆಟ್ಟ ಬೆಳಕೊಂಡದ್ದರಿಂದ ಗ್ರಾಮಗಳು ನಿರ್ಜನವಾಗಿ ಕೃಷಿಕರ್ಮ ನಡಿಸುವದು ದುರ್ಘಟವಾಗಿದೆ ಹೇಗಾದರೂ ಬೆಳೆ ಬೆಳೆಸಿದರೆ ಅವನ್ನು ಹಂದಿಗಳು ನಾಶ ಮಾಡುತ್ತವೆ ಸದ್ಯಕ್ಕೆ ಕುಮಟಾ ತಾಲೂಕಿನ ಮಿರ್ಜಾನ ಸೀಮೆಯ ತಲಗೇರಿ, ಬೈರೆ ಮೊದಲಾದ ಮಜರೆಗಳಲ್ಲಿ ಹಂದಿಗಳು **ಹಾವಳಿ** ಹಾಕಿ ೧೦ ಸಾವಿರ ಕಬ್ಬು ನಾಶ ಮಾಡಿದ್ದುಂಟು ಇದೇ ಪ್ರಕಾರ ಬೆಟ್ಟದ ಸಮೀಪದಲ್ಲಿದ್ದ ಇತರ ತಾಲೂಕುಗಳ ಅವಸ್ಥೆಯುಂಟು ಗ್ರಾಮಾಧಿಕಾರಿಗಳಾಗಲಿ ಗ್ರಾಮ-ಸಂಚಾರಕ್ಕೆ ಹೋದ ಮುಲ್ಕಿ ಇಲಖೆಯ ಮೇಲಧಿಕಾರಿಗಳಾಗಲಿ ಈ ಕುರಿತು ಕೊಂಚ ಚೌಕಶಿ ಮಾಡಿದರೆ ರೈತರ ಸ್ಥಿತಿ ದೃಗ್ಗೋಚರವಾಗುವಂತಿದೆ. ಇಂಥ ಪ್ರಸಕ್ತಿಯಲ್ಲಿ ಪೂರ್ಣ ತೀರ್ವೆ ಸೂಟ ಬಿಟ್ಟರೂ ಜನಗಳ ಕಷ್ಟ ದೂರವಾಗುವಂತಿಲ್ಲ ಯಾಕೆಂದರೆ ಇಡೀ ವರ್ಷ ಮಾಡಿದ ಹೋರೆಯೇ ನಿರರ್ಥಕವಾಗಿದೆ ನೀರ್ತೆರಿಗೆಯ ವಿಷಯವಂತು ಮೇಲ್ಕಾಣಿಸಿರುತ್ತದೆ. ಸರಕಾರವು ತೀರ್ವೆ ಸೂಟಿನ ವಿಚಾರ ಮಾಡುವಾಗ ಇವೆರಡೂ ಸಂಗತಿಗಳನ್ನು ಪರಾಂಬರಿಸುವದು ಕ್ರಮಪ್ರಾಪ್ತವಾಗಿದೆ ಸರಕಾರದಿಂದ ಸಾಕಿ ಸಲಹಿದ ಅಡವಿ ಬೇಸಾಯಗಾರರ ನಷ್ಟಕ್ಕೆ ಕಾರಣವಾಗಿರುವಾಗ ಆ ತೊಂದರೆಯನ್ನು ದೂರಪಡಿಸುವದು ಸರಕಾರದ ಕರ್ತವ್ಯವಾಗುತ್ತದೆ ಮತ್ತು ಆ ನಷ್ಟವನ್ನು ತುಂಬಿಕೊಡುವ ಹೊಣೆಗಾರಿಕೆ ಸಹ ಸರಕಾರದ ಮೇಲೆ ಬೀಳುತ್ತದೆ

⁂

ಈಗ ಬೆಲ್ಲದ ದರ ಮಣಕ್ಕೆ ರೂ ೧ ೯।, ಹೆಚ್ಚೆಂದರೆ ರೂ. ೧॥ ತನಕ ಇದೆ ಅದೇ ಸಕ್ಕರೆಯ ದರ ಮಣಕ್ಕೆ ರೂ ೪-೫ ಇದೆ ಇನ್ನೂ ಸಕ್ಕರೆಯ ದರ ಏರುವದಾಗಿ ಹೇಳುತ್ತಾರೆ. ಸಕ್ಕರೆಗಿಂತ ಬೆಲ್ಲದಲ್ಲಿ ಮಾನವ ದೇಹದ ಬೆಳವಣಿಗೆಗೆ ಅವಶ್ಯವುಳ್ಳ ಪೌಷ್ಟಿಕ ದ್ರವ್ಯಗಳು ಹೆಚ್ಚೆಚ್ಚಾಗಿ ಇರುತ್ತವಾಗಿ ರಸಾಯನಶಾಸ್ತ್ರಕಾರರು ಸಿದ್ಧಗೊಳಿಸಿದ್ದುಂಟು ಮಹಾತ್ಮರ ಅಖಿಲ ಭಾರತೀಯ ಗ್ರಾಮ-ಕೈಗಾರಿಕೆಯ ಸಂಘಗಳು ಬೆಲ್ಲದ ಪ್ರಚಾರ ಮಾಡುತ್ತಿವೆ ಆದಾಗ್ಯೂ ಜನಗಳಿಗೆ ಬೆಲ್ಲದ ಸವಿ ರುಚಿಯೆನಿಸುವದಿಲ್ಲ ಆದರಿಂದ ಬೆಲ್ಲಕ್ಕೆ ಗಿರಾಕಿ ಕಡಿಮೆ, ಅದು ಕಾರಣ ದರ ಕಡಿಮೆ ಈ ವರದಿಂದ ಬೆಲ್ಲದ ಬೇಸಾಯಗಾರರಿಗೆ ತಮ್ಮ ಕಷ್ಟದ ಪ್ರತಿಫಲ ಸಿಗುವದಿಲ್ಲ ಬೆಲ್ಲದಿಂದ ಸಕ್ಕರೆಯಾಗುತ್ತದೆ ಗ್ರಾಮೋದ್ಯೋಗ ಪ್ರಚಾರಕರು ಬೆಲ್ಲದಿಂದ ಸಕ್ಕರೆ ಮಾಡುವ ಸುಲಭ ಸಾಹಿತ್ಯಗಳನ್ನು ಪರಿಶೋಧಿಸಿರುತ್ತಾರೆ ವರ್ಧಾದಲ್ಲೂ ಸಾಬರಮತಿಯಲ್ಲೂ ಇವು ಪ್ರಚಾರದಲ್ಲಿರುವದಾಗಿ ತಿಳಿಯುತ್ತದೆ. ಗ್ರಾಮೋದ್ಧಾರಕ್ಕೆ ಸಂಬಂಧಪಟ್ಟ ವಿಷಯವಿದು ಬೆಲ್ಲದಿಂದ ಸಕ್ಕರೆ ಮಾಡುವ ಉದ್ದಿಮೆಯನ್ನು ನಮ್ಮಲ್ಲಿಯ ಗ್ರಾಮ ನಿವಾಸಿಗಳಿಗೆ ಕಲಿಸಿಕೊಟ್ಟರೆ ಬೆಲ್ಲಕ್ಕೆ ಗಿರಾಕಿ ಹೆಚ್ಚುವದು. ಸಕ್ಕರೆಗಾಗಿ ವಿದೇಶದ ಮೇಲೆ ಅವಲಂಬಿಸಿರುವ ಮತ್ತು ಅದಕ್ಕಾಗಿ ಹೆಚ್ಚು ದ್ರವ್ಯ ಕೊಡುವ ಪ್ರಸಂಗ ತಪ್ಪುವದು. ನಿರುದ್ಯೋಗಿ ಗ್ರಾಮ-ನಿವಾಸಿಗಳಿಗೆ ಒಂದು ಉದ್ದಿಮೆ, ಕೈಗಾರಿಕೆ ದೊರಕಿಸಿ ಕೊಟ್ಟಂತಾಗುವದು.

⁂

ಮುಂಬಯಿಯೊಳಗಿನ "ಕರ್ನಾಟಕ ಸಂಘ"ದವರು ಹಿಂದುಸ್ಥಾನ ಸರಕಾರದ ವಾಹನ ಇಲಾಖೆಗೆ ಮಾಡಿದ ಸೂಚನೆ ವಿಚಾರಾರ್ಹವಿದೆ. ಕರ್ನಾಟಕ ಸಂಘದವರು ಮುಂಬಯಿಯ ರಾವಬಹಾದ್ದೂರ ಡಿ. ವ್ಹಿ. ನಾಡಕರ್ಣಿಯವರ ಅಧ್ಯಕ್ಷತೆಯಲ್ಲಿ ಚೌಕಶಿ ಮಂಡಳವೊಂದನ್ನು ನೇಮಿಸಿ ನಮ್ಮ ಉತ್ತರ-ದಕ್ಷಿಣ ಕನ್ನಡ ಜಿಲ್ಲೆಗಳ ಪ್ರವಾಸ-ಕಷ್ಟಗಳನ್ನು ನೀಗಿಸಲು ಮುಂಬಯಿ ಸರಕಾರದ ಕಡೆಗೂ ಹಿಂದುಸ್ಥಾನ ಸರಕಾರದ ಕಡೆಗೂ ಶಿಫಾರಸು ನಡಿಸಿದರು. ಉಗಿಹಡಗಗಳ ಅಭಾವದಲ್ಲಿ, ಪೆಟ್ರೋಲಿನ ಬರಗಾಲದಲ್ಲಿ ಈ ಎರಡು ಜಿಲ್ಲೆಯವರು ಹೊರ ಪ್ರಯಾಣ ಮಾಡುವದು ಕಷ್ಟಕರವಾಗಿದೆ. ಖರ್ಚು ಹೆಚ್ಚು, ಕಷ್ಟ ಹೆಚ್ಚು. ಆದರಿಂದ ೧-೨ ಉಗಿಹಡಗಗಳನ್ನಾದರೂ ನಮ್ಮಲ್ಲಿಯ ಓಡಾಟಕ್ಕೆ ಬಿಡುಗಡೆ ಮಾಡಬೇಕಾಗಿ ಈ ಚೌಕಶಿ ಮಂಡಳದವರು ಬಹಳ ಪ್ರಯತ್ನ ಮಾಡಿದರು. ಆದರೆ ಈ ತನಕ ಉಗಿಹಡಗಗಳು ಇಲ್ಲಿಯ ಪ್ರವಾಸಕ್ಕೆ ಸಿಗಲಿಲ್ಲ; ಈಗಂತು ಸಿಗುವ ಆಶೆಯೇ ಇಲ್ಲ. ಆದರಿಂದ ಮುಂಬಯಿಗೆ ಹೋಗುವವರು ಕರಾವಳಿಯಿಂದ ಘಟ್ಟ ಹತ್ತಿ ಅಲ್ಲಿಂದ ಪಯಣ ಬೆಳಸಿ ಪುನಃ ಇಳಿದು ಮುಂಬಯಿಗೆ ತಲ್ಪಬೇಕು. ಹೀಗೆ ಸುತ್ತು ಹಾಕಿ ಪ್ರವಾಸ ಮಾಡಬೇಕಾಗುತ್ತದೆ. ಆದರಿಂದ ಮುಂಬಯಿಯಿಂದ ಮಂಗಳೂರ ತನಕ ಕರಾವಳಿಯ ಗುಂಟ ಉಗಿಬಂಡಿಯ ಮಾರ್ಗವನ್ನು ಕಟ್ಟಿಸಿದರೆ ನೇರವಾಗಿ ಪ್ರಯಾಣ ಮಾಡಲಿಕ್ಕೆ ನಮ್ಮ ಜಿಲ್ಲೆಯವರಿಗೂ ಕರಾವಳಿಯವರಿಗೂ ಅನುಕೂಲವಾಗುವಂತಿದೆ. ಮಳೆಗಾಲ-ಬೇಸಿಗೆ, ಯುದ್ಧ ಶಾಂತತೆ ಎಲ್ಲ ದಿನಮಾನಗಳಲ್ಲಿ, ಎಲ್ಲ ಕಾಲಮಾನಗಳಲ್ಲಿ ಸುಸೂತ್ರ ಪ್ರಯಾಣ ಮಾಡಲು ಅನುಕೂಲವಾಗುವ ಹಾಗೆ ಏರ್ಪಾಟಾಗಬೇಕಾಗಿ ಮುಂಬಯಿಯ ಕರ್ನಾಟಕ ಸಂಘದವರು ಹಿಂದುಸ್ಥಾನ ಸರಕಾರಕ್ಕೆ ಮಾಡಿದ ಸೂಚನೆ ಕಾಲೋಚಿತವಾದುದು. ಸಂಘದವರು ಅಭಿಪ್ರಾಯಪಟ್ಟಂತೆ ಈ ವಿಷಯವನ್ನು ಸರಕಾರವು ವಿಶಾಲ ದೃಷ್ಟಿಯಿಂದ ಆಲೋಚಿಸುವದಿದೆ.

⁂

ನಮ್ಮ ಜಿಲ್ಲೆಯೊಳಗೆ ಗೋಧನ ಕಡಿಮೆಯಾಗಲು ಜಂಗಲ ಇಲಾಖೆಯ ಧೋರಣವೇ ಕಾರಣವೆಂದು ಸಾಮಾನ್ಯವಾಗಿ ಲೋಕಪ್ರವಾದವಿದೆ. ೧೯೨೮ನೇ ಇಸ್ವಿಯಲ್ಲಿ ಹಿಂದುಸ್ಥಾನ ಸರಕಾರದ ಬೇಸಾಯ ಮಂಡಳದವರು ಚೌಕಶಿ ಮಾಡಿ ಗೋವುಗಳ ಬೆಳವಣಿಗೆಗೆ ೪ ನಮೂನೆಯಿಂದ ಅನುಕೂಲತೆಗಳನ್ನು ಒದಗಿಸಿಕೊಡಬೇಕಾಗಿ ಶಿಫಾರಸು ಮಾಡಿದ್ದರು. ದನಗಳಿಗೆ ಮೇಯಲು ಹೆಚ್ಚು ಪ್ರದೇಶವಿರಬೇಕು. ಜಪಾನ, ಜರ್ಮನಿ, ಬ್ರಿಟನ, ಅಮೇರಿಕೆ ಮೊದಲಾದ ದೇಶಗಳಲ್ಲಿ ದನಗಳಿಗೆ ಮೇಯಲು ತುಂಬ ಸ್ಥಳಾನುಕೂಲತೆಯುಂಟು. ಬೇಸಾಯ ಮಾಡುವ ಪ್ರತಿ ೬ ಎಕರೆಗೆ ೧ ಎಕರೆ ಮೇವು-ಕ್ಷೇತ್ರ ಜಪಾನ ಜರ್ಮನಿಗಳಲ್ಲುಂಟು. ಬ್ರಿಟನಿನಲ್ಲಿ ಪ್ರತಿ ೩ ಎಕರೆಗೆ ೧ ಎಕರೆ ಮೇವು ಕ್ಷೇತ್ರವಿದೆ. ಅಮೇರಿಕೆಯಲ್ಲಿ ಪ್ರತಿ ೧೬ ಎಕರೆಗೆ ೧ ಎಕರೆಯಂತೆ ಮೇವು-ಕ್ಷೇತ್ರವಿದೆ. ಆದರೆ ಹಿಂದುಸ್ಥಾನದಲ್ಲಿ ಪ್ರತಿ ೭೭ ಎಕರೆಗೆ ೧ ಎಕರೆ ಮೇವು-ಕ್ಷೇತ್ರ ಇದೆ. ನಮ್ಮ ಜಿಲ್ಲೆಯೊಳಗೆ ಇದಕ್ಕೂ ಕಡಿಮೆ ಪ್ರಮಾಣದಿಂದ ಮೇವಿನ ಕ್ಷೇತ್ರವಿರಬೇಕು. ದನಗಳಿಗೆ ಮೇಯಲು ಯಾವದೇ ಪ್ರತಿಬಂಧವಿರಬಾರದಾಗಿ ಹಿಂದುಸ್ಥಾನ ಸರಕಾರದ ಬೇಸಾಯ ಮಂಡಳದ ಕಟ್ಟಪ್ಪಣೆ. ಸ್ಥಳಿಕ ಅಧಿಕಾರಿಗಳೂ ಲೋಕಲ ಬೋರ್ಡುಗಳೂ ಮೇವಿನ ಪ್ರದೇಶಗಳನ್ನು ಜನಗಳಿಗೆ ವಿಂಗಡಿಸಿಕೊಟ್ಟು ಅವನ್ನು ಕಾಪಾಡಬೇಕಾಗಿ ಬೇಸಾಯ ಮಂಡಳದ ಸಲಹೆ. ಸರಕಾರಿ ಪಡಭೂಮಿಗಳನ್ನು ಜಂಗಲ ಇಲಾಖೆಯವರು ಬೇಸಾಯ ಇಲಾಖೆಯ ಸಹಕಾರದಿಂದ ಸುಧಾರಿಸಿ ಅವುಗಳಲ್ಲಿ ಮೇವು ಬೆಳಸಿ ದನಗಳಿಗೆ ಮೇಯಲು ಬಿಡಬೇಕಾಗಿ ಅದೇ ಮಂಡಳದ ಎರಡನೇ ಶಿಫಾರಸು. ಈ ಶಿಫಾರಸನ್ನು ನಮ್ಮ ಜಿಲ್ಲೆಯೊಳಗಿನ ಜಂಗಲ ಅಧಿಕಾರಿಗಳು ಪರಾಂಬರಿಸಿದ್ದಾರೆಂದು ಹೇಳುವದು ಕಠಿಣ. ಮೇವಿನ ಪ್ರದೇಶಗಳನ್ನು ಸರಿಯಾಗಿ ಊರ್ಜಿತ ಸ್ಥಿತಿಯಲ್ಲಿ ಕಾಪಾಡುವದಕ್ಕಾಗಿ ಜಿಲ್ಹಾ ಲೋಕಲ್ ಬೋರ್ಡುಗಳು ಉಪಾಯಗಳನ್ನು ಕೈಕೊಳ್ಳತಕ್ಕದ್ದೆಂಬ ಮೂರನೇ ಶಿಫಾರಸನ್ನು ನಮ್ಮ ಜಿಲ್ಹಾ ಲೋಕಲ್ ಬೋರ್ಡು ಪಾಲಿಸಿದ್ದು ಕಂಡು ಬರುವದಿಲ್ಲ. ಸರಕಾರವೂ ಲೋಕಲ ಬೋರ್ಡುಗಳೂ ದನಗಳ ಮೇವಿಗಾಗಿ ಅವಶ್ಯವಿರುವ ಪ್ರದೇಶಗಳನ್ನು ಜನರಿಂದ ಪ್ರತಿಫಲ ಕೊಟ್ಟು ಪಡೆಯಬೇಕೆಂಬ ೪ನೇ ಶಿಫಾರಸಂತು ಜಾರಿಯಲ್ಲಿ ಬರಲಿಲ್ಲ. ೧೯೨೬ನೇ ಇಸ್ವಿಯಲ್ಲಿ ಈಗ ಸರ್ವಾಧಿಪತಿಗಳಾಗಿರುವ ಲಿನಲಿಥಗೋ ದೊರೆಗಳ ಅಧ್ಯಕ್ಷತೆಯಲ್ಲಿ ನೇಮಿಸಿದ ಬೇಸಾಯ ಕಮಿಶನಿನಲ್ಲೂ ಇದೇ ಶಿಫಾರಸು ಮಾಡಲ್ಪಟ್ಟಿದೆ. ಗ್ರಾಮಗಳ ಸುತ್ತುಮುತ್ತಲಿರುವ ಪ್ರದೇಶಗಳನ್ನು ದನಗಳ ಮೇವಿಗೆ ತಕ್ಕದ್ದಾಗಿ ಮಾರ್ಪಡಿಸಲಿಲ್ಲ. ದನಗಳ ಪೀಳಿಗೆಯನ್ನು ಸುಧಾರಿಸಬೇಕೆಂಬ ಮಾತು ನಿಜ. ಆದರೆ ದನಗಳ ಮೇವಿನ ಏರ್ಪಾಟು ಮಾಡಿ ಅವುಗಳಿಗೆ ತುಂಬಾ ಮೇವು ಸಿಗುವ ವ್ಯವಸ್ಥೆ ಮಾಡದ ಪೀಳಿಗೆಯನ್ನು ಸುಧಾರಿಸಬಯಸುವದು ವ್ಯವಹಾರಿಕವಲ್ಲವೆಂದು ಕಮಿಶನಿನ ಅಂಬೋಣ. ನಮ್ಮ ಜಿಲ್ಲೆಯೊಳಗೆ ಜನವಸತಿಗಿಂತ ಜಾನುವಾರ-ವಸತಿಯ ಪ್ರದೇಶವೇ ಹೆಚ್ಚು. ೪ ಪಾಲು ಅಡವಿ, ೧ ಪಾಲು ಗ್ರಾಮವಸತಿ. ನಮ್ಮ ಜಿಲ್ಲೆಯಲ್ಲಿ ಮೇವು ಪ್ರದೇಶವನ್ನು ಬೆಳಸಲಿಕ್ಕೆ ತುಂಬ ಅವಕಾಶವುಂಟು. ಮೇವು ಪ್ರದೇಶ ಬೆಳಸಿ ದನಗಳ ಹೊಟ್ಟೆಯ ಏರ್ಪಾಟು ಮಾಡದೆ ದನಗಳ ಅಭಿವೃದ್ಧಿಯನ್ನು ಬಯಸುವದೂ ಪೀಳಿಗೆಯನ್ನು ಸುಧಾರಿಸಬಯಸುವದೂ ಅಯೋಗ್ಯವೆಂದು ಬೇಸಾಯ ಕಮಿಶನಿನ ಅಭಿಪ್ರಾಯ. ೧೯೩೭ನೇ ಇಸವಿಯಲ್ಲಿ ಬೇಸಾಯ ಮತ್ತು ದನಗಳ ಮಂಡಳದವರು ಒಂದು ಪ್ರಾಥಮಿಕ ಸಭೆಯನ್ನು ಸೇರಿಸಿ ದನಗಳ ಬೆಳವಣಿಗೆಯ ವಿಚಾರ ಮಾಡಿದ್ದಾರೆ. ಸರಕಾರದ ಯಾವತ್ತೂ ಇಲಾಖೆಗಳ ಮುಖ್ಯಾಧಿಕಾರಿಗಳು ಒಂದು ಮಂಡಳವನ್ನು ನೇಮಿಸಿಕೊಂಡು ಘೋಲಿನ ವ್ಯವಸ್ಥೆ ಮಾಡಲು ಉಪಾಯ ಯೋಜನೆ ಮಾಡತಕ್ಕದ್ದೆಂದು ಈ ಸಭೆಯ ನಿರ್ಣಯ. ದನಗಳ ಮೇವಿಗೆ ಯೋಗ್ಯವಾದ ಸ್ಥಳಗಳನ್ನು ಹುಡುಕಿ ಅವುಗಳ ಆಡಕತೆಯ ಬಗ್ಗೆ ತಕ್ಕ ಆಡಳಿತೆದಾರರನ್ನು ನೇಮಿಸಬೇಕೆಂದು ಸಹ ಈ ಸಭೆಯ ಸಲಹೆ. ೧೯೩೬ನೇ ಇಸ್ವಿಯಲ್ಲಿ ಡಾ॥ ರೈಟರವರು ದನಗಳ ಮತ್ತು ಹಾಲಿನ ಪದಾರ್ಥಗಳ ಉತ್ಪತ್ತಿಯ ಬಗ್ಗೆ ಒಂದು ವರದಿ ಮಾಡಿದ್ದಾರೆ. ಅದರೊಳಗೂ ಡಾ। ರೈಟರು ದನಗಳಿಗೆ ಸಿಗುವ ಮೇವು-ಕ್ಷೇತ್ರದ ಮೇಲೆಯೇ ಹೆಚ್ಚಿನ ಕಟಾಕ್ಷವಿಟ್ಟಿದ್ದಾರೆ. ಬೇಸಾಯಗಾರರು ಕೃಷಿಯನ್ನೂ ಗೋವುಗಳನ್ನೂ ಸಾಕಿ ಜೋಪಾನ ಮಾಡಿದರೆ ಬೇಸಾಯಗಾರರಿಗೆ ಕ್ಷೇಮವಾಗುವದಾಗಿ ಸೂಚಿಸಿದ್ದಾರೆ. ದನಗಳಿಗೆ ತಕ್ಕಷ್ಟು ಮೇವು ಸಿಗದಿದ್ದರೆ ಮೇವು ಒದಗುವಂತೆ ಅದನ್ನು ಕ್ಲಪ್ತ ಪ್ರದೇಶದ ಮೇಲೆ ಬೆಳಸುವ ಯೋಜನೆಯಾಗಬೇಕಾಗಿ ಸಹ ಡಾ॥ ರೈಟರ ಸೂಚನೆಯುಂಟು. ನಮ್ಮ ಜಿಲ್ಲೆಯೊಳಗೆ ದನಗಳಿಲ್ಲ. ಇದ್ದ ದನಗಳು ಸೊರಗಿವೆ, ಅವು ತಕ್ಕಷ್ಟು ಹಾಲು ಹಿಂಡುವದಿಲ್ಲ; ಅವನ್ನು ಸಲಹುವದು ಲಾಭಕರವಲ್ಲ, ಇವೇ ಮೊದಲಾದ ದೂರುಗಳು ಕೇಳ ಬರುತ್ತಿವೆ. ಮುಂಚೆ ಇದ್ದ ದನಗಳ ಮೇವಿನ ಕ್ಷೇತ್ರ ಜಂಗಲ ಖಾತೆಯ ನಿತಾಂತ ಸ್ವಾರ್ಥಪರಾಯಣತೆಯ ಧೋರಣದ ಮೂಲಕ ಕ್ರಮವಾಗಿ, ಸ್ಥಿರವಾಗಿ ಕುಗ್ಗಿತು. ದನಗಳಿಗೆ ಕೈ-ಕಾಲುಬಿಟ್ಟು ಓಡಾಲು ಸ್ಥಳಾನುಕೂಲತೆಯಿಲ್ಲ, ಮೇವು ಸಿಗುವದಿಲ್ಲ. ಜಂಗಲ ಇಲಾಖೆಯವರು ಬಿಟ್ಟ ಮೇವಿನ ಪ್ರದೇಶ ಬರೇ ಬೋಳುಗುಡ್ಡ, ಮರುಭೂಮಿಗಿಂತ ಕಡೆ. ಬೇಸಾಯ ಇಲಾಖೆಯವರೂ ಜಂಗಲ ಇಲಾಖೆಯವರೂ ಒಮ್ಮೆ ಈ ವಿಷಯವನ್ನು ಪರಾಂಬರಿಸಬಹುದಾಗಿದೆ. ಮುಖ್ಯ ಅಧಿಕಾರಿಗಳೂ ದನಗಳ ಮೇವಿಗೆ ಬಿಟ್ಟ ಕ್ಷೇತ್ರವನ್ನು ಒಮ್ಮೆ ಸಂದರ್ಶಿಸಿ ಅಲ್ಲಿ ಮೇವು ಬೆಳೆಯುತ್ತದೇನೆಂಬದರ ಕುರಿತು ಖಾತ್ರಿ ಮಾಡಿಕೊಳ್ಳಬಹುದು. ನಮ್ಮ ಜಿಲ್ಲೆಯ ಮಾನದಿಂದ ಸಾಗಭೂಮಿಗೂ ಮೇವಿನ ಭೂಪ್ರದೇಶಕ್ಕೂ ಇರತಕ್ಕ ಪ್ರಮಾಣವನ್ನು ನಿಶ್ಚಯಿಸಿ ಆ ಪ್ರಮಾಣದಂತೆ ಭೂಪ್ರದೇಶವನ್ನು ಮೇವಿನ ಬಗ್ಗೆ ವಿಂಗಡಿಸಿ ಕೊಡಬಹುದು. ಹಿಂದುಸ್ಥಾನ ಸರಕಾರದ ಮತ್ತು ಆ ಸರಕಾರವು ನೇಮಿಸಿದ ಬೇಸಾಯ ಮಂಡಳದ ಶಿಫಾರಸುಗಳನ್ನು ನಮ್ಮ ಜಿಲ್ಲೆಯೊಳಗಿನ ಜಂಗಲ ಅಧಿಕಾರಿಗಳು ಮನನ ಮಾಡಬಹುದಾಗಿದೆ.

ಮುಂಬಯಿ ಸರಕಾರವು ಹುಲ್ಲಿನ ಪ್ರದೇಶಗಳನ್ನು ಮಕ್ತೇದಾರರಿಗೆ ಮಾರಾಟ ಮಾಡಬೇಕಾಗಿ ನಿರ್ಧರಿಸಿರುವದಾಗಿ ತಿಳಿಯುತ್ತದೆ. ಗ್ರಾಮದವರಿಂದಾಗಲಿ ಸಾರ್ವಜನಿಕ ಸಂಸ್ಥೆಗಳಿಂದ ಕೊಳ್ಳಲ್ಪಡದ ಹುಲ್ಲು-ಪ್ರದೇಶವನ್ನು ಸರಕಾರವು ಮಾರಾಟ ಮಾಡಬಯಸುತ್ತದೆ. ಕಾಗದದ ಮೇಲೆ ಈ ಯೋಜನೆ ನಿರಪಾಯವಾದದ್ದೆಂದು ಕಾಣುತ್ತದೆ. ಆದರೆ ಪ್ರತ್ಯಕ್ಷ ಆಚಾರದಲ್ಲಿ ಈ ಕ್ರಮ ನಮ್ಮ ಜಿಲ್ಲೆಯೊಳಗೆ ಲೋಕಕಂಟಕವಾಗುವದು. ದನಗಳಿಗೆ ಸಾಕಷ್ಟು ಮೇವು ಪ್ರದೇಶವಿಲ್ಲವೆಂಬದೊಂದು ಮಾತು ಪ್ರತ್ಯೇಕ. ಹಿಂದುಸ್ಥಾನದೊಳಗೆ ಸಾಗುವಳಿ ಕ್ಷೇತ್ರಕ್ಕೂ ಹುಲ್ಲಿನ ಕ್ಷೇತ್ರಕ್ಕೂ ತೀರ ಕಡಿಮೆ ಪ್ರಮಾಣವಿರುವದೆಂದು ಮೇಲ್ಕಾಣಿಸಿಯದೆ. ಹೆಚ್ಚಿನ ಪ್ರದೇಶ ದನಗಳಿಗೆ ಮೇಯಸಿಕ್ಕ ಹಾಗೆ ದನಗಳು ನಿಸರ್ಗದೊಡನೆ ಐಕ್ಯವಾಗಿ ಬಲು ಬೇಗ ಬೆಳೆಯುತ್ತವೆ. ಹುಲ್ಲು ಪ್ರದೇಶ ಎಂದಿಗೂ ಗ್ರಾಮ-ನಿವಾಸಿಗಳಿಗೆ ಬೇಕಷ್ಟು ಉಳಿಯಲಾರದು. ಈ ವಿಚಾರ ಹಿಡಿದರೆ ಸರಕಾರದ ದುಡ್ಡು ಸಂಪಾದಿಸುವ ಕ್ರಮ ತಾನಾಗಿಯೇ ಆಕ್ಷೇಪಾರ್ಹವಾಗುತ್ತದೆ. ಮತ್ತೊಂದು ವಿಚಾರವೇನಂದರೆ, ಹುಲ್ಲು ಪ್ರದೇಶವನ್ನು ಮಾರಾಟ ಮಾಡಬೇಕೆಂದೊಡನೆ ಚಲೋ ಹುಲ್ಲು ಬೆಳೆಯುವ ಪ್ರದೇಶವೇ ಮಾರಾಟವಾಗಿ ಬೋಳು ಪ್ರದೇಶ, ಮರು ಪ್ರದೇಶ ಮಾತ್ರ ಜನಗಳ ಪಾಲಿಗೆ ಉಳಿಯುವದು. ಇನ್ನೊಂದು ಮಾತೇನಂದರೆ – ದನ

(೯ನೇ ಪುಟದ ಮೇಲೆ ಮುಂದುವರಿದಿದೆ.)

ಕಾನಡಾವೃತ್ತ.

ಮಿತಿ ವೃಷ ಸಂವತ್ಸರ ಮಾರ್ಗಶೀರ್ಷ ಬ|| ೧೩ರ ಸೋಮವಾರ

ಹೊಸ ರಾಜ್ಯಧೋರಣ ಬೇಕು.

ಜಪಾನವು ಯುದ್ಧ ಸೇರಿದ್ದರಿಂದ ಹಿಂದುಸ್ಥಾನದ ಮೇಲಿನ ಸಂಕಟ ಮಿಗಿಲಾಗಿರುವದಾಗಿ ನಾವು ಒಪ್ಪುತ್ತೇವೆ, ಮತ್ತು ನಾವು ಅದನ್ನು ಪ್ರತಿಭಟಿಸುವದಗತ್ಯವೆಂಬುದಕ್ಕೆ ಸಹ ನಮ್ಮ ಒಪ್ಪಿಗೆಯುಂಟು. ಆದರೆ ಪಂ|| ಜವಾಹಿರಲಾಲರು ನುಡಿದಂತೆ ಸ್ವತಂತ್ರ್ಯದ ಮೂಲತತ್ವವನ್ನು ಕಣ್ಮರೆ ಮಾಡಿ ಯುದ್ಧಪ್ರಯತ್ನಕ್ಕೆ ನಮ್ಮ ಹಿಂದೀ ಜನಾಂಗ ಉತ್ಸಾಹಪಡುವದಿಲ್ಲವಾಗಿ ನಮಗೂ ಅನಿಸುತ್ತಿದೆ. ಸಾಮ್ರಾಜ್ಯ ಸರಕಾರಕ್ಕಾದರೂ ಈ ಭಾವನೆಯುಂಟೆಂದು ನಮ್ಮ ನಿಶ್ಚಿತಾಭಿಪ್ರಾಯ. ಬ್ರಿಟಿಶ ಸರಕಾರವು ಜರ್ಮನಿಯ ಮೇಲೆ ಯುದ್ಧಘೋಷಣ ಮಾಡಿದೊಡನೆ ನಮ್ಮ ಹಿಂದುಸ್ಥಾನದ ಸರ್ವಾಧಿಪತಿ ಲಿನಲಿಥಗೋ ದೊರೆಗಳು ನಮ್ಮ ಹಿಂದೀ ಜನಾಂಗದ ಪರವಾಗಿ ಹಿಂದೀ ಲೋಕಪ್ರಮುಖರನ್ನು ಹೇಳದೆ ಕೇಳದೆ ಯುದ್ಧಘೋಷಣೆ ಮಾಡಿ ಹಿಂದೀ ಜನಾಂಗದ ಅಸ್ತಿತ್ವವನ್ನು ನಿರಾಕರಿಸಿ ನಮ್ಮ ಹಿಂದೀ ಲೋಕದೊಳಗ ಉಂಟು ಮಾಡಿದ ಹಾವಳಿಯನ್ನೂ ಆ ಮೇಲೆ ನಮ್ಮ ಜನಾಂಗದಲ್ಲಿ ಉಂಟಾದ ಲೋಕಕ್ಷೋಭವನ್ನೂ ನಾವು ಪುನಃ ನೆನಿಸುವದಗತ್ಯವಿಲ್ಲ. ಈಗ ಜಪಾನದೊಡನೆ ಬ್ರಿಟಿಶರು ಯುದ್ಧಘೋಷಣೆ ಮಾಡಿದ್ದಾರಷ್ಟೇ. ಆದರೆ ಹಿಂದುಸ್ಥಾನ ಸರಕಾರವು ಆದರ ಪ್ರತಿಧ್ವನಿಯನ್ನು ಹಿಂದುಸ್ಥಾನದಲ್ಲಿ ಇನ್ನೂ ಮಾಡದೆ ವಿಚಾರಮಗ್ನವಾಗಿದೆ. ಬ್ರಿಟಿಶ ಮುಖ್ಯ ಪ್ರಧಾನರಾದ ಚರ್ಚಿಲ್ಲರು ಪಾರ್ಲಿಮೆಂಟಿನ ಸಭೆಯನ್ನು ಸೇರಿಸಿ ಯುದ್ಧಘೋಷಣ ಮಾಡಿದಂತೆ ವರಿಷ್ಠ ಕಾಯಿದೆ ಕೌನ್ಸಿಲಿನ ವಿಶೇಷ ಅಧಿವೇಶನ ಸೇರಿಸಿ ಹಿಂದುಸ್ಥಾನ ಸರಕಾರವು ಜಪಾನದ ವಿರುದ್ಧ ಯುದ್ಧಘೋಷಣೆಯನ್ನು ಮಾಡಬಯಸುತ್ತದಾಗಿ ಸರಕಾರ-ಪಕ್ಷಪಾತಿ ಎಸೋಸಿಯೇಟೆಡ ಪ್ರೆಸ್ ಸಂಸ್ಥೆಯ ದಿಲ್ಲಿಯ ಸುದ್ದಿಗಾರರು ಪ್ರಕಟಿಸುತ್ತಾರೆ. ಸರ್ವಾಧಿಪತಿ ಲಿನಲಿಥಗೋ ದೊರೆಗಳು ಈವಾಗ ದಿಲ್ಲಿಯಲ್ಲಿ ಇರುವದಿಲ್ಲ, ಪಂಜಾಬದಲ್ಲಿ ಸಂಚರಿಸುತ್ತಿದ್ದಾರೆ. ಹಿಂದುಸ್ಥಾನ ಸರಕಾರದ ಕಾರ್ಯಕಾರಿ ಮಂಡಳದವರು ಆಲೋಚನೆ ಮಾಡಿ ಮುಂದಿನ ಕ್ರಮವನ್ನು ನಿರ್ಧರಿಸುವರಾಗಿ ದಿಲ್ಲಿಯೊಳಗ ವಾರ್ತೆಯುಂಟು. ಹಿಂದುಸ್ಥಾನ ಸರಕಾರವು ಈ ಉಚಿತ ಕ್ರಮವನ್ನು ಕೈಕೊಂಡು ಹಿಂದುಸ್ಥಾನಕ್ಕೆ ಸ್ವತಂತ್ರದ ಗ್ರಹಿಕ ಕೊಡುತ್ತದಾಗಿ ನಾವು ತಿಳಿದು ಸಮಾಧಾನಪಡುತ್ತೇವೆ. ಹಿಂದುಸ್ಥಾನ ಸರಕಾರದ ಕಾನೂನಿನಲ್ಲಿ ತಿದ್ದುಪಾಟಿಗಳನ್ನು ಮಾಡಲು ಈವಾಗ ಸಾಧ್ಯವಿಲ್ಲದಿದ್ದರೆ ಸಾಮ್ರಾಜ್ಯ ಸರಕಾರದ ಗಾಲಿ ನಮ್ಮ ಒತ್ತಾಯವಿಲ್ಲ. ಆದರೆ ಅಲ್ಲಿಯ ತನಕ ಉಪಕಾರದಿಂದ ಕೃತಿಯಿಂದ ಹಿಂದುಸ್ಥಾನ ಸರಕಾರವು ಹಿಂದೀ ಜನಾಂಗದ ಸರ್ವಾಭಿಮತವನ್ನು ಮನ್ನಿಸಿ ನಡಕೊಳ್ಳುವ ಪರಂಪರೆಯನ್ನು ನಿರ್ಮಿಸಿದರೆ ತನಗಾಗಿಯೇ ಹೊಸ ರಾಜ್ಯಭಾರ ರೂಢಿಸಾಗುವಂತೆ ಇದಂತೆಯೂ ಇರಗೊಡಿಸಿ, ಒಂದು ಯುದ್ಧವನ್ನು ಗೆದ್ದುಕೊಳ್ಳದೆ, ಎದುರಿಗೆ ಬಂದು ಬೀಳುತ್ತಿದ್ದ ಸಂಕಟವನ್ನು ನಿವಾರಿಸಿಕೊಳ್ಳುವಾ, ಆ ವೇಳೆ ಎಲ್ಲಿ ವಿಚಾರ ಮಾಡುವಾ ಎಂಬ ವೇದಾಂತ ಈವಾಗ ಕಾರ್ಯಕ್ಷಮವಾಗಲಾರದು. ಯುದ್ಧವನ್ನು ನಾವು ಗೆಲ್ಲಬೇಕು. ಮಾತು ನಿಶ್ಚಯವಾದದ್ದು. ಹಿಟ್ಲರನು ಸ್ವೈರ ಸ್ವಾರ್ಥ ಬೇಕೆಂದು ನಿರಂಕುಶ ಪ್ರಭುತ್ವವನ್ನು ದಿಕ್ಕುದಿಕ್ಕಿನ ಮೆರೆಸಲು ಕಾತರಿಸುತ್ತಾನೆ. ಆದ ನಾಶಕ್ಕಾಗಿ ಜಪಾನ ಪಕ್ಕದಲ್ಲಿ ಒದಗಿದಂತೆ ಹಿಟ್ಲರನ ಸಾಮ್ರಾಜ್ಯದ ನಿರ್ಮೂಲವಾದನಂತರ ಜಗತ್ತಿನ ರಕ್ಷಣೆಯಾದಂದು ನಾವು ಒಡಂಬಡುತ್ತೇವೆ. ಹೊಸ ಜಗತ್ತಿನ ತತ್ವದಿ ಸ್ವಸ್ವತಂತ್ರ, ಲೋಕಸತ್ತಾತ್ಮಕವೆಂದು ಅಟ್ಲಾಂಟಿಕ ಮಹಾಸಾಗರದಿಂದ ಮಾಡಿದ ಚರ್ಚಿಲ್ಲ ರೂಸ್ವೆಲ್ಟರ ಘೋಷಣೆಗಳಲ್ಲಿ ಸ್ಪಷ್ಟವಾಗಿ ನಿರ್ದೇಶಿಸಿದ್ದು ಆ ತತ್ವ ಹಿಂದುಸ್ಥಾನಕ್ಕೆ ಅನ್ವಯಿಸಿ ಅವುಗಳಂತೆ ರಾಜ್ಯಭಾರ ರೂಪವಾಗುತ್ತಿದ್ದರೆ ನಮ್ಮ ಹಿಂದೀ ಜನಾಂಗವು ಅಂತಃಕರಣಪೂರ್ವಕವಾಗಿ ಯುದ್ಧವನ್ನು ಪ್ರತಿಭಟಿಸಲು ಮುಂದಾಗಬಲ್ಲದು. ಆ ಮೂಲತತ್ವದ ಉಲ್ಲಕ್ಷವಾಗುತ್ತಿದ್ದರೆ ಯುದ್ಧಪೂರ್ವಸ್ಥಿತಿಯೇ ಯುದ್ಧೋತ್ತರ ನಡೆಯಬೇಕಾಗಿದ್ದರೆ ರಾಷ್ಟ್ರೀಯ ಸಭೆಯವರು ಯುದ್ಧಕಾರ್ಯದಲ್ಲಿ ಸೇರಲಿಕ್ಕೆ ಎಷ್ಟರಮಟ್ಟಿಗೆ ಒಡಂಬಡುವದಿಲ್ಲ. ಸತ್ಯಾತ್ಮಕ ವಿರೋಧ ಇಂದಿನಂತೆ ಮುಂದೆಯೂ ನಡೆಯುವದು. ಒದಗಿದ ಯುದ್ಧಕಾರಣದಿಂದ ಸತ್ಯಾಗ್ರಹದ ಧೋರಣದಲ್ಲಿ ತಿದ್ದುಪಾಟು ಮಾಡುವ ಕಾರಣವಿಲ್ಲವಾಗಿ ಪಂ|| ಜವಾಹಿರಲಾಲರು ಹೇಳಿದ ಮಾತನ್ನು ಲಕ್ಷಿಸಲು ನಾವು ಸಾಮ್ರಾಜ್ಯಕರ್ತರಿಗೆ ವಿನಯಪೂರ್ವಕ ಪ್ರಾರ್ಥಿಸಿಕೊಳ್ಳುತ್ತೇವೆ. ಹಿಂದುಸ್ಥಾನದೊಳಗಿನ ಯುದ್ಧಯತ್ನವು ಹೊರ ಕಾರಣಗಳನ್ನು ಹೊಂದಿಕೊಂಡಿಲ್ಲ. ಒಳಸ್ಥಿತಿಯನ್ನೇ ಸರ್ವದಾ ಅವಲಂಬಿಸಿಕೊಂಡಿದೆ. ಹಿಂದುಸ್ಥಾನದೊಳಗಿನ ರಾಜ್ಯಧೋರಣ ಬದಲುತ್ತಿದ್ದರೆ, ಆ ರಾಜ್ಯಧೋರಣದಲ್ಲಿ ಹಿಂದೀ ಪ್ರಮುಖರಿಗೆ ನಿರ್ಣಯಾಧಿಕಾರ ದೊರೆಯುತ್ತಿದ್ದರೆ, ಹಿಂದೀ ಜನಾಂಗವು ಯುದ್ಧಯತ್ನವನ್ನು ಪ್ರಯತ್ನಪೂರ್ವಕವಾಗಿ ನಡಿಸ ಮುಂದಾಗಬಲ್ಲದು. ಪಂ|| ಜವಾಹಿರಲಾಲರು ಈ ಸಂಗತಿಯನ್ನು ಚಿತ್ತಸ್ಪರ್ಶಕವಾಗಿ ಸ್ಫುಟಗೊಳಿಸಿದ್ದಾರೆ. ಹಿಂದುಸ್ಥಾನ ಸರಕಾರದಲ್ಲಿ ಹಿಂದೀಯರು ಸೇರಿದ್ದರಿಂದ ಸರ್ವಾಧಿಪತಿಗಳ ಸರ್ವಾಧಿಕಾರಸ್ಥಾನಕ್ಕೆ ಯಾವದೇ ಪ್ರಕಾರದಿಂದ ಕುಂದು ಬರಲಿಲ್ಲ. ಇಲ್ಲವೆ ಪರತಂತ್ರ ಹಿಂದೀ ಜನಾಂಗಕ್ಕೆ ಯಾವದೇ ಪ್ರಕಾರದಿಂದ ಸ್ವತಂತ್ರ ಅಧಿಕಾರ ಪ್ರಾಪ್ತವಾಗಲಿಲ್ಲ. ರಾಜ್ಯಕಾರಭಾರದ ಶಕ್ತಿ ಮುಂಚೆ ಸರ್ವಾಧಿಪತಿಗಳಲ್ಲಿದ್ದಂತೆ ಈಗಲೂ ಅಲ್ಲಿಯೇ ಠಾಣ್ಯ ಹೂಡಿದ್ದುಂಟು. ಹಿಂದುಸ್ಥಾನ ಸರಕಾರದ ಕಾರ್ಯಕಾರಿ ಸಭಾಸದರು ಲೋಕಪ್ರತಿನಿಧಿಗಳಿಗೆ ಹೊಣೆಗಾರರಾಗಿಲ್ಲ, ಸರ್ವಾಧಿಪತಿಗಳ ಅನುಗ್ರಹದ ಮೇರೆಗೆ ಅವರು ಸರಕಾರದಲ್ಲಿ ಆಸನಸ್ಥರಾಗಿರುತ್ತಾರೆ. ಈ ಸ್ಥಿತಿ ಬದಲಬೇಕು. ರಾಜ್ಯಕಾರಭಾರದ ಶಕ್ತಿ ಬ್ರಿಟಿಶ ಪಾರ್ಲಿಮೆಂಟು, ಸರ್ವಾಧಿಪತಿಗಳೊಳಗಿಂದ ಪಾರಾಗಿ ಹಿಂದೀ ಜನಾಂಗದಲ್ಲಿ, ಹಿಂದೀ ಜನಾಂಗದ ಪ್ರಮುಖರಲ್ಲಿ ಸೇರಬೇಕು, ಅಂದರೆ ಸರ್ವಾಧಿಪತಿಗಳು ಹಿಂದೀ ಲೋಕಸಭೆಯ ಸೇವಕ ಅಡಿಯಾಳುಗಳಾಗಿ ಪರಿಣಮಿಸಬೇಕು. ಹೀಗೆ ರಾಜ್ಯಭಾರದಲ್ಲಿ ರೂಪಾಂತರವಾದರೆ ಸರಕಾರದಲ್ಲಿ ಹಿಂದೀಯರೇ ಇರಲಿ, ಯುರೋಪಿಯನರೇ ಇರಲಿ, ಯಾರೇ ಇದ್ದರೂ ರಾಷ್ಟ್ರೀಯ ಸಭೆಯವರ ಆಕ್ಷೇಪವಿಲ್ಲ. ಅಧಿಕಾರಿ-ವ್ಯಕ್ತಿಗಳ ಮೇಲೆ ರಾಷ್ಟ್ರೀಯ ಸಭೆಯವರ ಕಟಾಕ್ಷವಿಲ್ಲ. ಸರ್ವಾಧಿಪತಿಗಳು ವರಿಷ್ಠ ಕಾಯಿದೆ ಕೌನ್ಸಿಲಿಗೆ ಅಂಕಿತವಾಗಿರುವ ಪ್ರಧಾನ ಮಂಡಳವನ್ನು ರಚಿಸಿಕೊಳ್ಳಲು ಒಡಂಬಡುತ್ತಿದ್ದರೆ ರಾಷ್ಟ್ರೀಯ ಸಭೇತರರನ್ನು, ಏಕೆ, ರಾಷ್ಟ್ರೀಯ ಸಭೆಯ ವಿರೋಧ ಬಗೆಯುವ ಬ್ಯಾ|| ಜಿನ್ನಾರವರನ್ನು ಮುಖ್ಯ ಪ್ರಧಾನರನ್ನಾಗಿ ನೇಮಿಸಿಕೊಳ್ಳಲು ರಾಷ್ಟ್ರೀಯ ಸಭೆಯ ಪರವಾಗಿ ಶ್ರೀ|| ಚಕ್ರವರ್ತಿ ರಾಜಗೋಪಾಲಾಚಾರ್ಯರು ಒಡಂಬಟ್ಟ ಸಂಗತಿ ಈವಾಗ ಲೋಕಪ್ರಸಿದ್ಧವಿದೆ. ಲಖನೌದೊಳಗೆ ಪತ್ರಿಕಾ ಪ್ರತಿನಿಧಿಗಳ ಕಡೆಗೆ ಪಂ|| ಜವಾಹಿರಲಾಲರು ಮಾತನಾಡುವಾಗ ರಾಜ್ಯಭಾರದ ಅಧಿಕಾರವನ್ನು ವರ್ಗಾಯಿಸುವದೇ ರಾಷ್ಟ್ರೀಯ ಸಭೆಗೆ ವಿಚಾರ ವಿಷಯವೆಂದೂ ಆ ಪ್ರಕಾರ ಅಧಿಕಾರ ಸ್ಥಳಾಂತರ ಹೊಂದದಿದ್ದರೆ ಯುದ್ಧಕಾರಣ ಎಷ್ಟು ಅವಸ್ಥಾಂತರ ಹೊಂದಿದಾಗ್ಯೂ ರಾಷ್ಟ್ರೀಯ ಸಭೆಯು ಅಲಿಪ್ತವಾಗಿ ಉಳಿಯುವದೆಂದೂ ನಿರ್ಧಾರವಾಗಿ ಹೇಳಿ ಸಾಮ್ರಾಜ್ಯ ಸರಕಾರಕ್ಕೆ ವಿಶಾಲ ದೃಷ್ಟಿಯಿಂದ ವಿಚಾರಿಸಿ ಹಿಂದುಸ್ಥಾನದ ಸಹಕಾರವನ್ನು ಸಾಧಿಸಲು ಸೂಚಿಸಿದ್ದಾರೆ. ಯುದ್ಧೋತ್ತರ ಜಗತ್ತಿನಲ್ಲಿ ಇಷ್ಟ ಕ್ರಮದಿಂದ ಸುಧಾರಣೆಯಾಗುವ ಕಾರ್ಯದಲ್ಲಿ ಶಕ್ತಿಸರ್ವಸ್ವವನ್ನು ವಿನಿಯೋಗಿಸಲು ಸಹ ಹಿಂದುಸ್ಥಾನವು ಬಯಸುತ್ತದಾಗಿ ಪಂ|| ಜವಾಹಿರಲಾಲರು ಉದ್ಗರಿಸುತ್ತಾರೆ. ರಾಷ್ಟ್ರೀಯ ಸಭೆಯ ಸತ್ಸಂಕಲ್ಪವನ್ನು ಪಂ|| ಜವಾಹಿರಲಾಲರು ಲೋಕಕ್ಕೆ ಸಾರಿದ್ದಾರೆಂದು ನಮ್ಮ ಅಭಿಪ್ರಾಯ. "ಸರ್ವೇ ಜನಾಃ ಸುಖಿನೋ ಭವಂತು। ಸಕಲ ಜನಗಳು ಸುಖದಿಂದಿರಲಿ ಎಂಬವೇ ನಮ್ಮ ಸನಾತನ ಭರತಖಂಡದ ಅಭಿಲಾಷ, ಮಹತ್ವಾಕಾಂಕ್ಷೆ. ನಮ್ಮ ಹಿಂದುಸ್ಥಾನವು ಈ ಪರಂಪರೆಯದು. ಆ ಪರಂಪರೆಯನ್ನು ಲೋಕದಲ್ಲಿ ರೂಢಗೊಳಿಸಿದರೆ ಯುದ್ಧಗಳು ಇಂದಿಗೆ ಒದಗುತ್ತಿರಲಿಲ್ಲ. ಶಸ್ತ್ರಾಸ್ತ್ರಗಳನ್ನು ಜನಾಂಗಗಳು ತ್ಯಜಿಸಬೇಕು. ಎಲ್ಲರೂ ಅನ್ಯೋನ್ಯ ಮಮತೆಯಿಂದ ಪರಸ್ಪರ ಕಲ್ಯಾಣ ಬಯಸಿ ಶಾಂತತೆಯಿಂದ ಬಾಳಬೇಕು. ಈ ಪರಿಣತಿಗಾಗಿ ನಮ್ಮ ಹಿಂದೀ ಜನಾಂಗ ಮಹಿಮೆಯು ಯುದ್ಧಕಾರಣದಲ್ಲಿ ಸೇರಲು

ಒಪ್ಪುವದಂತ್ರದ, ಅತ್ಯಂತ ಬಲಗೊಂಡಿದೆ. ಈ ಘೋರಣವನ್ನು ಯುದ್ಧ-ಕಾರಣದಲ್ಲಿ ಪುರಸ್ಕರಿಸುವ ಪ್ರಸಂಗ ನಾವು ಹಿಂದವಾಸಿಯರು, ಸಕಲ ಜನ-ಜನಾಂಗಗಳ ಸುಖವನ್ನು ಅಪೇಕ್ಷಿಸುವ ಪರಂಪರೆಯವರು, ನಾಟ್ಟಿನೊಡನೆ ಸ್ವತಂತ್ರರಾಗಬೇಕು. ಅಂದರೆ ಯುದ್ಧ-ಕಾರಣದಲ್ಲಿ ಗೌರವದಿಂದ ಸೇರಿ ಯುದ್ಧ ಕಾರಣವನ್ನು ರೂಪಗೊಳಿಸಲು ಅಧಿಕಾರಪಟ್ಟವರಿರಬೇಕು, ನಮ್ಮ ಜನಾಂಗದ ಪಟ್ಟಿಗೆ ಯುದ್ಧ-ಕಾರಣದ ನಿರ್ಣಯಾಧಿಕಾರ ದೊರಕಬೇಕು. ನಮ್ಮ ಪರಂಪರೆಯನ್ನು ನಾವು ನಮ್ಮ ದೇಶದಲ್ಲಿ ಪ್ರಚುರಗೊಳಿಸಲು ಅಧಿಕಾರಪಟ್ಟವರಾಗಬೇಕು. ಹೀಗೆಯ ರಾಜ್ಯಘೋಷಣ ಬಹುಬೇಗನೆ ಆದರೆ ರಾಷ್ಟ್ರೀಯ ಸಭೆಯ ಸಹಕಾರ ಯುದ್ಧಯತ್ನಕ್ಕೆ ಸಿಗುವದು ದುರ್ಘಟವೆಂಬ ಸಂಗತಿಯ ಸ್ಪಷ್ಟ ನಾವು ಸರಕಾರಕ್ಕೆ ಅರಿಕೆ ಮಾಡಿಕೊಳ್ಳಬಯಸುತ್ತೇವೆ. ಹೊಸ ರಾಜ್ಯಘೋಷಣವನ್ನು ಕೂಡಲೆ ಪ್ರಚುರಗೊಳಿಸಬೇಕಾಗಿಯೂ ಅರಿಕೆ ಮಾಡಿಕೊಳ್ಳುತ್ತೇವೆ. ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆ ಸದ್ಯಕ್ಕೆ ಸೇರಲಿಕ್ಕಿದೆ. ಅದರಿಂದ ಬ್ರಿಟಿಶ ಸರಕಾರವು ತ್ವರೆ ಮಾಡಬೇಕಾಗಿಯೂ ನಮ್ಮ ವಿನಂತಿಯುಂಟು. ಯುದ್ಧ ಯತ್ನಕ್ಕಾಗಿ ಯಾವತ್ತೂ ಪ್ರಯತ್ನಗಳು ನಡೆಯಬೇಕಾದ್ದರಿಂದ ನಾವು ಈ ವಿನಂತಿಯನ್ನು ಮಾಡಿಕೊಂಡಿದ್ದೇವ

"ಸ ಶಬ್ದಸ್ತುಮುಲೋಽಭವತ್।"

[ನಿರೀಕ್ಷಕನು ಬರೆದುದು.]

ಮಹಾಭಾರತ ಯುದ್ಧದ ವರ್ಣನೆ ಮಾಡುವಾಗ ಉಭಯ ಸೇನಾನಿಗಳು ಶಂಖನಾದ ಮಾಡಿದೊಡನೆ ಘನಘೋರ ಶಬ್ದವಾಗಿ ಭೂವ್ಯೋಮ ದಿಕ್ಕುಗಳು ದುಮದುಮಿಸಿದವೆಂದು ಸಂಜಯನು ಧೃತರಾಷ್ಟ್ರನಿಗೆ ಹೇಳಿದಂತೆ ಜಪಾನದ ಯುದ್ಧಪ್ರವೇಶದಿಂದ ಮಹಾ-ಯುದ್ಧವು ವಿಶ್ವವ್ಯಾಪಿಯಾಗಿ ಈಗ ಎಲ್ಲ ಪಾರ್ಶ್ವಗಳಲ್ಲೂ ಯುದ್ಧದ ನಿನಾದದಿಂದ ಕಿವಿಗಳು ಗಡಚಿಕ್ಕುತ್ತಿವೆ! ನಾನು ಜಪಾನದ ಯುದ್ಧಪ್ರವೇಶವನ್ನು ಹಿಂದೆಯೇ ಅಪೇಕ್ಷಿಸಿದ್ದ ಒಳಸೂತ್ರಗಳನ್ನು ನಿರೀಕ್ಷಿಸಿದ್ದೆ. ಆದರೆ ಆ ಕ್ಷಣ ಬರಯುವ ಮುಂಚಿತವಾಗಿಯೇ ಜಪಾನವು ಯುದ್ಧಶಂಖ ಊದುವದೆಂದು ಭಾವಿಸಿರಲಿಲ್ಲ. ರವಿವಾರ ಬೆಳಿಗ್ಗೆ ೭-೩೦ ಘಂಟೆಗೆ ಜಪಾನವು ಅಮೇರಿಕೆಯ ವಿರುದ್ಧ ಯುದ್ಧಘೋಷಣೆ ಮಾಡಿತಂತೆ. ಆದರೆ ಯುದ್ಧಘೋಷಣೆ ಮಾಡುವ ಪೂರ್ವದಲ್ಲೇ ಬಲಾತ್ಕಾರವನ್ನು ಪ್ರಾರಂಭಿಸಿತು! ಜಪಾನದ ಯೊಕೋಹಾಮಾ ಬಂದರದಿಂದ ಅಮೇರಿಕೆಯ ಹೊನೊಲುಲು ದ್ವೀಪ ೩೩೦೦ ಮೈಲು ದೂರವುಂಟು. ಈ ದ್ವೀಪದ ಮೇಲೆ ವಿಮಾನಗಳನ್ನು ಕಳುಹಬೇಕಾದರೆ ಹಡಗಗಳು ಕನಿಷ್ಠ ೧ ವಾರದ ಮುಂಚೆ ಯೊಕೋಹಾಮಾದಿಂದ ಹೊರಡಬೇಕು. ಯೊಕೋಹಾಮಾದಿಂದ ಹೊನೊಲುಲುವಿಗೆ ವಿಮಾನಗಳು ಒಮ್ಮೆಲೇ ಹಾರಿಹೋಗಲಾರವು. ವಿಮಾನಗಳನ್ನು ಹಡಗದ ಮೇಲೆ ಹತ್ತಿಸಿ ಒಯ್ದು ತಕ್ಕಷ್ಟು ಸಮೀಪಕ್ಕೆ ಹೋದ ಬಳಿಕ, ಹಡಗದ ಮೇಲಿಂದ ವಿಮಾನಗಳು ಹಾರಿಹೋಗಬೇಕು. ಯುದ್ಧಘೋಷಣೆಯಾದ ಕ್ಷಣಕ್ಕೇ ಜಪಾನದ ವಿಮಾನಗಳೂ ಅನೇಕ ಹಡಗಗಳೂ ಜಲನಾವೆಗಳೂ ಸೈನ್ಯ ಪಥಕಗಳೂ ಒಮ್ಮೆಲೇ ಪೂರ್ವ ಸಂಕೇತದಂತೆ ಅಚೆ ಈಚೆ, ಸುತ್ತು ಮುತ್ತು, ಎಲ್ಲ ಕಡೆಗಳಲ್ಲೂ ನುಗ್ಗಿ ಅಪಾರ ಅನರ್ಥ ಮಾಡಿಬಿಟ್ಟವು! ಬ್ರಿಟಿಶರಾಗಲಿ ಅಮೇರಿಕೆಯವರಾಗಲಿ ಬಲಾಢ್ಯ ಜನಾಂಗಗಳು ನಿಜ. ಜಪಾನಕ್ಕಿಂತ ಉಭಯ ಜನಾಂಗಗಳ ನೌಕಾಬಲ ಎಷ್ಟೋ ಪಾಲು ಅಧಿಕವಾದದ್ದು. ಅಮೇರಿಕೆಯಲ್ಲಿ ೧೭ ಯುದ್ಧ ಮಾಡುವ ದೊಡ್ಡ ಹಡಗಗಳು, ೩೭ ಘಾತಕ ಹಡಗಗಳು, ೭ ವಿಮಾನಗಳನ್ನೊಯ್ಯುವ ಹಡಗಗಳು, ೧೭೭ ವಿನಾಶಕ ಹಡಗಗಳು, ೧೧೩ ಜಲನಾವೆಗಳು ಹೀಗ ಸಾಮಗ್ರಿಗಳಿವೆ. ಆದೇ ಜಪಾನದ ಬಳಿ ೧೦ ಯುದ್ಧದ ಹಡಗಗಳು, ೩೦ ಘಾತಕ ಹಡಗಗಳು, ೬ ವಿಮಾನಗಳನ್ನೊಯ್ಯುವ ಹಡಗಗಳು, ಮತ್ತು ೧೨೫ ವಿನಾಶಕ ಹಡಗಗಳಿವೆ. ಜಪಾನದ ಜಲನಾವೆಗಳ ಸಂಖ್ಯೆಯನ್ನು ಗೌಪ್ಯದಿಂದ ಜಪಾನ ಸರಕಾರವು ಕಾಪಾಡಿದೆ. ಅಮೇರಿಕೆಯ ನೌಕಾದಳದ ಜೊತೆಗೆ ಬ್ರಿಟಿಶರ ನೌಕಾಬಲವುಂಟು. ಇದರಿಂದ ತಮ್ಮ ಮೇಲೆ ಜಪಾನವು ಸ್ವತಃ ಯುದ್ಧ ಸಾರಲಿಕ್ಕಿಲ್ಲವೆಂದು ಬ್ರಿಟನ ಅಮೇರಿಕೆಯವರು ಎಣಿಸಿದ್ದರೋ ಏನೋ! ಜಪಾನದ ಕುರುಸು ರಾಯಭಾರಿಗಳು ಅಮೇರಿಕೆಗೆ ಒಡಂಬಡಿಕೆಯ ಬಗ್ಗೆ ರವಾನೆಯಾದಾಗಲೇ ಜಪಾನದ ತೋಜೋ ಪ್ರಧಾನ ಮಂಡಳವು ಸೈನ್ಯಾಧಿಕಾರಿಗಳಿಗೂ ನೌಕಾಧಿಕಾರಿಗಳಿಗೂ ಬ್ರಿಟನ-ಅಮೇರಿಕೆಗಳ ಪ್ರದೇಶಗಳ ಮೇಲೆ ಸಾಗಿಹೋಗಲು ಅಪ್ಪಣೆ ಕೊಟ್ಟಿರಬೇಕು. ಅದರಿಂದ ಮೊದಲಿನ ಉಸುರಿಗೇ ಜಪಾನಿಯರು ಹೊನೊಲುಲು, ಫಿಲಿಪ್ಪೈನ, ಮಲಾಯಾ, ಸಯಾಮ ಮೊದಲಾದ ಪ್ರದೇಶಗಳನ್ನು ಉಧ್ವಸ್ತ ಮಾಡಿದರು! ಅಮೇರಿಕೆಯ ಸಾನಫ್ರಾನ್ಸಿಸ್ಕೋದಿಂದ ಜಪಾನದ ರಾಜಧಾನಿಯಾದ ಟೋಕಿಯೋ ಪಟ್ಟಣ ಸರಾಸರಿ ೫೦೦೦ ಮೈಲು ಅಂತರದಲ್ಲಿದೆ. ಇಷ್ಟು ಅಂತರದ ಸಮುದ್ರ ಪ್ರದೇಶದ ಮೇಲೆ ಈಗ ಕದನ ಕಾದಿಸಿದೆ. ಜಪಾನದ ಬಳಿಯಲ್ಲಿರುವ ಅಮೇರಿಕೆಯ ಫಿಲಿಪ್ಪೈನ, ಬ್ರಿಟಿಶರ ಹಾಂಗಕಾಂಗ ಪ್ರದೇಶಗಳು ಈಗ ಉರಿಯತೊಡಗಿವೆ! ವೈರಿಯ ವಿಮಾನಗಳು ಅಲ್ಲಿ ಬಾಂಬಿನ ಮಳೆಗರೆಯುತ್ತಿವೆ. ಇಂಡೋ ಚೀನದಲ್ಲಿ ಜಪಾನದ ಸೈನ್ಯ ಪಥಕಗಳು ಯುದ್ಧಕ್ಕಾಗಿ ಸಜ್ಜಾಗಿ ನಿಂತಿದ್ದವೆಂದು ನಾನು ಮೊದಲೇ ಹೇಳಿದ್ದೇನೆ. ಅವು ಅಲ್ಲಿಂದ ಸಯಾಮದಲ್ಲಿ ನುಗ್ಗಿದವು. ಬ್ರಿಟಿಶ ಸೈನ್ಯ ಪಥಕಗಳೂ ಸಯಾಮದಲ್ಲಿ ನುಗ್ಗಿದವು. ಸಯಾಮದ ಸ್ವಾತಂತ್ರ್ಯವನ್ನು ಭಂಗ ಮಾಡಿದವರಾರೆಂಬ ಚರ್ಚೆ ನಾನು ಮಾಡಹೋಗುವದಿಲ್ಲ. ಬ್ರಿಟಿಶರು ಮೊದಲು ನುಗ್ಗಿದರು, ಆ ಮೇಲೆ ತಾವು ನುಗ್ಗಿದವು, ಎಂಬದಾಗಿ ಜಪಾನದ ಅಂಬೋಣ! ಜಪಾನಿ ಸೈನ್ಯ ಪಥಕಗಳು ಮುಂಚೆ ಒಳನುಗ್ಗಿದವು, ಆ ಮೇಲೆ ಸಯಾಮದ ಸ್ವಾತಂತ್ರ್ಯ ರಕ್ಷಣೆಗಾಗಿ ತಾವು ನುಗ್ಗಬೇಕಾಯಿತು, ಹೀಗೆ ಬ್ರಿಟಿಶರ ಅಂಬೋಣ! ಉಭಯತರೂ ಸಯಾಮದ ಸೀಮೆಯನ್ನು ಉಲ್ಲಂಘಿಸಿದರೆಂಬ ಮಾತು ಮಾತ್ರ ನಿಜ. ಆದರೆ ಈ ವಾದ ನಿರ್ಣಯ ಮಾಡುವದರಲ್ಲಿ ಈವಾಗ ಸ್ವಾರಸ್ಯವಿಲ್ಲ. ಸಯಾಮವು ಜಪಾನದೊಡನೆ ಒಡಂಬಡಿಕೆ ಮಾಡಿಕೊಂಡು ಜಪಾನದ ಸೈನ್ಯ-ಪಥಕಗಳಿಗೆ ಮುನ್ನುಗ್ಗಿ ಹೋಗಲು ದಾರಿ ಕೊಟ್ಟಿದೆ. ಬ್ರಹ್ಮದೇಶ-ಚೀನ ಮಾರ್ಗವನ್ನು ಮುಚ್ಚುವದೇ ಈಗ ಜಪಾನದ ಅಟ್ಟಹಾಸ. ರಾಷ್ಟ್ರೀಯ ಚೀನಿಯರಿಗೆ ಯುದ್ಧಸಾಮಗ್ರಿಗಳನ್ನು ಪಡೆಯಲು ಸಮುದ್ರ ಮಾರ್ಗದಿಂದ ಸಾಧ್ಯವಿಲ್ಲ. ಕರಾವಳಿಯ ಪ್ರದೇಶವೆಲ್ಲ ಜಪಾನಿಗಳಿಂದ ಆಕ್ರಮಿಸಲ್ಪಟ್ಟಿದೆ. ಎಲ್ಲ ಯುದ್ಧಸಾಮಗ್ರಿ ಬ್ರಹ್ಮದೇಶ-ಯುನ್ನಾನ ಮಾರ್ಗದಿಂದಲೇ ಹೋಗತಕ್ಕದು. ಆ ಮಾರ್ಗ ಮುಚ್ಚಿದರೆ ಚೀನಿಯರಿಗೆ ಜಪಾನದೊಡನೆ ಹೋರಾಡಲು ಅನಾಗ ಪ್ರತಿಬಂಧವುಂಟಾಗುತ್ತದೆ. ಅದರಿಂದ ಜಪಾನಿಯರು ಆ ಮಾರ್ಗವನ್ನು ಮುಚ್ಚಲು ಕಾಟು ಮಾಡುತ್ತಿದ್ದಾರೆ! ಹೀಗ ಬ್ರಹ್ಮದೇಶ ರಣಕ್ಷೇತ್ರದಲ್ಲಿ ಸೇರ್ಪಡೆಯಾಗುತ್ತಿದೆ. ಬ್ರಹ್ಮದೇಶದ ಮೇಲೆ ಜಪಾನದ ವಿಮಾನಗಳು ದಾಳಿ ಮಾಡಿ ೭ ಜನರಿಗೆ ಘಾಯಗೊಳಿಸಿದ ವಾರ್ತೆ ಬಂದಿದೆ. ಇಂಥ ವಾರ್ತೆಗಳು ಈಗ ಮೇಲಿಂದ ಮೇಲೆ ಬರುವವು. ಇಡೀ ಬ್ರಹ್ಮದೇಶವೇ ರಣಭೂಮಿಯಾಗುವ ಪ್ರಸಂಗವೂ ಉಂಟು. ಹಿಂದುಸ್ಥಾನದೊಳಗಿನ ಸೈನ್ಯಪಥಕಗಳನ್ನೆಲ್ಲ ಬ್ರಹ್ಮದೇಶಕ್ಕೊಯ್ದು ಜಪಾನಿಯರೊಡನೆ ಹೋರಾಡುವ ಪ್ರಸಂಗ ಸದ್ಯಕ್ಕೇ ಒದಗಿದೆ. ಕಲಕತ್ತೆಯಲ್ಲಿ ವಿಮಾನ-ದಾಳಿಯಾದರೆ ಕೈಕೊಳ್ಳಬೇಕಾದ ಉಪಾಯಗಳ ಕುರಿತು ವಂಗ ಸರಕಾರವು ಗಾಂಭೀರ್ಯದಿಂದ ಆಲೋಚನೆ ಮಾಡತೊಡಗಿದೆ. ಬಂಗಾಲ ಆಸಾಮ ಪ್ರಾಂತಗಳ ಮೇಲೆ ಯುದ್ಧದ ಪಡಿನೆಳಲು ಬಿದ್ದಂತಾಗಿದೆ. ರಣಸೊಕ್ಕಿದ ಜಪಾನಕ್ಕೆ ಬ್ರಹ್ಮದೇಶದ ಮೇಲೆ ಚಿಲೋ ಕಣ್ಣುಂಟು. ಅವರಿಗೆ ಈಗ ಪೆಟ್ರೋಲು, ಕಲ್ಲಿದ್ದಲ ಮೊದಲಾದ ಖನಿಜಗಳು ಬೇಕು. ಬ್ರಹ್ಮದೇಶದಲ್ಲಿ ಇವು ವಿಪುಲವಾಗಿ ಸಿಗುತ್ತವೆ. ಮೇಲಾಗಿ ಚೀನದೊಳಗಿನ ಜಪಾನಿಯರ ಒಡೆತನಕ್ಕೆ ಕುಂದು ತರುವ ಬ್ರಹ್ಮದೇಶದ ಮಾರ್ಗ ಬ್ರಹ್ಮದೇಶದೊಳಗಿಂದಲೇ ಪ್ರಾರಂಭವಾಗುತ್ತದೆ. ಅದರಿಂದ ಬ್ರಹ್ಮದೇಶವನ್ನು ಸ್ವವಶ ಮಾಡಿಕೊಂಡರೆ ಚೀನ ದೇಶದ ಸಾರ್ವಭೌಮತನವನ್ನು ಗ್ರಹಪಡಿಸಲಿಕ್ಕೆ ಕಾಲಾವಧಿ ಬೇಡ. ಸಯಾಮವು ಬಲಾತ್ಕಾರದ ಸಮ್ಮತಿಯಿಂದಾಗಲಿ ಅಥವಾ ಸಂತೋಷದಿಂದಾಗಲಿ ಒಡಂಬಡಿಕೆ ಮಾಡಿಕೊಂಡು ಜಪಾನದ ಮರೆಹೊಕ್ಕಿರುವದಷ್ಟೇ. ಆದರೆ ಸಯಾಮದ ದಕ್ಷಿಣಕ್ಕಿರುವ ಮಲಾಯಾ ದ್ವೀಪಕಲ್ಪವೂ ಆ ದ್ವೀಪಕಲ್ಪಕ್ಕೆ ಹೊಂದಿಕೆಯಾಗಿರುವ ಜಾವಾ, ಸುಮಾತ್ರಾ, ಬೋರ್ನಿಯೋ ಮೊದಲಾದ ಡಚ್ಚರ ದ್ವೀಪಗಳೂ ಜಪಾನಕ್ಕೆ ಬೇಕು. ಈ ಭೂ-ಪ್ರದೇಶದಲ್ಲಿ ಪೆಟ್ರೋಲು, ತಾಮ್ರ, ಸೀಸ, ರಬ್ಬರ ಮೊದಲಾದ ವಿಪುಲ ಸಾಮಗ್ರಿಗಳಿವೆ. ಈ ದ್ವೀಪಗಳೂ ಮಲಾಯಾ ದ್ವೀಪಕಲ್ಪವೂ ಜಪಾನರ ವಶವಾದರೆ ಜಪಾನದ ಪ್ರಭುತ್ವವು ದೃಢಗೊಳ್ಳುತ್ತದೆ. ಅದರಿಂದ ಮಲಾಯಾದಲ್ಲಿ ಜಪಾನಿಯರು ಒಮ್ಮೆಲೇ ನುಗ್ಗಿ ವಿಮಾನ ರಂಗಗಳನ್ನು ಸ್ವವಶ ಮಾಡಿಕೊಂಡರು. ಮಲಾಯಾದಲ್ಲಿ ದಟ್ಟ ಅಡವಿ, ರಬ್ಬರಿನ ತೋಟ, ಇವುಗಳ ಮೂಲಕ ಜಪಾನಿಯರಿಗೆ ನಿಸರ್ಗ ರಕ್ಷಣೆ ಸಿಗುತ್ತದೆ. ಅವರಿಗೆ ಹಿಂಜರಿಯಬೇಕಾಗುವದು ದುರ್ಘಟವಾಗುತ್ತದೆ. ಸಿಂಗಪುರದ ಮೇಲೆ ಜಪಾನಿಯರು ವಿಮಾನಗಳ ಮೇಲಿಂದ ಬಾಂಬುಗಳನ್ನೊಗೆದರು

ಆದರಿಂದ ಚೀನಿ ಮತ್ತು ಹಿಂದೀಯರೇ ಹೆಚ್ಚಾಗಿ ಆರಿಕೊಂಡರೆಂದು ಹೇಳುತ್ತಾರೆ ಜಪಾನಿಯರು ಅಮೇರಿಕೆಯ ವೇಕ ಮತ್ತು ಗ್ವಾಮ ದ್ವೀಪಗಳನ್ನು ಕೈವಶ ಮಾಡಿಕೊಂಡರಂತೆ ಹೊನೊಲುಲು, ಹವಾಯಿ, ಮಿಡ್ವೇ, ವೇಕ, ಗ್ವಾಮ ಈ ದ್ವೀಪಗಳು ಅಮೇರಿಕೆಯವಿದ್ದು ಇವನ್ನು ಅಮೇರಿಕೆಯು ಭದ್ರಪಡಿಸಿ ಜಪಾನದ ಮೇಲೆ ಸಾಗಿ ಹೋಗುವ ಅನುಕೂಲತೆ ಮಾಡಿಕೊಂಡಿಟ್ಟಿತ್ತು. ಆದರಿಂದ ಈ ಪ್ರದೇಶಗಳ ಮೇಲೆಯೇ ಜಪಾನಿಯರು ಅನಪೇಕ್ಷಿತವಾಗಿ ದಂಡೆತ್ತಿಕೊಂಡು ಹೋಗಿ ಭಯಂಕರ ಹಾವಳಿ ಹಾಕಿದ್ದಾರೆ ಹವಾಯಿ ದ್ವೀಪದ ಪರ್ಲ ಬಂದರ ಹೊನೋಲುಲು, ಫಿಲಿಪ್ಪಾಯಿನದೊಳಗಿನ ಮನಿಲಾ ಲೂಝಾನ, ಆಪಾರಿ, ನಿಕೊಲಸ ಮೊದಲಾದ ಠಾಣ್ಯಗಳ ಮೇಲೆ ಜಪಾನ ವಿಮಾನಗಳು ಸಾಗಿಹೋಗಿ ಅನರ್ಥಗಳನ್ನುಂಟು ಮಾಡಿವೆ ಹೊನೋಲುಲು ದ್ವೀಪಕ್ಕೊಪ್ಪಿದ ಒಹಾಉ ದ್ವೀಪದಲ್ಲಿ ೧—೨ ದಿನಗಳ ಬಾಂಬುಗಳ ಅಗ್ನಿವೃಷ್ಟಿಗೆ ೧೫೦೦ ಜನರು ಕೀರಿಕೊಂಡರು, ೧೫೦೦ ಜನರು ಘಾಯಗೊಂಡರು ಜಪಾನಿಯರು ಸಾಸಿವೆ ಕಾಳಿನ ವಿಷಹೊಗೆಯ ಬಾಂಬುಗಳನ್ನು ಒಗೆದು ರಕ್ತಪಾತವನ್ನು ಆಚರಿಸುವ ಸುದ್ದಿಯುಂಟು ಇದು ಹೇಯವಾದುದೆಂದೂ ಇದನ್ನು ಉಪಯೋಗಿಸಿ ಘಾತಗೊಳಿಸುವದೂ ತಾ ೧೭—೬—೧೯೨೫ನೇಗೆ ಜಿನೆವಾ ಪರಿಷತ್ತಿನಲ್ಲಾದ ಗೆಸ ಕರಾರಿಗೆ ವಿರುದ್ಧವಾದದ್ದೆಂದು ನಮ್ಮ ಬ್ರಿಟಿಶ ಸರಕಾರವು ಜಪಾನ ಸರಕಾರಕ್ಕೆ ನೆನಪು ಮಾಡಿಕೊಟ್ಟಿದೆ ಆದರೆ ದುಷ್ಟ ಜರ್ಮನರ ಒಳಸಂಚಿಗೆ ಸೇರಿದ ಜಪಾನಿಯರು ಇದನ್ನು ಮನ್ನಿಸುವ ಲಕ್ಷಣ ಕಾಣುವದಿಲ್ಲ ಹೀಗೆ ಜಪಾನಿಯರು ಅನಿರೀಕ್ಷಿತವಾಗಿ ಹೂಡಿದ ಯುದ್ಧವನ್ನು ಹಿಟ್ಲರನು ಗುರುವಾರ ಲೋಕಸಭೆಯಲ್ಲಿ ಮನ್ನಿಸಿ ಜಪಾನಕ್ಕೆ ಸಕಲ ಸಹಾಯವನ್ನು ಜರ್ಮನಿಯು ನೀಡುವದಾಗಿ ಅಭಿವಚನ ಕೊಟ್ಟಿದ್ದಾನೆ ವಿಜಯಶಾಲಿಯಾಗುವ ವರೆಗೆ ಜರ್ಮನಿ, ಜಪಾನ, ಇಟಾಲಿ ದೇಶಗಳು ಒಟ್ಟುಗೂಡಿ ಹೋರಾಡುವ ನಿರ್ಧಾರ ಮಾಡಿರುವವೆಂದು ಹಿಟ್ಲರನು ಸಾರುತ್ತಾನೆ ಯುದ್ಧೋತ್ತರ ನೂತನವಾಗಿ ಜಗತ್ತಿನ ಪುನರ್ಘಟನೆಯಾಗುವ ಕಾರ್ಯಕ್ಕಾಗಿ ಮೂರೂ ಜನಾಂಗಗಳು ದುಡಿಯುವವೆಂದು ಹಿಟ್ಲರನು ಹೇಳಿ ಜಪಾನದ ತೋಜೋ ಪ್ರಧಾನ ಮಂಡಳದ ಧೋರಣವನ್ನು ಮನ್ನಿಸಿ ಪುರಸ್ಕರಿಸುತ್ತಾನೆ ಒಂದು ವಿಷಾದಕರ ಸಂಗತಿಯನ್ನು ನಾವು ನಮೂದಿಸಬೇಕಾಗಿದೆ ಸಿಂಗಾಪುರದ ರಕ್ಷಣೆಗೆಂದು ಇಂಗ್ಲಂಡದಿಂದ ರವಾನೆಯಾದ ಪ್ರಿನ್ಸ ಆಫ್ ವೇಲ್ಸ ಎಂಬ ಪ್ರಚಂಡ ಯುದ್ಧ ಹಡಗುಪಡೆ ಮತ್ತು 'ರಿಪಲ್ಸ ಎಂಬ ಘಾತಕ ಹಡಗುಪಡೆ ಜಪಾನದ ಬಾಂಬುಗಳಿಗೆ ತುತ್ತಾಗಿ ಜಲಸಮಾಧಿ ಹೊಂದಿದ ಸಂಗತಿಯನ್ನು ಪಾರ್ಲಿಮೆಂಟಿನಲ್ಲಿ ಹೇಳುವಾಗ ಮುಖ್ಯ ಪ್ರಧಾನರಾದ ಚರ್ಚಿಲ್ಲರಿಗೆ ಕಣ್ಣೀರು ಬಂತು ಆ ಹಡಗದ ಅಧಿಪತಿಗಳಾದ ಸರ್ ಟಾಮ ಫಿಲಿಪ್ಸರವರು ಕಣ್ಮರೆಯಾದ ಸುದ್ದಿಯನ್ನು ಹೇಳುವಾಗಂತು ಚರ್ಚಿಲ್ಲರು ಪಶ್ಚಾತ್ತಾಪದಿಂದ ನಿಟ್ಟುಸುರುಬಿಟ್ಟರು ಈ ಹಡಗಗಳ ಮೇಲೆ ಜಪಾನಿಯರು ಚಾತುರ್ಯದಿಂದಲೂ ನಿರ್ಧಾರದಿಂದಲೂ ಗುರಿಹಿಡಿದು ಬಾಂಬುಗಳನ್ನೊಗೆದರಾಗಿ ಚರ್ಚಿಲ್ಲರು ಶತ್ರುಗಳ ಕೌಶಲ್ಯವನ್ನು ಹೊಗಳಿದನು ಇವೆರಡೂ ಹಡಗಗಳು ಸಯಾಮ ಮತ್ತು ಮಲಾಯಾದಲ್ಲಿ ಕ್ರಾ ಸಂಯೋಗ ಭೂಮಿಯ ಬಳಿಯಲ್ಲಿ ಇಳಿಯುತ್ತಿರುವ ಜಪಾನಿ ಸೈನ್ಯ ಪಥಕಗಳನ್ನು ನಾಶಗೊಳಿಸಲು ಕೂಚು ಮಾಡುತ್ತಿದ್ದವು ಥಕ್ಕನೆ ಒಂಕ್ಕೆ ಮಿಕ್ಕಿ ಜಪಾನದ ವಿಮಾನಗಳು ನಾಲ್ಕೂ ಬದಿಯಿಂದ ಹಾರಿಹೋಗಿ ಸತತ ೩ ತಾಸಗಳ ವರೆಗೆ ಬಾಂಬಿನ ಮಳೆಗರೆದವಂತೆ ಒಂದೊಂದು ೯ ೯ರಂತೆ ೩ ಬಾಂಬು ತೆರೆಗಳು ವಿಮಾನಗಳಿಂದ ಇವೆರಡೂ ಹಡಗಗಳಿಗೆ ಹೊಡೆಯತೊಡಗಿದವು ಕೂಡಲೆ ಹಡಗಗಳು ತುಂಡಾಗಿ ಮುಳುಗಹತ್ತಿದವು ಕೆಲವು ಬಾಂಬುಗಳು ಹಡಗ ಮುಳುಗಿದ ಬಳಿಕ ಸ್ಫೋಟ ಹೊಂದಿ ಕಲ್ಲೋಲವಾಯಿತಂತೆ ಈ ಹಡಗಗಳ ಘಾತದಿಂದ ಬ್ರಿಟಿಶರ ಅಂತಃಕರಣಕ್ಕೆ ಒಳ್ಳೇ ಆಘಾತವಾಗಿದೆ ಆದರೆ ಇದಕ್ಕೆ ಬ್ರಿಟಿಶರಾಗಲಿ ಅಮೇರಿಕೆಯವರಾಗಲಿ ಹೆದರುವದಿಲ್ಲ ಪರಮಾವಧಿಯ ಪ್ರಯತ್ನ ಮಾಡಿ ಬ್ರಿಟಿಶರು ಜಪಾನಕ್ಕೆ ಹೊಡೆದೋಡಿಸುವರೆಂಬುದರಲ್ಲಿ ಸಂದೇಹವಿಲ್ಲ ಸದ್ಯಕ್ಕೆ ಜಪಾನಕ್ಕೆ ವಿಜಯ ತೋರಬಹುದು ಅಂತ್ಯದಲ್ಲಿ ಜಪಾನಕ್ಕೆ ವಿಜಯವಾಗುವ ಲಕ್ಷಣಗಳು ಕಡಿಮೆಯೆಂದು ಬ್ರಿಟನ ಅಮೇರಿಕೆಗಳೊಳಗಿನ ಪ್ರಾಜ್ಞರ ಅಭಿಪ್ರಾಯ ೧—೨ ದಿನಗಳಲ್ಲಿಯೇ ಅಮೇರಿಕೆಯವರು ಈ ಸೇಡು ತೀರಿಸಿಕೊಂಡರು ಜಪಾನದ ೨೯೦೦೦ ಟನ್ನಿನ 'ಹರೂನಾ' ಹಡಗವು ಫಿಲಿಪ್ಪಾಯಿನದ ಬಳಿ ಸಮುದ್ರಗಳ ತನ ಮಾಡುತ್ತಿತ್ತು ೩ ಗುಂಡುಗಳಲ್ಲಿ ಈ ಹಡಗವನ್ನು ಅಮೇರಿಕೆಯವರು ಮುಳುಗಿಸಿದರು 'ಪ್ರಿನ್ಸ ಆಫ್ ವೇಲ್ಸ,' ರಿಪಲ್ಸ 'ಹರೂನ ಇವು ಪ್ರಚಂಡ ಹಡಗಗಳು 'ಪ್ರಿನ್ಸ ಆಫ್ ವೇಲ್ಸ' ಹಡಗದ ತೂಕ ೩೫ ಸಾವಿರ ಟನ್ನು ಇದ್ದಿದೆ ಇದರಲ್ಲಿ ೧೪ ಇಂಚ ಪರಿಘದ ೧೦ ತೋಫುಗಳು ೫॥ ಇಂಚ ಪರಿಘದ ೧೬ ತೋಫುಗಳು ಮತ್ತು ೪ ಸಣ್ಣ ತೋಫುಗಳು ಇಷ್ಟನ್ನು ಇದಲ್ಲದ ಶಸ್ತ್ರಭಾಂಡಾರವಿತ್ತು 'ರಿಪಲ್ಸ ದ ತೂಕ ೩೨೦೦೦ ಟನ್ನು ೧೫ ಇಂಚ ಪರಿಘದ ೬ ತೋಫುಗಳು ಇರುತ್ತಿದ್ದವು ಹರೂನಾ ಹಡಗದ ತೂಕ ೨೯೩೩೦ ಟನ್ನು ಇದರ ಮೇಲೆ ೪ ಇಂಚ ಪರಿಘದ ೮ ತೋಫು ೬ ಇಂಚ ಪರಿಘದ ೧೬ ತೋಫು, ೫ ಇಂಚ ಪರಿಘದ ೮ ತೋಫುಗಳು ಇದ್ದವು ಇದಲ್ಲದೆ ಇದರ ಮೇಲೆ ೩ ವಿಮಾನಗಳಿದ್ದವು 'ಪ್ರಿನ್ಸ ಆಫ್ ವೇಲ್ಸ ಮತ್ತು 'ಹರೂನಾ ಹಡಗ ಕಟ್ಟೋಣ ಖರ್ಚು ತಿಳಿಯಲಿಲ್ಲ 'ರಿಪಲ್ಸ ಹಡಗಕ್ಕೆ ೨೮,೨೯೦೦೦ ಪವನು ಖರ್ಚು ತಗಲಿತ್ತೆಂದು ಪ್ರಕಟವಾಗಿದೆ 'ಪ್ರಿನ್ಸ ಆಫ್ ವೇಲ್ಸ' ಮತ್ತು 'ಹರೂನಾ ಹಡಗಗಳಿಗೆ ಸರಾಸರಿ ೭೦ ೭೫ ಲಕ್ಷ ಪವನು ಖರ್ಚಾಗಿರಬೇಕು ಸಂಯುಕ್ತ ಅಮೇರಿಕೆಯ ೨೯೦೦೦ ಟನ್ನು ತೂಕದ 'ಓಕ್ಲಾಮಾ' ಹಡಗವನ್ನೂ ಅದರ ಜೊತೆಗೆ ಒಂದು ವಿನಾಶಕ ಹಡಗವನ್ನೂ ಜಪಾನಿಯರು ನಾಶಗೊಳಿಸಿದ್ದಾರೆ 'ಪ್ರಿನ್ಸ ಆಫ್ ವೇಲ್ಸ' ಮತ್ತು ರಿಪಲ್ಸ' ಹಡಗ ಮುಳುಗುವಾಗ ನಡೆದ ವೃತ್ತಾಂತವನ್ನು ಕೊಲಂಬಿಯಾ ಆಕಾಶವಾಣಿಯ ಸುದ್ದಿಗಾರರಾದ ಮಿ॥ ಬ್ರೌನರು ಈ ರೀತಿ ವರ್ಣಿಸುತ್ತಾರೆ ಇವರು 'ಪ್ರಿನ್ಸ ಆಫ್ ವೇಲ್ಸ' ಹಡಗದಿಂದ ಪಾರಾಗಿ ಬಂದ ಭಾಗ್ಯಶಾಲಿಗಳು ಜಪಾನ ವಿಮಾನಗಳು ಬಾಂಬುಗಳನ್ನು ಹೊಡಹೊಡನೆ ನಾವಿಕರು ಎದೆಗುಂದಲಿಕ್ಕಿಲ್ಲ ಉಲ್ಲಸಿತರಾಗಿದ್ದರು ಅಚೆ ಈಚೆ ಜನರು ಸತ್ತು ಬೀಳುತ್ತಿದ್ದರು ಆದಾಗ್ಯೂ ಉಳಿದವರು ಪ್ರಸನ್ನವದನರಾಗಿ ಪ್ರತಿಭಟಿಸುತ್ತಿದ್ದರು 'ರಿಪಲ್ಸ'ಹಡಗ ಮುಳುಗುತ್ತಿತ್ತು, ಆಗ ಕಪ್ತಾನರು ಧ್ವನಿವಾಹಕ ಯಂತ್ರದಿಂದ ಎಲ್ಲರಿಗೂ ಅಂತಸ್ತಿನ ಮೇಲೆ ಬರಹೇಳಿದರು "ಎಲ್ಲರೂ ಹಡಗ ಬಿಟ್ಟು ಹೋಗಿರಿ, ದೇವರು ನಿಮ್ಮನ್ನು ಕಾಪಾಡುವನು ಹೀಗೆ ಹೇಳಿದ ಬಳಿಕ ಜನರು ಅಂತಸ್ತನ್ನು ಹತ್ತಿ ಸಮುದ್ರದಲ್ಲಿ ಹಾರಿಕೊಳ್ಳುವಷ್ಟರಲ್ಲಿ ಹಡಗದ ಹಿಂಭಾಗವು ಮೇಲೆ ಬಂದು ಹಡಗವು ತಿರುವುಮುರುವಾಗಿ ಜಲಸಮಾಧಿ ಹೊಂದಿತು ೧೦ ನಿಮಿಷಗಳಲ್ಲಿ 'ಪ್ರಿನ್ಸ ಆಫ್ ವೇಲ್ಸ' ಹಡಗವೂ ಇದೇ ರೀತಿ ಸಮುದ್ರಪಾಲಾಯಿತಂತೆ ಜಗತ್ಪ್ರಸಿದ್ಧ ಅಟ್ಲಾಂಟಿಕ ಮಹಾಸಾಗರದ ಘೋಷಣೆಯನ್ನು ರೂಝುವೆಲ್ಟ-ಚರ್ಚಿಲ್ಲರು 'ಪ್ರಿನ್ಸ ಆಫ್ ವೇಲ್ಸ' ಹಡಗದಿಂದಲೇ ಲೋಕಕ್ಕೆ ಸಾರಿದ್ದರು ಅದೇ ಪ್ರಕಾರ ಜರ್ಮನರ 'ಬಿಸ್ಮಾರ್ಕ' ಹಡಗುಪಡೆಯನ್ನು ಜಲಸಮಾಧಿಗೈದ ಶ್ರೇಯಸ್ಸಾದರೂ 'ಪ್ರಿನ್ಸ ಆಫ್ ವೇಲ್ಸ'ದ್ದೇ ಈ ಹಡಗುಪಡೆಯಷ್ಟು ಇತಿಹಾಸಪ್ರಸಿದ್ಧ ಅಜಸ್ರ ಹಡಗುಪಡೆ ಬೇರೊಂದಿಲ್ಲ ಈಗ ಸಿಂಗಾಪುರಕ್ಕೆ ಲಂಡನಿನಿಂದ 'ಎಡಿನಬರ್ಗ' ಹಡಗುಪಡೆ ಕಳಿಸಬೇಕೆಂದು ಗೊತ್ತಾಗಿದೆ ಇದಕ್ಕೆ ೧। ಕೋಟಿ ಪವನು ಖರ್ಚಾಗಿರುವವಂತೆ ಸಿಂಗಾಪುರವನ್ನು ಬ್ರಿಟಿಶರು ಸರ್ವ ಪ್ರಯತ್ನ ಮಾಡಿ ರಕ್ಷಿಸುವರೆಂಬ ಮಾತು ನಿಃಸಂಶಯ

ಜಪಾನದ ಯುದ್ಧಪ್ರವೇಶ ವಾರ್ತೆಯಿಂದ ಜರ್ಮನ ರಶ್ಯ ಯುದ್ಧವಾರ್ತೆಗಳ ಕಡೆಗೆ ಸಹಜವಾಗಿ ಅಲಕ್ಷ್ಯವಾಗುತ್ತಿದೆ ರಶ್ಯ ದೇಶದಲ್ಲಿ ಚಳಿ ಬಿದ್ದದರಿಂದ ವಿಷಮಜ್ವರದ ಪಿಡುಗು ಹಬ್ಬಿ ಜರ್ಮನರು ಹಿಂಜರಿಯಬೇಕಾಯಿತಾಗಿ ಜರ್ಮನರ ಕಡೆಯ ವಾರ್ತೆ ಆದರೆ ರಶ್ಯರು ಪ್ರತಿಭಟನೆಯಿಂದ ಜರ್ಮನರು ಹಿಂಜರಿದರೆಂಬ ರಶ್ಯರ ಕಡೆಯ ವಾರ್ತೆ ಉಭಯ ವಾರ್ತೆಗಳೊಳಗಿನ ಗುಣ ದೋಷಗಳನ್ನು ಚರ್ಚೆ ಮಾಡಿ ಫಲವಿಲ್ಲ ರಶ್ಯ ದೇಶದೊಳಗಿನ ಯುದ್ಧ ನಿಂತಿತು, ಸಂಕಲ್ಪದಂತೆ ಜರ್ಮನರು ಮುಂದೊತ್ತಿ ಹೋಗಲಿಲ್ಲವೆಂಬ ಮಾತು ನಿಶ್ಚಿತ ವಸಂತ ಕಾಲದ ತನಕ ಅಲ್ಲಿ ಇದೇ ಅವಸ್ಥೆ ಆ ರಣಕ್ಷೇತ್ರಕ್ಕೆ ಈಗ ವಿಶ್ರಾಂತಿ! ಈ ಯುದ್ಧದಲ್ಲಿ ಈ ತನಕ ೧,೬೨,೩೧೪ ಜರ್ಮನರು ಸತ್ತರು, ೩೩,೩೩೪ ಜನರು ಕಣ್ಮರೆಯಾದರು ೫,೭೧,೭೬೭ ಜನರು ಘಾಯಗೊಂಡರು ಹೀಗೆ ೭-೮ ಲಕ್ಷ ಜರ್ಮನರು ಈ ಯುದ್ಧದಲ್ಲಿ ಪೆಟ್ಟು ತಿಂದಿದ್ದಾರೆ ಇದಲ್ಲದೆ ಸುಮಾರು ೩೮ ಲಕ್ಷ ರಶ್ಯರಿಗೆ ಜರ್ಮನರು ಯುದ್ಧ-ಕೈದಿಗಳಾಗಿ ಹಿಡಿದಿದ್ದಾರಂತೆ ಈಗ ಈ ಯುದ್ಧದಲ್ಲಿ ಗೆದ್ದುಕೊಂಡ ಪ್ರದೇಶವನ್ನು ಹಿಟ್ಲರನು ವ್ಯವಸ್ಥಿತಗೊಳಿಸತೊಡಗುತ್ತಾನಂತೆ ಜಪಾನದ ಯುದ್ಧದಿಂದ ಬ್ರಿಟಿಶರಿಗೂ ಅಮೇರಿಕೆಯವರಿಗೂ ಹೊಸ ಉದ್ಯೋಗ ದೊರಕಿದೆ ಸಂಕಲ್ಪದಂತೆ ಬ್ರಿಟಿಶರಿಗಾಗಲಿ ರಶ್ಯರಿಗಾಗಲಿ ಸಹಾಯ ಮಾಡುವದು ಅಮೇರಿಕೆಗೆ ಕಠಿಣ ಜಪಾನವನ್ನು ಪ್ರತಿಭಟಿಸುವಷ್ಟು ಹಡಗುಪಡೆಗಳನ್ನೂ ಯುದ್ಧಸಾಮುಗ್ರಿಗಳನ್ನೂ ಅಮೇರಿಕೆಯು ಕಾದಿಟ್ಟುಕೊಂಡು ಉಳಿದ ಸಾಹಿತ್ಯವನ್ನಷ್ಟೇ ರಶ್ಯ ಬ್ರಿಟಿಶರಿಗೆ ಸಹಾಯವಾಗಿ ಕಳಿಸಿಕೊಡುವ ಪ್ರಸಂಗವುಂಟು ಹಿಟ್ಲರನಿಗೆ ಅಮೇರಿಕೆಯ ಮೇಲೆ ಸಿಟ್ಟು ಯುರೋಪಿನ ಕಲಹಗಳಲ್ಲಿ ಅಮೇರಿಕೆಗೇನ ಸಂಬಂಧ

(೭ನೇ ಪುಟದ ಮೇಲೆ ಮುಂದುವರಿದಿದೆ

ಸ್ಥಾನಿಕ ವೃತ್ತಾಂತ.

ಕುಮಟಾ— ಈಗ ಸಾಧಾರಣ ಚಳಿ ಬೀಳುತ್ತಿದೆ ಆದರೂ ಅದು ಚಳಿಗಾಲದ ಚಳಿಯಲ್ಲ. ಕೆಲವರು ಹೇಳುವಂತೆ ರಶಿಯಾ, ಉತ್ತರ ಅಫ್ರಿಕಾ ಮೊದಲಾದ ದೇಶಗಳೊಳಗಿನ ರಣಭೂಮಿಗಳಲ್ಲಿ ದಿನಾಲೂ ಸ್ಫೋಟವಾಗುತ್ತಿರುವ ಸಹಸ್ರಾವಧಿ, ಲಕ್ಷಾವಧಿ ಬಾಂಬು-ಗುಂಡು, ತೋಫಿನ ಗುಂಡು ಮುಂತಾದವುಗಳ ಉಗ್ರ ಉಷ್ಣತೆಯಿಂದ ಭೂತಲದ ಮೇಲಿನ ಗಾಳಿಯು ಉಷ್ಣವಾಗಿರುವದರಿಂದ ಈ ವರ್ಷ ಚಳಿಯೇ ಬೀಳಲಾರದೋ ಏನೋ ಎಂಬಂತೆ ಭಾಸವಾಗುತ್ತಿದೆ! ಗಾಳಿ ಬೀಸುತ್ತಿರುವದರಿಂದ ಮಾರ್ಗಗಳ ಮೇಲೆ ಧೂಳು ಬಹಳ ಹಾರುತ್ತಿದೆ ವಿಶೇಷವಾಗಿ ಕುಮಟಾ ಹೊನ್ನಾವರ ರಸ್ತೆಯ ಮೇಲೆ ಧೂಳು ವಿಶೇಷ! ಸದರಿ ರಸ್ತೆಯ ಮೇಲೆ ಕೆಲವು ಕಡೆ ಇಂಜಿನೀಯರ ಇಲಾಖೆಯವರು ಧೂಳು ಹಾಕಿಸಿರುವರಂತೆ ಅದೇಕೋ ಏನೋ! ಧೂಳಿಯ ಬದಲು ಸಮುದ್ರ-ಬೆಲೆಯ ಮೇಲಿನ ಉಸುಬು ಹಾಕಿಸಿದ್ದರೆ ಒಳಿತಾಗುತ್ತಿತ್ತೆಂದೂ ಧೂಳಿನ ಉಪದ್ರವ ತಪ್ಪುತ್ತಿತ್ತೆಂದೂ ತಜ್ಞರ ಅಭಿಪ್ರಾಯವಿದೆ

ಕಳೆದ ಶುಕ್ರವಾರ ಸಂಜೆ ಕಾನಡಾ ಜಿಲ್ಹಾ ಕೊಂಗ್ರೆಸ ಕಮಿಟಿಯ ಕಾರ್ಯಕಾರಿ ಮಂಡಳದ ಸಭೆ ಸೇರಿ, ಸುಪೆ ಪರಿಷತ್ತಿನಲ್ಲಿ ಸಿಕ್ಕ ಜಂಗಲ ಸವಲತ್ತುಗಳನ್ನು ಸರಕಾರದವರು ನಿಯಂತ್ರಿಸಬಯಸುತ್ತಿದ್ದ ಸಂಗತಿಯನ್ನು ಕುರಿತು ಆಲೋಚನೆ ನಡಿಸಿತು ರಾ| ಕೇಶವೈನ, ರಾ|| ಸುಂದರರಾವ ಪಂಡಿತ ಪಗ್ಗೆರಿ ಹಲಕೆಲವು ಹೊರಗಿನ ಜನರೂ ಈ ಸಭೆಗೆ ಬಂದಿದ್ದರು ಕೆಲ ಕಾಲ ಚರ್ಚೆಯಾಗಿ, ಈ ಕೆಳಗಿನ ಎರಡು ಗೊತ್ತುವಳಿಗಳು ಸ್ವೀಕೃತವಾದವು (೧) ಸುಪೆ ಪರಿಷತ್ತಿನೊಳಗಿನ ಚರ್ಚೆಯ ಫಲವಾಗಿ ಹಿಂದಿನ ಲೋಕಪ್ರಿಯ ಮಂತ್ರಿ ಮಂಡಳವು ದಯಪಾಲಿಸಿದ ಜಂಗಲ ಸವಲತ್ತುಗಳನ್ನು ಸಂಕೋಚಗೊಳಿಸುವ ಬಗ್ಗೆ ನಡೆದಿರುವ ಪ್ರಯತ್ನಗಳನ್ನು ಈ ಸಭೆಯು ಬಲವಾಗಿ ನಿಷೇಧಿಸುತ್ತದೆ, ಮತ್ತು ಅಂಥಾ ಪ್ರತಿಗಾಮಿ ಧೋರಣೆಯನ್ನು ಸ್ವೀಕರಿಸಿದಲ್ಲಿ ಜನತೆಯಲ್ಲಿ, ವಿಶೇಷತಃ ಒಕ್ಕಲಿಗ ಸಮಾಜದಲ್ಲಿ, ತೀವ್ರತರ ಅಸಂತೋಷ ಹುಟ್ಟುವದೆಂದು ಸರಕಾರಕ್ಕೆ ಎಚ್ಚರಿಕೆಯನ್ನು ಕೊಡಬಯಸುತ್ತದೆ (೨) ಮಾನ್ಯ ಪ್ರಾಂತಾಧಿಪತಿಗಳ ಸಲಹೆಗಾರರಾದ ರಾ|| ರಾ| ಮಾದನರವರು, ತಾ ೨೫-೧೧-೧೯೪೧ರ ಸರಕಾರಿ ರಿಪೋರ್ಟಿನಲ್ಲಿ ತಿದ್ದುಪಡಿ ಮಾಡುವ ಕುರಿತು ಬಂದ ಸೂಚನೆಗಳ ಆಲೋಚನೆ ಮಾಡಲು ಒಂದು ಸರಕಾರಿ ಅಧಿಕಾರಿಗಳ ಹಾಗೂ ಕೆಲವು ಮಂದಿ ಅಧಿಕಾರೇತರರ ಸಭೆ ಕರೆದಿರುವರಂತೆ, ಈ ಸಭೆಗೆ ಬರಲು ಕೊಂಗ್ರೆಸ ಪರವಾಗಿ ನಮ್ಮ ಜಿಲ್ಹೆಯಿಂದ ಆರಿಸಲ್ಪಟ್ಟ ಕೌನ್ಸಿಲ್-ಎಸೆಂಬ್ಲಿಗಳ ಸದಸ್ಯರಿಗೆ ನಿಮಂತ್ರಿಸಲಾಗಿದೆಯಂತೆ ಆದರೆ ಸದರಿ ಸಭೆಯಲ್ಲಿ ವಿಚಾರಕ್ಕೆ ಬರುವ ಸೂಚನೆಗಳು ಯಾವವೆಂಬದರ ಖುಲಾಸೆಯಾಗಲಿ ನಿರ್ದೇಶವಾಗಲಿ ಸಭೆಯ ಕಾರ್ಯಕ್ರಮ ಪತ್ರಿಕೆಯಲ್ಲಿ ಕಂಡುಬರುವದಿಲ್ಲ ಆದ್ದರಿಂದ ನಮ್ಮ ಕೊಂಗ್ರೆಸ ಪಕ್ಷದ ಎಸೆಂಬ್ಲಿ-ಕೌನ್ಸಿಲ ಸದಸ್ಯರು ಸಭೆಯಲ್ಲಿ ಈ ಕೆಳಗೆ ಕಾಣಿಸಿದ ಧೋರಣೆಯನ್ನು ಅನುಸರಿಸಬೇಕೆಂದು ಈ ಸಭೆಯು ವಿನ್ನವಿಸುತ್ತದೆ

ಜಂಗಲ-ಸವಲತ್ತುಗಳ ಕುರಿತು ಕೊಂಗ್ರೆಸ ಮಂತ್ರಿಮಂಡಳವು ಹಾಕಿಕೊಟ್ಟ ಧೋರಣೆಯನ್ನೇ ಬದಲಿಸುವಂತಹ ತಿದ್ದುಪಾಟಿಗಳನ್ನು ಸರಕಾರದವರು ಕಪ್ಪ ರದಾವಿನಲ್ಲಿ ಮಾಡಬಯಸುತ್ತಿದ್ದುದು ಕಂಡುಬಂದರೆ ಸದರಿ ಎಸೆಂಬ್ಲಿ-ಕೌನ್ಸಿಲ್ ಸದಸ್ಯರು ಆ ತಿದ್ದುಪಾಟಿಗಳಿಗೆ ಆಮೂಲಾಗ್ರ ವಿರೋಧ ಮಾಡಬೇಕು ಮತ್ತು ಲೋಕ-ಪ್ರತಿನಿಧಿಗಳಿಂದೊಳಗೊಂಡಿದ ಮಂತ್ರಿ-ಮಂಡಳವು ಹಾಕಿಕೊಟ್ಟ ಧೋರಣೆಯಲ್ಲಿ ಯಾವದೇ ಬಗೆಯ ವ್ಯತ್ಯಾಸ ಮಾಡಲು ಸಲಹೆಗಾರರ ಸರಕಾರಕ್ಕೆ ಎಳ್ಳಷ್ಟೂ ನೈತಿಕ ಅಧಿಕಾರವಿಲ್ಲೆಂದು ಅಧಿಕಾರಿಗಳಿಗೆ ಸ್ಪಷ್ಟವಾಗಿ ಹೇಳಬೇಕು

ಅದಲ್ಲದೆ ಸದರಿ ತಿದ್ದುಪಡಿಯ ಸೂಚನೆಗಳು ಚಿಕ್ಕ ಪುಟ್ಟ ತಿದ್ದುಪಾಟಿಗಳನ್ನಷ್ಟೇ ಮಾಡುವ ಸ್ವರೂಪದವು ಇರುತ್ತವೆಂದು ಕಂಡುಬಂದಲ್ಲಿ, ಆ ಸೂಚನೆಗಳನ್ನು ಜನತೆಯ ಮುಂದಿಟ್ಟು, ಅವುಗಳ ಅಭ್ಯಾಸ ಮತ್ತು ಚರ್ಚೆ ಮಾಡಿ ತಮ್ಮ ಮತ ವ್ಯಕ್ತ ಮಾಡಲು ಸಾರ್ವಜನಿಕರಿಗೆ ಸಾಕಷ್ಟು ಸಂಧಿ ಮತ್ತು ಕಾಲ ಕೊಡಬೇಕೆಂತಲೂ, ಲೋಕಮತ ಅನುಕೂಲ ಕಂಡು ಬಂದರೆ ಮಾತ್ರ ಆ ತಿದ್ದುಪಾಟಿಗಳನ್ನು ಮಾಡಬೇಕೆಂತಲೂ ಸದರಿ ಸದಸ್ಯರು ಅಧಿಕಾರಿಗಳಿಗೆ ಸ್ಪಷ್ಟ ತಿಳಿಸತಕ್ಕದ್ದು ಈಗ ಕೈಸೇರಿರುವ ಕಾರ್ಯಕ್ರಮಪತ್ರಿಕೆಯಲ್ಲಿ ಎಲ್ಲಿಯೂ ಸಂಕಲ್ಪಿತ ತಿದ್ದುಪಡಿಯ ಸೂಚನೆಗಳ ಸ್ವರೂಪವೇನೆಂದು ನಿರ್ದೇಶಿಸಿದ್ದು ಇರುವದಿಲ್ಲವಾದ್ದರಿಂದ, ಲೋಕಮತ ವ್ಯಕ್ತವಾಗುವ ತನಕ ಆ ಸೂಚನೆಗಳ ವಿಚಾರವನ್ನು ಮುಂದೆ ಹಾಕಬೇಕೆಂದು ಅವರು ಸಭೆಯವರಿಗೆ ವಿನ್ನವಿಸತಕ್ಕದ್ದು ಇನ್ನುಳಿದ ಅಧಿಕಾರೇತರ ಸದಸ್ಯರಾದರೂ ಮೇಲ್ಕಾಣಿಸಿದ ಧೋರಣೆಯನ್ನೇ ಎತ್ತಿ ಹಿಡಿಯುವರೆಂದು ಈ ಸಭೆಯು ನಂಬುತ್ತದೆ

ಮೊನ್ನೆ ಶನಿವಾರ ಸಂಜೆ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ ಎದುರಿನ ಪಟಾಂಗಣದಲ್ಲಿ ಜಿಲ್ಹಾ ಕೊಂಗ್ರೆಸ ಕಮಿಟಿಯ ಉಪಾಧ್ಯಕ್ಷರಾಗಿದ್ದ ರಾ| ತಿಮ್ಮಪ್ಪ ನಾಯಕರು ಯುದ್ಧವಿರೋಧಿ ಘೋಷಣೆ ಮಾಡಿ ಸತ್ಯಾಗ್ರಹವನ್ನಾಚರಿಸಿದರು ೬-೭ ನೂರು ಜನರು ಸಭೆಗೆ ಬಂದಿದ್ದರು ಜಿಲ್ಹಾಧ್ಯಕ್ಷ ರಾ| ಶಿವರಾವ ಗಾಡ್ಗೀಳ, ರಾ| ಹರಿ ಪೈ ಅಂಕೋಲಾ, ರಾ ರಾಮನ ಹೊದಕೆ ಸಿರ್ಸಿ, ರಾ| ಲಕ್ಷ್ಮಣ ಕಾಮತ ಕುಮಟಾ ಮೊದಲಾದವರ ಭಾಷಣಗಳಾದವು ರಾ|| ಪೈರೂ ಹೊದಕೆಯವರೂ ಸತ್ಯಾಗ್ರಹದ ಆಂದೋಲನದಲ್ಲಿ ಈಗ ಕಂಡು ಬರುತ್ತಿರುವ ಸ್ಥಿತ್ಯಂತರಗಳನ್ನು ತಿಳಿಸಿ ಹೇಳಿದರು ಹಿಂದಿನಂತೆಯೇ ಯುದ್ಧವಿರೋಧಿ ಘೋಷಣೆ ಮಾಡಿದಾಗ್ಯೂ ರಾ|| ನಾಯಕರಿಗೆ ಪೋಲೀಸ ಅಧಿಕಾರಿಗಳು ಸೆರೆಹಿಡಿಯಲಿಲ್ಲ! ಈಗ ಮುಂದೇನು ಮಾಡಬೇಕೆಂದು ರಾ|| ನಾಯಕರು ಕೊಂಗ್ರೆಸ ಮೇಲಧಿಕಾರಿಗಳಿಗೆ ಕೇಳಿರುತ್ತಾರಂತೆ

ತಾ ೧೨-೧೨-೪೧ಕ್ಕೆ ಅಂತ್ಯವಾಗುವ ಒಂದು ತಿಂಗಳಲ್ಲಿ ಕುಮಟಾ ತಾಲೂಕ ಪಷ್ಕಳ ವಿದ್ಯಾವರ್ಧಕ ಸಂಘಕ್ಕೆ



ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟನ್ನು ಕೊಳ್ಳಲು ನಿಮ್ಮಲ್ಲಿ ಒಟ್ಟಿಗೆ ೧೦ ರೂಪಾಯಿಗಳಿಲ್ಲದಿದ್ದಲ್ಲಿ ೪ ಆಣೆ ೨ ಆಣೆ ೧ ರೂಪಾಯಿ ಪ್ರಮಾಣದ ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪುಗಳನ್ನು ಕೊಂಡು, ಅವುಗಳನ್ನು ಪೋಸ್ಟಾಫೀಸಿನಲ್ಲಿ ಉಚಿತವಾಗಿ ಕೊಡುವ ಕಾರ್ಡಿನ ಮೇಲೆ ಅಂಟಿಸಿ ಅವುಗಳ ಬೆಲೆಯು ೧೦ ರೂಪಾಯಿ ಆದೊಡನೆಯೇ ಡಿಫೆನ್ಸ್ ಸರ್ಟಿಫಿಕೇಟಿಗೆ ವಿನಿಮಯ ಮಾಡಿಕೊಳ್ಳಬಹುದು

ಎಲ್ಲಾ ಪೋಸ್ಟ್ ಆಫೀಸುಗಳಲ್ಲಿ ದೊರೆಯುವವು

ಕೊಳ್ಳಿರಿ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು

G I 78 Kn

ನಿಮಗೂ ಮತ್ತು ನಿಮ್ಮ ದೇಶಕ್ಕೂ ಸಹಾಯ ಮಾಡಿರಿ.

ಬಗ್ಗೋಣದ ವೇ॥ ರಾಮಾ ಪಂಡಿತರ ೭ನೇ ಕಂತಿನ ಹಣ ಮತ್ತು ವರ್ಗಣಿ ಒಟ್ಟು ರೂ ೩೭॥।, ವೇ॥ ಶಿವ್ರ ಮಹಾಬಲೇಶ್ವರ ಭಟ್ಟರ ೭ನೇ ಕಂತಿನ ರೂ ೩೭॥ ರಾ॥ ಜಿ ಜಿ ಶಾಸ್ತ್ರಿ ವಕೀಲ ಇವರ ೪ ೫ ೬ ೭ನೇ ಕಂತುಗಳ ರೂ ೫೦, ರಾ॥ ವ್ಹಿ ಟಿ ಹೆಗಡೆ ವಕೀಲ ಇವರ ೭ನೇ ಕಂತಿನ ರೂ ೨೫, ರಾ॥ ಶ್ರೀಧರ ಹೆಗಡೆ ಕಜಳ್ಳಿ ಇವರ ೭ನೇ ಕಂತಿನ ರೂ ೧೦, ಸಬಜಜ್ಜ ರಾ॥ ವ್ಹಿ ಆರ್ ಅದ್ವೋಳಿ ಇವರ ವರ್ಗಣಿ ಮತ್ತು ದಾನ ಕೂಡಿ ರೂ ೧೦, ಆದೇ ಮೇರೆಗೆ ಭಟಕಳದ ಶಿರಸ್ತೇದಾರ ರಾ॥ ಜಿ ಆರ್ ಹೆಗಡೆ ಇವರ ೩ ವರ್ಷಗಳ ವರ್ಗಣಿ ಮತ್ತು ಪಗಾರ ಕಂತಿನ ರೂ ೧೦, ಡಾ॥ ಮಂಜಾ ಹೆಗಡೆ ಬಗ್ಗೋಣ ಇವರ ವರ್ಗಣಿ ಮತ್ತು ದಾನದ ರೂ ೬) (ರಾ॥ ವೆ ಪ ಹೆಗಡೆರ ೬-೭ನೇ ಕಂತುಗಳ ರೂ ೧೧ ಕೂಡಿ)ವಾಸ್ತದ ಜನರ ಪಗಾರ ಕಂತಿನ ರೂ ೧೯, ಶಿರ್ಸಿ ಪೇಟೆಯ ರಾ॥ ರಾ॥ ಪ ಭಟ್ಟರ ೭ನೇ ಕಂತಿನ ರೂ ೭ ರಾ॥ ಕೊಡ್ಲಕೆರೆ ಸೀತಾರಾಮ ಒಟ್ಟೆರ ದಾನದ ರೂ ೫, ರಾ॥ ದತ್ತಾತ್ರಯ ನಾರ್ಣಪ್ಪಾ ಮುಡಕಳಿ ಇವರ ವರ್ಗಣಿ ಮತ್ತು ದಾನ ರೂ ೩ ಸರ್ಕಲ್ ಇನ್ಸಪೆಕ್ಟರ ರಾ॥ ಕಾಸರಕೋಡಿಯವರ ವರ್ಗಣಿ ರೂ , ಅಡಿಕೆ ಸೊಸೈಟಿಯ ರಾ॥ ಕಡೆಕೋಡಿಯವರ ವರ್ಗಣಿ ರೂ , ಕಡವು [illegible] ನವರ ವರ್ಗಣಿ ಮತ್ತು ದಾನ ಕೂಡಿ ರೂ ೧೩ ೧೫-೯ ಬೆತ್ತಗೇರಿ ಗ್ರಾಮದವರ ವರ್ಗಣಿ ದಾನ ದಕ್ಷಿಣೆ ಕೂಡಿ ರೂ ೬೧-೧೩-೪, ಕಲ್ಲಬ್ಬೆ ಗ್ರಾಮದವರ ವರ್ಗಣಿ ವಗೈರೆ ರೂ ೪೧-೩-೦, ಹರಕಡೆ ಗ್ರಾಮದವರಿಂದ ದಾನ ಮತ್ತು ವರ್ಗಣಿ ಕೂಡಿ ರೂ ೩॥, ಕೊಣಳ್ಳಿ ಗ್ರಾಮದಲ್ಲಿ ವರ್ಗಣಿ ದಾನ ದಕ್ಷಿಣೆ ಕೂಡಿ ರೂ ೬-೪-೩ ಹೀಗೆ ಒಟ್ಟು ರೂ ೩೬೯-೮-೪ ವಸೂಲ ಬಂದಿದೆಯಾಗಿ ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ

ಕಳೆದ ಬುಧವಾರ ಮಧ್ಯಾಹ್ನ ೧ ಘಂಟೆಯ ಸುಮಾರಿಗೆ ಫ್ರಾನ್ಸಿಸ ದುಮಿಂಗ ಎ ಓತನು ಇಲ್ಲಿಯ ಮುನ್ಸಫ್ ಬಂಗಲೆಯ ಕೆಳಗಿನ ಹಾದಿಯಿಂದ ೬ ಬಾಟ್ಲಿ ಗೋವೆ ಸರಾಯಿಯನ್ನು ತಕ್ಕೊಂಡು ಹೋಗುತ್ತಿದ್ದಾಗ ರಾ॥ ವಿಠೋಬಾ ಪಾಟೀಲ ಎಂಬ ಪೋಲೀಸ ಶಿಪಾಯಿಯು ಆವನನ್ನು ಹಿಡಿದು ಚಟ್ಟಿ ಮಾಡಿಕೊಟ್ಟಿದ್ದಾನೆ ಬಾಟ್ಲಿಗಳನ್ನು ಎಲ್ಲಿ ಒಯ್ಯುತ್ತೀ ಎಂದು ಕೇಳಲಾಗಿ, ಒಂದು (?) ಉತ್ತರ ಕೊಟ್ಟು ಫ್ರಾನ್ಸಿಸನು ತಪ್ಪಿಸಿಕೊಳ್ಳಲು ಯತ್ನಿಸಿದನಂತೆ ! ಈ ಫ್ರಾನ್ಸಿಸನ ಸಹೋದರನಿಂದ ಪುತ್ತು ದುಮಿಂಗ ಈತನು ಮೇಲಿಂದ ಮೇಲೆ ಅಬಕಾರಿ ಇನ್ಸಪೆಕ್ಟರರ ಜೊತೆಯಲ್ಲಿ ತಿರುಗಾಡುತ್ತಾನೆ, ಮತ್ತು ಇನ್ಸಪೆಕ್ಟರರು ಕರಕೊಂಡು ಒಯ್ಯುತ್ತಿರುವ ಹಲಕೆಲವು ಪಂಚರಲ್ಲಿ ಇವನೊಬ್ಬನಿರುತ್ತಾನಂತೆ ಕೋರ್ಟ-ಕಚೇರಿಗಳ ನೆರೆ ಹೊರೆಯಲ್ಲಿ ಆದೂ ಕೂಡ ಮಧ್ಯಾಹ್ನದಲ್ಲಿ, ಹೀಗೆ ಅರ್ಧ ಡಜನಿನಷ್ಟು ಸರಾಯಿ ಬಾಟ್ಲಿಗಳನ್ನು ಯಾರೊಬ್ಬನು ರಸ್ತೆಯ ಮೇಲಿಂದ ಒಯ್ಯುತ್ತಿದ್ದದ್ದರ ಮೇಲಿಂದ ಏನು ತರ್ಕ ಮಾಡಬಹುದೆಂಬದನ್ನು ಅಬಕಾರಿ ಅಧಿಕಾರಿಗಳೇ ತಿಳಿಸಿ ಹೇಳುವವರೋ ಏನೋ

ಭತ್ತದ ದರ ಕಾಂಡಿಕ್ಕೆ ರೂ ೭೦ರಂತೆ ಏರಿದೆ ಭತ್ತ ಮತ್ತೆ ತುಂಬಿ ಗೋದಾಮಾಂತಕಕ್ಕೆ ರಫ್ತಾಗುತ್ತದೆ

ಹೊನ್ನಾವರ— (೧೪-೧೨-೪೧) ಡಾ॥ ಭಾ॥ ಪ॥ ಮಾರುತಿಬುವಾರವರು ನಡಿಸಿದ ಹರಿಭಜನ ಸಪ್ತಾಹದ ಮಂಗಲೋತ್ಸವವು ಕಳೆದ ಸೋಮವಾರ ನಡೆಯಿತು. ಸೂರ್ಯೋದಯಕ್ಕೆ ಒಂದು ದೊಡ್ಡ ಮೆರವಣಿಗೆ ಹೊರಟಿತು ಸಾವಿರಾರು ಸ್ತ್ರೀ ಪುರುಷರೂ ಮಕ್ಕಳೂ ಭಜನೆ ಮಾಡುತ್ತ ಮೆರವಣಿಗೆಯಲ್ಲಿ ಸೇರಿದ್ದರು ಮೆರವಣಿಗೆಯು ಊರೊಳಗಿನ ಮುಖ್ಯ ಮುಖ್ಯ ಬೀದಿಗಳೊಳಗಿಂದ ಹಾದು ತಿರುಗಿ ೧೧ ಘಂಟೆಯ ಸುಮಾರಿಗೆ ಟಪ್ಪರ ಸಭಾಮಂದಿರದ ಪ್ರವಾಸಿಗೆ ಬಂತು ಹಾದಿಯಲ್ಲಿ ಮೆರವಣಿಗೆಯು ಪೇಟೆಯಿಂದ ತಿರುಗಿ ಮಸೀದಿಯ ಸಮೀಪ ಮುಟ್ಟಿದಾಗ ಕೆಲವು ಮುಸಲ್ಮಾನ ಬಾಂಧವರು ಮಸೀದಿಯ ಮುಂದಿನಿಂದ ಮೆರವಣಿಗೆಯನ್ನು ಒಯ್ಯಕೂಡದೆಂದು ತಕರಾರು ಮಾಡಿದರು ! ಆದರೆ ಪೋಲೀಸ ಅಧಿಕಾರಿಗಳು ಅಷ್ಟರಲ್ಲಿ ಬಂದು ಮುಟ್ಟಿದ್ದರಿಂದ ಏನೂ ಗಲಭೆ, ತಂಟೆ, ಬಡಿದಾಟಗಳಾಗದೆ ಮೆರವಣಿಗೆಯು ಮುಂದೆ ಸಾಗಿತು

ಸಾಧುವರ್ಯ ಗಾಡಗೇ ಬುವಾರವರು ಸೋಮವಾರ ಸಂಜೆಯ ೪ ಘಂಟೆಗೆ ಹುಬ್ಬಳ್ಳಿಯಿಂದ ಬರುವ ಮೋಟಾರ ಬಂಡಿಯಲ್ಲಿ ಬರುವರೆಂದು ತಿಳಿದು ಬಂದದ್ದರಿಂದ ಸಾವಿರಾರು ಜನರು ಶರ್ಸಿ ಸಾಕೆಯ ಒಳೆ ಅವರ ಬರವನ್ನು ನಿರೀಕ್ಷಿಸುತ್ತ ನಿಂತಿದ್ದರು ಸದರಿ ಬಂಡಿ ಬಂದು ತಲ್ಪುತ್ತಲೇ ಜನರು ಸಾಧುವರ್ಯರ ಧೂಲಿದರ್ಶನ ತೆಗೆದುಕೊಳ್ಳಲು ಮುಂದಾಗಿ ಬಂಡಿಯನ್ನು ಅಡ್ಡಗಟ್ಟಿದರು ಎಷ್ಟೇ ಹೇಳಿದರೂ ಮಾರ್ಗ ಮಾಡಿಕೊಡಲಿಲ್ಲ ! ಆದರಿಂದ ಸಾಧುವರ್ಯರು ಅಲ್ಲೇ ಇಳಿಯಬೇಕಾಯಿತು ಅವರು ಕೂಡಲೆ ಕೆಳಗಿಳಿದು ಸಮೀಪದಲ್ಲಿದ್ದ ಪ್ಯಲಿಗೆ ಹೋದರು ಬುವಾರವರ ಆಗಮನದ ಸುದ್ದಿ ಊರೊಳಗೆಲ್ಲ ಮುಟ್ಟಿ ಇನ್ನೂ ಜನರು ಗುಂಪುಗಟ್ಟಿ ಬರಹತ್ತಿದರು ಅವರಿಗೆಲ್ಲ ದರ್ಶನ ಕೊಟ್ಟು, ಶಾಂತ ರೀತಿಯಿಂದ ನಡೆಕೊಳ್ಳಬೇಕೆಂದು ಹೇಳಿ, ಹಾಗೆಯೇ ಅವರು ಸಪ್ತಾಹದ ಮಂಟಪಕ್ಕೆ ಹೋದರು ಅಲ್ಲೂ ಸಾವಿರಾರು ಜನರು ಕೂಡಿದ್ದರು ಅವರೆಲ್ಲರಿಗೆ ರಾತ್ರಿ ೯ ಘಂಟೆಗೆ ಕೀರ್ತನ ಕೇಳಲು ಬರಹೇಳಿ ಕಳಿಸಿಕೊಟ್ಟರು

ಹೇಳಿದಂತೆ ರಾತ್ರಿ ೯ ಘಂಟೆಗೆ ಸಾಧುವರ್ಯರ ಕೀರ್ತನೆ ಆರಂಭವಾಯಿತು ೪-೬ ಸಾವಿರ ಜನರು ನೆರೆದಿದ್ದರು ಹಳ್ಳಿಹಳ್ಳಿಗಳಿಂದಲೂ ಜನರು ಬಂದಿದ್ದರು ಸಾಧುಗಳು ಕೀರ್ತನೆಯಲ್ಲಿ ಅಹಿಂಸೆಯ ಮಹತ್ವವನ್ನು ವಿಶೇಷವಾಗಿ ಪ್ರತಿಪಾದಿಸಿದರು ಜಾತ್ರೆ ಮೊದಲಾದವುಗಳಲ್ಲಿ ದೇವರ ಹೆಸರಲ್ಲಿ ಕುರಿ ಕೋಳಿ ಕೋಣಗಳನ್ನು ಕಡಿಯುವದು ಶುದ್ಧ ಪಾಪವೆಂತಲೂ, ವಧೆಯಾಗುವ ಜಾತ್ರೆಯನ್ನು ನೆರೆಯಿಸುವವರೂ, ಜಾತ್ರೆಯಲ್ಲಿ ಕೂಡುವವರೂ ಆ ಪಾಪದಲ್ಲಿ ಭಾಗಿಗಳಾಗುತ್ತಾರೆಂತಲೂ, ವ್ಯಾಪಾರ ಮಾಡುವ ಜಾತ್ರೆಗಳು ಜರಗುವ ಊರುಗಳವರು ಕೇವಲ ಹಣ ಲಾಭಕ್ಕೆಂದು ತಳಿಯುತ್ತಾರೆಂತಲೂ, ದೇವರಿಗೆ ಹರಕೆ ಮುಂತಾದವುಗಳನ್ನು ಹಾಕಿಕೊಳ್ಳುವದು ಕೂಡ ಧರ್ಮಬಾಹಿರವಾಗುತ್ತದೆಂತಲೂ, ಹೇಳಿಕೊಂಡದ್ದೆಂಬ ಹರಕೆಗಳನ್ನು ಕೊಡದಿದ್ದರೆ ಹಾನಿಯಾಗುವದೆಂತಲೂ ಹರಿನ ಭಜನೆ ಮತ್ತು ಅನ್ನ ದಾನ ಇವೇ ಆಪನ್ನಿವಾರಕವು ಹಾಗೂ ಇಷ್ಟಪ್ರಾಪ್ತಿಯ ರಾಜಮಾರ್ಗಗಳು ಎಂತಲೂ, ಏಕತೆ ಮತ್ತು ನಿರಭಿಮಾನಿತ್ವ ಇವೇ ಉದ್ಧತಿಗೆ ಕಾರಣವೆಂತಲೂ, ಅಭಿಮಾನ ಅಹಂಕಾರಗಳು ವಿನಾಶ ಕಾರಣಗಳೆಂತಲೂ ಸ್ಫೂರ್ತಿಯುಕ್ತ ರಸಾಲ ವಾಣಿಯಿಂದ ಬೋಧಿಸಿ, ಅಹಿಂಸಾಮಯ ಮಾರ್ಗದಿಂದಲೇ ಧರ್ಮವನ್ನಾಚರಿಸಿರೆಂದು ಬೋಧಿಸಿದರು ರಾತ್ರಿ ೩ ಘಂಟೆಯ ತನಕ ಅವರ ಕೀರ್ತನೆ ನಡೆಯಿತು

ಮಂಗಳವಾರ ದಿನ ಪೂರ್ವಸಂಕಲ್ಪಕ್ಕನುಸಾರವಾಗಿ ಸಪ್ತಾಹ ಮಂಡಲದವರು ಊರ ಜನರಿಗೆ ಅನ್ನಸಂತರ್ಪಣೆ ಮಾಡಿದರು ೪-೫ ಸಾವಿರ ಜನರು ಈ ಸಮಾರಾಧನೆಯಲ್ಲಿ ಉಂಡಿರಬಹುದು ಅದಕ್ಕಾಗಿ ೩೫ ಚೀಲ ಅಕ್ಕಿ, ೨೦೦೦ ತೆಂಗಿನ ಕಾಯಿಗಳು, ರೂ ೫೦೦ ನಗದಿ ಮತ್ತು ಬೆಲ್ಲ ಮುಂತಾದ ಬೇರೆ ಜಿನಸುಗಳು ಕೂಡಿಸಲ್ಪಟ್ಟಿದ್ದವು ಈ ಸಂತರ್ಪಣೆಯ ಕೆಲಸ ತೀರಿಸಿಕೊಂಡು ಡಾ॥ ಭಾ॥ ಪ॥ ಗಾಡಗೇ ಬುವಾರವರು ಸಂಜೆ ಕುಮಟಾ ಮಾರ್ಗವಾಗಿ ಹಿಂತೆರಳಿದರು

ಅನ್ನಸಂತರ್ಪಣೆಯ ಖರ್ಚು ಹೋಗಲಾಗಿ ಸಪ್ತಾಹ ಮಂಡಳಿಯ ಬಳಿ ೧೭ ಚೀಲ ಅಕ್ಕಿ, ೫೦೦ ಕಾಯಿ ಮತ್ತು ಬೆಲ್ಲದ ಕೆಲವ ಸಾಮಾನು ಶಿಲ್ಕು ಉಳಿದಿದ್ದವು ಇವುಗಳ ಲಿಲಾಂವು ಮಾಡಿ ಬಂದ ಹಣದ ವ್ಯವಸ್ಥೆ ಮಾಡುವದಕ್ಕೆ ಸಭೆ ಕರೆಯಬೇಕೆಂದು ಮೊದಲು ನಿರ್ಣಯವಾಗಿತ್ತು ಆದರೆ ಅನ್ನಸಂತರ್ಪಣೆಗಾಗಿ ಕೂಡಿಸಿದ ಸಾಮಗ್ರಿಯನ್ನು ಬಡವರ ಸಂತರ್ಪಣೆಗಾಗಿಯೇ ವಿನಿಯೋಗಿಸಬೇಕಲ್ಲದೆ ಬೇರೆ ಯಾವ ಕಾರ್ಯಕ್ಕೂ ವಿನಿಯೋಗಿಸತಕ್ಕದ್ದಲ್ಲವಾಗಿಯೂ, ವಿನಿಯೋಗಿಸಿದರೆ ಪರಿಣಾಮ ನೆಟ್ಟಗಾಗಲಿರದೆಂತಲೂ ಮಾರುತಿ ಬುವಾರವರು ಸಾರಿದ್ದರಿಂದ ಆ ಸಾಮಾನನ್ನು ಹಾಗೆಯೇ ಒಬ್ಬ ಗೃಹಸ್ಥರ ಕಡೆ ಇಟ್ಟಿರುತ್ತಾರೆ. ಅದನ್ನು ಗೋಕರ್ಣಕ್ಕೆ ಒಯ್ಯುವರೆಂದು ಇಂದು ಊರಲ್ಲಿ ಸುದ್ದಿ ಬಿದ್ದಿದೆ ಮತ್ತು ಸದರಿ ಸಾಮಾನು ಇಲ್ಲಿಯ ಬಡಜನರಿಗೇ ಹಂಚಿಕೊಡಬೇಕೆಂತಲೂ ಗೋಕರ್ಣಕ್ಕೆ ಒಯ್ಯುವದು ಧರ್ಮವಲ್ಲೆಂತಲೂ ವಂತಿಗೆ ಕೊಟ್ಟ ಕೆಲವರು ಪ್ರತಿಪಾದಿಸಲಾರಂಭಿಸಿದ್ದಾರೆ

ಜಪಾನವು ಯುದ್ಧದಲ್ಲಿ ಧುಮುಕಿದ ದಿನದಿಂದ ಪೇಟೆಯಲ್ಲಿ ಬೇರೆ ಬೇರೆ ಜಿನಸುಗಳ ಧಾರಣೆಗಳು ತೀವ್ರವಾಗಿವೆ ಬೆಂಕಿ ಪೆಟ್ಟಿಗೆಗಳ ಗ್ರೋಸ ೧೫ ಬೆಲೆ ೧ ರೂಪಾಯಿಯಷ್ಟು ಏರಿದೆ, ಕೊಬರಿ ಎಣ್ಣೆಯ ದರ ಡಬ್ಬಿ ೧ಕ್ಕೆ ರೂ ೨ರಷ್ಟು ಏರಿದೆ, ಕಾಳುಕಡಿ, ಧಾನ್ಯದವಸಗಳ ಧಾರಣೆಗಳೂ ಅದೇ ಮಾನದಿಂದ ಏರಿವೆ, ಇನ್ನೂ ಏರುತ್ತಲಿವೆ ಕೆರೊಸಿನ ಎಣ್ಣೆಯ ಡಬ್ಬಿ ೧ರ ಬೆಲೆ ಈಗ ರೂ ೪ ೬ ೦ರಿಂದ ೪-೮-೦ರ ವರೆಗೆ ಉಂಟು

ಪ್ರಾಂತಿಕ ಗ್ರಾಮೋದ್ಧಾರ ಮಂಡಳಕ್ಕೆ ಇಲ್ಲಿಯ ರಾ॥ ಸಂಜೀವರಾವ ಕಲ್ಲಾಪುರ, ವಕೀಲ ಇವರಿಗೆ ಸಭಾಸದರನ್ನಾಗಿ ಮುಂಬಯಿ ಸರಕಾರವು ನೇಮಿಸಿದೆ

ಮೊನ್ನೆಯ ದಿನ ಮಲಬಾರದಿಂದ ಮುಂಬಯಿಗೆ ಹೋಗುತ್ತಿದ್ದ ಒಂದು ದೊಡ್ಡ ಮಚವೆಯು ಬಸವರಾಜದುರ್ಗದ ಸಮೀಪ ಗಾಳಿಗೆ ಸಿಕ್ಕಬಿದ್ದು ಧಕ್ಕೆ ಬಂದು ಅಪ್ಪಳಿಸಿ ಚೂರು ಚೂರಾಯಿತು ಅದು ಕಟ್ಟಿಗೆ ಹಲಗೆಗಳಿಂದ ತುಂಬಿದ್ದಿತ್ತು ೧೯ ಜನ ಖಲಾಸಿಗಳಿದ್ದರು ಎಲ್ಲರೂ ಬದುಕಿದ್ದಾರೆ

ರಾಮತೀರ್ಥಕ್ಕೆ ಹೋಗುವ ರಸ್ತೆಯ ಮೇಲೆ ಒಂದು ಮೋರಿಯು ಕುಸಿದು ಬಿದ್ದು ಮಾರ್ಗದ ಮೇಲೆ ದೊಡ್ಡದೊಂದು ತೂತಾಗಿದೆ ! ರಾಮತೀರ್ಥಕ್ಕೆ ಹೋಗುತ್ತಿರುವ ನಗರ ತಾತರು ಅದನ್ನು ನೋಡಿಲ್ಲವೆಂದು ಹೇಳುವದು ಹೇಗೆ ? ಆದರೂ ಅದರ ದುರುಸ್ತಿಯ ವ್ಯವಸ್ಥೆ ಇನ್ನೂ ವರೆಗೆ ಆಗಿಲ್ಲವೆಂಬುದು ಮಾತ್ರ ನಿಜ !

ಭಟಕಳ — (ತಾ ೧೩ ೧೨ ೪೧) ನಗರ ಸಭೆಯ ಚಿಕಿತ್ಸಾಲಯದ ಹೊಸ ಡಾಕ್ಟರರಾದ ಡಾ॥ ದೇಶಪಾಂಡೆಯವರು ನಿನ್ನೆ ಬಂದು ತಮ್ಮ ಸ್ಥಳದಲ್ಲಿ ಹಾಜರಾಗಿದ್ದಾರೆ

ಇಲ್ಲಿಯ ಪ್ರೌಢ ಶಿಕ್ಷಣ ಪ್ರಚಾರಕ ಸಮಿತಿಯವರು ಸ್ಥಾನಿಕ ಮುಖಂಡರ ಸಹಾಯದಿಂದ ಮಣಕುಳಿ ಕೇರಿಯಲ್ಲಿ ಒಂದು ಪ್ರೌಢ ಶಾಲೆ ತೆರೆದಿದ್ದಾರೆ ರಾ॥ ಈರಪ್ಪ ನಾಯ್ಕ ಮಾಂಪ್ರುಟ್ಟಿನ್ ಇವರು ಅದರ ಮೇಲ್ವಿಚಾರಕ ಮಂಡಳಿಯ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿದ್ದಾರೆ ಶಾಲೆಯಲ್ಲಿ ಈಗಾಗಲೇ ೩೮ ವಿದ್ಯಾರ್ಥಿಗಳು ಸೇರಿದ್ದಾರೆ ಭಟಕಳ ಪ್ರೌಢ ಶಾಲೆಯ ರಾ॥ ಫರ್ನಾಂಡಿಸರವರು ತತ್ಕಾಲಕ್ಕೆ ಈ ಶಾಲೆಯಲ್ಲಿ ಶಿಕ್ಷಕರಾಗಿದ್ದಾರೆ ಶಾಲೆಗೆ ಬೇಕಾದ ಕಟ್ಟಡ ಕಟ್ಟಿಕೊಡಲು ಮಾಂಪ್ರುಟ್ಟಿನ್ ಇವರು ಒಪ್ಪಿದ್ದಾರೆ ಹೊಸ ಕಟ್ಟಡ ತಯಾರಾಗುವ ವರೆಗೆ ಶಾಲೆಯನ್ನು ನಡಿಸಲು ರಾ॥ ಚಿಕ್ಕಯ್ಯ ಶೆಟ್ಟರು ತಮ್ಮ ಇಮಾರತು ಕೊಟ್ಟಿದ್ದಾರೆ

ಹಡೀಲ್ಲ ಮತ್ತು ಹೇರೂರ ಮಜರೆಗಳಲ್ಲಿ ಹರಿಜನರ ವಸತಿ ವಿಶೇಷ ೪-೫ ತಿಂಗಳ ಹಿಂದೆ ಅಲ್ಲೊಂದು ಗಾಂವಠಿ ಶಾಲೆ ಸ್ಥಾಪನೆಯಾಗಿತ್ತು ೩೮ ವಿದ್ಯಾರ್ಥಿಗಳು ಶಾಲೆಯಲ್ಲಿ ಕಲಿಯುತ್ತಿದ್ದರು ಈ ಶಾಲೆಯನ್ನು ನೋಂದಿಸಿಕೊಳ್ಳುವ ಬಗ್ಗೆ ಜನರು ಸರಕಾರಕ್ಕೆ ಮನವಿ ಮಾಡಿದ್ದರಂತೆ ಆದರೆ ಶಾಲೆಯ ಕಟ್ಟಡ ಪಕ್ಕಾ ಇಲ್ಲದ್ದರಿಂದ ಶಾಲೆಯನ್ನು ನೋಂದಿಸಿಕೊಳ್ಳಲು ಬರುವದಿಲ್ಲೆಂದು ಅಧಿಕಾರಿಗಳು ಅಪ್ಪಣೆ ಕೊಡಿಸಿದ್ದರಂತೆ ! ಆ ತೀರ ಬಡ ರೈತರು ಹೊಸ ಇಮಾರತು ಕಟ್ಟಿಕೊಳ್ಳುವದು ಹೇಗೆಂಬುದರ ಆಲೋಚನೆಯನ್ನಾದರೂ ಅಧಿಕಾರಿಗಳು ಮಾಡುವರೇ ? ಸರಕಾರದವರೇ ಮುಂದಾಗಿ ಆ ಜನ

ರಿ" ಎಂದು ಕಟ್ಟಿದ ತಯಾರಿಸಿ ಕೊಡುವ ವ್ಯವಸ್ಥೆ ಮಾಡಲಾರದೇ? ಹಳ್ಳಿಗರ ಉದ್ಧಾರ, ವಿದ್ಯಾ-ಪ್ರಸಾರ, ಹರಿಜನರ ಉದ್ಧಾರ ಮುಂತಾದ ಉದ್ದುದ್ದ ಮಾತುಗಳನ್ನಾಡುವ ಅಧಿಕಾರಿಗಳು ಬಡವರ ಶಿಕ್ಷಣ-ಪ್ರಚಾರದ ಪ್ರಯತ್ನವನ್ನು ತಿರಸ್ಕರಿಸುವದು ಯುಕ್ತವಲ್ಲವೆಂದು ಯಾರೂ ಹೇಳದಿರಲಾರರು

ಶಿರಾಲಿ— (ತಾ ೧೩ ೧೨-೪೧) ಕಳೆದ ತಾ. ೨೬ನೇಗೆ ಶ್ರೀ ಮಹಾಮಾಯಾ ಗಣಪತಿ ದೇವರ ರಥೋತ್ಸವವೂ, ಮರುದಿನ ಅಹೋರಾತ್ರಿ ಭಜನೆಯೂ ಯಕ್ಷಗಾನ ಪ್ರಸಂಗವೂ ನಡೆದವು ಕಳೆದ ತಾ ೩ಕ್ಕೆ ನಾದಘರ ದೇವಸ್ಥಾನದಲ್ಲಿ ಶ್ರೀ ದತ್ತ ಜಯಂತೀ ಉತ್ಸವವಾಯಿತು ಮಾರನೇ ದಿನ ರಾತ್ರಿ ಹುಡುಗಿಯರು "ದತ್ತಜನ್ಮ" ವೆಂಬ ನಾಟಕವನ್ನೂ ಹುಡುಗರು "ಕಲಿತ ಹೆಂಡತಿ" ಎಂಬ ನಾಟಕವನ್ನೂ ಅಭಿನಯಿಸಿದರು ಹುಡುಗಿಯರ ನಾಟಕದಲ್ಲಿ ಪುರುಷಭೂಮಿಕೆಗಳನ್ನು ಸಹ ಹುಡುಗಿಯರೇ ಮಾಡಿದ್ದರು

ಭಟಕಳದ ವರ್ತಕರೊಬ್ಬರು ಹೇರಳ ಅಕ್ಕಿ ಪರಬಂದರಗಳಿಗೆ ರಫ್ತು ಮಾಡುತ್ತಿದ್ದಾರೆ ೧೦೦೦ಕ್ಕೆ ಮಿಕ್ಕಿ ಅಕ್ಕಿ ಚೀಲಗಳನ್ನು ರವಾನಿಸಿದ್ದಾರಂತೆ ಅದರಿಂದ ಅಕ್ಕಿ ಧಾರಣೆ ಏರುತ್ತಿದೆ ಬಡವರ ಗೋಳಾಟ ಹೇಳಲಾಸಲ್ಲ

ಇಲ್ಲಿ ಹಿಂದೀ ಕಲಿಸುತ್ತಿದ್ದ ಚಿತ್ರಾಪುರ ಶಾಲೆಯ ಸಹಾಯಕ ಶಿಕ್ಷಕರಿಗೆ ಕುಮಟೆಗೆ ವರ್ಗವಾದ್ದರಿಂದ ಹಿಂದೀ ವಿದ್ಯಾರ್ಥಿಗಳಿಗೆ ತಮ್ಮ ಅಭ್ಯಾಸ ಮುಂದರಿಸಲು ತೊಂದರೆಯಾಗಿದೆ

ಬೈಲೂರ— (ತಾ ೧೪-೧೨-೪೧) ನಮ್ಮ ಗ್ರಾಮಪಂಚಾಯತಿನ ಕಾರ್ಯದರ್ಶಿಗಳು ಗ್ರಾಮೋದ್ಧಾರದ ಕೆಲಸವನ್ನು ಹೇಗೆ ಸಾಗಿಸ್ಸುರೆಂಬದು ಮೊನ್ನೆಯೇ ನಡೆದ ಒಂದು ಘಟನೆಯಿಂದ ತಿಳಿದು ಬರುವಂತಿದೆ ಅವರ ನೆರೆಮನೆಯವನ ತೆಂಗಿನ ಮರವೊಂದು ಅವರ ಹಿತ್ತಲಿನ ಮುಂಭಾಗದಲ್ಲಿ ಬಗ್ಗಿತ್ತು ಅದರ ಕಾಯಿ ಕೊಯ್ಯಿಸಿದರೆ ಅವು ಕಾರ್ಯದರ್ಶಿಗಳ ಹಿತ್ತಲಲ್ಲಿ ಬೀಳುತ್ತಿದ್ದವು ಅವರ ಈ ವರೆಗೆ ಕಾರ್ಯದರ್ಶಿಗಳು ಆ ಬಗ್ಗೆ ಹಿಂದೆ ಎಂದೂ ತಕ್ರಾರು ಮಾಡಿದ್ದಿಲ್ಲ ಮೊನ್ನೆ ಮಾತ್ರ ಅವರು ಕಾಯಿಗಳು ತಮ್ಮ ಹಿತ್ತಲಲ್ಲಿ ಬೀಳುತ್ತಲೇ ಅವನ್ನು ತಮ್ಮ ಮನೆಯೊಳಗೆ ಹಾಕಿಸಿಕೊಂಡರು' ಮತ್ತು 'ನೆರೆಮನೆಯವನು ಹೀಗೇಕೆ ಮಾಡುತ್ತೀರೆಂದು ಕೇಳಲಾಗಿ ಅವನಿಗೆ ಒಳಿತಾಗಿ ಥಳಿಸಿದರಂತೆ! ಈ ಬಗ್ಗೆ ನೆರೆಮನೆಯವನು ಫಿರ್ಯಾದು ವಗೈರೆ ಕೊಡಬಹುದಿತ್ತು ಆದರೆ ಅವನು ಎಷ್ಟೆಂದರೂ ಬಡವನು! ಅವನ ಪರವಾಗಿ ಸಾಕ್ಷಿಪುರಾವೆ ಕೊಡುವವರು ಸಿಗುವದೂ ಕಷ್ಟ! ಅದ್ದರಿಂದ ಫಿರ್ಯಾದಿ ವಗೈರೆ ಆಗಿಲ್ಲ ಆದರೂ ಗ್ರಾಮ ಪಂಚಾಯತಿಯಂಥ ಊರಲ್ಲಿ ನ್ಯಾಯನಿರ್ಣಯ ಮಾಡಲು ಸ್ಥಾಪನೆಯಾದ ಸಂಸ್ಥೆಯ ಜವಾಬದಾರ ಅಧಿಕಾರಿಯೇ ವರ್ತನು ಹೀಗೆ ದಾಂಡಿಗತನ ನಡೆಸಬಹುದೇ ಎಂದು ಕೇಳದೆ ಇರಲಾಗುವದಿಲ್ಲ ಇತ್ಯಾದಿ ಬೈಲೂರಿನ ನಾಗರಿಕರೊಬ್ಬರು ಬರೆಯುತ್ತಾರೆ

ಅಂಕೋಲಾ— (ತಾ ೬-೧೨-೪೧) ಇತ್ತಲಾಗಿ ಈ ತಾಲೂಕಿನಲ್ಲಿ ಗುನ್ಹೆಗಳ ಪ್ರಮಾಣ ಬಹಳಷ್ಟು ಹೆಚ್ಚಿದೆ ಗುನ್ಹೆಗಳಲ್ಲಿ ಸಂಕಟಕ್ಕೆ ಇಲ್ಲವೆ ತ್ರಾಸಿಗೆ ಈಡಾದವರು ಪೋಲೀಸರಲ್ಲಿ ದೂರು ಒಯ್ದರೂ ಕೂಡ ಅರ್ಧದಷ್ಟು ಗುನ್ಹೆಗಳ ಪತ್ತೆಯೇ ಹತ್ತುವದಿಲ್ಲ ಅದರಿಂದ ಪೀಡಿತರು ಪೋಲೀಸರಿಗೆ ವರದಿ ಸಹ ಕೊಡಹೋಗುವದಿಲ್ಲ ಪೋಲೀಸರ ಕಡೆ ವ್ಯರ್ಥ ತಿರುಗಾಟ ಮಾಡುವ ಕ್ರಮವಾದರೂ ಉಳಿಯುವದೆಂದು ಭಾವಿಸಿ ಸುಮ್ಮಗಾಗಿರುತ್ತಾರೆ ಊರಲ್ಲಿ ಜುಗಾರ ಮಂಡಗಳು ಹೆಚ್ಚಾಗಿವೆ ಆದರಿಂದೇ ಕಳವು ಮುಂತಾದ ಗುನ್ಹೆಗಳು ಮಿಗಿಲಾಗಿವೆ ಗುನ್ಹೆಗಳ ತಪಾಸಣೆಯ ಕೆಲಸದಲ್ಲಿ ಹೀಗೇಕೆ ಸಡಿಲುತನ ಕಂಡುಬರುತ್ತಿದೆಯೆಂಬುದರ ಬಗ್ಗೆ ಪರಿಶೀಲನೆ ಮಾಡಲಾಗಿ ಮುಖ್ಯಾಧಿಕಾರಿಗಳ ಸಡಿಲುತನವೇ ಅದಕ್ಕೆ ಕಾರಣವೆಂದು ತೋರಿಬರುತ್ತಿದೆ ಇಲ್ಲಿಯ ಫೌಜದಾರರು ಈಗ ಮುದುಕರಾಗಿದ್ದಾರೆ ಇನ್ನೊಂದು ವರ್ಷದಲ್ಲಿ ಅವರು ಸೇವಾನಿವೃತ್ತರಾಗಲಿದ್ದಾರೆ 'ಹೇಗಾದರೂ ಇನ್ನೊಂದು ವರ್ಷ ಕಳೆದಾಯಿತು, ನಮಗೇಕೆ ಉಸಾಬರಿ' ಎಂದು ಅವರು ತಮ್ಮ ಕಾರಭಾರದಲ್ಲಿ ಸಡಿಲುತನ ನಡಿಸಿದ್ದು ಕಂಡುಬರುತ್ತದೆ ಮುಖ್ಯಾಧಿಕಾರಿಗಳೇ ಹೀಗೆ ಸಡಿಲುತನ ಮಾಡಿದ ಮೇಲೆ ಇನ್ನುಳಿದ ಪೋಲೀಸ ಸೇವಕರು ಕರ್ತವ್ಯದಕ್ಷರಾಗುವ ಬಗೆ ಹೇಗೆ? ಮೇಲಧಿಕಾರಿಗಳು ಈ ಸಮಸ್ಯೆಯ ಬಗ್ಗೆ ವಿಚಾರ ಮಾಡಿ ಪೋಲೀಸರು ಕರ್ತವ್ಯತತ್ಪರರಾಗುವಂತೆಯೂ ಗುನ್ಹೆಗಳ ಚೌಕಶಿಯು ಕೂಡಲೆ ಮತ್ತು ಯಶಸ್ವಿ ರೀತಿಯಲ್ಲಿ ಸಾಗುವಂತೆಯೂ ವ್ಯವಸ್ಥೆ ಮಾಡಬೇಕಾಗಿ ಅಂಕೋಲಾ ನಾಗರಿಕರೊಬ್ಬರು ಬಿನ್ನವಿಸುತ್ತಾರೆ

"ಸ ಶಬ್ದಸ್ತುಮುಲೋಽಭವತ್ !"

(೬ನೇ ಪಾನಿನಿಂದ ಮುಂದರಿಸಿದ್ದು)

ವೆಂದು ಹಿಟ್ಲರನು ಗುರುವಾರ ಮಾಡಿದ ಭಾಷಣದಲ್ಲಿ ಪ್ರಶ್ನಿಸುತ್ತಾನೆ. ಅಮೇರಿಕೆಯ ಲಕ್ಷ ಯುರೋಪದ ಕಡೆ ಸಳೆಯಬಾರದೆಂದು ಜಪಾನವನ್ನು ಯುದ್ಧಕ್ಕೆ ಹಿಟ್ಲರನು ಪ್ರೇರೇಪಿಸಿದ್ದಾನೆಂದು ಯುದ್ಧ ಕಾರಣದ ಅಭ್ಯಾಸಿಗಳು ಹೇಳುತ್ತಾರೆ ನನಗೆ ಅದೂ ಹಾಗೆಯೇ ಅನಿಸುತ್ತದೆ ಇನ್ನೊಂದು ಕಾರಣವುಂಟು ಪೂರ್ವಪಾರ್ಶ್ವದಲ್ಲಿ ಯುದ್ಧವಾದರೆ ಬ್ರಿಟಿಶರ ಏಕಾಗ್ರತೆಯೂ ಭಂಗಗೊಳ್ಳುತ್ತದೆ ಬ್ರಿಟಿಶರು ಭೂಮಧ್ಯ ಸಮುದ್ರದಲ್ಲಿಯೇ ಯಾವತ್ತೂ ಸೈನ್ಯಬಲವನ್ನು ಒಟ್ಟುಗೂಡಿಸಿ ಜರ್ಮನರಿಗೆ ಇದಿರಾಗುತ್ತಿದ್ದಾರೆ ಈಗ ಆ ಪ್ರಕಾರ ಮಾಡಬರುವದಿಲ್ಲ ಕೆಲವು ಹಡಗುಪಡೆಗಳನ್ನು ಹಿಂದೀ ಮಹಾಸಾಗರಕ್ಕೆ, ಪೆಸಿಫಿಕ ಮಹಾಸಾಗರದ ಬಳಿಗೆ ಕಳಿಸಬೇಕು ಭೂಮಧ್ಯ ಸಮುದ್ರದೊಳಗಿನ ನೌಕಾಬಲ ಸಹಜವಾಗಿ ಕುಗ್ಗುತ್ತದೆ ಅದರಿಂದ ಉತ್ತರ ಆಫ್ರಿಕೆಯಲ್ಲಿ ಸಂಗ್ರಾಮ ಹೂಡಲು ಜರ್ಮನರಿಗೆ ಅನುಕೂಲ ಈಗ ಆಫ್ರಿಕೆಯ ರಣಸಂಗ್ರಾಮಕ್ಕೆ ಒಳ್ಳೇ ಕಳೆಯೇರುವದು ಸುಯೇಜ ಕಾಲುವೆಯ ಪ್ರದೇಶದಲ್ಲಿ ಜರ್ಮನರೂ ಇಟಾಲಿಯನರೂ ಭಯಂಕರವಾದ ದಾವೆ ಹಾಕುವರೆಂದು ನಾನು ಈಗಲೇ ಹೇಳಬಲ್ಲೆ ಅದಾಗ್ಯೂ ತುರ್ಕಸ್ತಾನ, ಅರಬಸ್ತಾನ ಮೊದಲಾದ ಮುಸಲ್ಮಾನ ಲೋಕದ ಜನಾಂಗಗಳು ಇನ್ನೂ ತಟಸ್ಥತೆಯನ್ನು ಕೈಕೊಂಡು ಸುಮ್ಮನೆ ಕುಳಿಕೊಂಡಿವೆ, ಆಚೆ ಈಚೆ ಸರಿಯಲೊಲ್ಲವು ಉತ್ತರ ಆಫ್ರಿಕೆಯೊಳಗಿನ ಸಂಗ್ರಾಮಕ್ಕೆ ಕಳೆಯೇರಿದ ಬಳಿಕ ಈ ಜನಾಂಗಗಳು ಯಾವದೊಂದು ಪಕ್ಷವಹಿಸುವವೆಂದು ನನ್ನ ಊಹೆ ಸದ್ಯಕ್ಕೆ ಎಲ್ಲ ಲಕ್ಷ ಜಪಾನದ ಪುಂಡಾಟಿಕೆಯ ಮೇಲುಂಟು ಆದರಿಂದ ಅದನ್ನೇ ಓದುಗರು ನಿರೀಕ್ಷಿಸುತ್ತಿರಬೇಕು ಉತ್ತರ ಆಫ್ರಿಕೆಯ ರಣಸಂಗ್ರಾಮವೂ ಪೂರ್ವಪ್ರದೇಶದ ಜಪಾನದ ರಣಸಂಗ್ರಾಮವೂ ಸಹಕಾರದಿಂದ ನಡೆಯುವವೆಂದು ನಾನು ಮತ್ತೆ ಹೇಳುವದು ಬೇಡ ಈಗ ಯುದ್ಧಕ್ಕೆ ವ್ಯಾಪಕ ರೂಪ ಬಂದಿದೆ

ಲೋಕದೊಳಗಿನ ಬಲಾಢ್ಯ ಜನಾಂಗಗಳೆಲ್ಲ ಉಭಯ ಪಕ್ಷಗಳಲ್ಲಿ ಸೇರಿ ಎದುರುಬದುರಾಗಿ ಕಾದಾಡನಿಂತಿವೆ ಅದರಿಂದ ನನಗೆ ಸಂಜಯನ ವರ್ಣನೆಯೊಳಗಿನ 'ಸ ಶಬ್ದಸ್ತುಮುಲೋಽಭವತ್' ವಚನದ ನೆನವಾಯಿತು! ಆ ಕಾಲದಲ್ಲಿ ಭರತಭೂಮಿಯೊಳಗಿನ ಯಾವತ್ತೂ ರಾಜರುಗಳು ಉಭಯ ಪಕ್ಷಗಳಲ್ಲಿ ಸೇರಿಕೊಂಡಿದ್ದರೆಂಬ ಇತಿಹಾಸೋಕ್ತಿಯುಂಟು

ಸ್ಥಳೀಕ ವಿಷಯಗಳು

(೩ನೇ ಪಾನಿನಿಂದ ಮುಂದರಿಸಿದ್ದು)

ಗಳು ಫಕ್ಕನೆ ಮಾರಾಟ ಮಾಡಿದ ಹುಲ್ಲು-ಪ್ರದೇಶದಲ್ಲಿ ಸೇರಿದರೆ ಜಂಗಲಇಲಾಖೆಯ ನಿಯಮಗಳಂತೆ ಜನರ ಮೇಲೆ ಖಟ್ಲೆಗಳು ನಡೆಯುವವು ಜಂಗಲ ಇಲಾಖೆಯ ಪೀಡನೆಯ ಜೊತೆಗೆ ಹುಲ್ಲು ಮಕ್ತೇದಾರರ ಸಂಕಟನಿರ್ಮಾಣ ಹೊಂದುವದು ಮೇಲಾಗಿ ಜನರು ಮಕ್ತೇದಾರರಿಗೆ ಅಧೀನರಾಗಿ ಉಳಿಯಬೇಕಾಗುವದು ಯಾಕೆಂದರೆ ಹುಲ್ಲು ವಿದೇಶಗಳಿಗೆ ಇಲ್ಲವೆ ಹೊರ ಪ್ರದೇಶಗಳಿಗೆ ರಫ್ತಾಗುವ ವಸ್ತುವಲ್ಲ ಇಲ್ಲವೆ ಹೊರ ಪ್ರದೇಶಗಳಿಂದ ಆಮದು ಮಾಡುವಂಥ ವಸ್ತುವಲ್ಲ ಹುಲ್ಲು ದನಗಳಿಗೆ ಅತ್ಯವಶ್ಯ ಅದು ಮಕ್ತೇದಾರರ ಕೈಸೇರಿ ಹೋದರೆ ಮಕ್ತೇದಾರರು ಹೇಳಿದಷ್ಟು ಹಣ ತೆತ್ತು ಜನರು ಅದನ್ನು ಪಡಕೊಳ್ಳುವ ಪ್ರಸಂಗವುಂಟು. ಈಗ ಬಡಬಗ್ಗರು ಬೆಟ್ಟದಿಂದ ಹುಲ್ಲು ಕೊಯ್ದುಕೊಂಡು ಹೋಗಿ ಮಾರಾಟ ಮಾಡಿ ಜೀವಿಸುತ್ತಾರೆ ಇದಕ್ಕೊಂದು ತೊಂದರೆಯುಂಟಾಗುವದು ಜನರಿಗೆ ಈಗ ಇರುವ ತೊಂದರೆ ಸಾಕು ಹೊಸ ತೊಂದರೆಗಳನ್ನು ಸರಕಾರವು ನಿರ್ಮಿಸುವದು ಬೇಡ

⁂

ಮುಂಬಯಿ ಸರಕಾರವು ಚಿಕ್ಕ ಚಿಕ್ಕ ಬಂದರಗಳ ಸುಧಾರಣೆಯ ಕುರಿತು ನೇಮಿಸಿದ ಮಂಡಳದ ಶಿಫಾರಸಿನ ಮೇರೆಗೆ ನಮ್ಮ ಜಿಲ್ಲೆಯೊಳಗೆ ಕೈಕೊಂಡ ಕೆಲಸಗಳ ನಿರ್ದೇಶ ಮಾಡಬಹುದು ಕಾರವಾರ ಬಂದರದಲ್ಲಿ ಪ್ರಯಾಣಿಕರಿಗೆ ಕೂತುಕೊಳ್ಳಲಿಕ್ಕೆ ಒಂದು ಕಟ್ಟೋಣ ಕಟ್ಟಿಸಲಾಗಿದೆ ಸದಾಶಿವಗಡದಲ್ಲಿ ಭದ್ರವಾದ ಧಕ್ಕೆ ಸದ್ಯಕ್ಕೆ ಕಟ್ಟಿಸಲ್ಪಡುವದು ಅದೇ ಪ್ರಕಾರ ಹೊನ್ನಾವರ ಮತ್ತು ಗೇರಸಪ್ಪೆಗಳಲ್ಲಿ ಧಕ್ಕೆಗಳು ಕಟ್ಟಿಸಲ್ಪಡುವವು, ಕುಮಟಾ ಮತ್ತು ಹೊನ್ನಾವರಗಳಲ್ಲಿ ಸುಧಾರಿಸಿದ ದೀಪಗಳ ವ್ಯವಸ್ಥೆಯಾಗುವದು ಮತ್ತು ಇಡೀ ಜಿಲ್ಲೆಯಲ್ಲಿ ಸಮುದ್ರಕ್ಕೆ ಕೂಡುವ ಹೊಳೆಗಳ ಸಂಗಮ ಸ್ಥಳಗಳಲ್ಲಿ ತುಂಬಿಕೊಂಡಿದ್ದ ಮಣ್ಣನ್ನು ತೆಗೆದು ಆ ಮಣ್ಣು ಪುನಃ ಅಲ್ಲಿ ತುಂಬದಂತೆ ಆಜೆ ಈಚೆ ರಕ್ಷಕ ಸ್ಥಳಗಳು ಏರ್ಪಡಿಸಲ್ಪಡುವವು ಈ ಹೊಳೆಗಳಿಗೆ ಬೇಸಿಗೆ ಕಾಲದಲ್ಲಿ ಸೀ ನೀರಿನ ಕಟ್ಟುಗಳನ್ನು ಕಟ್ಟುವ ಕ್ರಮವುಂಟು ಮಳಗಾಲ ಪ್ರಾರಂಭವಾಗುವ ಮುಂಚೆ ಸಂಗಮ ಸ್ಥಾನದಿಂದ ೩೦ ಮೈಲು ಒಳ-ಪ್ರದೇಶದಲ್ಲಿ ಕಟ್ಟಿದ ಯಾವತ್ತೂ ಕಟ್ಟುಗಳನ್ನು ಕಡಿದು ತೆಗೆಯುವಂತೆ ಕಲೆಕ್ಟರರು ಜಾಗ್ರತೆ ತಕೊಳ್ಳತಕ್ಕದ್ದೆಂದು ಮುಂಬಯಿ ಸರಕಾರವು ಹುಕುಮುಗಳನ್ನು ಹೊರಡಿಸಿದೆ ಇವಕ್ಕೂ ಹೆಚ್ಚಿಗೆ ಬಂದರಗಳ ಸುಧಾರಣೆ ಮಾಡಲಿಕ್ಕೆ ಬಂದರ-ನಿಧಿ ದೊಡ್ಡದಿಲ್ಲವೆಂದು ಮುಂಬಯಿ ಸರಕಾರದ ನಿರ್ಣಯ

ಇತ್ತ ಲಕ್ಷಗೊಡಿರಿ! ಇತ್ತ ಲಕ್ಷಗೊಡಿರಿ!!

ಅಗತ್ಯದ ಸೂಚನೆ.

ಸದ್ಯ ಚಾಲತಿಯಲ್ಲಿ ಇಲ್ಲದ ವಿಕ್ಟೋರಿಯಾ ವಿಲಿಯಂ, ಶಿಂಡೆರಾಣಿ ಛಾಪೆಯ ರೂಪಾಯಿ, ಅರ್ಧ ರೂಪಾಯಿ ಮತ್ತು ಗೋವಾ, ಅಲ್ವಾರ ಬಿಕಾನೇರ ಸ್ಟೇಟಿನ ರೂಪಾಯಿ ವಗೈರೆ ನಾಣ್ಯಗಳು ಯೋಗ್ಯ ದರದಿಂದ ಕೊಳ್ಳಲ್ಪಡುವವು

— ಇಂದೇ ವಿಚಾರಿಸಿರಿ —

ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ



ನಿಮ್ಮ ಜ್ವರವು

[illegible]ಕ್ಕಿಂತ ಹೆಚ್ಚು [illegible] ಕೆಂದಲಿಗಳು ಉದುರು[illegible] ನಿಮ್ಮ [illegible] ಇನ್ಫ್ಲುಯೆಂಜಾ [illegible] ಮಲೇರಿಯಾ ಯಾವ [illegible] ಬರುವ [illegible] ಉಪಾಯ [illegible] ಗುವದು

[illegible] ಉತ್ಸಾಹ [illegible] ಕೇಶವರ್ಧಿನಿಯನ್ನು [illegible] ವದಕ್ಕಿಂತ ಇಂದೇ [illegible] ಉಪಯೋಗಿಸ[illegible]

ಕೇಶವರ್ಧಿನಿ

ಕೂದಲುಗಳನ್ನು [illegible] ತಂದು ಕೊಡುವದು

ಕೇಶವರ್ಧಿನಿ [illegible]
ಕೇಶವರ್ಧಿನಿ [illegible]
ಕೇಶವರ್ಧಿನಿ ಕ್ರೀಮ್ [illegible]

[illegible] ಮತ್ತು [illegible]
ಎಲ್ಲ ವ್ಯಾಪಾರಿಗಳಲ್ಲಿಯೂ [illegible]
ಸೌಥ ಇಂಡಿಯಾ ಕೆಮಿಕಲ್ಸ್
ಮೈಲಾಪುರ ಮದರಾಸು
ಉತ್ತರ ಕನ್ನಡ ಜಿಲ್ಲೆಯ ಏಜಂಟ
ದೇವಪ್ಪಾ ಅಯ್ಯಾ ನಾಯ್ಕ [illegible]

ಸಹ್ಯಾದ್ರಿ ಫಾರ್ಮಸಿ ಕುಮಟಾ.

ಬಾಳಂತಿಯರಿಗೆ— ಕಸ್ತೂರಿ ವಿ[illegible] ದಶಮೂಲಾರಿಷ್ಟ ಮತ್ತು ಧನ್ವಂತರಿ ಗುಳಿಗೆ— ಒಳ್ಳೇ [illegible]ಉಪಯುಕ್ತವಿದ್ದವು!

ಚಿಕ್ಕ ಮಕ್ಕಳ ಜಂತುವಿನ ಬಾಧೆಗೆ [illegible] ಸಾಯರ್ [illegible] ದಿವ್ಯ[illegible] ಔಷಧವು!

ನಾಯಿ—ಕೆಮ್ಮಿಗೆ ಎಂಟೇ ದಿವಸಗಳಲ್ಲಿ ಗುಣಪಡಿಸುವ ಕಷಾಯ[illegible]

ಯಾವತ್ತೂ ಪ್ರಕಾರಗಳ ಕಷಾಯ, ಅರಿಷ್ಟ, ಆಸವ, ತೈಲಾದಿ ಔಷಧ ಸಾಮುಗ್ರಿಗಳು ಸದಾ ಸಿಗುತ್ತವೆ

ಡಾ॥ ಎನ್. ಕೇ. ಭಟ್ಟ, ದವಾಖಾನೆ, ಕುಮಟಾ

ಧಾತುಪುಷ್ಟಿ ಲೇಹ

(ಸುವರ್ಣ ಸಂಯುಕ್ತ, ಕಲ್ಪ್ಪಿದ ಮಿಶ್ರ) ನಷ್ಟವಾಗಿರುವ ಪು[illegible] ವನ್ನು [illegible] ಕಲ್ಪಿಸಿಕೊಡುವ ಅತ್ಯುತ್ತಮ ಶಕ್ತಿದಾಯಕ ಔಷಧಿ ಮಾನಸಿಕ ಮತ್ತು ಕಾಯಶಕ್ತಿಗಳನ್ನು ಹುಟ್ಟಿಸಿ ಆರೋಗ್ಯ ಇಂದ್ರಿಯಶಕ್ತಿ ಇವೇ [illegible]ಗಳನ್ನು ಕಲ್ಪಿಸಿಕೊಡುವದು ಬಾಟ್ಲಿಗೆ 2—8—0

ಕಸ್ತೂರಿ ಮಿಶ್ರಣ ದಶಮೂಲ

ಪ್ರಸವ ನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ರಕ್ತವರ್ಧಕ ರಸಾಯನ ಬಾಟ್ಲಿಗೆ ರೂ 1—8—0

ಮಲೇರಿಯಾ ನಿವಾರಿಣಿ.

ಮಲೇರಿಯಾ ಜ್ವರ, ಚಳಿ ಜ್ವರ, ಇನ್ಫ್ಲುಯೆಂಝಾ, ಮ[illegible] ಇವುಗಳಿಗೆ ಪ್ರಸಿದ್ಧ ಔಷಧಿ ಬಾಟ್ಲಿಗೆ ರೂ 0—13—0

[illegible]

ಜ್ವರ[illegible] ಕರಗಿಸುವ ದಿವ್ಯೌಷಧಿ ಬಾಟ್ಲಿಗೆ ರೂ 1 2—0

ಎಚ್. ಗಣಪಯ್ಯ ಎಂಡ್ ಸನ್ಸ್, ರಥಬೀದಿ ನಂಬ್ರ 5, ಮಂಗಳೂರು. ದ ಕ

[illegible] — (1) [illegible] (2) [illegible] ಸ್ಟೋರ್ಸ್, ಹೊನ್ನಾವರ, (3) [illegible] (4) [illegible] ಮರ್ಚಂಟ, ಭಟಕಳ, (5) [illegible] 183 ಸುಪಾರಿಬಾಗ [illegible] (6) ಜನರಲ್ ಸ್ಟೋರ್ಸ್, [illegible] (7) [illegible] ಶೆಟ್ಟಿ ಮರ್ಚಂಟ, ಕಾರವಾರ, (8) [illegible] (9) [illegible] ಮೆಡಿಕಲ್ ಸ್ಟೋರ್ಸ್ ಗೋಕರ್ಣ, (10) [illegible] ಔಷಧಿ ಅಂಗಡಿ, ಶಿರ್ಸಿ [ಸ್ಯಾಂಪಲಿಗಾಗಿ ಬರಿರಿ]

ದಿ ಬಾಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್

ಸ್ಥಾಪನೆ 1908

[illegible] ಕಂಪನಿಯ ಹಣವು ಸರಕಾರಿ [illegible] ನೋಟುಗಳಲ್ಲಿಯೂ ಇಂಡಿಯನ್‌ಟ್ರಸ್ಟ [illegible] ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಂಪನಿ ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

[illegible] ಸ್ಥಳೀಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ [illegible]

[illegible]
D K Nayak Bros
K N Nayak
[illegible]
K V Prabhu

K. Padmanabha Rao & Sons,
BELGAUM
Chief Agents for
Karnatak Districts & S M States

ಚಕ್ರಬಿಂದು

ಮಕ್ಕಳ ಮರಣವನ್ನು ತಪ್ಪಿಸುವದು.

ಏಜನ್ಸಿ ಕಲಕತ್ತಾ, ಮುಂಬಯಿ ಮದ್ರಾಸ, ಬೆಂಗಳೂರು ಮಂಗಳೂರು

Spleen and Liver Enlargement for Children.

ಮಕ್ಕಳ ಯಕೃತ್ ಪ್ಲೀಹ, ಹೊಟ್ಟೆದೊಡ್ಡಾಗುವಿಕೆ [illegible] ಕಾಮಾಲೆ, ಗಡ್ಡೆರೋಗ ಕೋತೆ ರೋಗ, ಮೈಕೈ ಬಾವುಗಳಿಗೆ ದಿವ್ಯೌಷಧ!

[illegible] ತಿಂಗಳಿಗೆ ಸಾಕಾಗುವ ಔಷಧದ ಬೆಲೆ [illegible]



ಏತಕ್ಕೆ ಚಿಂತಿಸುವಿರಿ?

ಅನೇಕ ಹಿಮಾಚಲದ [illegible] ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಪ್ಲೀಹ ಮತ್ತು ಲಿವ್ಹರ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ

ಡಾ| ವಿ ಎಸ್ ಶ್ರೀನಿವಾಸರಾವ,
ಲಿವ್ಹರ್ ಸ್ಪೆಶಲಿಸ್ಟ
ಎಂ ವಿ ಪ್ರಸಾದಿಕ ಔಷಧಾಲಯ,
ಶಿವಮೊಗ್ಗಾ

ಇವರಲ್ಲಿ [illegible]
[illegible] ಏಜಂಟ —
ಸುಬ್ರಾಯ ಸೀತಾರಾಮ ಹೆಗಡೆ
[illegible] ಏಜಂಟ —
ದೇವಪ್ಪಾ ಅಯ್ಯಾ ನಾಯ್ಕ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್"ದಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No B 1270

Monday, 22nd December 1941.

ವರ್ಷ ೨೪

ಪತ್ರದ ವರ್ಗಣಿ.
ಕುಮಟೆಯಲ್ಲಿ ಅಗಾವು
ರೂಪಾಯಿ 2-4-0
ಮನಿಯಾರ್ಡರಿನಿಂದ
ರೂ 3-1-0.
ವ್ಹಿ ಪಿ ಅಂಚೆವೆಚ್ಚ ಸೇರಿ
ರೂಪಾಯಿ 3-4 0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಕಾನಡಾವೃತ್ತ

THE KANARA NEWS

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेंद्रै ।
इति महति विरोधे वर्तमाने समाने नृपतिजनपदानां दुर्लभ कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸಂಚಿಕೆ ೨೪

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಪ್ರತಿ
ಪ್ರಕಟನ (೧೫ ಎಮ್ ರುಂದ್ದ)
೮ ಸಾಲುಗಳವರೆಗೆ ರೂ 1 8 0
ಆ ನಂತ್ರ ಪ್ರತಿಸಾಲಿಗೆ 0-3 0
ಹಚ್ಚಿಂಗದ ಸಾಲು ಎಷ್ಟು
ಹೊತ್ತಿರುವದೋ ಆ ಮಾಪ
ದಿಂದ ಅಷ್ಟು ಸಾಲುಗಳು ಹಿಡಿ
ಯಲ್ಪಡುತ್ತವೆ

ಜಾಸ್ತಿ ಜಾಹಿರಾತುಗಳ ಬಗ್ಗೆ
ಪತ್ರದ್ವಾರ ಯಾ ಸಮಕ್ಷ ತಿಳಿ
ಸಲ್ಪಡುವದು

-*(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೨೨ ಮಾಹೆ ಡಿಶಂಬರ ಸನ್ ೧೯೪೧ನೇ ಇಸವಿ)*-



ಶ್ರೀ ಧೂತಪಾಪೇಶ್ವರ ಪನವೇಲ, ಲಿ.,

ಕರ್ನಾಟಕ ಕೇಂದ್ರ - ಯುನ್ಯಾಟೆಡ್ ಏಜನ್ಸೀಜ, ಹುಬ್ಬಳ್ಳಿ

ಕಾರವಾರ — ಮೆಸರ್ಸ ಮುಜುಮದಾರ-ಕಸಬೇಕರ ಬ್ರದರ್ಸ
ಅಂಕೋಲಾ:— ದಿ ಸ್ಟೇಶನರಿ ಡಿಪೋ
ಕುಮಟಾ:— ದೇವಪ್ಪಾ ಅಯ್ಯು ನಾಯ್ಕ.
ಹೊನ್ನಾವರ— ಮೆಸರ್ಸ ಕಲ್ಯಾಣಪುರ ಬ್ರದರ್ಸ
ಶಿರ್ಶಿ:— { ಶಿರ್ಶಿ ಡ್ರಗ್ ಸ್ಟೋರ್ಸ
ಎಸ್. ಎಲ್ ಧಾಕಪ್ಪಾ ಎಂಡ್ ಸನ್ಸ
ಸಿದ್ದಾಪುರ — ಮೆಸರ್ಸ ರಾಮಯ್ಯನ ಬ್ರದರ್ಸ
ಹಳಿಯಾಳ:— ಎನ್ ಪಿ ಹಳ್ಳಿಕೇರಿ

"ಸ್ಟಾರ ಆಫ್ ಕೆನರಾ ಪ್ರೆಸ್"

ಕುಮಟಾ.

—*—

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ ಗುಜರಾಥಿ ಭಾಷೆಯಿಂದ ಬೇಕಾದ ನಮೂನೆಯ ಕಲರ ಪ್ರಿಂಟಿಂಗ ವಗೈರೆ ಸಣ್ಣ ದೊಡ್ಡ ಛಾಪಾ ಕೆಲಸಗಳೂ, ಪುಸ್ತಕ ಮುದ್ರಣವೂ, ರೂಲಿಂಗ ಬ್ಯಾಂಡಿಂಗ ಕೆಲಸವೂ ಉತ್ತಮವಾಗಿ ಸುಲಭ ದರದಲ್ಲಿ ತಕ್ಕ ಕಾಲಕ್ಕೆ ತಯಾರಿಸಿ ಕೊಡಲಾಗುವದು

ಇದಲ್ಲದೆ ಕೋರ್ಟ ಕಚೇರಿ ಉಪಯೋಗದ ವಕಾಲತ ವಗೈರೆ ಫಾರ್ಮುಗಳೂ, ಕಸ್ಟಮ್ ಕಚೇರಿಯ ಶಿಪ್ಪಿಂಗ ಬೀಲು ಸತ್ಮಿ ವಗೈರೆ ಫಾರ್ಮುಗಳೂ, ಗೇಣಿ ರಸೀದಿ ಬುಕ್ಸ್, ರೇಣಿಚೀಟಿ ಎಮ್ಸರ್ಡಿ ಫಾರ್ಮುಗಳೂ ವಗೈರೆ ಮಾರಾಟಕ್ಕೆ ತಯಾರ ಸಿಗುತ್ತವೆ

ನಿಮ್ಮ ಛಾಪಾ ಕೆಲಸಗಳನ್ನು ನಮ್ಮಲ್ಲಿಗೇ ಕಳಿಸಿರಿ ಒಮ್ಮೆ ಅನುಭವ ತಕ್ಕೊಂಡು ನೋಡಿರಿ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ಹೆಡ್ ಆಫೀಸು - **ಕುಂದಾಪುರ.**

ಬ್ರೇಂಚ ಆಫೀಸುಗಳು -- ಅಂಕೋಲಾ, ಕುಂದಾಪುರ, ಬೈಂದೂರು, ಕೋಟೇಶ್ವರ, ಕುಮಟಾ ಗೋಕರ್ಣ, ಕಾರವಾರ, ಹಾವೇರಿ ಶಿವಮೊಗ್ಗಾ, ತರೀಕೆರೆ, ನಗರ, ಸೋಮವಾರಪೇಟೆ ಮತ್ತು ವೀರರಾಜಪೇಟೆ

ಕಾಯಂ ಠೇವುಗಳು, ಸೇವಿಂಗ್ಸ ಬೇಂಕ್ ಠೇವುಗಳು ಮತ್ತು ಚಾಲು ಠೇವುಗಳು ಸಹ ಅಂಗೀಕರಿಸಲ್ಪಡುವವು

ಭಂಗಾರದ ದಾಗಿನೆಗಳ ವ ಇತರ ವ್ಯಾಪಾರದ ಮಾಲುಗಳ ಆಡವಿನ ಮೇಲೆ ಸವಲತ್ತಿನ ದರದ ಬಡ್ಡಿಯಲ್ಲಿ ಸಾಲ ಕೊಡಲ್ಪಡುವದು.
ವ್ಯಾಪಾರದ ಕೇಂದ್ರಗಳ ಡ್ರಾಫ್ಟಗಳು, ಚೆಕ್ಕು ಸಹ ಕೊಡಲ್ಪಡುವವು ಎಲ್ಲ ತರದ ಬೇಂಕಿನ ವ್ಯವಹಾರಗಳು ಸವಲತ್ತಿನ ದರದಿಂದ ನಡಿಸಲ್ಪಡುವವು

ಕುಂದಾಪುರ, }
1-8-1941 }

The Agricultural & Industrial Bank, Ltd

ಜಾಹೀರನಾಮೆ.

ಉತ್ತರ ಕಾನಡಾ ಜಿಲ್ಹಾ ಎಗ್ಝಿಕ್ಯೂಟಿವ್ಹ ಇಂಜಿನಿಯರ ಸಾಹೇಬ ಬಹಾದ್ದೂರರವರ ಕಚೇರಿಯಿಂದ ಎಲ್ಲ ಜನರಿಗೆ ತಿಳಿಸಲ್ಪಡುವದೇನಂದರೆ:—

ಕೆಳಗೆ ತೋರಿಸಿದ ಈ ಜಿಲ್ಹೆಯೊಳಗಿನ ತಾರೀ ಹಾಸಲು ವಸೂಲು ಮಾಡುವ ದೆಸೆಯಿಂದ 1942ನೇ ಇಸವಿಯ ಏಪ್ರಿಲ ತಾರೀಖು 1ನೇ ಲಾಗಾಯಿತು ಒಂದು ವರ್ಷದ ಬಾಬತು ಮಕ್ತೆಗಳು ಕೆಳಗೆ ತೋರಿಸಿದ ತಾರೀಕಿಗೆ, ಕೆಳಗ ತೋರಿಸಿದ ಮುಕ್ಕಾಮಿನಲ್ಲಿ ಮಧ್ಯಾಹ್ನ 3 ಘಂಟೆಯ ಸಮಯ ಬಹಿರಂಗವಾಗಿ ಲಿಲಾಂವು ಮಾಡಲ್ಪಡುವವು. ಸವಾಲು ಮಾಡುವ ಇಚ್ಛೆಯುಳ್ಳವರು ಬಂದು ಸವಾಲ ಮಾಡಬಹುದು.

2. ಮಕ್ತೆ ಬೇಡುವವರ ಹತ್ತರ ತಮ್ಮ ಲಾಯಖಿ ಬಗ್ಗೆ ಅವರ ಸ್ಥಿರ ಆಸ್ತಿ ಎಲ್ಲಿರುವದೋ ಆ ತಾಲೂಕಿನ ಮಾಮಲೇದಾರರ ಅಥವಾ ಪೇಟೆಯ ಮಹಾಲಕರಿಯವರ ಸಹಿಯ ಸರ್ಟಿಫಿಕೇಟು ಇರಬೇಕು. ಮತ್ತು ಅವರು ಪ್ರತಿ ಒಂದು ಮಕ್ತೆ ಬಾಬತು ಇನ್ನೂರು (200 0-0) ರೂಪಾಯಿಗಳನ್ನು ನಗದಿಯಾಗಿ ಹಾಜರ ಮಾಡಲು ಸಿದ್ಧರಾಗಿರಬೇಕು. ಒನವ ಸಿ ತಾರಿ ಬಗ್ಗೆ ನಿರ್ದಿಷ್ಟ ಮಾಡಿದ ಡಿಪೋಜಿಟ ರಕಮು ರೂಪಾಯಿ 20 ಇರುತ್ತದೆ ಅಂದರೇನೇ ಅಂಥವರ ಸವಾಲು ತಕ್ಕೊಳ್ಳಲಾದೀತು. ಸವಾಲು ಮಂಜೂರು ಆಗದಿದ್ದರೆ ಹೀಗೆ ಹಾಜರ ಮಾಡಿದ ಹಣ ಪರತ ಕೊಡಲ್ಪಡುವದು ಮಂಜೂರು ಆದರೆ ಸದರೀ ರಕಮು ಕರಾರಿನಲ್ಲಿ ನಮೂದಿಸಿದ ಯಾವತ್ತೂ ಶರ್ತುಗಳನ್ನು ಯೋಗ್ಯ ರೀತಿಯಿಂದ ಪಾಲಿಸುವ ಬಗ್ಗೆ ಅನಾಮತವಾಗಿ ಇಡಲ್ಪಡುವದು. ಮತ್ತು ಮಕ್ತೆಯ ಮುದ್ದತು ತೀರಿದ ಬಳಿಕ ಸದರಿ ರಕಮು ಪರತ ಕೊಡಲ್ಪಡುವದು.

3 ಸವಾಲು ಮೂರು ವಾರ ಆದ ಕೂಡಲೆ ಸವಾಲಿನ ರಕಮಿನ ಒಂದು ಹತ್ತಾಂಶ 1/10 ಹಣ ಹಾಜರ ಮಾಡಲಿಕ್ಕೆ ಸವಾಲದಾರರು ಸಿದ್ಧರಾಗಿರಬೇಕು. ಹೀಗೆ ಹಾಜರ ಮಾಡಿದ ಹಣ ಅವರು ಕೊಡತಕ್ಕ ಆಖೈರ ಕಿಸ್ತಿಗೆ ಮುಜರಾ ಹಿಡಿಯಲ್ಪಡುವದು

4 ಯಾವತ್ತೂ ತಾರಿಗಳಿಗೆ ಜಂಗಲ ದೋಣಿಗಳು ಸರಕಾರದಿಂದ ಪೂರೈಸಲ್ಪಟ್ಟಿವೆ. ಆದರೆ ಪಟ್ಟಿಯಲ್ಲಿ (agreement) ನಮೂದಿಸಿದಷ್ಟು ಎಲ್ಲ ಪಸಿಂಜರ ದೋಣಿಗಳನ್ನು ಪೂರೈಸಿಕೊಳ್ಳುವ ವ್ಯವಸ್ಥೆಯನ್ನು ಮಕ್ತೇದಾರರೇ ಮಾಡತಕ್ಕದ್ದು.

5. ಮುಖ್ಯ ತಾರೀ ಮತ್ತು ಫ್ರೋಟ ತಾರಿಗೆ ಕೂಡಿ ಒಬ್ಬನೇ ಸವಾಲ ಮಾಡತಕ್ಕದ್ದು. ವಸ್ತುತಃ ಮುಖ್ಯ ಮತ್ತು ಫ್ರೋಟ ತಾರೀ ಕೂಡಿ ಒಂದೇ ತಾರಿ ಎಂತಾ ತಿಳಿಯಬೇಕು.

6. ಮೇಲೆ ಮೂರನೇ ಕಲಮಿನಲ್ಲಿ ಹೇಳಿದಂತೆ ಒಂದು ಹತ್ತಾಂಶ ರಕಮು ಮಕ್ತೆಯ ಸವಾಲು ಮೂರು ವಾರ ಆದ ಕೂಡಲೇ ಹಾಜರ ಮಾಡದಿದ್ದರೆ ಸವಾಲು ರದ್ದುಪಡಿಸಿ ಪುನಃ ಲಿಲಾಂವ ಮಾಡಲಾದೀತು. ಮತ್ತು ಅವರ ಸವಾಲು ತೆಗೆದುಕೊಳ್ಳಲಿಕ್ಕಿಲ್ಲ. ಹೀಗೆ ಲಿಲಾಂವು ಮಾಡಿದ್ದರಿಂದ ಲುಕಸಾನು ಆದರೆ ಅದು ಕಾಯಿದೇ ಪ್ರಕಾರ ಮೊದಲಿನ ಸವಾಲುದಾರರ ಕಡೆಯಿಂದ ತುಂಬಿಕೊಳ್ಳಲಾದೀತು. ಲಾಭ ಆದರೆ ಅದರ ಮೇಲೆ ಅವರ ಹಕ್ಕು ಇಲ್ಲ.

7. ಆಖೈರ ಸವಾಲು ಮೆ। ಎಗ್ಝಿಕ್ಯೂಟಿವ್ಹ ಇಂಜಿನಿಯರ ಸಾಹೇಬ ಬಹಾದ್ದೂರರವರ ಮಂಜೂರಿಗೆ ಒಳಗಾಗಿರುವದು. ಸವಾಲು ಯಾವದೇ ಕಾರಣದಿಂದ ಅವರು ನಾಕಾರಿಸಿದರೆ ಅದರ ಕಾರಣ ತಿಳಿಸಲಿಕ್ಕೆ ಅವರು ಬದ್ಧರಾಗಲಿಕ್ಕಿಲ್ಲ

8 ಲಿಲಾಂವು ಒಮ್ಮೆ ತೀರಿದ ಬಳಿಕ ಅರ್ಜಿ ದ್ವಾರವಾಗಲೀ ತಾರ ಮೇಲೆ ಆಗಲಿ ಹೆಚ್ಚು ಸವಾಲು ಆದೆ ಎಂತ ತಿಳಿಸಿದರೆ ಆ ಸವಾಲು ತೆಗೆದುಕೊಳ್ಳಲಿಕ್ಕೆ ಬರಲಿಕ್ಕಿಲ್ಲ

9 ಕರಾರಿನಲ್ಲಿ ನಮೂದಿಸಿದ ಎಲ್ಲ ಶರ್ತುಗಳನ್ನು ಯೋಗ್ಯ ರೀತಿಯಿಂದ ಬಜಾಯಿಸುವ ಬಗ್ಗೆ ಹಾಗೂ ಲಿಲಾಂವಿನ ರಕಮುಗಳನ್ನು ಪ್ರತಿ ವರ್ಷ ಸರಿಯಾದ ನಾಲ್ಕು ಕಂತುಗಳಿಂದ ಠರಾಯಿಸಿದ ಮುದ್ದತ್ತಿಗೆ ಕೊಡುವ ಬಗ್ಗೆ ಮಕ್ತೇದಾರರು ಎರಡು ಯೋಗ್ಯ ಜಾಮೀನದಾರರ ಮೇಲಿನ ಎರಡನೇ ಕಲಮಿನಲ್ಲಿ ನಮೂದಿಸಿದ ಪ್ರಕಾರ ಲಾಯಖೀ ಸರ್ಟಿಫಿಕೇಟುಗಳನ್ನು ಲಿಲಾಂವಿನ ತಾರೀಖಿನಿಂದ ಹತ್ತು ದಿವಸದೊಳಗೆ ಹಾಜರ ಮಾಡಬೇಕು.

10. ತಾರಿಯ ಮಕ್ತಾ ಪಡೆದವರು ಪ್ರತಿ ಒಂದು ತಾರಿಯ ಪ್ರತಿ ಒಂದು ದೋಣಿಯ ಬಗ್ಗೆ ತಮ್ಮ ಸ್ವಂತ ಖರ್ಚಿನಿಂದ ಮೆಹರಬಾನ ಕಲೆಕ್ಟರ ಸಾ| ಬಾ| ಕಾನಡಾ, ಕಾರವಾರರವರಿಂದ ತಾರಿಯನ್ನು ನಡೆಯಿಸುವ ಮುಂಚಿತವಾಗಿ ಲಾಯಸನ್ಸುಗಳನ್ನು ಪಡೆಯತಕ್ಕದ್ದು; ಮತ್ತು ಹೀಗೆ ಲಾಯಸನ್ಸು ಪಡೆದ ಬಗ್ಗೆ ಮೆ|| ಎಗ್ಝಿಕ್ಯೂಟಿವ್ಹ ಇಂಜಿನಿಯರ ಸಾಹೇಬರಿಗೆ ತಾ 16—3—1942 ನೇ ದರೊಳಗೆ ಲೇಖಿ ತಿಳಿಸತಕ್ಕದ್ದು

11 ಅವಶ್ಯವಿದ್ದವರು ಹಿಂದಿನ ವರ್ಷಗಳಲ್ಲಿ ಆಯಾ ಸಬ್ ಡಿವ್ಹಿಜನದಲ್ಲಿಯ ತಾರಿ ಮಕ್ತೆಗೆ ಎಷ್ಟು ರಕಮಿನ ಸವಾಲು ಮಂಜೂರಾಗಿತ್ತು ಎಂಬ ಮಾಹಿತಿಯನ್ನು ಮೆ|| ಎ. ಇ. ಸಾಹೇಬರ ಆಫೀಸಿನಲ್ಲಿ ಹಾಗೂ ಸರ್ವಸಾಧಾರಣವಾಗಿ ಲಿಲಾಂವಿನ ಶರ್ತುಗಳು ಏನು ಅವೆ ಎಂಬ ಮಾಹಿತಿಯನ್ನು ಸಬ್ ಡಿವ್ಹಿಜನಲ್ ಆಫೀಸರ ಪ. ವ. ಡಿ. ಕುಮಟಾ, ಕಾರವಾರ ಮತ್ತು ಶಿರ್ಶಿ ಇವರ ಕಚೇರಿಯಲ್ಲಿ, ಕಚೇರಿಯ ಹೊತ್ತಿನಲ್ಲಿ ತಿಳಕೊಳ್ಳಬಹುದು. ಮತ್ತು ಲಿಲಾಂವಿನ ಯಾವತ್ತೂ ಶರ್ತುಗಳು ಲಿಲಾಂವಿನ ಕಾಲಕ್ಕೆ ಓದಿ ತಿಳಿಸುವದರಲ್ಲಿ ಬಂದಾವು.

12. ಕೆಳಗೆ ಕಾಣಿಸಿದ ಪೈಕಿ ಸೀಜ ನಂ. 2, 3, 4 ಮತ್ತು 5ನೇ ತಾರಿಯ ಮೇಲಿಂದ ಹಾಯ್ದು ಹೋಗುವ ಗಾಡಿಗಳ ಹಾಗೂ ಬೇರೆ ವಾಹನಗಳ ಮೇಲೆ 2ನೇ ವರ್ಗದ ತಾರೀ ದರದಂತೆ ತಾರಿ ಹಾಸಲು ಆಕರಣಿ ಮಾಡಬಾರದೀತು.

13. ಯಾವದಾದರೊಂದು ತರದ ರಹದಾರಿ ಇಂತಿಷ್ಟೇ ಸಿಕ್ಕೀತೆಂದು ಕೇಳಲಿಕ್ಕೆ ಬರಲಾರದು. ಯಾವದಾದರೊಂದು ಕಾರಣದ ದೆಸೆಯಿಂದ ಯಾವದಾದರೂ ರಸ್ತೆಯ ಮೇಲಿನ ರಹದಾರಿ ಬಂದ ಮಾಡಿದರೆ ಅಥವಾ ತಾರೀ ಮಕ್ತೇದಾರನಿಗೆ ಅವನ ತಿಳುವಳಿಕೆಯಂತೆ ಯಾವದಾದರೊಂದು ಕಾರಣದಿಂದ ರಹದಾರಿ ಸಿಗದೆ ಇದ್ದಲ್ಲಿ ಆ ಬಗ್ಗೆ ಸದರಿ ಮಕ್ತೇದಾರನಿಗೆ ಸೂಟ ಅಥವಾ ರಿಫಂಡ ಸಿಗಲಾರದು.

14. ತಾರಿ ಬಾಬತು ಕರಾರುಗಳನ್ನು ಲಿಲಾಂವಿನ ತಾರೀಖಿನಿಂದ ಒಂದು ತಿಂಗಳೊಳಗೆ ಪೂರಾ ಮಾಡಬೇಕು. ಇಲ್ಲದಿದ್ದರೆ ಸವಾಲು ರದ್ದುಪಡಿಸಿ ಮೇಲಿನ ಎರಡನೇ ಮತ್ತು ಮೂರನೇ ಕಲಮುಗಳಲ್ಲಿ ನಮೂದಿಸಿದ ಪ್ರಕಾರ ಹಾಜರ ಮಾಡಿದ ರಕಮುಗಳು ದಂಡದ ಬಗ್ಗೆ ಸರಕಾರಕ್ಕೆ ಜಮಾ ಮಾಡಲಾದಾವು ಮತ್ತು ಪುನಃ ಲಿಲಾಂವ ಮಾಡಿಸಿ ಆದ ಲುಕಸಾನಿಗೆ ಸವಾಲುದಾರರು ಜವಾಬದಾರರಾಗುವರು. ಸವಾಲು ರಕಮು ಜಾಸ್ತಿ ಬಂದಲ್ಲಿ ಅದಕ್ಕೆ ಸವಾಲದಾರರ ಹಕ್ಕು ಇರಲಿಕ್ಕಿಲ್ಲ.

15. ತಾರಿಯ ಮಕ್ತೆ ಪಡೆದವರು ತಾರಿಯ ಎರಡೂ ಬದಿಯಲ್ಲಿರುವ ವಿಶ್ರಾಂತಿ ಗೃಹಗಳನ್ನು ತಮ್ಮ ಸ್ವಂತ ಖರ್ಚಿನಿಂದ ಪ್ರಯಾಣಸ್ಥರಿಗೆ ಅನಾನುಕೂಲತೆ ಆಗದಂತೆ ಸ್ವಚ್ಛ ಇಡಬೇಕಾದೀತು.

16. ಸರಕಾರಿ ದೋಣಿಗಳಿಗೆ ಮಕ್ತಾ ಪಡೆದವರು ಆಯಾ ವೇಳೆಯಲ್ಲಿ ಮಾಡತಕ್ಕ ದುರುಸ್ತಿ ವಗೈರೆಯ ಕ್ರಮ ಮೊದಲಾದವುಗಳನ್ನು ಸವಾಲು ಮಾಡುವವರು ತಮಗೆ ಬೇಕಾದಾಗ ಮೆ|| ಎಗ್ಝಿಕ್ಯೂಟಿವ್ಹ ಇಂಜಿನಿಯರ ಸಾಹೇಬರವರ ಆಫೀಸಿನಲ್ಲಿ, ಆಫೀಸ ಹೊತ್ತಿನಲ್ಲಿ ತಿಳಕೊಳ್ಳತಕ್ಕದ್ದು ಸರಕಾರಿ ಜಂಗಲ-ದೋಣಿಗಳಿಗೆ ಗಲಗಳೆ ಸರಕಾರದಿಂದಲೇ ಮಾಡಲ್ಪಡುವದು.

17. ಸೀಜ ನಂಬರ 1 ಶರಾವತಿ ಮುಖ್ಯ ತಾರಿಯ ಬಗ್ಗೆ ಪಾವರ ಲೋಂಚ ಸರ್ವ್ಹಿಸ ಅಥವಾ ದೋಣಿ ಸರ್ವ್ಹಿಸ ಎರಡೂ ತರದಿಂದ ಹಾಸಲು ವಸೂಲ ಮಾಡುವ ಹಕ್ಕು ಲಿಲಾಂವ ಮಾಡಲ್ಪಡುವದು. ಲೋಂಚ ಸರ್ವ್ಹಿಸಿಗೆ ಸವಾಲು ಮಾಡಲಿಚ್ಛಿಸುವವರು ಎರಡು ಚಲೋ ಪಾವರ ಲೋಂಚಗಳನ್ನು ಪೂರೈಸುವ ಯೋಗ್ಯ ವ್ಯವಸ್ಥೆ ಮಾಡುವ ಲಾಯಖಿ ಬಗ್ಗೆ ಮೆ|| ಎಗ್ಝಿಕ್ಯೂಟಿವ್ಹ ಇಂಜಿನಿಯರ ಸಾಹೇಬರವರಿಗೆ ಲಿಲಾಂವಿನ ದಿವಸ ಖಾತ್ರಿ ಮಾಡಿದಲ್ಲಿ ಮಾತ್ರ ಅವರಿಗೆ ಪಾವರ ಲೋಂಚ ಸರ್ವ್ಹಿಸಿನ ಬಾಬತು ಸವಾಲು ಮಾಡಲಿಕ್ಕೆ ಕೊಡಲ್ಪಡುವದು. ಪಾವರ ಲೋಂಚ ಇಲ್ಲವೆ ದೋಣಿಗಳ ಸರ್ವ್ಹಿಸು ಇಡಿಸುವದು ಮೆ|| ಎ. ಇಂ. ಸಾಹೇಬರವರ ಪಸಂತಿಗೆ ಒಳಗಾಗಿರುವದು ಪಾವರ ಲೋಂಚ ಸರ್ವ್ಹಿಸಿನ ಬಗ್ಗೆ ಯಾರ ಸವಾಲ ಮಂಜೂರ ಆಗುತ್ತದೋ ಅವರು ಆ ತಾರಿಯ ಬಗ್ಗೆ ಎರಡು ಚಲೋ ಲೋಂಚಗಳನ್ನು ಲಿಲಾಂವ ತಾರೀಕಿನಿಂದ ಒಂದು ತಿಂಗಳೊಳಗೆ ತಂದು ಮೆ|| ಎ. ಇಂ. ಸಾಹೇಬರ ಕಡೆಯಿಂದ ಪಾಸ ಮಾಡಿಸಬೇಕು ಹಾಗೂ ಸದ್ರಿ ಲೋಂಚಗಳ

ಬಾಬತು ಪೆಂಡಾಯಿನ ಬಾತಿಯಿಂದ ತಾ. 22-2-1942ನೇದರೊಳಗೆ ಪಾಸ ಮಾಡಿಸತಕ್ಕದ್ದು ಇದಕ್ಕೆ ತಪ್ಪಿದ್ದಲ್ಲಿ ಮೇಲಿನ 14ನೇ ಕಲಮಿನ ಪ್ರಕಾರ ತಜವೀಜು ಮಾಡಲಾದೀತು

18. ತಾರಿ ಸೇಜ ನಂಬರ 1 ಶರಾವತಿ ಈ ತಾರಿಯಿಂದ ಸರಕಾರದಿಂದ ತಯಾರಿಸಲ್ಪಟ್ಟ ಜಂಗಲ ಮೇಲಿಂದ ಸರಕಾರಿ ಅಥವಾ ಬೇರೆ ಪ್ರಯಾಣಸ್ಥರ ಮೋಟಾರಗಳು ಸದ್ರಿ ತಾರಿಯಿಂದ ಗೇರಸಪ್ಪೆಗೆ ಒಯ್ಯುವ ವ ತರುವ ವ್ಯವಸ್ಥೆ ಮಕ್ತೇದಾರರು ಮಾಡತಕ್ಕದ್ದು ಮತ್ತು ಈ ಬಗ್ಗೆ ನಿರ್ದಿಷ್ಟ ಮಾಡಿದ ಹಾಸಲು ಮತ್ತು ಇತರ ಶರ್ತುಗಳು ಲಿಲಾಂವದ ಕಾಲಕ್ಕೆ ಜಾಹೀರ ಮಾಡಲ್ಪಡುವವು. ಈ ಬಗ್ಗೆ ಸರಕಾರದಿಂದ ಇಟ್ಟ ಜಂಗಲ-ಬೋಟಿಗಳಿಗೆ ಗಲಗಲೆ ಸರಕಾರದಿಂದಲೇ ಮಾಡಲ್ಪಡುವದು. ಶರಾವತಿ ತಾರಿಯು ಲೋಂಚ ಅಥವಾ ದೋಣಿ ಸರ್ವಿಸ ಲಿಲಾಂವ ಮುಖ್ಯ ತಾರಿಯ ಬಗ್ಗೆ ಮತ್ತು ಗೇರಸಪ್ಪೆಯ ತಾರಿಯನ್ನು ನಡಿಸುವ ಶರ್ತಿನಿಂದ ಪ್ರತ್ಯೇಕವಾಗಿ ಲಿಲಾಂವ ಮಾಡಲ್ಪಡುವದು.

ನಂ.	ತಾರಿಯ ಹೆಸರು	ತಾರಿಯ ಕ್ಲಾಸು.	ತಾಲೂಕ	ಯಾವ ತಾರೀಖಿಗೆ	ಎಲ್ಲಿ	ಯಾರ ಮುಂದೆ
1	ಶರಾವತಿ (ಮಲ್ಲುಕುರ್ವೆ ಪೋಟ ತಾರಿ ಸಹಿತ)	2ನೇ	ಹೊನ್ನಾವರ	15—1—1942	ಪಿ. ಡಬ್ಲ್ಯು. ಡಿ. ಆಫೀಸ ಕುಮಟಾ	ಮೆ|| ಎಕ್ಝಿಕ್ಯೂಟಿವ್ಹ ಇಂಜನಿಯರ ಸಾಹೇಬ, ಕಾನಡಾ.
2	ಹೆಗಡೆ (ಮಿರ್ಜಾನ ಕೋಡಕಣಿಯ ಪೋಟ ತಾರಿಯ ಸಹಿತ)	3ನೇ	ಕುಮಟಾ			
3	ದಿವಗಿ (ಮಣಕಿ)	"	"			
4	ವೆಂಕಟಾಪುರ (ಹೆಬಳೆ ಮತ್ತು ತೆಂಗಿನಗುಂಡಿ ಪೋಟ ತಾರಿ ಸಹಿತ್ಯ)	"	ಭಟಕಳ ಪೇಟಾ			
5	ಉಳವರೆ	"	ಅಂಕೋಲಾ			
6	ಬನವಾಸಿ	4ನೇ	ಶಿರ್ಶಿ		ಸಬ್ ಡಿವ್ಹಿಜನಲ್ ಆಫೀಸ ಪಿ. ಡಬ್ಲ್ಯು. ಡಿ. ಶಿರ್ಶಿ.	ಮೆ|| ಸ. ಡಿ. ಆಫೀಸರ, ಪ. ವ. ಡಿ. ಶಿರ್ಶಿ.
7	ಕೋಡಿಬಾಗ (ಸದಾಶಿವಗಡ)	2ನೇ	ಕಾರವಾರ	20-1-1942	ಮೆ|| ಎ. ಇಂ. ಸಾಹೇಬರವರ ಆಫೀಸಿನಲ್ಲಿ	ಮೆ|| ಎ. ಇಂ. ಸಾಹೇಬ ಕಾನಡಾ

ಕಾರವಾರ,
5—12—1942.

S. K. KARANDIKAR,
Executive Engineer, Kanara Division.

“ ಈವ್ಸ-ಡ್ರೊಪರ ”ನ ಅಭಿಪ್ರಾಯ.

ಬರೀ ಹದಿನೇಳು ವರ್ಷಗಳಲ್ಲಿ ೧|| ಕೋಟಿ ರೂ.ಗಳಷ್ಟು ಜೀವನಿಧಿಯನ್ನು ಕಲೆಹಾಕಿದ ಹಾಗೂ ೪೦ ಲಕ್ಷ ರೂ.ಗಳಿಗೂ ಮಿಕ್ಕಿ ವಾರ್ಷಿಕ ಉತ್ಪನ್ನ ಪಡೆಯುವಷ್ಟು ಉತ್ತಮ ಸ್ಥಿತಿಗೆ ಬಂದು ಮುಟ್ಟಿದ, ಎರಡೇ ವರ್ಷಗಳಲ್ಲಿ ಆಡಳಿತೆಯ ಖರ್ಚಿನ ಪ್ರಮಾಣವನ್ನು ನೂರಕ್ಕೆ ೧೧ರಷ್ಟು ಇಳಿಸಿದ ಮತ್ತು ಹಿಂದುಸ್ಥಾನದ ಮುಖ್ಯ ಮುಖ್ಯ ಕೇಂದ್ರಗಳಲ್ಲಿ ತನ್ನ ಸ್ವಂತ ಮಾಲ್ಕಿಯ ಭವ್ಯ ಕಚೇರಿ-ಮನೆಗಳನ್ನು ಕಟ್ಟಿಸಿಕೊಂಡು ವೈಭವದಿಂದ ಮೆರೆಯುವ ಬೇರೆ ಅವ ಕಂಪನಿಯನ್ನೂ ನಾನು ಕಂಡಿಲ್ಲ! ಲಕ್ಷ್ಮೀ ವಿಮೆ ಕಂಪನಿಯು ನಿಜವಾಗಿಯೂ ಲಕ್ಷ್ಮೀ ದೇವಿಯ ಪ್ರೇಮಾನುಗ್ರಹವನ್ನು ಸಂಪಾದಿಸಿದೆ!

ತಾ. ೨೬-೪-೧೯೪೧ರ “ ಇಂಡಿಯನ್ ಫೈನೆನ್ಸ್ ” ಪತ್ರಿಕೆಯಿಂದ

ವರ್ಷ	ಜೀವ ನಿಧಿ	ವೆಚ್ಚದ ಪ್ರಮಾಣ
೧೯೨೫—೨೬	೬೪,೪೨೯	೭೭.೯೮
೧೯೨೯—೩೦	೧೫,೦೦,೭೨೬	೩೭.೮೭
೧೯೩೪—೩೫	೫೯,೧೩,೪೯೯	೩೧.೯೩
೧೯೩೯	೧,೩೩,೪೮,೩೯೯	೩೧.೫೭
೧೯೪೦	೧,೫೫.೨೨,೧೯೭	೨೫.೭೭

ಬೋನಸ್ಸು:- ಎಂಡೌಮೆಂಟ ವಿಮೆಗಳ ಮೇಲೆ: ೧೦೦೦ ರೂ.ಗೆ ಪ್ರತಿ ವರ್ಷ ರೂ. ೧೫.
ಆಜೀವ ವಿಮೆಗಳ ಮೇಲೆ ೧೦೦೦ ರೂ.ಗೆ ಪ್ರತಿ ವರ್ಷ ರೂ ೧೮

ದಿ ಲಕ್ಷ್ಮೀ ಇನ್ಶ್ಯೂರನ್ಸ ಕಂಪನಿ, ಲಿ.,
ಮುಖ್ಯ ಕಚೇರಿ: **ಮೆಕ್ಲಾಡ ರೋಡ, ಲಾಹೋರ.**

ಮುಂಬಯಿ ಶಾಖೆ:-
“ ಲಕ್ಷ್ಮೀ ಬಿಲ್ಡಿಂಗ ”
ಫಿರೋಜಶಹಾ ಮೆಹತಾ ರೋಡ,

ಕಲಕತ್ತಾ, ಮುಂಬಯಿ, ಮದ್ರಾಸ, ಕರಾಚಿ, ಲಖನೌ,
(ನಿಜಾಮ) ಹೈದರಾಬಾದ, ಮೊಂಬಾಸಾ (ಬ್ರಿಟಿಶ ಪೂರ್ವ ಆಫ್ರಿಕಾ)
ಈ ಊರುಗಳಲ್ಲಿ ಶಾಖೆಗಳಿವೆ.

ವಾರ್ತೆಗಳು.

— ಮಹಾತ್ಮಾಜಿಯವರೀಗ ಬಾರ್ಡೋಲಿಗೆ ಹೋಗಿದ್ದಾರೆ. ಕೊಂಗ್ರೆಸ ಕಾರ್ಯಕಾರಿ ಮಂಡಳವು ನಾಳೆ ಅಲ್ಲಿಯೇ ಕೂಡುವದು. ಅ. ಭಾ. ಕೊಂ. ಸಮಿತಿಯ ಸಭೆಯೂ ಕೂಡ ಬಾರ್ಡೋಲಿಯಲ್ಲೇ ಕೂಡಬಹುದು.

— ಈ ವರ್ಷದ ಹಿಂದು ಮಹಾಸಭೆಯು ಅಧಿವೇಶನವನ್ನು ಬಿಹಾರ ಪ್ರಾಂತದ ಭಾಗಲಪುರದಲ್ಲಿ ಸೇರಿಸತಕ್ಕದ್ದೆಂದು ನಿರ್ಣಯವಾಗಿ ಆ ಬಗ್ಗೆ ಸಿದ್ಧತೆಗಳು ಸಾಗಿರುವಾಗ, ಭಾಗಲಪುರದೊಳಗಿನ ಜಾತೀಯ ಪರಿಸ್ಥಿತಿಯು ಹಿಂದು ಮಹಾಸಭೆಯ ಕೂಡುವಿಕೆಯಿಂದ ಇನ್ನಿಷ್ಟು ಕೆಟ್ಟು ಅನರ್ಥವಾದೀತೆಂಬ ಕಾರಣತೋರಿಸಿ, ನಾತಾಳದಲ್ಲಿ ಭಾಗಲಪುರದಲ್ಲಿ ಹಿಂದು ಮಹಾಸಭೆಯ ಅಧಿವೇಶನ ಕೂಡಿಸಬಾರದೆಂದು ಬಿಹಾರ ಸರಕಾರದವರು ಪ್ರಕಟಣೆ ಹೊರಡಿಸಿದರು. ಹಿಂದು ಮಹಾಸಭೆಯವರು ಈ ಕುರಿತು ಸರಕಾರದ ಕಡೆ ವಿಶೇಷ ಮಾಹಿತಿ ಕೇಳಲಾಗಿ, ಡಿಶಂಬರ ತಾ. ೨೯ನೇಗೆ ಮುಸಲ್ಮಾನರ ಬಕರ-ಈದ ಹಬ್ಬ ಬರುತ್ತದೆಂತಲೂ, ಹಿಂದು ಮಹಾಸಭೆಯ ಅಧಿವೇಶನದಿಂದ ಭಾಗಲಪುರ ಮುಸಲ್ಮಾನ ಗುಂಡರು ಕೆರಳಿಕೊಂಡು ದಂಗೆಯನ್ನೆಬ್ಬಿಸ್ಯಾರೆಂಬ ಭೀತಿ ನಮಗುಂಟೆಂದೂ ಆ ದಂಗೆಯನ್ನು ಆಗಗೊಡದಿರಲು ಹಾಗೂ ಆದಲ್ಲಿ ಅದನ್ನು ದಬ್ಬಿಬಿಡಲು ಅವಶ್ಯವುಳ್ಳ ಪೋಲೀಸ-ಶಿಬಂದಿಯನ್ನು ಭಾಗಲಪುರದಲ್ಲಿಡಲು ತಮಗೆ ಅನುಕೂಲವಿಲ್ಲೆಂದೂ ಸರಕಾರದವರು ಖುಲಾಸೆ ಮಾಡಿದಂತೆ ತಿಳಿಯುತ್ತದೆ. ಬಿಹಾರ ಸರಕಾರದ ಈ ಖುಲಾಸೆಯಿಂದ ಹಿಂದು ಮಹಾಸಭೆಯವರಿಗೆ ಸಮಾಧಾನವಾಗಿರುವದಿಲ್ಲ. ಭಾಗಲಪುರದೊಳಗಿನ ಅಲ್ಪಸಂಖ್ಯ ಮುಸಲ್ಮಾನರ ಮನಃಸಂತೋಷ ಸಂಪಾದಿಸುವದಕ್ಕಾಗಿಯೇ ಬಿಹಾರ ಸರಕಾರವು ಹಿಂದು ಮಹಾಸಭೆಯ ಅಧಿವೇಶನಕ್ಕೆ ಅಡ್ಡಿ ಮಾಡುತ್ತಿರುವದೆಂದು ಮಹಾಸಭೆಯವರ ಆರೋಪವಿದೆ. ಮತ್ತು ಬಿಹಾರ ಸರಕಾರದ ಪ್ರತಿಬಂಧಕ ಹುಕುಮನ್ನು ಲೆಕ್ಕಿಸದೆ ಭಾಗಲಪುರದಲ್ಲೇ ಈ ವರ್ಷದ ಮಹಾಸಭೆಯ ಅಧಿವೇಶನ ಕೂಡಿಸಬೇಕೆಂದು ಅವರು ನಿಶ್ಚಯಿಸಿಕೊಂಡು ಅದರಂತೆ ತಮ್ಮ ತಯಾರಿಯನ್ನು ನಡಿಸಿರುತ್ತಾರೆ. ಸ್ವಾತಂತ್ರ್ಯವೀರ ಬ್ಯಾ|| ವಿನಾಯಕ ಸಾವರಕರರೇ ಪುನಃ ಈ ಅಧಿವೇಶದ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ಮೊನ್ನೆ ತಾ. ೧೪ನೇಗ ದೇಶದೊಳಗೆಲ್ಲ ಭಾಗಲಪುರ ದಿನದ ಆಚರಣೆಯಾಗಿ ಅಲ್ಲಲ್ಲಿಯ ಹಿಂದು ಸಭೆಗಳು ಸಭೆಗಳನ್ನು ಸೇರಿಸಿ ಬಿಹಾರ ಸರಕಾರದ ಹುಕುಮಿನ ನಿಷೇಧ ಮಾಡಿದರು. ಬರುವ ಗುರುವಾರ ತಾ. ೨೫ನೇಗೆ ಅಧಿವೇಶನದ ಪ್ರಾರಂಭವಾಗುವದೆಂದು ನಿಶ್ಚಿತವಾಗಿದೆ. ಸಾವಿರಾರು ಪ್ರತಿನಿಧಿಗಳು ಭಾಗಲಪುರಕ್ಕೆ ಹೋಗುವದಕ್ಕೆ ಸಿದ್ಧರಾಗಿದ್ದಾರೆ. ಅತ್ತ ಸರಕಾರದವರೂ ಕೂಡ ಅಧಿವೇಶನದ ಮಂಟಪದ ಸುತ್ತುಮುತ್ತು ಪೋಲೀಸರ ಸರ್ಪಗಾವಲು ಇಟ್ಟಿರುವರೆಂಬ ವಾರ್ತೆ ಬಂದಿದೆ! ಅಂತು ಈ ವಾರದಲ್ಲಿ ಭಾಗಲಪುರದೊಳಗೆ ಬಿಹಾರ ಸರಕಾರ ಮತ್ತು ಹಿಂದುಮಹಾಸಭೆಯವರೊಳಗೆ ಒಳ್ಳೇ ತಿಕ್ಕಾಟವುಂಟಾಗಿ ಇನ್ನೊಂದು ಸತ್ಯಾಗ್ರಹ-ಸಮರ ಪ್ರಾರಂಭವಾಗುವದೆಂದು ಕಂಡು ಬರುತ್ತದೆ.

ಕಾನಡಾವೃತ್ತ.

ಮಿತಿ ವೃಷ ಸಂವತ್ಸರ ಪುಷ್ಯ ಶು॥ ೬ಥಿ ಸೋಮವಾರ

ಈಗ ರಾಷ್ಟ್ರಸ್ವಾತಂತ್ರ್ಯದ್ದೇ ಪ್ರಶ್ನೆ.

ಕಳೆದ ಗುರುವಾರ ಮುಂಬಯಿಯ ಮಹಾಜನರು ಏರ್ಪಡಿಸಿದ ಸತ್ಕಾರ ಸಭೆಯಲ್ಲಿ ಹಿಂದುಸ್ಥಾನ ಸರಕಾರದ ಕಾರ್ಯಕಾರಿ ಮಂಡಳದ ಸಭಾಸದರಾದ ಶ್ರೀ॥ ಮಾಧವರಾವ ಆಣೇಯವರು ನುಡಿದಂತೆ, ರಾಷ್ಟ್ರೀಯ ಸಭೆಯವರು ಯುದ್ಧಯತ್ನದ ಕುರಿತು ನಿಶ್ಚಿತ ಧೋರಣ ತಳೆಯುವ ಕಾಲವೀಗ ಪ್ರಾಪ್ತವಾಗಿದೆಂದು ನಾವು ಒಪ್ಪುತ್ತೇವೆ, ಮತ್ತು ಅದೇ ಪ್ರಕಾರ ಸರ್ವರೂ ಈ ಆಪತ್ಕಾಲದಲ್ಲಿ ತನು-ಮನ ಧನದಿಂದ ಬ್ರಿಟಿಶ ಸರಕಾರಕ್ಕೆ ನೆರವಾಗಿ ಯುದ್ಧವನ್ನು ಜಯಿಸ ಕಾರಣರಾಗಬೇಕೆಂಬ ನಮ್ಮದೂ ಅಭಿಪ್ರಾಯವಿರುತ್ತದೆ ಪಂ|| ಜವಾಹಿರಲಾಲರು ಅದೇ ದಿನ ಮುಂಬಯಿಯಲ್ಲಿ ಭಾಷಣ ಮಾಡುವಾಗ ಹೇಳಿದಂತೆ ರಶಿಯಾ, ಚೀನ, ಅಮೇರಿಕಾಗಳಂಥ ಜನಾಂಗಗಳು ನಡಿಸುವ ಸಂಗ್ರಾಮವನ್ನು ಪುರಸ್ಕರಿಸದಿರುವದು ನಮ್ಮಂಥ ಸ್ವಾತಂತ್ರ್ಯಕಾಂಕ್ಷಿ ಜನಾಂಗಕ್ಕೆ ಅಶಕ್ಯವಾದ ಮಾತು ಆದರೆ ಪಂ| ಜವಾಹಿರಲಾಲರು ಪ್ರಾಂತಿಕ ಪ್ರತಿನಿಧಿಗಳ ಸಭೆಯಲ್ಲಿ ನಿರ್ದೇಶಿಸಿದ ಪಾರ್ಶ್ವಭೂಮಿಯನ್ನೂ ನಾವು ಮರೆಯಲಾರೆವು, ಹಿಂದವಾಸಿಗಳಾರೂ ಮರೆಯಲಾರರು ಬ್ರಿಟಿಶರ ರಾಜ್ಯಭಾರ ನಮ್ಮ ಜನಾಂಗದೊಳಗೆ ಪ್ರಾರಂಭವಾಗಿ ಇಂದಿಗೆ ಹೆಚ್ಚು-ಕಡಿಮೆ ೨೦೦ ವರ್ಷಗಳಾದವು. ಆದರೆ ಬ್ರಿಟಿಶ ಸರಕಾರದ ಬಗ್ಗೆ ಜನಸಾಮಾನ್ಯರಲ್ಲಿ ಏನೂ ಮಮತೆ ಇರುವದಿಲ್ಲ! ಪೇಶಾವರದಿಂದ ಕನ್ಯಾಕುಮಾರಿ ಭೂಶಿರದ ವರೆಗೆ ಜನಸಾಮಾನ್ಯರೊಡನೆ ಮಾತುಕತೆ ನಡಿಸಿದರೆ ಪ್ರತಿಯೊಬ್ಬರೂ ಬ್ರಿಟಿಶರ ಬಗ್ಗೆ ಅನಾದರವನ್ನೇ ವ್ಯಕ್ತಗೊಳಿಸುತ್ತಾರಾಗಿ ಪಂ॥ ಜವಾಹಿರಲಾಲರು ನುಡಿದ ಮಾತನ್ನು ನಮ್ಮಿಂದ ಅಲ್ಲಗಳೆಯಲಸಾಧ್ಯ ಪಂ॥ ಜವಾಹಿರಲಾಲರು ನಮ್ಮ ಜನಾಂಗದ ಅಂತಃಕರಣವನ್ನೇ ಸ್ಫುಟಗೊಳಿಸಿದ್ದಾರೆಂದು ನಾವು ಎಣಿಸಿ, ಪಾರ್ಶ್ವಭೂಮಿಯನ್ನು ಲೋಕಕ್ಕೆ ಕಂಠೋಕ್ತವಾಗಿ ಸಾರಿದ ಬಗ್ಗೆ ಪಂ॥ ಜವಾಹಿರಲಾಲರನ್ನು ಮನಃಪೂರ್ವಕವಾಗಿ ಹರಸಿ ಕೊಂಡಾಡುತ್ತೇವೆ ಬ್ರಿಟಿಶ ಸರಕಾರದೊಡನೆ ನಾವು ಹಿಂದವಾಸಿಯರು ಸಹಕಾರ ಮಾಡಬಾರದಾಗಿ ಪಂ॥ ಜವಾಹಿರಲಾಲರ ಅಂಬೋಣವಿಲ್ಲ, ಮಹಾತ್ಮರಂತೆ ಹಿಂಸೆ-ಅಹಿಂಸೆಯ ಧ್ಯೇಯವಾದವನ್ನು ಪಂ॥ ಜವಾಹಿರಲಾಲರು ವಿಚಾರಿಸಬಯಸುವದಿಲ್ಲ ರಾಷ್ಟ್ರಪತಿಗಳಾದ ಮೌ॥ ಅಬುಲಕಲಮ ಆಝಾದರವರಾದರೂ ಇದೇ ಮಾತನ್ನು ಮುಂಬಯಿಯೊಳಗೆ ಶುಕ್ರವಾರ ಸೇರಿದ ಸಭೆಯಲ್ಲಿ ದೃಢಪಡಿಸಿದ್ದಾರೆ ಧ್ಯೇಯವಾದ ಒತ್ತಟ್ಟಿಗಿಟ್ಟರೆ, ಹಿಂದ-ಜನಾಂಗದ ಸಹಕಾರ ನಿರ್ದೇಶವಾಗುವದು ಕ್ರಮಪ್ರಾಪ್ತವಾದ ಸಂಗತಿಯೆಂದೂ ರಾಷ್ಟ್ರೀಯ ಸಭೆಯು ಈ ಕಾಲದಲ್ಲಿ ಯುದ್ಧಯತ್ನ ಕ್ರಮವನ್ನು ನಿರ್ದೇಶಿಸಬೇಕೆಂದೂ ನಮ್ಮದೂ ಆಗ್ರಹವುಂಟು ರಶ್ಯ ಜನಾಂಗದ ಬಗ್ಗೆ ನಮ್ಮಲ್ಲಿ ಒಳ್ಳೇ ಆದರಭಾವವುಂಟು ಚೀನ ಜನಾಂಗದ ಸಂಕಟ ನಮ್ಮ ಹಿಂದ-ಜನಾಂಗದ ಮೇಲಿನ ಸಂಕಟವೆಂದೇ ಭಾವಿಸಲಿಕ್ಕೂ ನಾವು ಸಿದ್ಧರಿದ್ದೇವೆ ಸರ್ವಾಧಿಕಾರಿ ಸ್ಟೆಲಿನರ ಕಾರಕೀರ್ದಿಯಲ್ಲಿ ರಶ್ಯ ಜನಾಂಗದಲ್ಲುಂಟಾದ ನವಚೈತನ್ಯವನ್ನೂ ನವಸುಧಾರಣೆಗಳನ್ನೂ, ಲೋಕಕಲ್ಯಾಣವನ್ನೂ ಜನಸಾಮಾನ್ಯರ ಪ್ರಭುತ್ವವನ್ನೂ ಪಂ| ಜವಾಹಿರಲಾಲರು ಈ ಹಿಂದೆ ಹೊಗಳಿದ್ದಂತೆ, ಈಗಲೂ ಅವರು ಹೊಗಳುತ್ತಾರೆ ಚೀನ ದೇಶವಂತೂ ನಮ್ಮ ಪೌರ್ವಾತ್ಯ ದೇಶ, ನಮ್ಮ ಹಿಂದ-ಜನಾಂಗದಂತೆಯೇ ಸನಾತನ ಪುರಾತನ ಜನಾಂಗ ಆ ಜನಾಂಗದವರು ಸ್ವಸ್ವಾತಂತ್ರ್ಯಕ್ಕಾಗಿ ಜಪಾನದೊಡನೆ ನಡಿಸುತ್ತಿರುವ ಹೋರಾಟವನ್ನು ರಾಷ್ಟ್ರೀಯ ಸಭೆಯು ಹರಸಿದ ಆದರೆ ಹಿಂದ-ಜನಾಂಗವು ಈ ಜನಾಂಗಗಳಿಗೆ ನೆರವಾಗುವ ಬಗೆ ಹೇಗೆಂಬುದೇ ಸಮಸ್ಯೆ! ಪಂ|| ಜವಾಹಿರಲಾಲರು ನುಡಿದಂತೆ ಸಹಾಯ ನಿರ್ಣಯದ ಅಧಿಕಾರ ನಮ್ಮ ಸ್ವಾಧೀನವಿಲ್ಲ ನಾವು camp follower' ಅಂದರೆ ಬ್ರಿಟಿಶರ ಕಿಂಕರರಾಗಿ, ಬ್ರಿಟಿಶರು ವಿಧಿಸಿದ ಮಾರ್ಗವೇ ಯೋಗ್ಯ ಮಾರ್ಗವೆಂದು ಭಾವಿಸಿಕೊಂಡು, ಅದೇ ನಮ್ಮಿಂದಾಗತಕ್ಕ ಯುದ್ಧಕಾರ್ಯವೆಂದು ಗ್ರಹಿಸಬೇಕಾಗಿದೆ! ಇಂಥ ಸಹಾಯವನ್ನು ಹಿಂದ ಜನಾಂಗವು ಕೂಡಮಾಡಿದರೆ ಅದರ ಅರ್ಥವೇ ಬದಲುತ್ತದಾಗಿ ಪಂ॥ ಜವಾಹಿರಲಾಲರು ಹೇಳಿದ ಮಾತನ್ನು ವ್ಯವಹಾರಿಕರ್‍ಯಾರೂ ನಿರಾಕರಿಸಲಾರರು ಬ್ರಿಟಿಶ ಸರಕಾರದ ಅಡಿಯಾಳಾಗಿ ನಾವು ಹಿಂದವಾಸಿಯರು ವ್ಯವಹರಿಸತೊಡಗಿದರೆ ಹಿಂದುಸ್ಥಾನದೊಳಗಿನ ಪಾರತಂತ್ರ್ಯವನ್ನು ನಾವು ಸಮ್ಮತಿಸುತ್ತೇವಾಗಿಯೂ, ಇತರ ಪರತಂತ್ರ ಜನಾಂಗಗಳಲ್ಲಿ ಬ್ರಿಟಿಶ ಸರಕಾರವು ನಡಿಸುವ ಆಡಳಿತೆಯನ್ನು ಅನುಮತಿಸುತ್ತೇವಾಗಿಯೂ ಲೋಕಾಭಿಪ್ರಾಯವುಂಟಾಗುವದೆಂಬ ಭೀತಿಯುಂಟಾಗುವದು ವ್ಯವಹಾರಿಕ-ಲೋಕದೊಳಗಿನ ಸಾಮಾನ್ಯ ಸಿದ್ಧಾಂತ ಇರಾಕ, ಇರಾಣ ಮೊದಲಾದ ಮುಸಲ್ಮಾನ ಪ್ರದೇಶಗಳಲ್ಲಿಯೂ ಬ್ರಿಟಿಶರ ಧೋರಣ ಲೋಕ-ಸಮ್ಮತವಿಲ್ಲವೆಂದೂ, ಉಭಯ ದೇಶಗಳಲ್ಲಿ ಕೈಕೊಂಡ ಕ್ರಮಗಳಿಂದ ಮುಸಲ್ಮಾನ ಲೋಕವು ವಿಮನಸ್ಕವಾಗಿರುವದೆಂದೂ, ಪರರನ್ನಾಳುವ ಈ ರಾಜ್ಯಧೋರಣ ಬದಲಿದನಕ ನಮ್ಮಂಥ ಪೌರ್ವಾತ್ಯ ಜನಾಂಗಗಳ ಸಹಾನುಭೂತಿ ಬ್ರಿಟಿಶರಿಗೆ ಸಿಗಲಿಕ್ಕಿಲ್ಲವೆಂದೂ ಪಂ॥ ಜವಾಹಿರಲಾಲರು ಬ್ರಿಟಿಶ ಸರಕಾರಕ್ಕೆ ಮುಂದಾಗಿ ಸೂಚಿಸಿದ್ದಾರೆ ಸಾಮ್ರಾಜ್ಯ ಸರಕಾರವು ಈ ಸೂಚನೆಯನ್ನು ಆಳವಾಗಿ ಪರಾಂಬರಿಸಬೇಕೆಂದು ನಾವು ವಿನಯಪೂರ್ವಕ ಅರಿಕೆ ಮಾಡಿಕೊಳ್ಳುತ್ತೇವೆ

ಯುದ್ಧಯತ್ನವನ್ನು ಪಂ॥ ಜವಾಹಿರಲಾಲರು ವಿರೋಧಿಸುತ್ತಾರೆಂದು ಯಾರೂ ತಿಳಿಯಕೂಡದು ಯುದ್ಧಯತ್ನಕ್ಕೆ ವಿಘ್ನವಾಗುವ ಪರಿಸ್ಥಿತಿ, ಮನಸ್ಥಿತಿ, ದೇಶಸ್ಥಿತಿಗಳನ್ನಷ್ಟೇ ಪಂ॥ ಜವಾಹಿರಲಾಲರು ನಿರೂಪಿಸಿ, ಅದನ್ನು ಸುಧಾರಿಸಿಕೊಂಡು ಯುದ್ಧಯತ್ನವನ್ನು ರಭಸದಿಂದ ಪುರಸ್ಕರಿಸಿಕೊಳ್ಳಲು ಸಾಮ್ರಾಜ್ಯ ಸರಕಾರಕ್ಕೆ ಸದ್ಬೋಧೆಯನ್ನಿತ್ತಿದ್ದಾರೆ. ಬ್ರಿಟನಿನಲ್ಲೂ ಚೆಂಬರಲೇನರ ಕಾರಕೀರ್ದಿಯಲ್ಲಿ ಸಾಮಾನ್ಯವಾಗಿ ಇದೇ ಪ್ರಕಾರ ಪರಿಸ್ಥಿತಿಯಿತ್ತು. ಈಗ ನಮ್ಮ ಹಿಂದುಸ್ಥಾನದ ಮೇಲೆ ಪ್ರಾಪ್ತವಾದ ಪ್ರಸಂಗಕ್ಕಿಂತ ಕಠಿಣವಾದ ಪ್ರಸಂಗವು ಬ್ರಿಟನಿನ ಮೇಲೆ ಆ ಕಾಲದಲ್ಲೊದಗಿತ್ತು ಹಿಟ್ಲರನು ಬ್ರಿಟನಿನ ಮೇಲೆ ದಂಡೆತ್ತಿಕೊಂಡು ಹೋಗುತ್ತಾನೆಂದು ಎಲ್ಲರೂ ಭಾವಿಸಿದ್ದರು ಆದಾಗ್ಯೂ ಬ್ರಿಟನಿನೊಳಗಿನ ಕೂಲಿಕಾರ ಪಕ್ಷವು ಚೆಂಬರಲೇನರೊಡನೆ ಸಹಕಾರ ಮಾಡಲು ಎಷ್ಟಕ್ಕೂ ಸಂತೋಷಪಡಲಿಲ್ಲ! ಶ್ರೀ॥ ಚೆಂಬರಲೇನರು ಕೈಕೊಂಡ ಯುದ್ಧಯತ್ನ-ಧೋರಣವನ್ನು ನಿಕರದಿಂದ ಪ್ರತಿಭಟಿಸಿತು! ಚೆಂಬರಲೇನರ ಅಧಿಕಾರಚ್ಯುತಿಯನ್ನು ಪುನಃ ಪುನಃ ಪ್ರತಿಪಾದಿಸಿತು! ಚೆಂಬರಲೇನರ ಸರಕಾರವು ಅಂತ್ಯವಾದ ಬಳಿಕವೇ ಕೂಲಿಕಾರ ಪಕ್ಷವು ಸರಕಾರದಲ್ಲಿ ಸೇರಿ, ಸರ್ವರೂ ಅಂತಃಕರಣಪೂರ್ವಕವಾಗಿ ಯುದ್ಧಯತ್ನವನ್ನು ಪುರಸ್ಕರಿಸಿದರು ಕೂಲಿಕಾರ ಪಕ್ಷಕ್ಕೆ ಚೆಂಬರಲೇನ ಸರಕಾರದ ಮೇಲೆ ಇರುವ ಆಕ್ಷೇಪಗಳಿಗಿಂತ ನೂರುಮಡಿ ಮಿಗಿಲಾದ ಆಕ್ಷೇಪಗಳು ನಮ್ಮ ಹಿಂದ ಜನಾಂಗದ ಪರವಾಗಿ ಸಾಮ್ರಾಜ್ಯ ಸರಕಾರದ ಮೇಲೆ ಇರುವವೆಂದು ನಾವು ಪ್ರತ್ಯೇಕವಾಗಿ ನಮೂದಿಸುವದನವಶ್ಯಕ, ಅದು ಸ್ವಯಂಸಿದ್ಧವಾದ ಮಾತು, ಪ್ರತ್ಯಕ್ಷ ಪ್ರಮಾಣವಷ್ಟು ಸತ್ಯವಾದ ಸಂಗತಿಯೆಂದು ಸಾಮ್ರಾಜ್ಯ ಸರಕಾರವು ಒಪ್ಪಲೇ ಬೇಕು ಈ ಪರಿ ವಸ್ತುಸ್ಥಿತಿಯಿರುವಾಗ್ಯ, ಆ ವಸ್ತುಸ್ಥಿತಿಯಲ್ಲಿ ಅಪೇಕ್ಷಿತ ವ್ಯತ್ಯಾಸಗಳು ಒದಗಿ ಬಂದನಕ ತಮಗೂ ಯುದ್ಧ-ಯತ್ನಕ್ಕೂ ಸಂಬಂಧವಿಲ್ಲವೆಂದು ರಾಷ್ಟ್ರೀಯ, ಸಭೆಯವರು ಆಗ್ರಹ ಹಿಡಿದರೆ ಅದನ್ನು ಆಕ್ಷೇಪಿಸಬರುವಂತಿಲ್ಲ ಪಂ। ಜವಾಹಿರಲಾಲರು ನಮೂದಿಸಿದ ಒಂದು ಮಾತನ್ನು ನಾವು ಇಲ್ಲಿ ಉಲ್ಲೇಖಿಸಬಯಸುತ್ತೇವೆ ರಣಧೀರ ರಶ್ಯ ಜನಾಂಗಕ್ಕೆ ಸಹಾಯ ನೀಡುವ ಬಗೆಯಿಂದ ಹಿಂದ ಜನಾಂಗಕ್ಕೆ ಯುದ್ಧಯತ್ನದಲ್ಲಿ ಸೇರಲು ಪ್ರೇರೇಪಣೆಯಾಗುವ ಸಂಗತಿಯನ್ನು ನಾವು ಬಲ್ಲೆವು ಹಲವು ನಿರ್ಮಲ ವಿಚಾರವಂತರಿಗೆ, ಸಮಾಜಸತ್ತಾವಾದಿಗಳೆಂದು ಹೇಳಿಸಿಕೊಳ್ಳುವ ಅಭಿಮಾನಿಗಳಿಗೆ ಸ್ವ-ಜನಾಂಗಕ್ಕಿಂತ ರಶ್ಯ ಜನಾಂಗದ ಮೇಲೆಯೇ ಮಮತೆ ಹೆಚ್ಚು, ಸ್ವ-ಜನಾಂಗದಲ್ಲೊದಗುವ ಘಟನೆಗಳಿಗಿಂತ ರಶ್ಯ ಜನಾಂಗದ ಆಗುಹೋಗುಗಳ ಚಿಂತೆಯೇ ಹೆಚ್ಚು! ಹಿಟ್ಲರನು ರಶ್ಯ ದೇಶದ ಮೇಲೆ ದಂಡೆತ್ತಿಕೊಂಡು ಹೋದನೆಂಬ ವಾರ್ತೆ ಕೇಳಿದಂದಿನಿಂದ

ಅನೇಕ ಸಮಾಜಸತ್ತಾವಾದಿಗಳಿಗ ಯುದ್ಧಯತ್ನದ ಆವೇಶ ತುಂಬಿದ! ಈಗ ರಷ್ಯದೇಶಕ್ಕೆ ಬೇಕಾದಷ್ಟು, ಪಂ॥ ಜವಾಹಿರಲಾಲರು ನುಡಿದಂತೆ ಸಾಹಿತ್ಯ ಸಹಾಯ, ಜನಸಹಾಯವಲ್ಲವೆಂದು ನಾವು ಒತ್ತಿ ಹೇಳುತ್ತೇವೆ. ರಷ್ಯ ದೇಶದಲ್ಲಿ ದೃಢಶರೀರದ ವೀರ ಭಟರಿದ್ದಾರೆ, ಜನಬಲ ವಿಪುಲವುಂಟು. ಅವರಿಗೆ ಬೇಕಾದ ಮದ್ದು ಗುಂಡು, ತೋಫು-ತುಬಾಕಿ, ವಿಮಾನ ಮೊದಲಾದ ಸಾಹಿತ್ಯಗಳನ್ನು ಕಳಿಸುವ ದೆಸೆಯಿಂದ ಆ ಉದ್ದಿಮೆಗಳನ್ನು ನಮ್ಮಲ್ಲಿ ರೂಢಗೊಳಿಸಬಯಸಿದರೆ ಅದಕ್ಕೆ ಹಿಂದುಸ್ಥಾನ ಸರಕಾರವೂ ಸಾಮ್ರಾಜ್ಯ ಸರಕಾರವೂ ಹೇಳದ ಕೇಳದ ಆತಂಕಗಳನ್ನು ನಿರ್ಮಿಸುವ ಸಂಗತಿ ಶೇಟ ವಾಲಚಂದ ಹಿರಾಚಂದ ಪ್ರಭೃತಿ ಉದ್ದಿಮೆದಾರರು ಸಿದ್ಧಗೊಳಿಸುತ್ತಾರೆ. ಬ್ರಿಟಿಶ ಬಸವನ ಹಿಂದೆ ಬಾಲದಂತೆ ಯುದ್ಧಯತ್ನವನ್ನು ಪುರಸ್ಕರಿಸುವ ಮಾನವಯಂತ್ರವನ್ನು ಬ್ರಿಟಿಶ ಸರಕಾರವು ನಮ್ಮ ಹಿಂದಿ ಜನಾಂಗದಿಂದ ಅಪೇಕ್ಷಿಸುತ್ತದಾಗಿ ಪಂ॥ ಜವಾಹಿರಲಾಲರು ಪ್ರತಿಪಾದಿಸಿ, ಆ ಪ್ರಕಾರ ಹಿಂದಿ-ಜನಾಂಗವನ್ನು ರೂಪಾಂತರಿಸಲು ತಾವೂ ರಾಷ್ಟ್ರೀಯ ಸಭೆಯವರೂ ಎಷ್ಟಕ್ಕೂ ಕೊಡಲಿಕ್ಕಿಲ್ಲವಾಗಿ ಪಂ॥ ಜವಾಹಿರಲಾಲರು ಆರ್ಭಟದಿಂದ ಸಾಮ್ರಾಜ್ಯ ಸರಕಾರಕ್ಕೆ ಎಚ್ಚರಿಕೆ ಕೊಡುತ್ತಾರೆ. ೧೭ನೇ ಶತಮಾನದ ನಾಮಾಂಕಿತ ದಳಪತಿಯಾದ ಓಲಿವ್ಹರ ಕ್ರೊಮವೆಲ್ಲ ಬ್ರಿಟನಿನಲ್ಲಿ ಪಾರ್ಲಿಮೆಂಟ ಸಭೆಯನ್ನು ನುಗ್ಗಿ ಸಭಾಸದರಿಗೆಲ್ಲ "ನಿಮ್ಮ ಕಾರಭಾರ ಸಾಕು, ಎದ್ದು ಹೊರಟುಹೋಗಿರಿ" (We have had enough of you, get out) ಎಂಬದಾಗಿ ಪಾರ್ಲಿಮೆಂಟನ್ನು ವಿಸರ್ಜಿಸಿದ ಇತಿಹಾಸವುಂಟು. ಅದೇ ಮಾತನ್ನು ಪಂ॥ ಜವಾಹಿರಲಾಲರು ಭಾರತ ಮಂತ್ರಿ ಮಿ॥ ಎಮೆರಿಯವಂಗೆ ಕಾಣಿಸಿ, ಅವರ ಕಾರಭಾರವನ್ನು ಸಾಕು ಮಾಡಿ ಹೊರಟು ಹೋಗಹೇಳಿದ್ದಾರೆ. ಭಾರತ ಮಂತ್ರಿಗಳ ವಿದ್ಯಮಾನ ನಮ್ಮಿ ಜನಾಂಗದೊಳಗೆ ಪ್ರಕೃತ ರೂಢವಾಗಿರುವ ರಾಷ್ಟ್ರಭರದ ಕುರಿತು ಜನಾಂಗದಲ್ಲಿರುವ ತಿರಸ್ಕಾರವನ್ನು ಇದಕ್ಕೂ ಸ್ಪಷ್ಟವಾಗಿ ಸಾಮ್ರಾಜ್ಯಕರ್ತರ ಮನಸ್ಸಿಗೆ ಹೊಳೆಯುವಂತೆ ಹೇಳುವದಸಾಧ್ಯ.

ಯುದ್ಧೋತ್ತರ ಘಟನೆಗಳ ಕುರಿತು ರಾಷ್ಟ್ರೀಯ ಸಭೆಯ ಆಗ್ರಹವಿಲ್ಲ. ಯುದ್ಧ ಮುಗಿದ ಒಂದು ವರ್ಷದಲ್ಲಿ, ಅಥವಾ ೩ ವರ್ಷಗಳಲ್ಲಿ ಇಲ್ಲವೆ ೫ ವರ್ಷಗಳಲ್ಲಿ ಹಿಂದಿ-ಜನಾಂಗಕ್ಕೆ ಸ್ವಾತಂತ್ರ್ಯ ಕೊಡುವ ಘೋಷಣೆಯಾದರೆ ಸಾಕೆಂದು ಕೆಲವು ವಿಚಾರವಂತ ಸಂತೋಷಿಗಳು ಅಭಿಪ್ರಾಯಪಡುತ್ತಾರೆ. ಆದರೆ ಪಂ॥ ಜವಾಹಿರಲಾಲರು ನುಡಿದಂತೆ ಯುದ್ಧೋತ್ತರ ಆಗು-ಹೋಗುಗಳು ಯಾರದೇ ಸ್ವಾಧೀನವಿದ್ದ ವಿಷಯಗಳಲ್ಲ. ಭಾರತ ಮಂತ್ರಿ ಮಿ॥ ಎಮೆರಿಯವರಾಗಲಿ ಬ್ರಿಟಿಶ ಸರಕಾರವಾಗಲಿ ಭವಿಷ್ಯದ ಲೋಕಘಟನೆಯನ್ನು ನಿರ್ಮಿಸುವ ಶಕ್ತಿಗಳಲ್ಲ. ಈವಾಗ ಭೂಲೋಕದಲ್ಲಿ ಘೋರ, ಪ್ರಚಂಡ ಶಕ್ತಿಗಳು ನಿರ್ಮಾಣ ಹೊಂದುತ್ತಿವೆ. ಹೀಗೆ ಉದ್ಭವಿಸುವ ಬೇರೆ ಬೇರೆ ಸೃಷ್ಟಿಘಟನೆಗಳ ತಾಕಲಾಟದಿಂದ ಹುಟ್ಟುವ ಪರಿಣಾಮಗಳೇ ಯುದ್ಧೋತ್ತರ ಘಟನೆಗಳನ್ನು ರೂಪಿಸುವವು. ಆದರಿಂದ ಭವಿಷ್ಯದ ಲೋಕಘಟನೆಯಲ್ಲಿ ಉಂಟಾಗುವ ನಮ್ಮ ಜನಾಂಗದ ಸ್ವರೂಪವನ್ನು ಈವಾಗ ಕಲ್ಪಿಸಿಕೊಳ್ಳುವದು ಅವ್ಯವಹಾರಿಕವೆಂದು ಪಂ॥ ಜವಾಹಿರಲಾಲರು ಹೇಳಿದ ಮಾತು ತೀರ ಕಾಲೋಚಿತವಾದುದು. ಪ್ರಕೃತ ರಾಜಕಾರಣದ ಸಮಸ್ಯೆ ಯುದ್ಧಯತ್ನ ಪುರಸ್ಕಾರದ್ದು. ಹಿಂದುಸ್ಥಾನಕ್ಕೆ ರಾಷ್ಟ್ರಸ್ವತಂತ್ರ್ಯವನ್ನರ್ಪಿಸುವದೇ ಮುಖ್ಯ ಅವಶ್ಯಕತೆ. ಹಿಂದುಸ್ಥಾನವನ್ನು ಸ್ವತಂತ್ರಗೊಳಿಸಿದನಂತರ ಹಿಂದುಸ್ಥಾನದಿಂದ ಯುದ್ಧ ಕಾರಣಕ್ಕೆ ಸಂಕಲ್ಪಿತ ಇಲ್ಲವೆ ಪ್ರಸಂಗೋಚಿತ ಪುರಸ್ಕಾರ ಸಿಗದು. ಸಾಮ್ರಾಜ್ಯಕರ್ತರೂ ಸರ್ವಾಧಿಪತಿ ಲಿನಲಿಥಗೋ ದೊರೆಗಳೂ ಆಗಸ್ಟ ಘೋಷಣೆಯ ಹಾಡನ್ನು ಬಾರಿ ಬಾರಿಗೂ ಹಾಡಿ ಹಿಂದಿ-ಜನಾಂಗವನ್ನು ಬೇಸರಗೊಳಿಸಬಾರದು. ಸ್ವಾತಂತ್ರ್ಯ ಪ್ರಶ್ನೆಯನ್ನು ಇದೀಗಲೇ ಆಸಕ್ತಿಯಿಂದ ಬಿಡಿಸಬಯಸಬೇಕು. ಅಂದರೆ ಮಾತ್ರ ಹಿಂದಿ-ಜನಾಂಗಕ್ಕೂ ಬ್ರಿಟನ-ಜನಾಂಗಕ್ಕೂ ಸ್ನೇಹ-ಸೌಹಾರ್ದಗಳುಂಟಾಗುವವು.

ಗಾಬರಿಗೊಳ್ಳಬೇಡಿ; ಸಾವಧಾನಚಿತ್ತದಿಂದಿರ್ರಿ!

[ನಿರೀಕ್ಷಕನು ಬರೆದುದು.]

ಹಿಂದುಸ್ಥಾನದ ಸೇನಾಧಿಪತಿಗಳಾದ ವೆವಲರು ಂದವಾಸಿಯರಿಗೆಲ್ಲ ಗಾಬರಿಯಾಗುವದವಶ್ಯವಿಲ್ಲವೆಂದು ಆಶ್ವಾಸನ ಕೊಡುತ್ತಾರೆ, ಗಾಬರಿಯಾಗುವಂಥ ಪ್ರಕಾರಗಳನ್ನು ಪುರಸ್ಕರಿಸದಂತೆ ಪತ್ರಿಕಾಪ್ರತಿನಿಧಿಗಳಿಗೆ ವಿನಂತಿ ಮಾಡಿಕೊಂಡಿದ್ದಾರೆ. ಕಲಕತ್ತೆಯಲ್ಲಿ ಪೋಲೀಸ ಕಮಿಶನರರು ಒಂದು ಪ್ರಕಟಣೆಯನ್ನು ಹೊರಡಿಸಿ ಪತ್ರಿಕೆಗಳನ್ನು ಮಾರುವವರು ಗಾಬರಿಗೊಳಿಸುವ ಸುದ್ದಿಗಳನ್ನು ಒದರಿ ಹೇಳಬಾರದೆಂದು ವಿಧಿಸಿದ್ದಾರೆ. ಪ್ರಸಂಗ ಕಠಿಣವಿರುವದೆಂದು ಸೇನಾಪತಿ ವೆವೆಲರಿಗೆ ಒಪ್ಪಿಗೆ. ಶತ್ರುಗಳಿಗೆ ಪ್ರಾಥಮಿಕ ವಿಜಯ ಸಿಕ್ಕಿದೆಂಬ ಮಾತು ಸಹ ನಿಜ. ಅದನ್ನು ಸರಿಪಡಿಸುವದಕ್ಕಾಗಿ ಸೇನಾಪತಿಗಳು ಉಪಾಯ ಕೈಕೊಳ್ಳುತ್ತಿದ್ದಾರೆ. ಪೂರ್ವ-ಪಶ್ಚಿಮದಂಡೆಗಳಲ್ಲಿ ವಾಸಿಯರಿಗೆ ಭಯಂಕರವಾದ ನಷ್ಟವೊದಗಿದೆ. ವೇ ಮುಂತಾದ ಸಂಗತಿಗಳನ್ನು ನಮ್ಮ ಸೇನಾಪತಿಗಳಾದ ವವೆಲರು ವಿವರಿಸಿ ನಮಗೆಲ್ಲರಿಗೆ ಧೈರ್ಯ ಕೊಡುತ್ತಾರೆ. ಆದರಿಂದ ಅಧೈರ್ಯಪಡಬಾರದೆಂದು ನಾನು ಸಹ ಆಶ್ವಾಸನ ಕೊಡುತ್ತೇನೆ. ಜನರು ಧೈರ್ಯದಿಂದಿರಬೇಕು. ಕಲಕತ್ತೆಯಿಂದ ಜನರು ವಿಮಾನ-ದಾಳಿಯ ಭೀತಿಯ ಮೂಲಕ ಗಂಟುಗಟ್ಟಿ ಹೊರಟುಹೋಗತೊಡಗಿದ್ದಾರೆ. ಆದರ ಕಲಕತ್ತೆಗೆ ಭಯವಿಲ್ಲ. ಘಾಯಗೊಂಡವರಿಗೆ ಶುಶ್ರೂಷೆ ಮಾಡುವ ದೆಸೆಯಿಂದ ಕಲಕತ್ತೆಯಲ್ಲಿ ಸ್ಥಳಪರ್ಯಟನ ತೊಡಗಿದ ವಿಶ್ವವಿದ್ಯಾಲಯದವರು ಪರೀಕ್ಷೆಯ ದಿನಗಳನ್ನು ಸಪ್ಟಂಬರ ತನಕ ಮುಂದರಿಸಿದ್ದಾರೆ. ಯುದ್ಧ-ಪರಿಸ್ಥಿತಿಯಲ್ಲಿ ಸುಧಾರಣೆಯಾಗುವ ತನಕ ಶಾಲೆಗಳನ್ನೂ ವಿದ್ಯಾಲಯಗಳನ್ನೂ ಮುಚ್ಚುವ ವಿಚಾರ ನಡೆದಿದೆ. ವಿಮಾನ-ದಾಳಿಯ ಸಮಯ ನಡಕೊಳ್ಳತಕ್ಕ ನಡಾವಳಿಯನ್ನು ಜನಸಾಮಾನ್ಯರಿಗೆ ಕಲಿಸುವದಕ್ಕಾಗಿ ವಿಮಾನ ದಾಳಿಗಳ ಪ್ರಯೋಗಗಳು ಕಲಕತ್ತೆಯಲ್ಲಿ ನಡದಿವೆ. ಅಲ್ಲಿಯ ವ್ಹಿಕ್ಟೋರಿಯಾ ಸ್ಮಾರಕ ಮಂದಿರದಲ್ಲಿ ಅನೇಕ ಅಮೂಲ್ಯ ವಸ್ತುಗಳಿವೆ. ಆವೆಲ್ಲ ವಸ್ತುಗಳನ್ನು ಸುರಕ್ಷಿತ ಸ್ಥಳಗಳಿಗೆ ಒಯ್ದಿಡಲು ಹಿಂದುಸ್ಥಾನ ಸರಕಾರದ ಅಪ್ಪಣೆಯಾಗಿದೆ. ಬ್ರಹ್ಮದೇಶದ ರಂಗೂನಿನ ಮೇಲೆ ವಿಮಾನ ದಾಳಿಯಾಯಿತೆಂದು ಜಪಾನದ ಟೋಕಿಯೊದಿಂದ ಆಕಾಶವಾಣಿಯಾಗಿತ್ತು. ಇದು ಸಂಪೂರ್ಣ ಸಟೆಯೆಂದು ಬ್ರಹ್ಮದೇಶದ ಸರಕಾರವು ಚೌಕಶಿ ಮಾಡಿ ನಿರಾಕರಿಸಿದೆ. ಅಂದಮಾನ ದ್ವೀಪದಲ್ಲಿ ಜಪಾನದ ಸೈನ್ಯ ಇಳಿದಿದೆಯೆಂಬ ವಾರ್ತೆ ಸಹ ನಿರಾಧಾರವಾದದ್ದೆಂದು ಬ್ರಹ್ಮದೇಶ ಸರಕಾರದ ಅಂಬೋಣ. ರಂಗೂನಿನಲ್ಲಾಗಲಿ ಕಲಕತ್ತೆಯಲ್ಲಾಗಲಿ ವಿಮಾನ ದಾಳಿಯಾಗಿಲ್ಲ! ಜನಸಾಮಾನ್ಯರ ಗಾಬರಿಯೇ ಹೆಚ್ಚು! ಅದರಿಂದಲೇ ದೇಶ ತುಂಬ ಗಡಿಬಿಡಿ! ಪ್ರತ್ಯಕ್ಷ ದಾಳಿಗಿಂತ ಹೆಚ್ಚಿನ ಗಡಿಬಿಡಿಯನ್ನು ಜನರು ನಡಿಸತೊಡಗಿದ್ದಾರೆ. ಆದರಿಂದಲೇ ಸೇನಾಪತಿ ವವೆಲರು ಜನರಿಗೆ ಸಾವಧಾನದ ಸದುಪದೇಶ ಮಾಡುತ್ತಾರೆ. ಬ್ರಹ್ಮದೇಶದ ದಕ್ಷಿಣ ತುದಿಯ ವ್ಹಿಕ್ಟೋರಿಯಾ ಭೂಶಿರದಲ್ಲಿ ಬ್ರಿಟಿಶರ ವಿಮಾನ ಠಾಣ್ಯವೊಂದಿತ್ತು. ಅದನ್ನು ಜಪಾನಿಯರು ಕೈವಶ ಮಾಡಿಕೊಂಡಿದ್ದಾರೆ. ವ್ಹಿಕ್ಟೋರಿಯಾ ಭೂಶಿರದಿಂದ ರಂಗೂನ ಪಟ್ಟಣ ೬೪೦ ಮೈಲು ಅಂತರದಲ್ಲುಂಟು. ಕಲಕತ್ತೆಯು ೧೨೫೦ ಮೈಲು ಅಂತರದಲ್ಲುಂಟು. ಆದಾಗ್ಯೂ ಹಿಂದುಸ್ಥಾನದ ಮೇಲೆ ಜಪಾನಿಯರು ಪ್ರಚಂಡ ಪ್ರಮಾಣದಿಂದ ದಾಳಿ ಮಾಡುವ ಲಕ್ಷಣಗಳಿಲ್ಲವಂತೆ!

ಈಗ ನನಗೆ ಸಿಂಗಾಪುರದ್ದೇ ಚಿಂತೆ! ಸಿಂಗಾಪುರವು ಭದ್ರವಾಗಿದ್ದರೆ ಹಿಂದುಸ್ಥಾನಕ್ಕೆ ಏನಷ್ಟೂ ಭಯವಿಲ್ಲ. ಸಿಂಗಾಪುರದ ಬ್ರಿಟಿಶ ಗವ್ಹರ್ನರರು ಸಿಂಗಾಪುರವಾಸಿಯರಿಗೆ ಹೊರಡಿಸಿದ ಸಂದೇಶದಲ್ಲಿ ಅಪ್ಪಣೆ ಕೊಟ್ಟಂತೆ ಸಿಂಗಾಪುರವನ್ನು ಎಷ್ಟಕ್ಕೂ ಬೀಳಗೊಡಲಾಗದು. ಸಿಂಗಾಪುರವನ್ನು ಶತಪ್ರಯತ್ನದಿಂದ, ಸಹಸ್ರ ಪ್ರಯತ್ನದಿಂದ, ಸರ್ವಪ್ರಯತ್ನದಿಂದ ಸರ್ವರೂ ರಕ್ಷಿಸಬೇಕು. ಮಲಯಾ ದ್ವೀಪಕಲ್ಪದ ದಕ್ಷಿಣ ತುದಿಯಲ್ಲಿ ಸಿಂಗಾಪುರವಿದೆ. ಸಿಂಗಾಪುರದ ಉತ್ತರಕ್ಕೆ ಮಲಯಾದ ರಾಜಧಾನಿಯಾದ ಪೆನಾಂಗ ಪಟ್ಟಣವಿದ್ದು, ಆ ಪಟ್ಟಣವನ್ನು ಬ್ರಿಟಿಶ ದಂಡುಗಳು ಕಾಪಾಡಲಾಗದೆ ಬಿಟ್ಟು ಕೆಳಗಿಳಿದು ಬಂದವು. ಸಿಂಗಾಪುರದಿಂದ ಡಫ್ ಕೂಪರರು ಆಕಾಶವಾಣಿಯಿಂದ ನುಡಿಯುವದೇನಂದರೆ— "ಸಾಕಷ್ಟು ದಂಡುಗಳ ಅಭಾವದಲ್ಲಿ ನಾವು ಹಿಂಜರಿದೆವು. ಪರಿಸ್ಥಿತಿ ಘೋರವಾಗಿದೆ.' ಡಫ ಕೂಪರರ ಆಕಾಶವಾಣಿಯನ್ನು ಕೇಳಿದರೆ ಸಿಂಗಾಪುರದ ಮೇಲೆ ಕಠಿಣ ಪ್ರಸಂಗವಿರುವದಾಗಿ ನಾನು ಹೇಳಬಲ್ಲೆ. ಸಿಂಗಾಪುರದ ಪೂರ್ವಕ್ಕೆ ಬೋರ್ನಿಯೋ ದ್ವೀಪವಿದೆ. ಆ ದ್ವೀಪದಲ್ಲಿ ಜಪಾನಿಯರು ಸೈನ್ಯಪಥಕಗಳನ್ನು ಏಕಸವನೆ ಇಳಿಸುತ್ತಿದ್ದಾರೆ. ಇದರಿಂದ ಸಿಂಗಾಪುರಕ್ಕೆ ಉತ್ತರದ ಪೆನಾಂಗದ ಪಾರ್ಶ್ವದಿಂದಲೂ ಪೂರ್ವಕ್ಕೆ ಬೋರ್ನಿಯೋದ ಪಾರ್ಶ್ವದಿಂದಲೂ ಆಕ್ರಮಣವಾಗುವ ವ್ಯೂಹರಚನೆಯಾಗಿದೆ. ಬೋರ್ನಿಯೋದಲ್ಲಿ ಕೆಲ ಪ್ರದೇಶ

ಬ್ರಿಟಿಶರದುಂಟು ಲುಬೊಂಗ ಮತ್ತು ಮಿರಿ ಇವೆರಡೂ ಪಟ್ಟಣಗಳು ಎಣ್ಣೆಯ ಕೇಂದ್ರಗಳು ಎಣ್ಣೆಯನ್ನು ಶುದ್ಧಗೊಳಿಸುವ ಕಾರಖಾನೆಗಳು ಈ ಪ್ರದೇಶದಲ್ಲಿವೆ ಅವನ್ನು ಬ್ರಿಟಿಶರು ಕಾಪಾಡಿಕೊಳ್ಳಲು ಮಾಡಿದ ಸಕಲ ಪ್ರಯತ್ನಗಳು ನಿರರ್ಥಕವಾದವು ಬ್ರಿಟಿಶ ದಂಡುಗಳು ಹಿಂಜರಿದವು ಆದರೆ ಹಿಂಜರಿಯುವಾಗ ಆ ಕಾರಖಾನೆಗಳನ್ನೆಲ್ಲ ನೆಲಸಮಗೊಳಿಸಿದರು ಪೆನಾಂಗ ಪಟ್ಟಣವನ್ನು ಬಿಟ್ಟು ಬರುವಾಗ ಬ್ರಿಟಿಶ ಸೈನಿಕರು ಅಲ್ಲಿಯ ಯಾವತ್ತೂ ಮಹತ್ವದ ವಸ್ತುಗಳನ್ನು ನಾಶಗೊಳಿಸಿ ಶತ್ರುಗಳಿಗೆ ಏನೊಂದೂ ಪ್ರಯೋಜನ ಸಿಗದಂತೆ ಮುಂಜಾಗ್ರತೆ ಕೊಂಡದ್ದು ಸಮಾಧಾನಕರ ಪೆನಾಂಗದಿಂದ ಹಿಂದಿರುಗುವಾಗ ಸೈನಿಕರಿಗೆ ಏನೊಂದೂ ಪೆಟ್ಟಾಗಲಿಲ್ಲ ಎಲ್ಲರೂ ಸುರಕ್ಷಿತ ಹಿಂಜರಿದು ಸಂಕೇತ ಸ್ಥಳಕ್ಕೆ ಬಂದು ತಲ್ಪಿದರು ಇದು ಸೇನಾಪತಿಗಳ ಚಾತುರ್ಯದ ಫಲವೆಂದು ಹೇಳುತ್ತಾರೆ! ಬೋರ್ನಿಯೊದೊಳಗಿನ ಜಪಾನಿಯರ ಮೇಲೆ ಡಚ್ಚ ವಿಮಾನಗಳು ದಾಳಿ ಮಾಡಿದ್ದವು ಆದರೆ ಹವೆ ಪ್ರತಿಕೂಲವಿದ್ದವರಿಂದ ಅಪೇಕ್ಷಿಸಿದಷ್ಟು ಹಾನಿ ಶತ್ರುಗಳಿಗೆ ಒದಗದಿದ್ದದ್ದು ವ್ಯಸನಕಾರಣ. ಆದಾಗ್ಯೂ ಬ್ರಿಟಿಶರೂ ಡಚ್ಚರೂ ಜಪಾನಿಯರಿಗೆ ಒಳ್ಳೇ ಕೈ ತೋರಿಸುವರಾಗಿ ಹೇಳುತ್ತಾರೆ ಬ್ರಿಟಿಶರ ಹಾಂಗಕಾಂಗದ ಮೇಲೂ ಕಠಿಣ ಪ್ರಸಂಗ ಬಂದೊದಗಿದೆ ಹಾಂಗಕಾಂಗ ದ್ವೀಪ ಕೆಂಟನ ನದಿಯ ಮುಖದಲ್ಲಿ ಕೆಂಟನ ಬಂದರದಿಂದ ೯೦ ಮೈಲು ಅಂತರದಲ್ಲಿದೆ ಇದು ಸೈನ್ಯರಾಣ್ಯ, ನೌಕಾರಾಣ್ಯ ಬ್ರಿಟಿಶರು ಅಪಾರ ಹಣವೆಚ್ಚ ಮಾಡಿ ಭದ್ರವಾದ ಕೋಟೆಗಳನ್ನು ಹಾಂಗಕಾಂಗದಲ್ಲಿ ಏರ್ಪಡಿಸಿದ್ದಾರೆ ಇಲ್ಲಿ ಜಪಾನಿಯರು ಭಯಂಕರವಾದ ದಾಳಿ ಮಾಡಿದರು ಕೆಂಟನ ಪಟ್ಟಣ ಜಪಾನಿಯರ ವಶದಲ್ಲಿದ್ದುದರಿಂದ ಕೆಂಟನದಿಂದ ಹಾಂಗಕಾಂಗದ ಮೇಲೆ ತೋಫುಗಳ ಮಾರಿಯಲು ಬಹು ಅನುಕೂಲ ಬ್ರಿಟಿಶ ಗವ್ಹರ್ನರರಿಗೆ ಶರಣು ಬರಬೇಕಾಗಿ ಜಪಾನದ ಸೇನಾಪತಿಗಳು ಸಂದೇಶ ಕಳಿಸಿದರಂತೆ ಏನೇ ಆದರೂ ಶತ್ರುಗಳಿಗೆ ಶರಣು ಹೋಗಲಿಕ್ಕಿಲ್ಲವಾಗಿ ಬ್ರಿಟಿಶ ಗವ್ಹರ್ನರರು ಹೇಳಿ ಕಳಿಸಿದರಂತೆ! ಎರಡನೇ ಸಲ ಇದೇ ಪ್ರಕಾರ ಯತ್ನ ನಡೆಯಿತಂತೆ ಅದಕ್ಕೂ ಬ್ರಿಟಿಶ ಗವ್ಹರ್ನರರು ನಿರಾಕರಿಸಿದರು ಹಾಂಗಕಾಂಗದ ರಾಜಧಾನಿಯಾದ ವ್ಹಿಕ್ಟೋರಿಯಾ ಪಟ್ಟಣ ಜಪಾನದ ವಶವಾಯಿತಾಗಿ ಜರ್ಮನಿಯ ಬರ್ಲಿನ ಆಕಾಶವಾಣಿಯಲ್ಲಿ ಹೇಳಿದ ಸಂಗತಿ ಒಟ್ಟಾವಾದಿಂದ ಪ್ರಕಟವಾಗಿದೆ ಆದರೆ ಹಾಂಗಕಾಂಗದಿಂದ ತಾವು ಓಡಿ ಹೋಗಿರುವೆವೆಂದು ಜಪಾನದಿಂದ ಹರಡಿದ ಸುದ್ದಿ ಸಟಿಯೆಂದು ಹಾಂಗಕಾಂಗದ ಗವ್ಹರ್ನರರು ಮೊನ್ನೆ ಶನಿವಾರ ತಂತಿಯಿಂದ ತಿಳಿಸುತ್ತಾರೆ ವ್ಹಿಕ್ಟೋರಿಯಾ ರಾಜಧಾನಿ ಜಪಾನದ ವಶವಾದದ್ದು ಸಟಿಯೋ ದಿಟವೋ ಎಂಬ ಸಂಗತಿ ತಿಳಿಯುವದಿಲ್ಲ ಹಾಂಗಕಾಂಗ ಪಟ್ಟಣವನ್ನು ಬ್ರಿಟಿಶರು ಕಡೆತನಕ ರಕ್ಷಿಸಿಕೊಳ್ಳುವರೆಂಬುದರಲ್ಲಿ ಸಂದೇಹವಿಲ್ಲ ಆದರೆ ನನಗೊಂದು ಸಂದೇಹವುಂಟು ಹಾಂಗಕಾಂಗದಿಂದ ೪೦ ಮೈಲು ದೂರದಲ್ಲಿ ಮಕಾವೊ ಎಂಬ ಪೋರ್ತುಗೀಸರ ದ್ವೀಪವಿದೆ ಇದು ತೀರ ಚಿಕ್ಕ ದ್ವೀಪ ಇದನ್ನು ಜಪಾನಿಯರು ಆಕ್ರಮಿಸಿಕೊಂಡರೆಂಬ ವಾರ್ತೆಯುಂಟು ಈ ದ್ವೀಪ ಕೆಂಟನ ನದಿಯ ಮುಖದಲ್ಲಿಯೇ ಇದೆ ಈ ದ್ವೀಪ ಜಪಾನದ ವಶವಾದದ್ದು ದಿಟವಾದರೆ ಹಾಂಗಕಾಂಗ ರಾಣ್ಯವನ್ನು ಬ್ರಿಟಿಶರಿಂದ ರಕ್ಷಿಸಿಕೊಳ್ಳುವದು ದುರ್ಘಟವೆಂದು ಯುದ್ಧಕಲಾಕೋವಿದರ ಅಂಬೋಣ. ಮಕಾವೊ ದ್ವೀಪ ಜಪಾನಿಯರ ವಶವಾಗಿಲ್ಲವೆಂದು ಪೋರ್ತುಗೀಸ ಸರಕಾರವು ಹೇಳುತ್ತದಂತೆ ಆದಾಗ್ಯೂ ಲಿಸ್ಬನದಲ್ಲಿ ಗುರುವಾರ ಪೋರ್ತುಗೀಸ ಸರಕಾರದ ಸಭೆ ಸೇರಿ ಮಕಾವೊ ದ್ವೀಪದ ಪರಿಸ್ಥಿತಿಯ ಕುರಿತು ಆಲೋಚನೆಯಾಯಿತಂತೆ! ನಿರ್ಧಾರವೇನೂ ಆಗಿಲ್ಲವಂತೆ! ಪೋರ್ತುಗೀಸ ಸರಕಾರಕ್ಕೆ ಸದ್ಯಕ್ಕೆ ಗಾಬರಿಯಿಲ್ಲ, ಇಷ್ಟೇ ಇದರ ಅರ್ಥ ನಿರ್ಧಾರ ಮಾಡಹೋದರೆ ಯುದ್ಧದಲ್ಲಿ ಅಚೆ-ಈಚೆ ಎಲ್ಲಾದರೂ ಸರಿಯಬೇಕಾಗುತ್ತದೆ ಆ ಪ್ರಕಾರ ನಡೆಯಲು ಪೋರ್ತುಗೀಸ ಸರಕಾರಕ್ಕೆ ಧೈರ್ಯವಿಲ್ಲ ಮಕಾವೊ ದ್ವೀಪದ ವಿಚಾರ ನಡೆಯುತ್ತಿರುವಾಗಲೇ ಡಚ್ಚರೂ ಬ್ರಿಟಿಶರೂ ಪೋರ್ತುಗೀಸರ ತಿಮೋರ ದ್ವೀಪವನ್ನು ಆಕ್ರಮಿಸಿಕೊಂಡರು ತಿಮೋರ ದ್ವೀಪವನ್ನು ಜಪಾನಿಯರು ಆಕ್ರಮಿಸಿಕೊಂಡರೆ ಆಸ್ಟ್ರೇಲಿಯಾ ದೇಶಕ್ಕೆ ಅಪಾಯವಿರುವದೆಂದು ಗಣಿತ ಹಾಕಿ ಉಭಯತರು ಈ ದ್ವೀಪವನ್ನು ಆಕ್ರಮಿಸಿಕೊಂಡಿದ್ದಾರೆ ಜಪಾನದವರು ತಿಮೋರ ದ್ವೀಪದ ಮೇಲೆ ದಾಳಿ ಮಾಡಬಂದರೆ ಅದನ್ನು ತಾವು ಬ್ರಿಟಿಶರ ಸಹಾಯದಿಂದ ಪ್ರತಿಭಟಿಸುತ್ತೇವೆಂದು ಪೋರ್ತುಗೀಜ ಸರಕಾರವು ಆಶ್ವಾಸನ ಕೊಟ್ಟಾಗ್ಯೂ ಬ್ರಿಟಿಶ ಡಚ್ಚರು ಜಪಾನಿಯರಿಗೆ ಅವಕಾಶ ಮಾಡಬೇಕೆಂದು ತಿಮೋರ ದ್ವೀಪವನ್ನು ಆಕ್ರಮಿಸಿಕೊಂಡಿದ್ದಾರೆ ಗಂಡಾಂತರ ದೂರವಾದೊಡನೆ ತಾವು ತಿಮೋರ ದ್ವೀಪವನ್ನು ಬಿಟ್ಟುಹೋಗುತ್ತೇವಾಗಿ ಬ್ರಿಟಿಶ-ಡಚ್ಚ ಸರಕಾರಗಳ ಆಶ್ವಾಸನವಿದೆ. ಪೋರ್ತುಗೀಸ ಸರಕಾರವು ತಟಸ್ಥ ಜನಾಂಗವಾದರೂ ಪಾರ್ಶ್ವದ ಯುದ್ಧ ಕಾರಣದ ಘಟನೆಗಳಿಂದ ಈ ಜನಾಂಗ ಯುದ್ಧದಲ್ಲಿ ಪಕ್ಷ ವಹಿಸಬಹುದೆಂದು ಎಣಿಸಲಾಗಿದೆ. ಪೋರ್ತುಗೀಸರು ಶತ್ರು ಪಕ್ಷಕ್ಕೆ ಸೇರಿದರೆ ನಮ್ಮ ನೆರೆಹೊರೆಯ ಗೋವಾಂತಕ ಪ್ರಾಂತವನ್ನು ಸ್ವರಕ್ಷಣೆಗಾಗಿ ಆಕ್ರಮಿಸಿಕೊಳ್ಳುವ ಪ್ರಸಂಗ ಹಿಂದುಸ್ಥಾನ ಸರಕಾರಕ್ಕೆ ಪ್ರಾಪ್ತವಾಗಬಹುದು ಪೋರ್ತುಗೀಸರಂತೆ ಸ್ಪೇನದವರೂ ಗಡಿಬಿಡಿಯಲ್ಲಿ ಹೊಯ್ದಾಡುತ್ತಿದ್ದಾರೆ ಜಿಬ್ರಾಲ್ಟರದ ಮೇಲೆ ದಾಳಿಯಾಗುವ ಭೀತಿಯುಂಟಾಗಿದೆ ಮೊನ್ನೆ ಶನಿವಾರ ಬ್ರಿಟಿಶ ರಾಯಭಾರಿಯಾದ ಸರ್ ಸಮ್ಯುಅಲ ಹೋರರವರಿಗೂ ಸ್ಪೇನದ ವಿದೇಶ ಮಂತ್ರಿಗಳಾದ ಸುನೇರರವರಿಗೂ ಸೌಖ್ಯದಿಂದ ದೀರ್ಘಕಾಲದ ತನಕ ಸಂಭಾಷಣ ನಡೆಯಿತು ಅದಕ್ಕೂ ಪೂರ್ವದಲ್ಲಿ ಸುನೇರರು ಜರ್ಮನ-ಪೋರ್ತುಗೀಸ ರಾಯಭಾರಿಗಳೊಡನೆ ವಿಚಾರವಿನಿಮಯ ಮಾಡಿದರು ಪೋರ್ತುಗಾಲದಲ್ಲಿರುವ ಅಮೇರಿಕೆಯವರೆಲ್ಲರೂ ಅಮೇರಿಕೆಗೆ ಹೋಗಲು ಸಿದ್ಧರಾಗಿರಬೇಕೆಂದು ಪೋರ್ತುಗಾಲದೊಳಗಿನ ಅಮೇರಿಕೆಯ ರಾಯಭಾರಿ ಕಚೇರಿಯವರು ತಮ್ಮ ನಾಗರಿಕರಿಗೆ ಸೂಚನೆ ಕೊಟ್ಟಿದ್ದಾರೆ ಇದರ ಮೇಲಿಂದ ಪೋರ್ತುಗೀಸರು ಶತ್ರುಪಕ್ಷಕ್ಕೆ ಕೂಡುವರೆಂಬ ಅನುಮಾನ ಹುಟ್ಟುತ್ತದೆ ಸ್ಪೇನ, ಪೋರ್ತುಗಾಲಗಳ ರಾಜ್ಯಧೋರಣ ಒಂದಾಗಿರುವದಾಗಿ ನನಗ ತೋರುತ್ತದೆ ಇನ್ನೆರಡು ವಾರಗಳಲ್ಲಿ ಯಾವದೊಂದು ರೂಪ ತಳೆದೀತು

ಯುದ್ಧಕಾರಣದ ಮಹತ್ವದ ಘಟನೆಗಳು ಈವಾಗ ರೂಪುಗೊಳ್ಳುತ್ತಿವೆ. ಬರ್ಲಿನದಲ್ಲಿ ಜರ್ಮನಿ, ಇತಾಲಿ, ಜಪಾನ ಸರಕಾರಗಳ ಪ್ರತಿನಿಧಿಗಳು ಸಭೆ ಸೇರಿ ಯುದ್ಧ ನಡಿಸುವ ಧೋರಣವನ್ನು ನಿಶ್ಚಯಿಸಿಕೊಂಡಿದ್ದಾರೆ ಹಿಟ್ಲರನ ಧೋರಣವೇ ತಮ್ಮ ಧೋರಣವೆಂದು ಇತಾಲಿ-ಜಪಾನಿಗಳ ಮನೋನಿಶ್ಚಯವಾಗಿರುವದಾಗಿ ಜರ್ಮನ ಮುತ್ಸದ್ದಿಗಾರರ ಅಂಬೋಣ ರುಶ್ಯ ದೇಶದ ಯುದ್ಧ ಮುಗಿಯಿತಾಗಿಯೂ ಇನ್ನು ಬ್ರಿಟನಿನ ಮೇಲೆ ತಾವು ದಂಡೆತ್ತಿಕೊಂಡು ಹೋಗುವವಾಗಿಯೂ ಬ್ರಿಟಿಶರೇ ತಮ್ಮ ನಿಜ ಶತ್ರುಗಳೆಂದೂ ಜರ್ಮನಿಯ ಪ್ರಚಾರ ಇಲಾಖೆಯ ಸೇನಾಪತಿ ಡಾ|| ಗೋಬೆಲ್ಸರವರು ಶುಕ್ರವಾರ 'ಡಾಸ ರೀಚ' ಪತ್ರಿಕೆಯಲ್ಲಿ ಬರೆದು ಮುಂದಿನ ಕ್ರಮದ ನಿರ್ದೇಶ ಮಾಡುತ್ತಾರೆ ಈ ಪ್ರತಿಭಟನೆಗೆ ಪ್ರತಿಕ್ರಿಯೆಯೆಂದು ಬ್ರಿಟನ, ಅಮೇರಿಕಾ, ಚೀನ, ರಶಿಯಾ ದೇಶಗಳ ಸರಕಾರಗಳು ಯುದ್ಧವ್ಯೂಹವನ್ನು ಆಲೋಚಿಸತೊಡಗಿವೆ ಮಾಸ್ಕೋ ವಾಶಿಂಗಟನ್, ಚುಂಕಿಂಗ, ಲಂಡನ ಪಟ್ಟಣಗಳಲ್ಲಿ ನಾಲ್ಕೂ ಪ್ರದೇಶಗಳ ರಾಯಭಾರಿಗಳು ಆಲೋಚನೆ ಮಾಡುತ್ತಿದ್ದಾರೆ ನಾಲ್ಕೂ ದೇಶಗಳು ಈ ಯುದ್ಧಕ್ಕಾಗಿ ಸರ್ವಶ್ರೇಷ್ಠವಾದ ಒಂದೇ ಒಂದು ಯುದ್ಧಮಂಡಳವನ್ನು ಸಂಘಟಿಸಿ ಸಮಸ್ತ ಮಿತ್ರ ಜನಾಂಗಗಳ ಯುದ್ಧ ಕಾರಣವನ್ನು ಒಂದೇ ಧೋರಣದಿಂದ ನಡಿಸುವಂತೆ ಏರ್ಪಾಟು ಮಾಡುವ ಆಲೋಚನೆಯನ್ನು ಈ ಸರಕಾರಗಳು ಕೈಕೊಂಡಿವೆ ನಾಲ್ಕೂ ಸರಕಾರಗಳ ನೌಕಾಧಿಕಾರಿಗಳೂ ವೈಮಾನಿಕ ಅಧಿಕಾರಿಗಳೂ ಈ ಯುದ್ಧ ಮಂಡಳಕ್ಕೆ ಅಧೀನವಾಗಿ ನಡಕೊಳ್ಳತಕ್ಕದ್ದು ಬೇರೆ ಬೇರೆ ಸರಕಾರಗಳು ಪೃಥಕ್ ಪೃಥಕ್ ಆಗಿ ಯುದ್ಧಕಾರಣವನ್ನು ನಡಿಸತಕ್ಕದ್ದಲ್ಲ ಇತಾಲಿ, ಜಪಾನ ದೇಶಗಳು ಹಿಟ್ಲರನಿಗೆ ಅಧೀನವಾಗಿ ಆತನು ವಿಧಿಸಿದ ಮಾರ್ಗದಿಂದ ಯುದ್ಧಕಾರಣವನ್ನು ನಡಿಸುವಂತೆ, ಬ್ರಿಟನಾದಿ ಮಿತ್ರ ಜನಾಂಗಗಳು ಹೊಸ ಯುದ್ಧ-ಮಂಡಳಕ್ಕೆ ಯುದ್ಧ ನಡಿಸುವ ಸರ್ವಾಧಿಕಾರವನ್ನು ವಹಿಸುವವು. ಈ ಏರ್ಪಾಟಿನಿಂದ ಭೂಲೋಕದೊಳಗಿನ ಜನಾಂಗಗಳು ಶತ್ರು-ಮಿತ್ರ ಪಕ್ಷದಲ್ಲಿ ಸೇರ್ಪಡೆಯಾಗಿ ಯುದ್ಧ-ಕಾರಣವನ್ನು ನಡಿಸುವ ಅಪೂರ್ವ ನೋಟ ನೋಡ ಸಿಗುವದು! ಸ್ಪೇನ, ಪೋರ್ತುಗಾಲ ದೇಶಗಳೂ ತುರ್ಕಸ್ಥಾನಾದಿ ಮುಸಲ್ಮಾನ ದೇಶಗಳೂ ಈ ಯುದ್ಧದಲ್ಲಿ ಯಾವ ಪಕ್ಷವನ್ನು ವಹಿಸುವವೆಂದು ತಿಳಿಯಲು ಸರ್ವರೂ ಕುತೂಹಲಪಡುತ್ತಾರೆ ಸ್ವಾರ್ಥಕ್ಕೆ ಘಾತವಾದಗವಂತೆ ನೀತಿಯ ಪಕ್ಷಕ್ಕೆ ಸೇರುವ ಹಂಚಿಕೆಯನ್ನು ಎಲ್ಲವೂ ಪರಿಶೋಧಿಸುತ್ತಿವೆ.

ನಡುಮಧ್ಯದಲ್ಲಿ ನಮ್ಮ ಹಿಂದುಸ್ಥಾನಕ್ಕೆ ಸ್ವಾಭಾವಿಕವಾದ ಮಹತ್ವ ಪ್ರಾಪ್ತವಾಗಿದೆ. ಪೂರ್ವ ಪ್ರದೇಶದ ಯುದ್ಧದಲ್ಲಿ ಹಿಂದುಸ್ಥಾನವನ್ನು ಸೇರಿಸಿಕೊಂಡವಕ ಬ್ರಿಟಿಶರಿಗೆ ತಕ್ಕಷ್ಟು ಬಲ ದೊರಕುವದಿಲ್ಲ ಲಂಡನಿನ ವರ್ತಮಾನಪತ್ರಗಳಲ್ಲಿ ಹಿಂದುಸ್ಥಾನದೊಳಗಿನ ಬಿಕ್ಕಟ್ಟನ್ನು ಬಗೆಹರಿಸಬೇಕಾಗಿ ಲೇಖಗಳೂ ಪತ್ರಗಳೂ ಪ್ರಕಟವಾಗತೊಡಗಿವೆ ಲಂಡನಿನ 'ಟ್ಯಾಯ್ಮ್ಸ' ಪತ್ರಿಕೆಯಲ್ಲಿ ಹಿಂದುಸ್ಥಾನ ಸರಕಾರದ ಅರ್ಥಸಚಿವರಾಗಿದ್ದ ಸರ್ ಜಾರ್ಜ ಶೂಸ್ಟರ ಪ್ರಭೃತಿ ಮಹಾನುಭಾವರು ಹಿಂದುಸ್ಥಾನ ಸರಕಾರವನ್ನು ಪ್ರಜಾಪ್ರತಿನಿಧಿ ಯುದ್ಧ ಮಂಡಳವನ್ನಾಗಿ ಮಾರ್ಪಡಿಸಬೇಕೆಂದು ಆಗ್ರಹ ಮಾಡುತ್ತಾರೆ ರಾಷ್ಟ್ರೀಯ

(೯ನೇ ಪುಟದ ಮೇಲೆ ಮುಂದರಿಸಿದೆ)

ಸ್ಥಾನಿಕ ವೃತ್ತಾಂತ.

ಕುಮಟಾ— ೫-೬ ದಿನಗಳ ಹಿಂದೊಂದು ದಿನ ಸಂಜೆ ಅಕಸ್ಮಾತ್ತಾಗಿ ೧-೧॥ ತಾಸಿನ ತನಕ ಸಾಧಾರಣ ಮಳೆ ಸುರಿಯಿತು. ಈಗ ರಾತ್ರಿ ಸಾಧಾರಣ ಚಳಿ ಬೀಳುತ್ತಿದೆ, ಮೂಡಗಾಳಿಯೂ ಜೋರಾಗಿ ಬೀಸುತ್ತಿದೆ. ಊರಲ್ಲಿ ವಿಶೇಷ ಬೇನೆ ಬೇಸರಿಕೆಗಳಿಲ್ಲ.

ಈಗ ಊರಲ್ಲಿ ಎಲ್ಲ ಕಡೆ ಒಂದೇ ಮಾತು: ಧಾನ್ಯ-ದವಸಗಳ, ಜೀವನದ ವಸ್ತುಗಳ ಧಾರಣೆಗಳು ಏರೇರುತ್ತಿರುವದನ್ನು ಕಂಡು ಜನರೆಲ್ಲರೂ ಚಕಿತರಾಗಿದ್ದಾರೆ. ಗೋವೆಯವರು ಭತ್ತ ಖರೀದಿ ಮಾಡುತ್ತಿರುವದರಿಂದ ಅಕ್ಕಿ ಭತ್ತಗಳ ಧಾರಣೆ ಏರುತ್ತಿವೆ. ಮಾಸಿಗೆ ೧ಕ್ಕೆ ಈ ೧೦-೧೨ ದಿನಗಳಲ್ಲಿ ೬-೧೦ ಆಣೆ ದರವೇರಿದೆ. ಇನ್ನಿತರ ಧಾನ್ಯಗಳ ಧಾರಣೆಗಳೂ ಕೂಡ ಬೇಳೆ ೧ಕ್ಕೆ ೧-೧॥ ರೂಪಾಯಿಯಷ್ಟು ದರ ಏರಿದೆ. ಬೆಂಕಿಪೆಟ್ಟಿಗೆಗಳ ಧಾರಣೆ ನೂರಕ್ಕೆ ೪೦-೫೦ ರಷ್ಟು ಏರಿದೆ. ಕೆರೋಸಿನ್ ಎಣ್ಣೆಯೂ ತುಟ್ಟಿಯಾಗುತ್ತಿದೆ. ಹಿಂದೆ ಡಬ್ಬಿಗೆ ೪-೧೦ ದರವಿದ್ದದ್ದು ಈಗ ರೂ ೪॥ ಯಾಗಿದೆ. ಅಷ್ಟು ಬೆಲೆ ಕೊಟ್ಟರೂ ಏಜಂಟರು ಕೈಬಿಟ್ಟು ಎಣ್ಣೆ ಕೊಡುವದಿಲ್ಲ. ಮನೆಯ ಉಪಯೋಗಕ್ಕೆಂದು ಬೇಕಾದವರಿಗೆ ೧ ಯಾ ೨ ಡಬ್ಬಿಗಳನ್ನು ಕೊಡುತ್ತಾರೆ. ಕೇಳಿದರೆ ಈ ತಿಂಗಳ ಅಂಶ (quota) ಖರ್ಚಾಗಿ ಹೋಗಿದೆಯೆಂದು ಹೇಳುತ್ತಾರೆ. ಮತ್ತು ಪ್ಯಾಮಿಲಿಗಳಿಗೆ ತಾ. ೧೮ ನಂತರ ಡಬ್ಬಿಗಳನ್ನು ಕೊಡುತ್ತೇವೆಂದು ಹೇಳುತ್ತಾರೆ. ಯಾವ ಪೇಟೆಗೆ ಹೋದರೂ ಕೆರೋಸಿನ್ ಗಿರಾಕಿಗಳು ಹೆಚ್ಚು ಕಂಡು ಬರುತ್ತಿವೆ. ಬೆಲ್ಲವೊಂದು ಇಷ್ಟು ದಿನ ಅಗ್ಗವಿತ್ತು. ಈಗ ಅದರ ಬೆಲೆಯೂ ಏರಲಾರಂಭಿಸಿದೆ. ಹೀಗೆ ಜೀವನ ಸಾಹಿತ್ಯವೆಲ್ಲ ದಿನೇ ದಿನೇ ತುಟ್ಟಿಯಾಗುತ್ತ ನಡೆದರೆ ತಮ್ಮ ಗತಿಯೇನೆಂದು ಬಡಬಗ್ಗರಿಗೆ ಚಿಂತೆಯುಂಟಾಗಿದೆ. ಬಹಳಷ್ಟು ಕಟ್ಟು ಮಳಿಗೆಗಳ ಮೇಲೆ ಮಂಗಳೂರಿಗೆ ಹೋಗುತ್ತಿದೆಯಂತೆ. ಸರಕಾರಿ ಅಧಿಕಾರಿಗಳು ತದಡಿ ಬಂದರದಲ್ಲಿ ಒಂದು ಭತ್ತದ ಮಳಿಗೆ ತಡೆಹಾಕಿಟ್ಟಿದ್ದಾರೆಂದು ಸುದ್ದಿ. ಸರಕಾರದವರು ಎಲ್ಲ ಪರಿಸ್ಥಿತಿಯನ್ನು ಲಕ್ಷ್ಯಕ್ಕೆ ತಂದು ಧಾರಣೆಗಳನ್ನು ನಿಯಂತ್ರಿಸತಕ್ಕ ಯೋಜನೆಯನ್ನು ಕೈಕೊಂಡು ಕೂಡಲೇ ಅಮಲಿನಲ್ಲಿ ತರಬೇಕು.

ಕಳೆದ ನವಂಬರ ತಿಂಗಳಲ್ಲಾದ ದ. ಭಾ. ಹಿಂದೀ ಪ್ರಚಾರ ಸಭೆಯ ಹಿಂದೀ ಪರೀಕ್ಷೆಗಳಲ್ಲಿ ಇಲ್ಲಿಯ ಕೇಂದ್ರದಿಂದ ರಾಷ್ಟ್ರಭಾಷಾ ಪರೀಕ್ಷೆಗೆ ೧೨ ಮತ್ತು ಮಧ್ಯಮಾ ಪರೀಕ್ಷೆಗೆ ೨೭ ವಿದ್ಯಾರ್ಥಿಗಳು ಕೂತಿದ್ದರು. ಅವರಲ್ಲಿ ಅನುಕ್ರಮವಾಗಿ ೮ ಮತ್ತು ೨೫ ಮಂದಿ ಉತ್ತೀರ್ಣರಾಗಿರುತ್ತಾರೆ. ಬರುವ ಫೇಬ್ರುವರಿ ತಾ ೧೫ಕ್ಕಾಗುವ ಪ್ರಾರಂಭಿಕ ಪರೀಕ್ಷೆಗಳಿಗೆ ಕೂಡ್ರಲಪೇಕ್ಷಿಸುವ ವಿದ್ಯಾರ್ಥಿಗಳು ತಮ್ಮ ಅವೇದನ ಪತ್ರಗಳನ್ನು ತಾ ೩-೧-೪೨ ರೊಳಗಾಗಿ ತುಂಬಿಕೊಡಬೇಕೆಂದೂ, ಅವೇದನ ಪತ್ರಗಳು ತಮ್ಮ ಕಡೆ ಸಿಗುವವೆಂದೂ ಇಲ್ಲಿಯ ಹಿಂದೀ-ಪ್ರಚಾರಕ ರಾ॥ ಸು. ವಿ. ಭಟ್ಟರು ತಿಳಿಸುತ್ತಾರೆ.

ಕಳೆದವಾರ ಸಿ.ಐ.ಡಿ. ವಿಭಾಗದ ಪ್ರಾಂತ ಸಾಹೇಬರ ಮುಕ್ಕಾಮು ಇಲ್ಲಿತ್ತು. ಸಾಹೇಬರು ಈಗ ಕಾರವಾರಕ್ಕೆ ಮರಳುತ್ತಿದ್ದು ಜನವರಿ ತಾ ೬ಕ್ಕೆ ತಿರುಗಿ ಇಲ್ಲಿಗೆ ಬರುವರಂತೆ.

ಮೋಟಾರ ಬಂಡಿಗಳ ತಪಾಸಣೆ, ಟೆಕ್ಸ್ ಹಣದ ವಸೂಲಿ, ಡ್ರಾಯವ್ಹಿಂಗ ಪರವಾನಿಗಳ ಪುನರುಜ್ಜೀವನ ಮುಂತಾದ ಕಾರ್ಯಗಳನ್ನು ನಿರ್ವಹಿಸಲು ಮೋಟಾರ ಬಂಡಿಗಳ ಇನ್ಸಪೆಕ್ಟರ ಮಿ॥ ಎಲ್‌ರವರು ಜನವರಿ ತಾ ೧೦ಕ್ಕೆ ಶಿರ್ಸಿಯಲ್ಲಿಯೂ, ತಾ ೧೨, ೧೩ಕ್ಕೆ ಕುಮಟೆಯಲ್ಲಿಯೂ, ತಾ ೧೫, ೧೬ಕ್ಕೆ ಕಾರವಾರದಲ್ಲಿಯೂ ಮುಕ್ಕಾಮು ಮಾಡುವರೆಂದು ಕರ್ನಾಟಕ ವಿಭಾಗದ ವಾಹನ ನಿಯಂತ್ರಣಾಧಿಕಾರಿಗಳು ತಿಳಿಸುತ್ತಾರೆ.

ತಾ ೧೨ ೧೩ ೪೧ ನೇಗೆ ಈ ಊರಲ್ಲಿ ಸೇರಿದ ಜಿಲ್ಲಾ ಕೊಂಗ್ರೆಸ ಸಮಿತಿಯ ಕಾರ್ಯಕಾರಿ ಮಂಡಳದ ಸಭೆಗೆ ಜಿಲ್ಲಾ ಹರಿಜನ ಸೇವಾ ಸಂಘದವರೂ ಬೇರೆ ಬೇರೆ ತಾಲೂಕಿನ ಪ್ರಮುಖ ಹರಿಜನ-ಸೇವಕರೂ ಬಂದಿದ್ದರು. ಸದರಿ ಸಭೆಯಲ್ಲಿ ಜಿಲ್ಲೆಯಲ್ಲಿ ಕೆಲಸ ಮಾಡುವ ಬಗ್ಗೆ ಹೊಸ ಹರಿಜನಸೇವಾ ಸಮಿತಿಯು ಆರಿಸಲ್ಪಟ್ಟಿತು. ರಾ॥ ಶೇಷಗಿರಿರಾವ ಕೇಶವೈನವರು ಈ ಸಮಿತಿಯ ಅಧ್ಯಕ್ಷರು, ಮತ್ತು ರಾ॥ ವಿಟ್ಠಲ ಅನಂತ ಹೊಡಿಕೆ ಮತ್ತು ಶ್ರೀಧರ ಲಕ್ಷ್ಮಣ ಕಿಣಿ ಇವರು ಜತೆ ಕಾರ್ಯದರ್ಶಿಗಳು. ಈ ಹೊಸ ಸಮಿತಿಯಲ್ಲಿ ರಾ॥ ರಾ॥ ಶಿವರಾಮ ಶಾಸ್ತ್ರಿ, ತಿ. ಶ್ರೀ. ನಾಯಕ, ಹರಿ ಪೈ ವಗೈರೆ ೮ ಮಂದಿ ಸಾಮಾನ್ಯ ಸದಸ್ಯರಿರುತ್ತಾರೆ. ಸಮಿತಿಯ ಸಭೆಗಳಿಗೆ ೪ ಮಂದಿ ಕೂಡಿದರೆ ಸಭೆ ನಡೆಯಲಡ್ಡಿಯಿಲ್ಲವೆಂದು ನಿರ್ಣಯವಾಗಿದೆ. ಅಂಕೋಲೆಯಲ್ಲಿ ಹರಿಜನ-ವಿದ್ಯಾರ್ಥಿನಿಲಯಕ್ಕೆ ಸ್ವತಂತ್ರ ಕಟ್ಟಡ ಕಟ್ಟಿಸುವ ಬಗ್ಗೆ ಅವಶ್ಯ ಪಟ್ಟಿಗೆ ಹಣ ಕೂಡಿಸಬೇಕೆಂದೂ ಸಭೆಯಲ್ಲಿ ಒಂದು ತೀರ್ಮಾನವಾಯಿತು.

ಕಡತೋಕಾ— ಕಡತೋಕೆ ಸೀಮೆಯ ಗ್ರಾಮ್ಯ ಶಿಕ್ಷಣ ಪ್ರಚಾರ ಸಮಿತಿಯ ಬೇಡಿಕೆಯಂತೆ ಮುಂಬಯಿ ಸರಕಾರದ ಉದ್ಯೋಗಿಕ ಇಲಾಖೆಯವರು ಈ ಸೀಮೆಯಲ್ಲಿ ಜೇನು ಹುಟ್ಟುಗಳ ಉದ್ಯೋಗದ ಪ್ರಚಾರ ನಡೆಸಿದ್ದಾರೆ. ಕಡತೋಕಾ, ಕೆಕ್ಕಾರ, ನವಿಲಗೋಣ ವಗೈರೆ ೬ ಹಳ್ಳಿಗಳಲ್ಲಿ ಈಗಾಗಲೇ ೨೭ ಜೇನು-ಹುಳದ ಪೆಟ್ಟಿಗೆಗಳನ್ನು ಹಂಚಿದ್ದಾರೆ. ಪೆಟ್ಟಿಗೆಯೊಂದಕ್ಕೆ ೫ ಪೌಂಡು ಜೇನು ತುಪ್ಪ ಬೆಳೆಯನ್ನು ಕೊಡಬೇಕೆಂದು ನಿಶ್ಚಿತವಾಗಿದೆ. ಅಷ್ಟು ಜೇನು ಕೊಟ್ಟ ಮೇಲೆ ಪೆಟ್ಟಿಗೆಯು ನಾಶ್ತಿಯು ಪೆಟ್ಟಿಗೆ ಇಟ್ಟುಕೊಂಡವನಿಗೆ ಸಿಗುತ್ತದೆ. ರೈತರಿಗೆ ಇದೊಂದು ಲಾಭಕರ ಉದ್ದಿಮೆ. ೧ ಪೆಟ್ಟಿಗೆಯನ್ನು ಜತನ ಮಾಡಿಕೊಂಡು ಇಟ್ಟರೆ ವರ್ಷದ ತಲೆಯ ಮೇಲೆ ಸರಾಸರಿ ೭-೮ ರೂ ಸಿಗಲಡ್ಡಿಯಿಲ್ಲವಂತೆ. ಈ ಸೀಮೆಯ ಜನರು ಈ ಉದ್ಯೋಗವನ್ನು ಸ್ವಾಗತಿಸಬೇಕಾಗಿ ಸೂಚನೆಯಿದೆ. ಯಾರಿಗಾದರೂ ವಿಶೇಷ ಮಾಹಿತಿ ಬೇಕಾದರೆ ಅವರು ಇಲ್ಲಿರುವ ಜೇನು ಖಾತೆಯ ಕಚೇರಿಯಲ್ಲಿ ಬಂದು ಪಡಕೊಳ್ಳಬಹುದು.

ಭಟಕಳ— (ತಾ ೨೦-೧೨-೪೧) ವಿದ್ಯಾರ್ಥಿಗಳ ದೇಹಾರೋಗ್ಯದ ತಪಾಸಣೆ ಅಧಿಕಾರಿಗಳಾದ ರಾ॥ ದೇಸಾಯಿಯವರು ಕಳೆದ ರವಿವಾರ ಇಲ್ಲಿಯ ವ್ಯಾಯಾಮ ಶಾಲೆ ನೋಡಹೋಗಿದ್ದರು. ಆಗ ವ್ಯಾಯಾಮ ಶಿಕ್ಷಕ ರಾ॥ ಶೇಷಗಿರಿ ಪ್ರಭುರವರು ವಿದ್ಯಾರ್ಥಿಗಳ ಕವಾಯತ ಮೊದಲಾದ ಚಟುವಟಿಕೆಗಳನ್ನು ಮಾಡಿಸಿ ತೋರಿಸಿದರು. ರಾ॥ ದೇಸಾಯಿಯವರು ಅವನ್ನು ನೋಡಿ ಸಂತೋಷ ವ್ಯಕ್ತಗೊಳಿಸಿದರು. ರಾ॥ ಅನಂತ ಪ್ರಭುರವರು ಕೊನೆಗೆ ವ್ಯಾಯಾಮದ ಮಹತ್ವವನ್ನು ಕುರಿತು ಚಿಕ್ಕದೊಂದು ಭಾಷಣ ಮಾಡಿದರು.

ಶಾಲಾ ತಪಾಸಕ ರಾ॥ ಕರ್ಜಗಿಯವರು ಅದೇ ದಿನ ಕನ್ನಡ ಶಾಲೆಗೂ ಪ್ರೌಢ ಶಿಕ್ಷಣದ ರಾತ್ರಿ-ಶಾಲೆಗೂ ಭೆಟ್ಟಿ ಕೊಟ್ಟು ಹುಡುಗರ ಗಾಯನ, ವಾದ ವಿವಾದ, ಕವಾಯತು ಮುಂತಾದವನ್ನು ನೋಡಿ ಆನಂದಪಟ್ಟರು.

ಭಟಕಳ ಪೇಟೆಯಲ್ಲಿ ೧೨ ಬೋರ್ಡ ಶಾಲೆಗಳೂ ೨೪ ಗಾಂವಠಿ ಶಾಲೆಗಳೂ ಇರುತ್ತವೆ. ಅವೆಲ್ಲ ಶಾಲೆಗಳ ಮೇಲ್ವಿಚಾರಣೆಯು ಹಾಗೂ ಎಲ್ಲ ಶಾಲೆಗಳ ಶಿಕ್ಷಕರಿಗೆ ಪಗಾರ ಬಟವಡೆ ಮಾಡಿಸುವ ಕೆಲಸವನ್ನು ಹಿರಿಯ ಶಾಲೆಯ ಮುಖ್ಯಾಧ್ಯಾಪಕರೇ ಮಾಡಬೇಕು. ಇಷ್ಟೆಲ್ಲ ಕೆಲಸ ಮಾಡಲಿಕ್ಕೆ ಅವರಿಗೆ ಒಬ್ಬ ಶಿಪಾಯಿಯನ್ನು ಸಹ ಬೋರ್ಡಿನವರು ಕೊಟ್ಟಿರುವದಿಲ್ಲ. ಅದರಿಂದ ಮುಖ್ಯಾಧ್ಯಾಪಕರಿಗೆ ಶಾಲೆಯಲ್ಲಿ ಕಲಿಸಲಿಕ್ಕೆ ಬರುವದಿಲ್ಲ, ಮೇಲ್ವಿಚಾರಣೆಯು ಕೆಲಸವೂ ಸರಿಯಾಗಿ ಸಾಗುವದಿಲ್ಲ. ಶಾಲಾ ಬೋರ್ಡಿನವರು ಅವರಿಗೆ ಒಬ್ಬ ಶಿಪಾಯಿಯನ್ನು ಯಾಕೆ ಕೊಡಬಾರದು?

ಶಿರ್ಸಿ— ಅಡಿಕೆ ಮರಗಳ ಕೊಳೆ ರೋಗಕ್ಕೆ ಬೋರ್ಡೋ-ಮಿಶ್ರಣವನ್ನು ಸಿಂಪಡಿಸುವದೇ ರಾಮಬಾಣ ಔಷಧವೆಂದು ಬೇಸಾಯ ಇಲಾಖೆಯವರ ಅಂಬೋಣವೇನೋ ಇರುತ್ತದೆ. ಆದರೆ ಅದು ರಾಮಬಾಣ ಔಷಧವೋ ರಾವಣಬಾಣ ಔಷಧವೋ ಎಂಬುದು ಇನ್ನೂ ಸಿದ್ಧವಾಗಿಲ್ಲ. ಬೇಸಾಯ ಅಧಿಕಾರಿಗಳು ಜಾಣರಿರಬಹುದು, ಶಾಸ್ತ್ರಜ್ಞರೂ ಇರಬಹುದು, ಆದರೆ ಹೊಸ ವೈದ್ಯನಿಗಿಂತ ಹಳೇ ರೋಗಿಯೇ ಜಾಣ ಎಂಬ ನಾಣ್ಣುಡಿಯಂತೆ ಈ ಮಿಶ್ರಣದ ಉಪಚಾರದ ಸಂಬಂಧದಲ್ಲಿ ಕೆಲ ಕಾಲ ಅನುಭವ ಪಡೆದ ತೋಟಿಗರ ಅಭಿಪ್ರಾಯಕ್ಕೇ ಜನರು ಬೆಲೆ ಕೊಡಬಹುದಲ್ಲದೆ ಶಾಸ್ತ್ರಜ್ಞರ ಪುಸ್ತಕೀಯ ಇಲ್ಲವೆ ಸಂಕುಚಿತ ಕ್ಷೇತ್ರದ ಪ್ರಯೋಗಾನುಭವಕ್ಕೆ ಬೆಲೆ ಕೊಡಲಾರರು. ಸದರಿ ಮಿಶ್ರಣದ ಬಗ್ಗೆ ಅನೇಕ ತೋಟಿಗರು ವಿರೋಧ ಪ್ರದರ್ಶಿಸುತ್ತಾರೆ. ಮಿಶ್ರಣದ ಉಪಚಾರ ಹೊಂದಿದ ಅಡಿಕೆ ಮರಗಳು ಅಕಾಲ-ಮೃತ್ಯುವಿಗೆ ತುತ್ತಾಗುತ್ತವೆಂದು ಕೆಲವು ಅನುಭವಿಕರ ಅಂಬೋಣವುಂಟು. ಉಪಚಾರ ಹೊಂದಿದ ಮರಗಳ ಫಲದಾಯಿತ್ವದ ಶಕ್ತಿ ಹ್ರಾಸಹೊಂದುತ್ತದೆಂದು ಬೇರೆ ಕೆಲವರ ಅನುಭವ

ಉತ್ತರ ಕಾನಡಾ ಜಿಲ್ಲಾ ಕೋ-ಓಪರೇಟಿವ್ಹ
ಲ್ಯಾಂಡ ಮೊರ್ಗೇಜ ಬ್ಯಾಂಕ, ಲಿಮಿಟೆಡ್, ಕಾರವಾರ.

*

ಅಪೂರ್ವ ಸವಲತ್ತು.

ಬಡ್ಡಿ ದರ ಇನ್ನೂ ಕಡಿಮೆ! · ವಾರ್ಷಿಕ ಕಂತುಗಳೂ ಹೆಚ್ಚು!
ಒಕ್ಕಲಿಗರೇ ತ್ವರೆ ಮಾಡಿರಿ!

ಈ ಬ್ಯಾಂಕಿನ ಸ್ಥಾಪನೆಯು ೧೯೩೯ರಲ್ಲಿ ಆಗಿ ಹಲವು ಶೇತಕಿ ಜನರು ಹಳೇ ಸಾಲ ತೀರಿಸಲಿಕ್ಕೂ, ಜಮೀನ ಸುಧಾರಣೆಗೂ, ಹೊಸ ಜಮೀನು ಕೊಳ್ಳಲಿಕ್ಕೂ ವಗೈರೆ ಉದ್ದೇಶಗಳಿಗಾಗಿ ಈ ಬ್ಯಾಂಕಿನಿಂದ ಸುಲಭ ರೀತಿಯಿಂದ ತೀರಿಸುವ ಸಾಲಗಳನ್ನು ದೊರಕಿಸಿ ಯೋಗ್ಯ ಲಾಭವನ್ನು ಪಡಕೊಂಡಿರುತ್ತಾರೆಂಬದು ಎಲ್ಲರಿಗೆ ಗೊತ್ತಿದ್ದ ಮಾತೇ ಸರಿ.

ಈಗಂತೂ ನಮ್ಮ ಜಿಲ್ಲೆಯ ಪರಿಸ್ಥಿತಿಯನ್ನನುಲಕ್ಷಿಸಿ ಬಡ್ಡೀ ದರವು ಇನ್ನೂ ಕಡಿಮೆ ಅಂದರೆ ೫½% ಮಾಡಬೇಕೆಂತಲೂ ವಾರ್ಷಿಕ ಕಂತುಗಳ ಸಂಖ್ಯೆಯು ೧೫ ಇದ್ದದ್ದು ೨೦ರ ತನಕ ಬೆಳಿಸಬೇಕೆಂತಲೂ ಮೇಲಧಿಕಾರಿಗಳು ಯೋಚಿಸಿದ್ದಾರೆ. ಆದ್ದರಿಂದ ಈ ಜಿಲ್ಲೆಯ ಋಣಮುಕ್ತರಾಗಲಿಚ್ಛಿಸುವ ಶೇತಕೀ ಜನರು ಹಾಗೂ ಬ್ಯಾಂಕಿನ ಪೋಟನಿಯಮಗಳಿಗನುಸರಿಸಿ ಇತರ ಯೋಗ್ಯ ಉದ್ದೇಶಗಳಿಗಾಗಿ ಸಾಲ ಬೇಕಾಗುವಂಥವರು ತ್ವರೆ ಮಾಡಬೇಕು. ಹೆಚ್ಚಿನ ಮಾಹಿತಿ ಬಗ್ಗೆ ಚೆಅರಮನ್ನರಿಗೆ ಬರೆಯಿರಿ.

ವುಂಟು ಹೀಗೆ ಈ ಮಿಶ್ರಣದ ಬಗ್ಗೆ ಜನರಲ್ಲಿ ದ್ವಿಧಾ-ಅಭಿಪ್ರಾಯ ಕಂಡುಬರುತ್ತದೆ ಕೊಳೆರೋಗ ಸಮಸ್ಯೆಯ ಹಾಗೂ ತತ್ಪರಿಹಾರೋಪಾಯಗಳ ಚೌಕಶಿ ಮಾಡಲು ಜಿಲ್ಹಾ ಕೊಂಗ್ರೆಸ ಸಮಿತಿಯವರು ೩ ವರ್ಷಗಳ ಹಿಂದೆ ಒಂದು ಚೌಕಶಿ ಮಂಡಳ ನೇಮಿಸಿದ ಸಂಗತಿ 'ವೃತ್ತ'ದ ವಾಚಕರ ನೆನಪಿನಲ್ಲಿರಬಹುದು ಆ ಚೌಕಶಿ ಮಂಡಳದವರು ಬೇರೆ ಬೇರೆ ಭಾಗಗಳ ತೋಟಿಗರ ಅನುಭವ ಕೇಳಿಕೊಂಡು, ಬೋರ್ಡೋ ಮಿಶ್ರಣದ ಉಪಯೋಗಕ್ಕೆ ಬಹುಸಂಖ್ಯ ತೋಟಿಗರು ವಿರುದ್ಧರಿದ್ದಾರೆಂದು ಕಂಡು ಹಿಡಿದಿತ್ತು ಮತ್ತು ಆ ಮಿಶ್ರಣವು ಅಧಿಕಾರಿಗಳು ಹೇಳುವಷ್ಟು ಪ್ರಯೋಜನಕಾರಿಯಾಗುವದಿಲ್ಲೆಂದು ಅಭಿಪ್ರಾಯ ವ್ಯಕ್ತಗೊಳಿಸಿತ್ತು ಆದರೂ ಅಧಿಕಾರಿಗಳು ತಮ್ಮ ಮೊಲಕ್ಕೆ ಮೂರೇ ಕಾಲೆಂಬ ಹಟ ಬಿಡಲೊಪ್ಪುವದಿಲ್ಲ! ಬೋರ್ಡೋ ಮಿಶ್ರಣದ ಪ್ರಚಾರವನ್ನು ಅವರು ಭರದಿಂದ ಸಾಗಿಸಿದ್ದಾರೆ! ಮತ್ತು ಆ ಕುರಿತು ಸವ್ಯಾಪಸವ್ಯ ಮಾರ್ಗಗಳನ್ನೂ ಅನುಸರಿಸುತ್ತಿದ್ದಾರೆ! ಬೋರ್ಡೋ ಮಿಶ್ರಣ ಸಿಂಪಡಿಸಿಕೊಳ್ಳಲೊಪ್ಪುವ ತೋಟಿಗರಿಗಷ್ಟೇ ತಗಾವಿ ಹಣ ಸಿಕ್ಕೀತೆಂಬ ಶರ್ತ ಹಾಕಿ ತಗಾವಿ ಬೇಡಬಂದ ಮಿಶ್ರಣ ವಿರೋಧಿ ತೋಟಿಗರಿಗೆ ಅವರು ಕಾಡಿದ್ದು ಜನರಿಗೆ ಗೊತ್ತಿದೆ ಈಗ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಈ ಜಿಲ್ಹೆಯ ಅಡಿಕೆ ತೋಟಗಳಲ್ಲಿ ಬೋರ್ಡೋ ಮಿಶ್ರಣವನ್ನು ಒತ್ತಾಯದಿಂದ ಸಿಂಪಡಿಸುವ ಬಗ್ಗೆ ಸರಕಾರದ ಕಡೆಯಿಂದ ಮೊನ್ನೆಯೇ ಒಂದು ಹೊಸ ಕಾಯಿದೆಯನ್ನು ಮಾಡಿಸಿಕೊಂಡಿದ್ದಾರೆ! ಮುಂದಿನ ವರ್ಷದಿಂದ ಈ ಕಾನೂನು ನಮ್ಮ ಜಿಲ್ಹೆಯಲ್ಲಿ ಜಾರಿಯಲ್ಲಿ ಬರುವದಾಗಿ ಸುದ್ದಿ! ಇದಾವ ಕಾಯಿದೆ ಮಾಡುವ ಕ್ರಮವೋ! ಕಾಯಿದೆ ಮಂಡಳದ ಅಭಾವದಲ್ಲಿ ಸರ್ವಾಧಿಕಾರಿಗಳಾದ ಗವ್ಹರ್ನರರು ಇದ್ದ ಕಾಯಿದೆಗಳ ಸಹಾಯದಿಂದಲೇ ಆಡಳಿತೆಯನ್ನು ಸಾಗಿಸಬೇಕು, ಅಷ್ಟೇ, ಕಷ್ಟದ ಇಲ್ಲವೆ ಜರೂರಿಯ ಪ್ರಸಂಗ ಬಂದರೆ ಮಾತ್ರ ಹೊಸ ಕಟ್ಟಳೆಯನ್ನು ನಿರ್ಮಿಸಬೇಕು, ಎಂದು ರಾಜಕಾರಣ ಬಲ್ಲವರು ಹೇಳುತ್ತಾರೆ ಕೊಳೆರೋಗದ ಪ್ರಶ್ನೆ ಇಲ್ಲವೆ ಅದರ ಪರಿಹಾರದ ಪ್ರಶ್ನೆ ಅಂತಹ ಜರೂರಿಯ ಪ್ರಶ್ನೆಯಲ್ಲ ಅದ್ದರಿಂದ ನಿರಂಕುಶ ಸರ್ವಾಧಿಕಾರ ನಡಿಸುವ ಸರಕಾರವು ಇಂತಹ ಕಟ್ಟಳೆಯನ್ನು — ಲೋಕಮತದ ಬೆಂಬಲವಿಲ್ಲದ ಕಟ್ಟಳೆಯನ್ನು — ನಿರ್ಮಿಸುವದು, ಅದೂ ಕೂಡ ಲೋಕಾಭಿಪ್ರಾಯ ತಿಳಕೊಳ್ಳುವ ಪ್ರಯತ್ನ ಸಹ ಮಾಡದೆ ನಿರ್ಮಿಸುವದು ಯಾವ ನ್ಯಾಯ, ಇಲ್ಲವೆ ಜಾಣತನವೆಂಬುದು ಮುಂಬಯಿ ಸರಕಾರದ ಅಪ್ಪನಿಗೇ ಗೊತ್ತು! ಈ ಕಾನೂನು ಅಮಲಿನಲ್ಲಿ ಬಂದರೆ ತೋಟಿಗಾರರು ದೊಡ್ಡ ಸಂಕಟದಲ್ಲಿ ಬೀಳುವರು ಕೊಳೆರೋಗದ ವಿಪತ್ತಿಗಿಂತ ಬೋರ್ಡೋ ಮಿಶ್ರಣದ ಸಂಕ್ರಾಂತಿಯು ಅವರಿಗೇ ಹೆಚ್ಚು ಅಸಹ್ಯವಾಗಿ ತೋಟಗಳು ಹಾಳು ಬೀಳಬಹುದೆಂದು ಇಲ್ಲವೆ ಕಾಡಿನ ಪಾಲಾಗಿ ಹೋಗಬಹುದೆಂದು ಅಂಜಿಕೆಯುಂಟಾಗಿದೆ ಈ ಸಂಕಟವನ್ನು ತಪ್ಪಿಸಿಕೊಳ್ಳಬೇಕಾದರೆ ತೋಟಿಗಾರರೆಲ್ಲ — ಅದೇಕೆ ಇಡೀ ಜಿಲ್ಹೆಯ ರೈತ ಬಾಂಧವರೆಲ್ಲ — ತಮ್ಮೊಳಗೆ ಒಕ್ಕಟ್ಟಾಗಿ ಸರಕಾರದ ಹೊಸ ಕಾಯದೆಯನ್ನು ಕಡುತರವಾಗಿ ನಿಷೇಧಿಸಬೇಕು ಬೋರ್ಡೋ ಮಿಶ್ರಣದ ಪಕ್ಷಪಾತಿಗಳೂ ಕೂಡ ಈ ಕಾನೂನನ್ನು ನಿಷೇಧಿಸಬೇಕಾಗಿ ವಿನಂತಿಯಿದೆ ಆ ಮಿಶ್ರಣವು ಒಳ್ಳೆದಿರಬಹುದು, ಅದು ಪ್ರಯೋಜನಕಾರಿಯೂ ಇರಬಹುದು ಆದರೆ ಅದರ ಉಪಚಾರ ಮಾಡಿಸಿಕೊಳ್ಳಲೇಬೇಕೆಂದು ಜನರಿಗೆ ಒತ್ತಾಯ ಮಾಡುವದು ಎಂದೆಂದೂ ನ್ಯಾಯ್ಯವಾಗಲಾರದೆಂಬ ಮಾತನ್ನು ಅವರು ಮರೆಯಕೂಡದು ಜನರಿಗೆ ಒತ್ತಾಯದ ಉಪಕಾರ ಮಾಡುವ ಸರಕಾರಿ ಪ್ರವೃತ್ತಿಯನ್ನು ಅವರು ವಿರೋಧಿಸಬೇಕೆಂದು ಬೇರೆ ಹೇಳಬೇಕೇ? ತೋಟಿಗಾರರು ಇನ್ನಾದರೂ ಎಚ್ಚತ್ತು ಕೂಡಲೇ ಹೊಸ ಸಂಕಟಕ್ಕೆ ಇದಿರಾಗುವ ಸಿದ್ಧತೆಯನ್ನು ಮಾಡಬೇಕಾದುದು ಕ್ರಮಪ್ರಾಪ್ತವಿದೆ ಲೋಕಮತ ಸ್ಪಷ್ಟವಾದರೆ, ಜನರ ವಿರೋಧದ ಉಗ್ರತೆಯೂ ಕಂಡುಬಂದರೆ ಸರಕಾರದವರು ತಮ್ಮ ಸಂಕಲ್ಪಿತ ಸಕ್ತಿಯ ಕ್ರಮಕ್ಕೆ ತಡೆಹಾಕದಿರಲಾರರು

ಕೋಳಿಗಳ ಜಾತಿಯನ್ನು ಸುಧಾರಿಸಿ ಹೊಸ ಹೊಸ ಉತ್ತಮ ಕೋಳಿಗಳನ್ನು ಪ್ರಚಾರದಲ್ಲಿ ತರುವದಕ್ಕಾಗಿ ಗ್ರಾಮ ಸುಧಾರಣಾ ಇಲಾಖೆಯವರು ಹೊಸ ಹೊಸ ಜಾತಿಯ ಹುಂಜಗಳನ್ನೂ ತತ್ತಿಗಳನ್ನೂ ಒಕ್ಕಲಿಗರಿಗೆ ಮತ್ತು ಕೋಳಿ ಸಾಕುವ ಉದ್ದಿಮೆಯ ಪ್ರೀತಿಯುಳ್ಳವರಿಗೆ ಪೂರೈಸುವ ಏರ್ಪಾಟು ಮಾಡಿದ್ದಾರೆ ಬೇಕಾದವರು ಇಲ್ಲಿಯ ಅ॥ ರೂರಲ್ ಡೆವ್ಹಲಪಮೆಂಟ ಇನ್ಸಪೆಕ್ಟರರಿಗೆ ಭೆಟ್ಟಿಯಾಗಿ ತತ್ತಿಗಳನ್ನೂ ಹುಂಜಗಳನ್ನೂ ಪಡಕೊಳ್ಳಬೇಕು ಹುಂಜಗಳ ಸಂಖ್ಯೆ ಬಹಳ ಕಡಿಮೆಯಿರುವದರಿಂದ ವಿಳಂಬ ಮಾಡಿ ಬಂದವರಿಗೆ ನಿರಾಶೆಯಾಗುವ ಸಂಭವವಿದೆ

ಕಾರವಾರ— (ತಾ ೫-೧೨-೪೧) ಈಗ ಇಲ್ಲಿ ಹಾಯಸ್ಕೂಲ ಶಿಕ್ಷಣ ತಕ್ಕೊಳ್ಳುವ ಹುಡುಗಿಯರ ಸಂಖ್ಯೆ ಬಹಳ ಬೆಳೆದಿದೆ ಇದೀಗ ಹಿಂದು ಸ್ಕೂಲಿನಲ್ಲಿ ೧೩೦, ಸರಕಾರಿ ಹಾಯಸ್ಕೂಲಿನಲ್ಲಿ ೩೨, ಬಾಧ ಇಂಗ್ಲಿಷ ಶಾಲೆಯಲ್ಲಿ ೧೮ ಹೀಗೆ ಹುಡುಗಿಯರು ಕಲಿಯುತ್ತಿದ್ದಾರೆ ಇವರ ಬಗ್ಗೆ ಸ್ವತಂತ್ರ ಹುಡುಗಿಯರದೇ ಒಂದು ಹಾಯಸ್ಕೂಲು ತೆರೆಯುವದು ಅವಶ್ಯ ಹಾಗೂ ಪ್ರಶಸ್ತ ಕಾಣುತ್ತದೆ ಹಿಂದೆ ಸರಕಾರದವರು ಧಾರವಾಡ, ವಿಜಾಪುರ ಶಹರಗಳಲ್ಲಿ ವಿದ್ಯಾರ್ಥಿನಿಯರ ಬಗ್ಗೆ ಹಾಯಸ್ಕೂಲುಗಳನ್ನು ತೆರೆದಾಗ ಅಲ್ಲಿ ಮೊದಮೊದಲು ೩೦-೪೦ ಹುಡುಗಿಯರು ಸಹ ಕಲಿಯುತ್ತಿದ್ದಿಲ್ಲವಂತೆ ಹೀಗಿರುವಾಗ ಇಲ್ಲಿ ಕಲಿಯುವ ಹುಡುಗಿಯರ ಸಂಖ್ಯೆ ೨೦೦ಕ್ಕೆ ಸಮೀಪಿಸಿ ಒಂದಾಗ್ಯೂ ವಿದ್ಯಾಧಿಕಾರಿಗಳು ಇಲ್ಲೊಂದು ಹುಡುಗಿಯರ ಹಾಯಸ್ಕೂಲು ತೆರೆಯಲು ಹಿಂಜರಿಯುತ್ತಿರುವರೇಕೋ ತಿಳಿಯದು ಹುಡುಗಿಯರ ಬಗ್ಗೆ ಸ್ವತಂತ್ರ ಹಾಯಸ್ಕೂಲನ್ನು ತೆರೆದರೆ ಅವರಿಗಾಗಿಯೇ ಒದಗಿಸಿಕೊಡಬಹುದಾದ ಗಾಯನ, ನರ್ತನ, ಹೊಲಿಗೆ, ಕಲಾಕೌಶಲ್ಯ ಮೊದಲಾದ ವಿಶಿಷ್ಟ ಕಲೆಗಳ ಹಾಗೂ ಶಿಶುಸಂಗೋಪನ, ಗೃಹಶಿಕ್ಷಣ ಮೊದಲಾದ ಸ್ತ್ರೀಯರಿಗೆ ಉಪಯುಕ್ತವಿರುವ ವಿದ್ಯೆಗಳ ಶಿಕ್ಷಣ ಕೊಡುವ ಏರ್ಪಾಟು ಮಾಡಬರುತ್ತದೆ ಅದು ಮಿಶ್ರ ಶಾಲೆಗಳಲ್ಲಿ ಅನುಕೂಲವಾಗುವದಿಲ್ಲ ಮೇಲಾಗಿ ಹುಡುಗರ ಶಾಲೆಗೆ ತಮ್ಮ ಹುಡುಗಿಯರನ್ನು ಕಳಿಸಲು ಒಪ್ಪದ ಜನರ ಹುಡುಗಿಯರಿಗೂ ಉಚ್ಚ ಶಿಕ್ಷಣದ ಲಾಭ ಮಾಡಿಕೊಡಬರುತ್ತದೆ ಕಾರಣ ಸ್ತ್ರೀಶಿಕ್ಷಣದ ಬಗ್ಗೆ ಕಳಕಳಿಯನ್ನು ತೋರ್ಪಡಿಸುವ ಸರಕಾರದವರೂ ವಿದ್ಯಾಧಿಕಾರಿಗಳೂ ಬೇಗನೇ ಇಲ್ಲೊಂದು ಹುಡುಗಿಯರ ಹಾಯಸ್ಕೂಲು ತೆರೆಯುವ ವ್ಯವಸ್ಥೆ ಮಾಡಬೇಕಾಗಿ ಅತ್ರಸ್ಥರ ಅರಿಕೆಯಿದೆ

(ತಾ ೧೯-೧೨-೪೧) ರಾ॥ ರಾ॥ ದೇವ ಮತ್ತು ಗೋಪಿಯವರು ಕರೆದ ಸಭೆಯು ಪೂರ್ವನಿಶ್ಚಯದಂತೆ ತಾ ೧೪ನೇ ರವಿವಾರ ಸಂಜೆ ೩ ಘಂಟೆಗೆ ಜಿಲ್ಹಾ ಬೋರ್ಡಿನ ಕಚೇರಿಯಲ್ಲಿ ಕೂಡಿತು ರಾ॥ ರಾ॥ ಜಿ. ಆ. ದೇವ, ಸುಬ್ರಾವ ಹಳದೀಪುರ, ಮಹಾಬಲೇಶ್ವರ ಭಟ್ಟ ಗೋಪಿ, ಗೋವಿಂದರಾವ ಹುರುಳೀಕರ, ಏ ಡಿ ಪಾಲೇಕರ, ದತ್ತನಾಯ್ಕ ಮತ್ತು ಅನಂತ ಭಟ್ಟ ಯಲ್ಲಾಪುರಕರ ಇವರು ಸಭೆಗೆ ಬಂದಿದ್ದರು ಸರ್ವಾನುಮತದಿಂದ ರಾ॥ ಹಳದಿಪುರಕರರು ಸಭಾಪತಿಗಳಾದರು ಮತ್ತು ಕೆಲ ಕಾಲ ಚರ್ಚೆಯಾಗಿ ಈ ಕೆಳಗಿನ ಗೊತ್ತುವಳಿಯೊಂದು ಮಾಡಲ್ಪಟ್ಟಿತು —

"ಕೊಂಗ್ರೆಸಮಂತ್ರಿಗಳು ಜನರಿಗೆ ದಯಪಾಲಿಸಿದ ಜಂಗಲ ಸವಲತ್ತುಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಅಧಿಕಾರಿಗಳಿಗೆ ಎಲ್ಲಿ ಅಡಚಣೆಯಾಗುತ್ತವೆಂಬುದು ಸರಕಾರದ ಕಡೆಯಿಂದ ಸ್ಪಷ್ಟ ಮಾಡಲ್ಪಟ್ಟಿಲ್ಲ ಅದ್ದರಿಂದ ಬೆಳಗಾಂವದಲ್ಲಿ ಕೂಡುವ ಸಭೆಗೆ ನಿಮಂತ್ರಿಸಲ್ಪಟ್ಟ ಅಧಿಕಾರೇತರ ಗೃಹಸ್ಥರು ಈ ಮಾತನ್ನು ಅಧಿಕಾರಿಗಳ ಲಕ್ಷ್ಯಕ್ಕೆ ತಂದು, ಅಧಿಕಾರಿಗಳು ಹೇಳುವ ಅಡಚಣೆಗಳನ್ನು ಮೊದಲು ಜನತೆಯ ಮುಂದೆ ಇಟ್ಟು ಲೋಕಾಭಿಪ್ರಾಯ ತಿಳಕೊಳ್ಳಬೇಕಾಗಿಯೂ, ಲೋಕಾಭಿಪ್ರಾಯ ತಿಳಿದು ಬರುವ ವರೆಗೆ ಯಾವದೇ ನಿರ್ಣಯ ಕೈಕೊಳ್ಳಬಾರದಾಗಿಯೂ ಅವರಿಗೆ ಸ್ಪಷ್ಟ ತಿಳಿಸಬೇಕು

ಅದಲ್ಲದೆ ಯಾವದೊಂದು ನಿರ್ಣಯ ಕೂಡಲೆ ಆಗುವದವಶ್ಯವೆಂದು ಅಧಿಕಾರಿಗಳು ಹಟ ಹಿಡಿದು ಅಧಿಕಾರೇತರ ಗೃಹಸ್ಥರ ಅಭಿಪ್ರಾಯ ಕೇಳಿಕೊಂಡಲ್ಲಿ, ಆ ಗೃಹಸ್ಥರು ಏನೂ ಅಭಿಪ್ರಾಯ ಕೊಡಬಾರದಾಗಿಯೂ, ಸರಕಾರದವರು ಮುಂದೆ ನಿರ್ಣಯದಲ್ಲಿ ಏನೇ ಮಾಡಬಹುದಾದ ತಿದ್ದುಪಡಿಗಳಿಗೆ ಜನತೆಯು ಎಳ್ಳಷ್ಟೂ ಬೆಂಬಲವಿಲ್ಲೆಂದು ಸ್ಪಷ್ಟ ಮಾಡಿ ಚರ್ಚೆಯಲ್ಲಿ ಭಾಗ ವಹಿಸಬಾರದೆಂತಲೂ ನಿಮಂತ್ರಿತ ಗೃಹಸ್ಥರಿಗೆ ಈ ಸಭೆಯು ತಿಳಿಸುತ್ತದೆ"

ಬೆಳಗಾಂವಿಯ ಸಭೆಗೆ ರಾ॥ರಾ॥ ಸುಬ್ರಾವ ಹಳದೀಪುರ, ಮಹಾಬಲೇಶ್ವರ ಭಟ್ಟ ಗೋಪಿ, ಶೇಷಗಿರಿರಾವ ಕೇಶನ್ನವರ, ಸುಂದರರಾವ ಪಂಡಿತ, ರಾಘವೇಂದ್ರರಾವ ಬಸರೂರ, ಗಣ

ನೋಟೀಸು.

ಕಾರವಾರ ಮ್ಯುನಿಸಿಪಾಲಿಟಿಯವರು 1935 ನೇ ಇಸ್ವಿಯಲ್ಲಿ ರಸ್ತೆಯ ಮೇಲೆ ನೀರು ಹಾಕುವದಕ್ಕೆ ತಕ್ಕೊಂಡ 1935ನೇ Model Studbaker ಮೋಟರ ಟ್ರಕ್ chassis (ಲೋಖಂಡಿ ಪತ್ರಗಳ ನೀರಿನ ಟಾಕಿ ವ ನೀರು ಎಳೆಯುವ ಇಂಜಿನ ಪಂಪು ಹೊರತುಪಡಿಸಿ) ತಾರೀಕು 5—1—1942ನೇ ಸೋಮವಾರ ದಿವಸ ಮಧ್ಯಾನ್ಹ ಘಂಟೆ 3 ಕ್ಕೆ ಸರಿಯಾಗಿ ಕಾರವಾರ ಮ್ಯುನಿಸಿಪಲ್ ಆಫೀಸಿನಲ್ಲಿ ಬಹಿರಂಗವಾಗಿ ಲಿಲಾವು ಮಾಡಲ್ಪಡುವದು ಸದ್ರಿ chassis ಲಿಲಾವಿಗೆ ಪಡಕೊಳ್ಳಲಿಚ್ಛಿಸುವವರು ಸದ್ರಿ ದಿವಸ ಸದ್ರಿ ಹೊತ್ತಿಗೆ ಸರಿಯಾಗಿ ಮ್ಯುನಿಸಿಪಲ್ ಆಫೀಸಿನಲ್ಲಿ ಬಂದು ಸವಾಲು ಮಾಡಬಹುದು ಸವಾಲಿನ ಮೂರು ಬಾರ ಕಾಯಂ ಮಾಡಿದ ಕೂಡಲೆ ಸವಾಲದಾರರು ಸವಾಲಿನ ಪೂರಾ ರಕಮು ಒಂದೇ ಗಂಟನಿಂದ ವಸೂಲ ಕೊಡಬೇಕು ಈ ಬಗ್ಗೆ ಬೇಕಾದ ವಿಶೇಷ ಮಾಹಿತಿ ಮ್ಯುನಿಸಿಪಲ್ ಆಫೀಸಿನಲ್ಲಿ ಆಫೀಸಹೊತ್ತಿಗೆ ಬಂದು ಪಡಕೊಳ್ಳಬಹುದು

ಮ್ಯುನಿಸಿಪಲ್ ಆಫೀಸ,
ಕಾರವಾರ
19—12—1941

G. S. TELANG,
PRESIDENT,
Karwar
Municipality

ಸ್ಥಳ-ಬದಲಾವಣೆ.

ಕರ್ನಾಟಕ ಮೆಡಿಕಲ್ ಸಪ್ಲಾಯರ್ಸ, ಕುಮಟಾ.

ನಾವು ನಮ್ಮ ದುಕಾನವನ್ನು ಶ್ರೀ ವ್ಯಾಸ ದೇವಸ್ಥಾನದ ಬಳಿಯಿಂದ ಬಂದರ ರಸ್ತೆಯ ಮೇಲೆ **ರಾ॥ ಚಿತ್ರಿಗಿ ವಾಸುದೇವ ಶಾನಭಾಗರ ವಖಾರಿಯ ಮಾಳಿಗೆಯ** ಮೇಲೆ ಸ್ಥಳಾಂತರಿಸಿದ್ದೇವೆ

ಜಿ. ಡಿ. ಕುಂಬದಕೋಣ



ಪತ್ರಾವ ವಾಸೂದ ಮತ್ತು ಶಿವರಾವ ರಾವ್ ಈ ೭ ಮಂದಿಗೆ ನಿಮಂತ್ರಿಸಲಾಗಿತ್ತೆಂದು ತಿಳಿಯುತ್ತದೆ ಅವರಲ್ಲಿ ಮೊದಲಿನ ನಾಲ್ವರು ಮಾತ್ರ ಸಭೆಗೆ ಹೋಗಿದ್ದರು ಊರ ಸುತ್ತಲಿನ ಹಾಗೂ ಕಾಡಿನ ಭೂಮಿಯ ಸುತ್ತ ಮುತ್ತಲಿನ ಬಿಟ್ಟವನ್ನು ಸ್ವಚ್ಛಗೊಳಿಸಿಕೊಳ್ಳಲು ಜನರಿಗೆ ಕೊಟ್ಟ ಸವಲತ್ತನ್ನು ಸಂಕ್ಷಿಪ್ತದಲ್ಲಿ ತರಬೇಕೆಂತಲೂ ಸಾಗವಾನಿ ಗಿಡಗಳ ನೆಡುವಿಕೆಯ ಸಂಬಂಧವಾಗಿ ಹೇರಲ್ಪಟ್ಟ ನಿರ್ಬಂಧಗಳನ್ನು ರದ್ದುಗೊಳಿಸಬೇಕೆಂತಲೂ ಜಂಗಲ ಅಧಿಕಾರಿಗಳು ಮುಂದೆ ತಂದ ಸೂಚನೆಗಳಷ್ಟೇ ಸಭೆಯ ಕಾರ್ಯಕ್ರಮ ಪತ್ರಿಕೆಯಲ್ಲಿ ಕಾಣುತ್ತಿದ್ದವಂತೆ ಜಂಗಲ ಅಧಿಕಾರಿಗಳಿಗೆಯಾವದೇ ನಿರ್ಬಂಧವಿಲ್ಲದ ಸ್ವರಾಜ್ಯ ಬೇಕಿತ್ತು ಅವರಿಗೆ ಅಂಥ ಸ್ವರಾಜ್ಯ ಕೊಟ್ಟರೆ ಜನರ ಮೇಲೆ ದೇಶಾಂತರ ಮಾಡುವ ಪ್ರಸಂಗ ಬರುವದು ಖಂಡಿತವೆಂದು ಅರಿತಿರುವ ಲೋಕಪ್ರತಿನಿಧಿಗಳು ಆ ಸ್ವರಾಜ್ಯ ದಾನಕ್ಕೆ ಸಮ್ಮತಿಸುವದು ಹೇಗೆ ? ಆದ್ದರಿಂದ ನಾಲ್ಕೂ ಜನ ಲೋಕಪ್ರತಿನಿಧಿಗಳು ಜಂಗಲ ಅಧಿಕಾರಿಗಳ ಸೂಚನೆಗಳನ್ನು ಕಡುತರವಾಗಿ ವಿರೋಧಿಸಿ, ಕೊಂಗ್ರೆಸ ಸರಕಾರದ ರಾಜ್ಯದಲ್ಲಿ ಯಾವದೇ ತಿದ್ದುಪಡಿ ಮಾಡಲಿಕ್ಕೆ ತಾವು ಒಪ್ಪಿಗೆ ಕೊಡಲಾರೆವೆಂದು ಖಂಡತುಂಡವಾಗಿ ಹೇಳಿದರು ಆ ಮೇಲೆ ತುಸು ಚರ್ಚೆಯಾಗಿ, ಸರಕಾರಿ ಅಧಿಕಾರಿಗಳು ತಮ್ಮ ನಿಶ್ಚಿತ ಸೂಚನೆಗಳನ್ನು ತಿರಸ್ಕರಿಸಿ ಅಧಿಕಾರೇತರ ಪ್ರತಿನಿಧಿಗಳಿಗೆ ಕಳಿಸಿಕೊಡಬೇಕಾಗಿಯೂ, ಅಧಿಕಾರೇತರರು ಅವನ್ನು ಜನರ ಮುಂದಿಟ್ಟು ಲೋಕಮತವನ್ನು ಕಂಡು ಹಿಡಿಯಬೇಕೆಂತಲೂ, ಅಲ್ಲಿಯ ವರೆಗೆ ಯಾವದೇ ನಿರ್ಣಯ ಇಲ್ಲವೆ ಕ್ರಮ ಕೈಕೊಳ್ಳಬಾರದಾಗಿಯೂ ಇತ್ತಟ್ಟಿನವರ ಒಪ್ಪಿಗೆಯಿಂದ ಗೊತ್ತಾಯಿತು, ಮತ್ತು ಸಭೆಯ ಸಮಾಪ್ತಿಯಾಯಿತು

ಆದರೆ ಅಧಿಕಾರಿಗಳು ಬೆಳಗಾಂವಿಯ ಸಭೆಯಲ್ಲಿ ಪರಸ್ಪರರ ಒಪ್ಪಿಗೆಯಿಂದ ನಿಶ್ಚಿತವಾದ ಕ್ರಮವನ್ನು ಅನುಸರಿಸಲು ಒಪ್ಪುವದಿಲ್ಲೋ ಏನೋ! ಜಿಲ್ಲಾಧಿಕಾರಿಗಳಾದ ಮಿ॥ ಬಟ್ಲ್ಯಾರರವರು ಬೆಳಗಾಂವಿಸಭೆಗೆ ಹೋಗಿದ್ದ ಲೋಕ ಪ್ರತಿನಿಧಿಗಳಿಗೆ ಅಂದರೆ ರಾ॥ ಹಳದೀಪುರ, ಕೇಶವೈನ, ಗೋ[illegible] ಮತ್ತು ಪಂಡಿತ ಇವರಿಗೆ ಪತ್ರ ಬರೆದು,/ತಮಗೆ ಭೆಟ್ಟಿಯಾಗಬೇಕೆಂತಲೂ, ಜಂಗಲ ಸವಲತ್ತುಗಳ ಕುರಿತು ತಮ್ಮ ಸೂಚನೆಗಳನ್ನು ಸರಕಾರದ ಕಡೆ ಕಳಿಸಿಕೊಡುವ ಮುಂಚೆ ತಾವು ನಿಮಂತ್ರಿತ ಮಹಾನುಭಾವರೊಡನೆ ಅವುಗಳ ಬಗ್ಗೆ ಚರ್ಚಿಸಬಯಸುತ್ತೇವೆಂತಲೂ ತಿಳಿಸಿದ್ದಾರಂತೆ ಬೆಳಗಾಂವಿಯಲ್ಲಾದ ನಿರ್ಣಯಕ್ಕೂ, ಜಿಲ್ಲಾಧಿಕಾರಿಗಳ ಈ ನಡತೆಗೂ ಇರುವ ವಿಸಂಗತಿಯನ್ನು ಕಂಡು ನಿಮಂತ್ರಿತ ಲೋಕಪ್ರತಿನಿಧಿಗಳಿಗೆ ಬಹಳ ಆಶ್ಚರ್ಯವಾಗಿದೆ ಜಿಲ್ಲಾಧಿಕಾರಿಗಳನ್ನು ಕಾಣುವ ಮುಂಚೆ ರೈತ ವರ್ಗದ ಮುಂದಾಳುಗಳ ಕೂಡ ಆಲೋಚನೆ ಮಾಡಿ, ಜಿಲ್ಲಾಧಿಕಾರಿಗಳ ಕೂಡ ಮಾತುಕತೆಯಾಡುವಲ್ಲಾಗಲಿ ಮುಂದೆ ಸಭೆಯಲ್ಲಾಗಲಿ ಯಾವ ಧೋರಣೆ ಇಟ್ಟುಕೊಂಡು ನಡೆಯಬೇಕೆಂಬ ನಿರ್ಣಯಿಸಿಕೊಳ್ಳುವದಕ್ಕೆ ರಾ॥ ರಾ॥ ಕೇಶವೈನ ಮತ್ತು ಸುಂದರರಾವ ಪಂಡಿತ ಇವರು ನಾಳೆದು ತಾ ೨೩ನೇಗೆ ಮಧ್ಯಾಹ್ನ ಇಲ್ಲಿಯ ಜಿಲ್ಲಾ ಲೋಕಲ್ ಬೋರ್ಡಿನ ಕಚೇರಿಯಲ್ಲಿ ಲೋಕಪ್ರಮುಖರ ಸಭೆಯನ್ನು ಕರೆದಿದ್ದಾರೆ ಲೋಕಪ್ರಮುಖರು ತಮ್ಮ ಕಡೆಯಿಂದ ಆದಷ್ಟು ಜನಹಿತ ರಕ್ಷಣೆಯ ಪ್ರಯತ್ನವನ್ನು ಮಾಡೇ ಮಾಡ್ಯಾರು ಆದರೆ ಅಷ್ಟರಿಂದಲೇ ಜನರು ಸಮಾಧಾನ ಪಟ್ಟು ಸ್ವಸ್ಥ ಕೂಡ್ರುವಂತಾಗಿ ವಿಸಂಗತಿಯಿದೆ ಅವರು ಅಲ್ಲಲ್ಲಿ ಸಭೆ ಸೇರಿ ಸರಕಾರಿ ಅಧಿಕಾರಿಗಳ ಗಾಲಿಬಿಯ ಹಾಗೂ ಜಂಗಲ ಇಲಾಖೆಯವರ ಕಾರಸ್ಥಾನಗಳ ನಿಷೇಧ ಮಾಡಬೇಕು, ಮತ್ತು ಲೋಕಮತದ ತೀವ್ರತೆಯನ್ನು ಸರಕಾರದವರ ನಿದರ್ಶನಕ್ಕೆ ತರುವಕೊಡಬೇಕು ಅಂದರೆ ಮಾತ್ರ ಮುಂದಾಳುಗಳ ಪ್ರಯತ್ನಕ್ಕೆ ಯಶಸ್ಸು ಪ್ರಾಪ್ತವಾದೀತು

ಕಲಘಟಗಿಯಲ್ಲಿ ಪೋಸ್ಟಮಾಸ್ತರರಾಗಿರುವ ರಾ॥ ವೆಂಕಟದಾಸ ಕಾಮತರವರು ಈ ತಿಂಗಳ ೨ನೇ ವಾರದಲ್ಲಿ ಒಂದು ಮದವೆಯ ಬಗ್ಗೆ ರಜೆ ತಕ್ಕೊಂಡು ಇಲ್ಲಿ ಬಂದಿದ್ದರು ಆಗ ಮದುವೆಯ ಚಪ್ಪರದಲ್ಲೂ, ಬೇರೆ ಕಡೆಗಳಲ್ಲೂ ಅವರ ಕೀರ್ತನೆಗಳಾದವು. ರಾ॥ ಕಾಮತರು ಇತ್ತೀಚಿಗಾಗಿಯೇ ಕೀರ್ತನ ಕಲೆಯ ಅಭ್ಯಾಸ ಮಾಡಿದ್ದಾರೆ ಇನ್ನೂ ಅಭ್ಯಾಸ ಮಾಡಿ ಈ ಕಲೆಯನ್ನು ಹಸ್ತಗತ ಮಾಡಿಕೊಳ್ಳಬೇಕೆಂದು ಅವರ ಮನೀಷೆಯುಂಟು. ಅವರ ಮನೀಷೆ ಕೈಗೂಡುವದೆಂದು ಹೇಳಬಹುದು

ವಾರ್ತೆಗಳು.

—ಮುಂಬಯಿಯ ಸರಾಫಕಟ್ಟೆಯಲ್ಲಿ ಚಿನ್ನ-ಬೆಳ್ಳಿಗಳ ದರ ಏರುತ್ತಿದೆ. ಜಪಾನದ ಯುದ್ಧವಾರ್ತೆ ಹಬ್ಬಿದಂದಿನಿಂದ ಚಿನ್ನ ಖರೀದಿಮಾಡುವವರ ಸಂಖ್ಯೆ ಹೆಚ್ಚು. ಈಗ ಚಿನ್ನದ ದರ ತೊಲೆಗೆ ರೂ ೪೯॥ ಯಂತೆ ಉಂಟು ಇನ್ನೂ ಏರಿಕೆಯ ಲಕ್ಷಣಗಳೇ! ಪವನಿನ ದರ ರೂ ೩೨ಕ್ಕೆ ಮೇಲ್ಪಟ್ಟು ಉಂಟು ಇದೇ ಪ್ರಕಾರ ಬೆಳ್ಳಿಯ ದರವೂ ಏರಿಕೆಯದೇ! ೧೦೦ ತೊಲೆಯ ಗಟ್ಟಿ ೧ಕ್ಕೆ ರೂ. ೭೧ರ ತನಕ ಏರಿದೆ, ಅದು ಇನ್ನೂ ಏರಿಕೆಯಲ್ಲಿದೆ.

—ಮುಂಬಯಿಯಲ್ಲಿ ಪಂ॥ ಜವಾಹಿರಲಾಲರಿಗೂ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಮೌ॥ ಅಬುಲ ಕಲಮ ಆಝಾದರಿಗೂ ಅದ್ಭುತವಾದ ಸ್ವಾಗತ ದೊರೆಯಿತು ಪಂ॥ ಜವಾಹಿರಲಾಲರಿಗೆ ಸ್ಟೇಶನಿನ ಮೇಲೆ ಕೂಡಿದ ಜನಸಂದಣಿಯಿಂದ ಹೊರಬರಲಿಕ್ಕೆ ದೀರ್ಘಕಾಲ ತಗಲಿತು ಆಝಾದ ಬೈಲಲ್ಲಿ ಸೇರಿದ ಸಭೆಯಲ್ಲಿ ೧ಲಕ್ಷ ಜನರು ಕೂಡಿದ್ದರು ಸಭೆಯಲ್ಲಿ ಗೊಂದಲವಾಗಲು, ಪಂ॥ ಜವಾಹಿರಲಾಲರು ಉಚ್ಚಾಸನದಿಂದ ಎರಡು ಬಾರಿ ಕೆಳಗಿಳಿದು ಜನಸಂದಣಿಯನ್ನು ಶಾಂತಗೊಳಿಸಿದರು ಉಭಯತರೂ ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆಗಾಗಿ ಶನಿವಾರ ಮುಂಬಯಿಯಿಂದ ಬಾರ್ಡೋಲಿಗೆ ಹೊರಟುಹೋಗಿದ್ದಾರೆ

— ಶ್ರೀ॥ ಸುಭಾಷಚಂದ್ರ ಬೋಸರ ಅಣ್ಣಂದಿರಾದ ಶ್ರೀ॥ ಶರಚ್ಚಂದ್ರ ಬೋಸರಿಗೂ ಜಪಾನ ಸರಕಾರಕ್ಕೂ ಸಂಬಂಧವಿರುವದೆಂದು ಹಿಂದುಸ್ಥಾನ ಸರಕಾರವು ತಿಳಕೊಂಡು ಶ್ರೀ॥ ಶರಚ್ಚಂದ್ರ ಬೋಸರಿಗೆ ನಿರ್ಬಂಧಿಸಿಟ್ಟದೆ ಈ ಕುರಿತು ಬಂಗಾಲದ ಮುಖ್ಯ ಪ್ರಧಾನರಾದ ಮೌ॥ ಫಜಲುಲ ಹಕ್ಕರವರು ಸರ್ವಾಧಿಪತಿ ಲಿನಲಿಥಗೋ ದೊರೆಗಳಿಗೆ ಕಂಡು ಶ್ರೀ॥ ಶರಚ್ಚಂದ್ರ ಬೋಸರ ಬಿಡುಗಡೆಯ ಬಗ್ಗೆ ರಾಯಭಾರ ನಡಿಸಿದರು.

— ರಾಶಿಗಟ್ಟಲೆ ಕಾಳುಕಡಿಯಿದ್ದಾಗ್ಯೂ ಅದನ್ನು ಜನರಿಗೆ ಮಾರಾಟ ಮಾಡದೆ ಇಟ್ಟುಕೊಂಡ ಬಗ್ಗೆ ಭಾರತ ರಕ್ಷಣ ಕಾನೂನಿನನ್ವಯ ಝಾಂಶಿಯಲ್ಲಿ ೩ ಮಂದಿ ವರ್ತಕರ ಮೇಲೆ ಖಟ್ಲೆ ನಡೆದಿದೆ.

— ಕಲಕತ್ತೆಯನ್ನು ಗಂಡಾಂತರ ಪ್ರದೇಶವೆಂದು ಸರಕಾರವು ಘೋಷಿಸುವ ಸಂಭವವುಂಟು ಆದರಿಂದ ತಮ್ಮ ಕುಟುಂಬಗಳನ್ನು ಹಳ್ಳಿಗಳಿಗೆ ಒಯ್ಯುವಬಗ್ಗೆ ಸರಕಾರಿ ನೌಕರರಿಗೆಲ್ಲ ೧ ತಿಂಗಳ ಸಂಬಳವನ್ನು ಮುಂಗಡ ಕೊಡಬೇಕೆಂದು ಬಂಗಾಲಸರಕಾರದ ತೀರ್ಮಾನವಾಗಿದೆ ಕಲಕತ್ತೆಯಲ್ಲಿ ಹೌರಾ ಮತ್ತು ಸೀಲ್ದಾ ಹೀಗೆ ೨ ರೇಲ್ವೆ ಸ್ಟೇಶನುಗಳಿವೆ ಇವೆರಡೂ ಸ್ಟೇಶನಗಳಲ್ಲಿ ಜನಸಂದಣಿ, ಹೌರಾ ಸಂಕದ ಮೇಲಂತು ಯಾವದೇ ವಾಹನ ಒಯ್ಯಲು ಸಾಧ್ಯವಿಲ್ಲ, ಪೋಲೀಸರು ಗದ್ದಲವಾಗದಂತೆ ಜನಸಂದಣಿಯನ್ನು ಕ್ರಮಗೊಳಿಸುತ್ತಿದ್ದಾರೆ ಹಿಂದುಸ್ಥಾನ ಸರಕಾರವು ಕಲಕತ್ತೆಯ ವಿಶ್ವವಿದ್ಯಾಲಯಕ್ಕೆ ಒಂದು ಹುಕುಮನ್ನು ಹೊರಡಿಸಿ ವಿದ್ಯಾಲಯದ ಕಟ್ಟಡಗಳನ್ನು ಹಿಂದುಸ್ಥಾನ ಸರಕಾರದ ಸ್ವಾಧೀನಗೊಳಿಸಬೇಕೆಂದು ವಿಧಿಸಿದೆ. ಈ ಹುಕುಮನ್ನು ವಿದ್ಯಾಲಯದ ಕಾರ್ಯಕಾರಿಮಂಡಳದವರು ಆಲೋಚಿಸುತ್ತಿದ್ದಾರೆ

—ಸಿಂಧ ಪ್ರಾಂತದೊಳಗೆ ಪ್ರಧಾನ ಮಂಡಳಕ್ಕೂ ಗವ್ಹರ್ನರರಿಗೂ ಮತಭೇದವಾಗಿ ಪರಿಸ್ಥಿತಿ ವಿಕೋಪಕ್ಕೆ ಮುಟ್ಟತೊಡಗಿದೆ ಶನಿವಾರ ಎಸೆಂಬ್ಲಿಯ ಸಭೆಯಲ್ಲಿ ಮುಖ್ಯ ಮಂತ್ರಿಗಳಾದ ಖಾನಬಹಾದ್ದೂರ ಅಲ್ಲಾಬಕ್ಷರವರು ಭಾಷಣ ಮಾಡಿ ಗವ್ಹರ್ನರರು ತಮ್ಮ ಸಲಹೆಯಂತೆ ನಡಕೊಳ್ಳುವದಿಲ್ಲವಾಗಿ ಗವ್ಹರ್ನರರ ಮೇಲೆ ಆಕ್ಷೇಪ ಮಾಡಿದರು ಗವ್ಹರ್ನರರು ತಮ್ಮದೇ ಹಟವನ್ನು ದೃಢಪಡಿಸಿದ್ದಲ್ಲಿ ಸಿಂಧ ಪ್ರಾಂತದೊಳಗೆ ಬಿಕ್ಕಟ್ಟುಂಟಾಗುವದಾಗಿ ಮುಂಜಾಗ್ರತೆಯನ್ನೂ ಕೊಟ್ಟಿದ್ದಾರೆ

ಗಾಬರಿಗೊಳ್ಳಬೇಡಿ, ಸಾವಧಾನಚಿತ್ತದಿಂದಿರ್ರಿ!

(೬ನೇ ಪಾನಿನಿಂದ ಮುಂದುವರಿದದ್ದು)

ಸಭೆಯನ್ನು ತಮ್ಮ ವಿಶ್ವಾಸದಲ್ಲಿ ಸೇರ್ಪಡಿಸಿಕೊಳ್ಳಬೇಕೆಂದು ಮುಖ್ಯ ಮಂತ್ರಿ ಮಿ॥ ಚರ್ಚಿಲ್ಲರಮೇಲೆ ಒತ್ತಾಯವಾಗಹತ್ತಿದೆ ಸಾಮ್ರಾಜ್ಯ ಸರಕಾರವು ಅಲಿಪ್ತವಾಗಿ ಪರಸ್ಪರ ಜನರ ಮೇಲೆ ಹವಾಲೆ ಹಾಕಿ ಸುಮ್ಮನುಳಿಯುವದು ತರವಲ್ಲವಾಗಿ ಬ್ರಿಟನಿನೊಳಗಿನ ಲೋಕಮತ. ಸರ್ವಾಧಿಪತಿ ಲಿನಲಿಥಗೋ ದೊರೆಗಳು ಕೊಂಗ್ರೆಸ ಕಾರ್ಯಕಾರಿ ಮಂಡಳದ ಅಭಿಪ್ರಾಯಗಳನ್ನು ತಿಳಕೊಳ್ಳಬಯಸುತ್ತಾರಂತೆ ಹಿಂದುಸ್ಥಾನದ ಒಗ್ಗೆ ಏನಾದರೊಂದು ಸಮಾಧಾನಕರವಾದ ವ್ಯವಸ್ಥೆಯನ್ನು ರೂಢಗೊಳಿಸಬೇಕೆಂಬ ವಾತಾವರಣ ಹಬ್ಬಿಕೊಂಡಿದೆ. ಹಿಂದುಸ್ಥಾನದೊಳಗಿನ ರಾಜಕಾರಣವು ಯುದ್ಧಕಾರಣದ ಅಂಗವಾಗಿ ಮಾರ್ಪಟವಾಗುತ್ತಿದೆ ಇದನ್ನು ಸಹ ಒದುಗರು ಲಕ್ಷದಲ್ಲಿಡತಕ್ಕದ್ದು

ಕೊನೆಗೆ ಒಂದು ಮಾತನ್ನು ಹೇಳಿ ಇಂದಿನ ಲೇಖ ಮುಗಿಸುತ್ತೇನೆ ಅಮೇರಿಕೆಯ ಯುದ್ಧಪ್ರವೇಶದಿಂದ ಮಾಧ್ಯಸ್ಥಿಕೆಯ ಭೂಮಿಕೆಯನ್ನು ವಹಿಸಬಹುದಾದ ಜನಾಂಗವೇ ಇಲ್ಲದಂತಾಗಿದೆಂದು ಮಹಾತ್ಮರು ವಿದೇಶದ ಪ್ರಶ್ನೆಗಾರರಿಗೆ ತಿಳಿಸಿದ್ದಾರೆ ಯುಧ್ಯಮಾನ ಜನಾಂಗಗಳಲ್ಲಿರುವ ವಿವಾದ ವಿಷಯಗಳನ್ನು ತಿಳಕೊಂಡು ಶಾಂತತೆ ಮಾಡುವ ಪ್ರಬಲಪುರುಷನೇ ಇಲ್ಲದಂತಾಗಿದೆ. ಮಹಾಭಾರತ ಕಾಲದಲ್ಲಿ ಒದಗಿದಂತೆ ಈಗ ಪರಿಸ್ಥಿತಿಯುಂಟಾಗಿದೆ. ಹಿಟ್ಲರ-ವಾದ ನಾಶವಾಗಬೇಕೆಂದು ಬ್ರಿಟನ-ಅಮೇರಿಕೆಯವರೂ, ಬ್ರಿಟನ-ಅಮೇರಿಕೆಯವರ ಸಾಮ್ರಾಜ್ಯ-ವಾದ ನಾಶವಾಗಬೇಕೆಂದು ಜರ್ಮನಿ-ಇಟಾಲಿ-ಜಪಾನದವರೂ ಹೋರಾಟ ನಡಿಸುತ್ತಿದ್ದಾರೆ ಯಾರ ನಾಶವಾಗುವದು, ಎಷ್ಟು ನಾಶವಾಗುವದು, ಯಾರು ಉಳಿಯುವರು, ಏನು ಉಳಿಯುವದು ಆ ಸರ್ವಸೂತ್ರಚಾಲಕನಿಗೇ ಗೋಚರ !

ಇತ್ತ ಲಕ್ಷಗೊಡಿರಿ! ಇತ್ತ ಲಕ್ಷಗೊಡಿರಿ!!

ಅಗತ್ಯದ ಸೂಚನೆ.

ಸಧ್ಯ ಚಾಲತಿಯಲ್ಲಿ ಇಲ್ಲದ ವಿಕ್ಟೋರಿಯಾ, ವಿಲಿಯಂ, ತಂಡೆರಾಣಿ ಛಾಪೆಯ ರೂಪಾಯಿ, ಅರ್ಧ ರೂಪಾಯಿ ಮತ್ತು ಗೋವಾ, ಅಬ್ಬಾರ ಬಿಕಾನೇರ ಸ್ಟೇಟಿನ ರೂಪಾಯಿ ವಗೈರೆ ನಾಣ್ಯಗಳು ಯೋಗ್ಯ ದರದಿಂದ ಕೊಳ್ಳಲ್ಪಡುವವು.

— ಇಂದೇ ವಿಚಾರಿಸಿರಿ —

ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ.

ಹಳ್ಳೀ ಕೈಗಾರಿಕೆಗಳಿಗೆ ಪ್ರೋತ್ಸಾಹ.

ಭಾರತದ ೩ ಕೋಟಿ ೮೦ ಲಕ್ಷದಷ್ಟು ಜನರು ಹಳ್ಳಿಯ ಹಾಗೂ ಚಿಕ್ಕ ಪುಟ್ಟ ಉದ್ಯೋಗಗಳಿಂದ ಜೀವನ ಸಾಗಿಸುತ್ತಾರೆಂದು ಕಂಡು ಬಂದಿದೆ ದೊಡ್ಡ ದೊಡ್ಡ ಉದ್ಯೋಗ ಕಾರಖಾನೆಗಳಲ್ಲಿ ಸೇರಿ ಉದರ ನಿರ್ವಾಹ ಮಾಡುವವರ ಸಂಖ್ಯೆ ಬರೇ ೧೮ ಲಕ್ಷವಿರುತ್ತದೆ ಇದೇ ಜನಸಂಖ್ಯೆಯ ಸರಾಸರಿ [illegible] ಜನರು ಬೇಸಾಯದ ಮೇಲೆ ಅವಲಂಬಿಸಿರುತ್ತಾರೆ ಜಗತ್ತಿನಲ್ಲಿ ಉದ್ಯೋಗಗಳ ಬೆಳವಣಿಗೆ ಭರದಿಂದ ನಡೆದಿರುವ ಕಾಲದಲ್ಲಿ ಈ ಅಂಕಿ ಸಂಖ್ಯೆಗಳನ್ನು ಕಂಡರೆ ಯಾರೂ ಬೆಚ್ಚಿಬೀಳದಿರಲಾರರು

ಕಳೆದ ೧೦ ವರ್ಷಗಳಲ್ಲಿ ಭಾರತವರ್ಷದಲ್ಲಿ ಉದ್ಯೋಗಗಳ ಅಭಿವೃದ್ಧಿ ಬಹಳ ಆಗಿದೆ ಈಗ ನಡೆದಿರುವ ಯುದ್ಧದಿಂದಂತೂ ಇದಕ್ಕೆ ಒಳ್ಳೇ ಪುಟ ದೊರೆತಿದೆ ಪ್ರತಿಯೊಂದು ಕಡೆ ಹೊಸ ಹೊಸ ಉದ್ಯೋಗ ಉದ್ದಿಮೆಗಳು ತಲೆದೋರುತ್ತಿವೆ ಕೆಲವು ಕಾಲದಲ್ಲೀ ಭಾರತವು ಕೂಡ ಜಗತ್ತಿನ ಔದ್ಯೋಗಿಕ ಮಹಾರಾಷ್ಟ್ರಗಳಲ್ಲಿ ಸೇರ್ಪಡೆಯಾಗಬಹುದೆಂದು ಅಪೇಕ್ಷಿಸಲಡ್ಡಿಯಿಲ್ಲ

ಆದರೆ ಭಾರತವು ಪೂರ್ಣವಾಗಿ ಉದ್ಯೋಗಿಗಳ ತವರುಮನೆಯಾಗುವ ಪೂರ್ವದಲ್ಲೇ ಒದಗಬಹುದಾದ ಸ್ಥಿತ್ಯಂತರಗಳನ್ನು ಮರೆಯಲಾಗದು ಈ ಸಂಕ್ರಮಣ ಕಾಲದಲ್ಲಿ ಹಳ್ಳಿಗಳ ಸಣ್ಣ ಪುಟ್ಟ ಉದ್ದಿಮೆಗಳನ್ನೂ ಕೈಗಾರಿಕೆಗಳನ್ನೂ ಕಾಪಾಡಿಕೊಳ್ಳಲಿಕ್ಕೆ ಸಂಘಟಿತ ಪ್ರಯತ್ನ ಮಾಡದಿದ್ದರೆ ಅವುಗಳ ಬಹಳ ಹಾನಿಯಾಗದಿರಲಾರದು

ಹಳ್ಳಿಯ ಈ ಕೈಗಾರಿಕೆ ಉದ್ದಿಮೆಗಳಿಗೆ ಸರಕಾರದವರೂ ಸಾರ್ವಜನಿಕರೂ ತಕ್ಕ ಪ್ರೋತ್ಸಾಹ ಕೊಡಬೇಕಾದುದಕ್ಕೆ ಇನ್ನೊಂದು ಕಾರಣವುಂಟು ಅನಾದಿ ಕಾಲದಿಂದ ಹಿಂದಭೂಮಿಯು ಕಲೆ–ಕೈಗಾರಿಕೆಗಳ ಬಗ್ಗೆ ಜಗತ್ಪ್ರಸಿದ್ಧವಾಗಿದೆ ಇಲ್ಲಿ ಕೈಯಿಂದ ತಯಾರಾಗುತ್ತಿದ್ದ ಅರಿವೆ ಮಸ್ಲಿನ ದಸ್ತಿದಂತದ ಸಾಮಾನು, ಕತ್ತಿಗೆಯ ಸಾಮಾನು ಕಟ್ಟಿಗೆಯ ಸಾಮಾನು ಮೊದಲಾದ ಜಿನಸುಗಳಿಗೆ ಎಲ್ಲೆಲ್ಲಿಯೂ ಬೇಡಿಕೆಯಿತ್ತು ಅವುಗಳ ಸೊಬಗಿಗೂ ನಾಜೂಕಿಗೂ ವಿದೇಶಿ ಜನರು ಬಹಳ ಮರುಳಾಗಿದ್ದರು ಮುಂದೆ ಯಂತ್ರಯುಗಕ್ಕೆ ಪ್ರಾರಂಭವಾಗುತ್ತಲೇ ಯಂತ್ರಗಳಲ್ಲಿ ಸಿದ್ಧವಾಗುವ ಅಗ್ಗ ಸಾಮಾನು ಲೋಕಪ್ರಿಯವಾಗಿ, ಕೈಯಿಂದ ತಯಾರಾಗುವ ಕಷ್ಟಸಾಧ್ಯ ಸಾಮಾನುಗಳನ್ನು ಕೊಂಡುಕೊಳ್ಳುವ ಗಿರಾಕಿಗಳು ವಿರಳವಾದರು ಅದರ ಪರಿಣಾಮವಾಗಿ ಹಳ್ಳಿಯ ಮನೆ ಕೈಗಾರಿಕೆಗಳು ಈಗ ಪ್ರಾಯಶಃ ನಾಶವಾಗಿವೆ ರಾಷ್ಟ್ರದ ಕಲೆಯನ್ನೂ ಸಂಸ್ಕೃತಿಯನ್ನೂ ಉಳಿಸಿಕೊಳ್ಳುವದಕ್ಕಾಗಿ ಈ ಕಲೆ ಕೈಗಾರಿಕೆಗಳ ಪುನರುಜ್ಜೀವನ ಮಾಡುವದಗತ್ಯವುಂಟು ಕಾರಣ ಸರಕಾರದವರು ಈ ಬಗ್ಗೆ ಮುಂಬಯಿಯಲ್ಲಿ ಸರೋಜ ಶಹಾಂ ರಸ್ತೆಯ ಮಗ್ಗಲಿಗೆ ತೆರೆದಿರುವ ಹಳ್ಳಿಯ ಮತ್ತು ಚಿಕ್ಕ ಉದ್ದಿಮೆಗಳ ಉಗ್ರಾಣವು ಎರಡು ತರದಿಂದ ಪ್ರಯೋಜನಕಾರಿಯಾಗಿದೆ ಹಳ್ಳಿಯ ಕೈಗಾರಿಕೆಗಳಿಗೆ ಪೇಟೆಯನ್ನು ಒದಗಿಸಿ ಕೊಟ್ಟು ಅದು ಆ ಕೈಗಾರಿಕೆಗಳಿಗೆ ಸಹಾಯ ಮಾಡುತ್ತಿದೆ ಇದ್ದ ಪೇಟೆಗಳನ್ನು ಹಿಡಿದುಕೊಳ್ಳುವದಲ್ಲದೆ ಹೊಸ ಹೊಸ ಪೇಟೆಗಳನ್ನೂ ಅದು ಹುಡುಕಿ ಕೊಡುತ್ತಿದೆ ಕೈಗಾರಿಕೆ ಉದ್ದಿಮೆದಾರರಿಗೂ ಗಿರಾಕಿಗಳಿಗೂ ಅದು ಗಂಟು ಹಾಕಿಕೊಟ್ಟು ನಡುವಿನ ದಲಾಲರಿಗೆ ಕೊಡಬೇಕಾದ ಪ್ರತಿಫಲವನ್ನು ಅದು ತಪ್ಪಿಸುತ್ತಿದೆ

ಅದೇ ಮೇರೆಗೆ ಈ ಉಗ್ರಾಣವು ಬೇರೆ ಬೇರೆ ಜಾತಿಯ ವಸ್ತ್ರ ಮಾದರಿಯ ಸಾಮಾನುಗಳನ್ನು ಲೋಕಪ್ರಿಯ ಮಾಡಲು ಪ್ರಯತ್ನಿಸುತ್ತ, ಸಾರ್ವಜನಿಕರ ಅಭಿರುಚಿಯಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಕಾಲಕಾಲಕ್ಕೆ ಉದ್ದಿಮೆಗಾರರಿಗೆ ತಿಳಿಸುವ ಏರ್ಪಾಡನ್ನೂ ಮಾಡುತ್ತಿದೆ

ಮುಂಬಯಿಯೊಳಗಿನ ಈ ಉಗ್ರಾಣವನ್ನು ಕೇಂದ್ರ ಸಂಸ್ಥೆಯನ್ನಾಗಿ ಮಾಡಿ ಬೇರೆ ಬೇರೆ ಜಿಲ್ಲೆಗಳಲ್ಲಿ ಶಾಖಾ-ಉಗ್ರಾಣಗಳನ್ನು ತೆರೆಯಬೇಕೆಂದು ಸರಕಾರದವರ ಸಂಕಲ್ಪವಿದೆ ಉಗ್ರಾಣದಲ್ಲಿ ಹಳ್ಳಿಗರು ಕೈಯಿಂದ ತಯಾರಿಸಿದ ಗಂಧದ ಕತ್ತಿಗೆಯ ಸಾಮಾನು, ಕೊರೆದ ಸಾಮಾನು, ತುಂಬಿದ ಸಾಮಾನು, ಕೈ ಮಗ್ಗಗಳ ಮೇಲೆ ತಯಾರಿಸಿದ ಅರಿವೆ, ಉಣ್ಣೆಯ ಅರಿವೆಗಳು ಚರ್ಮದ ಸಾಮಾನುಗಳು ಮುಂತಾದವುಗಳೇ ಇಡಲ್ಪಡುತ್ತಿವೆ ಗ್ರೇಟ ಸೋಶಲ್ ಬಿಲ್ಡಿಂಗದ ಪ್ರಶಸ್ತ ಪ್ರದರ್ಶನದ ಕೋಣೆಯಲ್ಲಿಟ್ಟ ನಾನಾ ಬಗೆಯ ವಸ್ತುಗಳನ್ನು ನೋಡುವ ಸಂಧಿಯನ್ನು ಜನರೂ ಕೈಗಾರಿಕೆಗಳ ಅಭಿವೃದ್ಧಿಗಾಗಿ ಕಳಕಳಿಯುಳ್ಳ ಜನರೂ ಹೊಂದಬೇಕೆಂದು ಸೂಚನೆಯಿದೆ ಪ್ರಾಂತದೊಳಗಿನ ಕೈಮಗ್ಗದವರು ಮೊದಲಾದ ಕಲಾಜೀವಿಗಳು ತಮ್ಮ ಮಾದರಿ ಸಾಮಾನುಗಳನ್ನು ಕಳಿಸಿಕೊಟ್ಟು ಅವುಗಳ ಬೆಲೆಯನ್ನು ತಿಳಿಸಿದಲ್ಲಿ ಉಗ್ರಾಣದ ಅಧಿಕಾರಿಗಳು ಅವನ್ನು ಆನಂದದಿಂದ ಸ್ವೀಕರಿಸುವರು

* * *

ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್,

ಸ್ಥಾಪನೆ 1908

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂಪನಿದಾರರೂ, [illegible] ಬಹಳ [illegible] ಈ ಕಂಪನಿಯ ಹಣವು ಸರಕಾರಿ ಪ್ರೊ ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳೀಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದರೆ ಸಿಗುವದು

Kumta Agents
D K Nayak Bros
K N Nayak
Honavar Agent
R V, Prabhu

K. PadmanabhaRao & Sons,
BELGAUM
Chief Agents for
Karnatak Districts & S M States

ರಕ್ತಬಿಂದು

ಮಕ್ಕಳ ಮರಣವನ್ನು ತಪ್ಪಿಸುವದು.

ಏಜನ್ಸಿ ಕಲಕತ್ತಾ, ಮುಂಬಯಿ, ಮದ್ರಾಸ, ಬೆಂಗಳೂರು, ಮಂಗಳೂರು

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆದೊಡ್ಡಾಗುವಿಕೆ ಹಸುರು ನರಗಳು, ಕಾಮಿಲೆ
ಗಡ್ಡೆರೋಗ ಕಾಲೆ ರೋಗ, ಮೈ–ಕೈ ಬಾವುಗಳಿಗೆ ದಿವ್ಯೌಷಧ|

೧ ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ ೩

ಏತಕ್ಕೆ ಚಿಂತಿಸುವಿರಿ ?

ಆಸೇತುಹಿಮಾಚಲದ ವರೆಗೂ ೪೦
ವರುಷಗಳಿಂದ ಕೀರ್ತಿ ಪಡೆದಿರುವ
ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ
ವ್ಯಾಧಿಗಳಿಗೆ ಇದೊಂದೇ
ರಾಜಔಷಧವಾಗಿದೆ

ಡಾ| ಪಿ ಎನ್ ಶ್ರೀನಿವಾಸರಾವ,
ಲಿವ್ಹರ್ ಸ್ಪೆಶಲಿಸ್ಟ್
ಎಂ ಪಿ ಪ್ರಾಸಾದಿಕ ಔಷಧಾಲಯ,
ಶಿವಮೊಗ್ಗಾ

☞ ಇವರಲ್ಲಿ ಸಿಕ್ಕುವದು
ಶಿರ್ಸಿ ಏಜಂಟ —
ಸುಬ್ರಾಯ ಸೀತಾರಾಮ ಹೆಗಡೆ
ಕುಮಟೆಯ ಏಜಂಟ —
ದೇವಪ್ಪಾ ಅಯ್ಯಾ ನಾಯ್ಕ

ಇದನ್ನು ಪಾಂಡುರಂಗ ಕೃಷ್ಣ ಕಾನಭಾಗ (ಸಂಪಾದಕ) ಇವರು ತಮ್ಮ 'ಸ್ಟಾರ ಆಫ್ ಕೆನರಾ ಪ್ರೆಸ್ಸಿ'ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No B 1270

Monday, 29th December, 1941.

ವರ್ಷ ೨೪

ಕಾನಡಾವೃತ್ತ.

THE KANARA NEWS

ಸಂಚಿಕೆ ೨೫

ಪತ್ರದ ವರ್ಗಣಿ

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0
ಮನಿಯಾರ್ಡರಿನಿಂದ
ರೂ 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेंद्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಸ್ಮಾಲ ಪೈಕಾ (೧೫ ಏಮ್ ಉದ್ದ)
೬ ಸಾಲುಗಳವರೆಗೆ ರೂ.1 8 0
ಆ ನಂತರ ಪ್ರತಿಸಾಲಿಗೆ 0-3-0
ಹೆಡ್ಡಿಂಗದ ಸಾಲು ಎಷ್ಟು ಕೊಟ್ಟಿರುವರೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವರು.

-*(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೨೯ ಮಾಹೆ.ಡಿಸಂಬರ ಸನ್ ೧೯೪೧ನೇ ಇಸವಿ)*-


ಶ್ರೀಧೂತಪಾಪೇಶ್ವರ
ದ್ರಾಕ್ಷಾಸವ
ಚಳಿಗಾಲಕ್ಕಾಗಿ ಶಕ್ತಿವರ್ಧಕವೂ— ಪಾಚಕವೂ
ಆಪತ್ತಸ ದಮ್ಮು, ಕೆಮ್ಮು, ಮಲಬದ್ಧತೆಗಳಿಗೆ ಉತ್ತಮ ಗುಣಕಾರಿಯಾದದ್ದು
— ಟಾನಿಕ್ —
ಶ್ರೀಧೂತಪಾಪೇಶ್ವರ ಪನವೇಲ ಲಿಮಿಟೆಡ

ಶ್ರೀ ಧೂತಪಾಪೇಶ್ವರ ಪನವೇಲ, ಲಿ.,
ಕರ್ನಾಟಕ ಕೇಂದ್ರ- ಯುನ್ಯಾಟೆಡ್ ಏಜನ್ಸೀಜ, ಹುಬ್ಬಳ್ಳಿ.

ಕಾರವಾರ— ಮೆಸರ್ಸ ಮುಜುಮದಾರ-ಕಸಬೇಕರ ಬ್ರದರ್ಸ
ಅಂಕೋಲಾ:— ದಿ ಸ್ಟೇಶನರಿ ಡಿಪೋ
ಕುಮಟಾ:— ದೇವಪ್ಪಾ ಅಯ್ಯು ನಾಯ್ಕ.
ಹೊನ್ನಾವರ— ಮೆಸರ್ಸ ಕಲ್ಯಾಣಪುರ ಬ್ರದರ್ಸ.
ಶಿರಸಿ:— { ಶಿರಸಿ ಡ್ರಗ್ ಸ್ಟೋರ್ಸ
ಎಸ್. ಎಲ್ ಧಾಕಪ್ಪಾ ಎಂಡ್ ಸನ್ಸ
ಸಿದ್ದಾಪುರ.— ಮೆಸರ್ಸ ಶಾಮಯ್ಯನ ಬ್ರದರ್ಸ
ಹಳಿಯಾಳ:— ಎನ್. ಪಿ ಹಳ್ಳಿಕೇರಿ.

“ಸ್ಟಾರ ಆಫ್ ಕೆನರಾ ಪ್ರೆಸ್”,
ಕುಮಟಾ.

—*—

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಯಿಂದ ಬೇಕಾದ ನಮೂನೆಯ ಕಲರ ಪ್ರಿಂಟಿಂಗ ವಗೈರೆ ಸಣ್ಣ ದೊಡ್ಡ ಛಾಪಾ ಕೆಲಸಗಳೂ, ಪುಸ್ತಕ ಮುದ್ರಣವೂ, ರೂಲಿಂಗ ಬ್ಯಾಂಡಿಂಗ ಕೆಲಸವೂ ಉತ್ತಮವಾಗಿ ಸುಲಭ ದರದಲ್ಲಿ ತಕ್ಕ ಕಾಲಕ್ಕೆ ತಯಾರಿಸಿ ಕೊಡಲಾಗುವದು

ಇದಲ್ಲದೆ ಕೋರ್ಟ ಕಚೇರಿ ಉಪಯೋಗದ ವಕಾಲತ ವಗೈರೆ ಫಾರ್ಮುಗಳೂ, ಕಸ್ಟಮ್ ಕಚೇರಿಯ ಶಿಪ್ಪಿಂಗ ಬೀಲು ಪತ್ರ ವಗೈರೆ ಫಾರ್ಮುಗಳೂ, ಗೇಣಿ ರಶೀದಿ ಒಂಕಲ ಗೇಣಿಚೀಟಿ ಎದುರ್ಪಡಿ ಫಾರ್ಮುಗಳೂ ವಗೈರೆ ಮಾರಾಟಕ್ಕೆ ತಯಾರ ಸಿಗುತ್ತವೆ ನಿಮ್ಮ ಛಾಪಾ ಕೆಲಸಗಳನ್ನು ನಮ್ಮಲ್ಲಿಗೇ ಕಳಿಸಿ

ಒಮ್ಮೆ ಅನುಭವ ತಕ್ಕೊಂಡು ನೋಡಿರಿ !

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,
(ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ಹೆಡ್ ಆಫೀಸು — **ಕುಂದಾಪುರ.**

ಬ್ರೆಂಚ ಆಫೀಸುಗಳು **ಅಂಕೋಲಾ, ಕುಂದಾಪುರ ಬೈಂದೂರು, ಕೋಟೇಶ್ವರ, ಕುಮಟಾ, ಗೋಕರ್ಣ ಕಾರವಾರ, ಹಾವೇರಿ, ಶಿವಮೊಗ್ಗಾ, ತರೀಕೆರೆ, ನಗರ ಸೋಮವಾರಪೇಟೆ** ಮತ್ತು **ವೀರರಾಜಪೇಟೆ**

ಕಾಯಂ ಠೇವುಗಳು, ಸೇವಿಂಗ್ಸ ಬೇಂಕ್ ಠೇವುಗಳು ಮತ್ತು ಚಾಲು ಠೇವುಗಳು ಸಹ ಅಂಗೀಕರಿಸಲ್ಪಡುವವು.

ಭಂಗಾರದ ದಾಗಿನೆಗಳ ವ ಇತರ ವ್ಯಾಪಾರದ ವಸ್ತುಗಳ ಆಡವಿನ ಮೇಲೆ ಸವಲತ್ತಿನ ದರದ ಬಡ್ಡಿಯಲ್ಲಿ ಸಾಲ ಕೊಡಲ್ಪಡುವದು ವ್ಯಾಪಾರದ ಕೇಂದ್ರಗಳಿಗೆ ಡ್ರಾಫ್ಟುಗಳು, ಚೆಕ್ಕುಗಳು ಸಹ ಕೊಡಲ್ಪಡುವವು ಎಲ್ಲ ತರದ ಬೇಂಕಿನ ವ್ಯವಹಾರಗಳು ಸವಲತ್ತಿನ ದರದಿಂದ ನಡಿಸಲ್ಪಡುವವು

ಕುಂದಾಪುರ,
1—8—1941 }

The Agricultural & Industrial Bank Ltd

ಜಾಹೀರನಾಮೆ.

ಉತ್ತರ ಕಾನಡಾ ಜಿಲ್ಹಾ ಎಗ್ಝಿಕ್ಯೂಟಿವ್ಹ ಇಂಜಿನಿಯರ ಸಾಹೇಬ ಬಹಾದ್ದೂರರವರ ಕಚೇರಿಯಿಂದ ಎಲ್ಲ ಜನರಿಗೆ ತಿಳಿಸಲ್ಪಡುವದೇನಂದರೆ.—

ಕೆಳಗೆ ತೋರಿಸಿದ ಈ ಜಿಲ್ಹೆಯೊಳಗಿನ ತಾರೀ ಹಾಸಲು ವಸೂಲ ಮಾಡುವ ದೆಸೆಯಿಂದ 1942ನೇ ಇಸವಿಯ ಏಪ್ರಿಲ ತಾರೀಖು 1ನೇ ಬರಾಯಿತು ಒಂದು ವರ್ಷದ ಬಾಬತು ಮಕ್ತೆಗಳು ಕೆಳಗೆ ತೋರಿಸಿದ ತಾರೀಕಿಗೆ, ಕೆಳಗೆ ತೋರಿಸಿದ ಮುಕ್ಕಾಮಿನಲ್ಲಿ ಮಧ್ಯಾನ್ಹ 3 ಘಂಟೆಯ ಸಮಯ ಬಹಿರಂಗವಾಗಿ ಲಿಲಾಂವು ಮಾಡಲ್ಪಡುವವು ಸವಾಲು ಮಾಡುವ ಇಚ್ಛೆಯುಳ್ಳವರು ಬಂದು ಸವಾಲ ಮಾಡಬಹುದು

2 ಮಕ್ತೆ ಬೇಡುವವರ ಹತ್ತರ ತಮ್ಮ ಲಾಯಖಿ ಬಗ್ಗೆ ಅವರ ಸ್ಥಿರ ಆಸ್ತಿ ಎಲ್ಲಿರುವದೋ ಆ ತಾಲೂಕಿನ ಮಾಮಲೇದಾರರ ಅಥವಾ ಪೇಟಿಯ ಮಹಾಲ್ಕರಿಯವರ ಸಹಿಯ ಸರ್ಟಿಫಿಕೇಟು ಇರಬೇಕು ಮತ್ತು ಅವರು ಪ್ರತಿ ಒಂದು ಮಕ್ತಾ ಬಾಬತು ಇಪ್ಪತ್ತು (200 0 0) ರೂಪಾಯಿಗಳನ್ನು ನಗದಿಯಾಗಿ ಹಾಜರ ಮಾಡಲು ಸಿದ್ಧರಾಗಿರಬೇಕು ಬನವಾಸಿ ತಾರಿ ಬಗ್ಗೆ ನಿರ್ದಿಷ್ಟ ಮಾಡಿದ ಡಿಪೋಜಿಟ ರಕಮು ರೂಪಾಯಿ 20 ಇರುತ್ತದೆ ಅಂದರೇನೇ ಅವರ ಸವಾಲು ತಕ್ಕೊಳ್ಳಲಾದೀತು ಸವಾಲು ಮಂಜೂರು ಆಗದಿದ್ದರೆ ಹೀಗೆ ಹಾಜರ ಮಾಡಿದ ಹಣ ಪರತ ಕೊಡಲ್ಪಡುವದು ಮಂಜೂರು ಆದರೆ ಸದರೀ ರಕಮು ಕರಾರಿನಲ್ಲಿ ನಮೂದಿಸಿದ ಯಾವತ್ತೂ ಶರ್ತುಗಳನ್ನು ಯೋಗ್ಯ ರೀತಿಯಿಂದ ಪಾಲಿಸುವ ಬಗ್ಗೆ ಅಮಾನತವಾಗಿ ಇಡಲ್ಪಡುವದು ಮತ್ತು ಮಕ್ತೆಯ ಮುದ್ದತು ತೀರಿದ ಬಳಿಕ ಸದರಿ ರಕಮು ಪರತ ಕೊಡಲ್ಪಡುವದು

3 ಸವಾಲು ಮೂರು ಬಾರ ಆದ ಕೂಡಲೆ ಸವಾಲಿನ ರಕಮಿನ ಒಂದು ಹತ್ತಾಂಶ 1/10 ಹಣ ಹಾಜರ ಮಾಡಲಿಕ್ಕೆ ಸವಾಲದಾರರು ಸಿದ್ಧರಾಗಿರಬೇಕು ಹೀಗೆ ಹಾಜರ ಮಾಡಿದ ಹಣ ಅವರು ಕೊಡತಕ್ಕ ಆಖೈರ ಕಿಸ್ತಿಗೆ ಮುಜರಾ ಹಿಡಿಯಲ್ಪಡುವದು

4 ಯಾವತ್ತೂ ತಾರಿಗಳಿಗೆ ಜಂಗಲ ದೋಣಿಗಳು ಸರಕಾರದಿಂದ ಪೂರೈಸಲ್ಪಟ್ಟಿವೆ ಆದರೆ ಪಟ್ಟಿಯಲ್ಲಿ (agreement) ನಮೂದಿಸಿದಷ್ಟು ಎಲ್ಲ ಪಸಂಜರ ದೋಣಿಗಳನ್ನು ಪೂರೈಸಿಕೊಳ್ಳುವ ವ್ಯವಸ್ಥೆಯನ್ನು ಮಕ್ತೇದಾರರೇ ಮಾಡತಕ್ಕದ್ದು

5 ಮುಖ್ಯ ತಾರೀ ಮತ್ತು ಫೂಟ ತಾರಿಗೆ ಕೂಡಿ ಒಬ್ಬನೇ ಸವಾಲ ಮಾಡತಕ್ಕದ್ದು ವಸ್ತುತಃ ಮುಖ್ಯ ಮತ್ತು ಫೂಟ ತಾರೀ ಕೂಡಿ ಒಂದೇ ತಾರಿ ಎಂತ ತಿಳಿಯಬೇಕು

6 ಮೇಲೆ ಮೂರನೇ ಕಲಮಿನಲ್ಲಿ ಹೇಳಿದಂತೆ ಒಂದು ಹತ್ತಾಂಶ ರಕಮು ಮಕ್ತೆಯ ಸವಾಲು ಮೂರು ಬಾರ ಆದ ಕೂಡಲೇ ಹಾಜರ ಮಾಡದಿದ್ದರೆ ಸವಾಲು ರದ್ದುಪಡಿಸಿ ಪುನಃ ಲಿಲಾಂವ ಮಾಡಲಾದೀತು ಮತ್ತು ಅವರ ಸವಾಲು ತೆಗೆದುಕೊಳ್ಳಲಿಕ್ಕಿಲ್ಲ ಹೀಗೆ ಲಿಲಾಂವು ಮಾಡಿದ್ದರಿಂದ ನುಕಸಾನು ಆದರೆ ಅದು ಕಾಯಿದೇ ಪ್ರಕಾರ ಮೊದಲಿನ ಸವಾಲುದಾರರ ಕಡೆಯಿಂದ ತುಂಬಿಕೊಳ್ಳಲಾದೀತು ಲಾಭ ಆದರೆ ಅದರ ಮೇಲೆ ಅವರ ಹಕ್ಕು ಇಲ್ಲ

7 ಆಖೈರ ಸವಾಲು ಮೆ॥ ಎಗ್ಝಿಕ್ಯೂಟಿವ್ಹ ಇಂಜಿನಿಯರ ಸಾಹೇಬ ಬಹಾದ್ದೂರರವರ ಮಂಜೂರಿಗೆ ಒಳಗಾಗಿರುವದು ಸವಾಲು ಯಾವದೇ ಕಾರಣದಿಂದ ಅವರು ನಾಕರಿಸಿದರೆ ಅದರ ಕಾರಣ ತಿಳಿಸಲಿಕ್ಕೆ ಅವರು ಬದ್ಧರಾಗಲಿಕ್ಕಿಲ್ಲ

8 ಲಿಲಾಂವು ಒಮ್ಮೆ ತೀರಿದ ಬಳಿಕ ಅರ್ಜಿ ದ್ವಾರವಾಗಲೀ ತಾರ ಮೇಲೆ ಆಗಲಿ ಹೆಚ್ಚು ಸವಾಲು ಅದೆ ಎಂತ ತಿಳಿಸಿದರೆ ಆ ಸವಾಲು ತೆಗೆದುಕೊಳ್ಳಲಿಕ್ಕೆ ಬರಲಿಕ್ಕಿಲ್ಲ

9 ಕರಾರಿನಲ್ಲಿ ನಮೂದಿಸಿದ ಎಲ್ಲ ಶರ್ತುಗಳನ್ನು ಯೋಗ್ಯ ರೀತಿಯಿಂದ ಬಜಾಯಿಸುವ ಬಗ್ಗೆ ಹಾಗೂ ಲಿಲಾಂವಿನ ರಕಮುಗಳನ್ನು ಪ್ರತಿ ವರ್ಷ ಸರಿಯಾದ ನಾಲ್ಕು ಕಂತುಗಳಿಂದ ಠರಾಯಿಸಿದ ಮುದ್ದತ್ತಿಗೆ ಕೊಡುವ ಬಗ್ಗೆ ಮಕ್ತೇದಾರರು ಎರಡು ಯೋಗ್ಯ ಜಾಮೀನದಾರರ ಮೇಲಿನ ಎರಡನೇ ಕಲಮಿನಲ್ಲಿ ನಮೂದಿಸಿದ ಪ್ರಕಾರ ಲಾಯಖಿ ಸರ್ಟಿಫಿಕೇಟುಗಳನ್ನು ಲಿಲಾಂವಿನ ತಾರೀಖಿನಿಂದ ಹತ್ತು ದಿವಸದೊಳಗೆ ಹಾಜರ ಮಾಡಬೇಕು

10 ತಾರಿಯ ಮಕ್ತಾ ಪಡೆದವರು ಪ್ರತಿ ಒಂದು ತಾರಿಯ ಪ್ರತಿ ಒಂದು ದೋಣಿಯ ಬಗ್ಗೆ ತಮ್ಮ ಸ್ವಂತ ಖರ್ಚಿನಿಂದ ಮೆಹರಬಾನ ಕಲೆಕ್ಟರ ಸಾ| ಉ| ಕಾನಡಾ, ಕಾರವಾರರವರಿಂದ ತಾರಿಯನ್ನು ನಡೆಯಿಸುವ ಮುಂಚಿತವಾಗಿ ಲಾಯಸನ್ಸುಗಳನ್ನು ಪಡೆಯತಕ್ಕದ್ದು, ಮತ್ತು ಹೀಗೆ ಲಾಯಸನ್ಸು ಪಡೆದ ಬಗೆ ಮೆ|| ಎಗ್ಝಿಕ್ಯೂಟಿವ್ಹ ಇಂಜಿನಿಯರ ಸಾಹೇಬರಿಗೆ ತಾ 16—3—1942 ನೇ ದರೊಳಗೆ ಲೇಖಿ ತಿಳಿಸತಕ್ಕದ್ದು

11 ಅವಶ್ಯವಿದ್ದವರು ಹಿಂದಿನ ವರ್ಷಗಳಲ್ಲಿ ಆಯಾ ಸಬ್‌ಡಿವ್ಹಿಜನದಲ್ಲಿಯ ತಾರಿ ಮಕ್ತೆಗೆ ಎಷ್ಟು ರಕಮಿನ ಸವಾಲು ಮಂಜೂರಾಗಿತ್ತು ಎಂಬ ಮಾಹಿತಿಯನ್ನು ಮೆ| ಎ ಇಂ. ಸಾಹೇಬರ ಆಫೀಸಿನಲ್ಲಿ ಹಾಗೂ ಸರ್ವಸಾಧಾರಣವಾಗಿ ಲಿಲಾಂವಿನ ಶರ್ತುಗಳು ಏನು ಅವೆ ಎಂಬ ಮಾಹಿತಿಯನ್ನು ಸಬ್ ಡಿವ್ಹಿಜನಲ ಆಫೀಸರ ಸ ವ ಡಿ ಕುಮಟಾ, ಕಾರವಾರ ಮತ್ತು ಶಿರ್ಶಿ ಇವರ ಕಚೇರಿಯಲ್ಲಿ, ಕಚೇರಿಯ ಹೊತ್ತಿನಲ್ಲಿ ತಿಳಕೊಳ್ಳಬಹುದು ಮತ್ತು ಲಿಲಾಂವಿನ ಯಾವತ್ತೂ ಶರ್ತುಗಳು ಲಿಲಾಂವಿನ ಕಾಲಕ್ಕೆ ಓದಿ ತಿಳಿಸುವದರಲ್ಲಿ ಬರುವವು

12. ಕೆಳಗೆ ಕಾಣಿಸಿದ ಪೈಕಿ ಸೇಜ ನಂ 2, 3, 4 ಮತ್ತು 5ನೇ ತಾರಿಯ ಮೇಲಿಂದ ಹಾಯ್ದು ಹೋಗುವ ಗಾಡಿಗಳ ಹಾಗೂ ಬೇರೆ ವಾಹನಗಳ ಮೇಲೆ 2ನೇ ವರ್ಗದ ತಾರೀ ದರದಂತೆ ತಾರಿ ಹಾಸಲು ಆಕರಣಿ ಮಾಡಲಾದೀತು

13 ಯಾವದಾದರೊಂದು ತರದ ರಹದಾರಿ ಇಂತಿಷ್ಟೇ ಸಿಕ್ಕೀತೆಂದು ಹೇಳಲಿಕ್ಕೆ ಬರಲಾರದು ಯಾವದಾದರೊಂದು ಕಾರಣದ ದೆಸೆಯಿಂದ ಯಾವದಾದರೂ ರಸ್ತೆಯ ಮೇಲಿನ ರಹದಾರಿ ಬಂದ ಮಾಡಿದರೆ ಅಥವಾ ತಾರೀ ಮಕ್ತೇದಾರನಿಗೆ ಅವನ ತಿಳುವಳಿಕೆಯಂತೆ ಯಾವದಾದರೊಂದು ಕಾರಣದಿಂದ ರಹದಾರಿ ಸಿಗದೆ ಇದ್ದಲ್ಲಿ ಆ ಬಗ್ಗೆ ಸದರಿ ಮಕ್ತೇದಾರನಿಗೆ ಸೂಟ ಅಥವಾ ರಿಫಂಡ ಸಿಗಲಾರದು

14 ತಾರಿ ಬಾಬತು ಕರಾರುಗಳನ್ನು ಲಿಲಾಂವಿನ ತಾರೀಖಿನಿಂದ ಒಂದು ತಿಂಗಳೊಳಗೆ ಪೂರಾ ಮಾಡಬೇಕು ಇಲ್ಲದಿದ್ದರೆ ಸವಾಲು ರದ್ದುಪಡಿಸಿ ಮೇಲಿನ ಎರಡನೇ ಮತ್ತು ಮೂರನೇ ಕಲಮುಗಳಲ್ಲಿ ನಮೂದಿಸಿದ ಪ್ರಕಾರ ಹಾಜರ ಮಾಡಿದ ರಕಮುಗಳು ದಂಡದ ಬಗ್ಗೆ ಸರಕಾರಕ್ಕೆ ಜಮಾ ಮಾಡಲಾದಾವು ಮತ್ತು ಪುನಃ ಲಿಲಾಂವ ಮಾಡಿಸಿ ಆದ ನುಕಸಾನಿಗೆ ಸವಾಲುದಾರರು ಜವಾಬದಾರರಾಗುವರು ಸವಾಲು ರಕಮು ಜಾಸ್ತಿ ಬಂದಲ್ಲಿ ಅದಕ್ಕೆ ಸವಾಲದಾರರ ಹಕ್ಕು ಇರಲಿಕ್ಕಿಲ್ಲ

15 ತಾರಿಯ ಮಕ್ತೆ ಪಡೆದವರು ತಾರಿಯ ಎರಡೂ ಬದಿಯಲ್ಲಿರುವ ವಿಶ್ರಾಂತಿ ಗೃಹಗಳನ್ನು ತಮ್ಮ ಸ್ವಂತ ಖರ್ಚಿನಿಂದ ಪ್ರಯಾಣಸ್ಥರಿಗೆ ಅನಾನುಕೂಲತೆ ಆಗದಂತೆ ಸ್ವಚ್ಛ ಇಡಬೇಕಾದೀತು

16 ಸರಕಾರಿ ದೋಣಿಗಳಿಗೆ ಮಕ್ತೆ ಪಡೆದವರು ಆಯಾ ವೇಳೆಯಲ್ಲಿ ಮಾಡತಕ್ಕ ದುರುಸ್ತಿ ವಗೈರೆಯ ಕ್ರಮ ಮೊದಲಾದವುಗಳನ್ನು ಸವಾಲು ಮಾಡುವವರು ತಮಗೆ ಬೇಕಾದಾಗ ಮೆ|| ಎಗ್ಝಿಕ್ಯೂಟಿವ್ಹ ಇಂಜಿನಿಯರ ಸಾಹೇಬರವರ ಆಫೀಸಿನಲ್ಲಿ, ಆಫೀಸ ಹೊತ್ತಿನಲ್ಲಿ ತಿಳಕೊಳ್ಳತಕ್ಕದ್ದು ಸರಕಾರಿ ಜಂಗಲ-ದೋಣಿಗಳಿಗೆ ಗಲಗಲೆ ಸರಕಾರದಿಂದಲೇ ಮಾಡಲ್ಪಡುವದು

17 ಸೇಜ ನಂಬರ 1 ಶರಾವತಿ ಮುಖ್ಯ ತಾರಿಯ ಬಗ್ಗೆ ಪಾವರ ಲೊಂಚ ಸರ್ವ್ಹಿಸ ಅಥವಾ ದೋಣಿ ಸರ್ವ್ಹಿಸ ಎರಡೂ ತರದಿಂದ ಹಾಸಲು ವಸೂಲ ಮಾಡುವ ಹಕ್ಕು ಲಿಲಾಂವ ಮಾಡಲ್ಪಡುವವು ಲೊಂಚ ಸರ್ವ್ಹಿಸಿಗೆ ಸವಾಲು ಮಾಡಲಿಚ್ಛಿಸುವವರು ಎರಡು ಚಲೋ ಪಾವರ ಲೊಂಚಗಳನ್ನು ಪೂರೈಸುವ ಯೋಗ್ಯ ವ್ಯವಸ್ಥೆ ಮಾಡುವ ಲಾಯಖಿ ಬಗ್ಗೆ ಮೆ॥ ಎಗ್ಝಿಕ್ಯೂಟಿವ್ಹ ಇಂಜಿನಿಯರ ಸಾಹೇಬರವರಿಗೆ ಲಿಲಾಂವಿನ ದಿವಸ ಖಾತ್ರಿ ಮಾಡಿದಲ್ಲಿ ಮಾತ್ರ ಅವರಿಗೆ ಪಾವರ ಲೊಂಚ ಸರ್ವ್ಹಿಸಿನ ಬಾಬತು ಸವಾಲು ಮಾಡಲಿಕ್ಕೆ ಕೊಡಲ್ಪಡುವದು. ಪಾವರ ಲೊಂಚ ಇಲ್ಲವೆ ದೋಣಿಗಳ ಸರ್ವ್ಹಿಸು ಇಡಿಸುವದು ಮೆ॥ ಎ ಇಂ. ಸಾಹೇಬರವರ ಪಸಂತಿಗೆ ಒಳಗಾಗಿರುವದು ಪಾವರ ಲೊಂಚ ಸರ್ವ್ಹಿಸಿನ ಬಗ್ಗೆ ಯಾರ ಸವಾಲ ಮಂಜೂರ ಆಗುತ್ತದೋ ಅವರು ಆ ತಾರಿಯ ಬಗ್ಗೆ ಎರಡು ಚಲೋ ಲೊಂಚಗಳನ್ನು ಲಿಲಾಂವ ತಾರೀಕಿನಿಂದ ಒಂದು ತಿಂಗಳೊಳಗೆ ತಂದು ಮೆ॥ ಎ ಇಂ ಸಾಹೇಬರ ಕಡೆಯಿಂದ ಪಾಸ ಮಾಡಿಸಬೇಕು ಹಾಗೂ ಸದ್ರಿ ಲೊಂಚಗಳ

ಬಂಟತು ಮೊತ್ತಾಪಿನ ಪಾತಿಯಿಂದ ತಾ 22-2-1942ನೇ ದರೊಳಗೆ ಭರ್ತಿ ಮಾಡತಕ್ಕದ್ದು ಇದಕ್ಕೆ ತಪ್ಪಿದಲ್ಲಿ ಮೇಲಿನ 14ನೇ ಕಲಮಿನ ಪ್ರಕಾರ ತಜವೀಜು ಮಾಡಲಾದೀತು

18 ತಾರಿ ಸೀಜ ನಂಬರ 1 ಶರಾವತಿ ಈ ತಾರಿಯಿಂದ ಸರಕಾರದಿಂದ ತಯಾರಿಸಲ್ಪಟ್ಟ ಜಂಗಲ ಮೇಲಿಂದ ಸರಕಾರಿ ಅಥವಾ ಬೇರೆ ಪ್ರಯಾಣಸ್ಥರ ಮೋಟಾರಗಳು ಸದ್ರಿ ತಾರಿಯಿಂದ ಗೇರಸಪ್ಪೆಗೆ ಒಯ್ಯುವ ವ ತರುವ ವ್ಯವಸ್ಥೆ ಮಕ್ತೆದಾರರು ಮಾಡತಕ್ಕದ್ದು ಮತ್ತು ಈ ಬಗ್ಗೆ ನಿರ್ದಿಷ್ಟ ಮಾಡಿದ ಹಾಸಲು ಮತ್ತು ಇತರ ಶರ್ತುಗಳು ಲಿಲಾಂವದ ಕಾಲಕ್ಕೆ ಜಾಹೀರ ಮಾಡಲ್ಪಡುವವು ಈ ಬಗ್ಗೆ ಸರಕಾರದಿಂದ ಕಟ್ಟಿ ಜಂಗಲ-ಬೋಟಿಗಳಿಗೆ ಗಲಗಿತಿ ಸರಕಾರದಿಂದಲೇ ಮಾಡಲ್ಪಡುವದು ಶರಾವತಿ ತಾರಿಯು ಲೋಂಚ ಅಥವಾ ದೋಣಿ ಸ್ವೀಕಾರ ಲಿಲಾಂವ ಮುಖ್ಯ ತಾರಿಯ ಬಗ್ಗೆ ಮತ್ತು ಗೇರಸಪ್ಪೆಯ ತಾರಿಯನ್ನು ನಡಿಸುವ ಶರ್ತಿನಿಂದ ಪ್ರತ್ಯೇಕವಾಗಿ ಲಿಲಾಂವ ಮಾಡಲ್ಪಡುವದು

ನಂ	ತಾರಿಯ ಹೆಸರು	ತಾರಿಯ ಕ್ಲಾಸು	ತಾಲೂಕ	ಯಾವ ತಾರೀಖಿಗೆ	ಎಲ್ಲಿ	ಯಾರ ಮುಂದೆ
1	ಶರಾವತಿ (ಮಲ್ಲುಕುರ್ವೆ ಪೋಟ ತಾರಿ ಸಹಿತ)	2ನೇ	ಹೊನ್ನಾವರ	15—1—1942	ಪಿ ಡಬ್ಲ್ಯು ಡಿ ಆಫೀಸು ಹೊನ್ನಾವರ	ಮಾ|| ಎಕ್ಸಿಕ್ಯೂಟಿವ ಇಂಜಿನಿಯರ ಸಾಹೇಬ ಕಾನಡಾ
2	ಹೆಗಡೆ (ಮಿರ್ಜಾನ ಕೋಡಕಣಿಯ ಪೋಟ ತಾರಿಯ ಸಹಿತ)	3ನೇ	ಕುಮಟಾ			
3	ದಿವಗಿ (ಮಣಕಿ)	"	"			
4	ವೆಂಕಟಾಪುರ (ಹೆಬಳೆ ಮತ್ತು ತೆಂಗಿನಗುಂಡಿ ಪೋಟ ತಾರಿ ಸಹಿತ)	"	ಭಟಕಳ ಪೇಟಾ			
5	ಉಳವರೆ	"	ಅಂಕೋಲಾ			
6	ಬನವಾಸಿ	4ನೇ	ಶಿರಸಿ		ಸಬ್ ಡಿವಿಜನಲ್ ಆಫೀಸ ಪಿ ಡಬ್ಲ್ಯು ಡಿ ಶಿರಸಿ	ಮಾ|| ಸ ಡಿ ಆಫೀಸರ, ಪ ವ ಡಿ ಶಿರಸಿ
7	ಕೋಡಿಬಾಗ (ಸದಾಶಿವಗಡ)	2ನೇ	ಕಾರವಾರ	20-1-1942	ಮಾ|| ಎ ಇಂ ಸಾಹೇಬರವರ ಆಫೀಸಿನಲ್ಲಿ	ಮಾ|| ಎ ಇಂ ಸಾಹೇಬ ಕಾನಡಾ

ಕಾರವಾರ,
5—12—1942

S. K. KARANDIKAR,
Executive Engineer, Kanara Division

ವಾರ್ತೆಗಳು.

೧೯೪೧ನೇ ಇಸವಿಯಲ್ಲಿ ಉತ್ಕೃಷ್ಟ ಗ್ರಾಮಸುಧಾರಣೆಯ ಕೆಲಸ ಮಾಡಿತೋರಿಸಿದ ಬಗ್ಗೆ ದಕ್ಷಿಣ ಭಾಗದಲ್ಲಿ ಹೆಗ್ಗೆ (ಜಿ ಕಾನಡಾ), ಹಾಲಕೇರಿ (ಜಿ. ಧಾರವಾಡ), ಕೌಜಲಗಿ (ಜಿ ಬೆಳಗಾಂವ), ಕಾಖಂಡಿಕಿ (ಜಿ ವಿಜಾಪುರ) ಮತ್ತು ಪ್ರಂದೆ (ಜಿ ಕುಲಾಬಾ) ಈ ಗ್ರಾಮಗಳಿಗೆ ಸರಕಾರದಿಂದ ೧೦೦—೧೦೦ ರೂ ಇನಾಮು ದೊರೆತಿದೆ

— ಯುದ್ಧದ ಜ್ವಾಲೆಗಳು ನಮ್ಮ ಪ್ರಾಂತಕ್ಕೂ ಹಬ್ಬುವ ಅಂಜಿಕೆಯಿರುವದರಿಂದ ಮುಂಬಯಿ ಸರಕಾರದವರು ಮೊನ್ನೆ ಒಂದು ಪ್ರಕಟಣೆ ಹೊರಡಿಸಿ ಪ್ರಾಂತದಲ್ಲಿ ಎಲ್ಲಾದರೂ ಬಾಂಬು ಬಿದ್ದು ಸ್ಫೋಟವಾದರೆ ನೋಡಿದ ಜನರು ಕೂಡಲೆ ಸಮೀಪದಲ್ಲಿರುವ ಅಧಿಕಾರಿಗಳಿಗೆ, ಪೋಲೀಸರಿಗೆ ಯಾ ಆಕಾಶದಾಳಿಯ ರಕ್ಷಣಾಧಿಕಾರಿಗಳಿಗೆ ತಿಳಿಸಬೇಕೆಂದಲೂ, ಒಂದುವೇಳೆ ಬಿದ್ದ ಬಾಂಬು ಸ್ಫೋಟವಾಗದೆ ಉಳಿದಲ್ಲಿ ಜನರು ಅದರಿಂದ ದೂರದಲ್ಲುಳಿದು ಮೇಲಿನಂತೆ ಅಧಿಕಾರಿಗಳಿಗೆ ಕೂಡಲೆ ಮಾಹಿತಿ ಕೊಡಬೇಕಾಗಿಯೂ ಎಲ್ಲ ಜನರಿಗೆ ಮುಂಜಾಗ್ರತೆಯ ಹುಕುಮ ಕೊಟ್ಟಿರುತ್ತಾರೆ

— ರಂಗೂನ ಅಕ್ಕಿ ಗಾಂವಟಿ ಇಲ್ಲವೆ ಈ ದೇಶದ ಅಕ್ಕಿ, ಜೋಳ, ಬಾಜರಿ, ಕಡ್ಲೆ, ತೊಗರಿಬೇಳೆ, ಕಾಳ್ಗಳು ಯಾ ತತ್ಸಮ ಜೀನಸುಗಳು ಒಳ್ಳೆ ಎಣ್ಣೆ, ನೆಲಗಡ್ಲೆ ಎಣ್ಣೆ, ಉಪ್ಪು, ಉಳ್ಳೀಗಡ್ಡೆ, ಮೆಣಸು ತವಡು ಮೇವು ಹುಲ್ಲು ಮತ್ತು ಇದ್ದಲಿ ಇವಿಷ್ಟು ಜನ-ಜನಾವರಗಳ ಜೀವನಕ್ಕೆ ಅವಶ್ಯವಿರುವ ಜೀನಸುಗಳ ಧಾರಣೆಗಳನ್ನು ನಿಯಂತ್ರಣದಲ್ಲಿಡಲು ಮುಂಬಯಿ ಸರಕಾರದವರು ಎಲ್ಲ ಜಿಲ್ಹಾಧಿಕಾರಿಗಳಿಗೂ ಮುಂಬಯಿಯ ಧಾರಣೆ ನಿಯಂತ್ರಕರಿಗೂ ಅಧಿಕಾರ ಕೊಟ್ಟಿದೆ ಮುಂಬಯಿಯ ವ್ಯಾಪಾರಸ್ಥರು ಹೆಚ್ಚು ಲಾಭದ ಆಶೆಯಿಂದ ದರಗಳನ್ನು ಏರಿಸುತ್ತಿದ್ದಾರೆಂದು ಜನರು ದೂರಲಾರಂಭಿಸಿದ್ದರಿಂದ ಮುಂಬಯಿ ಸರಕಾರದವರು ಎಲ್ಲ ವ್ಯಾಪಾರಸ್ಥರಿಗೆ ಹಾಗೆ ಮಾಡಕೂಡದೆಂದು ಸ್ಪಷ್ಟ ಎಚ್ಚರಿಕೆ ಕೊಟ್ಟಿದ್ದಾರೆ ಮಿತಿಗೆಟ್ಟ ಧಾರಣೆಗಳನ್ನು ಏರಿಸಿ ವ್ಯಾಪಾರ ಮಾಡಿದವರಿಗೆ ಹಿಡಿದು ಶಿಕ್ಷಿಸಲಾಗುವದೆಂತಲೂ, ಅಂತಹ ಪ್ರಸಂಗ ಒದಗಿದರೆ ವರ್ತಕರ ಬಳಿಯಿರುವ ಸರಕನ್ನು ಸರಕಾರದವರು ತಮ್ಮ ಸ್ವಾಧೀನಪಡಿಸಿಕೊಂಡು ತಗ್ಗ ದರದಿಂದ ಅವನ್ನು ಮಾರಾಟ ಮಾಡುವ ವ್ಯವಸ್ಥೆ ಮಾಡುವದೆಂತಲೂ ವರ್ತಕಲೋಕಕ್ಕೆ ಮುಂಜಾಗ್ರತೆಯನ್ನೂ ಕೊಟ್ಟಿದ್ದಾರೆ ಮುಂಬಯಿಯ ಧಾರಣೆ ನಿಯಂತ್ರಕರು ಈಗಲೇ ಕೂಡಲೆ ಕೊಡಬೇಕಾದ ಗೋದಿಯ ಬೆಲೆ ಇಂತಿಷ್ಟಕ್ಕೆ ಮಿಗಬಾರದೆಂದು ನಿರ್ದಿಷ್ಟಗೊಳಿಸಿ ವ್ಯಾಪಾರಸ್ಥರಿಗೆ ಆಜ್ಞೆ ಹೊರಡಿಸಿದ್ದಾರೆ ಬೇಗನೇ ಆಯಾ ಜಿಲ್ಹೆಯ ಜಿಲ್ಹಾಧಿಪತಿಗಳೂ ಕೂಡ ಇಂಥ ಹುಕುಮುಗಳನ್ನು ಹೊರಡಿಸುವವರಿದ್ದಾರೆ ಕೆಲವು ವರ್ತಕರು ಗೋದಿಯ ವಾಯದೆಯ ಸಟ್ಟೆಗಳನ್ನು ಮಾಡುತ್ತಿದ್ದಾರೆಂತಲೂ ಧಾರಣೆ ನಿಯಂತ್ರಕರು ನಿರ್ದಿಷ್ಟ ಮಾಡಿಕೊಟ್ಟ ಧಾರಣೆಗಿಂತ ಹೆಚ್ಚಿನ ಬೆಲೆಗೆ ಗೋದಿ ಕೊಡುವ ಸಟ್ಟೆ ಮಾಡುತ್ತಿದ್ದಾರೆಂತಲೂ ಕಂಡುಬಂದದ್ದರಿಂದ ಸರಕಾರದವರು ವರ್ತಕರಿಗೆ ಇಂಥ ಸಾಟೆಗಳನ್ನು ಮಾಡುವದು ಹಿತಕರವಲ್ಲೆಂದು ಸೂಚನೆ ಕೊಟ್ಟಿದ್ದಾರೆ ಹಿಂದುಸ್ಥಾನ ಸರಕಾರದವರು ಶೀಘ್ರದಲ್ಲೇ ಗೋದಿಯ ಆಯಾತ ನಿರ್ಯಾತಗಳನ್ನೂ ಸ್ಥಳಾಂತರೀಕರಣವನ್ನೂ ಪ್ರತಿಬಂಧಿಸುವ ಇಲ್ಲವೆ ನಿಯಂತ್ರಿಸುವವರಿದ್ದದರಿಂದ ಸಟ್ಟೆ ಮಾಡಿದಂತೆ ವ್ಯಾಪಾರಿಗಳಿಗೆ ಗೋದಿ ಪೂರೈಸಲು ಬರಲಿಕ್ಕಿಲ್ಲವಾಗಿ ಕಾರಣವನ್ನೂ ತೋರಿಸಿದ್ದಾರೆ ಹಾಗೂ ಸರಕಾರದವರು ಬೇಕಾದಾಗ ವ್ಯಾಪಾರಿಗಳ ತಾಬೆಯಲ್ಲಿರುವ ಗೋದಿಯನ್ನು ಕೊಂಡುಕೊಳ್ಳಬಹುದು ಆಗ ಸರಕಾರದವರು ನಿರ್ದಿಷ್ಟ ಬೆಲೆಗಿಂತ ಹೆಚ್ಚಿಗೆ ಕ್ರಯವನ್ನು ಎಂದೂ ಕೊಡಲಿಕ್ಕಿಲ್ಲ ಲಾಭಬಡಕ ವ್ಯಾಪಾರಸ್ಥರು ಈ ಹುಕುಮುಗಳ ಅರ್ಥವನ್ನು ಚೆನ್ನಾಗಿ ತಿಳಕೊಂಡಿರಬೇಕಾಗಿ ಸೂಚನೆಯಿದೆ

— ಹಿಂದುಸ್ಥಾನದಲ್ಲಿ ಈಗ ಬರೇ ೧ ಲಕ್ಷ ಟನ್ನು ಕಾಗದ ತಯಾರಾಗುತ್ತಿದೆ ಇಷ್ಟರಿಂದ ನಿರ್ವಾಹವಾಗುವದಿಲ್ಲ ಹಿಂದುಸ್ಥಾನವು ಇಷ್ಟು ದಿನ (ಯುದ್ಧಾರಂಭವಾದಂದಿನಿಂದ) ತನಗೆ ಬೇಕಾದ ಕಾಗದವನ್ನು ಅಮೇರಿಕೆಯಿಂದಲೂ, ಕೆನಡಾ ದೇಶದಿಂದಲೂ ತರಿಸಿಕೊಳ್ಳುತ್ತಿತ್ತು ಈಗ ಪಾಸಿಫಿಕ್ ಮಹಾಸಾಗರದಲ್ಲೂ ಯುದ್ಧ ನಡೆದಿರುವದರಿಂದ ಆ ದೇಶಗಳಿಂದ ಕಾಗದ ತುಂಬಿದ ಹಡಗಗಳು ಸುರಕ್ಷಿತವಾಗಿ ಹಿಂದಭೂಮಿಯನ್ನು ತಲ್ಪಲಾರವು ಇದರಿಂದ ಸರಕಾರದವರಿಗೂ ಜನರಿಗೂ ಕಾಗದದ ಕೊರತೆ ಅನುಭವಿಸುವ ಪ್ರಸಂಗ ಒದಗಿದೆ ಆದ್ದರಿಂದ ಹಿಂದುಸ್ಥಾನ ಸರಕಾರದವರು ಒಂದು ವಿಶೇಷ ಪ್ರಕಟಣೆಯನ್ನು ಹೊರಡಿಸಿ ಕಾಗದವನ್ನು ಬಹಳ ಜಾಗ್ರತೆಯಿಂದ ಮತ್ತು ಮಿತವ್ಯಯದಿಂದ ಉಪಯೋಗಿಸಲು ಸಾರ್ವಜನಿಕರಿಗೆ ಎಚ್ಚರಿಕೆ ಕೊಟ್ಟಿರುತ್ತಾರೆ ಸರಕಾರಿ ಕಚೇರಿಗಳಿಗೆ ಈ ಹಿಂದೆಯೇ ಜಾಗ್ರತೆ ಕೊಡಲಾಗಿದೆಯಂತೆ

ಸಂಪೂರ್ಣವಾದ ಹೊಲಿಗೆಯ (TAILORING) ಪುಸ್ತಕ.

ಈಗ ತಾನೇ ಪ್ರಕಾಶವಾದ 'ಜೆಂ ಸಿಸ್ಟಿಮ್ ಆಫ್ ಕಟಿಂಗ' ಕನ್ನಡ ಭಾಷಾಂತರ ಇತ್ತೀಚಿನ ಸ್ಟೈಲಗಳನ್ನು ಕೂಡಿದ ಅನೇಕ ನೂರಾರು ಚಿತ್ರಗಳುಳ್ಳ ಇಂಡಿಯಾ ಯುರೋಪುಗಳಲ್ಲಿ ನನ್ನ ೪೪ ವರ್ಷಗಳ ಹೊಲಿಗೆ ಅನುಭವದ ಸಲುವಿದು ಈ ಪುಸ್ತಕವು ಹೊಲಿಗೆಯವರಿಗೆ ಮತ್ತು ನ ದ ಪ್ರಾರಂಭಕಾರರಿಗೆ ಸಂಸಾರಿಗಳಿಗೆ ಒಳ್ಳೇ ಮಾರ್ಗದರ್ಶಿ ಬೆಲೆ ರೂಪಾಯಿ ಪೋಸ್ಟೇಜ ಪ್ರತ್ಯೇಕ ಆಡರಿನೊಡನೆ ಮುಂಗಡ ಹಣ ಅಗತ್ಯ

ಸಂಪಿಗೆ ಶಾಮರಾವ್,
143, ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ

ಕಾನಡಾವೃತ್ತ.

ಮಿತಿ ವೃಷ ಸಂವತ್ಸರ ಪುಷ್ಯ ಶು॥ ೧೧ಶಿ, ಸೋಮವಾರ.

ಹಿಟ್ಲರವಾದವೂ ಸಾಮ್ರಾಜ್ಯವಾದವೂ.

ಈ ಮಹಾಯುದ್ಧದಲ್ಲಿ ಬ್ರಿಟಿಶರು ಸೋತರೆ ಹಿಂದುಸ್ಥಾನದ ಗತಿಯೇನೆಂದು ಗಾಬರಿಪಡುವ ಜನರನೇಕರಿದ್ದಾರೆಂದು ಪಂ॥ ಜವಾಹಿರಲಾಲರು ಮೊನ್ನೆ ಬಾರ್ಡೋಲಿಯೊಳಗೆ ನುಡಿದ ಮಾತಿಗೆ ಯಾರೂ ತಲೆದೂಗಲೇಬೇಕು. ಬ್ರಿಟಿಶರು ಎಂದಿಗೂ ಸೋಲಬಾರದು, ಗೆಲ್ಲಲೇಬೇಕು! ಆದರೆ ಕರ್ಮಧರ್ಮ ಸಂಯೋಗದಿಂದ ಒಂದಾವರ್ತಿ ಸೋತರೂ ಹಿಂದ-ಜನಾಂಗವು ನಿರ್ಗತಿಕವಾಗುವದೆಂದು ತಿಳಿಯುವದು ಕಡು ಮೂರ್ಖತನವೆಂದು ಪಂ॥ ಜವಾಹಿರಲಾಲರ ಘೋಷಣೆ. ಹಿಂದುಸ್ಥಾನವು ಜಪಾನ ಇಲ್ಲವೆ ಜರ್ಮನಿ ಜನಾಂಗಗಳ ಆಧೀನವಾಗುವದೆಂದು ಯಾರೂ ಕನಸು-ಮನಸಿನಲ್ಲಿ ಎಣಿಸಕೂಡದು. ಜರ್ಮನಿಯ ಹಿಟ್ಲರನನ್ನೂ ಆತನ ನಿರಂಕುಶ ವಾದವನ್ನೂ ನಿತಾಂತ ಜರ್ಮನ ಲೋಕ ಪ್ರಭುತ್ವವನ್ನೂ ಹಿಂದ-ಜನಾಂಗವು ಒಮ್ಮೆಲೇ ಧಿಃಕರಿಸುತ್ತದೆ. ಹಿಟ್ಲರನ ಜರ್ಮನ ಸಂಪ್ರದಾಯ ಗೆದ್ದರೆ ಲೋಕಕ್ಕೆ ಸಂಕಟವಿಡುವದಾಗಿ ನಮ್ಮ ರಾಷ್ಟ್ರೀಯ ಸಭೆಗೆ ಒಪ್ಪಿಗೆಯುಂಟು. ಲೋಕದಲ್ಲಿ ಶಾಂತಿಯಾಗಬೇಕಾದರೆ ಹಿಟ್ಲರ-ಪಂಥ ಇಲ್ಲವೆ ಹಿಟ್ಲರಧರ್ಮ ಸಂಪೂರ್ಣ ನಾಶ ಹೊಂದಲೇಬೇಕು ಆದರೆ ಬ್ರಿಟಿಶ ತತ್ವಜ್ಞಾನಿಗಳಾದ ನೇಕ ನಾಮದಾರ ವ್ಹೈಕೌಂಟ ಸೆಮ್ಯುಅಲರವರು ಬ್ರಿಟಿಶ ತತ್ವಜ್ಞಾನ ಸಂಸ್ಥೆಯಲ್ಲಿ ಯುದ್ಧ ಕಾರಣಗಳ ಮೀಮಾಂಸೆ ಮಾಡುವಾಗ ನುಡಿದಂತೆ, ಲೋಕದ ಪರಿಸ್ಥಿತಿಯ ಫಲರೂಪವಾಗಿ ಹಿಟ್ಲರ ಜನ್ಮತಾಳಿದ್ದಾನೆ 'Nothing can be worse than our present conditions. At all events these leaders will do *something*. And anything is better than nothing" ಎಂದು ದೊರೆಗಳ ಅಭಿಪ್ರಾಯ. ಸಂಕಟಗ್ರಸ್ತ ಜರ್ಮನ ಜನಾಂಗಕ್ಕೆ ಹಿಟ್ಲರನು ಹುರಿದುಂಬಿಸಿ ಈ ಯುದ್ಧವನ್ನು ಹೂಡಿದ್ದಾನೆಂಬ ಮಾತು ಈವಾಗ ಸ್ಪಷ್ಟವಾದದ್ದು. ಜರ್ಮನ ಜನಾಂಗವನ್ನು ನಿರ್ವೀರ್ಯಗೊಳಿಸಿ ಯುದ್ಧದ ಫಲವನ್ನು ವಿಜಯಶಾಲಿ ಜನಾಂಗಗಳು ಉಣ್ಣುತ್ತವೆಂದು ಸಿದ್ಧಾಂತ ಮಾಡಿದರೆ ವಸ್ತುಸ್ಥಿತಿಯ ವಿಪರ್ಯಾಸವಾಗದಾಗಿ ನಾವು ಎಣಿಸುತ್ತೇವೆ. ಪಂ॥ ಜವಾಹಿರಲಾಲರು ಬಾರ್ಡೋಲಿಯೊಳಗಿನ ಭಾಷಣದಲ್ಲಿ ಇಂಥ ತಪ್ಪು ಮುಂದೊದಗದಂತೆ ಜಾಗ್ರತೆ ಕೊಳ್ಳಬೇಕಾಗಿ ಪ್ರೇರೇಪಿಸುತ್ತಾರೆ. ಹಿಟ್ಲರ-ಧರ್ಮವನ್ನು ನಿರ್ನಾಮಗೊಳಿಸುವಾಗ ಸಾಮ್ರಾಜ್ಯವಾದದ ಪುರಸ್ಕಾರವಾಗದಂತೆ ಜಾಗ್ರತೆ ಕೊಳ್ಳುವದಾದರೂ ನಮ್ಮ ಕರ್ತವ್ಯವಿದೆ ಚಿಕ್ಕಪುಟ್ಟ ಜನಾಂಗಗಳನ್ನು ಸುಲಿದು ಸ್ವತಃ ಐಶ್ವರ್ಯವಂತನಾಗಿ ಕೊಬ್ಬುವದು ಸಾಮ್ರಾಜ್ಯವಾದದ ಲಕ್ಷಣ. ಇದನ್ನು ರಾಷ್ಟ್ರೀಯ ಸಭೆಯು ಪ್ರತಿಭಟಿಸುವದಾಗಿ, ಪ್ರತಿಭಟಿಸಬೇಕಾಗಿ ಪಂ॥ ಜವಾಹಿರಲಾಲರ ನಿಗ್ರಹ. ಬ್ರಿಟಿಶರು ಸೋತೊಡನೆ ಹಿಂದುಸ್ಥಾನವು ಮಹತ್ವಾಕಾಂಕ್ಷಿ ಜಪಾನ-ಜರ್ಮನಿಗಳ ಸ್ವಾಧೀನವಾಗಿ ಪಾರತಂತ್ರ್ಯದಲ್ಲಿ ಕೊಳೆಯುತ್ತಿರಬೇಕಾಗುವದೆಂಬದನ್ನು ಸಾಮ್ರಾಜ್ಯವಾದಿ ಬ್ರಿಟಿಶರು ಹಿಂದುಸ್ಥಾನಕ್ಕೆ ಯುದ್ಧೋತ್ತರ ಕಲ್ಯಾಣ ಮಾಡಬಯಸುತ್ತಾರೆಂಬದನ್ನೂ ಪಂ॥ ಜವಾಹಿರಲಾಲರು ನಂಬುವದಿಲ್ಲ. ದುರ್ಬಲ ಜನಾಂಗಗಳನ್ನು ಸುಲಿಯುವ ಪ್ರವೃತ್ತಿ ಸಾಮ್ರಾಜ್ಯಕರ್ತರಲ್ಲಿ ಬೇರೂರಿಕೊಂಡಿರುವಾಗ ಅದನ್ನು ಅಲ್ಲಗಳೆಯಲು ಸಾಮ್ರಾಜ್ಯಕರ್ತರು ಒಡಂಬಡದಿರುವಾಗ ಯುದ್ಧೋತ್ತರ ಹಿಂದಜನಾಂಗಕ್ಕೆ ಸ್ವಾತಂತ್ರ್ಯ ಸಿಗುವದೆಂದು ಈಗಲೇ ನಾವು ಮನೋರಾಜ್ಯವನ್ನು ಕಲ್ಪಿಸಿಕೊಳ್ಳುವ ದಡ್ಡತನ. ನೇಕ ನಾ॥ ಶ್ರೀನಿವಾಸ ಶಾಸ್ತ್ರಿಗಳು ಮದ್ರಾಸದೊಳಗೆ ಯುವಜನ ಸಂಘದಲ್ಲಿ ಭಾಷಣ ಮಾಡುವಾಗ ಯುದ್ಧೋತ್ತರ ಹಿಂದ-ಜನಾಂಗ ಸ್ವತಂತ್ರವಾಗುವದೆಂಬ ಘೋಷಣೆ ಮಾಡಬೇಕಾಗಿ ಬ್ರಿಟಿಶ ಜನಾಂಗಕ್ಕೆ ಆಗ್ರಹ ಮಾಡುತ್ತಾರೆ. ಇಂಥ ಘೋಷಣೆಯಿಂದ ಪಂ॥ ಜವಾಹಿರಲಾಲರು ಸಂತೋಷಪಡುವರು ನಾ॥ ಶ್ರೀನಿವಾಸ ಶಾಸ್ತ್ರಿಗಳ ಅಂಬೋಣ. ಆದರೆ ನಾ॥ ಶಾಸ್ತ್ರಿಗಳಿಗೆ ಪಂ॥ ಜವಾಹಿರಲಾಲರ ಅಂತರಂಗದ ಗ್ರಹಿಕೆ ಇಲ್ಲವಾಗಿ ನಮ್ಮ ಅಂಬೋಣ! ರಾಷ್ಟ್ರಸ್ವಾತಂತ್ರ್ಯವನ್ನು ಈಗಲೇ ಮನ್ನಿಸಬೇಕಾಗಿ ಪಂ॥ ಜವಾಹಿರಲಾಲ ಪ್ರಭೃತಿ ರಾಷ್ಟ್ರನಾಯಕರ ಅಂಬೋಣವುಂಟು. ಯುದ್ಧಯತ್ನವನ್ನು ಹಿಂದ-ಜನಾಂಗವು ಮನಃಪೂರ್ವಕವಾಗಿ ಪುರಸ್ಕರಿಸಬೇಕೆಂದು ಸಾಮ್ರಾಜ್ಯ ಸರಕಾರವು ಅಪೇಕ್ಷಿಸುವಾಗ ಈ ರಾಷ್ಟ್ರದ ಮನಸ್ಸನ್ನು ಸ್ವತಂತ್ರಗೊಳಿಸಿದನಕ ಈ ರಾಷ್ಟ್ರವು ಯುದ್ಧಯತ್ನಕ್ಕಾಗಿ ವ್ಯವಹರಿಸುವ ಬಗೆ ಹೇಗೆ? ವ್ಯವಹರಿಸುವ ಶಕ್ತಿಯಾಗಲಿ ಚೈತನ್ಯವಾಗಲಿ ದಕ್ಷತೆಯಾಗಲಿ ನಮ್ಮ ಜನಾಂಗಕ್ಕೆ ಪ್ರಾಪ್ತವಾಗುವ ಬಗೆ ಹೇಗೆ? ಸಾಮ್ರಾಜ್ಯಕರ್ತರಿಗೆ ಆಧೀನವಾಗಿ, ದಾಸರಾಗಿ ಹಿಂದ-ಜನಾಂಗವು ನಡೆಯಬೇಕಾಗಿದ್ದರೆ ಹಿಂದ-ಜನಾಂಗದ ಸ್ವತಂತ್ರ ಯುದ್ಧ-ಪ್ರಯತ್ನವೆಲ್ಲುಳಿಯಿತು? ಹಿಟ್ಲರ-ಧರ್ಮವು ವಿಶ್ವವ್ಯಾಪಿಯಾದರೆ ಲೋಕಸಂಕಟವಾಗುವದೆಂಬ ಸಿದ್ಧಾಂತವನ್ನು ಎಲ್ಲರೂ ಮನ್ನಿಸುತ್ತಾರೆ. ಮತ್ತು ಅದರ ನಾಶವನ್ನು ಎಲ್ಲರೂ ಹಾರೈಸುತ್ತಿದ್ದಾರೆ. ಜರ್ಮನ ಪಕ್ಷದ ವಿಜಯ ವಾರ್ತೆಗಳಿಂದ ಹಿಂದೀ ಜನರು ಗಾಬರಿಗೊಳ್ಳುತ್ತಾರೆ. ಆದರೆ ಅವನ್ನು ಪ್ರತಿಭಟಿಸುವ ಸಾಮರ್ಥ್ಯ ಪಾರತಂತ್ರ್ಯದ ಮೂಲಕ ತಮ್ಮಲ್ಲಿಲ್ಲವೆಂದು ಮರುಗಿ ಕೈ-ಕಾಲು ಮುದುಡಿಕೊಂಡು ಸುಮ್ಮನೆ ಕೂತುಕೊಳ್ಳುವ ಪ್ರಸಂಗ ನಮ್ಮ ಜನಾಂಗಕ್ಕೆ ಪ್ರಾಪ್ತವಾಗಿದೆ. ಜರ್ಮನಿ-ಜಪಾನ ದೇಶಗಳು ನಮ್ಮ ಹಿಂದುಸ್ಥಾನವನ್ನು ಆಕ್ರಮಿಸುವವೆಂಬ ಭೀತಿ ನಮಗಿಲ್ಲ. ಸಾಮ್ರಾಜ್ಯವಾದಿ ಬ್ರಿಟಿಶರನ್ನು ಪ್ರತಿಭಟಿಸುವ ನಿತಾಂತ ಸ್ವಾತಂತ್ರ್ಯವಾದಿಗಳು ಲೋಕಕಂಟಕ ಜರ್ಮನಿ-ಜಪಾನಗಳಿಗೆ ಆಶ್ರಯ ಕೊಡುವರೆಂದು ಯಾರೂ ಎಷ್ಟಕ್ಕೂ ಎಣಿಸಲಾಗದು. ಪಂ॥ ಜವಾಹಿರಲಾಲರು ಈ ವಿಚಾರವನ್ನು ಸಂಪೂರ್ಣವಾಗಿ ನಿರಾಕರಿಸಿ ರಾಷ್ಟ್ರಸ್ವಾತಂತ್ರ್ಯ-ಘಾತಕ ಜನಾಂಗಗಳಿಗೆ ರಾಷ್ಟ್ರೀಯ ಸಭೆಯು ಎದುರಿಸಿಯೇ ತೀರುವದಾಗಿ ನಿರ್ಧಾರದಿಂದ ಸಾರಿದ್ದಾರೆ. ರಾಷ್ಟ್ರಪತಿಗಳಾದ ಮೌ॥ ಅಬುಲ ಕಲಮ ಆಝಾದರವರೂ ನಿತಾಂತ ಸ್ವಾತಂತ್ರ್ಯಕಾಂಕ್ಷಿಗಳಾದ ಪಂ॥ ಜವಾಹಿರಲಾಲರವರೂ ಜಪಾನ ಸರಕಾರದೊಡನೆ ಒಳಸಂಚು ನಡಿಸಿದ್ದಾರೆಂದು ಜಪಾನಿಗಳು ಹುಟ್ಟಿಸಿದ ಲೋಕಪ್ರವಾದ ನಿರಾಧಾರವಾದದ್ದು; ಈ ಮಾತು ಸಂಪೂರ್ಣ ಸುಳ್ಳಂಬಳ್ಳಿಯೆಂದು ಮಂದಮತಿಯು ಸಹ ಹೇಳುವನು! ಸ್ವಾತಂತ್ರ್ಯಕ್ಕಾಗಿಯೇ ರಾಷ್ಟ್ರೀಯ ಸಭೆಯು ಬ್ರಿಟಿಶರನ್ನು ವಿರೋಧಿಸುತ್ತದೆ. ಬ್ರಿಟಿಶರ ಒಡೆತನವನ್ನು ಅಲ್ಲಗಳೆಯುವಾಗ ಜಪಾನ-ಜರ್ಮನಿಗಳ ಒಡೆತನವನ್ನು ಹಿಂದ-ಜನಾಂಗವು ಕಾಂಕ್ಷಿಸುವದಿಲ್ಲ! ಯಾವನೇ ಒಡೆಯನಾದರೂ ಅಗಸನ ಕತ್ತೆಗೆ ಗೋಣು ಮುರಿಯುವ ತನಕ ಒಜ್ಜೆ ಹೊರುವದೇನು ತಪ್ಪುವದಿಲ್ಲ! ಇಂಥ ಘಾತಕ ವ್ಯತ್ಯಾಸವನ್ನು ರಾಷ್ಟ್ರಸಭೆಯು ಕಾಂಕ್ಷಿಸುತ್ತದಾಗಿ ಯಾರೂ ಭಾವಿಸಕೂಡದು.] ರಾಷ್ಟ್ರಸ್ವಾತಂತ್ರ್ಯವೇ ರಾಷ್ಟ್ರೀಯ ಸಭೆಯ ಧ್ಯೇಯ. ಹಿಟ್ಲರ-ವಾದವನ್ನು ದ್ವೇಷಿಸುವದೂ ಸಾಮ್ರಾಜ್ಯ-ವಾದವನ್ನು ಪುರಸ್ಕರಿಸದಿರುವದೂ ರಾಷ್ಟ್ರಸ್ವಾತಂತ್ರ್ಯದ ಅಭಿಮಾನದಿಂದಲೇ ಎಂಬದನ್ನು ಈವಾಗ ಸಮಸ್ತ ಪ್ರಜೆಗಳು ಲಕ್ಷ್ಯದಲ್ಲಿಡತಕ್ಕ ಸಂಗತಿ. ಹಿಟ್ಲರ-ವಾದವನ್ನು ನಾಶಪಡಿಸಬೇಕೆಂಬ ಹವ್ಯಾಸದಲ್ಲಿ, ಹಿಂದ-ಜನಾಂಗ ಈಗ ಪರತಂತ್ರವಾದದ್ದೆಂದೂ ಅದನ್ನು ಸ್ವತಂತ್ರಗೊಳಿಸಬೇಕೆಂದೂ ಹಿಂದಜನಾಂಗವು ಸಾಮ್ರಾಜ್ಯವಾದಿಗಳಿಂದ ಸುಲಿಯಲ್ಪಡುತ್ತದೆಂದೂ ಯಾರೂ ಕಣ್ಮರೆ ಮಾಡಲಾಗದು. ಹಿಟ್ಲರ-ವಾದ ನಾಶಗೊಳಿಸಲೆತ್ನಿಸುವಾಗ ಸಾಮ್ರಾಜ್ಯವಾದಕ್ಕೆ ಪ್ರೋತ್ಸಾಹ ಸಿಗದಂತೆ ಹಿಂದ-ಜನಾಂಗ ಈ ಜಾಗರೂಕತೆಯನ್ನು ಹಿಡಿಯುವದವಶ್ಯವೆಂಬ ಸಂಗತಿಯನ್ನೂ ಲಕ್ಷ್ಯದಲ್ಲಿಡುವದವಶ್ಯ. ಉಭಯ ವಾದಗಳೂ ಲೋಕಕಂಟಕವಾದವುಗಳು. ಪಂ॥ ಜವಾಹಿರಲಾಲ ಪ್ರಭೃತಿ ರಾಷ್ಟ್ರೀಯ ಸಭೆಯವರ ಧೋರಣ ಈ ಪ್ರಕಾರದ್ದಿದೆ. ಹಿಟ್ಲರ-ವಾದ ವಿಜಯ ಹೊಂದುವದೆಂಬ ಗಾಬರಿಯನ್ನು ಲೋಕದಲ್ಲಿ ಹಬ್ಬಿಸಿ, ಸಾಮ್ರಾಜ್ಯವಾದದ ಲೋಕಸಂಕಟವನ್ನು ಮರೆಮಾಡಿ, ಸಾಮ್ರಾಜ್ಯವಾದಿಗಳು ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳಲು ಹವಣಿಸುತ್ತಾರಾಗಿ ರಾಷ್ಟ್ರಸಭೆಯ ಪ್ರಮುಖರು ಪೂರ್ವಾಪರ ವಿಚಾರದಿಂದ ಪ್ರತಿಪಾದಿಸುತ್ತಾರೆ. ಹಿಂದುಸ್ಥಾನವನ್ನು ಸ್ವತಂತ್ರಗೊಳಿಸುವದಿದ್ದರೆ, ಹಿಂದುಸ್ಥಾನವು ಸ್ವತಂತ್ರ ಜನಾಂಗಗಳ ಪಂಕ್ತಿಯಲ್ಲಿ ವ್ಯವಹರಿಸಬೇಕಾಗಿದ್ದರೆ, ಆ ದರ್ಜೆಯನ್ನು ಹಿಂದುಸ್ಥಾನಕ್ಕೆ ಕೂಡಲೆ ಗಳಿಸಿಕೊಡುವದು ಸಾಮ್ರಾಜ್ಯಕರ್ತರ ಕರ್ತವ್ಯವೇ ಸೈ! ಯುದ್ಧವನ್ನು ಗೆಲ್ಲುವ ದೆಸೆಯಿಂದ ಸಾಮ್ರಾಜ್ಯಕರ್ತರು

ಹಿಂದುಸ್ಥಾನದ ಸಹಾಯವನ್ನು ಅಪೇಕ್ಷಿಸುತ್ತಾರೆ. ಆ ಸಹಾಯದಿಂದ ಸಂಪಾದಿಸಿದ ವಿಜಯ-ಕಾಲದಲ್ಲಿ ಹಿಂದುಸ್ಥಾನಕ್ಕೆ ಪೂರ್ಣ ಸ್ವಾತಂತ್ರ್ಯ ಕೊಡುವ ಅಭಿಲಾಷೆ ನಮ್ಮ ಬ್ರಿಟಿಶ ಸಾಮ್ರಾಜ್ಯಕರ್ತರಿಗುಂಟು ಇದು ದಿಟವಾಗಿದ್ದರೆ ಈಗಲೇ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಕೊಟ್ಟು ವಿಜಯವನ್ನು ತ್ವರೆಪಡಿಸಿಕೊಳ್ಳಲು ಅಡ್ಡಿಯೇನಿದೆ? ಸ್ವಾತಂತ್ರ್ಯ ದೊರೆತನಕ ಯುದ್ಧಯತ್ನ ಸರಿಯಾಗಿ, ಸಂಘಟಿತವಾಗಿ ನಡೆಯದೆಂದು ಸಾಮ್ರಾಜ್ಯಕರ್ತರಿಗೆ ಹಿಂದುಸ್ಥಾನದೊಳಗಿನ ಪರಿಸ್ಥಿತಿಯ ಮೇಲಿಂದ ಸ್ಫುಟವಾಗುತ್ತದೆ. ಯುದ್ಧಯತ್ನಕ್ಕಾಗಿ ಹಿಂದವಾಸಿಯರು ಸ್ವಾತಂತ್ರ್ಯವನ್ನು ಆಗ್ರಹದಿಂದ ಕೇಳುವಾಗ ಅದನ್ನು ಅಲ್ಲಗಳೆಯುವದು ಯಾವ ಸಭ್ಯತನ? ವ್ಯವಹಾರಿಕರು ಈ ನಡಾವಳಿ ಮೊಂಡತನವೆಂದು ಅಧಿಕ್ಷೇಪಿಸದಿರರು. ಹಿಟ್ಲರ-ವಾದವನ್ನು ನಿಂದಿಸುವ ಸಾಮ್ರಾಜ್ಯವಾದಿಗಳು ಈ ವಿಚಾರ-ಸರಣಿಯನ್ನು ಆಳವಾಗಿ ಪರಾಂಬರಿಸಿ, ಹಿಂದ-ಜನಾಂಗವನ್ನು ಸ್ವತಂತ್ರಗೊಳಿಸಿ ಯುದ್ಧ-ಯತ್ನವನ್ನು ಪುರಸ್ಕರಿಸಯೋಜಿಸುವರೆಂದು ನಮ್ಮ ನಂಬಿಗೆ. ಬರೇ ಹಿಟ್ಲರ-ವಾದದ ವಿಜಯದ ಹೆದರಿಕೆಯಿಂದ ಹಿಂದಲೋಕದೊಳಗೆ ಗಾಬರಿಯನ್ನುಂಟು ಮಾಡುವದೂ ಆ ಗಾಬರಿಯಲ್ಲಿ ಸಾಮ್ರಾಜ್ಯ-ಪಾಪವನ್ನು ವಿಸ್ಮರಣ ಮಾಡಿಸಿ ಸ್ವ-ಕಾರ್ಯಸಾಧನೆ ಮಾಡಬಯಸುವದೂ ಈಗಿನ ಲೋಕಜಾಗೃತಿಯ ದಿನಮಾನದಲ್ಲಿ ಅಶಕ್ಯವಾದುದೆಂದು ನಾವಾಗಿ ಹೇಳುವದು ಬೇಡ.

ಘೋರ ಯುದ್ಧಪ್ರಸಂಗ!

*

[ನಿರೀಕ್ಷಕನು ಬರೆದುದು.]

ಈವಾಗ ಯುದ್ಧವು ಒಳ್ಳೇ ಇಕ್ಕಟ್ಟಿನ ಸ್ಥಿತಿಗೆ ಬಂದು ತಲ್ಪಿತು! ಬ್ರಿಟಿಶ ಮಹಾ ಪ್ರಧಾನರಾದ ಚರ್ಚಿಲ್ಲರು ಸುದ್ದಿಸುಳುವಿಲ್ಲದೆ ಅಮೇರಿಕೆಯ ರಾಜಧಾನಿಯಾದ ವಾಶಿಂಗಟನಕ್ಕೆ ಹೋಗಿ ಅಮೇರಿಕೆಯ ಅಧ್ಯಕ್ಷರಾದ ರೂಝವೆಲ್ಟರವರೊಡನೆ ಯುದ್ಧಯೋಜನೆಯನ್ನು ಕಲ್ಪಿಸತೊಡಗಿದ್ದಾರೆ. ಚರ್ಚಿಲ್ಲರ ಜೊತೆಗೆ ಸೈನ್ಯಾಧಿಕಾರಿಗಳೂ ನೌಕಾಧಿಕಾರಿಗಳೂ ಇದ್ದರು. ಅವರೆಲ್ಲರೂ ಯಾವತ್ತೂ ಪರಿಸ್ಥಿತಿಯನ್ನು ಸಮಾಲೋಚಿಸಿದರಂತೆ. ಭೂಮಧ್ಯಸಮುದ್ರದಲ್ಲಿ ಹೇಗೆ ಜರ್ಮನಿಯನ್ನು ಪ್ರತಿಭಟಿಸಬೇಕು? ಪೆಸಿಫಿಕ್ ಯಾನೆ ಶಾಂತ ಸಾಗರದಲ್ಲಿ ಜಪಾನದ ಚಪಲಚೇಷ್ಟೆಗಳನ್ನು ಹೇಗೆ ನಿರ್ಬಂಧಿಸಬೇಕು? ಯಾವ್ಯಾವ ಕಡೆಗಳಲ್ಲಿ ಸೈನ್ಯಗಳನ್ನು ಹೇಗೆ ಹಂಚಿಹಾಕಬೇಕು? ಇವೇ ಮೊದಲಾದ ವಿಷಯಗಳು ಚರ್ಚಿಸಲ್ಪಟ್ಟವಂತೆ. ರುಶ್ಯ ರಾಯಭಾರಿಯಾದ ಲಿಟ್ವಿನೋಫರವರನ್ನು ಚರ್ಚಿಲ್ಲರೂ ರೂಝವೆಲ್ಟರೂ ನಿಮಂತ್ರಿಸಿ ಶನಿವಾರ ಭೋಜನ ಮಾಡಿದರು. ಬ್ರಿಟನ, ಅಮೇರಿಕಾ, ಜಪಾನಗಳೊಳಗೆ ಯುದ್ಧ-ಘೋಷಣೆಯಾದರೂ ಬ್ರಿಟನ-ಅಮೇರಿಕೆಗಳ ಮಿತ್ರ-ಜನಾಂಗವಾದ ರುಶ್ಯ-ಸರಕಾರವು ಜಪಾನದ ಮೇಲೆ ಯುದ್ಧಘೋಷಣೆ ಮಾಡಲಿಲ್ಲ. ರುಶ್ಯ-ಜಪಾನ ಜನಾಂಗಗಳು ಇನ್ನೂ ಮಿತ್ರ-ಜನಾಂಗಗಳಂತೆ! ಶತ್ರು-ಜನಾಂಗಗಳಲ್ಲವಂತೆ!! ಸ್ಪೇನ, ತುರ್ಕಸ್ಥಾನ ಜನಾಂಗಗಳು ಜರ್ಮನ ಪಕ್ಷಕ್ಕೆ ಕೂಡಬಹುದಾಗಿ ನನ್ನದೊಂದು ಊಹೆ. ಸ್ಪೇನ-ತುರ್ಕಸ್ಥಾನ ಜನಾಂಗಗಳ ಮೇಲೆ ಹಿಟ್ಲರನು ಬಲಾತ್ಕಾರ ನಡಿಸುತ್ತಾನೆಂಬ ವಾರ್ತೆ ಹಬ್ಬಿದೆ. ಜರ್ಮನ ರಾಯಭಾರಿಯಾದ ಫೊಪೇನರವರಿಗೂ ತುರ್ಕಸ್ಥಾನದ ಅಧ್ಯಕ್ಷರಾದ ಇನೆನುರವರಿಗೂ ೩—೪ ದಿವಸಗಳ ಹಿಂದೆ ಸಮಕ್ಷ ಸಂಭಾಷಣವಾಯಿತು. ಸಂಭಾಷಣದ ವಿವರಗಳು ಪ್ರಕಟವಾಗಿಲ್ಲ. ಆದರೆ ಬಹುತರವಾಗಿ ತುರ್ಕಸ್ಥಾನವು ಬ್ರಿಟಿಶರಿಗೆ ಕೂಡುವ ಕಾರಸ್ಥಾನಗಳು ನಡೆದಿವೆ. ಹಿಟ್ಲರನು ಜರ್ಮನಿಯ ಸೇನಾಪತಿಗಳಿಗೆ ರಜೆ ಕೊಟ್ಟು ಸಕಲ ಚತುರಂಗ ಬಲಗಳ ಪ್ರಭುವಾದ್ದರಿಂದ ಉತ್ತರ ಆಫ್ರಿಕೆಯ ಪಾರ್ಶ್ವದಲ್ಲಿ ಆತನು ದಂಡೆತ್ತಿಕೊಂಡು ಹೋಗುವನೆಂದು ಸುದ್ದಿಗಾರರು ತರ್ಕಿಸುತ್ತಾರೆ ರುಶ್ಯ ದೇಶದೊಳಗಿನ ರುಶ್ಯ ವಿಜಯ-ವಾರ್ತೆಗಳನ್ನು ನೀವು ಓದುತ್ತೀರಷ್ಟೆ. ಆದರೆ ಜರ್ಮನರು ಪೂರ್ವಸಂಕೇತದಂತೆ ಹಿಂಜರಿದು ಬರುತ್ತಾರಾಗಿ ಕೆಲವರ ಅಂಬೋಣ. ಪೂರ್ವಸಂಕೇತವಿರಲಿ ಇಲ್ಲವೆ ಉತ್ತರ ಯೋಜನೆಯಿರಲಿ; ರುಶ್ಯ ಯುದ್ಧದಲ್ಲಿ ಜರ್ಮನರು ಹಿಂಜರಿಯುತ್ತಿದ್ದಾರೆಂಬ ಮಾತು ದಿಟ! ಗೆದ್ದುಕೊಂಡ ಪ್ರದೇಶವನ್ನು ಜರ್ಮನರು ಕಾಪಾಡಿಕೊಳ್ಳಲಸಮರ್ಥರೆಂಬ ಮಾತು ಸಹ ದಿಟವಾದದ್ದು! ರುಶ್ಯ ರಣಭೂಮಿಯೊಳಗಿನ ಪರಾಜಯಗಳಿಂದ ಹಿಟ್ಲರನ ರಣಸೊಕ್ಕು ಮುರಿಯಲಿಲ್ಲವೆಂಬ ಸಂಗತಿ ಮಾತ್ರ ಲಕ್ಷದಲ್ಲಿಡತಕ್ಕಂತಹದು! ಇನ್ನು ಮುಂದೆ ಘೋರ ಪ್ರಸಂಗ ಬರುವದರಿಂದಲೇ ಮಹಾ ಪ್ರಧಾನರಾದ ಚರ್ಚಿಲ್ಲರು ರೂಝವೆಲ್ಟರನ್ನು ಕಾಣಲು ವಾಶಿಂಗಟನ್ನ ತನಕ ಪ್ರವಾಸ ಮಾಡುವ ಸಾಹಸವನ್ನು ಕೈಕೊಂಡರೆಂದು ನಾನು ತಿಳಿಯುತ್ತೇನೆ. ಈ ಯೋಜನೆಯ ರೂಪರೇಷೆ ಇನ್ನೊಂದೆರಡು ವಾರಗಳಲ್ಲಿ ಪ್ರಕಟವಾಗಬಹುದು

ಇನ್ನು ಶಾಂತಸಾಗರದೊಳಗಿನ ಯುದ್ಧವಾರ್ತೆಗಳನ್ನು ತಿಳಕೊಳ್ಳುವ. ಬ್ರಿಟಿಶರ ಹೋಂಗಕೊಂಗ ದ್ವೀಪ ಜಪಾನರ ಸ್ವಾಧೀನವಾಯಿತು. ತಾವು ಯುದ್ಧ-ಕೈದಿಯಾಗಿ ಶತ್ರು-ಸ್ವಾಧೀನವಾಗುವ ತನಕ ಹೋರಾಡುವೆವೆಂದು ಹೋಂಗಕೊಂಗದ ಬ್ರಿಟಿಶ ಗವ್ಹರ್ನರರು ಘೋರ ಪ್ರತಿಜ್ಞೆ ಮಾಡಿ ನಿಕರದಿಂದ ಹೋರಾಡಿದರು. ಆದರೆ ಜಪಾನದ ಸೈನಿಕರು ತಂಡಗಟ್ಟಿಕೊಂಡು ನಾಲ್ಕೂ ಬದಿಯಿಂದ ಮುತ್ತಿಗೆ ಹಾಕಿ ಬ್ರಿಟಿಶ ಸೈನಿಕರಿಗೆ ನೀರು ಸಹ ಸಿಗದಂತೆ ನಿರ್ಬಂಧಿಸಿದ್ದರಿಂದ ನಿರುಪಾಯವಾಗಿ ಶತ್ರುಗಳಿಗೆ ಗವ್ಹರ್ನರರು ಶರಣು ಹೋಗಬೇಕಾದ ವಾರ್ತೆಯನ್ನು ಕೇಳಿ ಸಾಮ್ರಾಜ್ಯ ಸರಕಾರದ ವಸಾಹತು ಇಲಾಖೆಯವರು ಬಹು ವ್ಯಸನಪಡುತ್ತಾರೆ. ಎಲ್ಲರಿಗೂ ವ್ಯಸನ-ವಾರ್ತೆಯೇ ಇದು! ಅಮೇರಿಕೆಯ ಫಿಲಿಪಾಯಿನ ನಡುಗಡ್ಡೆಗಳೂ ಜಪಾನದ ವಶವಾಗಬಹುದು. ಫಿಲಿಪಾಯಿನದ ರಾಜಧಾನಿ ಮಣಿಲಾ ಪಟ್ಟಣ ಶತ್ರುಗಳ ಬಲಾತ್ಕಾರದಲ್ಲಿ ಸಿಲುಕಿ ಹೋರಾಡುತ್ತಿದೆ. ಜಪಾನಿಯರು ಘೋರವಾದ ವಿಮಾನ-ದಾಳಿಯನ್ನು ಪ್ರಾರಂಭಿಸಿದ್ದಾರೆ. ಉತ್ತರ-ದಕ್ಷಿಣ ಪಾರ್ಶ್ವಗಳಿಂದ ಜಪಾನಿ ಸೈನ್ಯಪಥಕಗಳು ಆವೇಶದಿಂದ ದಂಡೆತ್ತಿಕೊಂಡು ಹೋಗಹತ್ತಿವೆ ಮಣಿಲಾದಲ್ಲಿ ಕೂಡಲೆ ಸಹಾಯ ಸಿಗದಿದ್ದರೆ ಮಣಿಲಾಪಟ್ಟಣ ಶತ್ರುವಶವಾಗುವದು ಖಂಡಿತವಾದ ಮಾತು. ಪ್ರತ್ಯಕ್ಷ ರಣಭೂಮಿ ೫೦ ಮೈಲು ದೂರವಿದೆ. ಆದರೆ ಮಣಿಲಾ ಬಂದರದ ಮೇಲೆ ಜಪಾನದ ವಿಮಾನಗಳು ಹಾರಿ ಹೋಗಿ ಬಾಂಬುಗಳನ್ನೊಗೆದು ಇಡೀ ಪಟ್ಟಣಕ್ಕೆ ಬೆಂಕಿ ಕೊಟ್ಟವೆ. ಇಗರ್ಜಿಗಳೂ ವಿದ್ಯಾಲಯಗಳೂ ಉರಿಯುತ್ತಿವೆ. ಅನೇಕರು ತೀರಿಕೊಂಡರು. ಮಾರ್ಗಗಳಲ್ಲಿ ಅಲ್ಲಲ್ಲಿ ಬಿರುಕುಗಳು ಬಿದ್ದಿವೆ. ಹೀಗೆ ಫಿಲಿಪಾಯಿನ ದ್ವೀಪದ ಅವಸ್ಥೆ! ಫಿಲಿಪಾಯಿನ, ಹೋಂಗಕೊಂಗ ಇವೆರಡೂ ಪ್ರದೇಶಗಳೂ ಜಪಾನದ ವಶವಾದ್ದರಿಂದ ಸಿಂಗಾಪುರದ ಪರಿಸ್ಥಿತಿ ಇಕ್ಕಟ್ಟಿನದಾಗಿದೆ, ಆದ್ದರಿಂದ ಬ್ರಿಟಿಶ ಯುದ್ಧ ಇಲಾಖೆಯವರು ದಕ್ಷ ಸೇನಾಪತಿಗಳಾದ ವ್ಹೆವೆಲರವರನ್ನು ಸಿಂಗಾಪುರಕ್ಕೆ ರವಾನಿಸಿದ್ದಾರೆ. ಆಸ್ಟ್ರೇಲಿಯಾದಲ್ಲಿ ಸಕಲ ಯುದ್ಧ ಸಿದ್ಧತೆಗಳಾಗುತ್ತಿವೆ. ಮುಖ್ಯರಾದ ಪ್ರಧಾನ ಮಿ॥ ಕರ್ಟಿನರು ಜಪಾನವನ್ನು ಪ್ರತಿಭಟಿಸುವ ಯಾವತ್ತೂ ಸಿದ್ಧತೆ ತಮ್ಮಲ್ಲಿರುವದಾಗಿ ಆಕಾಶವಾಣಿಯಿಂದ ಜನಗಳಿಗೆ ಧೈರ್ಯ ಕೊಡುತ್ತಾರೆ. ಸಿಂಗಾಪುರದ ರಕ್ಷಣೆ ನಮ್ಮ ಹಿಂದುಸ್ಥಾನಕ್ಕೂ ಆಸ್ಟ್ರೇಲಿಯಾಕ್ಕೂ ಸಂಬಂಧವಿದ್ದದ್ದು. ರಂಗೂನದ ಮೇಲೆ ಪುನಃ ಗುರುವಾರ ದಾಳಿಯಾಯಿತು. ಶತ್ರು-ವಿಮಾನಗಳು ಸೈನ್ಯಕೇಂದ್ರಗಳಿಗೆ ಕೊಂಚ ಪೆಟ್ಟು ಕೊಟ್ಟವಾಗಿ ದಿಲ್ಲಿಯಿಂದ ಸುದ್ದಿ ಹೊರಟಿದೆ. ಈ ದಾಳಿಯಲ್ಲಿ ಸೇರಿದ ೩೦ ವೈರಿ ವಿಮಾನಗಳು ನೆಲಕ್ಕುರುಳಿಸಲ್ಪಟ್ಟವು. ಬಂಗಾಲ ಪ್ರಾಂತವು ಆಪತ್‌ಪ್ರದೇಶವೆಂದು ಸರಕಾರದ ಘೋಷಣೆಯಾಗಿದೆ ರಂಗೂನಿನಿಂದ ಜನರು ಹೊರಹೊರಡುತ್ತಿದ್ದಾರೆ. ಕಲಕತ್ತೆಯಿಂದಲೂ ಜನರು ಹೊರಹೊರಡುತ್ತಿದ್ದಾರೆ. ವಿಮಾನ-ದಾಳಿಯಾದಲ್ಲಿ ಜನಗಳಿಗೆ ಆತ್ಮರಕ್ಷಣೆ ಮಾಡಿಕೊಳ್ಳಲು ಅನುಕೂಲವಾಗಬೇಕೆಂದು ರಾತ್ರೆ ಕಾಲದಲ್ಲಿ ಮುಚ್ಚುವ ಉಪವನಗಳನ್ನೆಲ್ಲ ತೆರೆದಿಡಬೇಕೆಂದು ಸರಕಾರದ ಹುಕುಮು ಹೊರಟಿದೆ. ಪೆನಾಂಗ ಪಟ್ಟಣದಿಂದ ಕೆಳಕ್ಕೆ ಜಪಾನಿ ದಂಡುಗಳು ನುಗ್ಗುತ್ತಿವೆ. ಹೀಗೆ ನಾಲ್ಕೂ ಬದಿಯಿಂದ ಸಿಂಗಾಪುರವನ್ನು ಮುತ್ತುವ ವ್ಯೂಹವನ್ನು ಜಪಾನ ಯುದ್ಧ ಇಲಾಖೆಯವರು ನಡಿಸಿದ್ದಾರೆ

ಆದರೆ ಜಪಾನದ ವಿಜಯಗಳಿಂದ ಗಾಬರಿಯಾಗುವ ಕಾರಣವಿಲ್ಲ ಬ್ರಿಟಿಶ ಮಹಾ ಪ್ರಧಾನರಾದ ಚರ್ಚಿಲ್ಲರವರು ವಾಶಿಂಗಟನ್ನದೊಳಗೆ ಸೇರಿದ ಲೋಕಪ್ರತಿನಿಧಿಗಳ ಸಭೆಯಲ್ಲಿ ನುಡಿದಂತೆ ಜಪಾನದ ವಿಜಯಗಳಿಗೆ ಅಷ್ಟೊಂದು ಮಹತ್ವವಿಲ್ಲವಂತೆ ಅವು ಕೊನೆಯ ವಿಜಯ-ನಿರ್ಣಯಗಳಲ್ಲವಂತೆ. ಉತ್ತರ ಆಫ್ರಿಕೆಯಲ್ಲಿಯೇ ನಿಜವಾದ ಸಂಗ್ರಾಮವಿರುವದೆಂದೂ ಅಲ್ಲಿ ಬ್ರಿಟಿಶರು ವಿಜಯ ಹೊಂದುತ್ತಿರುವರಾಗಿಯೂ ಅದರಿಂದಲೇ ಶತ್ರುಗಳು ಪರಾಭವ ಹೊಂದುವರಾಗಿಯೂ ಚರ್ಚಿಲ್ಲರು ಹೇಳುತ್ತಾರೆ. ಉತ್ತರ ಆಫ್ರಿಕೆಯೊಳಗಿನ ಯುದ್ಧಕ್ಕೆ ಇನ್ನೂ ಕಳೆಯೇರಲಿಲ್ಲ ಸ್ಪೇನದ ಮನೋನಿರ್ಣಯವಾಗಿ ಜಿಬ್ರಾಲ್ಟರದ ಮೇಲೆ ದಾಳಿಯಾದನಕ ಈ ಪಾರ್ಶ್ವದಲ್ಲಿ ರಣದೇವಿಗೆ ಆವೇಶ ತುಂಬುವದಿಲ್ಲ. ಈ ತನಕ ಬಲ್ಗೇರಿಯವು ತಟಸ್ಥ ಜನಾಂಗವಾಗಿದ್ದಿತು. ಬ್ರಿಟನ-ಅಮೇರಿಕೆಯವರು ಆ ಜನಾಂಗದ ಮೇಲೆ ಯುದ್ಧ ಸಾರಿದ್ದಾರೆ. ಆದರಿಂದ ತುರ್ಕಸ್ಥಾನಕ್ಕೆ ನೆರೆಯ

(೬ನೇ ಪುಟದ ಮೇಲೆ ಮುಂದರಿಸಿದೆ.)

ಸ್ಥಾನಿಕ ವೃತ್ತಾಂತ.

ಕುಮಟಾ— ಹಗಲು ವಿಶೇಷ ಶೆಕೆ, ರಾತ್ರಿಯಲ್ಲಿ ಮಾತ್ರ ತುಸು ತುಸು ಚಳಿಯಾಗುತ್ತಿದೆ. ಹಿಂದೆ ೨ ದಿನ ಚಳಿ ಬಿದ್ದಾಗ ಕೆಲವೊಂದು ಮಾವಿನ ಮರಗಳು ಹೂ ಬಿಟ್ಟಿದ್ದವು. ಆದರೆ ಮುಂದೆ ಶೆಕೆ ಬಿದ್ದದ್ದರಿಂದ ಅದೆಲ್ಲ ಉದುರಿ ಹೋಯಿತು. ಈಗೆಲ್ಲೂ ಮಾವಿನ ಹೂ ಕಣ್ಣಿಗೆ ಕಾಣುವದಿಲ್ಲ. ಈ ವರ್ಷ ಮಾವಿನಕಾಯಿ, ಮಾವಿನ ಹಣ್ಣುಗಳಿಗೆ ದುಷ್ಕಾಳ ಬೀಳಬಹುದು. ಈ ವಾರ ಧಾನ್ಯ ದವಸುಗಳ ಧಾರಣೆಯು ಏರಾಟಕ್ಕೆ ತಡೆಬಿದ್ದದ್ದು ಕಂಡುಬರುತ್ತಿದೆ.

ಕಳೆದ ವಾರ ಹ|| ಭ|| ಪ|| ಮಾರುತಿಬುವಾರವರು ತಮ್ಮ ಶಿಷ್ಯಮಂಡಳಿ ಸಹಿತ ಈ ಊರಿಗೆ ಆಗಮಿಸಿದ್ದರು. ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ ಮುಂದಿನ ಪಟಾಂಗಣದಲ್ಲಿ ೨, ಶ್ರೀ ಅಮ್ಮನವರ ದೇವರ ಗುಡಿಯ ಸಮಿಪ ೨, ಹೀಗೆ ಅವರ ನಾಲ್ಕು ಕೀರ್ತನೆಗಳಾದವು.

ಬಾಡದಲ್ಲೂ ಸರಾಯಿಯ ವ್ಯಾಪಾರ ಬಹಳವಾಗಿದೆಯೆಂದು ಸುದ್ದಿ. ದೋಣಿಗಳಲ್ಲಿ ಗೋವೆಯಿಂದ ಸರಾಯಿ ಆಮದಾಗುತ್ತಿದೆಯಂತೆ. ತಾ ೧೫ನೇಗೆ ಅಬಕಾರಿ ಅಧಿಕಾರಿಗಳು ನಾಗಪ್ಪ ನಾಯ್ಕ ಎಂಬವನ ಅಂಗಡಿಯಲ್ಲಿ ಝಡತಿ ಮಾಡಲಾಗಿ ಕೆಲವಷ್ಟು ಗಾಂಜಾ ಸೊಪ್ಪು, ಮತ್ತು ಮನೆಯಲ್ಲಿ ಝಡತಿ ಮಾಡಲಾಗಿ ೬-೮ ಬಾಟ್ಲಿ ಹಿಡಿಯಬಹುದಾದ ಮತ್ತು ಸರಾಯಿಯ ವಾಸನೆ ಬರುವ ೧ ಭರಣಿಯೂ ಮನೆಯ ಹೊರಬದಿಗಿರುವ ಬೈಲು ಟಟ್ಟಿಯಲ್ಲಿ ೪ ೫ ಬಾಟ್ಲಿಯಷ್ಟು ಸರಾಯಿಯಿಂದ ತುಂಬಿದ ಇನ್ನೊಂದು ಭರಣಿಯೂ ಸಿಕ್ಕವಂತೆ. ಆದರೂ ಸರಾಯಿಯ ಆಯಾತ ಕಡಿಮೆಯಾಗಿಲ್ಲ. ಇಲ್ಲವೆ ಸರಾಯಿ ಕುಡಿಯುವವರಿಗೆ ಸರಾಯಿಯ ಕೊರತೆ ಬಿದ್ದಿರುವದಿಲ್ಲ. ಸರಕಾರದವರು ಸರಾಯಿಯ ನಿರ್ಬಂಧದ ಬಗ್ಗೆ ಕಠೋರ ಉಪಾಯಯೋಜನೆ ಮಾಡದಿದ್ದಲ್ಲಿ ಆ ವ್ಯಾಪಾರ ಅನಿರ್ಬಂಧವಾಗಿ ನಡೆಯುವದು ಸರಿ.

ತೋಟಿಗಾರರ ಒಪ್ಪಿಗೆಯುಳ್ಳದಿದ್ದಾಗ್ಯೂ ತೋಟಗಳಲ್ಲಿ ಒತ್ತಾಯದಿಂದ ಬೋರ್ಡೋ ಮಿಶ್ರಣವನ್ನು ಸಿಂಪಡಿಸತಕ್ಕದ್ದೆಂದೂ ಅದರ ವೆಚ್ಚವನ್ನು ತೋಟಿಗರಿಂದ ವಸೂಲ ಮಾಡತಕ್ಕದ್ದೆಂದೂ ಮುಂಬಯಿ ಸರಕಾರದವರು ಮೊನ್ನೆಯೇ ಮಾಡಿದ ಕಟ್ಟಳೆಯ ಸಂಬಂಧ ಹಾಗೂ ಸೂಪೆ ಸಂಪತ್ತಿನಲ್ಲಾದ ನಿರ್ಣಯಗಳಂತೆ ಸಿಕ್ಕ ಜಂಗಲ-ಸವಲತ್ತುಗಳನ್ನು ಸಂಕೋಚಗೊಳಿಸುವ ಬಗ್ಗೆ ಜಂಗಲ ಇಲಾಖೆಯವರು ನಡಿಸಿದ ಯತ್ನಗಳ ಸಂಬಂಧದಲ್ಲಿ ರೈತ ಜನರ ಹಾಗೂ ತೋಟಿಗಾರ ಸಮಾಜದ ಅಭಿಪ್ರಾಯ ವ್ಯಕ್ತಗೊಳಿಸುವದಕ್ಕಾಗಿ ಇಲ್ಲಿಯ ಅಡಿಕೆ ಮಾರಾಟ ಸಂಘದ ಅಧ್ಯಕ್ಷ ರಾ|| ವಿ ತಿ ಹೆಗಡೆಯವರು ಬರುವ ತಾ ೨೧ ರವಿವಾರ ಸಂಜೆ ೫ ಕ್ಕೆ ಸಂಘದ ಕಚೇರಿಯಲ್ಲಿ ಸಭೆ ಕರೆದಿದ್ದಾರೆ. ಜಿಲ್ಲೆಯ ರೈತರೂ ತೋಟಿಗರೂ ಅವರ ಗೆಳೆಯರೂ ಈ ಸಭೆಗೆ ಅವಶ್ಯ ಬರಬೇಕಾಗಿಯೂ ವಿನಂತಿಯಿದೆ.

ಹೊನ್ನಾವರ— (ತಾ ೨೧-೧೨-೪೧) ಚಳಿ ಕಡಿಮೆ, ಶೆಕೆ ಹೆಚ್ಚು.

ನಿನ್ನೆ ಈ ಊರಲ್ಲಿ ೨ ದುರ್ಮರಣಗಳಾದವು. ದೈವಜ್ಞ ಜಾತಿಯ ಹೆಂಗಸೊಬ್ಬಳು ಪ್ಲೇಗು ಬೇನೆಯಿಂದ ತೀರಿಕೊಂಡಳು. ಮೊನ್ನೆಯೇ ಅವಳು ಧಾರವಾಡ ಜಿಲ್ಲೆಯ ರೋಣ ಊರಿಂದ ಬಂದಿದ್ದಳಂತೆ. ಬರುವಾಗಲೇ ಆಕೆಗೆ ಪ್ಲೇಗಿನ ಬಾಧೆಯಾಗಿತ್ತು. ಸತ್ತ ಇನ್ನೊಬ್ಬನು ನಾಮಧಾರಿ ಜಾತಿಯ ಹರಿಯದವನು. ಮೊನ್ನೆ ಅವನು ಗೇರಸಪ್ಪೆಯಿಂದ ಬಂದು ಧಕ್ಕೆಯ ಮೇಲೆ ಇಳಿದಿದ್ದನು. ಬಂದವನೇ ವಾಂತಿ ಮಾಡಲು ಆರಂಭಿಸಿದನು. ಹಾಗೆಯೇ ಅಲ್ಲಿದ್ದ ಒಂದು ಕಟ್ಟೆಯ ಮೇಲೆ ಬಿದ್ದುಕೊಂಡನು. ಮರುದಿನ ಬೆಳಗಾಗುವಷ್ಟರಲ್ಲಿ ಮಲಗಿದಲ್ಲೇ ಅವನು ಸತ್ತುಬಿದ್ದನು. ಅವನ ವಾರಿಸದಾರರು ಯಾರೂ ಮುಂದೆ ಬಂದಿಲ್ಲ. ಆದ್ದರಿಂದ ಪಂಚನಾಮೆ ಮಾಡಿಸಿ ಪಟೇಲರು ಶವದ ವ್ಯವಸ್ಥೆ ಮಾಡಿಸಬೇಕಾಯಿತು.

ಹರಿನಾಮ ಸಪ್ತಾಹದ ಸಂತರ್ಪಣೆಯ ಬಗ್ಗೆ ಕೂಡಿಸಿದ ಹಾಗೂ ಸಂತರ್ಪಣೆಯ ಖರ್ಚು ಕಳೆದು ಉಳಿದ ಸಾಮಾನನ್ನು ಶ್ರೀ ಗೋಕರ್ಣ ಕ್ಷೇತ್ರಕ್ಕೆ ಒಯ್ದು ಅಲ್ಲಿಯ ಬಡಬಗ್ಗರಿಗೆ ಹಂಚಿಕೊಡಬೇಕೆಂದು ಹ|| ಭ|| ಪ|| ಮಾರುತಿಬುವಾರವರ ಸೂಚನೆಗೆ ಇಲ್ಲಿಯ ಜನರು ಒಪ್ಪಿಗೆ ಕೊಡುವದಿಲ್ಲ. ಗೋಕರ್ಣದ ಜನರಿಗಿಂತ ಹೆಚ್ಚಿಗೆ ಬಡ ಜನರು ಇಲ್ಲಿರುವಾಗ ಆ ಸಾಮಾನನ್ನು ಇಲ್ಲಿಂದ ಗೋಕರ್ಣಕ್ಕೆ ಒಯ್ಯುವದೇಕೆಂದು ಅವರ ಪ್ರಶ್ನೆ. ಗೋಕರ್ಣದವರಿಗೆ ಶ್ರೀಮಂತ ಧರ್ಮಾತ್ಮರು ಮೇಲಿಂದ ಮೇಲೆ ಧರ್ಮ ಕೊಡುತ್ತಾರೆಂದೂ ಇಲ್ಲಿಯ ಬಡ ಜನರಿಗೆ ಹಾಗೆ ಧರ್ಮ ಕೊಡುವವರು ವಿರಳರೆಂದೂ ಅವರ ಅಂಬೋಣವುಂಟು.

ಮಾಲಿಕರು ಸಹಿ ಮಾಡಿಲ್ಲೆಂಬ ಕಾರಣದಿಂದ ರಿಫಂಡ ಕೊಡದೆ ಉಳಿದ ಅರ್ಜಿಗಳನ್ನು ಕುರಿತು ಮೊನ್ನೆ ಕೂಡಿದ ನಗರ ಸಭೆಯಲ್ಲಿ ಚರ್ಚೆಯಾಗಿ, ಮಾಲಿಕರ ಬದಲು ಕಾರಕೂನರು ಇಲ್ಲವೆ ಪ್ರತಿನಿಧಿಗಳು ಸಹಿ ಮಾಡಿದ ಅರ್ಜಿಗಳ ರಿಫಂಡ ಹಣವನ್ನು ಜಿಲ್ಲಾಧಿಕಾರಿಗಳ ಪರವಾನಗಿ ತರಿಸ್ಕೊಂಡು ಕೊಡಬೇಕೆಂದೂ, ಇನ್ನು ಮುಂದೆ ಮಾತ್ರ ಮಾಲಿಕರೇ ಸ್ವತಃ ಅರ್ಜಿ ಮಾಡತಕ್ಕದ್ದೆಂತಲೂ ನಿರ್ಣಯವಾಗಿದೆ.

(ತಾ ೨೭-೧೨-೪೧) ಈ ವಾರ ಅಕ್ಕಿ ದರ ತುಸು ಇಳಿದಿದೆ. ಪೇಟೆಯಲ್ಲಿ ಕೆರೊಸಿನ್ ಸಿಗುವದು ಕಷ್ಟ. ಏಜಂಟರು ಗೇರಸಪ್ಪೆಯವರಿಗೆ ೧೦ ದುರ್ಗಟ್ಟಿನ ಡಬ್ಬಿ ಕೊಡುತ್ತಾರೆ. ಊರವರಿಗೆ ಒಂದು ಡಬ್ಬಿ ಸಿಗಬೇಕಾದರೆ ಏಜಂಟರ ಕೈಕಾಲು ಹಿಡಿಯಬೇಕು. ಕಂಪನಿಯವರು ನಿರ್ದಿಷ್ಟ ಮಾಡಿಕೊಟ್ಟ ದರ ಡಬ್ಬಿ ೧ಕ್ಕೆ ರೂ ೪-೨-೬ ಇರುತ್ತದಂತೆ. ಆದರೆ ಅಂಗಡಿಗಳಲ್ಲಿ ರೂ ೪|| ಕೊಟ್ಟರೂ ಡಬ್ಬಿ ಸಿಗುವದಿಲ್ಲ. ಜನವರಿ ತಿಂಗಳ ಎಣ್ಣೆಯು ಕೂಡ ಈ ತಿಂಗಳಲ್ಲೇ ಖರ್ಚ ಹಿಡಿದಿರುವದಾಗಿ ಗಾಳಿ ವರ್ತಮಾನವುಂಟು. ಹಿಂದೆ ಚಿಲ್ಲರೆ ಬಾಟಲಿ ೧ಕ್ಕೆ ೩ ಆಣೆ ದರವಿತ್ತು, ಈಗ ೩|| ಆಣೆಯಾಗಿದೆ. ಬಡವರು ಎಣ್ಣೆ ಸಿಗುವದಿಲ್ಲೆಂದೂ ಬಹಳ ತುಟ್ಟಿಯಾಯಿತೆಂದೂ ಗೋಳಿಡುತ್ತಾರೆ. ಕಂಪನಿಯ ಮೇಲಧಿಕಾರಿಗಳು ಇತ್ತ ಲಕ್ಷ ಕೊಟ್ಟು ಬಡವರಿಗೆ ಅಗ್ಗ ದರದಿಂದ ಎಣ್ಣೆ ಸಿಗುವಂತೆ ಯೋಜನೆ ಮಾಡಬೇಕೆಂದು ಆಗ್ರಹದ ವಿನಂತಿಯುಂಟು.

ಇಲ್ಲಿಯ ವರ್ತಕರೊಬ್ಬರು ಹೊಸ ತೂಕದ ಕಲ್ಲುಗಳನ್ನು ತರಿಸಿದ್ದರಂತೆ. ಅವುಗಳಿಗೆ ಮುದ್ರೆ ಹಾಕಿಸಿಕೊಳ್ಳಬೇಕೆಂದು ಆಲೋಚಿಸುವಷ್ಟರಲ್ಲಿ ಅಧಿಕಾರಿಗಳು ಅವನ್ನು ಒಯ್ದುಬಿಟ್ಟರು. ಅರ್ಜಿ ಮಾಡಿದರೂ ಅವು ತಿರುಗಿ ಸಿಗಲಿಲ್ಲ. ಆದರಿಂದ ಸದರಿ ವರ್ತಕರು ಅಧಿಕಾರಿಗಳ ವಿರುದ್ಧ ಕಾಯದೆ-ಕ್ರಮ ಕೈಕೊಳ್ಳುವ ವ್ಯವಸ್ಥೆ ಮಾಡಿರುತ್ತಾರೆಂದು ತಿಳಿಯುತ್ತದೆ.

ಮುರ್ಡೇಶ್ವರ— (ತಾ ೨೫-೧೨-೪೧) ಗಾಂವಟಿ ಶಾಲೆಗಳ ಆಡಳಿತೆಯನ್ನು ನಡಿಸಲು ಯೋಗ್ಯ ಮಂಡಳಗಳಿಲ್ಲದಿದ್ದಲ್ಲಿ ಸರಕಾರದಿಂದ ಧನಸಹಾಯ ಸಿಗಲಾರದೆಂದು ವಿದ್ಯಾಧಿಕಾರಿಗಳು ತಿಳಿಸಿದ್ದರಿಂದ ಈ ಹೊತ್ತು ಕೆರೆಕಟ್ಟಾ, ಹೆಂಡಿ, ಬಲಸೆ, ಕೋಟದಮಕ್ಕಿ, ಬೈಲೂರ ಮತ್ತು ಮುಡಿಕೇರಿ ಶಾಲೆಗಳ ಶಿಕ್ಷಕರೂ ವ್ಯವಸ್ಥಾಪಕರೂ, ಇತರ ಪ್ರಮುಖರೂ ಇಲ್ಲಿ ಸಭೆಗೂಡಿಕೊಂಡು ರಾ| ಎಸ್ ಪಿ ಹಳದೀಪುರ ಇವರ ಅಧ್ಯಕ್ಷತೆಯಲ್ಲಿ ಮುರ್ಡೇಶ್ವರ ಸೀಮೆಯ ಶಿಕ್ಷಣ ಸಮಿತಿಯೆಂಬ ಒಂದು ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಸಮಿತಿಯಲ್ಲಿ ೯ ಜನ ಸದಸ್ಯರಿದ್ದಾರೆ.

ಭಟಕಳ— (ತಾ ೨೭-೨೧-೧೯-೪೧) ನಿನ್ನೆ ಇಲ್ಲಿಯ ಸಿಂಡಿಕೇಟ ಬೇಂಕಿನವರು ಮೌಲಾನಾ ಸಭಾಮಂದಿರದಲ್ಲಿ ದಕ್ಷಿಣ ಭಾರತೀಯ ರೇಲ್ವೆ ಮಂಡಳದ ಓರ್ವ ಸದಸ್ಯರಾಗಿರುವ ಜನಾಬ ಎಚ್ ಹುಸೇನ ಸಾಹೇಬ ಇವರ ಸತ್ಕಾರಕ್ಕಾಗಿ ಒಂದು ಉಪಹಾರ ಸಮಾರಂಭವನ್ನು ಏರ್ಪಡಿಸಿದ್ದರು. ಜನಾಬ ಜೇ ಎಚ್ ಶಮಸುದ್ದೀನರವರು ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷರೂ ಬೇಂಕಿನ ಅಧ್ಯಕ್ಷ ಡಾ| ಮಾಧವ ಪೈರವರೂ ಮಾನ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟ ಮೇಲೆ ಅವರದೊಂದು ಚಿಕ್ಕ ಭಾಷಣವಾಯಿತು. ಕರ್ನಾಟಕದ, ವಿಶೇಷವಾಗಿ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳ ಏಳಿಗೆಯು ಬೇಂಕಿನ ಮತ್ತು ವಿಮೆ ಕಂಪನಿಗಳನ್ನು ಹೊಂದಿಕೊಂಡಿರುವದೆಂದು ತಮ್ಮ ಮನವರಿಕೆಯಾಗಿದೆಯೆಂತಲೂ ಜನರ ಬಡತನ ಹೋಗಲಾಡಿಸಿ ಅವರಿಗೆ ಉದ್ಯೋಗ ಕಲ್ಪಿಸಿಕೊಡಲು ಬೇಂಕುಗಳ ಮೂಲಕವೇ ಸಾಧ್ಯವಿರುವದೆಂತಲೂ, ಆ ಉದ್ದೇಶದಿಂದಲೇ ತಾವು ಸಿಂಡಿಕೇಟ ಬೇಂಕು ಮತ್ತು ಕೆನರಾ ಮ್ಯುಚ್ಯುವಲ್ ವಿಮೆ ಕಂಪನಿಯ ಡಾಯರೆಕ್ಟರ ಮಂಡಳದಲ್ಲಿ ಸೇರಿರುವದಾಗಿಯೂ ಅವರು ತಿಳಿಸಿದರು. ಅವರ ಹಿಂದಿನಿಂದ ಹೊನ್ನಾವರದ ವಕೀಲ ರಾ| ಪ್ರಭು, ರಾ| ಅಧಿಕಾರಿ ಮೊದಲಾದವರೂ ಸಮಯೋಚಿತ ಭಾಷಣಗಳನ್ನಿತ್ತರು. ಬಹಳ ಜನ ನಿಮಂತ್ರಿತರು ಈ ಸಮಾರಂಭಕ್ಕೆ ಬಂದಿದ್ದರು.

ಕಳೆದ ತಾ ೨೧ಕ್ಕೆ ಈ ಪೇಟೆಯೊಳಗಿನ ಗಾಂವಟಿ ಹಾಗೂ ಪ್ರೌಢ ಶಿಕ್ಷಣ ಶಾಲೆಗಳ ಶಿಕ್ಷಕರೂ ವ್ಯವಸ್ಥಾಪಕರೂ ರಾ|| ವಿ ಗ ನಾಯಕರ ಅಧ್ಯಕ್ಷತೆಯಲ್ಲಿ ಸಭೆಸೇರಿ ಒಂದು ಪೇಟಾ ಶಿಕ್ಷಣ ಸಮಿತಿಯನ್ನು ಸ್ಥಾಪಿಸಿದ್ದಾರೆ. ೦.೯

ಉತ್ತರ ಕಾನಡಾ ಜಿಲ್ಲಾ ಕೋ-ಓಪರೇಟಿವ್ಹ
ಲ್ಯಾಂಡ ಮೊರ್ಗೇಜ ಬ್ಯಾಂಕ, ಲಿಮಿಟೆಡ್, ಕಾರವಾರ.

* * *

ಅಪೂರ್ವ ಸವಲತ್ತು!

ಬಡ್ಡಿ ದರ ಇನ್ನೂ ಕಡಿಮೆ! ವಾರ್ಷಿಕ ಕಂತುಗಳೂ ಹೆಚ್ಚು!

ಒಕ್ಕಲಿಗರೇ ತ್ವರೆ ಮಾಡಿರಿ!

ಈ ಬ್ಯಾಂಕಿನ ಸ್ಥಾಪನೆಯು ೧೯೩೫ರಲ್ಲಿ ಆಗಿ ಹಲವು ಶೇತಕಿ ಜನರು ಹಳೇ ಸಾಲ ತೀರಿಸಲಿಕ್ಕೂ, ಜಮೀನ ಸುಧಾರಣೆಗೂ ಹೊಸ ಜಮೀನು ಕೊಳ್ಳಲಿಕ್ಕೂ ವಗೈರೆ ಉದ್ದೇಶಗಳಿಗಾಗಿ ಈ ಬ್ಯಾಂಕಿನಿಂದ ಸುಲಭ ರೀತಿಯಿಂದ ತೀರಿಸುವ ಸಾಲಗಳನ್ನು ದೊರಕಿಸಿ ಯೋಗ್ಯ ಲಾಭವನ್ನು ಪಡಕೊಂಡಿರುತ್ತಾರೆಂಬದು ಎಲ್ಲರಿಗೆ ಗೊತ್ತಿದ್ದ ಮಾತೇ ಸರಿ.

ಈಗಂತೂ ನಮ್ಮ ಜಿಲ್ಲೆಯ ಪರಿಸ್ಥಿತಿಯನ್ನನುಲಕ್ಷಿಸಿ ಬಡ್ಡೀ ದರವು ಇನ್ನೂ ಕಡಿಮೆ ಅಂದರೆ ೫½% ಮಾಡಬೇಕೆಂತಲೂ ವಾರ್ಷಿಕ ಕಂತುಗಳ ಸಂಖ್ಯೆಯು ೧೫ ಇದ್ದದ್ದು ೨೦ರ ತನಕ ಬೆಳಿಸಬೇಕೆಂತಲೂ ಮೇಲಧಿಕಾರಿಗಳು ಯೋಚಿಸಿದ್ದಾರೆ. ಆದ್ದರಿಂದ ಈ ಜಿಲ್ಲೆಯ ಋಣಮುಕ್ತರಾಗಲಿಚ್ಛಿಸುವ ಶೇತಕೀ ಜನರು ಹಾಗೂ ಬ್ಯಾಂಕಿನ ಪೋಟನಿಯಮಗಳನನುಸರಿಸಿ ಇತರ ಯೋಗ್ಯ ಉದ್ದೇಶಗಳಿಗಾಗಿ ಸಾಲ ಬೇಕಾಗುವಂಥವರು ತ್ವರೆ ಮಾಡಬೇಕು. ಹೆಚ್ಚಿನ ಮಾಹಿತಿ ಬಗ್ಗೆ ಚೇರಮನ್ನರಿಗೆ ಬರೆಯಿರಿ.

ದೇವೋತ್ತಮ ಭಟ್ಟರು ಸಮಿತಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ ಸಮಿತಿಯಲ್ಲಿ ೭ ಮಂದಿ ಸದಸ್ಯರಿದ್ದಾರೆ

ಶಿರಸಿ— ಚಳಿಗಾಲದಲ್ಲಿ ಈ ಭಾಗದಲ್ಲಿ ಬೆಳೆಸಬಹುದಾದ ಕ್ಯಾಬೇಜ, ಉಳ್ಳೀಗಡ್ಡೆ, ನೋಲಕೋಲು, ಕೊಲಿಫ್ಲೋವರ, ಬೆಟ್ರೂಟ, ಟೊಮೆಟೋ, ದೊಡ್ಡಮೆಣಸು, ಬದನೇಕಾಯಿ ಮೊದಲಾದ ಹಲವು ಜಾತಿಯ ಕಾಯಿಪಲ್ಲೆಯ ಸಸಿಗಳನ್ನು ಗ್ರಾಮಸುಧಾರಣಾ ಇಲಾಖೆಯವರು ತರಿಸಿ ಆ| ರೂರಲ್ ಡೆ| ಇನ್ಸಪೆಕ್ಟರರ ಕಡೆಗೆ ಇಟ್ಟಿರುವರು ಬೇಕಾದವರು ಆ| ಇನ್ಸಪೆಕ್ಟರರಿಗೆ ಭೆಟ್ಟಿಯಾಗಿ ಯಾ ಪತ್ರ ಬರೆದು ಅವನ್ನು ಕೊಂಡುಕೊಳ್ಳಬಹುದು ಸುಧಾರಿಸಿದ ಗೊಬ್ಬರವನ್ನೂ ಸದರಿಯವರು ಪೂರೈಸುತ್ತಾರಂತೆ

ಅಂಕೋಲಾ— (ತಾ ೨೭-೧೨-೪೭) ಕಳೆದ ಸೋಮವಾರ ರಾತ್ರಿ ೨ ಘಂಟೆಗೆ ಇಲ್ಲಿಯ ಬಂಡೀ ಬಾಜಾರದಲ್ಲಿರುವ ಮಡ್ಲ ಹೊದಿಕೆಯ ಮೂರು ಅಂಗಡಿಗಳಿಗೆ ಆಕಸ್ಮಾತ್ ಬೆಂಕಿ ಬಿದ್ದು ಮೂರೂ ಅಂಗಡಿಗಳು ಸುಟ್ಟು ಬೂದಿಯಾದವು ಸಮೀಪದಲ್ಲಿದ್ದ ಎರಡು ಉಪ್ಪರಿಗೆಗಳುಳ್ಳ ಹಂಚು ಛಾವಣಿಯ ಮಾಡು ಸಹ ಸುಟ್ಟುಹೋಯಿತು ಊರವರ ಸುದೈವದಿಂದ ಆಗ ಗಾಳಿಯಿದ್ದಿಲ್ಲ ಅದಿದ್ದರೆ ಇಲ್ಲವೆ ಹಂಚಿನ ಛಾವಣಿಯ ಅಂಗಡಿಯ ೧ ನೇ ಉಪ್ಪರಿಗೆಯಲ್ಲಿ ದಾಸ್ತಾನ ಇಟ್ಟಿದ್ದ ಕಲ್ಲೆಣ್ಣೆಯ ಡಬ್ಬಿಗಳ ವರೆಗೆ ಬೆಂಕಿ ಮುಟ್ಟುತ್ತಿದ್ದರೆ ೫೦-೬೦ ಅಂಗಡಿಗಳುಳ್ಳ ಇಡೀ ಪೇಟೆಯು ಪೇಟೆಯೇ ಅಗ್ನಿನಾರಾಯಣನಿಗೆ ಸ್ವಾಹಾ ಆಗುತ್ತಿತ್ತು! ಅಪರರಾತ್ರಿಯ ಸಮಯವಾದರೂ ನೂರಾರು ಜನರು ಕೂಡಿ ಬೆಂಕಿಯು ಇನ್ನಿತರ ಅಂಗಡಿಗಳಿಗೆ ಹಚ್ಚುವ ಮತ್ತು ಹಂಚಿನ ಅಂಗಡಿಯ ಬೆಂಕಿ ಕೆಳಗಿಳಿಯುವ ಪೂರ್ವದಲ್ಲೇ ಪ್ರಯಾಸಪಟ್ಟು ಅದನ್ನು ನಂದಿಸಿದರು ರಾ॥ ದತ್ತಾರಾಮ ಭಂಡಾರಿ, ಮುಕುಂದ ಭೋಯಿ, ವೆಂಕಟರಮಣ ನಾಯ್ಕ ಈ ಮೂವರಂತೂ ವಿಶೇಷ ಪ್ರಯಾಸಪಟ್ಟು ಊರವರ ಮೇಲೆ ದೊಡ್ಡ ಉಪಕಾರ ಮಾಡಿದ್ದಾರೆ

ಮೇಲಿನ ಬೆಂಕಿ ಎಲ್ಲಿಂದ ಬಂತೆಂಬುದೊಂದು ಗೂಢ! ಅದು ಈ ಅಂಗಡಿಗಳ ನೆರೆಯಲ್ಲೇ ನಡೆಯುತ್ತಿರುವ ಜುಗಾರ ಮಂಡಳಿಯವರ ಕೈಯಿಂದ ಬಿದ್ದಿರಬೇಕೆಂದು ಬಹಳ ಜನರ ತರ್ಕ ಈ ಮಂಡ ಬಹಳ ದಿನಗಳಿಂದ ನಡೆದಿದೆ ಪಟೇಲರು ಹಿಂದೆಯೆ ಈ ಕುರಿತು ವರದಿ ಮಾಡಿರುತ್ತಾರಂತೆ ಆದರೂ ಪೋಲೀಸರು ಅತ್ತ ಲಕ್ಷಕೊಟ್ಟಿಲ್ಲ! ಪೋಲೀಸರು ಸಾಹಸಪ್ರಿಯ ಮತ್ತು ಕರ್ತವ್ಯತತ್ಪರರಾಗದಿದ್ದದ್ದೇ ಇದಕ್ಕೆ ಕಾರಣ. ಮೇಲಿನ ಅಧಿಕಾರಿಗಳು ಈ ಕಂಟಕವನ್ನು ದೂರಗೊಳಿಸಬೇಕಾಗಿ ವಿನಂತಿ

ಮೊನ್ನೆಯ ಬೆಂಕಿಯಿಂದ ಇನ್ನೊಂದು ವಿಚಾರ ಹುಟ್ಟುತ್ತಿದೆ ನಡು ಪೇಟೆಯಲ್ಲಿ ಹೀಗೆ ನಾಲ್ಕಾರು ಹುಲ್ಲು ಛಾವಣಿಯ ಇಲ್ಲವೆ ಮಡ್ಲುಹೊದಿಕೆಯ ಅಂಗಡಿಗಳನ್ನು ಇರಗೊಡುವದು ಗಂಡಾಂತರಪ್ರದ

ಕೆಲವು ದಿನಗಳಿಂದ ಹುಬ್ಬಳ್ಳಿಯವನೊಬ್ಬನು ಇಲ್ಲಿಯ ಪೇಟೆಯಲ್ಲಿ ಚೆಂಡಿನ ಆಟವೆಂಬ ಗುಪ್ತ ಜುಗಾರಾಟವನ್ನು ಹಚ್ಚಿದ್ದಾನೆ ಅವನಿಗೆ ಜಿಲ್ಹಾಧಿಪರು ಅಪ್ಪಣೆಕೊಟ್ಟಿದ್ದಾರಂತೆ! ಅವರು ಹೇಗೆ ಪರವಾನಗಿ ಕೊಟ್ಟಿರೆಂಬುದೊಂದು ಆಶ್ಚರ್ಯದ ಮಾತು ಅದೇನಿದ್ದರೂ ಆ ಚಂಡಿನಾಟ ಜುಗಾರ ಆಟವಾಗದೆ ಉಳಿಯದು, ಕಾನೂನು ನಿಷಿದ್ಧ ಆಟವಾಗದೆ ಉಳಿಯದು! ಇಂಥ ಕಾನೂನು ನಿಷಿದ್ಧ ಆಟಗಳನ್ನಾಡಲು ಇಲ್ಲವೆ ಸಾರ್ವಜನಿಕ ಸ್ಥಳಗಳಲ್ಲಿ ಹಚ್ಚಲು ಪರವಾನಗಿ ಕೊಡುವ ಅಧಿಕಾರ ಜಿಲ್ಹಾಧಿಪತಿಗಳಿಗೆ ಯಾರು ಕೊಟ್ಟರು? ಮುಂಬಯಿ ಸರಕಾರದವರು ಚೌಕಶಿಮಾಡಬೇಕು ಪೋಲೀಸರಿಗೆ ಹುಬ್ಬಳ್ಳಿಯವನ ಆಟಕ್ಕೆ ಕಾಲದ ನಿರ್ಬಂಧ ಸಹ ಇಲ್ಲ ಮಧ್ಯರಾತ್ರಿಯ ವರೆಗೂ ಅವನ ಆಟ ನಡಿಯುತ್ತಿದೆ! ಅದರಿಂದ ನೆರೆಕೆರೆಯಲ್ಲಿ ಕಳವು, ತುಡುಗು, ಹೊಡೆದಾಟ ಮುಂತಾದ ಗುನ್ಹೆಗಳಾಗಲು ಅನುಕೂಲ ವಾತಾವರಣವು ಸಿದ್ಧವಾಗುತ್ತಿದೆ ಈ ಸ್ಥಿತಿ ಇಷ್ಟರ್ಲೇ ಹೋಗಲೆಂಬುವದರ ಆಲೋಚನೆಯನ್ನೂ ಸರಕಾರದವರು ಮಾಡಬೇಕು

ಕಾರವಾರ— (ತಾ ೨೩-೧೨-೧೯೪೭) ರಾ| ಸಂಧಿಕ ಮತ್ತು ಕೇಶವೈನ ಇವರ ನಿಮಂತ್ರಣೆಯಂತೆ ನಿನ್ನೆ ಸಂಜೆ ಜಿ| ಲೋ| ಬೋರ್ಡಿನ ಕಚೇರಿಯಲ್ಲಿ ರಾ| ದೇವ, ಕರ್ಕಿ ಮಂಜುನಾಥ ಭಟ್ಟ, ಸುಬ್ರಾಯ ಹಳದೀಪುರ, ಗೋಪಿ ಭಟ ಹೆಗಡೆ, ನಿಂಗಪ್ಪ ಹಳ್ಳಿಕೇರಿ, ಲಕ್ಷ್ಮಣ ನಾಡೇರ್ಕರ, ಅನಂತ ಭಟ್ಟ ಯಲ್ಲಾಪುರಕರ, ಗೋವಿಂದ ಪಯ್ಯಳೇಕರ ಮೊದಲಾದ ಕೆಲ ಪ್ರಮುಖರು ಸಭೆ ಸೇರಿದ್ದರು ರಾ| ಕರ್ಕಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು ಮತ್ತು ಕೆಳಗಿನ ಅರ್ಥದ ಒಂದು ಗೊತ್ತುವಳಿಯಾಯಿತು.

ತಾ. ೨೫ ೧೦-೧೯೪೬, ೨೦ ೩-೪೭, ೧೭-೪ ೪೭ ಮತ್ತು ೭-೮ ೪೭ನೇ ತಾರೀಖಿನ ಜಿ ಆರ್ ಜಿ ಡಿ ನಂ ೮೯೧-೩೩ನೇ ಸರಕಾರಿ ಠರಾವುಗಳಲ್ಲಿ ಈ ಜಿಲ್ಹೆಯ ಲೋಕಾಭಿಪ್ರಾಯ ಪಡೆಯದೆ ಸರಕಾರದವರು ಯಾವದೇ ತಿದ್ದುಪಡಿ ಇಲ್ಲವೆ ಬದಲಾವಣೆಗಳನ್ನು ಮಾಡತಕ್ಕದ್ದಲ್ಲವಾಗಿ ಈ ಸಭೆ ಖಂಡಿತ ಅಭಿಪ್ರಾಯಪಡುತ್ತದೆ ಜನತೆಗೆ ಹೇಳದೆ ಕೇಳದೆ ಇಂಥ ತಿದ್ದುಪಡಿಗಳನ್ನು ಮಾಡಿದರೆ ಅದರ ಪರಿಣಾಮ ನೆಟ್ಟಗಾಗಲಿಕ್ಕಿಲ್ಲೆಂದು ಸರಕಾರದವರು ಲಕ್ಷದಲ್ಲಿಡಬೇಕು

ನಿನ್ನೆ ಸೋಮವಾರ ಜಿಲ್ಹಾ ಲೋಕಲ್ ಬೋರ್ಡಿನ ಸಾಧಾರಣ ಸಭೆ ಕೂಡಿತ್ತು. ಸಭೆಯ ಪ್ರಾರಂಭಕ್ಕೆ ಬೆಳಗಾಂವ ಸಭೆಯ ಕುರಿತು ತೀವ್ರ ಚರ್ಚೆಯಾಗಿ ಈ ಕೆಳಗಿನ ಆಶ್ಚರ್ಯ-ಆಶಯದ ಒಂದು ಗೊತ್ತುವಳಿಯಾಗಿದೆ

ಜಂಗಲ ಖಾತೆಯವರ ಕಾರಭಾರದಿಂದ ಬೇಸಾಯಗಾರರಿಗೂ ಜನರಿಗೂ ಆಗುತ್ತಿದ್ದ ಕಷ್ಟನಷ್ಟಗಳ ವಿರುದ್ಧ ೫೦ ವರ್ಷಗಳಿಂದ ನಡೆದು ಬಂದಿದ್ದ ಚಳುವಳಿಯ ಪರಿಣಾಮವಾಗಿ ಕೊಂಗ್ರೆಸ ಮಂತ್ರಿಮಂಡಳದ ಕಡೆಯಿಂದ ಜನರಿಗೆ ಕೆಲವೊಂದು ಜಂಗಲಸವಲತ್ತುಗಳು ದೊರೆತಿದ್ದವು. ಆದರೂ ಸಾಗವಾನಿ ಕ್ಷೇತ್ರದ ನೆರೆಯಲ್ಲಿರುವ ಹಳ್ಳಿಗಳಿಗೂ ಬೆಟ್ಟದ ಸೀಮೆಯಲ್ಲಿರುವ ಹಳ್ಳಿಗಳಿಗೂ ಅವುಗಳಿಂದ ಹೇಳತಕ್ಕಷ್ಟು ಲಾಭವಾಗಿಲ್ಲೆಂಬ ದೂರು ಇದ್ದೇ ಇತ್ತು ಅದಾಗ್ಯೂ ಪ್ರಜಾ ಪ್ರತಿನಿಧಿ ಸರಕಾರದ ಮೊದಲನೇ ಪ್ರಯೋಗವಾಗಿದ್ದರಿಂದ ಜನರು ಆ ಸವಲತ್ತುಗಳನ್ನು ಸ್ವಾಗತೀಕರಿಸಿದ್ದರು. ಜನರ ದುರ್ದೈವದಿಂದ ಆ ಸರಕಾರವು ಕೆಲವು ದಿನಗಳಲ್ಲೇ ಮಾಯವಾಯಿತು ಪ್ರಜಾ-ಪ್ರತಿನಿಧಿ ಸರಕಾರದ ಅಭಾವವಿದ್ದುದರ ಲಾಭ ತಕ್ಕೊಂಡು, ಆ ಸರಕಾರದವರು ಪೂರ್ಣವಿಚಾರ ಮಾಡಿ ದಯಪಾಲಿಸಿದ ಹಕ್ಕುಗಳನ್ನು ಸಂಕೋಚಪಡಿಸುವದರ ಸಲುವಾಗಿ ತಾ ೧೬-೦೩-೪೭ ನೇಗೆ ಬೆಳಗಾಂವದಲ್ಲಿ ಮಿ॥ ಮುದಲಿಯಾರ ಅಧ್ಯಕ್ಷತೆಯಲ್ಲಿ ಒಂದು ಸಭೆಯಾಗಿತ್ತೆಂದು ತಿಳಿಯುತ್ತದೆ ರೈತರಿಂದ ಆರಿಸಲ್ಪಟ್ಟ ಈ ಬೋರ್ಡಿನ ೩೦ ಮಂದಿ ಸದಸ್ಯರಲ್ಲಿ ಒಬ್ಬರಿಗೂ ಆ ಸಭೆಗೆ ಬರಲು ನಿಮಂತ್ರಣೆಯಿದ್ದಿಲ್ಲವಾದ್ದರಿಂದ ಅಲ್ಲಿ ಏನೇನು ನಡೆಯಿತೆಂಬುದು ನಿಶ್ಚಿತವಾಗಿ ತಿಳಿಯಲು ಅನುವಿಲ್ಲ ಆದರೂ ಆ ಸಭೆಯಲ್ಲಿ ಕೊಂಗ್ರೆಸ ಮಂತ್ರಿ ಮಂಡಳದ ಕಾಲದಲ್ಲಿ ನಮ್ಮ ರೈತರಿಗೆ ದೊರೆತ ಸವಲತ್ತುಗಳನ್ನು ಸಂಪುಷ್ಟದಲ್ಲಿ ತರುವ ಬಗ್ಗೆ ಆಲೋಚನೆ ನಡೆಯಿತೆಂದು ಕೇಳುತ್ತೇವೆ ಹಾಗೇನಾದರೂ ಮಾಡಲು ಕೈಕೆಳಗಿನ ಅಧಿಕಾರಿಗಳು ಸಲಹೆ ಕೊಟ್ಟಲ್ಲಿ, ಲೋಕಮತಕ್ಕೆ ಯೋಗ್ಯ ಮನ್ನಣೆ ಕೊಡುವ ನಾಮದಾರ ಗವ್ಹರ್ನರ ದೊರೆಗಳು ಅಂತಹ ಸಲಹೆಯನ್ನು ಕೂಡಲೆ ಧಿಕ್ಕರಿಸಬೇಕಾಗಿ ಈ ಸಭೆಯು ದೊರೆಗಳಿಗೆ ಪ್ರಾರ್ಥಿಸುತ್ತದೆ ಹೋದ ಆಯ ವ್ಯಯ ಪತ್ರಿಕೆ ಪ್ರಕಟಿಸುವಾಗ ದೊರೆಗಳು ತೆಗೆದ ಉದ್ಗಾರಗಳ ಮೇಲಿಂದ ದೊರೆಗಳು ಈ ಜಿಲ್ಹೆಯ ರೈತರ ಹಿತಘಾತ ಮಾಡಲಾರರೆಂಬ ವಿಶ್ವಾಸವುಂಟು ಆದರೂ ಬೆಳಗಾಂವ ಸಭೆಯ ಸುದ್ದಿ ಕೇಳಿ ಜನರು ಭೀತಿಗ್ರಸ್ತರಾಗಿದ್ದಾರೆ ಅದ್ದರಿಂದ ದೊರೆಗಳು ಕೂಡಲೆ ಒಂದು ಪ್ರಕಟನೆಯನ್ನು ಹೊರಡಿಸಿ ಈ ಭೀತಿಯ ನಿವಾರಣೆ ಮಾಡಬೇಕಾಗಿ ಈ ಸಭೆ ಬೇಡಿಕೊಳ್ಳುತ್ತಿದೆ ಮತ್ತು ಕೊನೆಗೆ ಕೊಂಗ್ರೆಸ ಸರಕಾರದ ಠರಾವುಗಳಲ್ಲಿ ಏನಾದರೂ ವ್ಯತ್ಯಾಸಗಳು ಮಾಡಲ್ಪಟ್ಟರೆ ಜನರಲ್ಲಿ ತೀವ್ರವಾದ ಅಸಂತೋಷ ಹುಟ್ಟುವದೆಂದು ಈ ಸಭೆಯು ಸರಕಾರಕ್ಕೆ ಎಚ್ಚರಿಕೆ ಕೊಡಲಿಚ್ಛಿಸುತ್ತದೆ (ಈ ತೀರ್ಮಾನವು ಸರ್ವಾನುಮತದಿಂದ ಸ್ವೀಕೃತವಾಯಿತು)

ನಿನ್ನೆ ಸಂಜೆ ಇಲ್ಲಿಯ ಮಿತ್ರಸಮಾಜದಲ್ಲಿ, ಮುಂಬಯಿಯಲ್ಲಿದ್ದು ಮರಾಠಿ ಮಾಸಿಕಗಳಲ್ಲಿ ಲೇಖಗಳನ್ನೂ ಕವಿತೆಗಳನ್ನೂ ಬರೆದು ಕಳಿಸುವ ಸೌ॥ ಇಂದಿರಾಬಾಯಿ ತೇಲಂಗ ಇವರು "ನಮ್ಮ ಸಮಾಜದಲ್ಲಿ ಸ್ತ್ರೀಯರ ಕರ್ತವ್ಯಗಳು" ಎಂಬ ವಿಷಯದ ಮೇಲೆ ಕೊಂಕಣಿಯಿಂದ ಒಂದು ಭಾಷಣವನ್ನಿತ್ತರು 'ತಾಯಿ, ಹೆಂಡತಿ, ಸಹೋದರಿ ಹೀಗೆ ಹೆಂಗಸರಿಗೆ ಮೂರು ರೂಪಗಳು ತಾಯಿಯ ಸ್ಥಾನ ದೊಡ್ಡದು ಎಲ್ಲವೂ ಅದನ್ನು ಅವಲಂಬಿಸಿದೆ. ತಾಯಿ ಒಳ್ಳೆಯವಳಾದರೆ ಮಕ್ಕಳು ಒಳ್ಳೆಯವರಾಗುತ್ತಾರೆ ಗಂಡ ಹೆಂಡಂದಿರ ಸಂಬಂಧದಲ್ಲಿ ಸ್ವಾರ್ಥದ ಭಾವನೆಯುಂಟು. ಆದರೆ ತಾಯಿಯ ಮತ್ತು ಸೋದರಿಯ ಸಂಬಂಧದಲ್ಲಿ ಸ್ವಾರ್ಥವಿಲ್ಲ ಸೋದರಿಯ ಸಂಬಂಧವನ್ನು ಬೇಕಷ್ಟು ಬೆಳೆಸಬಹುದು ಜಗತ್ತಿನಲ್ಲೆಲ್ಲ ಹಬ್ಬಿಸಬಹುದು ಆ ಆ ಸ್ಥಾನದ ಕರ್ತವ್ಯಗಳನ್ನು ಸರಿಯಾಗಿ ಪಾಲಿಸುವದೇ ಸ್ತ್ರೀಯರ ಕರ್ತವ್ಯ ಅದಕ್ಕೆ ಶಿಕ್ಷಣ ಬೇಕು ಕಲಿತವರು ಗೃಹಕೃತ್ಯ ಮಾಡಲು ಬೇಸರ ಮಾಡಬಾರದು ಹೆಂಗಸರಿಗೆ ಒಲೆ ಮತ್ತು ಮಕ್ಕಳು' ಮುಖ್ಯವೆಂದು ಹೇಳುವದು ತಪ್ಪಲ್ಲ ಹಿರಿಯರ ಕಾಲದಲ್ಲಿ ಎಷ್ಟೇ ಮಂದಿ ಸೊಸೆಗಳು ಮನೆಗೆ ಬಂದಾಗ್ಯೂ ಅಡುವ ಮತ್ತು ಬಡಿಸುವ ಹೊಣೆಯನ್ನು ಬಿಟ್ಟು ಕೊಡುತ್ತಿದ್ದಿಲ್ಲ ಮಕ್ಕಳ ಜೋಪಾನೆಯ ಕಡೆಗೂ ನಾವು ದುರ್ಲಕ್ಷ ಮಾಡಕೂಡದು. ಹೆಂಗಸರು ಸ್ವತಃ ದುಡಿದು ಗಂಡಸರ ಆದಾಯ ಬೆಳೆಸಬಹುದು ಕನಿಷ್ಟ ಪಕ್ಷಕ್ಕೆ ಮಿತವ್ಯಯದಿಂದ ಸಂಸಾರ ಸಾಗಿಸಿ ನೆರವಾಗಬಹುದು ಈ ಕಡೆ ಎಂದೂ ದುರ್ಲಕ್ಷ ಮಾಡತಕ್ಕದ್ದಲ್ಲ ಮನೆಗೆ ಮಹಿಳೆಯೇ ಮುಖ್ಯ ಶೋಭೆ ಮನೆಯನ್ನು ಬೆಳಗಿಸುವ ಹೊಣೆ ಹೆಂಗಸರದು ಅವಳಿಲ್ಲದ ಮನೆ ಕಾಡಿಗೆ ಸಮಾನವಾದದ್ದು "ಎಂದು ಸೌ॥ ತೇಲಂಗರು ಉತ್ಸ್ಫೂರ್ತಿಯಿಂದ ಪ್ರತಿಪಾದಿಸಿದರು

ಊಟದ ಹೊಸ ವ್ಯವಸ್ಥೆ!

೭ ರೂ	೬೦ ಊಟ	೫ ವಾರ
೪ "	೩೦ "	೩೦ ದಿನ
೨॥ "	೧೫ "	೧೦ ದಿನ
೧ "	೫ "	೩ ದಿನ

೦—೪—೦ ಗೆ ಊಟ ೧

MANAGER, **Modern Hindu Hotel, KUMTA.**

ಇತ್ತ ಲಕ್ಷಗೊಡಿ! ಇತ್ತ ಲಕ್ಷಗೊಡಿರಿ!!

ಅಗತ್ಯದ ಸೂಚನೆ.

ಸಧ್ಯ ಚಾಲತಿಯಲ್ಲಿ ಇಲ್ಲದ ವಿಕ್ಟೋರಿಯಾ ವಿಲಿಯಂ, ರಂಡೆರಾಣಿ ಛಾಪೆಯ ರೂಪಾಯಿ, ಅರ್ಧ ರೂಪಾಯಿ ಮತ್ತು ಗೋವಾ, ಅಲ್ವಾರ ಬಿಕಾನೇರ ಸ್ಟೇಟಿನ ರೂಪಾಯಿ ವಗೈರೆ ನಾಣ್ಯಗಳು ಯೋಗ್ಯ ದರದಿಂದ ಕೊಳ್ಳಲ್ಪಡುವವು.

— ಇಂದೇ ವಿಚಾರಿಸಿರಿ —

ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ

ವಾಲಿ-ಸುಗ್ರೀವರ ಕಾಳಗ

ಮಣಕಿಯಲ್ಲಿ ಕಟ್ಟಿದ ಭವ್ಯವಾದ ಥಿಯೇಟರಿನಲ್ಲಿ ತಾ ೩೧ ಬುಧವಾರ ಆಡುವರು ಪ್ರಖ್ಯಾತ ಕೆರೆಮನೆ ಶಿವರಾಮ ಹೆಗಡೆಯವರ ಮೇಳದವರು ಸುಭದ್ರಾ ಕಲ್ಯಾಣ ಯಕ್ಷಗಾನವನ್ನು ನಿನ್ನೆ ತಾ ೨೮ನೇ ರಾತ್ರೆ ಆಡಿದರು, ಅದರಲ್ಲಿ ಬಲರಾಮ ಕೃಷ್ಣ ಸುಭದ್ರಾ ಭೂಮಿಕೆಯನ್ನು ಬಹಳೇ ಉತ್ತಮವಾಗಿ ನೆರವೇರಿಸಿದರು ಅದ್ದರಿಂದ ಬುಧವಾರದ ಆಟಕ್ಕೆ ತಾವೆಲ್ಲರೂ ಪ್ರೋತ್ಸಾಹಿಸಬೇಕು

ಎಮ್. ಕೆ. ಅಂಗಾರಿ, ಕುಮಟಾ.

ಘೋರ ಯುದ್ಧಪ್ರಸಂಗ!

(೫ನೇ ಪುಟದಿಂದ ಮುಂದರಿಸಿದ್ದು)

ಲ್ಲಿಯೇ ಶತ್ರು ನಿರ್ಮೂಲನವಾಗಿದ್ದಾನೆ ತುರ್ಕಸ್ಥಾನವು ಬ್ರಿಟನಿಗೆ ಸೇರಿದರೆ ಬಲ್ಗೇರಿಯದಿಂದ ತುರ್ಕಸ್ಥಾನದ ಮೇಲೆ ಸಾಗಿಹೋಗಲು ಹಿಟ್ಲರನಿಗೆ ಬಹು ಅನುಕೂಲ ಅದರಿಂದ ತುರ್ಕರ ಮಿತ್ರಪಕ್ಷಕ್ಕೆ ಕೊಡುವ ಸಂಬಂಧ ಕಡಿಮೆ ಹಿಟ್ಲರ ಪಕ್ಷ ಸೇರುವ ಭೀತಿ ಹೆಚ್ಚು ಅತ್ತ ಸ್ಪೇನ ಇತ್ತ ತುರ್ಕಸ್ಥಾನ ದೇಶಗಳು ಶತ್ರು ಪಕ್ಷಕ್ಕೆ ಕೂಡಿದರೆ ಉತ್ತರ ಆಫ್ರಿಕೆಯ ರಣಸಂಗ್ರಾಮ ಘೋರವಾಗಿ ನಡೆಯುವದು ಭೂಮಧ್ಯ ಸಮುದ್ರದೊಳಗಿನ ಮಾಲ್ಟಾದ ಮೇಲೆ ಈಗಲೇ ವಿಮಾನ ದಾಳಿಯಾಗುತ್ತಿದೆ ಮುಂದೆ ಭಯಂಕರವಾದ ಪ್ರಸಂಗ ಒದಗದು ಫ್ರೆಂಚ ರಾಜಕಾರಣವು ಬ್ರಿಟಿಶರಿಗೆ ಅನುಕೂಲವಾಗಿಲ್ಲ ಸೇನಾಪತಿ ಪೆಟೇನರು ಹಿಟ್ಲರನಿಗೆ ಸೇರಿದ್ದರೂ ಆತನ ಕೈಗೊಂಬೆಯಾಗಿರಲಿಲ್ಲ ಈಗ ಅವರು ಪದಚ್ಯುತಿ ಹೊಂದಿ, ಹಿಟ್ಲರನ ದಾಸಾನುದಾಸನಾದ ಡಾರ್ಲನರು ಫ್ರೆಂಚ ಸರಕಾರದ ಅಧಿಕಾರ ಗಳಿಸಿರುವರೆಂದು ಸುದ್ದಿಯುಂಟು ಸೇನಾಪತಿ ಪೆಟೇನರು ಈ ಸಂಗತಿಯನ್ನು ಅಲ್ಲಗಳೆಯುತ್ತಾರೆ ಆದಾಗ್ಯೂ ನನಗೆ ಈ ಮಾತಿನಲ್ಲಿ ನಂಬಿಗೆಯಿಲ್ಲ ಫ್ರೆಂಚರು ಹಿಟ್ಲರನಿಗೆ ಕೂಡಿದರೆ ಸ್ಪೇನದಿಂದ ಪೂರ್ವ ಇತ್ತ ಗ್ರೀಸದವರೆಗಿನ ಅರ್ಧ ವರ್ತುಲಾಕಾರದ ಭೂಮಧ್ಯ ಸಮುದ್ರದ ಕರಾವಳಿ ಪ್ರದೇಶ ಹಿಟ್ಲರನ ಸ್ವಾಧೀನವಾಗುತ್ತದೆ ಬ್ರಿಟಿಶರ ವ್ಯವಹಾರದ್ವಾರ ಜಿಬ್ರಾಲ್ಟರ [illegible] ಬ್ರಿಟಿಶರು ಸಮುದ್ರದಲ್ಲಿ ನಿಂತು ಈಜಿಪ್ತ ದೇಶವನ್ನು ಬೆಂಬಲಕ್ಕೆ ಪಡಕೊಂಡು ಉತ್ತರ ಆಫ್ರಿಕೆಯ ರಣಸಂಗ್ರಾಮವನ್ನು ನಡಿಸಬೇಕಾಗುತ್ತದೆ ತುರ್ಕರು ಹಿಟ್ಲರನನ್ನು ಕೂಡಿಕೊಂಡರೆ ಈಜಿಪ್ತದ ಫರೂಕ ಅರಸರು ಯಾವ ಪಕ್ಷದ ಕಡೆಗೆ ಜೋಕಾಲಿ ಹೊಡೆಯುವರೆಂದು ನಾನು ಹೇಳಲಾರೆ ಚರ್ಚಿಲ್ಲ ಮಹಾಪ್ರಧಾನರು ನುಡಿದಂತೆ ಉತ್ತರ ಆಫ್ರಿಕೆಯ ರಣಭೂಮಿಯು ಮಹಾಯುದ್ಧದ ಜಯಾಪಜಯಗಳನ್ನು ನಿರ್ಣಯಿಸಬಹುದು ಬ್ರಿಟಿಶರ ಸೈನ್ಯ ಸಾಹಿತ್ಯಗಳೂ ಯುದ್ಧ ವ್ಯೂಹರಚನೆಯಲ್ಲಿ ನಿಷ್ಣಾತರಾದ ಸೇನಾಪತಿ ಎಚಿನಲೇಕರವರೂ ಉತ್ತರ ಆಫ್ರಿಕೆಯಲ್ಲಿ ಒಟ್ಟುಗೂಡಿರುವದರಿಂದ ಹಿಟ್ಲರನು ಇಲ್ಲಿಯೇ ನಿಜ ಶತ್ರುಗಳನ್ನು ಪ್ರತಿಭಟಿಸಬಹುದು ಅಂತು ಘೋರ ಯುದ್ಧ ಪ್ರಸಂಗ ಈಗ ಒಂದೊದಗಿದೆ



ಹೌದು ಪುಟ್ಟ ಹುಡುಗನೇ ಈ ವೀರಯೋಧನು ಶತ್ರುವಿನಿಂದ ಕಾಪಾಡಲು ಹೊರಟಿದ್ದಾನೆ ಮತ್ತು ನೀನು ಸುಖವಾಗಿರುವಂಥ ಇಂಡಿಯಾವನ್ನು ರಕ್ಷಿಸುತ್ತಾನೆ ಯೋಧನಾಗಲು ನೀನು ತೀರಾ ಚಿಕ್ಕವನಿರುವಿ ಆದರೆ ನೀನು ಮತ್ತು ನಿನ್ನ ತಂದೆ ಮತ್ತು ತಾಯಿ ಸಹೋದರರು ಮತ್ತು ಸಹೋದರಿಯರು ನಿಮ್ಮ ಹಣಗಳನ್ನು ಕೂಡಿಟ್ಟು ಡಿಫೆನ್ಸ್ ಸೇವಿಂಗ್ಸ ಸ್ಟಾಂಪುಗಳನ್ನು ಮತ್ತು ಸರ್ಟಿಫಿಕೇಟುಗಳನ್ನು ಕೊಂಡುಕೊಂಡು ಇಂಡಿಯಾ ಜಯಗಳಿಸಲು ಸಹಕಾರಿಯಾಗಬಹುದು

ಒಂದಕ್ಕೆ ರೂ. ೧೦/-
ಡಿಫೆನ್ಸ್ ಸೇವಿಂಗ್ಸ ಸರ್ಟಿಫಿಕೇಟ್
೩/೯/- ಲಾಭ ಕೊಡುತ್ತೆ
ಪೋಸ್ಟಆಫೀಸಿನಲ್ಲಿ ವಿವರಗಳನ್ನು ಕೇಳಿರಿ

ಕೊಳ್ಳಿರಿ

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು

C1 49 Kn

ಸ್ಥಳಿಕ ವಿಷಯಗಳು.

ಲೇಖಕ ಸ್ಥಳವಂತಿಕ

ನವಿಸ್ಮಾ ಜಿಲ್ಹೆಯ ಭೂಭದ್ರ ಬೇಂಕಿನ ಪ್ರಕಟಣೆಯನ್ನು ಓದಿ ಸಾಲದೊಳಗೆ ಮುಳುಗಿದ ರೈತರು ಉಲ್ಹಾಸಪಡರು ಶೇಕಡಾ ೫॥ ಸಲೆ ಬಡ್ಡಿ ತೀರ ಹೆಚ್ಚಿನದು ಹ! ಸಲೆ ಬಡ್ಡಿ ತೆರುವಷ್ಟು ಶಕ್ತಿ ಇಲ್ಲವೆ ಸಂಪಾದನೆ ಈಗಿನ ಕೃಷಿಕರ್ಮದಲ್ಲಿ ಇರುವದಿಲ್ಲ ಪ್ರಪಂಚದ ಖರ್ಚು ಸಾಗಿಸಿ ಶೇಕಡಾ ೨ರಂತೆ ಸಹ ಬಡ್ಡಿ ತೆರಲಿಕ್ಕೆ ರೈತರಿಗೆ ಸ್ಥಿತಿಯಿಲ್ಲ ಭೂಭದ್ರ ಬೇಂಕಿನ ನಿಯಮಗಳನ್ನು ಪಾಲಿಸಲಿಕ್ಕ ಯಾವನೇ ಋಣಿಕನಿಗೆ ಸಾಧ್ಯವಿಲ್ಲ ಭೂಬೆಲೆ ಕಟ್ಟುವ ಅಧಿಕಾರಿಗೆ ಸಮಾಧಾನವಾಗುವಷ್ಟು ಭೂಮಿ ಮಾದಲು ಋಣಿಕನಿಗೆ ಇರುವದಿಲ್ಲ, ಒಂದುವೇಳೆ ಅಷ್ಟು ವಿಪುಲ ಭೂಮಿಯಿದ್ದಾಗ್ಯೂ ಸ್ವಂತ ಪ್ರಪಂಚ ಖರ್ಚು ತೆಗೆದು, ಬಡ್ಡಿ ತೆತ್ತು ಅಸಲನ್ನು ತೀರಿಸುವಷ್ಟು ಸಂಪಾದನೆ ಆ ಭೂಮಿಯಲ್ಲಿ ಹುಟ್ಟುವದಿಲ್ಲ ಆ ಪ್ರಕಾರ ಹುಟ್ಟುವಳಿಯಿರುತ್ತಿದ್ದರೆ ರೈತರು ಇಷ್ಟು ಗತಿಗೆಡುತ್ತಿರಲಿಲ್ಲ ಭೂಭದ್ರ ಬೇಂಕಿನ ವ್ಯವಹಾರ ಧೋರಣ ರೈತರ ಪರಿಸ್ಥಿತಿಗೆ ಸರಿಹೋಲುವದಿಲ್ಲ ಸಾವಕಾರರು ಋಣಿಕರಿಗೆ ಪೀಡಿಸುತ್ತಾರೆ ಬೇಂಕಿನವರು ಋಣಿಕರಿಗೆ ಕಾಪಾಡುತ್ತಾರೆ ಎಂಬ ಮೂಲಕಲ್ಪನೆಯೇ ತಪ್ಪು ಋಣಕ್ಕೆ ಸಾವಕಾರರ ಸ್ವಾರ್ಥ ಕಾರಣವಲ್ಲ, ಋಣ ಕಾರಣಗಳು ಪ್ರತ್ಯೇಕ ಸಂಪಾದನೆ ಕಡಿಮೆ, ಖರ್ಚು ಹೆಚ್ಚು, ಉದ್ಯೋಗದ ಅಭಾವ, ಹುಟ್ಟುವಳಿಯ ಕೊರತೆ ಇವನ್ನು ಪರಿಹರಿಸದೆ ಅರ್ಧ ಸಲೆ ಬಡ್ಡಿಯನ್ನು ಇಳಿಸಿದೊಡನೆ ಭೂಭದ್ರ ಬೇಂಕಿನ ಲೋಕಪ್ರಯೋಜನ ಮಿಗಿಲಾಯಿತೆಂದು ಎಣಿಸಕೂಡದು

ಋಣ ಇದೊಂದು ಪಾಪ ಪಾತಕ ಸೂತಕ, ವ್ಯಾಧಿ! ಸಮಾಜದ ಅಭಿವೃದ್ಧಿಗೆ ಹಿಡಿದ ರೋಗ!! ಅದನ್ನು ಸರಕಾರವು ಆದಾಯ ವೆಚ್ಚಗಳನ್ನು ಹಾಯಿಗೂಡಿಸಿಕೊಂಡು ಸರಕಾರಕ್ಕೆ ಯಾವದೇ ನಷ್ಟ ಘಟಿಸದಂತೆ, ಪರಿಹರಿಸಬಯಸಲಾಗದು ರೋಗಿಗಳ ಶುಶ್ರೂಷೆಗೆ ಚಿಕಿತ್ಸಾಲಯಗಳನ್ನು ಧರ್ಮಸಂಸ್ಥೆಗಳಂತೆ ಸ್ಥಾಪಿಸುವಂತೆ ಋಣಪರಿಹಾರದ ಯೋಜನೆಗಳನ್ನು ಸರಕಾರವು ಕಲ್ಪಿಸಬೇಕು ಬಡ್ಡಿಯ ಪ್ರತಿಫಲವನ್ನು ಸರಕಾರವು ಋಣಿಕರಿಂದ ಅಪೇಕ್ಷಿಸಕೂಡದು ಅಸಲನ್ನು ಮಾತ್ರ ತಿರುಗಿ ಪಡಕೊಳ್ಳಬಯಸಬೇಕು ಶೇಕಡಾ ೪ ಸಲೆಯಂತೆ ಪ್ರತಿ ವರುಷ ಅಸಲನು ಸರಕಾರವು ವಸೂಲಮಾಡಿ ೨೫ ವರ್ಷಗಳಲ್ಲಿ ಸಂಪೂರ್ಣವಾಗಿ ಅಸಲನ್ನು ಪಡಕೊಳ್ಳಯೋಜಿಸಬೇಕು ಈ ಯೋಜನೆಯಿಂದ ಸರಕಾರಕ್ಕೆ ಬಡ್ಡಿಯ ನಷ್ಟ ಒದಗುವದು ಆ ನಷ್ಟವನ್ನು ಸರಕಾರವು ತನ್ನ ವರ್ಗಣಿಯೆಂದೆಣಿಸಿ ಸಹಿಸಬೇಕು ಭೂಭದ್ರ ಬೇಂಕಿನವರು ಈ ಧೋರಣವನ್ನು ಪುರಸ್ಕರಿಸಿದರ ಋಣೀ ರೈತರಿಗೆ ಋಣಪರಿಹಾರ ಮಾಡಿಕೊಳ್ಳಲು ಅನುಕೂಲವಾಗುವಂತಿದೆ ಭೂಭದ್ರ ಬೇಂಕಿನವರು ಸಮಗ್ರ ಪರಿಸ್ಥಿತಿಯನ್ನು ಈ ಧೋರಣದಿಂದ ಸಮಾಲೋಚಿಸಿ ರೈತರ ಪರಿಸ್ಥಿತಿಗೆ ಸರಿಹೋಗುವ ಯೋಜನೆಯನ್ನು ತಯಾರಿಸಿ ಸರಕಾರದ ಕಡೆಗೆ ಮಧ್ಯಸ್ಥಿಕೆ ನಡಿಸುವದುಚಿತ

⁂

ಹಳ್ಳಿಗಳಲ್ಲಿ ಜ್ವರ ಹಬ್ಬಲು ಒಂದು ಪ್ರಮುಖ ಕಾರಣವುಂಟು ಗ್ರಾಮಜೀವನ ಪ್ರಾಮುಖ್ಯವಾಗಿ ಕೃಷಿಪ್ರಪಂಚವನ್ನೇ ಹೊಂದಿಕೊಂಡಿದೆ ಗ್ರಾಮಗಳಲ್ಲಿ ಕೃಷಿಗೆ ಕಾಡು ಪ್ರಾಣಿಗಳ ಬಾಧೆ ವಿಪರೀತ ಜಂಗಲ ಇಲಾಖೆಯ ನಿರ್ಬಂಧಗಳ ಮೂಲಕ ಕೃಷಿಕರಿಗೆ ಕೃಷಿವ್ಯವಸಾಯದ ಸಮಯ ಬಹಳ ತೊಂದರೆಯುಂಟಾಗುತ್ತವೆ ಬಿತ್ತಿಗೆಯಾದೊಡನೆ ಹಂದಿಗಳು ಹೊಲಗಳನ್ನು ಸೇರಿ ಬೀಜವನ್ನೆಲ್ಲ ಹೆರೆಕೊಂಡು ತಿಂದು ಬಿಡುತ್ತವೆ ತೆನೆ ಬಟ್ಟಂದಿನಿಂದ ಗದ್ದೆ ಕೊಯ್ಯುವ ತನಕ ಒಕ್ಕಲಿಗರು ಮಾಳಕಟ್ಟಿ ಬೆಳೆ ಕಾಯಬೇಕು ಬೆಳೆ ಕಾಯುವ ಕ್ರಮದ ಗ್ರಹಿಕೆ ಪಟ್ಟಣಿಗರಿಗಾಗದು ಹೆಬ್ಬಾಗಿಲಲ್ಲಿ ಪಟ್ಟಿ ಹಾಕಿಕೊಂಡು ಕೈಯಲ್ಲಿ ದೊಣ್ಣೆ ಹಿಡಿದುಕೊಂಡು ಕಂಬದಂತೆ ನಿಲ್ಲುವ ಕ್ರಮ ಪಟ್ಟಣಿಗರಿಗೆ ಗೊತ್ತು ರೈತರು ಬೆಳೆ ಕಾಯುವ ಕ್ರಮ ಇದಲ್ಲ ಮಾಳದಲ್ಲಿ ಇಡೀ ರಾತ್ರೆ ಜಾಗರಣ ಮಾಡಿ ಬೊಬ್ಬೆ ಹೊಡೆಯುತ್ತಿರಬೇಕು ದಿನಂಪ್ರತಿ ಇದೇ ಕ್ರಮ ಈ ಮೂಲಕ ಜನಗಳ ಆರೋಗ್ಯ ಕೆಡುತ್ತದ ಒಂದು ದಿನ ಸ್ವಲ್ಪ ಅಜಾಗ್ರತೆಯಾದರೆ ಇಷ್ಟೆಲ್ಲ ದಿನ ಬೆಳೆ ಕಾಯ್ದ ಪರಿಶ್ರಮವೆಲ್ಲ ನಿರರ್ಥಕವಾಗುತ್ತದೆ ಬೆಳೆ ಕಾಯುವ ಈ ಕ್ರಮದ ಮೂಲಕ ಹಳ್ಳಿಗಳಲ್ಲಿರುವ ಗಟ್ಟಿಗರಲ್ಲ ನಿಶ್ಶಕ್ತರಾಗುತ್ತಾರೆ ಸರಕಾರವು ಈ ಪರಿಸ್ಥಿತಿಯನ್ನು ಹೋಗಲಾಡಿಸಲು ಉಪಾಯ ಮಾಡಬೇಕು

ಅಡವಿಯನ್ನು ಕಡಿದು ಕಾಡು ಪಶುಗಳಿಗೆ ಆಶ್ರಯ ದೊರೆಯದಂತೆ ಏರ್ಪಾಟು ಮಾಡುವದೊಂದು ಉಪಾಯ ಆದರೆ ಈ ಉಪಾಯ ನಮ್ಮಲ್ಲಿಯ ಜಂಗಲ ಇಲಾಖೆಯವರಿಗೆ ಸಮ್ಮತವಿಲ್ಲ ಮೈಸೂರ ಸೀಮೆಯಲ್ಲಿ ಬೈದ ಸವಿಸ್ತಾರವಿರುವ ಭೂಪ್ರದೇಶದಲ್ಲಿ ಒಳ್ಳೇ ಬೆಳೆ ಬೆಳೆಯುತ್ತದೆ ಒಂದು ಕಾಳು ಸಹ ಕಾಡು ಪಶುಗಳ ಪಾಲಾಗುವದಿಲ್ಲ ಇಡೀ ಬೆಳೆ ಸುರಕ್ಷಿತವಿರುತ್ತದೆ ಬೆಳೆ ಬೆಳೆದು ನಿಂತಾಗ ಸಿದ್ದಾಪುರ ಸೀಮೆಯಿಂದ ಮೈಸೂರ ಸೀಮೆಗೆ ಅಡ್ಡಾಡ ಹೋದರ ಇಲ್ಲಿಯ ಬೆಳೆಯ ಅವಸ್ಥೆ ಮತ್ತು ಅಲ್ಲಿಯ ಬೆಳೆಯ ಸಮೃದ್ಧಿ ಒಮ್ಮೆಲೇ ಹೊಳೆಯುತ್ತವ ಈ ಸ್ಥಿತ್ಯಂತರಕ್ಕೆ ಮೈಸೂರ ಸರಕಾರವು ಕೈಕೊಳ್ಳುವ ಜನರಕ್ಷಣೆಯ ಧೋರಣವೇ ಕಾರಣ ಮೈಸೂರ ಸರಕಾರವು ಬೇಟೆಗಾರ ತಂಡಗಳನ್ನು ಏರ್ಪಡಿಸಿ ಗ್ರಾಮ ವಸತಿಯ ಸುತ್ತ ಮುತ್ತಲಿನ ಅಡವಿ ಪ್ರದೇಶದಲ್ಲಿ ಬೇಟೆಯಾಡಿಸುತ್ತದೆ ಅದರಿಂದ ಕಾಡುಪಶುಗಳು ಗ್ರಾಮಗಳ ಬದಿಯಲ್ಲಿ ಸುಳಿಯಹೋಗುವದಿಲ್ಲ ಇವು ಬಹು ಅಂಜುಬುರುಕ ಪ್ರಾಣಿ ಇದರಿಂದ ಹುಟ್ಟಿದ ಬೆಳೆ ರೈತರಿಗೆ ಪೂರ್ಣವಾಗಿ, ನಿರಾಯಾಸವಾಗಿ ಸಿಗುತ್ತದೆ ಹಳ್ಳಿಗರು ಈ ಪಶುಗಳ ಹಾವಳಿಯನ್ನು ಪ್ರತಿಬಂಧಿಸಲು ಜಾಗರಣೆ ಮಾಡುವ ಆವಶ್ಯಕತೆಯಿಲ್ಲ ನಮ್ಮಲ್ಲಿಯ ಲೋಕೋದ್ಧಾರ ಮಂಡಳಿಯವರು ಮೈಸೂರ ಸರಕಾರದಿಂದ ಈ ಮುಂಡಕೆಗಳ ಕಾರ್ಯಕ್ರಮದ ಮಾದರಿಯನ್ನು ತಿಳಿಸಿ ಅಂಥ ಉಪಾಯ ಕ್ರಮವನ್ನು ನವಿಸ್ಮಾ ಜಿಲ್ಹೆಯೊಳಗೆ ರೂಢಿಗೊಳಿಸಬಹುದಾಗಿದ

⁂

ಪೇಟೆಯಲ್ಲಿ ಜೀನಸುಗಳ ಧಾರಣೆ ಏರುತ್ತಿದ್ದ ಅಡಿಕೆಗೂ ಧಾರಣೆ ಏರುತ್ತಿತ್ತು ಆದರೆ ಮುಂಬಯಿಗೆ ಅಡಿಕೆ ರಫ್ತು ಮಾಡಸಾರದಾಗಿ ಇಲ್ಲಿಯ ವರ್ತಕರಿಗೆ ಮುಂಬಯಿಯ ದಲಾಲರು ತಿಳಿಸಿದ ಮೂಲಕ ಅಡಿಕೆ ಧಾರಣೆ ಇಳಿಮುಖವಾಗಿದೆ ಆದರೆ, ಅನ್ನಸಾಮಗ್ರಿಗಳ ಧಾರಣೆ ಮಾತ್ರ ಏರು-ಮುಖ! ಕೆಲವು ವೇಳೆ ಇಳಿಯುವದೂ ಉಂಟು ಆದರೆ ಏರಿಕೆ ಇಳಿತಗಳಿಗೆ ವಿಧಿಯುಕ್ತ ಕ್ರಮವಿಲ್ಲ ಉತ್ತರಕ್ಕೆ ಮುಂಬಯಿ ದಕ್ಷಿಣಕ್ಕೆ ಕೊಚ್ಚಿ ಪೇಟೆಗಳೊಳಗಿನ ಸ್ಥಿತ್ಯಂತರಗಳನ್ನು ನಮ್ಮಲ್ಲಿಯ ವರ್ತಕರು ಉಪಯೋಗಿಸಿಕೊಳ್ಳುತ್ತಿದ್ದಾರೆ ಎಲ್ಲ ಜೀನಸುಗಳಲ್ಲಿ ಚಿಮಣಿ ಎಣ್ಣೆಯ ಗಡಿಬಿಡಿಯೇ ಹೆಚ್ಚು! ಸರಕಾರವು ಎಣ್ಣೆ ಕಂಪನಿಗಳಿಗಲ್ಲ ದರ ನಿಶ್ಚಯಿಸಿಕೊಟ್ಟಿದೆ ಕಂಪನಿಯ ಏಜಂಟರು ನಿಶ್ಚಿತ ದರದಿಂದ ನಿಶ್ಚಿತ ಡಬ್ಬೆಗಳನು ನಿಶ್ಚಿತ ಅವಧಿಯಲ್ಲಿ ಮಾರಬೇಕೆಂಬ ನಿಯಮವುಂಟು ಪ್ರತಿ ತಿಂಗಳಿಗೆ ಮಾರತಕ್ಕ ಡಬ್ಬೆಗಳ ಸಂಖ್ಯೆ ಏಜಂಟರಿಗೆ ತಿಳಿಸಲ್ಪಡುತ್ತದೆ ಪ್ರಾಮಾಣಿಕತನದಿಂದ ಏಜಂಟರು ನಡಕೊಂಡರೆ ಸಾಮಾನ್ಯವಾಗಿ ನೇಮಿಸಿಕೊಟ್ಟ ಡಬ್ಬೆಗಳು ಜನರಿಗೆ ಸಾಲುತ್ತವೆ ಆದರೆ ಏಜಂಟರು ಡಬ್ಬೆಗಳನ್ನು ವರ್ತಕರಿಗೆ ಕೊಡದೆ ಬಿನ ಪಿಯಾಗಿ ಖರ್ಚ ಹಾಕುತ್ತಾರೆ ಮತ್ತು ದರವನ್ನು ಏರಿಸಿ ಮಾರಾಟ ಮಾಡುತ್ತಾರೆ ಈ ಮೂಲಕ ಪೇಟೆಯೊಳಗೆ ಚಿಮಣಿ ಎಣ್ಣೆಯ ಬರಗಾಲ ಬಿದ್ದಿದೆ ಎಲ್ಲ ಚಿಮಣಿ ಎಣ್ಣೆಯ ಕಂಪನಿಗಳು ಒಕ್ಕಟ್ಟಾದ್ದರಿಂದ ಚಿಮಣಿ ಎಣ್ಣೆಯಲ್ಲಿ ಮೇಲಾಟ ಮಾಡಲಿಕ್ಕೆ ಅಸಾಧ್ಯವಾಗಿದೆ ಕೆಲವು ಐಪತ್ತುಳ್ಳ ವರ್ತಕರು ಯುದ್ಧಪೂರ್ವದಲ್ಲಿ ಮುಂಬಯಿಯಿಂದ ಚಿಮಣಿ ಎಣ್ಣೆಯನ್ನು ತರಿಸುವ ಪ್ರಘಾತವಿತ್ತು ಇದರಿಂದ ಏಜಂಟರಿಗೆ ಚಿಮಣಿ ಎಣ್ಣೆಯ ದರ ಏರಿಸಲು ಸ್ವಾಭಾವಿಕ ಪ್ರತಿಬಂಧವಾಗುತ್ತಿತ್ತು ಈಗ ಆ ಅನುಕೂಲತೆಗೆ ಪ್ರತಿಬಂಧವಿಲ್ಲ ಆದರೆ ಮುಂಬಯಿಯಿಂದ ಇಲ್ಲಿ ಡಬ್ಬೆ ತರಿಸಿದರೆ ಡಬ್ಬೆಗಕ್ಕೆ ೭ ೮ ಆಣೆಯಷ್ಟು ವಾಹನ ಖರ್ಚು ತಗಲುತ್ತದೆ ಆದರಿಂದ ಆ ಕ್ರಮ ವರ್ತಕರಿಗೆ ಪೂರೈಸುವದಿಲ್ಲ ಇದು ಕಾರಣ ಏಜಂಟರಿಗೆ ಪೇಟೆಯಲ್ಲಿ ಚಿಮಣಿ ಎಣ್ಣೆಯ ಮಕ್ತೆ ದೊರೆತಿದೆ ಏಜಂಟರು ಕಪಟ ನಾಟಕ ಮಾಡುವದರಿಂದ ಕಾಯಿದ ಕ್ರಮದಂತೆ ಅವರ ಮೇಲೆ ಕ್ರಮ ನಡಿಸುವದು ಅಶಕ್ಯವಾಗುತ್ತದೆ ಇದು ಕಾರಣ ಸರಕಾರವು ತಾಲೂಕಿನ ಮುಖ್ಯಾಧಿಕಾರಿಗಳಿಗೆ ಪೆಟ್ರೋಲ ಕೂಪನಿನ ಮಾದರಿಯ ಮೇರೆಗೆ ಕೂಪನುಗಳನ್ನು ಕೊಡುವ ಅಧಿಕಾರ ಕೊಡಬೇಕು ಕೂಪನು ಕೊಟ್ಟ ವರ್ತಕರಿಗಷ್ಟೇ ಏಜಂಟರು ನಿಶ್ಚಿತ ದರದಿಂದ ಡಬ್ಬೆಗಳನ್ನು ಮಾರಾಟ ಮಾಡಬೇಕು ಭಾರತ ರಕ್ಷಣ ಕಾನೂನಿನ ಹೊಸ ನಿಯಮದಂತೆ ಸರಕಾರಕ್ಕೆ ಇಂಥ ಯೋಜನ ಮಾಡಲು ಅಧಿಕಾರವುಂಟು ಇಂಥ ನಿಯಂತ್ರಣ ಮಾಡಿದನಕ ಏಜಂಟರ ಉಪಟಳ ನಿಲ್ಲದು

⁂

ಮುಂಬಯಿ ಸರಕಾರವು ಹೊಸ ನಿಯಮ ಮಾಡಿ ಜಿಲ್ಹೆಯೊಳಗಿನ ಕೆಳ—ಸರಕಾರಿ ವಕೀಲರಿಗೆ ಫೌಜದಾರಿ ಮೊಕದ್ದಮೆಗಳನ್ನು ನಡಿಸಲು ಅವರವರ ಸೀಮೆಯಲ್ಲಿ ಜಿಲ್ಹಾಧಿಕಾರಿಗಳು ನೇಮಿಸತಕ್ಕದ್ದಾಗಿ ವಿಧಿಸಿದೆ ಈ ಮುಂಚೆ ಮುಖ್ಯ ಸರಕಾರಿ ವಕೀಲರಷ್ಟೇ ಫೌಜದಾರಿ ಮೊಕದ್ದಮೆಗಳನ್ನು ನಡಿಸಲು ಹಕ್ಕುದಾರರಿದ್ದರು ತಾಲೂಕುಗಳೊಳಗಿನ ಕೆಳ—ಸರಕಾರಿ ವಕೀಲರಿಗೆ ಫೌಜದಾರಿ ಮೊಕದ್ದಮೆ ನಡಿಸುವ ಅಧಿಕಾರವಿರಲಿಲ್ಲ ಇದರಿಂದ ಮುಖ್ಯ ಸರಕಾರಿ ವಕೀಲರಿಗೆ ೧ನೇ ತರಗತಿಯ ಮಾಜಿಸ್ಟ್ರೇಟರಲ್ಲಿ ಸಹ ಫೌಜ—

ದಾರಿ ಮೊಕದ್ದಮೆಗಳನ್ನು ಸ್ವತಃ ನಡಿಸಹೋಗುವ ಪ್ರಸಂಗ ಬೀಳುತ್ತಿತ್ತು. ಸರಕಾರಕ್ಕೆ ಹೆಚ್ಚು ಖರ್ಚ ತಗಲುತ್ತಿತ್ತು. ಹೊಸ ನಿಯಮದಿಂದ ಕೆಳ ಸರಕಾರಿ ವಕೀಲರಿಗೆ ಒಂದು ಗೌರವ ಪ್ರಾಪ್ತವಾಗಿದೆ. ಆದರೆ ಈ ನಿಯಮದಲ್ಲಿ ಇನ್ನೂ ಒಂದು ತಿದ್ದುಪಾಟಾಗಬಹುದು. ಕೆಳ-ಸರಕಾರಿ ವಕೀಲರನ್ನು ನೇಮಿಸುವಾಗ ಫೌಜದಾರಿ ಮೊಕದ್ದಮೆಗಳಲ್ಲಿ ಸಹ ಅವರ ಸೀಮೆಯ ಮಟ್ಟಿಗೆ ಕೆಳ ಸರಕಾರಿ ವಕೀಲರೇ ಮೊಕದ್ದಮೆಯನ್ನು ನಡಿಸಲು ಹಕ್ಕುದಾರರೆಂದು ನಿರ್ಧರಿಸುವದು ಯುಕ್ತ. ಮುಖ್ಯ ಸರಕಾರಿ ವಕೀಲರಿಗೆ ಎರಡು ಅಧಿಕಾರಗಳು ಒಮ್ಮೆಲೇ ಪ್ರಾಪ್ತವಾಗುತ್ತವೆ. ದಿವಾಣಿ ಮೊಕದ್ದಮೆಗಳಲ್ಲಿ ಅವರು ಸರಕಾರಿ ವಕೀಲರು, ಫೌಜದಾರಿ ಮೊಕದ್ದಮೆಗಳಲ್ಲಿಯೂ ಅವರೇ ಸರಕಾರಿ ವಕೀಲರು. ದಿವಾಣಿ ಸರಕಾರಿ ವಕೀಲರು ಬೇರೆ, ಫೌಜದಾರಿ ಸರಕಾರಿ ವಕೀಲರು ಬೇರೆ, ಹೀಗೆ ಮುಖ್ಯ ಸರಕಾರಿ ವಕೀಲರ ಮಟ್ಟಿಗೆ ಭೇದವಿಲ್ಲ. ಉಭಯ ಅಧಿಕಾರಗಳು ಒಂದೇ ವ್ಯಕ್ತಿಯಲ್ಲಿ ಒಂದೇ ಕಾಲಕ್ಕೆ ಒದಗುವ ಪ್ರಸ [illegible] ಅದೇ ರೀತಿ ಕೆಳ ಇಲ್ಲವೆ ಒಳ(sub)ಸರಕಾರಿ ವಕೀಲರ ದರ್ಜೆಯಿರಬೇಕು. ಜಿಲ್ಹಾಧಿಕಾರಿಗಳು ತಾಲೂಕಿಗೆ ನೇಮಿಸುವ ವಿಧಿ ಉಳಿಯಲಾಗದು. ಸಂಶಯ [illegible] ಮೊಕದ್ದಮೆಗಳಲ್ಲಿ ಮುಖ್ಯ ಸರಕಾರಿ ವಕೀಲರನ್ನು ನೇಮಿಸಲಿಕ್ಕೆ ಜಿಲ್ಹಾಧಿಕಾರಿಗಳಿಗೆ ಹೊಸ ನಿಯಮದಲ್ಲಿ ಇರುವ ಅಧಿಕಾರವನ್ನು ಊರ್ಜಿತ ಇಡಬಹುದು.

⁂

ಗೋಕರ್ಣದ ಡಾ। ಮಹಾಬಲೇಶ್ವರ ಗಣಪತಿ ಭಟ್ಟ ಗೋಪಿ ಇವರು ರಾಷ್ಟ್ರೀಯ ಸಭೆಯ ಪರವಾಗಿ ಮುಂಬಯಿ ಎಸೆಂಬ್ಲಿಗೆ ನಮ್ಮ ಜಿಲ್ಹೆಯ ಪ್ರತಿನಿಧಿಗಳಾಗಿ ಆರಿಸಿ ಹೋದ ಸಂಗತಿ ಜನಜನಿತವಾದದ್ದು. ಡಾ॥ ಗೋಪಿಯವರು ಗೋಕರ್ಣ ಮ್ಯುನಿಸಿಪಾಲಿಟಿಯ ಸರಕಾರ-ನಿಯುಕ್ತ ಉಪಾಧ್ಯಕ್ಷರಿದ್ದರು. ಇವರು ಅಸ್ವಾಸ್ಥ್ಯದ ಮೂಲಕ ಹಿಂಡಲಗಿ ಜೈಲಿನಿಂದ ಬಿಡುಗಡೆಯಾದರು. ಆ ಮೇಲೆ ಸಪ್ಟಂಬರ ತಿಂಗಳ ಕೊನೆಯ ವಾರದಲ್ಲಿ ಗೋಕರ್ಣ ಮ್ಯುನಿಸಿಪಾಲಿಟಿಯ ಸಭಾಸದತ್ವಕ್ಕೆ ಇವರು ರಾಜಿನಾಮೆ ಕೊಟ್ಟರೆಂಬ ಪ್ರಕಟನೆ ಹೊರಬಿತ್ತು. ರಾಜಿನಾಮೆಯ ಯಥಾಪ್ರತಿ ಪ್ರಕಟವಾಗಿಲ್ಲ. ಅದನ್ನು ಸಂಪಾದಿಸಲು ಕೆಲವರು ಪ್ರಯತ್ನ ಮಾಡಿದ್ದರಂತೆ, ಅವು ನಿಷ್ಫಲವಾದವಂತೆ. ರಾಜಿನಾಮೆಯ ನಕಲು ಸಿಗುವದಿಲ್ಲವಂತೆ! ಗೋಕರ್ಣ ಮ್ಯುನಿಸಿಪಾಲಿಟಿಯವರು ಯುದ್ಧನಿಧಿಗೆ ಹಣ ಕೊಟ್ಟದ್ದರಿಂದ ಡಾ॥ ಗೋಪಿಯವರು ರಾಜಿನಾಮೆ ಕೊಟ್ಟರೆಂದು ಪ್ರಕಟಣೆಯಲ್ಲಿ ಉಲ್ಲೇಖವುಂಟು. ಇದನ್ನು ಕೇಳಿ ಗೋಕರ್ಣಸ್ಥರನೇಕರು ಸೋಜಿಗಗೊಂಡಿದ್ದಾರೆ. ಈ ಕುರಿತು ಹಲವು ಪತ್ರಗಳು ವೃತ್ತಕರ್ತರಿಗೆ ಬಂದಿವೆ. ಅವುಗಳ ಸಾರಾಂಶವೆಂದರೆ — ಗೋಕರ್ಣ ಮ್ಯುನಿಸಿಪಾಲಿಟಿಯಲ್ಲಿ ಯುದ್ಧ ಸಾಲ ಕೊಡಬೇಕೆಂದು ತೀರ್ಮಾನವಾದದ್ದು ೧೯೪೦ನೇ ಇಸವಿಯ ನವಂಬರ ತಿಂಗಳಲ್ಲಿ. ಆ ಕಾಲದಲ್ಲಿ ರಾಷ್ಟ್ರೀಯ ಸಭೆಯ ಯುದ್ಧಧೋರಣ ಪ್ರಕಟವಾಗಿತ್ತು. ಡಾ॥ ಗೋಪಿಯವರು ಆ ಕಾಲದಲ್ಲಿ ಗೋಕರ್ಣ ಮ್ಯುನಿಸಿಪಾಲಿಟಿಯ ಉಪಾಧ್ಯಕ್ಷರಿದ್ದರು. ಅವರು ಸತ್ಯಾಗ್ರಹ ಮಾಡಿದ್ದು ೧೯೪೧ನೇ ಫೆಬ್ರುವರಿ ತಿಂಗಳಲ್ಲಿ, ಅಸ್ವಾಸ್ಥ್ಯದ ಮೂಲಕ ಬಿಡುಗಡೆ ಹೊಂದಿದ್ದು ಜುಲೈ ತಿಂಗಳಲ್ಲಿ. ಬಿಡುಗಡೆಯಾಗಿ ಬಂದ ಬಳಿಕ ಮ್ಯುನಿಸಿಪಾಲಿಟಿಯ ಮೆಂಬರ ಮತ್ತು ಉಪಾಧ್ಯಕ್ಷತನ ರದ್ದಾಗಲಿಲ್ಲವೆಂದು ಡಾ। ಗೋಪಿಯವರು ಕಲೆಕ್ಟರರಿಗೆ ಅರ್ಜಿ ಮಾಡಿಕೊಂಡರು. ಈ ಅರ್ಜಿಯನ್ನು ಕಲೆಕ್ಟರರು ತಿರಸ್ಕರಿಸಿದರು. ಸದಸ್ಯತನವೂ ಉಪಾಧ್ಯಕ್ಷತನವೂ ರದ್ದಾಗಿರುವವಾಗಿ ಕಲೆಕ್ಟರರು ನಿರ್ಣಯ ಕೊಟ್ಟರು. ತಾ ೧-೧೦-೪೧ನೇಗೆ ಹಳೇ ಮ್ಯುನಿಸಿಪಾಲಿಟಿಯ ಆಯುರ್ದಾಯ ತೀರಿತು. ಡಾ॥ ಗೋಪಿಯವರ ಸದಸ್ಯತನ ಉಪಾಧ್ಯಕ್ಷತನಗಳೇನಾದರೂ ಉಳಿದಿದ್ದಲ್ಲಿ ಅವು ತಂತಾನೇ ತೀರಿದವು. ಹೊಸ ಮ್ಯುನಿಸಿಪಾಲಿಟಿಗೆ ಮೆಂಬರರನ್ನು ನೂತನವಾಗಿ ಸರಕಾರವು ನೇಮಿಸತಕ್ಕದ್ದಿತ್ತು. ಹೊಸ ಮ್ಯುನಿಸಿಪಾಲಿಟಿಯಲ್ಲಿ ಡಾ॥ ಗೋಪಿಯವರ ಹೆಸರು ಲೋಪವಾಗಿರುವದು. ಈ ಸಂಗತಿ ಆಗಸ್ಟ ತಿಂಗಳಲ್ಲೇ ಹೇಳುತ್ತಿದ್ದರು. ಹೊಸ ಮೆಂಬರರಲ್ಲಿ ಡಾ॥ ಗೋಪಿಯವರು ನೇಮಿಸಲ್ಪಡಲಿಲ್ಲ. ಡಾ॥ ಗೋಪಿಯವರು ಬಿಡುಗಡೆ ಹೊಂದುವ ಪೂರ್ವದಲ್ಲೇ ೧೯೪೦ನೇ ಇಸ್ವಿಯ ನವಂಬರ ತಿಂಗಳಲ್ಲಾದ ಠರಾವಿನಂತೆ ಮ್ಯುನಿಸಿಪಾಲಿಟಿಯಿಂದ ಯುದ್ಧ ಸಾಲ ತುಂಬಲ್ಪಟ್ಟಿತ್ತು. ಡಾ। ಗೋಪಿಯವರು ತಮಗೆ ಮೆಂಬರರಾಗಿ ಸರಕಾರವು ಹೊಸ ಮ್ಯುನಿಸಿಪಾಲಿಟಿಯಲ್ಲಿ ನೇಮಿಸದ್ದರಿಂದ ವಿರಕ್ತರಾಗಿ ಯುದ್ಧಸಾಲದ ನೆವ ಮಾಡಿ ತಾ ೨೭-೯-೪೧ನೇಗೆ ರಾಜಿನಾಮೆ ಕೊಟ್ಟು ಆತ್ಮಶ್ಲಾಘನೆಯನ್ನು ಮಾಡಿಕೊಂಡಿರುತ್ತಾರೆ. ಈ ನಡತೆ ಸತ್ಯಾಭಿಮಾನಿ ರಾಷ್ಟ್ರೀಯ ಸಭೆಯ ಪ್ರತಿನಿಧಿಗಳಿಗೆ ಉಚಿತವಾದದ್ದಲ್ಲ. ಜಿಲ್ಹಾ ಕಾಂಗ್ರೆಸ ಕಮಿಟಿಯವರೂ ಪ್ರಾಂತಿಕ ಕಾಂಗ್ರೆಸ ಕಮಿಟಿಯವರೂ ಡಾ॥ ಗೋಪಿಯವರ ಕಾಂಗ್ರೆಸ ಭಕ್ತಿಯ ನೆಲೆ ಹಚ್ಚಬೇಕು. ಇಲ್ಲದಿದ್ದರೆ ಕಾಂಗ್ರೆಸ-ಸಂಸ್ಥೆಯ ಗೌರವಕ್ಕೆ ಕುಂದು ಬಂದೀತು ಇತ್ಯಾದಿ.

ದಿ ಬೋಂಬೆ ಲ್ಯಾಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್,
ಸ್ಥಾಪನೆ 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇತರ ಕಂಪನಿಗಳ ದರಗಳೂ, ಶರ್ತುಗಳೂ ಬಹಳ ಸೋಯಿಯುಳ್ಳವು ಇವೆ. ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.
ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.
ಸವಿಸ್ತರ ಮಾಹಿತಿ ಸ್ಥಳೀಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದರೆ ಸಿಗುವದು.

Kumta Agents.
D K Nayak Bros
K N Nayak
Honavar Agent
R V, Prabhu

K. PadmanabhaRao & Sons,
BELGAUM
Chief Agents for
Karnatak Districts & S M States

ಚಿತ್ರಬಿಂದು
ಮಕ್ಕಳ ಮರಣವನ್ನು ತಪ್ಪಿಸುವದು.

ಏಜನ್ಸಿ ಕಲಕತ್ತಾ, ಮುಂಬಯಿ ಮದ್ರಾಸ, ಬೆಂಗಳೂರು, ಮಂಗಳೂರು
Spleen and Liver Enlargement for Children.
ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆ [illegible], ಹಸುರು ನರಗಳು, ಕಾಮಿಲೆ,
ಗಡ್ಡೆರೋಗ ಕೋವೆ ರೋಗ, ಮೈ-ಕೈ ಬಾವುಗಳಿಗೆ ದಿವ್ಯೌಷಧ!
೧ ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3

ಏತಕ್ಕೆ ಚಿಂತಿಸುವಿರಿ?
ಆಸೇತುಹಿಮಾಚಲದ ವರೆಗೂ ೪೦ ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ
ಡಾ| ವಿ ಎಸ್ ಶ್ರೀನಿವಾಸರಾವ,
ಲಿವ್ಹರ್ ಸ್ಪೆಶಲಿಸ್ಟ,
ಎಂ ವಿ ಪ್ರಾಸಾದಿಕ ಔಷಧಾಲಯ,
ಶಿವಮೊಗ್ಗಾ
☞ ಇವರಲ್ಲಿ ವಿಚಾರಿಸಿರಿ
ಶಿರಸಿ ಏಜಂಟ —
ಸುಬ್ರಾಯ ಸೀತಾರಾಮ ಹೆಗಡೆ
ಕುಮಟೆಯ ಏಜಂಟ —
ದೇವಪ್ಪಾ ಅಯ್ಯಾ ನಾಯ್ಕ

ಇದನ್ನು ನಾರಾಯಣ ಕೃಷ್ಣ ಶಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು